ಪರಿಪೂರ್ಣಚಂದ್ರಿಕಾ

ಭಾಗ – 6

ಸೂತ್ರ–ಭಾಷ್ಯ–ಟೀಕಾ–ಟಿಪ್ಪಣಿ–ಮೊದಲಾದ 18 ಗ್ರಂಥಗಳೊಂದಿಗೆ
ಶ್ರೀವ್ಯಾಸತೀರ್ಥರ ತಾತ್ಪರ್ಯಚಂದ್ರಿಕಾ ಸಂಸ್ಕೃತಮೂಲ ಹಾಗೂ ಕನ್ನಡಾನುವಾದ

ಅಂತರ್ಯಾಮ್ಯಧಿಕರಣ
ಅದೃಶ್ಯತ್ವಾಧಿಕರಣ, ವೈಶ್ವಾನರಾಧಿಕರಣ
ದ್ಯುಭ್ವಾದ್ಯಧಿಕರಣ, ಭೂಮಾಧಿಕರಣ

ಪ್ರಕಾಶಕರು : ಶ್ರೀಪಾದರಾಜಮಠ, ಮುಳಬಾಗಿಲು

॥ ಶ್ರೀಲಕ್ಷ್ಮೀಹಯಗ್ರೀವೋ ವಿಜಯತೇತಮಾಮ್ ॥

ಭಾಗ – ೬

ಪರಿಪೂರ್ಣಚಂದ್ರಿಕಾ

ದ್ವಿತೀಯಪಾದ - ಅಂತರ್ಯಾಮ್ಯಧಿಕರಣ, ಆದೃಶ್ಯತ್ವಾಧಿಕರಣ, ವೈಶ್ವಾನರಾಧಿಕರಣ,

ತೃತೀಯ ಪಾದ - ದ್ಯುಭ್ವಾದ್ಯಧಿಕರಣ, ಭೂಮಾಧಿಕರಣ

ಬ್ರಹ್ಮಸೂತ್ರ	ಬ್ರಹ್ಮಸೂತ್ರಭಾಷ್ಯ	ತಾತ್ಪರ್ಯಚಂದ್ರಿಕಾ	ನ್ಯಾಯವಿವರಣ
ಸೂತ್ರದೀಪಿಕಾ	ಭಾಷ್ಯದೀಪಿಕಾ	ಪ್ರಕಾಶ	ನ್ಯಾಯವಿವರಣಟೀಕಾ
ತಂತ್ರದೀಪಿಕಾ	ಸತ್ತರ್ಕದೀಪಾವಳಿ	ಗುರುರಾಜೀಯ	ಅಣುಭಾಷ್ಯ
ನ್ಯಾಯಮುಕ್ತಾವಳಿ	ತತ್ತ್ವಪ್ರಕಾಶಿಕಾ ಭಾವದೀಪ	ಭಾಟ್ಟಸಂಗ್ರಹ	ತತ್ತ್ವಮಂಜರೀ
	ವಾಕ್ಯಾರ್ಥಮಂಜರೀ		

(ಶಂಕರಭಾಷ್ಯ, ಭಾಮತೀ, ರಾಮಾನುಜಭಾಷ್ಯ ಇವುಗಳ ಸಂಪೂರ್ಣ ಅಡಿಟಪ್ಪಣಿಯೊಂದಿಗೆ)

* * * * * *

ಪ್ರಧಾನಸಂಪಾದಕರು :

ವಿ॥ ಆರ್. ವೇಂಕಟೇಶಾಚಾರ್ಯ

ಶ್ರೀರಂಗಮ್

ಸಂಗ್ರಹ ಮತ್ತು ಅನುವಾದ :

ವಿ॥ ಬೆಮ್ಮತ್ತಿ ವೇಂಕಟೇಶಾಚಾರ್ಯ

ಬೆಂಗಳೂರು

- - - - - -

ಪ್ರಕಾಶಕರು

ಶ್ರೀಪಾದರಾಜಮಠ

ಮುಳಬಾಗಿಲು.

'ಪರಿಪೂರ್ಣಚಂದ್ರಿಕಾ' ಖರನಾಮಸಂವತ್ಸರ ಭಾದ್ರಪದ ಬಹುಳ ತ್ರಯೋದಶಿ (ದಿನಾಂಕ : 25-09-2011) ಶ್ರೀಶ್ರೀ ವಿಜ್ಞಾನನಿಧಿತೀರ್ಥಶ್ರೀಪಾದಂಗಳವರ ಮಹಾಸಮಾರಾಧನೆಯ ಶುಭಸಂದರ್ಭದಲ್ಲಿ ಮುಳಬಾಗಿಲು ಕ್ಷೇತ್ರದಲ್ಲಿ ಶ್ರೀಶ್ರೀಶ್ರೀ ಕೇಶವನಿಧಿಶ್ರೀಪಾದಂಗಳವರಿಂದ ಬಿಡುಗಡೆಯಾಯಿತು.

ಪ್ರಕಾಶನ : ಶ್ರೀಪಾದರಾಜಮಠ, ಮುಳುಬಾಗಿಲು.

ಸಹಯೋಗ : ಶ್ರೀಮತಿ ಲೀಲಾ ಮತ್ತು ಶ್ರೀನಿವಾಸ ಪ್ರಹ್ಲಾದ
ಡಾಯಲ್ಸ್ ಟೌನ್, ಪೆನ್ಸಿಲ್‌ವೆನಿಯಾ, ೧೮೯೦೧,
ಯು.ಎಸ್.ಎ.

ಪ್ರಥಮಮುದ್ರಣ : 2011

ಬೆಲೆ : 1000 ರೂ

ಪ್ರತಿಗಳು : 1000

©

Publication Copy right :

ಶ್ರೀಪಾದರಾಜಮಠ, ರಾಘವೇಂದ್ರ ಕಾಲೋನಿ, ಬೆಂಗಳೂರು.

Author Copyright

ಬೆಮ್ಮತ್ತಿ ವೆಂಕಟೇಶಾಚಾರ್ಯ, ಬೆಂಗಳೂರು.

All rights reserved . No part of this publication may be produced, stored in a retrieval system, or transmitted in any form or by any means, electronic, mechanical, photocopying, recording or otherwise, without the proper permission of Bemmatti Venkateshacharya.

ಅಕ್ಷರಜೋಡಣೆ :

ಸುಬ್ಬಣ್ಣ

ಕೆ. ವೆಂಕಟೇಶಮೂರ್ತಿ - 9480261663
ನಾಗಲತಾ(ಸುಧಾ)ನಿಧಿ, ಬೆಂಗಳೂರು.

ಮುಖಪುಟ :
ಶ್ರೀಮತಿ ವಿಜಯಲಕ್ಷ್ಮಿ

ಮುದ್ರಣ
ದರ್ಶನ್ ಪ್ರಿಂಟರ್ಸ್, ರಾಘವೇಂದ್ರಕಾಲೋನಿ, ಬೆಂಗಳೂರು.

ಮುನ್ನುಡಿ

ಭಗವಂತ ಎಲ್ಲಿದ್ದಾನೆ .....?

ಹೇಗಿದ್ದಾನೆ .....?

ಪ್ರತಿನಿತ್ಯ ನಾವು ಆವನನ್ನು ಎಲ್ಲಿ ಕಾಣಬೇಕು .....?

ಇದರ ಬಗ್ಗೆ ಎಷ್ಟು ವಿಚಾರ ಮಾಡಿದರೂ ಗೊಂದಲದಲ್ಲಿಯೇ ಮುಗಿಯುತ್ತದೆ.

..... ಆದರೆ ಉತ್ತರ ಕಷ್ಟವಿಲ್ಲ.

ಭಗವಂತನನ್ನು ಮೇಲಿನ ಲೋಕದಲ್ಲಿದ್ದಾನೆಂದು ..... ಅಥವಾ ದೊಡ್ಡ ಕ್ಷೇತ್ರಗಳಲ್ಲಿದ್ದಾನೆಂದು ..... ಅಥವಾ ಮಹಾತ್ಮರ ಬಳಿ ಇರುತ್ತಾನೆಂದು ತಿಳಿದು ಸುಮ್ಮನಿರಬೇಕಾಗಿಲ್ಲ ..... ನಮಗೆ ಅತ್ಯಂತ ಹತ್ತಿರವಿರುವ, ಅತ್ಯಂತ ಅಭಿಮಾನವೂ ಇರುವ .....

ನಮ್ಮ ಹೃದಯದಲ್ಲೇ ಇರುತ್ತಾನೆ.

ಆದ್ದರಿಂದಲೇ ನಾವು ಭಗವಂತನನ್ನು ಬೇರೆ ಎಲ್ಲೆಲ್ಲೋ ಹುಡುಕಬೇಕಾಗಿಲ್ಲ.

ಅದಕ್ಕಾಗಿ ಕ್ಷೇತ್ರ ಮೊದಲಾದವುಗಳಿಗೆ ಹೋಗಬೇಕಾಗಿಲ್ಲ. ಮನೆಯಲ್ಲೇ ಬಂಗಾರದ ಕೊಪ್ಪರಿಗೆಯಿರುವುದನ್ನು ಮರೆತು ಕಡುಬಡವರಾಗಿ ಊರಿನ ಜನರ ಮುಂದೆ ಭಿಕ್ಷೆ ಬೇಡಿದಂತೆ ನಮ್ಮ ಸ್ಥಿತಿ.

ಯಾವುದೇ ಕ್ಷೇತ್ರಾದಿಗಳಿಗೆ ಹೋದರೂ ಹೃದಯದಲ್ಲಿರುವ ಭಗವಂತನನ್ನು ನಾವು ಮರೆಯಬಾರದು.

ದೇವರ ಪೂಜೆಯ ಸಂದರ್ಭದಲ್ಲಿಯೂ ಹೃಯದಲ್ಲಿರುವ ಭಗವಂತನನ್ನು ನಾವು ಮರೆಯಬಾರದು.

ಪರಿಪೂರ್ಣಚಂದ್ರಿಕಾ

ಗುರುಗಳ ಅಂತರ್ಯಾಮಿಯಲ್ಲಿ ಕೃಷ್ಣಾರ್ಪಣವೆನ್ನುವಾಗಲೂ ಹೃದಯಲ್ಲಿರುವ ಭಗವಂತನನ್ನು ಮರೆಯಬಾರದು.

ಬಹಳ ಗಮನಿಸ ಬೇಕಾದ ವಿಚಾರ - ಪ್ರತಿನಿತ್ಯ ನಾವು ಮಾಡುವಂತಹ ಸಂಧ್ಯಾವಂದನೆ, ಗಾಯತ್ರಿಜಪ ಹಾಗೂ ಉಳಿದ ಮಂತ್ರಗಳ ಜಪದಕಾಲದಲ್ಲಿಯೂ ನಮ್ಮ ಹೃದಯದಲ್ಲೇ ಭಗವಂತನನ್ನು ಚಿಂತನೆ ಮಾಡಬೇಕು.

ಎಲ್ಲಿಯ ತನಕ ಹೃದಯದಲ್ಲೇ ಭಗವಂತನಿದ್ದಾನೆಂಬ ಚಿಂತನೆ, ಉಪಾಸನೆಗಳು ನಮಗೆ ಬರುವುದಿಲ್ಲವೋ? ಅಲ್ಲಿಯ ತನಕ ಭಗವಂತನು ನಮಗೆ ದೊರೆಯಲಾರ. ಆದ್ದರಿಂದಲೇ ಕಣ್ಮುಚ್ಚಿ ಧ್ಯಾನ ಮಾಡಬೇಕು. ಹೊರಗಿನ ಕಣ್ಮುಚ್ಚುವುದೆಂದರೆ ಒಳಗಣ್ಣಿನಿಂದ ಹೃದಯದಲ್ಲಿರುವ ಭಗವಂತನನ್ನು ಕಾಣುವುದು ಎಂದರ್ಥ.

ಬ್ರಹ್ಮಸೂತ್ರದ ಅಧ್ಯಯನವನ್ನು ಆನುಷ್ಠಾನಕ್ಕೆ ತರುವುದೆಂದರೆ ಹೃದಯದಲ್ಲಿರುವ ಭಗವಂತನನ್ನು ಪ್ರತಿಕ್ಷಣಗಳಲ್ಲಿಯೂ, ಪ್ರತಿಹೆಜ್ಜೆಯಲ್ಲಿಯೂ ಸ್ಮರಿಸುತ್ತಾ ಸರ್ವೋತ್ತಮನು, ಸರ್ವನಿಯಾಮಕನು ಸಕಲ ಗುಣಪರಿಪೂರ್ಣನೂ ಎಂದು ತಿಳಿಯುವಿಕೆ.

ಪ್ರಕೃತ ದ್ವಿತೀಯ ಪಾದದಲ್ಲಿರುವ ಗುಹಾಧಿಕರಣ, ಅಂತರ್ಯಾಮ್ಯಧಿಕರಣಗಳು ನಮ್ಮ ಹೃದಯದಲ್ಲೇ ಭಗವಂತನಿದ್ದಾನೆಂದು ಎಚ್ಚರಿಸುತ್ತಿದೆ.

ಪ್ರಕೃತ ತಾತ್ಪರ್ಯಚಂದ್ರಿಕೆಯಲ್ಲಿ ಅಂತರ್ಯಾಮ್ಯಧಿಕರಣವನ್ನು ಹೇಗೆ ಬಣ್ಣಿಸಿದ್ದಾರೆಂಬುದನ್ನು ತಿಳಿಯೋಣ.....

ಅಂತರ್ಯಾಮ್ಯಧಿಕರಣ

ಆನಂತರ್ಯ ಸಂಗತಿ ಹಾಗೂ ಅಂತರ್ಯಾಮಿ ಪ್ರಕೃತ್ಯಾದಿಗಳೋ ?
ಅಥವಾ ವಿಷ್ಣುವೋ? ಎಂದು ಸಂಶಯ

ಅಂತರ್ಯಾಮ್ಯಧಿಕರಣವು ಪ್ರಾರಂಭವಾಗುತ್ತಿದೆ. ಹಿಂದಿನ ಅಧಿಕರಣದಲ್ಲಿ ಚಕ್ಷುರಂತಃಸ್ಥನಾದವನು ವಿಷ್ಣುವೇ ಆಗಿದ್ದಾನೆಂದು ನಿರ್ಣಯಿಸಿದ್ದಾಯಿತು. ಆ ನಿರ್ಣಯಕ್ಕೆ ಅಮೃತತ್ವವನ್ನು ಹೇತುವೆಂದು ಹೇಳಿದರು. ಆದರೆ ವಿಷ್ಣುವಿನಲ್ಲಿ ಅಂತಹ ಅಮೃತತ್ವಾದಿ ಹೇತುಗಳೇ ಕೂಡುವುದಿಲ್ಲವೆಂದು ಈ ಅಧಿಕರಣದಲ್ಲಿ ಆಕ್ಷೇಪ ಮಾಡುತ್ತಿರುವುದರಿಂದ ಆನಂತರ್ಯ ಸಂಗತಿಯನ್ನು ತಿಳಿಯಬೇಕು.

'ಅಂತರ್ಯಾಮ್ಯಮೃತಃ' ಎಂಬ ಶ್ರುತಿ ವಾಕ್ಯ ಈ ಅಧಿಕರಣಕ್ಕೆ ವಿಷಯವಾಗಿದೆ. ಇಲ್ಲಿ ಕೇಳಿಸುತ್ತಿರುವ ಅಂತರ್ಯಾಮಿಯು ಪ್ರಕೃತ್ಯಾದಿಗಳೇಕಾಗಬಾರದು? ಎಂಬುದು ಪೂರ್ವಪಕ್ಷಿಗಳ ವಾದ. ವಿಷ್ಣುವೇ ಎಂದು ಸಿದ್ಧಾಂತಿಗಳ

ನಿರ್ಣಯ. ಆದ್ದರಿಂದ ಒಂದು ವೇಳೆ ಮುಂದೆ ಹೇಳುವ ಪ್ರಕಾರ ಅಂತರ್ಯಾಮಿಯು ಅಚೇತನಪರವಾದರೆ ಆವಾಗ ಜಡವಿದಿತತ್ವವು ಪ್ರಕೃತ್ಯಾದಿಗಳಲ್ಲಿ ಉಪಪನ್ನವಾಗುತ್ತದೆ. ಆವಾಗ ರೂಢ್ಯರ್ಥದಲ್ಲಿ ಬಾಧಕವಿಲ್ಲದ ಕಾರಣ ಪ್ರಕೃತ್ಯಾದಿಗಳನ್ನೇ ಶರೀರವಾಗಿ ಶರೀರವಾಗಿವುಳ್ಳ ವಿಷ್ಣುವೆಂಬರ್ಥವನ್ನು ಸ್ವೀಕರಿಸಬೇಕೆಂಬುದು ಯುಕ್ತವಾಗುವುದಿಲ್ಲ. ಆದ್ದರಿಂದ ಪ್ರಕೃತ್ಯಾದಿಗಳೇ ಅಂತರ್ಯಾಮಿಯೆಂದು ಪೂರ್ವಪಕ್ಷದ ಫಲ. ಜೀವನಿಗಿಂತ ಅಂತರ್ಯಾಮಿಗೆ ಭೇದವನ್ನು ಹೇಳುವ ವಚನಗಳಿರುವುದಿಲ್ಲವೆಂದು ಪೂರ್ವಪಕ್ಷಿಯ ಅಭಿಪ್ರಾಯ.

ಒಂದು ವೇಳೆ ಚೇತನ ಪರವಾದರೆ ಆವಾಗ ಸಾಕಲ್ಯೇನಾವಿದಿತತ್ವವು ಪ್ರಕೃತ್ಯಾದಿಗಳಲ್ಲಿ ಕೂಡುವುದಿಲ್ಲ. ಹೀಗೆ ಬಾಧಕವಿರುವುದರಿಂದರೂಢಿಯನ್ನುಬಿಟ್ಟುಶೀರ್ಯಮಾಣತ್ವಎಂಬಯೋಗದಿಂದವಿಷ್ಣುವಿನಲ್ಲೂಸಹಪ್ರಕೃತ್ಯಾದಿಗಳೇ ಶರೀರವಾಗಿವೆಯೆಂಬರ್ಥವನ್ನು ಕೂಡಿಸಬಹುದು. ಆದ್ದರಿಂದ ವಿಷ್ಣುವೇ ಅಂತರ್ಯಾಮಿಯಾಗಿದ್ದಾನೆಂದು ಸಿದ್ಧಾಂತದ ಫಲ.

ಪ್ರಕೃತಿಯೇ ಅಂತರ್ಯಾಮಿಯೆಂದು ಪೂರ್ವಪಕ್ಷ

ಪೂರ್ವಪಕ್ಷ ಹೀಗಿದೆ - ''ಏಷ ತ ಆತ್ಮಾಂತರ್ಯಾಮೀ'' ಎಂಬ ವಿಷಯ ವಾಕ್ಯದಲ್ಲಿ ಪ್ರತಿಪಾದ್ಯವಾದ ಅಂತರ್ಯಾಮಿಯು ಪ್ರಕೃತಿಯೇ ಆಗಿದೆ. ಪ್ರಕೃತಿಯನ್ನು ಅಂತರ್ಯಾಮಿ ಎಂದು ಹೇಳಿದರೆ ಶ್ರುತಿಯಲ್ಲಿ ಹೇಳಲ್ಪಟ್ಟ ಪೃಥಿವ್ಯಾದಿಗಳು ಶರೀರವಾಗಿವೆ ಎಂಬ ಮಾತನ್ನು ಸುಲಭವಾಗಿ ಕೂಡಿಸಬಹುದು. ಪೃಥಿವ್ಯಾದಿಗಳಿಗೆ ಉಪಾದಾನವಾದ್ದರಿಂದ ಸ್ವರೂಪ ಎಂಬರ್ಥದಲ್ಲಿ ಶರೀರಶಬ್ದವನ್ನು ಪ್ರಯೋಗಿಸುವುದು ಕಷ್ಟವಾಗುವುದಿಲ್ಲ. ಆದರೆ ದಿಕ್ ಮೊದಲಾದವುಗಳು ಅಪ್ರಾಕೃತವಾದ್ದರಿಂದ ಪ್ರಕೃತಿಗೆ ಶರೀರಗಳಾಗಿವೆ ಎಂಬ ಮಾತನ್ನು ಕೂಡಿಸುವುದು ಸ್ವಲ್ಪ ಕಷ್ಟವಾಗುತ್ತದೆ. ಆದರೆ ಬ್ರಹ್ಮನು ಅಂತರ್ಯಾಮಿ ಎಂಬ ಪಕ್ಷವನ್ನು ಆಶ್ರಯಿಸಿದಾಗ ಪೃಥಿವ್ಯಾದಿಗಳು ಶರೀರವಾಗಿವೆ ಎಂಬ ಮಾತನ್ನೇ ಕೂಡಿಸಲು ಸಾಧ್ಯವಿಲ್ಲ. 'ಶೀರ್ಯಮಾಣತ್ವ' ಎಂಬ ಯೌಗಿಕಾರ್ಥವನ್ನು ಸ್ವೀಕರಿಸಲು ಹೊರಟರೆ ಅಪ್ರಾಕೃತವಾದ ದಿಗಾದಿಗಳಲ್ಲಿ ಅದೂ ಸಹ ತಪ್ಪಾಗುತ್ತದೆ. ಆದ್ದರಿಂದ ಪ್ರಕೃತಿಯನ್ನೇ ಅಂತರ್ಯಾಮಿಯೆನ್ನಬೇಕು. ದಿಕ್ ಮೊದಲಾದವನ್ನು ಶರೀರವೆಂದು ಹೇಳಿದರೆ ಗೌಣಾರ್ಥ ಮಾಡಬೇಕು.

ಪ್ರಕೃತಿಯನ್ನು ಅಂತರ್ಯಾಮಿ ಎಂದು ಹೇಳಿದಾಗ ಅನೇಕ ಬಾಧಕಗಳಿಗೆ ಅವಕಾಶವಿದೆ -

ಹೇಗೆಂದರೆ 'ಯಃ ಪೃಥಿವ್ಯಾಂ ತಿಷ್ಠನ್' ಎಂಬಲ್ಲಿ ಹೇಳಲ್ಪಟ್ಟ ಪೃಥಿವ್ಯಾದಿ ಆಧಾರತ್ವವು ಬಾಧಕವೋ. 'ಯಮಯತಿ' ಎಂಬಲ್ಲಿ ಹೇಳಲ್ಪಟ್ಟ ಪೃಥಿವ್ಯಾದಿ ನಿಯಾಮಕತ್ವವು ಬಾಧಕವೋ? ಅಥವಾ 'ಆತ್ಮಾನಂ ಯಮಯತಿ' ಎಂಬಲ್ಲಿ ಹೇಳಲ್ಪಟ್ಟ ಚೇತನ ನಿಯಾಮಕತ್ವವು ಬಾಧಕವೋ? ಅಥವಾ ಆತ್ಮಾವಿದಿತತ್ವವು ಬಾಧಕವೋ?. ''ಅದೃಷ್ಟೋ ದ್ರಷ್ಟಾಶ್ರುತಃ ಶ್ರೋತಾ ಅಮತೋ ಮಂತಾ ಅವಿಜ್ಞಾತೋ ವಿಜ್ಞಾತಾ'' ಎಂಬಲ್ಲಿ ಹೇಳಲ್ಪಟ್ಟ ದ್ರಷ್ಟೃತ್ವಾದಿಗಳು ಬಾಧಕಗಳೋ? ಎಂದು ಪ್ರಶ್ನಿಸುತ್ತೇವೆ ಎಂದರೆ ಈ ಯಾವ ಬಾಧಕಗಳಿಗೂ ಅವಕಾಶವಿಲ್ಲ. ಏಕೆಂದರೆ ಕಾರ್ಯದಲ್ಲಿ ಕಾರಣವಿದೆಯೆಂಬ ಪ್ರಯೋಗವು ಲೋಕದಲ್ಲಿ ಕಾಣಿಸುತ್ತಿದೆ. ಪೃಥಿವಿ ಹಾಗೂ ಪ್ರಕೃತಿಗಳಿಗೆ ಕಾರ್ಯಕಾರಣ ಭಾವವಿದ್ದರೂ ಆಧಾರಾಧೇಯಭಾವದಿಂದ ವ್ಯವಹರಿಸಬಹುದು.

ಇನ್ನು 'ಪೃಥಿವೀಂ ಯಮಯತಿ' ಎಂಬಲ್ಲಿ ಕೇಳಿಸುತ್ತಿರುವ ಪೃಥಿವ್ಯಾದಿನಿಯಾಮಕತ್ವವು ಪ್ರಕೃತಿಯಲ್ಲಿ ಕೂಡುವುದಿಲ್ಲವೆಂದು ಹೇಳಬೇಕು. ಆದರೆ ಆತ್ಮನ ಪ್ರವೃತ್ತಿಯು ಶರೀರದ ಮೂಲಕವೇ ಆಗಬೇಕೇ ಹೊರತು ನೇರವಾಗಿ ಆಗುವುದಿಲ್ಲ. ಆದ್ದರಿಂದ ಆತ್ಮನು ಪ್ರಕೃತ್ಯಧೀನವೆಂದು ಹೇಳಬಹುದು.

ಪರಿಪೂರ್ಣಚಂದ್ರಿಕಾ

ಗುರುಗಳ ಅಂತರ್ಯಾಮಿಯಲ್ಲಿ ಕೃಷ್ಣಾರ್ಪಣವೆನ್ನುವಾಗಲೂ ಹೃದಯಲ್ಲಿರುವ ಭಗವಂತನನ್ನು ಮರೆಯಬಾರದು.

ಬಹಿರ್ ಗಮನಿಸ ಬೇಕಾದ ವಿಚಾರ - ಪ್ರತಿನಿತ್ಯ ನಾವು ಮಾಡುವಂತಹ ಸಂಧ್ಯಾವಂದನೆ, ಗಾಯತ್ರಿಜಪ ಹಾಗೂ ಉಳಿದ ಮಂತ್ರಗಳ ಜಪದಕಾಲದಲ್ಲಿಯೂ ನಮ್ಮ ಹೃದಯದಲ್ಲೇ ಭಗವಂತನನ್ನು ಚಿಂತನೆ ಮಾಡಬೇಕು.

ಎಲ್ಲಿಯ ತನಕ ಹೃದಯದಲ್ಲೇ ಭಗವಂತನಿದ್ದಾನೆಂಬ ಚಿಂತನೆ, ಉಪಾಸನೆಗಳು ನಮಗೆ ಬರುವುದಿಲ್ಲವೋ? ಅಲ್ಲಿಯ ತನಕ ಭಗವಂತನು ನಮಗೆ ದೊರೆಯಲಾರ. ಆದ್ದರಿಂದಲೇ ಕಣ್ಮುಚ್ಚಿ ಧ್ಯಾನ ಮಾಡಬೇಕು. ಹೊರಗಿನ ಕಣ್ಮುಚ್ಚುವುದೆಂದರೆ ಒಳಗಣ್ಣಿನಿಂದ ಹೃದಯದಲ್ಲಿರುವ ಭಗವಂತನನ್ನು ಕಾಣುವುದು ಎಂದರ್ಥ.

ಬ್ರಹ್ಮಸೂತ್ರದ ಅಧ್ಯಯನವನ್ನು ಅನುಷ್ಠಾನಕ್ಕೆ ತರುವುದೆಂದರೆ ಹೃದಯದಲ್ಲಿರುವ ಭಗವಂತನನ್ನು ಪ್ರತಿಕ್ಷಣಗಳಲ್ಲಿಯೂ, ಪ್ರತಿಹೆಜ್ಜೆಯಲ್ಲಿಯೂ ಸ್ಮರಿಸುತ್ತಾ ಸರ್ವೋತ್ತಮನು, ಸರ್ವನಿಯಾಮಕನು ಸಕಲ ಗುಣಪರಿಪೂರ್ಣನೂ ಎಂದು ತಿಳಿಯುವಿಕೆ.

ಪ್ರಕೃತ ದ್ವಿತೀಯ ಪಾದದಲ್ಲಿರುವ ಗುಹಾಧಿಕರಣ, ಅಂತರ್ಯಾಮ್ಯಧಿಕರಣಗಳು ನಮ್ಮ ಹೃದಯದಲ್ಲೇ ಭಗವಂತನಿದ್ದಾನೆಂದು ಎಚ್ಚರಿಸುತ್ತಿದೆ.

ಪ್ರಕೃತ ತಾತ್ಪರ್ಯಚಂದ್ರಿಕೆಯಲ್ಲಿ ಅಂತರ್ಯಾಮ್ಯಧಿಕರಣವನ್ನು ಹೇಗೆ ಬಣ್ಣಿಸಿದ್ದಾರೆಂಬುದನ್ನು ತಿಳಿಯೋಣ.....

ಅಂತರ್ಯಾಮ್ಯಧಿಕರಣ

ಆನಂತರ್ಯ ಸಂಗತಿ ಹಾಗೂ ಅಂತರ್ಯಾಮಿ ಪ್ರಕೃತ್ಯಾದಿಗಳೋ ?
ಅಥವಾ ವಿಷ್ಣುವೋ? ಎಂದು ಸಂಶಯ

ಅಂತರ್ಯಾಮ್ಯಧಿಕರಣವು ಪ್ರಾರಂಭವಾಗುತ್ತಿದೆ. ಹಿಂದಿನ ಅಧಿಕರಣದಲ್ಲಿ ಚಕ್ಷುರಂತಃಸ್ಥನಾದವನು ವಿಷ್ಣುವೇ ಆಗಿದ್ದಾನೆಂದು ನಿರ್ಣಯಿಸಿದ್ದಾಯಿತು. ಆ ನಿರ್ಣಯಕ್ಕೆ ಅಮೃತತ್ವವನ್ನು ಹೇತುವೆಂದು ಹೇಳಿದರು. ಆದರೆ ವಿಷ್ಣುವಿನಲ್ಲಿ ಅಂತಹ ಅಮೃತತ್ವಾದಿ ಹೇತುಗಳೇ ಕೂಡುವುದಿಲ್ಲವೆಂದು ಈ ಅಧಿಕರಣದಲ್ಲಿ ಆಕ್ಷೇಪ ಮಾಡುತ್ತಿರುವುದರಿಂದ ಆನಂತರ್ಯ ಸಂಗತಿಯನ್ನು ತಿಳಿಯಬೇಕು.

'ಅಂತರ್ಯಾಮ್ಯಮೃತಃ' ಎಂಬ ಶ್ರುತಿ ವಾಕ್ಯ ಈ ಅಧಿಕರಣಕ್ಕೆ ವಿಷಯವಾಗಿದೆ. ಇಲ್ಲಿ ಕೇಳಿಸುತ್ತಿರುವ ಅಂತರ್ಯಾಮಿಯು ಪ್ರಕೃತ್ಯಾದಿಗಳೇಕಾಗಬಾರದು? ಎಂಬುದು ಪೂರ್ವಪಕ್ಷಿಗಳ ವಾದ. ವಿಷ್ಣುವೇ ಎಂದು ಸಿದ್ಧಾಂತಿಗಳ

ನಿರ್ಣಯ. ಆದ್ದರಿಂದ ಒಂದು ವೇಳೆ ಮುಂದೆ ಹೇಳುವ ಪ್ರಕಾರ ಅಂತರ್ಯಾಮಿಯು ಅಚೇತನಪರವಾದರೆ ಆವಾಗ ಜಡವಿದಿತತ್ವವು ಪ್ರಕೃತ್ಯಾದಿಗಳಲ್ಲಿ ಉಪಪನ್ನವಾಗುತ್ತದೆ. ಆವಾಗ ರೂಢ್ಯರ್ಥದಲ್ಲಿ ಬಾಧಕವಿಲ್ಲದ ಕಾರಣ ಪ್ರಕೃತ್ಯಾದಿಗಳನ್ನೇ ಶರೀರವಾಗಿ ಶರೀರವಾಗಿವುಳ್ಳ ವಿಷ್ಣುವೆಂಬರ್ಥವನ್ನು ಸ್ವೀಕರಿಸಬೇಕೆಂಬುದು ಯುಕ್ತವಾಗುವುದಿಲ್ಲ. ಆದ್ದರಿಂದ ಪ್ರಕೃತ್ಯಾದಿಗಳೇ ಅಂತರ್ಯಾಮಿಯೆಂದು ಪೂರ್ವಪಕ್ಷದ ಫಲ. ಜೀವನಿಗಿಂತ ಅಂತರ್ಯಾಮಿಗೆ ಭೇದವನ್ನು ಹೇಳುವ ವಚನಗಳಿರುವುದಿಲ್ಲವೆಂದು ಪೂರ್ವಪಕ್ಷಿಯ ಅಭಿಪ್ರಾಯ.

ಒಂದು ವೇಳೆ ಚೇತನ ಪರವಾದರೆ ಆವಾಗ ಸಾಕಲ್ಯೇನಾವಿದಿತತ್ವವು ಪ್ರಕೃತ್ಯಾದಿಗಳಲ್ಲಿ ಕೂಡುವುದಿಲ್ಲ. ಹೀಗೆ ಬಾಧಕವಿರುವುದರಿಂದರೂಢಿಯನ್ನುಬಿಟ್ಟುಶೀರ್ಯಮಾಣತ್ವಎಂಬಯೋಗದಿಂದವಿಷ್ಣುವಿನಲ್ಲೂಸಹಪ್ರಕೃತ್ಯಾದಿಗಳೇ ಶರೀರವಾಗಿವೆಯೆಂಬರ್ಥವನ್ನು ಕೂಡಿಸಬಹುದು. ಆದ್ದರಿಂದ ವಿಷ್ಣುವೇ ಅಂತರ್ಯಾಮಿಯಾಗಿದ್ದಾನೆಂದು ಸಿದ್ಧಾಂತದ ಫಲ.

ಪ್ರಕೃತಿಯೇ ಅಂತರ್ಯಾಮಿಯೆಂದು ಪೂರ್ವಪಕ್ಷ

ಪೂರ್ವಪಕ್ಷ ಹೀಗಿದೆ - ''ಏಷ ತ ಆತ್ಮಾಂತರ್ಯಾಮೀ'' ಎಂಬ ವಿಷಯ ವಾಕ್ಯದಲ್ಲಿ ಪ್ರತಿಪಾದ್ಯವಾದ ಅಂತರ್ಯಾಮಿಯು ಪ್ರಕೃತಿಯೇ ಆಗಿದೆ. ಪ್ರಕೃತಿಯನ್ನು ಅಂತರ್ಯಾಮಿ ಎಂದು ಹೇಳಿದರೆ ಶ್ರುತಿಯಲ್ಲಿ ಹೇಳಲ್ಪಟ್ಟ ಪೃಥ್ವಾದಿಗಳು ಶರೀರವಾಗಿವೆ ಎಂಬ ಮಾತನ್ನು ಸುಲಭವಾಗಿ ಕೂಡಿಸಬಹುದು. ಪೃಥ್ವಾದಿಗಳಿಗೆ ಉಪಾದಾನವಾದ್ದರಿಂದ ಸ್ವರೂಪ ಎಂಬರ್ಥದಲ್ಲಿ ಶರೀರಶಬ್ದವನ್ನು ಪ್ರಯೋಗಿಸುವುದು ಕಷ್ಟವಾಗುವುದಿಲ್ಲ. ಆದರೆ ದಿಕ್ ಮೊದಲಾದವುಗಳು ಅಪ್ರಾಕೃತವಾದ್ದರಿಂದ ಪ್ರಕೃತಿಗೆ ಶರೀರಗಳಾಗಿವೆ ಎಂಬ ಮಾತನ್ನು ಕೂಡಿಸುವುದು ಸ್ವಲ್ಪ ಕಷ್ಟವಾಗುತ್ತದೆ. ಆದರೆ ಬ್ರಹ್ಮನು ಅಂತರ್ಯಾಮಿ ಎಂಬ ಪಕ್ಷವನ್ನು ಆಶ್ರಯಿಸಿದಾಗ ಪೃಥ್ವಾದಿಗಳು ಶರೀರವಾಗಿವೆ ಎಂಬ ಮಾತನ್ನೇ ಕೂಡಿಸಲು ಸಾಧ್ಯವಿಲ್ಲ. 'ಶೀರ್ಯಮಾಣತ್ವ' ಎಂಬ ಯೌಗಿಕಾರ್ಥವನ್ನು ಸ್ವೀಕರಿಸಲು ಹೊರಟರೆ ಅಪ್ರಾಕೃತವಾದ ದಿಗಾದಿಗಳಲ್ಲಿ ಅದೂ ಸಹ ತಪ್ಪಾಗುತ್ತದೆ. ಆದ್ದರಿಂದ ಪ್ರಕೃತಿಯನ್ನೇ ಅಂತರ್ಯಾಮಿಯೆನ್ನಬೇಕು. ದಿಕ್ ಮೊದಲಾದವನ್ನು ಶರೀರವೆಂದು ಹೇಳಿದ್ದರೆ ಗೌಣಾರ್ಥ ಮಾಡಬೇಕು.

ಪ್ರಕೃತಿಯನ್ನು ಅಂತರ್ಯಾಮಿ ಎಂದು ಹೇಳಿದಾಗ ಅನೇಕ ಬಾಧಕಗಳಿಗೆ ಅವಕಾಶವಿದೆ -

ಹೇಗೆಂದರೆ 'ಯಃ ಪೃಥಿವ್ಯಾಂ ತಿಷ್ಠನ್' ಎಂಬಲ್ಲಿ ಹೇಳಲ್ಪಟ್ಟ ಪೃಥಿವ್ಯಾದಿ ಆಧಾರತ್ವವು ಬಾಧಕವೋ. 'ಯಮಯತಿ' ಎಂಬಲ್ಲಿ ಹೇಳಲ್ಪಟ್ಟ ಪೃಥಿವ್ಯಾದಿ ನಿಯಾಮಕತ್ವವು ಬಾಧಕವೋ? ಅಥವಾ 'ಆತ್ಮಾನಂ ಯಮಯತಿ' ಎಂಬಲ್ಲಿ ಹೇಳಲ್ಪಟ್ಟ ಚೇತನ ನಿಯಾಮಕತ್ವವು ಬಾಧಕವೋ? ಅಥವಾ ಆತ್ಮಾವಿದಿತತ್ವವು ಬಾಧಕವೋ?. ''ಅದೃಷ್ಟೋ ದ್ರಷ್ಟಾಶ್ರುತಃ ಶ್ರೋತಾ ಅಮತೋ ಮಂತಾ ಅವಿಜ್ಞಾತೋ ವಿಜ್ಞಾತಾ'' ಎಂಬಲ್ಲಿ ಹೇಳಲ್ಪಟ್ಟ ದ್ರಷ್ಟತ್ವಾದಿಗಳು ಬಾಧಕಗಳೋ? ಎಂದು ಪ್ರಶ್ನಿಸುತ್ತೇವೆ ಎಂದರೆ ಈ ಯಾವ ಬಾಧಕಗಳಿಗೂ ಅವಕಾಶವಿಲ್ಲ. ಏಕೆಂದರೆ ಕಾರ್ಯದಲ್ಲಿ ಕಾರಣವಿದೆಯೆಂಬ ಪ್ರಯೋಗವು ಲೋಕದಲ್ಲಿ ಕಾಣಿಸುತ್ತಿದೆ. ಪೃಥಿವಿ ಹಾಗೂ ಪ್ರಕೃತಿಗಳಿಗೆ ಕಾರ್ಯಕಾರಣ ಭಾವವಿದ್ದರೂ ಆಧಾರಾಧೇಯಭಾವದಿಂದ ವ್ಯವಹರಿಸಬಹುದು.

ಇನ್ನು 'ಪೃಥಿವೀಂ ಯಮಯತಿ' ಎಂಬಲ್ಲಿ ಕೇಳಿಸುತ್ತಿರುವ ಪೃಥಿವ್ಯಾದಿನಿಯಾಮಕತ್ವವು ಪ್ರಕೃತಿಯಲ್ಲಿ ಕೂಡುವುದಿಲ್ಲವೆಂದು ಹೇಳಬೇಕು. ಆದರೆ ಆತ್ಮನ ಪ್ರವೃತ್ತಿಯು ಶರೀರದ ಮೂಲಕವೇ ಆಗಬೇಕೇ ಹೊರತು ನೇರವಾಗಿ ಆಗುವುದಿಲ್ಲ. ಆದ್ದರಿಂದ ಆತ್ಮನು ಪ್ರಕೃತ್ಯಧೀನವೆಂದು ಹೇಳಬಹುದು.

'ಯಮಾತ್ಮಾ ನ ವೇದ' ಎಂಬಲ್ಲಿ ಆತ್ಮನಿಂದ ಅಂತರ್ಯಾಮಿಯು ತಿಳಿಯಲು ಸಾಧ್ಯವಿಲ್ಲ ಎಂದು ಹೇಳಲಾಗಿದೆ. ಇದನ್ನೂ ಸಹ ಪ್ರಕೃತಿಯಲ್ಲಿ ಕೂಡಿಸಬಹುದು. ಏಕೆಂದರೆ 'ಅಪ್ರತರ್ಕ್ಯಮವಿಜ್ಞೇಯಂ' ಇತ್ಯಾದಿ ವಾಕ್ಯಗಳಂತೆ ಪ್ರಕೃತಿಯನ್ನು ಸಾಕಲ್ಯೇನ ತಿಳಿಯಲು ಯಾರಿಂದಲೂ ಸಾಧ್ಯವಿಲ್ಲ.

ಅಂತರ್ಯಾಮಿಯಲ್ಲಿ 'ದ್ರಷ್ಟಾ ಶ್ರೋತಾ' ಇತ್ಯಾದಿಯಾಗಿ ದ್ರಷ್ಟೃತ್ವ, ಶ್ರೋತೃತ್ವಾದಿಗಳು ಕೇಳಿಸುತ್ತಿವೆ. ಇವುಗಳು ಪ್ರಾಕೃತವಾದ ಇಂದ್ರಿಯಗಳು ದರ್ಶನ ಸಾಧನವಾದ್ದರಿಂದ ಪ್ರಕೃತಿಯನ್ನು ದ್ರಷ್ಟಾಶ್ರೋತಾ ಇತ್ಯಾದಿಯಾಗಿ ಹೇಳಬಹುದು. ಏಕೆಂದರೆ ಕರಣದಲ್ಲಿ ಕರ್ತೃತ್ವದ ಪ್ರಯೋಗವನ್ನು ಮಾಡುವುದು ಕಂಡಿದೆ. (ಹಂತಾ ರಾಮಶರಃ ಇತ್ಯಾದಿ ಸ್ಥಳದಲ್ಲಿ) ಅಥವಾ ಅಭಿಮಾನಿಯಾದ ಜೀವನಲ್ಲಿ ದ್ರಷ್ಟೃತ್ವಾದಿಗಳಿರುವುದರಿಂದ ಅಭಿಮನ್ಯಮಾನವಾದ ಪ್ರಕೃತಿಯಲ್ಲೂ ಸಹ ದ್ರಷ್ಟೃತ್ವಾದಿಗಳನ್ನು ಹೇಳಬಹುದು. ಆದ್ದರಿಂದ ಪ್ರಕೃತಿಯೇ ಅಂತರ್ಯಾಮಿಯೆಂದು ಹೇಳಿದಾಗ ಯಾವ ಆಡಚಣೆಯಿರುವುದಿಲ್ಲ.

ಪ್ರಕೃತಿ, ಅಂತರ್ಯಾಮಿಗಳು ಪೂರ್ವಪಕ್ಷಕ್ಕೆ ವಿಷಯವಲ್ಲವೆಂಬ ಪರಕೀಯಪಕ್ಷ ನಿರಾಸ

ನಮ್ಮ ಸಿದ್ಧಾಂತದ ಪ್ರಕಾರ ಪ್ರಕೃತಿ ಹಾಗೂ ಅಭಿಮಾನಿಯಾದ ದೇವತೆಯು ಅಂತರ್ಯಾಮಿಯೆಂದು ಪೂರ್ವಪಕ್ಷ ಮಾಡಲಾಗಿದೆ. ಆದರೆ ಅದ್ವೈತಿಗಳು ಹಾಗೂ ರಾಮಾನುಜರು ಇದಕ್ಕೆ ವಿರುದ್ಧವಾಗಿ ಜೀವಸಾಮಾನ್ಯನನ್ನು ಪೂರ್ವಪಕ್ಷಕ್ಕೆ ವಿಷಯನೆನ್ನುತ್ತಾರೆ. ಪ್ರಕೃತಿಯಲ್ಲಿ ಜ್ಞಾನವಿಷಯತ್ವವನ್ನು ಹೇಳುವ ದ್ರಷ್ಟೃತ್ವವು ಕೂಡುವುದಿಲ್ಲವೆಂಬ ಒಂದು ಯುಕ್ತಿ ಬಿಟ್ಟರೆ ಬೇರೆ ಯುಕ್ತಿಯನ್ನು ಅವರು ಹೇಳಲಾರರು.

ಇವರ ವಾದದಲ್ಲಿ ಹುರುಳಿಲ್ಲ. ಸ್ವತಃ ಅವರೇ ಈಕ್ಷತ್ಯಧಿಕರಣದಲ್ಲಿ ಪ್ರಕೃತಿಗೆ ಗೌಣವಾದ ಜ್ಞಾನವಿಷಯತ್ವವನ್ನು ಒಪ್ಪಿದ್ದಾರೆ. ಅಷ್ಟೇ ಅಲ್ಲದೆ ಇದೇ ಅಧಿಕರಣದ ಸಿದ್ಧಾಂತದಲ್ಲಿ ಬ್ರಹ್ಮನಿಗೆ ಆರೋಪಿತವಾದ ಜ್ಞಾನವಿಷಯತ್ವವನ್ನು ಒಪ್ಪಿದ್ದಾರೆ. ಹೀಗೆ ಬೇರೆ ಕಡೆ ಗೌಣವಾದ ದ್ರಷ್ಟೃತ್ವವನ್ನು ಒಪ್ಪುವ ಅವರು ಪ್ರಕೃತಿಯಲ್ಲೇಕೆ ಗೌಣವಾದ ದ್ರಷ್ಟೃತ್ವವನ್ನು ನಿರಾಕರಿಸುತ್ತಾರೆಂಬುದು ಅರ್ಥವಾಗದ ವಿಚಾರ. ಮತ್ತು ಪ್ರಕೃತಿಯು ಪೂರ್ವಪಕ್ಷಕ್ಕೆ ವಿಷಯವಾಗದಿದ್ದ ಮೇಲೆ ಸೂತ್ರಕಾರರು 'ನಚ ಸ್ಮಾರ್ತಮ್' ಎಂಬ ಸೂತ್ರದಲ್ಲಿ ಪ್ರಕೃತಿಯನ್ನು ನಿಷೇಧಿಸಿದ್ದೂ ಸಹ ವ್ಯರ್ಥವಾಗುತ್ತದೆ.

ಪ್ರಕೃತಿಯು ಈ ಅಧಿಕರಣದ ಪೂರ್ವಪಕ್ಷಕ್ಕೆ ವಿಷಯವಾದಂತೆ ಅಭಿಮಾನಿದೇವತೆಯೂ ಸಹ ಅಂತರ್ಯಾಮಿಯೆಂದು ಪೂರ್ವಪಕ್ಷ ಮಾಡಬಹುದು. ಈ ಪಕ್ಷದಲ್ಲಿ ಪೃಥಿವ್ಯಾದಿಗಳಿಗೆ ಶರೀರತ್ವವನ್ನು ಉಪಪಾದಿಸುವುದು ಸುಲಭವಾಗುತ್ತದೆ. ಆದರೆ ಭಾಮತಿಯಲ್ಲಿ ಒಬ್ಬನೇ ಅಭಿಮಾನಿ ಜೀವನಿಗೆ ಸಮಸ್ತ ಜಗತ್ತಿನ ನಿಯಾಮಕತ್ವವು ಅಸಂಭಾವಿತವಾದ್ದರಿಂದ ಅಭಿಮಾನಿದೇವತೆಯೆಂಬ ಪಕ್ಷವನ್ನು ನಿರಾಕರಿಸಲಾಗಿದೆ.

ಆದರೆ ಅಭಿಮಾನಿದೇವತೆಯನ್ನು ನಿರಾಕರಿಸುವ ಭಾಮತಿಕಾರ ಜೀವಸಾಮಾನ್ಯನನ್ನು ಅಂತರ್ಯಾಮಿಯೆಂದು ಒಪ್ಪಿರುವುದು ಹಾಸ್ಯಾಸ್ಪದ ವಿಚಾರ. ಒಬ್ಬ ಅಭಿಮಾನಿಗೆ ಸಕಲ ಜಗತ್ಪೇರಕಶಕ್ತಿಯು ಬಾರದಿದ್ದಾಗ ಒಬ್ಬ ಜೀವ ಸಾಮಾನ್ಯನಿಗೆ ಅಂತಹ ಶಕ್ತಿ ಎಲ್ಲಿಂದ ಬರುತ್ತದೆಂದು ತಿಳಿಯುವುದಿಲ್ಲ. ಮತ್ತು ಜೀವಸಾಮಾನ್ಯನು ಅಂತರ್ಯಾಮಿಯೆಂದು ಹೇಳಿದರೆ ಅವನಿಗೆ ಪೃಥಿವೀ, ಪ್ರಾಣ ಮೊದಲಾದವುಗಳ ಸಮುದಾಯವು ಶರೀರವಾಗಿದೆ ಹೊರತು ಕೇವಲ ಪೃಥಿವಿಯಾಗಲೀ, ಕೇವಲ ಪ್ರಾಣಾದಿಗಳಾಗಲೀ ಶರೀರಗಳಾಗಿರುವುದಿಲ್ಲ. ಆದ್ದರಿಂದ ಶ್ರುತಿಯಲ್ಲಿ ಹೇಳಲ್ಪಟ್ಟ ಕೇವಲ ಪೃಥ್ವಾದಿ ಶರೀರತ್ವವು ತಪ್ಪಾಗುತ್ತದೆ. ಆದರೆ ಅಭಿಮಾನಿ ದೇವತೆಯಲ್ಲಿ ಆಯಾ ಭೂತಗಳಿಗೆ ಅಭಿಮಾನಿಯಾಗಿದ್ದಾರೆಂಬ ಕಾರಣದಿಂದಲೇ ಅವುಗಳನ್ನು ಶರೀರವೆಂದು ಹೇಳಬಹುದು.

ಪರಿಪೂರ್ಣಚಂದ್ರಿಕಾ

ಆದ್ದರಿಂದ ಅಭಿಮಾನಿದೇವತೆಗಳೇ ಅಂತರ್ಯಾಮಿಯು ಭಿನ್ನನಾದ್ದರಿಂದ ಅಕ್ಷಿಸ್ಥ ಹೊರತು ವಿಷ್ಣುವಲ್ಲವೆಂಬ ಪೂರ್ವಪಕ್ಷವು ದೃಢವಾಗುತ್ತದೆ. ವಿಷ್ಣುವಿನಲ್ಲಿ ಪೃಥಿವ್ಯಾದಿ ಶರೀರತ್ವವನ್ನು ಯೌಗಿಕವಾಗಿ ಹೇಳಬಹುದು. ಆದರೆ ಯೋಗಕ್ಕಿಂತ ರೂಢಿಯು ಪ್ರಬಲವಾದ್ದರಿಂದ ರೂಢ್ಯರ್ಥವನ್ನೇ ಸ್ವೀಕರಿಸಬೇಕು. ಬಾಧಕವಿದ್ದಾಗ ರೂಢ್ಯರ್ಥವನ್ನು ಬಿಡಬಹುದಾದರೂ ಇಲ್ಲಿ ಅಂತಹ ಬಾಧಕಗಳೇನೂ ಕಾಣಿಸುತ್ತಿಲ್ಲ.

ಈ ಎಲ್ಲಾ ಕಾರಣಗಳಿಂದ ಅಂತರ್ಯಾಮಿಯು ಭಿನ್ನನಾದ್ದರಿಂದ ಅಕ್ಷಿಸ್ಥ ಪುರುಷನು ವಿಷ್ಣುವಾಗುವುದಿಲ್ಲ. ಪೃಥಿವ್ಯಾದಿಗಳಿಗೆ ಅಭಿಮಾನಿಯಾದ ಜೀವ ಅಥವಾ ಪ್ರಕೃತಿ ಆಗುತ್ತದೆ. ಅಮೃತತ್ವವೂ ಸಹ ಜೀವ ಅಥವಾ ಪ್ರಕೃತಿಯಲ್ಲಿಯೇ ಉಪಪನ್ನವಾಗುತ್ತದೆ. ಹೀಗಿರುವಾಗ ಹಿಂದಿನ ಅಂತರಾಧಿಕರಣದಲ್ಲಿ ಅಮೃತತ್ವವೆಂಬ ಹೇತುವಿನಿಂದ ಅಕ್ಷಿಸ್ಥನಾದವನು ವಿಷ್ಣುವೇ ಆಗುತ್ತಾನೆಂದು ಸಮರ್ಥಿಸುವುದು ಹೇಗೆ ಯುಕ್ತವಾಗುತ್ತದೆ ? ಇಷ್ಟು ಪೂರ್ವಪಕ್ಷಿಗಳ ಅಭಿಪ್ರಾಯ.

ಸರ್ವಾಂತರ್ಯಾಮಿಯಾದವನು ವಿಷ್ಣುವೇ ಎಂದು ಸಿದ್ಧಾಂತ

ಅಧಿಕರಣದ ಸಿದ್ಧಾಂತ ಹೀಗಿದೆ - ಸಕಲರಲ್ಲಿ ಅಂತರ್ಯಾಮಿಯಾಗಿ ನೆಲೆಸಿರುವನು ಮಹಾವಿಷ್ಣುವೇ ಆಗಿದ್ದಾನೆ. ಯಾವ ಶ್ರುತಿಯು ಹೀಗೆ ಹೇಳುತ್ತಿದೆಯೋ ಅದೇ ಶ್ರುತಿಯಲ್ಲಿ ಕೇಳಿಸುತ್ತಿರುವ ಪೃಥಿವ್ಯಾದ್ಯವಿದಿತತ್ವವು ವಿಷ್ಣುವಿನಲ್ಲಿ ಸುಲಭವಾಗಿ ಬರುತ್ತದೆ. ಪೃಥಿವೀ ಶಬ್ದಕ್ಕೆ ಜಡವೆಂದು ಅರ್ಥವಲ್ಲ. ಹಾಗಾದಲ್ಲಿ ಅಪ್ರಸಕ್ತ ವಿಷಯ ನಿಷೇಧ ಮಾಡಿದಂತಾಗುತ್ತದೆ ಆದ್ದರಿಂದ ಅಭಿಮಾನಿಚೇತನರೆಂಬರ್ಥವನ್ನು ಹೇಳಬೇಕು. ಅಂತಹ ಅಭಿಮಾನಿಚೇತನರಿಂದ ಸಂಪೂರ್ಣವಾಗಿ ತಿಳಿಯಲು ಅಸಮರ್ಥನಾದವನು ಈಶ್ವರನೊಬ್ಬನೇ ಹೊರತು ಪ್ರಕೃತ್ಯಾದಿಗಳಲ್ಲ.

ಅಂತರತ್ವವೂ ಸಹ ವಿಷ್ಣುವಿನ ಧರ್ಮವೇ ಆಗಿದೆ -

ಪೃಥಿವ್ಯಾದ್ಯವಿದಿತತ್ವವು ಪರಮಾತ್ಮನಲ್ಲಿ ಬರುವಂತೆ ಅಂತರತ್ವವೂ ಸಹ ಬರುತ್ತದೆ. ಏಕೆಂದರೆ ಬಾಹ್ಯಪದಾರ್ಥಗಳ ಅಪೇಕ್ಷೆಯಿಲ್ಲದೇ ಯಾರು ವಿಹರಿಸುತ್ತಾರೋ ಅಂತಹವನು 'ಅಂತರಃ' ಎನಿಸುತ್ತಾನೆ. ಮತ್ತು ಅತ್ಯಂತ ಪ್ರಿಯನಾದ್ದರಿಂದಲೂ ಶ್ರೀಹರಿಯು ಅಂತರನೆಂದು ಹೇಳಲ್ಪಟ್ಟಿದ್ದಾನೆ.

ಪೂರ್ವಪಕ್ಷಕ್ಕೆ ಪ್ರಬಲ ಹೇತುವಾಗಿರುವ ಪೃಥಿವ್ಯಾದಿ ಶರೀರತ್ವವೂ ಸಹ ವಿಷ್ಣುವಿನಲ್ಲೇ ಉಪಪನ್ನವಾಗುತ್ತದೆ. ಅಗ್ನಿಯಲ್ಲಿ ಇಂದ್ರ ಶಬ್ದಪ್ರಯೋಗವನ್ನು ಯೌಗಿಕವಾಗಿ ಮತ್ತು ಗೌಣವಾಗಿ ಮಾಡುವಂತೆ ವಿಷ್ಣುವಿನಲ್ಲೂ ಯೌಗಿಕವಾಗಿ ಮತ್ತು ಗೌಣವಾಗಿ ಪೃಥಿವ್ಯಾದಿಶರೀರತ್ವವನ್ನು ಕೂಡಿಸಬೇಕು. ರೂಢ್ಯರ್ಥದಲ್ಲಿ ಬಾಧವಿರುವುದೇ ಇದಕ್ಕೆ ಕಾರಣ.

ಸೂತ್ರಗಳ ಜೋಡಣೆಯು ಸ್ವಾರಸ್ಯಮಯವಾಗಿದೆ

ಶಾರೀರ ಪದಕ್ಕೆ ಭಾಷ್ಯ ಹಾಗೂ ಟೀಕೆಗಳಲ್ಲಿ ಯೋಗಾರ್ಥವನ್ನಷ್ಟೇ ಹೇಳಲಾಗಿದೆ. ಬೃಹದಾರಣ್ಯಕ ಭಾಷ್ಯದಲ್ಲಿ ಗೌಣಾರ್ಥವನ್ನು ಹೇಳಲಾಗಿದೆ. ಎರಡೂ ಭಾಷ್ಯಗಳನ್ನು ವಿವಕ್ಷಿಸಿ ಪ್ರಕೃತ ಗ್ರಂಥಕಾರರು ವ್ಯಾಖ್ಯಾನಿಸುತ್ತಿದ್ದಾರೆಂಬ ಅಂಶವನ್ನು ಗಮನಿಸಬೇಕು.

ಪರಮಾತ್ಮನೇ ಅಂತರ್ಯಾಮಿಯೆಂದು ಹೇಳುವುದರಿಂದ 'ಯ ಆತ್ಮನಿ ತಿಷ್ಠನ್' ಎಂಬುದನ್ನು ಸ್ವರಸವಾಗಿ ಅರ್ಥೈಸಿದಂತಾಗುತ್ತದೆ.

ಸೂತ್ರಗಳ ಜೋಡಣೆಯು ಸ್ವಾರಸ್ಯಮಯವಾಗಿದೆ. ಮೊದಲನೆಯ ಸೂತ್ರವು ಸ್ವಪಕ್ಷದಲ್ಲಿ ಸಾಧಕ

ಪ್ರಮಾಣವನ್ನು ಹೇಳಿದೆ.

ಎರಡನೆಯ ಸೂತ್ರವು ಪ್ರಧಾನ ಹಾಗೂ ಜೀವಪಕ್ಷಗಳಲ್ಲಿ ಸಾಧಕವಿಲ್ಲವೆಂದು ಹೇಳಿದೆ. ಏಕೆಂದರೆ ಮೂರನೆಯ ಸೂತ್ರದಲ್ಲಿರುವ 'ಶಾರೀರಶ್ಚ' ಎಂಬ ಪದವು ಎರಡನೆಯ ಸೂತ್ರದಲ್ಲೂ ಅನ್ವಯವಾಗುತ್ತದೆ.

ಮೂರನೆಯ ಸೂತ್ರದಲ್ಲಿ ಜೀವಪಕ್ಷದಲ್ಲಿ ಬಾಧಕವನ್ನು ಹೇಳಲಾಗಿದೆ.

ಬೃಹದಾರಣ್ಯಕ ಭಾಷ್ಯದಿಂದ ವಿರೋಧ ಶಂಕೆ ಹಾಗೂ ಸಮಾಧಾನಗಳು

ಬೃಹದಾರಣ್ಯಕ ಭಾಷ್ಯದಲ್ಲಿ ಆತ್ಮಶಬ್ದಕ್ಕೆ ಚತುರ್ಮುಖ ಎಂಬರ್ಥವನ್ನು ಹೇಳಿದ್ದಾರೆ. ಆದರೆ ಪ್ರಕೃತ ಜೀವನೆಂಬರ್ಥವನ್ನು ಒಪ್ಪಿ ಜೀವಭೇದದ ವಿಷಯದಲ್ಲಿ ಆದೇ ಶ್ರುತಿಯನ್ನು ಪ್ರಮಾಣವನ್ನಾಗಿ ಹೇಳಿದ್ದಾರೆ. ಇದು ವಿರುದ್ಧವಲ್ಲವೇ? ಎಂದು ಪ್ರಶ್ನಿಸಬಾರದು. ಚತುರ್ಮುಖಬ್ರಹ್ಮನಿಗೆ ನಿಯಾಮಕನಾದ್ದರಿಂದ ಬ್ರಹ್ಮನು ಚತುರ್ಮುಖಬ್ರಹ್ಮನಿಗಿಂತ ಭಿನ್ನನಾಗಿದ್ದಾನೆಂಬ ವಿಷಯವು ಸ್ಪಷ್ಟವಾಗಿ ತಿಳಿಯುತ್ತದೆ. ಚತುರ್ಮುಖನಿಂದಲೇ ಭಿನ್ನನಾದ ಮೇಲೆ ಚತುರ್ಮುಖನಿಂದ ಅಭಿಮನ್ಯಮಾನರಾದ ಸಕಲಜೀವರಿಗಿಂತ ಭಿನ್ನನಾಗಿದ್ದಾನೆಂದು ಇನ್ನೂ ಸ್ಪಷ್ಟವಾಗಿ ತಿಳಿಯುತ್ತದೆ. ಆದ್ದರಿಂದ ವಿರೋಧಕ್ಕೆ ಅವಕಾಶವಿಲ್ಲ.

'ಅಂತರ' ಶಬ್ದಕ್ಕೆ ಬೃಹದಾರಣ್ಯಕ ಭಾಷ್ಯದಲ್ಲಿ 'ಬಾಹ್ಯವಸ್ತುಗಳ ಅಪೇಕ್ಷೆಯಿಲ್ಲದೇ ಪೀಡಿಸುವಿಕೆ' ಎಂಬರ್ಥವನ್ನು ಹೇಳಿದ್ದಾರೆ. ಆದರೆ ಪ್ರಕೃತ ಟೀಕೆಯಲ್ಲಿ ಕೇವಲ ಭೇದವೆಂಬರ್ಥವನ್ನು 'ಅಂತರ' ಶಬ್ದಕ್ಕೆ ಹೇಳಿದ್ದಾರೆ. ಇದರ ವಿರೋಧ ಬರುತ್ತದಲ್ಲವೇ? ಎಂದೂ ಸಹ ಪ್ರಶ್ನಿಸಬಾರದು. 'ಆತ್ಮನೋ ಅಂತರಃ' ಎಂಬ ಶ್ರುತಿಯಲ್ಲಿರುವ ಅಂತರ ಶಬ್ದಕ್ಕೆ ಭೇದವೆಂಬರ್ಥವನ್ನು ಟೀಕೆಯಲ್ಲಿ ವಿವಕ್ಷಿಸಲಾಗಿದೆ. ಆದರೆ ಬೃಹದಾರಣ್ಯಕ ಭಾಷ್ಯದಲ್ಲಿ 'ಆತ್ಮಾನಾಂ ಅಂತರಃ' ಎಂಬಲ್ಲಿರುವ ಅಂತರ ಶಬ್ದವನ್ನು ಸ್ವೀಕರಿಸಿ ಅಂತಃಸ್ಥಿತ್ವ ರಮಣವೆಂಬ ಅರ್ಥವನ್ನು ಹೇಳಿದ್ದಾರೆ. ಆದ್ದರಿಂದ ಪರಸ್ಪರ ವಿರೋಧವಿರುವುದಿಲ್ಲ.

ಬೃಹದಾರಣ್ಯಕದಲ್ಲಿ ಮೂರು ಪ್ರಕರಣಗಳಿವೆ - ೧. ಅಭಿಮಾನಿ ದೇವತಾ ಪ್ರಕರಣ, ೨. ಅಧಿದೈವ ಪ್ರಕರಣ, ೩. ಅಧ್ಯಾತ್ಮ ಪ್ರಕರಣ ಎಂದು. ಈ ಮೂರು ಪ್ರಕರಣಗಳಲ್ಲಿಯೂ ಅಂತರ್ಯಾಮಿಯಾಗಿ ಹೇಳಲ್ಪಟ್ಟವನು ವಿಷ್ಣುವೇ ಪ್ರತಿಪಾದ್ಯನಾಗಿದ್ದಾನೆಂಬ ವಿಚಾರವು ನಿರ್ಧಾರವಾಯಿತು.

ಅದ್ವೈತಿಗಳ ಅಧಿಕರಣ ಶರೀರ

ಅದ್ವೈತಿಗಳ ಅಧಿಕರಣ ಶರೀರ ಹೀಗಿದೆ -

ಬೃಹದಾರಣ್ಯಕೋಪನಿಷತ್ತಿನಲ್ಲಿರುವ 'ಯಃ ಪೃಥಿವ್ಯಾಂ ತಿಷ್ಠನ್' ಎಂಬ ವಾಕ್ಯವನ್ನೇ ಅದ್ವೈತಿಗಳೂ ಸಹ ವಿಷಯವಾಕ್ಯವೆಂದು ಹೇಳುತ್ತಾರೆ. ಈ ವಾಕ್ಯದಲ್ಲಿ ಲೋಕ, ವೇದ, ಯಜ್ಞ, ಪ್ರಾಣಿ ಮತ್ತು ಆತ್ಮ ಇವುಗಳ ಒಳಗಡೆ ನಿಯಾಮಕನಾಗಿ ನೆಲೆಸಿರುವ ವ್ಯಕ್ತಿಯನ್ನು ಪ್ರಸ್ತಾಪ ಮಾಡಲಾಗಿದೆ. ಈ ವ್ಯಕ್ತಿಯು ಅದೃಷ್ಟದ ಮೂಲಕ ಜೀವನಾಗಬಹುದು. ಅಥವಾ ಯೋಗಿಪುರುಷನೂ ಆಗಬಹುದು. ಅಥವಾ ದೇವತೆಗಳಾಗಬಹುದು. ಆದರೆ ಶರೀರವಿಲ್ಲದ ಬ್ರಹ್ಮನು ಅಂತರ್ಯಾಮಿಯಾಗಲು ಸಾಧ್ಯವಿಲ್ಲ. ನಿಯಾಮಕನೂ ಸಹ ಆಗಲಾರನು. ಇಷ್ಟು ಪೂರ್ವಪಕ್ಷ.

ಸರ್ವನಿಯಾಮಕತ್ವವು ಬ್ರಹ್ಮನ ಧರ್ಮವಾಗಿದೆ. ಅವನಿಂದ ನಿಯಮ್ಯವಾದ ಪ್ರಪಂಚವೇ ಶರೀರವಾಗಿದೆ. ಅಥವಾ ತನ್ನಲ್ಲಿರುವ ಮಾಯಾಶಕ್ತಿಯಿಂದ ಶರೀರದ ಅಪೇಕ್ಷೆ ಇಲ್ಲದೆಯೂ ಪ್ರಪಂಚವನ್ನು ನಿಯಮನ ಮಾಡುವ ಸಾಮರ್ಥ್ಯ ಅವನಿಗಿದೆ. ಆತ್ಮನಿಗೆ ಒಬ್ಬ ನಿಯಾಮಕನಿರುವುದಾದರೆ ಅವನಿಗೆ ಮತ್ತೊಬ್ಬ ನಿಯಾಮಕನು

ಇರಬೇಕಾಗುತ್ತದೆಂದು ಅನವಸ್ಥಾದೋಷಕ್ಕೆ ಅವಕಾಶವಿಲ್ಲ. ನಿಯಮ್ಯನಾದ ಜೀವಾತ್ಮನು ಮತ್ತು ನಿಯಾಮಕನಾದ ಪರಮಾತ್ಮನು ಒಬ್ಬನೇ ಆಗಿದ್ದಾನೆ. ಇವರಿಬ್ಬರಿಗೆ ತಾತ್ತ್ವಿಕವಾದ ಭೇದವಿರುವುದಿಲ್ಲ. ಮತ್ತು ಈ ಪ್ರಕರಣದಲ್ಲಿ 'ಏಷ ತ ಆತ್ಮಾ' ಎಂಬ ಶ್ರುತಿಯಲ್ಲಿ ಆತ್ಮತ್ವ, ಅಮೃತತ್ವ ಮೊದಲಾದ ಧರ್ಮಗಳನ್ನು ಆದ್ಯಶಂತ್ವಾದಿಧರ್ಮಗಳನ್ನು ಹೇಳಲಾಗಿದೆ. ಇವೆಲ್ಲವೂ ಬ್ರಹ್ಮನ ಅಸಾಧಾರಣಧರ್ಮವಾದ್ದರಿಂದ ಬ್ರಹ್ಮನೇ ಅಂತರ್ಯಾಮಿಯಾಗಿದ್ದಾನೆಂದು ಸಿದ್ಧಾಂತ.

ಈ ಅಧಿಕರಣ ಶರೀರವು ತಪ್ಪು. ಅಜ್ಞಾನವೇ ಕಲ್ಪಿತವಾದದ್ದು. ಅಜ್ಞಾನ ಕಲ್ಪಿತವಾದ ಜಗತ್ತು ಬ್ರಹ್ಮನ ಶರೀರವಾದರೆ ಶುಕ್ತಿಯ ಅಜ್ಞಾನದಿಂದ ಕಲ್ಪಿತವಾದ ರಜತವೂ ಸಹ ಶುಕ್ತಿಯ ಶರೀರವಾಗಬೇಕಾಗುತ್ತದೆ. ಮತ್ತು ನಮ್ಮಂತೆ ಬ್ರಹ್ಮನೂ ಸಹ ಸಂಸಾರಿಯಾಗಬೇಕಾಗುತ್ತದೆ. ಜಗತ್ತನ್ನು ಸೃಷ್ಟಿ ಮಾಡುವ ಮೊದಲು ಶರೀರ ರಹಿತನಾಗಿ ಇದ್ದಂತೆ ಜಗತ್ತನ್ನು ಸೃಷ್ಟಿಸಿದ ಮೇಲೂ ಶರೀರರಹಿತನಾಗಿಯೇ ಇರಬಹುದಲ್ಲವೇ?

ರೋಗಗ್ರಸ್ಥನಾದ ವ್ಯಕ್ತಿಗೆ ರೋಗವನ್ನು ಪರಿಹರಿಸಲು ಕಾಲ್ಪನಿಕವಾದ ಔಷಧಿಯನ್ನು ನೀಡುವುದರಿಂದ ಅವನ ರೋಗವು ಪರಿಹಾರವಾಗುವುದಿಲ್ಲ. ಆದರಂತೆ ಶರೀರ ಇಲ್ಲದ ವ್ಯಕ್ತಿಗೆ ನಿಯಮನ ಮಾಡಲು ಸಾಧ್ಯವಿಲ್ಲವೆಂದು ಹೇಳಿದಾಗ ಗೌಣವಾದ ಶರೀರವನ್ನು ಒಪ್ಪುವುದರಿಂದೇನೂ ಪ್ರಯೋಜನವಿಲ್ಲ. ಶುದ್ಧಬ್ರಹ್ಮನನ್ನು ನಿಯಾಮಕನೆಂದು ಹೇಳಲು ಸಾಧ್ಯವಿಲ್ಲ. ವಿಶಿಷ್ಟಬ್ರಹ್ಮನನ್ನು ಅವಿದ್ಯಾವಿಷಯನೆಂದು ಹೇಳಲು ಸಾಧ್ಯವಿಲ್ಲ. ಒಟ್ಟಾರೆ ಅದ್ವೈತಸಿದ್ಧಾಂತದಲ್ಲಿ ಸಿಲುಕಿಕೊಂಡಿರುವ ಇಬ್ಬರು ಬ್ರಹ್ಮರಿಗೂ ಏನೂ ಕೆಲಸವಿಲ್ಲ.

ಮತ್ತು ಅದ್ವೈತಿಗಳು ಪೂರ್ವಪಕ್ಷವನ್ನು ನಿರಾಕರಿಸುವುದಕ್ಕಾಗಿ ನಿಯಮ್ಯನಾದ ಜೀವನಿಗೂ ನಿಯಾಮಕನಾದ ಬ್ರಹ್ಮನಿಗೂ ಅಭೇದವನ್ನು ಒಪ್ಪುವದರ ಮೂಲಕ ಅನವಸ್ಥಾ ದೋಷವನ್ನು ಪರಿಹರಿಸಿದ್ದಾರೆ. ಆದರೆ ಜೀವಾದಿಗಳಿಂದ ಅಭೇದವಿದ್ದ ಮೇಲೆ ಅವರನ್ನು ಬ್ರಹ್ಮನು ಹೇಗೆ ತಾನೇ ನಿಯಮನ ಮಾಡುತ್ತಾನೆ. ಶ್ರುತಿ, ಸೂತ್ರಗಳಲ್ಲೆಲ್ಲಾ ಭೇದವೇ ಹೇಳಲ್ಪಟ್ಟರುವಾಗ ಅಭೇದದ ಮಾರ್ಗಕ್ಕೆ ಏಕೆ ಶರಣಾಗುತ್ತಾರೆ. ಇನ್ನು ಕಾಲ್ಪನಿಕ ಭೇದವನ್ನು ಒಪ್ಪುವ ಮೂಲಕ ಕಣ್ಣೊರೆಸುವಂತಹ ಪ್ರಯತ್ನವು ವ್ಯರ್ಥ. ಯಾವರೀತಿಯಾಗಿ ಜೀವಬ್ರಹ್ಮರಿಗೆ ಕಾಲ್ಪನಿಕ ಭೇದವನ್ನು ಒಪ್ಪುತ್ತಾರೋ ಆದರಂತೆ ಈಶ್ವರನನ್ನು ನಿಯಮನ ಮಾಡುವಂತಹ ಕಾಲ್ಪನಿಕ ಭೇದವುಳ್ಳ ಮತ್ತೊಬ್ಬ ವ್ಯಕ್ತಿಯೂ ಇರಬಹುದೆಂದು ಆಪಾದಿಸುತ್ತೇವೆ. ಆದ್ದರಿಂದ ಅದ್ವೈತಿಗಳು ಭಗವಂತನಲ್ಲಿ ಸ್ವಾತಂತ್ರ್ಯವೆಂಬ ಗುಣವನ್ನು ಒಪ್ಪಿಯೇ ತಮಗೆ ಆಂಟಿಕೊಂಡ ದೋಷಗಳನ್ನೆಲ್ಲಾ ಜಾಡಿಸಿಕೊಳ್ಳಬೇಕು. ಬೇರೆ ಉಪಾಯವಿಲ್ಲ. ಅನವಸ್ಥಾ ಪರಿಹಾರಕ್ಕಾಗಿ ಜೀವಬ್ರಹ್ಮರಿಗೆ ಅಭೇದವನ್ನು ಒಪ್ಪುವುದಕ್ಕಿಂತ ಜಡವಾದ ಶರೀರೇಂದ್ರಿಯಾದಿಗಳಿಗೂ ಜೀವನಿಗೂ ಅಭೇದವನ್ನು ಒಪ್ಪಿದ್ದರೆ ಸ್ವಲ್ಪವಾದರೂ ಬುದ್ಧಿವಂತಿಕೆಯನ್ನು ತೋರಿಸಿಕೊಂಡಂತಾಗುತ್ತಿತ್ತು. ಜಡಪದಾರ್ಥಗಳೊಟ್ಟಿಗೆ ಅಭೇದವು ಪ್ರಮಾಣ ವಿರುದ್ಧವೆಂದು ಹೇಳುವುದಾದರೆ; 'ಭೇದೇನೈನಮಧೀಯತೇ' ಇತ್ಯಾದಿ ಸೂತ್ರಗಳಲ್ಲಿ ಜೀವಬ್ರಹ್ಮರ ಭೇದವನ್ನೂ ಸಹ ನಿರಾಕರಿಸಲಾಗಿದೆ. ಈ ಎಲ್ಲಾ ಕಾರಣಗಳಿಂದ ಜಗತ್ತು ಬ್ರಹ್ಮನ ಅವಿದ್ಯಾಕಲ್ಪಿತವಾದ್ದರಿಂದ ಅವನ ಶರೀರವಾಗಿದೆಯೆಂಬ ಸಿದ್ಧಾಂತವು ಅತ್ಯಂತ ಅಯುಕ್ತವಾಗಿದೆ.

ಅದ್ವೈತಮತದಲ್ಲಿ ನಿಯಾಮಕ ಬ್ರಹ್ಮನೇ ಇಲ್ಲ

ಅನವಸ್ಥಾದೋಷವನ್ನು ಪರಿಹರಿಸುವುದಕ್ಕಾಗಿ ನಿಯಾಮಕರಿಗೆ ಭೇದವನ್ನೇನೂ ಒಪ್ಪಬೇಕಾಗಿಲ್ಲ. ಒಂದು ಶರೀರದಲ್ಲಿ ಎರಡು ಪ್ರತ್ಯಕ್‌ಚೈತನ್ಯಗಳನ್ನು ಒಪ್ಪಲು ಸಾಧ್ಯವಿಲ್ಲದ ಕಾರಣ ಅವರಿಬ್ಬರಿಗೆ ಐಕ್ಯವನ್ನು ಅನಿವಾರ್ಯವಾಗಿ ಹೇಳಬೇಕೆಂದು ಅದ್ವೈತಿಗಳು ಆಕ್ಷೇಪಿಸುತ್ತಾರೆ. ಆದರೆ ಇದನ್ನು ಒಂದೇ ಶರೀರದಲ್ಲಿ ಜೀವಬ್ರಹ್ಮರಿದ್ದಾರೆ. ಅನೇಕ ಅಭಿಮಾನಿದೇವತೆಗಳೂ ಇದ್ದಾರೆಂದು ಹೇಳುವ ದ್ವೈತಿಗಳಿಗೆ ಮನದಟ್ಟಾಗಿಸಲು ಅದ್ವೈತಿಗಳಿಗೆ ಸಾಧ್ಯವಿಲ್ಲ.

ಒಂದು ಶರೀರದಲ್ಲಿ ಏಕಾಚಿಯು ಸೇರಿಕೊಂಡಾಗ ಇಬ್ಬರು ಚೇತನರಿರುವುದು ನಮ್ಮ ಅನುಭವದಲ್ಲಿ ಕಾಣಿಸುತ್ತಿದೆ. ಏತರೇಯೋಪನಿಷತ್ತಿನಲ್ಲಂತೂ ಸ್ಪಷ್ಟವಾಗಿ ''ಹಂತಾಸ್ಮಾತ್ ಶರೀರಾತ್'' ಇತ್ಯಾದಿ ವಾಕ್ಯದಿಂದ ಅನೇಕ ಅಭಿಮಾನಿದೇವತೆಗಳು ಒಂದೇ ಶರೀರದಲ್ಲಿ ಪ್ರವೇಶಿಸಿದ್ದಾರೆಂಬುದು ಕಾಣಿಸುತ್ತಿದೆ. ಹೀಗೆ ಹೇಳಿದಾಗ ಏನೂ ಬಾಧಕವಿಲ್ಲ. 'ನಾನ್ಯೋಽತೋಽಸ್ತಿ ದ್ರಷ್ಟಾ'' ಎಂಬ ಶ್ರುತಿಯು ಆಪಾತತಃ ಮತ್ತೊಬ್ಬನಿಲ್ಲ ಎಂದು ಹೇಳಿದಂತೆ ಕಾಣಿಸಬಹುದು. ಆದರೆ ಸ್ವತಂತ್ರನಾದ ಮತ್ತೊಬ್ಬ ದ್ರಷ್ಟಪುರುಷನಿಲ್ಲವೆಂದೇ ಆ ಶ್ರುತಿಯ ಅಭಿಪ್ರಾಯ.

ಈ ಸಂದರ್ಭದಲ್ಲಿ ವಿವರಣಕಾರನ ವಾದವೊಂದು ಹೀಗಿದೆ - ಅವಚ್ಛೇದಪಕ್ಷ ಹಾಗೂ ಪ್ರತಿಬಿಂಬ ಪಕ್ಷವೆಂದು ಎರಡು ಪಕ್ಷಗಳಿವೆ. ಅವಚ್ಛೇದಪಕ್ಷವೆಂದರೆ ಎಲ್ಲೆಡೆ ವ್ಯಾಪ್ತವಾಗಿರುವ ಆಕಾಶವು ಘಟದಲ್ಲಿಯೂ ಇರುತ್ತವೆ. ಆದರೆ ಬಾಹ್ಯಾಕಾಶವನ್ನು ಘಟದಲ್ಲಿದೆಯೆಂದು ಯಾರೂ ವ್ಯವಹರಿಸುವುದಿಲ್ಲ. ಕೇವಲ ಘಟಾವಚ್ಛಿನ್ನ ಆಕಾಶವಿದೆಯೆಂದೇ ಹೇಳುತ್ತಾರೆ. ಪ್ರತಿಬಿಂಬಪಕ್ಷದಲ್ಲಿ ಪ್ರತಿಬಿಂಬವಾದ ಆಕಾಶವು ಜಲದಲ್ಲಿದೆ. ಎಲ್ಲೆಡೆ ವ್ಯಾಪ್ತವಾದ ಆಕಾಶವೂ ಸಹ ಜಲದಲ್ಲಿದೆ. ಪ್ರಕೃತ ಜೀವನೆಂಬ ಶರೀರದಲ್ಲಿ ನಿಯಾಮಕನಾದ ಬ್ರಹ್ಮನಿದ್ದಾನೆಂದು ಅವಚ್ಛೇದಪಕ್ಷವನ್ನು ಅಂಗೀಕರಿಸಿ ಹೇಳಲು ಸಾಧ್ಯವಿಲ್ಲ. ಆದರೆ ಪ್ರತಿಬಿಂಬಪಕ್ಷವನ್ನು ಸ್ವೀಕರಿಸಿದಾಗ ಶರೀರದಲ್ಲಿ ಅವಿದ್ಯಾವಚ್ಛಿನ್ನನಾದ ಬ್ರಹ್ಮನೂ ಇರಬಹುದು. ನಿಯಾಮಕನಾದ ಬ್ರಹ್ಮನೂ ಸಹ ಇರಬಹುದು ಎಂದು.

ವಿವರಣಕಾರನ ಈ ಅಭಿಪ್ರಾಯವು ಹುರುಳಿಲ್ಲದ್ದು. ಏಕೆಂದರೆ ಘಟಾಕಾಶದಲ್ಲಿ ಬಾಹ್ಯಾಕಾಶವಿರುವುದು ಎಷ್ಟು ಅಸಂಭಾವಿತವೋ ಅದರಂತೆ ನೀರಿನಲ್ಲಿ ಬಿಂಬಭೂತವಾದ ಆಕಾಶವಿರುವುದೂ ಸಹ ಅಷ್ಟೇ ಅಸಂಭಾವಿತ.

ವಸ್ತುತಃ ಜಲದಲ್ಲಿ ಶುದ್ಧವಾದ ಆಕಾಶ, ಅವಚ್ಛಿನ್ನವಾದ ಆಕಾಶ ಹಾಗೂ ಪ್ರತಿಬಿಂಬಭೂತವಾದ ಆಕಾಶಗಳೆಂದು ಮೂರು ಆಕಾಶಗಳಿರುತ್ತದೆ. ಘಟದಲ್ಲಿ ಪ್ರತಿಬಿಂಬವಾದ ಆಕಾಶವಿರುವುದಿಲ್ಲ. ಕೇವಲ ಶುದ್ಧವಾದ ಆಕಾಶ ಹಾಗೂ ಅವಚ್ಛಿನ್ನವಾದ ಆಕಾಶಗಳಿರಡೇ ಇರುತ್ತವೆ. ಹೀಗೆ ವ್ಯತ್ಯಾಸವನ್ನೇನೋ ತೋರಿಸಬಹುದು. ಆದರೆ ದರ್ಪಣದಲ್ಲಿ ಪ್ರತಿಬಿಂಬವಾಗಿರುವ ಮುಖ ಹಾಗೂ ಮುಖಸಾಮಾನ್ಯವಿರುವುದು ಕಾಣಿಸುತ್ತದೆ. ಆದರೆ ಬಿಂಬಭೂತವಾದ ಮುಖವಿದೆಯೆಂದು ಯಾರೂ ಹೇಳುವುದಿಲ್ಲ. ಅದರಂತೆ ಶರೀರದಲ್ಲಿ ಚಿನ್ಮಾತ್ರನಿರಬಹುದು. ಅವಿದ್ಯಾವಚ್ಛಿನ್ನನಾದ ಬ್ರಹ್ಮನಿರಬಹುದು. ನಿಯಾಮಕಬ್ರಹ್ಮನಿದ್ದಾನೆಂದು ಈ ದೃಷ್ಟಾಂತದಿಂದ ಸಮರ್ಥಿಸಲು ಸಾಧ್ಯವಿಲ್ಲ. ಆದ್ವೈತಿಗಳು ಅವಚ್ಛಿನ್ನಬ್ರಹ್ಮ, ಪ್ರತಿಬಿಂಬಬ್ರಹ್ಮ, ಚಿನ್ಮಾತ್ರಬ್ರಹ್ಮನೆಂದು ಮೂರು ಬಗೆಯ ಬ್ರಹ್ಮರನ್ನು ಒಪ್ಪುತ್ತಾರೆ. ಈ ಮೂರು ಬ್ರಹ್ಮರಲ್ಲಿ ಅವಚ್ಛಿನ್ನಬ್ರಹ್ಮ ಹಾಗೂ ಪ್ರತಿಬಿಂಬಬ್ರಹ್ಮರು ಜೀವಸ್ವರೂಪವನ್ನು ತಾಳಿದ್ದರಿಂದ ನಿಯಮ್ಯರೇ ಆಗಿಬಿಟ್ಟಿದ್ದಾರೆ. ಇನ್ನು ಶುದ್ಧಬ್ರಹ್ಮನು ಯಾವುದೇ ಗುಣಗಳನ್ನು ಹೊಂದದ ಕಾರಣ ನಿಯಾಮಕನಾಗಲು ಸಾಧ್ಯವಿಲ್ಲ. ಇದು ಹೇಗಾಯಿತೆಂದರೆ 'ಮುಳ್ಳು ಕೊನೆಯ ಮೇಲೆ ಮೂರು ಕೆರೆಯ ಕಟ್ಟಿ, ಎರಡು ತುಂಬದು ಒಂದು ತುಂಬಲೇ ಇಲ್ಲ' ಎಂಬ ದಾಸರ ಒಗಟಿನ ಪದ್ಯದಂತೆ ಮೂರು ಬ್ರಹ್ಮರಲ್ಲಿ ಪ್ರತಿಬಿಂಬಬ್ರಹ್ಮಹಾಗೂ ಅವಚ್ಛಿನ್ನಬ್ರಹ್ಮರಿಗೆ ಜೀವಭಾವವಿರುವುದಿಂದ ನಿಯಾಮಕತ್ವ ಬರುವುದಿಲ್ಲ. ಉಳಿದೊಬ್ಬ ಶುದ್ಧಬ್ರಹ್ಮನಲ್ಲಿ ನಿಯಾಮಕತ್ವವನ್ನು ಸ್ವತಃ ಆವರೇ ಒಪ್ಪಿಲ್ಲ. ಒಟ್ಟಾರೆ ದೇಹದ ಒಳಗಡೆ ಕುಳಿತಿರುವ ಬ್ರಹ್ಮನು ನಪುಂಸಕನಂತೆ ವ್ಯರ್ಥವಾಗಿ ಕುಳಿತಿದ್ದಾನೆಂದು ಹೇಳಿದಂತಾಯಿತು.

ಶಂಕರಭಾಷ್ಯ ರಾಮಾನುಜಭಾಷ್ಯಗಳ ಸೂತ್ರಾರ್ಥ ವಿಮರ್ಶೆ

ಆದ್ವೈತಿಗಳ ಅಧಿಕರಣ ಶರೀರ ಹೀಗಿದೆ - ಬೃಹದಾರಣ್ಯಕೋಪನಿಷತ್ತಿನಲ್ಲಿ 'ಯಃ ಪೃಥಿವ್ಯಾಂ ತಿಷ್ಠನ್' ಇತ್ಯಾದಿ ವಾಕ್ಯವನ್ನೇ ವಿಷಯವೆನ್ನುತ್ತಾರೆ. ಜೀವನಾಗಲೀ ಅಥವಾ ಯಾರಾದರೂ ಒಬ್ಬ ಯೋಗಿಯಾಗಲೀ, ಪೃಥಿವ್ಯಾದಿ

ಲೋಕಗಳ ಅಂತರ್ಯಾಮಿಯಾಗಿರಬಹುದು. ಬ್ರಹ್ಮನಿಗೆ ಶರೀರವಿಲ್ಲದ ಕಾರಣ ಅಂತರ್ಯಾಮಿಯನಿಸಲಾರನೆಂದು ಪೂರ್ವಪಕ್ಷ.

ಸಕಲ ಪ್ರಪಂಚವನ್ನೇ ಶರೀರವನ್ನಾಗಿ ಹೊಂದಿರುವ ಅಚಿಂತ್ಯವಾದ ಮಾಯಾಶಕ್ತಿಯನ್ನು ಪಡೆದಿರುವ ಬ್ರಹ್ಮನಿಗೆ ಶರೀರವಿಲ್ಲದಿದ್ದರೂ ಪ್ರಪಂಚವನ್ನು ನಿಯಮನ ಮಾಡುವ ಸಾಮರ್ಥ್ಯವಿದೆ. ಜೀವಾತ್ಮನಿಗೂ, ಪರಮಾತ್ಮನಿಗೂ ಅಭೇದವಿರುವುದರಿಂದ ಇವನಿಗೆ ಇನ್ನೊಬ್ಬ ನಿಯಾಮಕನ ಅವಶ್ಯಕತೆಯಿರುವುದಿಲ್ಲ. ಮತ್ತು ಅದೇ ಪ್ರಕರಣದಲ್ಲಿ ಆತ್ಮತ್ವ, ಅಮೃತತ್ವ ಮೊದಲಾದ ಧರ್ಮಗಳು ಅದೃಶ್ಯತ್ವಾದಿ ಧರ್ಮಗಳೂ ಸಹ ಕೇಳಿಸುತ್ತಿವೆ. ಇವೆಲ್ಲವೂ ಬ್ರಹ್ಮನ ಅಸಾಧಾರಣ ಧರ್ಮಗಳಾದ್ದರಿಂದ ಬ್ರಹ್ಮನೇ ಅಂತರ್ಯಾಮಿಯಾಗಿದ್ದಾನೆ ಹೊರತು ಜೀವನಲ್ಲವೆಂದು ಸಿದ್ಧಾಂತ. ಅದ್ವೈತಿಗಳ ಈ ಅಧಿಕರಣ ಶರೀರವು ಅಯುಕ್ತವಾಗಿದೆ. 'ಯಃ ಆತ್ಮನೀ ತಿಷ್ಠನ್' ಇತ್ಯಾದಿ ಶ್ರುತಿಗಳಲ್ಲಿ ಜೀವನಿಗೂ ಸಹ ಪರಮಾತ್ಮನು ನಿಯಾಮಕನಾಗಿದ್ದಾನೆಂದು ಹೇಳಲ್ಪಟ್ಟಿದೆ. ಅವರಿಬ್ಬರಿಗೂ ಏಕ್ಯವಿದ್ದಲ್ಲಿ ನಿಯಮ್ಯನಿಯಾಮಕಭಾವವು ಹೇಗೆ ಉಪಪನ್ನವಾಗುತ್ತದೆ? ಕಾಲ್ಪನಿಕ ಭೇದವನ್ನು ಒಪ್ಪುವುದಾದರೆ ಈಶ್ವರನಿಗೂ ಸಹ ಮತ್ತೊಬ್ಬ ನಿಯಾಮಕನಿರಬಹುದಲ್ಲವೇ? ಈಶ್ವರನು ಸ್ವತಂತ್ರನಾದ್ದರಿಂದ ಮತ್ತೊಬ್ಬ ನಿಯಾಮಕನ ಅವಶ್ಯಕತೆಯಿಲ್ಲವೆಂದು ಕೊನೆಯಲ್ಲಿ ಉತ್ತರಿಸುವುದಾದರೆ, ಮೊದಲೇ ಈ ಉತ್ತರವನ್ನು ಹೇಳಿ ಏಕೆ ಜಾಣತನವನ್ನು ತೋರಿಸಲಿಲ್ಲ?

'ನಚ ಸ್ಮಾರ್ತಮತದ್ಧರ್ಮಾಭಿಲಾಪಾತ್' ಎಂಬ ಎರಡನೆಯ ಸೂತ್ರಕ್ಕೆ ಅದ್ವೈತಿಗಳ ವ್ಯಾಖ್ಯಾನ ಹೀಗಿದೆ - ಈ ಪ್ರಕರಣದಲ್ಲಿ ಹೇಳಲ್ಪಟ್ಟ ಅದೃಶ್ಯತ್ವವು ಅಂತರ್ಯಾಮಿಯಲ್ಲಿ ಕೂಡುವುದಿಲ್ಲ. ದ್ರಷ್ಟೃತ್ವ, ಆತ್ಮತ್ವ ಮೊದಲಾದ ಧರ್ಮಗಳು ಪ್ರಕೃತಿಯಲ್ಲಿ ಕೂಡುವುದಿಲ್ಲ ಎಂದು ವ್ಯಾಖ್ಯಾನಿಸುತ್ತಾರೆ. 'ಶಾರೀರಶ್ಚೋಭಯೇಽಪಿ ಹಿ ಭೇದೇನೈವ ಮಧಿಯತೇ' ಎಂಬ ಮೂರನೆಯ ಸೂತ್ರ ವ್ಯಾಖ್ಯಾನ ಹೀಗಿದೆ - ಕಾಣ್ವಮಾಧ್ಯಂದಿನ ಶಾಖೆಗಳಲ್ಲಿ ಹೇಳಲ್ಪಟ್ಟ ಭೇದವು ಸತ್ಯವಲ್ಲ. ಜೀವಬ್ರಹ್ಮರಿಗೆ ಏಕ್ಯವೇ ಇದೆ. ಆದ್ದರಿಂದ ಇವರಿಬ್ಬರಿಗೂ ನಿಯಮ್ಯನಿಯಾಮಕಭಾವವನ್ನಾಗಲೀ ಅದರಿಂದ ಭೇದದ ಸಮರ್ಥನೆಯಾಗಲೀ ಮಾಡಲು ಸಾಧ್ಯವಿಲ್ಲ. ಅದ್ವೈತಿಗಳ ಎರಡನೆಯ ಸೂತ್ರವು ಪ್ರಥಮಸೂತ್ರದಲ್ಲಿರುವ 'ತದ್ಧರ್ಮವ್ಯಪದೇಶಾತ್' ಎಂಬ ಭಾಗದಿಂದಲೇ ಪುನರುಕ್ತವಾಗಿದೆ. ಮೂರನೆಯ ಸೂತ್ರದಲ್ಲಿ ನಿಯಮ್ಯನಿಯಾಮಕರಿಗೆ ಭೇದವೇ ಸ್ಪಷ್ಟವಾಗಿ ಕೇಳಿಸುತ್ತಿರುವಾಗ ಆ ಭೇದವನ್ನು ಕಲ್ಪಾನಿಕವೆಂದು ಹೇಳುವುದು ಮೂರ್ಖತನ.

ರಾಮಾನುಜ ಭಾಷ್ಯದಲ್ಲಿ ಜೀವನೇ ಅಂತರ್ಯಾಮಿಯೆಂದು ಪೂರ್ವಪಕ್ಷ. ಸಕಲ ಲೋಕ ನಿಯಂತೃತ್ವ ಎಂಬ ಧರ್ಮದಿಂದ ಪರಮಾತ್ಮನೇ ನಿಯಾಮಕನಾದ ಅಂತರ್ಯಾಮಿಯೆಂದು ಸಿದ್ಧಾಂತ.

ಇವರ ಮತವೂ ಸಹ ಯುಕ್ತವಾಗಿದೆ. ಅದ್ವೈತ ಮತದಲ್ಲಿ ಹಾಗೂ ವಿಶಿಷ್ಟಾದ್ವೈತ ಮತದಲ್ಲಿ ಅಧಿದೈವಾದಿಷು ಎಂಬ ಪದವು ವ್ಯರ್ಥವಾಗುತ್ತದೆ. ಆದರೆ ದ್ವೈತದರ್ಶನದಲ್ಲಿ 'ಅಧಿದೈವಾದಿಷು ತದ್ಧರ್ಮವ್ಯಪದೇಶಾತ್' ಎಂಬುದಾಗಿ 'ಅಧಿದೈವಾದಿಷು' ಎಂಬ ಪದವನ್ನು ಸಾಧ್ಯದಲ್ಲಿ ಸೇರದೆ ಹೇತುವಿನಲ್ಲಿ ಸೇರಿರುವ ಕಾರಣ ಅಂತರ್ಯಾಮಿಯೆಂದು ಉಕ್ತನಾದವನು ವಿಷ್ಣುವೇ ಆಗಿದ್ದಾನೆ.

ಅದೃಶ್ಯತ್ವಾಧಿಕರಣ

ಸಂಗತಿ ಹಾಗೂ ಸಂಶಯ ಪರಂಪರೆ

ಹಿಂದಿನ ಆಧಿಕರಣದಲ್ಲಿ ಅಂತರ್ಯಾಮಿಯು ವಿಷ್ಣುವೇ ಆಗಿದ್ದಾನೆನ್ನಲು ಸಾಕಲ್ಯೇನ ಅವಿದಿತತ್ವವನ್ನು ಹೇತುವನ್ನಾಗಿ ಮಾಡಿದರು. ಅಂದರೆ ಅದೃಶ್ಯತ್ವವನ್ನು ಹೇತುವೆಂದು ಹೇಳದಂತಾಯಿತು. ಮತ್ತು ಆನಂದಮಯಾಧಿಕರಣದಲ್ಲಿ ಆನಂದಮಯನಾದ ವಿಷ್ಣುವಿಗೆ 'ಅದೃಶ್ಯೇऽನಾತ್ಮ್ಯೇ' ಎಂಬ ತೈತ್ತೀರಿಯದಲ್ಲಿ ಹೇಳಲ್ಪಟ್ಟ ಅದೃಶ್ಯತ್ವಗುಣವನ್ನು ಹೇಳಿದ್ದಾರೆ. ಈ ಅದೃಶ್ಯತ್ವಗುಣವು ವಿಷ್ಣುವಿನಲ್ಲಿ ಬರುವುದಿಲ್ಲವೆಂದು ಈ ಆಧಿಕರಣದಲ್ಲಿ ಆಕ್ಷೇಪ ಮಾಡುತ್ತಿದ್ದಾರೆ. ಆದ್ದರಿಂದ ಹಿಂದಿನ ಆಧಿಕರಣದಿಂದ ಆನಂತರ್ಯ ಸಂಗತಿಯು ಇರುತ್ತದೆ. ಮತ್ತು ಆನಂದಮಯಾಧಿಕರಣದಿಂದಲೂ ಪರಂಪರಯಾ ಸಂಗತಿಯು ಇರುತ್ತದೆ.

'ಅಕ್ಷರಾತ್ಪರತಃ ಪರಃ' ಎಂಬುದಾಗಿ ಯಾವ ಅಕ್ಷರವು ಪ್ರಸಕ್ತವಾಗಿದೆಯೋ, ಅದೇ ಅಕ್ಷರವು 'ಅಕ್ಷರಾತ್ಸಂಭವತೀಹ ವಿಶ್ವಂ' ಎಂಬಲ್ಲಿರುವ ಅಕ್ಷರಶಬ್ದದಿಂದಲೂ ಪ್ರತಿಪಾದ್ಯವಾದರೆ ಅದೃಶ್ಯತ್ವಾದಿಗುಣವುಳ್ಳ ಜಗತ್ಕಾರಣತ್ವೇನ ಹೇಳಲ್ಪಟ್ಟ ಪರತ್ವಾವಧಿತ್ವವು ಸರ್ವೋತ್ತಮನಾದ ವಿಷ್ಣುವಿನಲ್ಲಿ ಬರುವುದಿಲ್ಲ. ಆದ್ದರಿಂದ ಪ್ರಕೃತ್ಯಾದಿಗಳೇ ಅಕ್ಷರಶಬ್ದವಾಚ್ಯರಾಗುತ್ತಾರೆಂಬುದು ಪೂರ್ವಪಕ್ಷದ ಗುರಿ.

'ಅಕ್ಷರತ್ರಯಮೀರಿತಮ್' ಎಂದು ಮುಂದೆ ಹೇಳುವ ಪ್ರಕಾರ 'ಅಕ್ಷರಾತ್ಪರತಃ' ಎಂಬಲ್ಲಿ ಹೇಳಲ್ಪಟ್ಟ ಅಕ್ಷರವೇ ಬೇರೆ. 'ಅಕ್ಷರಾತ್ಸಂಭವತೀಹ ವಿಶ್ವಂ' ಎಂಬಲ್ಲಿ ಹೇಳಲ್ಪಟ್ಟ ಅಕ್ಷರವೇ ಬೇರೆ ಎಂದು ವಿವಕ್ಷಿಸಿದರೆ ಪರತ್ವಾವಧಿತ್ವವು ವಿಷ್ಣುವಿನಲ್ಲಿ ಬರುವುದಿಲ್ಲ. ಆವಾಗ ಪರವಿದ್ಯೆಯ ವಿಷಯನಾದ್ದರಿಂದ ವಿಷ್ಣುವೇ ಅಕ್ಷರನೆನಿಸುತ್ತಾನೆಂಬುದು ಸಿದ್ಧಾಂತದ ಗುರಿ.

ಪ್ರಕೃತಿ, ಬ್ರಹ್ಮಾದಿಗಳೇ ಅದೃಶ್ಯರೆಂದು ಪೂರ್ವಪಕ್ಷ

ಪೂರ್ವಪಕ್ಷ ಹೀಗಿದೆ - ಆನಂದಮಯಾಧಿಕರಣದಲ್ಲಿ 'ಅದೃಶ್ಯೇऽನಾತ್ಮ್ಯೇ' ಎಂದು ತೈತ್ತಿರೀಯ ವಾಕ್ಯವನ್ನು ಉಲ್ಲೇಖಿಮಾಡಿ ವಿಷ್ಣುವಿನಲ್ಲಿ ಅದೃಶ್ಯತ್ವಗುಣವನ್ನು ಹೇಳಲಾಗಿದೆ. ಮತ್ತು ಹಿಂದಿನ ಅಂತರ್ಯಾಮ್ಯಧಿಕರಣದಲ್ಲಿ ''ಸ ಯೋऽತೋऽಶ್ರುತೋಮತೋ'' ಇತ್ಯಾದಿ ಐತರೇಯೋಪನಿಷತ್ತಿನ ವಾಕ್ಯದಿಂದ ವಿಷ್ಣುವಿಗೆ ಅದೃಶ್ಯತ್ವ ಗುಣವನ್ನು ನಿರ್ಣಯಿಸಲಾಗಿದೆ. ಆದರೆ ಮಾಂಡೋಕ್ಯೋಪನಿಷತ್ತಿನಲ್ಲಿ ಇದೇ ಅದೃಶ್ಯತ್ವಗುಣವನ್ನು ಅಕ್ಷರತತ್ತ್ವಕ್ಕೆ ಹೇಳಲಾಗಿದೆ. ಈ ಅಕ್ಷರತತ್ವವನ್ನು ವಿಷ್ಣುವೆಂದು ನಿರ್ಣಯಿಸಲಾಗದು. ಏಕೆಂದರೆ 'ಅಕ್ಷರತ್ಸಂಭವತೀಹ ವಿಶ್ವಮ್' ಅಕ್ಷರತತ್ವದಿಂದ ಜಗತ್ತು ಹುಟ್ಟಿತು ಎಂದು ಹೇಳಿ. 'ಅಕ್ಷರತ್ಪರತಃ ಪರಃ' ಎಂಬುದಾಗಿ ಅಕ್ಷರತತ್ತ್ವಕ್ಕಿಂತಲೂ ವಿಷ್ಣು ಉತ್ತಮೋತ್ತಮನಾಗಿದ್ದಾನೆಂದು ಶ್ರುತಿ ಹೇಳುತ್ತಿದೆ. ಒಂದು ವೇಳೆ ವಿಷ್ಣುವೇ ಅಕ್ಷರನಾದರೆ ಅವನಿಗಿಂತ ಉತ್ತಮನಾದವನನ್ನು ಹೇಳಬೇಕಾಗುತ್ತದೆ. ಆವಾಗ ವಿಷ್ಣು ಸರ್ವೋತ್ತಮತ್ವವೇ ಭಗ್ನವಾಗುವ ಪ್ರಸಂಗ ಬರುತ್ತದೆ. ಆದ್ದರಿಂದ ಅಕ್ಷರತತ್ತ್ವ ವಿಷ್ಣುವಲ್ಲವೆಂಬುದನ್ನು ಒಪ್ಪಬೇಕು.

ಹಾಗಾದರೆ ಅಕ್ಷರತತ್ವ ಎಂದರೆ ಯಾವುದು ? ಜಡಪ್ರಕೃತಿಯಾಗಬಹುದು. ಶ್ರುತಿಯು 'ತಥಾಕ್ಷರಾತ್ಸಂಭವತೀಹ ವಿಶ್ವಮ್' ಎಂದು ಜಗತ್ತಿಗೆ ಉಪಾದಾನ ಕಾರಣವಾಗಿರುವುದನ್ನು ಅಕ್ಷರ ಎಂದು ಹೇಳುತ್ತಿದೆ. ಜಡಪ್ರಕೃತಿಪಕ್ಷದಲ್ಲಿ ಈ ಉಪಾದಾನಕಾರಣತ್ವವು ಸಮಂಜಸವಾಗುತ್ತದೆ. ಶ್ರುತಿಯಲ್ಲಿ ಕಾರಣತ್ವವನ್ನಷ್ಟೇ ಹೇಳಿರುವುದರಿಂದ ನಿಮಿತ್ತಕಾರಣವೆಂದು ವಿವಕ್ಷಿಸಬಹುದಲ್ಲವೇ? ಎಂದು ಪ್ರಶ್ನಿಸಬಾರದು. ನಿಮಿತ್ತಕಾರಣಕ್ಕಿಂತ ಉಪಾದಾನಕಾರಣವು ಆಂತರಂಗವಾದ್ದರಿಂದ ಬಹಿರಂಗವಾದ ನಿಮಿತ್ತಕಾರಣಯೆಂಬರ್ಥವನ್ನು ಬಿಡಬೇಕಾಗುತ್ತದೆ.

ಅಥವಾ ಚೇತನಪ್ರಕೃತಿಯನ್ನು ಅಕ್ಷರವೆನ್ನಬಹುದು. ಗೀತೆಯಲ್ಲಿ ಲಕ್ಷ್ಮೀದೇವಿಯನ್ನು ಅಕ್ಷರವೆಂದು ಹೆಸರಿಸಲಾಗಿದೆ. ವಿಶ್ವಕ್ಕೆ ಉಪಾದಾನಕಾರಣವಾದ ಜಡಪ್ರಕೃತಿಗೆ ಇವಳು ಅಭಿಮಾನಿಯಾದ್ದರಿಂದ ಲಕ್ಷ್ಮೀದೇವಿಯನ್ನು ಉಪಾದಾನಕಾರಣವೆಂದು ಹೇಳಬಹುದು.

ಅಥವಾ ಚತುರ್ಮುಖನೂ ಸಹ ಅಕ್ಷರನಾಗಬಹುದು. ಶ್ರುತಿಯಲ್ಲಿ ಬ್ರಹ್ಮ ಎಂಬ ಹೆಸರು ಪ್ರಸ್ತುತವಾಗಿದೆ. ಜಾಯಮಾನತ್ವ ಮೊದಲಾದ ಲಿಂಗಗಳ ಬಲದಿಂದ ಬ್ರಹ್ಮಶಬ್ದವು ಚತುರ್ಮುಖನನ್ನೇ ಪ್ರತಿಪಾದಿಸುತ್ತದೆ ಹೊರತು ವಿಷ್ಣುವನ್ನಲ್ಲ. ಚತುರ್ಮುಖನು ಜಗತ್ತಿಗೆ ಕಾರಣನೂ ಆಗಿದ್ದಾನೆ. ಆದ್ದರಿಂದ ಅವನೂ ಸಹ ಇಲ್ಲಿ ಅಕ್ಷರನೆಂದು ಪ್ರಸ್ತುತನಾಗಿರಬಹುದು.

ಅಥವಾ ರುದ್ರನಲ್ಲಿ ಪ್ರಸಿದ್ಧವಾದ ಈಶ ಶಬ್ದವು ಈ ಪ್ರಕರಣದಲ್ಲಿ ಕೇಳಿಸುತ್ತಿರುವುದರಿಂದ ರುದ್ರನು ಆದೃಶ್ಯತ್ವಾದಿಗುಣಗಳುಳ್ಳ ಅಕ್ಷರನಾಗಬಹುದು.

ಹೀಗೆ ನಾಲ್ಕು ಬಗೆಯಲ್ಲಿ ಪೂರ್ವಪಕ್ಷ ಮಾಡಬಹುದು. ವಿಚಾರ ಮಾಡಿದರೆ ವಿಷ್ಣುವನ್ನು ಅಕ್ಷರನೆಂದು ಒಪ್ಪಲು ತೊಂದರೆಯೇ ಇದೆ. ಶ್ರುತಿಯಲ್ಲಿ ಯಾವುದು ಅಕ್ಷರತತ್ತ್ವವಾಗಿದೆಯೋ? ಅದು ಅಧಮವೆಂದು ಹೇಳಿದೆ. ವಿಷ್ಣು ಸರ್ವೋತ್ತಮನಾದ್ದರಿಂದ ಅಧಮನಾಗಲು ಸಾಧ್ಯವಿಲ್ಲ. ಪರವಿದ್ಯಾವಿಷಯತ್ವವನ್ನು ಶ್ರುತಿ ಹೇಳುತ್ತಿರುವುದರಿಂದ ವಿಷ್ಣುವೇ ಅಕ್ಷರನಾಗಿದ್ದಾನೆಂದು ಒಪ್ಪಬೇಕಲ್ಲವೇ? ಎಂಬ ಪ್ರಶ್ನೆಗೂ ಸಹ ಅವಕಾಶವಿಲ್ಲ. ಶಾಸ್ತ್ರಯೋನಿತ್ವಾಧಿಕರಣದಲ್ಲಿ ಋಗ್ವೇದಾದಿಗಳನ್ನು ಅಪರವಿದ್ಯೆಯೆಂದು ಅಂಗೀಕರಿಸಿ ಅಂತಹ ಶಾಸ್ತ್ರಗಳಿಂದೆಲ್ಲಾ ವಿಷ್ಣುಪ್ರತಿಪಾದ್ಯನೆಂದು ಸಿದ್ಧಾಂತಿಗಳೇ ಒಪ್ಪಿದ್ದಾರೆ. ಅಪರವಿದ್ಯೆಗೆ ವಿಷಯನಾದ ಮೇಲೆ ಆದಕ್ಕೆ ವಿರುದ್ಧವಾದ ಪರವಿದ್ಯೆಗೆ ವಿಷ್ಣು ವಿಷಯನಾಗಲಾರನು. ಹಾಗಾಗಿ ಬೇರೆ ಜಡಪ್ರಕೃತ್ಯಾದಿಗಳನ್ನೇ ಪರವಿದ್ಯೆಗೆ ವಿಷಯವೆಂದು ಒಪ್ಪಬೇಕಾಗುತ್ತದೆ.

ಮತ ತ್ರಯಗಳಲ್ಲಿ ಪರವಿದ್ಯಾ ವಿಚಾರ

ಸಿದ್ಧಾಂತವನ್ನು ಪ್ರಾರಂಭಿಸುತ್ತಿದ್ದಾರೆ. ಮೊದಲು ಪರವಿದ್ಯಾವಿಷಯತ್ವವು ವಿಷ್ಣುವಿನ ಅಸಾಧಾರಣ-ಲಿಂಗವಾಗಿದೆಯೆಂಬುದನ್ನು ಸಮರ್ಥಿಸುತ್ತಿದ್ದಾರೆ. ಪೂರ್ವಪಕ್ಷ ಮಾಡುವಾಗ ಅಪರವಿದ್ಯೆಗೆ ವಿಷ್ಣುವು ವಿಷಯನಾಗಿದ್ದಾನೆ ಹೊರತು, ಪರವಿದ್ಯೆಗೆ ವಿಷಯನಾಗುವುದಿಲ್ಲವೆಂದು ಸಮರ್ಥಿಸಿದ್ದರು. ಇದು ತಪ್ಪು. ಯಾವ ಋಗ್ವೇದಾದಿಗಳು ಅಪರವಿದ್ಯೆಯೆಂದು ಪೂರ್ವಪಕ್ಷಕಾರರು ಹೇಳಿದರೋ ಅದೇ ಋಗ್ವೇದಾದಿಗಳು ಪರವಿದ್ಯೆಯೆಂದೂ ಆಗುತ್ತವೆ. ಉಪಾಧಿಭೇದದಿಂದ ಒಂದೇ ಶಾಸ್ತ್ರವು ಪರವಿದ್ಯೆಯೂ ಆಗುತ್ತದೆ. ಅಪರವಿದ್ಯೆಯೂ ಆಗುತ್ತದೆ. ಯಾವರೀತಿಯಾಗಿ ಒಂದೇ ಕರ್ಮವು ನಿಷ್ಕಾಮಭಾವನೆಯಿಂದ ಆಚರಿಸಿದಾಗ ನಿವೃತ್ತಕರ್ಮವಾಗುತ್ತದೆ. ಸಕಾಮ ಭಾವನೆಯಿಂದ ಆಚರಿಸಿದಾಗ ಪ್ರವೃತ್ತಕರ್ಮವಾಗುತ್ತದೆ. ಅಥವಾ ನಾವು ತಿನ್ನುವ ಅನ್ನವು ಆರೋಗ್ಯಕ್ಕೆ ಹಿತವಾದ ಪದಾರ್ಥಗಳನ್ನು ಸೇರಿಸಿ ತಿಂದಾಗ ಪಥ್ಯವಾಗುತ್ತದೆ. ಆರೋಗ್ಯಕ್ಕೆ ಅಹಿತವಾದ ಪದಾರ್ಥವನ್ನು ಸೇರಿಸಿ ತಿಂದಾಗ ಅಪಥ್ಯವಾಗುತ್ತದೆ. ಇದರಂತೆ ಒಂದೇ ಋಗ್ವೇದಾದಿ ಶಾಸ್ತ್ರಗಳು ಉಪಕ್ರಮಾದಿ ತಾತ್ಪರ್ಯಲಿಂಗಗಳಿಂದ

ವಿಚಾರಮಾಡಿ ಬ್ರಹ್ಮನನ್ನು ತಿಳಿದಾಗ ಪರವಿದ್ಯೆಯನಿಸುತ್ತದೆ, ಇಲ್ಲದಿದ್ದರೆ ಅಪರವಿದ್ಯೆಯನಿಸುತ್ತದೆ. ಆದ್ದರಿಂದ ತ್ರೀಮದಾಚಾರ್ಯರ ಮಾತು 'ಯಗಾದ್ಯಾ ಅಪರಾ ವಿದ್ಯಾ ಯದಾ ವಿಷ್ಣೋರ್ನ ವಾಚಕಾಃ । ಕಾ ಏವ ಪರಮಾ ವಿದ್ಯಾ ಯದಾ ವಿಷ್ಣೋಸ್ತು ವಾಚಕಾಃ ॥' 'ಯಾವಾಗ ಋಗ್ವೇದಾದಿಗಳು ವಿಷ್ಣುವನ್ನು ಪ್ರತಿಪಾದಿಸದೆ, ಉಪಾಸನಾ, ಕರ್ಮ ಮೊದಲಾದವನ್ನಷ್ಟೇ ಪ್ರತಿಪಾದಿಸುತ್ತವೋ ಆವಾಗ ಅಪರವಿದ್ಯೆಯನಿಸುತ್ತವೆ. ಯಾವಾಗ ವಿಷ್ಣುವನ್ನು ಪ್ರತಿಪಾದಿಸುತ್ತವೋ ಆವಾಗ ಪರವಿದ್ಯೆಯನಿಸುತ್ತಿವೆ' ಎಂದು. ಈ ಮಾತನ್ನು ಎಂದೂ ಮರೆಯಬಾರದು.

ಈ ಸಂದರ್ಭದಲ್ಲಿ ಅದ್ವೈತಿಗಳು ಏನು ಹೇಳುತ್ತಾರೆಂಬುದನ್ನು ತಿಳಿಯಬೇಕು. ವೇದವು ಮಂತ್ರ ಹಾಗೂ ಉಪನಿಷತ್ತು ಎಂದು ಎರಡುವಿಧ. ಉಪನಿಷತ್ ಭಾಗವು ಪರವಿದ್ಯೆಯಾಗುತ್ತದೆ, ಮಂತ್ರಭಾಗವು ಅಪರವಿದ್ಯೆಯಾಗುತ್ತದೆ. ಏಕೆಂದರೆ ಉಪನಿಷತ್ ಭಾಗವು ಶುದ್ಧಬ್ರಹ್ಮನನ್ನು ಪ್ರತಿಪಾದಿಸುವ ಮೂಲಕ ಮೋಕ್ಷಕಾರಣವಾಗಿದೆ. ಮಂತ್ರಭಾಗವು ಉಪಾಸನಾ, ಕರ್ಮ ಮೊದಲಾದವುಗಳನ್ನೆಲ್ಲಾ ಪ್ರತಿಪಾದನೆ ಮಾಡುವುದರಿಂದ ಮೋಕ್ಷಸಾಧನವಾಗಿಲ್ಲ ಎಂದು ಅದ್ವೈತಿಗಳ ಅಭಿಪ್ರಾಯ.

ಇದು ಸರಿಯಲ್ಲ. ಏಕೆಂದರೆ ಸಕಲ ಶ್ರುತಿಸ್ಮೃತಿಗಳಿಂದ ಮುಖ್ಯವಾಗಿ ಬ್ರಹ್ಮನೊಬ್ಬನೇ ಪ್ರತಿಪಾದ್ಯನಾಗಿದ್ದಾನೆ. ಆದ್ದರಿಂದ ಕೇವಲ ಉಪನಿಷತ್ ಭಾಗದಿಂದ ಪ್ರತಿಪಾದ್ಯನೆಂಬ ನಿರ್ಣಯ ತಪ್ಪಾಗುತ್ತದೆ. ವಿಚಾರ ಮಾಡಿದರೆ ಮಂತ್ರಭಾಗವು ಉಪಾಸನಾದಿಗಳನ್ನು ವಿವರಿಸುವಂತೆ ಉಪನಿಷತ್ತಿನಲ್ಲಿಯೂ ಅನೇಕ ಕಡೆ ಬ್ರಹ್ಮವಿಚಾರವು ಇರದ ಉಪಾಸನಾದಿಗಳ ವಿಚಾರವೇ ಇರುವುದು ಕಾಣಿಸುತ್ತದೆ. ಇನ್ನು ಮಂತ್ರಭಾಗದಲ್ಲಿಯೂ ಅನೇಕಕಡೆ ಬ್ರಹ್ಮವಿಚಾರವು ಪ್ರಸಕ್ತವಾಗಿದೆ. ಆದ್ದರಿಂದ ಅದ್ವೈತಿಗಳ ಅಭಿಪ್ರಾಯ ಸರಿಯಲ್ಲ.

ಇನ್ನು ರಾಮಾನುಜರು ಪರೋಕ್ಷಜ್ಞಾನವನ್ನು ಅಪರವಿದ್ಯೆಯೆಂದೂ, ಭಕ್ತಿರೂಪವಾದ ಅಪರೋಕ್ಷಜ್ಞಾನವನ್ನು ಪರವಿದ್ಯೆಯೆಂದೂ ಹೇಳುತ್ತಾರೆ. ಇದೂ ಸಹ ತಪ್ಪು. ವಿದ್ಯಾಶಬ್ದಕ್ಕೆ ಜ್ಞಾನಕರಣವೆಂದರ್ಥ. ಏಕೆಂದರೆ 'ಯಯಾ ತದಕ್ಷರಮಧಿಗಮ್ಯತೇ' ಎಂಬ ಶ್ರುತಿಯಿಂದ ಇದು ಸ್ಪಷ್ಟವಾಗುತ್ತದೆ. ಮತ್ತು ವ್ಯಾಕರಣದ ಪ್ರಕಾರ 'ವಿದ್' ಧಾತುವಿಗೆ 'ಕ್ಯಪ್' ಪ್ರತ್ಯಯವು ಬಂದು ವಿದ್ಯಾ ಎಂಬ ರೂಪವು ನಿಷ್ಪನ್ನವಾಗಿದೆ. ಈ 'ಕ್ಯಪ್' ಪ್ರತ್ಯಯವು ಭಾವಾರ್ಥದಲ್ಲಿರುವಂತೆ ಕರಣ, ಅಧಿಕರಣ ಮೊದಲಾದ ಅರ್ಥಗಳಲ್ಲಿಯೂ ಬರುತ್ತದೆ. ಆದ್ದರಿಂದ ಜ್ಞಾನವೆಂಬರ್ಥವನ್ನು ಹೇಳುವಂತೆ ಜ್ಞಾನಕರಣವೆಂಬರ್ಥವನ್ನೂ ಸಹ ವಿದ್ಯಾಶಬ್ದಕ್ಕೆ ಹೇಳಬಹುದು. ಪ್ರಕೃತ ಜ್ಞಾನಕರಣವೆಂಬರ್ಥವನ್ನೇ ವಿವಕ್ಷಿಸಬೇಕು.

ಪೂರ್ವಪಕ್ಷ ಮಾಡುವಾಗ ಊರ್ಣನಾಭ ಮೊದಲಾದ ದೃಷ್ಟಾಂತಗಳನ್ನು ನೀಡಿ ಶ್ರುತಿಯಲ್ಲಿ ಉಪಾದಾನಕಾರಣತ್ವವೇ ಪ್ರಸಕ್ತವಾಗಿದೆಯೆಂದು ಹೇಳಿದರು ಇದೂ ಸಹ ತಪ್ಪು. ಊರ್ಣನಾಭ, ಪೃಥಿವೀ ಮೊದಲಾದವುಗಳೆಲ್ಲವೂ ನಿಮಿತ್ತಕಾರಣವೇ ಆಗಿವೆ ಹೊರತು, ಉಪಾದಾನಕಾರಣವಾಗಿರುವುದಿಲ್ಲವೆಂಬ ವಿಚಾರವನ್ನು ಪ್ರಕೃತ್ಯಧಿಕರಣದ ಅನುವ್ಯಾಖ್ಯಾನ ಸುಧಾದಿಗ್ರಂಥಗಳನ್ನು ಓದಿ ತಿಳಿದುಕೊಳ್ಳಬೇಕು. ಆದ್ದರಿಂದ ಶ್ರುತಿಯು ನಿಮಿತ್ತಕಾರಣವನ್ನೇ ಹೇಳುತ್ತಿದೆ. ಇದು ಬ್ರಹ್ಮನಲ್ಲಿ ಯುಕ್ತವಾಗುತ್ತದೆ. ಇದರ ಜೊತೆಗೆ ಸರ್ವಜ್ಞತ್ವ, ಪರವಿದ್ಯಾವಿಷಯತ್ವ ಮೊದಲಾದ ಲಿಂಗಗಳೆಲ್ಲವೂ ವಿಷ್ಣುವಿನದ್ದೇ ಆಗಿರುತ್ತವೆಂದು ತಿಳಿಯಬೇಕು.

ವಿಶೇಷಣ ಹಾಗೂ ಭೇದವ್ಯಪದೇಶ ಹೇತುಗಳಲ್ಲಿರುವ ಸ್ವಾರಸ್ಯ ವರ್ಣನೆ

ಪೂರ್ವಪಕ್ಷಮಾಡುವಾಗ 'ಯಸರ್ವಜ್ಞಃ ಸರ್ವವಿತ್' ಎಂಬ ಶ್ರುತಿಯಲ್ಲಿರುವ ಸರ್ವಜ್ಞಪದವು ವಿಶೇಷ್ಯನಾದ ರುದ್ರನನ್ನು ಹೇಳುತ್ತಿದೆ ಎಂದು ಆಕ್ಷೇಪಿಸಿದ್ದರು. ಇದು ತಪ್ಪು. ಸರ್ವಜ್ಞನಾದ ವ್ಯಕ್ತಿಯಿಂದ ಚತುರ್ಮುಖಬ್ರಹ್ಮನು ಹುಟ್ಟಿದನೆಂದು ಮುಂದಿನ ಶ್ರುತಿ ಹೇಳುತ್ತಿದೆ. ಒಂದು ವೇಳೆ ಸರ್ವಜ್ಞಪದದಿಂದ ರುದ್ರನನ್ನು ವಿವಕ್ಷಿಸುವುದಾದರೆ ಚತುರ್ಮುಖನಿಂದ ಹುಟ್ಟಿದ ರುದ್ರನು ಚತುರ್ಮುಖನಿಗೆ ಜನಕನಾಗುತ್ತಾನೆಂದು ಹೇಗೆ ಹೇಳಲು ಸಾಧ್ಯ ? ಆದ್ದರಿಂದ

ಸರ್ವಜ್ಞಪದವು ವಿಶೇಷಣವಾಚಕವಾಗಿದೆ. ಇದನ್ನು ತಿಳಿಸುವುದಕ್ಕಾಗಿಯೇ ಸೂತ್ರಕಾರರು 'ವಿಶೇಷಣ' ಪದವನ್ನು ಬಳಸಿದ್ದಾರೆ. 'ಸರ್ವವಿತ್' ಎಂಬ ಪದವು ಜಗತ್ಕಾರಣತ್ವಾದ್ಯರ್ಥದಲ್ಲಿರುವುದರಿಂದ ಪುನರುಕ್ತಿ ಬರುವುದಿಲ್ಲವೆಂದು ತಿಳಿಯಬೇಕು.

ಭಾಷ್ಯದಲ್ಲಿ ಈ ಸರ್ವಜ್ಞತ್ವವಿಶೇಷಣದಿಂದ ಜಡಪ್ರಕೃತಿಯನ್ನು ಮಾತ್ರ ನಿಷೇಧ ಮಾಡಿದ್ದಾರೆ. ವಸ್ತುತಃ ಚಿತ್ಪಕ್ಷತಿ, ಬ್ರಹ್ಮ ಹಾಗೂ ರುದ್ರಾದಿಗಳಲ್ಲಿ ಮುಖ್ಯವಾದ ಸರ್ವಜ್ಞತ್ವವಿಲ್ಲದ ಕಾರಣ ಇವರನ್ನೂ ಸಹ ನಿರಾಕರಿಸಬಹುದಿತ್ತು. ಆದರೆ ಯಾವ ಪೂರ್ವಪಕ್ಷಿಯು ಚಿತ್ಪಕ್ಷತ್ಯಾದಿಗಳನ್ನು ಅಕ್ಷರಶಬ್ದವಾಚ್ಯರೆಂದು ಆಕ್ಷೇಪಿಸುತ್ತಿದ್ದಾನೋ, ಅವನು ಅವರನ್ನೂ ಜಗತ್ತಿಗೆ ಕಾರಣರಾದ್ದರಿಂದ ಸರ್ವಜ್ಞರೂ ಆಗಿದ್ದಾರೆಂದು ಆಕ್ಷೇಪಿಸುತ್ತಾನೆ. ಹೀಗೆ ವಿಪ್ರತಿಪನ್ನವಾದ ಸರ್ವಜ್ಞತ್ವದಿಂದ ಚಿತ್ಪಕ್ಷತ್ಯಾದಿಗಳನ್ನು ನಿಷೇಧಿಸುವುದು ತಪ್ಪಾಗುತ್ತದೆ. ಅದಕ್ಕೋಸ್ಕರ ಭಾಷ್ಯಕಾರರು ಜಗಚ್ಚಕ್ಷತಿಯನ್ನು ಮಾತ್ರ ನಿಷೇಧಿಸಲು ಇದನ್ನು ಹೇತುವನ್ನಾಗಿ ಉಪಯೋಗಿಸಿದ್ದಾರೆ. ಜಡವಾದ ಪದಾರ್ಥದಲ್ಲಿ ಜ್ಞಾನಕ್ಕೆ ಪ್ರಸಕ್ತಿ ಇಲ್ಲದಿದ್ದಾಗ ಸರ್ವಜ್ಞತ್ವವು ಸುತರಾಂ ಬರುವುದಿಲ್ಲ.

ಇದರಂತೆ ಭಾಷ್ಯದಲ್ಲಿ ಭೇದವ್ಯಪದೇಶವೆಂಬ ಹೇತುವಿನಿಂದ ಚತುರ್ಮುಖ, ರುದ್ರರನ್ನು ಮಾತ್ರ ನಿಷೇಧ ಮಾಡಿದ್ದಾರೆ, ಚಿತ್ಪಕ್ಷತಿಯನ್ನು ನಿಷೇಧ ಮಾಡಿಲ್ಲ. ಏಕೆಂದರೆ ಅಕ್ಷರಗಳಲ್ಲಿ ಉತ್ತಮಾಕ್ಷರ, ಮಧ್ಯಮಾಕ್ಷರ, ಅಧಮಾಕ್ಷರವೆಂಬ ಪ್ರಭೇದವನ್ನು ಪರಿಗಣಿಸದೆ ಭೇದವ್ಯಪದೇಶವನ್ನು ತಿಳಿಯಲು ಸಾಧ್ಯವಿಲ್ಲ. ಹೀಗೆ ತಿಳಿಯುವುದು ಶ್ರೇಷ್ಠವಾದ್ದರಿಂದ ಆಚಾರ್ಯರು ಚಿತ್ಪಕ್ಷತಿಯನ್ನು ನಿಷೇಧಿಸುವುದಕ್ಕಾಗಿ ಭೇದವ್ಯಪದೇಶವನ್ನು ಹೇತುವನ್ನಾಗಿ ಉಪಯೋಗಿಸಿಲ್ಲ.

ಸೂತ್ರದಲ್ಲಿ 'ಇತರ' ಶಬ್ದವನ್ನು ದ್ವಿವಚನದಲ್ಲಿ ಪ್ರಯೋಗಿಸಿದ್ದಾರೆ. ವಸ್ತುತಃ ಜಡಪ್ರಕೃತಿ, ಚತುರ್ಮುಖ, ರುದ್ರ, ಇವರನ್ನೆಲ್ಲಾ ವಿವಕ್ಷಿಸಿದಾಗ ಬಹುವಚವನ್ನು ಪ್ರಯೋಗಿಸಬೇಕಿತ್ತು. ಆದರೆ ಚತುರ್ಮುಖ ಹಾಗೂ ರುದ್ರ ಇವರಿಬ್ಬರನ್ನು ಚೇತನರೆಂದು ಪರಿಗಣಿಸಿ ಜಡಪ್ರಕೃತಿಯನ್ನು ಅಚೇತನವೆಂದು ಪರಿಗಣಿಸಿ ದ್ವೈವಿಧ್ಯಕಲ್ಪನೆಯಿಂದ ದ್ವಿವಚನಪ್ರಯೋಗವು ಯುಕ್ತವಾಗಿದೆಯೆಂದು ತಿಳಿಯಬೇಕು.

ಕಾರ್ತವೀರ್ಯಾರ್ಜುನ, ಪಾಂಡವಾರ್ಜುನ ಎಂಬುದಾಗಿ ಇಬ್ಬರು ಅರ್ಜುನರಿದ್ದಾರೆ. ಕಾರ್ತವೀರ್ಯಾರ್ಜುನನಿಗಿಂತ ಪಾಂಡವಾರ್ಜುನನು ಉತ್ತಮನಾಗಿದ್ದಾನೆ. ಈ ವಿವಕ್ಷೆಯಿಂದ ಅರ್ಜುನನಿಗಿಂತ ಅರ್ಜುನನು ಉತ್ತಮನು ಎಂಬ ವಾಕ್ಯವನ್ನು ಪ್ರಯೋಗಿಸಬಹುದು. ಆದರಂತೆ ಅಕ್ಷರವು ಎರಡು ವಿಧ - ಬ್ರಹ್ಮಾಕ್ಷರ, ಅಬ್ರಹ್ಮಾಕ್ಷರ ಎಂದು. ಅಬ್ರಹ್ಮಾಕ್ಷರಕ್ಕಿಂತ ಬ್ರಹ್ಮಾಕ್ಷರವು ಉತ್ತಮವಾದ್ದರಿಂದ ಅಕ್ಷರಕ್ಕಿಂತ ಅಕ್ಷರವು ಉತ್ತಮವಾಗಿದೆ ಎಂಬ ವಾಕ್ಯವನ್ನು ಪ್ರಯೋಗಿಸಬಹುದು.

ಇದನ್ನೇ ನ್ಯಾಯವಿವರಣೆಯಲ್ಲಿ "ಅಕ್ಷರಾತ್ಪರತಃ ಪರಸ್ಯಾಪ್ಯಕ್ಷರಾಂತರತ್ವವಚನಾತ್" ಅಕ್ಷರಕ್ಕಿಂತ ಅಕ್ಷರವು ಉತ್ತಮವಾಗಿದೆಯೆಂದು ಹೇಳಬಹುದೆಂದಿದ್ದಾರೆ.

ಮತ್ತೊಂದು ಗಮನಿಸಬೇಕಾದ ವಿಚಾರ. 'ಅಕ್ಷರಾತ್ಪರತಃ ಪರಃ' ಎಂಬ ಶ್ರುತಿಯಲ್ಲಿ ಪೂರ್ವಪ್ರಸಕ್ತವಾದ ಅಕ್ಷರವನ್ನೇ ಸ್ವೀಕರಿಸಬೇಕೆಂಬುದು ಪೂರ್ವಪಕ್ಷಕಾರರ ವಾದ. 'ಅಕ್ಷರಾತ್ಸಂಭವತೀಹ ವಿಶ್ವಮ್' ಎಂಬಲ್ಲಿ ಜಗತ್ಕಾರಣತ್ವೇನ ಪ್ರಸ್ತುತವಾದ ಚಿತ್ಪಕ್ಷತ್ಯಾದಿಗಳನ್ನು ವಿವಕ್ಷಿಸಿ ಅದಕ್ಕಿಂತ ಉತ್ತಮತ್ವವನ್ನು ವಿಷ್ಣುವಿನಲ್ಲಿ ಹೇಳಬೇಕೆಂದು ಪೂರ್ವಪಕ್ಷಕಾರರು ಹೇಳುತ್ತಿದ್ದಾರೆ. ಆದರೆ ಸಿದ್ಧಾಂತದಲ್ಲಿ ಇದನ್ನು ಒಪ್ಪುವುದಿಲ್ಲ. ಹಿಂದ ಪ್ರಸಕ್ತವಾಗಿರುವ ಅಕ್ಷರವನ್ನೇ 'ಅಕ್ಷರಾತ್ಪರತಃ ಪರಃ' ಎಂಬ ಅಕ್ಷರಶಬ್ದದಿಂದ ವಿವಕ್ಷಿಸಬೇಕಾಗಿಲ್ಲ. ಪೂರ್ವಮೀಮಾಂಸೆಯಲ್ಲಿಯೂ ಬಾಧಕವಿದ್ದಾಗ ಹಿಂದ ಪ್ರಸಕ್ತವಾದದ್ದನ್ನು ಬಿಡಬಹುದೆಂದು ನಿರ್ಣಯಿಸಿದ್ದಾರೆ. ಆದ್ದರಿಂದ ಪೂರ್ವಪ್ರಸಕ್ತವಾದದ್ದನ್ನು

ವಿವಕ್ಷಿಸಬೇಕಾಗಿಲ್ಲ ಹೊರತಾಗಿ ಸ್ಕಾಂದಪುರಾಣದ ಆಧಾರದಿಂದ ಹೀಗೆ ಶ್ರುತ್ಯರ್ಥವನ್ನು ತಿಳಿಯಬೇಕು. ಮೂರು ಅಕ್ಷರತತ್ವಗಳಿಗಳಿವೆ, ಜಡಪ್ರಕೃತಿ, ಲಕ್ಷ್ಮೀದೇವಿ, ವಿಷ್ಣು ಎಂದು. ಮೊದಲನೆಯದ್ದು ಅಪರಾಕ್ಷರ ಎನಿಸುತ್ತದೆ. ಎರಡನೆಯದ್ದು ಪರಾಕ್ಷರಯೆನಿಸುತ್ತದೆ. ಮೂರನೆಯವನು ಪರಾತ್ಪರಾಕ್ಷರ ಎನಿಸುತ್ತಾನೆ. ಹೀಗೆ ಈ ವಿವಕ್ಷೆಯಿಂದ ಮಾಂಡೂಕ್ಯೋಪನಿಷತ್ತಿನಲ್ಲಿ 'ಅಕ್ಷರಾತ್ಪರತಃ ಪರಃ' ಎಂದು ವಿಷ್ಣುವನ್ನು 'ಪರಾತ್ಪರಾಕ್ಷರ' ಎಂದು ಕರೆಯಲಾಗಿದೆ. ಅಂದರೆ ಲಕ್ಷ್ಮೀದೇವಿಯು ಅಕ್ಷರವೆನಿಸಿದ ಜಡಪ್ರಕೃತಿಗಿಂತಲೂ ಉತ್ತಮಳಾಗಿದ್ದಾಳೆ, ಅವಳಿಗಿಂತಲೂ ವಿಷ್ಣು ಉತ್ತಮನಾಗಿದ್ದಾನೆ. ಆದ್ದರಿಂದ ವಿಷ್ಣು 'ಅಕ್ಷರಾತ್ಪರತಃ ಪರಃ' ಎನಿಸುತ್ತಾನೆ.

ಅದ್ವೈತಮತ ವಿಮರ್ಶೆ

ಶಾಂಕರಭಾಷ್ಯದಲ್ಲಿ ಆದೃಶ್ಯತ್ವಾದಿಕರಣದ ರಚನೆ ಹೀಗಿದೆ - 'ಯತ್ತದದ್ರೇಶ್ಯಮ್' ಎಂಬ ಆಥರ್ವಣೋಪನಿಷತ್ತಿನ ವಾಕ್ಯವು ವಿಷಯವಾಗಿದೆ. ಈ ಶ್ರುತಿಯಲ್ಲಿ ಕೇಳಿಸುತ್ತಿರುವ ಆದೃಶ್ಯತ್ವಾದಿಗುಣಗಳು ಪ್ರಧಾನದಲ್ಲಿ ಬರುತ್ತವೆ. ಏಕೆಂದರೆ ಆದೇ ಶ್ರುತಿಯಲ್ಲಿ ಮುಂದೆ 'ಯದ್ಭೂತಯೋನಿಮ್' ಎಂಬುದಾಗಿ ಭೂತಯೋನಿ ಶಬ್ದವನ್ನು ಪ್ರಯೋಗಿಸಲಾಗಿದೆ. ಯೋನಿ ಶಬ್ದಕ್ಕೆ ಉಪಾದಾನಕಾರಣವೆಂದರ್ಥ. ಆದ್ದರಿಂದಲೇ ಶ್ರುತಿಯು 'ಯಥೋರ್ಣನಾಭಿಃ' ಎಂಬುದಾಗಿ ಜೇಡರ ಹುಳುವಿನ ದೇಹ, ಭೂಮಿ, ಪುರುಷದೇಹಗಳನ್ನು ಉದಾಹರಣೆಯನ್ನಾಗಿ ನೀಡಿದೆ. ಆದ್ದರಿಂದ ಜಗತ್ತಿಗೆ ಉಪಾದಾನಕಾರಣವಾದ ಜಡಪ್ರಕೃತಿಯು ಭೂತಯೋನಿಯೆಂದು ಕರೆಯಲ್ಪಡುತ್ತದೆ. ಆದ್ದರಿಂದ ಆದೃಶ್ಯತ್ವಾದಿಗುಣವುಳ್ಳ ಅಕ್ಷರವೆಂದರೆ ಜಡಪ್ರಕೃತಿಯಾಗುತ್ತದೆಂದು ತಿಳಿಯಬೇಕು. 'ಅಕ್ಷರಾತ್ಪರತಃ ಪರಃ' ಎಂದು ಅಕ್ಷರತತ್ತ್ವಕ್ಕಿಂತ ಬ್ರಹ್ಮನು ಭಿನ್ನನಾಗಿದ್ದಾನೆಂದು ಹೇಳಿರುವುದರಿಂದ ಬ್ರಹ್ಮನನ್ನು ಅಕ್ಷರನೆಂದು ಹೇಳಲು ಸಾಧ್ಯವಿಲ್ಲ. ಅಥವಾ ಭೂತಯೋನಿ ಶಬ್ದಕ್ಕೆ ನಿಮಿತ್ತಕಾರಣವೆಂದು ಅರ್ಥೈಸಿದರೆ ಪುಣ್ಯಪಾಪಗಬಲ ಮೂಲಕ ಜಗತ್ತಿಗೆ ಕಾರಣನಾದ ಜೀವಾತ್ಮನು ಅಕ್ಷರಶಬ್ದವಾಚ್ಯನಾಗುತ್ತಾನೆ. ಇಷ್ಟು ಪೂರ್ವಪಕ್ಷ.

ಶಾಂಕರಭಾಷ್ಯದಂತೆ ಸಿದ್ಧಾಂತ - ಜಗತ್ತು ಬ್ರಹ್ಮನ ಪರಿಣಾಮವೆಂದು ನಾವು ಹೇಳುವುದಿಲ್ಲ ಹೊರತು, ಬ್ರಹ್ಮನವಿವರ್ತವಾಗಿದೆ. ಯಾವರೀತಿಯಾಗಿ ರಜ್ಜುವಿಗೆ ಸರ್ಪವು ವಿವರ್ತಕಾರಣವಾಗಿದೆಯೋ, ಆದರಂತೆ ಜಗತ್ತಿಗೆ ಬ್ರಹ್ಮನು ವಿವರ್ತಕಾರಣನಾಗಿದ್ದಾನೆ. ಇಂತಹ ವಿವರ್ತಕಾರಣವನ್ನು ಭೂತಯೋನಿಶಬ್ದವು ಪ್ರತಿಪಾದಿಸುತ್ತಿದೆ. ಮತ್ತು 'ಅಕ್ಷರಾತ್ಸಂಭವತೀಹ ವಿಶ್ವಮ್' ಎಂಬುದಾಗಿ ಅಕ್ಷರತತ್ತ್ವವನ್ನು ಜಗತ್ಕಾರಣವೆಂದು ಹೇಳಿ, ಅದೇ ಅಕ್ಷರತತ್ತ್ವವನ್ನು 'ಯಃ ಸರ್ವಜ್ಞಃ' ಎಂಬುದಾಗಿ ಸರ್ವಜ್ಞವೆಂದು ಶ್ರುತಿ ಹೇಳಿದೆ. ಸರ್ವಜ್ಞತ್ವಾದಿಗಳು ಬ್ರಹ್ಮನ ಧರ್ಮವೇ ಹೊರತು, ಪ್ರಕೃತಿಯ ಧರ್ಮವಲ್ಲ. ಆದ್ದರಿಂದ ಆದೃಶ್ಯತ್ವಾದಿಗುಣಗಳುಳ್ಳವನು ಬ್ರಹ್ಮನೇ ಆಗುತ್ತಾನೆ. ಮತ್ತು 'ಯಯಾ ತದಕ್ಷರಮಧಿಗಮ್ಯತೇ' ಎಂಬುದಾಗಿ ಪರವಿದ್ಯೆಗೆ ಅಕ್ಷರತತ್ತ್ವವು ವಿಷಯವಾಗಿದೆಯೆಂದು ತಿಳಿಯುತ್ತಿದೆ. ಅಕ್ಷರನು ಬ್ರಹ್ಮನಾಗದಿದ್ದರೆ ಪರವಿದ್ಯೆಗೆ ವಿಷಯನೂ ಸಹ ಆಗಲಾರನು. ಆದ್ದರಿಂದ ಜಗತ್ತಿನ ಅಧ್ಯಾಸಕ್ಕೆ ಅಧಿಷ್ಠಾನನಾದ ಶುದ್ಧಬ್ರಹ್ಮನೇ ಆದೃಶ್ಯತ್ವಾದಿಗುಣಗಳುಳ್ಳವನು.

ಅದ್ವೈತಿಗಳ ಈ ಅಧಿಕರಣ ಶರೀರ ಸರಿಯಿಲ್ಲ. ಏಕೆಂದರೆ ಸರ್ಪದ ಆರೋಪಕ್ಕೆ ಹಗ್ಗವು ಹೇಗೆ ಅಧಿಷ್ಠಾನವೋ, ಆದರಂತೆ ಪ್ರಪಂಚದ ಆರೋಪಕ್ಕೆ ಬ್ರಹ್ಮನು ಅಧಿಷ್ಠಾನನಾಗಿದ್ದಾನೆ. ಅಂತಹ ಬ್ರಹ್ಮನು ವಾಚ್ಯನಾದರೆ ನಿರ್ಧರ್ಮಕನಾದ ಶುದ್ಧಬ್ರಹ್ಮನಲ್ಲಿ 'ಧರ್ಮೋಕ್ತೇಃ' ಎಂಬ ಸೂತ್ರೋಕ್ತ ಕಾರಣ ವಚನವು ತಪ್ಪಾಗುತ್ತದೆ. ಮತ್ತು 'ಸೂರ್ಯದ್ವಾರೇಣ ವಿರಜಾಃ ಪ್ರಯಾಂತಿ' ಎಂಬುದಾಗಿ ಸೂರ್ಯನ ಮಾರ್ಗದಲ್ಲಿ ಬ್ರಹ್ಮನನ್ನು ಹೊಂದುತ್ತಾರೆಂದು

ಶ್ರುತಿ ಹೇಳುತ್ತಿದೆ. ಅಂತಹ ಬ್ರಹ್ಮನು ಕಾರ್ಯಬ್ರಹ್ಮನಾಗಿದ್ದಾನೆ ಹೊರತು, ಅಧಿಷ್ಠಾನನಾದ ಬ್ರಹ್ಮನಲ್ಲ. ಆದುದರಿಂದ ನಿರ್ಗುಣನಿಗೆ ಇವೆಲ್ಲವೂ ಬಾಧಕವಾಗುತ್ತವೆ. ಆದ್ದರಿಂದ ಆದ್ವೈತಿಗಳ ಅಧಿಕರಣಶರೀರವು ಅಸಾಧುವಾಗಿದೆ.

ರಾಮಾನುಜರ ಅಧಿಕರಣ ವಿಮರ್ಶೆ ಮತ್ತು ಟೀಕೆಯ ಕಠಿಣಪದಾರ್ಥಗಳು

ಆದೃಶ್ಯತ್ವಾದಿಗುಣವುಳ್ಳದ್ದು ಪ್ರಕೃತಿ, ಅಕ್ಷರಾತ್ಪರತಃ ಪರನಾದವನು ಜೀವನೆಂದು ಪೂರ್ವಪಕ್ಷಮಾಡಿ ಎರಡೂ ಸಹ ಪರಮಾತ್ಮನೇ ಎಂದು ರಾಮಾನುಜರು ಸಿದ್ಧಾಂತ ಮಾಡಿದ್ದಾರೆ. ಇದು ತಪ್ಪು. ಏಕೆಂದರೆ

'ದಿವ್ಯೋ ಹ್ಯಮೂರ್ತಃ ಪುರುಷಃ ಸ ಬಾಹ್ಯಾಭ್ಯಂತರೋ ಹ್ಯಜಃ।
ಅಪ್ರಾಣೋ ಹ್ಯಮನಾಶ್ಶುಭ್ರೋ ಅಕ್ಷರಾತ್ಪರತಃ ಪರಃ' ॥

ಎಂಬುದಾಗಿ ದಿವ್ಯತ್ವ, ಅಮೂರ್ತತ್ವ ವ್ಯಾಪ್ತತ್ವ, ಪ್ರಾಣತ್ವ ಮೊದಲಾದ ಧರ್ಮಗಳಿಂದ ಅಕ್ಷರಾತ್ಪರತಃ ಪರವು ವಿಶಿಷ್ಟವಾಗಿದೆಯೆಂದು ಶ್ರುತಿ ಹೇಳುತ್ತಿದೆ. ಆದರೆ ಜೀವನಲ್ಲಿ ಅಮೂರ್ತತ್ವ ಮೊದಲಾದ ಯಾವುದೇ ಧರ್ಮಗಳು ಇರುವುದಿಲ್ಲ. ಆದ್ದರಿಂದ ಜೀವನು ಅಕ್ಷರಾತ್ಪರತಃ ಪರನಾಗುತ್ತಾನೆಂದು ಶಂಕೆಯೇ ಹುಟ್ಟುವುದಿಲ್ಲ.

ವೈಶ್ವಾನರಾಧಿಕರಣ

ವೈಶ್ವಾನರಶಬ್ದವು ಉಭಯತ್ರಪ್ರಸಿದ್ಧವಲ್ಲ

ಈ ಅಧಿಕರಣದಲ್ಲಿ ನೇರವಾಗಿ ಲಿಂಗವನ್ನು ಸಮನ್ವಯ ಮಾಡುತ್ತಿಲ್ಲ. 'ವೈಶ್ವಾನರ' ಎಂಬ ನಾಮವನ್ನು ಸಮನ್ವಯ ಮಾಡುತ್ತಿದ್ದಾರೆ. ಹಾಗಾದರೆ ಲಿಂಗಸಮನ್ವಯ ಮಾಡುವ ಈ ಪಾದದಲ್ಲಿ ವೈಶ್ವಾನರಾಧಿಕರಣವು ಅಸಂಗತವಾಗುತ್ತದೆಂಬುದು ಮೊದಲನೆಯ ಪ್ರಶ್ನೆ. ಇಂತಹ 'ವೈಶ್ವಾನರ' ಎಂಬ ನಾಮವು ವಿಷ್ಣುವಿನಲ್ಲಿ ಹಾಗೂ ಅಗ್ನಿಯಲ್ಲಿ ಸಾಧಾರಣವಾಗಿರುವುದರಿಂದ ಉಭಯತ್ರಪ್ರಸಿದ್ಧವಾಗಿದೆ. ಈ ಪಾದದಲ್ಲಿ ಅನ್ಯತ್ರಪ್ರಸಿದ್ಧಶಬ್ದವನ್ನು ಸಮನ್ವಯ ಮಾಡುತ್ತಿರುವುದರಿಂದಲೂ ಈ ಅಧಿಕರಣಕ್ಕೆ ಇಲ್ಲಿ ಸಂಗತಿ ಇರುವುದಿಲ್ಲವೆಂಬುದು ಎರಡನೆಯ ಪ್ರಶ್ನೆ.

ಒಂದು 'ವೈಶ್ವಾನರ' ಎಂಬ ನಾಮವನ್ನು ಸಮನ್ವಯ ಮಾಡುವುದರಿಂದ ವೈಶ್ವಾನರನೆನಿಸಿದ ವಿಷ್ಣುವಿಗೆ ಸಂಬಂಧಪಟ್ಟ ಎಲ್ಲ ಲಿಂಗಗಳನ್ನು ಸಮನ್ವಯ ಮಾಡಿದಂತಾಗುವುದರಿಂದ ಈ ಅಧಿಕರಣವು ಇಲ್ಲಿ ಸಂಗತವಾಗುತ್ತದೆ. ಮತ್ತು ಉಭಯತ್ರಪ್ರಸಿದ್ಧವೂ ಆಗುವುದಿಲ್ಲ. ಪ್ರಮಾಣತೌಲ್ಯ ಹಾಗೂ ನ್ಯಾಯತೌಲ್ಯಗಳಿದ್ದರೆ ಮಾತ್ರ ಉಭಯತ್ರಪ್ರಸಿದ್ಧವಾಗುತ್ತದೆ. ಅಂದರೆ ಶ್ರುತಿಯಿಂದ ವಿಷ್ಣುವಿನಲ್ಲಿ ಪ್ರಸಿದ್ಧಿಯನ್ನು ಹೇಳಿದರೆ ಅಂತಹ ಶ್ರುತಿಯಿಂದಲೇ ಅಗ್ನಿಯಲ್ಲಿಯೂ ಪ್ರಸಿದ್ಧಿಯನ್ನು ಹೇಳಬೇಕು. ಅಥವಾ ಲೋಕರೂಢಿಯನ್ನು ಅಗ್ನಿಯಲ್ಲಿ ಹೇಳಿದರೆ ಅಂತಹ ಲೋಕರೂಢಿಯನ್ನೇ ವಿಷ್ಣುವಿನಲ್ಲಿ ಹೇಳಬೇಕು. ಹೀಗಿದ್ದರೆ ಮಾತ್ರ ಉಭಯತ್ರಪ್ರಸಿದ್ಧವೆನಿಸುತ್ತದೆ. ಆದರೆ ಪ್ರಕೃತ ವೈಶ್ವಾನರ ಶಬ್ದವು ಲೋಕರೂಢಿಯಿಂದ ಅಗ್ನಿಯಲ್ಲಿ ಪ್ರಸಿದ್ಧವಾಗಿದೆ. ಶ್ರುತಿಯಿಂದ ವಿಷ್ಣುವಿನಲ್ಲಿ ಪ್ರಸಿದ್ಧವಾಗಿದೆ. ಹೀಗಿರುವಾಗ ಉಭಯತ್ರಪ್ರಸಿದ್ಧವೆನ್ನಲು ಸಾಧ್ಯವಿಲ್ಲ ಹೊರತಾಗಿ, ಲೋಕರೂಢಿಯನ್ನು ವಿವಕ್ಷಿಸಿ ಅನ್ಯತ್ರಪ್ರಸಿದ್ಧವೇ ಆಗುತ್ತದೆ.

ಪರಿಪೂರ್ಣಚಂದ್ರಿಕಾ

'ವೈಶ್ವಾನರ' ಶಬ್ದವು ಲಿಂಗಾತ್ಮಕವೆಂದು 'ವಿಶ್ವಜೀವಾಂತರಾತ್ಮಾದ್ಯೈರ್ಲಿಂಗೈಃ' ಎಂಬ ಅಣುಭಾಷ್ಯದಲ್ಲಿ ಹೇಳಿದಂತೆ ಕಾಣಿಸುತ್ತದೆ. ಇದು ಸಿದ್ಧಾಂತದಲ್ಲಿ 'ವೈಶ್ವಾನರ' ಶಬ್ದವನ್ನು ಯೌಗಿಕವೆಂದು ಹೇಳಿದ್ದಾರೆ ಎಂಬ ಅಭಿಪ್ರಾಯದಿಂದ; ಹೊರತು, ಉಳಿದ ಶಬ್ದಗಳಂತೆ ಪೂರ್ವಪಕ್ಷ ಸಂದರ್ಭದಲ್ಲಿ ಲಿಂಗಾತ್ಮಕವಾಗಿರುವುದಿಲ್ಲ; ನಾಮಾತ್ಮಕವೇ ಆಗಿರುತ್ತದೆ.

ಈ ಅಧಿಕರಣಕ್ಕೆ ಹಿಂದಿನ ಅದೃಶ್ಯತ್ವಾಧಿಕರಣದ ಜೊತೆಗೆ ಆಕ್ಷೇಪಿಕೀ ಸಂಗತಿಯನ್ನು ತಿಳಿಯಬೇಕು. ಅದೃಶ್ಯತ್ವಾದಿಗುಣಗಳು ವಿಷ್ಣುವಿನ ಧರ್ಮವೆಂದು ಎಲ್ಲಿ ಹೇಳಲಾಗಿದೆ. ಅಂತಹ ಅದೃಶ್ಯತ್ವಾದಿಗುಣಗಳನ್ನು ಹೇಳುವ ಉಪನಿಷತ್ತಿನಲ್ಲಿ ಸರ್ವಗತತ್ವವನ್ನೂ ಸಹ ಹೇಳಲಾಗಿದೆ. ಆದೇ ಸರ್ವಗತತ್ವಧರ್ಮವನ್ನು ಛಾಂದೋಗ್ಯೋಪನಿಷತ್ತು ವೈಶ್ವಾನರನಲ್ಲಿ ಹೇಳುತ್ತಿದೆ. ವೈಶ್ವಾನರನು ವಿಷ್ಣುವಲ್ಲದಿದ್ದರೆ ಅದೃಶ್ಯತ್ವಾದಿಗುಣಗಳೂ ಸಹ ವಿಷ್ಣುವಿನ ಧರ್ಮವಾಗುವುದಿಲ್ಲ. ಹೀಗೆ ಹಿಂದಿನ ಅಧಿಕರಣದ ಸಿದ್ಧಾಂತವು ಅಯುಕ್ತವಾಗುತ್ತದೆ. ಈ ಉದ್ದೇಶಕ್ಕೋಸ್ಕರ ಸೂತ್ರಕಾರರು 'ವೈಶ್ವಾನರ' ಎಂಬ ನಾಮಾತ್ಮಕಶಬ್ದವನ್ನು ವಿಷ್ಣುವಿನಲ್ಲಿ ಸಮರ್ಥಿಸಲು ಹೊರಟಿದ್ದಾರೆ.

ಸಂಶಯ ಹಾಗೂ ಪೂರ್ವಪಕ್ಷ

ಛಾಂದೋಗ್ಯಾದಿ ಉಪನಿಷತ್ತುಗಳಲ್ಲಿ ಪ್ರಸ್ತುತನಾದ ವೈಶ್ವಾನರನು ಜಡವಾದ ಅಗ್ನಿ ಅಥವಾ ಅಗ್ನಿದೇವತೆ ಹೊರತು; ವಿಷ್ಣುವಲ್ಲ. ಏಕೆಂದರೆ ಲೋಕದಲ್ಲಿ ಶ್ರುತ್ಯುಕ್ತ 'ವೈಶ್ವಾನರ' ಶಬ್ದವನ್ನು ಇವರಿಬ್ಬರಲ್ಲಿಯೇ ಪ್ರಯೋಗಿಸುತ್ತಾರೆ. ಆದ್ದರಿಂದ ಶ್ರುತಿಯು ಅಗ್ನಿಯೇ ವೈಶ್ವಾನರನಾಗಲು ಪ್ರಬಲವಾದ ಪ್ರಮಾಣವಾಗಿದೆ. ವಸ್ತುತಃ ಸರ್ವಗತತ್ವಧರ್ಮವು ವಿಷ್ಣುವಿನಲ್ಲಿರಬಹುದು. ಆದರೆ ಲಿಂಗಕ್ಕಿಂತ ಶ್ರುತಿಯು ಪ್ರಬಲವಾಗಿರುವುದರಿಂದ ಅಗ್ನಿಯೇ ವೈಶ್ವಾನರಶಬ್ದದಿಂದ ಪ್ರತಿಪಾದ್ಯನಾಗಬೇಕು. ಶ್ರುತಿಸಮಾಖ್ಯಾ, ಪುರುಷಸೂಕ್ತ ಸಮಾಖ್ಯಾ, ಆತ್ಮಶಬ್ದ, ಬ್ರಹ್ಮಪ್ರಕರಣ, ಸರ್ವಗತತ್ವಲಿಂಗ ಇವೇ ಮೊದಲಾದ ಅನೇಕ ಪ್ರಮಾಣಗಳು ಸಿದ್ಧಾಂತ ಸ್ಥಾಪಕಗಳಾಗಿವೆಯಲ್ಲವೇ? ಎಂದು ಪ್ರಶ್ನಿಸಬಾರದು. ಸ್ವಭಾವತಃ ಬಲಿಷ್ಠವಾದ ಒಂದೇ ಶ್ರುತಿಯು ಆ ಎಲ್ಲ ಲಿಂಗಗಳನ್ನು ಬಾಧಿಸುತ್ತದೆ. ಹೀಗೆ ಶ್ರುತಿಯ ಆಧಾರದಿಂದ ಅಗ್ನಿದೇವತೆಯು ವೈಶ್ವಾನರನಾಗಿದ್ದಾನೆಂದು ಪೂರ್ವಪಕ್ಷಕಾರನ ಅಭಿಪ್ರಾಯ.

ನಿರ್ಧಾರಿತ ಪೂರ್ವಪಕ್ಷವೋ ? ಅನಿರ್ಧಾರಿತ ಪೂರ್ವಪಕ್ಷವೋ ?

ಅಗ್ನಿಯು ವೈಶ್ವಾನರನಾಗಿದ್ದಾನೆಂಬ ಪೂರ್ವಪಕ್ಷಕ್ಕೆ ಶ್ರುತಿಯು ಆಧಾರವಾಗಿದೆ. ವಿಷ್ಣು ವೈಶ್ವಾನರನಾಗಿದ್ದಾನೆಂಬ ಸಿದ್ಧಾಂತಕ್ಕೆ ಲಿಂಗವು ಆಧಾರವಾಗಿದೆ. ಇವೆರಡರಲ್ಲಿ ಯಾವುದು ಪ್ರಬಲ? ಯಾವುದು ದುರ್ಬಲ? ಎಂಬುದನ್ನು ಮೊದಲು ವಿಚಾರ ಮಾಡಬೇಕು. ವಾಸ್ತವಿಕವಾಗಿ ಅಂತಃಸ್ಥತ್ವಾಧಿಕರಣದ ನ್ಯಾಯವನ್ನು ಸ್ಥರಿಸಿಕೊಂಡರೆ ಅಗ್ನಿಶ್ರುತಿ ಮೊದಲಾದವೆಲ್ಲ ವಿಷ್ಣುವನ್ನೇ ಪ್ರತಿಪಾದಿಸುತ್ತವೆಂದು ತಿಳಿಯುತ್ತದೆ. ಆವಾಗ ಶ್ರುತಿಯು ಸಾವಕಾಶವಾಗುವುದರಿಂದ ದುರ್ಬಲವಾಗುತ್ತದೆ. ಲಿಂಗವು ನಿರವಕಾಶವಾದ್ದರಿಂದ ಪ್ರಬಲವಾಗುತ್ತದೆ. ಆದರೆ ಪ್ರಕೃತ ಪೂರ್ವಪಕ್ಷಕಾರನು ತನ್ನ ವಾದವನ್ನು ಸಮರ್ಥವಾಗಿ ಮಂಡಿಸುತ್ತಿದ್ದಾನೆ. ಒಂದು ವೇಳೆ ಎಲ್ಲಾ ಶಬ್ದಗಳು ಭಗವಂತನನ್ನೇ ಪ್ರತಿಪಾದಿಸುವುದಾದರೆ ಲೋಕವ್ಯವಹಾರವೇ ಇಲ್ಲವಾಗುವ ಪ್ರಸಂಗ ಬರುತ್ತದೆ. ಅದಕ್ಕೋಸ್ಕರ ಅಗ್ನಿ ಮೊದಲಾದ ಶಬ್ದಗಳು ಮುಖ್ಯವಾಗಿ ದೇವತೆಗಳನ್ನು ಪ್ರತಿಪಾದಿಸುತ್ತವೆಂದು ಒಪ್ಪಬೇಕು.

ಇನ್ನು ಮುಖ್ಯಾರ್ಥನಾದವನು ಭಗವಂತ. ಅವನ ಸಂಬಂಧದಿಂದ ದೇವತೆಗಳು ಅಗ್ನಿ ಮೊದಲಾದ ಶಬ್ದಗಳಿಂದ ಪ್ರತಿಪಾದ್ಯರಾಗುತ್ತಾರೆಂದು ಸಿದ್ಧಾಂತಿಗಳು ಉತ್ತರಿಸಬಹುದು. ಹಾಗಾದರೆ ಸಕಲ ಶಬ್ದಗಳಿಗೆ ಎಲ್ಲಾ ಪದಾರ್ಥಗಳಲ್ಲಿ ಲಕ್ಷಣಾವೃತ್ತಿಯನ್ನು ಒಪ್ಪಿದಂತಾಗುತ್ತದೆ. ಹಾಗೇ ಲಕ್ಷಣಾವೃತ್ತಿಯನ್ನು ಒಪ್ಪಿದರೆ ಸಂಸ್ಕೃತ ಸಾಹಿತ್ಯದಲ್ಲಿರುವ ನಾಮಾತ್ಮಕ

ಶಬ್ದಗಳೆಲ್ಲವೂ ಪರ್ಯಾಯಪದಗಳಾದವು. ಆವಾಗ ಇಂದ್ರ ಮೊದಲಾದ ಶಬ್ದಗಳು ಇಂದ್ರನನ್ನು ಪ್ರತಿಪಾದಿಸುವಂತೆ ಅಗ್ನ್ಯಾದಿಗಳನ್ನೂ ಸಹ ಪ್ರತಿಪಾದಿಸಬೇಕಾಗುತ್ತದೆ. ಲಕ್ಷಣಾ ಮಾಡಬೇಕಾದರೆ ಲಕ್ಷಣೀಯವಾದ ವಸ್ತುವನ್ನು ಒಂದೇ ಶಬ್ದದಿಂದ ತಿಳಿಯಬೇಕೆಂದೇನೂ ನಿಯಮವಿಲ್ಲ. ತೀರದಲ್ಲಿ ಗಂಗಾಪದಕ್ಕೆ ಲಕ್ಷಣಾ ಮಾಡುವಂತೆ ಪ್ರವಾಹ ಶಬ್ದಕ್ಕೂ ಮಾಡಬಹುದು. 'ದೇವಸರಿತ್' ಎಂಬ ಶಬ್ದಕ್ಕೂ ಮಾಡಬಹುದು. ಹೀಗೊಪ್ಪದಿದ್ದರೆ ಅಗ್ನಿಯಲ್ಲಿ ವಹ್ನಿ ಶಬ್ದವನ್ನೂ ಸಹ ಪ್ರಯೋಗ ಮಾಡದೇ ಇರುವಂತಹ ಸ್ಥಿತಿ ಬರುತ್ತದೆ.

ಇನ್ನು ಪರಮಾತ್ಮನು ಅಗ್ನಿ ಮೊದಲಾದ ಶಬ್ದಗಳಿಂದ ಮುಖ್ಯವಾಗಿ ವಾಚ್ಯನಾಗಿದ್ದಾನೆ. ದೇವತೆಗಳು ಅಮುಖ್ಯವಾಗಿ ವಾಚ್ಯರಾಗಿದ್ದಾರೆಂದು ಸಿದ್ಧಾಂತಿಗಳು ಉತ್ತರಿಸಬಹುದು. ಆದರೆ ಹಾಗೆ ಹೇಳಲು ಕಾರಣವಿಲ್ಲ. ಒಂದು ವೇಳೆ ಅಗ್ನ್ಯಾದಿ ದೇವತೆಗಳನ್ನು ಯಾವುದಾದರೂ ಶಬ್ದವು ಮುಖ್ಯವಾಗಿ ಪ್ರತಿಪಾದಿಸುವುದಾಗಿದ್ದರೆ ಆದರ ಅನ್ವಯಕ್ಕೋಸ್ಕರ ಉಳಿದ ಶಬ್ದವನ್ನು ಅಮುಖ್ಯವಾಗಿ ಕೂಡಿಸಬಹುದಿತ್ತು. ಆದರೆ ಸಿದ್ಧಾಂತದ ಪ್ರಕಾರ ಭಗವಂತನನ್ನು ಬಿಟ್ಟು ಬೇರೆ ಯಾರೂ ಸಹ ಮುಖ್ಯವಾಗಿ ಯಾವುದೇ ಶಬ್ದದಿಂದ ಪ್ರತಿಪಾದ್ಯರಾಗುವುದಿಲ್ಲ.

ಮತ್ತು ಇಂದ್ರಾದಿ ಶಬ್ದಗಳು ಬ್ರಹ್ಮನಲ್ಲಿ ಮುಖ್ಯವಾಗಿರುವುದಾದರೆ, ಅಗ್ನಿಸೂಕ್ತ, ವಾಯುಸೂಕ್ತ ಎಂಬ ಸೂಕ್ತ ವ್ಯವಸ್ಥೆಯು ಹಾಗೂ ವೈಶ್ವಾನರ ವಿದ್ಯೆ, ಅಗ್ನಿವಿದ್ಯೆಯೆಂಬ ವಿದ್ಯಾವ್ಯವಸ್ಥೆಯೂ ಸಹ ಅಯುಕ್ತವಾಗುತ್ತದೆ. ಈ ಎಲ್ಲ ಕಾರಣಗಳಿಂದ ಲೋಕವ್ಯವಹಾರವನ್ನು ಕೂಡಿಸಬೇಕೆಂದರೆ ವಿಷ್ಣುವನ್ನು ಬಿಟ್ಟು ಬೇರೆ ಪದಾರ್ಥಗಳಲ್ಲಿಯೂ ಮುಖ್ಯವಾಚ್ಯತ್ವವನ್ನೇ ನಾವು ಒಪ್ಪಬೇಕು. ಹಾಗೆ ಒಪ್ಪಿದಾಗ ವೈಶ್ವಾನರ ಶ್ರುತಿಯು ಪೂರ್ವಪಕ್ಷಿಯ ವಿಷಯದಲ್ಲಿ ಪ್ರಬಲವಾದ ಪ್ರಮಾಣವಾಗುತ್ತದೆ.

ಟೀಕೆ, ಭಾಷ್ಯಗಳನ್ನು ನೋಡಿದಾಗ ಅನಿರ್ಧಾರಿತ ಪೂರ್ವಪಕ್ಷವನ್ನು ಮಾಡಿದಂತೆ ಕಾಣಿಸುತ್ತದೆ. ಅಂದರೆ ಪೂರ್ವಪಕ್ಷಯುಕ್ತಿ ಹಾಗೂ ಸಿದ್ಧಾಂತಯುಕ್ತಿಯು ಸಮಬಲವಾಗಿರುವುದರಿಂದ ವಿಷ್ಣುವೇ ವೈಶ್ವಾನರನೆಂದು ನಿರ್ಣಯವಾಗುವುದಿಲ್ಲವೆಂದು ಪೂರ್ವಪಕ್ಷ ಮಾಡಿದ್ದಾರೆ. ಆದರೂ ಸಹ ಚಂದ್ರಿಕಾಚಾರ್ಯರು ನಿಶ್ಚಯಾತ್ಮಕವಾದ ಪೂರ್ವಪಕ್ಷವನ್ನೇ ಸಮರ್ಥಿಸಿದ್ದಾರೆ. ಸಿದ್ಧಾಂತಯುಕ್ತಿಗಿಂತಲೂ ಪೂರ್ವಪಕ್ಷಯುಕ್ತಿಯು ಪ್ರಬಲವಾಗಿದೆ. ಏಕೆಂದರೆ ಅನ್ಯತ್ರಪ್ರಸಿದ್ಧಿಯೆಂಬ ನಿರವಕಾಶಯುಕ್ತಿಯಿಂದ ವೈಶ್ವಾನರ ಶ್ರುತಿಯು ಪ್ರಬಲವಾದ ಪ್ರಮಾಣವಾಗಿದೆ. ಆದ್ದರಿಂದ ವಿಷ್ಣು ವೈಶ್ವಾನರನಾಗಲು ಸಾಧ್ಯವೇ ಇಲ್ಲ. ಅಗ್ನಿಯೇ ವೈಶ್ವಾನರನಾಗುತ್ತಾನೆಂಬ ಪೂರ್ವಪಕ್ಷವನ್ನು ನಿರ್ಣಯ ಮಾಡಿದ್ದಾರೆ. ಇದಕ್ಕೆನುಗುಣವಾಗಿಯೇ ಟೀಕೆ ಹಾಗೂ ಭಾಷ್ಯಗಳನ್ನು ಅರ್ಥೈಸಿಕೊಳ್ಳಬೇಕು. ನಿಶ್ಚಯ ಮಾಡಲು ಬರುವುದಿಲ್ಲವೆಂದು ಟೀಕೆಯಲ್ಲಿ ಹೇಳಿದ್ದರೂ ಸಹ ಅಗ್ನಿ ಪರವಾಗಿ ನಿಶ್ಚಯಿಸಬಹುದೆಂಬುದನ್ನು ಅಲ್ಲಿ ವಿವಕ್ಷಿಸಿದಾಗ ಸಮಸ್ಯೆಯು ಪರಿಹಾರವಾಗುತ್ತದೆ. ಆದ್ದರಿಂದ ನಿಶ್ಚಯಾತ್ಮಕವಾದ ಪೂರ್ವಪಕ್ಷವನ್ನೇ ಮಾಡಲು ಬರುವಾಗ ಅನಿಶ್ಚಯಾತ್ಮಕವಾದ ಪೂರ್ವಪಕ್ಷವನ್ನೇಕೆ ಮಾಡಬೇಕು? ಅಥವಾ ಅನಿರ್ಧಾರಿತವಾದ ಪೂರ್ವಪಕ್ಷವನ್ನು ಇಟ್ಟುಕೊಂಡರೂ ಸಹ ವಿಷ್ಣುಪರತ್ವವಿಷಯದಲ್ಲಷ್ಟೇ ನಿಶ್ಚಯವಿಲ್ಲವೆಂದಭಿಪ್ರಾಯ. ಅಗ್ನಿವಿಷಯದಲ್ಲಿ ನಿಶ್ಚಯಾತ್ಮಕವಾಗಿ ಯುಕ್ತಿಗಳನ್ನು ಹೇಳಬಹುದು.

ಈ ವೈಶ್ವಾನರಾಧಿಕರಣವು ಹಿಂದಿನೆರಡು ಪಾದಗಳಲ್ಲಿ ಪ್ರಸಕ್ತವಾದ ಎಲ್ಲಾ ಅಧಿಕರಣಗಳ ಸಿದ್ಧಾಂತ ಪ್ರಮೇಯವನ್ನು ಆಕ್ಷೇಪಿಸುತ್ತಿರುವುದರಿಂದ ಎರಡು ಪಾದಗಳಲ್ಲಿರುವ ಎಲ್ಲಾ ಅಧಿಕರಣಗಳಿಗೆ ರಾಜನ ಸ್ಥಾನದಲ್ಲಿದೆ. ಆದ್ದರಿಂದಲೇ ವೈಶ್ವಾನರಾಧಿಕರಣವನ್ನು ಕೊನೆಯಲ್ಲಿ ಉಲ್ಲೇಖಿಸಿದ್ದಾರೆ.

ಪರಿಪೂರ್ಣಚಂದ್ರಿಕಾ

ವೈಶ್ವಾನರ ಶ್ರುತಿಯಿಂದ ವಿಷ್ಣುವೇ ಪ್ರತಿಪಾದ್ಯನೆಂದು ಸಿದ್ಧಾಂತ

ಸಿದ್ಧಾಂತ ಹೀಗಿದೆ - ಆಜ್ಞಾನಿಗಳು ಆಜ್ಞಾನ ಪ್ರಯುಕ್ತವಾಗಿ ವಿಷ್ಣುಪರವಾದ ಶಬ್ದಗಳನ್ನು ಲೋಕದಲ್ಲಿ ಪ್ರಯೋಗಿಸಿದ್ದಾರೆ. ಆದರಂತೆ ಜ್ಞಾನಿಗಳೂ ಸಹ ಹಾನ, ಉಪಾದಾನ ಮೊದಲಾದ ವ್ಯವಹಾರಕ್ಕೋಸ್ಕರ ಲೋಕದಲ್ಲಿ ಪ್ರಯೋಗಿಸುತ್ತಾರೆ.

ವಸ್ತುತಃ ಸೂಕ್ತಾದಿವ್ಯವಸ್ಥೆಗೆ ಋಗ್ಭಾಷ್ಯದಲ್ಲಿ ಬೇರೆ ಕಾರಣವನ್ನೇ ಹೇಳಿದ್ದಾರೆ -

ಪೃಥಗ್ರೂಪಾಣಿ ವಿಷ್ಣೋಸ್ತು ದೇವತಾಂತರಗಾನಿ ಚ ।
ಅಗ್ನ್ಯಾದಿಸೂಕ್ತವಾಚ್ಯಾನಿ ನಾಮ್ನಾ ಸೂಕ್ತಭಿದಾ ಭವೇತ್ ॥

ಭಗವಂತನು ದೇವತಾಂತರ್ಗತನಾಗಿ ಹಾಗೂ ದೇವತೆಗಳಲ್ಲಿ ಅಂತರ್ಗತನಾಗದೇ ಎರಡು ರೂಪಗಳಿಂದ ಅಗ್ನಿ ಮೊದಲಾದ ಶಬ್ದಗಳಿಂದ ಪ್ರತಿಪಾದ್ಯನಾಗಿದ್ದಾನೆ. ಈ ಎರಡು ರೂಪಗಳಲ್ಲಿರುವ ಅಗ್ನ್ಯಾದಿ ಶಬ್ದಗಳನ್ನು ವಿವಕ್ಷಿಸಿ ಅಗ್ನಿಸೂಕ್ತ, ವಾಯುಸೂಕ್ತ ಇತ್ಯಾದಿ ವ್ಯವಸ್ಥೆಯು ಇರುತ್ತದೆ.

ಹೀಗೆ ಅಗ್ನಿ ಮೊದಲಾದ ಶಬ್ದಗಳ ಪ್ರಯೋಗವೇ ಸೂಕ್ತಾದಿಗಳಿಗೆ ವ್ಯವಸ್ಥಾಪಕವೆಂದು ಹೇಳಿದ್ದಾರೆ.

ಸೂತ್ರಕ್ರಮಗಳ ಸ್ವಾರಸ್ಯ ವರ್ಣನೆ

ಪ್ರಥಮಸೂತ್ರದಲ್ಲಿ ಶ್ರುತಿ ಎಂಬ ಸಾಧಕ ಪ್ರಮಾಣವನ್ನು ಹೇಳಿರುತ್ತಾರೆ. ಎರಡನೆಯ ಸೂತ್ರದಲ್ಲಿ ಸಮಾಖ್ಯಾಪ್ರಮಾಣವನ್ನು ಹೇಳಿರುತ್ತಾರೆ. ಸ್ವಪಕ್ಷ ಸಾಧಕವನ್ನು ಹೇಳಿದ ಮೇಲೆ ಮೂರನೆಯ ಸೂತ್ರದಲ್ಲಿ ವೈಶ್ವಾನರ ಶ್ರುತಿಯಲ್ಲಿರುವ ಅಸಾಧಾರಣವಾದ ಬಾಧಕವನ್ನು ಪರಿಹರಿಸಿದ್ದಾರೆ. ನಾಲ್ಕನೆಯ ಸೂತ್ರದಲ್ಲಿ ಪರಮತ ನಿರಾಕರಣೆ ಇದೆ. ಐದನೆಯ ಸೂತ್ರದಲ್ಲಿ ವೈಶ್ವಾನರ ಶಬ್ದದ ಸಮನ್ವಯವು ಸಿದ್ಧವಾಯಿತಾದ್ದರಿಂದ ಸಕಲ ಶಬ್ದಗಳ ವಿಷಯದಲ್ಲಿರುವ ಬಾಧಕವನ್ನು ಪರಿಹರಿಸಿದ್ದಾರೆ. ಆರನೆಯ ಸೂತ್ರದಿಂದ ಮುಂದಿನ ನಾಲ್ಕು ಸೂತ್ರಗಳಲ್ಲಿ ವೇದದಲ್ಲಿರುವ ಸೂಕ್ತಾದಿ ವ್ಯವಸ್ಥೆಗಳನ್ನು ಅನೇಕ ಬಗೆಯಲ್ಲಿ ಸಮರ್ಥಿಸಿದ್ದಾರೆ. ಈ ಕ್ರಮದಲ್ಲಿ ಚಿಂತಿಸಿದಾಗ ಸೂತ್ರಗಳ ಜೋಡಣೆಯು ಅತ್ಯಂತ ಸ್ವರಸವಾಗಿದೆಯೆಂದು ಸ್ಪಷ್ಟವಾಗಿ ತಿಳಿಯುತ್ತದೆ.

ಕೊನೆಯ ನಾಲ್ಕು ಸೂತ್ರಗಳು ವೈಶ್ವಾನರವೆಂಬ ನಾಮಾತ್ಮಕ ಶಬ್ದದ ಸಮನ್ವಯಕ್ಕಾಗಿ ಹೊರಟಿರುವುದಿಲ್ಲ. ಸಕಲ ಶಬ್ದಗಳ ಸಮನ್ವಯವನ್ನು ಭಗವಂತನಲ್ಲೇ ಮಾಡಿದಾಗ ಬರುವಂತಹ ಬಾಧಕವನ್ನಷ್ಟೇ ಪರಿಹರಿಸಿದೆ. ವಾಸ್ತವಿಕವಾಗಿ ನಾಲ್ಕನೆಯ ಪಾದದ ಕೊನೆಯಲ್ಲಿ ಈ ನಾಲ್ಕು ಸೂತ್ರಗಳನ್ನು ಹೇಳಬೇಕಿತ್ತೆ ಎಂದೆನಿಸುತ್ತದೆ. ಆದರೆ ಕೇವಲ ಪದ, ವರ್ಣ ಸ್ವರಗಳ, ಸಮನ್ವಯದಲ್ಲಿ ಪರ್ಯವಸಾನ ಗೊಳ್ಳುವ ನಾಲ್ಕನೆಯ ಪಾದದಲ್ಲಿ ಈ ಸೂತ್ರಗಳು ಅಸಂಗತವೇ ಆಗುತ್ತಿದ್ದವು. ಆದ್ದರಿಂದ ಸೂತ್ರಕಾರರು ನಾಮಾತ್ಮಕ ಹಾಗೂ ಲಿಂಗಾತ್ಮಕ ಶಬ್ದಗಳ ಸಮನ್ವಯವು ಮುಗಿಯುತ್ತಿರುವ ಸಂದರ್ಭದಲ್ಲಿ ಈ ನಾಲ್ಕು ಸೂತ್ರಗಳನ್ನು ಹೇಳಿದ್ದು ಅತ್ಯಂತ ಸಂಗತವೇ ಆಗಿದೆ.

ಶಂಕರ, ರಾಮಾನುಜರ ಪ್ರಥಮ ಸೂತ್ರಾರ್ಥ ವಿಮರ್ಶೆ

ಶಾಂಕರ ಭಾಷ್ಯದಲ್ಲಿ ಸೂತ್ರಾರ್ಥವನ್ನು ಹೀಗೆ ಹೇಳಿದ್ದಾರೆ - ಛಾಂದೋಗ್ಯದಲ್ಲಿ 'ಅಯಮಗ್ನಿರ್ವೈಶ್ವಾನರಃ' ಎಂಬುದಾಗಿ ವೈಶ್ವಾನರ ಶಬ್ದವು ಕೇಳಿಸುತ್ತಿದೆ. ಜಾಠರಾಗ್ನಿ, ಭೂತಾಗ್ನಿ, ಅಗ್ನಿದೇವತೆ ಮೂವರಲ್ಲಿಯೂ ವೈಶ್ವಾನರ

ಶಬ್ದವು ಸಮಾನವಾಗಿ ಪ್ರಯೋಗಿಸಲ್ಪಡುತ್ತದೆ. ಪ್ರಕರಣದ ಪ್ರಾರಂಭದಲ್ಲಿ ಜೀವ ಹಾಗೂ ಈಶ್ವರರಲ್ಲಿ ಸಾಧಾರಣವಾದ ಆತ್ಮಶಬ್ದವು ಕೇಳಿಸುತ್ತಿರುವುದರಿಂದ ಜೀವನೂ ಸಹ ವೈಶ್ವಾನರನೆನಿಸಬಹುದು. ಇಷ್ಟು ಪೂರ್ವಪಕ್ಷ.

ವೈಶ್ವಾನರ ಹಾಗೂ ಆತ್ಮಶಬ್ದಗಳು ಸಾಧಾರಣವಾಗಿದ್ದರೂ 'ಮೂರ್ಧ್ನೈವ ಸುತೇಜಾಃ' ಇತ್ಯಾದಿಯಾಗಿ ಸ್ವರ್ಗಾದಿಲೋಕಗಳೇ ವೈಶ್ವಾನರನ ಅವಯವವಾಗಿದೆಯೆಂದು ಶ್ರುತಿ ಹೇಳುತ್ತಿದೆ. ಹೀಗೆ ಜೀವನಲ್ಲಿಲ್ಲದ ವಿಶೇಷಣಗಳನ್ನು ವೈಶ್ವಾನರನಲ್ಲಿ ಹೇಳಿದ್ದರಿಂದ' ಬ್ರಹ್ಮನೇ ಇಲ್ಲಿ ವೈಶ್ವಾನರ ಶಬ್ದದಿಂದ ಪ್ರತಿಪಾದ್ಯನಾಗುತ್ತಾನೆಂದು ಸಿದ್ಧಾಂತ.

ಶಂಕರ ಭಾಷ್ಯದ ಈ ವ್ಯಾಖ್ಯಾನವು ಅಯುಕ್ತವಾಗಿದೆ. ಏಕೆಂದರೆ ವೈಶ್ವಾನರಶಬ್ದವು ಜಾಠರಾಗ್ನಿ, ಭೂತಾಗ್ನಿ, ಅಗ್ನಿದೇವತೆ ಮೂರರಲ್ಲಿ ಮಾತ್ರ ಸಾಧಾರಣವಾಗಿಲ್ಲ. ಆತ್ಮನಲ್ಲಿಯೂ ಸಹ ಸಾಧಾರಣವಾಗಿರುವುದರಿಂದ ತ್ರಿತಯ ಸಾಧಾರಣವೆಂಬ ಆದ್ವೈತಿಗಳ ಮಾತು ತಪ್ಪಾಗುತ್ತದೆ.

ಮತ್ತು ಆತ್ಮಶಬ್ದವು ಜೀವ ಹಾಗೂ ಈಶ್ವರರಲ್ಲಿ ಸಾಧಾರಣವಾಗಿದೆಯೆಂದು ಸಾಧಾರಣಶಬ್ದದ ಅರ್ಥವನ್ನು ಹೇಳಿದರೆ; 'ದ್ಯುಭ್ವಾದ್ಯಾಯತನಂ ಸ್ವ ಶಬ್ದಾತ್' ಎಂಬಲ್ಲಿ 'ಸ್ವಶಬ್ದಾತ್' ಎಂಬ ಶಬ್ದಕ್ಕೆ 'ಆತ್ಮಶಬ್ದಾತ್' ಎಂದು ವ್ಯಾಖ್ಯಾನಿಸಿ ದ್ಯುಭ್ವಾದ್ಯಾಯತನತ್ವವನ್ನು ಬ್ರಹ್ಮನಲ್ಲಿ ಸಮರ್ಥಿಸಿದ್ದಾರೆ. ಇದರಿಂದ ಆತ್ಮಶಬ್ದವು ಕೇವಲ ಬ್ರಹ್ಮನನ್ನು ಪ್ರತಿಪಾದಿಸುತ್ತದೆಂದು ಅವರು ಒಪ್ಪಿದ್ದಾರೆ. ಇಲ್ಲದಿದ್ದರೆ 'ನಾನುಮಾನಮತಚ್ಛಬ್ದಾತ್' ಎಂಬ ಸೂತ್ರದಲ್ಲಿ ಆತ್ಮಶಬ್ದ ಜೀವನಲ್ಲಿಲ್ಲದ ಕಾರಣ ಜೀವನು ದ್ಯುಭ್ವಾದ್ಯಾಯತನನಾಗುವುದಿಲ್ಲವೆಂದು ನಿರಾಕರಿಸಿದ್ದು ಅವರ ಪ್ರಕಾರವೇ ತಪ್ಪಾಗುತ್ತದೆ.

ರಾಮಾನುಜ ಭಾಷ್ಯದಲ್ಲಿ ಪ್ರಥಮ ಸೂತ್ರವ್ಯಾಖ್ಯಾನ ಹೀಗಿದೆ -

ಜಾಠರಾಗ್ನಿ, ಭೂತಾಗ್ನಿ, ಅಗ್ನಿದೇವತೆ, ಪರಬ್ರಹ್ಮ ಈ ನಾಲ್ಕರಲ್ಲಿಯೂ ಸಾಧಾರಣವಾದ ವೈಶ್ವಾನರಶಬ್ದಕ್ಕೆ ಪರಮಾತ್ಮನಲ್ಲಿ ಮಾತ್ರ ಇರುವ ಧರ್ಮಗಳನ್ನು ವಿಶೇಷಣವನ್ನಾಗಿ ಹೇಳಲಾಗಿದೆ. ಮುಮುಕ್ಷುಗಳಾದ ಔಪಮನ್ಯುವೇ ಮೊದಲಾದ ಐದು ಮಂದಿ ಶಿಷ್ಯಂದಿರು ಬ್ರಹ್ಮನ ಜಿಜ್ಞಾಸೆಯನ್ನು ಮಾಡಿದ್ದಾರೆ. ಆವಾಗ ವೈಶ್ವಾನರನೇ ಬ್ರಹ್ಮನೆಂದು ರಾಜನು ಉಪದೇಶಿಸಿದ್ದಾನೆ. ಹೀಗೆ ಜಿಜ್ಞಾಸ್ಯಮಾನತ್ವ ಮುಂತಾದ ಬ್ರಹ್ಮನ ಲಿಂಗಗಳಿಂದ ವೈಶ್ವಾನರನಿಗೆ ವಿಶೇಷಣಗಳನ್ನು ಹೇಳಿದ್ದರಿಂದ ವೈಶ್ವಾನರನು ಬ್ರಹ್ಮನೇ ಆಗುತ್ತಾನೆಂದು ಸಿದ್ಧಾಂತ ಮಾಡಿದ್ದಾರೆ.

ಆದ್ವೈತಿಗಳಂತೆ ಇವರ ವ್ಯಾಖ್ಯಾನವೂ ಇರುತ್ತದೆ. ಜಾಠರಾಗ್ನಿಯನ್ನು ಪ್ರತ್ಯೇಕವಾಗಿ ಪರಿಗಣಿಸಿದ್ದು ತಪ್ಪಾಗುತ್ತದೆಂಬುದು ಇವರಿಗೂ ಸಮಾನ.

ಮತ್ತು 'ಆತ್ಮಾನಂ ವೈಶ್ವಾನರಮ್' ಎಂಬುದಾಗಿ ವೈಶ್ವಾನರನಲ್ಲಿ ನೇರವಾಗಿ ವಿಶೇಷಣವಾಗಿರುವ ಆತ್ಮಶ್ರುತಿಯಿಂದಲೇ ಬ್ರಹ್ಮನು ವೈಶ್ವಾನರನಾಗಿದ್ದಾನೆಂದು ಹೇಳಲು ಬರುವಾಗ ಪ್ರಕರಣದಿಂದ ಲಭಿಸುವ ಲಿಂಗವೆಂಬ ವಿಶೇಷಣದಿಂದ ಪರಮಾತ್ಮನನ್ನು ವೈಶ್ವಾನರನೆಂದು ನಿರ್ಣಯಿಸುವುದು ಅಯುಕ್ತವಾಗಿದೆ.

ಶಾಂಕರ ರಾಮಾನುಜ ಭಾಷ್ಯಗಳಲ್ಲಿನ ದ್ವಿತೀಯ ಸೂತ್ರಾರ್ಥ ವಿಮರ್ಶೆ

'ಯಸ್ಯಾಗ್ನಿರಸ್ಯಾಮ್' ಇತ್ಯಾದಿ ಶ್ರುತಿಗಳು ದ್ಯುಲೋಕಾದಿಗಳು ಬ್ರಹ್ಮನ ಅವಯವಗಳೆಂದು ಹೇಳಲ್ಪಟ್ಟಿದೆ. ಶ್ರುತಿಗೆ ಅನುಸಾರಿಯಾಗಿ ಸ್ಮೃತಿಯನ್ನು ವ್ಯಾಖ್ಯಾನಿಸಬೇಕಾದ್ದರಿಂದ ದ್ಯುಲೋಕಾದಿಗಳು ಬ್ರಹ್ಮನ ಅವಯವಗಳೆಂದೇ ಶ್ರುತಿಗಳೂ ಸಹ ಹೇಳುತ್ತಿವೆ. ಆದರೆ ಬ್ರಹ್ಮನೇ ವೈಶ್ವಾನರನೆಂದು ಆದ್ವೈತಿಗಳ ವ್ಯಾಖ್ಯಾನ.

ದ್ಯುಲೋಕದಿಂದ ಪೃಥಿವೀ ಲೋಕಪರ್ಯಂತ. ಸಕಲ ಲೋಕಗಳೂ ಬ್ರಹ್ಮನ ಅವಯವಗಳೇ ಆಗಿವೆಯಂದು 'ಅಗ್ನಿರ್ಮೂರ್ಧಾ' ಇತ್ಯಾದಿ ಶ್ರುತಿಗಳು ಪ್ರತಿಪಾದಿಸುತ್ತಿದೆ. ಅಂದರೆ ಶ್ರುತಿಯಲ್ಲಿ ಮಾಡಲ್ಪಟ್ಟ ಉಲ್ಲೇಖವೇ ವೈಶ್ವಾನರನು ಬ್ರಹ್ಮನಾಗಿದ್ದಾನೆನ್ನಲು ಕಾರಣವಾಗಿದೆ.ಯೆಂದು ರಾಮಾನುಜರು ವ್ಯಾಖ್ಯಾನಿಸುತ್ತಾರೆ.

ಇವರಿಬ್ಬರ ಅಭಿಪ್ರಾಯವೂ ಸರಿಯಿಲ್ಲ. ಚಕ್ಷುಷೀ ಚಂದ್ರಸೂರ್ಯೌ ಇತ್ಯಾದಿ ಶ್ರುತಿಯೂ ಸಹ ಸ್ಮೃತಿ ಮೂಲವಾಗಿದೆ. ಮತ್ತು 'ಅಹಂ ವೈಶ್ವಾನರಃ' ಎಂಬ ಶ್ರುತಿಯಲ್ಲಿ ನೇರವಾಗಿಯೇ ಈಶ್ವರನನ್ನು ವೈಶ್ವಾನರನೆಂದು ಹೇಳಿದ್ದಾರೆ. ರಾಮಾನುಜರು 'ಸ್ಮರ್ಯಮಾಣ' ಶಬ್ದಕ್ಕೆ 'ಪ್ರತ್ಯಭಿಜ್ಞಾನಮಾಯ' ಎಂಬರ್ಥವನ್ನು ಹೇಳಿದ್ದಾರೆ. ಈ ಅರ್ಥವು ಸೂತ್ರಾರ್ಥ ಸ್ವಾರಸ್ಯಕ್ಕೆ ಭಂಗವನ್ನುಂಟು ಮಾಡುತ್ತಿದೆ.

ಉಳಿದ ಸೂತ್ರಾರ್ಥಗಳ ವಿಮರ್ಶೆ

ವೈಶ್ವಾನರನು ಬ್ರಹ್ಮನ ಪ್ರತೀತ ಹಾಗೂ ಉಪಾಧಿಯಂದು 'ತಥಾ ದೃಷ್ಟ್ಯುಪದೇಶಾತ್' ಎಂಬ ಸೂತ್ರಕ್ಕೆ ಅರ್ಥೈಸುತ್ತಾರೆ. ಆದರೆ ವೈಶ್ವಾನರನು ಪ್ರತೀಕವಾದರೆ ಬ್ರಹ್ಮವಾಚಕವಾಗಲು ಹೇಗೆ ಸಾಧ್ಯ ? ಮನಸ್ಸು ಬ್ರಹ್ಮನಿಗೆ ಪ್ರತೀಕವಾದ ಮಾತ್ರದಿಂದ 'ಮನಸ್' ಶಬ್ದದಿಂದ ಬ್ರಹ್ಮನು ಪ್ರತಿಪಾದ್ಯನಾಗುತ್ತಾನೇನು? ಮತ್ತು ಅಂತಹ ಪ್ರತೀಕೋಪಾಸನೆಯಿಂದ ಯಾವುದೇ ಪಾಪಗಳೂ ಸಹ ಕ್ಷಯವಾಗುವುದಿಲ್ಲ. ಕೇವಲ ನಿರ್ಗುಣೋಪಾಸನೆಯಿಂದಷ್ಟೇ ಪಾಪಕ್ಷಯವಾಗುತ್ತದೆಂಬುದು ಅದ್ವೈತಿಗಳ ಸಿದ್ಧಾಂತ. 'ಅರ್ಭಕೌಕಸ್ತ್ವಾತ್' ಮತ್ತು 'ತಥಾದೃಷ್ಟ್ಯುಪದೇಶಾತ್' ಇತ್ಯಾದಿ ಸೂತ್ರಗಳಲ್ಲಿ ಬ್ರಹ್ಮನಿಗೆ ಪ್ರಾದೇಶ ಮಾತ್ರ ಪರಿಮಾಣವನ್ನು ಸಮರ್ಥಿಸಿದ್ದಾಗಿದೆ. ಪುನಃ ಇಲ್ಲಿಯೂ ಆದನ್ನೇ ಪ್ರತಿಪಾದಿಸಿದರೆ ಪುನರುಕ್ತಿ ಬರುತ್ತದೆಂದು ತಿಳಿಯಬೇಕು. ರಾಮಾನುಜ ಭಾಷ್ಯದಲ್ಲಿಯ 'ಅಭಿವ್ಯಕ್ತೇರಿತಿ' ಇತ್ಯಾದಿ ನಾಲ್ಕು ಸೂತ್ರಗಳು ಬೇರೆ ಬೇರೆ ವಿಷಯವನ್ನು ಪ್ರತಿಪಾದಿಸುತ್ತವೆಂದು ಹೇಳಿದ್ದಾರೆ. ಆದರೆ ಒಂದೇ ವಿಷಯದಲ್ಲಿ ಅಭಿಪ್ರಾಯ ಭೇದಗಳನ್ನು ಸೂಚಿಸುತ್ತಿದೆಯೆಂದು ಹೇಳುವುದೇ ಸ್ವರಸವಾಗುತ್ತದೆ.

ಪ್ರಥಮಾಧ್ಯಾಯದ ತೃತೀಯ ಪಾದ
ದ್ಯುಭ್ವಾದ್ಯಧಿಕರಣ

ಉಭಯತ್ರಪ್ರಸಿದ್ಧಶಬ್ದ ಸಮನ್ವಯದ ಅನಿವಾರ್ಯತೆ ಮತ್ತು ಶಬ್ದಸಂಗತಿ ವಿಚಾರ

ನಾಮಪಾದದಲ್ಲಿ ಸಕಲ ನಾಮಾತ್ಮಕ ಶಬ್ದಗಳು ಭಗವಂತನ ಹೆಸರುಗಳಾಗಿವೆಯೆಂಬುದನ್ನು ವಿಚಾರ ಮಾಡಿದ್ದಾಯಿತು. ಯೌಗಿಕವಾದ ಸಕಲ ಶಬ್ದಗಳು ಲಿಂಗಸ್ವರೂಪದಲ್ಲಿರುವುದರಿಂದ ಅವುಗಳೂ ಸಹ ಭಗವಂತನ ಗುಣಪ್ರತಿಪಾದಕಗಳಾಗಿವೆಯೆಂಬುದನ್ನೂ ಸಹ ಎರಡನೇ ಪಾದದಲ್ಲಿ ವಿಚಾರ ಮಾಡಿದ್ದಾಯಿತು.

ಶಬ್ದಗಳು ಭಗವಂತನನ್ನು ಪ್ರತಿಪಾದಿಸಲು ಸಾಧ್ಯವಿಲ್ಲ. ಲೋಕರೂಢಿಯಂತೆ ಲೌಕಿಕಪದಾರ್ಥಗಳನ್ನೇ ಪ್ರತಿಪಾದಿಸುತ್ತದೆಂಬುದು ಪೂರ್ವಪಕ್ಷಕಾರನ ಆಗ್ರಹ. ಪ್ರತಿಯೊಂದು ಶಬ್ದಗಳೂ ಭಗವತ್ತತ್ತಿಪಾದಕಗಳಾಗಿವೆ. ಭಗವಂತನನ್ನು ಬಿಟ್ಟು ಇತರ ಯಾವುದೇ ಪದಾರ್ಥಗಳನ್ನೂ ಸಹ ಪ್ರತಿಪಾದಿಸಲು ಸಾಧ್ಯವೇ ಇಲ್ಲವೆಂಬುದು

ಸಿದ್ಧಾಂತಿಗಳ ಆಗ್ರಹ. ಇವರಿಬ್ಬರನ್ನೂ ಸಮಾಧಾನ ಮಾಡಲು ಒಂದು ಉಪಾಯವನ್ನು ಹುಡುಕಬಹುದು. ಸಕಲ ಶಬ್ದಗಳು ಹಾಗೂ ಲಿಂಗಗಳು ಲೌಕಿಕಪದಾರ್ಥಗಳನ್ನೂ ಪ್ರತಿಪಾದಿಸುತ್ತವೆ. ವಿಷ್ಣುವನ್ನೂ ಸಹ ಪ್ರತಿಪಾದಿಸುತ್ತವೆ. ಹೀಗೆ ಹೇಳಿದಾಗ ಇಬ್ಬರಿಗೂ ಗಲಾಟೆಯಾಗಲು ಸಾಧ್ಯವೇ ಇಲ್ಲ. ಆದ್ದರಿಂದ ಉಭಯತ್ರಪ್ರಸಿದ್ಧವೆಂದು ಶಬ್ದಗಳನ್ನು ಒಪ್ಪೋಣ ಏನು ತೊಂದರೆ? ಎಂಬ ಪ್ರಶ್ನೆಯನ್ನು ಅನೇಕ ಮಂದಿ ಮಾಡುತ್ತಾರೆ. ಅದಕ್ಕೆ ಉತ್ತರ ನೀಡುವುದಕ್ಕಾಗಿಯೇ ಮೂರನೇ ಪಾದವು ಹೊರಡುತ್ತಿದೆ. ಈ ಪಾದದಲ್ಲಿ ಉಭಯತ್ರಪ್ರಸಿದ್ಧವಾದ ಶಬ್ದಗಳೆಲ್ಲವೂ ಭಗವಂತನನ್ನೇ ಪ್ರತಿಪಾದಿಸುತ್ತವೆಂದು ಸಾಧಿಸುತ್ತಿದ್ದಾರೆ.

ತಿಳಿಯಬೇಕಾದ ವಿಚಾರವಿಷ್ಟು. ಹಿಂದಿನ ಎರಡು ಪಾದಗಳಲ್ಲಿ ಸಕಲಶಬ್ದಗಳಿಗೆ ಭಗವಂತನಲ್ಲಿ ತಾತ್ಪರ್ಯವಿದೆಯೆಂದು ಹೇಳಿದ್ದಾರೆ ಹೊರತು, ಮುಖ್ಯವಾಚ್ಯತ್ವವನ್ನು ಸಮರ್ಥಿಸಿರುವುದಿಲ್ಲ. ತಾತ್ಪರ್ಯವಿರುವ ಪ್ರಯುಕ್ತ ವಿಷ್ಣುಪರವಾಗುತ್ತವೆಂಬುದಂತೂ ಅನೇಕ ನ್ಯಾಯಗಳಿಂದ ತಿಳಿಯುತ್ತವೆ. ಆದರೆ ಲೋಕರೂಢಿಯೂ ಸಹ ಬೇರೆ ಪದಾರ್ಥಗಳಲ್ಲಿರುವುದರಿಂದ ಶಬ್ದಗಳು ವಿಷ್ಣುವನ್ನು ಪ್ರತಿಪಾದಿಸುವಂತೆ ಇತರ ಪದಾರ್ಥಗಳನ್ನೂ ಸಹ ಪ್ರತಿಪಾದಿಸುತ್ತವೆ. ಹಾಗಾಗಿ ಹಿಂದಿನ ಎರಡು ಪಾದಗಳಲ್ಲಿ ಯಾವ ಶಬ್ದಗಳನ್ನೆಲ್ಲ ಸಮನ್ವಯ ಮಾಡಿದರೋ ಅವೆಲ್ಲವೂ ವಿಷ್ಣುವಿನಲ್ಲೂ ಬರುತ್ತವೆ. ಲೋಕದಲ್ಲಿಯೂ ಬರುತ್ತವೆ. ವಿಷ್ಣುವಿನಲ್ಲಿ ಮಾತ್ರ ಬರುತ್ತವೆಂಬ ನಿರ್ಧಾರವನ್ನು ಮಾಡಲು ಸಾಧ್ಯವಿಲ್ಲ. ಹಾಗಾಗಿ ಹಿಂದಿನೆರಡು ಪಾದಗಳಲ್ಲಿ ಸಮನ್ವಯ ಮಾಡಿದ ಶಬ್ದಗಳನ್ನು ಪುನಃ ಸಮನ್ವಯ ಮಾಡುವ ಅನಿವಾರ್ಯತೆ ಬಹಳವಾಗಿ ಕಾಣಿಸುತ್ತದೆ. ಅದಕ್ಕೋಸ್ಕರವೇ ಈ ಪಾದ ಹೊರಟಿದೆ. ಈ ಪಾದವು ಹೊರಟಿದ್ದರೆ ಸಕಲ ಶಬ್ದಗಳೂ ಉಭಯತ್ರಪ್ರಸಿದ್ಧವೆಂದಾಗಿ ಭಗವಂತನಲ್ಲಿ ಸಕಲಶಬ್ದದ ಸಮನ್ವಯವೂ ಸಿದ್ಧವಾಗದೆ. ಸಕಲ ಗುಣಪರಿಪೂರ್ಣತ್ವದ ಸಿದ್ಧಿಯೂ ಸಹ ಆಗದಿರುವ ಪ್ರಸಂಗ ಬರುತ್ತಿತ್ತು.

ಈ ಪಾದದಲ್ಲಿ ಈಗಾಗಲೇ ಹೇಳಿದಂತೆ ಕೇವಲ ನಾಮಾತ್ಮಕ ಶಬ್ದಗಳ ಸಮನ್ವಯವಷ್ಟೇ ಅಲ್ಲ, ಲಿಂಗಾತ್ಮಕ ಶಬ್ದಗಳ ಸಮನ್ವಯವನ್ನೂ ಸಹ ಮಾಡುತ್ತಿದ್ದಾರೆ. ಒಟ್ಟು ಹದಿನಾಲ್ಕು ಅಧಿಕರಣಗಳು ಈ ಪಾದದಲ್ಲಡಗಿವೆ. ಅವುಗಳಲ್ಲಿ ಮೊದಲನೆಯದು ದ್ಯುಭ್ವಾದ್ಯಧಿಕರಣ. ಸರ್ವಾಧಾರತ್ವವೆಂಬ ಲಿಂಗವನ್ನು ಈ ಮೊದಲನೆಯ ಅಧಿಕರಣದಲ್ಲಿ ವಿಷ್ಣುಮಾತ್ರಪರವೆಂದು ಸಮನ್ವಯ ಮಾಡುತ್ತಾರೆ. ಮುಂದಿನ ಭೂಮಾಧಿಕರಣದಲ್ಲಿ 'ಭೂಮಾ' ಎಂಬ ನಾಮಾತ್ಮಕ ಶಬ್ದದ ಸಮನ್ವಯವನ್ನು, ಅದರ ಮುಂದಿನ ಆಕ್ಷರಾಧಿಕರಣದಲ್ಲಿ 'ಆಕ್ಷರ' ಎಂಬ ನಾಮಾತ್ಮಕ ಶಬ್ದವನ್ನು ವಿಷ್ಣುವಿನಲ್ಲಿ ಸಮರ್ಥನೆ ಮಾಡುತ್ತಾರೆ.

ನಾಲ್ಕನೆಯ ಸದಧಿಕರಣದಲ್ಲಿ ಅನೇಕ ಪ್ರಕರಣಗಳ ಸಮೂಹಾತ್ಮಕವಾದ ಸ್ಥಾನವೆಂಬುದನ್ನು ವಿಷ್ಣುವಿನಲ್ಲಿ ಸಮನ್ವಯ ಮಾಡುತ್ತಾರೆ. ಐದನೆಯ ದಹರಾಧಿಕರಣದಲ್ಲಿ 'ಹೃದ್ಪದ್ಮಸ್ಥತ್ವ' ಲಿಂಗವನ್ನು, ಅನುಕೃತ್ಯಧಿಕರಣದಲ್ಲಿ 'ಅನುಕೂಲ್ಯೇನ ಗೃಹ್ಯಮಾಣತ್ವ' ಎಂಬ ಲಿಂಗವನ್ನು ಸಮನ್ವಯ ಮಾಡಿದ್ದಾರೆ. ಮುಂದಿನ ವಾಮನಾಧಿರಣದಲ್ಲಿ ಈಶಾನ ಶಬ್ದವನ್ನು ಕಂಪನಾಧಿಕರಣದಲ್ಲಿ ವಜ್ರ ಶಬ್ದವನ್ನು, ಜ್ಯೋತಿರಧಿಕರಣದಲ್ಲಿ ಜ್ಯೋತಿಶಬ್ದವನ್ನು, ಆಕಾಶಧಿಕರಣದಲ್ಲಿ ಆಕಾಶ ಶಬ್ದವನ್ನು, ಸುಷುಪ್ತಧಿಕರಣದಲ್ಲಿ ಸ್ವಪ್ನಾದಿಪ್ರಪ್ಚತ್ವವೆಂಬ ಲಿಂಗವನ್ನು, ಬ್ರಾಹ್ಮಣಾಧಿಕರಣದಲ್ಲಿ ಬ್ರಾಹ್ಮಣ ಶಬ್ದವನ್ನು ವಿಷ್ಣುವಿನಲ್ಲಿ ಸಮನ್ವಯ ಮಾಡಿದ್ದಾರೆ. ಮಧ್ಯದಲ್ಲಿ ದೇವತಾಧಿಕರಣ ಹಾಗೂ ಅಪಶೂದ್ರಾಧಿಕರಣಗಳು ಬರುತ್ತವೆ. ಆದರೆ ಈ ಎರಡು ಅಧಿಕರಣಗಳಲ್ಲಿ ದೇವತೆಗಳಿಗೆ ಮಾತ್ರ ವೇದಾಧಿಕಾರವಿದೆ. ಶೂದ್ರಾದಿಗಳಿಗೆ ವೇದಾಧಿಕಾರವಿಲ್ಲವೆಂಬ ವಿಚಾರವನ್ನು ಮಾಡಿದ್ದಾರೆ. ಆದ್ದರಿಂದ ಯಾವುದೇ ಲಿಂಗವನ್ನಾಗಲೀ, ಹೆಸರನ್ನಾಗಲೀ, ಈ ಎರಡು ಅಧಿಕರಣಗಳಲ್ಲಿ ಸಮನ್ವಯ ಮಾಡದ ಪ್ರಾಸಂಗಿಕವಾದ ವಿಚಾರಗಳನ್ನಷ್ಟೇ ತಿಳಿಸಿದ್ದಾರೆ.

ಪರಿಪೂರ್ಣಚಂದ್ರಿಕಾ

ಮೊದಲನೇ ಈ ದ್ಯುಭ್ವಾದ್ಯಧಿಕರಣದಲ್ಲಿ ಸಮನ್ವಯ ಮಾಡುತ್ತಿರುವ ದ್ಯುಭ್ವಾದ್ಯಾಯತನತ್ವವೆಂಬ ಲಿಂಗವು ಉಭಯತ್ರಪ್ರಸಿದ್ಧವಾಗಿದೆ ಹೊರತು, ಅನ್ಯತ್ರಪ್ರಸಿದ್ಧವಲ್ಲ. ವಸ್ತುತಃ ಜಾಯಮಾನತ್ವವೆಂಬ ಅನ್ಯತ್ರಪ್ರಸಿದ್ಧವಾದ ಲಿಂಗದ ಜೊತೆಗೆ ಇದನ್ನು ಹೇಳಿರುವುದರಿಂದ ಇದೂ ಸಹ ಅನ್ಯತ್ರಪ್ರಸಿದ್ಧವೆಂಬ ಭ್ರಾಂತಿ ಬರುತ್ತದೆ. ಆದರೆ ರುದ್ರನಲ್ಲಿ ಹಾಗೂ ವಿಷ್ಣುವಿನಲ್ಲಿ ಸಾಧಾರಣವಾದ ಶ್ರುತಿಯನ್ನು ನೋಡಿದಾಗ ದ್ಯುಭ್ವಾದ್ಯಾಯತನತ್ವವು ಸ್ವಾಭಾವಿಕವಾಗಿ ಉಭಯತ್ರಪ್ರಸಿದ್ಧವಾಗಿದೆಯೆಂದು ತಿಳಿಯುತ್ತದೆ. ಅನ್ಯತ್ರಪ್ರಸಿದ್ಧವೆಂದು ಹೇಳಬೇಕಾದರೆ ಅನ್ಯತ್ರಪ್ರಸಿದ್ಧವಾದ ಜಾಯಮಾನತ್ವವೆಂಬ ಲಿಂಗವನ್ನು ಅಪೇಕ್ಷಿಸಬೇಕು. ಉಭಯತ್ರಪ್ರಸಿದ್ಧವೆಂಬ ಲಿಂಗವನ್ನು ಹೇಳಬೇಕಾದರೆ ಮತ್ತೊಂದನ್ನು ಆಪೇಕ್ಷಿಸಬೇಕಾಗಿಲ್ಲ. ಸ್ವಾಭಾವಿಕವಾಗಿಯೇ ಉಭಯತ್ರಪ್ರಸಿದ್ಧವಾಗಿದೆಯೆಂದು ತಿಳಿಯಬಹುದು. ಸಾಪೇಕ್ಷಕ್ಕಿಂತ ನಿರಪೇಕ್ಷವು ಪ್ರಬಲವಾಗಿರುವುದರಿಂದ ದ್ಯುಭ್ವಾದ್ಯಾಯತನತ್ವವನ್ನು ಉಭಯತ್ರಪ್ರಸಿದ್ಧವಾದ ಲಿಂಗವೆಂದೇ ಪರಿಗಣಿಸಬೇಕು.

ಅನ್ಯತ್ರಪ್ರಸಿದ್ಧಶಬ್ದಗಳಿಗೂ, ಉಭಯತ್ರಪ್ರಸಿದ್ಧಶಬ್ದಗಳಿಗೂ ಸಾಂಕರ್ಯವಿಲ್ಲ

ಈ ಅಧಿಕರಣದಲ್ಲಿ ಸಮನ್ವಯ ಮಾಡುತ್ತಿರುವ 'ಭೂಮಾ' ಮೊದಲಾದ ಶಬ್ದಗಳನ್ನು ಉಭಯತ್ರಪ್ರಸಿದ್ಧವೆಂದು ಹೇಗೆ ಹೇಳುತ್ತೀರಿ? ಇವುಗಳೂ ಸಹ ಅನ್ಯತ್ರಪ್ರಸಿದ್ಧವೇ ಆಗುತ್ತವೆ. ಏಕೆಂದರೆ ಭೂಮಾಧಿಕರಣದಲ್ಲಿ ಮುಖ್ಯಪ್ರಾಣನನ್ನು ಪ್ರತಿಪಾದಿಸುವ 'ಭೂಮಾ' ಎಂಬ ಶಬ್ದವು 'ಪ್ರಾಣೋನೂತ್ಮಾಮತಿ' ಎಂಬ ನಿರವಕಾಶವಾದ ಉತ್ಮಮಣವೆಂಬ ಲಿಂಗದಿಂದ ಮುಖ್ಯಪ್ರಾಣನಲ್ಲಿ ಪ್ರಸಿದ್ಧವಾಗಿದೆ. ಅಕ್ಷರಾಧಿಕರಣದಲ್ಲಿ ಸಮನ್ವಯ ಮಾಡಬೇಕಾದ ಅಕ್ಷರಶಬ್ದವೂ ಸಹ ಮತ್ತೊಂದು ಶ್ರುತಿಯಿಂದ ಸಿದ್ಧವಾದ ಚಂದ್ರಾದ್ಯಾಧಾರತ್ವವೆಂಬ ಲಕ್ಷ್ಮೀದೇವಿಯ ಲಿಂಗದಿಂದ ಅನ್ಯತ್ರಪ್ರಸಿದ್ಧವಾಗಿದೆ. ಸದಧಿಕರಣದಲ್ಲಿ ಸಮನ್ವಯ ಮಾಡಬೇಕಾದ 'ಸತ್' ಶಬ್ದವೂ ಸಹ 'ಬಹುಸ್ಯಾಮ್' ಎಂಬ ಶ್ರುತಿಯಿಂದ ಸಿದ್ಧವಾದ ವಿಕಾರ ಎಂಬ ಲಿಂಗದಿಂದ ಅನ್ಯತ್ರಪ್ರಸಿದ್ಧವಾಗಿದೆ. ದಹರಾಧಿಕರಣದಲ್ಲಿ ಸಮನ್ವಯ ಮಾಡುವ 'ಹೃತ್ಪದ್ಮಸ್ಥತ್ವ' ಎಂಬ ಲಿಂಗವೂ ಆಕಾಶಶ್ರುತಿಯಿಂದ ಅನ್ಯತ್ರಪ್ರಸಿದ್ಧವಾಗಿದೆ. ಹೀಗಿರುವಾಗ ಇವುಗಳನ್ನೆಲ್ಲಾ ಉಭಯತ್ರಪ್ರಸಿದ್ಧವೆಂದು ಹೇಗೆ ಹೇಳುತ್ತೀರಿ?

ಈ ಆಕ್ಷೇಪಕ್ಕೆ ಈಗಾಗಲೇ ಹೇಳಿದ ನಾಲ್ಕು ಬಗೆಯ ಸಮಾಧಾನವನ್ನು ತಿಳಿದುಕೊಳ್ಳಬೇಕು.

೧. 'ದ್ಯುಭ್ವಾದ್ಯಾಯತನತ್ವ' ಮೊದಲಾದ ಲಿಂಗಗಳಿಗೆ ಸಮಾನವಾದ ಶ್ರುತಿಯ ಬಲದಿಂದ ಅನ್ಯತ್ರಪ್ರಸಿದ್ಧಿಯೂ ಇರುತ್ತದೆ. ಉಭಯತ್ರಪ್ರಸಿದ್ಧಿಯೂ ಸಹ ಇರುತ್ತದೆ. ಇವೆರಡರಲ್ಲಿ ಉಭಯತ್ರಪ್ರಸಿದ್ಧತ್ವವನ್ನು ವಿವಕ್ಷಿಸಬೇಕು.

೨. ಅನ್ಯತ್ರಪ್ರಸಿದ್ಧಿಯು, ಅನ್ಯತ್ರಪ್ರಸಿದ್ಧವಾದ ಮತ್ತೊಂದು ಲಿಂಗವನ್ನು ಅಪೇಕ್ಷಿಸುತ್ತದೆ. ಉಭಯತ್ರಪ್ರಸಿದ್ಧಿಯು ಮತ್ತೊಂದು ಲಿಂಗವನ್ನು ಅಪೇಕ್ಷಿಸದೇ ಸಮಾಖ್ಯಾಶ್ರುತಿಯ ಬಲದಿಂದ ಸ್ವತಃ ಉಭಯತ್ರಪ್ರಸಿದ್ಧವಾಗುತ್ತದೆ. ಸಾಪೇಕ್ಷ ಹಾಗೂ ನಿರಪೇಕ್ಷಗಳಲ್ಲಿ ನಿರಪೇಕ್ಷವಾದದ್ದನ್ನೇ ಆಧರಿಸಬೇಕಾದ್ದರಿಂದ ದ್ಯುಭ್ವಾದ್ಯಾಯತನತ್ವಾದಿಗಳೆಲ್ಲವೂ ಉಭಯತ್ರಪ್ರಸಿದ್ಧವೆಂದು ವಿವಕ್ಷಿಸಬೇಕು.

೩. ದುಭ್ವಾದ್ಯಾಯತನತ್ವಾದಿಗಳಿಗೆ ಅನ್ಯತ್ರಪ್ರಸಿದ್ಧತ್ವವನ್ನು ಒಪ್ಪುವುದೇ ಬೇಕಾಗಿಲ್ಲ. ಏಕೆಂದರೆ 'ಶ್ರುತ್ಯಾದಿತೋ ಲೋಕತೋ ವಾಽಪೀತರೇಷು ಪ್ರಸಿದ್ಧತಾ' ಎಂಬ ಅನ್ಯತ್ರಪ್ರಸಿದ್ಧಿಯ ಲಕ್ಷಣದಲ್ಲಿ 'ಶ್ರುತ್ಯಾದಿತೌಲ್ಯಾಭಾವೇ ಸತಿ' ಎಂಬುದನ್ನು ವಿಶೇಷಣವನ್ನಾಗಿ ಹೇಳಿದ್ದರಿಂದ ಸರ್ವಗತತ್ವಾದಿಲಿಂಗಗಳಿಗೆ ಹಾಗೂ ಭೂಮಾದಿ ಶಬ್ದಗಳಿಗೆ

ಅನ್ಯತ್ರಪ್ರಸಿದ್ಧಿಯ ಸಾಹಚರ್ಯದಿಂದ ಅನ್ಯತ್ರಪ್ರಸಿದ್ಧತ್ವವಿದ್ದರೂ ಸಹ ಎಲ್ಲಿ ಶ್ರುತ್ಯಾದಿತೌಲ್ಯವು ಇರುವುದಿಲ್ಲವೋ ಅಲ್ಲಿಯೂ ಸಹ ಅನ್ಯತ್ರಪ್ರಸಿದ್ಧಿಯ ಲಕ್ಷಣಬರುತ್ತದೆ. ಭೂಮಾ, ದ್ಯುಭ್ವಾದ್ಯಾಯತನತ್ವ ಮೊದಲಾದೆಡೆ ಸಮಾಖ್ಯಾಶ್ರುತಿಯ ತೌಲ್ಯವಿರುವುದರಿಂದ ಅನ್ಯತ್ರಪ್ರಸಿದ್ಧಿಯ ಲಕ್ಷಣ ಬರುವುದಿಲ್ಲವೆಂದು ತಿಳಿಯಬೇಕು.

೪. ಅನ್ಯತ್ರಪ್ರಸಿದ್ಧವಾದ ಲಿಂಗದ ಸಾಹಚರ್ಯದಿಂದ ಅನ್ಯತ್ರಪ್ರಸಿದ್ಧವಾಗುತ್ತದೆಂಬ ಪರಿಕಲ್ಪನೆಯನ್ನೇ ಒಪ್ಪುವುದಿಲ್ಲ; ಹೊರತಾಗಿ ಸ್ವಾಭಾವಿಕವಾಗಿ ಯಾವುದು ಲೋಕರೂಢಿಯಿಂದ ಅನ್ಯತ್ರಪ್ರಸಿದ್ಧವಾಗಿರುತ್ತದೋ, ಅದನ್ನು ಮಾತ್ರ ಅನ್ಯತ್ರಪ್ರಸಿದ್ಧವೆಂದು ಹೇಳಬೇಕು. ಸರ್ವಗತತ್ವಾದಿಗಳೆಲ್ಲವೂ ಅನ್ಯತ್ರಪ್ರಸಿದ್ಧವಾದ ಶ್ರುತ್ಯಾದಿಗಳ ಸಾಹಚರ್ಯದಿಂದ ಅನ್ಯತ್ರಪ್ರಸಿದ್ಧವಾಗಿರುವುದಲ್ಲ. ಹೊರತಾಗಿ ಬೇರೆಡೆ ಪ್ರಸಿದ್ಧವಾಗಿವೆಯೆಂಬುದನ್ನು ತಿಳಿಸಲು ಮಾತ್ರ ಆಯಾ ಅಧಿಕರಣಗಳಲ್ಲಿ ಶ್ರುತ್ಯಾದಿ ಪ್ರಮಾಣಗಳನ್ನು ಹೇಳಿರುತ್ತಾರೆ.

ಪ್ರಕೃತ ದ್ಯುಭ್ವಾದ್ಯಾಯತನತ್ವಾದಿಗಳಲ್ಲಿ ಲೋಕರೂಢಿಯಿಂದ ಸ್ವಾಭಾವಿಕವಾಗಿ ಅನ್ಯತ್ರಪ್ರಸಿದ್ಧತ್ವವು ಇಲ್ಲದ ಕಾರಣ ಅನ್ಯತ್ರಪ್ರಸಿದ್ಧಿಯ ಲಕ್ಷಣ ಬರುವುದಿಲ್ಲವೆಂದು ತಿಳಿಯಬೇಕು. ಹಾಗಾಗಿ ಸರ್ವಗತತ್ವಾದಿಧರ್ಮಗಳು ಅನ್ಯತ್ರಪ್ರಸಿದ್ಧವಾದ ಶಬ್ದಗಳೇ ಆಗುತ್ತವೆ. ದ್ಯುಭ್ವಾದ್ಯಾಯತನತ್ವಗಳು ಉಭಯತ್ರಪ್ರಸಿದ್ಧವೇ ಆಗುತ್ತವೆ ಪರಸ್ಪರ ಸಾಂಕರ್ಯ ದೋಷಕ್ಕೆ ಅವಕಾಶವಿರುವುದಿಲ್ಲ.

ಅಧಿಕರಣ ಸಂಗತಿ ಹಾಗೂ ಸಂಶಯ ಪರಂಪರೆ

ಹಿಂದಿನ ಅಧಿಕರಣದಿಂದ ಈ ಅಧಿಕರಣಕ್ಕೆ ಸಂಗತಿಯನ್ನು ತೋರಿಸಬೇಕಾಗಿಲ್ಲ. ಏಕೆಂದರೆ ಪಾದದ ಮೊದಲನೇ ಅಧಿಕರಣಕ್ಕೆ ಸಂಗತಿ ಇರುವುದಿಲ್ಲ. ಹಾಗೇನಾದರೂ ಸಹಜವಾಗಿ ಸಂಗತಿ ಇದ್ದರೂ ಸಹ ಅದನ್ನು ತಿಳಿಯುವುದು ತಪ್ಪಲ್ಲ. ಹಿಂದಿನ ವೈಶ್ವಾನರಾಧಿಕರಣದಲ್ಲಿ ಸಿದ್ಧಾಂತಹೇತುವನ್ನಾಗಿ ಬಳಸಲ್ಪಟ್ಟ ಆತ್ಮಶಬ್ದವನ್ನು ವಿಚಾರ ಮಾಡುತ್ತಿರುವುದರಿಂದ ಆತೀದೇಶಿಕೀ ಸಂಗತಿಯನ್ನು ಹೇಳಿದರ ತಪ್ಪಲ್ಲ.

'ಯಸ್ಮಿನ್‌ದ್ಯೌಃ' ಇತ್ಯಾದಿ ಶ್ರುತಿಯಲ್ಲಿ ದ್ಯುಭ್ವಾದ್ಯಾಯತನತ್ವವೆಂಬ ಲಿಂಗವು ಕೇಳಿಸುತ್ತಿದೆ. ಇದು ರುದ್ರನಲ್ಲಿ ಬರುತ್ತದೆಂಬುದು ಪೂರ್ವಪಕ್ಷಕಾರನ ಆಗ್ರಹ, ವಿಷ್ಣುವಿನಲ್ಲಿ ಬರುತ್ತದೆಂಬುದು ಸಿದ್ಧಾಂತಿಗಳ ಆಗ್ರಹ. ಒಂದು ವೇಳೆ ಶರೀರವನ್ನು ಸ್ವೀಕಾರ ಮಾಡುವುದೇ ಜನನ = ಹುಟ್ಟುವಿಕೆ ಎಂದಾದರೆ, ಶರೀರವೇ ಇಲ್ಲದ ವಿಷ್ಣುವಿನಲ್ಲಿ ಜಾಯಮಾನತ್ವವು ಅಯುಕ್ತವಾಗುತ್ತದೆ. ಜಾಯಮಾನತ್ವವೆಂಬ ಬಾಧಕಲಿಂಗದಿಂದಲೇ ಪ್ರಕರಣದಲ್ಲಿ ಕೇಳಿಸುತ್ತಿರುವ ಆತ್ಮಶಬ್ದಾದಿಗಳೆಲ್ಲವೂ ವಿಷ್ಣುವನ್ನು ಪ್ರತಿಪಾದಿಸದೇ ಗೌಣವಾದ ಬೇರೆ ಯಾರನ್ನಾದರೂ ಪ್ರತಿಪಾದಿಸುತ್ತದೆಂದು ಹೇಳಬೇಕಾಗುತ್ತದೆ. ಆವಾಗ 'ರುದ್ರೋ ವಾವ ಲೋಕಾಧಾರಃ' ಇತ್ಯಾದಿ ಸಮಾಖ್ಯಾ ಪ್ರಮಾಣಗಳ ಬೆಂಬಲದಿಂದ ರುದ್ರಾದಿಗಳೇ ದ್ಯುಭ್ವಾದ್ಯಾಯತನರಾಗುತ್ತಾರೆಂಬುದು ಪೂರ್ವಪಕ್ಷಕಾರನ ಗುರಿ.

ಜನನ ಶಬ್ದಕ್ಕೆ ಹುಟ್ಟುವಿಕೆ ಎಂಬರ್ಥವನ್ನೇ ಸ್ವೀಕರಿಸಬೇಕಿಲ್ಲ. ಪ್ರಾದುರ್ಭಾವವೆಂಬರ್ಥವನ್ನೂ ಸಹ ಸ್ವೀಕರಿಸಬಹುದು. ಆದ್ದರಿಂದ ಜಾಯಮಾನತ್ವವನ್ನು ವಿಷ್ಣುವಿನಲ್ಲಿ ಹೇಳಲು ಏನೂ ಅಡ್ಡಿಯಿಲ್ಲ ಎಂದು ಒಪ್ಪಿದಾಗ ಆತ್ಮಶಬ್ದಾದಿಗಳೆಲ್ಲವೂ ಬಾಧಕವಿಲ್ಲದ ಕಾರಣ ಮಹಾವಿಷ್ಣುವನ್ನೇ ಮುಖ್ಯವಾಗಿ ಪ್ರತಿಪಾದಿಸುತ್ತವೆ. ಆತ್ಮಶಬ್ದಾದಿಗಳ ಬಲದಿಂದ ರುದ್ರಾದಿಗಳ ವಿಷಯದಲ್ಲಿರುವ ಸಮಾಖ್ಯಾದಿ ಪ್ರಮಾಣಗಳೆಲ್ಲವೂ ದುರ್ಬಲವಾಗುತ್ತವೆ. ಆವಾಗ 'ಯಸ್ಮಿನ್‌ದ್ಯೌಃ' ಇತ್ಯಾದಿ ಶ್ರುತಿಯಲ್ಲಿ ಪ್ರತಿಪಾದಿಸಲ್ಪಟ್ಟ ದ್ಯುಭ್ವಾದ್ಯಾಯತನತ್ವವೆಂಬ ಲಿಂಗವು ಮಹಾವಿಷ್ಣುವಿನಲ್ಲಿ ಸಿದ್ಧವಾಗುತ್ತದೆಂಬ ಸಾಧನೆಯೇ ಸಿದ್ಧಾಂತಿಗಳ ಗುರಿ.

ರುದ್ರ, ಪ್ರಕೃತಿ, ವಾಯು, ಜೀವ, ಈ ನಾಲ್ವರು ದ್ಯುಭ್ವಾದ್ಯಾಯತನರೆಂದು ಪೂರ್ವಪಕ್ಷ

ಈ ಅಧಿಕರಣದ ಪೂರ್ವಪಕ್ಷ ಹೀಗಿದೆ - ದ್ಯುಭ್ವಾದ್ಯಾಯತನನಾದವನು ವಿಷ್ಣುವೇ ಆಗುತ್ತಾನೆಂದು ನಿರ್ಣಯಿಸಲು ಸಾಧ್ಯವಿಲ್ಲ; ಹೊರತಾಗಿ ರುದ್ರ, ಪ್ರಕೃತಿ, ವಾಯು ಅಥವಾ ಜೀವ ಇವರುಗಳೇ ದ್ಯುಭ್ವಾದ್ಯಾಯತನರಾಗುತ್ತೆನ್ನಲು ಪ್ರಮಾಣವಿದೆ. 'ರುದ್ರೋ ವಾವ ಲೋಕಾಧಾರಃ' ಎಂಬ ಶ್ರುತಿಯು ರುದ್ರನ ವಿಷಯದಲ್ಲಿ; 'ಆಕಾಶ ಏವ ತದೋತಂ ಚ' ಎಂಬ ಶ್ರುತಿಯು ಪ್ರಕೃತಿಯ ವಿಷಯದಲ್ಲಿ; 'ವಾಯುನಾ ವೈ' ಎಂಬ ಶ್ರುತಿಯುವಾಯುದೇವನವಿಷಯದಲ್ಲಿ ಹಾಗೂ ಜಾಯಮಾನತ್ವ ಎಂಬ ಲಿಂಗವು ಜೀವನವಿಷಯದಲ್ಲಿ ಆಧಾರವಾಗಿದೆ. ರುದ್ರ, ಪ್ರಕೃತಿ, ವಾಯು ಈ ಮೂವರು ದ್ಯುಭ್ವಾದ್ಯಾಯತನರಾಗಿದ್ದಾರೆನ್ನಲು ಸಮಾಖ್ಯಾಪ್ರಮಾಣವಿದೆಯೆಂದು ಪೂರ್ವಪಕ್ಷಕಾರರು ಹೇಳುತ್ತಿರುವ ದೊಡ್ಡ ಆಧಾರ. ಆದರೆ ವಿಷ್ಣುವಿಷಯದಲ್ಲಿಯೂ 'ಲೋಕಾಶ್ಚ ಲೋಕನಶ್ಚ' ಇತ್ಯಾದಿ ಶ್ರುತಿಯು ಸಮಾಖ್ಯಾಪ್ರಮಾಣವಾಗಿದೆಯೆಂದು ಆಕ್ಷೇಪ ಬರುತ್ತದೆ. ಆದರೆ ರುದ್ರನ ವಿಷಯದಲ್ಲಿರುವ ಸಮಾಖ್ಯಾಪ್ರಮಾಣವು ವಿಷ್ಣುವಿಷಯಕವಾದ ಸಮಾಖ್ಯಾಪ್ರಮಾಣಕ್ಕಿಂತಲೂ ಅತ್ಯಂತ ಬಲಿಷ್ಠವಾಗಿದೆ. ರುದ್ರನಲ್ಲಿ ಪ್ರಸಿದ್ಧವಾದ ಕೃತ್ತಿವಾಸಾ ಮೊದಲಾದ ಶಬ್ದ ಪ್ರಯೋಗ ಹಾಗೂ ಪ್ರಾಣಾಧಾರತ್ವ ಮೊದಲಾದ ಲಿಂಗ ಇವುಗಳ ಬಲದಿಂದ ರುದ್ರವಿಷಯಕವಾದ ಪ್ರಮಾಣವು ಪ್ರಬಲವಾಗಿ ವಿಷ್ಣುವಿಷಯಕವಾದ ಸಮಾಖ್ಯಾಪ್ರಮಾಣವನ್ನು ಬಾಧಿಸುತ್ತದೆ. ಇನ್ನು ವಾಯು ಹಾಗೂ ಪ್ರಕೃತಿವಿಷಯಕವಾದ ಸಮಾಖ್ಯಾಪ್ರಮಾಣವು ಶ್ರುತಿಲಿಂಗಗಳ ಆಧಾರದಿಂದ ಪ್ರಬಲವಾಗದೇ ಇದ್ದರೂ, ಜಾಯಮಾನತ್ವವೆಂಬ ಲಿಂಗದ ಆಧಾರದಿಂದ ಪ್ರಬಲವಾಗಿದೆ. ಆದ್ದರಿಂದ ದುರ್ಬಲವಾದ ವಿಷ್ಣುವಿಷಯಕವಾದ ಸಮಾಖ್ಯಾಪ್ರಮಾಣದಿಂದ ದ್ಯುಲೋಕ, ಭೂಲೋಕಾದಿಗಳಿಗೆ ಆಧಾರನಾದವನು ವಿಷ್ಣುವೇ ಆಗಿದ್ದಾನೆಂದು ನಿಶ್ಚಯಿಸಲು ಸಾಧ್ಯವಿಲ್ಲ.

ಪೂರ್ವಪಕ್ಷಕಾರರ ಮೇಲೆ ಒಂದು ದೊಡ್ಡ ಆಕ್ಷೇಪ ಬರುತ್ತದೆ - ಯಾವ ಪ್ರಕರಣದಲ್ಲಿ ದ್ಯುಭ್ವಾದ್ಯಾಯತನತ್ವವು ಕೇಳಿಸುತ್ತಿದೆಯೋ, ಅದು ವಿಷ್ಣುಪ್ರಕರಣವಾಗಿದೆಯೆಂದು ಉಪಕ್ರಮದ ಆಧಾರದಿಂದ ತಿಳಿಯುತ್ತಿದೆ. ಮತ್ತು ಮುಕ್ತೋಪಸೃಪ್ಯತ್ವವೇ ಮೊದಲಾದ ವಿಷ್ಣುವಿನ ಅಸಾಧಾರಣ ಲಿಂಗಗಳೂ ಸಹ ಕೇಳಿಬರುತ್ತಿವೆ. ಲಿಂಗ ಹಾಗೂ ಪ್ರಕರಣಗಳು ವಿಷ್ಣುವಿಷಯದಲ್ಲಿರುವಾಗ ಕೇವಲ ಸಮಾಖ್ಯಾಪ್ರಮಾಣದಿಂದ ರುದ್ರಾದಿಗಳನ್ನು ಸಮರ್ಥಿಸಲು ಹೇಗೆ ಸಾಧ್ಯ ? ಮತ್ತು ರುದ್ರನ ವಿಷಯದಲ್ಲಿರುವ ಕೃತ್ತಿವಾಸಾ ಮೊದಲಾದ ಶಬ್ದಗಳು ಹಾಗೂ ಪಿನಾಕಿತ್ವ ಮೊದಲಾದ ಲಿಂಗಗಳು ವಿಷ್ಣುವಿನಲ್ಲಿ ಸಾವಕಾಶವಾಗುತ್ತವೆಂಬುದನ್ನು ಅಂತರಧಿಕರಣದಲ್ಲಿ ಹಾಗೂ 'ಶಾಸ್ತ್ರದೃಷ್ಟ್ಯಾ' ಎಂಬ ಸೂತ್ರದಲ್ಲಿ ಈಗಾಗಲೇ ಸಿದ್ಧಾಂತಿಗಳು ಸಮರ್ಥಿಸಿದ್ದಾರೆ. ಅಷ್ಟೇ ಅಲ್ಲದೆ ಜಾಯಮಾನತ್ವವೆಂಬ ಲಿಂಗವೂ ಸಹ ಪ್ರಾದುರ್ಭಾವವೆಂಬರ್ಥದಿಂದ ವಿಷ್ಣುವಿನಲ್ಲಿ ಸಾವಕಾಶವಾಗುತ್ತದೆ. ಹೀಗಿರುವಾಗ ಪೂರ್ವಪಕ್ಷಕಾರರು ತೋರಿಸಿದ ಯುಕ್ತಿಗಳೆಲ್ಲವೂ ಸಾವಕಾಶವಾಗಿ ದುರ್ಬಲವಾಗಿವೆ. ಪೂರ್ವಪಕ್ಷವೇ ಹೊರಡಲು ಸಾಧ್ಯವಿಲ್ಲದಿದ್ದಾಗ, ಈ ಅಧಿಕರಣದ ಪ್ರವೃತ್ತಿಯಾದರೂ ಸಹ ಏಕೆ? ಎಂಬ ದೊಡ್ಡ ಪ್ರಶ್ನೆಯನ್ನು ಪೂರ್ವಪಕ್ಷಕಾರರು ಎದುರಿಸಬೇಕು.

ನಿರವಕಾಶಲಿಂಗಗಳ ಬಲದಿಂದ ಪೂರ್ವಪಕ್ಷ ಸ್ಥಾಪನೆ

ಇದುವರೆಗೂ ಮಾಡಿದ ಪ್ರಶ್ನೆಗೆ ಹೀಗೆ ಉತ್ತರ - ಜಾಯಮಾನತ್ವವೆಂಬ ಲಿಂಗವು ಆನಂದಮಯಾಧಿಕರಣದಿಂದಾಗಲೀ, 'ಕಾರಣತ್ವೇನ ಚ' ಎಂಬ ಸೂತ್ರದಿಂದಾಗಲೀ ಸಾವಕಾಶವಾಗಲು ಸಾಧ್ಯವೇ ಇಲ್ಲ. ಈ ಅಧಿಕರಣದ ಸಿದ್ಧಾಂತವನ್ನು ವಿವಕ್ಷಿಸಿ ಆನಂದಮಯಾಧಿಕರಣದಲ್ಲಿ ಜಾಯಮಾನ ಶಬ್ದಕ್ಕೆ ಪ್ರಾದುರ್ಭಾವವೆಂಬರ್ಥವನ್ನು ಹೇಳಿರುತ್ತಾರೆ. ಹೀಗಿರುವಾಗ ಆ ಅಧಿಕರಣದ ವಚನದಿಂದ ಇಲ್ಲಿ ಸಾವಕಾಶತ್ವವನ್ನು

ಸ್ಥಾಪಿಸಲು ಸಾಧ್ಯವಿಲ್ಲ. ಮತ್ತು 'ಕಾರಣತ್ವೇನ' ಇತ್ಯಾದಿ ಸೂತ್ರದಲ್ಲಿಯೂ ಒಬ್ಬನೇ ವ್ಯಕ್ತಿಗೆ ಕಾರ್ಯಕಾರಣಭಾವವು ವಿರುದ್ಧವಾಗುತ್ತದಲ್ಲವೇ? ಎಂಬ ಆಶಂಕೆಗೆ ಉತ್ತರವನ್ನು ನೀಡಿದ್ದಾರೆ ಹೊರತು, ಯಾವುದೇ ತರಹದ ಜನನವಿಲ್ಲದ ಪರಮಾತ್ಮನಿಗೆ ಹುಟ್ಟುವಿಕೆ ಎಂಬುದು ಹೇಗೆ ಕೂಡುತ್ತದೆ ಎಂಬ ಆಶಂಕೆಯು ಅಲ್ಲಿ ಪ್ರಸಕ್ತವೇ ಆಗಿಲ್ಲ. ಆದಕ್ಕೆ ಉತ್ತರವನ್ನೂ ಸಹ ಅದಕ್ಕೆ ನೀಡಿರುವುದಿಲ್ಲ. ಆದ್ದರಿಂದ ಜಾಯಮಾನತ್ವವೆಂಬ ಲಿಂಗವು ಸಾವಕಾಶವಾಗಲು ಸಾಧ್ಯವಿಲ್ಲ; ಹೊರತಾಗಿ ನಿರವಕಾಶವೇ ಆಗಿದೆ. ಏಕೆಂದರೆ ಜನನವಿರುವಂತಹ ಚೇತನನಲ್ಲಿಯೇ ಮರಣವಿರಬೇಕು. 'ಯತೋ ವಾ ಇಮಾನಿ ಭೂತಾನಿ ಜಾಯಂತೇ' ಎಂದು ಚೇತನನಾದ ಜೀವನಲ್ಲಿ ಜನನವು ಕೇಳಿಸುತ್ತಿದೆ. ದೇಹತ್ಯಾಗವೆಂಬ ಮರಣಶೀಲನಾದ ಜೀವನಲ್ಲಿಯೇ ಇದನ್ನು ಕೂಡಿಸಬೇಕು; ಹೊರತು ಮರಣವಿಲ್ಲದ ಪರಮಾತ್ಮನಲ್ಲಿ ಇಂತಹ ಜನನವನ್ನು ಹೇಳುವುದು ತಪ್ಪಾಗುತ್ತದೆ. ಮತ್ತು ಜನನ ಶಬ್ದಕ್ಕೆ ಭೌತಿಕವಾದ ಶರೀರವನ್ನು ಸ್ವೀಕರಿಸುವುದು ಎಂದರ್ಥ. ಅಥವಾ ಆಸ್ವಾತಂತ್ರ್ಯವನ್ನು ಹೊಂದುವುದು ಎಂದರ್ಥ. ಇವೆರಡನ್ನೂ ಸಹ ಪರಮಾತ್ಮನಲ್ಲಿ ಹೇಳಲು ಸಾಧ್ಯವಿಲ್ಲ. ಆದ್ದರಿಂದ ಜಾಯಮಾನತ್ವವೆಂಬ ಧರ್ಮವೂ ಜೀವನಲ್ಲಿ ಮಾತ್ರ ಬರುತ್ತದೆ ಹೊರತು, ಪರಮಾತ್ಮನಲ್ಲಿ ಬರುವುದಿಲ್ಲ. ಇಂತಹ ಬಲಿಷ್ಠವಾದ ಲಿಂಗದಿಂದ ದ್ಯುಭ್ವಾದ್ಯಾಯತನರಾದವರು ಜೀವರೆನಿಸಿದ ರುದ್ರಾದಿಗಳೇ ಆಗುತ್ತಾರೆ. ಪರಮಾತ್ಮನಾಗಲು ಸಾಧ್ಯವಿಲ್ಲ.

ಅನುವ್ಯಾಖ್ಯಾನ ಹಾಗೂ ನ್ಯಾಯವಿವರಣಗಳಲ್ಲಿ ಹೇಳಲ್ಪಟ್ಟ ಸಮಾಖ್ಯಾಪ್ರಮಾಣವೂ ಸಹ ನಿರವಕಾಶವೇ ಆಗಿದೆ. ಏಕೆಂದರೆ ಸಮಾಖ್ಯಾಪ್ರಮಾಣಗಳಲ್ಲಿ ಯಾವುದೇ ವಿಷ್ಣುಲಿಂಗಗಳು ಕೇಳಿಸುತ್ತಿಲ್ಲ. ಹಾಗೇನಾದರೂ ಕೇಳಿಸಿದ್ದರೆ 'ಅಂತಸ್ತದ್ಧರ್ಮೋಪದೇಶಾತ್' ಎಂಬ ಸೂತ್ರದ ನ್ಯಾಯದಂತೆ ಆ ಪ್ರಮಾಣಗಳು ವಿಷ್ಣುಪರವೆಂದು ಸಮರ್ಥಿಸಬಹುದಿತ್ತು. ಆದ್ದರಿಂದ ಜಾಯಮಾನತ್ವವೆಂಬ ಲಿಂಗದಂತೆ ಸಮಾಖ್ಯಾಪ್ರಮಾಣವೂ ಸಹ ನಿರವಕಾಶವೇ ಆಗಿದೆ. ಇನ್ನು ವಿಷ್ಣುವಿಷಯಕವಾದ ಆತ್ಮಶಬ್ದ, ಮುಕ್ತೋಪಸೃಪ್ಯತ್ವವೆಂಬ ಲಿಂಗ, ಪರವಿದ್ಯಾವಿಷಯತ್ವವೆಂಬ ಪ್ರಕರಣ ಇವುಗಳನ್ನೆಲ್ಲಾ ಜೀವಬ್ರಹ್ಮರ ಐಕ್ಯದಿಂದ ಜೀವರಲ್ಲಿ ಕೂಡಿಸಬೇಕು. ಆದ್ದರಿಂದ ದ್ಯುಭ್ವಾದ್ಯಾಯತನರಾದವರು ರುದ್ರ, ಪ್ರಕೃತಿ, ಜೀವಾದಿಗಳೇ ಆಗುತ್ತಾರೆ ಹೊರತು, ವಿಷ್ಣುವಲ್ಲವೆಂಬ ಪೂರ್ವಪಕ್ಷವು ಸ್ಥಾಪಿತವಾಯಿತು.

ಸಿದ್ಧಾಂತ - ವಿಷ್ಣುವಿನ ಹುಟ್ಟು ಲೋಕವಿಲಕ್ಷಣ

ಸಿದ್ಧಾಂತದ ಸಾರ ಹೀಗಿದೆ - ಜಾಯಮಾನತ್ವವೆಂಬ ಲಿಂಗವು ಜೀವಾದಿಗಳ ವಿಷಯದಲ್ಲಿ ನಿರವಕಾಶಲಿಂಗವೆಂದು ಪೂರ್ವಪಕ್ಷಕಾರರು ಹೇಳಿದರು. ಆದರೆ ಅದು ಸಾವಕಾಶವೇ ಆಗಿದೆ. ಲೋಕದಲ್ಲಿ ಅಚೇತನಪದಾರ್ಥಕ್ಕಿಂತ ಚೇತನಪದಾರ್ಥದ ಜನನವು ವಿಲಕ್ಷಣವಾಗಿರುವುದು ಕಂಡಿದೆ. ಇಂತಹ ಚೇತನ, ಅಚೇತನ ಪದಾರ್ಥಗಳಿಗಿಂತ ಭಗವಂತನ ಜನನವೂ ಸಹ ಲೋಕವಿಲಕ್ಷಣವಾಗಿದೆ. ಆದ್ದರಿಂದ ಸುಖಿಸ್ವರೂಪನಾದ ಭಗವಂತನು ಮತ್ಸ್ಯ, ಕೂರ್ಮ, ವರಾಹ ಮೊದಲಾದ ಬೇರೆ ಬೇರೆ ತನ್ನ ಶರೀರಗಳನ್ನು ಪ್ರಕಟಪಡಿಸುತ್ತಾನೆ. ಇದೇ ಅವನ ಜನನವೆನಿಸುತ್ತದೆ ಹೊರತು, ಜೀವಾದಿಗಳಿಗೆ ಬರುವಂತೆ ದೇಹದ ಸಂಬಂಧವನ್ನು ಜನನವೆಂದು ಹೇಳಲಾಗದು. ಆದ್ದರಿಂದ 'ಅಜಾಯಮಾನೋ ಬಹುಧಾ ವಿಜಾಯತೇ' ಇತ್ಯಾದಿ ಶ್ರುತಿಯು ವಿಷ್ಣುವಿಷಯಕವೇ ಆಗಿದೆ. ಯಾವಾಗ ಜಾಯಮಾನತ್ವವೆಂಬ ಪೂರ್ವಪಕ್ಷಲಿಂಗವು ಸಾವಕಾಶವಾಗುತ್ತದೋ, ಆವಾಗ ಆತ್ಮಶ್ರುತಿಯು ನಿರವಕಾಶವಾಗುತ್ತದೆ. ನಿರವಕಾಶವಾದ ಆತ್ಮಶ್ರುತಿಯ ಬಲದಿಂದ ಜಾಯಮಾನತ್ವವೆಂಬ ಲಿಂಗವನ್ನೇ ಗೌಣ ಮಾಡಬೇಕು ಹೊರತು, ವಿಪರೀತವಾಗಿ ಹೇಳಬಾರದು.

ಪರಿಪೂರ್ಣಚಂದ್ರಿಕಾ

ಸಮಾಖ್ಯಾಪ್ರಮಾಣವೂ ಸಹ ಸಾವಕಾಶವಾಗಿದೆ. ಆಚಾರ್ಯರು ಭಾಷ್ಯದಲ್ಲಿ ಅನೇಕ ಶ್ರುತಿ, ಸ್ಮೃತಿಗಳ ಆಧಾರದಿಂದ, ರುದ್ರ, ಅಂತಕ, ಪಿನಾಕೀ ಮೊದಲಾದ ಶಬ್ದಗಳನ್ನೆಲ್ಲಾ ವಿಷ್ಣುವಿನಲ್ಲೇ ಮುಖ್ಯವಾಗಿ ಪ್ರತಿಪಾದಿಸಿದ್ದಾರೆ. ಹೀಗೆ ಸೂತ್ರಕಾರರು ಹೇಳಲ್ಪಟ್ಟ ಆತ್ಮಶಬ್ದವೆಂಬ ಲಿಂಗದಿಂದ ಮುಕ್ತೋಪಸೃಪ್ಯತ್ವವೆಂಬ ಲಿಂಗದಿಂದ ವಿಷ್ಣುವೇ ದ್ಯುಭ್ವಾದ್ಯಾಯತನನಾಗಿದ್ದಾನೆಂದು ನಿರ್ಣಯವಾಗುತ್ತದೆ.

ಸೂತ್ರಗಳ ವಿನ್ಯಾಸದಲ್ಲಿ ಸ್ವಾರಸ್ಯ

ಪ್ರಥಮಸೂತ್ರವು ಸ್ವಪಕ್ಷ ಸಾಧಕವನ್ನು ಹೇಳುತ್ತಿರುವುದರಿಂದ ಪ್ರಥಮ ಪ್ರಾಪ್ತವಾಗಿದೆ. ವಾದ ಕಥೆಯಲ್ಲಿ ಮೊದಲು ಸ್ವಪಕ್ಷ ಸಾಧಕಗಳನ್ನು ಹೇಳಿ, ಆನಂತರ (ಪರಪಕ್ಷಬಾಧಕಗಳನ್ನು ಹೇಳಬೇಕು) ಪರಪಕ್ಷಗಳನ್ನು ನಿರಾಕರಣೆ ಮಾಡಬೇಕು. ಅದಕ್ಕನುಸಾರಿಯಾಗಿ ಸೂತ್ರಕಾರರು ಮೊದಲು ಸ್ವಪಕ್ಷಸಾಧಕಗಳನ್ನು ಹೇಳಿ ಮುಂದೆ 'ಆತಚ್ಛಬ್ದಾತ್' ಇತ್ಯಾದಿಯಾಗಿ ಪರಪಕ್ಷಗಳನ್ನು ನಿರಾಕರಣೆ ಮಾಡಿದ್ದಾರೆ.

ಸೂತ್ರದಲ್ಲಿರುವ 'ಸ್ವಶಬ್ದಾತ್' ಎಂಬ ಹೇತುವಿನಿಂದ 'ಸ್ವ' ಎಂಬ ಶಬ್ದಕ್ಕೆ ಪರ್ಯಾಯ ಪದವೆನಿಸಿದ ಆತ್ಮಶಬ್ದವನ್ನು ಸ್ವೀಕರಿಸಬೇಕು. ಯಾವರೀತಿಯಾಗಿ ಪಾಣಿನಿ ವ್ಯಾಕರಣದಲ್ಲಿ 'ಸಭಾರಾಜಾಽಮನುಷ್ಯಪೂರ್ವೇ' ಎಂಬ ಸೂತ್ರದಲ್ಲಿ 'ರಾಜಾ' ಎಂಬ ಶಬ್ದಕ್ಕೆ ಪರ್ಯಾಯ ಪದಗಳಾದ ಈಶ್ವರ ಮೊದಲಾದ ಶಬ್ದಗಳನ್ನು ಸ್ವೀಕರಿಸಿದ್ದಾರೋ, ಅದರಂತೆ ಇಲ್ಲಿಯೂ ಸಹ ತಿಳಿಯಬೇಕು.

'ಸ್ವಶಬ್ದಾತ್' ಎಂಬ ಸೂತ್ರ ಭಾಗದ ಗಾಂಭೀರ್ಯ

ಸೂತ್ರದಲ್ಲಿ 'ಸ್ವಶಬ್ದಾತ್' ಎಂದು ಹೇಳಿದ್ದಾರೆ. ವಿಷ್ಣುವಿನಲ್ಲಿ ಅಸಾಧಾರಣವಾಗಿ ಪ್ರಯೋಗಿಸಲ್ಪಟ್ಟ ಆತ್ಮಶಬ್ದವು ಪ್ರಕರಣದಲ್ಲಿ ಕೇಳಿಸುತ್ತಿರುವುದರಿಂದ ಎಂದು ಇದರ ಅರ್ಥ. ಈ ಅರ್ಥವನ್ನು ವಿವಕ್ಷಿಸುವುದಾದರೆ ಸಹಜವಾಗಿ ಶಂಕೆಯು ಉದ್ಭವಿಸುತ್ತದೆ. ಸೂತ್ರಕಾರರು 'ಆತ್ಮಶಬ್ದಾತ್' ಎಂದೇ ಹೇಳಬಹುದಿತ್ತಲ್ಲವೇ? ನೇರವಾಗಿ ಇದರಿಂದ ಹೇತುವನ್ನು ತಿಳಿಸಿದಂತಾಗುತ್ತಿತ್ತು. 'ಸ್ವಶಬ್ದಾತ್' ಎಂದು ಹೇಳಿದರೆ ವಿಷ್ಣುವಿಗೆ ಸಂಬಂಧಪಟ್ಟ ಶಬ್ದ ಯಾವುದೆಂದು ಮೊದಲು ವಿಮರ್ಶಿಸಿ ಆನಂತರ ಅದು ಆತ್ಮಶಬ್ದವಾಗಿದೆಯೆಂಬುದನ್ನು ಅನ್ಯಥ್ಯಾನುಪಪತ್ತಿ ಪ್ರಮಾಣದಿಂದ ತಿಳಿಯಬೇಕಾಗುತ್ತದೆ. ಇದು ವಕ್ರ ಮಾರ್ಗ. ಸೂತ್ರಕಾರರು ನೇರ ಮಾರ್ಗವನ್ನೇಕೆ ಬಿಟ್ಟರು? ವಕ್ರಮಾರ್ಗವನ್ನೇಕೆ ಹಿಡಿದರು? ಎಂದು.

ಇದು ಮಂದಮತಿಗಳಿಗೆ ಬರುವ ಪ್ರಶ್ನೆಯಷ್ಟೇ ಹೊರತು, ಇದರಲ್ಲಿ ಹುರುಳಿಲ್ಲ. 'ಸ್ವಶಬ್ದಾತ್' ಎಂಬ ಶಬ್ದ ಪ್ರಯೋಗದ ಹಿಂದೆ ಬಹಳ ಅರ್ಥವನ್ನು ತುಂಬಿದ್ದಾರೆ ಸೂತ್ರಕಾರರು. 'ಆತ್ಮಾ' ಎಂಬ ಶಬ್ದವು ವಿಷ್ಣುವಿನಲ್ಲಿ ಅಸಾಧಾರಣವಾಗಿದೆ ಮತ್ತು ಈ ಶಬ್ದವಿಶೇಷವನ್ನೇ ಸ್ವೀಕರಿಸಬೇಕು ಎಂಬೆರಡು ವಿಚಾರಗಳನ್ನು ತಿಳಿಸುವುದಕ್ಕಾಗಿ 'ಸ್ವಶಬ್ದಾತ್' ಎಂದು ಹೇಳಿರುವರು. ಒಂದು ವೇಳೆ ಆತ್ಮಶಬ್ದವನ್ನೇ ಬಾಯಿಬಿಟ್ಟು ಹೇಳಿದ್ದರೆ, ಆದು ವಿಷ್ಣುವಿನಲ್ಲಿ ಅಸಾಧಾರಣವಾಗಿದೆಯೆಂದು ತಿಳಿಯುತ್ತಿರಲಿಲ್ಲ. ಇದು ಶಬ್ದವಿಶೇಷವೆಂದೂ ಸಹ ತಿಳಿಯುತ್ತಿರಲಿಲ್ಲ. 'ಸ್ವ ಇತಿ ಶಬ್ದಃ = ಸ್ವಶಬ್ದಃ' ಎಂಬ ಕರ್ಮಧಾರಯವನ್ನು ಆಶ್ರಯಿಸಿದಾಗ ಶಬ್ದವಿಶೇಷವನ್ನೇ ಸ್ವೀಕರಿಸಬೇಕೆಂಬ ಪ್ರಯೋಜನವು ಲಾಭವಾಗುತ್ತದೆ. 'ಸ್ವಸ್ಯ ಶಬ್ದಃ' 'ಸ್ವಶಬ್ದಃ' ಎಂಬ ಷಷ್ಠೀತತ್ಪುರುಷವನ್ನು ಆಶ್ರಯಿಸಿದಾಗ ವಿಷ್ಣುವಿನ ಅಸಾಧಾರಣ ಶಬ್ದವಾಗಿದೆಯೆಂದು ತಿಳಿಯುತ್ತದೆ. 'ಆತ್ಮಶಬ್ದಾತ್' ಎಂಬ ಪದಪ್ರಯೋಗದಿಂದ ಈ ಎರಡು ಸಮಾಸಗಳೂ ತಿಳಿಯಲು ಸಾಧ್ಯವಿರಲಿಲ್ಲ. ಈ ಎರಡು ಸಮಾಸಗಳಿಂದ ತಿಳಿಯುವ ಪ್ರಮೇಯವೂ ಸಹ ಸಿದ್ಧವಾಗುತ್ತಿರಲಿಲ್ಲ.

ಪರಿಪೂರ್ಣಚಂದ್ರಿಕಾ

ಅಥವಾ ಸ್ವಶಬ್ದಃವನ್ನು ದೃಷ್ಟಾಂತವನ್ನು ತಿಳಿಯಬಹುದು. ಲೋಕದಲ್ಲಿ ೧. ತಾನು, ೨. ದುಡ್ಡು, ೩. ಬಂಧು ಮೊದಲಾದ ಅರ್ಥಗಳಲ್ಲಿ ಸ್ವ ಎಂಬ ಶಬ್ದವನ್ನು ಪ್ರಯೋಗಿಸುವುದು ಕಂಡಿದೆ. ಆದರೂ ಸಹ ಚತುರ್ಮುಖನನ್ನು 'ಸ್ವಭೂಃ' ಎಂದು ಕರೆಯಲಾಗುತ್ತದೆ. ಏಕೆಂದರೆ 'ಸ್ವ' ಎನಿಸಿದ ಭಗವಂತನಿಂದ ಹುಟ್ಟಿದ್ದವನಾದ್ದರಿಂದ. ಇದರಿಂದ 'ಸ್ವ' ಶಬ್ದವು ಶ್ರೀಹರಿಯಲ್ಲೇ ಮುಖ್ಯವಾಗಿದೆಯೆಂದು ತಿಳಿಯುತ್ತದೆ. ಆದರಂತೆ ಆತ್ಮಶಬ್ದವನ್ನೂ ಲೋಕದಲ್ಲಿ ಬೇರೆಡೆ ಪ್ರಯೋಗಿಸಬಹುದು. ಆದರೆ ಚತುರ್ಮುಖನನ್ನೇ 'ಆತ್ಮಭೂಃ' ಎಂದೂ ಸಹ ಕರೆಯುತ್ತಾರೆ. ಹಾಗಾದರೆ ಆತ್ಮಶಬ್ದಕ್ಕೆ ಮುಖ್ಯಪ್ರತಿಪಾದ್ಯನು ವಿಷ್ಣುವೇ ಆಗಿದ್ದಾನೆಂದು ಅರ್ಥ್ಯಸಬೇಕು. ಹೀಗೆ ಸ್ವಶಬ್ದವು ಹೇಗೆ ವಿಷ್ಣುವನ್ನೇ ಮುಖ್ಯವಾಗಿ ಪ್ರತಿಪಾದಿಸುತ್ತದೋ? ಆದರಂತೆ ಆತ್ಮಶಬ್ದವೂ ಸಹ ವಿಷ್ಣುವನ್ನೇ ಮುಖ್ಯವಾಗಿ ಪ್ರತಿಪಾದಿಸುತ್ತದೆಂಬ ಇತ್ಯಾದಿ ವಿಚಾರಗಳನ್ನು ಸೂತ್ರಕಾರರು ಇಲ್ಲಿ ಸೆರೆಹಿಡಿದಿದ್ದಾರೆ.

ಮುಕ್ತೋಪಸೃಪ್ಯತ್ವವೆಂಬ ಎರಡನೆಯ ಸೂತ್ರದ ಸ್ಥಾನಮಾನ

'ಯಸ್ಮಿನ್‌ದ್ಯೌಃ ಪೃಥಿವೀ' ಎಂಬ ವಿಷಯವಾಕ್ಯದಿಂದ ಸ್ವಲ್ಪ ಹತ್ತಿರದಲ್ಲಿಯೇ ಮುಕ್ತಪ್ರಾಪ್ಯತ್ವವೆಂಬ ಲಿಂಗವು ಶ್ರುತಿಯಲ್ಲಿ ಕೇಳಿಸುತ್ತಿದೆ. ಮುಕ್ತರಿಂದ ಹೊಂದಲು ಯೋಗ್ಯನಾಗಿರುವವನು ಪರಮಾತ್ಮನೇ ಆಗಿದ್ದಾನೆ ಹೊರತು, ಬೇರಾರೂ ಅಲ್ಲ. ಆದ್ದರಿಂದಲೂ ದ್ಯುಭ್ವಾದ್ಯಾಯತನನಾಗಿರುವವನು ವಿಷ್ಣುವೇ ಆಗಿದ್ದಾನೆಂದು ತಿಳಿಯಬೇಕು.

ಹೀಗೆ ದ್ಯುಭ್ವಾದ್ಯಾಯತನತ್ವವನ್ನು ಸಮರ್ಥಿಸಲು ಮತ್ತೊಂದು ಕಾರಣವನ್ನು ಈ ಸೂತ್ರವು ಹೇಳುವುದಾದರೆ 'ಚ' ಶಬ್ದವನ್ನು ಸೂತ್ರದಲ್ಲಿ ಹೇಳಬೇಕಿತ್ತಲ್ಲವೇ? ಎಂಬ ಪ್ರಶ್ನೆ ಬರುತ್ತದೆ. ಸಮಾಧಾನ ಹೀಗೆ - ಪ್ರಥಮ ಸೂತ್ರದಲ್ಲಿ ಆತ್ಮ ಶಬ್ದವೆಂಬ ಕಾರಣವನ್ನು ಹೇಳಿದ ಮೇಲೆ ಜಾಯಮಾನತ್ವವೆಂಬ ಲಿಂಗದಿಂದ ಆತ್ಮಶಬ್ದವು ಗೌಣಾರ್ಥವನ್ನು ಹೇಳಬಹುದಲ್ಲವೇ? ಎಂಬ ಆಕ್ಷೇಪವು ಬರುತ್ತದೆ. ಆದನ್ನು ನಿರಾಕರಿಸುವುದಕ್ಕಾಗಿ ಈ ಸೂತ್ರ ಹೊರಟಿದೆ ಹೊರತು, ನೇರವಾಗಿ ದ್ಯುಭ್ವಾದ್ಯಾಯತನತ್ವಕ್ಕೆ ಕಾರಣತ್ವವನ್ನು ಸಮರ್ಥಿಸಲು ಹೊರಟಿಲ್ಲ. ಜೀವವಿಷಯದಲ್ಲಿ ಬರುತ್ತಿರುವ ಆಕ್ಷೇಪವನ್ನು ಮಾಡದಿದ್ದರೆ ಈ ಸೂತ್ರಕ್ಕೆ ಪ್ರಸಕ್ತಿಯೇ ಇರುವುದಿಲ್ಲ. ಆದ್ದರಿಂದ ಸ್ವತಂತ್ರವಾಗಿ ಹೇತುವನ್ನು ಹೇಳದ ಕಾರಣ 'ಚ' ಶಬ್ದದ ಅನಿವಾರ್ಯತೆ ಇಲ್ಲ.

'ಮುಕ್ತೋಪಸೃಪ್ಯತ್ವ' ಎಂದರೆ ಮುಕ್ತರಿಂದ ಹೊಂದಲು ಯೋಗ್ಯನಾಗಿರಬೇಕು. ಇವನನ್ನು ಹೊಂದಿದ ಮೇಲೆ ಮತ್ತೊಬ್ಬರನ್ನು ಮುಕ್ತನು ಹೊಂದಬಾರದು ಎಂಬರ್ಥವನ್ನು ವಿವಕ್ಷಿಸಬೇಕು. ಏಕೆಂದರೆ ಮೋಕ್ಷಕ್ಕೆ ಹೋಗಬೇಕಾದರೆ ಅರ್ಚಿರ್ಲೋಕ, ಆಹರ್ಲೋಕ ಇವುಗಳ ಮೂಲಕ ಹೋಗುತ್ತಾನೆ. ಅಲ್ಲಿರುವ ದೇವತೆಗಳೂ ಸಹ ಮೊದಲು ಪ್ರಾಪ್ಯರೇ ಆಗಿದ್ದಾರೆ. ಆದರೆ ಅಂತಿಮವಾಗಿ ಪ್ರಾಪ್ಯನಾಗಿರುವವನು ವಿಷ್ಣುವೇ ಆಗಿದ್ದಾನೆ. ಆದ್ದರಿಂದಲೇ ಮುಕ್ತರಿಗೆ ಆವನು ಸೇತು ಎನಿಸಿದ್ದಾನೆ. 'ಸೇತು' ಪದದ ಈ ಅರ್ಥವನ್ನು ವಿವಕ್ಷಿಸಿಯೇ ಮುಕ್ತೋಪಸೃಪ್ಯತ್ವಲಿಂಗವನ್ನು ಹೇಳುವಾಗ ಭಾಷ್ಯಕಾರರು 'ಅಮೃತಸ್ಯೈಷ ಸೇತುಃ' ಎಂಬ ವಾಕ್ಯವನ್ನೇ ಉದಾಹರಿಸಿದ್ದಾರೆ.

ಮೂರು ಹಾಗೂ ನಾಲ್ಕನೆಯ ಸೂತ್ರಗಳ ವ್ಯಾಖ್ಯಾನ

'ಓಂ ನಾನುಮಾನಮತಚ್ಛಬ್ದಾತ್ ಓಂ' ಎಂಬ ಮೂರನೇ ಸೂತ್ರವು ಪರಪಕ್ಷದಲ್ಲಿ ಯಾವುದೇ ಸಾಧಕಪ್ರಮಾಣಗಳಿಲ್ಲವೆಂದು ಸಮರ್ಥಿಸುತ್ತಿದೆ. ಮೊದಲು ಸ್ವಪಕ್ಷದಲ್ಲಿ ಸಾಧಕಪ್ರಮಾಣಗಳನ್ನು ಹೇಳಿ ಈ ಸೂತ್ರದಲ್ಲಿ ಪರಪಕ್ಷದಲ್ಲಿ ಸಾಧಕಪ್ರಮಾಣಗಳಿಲ್ಲವೆಂದು ಹೇಳುತ್ತಿರುವುದರಿಂದ ಮೂರನೆಯ ಸ್ಥಾನವು ಈ ಸೂತ್ರಕ್ಕೆ ಸಮಂಜಸವಾಗಿದೆ.

ಪರಿಪೂರ್ಣಚಂದ್ರಿಕಾ

ಸೂತ್ರದಲ್ಲಿರುವ ಅನುಮಾನ ಶಬ್ದಕ್ಕೆ ಅನುಮಾನವೇ ಪ್ರಧಾನವಾಗಿವುಳ್ಳ ಪಾಶುಪಾತ್ಯಾಗಮಗಳೆಂದರ್ಥ. ಇವುಗಳಲ್ಲಿರುದ್ರಾದಿಗಳೇ ದ್ಯುಭ್ವಾದ್ಯಾಯತನರಾಗಿದ್ದಾರೆಂದು ಹೇಳಲಾಗಿದೆಯೆಂದು ಪೂರ್ವಪಕ್ಷಕಾರರು ಹೇಳುತ್ತಾರೆ. ಆದರೆ ಈ ವಿಚಾರವನ್ನು ಸಮರ್ಥಿಸಲು ಯಾವುದೇ ಸಾಧಕಪ್ರಮಾಣಗಳಿರುವುದಿಲ್ಲ. ಅಷ್ಟೇ ಅಲ್ಲದೆ ವಿಷ್ಣುವಿಷಯಕವಾದ ಸಮಾಖ್ಯಾಪ್ರಮಾಣದಲ್ಲಿ ವಿಷ್ಣುವೇ ದ್ಯುಭ್ವಾದ್ಯಾಯತನನಾಗಿದ್ದಾನೆನ್ನಲು ಸಾಧಕಪ್ರಮಾಣಗಳಿಲ್ಲವೆಂದೂ ಸಹ ಹೇಳಲು ಸಾಧ್ಯವಿಲ್ಲ. ರುದ್ರಸಮಾಖ್ಯಾ ಪ್ರಮಾಣದಲ್ಲಿರುವ ರುದ್ರ, ಪಿನಾಕೀ ಮೊದಲಾದ ಶಬ್ದಗಳೆಲ್ಲವೂ ವಿಷ್ಣುವನ್ನು ಮುಖ್ಯವಾಗಿ ಪ್ರತಿಪಾದಿಸುತ್ತವೆ. ಆದರಂತೆ ವಿಷ್ಣುಸಮಾಖ್ಯಾಪ್ರಮಾಣದಲ್ಲಿರುವ ವಿಷ್ಣು ಮೊದಲಾದ ಶಬ್ದಗಳು ರುದ್ರಾದಿಗಳನ್ನು ಮುಖ್ಯವಾಗಿ ಪ್ರತಿಪಾದಿಸುವುದಿಲ್ಲ. ಆದ್ದರಿಂದ ರುದ್ರಸಮಾಖ್ಯಾಪ್ರಮಾಣವು ಸಾವಕಾಶವೆಂದಂತಾಯಿತು. ವಿಷ್ಣುಸಮಾಖ್ಯಾಪ್ರಮಾಣವು ನಿರವಕಾಶವಾಯಿತು. ಆದ್ದರಿಂದಲೇ ಅನುವ್ಯಾಖ್ಯಾನದ ಶ್ಲೋಕದಲ್ಲಿ ಯಾವ ಯುಕ್ತಿಗಳು ಸಾವಕಾಶವಾಗಿರುತ್ತದೋ ಅವನ್ನೇ ಪೂರ್ವಪಕ್ಷಯುಕ್ತಿಯನ್ನಾಗಿ ಪರಿಗಣಿಸಿ ಅವೇ ಯುಕ್ತಿಗಳು ನಿರವಕಾಶವಾಗಿದ್ದರೆ ಸಿದ್ಧಾಂತ ಯುಕ್ತಿಗಳಾಗುತ್ತವೆಯೆಂದು ಶ್ರೀಮದಾಚಾರ್ಯರು ಹೇಳಿದ್ದಾರೆ.

ಸೂತ್ರದಲ್ಲಿ 'ಅತಶ್ಚಬ್ದಾತ್' ಎಂದು 'ನಞ್' ಸಮಾಸವು ಕಾಣಿಸುತ್ತಿದೆ. ಆದರೆ ಪ್ರಸಜ್ಯ ಪ್ರತಿಷೇಧಾರ್ಥದಲ್ಲಿ ನಞ್ ಎಂಬುದು ಕ್ರಿಯಾಸಾಪೇಕ್ಷವಾದ್ದರಿಂದ ಸಾಮರ್ಥ್ಯವನ್ನು ಹೊಂದದ ಕಾರಣ ಸಮಾಸವಾಗುವುದಿಲ್ಲವೆಂದೆನಿಸುತ್ತದೆ. ಆದರೂ 'ಅಸೂರ್ಯಂ ಪಶ್ಯಾಃ, ಅಶ್ರಾದ್ಧಭೋಜೀ' ಇತ್ಯಾದಿ ಸ್ಥಳಗಳಲ್ಲಿ 'ನಞ್' ಸಮಾಸವನ್ನು ಪ್ರಸಜ್ಯಪ್ರತಿಷೇಧಾರ್ಥದಲ್ಲಿಯೂ ಒಪ್ಪಿರುವುದರಿಂದ ಇಲ್ಲಿಯೂ ತಪ್ಪಾಗುವುದಿಲ್ಲ. ಅಥವಾ ಅವ್ಯಯೀಭಾವ ಸಮಾಸವೆಂದು ಪರಿಗಣಿಸಬಹುದು. ಅವ್ಯಯೀಭಾವ ಸಮಾಸವಾದರೆ 'ಅಮ್' ಪ್ರತ್ಯಯವು ಕೊನೆಯಲ್ಲಿ ಬರಬೇಕೆಂದೇನೂ ನಿಯಮವಿಲ್ಲ. 'ಅಪಂಚಮ್ಯಾಃ' ಎಂಬುದಾಗಿ ಪಂಚಮೀವಿಭಕ್ತಿಯನ್ನು ಬಿಟ್ಟು ಉಳಿದೆಡೆ ಹಾಗೇ 'ಅಮ್' ಪ್ರತ್ಯಯವು ಬರುತ್ತದೆಂದು ಪಾಣಿನಿ ಸೂತ್ರವು ಹೇಳಿದೆ.

ಮೂರನೆಯ ಸೂತ್ರವು ಹೀಗೆ ಪರಪಕ್ಷದಲ್ಲಿ ಸಾಧಕ ಪ್ರಮಾಣಗಳಿಲ್ಲವೆಂದು ಸಮರ್ಥಿಸಿದ ಮೇಲೆ ನಾಲ್ಕನೆಯ 'ಪ್ರಾಣಭೃಚ್ಚ' ಎಂಬ ಸೂತ್ರವು ಜೀವ ಹಾಗೂ ಪ್ರಧಾನಗಳು ದ್ಯುಭ್ವಾದ್ಯಾಯತನರಾಗುವುದಿಲ್ಲವೆಂದು ಸಮರ್ಥಿಸಿದೆ. ಈ ಸೂತ್ರವನ್ನು ಮುಂದಿನ 'ಭೇದವ್ಯಪದೇಶಾತ್' ಎಂಬ ಸೂತ್ರದಲ್ಲಿ ಅನುಕರ್ಷಮಾಡಬೇಕೆಂಬ ಉದ್ದೇಶದಿಂದ ಪ್ರತ್ಯೇಕವಾಗಿ ಹೇಳಿದ್ದಾರೆ. ಮುಂದಿನ ಸೂತ್ರದಲ್ಲಿ ಅನುಕರ್ಷ ಮಾಡುವ ಅವಶ್ಯಕತೆ ಇಲ್ಲದಿದ್ದಲ್ಲಿ ಹಿಂದಿನ ಸೂತ್ರಗಳ ಜೊತೆಗೆ ಸೇರಿಸಿ ಈ ಸೂತ್ರವನ್ನು ಪಠಿಸಬಹುದಿತ್ತು.

ಐದು, ಆರು ಹಾಗೂ ಏಳನೆಯ ಸೂತ್ರಾರ್ಥ ವಿವರಣೆ

'ಓಂ ಭೇದವ್ಯಪದೇಶಾತ್ ಓಂ' ಎಂಬ ಐದನೆಯ ಸೂತ್ರದಲ್ಲಿ ಜೀವಬ್ರಹ್ಮರಿಗೆ ಅಭೇದವನ್ನು ಆಶಂಕಿಸಿದರೆ ಉತ್ತರಿಸಲಾಗಿದೆ. ವಸ್ತುತಃ 'ಜುಷ್ಟಂ ಯದಾ ಪಶ್ಯತ್ಯನ್ಯಮೀಶಮ್' ಎಂಬ ಶ್ರುತಿಯಲ್ಲಿ ಭಿನ್ನನಾದ ಈಶನೆಂದಷ್ಟೇ ಹೇಳಲಾಗಿದೆ. ಯಾರಿಂದ ಭಿನ್ನನಾಗಿದ್ದಾನೆಂದು ಸ್ಪಷ್ಟವಾಗಿ ತಿಳಿಯುವುದಿಲ್ಲ. ಆದರೆ 'ಪಶ್ಯತೀ' ಎಂಬ ಕ್ರಿಯಾಪದದಿಂದ ಜೀವನು ಪ್ರಸಕ್ತನಾದ್ದರಿಂದ ಅರ್ಥಾತ್ ಜೀವನಿಂದ ಭೇದವನ್ನೇ ಹೇಳುತ್ತಿದೆಯೆಂದು ತಿಳಿಯಬೇಕು. 'ಜುಷ್ಟಂ ಯದಾ ಪಶ್ಯತಿ' ಎಂಬ ಶ್ರುತಿಯನ್ನು ಆದೃಶ್ಯತ್ವಾಧಿಕರಣದಲ್ಲಿ ರುದ್ರನಿಗಿಂತ ವಿಷ್ಣು ಭಿನ್ನನಾಗಿದ್ದಾನೆಂಬ ವಿಷಯದಲ್ಲಿ ಪ್ರಮಾಣವನ್ನಾಗಿ ಹೇಳಿದ್ದರು. ಮತ್ತೊಂದು ರೀತಿಯಲ್ಲಿ ಪ್ರಕೃತ ವ್ಯಾಖ್ಯಾನ ಮಾಡುತ್ತಾ ಜೀವ ಬ್ರಹ್ಮರ ಭೇದವಿಷಯದಲ್ಲಿಯೂ ಈ ಶ್ರುತಿಯು ಪ್ರಮಾಣವಾಗಿದೆಯೆಂದು ಸಮರ್ಥಿಸುತ್ತಿದ್ದಾರೆ.

'ಓಂ ಪ್ರಕರಣಾತ್ ಓಂ' ಎಂಬ ಆರನೆಯ ಸೂತ್ರವು ಹಿಂದಿನ ಸೂತ್ರದಲ್ಲಿ ಹೇಳಲ್ಪಟ್ಟ ಭೇದವು ಅನ್ಯವಿಷಯಕವಾಗುವುದಿಲ್ಲವೆಂಬುದನ್ನು ಮಾತ್ರ ಸಮರ್ಥನೆ ಮಾಡುತ್ತಿದೆ.

ಪರಿಪೂರ್ಣಚಂದ್ರಿಕಾ

'ಓಂ ಸ್ಥಿತ್ಯದನಾಭ್ಯಾಂಚ ಓಂ' ಎಂಬ ಏಳನೆಯ ಸೂತ್ರವು ಭೇದವಿಷಯದಲ್ಲಿ ಶ್ರುತಿಯು ಹೇಗೆ ಪ್ರಮಾಣವಾಗಿದೆಯೋ, ಅದರಂತೆ ಶ್ರುತಿ ಹಾಗೂ ಆದನಗಳೆಂಬ ಲಿಂಗಗಳೂ ಸಹ ಪ್ರಮಾಣವಾಗಿದೆಯೆಂದು ಸಮರ್ಥಿಸುತ್ತಿದೆ.

ಆದ್ವೈತಿಗಳು 'ದ್ವಾ ಸುಪರ್ಣಾ' ಎಂಬ ಶ್ರುತಿಯು ಬುದ್ಧಿಜೀವರಿಗೆ ಭೇದವನ್ನು ಹೇಳುವುದಕ್ಕಾಗಿ ಹೊರಟಿದ ಎನ್ನುತ್ತಾರೆ. ಅವರು ನೀಡುವ ಕಾರಣ ಪೈಂಗಿಹಸ್ಯ ಬ್ರಾಹ್ಮಣ ವಾಕ್ಯದಲ್ಲಿ 'ದ್ವಾ ಸುಪರ್ಣಾ' ಎಂಬ ವಾಕ್ಯವನ್ನು ವ್ಯಾಖ್ಯಾನ ಮಾಡುವಾಗ 'ತಾವೇತೌ ಸತ್ವಕ್ಷೇತ್ರಜ್ಞೌ' ಎಂದು ಹೇಳಲಾಗಿದೆ. ಸತ್ವ ಹಾಗೂ ಕ್ಷೇತ್ರಜ್ಞರೆಂದರೆ ಬುದ್ಧಿ ಮತ್ತು ಜೀವರೇ ಆಗಿರುತ್ತಾರೆಂದು ಅವರ ಸಮರ್ಥನೆ. ಇದು ಸರಿಯಿಲ್ಲ. 'ಸತ್ವಂ ಜೀವ ಇತಿ ಪ್ರೋಕ್ತಃ' ಇತ್ಯಾದಿ ಮಾತುಗಳ ಆಧಾರದಿಂದ ಜೀವನೇ ಸತ್ವಶಬ್ದದಿಂದ ಪ್ರತಿಪಾದ್ಯನು. ಕ್ಷೇತ್ರಜ್ಞಶಬ್ದದಿಂದ ಪರಮಾತ್ಮನೇ ಪ್ರತಿಪಾದ್ಯನೆನ್ನಲು 'ಅಗುಣಾನ್ವಿತಂ ಕ್ಷೇತ್ರಜ್ಞಮಾಹುಃ' ಇತ್ಯಾದಿ ಅನೇಕ ಪ್ರಮಾಣಗಳಿವೆ. ಈ ಕಾರಣದಿಂದ 'ದ್ವಾ ಸುಪರ್ಣಾ' ಎಂಬ ಶ್ರುತಿಯು ಜೀವಬ್ರಹ್ಮಭೇದಪ್ರತಿಪಾದಕವೇ ಆಗಿದೆ ಹೊರತು, ಬುದ್ಧಿಜೀವರ ಭೇದ ಪ್ರತಿಪಾದಕವಾಗಿಲ್ಲವೆಂದು ತಿಳಿಯಬೇಕು.

ಶಾಂಕರ ಭಾಷ್ಯ ವಿಮರ್ಶೆ

ಆದ್ವೈತಿಗಳು ನಾವು ಹೇಳುವ ವಾಕ್ಯವನ್ನೇ ಈ ಅಧಿಕರಣಕ್ಕೆ ವಿಷಯವೆನ್ನುತ್ತಾರೆ. ಆದರೆ ಪೂರ್ವಪಕ್ಷ ಹಾಗೂ ಸಿದ್ಧಾಂತ ಲಿಂಗಗಳಲ್ಲಿ ವ್ಯತ್ಯಾಸವಿದೆ. 'ಅಮೃತಸ್ಯೈಷ ಸೇತುಃ' ಎಂಬ ಶ್ರುತಿ ಅಮೃತಕ್ಕೆ ಸೇತುವಾಗಿರುವ ವ್ಯಕ್ತಿಯೇ ದ್ಯುಭ್ವಾದ್ಯಾಯತನನೆಂದು ಹೇಳುತ್ತಿದೆ. ಆದ್ದರಿಂದ ಅಮೃತ ಸ್ವರೂಪನಾದ ಬ್ರಹ್ಮನು ಅಮೃತಕ್ಕೆ ಸೇತುವಾಗಲು ಸಾಧ್ಯವಿಲ್ಲವೆಂದು ಪೂರ್ವಪಕ್ಷ ಮಾಡಿದ್ದಾರೆ. ಅಮೃತಸೇತುತ್ವವನ್ನು ಗೌಣವನ್ನಾಗಿ ವಿವಕ್ಷಿಸಿ ಮುಕ್ತರಿಗೆ ಆಶ್ರಯನಾದ್ದರಿಂದ ಬ್ರಹ್ಮನೇ ಅಮೃತಸೇತುವಾಗಿದ್ದಾನೆ. ಆದ್ದರಿಂದ ದ್ಯುಭ್ವಾದ್ಯಾಯತನನೂ ಸಹ ಅವನೇ ಆಗುತ್ತಾನೆಂದು ಸಿದ್ಧಾಂತ ಮಾಡಿದ್ದಾರೆ. ಅಥವಾ ಯಾರನ್ನು ತಿಳಿಯುವುದರಿಂದ ಮೋಕ್ಷವು ಉಂಟಾಗುತ್ತದೋ, ಅವನೇ ದ್ಯುಭ್ವಾದ್ಯಾಯತನನೆಂದು ಶ್ರುತಿಗೆ ಅರ್ಥೈಸಬೇಕೆಂದು ಮತ್ತೊಂದು ಬಗೆಯಲ್ಲಿಯೂ ವ್ಯಾಖ್ಯಾನಿಸುತ್ತಾರೆ.

ಇವರ ಈ ಅಧಿಕರಣ ಶರೀರವು ಅಯುಕ್ತವಾಗಿದೆ. ಶ್ರುತಿಯಲ್ಲಿ ಜಾಯಮಾನತ್ವಲಿಂಗವು ಕೇಳಿಸುತ್ತಿರುವುದರಿಂದ ಪ್ರಬಲವಾದ ಪೂರ್ವಪಕ್ಷಲಿಂಗವನ್ನು ಬಿಟ್ಟು ಅಪ್ರಧಾನವಾದ ಅಮೃತಸೇತುತ್ವವಿಲ್ಲವೆಂದು ಪೂರ್ವಪಕ್ಷ ಮಾಡುವುದು ಅಸಂಗತ. ಮತ್ತು ಅಮೃತಸೇತುತ್ವವನ್ನು ಬ್ರಹ್ಮನಲ್ಲಿ ಸಮರ್ಥಿಸಲು ಆವರಿಗೆ ಸಾಧ್ಯವೂ ಇಲ್ಲ. ಆದ್ವೈತಮತ ಪ್ರಕಾರ ಮೋಕ್ಷವು ಬ್ರಹ್ಮಸ್ವರೂಪವೇ ಆಗಿದೆ. ಹೀಗಿರುವಾಗ ಬ್ರಹ್ಮ ಮೋಕ್ಷಕ್ಕೆ ಆಶ್ರಯನಾಗಲು ಹೇಗೆ ಸಾಧ್ಯ? ಆದ್ದರಿಂದ ಗೌಣವಾದ ಅಮೃತಸೇತುತ್ವವನ್ನು ಆವರಿಂದ ಸಮರ್ಥಿಸಲಾಗದು. ಮತ್ತು ದ್ಯುಭ್ವಾದ್ಯಾಯತನತ್ವವನ್ನು ಬ್ರಹ್ಮನಲ್ಲಿ ಸಮರ್ಥಿಸಲು ಸಾಧ್ಯವಿಲ್ಲ. ಏಕೆಂದರೆ ಮೂರನೆಯ ಪಾದವು ಆದ್ವೈತಮತ ಪ್ರಕಾರ ನಿರ್ವಿಶೇಷ ಬ್ರಹ್ಮಪ್ರತಿಪಾದಕವಾಗಿದೆ. ಆದ್ದರಿಂದ ನಿರ್ವಿಶೇಷ ಬ್ರಹ್ಮನಲ್ಲಿ ದ್ಯುಭ್ವಾದ್ಯಾಯತನತ್ವವೆಂಬ ಧರ್ಮವನ್ನು ಸಮರ್ಥಿಸುವುದು ಹೇಗೆ ಸಮಂಜಸವಾಗುತ್ತದೆ?

ಹಾಗೂ 'ಸ್ವಶಬ್ದಾತ್' ಎಂಬುದಕ್ಕೆ ಬ್ರಹ್ಮನಲ್ಲಿ ಆತ್ಮಶಬ್ದವಿರುವುದರಿಂದ ಎಂದು ವ್ಯಾಖ್ಯಾನಿಸುತ್ತಾರೆ. ನಿರ್ವಿಶೇಷ ಬ್ರಹ್ಮನಲ್ಲಿ ಆತ್ಮವಾಚ್ಯತ್ವವೂ ಸಹ ಇರುವುದಿಲ್ಲ. ಈ ಎಲ್ಲಾ ಕಾರಣಗಳಿಂದ ಆದ್ವೈತಿಗಳ ವ್ಯಾಖ್ಯಾನವು ಯಾರಿಗೂ ಸಹ ಮನದಟ್ಟಾಗುವುದಿಲ್ಲ. ಪ್ರತಿಯೊಂದು ಅಧಿಕರಣಗಳಂತೆ ಈ ಅಧಿಕರಣದಲ್ಲಿಯೂ 'ಭೇದವ್ಯಪದೇಶಾತ್' ಎಂಬ ಸೂತ್ರದಿಂದ, 'ಮುಕ್ತೋಪಸೃಪ್ಯವ್ಯಪದೇಶಾತ್' ಎಂಬ ಸೂತ್ರದಿಂದ ಆದ್ವೈತಿಗಳು ದ್ವೈತವನ್ನೇ ಸ್ಥಾಪನೆ ಮಾಡಿದ್ದಾರೆ.

ಅದ್ವೈತದ ಸಾಧನೆಗೆ ಇದೂ ಸಹ ಅವರಿಗೆ ಅನುಕೂಲವಾಗುವುದಿಲ್ಲ.

ರಾಮಾನುಜ ಮತ ವಿಮರ್ಶೆ

ರಾಮಾನುಜರೂ ಸಹ 'ಯಸ್ಮಿನ್ದ್ಯೌಃ' ಎಂಬುದನ್ನೇ ವಿಷಯವಾಕ್ಯವೆನ್ನುತ್ತಾರೆ. ಆದರೆ ಈ ಅಧಿಕರಣದಲ್ಲಿ ಜೀವನು ಮಾತ್ರ ಪೂರ್ವಪಕ್ಷಕ್ಕೆ ವಿಷಯನು. ಪ್ರಕೃತಿ ಮೊದಲಾದವುಗಳು ಪೂರ್ವಪಕ್ಷಕ್ಕೆ ವಿಷಯವಲ್ಲವೆನ್ನುತ್ತಾರೆ. ಏಕೆಂದರೆ 'ಗೌಣಶ್ಚೇನ್ನಾತ್ಮಶಬ್ದಾತ್' ಎಂಬ ಈಕ್ಷತ್ಯಧಿಕರಣ ಸೂತ್ರದಲ್ಲಿ ಆತ್ಮಶಬ್ದವಾಚ್ಯತ್ವವನ್ನು ಪ್ರಕೃತಿಗೆ ನಿರಾಕರಣ ಮಾಡಿದ್ದರಿಂದ ಪುನಃ ಪೂರ್ವಪಕ್ಷ ಮಾಡಲು ಸಾಧ್ಯವಿಲ್ಲ. 'ನಾನುಮಾನಮ್' ಎಂಬ ಸೂತ್ರದಲ್ಲಿ ಪ್ರಕೃತಿಯನ್ನು ನಿರಾಕರಣೆ ಮಾಡಿದ್ದು ಕೇವಲ ದೃಷ್ಟಾಂತಕ್ಕೋಸ್ಕರ. ಹೇಗೆ ಪ್ರಕೃತಿ ಪ್ರಾಪಕವಾದ ಶಬ್ದಗಳು ಇಲ್ಲದ ಕಾರಣ ಪ್ರಕೃತಿಯು ಲೋಕಾಧಾರವಾಗುವುದಿಲ್ಲವೋ ಅದರಂತೆ ಜೀವನೂ ಸಹ ಲೋಕಾಧಾರನಾಗುವುದಿಲ್ಲವೆಂದು ಅದರ ಅಭಿಪ್ರಾಯ. 'ನಾನುಮಾನಮ್ ಅತಚ್ಛಬ್ದಾತ್', ಪ್ರಾಣಭೃಚ್ಚ' ಎಂಬುದನ್ನು ಒಂದೇ ಸೂತ್ರವೆನ್ನುವುದು ಇವರ ಮತ್ತೊಂದು ಅಭಿಪ್ರಾಯ.

ಇವರ ಅಧಿಕರಣಶರೀರವೂ ಸಹ ತಪ್ಪಾಗಿದೆ. ಪ್ರಕೃತಿಯು ಪೂರ್ವಪಕ್ಷಕ್ಕೆ ವಿಷಯವಾಗದಿರಬಹುದು. ಆದರೆ ರುದ್ರ ಹಾಗೂ ವಾಯುಗಳು ಪೂರ್ವಪಕ್ಷಕ್ಕೆ ವಿಷಯವಾಗಬಹುದಲ್ಲವೇ? ಇದಕ್ಕೆ ಅವರಲ್ಲಿ ಉತ್ತರವಿಲ್ಲ. ಮತ್ತು ಆತ್ಮಶಬ್ದದ ಬಲದಿಂದ ಪ್ರಕೃತಿಯು ಪೂರ್ವಪಕ್ಷಕ್ಕೆ ವಿಷಯವಾಗುವುದಿಲ್ಲವೆಂದಮೇಲೆ ಅದೇ ಆನಂದಮಯಾಧಿಕರಣದಲ್ಲಿ ಮುಕ್ತಪ್ರಾಪ್ಯತ್ವಧರ್ಮವನ್ನು ಜೀವನಲ್ಲಿ ನಿರಾಕರಿಸಲಾಗಿದೆ. ಪ್ರಕೃತಿಯನ್ನು ಪೂರ್ವಪಕ್ಷದಲ್ಲಿ ಸೇರಿಸದೇ ಬಿಟ್ಟರೆ, ಜೀವನನ್ನೂ ಸಹ ಪೂರ್ವಪಕ್ಷದಲ್ಲಿ ಸೇರಿಸಬಾರದು. ಆದ್ದರಿಂದ ಈ ಅಧಿಕರಣದ ಪೂರ್ವಪಕ್ಷಕ್ಕೆ ವಿಷಯವೇ ಇಲ್ಲದಂತಾಗುತ್ತದೆ. ಜಾಯಮಾನತ್ವ ಮೊದಲಾದ ಜೀವವಿಷಯಕವಾದ ಪೂರ್ವಪಕ್ಷಲಿಂಗಗಳಿಂದ ಮುಕ್ತೋಪಸೃಪ್ಯತ್ವವನ್ನು ಗೌಣವನ್ನಾಗಿ ವ್ಯಾಖ್ಯಾನಿಸಬೇಕೆನ್ನುವುದಾದರೆ ಪ್ರಕೃತಿ-ವಿಷಯದಲ್ಲಿರುವ ನಿರವಕಾಶಲಿಂಗಗಳಿಂದಲೇ ಆತ್ಮಶಬ್ದವನ್ನೂ ಸಹ ಗೌಣವನ್ನಾಗಿ ವ್ಯಾಖ್ಯಾನಿಸಬೇಕಾಗುತ್ತದೆ. ಆದ್ದರಿಂದ ಪ್ರಕೃತಿಯು ಪೂರ್ವಪಕ್ಷಕ್ಕೆ ವಿಷಯವಲ್ಲ. ಜೀವನು ಮಾತ್ರವೆಂಬ ವಿಷಯ ಎಂಬ ವಿಚಾರದಲ್ಲಿ ಅರ್ಥವಿಲ್ಲ.

ಆದೃಶ್ಯತ್ವಾದ್ಯಧಿಕರಣದಿಂದ ಈ ಅಧಿಕರಣಕ್ಕೆ ಪುನರುಕ್ತಿ ಬರುತ್ತದೆಂಬ ದೋಷ. ಮೂವರಿಗೂ ಸಮಾನ. ಏಕೆಂದರೆ 'ಯತ್ತದದ್ರೇಶ್ಯಮ್' ಎಂಬ ವಾಕ್ಯವು ಯಾವ ಪ್ರಕರಣದಲ್ಲಿದೆಯೋ, ಅದೇ ಪ್ರಕರಣದಲ್ಲಿ 'ಯಸ್ಮಿನ್ದ್ಯೌಃ' ಎಂಬ ವಾಕ್ಯವೂ ಸಹ ಇರುತ್ತದೆ. ಆದೃಶ್ಯತ್ವಾದ್ಯಧಿಕರಣದಿಂದಲೇ ಲೋಕಾಧಾರತ್ವವನ್ನು ವಿಷ್ಣುವಿನಲ್ಲಿ ಸಮರ್ಥಿಸಿದ್ದರಿಂದ ಪುನಃ ಅದನ್ನೇ ಇಲ್ಲಿ ಸಮರ್ಥಿಸಿದರೆ ಪುನರುಕ್ತಿ ಬರುತ್ತದೆ. ಈ ಶಂಕೆಗೆ ಅದ್ವೈತಿಗಳು 'ಯಸ್ಮಿನ್ದ್ಯೌಃ' ಎಂಬ ವಾಕ್ಯವು ಪ್ರಕರಣದಲ್ಲಿ ಇಲ್ಲವೆಂದು ತಿಳಿದುಕೊಂಡು ಪೂರ್ವಪಕ್ಷದಲ್ಲಿ ಉತ್ತರಿಸುತ್ತಾರೆ. ಇದು ತಪ್ಪು. ಜಾಯಮಾನತ್ವ ಮೊದಲಾದ ಲಿಂಗಗಳಿಂದ ಸಂಪೂರ್ಣಪ್ರಕರಣವೇ ಜೀವಪರವಾಗುತ್ತದೆಂಬ ಅಧಿಕಾಶಂಕೆಯನ್ನು ಮಾಡಲು ಬರುವಾಗ ಆ ವಾಕ್ಯವನ್ನು ಇಲ್ಲವೆಂದು ತಿಳಿದುಕೊಳ್ಳಬೇಕೆಂಬ ಉತ್ತರವು ತಪ್ಪಾಗುತ್ತದೆ. ರಾಮಾನುಜರು 'ಯತ್ತದದ್ರೇಶ್ಯಮ್' ಎಂಬುದು ಬ್ರಹ್ಮಪರವಾದರೂ ಸಹ ಜೀವವಿಷಯಕವಾದ ಇಂದ್ರಿಯಾಧಾರತ್ವ ಮೊದಲಾದ ಲಿಂಗಗಳು ಕೇಳಿಸುತ್ತಿವೆ. ಆದ್ದರಿಂದ 'ಯಸ್ಮಿನ್ದ್ಯೌಃ' ಎಂಬ ಪ್ರಕರಣವೇ ಬೇರೆಯಾಗುತ್ತದೆ. ಪ್ರಕರಣವಿಚ್ಛೇದಪ್ರಾಪಕವು ಇದ್ದಾಗ ಪ್ರಕರಣಭೇದವನ್ನು ಒಪ್ಪುವುದು ಅನಿವಾರ್ಯವೆಂದು ಉತ್ತರಿಸುತ್ತಾರೆ. ಇದೂ ಸಹ ತಪ್ಪು. ಒಂದೇ ಪ್ರಕರಣವೆಂದು ವಿವಕ್ಷಿಸಿದಾಗಲೂ ಪೂರ್ವಪಕ್ಷವನ್ನು ಮಾಡಲು ಬರುವಾಗ ಭಿನ್ನಪ್ರಕರಣವೆಂದು ಹೇಳುವುದು ಸರಿಯಲ್ಲ. ಮತ್ತು ಅನುಭವವಿರುದ್ಧವಾದ ಲೋಕಾಧಾರತ್ವವನ್ನು ಜೀವನಲ್ಲಿ ಆಕ್ಷೇಪಿಸುವ ರಾಮಾನುಜರು ಸುಲಭವಾಗಿ ಆಕ್ಷೇಪಿಸಬಹುದಾದ ಆದೃಶ್ಯತ್ವವನ್ನೇಕೆ ಬಿಡುತ್ತಾರೆಂದು

ಅರ್ಥವಾಗದ ಸಂಗತಿ. ಆದ್ದರಿಂದ ಅದೃಶ್ಯತ್ವಾಧಿಕರಣದ ಮೇಲೆ ಬರುವ ಹೆಚ್ಚಿನ ಆಶಂಕೆಯ ಪರಿಹಾರಕ್ಕೋಸ್ಕರ ಈ ಅಧಿಕರಣವು ಹೊರಟಿರುತ್ತದೆಂಬ ಭಾಷ್ಯ ಹಾಗೂ ಟೀಕೆಗಳಲ್ಲಿರುವ ಮಾಡಿರುವ ಸಮರ್ಥನೆಯು ಅತ್ಯಂತ ಸಂಗತವಾಗಿದೆ.

ಭೂಮಾಧಿಕರಣ

'ಭೂಮಾ' ಶಬ್ದವು ಧರ್ಮಿಪರ ಮತ್ತು ಉಭಯತ್ರಪ್ರಸಿದ್ಧ

'ಭೂಮಾ' ಎಂಬ ನಾಮಾತ್ಮಕ ಶಬ್ದವನ್ನು ಈ ಅಧಿಕರಣದಲ್ಲಿ ಸಮನ್ವಯ ಮಾಡುತ್ತಿದ್ದಾರೆ. 'ಪ್ರಾಣೋ ವಾ ಆಶಾಯಾ ಭೂಯಾನ್' ಎಂಬುದಾಗಿ ಛಾಂದೋಗ್ಯದಲ್ಲಿ ಪ್ರಾಣನನ್ನು 'ಭೂಮಾ' ಎನ್ನಲಾಗಿದೆ. 'ವಿಷ್ಣುರ್ವೈ ದೇವೇಭ್ಯೋ ಭೂಯಾನ್' ಎಂಬುದಾಗಿ ವಿಷ್ಣುವನ್ನೂ ಸಹ 'ಭೂಮಾ' ಎನ್ನಲಾಗಿದೆ. ಆದ್ದರಿಂದ ಪ್ರಾಣ ಹಾಗೂ ವಿಷ್ಣು ಇಬ್ಬರಲ್ಲಿಯೂ ಪ್ರಸಿದ್ಧವಾದ 'ಭೂಮಾ' ಎಂಬ ಶಬ್ದವು ಉಭಯತ್ರಪ್ರಸಿದ್ಧವಾಯಿತು.

ವಸ್ತುತಃ 'ಬಹು' ಎಂಬ ಶಬ್ದದ ಮೇಲೆ 'ಇಮನಿಚ್' ಪ್ರತ್ಯಯ ಹಾಗೂ ಭೂ ಆದೇಶಗಳು ಬಂದು 'ಭೂಮಾ' ಎಂಬ ಶಬ್ದವು ನಿಷ್ಪನ್ನವಾಗಿದೆ. ಆದ್ದರಿಂದ ಸಂಖ್ಯಾವಾಚಕವಾದ 'ಭೂಮಾ' ಎಂಬ ಶಬ್ದವು ಧರ್ಮವಾಚಕವಾಗುವುದರಿಂದ ಲಿಂಗಾತ್ಮಕವಾಗಿದೆಯೆಂದನಿಸುತ್ತದೆ. ಆದರೆ 'ಯೋ ವೈ ಭೂಮಾ ತದಮೃತಮ್' ಇತ್ಯಾದಿಯಾಗಿ ಶ್ರೇಷ್ಠನೆಂಬರ್ಥದಲ್ಲಿ ಉಪನಿಷತ್ತು 'ಭೂಮಾ' ಶಬ್ದವನ್ನು ಪ್ರಯೋಗ ಮಾಡುತ್ತಿದೆ. ಮತ್ತು 'ಮಾಗ್ಯಾವ ನಾಮ್ನೋ ಭೂಯಸೀ' ಇತ್ಯಾದಿ ಸ್ಥಳಗಳಲ್ಲಿ ಕೇಳಿಸುತ್ತಿರುವ 'ಭೂಮಾ' ಎಂಬ ಶಬ್ದಕ್ಕೆ ಸಮಾನಾರ್ಥಕವಾದ 'ಭೂಯಸ್' ಶಬ್ದವನ್ನು ಸಂಖ್ಯಾರ್ಥದಲ್ಲಿ ವಿವಕ್ಷಿಸಲು ಸಾಧ್ಯವಿಲ್ಲ. ಆದ್ದರಿಂದ ಶ್ರೇಷ್ಠನೆಂಬ ಧರ್ಮವಾಚಕತ್ವವನ್ನೇ 'ಭೂಮಾ' ಎಂಬ ಶಬ್ದಕ್ಕೆ ಒಪ್ಪಬೇಕು.

ಇಂತಹ 'ಭೂಮಾ' ಎಂಬ ಶಬ್ದವು ಉಭಯತ್ರಪ್ರಸಿದ್ಧವಾಗಿದೆ. 'ಪ್ರಾಣೋ ವಾ ಆಶಾಯಾ ಭೂಯಾನ್' ಎಂಬ ಛಾಂದೋಗ್ಯೋಪನಿಷತ್ತಿನ ಉಪಕ್ರಮದಲ್ಲಿ ಪ್ರಾಣನಲ್ಲಿ ಪ್ರಸಿದ್ಧವಾದ 'ಭೂಮಾ' ಎಂಬ ಶಬ್ದವು 'ವಿಷ್ಣುರ್ವೈ ದೇವೇಭ್ಯೋ ಭೂಯಾನ್' ಎಂಬ ಸಮಾಖ್ಯಾಪ್ರಮಾಣದಲ್ಲಿ ವಿಷ್ಣುವಿನಲ್ಲಿಯೂ ಪ್ರಸಿದ್ಧವಾಗಿದೆ. ಉಪಕ್ರಮ ಪ್ರಮಾಣಕ್ಕಿಂತ ಸಮಾಖ್ಯಾಪ್ರಮಾಣವು ದುರ್ಬಲವಾಗಿದ್ದರೂ ಕೂಡ ಇಲ್ಲಿರುವ ಸಮಾಖ್ಯಾಪ್ರಮಾಣವು ಅಭ್ಯಾಸ ಹಾಗೂ ಉಪಪತ್ತಿಗಳಿಂದ ಸಹಿತವಾಗಿದೆ. ಆದ್ದರಿಂದ ಉಪಕ್ರಮದಿಂದ ಸಮಾನಬಲವುಳ್ಳದ್ದೇ ಆಗಿದೆ. ಹೀಗೆ ಸಮಬಲವಾದ ಉಪಕ್ರಮ ಹಾಗೂ ಸಮಾಖ್ಯಾಪ್ರಮಾಣಗಳು ಪ್ರಾಣ ಹಾಗೂ ವಿಷ್ಣುವಿನಲ್ಲಿ 'ಭೂಮಾ' ಶಬ್ದವನ್ನು ಪ್ರಯೋಗಿಸುತ್ತಿರುವ ಕಾರಣ ಉಭಯತ್ರಪ್ರಸಿದ್ಧವಾಗಿದೆಯೆಂದು ತಿಳಿಯಬೇಕು. ಅಥವಾ ಉಪಕ್ರಮ ಹಾಗೂ ಸಮಾಖ್ಯಾಪ್ರಮಾಣಗಳಲ್ಲಿ ಯಾರಿಗೆ ಪ್ರಾಬಲ್ಯ ಹಾಗೂ ದೌರ್ಬಲ್ಯ ವಿಚಾರವು ಬಂದಿರುವುದಿಲ್ಲವೋ, ಅಂತಹ ವ್ಯಕ್ತಿಯ ವಿಷಯದಲ್ಲಿ 'ಭೂಮಾ' ಎಂಬ ಶಬ್ದವು ಉಭಯಸಾಧಾರಣವಾಗಿದೆಯೆಂದು ತಿಳಿಯಬಹುದು.

ಭೂಮಾಧಿಕರಣಕ್ಕೆ ಪಾದ ಸಂಗತಿ

ಅಥವಾ 'ಅತ ಏವ ಪ್ರಾಣಃ' ಎಂಬ ಸೂತ್ರದಲ್ಲಿಯೇ ಪ್ರಾಣಶಬ್ದವನ್ನು ವಿಷ್ಣುಪರವೆಂದು ನಿರ್ಣಯಿಸಿದ್ದಾಗಿದೆ. ಆದ್ದರಿಂದ ಉಪಕ್ರಮದಲ್ಲಿರುವ ಪ್ರಾಣಶಬ್ದವು ಸಾವಕಾಶವಾಯಿತು. ಸಮಾಖ್ಯಾಪ್ರಮಾಣದಲ್ಲಿರುವ ವಿಷ್ಣುಶಬ್ದವು

ವ್ಯಾಪನಲ್ಲಿ ಸಮನ್ವಯವಾಗದ ಕಾರಣ ನಿರವಕಾಶವಾಗಿದೆ. ವಾಸ್ತವಿಕವಾಗಿ ಉಪಕ್ರಮವು ಸಮಾಖ್ಯಾಪ್ರಮಾಣಕ್ಕಿಂತ ಬಲಿಷ್ಠವಾಗಿದ್ದರೂ ಸಾವಕಾಶವಾಗಿರುವುದರಿಂದ ಸಮಾಖ್ಯಾಪ್ರಮಾಣಕ್ಕೆ ಹಾಗೂ ಉಪಕ್ರಮ ಪ್ರಮಾಣಕ್ಕೆ ಸಮಾನ ಬಲವನ್ನು ಹೇಳಬಹುದು.

ಈ ಅಧಿಕರಣದಲ್ಲಿ 'ಭೂಮಾ' ಎಂಬ ಶಬ್ದವು ಉಭಯಸಾಧಾರಣವಾಗಿದೆಯೆನ್ನಲು ಉಪಕ್ರಮ ವಾಕ್ಯ ಹಾಗೂ ಸಮಾಖ್ಯಾಪ್ರಮಾಣಗಳನ್ನು ಆಧರಿಸುತ್ತಿದ್ದಾರೆ. ಆದರೆ 'ಪ್ರಾಣೋ ವಾವ ಸರ್ವೇಭ್ಯೋ ಭೂಯಾನ್' ಎಂಬುದಾಗಿ ಪ್ರಾಣನ ವಿಷಯದಲ್ಲಿಯೂ ಸಮಾಖ್ಯಾಪ್ರಮಾಣವನ್ನೇ ಹೇಳಬಹುದು. ಹೀಗೆ ಹೇಳಿದಾಗ ಪೂರ್ವಪಕ್ಷ ಹಾಗೂ ಸಿದ್ಧಾಂತ ಪಕ್ಷಗಳಲ್ಲಿ ಸಮಬಲವಾದ ಪ್ರಮಾಣಗಳನ್ನು ಹೇಳಿದಂತಾಗುತ್ತದೆ. ಆದರೆ 'ಪ್ರಾಣೋ ವಾವ ಸರ್ವೇಭ್ಯೋ ಭೂಯಾನ್' ಎಂಬ ಸಮಾಖ್ಯಾಪ್ರಮಾಣದಲ್ಲಿ ಸಕಲ ದೇವತೆಗಳಿಗಿಂತಲೂ ಪ್ರಾಣನು ಉತ್ತಮನೆಂದು ಸ್ಪಷ್ಟವಾಗಿ ತಿಳಿಯುವುದಿಲ್ಲ. ಕೇವಲ ಉಪಾಸಕರಿಗಿಂತ ಉತ್ತಮನಾಗಿದ್ದಾನೆಂದಷ್ಟೇ ತಿಳಿಯುತ್ತದೆ. ಈ ಕಾರಣಕ್ಕಾಗಿ ಉಪಕ್ರಮಪ್ರಮಾಣವನ್ನೇ ಆಧರಿಸಿದ್ದಾರೆ.

ಹಿಂದಿನ ದ್ಯುಭ್ವಾದ್ಯಧಿಕರಣದಲ್ಲಿಯೂ ಉಪಕ್ರಮಪ್ರಮಾಣವನ್ನೇ ಹೇಳಬಹುದಿತ್ತಲ್ಲವೇ? ಎಂದು ಪ್ರಶ್ನಿಸಬಾರದು. ಅಲ್ಲಿರುದ್ಯಾದಿ ಪ್ರಾಪಕವಾದ ಉಪಕ್ರಮಪ್ರಮಾಣವು ಇಲ್ಲದ ಕಾರಣದಿಂದಲೇ ಪೂರ್ವಪಕ್ಷ ಹಾಗೂ ಸಿದ್ಧಾಂತ ಪಕ್ಷಗಳಲ್ಲಿ ಸಮಬಲವಾದ ಸಮಾಖ್ಯಾಪ್ರಮಾಣಗಳನ್ನೇ ಆಶ್ರಯಿಸಲಾಗಿದೆ.

ಉಪಕ್ರಮ ಹಾಗೂ ಸಮಾಖ್ಯಾಪ್ರಮಾಣಗಳಿಂದ 'ಭೂಮಾ' ಎಂಬ ಶಬ್ದವು ಉಭಯ ಸಾಧಾರಣವಾಗಿದೆಯೆಂದು ಹೇಳುವುದಾದರೆ ಸರ್ವಗತತ್ವಾಧಿಕರಣದಲ್ಲಿಯೂ 'ತಸ್ಯೈತಸ್ಯಾವಾದಿತ್ಯೋ ರಸಃ' ಎಂದು ಆದಿತ್ಯನಲ್ಲಿ ಶ್ರುತಿರೂಪ ಉಪಕ್ರಮಪ್ರಮಾಣವಿದೆ. ಬ್ರಹ್ಮನ ವಿಷಯದಲ್ಲಿ ಸಮಾಖ್ಯಾಪ್ರಮಾಣವಿದೆ. ಹಾಗಾಗಿ 'ಭೂಮಾ' ಎಂಬ ಶಬ್ದದಂತೆ ಸರ್ವಗತತ್ವವೂ ಸಹ ಉಭಯತ್ರಪ್ರಸಿದ್ಧವಾಗಬೇಕಲ್ಲವೇ? ಎಂಬುದು ಮುಂದಿನ ಪ್ರಶ್ನೆ. ಈ ಪ್ರಶ್ನೆಗೆ ಹೀಗೆ ಉತ್ತರಿಸಬೇಕು. ಸರ್ವಗತತ್ವಾಧಿಕರಣದಲ್ಲಿ ಯಾವುದೇ ಶ್ರುತಿಯಲ್ಲಿಯೂ ಸಹ ಆಲ್ಪೌಕಸ್ತ್ವವೆಂಬ ಸರ್ವಭೂತಗತತ್ವವನ್ನು ಪೂರ್ವಪಕ್ಷಿಯು ಬ್ರಹ್ಮನಲ್ಲಿ ಒಪ್ಪಿರುವುದಿಲ್ಲ. ಆದ್ದರಿಂದ ಸಮಾಖ್ಯಾಪ್ರಮಾಣವನ್ನೇ ಅಲ್ಲಿ ಹೇಳಲುಸಾಧ್ಯವಿಲ್ಲ. ಆದರೆಪ್ರಕೃತಈಅಧಿಕರಣದಪೂರ್ವಪಕ್ಷಿಯುಸಮಾಖ್ಯಾಶ್ರುತಿಯುವಿಷ್ಣುಪರವಾಗಬಹುದೆಂದು ಒಪ್ಪಿಕೊಂಡು ಉಪಕ್ರಮದಲ್ಲಿರುವ 'ಭೂಮಾ' ಎಂಬ ಶಬ್ದವನ್ನಷ್ಟೇ ವಿಷ್ಣುಪರವಲ್ಲವೆಂದು ಆಕ್ಷೇಪಿಸುತ್ತಿದ್ದಾನೆ. ಹೀಗೆ ಎರಡೂ ಅಧಿಕರಣಗಳ ವ್ಯತ್ಯಾಸವನ್ನು ಗಮನಿಸಬೇಕು.

'ಯೋ ವೈ ಭೂಮಾ ತತ್ಸುಖಮ್' ಇತ್ಯಾದಿಯಾಗಿ ಭೂಮರೂಪನಾದ ವಾಯು, ಆನಂದಮಯನಾಗದಿದ್ದರೆ ಇಲ್ಲಿ ಭೂಮನಿಗೆ ಹೇಳಲ್ಪಟ್ಟ ಸುಖವೂ ಸಹ ಕೂಡುವುದಿಲ್ಲ. ಆದ್ದರಿಂದ ಭೂಮನೆನಿಸಿದ ಮುಖ್ಯಪ್ರಾಣನೇ ಆನಂದಮಯನಾಗುತ್ತಾನೆ. ಹೀಗೆ 'ಭೂಮಾ' ಎಂಬ ಶಬ್ದವು ವಿಷ್ಣು ಹಾಗೂ ವಾಯು ಇಬ್ಬರಲ್ಲಿಯೂ ಸಾಧಾರಣವಾಗಿರುವುದರಿಂದ ಪಾದಸಂಗತಿಯು ಯುಕ್ತವಾಗಿದೆ.

ಹಿಂದಿನ ಅಧಿಕರಣದಿಂದ ಅವಾಂತರಸಂಗತಿ ವಿಚಾರ

ಭೂಮನಲ್ಲಿ ಸರ್ವಗತತ್ವ, ಆತ್ಮಕ್ರೀಡಾತ್ವ, ಆಮೃತತ್ವ ಇವೇ ಮೊದಲಾದ ಧರ್ಮಗಳು ಕೇಳಿಸುತ್ತಿವೆ. ದ್ಯುಭ್ವಾದ್ಯಾಯತನನಲ್ಲಿಯೂ ಕೂಡ ಇವೇ ಧರ್ಮಗಳು ಕೇಳಿಸುತ್ತಿವೆ. ಆದ್ದರಿಂದ ಭೂಮಾ ಹಾಗೂ ದ್ಯುಭ್ವಾದ್ಯಾಯತನರು ಒಬ್ಬನೇ ಎಂದು ತಿಳಿಯುತ್ತದೆ. ಒಂದು ವೇಳೆ ಈಗಾಗಲೇ ಹೇಳಿದಂತೆ ಭೂಮನು ಮುಖ್ಯಪ್ರಾಣನಾದರೆ ದ್ಯುಭ್ವಾದ್ಯಾಯತನನೂ ಸಹ ಅವನೇ ಆಗುತ್ತಾನೆ. ಹೀಗಿರುವಾಗ ದ್ಯುಭ್ವಾದ್ಯಾಯತನನು ವಿಷ್ಣುವೆಂದು ಹಿಂದಿನ ಅಧಿಕರಣದಲ್ಲಿ ಹೇಗೆ ನಿರ್ಣಯಿಸಿದಿರಿ ? ಎಂದು ಆಕ್ಷೇಪಿಕೀ ಸಂಗತಿಯನ್ನು ತಿಳಿಯಬೇಕು.

ಟೀಕೆಯಲ್ಲಿ ಆನಂದಮಯಾಧಿಕರಣದಿಂದ ಸಂಗತಿಯನ್ನು ತೋರಿಸಿರುತ್ತಾರೆ. ಯಾವ ನ್ಯಾಯವನ್ನು ವಿವಕ್ಷಿಸಿ ಆನಂದಮಯಾಧಿಕರಣದಿಂದ ಸಂಗತಿಯನ್ನು ತೋರಿಸಿದ್ದಾರೋ ಅದೇ ನ್ಯಾಯವು ಹಿಂದಿನ ಅಧಿಕರಣದಿಂದ ತೋರಿಸುವ ಸಂಗತಿಯಲ್ಲಿಯೂ ಇರುವುದರಿಂದ ಟೀಕೆಯಿಂದಲೇ ಪೂರ್ವಾಧಿಕರಣದ ಸಂಗತಿಯನ್ನು ಸೂಚಿಸಿದ್ದಾರೆ.

ಅಧಿಕರಣದ ಸಂಶಯ ಪರಂಪರೆ

ಸಿದ್ಧಾಂತ ಹಾಗೂ ಪೂರ್ವಪಕ್ಷಗಳ ಫಲಿತಾಂಶವನ್ನು ಹೀಗೆ ತಿಳಿಯಬೇಕು - ಒಂದು ವೇಳೆ ಪ್ರಾಣನಲ್ಲಿ ಶ್ರುತವಾದ ಉತ್ಕ್ರಮಣಲಿಂಗವು ಮುಂದೆ ಹೇಳುವ ಪ್ರಕಾರ ಸರ್ವಗತನಾದ ಬ್ರಹ್ಮನಲ್ಲಿ ಅಯುಕ್ತವಾದರೆ ಉಪಕ್ರಮದಲ್ಲಿ ಶ್ರುತನಾದ ಪ್ರಾಣನು ವಾಯುವೇ ಆಗುತ್ತಾನೆ. ಅಂತಹ ವಾಯುವಿಗಿಂತ ಬ್ರಹ್ಮನು ಶ್ರೇಷ್ಠನೆಂದು ಸಿದ್ಧಾಂತಿಯು ಒಪ್ಪಿರುವುದರಿಂದ ಪ್ರಶ್ನ ಹಾಗೂ ಉತ್ತರಗಳಿಂದ ಪ್ರಾಣನಿಗಿಂತ ಉತ್ತಮತ್ವವನ್ನು ಬ್ರಹ್ಮನಿಗೆ ಹೇಳಬೇಕು. ಆದರೆ ಹಾಗೆ ಉಪನಿಷತ್ತಿನಲ್ಲಿ ಹೇಳಿರುವುದಿಲ್ಲ. ಹೀಗೆ ಹೇಳದಿರುವಿಕೆಯೇ ಮುಖ್ಯಪ್ರಾಣನಿಗೆ ಪೂರ್ಣಸುಖತ್ವವನ್ನು ಹಾಗೂ ಭೂಮತ್ವವನ್ನು ಹೇಳಬೇಕೆಂಬುದಕ್ಕೆ ಗಮಕ ಎಂದು ಪೂರ್ವಪಕ್ಷಕಾರರ ಆಶಯ.

ಒಂದು ವೇಳೆ ಭಗವಂತನ ಅನೇಕ ರೂಪಗಳ ಭೇದದಿಂದ ತನ್ನಿಂದಲೇ ತನಗೆ ಭೂಯಸ್ತ್ವವನ್ನು ಹೇಳಿದ್ದು ಯುಕ್ತವಾಗುವುದಾದರೆ ಪ್ರಾಣನೂ ಸಹ ಬ್ರಹ್ಮನೇ ಆಗುತ್ತಾನೆ. ಆವಾಗ ತನ್ನಿಂದಲೇ ತನಗೆ ಉತ್ತಮತ್ವವು ಬರುವುದಿಲ್ಲವಾದ್ದರಿಂದ ಭೂಯಸ್ತ್ವದ ಅನುಕ್ತಿಯು ಯುಕ್ತವಾಗುತ್ತದೆ. ಆದ್ದರಿಂದ ಪೂರ್ಣಸುಖತ್ವ ಹಾಗೂ ಭೂಮತ್ವಗಳೆರಡೂ ವಿಷ್ಣುವಿನಲ್ಲೇ ಬರುತ್ತದೆಂಬುದು ಸಿದ್ಧಾಂತದ ಉದ್ದೇಶ.

ಮುಖ್ಯಪ್ರಾಣನೇ ಭೂಮನು (ಪ್ರಥಮ ಪೂರ್ವಪಕ್ಷ)

ಮುಖ್ಯಪ್ರಾಣನೇ ಭೂಮನಾಗಿದ್ದಾನೆ. 'ಪ್ರಾಣೋ ವಾ ಆಶಾಯಾ ಭೂಯಾನ್' ಎಂಬ ಉಪಕ್ರಮ ಪ್ರಮಾಣವೇ ಈ ವಿಷಯದಲ್ಲಿ ಆಧಾರವಾಗಿದೆ. ಪ್ರಾಣ ಹಾಗೂ ಭೂಮಾ ಇಬ್ಬರಿಗೂ ಭೇದವನ್ನು ಹೇಳಬಾರದು. ಏಕೆಂದರೆ ಹಾಗೇನಾದರೂ ಭೇದವಿದ್ದಿದ್ದರೆ ಪ್ರಾಣನಿಗಿಂತ ಭೂಮನನ್ನು ಉತ್ತಮನೆಂದು ಹೇಳಬೇಕಿತ್ತು. ಆದರೆ ಹಾಗೆ ಹೇಳಿರುವುದಿಲ್ಲ. ಅಥವಾ ಪ್ರಾಣನಿಗಿಂತ ಉತ್ತಮನೊಬ್ಬ ಇದ್ದಾನೆಂಬ ಪ್ರಶ್ನೆಯನ್ನೂ ಸಹ ಮಾಡಿರುವುದಿಲ್ಲ. ಆದ್ದರಿಂದ ಮುಖ್ಯಪ್ರಾಣನೇ ಭೂಮನಾಗಿದ್ದಾನೆಂದು ಸ್ಪಷ್ಟವಾಗುತ್ತದೆ. ಇನ್ನು ವಿಷ್ಣುವಿನ ವಿಷಯದಲ್ಲಿಯೂ ಸಮಾಖ್ಯಾಪ್ರಮಾಣವಿದೆಯೆಂದು ಹೇಳಬಹುದು. ಆದರೆ ಉಪಕ್ರಮ ಹಾಗೂ ಸಮಾಖ್ಯಾಪ್ರಮಾಣಗಳೆರಡರ ಮಧ್ಯದಲ್ಲಿ ಉಪಕ್ರಮ ಪ್ರಮಾಣವೇ ಶ್ರೇಷ್ಠವಾಗಿರುತ್ತದೆ. ಆದ್ದರಿಂದ ವಿಷ್ಣುವಿನ ಸಮಾಖ್ಯಾಪ್ರಮಾಣವು ಇದನ್ನು ವಿರೋಧಿಸುವುದಿಲ್ಲ.

ಮುಖ್ಯಪ್ರಾಣದೇವರೇ ಭೂಮರೆಂದು ಭಾಷ್ಯದ ಪ್ರಕಾರ ಪೂರ್ವಪಕ್ಷ

ಭೂಮರೆನಿಸಿದವರು ಮುಖ್ಯಪ್ರಾಣದೇವರೇ ಹೊರತು, ಬ್ರಹ್ಮನಲ್ಲ. ಪ್ರಾಣಶಬ್ದದಿಂದ ಬ್ರಹ್ಮನೂ ಪ್ರತಿಪಾದ್ಯನಾದ್ದರಿಂದ ಬ್ರಹ್ಮನನ್ನೂ ಸಹ ಭೂಮನೆನ್ನಬಹುದಲ್ಲವೇ? ಎಂದು ಪ್ರಶ್ನಿಸಬಾರದು. ಪ್ರಥಮ ಪಾದದಲ್ಲಿ ಪ್ರಾಣಶಬ್ದವನ್ನು ಬ್ರಹ್ಮನೆಂದು ಸಮರ್ಥಿಸಲು ನಿರವಕಾಶವಾದ ವಿಷ್ಣುವಿನ ಲಿಂಗವಿತ್ತು. ಆದರೆ ಇಲ್ಲಿ ಅಂತಹ ವಿಷ್ಣುಲಿಂಗಗಳೇನೂ ಇರುವುದಿಲ್ಲ. ವಿಪರೀತವಾಗಿ 'ದೇಹಾದುತ್ಕ್ರಮಣ' ಎಂಬ ಲಿಂಗವೇ ಇರುತ್ತದೆ. ಮುಖ್ಯಪ್ರಾಣದೇವರು ಭೂಮರೆಂದು ಹೇಳಿದರೆ ಯಾವುದೇ ಬಾಧಕಗಳೂ ಸಹ ಇರುವುದಿಲ್ಲ. ಎಲ್ಲೆಡೆ ವ್ಯಾಪ್ತನಾಗಿದ್ದರೆ ಮಾತ್ರ ಭೂಮನೆನಿಸಬೇಕಾಗಿಲ್ಲ. ಭೂಮಪ್ರಕರಣವನ್ನು ಹಿಂದಿನ, ಮುಂದಿನ ವಾಕ್ಯಗಳಿಂದ ವಿಚಾರ

ಮಾಡಿದಾಗ ಅಲ್ಲಿ ಗುಣತಃ ಉತ್ತಮತ್ವವೇ ಪ್ರಸಕ್ತವಾಗಿದೆ ಎಂದು ತಿಳಿಯುತ್ತದೆ. ಆದ್ದರಿಂದ ಆಶಾಯನಿಸಿದ ಭಾರತಿಗಿಂತ ಉತ್ತಮನಾಗಿದ್ದಾನೆಂದರೆ ಹೆಚ್ಚಿನ ದೇಶದಲ್ಲಿದ್ದಾನೆಂದು ಅರ್ಥವಲ್ಲ. ಹೆಚ್ಚಿನ ಗುಣಗಳುಳ್ಳವ- ನಾಗಿದ್ದಾನೆಂದಷ್ಟೇ ಅರ್ಥ. ಆದ್ದರಿಂದ ಅಣುಸ್ವರೂಪರಾಗಿದ್ದರೂ ಸಹ ಮುಖ್ಯಪ್ರಾಣದೇವರಲ್ಲಿ ಭೂಮತ್ವವು ಯುಕ್ತವಾಗುತ್ತದೆ. ಅವರೇ ಆನಂದಮಯರೂ ಸಹ ಆಗುತ್ತಾರೆಂದು ಆಕ್ಷೇಪ ಮಾಡಬಹುದು.

ಉತ್ಕ್ರಮಣ ಲಿಂಗಕ್ಕೆ ನಿರವಕಾಶತ್ವ ಸಮರ್ಥನೆ

ಭೂಮಪ್ರಕರಣದಲ್ಲಿ ಸರ್ವಗತತ್ವವು ಕೇಳಿಸುತ್ತಿದೆ. ಆದಕ್ಕನುಸಾರಿಯಾಗಿ ಪ್ರಾಣನಲ್ಲಿ ಕೇಳಿಸುತ್ತಿರುವ ದೇಹಾದ್ಯುತ್ಕ್ರಮಣವೆಂಬ ಲಿಂಗವನ್ನು ಗೌಣವಾಗಿ ವ್ಯಾಖ್ಯಾನಿಸಬೇಕೆಂದು ಹೇಳಬಾರದು. ಏಕೆಂದರೆ 'ಉತ್ಕ್ರಾಂತ' ಎಂಬ ಶಬ್ದದಿಂದಲೇ ನೇರವಾಗಿ ಪ್ರಾಣೋತ್ಕ್ರಮಣವೆಂಬ ಲಿಂಗವು ತಿಳಿಯುತ್ತಿದೆ. ಹಾಗೇ ಸರ್ವಗತತ್ವವನ್ನು ನೇರವಾಗಿ ಹೇಳುವ ಯಾವುದೇ ಶಬ್ದಗಳು ಶ್ರುತಿಯಲ್ಲಿರುವುದಿಲ್ಲ. ಆದ್ದರಿಂದ ಸರ್ವಗತತ್ವವನ್ನೇ ಗೌಣವನ್ನಾಗಿ ಅರ್ಥೈಸಬೇಕು. ಒಟ್ಟಾರೆ ಸಂಪ್ರಸಾದವೆಂಬ ಪೂರ್ಣಾನಂದತ್ವವು ವಿಷ್ಣುವಿನಲ್ಲಿ ಮಾತ್ರ ಬರುತ್ತದೆಂಬ ನಿಯಮವನ್ನು ಸಿದ್ಧಾಂತಿಗಳು ಮಾಡಲು ಸಾಧ್ಯವಿಲ್ಲ. ಮುಖ್ಯಪ್ರಾಣದೇವರಲ್ಲಿಯೂ ಈ ಲಿಂಗವು ಬರುತ್ತಿದೆ.

ವ್ಯಾಪ್ತನಾದ ಬ್ರಹ್ಮನಲ್ಲಿ ಉತ್ಕ್ರಮಣವನ್ನು ಹೇಳಲಾಗದೆಂದು ಪೂರ್ವಪಕ್ಷದ ಉಪಸಂಹಾರ

ಪರಮಾತ್ಮನು ವ್ಯಾಪ್ತನಾದ ಕಾರಣ 'ದೇಹದಿಂದ ಹೊರಗೆ ಹೊರಟಿದ್ದಾನೆ'. ಅಥವಾ 'ದೇಹದಲ್ಲಿ ಪ್ರವೇಶ ಮಾಡಿದ್ದಾನೆ' ಇತ್ಯಾದಿಯಾಗಿ ಯಾವುದೇ ಕ್ರಿಯೆಯನ್ನು ಹೇಳಲು ಸಾಧ್ಯವಿಲ್ಲ. ಇಂತಹ ಕ್ರಿಯೆಯನ್ನು ಅಣುಸ್ವರೂಪನಾದ ಮುಖ್ಯಪ್ರಾಣನಲ್ಲಿ ಮಾತ್ರ ಹೇಳಬೇಕೆಂದು ಪೂರ್ವಪಕ್ಷದ ಅಭಿಪ್ರಾಯ. ಬ್ರಹ್ಮನು ವ್ಯಾಪ್ತನಾಗಿದ್ದರೂ ಸಹ ಅಣುಸ್ವರೂಪನೂ ಆಗಿರುವ ಪ್ರಯುಕ್ತ ಕ್ರಿಯೆಯನ್ನು ಹೇಳಬಹುದಲ್ಲವೇ ? ಎಂಬ ಪ್ರಶ್ನೆ ಸಹಜವಾಗಿ ಬರುತ್ತದೆ. ಆದರೆ ಅಣುತ್ವವಿರುವ ಪ್ರಯುಕ್ತ ಕ್ರಿಯೆಯು ಬರುತ್ತದೆಂದು ಹೇಳುವುದಾದರೆ ಮಹತ್ತ್ವವಿರುವ ಪ್ರಯುಕ್ತ ಕ್ರಿಯೆಯು ಬರುವುದಿಲ್ಲವೆಂದು ಹೇಳಿದರೆ ಈ ರೀತಿಯ ಪೂರ್ವಪಕ್ಷಿಗಳ ಪ್ರತಿಬಂದಿಗೆ ಉತ್ತರವನ್ನು ನೀಡಲು ಸಾಧ್ಯವಿಲ್ಲ. ಆದ್ದರಿಂದ ವ್ಯಾಪ್ತನಾದ ಪರಮಾತ್ಮನಿಗೆ ಕ್ರಿಯೆಯು ಕೂಡುವುದಿಲ್ಲವೆಂಬುದೇ ಈ ಅಧಿಕರಣದ ಪೂರ್ವಪಕ್ಷ. ಇದರ ನಿರಾಕರಣೆಯೇ ಸಿದ್ಧಾಂತ.

ಈ ಪೂರ್ವಪಕ್ಷ ಹಾಗೂ ಸಿದ್ಧಾಂತಗಳನ್ನು ಬೇರೆ ಯಾವುದೇ ಅಧಿಕರಣಗಳಲ್ಲಿಯೂ ಸಹ ಮಾಡಿರುವುದಿಲ್ಲ. 'ಸರ್ವತ್ರ ಪ್ರಸಿದ್ಧೋಪದೇಶಾತ್' ಎಂಬ ಸೂತ್ರದಲ್ಲಿ ಸರ್ವಗತನಾದ ಪರಮಾತ್ಮನು ಹೃದಯದಲ್ಲಿದ್ದಾನೆಂದು ಹೇಳಿದ್ದಾರೆ ಹೊರತು, ವ್ಯಾಪ್ತನಾದ ಪರಮಾತ್ಮನಿಗೆ ಕ್ರಿಯೆಯು ಬರುತ್ತದೆಂದು ಹೇಳಿರುವುದಿಲ್ಲ. ಇದರಂತೆ 'ಜ್ಯೋತಿರ್ದರ್ಶನಾತ್' ಎಂಬ ಸೂತ್ರದಲ್ಲಿ ಕರ್ಮಾಧೀನವಾಗಿ ಸಂಚಾರವು ಬರುತ್ತದೆಂದು ಹೇಳಿದ್ದಾರೆ ಹೊರತು, ವ್ಯಾಪ್ತನಾದ ಪರಮಾತ್ಮನಿಗೆ ಕ್ರಿಯೆಯು ಬರುವುದಿಲ್ಲವೆಂದು ಪೂರ್ವಪಕ್ಷವನ್ನು ಮಾಡಿರುವುದಿಲ್ಲ. ಮತ್ತು ಅದರ ಖಂಡನೆಯನ್ನೂ ಸಹ ಮಾಡಿರುವುದಿಲ್ಲ. ಆದ್ದರಿಂದ ಈ ಅಧಿಕರಣವು ಬೇರೆ ಅಧಿಕರಣದಿಂದ ಗತಾರ್ಥವಾಗಲು ಸಾಧ್ಯವಿಲ್ಲ. ಆದ್ದರಿಂದ ಉತ್ಕ್ರಮಣವೆಂಬ ಲಿಂಗವು ಮುಖ್ಯಪ್ರಾಣನಲ್ಲಿ ಮಾತ್ರ ಬರುತ್ತದೆ. ಪ್ರಾಣಶಬ್ದದಿಂದ ಮುಖ್ಯಪ್ರಾಣದೇವರೇ ಪ್ರತಿಪಾದ್ಯರಾಗುತ್ತಾರೆ, ಅವರೇ ಭೂಮರೂ ಸಹ ಆಗುತ್ತಾರೆಂಬ ಎಂಬ ಪೂರ್ವಪಕ್ಷವು ಉದಯವಾಯಿತು.

ಪರಿಪೂರ್ಣಚಂದ್ರಿಕಾ

ವಿಷ್ಣುವೇ ಭೂಮನೆಂದು ಸಿದ್ಧಾಂತ

ಯಾರು ಭೂಮನಾಗಿದ್ದಾನೋ, ಅವನು ಪರಿಪೂರ್ಣವಾದ ಸುಖವುಳ್ಳವನೆಂದು 'ಯೋ ವೈ ಭೂಮಾ ತತ್ಸುಖಮ್' ಎಂಬ ಶ್ರುತಿಯು ಪ್ರತಿಪಾದನೆ ಮಾಡುತ್ತಿದೆ. ನಿರುಪಪದವಾದ ಸುಖಶಬ್ದಕ್ಕೆ ಪರಿಪೂರ್ಣವೆಂದೇ ಅರ್ಥ. ಪರಿಪೂರ್ಣಸುಖ ಇರುವುದು ಪರಮಾತ್ಮನಲ್ಲಿ ಮಾತ್ರವೇ. ಬೇರೆಯವರೆಲ್ಲರೂ ಅಲ್ಪವಾದ ಸುಖವುಳ್ಳವರು. ಆದ್ದರಿಂದ ಬೇರೆಯವರು ಯಾರೂ ಸಹ 'ಭೂಮಾ' ಎಂಬ ಶಬ್ದದಿಂದ ಪ್ರತಿಪಾದ್ಯರಾಗುವುದಿಲ್ಲ. ಈ ಎಲ್ಲ ವಿಷಯವನ್ನು 'ಸಂಪ್ರಸಾದಾತ್' ಎಂಬ ಲಿಂಗದಿಂದ ಸೂತ್ರಕಾರರು ಹೇಳಿರುತ್ತಾರೆ.

'ವಿಶ್ವಶಂಭುವಮ್' ಎಂಬ ಶ್ರುತಿಯು ಪೂರ್ಣವಾದ ಸುಖಕ್ಕೆ ಆಶಯನಾದವನು ವಿಷ್ಣುವೇ ಆಗಿದ್ದಾನೆಂದು ಹೇಳುತ್ತಿರುವುದರಿಂದ ಮುಖ್ಯಪ್ರಾಣದೇವರನ್ನು ಪೂರ್ಣಸುಖಸ್ವರೂಪರೆಂದು ಹೇಳಬಾರದು.

'ಅನುಕ್ತಿ' ಎಂಬ ಪೂರ್ವಪಕ್ಷಲಿಂಗವು ಸಾವಕಾಶ

ಭೂಮನೇ ವಿಷ್ಣುವಾಗಿದ್ದಾನೆಂಬ ವಿಷಯದಲ್ಲಿ ಅನೇಕ ಸಾಧಕ ಪ್ರಮಾಣಗಳಿವೆ. ಅಷ್ಟೇ ಅಲ್ಲದೇ ಪೂರ್ವಪಕ್ಷಕಾರರು ಹೇಳಲ್ಪಟ್ಟ ಅನುಕ್ತಿ ಹಾಗೂ ಉತ್ತಮಣ ಎಂಬ ಬಾಧಕಗಳೂ ಸಹ ಇರುವುದಿಲ್ಲ. ಏಕೆಂದರೆ ಪ್ರಾಣನಿಗಿಂತ ವಿಷ್ಣು ಅಧಿಕನಾಗಿದ್ದಾನೆಂದು ಹೇಳದಿರುವಿಕೆಯು ಬಾಧಕವಾಗುತ್ತದೆಂದು ಪೂರ್ವಪಕ್ಷಕಾರರು ಹೇಗೆ ಹೇಳುತ್ತಾರೋ ಆದರಂತೆ ವಿಷ್ಣುವಿಗಿಂತ ಪ್ರಾಣನು ಉತ್ತಮನಾಗಿದ್ದಾನೆಂಬ ಹೇಳದಿರುವಿಕೆಯು ಪೂರ್ವಪಕ್ಷಕಾರರಿಗೂ ಬಾಧಕವಾಗಿದೆ. ಪ್ರಾಣನು ಸರ್ವೋತ್ತಮನೆಂದೇ ಪೂರ್ವಪಕ್ಷಕಾರರು ಸಮರ್ಥಿಸಬೇಕು. ಆದ್ದರಿಂದ ವಿಷ್ಣುವಿಗಿಂತಲೂ ಪ್ರಾಣನಿಗೆ ಉತ್ತಮತ್ವವನ್ನು ಅವರು ಪ್ರತಿಪಾದಿಸಿದರೆ ಮಾತ್ರ ಭೂಮನು ಪ್ರಾಣನಾಗಿದ್ದಾನೆಂಬ ಸಮರ್ಥನೆಯು ಸಾಧ್ಯವಾಗುತ್ತದೆ. ಆದ್ದರಿಂದ ನಮ್ಮನ್ನು ಕುರಿತು ಯಾವ ಅನುಕ್ತಿಯನ್ನು ಬಾಧಕವನ್ನಾಗಿ ಹೇಳುತ್ತಿದ್ದಾರೋ, ಅದೇ ಅನುಕ್ತಿಯೆಂಬ ಲಿಂಗವು ಪೂರ್ವಪಕ್ಷಕಾರರಿಗೇನೇ ಮಾರಕವಾಗಿದೆ.

'ಅಧ್ಯುಪದೇಶಾತ್' ಎಂಬಲ್ಲಿ 'ಅಧಿ' ಎಂದರೆ 'ಸರ್ವಾಧಿಕ' ಎಂದರ್ಥ. ಪ್ರಾಣನನ್ನು ಸರ್ವೋತ್ತಮನೆಂದು ಶ್ರುತಿಯು ಹೇಳಿದೆ. ಶ್ರುತಿಯಲ್ಲಿ ಪ್ರಸಕ್ತವಾದ ಪ್ರಕರಣ ಹೀಗಿದೆ - ನಾರದರು ಸನತ್ಕುಮಾರರನ್ನು ಬ್ರಹ್ಮೋಪದೇಶಕ್ಕಾಗಿ ಉಪಸತ್ತಿ ಮಾಡುತ್ತಾರೆ. ಅಂತಹ ನಾರದರನ್ನು ಕುರಿತು ಸನತ್ಕುಮಾರರು 'ನಾಮ ಬ್ರಹ್ಮೇತ್ಯುಪಾಸೀತ' ನಾಮಾಭಿಮಾನಿಯಾದ ಉಷಾದೇವಿಯನ್ನು ಪೂರ್ಣಳೆಂದು ಉಪಾಸನೆ ಮಾಡಬೇಕು ಎಂದು ಪ್ರಾರಂಭ ಮಾಡಿ ಆಶಾನಾಮಕಳಾದ ಭಾರತೀದೇವಿಯ ತನಕ ಉಪಾಸನೆಯನ್ನು ತಾರತಮ್ಯ ಪ್ರಕಾರವಾಗಿ ಉಪದೇಶಿಸಿದರು. ಕೊನೆಯಲ್ಲಿ ಆಶಾನಾಮಕಳಾದ ಭಾರತೀದೇವಿಗಿಂತ ಪ್ರಾಣನನ್ನು ಉತ್ತಮನೆಂದು ಹೇಳಿದರು. ಅಂತಹ ಪ್ರಾಣನಿಗಿಂತ ಉತ್ತಮನಾದ ಮತ್ತೊಬ್ಬನನ್ನು ಹೇಳಲಿಲ್ಲ. ಇದರಿಂದ ಸರ್ವೋತ್ತಮನಾದ ವ್ಯಕ್ತಿ ಪ್ರಾಣನೆಂದೇ ತಿಳಿಯುತ್ತದೆ. ಈ ಪ್ರಾಣಶಬ್ದದಿಂದ ಪ್ರತಿಪಾದ್ಯನಾದವನು ವಿಷ್ಣುವೇ ಆಗಿದ್ದಾನೆ ಹೊರತು, ಮುಖ್ಯಪ್ರಾಣದೇವರಲ್ಲ. ಆದ್ದರಿಂದ ವಿಷ್ಣುವೇ ಭೂಮನೆನಿಸುತ್ತಾನೆಂಬುದು ಒಟ್ಟು ಅಭಿಪ್ರಾಯ.

ವ್ಯತಿಹಾರಾದ್ಯಧಿಕರಣಗಳಿಂದ ಇದು ಗತಾರ್ಥವಲ್ಲ

'ವ್ಯತಿಹಾರೋ ವಿಶಿಂಷಂತಿ' ಎಂಬ ಸೂತ್ರದಲ್ಲಿಯೂ ಮುಂದೆ ಇದೇ ವಿಷಯವನ್ನು ಪ್ರತಿಪಾದಿಸುವರಿದ್ದಾರೆ. ಆದ್ದರಿಂದ ಪ್ರಶ್ನಪ್ರತಿವಚನಗಳನ್ನು ಉಪನಿಷತ್ತಿನಲ್ಲಿ ಅನುಸಂಧಾನ ಮಾಡಿಕೊಂಡು ವಿಷ್ಣುವೇ ಭೂಮನಾಗಿದ್ದಾನೆಂದು

ಸಮರ್ಥಿಸುವುದು ಯುಕ್ತವಲ್ಲವೆಂದು ಹೇಳಬಾರದು. ಹಾಗೂ 'ವ್ಯಕ್ತಿಹಾರೋ ವಿಶಿಂಷಂತಿ' ಎಂಬ ಸೂತ್ರದಲ್ಲಿ ಅಧ್ಯಾಹಾರ ಮಾಡಿಕೊಳ್ಳಬೇಕೆಂಬುದನ್ನು ಹೇಳಿದ್ದು ಸತ್ಯ. ಆದರೆ ಅದನ್ನೇ ಇಲ್ಲಿ ಆಕ್ಷೇಪ ಮಾಡುತ್ತಿರುವುದರಿಂದ ಪುನರುಕ್ತಿಗೆ ಅವಕಾಶವಿಲ್ಲವೆಂದು ತಿಳಿಯಬೇಕು.

ನ್ಯಾಯವಿವರಣ ಹಾಗೂ ಛಾಂದೋಗ್ಯ ಭಾಷ್ಯಗಳಲ್ಲಿ ಪ್ರಾಣಶಬ್ದಕ್ಕೆ ಮುಖ್ಯಪ್ರಾಣನೆಂದೇ ವ್ಯಾಖ್ಯಾನಿಸಿದ್ದಾರೆ. ಹಾಗಾದರೆ ಶ್ರುತಿಯಲ್ಲಿ ವಿಷ್ಣುವನ್ನು ಉಲ್ಲೇಖಿಸಿದಂತೆಯೇ ಆಗಲಿಲ್ಲವಲ್ಲಾ? ಎಂದು ಪ್ರಶ್ನಿಸಬಾರದು. ಮುಖ್ಯಪ್ರಾಣದೇವರ ಆನಂತರ ಸತ್ಯವು ಪ್ರಸ್ತುತವಾಗಿದೆ. ಅಂತಹ ಸತ್ಯಶಬ್ದದಿಂದ ವಿಷ್ಣುವೇ ಪ್ರತಿಪಾದ್ಯನೆಂದು ತಿಳಿಯಬೇಕು. ಆದ್ದರಿಂದಲೇ 'ಏವಂ ವಿಜಾನನ್ ಅತಿವಾದೀ' ಎಂದು ಮುಖ್ಯಪ್ರಾಣದೇವರನ್ನು ಯಾರು ತಿಳಿಯುತ್ತಾರೋ, ಅವನನ್ನು 'ಅತಿವಾದಿ' ಅಂದರೆ ಅಧಿಕಜ್ಞಾನಿಯೆಂದು ಶ್ರುತಿಯು ಪ್ರಶಂಸಿಸಿದೆ. ಅನಂತರ 'ಏಷ ತು ವಾ ಅತಿವದತಿ ಯಃ ಸತ್ಯೇನಾತಿವದತಿ' ಎಂಬುದಾಗಿ ಯಾರು ಸತ್ಯಸ್ವರೂಪನಾದ ಬ್ರಹ್ಮನನ್ನು ತಿಳಿಯುತ್ತಾರೋ ಅವನು ಅತ್ಯಧಿಕವಾದ ಜ್ಞಾನಿ ಎಂಬುದಾಗಿ 'ತು' ಶಬ್ದವು ಅತಿಶಯವನ್ನು ತಿಳಿಸುತ್ತಿದೆ. ಆದ್ದರಿಂದ ಸತ್ಯಶಬ್ದದಿಂದ ಪರಬ್ರಹ್ಮನೇ ಪ್ರತಿಪಾದ್ಯನೆಂದು ಸಿದ್ಧವಾಗುತ್ತದೆ. ಆದ್ದರಿಂದ ಶ್ರುತಿಯಲ್ಲಿ ವಿಷ್ಣುವಿನ ಉಲ್ಲೇಖವಿದೆ ಎಂದು ಸಿದ್ಧವಾಗುತ್ತದೆ.

ಪ್ರಾಣಶಬ್ದಾರ್ಥ ವಿಷಯದಲ್ಲಿ ಭಾಷ್ಯ ಹಾಗೂ ನ್ಯಾಯವಿವರಣೆಗಳಿಗೆ ವಿರೋಧವಿಲ್ಲ

'ಪ್ರಾಣೋ ವಾ ಆಶಾಯಾ ಭೂಯಾನ್' ಎಂಬ ಛಾಂದೋಗ್ಯದಲ್ಲಿರುವ ಪ್ರಾಣಶಬ್ದಕ್ಕೆ 'ವಿಷ್ಣು' ಎಂಬರ್ಥವನ್ನು ಒಪ್ಪಿ ಸಿದ್ಧಾಂತ ಮಾಡಿರುತ್ತಾರೆ. ಆದರೆ ನ್ಯಾಯವಿವರಣದಲ್ಲಿ ಮುಖ್ಯಪ್ರಾಣನೆಂಬರ್ಥವನ್ನೂ ಒಪ್ಪಿಯೇ ಸಿದ್ಧಾಂತ ಮಾಡಿರುತ್ತಾರೆ. ವಿಚಾರ ಮಾಡಿದರೆ ನ್ಯಾಯವಿವರಣದ ಅಭಿಪ್ರಾಯವು ಅತ್ಯಂತ ಸಮಂಜಸವೆಂದೆನಿಸುತ್ತದೆ. ಏಕೆಂದರೆ ಪ್ರಾಣಶಬ್ದವು ವಿಷ್ಣುಪರವಾಗುವುದರಿಂದ 'ಏಷ ತು ವಾ ಅತಿವದಿತಿ' ಎಂಬಲ್ಲಿರುವ 'ತು' ಶಬ್ದವು ಸ್ವಾರಸ್ಯವಾಗುತ್ತದೆ. ಮತ್ತು ಆಶಾನಾಮಕಳಾದ ಭಾರತೀದೇವಿಗಿಂತ ಮುಖ್ಯಪ್ರಾಣದೇವರಿಗೆ ಉತ್ತಮತ್ವವನ್ನು ಹೇಳಿದಂತಾಗುತ್ತದೆ. ಅಷ್ಟೇ ಅಲ್ಲದೆ 'ಇಯದಾಮನನಾತ್' ಇತ್ಯಾದಿ ಸೂತ್ರಗಳಲ್ಲಿ ಹಾಗೂ ಛಾಂದೋಗ್ಯಭಾಷ್ಯದಲ್ಲೆಲ್ಲಾ ಪ್ರಾಣಶಬ್ದಕ್ಕೆ ಮುಖ್ಯಪ್ರಾಣನೆಂಬರ್ಥವನ್ನೇ ಅಂಗೀಕರಿಸಿದ್ದಾರೆ. ಹೀಗಿರುವಾಗ ಭಾಷ್ಯದಲ್ಲಿ ವಿಷ್ಣುವೆಂಬರ್ಥವನ್ನು ಅಂಗೀಕರಿಸಿದ್ದು ವಿರುದ್ಧವಾಗುತ್ತದಲ್ಲವೆ ಎಂಬ ವಿರೋಧಾಶಂಕೆಯು ಬರುತ್ತದೆ.

ಇದಕ್ಕೆ ಸಮಾಧಾನ ಹೀಗೆ - ಶ್ರೀಮದಾಚಾರ್ಯರು ಭಾಷ್ಯದಲ್ಲಿ ಪ್ರಾಣಶಬ್ದಕ್ಕೆ ವಿಷ್ಣುವೆಂಬರ್ಥವನ್ನು ಒಪ್ಪಲು ಅನೇಕ ಕಾರಣಗಳಿವೆ. ಪೂರ್ವಪಕ್ಷಕಾರರಂತೆ ನಾವು ಕೇವಲ ಪ್ರಾಣಪರತ್ವವನ್ನು ಮಾತ್ರ ಒಪ್ಪಿರುವುದಿಲ್ಲ. ವಿಷ್ಣುಪರತ್ವವನ್ನೂ ಸಹ ಒಪ್ಪುತ್ತೇವೆ. ಅಥವಾ ಮುಖ್ಯಪ್ರಾಣದೇವರಿಗಿಂತ ವಿಷ್ಣು ಉತ್ತಮನಾಗಿದ್ದಾನೆಂದು ಹೇಳಬೇಕಾಗಿದೆ. ಅಥವಾ ಅಂತರ್ಯಾಮಿತ್ವೇನೈವ ಉತ್ಕ್ರಮಣಾದಿಲಿಂಗವನ್ನು ವಿಷ್ಣುವಿನಲ್ಲಿ ಕೂಡಿಸಬೇಕಾಗಿದೆ. ಈ ಎಲ್ಲಾ ಕಾರಣಕ್ಕೋಸ್ಕರ ವಿಷ್ಣುಪರತ್ವವನ್ನು ಪ್ರಾಣಶಬ್ದಕ್ಕೆ ಒಪ್ಪಿರುತ್ತಾರೆ. ಆದ್ದರಿಂದ ಬೇರೆ ಬೇರೆ ವಿವಕ್ಷೆಗಳಿಂದ ಪ್ರಾಣಶಬ್ದದಿಂದ ಮುಖ್ಯಪ್ರಾಣ ಹಾಗೂ ವಿಷ್ಣು ಪ್ರತಿಪಾದ್ಯರಾಗಿದ್ದಾರೆಂದು ಉತ್ತರಿಸಬೇಕಾಗಿಲ್ಲ ಹೊರತಾಗಿ ಮುಖ್ಯಪ್ರಾಣ ಹಾಗೂ ವಿಷ್ಣು ಇಬ್ಬರೂ ಸಹ ಪ್ರತಿಪಾದ್ಯರೇ ಆಗಿದ್ದಾರೆಂದು ಒಪ್ಪಬೇಕು. ವಿಕಲ್ಪಪಕ್ಷವನ್ನು ಆಶ್ರಯಿಸಬಾರದು. ಸಮುಚ್ಚಯಪಕ್ಷವನ್ನೇ ಆಶ್ರಯಿಸಬೇಕು.

ಭಗವಂತನಲ್ಲಿ ಉತ್ಕ್ರಮಣ ಕ್ರಿಯೆಯ ಸಮರ್ಥನೆ

ಉತ್ಕ್ರಮಣವೆಂಬ ಕ್ರಿಯೆಯು ವ್ಯಾಪ್ತನಾದ ಭಗವಂತನಲ್ಲಿ ಹೇಗೆ ಕೂಡುತ್ತದೆ? ಎಂಬ ಗೊಂದಲವು ಬೇಡ. ಎಲ್ಲೆಡೆ ವ್ಯಾಪ್ತವಾದ ಜಾತಿಯು ಮಡಿಕೆ ಮೊದಲಾದವುಗಳಲ್ಲಿ ಇರುತ್ತದೆಂದು ಒಪ್ಪಿದ್ದಾರೆ. ಮತ್ತು ಆಕಾಶ, ದಿಕ್

ಇವೆರಡೂ ವ್ಯಾಪ್ತವಾಗಿರುವುದರಿಂದ ಪರಸ್ಪರ ಸಂಯೋಗವಿದ್ದರೂ ತಾರ್ಕಿಕರು ನಿತ್ಯದ್ರವ್ಯಗಳಿಗೆ ಸಂಯೋಗವನ್ನು ಒಪ್ಪಿರುವುದಿಲ್ಲ. ಆದರಂತೆ ಎಲ್ಲೆಡೆ ಭಗವಂತನು ವ್ಯಾಪ್ತನಾಗಿದ್ದರೂ ಕ್ರಿಯೆಯನ್ನು ಒಪ್ಪಲು ಆಡ್ಡಿಯಿಲ್ಲ.

'ಸ್ವಾಭಾವಿಕೀ ಜ್ಞಾನಬಲಕ್ರಿಯಾ ಚ' ಇವೇ ಮೊದಲಾದ ಪ್ರಮಾಣಗಳ ಆಧಾರದಿಂದ ಭಗವಂತನಲ್ಲಿರುವ ಕ್ರಿಯೆ ಮೊದಲಾದವು ಸ್ವಾಭಾವಿಕವಾಗಿರುತ್ತವೆ ಎಂದು ತಿಳಿದು ಬರುತ್ತಿದೆ. ಮತ್ತು ಭಗವಂತನಲ್ಲಿ ಇಂತಹ ಕ್ರಿಯೆಯಿರಲು ಅಣುತ್ವವೆಂಬ ಧರ್ಮವಿದೆ. ಅಣುವಾದ ಪದಾರ್ಥಗಳಲ್ಲಿ ಕ್ರಿಯೆಯಿರುವುದು ಲೋಕದಲ್ಲಿ ಕಾಣುತ್ತೇವೆ. ಭಗವಂತನಿಗೆ ಅಣುರೂಪವೂ ಇರುವುದರಿಂದ ಕ್ರಿಯೆಯನ್ನು ಹೇಳಲು ಏನೂ ತೊಂದರೆಯಿಲ್ಲ. ಮತ್ತು ಇವನಲ್ಲಿರುವ ಕ್ರಿಯೆಯು ಲೋಕವಿಲಕ್ಷಣವಾಗಿರುವುದರಿಂದ ಉತ್ತರದೇಶಸಂಯೋಗ, ಪೂರ್ವದೇಶವಿಭಾಗ ಮೊದಲಾದ ಪ್ರಯೋಜನಗಳಿಲ್ಲದಿದ್ದರೂ ಸ್ವಾಭಾವಿಕವಾಗಿ ಇರುತ್ತದೆಂದು ಒಪ್ಪಬೇಕು.

ಆದ್ದರಿಂದ ಉತ್ಕ್ರಮಣವೆಂಬ ಪೂರ್ವಪಕ್ಷಲಿಂಗವು ವಿಷ್ಣುವಿನಲ್ಲಿ ಸಾವಕಾಶವಾಯಿತು. ಈ ಲಿಂಗದಿಂದ ಮುಖ್ಯಪ್ರಾಣನೇ ಭೂಮನಾಗಿದ್ದಾನೆಂದು ಸಾಧಿಸಲು ಬರುವುದಿಲ್ಲ.

ಭಗವತ್ ಕ್ರಿಯೆಯು ಶಕ್ತಿ, ವ್ಯಕ್ತಿ ಎಂದು ಎರಡು ವಿಧ

ಯಾವುದೇ ಪದಾರ್ಥದಲ್ಲಿ ಕ್ರಿಯೆ ಉಂಟಾಗಬೇಕೆಂದರೆ ಆದು ಅಣುರೂಪವಾಗಿರಬೇಕು. ಅಥವಾ ಮಧ್ಯಮ ಪರಿಮಾಣವುಳ್ಳದ್ದಾಗಿರಬೇಕು. ಏಕೆಂದರೆ ಕ್ರಿಯೆ ಎಂದರೆ ತಾನು ಯಾವ ಸ್ಥಳದಲ್ಲಿ ಇರುತ್ತದೋ, ಆ ಸ್ಥಳವನ್ನು ಬಿಟ್ಟು ಮತ್ತೊಂದು ಸ್ಥಳಕ್ಕೆ ಹೋಗುವುದು ಎಂದರ್ಥ. ಎಲ್ಲೆಡೆ ತುಂಬಿರುವ ವಸ್ತು ಇರುವ ಸ್ಥಳದಿಂದ ಹೊರಟು ಮತ್ತೊಂದು ಸ್ಥಳಕ್ಕೆ ಹೋಗಲು ಸಾಧ್ಯವೇ ಇಲ್ಲ. ಭಗವಂತನು ಎಲ್ಲೆಡೆ ವ್ಯಾಪ್ತನಾಗಿದ್ದಲ್ಲಿ ಇಂತಹ ಕ್ರಿಯೆಯನ್ನು ಒಪ್ಪುವುದು ಹೇಗೆ ? ಎಂಬುದೇ ಇಲ್ಲಿ ಬಂದಿರುವ ದೊಡ್ಡ ಗೊಂದಲ.

ಈ ಗೊಂದಲಕ್ಕೆ ಅನೇಕ ಬಗೆಯಲ್ಲಿ ಪರಿಹಾರಗಳನ್ನು ತಿಳಿದುಕೊಳ್ಳಬಹುದು. ಭಗವಂತನು ಅಣುವಿಗಿಂತ ಅಣುಸ್ವರೂಪನು, ಹಾಗೂ ಮಹತ್‌ಪದಾರ್ಥಕ್ಕಿಂತಲೂ ಮಹತ್‌ಸ್ವರೂಪನೂ ಆಗಿರುತ್ತಾನೆ. ಈ ವಿರುದ್ಧ ಧರ್ಮವು ಒಬ್ಬನೇ ಭಗವಂತನಲ್ಲಿ ಒಪ್ಪಲು ಹೇಗೆ ಸಾಧ್ಯ ? ಎಂಬುದು ಮತ್ತೊಂದು ಗೊಂದಲ. ಈ ಗೊಂದಲವನ್ನು ಪರಿಹರಿಸಿಕೊಂಡರೆ ಎಲ್ಲೆಡೆ ವ್ಯಾಪ್ತನಾದ ಭಗವಂತನಲ್ಲಿ ಕ್ರಿಯೆಯೂ ಸಹ ಉಪಪನ್ನವಾಗುತ್ತದೆಂದು ಸುಲಭವಾಗಿ ತಿಳಿಯಬಹುದು. ನ್ಯಾಯಸುಧಾ, ಅನುವ್ಯಾಖ್ಯಾನ ಹಾಗೂ ತತ್ವಪ್ರಕಾಶಿಕೆ ಮೊದಲಾದ ಗ್ರಂಥಗಳಲ್ಲಿ ಹೇಳಿರುವ ಪ್ರಮೇಯಗಳನ್ನು ಗ್ರಂಥಕಾರರು ಇಲ್ಲಿ ಸಂಗ್ರಹಿಸಿ, ಈ ಎಲ್ಲಾ ಪ್ರಶ್ನೆಗಳನ್ನು ಪರಿಹರಿಸುತ್ತಿದ್ದಾರೆ. ಭಗವಂತನಲ್ಲಿ ಯಾವಾಗ ಅಣುತ್ವವೆಂಬ ಧರ್ಮವಿರುತ್ತದೋ, ಆವಾಗಲೇ ಮಹತ್ತ್ವವೆಂಬ ಧರ್ಮವು ಅದೇ ಪ್ರಕಾರದಲ್ಲಿರುತ್ತದೆಂದು ನಾವು ಹೇಳುವುದಿಲ್ಲ, ಸ್ವಲ್ಪ ವ್ಯತ್ಯಾಸವಿದೆ. ಪ್ರತಿಯೊಂದು ಗುಣಗಳೂ ಸಹ ಶಕ್ತಿ ಹಾಗೂ ವ್ಯಕ್ತಿ ಸ್ವರೂಪದಲ್ಲಿರುತ್ತದೆ. ಅಣುತ್ವವು ಯಾವಾಗ ಶಕ್ತಿಸ್ವರೂಪದಲ್ಲಿರುತ್ತದೋ, ಆವಾಗ ಮಹತ್ತ್ವವು ವ್ಯಕ್ತಿರೂಪದಲ್ಲಿರುತ್ತದೆ. ಶಕ್ತಿರೂಪವೆಂದರೆ ಆ ಸಂದರ್ಭದಲ್ಲಿ ಆ ರೂಪದಿಂದ ಕೆಲಸವಾಗುತ್ತಿರುವುದಿಲ್ಲ ಎಂದರ್ಥ. ವ್ಯಕ್ತಿಸ್ವರೂಪವೆಂದರೆ ಅದೇ ಸಂದರ್ಭದಲ್ಲಿ ಆ ರೂಪದಿಂದ ಆ ಕಾರ್ಯವು ನಡೆಯುತ್ತಿರುತ್ತದೆ ಎಂದರ್ಥ. ಆದ್ದರಿಂದ ಅಣುತ್ವ ಹಾಗೂ ಮಹತ್ತ್ವಗಳು ನಿರಂತರವಾಗಿ ಭಗವಂತನಲ್ಲಿ ಇದ್ದರೂ ಸಹ ಎರಡೂ ಧರ್ಮಗಳು ಕೇವಲ ಶಕ್ತಿರೂಪದಿಂದಾಗಲೀ ಅಥವಾ ವ್ಯಕ್ತಿರೂಪದಿಂದಾಗಲೀ, ಇರುವುದಿಲ್ಲವೆಂಬ ಸೂಕ್ಷ್ಮಪ್ರಮೇಯವನ್ನು ಗಮನಿಸಬೇಕು. ಅಂತೂ ಭಗವಂತನಲ್ಲಿ ಅಣುತ್ವವು ಯಾವಾಗ ವ್ಯಕ್ತಿಸ್ವರೂಪದಿಂದ ಇರುತ್ತದೋ, ಆವಾಗ ಮಹತ್ತ್ವವು ವ್ಯಕ್ತಿಸ್ವರೂಪದಿಂದ ಇರುವುದಿಲ್ಲವೆಂದಂತಾಯಿತು. ಈ ಬಗೆಯಲ್ಲಿ ಚಿಂತಿಸಿದಾಗ ಅಣುಸ್ವರೂಪನಾದ ಭಗವಂತನಿಗೆ ಪೂರ್ವದೇಶ ವಿಭಾಗ,

ಉತ್ತರದೇಶ ಸಂಯೋಗ ಮೊದಲಾದವುಗಳೆಲ್ಲವೂ ಸಿದ್ಧವಾಗುತ್ತವೆ. ಯಾವಾಗ ಮಹತ್ತ್ವವು ವ್ಯಕ್ತವಾಗಿರುತ್ತದೋ, ಆವಾಗ ಅಣುತ್ವವು ಶಕ್ತಿರೂಪದಲ್ಲಿರುವುದರಿಂದ ಪೂರ್ವದೇಶವಿಭಾಗ ಅಥವಾ ಉತ್ತರದೇಶಸಂಯೋಗಗಳನ್ನು ಒಪ್ಪಲು ಸಾಧ್ಯವಿಲ್ಲ. ಆಂದರೆ ವ್ಯಕ್ತವಾದ ಅಣುಸ್ವರೂಪವುಳ್ಳ ಭಗವಂತನಲ್ಲಿ ಕ್ರಿಯೆಯು ನಡೆಯುತ್ತದೆಂದು ಇದರ ಅಭಿಪ್ರಾಯ. ಭಗವಂತನಲ್ಲಿ ಅನೇಕ ಕ್ರಿಯೆಗಳಿವೆ. ಸೃಷ್ಟಿ ಮಾಡುವ ಕ್ರಿಯೆ, ಸಂಹಾರ ಮಾಡುವ ಕ್ರಿಯೆ ಇತ್ಯಾದಿಯಾಗಿ ಎಣಿಸಲು ಸಾಧ್ಯವಾಗದಷ್ಟು ಕ್ರಿಯೆಗಳಿವೆ. ಇವೆಲ್ಲವೂ ಸಹ ಭಗವತ್‌ಸ್ವರೂಪವೇ ಎಂಬುದರಲ್ಲಿ ಸಂದೇಹವಿಲ್ಲ. ಆದರೆ ಸೃಷ್ಟಿ ಮಾಡುವ ಕ್ರಿಯೆಯು ಭಗವತ್‌ಸ್ವರೂಪವಾದ್ದರಿಂದ ನಿರಂತರವಾಗಿರುವುದಾದರೆ, ನಿರಂತರ ಸೃಷ್ಟಿಯೇ ಆಗುತ್ತಿರಬೇಕಾಗುತ್ತದೆ. ಸಂಹಾರ, ನಿಯಮನ ಮೊದಲಾದ ಕ್ರಿಯೆಗಳು ನಡೆಯಲು ಸಾಧ್ಯವಿಲ್ಲದಂತಾಗುತ್ತದೆ. ಈಗಾಗಲೇ ಹೇಳಿದಂತೆ ಪ್ರತಿಯೊಂದೂ ಕ್ರಿಯೆಯನ್ನು ಶಕ್ತ್ಯಾತ್ಮನಾ, ವ್ಯಕ್ತ್ಯಾತ್ಮನಾ ವಿಭಾಗ ಮಾಡಿಕೊಂಡಾಗ ಯಾವಾಗ ಸೃಷ್ಟಿ ಸಮಯವು ಪ್ರಾಪ್ತವಾಗುತ್ತದೋ, ಆವಾಗ ಮಾತ್ರ ಸೃಷ್ಟಿ ಮಾಡುವ ಕ್ರಿಯೆಯು ಅಭಿವ್ಯಕ್ತವಾಗುತ್ತದೆ. ಸಂಹಾರ ಮಾಡುವ ಕಾಲವು ಪ್ರಾಪ್ತವಾದಾಗ ಸಂಹಾರ ಮಾಡುವಂತಹ ಕ್ರಿಯೆಯು ಪ್ರಾಪ್ತವಾಗುತ್ತದೆ. ಹೀಗೆ ಹೇಳಿದಾಗ ಎಲ್ಲಾ ವಿಧದ ಸಮಾಧಾನಗಳನ್ನು ಹೇಳಿದಂತಾಗುತ್ತದೆ. ಶ್ರೀರಾಮಚಂದ್ರನು ರಾವಣನನ್ನು ಕೊಂದನು ಎಂದು ಹೇಳಿದಾಗ ರಾವಣನ ಹನನವೆಂಬ ಕ್ರಿಯೆಯು ಶ್ರೀರಾಮಚಂದ್ರನಲ್ಲಿ ನಿರಂತರವಾಗಿ ಇರುತ್ತದೆ. ಆಂದ ಮಾತ್ರಕ್ಕೆ ಯಾವಾಗಲೂ ರಾವಣನನ್ನು ಸಂಹಾರ ಮಾಡುತ್ತಲೇ ಇರುತ್ತಾನೆ ಎಂದರ್ಥವಲ್ಲ. ಹೊರತಾಗಿ ಯಾವಾಗ ಆ ಸಮಯವು ಪ್ರಾಪ್ತವಾಗುತ್ತದೋ, ಆ ಸಂದರ್ಭದಲ್ಲಿ ಮಾತ್ರ ರಾವಣನನ್ನು ಕೊಲ್ಲುವಂತಹ ಕ್ರಿಯೆಯು ಅಭಿವ್ಯಕ್ತವಾಗುತ್ತದೆ. ಉಳಿದ ಕಾಲಗಳೆಲ್ಲಾ ಶಕ್ತಿಸ್ವರೂಪದಲ್ಲಿರುತ್ತದೆ ಎಂದು ತಿಳಿಯ ಬೇಕಾದ ಮುಖ್ಯಪ್ರಮೇಯ.

ಹೀಗೆ ಭಗವಂತನ ಕ್ರಿಯೆಗಳು ಅಣುತ್ವ, ಮಹತ್ತ್ವ ಮೊದಲಾದ ಗುಣಗಳು ಶಕ್ತಿ ಹಾಗೂ ವ್ಯಕ್ತಿಸ್ವರೂಪ ಎಂಬ ಎರಡು ಬಗೆಯನ್ನು ಹೊಂದಿರುತ್ತವೆ ಎಂದಷ್ಟೇ ಅಲ್ಲ. ಭಗವಂತನಿಗೆ ಅನೇಕ ರೂಪಗಳು ಪ್ರಮಾಣಸಿದ್ಧವಾಗಿದೆ. ಒಂದು ರೂಪದಲ್ಲಿ ಅಣುತ್ವವು ವ್ಯಕ್ತವಾಗಬಹುದು. ಮತ್ತೊಂದು ರೂಪದಲ್ಲಿ ಮಹತ್ತ್ವವು ವ್ಯಕ್ತವಾಗಬಹುದು. ಹೀಗೆ ರೂಪಗಳ ಭೇದದಿಂದಲೂ ಅಣುತ್ವ ಮಹತ್ತ್ವಗಳನ್ನು ಉಪಪಾದಿಸುವುದು ಸುಲಭ. ಸವಿಶೇಷ ಭೇದವಿರುವುದರಿಂದ ಹೀಗೆ ಭೇದದ ಕಾರ್ಯವು ಆಯಾ ರೂಪಗಳಲ್ಲಿ ನಡೆಯುತ್ತವೆ. ಅಥವಾ ಅಚಿಂತ್ಯಾತ್ಮಕ ಶಕ್ತಿಯನ್ನು ಹೊಂದಿರುವ ಭಗವಂತನಲ್ಲಿ ನಮ್ಮ ಕಲ್ಪನೆಗೆ ಮೀರಿದ ವಿಚಾರಗಳೇ ಇರುತ್ತವೆ.

ಸೂತ್ರದಲ್ಲಿ 'ಸಂಪ್ರಸಾದಾತ್' ಎಂದು ಹೇಳಿದ್ದಾರೆ. 'ಸಂಪ್ರಸಾದಾತ್' ಎಂಬ ಶಬ್ದಕ್ಕೆ ಪೂರ್ಣಸುಖವುಳ್ಳವನಾದ್ದರಿಂದ ಎಂದರ್ಥ. ಒಂದು ವೇಳೆ 'ಸಂಪ್ರಸಾದಾತ್' ಶಬ್ದವನ್ನು ಬಳಸದೇ 'ಪೂರ್ಣಸುಖಾತ್' ಎಂದೇ ಹೇಳಿದ್ದರೆ, ಸುಖವಿರುವುದಾದರೆ ದುಃಖವು ಬರಲಿ, ಅಥವಾ ಸುಖದ ಜೊತೆಗೆ ದುಃಖವು ಅವಿನಾಭೂತವಾಗಿದೆ, ಇತ್ಯಾದಿಯಾಗಿ ಪ್ರಶ್ನೆಗಳು ಹುಟ್ಟುತ್ತಿದ್ದವು. 'ಸಂಪ್ರಸಾದಾತ್' ಶಬ್ದವನ್ನು ಬಳಸಿದ್ದರಿಂದ ಸುಖದ ಕಾರ್ಯವೆನಿಸಿದ ಪ್ರಸಾದವು ಈಶ್ವರನಲ್ಲಿ ಪೂರ್ಣವಾಗಿರುವುದರಿಂದ ದುಃಖಕ್ಕೆ ಅವಕಾಶವಿಲ್ಲ. ಮತ್ತು ಜ್ಞಾನದಂತೆ ಸುಖವೂ ಸಹ ದುಃಖದಿಂದ ಅವಿನಾಭೂತವಾಗಿಲ್ಲ ಎಂಬೆರಡು ಪ್ರಮೇಯಗಳನ್ನು ಸೂತ್ರಕಾರರು ಸೂಚಿಸಿದ್ದಾರೆ. ಉಪನಿಷತ್ತಿನಲ್ಲಿರುವ ವಿಷಯವಾಕ್ಯಕ್ಕೆ ಅನುಗುಣವಾಗಿಯೇ ಸೂತ್ರಗಳ ಕ್ರಮವಿರುವುದರಿಂದ ಸೂತ್ರಗಳ ವಿನ್ಯಾಸ ಶೈಲಿಯು ಅತ್ಯಂತ ಅರ್ಥಪೂರ್ಣವಾಗಿದೆ.

ಶಾಂಕರಭಾಷ್ಯ ವಿಮರ್ಶೆ

ಶಾಂಕರಭಾಷ್ಯದಲ್ಲಿ 'ಭೂಮಾ ಸಂಪ್ರಸಾದಾತ್ ಅಧ್ಯುಪದೇಶಾತ್' ಎಂಬ ಸೂತ್ರವನ್ನು ವ್ಯಾಖ್ಯಾನಿಸುತ್ತಾ ಅಧಿಕರಣ ಶರೀರವನ್ನು ಹೀಗೆ ರಚನೆ ಮಾಡಿದ್ದಾರೆ. ನಾರದರಿಗೆ ಸನತ್ಕುಮಾರರು ಬ್ರಹ್ಮೋಪದೇಶವನ್ನು ಮಾಡುತ್ತಾ

'ನಾಮ ಬ್ರಹ್ಮೇತಿ ಉಪಾಸೀತ' ಎಂದು ಹೇಳಿದರು. ಆವಾಗ ನಾರದರು 'ಅಸ್ತಿ ಭಗವಃ ನಾಮ್ನೋ ಭೂಯಃ' ನಾಮಕ್ಕಿಂತ ಮಿಗಿಲಾದುದು ಯಾವುದು? ಎಂದು ಪ್ರಶ್ನಿಸುತ್ತಾರೆ. ಪುನಃ ಸನತ್ಕುಮಾರರು 'ವಾಗ್ವಾವ ನಾಮ್ನೋ ಭೂಯಸೀ' ಎಂದು ಉತ್ತರಿಸಿದರು. ಹೀಗೆ ಪ್ರಶ್ನೋತ್ತರಗಳು ನಡೆದು ಕೊನೆಯಲ್ಲಿ 'ಯೋ ವೈ ಭೂಮಾ ತತ್ಸುಖಮ್' ಎಂದು ಪ್ರಾಣನನ್ನು ಭೂಮನೆಂದು ಉಪದೇಶಿಸಿದರು. ಆದ್ದರಿಂದ ಜಡಭೂತವಾದ ಪ್ರಾಣವೇ ಭೂಮನೆಂದು ಪೂರ್ವಪಕ್ಷ.

ಸನತ್ಕುಮಾರರು ಪ್ರಾಣನ ತನಕ ಉಪದೇಶಿಸಿ ಆನಂತರ 'ಏಷ ತು ವಾ ಅತಿವದತಿ ಯ ಸತ್ಯೇನ ಅತಿವದತಿ' 'ಸತ್ಯನನ್ನು ಯಾರು ತಿಳಿಯುತ್ತಾನೋ, ಅವನೇ ಅತಿವಾದಿ' ಎಂದು ಹೇಳಿದ್ದಾರೆ. ಇಲ್ಲಿ 'ಸತ್ಯ' ಶಬ್ದಕ್ಕೆ ಬ್ರಹ್ಮನೆಂದರ್ಥ. 'ಸತ್ಯಂ ಜ್ಞಾನಮನಂತಂ ಬ್ರಹ್ಮ' ಎಂಬುದಾಗಿ ತೈತ್ತಿರೀಯ ಶ್ರುತಿಯು ಬ್ರಹ್ಮನನ್ನೇ ಸತ್ಯವೆನ್ನುತ್ತಿದೆ. ಅದನ್ನೇ 'ಯೋ ವೈ ಭೂಮಾ ತತ್ಸುಖಮ್' ಎಂದು ಭೂಮನೆಂದು ಉಪದೇಶಿಸಲಾಗಿದೆ. ಆದ್ದರಿಂದ ನಿರ್ವಿಶೇಷಬ್ರಹ್ಮನೇ ಭೂಮನು ಹೊರತು, ಜಡವಾದ ವಾಯುವಲ್ಲ. ಹೀಗೆ ನಿರ್ವಿಶೇಷ ಬ್ರಹ್ಮನ ಪ್ರತಿಪಾದನೆಗಾಗಿ ಈ ಪಾದವು ಹೊರಟಿರುವುದರಿಂದ ಭೂಮಾಧಿಕರಣವು ನಿರ್ವಿಶೇಷಬ್ರಹ್ಮನನ್ನೇ ಭೂಮನೆನ್ನುತ್ತದೆ ಎಂದು ಸಿದ್ಧಾಂತ ಮಾಡಿದ್ದಾರೆ.

ಪೂರ್ವಪಕ್ಷ ಮತ್ತು ಸಿದ್ಧಾಂತಗಳೇ ಇವರ ಮತದಲ್ಲಿ ಕೂಡುವುದಿಲ್ಲ. ಏಕೆಂದರೆ ಪ್ರಾರಂಭದಲ್ಲಿ ಆತ್ಮಶಬ್ದ ಹಾಗೂ ಸುಖಶಬ್ದಗಳು ಕೇಳಿಸುತ್ತಿವೆ. ಜಡದಲ್ಲಿ ಇವೆರಡೂ ಸಹ ಉಪಪನ್ನವಾಗುವುದಿಲ್ಲ. ಮತ್ತು ಮಾತನಾಡುವಿಕೆ, ಚರ್ಚೆ ಮಾಡುವಿಕೆ ಮೊದಲಾದ ಚೇತನನ ಧರ್ಮವು ಪ್ರಾಣನಲ್ಲಿ ಕೇಳಿಸುತ್ತಿವೆ. ಇವೂ ಸಹ ಜಡದಲ್ಲಿ ಅನುಪಪನ್ನವಾಗುತ್ತವೆ. ಹಾಗಾಗಿ ಜಡವಾಯು ಭೂಮನೆಂದು ಪೂರ್ವಪಕ್ಷ ಮಾಡಿದ್ದೇ ತಪ್ಪು.

ಸಿದ್ಧಾಂತವೂ ಸಹ ತಪ್ಪು. ಉಪಕ್ರಮದಲ್ಲಿ ಗುಣಜ್ಯೇಷ್ಠತ್ವವು ಕೇಳಿಸುತ್ತಿದೆ. ನಿರ್ವಿಶೇಷನಾದ ನಿರ್ಗುಣಬ್ರಹ್ಮನಲ್ಲಿ ಉತ್ತಮವಾದ ಗುಣಗಳೆರಲು ಹೇಗೆ ಸಾಧ್ಯ? ಮತ್ತು ಯಾರು ಭೂಮನನ್ನು ತಿಳಿಯುತ್ತಾರೋ, ಅವನು ಬಯಸಿದ್ದನ್ನೆಲ್ಲಾ ಹೊಂದುತ್ತಾನೆಂಬ ಫಲವನ್ನು ಶ್ರುತಿಯು ಹೇಳುತ್ತಿದೆ. ಆದರೆ ಅದ್ವೈತಮತದಲ್ಲಿ ನಿರ್ವಿಶೇಷಬ್ರಹ್ಮನ ಜ್ಞಾನದಿಂದ ಅಂತಹ ಆಪೇಕ್ಷೆಗಳೇ ಉಂಟಾಗುವುದಿಲ್ಲವೆಂದು ಸಕಲ ನಿವೃತ್ತಿಯನ್ನು ಫಲವನ್ನಾಗಿ ಹೇಳಿದ್ದಾರೆ. ಈ ಎಲ್ಲಾ ಕಾರಣಗಳಿಂದ ಅದ್ವೈತಿಗಳ ಅಧಿಕರಣಶರೀರವು ಅಯುಕ್ತವಾಗಿದೆಯೆಂದು ತಿಳಿಯಬೇಕು.

ಅದ್ವೈತಿಗಳ ಸೂತ್ರಾರ್ಥ ವಿಮರ್ಶೆ

ಅದ್ವೈತಿಗಳ ಪ್ರಥಮ ಸೂತ್ರಾರ್ಥ ಹೀಗಿದೆ - 'ಸಂಪ್ರಸಾದಾತ್' 'ಅಧಿ ಉಪದೇಶಾತ್ ಭೂಮಾ ಪರಮಾತ್ಮೈವ' 'ಸಂಪ್ರಸಾದಾತ್' ಎಂದರೆ 'ನಿದ್ರಾವಸ್ಥೆ' ಎಂದರ್ಥ. ನಿದ್ರಾವಸ್ಥೆಯಲ್ಲಿ ಕ್ರಿಯಾಶೀಲವಾದ ಪ್ರಾಣವಾಯುವನ್ನು ಲಕ್ಷಣಯಾ ಸ್ವೀಕರಿಸಬೇಕು. ಅಂತಹ ಪ್ರಾಣವಾಯುವಿಗಿಂತ ಅಧಿಕವಾಗಿ 'ಭೂಮ್ನಃ' ಭೂಮನನ್ನು 'ಉಪದೇಶಾತ್' 'ಉಪದೇಶ ಮಾಡಿರುವುದರಿಂದ ಬ್ರಹ್ಮನೇ ಭೂಮನಾಗುತ್ತಾನೆ' ಎಂದು ವ್ಯಾಖ್ಯಾನಿಸುತ್ತಾರೆ.

ಇದು ತಪ್ಪು. 'ಸಂಪ್ರಸಾದ' ಶಬ್ದಕ್ಕೆ 'ಸುಖ' ಎಂಬ ಯೌಗಿಕಾರ್ಥವನ್ನು ವಿವಕ್ಷಿಸಲು ಬರುವಾಗ ಲಕ್ಷಣಯಾ 'ಪ್ರಾಣವಾಯು' ಎಂಬ ವ್ಯಾಖ್ಯಾನವು ಅಯುಕ್ತ. ಮತ್ತು ಬ್ರಹ್ಮಮೀಮಾಂಸಾಶಾಸ್ತ್ರದಲ್ಲಿ ಯಾವ ಸೂತ್ರಗಳು ತತ್ವಜ್ಞಾನಕ್ಕೋಸ್ಕರ ಹೊರಟಿವೆಯೋ, ಅಂತಹ ಸೂತ್ರಗಳಲ್ಲಿ ಸಾಧ್ಯದ ಅಧ್ಯಾಹಾರವು ಇರುವುದಿಲ್ಲ. 'ಆನಂದಮಯೋಽಭ್ಯಾಸಾತ್' ಎಂಬ ಸೂತ್ರವು ಬ್ರಹ್ಮನನ್ನು ಆನಂದಮಯನೆನ್ನುತ್ತಿದೆ. ಈ ಸೂತ್ರವು ಸ್ವಪಕ್ಷಸಾಧಕವಾಗಿರುವುದರಿಂದ ಪಕ್ಷ ಹಾಗೂ ಹೇತುಗಳನ್ನಷ್ಟೆ ಹೇಳಲಾಗಿದೆ. ಸಾಧ್ಯವನ್ನು ಹೇಳಿರುವುದಿಲ್ಲ. ಆದರೆ 'ನೇತರೋಽನುಪಪತ್ತೇಃ' ಇತ್ಯಾದಿಯಾದ ಪರಪಕ್ಷ ನಿರಾಸಕವಾದ ಸೂತ್ರಗಳಲ್ಲಿ 'ನೇತರಃ' ಎಂಬುದಾಗಿ ಸಾಧ್ಯವನ್ನೂ ಹೇಳಿರುತ್ತಾರೆ. ಪ್ರಕೃತ ಅದ್ವೈತಿಗಳು 'ಭೂಮಾ ಸಂಪ್ರಸಾದಾತ್' ಇತ್ಯಾದಿ ಸೂತ್ರವು ಪ್ರಾಣನು ಭೂಮನಲ್ಲವೆಂದು

ವರಪಕ್ಷ ನಿರಾಸಕ್ಕೋಸ್ಕರ ಹೊರಟಿದೆ ಎಂದು ಹೇಳುವುದಾದರೆ ಇಲ್ಲಿಯೂ ಸಹ 'ನ ಪ್ರಾಣಃ' ಎಂಬ ಸಾಧ್ಯದ ನಿರ್ದೇಶವಿರಬೇಕಿತ್ತು. ಆದ್ದರಿಂದ ಇದನ್ನು ಸ್ವಪಕ್ಷಸಾಧಕಸೂತ್ರವೆಂದೇ ಪರಿಗಣಿಸಬೇಕಾಗುತ್ತದೆ. ಮತ್ತು ಪ್ರಾಣನಿಗಿಂತ ಭೂಮನು ಉತ್ತಮನೆಂದು ಹೇಳಿರುವ ಕಾರಣ ಬ್ರಹ್ಮನೇ ಭೂಮನಾಗುತ್ತಾನೆಂಬ ಸಾಧನೆಯನ್ನು ಅದ್ವೈತಿಗಳಂದ ಮಾಡಲಾಗದು. ಪ್ರಾಣನ ಉಪದೇಶದ ಅನಂತರ ಸತ್ಯನಾಮಕನಾದ ಬ್ರಹ್ಮನ ಉಪದೇಶವು ಹೇಗೆ ಇದೆಯೋ, ಅದರಂತೆ ವಿಜ್ಞಾನ, ಮತಿ, ಶ್ರದ್ಧಾ ಇವುಗಳ ಉಪದೇಶವೂ ಸಹ ಅಲ್ಲಿಯೇ ಇರುತ್ತದೆ. ಸತ್ಯನು ಬ್ರಹ್ಮನೆಂದು ಅದ್ವೈತಿಗಳು ಹೇಳುವುದಾದರೆ ವಿಜ್ಞಾನ, ಮತಿ, ಶ್ರದ್ಧಾ ಇವುಗಳೂ ಸಹ ಬ್ರಹ್ಮನೇ ಆಗಬೇಕಾಗುತ್ತದೆ. ಆದ್ದರಿಂದ ಪ್ರಾಣನಿಗಿಂತ ಉತ್ತಮವೆಂಬ ಉಪದೇಶವು ಬ್ರಹತ್ವದ ನಿರ್ಧಾರಕ್ಕೆ ಕಾರಣವಾಗುವುದಿಲ್ಲ.

'ಧರ್ಮೋಪಪತ್ತೇಶ್ಚ' ಎಂಬ ಎರಡನೆಯ ಸೂತ್ರಕ್ಕೆ 'ಯತ್ರ ನಾನ್ಯತ್ಪಶ್ಯತಿ' ಯಾವುದೇ ವ್ಯವಹಾರವಿಲ್ಲವೆಂಬ ಧರ್ಮವನ್ನು ಶ್ರುತಿಯು ಹೇಳುತ್ತಿರುವುದರಿಂದ ನಿರ್ವಿಶೇಷ ಬ್ರಹ್ಮನ ಧರ್ಮವನ್ನು ಹೇಳಿದಂತಾಗುತ್ತದೆ. ಈ ಕಾರಣದಿಂದಲೂ ನಿರ್ವಿಶೇಷ ಬ್ರಹ್ಮನೇ ಭೂಮನೆಂದು ವ್ಯಾಖ್ಯಾನಿಸುತ್ತಾರೆ.

ಇದೂ ಸಹ ಸರಿಯಲ್ಲ. ಭೂಮನನ್ನು ಬೇರೆಯವರು ತಿಳಿಯುವುದಿಲ್ಲವೆಂದು ಶ್ರುತಿ ಹೇಳುತ್ತಿದೆ ಹೊರತು, ಭೂಮನಿಗೆ ದ್ರಷ್ಟೃತ್ವವನ್ನು ನಿಷೇಧ ಮಾಡುತ್ತಿಲ್ಲ. ಒಂದು ವೇಳೆ ನಿಷೇಧವನ್ನೇ ಮಾಡಿದ್ದರೆ ನಿರ್ವಿಶೇಷನ ಬ್ರಹ್ಮನಧರ್ಮವೆಂದು ಪರಿಗಣಿಸಬಹುದಿತ್ತು. ಆಷ್ಟೇ ಅಲ್ಲದೆ 'ಏವಂ ಪಶ್ಯನ್ ಏವಂ ವಿಜಾನನ್' ಇತ್ಯಾದಿಯಾಗಿ ದರ್ಶನ ಮೊದಲಾದ ವ್ಯವಹಾರವನ್ನೂ ಸಹ ಹೇಳಿರುವುದರಿಂದ ದರ್ಶನಾದಿಗಳ ವ್ಯವಹಾರಾಭಾವವು ಶ್ರುತವಾಗಿದೆಯೆಂಬ ಪರಿಕಲ್ಪನೆಯೇ ತಪ್ಪಾಗುತ್ತದೆ.

ಪ್ರತಿಯೊಂದು ಅಧಿಕರಣಗಳಂತೆ ಈ ಅಧಿಕರಣದಲ್ಲಿಯೂ 'ಧರ್ಮೋಪಪತ್ತೇಃ' ಎಂಬ ಸೂತ್ರದಲ್ಲಿ ನಿರ್ಧರ್ಮತ್ವಕ್ಕೆ ವಿರುದ್ಧವಾದ ಧರ್ಮವನ್ನು ಸೂತ್ರವು ಹೇಳುತ್ತಿರುವುದರಿಂದ ಅದ್ವೈತಿಗಳಿಗೆ ಈ ಅಧಿಕರಣವು ಕಂಟಕವೇ ಆಗಿದೆಯೆಂದು ತಿಳಿಯಬೇಕು.

ರಾಮಾನುಜ ಭಾಷ್ಯದ ಅಧಿಕರಣ ವಿಮರ್ಶೆ

ರಾಮಾನುಜರ ಭೂಮಾಧಿಕರಣ ಹೀಗಿದೆ - ಪ್ರಕರಣದಲ್ಲಿರುವ 'ಭೂಮಾ' ಎಂಬ ಶಬ್ದವು ಲಕ್ಷಣಾ ವೃತ್ತಿಯಿಂದ ಜೀವನನ್ನೇ ಪ್ರತಿಪಾದಿಸುತ್ತದೆ. ಕಾರಣವೇನೆಂದರೆ ಪ್ರಾಣಶಬ್ದವು ಜಡವಾಯುವನ್ನು ಪ್ರತಿಪಾದಿಸಲು ಪ್ರಕರಣದಲ್ಲಿ ಹೇಳಲ್ಪಟ್ಟ ಪಿತೃತ್ವ, ಹಿಂಸ್ಯತ್ವ ಮೊದಲಾದ ಬಾಧಕಗಳಿವೆ. ಆದ್ದರಿಂದ ಚೇತನನ್ನೇ ಪ್ರತಿಪಾದಿಸಬೇಕು. ಪ್ರಾಣಶಬ್ದದ ಸಾಹಚರ್ಯವಿರುವ ಪ್ರಯುಕ್ತ ಜೀವಾತ್ಮನೇ ಪ್ರಾಣನಾಗುತ್ತಾನೆ. ಮೋಕ್ಷವನ್ನು ಹೊಂದಿದ ನಂತರ ಪೂರ್ಣಸುಖಸ್ವರೂಪನಾಗುವುದರಿಂದ 'ಭೂಮಾ ತತ್ಸುಖಮ್' ಪೂರ್ಣಸುಖಸ್ವರೂಪನಾದ ಭೂಮನೆಂದರೆ ಜೀವಾತ್ಮನೇ ಆಗುತ್ತಾನೆಂಬುದು ಯುಕ್ತವಾಗಿದೆ. ಇಷ್ಟು ಪೂರ್ವಪಕ್ಷ.

ಜೀವನಿಗಿಂತ ಬ್ರಹತ್ತತ್ವವು ಉತ್ತಮವೆಂದು 'ಸತ್ಯ' ಶಬ್ದದಿಂದ ತಿಳಿಯುತ್ತಿದೆ. ಮತ್ತು ಪ್ರಾಣಜ್ಞಾನಿಯನ್ನು ಅತಿವಾದಿಯೆಂದು ಸತ್ಯನನ್ನು ತಿಳಿದವನು ಅತಿಶಯವಾದ ಅತಿವಾದಿಯೆಂದು ಶ್ರುತಿಯು ಉಪಾಸಕನ ಭೇದವನ್ನು ಹೇಳುತ್ತಿದೆ. ಆದ್ದರಿಂದಲೇ ಪ್ರಾಣನೇ ಬೇರೆ, ಭೂಮನೇ ಬೇರೆ ಎಂಬ ವಿಷಯವು ಸ್ಪಷ್ಟವಾಗುತ್ತದೆ. 'ಸತ್ಯಂ ಜ್ಞಾನ ಅನಂತಂ ಬ್ರಹ್ಮ' ಎಂಬ ಶ್ರುತಿಯ ಆಧಾರದಿಂದ ಸತ್ಯ ಶಬ್ದದ ಪ್ರತಿಪಾದ್ಯನು ಬ್ರಹ್ಮನೇ ಆಗುತ್ತಾನೆ. ಇಷ್ಟು ಸಿದ್ಧಾಂತ.

ರಾಮಾನುಜರ ಈ ಅಧಿಕರಣ ಶರೀರವು ಅಯುಕ್ತವಾಗಿದೆ. ಏಕೆಂದರೆ ಅವರಪೂರ್ವಪಕ್ಷವು

ಸಮಂಜಸವಾಗಿದ್ದಲ್ಲಿ ಸಿದ್ಧಾಂತವು ಸರಿಯೆನ್ನಬಹುದಿತ್ತು. ಆದರೆ ಪೂರ್ವಪಕ್ಷವೇ ಸರಿಯಿಲ್ಲ. ಪ್ರಾಣಶಬ್ದಕ್ಕೆ ಅಭಿಮಾನಿ ಚೇತನವೆಂದು ಅರ್ಥೈಸಿದರೂ ಸಹ ಪಿತೃತ್ವ ಹಿಂಸತ್ವ ಮೊದಲಾದ ಧರ್ಮಗಳನ್ನು ಕೂಡಿಸಬಹುದು. ಪಿತೃತ್ವಾದಿ ಬಾಧಕಗಳಿರುವುದರಿಂದ ಜೀವನಲ್ಲಿ ಲಕ್ಷಣಾ ಮಾಡುವುದು ಅನಿವಾರ್ಯವೆಂಬ ಅವರ ವಿಚಾರದಲ್ಲಿ ಅರ್ಥವೇ ಇಲ್ಲ. ಮತ್ತು ತಂದೆ, ತಾಯಿ, ಆಚಾರ್ಯ ಮೊದಲಾದ ಜೀವರ ಪ್ರಾಣವು ಉತ್ಕ್ರಾಂತವಾಗುತ್ತದೆಂದು ಶ್ರುತಿಯು ಹೇಳುತ್ತಿದೆ. ಪ್ರಾಣನೇ ಜೀವನಾದರೆ, ಜೀವನ ದೆಸೆಯಿಂದ ಜೀವನು ಉತ್ಕ್ರಾಂತನಾಗುತ್ತಾನೆ ಎಂದು ಹೇಳಿದಂತಾಗುತ್ತದೆ. ಇದು ತಪ್ಪಲ್ಲವೇ? ಪ್ರಾಣೋತ್ಕ್ರಮಣವು ಪ್ರಸಿದ್ಧವಾಗಿದೆ ಹೊರತು, ಜೀವೋತ್ಕ್ರಮಣವು ಪ್ರಸಿದ್ಧವಾಗಿಲ್ಲ. ಆದ್ದರಿಂದ ಸೂತ್ರದಲ್ಲಿರುವ 'ಸಂಪ್ರಸಾದ' ಶಬ್ದವು ಜೀವನನ್ನು ಪ್ರತಿಪಾದಿಸುವುದಿಲ್ಲ. ಪ್ರಾಣನನ್ನೇ ಪ್ರತಿಪಾದಿಸುತ್ತದೆ. ಜೀವನನ್ನು ಪ್ರತಿಪಾದಿಸುತ್ತದೆಂಬ ಪೂರ್ವಪಕ್ಷವು ಅಯುಕ್ತವಾಗಿದೆಯೆಂದು ತಿಳಿಯಬೇಕು.

ಅನುವಾದಕರು

ಬೆಮ್ಮತ್ತಿ ವೆಂಕಟೇಶಾಚಾರ್ಯ

॥ ಶ್ರೀಕೃಷ್ಣಾರ್ಪಣಮಸ್ತು ॥

ಚಂದ್ರಿಕಾಬಿಂದು

ಅದೃಶ್ಯತ್ವಾಧಿಕರಣ - ಈ ಅಧಿಕರಣದಲ್ಲಿ 'ದೃಶ್ಯತ್ವಾದ್ಯಭಾವ' ಎಂಬ ಲಿಂಗವನ್ನು ಬ್ರಹ್ಮನಲ್ಲಿ ಸಮನ್ವಯ ಮಾಡುತ್ತಾರೆ. ಹಿಂದಿನ ಅಂತರ್ಯಾಮ್ಯಧಿಕರಣದಲ್ಲಿ, ಅಂತರ್ಯಾಮಿಯಾದವನು 'ಬ್ರಹ್ಮ' ಎಂಬುದನ್ನು ಸಾಧನೆ ಮಾಡಲಿಕ್ಕೆ ಉಪಯೋಗಿಸಕೊಂಡ ಹೇತು - 'ಅದೃಶ್ಯತ್ವ'. ಈ 'ಅದೃಶ್ಯತ್ವ'ವೆಂಬ ಗುಣವು ವಿಷ್ಣುವಿನಲ್ಲಿ ಇರುವುದರಿಂದ, ಅಂತರ್ಯಾಮೀ ಬ್ರಹ್ಮ ಎಂದು ಸಾಧನೆ ಮಾಡಲಾಗಿತ್ತು. ಇಂತಹ ಅದೃಶ್ಯತ್ವ ಧರ್ಮವು ವಿಷ್ಣು ಇತರನಿಗೆ ಹೊರತು, ವಿಷ್ಣುವಿಗೆ ಇಲ್ಲ ಎಂದು ಆದರೆ, ಆಗ, ಅಂತರ್ಯಾಮೀ ವಿಷ್ಣು ಇತರ ಎಂದು ಆಗಿಬಿಡುತ್ತದೆ. ಆದ್ದರಿಂದ ಅದೃಶ್ಯತ್ವವು ವಿಷ್ಣುವಿನಲ್ಲೇ ಇರುವ ಅಸಾಧಾರಣ ಧರ್ಮ ಎಂಬುದನ್ನು ಸಾಧನೆ ಮಾಡಲಾಗಿದೆ.

ಅದೃಶ್ಯತ್ವ ಗುಣವು ವಿಷ್ಣು ಇತರರಲ್ಲಿ ಇದೆ ಎಂಬ ಸಂದೇಹಕ್ಕೆ ಕಾರಣವೇನು ಎಂದು ಕೇಳಿದರೆ. ಮುಂಡಕ ಉಪನಿಷತ್ತಿನಲ್ಲಿ, ಅದೃಶ್ಯತ್ವಗುಣವುಳ್ಳ ಅಕ್ಷರಶಬ್ದವಾಚ್ಯನಾದ ವ್ಯಕ್ತಿಯು ವಿಷ್ಣು ಇತರ ಎಂದು ಹೇಳಿದೆ. ನೇರವಾಗಿ ವಿಷ್ಣುಇತರ ಎಂದು ಹೇಳದಿದ್ದರೂ, ಅರ್ಥತಃ ಹೇಳಿದ್ದಾರೆ. ಹೇಗೆಂದರೆ

'ಯತ್ತದದ್ರೇಶ್ಯಂ, ಅಗ್ರಾಹ್ಯಂ...' ಎಂದು ಮೊದಲು ಅನೇಕ ಧರ್ಮಗಳನ್ನೂ ಹೇಳಿ, 'ಯಥಾ ಊರ್ಣನಾಭಿಃ ಸೃಜತೇ....' ಎಂದು ಅಕ್ಷರಶಬ್ದವಾಚ್ಯನಾದ ವ್ಯಕ್ತಿಯಲ್ಲಿ ಅದೃಶ್ಯತ್ವಗುಣಗಳನ್ನು ಹೇಳಿದ್ದಾರೆ; ಈ ಅಕ್ಷರಶಬ್ದವಾಚ್ಯನಾದ ವ್ಯಕ್ತಿಯು ವಿಷ್ಣು ಆಗಲಿಕ್ಕೆ ಸಾಧ್ಯವಿಲ್ಲ. ಯಾಕೆಂದರೆ, ಮುಂದೆ ಅದೇ ಮುಂಡಕದಲ್ಲಿ 'ಅಪ್ರಾಣೋಹಿ ಅಮನಾಃ' ಶುಭ್ರೋ ಅಕ್ಷರಾತ್ ಪರತಃ ಪರಃ'' ಎಂಬುದಾಗಿ. ಅಕ್ಷರಶಬ್ದವಾಚ್ಯನಾದ ವ್ಯಕ್ತಿಗಿಂತ ಇನ್ನೊಬ್ಬ ಉತ್ತಮನು ಇದ್ದಾನೆ ಎಂದು ಹೇಳಿದೆ; ಆದ್ದರಿಂದ ಅಕ್ಷರಶಬ್ದವಾಚ್ಯನಾದವನು ವಿಷ್ಣುವಾದರೆ, ಅವನನ್ನು ಮೀರಿಸುವ ಇನ್ನೊಬ್ಬ ವ್ಯಕ್ತಿಯು ಬಾಧಿತವಾಗುತ್ತದೆಯಾದ್ದರಿಂದ, ಅಕ್ಷರನು ವಿಷ್ಣುವಲ್ಲ. ಅಂತಹ ಅಕ್ಷರನಲ್ಲಿ ಹೇಳಿರುವ ಅದೃಶ್ಯತ್ವ ಮೊದಲಾದ ಗುಣಗಳು. ವಿಷ್ಣುವಿನಲ್ಲಿ ಇಲ್ಲ. ಆದ್ದರಿಂದ ಅಂತರ್ಯಾಮಿ ವಿಷ್ಣು ಅಲ್ಲ ಎಂದು ಹಿಂದಿನ ಅಧಿಕರಣದ ಮೇಲೆ ಆಕ್ಷೇಪವನ್ನು ಮಾಡಬಹುದು.

ಈ ವಿಷಯದಲ್ಲಿ ಒಂದು ಸಂದೇಹವು ಬರಬಹುದು. ಏನೆಂದರೆ - ಈ ಅಧಿಕರಣದಲ್ಲಿ, ವಸ್ತುತಃ ಅದೃಶ್ಯತ್ವ ಮೊದಲಾದ ಗುಣಸಮೂಹವನ್ನು ಸಮನ್ವಯ ಮಾಡಿದ್ದಾರೆ. ಲಿಂಗಪಾದವಾದ್ದರಿಂದ ಹಾಗೂ ಟೀಕಾದಲ್ಲಿ ಹಾಗೆಯೇ ಹೇಳಿದ್ದಾರೆ. ಹಾಗಾದರೆ,

ಅಕ್ಷರಶಬ್ದವಾಚ್ಯನಾದ ಒಂದು ವಸ್ತುವನ್ನು ಮಧ್ಯದಲ್ಲಿ ಇಟ್ಟುಕೊಂಡಿದ್ದು ಯಾಕೆ? ನೇರವಾಗಿ ಅದೃಶ್ಯತ್ವ ಮೊದಲಾದ ಗುಣಗಳನ್ನು ವಿಷ್ಣುವಿನಲ್ಲಿ ಸಮನ್ವಯ ಮಾಡಬಹುದಲ್ಲಾ ಎಂದು?

ಇದಕ್ಕೆ ಉತ್ತರ - ಅಕ್ಷರಶಬ್ದದ ಮೂಲಕ ಪ್ರಶ್ನೆಯನ್ನು ತೆಗೆದುಕೊಂಡರೆ, ಆಗ ಪೂರ್ವಪಕ್ಷ ದೃಢವಾಗುತ್ತದೆ. ಅದು ಹೇಗೆಂದರೆ,

೧. ಈ ಅದೃಶ್ಯತ್ವಾದಿ ಧರ್ಮಗಳು ಯಾರಿಗೆ ? ಎಂದು ಪ್ರಶ್ನೆ ಬಂದರೆ, ಈ ಎಲ್ಲಾ ಧರ್ಮಗಳಿಗೆ, ಧರ್ಮಿ ಯಾರು ? ಎಂದು ಪ್ರಶ್ನೆ ಮಾಡಿದರೆ, ಆಗ ಅಕ್ಷರಶಬ್ದವಾಚ್ಯನೇ ಈ ಧರ್ಮಗಳಿಗೆ ವಿಶೇಷ್ಯನಾಗಿದ್ದಾನೆ ಎಂದು ಉತ್ತರ. ಇಂತಹ ಅಕ್ಷರನು ವಿಷ್ಣುಇತರ (ಹಿಂದೆ ಹೇಳಿದಂತೆ) ಎಂದು ಇರುವುದರಿಂದ ಅದೃಶ್ಯತ್ವಾದಿಗುಣಗಳು ವಿಷ್ಣುವಿನಲ್ಲಿ ಇಲ್ಲ ಎಂದು ಹೇಳಬಹುದು.

೨. ಅದೃಶ್ಯತ್ವಾದಿಗುಣವುಳ್ಳ ಅಕ್ಷರಶಬ್ದವಾಚ್ಯನಾದ ವ್ಯಕ್ತಿಗೆ ಉಪಾದಾನತ್ವವನ್ನು ಹೇಳಿದ (ತಥಾ ಅಕ್ಷರಾತ್-ಸಂಭವತಿ ಇಹ ವಿಶ್ವಮ್). ಅದು ವಿಷ್ಣುವಿಗೆ ಕೂಡುವುದಿಲ್ಲವಾದ್ದರಿಂದ ಅದೃಶ್ಯತ್ವಾದಿಗಳೂ ವಿಷ್ಣುಇತರ ಎಂದು ಸಾಧನೆ ಮಾಡಬಹುದು.

ಇನ್ನು ಇದರ ಮೇಲೆ ಬರುವ ಪ್ರಶ್ನೆ -

ಈ ಅಧಿಕರಣದಲ್ಲಿ, 'ಅದೃಶ್ಯತ್ವ' ಮೊದಲಾದವುಗಳನ್ನು ಸಮನ್ವಯ ಮಾಡುವುದು ಯಾಕೆ? ನೇರವಾಗಿ ಅಕ್ಷರಶಬ್ದ ಸಮನ್ವಯವನ್ನು ಮಾಡಿರಿ. ನೇರವಾಗಿ ಅಕ್ಷರಶಬ್ದ ಸಮನ್ವಯ ಮಾಡಿದರೆ, ಇದನ್ನು (ಈ ಸೂತ್ರವನ್ನು) ಲಿಂಗಪಾದದಲ್ಲಿ ಹೇಗೆ ಸೇರಿಸುವುದು. ನಾಮಪಾದದಲ್ಲಿ ಈ ಅಧಿಕರಣವು ಬರಬೇಕಾಗುತ್ತದೆ ಎಂದರೆ. ಆದಕ್ಕೆ ಉತ್ತರ - ಇದೇ ಲಿಂಗಪಾದದಲ್ಲಿ ಬರುವ ವೈಶ್ವಾನರಾಧಿಕರಣದಲ್ಲಿ ಒಂದು ವೈಶ್ವಾನರ ನಾಮಸಮನ್ವಯದಿಂದ ಅನೇಕ ಲಿಂಗಗಳು ಸಮನ್ವಿತವಾಗುತ್ತದೋ, ಅದರಂತೆ ಈ ಅಧಿಕರಣವೂ ಲಿಂಗಪಾದದಲ್ಲೇ ಇದ್ದುಕೊಂಡು ಅಕ್ಷರನಾಮವನ್ನು ಸಮನ್ವಯ ಮಾಡಿದರೂ, ಅನೇಕ ಲಿಂಗಗಳೂ ಸಮನ್ವಯವಾಗುತ್ತವೆಯಾದ್ದರಿಂದ ದೋಷವಿಲ್ಲ ಎಂದು ಸಮಾಧಾನವನ್ನು ಹೇಳಬಹುದು.

ಅಷ್ಟೇ ಅಲ್ಲದೆ, ನೇರವಾಗಿ ಅಕ್ಷರಶಬ್ದ ಸಮನ್ವಯವನ್ನು ಮಾಡಿದರೆ, ಇನ್ನೊಂದು ಲಾಭವೂ ಇದೆ. ಏನೆಂದರೆ ಪೂರ್ವಪಕ್ಷವು ನೇರವಾಗಿ ಬರುತ್ತದೆ. ಹೇಗೆಂದರೆ 'ಅಕ್ಷರಾತ್ ಸಂಭವತೀಹ ವಿಶ್ವಮ್' ಎಂದು ಅಕ್ಷರನಿಗೆ ಉಪಾದಾನತ್ವ ಕೇಳಿ ಬರುತ್ತಿರುವುದರಿಂದ ಅಕ್ಷರನು ಬ್ರಹ್ಮ ಅಲ್ಲ ಎಂದು.

ಹೀಗೆ ಮಾಡಿದರೆ 'ಉಪಾದಾನತ್ವಾತ್ ಅಕ್ಷರಶಬ್ದವಾಚ್ಯ'ನಾದವನನ್ನು 'ಇತರ' ಎಂದು ಹೇಳಿದರೆ, ಆಗ ಅಕ್ಷರನಿಗೆ ವಿಶೇಷಣವಾದ ಅದೃಶ್ಯತ್ವಾದಿಗುಣಗಳೂ ಕೂಡ ಅನ್ಯನಿಗೆ ಹೇಳಬೇಕಾಗುತ್ತದೆ ಎಂಬುದು ವಕ್ರವಾದ ಪೂರ್ವಪಕ್ಷಕ್ರಮ. ಆದ್ದರಿಂದ ಈ ಎರಡೂ ಕಾರಣಗಳಿಂದ, ನೇರವಾಗಿ ಅಕ್ಷರಶಬ್ದ ಸಮನ್ವಯವನ್ನೇ ಮಾಡುವುದು ಉಚಿತ ಎಂದು ಪ್ರಶ್ನೆ.

ಇದಕ್ಕೆ ಉತ್ತರವನ್ನು ರಾಯರು ತಮ್ಮ ವ್ಯಾಖ್ಯಾನದಲ್ಲಿ ಹೇಳುತ್ತಾರೆ -

೧. ಆಕ್ಷರಶಬ್ದಸಮನ್ವಯವನ್ನು ಆಕ್ಷರಾಧಿಕರಣದಲ್ಲಿ ಮಾಡಲಿದ್ದೇವೆ. ಆದ್ದರಿಂದ ಇಲ್ಲಿ ಪುನಃ ಮಾಡಿದರೆ, ಪೌನರುರುಕ್ತಿ ದೋಷ ಬರುತ್ತದೆ. ಹಾಗಾದರೆ ಆಲ್ಲೇ ಆಕ್ಷರಶಬ್ದ ಸಮನ್ವಯವನ್ನು ಮಾಡಿದ ಮೇಲೆ ಆದೇ ನ್ಯಾಯದಿಂದ ಇಲ್ಲಿ ಅದೃಶ್ಯತ್ವಾದಿಗುಣಸಮೂಹವನ್ನು ಬ್ರಹ್ಮನಿಗೆ ಹೇಳಬಹುದು. ಆದ್ದರಿಂದ ಈ ಅಧಿಕರಣ ವ್ಯರ್ಥವೆಂದು ಹೇಳಿದರೆ, ಇಲ್ಲಿ ಬರುವ ಆಕ್ಷರಾತ್ ಪರತಃ ಪರಃ ಎಂದು ಪರ-ಅವಧಿತ್ವರೂಪ ಬಾಧಕವಿರುವುದರಿಂದ ಆಕ್ಷರಾಧಿಕರಣದ ಮೇಲೆ ಆಕ್ಷೇಪವನ್ನು ಮಾಡಬಹುದು. (ಅಂದರೆ ಇಲ್ಲಿ ಆಕ್ಷರಶಬ್ದವಾಚ್ಯನು ವಿಷ್ಣು ಅಲ್ಲ, ಪರಾವಧಿತ್ವಬಾಧಕವಿರುವುದರಿಂದ. ಆದ್ದರಿಂದ ಆಕ್ಷರಾಧಿಕರಣದಲ್ಲಿ ಹೇಳಿದ ಆಕ್ಷರನೂ ವಿಷ್ಣುವಲ್ಲ ಎಂದು.)

೨. ಇಲ್ಲಿ ಕೇವಲ ಆಕ್ಷರಶಬ್ದವನ್ನು ಸಮನ್ವಯ ಮಾಡದೆ, ಅನೇಕ ಗುಣಸಮೂಹವನ್ನು ಸಮನ್ವಯ ಮಾಡುತ್ತಾರೆ.

೩. ಈ ಪಾದದಲ್ಲಿ ಎಲ್ಲ ಅಧಿಕರಣಗಳಲ್ಲೂ ಆನ್ಯಸಾಹಿತ್ಯೇನ ಏವ ಅನ್ಯತ್ರಪ್ರಸಿದ್ಧಿಯನ್ನು ಹೇಳಲಾಗಿದೆ. (ಉದಾ:- ಆದಿತ್ಯಶ್ರುತಿಯಿಂದ ಸರ್ವಗತತ್ವವನ್ನು ಸಮನ್ವಯ ಮಾಡಿದಂತೆ) ಅದರಂತೆ ಇಲ್ಲಿ ಆಕ್ಷರಶ್ರುತಿಸಾಹಿತ್ಯೇನ, ಅದೃಶ್ಯತ್ವಾದಿಗಳಿಗೆ ಅನ್ಯತ್ರಪ್ರಸಿದ್ಧಿಯನ್ನು ಹೇಳುವುದು ಉಚಿತ.

೪. ಅದೃಶ್ಯತ್ವಾದಿಗುಣಸಮನ್ವಯವನ್ನು ಮಾಡಿದರೆ, ಆಗ ಹಿಂದಿನ ಅಧಿಕರಣದ ಸಂಗತಿಯು ನೇರವಾಗಿ ಬರುತ್ತದೆ. (ಹಿಂದೆ ಅಂತರ್ಯಾಮೀ ವಿಷ್ಣುಃ ಅದೃಶ್ಯತ್ವಾತ್ ಎಂದು ಹೇಳಿದ್ದರಿಂದ)

ಹೀಗೆ ನಾಲ್ಕು ರೀತಿಯಿಂದ ರಾಯರು ಸಮಾಧಾನವನ್ನು ಹೇಳಿದ್ದಾರೆ. ಇಷ್ಟು ಕಾರಣಗಳಿಂದಾಗಿಯೇ ವ್ಯಾಸರಾಜರು ಪೂರ್ವಪಕ್ಷವನ್ನು ಆಕ್ಷರಶಬ್ದದ ಮೂಲಕ ದೃಢಪಡಿಸುತ್ತಿದ್ದಾರೆ ಎಂದು ರಾಯರ ವ್ಯಾಖ್ಯಾನದಿಂದ ತಿಳಿದುಬರುತ್ತದೆ.

ವೈಶ್ವಾನರಾಧಿಕರಣ

ಈ ಅಧಿಕರಣದಲ್ಲಿ ವೈಶ್ವಾನರ ಶಬ್ದಸಮನ್ವಯವನ್ನು ಮಾಡಿದ್ದಾರೆ.

ಸಮನ್ವಯ ಮಾಡುವ ಸಂದರ್ಭದಲ್ಲಿ, ೧. ಅಗ್ನಿ, ಇಂದ್ರ, ವೈಶ್ವಾನರ ಮೊದಲಾದ ಶಬ್ದಗಳು ಮುಖ್ಯವಾಗಿ ಬ್ರಹ್ಮನನ್ನೇ ಹೇಳಿದರೆ, ಪ್ರಸಿದ್ಧ ಅಗ್ನಿಯಲ್ಲಿ ಲೌಕಿಕವ್ಯವಹಾರ ಹೇಗೆ? (ಉದಾ:- ಅಗ್ನಿಂ, ಆನಯ ಎಂದು ಗುರುವು ಶಿಷ್ಯನಿಗೆ ಹೇಳಿದರೆ, ಅಗ್ನಿ ಶಬ್ದವು ಮುಖ್ಯವಾಗಿ ಬ್ರಹ್ಮನನ್ನೇ ಹೇಳಿದರೆ, ಲೌಕಿಕವ್ಯವಹಾರವನ್ನು ಹೇಗೆ ಕೂಡಿಸುವುದು)

೨. ಅಗ್ನಿ, ಇಂದ್ರ ಮೊದಲಾದ ಎಲ್ಲ ಶಬ್ದಗಳೂ ಬ್ರಹ್ಮನನ್ನೇ ಹೇಳಿದರೆ, ಅಗ್ನಿಸೂಕ್ತ, ಇಂದ್ರಸೂಕ್ತ ಮೊದಲಾದ ಸೂಕ್ತವ್ಯವಸ್ಥೆ ಹೇಗೆ?

೩. ಹಾಗೆಯೇ ಅಗ್ನಿವಿದ್ಯಾ, ಇಂದ್ರವಿದ್ಯಾ ಮೊದಲಾದ ವಿದ್ಯಾವ್ಯವಸ್ಥಾ ಹೇಗೆ? ಮೊದಲಾದ ಪ್ರಶ್ನೆಗಳಿಗೆ ಉತ್ತರವನ್ನೂ ಕೊಟ್ಟಿದ್ದಾರೆ.

ಸಿದ್ಧಾಂತದಲಿ ಉತ್ತರ ಕೊಡಬೇಕಾದರೆ, ಮೊದಲನೆ ಪ್ರಶ್ನೆಗೆ, ಅಗ್ನಿ, ವೈಶ್ವಾನರ ಮೊದಲಾದ ಶಬ್ದಗಳು ಪರಮಮುಖ್ಯವಾಗಿ ವಿಷ್ಣುವಿನನ್ನೇ ಹೇಳುತ್ತದೆ. ಮುಖ್ಯವಾಗಿ ಪುರಂದರ, ಅಗ್ನಿ ಮೊದಲಾದ ದೇವತೆಗಳನ್ನೂ ಹೇಳುತ್ತದೆ. ಆದ್ದರಿಂದ ಹಾನಾದಿವ್ಯವಹಾರಾರ್ಥಂ ಅಗ್ನಿ ಮೊದಲಾದ ಶಬ್ದಗಳನ್ನು ವಿಷ್ಣುಇತರರಲ್ಲೂ ಪ್ರಯೋಗಿಸಬಹುದು. (ಇದನ್ನು 'ಸಾಕ್ಷಾದಪ್ಯವಿರೋಧಂ ಜೈಮಿನಿಃ' ಎಂಬಲ್ಲಿ ಹೇಳಿದ್ದಾರೆ. ಇನ್ನು ಸೂಕ್ತವ್ಯವಸ್ಥಾ, ವಿದ್ಯಾವ್ಯವಸ್ಥಾ ಹೇಗೆ ಎಂಬುದಕ್ಕೆ ಮೂರುರೀತಿಯಲ್ಲಿ ಉತ್ತರ ಕೊಟ್ಟಿದ್ದಾರೆ.

೧. ''ಅಭಿವ್ಯಕ್ತೇಃ ಇತ್ಯಾಶ್ಮರಥ್ಯಃ'' ಎಂಬ ಸೂತ್ರದಲ್ಲಿ, ಅಗ್ನಿ ಮುಂತಾದವುಗಳಲ್ಲಿ ಬ್ರಹ್ಮನ ಉಪಾಸನೆಯಿಂದ ಬ್ರಹ್ಮನ ಅಭಿವ್ಯಕ್ತಿಯಾಗುವುದರಿಂದ, ಅಗ್ನಿಸೂಕ್ತ, ಇಂದ್ರಸೂಕ್ತ ಮೊದಲಾದ ಸೂಕ್ತವ್ಯವಸ್ಥಾವನ್ನು ಕೂಡಿಸಬಹುದು ಎಂದು ಆಶ್ಮರಥ್ಯರ ಅಭಿಪ್ರಾಯ.

೨. ''ಅನುಸ್ಮೃತೇಃ ಬಾದರಿಃ'' ಎಂಬ ಸೂತ್ರದಲ್ಲಿ, ಆಯಾ ಸೂಕ್ತಗಳ ಉಪಾಸಕರಿಂದ, ಆಯಾ ಪ್ರತೀಕಗಳಲ್ಲಿ ಬ್ರಹ್ಮನ ಸ್ಮರಣೆ (ಧ್ಯಾನ)ವನ್ನು ಮಾಡುವುದರಿಂದ ಸೂಕ್ತವ್ಯವಸ್ಥಾವನ್ನು ಕೂಡಿಸಬಹುದು. (ಉದಾ: ಅಗ್ನಿ ಉಪಾಸಕನು. ಅಗ್ನಿಪ್ರತೀಕದಲ್ಲಿ ಬ್ರಹ್ಮನನ್ನು ಉಪಾಸನೆ ಮಾಡುತ್ತಾನೆ.) ಎಂಬುದು ಶುಕಾಚಾರ್ಯರ ಅಭಿಪ್ರಾಯ.

೩. ''ಸಂಪತ್ತೇರಿತಿ ಜೈಮಿನಿಃ'' ಎಂಬ ಸೂತ್ರದಲ್ಲಿ, ಅಗ್ನಿಸೂಕ್ತದಿಂದ ಉಪಾಸನೆ ಮಾಡುವವನಿಗೆ ಅಗ್ನಿಸ್ಥ ಬ್ರಹ್ಮ ಪ್ರಾಪ್ತಿಯು, ವಾಯುಸೂಕ್ತದಿಂದ ಉಪಾಸನೆ ಮಾಡುವವನಿಗೆ ವಾಯುಗತ ಬ್ರಹ್ಮಪ್ರಾಪ್ತಿಯು. ಹೀಗೆ ಸೂಕ್ತ ವ್ಯವಸ್ಥೆಯನ್ನು ಮಾಡಬಹುದು. ಹೀಗೆ ಸೂಕ್ತವ್ಯವಸ್ಥಾ, ವಿದ್ಯಾವ್ಯವಸ್ಥೆಯನ್ನು ಮೂರುರೀತಿಯಲ್ಲಿ ಸಮಾಧಾನ ಹೇಳಿದ್ದಾರೆ.

ಇದರ ಮೇಲೆ ವ್ಯಾಸರಾಜರು ಒಂದು ಸ್ವಾರಸ್ಯವಾದ ಪ್ರಶ್ನೆಯನ್ನು ಮಾಡುತ್ತಾರೆ.

ಈ ರೀತಿಯಲ್ಲಿ ಸೂತ್ರಕಾರರು ಸಮಾಧಾನವನ್ನು ಹೇಳುವುದು ಸಮಂಜಸವಾಗುವುದಿಲ್ಲ ಯಾಕೆಂದರೆ -

೧. ಅಧಿಷ್ಠಾನ ಇದ್ದ ಕಡೆ, ಈ ಮೂರು ರೀತಿಯಲ್ಲಿ ಯಾವುದಾದರೂ ಒಂದು ಸಮಾಧಾನವನ್ನು ಇಟ್ಟುಕೊಂಡು ಸೂಕ್ತವ್ಯವಸ್ಥಾವನ್ನು ಮಾಡಬಹುದು. ಆದರೆ, ಎಲ್ಲಿ ನೇರವಾಗಿ ಬ್ರಹ್ಮನನ್ನು ಹೇಳುವ ವಾಕ್ಯಗಳಿರುತ್ತವೆಯೋ (ಉದಾಹರಣೆ ಪುರುಷಸೂಕ್ತ, ವಾಮನಸೂಕ್ತ, ವಿಷ್ಣುಸೂಕ್ತ) ಇಲ್ಲಿ ಅಧಿಷ್ಠಾನವೇ ಇಲ್ಲದಿರುವುದರಿಂದ, ಈ ಯಾವ ಸಮಾಧಾನವನ್ನೂ ಹೇಳಲಿಕ್ಕೆ ಬರುವುದಿಲ್ಲ.

೨. ಇನ್ನು ಈ ಮೂರು ಸಮಾಧಾನಗಳಲ್ಲಿ, ಅಧಿಷ್ಠಾನಭೇದವನ್ನು ಅವಲಂಬಿಸಿ, ಸೂಕ್ತಭೇದವನ್ನು ಹೇಳಬೇಕು. ಆದರೆ, ಕೆಲವು ಕಡೆ, ಒಂದೇ ದೇವತಾ ಇದ್ದು. (ಅಂದರೆ ಅಧಿಷ್ಠಾನಭೇದವಿಲ್ಲದೆ)

ಇದಕ್ಕೆ ಉತ್ತರವನ್ನು ರಾಯರು ತಮ್ಮ ವ್ಯಾಖ್ಯಾನದಲ್ಲಿ ಹೇಳುತ್ತಾರೆ -

೧. ಆಕ್ಷರಶಬ್ದಸಮನ್ವಯವನ್ನು ಆಕ್ಷರಾಧಿಕರಣದಲ್ಲಿ ಮಾಡಲಿದ್ದೇವೆ. ಆದ್ದರಿಂದ ಇಲ್ಲಿ ಪುನಃ ಮಾಡಿದರೆ, ಪೌನರುರುಕ್ತಿ ದೋಷ ಬರುತ್ತದೆ. ಹಾಗಾದರೆ ಆಲ್ಲೇ ಆಕ್ಷರಶಬ್ದ ಸಮನ್ವಯವನ್ನು ಮಾಡಿದ ಮೇಲೆ ಆದೇ ನ್ಯಾಯದಿಂದ ಇಲ್ಲಿ ಆದೃಶ್ಯತ್ವಾದಿಗುಣಸಮೂಹವನ್ನು ಬ್ರಹ್ಮನಿಗೆ ಹೇಳಬಹುದು. ಆದ್ದರಿಂದ ಈ ಅಧಿಕರಣ ವ್ಯರ್ಥವೆಂದು ಹೇಳಿದರೆ, ಇಲ್ಲಿ ಬರುವ ಆಕ್ಷರಾತ್ ಪರತಃ ಪರಃ ಎಂದು ಪರ-ಅವಧಿತ್ವರೂಪ ಬಾಧಕವಿರುವುದರಿಂದ ಆಕ್ಷರಾಧಿಕರಣದ ಮೇಲೆ ಆಕ್ಷೇಪವನ್ನು ಮಾಡಬಹುದು. (ಅಂದರೆ ಇಲ್ಲಿ ಆಕ್ಷರಶಬ್ದವಾಚ್ಯನು ವಿಷ್ಣು ಅಲ್ಲ, ಪರಾವಧಿತ್ವಬಾಧಕವಿರುವುದರಿಂದ. ಆದ್ದರಿಂದ ಆಕ್ಷರಾಧಿಕರಣದಲ್ಲಿ ಹೇಳಿದ ಆಕ್ಷರನೂ ವಿಷ್ಣುವಲ್ಲ ಎಂದು.)

೨. ಇಲ್ಲಿ ಕೇವಲ ಆಕ್ಷರಶಬ್ದವನ್ನು ಸಮನ್ವಯ ಮಾಡದೆ, ಅನೇಕ ಗುಣಸಮೂಹವನ್ನು ಸಮನ್ವಯ ಮಾಡುತ್ತಾರೆ.

೩. ಈ ಪಾದದಲ್ಲಿ ಎಲ್ಲ ಅಧಿಕರಣಗಳಲ್ಲೂ ಅನ್ಯಸಾಹಿತ್ಯೇನ ಏವ ಅನ್ಯತ್ರಪ್ರಸಿದ್ಧಿಯನ್ನು ಹೇಳಲಾಗಿದೆ. (ಉದಾ:- ಆದಿತ್ಯಶ್ರುತಿಯಿಂದ ಸರ್ವಗತತ್ವವನ್ನು ಸಮನ್ವಯ ಮಾಡಿದಂತೆ) ಅದರಂತೆ ಇಲ್ಲಿ ಆಕ್ಷರಶ್ರುತಿಸಾಹಿತ್ಯೇನ, ಆದೃಶ್ಯತ್ವಾದಿಗಳಿಗೆ ಅನ್ಯತ್ರಪ್ರಸಿದ್ಧಿಯನ್ನು ಹೇಳುವುದು ಉಚಿತ.

೪. ಆದೃಶ್ಯತ್ವಾದಿಗುಣಸಮನ್ವಯವನ್ನು ಮಾಡಿದರೆ, ಆಗ ಹಿಂದಿನ ಅಧಿಕರಣದ ಸಂಗತಿಯು ನೇರವಾಗಿ ಬರುತ್ತದೆ. (ಹಿಂದೆ ಅಂತರ್ಯಾಮೀ ವಿಷ್ಣುಃ ಆದೃಶ್ಯತ್ವಾತ್ ಎಂದು ಹೇಳಿದ್ದರಿಂದ)

ಹೀಗೆ ನಾಲ್ಕು ರೀತಿಯಿಂದ ರಾಯರು ಸಮಾಧಾನವನ್ನು ಹೇಳಿದ್ದಾರೆ. ಇಷ್ಟು ಕಾರಣಗಳಿಂದಾಗಿಯೇ ವ್ಯಾಸರಾಜರು ಪೂರ್ವಪಕ್ಷವನ್ನು ಆಕ್ಷರಶಬ್ದದ ಮೂಲಕ ದೃಢಪಡಿಸುತ್ತಿದ್ದಾರೆ ಎಂದು ರಾಯರ ವ್ಯಾಖ್ಯಾನದಿಂದ ತಿಳಿದುಬರುತ್ತದೆ.

ವೈಶ್ವಾನರಾಧಿಕರಣ

ಈ ಅಧಿಕರಣದಲ್ಲಿ ವೈಶ್ವಾನರ ಶಬ್ದಸಮನ್ವಯವನ್ನು ಮಾಡಿದ್ದಾರೆ.

ಸಮನ್ವಯ ಮಾಡುವ ಸಂದರ್ಭದಲ್ಲಿ, ೧. ಅಗ್ನಿ, ಇಂದ್ರ, ವೈಶ್ವಾನರ ಮೊದಲಾದ ಶಬ್ದಗಳು ಮುಖ್ಯವಾಗಿ ಬ್ರಹ್ಮನನ್ನೇ ಹೇಳಿದರೆ, ಪ್ರಸಿದ್ಧ ಅಗ್ನಿಯಲ್ಲಿ ಲೌಕಿಕವ್ಯವಹಾರ ಹೇಗೆ? (ಉದಾ:- ಅಗ್ನಿಂ, ಆನಯ ಎಂದು ಗುರುವು ಶಿಷ್ಯನಿಗೆ ಹೇಳಿದರೆ, ಅಗ್ನಿ ಶಬ್ದವು ಮುಖ್ಯವಾಗಿ ಬ್ರಹ್ಮನನ್ನೇ ಹೇಳಿದರೆ, ಲೌಕಿಕವ್ಯವಹಾರವನ್ನು ಹೇಗೆ ಕೂಡಿಸುವುದು)

೨. ಅಗ್ನಿ, ಇಂದ್ರ ಮೊದಲಾದ ಎಲ್ಲ ಶಬ್ದಗಳೂ ಬ್ರಹ್ಮನನ್ನೇ ಹೇಳಿದರೆ, ಅಗ್ನಿಸೂಕ್ತ, ಇಂದ್ರಸೂಕ್ತ ಮೊದಲಾದ ಸೂಕ್ತವ್ಯವಸ್ಥೆ ಹೇಗೆ?

೩. ಹಾಗೆಯೇ ಅಗ್ನಿವಿದ್ಯಾ, ಇಂದ್ರವಿದ್ಯಾ ಮೊದಲಾದ ವಿದ್ಯಾವ್ಯವಸ್ಥಾ ಹೇಗೆ? ಮೊದಲಾದ ಪ್ರಶ್ನೆಗಳಿಗೆ ಉತ್ತರವನ್ನೂ ಕೊಟ್ಟಿದ್ದಾರೆ.

ಸಿದ್ಧಾಂತದಲಿ ಉತ್ತರ ಕೊಡಬೇಕಾದರೆ, ಮೊದಲನೆ ಪ್ರಶ್ನೆಗೆ, ಅಗ್ನಿ, ವೈಶ್ವಾನರ ಮೊದಲಾದ ಶಬ್ದಗಳು ಪರಮಮುಖ್ಯವಾಗಿ ವಿಷ್ಣುವಿನನ್ನೇ ಹೇಳುತ್ತದೆ. ಮುಖ್ಯವಾಗಿ ಪುರಂದರ, ಅಗ್ನಿ ಮೊದಲಾದ ದೇವತೆಗಳನ್ನೂ ಹೇಳುತ್ತದೆ. ಆದ್ದರಿಂದ ಹಾನಾದಿವ್ಯವಹಾರಾರ್ಥಂ ಅಗ್ನಿ ಮೊದಲಾದ ಶಬ್ದಗಳನ್ನು ವಿಷ್ಣುಇತರರಲ್ಲೂ ಪ್ರಯೋಗಿಸಬಹುದು. (ಇದನ್ನು 'ಸಾಕ್ಷಾದಪ್ಯವಿರೋಧಂ ಜೈಮಿನಿಃ' ಎಂಬಲ್ಲಿ ಹೇಳಿದ್ದಾರೆ. ಇನ್ನು ಸೂಕ್ತವ್ಯವಸ್ಥಾ, ವಿದ್ಯಾವ್ಯವಸ್ಥಾ ಹೇಗೆ ಎಂಬುದಕ್ಕೆ ಮೂರುರೀತಿಯಲ್ಲಿ ಉತ್ತರ ಕೊಟ್ಟಿದ್ದಾರೆ.

೧. ''ಅಭವ್ಯಕ್ತೇಃ ಇತ್ಯಾಶ್ಮರಥ್ಯಃ'' ಎಂಬ ಸೂತ್ರದಲ್ಲಿ, ಅಗ್ನಿ ಮುಂತಾದವುಗಳಲ್ಲಿ ಬ್ರಹ್ಮನ ಉಪಾಸನೆಯಿಂದ ಬ್ರಹ್ಮನ ಅಭವ್ಯಕ್ತಿಯಾಗುವುದರಿಂದ, ಅಗ್ನಿಸೂಕ್ತ, ಇಂದ್ರಸೂಕ್ತ ಮೊದಲಾದ ಸೂಕ್ತವ್ಯವಸ್ಥಾವನ್ನು ಕೂಡಿಸಬಹುದು ಎಂದು ಆಶ್ಮರಥ್ಯರ ಅಭಿಪ್ರಾಯ.

೨. ''ಆನುಸ್ಮೃತೇಃ ಬಾದರಿಃ'' ಎಂಬ ಸೂತ್ರದಲ್ಲಿ, ಆಯಾ ಸೂಕ್ತಗಳ ಉಪಾಸಕರಿಂದ, ಆಯಾ ಪ್ರತೀಕಗಳಲ್ಲಿ ಬ್ರಹ್ಮನ ಸ್ಮರಣೆ (ಧ್ಯಾನ)ವನ್ನು ಮಾಡುವುದರಿಂದ ಸೂಕ್ತವ್ಯವಸ್ಥಾವನ್ನು ಕೂಡಿಸಬಹುದು. (ಉದಾ: ಅಗ್ನಿ ಉಪಾಸಕನು. ಅಗ್ನಿಪ್ರತೀಕದಲ್ಲಿ ಬ್ರಹ್ಮನನ್ನು ಉಪಾಸನೆ ಮಾಡುತ್ತಾನೆ.) ಎಂಬುದು ಶುಕಾಚಾರ್ಯರ ಅಭಿಪ್ರಾಯ.

೩. ''ಸಂಪತ್ತೇರಿತಿ ಜೈಮಿನಿಃ'' ಎಂಬ ಸೂತ್ರದಲ್ಲಿ, ಅಗ್ನಿಸೂಕ್ತದಿಂದ ಉಪಾಸನೆ ಮಾಡುವವನಿಗೆ ಅಗ್ನಿಸ್ಥ ಬ್ರಹ್ಮ ಪ್ರಾಪ್ತಿಯು, ವಾಯುಸೂಕ್ತದಿಂದ ಉಪಾಸನೆ ಮಾಡುವವನಿಗೆ ವಾಯುಗತ ಬ್ರಹ್ಮಪ್ರಾಪ್ತಿಯು. ಹೀಗೆ ಸೂಕ್ತ ವ್ಯವಸ್ಥೆಯನ್ನು ಮಾಡಬಹುದು. ಹೀಗೆ ಸೂಕ್ತವ್ಯವಸ್ಥಾ, ವಿದ್ಯಾವ್ಯವಸ್ಥೆಯನ್ನು ಮೂರುರೀತಿಯಲ್ಲಿ ಸಮಾಧಾನ ಹೇಳಿದ್ದಾರೆ.

ಇದರ ಮೇಲೆ ವ್ಯಾಸರಾಜರು ಒಂದು ಸ್ವಾರಸ್ಯವಾದ ಪ್ರಶ್ನೆಯನ್ನು ಮಾಡುತ್ತಾರೆ.

ಈ ರೀತಿಯಲ್ಲಿ ಸೂತ್ರಕಾರರು ಸಮಾಧಾನವನ್ನು ಹೇಳುವುದು ಸಮಂಜಸವಾಗುವುದಿಲ್ಲ ಯಾಕೆಂದರೆ -

೧. ಅಧಿಷ್ಠಾನ ಇದ್ದ ಕಡೆ, ಈ ಮೂರು ರೀತಿಯಲ್ಲಿ ಯಾವುದಾದರೂ ಒಂದು ಸಮಾಧಾನವನ್ನು ಇಟ್ಟುಕೊಂಡು ಸೂಕ್ತವ್ಯವಸ್ಥಾವನ್ನು ಮಾಡಬಹುದು. ಆದರೆ, ಎಲ್ಲಿ ನೇರವಾಗಿ ಬ್ರಹ್ಮನನ್ನು ಹೇಳುವ ವಾಕ್ಯಗಳಿರುತ್ತವೆಯೋ (ಉದಾಹರಣೆ ಪುರುಷಸೂಕ್ತ, ವಾಮನಸೂಕ್ತ, ವಿಷ್ಣುಸೂಕ್ತ) ಇಲ್ಲಿ ಅಧಿಷ್ಠಾನವೇ ಇಲ್ಲದಿರುವುದರಿಂದ, ಈ ಯಾವ ಸಮಾಧಾನವನ್ನೂ ಹೇಳಲಿಕ್ಕೆ ಬರುವುದಿಲ್ಲ.

೨. ಇನ್ನು ಈ ಮೂರು ಸಮಾಧಾನಗಳಲ್ಲಿ, ಅಧಿಷ್ಠಾನಭೇದವನ್ನು ಅವಲಂಬಿಸಿ, ಸೂಕ್ತಭೇದವನ್ನು ಹೇಳಬೇಕು. ಆದರೆ, ಕೆಲವು ಕಡೆ, ಒಂದೇ ದೇವತಾ ಇದ್ದು. (ಅಂದರೆ ಅಧಿಷ್ಠಾನಭೇದವಿಲ್ಲದೆ)

ಸೂಕ್ತವ್ಯವಸ್ಥಾ ಇರುವುದು ಕಂಡಿದೆ. (ಅಂದರೆ ಅಧಿಷ್ಠಾನಭೇದವಿಲ್ಲದೆ) ಸೂಕ್ತವ್ಯವಸ್ಥಾ ಇರುವುದು ಕಂಡಿದೆ. ಉದಾ: ಸೌರಸೂಕ್ತ, ಸಾವಿತ್ರಸೂಕ್ತ, ಇವೆರಡಕ್ಕೂ ದೇವತಾ ಒಬ್ಬನೇ ಸೂರ್ಯ. ಆದರೂ ಸೌರ, ಸಾವಿತ್ರ ಮೊದಲಾಗಿ ಸೂಕ್ತಭೇದವಿದೆ. ಈ ಭೇದವನ್ನು ಹಿಂದೆ ಹೇಳಿದ ಮೂರುರೀತಿಯಿಂದಲೂ ಕೂಡಿಸುವುದಕ್ಕೆ ಬರುವುದಿಲ್ಲ.

ಆದ್ದರಿಂದ ಋಗ್ಭಾಷ್ಯದಲ್ಲಿ ಹೇಳಿದ ಸೂಕ್ತವ್ಯವಸ್ಥಾ ಸಮಾಧಾನವನ್ನು ಹೇಳಬೇಕು. ಆಲ್ಲಿ ಏನು ಹೇಳಿದ್ದಾರೆ ಎಂದರೆ. ವಿಷ್ಣುರೂಪಗಳು ಎರಡು ವಿಧ. ದೇವತಾಂತರ್ಗತವಿಷ್ಣುರೂಪಗಳು ಕೆಲವು. ದೇವತಾ-ಅನಂತರ್ಗತ ವಿಷ್ಣುರೂಪಗಳು ಇನ್ನು ಕೆಲವು. ಅದರಲ್ಲಿ 'ಅಗ್ನಿ' ಎಂಬ ದೇವತಾ ಅಧಿಷ್ಠಾನದಲ್ಲಿ ಇರುವ 'ಅಗ್ನಿ' ಎಂಬ ಹೆಸರುಳ್ಳ ವಿಷ್ಣುರೂಪ ಹಾಗೆಯೇ 'ವಾಯು' ಎಂಬ ದೇವತಾ ಅಧಿಷ್ಠಾನದಲ್ಲಿ ಇರುವ 'ವಾಯು' ಎಂಬ ಹೆಸರುಳ್ಳ ವಿಷ್ಣುರೂಪ. ಈ ರೂಪಗಳಿಗೆ ಭೇದವಿರುವುದರಿಂದ (ಹಾಗೂ ಅಧಿಷ್ಠಾನಗಳಲ್ಲಿ ಭೇದವಿರುವುದರಿಂದ) ಸೂಕ್ತಭೇದವ್ಯವಸ್ಥಾ. ಇನ್ನು ಅಧಿಷ್ಠಾನದ ಸಂಬಂಧವಿಲ್ಲದೇನೇ ಕೇವಲ ವಿಷ್ಣುವಿನ ನಾಮಗಳಲ್ಲಿ ಭೇದವಿರುವುದರಿಂದಲೂ ೩ ಸೂಕ್ತಭೇದವ್ಯವಸ್ಥಾವನ್ನು ಕೂಡಿಸಬಹುದು. ಉದಾ:- ವಾಮನ ಹಾಗೂ ವಿಷ್ಣು ಇವೆರಡು ಬೇರೆ ಬೇರೆ ಬ್ರಹ್ಮನ ನಾಮಗಳು.

ಹಾಗೆಯೇ ಸೌರಸೂಕ್ತ ಹಾಗೂ ಸಾವಿತ್ರ ಸೂಕ್ತ ಇವೆರಡಕ್ಕೂ ಅಧಿಷ್ಠಾನನಾದ ಸೂರ್ಯ ಒಬ್ಬನೇ ಆದರೂ, ವಿಷ್ಣುವಿನ ನಾಮಗಳಲ್ಲಿ ಭೇದ ಇದೆ. (ಸೂರ್ಯ, ಸಾವಿತ್ರ) ಎಂದು. ಆದ್ದರಿಂದ 'ನಾಮಭೇದಾತ್', 'ಸೂಕ್ತಭೇದಃ' ಎಂಬ ವ್ಯವಸ್ಥಾವನ್ನು ಋಗ್ಭಾಷ್ಯದಲ್ಲಿ ಮಾಡಿದ್ದಾರೆ.

ಈ ವ್ಯವಸ್ಥಾವನ್ನೇ ಇಲ್ಲೂ ಹೇಳಬೇಕು. ಇಲ್ಲದಿದ್ದರೆ, ಮೇಲೆ ಹೇಳಿದ ಎರಡು ಪ್ರಶ್ನೆಗಳಿಗೆ ಉತ್ತರ ಬರುವುದಿಲ್ಲ ಎಂಬ ಸ್ವಾರಸ್ಯವಾದ ಸಂದೇಹವನ್ನು ಎತ್ತಿಕೊಂಡು. ಅದಕ್ಕೆ ಪರಿಹಾರವನ್ನೂ ಅಷ್ಟೇ ಹೃದಯಂಗಮವಾಗಿ ಹೇಳಿದ್ದಾರೆ.

ಈ ಅಧಿಕರಣದಲ್ಲಿ, ಉಪಾಸಕನ ಉಪಾಸ್ಯವಾದ ಅಧಿಷ್ಠಾನದಲ್ಲಿ ಭೇದವಿದ್ದರಿಂದಲೂ ಸೂಕ್ತವ್ಯವಸ್ಥಾವನ್ನು ಕೂಡಿಸಬಹುದು ಎಂಬುದನ್ನೂ ಹೇಳುತ್ತಿದ್ದಾರೆ. ಆದ್ದರಿಂದ ಋಗ್ಭಾಷ್ಯದಲ್ಲಿ ಹೇಳಿದ ಪರಿಹಾರವನ್ನು ಒಪ್ಪಿ, ಇಲ್ಲಿ ಒಬ್ಬ ಸಾಧಕನು ಯಾವ ರೀತಿಯಲ್ಲಿ ಪರಮಾತ್ಮನ ರೂಪಗಳನ್ನು ಬೇರೆ ಬೇರೆ ಅಧಿಷ್ಠಾನಗಳಲ್ಲಿ ಉಪಾಸನೆಯನ್ನು ಮಾಡಬಹುದು. ಆದರಿಂದ ಆಗುವ ಫಲವೇನು ಎಂಬುದನ್ನು ತಿಳಿಸುವುದಕ್ಕಾಗಿ ಈ ಅಧಿಕರಣವು ಹೊರಟಿದೆ. ಹೀಗೆ ಅನುಷ್ಠಾನ-ಉಪಯೋಗಿಯಾಗುವ ಈ ಪರಿಹಾರದಿಂದಲೂ ಸೂಕ್ತವ್ಯವಸ್ಥಾವನ್ನು ಕೂಡಿಸಬಹುದು ಎಂಬ ಹೆಚ್ಚಿನ ಅಂಶವನ್ನು ಇಲ್ಲಿ ಹೇಳಿದ್ದಾರೆ ಹೊರತು, ಋಗ್ಭಾಷ್ಯದಲ್ಲಿ ಹೇಳಿರುವ ಪ್ರಮೇಯಕ್ಕೆ ಯಾವ ವಿರೋಧವೂ ಇಲ್ಲ.

ದ್ಯುಭ್ವಾದ್ಯಧಿಕರಣ

ಈ ಅಧಿಕರಣದಲ್ಲಿ, ''ಎಲ್ಲಾ ಲೋಕಗಳಿಗೆ ಯಾವ ದೇವತೆಯು ಆಶ್ರಯನಾಗಿರುವವನಾಗಿದ್ದಾನೆ'' - ಎಂಬುವುದನ್ನು ನಿರ್ಣಯ ಮಾಡಲಾಗಿದೆ. 'ಸರ್ವಾಧಾರತ್ವ' ಎಂಬ ಲಿಂಗವನ್ನು ಸಮನ್ವಯ

ಮಾಡಲಾಗಿದೆ. 'ಮುಂಡಕ ಉಪನಿಷತ್ತಿನಲ್ಲಿ, ಯಸ್ಮಿನ್ ದ್ಯೌ ಪೃಥಿವೀ ಚ ಅಂತರಿಕ್ಷಂ ಆತ ಮನಃ ಸಹ ಪ್ರಾಣೈಶ್ಚ ಸರ್ವೈಃ । ತಮೇವೈಕಂ ಜಾನಥ ಆತ್ಮಾನಂ ಅನ್ಯಾವಾಚೋ ವಿಮುಂಚಥ' ಎಂಬ ಶ್ರುತಿಯು ಇಲ್ಲಿ ವಿಷಯವಾಕ್ಯ.

ಇಲ್ಲಿ ಪ್ರತಿಪಾದಿತವಾಗಿರುವ ದ್ಯು, ಭೂ, ಅಂತರಿಕ್ಷ ಮೊದಲಾದವುಗಳ ಆಶ್ರಯ ಪ್ರಧಾನಾದಿಗಳಲ್ಲಿ (ಪ್ರಧಾನ ಅಥವಾ ರುದ್ರ ಅಥವಾ ವಾಯು ಅಥವಾ ಜೀವ) ಯಾವುದಾದರೂ ಆಗಲಿ ಎಂಬುದು ಪೂರ್ವಪಕ್ಷ.

ಈ ವಾಕ್ಯದಲ್ಲಿ ಆತ್ಮಶಬ್ದವು ಶ್ರುತವಾಗಿರುವುದರಿಂದ, ಆ ಆತ್ಮ ಶಬ್ದವು ಬ್ರಹ್ಮನಿಗೆ ಮಾತ್ರ ವಾಚಕವಾಗಿರುವುದರಿಂದ ಬ್ರಹ್ಮನೇ ದ್ಯುಭ್ವಾದ್ಯಾಯತನ ಎಂಬುದು ಸಿದ್ಧಾಂತ.

ಇಲ್ಲಿ 'ಆತ್ಮಶಬ್ದಾತ್' ಎಂದು ಹೇಳದೇ 'ಸ್ವಶಬ್ದಾತ್' ಎಂದು ಸೂತ್ರಕಾರರು ಯಾಕೆ ಹೇಳಿದ್ದಾರೆ? ಎಂಬ ಪ್ರಶ್ನೆಗೆ ವ್ಯಾಸರಾಜರು ಸ್ವಾರಸ್ಯವಾಗಿ ಉತ್ತರವನ್ನು ಕೊಟ್ಟಿದ್ದಾರೆ.

ಸೂತ್ರದಲ್ಲಿರುವ 'ಸ್ವಶಬ್ದಾತ್' ಎನ್ನುವುದಕ್ಕೆ 'ಸ್ವೇತಿ ಶಬ್ದಃ ಸ್ವಶಬ್ದಃ' ಎಂದು ಕರ್ಮಧಾರಯ ಸಮಾಸವನ್ನು ಮಾಡಬೇಕು. ಅಲ್ಲಿರುವ ಸ್ವಶಬ್ದಕ್ಕೆ ಸ್ವಶಬ್ದ ಪರ್ಯಾಯವಾದ 'ಆತ್ಮಶಬ್ದವನ್ನು' ತೆಗೆದುಕೊಳ್ಳಬೇಕು.

ಇಲ್ಲಿ 'ಸ್ವ' ಎಂಬ ಶಬ್ದದಿಂದ ಆತ್ಮಶಬ್ದವನ್ನು ತೆಗೆದುಕೊಳ್ಳುವುದಕ್ಕಿಂತ, 'ಆತ್ಮಶಬ್ದಾತ್' ಎಂದೇ ಸೂತ್ರಕಾರರು ಪ್ರಯೋಗ ಮಾಡಬಹುದಾಗಿತ್ತು. ಆಗ ವಿಷಯವಾಕ್ಯದಲ್ಲಿ ಬರುವ ಆತ್ಮಶಬ್ದವನ್ನು ತೆಗೆದುಕೊಳ್ಳಬೇಕು ಎಂಬ ಸೂಚನೆಯೂ ಆಗುತ್ತಿತ್ತು. ಹಾಗೆ ಮಾಡದೆ 'ಸ್ವಶಬ್ದಾತ್' ಎಂದು ಹೇಳಿದಾಗ, ವಿಷಯವಾಕ್ಯದಲ್ಲಿ 'ಸ್ವ'ಶಬ್ದವನ್ನು ಹುಡುಕಿ, ಕಾಣದೇ ಇದ್ದಾಗ, ಸ್ವಶಬ್ದ ಪರ್ಯಾಯವಾದ ಆತ್ಮಶಬ್ದವನ್ನು ತೆಗೆದುಕೊಳ್ಳಬೇಕು ಎಂಬುದು. ವಕ್ರವಾದ ಮಾರ್ಗ. ಹೀಗೆ ಯಾಕೆ ಬಾದರಾಯಣರು ಸೂತ್ರಿಸಿದ್ದಾರೆ ಎಂಬ ಪ್ರಶ್ನೆ ಸಹಜ.

ಇದಕ್ಕೆ ವ್ಯಾಸರಾಜರು ಉತ್ತರ ಕೊಡುತ್ತಾ, ವೇದವ್ಯಾಸರೂ 'ಸ್ವಶಬ್ದಾತ್' ಎಂದು ಹೇಳಿದ್ದರಿಂದ. ಆತ್ಮಶಬ್ದವು ವಿಷ್ಣುವಿನ ಅಸಾಧಾರಣ ಶಬ್ದ ಎಂಬುದನ್ನು ತೋರಿಸಿಕೊಟ್ಟಂತೆ ಆಗುತ್ತದೆ.

'ಸ್ವಶಬ್ದಾತ್' ಎಂದು ಹೇಳದೆ, 'ಆತ್ಮಶಬ್ದಾತ್' ಎಂದು ಅಷ್ಟೇ ಹೇಳಿದ್ದಾರೆ. ಈ ಆತ್ಮಶಬ್ದವು ವಿಷ್ಣುವಿನ ಅಸಾಧಾರಣಶಬ್ದ ಎಂದು ತೋರಿಸಿಕೊಟ್ಟಂತೆ ಆಗುವುದಿಲ್ಲ.

ಹೀಗೆ ಹೇಳಿದಾಗ ಇನ್ನೊಂದು ಪ್ರಶ್ನೆ ಉದ್ಭವಿಸಬಹುದು. ವಿಷ್ಣುವಿನ ಅಸಾಧಾರಣಶಬ್ದವು ಈ ವಿಷಯವಾಕ್ಯದಲ್ಲಿ ಇದೆ ಎಂಬುದನ್ನು ತೋರಿಸಬೇಕು ಎಂದು ಬಾದರಾಯಣರ ವಿವಕ್ಷಾ ಇದ್ದರೆ, 'ತತ್-ಶಬ್ದಾತ್' ಎಂದು ಹೇಳಿದ್ದರೆ ಆಗುತ್ತಿತ್ತು. 'ತಸ್ಯ ಶಬ್ದಃ' 'ತಚ್ಛಬ್ದಃ' ಎಂದು ಸಮಾಸವನ್ನು ಆಶ್ರಯಿಸಿ, ವಿಷ್ಣುವಿನ ಅಸಾಧಾರಣ ಶಬ್ದವು ಈ ವಾಕ್ಯದಲ್ಲಿ ಇರುವುದರಿಂದ, ದ್ಯುಭ್ವಾದ್ಯಾಯತನ ವಿಷ್ಣುವೇ ಆಗಿದ್ದಾನೆ ಎಂದು ಸಾಧಿಸಬಹುದು. ಹೀಗೆ ಹೇಳದೇ 'ಸ್ವಶಬ್ದಾತ್' ಎಂದು ಹೇಳಿದ್ದು ಯಾಕೆ?

ಆದಕ್ಕೆ ಚಂದ್ರಿಕಾಚಾರ್ಯರು ಕೊಡುವ ಉತ್ತರ - ಒಂದು ವೇಳೆ 'ತಚ್ಛಬ್ದಾತ್' ಎಂದು ಹೇಳದಿದ್ದರೆ, ವಿಷ್ಣುವಿನ ಅಸಾಧಾರಣಶಬ್ದವನ್ನು ತೆಗೆದುಕೊಳ್ಳಬೇಕು ಎಂದೇನೋ ಹೇಳಿದಂತೆ ಆಗುತ್ತಿತ್ತು. ಆದರೆ ಆ ಶಬ್ದವು ಯಾವುದು ಎಂಬ ಪ್ರಶ್ನೆಗೆ ಉತ್ತರವಿರುತ್ತಿರಲಿಲ್ಲ. 'ಸ್ವಶಬ್ದಾತ್' ಎಂದು ಹೇಳಿದಾಗ, ವಿಷ್ಣುವಿನ ಅಸಾಧಾರಣಶಬ್ದವನ್ನು ತೆಗೆದುಕೊಳ್ಳಬೇಕು ಎಂದು ಸೂಚಿಸುವ ಜೊತೆಗೆ, ಆ ಶಬ್ದವು ಯಾವುದು ಎಂದು ಸೂಚಿಸಿದಂತೆಯೂ ಆಗುತ್ತದೆ. ಸ್ವಶಬ್ದಪರ್ಯಾಯ ಆತ್ಮಶಬ್ದವಾದುದರಿಂದ.

'ಸ್ವಶಬ್ದಾತ್' ಎಂದು ಹೇಳಿರುವುದರಿಂದ ವಿಷ್ಣುವಿನ ಅಸಾಧಾರಣಶಬ್ದವನ್ನು ತೆಗೆದುಕೊಳ್ಳಬೇಕು ಎಂದು ಹೇಗೆ ಸೂಚಿತವಾಯಿತು ಎಂದರೆ ಅನ್ಯಥಾ-ಅನುಪಪತ್ತಿಯಿಂದ ಎಂದು ಉತ್ತರಿಸುತ್ತಾರೆ ವ್ಯಾಸರಾಜರು. ಹೇಗೆಂದರೆ, 'ಆತ್ಮಶಬ್ದಾತ್' ಎಂದು ನೇರವಾಗಿ ಹೇಳಲಿಕ್ಕೆ ಬರುವಾಗ 'ಸ್ವಶಬ್ದಾತ್' ಎಂದು ಹೇಳಿ, ಸ್ವಶಬ್ದ ಪರ್ಯಾಯ ಆತ್ಮಶಬ್ದವನ್ನು ಗ್ರಹಣ ಮಾಡಬೇಕು ಎಂದು ವಕ್ರವಾದ ರೀತಿಯನ್ನು ಸೂತ್ರಕಾರರು ಆಶ್ರಯಣ ಮಾಡಿರುವುದರಿಂದಲೇ, ಈ ಆತ್ಮಶಬ್ದವು ಅಸಾಧಾರಣ ಎಂದು ತಿಳಿದುಬರುತ್ತದೆ.

ಹೀಗೆ 'ಸ್ವಶಬ್ದಾತ್' ಎಂದು ಸೂತ್ರಕಾರರು ಹೇಳಿರುವುದಕ್ಕೆ ಎರಡು ಪ್ರಯೋಜನವಿದೆ ಎಂದು ಹೇಳಿದಂತೆ ಆಯಿತು.

೧. ಅಸಾಧಾರಣ್ಯಜ್ಞಾಪನ (ಆತ್ಮಶಬ್ದವು ವಿಷ್ಣುವಿನ ಅಸಾಧಾರಣ ನಾಮ)

೨. ಶಬ್ದವಿಶೇಷ ಉಪಾದಾನ (ಆತ್ಮಶಬ್ದಗ್ರಹಣ)

ಹೀಗೆ ಹೇಳಿದ್ದರಿಂದ 'ಸ್ವಶಬ್ದಾತ್' ಎಂಬುದಕ್ಕೆ ಇನ್ನೊಂದು ರೀತಿಯಲ್ಲೂ ವಿಗ್ರಹವನ್ನು ಮಾಡಬಹುದು ಎಂದು ಸೂಚಿಸಿದಂತೆ ಆಯಿತು. 'ಸ್ವೇತಿ ಶಬ್ದಃ' 'ಸ್ವಶಬ್ದಃ' ಎಂದು ಒಂದು ರೀತಿಯ ವಿಗ್ರಹವಾದರೆ 'ಸ್ವಸ್ಯ (ವಿಷ್ಣೋರೇವ) ಶಬ್ದಃ ಸ್ವಶಬ್ದಃ' ಎಂದು ಎರಡನೆಯ ರೀತಿ. ಮೊದಲನೆಯ ರೀತಿಯ ವಿಗ್ರಹದಿಂದ ಆತ್ಮಶಬ್ದವು ಸೂಚಿತವಾದರೆ, ಎರಡನೆಯ ರೀತಿಯ ವಿಗ್ರಹದಿಂದ ಆ ಆತ್ಮಶಬ್ದವು ವಿಷ್ಣುವಿನ ಅಸಾಧಾರಣ ಶಬ್ದ ಎಂಬುದು ಸೂಚಿತವಾಯಿತು.

ಈ ಅಭಿಪ್ರಾಯವನ್ನು ಇಟ್ಟುಕೊಂಡೇ ತತ್ವಪ್ರದೀಪದಲ್ಲಿ, ''ವಿಷ್ಣೋಃ ಸ್ವರೂಪಸ್ಯೈವ ಸಾಕ್ಷಾತ್ ವಾಚಕಃ ಆತ್ಮಶಬ್ದಃ'' ಎಂದು ಹೇಳಿದ್ದಾರೆ. ಹೀಗೆ ಎರಡು ವಿಗ್ರಹಗಳನ್ನು ಆಶ್ರಯಿಸಿ, ಒಂದು ಸಮಾಧಾನವನ್ನು ಹೇಳಿ, ಇನ್ನೊಂದು ರೀತಿಯಲ್ಲೂ ಸಮಾಧಾನವನ್ನು ವ್ಯಾಸರಾಜರು ಹೇಳುತ್ತಾರೆ. 'ಸ್ವೇತಿಶಬ್ದಃ' 'ಸ್ವಶಬ್ದಃ' ಎಂದು ಒಂದೇ ವಿಗ್ರಹ ಮಾಡಬೇಕು. ಅಂದರೆ ಹಿಂದಿನಂತೆಯೇ ಸ್ವಶಬ್ದ ಪರ್ಯಾಯ ಆತ್ಮಶಬ್ದಾತ್ ಎಂದೇ ಅರ್ಥ. ಹಾಗಾದರೆ 'ಆತ್ಮಶಬ್ದಾತ್' ಎಂದೇ ಸೂತ್ರಕಾರರು ಹೇಳಬಹುದಿತ್ತಲ್ಲಾ, 'ಸ್ವಶಬ್ದಾತ್' ಎಂದು ಹೇಳಿದ್ದರಿಂದ ಏನು ಪ್ರಯೋಜನ? ಎಂದು ಪ್ರಶ್ನೆ ಬಂದರೆ, 'ಸ್ವಶಬ್ದಾತ್' ಎಂದು ಹೇಳಿದರೆ, ಇಷ್ಟು ಸೂಚಿಸಿದಂತೆ ಆಗುತ್ತದೆ - ಹೇಗೆ ಸ್ವಶಬ್ದವು ವಿಷ್ಣುವಿನಲ್ಲಿ ಮುಖ್ಯವೋ ಹಾಗೆ ಆತ್ಮಶಬ್ದವೂ ಕೂಡ ವಿಷ್ಣುವಿನಲ್ಲಿ ಮುಖ್ಯ.

ಇದನ್ನು ಆಚಾರ್ಯರು ಛಾಂದೋಗ್ಯಭಾಷ್ಯದಲ್ಲಿ ಸಮರ್ಥನೆ ಮಾಡಿದ್ದಾರೆ. ಅದನ್ನು ವ್ಯಾಸರಾಜರು ಇಲ್ಲಿ ನೆನಪಿಗೆ ತಂದುಕೊಡುತ್ತಾರೆ.

ಛಾಂದೋಗ್ಯಭಾಷ್ಯದಲ್ಲಿ- 'ಆತ್ಮಶಬ್ದವು ವಿಷ್ಣುವಿನಲ್ಲಿ ಮುಖ್ಯ' ಎಂಬುದನ್ನು ಸಮರ್ಥನೆ ಮಾಡಲು ಸ್ವಶಬ್ದವನ್ನು ದೃಷ್ಟಾಂತವಾಗಿ ಕೊಟ್ಟಿದ್ದಾರೆ. ಲೋಕದಲ್ಲಿ ಸ್ವಶಬ್ದವು ಅನ್ಯತ್ರಪ್ರಸಿದ್ಧವಾದರೂ (ಸ್ವ = ತಾನು), ಸ್ವಯಂಭೂಃ ಅಥವಾ ಸ್ವಭೂಃ ಎಂದು ಚತುರ್ಮುಖನಿಗೆ ಹೇಳುವ ಸಂದರ್ಭದಲ್ಲಿ ಸ್ವಶಬ್ದವು ವಿಷ್ಣುವಿನಲ್ಲಿ ಮುಖ್ಯವಾಗಿ ಹೇಳುತ್ತದೆ. ಅವನಿಂದ ಹುಟ್ಟಿದವನಾದ್ದರಿಂದ ಸ್ವಯಂಭೂ = ಎಂದರೆ ಚತುರ್ಮುಖ. 'ಯೋ ಬ್ರಹ್ಮಾಣಾಂ ವಿದಧಾತಿ' ಎಂಬ ಶ್ರುತಿ ಇರುವುದರಿಂದ, ಅದರಂತೆ, ಲೋಕೇ ಆತ್ಮಶಬ್ದವು ಅನ್ಯತ್ರಪ್ರಸಿದ್ಧವಾದರೂ, 'ಆತ್ಮಭೂಃ' ಎಂದು ಚತುರ್ಮುಖನಿಗೆ ನಾಮವಿರುವುದರಿಂದ, ಹಾಗೂ

ಆತ್ಮೇತಿ ಮುಖ್ಯತೋ ವಿಷ್ಣುಃ ತದನ್ಯೇ ತು ಉಪಚಾರತಃ ।
ತಥೈವ ಸ್ವ ಇತಿ ಪ್ರೋಕ್ತಃ ತಸ್ಮಾತ್ ಆತ್ಮಭೂಃ ಸ್ವಭೂಃ ॥

ಎಂಬ ಪ್ರಮಾಣವಿರುವುದರಿಂದಲೂ, ಆತ್ಮಶಬ್ದವು ವಿಷ್ಣುವಿನಲ್ಲಿ ಮುಖ್ಯ ಎಂಬುದನ್ನು ಆಚಾರ್ಯರು ಸಮರ್ಥನೆ ಮಾಡಿದ್ದಾರೆ. ಈ ನಿಯಮಕ್ಕೆ ಅನುಸಾರವಾಗಿ ಸೂತ್ರಕಾರರು 'ಸ್ವಶಬ್ದಾತ್' ಎಂದು ಹೇಳಿದ್ದಾರೆ. ಒಟ್ಟು ಇದರ ಅಭಿಪ್ರಾಯ - ಸ್ವಶಬ್ದವು ಹೇಗೆ ವಿಷ್ಣುವಿನಲ್ಲಿ ಮುಖ್ಯವೋ ಹಾಗೆಯೇ ಆತ್ಮಶಬ್ದವೂ ಮುಖ್ಯ ಎಂಬುದನ್ನು ಸೂಚನೆ ಮಾಡಲು 'ಸ್ವಶಬ್ದಾತ್' ಎಂದು ಪ್ರಯೋಗ ಮಾಡಿದ್ದಾರೆ. ಆತ್ಮಶಬ್ದಾತ್' ಎಂದೇ ಪ್ರಯೋಗ ಮಾಡಿದ್ದರೆ, ಈ ಮುಖ್ಯತ್ವವು ಸೂಚಿತವಾಗುತ್ತಿರಲಿಲ್ಲ.

ಹೀಗೆ ವ್ಯಾಸರಾಜರು ಸೂತ್ರದಲ್ಲಿ ಬರುವ 'ಸ್ವಶಬ್ದಾತ್' ಎನ್ನುವುದಕ್ಕೆ ಎರಡು ರೀತಿಯಿಂದ ಪ್ರಯೋಜನವನ್ನು ಬಹಳ ಸ್ವಾರಸ್ಯವಾಗಿ ಉಪಪಾದನೆ ಮಾಡಿದ್ದಾರೆ.

ಭೂಮಾಧಿಕರಣ

ಈ ಅಧಿಕರಣದಲ್ಲಿ ಭೂಮಾ ಶಬ್ದವು ವಿಷ್ಣುವಾಚಕ ಅರ್ಥಾತ್ ವಿಷ್ಣು ಪೂರ್ಣನಾಗಿದ್ದಾನೆ ಎಂಬ ಪ್ರಮೇಯವನ್ನು ಸಮರ್ಥಿಸುತ್ತಾರೆ. ಈ ಭೂಮಾ ಶಬ್ದವು ಛಾಂದೋಗ್ಯೋಪನಿಷತ್ತಿನಲ್ಲಿ 'ಯೋ ವೈ ಭೂಮಾ ತತ್ಸುಖಮ್' ಎಂಬ ವಾಕ್ಯದಲ್ಲಿ ಬರುತ್ತದೆ. ಅದೇ ಪ್ರಕರಣದಲ್ಲಿ. ಆ ಭೂಮಾಶಬ್ದದಿಂದ ವಾಚ್ಯನಾದ ವ್ಯಕ್ತಿಗೆ, ಉತ್ತಮಣವನ್ನು ಹೇಳಿದ್ದಾರೆ. ಇಲ್ಲಿ ಬರುವ ದೊಡ್ಡ ಪ್ರಶ್ನೆ ವಿಷ್ಣು ಎಲ್ಲಕಡೆ ವ್ಯಾಪ್ತನಾಗಿರುವುದರಿಂದ ಅವನಿಗೆ ಉತ್ತಮಣ (ಒಂದು ಕಡೆಯಿಂದ ಮತ್ತೊಂದು ಕಡೆಗೆ ಹೋಗುವುದು) ಎಂದು ಕ್ರಿಯೆ ಹೇಗೆ ಕೂಡುತ್ತದೆ. ಉದಾ:- 'ಅವ್ಯಾಕೃತಾಕಾಶ' ಸರ್ವತ್ರ ವ್ಯಾಪ್ತ ಅದರ ಪರಿಮಾಣಕ್ಕೆ 'ಮಹತ್ವ' ಎಂದು ಹೆಸರು. ಇಂತಹ ಆಕಾಶಕ್ಕೆ ಕ್ರಿಯೆಯನ್ನು ಹೇಳಲಿಕ್ಕೆ ಬರುವುದಿಲ್ಲ. ಅದರಂತೆ ವಿಷ್ಣುವೂ ಕೂಡ ಆಕಾಶದಂತೆ 'ಸರ್ವತ್ರ ವ್ಯಾಪ್ತ' ಅವನಲ್ಲೂ 'ಮಹತ್ವ' ಎಂಬ ಪರಿಮಾಣವಿದೆ. ಆದ್ದರಿಂದ ಅವನಲ್ಲಿ ಯಾವ ಕ್ರಿಯೆಯೂ ಇಲ್ಲ.

ಹಾಗೆ ಕ್ರಿಯೆಯ ಫಲ 'ಪೂರ್ವದೇಶವಿಯೋಗ' ಹಾಗೂ 'ಉತ್ತರದೇಶಸಂಯೋಗ'. (ಉದಾ: ಒಬ್ಬ ವ್ಯಕ್ತಿ ಬೆಂಗಳೂರನ್ನು ಬಿಟ್ಟು ಮೈಸೂರಿಗೆ ಬಂದರೆ, ಅವನಲ್ಲಿ ಕ್ರಿಯೆಯಾಯಿತು ಎಂದು ಹೇಳಬಹುದು. ಯಾಕೆಂದರೆ ಆ ಕ್ರಿಯೆಯ ಫಲ, ಬೆಂಗಳೂರು ದೇಶದ ವಿಯೋಗ ಹಾಗೂ ಮೈಸೂರು ದೇಶದ ಸಂಯೋಗ) ಎಲ್ಲ ಕಡೆ ಇರುವ ವಸ್ತುವಿಗೆ (ಉದಾ: ಆಕಾಶ) ಎಲ್ಲೂ ವಿಯೋಗವೇ ಇಲ್ಲ. ಹಾಗೂ ಸಂಯೋಗವೂ ಇಲ್ಲ (ಎರಡು ದ್ರವ್ಯಗಳಲ್ಲಿ ಮೊದಲು ಇಲ್ಲದೇ ಇರುವ ಒಂದು ಸಂಬಂಧ; ಒಂದಕ್ಕೊಂದು ಸೇರುವುದು) (ತಾರ್ಕಿಕರ ಪ್ರಕಾರ ಸಂಯೋಗವು ಜನ್ಯ)

ಹೀಗೆ ಸರ್ವತ್ರವ್ಯಾಪ್ತನಾದ ವಿಷ್ಣುವಿಗೆ ಪೂರ್ವದೇಶವಿಯೋಗ ಹಾಗೂ ಉತ್ತರದೇಶಸಂಯೋಗವನ್ನು ಹೇಳಲಿಕ್ಕೆ ಬರುವುದಿಲ್ಲ.

ಈ ಸೂಕ್ಷ್ಮ ಪ್ರಶ್ನೆಗೆ ವ್ಯಾಸರಾಜರು ಅತ್ಯಂತ ವಿಸ್ತಾರವಾಗಿ, ಸಮರ್ಪಕವಾಗಿ, ಸ್ವಾರಸ್ಯ ರೀತಿಯಿಂದ ಉತ್ತರವನ್ನು ಕೊಟ್ಟಿದ್ದಾರೆ.

ಮೊದಲನೆಯದಾಗಿ ಒಂದು ಕ್ರಿಯೆಯಾಗಬೇಕಾದರೆ, ಆ ವಸ್ತುವಿನಲ್ಲಿ 'ಮಹತ್ವ' ಪರಿಮಾಣವು ಪ್ರತಿಬಂಧಕವಲ್ಲ. ಕ್ರಿಯಾಗೆ 'ಅಣುತ್ವ' ಪರಿಣಾಮವು ಪ್ರಯೋಜಕ· ಧರ್ಮ ಹೊರತು ಮಹತ್ವಾಭಾವವಾಗಲಿ, ಮಹತ್ವಾಭಾವವಿಶಿಷ್ಟ ಅಣುತ್ವವಾಗಲಿ ಪ್ರಯೋಜಕ ಧರ್ಮವಲ್ಲ. ಯಾಕೆಂದರೆ ಪ್ರಯೋಜಕಧರ್ಮವು ಎಷ್ಟು ಲಘುಭೂತವಾಗಿರುತ್ತದೋ ಅಷ್ಟು ಒಳ್ಳೆಯದು. ಕ್ರಿಯಾವತ್ವಕ್ಕೆ ಲಘುಭೂತವಾದ 'ಅಣುತ್ವ'ವನ್ನು ಪ್ರಯೋಜಕಧರ್ಮವೆಂದು ಹೇಳಬೇಕು ಹೊರತು, 'ಅಭಾವ' ಘಟಿತವಾದ ಗುರುಭೂತವಾದ 'ಮಹತ್ವಾಭಾವ'ವನ್ನಾಗಲೀ, ಮಹತ್ವಾಭಾವವಿಶಿಷ್ಟ ಅಣುತ್ವವನ್ನಾಗಲಿ ಪ್ರಯೋಜಕಧರ್ಮವನ್ನಾಗಿ ಹೇಳಬಾರದು. ವಿಷ್ಣುವಿನಲ್ಲಿ ಅಣುತ್ವವಿದೆಯಾದ್ದರಿಂದ ಅವನಲ್ಲಿ ಕ್ರಿಯಾವನ್ನು ಹೇಳಬಹುದು. ಆಕಾಶದಲ್ಲಿ ಅಣುತ್ವವು ಇಲ್ಲದಿರುವುದರಿಂದ ಅದರಲ್ಲಿ ಕ್ರಿಯಾ ಇಲ್ಲ.

ಆದರೆ ಇದರ ಮೇಲೆ ಹೀಗೆ ಪ್ರಶ್ನೆ ಬರಬಹುದು - ಅಕ್ರಿಯಾತ್ವಕ್ಕೆ ಪ್ರಯೋಜಕಧರ್ಮ ಮಹತ್ವ (ಉದಾ:- ಆಕಾಶದಲ್ಲಿ ಕ್ರಿಯಾ ಇಲ್ಲ. ಯಾಕೆಂದರೆ 'ಮಹತ್ವ' ಇರುವುದರಿಂದ) ಹೊರತು ಅಣುತ್ವಾಭಾವವಲ್ಲ. ಅಥವಾ ಅಣುತ್ವಾಭಾವವಿಶಿಷ್ಟಮಹತ್ವವಲ್ಲ. ಯಾಕೆಂದರೆ 'ಮಹತ್ವ' ಎಂಬ ಧರ್ಮವನ್ನು ಒಪ್ಪಿದರೆ ಲಘುಭೂತ. ಅಭಾವವಿಶಿಷ್ಟಧರ್ಮವನ್ನು ಒಪ್ಪಿದರೆ, ಗುರುಭೂತ. ಆದ್ದರಿಂದ ಕ್ರಿಯಾವತ್ವಕ್ಕೆ ಅಣುತ್ವವು ಲಘುಭೂತವಾದ ಪ್ರಯೋಜಕಧರ್ಮವಿದ್ದಂತೆ. ಅಕ್ರಿಯಾತ್ವಕ್ಕೆ ಮಹತ್ವವು ಲಘುಭೂತವಾದ ಪ್ರಯೋಜಕಧರ್ಮ ಅಷ್ಟೇ ಅಲ್ಲದೆ. ಮಹತ್ವವಿದ್ದರೂ ಕ್ರಿಯಾ ಇರುವುದಾದರೆ, 'ಉತ್ಕ್ಷಂತಿಗತ್ಯಾಗತೀನಾಂ' ಎಂಬ ಸೂತ್ರದಲ್ಲಿ, ಜೀವನಿಗೆ ಕ್ರಿಯಾ ಇರುವುದರಿಂದ ಅಣುತ್ವವನ್ನು ಉಪಪಾದನೆ ಮಾಡಿರುವುದು ತಪ್ಪಾಗುತ್ತದೆ.

ಈ ಅಭ್ಯಧಿಕಾಶಂಕೆಗೆ ಉತ್ತರ ಕೊಡುತ್ತಾ ವ್ಯಾಸರಾಜರು ಹೇಳುತ್ತಾರೆ. ಕ್ರಿಯಾವತ್ವಕ್ಕೆ ಪ್ರಯೋಜಕಧರ್ಮ ಮಹತ್ವಾಭಾವ ಎಂದು ಹೇಳಿದರೆ, ಗುಣ, ಜಾತಿ ಮೊದಲಾದ ಪದಾರ್ಥಗಳಿಗೂ

'ಕ್ರಿಯಾ'ವನ್ನು ಹೇಳಬೇಕಾಗುತ್ತದೆ. ಅವುಗಳಲ್ಲಿ 'ಮಹತ್ವ'ವಿಲ್ಲದಿರುವುದರಿಂದ (ನೈಯ್ಯಾಯಿಕರು ಗುಣ, ಜಾತಿಗಳಲ್ಲಿ ಗುಣವನ್ನು ಒಪ್ಪುವುದಿಲ್ಲ) ಅಷ್ಟೇ ಅಲ್ಲ, ಅಕ್ರಿಯತ್ವಕ್ಕೆ 'ಮಹತ್ವ'ವೂ ಪ್ರಯೋಜಕಧರ್ಮವಲ್ಲ. ಯಾಕೆಂದರೆ, ಗುಣದಲ್ಲಿ 'ಮಹತ್ವ'ವಿಲ್ಲ. ಆದರೂ ಅಕ್ರಿಯತ್ವ ಇದೆ. ಅಂದರೆ ಪ್ರಯೋಜಕಧರ್ಮವಿಲ್ಲದಿದ್ದರೂ ಕಾರ್ಯ ಇದೆಯೆಂದರೆ ಅದು ಪ್ರಯೋಜಕಧರ್ಮವಲ್ಲವೆಂದು ಹೇಳಬೇಕು.

ಆದ್ದರಿಂದ ಕ್ರಿಯಾವತ್ವಕ್ಕೆ ಅಣುತ್ವವೇ ಪ್ರಯೋಜಕ ಹೊರತು, ಮಹತ್ಪಾಭಾವವಲ್ಲ ಹಾಗೂ ಅಕ್ರಿಯತ್ವಕ್ಕೆ ಅಣುತ್ಪಾಭಾವನೇ ಪ್ರಯೋಜಕ ಹೊರತು ಮಹತ್ವವಲ್ಲ. ವ್ಯಾಸರಾಜರು ಅಕ್ರಿಯತ್ವದ ಪ್ರಯೋಜಕಧರ್ಮಕ್ಕೆ ಒಂದು ಸುಲಭ ಉಪಾಯವನ್ನು ಹೇಳುತ್ತಾರೆ. ಮೊದಲು ಕ್ರಿಯಾವತ್ವಕ್ಕೆ ಪ್ರಯೋಜಕಧರ್ಮ 'ಅಣುತ್ವ' ಎಂದು ನಿರ್ಣಯವಾದ ಮೇಲೆ, ಅಕ್ರಿಯಾತ್ವಕ್ಕೆ ತದಭಾವವನೆನೇ (ಅಣುತ್ಪಾಭಾವವನ್ನೇ) ಪ್ರಯೋಜಕಧರ್ಮ ಎಂದು ಹೇಳುವುದು ಸೂಕ್ತ. ಉದಾ:- ಧೂಮಕ್ಕೆ ಪ್ರಯೋಜಕ ಅಗ್ನಿಯಾದರೆ, ಧೂಮಾಭಾವಕ್ಕೆ ಪ್ರಯೋಜಕಧರ್ಮ ಅಗ್ನ್ಯಾಭಾವ ಇಲ್ಲಿ ಒಂದು ಸಂಶಯ ಬರಬಹುದು.

ಕ್ರಿಯಾವತ್ವಕ್ಕೆ ಮಹತ್ಪಾಭಾವ ಪ್ರಯೋಜಕ ಎಂದು ಹೇಳಿದರೆ. ಗುಣಜಾತ್ಯಾದಿಗಳಲ್ಲಿ ವ್ಯಭಿಚಾರವು ಇದೆ ಎಂದು ವ್ಯಾಸರಾಜರು ಹೇಳಿದರು. ಆದರೆ 'ಮಹತ್ಪಾಭಾವ ವಿಶಿಷ್ಟಅಣುತ್ವ'ವು ಪ್ರಯೋಜಕಧರ್ಮವೆಂದು ಹೇಳಿದರೆ ಆಗ ವ್ಯಭಿಚಾರ ಬರುವುದಿಲ್ಲ. ಯಾಕೆಂದರೆ ಗುಣ, ಜಾತಿಗಳಲ್ಲಿ ಅಣುತ್ವವು ಇಲ್ಲ.

ಈ ಸಂಶಯಕ್ಕೆ ವ್ಯಾಸರಾಜರು ಈ ರೀತಿಯಲ್ಲಿ ಸಮಾಧಾನವನ್ನು ಹೇಳಿದ್ದಾರೆ. ಲಘುಭೂತವಾದ ಅಣುತ್ವವು ಪ್ರಯೋಜಕಧರ್ಮ ಎಂದು ಒಪ್ಪುವುದರಿಂದಲೇ ಕ್ರಿಯಾವತ್ವವನ್ನು ನಿರ್ವಹಣೆ ಮಾಡುವುದಕ್ಕೆ ಬರುವಾಗ, ಗುರುಭೂತವಾದ ಮಹತ್ಪಾಭಾವವಿಶಿಷ್ಟ ಅಣುತ್ವವು ಪ್ರಯೋಜಕಧರ್ಮವೆಂದು ಹೇಳುವುದು ಸೂಕ್ತವಲ್ಲ. ಈ ಸಮಾಧಾನವನ್ನು ಹಿಂದೆಯೇ ಹೇಳಿದ್ದರು.

ಇದೇ ನಿಯಮವನ್ನು ಉಪಯೋಗಿಸಿ, ಸಿದ್ಧಾಂತಿಗೂ ದೋಷವನ್ನು ಹೇಳಬಹುದು ಎಂದು ಪೂರ್ವಪಕ್ಷಿ ಶಂಕಿಸಬಹುದು. ನಾವು ಅಕ್ರಿಯತ್ವಕ್ಕೆ ಅಣುತ್ಪಾಭಾವ ಪ್ರಯೋಜಕ ಎಂದು ಹೇಳಿದರೆ, ಪೂರ್ವಪಕ್ಷಿ ಇದು ಗುರುಭೂತವಾದ ಪ್ರಯೋಜಕಧರ್ಮವಾದ್ದರಿಂದ ಲಘುಭೂತವಾದ 'ಮಹತ್ವ'ವನ್ನೇ ಪ್ರಯೋಜಕಧರ್ಮ ಎಂದು ಹೇಳಿರಿ, ಕ್ರಿಯಾವತ್ವಕ್ಕೆ ಮಹತ್ಪಾಭಾವವನ್ನೇ ಪ್ರಯೋಜಕಧರ್ಮ ಎಂದು ಹೇಳಿರಿ ಎಂದು.

ಆದ್ದರಿಂದ ಸಿದ್ಧಾಂತಿಯು ಕ್ರಿಯಾವತ್ವಕ್ಕೆ ಅಣುತ್ವ ಪ್ರಯೋಜಕ, ಅಕ್ರಿಯತ್ವಕ್ಕೆ ಅಣುತ್ಪಾಭಾವ ಪ್ರಯೋಜಕ ಎಂದು ಹೇಳಿದರೆ, ಪೂರ್ವಪಕ್ಷಿಯು ಅಕ್ರಿಯತ್ವಕ್ಕೆ ಮಹತ್ವ ಪ್ರಯೋಜಕ, ಕ್ರಿಯಾವತ್ವಕ್ಕೆ ಮಹತ್ಪಾಭಾವಪ್ರಯೋಜಕ ಎಂದು ಹೇಳುತ್ತಾನೆ.

ಆದ್ದರಿಂದ ಇವೆರಡರಲ್ಲಿ ಯಾವುದು ಸರಿಯಾದದ್ದು ಎಂಬ ಸಂದೇಹ ಮತ್ತೆ ಬರುತ್ತದೆ.

ಇದಕ್ಕೆ ವ್ಯಾಸರಾಜರು ಒಂದು ಮಹತ್ವವಾದ ಪದವನ್ನು ಸೇರಿಸಿದ್ದಾರೆ. 'ಭಾವರೂಪಾಯಾಂ ಕ್ರಿಯಾಯಾಂ ಪೂರ್ವಮ್ ಧೀಸ್ಥಂ ಅಣುತ್ವರೂಪಂ ಪ್ರಯೋಜಕಂ' ಎಂದು. ಅಂದರೆ ಒಂದರ ಅಭಾವಕ್ಕೆ ಪ್ರಯೋಜಕಧರ್ಮವನ್ನು ಹುಡುಕುವಾಗ ಮೊದಲು ಅದರ ಸತ್ವಕ್ಕೆ ಪ್ರಯೋಜಕಧರ್ಮವನ್ನು ಹುಡುಕಬೇಕು. ಆಮೇಲೆ ಅಭಾವಕ್ಕೆ, ಆ ಸತ್ವಪ್ರಯೋಜಧರ್ಮದ ಅಭಾವವೇ ಪ್ರಯೋಜಕಧರ್ಮವಾಗುತ್ತದೆ. ಉದಾ:- ಹಿಂದೆ ದೃಷ್ಟಾಂತ ಹೇಳಿದಂತೆ, ಧೂಮಾಭಾವಕ್ಕೆ ಯಾವುದು ಪ್ರಯೋಜಕ ಎಂದು ಪ್ರಶ್ನೆ ಬಂದಾಗ, ಮೊದಲು ಧೂಮಕ್ಕೆ ಯಾವುದು ಪ್ರಯೋಜಕ ಎಂಬುದನ್ನು ಗುರುತಿಸಬೇಕು. ಇಲ್ಲಿ ಅಗ್ನಿಯು ಪ್ರಯೋಜಕ ಎಂದು ಗೊತ್ತಾದ ಮೇಲೆ ಧೂಮಾಭಾವಕ್ಕೆ ಪ್ರಯೋಜಕ ಅಗ್ನ್ಯಭಾವ ಎಂದು ಗೊತ್ತಾಗುತ್ತದೆ. ಅದರಂತೆ ಇಲ್ಲಿಯೂ ತಿಳಿಯಬೇಕು.

ಜಿಜ್ಞಾಸು

ವಿಷಯಾನುಕ್ರಮಣಿಕೆ

ಅಂತರ್ಯಾಮ್ಯಧಿಕರಣ

ಭಾಷ್ಯ ತತ್ತ್ವಪ್ರಕಾಶಿಕಾ

'ಅಂತರ್ಯಾಮಿ' ಎಂದರೆ ಮಹಾವಿಷ್ಣುವೇ ೨

ಪ್ರಕೃತಿ, ಜೀವ ಮೊದಲಾದವರು ಅಂತರ್ಯಾಮಿಗಳಲ್ಲ ೨೪

ಕಾಣ್ವಶಾಖೆಯಲ್ಲಿ ಜೀವನೇ ಬೇರೆ ಅಂತರ್ಯಾಮಿಯೇ ಬೇರೆ ಎಂದಿದೆ. ೨೮

ತಾತ್ಪರ್ಯಚಂದ್ರಿಕಾ

ಆನಂತರ್ಯ ಸಂಗತಿ ಹಾಗೂ ಅಂತರ್ಯಾಮಿ ಪ್ರಕೃತ್ಯಾದಿಗಳೋ ?
ಅಥವಾ ವಿಷ್ಣುವೋ? ಎಂದು ಸಂಶಯ ೪೦

ಪ್ರಕೃತಿಯೇ ಅಂತರ್ಯಾಮಿಯೆಂದು ಪೂರ್ವಪಕ್ಷ ೪೮

ಪ್ರಕೃತಿ, ಅಂತರ್ಯಾಮಿಗಳು ಪೂರ್ವಪಕ್ಷಕ್ಕೆ ವಿಷಯವಲ್ಲವೆಂಬ
ಪರಕೀಯಪಕ್ಷ ನಿರಾಸ ೫೬

ಸರ್ವಾಂತರ್ಯಾಮಿಯಾದವನು ವಿಷ್ಣುವೇ ಎಂದು ಸಿದ್ಧಾಂತ ೬೭

ಸೂತ್ರಗಳ ಜೋಡಣೆಯು ಸ್ವಾರಸ್ಯಮಯವಾಗಿದೆ ೭೮

ಬೃಹದಾರಣ್ಯಕ ಭಾಷ್ಯದಿಂದ ವಿರೋಧ ಶಂಕೆ ಹಾಗೂ ಸಮಾಧಾನಗಳು ೮೪

ಅದ್ವೈತಿಗಳ ಅಧಿಕರಣ ಶರೀರ ೯೪

ಅದ್ವೈತಮತದಲ್ಲಿ ನಿಯಾಮಕ ಬ್ರಹ್ಮನೇ ಇಲ್ಲ ೧೧೧

ಶಂಕರಭಾಷ್ಯ ರಾಮಾನುಜಭಾಷ್ಯಗಳ ಸೂತ್ರಾರ್ಥ ವಿಮರ್ಶೆ ೧೨೪

ಅಂತರ್ಯಾಮ್ಯಧಿಕರಣದ ಪರಿಶಿಷ್ಟಗ್ರಂಥಗಳು (೧೪೩-೧೫೮)

ಅದೃಶ್ಯತ್ವಾಧಿಕರಣ - ಭಾಷ್ಯ ತತ್ತ್ವಪ್ರಕಾಶಿಕಾ

ಅದೃಶ್ಯತ್ವಾದಿ ಗುಣಗಳುಳ್ಳವನೂ ಸಹ ಮಹಾವಿಷ್ಣುವೇ ೧೬೦

ಸರ್ವಜ್ಞರಲ್ಲದ ಬ್ರಹ್ಮಾದಿಗಳು ಅದೃಶ್ಯರಲ್ಲ ೧೮೯

ಶುದ್ಧವಾದ ಹಳದಿ ಬಣ್ಣ ಭಗವಂತನಿಗೆ ಮಾತ್ರ ೨೦೧

ತಾತ್ಪರ್ಯಚಂದ್ರಿಕಾ

ಸಂಗತಿ ಹಾಗೂ ಸಂಶಯ ಪರಂಪರೆ ೨೧೨

ಪ್ರಕೃತಿ, ಬ್ರಹ್ಮಾದಿಗಳೇ ಅದೃಶ್ಯರೆಂದು ಪೂರ್ವಪಕ್ಷ ೨೨೩

ಮತ ತ್ರಯಗಳಲ್ಲಿ ಪರವಿದ್ಯಾ ವಿಚಾರ ೨೪೩

ವಿಶೇಷಣ ಹಾಗೂ ಭೇದವ್ಯಪದೇಶ ಹೇತುಗಳಲ್ಲಿರುವ ಸ್ವಾರಸ್ಯ ವರ್ಣನೆ ೨೫೬

''ಸಮೇಷು ಕರ್ಮಯುಕ್ತಂ ಸ್ಯಾತ್'' (೨-೨-೧೨) ೨೬೫

ಅದ್ವೈತಮತ ವಿಮರ್ಶೆ ೨೭೨

ರಾಮಾನುಜರ ಅಧಿಕರಣ ವಿಮರ್ಶೆ ಮತ್ತು
ಟೀಕೆಯ ಕಠಿಣಪದಾರ್ಥಗಳು ೨೯೪

ಅದೃಶ್ಯತ್ವಾಧಿಕರಣದ ಪರಿಶಿಷ್ಟಗ್ರಂಥಗಳು (೩೦೫-೩೨೨)

ವೈಶ್ವಾನರಾಧಿಕರಣ –
ಭಾಷ್ಯ ತತ್ತ್ವಪ್ರಕಾಶಿಕಾ

ವೈಶ್ವಾನರ ಎಂಬ ಹೆಸರು ಮಹಾವಿಷ್ಣುವಿಗೆ ಮಾತ್ರ ೩೨೪

ಭಗವದ್ಗೀತೆಯ ಆಧಾರದಿಂದ ವೈಶ್ವಾನರನನ್ನು ತಿಳಿಯಬೇಕು ೩೩೮

'ವೈಶ್ವಾನರ' ಎಂಬ ಉಪಾಸನೆ ಅತ್ಯವಶ್ಯ ೩೪೩

ಅಗ್ನಿದೇವತೆ ಹಾಗೂ ಜಡವಾದ ಅಗ್ನಿ ವೈಶ್ವಾನರ ಅಲ್ಲ ೩೭೮

ಲೌಕಿಕ ವ್ಯವಹಾರಕ್ಕಾಗಿ ಸೂಕ್ತ ನಿಯಮವೆಂದು ಜೈಮಿನಿಗಳ ಅಭಿಪ್ರಾಯ ೩೮೩

ಉಪಾಸನೆಗಾಗಿ ಸೂಕ್ತ ನಿಮಯವೆಂದು ಆಶ್ಮರಥ್ಯರು ೩೯೦

ಶುಕಾಚಾರ್ಯರ ಪ್ರಕಾರ ಉಪಾಸಕರಿಗೆ ಅಧಿಷ್ಠಾನವನ್ನು
ತಿಳಿಸಲು ಸೂಕ್ತ ನಿಯಮ ೩೯೪

ಉಪಾಸಕನಿಗೆ ತಕ್ಕ ಫಲವು ಪ್ರಾಪ್ತವಾಗುತ್ತದೆಂದು ಜೈಮಿನಿಗಳ ಭರವಸೆ ೩೯೭

ಅಗ್ನ್ಯಾದಿ ದೇವತೆಗಳಲ್ಲಿ ಆಯಾ ಹೆಸರಿನಿಂದಲೇ ವಿಷ್ಣುವಿನ ಸನ್ನಿಧಾನ ೪೦೩

ತಾತ್ಪರ್ಯಚಂದ್ರಿಕಾ

ವೈಶ್ವಾನರಶಬ್ದವು ಉಭಯತ್ರಪ್ರಸಿದ್ಧವಲ್ಲ ೪೧೨

ಸಂಶಯ ಹಾಗೂ ಪೂರ್ವಪಕ್ಷ ೪೨೨

ನಿರ್ಧಾರಿತ ಪೂರ್ವಪಕ್ಷವೋ ? ಅನಿರ್ಧಾರಿತ ಪೂರ್ವಪಕ್ಷವೋ ? ೪೩೪

ವೈಶ್ವಾನರ ಶ್ರುತಿಯಿಂದ ವಿಷ್ಣುವೇ ಪ್ರತಿಪಾದ್ಯನೆಂದು ಸಿದ್ಧಾಂತ ೪೫೫

ಸೂತ್ರಕ್ರಮಗಳ ಸ್ವಾರಸ್ಯ ವರ್ಣನೆ ೪೭೨

ಶಂಕರ, ರಾಮಾನುಜರ ಪ್ರಥಮ ಸೂತ್ರಾರ್ಥ ವಿಮರ್ಶೆ ೪೮೮

ಶಾಂಕರ ರಾಮಾನುಜ ಭಾಷ್ಯಗಳಲ್ಲಿನ ದ್ವಿತೀಯ ಸೂತ್ರಾರ್ಥ ವಿಮರ್ಶೆ ೪೯೫

ಉಳಿದ ಸೂತ್ರಾರ್ಥಗಳ ವಿಮರ್ಶೆ ೫೦೨

ವೈಶ್ವಾನರಾಧಿಕರಣದ ಪರಿಶಿಷ್ಟಗ್ರಂಥಗಳು (೫೧೯-೫೪೦)

ದ್ಯುಭ್ವಾದ್ಯಧಿಕರಣ

ಭಾಷ್ಯ ತತ್ತ್ವಪ್ರಕಾಶಿಕಾ

ಸ್ವರ್ಗಾದಿ ಲೋಕಾದಿಗಳಿಗೆ ಮಹಾವಿಷ್ಣುವೇ ಆಧಾರ ೫೪೨

ಆತ್ಮಶಬ್ದಕ್ಕೆ ಜೀವನೆಂದರ್ಥವಲ್ಲ ೫೬೯

ರುದ್ರ, ಪ್ರಕೃತ್ಯಾದಿಗಳೂ ಕೂಡ ದ್ಯುಭ್ವಾದ್ಯಾಯತನರಲ್ಲ ೫೭೬

ಆತ್ಮಶಬ್ದ-ಮುಕ್ತಪ್ರಾಪ್ಯತ್ವಗಳು ವಾಯುದೇವರಲ್ಲೂ ಇಲ್ಲ ೫೯೨

ಜೀವಬ್ರಹ್ಮರಿಗೆ ಅಭೇದವನ್ನು ಹೇಳಬಾರದು ೫೯೯

ಬ್ರಹ್ಮಪ್ರಕರಣದಲ್ಲಿರುವ ಶಬ್ದಗಳಿಂದ ಬ್ರಹ್ಮನೇ ಪ್ರತಿಪಾದ್ಯನು ೬೦೩

ವಿರುದ್ಧಧರ್ಮವುಳ್ಳ ಜೀವೇಶ್ವರರಿಗೆ ಅಭೇದವು ಕೂಡದು ೬೦೭

ತಾತ್ಪರ್ಯಚಂದ್ರಿಕಾ

ಉಭಯತ್ರಪ್ರಸಿದ್ಧಶಬ್ದ ಸಮನ್ವಯದ ಅನಿವಾರ್ಯತೆ
ಮತ್ತು ಶಬ್ದಸಂಗತಿ ವಿಚಾರ ೬೨೦

ಅನ್ಯತ್ರಪ್ರಸಿದ್ಧಶಬ್ದಗಳಿಗೂ, ಉಭಯತ್ರಪ್ರಸಿದ್ಧಶಬ್ದಗಳಿಗೂ ಸಾಂಕರ್ಯವಿಲ್ಲ ೬೩೯

ಅಧಿಕರಣ ಸಂಗತಿ ಹಾಗೂ ಸಂಶಯ ಪರಂಪರೆ ೬೪೬

ರುದ್ರ, ಪ್ರಕೃತಿ, ವಾಯು, ಜೀವ,
ಈ ನಾಲ್ವರು ದ್ಯುಭ್ವಾದ್ಯಾಯತನರೆಂದು ಪೂರ್ವಪಕ್ಷ ೬೫೬

ನಿರವಕಾಶಲಿಂಗಗಳ ಬಲದಿಂದ ಪೂರ್ವಪಕ್ಷಸ್ಥಾಪನೆ ೬೭೨

ಸಿದ್ಧಾಂತ - ವಿಷ್ಣುವಿನ ಹುಟ್ಟುಲೋಕವಿಲಕ್ಷಣ ೬೭೯

ಸೂತ್ರಗಳ ವಿನ್ಯಾಸದಲ್ಲಿ ಸ್ವಾರಸ್ಯ ೬೮೬

'ಸ್ವಶಬ್ದಾತ್' ಎಂಬ ಸೂತ್ರ ಭಾಗದ ಗಾಂಭೀರ್ಯ ೬೯೪

ಮುಕ್ತೋಪಸೃಪ್ಯತ್ವವೆಂಬ ಎರಡನೆಯ ಸೂತ್ರದ ಸ್ಥಾನಮಾನ ೭೦೦

ಮೂರು ಹಾಗೂ ನಾಲ್ಕನೆಯ ಸೂತ್ರಗಳ ವ್ಯಾಖ್ಯಾನ ೭೦೭

ಐದು, ಆರು ಹಾಗೂ ಏಳನೆಯ ಸೂತ್ರಾರ್ಥ ವಿವರಣೆ ೭೩೧

'ಪದಕರ್ಮಾಪ್ರಯೋಜಕಂ ನಯನಸ್ಯ ಪರಾರ್ಥತ್ವಾತ್' (೪-೧-೧೦) ೭೩೬

ಶಾಂಕರ ಭಾಷ್ಯ ವಿಮರ್ಶೆ ೭೪೬

ರಾಮಾನುಜ ಮತ ವಿಮರ್ಶೆ ೭೬೫

ದ್ಯುಭ್ವಾದ್ಯಧಿಕರಣದ ಪರಿಶಿಷ್ಟಗ್ರಂಥಗಳು (೭೮೯-೮೧೪)

ಭೂಮಾಧಿಕರಣ

ಭಾಷ್ಯ ತತ್ತ್ವಪ್ರಕಾಶಿಕಾ

ಪೂರ್ಣಸುಖ ಸ್ವರೂಪನಾದ ವಿಷ್ಣುವೇ 'ಭೂಮಾ' ೮೧೬

ಸರ್ವಗತತ್ವ - ಸ್ವಾತಂತ್ರ್ಯ ಮೊದಲಾದ ಲಿಂಗಗಳ ಆಧಾರ ೮೪೪

ತಾತ್ಪರ್ಯಚಂದ್ರಿಕಾ

'ಭೂಮಾ' ಶಬ್ದವು ಧರ್ಮಿಪರ ಮತ್ತು ಉಭಯತ್ರಪ್ರಸಿದ್ಧ ೮೫೦

ಭೂಮಾಧಿಕರಣಕ್ಕೆ ಪಾದ ಸಂಗತಿ ೮೬೪

ಹಿಂದಿನ ಅಧಿಕರಣದಿಂದ ಅವಾಂತರಸಂಗತಿ ವಿಚಾರ ೮೭೨

ಅಧಿಕರಣದ ಸಂಶಯ ಪರಂಪರೆ. ೮೭೮

ಮುಖ್ಯಪ್ರಾಣನೇ ಭೂಮನು (ಪ್ರಥಮ ಪೂರ್ವಪಕ್ಷ) ೮೮೮

ಮುಖ್ಯಪ್ರಾಣದೇವರೇ ಭೂಮರೆಂದು ಭಾಷ್ಯದ ಪ್ರಕಾರ ಪೂರ್ವಪಕ್ಷ ೮೯೨

ಉತ್ತಮಣ ಲಿಂಗಕ್ಕೆ ನಿರವಕಾಶತ್ವಸಮರ್ಥನೆ ೮೯೬

ವ್ಯಾಪ್ತನಾದ ಬ್ರಹ್ಮನಲ್ಲಿ ಉತ್ತಮಣವನ್ನು ಹೇಳಲಾಗದೆಂದು
ಪೂರ್ವಪಕ್ಷದ ಉಪಸಂಹಾರ ೮೯೮

ವಿಷ್ಣುವೇ ಭೂಮನೆಂದು ಸಿದ್ಧಾಂತ ೯೦೪

'ಅನುಕ್ತೆ' ಎಂಬ ಪೂರ್ವಪಕ್ಷಲಿಂಗವು ಸಾವಕಾಶ ೯೧೫

ವ್ಯತಿಹಾರಾದ್ಯಧಿಕರಣಗಳಿಂದ ಇದು ಗತಾರ್ಥವಲ್ಲ ೯೨೨

ಪ್ರಾಣಶಬ್ದಾರ್ಥ ವಿಷಯದಲ್ಲಿ ಭಾಷ್ಯ ಹಾಗೂ
ನ್ಯಾಯವಿವರಣೆಗಳಿಗೆ ವಿರೋಧವಿಲ್ಲ ೯೨೬

ಭಗವಂತನಲ್ಲಿ ಉತ್ಕ್ರಮಣ ಕ್ರಿಯೆಯ ಸಮರ್ಥನೆ ೯೩೪

ಭಗವತ್ ಕ್ರಿಯೆಯು ಶಕ್ತಿ, ವ್ಯಕ್ತಿ ಎಂದು ಎರಡು ವಿಧ ೯೪೦

ಶಾಂಕರಭಾಷ್ಯ ವಿಮರ್ಶೆ ೯೫೩

ಅದ್ವೈತಿಗಳ ಸೂತ್ರಾರ್ಥ ವಿಮರ್ಶೆ ೯೬೭

ರಾಮಾನುಜ ಭಾಷ್ಯದ ಅಧಿಕರಣ ವಿಮರ್ಶೆ ೯೭೬

ಭೂಮಾಧಿಕರಣದ ಪರಿಶಿಷ್ಟಗ್ರಂಥಗಳು (೯೯೧-೧೦೦೪)

* * * * *

ಅಂತರ್ಯಾಮ್ಯಧಿಕರಣ

(೧-೨-೫)

ಭಾಗ -೧

ಬ್ರಹ್ಮಸೂತ್ರ, ಸೂತ್ರದೀಪಿಕಾ, ಬ್ರಹ್ಮಸೂತ್ರಭಾಷ್ಯ,
ಸತ್ತರ್ಕದೀಪಾವಳಿ, ತತ್ವಪ್ರಕಾಶಿಕಾ,
ಭಾವದೀಪ ಇವುಗಳ ವಿವರಣೆಯೊಂದಿಗೆ
ಸರಳ ಕನ್ನಡ ಅನುವಾದ

* * *

ಭಾಷ್ಯದೀಪಿಕಾ ಹಾಗೂ ವಾಕ್ಯಾರ್ಥಮಂಜರೀ -
ಸಂಪೂರ್ಣ ಸಂಸ್ಕೃತ ಮೂಲ.

॥ ಶ್ರೀಗುರುಭ್ಯೋ ನಮಃ ॥

ಅಂತರ್ಯಾಮ್ಯಧಿಕರಣ

ದೇವದೇವೋತ್ತಮ ದೇವತಾಸಾರ್ವಭೌಮ
ಅಖಿಲಾಂಡಕೋಟಿಬ್ರಹ್ಮಾಂಡನಾಯಕ,ಚತುರ್ದಶಲೋಕಗುರುಗಳಾದ
ಶ್ರೀವೇದವ್ಯಾಸದೇವರಿಂದ ಅನುಗ್ರಹಿಸಲ್ಪಟ್ಟ

ಬ್ರಹ್ಮಮೀಮಾಂಸಾಶಾಸ್ತ್ರ

'ಅಂತರ್ಯಾಮಿ' ಎಂದರೆ ಮಹಾವಿಷ್ಣುವೇ

ॐ ॥ अन्तर्याम्यधिदैवादिषु तद्धर्मव्यपदेशात् ॥ ॐ ॥ ೧೮ ॥

ಸೂತ್ರಾರ್ಥ - 'ಏಷ ಆತ್ಮಾಂऽತರ್ಯಾಮೀ' ಎಂಬ ಶ್ರುತಿಯಲ್ಲಿ ಹೇಳಲ್ಪಟ್ಟ ಅಂತರ್ಯಾಮಿಯು ವಿಷ್ಣುವೇ ಆಗಿದ್ದಾನೆ. ಏಕೆಂದರೆ ಅಧಿದೈವಾದಿಪ್ರಕರಣಗಳಲ್ಲಿ ಅವಿದಿತತ್ವವೇ ಮೊದಲಾದ ವಿಷ್ಣುವಿನ ಧರ್ಮಗಳನ್ನು ಹೇಳಿರುವುದರಿಂದ.

ಶ್ರೀಜಗನ್ನಾಥಯತಿಗಳಿಂದ ರಚಿಸಲ್ಪಟ್ಟ

ಸೂತ್ರದೀಪಿಕಾ

सूत्रदीपिका — 'एष आत्माऽन्तर्यामी' इति श्रुत्युक्तोऽन्तर्यामी विष्णुरेव न प्रधानादिः । कुतः? अधिदैवादिषु अधिदैवाध्यात्माधिभूतादिप्रकरणेषु । तद्धर्मव्यपदेशात् । तस्मिन् अन्तर्यामिणि । तस्य 'यं पृथिवी न वेद' इति श्रुतौ उक्तस्याविदितत्वादिब्रह्मधर्मस्य व्यपदेशाद् उक्तत्वादित्यर्थः ।।

ಅರ್ಥ — 'ಏಷ ಆತ್ಮಾ ಅಂತರ್ಯಾಮೀ' ಎಂಬ ಬೃಹದಾರಣ್ಯಕಶ್ರುತಿಯು ಈ ಸೂತ್ರಕ್ಕೆ ವಿಷಯವಾಗಿದೆ. ಇಲ್ಲಿ ಹೇಳಲ್ಪಟ್ಟ ಅಂತರ್ಯಾಮಿಯು ವಿಷ್ಣುವೇ ಆಗಿದ್ದಾನೆ; ಹೊರತು ಪ್ರಕೃತ್ಯಾದಿಗಳಲ್ಲ. ಏಕೆಂದರೆ

ಅಧಿದೈವಾದಿಷು = ಅಧಿದೈವ, ಅಧ್ಯಾತ್ಮ, ಅಧಿಭೂತ ಮೊದಲಾದ ಪ್ರಕರಣಗಳಲ್ಲಿ, ತದ್ಧರ್ಮವ್ಯಪದೇಶಾತ್ = ಅಂತರ್ಯಾಮಿಯಲ್ಲಿ 'ಯಂ ಪೃಥಿವೀ ನ ವೇದ' ಎಂಬ ಶ್ರುತಿಯಲ್ಲಿ ಹೇಳಲ್ಪಟ್ಟ ಅವಿದಿತತ್ವ ಮೊದಲಾದ ಬ್ರಹ್ಮನ ಧರ್ಮಗಳನ್ನು ಹೇಳಿರುವುದರಿಂದ.

ಶ್ರೀಮದಾನನ್ದತೀರ್ಥಭಗವತ್ಪಾದಾಚಾರ್ಯವಿರಚಿತ-

ಬ್ರಹ್ಮಸೂತ್ರಭಾಷ್ಯಮ್

ಭಾಷ್ಯಮ್ – 'यः पृथिव्यां तिष्ठन् पृथिव्या अन्तरो यं पृथिवी न वेद यस्य पृथिवी शरीरं यः पृथिवीमन्तरो यमयत्येष त आत्माऽन्तर्याम्यमृतः' (बृ. ५-७-३) इत्यादि नाऽन्तर्याम्युच्यते ।

ಅನುವಾದ - 'ಯಾರು ಪೃಥಿವಿಯಲ್ಲಿ ನೆಲೆಸಿ ಆದಕ್ಕಿಂತಲೂ ಭಿನ್ನನಾಗಿ ಇರುವನೋ ಯಾರನ್ನು ಪೃಥಿವೀ ಮೊದಲಾದ ದೇವತಾಸಮೂಹವು ತಿಳಿಯಲು ಸಾಧ್ಯವಿಲ್ಲವೋ ಯಾರು ಅಲ್ಲಿದ್ದು ಸ್ವರಮಣನಾಗಿ ಎಲ್ಲವನ್ನೂ ನಿಯಮನ ಮಾಡುತ್ತಾನೋ, ಅಂತಹ ಪುರುಷನೇ ನಿನ್ನ ಒಳಗಿದ್ದು ನಿಯಮಿಸುತ್ತಿದ್ದಾನೆ. ಈ ಪುರುಷನೇ ನಿನಗೆ ಸ್ವಾಮಿಯಾಗಿದ್ದಾನೆ. ಎಲ್ಲರ ಅಂತರ್ಯಾಮಿಯೂ ಆಗಿದ್ದಾನೆ. ಮತ್ತು ನಾಶ ರಹಿತನಾಗಿದ್ದಾನೆ'

ಇವೇ ಮೊದಲಾದ ವಾಕ್ಯಗಳಿಂದ ಎಲ್ಲರಲ್ಲಿಯೂ ಒಬ್ಬನೇ ವ್ಯಕ್ತಿಯು ನೆಲೆಸಿದ್ದಾನೆಂದು ಹೇಳಲ್ಪಟ್ಟಿದೆ.

ಪ್ರತಿಪದಾರ್ಥ -- ಈ ಅಧಿಕರಣದಲ್ಲಿ ಅಂತಃಶ್ಚತ್ವ ಎಂಬ ಭಾವಧರ್ಮದಿಂದ ಸಹಿತವಾದ ನಿಯಮನ ಎಂಬ ಕ್ರಿಯಾರೂಪವಾದ ಲಿಂಗದ ಸಮನ್ವಯವನ್ನು ಬ್ರಹ್ಮನಲ್ಲಿ ಮಾಡಲಾಗಿದೆ. ವಿಷಯವಾಕ್ಯವನ್ನು ಉದಾಹರಿಸುವ ಮೂಲಕ ವಿಷಯವನ್ನು ತೋರಿಸುತ್ತಿದ್ದಾರೆ.

ಯಃ = ಯಾವಾತನು, ಪೃಥಿವ್ಯಾಂ = ಭೂಮಿಯಲ್ಲಿ, ತಿಷ್ಠನ್ = ನೆಲೆಸಿದವನಾಗಿ, ಪೃಥಿವ್ಯಾಃ = ಪೃಥಿವಿಯಿಂದ ಹಾಗೂ ತದಭಿಮಾನಿದೇವತೆಯಿಂದ, ಅಂತರಃ = ಭಿನ್ನನಾಗಿದ್ದಾನೋ, ಯಂ = ಯಾವಾತನನ್ನು, ಪೃಥಿವೀ = ಪೃಥಿವೀ ಮೊದಲಾದ ದೇವತಾವೃಂದವು, ನ ವೇದ = ತಿಳಿಯುವುದಿಲ್ಲವೋ, ಯಸ್ಯ = ಯಾವನಿಗೆ, ಪೃಥಿವೀ = ಪೃಥಿವಿಯೇ, ಪೃಥಿವೀ ಅಭಿಮಾನಿ ದೇವತೆಯೇ, ಶರೀರಂ = ದೇಹವಾಗಿದೆಯೋ, ಯಃ = ಯಾವಾತನು, ಪೃಥಿವೀಂ = ಪೃಥಿವೀ ಮೊದಲಾದ ದೇವತಾವೃಂದವನ್ನು, ಅಂತರಃ = ಒಳಗಡೆ ಇದ್ದು, ಯಮಯತಿ = ಪ್ರೇರಣೆ ಮಾಡುತ್ತಾನೋ, ಏಷಃ = ಅಂತಹ ಈ ಪುರುಷನೇ, ತೇ= ನಿನಗೆ, ಆತ್ಮಾ = ಹೃದಯದಲ್ಲಿ ನೆಲೆಸಿರುವ ಸ್ವಾಮಿಯು ಮತ್ತು, ಅಂತರ್ಯಾಮೀ = ಎಲ್ಲೆಡೆ ಎಲ್ಲರ ಹೃದಯದಲ್ಲಿ ನೆಲೆಸಿರುವವನು, ಅಮೃತಃ = ನಾಶ ರಹಿತನು:

ಅಂತರ್ಯಾಮ್ಯಧಿಕರಣ (೧-೨-೫)

ಇತ್ಯಾದಿ = ಇವೇ ಮೊದಲಾದ ವಾಕ್ಯಗಳಿಂದ (ವಾಕ್ಯಗಳಲ್ಲಿ),
ಅಂತರ್ಯಾಮೀ = ಎಲ್ಲರ ಹೃದಯದಲ್ಲಿ ನೆಲೆಸಿರುವ ವ್ಯಕ್ತಿಯು ಒಬ್ಬನೇ ಎಂದು,
ಉಚ್ಯತೇ = ಕರೆಸಿಕೊಳ್ಳುತ್ತಾನೆ.(೧)

ಭಾಷ್ಯಮ್ – तत्र च 'एतदमृतम्'(छां. ४-१५.१) इत्युक्तममृतत्वमुच्यते । स च 'यस्य पृथिवी शरीरम्' इत्यादिना सर्वात्मकत्वात् प्रकृतिस्तत्तज्जीवो वा युक्तः ।

ಅನುವಾದ -ಆ ಪರಮಾತ್ಮನಲ್ಲಿ 'ಏತದಮೃತಮ್, ಏತದಭಯಮ್' ಇತ್ಯಾದಿಯಾಗಿ ಛಾಂದೋಗ್ಯದಲ್ಲಿ ಹೇಳಿದಂತೆ ನಾಶವಿಲ್ಲದಿರುವಿಕೆಯು ತಿಳಿಯುತ್ತದೆ. 'ಯಸ್ಯ ಪೃಥಿವೀ ಶರೀರಮ್' ಇತ್ಯಾದಿಯಾಗಿ ಸರ್ವಾತ್ಮಕತ್ವವು ಹೇಳಲ್ಪಟ್ಟದೆ. ಈ ಧರ್ಮವು ಪ್ರಕೃತಿ

---

(೧) **ಭಾಷ್ಯದೀಪಿಕಾ** – अत्राधिकरणेऽन्तःस्थत्वरूपभावसहितं नियमनक्रियात्मकं लिङ्गं ब्रह्मणि समन्वीयते । विषयवाक्योदाहरणपूर्वकं विषयं दर्शयति – य इति ।। इत्यादीति प्रथमा सप्तम्यर्थे । तृतीयार्थे वा । 'सप्तसु प्रथमा' इति सूत्रात् । 'क्रियाविशेषणं वा' इति तत्त्वप्रदीपोक्तेः 'इत्यादिना' इति पाठस्तद्विरुद्धः । वाक्ये, वाक्येनेति वा शेषः। 'योऽप्सु तिष्ठन्' 'यो भूतेषु तिष्ठन्' इत्यादिकमादिशब्देन गृह्यते । अन्तर्यामीत्यनेन विषयो दर्शितः । बृहदारण्यके उद्दालकं प्रति याज्ञवल्क्येनोक्तम् इदं वाक्यम् । 'यः पृथिव्यां' पृथुं विष्णुमूढ्वा वाति गच्छतीति पृथिवी गरुडः, तस्मिन् तिष्ठन् 'पृथिव्याः' तदभिमानिचेतनात् 'अन्तरः' विविक्तः । 'यं च पृथिवी' तदभिमानी चेतनो न वेद साकल्येन । 'यस्य च पृथिवी' तद्वशत्वनिमित्तात् शरीरभूता । न केवलं तत्र स्थितिमात्रं, किन्तु 'योऽन्तरः' अन्तःस्थित्वा बाह्यविषयापेक्षां विना रममाणः । स्वतो नित्यतृप्तः -
'..... सोऽन्तरः स्ववशत्वतः ।
बाह्यापेक्षां विना यस्तु रमते सोऽन्तरः स्मृतः' ।। इति बृहद्भाष्योक्तेः ।
यद्वा -
'अतिप्रियत्वाच्च हरेरन्तरत्वमुदाहृतम् ।।' इति तत्रैवोक्तेः । 'प्रेयः पुत्रात्' इत्यादिश्रुत्या परमप्रेयोरूपत्वात् 'अन्तरः' अतिप्रियः सन् 'पृथिवीं' गरुडं 'यमयति' नियमयति । एषः 'ते' तव 'अन्तर्याम्यात्मा' नियामकः पुरुषः 'अमृतः' नित्य इति श्रुत्यर्थः ।।
एतेन् 'अन्तरो विविक्तः' इति टीकाया बृहद्भाष्यविरोधो निरस्तः । बृहद्भाष्यस्य 'य आत्मानम्' इत्यत्रस्थान्तरशब्दविषयत्वात् । अत एव न श्रुतौ पौनरुक्त्यम् । द्वयोर्भिन्नार्थत्वात् । पूर्वपक्षी त्विदं वाक्यमन्यपरं मन्यते ।।

ಅಥವಾ ಆಯಾ ಜೀವರಲ್ಲಿ ಕಂಡುಬರುವುದರಿಂದ ಅಮೃತತ್ವಧರ್ಮವು ಅವರಿಗೇ ಸರಿಹೊಂದುತ್ತದೆ.

ಪ್ರತಿಪದಾರ್ಥ -- ಹಿಂದಿನ ಅಧಿಕರಣದ ವಿಷಯವಾಕ್ಯದಿಂದ ಸಂಗತಿಯನ್ನು ತೋರಿಸುತ್ತಿದ್ದಾರೆ.

ತತ್ರ ಚ = ಅಂತಹ ಪರಮಾತ್ಮನಲ್ಲಿ, ಏತದಮೃತಂ = 'ಏತದಮೃತಮ್, ಏತದಭಯಂ' ಎಂದು ಛಾಂದೋಗ್ಯದಲ್ಲಿ, ಉಕ್ತಮ್ = ಹೇಳಲಾಗಿದೆ. ಅಮೃತಂ = ನಾಶವಿಲ್ಲದಿರುವಿಕೆಯು, ಉಚ್ಯತೇ = ಹೇಳಲ್ಪಟ್ಟಿದೆ.

ಸ ಚ = ಇಂತಹ ಧರ್ಮಗಳಿಂದ ಹೇಗಿರುವವನು, ಪೃಥಿವೀ ಶರೀರಂ - = ಪೃಥಿವಿಯೇ ಶರೀರವು, ಯಸ್ಯ = ಯಾವನಿಗಿದೆಯೋ, ಇತ್ಯಾದಿನಾ = ಇವೇ ಮೊದಲಾದ ಪ್ರಮಾಣಗಳಿಂದ, ಸರ್ವಾತ್ಮಕತ್ವಾತ್ = ಎಲ್ಲೆಡೆ ವ್ಯಾಪ್ತವಾಗಿರುವಿಕೆ ಎಂಬ ಕಾರಣದಿಂದ, ಪ್ರಕೃತಿಃ = ಚಿತ್‌ಪ್ರಕೃತಿ ಅಥವಾ ಜಡಪ್ರಕೃತಿಯು, ತತ್ತಜ್ಜೀವೋ ವಾ = ಅಥವಾ ಅಲ್ಲಿರುವ ಜೀವರು, ಯುಕ್ತಃ = ಅಂತರ್ಯಾಮಿತ್ವವೆಂಬ ಧರ್ಮವುಳ್ಳವರೆಂದು ಹೇಳಲಹುದು.(೧)

ಭಾಷ್ಯಮ್ – ನಹಿ ವಿಷ್ಣೋಃ ಪೃಥಿವ್ಯಾದಿಶರೀರತ್ವಮಙ್ಗೀಕ್ರಿಯತ ಇತಿ ।

ಅನುವಾದ - ವಿಷ್ಣುವಿಗೆ ಪೃಥಿವಿಯು ಶರೀರವಾಗಿರುವಿಕೆಯನ್ನು ಅಂಗೀಕರಿಸುವುದಿಲ್ಲ. ಆದ್ದರಿಂದ ವಿಷ್ಣುವು ಅಂತರ್ಯಾಮಿಯಲ್ಲ. ಹೀಗೆ ಆಕ್ಷೇಪ.

---

(೧) ಭಾಷ್ಯದೀಪಿಕಾ – ಪೂರ್ವಾಧಿಕರಣತದ್ವಿಷಯವಾಕ್ಯಸಙ್ಗತಿಂ ದರ್ಶಯತಿ – ತತ್ರೇತಿ ।। ಇಯಮತ್ರ ತತ್ತ್ವಪ್ರದೀಪೋಕ್ತಾ ಯೋಜನಾ – 'ಯಃ ಪೃಥಿವ್ಯಾಂ ತಿಷ್ಠನ್' ಇತ್ಯಾದಿವಾಕ್ಯೇಷ್ವನ್ತರ್ಯಾಮ್ಯುಚ್ಯತೇ । ತತ್ರ ಚ ತದ್ವಾಕ್ಯೇಷ್ವೇವ ತಸ್ಮಿನ್ನೇವಾನ್ತರ್ಯಾಮಿಣಿ 'ಏತದಮೃತಮೇತದಭಯಮ್' ಇತಿ ಪೂರ್ವನಯೋದಾಹೃತ-ಛಾನ್ದೋಗ್ಯವಾಕ್ಯೇऽಕ್ಷಿಪುರುಷಸ್ಯೋಕ್ತಮಮೃತತ್ವಮ್ 'ಏಷ ತ ಆತ್ಮಾऽನ್ತರ್ಯಾಮ್ಯಮೃತಃ' ಇತ್ಯನೇನ ಉಚ್ಯತ ಇತಿ । ಅನೇನ ಬೃಹದಾರಣ್ಯಕೋಕ್ತಾನ್ತರ್ಯಾಮಿಣಿ ವಿಷ್ಣ್ವನ್ಯತ್ವಾಕ್ಷೇಪಮುಖೇನ ತದುಕ್ತಾಮೃತತ್ವಸ್ಯಾಪ್ಯನ್ಯನಿಷ್ಠತ್ವಂ ಸಮ್ಪಾದ್ಯ ತಸ್ಯ ಪೂರ್ವಾಧಿಕರಣೋಕ್ತಾಕ್ಷಿಸ್ಥತ್ವಸ್ಯ ವಿಷ್ಣುತ್ವಸಾಧಕತ್ವಾಕ್ಷೇಪಾತ್ ಪೂರ್ವೇणाऽक्षेपिकी ಸङ್ಗತಿರುಕ್ತಾ ಭವತಿ । ತತಃ ಕಿಮಿತ್ಯತಃ ಸಯುಕ್ತಿಕಂ ಪೂರ್ವಪಕ್ಷಯತಿ – ಸ ಚೇತಿ ।। ಚಶಬ್ದೋ ಹೇತುಸಮುಚ್ಚಯೇ । ಆದಿಪದೇನ 'ಯಸ್ಯಾऽಪಃ ಶರೀರಮ್' ಇತ್ಯಾದೇಃ ಸङ್ಗ್ರಹಃ । ತಚ್ಛಬ್ದಸ್ಯ ವಿಪರಿಣಾಮೇನ ಹೇತುವಾಕ್ಯೇನ ಸಮ್ಬಧ್ಯತೇ । ಆತ್ಮಶಬ್ದಃ ಸ್ವರೂಪಶರೀರೋಭಯಾರ್ಥಃ । ತಥಾ ಚ ಸೋऽನ್ತರ್ಯಾಮೀ ಜಡಚೇತನೋಭಯರೂಪಾ ಪ್ರಕೃತಿಃ ಪೃಥಿವ್ಯಾದಿತತ್ತಜ್ಜೀವೋ ವಾ ಯುಕ್ತಃ । ಕುತಃ? ಶ್ರೌತಶರೀರಶಬ್ದಸ್ಯ 'ಇದಂ ಪೂರ್ವಪಕ್ಷಶರೀರಮ್' ಇತ್ಯಾದಾವಿವ ಸ್ವರೂಪಾರ್ಥತ್ವಾತ್ । ಜಡಪ್ರಕೃತೇಶ್ಚ ಸರ್ವೋಪಾದಾನತ್ವೇನ ಸರ್ವಾತ್ಮಕತ್ವಾತ್ । ಚಿತ್ಪ್ರಕೃತೇಶ್ಚ ಸರ್ವಾಭಿಮಾನಿತ್ವೇನ ಸರ್ವಾತ್ಮಕತ್ವಾತ್ ಪೃಥಿವ್ಯಾದಿಜೀವಸ್ಯ ಪೃಥಿವ್ಯಾದಿಸರ್ವಶರೀರತ್ವಾದಿತಿ ಯೋಜನಾ ।।

ಪ್ರತಿಪದಾರ್ಥ - - ಯಾವ ರೀತಿಯಾಗಿ ಪ್ರಕೃತಿ ಮೊದಲಾದ ಲಿಂಗಗಳಿಂದ ಪ್ರಕೃತಿಯನ್ನು ಅಂತರ್ಯಾಮಿಯೆಂದು ಹೇಳುವ ಲಿಂಗಗಳಿರುವುದರಿಂದ ಪ್ರಕೃತ್ಯಾದಿಗಳನ್ನು ಅಂತರ್ಯಾಮಿಯೆಂದು ಹೇಳಲಾಗುತ್ತದೋ ಅದರಂತೆ ಅಮೃತತ್ವ ಎಂಬ ಲಿಂಗದಿಂದ ವಿಷ್ಣುವನ್ನು ಅಂತರ್ಯಾಮಿಯೆಂದು ಏಕೆ ಹೇಳಬಾರದು? ಎಂಬ ಪ್ರಶ್ನೆಗ ಉತ್ತರಿಸುತ್ತಿದ್ದಾರೆ.

ಪೃಥಿವ್ಯಾದಿಶರೀರತ್ವಂ = ಪೃಥಿವಿಯೇ ದೇಹವಾಗಿರುವಿಕೆಯು, ವಿಷ್ಣೋಃ ನಾಂಗೀಕ್ರಿಯತೇ = ವಿಷ್ಣುವಿಗೆ ಒಪ್ಪುವುದಿಲ್ಲ. ಆದ್ದರಿಂದ ವಿಷ್ಣು ಸರ್ವಾಂತರ್ಯಾಮಿಯು ಆಗುವುದಿಲ್ಲ. ಇತಿ = ಹೀಗೆ ಪೂರ್ವಪಕ್ಷಸ್ವರೂಪವು.(೧)

ಭಾಷ್ಯಮ್ – ಅತ ಆಹ -

ॐ ॥ ಅನ್ತರ್ಯಾಮ್ಯಧಿದೈವಾದಿಷು ತದ್ಧರ್ಮವ್ಯಪದೇಶಾತ್ ॥ ॐ ॥೧೮॥

'ಯಂ ಪೃಥಿವೀ ನ ವೇದ, ಯಃ ಪೃಥಿವ್ಯಾ ಅನ್ತರಃ' (ಬೃ. ೫-೭-೩.) ಇತ್ಯಾದಿನಾ ಅಧಿದೈವಾದಿಷು ತದ್ಧರ್ಮವ್ಯಪದೇಶಾದ್ ವಿಷ್ಣುರೇವಾನ್ತರ್ಯಾಮೀ ।

ಅನುವಾದ - ಹಿಂದಿನ ಆಕ್ಷೇಪಕ್ಕೆ ಸೂತ್ರಕಾರರು ಉತ್ತರಿಸುತ್ತಿದ್ದಾರೆ 'ಯಂ ಪೃಥಿವೀ ನ ವೇದ' ಇತ್ಯಾದಿಯಾಗಿ ಬೃಹದಾರಣ್ಯಕದ ವಾಕ್ಯಗಳಿಂದ ಇಲ್ಲಿರುವ ಅಧಿದೈವ, ಅಧಿಭೂತ, ಅಧ್ಯಾತ್ಮಈ ಮೂರು ಪ್ರಕರಣಗಳಲ್ಲಿಯೂ ಅಂತರ್ಯಾಮಿಯೆಂದು ಪ್ರತಿಪಾದ್ಯನಾದವನು ವಿಷ್ಣುವೇ ಆಗಿದ್ದಾನೆ. ಆ ಧರ್ಮಗಳೂ ಸಹ ವಿಷ್ಣುವಿನದ್ದೇ ಆಗಿವೆ.

ಪ್ರತಿಪದಾರ್ಥ - ಸಿದ್ಧಾಂತವನ್ನು ಮಾಡುತ್ತಾ ಸೂತ್ರವನ್ನು ಹೇಳಿ ವ್ಯಾಖ್ಯಾನಿಸುತ್ತಿದ್ದಾರೆ. ಅತಃ = ಹಿಂದಿನ ಪೂರ್ವಪಕ್ಷದ ನಿರಾಕರಣೆಗೋಸ್ಕರ, ಆಹ = ಸೂತ್ರಕಾರರು 'ಅಂತರ್ಯಾಮ್ಯಧಿದೈವಾದಿಷು ತದ್ಧರ್ಮೋಪದೇಶಾತ್' ಎಂದು ಹೇಳಿದ್ದಾರೆ. ಪೃಥಿವೀ = ಪೃಥಿವಿಯು, ಯಂ = ಯಾವನನ್ನು , ನ ವೇದ = ತಿಳಿಯಲಾರಳೋ, ಪೃಥಿವ್ಯಾಃ = ಪೃಥಿವಿಯಿಂದ, ಯಃ = ಯಾವಾತನು, ಅಂತರಃ = ಅಂತರ್ಯಾಮಿಯಾಗಿದ್ದು ಪ್ರೇರಣೆ ಮಾಡುತ್ತಾನೋ, ಇತ್ಯಾದಿನಾ = ಇವೇ ಮೊದಲಾದ ಬೃಹದಾರಣ್ಯಕದ ಮಾತುಗಳಿಂದ ಅಧಿದೈವಾದಿಷು = ಅಧಿದೈವ, ಅಧಿಭೂತ, ಅಧ್ಯಾತ್ಮ ಮೊದಲಾದ ಪ್ರಕರಣಗಳಲ್ಲಿ,

---

(೧) ಭಾಷ್ಯದೀಪಿಕಾ – ನನು ಯಥಾ ಪ್ರಕೃತ್ಯಾದಿಲಿಙ್ಗೇನ ತೇಷಾಮನ್ತರ್ಯಾಮಿತ್ವಂ ತಥಾऽಮೃತತ್ವಲಿಙ್ಗೇನ ವಿಷ್ಣೋಸ್ತತ್ ಕಿಂ ನ ಸ್ಯಾದಿತ್ಯತ ಆಹ – ನ ಹೀತಿ ।। ಪೃಥಿವ್ಯಾದಿ ಶರೀರಂ ಯಸ್ಯ ಸ ತಯೋಕ್ತಃ, ತಸ್ಯ ಭಾವಸ್ತತ್ತ್ವಂ ತ್ವಪ್ರತ್ಯಯಾಪಾಠೇ ತ್ವನ್ವಯಃ ಋಜುರಙ್ಗೀಕ್ರಿಯತೇ । ಸಿದ್ಧಾನ್ತಿನೇತಿ ಶೇಷಃ । ತಸ್ಯ ಪೃಥಿವ್ಯಾದಿಜಽಭಿನ್ನಚಿಚ್ಛರೀರತ್ವಾದಿತಿ ಹಿಶಬ್ದಾಭಿಪ್ರಾಯಃ । ತಥಾ ಚ - ಸೈದ್ಧಾನ್ತಿಕಲಿಙ್ಗಾಪೇಕ್ಷಯಾ ಪೂರ್ವಪಕ್ಷಲಿಙ್ಗಸ್ಯ ನಿರವಕಾಶತಯಾ ಬಲವತ್ತ್ವಾದನೇನ ತಸ್ಯ ಬಾಧಾನ್ನಾನ್ತರ್ಯಾಮೀ ವಿಷ್ಣುರಿತಿ ಭಾವಃ ।।

ತದ್ಧರ್ಮವ್ಯಪದೇಶಾತ್ = ಆ ವಿಷ್ಣುವಿನ ಧರ್ಮಗಳೇ ಹೇಳಲ್ಪಟ್ಟಿರುವುದರಿಂದ,
ವಿಷ್ಣುರೇವ = ಮಹಾವಿಷ್ಣುವೇ ಅಂತರ್ಯಾಮಿ = ಸರ್ವಾಂತರ್ಯಾಮಿಯಾಗಿದ್ದಾನೆ.(೧)

ಭಾಷ್ಯಮ್ – ಸ ಹಿ – 'ನ ತೇ ವಿಷ್ಣೋ ಜಾಯಮಾನೋ ನ ಜಾತಃ'(ಋ.೭-೯೯-೨) 'ಸ ಯೋಽತೋಽಶ್ರುತೋಽಗತೋಽಮತೋಽನತೋಽದೃಷ್ಟೋಽವಿಜ್ಞಾತೋಽನಾದಿಷ್ಟಃ ಸರ್ವೇಷಾಂ ಭೂತಾನಾಮನ್ತರಪುರುಷಃ' (ಐ.ಆ. ೩-೨-೪.) ಇತ್ಯಾದಿನಾಽವಿದಿತೋಽನ್ತರಶ್ಚ ॥ ೧೮ ॥

ಅನುವಾದ - ಅಂತಹ ವಿಷ್ಣುವು ಶ್ರುತ್ಯುಕ್ತಧರ್ಮವುಳ್ಳವನು ಎಂದರೆ 'ಎಲೈ ! ವಿಷ್ಣುವೇ ಹಿಂದೆ ಹುಟ್ಟಿದವನಾಗಲೀ, ಮುಂದೆ ಹುಟ್ಟುವ ಜೀವರಾಶಿಗಳಾಗಲೀ ಯಾರೂ ಸಹ ನಿನ್ನ ಮಹಿಮೆಯನ್ನು ಇದುವರೆಗೂ ತಿಳಿದಿಲ್ಲ. ಮುಂದೆ ತಿಳಿಯುವುದೂ ಇಲ್ಲ' ಎಂದು ಋಗ್ವೇದದಲ್ಲಿ;

ಮತ್ತು ಐತರೇಯದಲ್ಲಿಯೂ 'ಪ್ರಸಿದ್ಧನಾದ ವಿಷ್ಣುವೇ ಸಂಪೂರ್ಣವಾಗಿ ಕೇಳುವುದರಿಂದ

(೧) ಭಾಷ್ಯದೀಪಿಕಾ – ಸಿದ್ಧಾನ್ತಯತ್ಸೂತ್ರಮವತಾರ್ಯ ವ್ಯಾಚಷ್ಟೇ – ಅತ ಇತಿ ॥ ಇತ್ಯಾದಿನಾ ವಾಕ್ಯೇನ ಇತಿ ಶೇಷಃ । ತತ್ರ ಯದ್ಯಪಿ ಸೌತ್ರವ್ಯಪದೇಶಪದೇನ ಅಭಿಪ್ರೇತಂ 'ಯಂ ಪೃಥಿವೀ ನ ವೇದ ಯಃ ಪೃಥಿವೀಮನ್ತರೋ ಯಮಯತಿ' ಇತಿ ವಾಕ್ಯಮೇವೋದಾಹರ್ತವ್ಯಮ್ । ಅತ್ರೋಕ್ತಾನ್ತರತ್ವಸ್ಯೈವ ಸೌತ್ರಧರ್ಮಶಬ್ದಾರ್ಥತ್ವಾತ್, ನತು 'ಪೃಥಿವ್ಯಾಮನ್ತರಃ' ಇತಿ ವಾಕ್ಯಮ್ । ಅತ್ರತ್ಯಾನ್ತರಶಬ್ದಸ್ಯ ವಿವಿಕ್ತಾರ್ಥತ್ವೇನ ತದುಕ್ತಾರ್ಥಸ್ಯಾಹೇತುತ್ವಾತ್ । ತಥಾ ಚ ತದುದಾಹರಣಂ ನ ಪ್ರಕೃತೋಪಯುಕ್ತಮ್ । ತಥಾಽಪಿ ತತ್ಪ್ರತೀಕತ್ವೇನೋದಾಹೃತಮಿತ್ಯದೋಷಃ । ಆದಿಶಬ್ದೇನ ಪ್ರಕರಣತ್ರಯವಾಕ್ಯಂ ಗೃಹ್ಯತೆ । ಅಧಿದೈವಾದಿಷು । ಪ್ರಕರಣೇಷ್ವಿತಿ ಶೇಷಃ । ಪ್ರಕರಣಂ ನಾಮ ಏಕಪ್ರಮೇಯಪ್ರತಿಪಾದಕಾನೇಕವಾಕ್ಯಾನಿ । ತತ್ರ 'ಯಃ ಪೃಥಿವ್ಯಾಂ ತಿಷ್ಠನ್' ಇತ್ಯಧಿದೈವತಪ್ರಕರಣಮ್ । 'ಯಃ ಸರ್ವೇಷು ಭೂತೇಷು ತಿಷ್ಠನ್' ಇತ್ಯಧಿಭೂತಪ್ರಕರಣಮ್ । 'ಯಃ ಪ್ರಾಣೇ ತಿಷ್ಠನ್' ಇತ್ಯಧ್ಯಾತ್ಮಪ್ರಕರಣಮ್ । ಸೂತ್ರೇ ಭಾಷ್ಯೇ ಚಾಧಿದೈವೇತ್ಯುಕ್ತ್ಯಾ ಪೃಥಿವ್ಯಾದೀನಾಂ ಜಡತ್ವೇನ ತದವಿದಿತತ್ವಂ ಸರ್ವಸ್ಯಾಪಿ ಸಮ್ಭವತೀತಿ ಶಙ್ಕಾ ವಾರಿತಾ । ಅತ್ರೋಕ್ತಾನಾಂ ಪೃಥಿವ್ಯಾದೀನಾಮಧಿದೈವತ್ವೇನ ಚೇತನತ್ವಾತ್ 'ಪ್ರಾಣೇ' ಇತಿ ಶ್ರುತೌ ಪ್ರಾಣಶಬ್ದಃ ಪ್ರಾಣವಾಯುದೇವತಾಪರಃ, ಸೈವ ಪ್ರಮೇಯದೀಪರೀತ್ಯಾ ಪ್ರಾಣೇನ್ದ್ರಿಯದೇವತಾ । ಅಧಿದೈವಾದಿಷ್ವಿತ್ಯನೇಕಪ್ರಕರಣಗ್ರಹಣೇನ ನ ಕೇವಲಮೇಕತ್ರ ತದ್ಧರ್ಮೋಕ್ತಿಃ, ಕಿನ್ತು ಬಹುಷು ಸ್ಥಲೇಷ್ವಿತಿ ಸೂಚಿತಮ್ । ಅನುವೃತ್ತಸ್ಯ ತತ್ಸಿತ್ಯಸ್ಯಾರ್ಥಮಾಹ – ವಿಷ್ಣುರೇವೇತಿ ॥ ತದಿತ್ಯಸ್ಯ ನಪುಂಸಕತ್ವೇಽಪ್ಯನ್ತರ್ಯಾಮಿತ್ಯುದ್ದೇಶ್ಯಸಮರ್ಪಕಸೌತ್ರಪದಾನುಸಾರೇಣ ವಿಷ್ಣುರೇವೇತಿ ವ್ಯಾಖ್ಯಾತಮ್ । ಅನೇನ 'ಏಷ ತ ಆತ್ಮಾ' (ಬೃ.೫-೭-೩) ಇತ್ಯುಕ್ತೋಽನ್ತರ್ಯಾಮಿ ಸ ವಿಷ್ಣುರೇವ । ಕುತಃ? ಅಧಿದೈವಾದಿಷು ಪ್ರಕರಣೇಷು 'ತದ್ಧರ್ಮವ್ಯಪದೇಶಾತ್' ತಸ್ಯ ವಿಷ್ಣೋಃ ಧರ್ಮಸ್ಯ ಅವಿದಿತತ್ವಾನ್ತರತ್ವಾದೇಃ 'ಯಂ ಪೃಥಿವೀ ನ ವೇದ' ಇತ್ಯಾದಿನೋಕ್ತತ್ವಾದಿತಿ ಸೂತ್ರಾರ್ಥ ಉಕ್ತೋ ಭವತಿ ॥

ತಿಳಿಯಲು ಅಸಮರ್ಥನು, ಹೊಂದಲು ಅಶಕ್ಯನು, ತಿಳಿಯಲು ಸಾಧ್ಯವಿಲ್ಲದವನು, ಯಾರಿಗೂ ಮಣಿಯಲಾರದವನು. ಕಾಣಲು ಸಾಧ್ಯವಿಲ್ಲದವನು. ಜ್ಞಾನಕ್ಕೆ ನಿಲುಕದವನು. ಯಾರಿಂದಲೂ ಆಜ್ಞೆಗೆ ಒಳಗಾಗದವನು. ಸಕಲಪ್ರಾಣಿಗಳ ಹೃದಯದಲ್ಲಿ ಭಿನ್ನನಾಗಿ ನೆಲೆಸಿ ಪ್ರೇರಣೆ ಮಾಡುವ ಮಹಾಪುರುಷನು ಇವನೇ --ಹೀಗೆ ಹೇಳಿದೆ. ಇಂತಹ ಶ್ರುತಿಗಳಿಂದ ಅಪ್ರಮೇಯನೂಅಂತರ್ಯಾಮಿಯಾದವನೂ ವಿಷ್ಣುವೇ ಆಗಿದ್ದಾನೆ.

ಪ್ರತಿಪದಾರ್ಥ -- ಅವಿದಿತತ್ವಾದಿಗಳನ್ನು ಅಂತಹ ವಿಷ್ಣುವಿನ ಧರ್ಮವೆಂದು ಹೇಗೆ ನಿಶ್ಚಯಿಸುತ್ತೀರಿ ಎಂಬ ಪ್ರಶ್ನೆಗೆ ಉತ್ತರಿಸುತ್ತಿದ್ದಾರೆ.

ಸ ಹಿ = ಅಂತಹ ವಿಷ್ಣುವೇ, ಋಗ್ವೇದದಲ್ಲಿ ಹೀಗೆ ಹೇಳಲ್ಪಟ್ಟಿದ್ದಾನೆ. ಹೇ ವಿಷ್ಣೋ ಎಲೈ ವಿಷ್ಣುವೇ, ಜಾಯಮಾನಃ = ಮುಂದೆ ಹುಟ್ಟುವ ಸಕಲಜೀವರಾಶಿಗಳು, ಜಾತಃ = ಇಲ್ಲಿಯ ತನಕ ಹುಟ್ಟಿದ ಸಕಲ ಜೀವರಾಶಿಗಳು, ತೇ = ನಿನ್ನ ಅಗಾಧವಾದ ಮಹಿಮೆಯನ್ನು, ನ = ತಿಳಿಯಲು ಸಾಧ್ಯವೇ ಇಲ್ಲ. ಎಂದು.

ಏತರೇಯೋಪನಿಷತ್ತಿನಲ್ಲೂ - ಯಃ = ಯಾವ ಪ್ರಸಿದ್ಧನಾದ, ಸಃ = ಆ ವಿಷ್ಣುವು, ಅಶ್ರುತಃ = ಸಂಪೂರ್ಣವಾಗಿ ಕೇಳುವಿಕೆಯಿಂದ ತಿಳಿಯಲು ಸಾಧ್ಯವಿಲ್ಲದವನು. ಅಗತಃ = ಹೊಂದಲು ಅಸಮರ್ಥನು, ಅಮತಃ = ಮನನದಿಂದ ತಿಳಿಯಲು ಸಾಧ್ಯವಿಲ್ಲದವನು, ಅನತಃ = ಯಾರಿಗೂ ಮಣಿಯಲಾರದವನು, ಅದೃಷ್ಟಃ = ಕಾಣಲು ಸಾಧ್ಯವಿಲ್ಲದವನು, ಅವಿಜ್ಞಾತಃ = ಜ್ಞಾನಕ್ಕೆ ನಿಲುಕದವನು. ಅನಾದಿಷ್ಟಃ -= ಯಾರ ಆಜ್ಞೆಗೂ ಒಳಗಾಗದವನು. ಸರ್ವೇಷಾಂ ಭೂತಾನಾಂ = ಸಕಲಪ್ರಾಣಿಗಳ ಅಂತರಪುರುಷಃ = ಒಳಗಡೆ ನೆಲೆಸಿ ಪುರುಷನಾಗಿರುವವನು -- ಹೀಗೆ ಹೇಳಿದೆ.

ಇತ್ಯಾದಿನಾ = ಇವೇ ಮೊದಲಾದ ಶ್ರುತಿಗಳಿಂದ, ಅವಿದಿತಃ = ಅಪ್ರಮೇಯನೂ, ಚ = ಮತ್ತು, ಅಂತರಃ = ಅಂತರ್ಯಾಮಿಯಾದವನು (ಮಹಾವಿಷ್ಣುವೇ) ಆಗಿದ್ದಾನೆ.[೧]

---

(೧) ಭಾಷ್ಯದೀಪಿಕಾ – ಅವಿದಿತತ್ವಾದೇಃ ಕುತೋ ವಿಷ್ಣುಧರ್ಮತ್ವಮಿತ್ಯತ ಆಹ – ಸ ಹೀತಿ ।। 'ಸಃ' ವಿಷ್ಣುಃ 'ಹಿ' ಯಸ್ಮಾತ್ । 'ಇತ್ಯಾದಿನಾ' ವಾಕ್ಯೇನೇತಿ ಶೇಷಃ । ಆದಿಪದೇನ 'ದಿವ್ಯೋ ದೇವ ಏಕೋ ನಾರಾಯಣಃ' (ಸುಬಾಲ.೭) ಇತ್ಯುಪಕ್ರಮ್ಯ 'ಯಸ್ಯ ಪೃಥಿವೀ ಶರೀರಂ ಯಃ ಪೃಥಿವೀಮನ್ತರಃ ಸಞ್ಚರನ್ ಯಂ ಪೃಥಿವೀ ನ ವೇದ ಏಷ ಸರ್ವಭೂತಾನ್ತರಾತ್ಮಾ ಅಪಹತಪಾಪ್ಮಾ ದಿವ್ಯೋ ದೇವ ಏಕೋ ನಾರಾಯಣಃ' ಇತ್ಯುಪಸಂಹೃತ್ಯಾಧೀತಂ ಶ್ರುತ್ಯನ್ತರಂ ಗೃಹ್ಯತೇ । 'ಅವಿದಿತಃ' ಸಾಕಲ್ಯೇನಾಜ್ಞಾತಃ 'ಅನ್ತರಃ' ಅನ್ತಸ್ತಿಷ್ಠತ್ವಾ ರಮಣಕೃತ್ ಪ್ರಸಿದ್ಧ ಇತಿ ಶೇಷಃ । ಚಃ ಸಮುಚ್ಚಯೇ । 'ನ ತೇ' ಇತಿ ವಾಕ್ಯಂ ಚ ತೇ ದೇವ ಮಹಿಮ್ನಃ ಪರಮನ್ತಂ ಮಹಿಮಾನಂ ಶ್ರೋತ್ರಾದಿನಾ ನಾऽಪ ಇತಿ ಪ್ರಕೃತಾನುಗುಣ್ಯೇನ ಸರ್ವತ್ರಾಧಿಕರಣೇ ವ್ಯಾಖ್ಯಾತಮ್ । 'ಸಃ' ಇತಿ ವಾಕ್ಯಮಪಿ ತತ್ರೈವ ವ್ಯಾಕೃತಮ್ ।।

ಪರಿಪೂರ್ಣಚಂದ್ರಿಕಾ

श्रीपद्मनाभतीर्थविरचितसत्तर्कदीपावळ्याम्:

अन्तर्याम्याधिकरणम्

ॐ अन्तर्याम्यधिदैवादिषु तद्धर्मव्यपदेशात् ॐ ।। १-२-१८ ।।
ॐ नच स्मार्तमतद्धर्माभिलापात् ॐ ।। १-२-१९ ।।
ॐ शारीरश्चोभयेऽपि हि भेदेनैनमधीयते ॐ ।। १-२-२० ।।

'एतमदमृतमभयम्' इति यदक्ष्यन्तरपुरुषस्य विष्णुत्वसाधकममृतत्वमुक्तं तदन्तर्यामिणः श्रूयते । 'एष त आत्माऽन्तर्याम्यमृतः' इति अन्तर्यामी विष्णोरन्यः प्रतीयत इत्याशङ्क्य विष्णुरेवान्तर्यामीति प्रतिपादयितुमुत्तराधिकरणमारभ्यते ।। यः पृथिव्यां तिष्ठन्निति ।। यं पृथिवी न वेद पृथिवी देवता न वेदेत्यर्थः ।। उभयेऽपीति ।। काण्वा माध्यन्दिनायनाश्चान्तर्यामिणः सकाशाज्जीवमधीयत इत्यर्थः । 'यस्य पृथिवी शरीरम्' इत्यादिषु शरीरशब्दो न भोगायतनादित्वाभिप्रायः, किन्तु यौगिक इत्याह – शीर्यत इति ।।

।। इति सत्तर्कदीपावळ्याम् अन्तर्याम्याधिकरणम् ।।

'ಏತದಮೃತಮಭಯಮ್' ಇತ್ಯಾದಿ ಶ್ರುತಿಯಲ್ಲಿ ಚಕ್ಷುರಿಂದ್ರಿಯದಲ್ಲಿರುವ ಪುರುಷನು ವಿಷ್ಣುವೇ ಆಗಿದ್ದಾನೆನ್ನಲು ಅಮೃತತ್ವವೆಂಬ ಧರ್ಮವನ್ನು ಹೇಳಲಾಯಿತು. ಆದರೆ ಈ ಧರ್ಮವು ಅಂತರ್ಯಾಮಿಯಲ್ಲಿ ಕೇಳಿಸುತ್ತಿದೆ. ಅದು ಹೀಗೆ -- ''ಏಷ ತೇ ಆತ್ಮಾ ಅಂತರ್ಯಾಮ್ಯಮೃತಃ'' ಎಂದು. ಒಂದು ವೇಳೆ ಅಂತರ್ಯಾಮಿಯು ವಿಷ್ಣುವಿಗಿಂತ ಭಿನ್ನನಾದರೆ ಅವನೇ ಅಮೃತತ್ವ ಧರ್ಮವುಳ್ಳವನಾಗುತ್ತಾನೆಂದು ಆಶಂಕಿಸಿ, ಅಂತರ್ಯಾಮಿಯಾದವನು ವಿಷ್ಣುವೇ ಆಗಿದ್ದಾನೆಂದು ಪ್ರತಿಪಾದಿಸುವುದಕ್ಕಾಗಿ ಈ ಅಧಿಕರಣವು ಹೊರಟಿರುತ್ತದೆ. ''ಯಂ ಪೃಥಿವೀ ನ ವೇದ'' ಇತ್ಯಾದಿವಾಕ್ಯವು ಈ ಅಧಿಕರಣದ ವಿಷಯವಾಗಿದೆ. ಯಾವ ವ್ಯಕ್ತಿಯನ್ನು ಪೃಥಿವೀ ಎಂದರೆ ಪೃಥಿವ್ಯಭಿಮಾನಿಯಾದ ದೇವತೆಯು ತಿಳಿಯುವುದಿಲ್ಲವೋ ಎಂದು ಈ ಶ್ರುತಿಗೆ ಅರ್ಥ.

''ಶಾರೀರಶ್ಚೋಭಯೇಽಪಿ ಹಿ ಭೇದೇನೈನಮಧೀಯತೇ'' ಎಂಬ ಸೂತ್ರದಲ್ಲಿ ಉಭಯೇಽಪಿ ಎಂದರೆ ಕಾಣ್ವಶಾಖಿಗಳು ಹಾಗೂ ಮಾಧ್ಯಂದಿನ ಶಾಖಿಗಳು ಅಂತರ್ಯಾಮಿಗಿಂತ ಜೀವನು ಭಿನ್ನನಾಗಿದ್ದಾನೆಂದು ಅಧ್ಯಯನ ಮಾಡುತ್ತಾರೆ ಎಂದರ್ಥ.

''ಯಸ್ಯ ಪೃಥಿವೀ ಶರೀರಂ'' ಇತ್ಯಾದಿ ಶ್ರುತಿಯಲ್ಲಿ ಕೇಳಿಸುತ್ತಿರುವ ಶರೀರಶಬ್ದವು (ರೂಢವಾಗಿರುವ) ಭೋಗಕ್ಕೆ ಆಶ್ರಯವಾದ ದೇಹವನ್ನು ಹೇಳುತ್ತಿಲ್ಲ. ಹೊರತು ನಿತ್ಯವಾಗಿ ನಾಶ ಹೊಂದುವ ವಸ್ತುವೆಂದು ಯೌಗಿಕವಾದ ಅರ್ಥವನ್ನು ಹೇಳುತ್ತಿದೆ.

ಇಲ್ಲಿಗೆ ಸತ್ತರ್ಕದೀಪಾವಳಿಯ ಕನ್ನಡಾನುವಾದದಲ್ಲಿ ಅಂತರ್ಯಾಮ್ಯಧಿಕರಣವು
ಸಮಾಪ್ತವಾಯಿತು.
ಶ್ರೀಕೃಷ್ಣಾರ್ಪಣಮಸ್ತು

तत्वप्रकाशिका –

अत्र पृथिव्यादिशरीरत्वलिङ्गसाहित्येन अन्यत्रप्रसिद्धान्तार्यामित्वलिङ्गस्य विष्णौ समन्वयप्रतिपादनादस्ति शास्त्रादिसङ्गतिः । विषयवाक्योदाहरणपूर्वकं विषयं दर्शयति – य इति ।।

ಈ ಅಂತರ್ಯಾಮ್ಯಧಿಕರಣದಲ್ಲಿ ಪೃಥಿವ್ಯಾದಿಶರೀರತ್ವ (ಪೃಥಿವೀ ಮೊದಲಾದವುಗಳೇ ಶರೀರವಾಗಿರುವಿಕೆ) ಎಂಬ ಲಿಂಗದ ಜೊತೆಗೆ ಅನ್ಯತ್ರಪ್ರಸಿದ್ಧವಾದ ಅಂತರ್ಯಾಮಿತ್ವ ಎಂಬ ಲಿಂಗದ ಸಮನ್ವಯವನ್ನು ವಿಷ್ಣುವಿನಲ್ಲಿ ಪ್ರತಿಪಾದಿಸಲಾಗಿದೆ. ಆದ್ದರಿಂದಲೇ ಈಅಧಿಕರಣಕ್ಕೆ ಶಾಸ್ತ್ರಸಂಗತಿ ಅಧ್ಯಾಯಸಂಗತಿ ಹಾಗೂ ಪಾದಸಂಗತಿಗಳು ಇರುತ್ತವೆ.

ಈ ಅಧಿಕರಣದ ವಿಷಯವಾಕ್ಯವನ್ನು ಉದಾಹರಿಸುವ ಮೂಲಕವಾಗಿ ವಿಷಯವನ್ನು ಪ್ರದರ್ಶಿಸುತ್ತಿದ್ದಾರೆ. ''ಯಃ ಪೃಥಿವ್ಯಾಂ'' ಇತ್ಯಾದಿ ಭಾಷ್ಯದ ಮಾತಿನಲ್ಲಿ.

तत्वप्रकाशिका – श्रुत्यादिसङ्गतिं दर्शयति – तत्रेति ।। 'एतदमृतमभयम्' इत्यक्षिस्थपुरुषस्यामृतत्वमुक्तम् । तत् काण्वमाध्यन्दिनश्रुत्योरन्तर्यामिणः कस्यचिच्छ्रूयते 'एष त आत्माऽन्तर्याम्यमृतः' इति । स चान्तर्यामी यदि विष्णोरितरः स्यात्तदाऽमृतत्वं चान्यनिष्ठं नाक्षिस्थस्य विष्णुत्वसाधकं स्यादिति, अवश्यं निर्णेतव्य एव ।

ಶ್ರುತಿ ಸಂಗತಿ ಹಾಗೂ ಅಧಿಕರಣಸಂಗತಿಗಳನ್ನು ''ತತ್ರ ಚ'' ಎಂಬ ಭಾಷ್ಯದಿಂದ ತೋರಿಸಿದ್ದಾರೆ.

ಹಿಂದಿನ ಅಧಿಕರಣದಲ್ಲಿ ಕಣ್ವಸಲ್ಲಿರುವವನು ಪರಮಾತ್ಮನೇ ಆಗಿದ್ದಾನೆಂದು ನಿರ್ಣಯಿಸಲಾಯಿತು. ಆದರೆ 'ಏತದಮೃತಮಭಯಮ್' ಎಂಬ ಛಾಂದೋಗ್ಯದ ಮಾತಿನಲ್ಲಿ ಕಣ್ವಸಲ್ಲಿರುವ ಪುರುಷನಲ್ಲಿ ಅಮೃತತ್ವ ಎಂಬ ಧರ್ಮವು ಕೇಳಿಸುತ್ತಿದೆ. ಇದೇ ಧರ್ಮವನ್ನು ಕಾಣ್ವಶ್ರುತಿ ಹಾಗೂ ಮಾಧ್ಯಂದಿನ ಶ್ರುತಿಗಳು ಅಂತರ್ಯಾಮಿಯಾದ ಯಾರೋ ಒಬ್ಬನಲ್ಲಿ 'ಏಷ ತೇ ಆತ್ಮಾ ಅಂತರ್ಯಾಮ್ಯಮೃತಃ' ಎಂಬುದಾಗಿ ಹೇಳುತ್ತಿವೆ. ಆದ್ದರಿಂದ ಇಂತಹ ಅಂತರ್ಯಾಮಿಯು ಒಂದು ವೇಳೆ ವಿಷ್ಣುವಿಗಿಂತ ಬೇರೆಯವನಾದರೆ ಅವನಲ್ಲಿ ಕೇಳಿಸಲ್ಪಟ್ಟ ಅಮೃತತ್ವವೂ ಸಹ ಬೇರೆಯವನಲ್ಲೇ ಇರಬೇಕು. ಈ ಎಲ್ಲ ಕಾರಣಗಳಿಂದ ಹಿಂದಿನ ಅಧಿಕರಣದಲ್ಲಿ ಸಾಧಿಸಲ್ಪಟ್ಟ ವಿಷ್ಣುವೇ ಆಕ್ಷಿಸ್ಥನಾಗಿದ್ದಾನೆಂಬ ಪ್ರಮೇಯವು ಸಿದ್ಧವಾಗುವುದಿಲ್ಲ. ಆದ್ದರಿಂದ ಅಮೃತತ್ವ ಧರ್ಮವು ಇರುವಂತಹ ಅಂತರ್ಯಾಮಿಯು ಯಾರೆಂದು ಅವಶ್ಯವಾಗಿ ನಿರ್ಣಯಿಸಬೇಕಾಗಿದೆ.

तत्वप्रकाशिका – तदन्तर्यामित्वमत्र विषयः । किं विष्णोरन्यस्य वा? इति सन्देहः । अमृतत्वं पृथिव्यादिशरीरत्वं च सन्देहबीजमिति भावः । सयुक्तिकं पूर्वपक्षयति – स चेति ।।

ಈ ಅಧಿಕರಣಕ್ಕೆ ಅಂತರ್ಯಾಮಿತ್ವವೇ ವಿಷಯ. ಅಂತರ್ಯಾಮಿತ್ವವು ವಿಷ್ಣುವಿನ ಧರ್ಮವೋ ಅಥವಾ ಬೇರೆಯವರದ್ದೋ ಎಂಬುದೇ ಸಂದೇಹ? ಅಮೃತತ್ವ ಹಾಗೂ ಪೃಥಿವ್ಯಾದಿ ಶರೀರತ್ವ ಎಂಬ ಧರ್ಮಗಳು ಸಂದೇಹಕ್ಕೆ ಕಾರಣ ಎಂದು ತಿಳಿಯಬೇಕು. ಯುಕ್ತಿಬದ್ಧವಾದ ಪೂರ್ವಪಕ್ಷವನ್ನು ''ಸ ಚ'' ಎಂಬ ಭಾಷ್ಯದ ವಾಕ್ಯವು ತೋರಿಸುತ್ತಿದೆ.

तत्वप्रकाशिका – सोऽन्तर्यामी प्रकृतिर्भवेत् । ''यस्य पृथिवी शरीरं यस्याऽपः शरीरम्'' इत्यादिनाऽन्तर्यामिणः पृथिव्यादिशरीरत्वस्य श्रवणात् । तस्य च प्रकृतावुपपत्तेः शरीरशब्दस्य स्वरूपेऽपि प्रयोगात् । प्रकृतेश्च पृथिव्यादि-सर्वात्मकत्वात् ।

ಶ್ರುತಿಯಲ್ಲಿ ಕೇಳಿಸುತ್ತಿರುವ ಅಂತರ್ಯಾಮಿಯು ಪ್ರಕೃತಿಯೇ ಆಗಬೇಕು. ಏಕೆಂದರೆ 'ಯಸ್ಯ ಪೃಥಿವೀ ಶರೀರಂ ಯಸ್ಯಾಪಃ ಶರೀರಂ' ಪೃಥಿವಿಯು ಯಾರಿಗೆ ಶರೀರವಾಗಿದೆಯೋ, ನೀರು ಯಾರಿಗೆ ಶರೀರವಾಗಿದೆಯೋ ಇತ್ಯಾದಿಯಾಗಿ ಅಂತರ್ಯಾಮಿಯು ಪೃಥಿವೀ ಮೊದಲಾದವುಗಳನ್ನೇ ಶರೀರವನ್ನಾಗಿ ಹೊಂದಿದ್ದಾನೆಂದು ಹೇಳಲಾಗಿದೆ. ಈ ಪೃಥಿವ್ಯಾದಿ ಶರೀರತ್ವವು ಪ್ರಕೃತಿಯಲ್ಲಿ ಉಪಪನ್ನವಾಗುತ್ತದೆ. ಶರೀರಶಬ್ದವು ದೇಹ ಎಂಬ ಅರ್ಥದಲ್ಲಿ ಪ್ರಸಿದ್ಧವಿರುವಂತೆ ಸ್ವರೂಪ ಎಂಬರ್ಥದಲ್ಲಿಯೂ ಪ್ರಯೋಗಿಸಬಹುದು. ಪ್ರಕೃತಿಯಾದರೂ ಸಹ ಪೃಥಿವಿಯೇ ಮೊದಲಾದ ಸಕಲ ಪದಾರ್ಥಗಳ ಸ್ವರೂಪವಾಗಿದೆ.

ತತ್ವಪ್ರಕಾಶಿಕಾ – ನ ಚ 'ಯಃ ಪೃಥಿವ್ಯಾಂ ತಿಷ್ಠನ್' ಇತ್ಯಾದೇರನುಪಪತ್ತಿಃ ।

ಪ್ರಶ್ನೆ - ಪ್ರಕೃತಿಯನ್ನು ಅಂತರ್ಯಾಮಿಯೆಂದು ಹೇಳುತ್ತಿದ್ದೀರಿ ಹಾಗಾದರೆ ಪೃಥಿವೀ ಮತ್ತು ಅಂತರ್ಯಾಮಿ ಎರಡೂ ಒಂದೇ ಆದ್ದರಿಂದ 'ಪೃಥಿವ್ಯಾಂ ತಿಷ್ಠನ್' ಪೃಥಿವಿಯಲ್ಲಿ ನಿಂತು ಎಂಬ ಮಾತು ಅನುಪಪನ್ನವಾಗುತ್ತದೆ. ಏಕೆಂದರೆ ತಾನೇ ತನಗೆ ಆಧಾರವಾಗಲು ಸಾಧ್ಯವಿಲ್ಲವಲ್ಲವೇ?

ತತ್ವಪ್ರಕಾಶಿಕಾ – 'ವ್ಯಾಪ್ತಂ ಕಾರ್ಯೇಷು ಕಾರಣಮ್' ಇತ್ಯಾದಿನಾ ಕಾರಣಸ್ಯ ಕಾರ್ಯಸ್ಥತ್ವೋಕ್ತೇಃ ।

ಸಮಾಧಾನ - ಈ ಪ್ರಶ್ನೆಯು ಸರಿಯಲ್ಲ; ಏಕೆಂದರೆ ಲೋಕದಲ್ಲಿ 'ವ್ಯಾಪ್ತಂ ಕಾರ್ಯೇಷು ಕಾರಣಮ್' ಕಾರ್ಯದಲ್ಲಿ ಕಾರಣವು ವ್ಯಾಪ್ತವಾಗಿದೆ ಎಂಬ ಪ್ರಯೋಗವಿದೆ. ಆದರಂತೆ ಕಾರ್ಯ ಹಾಗೂ ಕಾರಣಗಳಿಗೆ ಏಕ್ಯವಿದ್ದರೂ ಸಹ ಆಧಾರಾಧೇಯಭಾವವನ್ನು ಹೇಗೆ ಕೂಡಿಸುತ್ತೇವೋ ಅದರಂತೆ ಪ್ರಕೃತಿಯು ಪೃಥಿವಿಯ ಸ್ವರೂಪವಾಗಿದ್ದರೂ 'ಪೃಥಿವ್ಯಾಂ ತಿಷ್ಠನ್' ಎಂಬ ಪ್ರಯೋಗವನ್ನು ಕೂಡಿಸಬಹುದು.

ತತ್ವಪ್ರಕಾಶಿಕಾ – 'ಪೃಥಿವೀಂ ಯಮಯತಿ' ಇತ್ಯೇತದಪ್ಯುಪಚಾರೇಣ ನೇತವ್ಯಮ್ ।

ಪ್ರಶ್ನೆ - ಪ್ರಕೃತಿಯನ್ನೇ ಅಂತರ್ಯಾಮಿಯೆಂದು ಹೇಳಿದರೆ 'ಪೃಥಿವೀಂ ಯಮಯತಿ' ಪೃಥಿವಿಯನ್ನು ನಿಯಮನ ಮಾಡುತ್ತದೆ ಎಂಬ ಮಾತನ್ನು ಹೇಗೆ ಕೂಡಿಸುವುದು.

ಉತ್ತರ - ಈ ವಾಕ್ಯವನ್ನು ಗೌಣವಾಗಿ ವ್ಯಾಖ್ಯಾನಿಸಬೇಕು. ಕಾರ್ಯವು ಕಾರಣದ ಅಧೀನವಾದ್ದರಿಂದ ಕಾರಣವು ಕಾರ್ಯಕ್ಕೆ ವಿಷಯವಾಗಿದೆ ಎಂದು ಇದರ ಅರ್ಥ.

ತತ್ವಪ್ರಕಾಶಿಕಾ – ಪೃಥಿವ್ಯಾದಿಜೀವಸ್ಯೈವ ತದಂತರ್ಯಾಮಿತ್ವಮ್ । ಪೃಥಿವ್ಯಾದಿಶರೀರತ್ವಾದೇ-ಸ್ತಸ್ಮಿನ್ನತಿಸುಘಟತ್ವಾದಿತಿ ಭಾವಃ ।

ಅಥವಾ ಪೃಥಿವ್ಯಾದಿಗಳಲ್ಲಿ ಅಭಿಮಾನಿಯಾಗಿರುವ ಜೀವನೇ ಅಂತರ್ಯಾಮಿಯಾಗಿದ್ದಾನೆಂದು ಹೇಳಬಹುದು. ಏಕೆಂದರೆ ಅಭಿಮಾನಿಯಾದ ಜೀವನಿಗೆ ಪೃಥಿವೀ ಮೊದಲಾದವು ಶರೀರಗಳಾಗಿವೆ. ಎಂಬುದನ್ನು ಅತ್ಯಂತ ಸ್ಪಷ್ಟವಾಗಿ ಉಪಪಾದಿಸಬಹುದೆಂದು ತಿಳಿಯಬೇಕು.

ತತ್ವಪ್ರಕಾಶಿಕಾ – ನನು ಯಥಾ ಪ್ರಕೃತ್ಯಾದಿಲಿಙ್ಗೇನ ತೇಷಾಮನ್ತರ್ಯಾಮಿತ್ವಂ ತಥಾऽಮೃತತ್ವಲಿಙ್ಗೇನ ವಿಷ್ಣೋಃ ಕಿಂ ನ ಸ್ಯಾದಿತ್ಯತ ಆಹ – ನ ಹೀತಿ ।।

ಶಂಕೆ - ಯಾವ ರೀತಿಯಾಗಿ ಪೃಥಿವೀಶರೀರತ್ವ ಮೊದಲಾದ ಲಿಂಗಗಳಿಂದ ಪ್ರಕೃತಿ ಅಥವಾ ಜೀವರು ಅಂತರ್ಯಾಮಿಗಳಾಗಿದ್ದಾರೆಂದು ಹೇಳುತ್ತೀರೋ ಅದರಂತೆ ಅಮೃತತ್ವಲಿಂಗದಿಂದ ವಿಷ್ಣುವೇ ಅಂತರ್ಯಾಮಿಯಾಗಬಹುದಲ್ಲವೇ?

ಸಮಾಧಾನ - ಈ ಶಂಕೆಗೆ ''ನಹಿ'' ಎಂಬುದರಿಂದ ಉತ್ತರಿಸುತ್ತಿದ್ದಾರೆ. ಅದು ಹೀಗೆ —

तत्वप्रकाशिका – विद्यामानेऽपि विष्णुलिङ्गे न तस्यान्तर्यामित्वम् । पृथिव्यादिशरीरत्वस्य कयाऽपि विधयाऽवकाशाभावात् ।

ಅಮೃತತ್ವವೆಂಬ ವಿಷ್ಣುವಿನ ಲಿಂಗವು ಶ್ರುತಿಯಲ್ಲಿ ಕೇಳಿಸುತ್ತಿರಬಹುದು. ಆದರೂ ಸಹ ವಿಷ್ಣುವಿಗೆ ಅಂತರ್ಯಾಮಿತ್ವವು ಕೂಡುವುದಿಲ್ಲ. ಏಕೆಂದರೆ ಅದೇ ಸಂದರ್ಭದಲ್ಲಿ ಕೇಳಿಸುತ್ತಿರುವ ಪೃಥಿವ್ಯಾದಿ ಶರೀರತ್ವವು ವಿಷ್ಣುವಿನಲ್ಲಿ ಯಾವುದೇ ಪ್ರಕಾರದಿಂದಲೂ ಸಾವಕಾಶ ಮಾಡಲು ಸಾಧ್ಯವಿಲ್ಲ.

तत्वप्रकाशिका – तस्य पृथिव्यादिभिन्नत्वचिच्छरीरत्वोररीकारेण पृथिव्यादिशरीरत्वानङ्गीकारात् । अमृतत्वस्य कथञ्चित्प्रकृत्यादावपि सावकाशत्वात् । सावकाशस्य च निरवकाशेन बाधोपपत्तेः ।

ಏಕೆಂದರೆ ವಿಷ್ಣುವು ಪೃಥಿವ್ಯಾದಿ ಸಕಲಪದಾರ್ಥಗಳಿಗಿಂತ ಭಿನ್ನನಾಗಿದ್ದಾನೆ ಹಾಗೂ ಚಿನ್ಮಯಶರೀರನಾಗಿದ್ದಾನೆ. ಹೀಗೆ ಸಿದ್ಧಾಂತಿಗಳೇ ಒಪ್ಪಿರುವುದರಿಂದ ಪೃಥಿವೀ ಮೊದಲಾದವುಗಳನ್ನು ವಿಷ್ಣುವಿನ ಶರೀರವೆಂದು ಯಾವ ಪ್ರಕಾರದಿಂದಲೂ ಹೇಳಲಾಗದು. ಆದರೆ ವಿಷ್ಣುವಿನ ಧರ್ಮವೆನಿಸಿದ ಅಮೃತತ್ವವನ್ನು ಪ್ರಕೃತ್ಯಾದಿಗಳಲ್ಲಿ ಹೇಗಾದರೂ ಸಾವಕಾಶ ಮಾಡಬಹುದು. ಸಾವಕಾಶವಾದ ಧರ್ಮವು ನಿರವಕಾಶವಾದ ಯುಕ್ತಿಯಿಂದ ಬಾಧಿತವಾಗುತ್ತದೆ.

तत्वप्रकाशिका – अतोऽन्तर्यामी न विष्णुरपि तु प्रकृत्यादय एवेति नामृतत्वमक्षिस्थस्य विष्णुत्वसाधकमिति भावः ।

ಆದ್ದರಿಂದ ಅಂತರ್ಯಾಮಿಯಾದವನು ವಿಷ್ಣುವಾಗಲು ಸಾಧ್ಯವಿಲ್ಲ. ಹೊರತಾಗಿ ಪ್ರಕೃತಿ ಅಥವಾ ಜೀವರೇ ಆಗುತ್ತಾರೆ. ಹೀಗಿರುವಾಗ ಅಮೃತತ್ವಧರ್ಮವು ಅಕ್ಷಿಸ್ಥನಾದವನು ವಿಷ್ಣುವೇ ಆಗಿದ್ದಾನೆಂಬುದಕ್ಕೆ ಸಾಧಕಪ್ರಮಾಣವಾಗುವುದಿಲ್ಲವೆಂದು ಪೂರ್ವಪಕ್ಷದ ಅಭಿಪ್ರಾಯ.

तत्वप्रकाशिका – सिद्धान्तयत्सूत्रमवतार्य व्याचष्टे – अत इति ।। अन्तर्यामी विष्णुरेव । अन्तर्यामिणः पृथिव्याद्यविदितत्वतदन्तरत्वाख्यधर्मव्यपदेशात् । अविदितत्वादेश्च विष्णुधर्मत्वात् ।

ಸಿದ್ಧಾಂತವನ್ನು ಸ್ಥಾಪಿಸುವುದಕ್ಕಾಗಿ ಸೂತ್ರವನ್ನು ಪಠಿಸಿ ವ್ಯಾಖ್ಯಾನಿಸುತ್ತಿದ್ದಾರೆ. ''ಅತಃ'' ಇತ್ಯಾದಿಯಾಗಿ.

ಅಂತರ್ಯಾಮಿಯು ವಿಷ್ಣುವೇ ಆಗಿದ್ದಾನೆ. ಏಕೆಂದರೆ ಪೃಥಿವಿ ಮೊದಲಾದವುಗಳಿಂದ ತಿಳಿಯದಿರುವಿಕೆ ಮತ್ತು ಅವುಗಳ ಅಂತರ್ಯಾಮಿಯಾಗಿರುವಿಕೆ ಮೊದಲಾದ ಧರ್ಮಗಳನ್ನು ಶ್ರುತಿಯು ಹೇಳುತ್ತಿದೆ. ಈ ಅವಿದಿತತ್ವ ಮೊದಲಾದವುಗಳೆಲ್ಲವೂ ವಿಷ್ಣುವಿನ ಧರ್ಮವೇ ಆಗಿವೆ ಎಂಬ ವಿಚಾರವು ಸ್ಪಷ್ಟವಾಗಿದೆ.

तत्त्वप्रकाशिका – नच वाच्यं पृथिव्यादीनां जडत्वेन तदज्ञेयत्व सर्वस्यापि सम्भवतीति । पृथिव्यादीनामधिदैवत्वेन जडत्वाभावादिति भावः ।

ಶಂಕೆ - ಪೃಥಿವ್ಯಾದಿಗಳೆಲ್ಲವೂ ಜಡವಾದ್ದರಿಂದ ಇವುಗಳಿಂದ ತಿಳಿಯದಿರುವಿಕೆಯು ಸಕಲ ಪದಾರ್ಥಗಳಲ್ಲೂ ಪ್ರಾಪ್ತವಾಗುತ್ತದಲ್ಲವೇ?

ಸಮಾಧಾನ - ಇದು ತಪ್ಪು. ಪ್ರಕೃತ ಪೃಥಿವ್ಯಾದಿಗಳು ಅಧಿದೈವವಾದ್ದರಿಂದ ಪೃಥಿವ್ಯಾದಿಶಬ್ದಗಳಿಂದ ಅವುಗಳ ಅಂತರ್ಯಾಮಿಯಾದ ದೇವತೆಯೇ ಪ್ರಸಕ್ತನಾಗಿರುತ್ತಾನೆ. ಆದ್ದರಿಂದ ಪೃಥಿವ್ಯಾದಿಶಬ್ದಗಳು ಜಡಪರವಾಗಿವೆ ಎಂದು ಹೇಳಬಾರದು.

तत्त्वप्रकाशिका – चक्षुरादीनां जडत्वेऽप्यत्रोक्तस्यैव तत्र कथनान्न विरोधः । अविदितत्वादेः कुतो विष्णुधर्मत्वमित्यत आह – स हीति ।। नच पृथिव्यादिजीवावविदितत्वं प्रकृतेः पृथिव्यादिजीवस्य वोपपद्यते ।। १८ ।।

ವಸ್ತುತಃ ಚಕ್ಷುರಾದಿಶಬ್ದಗಳು ಜಡಪರವಾಗಿರಬಹುದು. ಆದರೆ 'यः चक्षुषि तिष्ठन्' ಎಂಬಲ್ಲಿ ಹೇಳಿರುವುದನ್ನೇ 'य एषोऽन्तरक्षिणि' ಎಂಬಲ್ಲಿಯೂ ಹೇಳಿರುವುದರಿಂದ ವಿರೋಧಕ್ಕೆ ಅವಕಾಶವಿಲ್ಲ.

ಇನ್ನು ಅವಿದಿತತ್ವಾದಿಗಳನ್ನು ವಿಷ್ಣು ಧರ್ಮವೆಂದು ಹೇಗೆ ನಿಶ್ಚಯಿಸುತ್ತೀರಿ? ಎಂದು ಪ್ರಶ್ನಿಸಬಹುದು. ಇದಕ್ಕೆ ''ಸಹಿ'' ಎಂಬ ವಾಕ್ಯದಿಂದ ಉತ್ತರಿಸಿದ್ದಾರೆ. ಪೃಥಿವ್ಯಾದಿಪದಾರ್ಥಗಳ ಅಭಿಮಾನಿಯಾದ ಜೀವರಿಂದ ಪ್ರಕೃತಿಯು ಅಥವಾ ಪೃಥಿವ್ಯಾದಿ ಜೀವರುಗಳು ಅಜ್ಞೇಯರಾಗಲು ಸಾಧ್ಯವಿಲ್ಲ. ಆದ್ದರಿಂದ ಇದೂ ಪರಮಾತ್ಮನ ಲಿಂಗವೇ ಆಗಿದೆ.

ಭಾವದೀಪಃ –

ॐ अन्तर्याम्यधिदैवादिषु तद्धर्मव्यपदेशात् ॐ ।। १-२-१८ ।।

इत्यन्तभाष्यं सङ्गतिपरत्वेन व्याकुर्वन् ''एतदमृतं इत्युक्तं'' इति वाक्यं व्याचष्टे – एतदिति ।। उभयेपीति । सुत्रोक्त्यनुरोधात् ''तत्र च अमृतत्वमुच्यते'' इत्यंशार्थमाह – तत्काण्वेति ।।

"ಇತಿ" ಎಂಬಲ್ಲಿಯ ತನಕ ಇರುವ ಭಾಷ್ಯವನ್ನು ಸಂಗತಿಪರವಾಗಿ ವಾಖ್ಯಾನಿಸುತ್ತಾ "ಏತದಮೃತಂ ಇತ್ಯುಕ್ತಂ" ಎಂಬ ವಾಕ್ಯವನ್ನು ವ್ಯಾಖ್ಯಾನಿಸುತ್ತಿದ್ದಾರೆ "ಏತತ್" ಇತ್ಯಾದಿ ಟೀಕಾ ಗ್ರಂಥದಿಂದ. ಶ್ರುತಿಯಲ್ಲಿರುವ "ಏತತ್" ಎಂದರೆ ಅಮೃತತ್ವ ಮತ್ತು ಅಭಯತ್ವ ಎಂಬ ಎರಡು ಲಿಂಗಗಳೆಂದರ್ಥ. ಸೂತ್ರವನ್ನು ಅನುಸರಿಸಿ ಭಾಷ್ಯದಲ್ಲಿ ಹೇಳಿರುವ "ತತ್ರ ಚ ಅಮೃತತ್ವಮುಚ್ಯತೇ" ಎಂಬ ವಾಕ್ಯದ ಅರ್ಥವನ್ನು " ತತ್ ಕಾಣ್ವ" ಇತ್ಯಾದಿ ಮಾತಿನಿಂದ ಹೇಳುತ್ತಿದ್ದಾರೆ.

ಭಾವದೀಪಃ – 'यः पृथिव्याम्' इत्यादिवाक्यस्य काण्वमाध्यन्दिनशाखयोरेकरूपत्वादिति भावः । उच्यते पञ्चमेऽध्याये अन्तर्यामिणः कस्यचिदित्यनेन तत्रेत्यस्यान्तर्यामिणीत्यर्थो दर्शितः । कस्यचित् प्रकृत्यादेः । किं तदमृतत्वोक्तिपरं वाक्यमित्यतः तत्रेति परामृष्टवाक्यशेषमाह – एष त इति ।।

"ಯಃ ಪೃಥಿವ್ಯಾಂ" ಇತ್ಯಾದಿ ವಾಕ್ಯವು ಕಾಣ್ವಶಾಖೆಯಲ್ಲಿ ಹಾಗೂ ಮಾಧ್ಯಂದಿನಶಾಖೆಯಲ್ಲಿ ಒಂದೇ ರೀತಿಯಾಗಿ ರಚಿಸಲ್ಪಟ್ಟಿದೆ ಎಂದು ಅಭಿಪ್ರಾಯ. "ಉಚ್ಯತೇ" ಎಂದರೆ ಐದನೆಯ ಅಧ್ಯಾಯದಲ್ಲಿ "ಅಂತರ್ಯಾಮಿಣಃ ಕಸ್ಯಚಿತ್" ಎಂಬುದರಿಂದ. "ತತ್ರ" ಎಂದರೆ ಅಂತರ್ಯಾಮಿಣಃ" ಎಂಬ ಅರ್ಥವನ್ನು ತೋರಿಸಿದ್ದಾರೆ. "ಕಸ್ಯಚಿತ್" ಎಂದರೆ ಪ್ರಕೃತ್ಯಾದಿಗಳಿಗೆ ಎಂದರ್ಥ. ಅಮೃತತ್ವವನ್ನು ಹೇಳುವ ವಾಕ್ಯ ಯಾವುದು? ಎಂಬ ಪ್ರಶ್ನೆಗೆ "ತತ್ರ" ಎಂಬುದರಿಂದ ಪರಾಮರ್ಶಿಸಲ್ಪಟ್ಟ ವಾಕ್ಯಶೇಷವನ್ನು "ಏಷ ತೇ" ಎಂಬುದರಿಂದ ಹೇಳುತ್ತಿದ್ದಾರೆ.

ಭಾವದೀಪಃ – अत एव भाष्ये आत्माऽन्तर्यामीत्येव वाच्ये अमृत इत्यंशोऽप्युक्त इति भावः । 'यस्य पृथिवी शरीरम्' इत्यंशोक्तिः पूर्वपक्षयुक्तेः 'यं पृथिवी न वेद यः पृथिव्यामन्तरः' इत्यंशोक्तिः सिद्धान्तयुक्तेः 'यः पृथिवीमन्तरः' इत्यंशोक्तिर्भेदाध्ययनस्य सूचनायेत्याशयः ।

ಆದ್ದರಿಂದಲೇ ಭಾಷ್ಯದಲ್ಲಿ "ಆತ್ಮಾಂತರ್ಯಾಮೀ" ಎಂದಷ್ಟೇ ಹೇಳಿದ್ದರೂ ಸಾಕಾಗಿತ್ತು. ಆದರೂ ಸಹ "ಅಮೃತಃ" ಎಂಬ ಅಂಶವನ್ನು ಹೇಳಿದ್ದಾರೆ ಎಂದು ಅಭಿಪ್ರಾಯ. "ಯಸ್ಯ ಪೃಥಿವೀ ಶರೀರಂ" ಎಂಬ ಅಂಶವನ್ನು ಹೇಳಿದ್ದರಿಂದ ಪೂರ್ವಪಕ್ಷ ಯುಕ್ತಿಯನ್ನು, "ಯಂ ಪೃಥಿವೀ ನ ವೇದ" "ಯಃ ಪೃಥಿವ್ಯಾಮಂತರಃ" ಎಂಬ ಅಂಶವನ್ನು ಹೇಳಿದ್ದರಿಂದ ಸಿದ್ಧಾಂತ ಯುಕ್ತಿಯನ್ನು "ಯಃ ಪೃಥಿವೀಮಂತರಃ" ಎಂಬ ಅಂಶವನ್ನು ಹೇಳಿದ್ದರಿಂದ ಭೇದಾಧ್ಯಯನವನ್ನು ಸೂಚಿಸಿದ್ದಾರೆಂದು ತಿಳಿಯಬೇಕು.

ಭಾವದೀಪಃ – स च 'यस्य पृथिवी' इत्यादिवाक्यतात्पर्यम् ।। स चेति ।। अन्तर्याम्यमृत इति वाक्योक्त इत्यर्थः । सच इत्यस्यार्थः – अन्तर्यामीति ।। प्रकृतिर्जीवो वेत्यस्यार्थः – इतर इति ।। सर्वात्मकत्वादित्युक्तयुक्त्येत्यर्थः ।

ಅಂತರ್ಯಾಮಿಯು ವಿಷ್ಣುವೇ ಆಗಿದ್ದಾನೆ. ಏಕೆಂದರೆ ಪೃಥಿವಿ ಮೊದಲಾದವುಗಳಿಂದ ತಿಳಿಯದಿರುವಿಕೆ ಮತ್ತು ಅವುಗಳ ಅಂತರ್ಯಾಮಿಯಾಗಿರುವಿಕೆ ಮೊದಲಾದ ಧರ್ಮಗಳನ್ನು ಶ್ರುತಿಯು ಹೇಳುತ್ತಿದೆ. ಈ ಅವಿದಿತತ್ವ ಮೊದಲಾದವುಗಳೆಲ್ಲವೂ ವಿಷ್ಣುವಿನ ಧರ್ಮವೇ ಆಗಿವೆ ಎಂಬ ವಿಚಾರವು ಸ್ಪಷ್ಟವಾಗಿದೆ.

तन्त्रप्रकाशिका – नच वाच्यं पृथिव्यादीनां जडत्वेन तदज्ञेयत्व सर्वस्यापि सम्भवतीति । पृथिव्यादीनामधिदैवत्वेन जडत्वाभावादिति भावः ।

ಶಂಕೆ - ಪೃಥಿವ್ಯಾದಿಗಳೆಲ್ಲವೂ ಜಡವಾದ್ದರಿಂದ ಇವುಗಳಿಂದ ತಿಳಿಯದಿರುವಿಕೆಯು ಸಕಲ ಪದಾರ್ಥಗಳಲ್ಲೂ ಪ್ರಾಪ್ತವಾಗುತ್ತದಲ್ಲವೇ?

ಸಮಾಧಾನ - ಇದು ತಪ್ಪು. ಪ್ರಕೃತ ಪೃಥಿವ್ಯಾದಿಗಳು ಅಧಿದೈವವಾದ್ದರಿಂದ ಪೃಥಿವ್ಯಾದಿಶಬ್ದಗಳಿಂದ ಅವುಗಳ ಅಂತರ್ಯಾಮಿಯಾದ ದೇವತೆಯೇ ಪ್ರಸಕ್ತನಾಗಿರುತ್ತಾನೆ. ಆದ್ದರಿಂದ ಪೃಥಿವ್ಯಾದಿಶಬ್ದಗಳು ಜಡಪರವಾಗಿವೆ ಎಂದು ಹೇಳಬಾರದು.

तत्वप्रकाशिका – चक्षुरादीनां जडत्वेऽप्यत्रोक्तस्यैव तत्र कथनान्न विरोधः । अविदितत्वादेः कुतो विष्णुधर्मत्वमित्यत आह – स हीति ।। नच पृथिव्यादिजीवाविदितत्वं प्रकृतेः पृथिव्यादिजीवस्य वोपपद्यते ।। १८ ।।

ವಸ್ತುತಃ ಚಕ್ಷುರಾದಿಶಬ್ದಗಳು ಜಡಪರವಾಗಿರಬಹುದು. ಆದರೆ 'ಯಃ ಚಕ್ಷುಷಿ ತಿಷ್ಠನ್' ಎಂಬಲ್ಲಿ ಹೇಳಿರುವುದನ್ನೇ 'ಯ ಏಷೋऽಂತರಕ್ಷಿಣಿ' ಎಂಬಲ್ಲಿಯೂ ಹೇಳಿರುವುದರಿಂದ ವಿರೋಧಕ್ಕೆ ಅವಕಾಶವಿಲ್ಲ.

ಇನ್ನು ಅವಿದಿತತ್ವಾದಿಗಳನ್ನು ವಿಷ್ಣು ಧರ್ಮವೆಂದು ಹೇಗೆ ನಿಶ್ಚಯಿಸುತ್ತೀರಿ? ಎಂದು ಪ್ರಶ್ನಿಸಬಹುದು. ಇದಕ್ಕೆ ''ಸಹಿ'' ಎಂಬ ವಾಕ್ಯದಿಂದ ಉತ್ತರಿಸಿದ್ದಾರೆ. ಪೃಥಿವ್ಯಾದಿಪದಾರ್ಥಗಳ ಅಭಿಮಾನಿಯಾದ ಜೀವರಿಂದ ಪ್ರಕೃತಿಯು ಅಥವಾ ಪೃಥಿವ್ಯಾದಿ ಜೀವರುಗಳು ಅಜ್ಞೇಯರಾಗಲು ಸಾಧ್ಯವಿಲ್ಲ. ಆದ್ದರಿಂದ ಇದೂ ಪರಮಾತ್ಮನ ಲಿಂಗವೇ ಆಗಿದೆ.

ಭಾವದೀಪಃ –

ॐ अन्तर्याम्यधिदैवादिषु तद्धर्मव्यपदेशात् ॐ ।। १-२-१८ ।।

इत्यन्तभाष्यं सङ्गतिपरत्वेन व्याकुर्वन् ''एतदमृतं इत्युक्तं'' इति वाक्यं व्याचष्टे – एतदिति ।। उभयेपीति । सुत्रोक्त्यनुरोधात् ''तत्र च अमृतत्वमुच्यते'' इत्यंशार्थमाह – तत्काण्वेति ।।

''ಇತಿ'' ಎಂಬಲ್ಲಿಯ ತನಕ ಇರುವ ಭಾಷ್ಯವನ್ನು ಸಂಗತಿಪರವಾಗಿ ವಾಖ್ಯಾನಿಸುತ್ತಾ ''ಏತದಮೃತಂ ಇತ್ಯುಕ್ತಂ'' ಎಂಬ ವಾಕ್ಯವನ್ನು ವ್ಯಾಖ್ಯಾನಿಸುತ್ತಿದ್ದಾರೆ ''ಏತತ್'' ಇತ್ಯಾದಿ ಟೀಕಾ ಗ್ರಂಥದಿಂದ. ಶ್ರುತಿಯಲ್ಲಿರುವ ''ಏತತ್'' ಎಂದರೆ ಅಮೃತತ್ವ ಮತ್ತು ಅಭಯತ್ವ ಎಂಬ ಎರಡು ಲಿಂಗಗಳೆಂದರ್ಥ. ಸೂತ್ರವನ್ನು ಅನುಸರಿಸಿ ಭಾಷ್ಯದಲ್ಲಿ ಹೇಳಿರುವ ''ತತ್ರ ಚ ಅಮೃತತ್ವಮುಚ್ಯತೇ'' ಎಂಬ ವಾಕ್ಯದ ಅರ್ಥವನ್ನು '' ತತ್ ಕಾಣ್ವ'' ಇತ್ಯಾದಿ ಮಾತಿನಿಂದ ಹೇಳುತ್ತಿದ್ದಾರೆ.

ಭಾವದೀಪಃ – 'यः पृथिव्याम्' इत्यादिवाक्यस्य काण्वमाध्यन्दिनशाखयोरेकरूपत्वादिति भावः । उच्यते पञ्चमेऽध्याये अन्तर्यामिणः कस्यचिदित्यनेन तत्रेत्यस्यान्तर्यामिणीत्यर्थो दर्शितः । कस्यचित् प्रकृत्यादेः । किं तदमृतत्वोक्तिपरं वाक्यमित्यतः तत्रेति परामृष्टवाक्यशेषमाह – एष त इति ।।

''ಯಃ ಪೃಥಿವ್ಯಾಂ'' ಇತ್ಯಾದಿ ವಾಕ್ಯವು ಕಾಣ್ವಶಾಖೆಯಲ್ಲಿ ಹಾಗೂ ಮಾಧ್ಯಂದಿನಶಾಖೆಯಲ್ಲಿ ಒಂದೇ ರೀತಿಯಾಗಿ ರಚಿಸಲ್ಪಟ್ಟಿದೆ ಎಂದು ಅಭಿಪ್ರಾಯ. ''ಉಚ್ಯತೇ'' ಎಂದರೆ ಐದನೆಯ ಅಧ್ಯಾಯದಲ್ಲಿ ''ಅಂತರ್ಯಾಮಿಣಃ ಕಸ್ಯಚಿತ್'' ಎಂಬುದರಿಂದ. ''ತತ್ರ'' ಎಂದರೆ ಅಂತರ್ಯಾಮಿಣಃ'' ಎಂಬ ಅರ್ಥವನ್ನು ತೋರಿಸಿದ್ದಾರೆ. ''ಕಸ್ಯಚಿತ್'' ಎಂದರೆ ಪ್ರಕೃತ್ಯಾದಿಗಳಿಗೆ ಎಂದರ್ಥ. ಅಮೃತತ್ವವನ್ನು ಹೇಳುವ ವಾಕ್ಯ ಯಾವುದು? ಎಂಬ ಪ್ರಶ್ನೆಗೆ ''ತತ್ರ'' ಎಂಬುದರಿಂದ ಪರಾಮರ್ಶಿಸಲ್ಪಟ್ಟ ವಾಕ್ಯಶೇಷವನ್ನು ''ಏಷ ತೇ'' ಎಂಬುದರಿಂದ ಹೇಳುತ್ತಿದ್ದಾರೆ.

ಭಾವದೀಪಃ – अत एव भाष्ये आत्माऽन्तर्यामीत्येव वाच्ये अमृत इत्यंशोऽप्युक्त इति भावः । 'यस्य पृथिवी शरीरम्' इत्यंशोक्तिः पूर्वपक्षयुक्तेः 'यं पृथिवी न वेद यः पृथिव्यामन्तरः' इत्यंशोक्तिः सिद्धान्तयुक्तेः 'यः पृथिवीमन्तरः' इत्यंशोक्तिर्भेदाध्ययनस्य सूचनायेत्याशयः ।

ಆದ್ದರಿಂದಲೇ ಭಾಷ್ಯದಲ್ಲಿ ''ಆತ್ಮಾಽಂತರ್ಯಾಮೀ'' ಎಂದಷ್ಟೇ ಹೇಳಿದ್ದರೂ ಸಾಕಾಗಿತ್ತು. ಆದರೂ ಸಹ ''ಅಮೃತಃ'' ಎಂಬ ಅಂಶವನ್ನು ಹೇಳಿದ್ದಾರೆ ಎಂದು ಅಭಿಪ್ರಾಯ. ''ಯಸ್ಯ ಪೃಥಿವೀ ಶರೀರಂ'' ಎಂಬ ಅಂಶವನ್ನು ಹೇಳಿದ್ದರಿಂದ ಪೂರ್ವಪಕ್ಷ ಯುಕ್ತಿಯನ್ನು, ''ಯಂ ಪೃಥಿವೀ ನ ವೇದ'' ''ಯಃ ಪೃಥಿವ್ಯಾಮಂತರಃ'' ಎಂಬ ಅಂಶವನ್ನು ಹೇಳಿದ್ದರಿಂದ ಸಿದ್ಧಾಂತ ಯುಕ್ತಿಯನ್ನು ''ಯಃ ಪೃಥಿವೀಮಂತರಃ'' ಎಂಬ ಅಂಶವನ್ನು ಹೇಳಿದ್ದರಿಂದ ಭೇದಾಧ್ಯಯನವನ್ನು ಸೂಚಿಸಿದ್ದಾರೆಂದು ತಿಳಿಯಬೇಕು.

ಭಾವದೀಪಃ – स च 'यस्य पृथिवी' इत्यादिवाक्यतात्पर्यम् ।। स चेति ।। अन्तर्याम्यमृत इति वाक्योक्त इत्यर्थः । सच इत्यस्यार्थः – अन्तर्यामीति ।। प्रकृतिर्जीवो वेत्यस्यार्थः – इतर इति ।। सर्वात्मकत्वादित्युक्तयुक्तयेत्यर्थः ।

''ಸ ಚ ಯಸ್ಯ ಪೃಥಿವೀ'' ಇತ್ಯಾದಿ ಭಾಷ್ಯವಾಕ್ಯದ ತಾತ್ಪರ್ಯವನ್ನು ''ಸ ಚ ಆಂತರ್ಯಾಮೀ'' ಇತ್ಯಾದಿ ಟೀಕಾವಾಕ್ಯಗಳಿಂದ ವಿವರಿಸುತ್ತಿದ್ದಾರೆ. ''ಸ ಚ '' ಎಂದರೆ ''ಆಂತರ್ಯಾಮ್ಯಮೃತಃ' ಎಂಬ ವಾಕ್ಯದಲ್ಲಿ ಹೇಳಿದ ರೀತಿ ಎಂದರ್ಥ. ಭಾಷ್ಯದಲ್ಲಿರುವ ''ಸ ಚ'' ಪದದ ಅರ್ಥವನ್ನು ''ಆಂತರ್ಯಾಮೀ'' ಎಂದು ಟೀಕೆಯಲ್ಲಿ ಬರೆದಿದ್ದಾರೆ. ''ಪ್ರಕೃತಿರ್ಜೀವೋ ವಾ'' ಎಂಬ ಭಾಷ್ಯಕ್ಕೆ ''ಇತರಃ'' ಎಂಬ ಅರ್ಥವನ್ನು ಬರೆದಿದ್ದಾರೆ. ''ಸರ್ವಾತ್ಮಕತ್ವಾತ್'' ಎಂಬ ಹಿಂದೆ ಹೇಳಿದ ಯುಕ್ತಿಯಿಂದ ಎಂದರ್ಥ.

ಭಾವದೀಪಃ – तत्र चेत्यादेरुच्यत इत्यन्तस्य तात्पर्यमाह – तदेति ।। इत्यवश्येति ।। इति सङ्गतिसम्भवादित्यर्थः ।। अन्यस्य वेति ।। जडप्रकृत्यादेरित्यर्थः । द्रष्टा श्रोतेति द्रष्टृत्वादेः श्रवणात् न प्रकृतेरत्रावकाश इति तु अक्षरनये निरस्तप्रायं भविष्यतीति भावः ।

''ತತ್ರ ಚ'' ಎಂಬಲ್ಲಿಂದ ಪ್ರಾರಂಭಿಸಿ ''ಉಚ್ಯತೇ'' ಎಂಬಲ್ಲಿಯ ತನಕ ಇರುವ ಭಾಷ್ಯದ ತಾತ್ಪರ್ಯವನ್ನು ''ತದಾ'' ಎಂಬುದರಿಂದ ಹೇಳುತ್ತಿದ್ದಾರೆ. ''ಇತಿ ಅವಶ್ಯಂ'' ಎಂದರೆ ಹೀಗೆ ಸಂಗತಿಯು ಕೂಡುವುದರಿಂದ ಎಂದರ್ಥ. ''ಅನ್ಯಸ್ಯ ವಾ'' ಎಂದರೆ ಜಡಪ್ರಕೃತ್ಯಾದಿಗಳಿಗೆಂದರ್ಥ. ''ದ್ರಷ್ಟಾ ಶ್ರೋತಾ'' ಇತ್ಯಾದಿ ಶ್ರುತಿಯಿಂದ ದ್ರಷ್ಟೃತ್ವಾದಿಗಳು ಅಂತರ್ಯಾಮಿಯಲ್ಲಿ ಕೇಳಿಸುತ್ತಿರುವುದರಿಂದ ಪ್ರಕೃತಿಯು ಇಲ್ಲಿ ಪ್ರತಿಪಾದ್ಯವಾಗುವುದಿಲ್ಲ ಎಂಬ ವಿಚಾರವು ಅಕ್ಷರಾಧಿಕರಣದಿಂದಲೇ ನಿರಸ್ತವಾಗುತ್ತದೆಂದು ತಿಳಿಯಬೇಕು.

ಭಾವದೀಪಃ – भाष्ये प्रकृतिर्जीवो वेत्युक्तावप्यन्यस्येत्युक्तिः प्रकृतिजीवान्यतरा-निश्चयेऽपि विष्वन्यत्वेन पूर्वपक्षेऽवधारणं युक्तमिति दर्शयितुम् ।

ಭಾಷ್ಯದಲ್ಲಿ ಪ್ರಕೃತಿ ಹಾಗೂ ಜೀವರೆಂಬ ಪಕ್ಷಗಳನ್ನು ಪ್ರತ್ಯೇಕವಾಗಿ ಪರಿಗಣಿಸಿರಬಹುದು. ಆದರೂ ಸಹ ಟೀಕೆಯಲ್ಲಿ ''ಅನ್ಯಸ್ಯ'' ಎಂದು ಅದನ್ನು ವ್ಯಾಖ್ಯಾನಿಸಿದ್ದಾರೆ. ಏಕೆಂದರೆ ಪ್ರಕೃತಿ ಹಾಗೂ ಜೀವರೆಂಬ ಎರಡು ಪೂರ್ವಪಕ್ಷಕೋಟಿಗಳು ಅನಿತ್ಯವಾದರೂ ಸಹ ವಿಷ್ಣುವಿಗಿಂತ ಅನ್ಯವಾದ ವಸ್ತು ಅಂತರ್ಯಾಮಿಯಾಗುತ್ತದೆಂಬ ಪೂರ್ವಪಕ್ಷದಲ್ಲಿ ಅವಧಾರಣೆಯನ್ನು ತೋರಿಸುವುದಕ್ಕಾಗಿ ಹಾಗೆ ಹೇಳಿರುತ್ತಾರೆ.

ಭಾವದೀಪಃ – सङ्गतिपरतया व्याख्यातमेव भाष्यं पूर्वपक्षतद्युक्तितत्फलोक्ति-परत्वेन व्याकुर्वन् स चेति वाक्यं तावदवतारयति – सयुक्तिकमिति ।। व्यवहितत्वादन्वयोक्त्या प्रतिज्ञांशं व्याचष्टे – स इति ।।

ಸಂಗತಿಪರವಾಗಿ ವ್ಯಾಖ್ಯಾನಿಸಿದ ಭಾಷ್ಯವನ್ನು ಪೂರ್ವಪಕ್ಷ, ಪೂರ್ವಪಕ್ಷಯುಕ್ತಿ ಹಾಗೂ ಪೂರ್ವಪಕ್ಷಫಲಪರವಾಗಿ ವ್ಯಾಖ್ಯಾನಿಸುತ್ತಿದ್ದಾರೆ. ಮತ್ತು ''ಸ ಚ'' ಎಂಬ ವಾಕ್ಯಕ್ಕೆ ಅವತಾರಿಕೆಯನ್ನು ''ಸ ಯುಕ್ತಿಕಂ'' ಎಂಬ ವಾಕ್ಯದಿಂದ ನೀಡುತ್ತಿದ್ದಾರೆ. ವ್ಯವಹಿತವಾಗಿರುವುದರಿಂದ ಅನ್ವಯವು ತಿಳಿಯುವುದಿಲ್ಲ.

ಆದ್ದರಿಂದ ಅನ್ವಯವನ್ನು ಹೇಳುವ ಮೂಲಕ ಪ್ರತಿಜ್ಞಾಭಾಗವನ್ನು ವ್ಯಾಖ್ಯಾನಿಸುತ್ತಿದ್ದಾರೆ ''ಸಃ '' ಇತ್ಯಾದಿಯಾಗಿ.

ಭಾವದೀಪಃ – ಆದಿಪದಾರ್ಥೋಕ್ತಿಪೂರ್ವಂ ಹೇತ್ವಂಶಂ ವ್ಯಾಚಷ್ಟೇ – ಯಸ್ಯೇತಿ ।। ಉಪಪತ್ತೇರಿತ್ಯುಕ್ತಂ ವ್ಯನಕ್ತಿ – ಶಾರೀರೇತಿ ।। ಪೂರ್ವಪಕ್ಷಸ್ಯ ಶರೀರಮಿತ್ಯಾದೌ ಸ್ವರೂಪೇऽಪಿ ಪ್ರಯೋಗಾದಿತ್ಯರ್ಥಃ । ಏವಂ ಪರಿಷ್ಕೃತ್ಯ ಭಾಷ್ಯಸ್ಯಂ ಹೇತುಂ ಸನ್ನಮಯತಿ –

ಬೃಹದಾರಣ್ಯದ ಮೂರನೇ ಅಧ್ಯಾಯದಲ್ಲಿರುವ ವಿಷಯವಾಕ್ಯ ಹೀಗಿದೆ - ''ಯಃ ಪೃಥಿವ್ಯಾಂ ತಿಷ್ಠನ್ ಪೃಥಿವ್ಯಾ ಅಂತರೋ ಯಂ ಪೃಥಿವೀ ನ ವೇದ ಯಸ್ಯ ಪೃಥಿವೀ ಶರೀರಂ ಯಃ ಪೃಥಿವೀಮಂತರೋ ಯಮಯತ್ಯೇಷ ತ ಆತ್ಮಾಂತರ್ಯಾಮ್ಯಮೃತಃ'' ಎಂದು. ಇಲ್ಲಿ ಆಪ್, ಅಗ್ನಿ, ಅಂತರಿಕ್ಷ, ವಾಯು, ಆದಿತ್ಯ, ದಿಕ್, ಚಂದ್ರ, ನಕ್ಷತ್ರ, ಆಕಾಶ, ತಮಸ್ಸು, ತೇಜಸ್ಸು ಮೊದಲಾದ ಆಧಿದೈವಿಕ ಪದಾರ್ಥಗಳಲ್ಲಿ ''ಯಸ್ಸರ್ವೇಷು ಭೂತೇಷು'' ಎಂಬಲ್ಲಿ ಹೇಳಲ್ಪಟ್ಟ ಆಧಿಭೌತಿಕಪದಾರ್ಥಗಳಲ್ಲಿ; ಪ್ರಾಣ, ವಾಕ್, ಚಕ್ಷುಷ್, ಶ್ರೋತ್ರ, ಮನಸ್ಸು, ತ್ವಕ್, ವಿಜ್ಞಾನ, ರೇತಸ್ಸು ಮೊದಲಾದ ಆಧ್ಯಾತ್ಮಿಕ ಪದಾರ್ಥಗಳಲ್ಲಿ ಇದ್ದಾನೆಂದು ಶ್ರುತನಾದ ಅಂತರ್ಯಾಮಿಯೇ ಈ ಅಧಿಕರಣಕ್ಕೆ ವಿಷಯನಾಗಿದ್ದಾನೆಂದು ತಿಳಿಯಬೇಕು.

प्रकाशः – टीकायामधिदैवादि सर्वप्रकरणश्रुतान्तर्यामिमात्रविषयताद्योत-नायान्तर्यामित्वं विषय इत्युक्तावपि, सूत्राभाष्यानुरोधेन 'अन्तर्यामी' इत्युक्तम् । आदिपदेन तत्तदभिमानिजीवाः ।

ಟೀಕೆಯಲ್ಲಿ ಆಧಿದೈವವೇ ಮೊದಲಾದ ಸಕಲ ಪ್ರಕರಣಗಳಲ್ಲಿ ಶ್ರುತನಾದ (ಕೇಳಲ್ಪಟ್ಟ) ಅಂತರ್ಯಾಮಿತ್ವವು ಮಾತ್ರ ವಿಷಯವಾಗಿದೆ. ಇದನ್ನು ತಿಳಿಸಲು 'ಅಂತರ್ಯಾಮಿತ್ವಂ ವಿಷಯಃ' ಎಂದು ಹೇಳಿದ್ದರೂ ಸಹ. ಸೂತ್ರ ಹಾಗೂ ಭಾಷ್ಯಗಳಲ್ಲಿ 'ಅಂತರ್ಯಾಮಿ' ಎಂಬ ಪದವಿರುವುದರಿಂದ ಪ್ರಕೃತ ಗ್ರಂಥಕಾರರೂ ಸಹ 'ಅಂತರ್ಯಾಮಿ' ಎಂದೇ ಹೇಳಿದ್ದಾರೆ. ಪ್ರಕೃತ್ಯಾದಿ ಎಂಬ ಆದಿಪದಿಂದ ಪ್ರಕೃತ್ಯಾದಿ ಜಡಪದಾರ್ಥಗಳಿಗೆ ಅಭಿಮಾನಿಗಳಾದ ಚೇತನರನ್ನು ಗ್ರಹಣ ಮಾಡಬೇಕು.

प्रकाशः – अस्पष्टांशे फलफलिभावमाह – अचेतनेति । यदा वक्ष्यमाणदिशा अचेतनपरत्वं, तदा जडाविदित्वस्य प्रकृत्यादेरुपपत्तेः, रूढौ बाधकाभावात् तादृक्शरीरत्वं विष्णोर्न युक्तमिति प्रकृत्यादिरेवेति पूर्वपक्षे फलम् । जीवादन्तर्यामि-भेदोक्तिर्नेति पूर्वपक्षिणो भावः ।

ಯಾವ ಅಂಶವು ಅಸ್ಪಷ್ಟವಾಗಿದೆಯೋ ಆ ವಿಷಯದಲ್ಲಿ ಮಾತ್ರ ಫಲಫಲಿಭಾವವನ್ನು ಹೇಳುವುದಕ್ಕಾಗಿ ಅಚೇತನಪರತ್ವವೆಂಬ ವಾಕ್ಯವು ಹೊರಟಿದೆ.

ಒಂದು ವೇಳೆ ಮುಂದೆ ಹೇಳುವ ಪ್ರಕಾರ ಅಂತರ್ಯಾಮಿಯು ಅಚೇತನಪರವಾದರೆ ಆಗ ಜಡಾವಿದಿತತ್ವವು ಪ್ರಕೃತ್ಯಾದಿಗಳಲ್ಲಿ ಉಪಪನ್ನವಾಗುತ್ತದೆ. ಆಗ ರೂಢ್ಯರ್ಥದಲ್ಲಿ ಬಾಧಕವಿಲ್ಲದ ಕಾರಣ ಪ್ರಕೃತ್ಯಾದಿಗಳನ್ನೇ ಶರೀರವಾಗಿರುವುಳ್ಳ ವಿಷ್ಣುವೆಂಬರ್ಥವನ್ನು ಸ್ವೀಕರಿಸಬೇಕೆಂಬುದು ಯುಕ್ತವಾಗುವುದಿಲ್ಲ. ಆದ್ದರಿಂದ ಪ್ರಕೃತ್ಯಾದಿಗಳೇ ಅಂತರ್ಯಾಮಿಯೆಂದು ಪೂರ್ವಪಕ್ಷದ ಫಲ. ಜೀವನಿಗಿಂತ ಅಂತರ್ಯಾಮಿಗೆ ಭೇದವನ್ನು ಹೇಳುವ ವಚನಗಳಿರುವುದಿಲ್ಲವೆಂದು ಪೂರ್ವಪಕ್ಷಿಯ ಅಭಿಪ್ರಾಯ.

ಪ್ರಕಾಶಃ – यदा तु चेतनपरत्वं, तदा तेन साकल्येनाविदितत्वस्य प्रकृत्यादावयोगात् बाधकेन रूढित्यागाच्छीर्यमाणत्वयोगेन विष्णावपि तच्छरीरकत्वसम्भवात् विष्णुरेवेति सिद्धान्ते फलमित्यर्थः ।

ಒಂದು ವೇಳೆ ಅಂತರ್ಯಾಮಿತ್ವವು ಚೇತನ ಪರವಾದರೆ ಆವಾಗ ಸಾಕಲ್ಯೇನಾವಿದಿತತ್ತ್ವವು ಎಲ್ಲರೀತಿಯಿಂದ ತಿಳಿಯಲ್ಪಡದೇ ಇರುವಿಕೆ ಪ್ರಕೃತ್ಯಾದಿಗಳಲ್ಲಿ ಕೂಡುವುದಿಲ್ಲ. ಹೀಗೆ ಬಾಧಕವಿರುವುದರಿಂದ ರೂಢಿಯನ್ನು ಬಿಟ್ಟು ಶೀರ್ಯಮಾಣತ್ವ ಎಂಬ ಯೋಗದಿಂದ ವಿಷ್ಣುವಿನಲ್ಲೂ ಸಹ ಪ್ರಕೃತ್ಯಾದಿಗಳೇ ಶರೀರವಾಗಿವೆಯೆಂಬರ್ಥವನ್ನು ಕೂಡಿಸಬಹುದು. ಆದ್ದರಿಂದ ವಿಷ್ಣುವೇ ಅಂತರ್ಯಾಮಿಯಾಗಿದ್ದಾನೆಂದು ಸಿದ್ಧಾಂತದ ಫಲ.

ಪ್ರಕೃತ್ಯಾದಿಗಳು ವಿಷ್ಣುವಿಗೆ ಶರೀರ ಎಂದರೆ ಪ್ರಕೃತ್ಯಾದಿಗಳು ಶೀರ್ಯಮಾಣತ್ವಾತ್ ಶರೀರ ಎಂಬ ಶಬ್ದವಾಚ್ಯವಾಗಿದೆ. ಆದ್ದರಿಂದ ಆವು ವಿಷ್ಣುವಿನ ಶರೀರ ಎಂಬ ವ್ಯವಹಾರಕ್ಕೆ ವಿಷಯವಾಗಿದೆ ಎಂದಭಿಪ್ರಾಯ.

ಪ್ರಕಾಶಃ – यद्यपि विष्णुरिति चिन्तानन्तरं, तदर्थममृतत्वादिकं गौणम् उत मुख्यमिति, तदर्थं बाधकमस्त्युत नेति, तदर्थं शरीरत्वं विष्णोर्न युक्तमुत युक्तमिति, तदर्थं तत्किं रूढं यौगिकं वेत्येवं यथासूत्रविन्यासं चिन्तोपदर्शनीय, आद्ये सूत्रे साधकलिङ्गस्य, द्वितीयादौ परलिङ्गसावकाशतायाश्चोक्तेः ।

ಪ್ರಶ್ನೆ – 'किंवा विष्णुः' ಎಂಬ ಪ್ರಥಮಕೋಟಿಯ ಚಿಂತೆಯ ಅನಂತರ ಅದಕ್ಕೋಸ್ಕರ ಅಮೃತತ್ವಾದಿಗಳು ಗೌಣವಾಗುತ್ತವೋ? ಅಥವಾ ಮುಖ್ಯವಾಗುತ್ತವೋ? ಅದಕ್ಕೋಸ್ಕರ ಬಾಧಕವಿದೆಯೋ? ಇಲ್ಲವೋ? ಅದಕ್ಕೋಸ್ಕರ ಶರೀರತ್ವವು ವಿಷ್ಣುವಿನಲ್ಲಿ ಯುಕ್ತವಾಗುವುದಿಲ್ಲವೋ? ಯುಕ್ತವಾಗುತ್ತದೋ? ಅದಕ್ಕೋಸ್ಕರ ಶರೀರ ಪದವು ರೂಢವೋ? ಅಥವಾ ಯೌಗಿಕವೋ? ಎಂಬ ಕ್ರಮದಲ್ಲಿ ಸಂಶಯ ಕೋಟಿಗಳನ್ನು ತೋರಿಸಬೇಕಿತ್ತು. ಹೀಗೆ ತೋರಿಸಿದಾಗ ಸೂತ್ರಗಳ ಜೋಡಣೆಯ ಕ್ರಮದಲ್ಲಿಯೇ ಸಂಶಯವನ್ನು ತೋರಿಸಿದಂತಾಗಿ ತಿಳಿಯಲು ಅನುಕೂಲವಾಗುತ್ತಿತ್ತು. ಏಕೆಂದರೆ ಮೊದಲನೇ ಸೂತ್ರದಲ್ಲಿ ಸಾಧಕಲಿಂಗವನ್ನು ಹೇಳಿ, ಎರಡನೆಯ ಸೂತ್ರಾದಿಗಳಲ್ಲಿ ಪರಲಿಂಗಗಳಿಗೆ ಸಾವಕಾಶತ್ವವನ್ನು ಹೇಳುವ ಮೂಲಕ ಬಾಧಕವನ್ನು ಹೇಳಿದ್ದರಿಂದ ಈ ಕ್ರಮದಲ್ಲಿಯೇ ಸಂಶಯ ಕೋಟಿಗಳನ್ನು ತೋರಿಸುವುದು ಸಮಂಜಸವಾಗುತ್ತದಲ್ಲವೇ?

ಪ್ರಕಾಶಃ – तथाऽपि सिद्धान्ते शरीरपदस्य यौगिकत्वोक्तेर्निर्बीजतानिरासायाधिदैवपदस्वारस्याय च तदभिप्रेतैवेयं चिन्ता दर्शिता । अत एव पूर्वपक्षटीकायां शरीरत्वस्याघटनयैव पूर्वं विष्णावुक्ता, सिद्धान्तटीकायां च ''यद्यपि योगाद्रूढेः प्राधान्यम् । तथाऽपि निरवकाशाविदितत्वादिलिङ्गबलेन योगाङ्गीकारो युज्यते'' इत्युक्तमिति भावः ।

ಉತ್ತರ - ಹೌದು. ಆದರೆ ಸಿದ್ಧಾಂತದಲ್ಲಿ ಶರೀರಪದವನ್ನು ಯೌಗಿಕವೆಂದು ಅಂಗೀಕರಿಸಲಾಗಿದೆ. ಅದು ನಿರ್ಬೀಜ ಎಂಬ ಶಂಕೆಯನ್ನು ಪರಿಹರಿಸುವುದಕ್ಕಾಗಿ ಮತ್ತು ಅಧಿದೈವಪದಸ್ವಾರಸ್ಯಕ್ಕಾಗಿ ಗ್ರಂಥಕಾರರು ಬೇರೆ ಕ್ರಮದಲ್ಲಿ ಸಿದ್ಧಾಂತಾಭಿಪ್ರೇತವಾದ ಚಿಂತೆಯನ್ನೇ ತೋರಿಸಿದ್ದಾರೆ. ಆದ್ದರಿಂದಲೇ ಪೂರ್ವಪಕ್ಷದ ಟೀಕೆಯಲ್ಲಿ ಶರೀರತ್ವವನ್ನು ಸೇರಿಸಿಕೊಳ್ಳದೆ. ಹಿಂದೆ ವಿಷ್ಣುವಿನಲ್ಲಿ ಹೇಳಿದ್ದಾರೆ. ಆದರೆ ಸಿದ್ಧಾಂತ ಟೀಕೆಯಲ್ಲಾದರೂ ''ಯದ್ಯಪಿ ಯೋಗಾದ್ರೂಢೇಃ ಪ್ರಾಧಾನ್ಯಮ್ । ತಥಾऽಪಿ ನಿರವಕಾಶಾವಿದಿತತ್ವಾದಿಲಿಂಗಬಲೇನ ಯೋಗಾಂಗೀಕಾರೋ ಯುಜ್ಯತೇ'' ವಸ್ತುತಃ ಯೋಗಕ್ಕಿಂತ ರೂಢಿಯು ಪ್ರಬಲವಾಗಿದೆ. ಆದರೆ ನಿರವಕಾಶವಾದ 'ಅವಿದಿತತ್ವ' ಎಂಬ ಲಿಂಗದ ಬಲದಿಂದ ಯೋಗಾರ್ಥವನ್ನು ಅಂಗೀಕರಿಸುವುದು ಯುಕ್ತವಾಗುತ್ತದೆ ಎಂದು ಹೇಳಿದ್ದಾರೆ.

ಪಾಂಡುರಂಗಿಕೇಶವಾಚಾರ್ಯವಿರಚಿತ

ಗುರುರಾಜೀಯಮ್ (ಭಾವದೀಪ)

ಗುರುರಾಜೀಯಮ್ – ।। ॐ अन्तर्याम्यधिदेवादिषु तद्धर्मव्यपेशात् ॐ ।। पूर्वपक्षे सिद्धान्ते च फलफलिभावमाह – अचेतनेति ।।

ಸಾರ

ಆಂತರ್ಯಾಮ್ಯಧಿಕರಣವು ಪ್ರಾರಂಭವಾಗುತ್ತಿದೆ. ಹಿಂದಿನ ಅಧಿಕರಣದಲ್ಲಿ ಚಕ್ಷುರಂತಃಸ್ಥನಾದವನು ವಿಷ್ಣುವೇ ಆಗಿದ್ದಾನೆಂದು ನಿರ್ಣಯಿಸಿದ್ದಾಯಿತು. ಆ ನಿರ್ಣಯಕ್ಕೆ ಅಮೃತತ್ವವನ್ನು ಹೇತುವೆಂದು ಹೇಳಿದರು. ಆದರೆ ವಿಷ್ಣುವಿನಲ್ಲಿ ಆಂತಹ ಅಮೃತತ್ವಾದಿ ಹೇತುಗಳೇ ಕೂಡುವುದಿಲ್ಲವೆಂದು ಈ ಅಧಿಕರಣದಲ್ಲಿ ಆಕ್ಷೇಪ ಮಾಡುತ್ತಿರುವುದರಿಂದ ಆನಂತರ್ಯ ಸಂಗತಿಯನ್ನು ತಿಳಿಯಬೇಕು.

'ಆಂತರ್ಯಾಮ್ಯಮೃತಃ' ಎಂಬ ಶ್ರುತಿ ವಾಕ್ಯ ಈ ಅಧಿಕರಣಕ್ಕೆ ವಿಷಯವಾಗಿದೆ. ಇಲ್ಲಿ ಕೇಳಿಸುತ್ತಿರುವ ಆಂತರ್ಯಾಮಿಯು ಪ್ರಕೃತ್ಯಾದಿಗಳೇಕಾಗಬಾರದು? ಎಂಬುದು ಪೂರ್ವಪಕ್ಷಿಗಳ ವಾದ. ವಿಷ್ಣುವೇ ಎಂದು ಸಿದ್ಧಾಂತಿಗಳ ನಿರ್ಣಯ. ಆದ್ದರಿಂದ ಒಂದು ವೇಳೆ ಮುಂದೆ ಹೇಳುವ ಪ್ರಕಾರ ಆಂತರ್ಯಾಮಿಯು ಅಚೇತನಪರವಾದರೆ ಆವಾಗ ಜಡವಿದಿತತ್ವವು ಪ್ರಕೃತ್ಯಾದಿಗಳಲ್ಲಿ ಉಪಪನ್ನವಾಗುತ್ತದೆ. ಆವಾಗ ರೂಢ್ಯರ್ಥದಲ್ಲಿ ಬಾಧಕವಿಲ್ಲದ ಕಾರಣ ಪ್ರಕೃತ್ಯಾದಿಗಳನ್ನೇ ಶರೀರವಾಗಿ ಶರೀರವಾಗಿವುಳ್ಳ ವಿಷ್ಣುವೆಂಬರ್ಥವನ್ನು ಸ್ವೀಕರಿಸಬೇಕೆಂಬುದು ಯುಕ್ತವಾಗುವುದಿಲ್ಲ. ಆದ್ದರಿಂದ ಪ್ರಕೃತ್ಯಾದಿಗಳೇ ಆಂತರ್ಯಾಮಿಯೆಂದು ಪೂರ್ವಪಕ್ಷದ ಫಲ. ಜೀವನಿಗಿತ ಆಂತರ್ಯಾಮಿಗೆ ಭೇದವನ್ನು ಹೇಳುವ ವಚನಗಳಿರುವುದಿಲ್ಲವೆಂದು ಪೂರ್ವಪಕ್ಷಿಯ ಅಭಿಪ್ರಾಯ.

ಆಂತರ್ಯಾಮ್ಯಧಿಕರಣ (೧-೨-೫)

ಒಂದು ವೇಳೆ ಚೇತನ ಪರವಾದರೆ ಆವಾಗ ಸಾಕಲ್ಯೇನಾವಿದಿತತ್ತ್ವವು ಪ್ರಕೃತ್ಯಾದಿಗಳಲ್ಲಿ ಕೂಡುವುದಿಲ್ಲ. ಹೀಗೆ ಬಾಧಕವಿರುವುದರಿಂದ ರೂಢಿಯನ್ನು ಬಿಟ್ಟು ಶೀರ್ಯಮಾಣತ್ವ ಎಂಬ ಯೋಗದಿಂದ ವಿಷ್ಣುವಿನಲ್ಲೂ ಸಹ ಪ್ರಕೃತ್ಯಾದಿಗಳೇ ಶರೀರವಾಗಿವೆಯೆಂಬರ್ಥವನ್ನು ಕೂಡಿಸಬಹುದು. ಆದ್ದರಿಂದ ವಿಷ್ಣುವೇ ಅಂತರ್ಯಾಮಿಯಾಗಿದ್ದಾನೆಂದು ಸಿದ್ಧಾಂತದ ಫಲ.

• • • • •

ಪ್ರಕೃತಿಯೇ ಅಂತರ್ಯಾಮಿಯೆಂದು ಪೂರ್ವಪಕ್ಷ

ತಾತ್ಪರ್ಯಚನ್ದ್ರಿಕಾ

ಪೂರ್ವಪಕ್ಷಸ್ತು – ''ಏಷ ತ ಆತ್ಮಾऽನ್ತರ್ಯಾಮೀ'' ಇತ್ಯುಕ್ತೋऽನ್ತರ್ಯಾಮೀ ಪ್ರಕೃತಿಃ,

ಅನುವಾದ - ಪೂರ್ವಪಕ್ಷ ಹೀಗಿದೆ - ''ಏಷ ತ ಆತ್ಮಾऽಂತರ್ಯಾಮೀ' ಎಂಬ ವಿಷಯವಾಕ್ಯದಲ್ಲಿ ಪ್ರತಿಪಾದ್ಯವಾದ ಆಂತರ್ಯಾಮಿಯು ಪ್ರಕೃತಿಯೇ ಆಗಿದೆ.

ಅನ್ತರ್ಯಾಮಿಣಿ ಶ್ರುತಸ್ಯ ಪೃಥಿವ್ಯಾದ್ಯಾತ್ಮಕತ್ವರೂಪಸ್ಯ ಪೃಥಿವ್ಯಾದಿಶರೀರತ್ವಸ್ಯ ಪೃಥಿವ್ಯಾದ್ಯುಪಾದಾನೇ ಪ್ರಕೃತೌ ಸಮ್ಭವಾತ್, ಶರೀರಶಬ್ದಸ್ಯ 'ಇದಂ ಪೂರ್ವಪಕ್ಷಶರೀರಮ್' ಇತ್ಯಾದೌ ಸ್ವರೂಪೇऽಪಿ ಪ್ರಯೋಗಾತ್ ।

ಅಂತರ್ಯಾಮಿಯಲ್ಲಿ ಪೃಥಿವ್ಯಾದಿಸ್ವರೂಪವೆಂದು ಹೇಳುವ ಪೃಥಿವ್ಯಾದಿ ಶರೀರತ್ವವು (ಪೃಥಿವ್ಯಾದಿಗಳು ಶರೀರವಾಗಿವೆ) ಪ್ರಕೃತಿಯಲ್ಲಿ ಕೂಡುತ್ತದೆ. ಏಕೆಂದರೆ ಪೃಥಿವ್ಯಾದಿಗಳಿಗೆ ಪ್ರಕೃತಿಯು ಉಪಾದಾನವಾದ್ದರಿಂದ. ಅಂದರೆ ಪ್ರಕೃತಿಗೆ ಪೃಥಿವ್ಯಾದಿಗಳನ್ನು ಶರೀರವೆಂದು ಹೇಳಬಹುದು. ಶರೀರ ಶಬ್ದವು ಸ್ವರೂಪ ಎಂಬರ್ಥದಲ್ಲಿ ಪ್ರಯೋಗಿಸಲ್ಪಡುತ್ತದೆ. 'ಇದು ಪೂರ್ವಪಕ್ಷ ಶರೀರ' ಎಂದು ಹೇಳಿದಾಗ ಶರೀರ ಶಬ್ದವು ಸ್ವರೂಪ ಎಂಬರ್ಥದಲ್ಲಿಯೇ ಪ್ರಸಿದ್ಧವಾಗಿದೆ.

ಯದ್ಯಪಿ ''ಯಸ್ಯ ದಿಶಃ ಶರೀರಂ, ಯಸ್ಯಾತ್ಮಾ ಶರೀರಮ್'' ಇತ್ಯುಕ್ತಂ ದಿಗಾದಿಶರೀರತ್ವಂ ಪ್ರಕೃತೌ ನ ಮುಖ್ಯಂ, ಪೃಥಿವ್ಯಾದೇಃ ಪ್ರಾಕೃತತ್ವೇऽಪಿ ದಿಗಾದೇರಪ್ರಾಕೃತತ್ವಾತ್ ।

ಮತ್ತೇನೆಂದರೆ 'ಯಸ್ಯ ದಿಶಃ ಶರೀರಂ, ಯಸ್ಯಾತ್ಮಾ ಶರೀರಮ್' ಎಂಬಲ್ಲಿ ದಿಕ್ ಮೊದಲಾದವುಗಳೂ ಸಹ ಶರೀರವಾಗಿವೆಯೆಂದು ಹೇಳಲಾಗಿದೆ. ಇದನ್ನು ಪ್ರಕೃತಿಯಲ್ಲಿ ಮುಖ್ಯವಾಗಿ ಹೇಳಲಾಗದು. ಏಕೆಂದರೆ ಪೃಥಿವ್ಯಾದಿಗಳು ಪ್ರಾಕೃತವಾದ್ದರಿಂದ ಶರೀರವೆಂದು ಹೇಳುವುದು ತಪ್ಪಾಗುವುದಿಲ್ಲ. ಆದರೆ ದಿಕ್ ಮೊದಲಾದವು ಅಪ್ರಾಕೃತವಾದ್ದರಿಂದ ಅವನ್ನು ಶರೀರವೆಂದು ಹೇಳಲಾಗದು.

तथाऽपि गौणं तदस्तु । ब्रह्मणस्तु पृथिव्यादिशरीरत्वमपि न मुख्यम् ।

ಹಾಗಾದರೆ ದಿಗಭಿಮಾನಿಯ ಶರೀರವು ಪ್ರಾಕೃತವಾದ್ದರಿಂದ ಗೌಣಾರ್ಥವನ್ನು ಮಾಡಿ ದಿಗಾದಿಗಳಿಗೆ ಶರೀರತ್ವವನ್ನು ಸಮರ್ಥಿಸುತ್ತೇವೆ. ವಿಚಾರ ಮಾಡಿದರೆ ಬ್ರಹ್ಮಪಕ್ಷದಲ್ಲಿ ಪೃಥಿವ್ಯಾದಿಗಳಿಗೂ ಸಹ ಶರೀರತ್ವವನ್ನು ಮುಖ್ಯವಾಗಿ ಹೇಳಲಾಗದು.

नच नित्ये दिगादिके ब्रह्म प्रति शीर्यमाणत्वादिरूपं यौगिकमपि शरीरत्वमस्ति ।

ನಿತ್ಯವಾದ ದಿಗಾದಿಗಳಿಗೆ ಬ್ರಹ್ಮನನ್ನು ಕುರಿತು ಶೀರ್ಯಮಾಣತ್ವವೆಂಬ ಯೌಗಿಕಾರ್ಥವನ್ನು ಸ್ವೀಕರಿಸಿ ಅವು ಶರೀರವೆಂಬರ್ಥವನ್ನೂ ಸಹ ಹೇಳಲಾಗದು. ಆದರೆ ಪ್ರಕೃತಿಯಲ್ಲಿ ಗೌಣಾರ್ಥದಿಂದ ಶರೀರತ್ವವನ್ನು ಕೂಡಿಸಬಹುದು.

''यः पृथीव्यां तिष्ठन्'' इत्यादिकं तु ''व्याप्तं कार्येषु कारणम्'' इत्युक्तेः, पटे तन्तव इति प्रतीतेश्च कारणस्यापि कार्यस्थत्वायुक्तम् ।

'ಯ ಪೃಥಿವ್ಯಾಂ ತಿಷ್ಠನ್' ಎಂಬಲ್ಲಿ ಪೃಥಿವೀಯು ಆಂತರ್ಯಾಮಿಗೆ ಆಧಾರವಾಗಿದೆಯೆಂದು ಹೇಳಲಾಗಿದೆ. ಪ್ರಕೃತಿಯು ಪೃಥಿವಿಯ ಸ್ವರೂಪವಾಗಿರುವುದರಿಂದ ಪ್ರಕೃತಿಗೆ ಪೃಥಿವಿಯು ಆಧಾರವಾಗಲು ಹೇಗೆ ಸಾಧ್ಯ ? ಎಂದು ಪ್ರಶ್ನಿಸಬಾರದು. ಈ ರೀತಿಯ ಪ್ರಯೋಗವೇನೂ ತಪ್ಪಾಗುವುದಿಲ್ಲ. 'ವ್ಯಾಪ್ತಂ ಕಾರ್ಯೇಷು ಕಾರಣಂ' ಎಂಬ ಗೀತಾ ತಾತ್ಪರ್ಯದ ಮಾತಿನಲ್ಲಿ ಕಾರ್ಯದಲ್ಲಿ ಕಾರಣವಿದೆಯೆಂದು ಹೇಳಿದ್ದಾರೆ. 'ಪಟೇ ತಂತವಃ' (ವಸ್ತ್ರದಲ್ಲಿ ದಾರ) ಎಂಬ ಪ್ರತ್ಯಕ್ಷ ಪ್ರತೀತಿಯೂ ಇದೆ. ಕಾರ್ಯ-ಕಾರಣವೆಂಬ ಭೇದವಿದ್ದರೂ ಕಾರ್ಯವು ಕಾರಣವೆಂಬ ಪ್ರಯೋಗ ಮಾಡುವುದೇನೂ ತಪ್ಪಾಗುವುದಿಲ್ಲ.

कार्यकारणयोश्च भिन्नाभिन्नत्वाद् भेदेन तदात्मकत्वं, भेदेन तत्स्थत्वं चाविरुद्धम् ।

ಕಾರ್ಯ ಹಾಗೂ ಕಾರಣಗಳಿಗೆ ಭೇದಾಭೇದವಿರುವುದರಿಂದ ಅಭೇದವನ್ನು ವಿವಕ್ಷಿಸಿ ತದಾತ್ಮಕತ್ವವನ್ನು (ಕಾರ್ಯಾತ್ಮಕತ್ವ) ಹೇಳಬಹುದು. ಭೇದವನ್ನು ವಿವಕ್ಷಿಸಿ ಕಾರ್ಯಸ್ಥತ್ವವನ್ನು ಹೇಳಬಹುದು. ಹೀಗೆ ಹೇಳುವುದರಿಂದ ಯಾವ ವಿರೋಧವೂ ಬರುವುದಿಲ್ಲ.

''पृथिवीं यमयति'' इत्यादिनोक्तं च तन्नियम्यत्वं गौणं, कार्यस्य कारणाधीनत्वात् ।

ಇನ್ನು ''ಪೃಥಿವೀಂ ಯಮಯತಿ'' ಎಂಬಲ್ಲಿ ಕೇಳಿಸುತ್ತಿರುವ ಪೃಥಿವ್ಯಾದಿನಿಯಾಮಕತ್ವವು ಪ್ರಕೃತಿಯಲ್ಲಿ ಕೂಡುವುದಿಲ್ಲವೆಂದು ಹೇಳಬೇಕು. ಆದರೆ ಆತ್ಮನ ಪ್ರವೃತ್ತಿಯು ಶರೀರದ ಮೂಲಕವೇ ಆಗಬೇಕು ಹೊರತು ನೇರವಾಗಿ ಆಗುವುದಿಲ್ಲ. ಆದ್ದರಿಂದ ಆತ್ಮನು ಪ್ರಕೃತ್ಯಧೀನವೆಂದು ಹೇಳಬಹುದು. ಕಾರ್ಯವು ಕಾರಣಾಧೀನವಾದ್ದರಿಂದ ಗೌಣವಾದ ನಿಯಮ್ಯತ್ವವನ್ನು ಪೃಥಿವಿಗೆ ಹೇಳುತ್ತೇವೆ ಎಂದಭಿಪ್ರಾಯ.

''ಯಮಾತ್ಮಾ ನ ವೇದ'' ಇತ್ಯೇತದಪಿ ''ಅಪ್ರತರ್ಕ್ಯಮವಿಜ್ಞೇಯಮ್'' ಇತ್ಯಾದಿನಾ ಪ್ರಕೃತೇರ್ದುರ್ಜ್ಞಾನತ್ವಾತ್ ।

''ಯಮಾತ್ಮಾ ನ ವೇದ'' ಎಂಬಲ್ಲಿ ಆತ್ಮನಿಂದ ಅಂತರ್ಯಾಮಿಯು ತಿಳಿಯಲು ಸಾಧ್ಯವಿಲ್ಲ ಎಂದು ಹೇಳಲಾಗಿದೆ. ಇದನ್ನೂ ಸಹ ಪ್ರಕೃತಿಯಲ್ಲಿ ಕೂಡಿಸಬಹುದು. ಹೇಗೆಂದರೆ 'ಅಪ್ರತರ್ಕ್ಯಮವಿಜ್ಞೇಯಂ' ಇತ್ಯಾದಿ ಮಾತುಗಳಂತೆ ಪ್ರಕೃತಿಯನ್ನು ಸಾಕಲ್ಯೇನ ತಿಳಿಯಲು ಯಾರಿಂದಲೂ ಸಾಧ್ಯವಿಲ್ಲವಾದ್ದರಿಂದ.

''ದ್ರಷ್ಟಾ ಶ್ರೋತಾ'' ಇತ್ಯಾದಿನೋಕ್ತಂ ಚ ದ್ರಷ್ಟೃತ್ವಾದಿಕಂ ಪ್ರಾಕೃತಾನಾಮಿನ್ದ್ರಿಯಾಣಾಂ ದರ್ಶನಾದಿಸಾಧನತ್ವೇನ' ಕರಣೇ ಕರ್ತೃತ್ವೋಪಚಾರಾದ್ವಾऽಭಿಮಾನಿದ್ವಾರಾ ವಾ ಪ್ರಕೃತೌ ಯುಕ್ತಮ್ ।

ಅಂತರ್ಯಾಮಿಯಲ್ಲಿ ''ದ್ರಷ್ಟಾ ಶ್ರೋತಾ'' ಇತ್ಯಾದಿಯಾಗಿ ದ್ರಷ್ಟೃತ್ವ, ಶ್ರೋತೃತ್ವಾದಿಗಳು ಕೇಳಿಸುತ್ತಿವೆ. ಪ್ರಾಕೃತವಾದ ಇಂದ್ರಿಯಗಳು ದರ್ಶನಸಾಧನವಾದ್ದರಿಂದ ಪ್ರಕೃತಿಯನ್ನೇ 'ದ್ರಷ್ಟಾ ಶ್ರೋತಾ' ಇತ್ಯಾದಿಯಾಗಿ ಹೇಳಬಹುದು. ಏಕೆಂದರೆ ಕರಣದಲ್ಲಿ ಕರ್ತೃತ್ವದ ಪ್ರಯೋಗವನ್ನು ಔಪಚಾರಿಕವಾಗಿ ಮಾಡುವುದು ಕಂಡಿದೆ. (ಹಂತಾ ರಾಮಶರಃ ಇತ್ಯಾದಿ ಸ್ಥಳದಲ್ಲಿ) ಅಥವಾ ಅಭಿಮಾನಿಯಾದ ಜೀವನಲ್ಲಿ ದ್ರಷ್ಟೃತ್ವಾದಿಗಳಿರುವುದರಿಂದ ಅಭಿಮನ್ಯಮಾನವಾದ ಪ್ರಕೃತಿಯಲ್ಲೂ ಸಹ ದ್ರಷ್ಟೃತ್ವಾದಿಗಳನ್ನು ಹೇಳಬಹುದು.

ಪ್ರಕಾಶಃ –

''ಸೋऽನ್ತರ್ಯಾಮೀ ಪ್ರಕೃತಿರ್ಭವೇತ್'' ಇತ್ಯಾದಿಟೀಕಾಂ ವಿವೃಣ್ವನ್ ''ಪೃಥಿವ್ಯಾದಿ, ಶರೀರತ್ವಂ ನಿರವಕಾಶಮ್'' ಇತಿ ನ್ಯಾಯವಿವರಣೋಕ್ತಶಾರೀರಿತ್ವರೂಪನಿರವಕಾಶಾಲಿಙ್ಗೇನ ಪೂರ್ವಪಕ್ಷದ್ವಯಂ ವಕ್ತುಂ ''ನಚ ಸ್ಮಾರ್ತಮ್'' ಇತಿ ಸೂತ್ರಸೂಚಿತಂ ಪ್ರಕೃತಿಪೂರ್ವಪಕ್ಷಂ ತಾದವಾಹ – ಏಷ ತ ಇತಿ ।

ವಿವರಣೆ - ''ಸೋऽಂತರ್ಯಾಮೀ ಪ್ರಕೃತಿರ್ಭವೇತ್'' ಇತ್ಯಾದಿ ಟೀಕೆಯಲ್ಲಿ ಈ ಅಧಿಕರಣದ ಪೂರ್ವಪಕ್ಷವನ್ನು ವಿವರಿಸುತ್ತಾರೆ. ಹಾಗೂ ''ಪೃಥಿವ್ಯಾದಿ, ಶರೀರತ್ವಂ ನಿರವಕಾಶಮ್'' ಎಂದು

ನ್ಯಾಯವಿವರಣದಲ್ಲಿ ಹೇಳಲ್ಪಟ್ಟ ಶರೀರತ್ವವೆಂಬ ನಿರವಕಾಶಲಿಂಗದಿಂದ ಎರಡು ಪೂರ್ವಪಕ್ಷಗಳನ್ನು ತೋರಿಸಲು ಹೊರಟಿದ್ದಾರೆ. ಪ್ರಕೃತ 'ನಚ ಸ್ಮಾರ್ತಮ್' ಎಂಬ ಸೂತ್ರದಿಂದ ಸೂಚಿತವಾದ ಪ್ರಕೃತಿಯೇ ಅಂತರ್ಯಾಮಿ ಆಗಿದೆಯೆಂಬ ಪೂರ್ವಪಕ್ಷವನ್ನು 'ಏಷ ತ ಇತಿ' ಇತ್ಯಾದಿ ವಾಕ್ಯದಿಂದ ಹೇಳುತ್ತಿದ್ದಾರೆ.

ಪ್ರಕಾಶಃ – ಏತೇನ 'ಸಃ' ಇತಿ ಟೀಕಾಸ್ಥತಚ್ಛಬ್ದಾರ್ಥೋ ವಿವೃತಃ । ''ಯಸ್ಯ ಪೃಥಿವೀ'' ಇತ್ಯಾದಿ ''ಸರ್ವಾತ್ಮಕತ್ವಾತ್'' ಇತ್ಯನ್ತಟೀಕಾರ್ಥೆ ನಿಷ್ಕೃಷ್ಯಾಹ – ಅನ್ತರ್ಯಾಮಿಣೀತಿ । ತತ್ರಾನುಪಪತ್ತಿಮಾಶಙ್ಕ್ಯ ನಿರಾಹ – ಯದ್ಯಪೀತಿ ।

ಹೀಗೆ ಹೇಳಿದ್ದರಿಂದ 'ಸೋಽಂತರ್ಯಾಮೀ'' ಇತ್ಯಾದಿ ಟೀಕೆಯಲ್ಲಿರುವ ತತ್‌ಶಬ್ದದ ಅರ್ಥವನ್ನು ವಿವರಿಸಿದಂತಾಯಿತು. ''ಯಸ್ಯ ಪೃಥಿವೀ'' ಎಂಬಲ್ಲಿಂದ ಪ್ರಾರಂಭಿಸಿ ''ಸರ್ವಾತ್ಮಕತ್ವಾತ್'' ಎಂಬಲ್ಲಿಯವರೆಗಿನ ಟೀಕೆಯ ಅಭಿಪ್ರಾಯವನ್ನು ಸಂಗ್ರಹಿಸಿ ವ್ಯಾಖ್ಯಾನಿಸುತ್ತಿದ್ದಾರೆ 'ಅಂತರ್ಯಾಮಿಣಿ' ಇತ್ಯಾದಿಯಾಗಿ. ಅಲ್ಲಿರುವ ಅನುಪಪತ್ತಿಯನ್ನು ಆಶಂಕಿಸಿ ನಿರಾಕರಿಸುತ್ತಿದ್ದಾರೆ 'ಯದ್ಯಪಿ' ಇತ್ಯಾದಿಯಾಗಿ.

ಪ್ರಕಾಶಃ – ಗೌಣಮಿತಿ । ದಿಗಾದ್ಯಭಿಮಾನಿದೇಹಸ್ಯ ಪ್ರಾಕೃತತ್ವಾದ್ ದಿಗಾದಿರಪಿ ತಥೋಚ್ಯತ ಇತಿ ಭಾವಃ । ಬ್ರಹ್ಮಣಸ್ತ್ವಿತಿ । ಪ್ರಕೃತೌ ಕಿಞ್ಚಿದೇವಾಮುಖ್ಯಂ, ಬ್ರಹ್ಮಣಿ ತು ಸರ್ವಮಪೀತಿ ನ ತದ್ಗ್ರಹ ಇತ್ಯರ್ಥಃ ।

ದಿಕ್ ಮೊದಲಾದವುಗಳಿಗೆ ಅಭಿಮಾನಿಯಾದ ಯಾವ ದೇವತೆಯಿದ್ದಾನೋ? ಅವನ ದೇಹವು ಪ್ರಾಕೃತವಾದ್ದರಿಂದ ದಿಕ್ ಅನ್ನು ಪ್ರಾಕೃತವೆಂದು ಶ್ರುತಿ ಹೇಳುತ್ತಿದೆ. ಹೀಗೆ ಗೌಣಾರ್ಥವನ್ನು ಮಾಡಬೇಕೆಂದು 'ಗೌಣಂ' ಎಂಬ ಪದದಿಂದ ಹೇಳಿದ್ದಾರೆ. ಪ್ರಕೃತಿಯು ಅಂತರ್ಯಾಮಿ ಎಂಬ ಪಕ್ಷದಲ್ಲಿ ದಿಕ್‌ಶಬ್ದಕ್ಕೆ ಮಾತ್ರ ಗೌಣಾರ್ಥ ಮಾಡಬೇಕು. ಬ್ರಹ್ಮನು ಸರ್ವಾಂತರ್ಯಾಮಿ ಎಂಬ ಪಕ್ಷದಲ್ಲಿ ಎಲ್ಲಾ ಪದಗಳಿಗೂ ಗೌಣಾರ್ಥ ಮಾಡಬೇಕಾಗುತ್ತದೆ. ಆದ್ದರಿಂದ ಬ್ರಹ್ಮನೆಂಬ ಅರ್ಥವನ್ನು ಸ್ವೀಕರಿಸಬಾರದೆಂದು ಅಭಿಪ್ರಾಯ.

ಪ್ರಕಾಶಃ – ನನು ಬ್ರಹ್ಮಣಿ ಯೋಗಾಙ್ಗೀಕಾರೇ ಮುಖ್ಯಂ ಯುಜ್ಯತ ಇತ್ಯತ ಆಹ – ನಚೇತಿ । 'ನಿತ್ಯೇ' ಇತಿ ಹೇತುಗರ್ಭಮ್ । ನನು ಬ್ರಹ್ಮಪಕ್ಷೇ ಯಥಾ ದಿಗಾದಿಶರೀರತ್ವಮಯುಕ್ತಂ, ಪ್ರಕೃತಿಪಕ್ಷೇऽಪಿ ತಥಾ ನ ಯುಕ್ತಂ, ಪೃಥಿವ್ಯಾದಿಶರೀರತ್ವಂ ಚೋಭಯತ್ರಾಪಿ ಯುಕ್ತಮಿತಿ ಚೇನ್ನ, ಯೋಗಾರೂಢೇ ರಥಕಾರಾಧಿಕರಣನ್ಯಾಯೇನ ಬಲವತ್ತ್ವಾದಿತಿ ಭಾವಃ ।

ಬ್ರಹ್ಮನಲ್ಲಿ ಯೋಗಾರ್ಥವನ್ನು ಅಂಗೀಕರಿಸಿದರೆ ಮುಖ್ಯಾರ್ಥವನ್ನು ಸ್ವೀಕರಿಸಿದಂತಾಗುತ್ತದಲ್ಲವೇ? ಎಂಬ ಪ್ರಶ್ನೆಗೆ 'ನಚ ನಿತ್ಯೇ' ಎಂಬ ವಾಕ್ಯದಿಂದ ಉತ್ತರಿಸುತ್ತಿದ್ದಾರೆ. 'ನಿತ್ಯೇ' ಎಂಬ ಪದವು ಹೇತುವನ್ನೂ ಸಹ ಹೇಳುತ್ತಿರುವುದರಿಂದ ಹೇತುಗರ್ಭವಿಶೇಷಣವಾಗಿದೆ. ಬ್ರಹ್ಮಪಕ್ಷದಲ್ಲಿ ಯಾವರೀತಿಯಾಗಿ ದಿಗಾದಿಗಳಿಗೆ ಶರೀರತ್ವವು ಅಯುಕ್ತವಾಗಿದೆಯೋ, ಅದೇರೀತಿಯಾಗಿ ಪ್ರಕೃತಿ ಪಕ್ಷದಲ್ಲಿಯೂ ಸಹ ದಿಗಾದಿಶರೀರತ್ವವು ಅಯುಕ್ತವಾಗಿದೆ. ಇನ್ನು ಪೃಥಿವ್ಯಾದಿಗಳು ಶರೀರವಾಗಿವೆಯೆಂದು ಹೇಳಿದಾಗ ಬಾಧಕವಿಲ್ಲವೆಂಬುದು ಎರಡೂ ಪಕ್ಷದಲ್ಲಿ ಸಮಾನವಾಗಿದೆಯಲ್ಲವೇ? ಎಂದರೆ.

ಹೀಗೆ ಪ್ರಶ್ನಿಸಬಾರದು. ಯೋಗಕ್ಕಿಂತ ರೂಢಿಯೇ ಪ್ರಬಲವೆಂದು ರಥಕಾರಾಧಿಕರಣದ ನ್ಯಾಯದಿಂದ ಸಿದ್ಧವಾಗಿದೆ. ಆದ್ದರಿಂದ ಯೋಗಾರ್ಥವನ್ನು ಸ್ವೀಕರಿಸುವ ಬ್ರಹ್ಮನ ಪಕ್ಷವನ್ನು ಸ್ವೀಕರಿಸಬಾರದು.

ಪ್ರಕಾಶಃ – ಇಯತಾ ಗ್ರನ್ಥೇನ ಆದ್ಯಾದಿಚಿನ್ತಾತ್ರಯಸ್ಯಪೂರ್ವಪಕ್ಷಕೋಟಯೋ ಹೇತುಹೇತುಮದ್ಭಾವಾಪನ್ನತಯಾ ವಿವೃತಾಃ । ಇದಾನೀಂ 'ಬಾಧಕಂ ನಾಸ್ತಿ' ಇತ್ಯಪಿ ಕೋಟಿರ್ವಿವರೀತುಕಾಮಃ ಕಿಮತ್ರ ಬಾಧಕಂ

ಇದುವರೆಗಿನ ಗ್ರಂಥದಿಂದ ಮೊದಲಿನ ಮೂರು ಸಂಶಯಕೋಟಿಗಳಲ್ಲಿರುವ ಪೂರ್ವಪಕ್ಷಕೋಟಿಗಳಿಗೆ ಹೇತುಹೇತುಮದ್ಭಾವವನ್ನು ತೋರಿಸುವ ಮೂಲಕ ವಿವರಿಸಿದಂತಾಯಿತು. ಪ್ರಕೃತ ಬಾಧಕವೂ ಸಹ ಇರುವುದಿಲ್ಲವೆಂಬ ಕೋಟಿಗಳನ್ನು ವಿವರಿಸುವ ಇಚ್ಛೆಯಿಂದ ಬಾಧಕಗಳನ್ನು ಹೇಳುವುದಾದರೆ ಯಾವ ಬಾಧಕವೆಂದು ಪ್ರಶ್ನಿಸುತ್ತಿದ್ದಾರೆ.

ಪ್ರಕಾಶಃ – ''ಯಃ ಪೃಥಿವ್ಯಾಂ ತಿಷ್ಠನ್'' ''ಯ ಆತ್ಮನಿ ತಿಷ್ಠನ್'' ಇತ್ಯುಕ್ತಪೃಥಿವ್ಯಾದ್ಯಾಧಾರತ್ವಂ ವಾ, ''ಯಮಯತಿ'' ಇತ್ಯುಕ್ತಪೃಥಿವ್ಯಾದಿನಿಯಾಮಕತ್ವಂ ವಾ, ''ಆತ್ಮಾನಂ ಯಮಯತಿ'' ಇತ್ಯುಕ್ತಚೇತನನಿಯಾಮಕತ್ವಂ ವಾ, ಆತ್ಮಾವಿದಿತತ್ವಂ ವಾ, ''ಅದೃಷ್ಟೋ ದ್ರಷ್ಟಾऽಶ್ರುತಃ ಶ್ರೋತಾ ಅಮತೋ ಮನ್ತಾ ಅವಿಜ್ಞಾತೋ ವಿಜ್ಞಾತಾ'' ಇತ್ಯುಕ್ತದ್ರಷ್ಟೃತ್ವಾದಿಕಂ ವೇತಿ ವಿಕಲ್ಪಾನ್ ಹೃದಿ ಕೃತ್ವಾ, ''ನಚ ''ಪೃಥಿವ್ಯಾಂ ತಿಷ್ಠನ್'' ಇತ್ಯಾದೇರನುಪಪತ್ತಿಃ'' ಇತ್ಯಾದಿಟೀಕಾಂ ವಿವೃಣ್ವನ್ ಕ್ರಮೇಣ ನಿರಾಹ – ಯ ಇತಿ ।

'ಯಃ ಪೃಥಿವ್ಯಾಂ ತಿಷ್ಠನ್' 'ಯ ಆತ್ಮನಿ ತಿಷ್ಠನ್' ಎಂಬಲ್ಲಿ ಹೇಳಲ್ಪಟ್ಟ ಪೃಥಿವ್ಯಾದಿ ಆಧಾರತ್ವವು ಬಾಧಕವೋ, ಅಥವಾ 'ಯಮಯತಿ' ಎಂಬಲ್ಲಿ ಹೇಳಲ್ಪಟ್ಟ ಪೃಥಿವ್ಯಾದಿ ನಿಯಾಮಕತ್ವವು ಬಾಧಕವೋ? ಅಥವಾ ''ಆತ್ಮಾನಂ ಯಮಯತಿ'' ಎಂಬಲ್ಲಿ ಹೇಳಲ್ಪಟ್ಟ ಚೇತನನಿಯಾಮಕತ್ವವು ಬಾಧಕವೋ? ಅಥವಾ ಆತ್ಮಾವಿದಿತತ್ವವು ಬಾಧಕವೋ?. ''ಅದೃಷ್ಟೋ ದ್ರಷ್ಟಾऽಶ್ರುತಃ ಶ್ರೋತಾ ಅಮತೋ ಮಂತಾ ಅವಿಜ್ಞಾತೋ ವಿಜ್ಞಾತಾ'' ಎಂಬಲ್ಲಿ ಹೇಳಲ್ಪಟ್ಟ ದ್ರಷ್ಟೃತ್ವಾದಿಗಳು ಬಾಧಕವೋ? ಹೀಗೆ ಅನೇಕ ಮುಖಗಳಲ್ಲಿ ವಿಕಲ್ಪಗಳನ್ನು ಮಾಡುತ್ತಾ ಕ್ರಮವಾಗಿ ನಿರಾಕರಿಸುತ್ತಿದ್ದಾರೆ. ಮತ್ತು ''ನಚ ''ಪೃಥಿವ್ಯಾಂ ತಿಷ್ಠನ್'' ಇತ್ಯಾದೇರನುಪಪತ್ತಿಃ'' ಇತ್ಯಾದಿ ಟೀಕೆಯನ್ನೂ ಸಹ 'ಯಃ' ಇತ್ಯಾದಿ ಗ್ರಂಥದಿಂದ ವಿವರಿಸುತ್ತಿದ್ದಾರೆ.

ಪ್ರಕಾಶಃ – ಇತ್ಯುಕ್ತೇರಿತಿ । 'ಕಾರಣೇಷು ಸ್ಥಿತಂ ಕಾರ್ಯಂ ವ್ಯಾಪ್ತಂ ಕಾರ್ಯೇಷು ಕಾರಣಮ್' ।

ಇತಿ ಪಞ್ಚಮೇ ಗೀತಾತಾತ್ಪರ್ಯೋಕ್ತೇರಿತ್ಯರ್ಥಃ । ಪ್ರತ್ಯಕ್ಷಂ ಚಾಹ – ಪಟ ಇತಿ । ಏತೇನ ಟೀಕಾ ಉಪಲಕ್ಷಣಮಿತಿ ಸೂಚಿತಮ್ । ಟೀಕೋಕ್ತೇರ್ವಿರೋಧಂ ಹೃದಾಶಙ್ಕ್ಯ ಸ್ವಯಂ ಸಮಾಧತ್ತೇ – ಕಾರ್ಯೇತಿ ।

'ಇತ್ಯುಕ್ತೇಃ' ಎಂದರೆ 'ಕಾರಣೇಷು ಸ್ಥಿತಂ ಕಾರ್ಯಂ ವ್ಯಾಪ್ತಂ ಕಾರ್ಯೇಷು ಕಾರಣಮ್' ಎಂಬ ಪಂಚಮಾಧ್ಯಾಯದ ಗೀತಾತಾತ್ಪರ್ಯದಲ್ಲಿ ಹೇಳಿದ್ದಾರೆಂದು ತಿಳಿಯಬೇಕು. 'ಕಾರಣವು ಕಾರ್ಯದಲ್ಲಿದೆ'

ಎಂಬ ವಿಚಾರವು ಪ್ರತ್ಯಕ್ಷದಿಂದಲೂ ಸಿದ್ಧವಾಗಿದೆಯೆಂದು 'ಪಟ' ಇತ್ಯಾದಿ ವಾಕ್ಯದಿಂದ ಸಮರ್ಥಿಸುತ್ತಿದ್ದಾರೆ. ಇದರಿಂದ ಆಗಮವನ್ನು ಪ್ರಮಾಣವನ್ನಾಗಿ ಹೇಳಿದ ಟೀಕೆಯು ಕೇವಲ ಉಪಲಕ್ಷಣವಾಗಿದೆಯೆಂದು ಸೂಚಿಸಿದಂತಾಯಿತು. ಟೀಕೆಯಲ್ಲಿರುವ ವಿರೋಧವನ್ನು ಮನಸ್ಸಿನಲ್ಲಿ ಆಶಂಕಿಸಿ ಸ್ವತಃ ತಾವೇ ಸಮಾಧಾನವನ್ನು ಹೇಳುತ್ತಿದ್ದಾರೆ. 'ಕಾರ್ಯಕಾರಣಯೋಃ' ಎಂಬ ವಾಕ್ಯದಿಂದ.

ಪ್ರಕಾಶಃ – ಗೌಣತಾಂ ವ್ಯನಕ್ತಿ – ಕಾರ್ಯಸ್ಯೇತಿ । ''आत्मानम्'' इति माध्यन्दिनपाठः। ''विज्ञानम्'' इत्येव काण्वपाठः । 'यम्' इति पृथिव्याद्यविदितत्वं त्वग्रे सावकाशयिष्यत इति भावः । 'इत्यादिना' गीतावाक्येनेत्यर्थः ।

ನಿಯಮಾರ್ಥವು ಗೌಣವಾಗಿದೆಯೆಂದು 'ಕಾರ್ಯಸ್ಯ' ಎಂಬ ವಾಕ್ಯದಿಂದ ಸ್ಪಷ್ಟಪಡಿಸುತ್ತಿದ್ದಾರೆ. ''ಆತ್ಮಾನಂ ಯಮಯತಿ'' ಎನ್ನುವುದು ಮಾಧ್ಯಂದಿನಪಾಠ, 'ವಿಜ್ಞಾನಂ' ಎಂಬುದು ಕಾಣ್ವಪಾಠ, 'ಯಮಾತ್ಮಾನ ವೇದ' ಎಂದು ಮುಂದಿನ ಗ್ರಂಥದಲ್ಲಿದೆ. ಇದರಿಂದ ಪೃಥಿವ್ಯಾದ್ಯವಿದಿತತ್ವವನ್ನು ಮುಂದೆ ಸಾವಕಾಶ ಮಾಡುತ್ತಾರೆಂದು ತಿಳಿಯಬೇಕು. 'ಇತ್ಯಾದಿನಾ' ಎಂಬ ಪದಕ್ಕೆ ಇದೇ ಮೊದಲಾದ ಗೀತಾವಾಕ್ಯದಿಂದ ಎಂದರ್ಥ.

ಗುರುರಾಜೀಯಮ್ – 'यस्य पृथिवीशरीरम्' इत्यादिनाऽन्तर्यामिणः पृथिव्यादिशरीरत्वश्रवणात्तस्य च प्रकृतानुपपत्तेरिति टीकाऽनुपपन्ना । प्रकृतेरिव विष्णोरपि पृथिव्यादिशरीरत्वोपपत्तेः । नच पृथिव्यादिशरीरत्वं नाम पृथिव्याद्यात्मकत्वं विवक्षितमिति वाच्यम् । तस्य च प्रकृतावसम्भवादित्यतः पृथिव्याद्यात्मकत्वस्य प्रकृतावुपपत्तौ नियामकमाह – अन्तर्यामिणीति ।। पृथिव्याद्युपादान इति तत्र हेतूक्तिः । शरीरशब्दस्य स्वरूपेऽपि प्रयोगादित्येवं टीकायामुक्तम् । तत्र दृष्टान्तस्तु नोक्त इत्यतो दृष्टान्तं वदन् व्याख्याति – शरीरशब्दस्येति ।। ननु दिगादिशरीरत्वस्य प्रकृतावभावेऽपि गौणस्य दिगादिशरीरत्वस्य प्रकृतौ सत्त्वेन प्रकृतेरन्तर्यामित्ववद् ब्रह्मणोऽपि गौणस्य दिगादिशरीरत्वस्य सम्भवादन्तर्यामित्वं किं न स्यादित्यतः प्रकृतौ दिगादिशरीरत्वस्य गौणत्वेऽपि पृथिव्याद्युपादानत्वेन पृथिव्याद्यात्मकत्वरूपपृथिव्यादिशरीरत्वस्य मुख्यत्वेनान्तर्यामित्वसम्भवेऽपि विष्णौ दिगादिशरीरत्ववत्पृथिव्यादिशरीरत्वस्यापि गौणत्वेनान्तर्यामित्वं न सम्भवति इत्यभिप्रायेणाह – ब्रह्मणस्त्विति ।। ननु 'शीर्यते नित्यमेवास्मात्' इत्युक्तरीत्या यौगिकस्य पृथिव्यादिशरीरत्वस्य ब्रह्मण्यपि सम्भवाद्ब्रह्मणोऽप्यन्तर्यामिता स्यादित्यतः पृथिव्यादेर्यौगिकशरीरत्वसम्भवेऽपि दिगादेर्यौगिकमपि न सम्भवतीति न तस्यान्तर्यामित्वमित्यभिप्रेत्याह – नचेति ।। अत्र यद्यपि प्रकृतौ पृथिव्यादिशरीरत्वस्य

रूढत्वबद्विष्णौ पृथिव्यादिशरीरत्वस्य यौगिकत्वे न मुख्यत्वम् । ब्रह्मणि दिगादि-शरीरत्वस्यामुख्यत्वबत्प्रकृतावपि दिगादिशरीरत्वममुख्यमेवेति प्रकृतेरेवान्तर्यामित्व-मिति निर्णयो नोपपन्नः । तथापि रूढ्यपेक्षया योगस्यामुख्यत्वात्प्रकृतावेव रूढस्य शरीरत्वस्य सत्त्वाद्विष्णौ तु यौगिकत्वान्निर्णयोपपत्तिरिति हृदयम् । 'व्याप्तं कार्येषु कारणम्' इत्यादिन इत्यत्र टीकास्थादिशब्दार्थमाह – **पटे तन्तव इति ।।** **प्रतीतेश्चेति ।।** पृथिवीं यमयति इत्येतदुपचारेण नेतव्यम् इति टीका । तत्रोपचारे निमित्तानुक्तेस्तत्र निमित्तं वदन्नेव व्याख्याति – **पृथिवीं यमयतीत्यादिनोक्तं चेति ।।** पृथिवीं यमयतीत्येतदुपचारेण नेतव्यमित्येतदुपलक्षणम् ।। **आत्मानं यमयतीत्येतदपीति ।।** गौणमिति सम्बन्धः । ननु चान्तर्यामिणो 'द्रष्टा श्रोत' इत्यादिना द्रष्टृत्वमुच्यते । द्रष्टृत्वं च दर्शनकर्तृत्वम् तच्च बुद्धिपूर्वप्रवृत्तिः । तथा च प्रकृतेः कथमन्तर्यामित्वम् । तस्या अचेतनत्वेन द्रष्टृत्वासम्भवादित्यत आह – **द्रष्टेति ।।** मुख्यामुख्ययोर्मुख्ये सम्प्रत्यय इति न्यायेन सम्भवति मुख्यार्थेऽमुख्यार्थ-ग्रहणमन्याय्यमित्यरुचेराह – **अभिमानद्वारा वेति ।।** **अन्ययेति ।।** जीवमात्रमन्तर्यामीत्येव पूर्वपक्ष इत्यर्थः । पृथिव्यादिजीवस्यैवैतदन्तर्यामित्वमित्युक्तं टीकायाम् । तत्र पृथिव्यादिरूप एव जीवोऽस्तीति प्रतीयते । तदयुक्तम् । पृथिव्यादिरूपस्य जीवस्याभावादित्यतः पृथिव्याद्यभिमानी जीवः पृथिव्यादिजीव इति मध्यमपदलोपीसमासोऽत्राभिमत इत्यभिप्रेत्याह – **पृथिव्यादीति ।।** पृथिव्यादिजीवानामन्तर्यामित्वे पृथिव्यादिशरीरत्वादेस्तस्मिन्नति- सुघटत्वादिति टीकायां हेतुरुक्तः । तत्र कथमतिसुघटत्वमित्यत आह – **तान्प्रतीति ।।** तदसम्भवात् प्रत्येकं सर्वनियन्तृत्वासम्भवात् इत्यर्थः ।

ಸಾರ

ಪೂರ್ವಪಕ್ಷ ಹೀಗಿದೆ - "ಏಷ ತ ಆತ್ಮಾಽಂತರ್ಯಾಮೀ" ಎಂಬ ವಿಷಯ ವಾಕ್ಯದಲ್ಲಿ ಪ್ರತಿಪಾದ್ಯವಾದ ಅಂತರ್ಯಾಮಿಯು ಪ್ರಕೃತಿಯೇ ಆಗಿದೆ. ಪ್ರಕೃತಿಯನ್ನು ಅಂತರ್ಯಾಮಿ ಎಂದು ಹೇಳಿದರೆ ಶ್ರುತಿಯಲ್ಲಿ ಹೇಳಲ್ಪಟ್ಟ ಪೃಥಿವ್ಯಾದಿಗಳು ಶರೀರವಾಗಿವೆ ಎಂಬ ಮಾತನ್ನು ಸುಲಭವಾಗಿ ಕೂಡಿಸಬಹುದು. ಪೃಥಿವ್ಯಾದಿಗಳಿಗೆ ಉಪಾದಾನವಾದ್ದರಿಂದ ಸ್ವರೂಪ ಎಂಬರ್ಥದಲ್ಲಿ ಶರೀರಶಬ್ದವನ್ನು ಪ್ರಯೋಗಿಸುವುದು ಕಷ್ಟವಾಗುವುದಿಲ್ಲ. ಆದರೆ

ದಿಕ್ ಮೊದಲಾದವುಗಳು ಅಪ್ರಾಕೃತವಾದ್ದರಿಂದ ಪ್ರಕೃತಿಗೆ ಶರೀರಗಳಾಗಿವೆ ಎಂಬ ಮಾತನ್ನು ಕೂಡಿಸುವುದು ಸ್ವಲ್ಪ ಕಷ್ಟವಾಗುತ್ತದೆ. ಆದರೆ ಬ್ರಹ್ಮನು ಅಂತರ್ಯಾಮಿ ಎಂಬ ಪಕ್ಷವನ್ನು ಆಶ್ರಯಿಸಿದಾಗ ಪೃಥಿವ್ಯಾದಿಗಳು ಶರೀರವಾಗಿವೆ ಎಂಬ ಮಾತನ್ನೇ ಕೂಡಿಸಲು ಸಾಧ್ಯವಿಲ್ಲ. 'ಶೀರ್ಯಮಾಣತ್ವ' ಎಂಬ ಯೌಗಿಕಾರ್ಥವನ್ನು ಸ್ವೀಕರಿಸಲು ಹೊರಟರೆ ಅಪ್ರಾಕೃತವಾದ ದಿಗಾದಿಗಳಲ್ಲಿ ಅದೂ ಸಹ ತಪ್ಪಾಗುತ್ತದೆ. ಆದ್ದರಿಂದ ಪ್ರಕೃತಿಯನ್ನೇ ಅಂತರ್ಯಾಮಿಯೆನ್ನಬೇಕು. ದಿಕ್ ಮೊದಲಾದವನ್ನು ಶರೀರವೆಂದು ಹೇಳಿದ್ದರೆ ಗೌಣಾರ್ಥ ಮಾಡಬೇಕು.

ಪ್ರಕೃತಿಯನ್ನು ಅಂತರ್ಯಾಮಿ ಎಂದು ಹೇಳಿದಾಗ ಅನೇಕ ಬಾಧಕಗಳಿಗೆ ಅವಕಾಶವಿದೆ -

ಹೇಗೆಂದರೆ 'ಯಃ ಪೃಥಿವ್ಯಾಂ ತಿಷ್ಠನ್' ಎಂಬಲ್ಲಿ ಹೇಳಲ್ಪಟ್ಟ ಪೃಥಿವ್ಯಾದಿ ಆಧಾರತ್ವವು ಬಾಧಕವೋ. 'ಯಮಯತಿ' ಎಂಬಲ್ಲಿ ಹೇಳಲ್ಪಟ್ಟ ಪೃಥಿವ್ಯಾದಿ ನಿಯಾಮಕತ್ವವು ಬಾಧಕವೋ? ಅಥವಾ 'ಆತ್ಮಾನಂ ಯಮಯತಿ' ಎಂಬಲ್ಲಿ ಹೇಳಲ್ಪಟ್ಟ ಚೇತನ ನಿಯಾಮಕತ್ವವು ಬಾಧಕವೋ? ಅಥವಾ ಆತ್ಮಾವಿದಿತತ್ವವು ಬಾಧಕವೋ?. ''ಅದೃಷ್ಟೋ ದ್ರಷ್ಟಾಶ್ರುತಃ ಶ್ರೋತಾ ಅಮತೋ ಮಂತಾ ಅವಿಜ್ಞಾತೋ ವಿಜ್ಞಾತಾ'' ಎಂಬಲ್ಲಿ ಹೇಳಲ್ಪಟ್ಟ ದ್ರಷ್ಟೃತ್ವಾದಿಗಳು ಬಾಧಕಗಳೋ? ಎಂದು ಪ್ರಶ್ನಿಸುತ್ತೇವೆ ಎಂದರೆ ಈ ಯಾವ ಬಾಧಕಗಳಿಗೂ ಅವಕಾಶವಿಲ್ಲ. ಏಕೆಂದರೆ ಕಾರ್ಯದಲ್ಲಿ ಕಾರಣವಿದೆಯೆಂಬ ಪ್ರಯೋಗವು ಲೋಕದಲ್ಲಿ ಕಾಣುತ್ತಿದೆ. ಪೃಥಿವಿ ಹಾಗೂ ಪ್ರಕೃತಿಗಳಿಗೆ ಕಾರ್ಯಕಾರಣ ಭಾವವಿದ್ದರೂ ಅಧಾರಾಧೇಯಭಾವದಿಂದ ವ್ಯವಹರಿಸಬಹುದು.

ಇನ್ನು 'ಪೃಥಿವೀಂ ಯಮಯತಿ' ಎಂಬಲ್ಲಿ ಕೇಳಿಸುತ್ತಿರುವ ಪೃಥಿವ್ಯಾದಿನಿಯಾಮಕತ್ವವು ಪ್ರಕೃತಿಯಲ್ಲಿ ಕೂಡುವುದಿಲ್ಲವೆಂದು ಹೇಳಬೇಕು. ಆದರೆ ಆತ್ಮನ ಪ್ರವೃತ್ತಿಯು ಶರೀರದ ಮೂಲಕವೇ ಆಗಬೇಕೇ ಹೊರತು ನೇರವಾಗಿ ಆಗುವುದಿಲ್ಲ. ಆದ್ದರಿಂದ ಆತ್ಮನು ಪ್ರಕೃತ್ಯಧೀನವೆಂದು ಹೇಳಬಹುದು.

'ಯಮಾತ್ಮಾ ನ ವೇದ' ಎಂಬಲ್ಲಿ ಆತ್ಮನಿಂದ ಅಂತರ್ಯಾಮಿಯು ತಿಳಿಯಲು ಸಾಧ್ಯವಿಲ್ಲ ಎಂದು ಹೇಳಲಾಗಿದೆ. ಇದನ್ನೂ ಸಹ ಪ್ರಕೃತಿಯಲ್ಲಿ ಕೂಡಿಸಬಹುದು. ಏಕೆಂದರೆ 'ಅಪ್ರತರ್ಕ್ಯಮವಿಜ್ಞೇಯಂ' ಇತ್ಯಾದಿ ವಾಕ್ಯಗಳಂತೆ ಪ್ರಕೃತಿಯನ್ನು ಸಾಕಲ್ಯೇನ ತಿಳಿಯಲು ಯಾರಿಂದಲೂ ಸಾಧ್ಯವಿಲ್ಲ.

ಅಂತರ್ಯಾಮಿಯಲ್ಲಿ 'ದ್ರಷ್ಟಾ ಶ್ರೋತಾ' ಇತ್ಯಾದಿಯಾಗಿ ದ್ರಷ್ಟೃತ್ವ, ಶ್ರೋತೃತ್ವಾದಿಗಳು ಕೇಳಿಸುತ್ತಿವೆ. ಇವುಗಳು ಪ್ರಾಕೃತವಾದ ಇಂದ್ರಿಯಗಳು ದರ್ಶನ ಸಾಧನವಾದ್ದರಿಂದ ಪ್ರಕೃತಿಯನ್ನು ದ್ರಷ್ಟಾಶ್ರೋತಾ ಇತ್ಯಾದಿಯಾಗಿ ಹೇಳಬಹುದು. ಏಕೆಂದರೆ ಕರಣದಲ್ಲಿ ಕರ್ತೃತ್ವದ ಪ್ರಯೋಗವನ್ನು ಮಾಡುವುದು ಕಂಡಿದೆ. (ಹಂತಾ ರಾಮಶರಃ ಇತ್ಯಾದಿ ಸ್ಥಳದಲ್ಲಿ) ಅಥವಾ ಅಭಿಮಾನಿಯಾದ ಜೀವನಲ್ಲಿ ದ್ರಷ್ಟೃತ್ವಾದಿಗಳಿರುವುದರಿಂದ ಅಭಿಮನ್ಯಮಾನವಾದ ಪ್ರಕೃತಿಯಲ್ಲೂ ಸಹ ದ್ರಷ್ಟೃತ್ವಾದಿಗಳನ್ನು ಹೇಳಬಹುದು. ಆದ್ದರಿಂದ ಪ್ರಕೃತಿಯೇ ಅಂತರ್ಯಾಮಿಯೆಂದು ಹೇಳಿದಾಗ ಯಾವ ಅಡಚಣೆಯಿರುವುದಿಲ್ಲ.

ಪ್ರಕೃತಿ, ಅಂತರ್ಯಾಮಿಗಳು ಪೂರ್ವಪಕ್ಷಕ್ಕೆ ವಿಷಯವಲ್ಲವೆಂಬ ಪರಕೀಯಪಕ್ಷ ನಿರಾಸ

तात्पर्यचन्द्रिका

अत्र यदुक्तम् उभाभ्यां जीवमात्रमन्तर्यामीत्येव पूर्वः पक्षः । नतु प्रकृतिः, तस्याः द्रष्टृत्वाद्यसम्भवादिति,

ಅನುವಾದ - ಈ ಸಂದರ್ಭದಲ್ಲಿ ರಾಮಾನುಜರು ಹಾಗೂ ಆದ್ವೈತಿಗಳು ಜೀವಸಾಮಾನ್ಯನನ್ನೇ ಅಂತರ್ಯಾಮಿಯೆಂದು ಪೂರ್ವಪಕ್ಷ ಮಾಡುತ್ತಾರೆ. ಪ್ರಕೃತಿಯನ್ನು ಪೂರ್ವಪಕ್ಷ ಮಾಡುವುದಿಲ್ಲ. ಏಕೆಂದರೆ ಪ್ರಕೃತಿಯಲ್ಲಿ ದ್ರಷ್ಟೃತ್ವಾದಿಗಳು ಕೂಡುವುದಿಲ್ಲವೆಂದು ಅವರ ಅಭಿಪ್ರಾಯ.

तन्न, त्वन्मते ''तदैक्षत'' इति श्रुतस्यैक्षणस्य प्रकृतौ गौणत्वेनेक्षत्यधिकरण-पूर्वपक्षवत्, द्रष्टृत्वादेर्दर्शनरूपे ब्रह्मणि आरोपितत्वेन वा, मायाविशिष्टनिष्ठत्वेन वा अत्यत्रसिद्धान्तवच, पृथिवीशरीरत्वादिप्रकृतिलिङ्गेन प्रधानेऽपि द्रष्टृत्वादे-गौणत्वेनारोपितत्वेन वा, चेतनविशिष्टनिष्ठत्वेन वा पूर्वपक्षस्य सम्भवात् ।

ಇದು ತಪ್ಪು. ಏಕೆಂದರೆ ಆದ್ವೈತಿಗಳೇ ''ತದೈಕ್ಷತ'' ಎಂಬ ಶ್ರುತಿಯಲ್ಲಿ ಕೇಳಿಸುತ್ತಿರುವ ಈಕ್ಷಣವನ್ನು (ಜ್ಞಾನವಿಷಯತ್ವವನ್ನು) ಪ್ರಕೃತಿಯಲ್ಲಿ ಗೌಣವಾಗಿ ಸ್ವೀಕರಿಸುತ್ತಾರೆ. ಹಾಗೇ ಸ್ವೀಕರಿಸಿ ಈಕ್ಷತ್ಯಧಿಕರಣದ ಪೂರ್ವಪಕ್ಷವನ್ನು ರಚಿಸಿದ್ದಾರೆ. ಅದರಂತೆ ಇಲ್ಲಿಯೂ ಸಹ ಪ್ರಕೃತಿಗೆ ದರ್ಶನ ವಿಷಯತ್ವವನ್ನು ಗೌಣವಾಗಿ ಕೂಡಿಸಬಹುದು. ಅಥವಾ ಜ್ಞಾನರೂಪನಾದ ಬ್ರಹ್ಮನಲ್ಲಿ ಜ್ಞಾನವಿಷಯತ್ವವೆಂಬ ದ್ರಷ್ಟೃತ್ವಾದಿ ಧರ್ಮಗಳು ಆರೋಪಿತವಾದ್ದರಿಂದ ಉಪಪನ್ನವಾಗುತ್ತವೆ. ಮತ್ತು ಮಾಯಾವಿಶಿಷ್ಟನಾದ ಬ್ರಹ್ಮನಲ್ಲಿ ದ್ರಷ್ಟೃತ್ವಾದಿಗಳನ್ನು ಹೇಳಬಹುದೆಂದು ಈ ಅಧಿಕರಣದಲ್ಲಿ ಸಿದ್ಧಾಂತ ಮಾಡುತ್ತಾರೆ. ಅದರಂತೆ ಪ್ರಕೃತದಲ್ಲಿಯೂ ಪೃಥಿವೀಶರೀರತ್ವ ಮೊದಲಾದ ಪ್ರಕೃತಿವಾಚಕ-ಲಿಂಗಗಳಿರುವುದರಿಂದ ಪ್ರಕೃತಿಯನ್ನೇ ಅಂತರ್ಯಾಮಿಯೆಂದು ಹೇಳಿ ದ್ರಷ್ಟೃತ್ವಾದಿಗಳನ್ನು ಗೌಣವಾಗಿ ಅಥವಾ ಆರೋಪಿತವಾಗಿ ಅಥವಾ ಚೇತನವಿಶಿಷ್ಟವಾಗಿ ಕೂಡಿಸಬಹುದು. ಹೀಗೆ ಪ್ರಕೃತಿಯೇ ಅಂತರ್ಯಾಮಿಯೆಂದು ಪೂರ್ವಪಕ್ಷ ಮಾಡಬಹುದು.

अन्यथा ''नच स्मार्तम् '' इति सूत्रे प्रकृतेर्निषेधो न स्यात् ।

ಹೀಗೊಪ್ಪದಿದ್ದರೆ ''ನಚ ಸ್ಮಾರ್ತಮ್'' ಎಂಬ ಸೂತ್ರದಲ್ಲಿ ಪ್ರಕೃತಿಯನ್ನು ನಿಷೇಧ ಮಾಡಿದ್ದು ತಪ್ಪಾಗುತ್ತದೆ. ಏಕೆಂದರೆ ಪ್ರಕೃತಿಯು ಪೂರ್ವಪಕ್ಷಕ್ಕೆ ವಿಷಯವಾಗದಿದ್ದ ಮೇಲೆ ಅದನ್ನು ಅಂತರ್ಯಾಮಿಯಲ್ಲವೆಂದು ನಿಷೇಧಿಸುವುದರಲ್ಲಿ ಅರ್ಥವಿಲ್ಲ.

पृथिव्याद्यभिमानिनां जीवानां वैतदन्तर्यामित्वं, तान्प्रति पृथिव्यादेः स्थूलशरीरत्वात् ।

ಪ್ರಕೃತಿಯು ಪೂರ್ವಪಕ್ಷಕ್ಕೆ ವಿಷಯವಾದಂತೆ ಪೃಥಿವ್ಯಾದ್ಯಭಿಮಾನಿ ಜೀವರುಗಳೂ ಸಹ ಪೂರ್ವಪಕ್ಷಕ್ಕೆ ವಿಷಯವಾಗಬಹುದು. ಅಭಿಮಾನಿ ಜೀವರಿಗೆ (ದೇವತೆಗಳಿಗೆ) ಪೃಥಿವ್ಯಾದಿಗಳು ಸ್ಥೂಲಶರೀರವಾಗಿರುವುದರಿಂದ ಅವರಿಗೆ ಪೃಥಿವ್ಯಾದಿ ಶರೀರತ್ವವು ಯುಕ್ತವಾಗುತ್ತದೆ. ಆದ್ದರಿಂದ ಅಭಿಮಾನಿ ದೇವತೆಗಳೇ ಅಂತರ್ಯಾಮಿಗಳಾಗುತ್ತಾರೆ.

अत्र भामत्यां ''यस्सर्वान् लोकानन्तरो यमयति'' इति श्रुतस्य सर्वनियन्तृत्वस्याभिमानिजीवेषु प्रत्येकमसम्भवात् नैवं पूर्वपक्ष इत्युक्तम् ।

ಆದರೆ ಭಾಮತಿಯಲ್ಲಿ ಅಭಿಮಾನಿಜೀವರನ್ನು ಪೂರ್ವಪಕ್ಷಕ್ಕೆ ವಿಷಯರಾಗುತ್ತಾರೆಂಬುದನ್ನು ನಿರಾಕರಿಸಲಾಗಿದೆ. ಏಕೆಂದರೆ ''ಯಸ್ಸರ್ವಾನ್ ಲೋಕಾನಂತರೋ ಯಮಯತಿ'' ಎಂಬಲ್ಲಿ ಕೇಳಿಸುತ್ತಿರುವ ಸಕಲಜಗತ್ತಿನ ನಿಯಂತೃತ್ವವು ಪ್ರತಿಯೊಬ್ಬ ಅಭಿಮಾನಿ ಜೀವರಲ್ಲಿ (ದೇವತೆಗಳಲ್ಲಿ) ಕೂಡಲು ಸಾಧ್ಯವಿಲ್ಲದ ಕಾರಣ ಹಾಗೆ ಪೂರ್ವಪಕ್ಷ ಮಾಡಬಾರದೆಂದು ಭಾಮತಿಯ ಅಭಿಪ್ರಾಯ.

तन्न, स्वाङ्गीकृतजीवमात्रपक्षेऽपि तदसम्भवात् । 'यः' इत्यावेकवचनस्य समुदायपरत्वं त्वभिमानिपक्षेऽपि समम् ।

ಭಾಮತಿಯ ಅಭಿಪ್ರಾಯ ಸರಿಯಲ್ಲ. ತಾವು ಯಾವ ಜೀವಸಾಮಾನ್ಯರನ್ನು ಪೂರ್ವಪಕ್ಷಕ್ಕೆ ವಿಷಯರೆಂದು ಹೇಳುತ್ತಾರೋ ಅಂತಹ ಜೀವರಲ್ಲಿಯೂ ಪ್ರತ್ಯೇಕವಾದ ನಿಯಂತೃತ್ವವು ಕೂಡದ ಕಾರಣ ದೋಷವು ಸಮಾನವಾಗಿದೆ. ಇನ್ನು 'ಯಃ' ಇತ್ಯಾದಿ ಸ್ಥಳದಲ್ಲಿರುವ ಏಕವಚನವು ಸಮುದಾಯಾಭಿಪ್ರಾಯದಲ್ಲಿರುವುದರಿಂದ ಮಿಲಿತರಾದ ಜೀವರಿಗೆ ನಿಯಾಮಕತ್ವ ಶಕ್ತಿಯನ್ನು ಹೇಳಬಹುದೆಂದು ಉತ್ತರಿಸಿದರೆ ಅಭಿಮಾನಿ ಜೀವರ ಪಕ್ಷದಲ್ಲಿಯೂ ಈ ಸಮಾಧಾನವನ್ನು ಹೇಳಬಹುದು.

प्रत्युत जीवमात्रपक्ष एव युक्तः, ''यस्य पृथिवी शरीरम्'' इत्यादिनोक्तस्य पृथिव्यादेकैकशरीरत्वस्य, ''यस्य प्राणः शरीरम्'' इत्यादिनोक्तस्य प्राणवाक्चक्षुश्श्रोत्रादिशरीरत्वस्य चायोगात् ।

ಅಷ್ಟೇ ಅಲ್ಲದೆ ಜೀವಸಾಮಾನ್ಯನೆಂಬರ್ಥವೇ ಯುಕ್ತವಾಗಿದೆ. ಏಕೆಂದರೆ ''ಯಸ್ಯ ಪೃಥಿವೀ ಶರೀರಂ'' ಇತ್ಯಾದಿ ವಾಕ್ಯದಲ್ಲಿ ಹೇಳಲ್ಪಟ್ಟ ಪೃಥಿವ್ಯಾದಿಗಳು ಒಂದೊಂದೂ ಶರೀರವಾಗಿದೆಯೆಂಬುದು

ಜೀವನಿಗೆ ಕೂಡುವುದಿಲ್ಲ. ಮತ್ತು ''ಯಸ್ಯ ಪ್ರಾಣಃ ಶರೀರಂ'' ಎಂಬಲ್ಲಿ ಹೇಳಲ್ಪಟ್ಟ ಪ್ರಾಣ, ವಾಕ್, ಚಕ್ಷುಸ್, ಶ್ರೋತ್ರ ಮೊದಲಾದವುಗಳಷ್ಟೇ ಜೀವನಿಗೆ ಶರೀರವಾಗುವುದಿಲ್ಲ. ಇವುಗಳೆಲ್ಲದರ ಸಂಘಾತದಿಂದಷ್ಟೇ ಜೀವನ ಶರೀರವು ಉತ್ಪನ್ನವಾಗಿದೆ.

तस्मादभिमानिनामेवान्तर्यामित्वं नतु विष्णोः, तस्य पृथिव्याद्यात्मकत्वतद्देहत्वयोरयोगात् ।

ಆದ್ದರಿಂದ ಪೃಥಿವ್ಯಾದಿಗಳ ಅಭಿಮಾನಿಗಳನ್ನೇ ಅಂತರ್ಯಾಮಿ ಎಂದು ಹೇಳಬೇಕು ಹೊರತು, ವಿಷ್ಣುವನ್ನು ಅಂತರ್ಯಾಮಿಯೆಂದು ಹೇಳಬಾರದು. ಏಕೆಂದರೆ ವಿಷ್ಣುವಿಗೆ ಪೃಥಿವ್ಯಾದ್ಯಾತ್ಮಕತ್ವವಾಗಲೀ, ಪೃಥಿವ್ಯಾದಿಗಳೇ ದೇಹವಾಗಿದೆಯೆಂಬುದಾಗಲೀ ಕೂಡುವುದಿಲ್ಲ.

नच तेन शीर्यमाणत्वादिना पृथिव्यादेस्तच्छरीरत्वं, योगाद्रूढिर्बलीयस्त्वात् ।

ರೂಢ್ಯರ್ಥವನ್ನು ಸ್ವೀಕರಿಸಲು ಬಾರದಿದ್ದರೂ ಶೀರ್ಯಮಾಣತ್ವವೆಂಬ ಯೋಗಾರ್ಥವನ್ನು ಸ್ವೀಕರಿಸುವ ಮೂಲಕ ವಿಷ್ಣುವಿಗೆ ಪೃಥಿವ್ಯಾದಿಗಳು ಶರೀರವಾಗಿದೆಯೆಂದು ಹೇಳಬಹುದಲ್ಲವೇ ? ಎಂದು ಪ್ರಶ್ನಿಸಬಾರದು. ಯೋಗಾರ್ಥಕ್ಕಿಂತ ರೂಢ್ಯರ್ಥವೇ ಪ್ರಬಲವಾಗಿರುತ್ತದೆ.

''यं पृथिवी न वेद'' इत्युक्तं पृथिव्यादिना अविदितत्वं च तस्य जडत्वादभिमानिन्यपि युक्तम् ।

ಬಾಧಕವಿದ್ದಾಗ ರೂಢ್ಯರ್ಥವನ್ನು ಬಿಡಬಹುದು ಎಂದಿದೆ. ಪ್ರಕೃತ ಪೃಥಿವ್ಯಾದಿಗಳಿಂದ ತಿಳಿಯಲು ಸಾಧ್ಯವಿಲ್ಲವೆಂದು ಹೇಳಿದ್ದರಿಂದ ಅಭಿಮಾನಿ ಚೇತರನ್ನು ವಿವಕ್ಷಿಸಬಾರದೆಂದು ತಿಳಿಯುತ್ತದೆ. ಹೀಗೆ ಪೃಥಿವ್ಯಾದಿನಾಅವಿದಿತತ್ವಂ ಎಂಬ ಬಾಧಕವಿರುವುದರಿಂದ ರೂಢ್ಯರ್ಥವನ್ನು ಬಿಟ್ಟು ಯೋಗಾರ್ಥವನ್ನು ಸ್ವೀಕರಿಸಬಹುದಲ್ಲವೇ? ಎಂದು ಪ್ರಶ್ನಿಸಬಾರದು. ಪೃಥಿವ್ಯಾದಿಗಳು ಜಡವಾದ್ದರಿಂದ ತಿಳುವಳಿಕೆಯು ಅವುಗಳಲ್ಲಿ ಹೇಳಲು ಸಾಧ್ಯವಿಲ್ಲ. ಆದ್ದರಿಂದ ಪೃಥಿವ್ಯಾದಿನಾಅವಿದಿತತ್ವವನ್ನು ವಿಷ್ಣುವಿನಲ್ಲಿ ಹೇಳುವಂತೆ ಅಭಿಮಾನಿಗಳಾದ ಚೇತನರಲ್ಲಿಯೂ ಹೇಳಬಹುದು.

''यम् आत्मा न वेद'' इति चेतनस्य पृथगुक्तेः पृथिव्यादिशब्दो नाभिमानिचेतनपरः ।

'ಯಂ ಪೃಥಿವೀ ನ ವೇದ' ಎಂಬಲ್ಲಿರುವ ಪೃಥಿವೀ ಮುಂತಾದ ಶಬ್ದವು ಜಡಪರವಾಗಿದೆಯೆನ್ನಲು ಕಾರಣವು ಹೀಗಿದೆ - 'ಯಮ್ ಆತ್ಮಾನ ವೇದ' ಎಂಬಲ್ಲಿ ಚೇತನರನ್ನು ಪ್ರತ್ಯೇಕವಾಗಿ ವಿವಕ್ಷಿಸಿದ್ದರಿಂದ ಇಲ್ಲಿರುವ ಪೃಥಿವೀ ಮುಂತಾದ ಶಬ್ದದಿಂದ ಅಭಿಮಾನಿ ಚೇತರನ್ನು ವಿವಕ್ಷಿಸಬಾರದು.

''यः पृथिव्या अन्तरः'' इत्युक्तमन्तरत्वं यदि भिन्नत्वं, यदि वाऽन्तस्स्थत्वं, द्वयमपि पृथिव्यादिशरीरकेऽभिमानिन्यपि युक्तम् ।

ಯೋಗಾರ್ಥವನ್ನು ಸ್ವೀಕರಿಸಲು ''ಯಃ ಪೃಥಿವ್ಯಾ ಅಂತರಃ'' ಎಂಬಲ್ಲಿ ಕೇಳಿಸುತ್ತಿರುವ ಅಂತರತ್ವವನ್ನು ಬಾಧಕವೆಂದು ಹೇಳಬಹುದಲ್ಲವೇ ? ಎಂದು ಪ್ರಶ್ನಿಸಬಾರದು. ಇಲ್ಲಿರುವ ಅಂತರತ್ವವು ಭಿನ್ನತ್ವ ಅಥವಾ ಅಂತಃಸ್ಥತ್ವ ಎಂಬರ್ಥದಲ್ಲಿರುವುದಾದರೆ ಪೃಥಿವ್ಯಾದಿಗಳನ್ನೇ ಶರೀರವಾಗಿ ಹೊಂದಿರುವ ಅಭಿಮಾನಿ ಚೇತನರಲ್ಲೂ ಅದು ಯುಕ್ತವಾಗುತ್ತದೆ.

''य आत्मनि तिष्ठन् आत्मानं यमयति'' इत्येतदपि तत्त्वाभिमानिनाम् अस्मदाद्यात्मनियामकत्वाद् युक्तम् ।

''ಯ ಆತ್ಮನಿ ತಿಷ್ಠನ್'' ಎಂಬಲ್ಲಿ ಹೇಳಲ್ಪಟ್ಟ ಚೇತನ ನಿಷ್ಠತ್ವವು ''ಆತ್ಮಾನಂ ಯಮಯತಿ'' ಎಂಬಲ್ಲಿ ಹೇಳಲ್ಪಟ್ಟ ಚೇತನ ನಿಯಾಮಕತ್ವವು ವಿಷ್ಣುವಿನಲ್ಲಿ ಬರುವಂತೆ ತತ್ತ್ವಾಭಿಮಾನಿದೇವತೆಗಳಲ್ಲೂ ಸಹ ಯುಕ್ತವಾಗುತ್ತದೆ. ಅವರೂ ಸಹ ನಮ್ಮೆಲ್ಲರನ್ನೂ ನಿಯಮನ ಮಾಡುತ್ತಾರೆ.

''यमात्मा न वेद'' इति तु अभिमानिजीवानां दुर्ज्ञानत्वाद् युक्तम् ।

''ಯಮಾತ್ಮಾನ ವೇದ'' ಎಂಬ ಮಾತೂ ಸಹ ಇಂದ್ರಿಯಾಭಿಮಾನಿ ಜೀವರನ್ನು (ತತ್ತ್ವಾಭಿಮಾನಿ ದೇವತೆಗಳನ್ನು) ತಿಳಿಯುವುದು ಕಷ್ಟವಾದ್ದರಿಂದ ಆತ್ಮರಿಂದ ಅವಿದಿತತ್ವವು ವಿಷ್ಣುವಿನಂತೆ ಅಭಿಮಾನಿ ಜೀವರಲ್ಲೂ (ದೇವತೆಗಳಲ್ಲೂ) ಯುಕ್ತವಾಗುತ್ತದೆ.

यद्वा – ''यः पृथिव्याम्'' इत्यादाविव ''य आत्मनि'' इत्यत्रापि आत्माभिमानिजीव एवात्मान्तर्यामित्वेनोच्यत इति ।।

ಅಥವಾ ''ಯಃ ಪೃಥಿವ್ಯಾಂ'' ಎಂಬಲ್ಲಿ ಯಾವರೀತಿಯಾಗಿ ಅಂತರ್ಯಾಮಿಯಾದ ಜೀವನು ಪ್ರತಿಪಾದ್ಯನಾಗಿದ್ದಾನೋ, ಅದರಂತೆ ''ಯ ಆತ್ಮನಿ'' ಎಂಬಲ್ಲಿಯೂ ಸಹ ಆತ್ಮನಿಗೆ ಅಭಿಮಾನಿಯಾದ ಜೀವನೇ ಅಂತರ್ಯಾಮಿಯೆಂದು ಪ್ರತಿಪಾದ್ಯನಾಗಿದ್ದಾನೆ. ಆದ್ದರಿಂದ ಹಿಂದೆ ಪೃಥಿವ್ಯಾದಿ ಶಬ್ದಗಳಿಗೆ ಅಭಿಮಾನಿಪರವಾಗಿ ಅರ್ಥೈಸಿದಂತೆ ಇಲ್ಲಿಯೂ ಸಹ ಆತ್ಮಶಬ್ದಕ್ಕೆ ಅಭಿಮಾನಿಪರವಾಗಿ ಅರ್ಥೈಸಿದಂತಾಗುತ್ತದೆ.

ಪ್ರಕಾಶಃ –

अत्र यदुक्तमिति । स्पष्टयिष्यते चैतदग्रे । गौणत्वेनेति । ''गौणश्चेत्'' इति सूत्रे द्वाभ्यामपि गौणत्वेनोक्तत्वादिति भावः । प्रधानेऽपि द्रष्टृत्वादे-गौणत्वेनेति ।

ವಿವರಣೆ - ಈ ಅಧಿಕರಣದ ಪೂರ್ವಪಕ್ಷವನ್ನು ಮಾಡುವಾಗ ಆದ್ವೈತಿಗಳು ಹಾಗೂ ರಾಮಾನುಜರು ಜೀವನೇ ಅಂತರ್ಯಾಮಿ ಎಂದು ಪೂರ್ವಪಕ್ಷ ಮಾಡುತ್ತಾರೆ. ಈ ವಿಷಯವನ್ನು ಮುಂದೆ ಸ್ಪಷ್ಟಪಡಿಸಲಾಗುತ್ತದೆ. 'ಗೌಣತ್ವೇನ' ಎಂದರೆ 'ಗೌಣಶ್ಚೇನ್ನಾತ್ಮಶಬ್ದಾತ್' ಎಂಬ ಸೂತ್ರದಲ್ಲಿ ಇಬ್ಬರೂ ಸಹ ಪ್ರಕೃತಿಗೆ ಜ್ಞಾನವಿಷಯತ್ವವನ್ನು ಗೌಣವಾಗಿ ಅಂಗೀಕರಿಸಿದ್ದಾರೆಂದು ತಿಳಿಯಬೇಕು. ಗ್ರಂಥದಲ್ಲಿ 'ಪ್ರಧಾನೇऽಪಿ ದ್ರಷ್ಟೃತ್ವಾದೇರ್ಗೌಣತ್ವೇನ' ಎಂದು ಹೇಳಿದ್ದಾರೆ. ಇದರಿಂದ ಪ್ರಧಾನದಲ್ಲಿ (ಪ್ರಕೃತಿ) ದ್ರಷ್ಟೃತ್ವಾದಿಗಳನ್ನು ಗೌಣವಾಗಿ ಸ್ವೀಕರಿಸಿದ್ದಾರೆಂದು ತಿಳಿಯಬೇಕು.

ಪ್ರಕಾಶಃ – ನನ್ವಕ್ಷರಾಧಿಕರಣಟೀಕಾಯಾಂ ''ದ್ರಷ್ಟೃತ್ವಾದಿಶ್ರವಣಾಜ್ಜಡಪ್ರಕೃತೇರ್ನ ಸನ್ದೇಹನಿವಿಷ್ಟತ್ವಮ್'' ಇತಿ ವಕ್ಷ್ಯತ ಇತಿ ತದ್ವಿರುಧ್ಯತ ಇತಿ ಚೇನ್ನ,

ಪ್ರಶ್ನೆ - ಅಕ್ಷರಾಧಿಕರಣದ ಟೀಕೆಯಲ್ಲಿ ಜಡಪ್ರಕೃತಿಯಲ್ಲಿ ದ್ರಷ್ಟೃತ್ವಾದಿಗಳು ಕೇಳಿಸುತ್ತಿರುವುದರಿಂದ ಅದನ್ನು ಸಂದೇಹಕೋಟಿಯಲ್ಲಿ ನಿವೇಶಿಸಿಲ್ಲವೆಂದು ಹೇಳಿದ್ದಾರೆ. ಅಂದರೆ ದ್ರಷ್ಟೃತ್ವಾದಿಗಳು ಜಡವಸ್ತುವಿನಲ್ಲಿ ಗೌಣವಾಗಿಯೂ ಸಹ ಬರುವುದಿಲ್ಲವೆಂದು ಒಪ್ಪಿಕೊಂಡಂತಾಯಿತು. ಈಗ ಆದಕ್ಕೆ ವಿರುದ್ಧವಾಗಿ ಜಡವಾದ ಪ್ರಕೃತಿಯಲ್ಲಿ ದ್ರಷ್ಟೃತ್ವವನ್ನು ಹೇಳಿದರೆ ಅದರ ವಿರೋಧಬರುತ್ತದಲ್ಲವೇ?

ಪ್ರಕಾಶಃ – ತತ್ರ ದ್ರಷ್ಟೃತ್ವಾದೇಃ ಪ್ರಥಮತಶ್ಶ್ರವಣಾದಿಹ ಚರಮಶ್ರುತದ್ರಷ್ಟೃತ್ವಾದೇಃ ಪ್ರಥಮಾವಗತ-ಪೃಥಿವ್ಯಾದಿಶರೀರಸ್ಥತ್ವಪೃಥಿವೀಸ್ಥತ್ವಾದಿನಾ ಲಿಙ್ಗೇನ ಕಥಞ್ಚಿನ್ನೇಯತ್ವಾದಿತಿ ತಾತ್ಪರ್ಯಾತ್ । ಅತ ಏವ ತತ್ರ ವಕ್ಷ್ಯತಿ ಟೀಕಾಕಾರಃ ''ಉತ್ತರಾಧಿಕರಣೇ ತ್ವೀಕ್ಷಣಸ್ಯ ಪ್ರಥಮಾಪ್ರತೀತೇರ-ಸ್ತ್ಯವಕಾಶಃ'' ಇತೀತಿ ಭಾವಃ ।

ಕಿಮರ್ಥಮೇವಮಿತ್ಯತಃ ವಿಪಕ್ಷೇ ಸೂತ್ರವಿರೋಧಮಾಹ – ಅನ್ಯಥೇತಿ ।

ಉತ್ತರ - ಅಕ್ಷರಾಧಿಕರಣದ ವಿಷಯವಾಕ್ಯದಲ್ಲಿ ದ್ರಷ್ಟೃತ್ವಾದಿಗಳು ಮೊದಲು ಕೇಳಿಸುತ್ತಿರುವುದರಿಂದ ಯಥಾರ್ಥವಾಗಿಯೇ ಅರ್ಥೈಸಬೇಕಾಗುತ್ತದೆ. ಆದರೆ ಈ ಅಧಿಕರಣದ ವಿಷಯವಾಕ್ಯದಲ್ಲಿ ದ್ರಷ್ಟೃತ್ವಾದಿಗಳು ಕೊನೆಯಲ್ಲಿ ಕೇಳಿಸುತ್ತಿವೆ. ಆದ್ದರಿಂದ ಚರಮ ಶ್ರುತವಾದ ದೃಷ್ಟೃತ್ವಾದಿಗಳು ಮೊದಲು ಕೇಳಿಸುತ್ತಿರುವ ಪೃಥಿವ್ಯಾದಿಶರೀರಸ್ಥತ್ವ ಮತ್ತು ಪೃಥಿವೀಸ್ಥತ್ವ ಮೊದಲಾದ ಲಿಂಗಗಳ ಬಲದಿಂದ ಕಥಂಚಿತ್ ಕೂಡಿಸಬೇಕಾಗುತ್ತದೆ ಎಂದು ಅಭಪ್ರಾಯ. ಆದ್ದರಿಂದ ಪೂರ್ವಾಪರವಿರೋಧವಿಲ್ಲ. ಆದ್ದರಿಂದಲೇ ಅಕ್ಷರಾಧಿಕರಣದಲ್ಲಿ ಟೀಕಾರಾಯರು ''ಉತ್ತರಾಧಿಕರಣೇ ತ್ವೀಕ್ಷಣಸ್ಯ ಪ್ರಥಮಾಪ್ರತೀತೇರಸ್ತ್ಯವಕಾಶಃ'' ಎಂದು ಜ್ಞಾನವಿಷಯತ್ವವು ಪ್ರಥಮಪ್ರತೀತವಾಗದ ಕಾರಣ ಬೇರೆ ರೀತಿಯಲ್ಲಿ ಅರ್ಥೈಸಬಹುದೆಂದು ಹೇಳಿದ್ದಾರೆ.

ಈ ಅರ್ಥವನ್ನೇಕೆ ಒಪ್ಪಬೇಕು ? ಎಂಬ ಪ್ರಶ್ನೆಗೆ ವಿಪಕ್ಷದಲ್ಲಿ ಸೂತ್ರವಿರೋಧವನ್ನು ಹೇಳುತ್ತಿದ್ದಾರೆ. 'ಅನ್ಯಥಾ' ಇತ್ಯಾದಿಯಾಗಿ.

प्रकाशः – यदत्रोक्तं श्रुतप्रकाशे तदग्रे निरसिष्यते । एवं पृथिव्यादिशरीरत्वं नाम तदात्मकत्वमित्युपेत्य एकः पूर्वपक्षः टीकाविवरणेन विवृतः ।

ಈ ವಿಷಯದಲ್ಲಿ ಶ್ರುತಪ್ರಕಾಶದ ಅಭಿಪ್ರಾಯವನ್ನು ಮುಂದೆ ನಿರಾಕರಿಸುತ್ತಾರೆ. ಹೀಗೆ 'ಪೃಥಿವ್ಯಾದಿ ಶರೀರತ್ವ' ಎಂಬುದಕ್ಕೆ 'ಪೃಥಿವ್ಯಾದಿ ಸ್ವರೂಪತ್ವ' ಎಂಬರ್ಥವನ್ನು ಸ್ವೀಕರಿಸಿ ಒಂದು ಪೂರ್ವಪಕ್ಷ ಟೀಕೆಯನ್ನು ವಿವರಿಸಿದ್ದಾಯಿತು.

प्रकाशः – इदानीं तदेहत्वमर्थमुपेत्य ''शारीरश्च'' इति सूत्रसूचितं द्वितीयं पक्षं ''पृथिव्यादिजीवस्य वैतदन्तर्यामित्वम्'' इत्यादिटीकां विवृण्वन्नाह – पृथिव्यादीति ।

ಪ್ರಕೃತ 'ಪೃಥಿವ್ಯಾದಿ ಶರೀರ' ಎಂಬ ಶಬ್ದಕ್ಕೆ ಪೃಥಿವ್ಯಾದಿಗಳೇ ದೇಹವಾಗಿವೆಯೆಂಬರ್ಥವನ್ನು ಸ್ವೀಕರಿಸಿ 'ಶಾರೀರಶ್ಚ' ಎಂಬ ಸೂತ್ರದಿಂದ ಸೂಚಿತವಾದ ಎರಡನೇ ಪೂರ್ವಪಕ್ಷವನ್ನು 'ಪೃಥಿವ್ಯಾದಿ' ಎಂಬ ವಾಕ್ಯದಿಂದ ವಿವರಿಸುತ್ತಿದ್ದಾರೆ. ಇದರಿಂದ ''ಪೃಥಿವ್ಯಾದಿಜೀವಸ್ಯ ವೈತದಂತರ್ಯಾಮಿತ್ವಂ' ಎಂಬಿತ್ಯಾದಿ ಟೀಕೆಯನ್ನು ವ್ಯಾಖ್ಯಾನಿಸುತ್ತಿದ್ದಾರೆ.

प्रकाशः – भाष्यसूत्रानुरोधेन टीकायामेकवचनोक्तावपि तज्जात्यभिप्रायमिति भावेन बहुवचनोक्तिः । अन्यथा भामतीमतरीत्या टीकायामपि जीवसामान्य-मेवाभिमतमिति मन्दस्य शङ्का स्यात् । जीवसामान्यपक्षश्चाग्रेतनदोषदुष्टः ।

ಭಾಷ್ಯ ಹಾಗೂ ಸೂತ್ರಕ್ಕೆ ಅನುಸಾರಿಯಾಗಿ ಟೀಕೆಯಲ್ಲಿ ಏಕವಚನವನ್ನು ಹೇಳಿದ್ದರೂ ಸಹ ಅದನ್ನು ಸಮುದಾಯಾರ್ಥದಲ್ಲಿರುವ ಏಕವಚನವೆಂದು ತಿಳಿಯಬೇಕು. ಈ ಅಭಿಪ್ರಾಯದಿಂದ 'ಜೀವಾನಾಂ' ಎಂಬುದಾಗಿ ಗ್ರಂಥಕಾರರು ಚಂದ್ರಿಕಾದಲ್ಲಿ ಬಹುವಚನವನ್ನು ಹೇಳಿದ್ದಾರೆ. ಇಲ್ಲದಿದ್ದರೆ ಭಾಮತೀ ಮತದ ಪ್ರಕಾರ ಟೀಕೆಯಲ್ಲೂ ಸಹ ಅಭಿಮಾನಿಜೀವನನ್ನು ವಿವಕ್ಷಿಸದೇ ಕೇವಲ ಜೀವಸಾಮಾನ್ಯನನ್ನು ವಿವಕ್ಷಿಸಲಾಗಿದೆಯೆಂದು ಮಂದಜನರು ಶಂಕಿಸಬೇಕಾದೀತು. ಆದರೆ ಜೀವಸಾಮಾನ್ಯವೆಂಬ ಪಕ್ಷವು ಅನೇಕ ದೋಷ ದುಷ್ಟವಾಗಿದೆಯೆಂದು ಮುಂದೆ ನಿರಾಕರಿಸುತ್ತಾರೆ.

प्रकाशः – अत एव टीकायामुत्तरत्र ''प्रकृत्यादिलिङ्गेन तेषामन्तर्यामित्वम्'' इति ''अतोऽन्तर्यामी न विष्णुः, अपि तु प्रकृत्यादयः'' इति च बहुवचनोक्तिः । अन्यथा 'तस्य' इति 'प्रकृत्यादिः' इत्येव च निर्देशः स्यादिति भावः ।

ಆದ್ದರಿಂದಲೇ ಮುಂದಿನ ಟೀಕೆಯಲ್ಲಿ ''ಪ್ರಕೃತ್ಯಾದಿಲಿಂಗೇನ ತೇಷಾಮಂತರ್ಯಾಮಿತ್ವಂ'' ಎಂಬಲ್ಲಿ 'ತೇಷಾಂ' ಎಂಬ ಪದದಿಂದ; ''ಅತೋಽಂತರ್ಯಾಮೀ ನ ವಿಷ್ಣುಃ, ಅಪಿ ತು ಪ್ರಕೃತ್ಯಾದಯಃ'' ಎಂಬಲ್ಲಿ 'ಪ್ರಕೃತ್ಯಾದಯಃ' ಎಂದು ಬಹುವಚನವನ್ನೇ ಪ್ರಯೋಗಿಸಿದ್ದಾರೆ. ಒಂದು ವೇಳೆ ಏಕತ್ವವೇ ವಿವಕ್ಷಿತವಾಗಿದ್ದಲ್ಲಿ

'तेषाम' ಎಂದು ಹೇಳದೆ 'तस्य' ಎಂದು ಹೇಳುತ್ತಿದ್ದರು. ಹಾಗೂ 'प्रकृत्यादयः' ಎಂದು ಹೇಳುವ ಬದಲು 'प्रकृत्यादिः' ಎಂದು ಹೇಳುತ್ತಿದ್ದರು.

प्रकाशः – अत्र परोक्तं बाधकमाशङ्क्याह – **अत्रेति । नैवमिति । किन्तु** जीवसामान्यमित्यर्थः । **तदिति । सर्वलोकनियन्तृत्वस्य प्रत्येकं जीवे असम्भवादित्यर्थः । न प्रत्येकं जीवानां तन्नियन्तृत्वं, किन्तु मिलितानां, ''यस्सर्वान् लोकान्'' इत्येकवचनं समुदायाशयमित्यत आह – य इति ।**

ಅಭಮಾನಿ ಜೀವರೆಂಬ ಪರೋಕ್ತವಾದ ಅರ್ಥವನ್ನು ವಿವಕ್ಷಿಸಿದಾಗ ಬರುವ ಬಾಧಕವನ್ನು ಆಶಂಕಿಸುತ್ತಿದ್ದಾರೆ 'अत्र' ಇತ್ಯಾದಿಯಾಗಿ. 'नैवं' ಎಂದರೆ ಅಭಮಾನಿಜೀವನನ್ನು ವಿವಕ್ಷಿಸಬಾರದು ಹೊರತಾಗಿ ಜೀವಸಾಮಾನ್ಯನನ್ನು ವಿವಕ್ಷಿಸಬೇಕೆಂದು ಅರ್ಥ. 'तदसंभवात्' ಎಂಬ ಪದಕ್ಕೆ ಸರ್ವಲೋಕನಿಯಂತೃತ್ವವು ಪ್ರತ್ಯೇಕವಾಗಿ ಜೀವನಲ್ಲಿ ಅಸಂಭವವಾಗಿದೆ ಎಂದರ್ಥ. ಒಬ್ಬೊಬ್ಬ ಜೀವನೇ ಎಲ್ಲವನ್ನೂ ನಿಯಂತ್ರಿಸಲಾರ. ಆದರೆ ಒಟ್ಟಿಗೆ ಎಲ್ಲಾ ಜೀವರೂ ಸೇರಿ ಜಗತ್ತನ್ನು ನಿಯಂತ್ರಿಸಬಹುದು. ''यस्सर्वान् लोकान्'' ಎಂಬಲ್ಲಿರುವ 'यः' ಎಂಬ ಪದವು ಸಮುದಾಯಾರ್ಥದಲ್ಲಿ ಏಕವಚನವನ್ನು ಹೊಂದಿದೆಯಲ್ಲವೇ? ಎಂಬ ಪ್ರಶ್ನೆಗೆ 'य इति' ಎಂಬ ವಾಕ್ಯದಿಂದ ಉತ್ತರಿಸುತ್ತಿದ್ದಾರೆ.

प्रकाशः – अभिमानिनामप्युक्तरीत्या तत्तल्लोकनियामकत्वेन मिलित्वा सर्वलोक-नियन्तृत्वोपपत्तेरित्यर्थः । **प्रत्युतेति । प्राणचक्षुरादीन्द्रियपृथिव्यादिभूतसङ्घात-**शरीरकत्वात् जीवस्य पृथिव्यादिमात्रशरीरकत्वमयुक्तं, अभिमानिनां तु तत्तन्मात्रनियामकत्वेन तत्तन्मात्रस्थूलशरीरकत्वं युक्तमिति भावः ।

ಅಭಮಾನಿಜೀವರಿಗೂ ಆಯಾಯಾ ಲೋಕವನ್ನು ನಿಯಮನ ಮಾಡುವ ಮೂಲಕ ಸರ್ವಲೋಕನಿಯಂತೃತ್ವವನ್ನು ಹೇಳಬಹುದೆಂದು ಅರ್ಥ. 'प्रत्युत' ಎಂದರೆ ಪ್ರಾಣ, ಚಕ್ಷುರಾದಿ ಇಂದ್ರಿಯ ಪೃಥಿವ್ಯಾದಿ ಭೂತಪದಾರ್ಥಗಳ ಮಿಲನದಿಂದ ಜೀವರ ಶರೀರವು ನಿರ್ಮಾಣವಾಗಿರುತ್ತದೆ. ಹೀಗಿರುವಾಗ ಶರೀರವನ್ನು ಕೇವಲ ಪೃಥಿವೀ ಕೇವಲ ಜಲ ಇತ್ಯಾದಿಗಳ ಸ್ವರೂಪವೆಂದು ಹೇಳುವುದು ತಪ್ಪಾಗುತ್ತದೆ. ಆದರೆ ಭೂತಾಭಿಮಾನಿ ಜೀವರಿಗೆ ಆಯಾ ಭೂತಗಳನ್ನಷ್ಟೇ ನಿಯಮನ ಮಾಡುವ ಶಕ್ತಿಯಿರುವುದರಿಂದ ಆಯಾ ಭೂತಗಳನ್ನೇ ಶರೀರವನ್ನಾಗಿ ಹೊಂದಿದ್ದಾರೆಂದು ಹೇಳುವುದು ಕೂಡುತ್ತದೆ.

प्रकाशः – ''विद्यमानेऽपि विष्णुलिङ्गे न तस्यान्तर्यामित्वम्'' इत्यादिटीकार्थमाह – **नतु विष्णोरित्यादिना । ''पृथिव्यादिशरीरकत्वस्य कयाऽपि विधया अवकाशा-**भावात्'' इति टीकायाम् विधाशब्दस्य ''पृथिवीभिन्नचिच्छरीरत्वोररीकारेण'' इति

वाक्यानुरोधेन तदात्मकत्वतद्देहत्वरूपप्रकारद्वयमर्थं विवृत्य योगवृत्त्याऽपि इत्यपेरर्थमभिप्रेत्य योगवृत्त्या विष्णौ घटनमाशङ्क्य निराह – नच तेनेति ।

''ವಿದ್ಯಮಾನೇऽಪಿ ವಿಷ್ಣುಲಿಂಗೇ ನ ತಸ್ಯಾಂತರ್ಯಾಮಿತ್ವಮ್'' 'ವಿಷ್ಣುಲಿಂಗಗಳಿದ್ದರೂ ಸಹ ಅವನು ಆಂತರ್ಯಾಮಿ ಆಗುವುದಿಲ್ಲ' ಎಂಬ ಟೀಕೆಯ ಅಭಿಪ್ರಾಯವನ್ನು 'ನತು ವಿಷ್ಣೋಃ' ಇತ್ಯಾದಿ ಗ್ರಂಥದಿಂದ ವ್ಯಾಖ್ಯಾನಿಸುತ್ತಿದ್ದಾರೆ. ''ಪೃಥಿವ್ಯಾದಿಶರೀರಕತ್ವಸ್ಯ ಕಯಾऽಪಿ ವಿಧಯಾ ಅವಕಾಶಾಭಾವಾತ್'' 'ಪೃಥಿವ್ಯಾದಿ ಶರೀರತ್ವವು ಭಗವಂತನಲ್ಲಿ ಯಾವುದೇ ವಿಧದಲ್ಲಿಯೂ ಕೂಡುವುದಿಲ್ಲ' ಎಂಬ ಟೀಕೆಯಲ್ಲಿರುವ 'ವಿಧಾ' ಎಂಬ ಶಬ್ದಕ್ಕೆ ಎರಡು ಬಗೆಯಲ್ಲಿ ವ್ಯಾಖ್ಯಾನಿಸುತ್ತಿದ್ದಾರೆ. 'ಪೃಥಿವೀಭಿನ್ನಚಿಚ್ಛರೀರತ್ವೋರರೀಕಾರೇಣ'' 'ಭಗವಂತನು ಪೃಥಿವಿಗಿಂತ ಭಿನ್ನನಾಗಿದ್ದಾನೆ ಮತ್ತು ಅವನ ಶರೀರವು ಚಿತ್‌ಸ್ವರೂಪವಾಗಿದೆ' ಎಂದು ಅಂಗೀಕರಿಸಿರುವುದರಿಂದ ಎಂಬ ವಾಕ್ಯವನ್ನು ಅನುಸರಿಸಿ ಶರೀರಶಬ್ದಕ್ಕೆ 'ತದಾತ್ಮಕತ್ವ' ಮತ್ತು 'ತದ್ದೇಹತ್ವ' ಎಂದು ಎರಡು ರೀತಿಯಾಗಿ ಅರ್ಥ ಎಂದಭಿಪ್ರಾಯ. ಹೀಗೆ ಶರೀರಕತ್ವ ಶಬ್ದಕ್ಕೆ ಅರ್ಥಗಳನ್ನು ವಿವರಿಸಿ. ಈಗ 'ಕಯಾऽಪಿ' ಎಂಬಲ್ಲಿರುವ 'ಅಪಿ' ಶಬ್ದಕ್ಕೆ 'ಯೋಗವೃತ್ತ್ಯಾ ಅಪಿ' ಎಂದು ಅರ್ಥೈಸಿದ್ದಾರೆ. ಯೋಗವೃತ್ತಿಯಿಂದಲೂ ಶರೀರ ಪದವು ವಿಷ್ಣುವಿನಲ್ಲಿ ಕೂಡಬಹುದಲ್ಲವೇ? ಎಂದು ಆಶಂಕಿಸಿ ನಿರಾಕರಿಸುತ್ತಿದ್ದಾರೆ - 'ನಚ ತೇನ' ಇತ್ಯಾದಿ ವಾಕ್ಯದಿಂದ.

ಪ್ರಕಾಶಃ – बलीयस्त्वादिति । तस्य जन्मादिनयपूर्वपक्ष एव व्युत्पादितत्वादिति भावः । रूढित्यागे बाधकमाशङ्क्याह – यमिति । 'तस्य' पृथिव्यादेः । जडत्वे युक्तिमाह – यमिति ।

ಯೋಗಕ್ಕಿಂತ ರೂಢಿಯು ಪ್ರಬಲವೆಂದು ಜನ್ಮಾದಿಕರಣದ ಪೂರ್ವಪಕ್ಷದಲ್ಲಿ ಸಮರ್ಥಿಸಿದ್ದಾರೆಂದು ತಿಳಿಯಬೇಕು. ರೂಢ್ಯರ್ಥವನ್ನು ಬಿಡಲು ಬಾಧಕವನ್ನು ಆಶಂಕಿಸುತ್ತಿದ್ದಾರೆ - 'ಯಂ' ಇತ್ಯಾದಿಯಾಗಿ. 'ತಸ್ಯ' ಎಂಬ ಪದಕ್ಕೆ ಪೃಥಿವ್ಯಾದಿಗಳಿಗೆ ಎಂದರ್ಥ. 'ಜಡ' ಎಂಬ ವಿಷಯದಲ್ಲಿ ಎಂದರೆ ಪೃಥಿವ್ಯಾದಿ ಶಬ್ದಗಳು ಜಡಪರ ಎಂಬ ವಿಷಯದಲ್ಲಿ 'ಯಂ' ಇತ್ಯಾದಿ ವಾಕ್ಯದಿಂದ ಯುಕ್ತಿಯನ್ನು ಹೇಳುತ್ತಿದ್ದಾರೆ.

ಪ್ರಕಾಶಃ – माध्यन्दिनपाठानुरोधेन 'आत्मा' इत्युक्तम् । ''यं विज्ञानं न वेद'' इति काण्वपाठस्यैवोक्तौ विज्ञानशब्दस्य आत्मशब्दस्येव जीवे प्रसिद्ध्यभावेन चेतनाज्ञेयत्वं न स्पष्टं भायादिति भावः ।

'ಯಮಾತ್ಮಾನ ವೇದ' ಎಂಬುದು ಮಾಧ್ಯಂದಿನಪಾಠ. 'ಯಂ ವಿಜ್ಞಾನಂ ನ ವೇದ' ಎಂಬುದು ಕಾಣ್ವ ಪಾಠ. ಇಲ್ಲಿ ಕಾಣ್ವಪಾಠವನ್ನು ವಿವಕ್ಷಿಸಿದರೆ ಆತ್ಮಶಬ್ದವು ಜೀವನಲ್ಲಿ ಪ್ರಸಿದ್ಧವಾಗಿರುವಂತೆ ವಿಜ್ಞಾನ ಶಬ್ದಕ್ಕೆ ಜೀವ ಎಂಬರ್ಥವು ಪ್ರಸಿದ್ಧವಾಗಿಲ್ಲ. ಆದ್ದರಿಂದ ಚೇತನರಿಂದ ತಿಳಿಯಲಾರ ಎಂಬರ್ಥವು ಸ್ಪಷ್ಟವಾಗಿ ತಿಳಿಯುವುದಿಲ್ಲವೆಂಬ ಅಭಿಪ್ರಾಯದಿಂದ ಮಾಧ್ಯಂದಿನ ಪಾಠವನ್ನೇ ಗ್ರಂಥಕಾರರು ಸ್ವೀಕರಿಸಿದ್ದಾರೆ.

ಪ್ರಕಾಶಃ – ನನ್ವಯಾಪಿ ''ಅನ್ತರಪುರುಷಃ'' ಇತ್ಯತ್ರ ನಿರ್ಣೀತಾನ್ತರತ್ವಂ ವಾ, ''ಆತ್ಮನಿ ತಿಷ್ಠನ್'' ಇತ್ಯಾದಿನೋಕ್ತಂ ಚೇತನನಿಷ್ಠತ್ವಂ ವಾ, ಚೇತನನಿಯಮನಂ ವಾ, ಆತ್ಮಶಬ್ದಿತಚೇತನಾವಿದಿತತ್ವಂ ವಾ ರೂಢೌ ಬಾಧಕಮಸ್ತೀತ್ಯತಃ ಕ್ರಮೇಣ ನಿರಾಹ – ಯ ಇತ್ಯಾದಿನಾ ।

ಪ್ರಶ್ನೆ - ರೂಢ್ಯರ್ಥವನ್ನು ಸ್ವೀಕರಿಸಲು ಬಾಧಕವಿಲ್ಲವೆಂದು ಹೇಳಲು ಸಾಧ್ಯವಿಲ್ಲ. ಏಕೆಂದರೆ ''ಅಂತರಃ ಪುರುಷಃ'' ಎಂಬಲ್ಲಿ ನಿರ್ಣಯಿಸಲ್ಪಟ್ಟ ಅಂತರತ್ವವು ಅಥವಾ 'ಆತ್ಮನಿ ತಿಷ್ಠನ್' ಎಂಬಲ್ಲಿ ಹೇಳಲ್ಪಟ್ಟ ಚೇತನನಿಷ್ಠತ್ವವು ಅಥವಾ ಚೇತನರ ನಿಯಾಮಕತ್ವವು ಅಥವಾ ಆತ್ಮ ಎಂಬ ಶಬ್ದದಿಂದ ಹೇಳಲ್ಪಡುವ ಚೇತನ ಅವಿದಿತತ್ವವು ರೂಢ್ಯರ್ಥವನ್ನು ಸ್ವೀಕರಿಸಲು ಬಾಧಕವಾಗಿದೆಯಲ್ಲವೇ ?

ಉತ್ತರ - ಈ ಎಲ್ಲಾ ಬಾಧಕಗಳನ್ನು 'ಯ ಪೃಥಿವ್ಯಾಂ' ಇತ್ಯಾದಿ ವಾಕ್ಯದಿಂದ ಕ್ರಮವಾಗಿ ನಿರಾಕರಿಸುತ್ತಿದ್ದಾರೆ.

ಪ್ರಕಾಶಃ – ಪೂರ್ವಮಾತ್ಮಶಬ್ದಸ್ಯ ಜೀವಸಾಮಾನ್ಯಪರತ್ವಂ, ತದ್ವಾಕ್ಯಸ್ಥ 'ಯಃ' ಇತ್ಯಾದಿಯಚ್ಛಬ್ದಸ್ಯ ಪೃಥಿವ್ಯಾದಿತತ್ತ್ವಾಭಿಮಾನಿಜೀವಸಮುದಾಯಪರತ್ವಮುಪೇತ್ಯ ತಲ್ಲಿಙ್ಗಂ ಸಾವಕಾಶಮಿತ್ಯುಕ್ತಮ್ ।

ಹಿಂದೆ ಆತ್ಮಶಬ್ದವು ಜೀವಸಾಮಾನ್ಯಪರವಾಗಿದೆಯೆಂದು ಅಂಗೀಕರಿಸಿ ಆ ಶ್ರುತಿವಾಕ್ಯದಲ್ಲಿರುವ 'ಯಃ' ಮುಂತಾದ 'ಯತ್' ಶಬ್ದವು ಪೃಥಿವಿಯೇ ಮೊದಲಾದ ತತ್ತ್ವಾಭಿಮಾನಿ ದೇವತೆಗಳ ಸಮುದಾಯವನ್ನು ಹೇಳುತ್ತಿದೆ ಎಂಬರ್ಥವನ್ನು ಅಂಗೀಕರಿಸಿ ಪೃಥಿವ್ಯಾದಿಶರೀರತ್ವವೆಂಬ ಲಿಂಗವನ್ನು ಸಾವಕಾಶ ಮಾಡಿದ್ದರು.

ಪ್ರಕಾಶಃ – ಇದಾನೀಮಾತ್ಮಶಬ್ದಃ ಸಕಲಚೇತನಪರ ಏವ, 'ಯಃ' ಇತ್ಯಾದಿಯಚ್ಛಬ್ದಸ್ತು ಸಕಲಾತ್ಮಾಭಿಮಾನಿಚೇತನಪರಃ, ಪೂರ್ವತ್ರ ಪೃಥಿವ್ಯಾದಿಶಬ್ದೈಸ್ತದಭಿಮಾನಿಜೀವಸ್ಯೈವ ಗ್ರಹಣೇನಾತ್ರಾಪಿ ತತ್ಪ್ರಾಯಪಾಠೇನ ತಥೈವ ಗ್ರಾಹ್ಯತ್ವಾತ್ । ಆತ್ಮಾಜ್ಞೇಯತ್ವಾದಿ ಚ ಆತ್ಮಾಭಿಮಾನಿನೋ ಜೀವಸ್ಯ ದುರ್ಜ್ಞೇಯತ್ವಾದಿನಾ ಯುಕ್ತಮಿತಿ ಭಾವೇನಾಹ – ಯಚ್ಚೇತಿ ।

ಆದರೆ ಈಗ ಆತ್ಮಶಬ್ದವು ಸಕಲಚೇತರನ್ನು ಹೇಳುತ್ತದೆ. 'ಯಃ' ಇತ್ಯಾದಿಗಳಲ್ಲಿರುವ 'ಯತ್' ಶಬ್ದವು ಸಕಲ ಆತ್ಮಾಭಿಮಾನಿದೇವತೆಗಳನ್ನು ಹೇಳುತ್ತದೆ. ಏಕೆಂದರೆ ಹಿಂದೆ 'ಪೃಥಿವೀ' ಮುಂತಾದ ಶಬ್ದಗಳಿಂದ ಪೃಥಿವ್ಯಾದಿಗಳಿಗೆ ಅಭಿಮಾನಿಯಾದ ಜೀವನೆಂಬರ್ಥವನ್ನೇ ಸ್ವೀಕರಿಸಲಾಗಿತ್ತು. ಆದರ ಪ್ರಾಯಪಾಠದಿಂದ ಇಲ್ಲಿಯೂ ಸಹ ಅದೇ ಅರ್ಥವನ್ನೇ ಸ್ವೀಕರಿಸಬೇಕು. ಆತ್ಮನಿಂದ ತಿಳಿಯಲು ಸಾಧ್ಯವಿಲ್ಲವೆಂಬ ಮಾತನ್ನು ಅಭಿಮಾನಿಯಾದ ಜೀವನನ್ನು ತಿಳಿಯುವುದು ಕಷ್ಟವೆಂಬರ್ಥದಲ್ಲಿ ಕೂಡಿಸಬೇಕು. ಈ ಅಭಿಪ್ರಾಯದಿಂದ 'ಯದ್ವಾ' ಎಂಬುದಾಗಿ ಮತ್ತೊಂದು ಪಕ್ಷವನ್ನು ಗ್ರಂಥಕಾರರು ಹೇಳುತ್ತಿದ್ದಾರೆ.

प्रकाशः – एवञ्चान्तर्यामिणोऽन्यत्वादमृतत्वस्यापि तस्यैव वाच्यत्वात् प्रागुक्तहेतुना नाक्षिस्थो विष्णुरिति भावः ।।

ಈ ಎಲ್ಲಾ ಕಾರಣಗಳಿಂದ ಅಂತರ್ಯಾಮಿಯು ಭಿನ್ನನಾದ್ದರಿಂದ ಅಕ್ಷಿಸ್ಥನಾದ ಪುರುಷನು ವಿಷ್ಣುವಾಗುವುದಿಲ್ಲ. ಕಿಂತು ಪೃಥಿವ್ಯಾದಿಗಳಿಗೆ ಅಭಿಮಾನಿಯಾದ ಜೀವ ಅಥವಾ ಪ್ರಕೃತಿ ಆಗುತ್ತದೆ. ಅಮೃತತ್ವವೂ ಸಹ ಜೀವ ಅಥವಾ ಪ್ರಕೃತಿಯಲ್ಲಿಯೇ ಉಪಪನ್ನವಾಗುತ್ತದೆ. ಹೀಗಿರುವಾಗ ಹಿಂದಿನ ಅಂತರಾಧಿಕರಣದಲ್ಲಿ ಹೇಳಿದ ಅಮೃತತ್ವವೆಂಬ ಹೇತುವಿನಿಂದ ಅಕ್ಷಿಸ್ಥನಾದವನು ವಿಷ್ಣುವೇ ಆಗುತ್ತಾನೆಂದು ಸಮರ್ಥಿಸುವುದು ಹೇಗೆ ಯುಕ್ತವಾಗುತ್ತದೆ ? ಇಷ್ಟು ಪೂರ್ವಪಕ್ಷಿಗಳ ಅಭಿಪ್ರಾಯ.

गुरुराजीयम् – ननु पृथिव्यादीनामनेकत्वान्नान्तर्यामित्वम् । 'यस्सर्वान्' इत्यन्तर्यामिण एकत्वस्य बोधनादिति चेन्न । तथा सति जीवमात्रमित्यपि न स्यात् । तेषामप्यनेकत्वसाम्यात् । नच जीवानामनेकत्वेऽपि तत्समुदायापेक्षयैक-वचनोपपत्तिरिति वाच्यम् । तथा सत्यभिमानिपक्षेऽपि समुदायविवक्षया तदुपपत्तिरिति भावेनाह – **य इतीति** ।। ननु जीवमात्रस्यैकस्मिन्काले पृथिव्यादिशरीरत्वासम्भवेऽपि कदाचित्कस्यचिदित्येवंरूपेण जीवमात्रस्य पृथिव्यादि-शरीरत्वमुपपन्नमित्यरुचेराह – **यस्य प्राण इति** ।। प्रथमसूत्रोक्तं पृथिव्याद्यविदितत्वमपि सावकाशमित्यतो न प्रकृतपक्षे बाधकमित्याह – **यं पृथिवी न वेदेति** ।। ननु कथं पृथिव्यादेर्जडत्वेन तदविदितत्वं जीवस्य । उच्यते । पृथिव्यादिशब्दानामभिमानिचेतनपरत्वात्तदविदितत्वस्य जीवेऽपि सम्भवादित्यत आह – **यमात्मा न वेदेति** ।। चेतनस्य पृथगुक्तेरिति ।। अन्यथा पौनरुक्त्यं स्यादिति भावः ।। **अभिमानिन्यपीति** ।। अभिमानिनः पृथिव्यादिरूपशरीराद्भिन्न-त्वात्तदन्तस्स्थत्वाचेति भावः ।। **तत्वभिमानिनामिति** ।। पृथिव्याद्यभिमानिनामित्यर्थः। ननु पृथिव्यादेर्जडत्वेन तदविदितत्वस्याभिमानिनि सम्भवेऽपि पृथिव्याद्यभिमानि-नामात्माविदितत्वं कथम् । आत्मनश्चेतनत्वेन तदविदितत्वस्यासम्भवादित्यत आह – **यमात्मेति** ।। नन्वेवं प्रायपाठबाधः । 'यःपृथिव्याम्' इत्यादौ पृथिव्याद्यभिमानिजीवस्यान्तर्यामित्ववत् 'य आत्मनि' इत्यत्रान्तर्यामिपरत्वाभावेन पृथिव्याद्यभिमानिदेवतानामन्तर्यामित्ववचनस्य प्रायपाठविरुद्धत्वादित्यरुच्या पक्षान्तरमाह – **यद्वेति** ।। जीव एवेति ।। चतुर्मुख इत्यर्थः ।।

ಪ್ರಕಾಶಃ – ನನ್ವಥಾಪಿ ''ಅನ್ತರಪುರುಷಃ'' ಇತ್ಯತ್ರ ನಿರ್ಣೀತಾನ್ತರತ್ವಂ ವಾ, ''ಆತ್ಮನಿ ತಿಷ್ಠನ್'' ಇತ್ಯಾದಿನೋಕ್ತಂ ಚೇತನನಿಷ್ಠತ್ವಂ ವಾ, ಚೇತನನಿಯಮನಂ ವಾ, ಆತ್ಮಶಬ್ದಿತಚೇತನಾವಿದಿತತ್ವಂ ವಾ ರೂಢೌ ಬಾಧಕಮಸ್ತೀತ್ಯತಃ ಕ್ರಮೇಣ ನಿರಾಹ – ಯ ಇತ್ಯಾದಿನಾ ।

ಪ್ರಶ್ನೆ - ರೂಢ್ಯರ್ಥವನ್ನು ಸ್ವೀಕರಿಸಲು ಬಾಧಕವಿಲ್ಲವೆಂದು ಹೇಳಲು ಸಾಧ್ಯವಿಲ್ಲ. ಏಕೆಂದರೆ ''ಅಂತರಃ ಪುರುಷಃ'' ಎಂಬಲ್ಲಿ ನಿರ್ಣಯಿಸಲ್ಪಟ್ಟ ಅಂತರತ್ವವು ಅಥವಾ 'ಆತ್ಮನಿ ತಿಷ್ಠನ್' ಎಂಬಲ್ಲಿ ಹೇಳಲ್ಪಟ್ಟ ಚೇತನನಿಷ್ಠತ್ವವು ಅಥವಾ ಚೇತನರ ನಿಯಾಮಕತ್ವವು ಅಥವಾ ಆತ್ಮ ಎಂಬ ಶಬ್ದದಿಂದ ಹೇಳಲ್ಪಡುವ ಚೇತನ ಅವಿದಿತತ್ವವು ರೂಢ್ಯರ್ಥವನ್ನು ಸ್ವೀಕರಿಸಲು ಬಾಧಕವಾಗಿದೆಯಲ್ಲವೇ ?

ಉತ್ತರ - ಈ ಎಲ್ಲಾ ಬಾಧಕಗಳನ್ನು 'ಯ ಪೃಥಿವ್ಯಾಂ' ಇತ್ಯಾದಿ ವಾಕ್ಯದಿಂದ ಕ್ರಮವಾಗಿ ನಿರಾಕರಿಸುತ್ತಿದ್ದಾರೆ.

ಪ್ರಕಾಶಃ – ಪೂರ್ವಮಾತ್ಮಶಬ್ದಸ್ಯ ಜೀವಸಾಮಾನ್ಯಪರತ್ವಂ, ತದ್ವಾಕ್ಯಸ್ಥ 'ಯಃ' ಇತ್ಯಾದಿಯಚ್ಛಬ್ದಸ್ಯ ಪೃಥಿವ್ಯಾದಿತತ್ತ್ವಾಭಿಮಾನಿಜೀವಸಮುದಾಯಪರತ್ವಮುಪೇತ್ಯ ತಲ್ಲಿಙ್ಗಂ ಸಾವಕಾಶಮಿತ್ಯುಕ್ತಮ್ ।

ಹಿಂದೆ ಆತ್ಮಶಬ್ದವು ಜೀವಸಾಮಾನ್ಯಪರವಾಗಿದೆಯೆಂದು ಅಂಗೀಕರಿಸಿ ಆ ಶ್ರುತಿವಾಕ್ಯದಲ್ಲಿರುವ 'ಯಃ' ಮುಂತಾದ 'ಯತ್' ಶಬ್ದವು ಪೃಥಿವಿಯೇ ಮೊದಲಾದ ತತ್ತ್ವಾಭಿಮಾನಿ ದೇವತೆಗಳ ಸಮುದಾಯವನ್ನು ಹೇಳುತ್ತಿದೆ ಎಂಬರ್ಥವನ್ನು ಅಂಗೀಕರಿಸಿ ಪೃಥಿವ್ಯಾದಿಶರೀರತ್ವವೆಂಬ ಲಿಂಗವನ್ನು ಸಾವಕಾಶ ಮಾಡಿದ್ದರು.

ಪ್ರಕಾಶಃ – ಇದಾನೀಮಾತ್ಮಶಬ್ದಃ ಸಕಲಚೇತನಪರ ಏವ, 'ಯಃ' ಇತ್ಯಾದಿಯಚ್ಛಬ್ದಸ್ತು ಸಕಲಾತ್ಮಾಭಿಮಾನಿಚೇತನಪರಃ, ಪೂರ್ವತ್ರ ಪೃಥಿವ್ಯಾದಿಶಬ್ದೈಸ್ತದಭಿಮಾನಿಜೀವಸ್ಯೈವ ಗ್ರಹಣೇನಾತ್ರಾಪಿ ತತ್ಪ್ರಾಯಪಾಠೇನ ತಥೈವ ಗ್ರಾಹ್ಯತ್ವಾತ್ । ಆತ್ಮಾಜ್ಞೇಯತ್ವಾದಿ ಚ ಆತ್ಮಾಭಿಮಾನಿನೋ ಜೀವಸ್ಯ ದುರ್ಜ್ಞೇಯತ್ವಾದಿನಾ ಯುಕ್ತಮಿತಿ ಭಾವೇನಾಹ – ಯಚ್ಚೇತಿ ।

ಆದರೆ ಈಗ ಆತ್ಮಶಬ್ದವು ಸಕಲಚೇತರನ್ನು ಹೇಳುತ್ತದೆ. 'ಯಃ' ಇತ್ಯಾದಿಗಳಲ್ಲಿರುವ 'ಯತ್' ಶಬ್ದವು ಸಕಲ ಆತ್ಮಾಭಿಮಾನಿದೇವತೆಗಳನ್ನು ಹೇಳುತ್ತದೆ. ಏಕೆಂದರೆ ಹಿಂದೆ 'ಪೃಥಿವೀ' ಮುಂತಾದ ಶಬ್ದಗಳಿಂದ ಪೃಥಿವ್ಯಾದಿಗಳಿಗೆ ಅಭಿಮಾನಿಯಾದ ಜೀವನೆಂಬರ್ಥವನ್ನೇ ಸ್ವೀಕರಿಸಲಾಗಿತ್ತು. ಅದರ ಪ್ರಾಯಪಾಠದಿಂದ ಇಲ್ಲಿಯೂ ಸಹ ಅದೇ ಅರ್ಥವನ್ನೇ ಸ್ವೀಕರಿಸಬೇಕು. ಆತ್ಮನಿಂದ ತಿಳಿಯಲು ಸಾಧ್ಯವಿಲ್ಲವೆಂಬ ಮಾತನ್ನು ಅಭಿಮಾನಿಯಾದ ಜೀವನನ್ನು ತಿಳಿಯುವುದು ಕಷ್ಟವೆಂಬರ್ಥದಲ್ಲಿ ಕೂಡಿಸಬೇಕು. ಈ ಅಭಿಪ್ರಾಯದಿಂದ 'ಯದ್ವಾ' ಎಂಬುದಾಗಿ ಮತ್ತೊಂದು ಪಕ್ಷವನ್ನು ಗ್ರಂಥಕಾರರು ಹೇಳುತ್ತಿದ್ದಾರೆ.

ಪ್ರಕಾಶಃ – ಏವಞ್ಚಾನ್ತರ್ಯಾಮಿಣೋऽನ್ಯತ್ವಾದಮೃತತ್ವಸ್ಯಾಪಿ ತಸ್ಯೈವ ವಾಚ್ಯತ್ವಾತ್ ಪ್ರಾಗುಕ್ತಹೇತುನಾ ನಾಕ್ಷಿಸ್ಥೋ ವಿಷ್ಣುರಿತಿ ಭಾವಃ ।।

ಈ ಎಲ್ಲಾ ಕಾರಣಗಳಿಂದ ಅಂತರ್ಯಾಮಿಯು ಭಿನ್ನನಾದ್ದರಿಂದ ಅಕ್ಷಿಸ್ಥನಾದ ಪುರುಷನು ವಿಷ್ಣುವಾಗುವುದಿಲ್ಲ. ಕಿಂತು ಪೃಥಿವ್ಯಾದಿಗಳಿಗೆ ಅಭಿಮಾನಿಯಾದ ಜೀವ ಅಥವಾ ಪ್ರಕೃತಿ ಆಗುತ್ತದೆ. ಅಮೃತತ್ವವೂ ಸಹ ಜೀವ ಅಥವಾ ಪ್ರಕೃತಿಯಲ್ಲಿಯೇ ಉಪಪನ್ನವಾಗುತ್ತದೆ. ಹೀಗಿರುವಾಗ ಹಿಂದಿನ ಅಂತರಾಧಿಕರಣದಲ್ಲಿ ಹೇಳಿದ ಅಮೃತತ್ವವೆಂಬ ಹೇತುವಿನಿಂದ ಅಕ್ಷಿಸ್ಥನಾದವನು ವಿಷ್ಣುವೇ ಆಗುತ್ತಾನೆಂದು ಸಮರ್ಥಿಸುವುದು ಹೇಗೆ ಯುಕ್ತವಾಗುತ್ತದೆ ? ಇಷ್ಟು ಪೂರ್ವಪಕ್ಷಿಗಳ ಅಭಿಪ್ರಾಯ.

ಗುರುರಾಜೀಯಮ್ – ನನು ಪೃಥಿವ್ಯಾದೀನಾಮನೇಕತ್ವಾನ್ನಾನ್ತರ್ಯಾಮಿತ್ವಮ್ । 'ಯಸ್ಸರ್ವಾನ್' ಇತ್ಯನ್ತರ್ಯಾಮಿಣ ಏಕತ್ವಸ್ಯ ಬೋಧನಾದಿತಿ ಚೇನ್ನ । ತಥಾ ಸತಿ ಜೀವಮಾತ್ರಮಿತ್ಯಪಿ ನ ಸ್ಯಾತ್ । ತೇಷಾಮಪ್ಯನೇಕತ್ವಸಾಮ್ಯಾತ್ । ನಚ ಜೀವಾನಾಮನೇಕತ್ವೇऽಪಿ ತತ್ಸಮುದಾಯಾಪೇಕ್ಷಯೈಕವಚನೋಪಪತ್ತಿರಿತಿ ವಾಚ್ಯಮ್ । ತಥಾ ಸತ್ಯಭಿಮಾನಿಪಕ್ಷೇऽಪಿ ಸಮುದಾಯವಿವಕ್ಷಯಾ ತದುಪಪತ್ತಿರಿತಿ ಭಾವೇನಾಹ – **ಯ ಇತೀತಿ** ।। ನನು ಜೀವಮಾತ್ರಸ್ಯೈಕಸ್ಮಿನ್ಕಾಲೇ ಪೃಥಿವ್ಯಾದಿಶರೀರತ್ವಾಸಮ್ಭವೇऽಪಿ ಕದಾಚಿತ್ಕಸ್ಯಚಿದಿತ್ಯೇವಂರೂಪೇಣ ಜೀವಮಾತ್ರಸ್ಯ ಪೃಥಿವ್ಯಾದಿಶರೀರತ್ವಮುಪಪನ್ನಮಿತ್ಯರುಚೇರಾಹ – **ಯಸ್ಯ ಪ್ರಾಣ ಇತಿ** ।। ಪ್ರಥಮಸೂತ್ರೋಕ್ತಂ ಪೃಥಿವ್ಯಾದ್ಯವಿದಿತತ್ವಮಪಿ ಸಾವಕಾಶಮಿತ್ಯತೋ ನ ಪ್ರಕೃತಪಕ್ಷೇ ಬಾಧಕಮಿತ್ಯಾಹ – **ಯಂ ಪೃಥಿವೀ ನ ವೇದೇತಿ** ।। ನನು ಕಥಂ ಪೃಥಿವ್ಯಾದೇರ್ಜಡತ್ವೇನ ತದವಿದಿತತ್ವಂ ಜೀವಸ್ಯ । ಉಚ್ಯತೇ । ಪೃಥಿವ್ಯಾದಿಶಬ್ದಾನಾಮಭಿಮಾನಿಚೇತನಪರತ್ವಾತ್ತದವಿದಿತತ್ವಸ್ಯ ಜೀವೇऽಪಿ ಸಮ್ಭವಾದಿತ್ಯತ ಆಹ – **ಯಮಾತ್ಮಾ ನ ವೇದೇತಿ** ।। ಚೇತನಸ್ಯ ಪೃಥಗುಕ್ತೇರಿತಿ ।। ಅನ್ಯಥಾ ಪೌನರುಕ್ತ್ಯಂ ಸ್ಯಾದಿತಿ ಭಾವಃ ।। **ಅಭಿಮಾನಿನ್ಯಪೀತಿ** ।। ಅಭಿಮಾನಿನಃ ಪೃಥಿವ್ಯಾದಿರೂಪಶರೀರಾದ್ಭಿನ್ನತ್ವಾತ್ತದನ್ತಸ್ಥತ್ವಾಚ್ಚೇತಿ ಭಾವಃ ।। **ತತ್ವಭಿಮಾನಿನಾಮಿತಿ** ।। ಪೃಥಿವ್ಯಾದ್ಯಭಿಮಾನಿನಾಮಿತ್ಯರ್ಥಃ। ನನು ಪೃಥಿವ್ಯಾದೇರ್ಜಡತ್ವೇನ ತದವಿದಿತತ್ವಸ್ಯಾಭಿಮಾನಿನಿ ಸಮ್ಭವೇऽಪಿ ಪೃಥಿವ್ಯಾದ್ಯಭಿಮಾನಿನಾಮಾತ್ಮಾವಿದಿತತ್ವಂ ಕಥಮ್ । ಆತ್ಮನಶ್ಚೇತನತ್ವೇನ ತದವಿದಿತತ್ವಸ್ಯಾಸಮ್ಭವಾದಿತ್ಯತ ಆಹ – **ಯಮಾತ್ಮೇತಿ** ।। ನನ್ವೇವಂ ಪ್ರಾಯಪಾಠಬಾಧಃ । **'ಯಃಪೃಥಿವ್ಯಾಮ್'** ಇತ್ಯಾದೌ ಪೃಥಿವ್ಯಾದ್ಯಭಿಮಾನಿಜೀವಸ್ಯಾನ್ತರ್ಯಾಮಿತ್ವವತ್ 'ಯ ಆತ್ಮನಿ' ಇತ್ಯತ್ರಾನ್ತರ್ಯಾಮಿಪರತ್ವಾಭಾವೇನ ಪೃಥಿವ್ಯಾದ್ಯಭಿಮಾನಿದೇವತಾನಾಮನ್ತರ್ಯಾಮಿತ್ವವಚನಸ್ಯ ಪ್ರಾಯಪಾಠವಿರುದ್ಧತ್ವಾದಿತ್ಯರುಚ್ಯಾ ಪಕ್ಷಾನ್ತರಮಾಹ – **ಯಶ್ಚೇತಿ** ।। **ಜೀವ ಏವೇತಿ** ।। ಚತುರ್ಮುಖ ಇತ್ಯರ್ಥಃ ।।

ಸಾರ

ನಮ್ಮ ಸಿದ್ಧಾಂತದ ಪ್ರಕಾರ ಪ್ರಕೃತಿ ಹಾಗೂ ಅಭಿಮಾನಿಯಾದ ದೇವತೆಯು ಅಂತರ್ಯಾಮಿಯೆಂದು ಪೂರ್ವಪಕ್ಷಮಾಡಲಾಗಿದೆ. ಆದರೆ ಅದ್ವೈತಿಗಳು ಹಾಗೂ ರಾಮಾನುಜರು ಇದಕ್ಕೆ ವಿರುದ್ಧವಾಗಿ ಜೀವಸಾಮಾನ್ಯನನ್ನು ಪೂರ್ವಪಕ್ಷಕ್ಕೆ ವಿಷಯನೆನ್ನುತ್ತಾರೆ. ಪ್ರಕೃತಿಯಲ್ಲಿ ಜ್ಞಾನವಿಷಯತ್ವವನ್ನು ಹೇಳುವ ದ್ರಷ್ಟೃತ್ವವು ಕೂಡುವುದಿಲ್ಲವೆಂಬ ಒಂದು ಯುಕ್ತಿ ಬಿಟ್ಟರೆ ಬೇರೆ ಯುಕ್ತಿಯನ್ನು ಅವರು ಹೇಳಲಾರರು.

ಇವರ ವಾದದಲ್ಲಿ ಹುರುಳಿಲ್ಲ. ಸ್ವತಃ ಅವರೇ ಈಕ್ಷತ್ಯಧಿಕರಣದಲ್ಲಿ ಪ್ರಕೃತಿಗೆ ಗೌಣವಾದ ಜ್ಞಾನವಿಷಯತ್ವವನ್ನು ಒಪ್ಪಿದ್ದಾರೆ. ಅಷ್ಟೇ ಅಲ್ಲದೆ ಇದೇ ಅಧಿಕರಣದ ಸಿದ್ಧಾಂತದಲ್ಲಿ ಬ್ರಹ್ಮನಿಗೆ ಆರೋಪಿತವಾದ ಜ್ಞಾನವಿಷಯತ್ವವನ್ನು ಒಪ್ಪಿದ್ದಾರೆ. ಹೀಗೆ ಬೇರೆ ಕಡೆ ಗೌಣವಾದ ದ್ರಷ್ಟೃತ್ವವನ್ನು ಒಪ್ಪುವ ಅವರು ಪ್ರಕೃತಿಯಲ್ಲೇಕೆ ಗೌಣವಾದ ದ್ರಷ್ಟೃತ್ವವನ್ನು ನಿರಾಕರಿಸುತ್ತಾರೆಂಬುದು ಅರ್ಥವಾಗದ ವಿಚಾರ. ಮತ್ತು ಪ್ರಕೃತಿಯು ಪೂರ್ವಪಕ್ಷಕ್ಕೆ ವಿಷಯವಾಗದಿದ್ದ ಮೇಲೆ ಸೂತ್ರಕಾರರು 'ನಚ ಸ್ಮಾರ್ತಮ್' ಎಂಬ ಸೂತ್ರದಲ್ಲಿ ಪ್ರಕೃತಿಯನ್ನು ನಿಷೇಧಿಸಿದ್ದೂ ಸಹ ವ್ಯರ್ಥವಾಗುತ್ತದೆ.

ಪ್ರಕೃತಿಯು ಈ ಅಧಿಕರಣದ ಪೂರ್ವಪಕ್ಷಕ್ಕೆ ವಿಷಯವಾದಂತೆ ಅಭಿಮಾನಿದೇವತೆಯೂ ಸಹ ಅಂತರ್ಯಾಮಿಯೆಂದು ಪೂರ್ವಪಕ್ಷ ಮಾಡಬಹುದು. ಈ ಪಕ್ಷದಲ್ಲಿ ಪೃಥಿವ್ಯಾದಿಗಳಿಗೆ ಶರೀರತ್ವವನ್ನು ಉಪಪಾದಿಸುವುದು ಸುಲಭವಾಗುತ್ತದೆ. ಆದರೆ ಭಾಮತಿಯಲ್ಲಿ ಒಬ್ಬನೇ ಅಭಿಮಾನಿ ಜೀವನಿಗೆ ಸಮಸ್ತ ಜಗತ್ತಿನ ನಿಯಾಮಕತ್ವವು ಅಸಂಭಾವಿತವಾದ್ದರಿಂದ ಅಭಿಮಾನಿದೇವತೆಯೆಂಬ ಪಕ್ಷವನ್ನು ನಿರಾಕರಿಸಲಾಗಿದೆ.

ಆದರೆ ಅಭಿಮಾನಿದೇವತೆಯನ್ನು ನಿರಾಕರಿಸುವ ಭಾಮತಿಕಾರ ಜೀವಸಾಮಾನ್ಯನನ್ನು ಅಂತರ್ಯಾಮಿಯೆಂದು ಒಪ್ಪಿರುವುದು ಹಾಸ್ಯಾಸ್ಪದ ವಿಚಾರ. ಒಬ್ಬ ಅಭಿಮಾನಿಗೆ ಸಕಲ ಜಗತ್ಕಾರಕಶಕ್ತಿಯು ಬಾರದಿದ್ದಾಗ ಒಬ್ಬ ಜೀವ ಸಾಮಾನ್ಯನಿಗೆ ಅಂತಹ ಶಕ್ತಿ ಎಲ್ಲಿಂದ ಬರುತ್ತದೆಂದು ತಿಳಿಯುವುದಿಲ್ಲ. ಮತ್ತು ಜೀವಸಾಮಾನ್ಯನು ಅಂತರ್ಯಾಮಿಯೆಂದು ಹೇಳಿದರೆ ಅವನಿಗೆ ಪೃಥಿವೀ, ಪ್ರಾಣ ಮೊದಲಾದವುಗಳ ಸಮುದಾಯವು ಶರೀರವಾಗಿದೆ ಹೊರತು ಕೇವಲ ಪೃಥಿವಿಯಾಗಲೀ, ಕೇವಲ ಪ್ರಾಣಾದಿಗಳಾಗಲೀ ಶರೀರಗಳಾಗಿರುವುದಿಲ್ಲ. ಆದ್ದರಿಂದ ಶ್ರುತಿಯಲ್ಲಿ ಹೇಳಲ್ಪಟ್ಟ ಕೇವಲ ಪೃಥಿವ್ಯಾದಿ ಶರೀರತ್ವವು ತಪ್ಪಾಗುತ್ತದೆ. ಆದರೆ ಅಭಿಮಾನಿ ದೇವತೆಯಲ್ಲಿ ಆಯಾ ಭೂತಗಳಿಗೆ ಅಭಿಮಾನಿಯಾಗಿದ್ದಾರೆಂಬ ಕಾರಣದಿಂದಲೇ ಅವುಗಳನ್ನು ಶರೀರವೆಂದು ಹೇಳಬಹುದು.

ಆದ್ದರಿಂದ ಅಭಿಮಾನಿದೇವತೆಗಳೇ ಅಂತರ್ಯಾಮಿಯು ಭಿನ್ನವಾದ್ದರಿಂದ ಅಕ್ಷಿಸ್ಥ ಹೊರತು ವಿಷ್ಣುವಲ್ಲವೆಂಬ ಪೂರ್ವಪಕ್ಷವು ದೃಢವಾಗುತ್ತದೆ. ವಿಷ್ಣುವಿನಲ್ಲಿ ಪೃಥಿವ್ಯಾದಿ ಶರೀರತ್ವವನ್ನು ಯೌಗಿಕವಾಗಿ ಹೇಳಬಹುದು. ಆದರೆ ಯೋಗಕ್ಕಿಂತ ರೂಢಿಯು ಪ್ರಬಲವಾದ್ದರಿಂದ ರೂಢ್ಯರ್ಥವನ್ನೇ ಸ್ವೀಕರಿಸಬೇಕು. ಬಾಧಕವಿದ್ದಾಗ ರೂಢ್ಯರ್ಥವನ್ನು ಬಿಡಬಹುದಾದರೂ ಇಲ್ಲಿ ಅಂತಹ ಬಾಧಕಗಳೇನೂ ಕಾಣಿಸುತ್ತಿಲ್ಲ.

ಪರಿಪೂರ್ಣಚಂದ್ರಿಕಾ

ಈ ಎಲ್ಲಾ ಕಾರಣಗಳಿಂದ ಅಂತರ್ಯಾಮಿಯು ಭಿನ್ನನಾದ್ದರಿಂದ ಆಕ್ಷಿಪ್ತ ಪುರುಷನು ವಿಷ್ಣುವಾಗುವುದಿಲ್ಲ. ಪೃಥಿವ್ಯಾದಿಗಳಿಗೆ ಅಭಿಮಾನಿಯಾದ ಜೀವ ಅಥವಾ ಪ್ರಕೃತಿ ಆಗುತ್ತದೆ. ಅಮೃತತ್ವವೂ ಸಹ ಜೀವ ಅಥವಾ ಪ್ರಕೃತಿಯಲ್ಲಿಯೇ ಉಪಪನ್ನವಾಗುತ್ತದೆ. ಹೀಗಿರುವಾಗ ಹಿಂದಿನ ಅಂತರಾಧಿಕರಣದಲ್ಲಿ ಅಮೃತತ್ವವೆಂಬ ಹೇತುವಿನಿಂದ ಆಕ್ಷಿಪ್ತನಾದವನು ವಿಷ್ಣುವೇ ಆಗುತ್ತಾನೆಂದು ಸಮರ್ಥಿಸುವುದು ಹೇಗೆ ಯುಕ್ತವಾಗುತ್ತದೆ ? ಇಷ್ಟು ಪೂರ್ವಪಕ್ಷಿಗಳ ಅಭಿಪ್ರಾಯ.

● ● ● ● ●

ಸರ್ವಾಂತರ್ಯಾಮಿಯಾದವನು ವಿಷ್ಣುವೇ ಎಂದು ಸಿದ್ಧಾಂತ

तात्पर्यचन्द्रिका

सिद्धान्तस्तु –

पृथिव्यादेर्जडत्वे स्याद्प्रसक्तनिराक्रिया ।
चित्त्वे तु तेन कात्स्न्र्येनावेद्यत्वं नेश्वरं विना ।।

ಅನುವಾದ - ಸಿದ್ಧಾಂತದ ಸಂಗ್ರಹ ಹೀಗಿದೆ -

ಪೃಥಿವ್ಯಾದೇರ್ಜಡತ್ವೇ ಸ್ಯಾದಪ್ರಸಕ್ತನಿರಾಕ್ರಿಯಾ ।
ಚಿತ್ತ್ವೇ ತು ತೇನ ಕಾರ್ತ್ಸ್ನ್ಯೇನಾವೇದ್ಯತ್ವಂ ನೇಶ್ವರಂ ವಿನಾ ।।

ಪೃಥಿವ್ಯಾದಿಗಳು ಜಡವಾದ್ದರಿಂದ ಜ್ಞಾನದ ಪ್ರಸಕ್ತಿಯೇ ಬರುವುದಿಲ್ಲ. ಅವುಗಳಲ್ಲಿ ತಿಳುವಳಿಕೆಯನ್ನು ನಿಷೇಧ ಮಾಡಿದರೆ ಅಪ್ರಸಕ್ತನಿಷೇಧವಾಗುತ್ತದೆ. ಆದ್ದರಿಂದ ಪೃಥಿವ್ಯಾದಿ ಶಬ್ದಗಳಿಗೆ ವಾಚ್ಯತ್ವೇನ ತದಭಿಮಾನಿ ಚೇತನರನ್ನೇ ವಿವಕ್ಷಿಸಬೇಕು. ಅಂತಹ ಚೇತನರಿಂದ ಸಮಗ್ರವಾಗಿ ತಿಳಿಯಲ್ಪಡದ ವಸ್ತು ಎಂದರೆ ಈಶ್ವರನೇ ಹೊರತು ಪ್ರಕೃತ್ಯಾದಿಗಳಲ್ಲ.

''यं पृथिवी न वेद'' इत्यादौ पृथिव्यादेर्जडत्वे 'यम्' इत्यस्य वैयर्थ्यम्, ''यमात्मा न वेद'' इत्यस्यानुपपत्तिश्च । अप्रसक्तप्रतिषेधापातश्च ।

'ಯಂ ಪೃಥಿವೀ ನ ವೇದ'' ಇತ್ಯಾದಿ ವಾಕ್ಯಗಳಲ್ಲಿ ಪೃಥಿವೀ ಮೊದಲಾದ ಶಬ್ದಗಳು ಜಡ ಪ್ರತಿಪಾದಕವಾದರೆ 'ಯಂ' ಎಂಬುದಾಗಿ ವಿಷಯನಿರ್ದೇಶ ಮಾಡಿದ್ದು ವ್ಯರ್ಥವಾಗುತ್ತದೆ. ಮತ್ತು ''ಯಮಾತ್ಮಾ ನ ವೇದ'' ಎಂಬುದಾಗಿ ಚೇತನರಿಂದ ತಿಳಿಯಲು ಸಾಧ್ಯವಿಲ್ಲವೆಂದು ಹೇಳಿದ್ದೂ ಸಹ ಅನುಪಪನ್ನವಾಗುತ್ತದೆ. ಮತ್ತು ಜಡದಲ್ಲಿ ಅಪ್ರಸಕ್ತವಾದ ತಿಳುವಳಿಕೆಯನ್ನು ನಿಷೇಧಿಸಿದಂತಾಗುತ್ತದೆ.

''नान्तरिक्षे न दिवि'' इत्यन्तरिक्षादावप्रसक्तचयननिषेधस्तु ''हिरण्यं निधाय चेतव्यम्'' इति विधिस्तुत्यर्थः ।

ಪೂರ್ವಮೀಮಾಂಸೆಯಲ್ಲಿ ಯಜ್ಞವೇದಿಕೆ ನಿರ್ಮಾಣವು ಅಂತರಿಕ್ಷದಲ್ಲಿ ಪ್ರಸಕ್ತವಾಗಿಲ್ಲ. ಆದರೂ ಸಹ ''ನಾಂತರಿಕ್ಷೇ ನ ದಿವಿ'' ಎಂಬುದಾಗಿ ಅಂತರಿಕ್ಷದಲ್ಲಿ ಯಜ್ಞವೇದಿಕೆಯನ್ನು ನಿರ್ಮಾಣ ಮಾಡಬಾರದೆಂಬ ನಿಷೇಧವೂ ಕಾಣಿಸುತ್ತದೆ. ಇದು ಅಪ್ರಸಕ್ತ ನಿಷೇಧವಲ್ಲವೇ? ಎಂದು ಪ್ರಶ್ನಿಸಬಾರದು. ''ಹಿರಣ್ಯಂ ನಿಧಾಯ ಚೇತವ್ಯಮ್'' ಹಿರಣ್ಯ ಸ್ಥಾಪನೆಯೆಂಬ ವಿಧಾನವನ್ನು ಪ್ರಶಂಸೆ ಮಾಡುವುದಕ್ಕಾಗಿ 'ನಾಂತರಿಕ್ಷೇ' ಎಂಬ ಮಾತು ಹೊರಟಿದೆ.

प्रकृते तु न तथा । तस्मात्पृथिव्यादिः तदभिमानिचेतन एव । तेन च साकल्येनावेद्यत्वं भाष्योक्तश्रुत्यादिभिर्हरेरेव ।

ಆದರೆ ಪ್ರಕೃತದಲ್ಲಿ ಹಾಗೆ ಹೇಳಲಾಗದು. ಅಂತಹ ವಿಧಾನವೇನೂ ಇಲ್ಲಿ ಕೇಳಿಸುತ್ತಿಲ್ಲ. ಆದ್ದರಿಂದ ಪೃಥಿವ್ಯಾದಿಶಬ್ದಗಳಿಂದ ಜಡವನ್ನು ವಿವಕ್ಷಿಸದೇ ಅಭಿಮಾನಿಯಾದ ಚೇತನರನ್ನೇ ವಿವಕ್ಷಿಸಬೇಕು. ಅಂತಹ ಅಭಿಮಾನಿ ಚೇತನರಿಂದ ಸಂಪೂರ್ಣವಾಗಿ ತಿಳಿಯಲು ಸಾಧ್ಯವಿಲ್ಲದವನು ವಿಷ್ಣುವೇ ಆಗಿದ್ದಾನೆ. ಈ ವಿಷಯವು ಸಾಕಲ್ಯೇನಾವೇದ್ಯತ್ವವು ಭಾಷ್ಯದಲ್ಲಿ ಹೇಳಲ್ಪಟ್ಟ ಶ್ರುತ್ಯಾದಿಗಳಿಂದ ದೃಢವಾಗುತ್ತದೆ.

अन्तरत्वं च

बाह्यापेक्षां विना यस्तु रमते सोऽन्तरः स्मृतः ।
अतिप्रियत्वाच्च हरेरन्तरत्वमुदाहृतम् ।।

ಪೃಥಿವ್ಯಾದ್ಯವಿದಿತತ್ವವು ಪರಮಾತ್ಮನಲ್ಲಿ ಬರುವಂತೆ ಅಂತರತ್ವವೂ ಸಹ ಬರುತ್ತದೆ. ಏಕೆಂದರೆ

ಬಾಹ್ಯಪೇಕ್ಷಾಂ ವಿನಾ ಯಸ್ತು ರಮತೇ ಸೋಽಂತರಃ ಸ್ಮೃತಃ ।
ಅತಿಪ್ರಿಯತ್ವಾಚ್ಚ ಹರೇರಂತರತ್ವಮುದಾಹೃತಮ್ ।।

ಬಾಹ್ಯಪದಾರ್ಥಗಳ ಅಪೇಕ್ಷೆಯಿಲ್ಲದೇ ಯಾರು ವಿಹರಿಸುತ್ತಾರೋ ಅಂತಹವನು 'ಅಂತರಃ' ಎನಿಸುತ್ತಾನೆ. ಮತ್ತು ಅತ್ಯಂತ ಪ್ರಿಯನಾದ್ದರಿಂದಲೂ ಶ್ರೀಹರಿಯು ಅಂತರನೆಂದು ಹೇಳಲ್ಪಟ್ಟಿದ್ದಾನೆ.

इति स्मृत्युक्तं, स्वतो नित्यतृप्तात् ''प्रेयः पुत्रात्'' इत्यादिश्रुत्या परमप्रेयोरूपाच्च ब्रह्मणोऽन्यत्र न युक्तम् ।

ಮೇಲೆ ಹೇಳಿದ ಸ್ಮೃತಿಯ ಮಾತಿನಿಂದ ಶ್ರೀಹರಿಯು ಸ್ವಾಭಾವಿಕವಾಗಿಯೇ ನಿತ್ಯತೃಪ್ತನಾದ್ದರಿಂದ ಅಂತರನಾಗಿದ್ದಾನೆಂದು ತಿಳಿಯುತ್ತದೆ. ಹಾಗೂ ''ಪ್ರೇಯಃ ಪುತ್ರಾತ್'' ಇತ್ಯಾದಿ ಶ್ರುತಿಗಳಿಂದ ಪರಮಪ್ರೇಮಾಸ್ಪದನಾದ್ದರಿಂದಲೂ ಅಂತರನೆಂದು ತಿಳಿಯುತ್ತದೆ. ಇಂತಹ ಶ್ರುತಿ, ಸ್ಮೃತಿಸಿದ್ಧವಾದ ಅಂತರತ್ವವು ಶ್ರೀಹರಿಯನ್ನು ಬಿಟ್ಟು ಬೇರೆಯವರಲ್ಲಿ ಹೇಳಲಾಗದು.

किञ्च श्रुत्यन्तरे ''दिव्यो देव एको नारायणः'' इत्युपक्रम्य ''यस्य पृथिवी शरीरं यः पृथिवीमन्तरे सञ्चरन् यं पृथिवी न वेद'' इत्याद्युक्त्वा 'एष सर्वभूतान्तरात्माऽपहतपाप्मा दिव्यो देव एको नारायणः'' इत्युपसंहारान्नारायण एवान्तर्यामी ।।

ಮತ್ತು ಇನ್ನೊಂದು ಉಪನಿಷತ್ತಿನಲ್ಲಿಯೂ ಅಂತರತ್ವವು ವಿಷ್ಣುವಿನಲ್ಲಿಯೇ ಉಪಪನ್ನವಾಗುತ್ತದೆಂಬುದು ಸ್ಪಷ್ಟವಾಗುತ್ತದೆ. ಉಪನಿಷತ್ತಿನಲ್ಲಿ ''ದಿವ್ಯೋ ದೇವ ಏಕೋ ನಾರಾಯಣಃ'' ಎಂದು ಪ್ರಾರಂಭವಾಗಿ ''ಯಸ್ಯ ಪೃಥಿವೀ ಶರೀರಂ ಯಃ ಪೃಥಿವೀಮಂತರೇ ಸಂಚರನ್ ಯಂ ಪೃಥಿವೀ ನ ವೇದ'' ಯಾರಿಗೆ ಪೃಥಿವಿಯು ಶರೀರವಾಗಿದೆಯೋ? ಯಾರು ಪೃಥಿವಿಯಲ್ಲಿ ಸಂಚರಿಸುತ್ತಾನೋ? ಯಾರನ್ನು ಪೃಥಿವಿಯಲ್ಲಿ ತಿಳಿಯುವುದಿಲ್ಲವೋ?'' ಇತ್ಯಾದಿಯಾಗಿ ಅಂತರ್ಯಾಮಿಧರ್ಮಗಳನ್ನು ಹೇಳಿ ''ಏಷ ಸರ್ವಭೂತಾಂತರಾತ್ಮಾಪಹತಪಾಪ್ಮಾ ದಿವ್ಯೋ ದೇವ ಏಕೋ ನಾರಾಯಣಃ'' ಇವನು ಸಕಲ ಭೂತಗಳ ಅಂತರಾತ್ಮನು, ನಿರ್ದೋಷಿಯು, ದಿವ್ಯಸ್ವರೂಪವುಳ್ಳವನು, ಕ್ರೀಡಾದಿಗುಣವಿಶಿಷ್ಟನು ಹಾಗೂ ಅದ್ವಿತೀಯನು ನಾರಾಯಣನೇ ಆಗಿದ್ದಾನೆಂದು ಉಪಸಂಹಾರದಲ್ಲಿ ಹೇಳಲಾಗಿದೆ. ಈ ಸಮಾಖ್ಯಾಶ್ರುತಿಯ ಆಧಾರದಿಂದ ನಾರಾಯಣನೇ ಸರ್ವಾಂತರ್ಯಾಮಿ ಎಂದು ನಿರ್ಣಯವಾಗುತ್ತದೆ. ಹಾಗೂ ಪೂರ್ವಪಕ್ಷಕ್ಕೆ ಪ್ರಬಲ ಹೇತುವಾಗಿರುವ ಪೃಥಿವ್ಯಾದಿ ಶರೀರತ್ವವೂ ಸಹ ವಿಷ್ಣುವಿನಲ್ಲೇ ಉಪಪನ್ನವಾಗುತ್ತದೆ.

पृथिव्यादेः शरीरत्वं यौगिकं गौणमेव वा ।
रूढस्यानुपपन्नत्वाद् अग्नेरिन्द्रत्ववद् भवेत् ।।

ಪೃಥಿವ್ಯಾದೇಃ ಶರೀರತ್ವಂ ಯೌಗಿಕಂ ಗೌಣಮೇವ ವಾ ।
ರೂಢಸ್ಯಾನುಪಪನ್ನತ್ವಾದ್ ಅಗ್ನೇರಿಂದ್ರತ್ವವದ್ ಭವೇತ್ ।।

ಪೃಥಿವ್ಯಾದಿಶರೀರತ್ವವು ಯೌಗಿಕವಾಗಿ ಅಥವಾ ಗೌಣವಾಗಿ ವಿಷ್ಣುವಿನಲ್ಲೇ ಉಪಪನ್ನವಾಗುತ್ತದೆ. ಅಗ್ನಿಯಲ್ಲಿ ಇಂದ್ರ ಶಬ್ದಪ್ರಯೋಗವನ್ನು ಯೌಗಿಕವಾಗಿ ಅಥವಾ ಗೌಣವಾಗಿ ಮಾಡುವಂತೆ ವಿಷ್ಣುವಿನಲ್ಲೂ ಪೃಥಿವ್ಯಾದಿಶರೀರತ್ವವನ್ನು ಕೂಡಿಸಬೇಕು. ರೂಢ್ಯರ್ಥದಲ್ಲಿ ಬಾಧವಿರುವುದೇ ಇದಕ್ಕೆ ಕಾರಣ.

यथा ''इन्द्रो न तस्थौ'' इतीन्द्रशब्दः गार्हपत्येऽपि स्वोचितैश्वर्यस्य सद्भावायोगेन वा, इन्द्रवधहसाधनत्वाद् गौण्या वा वृत्त्या वर्तते ।

ಇದಕ್ಕೆ ದೃಷ್ಟಾಂತ - ''ಇಂದ್ರೋ ನ ತಸ್ಥೌ'' ಎಂಬಲ್ಲಿ ಇಂದ್ರಶಬ್ದವು ಗಾರ್ಹಪತ್ಯಾಗ್ನಿಯಲ್ಲಿ ಪ್ರಯೋಗಿಸಲಾಗಿದೆ. ಇದು ತಪ್ಪಲ್ಲ. ತನಗೆ ಉಚಿತವಾದ ಐಶ್ವರ್ಯವನ್ನು ಅಗ್ನಿಯೂ ಸಹ ಹೊಂದಿರುವ ಕಾರಣ ಯೌಗಿಕಾರ್ಥದಿಂದ ಅಗ್ನಿಯಲ್ಲಿ ಇಂದ್ರಶಬ್ದವನ್ನು ಪ್ರಯೋಗಿಸಬಹುದು. ಅಥವಾ ಇಂದ್ರನಂತೆ ಅಗ್ನಿಯೂ ಸಹ ಯಜ್ಞಸಾಧನನಾದ್ದರಿಂದ ಗೌಣೀವೃತ್ತಿಯಿಂದಲೂ ಅಗ್ನಿಯನ್ನು ಇಂದ್ರನೆನ್ನಬಹುದು.

उक्तं हि –

स्यादग्नेर्गौणमिन्द्रत्वं यज्ञसम्बन्धकारितम् ।

इन्दत्यर्थानुसाराद्वा स्वकार्ये सोऽपि हीश्वरः ।। इति ।

ಈ ವಿಷಯವನ್ನೇ ಶ್ಲೋಕವಾರ್ತಿಕದಲ್ಲಿ ಹೀಗೆ ಹೇಳಲಾಗಿದೆ - ಯಜ್ಞಸಂಬಂಧವಿರುವ ಕಾರಣ ಅಗ್ನಿಗೆ ಗೌಣವಾದ ಇಂದ್ರತ್ವವನ್ನು ಹೇಳಬಹುದು. ಅಥವಾ 'ಇದಿ' ಧಾತುವಿಗೆ ಐಶ್ವರ್ಯವೆಂಬ ಅರ್ಥವಿರುವುದರಿಂದ ಯೋಗಾರ್ಥವನ್ನು ಅನುಸರಿಸಿಯೂ ಅಗ್ನಿಯನ್ನು ಇಂದ್ರನೆನ್ನಬಹುದು.

तथा शरीरशब्दोऽपि पृथिव्यादिषु योगेन वा शरीरवत्तन्नियम्यत्वेन गौण्या वा वृत्त्या वर्तताम् । चेतनानामपि देहद्वारा शीर्णताऽस्त्येव ।

ಇದರಂತೆ ಪೃಥಿವ್ಯಾದಿಗಳಲ್ಲಿ ಯೌಗಿಕವಾಗಿ ಅಥವಾ ಶರೀರದಂತೆ ಅವನಿಂದ ನಿಯಮ್ಯವಾಗಿದೆ ಎಂಬ ಗೌಣೀವೃತ್ತಿಯಿಂದಲೂ ಶರೀರಶಬ್ದ ಪ್ರಯೋಗವನ್ನು ಕೂಡಿಸಬಹುದು. ಶೀರ್ಯಮಾಣತ್ವ ಎಂಬ ಯೌಗಿಕಾರ್ಥವನ್ನು ಸ್ವೀಕರಿಸಿದಾಗ ಚೇತನರಿಗೆ ನಾಶವಿಲ್ಲದಿದ್ದರೂ ದೇಹದ ಮೂಲಕ ನಾಶವಿದೆ.

प्रकाशः –

अधिदैवाधिभूताध्यात्मप्रकरणेषु पृथिव्याद्यविदितत्वतदन्तरत्वरूपनिरवकाश-लिङ्गसत्त्वेन तद्बलेन पृथिव्यादिशरीरित्वस्य कथञ्चिन्नेयत्वाद् अन्तर्यामी विष्णुरिति भावेन ''अन्तर्यामी विष्णुरेव'' इत्यादिटीकां विवृण्वन्नविदितत्वस्य निरवकाशत्वं तावदाह – **पृथिव्यादेरिति ।**

ವಿವರಣೆ - ವಿಷ್ಣುವೇ ಆಂತರ್ಯಾಮಿಯಾಗಿದ್ದಾನೆಂದು ಸಿದ್ಧಾಂತ ಮಾಡುತ್ತಿದ್ದಾರೆ. ಅಧಿದೈವ, ಅಧಿಭೂತ, ಅಧ್ಯಾತ್ಮ, ಪ್ರಕರಣಗಳಲ್ಲಿ, ಪೃಥಿವ್ಯಾದ್ಯವಿದಿತತ್ವ, ತದಂತರತ್ವ ಮೊದಲಾದ ನಿರವಕಾಶ ಲಿಂಗಗಳಿರುವುದರಿಂದ ಅವುಗಳ ಬಲದಿಂದ ಪೃಥಿವ್ಯಾದಿ ಶರೀರತ್ವವೆಂಬ ಪೂರ್ವಪಕ್ಷಹೇತುವನ್ನು ವಿಷ್ಣುವಿನಲ್ಲಿ ಗೌಣವಾಗಿ ವ್ಯಾಖ್ಯಾನಿಸಬೇಕು ಆದ್ದರಿಂದ ವಿಷ್ಣುವೇ ಆಂತರ್ಯಾಮಿಯಾಗಿದ್ದಾನೆಂಬ ಅಭಿಪ್ರಾಯದಿಂದ "ಅಂತರ್ಯಾಮೀ ವಿಷ್ಣುರೇವ" ಇತ್ಯಾದಿ ಟೀಕೆಯನ್ನು ವಿವರಿಸುತ್ತಿದ್ದಾರೆ. ಮೊದಲಿಗೆ ಪೃಥಿವ್ಯಾದ್ಯವಿದಿತತ್ವವು ನಿರವಕಾಶವಾಗಿದೆಯೆಂಬ ವಿಷಯವನ್ನು 'ಪೃಥಿವ್ಯಾದೇಃ' ಎಂಬ ವಾಕ್ಯದಿಂದ ಸಮರ್ಥಿಸುತ್ತಿದ್ದಾರೆ.

ಪ್ರಕಾಶಃ – यदुक्तं पृथिव्यादेर्जडत्वेन तदवेद्यत्वं प्रकृत्यादौ युक्तमिति, तत्र बाधकत्रयं वदन् पूर्वार्धं व्यनक्ति – **यमिति** । जडे ज्ञानमात्रस्यैवाभावेन 'न वेद' इत्येव वाच्यं, नतु 'यम्' इति विषयविशेषोपादानमित्यर्थः ।

ಹಿಂದೆ ಪೃಥಿವ್ಯಾದಿಗಳು ಜಡವಾದ್ದರಿಂದ ಇವುಗಳಿಂದ ಅವೇದ್ಯತ್ವವು ಪ್ರಕೃತ್ಯಾದಿಗಳಲ್ಲಿ ಯುಕ್ತವಾಗುತ್ತದೆಂದು. ಹೇಳಲಾಗಿತ್ತು. ಈ ವಿಷಯದಲ್ಲಿ ಮೂರು ಬಾಧಕಗಳನ್ನು ಹೇಳುತ್ತಾ ಶ್ಲೋಕದ ಪೂರ್ವಾರ್ಧವನ್ನು ಸ್ವತಃ ತಾವೇ ವ್ಯಾಖ್ಯಾನಿಸುತ್ತಿದ್ದಾರೆ. 'ಯಂ ಪೃಥಿವೀ' ಇತ್ಯಾದಿಯಾಗಿ. ಜಡಪದಾರ್ಥದಲ್ಲಿ ಜ್ಞಾನಮಾತ್ರವೇ ಇರಲು ಸಾಧ್ಯವಿರದ ಕಾರಣ 'ನ ವೇದ' ಎಂದಷ್ಟೇ ಹೇಳಬೇಕಿತ್ತು. ವಿಷಯವಿಶೇಷವನ್ನು ಪ್ರತಿಪಾದಿಸುವ 'ಯಂ' ಎಂಬ ಪದವನ್ನು ಹೇಳಬಾರದಾಗಿತ್ತೆಂದು ಅಭಿಪ್ರಾಯ.

ಪ್ರಕಾಶಃ – **यमात्मेति** । पृथिव्यादौ ज्ञानमात्रनिषेधे "यमात्मा" इत्यादावपि तथात्वापत्त्या चेतनस्य ज्ञानसामान्यनिषेधायोग इत्यर्थः । श्लोके 'अप्रसक्त' इत्युक्तिरुपलक्षणमिति भावः । **अप्रसक्तेति** । जडे ज्ञानप्रसक्तेरेवाभावादिति भावः ।

'ಯಮಾತ್ಮಾ ನ ವೇದ' ಇತ್ಯಾದಿ ವಾಕ್ಯಕ್ಕೆ ಹೀಗರ್ಥ - ಪೃಥಿವ್ಯಾದಿಗಳಲ್ಲಿ ಜ್ಞಾನಸಾಮಾನ್ಯವನ್ನು ನಿಷೇಧ ಮಾಡಿದರೆ 'ಯಮಾತ್ಮಾ' ಮುಂತಾದ ಸ್ಥಳದಲ್ಲಿಯೂ ಜ್ಞಾನಸಾಮಾನ್ಯವನ್ನೇ ನಿಷೇಧ ಮಾಡಿದಂತಾಗುತ್ತದೆ. ಎಂದರೆ ಚೇತನ ಪದಾರ್ಥಕ್ಕೆ ಜ್ಞಾನಸಾಮಾನ್ಯವನ್ನು ನಿಷೇಧ ಮಾಡಿದಂತಾಗುವುದು. ಇದು ತಪ್ಪಾಗುತ್ತದೆಂದು ಅಭಿಪ್ರಾಯ. ಶ್ಲೋಕದಲ್ಲಿ 'ಅಪ್ರಸಕ್ತ' ಎಂದು ಹೇಳಿರುವುದು ಉಪಲಕ್ಷಣವಾಗಿದೆಯೆಂದು ತಿಳಿಯಬೇಕು. 'ಅಪ್ರಸಕ್ತೇಃ' ಎಂದರೆ ಜಡಪದಾರ್ಥದಲ್ಲಿ ಜ್ಞಾನಕ್ಕೆ ಪ್ರಸಕ್ತಿಯೇ ಇಲ್ಲವಾದ್ದರಿಂದ ಎಂದು ಅಭಿಪ್ರಾಯ.

ಪ್ರಕಾಶಃ – ननु 'पृथिव्यामग्निश्चेतव्यो नान्तरिक्षे न दिवि हिरण्यं निधाय चेतव्यम्" इत्यत्रेष्टकावेदिकारूपाग्निचयनस्य "नान्तरिक्षे" इत्यत्राप्रसक्तविषयत्वेऽपि यथा नित्यानुवादत्वं तद्वत्स्यादित्यत आह – **नेति** ।

ಆಕ್ಷೇಪ - ಅಪ್ರಸಕ್ತವಾದದ್ದನ್ನು ನಿಷೇಧ ಮಾಡಬಾರದೆಂದೇನೂ ನಿಯಮವಿಲ್ಲ. ಪೂರ್ವಮೀಮಾಂಸೆಯಲ್ಲಿ "ಪೃಥಿವ್ಯಾಮಗ್ನಿಶ್ಚೇತವ್ಯೋ ನಾಂತರಿಕ್ಷೇ ನ ದಿವಿ ಹಿರಣ್ಯಂ ನಿಧಾಯ ಅಂತರ್ಯಾಮ್ಯಧಿಕರಣ (೧-೨-೫)

ಚೇತವ್ಯಮ್'' ಎಂಬಲ್ಲಿ ಇಟ್ಟಿಗೆಯಿಂದ ನಿರ್ಮಾಣ ಮಾಡಲ್ಪಡುವ ವೇದಿಕೆಯೆಂಬ ಅಗ್ನಿಸೇನವನ್ನು 'ನಾಂತರಿಕ್ಷೇ' ಎಂಬುದಾಗಿ ಅಂತರಿಕ್ಷದಲ್ಲಿ ನಿರ್ಮಾಣ ಮಾಡಬಾರದೆಂದು ನಿಷೇಧಿಸಲಾಗಿದೆ. ವಸ್ತುತಃ ವೇದಿಕೆಯ ನಿರ್ಮಾಣವನ್ನು ಭೂಮಿಯ ಮೇಲೆ ಮಾಡಬಹುದೇ ಹೊರತು ಅಂತರಿಕ್ಷದಲ್ಲಿ ನಿರ್ಮಾಣ ಮಾಡುವ ಪ್ರಸಕ್ತಿಯೇ ಬರುವುದಿಲ್ಲ. ಹೀಗಿರುವಾಗ 'ನಾಂತರಿಕ್ಷೇ' ಎಂಬ ನಿಷೇಧವು ನಿಮ್ಮ ಪ್ರಕಾರ ತಪ್ಪಾಗಬೇಕಾದೀತು. ಆದರೆ ಈ ವಾಕ್ಯವು ಅಪ್ರಸಕ್ತವಿಷಯವಾದರೂ ಸಹ ಇದನ್ನು ನಿತ್ಯಾನುವಾದವೆಂದು ಅಂದರೆ ವಸ್ತುಸ್ಥಿತಿಕಥನವೆಂದು ಹೇಳಿದ್ದಾರೆ. ಆದರಂತೆ ಪ್ರಕೃತದಲ್ಲಿಯೂ ಪೃಥಿವ್ಯಾದಿ ಜಡಪದಾರ್ಥಗಳಲ್ಲಿ ಜ್ಞಾನದ ಪ್ರಸಕ್ತಿಯಿಲ್ಲದಿದ್ದರೂ ತಿಳಿಯುವುದಿಲ್ಲವೆಂಬ ಜ್ಞಾನದ ನಿಷೇಧವು ವಸ್ತುಸ್ಥಿತಿಕಥನವೆಂದು ಹೇಳಬಹುದಲ್ಲವೇ?

ಸಮಾಧಾನ - ಈ ಆಕ್ಷೇಪಕ್ಕೆ 'ನಾಂತರಿಕ್ಷೇ' ಎಂಬುದರಿಂದ ಉತ್ತರಿಸುತ್ತಿದ್ದಾರೆ.

ಪ್ರಕಾಶಃ – ಆಚಸ್ಯ ದ್ವಿತೀಯಪಾದೇ ಅರ್ಥವಾದನಯೇ ''ಅಭಾಗಿಪ್ರತಿಷೇಧಾತ್'' ಇತಿ ಗುಣಸೂತ್ರೇ ''ನಾನ್ತರಿಕ್ಷೇ'' ಇತ್ಯಾದೇರಪ್ರಸಕ್ತನಿಷೇಧೇನಾಪ್ರಾಮಾಣ್ಯಮಾಶಙ್ಕ್ಯ ''ಅನ್ತ್ಯೋರ್ಯಥೋಕ್ತಮ್'' ಇತಿ ಸಿದ್ಧಾನ್ತಗುಣಸೂತ್ರೇಣ ಹಿರಣ್ಯಸ್ತುತ್ಯರ್ಥಮಿತರನಿನ್ದಾ ಕ್ರಿಯತೇ ।

ಅರ್ಥವಾದಾಧಿಕರಣದಲ್ಲಿ ಬರುವ 'ಅಭಾಗಿಪ್ರತಿಷೇಧಾತ್' ಎಂಬ ಈ ಗುಣಸೂತ್ರದಲ್ಲಿ 'ಅಂತರಿಕ್ಷೇ' ಇತ್ಯಾದಿಯಾದ ಅಪ್ರಸಕ್ತ ನಿಷೇಧಕ್ಕೆ ಅಪ್ರಾಮಾಣ್ಯವನ್ನು ಆಶಂಕಿಸಲಾಗಿದೆ. ಅನಂತರ ''ಅನ್ತ್ಯೋರ್ಯಥೋಕ್ತಮ್'' ಎಂಬ ಸಿದ್ಧಾಂತದ ಗುಣಸೂತ್ರದಲ್ಲಿ ಹಿರಣ್ಯಸ್ತುತಿಗೋಸ್ಕರ ಇತರ ನಿಂದೆಯನ್ನು ಮಾಡಲಾಗಿದೆಯೆಂದು ಸಿದ್ಧಾಂತ ಮಾಡಲಾಗಿದೆ. ಅಂದರೆ ಹಿರಣ್ಯಸ್ತಾಪನೆಯನ್ನು ಮಾಡಿಯೇ ಇಟ್ಟಿಗೆಗಳಿಂದ ಯಜ್ಞವೇದಿಕೆಯನ್ನು ತಯಾರಿಸಬೇಕು. ಈ ವಿಷಯವನ್ನು ದೃಢಪಡಿಸುವುದಕ್ಕಾಗಿ ಆಕಾಶಾದಿಗಳಲ್ಲಿ ವೇದಿಕೆಯನ್ನು ನಿರ್ಮಾಣ ಮಾಡಬಾರದೆಂದು ಶ್ರುತಿ ಹೇಳುತ್ತಿದೆ.

ಪ್ರಕಾಶಃ – 'असति प्रसङ्गे निषेधो नित्यानुवादः' इत्युक्तमभियुक्तैः । इह तु न तथा, विधेयान्तराभावदिति भावः ।

'ಅಸತಿ ಪ್ರಸಂಗೇ ನಿಷೇಧೋ ನಿತ್ಯಾನುವಾದಃ' ಪ್ರಸಕ್ತವಾಗದಿದ್ದರೂ ನಿಷೇಧ ಮಾಡಿದರೆ ಅದನ್ನು ನಿತ್ಯವಿಧಿಯೆಂದು ಅಭಿಯುಕ್ತರು ಅಭಿಪ್ರಾಯ ಪಡುತ್ತಾರೆ. ಆದ್ದರಿಂದ ಪೂರ್ವಮೀಮಾಂಸಾ ದೃಷ್ಟಾಂತವು ವಿಷಮವಾಗಿದೆ. ಏಕೆಂದರೆ ಹಿರಣ್ಯಸ್ಥಾಪನೆಯೆಂಬ ಮತ್ತೊಂದು ವಿಧೇಯವು ಅಲ್ಲಿ ಇರುವಂತೆ ಪ್ರಕೃತ ಅಂತಹ ವಿಧೇಯಾಂತರವು ಇರುವುದಿಲ್ಲ ಎಂದರೆ ಜಡದಲ್ಲಿ ಜ್ಞಾನಪ್ರಸಕ್ತಿಯನ್ನು ನಿಷೇಧ ಮಾಡಲು ಹೊರಟಾಗ ದೃಷ್ಟಾಂತದಲ್ಲಿ ಯಾವುದನ್ನೂ ವಿಧಾನ ಮಾಡುತ್ತಿಲ್ಲ. ಆದ್ದರಿಂದ ದೃಷ್ಟಾಂತ - ದಾರ್ಷ್ಟಾಂತಿಕಗಳಲ್ಲಿ - ವ್ಯತ್ಯಾಸವನ್ನು ಗಮನಿಸಬೇಕು.

ಪ್ರಕಾಶಃ – 'एव' इत्यनेनाभिमानिनयन्यायेन पृथिव्यादिशब्दानाम् अभिमानिन्येव मुख्यत्वान्मुख्यसम्भवे नामुख्यं ग्राह्यमिति सूचितम् ।

'ಏವ' ಎಂಬುದರಿಂದ ಅಭಿಮಾನಿ ಅಧಿಕರಣದ ನ್ಯಾಯದಂತೆ ಪೃಥಿವ್ಯಾದಿ ಶಬ್ದಗಳೆಲ್ಲವೂ ಅಭಿಮಾನಿದೇವತೆಗಳನ್ನೇ ಮುಖ್ಯವಾಗಿ ಪ್ರತಿಪಾದಿಸುತ್ತವೆಂದು ತಿಳಿಯುತ್ತದೆ. ಹೀಗೆ ಮುಖ್ಯಾರ್ಥವನ್ನೇ ಸ್ವೀಕರಿಸಲು ಬರುವಾಗ ಆಮುಖ್ಯಾರ್ಥವನ್ನು ಸ್ವೀಕರಿಸಬಾರದೆಂದು ಸೂಚಿಸಿದ್ದಾರೆ.

ಪ್ರಕಾಶಃ – एतेन ''पृथिव्यादीनामधिदैवत्वेन जडत्वाभावात्'' इति टीका विवृता । ''यमात्मा न वेद'' इति पृथगुक्तिस्तु आत्माभिमानिपरत्वाद्युक्तेति भावः ।

ಹೀಗೆ ಹೇಳಿದ್ದರಿಂದ ''ಪೃಥಿವ್ಯಾದೀನಾಮಧಿದೈವತ್ವೇನ ಜಡತ್ವಾಭಾವಾತ್'' 'ಪೃಥಿವ್ಯಾದಿಗಳು ಅಧಿದೈವವಾದ್ದರಿಂದ ಜಡವಲ್ಲ' ಎಂಬ ಟೀಕೆಯನ್ನು ವಿವರಿಸಿದಂತಾಯಿತು. 'ಯಮಾತ್ಮಾ ನ ವೇದ' ಎಂದು ಪ್ರತ್ಯೇಕವಾಗಿ ಹೇಳಿದ್ದರಿಂದ ಅಲ್ಲಿ ಆತ್ಮಶಬ್ದಕ್ಕೆ ಆತ್ಮಾಭಿಮಾನಿ ಜೀವ ಎಂದರ್ಥ. ಆತ್ಮನಿಗೆ ಅಭಿಮಾನಿಯಾದ ದೇವತೆಯಿಂದಲೂ ಭಗವಂತನು ಅವೇದ್ಯ ಹಾಗೂ ಅವನಿಗೂ ಭಗವಂತನು ಅಂತರ್ಯಾಮಿಯಾಗಿದ್ದಾನೆ ಎಂದರ್ಥ.

ಪ್ರಕಾಶಃ – ततश्च किमित्यतः उत्तरार्धं व्यनक्ति – तेन चेति । चेतनेनेत्यर्थः । लेशेन विदितत्वस्य सर्वत्र सम्भवेन तन्निषेधायोगात्, तदन्यथानुपपत्त्यैव साकल्येनाविदितत्वं लभ्यते । तच्च ''न ते विष्णो जायमानः'' इत्यादिभिः हरेरेवेत्यर्थः ।

ಹೀಗೆ ಹೇಳಿದ್ದರಿಂದ ಏನು ತಿಳಿಯತು ? ಎಂಬ ಪ್ರಶ್ನೆಗೆ ಶ್ಲೋಕದ ಉತ್ತರಾರ್ಧವನ್ನು ಸ್ವತಃ ವ್ಯಾಖ್ಯಾನಿಸುತ್ತಾ ಉತ್ತರಿಸುತ್ತಿದ್ದಾರೆ 'ತೇನ ಚ' ಇತ್ಯಾದಿಯಾಗಿ. 'ತೇನ' ಎಂಬ ಪದಕ್ಕೆ ಚೇತನನಿಂದ ಎಂದರ್ಥ. ಲೇಶತಃ ತಿಳುವಳಿಕೆಯು ಎಲ್ಲಾ ಪದಾರ್ಥಗಳಲ್ಲೂ ಬರುವುದರಿಂದ ಅದನ್ನು ನಿಷೇಧ ಮಾಡಲು ಸಾಧ್ಯವಿಲ್ಲ. ಆದ್ದರಿಂದ ಇದರ ಅನ್ಯಥಾನುಪಪತ್ತಿಯಿಂದ ಸಾಕಲ್ಯೇನಾವಿದಿತತ್ವವನ್ನೇ ಶ್ರುತಿಯ ಅರ್ಥವೆನ್ನಬೇಕು. ಇಂತಹ ಸಾಕಲ್ಯೇನ ಅವಿದಿತತ್ವವು ''ನ ತೇ ವಿಷ್ಣೋ ಜಾಯಮಾನಃ'' ಎಂಬ ಶ್ರುತಿಯ ಆಧಾರದಿಂದ ಭಗವಂತನಿಗೇ ಇದೆ ಎಂದು ಸ್ಪಷ್ಟವಾಗುತ್ತದೆ.

ಪ್ರಕಾಶಃ – ''यः पृथिवीमन्तरो यमयति'' इति श्रुतान्तरत्वमपि निरवकाशमित्याह – अन्तरत्वं चेति । 'अन्यत्र न युक्तम्' इत्यन्वयः । 'स्मृत्युक्तं' बृहदारण्यकभाष्योक्तस्मृत्युक्तमित्यर्थः ।

'ಯಃ ಪೃಥಿವೀಮಂತರೋ ಯಮಯತಿ'' ಎಂಬಲ್ಲಿ ಕೇಳಿಸುತ್ತಿರುವ ಅಂತರತ್ವವೂ ಸಹ ನಿರವಕಾಶವಾಗಿದೆಯೆಂದು 'ಅಂತರತ್ವಂ ಚ' ಎಂಬ ವಾಕ್ಯದಿಂದ ಪ್ರತಿಪಾದಿಸುತ್ತಿದ್ದಾರೆ. 'ಅನ್ಯತ್ರ' ಎಂಬ ಪದಕ್ಕೆ 'ನ ಯುಕ್ತಂ' ಎಂಬಲ್ಲಿ ಅನ್ವಯ. 'ಸ್ಮೃತ್ಯುಕ್ತಂ' ಎಂದರೆ ಬೃಹದಾರಣ್ಯಕಭಾಷ್ಯದಲ್ಲಿ ಉದಾಹರಿಸಲ್ಪಟ್ಟ ಸ್ಮೃತಿಯಲ್ಲಿ ಹೇಳಲ್ಪಟ್ಟದೆ ಎಂದರ್ಥ.

ಪ್ರಕಾಶಃ – ಪೂರ್ವಾರ್ಧತಾತ್ಪರ್ಯ – ಸ್ವತೋ ನಿತ್ಯತೃಪ್ತಾದಿತಿ । ಉತ್ತರಾರ್ಧತಾತ್ಪರ್ಯ – ಪ್ರೇಯ ಇತ್ಯಾದಿ । ಶ್ರುತ್ಯೇತಿ । ವಾಜಸನೇಯಶ್ರುತ್ಯೇತ್ಯರ್ಥಃ । ಸೂತ್ರಭಾಷ್ಯಾದ್ಯುಕ್ತಮುಪಲಕ್ಷಣಂ ಮತ್ವಾ ಸ್ವಯಂ ಸಮಾಖ್ಯಾಮಪ್ಯಾಹ – ಕಿಞ್ಚೇತಿ ।

'ಬಾಹ್ಯಾಪೇಕ್ಷಾ' ಎಂಬ ಶ್ಲೋಕದ ಪೂರ್ವಾರ್ಧವನ್ನು ವ್ಯಾಖ್ಯಾನಿಸುತ್ತಿದ್ದಾರೆ ಸ್ವತಃ 'ನಿತ್ಯತೃಪ್ತಾತ್ವಾತ್' ಎಂಬುದಾಗಿ. ಉತ್ತರಾರ್ಧದ ತಾತ್ಪರ್ಯವನ್ನು 'ಪ್ರೇಯಃ' ಇತ್ಯಾದಿಯಾಗಿ ಹೇಳಿದ್ದಾರೆ. ಶ್ರುತ್ಯಾ ಎಂದರೆ ವಾಜಸನೇಯ ಶ್ರುತಿಯಿಂದ ಎಂದರ್ಥ. ಸೂತ್ರ ಹಾಗೂ ಭಾಷ್ಯದಲ್ಲಿ ಹೇಳಿದ್ದು ಕೇವಲ ಉಪಲಕ್ಷಣವೆಂದು ತಿಳಿದು ಗ್ರಂಥಕಾರರು ಸ್ವತಃ ಸಮಾಖ್ಯಾಪ್ರಮಾಣವನ್ನೂ ಸಹ ಹೇಳುತ್ತಿದ್ದಾರೆ. 'ಕಿಂಚ' ಇತ್ಯಾದಿಯಾಗಿ.

**ಪ್ರಕಾಶಃ – 'ಶ್ರುತ್ಯನ್ತರೇ' ಸುಬಾಲೋಪನಿಷದಿ । ''ತದಾಹುಃ ಕಿನ್ತದಾಸೀನ್ನೈವೇಹ ಕಿಞ್ಚನಾಗ್ರ ಆಸೀತ್' ಅಮೂಲಮನಾಧಾರಾ ಇಮಾಃ ಪ್ರಜಾಃ ಪ್ರಜಾಯನ್ತೇ, ದಿವ್ಯೋ ದೇವ ಏಕೋ ನಾರಾಯಣಶ್ಚಕ್ಷುಶ್ಚ ದ್ರಷ್ಟವ್ಯಂ ಚ ನಾರಾಯಣಃ ಶ್ರೋತ್ರಂ ಚ ಶ್ರೋತವ್ಯಂ ಚ ನಾರಾಯಣಃ ಮನಶ್ಚ ಮನ್ತವ್ಯಂ ಚ ನಾರಾಯಣಃ ವಿಜ್ಞಾನಞ್ಚ ವಿಜ್ಞಾತವ್ಯಂ ಚ ನಾರಾಯಣಃ ಪ್ರಾಣಶ್ಚ ಪ್ರಾಣಿತವ್ಯಂ ಚ ನಾರಾಯಣಃ ಅಪಾನಶ್ಚಾಪಾನಿತವ್ಯಂ ಚ ನಾರಾಯಣಃ ವ್ಯಾನಶ್ಚ ವ್ಯಾನಿತವ್ಯಂ ಚ ನಾರಾಯಣಃ ಉದಾನಶ್ಚೋದಾನಿತವ್ಯಂ ಚ ನಾರಾಯಣಃ ಸಮಾನಶ್ಚ ಸಮಾನಿತವ್ಯಂ ಚ ನಾರಾಯಣಃ ಅನ್ನಞ್ಚಾದ್ಯಂ ಚ ನಾರಾಯಣಃ ತೇಜಶ್ಚ ತೇಜಯಿತವ್ಯಂ ಚ ನಾರಾಯಣಃ ಆಕಾಶಶ್ಚಾಕಾಶಯಿತವ್ಯಂ ಚ ನಾರಾಯಣಃ ಆತ್ಮಾ ಚಾನಾತ್ಮಾ ಚ ನಾರಾಯಣಃ ಅಹಙ್ಕಾರಶ್ಚಾಹಙ್ಕರ್ತವ್ಯಂ ಚ ನಾರಾಯಣಃ ಬುದ್ಧಿಶ್ಚ ಬೋದ್ಧವ್ಯಂ ಚ ನಾರಾಯಣಃ ಚಿತ್ತಞ್ಚ ಚೇತಯಿತವ್ಯಂ ಚ ನಾರಾಯಣಃ ಅವ್ಯಕ್ತಞ್ಚ ವ್ಯಞ್ಜಯಿತವ್ಯಂ ಚ ನಾರಾಯಣಃ ಅಕ್ಷರಞ್ಚಾಕ್ಷರಯಿತವ್ಯಂ ಚ ನಾರಾಯಣಃ ಮೃತ್ಯುಶ್ಚ ಮಾರಯಿತವ್ಯಂ ಚ ನಾರಾಯಣಃ ಸ್ಥಿತಿಶ್ಚ ಸ್ಥಾತವ್ಯಂ ಚ ನಾರಾಯಣಃ ಸರ್ವಂ ಚ ಸರ್ವಯಿತವ್ಯಂ ಚ ನಾರಾಯಣಃ ಅನ್ತರ್ಯಾಮ್ಯಮೃತಃ ಪರಮಾತ್ಮಾ ಚ ನಾರಾಯಣಃ ಪರಂ ಜ್ಯೋತಿರುಪಸಮ್ಪದ್ಯ ಸ್ವೇನ ರೂಪೇಣಾಭಿನಿಷ್ಪದ್ಯತೇ ಸ ಆತ್ಮಾನ್ತರ್ಯಾಮ್ಯಮೃತಃ ಪರಮಾತ್ಮಾ ನಾರಾಯಣಃ ಪರೋಽವ್ಯಕ್ತಾದಿಪುರುಷಃ ಸರ್ವಜ್ಞಃ ಸರ್ವಶಕ್ತಿಃ ಸರ್ವಾನನ್ದಃ ಸರ್ವಾಧಾರಃ ಸರ್ವಾಶ್ರಯಃ ಸರ್ವಾತ್ಮಾ ಸರ್ವಾಧಿಷ್ಠಾನಃ ಸರ್ವಾಧಿಪತಿಃ ಸರ್ವಾಧ್ಯಕ್ಷಃ ಸರ್ವಾಭಿಮಾನೀ ಸರ್ವಾಭಿಮಾನಿಷು ಸರ್ವಾತ್ಮಕಃ ಸರ್ವಾತ್ಮಕೇ

ಪ್ರಕಾಶಃ – ಯದ್ವಾ – ''ಅಧಿದೈವಾದಿಷು'' ಇತಿ ಸಾಮಾನ್ಯೋಕ್ತ್ಯಾ ಶ್ರುತ್ಯನ್ತರಸ್ಥಾಧಿದೈವಾದಿ-ಪ್ರಕರಣಸ್ಯಾಪಿ ಸೂತ್ರಾದೌ ಸಙ್ಗ್ರಹಸೂಚನಾದತ್ರ ತದುಕ್ತಿಃ ।

ಅಥವಾ ಸೂತ್ರದಲ್ಲಿ ''ಅಧಿದೈವಾದಿಷು'' ಎಂದು ಸಾಮಾನ್ಯವಾಗಿ ಹೇಳಿರುವುದರಿಂದ ಬೇರೆ ಶ್ರುತಿಯಲ್ಲಿರುವ ಅಧಿದೈವಾದಿ ಪ್ರಕರಣವನ್ನೂ ಸಹ ಸೂತ್ರದಲ್ಲಿ ಸಂಗ್ರಹಿಸಬೇಕೆಂದು ವಿವಕ್ಷಿಸಬೇಕು. ಆದ್ದರಿಂದಲೇ ಇಲ್ಲಿ ಸಮಾಖ್ಯಾಪ್ರಮಾಣವನ್ನು ಹೇಳಿದ್ದಾರೆ.

ಪ್ರಕಾಶಃ – ಯದ್ವಾ – 'ತದ್ಧರ್ಮಶ್ಚ ವ್ಯಪದೇಶಶ್ಚ' ಇತಿ ಸಮಾಹಾರದ್ವನ್ದ್ವೇನ ''ಸಮ್ಭೃತಿದ್ಯುವ್ಯಾಪಿ'' ಇತಿವದಯಂ ಸೂತ್ರಭಾಷ್ಯಟೀಕಾಸು ''ತದ್ಧರ್ಮವ್ಯಪದೇಶಾತ್'' ಇತಿ ನಿರ್ದೇಶ ಇತಿ ಮತ್ವಾ, ವ್ಯಪದೇಶಶಬ್ದಾರ್ಥತಯಾ ಸಮಾಖ್ಯೋಕ್ತಿರಿತಿ ಸೂತ್ರಾದೇರರ್ಥಾನ್ತರಮಪಿ ಧ್ಯೇಯಮ್ ।

ಅಥವಾ ಸೂತ್ರದಲ್ಲಿ ''ತದ್ಧರ್ಮಶ್ಚ ವ್ಯಪದೇಶಶ್ಚ'' ಎಂದು ಸಮಾಹಾರದ್ವಂದ್ವವನ್ನು ಮಾಡಬಹುದು. ಆವಾಗ ''ಸಂಭೃತಿದ್ಯುವ್ಯಾಪ್ತಿ'' ಎಂಬಂತೆ ಇಲ್ಲಿಯೂ ಸಹ ಸೂತ್ರ ಭಾಷ್ಯ ಹಾಗೂ ಟೀಕೆಗಳಲ್ಲಿ ''ತದ್ಧರ್ಮವ್ಯಪದೇಶಾತ್'' ಎಂಬ ಪದವನ್ನು ಬಳಸಿರುತ್ತಾರೆ. ಹೀಗೆ ಸಮಾಸವನ್ನು ಆಶ್ರಯಿಸಿದಾಗ ವ್ಯಪದೇಶಶಬ್ದದಿಂದ ಸಮಾಖ್ಯಪ್ರಮಾಣವನ್ನು ಹೇಳಿದಂತಾಗುತ್ತದೆ. ಇದು ಸೂತ್ರಕ್ಕೆ ಮತ್ತೊಂದು ಬಗೆಯ ವ್ಯಾಖ್ಯಾನವೆಂದು ತಿಳಿಯಬೇಕು.

ಪ್ರಕಾಶಃ – ಯದಪಿ ಪೃಥಿವ್ಯಾದಿಶರೀರತ್ವಂ ಪರಸಾಧಕಂ ಸ್ವಬಾಧಕಂ, ತಸ್ಯ ''ಅತದ್ಧರ್ಮಾಭಿಲಾಪಾತ್'' ಇತಿ ದ್ವಿತೀಯಸೂತ್ರಾಂಶಲಭ್ಯಂ ಸಾವಕಾಶತ್ವಂ, ''ಯೋಗವೃತ್ತ್ಯಾ ತಸ್ಮಿನ್ ಪೃಥಿವ್ಯಾದಿಶರೀರತ್ವವ್ಯಪದೇಶೋಪಪತ್ತೇಃ'' ಇತಿ ಭಾಷ್ಯಟೀಕೋಕ್ತಮ್ ಅನ್ಯತ್ರೋಕ್ತಸಾವಕಾಶತ್ವಪ್ರಕಾರಂ ಚ ಸಙ್ಗೃಹ್ಯಾಹ – ಪೃಥಿವ್ಯಾದೇರಿತಿ ।

ಮತ್ತೇನೆಂದರೆ ಪೃಥಿವ್ಯಾದಿಶರೀರತ್ವವು ಪರಪಕ್ಷದಲ್ಲಿ ಸಾಧಕ ಪ್ರಮಾಣವಾದೆ. ಹಾಗೂ ಸ್ವಪಕ್ಷದಲ್ಲಿ ಬಾಧಕಪ್ರಮಾಣವಾಗಿದೆ ಎಂದು ತೋರುತ್ತದೆ. ಆದರ ''ಅತದ್ಧರ್ಮಾಭಿಲಾಪಾತ್'' ಎಂಬ ಎರಡನೇ ಸೂತ್ರದಿಂದ ತಿಳಿಯುವ ಸಾವಕಾಶತ್ವವನ್ನು ಮತ್ತು ''ಯೋಗವೃತ್ತ್ಯಾ ತಸ್ಮಿನ್ ಪೃಥಿವ್ಯಾದಿಶರೀರತ್ವವ್ಯಪದೇಶೋಪಪತ್ತೇಃ'' ವಿಷ್ಣುವಿನಲ್ಲಿ ಯೋಗವೃತ್ತಿಯಿಂದ ಪೃಥಿವ್ಯಾದಿ ಶರೀರತ್ವವನ್ನು ಉಪಪಾದಿಸಬಹುದೆಂಬ ಭಾಷ್ಯ ಹಾಗೂ ಟೀಕೆಗಳಲ್ಲಿ ಹೇಳಲ್ಪಟ್ಟ ಸಾವಕಾಶತ್ವವನ್ನು ಮತ್ತು ಬೇರೆ ಕಡೆ ಹೇಳಲ್ಪಟ್ಟ ಸಾವಕಾಶತ್ವ ಪ್ರಕಾರವನ್ನೂ ಸಹ 'ಪೃಥಿವ್ಯಾದೇಃ ' ಇತ್ಯಾದಿ ವಾಕ್ಯದಿಂದ ಸಂಗ್ರಹಿಸಿದ್ದಾರೆ.

ಪ್ರಕಾಶಃ – ನನು ರೂಢಿರ್ಬಲವತೀತ್ಯತ ಉಕ್ತಂ – ರೂಢಸ್ಯೇತಿ । ಉಕ್ತಬಾಧಕೇಭ್ಯ ಇತಿ ಭಾವಃ । ದೃಷ್ಟಾನ್ತಾಂಶಂ ವ್ಯನಕ್ತಿ – ಯಥೇತಿ । ''ಕದಾಚನ ಸ್ತರೀರಸಿ ನೇನ್ದ್ರ'' ಇತಿ ಪುರೋನುವಾಕ್ಯಾ, ''ನಿವೇಶನಃ'' ಇತಿ ಯಾಜ್ಯಾ, ''ಇನ್ದ್ರೋ ನ ತಸ್ಥೌ'' ಇತ್ಯುಪರಿಷ್ಟಾಲ್ಲಕ್ಷ್ಮ-ಶ್ರವಣಾತ್ ।

ಶರೀರ ಶಬ್ದಕ್ಕೆ ರೂಢ್ಯರ್ಥವನ್ನು ಸ್ವೀಕರಿಸುವುದೇ ನ್ಯಾಯವೆಂದು ಹಿಂದೆ ಸಮರ್ಥಿಸಿದ್ದರಲ್ಲವೇ? ಎಂಬ ಪ್ರಶ್ನೆಗೆ 'ರೂಢಸ್ಯ' ಎಂಬ ವಾಕ್ಯದಿಂದ ಉತ್ತರಿಸುತ್ತಿದ್ದಾರೆ. ಹಿಂದೆ ಹೇಳಿದ ಬಾಧಕಗಳಿರುವುದರಿಂದ ರೂಢ್ಯರ್ಥವನ್ನು ಬಿಡಬಹುದೆಂದು ತಿಳಿಯಬೇಕು. ಈ ವಿಷಯದಲ್ಲಿ ದೃಷ್ಟಾಂತವನ್ನು 'ಯಥಾ' ಇತ್ಯಾದಿ ವಾಕ್ಯದಿಂದ ನೀಡುತ್ತಿದ್ದಾರೆ. ''ಕದಾಚನ ಸ್ತರೀರಸಿ ನೇಂದ್ರ'' ಎಂಬುದು ಪುರೋನುವಾಕ್ಯಾ ಮಂತ್ರ ''ನಿವೇಶಯಂತಃ'' ಎಂಬುದು ಯಾಜ್ಯಾಮಂತ್ರ. ಏಕೆಂದರೆ ''ಇಂದ್ರೋ ನ ತಸ್ಥೌ'' ಎಂಬುದಾಗಿ ಮುಂದೆ ಲಕ್ಷಣವು ಕೇಳಿಸುತ್ತಿರುವುದರಿಂದ.

ಪ್ರಕಾಶಃ – ತತ್ರ ''ಐಂದ್ರ್ಯಾ ಗಾರ್ಹಪತ್ಯಮುಪತಿಷ್ಠತೇ'' ಇತಿ ಶ್ರೌತವಿನಿಯೋಗೇನ ಮನ್ತ್ರಸ್ಯ ಗಾರ್ಹಪತ್ಯಶೇಷತಯಾ ತತ್ಪ್ರಕಾಶಕತ್ವಾನ್ಮನ್ತ್ರಸ್ಥೇನ್ದ್ರಶಬ್ದಸ್ಯೇದ್ಧಿಧಾತ್ವರ್ಥಸ್ವೋಚಿತೈಶ್ವರ್ಯಯೋಗೇನ ವಾ ಯಜ್ಞಸಾಧನತ್ವಗುಣಮೂಲಯಾ ಗೌಣ್ಯಾ ವೃತ್ತ್ಯಾ ವೇತ್ಯರ್ಥಃ ।

ಪೂರ್ವಮೀಮಾಂಸೆಯಲ್ಲಿ 'ಐಂದ್ರ್ಯಾ ಗಾರ್ಹಪತ್ಯಮುಪತಿಷ್ಠತೇ' ಎಂಬಲ್ಲಿ 'ಉಪತಿಷ್ಠತೇ' ಎಂಬ ಶ್ರುತ್ಯುಕ್ತವಿನಿಯೋಗದಿಂದ ಐಂದ್ರೀಮಂತ್ರಕ್ಕೆ ಗಾರ್ಹಪತ್ಯಶೇಷತ್ವವನ್ನು ಅಂಗೀಕರಿಸಲಾಗಿದೆ. ಅಂದರೆ ಅಗ್ನಿಯನಿಸಿದ ಗಾರ್ಹಪತ್ಯನಲ್ಲಿ ಇಂದ್ರ ಶಬ್ದವನ್ನು ಪ್ರಯೋಗಿಸಲಾಗಿದೆ. ಇದು ತಪ್ಪಲ್ಲವೇ ? ಎಂಬ ಪ್ರಶ್ನೆ ಬಂದರೆ ಸಮಾಧಾನ ಹೀಗಿದೆ - ಗಾರ್ಹಪತ್ಯಾಗ್ನಿಯಲ್ಲಿಯೂ ತನಗೆ ಉಚಿತವಾದ ಐಶ್ವರ್ಯವಿರುತ್ತದೆ. ಆದ್ದರಿಂದ 'ಇದಿ' ಧಾತ್ವರ್ಥವಾದ ಐಶ್ವರ್ಯವೆಂಬ ಯೋಗಾರ್ಥವನ್ನು ಅಗ್ನಿಯಲ್ಲಿ ಹೇಳಬಹುದು. ಅಥವಾ ಇಂದ್ರನಂತೆ ಅಗ್ನಿಯೂ ಸಹ ಯಜ್ಞಸಾಧನನಾದ್ದರಿಂದ ಇಂದ್ರ ಎನಿಸಬಹುದು. ಹೀಗೆ ಯೋಗವೃತ್ತಿಯಿಂದ ಅಥವಾ ಗೌಣೀ ವೃತ್ತಿಯಿಂದ ಇಂದ್ರ ಶಬ್ದವನ್ನು ಗಾರ್ಹಪತ್ಯಾಗ್ನಿಯಲ್ಲಿ ಪ್ರಯೋಗಿಸಲಾಗಿದೆ.

ಪ್ರಕಾಶಃ – ತಕ್ತಂ ಹೀತಿ । ತೃತೀಯೇ ವಾರ್ತಿಕಕೃತೇತ್ಯರ್ಥಃ । ಪೂರ್ವಾರ್ಧಂ ವ್ಯನಕ್ತಿ – ತಥೇತಿ ।

ಶೀರ್ಯತೇ ನಿತ್ಯಮೇವಾಸ್ಮಾದ್ವಿಷ್ಣೋಸ್ತು ಜಗದೀದೃಶಾಮ್ ।
ರಮತೇ ಚ ಪರೋ ಹ್ಯಸ್ಮಿನ್ ಶರೀರಂ ತಸ್ಯ ತಜ್ಜಗತ್ ।
ಇತಿ ತಕ್ತಯೋಗೇನೇತ್ಯರ್ಥಃ ।

'ಉಕ್ತಂ ಹಿ' ಎಂದರೆ ಶ್ಲೋಕವಾರ್ತಿಕದ ಮೂರನೇ ಅಧ್ಯಾಯದಲ್ಲಿ ಹೇಳಲ್ಪಟ್ಟಿದೆ ಎಂದರ್ಥ. ಶ್ಲೋಕದ ಪೂರ್ವಾರ್ಧವನ್ನು 'ತಥಾ' ಎಂಬ ವಾಕ್ಯದಿಂದ ವ್ಯಾಖ್ಯಾನಿಸುತ್ತಿದ್ದಾರೆ.

ಶೀರ್ಯತೇ ನಿತ್ಯಮೇವಾಸ್ಮಾದ್ವಿಷ್ಣೋಸ್ತು ಜಗದೀದೃಶಮ್ ।
ರಮತೇ ಚ ಪರೋ ಹ್ಯಸ್ಮಿನ್ ಶರೀರಂ ತಸ್ಯ ತಜ್ಜಗತ್ ॥

ನಿತ್ಯವಾಗಿ ಭಗವಧೀನವಾಗಿ ಜಗತ್ ನಾಶಗೊಳ್ಳುತ್ತದೆ. ಶ್ರೇಷ್ಠನಾದ ಭಗವಂತನು ಅಂತಹ ಜಗತ್ತಿನಲ್ಲಿ ನೆಲೆಸಿ ವಿಹರಿಸುತ್ತಾನೆ. ಆದ್ದರಿಂದ ಜಗತ್ತು ಅವನಿಗೆ ಶರೀರ ಎನಿಸಿದೆಯೆಂಬ ಯೋಗವೃತ್ತಿಯಿಂದ ಶರೀರಶಬ್ದವನ್ನು ವಿಷ್ಣುವಿನಲ್ಲಿ ಪ್ರಯೋಗಿಸಬಹುದು.

प्रकाशः – ननु यौगिकमपि शरीरत्वं पृथिव्यादेरपि चित्त्वेनायुक्तं, ''यस्यात्मा शरीरम्'' इत्याद्ययोगश्च, चेतननित्यतायाः ''यावदात्मभावित्वाच्च न दोषः'' इत्यादौ सेत्स्यमानत्वादित्यत आह – **चेतनानामपीति ।**

ಶರೀರಶಬ್ದಕ್ಕೆ ಯೌಗಿಕಾರ್ಥವನ್ನು ಸ್ವೀಕರಿಸುವುದಾದರೆ ಅಂತಹ ಶರೀರತ್ವವು ಪೃಥಿವ್ಯಾದಿಗಳೂ ಸಹ ಅಯುಕ್ತವಾಗುತ್ತದೆ. 'ಚಿತ್' ಆದ್ದರಿಂದ ''ಯಸ್ಯಾತ್ಮಾ ಶರೀರಂ'' ಎಂಬಲ್ಲಿ ಹೇಳಲ್ಪಟ್ಟ ಆತ್ಮನ ಶರೀರ ಎಂಬ ಪ್ರಯೋಗವೂ ಸಹ ಅಯುಕ್ತವಾಗುತ್ತದೆ. ಏಕೆಂದರೆ ''ಯಾವದಾತ್ಮಭಾವಿತ್ವಾಚ್ಚ ನ ದೋಷಃ'' ಇತ್ಯಾದಿ ಸ್ಥಳಗಳಲ್ಲಿ ಚೇತನನಿತ್ಯತ್ವವನ್ನು ಸಮರ್ಥಿಸಲಾಗುತ್ತದೆ. ಆದ್ದರಿಂದ ನೀವು ಹೇಳಿದ ಯೋಗಾರ್ಥವು ತಪ್ಪಾಗುತ್ತದಲ್ಲವೇ? ಈ ಪ್ರಶ್ನೆಗೆ ''ಚೇತನಾನಾಮಪಿ'' ಎಂಬ ವಾಕ್ಯದಿಂದ ಉತ್ತರಿಸುತ್ತಿದ್ದಾರೆ.

प्रकाशः – तादृशदेहसम्बन्धश्च ''ज्ञोऽत एव'' ''युक्तेश्च'' इत्यत्र सेत्स्यतीति भावः । एतेन दिशामप्यवान्तराभिमानिदेहद्वारा शीर्णताऽस्त्येवेति तत्रापि नायुक्तमिति ध्येयम् ।

ನಿತ್ಯನಾದ ಚೇತನನಿಗೆ ಅನಿತ್ಯವಾದ ದೇಹದ ಸಂಬಂಧವನ್ನು ಹೇಳಬಹುದೆಂದು ''ಜ್ಞೋऽತ ಏವ'' ಮತ್ತು ''ಯುಕ್ತೇಶ್ಚ'' ಸೂತ್ರದಲ್ಲಿ ಸಮರ್ಥಿಸುತ್ತಾರೆ ಎಂದು ಅಭಿಪ್ರಾಯ. ಹೀಗೆ ಹೇಳಿದ್ದರಿಂದ ದಿಕ್ಕುಗಳಿಗೂ ಅವಾಂತರ ಅಭಿಮಾನಿ ದೇವತೆಗಳ ದೇಹದ ಮೂಲಕವಾಗಿ ನಾಶಹೊಂದುವಿಕೆ ಎಂಬುದು ಉಪಪನ್ನವಾಗುತ್ತದೆ. ಆದ್ದರಿಂದ ಅವರಲ್ಲಿ ಪ್ರಯೋಗಿಸಲ್ಪಟ್ಟ ಶರೀರ ಶಬ್ದವೂ ಸಹ ಅಯುಕ್ತವಾಗುವುದಿಲ್ಲವೆಂದು ತಿಳಿಯಬೇಕು.

गुरुराजीयम् – यमित्यस्य वैयर्थ्यमिति ।। विशेषविधेश्शेषनिषेधनान्तरीयकत्वद्विशेषनिषेधस्य शेषविधिनान्तरीयकत्वस्यापि सत्त्वात् 'यमिति विशेषनिषेधेनान्यज्ञानत्वं लभ्यते । तच्च पृथिव्यादेर्जडत्वादयुक्तमिति भावः । नन्वभिमानिजीवानां दुर्ज्ञानत्वात्' 'आत्मा न वेद' इत्युपपन्नमित्यरुच्याऽह – **अप्रसक्तेरिति ।।** किं चाभिमानिपरत्वे 'यः पृथिव्या अन्तरः' इत्युक्तान्तरत्वानुपपत्तिः । ननु चान्तरत्वं यदि भिन्नत्वं यदि वाऽन्तस्थत्वं द्वयमपि पृथिव्यादिशरीरकेऽभिमानिनि युक्तमित्युक्तमित्यत आह – **अन्तरत्वं चेति ।।**

ಸಾರ

ಅಧಿಕರಣದ ಸಿದ್ಧಾಂತ ಹೀಗಿದೆ - ಸಕಲರಲ್ಲಿ ಆಂತರ್ಯಾಮಿಯಾಗಿ ನೆಲೆಸಿರುವನು ಮಹಾವಿಷ್ಣುವೇ ಆಗಿದ್ದಾನೆ. ಯಾವ ಶ್ರುತಿಯು ಹೀಗೆ ಹೇಳುತ್ತಿದೆಯೋ ಅದೇ ಶ್ರುತಿಯಲ್ಲಿ ಕೇಳಿಸುತ್ತಿರುವ ಪೃಥಿವ್ಯಾದ್ಯವಿದಿತತ್ವವು ವಿಷ್ಣುವಿನಲ್ಲಿ ಸುಲಭವಾಗಿ ಬರುತ್ತದೆ. ಪೃಥಿವೀ ಶಬ್ದಕ್ಕೆ ಜಡವೆಂದು ಅರ್ಥವಲ್ಲ. ಹಾಗಾದಲ್ಲಿ ಅಪ್ರಸಕ್ತ ವಿಷಯ ನಿಷೇಧ ಮಾಡಿದಂತಾಗುತ್ತದೆ ಆದ್ದರಿಂದ ಅಭಿಮಾನಿಚೇತನರೆಂಬರ್ಥವನ್ನು ಹೇಳಬೇಕು. ಅಂತಹ ಅಭಿಮಾನಿಚೇತನರಿಂದ ಸಂಪೂರ್ಣವಾಗಿ ತಿಳಿಯಲು ಅಸಮರ್ಥನಾದವನು ಈಶ್ವರನೊಬ್ಬನೇ ಹೊರತು ಪ್ರಕೃತ್ಯಾದಿಗಳಲ್ಲ.

ಅಂತರತ್ವವೂ ಸಹ ವಿಷ್ಣುವಿನ ಧರ್ಮವೇ ಆಗಿದೆ -

ಪೃಥಿವ್ಯಾದ್ಯವಿದಿತತ್ವವು ವರಮಾತ್ಮನಲ್ಲಿ ಬರುವಂತೆ ಅಂತರತ್ವವೂ ಸಹ ಬರುತ್ತದೆ. ಏಕೆಂದರೆ ಬಾಹ್ಯಪದಾರ್ಥಗಳ ಅಪೇಕ್ಷೆಯಿಲ್ಲದೇ ಯಾರು ವಿಹರಿಸುತ್ತಾರೋ ಅಂತಹವನು 'ಅಂತರಃ' ಎನಿಸುತ್ತಾನೆ. ಮತ್ತು ಅತ್ಯಂತ ಪ್ರಿಯನಾದ್ದರಿಂದಲೂ ಶ್ರೀಹರಿಯು ಅಂತರನೆಂದು ಹೇಳಲ್ಪಟ್ಟಿದ್ದಾನೆ.

ಪೂರ್ವಪಕ್ಷಕ್ಕೆ ಪ್ರಬಲ ಹೇತುವಾಗಿರುವ ಪೃಥಿವ್ಯಾದಿ ಶರೀರತ್ವವೂ ಸಹ ವಿಷ್ಣುವಿನಲ್ಲೇ ಉಪಪನ್ನವಾಗುತ್ತದೆ. ಅಗ್ನಿಯಲ್ಲಿ ಇಂದ್ರ ಶಬ್ದಪ್ರಯೋಗವನ್ನು ಯೌಗಿಕವಾಗಿ ಮತ್ತು ಗೌಣವಾಗಿ ಮಾಡುವಂತೆ ವಿಷ್ಣುವಿನಲ್ಲೂ ಯೌಗಿಕವಾಗಿ ಮತ್ತು ಗೌಣವಾಗಿ ಪೃಥಿವ್ಯಾದಿಶರೀರತ್ವವನ್ನು ಕೂಡಿಸಬೇಕು. ರೂಢ್ಯರ್ಥದಲ್ಲಿ ಬಾಧವಿರುವುದೇ ಇದಕ್ಕೆ ಕಾರಣ.

• • • • •

ಸೂತ್ರಗಳ ಜೋಡಣೆಯು ಸ್ವಾರಸ್ಯಮಯವಾಗಿದೆ

ತಾತ್ಪರ್ಯಚನ್ದ್ರಿಕಾ

ಶರೀರತ್ವಸ್ಯ ಗೌಣತ್ವಂ ಚ ಬೃಹದಾರಣ್ಯಕಭಾಷ್ಯೇ ಉಕ್ತಮ್ । ತೇನ ಪುರಾಣಾದಿಷು ಪ್ರಪಞ್ಚೇ ಬ್ರಹ್ಮಕಾಯತ್ವಾದ್ಯುಕ್ತಿರಪಿ ಸಮರ್ಥಿತಾ ।

ಅನುವಾದ - ಶರೀರತ್ವವು ಗೌಣವಾಗಿದೆಯೆಂದು ಭಾಷ್ಯಟೀಕೆಗಳಲ್ಲಿ ಹೇಳಿದಿದ್ದರೂ ಬೃಹದಾರಣ್ಯಕದ ಭಾಷ್ಯದಲ್ಲಿ ಹೇಳಿದ್ದಾರೆ. ಇದರಿಂದ ಪುರಾಣಾದಿಗಳಲ್ಲಿ ಪ್ರಪಂಚವನ್ನು ಬ್ರಹ್ಮನ ಕಾಯವೆಂದು ಹೇಳಿದ್ದನ್ನು ಸಮರ್ಥಿಸಿದಂತಾಯಿತು.

ಏವಞ್ಚ ''ಯ ಆತ್ಮನಿ ತಿಷ್ಠನ್'' ಇತ್ಯಾದಿಕಂ ಚ ಕ್ಲೇಶೇನ ನ ನೇಯಮಿತಿ । ಏತದೇವಾಭಿಪ್ರೇತ್ಯೋಕ್ತಂ ನ್ಯಾಯವಿವರಣೇ – ''ಪೃಥಿವ್ಯಾದಿಶರೀರತ್ವಂ ಚ ನ ನಿರವಕಾಶಂ, ಯೌಗಿಕ-ಶರೀರತ್ವೋಪಪತ್ತೇರ್ವಿಷ್ಣೋರಪಿ'' ಇತಿ ।

ಪರಿಪೂರ್ಣಚಂದ್ರಿಕಾ

ಆದ್ದರಿಂದ ''ಯ ಆತ್ಮನಿ ತಿಷ್ಠನ್'' ಎಂಬುದನ್ನು ಭೇದಾಭೇದವನ್ನು ಒಪ್ಪುವ ಮೂಲಕ ಕಷ್ಟದಿಂದ ಅರ್ಥೈಸಬೇಕಾಗಿಲ್ಲ. ಇದೇ ಅಭಿಪ್ರಾಯದಿಂದಲೇ ನ್ಯಾಯವಿವರಣದಲ್ಲಿ ''ಪೃಥಿವ್ಯಾದಿಶರೀರತ್ವಂ ಚ ನ ನಿರವಕಾಶಂ, ಯೌಗಿಕಶರೀರತ್ವೋಪಪತ್ತೇರ್ವಿಷ್ಣೋರಪಿ'' ಪೃಥಿವ್ಯಾದಿ ಶರೀರತ್ವವು ನಿರವಕಾಶವಾಗಿಲ್ಲ. ಯೌಗಿಕವಾದ ಶರೀರತ್ವವನ್ನು ವಿಷ್ಣುವಿನಲ್ಲೂ ಕೂಡಿಸಬಹುದು ಎಂದು ಹೇಳಿದ್ದಾರೆ.

सूत्रक्रमस्तु – आद्ये स्वपक्षसाधकोक्तिः, द्वितीये प्रधानजीवपक्षयोः साधकाभावोक्तिः, तृतीयसूत्रस्थस्य 'शारीरश्च' इत्यस्यात्रापि सम्बन्धात्, तृतीये जीवपक्षे बाधकोक्तिरिति ।

ಸೂತ್ರಗಳ ಜೋಡಣೆಯು ಸ್ವಾರಸ್ಯಮಯವಾಗಿದೆ. ಮೊದಲನೆಯ ಸೂತ್ರವು ಸ್ವಪಕ್ಷದಲ್ಲಿ ಸಾಧಕಪ್ರಮಾಣವನ್ನು ಹೇಳಿದೆ.

ಎರಡನೆಯ ಸೂತ್ರವು ಪ್ರಧಾನ ಹಾಗೂ ಜೀವಪಕ್ಷಗಳಲ್ಲಿ ಸಾಧಕವಿಲ್ಲವೆಂದು ಹೇಳಿದೆ. ಏಕೆಂದರೆ ಮೂರನೆಯ ಸೂತ್ರದಲ್ಲಿರುವ 'ಶಾರೀರಶ್ಚ' ಎಂಬ ಪದವು ಎರಡನೆಯ ಸೂತ್ರದಲ್ಲೂ ಅನ್ವಯವಾಗುತ್ತದೆ.

ಮೂರನೆಯ ಸೂತ್ರದಲ್ಲಿ ಜೀವಪಕ್ಷದಲ್ಲಿ ಬಾಧಕವನ್ನು ಹೇಳಲಾಗಿದೆ.

ಪ್ರಕಾಶಃ –

ಗೌಣತ್ವಂ ಭಾಷ್ಯಟೀಕಯೋರ್ನೋಕ್ತಮಿತ್ಯತ ಆಹ – **शरीरत्वस्येति ।**

पृथिव्याद्या देवतास्तु देहवद्यद्वशत्वतः ।
शरीरमिति चोच्यन्ते यस्य विष्णोर्महात्मनः ।।

ಇತಿ ಸ್ಮೃತ್ಯಾ ಶರೀರಸ್ಯ ಯಥಾ ಜೀವವಶತ್ವಂ, ತಥಾ ಪೃಥಿವ್ಯಾದ್ಯಭಿಮಾನಿಜೀವಾನಾಮೀಶ್ವರವಶತ್ವಾತ್ತಚ್ಛರೀರತ್ವಮಿತಿ ಗೌಣತ್ವಮುಕ್ತಮಿತ್ಯರ್ಥಃ । ತಥಾ ಚ ಭಾಷ್ಯದ್ವಯಾನುಸಾರಾದ್ ದ್ವಯಮಪ್ಯಸ್ಮಾಭಿರುಕ್ತಮಿತಿ ಭಾವಃ ।

ವಿವರಣೆ - ಶರೀರಶಬ್ದಕ್ಕೆ ಗೌಣಾರ್ಥವನ್ನು ಮಾಡಬೇಕೆಂದು ಭಾಷ್ಯದಲ್ಲಾಗಲೀ, ಟೀಕೆಯಲ್ಲಾಗಲೀ ಹೇಳಿದ್ದು ಕಾಣಸುತ್ತಿಲ್ಲ. ಹೀಗಿರುವಾಗ ಗ್ರಂಥಕಾರರು ಯೋಗಾರ್ಥದ ಜೊತೆಗೆ ಗೌಣಾರ್ಥವನ್ನು ಹೇಗೆ ಸ್ವೀಕರಿಸಿದರು? ಎಂಬ ಪ್ರಶ್ನೆಗೆ 'ಶರೀರತ್ವಸ್ಯ' ಎಂಬ ವಾಕ್ಯದಿಂದ ಉತ್ತರಿಸುತ್ತಿದ್ದಾರೆ.

ಪೃಥಿವ್ಯಾದ್ಯಾ ದೇವತಾಸ್ತು ದೇಹವದ್ಯದ್ಭತ್ವತಃ।
ಶರೀರಮಿತಿ ಚೋಚ್ಯಂತೇ ಯಸ್ಯ ವಿಷ್ಣೋರ್ಮಹಾತ್ಮನಃ॥

'ಪೃಥಿವೀ ಮೊದಲಾದ ದೇವತೆಗಳು ಭಗವಂತನ ಶರೀರ ಎಂದು ಕರೆಯಲ್ಪಡುತ್ತಾರೆ. ಏಕೆಂದರೆ ದೇಹದಂತೆ ಮಹಾತ್ಮನಾದ ವಿಷ್ಣುವಿಗೆ ಆಧೀನರಾಗಿದ್ದಾರೆ ಆದ್ದರಿಂದ ಎಂದು ಹೇಳಲಾಗಿದೆ' ಎಂಬ ಸ್ಮೃತಿಯಂತೆ ಶರೀರವು ಯಾವರೀತಿಯಾಗಿ ಆತ್ಮನ ಆಧೀನವಾಗಿದೆಯೋ, ಆದರಂತೆ ಪೃಥಿವ್ಯಾದ್ಯಭಿಮಾನಿ ಚೇತನರೂ ಸಹ ಈಶ್ವರನ ಆಧೀನರಾಗಿದ್ದಾರೆ. ಈ ಕಾರಣದಿಂದ ಪೃಥಿವ್ಯಾದಿ ಚೇತನರು ಭಗವಂತನಿಗೆ ಶರೀರ ಎನಿಸುತ್ತಾರೆ. ಹೀಗೆ ಗೌಣಾರ್ಥವನ್ನು ಮಾಡಬೇಕೆಂದು ಬೃಹದಾರಣ್ಯಕದ ಭಾಷ್ಯದಲ್ಲಿ ಹೇಳಿದ್ದಾರೆಂದು ತಿಳಿಯಬೇಕು.. ಆದ್ದರಿಂದ ಪ್ರಕೃತ ಎರಡೂ ಭಾಷ್ಯಗಳನ್ನು ಅನುಸರಿಸಿ ಯೋಗಾರ್ಥ ಹಾಗೂ ಗೌಣಾರ್ಥಗಳನ್ನು ನಾವು ಅನುಸರಿಸಿದ್ದೇವೆಂದು ತಿಳಿದುಕೊಳ್ಳಬೇಕು.

ಪ್ರಕಾಶಃ – ಗೌಣತ್ವೋಕ್ತೇಃ ಫಲಮಾಹ – ತೇನೇತಿ । ಗೌಣತ್ವಕಥನೇನೇತ್ಯರ್ಥಃ ।

ಗೌಣಾರ್ಥವನ್ನು ಹೇಳಿದ್ದಕ್ಕೆ ಏನು ಪ್ರಯೋಜನ ? ಎಂಬ ಪ್ರಶ್ನೆಗೆ 'ತೇನ' ಎಂಬ ವಾಕ್ಯದಿಂದ ಉತ್ತರಿಸುತ್ತಿದ್ದಾರೆ. ಅಂದರೆ ಗೌಣತ್ವವನ್ನು ಹೇಳಿದ್ದರಿಂದ ಬೇರೆಕಡೆ ಪ್ರಸಿದ್ಧವಾಗಿರುವ ಪ್ರಪಂಚವು ಬ್ರಹ್ಮನ ಶರೀರವಾಗಿದೆ ಎಂಬುದನ್ನು ಸಮರ್ಥಿಸಿದಂತಾಗುತ್ತದೆ; ಇದೇ ಫಲ ಎಂದರ್ಥ.

ಪ್ರಕಾಶಃ – ಪುರಾಣಾದಿಷ್ವಿತಿ ।

'ಸ ವಿಶ್ವಕಾಯಃ ಪುರುಹೂತ ಈಶಃ ಸತ್ಯಂ ಪರಜ್ಯೋತಿರಜಃ ಪುರಾಣಃ ।'

ಇತ್ಯಾದಿಭಾಗವತಾದಿಷ್ವಿತ್ಯರ್ಥಃ । ಕಾಯತ್ವಾದೀತಿ । ದೇಹತ್ವವಿಗ್ರಹತ್ವಾದ್ಯುಕ್ತಿರಾದಿಪದಾರ್ಥಃ । ಕ್ಲೇಶೇನೇತಿ । ತಚ್ಛರೀರಸ್ಯ ಪ್ರಾಕೃತತ್ವಭೇದಾಭೇದಾದಿನಾ ।

'ಪುರಾಣಾದಿಷು' ಎಂದರೆ 'ಸ ವಿಶ್ವಕಾಯಃ ಪುರುಹೂತ ಈಶಃ ಸತ್ಯಂ ಪರಂಜ್ಯೋತಿರಜಃ ಪುರಾಣಃ' ಮೊದಲಾದ ಭಾಗವತದ ಮಾತುಗಳಲ್ಲಿ ಎಂದರ್ಥ. 'ಕಾಯತ್ವಾದಿ' ಎಂಬಲ್ಲಿರುವ ಆದಿಪದದಿಂದ 'ದೇಹತ್ವ, ವಿಗ್ರಹತ್ವ' ಮೊದಲಾದ ಪ್ರಯೋಗಗಳನ್ನೂ ಸಹ ವಿವಕ್ಷಿಸಬೇಕು. 'ಕ್ಲೇಶೇನ' ಎಂದರೆ ಭೇದಾಭೇದವನ್ನು ಅಂಗೀಕರಿಸಿದ್ದರಿಂದ ಎಂದರ್ಥ. ಅಂದರೆ ಕಾರ್ಯಕ್ಕೂ ಕಾರಣಕ್ಕೂ ಭೇದಾಭೇದವನ್ನು ಅಂಗೀಕರಿಸಿ 'ಪೃಥಿವ್ಯಾಂ ತಿಷ್ಠನ್' ಎಂಬ ಆಧಾರಾಧೇಯಭಾವವನ್ನು ಕಷ್ಟಪಟ್ಟು ಕೂಡಿಸಿದ್ದರಿಂದ ಎಂದು ತಿಳಿಯಬೇಕು.

ಪ್ರಕಾಶಃ – ಯೌಗಿಕೇತಿ । ಗೌಣಶರೀರತ್ವೇತ್ಯಪಿ ಗ್ರಾಹ್ಯಮ್ । ಅವಿದಿತತ್ವಾದಿನಿರವಕಾಶ-ಬಾಧಕಬಲೇನ ಪ್ರಥಮಪ್ರಾಪ್ತಾಯಾ ಅಪಿ ರೂಢೇಃ ಪರಿತ್ಯಾಗೋಪಪತ್ತೇರಿತಿ ಭಾವಃ ।

'ಯೌಗಿಕ' ಎಂಬ ಪದದಿಂದ 'ಗೌಣಶರೀರತ್ವ' ಎಂಬ ಮಾತನ್ನೂ ಸ್ವೀಕರಿಸಬೇಕು. ಅವಿದಿತತ್ವ ಮುಂತಾದ ನಿರವಕಾಶ ಬಾಧಕಗಳ ಲಿಂಗಗಳ ಬಲದಿಂದ ಪ್ರಥಮ ಪ್ರಾಪ್ತವಾಗಿದ್ದರೂ ರೂಢಿಯನ್ನು ಬಿಡಬೇಕೆಂದು ಅಭಿಪ್ರಾಯ.

ಪ್ರಕಾಶಃ – आद्य इति । ''अन्तर्याम्यधिदैवादिषु तद्धर्मव्यपदेशात्'' इत्यत्र भाष्यादाववगतत्वान्तरत्वयोरुक्तेरिति भावः । 'द्वितीये' ''नच स्मार्तमतद्धर्माभिलापात्'' इत्यत्र ।

'ಆದ್ಯೇ' ಎಂದರೆ ''ಅಂತರ್ಯಾಮ್ಯಧಿದೈವಾದಿಷು ತದ್ಧರ್ಮವ್ಯಪದೇಶಾತ್'' ಎಂಬ ಮೊದಲನೆಯ ಸೂತ್ರದಲ್ಲಿ ಭಾಷ್ಯಾದಿಗಳಲ್ಲಿ ಅವಿದಿತತ್ವ ಹಾಗೂ ಅಂತರತ್ವಗಳೆಂಬ ಸಾವಕಾಶಲಿಂಗಗಳನ್ನು ಹೇಳಿದ್ದಾರೆಂದು ಅಭಿಪ್ರಾಯ. 'ದ್ವಿತೀಯೇ' ಎಂದರೆ ''ನಚ ಸ್ಮಾರ್ತಮತದ್ಧರ್ಮಾಭಿಲಾಪಾತ್'' ಎಂಬ ಎರಡನೆಯ ಸೂತ್ರದಲ್ಲಿ ಎಂದರ್ಥ.

ಪ್ರಕಾಶಃ – भाष्ये त्रिगुणत्वोपादानत्वादिप्रधानधर्मोक्तत्वभावात्कापिलस्मृतौ पृथिव्याद्यात्मकतयोक्तप्रधानं नान्तर्यामीत्युक्त्वा संसारित्वादितद्धर्माभिलापाभावात् जीवोऽपि नेति लब्धत्वात् 'प्रधानजीव' इत्युक्तम् । जीवपदाभावात् कथमेतदित्यत आह – तृतीयेति ।

ಬೃಹದಾರಣ್ಯಕದ ಭಾಷ್ಯದಲ್ಲಿ ಕಾಪಿಲಸ್ಮೃತಿಯನ್ನು ಉದಾಹರಿಸಿದ್ದಾರೆ. ಆದರಲ್ಲಿ ತ್ರಿಗುಣತ್ವ, ಉಪಾದಾನತ್ವ ಮೊದಲಾದ ಪ್ರಕೃತಿಯ ಧರ್ಮವನ್ನು ಹೇಳಿದ್ದು ಕಾಣಿಸುವುದಿಲ್ಲ. ಆದ್ದರಿಂದ ಪೃಥಿವ್ಯಾದ್ಯಾತ್ಮಕವೆಂದು ಹೇಳಲ್ಪಟ್ಟ ಪ್ರಕೃತಿಯನ್ನು ಅಂತರ್ಯಾಮಿಯೆಂದು ಹೇಳಬಾರದು. ಹೀಗೆ ಹೇಳಿದ್ದರಿಂದಲೇ ಸಂಸಾರಿತ್ವವೇ ಮೊದಲಾದ ಜೀವನ ಧರ್ಮಗಳೂ ಸಹ ಕೇಳಿಸದ ಕಾರಣ ಜೀವನೂ ಸಹ ಅಂತರ್ಯಾಮಿಯಾಗುವುದಿಲ್ಲವೆಂದು ಅರ್ಥಾತ್ ಸಿದ್ಧವಾಗುತ್ತದೆ. ಈ ಅಭಿಪ್ರಾಯದಿಂದಲೇ ಗ್ರಂಥಕಾರರು 'ಪ್ರಧಾನ, ಜೀವ' ಎಂದು ಹೇಳಿದ್ದಾರೆ.

ಸೂತ್ರದಲ್ಲಿ ಜೀವಪದವು ಕೇಳಿಸದ ಕಾರಣ ಹೀಗೆ ಹೇಳುವುದು ತಪ್ಪಲ್ಲವೇ? ಎಂಬ ಪ್ರಶ್ನೆಗೆ 'ತೃತೀಯೇ' ಎಂಬುದರಿಂದ ಉತ್ತರಿಸುತ್ತಿದ್ದಾರೆ.

ಪ್ರಕಾಶಃ – एतेन जीवपक्षे साधकं नेत्यनुक्त्वा कथं बाधकोक्तवसर इति प्रत्युक्तम् । एतेन ''यज्जीवनोऽन्तर्यामीत्युक्तम्, तदपि संसारित्वाद्य-तद्धर्माभिलापादिना निरस्तमपि विशेषयुक्त्वा पराकुर्वत्सूत्रम्'' इति टीकोक्तं सूत्रारूढं दर्शितम् ।

ಹೀಗೆ ಹೇಳಿದ್ದರಿಂದ ಜೀವಪಕ್ಷದಲ್ಲಿ ಸಾಧಕವಿಲ್ಲವೆಂದು ಹೇಳದೆ ಬಾಧಕವನ್ನು ಹೇಳುವುದು ತಪ್ಪಲ್ಲವೇ? ಎಂಬ ಶಂಕೆಯನ್ನು ನಿರಾಕರಿಸಿದಂತಾಯಿತು. ಏಕೆಂದರೆ 'ನಚಸ್ಮಾರ್ತಮ್' ಎಂಬ ಎರಡನೆಯ ಸೂತ್ರದಲ್ಲೇ ಸಾಧಕವಿಲ್ಲವೆಂದು ಈಗ ಹೇಳಿದಂತೆ ಸಮರ್ಥಿಸಿದ್ದೇವೆ.

ಇದರಿಂದ ಟೀಕಾಮಾತನ್ನು ಸೂತ್ರಾರೂಢ ಮಾಡಿದಂತೆಯೂ ಆಯಿತು. ಹೇಗೆಂದರೆ - ಟೀಕೆಯ ಮಾತು ಹೀಗಿದೆ - ''ಯಜ್ಜೀವನೋऽಂತರ್ಯಾಮೀತ್ಯುಕ್ತಮ್, ತದಪಿ ಸಂಸಾರಿತ್ವಾದ್ಯತದ್ಧರ್ಮಾಭಿಲಾಪಾದಿನಾ ನಿರಸ್ತಮಪಿ ವಿಶೇಷಯುಕ್ತ್ಯಾ ಪರಾಕುರ್ವತ್‌ಸೂತ್ರಂ'' ಎಂದು ''ಜೀವನು ಅಂತರ್ಯಾಮಿಯಾಗಿದ್ದಾನೆಂದು ಹೇಳಿದ್ದು ಸರಿಯಲ್ಲ. ಏಕೆಂದರೆ ಸಂಸಾರಿತ್ವವೇ ಮೊದಲಾದ ಜೀವನ ಧರ್ಮಗಳನ್ನು ಹೇಳಿದ ಕಾರಣ ಜೀವಪಕ್ಷವನ್ನು ನಿರಾಕರಿಸಿದಂತಾಯಿತು. ಆದರೂ ಸಹ ವಿಶೇಷ ಯುಕ್ತಿಯಿಂದ ನಿರಾಕರಿಸಲು ಮುಂದಿನ ಸೂತ್ರ ಹೊರಟಿದೆ'' ಎಂದು. ಈ ಟೀಕೆಯ ಮಾತಿನ ಅರ್ಥ. ಇದು ಮುಂದಿನ ಸೂತ್ರದಿಂದ ಶಾರೀರ ಪದವನ್ನು ಎರಡನೇ ಸೂತ್ರದಲ್ಲಿ ಅನುಕರ್ಷ ಮಾಡಿದ್ದರಿಂದ ಸೂತ್ರಾರೂಢವಾಯಿತು.

प्रकाशः – 'अतद्धर्माभिलापात्' इत्यत्र समासनिर्वाहस्तु ''नानुमानमतच्छब्दात्'' इत्यत्र करिष्यत इति भावः ।

'ಅತದ್ಧರ್ಮಾಭಿಲಾಪಾತ್' ಎಂಬಲ್ಲಿ ''ತದ್ಧರ್ಮಾಣಾಮ್ ಅಭಿಲಾಪಃ ತದ್ಧರ್ಮಾಭಿಲಾಪಃ ತದ್ಧರ್ಮಾಭಿಲಾಪಸ್ಯ ಅಭಾವಃ = ಅತದ್ಧರ್ಮಾಭಿಲಾಪಃ, ತಸ್ಮಾತ್ = ಅತದ್ಧರ್ಮಾಭಿಲಾಪಾತ್'' ಎಂದು ಸಮಾಸ ಮಾಡಬೇಕು. ಆದರೆ ಇಲ್ಲಿರುವ 'ನ'ಇ' ಗೆ ಅಭಾವವೆಂದರ್ಥವನ್ನು ಹೇಳಿದ್ದರಿಂದ ಪ್ರಸಜ್ಯಪ್ರತಿಷೇಧ ಎಂಬರ್ಥವನ್ನು ಹೇಳಿದಂತಾಯಿತು. ಆವಾಗ ಸಮಾಸವಾಗುವುದಿಲ್ಲವೆಂದು ವ್ಯಾಕರಣದಲ್ಲಿ ನಿರ್ಣಯಿಸಿದ್ದಾರೆ. ಹೀಗಿರುವಾಗ ಸೂತ್ರಕಾರರು 'ಅತದ್ಧರ್ಮಾಭಿಲಾಪಾತ್' ಎಂದು ಹೇಗೆ ಸಮಾಸ ಮಾಡಿದರು? ಎಂದರೆ

ಇಲ್ಲಿ ಹೇಗೆ ಸಮಾಸವಾಗುತ್ತದೆಂಬುದನ್ನು ''ನಾನುಮಾನಮತಚ್ಛಬ್ದಾತ್'' ಎಂಬ ಸೂತ್ರದಲ್ಲಿ ಸಮರ್ಥಿಸುತ್ತೇವೆ.

प्रकाशः – तृतीय इति । ''शारीरश्चोभयेऽपि हि भेदेनैनमधीयते'' इत्यत्र ''आत्मनोऽन्तरः'' इति माध्यन्दिनाः ''विज्ञानादन्तरः'' इति काण्वाश्च जीवं विज्ञानादन्तर्यामिणो भेदेनाधीयत इति शारीरो नान्तर्यामीति भेदाध्ययन-रूपबाधकोक्तिरित्यर्थः ।

'ತೃತೀಯೇ' ಎಂದರೆ ಮೂರನೆಯ ಸೂತ್ರದಲ್ಲಿ ಎಂದರ್ಥ. ಎಂದರೆ -''ಶಾರೀರಶ್ಚೋಭಯೇऽಪಿ ಹಿ ಭೇದೇನೈನಮಧೀಯತೇ'' ಎಂಬ ಸೂತ್ರದಲ್ಲಿ ''ಆತ್ಮನೋऽಂತರಃ'' ಎಂದು ಮಾಧ್ಯಂದಿನ ಶಾಖೆಯವರೂ ಹಾಗೂ ಶಾಖೆಗಳನ್ನು 'ವಿಜ್ಞಾನಾದಂತರಃ' ಕಾಣ್ವಶಾಖಿಗಳೂ ವಿಜ್ಞಾನಮಯನಾದ ಅಂತರ್ಯಾಮಿಯಿಂದ ಜೀವನಿಗೆ ಭೇದವಿದೆಯೆಂದು ಅಧ್ಯಯನ ಮಾಡುತ್ತಾರೆ. ಹೀಗೆ ಶಾರೀರನಾದ ಜೀವನು ಅಂತರ್ಯಾಮಿಯಾಗುವುದಿಲ್ಲವೆಂಬುದು ಭೇದಾಧ್ಯಯನವೆಂಬ ಬಾಧಕದಿಂದ ತಿಳಿಯುತ್ತದೆ ಎಂದಭಿಪ್ರಾಯ.

प्रकाशः – यद्यपि चकारात् ' ''यस्तेजसि तिष्ठन्'' इत्यादिना श्रीभूदुर्गा-रूपायाश्चित्प्रकृतेरपि भेदेनाधीतत्वात् न चित्प्रकृतिरन्तर्यामीत्यभिप्रायः' इति तत्त्वप्रदीपरीत्या चित्प्रकृतिपक्षेऽपि बाधकोक्तिपरत्वं भाति, तथाऽपि टीकारीत्यैवमुक्तिः ।

'ಶಾರೀರಶ್ಚ' ಎಂಬ ಸೂತ್ರದಲ್ಲಿರುವ ಚಕಾರಕ್ಕೆ ತತ್ತ್ವಪ್ರದೀಪದಲ್ಲಿ ಮತ್ತೊಂದು ರೀತಿಯಲ್ಲಿ ವ್ಯಾಖ್ಯಾನಿಸಿದ್ದಾರೆ - ''ಯಸ್ತೇಜಸಿ ತಿಷ್ಠನ್'' ಎಂಬಲ್ಲಿರುವ ತೇಜಸ್ ಶಬ್ದದಿಂದ ಶ್ರೀಭೂದುರ್ಗಾರೂಪಗಳಿಂದ ಚಿತ್‌ಪ್ರಕೃತಿಯು ಪ್ರತಿಪಾದ್ಯವಾಗಿದೆ. ಆಂತಹ ಚಿತ್ಪ್ರಕೃತಿಯ ದೆಸೆಯಿಂದ ಅಂತರ್ಯಾಮಿಗೆ ಭೇದವಿದೆಯೆಂದು ಅಧ್ಯಯನ ಮಾಡುವುದರಿಂದ ಚಿತ್‌ಪ್ರಕೃತಿಯನ್ನು ಅಂತರ್ಯಾಮಿಯೆಂದು ಹೇಳಲಾಗದು. ಹೀಗೆ ತತ್ತ್ವಪ್ರದೀಪದ ಪ್ರಕಾರ ಚಿತ್ಪ್ರಕೃತಿಪಕ್ಷದಲ್ಲೂ ಸಹ ಬಾಧಕವನ್ನು ಹೇಳಿದ್ದೂ ಕಾಣಿಸುತ್ತದೆ. ಆದರೆ ಗ್ರಂಥಕಾರರು ಟೀಕೆಯ ಪ್ರಕಾರ ಸೂತ್ರವನ್ನು ವ್ಯಾಖ್ಯಾನಿಸಿದ್ದಾರೆ.

ಗುರುರಾಜೀಯಮ್ – ನನು ಚ ಭಾಷ್ಯತಟ್ಟೀಕಯೋಃ ಪೃಥಿವ್ಯಾದೇರ್ಯೌಗಿಕಶರೀರತ್ವಮೇವೋಕ್ತಮ್ । ಭವದ್ಭಿಶ್ಚ ಶರೀರವತ್ತಯಿಯಮ್ಯತ್ವೇನ ಗೌಣಂ ಶರೀರಮಿತ್ಯುಚ್ಯತೇ । ತತ್ಕುತೋऽವಗನ್ತವ್ಯಮ್ । ಭಾಷ್ಯಾನುಕ್ತತ್ವೇನ ಮೂಲಭೂತಪ್ರಮಾಣಾಭಾವಾದಿತ್ಯತ ಆಹ – ಶರೀರತ್ವಸ್ಯೇತಿ ।। ಏವಮ್ 'ಆದಿಪದೇನ ಆತ್ಮಾನಂ ಯಮಯತಿ' ಇತ್ಯಸ್ಯ ಸಙ್ಗ್ರಹಃ ।। ಕ್ಲೇಶೇನೇತಿ ।। ನತ್ವಭಿಮಾನಿನಾಮಸ್ಮದಾದ್ಯಾತ್ಮಕತ್ವನಿಯಾಮಕತ್ವಾಭಿಪ್ರಾಯೇಣಾತ್ಮಾಭಿಮಾನಿಚತುರ್ಮುಖರೂಪಜೀವ-ವಿಶೇಷಾಭಿಪ್ರಾಯೇಣ ಚೇತಿ ಕ್ಲೇಶೇನ ನೇಯಮಿತ್ಯರ್ಥಃ ।।

ಸಾರ

ಶಾರೀರ ಪದಕ್ಕೆ ಭಾಷ್ಯ ಹಾಗೂ ಟೀಕೆಗಳಲ್ಲಿ ಯೋಗಾರ್ಥವನ್ನಷ್ಟೇ ಹೇಳಲಾಗಿದೆ. ಬೃಹದಾರಣ್ಯಕ ಭಾಷ್ಯದಲ್ಲಿ ಗೌಣಾರ್ಥವನ್ನು ಹೇಳಲಾಗಿದೆ. ಎರಡೂ ಭಾಷ್ಯಗಳನ್ನು ವಿವಕ್ಷಿಸಿ ಪ್ರಕೃತ ಗ್ರಂಥಕಾರರು ವ್ಯಾಖ್ಯಾನಿಸುತ್ತಿದ್ದಾರೆಂಬ ಅಂಶವನ್ನು ಗಮನಿಸಬೇಕು.

ಪರಮಾತ್ಮನೇ ಅಂತರ್ಯಾಮಿಯೆಂದು ಹೇಳುವುದರಿಂದ 'ಯ ಆತ್ಮನಿ ತಿಷ್ಠನ್' ಎಂಬುದನ್ನು ಸ್ವರಸವಾಗಿ ಅರ್ಥೈಸಿದಂತಾಗುತ್ತದೆ.

ಸೂತ್ರಗಳ ಜೋಡಣೆಯು ಸ್ವಾರಸ್ಯಮಯವಾಗಿದೆ. ಮೊದಲನೆಯ ಸೂತ್ರವು ಸ್ವಪಕ್ಷದಲ್ಲಿ ಸಾಧಕ ಪ್ರಮಾಣವನ್ನು ಹೇಳಿದೆ.

ಎರಡನೆಯ ಸೂತ್ರವು ಪ್ರಧಾನ ಹಾಗೂ ಜೀವಪಕ್ಷಗಳಲ್ಲಿ ಸಾಧಕವಿಲ್ಲವೆಂದು ಹೇಳಿದೆ. ಏಕೆಂದರೆ ಮೂರನೆಯ ಸೂತ್ರದಲ್ಲಿರುವ 'ಶಾರೀರಶ್ಚ' ಎಂಬ ಪದವು ಎರಡನೆಯ ಸೂತ್ರದಲ್ಲೂ ಅನ್ವಯವಾಗುತ್ತದೆ.

ಮೂರನೆಯ ಸೂತ್ರದಲ್ಲಿ ಜೀವಪಕ್ಷದಲ್ಲಿ ಬಾಧಕವನ್ನು ಹೇಳಲಾಗಿದೆ.

ಬೃಹದಾರಣ್ಯಕ ಭಾಷ್ಯದಿಂದ ವಿರೋಧ ಶಂಕೆ ಹಾಗೂ ಸಮಾಧಾನಗಳು

तात्पर्यचन्द्रिका

अत्र यद्यपि

आत्मा विज्ञानमिति च सर्वजीवाभिमानवान् ।
ब्रह्मैवोक्तः ..... ।

इति बृहदारण्यकभाष्ये आत्मादिशब्दश्चतुर्मुखपर इत्युक्तम् ।

ಅನುವಾದ - ಶಂಕಾ - 'ಯ ಆತ್ಮನಿ' ಮತ್ತು 'ಯೋ ವಿಜ್ಞಾನೇ' ಇತ್ಯಾದಿ ಶ್ರುತಿಗಳನ್ನು ವ್ಯಾಖ್ಯಾನಿಸುವಾಗ ಬೃಹದಾರಣ್ಯಕ ಭಾಷ್ಯದಲ್ಲಿ 'ಆತ್ಮಾ ವಿಜ್ಞಾನಮಿತಿ ಚ ಸರ್ವಜೀವಾಭಿಮಾನವಾನ್ । ಬ್ರಹ್ಮೈವೋಕ್ತಃ..... ।' ಆತ್ಮ ಹಾಗೂ ವಿಜ್ಞಾನ ಶಬ್ದಗಳಿಂದ ಸಕಲ ಜೀವರ ಅಭಿಮಾನಿಯಾದ ಚತುರ್ಮುಖನೇ ಪ್ರತಿಪಾದ್ಯನಾಗಿದ್ದಾನೆಂದು ವ್ಯಾಖ್ಯಾನಿಸಿದ್ದಾರೆ. ಆದ್ದರಿಂದ 'ಶಾರೀರಸ್ಯ' ಎಂಬ ಸೂತ್ರದ ವಿಷಯವಾಕ್ಯದಲ್ಲಿರುವ ಆತ್ಮ ಹಾಗೂ ವಿಜ್ಞಾನ ಶಬ್ದಗಳು ಚತುರ್ಮುಖಬ್ರಹ್ಮನನ್ನು ಪ್ರತಿಪಾದಿಸುತ್ತವೆಂದು ಹೇಳಿರುವಾಗ ನೀವು ಜೀವನನ್ನು ಪ್ರತಿಪಾದಿಸುತ್ತವೆಂದು ವಿವಕ್ಷಿಸಿ ಜೀವನಿಂದ ಅಂತರ್ಯಾಮಿಗೆ ಭೇದವನ್ನು ಹೇಗೆ ಸಮರ್ಥಿಸುತ್ತೀರಿ ?

तथाऽपि पूर्वपक्षे ''य आत्मनि'' इत्यादावात्मादिशब्दस्याऽऽत्माभिमानिपरत्वे ''यः पृथिव्याम्'' इत्यादौ पृथिव्यादिशब्दस्यापि तदभिमानिपरत्वापातेन ''यः पृथिव्याम्'' इत्यादेरेव भेदाध्ययनत्वप्रसङ्गात्, पूर्ववादिना पृथिव्यादिशब्दानां जडपरता, आत्मविज्ञानशब्दयोस्तु शारीरपरता वाच्येत्यभिप्रेत्य तं प्रति ''य आत्मनि'' इत्यादेः शारीरभेदे प्रमाणत्वोक्तिः ।

ಸಮಾಧಾನ - ಬೃಹದಾರಣ್ಯಕ ಭಾಷ್ಯದಲ್ಲಿ ಚತುರ್ಮುಖಬ್ರಹ್ಮಪರವಾಗಿ ಅರ್ಥೈಸಿರುವುದು ಸತ್ಯ. ಆದರೆ ಈ ಅಧಿಕರಣದ ಪೂರ್ವಪಕ್ಷವನ್ನು ತೋರಿಸುವಾಗ 'ಯ ಆತ್ಮನಿ' ಎಂಬಲ್ಲಿರುವ ಆತ್ಮಾದಿ ಶಬ್ದಗಳಿಗೆ ಆತ್ಮನಿಗೆ ಅಭಿಮಾನಿಯಾದ ದೇವತೆಯನ್ನು ವಿವಕ್ಷಿಸಿದರೆ. 'ಯಃ ಪೃಥಿವ್ಯಾಂ'' ಎಂಬಲ್ಲೂ ಸಹ ಪೃಥಿವೀ ಮೊದಲಾದ ಶಬ್ದಗಳಿಗೆ ಪೃಥಿವ್ಯಭಿಮಾನಿದೇವತೆಯನ್ನೇ ವಿವಕ್ಷಿಸಬೇಕಾಗುತ್ತದೆ. ಹಾಗೆ ಮಾಡಿದರೆ 'ಯಃ ಪೃಥಿವ್ಯಾಂ' ಇತ್ಯಾದಿ ವಾಕ್ಯಗಳಿಂದಲೇ ಭೇದವನ್ನು ಅಧ್ಯಯನ ಮಾಡಬೇಕಾದೀತು. ಆದರೆ ಪೂರ್ವಪಕ್ಷಿಗಳು ಪೃಥಿವ್ಯಾದಿಶಬ್ದಗಳಿಗೆ ಜಡಪರತ್ವವನ್ನು ಒಪ್ಪಿರುತ್ತಾರೆ. ಮತ್ತು ಆತ್ಮ ಹಾಗೂ ವಿಜ್ಞಾನ ಶಬ್ದಗಳಿಗೆ ಶಾರೀರನಾದ ಜೀವಪರತ್ವವನ್ನು ಒಪ್ಪಿರುತ್ತಾರೆ. ಆದ್ದರಿಂದ

ಅಂತಹ ಪೂರ್ವಪಕ್ಷಿಯನ್ನು ಕುರಿತು "ಯ ಆತ್ಮನಿ" ಇತ್ಯಾದಿ ವಾಕ್ಯಗಳಿಂದ ಅಂತರ್ಯಾಮಿಗೆ ಶಾರೀರನಿಂದ = ಜೀವನಿಂದ ಭೇದವಿದೆ ಎನ್ನಲು ಪ್ರಮಾಣವನ್ನು ಹೇಳಿದ್ದಾರೆ. ಆದ್ದರಿಂದ ಬೃಹದಾರಣ್ಯಕ ಭಾಷ್ಯದ ವಿರೋಧಕ್ಕೆ ಅವಕಾಶವಿಲ್ಲ.

यद्वा – जीवाभिमानिनश्चतुर्मुखादपि तन्नियामकत्वादिना भिन्नस्यान्तर्यामिणः किमु वक्तव्यं तदभिमन्यमानजीवेभ्यो भिन्नत्वमित्यभिप्रेत्य तदुक्तिः ।

ಅಥವಾ ಜೀವಾಭಿಮಾನಿ ಚತುರ್ಮುಖನಿಗಿಂತಲೂ ಅವನಿಗೆ ನಿಯಾಮಕನಾದ ಕಾರಣ ಅವನಿಂದ ಅವನ ಅಂತರ್ಯಾಮಿಯು ಭಿನ್ನನಾದ ಮೇಲೆ ಚತುರ್ಮುಖಾಭಿಮನ್ಯರಾದ ಜೀವರಿಂದ ಅಂತರ್ಯಾಮಿಗೆ ಭೇದವು ಕೈಮುತ್ಯನ್ಯಾಯದಿಂದ ಸಿದ್ಧವಾಗುತ್ತದೆ ಎಂಬ ಅಭಿಪ್ರಾಯದಿಂದ ಆತ್ಮಶಬ್ದವು ಚತುರ್ಮುಖ ಪರ ಎಂದು ಶಂಕಾ ಮಾಡಲಾಗಿದೆ.

यद्वा – "यः पृथिव्यां" इत्यादौ तत्तदभिमानिन एव तत्तदन्तर्यामित्वमिति वदता पूर्ववादिना "य आत्मनि" इत्यत्रापि जीवात्माभिमानिन एव तदन्तर्यामित्वं वाच्यम् ।

ಅಥವಾ 'यः पृथिव्यां' ಇತ್ಯಾದಿ ಶ್ರುತಿಯಲ್ಲಿ ಪೃಥಿವ್ಯಾದ್ಯಭಿಮಾನಿ ದೇವತೆಯೇ ಅಂತರ್ಯಾಮಿಯಾಗಿದ್ದಾನೆಂದು ಪೂರ್ವಪಕ್ಷಿಯು ಹೇಳುತ್ತಿದ್ದಾನೆ. ಅಂತಹ ಪೂರ್ವಪಕ್ಷಿಯು 'य आत्मनि' ಎಂಬ ಶ್ರುತಿಯಲ್ಲಿಯೂ ಜೀವಾಭಿಮಾನಿಯಾದವನೇ ಅಂತರ್ಯಾಮಿಯಾಗಿದ್ದಾನೆಂದು ಹೇಳಬೇಕು.

तच्चायुक्तं, "आत्मा विज्ञानं" इति स्मृत्या, अभिमानिप्रायपाठेन, अभिमान्यधिकरणन्यायेन च जीवाभिमानिन एव आत्मशब्दार्थत्वात्, अन्तर्यामिणश्च "य आत्मनि" इत्यादिना ततो भिन्नत्वेनाधीतत्वादित्यभिप्रेत्य तदुक्तिः ।

ಇದು ತಪ್ಪು. 'आत्मा विज्ञानं' ಎಂಬ ಸ್ಮೃತಿಯಿಂದ ಮತ್ತು ಪೃಥಿವ್ಯಾದಿಶಬ್ದಗಳ ಪ್ರಾಯವಾಠಗಳ ಬಲದಿಂದ ಅಭಿಮಾನ್ಯಧಿಕರಣದ ನ್ಯಾಯದಿಂದಲೂ ಸಹ ಜೀವಾಭಿಮಾನಿಯಾದವನೇ ಆತ್ಮಶಬ್ದದ ಅರ್ಥನೆನಿಸಿರುತ್ತಾನೆ. ಆದರೆ 'य आत्मनि' ಇತ್ಯಾದಿ ಶ್ರುತಿಯಿಂದ ಪ್ರತಿಪಾದ್ಯನಾದ ಅಂತರ್ಯಾಮಿಯಾದರೂ ಅಭಿಮಾನಿಗಿಂತ ಭಿನ್ನನೆಂದು ಅತೀತನಾಗಿದ್ದಾನೆ. ಈ ಅಭಿಪ್ರಾಯದಿಂದ ಬೃಹದಾರಣ್ಯಕ ಭಾಷ್ಯದಲ್ಲಿ ಚತುರ್ಮುಖಪರತ್ವವನ್ನು ಆತ್ಮಶಬ್ದಕ್ಕೆ ಹೇಳಿರುತ್ತಾರೆ.

''यः पृथिव्यां तिष्ठन्'' इत्यादिकं पृथिव्याद्यभिमानिभ्यो भेदेनाध्ययनं तु न्या यतौल्येनोक्तप्रायत्वान्न पृथगुक्तम् ।

'यः पृथिव्यां तिष्ठन्' ಎಂಬಲ್ಲಿ ಪೃಥಿವ್ಯಾದ್ಯಭಿಮಾನಿ ದೇವತೆಗಳಿಗಿಂತ ಭೇದವಿದೆಯೆಂಬ ಅಧ್ಯಯನವಾದರೂ ಸಮಾನನ್ಯಾಯದಿಂದ ಉಕ್ತಪ್ರಾಯವೆಂದು ತಿಳಿದು ಪ್ರತ್ಯೇಕವಾಗಿ ಹೇಳಿರುವುದಿಲ್ಲ.

श्रुतौ ''यः पृथिव्यां तिष्ठन्'' इत्यादेः प्राथम्येऽपि भाष्ये ''य आत्मनि तिष्ठन्, यो विज्ञाने तिष्ठन्'' इति वाक्ययोरुपादानं तु तयोरैकार्थ्यं, तत्र चेतनपरत्वस्योभयवादिसम्मतत्वं च दर्शयितुम् ।

'यः पृथिव्यां तिष्ठन्' ಇತ್ಯಾದಿಯಾದ ವಾಕ್ಯವೇ ಮೊದಲಿರುತ್ತವೆ. ಆದರೆ ಭಾಷ್ಯದಲ್ಲಿ ಮೊದಲಿರುವ ವಾಕ್ಯವನ್ನು ಬಿಟ್ಟು ಅನಂತರ ಪ್ರಸಕ್ತವಾದ 'यः आत्मनि तिष्ठन्, यो विज्ञाने तिष्ठन्' ಎಂಬೆರಡು ವಾಕ್ಯಗಳನ್ನು ಸ್ವೀಕರಿಸಿದ್ದಾರೆ. ಕಾರಣವೇನೆಂದರೆ ಈ ಎರಡು ವಾಕ್ಯಗಳಿಗೆ ಸಮಾನಾರ್ಥವಿದೆ. ಚೇತನಪರತ್ವವೆಂಬರ್ಥವು ಪೂರ್ವಪಕ್ಷಿಗಳಿಗೂ ಹಾಗೂ ಸಿದ್ಧಾಂತಿಗಳಿಗೂ ಸಮ್ಮತವಾಗಿದೆಯೆಂದು ತೋರಿಸುವುದಕ್ಕಾಗಿ

यद्यप्यन्तरशब्दस्य बृहदारण्यकभाष्ये बाह्यापेक्षां विना रमणादिरर्थ इत्युक्तम्, अत्रापि च भाष्येऽन्तरत्वं आद्यसूत्रस्थतद्धर्मशब्दस्यार्थ इत्युक्तम् । भेदेनाध्ययनं तु ''य आत्मनि तिष्ठन् यस्यात्मा शरीरं य आत्मानं यमयत्येष त आत्मा'' इत्यादि भेदकाध्ययनात् सिध्यति ।

नच ''एष त आत्मा'' इत्यत्राऽऽत्मशब्दः स्वरूपार्थः, 'ते' शति षष्ठ्या औपचारिकत्वापातात् । शरीरशब्दसन्निधानेनात्मशब्दस्य शरीरप्रतिसम्बन्धिपरत्वाच्च। अत एव भाष्ये ''य आत्मनि'' इत्याद्युदाहृतम् ।

ಪ್ರಶ್ನೆ - ಅಂತರ ಶಬ್ದಕ್ಕೆ ಬೃಹದಾರಣ್ಯಕ ಭಾಷ್ಯದಲ್ಲಿ ಭಾಷ್ಯಾಪೇಕ್ಷೆ ಇಲ್ಲದೆ ರಮಿಸುವಿಕೆ ಎಂಬರ್ಥವನ್ನು ಅಂತರ ಶಬ್ದಕ್ಕೆ ಹೇಳಿದ್ದಾರೆ. ಈ ಅಧಿಕರಣದ ಭಾಷ್ಯದಲ್ಲಿಯೂ, ಪ್ರಥಮ ಸೂತ್ರದ ಅಂತಃಸ್ಥದ್ಧರ್ಮ ಎಂಬುದರ ಅರ್ಥವೇ ಅಂತರತ್ವವೆಂದು ವ್ಯಾಖ್ಯಾನಿಸಿದ್ದಾರೆ. ಭೇದಾಧ್ಯಯನವಾದರೂ ಸಹ 'य आत्मनि तिष्ठन् यस्यात्मा शरीरं य आतानूनानं यमयत्येष त आत्मा'' ಇತ್ಯಾದಿಯಾದ ಭೇದಕಾಧ್ಯಯನದಿಂದ ಸಿದ್ಧವಾಗುತ್ತದೆ. ಇನ್ನು 'एष त आत्मा' ಎಂಬಲ್ಲಿರುವ

ಆತ್ಮಶಬ್ದಕ್ಕೆ ಸ್ವರೂಪವೆಂದರ್ಥವನ್ನು ಮಾಡಬಾರದು. 'ತೇ' ಎಂಬಲ್ಲಿರುವ ಷಷ್ಠೀ ವಿಭಕ್ತಿಗೆ ಗೌಣಾರ್ಥವನ್ನು ಮಾಡಿದಂತಾಗುತ್ತದೆ. ಶರೀರಶಬ್ದದ ಸನ್ನಿಧಾನದಿಂದ ಆತ್ಮಶಬ್ದಕ್ಕೆ ಶರೀರಕ್ಕೆ ಪ್ರತಿಸಂಬಂಧಿಯಾದ ಆತ್ಮನೆಂಬರ್ಥವನ್ನೇ ಹೇಳಬೇಕು. ಈ ಉದ್ದೇಶದಿಂದಲೇ ಭಾಷ್ಯದಲ್ಲಿ 'ಯಃ ಆತ್ಮನಿ' ಇತ್ಯಾದಿ ವಾಕ್ಯಗಳನ್ನೂ ಸಹ ಉದಾಹರಿಸಿರುತ್ತಾರೆ. ಹೀಗೆ ಭಾಷ್ಯದಲ್ಲಿ 'ಅಂತರ' ಶಬ್ದಕ್ಕೆ ಒಳಗಡೆ ಇದ್ದು ರಮಿಸುವಿಕೆ ಎಂಬರ್ಥವನ್ನು ಹೇಳಿರುವಾಗ ಭೇದಾಧ್ಯಯನದ ವಿಷಯದಲ್ಲಿ ಪ್ರಮಾಣವಾಗುತ್ತದೆಂದು ಹೇಗೆ ಹೇಳುತ್ತಿದ್ದೀರಿ?

तथाऽपि टीकायां साक्षादेव भेदाध्ययनसिद्ध्यर्थं ''य आत्मनोऽन्तरः'' इत्यत्रत्यान्तरशब्दस्य विविक्तत्वमर्थः ।

ಉತ್ತರ - ಭಾಷ್ಯದಲ್ಲಿ ಕೈಮುತ್ಯದಿಂದ ಭೇದಾಧ್ಯಯನವನ್ನು ಹೇಳಿದ್ದಾರೆ. ಆದರೆ ನೇರವಾಗಿಯೇ ಭೇದಾಧ್ಯಯನವು ಸಿದ್ಧವಾಗಬೇಕೆಂಬ ಉದ್ದೇಶದಿಂದ ಟೀಕೆಯಲ್ಲಿ 'ಯ ಆತ್ಮನೋऽಂತರಃ' ಎಂಬಲ್ಲಿರುವ 'ಅಂತರ' ಶಬ್ದಕ್ಕೆ ಭೇದವೆಂಬರ್ಥವನ್ನು ಸ್ವೀಕರಿಸಿದ್ದಾರೆ.

बृहदारण्यकभाष्यं तु ''य आत्मानमन्तरः'' इत्यत्रान्तरशब्दविष्यम् । अत एव श्रुतौ न पुनरुक्तिः ''य आत्मनोऽन्तरः, यो विज्ञानादन्तरः, योऽद्भ्योऽन्तरः'' इत्यादौ पञ्चम्युपपत्तिश्च ।

ಬೃಹದಾರಣ್ಯಕ ಭಾಷ್ಯದಲ್ಲಾದರೂ 'ಯ ಆತ್ಮಾನಾಂತರಃ' ಎಂಬ ಮತ್ತೊಂದು ಶ್ರುತಿಯಲ್ಲಿರುವ 'ಅಂತರ' ಶಬ್ದವನ್ನೇ ಸ್ವೀಕರಿಸಿದ್ದಾರೆ. ಹೀಗೆ ಹೇಳಿದ್ದರಿಂದ ಪುನರುಕ್ತಿದೋಷ ಪರಿಹಾರವೆಂಬ ಮತ್ತೊಂದು ಪ್ರಯೋಜನವು ಲಾಭವಾಯಿತು. 'ಯ ಆತ್ಮನೋऽಂತರಃ, ಯೋ ವಿಜ್ಞಾನಾದಂತರಃ, ಯೋऽದ್ಭ್ಯೋऽಂತರಃ' ಇವೇ ಮೊದಲಾದ ಶ್ರುತಿಗಳಲ್ಲಿರುವ ಪಂಚಮಿ ವಿಭಕ್ತಿಯೂ ಸಹ ಸ್ವರಸವಾಯಿತು.

''यं पृथिवी न वेद यः पृथिव्या अन्तरः इत्यादिना'' इत्यावसूत्रीयभाष्ये तु प्रतीकमुखेन ''पृथिवी मन्तरः'' इति वाक्यमुपात्तमित्यभिप्रेत्य ''अन्तरो विविक्तः'' इत्युक्तम् ।।

'यं पृथिवी न वेद यः पृथिव्या अंतरः इत्यादिना' ಇತ್ಯಾದಿಯಾದ ಪ್ರಥಮಸೂತ್ರದ ಭಾಷ್ಯದಲ್ಲಿ ಕೇವಲ ಪ್ರತೀಕ ಗ್ರಹಣಕ್ಕಾಗಿ 'ಪೃಥಿವೀ ಮಂತರಃ' ಎಂದು ಹೇಳಿರುತ್ತಾರೆ. ಈ ಅಭಿಪ್ರಾಯದಿಂದಲೇ 'ಅಂತರೋ ವಿವಿಕ್ತಃ' ಎಂಬ ಮಾತನ್ನೂ ಸಹ ಹೇಳಿದ್ದಾರೆಂದು ತಿಳಿಯಬೇಕು.

ಪ್ರಕಾಶಃ –

ಎತದ್ಭಾಷ್ಯಸ್ಯ ಭಾಷ್ಯಾನ್ತರವಿರೋಧಂ ವಾ, ಅನ್ಯತ್ರೋಕ್ತಾರ್ಥೇ ಜೀವಾನ್ತರ್ಯಾಮಿಭೇದಾಧ್ಯಾಯನಾಸಿದ್ಧಂ ವಾ, ಅರ್ಥದ್ವಯೋಕ್ತೇರ್ವೈಯರ್ಥ್ಯಂ ವಾ ಹೃದಿ ಕೃತ್ವಾ ತದನೂದ್ಯ ನಿರಾಹ ಅತ್ರ – ಯದ್ಯಪೀತಿ ।

ಏವರಣೆ – 'ಶಾರೀರಶ್ಚೋಭಯೇಽಪಿ ಹಿ ಭೇದೇನೈನಮಧೀಯತೇ'' ಎಂಬ ಸೂತ್ರವನ್ನು ವ್ಯಾಖ್ಯಾನಿಸುವಾಗ 'ಯ ಆತ್ಮನಿ ತಿಷ್ಠನ್' ಎಂಬುದಾಗಿ ಮಾಧ್ಯಂದಿನಶಾಖೆಯಲ್ಲಿ 'ಯೋ ವಿಜ್ಞಾನೇ ತಿಷ್ಠನ್' ಎಂಬುದಾಗಿ ಕಾಣ್ವಶಾಖೆಯಲ್ಲಿ ಅಂತರ್ಯಾಮಿಯಿಂದ ಜೀವನಿಗೆ ಭೇದವನ್ನು ಅಧ್ಯಯನ ಮಾಡುತ್ತಾರೆಂದು ಹೇಳಲಾಗಿದೆ. ಇಲ್ಲಿರುವ ಆತ್ಮ ಹಾಗೂ ವಿಜ್ಞಾನಶಬ್ದಗಳಿಗೆ ಜೀವವೆಂಬರ್ಥವನ್ನು ಹೇಳಿದಾಗ ಮಾತ್ರ ಜೀವರಿಂದ ಭೇದವನ್ನು ತಿಳಿದಂತಾಗುತ್ತದೆ. ಆದರೆ ಬೃಹದಾರಣ್ಯಕ ಭಾಷ್ಯದಲ್ಲಿ ಈ ಅರ್ಥವೇ ತೋರುತ್ತಿಲ್ಲ. ಆದ್ದರಿಂದ ಸೂತ್ರಭಾಷ್ಯಕ್ಕೂ ಉಪನಿಷತ್‌ಭಾಷ್ಯಕ್ಕೂ ಪರಸ್ಪರ ವಿರೋಧ ಬರುತ್ತದೆ. ಮತ್ತು ಇಲ್ಲಿ ಹೇಳಿದ ವಿಷಯದಲ್ಲಿ ಜೀವಾಂತರ್ಯಾಮಿಯಿಂದ ಭೇದವನ್ನು ಅಧ್ಯಯನ ಮಾಡುತ್ತಾರೆಂಬುದೂ ಸಹ ಅಸಿದ್ಧವಾಗುತ್ತದೆ. ಮತ್ತು ಎರಡು ಬಗೆಯ ಅರ್ಥವನ್ನೂ ಹೇಳಿದ್ದೂ ಸಹ ವ್ಯರ್ಥವಾಗುತ್ತದೆ ಎಂಬ ಈ ಎಲ್ಲಾ ಆಕ್ಷೇಪಗಳನ್ನು ಅನುವಾದ ಮಾಡಿ ನಿರಾಕರಿಸುತ್ತಿದ್ದಾರೆ 'ಯದ್ಯಪಿ' ಎಂಬ ಗ್ರಂಥದಿಂದ.

ಪ್ರಕಾಶಃ – ಪೃಥಿವ್ಯಾದಿಶಬ್ದಸ್ಯಾಪೀತಿ । ಅನ್ಯಥಾ ಪ್ರಾಯಪಾಠವಿರೋಧಾದಿತಿ ಭಾವಃ । ಅಭಿಮಾನಿಪರತ್ವೇ ಕೋ ದೋಷ ಇತ್ಯತ ಆಹ – ಯ ಇತಿ । ಪೃಥಿವ್ಯಾದಿಶಬ್ದಾನಾಮಭಿಮಾನಿಚೇತನಪರತ್ವೇ 'ಯಃ' ಇತ್ಯನೇನ ತದನ್ಯಸ್ಯ ಗ್ರಹಣಾತ್ ''ಏಷ ತ ಆತ್ಮಾಽನ್ತರ್ಯಾಮೀ'' ಇತಿ ಪೃಥಿವ್ಯಾದ್ಯಭಿಮಾನಿಚೇತನಭಿನ್ನಸ್ಯಾನ್ತರ್ಯಾಮಿತಾಪತ್ತ್ಯಾಽಭಿಮಾನಿಜೀವ ಏವಾನ್ತರ್ಯಾಮೀತಿ ಪಕ್ಷೋ ನ ಸ್ಯಾದಿತಿ ಜಡಪರತಾ ವಾಚ್ಯೇತ್ಯರ್ಥಃ ।

ಆತ್ಮ ಶಬ್ದಕ್ಕೆ ಅಭಿಮಾನಿ ಪರವಾಗಿ ಅರ್ಥೈಸಿದಾಗ ಪೃಥಿವ್ಯಾದಿಶಬ್ದಗಳಿಗೂ ಅಭಿಮಾನಿ ಪರವಾಗಿಯೇ ಅರ್ಥೈಸಬೇಕು. ಇಲ್ಲದಿದ್ದರೆ ಪ್ರಾಯಪಾಠದ ವಿರೋಧ ಬರುತ್ತದೆಂದು 'ಪೃಥಿವ್ಯಾದಿಶಬ್ದಸ್ಯಾಪಿ' ಎಂಬುದರಿಂದ ಹೇಳುತ್ತಿದ್ದಾರೆ.

ಪೃಥಿವ್ಯಾದಿಶಬ್ದಗಳಿಗೆ ಅಭಿಮಾನಿ ದೇವತಾಪರವಾಗಿ ಅರ್ಥೈಸಿದರೆ ಏನು ತಪ್ಪು? ಎಂಬ ಶಂಕೆಗೆ 'ಯಃ ಪೃಥಿವ್ಯಾಂ' ಎಂಬುದರಿಂದ ಉತ್ತರಿಸುತ್ತಿದ್ದಾರೆ. ಇದರ ಅಭಿಪ್ರಾಯ ಹೀಗಿದೆ - ಪೃಥಿವ್ಯಾದಿಶಬ್ದಗಳು ಅಭಿಮಾನಿಯಾದ ಚೇತನನ್ನು ಪ್ರತಿಪಾದಿಸುವುದಾದರೆ 'ಯಃ' ಎಂಬ ಪದದಿಂದ ಆದಕ್ಕೆ ಅಭಿಮಾನಿ ದೇವತೆಯನ್ನು ವಿವಕ್ಷಿಸಲಾಗದು; ಹೊರತಾಗಿ ಬೇರೆಯವನನ್ನೇ ವಿವಕ್ಷಿಸಬೇಕು. ಆವಾಗ 'ಏಷ ತ' ಆತ್ಮಾಽನ್ತರ್ಯಾಮೀ' ಎಂಬಲ್ಲಿಯೂ ಪೃಥಿವ್ಯಾದ್ಯಭಿಮಾನಿಗಳಿಗಿಂತ ಭಿನ್ನನಾದ ಅಂತರ್ಯಾಮಿಯನ್ನೇ ವಿವಕ್ಷಿಸಬೇಕಾಗುತ್ತದೆ. ಆದ್ದರಿಂದ ಅಭಿಮಾನಿಯಾದ ಜೀವನೇ ಅಂತರ್ಯಾಮಿಯಾಗಿದ್ದಾನೆಂಬ ಎಂಬ ಪಕ್ಷವು ಭಗ್ನವಾಗುತ್ತದೆ. ಈ ಸಮಸ್ಯೆಯನ್ನು ಪರಿಹರಿಸಬೇಕೆಂದರೆ ಪೂರ್ವಪಕ್ಷಿಗಳು ಪೃಥಿವ್ಯಾದಿಶಬ್ದಗಳಿಗೆ ಜಡಪರತ್ವವನ್ನೇ ಒಪ್ಪಬೇಕು.

ಪ್ರಕಾಶಃ – ಭಾಷ್ಯೇ ಆತ್ಮಾದಿಶಬ್ದಸ್ಯ ಸರ್ವಜೀವಾರ್ಥತ್ವೋಕ್ತೇ ಕೃತ್ಯಮುಕ್ತ್ವಾ, ಅನ್ಯತ್ರ ಚತುರ್ಮುಖಪರತ್ವೋಕ್ತೇಃ ಫಲಮಾಹ – **ಯದ್ಧೇತಿ** ।

ಭಾಷ್ಯದಲ್ಲಿ ಆತ್ಮ ಮೊದಲಾದ ಶಬ್ದಕ್ಕೆ ಸಕಲ ಜೀವರೆಂಬರ್ಥವನ್ನು ಹೇಳಿದ್ದಕ್ಕೆ ಪ್ರಯೋಜನವನ್ನು ಹೇಳಿ, ಬೇರೆ ಶ್ರುತಿಯಲ್ಲಿ ಆತ್ಮಾದಿ ಶಬ್ದಗಳಿಗೆ ಚತುರ್ಮುಖನೆಂಬರ್ಥವನ್ನು ಹೇಳಲು ಪ್ರಯೋಜನವನ್ನು 'ಯದ್ವಾ' ಇತ್ಯಾದಿ ವಾಕ್ಯದಿಂದ ತೋರಿಸುತ್ತಿದ್ದಾರೆ.

ಪ್ರಕಾಶಃ – 'ತದುಕ್ತಿಃ' ಚತುರ್ಮುಖಪರತ್ವೋಕ್ತಿಃ । ತಥಾ ಚಾತ್ಮವಿಜ್ಞಾನಶಬ್ದಯೋಃ ಚತುರ್ಮುಖಪರತ್ವಮೇವ, ನ ಶಾರೀರಾರ್ಥಕತ್ವಮ್ । ಅತ್ರ ಭಾಷ್ಯೇ ಶಾರೀರಾರ್ಥಕತ್ವಸ್ಯ ಪ್ರದರ್ಶನಂ ತು ಕೈಮುತ್ಯಲಬ್ಧಸ್ಯ, ನತು ಶಬ್ದಾರ್ಥತ್ವೇನ ಪ್ರಾಪ್ತಸ್ಯೇತ್ಯರ್ಥಃ ।

'ತದುಕ್ತಿಃ' ಎಂದರೆ ಚತುರ್ಮುಖಪರತ್ವವೆಂಬ ಹೇಳುವಿಕೆ ಎಂಬರ್ಥ. ಆದ್ದರಿಂದ ಆತ್ಮ, ವಿಜ್ಞಾನ ಶಬ್ದಗಳಿಗೆ ಚತುರ್ಮುಖನೆಂದೇ ಅರ್ಥ ಹೊರತು, ಜೀವನೆಂದರ್ಥವಲ್ಲ. ಹಾಗಾದರೆ ಭಾಷ್ಯದಲ್ಲಿ ಜೀವನದೆಸೆಯಿಂದ ಭೇದವನ್ನು ತೋರಿಸಿದ್ದಾರಲ್ಲ? ಎಂದರೆ ಅದು ಕೇವಲ ಕೈಮುತ್ಯನ್ಯಾಯದಿಂದ ಲಬ್ಧವಾಗಿದೆಯೆಂದು ತಿಳಿಯಬೇಕು ಹೊರತು, ಶ್ರುತಿಯಿಂದ ನೇರವಾಗಿ ತಿಳಿದಿರುವುದಲ್ಲ.

ಪ್ರಕಾಶಃ – ನನು ಪೃಥಿವ್ಯಾದ್ಯಭಿಮಾನಿಜೀವಾನಾಮನ್ತರ್ಯಾಮಿತ್ವೇ ಶಙ್ಕಿತೇ ತೇಷಾಮೇವಾನ್ತರ್ಯಾಮಿಣಾ ಭೇದಸ್ಯ ಆದೌ ವಾಚ್ಯತ್ವೇನಾವಶ್ಯವಾಚ್ಯಸ್ಯ ಸಾಕ್ಷಾದವಚನಂ, ಅನುಯಪುಕ್ತಂ ಚತುರ್ಮುಖಸ್ಯ ತತ್ಕಥನಂ ತು ಸಾಕ್ಷಾದಿತ್ಯುಕ್ತಮಿತ್ಯತಶ್ಚತುರ್ಮುಖಪರತ್ವಮೇವಾವಶ್ಯಂ ವಾಚ್ಯಮಿತಿ ಭಾವೇನ ತದುಕ್ತಿಂ ಸಾಧಯತಿ – **ಯದ್ಧೇತಿ** ।

ಪ್ರಶ್ನೆ - ಪೃಥಿವ್ಯಾದ್ಯಭಿಮಾನಿ ಜೀವರುಗಳೇ ಅಂತರ್ಯಾಮಿಯಾಗಿದ್ದಾರಲ್ಲವೇ? ಎಂಬ ಶಂಕೆಗೆ ಅಭಿಮಾನಿ ಜೀವರು ಅಂತರ್ಯಾಮಿಯಿಂದ ಭಿನ್ನರಾಗಿದ್ದಾರೆಂದು ಹೇಳಬೇಕು. ಅವಶ್ಯವಾಗಿ ಹೇಳಬೇಕಾದ್ದನ್ನು ನೇರವಾಗಿ ಹೇಳಬೇಕು ಹೊರತು, ಕೈಮುತ್ಯದಿಂದ ಹೇಳಬಾರದು. ಚತುರ್ಮುಖನಿಗೆ ಭೇದವನ್ನು ನೇರವಾಗಿ ಹೇಳುವುದು ತಪ್ಪಲ್ಲವೇ?

ಉತ್ತರ - ಹೀಗೆ ಪ್ರಶ್ನಿಸಬಾರದು. ಆತ್ಮಶಬ್ದಕ್ಕೆ ಚತುರ್ಮುಖನೆಂಬ ಅರ್ಥವನ್ನೇ ಅವಶ್ಯವಾಗಿ ಹೇಳಬೇಕೆಂಬ ಅಭಿಪ್ರಾಯದಿಂದ 'ಯದ್ವಾ' ಇತ್ಯಾದಿ ವಾಕ್ಯವು ಅದನ್ನೇ ಸಾಧಿಸುತ್ತಿದೆ.

ಪ್ರಕಾಶಃ – **ಸ್ಮೃತ್ಯೇತಿ** । ಪ್ರಾಗುಕ್ತಯೇತ್ಯರ್ಥಃ । **ಅಭಿಮಾನೀತಿ** । ಪೃಥಿವ್ಯಾದ್ಯಭಿಮಾನಿಪ್ರಾಯಪಾಠೇನೇತ್ಯರ್ಥಃ । **ಅಭಿಮಾನ್ಯಧಿಕರಣೇತಿ** । ತತ್ರ ಅಭಿಮನ್ಯಮಾನಶಬ್ದಾನಾಂ ಅಭಿಮಾನಿನಿ ಮುಖ್ಯತ್ವೋಕ್ತೇರಿತಿ ಭಾವಃ ।

'स्मृत्या' ಎಂದರೆ ಹಿಂದೆ ಹೇಳಿದ ಶ್ರುತಿಯಿಂದ ಎಂದರ್ಥ. 'ಅಭಿಮಾನಿ' ಎಂಬ ಪದಕ್ಕೆ ಪೃಥಿವ್ಯಾದ್ಯಭಿಮಾನಿ ಪ್ರಾಯಪಾಠದಿಂದ ಎಂದರ್ಥ. ಅಭಿಮನ್ಯಧಿಕರಣದಲ್ಲಿ ಅಭಿಮನ್ಯಮಾನವಾದ ಶಬ್ದವು ಅಭಿಮಾನಿಯಲ್ಲಿ ಮುಖ್ಯವಾಗಿದೆಯೆಂದು ಸಾಧಿಸಿದ್ದಾರೆ.

प्रकाशः – ननु एवं पृथिव्यादिशब्दानामप्यभिमानिपरत्वात्तत्राप्यभिमानिनोऽन्तर्यामिणो भेदोक्तिसम्भवेन भाष्ये ''य आत्मनि'' इत्यादिविशिष्यप्रदर्शनमयुक्तमित्यत आह – **यः पृथिव्यामिति । प्रथमातिक्रमे हेतुमाह – श्रुताविति ।**

ಪೃಥಿವ್ಯಾದಿಶಬ್ದಗಳಿಗೆ ಅಭಿಮಾನಿದೇವತಾ ಪರತ್ವವನ್ನು ಹೇಳಬೇಕಾದ್ದರಿಂದ ಅಭಿಮಾನಿದೇವತೆಗಳಿಗೆ ಅಂತರ್ಯಾಮಿಯಿಂದ ಭೇದವನ್ನು ಹೇಳಿದಂತಾಗುತ್ತದೆ. ಹೀಗಿರುವಾಗ ಭಾಷ್ಯದಲ್ಲಿ 'ಯ ಆತ್ಮನಿ' ಇತ್ಯಾದಿಯಾಗಿ ವಿಶೇಷವಾದ ಇದೇ ಶ್ರುತಿಯನ್ನು ಸ್ವೀಕರಿಸಲು ಏನು ಕಾರಣ? ಎಂಬ ಪ್ರಶ್ನೆಗೆ 'ಯಃ ಪೃಥಿವ್ಯಾಂ' ಇತ್ಯಾದಿ ವಾಕ್ಯದಿಂದ ಉತ್ತರಿಸುತ್ತಿದ್ದಾರೆ. ಪ್ರಥಮ ಪ್ರಾಪ್ತವಾದದ್ದನ್ನು ಅತಿಕ್ರಮ ಮಾಡಲು ಕಾರಣವನ್ನು 'ಶ್ರುತೌ' ಇತ್ಯಾದಿ ವಾಕ್ಯದಿಂದ ತೋರಿಸುತ್ತಿದ್ದಾರೆ.

प्रकाशः – टीकायां ''आत्मनस्सकाशादन्तरो विविक्तः'' इत्युक्तं, तदाचार्यसूक्तिविरुद्धमित्याशङ्क्य समाधत्ते – **यद्यपीति ।**

> बाह्यापेक्षां विना यस्तु रमते सोऽन्तरः स्मृतः ।
> अतिप्रियत्वाच्च हरेरन्तरत्वमुदाहृतम् ।।
>
> इत्यनेनेत्यर्थः ।

ಟೀಕೆಯಲ್ಲಿ 'ವಿವಿಕ್ತಃ' ಎಂಬುದಾಗಿ ಅಂತರ ಶಬ್ದಕ್ಕೆ ಭೇದವೆಂಬರ್ಥವನ್ನು ಹೇಳಿದ್ದಾರೆ. ಆದರೆ ಶ್ರೀಮದಾಚಾರ್ಯರು ಬೇರೆಯೇ ಅರ್ಥವನ್ನು ಹೇಳಿದ್ದರಿಂದ ಟೀಕೆಯು ಭಾಷ್ಯವಿರುದ್ಧವಾಯಿತಲ್ಲವೇ? ಎಂಬುದಾಗಿ 'ಯದ್ಯಪಿ' ಇತ್ಯಾದಿ ವಾಕ್ಯದಿಂದ ಆಶಂಕಿಸಿ ಸಮಾಧಾನವನ್ನು ಹೇಳಿದ್ದಾರೆ.

> ಬಾಹ್ಯಾಪೇಕ್ಷಾ ವಿನಾ ಯಸ್ತು ರಮತೇ ಸೋಽಂತರಃ ಸ್ಮೃತಃ।
> ಅತಿಪ್ರಿಯತ್ವಾಚ್ಚ ಹರೇರಂತರತ್ವಮುದಾಹೃತಮ್ ॥

ಬಾಹ್ಯಾಪೇಕ್ಷೆಯು ಇಲ್ಲದೆ ಯಾವಾತನು ಸುಖಿಸುತ್ತಾನೋ, ಅವನೇ ಅಂತರನೆನಿಸಿದ್ದಾನೆ. ಈ ವಾಕ್ಯದಲ್ಲಿ ಅಂತರಶಬ್ದಕ್ಕೆ ಭೇದವೆಂಬರ್ಥವನ್ನು ಸ್ವೀಕರಿಸಿಲ್ಲ.

प्रकाशः – भेदोक्त्यर्थान्तरमेतत्किं नेति भ्रमं निराह – **भेदेनेति । भेदकेति ।**

सप्तमीषष्ठ्यादिरूपभिन्नविभक्तिनिर्देशस्तूपेत्यर्थः । भेदकत्वं साधयति – **नचेति ।** 'टीकायाम्' इत्यस्य 'इत्युक्तम्' इत्यन्वयः ।

ಭೇದವನ್ನು ಹೇಳುವುದಕ್ಕಾಗಿ ಆದೇ ಶ್ರುತಿಗೆ ಟೀಕಾರಾಯರು ಮತ್ತೊಂದು ಅರ್ಥವನ್ನು ಹೇಳಿರಬಹುದೆಂಬ ಭ್ರಮೆಯನ್ನು ಭೇದೇನ ಇತ್ಯಾದಿ ವಾಕ್ಯದಿಂದ ನಿರಾಕರಿಸುತ್ತಿದ್ದಾರೆ. 'ಭೇದಕಾಧ್ಯಯನಾತ್' ಎಂದರೆ ಸಪ್ತಮೀ, ಷಷ್ಠಿ ಮೊದಲಾದ ಬೇರೆ ಬೇರೆ ವಿಭಕ್ತಿಗಳ ನಿರ್ದೇಶದಿಂದ ತಿಳಿಯಲ್ಪಟ್ಟ ಭೇದಾಧ್ಯಯನದಿಂದ ಎಂದರ್ಥ. ಭೇದಶ್ ಧರ್ಮವನ್ನೇ 'ನಚ' ಇತ್ಯಾದಿ ವಾಕ್ಯದಿಂದ ಸಾಧಿಸುತ್ತಿದ್ದಾರೆ. 'ಟೀಕಾಯಾಂ' ಎಂಬ ಪದಕ್ಕೆ 'ಇತ್ಯುಕ್ತಂ' ಎಂಬಲ್ಲಿ ಅನ್ವಯ.

ಪ್ರಕಾಶಃ – ಪಞ್ಚಮೀತಿ । ''ಅಪಾದಾನೇ ಪಞ್ಚಮೀ'' ಇತಿ ಪ್ರಕರಣೇ ''ಅನ್ಯಾರಾದಿತರರ್ತೇ ದಿಕ್ಶಬ್ದಾಞ್ಚೂತ್ತರಪದಾಜ್ಞಾಹಿಯುಕ್ತೇ'' ಇತಿ 'ಅನ್ಯ' ಇತ್ಯರ್ಥಗ್ರಹಣೇನ ಪಞ್ಚಮೀವಿಧಾನಾತ್, ಬಾಹ್ಯಾನಪೇಕ್ಷರಮಣಾರ್ಥತ್ವೇ 'ಪೃಥಿವ್ಯಾಃ' ಇತ್ಯಸ್ಯ ವೈಯರ್ಥ್ಯಂ ಚ ಸ್ಯಾದಿತಿ ಭಾವಃ ।

'ಅಪಾದಾನೇ ಪಂಚಮೀ' ಎಂಬ ಪ್ರಕರಣದಲ್ಲಿ 'ಅನ್ಯಾರಾದಿತರರ್ತೇ ದಿಕ್ಶಬ್ದಾಂಚೂತ್ತರಪದಾಜಹಿಯುಕ್ತೇ' ಇತ್ಯಾದಿ ಸೂತ್ರದಲ್ಲಿ 'ಅನ್ಯ' ಎಂಬರ್ಥದಲ್ಲಿ ಪಂಚಮಿಯನ್ನು ವಿಧಾನ ಮಾಡಲಾಗಿದೆ. ಮತ್ತು ಬಾಹ್ಯಾಪೇಕ್ಷೆಯಿಲ್ಲದೇ ಕ್ರೀಡಿಸುವಿಕೆ ಎಂಬರ್ಥವನ್ನು ವಿವಕ್ಷಿಸುವುದಾದಲ್ಲಿ 'ಪೃಥಿವ್ಯಾಃ' ಎಂಬ ಷಷ್ಠೀ ವಿಭಕ್ತಿಯೂ ಸಹ ವ್ಯರ್ಥವಾಗುತ್ತದೆಂದು ತಿಳಿಯಬೇಕು.

ಪ್ರಕಾಶಃ – ತರ್ಹಿ ಭಾಷ್ಯೇ ''– ಯಂ ಪೃಥಿವೀ ನ ವೇದ ಯಃ ಪೃಥಿವ್ಯಾ ಅನ್ತರಃ'' ಇತ್ಯಾದಿನಾऽಧಿದೈವಾದಿಷು ತದ್ಧರ್ಮವ್ಯಪದೇಶಾತ್'' ಇತ್ಯುಕ್ತಿಃ ಕಥಮಿತ್ಯತ ಆಹ – ಯಮಿತಿ ।

ಹಾಗಾದರೆ ಭಾಷ್ಯದಲ್ಲಿ 'ಯಂ ಪೃಥೀವೀ ನ ವೇದ ಯಃ ಪೃಥಿವ್ಯಾ ಆಂತರಃ' ಇತ್ಯಾದಿನಾಧಿದೈವಾದಿಷು ತದ್ಧರ್ಮವ್ಯಪದೇಶಾತ್' ಎಂದೇಕೆ ಹೇಳಿದ್ದಾರೆ? ಎಂಬ ಪ್ರಶ್ನೆಗಳಿಗೆ 'ಯಮ್' ಇತ್ಯಾದಿ ವಾಕ್ಯದಿಂದ ಉತ್ತರಿಸಿದ್ದಾರೆ.

ಪ್ರಕಾಶಃ – ಅವಿದಿತತ್ವಸ್ಯೋಕ್ತ್ಯರ್ಥಂ 'ಯಂ' ಇತ್ಯಾದೇರವಶ್ಯವಾಚ್ಯತ್ವಾತ್ತನ್ಮುಖೇನ ''ಯಃ ಪೃಥಿವೀಮನ್ತರಃ'' ಇತ್ಯೇವಾಭಿಪ್ರೇತಮಿತ್ಯರ್ಥಃ । ಅತ ಏವ ಟೀಕಾಯಾಂ ವಾಕ್ಯಶೇಷಮನುಪಾದಾಯಾಧಸ್ತ್ರೇ 'ಪೃಥಿವ್ಯಾದ್ಯವಿದಿತತ್ವಾನ್ತರತ್ವಾಖ್ಯಧರ್ಮವ್ಯಪದೇಶಾತ್' ಇತಿ ಸಾಮಾನ್ಯೇನೋಕ್ತಮಿತಿ ಭಾವಃ ।।

ಅವಿದಿತತ್ವವನ್ನು ತಿಳಿಸುವುದಕ್ಕಾಗಿ 'ಯಂ' ಇತ್ಯಾದಿ ವಾಕ್ಯವನ್ನು ಅವಶ್ಯವಾಗಿ ಹೇಳಬೇಕು. ತನ್ಮೂಲಕವಾಗಿ 'ಯಃ ಪೃಥಿವೀಮಂತರಃ' ಎಂಬ ವಾಕ್ಯವಷ್ಟೇ ಅಭಿಪ್ರೇತವಾಗಿದೆ. ಆದ್ದರಿಂದಲೇ ಟೀಕೆಯಲ್ಲಿ ಯಾವುದೇ ಒಂದು ವಿಶೇಷವಾದ ವಾಕ್ಯವನ್ನು ಉಲ್ಲೇಖಿಸದಲೇ ಪ್ರಥಮ ಸೂತ್ರದಲ್ಲಿ 'ಪೃಥಿವ್ಯಾದ್ಯವಿದಿತತ್ವಾಂತರತ್ವಾಖ್ಯಧರ್ಮವ್ಯಪದೇಶಾತ್' ಎಂದು ಸಾಮಾನ್ಯವಾಗಿ ಹೇಳಿದ್ದಾರೆ.

ಗುರುರಾಜೀಯಮ್ – ನನು ದ್ವಿತೀಯೇ ಪ್ರಧಾನಜೀವಯೋಸ್ಸ್ವಪಕ್ಷಸಾಧಕಾಭಾವೋಕ್ತಿರಯುಕ್ತಾ । ಜೀವಮಾತ್ರಸ್ಯಾನ್ತರ್ಯಾಮಿಣಸ್ಸಕಾಶಾಜ್ಜೀವಪ್ರತಿಪಾದನಾರ್ಥಂ ಚತುರ್ಮುಖಸ್ಯಾನ್ತರ್ಯಾಮಿಣಸ್ಸಕಾಶಾದ್ ಭೇದಪ್ರತಿಪಾದಕವಾಕ್ಯೋದಾರಹರಣಸ್ಯಾಸಙ್ಗತತ್ವಾತ್ । ನಚ ತತ್ರಾಪ್ಯಾತ್ಮಶಬ್ದೋ ಜೀವಪರ ಇತಿ

तदुक्तिर्युक्तेति वाच्यम् । तथा सति बृहदारण्यकभाष्यविरोधस्स्यात् । तत्रात्मा विज्ञानमिति चेत्यादिनाऽऽत्मादिशब्दानां जीवविशेषचतुर्मुखपरतयोक्तत्वादित्यत आह – **अत्र यद्यपीति ।।**

नन्वेवं पूर्वपक्षरीत्या भेदव्यपदेशोक्तौ वास्तवभेदव्यपदेशाभावाज्जीवमात्रस्यान्तर्यामिणस्सकाशाद्भेदसिद्धिर्न स्यादित्यरुच्याऽऽह – **यद्वेति ।।** अस्मिन्पक्षे कैमुत्येन लाभेऽपि साक्षान्न तल्लाभ इत्यतः पक्षान्तरमाह – **यद्वेति ।।** नन्वभिमान्यधिकरण-न्यायेनात्मशब्दस्य तदभिमानिचेतनपरत्ववत्पृथिव्यादिशब्दानामपि चेतनपरत्वेन यः पृथिव्यां तिष्ठन्नित्यादिनोक्तस्यान्तर्यामिणः पृथिव्याद्यभिमानिभ्यो भेदव्यपदेशस्य सत्त्वात्सोऽपि कुतो नोक्त इत्यत आह – **यद्वेति ।।** ननु टीकायामन्तरो विविक्त इति व्याख्यातम् । तदयुक्तम् । बृहदारण्यकवाक्यविरोधात् । एतद्भाष्यविरोधाच्च । बाह्यापेक्षां विना रमणस्यैव तदर्थत्वेनोक्तत्वात् । नच भेदव्यपदेशलाभार्थं तथा व्याख्यानम् । य आत्मनि तिष्ठन्नित्यादिनापि भेदव्यपदेशलाभोपपत्तेरित्यतस्तत्सार्थक्यं वक्तुमाह – **यद्यपीति ।। अत एवेति ।।** य आत्मनि तिष्ठन्नित्यादेरपि भेदव्यपेशस्य भाष्यकृदभिप्रेतत्वादेवेत्यर्थः ।। **साक्षादेवेति ।।** अन्यथा तु भेदाकोक्त्या भेदलाभ इति भावः । **अत एवेति ।।** बाह्यपेक्षां विना रमणरूपस्य बृहद्भाष्योक्तस्यान्तर इत्युभयत्रत्यान्तरशब्दविष्यत्वे एकेनैव बाह्यापेक्षां विना रमणस्योक्तत्वेन द्वितीयेनापि तदुक्तौ पौनरुक्त्यं स्यादिति भावः । अत्र यद्यप्यात्मन इति पृथिव्या इत्येव चोदाहरणीयम् । तथाप्यात्मन इत्यस्य पञ्चमीत्वसिद्ध्यर्थं विज्ञानादित्यस्य पृथिव्या इत्यस्य पञ्चमीत्वसिद्ध्यर्थं चाद्भ्य इत्यस्योदाहरणम् । अन्यथा षष्ठीत्वान्न पञ्चम्यनुपपत्तिरिति शङ्का स्यादिति भावः ।। **पञ्चम्युपपत्तिश्चेति ।।** पृथिव्या इत्यादौ सादृश्यात्षष्ठीपञ्चमीसन्देहेऽपि विज्ञानादद्भ्य इत्यादौ पञ्चम्या निर्णीतत्वेन तत्प्रायपाठेन सर्वत्रापि पञ्चम्या निर्णयात् । तस्याश्च पृथिव्यादेरपादानत्वाभावेन कारकविभक्तित्वासम्भवादुपपदविभक्तित्वे पदान्तरयोगाभावात् । अन्यारादितरर्त इत्यत्रान्येत्यस्यान्यार्थकशब्दग्रहणपरत्वादन्तरशब्दपरत्वस्य च विभक्ति-प्रतिरूपकान्तरेणेति यदन्तरं व्याघ्रहरीन्द्रयोर्वने इत्यादौ भेदभेदकयोः प्रयोगादत्र

विभक्तत्वार्थेऽन्यः कृष्ण इत्यादिवि पञ्चम्या उपपत्तेरन्यथा चोपपत्तेरिति भावः । नन्वेवं पृथिव्या इत्यस्य यदि पृथिव्या भिन्न इत्यर्थस्तर्हि प्रथमसूत्रभाष्ये तद्ग्रहणमयुक्तम् । तस्य तद्धर्मत्वाभावादित्यत आह – यमिति ।।

ಸಾರ

ಬೃಹದಾರಣ್ಯಕ ಭಾಷ್ಯದಲ್ಲಿ ಆತ್ಮಶಬ್ದಕ್ಕೆ ಚತುರ್ಮುಖ ಎಂಬರ್ಥವನ್ನು ಹೇಳಿದ್ದಾರೆ. ಆದರೆ ಪ್ರಕೃತ ಜೀವನೆಂಬರ್ಥವನ್ನು ಒಪ್ಪಿ ಜೀವಭೇದದ ವಿಷಯದಲ್ಲಿ ಆದೇ ಶ್ರುತಿಯನ್ನು ಪ್ರಮಾಣವನ್ನಾಗಿ ಹೇಳಿದ್ದಾರೆ. ಇದು ವಿರುದ್ಧವಲ್ಲವೇ? ಎಂದು ಪ್ರಶ್ನಿಸಬಾರದು. ಚತುರ್ಮುಖಬ್ರಹ್ಮನಿಗೆ ನಿಯಾಮಕನಾದ್ದರಿಂದ ಬ್ರಹ್ಮನು ಚತುರ್ಮುಖಬ್ರಹ್ಮನಿಗಿಂತ ಭಿನ್ನನಾಗಿದ್ದಾನೆಂಬ ವಿಷಯವು ಸ್ಪಷ್ಟವಾಗಿ ತಿಳಿಯುತ್ತದೆ. ಚತುರ್ಮುಖನಿಂದರೇ ಭಿನ್ನನಾದ ಮೇಲೆ ಚತುರ್ಮುಖನಿಂದ ಅಭಿಮನ್ಯಮಾನರಾದ ಸಕಲಜೀವರಿಗಿಂತ ಭಿನ್ನನಾಗಿದ್ದಾನೆಂದು ಇನ್ನೂ ಸ್ಪಷ್ಟವಾಗಿ ತಿಳಿಯುತ್ತದೆ. ಆದ್ದರಿಂದ ವಿರೋಧಕ್ಕೆ ಅವಕಾಶವಿಲ್ಲ.

'ಅಂತರ' ಶಬ್ದಕ್ಕೆ ಬೃಹದಾರಣ್ಯಕ ಭಾಷ್ಯದಲ್ಲಿ 'ಬಾಹ್ಯವಸ್ತುಗಳ ಅಪೇಕ್ಷೆಯಿಲ್ಲದೇ ಪೀಡಿಸುವಿಕೆ' ಎಂಬರ್ಥವನ್ನು ಹೇಳಿದ್ದಾರೆ. ಆದರೆ ಪ್ರಕೃತ ಟೀಕೆಯಲ್ಲಿ ಕೇವಲ ಭೇದವೆಂಬರ್ಥವನ್ನು 'ಅಂತರ' ಶಬ್ದಕ್ಕೆ ಹೇಳಿದ್ದಾರೆ. ಇದರ ವಿರೋಧ ಬರುತ್ತದಲ್ಲವೇ? ಎಂದೂ ಸಹ ಪ್ರಶ್ನಿಸಬಾರದು. 'ಆತ್ಮನೋ ಅಂತರಃ' ಎಂಬ ಶ್ರುತಿಯಲ್ಲಿರುವ ಅಂತರ ಶಬ್ದಕ್ಕೆ ಭೇದವೆಂಬರ್ಥವನ್ನು ಟೀಕೆಯಲ್ಲಿ ವಿವಕ್ಷಿಸಲಾಗಿದೆ. ಆದರೆ ಬೃಹದಾರಣ್ಯಕ ಭಾಷ್ಯದಲ್ಲಿ 'ಆತ್ಮಾಂ ಅಂತರಃ' ಎಂಬಲ್ಲಿರುವ ಅಂತರ ಶಬ್ದವನ್ನು ಸ್ವೀಕರಿಸಿ ಅಂತಃಸ್ಥ ರಮಣವೆಂಬ ಅರ್ಥವನ್ನು ಹೇಳಿದ್ದಾರೆ. ಆದ್ದರಿಂದ ಪರಸ್ಪರ ವಿರೋಧವಿರುವುದಿಲ್ಲ.

ಬೃಹದಾರಣ್ಯಕದಲ್ಲಿ ಮೂರು ಪ್ರಕರಣಗಳಿವೆ - ೧. ಅಭಿಮಾನಿ ದೇವತಾ ಪ್ರಕರಣ, ೨. ಅಧಿದೈವ ಪ್ರಕರಣ, ೩. ಅಧ್ಯಾತ್ಮ ಪ್ರಕರಣ ಎಂದು. ಈ ಮೂರು ಪ್ರಕರಣಗಳಲ್ಲಿಯೂ ಅಂತರ್ಯಾಮಿಯಾಗಿ ಹೇಳಲ್ಪಟ್ಟವನು ವಿಷ್ಣುವೇ ಪ್ರತಿಪಾದ್ಯನಾಗಿದ್ದಾನೆಂಬ ವಿಚಾರವು ನಿರ್ಧಾರವಾಯಿತು.

तात्पर्यचन्द्रिका

अन्ये तु – शरीरादिराहित्यात् ब्रह्मणो न नियन्तृत्वं पटवदिति प्राप्ते, शरीरादिराहित्यमसिद्धं, चैत्रकर्मनिर्मितस्य चैत्रशरीरत्ववत् ब्रह्मविषयका-विद्याकल्पितस्य जगतस्तच्छरीरत्वादिति सिद्धन्तः ।[1]

(१) शङ्करभाष्यम् -

अन्तर्याम्यधिदैवादिषु तद्धर्मव्यपदेशात्
प्रधानं जीव ईशो वा कोऽन्तर्यामी जगत्प्रति ।
कारणत्वात् प्रधानं स्याज्जीवो वा कर्मणो मुखात् ॥
जीवैकत्वामृतत्वादेरन्तर्यामी परेश्वरः ।
द्रष्टृत्वादेर्न प्रधानं न जीवोऽपि नियम्यतः ॥

'य इमं च लोकं परं च लोकं सर्वाणि च भूतानि योऽन्तरो यमयति' इत्युपक्रम्य श्रूयते, 'यः पृथिव्यां तिष्ठन् पृथिव्या अन्तरो यं पृथिवी न वेद यस्य पृथिवी शरीरं यः पृथिवीमन्तरो यमयत्येष त आत्मान्तर्याम्यमृतः' इत्यादि । अत्राधिदैवतमधिलोकमधि-वेदमधियज्ञमधिभूतमध्यात्मं च कश्चिदन्तरवस्थितो यमयितान्तर्यामीति श्रूयते । स किमधिदैवाद्यभिमानी देवतात्मा कश्चित्, किं वा प्राप्तप्राणिमाद्यैश्वर्यः कश्चिद् योगी किं वा परमात्मा किंवार्थान्तरं किञ्चिदित्यपूर्वसञ्ज्ञादर्शनात् संशयः । किं तावत्नः प्रतिभाति, सञ्ज्ञाया अप्रसिद्धत्वात् सञ्ज्ञिनाऽप्यप्रसिद्धेनार्थान्तरेण केनचिद् भवितव्यमिति । अथवा नानिरूपितरूपमर्थान्तरं शक्यमस्तीत्यभ्युपगन्तुम् । अन्तर्यामिशब्दश्चान्तर्यमनयोगेन प्रवृत्तो नात्यन्तप्रसिद्धः । तस्मात् पृथिव्याद्यभिमानी कश्चिद्देवोऽन्तर्यामी स्यात् । तथाच श्रूयते 'पृथिव्येव यस्यायतनमग्निर्लोको मनो ज्योतिः' इत्यादि । स च कार्यकरणवत्त्वात् पृथिव्यादीनन्तस्तिष्ठन्यमयतीति युक्तं देवतात्मनो यमयितृत्वम् । योगिनो वा कस्यचित् सिद्धस्य सर्वानुप्रवेशेन यमयितृत्वं स्यात् । नतु परमात्मा प्रतीयेत, अकार्यकरणत्वादित्येवं प्राप्त इदमुच्यते । योऽन्तर्याम्यधिदैवादिषु श्रूयते स परमात्मैव स्यान्नान्य इति । कुतः? तद्धर्मव्यपदेशात् । तस्य हि परमात्मनो धर्मा इह निर्दिश्यमाना दृश्यन्ते । पृथिव्यादि तावदधिदैवादिभेदभिन्नं समस्तं विकारजातमन्तस्तिष्ठन्यमयतीति परमात्मनो यमयितृत्वं धर्म उपपद्यते । सर्वविकारकारणत्वे सति सर्वशक्त्युपपत्तेः । 'एष त आत्माऽन्तर्याम्यमृतः' इति चात्मत्वामृतत्वे मुख्ये परमात्मन उपपद्येते । 'यं पृथिवी न वेद' इति च

ಪೃಥಿವೀದೇವತಾಯಾ ಅವಿಜ್ಞೇಯಮನ್ತರ್ಯಾಮಿಣಂ ಬ್ರುವನ್ ದೇವತಾತ್ಮನೋऽನ್ಯಮನ್ತರ್ಯಾಮಿಣಂ ದರ್ಶಯತಿ । 'ಪೃಥಿವೀ ದೇವತಾ ಹ್ಯಹಮಸ್ಮಿ ಪೃಥಿವೀತ್ಯಾತ್ಮಾನಂ ವಿಜಾನೀಯಾತ್' । 'ತಥಾ ಅದೃಷ್ಟೋऽಶ್ರುತಃ' ಇತ್ಯಾದಿವ್ಯಪದೇಶೋ ರೂಪಾದಿವಿಹೀನತ್ವಾತ್ ಪರಮಾತ್ಮನ ಉಪಪದ್ಯತ ಇತಿ । ಯತ್ತ್ವಕಾರ್ಯಕರಣಸ್ಯ ಪರಮಾತ್ಮನೋ ಯಮಯಿತೃತ್ವಂ ನೋಪಪದ್ಯತ ಇತಿ । ನೈಷ ದೋಷಃ । ಯಾನ್ಯಿಯಚ್ಚತಿ ತತ್ಕಾರ್ಯಕರಣೈರೇವ ತಸ್ಯ ಕಾರ್ಯಕರಣವತ್ತ್ವೋಪಪತ್ತೇಃ । ತಸ್ಯಾಪ್ಯನ್ಯೋ ನಿಯನ್ತೇತ್ಯನವಸ್ಥಾದೋಷಶ್ಚ ನ ಸಮ್ಭವತಿ, ಭೇದಾಭಾವಾತ್ । ಭೇದೇ ಹಿ ಸತ್ಯನವಸ್ಥಾದೋಷೋಪಪತ್ತಿಃ । ತಸ್ಮಾತ್ ಪರಮಾತ್ಮೈವಾನ್ತರ್ಯಾಮೀ ।।

ನಚ ಸ್ಮಾರ್ತಮತದ್ಧರ್ಮಾಭಿಲಾಪಾತ್

ಸ್ಯಾದೇತತ್ । ಅದೃಶ್ಯತ್ವಾದಯೋ ಧರ್ಮಾಃ ಸಾङ್ಖ್ಯಸ್ಮೃತಿಕಲ್ಪಿತಸ್ಯ ಪ್ರಧಾನಸ್ಯಾಪ್ಯುಪಪದ್ಯನ್ತೇ, ರೂಪಾದಿಹೀನತಯಾ ತಸ್ಯ ತೈರಭ್ಯುಪಗಮಾತ್ । 'ಅಪ್ರತರ್ಕ್ಯಮವಿಜ್ಞೇಯಂ ಪ್ರಸುಪ್ತಮಿವ ಸರ್ವತಃ' ಇತಿ ಹಿ ಸ್ಮರನ್ತಿ । ತಸ್ಯಾಪಿ ನಿಯನ್ತೃತ್ವಂ ಸರ್ವವಿಕಾರಕಾರಣತ್ವಾದುಪಪದ್ಯತೇ । ತಸ್ಮಾತ್ಪ್ರಧಾನಮನ್ತರ್ಯಾಮಿಶಬ್ದಂ ಸ್ಯಾತ್ । 'ಈಕ್ಷತೇರ್ನಾಶಬ್ದಮ್' ಇತ್ಯತ್ರ ನಿರಾಕೃತಮಪಿ ಸತ್ಪ್ರಧಾನಮಿಹಾದೃಶ್ಯತ್ವಾದಿವ್ಯಪದೇಶಸಮ್ಬನ್ಧೇನ ಪುನರಾಶಙ್ಕ್ಯತೇ । ಅತ ಉತ್ತರಮುಚ್ಯತೇ । ನಚ ಸ್ಮಾರ್ತಂ ಪ್ರಧಾನಮನ್ತರ್ಯಾಮಿಶಬ್ದಂ ಭವಿತುಮರ್ಹತಿ । ಕಸ್ಮಾದ್, ಅತದ್ಧರ್ಮಾಭಿಲಾಪಾತ್ । ಯದ್ಯಪ್ಯದೃಶ್ಯತ್ವಾದಿವ್ಯಪದೇಶಃ ಪ್ರಧಾನಸ್ಯ ಸಮ್ಭವತಿ, ತಥಾಪಿ ನ ದ್ರಷ್ಟೃತ್ವಾದಿವ್ಯಪದೇಶಃ ಸಮ್ಭವತಿ, ಪ್ರಧಾನಸ್ಯಾಚೇತನತ್ವೇನ ತೈರಭ್ಯುಪಗಮಾತ್ । ಅದೃಷ್ಟೋ ದ್ರಷ್ಟಾऽಶ್ರುತಃ ಶ್ರೋತಾऽಮತೋ ಮನ್ತಾऽವಿಜ್ಞಾತೋ ವಿಜ್ಞಾತಾ' ಇತಿ ಹಿ ವಾಕ್ಯಶೇಷ ಇಹ ಭವತಿ । ಆತ್ಮತ್ವಮಪಿ ನ ಪ್ರಧಾನಸ್ಯೋಪಪದ್ಯತೇ ।।

ಯದಿ ಪ್ರಧಾನಮಾತ್ಮತ್ವದ್ರಷ್ಟೃತ್ವಾದ್ಯಸಮ್ಭವಾನ್ನಾನ್ತರ್ಯಾಮ್ಯಭ್ಯುಪಗಮ್ಯತೇ, ಶಾರೀರಸ್ತರ್ಹ್ಯನ್ತರ್ಯಾಮೀ ಭವತು । ಶಾರೀರೋ ಹಿ ಚೇತನತ್ವಾದ್ ದ್ರಷ್ಟಾ ಶ್ರೋತಾ ಮನ್ತಾ ವಿಜ್ಞಾತಾ ಚ ಭವತಿ, ಆತ್ಮಾ ಚ ಪ್ರತ್ಯಕ್ತ್ವಾತ್ । ಅಮೃತಶ್ಚ, ಧರ್ಮಾಧರ್ಮಫಲೋಪಭೋಗೋಪಪತ್ತೇಃ । ಅದೃಷ್ಟವಾದಯಶ್ಚ ಧರ್ಮಾಃ ಶರೀರೇ ಪ್ರಸಿದ್ಧಾಃ, ದರ್ಶನಾದಿಕ್ರಿಯಾಯಾಃ ಕರ್ತರಿ ಪ್ರವೃತ್ತಿವಿರೋಧಾತ್ । 'ನ ದೃಷ್ಟೇರ್ದ್ರಷ್ಟಾರಂ ಪಶ್ಯೇಃ' ಇತ್ಯಾದಿಶ್ರುತಿಭ್ಯಶ್ಚ । ತಸ್ಯ ಚ ಕಾರ್ಯಕರಣಸಙ್ಘಾತಮನ್ತರ್ಯಮಯಿತುಂ ಶೀಲಂ, ಭೋಕ್ತೃತ್ವಾತ್ । ತಸ್ಮಾಚ್ಛಾರೀರೋऽನ್ತರ್ಯಾಮೀತ್ಯತ ಉತ್ತರಂ ಭವತಿ –

ಶಾರೀರಶ್ಚೋಭಯೇऽಪಿ ಹಿ ಭೇದೇನೈನಮಧೀಯತೇ

ನೇತಿ ಪೂರ್ವಸೂತ್ರಾದನುವರ್ತತೇ । ಶಾರೀರಶ್ಚ ನಾನ್ತರ್ಯಾಮೀಷ್ಯತೇ । ಕಸ್ಮಾದ್, ಯದ್ಯಪಿ ದ್ರಷ್ಟೃತ್ವಾದಯೋ ಧರ್ಮಾಸ್ತಸ್ಯ ಸಮ್ಭವನ್ತಿ, ತಥಾಪಿ ಘಟಾಕಾಶವದುಪಾಧಿಪರಿಚ್ಛಿನ್ನತ್ವಾನ್ನ ಕಾತ್ಸ್ನ್ಯೇನ ಪೃಥಿವ್ಯಾದಿಷ್ವನ್ತರವಸ್ಥಾತುಂ ನಿಯನ್ತುಂ ಚ ಶಕ್ನೋತಿ । ಅಪಿ ಚೋಭಯೇऽಪಿ ಹಿ ಶಾಖಿನಃ ಕಾಣ್ವಾ ಮಾಧ್ಯನ್ದಿನಾಶ್ಚಾನ್ತರ್ಯಾಮಿಣೋ ಭೇದೇನೈನಂ ಶಾರೀರಂ ಪೃಥಿವ್ಯಾದಿವದಧಿಷ್ಠಾನತ್ವೇನ ನಿಯಮ್ಯತ್ವೇನ ಚಾಧೀಯತೇ । 'ಯೋ ವಿಜ್ಞಾನೇ ತಿಷ್ಠನ್' ಇತಿ ಕಾಣ್ವಾಃ । 'ಯ ಆತ್ಮನಿ ತಿಷ್ಠನ್' ಇತಿ ಮಾಧ್ಯನ್ದಿನಾಃ । 'ಯ ಆತ್ಮನಿ ತಿಷ್ಠನ್' ಇತ್ಯಸ್ಮಿಂಸ್ತಾವತ್ಪಾಠೇ ಭವತ್ಯಾತ್ಮಶಬ್ದಃ ಶಾರೀರಸ್ಯ ವಾಚಕಃ । 'ಯೋ ವಿಜ್ಞಾನೇ ತಿಷ್ಠನ್' ಇತ್ಯಸ್ಮಿನ್ನಪಿ ಪಾಠೇ ವಿಜ್ಞಾನಶಬ್ದೇನ ಶಾರೀರ ಉಚ್ಯತೇ ।

ಶರೀರವಿದ್ದರೆ ಮಾತ್ರ ಬೇರೆ ಪದಾರ್ಥಗಳನ್ನು ನಿಯಂತ್ರಣ ಮಾಡಲು ಸಮರ್ಥನಾಗುತ್ತಾನೆ. ಆದರೆ

विज्ञानमयो हि शारीरः । तस्माच्छारीरादन्य ईश्वरोऽन्तर्यामीति सिद्धम् । कथं पुनरेकस्मिन् देहे द्वौ द्रष्टारावुपपद्येते, यश्चायमीश्वरोऽन्तर्यामी यश्चायमितरः शारीरः । का पुनरिहानुपपत्तिः । 'नान्योऽतोऽस्ति द्रष्टा' इत्यादि श्रुतिवचनं विरुद्धचेत । अत्र हि प्रकृतादन्तर्यामिणोऽन्यं द्रष्टारं, श्रोतारं, मन्तारं, विज्ञातारं चात्मानं प्रतिषेधति । नियन्त्रन्तरप्रतिषेधार्थमेतद्वचनमिति चेन्न, नियन्त्रन्तराप्रसङ्गादविशेषश्रवणाच्च । अत्रोच्यते, अविद्याप्रत्युपस्थापितकार्यकरणोपाधिनिमित्तोऽयं शारीरान्तर्यामिणोर्भेदव्यपदेशो न पारमार्थिकः । एको हि प्रत्यगात्मा भवति । न द्वौ प्रत्यगात्मानौ सम्भवतः । एकस्यैव तु भेदव्यवहार उपाधिकृतः, यथा घटाकाशो महाकाश इति । ततश्च ज्ञातृज्ञेयादिभेदश्रुतयः प्रत्यक्षादीनि च प्रमाणानि संसारानुभवो विधिप्रतिषेधशास्त्रं चेति सर्वमेतदुपपद्यते । तथाच श्रुतिः 'यत्र हि द्वैतमिव भवति, तदितर इतरं पश्यति' इत्यविद्याविषये सर्वं व्यवहारं दर्शयति । 'यत्र त्वस्यसर्वमात्मैवाभूत् तत् केन कं पश्येद्' इति विद्याविषये सर्वं व्यवहारं वारयति ।।

भामती – अन्तर्याम्यधिदैवादिषु तद्धर्मव्यपदेशात् ॥ 'स्वकर्मोपार्जितं देहं तेनान्यच्च नियच्छति । तक्षादिरशरीरस्तु नात्मान्तर्यामितां भजेत् ।।' प्रवृत्तिनियमलक्षणं हि कार्यं चेतनस्य शरीरिणः स्वशरीरेन्द्रियादौ वा शरीरेण वा वास्यादौ दृष्टं नाशरीरस्य ब्रह्मणो भवितुमर्हति । नहि जातु वटाङ्कुरः कुटजबीजाज्जायते । तदनेन 'जन्माद्यस्य यतः' इत्येतदप्याक्षिप्तं वेदितव्यम् । तस्मात्परमात्मनः शरीरेन्द्रियादिरहितस्यान्तर्यामित्वाभावात्, प्रधानस्य वा पृथिव्याद्यभिमानवत्या देवताया वाणिमाद्यैश्वर्ययोगिनो योगिनो वा जीवात्मनो वान्तर्यामिता स्यात् । तत्र यद्यपि प्रधानस्यादृष्टत्वाश्रुतत्वामतत्वाविज्ञातत्वानि सन्ति, तथापि तस्याचेतनस्य द्रष्टृत्वश्रोतृत्वमन्तृत्वविज्ञातृत्वानां श्रुतानामभावात्, अनात्मत्वाच्च 'एष त आत्मा' इति श्रुतेरनुपपत्तेर्न प्रधानस्यान्तर्यामिता । यद्यपि पृथिव्याद्यभिमानिनो देवस्यात्मत्वमस्ति, अदृष्टत्वादयश्च सह द्रष्टृत्वादिभिरुपपद्यन्ते, शरीरेन्द्रियादियोगश्च, पृथिव्येव यस्यायतनमग्निर्लोको मनो ज्योतिः' इत्यादिश्रुतेः, तथापि तस्य प्रतिनियतनियमनाद् 'यः सर्वाँल्लोकानन्तरो यमयति यः सर्वाणि भूतान्यन्तरो यमयति' इति श्रुतिविरोधादनुपपत्तेः, योगी तु यद्यपि लोकभूतवशितया सर्वाँल्लोकान् सर्वाणि च भूतानि नियन्तुमर्हति तत्र तत्रानेकविधदेहेन्द्रियादिनिर्माणेन 'स एकधा भवति त्रिधा भवति' इत्यादिश्रुतिभ्यः, तथापि 'जगद् व्यापारवर्जं प्रकरणात्' इति वक्ष्यमाणेन न्यायेन विकारविषये विद्यासिद्धानां व्यापाराभावात् सोऽपि नान्तर्यामी । तस्मात् पारिशेष्याज्जीव एव चेतनो देहेन्द्रियादिमान् द्रष्टृत्वादिसम्पन्नः स्वयमदृश्यादिः स्वात्मनि वृत्तिविरोधात् । अमृतश्च, देहेन्द्रियादिनाशेऽप्यनाशात् । अन्यथामुष्मिकफलोपभोगा-

ಶರೀರವೇ ಇಲ್ಲದ ಬಟ್ಟೆ ಮೊದಲಾದ ವಸ್ತುಗಳು ಮತ್ತೊಂದನ್ನು ನಿಯಂತ್ರಿಸಲು ಹೇಗೆ ಅಸಮರ್ಥವಾಗಿವೆಯೋ? ಅದರಂತೆ ಬ್ರಹ್ಮನೂ ಸಹ ಶರೀರರಹಿತನಾಗಿರುವುದರಿಂದ ಬೇರೆ ಪದಾರ್ಥಗಳನ್ನು ನಿಯಂತ್ರಿಸಲು ಅಸಮರ್ಥನಾಗಿದ್ದಾನೆಂದು ಪೂರ್ವಪಕ್ಷ.

ಭಾವೇನ ಕೃತವಿಪ್ರಣಾಶಾಕೃತಾಭ್ಯಾಗಮಪ್ರಸಙ್ಗಾತ್ । 'ಯ ಆತ್ಮನಿ ತಿಷ್ಠನ್' ಇತಿ ಚಾಭೇದೇऽಪಿ ಕಥಞ್ಚಿದ್ ಭೇದೋಪಚಾರಾತ್ 'ಸ ಭಗವಃ ಕಸ್ಮಿನ್ ಪ್ರತಿಷ್ಠಿತಃ ಸ್ವೇ ಮಹಿಮ್ನಿ' ಇತಿವತ್ । 'ಯಮಾತ್ಮಾ ನ ವೇದ' ಇತಿ ಚ ಸ್ವಾತ್ಮನಿ ವೃತ್ತಿವಿರೋಧಾಭಿಪ್ರಾಯಮ್ । 'ಯಸ್ಯಾತ್ಮಾ ಶರೀರಮ್' ಇತ್ಯಾದಿ ಚ ಸರ್ವಂ 'ಸ್ವೇ ಮಹಿಮ್ನಿ' ಇತಿವದ್ ಯೋಜನೀಯಮ್ । ಯದಿ ಪುನರಾತ್ಮನೋऽಪಿ ನಿಯನ್ತುರನ್ಯೋ ನಿಯನ್ತಾ ಭವೇದ್ ವೇದಿತಾ ವಾ ತತಸ್ತಸ್ಯಾಪ್ಯನ್ಯ ಇತ್ಯನವಸ್ಥಾ ಸ್ಯಾತ್ । ಸರ್ವಲೋಕಭೂತನಿಯನ್ತೃತ್ವಂ ಚ ಜೀವಸ್ಯಾದೃಷ್ಟದ್ವಾರಾ । ತದುಪಾರ್ಜಿತೌ ಹಿ ಧರ್ಮಾಧರ್ಮೌ ನಿಯಚ್ಛತ ಇತ್ಯನಯಾ ದ್ವಾರಾ ಜೀವೋ ನಿಯಚ್ಛತಿ । ಏಕವಚನಂ ಚ ಜಾತ್ಯಭಿಪ್ರಾಯಮ್ । ತಸ್ಮಾಜ್ಜೀವಾತ್ಮೈವಾನ್ತರ್ಯಾಮೀ, ನ ಪರಮಾತ್ಮೇತಿ । ಏವಂ ಪ್ರಾಪ್ತೇऽಭಿಧೀಯತೇ 'ದೇಹೇನ್ದ್ರಿಯಾದಿನಿಯಮೇ ನಾಸ್ಯ ದೇಹೇನ್ದ್ರಿಯಾನ್ತರಮ್ । ತತ್ಕರ್ಮೋಪಾರ್ಜಿತಂ ತಚ್ಚೇತ್ ತದವಿದ್ಯಾರ್ಜಿತಂ ಜಗತ್ ॥' ಶ್ರುತಿಸ್ಮೃತೀತಿಹಾಸಪುರಾಣೇಷು ತಾವದ್ಯತ್ಪಭವತಃ ಸರ್ವಜ್ಞಸ್ಯ ಸರ್ವಶಕ್ತೇಃ ಪರಮೇಶ್ವರಸ್ಯ ಜಗದ್ಯೋನಿತ್ವಮವಗಮ್ಯತೇ । ನ ತತ್ಪೃಥಗ್ಜನಸಾಧಾರಣ್ಯಾನುಮಾನಾಭಾಸೇನಾಗಮವಿರೋಧಿನಾ ಶಕ್ಯಮಪಹೋತುಮ್ । ತಥಾಚ ಸರ್ವಂ ವಿಕಾರಜಾತಂ ತದವಿದ್ಯಾಶಕ್ತಿಪರಿಣಾಮಸ್ತಸ್ಯ ಶರೀರೇನ್ದ್ರಿಯಸ್ಥಾನೇ ವರ್ತತ ಇತಿ ಯಥಾಯಥಂ ಪೃಥಿವ್ಯಾದಿದೇವತಾದಿಕಾರ್ಯಕರಣೈಸ್ತಾನೇವ ಪೃಥಿವ್ಯಾದಿದೇವತಾದೀಞ್ಛಕ್ನೋತಿ ನಿಯನ್ತುಮ್ । ನಚಾನವಸ್ಥಾ । ನಹಿ ನಿಯನ್ತ್ರನ್ತರಂ ತೇನ ನಿಯಮ್ಯತೇ, ಕಿನ್ತು ಯೋ ಜೀವೋ ನಿಯನ್ತಾ ಲೋಕಸಿದ್ಧಃ ಸ ಪರಮಾತ್ಮೈವೋಪಾಧ್ಯವಚ್ಛೇದಕಲ್ಪಿತಭೇದಸ್ತಥಾ ವ್ಯಾಖ್ಯಾಯತ ಇತ್ಯಸಕೃದಾವೇದಿತಮ್, ತತ್ಕೃತೋ ನಿಯನ್ತ್ರನ್ತರಮ್, ಕುತಶ್ಚಾನವಸ್ಥಾ । ತಥಾಚ 'ನಾನ್ಯೋऽತೋऽಸ್ತಿ ದ್ರಷ್ಟಾ' ಇತ್ಯಾದ್ಯಾ ಅಪಿ ಶ್ರುತಯುಪಪನ್ನಾರ್ಥಾಃ । ಪರಮಾರ್ಥತೋऽನ್ತರ್ಯಾಮಿಣೋऽನ್ಯಸ್ಯ ಜೀವಾತ್ಮನೋ ದ್ರಷ್ಟೃಭಾವಾತ್ । ಅವಿದ್ಯಾಕಲ್ಪಿತ ಜೀವಪರಮಾತ್ಮಭೇದಾಶ್ರಯಾಸ್ತು ಜ್ಞಾತೃಜ್ಞೇಯಭೇದಶ್ರುತಯಃ, ಪ್ರತ್ಯಕ್ಷಾದೀನಿ ಪ್ರಮಾಣಾನಿ, ಸಂಸಾರಾನುಭವಃ, ವಿಧಿನಿಷೇಧಶಾಸ್ತ್ರಾಣಿ ಚ । ಏವಂ ಚಾಧಿದೈವಾದಿಷ್ವೇಕಸ್ಯೈವಾನ್ತರ್ಯಾಮಿಣಃ ಪ್ರತ್ಯಭಿಜ್ಞಾನಂ ಸಮಞ್ಜಸಂ ಭವತಿ, 'ಯಃ ಸರ್ವಾಁಲ್ಲೋಕಾನ್' 'ಯಃ ಸರ್ವಾಣಿ ಭೂತಾನಿ' ಇತ್ಯತ್ರ ಯ ಇತ್ಯೇಕವಚನಮುಪಪದ್ಯತೇ । ಅಮೃತತ್ವಂ ಚ ಪರಮಾತ್ಮನಿ ಸಮಞ್ಜಸಂ ನಾನ್ಯತ್ರ । 'ಯ ಆತ್ಮನಿ ತಿಷ್ಠನ್' ಇತ್ಯಾದೌ ಚಾಭೇದೇऽಪಿ ಭೇದೋಪಚಾರಕ್ಲೇಶೋ ನ ಭವಿಷ್ಯತಿ । ತಸ್ಮಾತ್ಪರಮಾತ್ಮಾನ್ತರ್ಯಾಮೀ ನ ಜೀವಾದಿರಿತಿ ಸಿದ್ಧಮ್ । ಪೃಥಿವ್ಯಾದಿ ಸ್ತನಯಿತ್ನ್ವನ್ತಮಧಿದೈವಮ್ । 'ಯಃ ಸರ್ವೇಷು ಲೋಕೇಷು' ಇತ್ಯಧಿಲೋಕಮ್ । 'ಯಃ ಸರ್ವೇಷು ವೇದೇಷು' ಇತ್ಯಧಿವೇದಮ್ । 'ಯಃ ಸರ್ವೇಷು ಯಜ್ಞೇಷು' ಇತ್ಯಧಿಯಜ್ಞಮ್ । 'ಯಃ ಸರ್ವೇಷು ಭೂತೇಷು' ಇತ್ಯಧಿಭೂತಮ್ । ಪ್ರಾಣಾದ್ಯಾತ್ಮಾನ್ತಮಧ್ಯಾತ್ಮಮ್ । ಸಞ್ಜ್ಞಾಯಾ ಅಪ್ರಸಿದ್ಧತ್ವಾದಿತ್ಯುಪಕ್ರಮಮಾತ್ರಂ ಪೂರ್ವಃ ಪಕ್ಷಃ ।। ೧೯ ।।

ದರ್ಶನಾದಿಕ್ರಿಯಾಯಾಃ ಕರ್ತರಿ ಪ್ರವೃತ್ತಿವಿರೋಧಾತ್ ।। ಕರ್ತರಿ ಆತ್ಮನಿ ಪ್ರವೃತ್ತಿವಿರೋಧಾದಿತ್ಯರ್ಥಃ ।।೨೦।।

ಶರೀರರಾಹಿತ್ಯವೆಂಬ ಹೇತುವೇ ಅಸಿದ್ಧವಾಗಿದೆ. ಯಾವರೀತಿಯಾಗಿ ಚೈತ್ರನ ಕರ್ಮದಿಂದ ನಿಯಮಿತವಾದ ಶರೀರವು ಚೈತ್ರನ ಶರೀರವೆಂದು ಕರೆಸಿಕೊಳ್ಳುತ್ತದೋ ಅದರಂತೆ ಬ್ರಹ್ಮವಿಷಯಕವಾದ ಅವಿದ್ಯೆಯಿಂದ ಕಲ್ಪಿತವಾದ ಜಗತ್ತೇ ಬ್ರಹ್ಮನಿಗೆ ಶರೀರವಾಗಿದೆ. ಇಂತಹ ತನ್ನ ಶರೀರವಾದ ಜಗತ್ತನ್ನು ಬ್ರಹ್ಮನು ನಿಯಂತ್ರಣ ಮಾಡಬಹುದೆಂದು ಸಿದ್ಧಾಂತ.

ತದುಕ್ತಂ ಭಾಮಾತ್ಯಾಂ –

'ದೇಹೇನ್ದ್ರಿಯಾದಿನಿಯಮೇ ನಾಸ್ಯ ದೇಹೇನ್ದ್ರಿಯಾನ್ತರಮ್ ।
ತತ್ಕರ್ಮೋಪಾರ್ಜಿತಂ ತಚ್ಚೇತ್ತದವಿದ್ಯಾರ್ಜಿತಂ ಜಗತ್ ।।'

ಇತೀತ್ಯಾಹುಃ ।

ಇದನ್ನೇ ಭಾಮತಿಯಲ್ಲಿ ಹೀಗೆ ಹೇಳಲಾಗಿದೆ -

ಬ್ರಹ್ಮನಿಗೆ ಶರೀರವಿಲ್ಲವೆಂದರೆ ಏನರ್ಥ? ನಿಯಮ್ಯವಾದ ದೇಹಕ್ಕಿಂತ ಅತಿರಿಕ್ತವಾದ ದೇಹವಿಲ್ಲವೆಂದು ಹೇಳುವುದಾದರೆ ನಿಯಮ್ಯವಾದ ತನ್ನ ಶರೀರಕ್ಕಿಂತ ಅತಿರಿಕ್ತವಾದ ದೇಹವಿಲ್ಲದಿದ್ದರೂ ತನ್ನ ದೇಹಕ್ಕೆ ನಿಯಾಮಕನಾಗಬಹುದು. ಇನ್ನು ದೇಹಸಂಬಂಧವೇ ಇಲ್ಲವೆಂದು ಹೇಳುವುದಾದರೆ ಜೀವನ ಕರ್ಮದಿಂದ ಜೀವನು ಹೇಗೆ ಶರೀರವನ್ನು ಪಡೆಯುತ್ತಾನೋ ಅದರಂತೆ ಅವಿದ್ಯೆಯಿಂದ ಬ್ರಹ್ಮನೂ ಸಹ ಜಗತ್ತನ್ನೇ ಶರೀರವನ್ನಾಗಿ ಪಡೆಯುತ್ತಾನೆ ಎಂದು.

ತನ್ನ, ತದವಿದ್ಯಾಕಲ್ಪಿತಸ್ಯ ತಚ್ಛರೀರತ್ವೇ ಬ್ರಹ್ಮವತ್ ಸ್ವತಶ್ಶರೀರಶೂನ್ಯಶುಕ್ತಿಸ್ಥಾಣ್ವಾದ್ಯ-ಜ್ಞಾನಕಲ್ಪಿತಸ್ಯ ರೂಪ್ಯದೇಹಾದೇಃ ಶುಕ್ತಿಸ್ಥಾಣ್ವಾದಿಶರೀರತ್ವಾಪಾತಾತ್ ।

ಇದು ಸರಿಯಲ್ಲ. ಬ್ರಹ್ಮನ ಅವಿದ್ಯಾದಿಂದ ಕಲ್ಪಿತವಾದ ಜಗತ್ತು ಬ್ರಹ್ಮನ ಶರೀರವಾಗಿದೆಯೆಂದು ಹೇಳುತ್ತಿದ್ದೀರಿ. ಹಾಗಾದರೆ ಬ್ರಹ್ಮನು ಹೇಗೆ ಸ್ವತಃ ಶರೀರಶೂನ್ಯನಾಗಿದ್ದಾನೋ? ಅದರಂತೆ ರಜತ ಹಾಗೂ ದೇಹಗಳೂ ಸಹ ಸ್ವತಃ ಶರೀರಶೂನ್ಯವಾಗಿವೆ. ಆದ್ದರಿಂದ ಬ್ರಹ್ಮನ ಅವಿದ್ಯಾದಿಂದ ಕಲ್ಪಿತವಾದದ್ದು ಬ್ರಹ್ಮನ ಶರೀರವೆಂದು ಹೇಳುವಂತೆ ಶುಕ್ತಿಯ ಅಜ್ಞಾನದಿಂದ ಕಲ್ಪಿತವಾದ ರಜತವೂ ಸಹ ಶುಕ್ತಿಯ ಶರೀರವಾಗಬೇಕಾಯಿತು. ಸ್ಥಾಣುವಿನ ಅಜ್ಞಾನದಿಂದ ಕಲ್ಪಿತವಾದ ದೇಹವೂ ಸ್ಥಾಣುವಿನ ಶರೀರವೆಂದಾಗಬೇಕಾದೀತು.

ಬ್ರಹ್ಮಣಃ ಸ್ವಾವಿದ್ಯಾಕಲ್ಪಿತೇನಾಸ್ಮದಾದಿಸಂಸಾರೇಣ ಸಂಸಾರಿತ್ವಾಪಾತಾಚ್ಚ ।

ಮತ್ತು ಬ್ರಹ್ಮನೂ ತನ್ನ ಅಜ್ಞಾನದಿಂದ ಕಲ್ಪಿತನಾದ್ದರಿಂದ ನಮ್ಮಂತೆ ಬ್ರಹ್ಮನೂ ಸಹ ಸಂಸಾರಿಯಾಗಬೇಕಾದೀತು. ಅಂದರೆ ಅವಿದ್ಯಾಕಲ್ಪಿತವಾದದ್ದನ್ನೇ ಸಂಸಾರವೆಂದು ಅದ್ವೈತಿಗಳು

ಹೇಳುವ ಕಾರಣ ಬ್ರಹ್ಮನೂ ಸಹ ಸ್ವ-ಅಜ್ಞಾನಕಲ್ಪಿತನಾದ್ದರಿಂದ ಸಂಸಾರಿಯಾಗಬೇಕಾದೀತೆಂದು ಅಭಿಪ್ರಾಯ.

जगदार्जनात् प्रागशरीरस्यैव सृष्टृत्ववत् नियन्तृत्वस्याप्युपपत्तेश्च ।

ಮತ್ತು ಜಗತ್ತು ಸೃಷ್ಟಿಯಾಗುವ ಮೊದಲು ಬ್ರಹ್ಮನು ಅಶರೀರನಾಗಿದ್ದನು. ಅಶರೀರಿಯಾದ ಬ್ರಹ್ಮನಿಂದ ಜಗತ್ತಿನ ಸೃಷ್ಟಿಯಾಯಿತೆಂದು ಹೇಳುವಂತೆ ಅಶರೀರಿಯಾದ ಬ್ರಹ್ಮನಿಂದಲೇ ನಿಯಂತೃತ್ವವು ನಡೆಯಬಹುದು. ನಿಯಮನಕ್ಕೋಸ್ಕರ ಶರೀರವನ್ನು ಒಪ್ಪುವ ಅವಶ್ಯಕತೆಯಿರುವುದಿಲ್ಲ.

न चाशरीरस्यानियन्तृत्वे शङ्किते गौणशरीरोपपादनं युक्तम् ।

ಶರೀರವಿಲ್ಲದ ಕಾರಣ ನಿಯಂತೃತ್ವವು ಕೂಡುವುದಿಲ್ಲವೆಂದು ಆಶಂಕಿಸಿದಾಗ ಗೌಣವಾದ ಶರೀರವನ್ನು ಒಪ್ಪುವುದು ಅಯುಕ್ತವಾಗುತ್ತದೆ. (ನಿರ್ಗತಿಕನಾದ ವ್ಯಕ್ತಿಯಲ್ಲಿ ಗೌಣವಾದ ಹಣವನ್ನು ಸಮರ್ಪಿಸುವುದರಿಂದ ಅವನು ಶ್ರೀಮಂತನಾಗಲಾರ)

किञ्च शुद्धं न नियन्तृ, अशुद्धं त्वविद्याकल्पितत्वान्नाविद्याविषयः ।

ಮತ್ತೆ - ಶುದ್ಧಬ್ರಹ್ಮನಿಗೆ ಶರೀರವನ್ನು ಆದ್ವೈತಿಗಳು ಒಪ್ಪುವುದಾದರೆ ಅವನಿಗೆ ನಿಯಂತೃತ್ವವನ್ನು ಒಪ್ಪಲು ಸಾಧ್ಯವಿಲ್ಲ. ಅಶುದ್ಧಬ್ರಹ್ಮನಿಗೆ ಶರೀರವನ್ನು ಒಪ್ಪುವುದಾದರೆ ಅವಿದ್ಯಾವಿಷಯನೆಂದು ಹೇಳಬೇಕು. ಆದರೆ ಅವಿದ್ಯಾಕಲ್ಪಿತನಾದ ಅಶುದ್ಧಬ್ರಹ್ಮನು ಅವಿದ್ಯೆಗೆ ವಿಷಯನಾಗಲು ಹೇಗೆ ಸಾಧ್ಯ ? ಇನ್ನು ಅವಿದ್ಯೆಗೆ ಶುದ್ಧಬ್ರಹ್ಮನು ವಿಷಯನಾಗಬಹುದು ಆದರೆ ಅವನಲ್ಲಿ ನಿಯಂತೃತ್ವ ಮೊದಲಾದ ಧರ್ಮಗಳನ್ನು ಹೇಳಲು ಬರುವುದಿಲ್ಲ.

यच्चोक्तं – देहादिनियन्तुरपि जीवस्य भिन्ननियन्तृनियम्यत्वे तन्नियन्तुरीश्वरस्यापि भिन्ननियन्तृनियम्यत्वेनावस्थापातात् नियन्तृ ब्रह्म नियम्यजीवाभिन्नमिति,

ಮತ್ತು ಆದ್ವೈತಿಗಳ ಮತ್ತೊಂದು ಮಾತು ಹೀಗಿದೆ - ದೇಹೇಂದ್ರಿಯಾದಿಗಳಿಗೆ ಜೀವನು ನಿಯಾಮಕನಾಗಿದ್ದಾನೆ. ಇಂತಹ ಜೀವನು ಬೇರೊಬ್ಬ ನಿಯಾಮಕನಿಂದ ನಿಯಮ್ಯನಾದರೆ ಅಂತಹ ನಿಯಾಮಕನಾದ ಈಶ್ವರನಿಗೂ ಸಹ ಭಿನ್ನವಾದ ಮತ್ತೊಬ್ಬ ನಿಯಾಮಕನು ಇರಬೇಕಾಗುತ್ತದೆ. ಅವರಿಗೂ ಮತ್ತೊಬ್ಬ ನಿಯಾಮಕನ ಅನಿವಾರ್ಯತೆ ಇರುವುದರಿಂದ ಅನವಸ್ಥಾ ದೋಷವು ಬರುತ್ತದೆ. ಇದನ್ನು ಪರಿಹರಿಸಬೇಕೆಂದರೆ ನಿಯಂತೃವಾಗಿರುವ ಬ್ರಹ್ಮನು ನಿಯಮ್ಯನಾದ ಜೀವನಿಗಿಂತ ಅಭಿನ್ನನಾಗಿದ್ದಾನೆಂದೇ ಹೇಳಬೇಕು. ಆವಾಗ ಮತ್ತೊಬ್ಬ ನಿಯಮಕನ ಅಪೇಕ್ಷೆಯು ಬಾರದ ಕಾರಣ ಅನವಸ್ಥಾ ದೋಷವು ಪರಿಹಾರವಾಗುತ್ತವೆ ಎಂದು.

ಶರೀರರಾಹಿತ್ಯವೆಂಬ ಹೇತುವೇ ಅಸಿದ್ಧವಾಗಿದೆ. ಯಾವರೀತಿಯಾಗಿ ಚೈತ್ರನ ಕರ್ಮದಿಂದ ನಿಯಮಿತವಾದ ಶರೀರವು ಚೈತ್ರನ ಶರೀರವೆಂದು ಕರೆಸಿಕೊಳ್ಳುತ್ತದೋ ಅದರಂತೆ ಬ್ರಹ್ಮವಿಷಯಕವಾದ ಅವಿದ್ಯೆಯಿಂದ ಕಲ್ಪಿತವಾದ ಜಗತ್ತೇ ಬ್ರಹ್ಮನಿಗೆ ಶರೀರವಾಗಿದೆ. ಇಂತಹ ತನ್ನ ಶರೀರವಾದ ಜಗತ್ತನ್ನು ಬ್ರಹ್ಮನು ನಿಯಂತ್ರಣ ಮಾಡಬಹುದೆಂದು ಸಿದ್ಧಾಂತ.

ತದುಕ್ತಂ ಭಾಮತ್ಯಾಂ –

'ದೇಹೇನ್ದ್ರಿಯಾದಿನಿಯಮೇ ನಾಸ್ಯ ದೇಹೇನ್ದ್ರಿಯಾನ್ತರಮ್ ।
ತತ್ಕರ್ಮೋಪಾರ್ಜಿತಂ ತಚ್ಚೇತ್ತದವಿದ್ಯಾರ್ಜಿತಂ ಜಗತ್ ।।'

ಇತೀತ್ಯಾಹುಃ ।

ಇದನ್ನೇ ಭಾಮತಿಯಲ್ಲಿ ಹೀಗೆ ಹೇಳಲಾಗಿದೆ -

ಬ್ರಹ್ಮನಿಗೆ ಶರೀರವಿಲ್ಲವೆಂದರೆ ಏನರ್ಥ? ನಿಯಮ್ಯವಾದ ದೇಹಕ್ಕಿಂತ ಅತಿರಿಕ್ತವಾದ ದೇಹವಿಲ್ಲವೆಂದು ಹೇಳುವುದಾದರೆ ನಿಯಮ್ಯವಾದ ತನ್ನ ಶರೀರಕ್ಕಿಂತ ಅತಿರಿಕ್ತವಾದ ದೇಹವಿಲ್ಲದಿದ್ದರೂ ತನ್ನ ದೇಹಕ್ಕೆ ನಿಯಾಮಕನಾಗಬಹುದು. ಇನ್ನು ದೇಹಸಂಬಂಧವೇ ಇಲ್ಲವೆಂದು ಹೇಳುವುದಾದರೆ ಜೀವನ ಕರ್ಮದಿಂದ ಜೀವನು ಹೇಗೆ ಶರೀರವನ್ನು ಪಡೆಯುತ್ತಾನೋ ಅದರಂತೆ ಅವಿದ್ಯೆಯಿಂದ ಬ್ರಹ್ಮನೂ ಸಹ ಜಗತ್ತನ್ನೇ ಶರೀರವನ್ನಾಗಿ ಪಡೆಯುತ್ತಾನೆ ಎಂದು.

ತನ್ನ, ತದವಿದ್ಯಾಕಲ್ಪಿತಸ್ಯ ತಚ್ಛರೀರತ್ವೇ ಬ್ರಹ್ಮವತ್ ಸ್ವತಶ್ಶರೀರಶೂನ್ಯಶುಕ್ತಿಸ್ಥಾಣ್ವಾದ್ಯ-ಜ್ಞಾನಕಲ್ಪಿತಸ್ಯ ರೂಪ್ಯದೇಹಾದೇಃ ಶುಕ್ತಿಸ್ಥಾಣ್ವಾದಿಶರೀರತ್ವಾಪಾತಾತ್ ।

ಇದು ಸರಿಯಲ್ಲ. ಬ್ರಹ್ಮನ ಅವಿದ್ಯಾದಿಂದ ಕಲ್ಪಿತವಾದ ಜಗತ್ತು ಬ್ರಹ್ಮನ ಶರೀರವಾಗಿದೆಯೆಂದು ಹೇಳುತ್ತಿದ್ದೀರಿ. ಹಾಗಾದರೆ ಬ್ರಹ್ಮನು ಹೇಗೆ ಸ್ವತಃ ಶರೀರಶೂನ್ಯನಾಗಿದ್ದಾನೋ? ಅದರಂತೆ ರಜತ ಹಾಗೂ ದೇಹಗಳೂ ಸಹ ಸ್ವತಃ ಶರೀರಶೂನ್ಯವಾಗಿವೆ. ಆದ್ದರಿಂದ ಬ್ರಹ್ಮನ ಅವಿದ್ಯಾದಿಂದ ಕಲ್ಪಿತವಾದದ್ದು ಬ್ರಹ್ಮನ ಶರೀರವೆಂದು ಹೇಳುವಂತೆ ಶುಕ್ತಿಯ ಅಜ್ಞಾನದಿಂದ ಕಲ್ಪಿತವಾದ ರಜತವೂ ಸಹ ಶುಕ್ತಿಯ ಶರೀರವಾಗಬೇಕಾಯಿತು. ಸ್ಥಾಣುವಿನ ಅಜ್ಞಾನದಿಂದ ಕಲ್ಪಿತವಾದ ದೇಹವೂ ಸ್ಥಾಣುವಿನ ಶರೀರವೆಂದಾಗಬೇಕಾದೀತು.

ಬ್ರಹ್ಮಣಃ ಸ್ವಾವಿದ್ಯಾಕಲ್ಪಿತೇನಾಸ್ಮದಾದಿಸಂಸಾರೇಣ ಸಂಸಾರಿತ್ವಾಪಾತಾಚ್ಚ ।

ಮತ್ತು ಬ್ರಹ್ಮನೂ ತನ್ನ ಅಜ್ಞಾನದಿಂದ ಕಲ್ಪಿತನಾದ್ದರಿಂದ ನಮ್ಮಂತೆ ಬ್ರಹ್ಮನೂ ಸಹ ಸಂಸಾರಿಯಾಗಬೇಕಾದೀತು. ಅಂದರೆ ಅವಿದ್ಯಾಕಲ್ಪಿತವಾದದ್ದನ್ನೇ ಸಂಸಾರವೆಂದು ಅದ್ವೈತಿಗಳು

ಹೇಳುವ ಕಾರಣ ಬ್ರಹ್ಮನೂ ಸಹ ಸ್ವ-ಅಜ್ಞಾನಕಲ್ಪಿತನಾದ್ದರಿಂದ ಸಂಸಾರಿಯಾಗಬೇಕಾದೀತೆಂದು ಅಭಿಪ್ರಾಯ.

जगदार्जनात् प्रागशरीरस्यैव सृष्टृत्ववत् नियन्तृत्वस्याप्युपपत्तेश्च ।

ಮತ್ತು ಜಗತ್ತು ಸೃಷ್ಟಿಯಾಗುವ ಮೊದಲು ಬ್ರಹ್ಮನು ಅಶರೀರನಾಗಿದ್ದನು. ಅಶರೀರಿಯಾದ ಬ್ರಹ್ಮನಿಂದ ಜಗತ್ತಿನ ಸೃಷ್ಟಿಯಾಯಿತೆಂದು ಹೇಳುವಂತೆ ಅಶರೀರಿಯಾದ ಬ್ರಹ್ಮನಿಂದಲೇ ನಿಯಂತೃತ್ವವು ನಡೆಯಬಹುದು. ನಿಯಮನಕ್ಕೋಸ್ಕರ ಶರೀರವನ್ನು ಒಪ್ಪುವ ಅವಶ್ಯಕತೆಯಿರುವುದಿಲ್ಲ.

न चाशरीरस्यानियन्तृत्वे शङ्किते गौणशरीरोपपादनं युक्तम् ।

ಶರೀರವಿಲ್ಲದ ಕಾರಣ ನಿಯಂತೃತ್ವವು ಕೂಡುವುದಿಲ್ಲವೆಂದು ಆಶಂಕಿಸಿದಾಗ ಗೌಣವಾದ ಶರೀರವನ್ನು ಒಪ್ಪುವುದು ಅಯುಕ್ತವಾಗುತ್ತದೆ. (ನಿರ್ಗತಿಕನಾದ ವ್ಯಕ್ತಿಯಲ್ಲಿ ಗೌಣವಾದ ಹಣವನ್ನು ಸಮರ್ಪಿಸುವುದರಿಂದ ಅವನು ಶ್ರೀಮಂತನಾಗಲಾರ)

किञ्च शुद्धं न नियन्तृ, अशुद्धं त्वविद्याकल्पितत्वान्नाविद्याविषयः ।

ಮತ್ತೆ - ಶುದ್ಧಬ್ರಹ್ಮನಿಗೆ ಶರೀರವನ್ನು ಅದ್ವೈತಿಗಳು ಒಪ್ಪುವುದಾದರೆ ಅವನಿಗೆ ನಿಯಂತೃತ್ವವನ್ನು ಒಪ್ಪಲು ಸಾಧ್ಯವಿಲ್ಲ. ಅಶುದ್ಧಬ್ರಹ್ಮನಿಗೆ ಶರೀರವನ್ನು ಒಪ್ಪುವುದಾದರೆ ಅವಿದ್ಯಾವಿಷಯನೆಂದು ಹೇಳಬೇಕು. ಆದರೆ ಅವಿದ್ಯಾಕಲ್ಪಿತನಾದ ಅಶುದ್ಧಬ್ರಹ್ಮನು ಅವಿದ್ಯೆಗೆ ವಿಷಯನಾಗಲು ಹೇಗೆ ಸಾಧ್ಯ ? ಇನ್ನು ಅವಿದ್ಯೆಗೆ ಶುದ್ಧಬ್ರಹ್ಮನು ವಿಷಯನಾಗಬಹುದು ಆದರೆ ಅವನಲ್ಲಿ ನಿಯಂತೃತ್ವ ಮೊದಲಾದ ಧರ್ಮಗಳನ್ನು ಹೇಳಲು ಬರುವುದಿಲ್ಲ.

यच्चोक्तं – देहादिनियन्तुरपि जीवस्य भिन्ननियन्तृनियम्यत्वे तन्नियन्तुरीश्वरस्यापि भिन्ननियन्तृनियम्यत्वेनावस्थापातात् नियन्तृ ब्रह्म नियम्यजीवाभिन्नमिति,

ಮತ್ತು ಅದ್ವೈತಿಗಳ ಮತ್ತೊಂದು ಮಾತು ಹೀಗಿದೆ - ದೇಹೇಂದ್ರಿಯಾದಿಗಳಿಗೆ ಜೀವನು ನಿಯಾಮಕನಾಗಿದ್ದಾನೆ. ಇಂತಹ ಜೀವನು ಬೇರೊಬ್ಬ ನಿಯಾಮಕನಿಂದ ನಿಯಮ್ಯನಾದರೆ ಅಂತಹ ನಿಯಾಮಕನಾದ ಈಶ್ವರನಿಗೂ ಸಹ ಭಿನ್ನವಾದ ಮತ್ತೊಬ್ಬ ನಿಯಾಮಕನು ಇರಬೇಕಾಗುತ್ತದೆ. ಅವರಿಗೂ ಮತ್ತೊಬ್ಬ ನಿಯಾಮಕನ ಅನಿವಾರ್ಯತೆ ಇರುವುದರಿಂದ ಅನವಸ್ಥಾ ದೋಷವು ಬರುತ್ತದೆ. ಇದನ್ನು ಪರಿಹರಿಸಬೇಕೆಂದರೆ ನಿಯಂತೃವಾಗಿರುವ ಬ್ರಹ್ಮನು ನಿಯಮ್ಯನಾದ ಜೀವನಿಗಿಂತ ಅಭಿನ್ನನಾಗಿದ್ದಾನೆಂದೇ ಹೇಳಬೇಕು. ಆವಾಗ ಮತ್ತೊಬ್ಬ ನಿಯಮಕನ ಅಪೇಕ್ಷೆಯು ಬಾರದ ಕಾರಣ ಅನವಸ್ಥಾ ದೋಷವು ಪರಿಹಾರವಾಗುತ್ತವೆ ಎಂದು.

तन्न, अभेदे सुतरां नियन्तृत्वायोगात् ।

ಆದ್ವೈತಿಗಳ ಈ ನಿಲುವು ಅಯುಕ್ತವಾಗಿದೆ. ಅನವಸ್ಥಾದೋಷ ಪರಿಹಾರಕ್ಕಾಗಿ ಅಭೇದವನ್ನು ಹೇಳುವುದಾದರೆ ಸುತರಾಂ ನಿಯಂತೃತ್ವವೂ ಕೂಡುವುದಿಲ್ಲ.

श्रुतिसूत्रयोर्भेदोक्त्ययोगाच्च ।

ಮತ್ತು 'ಭೇದೇನೈನಮಧೀಯತೇ' ಎಂಬುದಾಗಿ ಸೂತ್ರವು ಭೇದವನ್ನೇ ಹೇಳುತ್ತಿದೆ. ಶ್ರುತಿಯೂ ಸಹ ಭೇದವನ್ನೇ ಹೇಳುತ್ತಿರುವುದರಿಂದ ಇವುಗಳಿಗೆ ಅಸ್ವಾರಸ್ಯವನ್ನು ಹೇಳಿದಂತಾಗುತ್ತದೆ.

काल्पनिकभेदेन नियन्तृत्वादिकं युक्तमिति चेत्, तर्हि यथा देहादिनियन्तुर्जीवस्य व्यावहारिकभेदवानीशो नियन्ता, तथेशस्यापि व्यावहारिकभेदवान्यो नियन्ता स्यादिति व्यावहारिकनियन्तृपरम्परया अनवस्था स्यात् ।

ಕಾಲ್ಪನಿಕವಾದ ಭೇದವನ್ನು ಒಪ್ಪಿ ನಿಯಂತೃತ್ವಾದಿಗಳನ್ನು ಕೂಡಿಸಬಹುದಲ್ಲವೇ? ಎಂದು ಶಂಕಿಸಬಾರದು. ಹಾಗಾದರೆ ಯಾವರೀತಿಯಾಗಿ ದೇಹೇಂದ್ರಿಯಾದಿಗಳನ್ನು ನಿಯಮನ ಮಾಡುವ ಜೀವನಿಗೆ ವ್ಯಾವಹಾರಿಕ ಭೇದವುಳ್ಳ ಮತ್ತೊಬ್ಬ ಈಶ್ವರನು ನಿಯಾಮಕನಾಗಿದ್ದಾನೆಂದು ಹೇಳುತ್ತೀರೋ? ಆದರಂತೆ ನಿಯಾಮಕನಾದ ಅಂತಹ ಈಶ್ವರನಿಗೂ ವ್ಯಾವಹಾರಿಕಭೇದವುಳ್ಳ ಮತ್ತೊಬ್ಬ ನಿಯಾಮಕನನ್ನು ಒಪ್ಪಲೇಬೇಕಾಗುತ್ತದೆ. ಅವರಿಗೂ ಸಹ ವ್ಯಾವಹಾರಿಕಭೇದವುಳ್ಳ ಮತ್ತೊಬ್ಬ ನಿಯಾಮಕನ ಅಪೇಕ್ಷೆಯಿರುವುದರಿಂದ ವ್ಯಾವಹಾರಿಕ ನಿಯಂತೃಪರಂಪರೆಯಿರುವುದರಿಂದ ಅನವಸ್ಥಾದೋಷವು ಆದ್ವೈತಿಗಳಿಗೆ ತಪ್ಪಿದ್ದಲ್ಲ.

अथ "न वैशेष्यात्" इत्युक्तन्यायेन ईशस्य स्वातन्त्र्यादिविशेषान्न नियन्त्रन्तरं, तर्ह्यनवस्थापरिहारो नाभेदेन, किन्तु स्वातन्त्र्येणेति सत्यभेद एवास्तु ।

ಇನ್ನು "ನ ವೈಶೇಷ್ಯಾತ್" ಎಂಬಲ್ಲಿ ಹೇಳಿದ ನ್ಯಾಯದ ಪ್ರಕಾರ ಭಗವಂತನಿಗೆ ಸ್ವಾತಂತ್ರ್ಯ ಮೊದಲಾದ ವಿಶೇಷಗುಣವಿರುತ್ತದೆ. ಆದ್ದರಿಂದ ಅವನಿಗೆ ಮತ್ತೊಬ್ಬ ನಿಯಾಮಕನನ್ನು ಒಪ್ಪಬೇಕಾಗಿಲ್ಲ ಎಂದು ಉತ್ತರಿಸಿದರೆ ಅನವಸ್ಥಾ ಪರಿಹಾರವನ್ನು ಅಭೇದದಿಂದ ಮಾಡಿದಂತೆ ಆಗಲಿಲ್ಲ ; ಹೊರತಾಗಿ ಸ್ವಾತಂತ್ರ್ಯದಿಂದ ಎಂದಾಯಿತು. ಆದ್ದರಿಂದ ಸತ್ಯವಾದಭೇದವಿದ್ದರೆ ಏನು ತೊಂದರೆ ?

किञ्चानवस्थातो बिभ्यता शरीरजीवयोरैक्यं स्वीकार्यम् । प्रमाणविरोधश्च जीवपरयोरैक्येऽपि ''भेदेनैनमधीयते'' इति सूत्र एवोक्तः ।

ಮತ್ತು ಅನವಸ್ಥಾದೋಷಕ್ಕೆ ಹೆದರಿ ಶರೀರ ಹಾಗೂ ಜೀವರಿಗೆ ಐಕ್ಯವೆಂದು ಒಪ್ಪಬೇಕಾಗುತ್ತದೆ. ಪ್ರಮಾಣವಿರೋಧವುಂಟಾಗುತ್ತದೆಂದರೆ ಜೀವ ಹಾಗೂ ಪರಮಾತ್ಮನ ಐಕ್ಯವಿಷಯದಲ್ಲಿಯೂ 'ಭೇದೇನೈನಮಧೀಯತೇ' ಎಂಬ ಸೂತ್ರದಲ್ಲಿ ಹೇಳಿದ ಪ್ರಕಾರ ಅನೇಕ ಪ್ರಮಾಣಗಳ ವಿರೋಧವು ಬರುತ್ತದೆ.

किञ्चैवं सति स्वकार्यं प्रति कारणस्यापि पृथिव्यादिकस्य ब्रह्मकार्यत्वे ब्रह्मणोऽप्यन्यकार्यत्वमित्यनवस्थापरिहाराय पृथिवीब्रह्मणोरभेदः स्यात् । प्रमाणविरोधस्तु जीवपरयोरैक्येऽपि सम इत्युक्तम् ।

ಹೀಗೆ ಅನವಸ್ಥಾವನ್ನು ಪರಿಹರಿಸುವುದಕ್ಕಾಗಿ ಅಭೇದವನ್ನು ಒಪ್ಪುವುದಾದರೆ ಕಾರ್ಯಕಾರಣಗಳಿಗೂ ಸಹ ಅಭೇದ ಬರಬೇಕಾದೀತು. ತನ್ನ ಕಾರ್ಯಕ್ಕೆ ಪೃಥ್ವಾದಿಗಳೂ ಕಾರಣವಾಗಿರಬಹುದು. ಆದರೆ ಈ ಎಲ್ಲಾ ಪೃಥ್ವಾದಿಗಳೂ ಬ್ರಹ್ಮನ ಕಾರ್ಯವಾಗಿವೆ. ಅಂತಹ ಬ್ರಹ್ಮನೂ ಸಹ ಮತ್ತೊಂದು ಪದಾರ್ಥದಿಂದ ಕಾರ್ಯಭೂತನೇ ಆಗಬೇಕು. ಹೀಗೆ ಅನವಸ್ಥಾ ದೋಷವು ಬರುತ್ತದೆ. ಇದನ್ನು ಪರಿಹರಿಸುವುದಕ್ಕಾಗಿ ಪೃಥಿವೀ ಹಾಗೂ ಬ್ರಹ್ಮನಿಗೂ ಅಭೇದವನ್ನು ಒಪ್ಪಬೇಕಾದೀತು. ಹಾಗೆ ಅಭೇದ ಒಪ್ಪಿದರೆ ಪ್ರಮಾಣವಿರೋಧ ಬರುತ್ತದಲ್ಲವೇ? ಎಂದು ಪ್ರಶ್ನಿಸಬಾರದು. ಜೀವ ಹಾಗೂ ಪರಮಾತ್ಮರ ಐಕ್ಯವಿಷಯದಲ್ಲಿಯೂ ಈ ದೋಷವು ಸಮಾನವಾಗಿದೆ ಎಂದು ಹಿಂದೆಯೇ ಹೇಳಲಾಗಿದೆ.

ಪ್ರಕಾಶಃ –

अन्ये त्विति । अत्रान्तर्यामी किं प्रधानमुत पृथिव्याद्यभिमानिदेवता, किं प्राप्ताणिमाद्यैश्वर्यः कश्चिद्योगी जीवः, अथ परमात्मेत्यादि भाष्ये प्रदर्शितम् ।

ವಿವರಣೆ - ಇಲ್ಲಿಯ ತನಕ ನಮ್ಮ ಸಿದ್ಧಾಂತದ ಪ್ರಕಾರ ಅಂತರ್ಯಾಮ್ಯಧಿಕರಣವನ್ನು ಸ್ಥಾಪಿಸಿದ್ದಾಯಿತು. ಈಗ ಅದ್ವೈತ ಮತದ ಪ್ರಕಾರ ಅಂತರ್ಯಾಮ್ಯಧಿಕರಣವನ್ನು ಅನುವಾದ ಮಾಡಿ ವಿಮರ್ಶಿಸಲು ಹೊರಟಿದ್ದಾರೆ. 'ಅನ್ಯೇ ತು' ಇತ್ಯಾದಿ ಗ್ರಂಥದಿಂದ. ಈ ಅಧಿಕರಣದಲ್ಲಿ ಅಂತರ್ಯಾಮಿಯು ಪ್ರಧಾನವೋ? ಅಥವಾ ಪೃಥಿವೀ ಮೊದಲಾದ ಪಂಚಭೂತಗಳ ಅಭಿಮಾನಿದೇವತೆಯೋ? ಅಥವಾ ಅಣಿಮಾ ಮಹಿಮಾ ಮೊದಲಾದ ಅಷ್ಟ ಐಶ್ವರ್ಯಗಳನ್ನು ಹೊಂದಿರುವ ಯಾರಾದರೊಬ್ಬ ಯೋಗಿಯೋ? ಅಥವಾ ಜೀವನೋ? ಅಥವಾ ಪರಮಾತ್ಮನೋ? ಎಂಬುದಾಗಿ ಸಂದೇಹ, ಪೂರ್ವಪಕ್ಷಗಳನ್ನು ಶಾಂಕರ ಭಾಷ್ಯದಲ್ಲಿ ತೋರಿಸಿರುತ್ತಾರೆ.

ಅಂತರ್ಯಾಮ್ಯಧಿಕರಣ (೧-೨-೫)

तन्न, अभेदे सुतरां नियन्तृत्वायोगात् ।

ಅದ್ವೈತಿಗಳ ಈ ನಿಲುವು ಅಯುಕ್ತವಾಗಿದೆ. ಅನವಸ್ಥಾದೋಷ ಪರಿಹಾರಕ್ಕಾಗಿ ಅಭೇದವನ್ನು ಹೇಳುವುದಾದರೆ ಸುತರಾಂ ನಿಯಂತೃತ್ವವೂ ಕೂಡುವುದಿಲ್ಲ.

श्रुतिसूत्रयोर्भेदोक्त्ययोगाच्च ।

ಮತ್ತು 'ಭೇದನ್ಯೈನಮಧೀಯತೇ' ಎಂಬುದಾಗಿ ಸೂತ್ರವು ಭೇದವನ್ನೇ ಹೇಳುತ್ತಿದೆ. ಶ್ರುತಿಯೂ ಸಹ ಭೇದವನ್ನೇ ಹೇಳುತ್ತಿರುವುದರಿಂದ ಇವುಗಳಿಗೆ ಅಸ್ವಾರಸ್ಯವನ್ನು ಹೇಳಿದಂತಾಗುತ್ತದೆ.

काल्पनिकभेदेन नियन्तृत्वादिकं युक्तमिति चेत्, तर्हि यथा देहादिनियन्तुर्जीवस्य व्यावहारिकभेदवानीशो नियन्ता, तथेशस्यापि व्यावहारिकभेदवान्यो नियन्ता स्यादिति व्यावहारिकनियन्तृपरम्परया अनवस्था स्यात् ।

ಕಾಲ್ಪನಿಕವಾದ ಭೇದವನ್ನು ಒಪ್ಪಿ ನಿಯಂತೃತ್ವಾದಿಗಳನ್ನು ಕೂಡಿಸಬಹುದಲ್ಲವೇ? ಎಂದು ಶಂಕಿಸಬಾರದು. ಹಾಗಾದರೆ ಯಾವರೀತಿಯಾಗಿ ದೇಹೇಂದ್ರಿಯಾದಿಗಳನ್ನು ನಿಯಮನ ಮಾಡುವ ಜೀವನಿಗೆ ವ್ಯಾವಹಾರಿಕ ಭೇದವುಳ್ಳ ಮತ್ತೊಬ್ಬ ಈಶ್ವರನು ನಿಯಾಮಕನಾಗಿದ್ದಾನೆಂದು ಹೇಳುತ್ತೀರೋ? ಅದರಂತೆ ನಿಯಾಮಕನಾದ ಅಂತಹ ಈಶ್ವರನಿಗೂ ವ್ಯಾವಹಾರಿಕಭೇದವುಳ್ಳ ಮತ್ತೊಬ್ಬ ನಿಯಾಮಕನನ್ನು ಒಪ್ಪಲೇಬೇಕಾಗುತ್ತದೆ. ಅವರಿಗೂ ಸಹ ವ್ಯಾವಹಾರಿಕಭೇದವುಳ್ಳ ಮತ್ತೊಬ್ಬ ನಿಯಾಮಕನ ಅಪೇಕ್ಷೆಯಿರುವುದರಿಂದ ವ್ಯಾವಹಾರಿಕ ನಿಯಂತೃಪರಂಪರೆಯಿರುವುದರಿಂದ ಅನವಸ್ಥಾದೋಷವು ಅದ್ವೈತಿಗಳಿಗೆ ತಪ್ಪಿದ್ದಲ್ಲ.

अथ "न वैशेष्यात्" इत्युक्तन्यायेन ईशस्य स्वातन्त्र्यादिविशेषान्न नियन्त्रन्तरं, तर्ह्यनवस्थापरिहारो नाभेदेन, किन्तु स्वातन्त्र्येणेति सत्यभेद एवास्तु ।

ಇನ್ನು "ನ ವೈಶೇಷ್ಯಾತ್" ಎಂಬಲ್ಲಿ ಹೇಳಿದ ನ್ಯಾಯದ ಪ್ರಕಾರ ಭಗವಂತನಿಗೆ ಸ್ವಾತಂತ್ರ್ಯ ಮೊದಲಾದ ವಿಶೇಷಗುಣವಿರುತ್ತದೆ. ಆದ್ದರಿಂದ ಅವನಿಗೆ ಮತ್ತೊಬ್ಬ ನಿಯಾಮಕನನ್ನು ಒಪ್ಪಬೇಕಾಗಿಲ್ಲ ಎಂದು ಉತ್ತರಿಸಿದರೆ ಅನವಸ್ಥಾ ಪರಿಹಾರವನ್ನು ಅಭೇದದಿಂದ ಮಾಡಿದಂತೆ ಆಗಲಿಲ್ಲ ; ಹೊರತಾಗಿ ಸ್ವಾತಂತ್ರ್ಯದಿಂದ ಎಂದಾಯಿತು. ಆದ್ದರಿಂದ ಸತ್ಯವಾದಭೇದವಿದ್ದರೆ ಏನು ತೊಂದರೆ ?

किञ्चानवस्थातो विभ्यता शरीरजीवयोरैक्यं स्वीकार्यम् । प्रमाणविरोधश्च जीवपरयोरैक्येऽपि ''भेदेनैनमधीयते'' इति सूत्र एवोक्तः ।

ಮತ್ತು ಅನವಸ್ಥಾದೋಷಕ್ಕೆ ಹೆದರಿ ಶರೀರ ಹಾಗೂ ಜೀವರಿಗೆ ಐಕ್ಯವೆಂದು ಒಪ್ಪಬೇಕಾಗುತ್ತದೆ. ಪ್ರಮಾಣವಿರೋಧವುಂಟಾಗುತ್ತದೆಂದರೆ ಜೀವ ಹಾಗೂ ಪರಮಾತ್ಮನ ಐಕ್ಯವಿಷಯದಲ್ಲಿಯೂ 'ಭೇದೇನೈನಮಧೀಯತೇ' ಎಂಬ ಸೂತ್ರದಲ್ಲಿ ಹೇಳಿದ ಪ್ರಕಾರ ಅನೇಕ ಪ್ರಮಾಣಗಳ ವಿರೋಧವು ಬರುತ್ತದೆ.

किञ्चैवं सति स्वकार्यं प्रति कारणस्यापि पृथिव्यादिकस्य ब्रह्मकार्यत्वे ब्रह्मणोऽप्यन्यकार्यत्वमित्यनवस्थापरिहाराय पृथिवीब्रह्मणोरभेदः स्यात् । प्रमाणविरोधस्तु जीवपरयोरैक्येऽपि सम इत्युक्तम् ।

ಹೀಗೆ ಅನವಸ್ಥಾವನ್ನು ಪರಿಹರಿಸುವುದಕ್ಕಾಗಿ ಅಭೇದವನ್ನು ಒಪ್ಪುವುದಾದರೆ ಕಾರ್ಯಕಾರಣಗಳಿಗೂ ಸಹ ಅಭೇದ ಬರಬೇಕಾದೀತು. ತನ್ನ ಕಾರ್ಯಕ್ಕೆ ಪೃಥಿವ್ಯಾದಿಗಳೂ ಕಾರಣವಾಗಿರಬಹುದು. ಆದರೆ ಈ ಎಲ್ಲಾ ಪೃಥಿವ್ಯಾದಿಗಳೂ ಬ್ರಹ್ಮನ ಕಾರ್ಯವಾಗಿವೆ. ಅಂತಹ ಬ್ರಹ್ಮನೂ ಸಹ ಮತ್ತೊಂದು ಪದಾರ್ಥದಿಂದ ಕಾರ್ಯಭೂತನೇ ಆಗಬೇಕು. ಹೀಗೆ ಅನವಸ್ಥಾ ದೋಷವು ಬರುತ್ತದೆ. ಇದನ್ನು ಪರಿಹರಿಸುವುದಕ್ಕಾಗಿ ಪೃಥಿವೀ ಹಾಗೂ ಬ್ರಹ್ಮನಿಗೂ ಅಭೇದವನ್ನು ಒಪ್ಪಬೇಕಾದೀತು. ಹಾಗೆ ಅಭೇದ ಒಪ್ಪಿದರೆ ಪ್ರಮಾಣವಿರೋಧ ಬರುತ್ತದಲ್ಲವೇ? ಎಂದು ಪ್ರಶ್ನಿಸಬಾರದು. ಜೀವ ಹಾಗೂ ಪರಮಾತ್ಮರ ಐಕ್ಯವಿಷಯದಲ್ಲಿಯೂ ಈ ದೋಷವು ಸಮಾನವಾಗಿದೆ ಎಂದು ಹಿಂದೆಯೇ ಹೇಳಲಾಗಿದೆ.

ಪ್ರಕಾಶಃ —

अन्ये त्विति । अत्रान्तर्यामी किं प्रधानमुत पृथिव्याद्यभिमानिदेवता, किं प्राणिमात्रैश्वर्यः कश्चिद्योगी जीवः, अथ परमात्मेत्यादि भाष्ये प्रदर्शितम् ।

ವಿವರಣೆ - ಇಲ್ಲಿಯ ತನಕ ನಮ್ಮ ಸಿದ್ಧಾಂತದ ಪ್ರಕಾರ ಅಂತರ್ಯಾಮ್ಯಧಿಕರಣವನ್ನು ಸ್ಥಾಪಿಸಿದ್ದಾಯಿತು. ಈಗ ಅದ್ವೈತ ಮತದ ಪ್ರಕಾರ ಅಂತರ್ಯಾಮ್ಯಧಿಕರಣವನ್ನು ಅನುವಾದ ಮಾಡಿ ವಿಮರ್ಶಿಸಲು ಹೊರಟಿದ್ದಾರೆ. 'ಅನ್ಯೇ ತು' ಇತ್ಯಾದಿ ಗ್ರಂಥದಿಂದ. ಈ ಅಧಿಕರಣದಲ್ಲಿ ಅಂತರ್ಯಾಮಿಯು ಪ್ರಧಾನವೋ? ಅಥವಾ ಪೃಥಿವೀ ಮೊದಲಾದ ಪಂಚಭೂತಗಳ ಅಭಿಮಾನಿದೇವತೆಯೋ? ಅಥವಾ ಅಣಿಮಾ ಮಹಿಮಾ ಮೊದಲಾದ ಅಷ್ಟ ಐಶ್ವರ್ಯಗಳನ್ನು ಹೊಂದಿರುವ ಯಾರಾದರೊಬ್ಬ ಯೋಗಿಯೋ? ಅಥವಾ ಜೀವನೋ? ಅಥವಾ ಪರಮಾತ್ಮನೋ? ಎಂಬುದಾಗಿ ಸಂದೇಹ, ಪೂರ್ವಪಕ್ಷಗಳನ್ನು ಶಾಂಕರ ಭಾಷ್ಯದಲ್ಲಿ ತೋರಿಸಿರುತ್ತಾರೆ.

ಅಂತರ್ಯಾಮ್ಯಧಿಕರಣ (೧-೨-೫)

ಪ್ರಕಾಶಃ – ಭಾಮತ್ಯಾಂ ತು ಅಚೇತಸ್ಯ ಪ್ರಧಾನಸ್ಯ ದ್ರಷ್ಟೃತ್ವಶ್ರೋತೃತ್ವವಿಜ್ಞಾತೃತ್ವಾದೀನಾಮ್, ''ಏಷ ಆತ್ಮಾ'' ಇತ್ಯುಕ್ತಾತ್ಮತ್ವಸ್ಯ ಚಾಯೋಗಾತ್,

ಶಾಂಕರಭಾಷ್ಯಕ್ಕಿಂತ ಸ್ವಲ್ಪ ವಿಭಿನ್ನವಾದ ಸಂದೇಹ, ಪೂರ್ವಪಕ್ಷಗಳನ್ನು ಭಾಮತಿಯಲ್ಲಿ ತೋರಿಸಲಾಗಿದೆ. ಅದು ಹೀಗೆ - ಪ್ರಧಾನವು ಅಚೇತನವಾಗಿರುವುದರಿಂದ ಶ್ರುತಿಯಲ್ಲಿ ಹೇಳಲ್ಪಟ್ಟ ದ್ರಷ್ಟೃತ್ವ, ಶ್ರೋತೃತ್ವ, ವಿಜ್ಞಾತೃತ್ವ ಮೊದಲಾದ ಧರ್ಮಗಳಾಗಲೀ, 'ಏಷ ಆತ್ಮಾ' ಎಂಬ ಶ್ರುತಿಯಲ್ಲಿ ಹೇಳಲ್ಪಟ್ಟ ಆತ್ಮತ್ವ ರೂಪಧರ್ಮವಾಗಲೀ ಯುಕ್ತವಾಗುವುದಿಲ್ಲ. ಆದ್ದರಿಂದ ಸಂದೇಹಕ್ಕೆ ಪ್ರಧಾನವು ವಿಷಯವೇ ಆಗುವುದಿಲ್ಲ.

ಪ್ರಕಾಶಃ – ಪೃಥಿವ್ಯಾದ್ಯಭಿಮಾನಿನೋ ದೇವಸ್ಯ ಪ್ರತಿನಿಯತನಿಯಮನಾತ್ ''ಯಃ ಸರ್ವಾನ್ ಲೋಕಾನನ್ತರೋ ಯಮಯತಿ ಯಸ್ಸರ್ವಾಣಿ ಭೂತಾನ್ಯನ್ತರೋ ಯಮಯತಿ'' ಇತ್ಯುಕ್ತಸರ್ವಲೋಕಭೂತ-ನಿಯಮನಾಯೋಗಾತ್,

ಪ್ರಕೃತಿಯಂತೆ ಪೃಥಿವಾದ್ಯಭಿಮಾನಿ ದೇವತೆಗಳನ್ನೂ ಸಹ ಸಂದೇಹಕ್ಕೆ ವಿಷಯರಾಗಿದ್ದಾರೆಂದು ಹೇಳಲು ಸಾಧ್ಯವಿಲ್ಲ. ಏಕೆಂದರೆ ಪ್ರತಿಯೊಬ್ಬ ಅಭಿಮಾನಿದೇವತೆಗಳಿಗೆ ಸೀಮಿತವಾದ ಪದಾರ್ಥಗಳನ್ನಷ್ಟೇ ನಿಯಮನ ಮಾಡುವಂತಹ ಶಕ್ತಿಯಿರುತ್ತದೆ. ಆದರೆ ಶ್ರುತಿಯಲ್ಲಿ ''ಯಃ ಸರ್ವಾನ್ ಲೋಕಾನ್ ಅಂತರೋ ಯಮಯತಿ ಯಸ್ಸರ್ವಾಣಿ ಭೂತಾನ್ಯಂತರೋ ಯಮಯತಿ'' ಎಂಬುದಾಗಿ ಸಕಲ ಲೋಕಗಳನ್ನೂ ಸಕಲಭೂತಗಳನ್ನೂ ಅಂತರ್ಯಾಮಿಯು ನಿಯಮನ ಮಾಡುತ್ತಾನೆಂದು ಹೇಳಲಾಗಿದೆ. ಇದು ಅಭಿಮಾನಿ ದೇವತೆಗಳಲ್ಲಿ ಕೂಡುವುದಿಲ್ಲ.

ಪ್ರಕಾಶಃ – ಯೋಗಿಜೀವಸ್ಯ ಚ ''ಜಗದ್ವ್ಯಾಪಾರವರ್ಜಮ್'' ಇತಿ ವಕ್ಷ್ಯಮಾಣನ್ಯಾಯೇನ ಜ್ಞಾನಿನೋ ನಿಯಮನಾದಿವ್ಯಾಪಾರಾಭಾವಾತ್ ನ ಪ್ರಧಾನಾಭಿಮಾನಿದೇವಯೋಗಿಜೀವಾನಾಮತ್ರ ಸನ್ದೇಹವಿಷಯತಾ ।

ಅಣಿಮಾ, ಮಹಿಮಾ ಮೊದಲಾದ ಅಷ್ಟೈಶ್ವರ್ಯವುಳ್ಳ ಯೋಗಿಜೀವನೂ ಸಹ ಅಂತರ್ಯಾಮಿಯಾಗುತ್ತಾನೆಂಬ ಸಂದೇಹಕ್ಕೆ ವಿಷಯನಾಗುವುದಿಲ್ಲ. ಏಕೆಂದರೆ ''ಜಗದ್ವ್ಯಾಪಾರವರ್ಜಮ್'' ಎಂಬುದಾಗಿ ಮುಂದೆ ಹೇಳುವ ನ್ಯಾಯದಿಂದ ಜ್ಞಾನಿಯಾಗಿರುವ ಯೋಗಿ ಪುರುಷನಿಗೆ ಜಗತ್ತನ್ನು ನಿಯಮನ ಮಾಡುವಂತಹ ಯಾವುದೇ ವ್ಯಾಪಾರಗಳು ಇರುವುದಿಲ್ಲ.

ಆದ್ದರಿಂದ ಪ್ರಧಾನವಾಗಲೀ, ಅಭಿಮಾನಿ ದೇವತೆಗಳಾಗಲೀ, ಯೋಗಿಯಾದ ಜೀವನಾಗಲೀ ಅಂತರ್ಯಾಮಿಯಾಗಿರುತ್ತಾರೆಂಬುದು ಸಂದೇಹಕ್ಕೆ ವಿಷಯವೇ ಆಗುವುದಿಲ್ಲ.

ಪ್ರಕಾಶಃ – ಕಿನ್ತು ಜೀವಮಾತ್ರಂ ವಾ ಪರಮಾತ್ಮಾ ವೇತಿ ಸನ್ದೇಹೇ ಜೀವಮಾತ್ರಮೇವ ।

ಹೊರತಾಗಿ ಕೇವಲ ಜೀವ ಹಾಗೂ ಪರಮಾತ್ಮರು ಮಾತ್ರ ಸಂದೇಹಕ್ಕೆ ವಿಷಯರಾಗುತ್ತಾರೆ. ಆದ್ದರಿಂದ ಶ್ರುತಿಯಲ್ಲಿ ಹೇಳಲ್ಪಟ್ಟ ಅಂತರ್ಯಾಮಿಯು ಜೀವನೋ? ಅಥವಾ ಪರಮಾತ್ಮನೋ? ಎಂದು ಈ ಅಧಿಕರಣದ ಸಂದೇಹ.

ಪ್ರಕಾಶಃ – लोके चेतनस्य शरीरिणः स्वशरीरेन्द्रियादौ शरीरेण वास्यादौ नियमनादिकार्योपलम्भात् । जीवस्य च शरीरेन्द्रियादिमत्त्वाद्दृष्टत्वादिसम्भवाच्च ।

ಲೋಕದಲ್ಲಿ ಚೇತನನಾದ ಶರೀರಿಯು ತನ್ನ ಶರೀರ, ಇಂದ್ರಿಯ ಮೊದಲಾದವುಗಳನ್ನು ನೇರವಾಗಿ ನಿಯಮಿಸುತ್ತಾನೆ. ಆದರೆ ವಾಸ್ಯಾದಿಗಳನ್ನು (ಉಳಿ ಮೊದಲಾದವುಗಳನ್ನು) ತನ್ನ ಶರೀರದ ಮೂಲಕ ನಿಯಮನ ಮಾಡುತ್ತಾನೆ. ಮತ್ತು ಜೀವನಿಗೇ ಶರೀರ, ಇಂದ್ರಿಯಾದಿಗಳಿರುವುದರಿಂದ ಹಾಗೂ ಅವನು ಅವುಗಳಿಂದ ಪದಾರ್ಥಗಳನ್ನು ತಿಳಿಯುವುದರಿಂದ ಅವನಿಗೇ ದ್ರಷ್ಟೃತ್ವಾದಿಗಳು ಉಪಪನ್ನವಾಗುತ್ತದೆ.

ಪ್ರಕಾಶಃ – अदृष्टादिद्वारा सर्वलोकादिनियन्तृत्वोपपत्तेश्च ।

ಅಷ್ಟೇ ಅಲ್ಲದೆ ತನ್ನ ಅದೃಷ್ಟದ ಮೂಲಕವಾಗಿ ಸಕಲ ಜಗತ್ತಿನ ನಿಯಂತೃತ್ವವೂ ಸಹ ಉಪಪನ್ನವಾಗುತ್ತದೆ. ಅಂದರೆ ಜೀವನು ಫಲವನ್ನು ಉಣ್ಣಬೇಕೆಂಬ ಉದ್ದೇಶದಿಂದ ಈ ಜಗತ್ತು ಉತ್ಪನ್ನವಾಗಿದೆ. ಆದ್ದರಿಂದ ಜೀವನ ಅದೃಷ್ಟವೇ ಜಗತ್ತಿಗೆ ಕಾರಣವೆಂದಂತಾಯಿತು.

ಪ್ರಕಾಶಃ – 'यः' इत्येकवचनस्य च जात्यभिप्रायत्वात् । नच जीवस्याप्यन्यो नियन्ताऽऽवश्यक इति वाच्यं, तस्याप्यन्यः तस्याप्यन्य इत्यनवस्थापत्तेः ।

ವಿಷಯವಾಕ್ಯದಲ್ಲಿರುವ 'यः' ಎಂಬ ಏಕವಚನವು ಸಮುದಾಯಾಭಿಪ್ರಾಯದಲ್ಲಿ ಉಲ್ಲೇಖಿತವಾಗಿದೆ. ಆದ್ದರಿಂದ ಏಕವಚನದ ವಿರೋಧಕ್ಕೂ ಅವಕಾಶವಿರುವುದಿಲ್ಲ.

ಜೀವನಿಗೆ ಮತ್ತೊಬ್ಬ ನಿಯಾಮಕನು ಬೇಕಾಗುತ್ತದೆಂದು ಆಕ್ಷೇಪಿಸಬಾರದು; ಏಕೆಂದರೆ - ಅಂತಹ ಜೀವನಿಗೂ ಮತ್ತೊಬ್ಬ ನಿಯಾಮಕನ ಅವಶ್ಯಕತೆ ಇದೆ. ಆ ನಿಯಾಮಕನಿಗೂ ಮತ್ತೊಬ್ಬ ನಿಯಾಮಕನ ಅಪೇಕ್ಷೆಯಿರುವುದರಿಂದ ಹೀಗೆ ಅನವಸ್ಥಾದೋಷವು ಬರುತ್ತದೆ.

ಪ್ರಕಾಶಃ – उक्तञ्च –

'स्वकर्मोपार्जितं देहं तेनान्यच्च नियच्छति ।
अक्षरादिशरीरस्तु नाऽत्मान्तर्यामितां भजेत् ।।'

इति । एवं प्राप्ते

ಮೇಲೆ ಹೇಳಿದ ವಿಷಯವನ್ನೆಲ್ಲಾ ಸಂಗ್ರಹಿಸಿ ಭಾಮತಿಯಲ್ಲಿ ಹೀಗೆ ಹೇಳಲಾಗಿದೆ -

'स्वकर्मोपार्जितं देहं तेनान्यच्च नियच्छति ।
अक्षरादिशरीरस्तु नाऽत्मान्तर्यामितां भजेत् ।।'

ಬಡಿಗೆಗಾರನು ತನ್ನ ಕರ್ಮದಿಂದ ಸಂಪಾದಿಸಲ್ಪಟ್ಟ ದೇಹವನ್ನು ನಿಯಂತ್ರಣ ಮಾಡುತ್ತಾನೆ. ಅಂತಹ ದೇಹದ ಮುಖಾಂತರ ಕಟ್ಟಿಗೆ ಒಡೆಯಲು ಸಾಧನವಾದ ಉಳಿ ಮೊದಲಾದವುಗಳನ್ನು ನಿಯಂತ್ರಣ

ಮಾಡುತ್ತಾನೆ. ಆದ್ದರಿಂದ ಜೀವನೇ ಅಂತರ್ಯಾಮಿಯಾಗುತ್ತಾನೆ. ಆದರೆ ಬ್ರಹ್ಮನಿಗೆ ಶರೀರೇಂದ್ರಿಯಾದಿಗಳೇ ಇಲ್ಲದ ಕಾರಣ ಅಂತರ್ಯಾಮಿಯಾಗಲು ಸಾಧ್ಯವಿಲ್ಲವೆಂದು. ಇಷ್ಟು ಪೂರ್ವಪಕ್ಷ.

ಪ್ರಕಾಶಃ – सर्वस्य विकारजातस्य तदविद्याशक्तिपरिणामत्त्वात्तस्य च चैत्रकर्तृनिर्मितस्य चैत्रशरीरादित्ववद् ब्रह्मणः शरीरेन्द्रियादिस्थानत्वाद् यथायं पृथिव्यादिकार्यकारणैस्तानेव पृथिव्यादिदेवान् शक्नोति नियन्तुमिति अधिदैवादिषु उक्तोऽन्तर्यामी ब्रह्मैव,

ಜೀವನೇ ಅಂತರ್ಯಾಮಿಯಾಗಿದ್ದಾನೆಂಬ ಪೂರ್ವಪಕ್ಷವು ಅಯುಕ್ತವಾಗಿದೆ. ಏಕೆಂದರೆ ವಿಕಾರವನ್ನು ತಾಳಿದ ಸಮಸ್ತ ಜಗತ್ತು ಬ್ರಹ್ಮನ ಅವಿದ್ಯಾಶಕ್ತಿಯ ಪರಿಣಾಮವಾಗಿದೆ. ಆಂದರೆ ಅವಿದ್ಯಾಕಲ್ಪಿತವಾಗಿದೆ. ಯಾವರೀತಿಯಾಗಿ ಚೈತ್ರನ ಕರ್ಮದಿಂದ ನಿರ್ಮಿತವಾದ ಶರೀರವನ್ನು ಚೈತ್ರನು ನಿಯಮನ ಮಾಡುತ್ತಾನೋ ಅದರಂತೆ ಬ್ರಹ್ಮನಿಗೆ ಅವಿದ್ಯಾಕಲ್ಪಿತವಾದ ಈ ಸಮಸ್ತ ಜಗತ್ತು ಅವನ ಶರೀರ ಹಾಗೂ ಇಂದ್ರಿಯಗಳ ಸ್ಥಾನದಲ್ಲಿದೆ. ಹೀಗೆ ಶರೀರವೇ ಆಗಿರುವ ಜಗತ್ತನ್ನು ಬ್ರಹ್ಮನು ನಿಯಮನ ಮಾಡಬಹುದು. ಮತ್ತು ಪೃಥಿವೀ ಮೊದಲಾದ ಕಾರ್ಯಕಾರಣಗಳಿಂದ ಆಲ್ಲೇ ಇರುವ ಪೃಥಿವ್ಯಾದ್ಯಭಿಮಾನಿ ದೇವತೆಗಳನ್ನು ನಿಯಂತ್ರಣ ಮಾಡಲು ಸಮರ್ಥನಾಗುತ್ತಾನೆ. ಆದ್ದರಿಂದ ಅಧಿದೈವಾದಿಪ್ರಕರಣದಲ್ಲಿ ಅಂತರ್ಯಾಮಿಯೆಂದು ಪ್ರತಿಪಾದಿಸಲ್ಪಟ್ಟಿರುವವನು ಬ್ರಹ್ಮನೇ ಆಗಿದ್ದಾನೆ.

ಪ್ರಕಾಶಃ – आत्मत्वामृतत्वादिधर्माणां व्यपदेशात् ।

ವಿಷಯವಾಕ್ಯದಲ್ಲಿರುವ ಆತ್ಮತ್ವ, ಅಮೃತತ್ವ ಮೊದಲಾದ ಧರ್ಮಗಳು ಬ್ರಹ್ಮನು ಅಂತರ್ಯಾಮಿಯಾಗಿದ್ದಾನೆಂಬ ಪಕ್ಷದಲ್ಲಷ್ಟೇ ಉಪಪನ್ನವಾಗುತ್ತವೆ.

ಪ್ರಕಾಶಃ – न चानवस्था, ''नान्योऽतोऽस्ति द्रष्टा'' इत्यादिश्रुत्या नियन्तृब्रह्मणो नियम्यजीवाद् भेदानभ्युपगमात् ।

ಬ್ರಹ್ಮನನ್ನು ಅಂತರ್ಯಾಮಿಯೆಂದು ಹೇಳಿದರೆ ನಿಯಾಮಕನಾದ ಜೀವನಿಗೆ ಮತ್ತೊಬ್ಬ ನಿಯಾಮಕನನ್ನು ಒಪ್ಪಿದಂತಾಯಿತು. ಆವಾಗ ಅಂತಹ ನಿಯಾಮಕನಾದ ಬ್ರಹ್ಮನಿಗೂ ಮತ್ತೊಬ್ಬ ಬ್ರಹ್ಮನನ್ನು ಒಪ್ಪಬೇಕಾಗುತ್ತದ್ದರಿಂದ ಅನವಸ್ಥಾದೋಷ ಬರುತ್ತದಲ್ಲವೇ? ಎಂದು ಪ್ರಶ್ನಿಸಬಾರದು. ''ನಾನ್ಯೋಽತೋಽಸ್ತಿ ದ್ರಷ್ಟಾ'' ಎಂಬ ಶ್ರುತಿಯು ನಿಯಂತೃವಾಗಿರುವ ಬ್ರಹ್ಮನಿಗೆ ನಿಯಮ್ಯನಾದ ಜೀವನಿಂದ ಅಭೇದವನ್ನು ಹೇಳುತ್ತಿದೆ. ಆದ್ದರಿಂದ ಜೀವಬ್ರಹ್ಮರಿಗೆ ಭೇದವಿದ್ದಲ್ಲಿ ಅನವಸ್ಥಾದೋಷವನ್ನು ಆಕ್ಷೇಪಿಸಬಹುದಿತ್ತು. ಆದರೆ ಅಭೇದವಿರುವುದರಿಂದ ನಿಯಾಮಕನಿಗೆ ಮತ್ತೊಬ್ಬ ನಿಯಾಮಕನನ್ನು ಒಪ್ಪಿದಂತಾಗುವುದಿಲ್ಲ.

ಪ್ರಕಾಶಃ – अविद्याकल्पितजीवपरमात्मभेदाश्रयास्तु ज्ञातृज्ञेयभेदश्रुतय इति सिद्धान्त इत्यर्थः ।

ಹಾಗಾದರೆ ಅಧಿದೈವಾದಿಪ್ರಕರಣದಲ್ಲಿ ಜ್ಞಾತೃಜ್ಞೇಯಭಾವವನ್ನು ಹೇಳುವಂತಹ ಆಧಾರಾಧೇಯಭಾವವನ್ನು ಹೇಳುವಂತಹ ಶ್ರುತಿಗಳನ್ನು ಹೇಗೆ ಕೂಡಿಸುವುದು ಎಂದು ಶಂಕಿಸಬಾರದು. ಅವಿದ್ಯಾಕಲ್ಪಿತವಾದ ಜೀವಪರಮಾತ್ಮರ ಭೇದವನ್ನು ಒಪ್ಪಿರುವುದರಿಂದ ಆ ಶ್ರುತಿಗಳು ತದ್ವಿಷಯಕವಾಗಿ ಉಪಪನ್ನವಾಗುತ್ತವೆ. ಅಂದರೆ ವ್ಯವಹಾರಿಕ ಭೇದವನ್ನು ವಿವಕ್ಷಿಸಿ ಜ್ಞಾತೃಜ್ಞೇಯಭಾವಸಂಬಂಧಾದಿಗಳನ್ನೆಲ್ಲಾ ಹೊಂದಿಸಬೇಕೆಂದರ್ಥ. ಇಷ್ಟು ಭಾಮತಿಯಲ್ಲಿರುವ ಸಿದ್ಧಾಂತ.

ಪ್ರಕಾಶಃ – ದೇಹೇನ್ದ್ರಿಯಾದೀತಿ । ಕಿಮಿದಮಶರೀರತ್ವಂ, ಯತೋ ನಿಯನ್ತೃತ್ವಾಭಾವ ಉಚ್ಯತೇ । ನಿಯಮ್ಯಾತಿರಿಕ್ತದೇಹರಾಹಿತ್ಯಂ ವಾ, ದೇಹಸಮ್ಬನ್ಧಾಭಾವೋ ವಾ ।

'ದೇಹೇಂದ್ರಿಯಾದಿ' ಎಂಬ ಶ್ಲೋಕಕ್ಕೆ ಹೀಗರ್ಥ - ಬ್ರಹ್ಮನಲ್ಲಿ ಅಶರೀರತ್ವವನ್ನು ಹೇಳಲಾಗಿದೆ. ಆದ್ದರಿಂದಲೇ ಅವನು ನಿಯಮ್ಯನಾಗಲಾರನೆಂದು ಪೂರ್ವಪಕ್ಷದಲ್ಲಿ ಹೇಳಲಾಯಿತು. ಇದರ ಅಭಿಪ್ರಾಯವೇನು? ನಿಯಮ್ಯವಾದ ಪದಾರ್ಥಕ್ಕಿಂತ ಅತಿರಿಕ್ತವಾದ ದೇಹವು ಬ್ರಹ್ಮನಿಗಿರುವುದಿಲ್ಲವೆಂದು ಅರ್ಥವೋ? ಅಥವಾ ಯಾವುದೇ ದೇಹದ ಸಂಬಂಧವು ಬ್ರಹ್ಮನಿಗೆ ಇರುವುದಿಲ್ಲವೆಂದರ್ಥವೋ?

ಪ್ರಕಾಶಃ – ನಾಽಃ । ಅಸ್ಯ ಜೀವಸ್ಯ ಸ್ವದೇಹಾದಿನಿಯಮನೇ ಕಾರ್ಯೇ ನ ದೇಹಾನ್ತರಮಸ್ತೀತಿ ವ್ಯಭಿಚಾರ ಇತ್ಯರ್ಥಃ ।

ಮೊದಲನೆಯ ಪಕ್ಷ ಅಯುಕ್ತವಾಗಿದೆ. ಏಕೆಂದರೆ ಜೀವನೂ ಸಹ ತನ್ನ ದೇಹವನ್ನು ನಿಯಮನ ಮಾಡುವಾಗ ಮತ್ತೊಂದು ದೇಹಾಂತರವನ್ನು ಹೊಂದಿರುವುದಿಲ್ಲ. ಅಂದರೆ ನಿಯಮ್ಯವಾದ ಪದಾರ್ಥಕ್ಕಿಂತ ಅತಿರಿಕ್ತವಾದ ದೇಹವು ಜೀವನಲ್ಲಿ ಇರುವುದಿಲ್ಲ. ಆದರೆ ಶರೀರತ್ವವು ಇದೆ. ಹೀಗೆ ಹೇತುವಿದ್ದು ಸಾಧ್ಯವಿಲ್ಲದ ಕಾರಣ ವ್ಯಭಿಚಾರ ದೋಷವು ಬರುತ್ತದೆ.

ಪ್ರಕಾಶಃ – ದ್ವಿತೀಯಂ ಶಙ್ಕತೇ – ತತ್ಕರ್ಮೇತಿ । ಜೀವೇ ಸ್ವಕರ್ಮಾರ್ಜಿತದೇಹಸಮ್ಬನ್ಧೋऽಸ್ತೀತಿ ಚೇತ್, ಪರಸ್ಯಾಪಿ ದೇಹಸಮ್ಬನ್ಧೋऽಸಿದ್ಧ ಇತ್ಯಾಹ – ತದವಿದ್ಯೇತಿ । ತದ್ವಿಷಯತ್ವಾದವಿದ್ಯಾಯಾಃ ತದವಿದ್ಯಾತ್ವಮ್ ।

ಎರಡನೆಯ ಪಕ್ಷವನ್ನು 'ತತ್ಕರ್ಮ' ಎಂಬ ವಾಕ್ಯದಿಂದ ಆಶಂಕಿಸುತ್ತಿದ್ದಾರೆ. ಜೀವನಲ್ಲಿ ಸ್ವಕರ್ಮದಿಂದ ಸಂಪಾದಿಸಲ್ಪಟ್ಟ ದೇಹಸಂಬಂಧವು ಇರುತ್ತದೆಂದು ಹೇಳುತ್ತೀರಿ. ಹಾಗಾದರೆ ಬ್ರಹ್ಮನಿಗೂ ಸಹ ಅಂತಹ ಅವಿದ್ಯಾವಿಷಯಕವಾದ ದೇಹಸಂಬಂಧವನ್ನು ಒಪ್ಪಬಹುದು. ದೇಹಸಂಬಂಧಾಭಾವವೆಂಬ ಹೇತು ಅಸಿದ್ಧವಾಗಿದೆಯೆಂದು 'ತದವಿದ್ಯಾ' ಎಂಬ ವಾಕ್ಯದಿಂದ ಪ್ರತಿಪಾದಿಸುತ್ತಿದ್ದಾರೆ. 'ತದವಿದ್ಯಾ' ಎಂಬ ಮಾತಿಗೆ 'ತದವಿದ್ಯಾ' ಎಂದರೆ ಅವಿದ್ಯೆಯು ಬ್ರಹ್ಮವಿಷಯಕವಾಗಿದೆ ಎಂದು ಅಭಿಪ್ರಾಯ.

ಪ್ರಕಾಶಃ – ಪೂರ್ವಪಕ್ಷಭಾಗಸ್ಯ ಪ್ರಾಗೇವ ಅಸ್ಮದೀಯಪೂರ್ವಪಕ್ಷೇಷು ದೂಷಿತತ್ವಾತ್, ಅತಿಪ್ರಸಙ್ಗಾಪಾದನೇನ ಸಿದ್ಧಾನ್ತಾಂಶಂ ನಿರಾಹ – ತನ್ನೇತಿ ।

ಪೂರ್ವಪಕ್ಷಭಾಗವನ್ನು ಹಿಂದೆ ನಮ್ಮ ಸಿದ್ಧಾಂತದ ಪೂರ್ವಪಕ್ಷದಲ್ಲಿ ದೂಷಣೆ ಮಾಡಿದ್ದರಿಂದ ಪ್ರಕೃತ ಅತಿಪ್ರಸಂಗವನ್ನು ಆಪಾದನೆ ಮಾಡುವ ಮೂಲಕ ಸಿದ್ಧಾಂತಾಂಶವನ್ನು ನಿರಾಕರಿಸುತ್ತಿದ್ದಾರೆ 'ತನ್ನ' ಇತ್ಯಾದಿ ವಾಕ್ಯದಿಂದ.

ಪ್ರಕಾಶಃ – ರೂಪ್ಯದೇಹಾದೇರಿತಿ । ಯಥಾಕ್ರಮಮನ್ವಯಃ । ನನ್ವಗತ್ಯಾ ಸ್ರಷ್ಟೃತ್ವಾಙ್ಗೀಕಾರೇऽಪಿ ನ ನಿಯಮನಂ ತಥಾ ವಾಚ್ಯಮಿತ್ಯತ ಆಹ – ನಚೇತಿ ।

'ರೂಪ್ಯದೇಹಾದೇಃ' ಎಂಬಲ್ಲಿ ರೂಪ್ಯ ಪದವನ್ನು ಹಾಗೂ ದೇಹ ಪದವನ್ನು ಯಥಾಕ್ರಮದಲ್ಲಿ ಅನ್ವಯ ಮಾಡಬೇಕು.

ಸ್ರಷ್ಟೃತ್ವವನ್ನು ಬ್ರಹ್ಮನಲ್ಲಿ ಒಪ್ಪುವುದು ಅನಿವಾರ್ಯ. ಆದ್ದರಿಂದ ದೇಹವಿಲ್ಲದಿದ್ದರೂ ಪ್ರಳಯಕಾಲದಲ್ಲಿ ಜಗತ್ತನ್ನು ಸೃಷ್ಟಿ ಮಾಡಬಹುದು. ಆದರೆ ನಿಯಮನವನ್ನು ಶರೀರವಿಲ್ಲದೆ ಒಪ್ಪುವ ಅವಶ್ಯಕತೆಯಿರುವುದಿಲ್ಲ. ಈ ಆಕ್ಷೇಪಕ್ಕೆ 'ನಚ' ಎಂಬ ವಾಕ್ಯದಿಂದ ಉತ್ತರಿಸುತ್ತಿದ್ದಾರೆ.

ಪ್ರಕಾಶಃ – ಅಸ್ತು ವಾ ತದಜ್ಞಾನಕಲ್ಪಿತಂ ತಚ್ಛರೀರಮಿತಿ, ತಥಾऽಪಿ ಕಿಂ ಶುದ್ಧಸ್ಯೇದಂ ಶರೀರಮುತ ವಿಶಿಷ್ಟಸ್ಯೇತಿ ವಿಕಲ್ಪ್ಯ ಕ್ರಮೇಣ ನಿರಾಹ – ಕಿಞ್ಚೇತಿ ।

ಬ್ರಹ್ಮನ ಅಜ್ಞಾನದಿಂದ ಕಲ್ಪಿತವಾದದ್ದು ಬ್ರಹ್ಮನ ಶರೀರವಾಗಿದೆಯೆಂಬುದನ್ನು ಒಪ್ಪೋಣ. ಆದರೆ ಆ ಶರೀರವನ್ನು ಶುದ್ಧಬ್ರಹ್ಮನಿಗೆ ಒಪ್ಪುತ್ತೀರೋ ? ಅಥವಾ ವಿಶಿಷ್ಟಬ್ರಹ್ಮನಿಗೆ ಒಪ್ಪುತ್ತೀರೋ? ಎಂದು ವಿಕಲ್ಪಿಸಿ ಕ್ರಮವಾಗಿ 'ಕಿಂಚ' ಎಂಬ ವಾಕ್ಯದಿಂದ ನಿರಾಕರಿಸುತ್ತಿದ್ದಾರೆ.

ಪ್ರಕಾಶಃ – ಶುದ್ಧಸ್ಯ ನಿಯನ್ತೃತ್ವಮೇವ ನಾಸ್ತಿ, ನಿರ್ವಿಕಾರತ್ವಾತ್ತಸ್ಯ ಶರೀರಾದ್ಯುಪಪಾದನಕ್ಲೇಶೋ ವ್ಯರ್ಥಃ ।

ಅಭಿಪ್ರಾಯ ಹೀಗಿದೆ - ಶುದ್ಧಬ್ರಹ್ಮನಲ್ಲಿ ನಿಯಂತೃತ್ವವೆಂಬ ಧರ್ಮವೇ ಬರುವುದಿಲ್ಲ. ಏಕೆಂದರೆ ಅವನಲ್ಲಿ ಯಾವುದೇ ವಿಕಾರಗಳಾಗಲೀ ಅಥವಾ ಧರ್ಮಗಳಾಗಲೀ ಬರುವುದಿಲ್ಲವೆಂಬುದು ಅದ್ವೈತ ಸಿದ್ಧಾಂತ. ಅಂತಹ ಶುದ್ಧನಲ್ಲಿ ಶರೀರಾದಿಗಳನ್ನು ಉಪಪಾದಿಸುವಿಕೆಯೆಂಬ ಕ್ಲೇಶವು ವ್ಯರ್ಥವಾಗಿದೆ.

ಪ್ರಕಾಶಃ – ವಿಶಿಷ್ಟಂ ತು ನಿಯಾಮಕಂ ಭವತಿ, ತಸ್ಯಾವಿಷಯತ್ವಾಭಾವಾನ್ನ ತದೀಯತ್ವಮವಿದ್ಯಾಯಾ ಇತಿ ನ ತದವಿದ್ಯಾರ್ಜಿತಂ ಜಗಾದಿತಿ ನ ತಚ್ಛರೀರತ್ವಮ್ ।

ಇನ್ನು ವಿಶಿಷ್ಟಬ್ರಹ್ಮನನ್ನು ನಿಯಾಮಕನೆಂದು ಹೇಳಬೇಕು. ಆದರೆ ಶುದ್ಧಬ್ರಹ್ಮನನ್ನು ಬಿಟ್ಟು ಉಳಿದೆಲ್ಲಾ ಪದಾರ್ಥಗಳು ಅವಿದ್ಯಾಕಲ್ಪಿತವೆಂದು ಅದ್ವೈತಿಗಳು ಒಪ್ಪಿರುವುದರಿಂದ ವಿಶಿಷ್ಟಬ್ರಹ್ಮನೂ ಸಹ ಅವಿದ್ಯಾಕಲ್ಪಿತನೇ ಆಗುತ್ತಾನೆ. ಯಾವ ಪದಾರ್ಥವು ಅಜ್ಞಾನಕಲ್ಪಿತವಾಗಿದೆಯೋ ಅದು ಅಜ್ಞಾನಕ್ಕೆ ವಿಷಯವಾಗಲು ಸಾಧ್ಯವಿಲ್ಲ. ಆದ್ದರಿಂದ ವಿಶಿಷ್ಟವಿಷಯಕವಾದ ಅಜ್ಞಾನವೇ ಅಸಂಭಾವಿತವಾಗಿದೆ. ಹೀಗಿರುವಾಗ ಅಂತಹ ವಿಶಿಷ್ಟಬ್ರಹ್ಮನ ಅಜ್ಞಾನಕ್ಕೆ ವಿಷಯವಾಗಿರುವುದರಿಂದ ಜಗತ್ತನ್ನು ಅವನ ಶರೀರವೆಂದು ಹೇಳಲು ಸಾಧ್ಯವಿಲ್ಲ.

ಪ್ರಕಾಶಃ – ಉಕ್ತಞ್ಚ –

'ಆಶ್ರಯತ್ವವಿಷಯತ್ವಭಾಗಿನೀ ನಿರ್ವಿಶೇಷಚಿತಿರೇವ ಕೇವಲಾ ।
ಪೂರ್ವಸಿದ್ಧತಮಸೋ ಹಿ ಪಶ್ಚಿಮೋ ನಾಶ್ರಯೋ ಭವತಿ ನಾಪಿ ಗೋಚರಃ ।।'

ಇತಿ ।

ಅಜ್ಞಾನವು ಶುದ್ಧಬ್ರಹ್ಮನಲ್ಲಿ ಬರುತ್ತದೆ ಹೊರತು; ವಿಶಿಷ್ಟಬ್ರಹ್ಮನಲ್ಲಿ ಬರುವುದಿಲ್ಲವೆನ್ನಲು ಅದ್ವೈತಿಗಳೇ ಹೇಳುವ ಪ್ರಸಿದ್ಧವಾದ ಒಂದು ಶ್ಲೋಕ ಹೀಗಿದೆ -

ಆಶ್ರಯತ್ವವಿಷಯತ್ವಭಾಗಿನೀ ನಿರ್ವಿಶೇಷಚಿತಿರೇವ ಕೇವಲಾ।
ಪೂರ್ವಸಿದ್ಧತಮಸೋ ಹಿ ಪಶ್ಚಿಮೋ ನಾಶ್ರಯೋ ಭವತಿ ನಾಪಿ ಗೋಚರಃ॥

ಅಜ್ಞಾನಕ್ಕೆ ಆಶ್ರಯವಾದ ಹಾಗೂ ವಿಷಯವಾದ ವಸ್ತು ನಿರ್ವಿಶೇಷಬ್ರಹ್ಮನೇ ಆಗಬೇಕು. ಏಕೆಂದರೆ ಮೊದಲು ಸಿದ್ಧವಾಗಿರುವ ತಮಸ್ಸಿಗೆ (ಅಜ್ಞಾನಕ್ಕೆ) ಅನಂತರ ಹುಟ್ಟುವ ವಿಶಿಷ್ಟಬ್ರಹ್ಮಾದಿಗಳು ಆಶ್ರಯರಾಗಲೀ, ವಿಷಯರಾಗಲೀ ಆಗುವುದಿಲ್ಲ ಎಂದು.

ಪ್ರಕಾಶಃ – ಅನವಸ್ಥಾಶಙ್ಕಾಪರಿಹಾರೌ ಚ ಭಾಷ್ಯೋಕ್ತಾವನ್ವಾ ನಿರಾಹ – ಯಚ್ಚೇತಿ ।

ಅದ್ವೈತಿಗಳು ನಿಯಾಮಕನಾದ ಜೀವನಿಗೆ ಬ್ರಹ್ಮನು ನಿಯಾಮಕನಾಗಿದ್ದಾನೆಂದು ಹೇಳಿದರೆ ಅನವಸ್ಥಾದೋಷವು ಬರುತ್ತದೆಂದು ಆಪಾದಿಸಿದ್ದರು. ಈ ಅನವಸ್ಥಾದೋಷವನ್ನು ಮತ್ತು ಅದರ ಪರಿಹಾರವನ್ನು ಶಂಕರಭಾಷ್ಯದಲ್ಲಿಯೇ ಹೇಳಿರುತ್ತಾರೆ. ಅದನ್ನೇ ಅನುವಾದ ಮಾಡಿ 'ಯಚ್ಚ' ಇತ್ಯಾದಿ ವಾಕ್ಯಗಳಿಂದ ನಿರಾಕರಿಸುತ್ತಿದ್ದಾರೆ.

ಪ್ರಕಾಶಃ – ಪ್ರತಿಬನ್ದೀಮಾಪಾದಯನ್ ಅನವಸ್ಥಾಪರಿಹಾರಂ ಪ್ರಕಾರಾನ್ತರೇಣ ತೇನೈವ ವಾಚಯತಿ – ತರ್ಹೀತಿ । 'ಉಕ್ತನ್ಯಾಯೇನ' ''ಸರ್ವತ್ರ'' ಇತ್ಯಧಿಕರಣಸೂತ್ರೇಣೋಕ್ತನ್ಯಾಯೇನೇತ್ಯರ್ಥಃ ।

ಪ್ರತಿಬಂದಿಯನ್ನು ಆಪಾದಿಸುತ್ತಾ ಅನವಸ್ಥಾಪರಿಹಾರವನ್ನು ಮತ್ತೊಂದು ಬಗೆಯಲ್ಲಿ ಅದ್ವೈತಿಗಳ ಮುಖಾಂತರವೇ ಮಾಡಿಸುತ್ತಿದ್ದಾರೆ - 'ತರ್ಹಿ' ಇತ್ಯಾದಿ ವಾಕ್ಯದಿಂದ. 'ಉಕ್ತನ್ಯಾಯೇನ' ಎಂದರೆ 'ಸರ್ವತ್ರ ಪ್ರಸಿದ್ಧೋಪದೇಶಾತ್' ಎಂಬ ಸೂತ್ರದಲ್ಲಿ ಹೇಳಲ್ಪಟ್ಟ ನ್ಯಾಯದಿಂದ ಎಂದರ್ಥ.

ಪ್ರಕಾಶಃ – ಕಿಞ್ಚೇತಿ । ಕಿಯನ್ತಂ ದೂರಂ ಗತ್ವಾ ಅಭೇದಾಶ್ರಯಣೇನ ಕಿಮಿತ್ಯರ್ಥಃ ।

'ಕಿಂಚ' ಎಂಬುದರ ತಾತ್ಪರ್ಯ ಹೀಗೆ - ಸ್ವಲ್ಪ ದೂರ ಹೋಗಿ ಅಭೇದವನ್ನು ಒಪ್ಪುವುದಕ್ಕಿಂತ ಮೊದಲೇ ಅಭೇದವನ್ನು ಒಪ್ಪುವುದು ಸೂಕ್ತವಾದ ಮಾರ್ಗ. ಅಂದರೆ ಶರೀರ ಇಂದ್ರಿಯಗಳಿಗೆ ಜೀವನಿಂದ ಭೇದವನ್ನು ಒಪ್ಪಿ ಅಂತಹ ಜೀವನಿಗೆ ಬ್ರಹ್ಮನಿಂದ ಅಭೇದವನ್ನು ಒಪ್ಪುತ್ತೀರಿ. ಅದಕ್ಕಿಂತ ಜೀವನಿಗೂ ಶರೀರ ಇಂದ್ರಿಯಾದಿಗಳಿಗೂ ಅಭೇದವನ್ನು ಒಪ್ಪುವುದು ಅತ್ಯಂತ ಸೂಕ್ತವೆಂದರ್ಥ.

ಆಂತರ್ಯಾಮ್ಯಧಿಕರಣ (೧-೨-೫)

ಪ್ರಕಾಶಃ – ನನು ದೇಹಭೇದೇ ತಸ್ಯ ನಾಶೇ ಅಸ್ಯಾಪಿ ನಾಶೇನ ಸ್ವರ್ಗಾದ್ಯುದ್ದೇಶೇನ ಧರ್ಮಾಧರ್ಮಾದಿವಿಧಾಯಕಪ್ರಮಾಣವಿರೋಧೋऽನುಭವವಿರೋಧಶ್ಚೇತ್ಯತ ಆಹ – ಪ್ರಮಾಣವಿರೋಧಶ್ಚೇತಿ ।

ಜೀವಬ್ರಹ್ಮರಿಗೆ ಐಕ್ಯ ಹೇಳುವುದು ತಪ್ಪಲ್ಲ. ದೇಹೇಂದ್ರಿಯಾದಿಗಳಿಗೂ ಜೀವನಿಗೂ ಐಕ್ಯವನ್ನು ಹೇಳಬಾರದು. ಹಾಗೇನಾದರೂ ಜೀವನಿಗೆ ದೇಹೇಂದ್ರಿಯಾದಿಗಳಿಂದ ಐಕ್ಯವನ್ನು ಒಪ್ಪಿದರೆ ದೇಹನಾಶವಾದರೆ ಜೀವನೂ ಸಹ ನಾಶವಾಗುತ್ತಾನೆ. ಆವಾಗ ಸ್ವರ್ಗಾದಿಗಳ ಉದ್ದೇಶದಿಂದ ನಡೆಸುವ ಧರ್ಮಾಧರ್ಮವಿಧಾಯಕವಾದ ಪ್ರಮಾಣಗಳ ವಿರೋಧಬರುತ್ತದೆ. ದೇಹದ ಜೊತೆಗೆ ಜೀವನೂ ಸಹ ನಾಶವಾಗುವುದರಿಂದ ಸ್ವರ್ಗಾದಿಫಲಗಳು ಜೀವನಿಗೆ ದೊರೆಯುವುದಿಲ್ಲ. ಮತ್ತು 'ಮಮದೇಹಃ' ಎಂಬುದಾಗಿ ಶರೀರಾದಿಗಳಿಗಿಂತಲೂ ಜೀವನು ಭಿನ್ನನಾಗಿದ್ದಾನೆಂಬ ಅನುಭವವೇ ನಮ್ಮೆಲ್ಲರಿಗೂ ಇರುತ್ತದೆ. ಈ ಅನುಭವವಿರೋಧವೂ ಸಹ ಬರುತ್ತದಲ್ಲವೇ? ಎಂಬ ಪ್ರಶ್ನೆಗೆ 'ಪ್ರಮಾಣವಿರೋಧ' ಎಂಬ ವಾಕ್ಯದಿಂದ ಉತ್ತರಿಸುತ್ತಿದ್ದಾರೆ.

ಪ್ರಕಾಶಃ – ಅನವಸ್ಥಾನಿರಾಸಾಯ ನಿಯನ್ತುರ್ನಿಯಮ್ಯಾಭೇದೇ ಅಙ್ಗೀಕ್ರಿಯಮಾಣೇ ಕಾರ್ಯಸ್ಯಾಪ್ಯಭಿನ್ನಕಾರಣಜನ್ಯತ್ವಂ ಸ್ಯಾತ್ ಅನ್ಯಥೋಕ್ತದೋಷಾದಿತಿ ಜಡಾಭೇದೋऽಪ್ಯುಪೇಯಃ ಸ್ಯಾದಿತ್ಯಾಹ – ಕಿಞ್ಚೈವಂ ಸತೀತಿ ।

ಅನವಸ್ಥಾದೋಷವನ್ನು ಪರಿಹರಿಸುವುದಕ್ಕಾಗಿ ನಿಯಾಮಕನಿಗೆ ನಿಯಮ್ಯನಿಂದ ಅಭೇದವನ್ನು ಒಪ್ಪುತ್ತಿದ್ದೀರಿ. ಹಾಗಾದರೆ ಸಕಲ ಕಾರ್ಯಗಳಿಗೆ ಕಾರಣದಿಂದ ಐಕ್ಯವನ್ನು ಒಪ್ಪಬೇಕಾದೀತು. ಇಲ್ಲದಿದ್ದರೆ ಆ ಕಾರಣಕ್ಕೂ ಮತ್ತೊಂದು ಕಾರಣದ ಅವಶ್ಯಕತೆಯಿರುವುದರಿಂದ ಅನವಸ್ಥಾದೋಷವು ಬರುತ್ತದೆ. ಇಂತಹ ಅನವಸ್ಥಾದೋಷವನ್ನು ಜಡಪದಾರ್ಥಗಳಿಗೆ ಅಭೇದವನ್ನು ಒಪ್ಪುವ ಮೂಲಕವಾಗಿಯೂ ಪರಿಹರಿಸಬಹುದೆಂದು 'ಕಿಂಚೈವಂ ಸತಿ' ಎಂಬ ವಾಕ್ಯದಿಂದ ಪ್ರತಿಪಾದಿಸುತ್ತಿದ್ದಾರೆ.

ಪ್ರಕಾಶಃ – ನನು ''ಯಃ ಪೃಥಿವ್ಯಾಂ ತಿಷ್ಠನ್'' ಇತ್ಯಾದಿಭೇದೋಕ್ತಿರ್ವಿರುಧ್ಯತ ಇತ್ಯತ ಆಹ – ಪ್ರಮಾಣೇತಿ ।

ಪೃಥಿವೀಗೂ ಬ್ರಹ್ಮನಿಗೆ ಅಭೇದ ಹೇಳಿದರೆ 'ಯಃ ಪೃಥಿವ್ಯಾಂ ತಿಷ್ಠನ್' ಇತ್ಯಾದಿಯಾದ ಭೇದವಿಧಾಯಕವಾದ ಪ್ರಮಾಣಗಳಿಂದ ವಿರೋಧ ಬರುತ್ತದಲ್ಲವೇ? ಎಂಬ ಪ್ರಶ್ನೆಗೆ 'ಪ್ರಮಾಣವಿರೋಧಸ್ತು' ಎಂಬ ವಾಕ್ಯದಿಂದ ಉತ್ತರಿಸುತ್ತಿದ್ದಾರೆ.

ಪ್ರಕಾಶಃ – ಉಪಲಕ್ಷಣಮಿದಮ್, ಪೃಥಿವ್ಯಾದೇಃ ಸ್ವವ್ಯತಿರಿಕ್ತಜ್ಞಾನಪ್ರಕಾಶ್ಯತ್ವೇ ಜ್ಞಾನಸ್ಯಾಪಿ ಸ್ವವ್ಯತಿರಿಕ್ತಜ್ಞಾನಾಪೇಕ್ಷತ್ವೇನಾನವಸ್ಥಾಪ್ರಸಙ್ಗಾತ್, ತನ್ನಿರಾಸಾಯ ಜ್ಞಾನಜಡಯೋರಭೇದಃ ಸ್ಯಾತ್ । ಜ್ಞಾನಸ್ಯ ಸ್ವಪ್ರಕಾಶತ್ವೇ ನಿಯನ್ತುಃ ಸ್ವಾತನ್ತ್ರ್ಯಮಸ್ತು ।

ಉಪಲಕ್ಷಣದಿಂದ ಇನ್ನು ಕೆಲವು ದೋಷಗಳನ್ನು ಇಲ್ಲಿ ತಿಳಿದುಕೊಳ್ಳಬೇಕು. ಪೃಥಿವ್ಯಾದಿಗಳೆಲ್ಲವೂ ತನಗಿಂತ ಭಿನ್ನವಾದ ಜ್ಞಾನದಿಂದ ಪ್ರಕಾಶಿತವಾಗುತ್ತಿವೆ. ಆ ಜ್ಞಾನವೂ ಸಹ ಮತ್ತೊಂದು ಜ್ಞಾನದಿಂದ ಪ್ರಕಾಶವಾಗಬೇಕು. ಆ ಜ್ಞಾನಕ್ಕೂ ಮತ್ತೊಂದು ಜ್ಞಾನದ ಅಪೇಕ್ಷೆಯಿರುವುದರಿಂದ ಅನವಸ್ಥಾದೋಷವು ಬರುತ್ತದೆ. ಇದನ್ನು ಪರಿಹರಿಸುವುದಕ್ಕಾಗಿ ಅದ್ವೈತಿಗಳು ಜ್ಞಾನಕ್ಕೂ ಪೃಥಿವ್ಯಾದಿ ಜಡಪದಾರ್ಥಗಳಿಗೂ ಅಭೇದವನ್ನು ಒಪ್ಪಬೇಕಾದೀತು.

ಜ್ಞಾನಕ್ಕೆ ಮತ್ತೊಂದು ಜ್ಞಾನದ ಅಪೇಕ್ಷೆಯಿರುವುದಿಲ್ಲ. ಏಕೆಂದರೆ ಸ್ವಪ್ರಕಾಶ್ಯವಾಗಿದೆಯೆಂದು ಅದ್ವೈತಿಗಳು ಉತ್ತರಿಸಿದರೆ ನಮಗೂ ಇದು ಸಮಾನ. ಅಂದರೆ ನಿಯಾಮಕನಾದ ಭಗವಂತನಲ್ಲಿ ಸ್ವಾತಂತ್ರ್ಯವನ್ನು ಒಪ್ಪಿದರೆ ಸಾಕು. ಅನವಸ್ಥಾದಿದೋಷಗಳು ಪರಿಹಾರವಾಗುತ್ತದೆ.

ಪ್ರಕಾಶಃ – ಏವಂ ಪೃಥಿವ್ಯಾದೇಸ್ತವ್ಯತಿರಿಕ್ತೇನ ಧಾರಣೇ ತತ್ರಾಪಿ ತಥೇತ್ಯನವಸ್ಥೇತ್ಯಪಿ ಧ್ಯೇಯಮ್ ।

ಇದರಂತೆ ಪೃಥಿವ್ಯಾದಿಗಳನ್ನು ಭಿನ್ನನಾದ ವ್ಯಕ್ತಿಯು ಧರಿಸಿದ್ದಾನೆಂದು ಹೇಳಬೇಕು. ಆ ವ್ಯಕ್ತಿಯನ್ನೂ ಸಹ ಮತ್ತೊಬ್ಬ ಭಿನ್ನನಾದ ವ್ಯಕ್ತಿಯೇ ಧರಿಸಬೇಕು. ಹೀಗೆ ಅನವಸ್ಥಾದೋಷ ಬರುತ್ತದೆ. ಇದನ್ನು ಪರಿಹರಿಸುವುದಕ್ಕಾಗಿ ಪೃಥಿವ್ಯಾದಿ ಪದಾರ್ಥಗಳಿಗೂ ಧಾರಕನಾದ ಭಗವಂತನಿಗೂ ಅಭೇದವನ್ನು ಒಪ್ಪಬೇಕಾಗುವ ಪ್ರಸಂಗ ಬರುತ್ತದೆ.

ಗುರುರಾಜೀಯಮ್ – ತದುಕ್ತಂ ಭಾಮತ್ಯಾಮಿತಿ ।। ಕಿಮತ್ರಾಶರೀರತ್ವಂ ಯತೋ ನಿಯನ್ತೃತ್ವಾಭಾವಃ । ಕಿಂ ನಿಯಮ್ಯಾತಿರಿಕ್ತದೇಹರಹಿತತ್ವಂ ವಾ ದೇಹಸಮ್ಬನ್ಧಾಭಾವೋ ವಾ ದೇಹಭೋಕ್ತೃತ್ವಾಭಾವೋ ವಾ । ನಾದ್ಯ ಇತ್ಯಾಹ – ದೇಹೇತಿ ।। ದೇಹಾದೌ ತತ್ತದಾತ್ಮಾ ತತ್ಸಾಕ್ಷಾದ್ಬುದ್ಧಿಸ್ಥೋऽಸ್ಯೇತ್ಯುಕ್ತಃ । ಅಥವಾ ತಸ್ಮಾಜ್ಜೀವಾತ್ಮೈವೇತ್ಯುಪಸಂಹಾರಸ್ಥೋ ಜೀವಾತ್ಮಾ ಪರಾಮೃಷ್ಟಃ । ಅಸ್ಯ ಸ್ವದೇಹಾದಿನಿಯಮನೇನ ದೇಹಾದ್ಯನ್ತರಮ್ ಅತೋऽನೇಕಾನ್ತಿಕತೇತ್ಯರ್ಥಃ । ದ್ವಿತೀಯಂ ಶಙ್ಕತೇ – ತದಿತಿ ।। ಪರಸ್ಯಾಪಿ ದೇಹಸಮ್ಬನ್ಧೋऽಸಿದ್ಧ ಇತ್ಯಾಹ – ತದವಿದ್ಯೇತಿ ।। ತದ್ವಿಷಯತ್ವಾದವಿದ್ಯಾಯಾಸ್ತದವಿದ್ಯಾತ್ವಮ್ । ತೃತೀಯೇ ತು ಸೋಪಾಧಿಕತೈವ । ಮುಕ್ತಸ್ಯಾಪಿ ಪರಾಭೇದೇನ ಪಕ್ಷತ್ವಾನ್ನ ಸಾಧ್ಯಾವ್ಯಾಪ್ತಿಃ । ಶರೀರಜೀವಯೋರಿತಿ ।। ಶರೀರಜೀವಯೋರ್ಭೇದೇ ಶರೀರಸ್ಯ ಭಿನ್ನನಿಯನ್ತೃನಿಯಮ್ಯತ್ವಾಪತ್ತ್ಯಾ ಅನವಸ್ಥಾಪಾತಾದಿತಿ ಭಾವಃ ।

ಸಾರ

ಅದ್ವೈತಿಗಳ ಅಧಿಕರಣ ಶರೀರ ಹೀಗಿದೆ -

ಬೃಹದಾರಣ್ಯಕೋಪನಿಷತ್ತಿನಲ್ಲಿರುವ 'ಯಃ ಪೃಥಿವ್ಯಾಂ ತಿಷ್ಠನ್' ಎಂಬ ವಾಕ್ಯವನ್ನೇ ಅದ್ವೈತಿಗಳೂ ಸಹ ವಿಷಯವಾಕ್ಯವೆಂದು ಹೇಳುತ್ತಾರೆ. ಈ ವಾಕ್ಯದಲ್ಲಿ ಲೋಕ, ವೇದ, ಯಜ್ಞ, ಪ್ರಾಣಿ ಮತ್ತು ಆತ್ಮ ಇವುಗಳ ಒಳಗಡೆ ನಿಯಾಮಕನಾಗಿ ನೆಲೆಸಿರುವ ವ್ಯಕ್ತಿಯನ್ನು ಪ್ರಸ್ತಾಪ ಮಾಡಲಾಗಿದೆ. ಈ ವ್ಯಕ್ತಿಯು ಅದೃಷ್ಟದ ಮೂಲಕ ಜೀವನಾಗಬಹುದು. ಅಥವಾ ಯೋಗಿಪುರುಷನೂ ಆಗಬಹುದು. ಅಥವಾ ದೇವತೆಗಳಾಗಬಹುದು. ಆದರೆ ಶರೀರವಿಲ್ಲದ ಬ್ರಹ್ಮನು ಅಂತರ್ಯಾಮಿಯಾಗಲು ಸಾಧ್ಯವಿಲ್ಲ. ನಿಯಾಮಕನೂ ಸಹ ಆಗಲಾರನು. ಇಷ್ಟು ಪೂರ್ವಪಕ್ಷ.

ಸರ್ವನಿಯಾಮಕತ್ವವು ಬ್ರಹ್ಮನ ಧರ್ಮವಾಗಿದೆ. ಅವನಿಂದ ನಿಯಮ್ಯವಾದ ಪ್ರಪಂಚವೇ ಶರೀರವಾಗಿದೆ. ಅಥವಾ ತನ್ನಲ್ಲಿರುವ ಮಾಯಾಶಕ್ತಿಯಿಂದ ಶರೀರದ ಆಪೇಕ್ಷೆ ಇಲ್ಲದೆಯೂ ಪ್ರಪಂಚವನ್ನು ನಿಯಮನ ಮಾಡುವ ಸಾಮರ್ಥ್ಯ ಅವನಿಗಿದೆ. ಆತ್ಮನಿಗೆ ಒಬ್ಬ ನಿಯಾಮಕನಿರುವುದಾದರೆ ಅವನಿಗೆ ಮತ್ತೊಬ್ಬ ನಿಯಾಮಕನು ಇರಬೇಕಾಗುತ್ತದೆಂದು ಅನವಸ್ಥಾದೋಷಕ್ಕೆ ಅವಕಾಶವಿಲ್ಲ. ನಿಯಮ್ಯನಾದ ಜೀವಾತ್ಮನು ಮತ್ತು ನಿಯಾಮಕನಾದ ಪರಮಾತ್ಮನು ಒಬ್ಬನೇ ಆಗಿದ್ದಾನೆ. ಇವರಿಬ್ಬರಿಗೆ ತಾತ್ವಿಕವಾದ ಭೇದವಿರುವುದಿಲ್ಲ. ಮತ್ತು ಈ ಪ್ರಕರಣದಲ್ಲಿ 'ಏಷ ತ ಆತ್ಮಾ' ಎಂಬ ಶ್ರುತಿಯಲ್ಲಿ ಆತತ್ವ, ಅಮೃತತ್ವ ಮೊದಲಾದ ಧರ್ಮಗಳನ್ನು ಅದೃಶ್ಯತ್ವಾದಿಧರ್ಮಗಳನ್ನು ಹೇಳಲಾಗಿದೆ. ಇವೆಲ್ಲವೂ ಬ್ರಹ್ಮನ ಅಸಾಧಾರಣಧರ್ಮವಾದ್ದರಿಂದ ಬ್ರಹ್ಮನೇ ಅಂತರ್ಯಾಮಿಯಾಗಿದ್ದಾನೆಂದು ಸಿದ್ಧಾಂತ.

ಈ ಅಧಿಕರಣ ಶರೀರವು ತಪ್ಪು. ಅಜ್ಞಾನವೇ ಕಲ್ಪಿತವಾದದ್ದು. ಅಜ್ಞಾನ ಕಲ್ಪಿತವಾದ ಜಗತ್ತು ಬ್ರಹ್ಮನ ಶರೀರವಾದರೆ ಶುಕ್ತಿಯ ಅಜ್ಞಾನದಿಂದ ಕಲ್ಪಿತವಾದ ರಜತವೂ ಸಹ ಶುಕ್ತಿಯ ಶರೀರವಾಗಬೇಕಾಗುತ್ತದೆ. ಮತ್ತು ನಮ್ಮಂತೆ ಬ್ರಹ್ಮನೂ ಸಹ ಸಂಸಾರಿಯಾಗಬೇಕಾಗುತ್ತದೆ. ಜಗತ್ತನ್ನು ಸೃಷ್ಟಿ ಮಾಡುವ ಮೊದಲು ಶರೀರ ರಹಿತನಾಗಿ ಇದ್ದಂತೆ ಜಗತ್ತನ್ನು ಸೃಷ್ಟಿಸಿದ ಮೇಲೂ ಶರೀರರಹಿತನಾಗಿಯೇ ಇರಬಹುದಲ್ಲವೇ?

ರೋಗಗ್ರಸ್ತನಾದ ವ್ಯಕ್ತಿಗೆ ರೋಗವನ್ನು ಪರಿಹರಿಸಲು ಕಾಲ್ಪನಿಕವಾದ ಔಷಧಿಯನ್ನು ನೀಡುವುದರಿಂದ ಅವನ ರೋಗವು ಪರಿಹಾರವಾಗುವುದಿಲ್ಲ. ಅದರಂತೆ ಶರೀರ ಇಲ್ಲದ ವ್ಯಕ್ತಿಗೆ ನಿಯಮನ ಮಾಡಲು ಸಾಧ್ಯವಿಲ್ಲವೆಂದು ಹೇಳಿದಾಗ ಗೌಣವಾದ ಶರೀರವನ್ನು ಒಪ್ಪುವುದರಿಂದೇನೂ ಪ್ರಯೋಜನವಿಲ್ಲ. ಶುದ್ಧಬ್ರಹ್ಮನನ್ನು ನಿಯಾಮಕನೆಂದು ಹೇಳಲು ಸಾಧ್ಯವಿಲ್ಲ. ವಿಶಿಷ್ಟಬ್ರಹ್ಮನನ್ನು ಅವಿದ್ಯಾವಿಷಯನೆಂದು ಹೇಳಲು ಸಾಧ್ಯವಿಲ್ಲ. ಒಟ್ಟಾರೆ ಅದ್ವೈತಸಿದ್ಧಾಂತದಲ್ಲಿ ಸಿಲುಕಿಕೊಂಡಿರುವ ಇಬ್ಬರು ಬ್ರಹ್ಮರಿಗೂ ಏನೂ ಕೆಲಸವಿಲ್ಲ.

ಮತ್ತು ಅದ್ವೈತಿಗಳು ಪೂರ್ವಪಕ್ಷವನ್ನು ನಿರಾಕರಿಸುವುದಕ್ಕಾಗಿ ನಿಯಮ್ಯನಾದ ಜೀವನಿಗೂ ನಿಯಾಮಕನಾದ ಬ್ರಹ್ಮನಿಗೂ ಅಭೇದವನ್ನು ಒಪ್ಪುವದರ ಮೂಲಕ ಅನವಸ್ಥಾ ದೋಷವನ್ನು ಪರಿಹರಿಸಿದ್ದಾರೆ. ಆದರೆ ಜೀವಾವಿಗಳಿಂದ ಅಭೇದವಿದ್ದ ಮೇಲೆ ಅವರನ್ನು ಬ್ರಹ್ಮನು ಹೇಗೆ ತಾನೇ ನಿಯಮನ ಮಾಡುತ್ತಾನೆ.

ಶ್ರುತಿ, ಸೂತ್ರಗಳಲ್ಲೆಲ್ಲಾ ಭೇದವೇ ಹೇಳಲ್ಪಟ್ಟರುವಾಗ ಅಭೇದದ ಮಾರ್ಗಕ್ಕೆ ಏಕೆ ಶರಣಾಗುತ್ತಾರೆ. ಇನ್ನು ಕಾಲ್ಪನಿಕ ಭೇದವನ್ನು ಒಪ್ಪುವ ಮೂಲಕ ಕಣ್ಣೊರೆಸುವಂತಹ ಪ್ರಯತ್ನವು ವ್ಯರ್ಥ. ಯಾವರೀತಿಯಾಗಿ ಜೀವಬ್ರಹ್ಮರಿಗೆ ಕಾಲ್ಪನಿಕ ಭೇದವನ್ನು ಒಪ್ಪುತ್ತಾರೋ ಅದರಂತೆ ಈಶ್ವರನನ್ನು ನಿಯಮನ ಮಾಡುವಂತಹ ಕಾಲ್ಪನಿಕ ಭೇದವುಳ್ಳ ಮತ್ತೊಬ್ಬ ವ್ಯಕ್ತಿಯೂ ಇರಬಹುದೆಂದು ಆಪಾದಿಸುತ್ತೇವೆ. ಆದ್ದರಿಂದ ಅದ್ವೈತಿಗಳು ಭಗವಂತನಲ್ಲಿ ಸ್ವಾತಂತ್ರ್ಯವೆಂಬ ಗುಣವನ್ನು ಒಪ್ಪಲೇ ತಮಗೆ ಅಂಟಿಕೊಂಡ ದೋಷಗಳನ್ನೆಲ್ಲಾ ಜಾಡಿಸಿಕೊಳ್ಳಬೇಕು. ಬೇರೆ ಉಪಾಯವಿಲ್ಲ. ಅನವಸ್ಥಾ ಪರಿಹಾರಕ್ಕಾಗಿ ಜೀವಬ್ರಹ್ಮರಿಗೆ ಅಭೇದವನ್ನು ಒಪ್ಪುವುದಕ್ಕಿಂತ ಜಡವಾದ ಶರೀರೇಂದ್ರಿಯಾದಿಗಳಿಗೂ ಜೀವನಿಗೂ ಅಭೇದವನ್ನು ಒಪ್ಪಿದ್ದರೆ ಸ್ವಲ್ಪವಾದರೂ ಬುದ್ಧಿವಂತಿಕೆಯನ್ನು ತೋರಿಸಿಕೊಂಡಂತಾಗುತ್ತಿತ್ತು. ಜಡಪದಾರ್ಥಗಳೊಟ್ಟಿಗೆ ಅಭೇದವು ಪ್ರಮಾಣ ವಿರುದ್ಧವೆಂದು ಹೇಳುವುದಾದರೆ; 'ಭೇದೇನೈನಮಧೀಯತೇ' ಇತ್ಯಾದಿ ಸೂತ್ರಗಳಲ್ಲಿ ಜೀವಬ್ರಹ್ಮರ ಭೇದವನ್ನೂ ಸಹ ನಿರಾಕರಿಸಲಾಗಿದೆ. ಈ ಎಲ್ಲಾ ಕಾರಣಗಳಿಂದ ಜಗತ್ತು ಬ್ರಹ್ಮನ ಅವಿದ್ಯಾಕಲ್ಪಿತವಾದ್ದರಿಂದ ಅವನ ಶರೀರವಾಗಿದೆಯೆಂಬ ಸಿದ್ಧಾಂತವು ಅತ್ಯಂತ ಅಯುಕ್ತವಾಗಿದೆ.

• • • • •

ಅದ್ವೈತಮತದಲ್ಲಿ ನಿಯಾಮಕ ಬ್ರಹ್ಮನೇ ಇಲ್ಲ

ತಾತ್ಪರ್ಯಚಂದ್ರಿಕಾ

ಯಚ್ಚೋಕ್ತಮ್ – ಏಕಸ್ಮಿನ್ ಶರೀರೇ ಪ್ರತ್ಯಗ್ಭಯಂ ನೇತಿ,

ಅನುವಾದ - ಜೀವನಿಂದ ಬ್ರಹ್ಮನು ಅಭಿನ್ನನಾಗಿದ್ದಾನೆಂದು ಅದ್ವೈತಿಗಳು ಹೇಳುವ ಕಾರಣ ಹೀಗಿದೆ - ಒಂದೇ ಶರೀರದಲ್ಲಿ ಎರಡು ಪ್ರತ್ಯಕ್‌ಚೈತನ್ಯಗಳು ಇರಲು ಸಾಧ್ಯವಿಲ್ಲ. ಆದ್ದರಿಂದ ಜೀವನಿಂದ ಬ್ರಹ್ಮನಿಗೆ ಐಕ್ಯ ಹೇಳಿದಾಗ ಒಬ್ಬನೇ ಪ್ರತ್ಯಕ್‌ಚೈತನ್ಯನನ್ನು ಒಪ್ಪಿದಂತಾಗುತ್ತದೆ ಎಂದು.

ತನ್ನ, ಮಾಂ ಪ್ರತಿ ದೃಷ್ಟಾನ್ತಾಭಾವಾತ್ ।

ಇದು ತಪ್ಪು. ಭೇದವಾದಿಗಳಾದ ನಮ್ಮನ್ನು ಕುರಿತು ನಿನಗೆ ಹೀಗೆ ಸಮರ್ಥಿಸಲು ದೃಷ್ಟಾಂತವೇ ಇರುವುದಿಲ್ಲ. ನಾವು ಒಂದೇ ಶರೀರದಲ್ಲಿ ಜೀವ ಹಾಗೂ ಬ್ರಹ್ಮರನ್ನು ಒಪ್ಪುತ್ತೇವೆ. ಇಂತಹ ನಮ್ಮನ್ನು ಕುರಿತು ಒಂದೇ ದೇಹದಲ್ಲಿ ಎರಡು ಪ್ರತ್ಯಕ್‌ಚೈತನ್ಯಗಳಿರುವಿರುವುದಿಲ್ಲವೆಂಬ ಪ್ರಮೇಯವನ್ನು ಸಾಧಿಸಲಾಗದು.

ಗ್ರಹಾವಾವಿಷ್ಟಶರೀರೇಽಹಮರ್ಥರೂಪಪ್ರತ್ಯಗ್ಭಯದರ್ಶನಾಚ ।

ಅಷ್ಟೇ ಅಲ್ಲದೆ, ಉಳಿದ ಶರೀರದಲ್ಲಿ ಎರಡು ಪ್ರತ್ಯಕ್‌ಚೈತನ್ಯಗಳಿರುವುದು ಅನುಭವಸಿದ್ಧವಾಗಿದೆ. ಯಾವ ಶರೀರದಲ್ಲಿ ಪಿಶಾಚಿಯು ಸೇರಿಕೊಂಡಿರುತ್ತದೋ ಆದು ಆ ಶರೀರದಲ್ಲಿ ನಿಂತು 'ಅಹಮ್' ಎಂದು ಹೇಳುತ್ತದೆ. ಮೊದಲೇ ಇರುವ ಜೀವನೂ ಸಹ 'ಅಹಮ್' ಎನ್ನುತ್ತಾನೆ. ಹೀಗೆ ಒಂದೇ ಶರೀರದಲ್ಲಿ ಅಹಮರ್ಥವೆಂಬ ಎರಡು ಪ್ರತ್ಯಕ್‌ಚೈತನ್ಯಗಳಿರುವುದು ಅನುಭವಸಿದ್ಧವಾಗಿವೆ.

''हन्तास्माच्छरीरादुत्क्रामाम तयस्मिन् उत्क्रान्ते'' ''हन्तेदं पुनश्शरीरं प्रविशाम तयस्मिन् नः प्रपन्ने'' इत्यादाविवैकस्मिन् शरीरे चक्षुरायभिमान्यनेकाहमर्थश्रवणाच्च ।

ಮತ್ತು ಐತರೇಯೋಪನಿಷತ್ತಿನಲ್ಲಿ ಸ್ಪಷ್ಟವಾಗಿ ''ಹಂತಾಸ್ಮಾಚ್ಛರೀರಾದುತ್ಕ್ರಾಮಾಮ ತದ್ಯಸ್ಮಿನ್ ಉತ್ಕ್ರಾಂತೇ'' ''ಹಂತೇದಂ ಪುನಶ್ಶರೀರಂ ಪ್ರವಿಶಾಮ ತದ್ಯಸ್ಮಿನ್ ನಃ ಪ್ರಪನ್ನೇ'' ಯಾರು ಈ ಶರೀರವನ್ನು ಬಿಟ್ಟುಹೋಗುವುದರಿಂದ ಶರೀರವು ಬೀಳುತ್ತದೋ ಯಾರ ಪ್ರವೇಶದಿಂದ ಶರೀರವು ಎದ್ದೇಳುತ್ತದೋ ಅವನೇ ಶ್ರೇಷ್ಠನು ಎಂಬುದಾಗಿ ಚಕ್ಷುರಾದ್ಯಭಿಮಾನಿದೇವತೆಗಳು ವಿವಾದ ಮಾಡಿದ್ದಾರೆ. ಈ ವಿವಾದದಿಂದ ಒಂದೇ ದೇಹದಲ್ಲಿ ಅನೇಕ ಚಕ್ಷುರಾದ್ಯಭಿಮಾನಿದೇವತೆಗಳ 'ಅಹಮ್' ಎಂಬ ಪ್ರಯೋಗವು ಕೇಳಿಸುತ್ತಿದೆ. ಅಂದರೆ ಒಂದೇ ಶರೀರದಲ್ಲಿ ಅನೇಕ ಅಭಿಮಾನಿದೇವತೆಗಳಿದ್ದಾರೆಂಬುದನ್ನು ಉಪನಿಷತ್ತಿನ ಆಧಾರದಿಂದ ಒಪ್ಪಿಕೊಳ್ಳಬೇಕು.

बाधकाभावाच्च । अन्तर्याम्युक्त्यनन्तरं ''नान्योऽतोऽस्ति द्रष्टा'' इति द्रष्टृन्तरनिषेधो बाधक इति त्वन्यत्र निरस्तम् ।

ಒಂದೇ ದೇಹದಲ್ಲಿ ಅನೇಕ ಅಹಮರ್ಥರನ್ನು ಒಪ್ಪಿದರೆ ಏನೂ ಬಾಧಕವಿರುವುದಿಲ್ಲ.

ಆಕ್ಷೇಪ - ಅಂತರ್ಯಾಮಿಯನ್ನು ಹೇಳಿದ ಮೇಲೆ ''ನಾನ್ಯೋಽತೋಽಸ್ತಿ ದ್ರಷ್ಟಾ'' 'ಬ್ರಹ್ಮನಿಗಿಂತ ಅನ್ಯನಾದ ಮತ್ತೊಬ್ಬ ದ್ರಷ್ಟ್ರಪುರುಷನು ದೇಹದಲ್ಲಿರುವುದಿಲ್ಲ' ಎಂದು ನಿಷೇಧಿಸುತ್ತಿದೆ. ಹೀಗೆ ಮತ್ತೊಬ್ಬ ದ್ರಷ್ಟ್ರಪುರುಷನಿಲ್ಲವೆಂಬ ನಿಷೇಧವೇ ಬಾಧಕವಾಗಿದೆಯಲ್ಲವೇ?

ಸಮಾಧಾನ - ಈ ಬಾಧಕವನ್ನು ನ್ಯಾಯಾಮೃತಾದಿ ಗ್ರಂಥಗಳಲ್ಲಿ ನಿರಾಕರಿಸಿದ್ದೇವೆ. ಮುಖ್ಯವಾದ ದ್ರಷ್ಟ್ರಯೆನಿಸಿದವನು ಪರಮಾತ್ಮನೇ; ಹೊರತು ಜೀವನಲ್ಲ. ಜೀವನು ಅಸ್ವತಂತ್ರ ದ್ರಷ್ಟ್ರಯೆನಿಸಿದ್ದಾನೆಂದು ಈ ಶ್ರುತಿಯ ಒಟ್ಟು ತಾತ್ಪರ್ಯ.

अत्र यदुक्तं विवरणे – ''यो विज्ञाने तिष्ठन्'' इत्यादौ ब्रह्मणो जीवावच्छेदेषु नियन्तृत्वेनावस्थानं श्रूयते ।

ಜೀವಬ್ರಹ್ಮೈಕ್ಯ ವಿಚಾರದಲ್ಲಿ ವಿವರಣ ಗ್ರಂಥ ಹೀಗೆ ಹೇಳಿದೆ - ''ಯೋ ವಿಜ್ಞಾನೇ ತಿಷ್ಠನ್'' ಇತ್ಯಾದಿ ಅಂತರ್ಯಾಮಿ ಪ್ರಕರಣದಲ್ಲಿ ಬ್ರಹ್ಮನು ಜೀವಾವಚ್ಛೇದಗಳಲ್ಲಿ ನಿಯಾಮಕನಾಗಿದ್ದಾನೆಂದು ಕೇಳಿಸುತ್ತಿದೆ.

तच्च यद्यप्यवच्छेदपक्षे न युक्तम्, घटावच्छिन्नाकाशप्रदेशे बाह्याकाशस्यादर्शनेन द्विगुणीकृत्य वृत्त्यनुपपत्तेः, जीवप्रदेशे ब्रह्मणोऽवस्थानायोगात् ।

ಇದು ವಸ್ತುತಃ ಅವಚ್ಛೇದಪಕ್ಷದಲ್ಲಿ ಯುಕ್ತವಾಗುವುದಿಲ್ಲ. ಏಕೆಂದರೆ ಘಟಾವಚ್ಛಿನ್ನವಾದ ಆಕಾಶವಿರುವ ಪ್ರದೇಶದಲ್ಲಿ ಬಾಹ್ಯಕಾಶವಿರುವುದು ಕಾಣಿಸುತ್ತಿಲ್ಲ. ಅಂದರೆ ಘಟದ ಒಳಗಡೆ ಘಟಾಕಾಶವಿದೆಯೆಂದು ಹೇಳುತ್ತಾರೆ ಹೊರತು. ಬಾಹ್ಯಾಕಾಶವಿದೆಯೆಂದು ಹೇಳುವುದಿಲ್ಲ. ಹೀಗೆ ಒಂದು ಪ್ರದೇಶದಲ್ಲಿ ಎರಡು ಪದಾರ್ಥಗಳಿರುವುದು ಸಾಧ್ಯವಿಲ್ಲದ ಕಾರಣ ಜೀವ ಇರುವ ಪ್ರದೇಶದಲ್ಲಿ ಎಲ್ಲೆಡೆ ವ್ಯಾಪ್ತನಾದ ಬ್ರಹ್ಮನು ಇರಲು ಸಾಧ್ಯವಿಲ್ಲ.

तथाऽपि प्रतिबिम्बपक्षे युक्तम्, जलगतस्वाभाविकाऽकाशे सत्येव प्रतिबिम्बाऽकाशदर्शनेन द्विगुणीकृत्य वृत्त्युपपत्तेरिति,

ಹೀಗೆ ಅವಚ್ಛೇದಪಕ್ಷದಲ್ಲಿ ಜೀವ ಹಾಗೂ ಬ್ರಹ್ಮರು ಒಂದೇ ದೇಹದಲ್ಲಿ ಒಟ್ಟಿಗೆ ಇರುವುದು ಅಸಂಭಾವಿತವಾಗಬಹುದು. ಆದರೆ ಪ್ರತಿಬಿಂಬಪಕ್ಷದಲ್ಲಿ ಒಂದೇ ದೇಹದಲ್ಲಿ ಇಬ್ಬರೂ ಸಹ ಇರಬಹುದು. ಉದಾ :- ಜಲದಲ್ಲಿ ಸ್ವಾಭಾವಿಕವಾದ ಆಕಾಶವಿದೆ. ಆದೇ ಸಂದರ್ಭದಲ್ಲಿ ಪ್ರತಿಬಿಂಬವಾದ ಆಕಾಶವೂ ಸಹ ಕಾಣಿಸುತ್ತದೆ. ಹೀಗೆ ಒಂದೇ ಜಲ ಎಂಬ ಪದಾರ್ಥದಲ್ಲಿ ಬಿಂಬಭೂತವಾದ · ಆಕಾಶ ಹಾಗೂ ಪ್ರತಿಬಿಂಬಭೂತವಾದ ಆಕಾಶವಿರುವುದು ಕಾಣಿಸುತ್ತಿದೆ. ಆದರಂತೆ ಒಂದೇ ದೇಹದಲ್ಲಿ ಬಿಂಬನಾದ ಬ್ರಹ್ಮನು ಹಾಗೂ ಪ್ರತಿಬಿಂಬನಾದ ಜೀವನು ಇರಬಹುದು.

तत्र ब्रूमः –

घटाकाशे यथा बाह्याकाशं नैवोपलभ्यते ।
तथैव प्रतिबिम्बेऽपि बिम्बाकाशं न दृश्यते ।।

ಈ ಹಿಂದಿನ ವಾದಕ್ಕೆ ಉತ್ತರ ಹೀಗೆ - ಘಟಾಕಾಶದಲ್ಲಿ ಬಾಹ್ಯಾಕಾಶವು ಹೇಗೆ ತೋರುತ್ತಿಲ್ಲವೋ? ಆದರಂತೆ ನೀರಿನಲ್ಲಿಯೂ ಪ್ರತಿಬಿಂಬಭೂತವಾದ ಆಕಾಶ ತೋರಿದರೂ ಬಿಂಬಭೂತವಾದ ಆಕಾಶವು ತೋರುವುದಿಲ್ಲ.

यथा घटस्यान्तः आकाशमात्रेऽवच्छिन्नाकाशे च सत्यपि बाह्याकाशं नास्ति,

ಆಕಾಶವು ಒಟ್ಟು ಮೂರು ಬಗೆಯಾಗಿದೆ - ೧. ಆಕಾಶ ಸಾಮಾನ್ಯ, ೨. ಅವಚ್ಛಿನ್ನ ಆಕಾಶ, ೩. ಬಾಹ್ಯಾಕಾಶ ಎಂದು. ಘಟದ ಒಳಗಡೆ ಆಕಾಶಸಾಮಾನ್ಯವಿದೆ. ಮತ್ತು ಘಟಾವಚ್ಛಿನ್ನಾಕಾಶವೂ ಇದೆ. ಆದರೆ ಬಾಹ್ಯಾಕಾಶವು ಇರಲು ಸಾಧ್ಯವಿಲ್ಲವೆಂದು ನೀವೇ ಒಪ್ಪುತ್ತೀರಿ.

तथा जलस्यान्तराकाशमात्रे प्रतिबिम्बाकाशे च सत्यपि बिम्बाकाशं नास्त्येव ।

ಆದರಂತೆ ಪ್ರತಿಬಿಂಬ ಪಕ್ಷದಲ್ಲಿಯೂ ಮೂರು ಬಗೆಯ ಆಕಾಶವಿದೆ. ೧. ಆಕಾಶ ಸಾಮಾನ್ಯ, ೨. ಪ್ರತಿಬಿಂಬ ಆಕಾಶ, ೩. ಬಿಂಬಾಕಾಶ ಎಂದು. ಜಲದಲ್ಲಿ ಆಕಾಶ ಸಾಮಾನ್ಯ ಮತ್ತು ಪ್ರತಿಬಿಂಬಭೂತವಾದ ಆಕಾಶವಿದೆಯೆಂದು ಹೇಳಲು ಏನೂ ತೊಂದರೆಯಿಲ್ಲ. ಆದರೆ ಬಿಂಬಭೂತವಾದ ಆಕಾಶವು ಕಾಣಿಸುತ್ತಿದೆಯೆಂಬುದು ಮಾತ್ರ ಬಹಳ ತಪ್ಪಾಗುತ್ತದೆ.

ननु तथाऽपि जलस्यान्तरुक्तमाकाशद्वयं जलावच्छिन्नाकाशं चेति तत्त्रयमस्ति, घटस्यान्तस्तूक्ताकाशद्वयमेवेति वैषम्यमिति चेन्न,

ಆಕ್ಷೇಪ - ಘಟಕ್ಕೂ ಮತ್ತು ಜಲಕ್ಕೂ ವ್ಯತ್ಯಾಸವಿದೆ. ಜಲದಲ್ಲಿ ಆಕಾಶಸಾಮಾನ್ಯ ಹಾಗೂ ಪ್ರತಿಬಿಂಬಭೂತವಾದ ಆಕಾಶ ಎರಡೂ ಇರುವಂತೆ ಜಲಾವಚ್ಛಿನ್ನವಾದ ಆಕಾಶವೆಂಬ ಮೂರನೆಯ ಆಕಾಶವೊಂದಿದೆ. ಆದರೆ ಘಟದಲ್ಲಿ ಆಕಾಶಸಾಮಾನ್ಯ ಹಾಗೂ ಘಟಾವಚ್ಛಿನ್ನಆಕಾಶಗಳೆರಡೇ ಇರುತ್ತವೆ. ಬಿಂಬಪ್ರತಿಬಿಂಬಭಾವವಿಲ್ಲದ ಕಾರಣ ಪ್ರತಿಬಿಂಬಭೂತವಾದ ಆಕಾಶವಿದೆಯೆಂದು ಹೇಳಲಾಗದು. ಆದರಂತೆ ಶರೀರದಲ್ಲಿ ಚಿನ್ಮಾತ್ರನಿದ್ದಾನೆ. ದೇಹಾವಚ್ಛಿನ್ನವಾದ ಜೀವನಾದ ಆತ್ಮನಿದ್ದಾನೆ. ಮತ್ತು ಪ್ರತಿಬಿಂಬಭೂತನಾದ ನಿಯಾಮಕಬ್ರಹ್ಮನಿದ್ದಾನೆ. ಹೀಗೆ ಜಲದ ದೃಷ್ಟಾಂತದಿಂದ ಒಂದೇ ಶರೀರದಲ್ಲಿ ಜೀವನ ಅಸ್ತಿತ್ವ ಹಾಗೂ ನಿಯಾಮಕಬ್ರಹ್ಮನ ಅಸ್ತಿತ್ವವನ್ನು ಕೂಡಿಸಬಹುದಲ್ಲವೇ?

यस्याकाशादेर्जलेनावच्छेदः तत्र प्रतिबिम्बनं च तत्र त्रितयसद्भावेऽपि, यस्य प्रतिबिम्बनमात्रं दर्पणादौ मुखादेः, तत्र त्रितयाभावेन प्रतिबिम्बपक्षपातायोगात् ।

ಆಕಾಶಕ್ಕೆ ಜಲದಿಂದ ಅವಚ್ಛೇದಕವಿರುವುದರಿಂದ ಮೂರುಬಗೆಯ ಆಕಾಶಗಳನ್ನು ಜಲದಲ್ಲಿ ಹೇಳಬಹುದು. ಆದರೆ ಬಿಂಬಪ್ರತಿಬಿಂಬಭಾವ ಇರುವ ಸ್ಥಳದಲ್ಲೆಲ್ಲಾ ಹೀಗೆ ಮೂರುಬಗೆಯಲ್ಲಿ ಹೇಳಲು ಸಾಧ್ಯವಿಲ್ಲ. ಏಕೆಂದರೆ ದರ್ಪಣಾದಿಗಳಲ್ಲಿ ಮುಖದ ಪ್ರತಿಬಿಂಬವು ಕಾಣಿಸುತ್ತದೆ. ಇಂತಹ ದರ್ಪಣದಲ್ಲಿ ಅವಚ್ಛಿನ್ನವಾದ ಮುಖವನ್ನಾಗಲೀ ಕೇವಲ ಮುಖವನ್ನಾಗಲೀ ಹೇಳಲು ಸಾಧ್ಯವಿಲ್ಲ. ಕೇವಲ ಪ್ರತಿಬಿಂಬಭೂತವಾದ ಮುಖವಷ್ಟೇ ಇರುತ್ತದೆ. ಆದ್ದರಿಂದ ಪ್ರತಿಬಿಂಬಪಕ್ಷದಲ್ಲಿ ಒಂದೇ ದೇಹದಲ್ಲಿ ಎರಡು ಚೈತನ್ಯವನ್ನು ಉಪಪಾದಿಸಬಹುದೆಂಬ ನಿಮ್ಮಯುಕ್ತಿಯು ಅಸಾಧುವಾಗಿದೆ.

ननु तर्हि ब्रह्मणोऽवियाऽवच्छेदस्तत्र प्रतिबिम्बनं चेति द्वयमप्यस्त्विति चेत्,

ಆಕ್ಷೇಪ - ಹಾಗಾದರೆ ಆಕಾಶದೃಷ್ಟಾಂತದಂತೆ ಬ್ರಹ್ಮನನ್ನು ನಾವು ವಿವಕ್ಷಿಸುತ್ತೇವೆ ಹೊರತು, ದರ್ಪಣದ ದೃಷ್ಟಾಂತದಂತೆ ಬ್ರಹ್ಮನನ್ನು ವಿವಕ್ಷಿಸುವುದಿಲ್ಲ. ಬ್ರಹ್ಮನಿಗೆ ಅವಿದ್ಯೆಯೆಂಬ ಉಪಾಧಿಯಿಂದ ಅವಚ್ಛೇದವನ್ನು ಹೇಳಬಹುದು. ಯಾವರೀತಿಯಾಗಿ ಜಲದಲ್ಲಿ ಅವಚ್ಛಿನ್ನವಾದ ಆಕಾಶ, ಆಕಾಶಸಾಮಾನ್ಯ ಹಾಗೂ ಪ್ರತಿಬಿಂಬಭೂತವಾದ ಆಕಾಶವು ಇರುತ್ತವೋ ಆದರಂತೆ ಶರೀರದಲ್ಲಿ ಅವಚ್ಛಿನ್ನನಾದ ಬ್ರಹ್ಮನು, ಪ್ರತಿಬಿಂಬಭೂತನಾದ ಬ್ರಹ್ಮನು ಚಿನ್ಮಾತ್ರನು ಇರಬಹುದೆಂದು ಹೇಳಿದರೆ ಏನು ತಪ್ಪು?

न, यत्र द्वयं, तत्र यद्यपि जलान्तर्जलाच्छिन्नाकाशे सत्येव पुनराकाशमात्रं प्रतिबिम्बाकाशं चास्ति,

ಇದು ತಪ್ಪು. ವಸ್ತುತಃ ಜಲದಲ್ಲಿ ಜಲಾವಚ್ಛಿನ್ನವಾದ ಆಕಾಶವಿದ್ದರೆ ಮಾತ್ರವೇ ಆಕಾಶಸಾಮಾನ್ಯ ಹಾಗೂ ಪ್ರತಿಬಿಂಬಭೂತವಾದ ಆಕಾಶಗಳಿರುವುದು ಕಾಣಿಸುತ್ತದೆ.

तथाऽपि जलान्तर्बाह्याकाशस्य बिम्बाकाशस्य चाभावेन तत्स्थानीयस्य ब्रह्मणो जीवप्रदेशे नियन्तृत्वेनावस्थानायोगात् ।

ಆದರೂ ಸಹ ಜಲದಲ್ಲಿ ಬಾಹ್ಯಾಕಾಶವಾಗಲೀ, ಬಿಂಬಾಕಾಶವಾಗಲೀ ಇರುವುದಿಲ್ಲ. ಆದರಂತೆ ಬ್ರಹ್ಮನು ಜೀವನೆಂಬ ಶರೀರದಲ್ಲಿ ಚಿನ್ಮಾತ್ರರೂಪದಿಂದಾಗಲೀ, ಅವಚ್ಛಿನ್ನರೂಪದಿಂದಾಗಲೀ ಇರಬಹುದು. ಆದರೆ ನಿಯಾಮಕರೂಪದಿಂದ ಇರಲು ಸಾಧ್ಯವಿಲ್ಲ. ಹೇಗೆ ನೀರಿನಲ್ಲಿ ಬಾಹ್ಯಾಕಾಶವಾಗಲೀ, ಬಿಂಬಾಕಾಶವಾಗಲೀ ಇರುವುದಿಲ್ಲವೋ ಆದರಂತೆ ಬಿಂಬಭೂತನಾದ ಬ್ರಹ್ಮನಾಗಲೀ, ನಿಯಾಮಕ ಬ್ರಹ್ಮನಾಗಲೀ ಜೀವನಲ್ಲಿ ಇರುವುದಿಲ್ಲ.

आकाशकमात्रस्थानीयस्य चिन्मात्रस्य त्वन्मते अनियन्तृत्वात् ।

ಇನ್ನು ಕೇವಲ ಆಕಾಶಮಾತ್ರಸ್ಥಾನದಲ್ಲಿ ಇರುವ ಚಿನ್ಮಾತ್ರನನ್ನು ದೇಹದಲ್ಲಿದ್ದಾನೆಂದು ಹೇಳಬೇಕು. ಆದರೆ ಇವನು ನಿಯಾಮಕನಾಗಲು ಸಾಧ್ಯವಿಲ್ಲ.

तस्मादवच्छेदप्रतिबिम्बनयोर्विकल्पे समुच्चये वा ब्रह्मणोऽन्तर्यामित्वायोगः ।

ಆದ್ದರಿಂದ ಅವಚ್ಛೇದ ಹಾಗೂ ಪ್ರತಿಬಿಂಬಗಳನ್ನು ಪ್ರತ್ಯೇಕವಾಗಿ ವಿವಕ್ಷಿಸಿದಾಗ; ಅಥವಾ ಒಟ್ಟಿಗೇ ವಿವಕ್ಷಿಸಿದಾಗ ಎರಡೂ ಪಕ್ಷಗಳಲ್ಲಿಯೂ ಬ್ರಹ್ಮನಿಗೆ ಅಂತರ್ಯಾಮಿತ್ವವು ಯುಕ್ತವಾಗುವುದಿಲ್ಲ.

किञ्चावच्छेदोपाधौ घटादावच्छिन्नाकाशव्यतिरेकेणाकाशव्यक्त्यन्तरं प्रतिबिम्बनोपाधौ दर्पणादौ च प्रतिबिम्बव्यतिरेकेण मुख्यव्यक्त्यन्तरं नास्तीत्यन्यत्रोक्तम् ।

ಅಂತರ್ಯಾಮ್ಯಧಿಕರಣ (೧-೨-೫)

ಜಲವು ಅವಚ್ಛೇದಕ್ಕೂ ಉಪಾಧಿಯಾಗುತ್ತದೆ. ಪ್ರತಿಬಿಂಬಕ್ಕೂ ಉಪಾಧಿಯಾಗುತ್ತದೆ. ಆದ್ದರಿಂದ ಅವಚ್ಛಿನ್ನಆಕಾಶವಿದೆಯೆಂದೂ; ಪ್ರತಿಬಿಂಬಭೂತವಾದ ಆಕಾಶವಿದೆಯೆಂದೂ ಸಹ ಹೇಳಬಹುದು. ಇವೆರಡಕ್ಕಿಂತ ಅತಿರಿಕ್ತವಾಗಿ ಆಕಾಶಮಾತ್ರವನ್ನು ಜಲದಲ್ಲಿ ಹೇಳಲು ಸಾಧ್ಯವಿಲ್ಲ. ಆದರಂತೆ ಪ್ರಕೃತ ದೇಹದಲ್ಲಿ ಅವಿದ್ಯಾಪ್ರತಿಬಿಂಬಿತನನ್ನು ಹಾಗೂ ಅವಿದ್ಯಾವಚ್ಛಿನ್ನನನ್ನು ಹೇಳಬಹುದು. ಆದರೆ ಅವಿದ್ಯಾಪ್ರತಿಬಿಂಬಿತನಾದ ವ್ಯಕ್ತಿಯಾಗಲೀ ಅವಿದ್ಯಾವಚ್ಛಿನ್ನನಾದ ವ್ಯಕ್ತಿಯಾಗಲೀ ಜೀವನೇ ಆಗಿದ್ದಾನೆ. ಈ ಎರಡಕ್ಕಿಂತ ವಿಭಿನ್ನವಾಗಿ ನಿಯಾಮಕಬ್ರಹ್ಮವಾಗಲೀ ಶುದ್ಧಚಿನ್ಮಾತ್ರನಾಗಲೀ ದೇಹದಲ್ಲಿದ್ದಾನೆಂದು ಹೇಳಲು ಸಾಧ್ಯವಿಲ್ಲ. ದರ್ಪಣಾದಿಗಳಲ್ಲಿಯೂ ಪ್ರತಿಬಿಂಬಕ್ಕಿಂತ ಅತಿರಿಕ್ತವಾದ ಮುಖವೆಂಬ ವ್ಯಕ್ತಿಯನ್ನು ಹೇಳಲು ಸಾಧ್ಯವಿಲ್ಲವೆಂಬ ವಿಚಾರವು ನ್ಯಾಯಾಮೃತಾದಿ ಗ್ರಂಥಗಳಲ್ಲಿ ವಿವರಿಸಲ್ಪಟ್ಟಿದೆ.

ಪ್ರಕಾಶಃ –

ನನು ನಾನವಸ್ಥಾನಿರಾಸಾಯ ನಿಯನ್ತ್ರಭೇದಃ, ಅಪಿ ತು ಪ್ರತ್ಯಕ್ಚೈತನ್ಯದ್ವಯಾಯೋಗಾದ್ ಉಭಯೋರಭೇದ ಇತ್ಯೇತದನೂದ್ಯ ನಿರಾಹ – **ಯಚ್ಚೇತಿ ।**

ವಿವರಣೆ - ಅನವಸ್ಥಾದೋಷವನ್ನು ಪರಿಹರಿಸುವುದಕ್ಕಾಗಿ ನಿಯಾಮಕರಿಗೆ ಭೇದವನ್ನು ಒಪ್ಪಬೇಕಾಗಿಲ್ಲ. ಹೊರತಾಗಿ ಒಂದೇ ಶರೀರದಲ್ಲಿ ಎರಡು ಪ್ರತ್ಯಕ್‌ಚೈತನ್ಯಗಳು ಇರಲು ಸಾಧ್ಯವಿಲ್ಲದ ಕಾರಣ ಆ ಎರಡು ಪ್ರತ್ಯಕ್‌ಚೈತನ್ಯಗಳಿಗೆ ಅಭೇದವನ್ನೇ ಒಪ್ಪಬೇಕು. ಹೀಗೆ ಅದ್ವೈತಿಗಳು ಹೇಳುತ್ತಾರೆ. ಅವರ ಮತವನ್ನು ಅನುವಾದ ಮಾಡಿ ನಿರಾಕರಿಸುತ್ತಿದ್ದಾರೆ. 'ಯಚ್ಚ' ಇತ್ಯಾದಿ ವಾಕ್ಯಗಳಿಂದ.

ಪ್ರಕಾಶಃ – ಮಾಂ ಪ್ರತೀತಿ । ಜೀವೇಶಭೇದವಾದೇ ಪ್ರತಿಶರೀರಂ ತಯೋಃ ಸತ್ತ್ವಾದಿತಿ ಭಾವಃ । ಅನೇಕಾಹಮರ್ಥೇತಿ । ಬಹ್ವವಚನಪ್ರಯೋಗಾದಿತಿ ಭಾವಃ ।

ಗ್ರಂಥದಲ್ಲಿ 'ಮಾಂ ಪ್ರತಿ' ಎಂದಿದೆ. ಒಂದೇ ದೇಹದಲ್ಲಿ ಎರಡು ಪ್ರತ್ಯಕ್‌ಚೈತನ್ಯಗಳಿರುವುದಿಲ್ಲವೆಂಬ ವಿಚಾರವನ್ನು ದ್ವೈತಿಗಳಿಗೆ ಮನದಟ್ಟಾಗಿಸಲು ಅದ್ವೈತಿಗಳಿಂದ ಸಾಧ್ಯವಿಲ್ಲ. ಏಕೆಂದರೆ ಜೀವೇಶರಿಗೆ ಭೇದವನ್ನು ಒಪ್ಪುವ ನಾವು ಪ್ರತಿಯೊಂದು ಶರೀರದಲ್ಲಿಯೂ ಅವರಿಬ್ಬರ ಅಸ್ತಿತ್ವವನ್ನು ಹೇಳುತ್ತೇವೆ. ಇನ್ನು ಅಭಿಮಾನಿ ದೇವತೆಗಳನ್ನು ವಿವಕ್ಷಿಸಿದಾಗಲೂ ಅನೇಕ ಜೀವರನ್ನೇ ಒಂದು ದೇಹದಲ್ಲಿ ಒಪ್ಪುತ್ತೇವೆ. 'ಅನೇಕಾಹಮರ್ಥಶ್ರವಣಾಚ್ಚ' ಎಂದು ಗ್ರಂಥದಲ್ಲಿದೆ. ಅಂದರೆ ಐತರೇಯೋಪನಿಷತ್ತಿನಲ್ಲಿ 'ಪ್ರವಿಷಾಮಃ ನಃ' ಇತ್ಯಾದಿಯಾಗಿ ಅಸ್ಮದ್ ಶಬ್ದದ ಬಹುವಚನ ಪ್ರಯೋಗವಿರುವುದರಿಂದ ಅನೇಕ ಮಂದಿಯೇ ಒಂದು ಶರೀರದಲ್ಲಿದ್ದಾರೆಂದು ತಿಳಿಯುತ್ತದೆ.

ಪ್ರಕಾಶಃ – ನನು ತತ್ರ ಪ್ರತ್ಯಕ್ತ್ವಮೇವ ಸತ್ಯಂ, ಭೇದೋ ಮಿಥ್ಯೇತಿ ಚೇತ್, ಭೇದಸ್ತತ್ಯಃ ಪ್ರತ್ಯಕ್ತ್ವಂ ಮಿಥ್ಯೇತಿ ಕಿಂ ನ ಸ್ಯಾತ್ । ಪ್ರತ್ಯಕ್ತ್ವೇ ಬಾಧಕಂ ನೇತಿ ಚೇತ್, ತುಲ್ಯಂ ಭೇದೇऽಪೀತ್ಯಾಹ – **ಬಾಧಕೇತಿ ।**

ಐತರೇಯೋಪನಿಷತ್ತಿನಲ್ಲಿ ಅನೇಕ ಅಭಿಮಾನಿದೇವತೆಗಳು ಒಂದೇ ದೇಹದಲ್ಲಿ ಪ್ರವೇಶಮಾಡಿದ್ದಾರೆಂದು ಹೇಳಿದ್ದಾರೆ. ಇದನ್ನು ಒಪ್ಪಬಹುದು. ಆದರೆ ಆ ಎಲ್ಲಾ ಅಭಿಮಾನಿ ದೇವತೆಗಳಿಗೆ ಇರುವ ಭೇದವು ಮಿಥ್ಯಾಭೂತವಾಗಿವೆ.

ಸಮಾಧಾನ - ಇದು ತಪ್ಪು. ಎಲ್ಲಾ ಅಭಿಮಾನಿ ದೇವತೆಗಳಿಗಿರುವ ಭೇದವೇ ಸತ್ಯವಾಗಿವೆ. ಆದರೆ ದೇಹದ ಒಳಗಡೆ ಒಳಗಿದ್ದಾರೆಂಬುದು ಮಿಥ್ಯಾಭೂತವಾಗಿದೆಯೆಂದು ನಾವು ವಿಪರೀತವಾಗಿ ಹೇಳಿದರೆ ನಿಮ್ಮಲ್ಲಿ ಉತ್ತರವಿಲ್ಲ.

ಆಕ್ಷೇಪ - ಅಭಿಮಾನಿದೇವತೆಗಳಿಗೆ ಪ್ರತ್ಯಕ್ತ್ವವನ್ನು (ದೇಹದ ಒಳಗಿದ್ದಾರೆಂಬುದನ್ನು) ಒಪ್ಪಿದರೆ ಏನೂ ಬಾಧಕವಿಲ್ಲವಲ್ಲ ?

ಸಮಾಧಾನ - ಹಾಗಾದರೆ ಆ ಎಲ್ಲಾ ಅಭಿಮಾನಿ ದೇವತೆಗಳಿಗೆ ಇರುವ ಭೇದವನ್ನು ಸತ್ಯವೆಂದು ಹೇಳಿದರೂ ಸಹ ಏನೂ ಬಾಧಕವಿರುವುದಿಲ್ಲ. ಈ ವಿಚಾರವನ್ನು 'ಬಾಧಕಾಭಾವಾಚ್ಚ' ಎಂಬುದರಿಂದ ಗ್ರಂಥಕಾರರು ಪ್ರತಿಪಾದಿಸಿದ್ದಾರೆ.

ಪ್ರಕಾಶಃ – अतः शब्दपरामर्शं दर्शयितुम्, 'अन्तर्याम्युक्तवनन्तरम्' इत्युक्तम् । 'अन्यत्र' न्यायामृते द्वितीयपरिच्छेदे ''अहं ब्रह्मास्मि'' इत्यादि श्रुत्यर्थवर्णन-प्रस्तावे ।

''नान्योऽतोऽस्ति द्रष्टा'' ಎಂಬ ಶ್ರುತಿಯಲ್ಲಿರುವ ಅತಃ ಶಬ್ದದಿಂದ ಪರಾಮರ್ಶಿಸಲ್ಪಟ್ಟ ಅರ್ಥವನ್ನು ತೋರಿಸುವುದಕ್ಕಾಗಿ ಗ್ರಂಥಕಾರರು ಅಂತರ್ಯಾಮ್ಯುಕ್ತನಂತರಂ'' ಎಂದು ಹೇಳಿರುತ್ತಾರೆ. 'ಅನ್ಯತ್ರ' ಎಂದರೆ ನ್ಯಾಯಾಮೃತದ ದ್ವಿತೀಯಪರಿಚ್ಛೇದದಲ್ಲಿರುವ ''ಅಹಂ ಬ್ರಹ್ಮಾಸ್ಮಿ'' ಎಂಬ ಶ್ರುತ್ಯರ್ಥವನ್ನು ವರ್ಣನೆ ಮಾಡುವ ಸಂದರ್ಭದಲ್ಲಿ ಎಂದರ್ಥ.

ಪ್ರಕಾಶಃ – तत्र 'अतः' इत्यनेन प्रस्तुतसर्वनियन्तारं परामृश्य अन्यो द्रष्टा नास्तीत्युक्ते 'अस्मिन् ग्रामे अयमेव सर्वनियामको नान्यः पुरुषोऽस्ति' इत्यादावन्यशब्दस्य प्रस्तुतसदृशपरतया व्युत्पन्नत्वेन, इहापि सर्वनियामकद्रष्ट्रन्तर-निषेधात्, भेदनिषेधाभावादिति निरस्तमित्यर्थः ।

ನ್ಯಾಯಾಮೃತದಲ್ಲಿ ಪ್ರತಿಪಾದಿಸಲ್ಪಟ್ಟ ವಿಚಾರದ ಸಾರ ಹೀಗಿದೆ - ಶ್ರುತಿಯಲ್ಲಿರುವ 'ಅತಃ' ಎಂಬ ಪದದಿಂದ ಪ್ರಸ್ತುತನಾದ ಸರ್ವನಿಯಾಮಕನನ್ನು ಪರಾಮರ್ಶಮಾಡಿ 'ಅನ್ಯಃ ದ್ರಷ್ಟಾ ನ' ಮತ್ತೊಬ್ಬ ದ್ರಷ್ಟ್ರಪುರುಷನು ಇರುವುದಿಲ್ಲ ಎಂದು ಶ್ರುತಿಯು ಹೇಳುತ್ತಿದೆ. ''ಈ ಗ್ರಾಮದಲ್ಲಿ ಇವನೊಬ್ಬನೇ ಸರ್ವನಿಯಾಮಕನು; ಮತ್ತೊಬ್ಬನಿಲ್ಲ'' ಹೀಗೆ ಹೇಳಿದಾಗ ಅನ್ಯಶಬ್ದವು ಸದೃಶನಾದ ಅಂದರೆ ಸರ್ವನಿಯಾಮಕನಿಗೆ ಸರಿಸಾಟಿಯಾದ ಮತ್ತೊಬ್ಬ ಪುರುಷನನ್ನೇ ಹೇಳುತ್ತದೆ; ಹೊರತು, ಸಾಮಾನ್ಯ ಪ್ರಜೆ ಮೊದಲಾದವರನ್ನು ಹೇಳುವುದಿಲ್ಲ. ಆದರಂತೆ ಶ್ರುತಿಯಲ್ಲಿರುವ ಅನ್ಯಶಬ್ದವೂ ಸಹ ಮತ್ತೊಬ್ಬ

ನಿಯಾಮಕವುರುಷನನ್ನೇ ಅಲ್ಲಗಳೆಯುತ್ತಿದೆ. ಏಕೆಂದರೆ 'ಅತಃ' ಎಂಬ ಪದದಿಂದ ಸರ್ವನಿಯಾಮಕನಾದ ಅಂತರ್ಯಾಮಿಯೇ ಪ್ರಸಕ್ತನಾಗಿದ್ದಾನೆ. ಆದ್ದರಿಂದ ಅನ್ಯಶಬ್ದವು ಕೇವಲ ಜೀವ ಮೊದಲಾದವರನ್ನು ನಿಷೇಧಿಸುವುದಿಲ್ಲ. ಹಾಗಾಗಿ ''ನಾನ್ಯೋಽತೋಽಸ್ತಿ ದ್ರಷ್ಟಾ'' ಎಂಬ ಶ್ರುತಿಗೆ ಸರ್ವನಿಯಾಮಕನಾದ ಅಂತರ್ಯಾಮಿಯಾದ ಭಗವಂತನೇ ಮುಖ್ಯವಾದ ದ್ರಷ್ಟೃತ್ವವುಳ್ಳವನು; ಮುಖ್ಯವಾದ ದ್ರಷ್ಟೃತ್ವವುಳ್ಳ ಅಥವಾ ಸ್ವತಂತ್ರವಾದ ದ್ರಷ್ಟೃತ್ವವುಳ್ಳ ಮತ್ತೊಬ್ಬ ಪುರುಷನಿಲ್ಲವೆಂದು ಇದರ ಅರ್ಥ.

ಪ್ರಕಾಶಃ – ''ನೇಹ ನಾನಾ'' ಇತ್ಯಾದಿಕಮಪ್ಯನ್ಯತ್ರ ಪ್ರಥಮಪರಿಚ್ಛೇದೇ ನಿರಸ್ತಮಿತಿ ಭಾವಃ ।

''ನೇಹ ನಾನಾ'' ಇತ್ಯಾದಿ ಶ್ರುತಿಗಳು ಭಿನ್ನನಾದ ಮತ್ತೊಬ್ಬ ಪುರುಷನು ಇಲ್ಲವೆಂದು ನಿರಾಕರಿಸುತ್ತಿದೆ ಎಂಬ ಆಕ್ಷೇಪಕ್ಕೂ ಅವಕಾಶವಿಲ್ಲ. ಈ ಶ್ರುತಿಯು ಭೇದವನ್ನು ನಿರಾಕರಿಸುತ್ತಿಲ್ಲ; ಹೊರತಾಗಿ ಭಗವಂತನ ಅವಯವ, ಗುಣ, ಕ್ರಿಯಾ ಮೊದಲಾದವುಗಳಿಗೆ ಭೇದವಿಲ್ಲವೆಂದಷ್ಟೇ ಪ್ರತಿಪಾದಿಸುತ್ತಿದೆ ಎಂಬ ವಿಚಾರವನ್ನು ನ್ಯಾಯಾಮೃತದ ಪ್ರಥಮ ಪರಿಚ್ಛೇದದಲ್ಲಿ ವರ್ಣಿಸಲಾಗಿದೆಯೆಂದು ತಿಳಿಯಬೇಕು.

ಪ್ರಕಾಶಃ – ವಿವರಣೇ ಅವಚ್ಛೇದಪಕ್ಷೇ ಅನ್ತರ್ಯಾಮ್ಯವಸ್ಥಾನಂ ನ ಯುಕ್ತಮ್, ಪ್ರತಿಬಿಮ್ಬಪಕ್ಷ ಏವ ಯುಕ್ತಮಿತ್ಯುಕ್ತಮ್,

ವಸ್ತುತಃ ವಿವರಣ ಗ್ರಂಥದಲ್ಲಿ ಅವಚ್ಛೇದಪಕ್ಷದಲ್ಲಿ ಅಂತರ್ಯಾಮಿಯು ದೇಹದಲ್ಲಿದ್ದಾನೆಂದು ಹೇಳಲಾಗದು. ಆದರೆ ಪ್ರತಿಬಿಂಬಪಕ್ಷದಲ್ಲಿ ಹೇಳಬಹುದೆಂದು ನಿರೂಪಿಸಲಾಗಿದೆ.

ಪ್ರಕಾಶಃ – ತದಯುಕ್ತಮ್, ಪಕ್ಷದ್ವಯೇऽಪ್ಯಯೋಗಾದಿತಿ ದೂಷಯಿತುಮನುವದತಿ – ಅತ್ರೇತಿ । ಅವಚ್ಛೇದೇತಿ । ಅವಿದ್ಯಾವಚ್ಛಿನ್ನೋ ಜೀವಸ್ತತ್ರ ಪ್ರತಿಬಿಮ್ಬಿತೋ ವಾ ಜೀವ ಇತಿ ಮತದ್ವಯಮ್ । ಅತ್ರಾದ್ಯ ಇತ್ಯರ್ಥಃ । ಕುತ ಇತ್ಯತ ಆಹ – ಘಟೇತಿ ।

ವಿವರಣಕಾರನ ಈ ಅಭಿಪ್ರಾಯವು ಸರಿಯಲ್ಲ. ಅವಚ್ಛೇದಪಕ್ಷದಲ್ಲಾಗಲೀ, ಪ್ರತಿಬಿಂಬಪಕ್ಷದಲ್ಲಾಗಲೀ ನಿಯಾಮಕನಾದ ಅಂತರ್ಯಾಮಿಯು ದೇಹದಲ್ಲಿದ್ದಾನೆಂದು ಅದ್ವೈತಿಗಳಿಗೆ ಪ್ರತಿಪಾದಿಸಲು ಸಾಧ್ಯವಿಲ್ಲವೆಂದು ಅದ್ವೈತಮತವನ್ನು ದೂಷಿಸುವುದಕ್ಕಾಗಿ 'ಅತ್ರ' ಇತ್ಯಾದಿ ವಾಕ್ಯಗಳಿಂದ ಅನುವಾದ ಮಾಡುತ್ತಿದ್ದಾರೆ. ಗ್ರಂಥದಲ್ಲಿರುವ 'ಅವಚ್ಛೇದಪಕ್ಷೇ' ಎಂಬುದಕ್ಕೆ ಹೀಗರ್ಥ - ಜೀವನು ಅವಿದ್ಯಾವಚ್ಛಿನ್ನನಾಗಿದ್ದಾನೆಂಬುದು ಒಂದು ಪಕ್ಷ. ಪ್ರತಿಬಿಂಬಿತನಾಗಿದ್ದಾನೆಂಬುದು ಮತ್ತೊಂದು ಪಕ್ಷ. ಈ ಎರಡರಲ್ಲಿ ಮೊದಲನೆಯ ಪಕ್ಷದಲ್ಲಿ ಎಂದರ್ಥ. ಮೊದಲನೆಯ ಪಕ್ಷವನ್ನು ಏಕೆ ಅಂಗೀಕರಿಸಬಾರದು ಎಂಬ ಪ್ರಶ್ನೆಗೆ 'ಘಟ' ಇತ್ಯಾದಿ ವಾಕ್ಯಗಳಿಂದ ಉತ್ತರಿಸುತ್ತಿದ್ದಾರೆ.

ಪ್ರಕಾಶಃ – ಯುಕ್ತತಾಮಾಹ – ಜಲೇತಿ । ಅವಚ್ಛೇದಪಕ್ಷೇ ಯಥಾ ಯುಕ್ತತಾ, ತಥಾ ಪ್ರತಿಬಿಮ್ಬಪಕ್ಷೇऽಪೀತಿ ಪರೋಕ್ತಂ ದೃಷ್ಟಾನ್ತೀಕೃತ್ಯಾಹ – ಘಟೇತಿ ।

ಪ್ರತಿಬಿಂಬ ಪಕ್ಷದಲ್ಲಿ ಬ್ರಹ್ಮನಿಗೆ ಜೀವಶರೀರದಲ್ಲಿ ಪ್ರವೇಶವು ಯುಕ್ತವಾಗುತ್ತದೆಂಬುದನ್ನು 'ಜಲಗತ' ಇತ್ಯಾದಿ ವಾಕ್ಯಗಳಿಂದ ಪ್ರತಿಪಾದಿಸುತ್ತಿದ್ದಾರೆ. ಅವಚ್ಛೇದಪಕ್ಷದಲ್ಲಿ ದೇಹದಲ್ಲಿರುವಿಕೆಯನ್ನು ಅದ್ವೈತಿಗಳು ಹೇಗೆ ಒಪ್ಪಿರುವುದಿಲ್ಲವೋ ಅದರಂತೆ ಪ್ರತಿಬಿಂಬಪಕ್ಷದಲ್ಲಿಯೂ ಒಪ್ಪಲು ಸಾಧ್ಯವಿಲ್ಲವೆಂದು ಅವರ ದೃಷ್ಟಾಂತವನ್ನು ನೀಡಿ ನಿರಾಕರಿಸುತ್ತಿದ್ದಾರೆ. 'ಘಟಾಕಾಶ' ಎಂಬ ಶ್ಲೋಕದಿಂದ.

ಪ್ರಕಾಶಃ – ಶ್ಲೋಕಂ ವ್ಯಾಚಷ್ಟೇ – ಯಥೇತಿ । ನಾಸ್ತ್ಯೇವೇತಿ । ತಥಾ ಚ ಬಿಮ್ಬರೂಪತ್ವಾದನ್ತರ್ಯಾಮಿಣಃ ತತ್ರ ನಾವಸ್ಥಾನಮಿತಿ ಭಾವಃ ।

ಗ್ರಂಥಕಾರರು ತಮ್ಮ ಶ್ಲೋಕಕ್ಕೆ ತಾವೇ ವ್ಯಾಖ್ಯಾನ ಮಾಡುತ್ತಿದ್ದಾರೆ. 'ಯಥಾ' ಇತ್ಯಾದಿ ಗ್ರಂಥದಿಂದ. 'ನಾಸ್ತ್ಯೇವ' ಎಂದರೆ ಅಂತರ್ಯಾಮಿಯು ಬಿಂಬರೂಪನಾದ್ದರಿಂದ ದೇಹದಲ್ಲಿರಲಾರನೆಂದು ಅಭಿಪ್ರಾಯ.

ಪ್ರಕಾಶಃ – ಪ್ರತಿಬಿಮ್ಬಪಕ್ಷೇ ಅವಚ್ಛೇದವೈಲಕ್ಷಣ್ಯಮಾಶಙ್ಕತೇ – ನನ್ವಿತಿ । ಉಕ್ತಮಿತಿ । ಬಿಮ್ಬಪ್ರತಿಬಿಮ್ಬತ್ವರಹಿತಮಾಕಾಶಮಾತ್ರಂ ಪ್ರತಿಬಿಮ್ಬಾಕಾಶಂ ಚೇತಿ ದ್ವಯಮಿತ್ಯರ್ಥಃ ।

ಪ್ರತಿಬಿಂಬಪಕ್ಷದಲ್ಲಿ ಅವಚ್ಛೇದಪಕ್ಷಕ್ಕಿಂತ ವೈಲಕ್ಷಣ್ಯವಿದೆಯೆಂದು 'ನನು ತಥಾऽಪಿ' ಎಂಬ ಗ್ರಂಥದಿಂದ ಆಕ್ಷೇಪ ಮಾಡುತ್ತಿದ್ದಾರೆ. 'ಉಕ್ತಮ್' ಎಂದರೆ ಬಿಂಬಪ್ರತಿಬಿಂಬ ಭಾವವನ್ನು ಹೊಂದದ ಶುದ್ಧ ಆಕಾಶವು ಮತ್ತು ಪ್ರತಿಬಿಂಬಭೂತವಾದ ಆಕಾಶ ಎರಡನ್ನೂ ಹೇಳಲಾಗಿದೆ ಎಂದರ್ಥ.

ಪ್ರಕಾಶಃ – ದ್ವಯಮೇವೇತಿ । ಆಕಾಶಮಾತ್ರಮವಚ್ಛಿನ್ನಂ ಚೇತಿ ದ್ವಯಂ, ನತು ಪ್ರತಿಬಿಮ್ಬಾಕಾಶಮಿತ್ಯರ್ಥಃ । ತಸ್ಯಾಸ್ವಚ್ಛತಯಾ ಪ್ರತಿಬಿಮ್ಬನಾನುಪಾಧಿತ್ವಾದಿತಿ ಭಾವಃ ।

'ದ್ವಯಮೇವ' ಎಂದರೆ ಶುದ್ಧವಾದ ಆಕಾಶ ಹಾಗೂ ಅವಚ್ಛಿನ್ನವಾದ ಆಕಾಶಗಳೆರಡೇ ಎಂದರ್ಥ. ಹೊರತು, ಪ್ರತಿಬಿಂಬಭೂತವಾದ ಆಕಾಶವನ್ನು ವಿವಕ್ಷಿಸಬಾರದು. ಏಕೆಂದರೆ ಘಟವು ಅಸ್ವಚ್ಛವಾದ್ದರಿಂದ ಪ್ರತಿಬಿಂಬಕ್ಕೆ ಉಪಾಧಿಯಾಗುವುದಿಲ್ಲ.

ಪ್ರಕಾಶಃ – ತ್ರಿತಯಾಭಾವೇನೇತಿ । ತಥಾ ಚ ಬ್ರಹ್ಮಣोऽವಿದ್ಯಾಯಾಂ ಪ್ರತಿಬಿಮ್ಬಿತಮಾತ್ರತ್ವೇನ, ತತ್ರ ಚಿನ್ಮಾತ್ರಸ್ಯ ಪ್ರತಿಬಿಮ್ಬಿತಸ್ಯ ಚ, ಘಟಾದಾವಾಕಾಶದ್ವಯಸ್ಯೇವ ದರ್ಪಣಾದೌ ಮುಖಮಾತ್ರ-ಪ್ರತಿಬಿಮ್ಬಮುಖರೂಪದ್ವಯಸ್ಯೇವ, ಭಾವेऽಪಿ ತ್ರಿತಯಾಭಾವೇನಾವಚ್ಛೇದಪಕ್ಷತ್ಯಾಗೇನ ಪ್ರತಿಬಿಮ್ಬ-ಪಕ್ಷಸ್ವೀಕಾರಾಯೋಗಾದಿತ್ಯರ್ಥಃ ।

ಗ್ರಂಥದಲ್ಲಿ 'ತ್ರಿತಯಾಭಾವೇನ' ಎಂದು ಹೇಳಿರುತ್ತಾರೆ. ಬ್ರಹ್ಮನು ಅವಿದ್ಯೆಯಲ್ಲಿ ಕೇವಲ ಪ್ರತಿಬಿಂಬಿತನಾಗಿದ್ದಾನೆ; ಹೊರತು ಅವಚ್ಛಿನ್ನನಾಗಿಲ್ಲ. ಆದ್ದರಿಂದ ಚಿನ್ಮಾತ್ರನು ಮತ್ತು ಪ್ರತಿಬಿಂಬಿತನು ಇರಬಹುದು. ಯಾವರೀತಿಯಾಗಿ ದರ್ಪಣದಲ್ಲಿ ಮುಖವೆಂಬ ಸಾಮಾನ್ಯವು ಹಾಗೂ ಪ್ರತಿಬಿಂಬ ಎಂಬ ಮುಖಗಳೆರಡೇ ಇರುತ್ತವೋ ಹೊರತು, ಅವಚ್ಛಿನ್ನವಾದ ಮುಖವೆಂಬ ಮೂರನೆಯ ಪಕ್ಷವು ಇರುವುದಿಲ್ಲವೋ, ಅದರಂತೆ ಘಟದಲ್ಲಿಯೂ ಸಹ ಕೇವಲ ಘಟಾಕಾಶ ಮತ್ತು ಘಟಾವಚ್ಛಿನ್ನ ಆಕಾಶಗಳು

ಇದ್ದರೂ ಸಹ ಅವಚ್ಛಿನ್ನನಾದ ಬ್ರಹ್ಮನು ಇರಲು ಸಾಧ್ಯವಿಲ್ಲ. ಆದ್ದರಿಂದ ಅವಚ್ಛೇದಪಕ್ಷವನ್ನು ಬಿಟ್ಟು ಪ್ರತಿಬಿಂಬ ಪಕ್ಷವನ್ನು ಸ್ವೀಕರಿಸುವುದರಲ್ಲಿ ಅರ್ಥವೇ ಇಲ್ಲ.

ಪ್ರಕಾಶಃ – ನನು ಸತ್ಯಂ, ಯತ್ರೈಕಸ್ಯಾವಚ್ಛೇದಃ ಪ್ರತಿಬಿಮ್ಬನಂ ಚ, ತತ್ರ ಸಾಮಾನ್ಯಂ ಪ್ರತಿಬಿಮ್ಬಿತವಮಚ್ಛಿನ್ನಂ ಚೇತಿ ತ್ರಿತಯಮನ್ಯತ್ರ ದ್ವಯಮಿತಿ । ತಥಾऽಪಿ ಪ್ರಕೃತೇ ತಥಾऽಸ್ತ್ವಿತಿ ಶಙ್ಕತೇ – ನನ್ವಿತಿ ।

ಹೌದು, ಯಾವ ಘಟಾದಿಗಳಲ್ಲಿ ಒಂದರ ಅವಚ್ಛೇದ ಮಾತ್ರವಿರುತ್ತದೋ ಅಲ್ಲಿ ಅವಚ್ಛಿನ್ನ ಹಾಗೂ ಸಾಮಾನ್ಯ ಎರಡೇ ಇರುತ್ತದೆ. ದರ್ಪಣಾದಿಗಳಲ್ಲಿ ಪ್ರತಿಬಿಂಬವಿದ್ದರೆ ಪ್ರತಿಬಿಂಬಿತವಾದ ಮುಖ ಹಾಗೂ ಮುಖ ಸಾಮಾನ್ಯವು ಎರಡೇ ಇರುತ್ತದೆ. ಮೂರು ಇರುವುದಿಲ್ಲ. ಹೀಗೆ ಅವಚ್ಛೇದಪಕ್ಷದಲ್ಲಾಗಲೀ ಪ್ರತಿಬಿಂಬಪಕ್ಷದಲ್ಲಾಗಲೀ ಎರಡು ಬರುತ್ತವೆ. ಎರಡೇ ಹೊರತು ಮೂರು ಬರುವುದಿಲ್ಲ. ಆದರೆ ಎಲ್ಲೆಲ್ಲಿ ಒಂದೇ ಉಪಾಧಿಯಲ್ಲಿ ಅವಚ್ಛೇದ ಹಾಗೂ ಪ್ರತಿಬಿಂಬಗಳು ಒಟ್ಟಿಗೆ ಇರುತ್ತವೋ ಅಲ್ಲಿ ಸಾಮಾನ್ಯ ಹಾಗೂ ಪ್ರತಿಬಿಂಬ ಮತ್ತು ಅವಚ್ಛಿನ್ನ ಮೂರೂ ಸಹ ಇರುತ್ತವೆ. ಬೇರೆ ಕಡೆ ಎರಡು ಮಾತ್ರ ಇರುತ್ತವೆ. ಜಲವು ಇದಕ್ಕೆ ದೃಷ್ಟಾಂತ ಆದರೆ ಬ್ರಹ್ಮಪಕ್ಷದಲ್ಲಿ ಮೂರೂ ಸಹ ಬರಬಹುದೆಂದು 'ನನು' ಇತ್ಯಾದಿ ವಾಕ್ಯಗಳಿಂದ ಆಕ್ಷೇಪಿಸುತ್ತಿದ್ದಾರೆ.

ಪ್ರಕಾಶಃ – ಕಿಮೇತಾವತಾ; ಏಕಸ್ಮಿನ್ನಪಿ ದೇಹೇ ಅವಚ್ಛಿನ್ನಂ ಪ್ರತಿಬಿಮ್ಬಿತಂ ಚಿನ್ಮಾತ್ರಂ ಚೇತಿ ಬ್ರಹ್ಮತ್ರಯಸಿದ್ಧಾವಪಿ ತತ್ರಾವಚ್ಛಿನ್ನಂ ವಾ ಪ್ರತಿಬಿಮ್ಬಿತಂ ವಾ ನಾನ್ತರ್ಯಾಮಿ, ತಸ್ಯ ನಿಯಮ್ಯರೂಪಜೀವತ್ವಾತ್ । ಅಥ ತತ್ರತ್ಯಂ ಚಿನ್ಮಾತ್ರಂ ವಾ, ಸಾರ್ವಜ್ಞ್ಯಾದ್ಯುಪೇತಂ ಬಿಮ್ಬಭೂತಂ ಬ್ರಹ್ಮ ವಾ ತಥೇತಿ ವಾಚ್ಯಮಿತಿ ಭಾವೇನ, ಅನ್ತ್ಯೇ ದೋಷಮಾಹ – ಯತ್ರೇತಿ ।

ಇದರಿಂದೇನೂ ಪ್ರಯೋಜನವಿಲ್ಲ. ಒಂದೇ ದೇಹದಲ್ಲಿ ಅವಚ್ಛಿನ್ನನಾದ ಬ್ರಹ್ಮ, ಪ್ರತಿಬಿಂಬಿತನಾದ ಬ್ರಹ್ಮ, ಚಿನ್ಮಾತ್ರನಾದ ಬ್ರಹ್ಮನೆಂದು ಎಂಬ ಮೂರು ಬಗೆಯ ಬ್ರಹ್ಮರನ್ನು ನೀವು ಸಾಧಿಸಿದಿರಿ. ಆದರೆ ಅವಚ್ಛಿನ್ನನಾದ ಬ್ರಹ್ಮನು ಮತ್ತು ಪ್ರತಿಬಿಂಬಿತನಾದ ಬ್ರಹ್ಮನು ಅಂತರ್ಯಾಮಿಯಾಗುವುದಿಲ್ಲ. ಏಕೆಂದರೆ ಅವರಿಬ್ಬರೂ ನಿಯಮ್ಯರಾದ ಜೀವಸ್ವರೂಪವನ್ನು ತಾಳಿದ್ದಾರೆ. ಇನ್ನು ಆ ಮೂರುಬ್ರಹ್ಮರಲ್ಲಿ ಚಿನ್ಮಾತ್ರ ಅಥವಾ ಸಾರ್ವಜ್ಞ್ಯಾದಿಗುಣಗಳಿಂದ ಕೂಡಿರುವ ಬಿಂಬಭೂತನಾದ ಬ್ರಹ್ಮನನ್ನು ನಿಯಾಮಕನೆಂದು ಹೇಳಬೇಕು. ಈ ಎರಡನೇ ಪಕ್ಷದಲ್ಲಿ 'ಯತ್ರ' ಎಂಬ ವಾಕ್ಯದಿಂದ ದೋಷವನ್ನು ಹೇಳುತ್ತಿದ್ದಾರೆ.

ಪ್ರಕಾಶಃ – 'ದ್ವಯಮ್' ಅವಚ್ಛಿನ್ನಂ ಪ್ರತಿಬಿಮ್ಬಿತಂ ಚೇತ್ಯರ್ಥಃ । ಆದ್ಯೇ ದೋಷಮಾಹ – ಆಕಾಶಮಾತ್ರೇತಿ । ವಿಕಲ್ಪ ಇತಿ । ಘಟಾದಾವಾಕಾಶಸ್ಯೈವಾವಚ್ಛೇದಮಾತ್ರಂ ನ ಪ್ರತಿಬಿಮ್ಬನಂ, ದರ್ಪಣಾದೌ ಮುಖಸ್ಯೇವ ಬ್ರಹ್ಮಣೋऽವಿದ್ಯಾಯಾಂ ಪ್ರತಿಬಿಮ್ಬನಮಾತ್ರಂ ನ ತ್ವವಚ್ಛೇದ ಇತಿ ವಿಕಲ್ಪಪಕ್ಷೇ, ಜಲಾದಾವೇಕಸ್ಯಾಕಾಶಸ್ಯೇವ ಬ್ರಹ್ಮಣ ಏಕಸ್ಮಿನ್ ದೇಹೇ ಅವಿದ್ಯಯाऽವಚ್ಛೇದಃ ಪ್ರತಿಬಿಮ್ಬನಂ ಚೇತಿ ಸಮುಚ್ಚಯಪಕ್ಷೇ ಚೇತ್ಯರ್ಥಃ । ಪಕ್ಷದ್ವಯेऽप್ಯನ್ತರ್ಯಾಮಿಭೂತಸ್ಯ ತತ್ರಾಭಾವಾದಿತಿ ಭಾವಃ ।

'ದ್ವಯಮ್' ಎಂದರೆ ಅವಚ್ಛಿನ್ನನಾದ ಹಾಗೂ ಪ್ರತಿಬಿಂಬಭೂತನಾದ ಬ್ರಹ್ಮನು ಎಂದರ್ಥ. ಅವಚ್ಛಿನ್ನ ಪಕ್ಷದಲ್ಲಿ 'ಆಕಾಶಮಾತ್ರ' ಇತ್ಯಾದಿ ವಾಕ್ಯದಿಂದ ದೋಷವನ್ನು ಹೇಳಿದ್ದಾರೆ. 'ವಿಕಲ್ಪಃ' ಎಂದರೆ ಘಟಾದಿಗಳಲ್ಲಿ ಆಕಾಶವು ಅವಚ್ಛಿನ್ನವಾಗುತ್ತದೆ ಹೊರತು ಪ್ರತಿಬಿಂಬವಾಗುವುದಿಲ್ಲ. ದರ್ಪಣಾದಿಗಳಲ್ಲಿ ಮುಖವು ಹೇಗೆ ಪ್ರತಿಬಿಂಬವಾಗುತ್ತದೋ, ಅದರಂತೆ ಅವಿದ್ಯೆಯಲ್ಲಿ ಬ್ರಹ್ಮನು ಪ್ರತಿಬಿಂಬನಾಗುತ್ತಾನೆ ಹೊರತು ಅವಚ್ಛಿನ್ನನಾಗುವುದಿಲ್ಲ. ಅದು ವಿಕಲ್ಪ ಪಕ್ಷ. ಇನ್ನು ಜಲಾದಿಗಳಲ್ಲಿ ಒಂದೇ ಆಕಾಶವು ಅವಚ್ಛಿನ್ನವೂ, ಪ್ರತಿಬಿಂಬಿತವೂ ಆಗುವಂತೆ ಒಂದೇ ದೇಹದಲ್ಲಿ ಬ್ರಹ್ಮನು ಅವಿದ್ಯೆಯಿಂದ ಅವಚ್ಛಿನ್ನನೂ, ಪ್ರತಿಬಿಂಬಿತನೂ ಆಗುತ್ತಾನೆಂಬುದು ಸಮುಚ್ಚಯ ಪಕ್ಷ. ಈ ಎರಡು ಪಕ್ಷಗಳಲ್ಲಿಯೂ ಸಹ ಅಂತರ್ಯಾಮಿಯು ನಿಯಾಮಕನಾಗಿ ದೇಹದಲ್ಲಿರಲು ಸಾಧ್ಯವಿಲ್ಲವೆಂದು ತಿಳಿಯಬೇಕು.

ಪ್ರಕಾಶಃ – ನನ್ವವಚ್ಛೇದಪಕ್ಷೇ ಪ್ರತಿಬಿಮ್ಬನಪಕ್ಷೇ ಚ ಯಚ್ಚಿನ್ಮಾತ್ರಮಾಕಾಶಸ್ಯಾನೀಯಂ ತದೇವಾಗತ್ಯಾ ನಿಯನ್ತೃ ಸ್ಯಾದಿತಿ ಕಶ್ಚಿದ್ ಬ್ರೂಯಾತ್ತಂ ಪ್ರತ್ಯಾಹ – **ಕಿಞ್ಚೇತಿ । 'ಅನ್ಯತ್ರ' ನ್ಯಾಯಾಮೃತೇ ।**

ಆಕ್ಷೇಪ - ಅವಚ್ಛೇದಪಕ್ಷದಲ್ಲಿ ಮತ್ತು ಪ್ರತಿಬಿಂಬಪಕ್ಷದಲ್ಲಿ ಆಕಾಶಸ್ಥಾನದಲ್ಲಿರುವ ಚಿನ್ಮಾತ್ರವನ್ನೇ ಗತಿಯಿಲ್ಲದೇ ಅವಶ್ಯವಾಗಿ ನಿಯಾಮಕವೆಂದು ಹೇಳಬೇಕು. ಹೀಗೆ ಹೇಳಿದಾಗ ಎಲ್ಲ ದೋಷವು ಪರಿಹಾರವಾಗುತ್ತದಲ್ಲವೇ?

ಸಮಾಧಾನ - ಹೀಗೆ ಅದ್ವೈತಿಗಳಲ್ಲಿ ಯಾರಾದರೂ ಆಕ್ಷೇಪಿಸಬಹುದು. ಇದನ್ನೇ ಗ್ರಂಥಕಾರರು 'ಕಿಂಚ' ಇತ್ಯಾದಿ ವಾಕ್ಯದಿಂದ ನಿರಾಕರಿಸಿದ್ದಾರೆ. ಅವಚ್ಛೇದಪಕ್ಷದಲ್ಲಾಗಲೀ, ಪ್ರತಿಬಿಂಬಪಕ್ಷದಲ್ಲಾಗಲೀ, ಅಂತಹ ಚಿನ್ಮಾತ್ರನನ್ನು ಇದ್ದಾನೆಂದು ಸಮರ್ಥಿಸಲಾಗದು. 'ಅನ್ಯತ್ರ' ಎಂಬ ಪದಕ್ಕೆ ನ್ಯಾಯಾಮೃತದಲ್ಲಿ ಎಂದರ್ಥ.

ಗುರುರಾಜೀಯಮ್ – ಯದುಕ್ತಂ ಪರೈರೇಕೋ ಹಿ ಪ್ರತ್ಯಗಾತ್ಮಾ ಭವತಿ । ನ ದ್ವೌ ಪ್ರತ್ಯಗಾತ್ಮಾನೌ ಸಮ್ಭವತಃ । ಏಕಸ್ಯೈವ ತು ಭೇದವ್ಯವಹಾರ ಉಪಾಧಿಕೃತಃ । ಯಥಾ ಘಟಾಕಾಶೋ ಮಠಾಕಾಶ ಇತಿ । ತದ್ಧದಿತಿ । ತದನೂದ್ಯ ದೂಷಯತಿ – **ಯಚ್ಚೋಕ್ತಮಿತಿ ।। ಮಾಂ ಪ್ರತೀತಿ ।।** ಏಕಸ್ಯೈವ ಪ್ರತ್ಯಗಾತ್ಮನೋ ಭೇದವ್ಯವಹಾರ ಉಪಾಧಿಕೃತ ಇತ್ಯತ್ರ ಮಾಂ ಪ್ರತಿ ದೃಷ್ಟಾನ್ತಾಭಾವಾತ್ । ಗಗನೇಽಪಿ ಭೇದಸ್ಯ ಸ್ವಾಭಾವಿಕತ್ವೇನೋಪಾಧಿಕೃತತ್ವಾಭಾವೇನ ತಸ್ಯ ದೃಷ್ಟಾನ್ತತ್ವಾಸಮ್ಭವಾದಿತಿ ಭಾವಃ । **ಅವಚ್ಛೇದಪಕ್ಷ ಇತಿ ।।** ಸರ್ವಗತಸ್ಯ ಗಗನಸ್ಯ ಘಟಾಕಾಶತ್ವವ್ಯಪದೇಶಃ । ತಥಾ ತದುಪಾಧ್ಯವಚ್ಛಿನ್ನೇ ಬ್ರಹ್ಮಣಿ ಜೀವತ್ವವ್ಯಪದೇಶ ಇತ್ಯವಚ್ಛೇದಪಕ್ಷ ಇತ್ಯರ್ಥಃ । **ದ್ವಿಗುಣೀಕೃತ್ಯೇತಿ ।।** ಸರ್ವಗತಸ್ಯ ಬ್ರಹ್ಮಣ ಉಪಾಧ್ಯವಚ್ಛೇದೇ ಪ್ರಾಥಮಿಕೀ ವೃತ್ತಿಃ । ಪುನರವಚ್ಛಿನ್ನೇಽಪಿ ನಿಯನ್ತೃತ್ವಾದಿಸಿದ್ಧ್ಯರ್ಥಮನವಚ್ಛಿನ್ನಸ್ಯ ವೃತ್ತ್ಯನ್ತರಮಾಶ್ರಯಣೀಯಮ್ । ನ ಚೈತದುಪಲಬ್ಧ್ಯಚರಮಿತಿ ದ್ವಿಗುಣೀಕೃತ್ಯ ವೃತ್ತ್ಯನುಪಪತ್ತಿಃ । ಗಗನಸ್ಯ ತ್ವವಚ್ಛಿನ್ನೇ

वृत्त्यनङ्गीकाराद्वैषम्यमिति भावः । अन्तःकरणप्रतिबिम्बितजीवनियन्तृत्वेन ब्रह्मणस्तत्रावस्थानाद् द्विगुणीकृत्य वृत्त्यनुपपत्तिस्तत्रापि समेत्याशङ्क्याह – **प्रतिबिम्बेति** ।। किमवच्छेदपक्षं परित्यज्य प्रतिबिम्बपक्षमेवाश्रित्य ब्रह्मणोऽवस्थानं प्रतिपाद्यते। किं वा प्रतिबिम्बपक्षमभेदव्यवच्छेदपक्षं चाश्रित्यान्तर्यामिणोऽवस्थानमिति। नाद्यः । अवच्छेदपक्ष इव प्रतिबिम्बपक्षेऽप्याकाशद्वयस्यैव प्राप्त्या बिम्बाकाशस्याभावादित्याह – **ययेति** । अथावच्छेदप्रतिबिम्बपक्षयोस्साम्यं विघटयति – **नन्विति**।। उक्तमाकाशद्वयं स्वाभाविकाकाशः **प्रतिबिम्बाकाशश्चेत्याकाशद्वयमित्यर्थः** । तर्ह्यवच्छेदप्रतिबिम्बनवति त्रितयसद्भावेऽप्यवच्छेदमात्र इव प्रतिबिम्बनमात्रेऽपि द्वयस्यैव सत्त्वेनावच्छेदपक्षं परित्यज्य प्रतिबिम्बपक्षाश्रयणमयुक्तमित्याह – **यस्येति**।। **त्रितयाभावेनेति** ।। दर्पणादौ स्वाभाविकाकाशस्य प्रतिमुखाकाशस्य सद्भावेऽपि दर्पणादेर्जलादिवदनिबिडद्रव्यत्वाभावेन दर्पणावच्छिन्नाकाशाभावेन त्रितयाभाव इत्यर्थः । नन्ववच्छेदपक्षमात्र इव प्रतिबिम्बपक्षमात्रेऽपि त्रितयाभावेऽपि ब्रह्मणोऽविद्यया‍ऽवच्छेदस्य प्रतिबिम्बस्य च सत्त्वादाकाशवत्त्रितयसिद्धिस्स्यात् । न चैवमवच्छेदपक्षस्याप्याश्रयणेऽवच्छेदपक्षो न युक्त इत्यादिपूर्वोक्तिव्याघात इति वाच्यम् । केवलावच्छेदमात्रपक्षे त्रितयलाभस्य तत्रानभिप्रेतत्वादवच्छेदसहितप्रतिबिम्बपक्षे त्रितयलाभस्य चाभिप्रेतत्वात् । ततश्च न विरोध इति समुच्चयमाशङ्कते – **ननु तर्हीति** ।। एवमवच्छेदप्रतिबिम्बपक्षोभयाश्रयणेऽपि तेनान्तर्यामिणस्सत्त्वसिद्धिरित्याह – **यत्रेत्यादि** ।। अवच्छेदपक्षाश्रयणेनाह – **बाह्याकाशस्येति** ।। प्रतिबिम्बपक्षाश्रयणेनाह – **बिम्बाकास्येति** ।। ननु जीवप्रदेशे चिन्मात्रावस्थाने चिन्मात्रस्यैवान्तर्यामित्वादन्तर्यामिणोऽवस्थानसिद्धिरित्यत आह – **आकाशमात्रेति** ।। अन्यथाऽपसिद्धान्तस्स्यादिति भावः । **तस्मादिति** ।। परेणावच्छेदपक्षस्य प्रतिबिम्बन्यासमुदायपक्षयोर्निराकृतत्वादिति भावः । **किञ्चेति** ।। तथा चास्याभ्युपगमवादेनोक्तत्वान्न ग्रन्थान्तरस्यस्वोक्तिविरोध इति भावः ।। दर्पणादौ च प्रतिबिम्बव्यतिरेकेण मुखव्यक्त्यन्तरं नास्तीत्यन्यत्रोक्तमिति ।। मुखप्रतिमुखानुगतमुखत्वातिरिक्तमुखमात्ररूपव्यक्त्यन्तरस्येव जीवब्रह्मानुगत चित्त्वातिरिक्तचिन्मात्ररूपस्याज्ञानाश्रयत्वयोग्यव्यक्त्यन्तरस्य चाभावाच्चेति न्यायामृते प्रथमपरिच्छेदेऽज्ञानस्य विवरणोक्तचिन्मात्राश्रितत्वभङ्गे उक्तमित्यर्थः ।

ಸಾರ

ಅನವಸ್ಥಾದೋಷವನ್ನು ಪರಿಹರಿಸುವುದಕ್ಕಾಗಿ ನಿಯಾಮಕರಿಗೆ ಭೇದವನ್ನೇನೂ ಒಪ್ಪಬೇಕಾಗಿಲ್ಲ. ಒಂದು ಶರೀರದಲ್ಲಿ ಎರಡು ಪ್ರತ್ಯಕ್‌ಚೈತನ್ಯಗಳನ್ನು ಒಪ್ಪಲು ಸಾಧ್ಯವಿಲ್ಲದ ಕಾರಣ ಅವರಿಬ್ಬರಿಗೆ ಐಕ್ಯವನ್ನು ಅನಿವಾರ್ಯವಾಗಿ ಹೇಳಬೇಕೆಂದು ಅದ್ವೈತಿಗಳು ಆಕ್ಷೇಪಿಸುತ್ತಾರೆ. ಆದರೆ ಇದನ್ನು ಒಂದೇ ಶರೀರದಲ್ಲಿ ಜೀವಬ್ರಹ್ಮರಿದ್ದಾರೆ. ಅನೇಕ ಅಭಿಮಾನಿದೇವತೆಗಳೂ ಇದ್ದಾರೆಂದು ಹೇಳುವ ದ್ವೈತಿಗಳಿಗೆ ಮನದಟ್ಟಾಗಿಸಲು ಅದ್ವೈತಿಗಳಿಗೆ ಸಾಧ್ಯವಿಲ್ಲ. ಒಂದು ಶರೀರದಲ್ಲಿ ಪಿಶಾಚಿಯು ಸೇರಿಕೊಂಡಾಗ ಇಬ್ಬರು ಚೇತನರಿರುವುದು ನಮ್ಮ ಅನುಭವದಲ್ಲಿ ಕಾಣಿಸುತ್ತಿದೆ. ಪತರೇಯೋಪನಿಷತ್ತಿನಲ್ಲಂತೂ ಸ್ಪಷ್ಟವಾಗಿ "ಹಂತಾಸ್ಮಾತ್ ಶರೀರಾತ್" ಇತ್ಯಾದಿ ವಾಕ್ಯದಿಂದ ಅನೇಕ ಅಭಿಮಾನಿದೇವತೆಗಳು ಒಂದೇ ಶರೀರದಲ್ಲಿ ಪ್ರವೇಶಿಸಿದ್ದಾರೆಂಬುದು ಕಾಣಿಸುತ್ತಿದೆ. ಹೀಗೆ ಹೇಳಿದಾಗ ಏನೂ ಬಾಧಕವಿಲ್ಲ. 'ನಾನ್ಯೋಽತೋಽಸ್ತಿ ದ್ರಷ್ಟಾ" ಎಂಬ ಶ್ರುತಿಯು ಅಪಾತತಃ ಮತ್ತೊಬ್ಬನಿಲ್ಲ ಎಂದು ಹೇಳಿದಂತೆ ಕಾಣಿಸಬಹುದು. ಆದರೆ ಸ್ವತಂತ್ರನಾದ ಮತ್ತೊಬ್ಬ ದ್ರಷ್ಟ್ರಪುರುಷನಿಲ್ಲವೆಂದೇ ಆ ಶ್ರುತಿಯ ಅಭಿಪ್ರಾಯ.

ಈ ಸಂದರ್ಭದಲ್ಲಿ ವಿವರಣಕಾರನ ವಾದವೊಂದು ಹೀಗಿದೆ - ಅವಚ್ಛೇದಪಕ್ಷ ಹಾಗೂ ಪ್ರತಿಬಿಂಬ ಪಕ್ಷವೆಂದು ಎರಡು ಪಕ್ಷಗಳಿವೆ. ಅವಚ್ಛೇದಪಕ್ಷವೆಂದರೆ ಎಲ್ಲೆಡೆ ವ್ಯಾಪ್ತವಾಗಿರುವ ಆಕಾಶವು ಘಟದಲ್ಲಿಯೂ ಇರುತ್ತವೆ. ಆದರೆ ಬಾಹ್ಯಾಕಾಶವನ್ನು ಘಟದಲ್ಲಿದೆಯೆಂದು ಯಾರೂ ವ್ಯವಹರಿಸುವುದಿಲ್ಲ. ಕೇವಲ ಘಟಾವಚ್ಛಿನ್ನ ಆಕಾಶವಿದೆಯಂದೇ ಹೇಳುತ್ತಾರೆ. ಪ್ರತಿಬಿಂಬಪಕ್ಷದಲ್ಲಿ ಪ್ರತಿಬಿಂಬವಾದ ಆಕಾಶವು ಜಲದಲ್ಲಿದೆ. ಎಲ್ಲೆಡೆ ವ್ಯಾಪ್ತವಾದ ಆಕಾಶವೂ ಸಹ ಜಲದಲ್ಲಿದೆ. ಪ್ರಕೃತ ಜೀವನೆಂಬ ಶರೀರದಲ್ಲಿ ನಿಯಾಮಕನಾದ ಬ್ರಹ್ಮನಿದ್ದಾನೆಂದು ಅವಚ್ಛೇದಪಕ್ಷವನ್ನು ಅಂಗೀಕರಿಸಿ ಹೇಳಲು ಸಾಧ್ಯವಿಲ್ಲ. ಆದರೆ ಪ್ರತಿಬಿಂಬಪಕ್ಷವನ್ನು ಸ್ವೀಕರಿಸಿದಾಗ ಶರೀರದಲ್ಲಿ ಅವಿದ್ಯಾವಚ್ಛಿನ್ನನಾದ ಬ್ರಹ್ಮನೂ ಇರಬಹುದು. ನಿಯಾಮಕನಾದ ಬ್ರಹ್ಮನೂ ಸಹ ಇರಬಹುದು ಎಂದು.

ವಿವರಣಕಾರನ ಈ ಅಭಿಪ್ರಾಯವು ಹುರುಳಿಲ್ಲದ್ದು. ಏಕೆಂದರೆ ಘಟಾಕಾಶದಲ್ಲಿ ಬಾಹ್ಯಾಕಾಶವಿರುವುದು ಎಷ್ಟು ಅಸಂಭಾವಿತವೋ ಅದರಂತೆ ನೀರಿನಲ್ಲಿ ಬಿಂಬಭೂತವಾದ ಆಕಾಶವಿರುವುದೂ ಸಹ ಅಷ್ಟೇ ಅಸಂಭಾವಿತ.

ವಸ್ತುತಃ ಜಲದಲ್ಲಿ ಶುದ್ಧವಾದ ಆಕಾಶ, ಅವಚ್ಛಿನ್ನವಾದ ಆಕಾಶ ಹಾಗೂ ಪ್ರತಿಬಿಂಬಭೂತವಾದ ಆಕಾಶಗಳೆಂದು ಮೂರು ಆಕಾಶಗಳಿರುತ್ತದೆ. ಘಟದಲ್ಲಿ ಪ್ರತಿಬಿಂಬವಾದ ಆಕಾಶವಿರುವುದಿಲ್ಲ. ಕೇವಲ ಶುದ್ಧವಾದ ಆಕಾಶ ಹಾಗೂ ಅವಚ್ಛಿನ್ನವಾದ ಆಕಾಶಗಳಿರಡೇ ಇರುತ್ತವೆ. ಹೀಗೆ ವ್ಯತ್ಯಾಸವನ್ನೇನೋ ತೋರಿಸಬಹುದು. ಆದರೆ ದರ್ಪಣದಲ್ಲಿ ಪ್ರತಿಬಿಂಬವಾಗಿರುವ ಮುಖ ಯಾರೂ ಮುಖಸಾಮಾನ್ಯವಿರುವುದು ಕಾಣಿಸುತ್ತದೆ. ಆದರೆ ಬಿಂಬಭೂತವಾದ ಮುಖವಿದೆಯೆಂದು ಯಾರೂ ಹೇಳುವುದಿಲ್ಲ. ಅದರಂತೆ ಶರೀರದಲ್ಲಿ ಚಿನ್ಮಾತ್ರನಿರಬಹುದು. ಅವಿದ್ಯಾವಚ್ಛಿನ್ನನಾದ ಬ್ರಹ್ಮನಿರಬಹುದು. ನಿಯಾಮಕಬ್ರಹ್ಮನಿದ್ದಾನೆಂದು ಈ ದೃಷ್ಟಾಂತದಿಂದ ಸಮರ್ಥಿಸಲು ಸಾಧ್ಯವಿಲ್ಲ. ಅದ್ವೈತಿಗಳು ಅವಚ್ಛಿನ್ನಬ್ರಹ್ಮ, ಪ್ರತಿಬಿಂಬಬ್ರಹ್ಮ, ಚಿನ್ಮಾತ್ರಬ್ರಹ್ಮನೆಂದು ಮೂರು ಬಗೆಯ ಬ್ರಹ್ಮರನ್ನು ಒಪ್ಪುತ್ತಾರೆ. ಈ ಮೂರು ಬ್ರಹ್ಮರಲ್ಲಿ ಅವಚ್ಛಿನ್ನಬ್ರಹ್ಮ ಹಾಗೂ ಪ್ರತಿಬಿಂಬಬ್ರಹ್ಮರು ಜೀವಸ್ವರೂಪವನ್ನು ತಾಳಿದ್ದರಿಂದ ನಿಯಮ್ಯರೇ ಆಗಿಬಿಟ್ಟಿದ್ದಾರೆ. ಇನ್ನು

ಶುದ್ಧಬ್ರಹ್ಮನು ಯಾವುದೇ ಗುಣಗಳನ್ನು ಹೊಂದದ ಕಾರಣ ನಿಯಾಮಕನಾಗಲು ಸಾಧ್ಯವಿಲ್ಲ. ಇದು ಹೇಗಾಯಿತೆಂದರೆ 'ಮುಳ್ಳು ಕೊನೆಯ ಮೇಲೆ ಮೂರು ಕೆರೆಯ ಕಟ್ಟ, ಎರಡು ತುಂಬದು ಒಂದು ತುಂಬಲೇ ಇಲ್ಲ' ಎಂಬ ದಾಸರ ಒಗಟಿನ ಪದ್ಯದಂತೆ ಮೂರು ಬ್ರಹ್ಮರಲ್ಲಿ ಪ್ರತಿಬಿಂಬಬ್ರಹ್ಮ ಹಾಗೂ ಅವಚ್ಛಿನ್ನಬ್ರಹ್ಮರಿಗೆ ಜೀವಭಾವವಿರುವುದಿಂದ ನಿಯಾಮಕತ್ವ ಬರುವುದಿಲ್ಲ. ಉಳಿದೊಬ್ಬ ಶುದ್ಧಬ್ರಹ್ಮನಲ್ಲಿ ನಿಯಾಮಕತ್ವವನ್ನು ಸ್ವತಃ ಅವರೇ ಒಪ್ಪಿಲ್ಲ. ಒಟ್ಟಾರೆ ದೇಹದ ಒಳಗಡೆ ಕುಳಿತಿರುವ ಬ್ರಹ್ಮನು ನಪುಂಸಕನಂತೆ ವ್ಯರ್ಥವಾಗಿ ಕುಳಿತಿದ್ದಾನೆಂದು ಹೇಳಿದಂತಾಯಿತು.

• • • • •

ಶಂಕರಭಾಷ್ಯ ರಾಮಾನುಜಭಾಷ್ಯಗಳ ಸೂತ್ರಾರ್ಥ ವಿಮರ್ಶೆ

तात्पर्यचन्द्रिका

यच्चोक्तमुभाभ्याम् – आद्यसूत्रे अधिदेवादिषु योऽन्तर्यामी स परमात्मेत्यन्वय इति,

ಅನುವಾದ - ರಾಮಾನುಜರು ಹಾಗೂ ಅದ್ವೈತಿಗಳು ಮೊದಲನೆಯ ಸೂತ್ರವನ್ನು ಹೀಗೆ ವ್ಯಾಖ್ಯಾನಿಸುತ್ತಾರೆ - ''ಅಂತರ್ಯಾಮ್ಯಧಿದೇವಾದಿಷು ತದ್ಧರ್ಮವ್ಯಪದೇಶಾತ್'' ಎಂಬ ಪ್ರಕರಣಗಳಲ್ಲಿ ಯಾರು ಅಂತರ್ಯಾಮಿಯಾಗಿ ಶ್ರುತನಾಗಿದ್ದಾನೋ ಅವನು ಪರಮಾತ್ಮನೇ ಆಗಿದ್ದಾನೆ. ಏಕೆಂದರೆ ಪರಮಾತ್ಮನ ಧರ್ಮಗಳು ಕೇಳಿಸುತ್ತಿರುವುದರಿಂದ ಎಂದು.

तन्न, तथात्वे 'अधिदैवादिषु' इत्यस्य वैयर्थ्यात् ।

ಇದು ತಪ್ಪು. ಹಾಗೇ ಅರ್ಥೈಸುವುದಾದರೆ 'ಅಧಿದೈವಾದಿಷು' ಎಂಬ ಪದವೇ ವ್ಯರ್ಥವಾಗುತ್ತದೆ. ಅಧಿದೈವಾದಿ ಪ್ರಕರಣಗಳಲ್ಲಿ ಎಂದು ಹೇಳದಿದ್ದರೂ ಅಂತರ್ಯಾಮಿಯು ಪರಮಾತ್ಮನೇ ಆಗಿದ್ದಾನೆಂದು ನಿರ್ಣಯಿಸಲು ಬರುತ್ತದೆ.

विषयवाक्यसूचनस्यान्तर्यामिपदेनैव सिद्धेः ।

ವಿಷಯವಾಕ್ಯವನ್ನು ಸೂಚಿಸುವುದಕ್ಕಾಗಿ ಅಧಿದೈವವೆಂಬ ಪದವು ಸಾರ್ಥಕವಲ್ಲವೇ? ಎಂದು ಪ್ರಶ್ನಿಸಬಾರದು. ಅಂತರ್ಯಾಮಿ ಪದದಿಂದಲೇ ಅಂತರ್ಯಾಮಿ ಶಬ್ದಗಳಲ್ಲಿರುವ ಎಲ್ಲಾ ಶ್ರುತಿವಾಕ್ಯಗಳು ಈ ಅಧಿಕರಣಕ್ಕೆ ವಿಷಯವಾಗುತ್ತದೆಂದು ಸಿದ್ಧವಾಗುತ್ತದೆ.

अन्यथा ''अन्तस्तद्धर्म'' इत्यादावादित्यादिष्वन्तरिति साध्यं निर्दिश्येत ।[१]

(१) श्रीभाष्य – 'स्थानादिव्यपदेशाच्च' इत्यत्र 'यश्चक्षुषि तिष्ठन्' इत्यादिना प्रतिपाद्यमानं

चक्षुषि स्थितिनियमनादिकं परमात्मन एवेति सिद्धं कृत्वाऽक्षिपुरुषस्य परमात्मत्वं साधितम् । इदानीं तदेव समर्थयते–

अन्तर्याम्यधिदैवादिषु तद्धर्मव्यपदेशात्

काण्वा माध्यन्दिनाश्च वाजसनेयिनः समामनन्ति । 'यः पृथिव्यां तिष्ठन् पृथिव्या अन्तरो यं पृथिवी न वेद यस्य पृथिवी शरीरं यः पृथिवीमन्तरो यमयति एष त आत्माऽन्तर्याम्यमृतः' इति । एवमम्ब्वग्न्तरिक्षवाय्वादित्यादिचन्द्रतारकाकाशतमस्तेजस्सु देवेषु च सर्वेषु भूतेषु च प्राणवाक्चक्षुःश्रोत्रमनस्त्वग्विज्ञानरेतस्स्वात्मात्मीयेषु च तिष्ठन्तं तत्तदन्तरभूतं तत्तदवेद्यं तत्तच्छरीरकं तत्तद्यमयन्तं कञ्चिन्निर्दिश्य 'एष त आत्माऽन्तर्याम्यमृतः' इत्युपदिश्यते । माध्यन्दिनपाठे तु 'यस्सर्वेषु लोकेषु तिष्ठन्' 'यस्सर्वेषु वेदेषु' 'यस्सर्वेषु यज्ञेषु' इति च पर्यायाः, 'यो विज्ञाने तिष्ठन्' इत्यस्य पर्यायस्य स्थाने 'य आत्मनि तिष्ठन्' इति पर्यायः । 'स त आत्माऽन्तर्याम्यमृतः' इति च विशेषः । तत्र संशय्यते । किमयमन्तर्यामी प्रत्यगात्मा, उत परमात्मा? इति । किं युक्तम्? प्रत्यगात्मेति । कुतः? वाक्यशेषे 'द्रष्टा श्रोता' इति करणायत्तज्ञानताश्रुतेः । एवं द्रष्टुरेवान्तर्यामित्वोपदेशात् 'नान्योऽतोस्ति द्रष्टा' इति द्रष्टृन्तरनिषेधाच्चेति ।

एवं प्राप्तेऽभिधीयते– **अन्तर्याम्यधिदैवाधिलोकादिषु तद्धर्मव्यपदेशात् ॥** अधिदैवाधिलोकादि पदचिह्नितेषु वाक्येषु श्रूयमाणोऽन्तर्याम्यपहतपाप्मा परमात्मा नारायणः । काण्वपाठ-सिद्धेभ्योऽधिदैवादिमद्भ्यो वाक्येभ्योऽधिकान्यधिलोकादिमन्ति वाक्यानि माध्यन्दिनपाठे सन्तीति ज्ञापनार्थमधिदैवाधिलोकादिष्वित्युभयोरुपादानम् । तदेवमुभयेष्वपि वाक्येष्वन्तर्यामी परमात्मेत्यर्थः । कुतः? तद्धर्मव्यपदेशात् । परमात्मधर्मो ह्ययम् । यदेक एव सन् सर्वलोकसर्वभूतसर्वदेवादीन्नियमयतीति । तथा ह्युद्दालकप्रश्नः 'य इमं च लोकं परं च लोकं सर्वाणि च भूतानि योऽन्तरो यमयति' इत्युपक्रम्य 'तमन्तर्यामिणं ब्रूहि' इति तस्य चोत्तरम् । 'यः पृथिव्यां तिष्ठन्' इत्यारभ्योक्तम् । तदेतत् सर्वान् लोकान् सर्वाणि च भूतानि सर्वान् देवान् सर्वान् वेदान् सर्वांश्च यज्ञानन्तःप्रविश्य सर्वप्रकारनियमनं सर्वशरीरतया सर्वस्यात्मत्वं च सर्वज्ञात् सत्यसङ्कल्पात् पुरुषोत्तमादन्यस्य न सम्भवति । तथाहि 'अन्तःप्रविष्टः शास्ता जनानां सर्वात्मा' । 'तत् सृष्ट्वा । तदेवानुप्राविशत् । तदनुप्रविश्य । सच्च त्यच्चाभवत् ।' इत्यादीन्यौपनिषदानि वाक्यानि परमात्मन एव सर्वस्य प्रशासितृत्वं सर्वस्यात्मत्वमित्यादीनि वदन्ति । तथा सुबालोपनिषदि 'नैवेह किञ्चनाग्र आसीदमूलमनाधारमिमाः प्रजाः प्रजायन्ते दिव्यो देव एको नारायणः । चक्षुश्च द्रष्टव्यं च नारायणः । श्रोत्रं च श्रोतव्यं च नारायणः' इत्यारभ्य 'अन्तश्शरीरे निहितो गुहायामज एको नित्यः यस्य पृथिवी शरीरं यः पृथिवीमन्तरे सञ्चरन् यं पृथिवी न वेद यस्यापश्शरीरम्'

ಹೀಗೊಪ್ಪದಿದ್ದರೆ 'ಅಂತಸ್ತದ್ಧರ್ಮೋಪದೇಶಾತ್' ಇತ್ಯಾದಿ ಸೂತ್ರಗಳಲ್ಲಿಯೂ 'ಆದಿತ್ಯಾದಿಷು

ಇತ್ಯಾದಿ । 'यस्य मृत्युः शरीरं यो मृत्युमन्तरे सञ्चरन् यं मृत्युर्न वेद एष सर्वभूतान्तरात्माऽपहतपाप्मा दिव्यो देव एको नारायणः' इति परस्यैव ब्रह्मणः सर्वात्मत्वं सर्वशरीरत्वं सर्वस्य नियन्तृत्वं च प्रतिपाद्यते । स्वाभाविकं चामृतत्वं परमात्मन एव धर्मः । नच परस्यात्मनः करणायत्तं द्रष्टृत्वादिकम्, अपितु स्वभावत एव सर्वज्ञत्वात् सत्यसङ्कल्पत्वाच्च स्वत एव । तथाच श्रुतिः 'पश्यत्यचक्षुस्स शृणोत्यकर्णः अपाणिपादो जवनो ग्रहीता' इति । नच दर्शनश्रवणादिशब्दाश्चक्षुरादिकरणजन्यमनो ज्ञानस्य वाचकाः, अपितु रूपादिसाक्षात्कारस्य । स च रूपादिसाक्षात्कारः कर्मतिरोहितस्वाभाविकज्ञानस्य जीवस्य चक्षुरादिकरणजन्मा, परस्य तु स्वत एव । 'नान्योऽतोऽस्ति द्रष्टा' इत्येतदपि पूर्ववाक्योदिताभियन्तुर्द्रष्टुरन्यो द्रष्टा नास्तीति वदति । 'यं पृथिवी न वेद' 'यमात्मा न वेद' इत्येवमादिभिर्वाक्यैः पृथिव्यात्मादिनियम्यैरनुलभ्यमान एव नियमयतीति यत्पूर्वमुक्तम्, तदेव 'अदृष्टो द्रष्टा अश्रुतः श्रोता' इति निगमय्य 'नान्योऽतोऽस्ति द्रष्टा' इत्यादिना तस्य नियन्तुर्नियन्त्रन्तरं निषिद्धयते । 'एष त आत्मा' इति च 'ते' इति व्यतिरेकविभक्तिनिर्दिष्टस्य जीवस्यात्मतयोपदिश्यमानोऽन्तर्यामी न प्रत्यगात्मा भवितुमर्हति ।। १९ ।।

नच स्मार्ततद्धर्माभिलापाच्छारीरश्च

स्मार्तम् प्रधानम् । शारीरः जीवः । स्मार्तश्च शारीरश्च नान्तर्यामी । अतद्धर्माभिलापात् तयोरसम्भावितधर्माभिलापात् । स्वभावत एव सर्वस्य द्रष्टृत्वं सर्वस्य नियन्तृत्वं सर्वस्यात्मत्वं स्वत एवामृतत्वं च तयोर्न सम्भावनागन्धमर्हति । एतदुक्तं भवति – यथा स्मार्तमचेतनं सर्वज्ञत्वनियन्तृत्वसर्वात्मत्वादिकं नार्हति तथा जीवोऽप्यतद्धर्मत्वादिति । अमीषां गुणानां परमात्मन्यन्वयः प्रत्यगात्मनि व्यतिरेकश्च सूत्रद्वयेन दर्शितः ।। २० ।।

निरपेक्षं च हेत्वन्तरमाह –

उभयेऽपि हि भेदेनैनमधीयते

उभये माध्यन्दिनाः काण्वाश्च अन्तर्यामिणो नियाम्यत्वेन वागादिभिरचेतनैस्समम् एनं शारीरमपि विभज्याधीयते 'य आत्मनि तिष्ठन्नात्मनोऽन्तरो यमात्मा न वेद यस्यात्मा शरीरं य आत्मानमन्तरो यमयति स त आत्माऽन्तर्याम्यमृतः' इति माध्यन्दिनाः, 'यो विज्ञाने तिष्ठन्' इति च काण्वाः, परमात्मनियम्यतया तस्माद् विलक्षणत्वेनैनमधीयत इत्यर्थः । अतोऽन्तर्यामी प्रत्यगात्मनो विलक्षणोऽपहतपाप्मा परमात्मा नारायण इति सिद्धम् ।। २१ ।।

इति अन्तर्याम्यधिकरणम्

ಅಂತಃ' ಎಂಬುದಾಗಿ ಸಾಧ್ಯವನ್ನು ನಿರ್ದೇಶಿಸಬೇಕಾಗಿತ್ತು. ಏಕೆಂದರೆ ಅಲ್ಲಿಯೂ ಸಹ ಆದಿತ್ಯಾದ್ಯಂತರ್ಗತತ್ವವನ್ನೇ ಸಮರ್ಥಿಸುತ್ತಿರುವುದರಿಂದ.

तस्मादधिदैवादिप्रकरणेषु तद्धर्मव्यपदेशादिति यथाश्रुत एवान्वयः ।

ಆದ್ದರಿಂದ ನಾವು ಹೇಳುವಂತೆ ಅಧಿದೈವ, ಅಧ್ಯಾತ್ಮ, ಅಧಿಭೂತಾದಿಪ್ರಕರಣಗಳಲ್ಲಿ ಭಗವಂತನ ಧರ್ಮಗಳು ಹೇಳಲ್ಪಟ್ಟಿರುವುದರಿಂದ ಅಂತರ್ಯಾಮಿಯೆಂದು ಶ್ರುತನಾದವನು ಅವನೇ ಆಗುತ್ತಾನೆಂದು ಯಥಾಶ್ರುತವಾಗೇ ಅನ್ವಯ ಮಾಡಬೇಕು; ಹೊರತು ಅಧಿದೈವಾದಿಪ್ರಕರಣಗಳಲ್ಲಿ ಅಂತರ್ಯಾಮಿಯಾದವನು ಪರಮಾತ್ಮನೆಂದು ಅನ್ವಯ ಮಾಡಬಾರದು.

स्यं हि वैयर्थ्यादपि लक्षणा ।

ನಿಮಗೂ ಸಹ ಅಧಿದೈವಶಬ್ದಕ್ಕೆ ಅಧಿದೈವಾದಿಪ್ರಕರಣವೆಂಬರ್ಥದಲ್ಲಿ ಲಕ್ಷಣಾ ಮಾಡುವಂತಹ ದೋಷ ಬರುತ್ತದಲ್ಲವೇ? ಎಂದು ಶಂಕಿಸಬಾರದು. ವೈಯರ್ಥ್ಯಕ್ಕಿಂತ ಲಕ್ಷಣಾವು ದೊಡ್ಡ ದೋಷವಲ್ಲ. ವೈಯರ್ಥ್ಯ ಹಾಗೂ ಲಕ್ಷಣಾ ಈ ದೋಷಗಳಲ್ಲಿ ವೈಯರ್ಥ್ಯವೇ ದೊಡ್ಡ ದೋಷ. ನಿಮಗೆ ವೈಯರ್ಥ್ಯ ಬರುತ್ತದೆ. ನಮಗೆ ಲಕ್ಷಣಾ ಬರುತ್ತದೆ.

एवं हि न केवलं तद्धर्मव्यपदेशमात्रं, किन्तु तस्याभ्यासोऽप्यस्तीति सूचितम् ।

ನಮ್ಮ ಪ್ರಕಾರ ಸೂತ್ರವನ್ನು ವ್ಯಾಖ್ಯಾನಿಸಿದಾಗ ಕೇವಲ ತದ್ಧರ್ಮವ್ಯಪದೇಶರೂಪವಾದ ಹೇತುವಷ್ಟೇ ಇರುವುದಲ್ಲ ಹೊರತಾಗಿ, ಭಗವತ್ಪತಿಪಾದಕವಾದ ಧರ್ಮಗಳ ಅಭ್ಯಾಸವೂ ಸಹ ಇರುತ್ತದೆಂದು ಹೇಳಿದಂತಾಗುತ್ತದೆ.

यच्च द्वितीयसूत्रेऽतद्धर्माभिलापो नाम प्रधानधर्मविरुद्धधर्माभिलाप इत्युक्तं,

ಇನ್ನು ಪರರು 'नच स्मार्तम्' ಎಂಬ ಎರಡನೇ ಸೂತ್ರಕ್ಕೆ ಹೀಗೆ ವ್ಯಾಖ್ಯಾನಿಸುತ್ತಾರೆ - 'ಅತದ್ಧರ್ಮಾಭಿಲಾಪ' ಎಂದರೆ ಪ್ರಧಾನದ (ಪ್ರಕೃತಿಯ) ಧರ್ಮಕ್ಕೆ ವಿರುದ್ಧವಾದ ಧರ್ಮವನ್ನು ಹೇಳಿರುವುದರಿಂದ ಬ್ರಹ್ಮನೇ ಅಂತರ್ಯಾಮಿಯಾಗುತ್ತಾನೆ.

तन्न, आद्यसूत्रस्थेन ''तद्धर्मव्यपदेशात्'' इत्यनेन पुनरुक्तेः । ब्रह्मधर्मो हि प्रधानधर्मविरुद्ध एव । तस्मात् त्रिगुणत्वादिधर्माभिलापाभावादित्येवार्थः ।

ಇದು ತಪ್ಪು. ಮೊದಲನೆಯ ಸೂತ್ರದಲ್ಲಿರುವ ''तद्धर्मव्यपदेशात्'' ಎಂಬ ಹೇತುವಿನಿಂದಲೇ ಈ ವಿಷಯವು ಸಿದ್ಧವಾಗಿರುವಾಗ ಪುನರುಕ್ತಿ ಬರುತ್ತದೆ. ಏಕೆಂದರೆ ಮೊದಲನೆಯ

ಸೂತ್ರದಲ್ಲಿ ಬ್ರಹ್ಮನ ಧರ್ಮಗಳು ಹೇಳಲ್ಪಟ್ಟರುವುದರಿಂದ ಎಂದು ಅರ್ಥೈಸಲಾಯಿತು. ಬ್ರಹ್ಮನ ಧರ್ಮಗಳೆಲ್ಲವೂ ಪ್ರಧಾನದ ಧರ್ಮಕ್ಕೆ ವಿರುದ್ಧವೇ ಆಗಿವೆ. ಆದ್ದರಿಂದ ಒಂದೇ ಹೇತುವನ್ನು ಎರಡು ಸೂತ್ರದಲ್ಲಿ ಹೇಳಿದರೆ ಪುನರುಕ್ತಿಯು ಬಂದೇ ಬರುತ್ತದೆ. ಆದ್ದರಿಂದ ನಾವು ಹೇಳುವಂತೆ 'ಅತದ್ಧರ್ಮಾಭಿಲಾಪಾತ್' ಎಂಬ ಹೇತುವಿಗೆ ತ್ರಿಗುಣತ್ವವೇ ಮೊದಲಾದ ಪ್ರಕೃತಿಯ ಧರ್ಮಗಳನ್ನು ಹೇಳದ ಕಾರಣ ಎಂದು ವ್ಯಾಖ್ಯಾನಿಸಬೇಕು.

ಕಿಞ್ಚ – ''ಭೇದವ್ಯಪದೇಶಾತ್'' ''ಭೇದವ್ಯಪದೇಶಾಚ್ಚಾನ್ಯಃ'' ''ಸಮ್ಭೋಗಪ್ರಾಪ್ತಿರಿತಿ ಚೇನ್ನ ವೈಶೇಷ್ಯಾತ್'' ಇತ್ಯಾದಿಕಮತೀತಂ, ''ಶಾರೀರಶ್ಚೋಭಯೇऽಪಿ ಹಿ ಭೇದೇನೈನಮಧೀಯತೇ'' ಇತಿ ವರ್ತಮಾನಂ, ''ವಿಶೇಷಣಭೇದವ್ಯಪದೇಶಾಭ್ಯಾಂ ಚ ನೇತರೌ'' ''ಭೇದವ್ಯಪದೇಶಾತ್'' ಇತ್ಯಾದಿ ಚಾऽऽಗಾಮಿ ಭೇದಪ್ರತಿಪಾದಕಮ್ ।।

ಮತ್ತು ''ಭೇದವ್ಯಪದೇಶಾತ್'' ''ಭೇದವ್ಯಪದೇಶಾಚ್ಚಾನ್ಯಃ'' ''ಸಂಭೋಗಪ್ರಾಪ್ತಿರಿತಿ ಚೇನ್ನ ವೈಶೇಷ್ಯಾತ್'' ಇತ್ಯಾದಿಯಾದ. ಹಿಂದೆ ಬಂದಿರುವ ಅನೇಕ ಸೂತ್ರಗಳಲ್ಲಿ ಭೇದವೇ ಪ್ರತಿಪಾದಿಸಲ್ಪಟ್ಟಿವೆ. ಪ್ರಕೃತ ಪ್ರಸಕ್ತವಾಗಿರುವ ''ಶಾರೀರಶ್ಚೋಭಯೇऽಪಿ ಹಿ ಭೇದೇನೈನಮಧೀಯತೇ'' ಎಂಬ ಸೂತ್ರವೂ ಸಹ ಭೇದವನ್ನೇ ಹೇಳುತ್ತಿದೆ. ಮುಂದೆ ಹೇಳಲಿರುವ ''ವಿಶೇಷಣಭೇದವ್ಯಪದೇಶಾಭ್ಯಾಂ ಚ ನೇತರೌ'' ''ಭೇದವ್ಯಪದೇಶಾತ್'' ಇತ್ಯಾದಿ ಅನೇಕ ಸೂತ್ರಗಳಲ್ಲಿ ಭೇದವನ್ನೇ ಪ್ರತಿಪಾದಿಸುತ್ತಾರೆ. ಹೀಗೆ ಹಿಂದಿನ, ಮುಂದಿನ ಮತ್ತು ಈಗಿನ ಸೂತ್ರಗಳೆಲ್ಲವೂ ಭೇದವನ್ನೇ ಪ್ರತಿಪಾದಿಸುತ್ತಿವೆ. ಇದಕ್ಕೆ ವಿರುದ್ಧವಾಗಿ ನೀವು ಅಭೇದವನ್ನು ಹೇಗೆ ಪ್ರತಿಪಾದಿಸುತ್ತೀರಿ?

ಅದ್ವೈತಿಭಿರ್ವ್ಯಾಕ್ರಿಯತೇ ಕಥಮದ್ವೈತದೂಷಕಮ್ ।
ಸೂತ್ರಜಾತಂ ಸ್ವಸಿದ್ಧಾನ್ತತಯಾ ಲಜ್ಜಾಂ ವಿನೈವ ತು ।।

ಅದ್ವೈತಮತವನ್ನು ದೂಷಿಸುವ ಭೇದಪ್ರತಿಪಾದಕ ಸೂತ್ರಗಳ ಸಮೂಹವನ್ನು ಅದ್ವೈತಿಗಳು ತಮ್ಮ ಸಿದ್ಧಾಂತ ಪರವಾಗಿ ನಾಚಿಕೆ ಬಿಟ್ಟು ವ್ಯಾಖ್ಯಾನಿಸುತ್ತಾರೆ. ಇದು ಹೇಗೆ? ಎಂಬುದು ಆಶ್ಚರ್ಯ.

ಯದಿ ಮಿಥ್ಯಾರ್ಥವಾದೀನಿ ಸೂತ್ರಾಣೀತ್ಯೇವ ಕೀರ್ತನಮ್ ।
ಸೂತ್ರವ್ಯಾಖ್ಯಾ ತರ್ಹಿ ವೇದಬೋಧ್ಯಮಿಥ್ಯಾತ್ವಬೋಧಕಃ ।।

ಒಂದು ವೇಳೆ ಭೇದಪ್ರತಿಪಾದಕವಾದ ಸೂತ್ರಗಳೆಲ್ಲವೂ ಮಿಥ್ಯಾಭೂತವಾದ ಭೇದವನ್ನು ಪ್ರತಿಪಾದಿಸುತ್ತಿವೆ ಎಂದು ತಮ್ಮ ವಾದವನ್ನು ಅದ್ವೈತಿಗಳು ಸಮರ್ಥಿಸಿಕೊಳ್ಳುವುದಾದರೆ

ವೇದಪ್ರತಿಪಾದ್ಯವಾದ ಸುಳ್ಳು ಎಂಬ ಪದಾರ್ಥವನ್ನು ಈ ಸೂತ್ರಗಳು ಪ್ರತಿಪಾದಿಸುತ್ತಿವೆ ಎಂದು ಹೇಳಿದಂತಾಯಿತು.

ಬೌದ್ಧಾಗಮೋऽಪಿ ವೇದಸ್ಯ ವ್ಯಾಖ್ಯಾರೂಃ ಪ್ರಸಜ್ಯತೇ ।
ಬೌದ್ಧೋऽಪಿ ಬ್ರಹ್ಮಸೂತ್ರಾಣಿ ವ್ಯಾಖ್ಯಾಯಾನ್ತೇ ಭವಾನಿವ ।।

ಹಾಗಾದರೆ ಬೌದ್ಧಾಗಮವೂ ಸಹ ವೇದಕ್ಕೆ ವ್ಯಾಖ್ಯಾನವಾಗಬಹುದು. ನಿನ್ನಂತೆ ಬೌದ್ಧನೂ ಸಹ ಬ್ರಹ್ಮಸೂತ್ರಗಳನ್ನು ವ್ಯಾಖ್ಯಾನಿಸುತ್ತಾನೆ.

ಮಿಥ್ಯೈಷोऽರ್ಥಃ ಕಿನ್ತು ತತ್ತ್ವಂ ಶೂನ್ಯಮೇವೇತಿ ಕೀರ್ತಯೇತ್ ।
ಅಸದ್ವೈ(ಽಇ)ತ್ಯಾದಿವಚನಂ ತಸ್ಯ ಸ್ಯಾತ್ತತ್ತ್ವವೇದಕಮ್ ।।

ವೇದವನ್ನು ವ್ಯಾಖ್ಯಾನಿಸಿದ ಮೇಲೆ ಬೌದ್ಧನು. ಎಲ್ಲವೂ ಸಹ ಮಿಥ್ಯಾ. ತತ್ತ್ವವು ಶೂನ್ಯ ಎಂದು ಸಮರ್ಥಿಸಿ 'ಅಸದ್ವಾ ಇದಮಗ್ರ ಆಸೀತ್' ಇತ್ಯಾದಿ ಕೆಲವೇ ಕೆಲವು ಪ್ರಮಾಣಗಳನ್ನು ಆಧಾರವನ್ನಾಗಿ ನೀಡುತ್ತಾನೆ. ಆದ್ದರಿಂದ ಅಂತಹ ವೇದವೂ ಸಹ ಅವನಿಗೆ ತತ್ತ್ವವೇದಕವೇ ಆಗಬೇಕಾಗುತ್ತದೆ.

ಅಪೌರುಷೇಯಭಾವೇನ ಪ್ರಯುಕ್ತಾ ಚ ಪ್ರಮಾಣತಾ ।
ವ್ಯಾವಹಾರಿಕಮಾತ್ರೇಣ ನಾರ್ಥೇನ ಪರಿತುಷ್ಯತಿ ।।

ಬೌದ್ಧರು ವೇದವನ್ನು ಅಪೌರುಷೇಯವಾದ್ದರಿಂದ ಪ್ರಮಾಣವೆಂದು ಹೇಳುವುದಿಲ್ಲ. ನಾವಾದರೂ ಅಪೌರುಷೇಯತ್ವವನ್ನು ಒಪ್ಪುತ್ತೇವಲ್ಲವೇ ಎಂದು ಅದ್ವೈತಿಗಳು ಅಹಂಕಾರದಿಂದ ಉತ್ತರಿಸಬಹುದು. ಆದರೆ ಕೇವಲ ವ್ಯವಹಾರಿಕವಾದ ವಿಷಯವನ್ನು ಪ್ರತಿಪಾದಿಸುವ ಮಾತ್ರದಿಂದ ಅಪೌರುಷೇಯ ಪ್ರಯುಕ್ತವಾದ ಪ್ರಾಮಾಣ್ಯವನ್ನು ವೇದಕ್ಕೆ ಸಮರ್ಥಿಸಿದಂತಾಗುವುದಿಲ್ಲ. ಪ್ರಾಮಾಣ್ಯವು ನೀವು ನೀಡುವ ಕಾರಣದಿಂದ ಸಂತೋಷವನ್ನು ಹೊಂದುವುದಿಲ್ಲ.

ಅಸಕೃಚ್ಛ್ರುತಿಭಿಃ ಸೂತ್ರೈರ್ಭೇದೇ ಯತ್ನೇನ ಸಾಧಿತೇ ।
ಮಿಥ್ಯಾರ್ಥತಾಂ ಕಥಂ ಬ್ರೂಯಾತ್ ಸೂತ್ರಾಣಾಂ ಭಾಷ್ಯಕೃತ್ಸ್ವಯಮ್ ।।

ಅನೇಕ ಶ್ರುತಿಗಳ ಆಧಾರದಿಂದ ಪ್ರಯತ್ನಪೂರ್ವಕವಾಗಿ ಸೂತ್ರಗಳಿಂದ ಭೇದವನ್ನು ಸಮರ್ಥಿಸಲಾಗಿದೆ. ಹೀಗಿರುವಾಗ ಸ್ವತಃ ಭಾಷ್ಯಕಾರನೆಂಬ ಪಟ್ಟಿಯನ್ನು ಹಾಕಿಕೊಂಡ ನೀನು ಸೂತ್ರಗಳಿಗೆ ಸುಳ್ಳು ಸುಳ್ಳಾದ ಅರ್ಥವನ್ನು ಹೇಳುವುದು ಹೇಗೆ ಸರಿಯಾಗುತ್ತದೆ.

सौगता वेदबाह्या हि वेदाप्रामाण्यवादिनः ।
अवैदिका इति ज्ञात्वा वैदिकैः परिवर्जिताः ।।

ಬೌದ್ಧನು ವೇದಪ್ರಾಮಾಣ್ಯವನ್ನು ಒಪ್ಪುವುದಿಲ್ಲ. ವೇದಬಾಹ್ಯನಾಗಿದ್ದಾನೆ. ಆದ್ದರಿಂದಲೇ ಅವೈದಿಕನಾಗಿದ್ದಾನೆಂದು ತಿಳಿದು ಎಲ್ಲ ವೈದಿಕರು ಬೌದ್ಧರನ್ನು ದೂರವಿಟ್ಟಿದ್ದಾರೆ.

वेदान् प्रविश्य वेदानामप्रामाण्यं प्रसाधयन् ।
मायी तु यत्रतस्ताज्यो वैदिकैर्हितशत्रुवत् ।।

ಆದರೆ ಅದ್ವೈತಿಗಳು ವೇದದ ಒಳಗಡೆ ಪ್ರವೇಶಿಸಿ ವೈದಿಕರೆಂಬ ಪಟ್ಟಿಯನ್ನು ಕಟ್ಟಿಕೊಂಡು ವೇದದ ಅಪ್ರಮಾಣ್ಯವನ್ನೇ ಸಾಧಿಸುವ ಗುರಿಯನ್ನು ಇಟ್ಟುಕೊಂಡಿದ್ದಾರೆ. ಇಂತಹ ಮಾಯಾವಾದಿಗಳು ಎಲ್ಲಾ ವೈದಿಕರಿಗೆ ಹಿತಶತ್ರುಗಳಾಗಿದ್ದಾರೆ. ಶತ್ರುವಿಗಿಂತ ಹಿತಶತ್ರುವಾದವನು ಬಹಳ ಅಪಾಯಕಾರಿ. ಆದ್ದರಿಂದ ಬೌದ್ಧರಿಗಿಂತಲೂ ಇಂತಹ ಮಾಯಾವಾದಿಗಳನ್ನು ಬಹಳಷ್ಟು ದೂರದಲ್ಲಿಡಬೇಕು.

टीकाक्षरार्थस्तु स्पष्टः ।।

।। इति श्रीब्रह्मण्यतीर्थपूज्यश्रीपादशिष्यव्यासतीर्थविरचितायां तात्पर्यचन्द्रिकायाम् अन्तर्याम्यधिकरणं सम्पूर्णम् ।।

ಟೀಕೆಯಲ್ಲಿರುವ ಕಠಿಣಪದಾರ್ಥಗಳು ಸ್ಪಷ್ಟವಾಗಿರುವುದರಿಂದ ಪ್ರತ್ಯೇಕವಾಗಿ ಬರೆದಿರುವುದಿಲ್ಲ.

ಇಲ್ಲಿಗೆ ತಾತ್ಪರ್ಯಚಂದ್ರಿಕೆಯ ಕನ್ನಡಾನುವಾದದಲ್ಲಿ
ಅಂತರ್ಯಾಮ್ಯಧಿಕರಣವು ಸಂಪೂರ್ಣವಾಯಿತು.

प्रकाशः –

एवमधिकरणप्रमेयं परमते निरस्य, मायिमते रामानुजमते च सूत्राक्षारार्थानुपपत्तिमाह – **यच्चेति** ।

ಪರಿಪೂರ್ಣಚಂದ್ರಿಕಾ

ವಿವರಣೆ - ಈ ಹಿಂದೆ ರಾಮಾನುಜರ ಹಾಗೂ ಅದ್ವೈತಿಗಳ ಅಧಿಕರಣ ರಚನೆಯನ್ನು ನಿರಾಕರಿಸಿದ್ದಾಯಿತು. ಪ್ರಕೃತ ಮಾಯಾವಾದಿಗಳ ಹಾಗೂ ರಾಮಾನುಜರ ಸೂತ್ರಾಕ್ಷರಾರ್ಥದಲ್ಲಿರುವ ಅನುಪಪತ್ತಿಯನ್ನು ತೋರಿಸುವುದಕ್ಕಾಗಿ 'ಯಚ್ಚ' ಇತ್ಯಾದಿ ಗ್ರಂಥವು ಹೊರಟಿರುತ್ತದೆ.

ಪ್ರಕಾಶಃ – केषाञ्चिदधिकरणशरीरं परमतादनतिभिन्नत्वान्न पृथग्दूषितम् । तथा हि –

ಇನ್ನು ಕೆಲವು ಪರವಾದಿಗಳ ಅಧಿಕರಣಶರೀರವನ್ನು ಗ್ರಂಥಕಾರರು ಪ್ರತ್ಯೇಕವಾಗಿ ದೂಷಿಸಿಲ್ಲ. ಏಕೆಂದರೆ ಅದ್ವೈತಮತಕ್ಕಿಂತ ಹೆಚ್ಚಿನ ವ್ಯತ್ಯಾಸವೇನೂ ಅವರ ಮತದಲ್ಲಿ ಕಾಣಿಸುವುದಿಲ್ಲ. ಅವರ ಅಧಿಕರಣ ಶರೀರ ಹೀಗಿದೆ -

ಪ್ರಕಾಶಃ – प्रधानस्य वाक्यशेषोक्तद्रष्टृत्वाद्ययोगेन शङ्कितुमयोग्यत्वात्, अयमन्तर्यामी ऐश्वर्ययोगविशेषनिमित्तप्रकृष्टादृष्टवान् जीवविशेषः परमात्मा वेति सन्देहे,

ವಾಕ್ಯಶೇಷದಲ್ಲಿ ಹೇಳಲ್ಪಟ್ಟಿರುವ ದ್ರಷ್ಟೃತ್ವಾದಿಗಳು ಪ್ರಧಾನದಲ್ಲಿ ಯುಕ್ತವಾಗುವುದಿಲ್ಲ. ಆದ್ದರಿಂದ ಪ್ರಧಾನದಲ್ಲಿ ಅಂತಹ ದ್ರಷ್ಟೃತ್ವಗಳು ಬರುತ್ತವೋ, ಇಲ್ಲವೋ? ಎಂಬ ಶಂಕೆಯೇ ತಪ್ಪಾಗುತ್ತದೆ. ಆದ್ದರಿಂದ ಅಂತರ್ಯಾಮಿಯೆಂದು ಹೇಳಲ್ಪಟ್ಟಿರುವನು ಐಶ್ವರ್ಯಾದಿ ಗುಣವಿಶೇಷನಿಮಿತ್ತಕವಾಗಿ ಅದೃಷ್ಟವಂತನಾದ ಜೀವವಿಶೇಷನೋ, ಅಥವಾ ಪರಮಾತ್ಮನೋ? ಎಂದು ಸಂದೇಹ.

ಪ್ರಕಾಶಃ – वाक्यशेषे ''द्रष्टा श्रोता मन्ता'' इति करणजन्यदर्शनश्रवणमननादि-रूपज्ञानवत्त्वश्रवणात् तस्य च जीव एव सम्भवाद् द्रष्टृत्वादेः करणजन्य-ज्ञानपरत्वमनङ्गीकृत्य रूपादिसाक्षात्कारमात्रपरत्वेऽङ्गीक्रियमाणे रूपादिसाक्षात्कारस्य जीवपरयोः साधारण्येन अस्मिन् प्रकरणे ''नान्योऽतोऽस्ति द्रष्टा'' इति द्रष्टृन्तरनिषेधायोगात् करणायत्तज्ञानपरत्वात्, जीवस्यैतादृशद्रष्टृत्वेन निषेधायोगात्तद्बलेन ''आत्मनि तिष्ठन् आत्मनोऽन्तरो यमात्मा न वेद'' इत्यात्मस्थित्यन्तरत्वाविदितत्वनियन्तृत्वादेः कथञ्चिन्नेयत्वात् जीवविशेष एवान्तर्यामीति प्राप्ते,

ಪೂರ್ವಪಕ್ಷ - ವಾಕ್ಯಶೇಷದಲ್ಲಿ ದ್ರಷ್ಟಾ, ಶ್ರೋತಾ, ಮಂತಾ ಇತ್ಯಾದಿಯಾಗಿ ಯಾರೋ ಒಬ್ಬನಿಗೆ ಇಂದ್ರಿಯಜನ್ಯವಾದ ದರ್ಶನ, ಶ್ರವಣ, ಮನನ ಇತ್ಯಾದಿ ರೂಪವಾದ ಜ್ಞಾನವಿರುವಿಕೆಯನ್ನು ಹೇಳಲಾಗಿದೆ. ಇಂತಹ ಜ್ಞಾನವತ್ವವು ಜೀವನಲ್ಲೇ ಬರುತ್ತದೆ, ಹೊರತು ಪರಮಾತ್ಮನಲ್ಲಿ ಬರುವುದಿಲ್ಲ. ಒಂದುವೇಳೆ 'ದ್ರಷ್ಟಾ' ಇತ್ಯಾದಿ ಪದಗಳಿಗೆ ಇಂದ್ರಿಯಜನ್ಯಜ್ಞಾನವಿಷಯತ್ವವನ್ನು ಒಪ್ಪದೇ ಕೇವಲ

ರೂಪಾದಿಸಾಕ್ಷಾತ್ಕಾರವುಳ್ಳವನೆಂಬ ಅರ್ಥವನ್ನು ಅಂಗೀಕರಿಸಿದರೆ ರೂಪಾದಿಸಾಕ್ಷಾತ್ಕಾರವು ಜೀವ ಹಾಗೂ ಪರಮಾತ್ಮ ಇಬ್ಬರಲ್ಲಿಯೂ ಸಾಧಾರಣವಾಗಿರುತ್ತದೆ. ಆವಾಗ ಇಬ್ಬರಲ್ಲಿಯೂ ದ್ರಷ್ಟೃತ್ವಾದಿಗಳನ್ನು ಹೇಳಿದಂತಾಗುತ್ತದೆ. ಹೀಗೆ ಹೇಳಿದರೆ ಅದೇ ಪ್ರಕರಣದಲ್ಲಿ ''ನಾನ್ಯೋಽತೋಽಸ್ತಿ ದ್ರಷ್ಟಾ'' ಎಂಬ ಶ್ರುತಿಯಲ್ಲಿ ಮತ್ತೊಬ್ಬ ದ್ರಷ್ಟೃಪುರುಷವಿಲ್ಲವೆಂದು ನಿಷೇಧ ಮಾಡಿದ್ದು ತಪ್ಪಾಗುತ್ತದೆ. ಅದಕ್ಕೋಸ್ಕರ ಇಂದ್ರಿಯಜನ್ಯಜ್ಞಾನವಿಷಯತ್ವವೆಂಬ ಅರ್ಥವನ್ನೇ 'ದ್ರಷ್ಟಾ' ಇತ್ಯಾದಿ ಪದಗಳಿಗೆ ಹೇಳಬೇಕು. ಜೀವನಲ್ಲಿ ಇಂತಹ ಇಂದ್ರಿಯಜನ್ಯಜ್ಞಾನವು ಇರುವುದರಿಂದ ಅವನು ದ್ರಷ್ಟೃತ್ವವುಳ್ಳವನಾಗಿದ್ದಾನೆ. ಆದ್ದರಿಂದಲೇ ''ನಾನ್ಯೋಽತೋಽಸ್ತಿ ದ್ರಷ್ಟಾ'' ಎಂಬ ಶ್ರುತಿಯಿಂದ ಜೀವನನ್ನು ನಿಷೇಧಿಸಲು ಸಾಧ್ಯವಿಲ್ಲ. ಈ ಒಂದು ಯುಕ್ತಿಯ ಆಧಾರದಿಂದ ''ಆತ್ಮನಿ ತಿಷ್ಠನ್ ಆತ್ಮನೋಽಂತರೋ ಯಮಾತ್ಮಾ ನ ವೇದ'' ಇತ್ಯಾದಿ ವಾಕ್ಯಗಳಲ್ಲಿ ಕೇಳಿಸುತ್ತಿರುವ ಆತ್ಮಸ್ಥಿತಿ, ಅಂತರತ್ವ, ಅವಿದಿತತ್ವ ಮತ್ತು ನಿಯಂತೃತ್ವಾದಿಗಳನ್ನು ಜೀವನಲ್ಲಿ ಗೌಣವಾಗಿ ವ್ಯಾಖ್ಯಾನಿಸಬೇಕು. ಹಾಗಾಗಿ ಏಶ್ವರ್ಯಾದಿಗುಣಗಳುಳ್ಳ ಜೀವನೆಂಬ ವಿಶೇಷಪುರುಷನೇ ಅಂತರ್ಯಾಮಿಯೆಂದು ಶ್ರುತಿಪ್ರತಿಪಾದ್ಯನಾಗಿದ್ದಾನೆ.

प्रकाशः – ''यः पृथिव्यां तिष्ठन्'' इत्यादिषु पृथिव्यादिसर्वभूतान्तःप्रवेशसर्वनियमनसर्वशरीरकत्वादितद्धर्मोपदेशात् परमात्मैव । ''द्रष्टा'' इत्यादिवाक्यशेषस्तु रूपादिसाक्षात्कारमात्रपरो न करणायत्तज्ञानपरः । स च ''पश्यत्यचक्षुः स शृणोत्यकर्णः'' इत्यादिना परस्यैव । ''नान्योऽतोऽस्ति'' इति द्रष्टृन्तरनिषेधस्तु स्वातन्त्र्येण द्रष्टृन्तरनिषेधपर इति सिद्धान्त इति ।

ಸಿದ್ಧಾಂತ - ಪರಮಾತ್ಮನೇ ಅಂತರ್ಯಾಮಿಯಾಗಿದ್ದಾನೆ; ಹೊರತು ಜೀವನಲ್ಲ. ಏಕೆಂದರೆ ಪೃಥಿವಿಯೇ ಮೊದಲಾದ ಸಕಲ ಭೂತಪದಾರ್ಥಗಳ ಒಳಗಡೆ ಪ್ರವೇಶಿಸಿ ಎಲ್ಲವನ್ನೂ ನಿಯಮನ ಮಾಡುತ್ತಾನಾದ್ದರಿಂದ ಪೃಥಿವ್ಯಾದಿಗಳೆಲ್ಲವೂ ಅವನಿಗೆ ಶರೀರವಾಗಿವೆ. ಹೀಗೆ ಭಗವಂತನ ಅನೇಕ ಧರ್ಮಗಳು ಕೇಳಿಸುತ್ತಿರುವುದರಿಂದ ಪರಮಾತ್ಮನೇ ಅಂತರ್ಯಾಮಿಯಾಗಿದ್ದಾನೆ. ಹಾಗಾದರೆ 'ದ್ರಷ್ಟಾ ಶ್ರೋತಾ' ಎಂಬ ಶ್ರುತಿಗೆ ಏನರ್ಥ? ಎಂದು ಪ್ರಶ್ನಿಸಬಾರದು. 'ದ್ರಷ್ಟಾ' ಇತ್ಯಾದಿ ಪದಗಳಿಗೆ ಇಂದ್ರಿಯಜನ್ಯಜ್ಞಾನವುಳ್ಳವನೆಂಬರ್ಥವನ್ನು ಮಾಡಬೇಕಾಗಿಲ್ಲ. ರೂಪಾದಿಸಾಕ್ಷಾತ್ಕಾರವುಳ್ಳವನೆಂಬ ಅರ್ಥವನ್ನಷ್ಟೇ ಮಾಡಬೇಕು. ಇಂತಹ ರೂಪಾದಿಸಾಕ್ಷಾತ್ಕಾರವೂ ಸಹ ''ಪಶ್ಯತ್ಯಚಕ್ಷುಃ ಸ ಶೃಣೋತ್ಯಕರ್ಣಃ'' ಇತ್ಯಾದಿ ಮಾತುಗಳ ಆಧಾರದಿಂದ ಪರಮಾತ್ಮನಲ್ಲಿ ಯುಕ್ತವಾಗುತ್ತದೆ. ಹಾಗಾದರೆ 'ನಾನ್ಯೋಽತೋಽಸ್ತಿ ದ್ರಷ್ಟಾ' ಮತ್ತೊಬ್ಬ ದ್ರಷ್ಟೃಪುರುಷನಿಲ್ಲವೆಂದು ಶ್ರುತಿಯು ಹೇಗೆ ನಿಷೇಧಮಾಡುತ್ತಿದೆ? ಎಂದರೆ ಸ್ವತಂತ್ರನಾದ, ಪ್ರಧಾನನಾದ ಮತ್ತೊಬ್ಬ ದ್ರಷ್ಟೃಪುರುಷನಿಲ್ಲವೆಂದೇ ಶ್ರುತಿಯ ಅಭಿಪ್ರಾಯ. ಹೀಗೆ ಸಿದ್ಧಾಂತ ಮಾಡಿದ್ದಾರೆ.

ಪ್ರಕಾಶಃ – ಅತ್ರ ಪ್ರಧಾನಪೂರ್ವಪಕ್ಷಸ್ಯ ಪ್ರಾಗೇವ ಸಮರ್ಥನೇನ ತತ್ತ್ಯಾಗೋऽಯುಕ್ತಃ । ಅನ್ಯಥಾ ''ನಚ ಸ್ಮಾರ್ತಮ್'' ಇತಿ ಪ್ರಧಾನಪ್ರತ್ಯಾಖ್ಯಾನಾಯೋಗಃ ।

ಇವರು ಪ್ರಧಾನವನ್ನು ಬಿಟ್ಟು ಕೇವಲ ಜೀವನನ್ನು ಪೂರ್ವಪಕ್ಷವಿಷಯವನ್ನಾಗಿ ಸ್ವೀಕರಿಸಿದ್ದೇ ತಪ್ಪು. ಏಕೆಂದರೆ ಈ ಹಿಂದೆ ಪ್ರಧಾನಪೂರ್ವಪಕ್ಷವನ್ನು ಸಮರ್ಥಿಸಿದ್ದರಿಂದ ಇಲ್ಲಿ ಅದನ್ನು ಬಿಡುವುದು ಸರಿಯಲ್ಲ. ಒಂದುವೇಳೆ ಪ್ರಧಾನನ್ನು ಬಿಟ್ಟು ಜೀವನನ್ನು ಮಾತ್ರ ಪೂರ್ವಪಕ್ಷ ಮಾಡಿದರೆ 'ನಚ ಸ್ಮಾರ್ತಮ್' ಎಂಬ ಸೂತ್ರದಲ್ಲಿ ಪ್ರಧಾನವನ್ನು ನಿರಾಕರಿಸಿದ್ದೇ ತಪ್ಪಾದೀತು.

ಪ್ರಕಾಶಃ – ಯದತ್ರೋಕ್ತಂ ಶ್ರುತಪ್ರಕಾಶೇ – ''ನಚ ಸ್ಮಾರ್ತಮ್'' ಇತಿ ದೃಷ್ಟಾನ್ತತಯೈವೋಪನ್ಯಸ್ತೋ ನ ಪ್ರಾಧಾನ್ಯೇನ ಅತ ಏವ ''ನಚ ಸ್ಮಾರ್ತಮತದ್ಧರ್ಮಾಭಿಲಾಪಾಚ್ಛಾರೀರಶ್ಚ'' ಇತ್ಯೇವಮನ್ತಮೇಕಂ ಸೂತ್ರಮಿತಿ,

ಇದಕ್ಕೆ ಶ್ರುತಪ್ರಕಾಶದ ಸಮರ್ಥನೆ ಹೀಗಿದೆ - 'ನಚ ಸ್ಮಾರ್ತಮ್' ಎಂಬ ಸೂತ್ರದಲ್ಲಿ ಪ್ರಧಾನವನ್ನು ನಿರಾಕರಿಸುತ್ತಿಲ್ಲ; ಹೊರತಾಗಿ, ಕೇವಲ ದೃಷ್ಟಾಂತವನ್ನಷ್ಟೇ ಹೇಳಿದ್ದಾರೆ. ಯಾವರೀತಿಯಾಗಿ ಪ್ರಧಾನವು ಅಂತರ್ಯಾಮಿಯಾಗಿಲ್ಲವೋ ಅದರಂತೆ ಜೀವನೂ ಸಹ ಅಂತರ್ಯಾಮಿಯಾಗಿರುವುದಿಲ್ಲ. ಆದ್ದರಿಂದಲೇ ''ನಚ ಸ್ಮಾರ್ತಮತದ್ಧರ್ಮಾಭಿಲಾಪಾತ್ ಶಾರೀರಶ್ಚ'' ಎಂಬಲ್ಲಿಯ ತನಕ ಒಂದೇ ಸೂತ್ರವೆಂದು ಪರಿಗಣಿಸಬೇಕು. 'ಉಭಯೇऽಪಿ ಹಿ ಭೇದೇನೈನಮಧೀಯತೇ' ಎಂಬುದನ್ನು ಮತ್ತೊಂದು ಸೂತ್ರವೆಂದು ಪರಿಗಣಿಸಬೇಕು.

ಪ್ರಕಾಶಃ – ತನ್ನ, ದೃಷ್ಟಾನ್ತತ್ವದ್ಯೋತಕಾಭಾವಾತ್ । ಅನ್ಯಥಾ ''ನಾನುಮಾನಮತಚ್ಛಬ್ದಾತ್'' ''ಪ್ರಾಣಭೃಚ್ಚ'' ಇತ್ಯಾದಾವಪಿ ತಥಾತ್ವಾಪತ್ತಿಃ ।

ಶ್ರುತಪ್ರಕಾಶದ ಈ ಧೋರಣೆ ಸರಿಯಿಲ್ಲ. ಪ್ರಧಾನವನ್ನು ದೃಷ್ಟಾಂತವೆಂದು ಪರಿಗಣಿಸಬೇಕೆಂದರೆ ಸೂತ್ರದಲ್ಲಿ ದೃಷ್ಟಾಂತ ದ್ಯೋತಕವಾದ ''ಯಥಾ'' ಅಥವಾ ''ಇವ'' ಇತ್ಯಾದಿ ಶಬ್ದಗಳು ಇರಬೇಕಾಗುತ್ತದೆ. ಅಂತಹ ಪದಗಳೇನೂ ಕಾಣಿಸುತ್ತಿಲ್ಲ. ಆದ್ದರಿಂದ 'ನಚ ಸ್ಮಾರ್ತಮ್' ಎಂಬ ಸೂತ್ರವು ಪ್ರಧಾನವನ್ನು ನೇರವಾಗಿಯೇ ನಿರಾಕರಿಸುತ್ತಿದೆ ಎಂದು ಹೇಳಬೇಕು. ಮತ್ತು 'ನಚ ಸ್ಮಾರ್ತಮತದ್ಧರ್ಮಾಭಿಲಾಪಾತ್' ಎಂಬುದೇ ಬೇರೆ ಸೂತ್ರ. 'ಶಾರೀರಶ್ಚೋಭಯೇऽಪಿ ಹಿ ಭೇದೇನೈನಮಧೀಯತೇ' ಎಂಬುದು ಮತ್ತೊಂದು ಸೂತ್ರವೆಂದು ಹೇಳಬೇಕು. ಹೀಗೊಪ್ಪದಿದ್ದರೆ ''ನಾನುಮಾನಮತಶಬ್ದಾತ್'' ''ಪ್ರಾಣಭೃಚ್ಚ'' ಎಂಬುದನ್ನು ಒಂದೇ ಸೂತ್ರವೆಂದು ಪರಿಗಣಿಸಿರಿ. ಅನುಮಾನಶಬ್ದವು ಪ್ರಧಾನದ ದೃಷ್ಟಾಂತವನ್ನು ನೀಡುವ ಮೂಲಕ 'ಪ್ರಾಣಭೃತ್' ಆಂದರೆ ಜೀವನನ್ನು ಅಲ್ಲಗಳೆಯುತ್ತಿದೆ ಎಂದು ವ್ಯಾಖ್ಯಾನಿಸಿರಿ. ಆದರೆ ಆ ಸಂದರ್ಭದಲ್ಲಿ ನೀವೇ ಹಾಗೇ ವ್ಯಾಖ್ಯಾನಿಸಿಲ್ಲ. ಹೀಗಿರುವಾಗ ಒಂದೊಂದು ಕಡೆ ಒಂದೊಂದು ಬಗೆ ಸೂತ್ರಗಳನ್ನು ವ್ಯಾಖ್ಯಾನಿಸುವುದು ಮೂರ್ಖಿತನವಲ್ಲವೇ?

ಪ್ರಕಾಶಃ – ದೃಷ್ಟಾನ್ತೋಪಾದಾನಸ್ಯ ವೈಯರ್ಥ್ಯಾಚ್ಚ । 'ನಚ ಶಾರೀರಃ ಸ್ಮಾರ್ತವತ್' ಇತ್ಯಾದಿವಿನ್ಯಾಸಾಪಾತಾಚ್ಚ ।

ಮತ್ತು ದೃಷ್ಟಾಂತವನ್ನು ನೀಡುವ ಆವಶ್ಯಕತೆಯೇ ಇಲ್ಲ. ದೃಷ್ಟಾಂತವನ್ನು ಹೇಳದೇ ಜೀವನು ಅಂತರ್ಯಾಮಿಯಾಗಿಲ್ಲ ಎಂದು ಉಪಪಾದಿಸಿದರೆ ಸಾಕು. ಮತ್ತು 'ನಚ ಶಾರೀರಃ ಸ್ಮಾರ್ತವತ್' ಎಂದೇ ಸೂತ್ರದ ವಿನ್ಯಾಸ ಇರಬೇಕಾಗುತ್ತದೆ ಎಂದೂ ಆಪಾದಿಸಲು ಬರುತ್ತದೆ.

ಪ್ರಕಾಶಃ – ಪ್ರಧಾನಶಙ್ಕಾನುದಯಾದೇವಂ ಕಲ್ಪನಮಿತಿ ಚೇನ್ನ,

ಆಕ್ಷೇಪ - ಪ್ರಕೃತಿಯು ಅಂತರ್ಯಾಮಿಯಾಗಿರಬಹುದೆಂಬ ಸಂಶಯವೇ ಹುಟ್ಟುವುದಿಲ್ಲ. ಹೀಗಿರುವಾಗ ಪ್ರಕೃತಿಯು ಪೂರ್ವಪಕ್ಷಕ್ಕೆ ವಿಷಯವಾಗಲು ಹೇಗೆ ಅರ್ಹವಾಗುತ್ತದೆ? ಈ ಉದ್ದೇಶಕ್ಕೋಸ್ಕರ ನಾವು ಪ್ರಕೃತಿಯನ್ನು ದೃಷ್ಟಾಂತವೆಂದು ಪರಿಗಣಿಸಿದ್ದೇವೆ.

ತಚ್ಛಙ್ಕೋದಯಸ್ಯ ಮೂಲ ಏವೋಕ್ತತ್ವಾತ್ । 'ಶಾರೀರಶ್ಚ' ಇತಿ ಚಶಬ್ದಾಸ್ವಾರಸ್ಯಾಚ್ಚ ।

ಸಮಾಧಾನ - ಇದು ತಪ್ಪು. ಪ್ರಕೃತಿಯು ಪೂರ್ವಪಕ್ಷಕ್ಕೆ ವಿಷಯವಾಗುತ್ತದೆಂದು ಮೂಲದಲ್ಲಿಯೇ ನಾವು ಈ ಹಿಂದೆಯೇ ಪ್ರತಿಪಾದಿಸಿದ್ದೇವೆ. ಮತ್ತು 'ಶಾರೀರಶ್ಚ' ಎಂಬ ಸೂತ್ರದಲ್ಲಿ 'ಚ' ಶಬ್ದದಿಂದ ಪ್ರಕೃತಿಯನ್ನು ಸಮಾಕರ್ಷಮಾಡಿರುತ್ತಾರೆ. ಜೀವನೊಬ್ಬನೇ ಪೂರ್ವಪಕ್ಷಕ್ಕೆ ವಿಷಯನಾದರೆ ಈ 'ಚ' ಶಬ್ದವು ಅಸ್ವರಸವಾಗುತ್ತದೆ.

ಪ್ರಕಾಶಃ – ಅಸ್ಯಾಪಿ ಜೀವಮಾತ್ರನಿರಾಸಪರತ್ವೇ ಯೋಗವಿಭಾಗಾಯೋಗೇನ ''ಅತದ್ಧರ್ಮಾಭಿಲಾಪಾತ್ ಶಾರೀರಶ್ಚೋಭಯೇऽಪಿ ಹಿ ಭೇದೇನೈನಮಧೀಯತೇ'' ಇತ್ಯೇಕವಾಕ್ಯತಯೈವ ವಿನ್ಯಾಸಃ ಸ್ಯಾದಿತಿ ।

ಮತ್ತು 'ಶಾರೀರಶ್ಚ' ಎಂಬ ಸೂತ್ರವು ಕೇವಲ ಜೀವನನ್ನು ನಿರಾಕರಣೆ ಮಾಡುವುದಾದರೆ ಎರಡು ಸೂತ್ರಗಳು ಬೇಕಾಗಿಲ್ಲ. ಕೇವಲ ''ಅತದ್ಧರ್ಮಾಭಿಲಾಪಾತ್ ಶಾರೀರಶ್ಚೊಭಯೇऽಪಿ ಹಿ ಭೇದೇನೈನಮಧೀಯತೇ'' ಎಂದು ಒಂದೇ ಸೂತ್ರವನ್ನಾಗಿ ಪರಿಗಣಿಸಿ ಒಂದು ವಾಕ್ಯರೂಪದಲ್ಲಿ ಪದಗಳ ವಿನ್ಯಾಸವಿರಬೇಕಿತ್ತು. ಈ ಎಲ್ಲಾ ಕಾರಣಗಳಿಂದ ಇವರ ಮತವು ಅಯುಕ್ತವಾಗಿದೆ.

ಪ್ರಕಾಶಃ – ನನ್ವಧಿದೈವಾದಿಷ್ವಿತಿ ವಿಷಯಸಪ್ತಮೀತಿ ತದಿತ್ಯುಕ್ತಮಿತ್ಯತ ಆಹ – **ವಿಷಯೇತಿ** ।

'ಅಧಿದೈವಾದಿಷು' ಎಂಬ ಪದವು ವ್ಯರ್ಥವಾಗುವುದಿಲ್ಲ. 'ಅಧಿದೈವ' ಎಂಬ ಪದದಿಂದ ಕೂಡಿರುವ ವಾಕ್ಯಗಳೆಲ್ಲವೂ ಈ ಅಧಿಕರಣದ ವಿಷಯವಾಕ್ಯಗಳಾಗಿವೆ ಎಂಬುದನ್ನು ಸೂಚಿಸುವುದಕ್ಕೋಸ್ಕರ

ಸಾರ್ಥಕವಾಗಿದೆಯಲ್ಲವೇ? ಎಂಬ ಪ್ರಶ್ನೆಗೆ ಗ್ರಂಥಕಾರರು 'ವಿಷಯವಾಕ್ಯ' ಎಂಬ ಮಾತಿನಿಂದ ಸಮಾಧಾನ ಹೇಳುತ್ತಿದ್ದಾರೆ.

ಪ್ರಕಾಶಃ – ननु भवन्मतेऽप्यधिदैवादिप्रकरणेष्विति प्रकरणलक्षकत्वाल्लक्षणादोष इत्यत आह – वरं हीति ।

ದ್ವೈತಿಗಳೂ ಸಹ ಅಧಿದೈವಾದಿಪ್ರಕರಣಗಳಲ್ಲಿ ಎಂದು ಆರ್ಥೈಸುವುದರಿಂದ ಅವರಿಗೆ ಅಧಿದೈವಪದಕ್ಕೆ ಪ್ರಕರಣದಲ್ಲಿ ಲಕ್ಷಣಾಮಾಡುವಂತಹ ದೋಷಬರುತ್ತದ್ದಲ್ಲವೇ? ಈ ಆಕ್ಷೇಪಕ್ಕೆ 'ವರಂ ಹಿ' ಎಂಬ ವಾಕ್ಯದಿಂದ ಉತ್ತರಿಸುತ್ತಿದ್ದಾರೆ.

ಪ್ರಕಾಶಃ – अत एव ''एकादश वै पशोरवादानानि तानि द्विरवद्यति'' इति वाक्यवैयर्थ्यपरिहाराय ''यद्यपि चतुरवर्त्ती यजमानः पञ्चावत्तैव वपा कार्या'' इत्यत्र वपाशब्दे पाशुकहविर्मात्रलक्षणेति स्वीकृतं मीमांसकैरिति भावः ।

ಲಕ್ಷಣಾದೋಷಕ್ಕಿಂತ ವೈಯರ್ಥ್ಯದೋಷವೇ ಬಲಿಷ್ಠವಾಗಿದೆ. ಆದ್ದರಿಂದಲೇ ಪೂರ್ವಮೀಮಾಂಸೆಯಲ್ಲಿ ''ಏಕಾದಶ ವೈ ಪಶೋರವಾದಾನಾನಿ ತಾನಿ ನಿರವದ್ಯತಿ'' ಎಂಬ ವಾಕ್ಯದ ವೈಯರ್ಥ್ಯವನ್ನು ಪರಿಹರಿಸುವುದಕ್ಕಾಗಿ ''ಯದ್ಯಪಿ ಚತುರವರ್ತೀ ಯಜಮಾನಃ ಪಂಚಾವತ್ತೈವ ವಪಾ ಕಾರ್ಯಾ'' ಎಂಬಲ್ಲಿ ವಪಾ ಶಬ್ದಕ್ಕೆ ಪಾಶುಕಹವಿಸ್ಸಿನಲ್ಲಿ ಮಾತ್ರ ಲಕ್ಷಣಾ ಮಾಡಲಾಗಿದೆ. ಇದರಿಂದ ಲಕ್ಷಣಾ ಮಾಡಿದರೂ ಪರವಾಗಿಲ್ಲ. ವೃರ್ಥವಾದ ಪದಗಳನ್ನು ಪ್ರಯೋಗಿಸಬಾರದೆಂದು ಸ್ಪಷ್ಟವಾಗುತ್ತದೆ.

ಪ್ರಕಾಶಃ – अत्र सूत्रे एवमपि न वैयर्थ्यानिस्तार इत्यत आह – एवं हीति ।

अत्र 'अधिदैवाधिलोकादिषु'' इति पाठः कैश्चित्कल्पित एव न वास्तव इति ध्येयम् ।

ಲಕ್ಷಣಾ ಮಾಡಿದರೆ ವೈಯರ್ಥ್ಯದೋಷಕ್ಕೆ ಅವಕಾಶವಿಲ್ಲ. ಮತ್ತು ಸೂತ್ರದಲ್ಲಿರುವ ಪದಗಳು ಸಾರ್ಥಕವೇ ಆಗುತ್ತವೆಂದು 'ಏವಂ ಹಿ' ಎಂಬ ವಾಕ್ಯದಿಂದ ಪ್ರತಿಪಾದಿಸಿದ್ದಾರೆ. ಅಂದರೆ ಬ್ರಹ್ಮನ ಧರ್ಮಗಳು ಇರುವುದಷ್ಟೇ ಅಲ್ಲ. ಅಭ್ಯಾಸವೆಂಬ ಪ್ರಮಾಣವು ಇರುತ್ತಾದ್ದರಿಂದ ಸಾರ್ಥಕವಾಗಿದೆ. ಕೆಲವರು 'ಅಧಿದೈವಾಧಿಲೋಕಾದಿಷು' ಎಂಬ ಪಾಠವನ್ನು ಸ್ವೀಕರಿಸುತ್ತಾರೆ. ಆದರೆ ಈ ಪಾಠವು ವಾಸ್ತವವಲ್ಲ ಎಂದು ತಿಳಿಯಬೇಕು.

ಪ್ರಕಾಶಃ – इत्युक्तमिति । उभाभ्यामिति वर्तते ।

तस्मादिति । अत्र समासोपपत्तिस्तु ''अतच्छब्दात्'' इत्यत्र वक्ष्यत इति भावः ।

ಗ್ರಂಥದಲ್ಲಿ 'ಇತ್ಯುಕ್ತಂ' ಎಂದು ಹೇಳಿದ್ದಾರೆ. 'ಉಭಾಭ್ಯಾಮ್' ಎಂಬುದನ್ನು ಶೇಷಪೂರಣ ಮಾಡಿಕೊಳ್ಳಬೇಕು. 'ತಸ್ಮಾತ್' ಎಂಬ ವಾಕ್ಯದ ಅಭಿಪ್ರಾಯ ಹೀಗಿದೆ - ಆದ್ವೈತಿಗಳು 'ಅತದ್ಧರ್ಮಾಭಿಲಾಪಾತ್' ಎಂಬಲ್ಲಿರುವ 'ನಞ್'ಗೆ ವಿರುದ್ಧವೆಂಬ ಅರ್ಥವನ್ನು ಮಾಡುತ್ತಾರೆ. 'ನ ಸುರಾಃ ಅಸುರಾಃ' ಎಂಬಲ್ಲಿರುವ 'ನ್'ಞ್' ಎಂಬುದು ಹೇಗೆ ವಿರುದ್ಧಾರ್ಥದಲ್ಲಿದೆಯೋ ಅದರಂತೆ 'ಅತದ್ಧರ್ಮಾಭಿಲಾಪಾತ್' ಎಂಬಲ್ಲಿರುವ 'ನ್'ಞ್' ಪ್ರತ್ಯಯವೂ ಸಹ 'ಪ್ರಕೃತಿಯ ವಿರುದ್ಧಧರ್ಮಗಳು ಹೇಳಲ್ಪಟ್ಟರುವುದರಿಂದ' ಎಂಬರ್ಥವನ್ನು ಹೇಳುತ್ತಿದೆ. ಈ ಅರ್ಥದಲ್ಲಿ ಸಮಾಸವಾಗುತ್ತದೆ. ಆದರೆ ನಾವು 'ಅತದ್ಧರ್ಮಾಭಿಲಾಪಾತ್' ಎಂಬಲ್ಲಿರುವ 'ನಞ್'ಗೆ ಅಭಾವವೆಂಬರ್ಥವನ್ನು ಹೇಳುತ್ತೇವೆ. ಅಭಾವಾರ್ಥದಲ್ಲಿ ಸಮಾಸವಾಗುವುದು ಅಪ್ಪು ಸುಲಭವಲ್ಲ. ಆದರೂ ಸಹ ಹೇಗೆ ಸಮಾಸವಾಗಿದೆಯೆಂಬ ವಿಚಾರವನ್ನು 'ಅತಚ್ಛಬ್ದಾತ್' ಎಂಬ ಸೂತ್ರವನ್ನು ವ್ಯಾಖ್ಯಾನಿಸುವಾಗ ವಿವರಿಸುತ್ತೇವೆ ಎಂದು ತಿಳಿಯಬೇಕು.

प्रकाशः – तृतीयसूत्रं मायिमते अनुपपन्नमिति वदन् प्रसङ्गादतीतानागतभेद-सूत्राणि सर्वाण्यप्ययुक्तानीत्याह – किञ्चेति ।

ಮೊದಲೆರಡು ಸೂತ್ರಗಳು ಪರಮತದಲ್ಲಿ ಅಯುಕ್ತವಾಗಿವೆಯೆಂದು ಹೇಳಿದ್ದಾಯಿತು. ಈಗ 'ಶಾರೀರಶ್ಚ' ಇತ್ಯಾದಿ ಮೂರನೆಯ ಸೂತ್ರವೂ ಸಹ ಆದ್ವೈತಮತದಲ್ಲಿ ಅನುಪಪನ್ನವಾಗಿದೆಯೆಂಬುದನ್ನು ಹೇಳುತ್ತಿದ್ದಾರೆ. ಈ ಸಂದರ್ಭದಲ್ಲಿ ಪ್ರಾಸಂಗಿಕವಾಗಿ ಹಿಂದಿನ ಹಾಗೂ ಮುಂದಿನ ಭೇದಪ್ರತಿಪಾದಕ ಸೂತ್ರಗಳನ್ನು ಆದ್ವೈತಿಗಳಿಗೆ ಅಭೇದ ಪರವಾಗಿ ವ್ಯಾಖ್ಯಾನಿಸಲು ಸಾಧ್ಯವಿಲ್ಲವೆಂದು 'ಕಿಂಚ' ಇತ್ಯಾದಿ ವಾಕ್ಯದಿಂದ ಪ್ರತಿಪಾದಿಸುತ್ತಿದ್ದಾರೆ.

प्रकाशः – 'भेदप्रतिपादकम्' इत्यस्य 'सूत्रजातम्' इति श्लोकगतेनान्वयः । 'इत्यादि च' इत्यपि तेनैवान्वेति । का कथन्तेत्यत उक्तम् – अद्वैतदूषकमिति । मिथ्याभेदपरत्वेन अद्वैताविरोधित्वात् का लज्जाप्रसक्तिरित्यत आह – यदीति ।

'ಭೇದಪ್ರತಿಪಾದಕಮ್' ಎಂಬುದಕ್ಕೆ ಶ್ಲೋಕದಲ್ಲಿರುವ 'ಸೂತ್ರಜಾತಮ್' ಎಂಬಲ್ಲಿ ಅನ್ವಯ. 'ಇತ್ಯಾದಿ ಚ' ಎಂಬುದೂ ಸಹ ಅಲ್ಲಿಯೇ ಅನ್ವಯಹೊಂದುತ್ತದೆ. ಆದ್ವೈತಿಗಳು 'ಕಥಂ ವ್ಯಾಕ್ರಿಯತೇ' ಹೇಗೆ ವ್ಯಾಖ್ಯಾನಿಸುತ್ತಾರೆ ? ಎಂದು ಪ್ರಶ್ನಿಸಿದರು. ಆದ್ವೈತಿಗಳು ಎಲ್ಲವನ್ನೂ ವ್ಯಾಖ್ಯಾನಿಸುತ್ತಾರಲ್ಲವೇ? ಎಂದರೆ 'ಆದ್ವೈತದೂಷಕಮ್' ಎಂಬುದರಿಂದ ಉತ್ತರಿಸುತ್ತಿದ್ದಾರೆ. ಹೌದು, ಬೇರೆಯದನ್ನು ವ್ಯಾಖ್ಯಾನಿಸಬಹುದು. ಆದರೆ ಆದ್ವೈತಮತವನ್ನೇ ದೂಷಿಸುವ ಸೂತ್ರಗಳನ್ನೇ ಹೇಗೆ ವ್ಯಾಖ್ಯಾನಿಸುತ್ತೀರಿ? ಎಂದು ಶ್ಲೋಕದ ಅಭಿಪ್ರಾಯ. ಆ ಸೂತ್ರಗಳೆಲ್ಲವೂ ಮಿಥ್ಯಾಭೂತವಾದ ಭೇದವನ್ನು ಪ್ರತಿಪಾದಿಸುತ್ತಿದೆ. ಆದ್ದರಿಂದ ಆದ್ವೈತಕ್ಕೆ

ವಿರುದ್ಧವಾಗಿಲ್ಲ. ಹೀಗಿರುವಾಗ ಅಂತಹ ಸೂತ್ರಗಳನ್ನು ವ್ಯಾಖ್ಯಾನಿಸಲು ನಾಚಿಕೆಯೇಕೆ? ಎಂಬ ಪ್ರಶ್ನೆಗೆ 'ಯದಿ' ಎಂಬ ವಾಕ್ಯದಿಂದ ಉತ್ತರಿಸಿದ್ದಾರೆ.

ಪ್ರಕಾಶಃ – ನನು ಯಥಾऽರ್ಥವಾದಾನಾಂ ಮಿಥ್ಯಾರ್ಥಾವಲಮ್ಬನೇನ ಪ್ರಾಶಸ್ತ್ಯೇ ತಾತ್ಪರ್ಯಾತ್ ಪ್ರಾಮಾಣ್ಯಂ, ತದ್ವತ್ ಸೂತ್ರಾದೀನಿ ಸರ್ವಾಣಿ ಮಿಥ್ಯಾರ್ಥವಾದೀನ್ಯಪಿ ತಾತ್ತ್ವಿಕಶುದ್ಧಚೈತನ್ಯತಾತ್ಪರ್ಯ-ವಿಷಯೋಪೇತಾನಿ ಭವಿಷ್ಯನ್ತಿ, ನೈವಂ ಬೌದ್ಧಮತ ಇತ್ಯತ ಆಹ – ಬೌದ್ಧೋऽಪೀತಿ ।

'ವಾಯುರ್ವೈ ಕ್ಷೇಪಿಷ್ಠಾ ದೇವತಾ' ಇತ್ಯಾದಿ ಅರ್ಥವಾದ ವಾಕ್ಯಗಳು ಸುಳ್ಳನ್ನೇ ಹೇಳುತ್ತಿವೆ. ಆದರೂ ಶ್ವೇತಪಶುವಿನ ಆಲಂಭವನ್ನೇ ಮಾಡುವುದು ಅತ್ಯಂತ ಪ್ರಶಸ್ತ ಎಂಬ ವಿಷಯದಲ್ಲಿ ಪ್ರಾಶಸ್ತ್ಯವನ್ನು ತಿಳಿಸುವ ಕಾರಣ ಹೇಗೆ ಪ್ರಮಾಣವೇ ಆಗುತ್ತವೋ, ಆದರಂತೆ ಎಲ್ಲ ಭೇದಪ್ರತಿಪಾದಕ ಸೂತ್ರಗಳೂ ಸಹ ಮಿಥ್ಯಾಭೂತವಾದ ಭೇದವನ್ನೇ ಪ್ರತಿಪಾದಿಸಬಹುದು. ಸಾತ್ತ್ವಿಕವಾದ ಶುದ್ಧಚೈತನ್ಯನ ಸಮರ್ಥನೆಯಲ್ಲಿ ತಾತ್ಪರ್ಯವನ್ನು ಹೊಂದಿರುವ ಕಾರಣ ಪ್ರಮಾಣವಾಗುತ್ತವೆ. ಈ ಪ್ರಮೇಯವನ್ನು ಬೌದ್ಧರು ಹೇಳುವುದಿಲ್ಲ. ಆದ್ದರಿಂದ ಬೌದ್ಧಮತಕ್ಕೂ ಮಾಯಾವಾದಮತಕ್ಕೂ ವೈಲಕ್ಷಣ್ಯವಿದೆಯಲ್ಲವೇ?

ಈ ಆಕ್ಷೇಪಕ್ಕೆ 'ಬೌದ್ಧೋऽಪಿ' ಎಂಬ ವಾಕ್ಯದಿಂದ ಉತ್ತರಿಸುತ್ತಿದ್ದಾರೆ.

ಪ್ರಕಾಶಃ – ನನು ನ ತಸ್ಯ ತಥಾ ವಚನೇ ತತ್ತ್ವಾವೇದಕವಚನಂ ಮಾನಮಸ್ತಿ, ಮಮ ತ್ವಸ್ತಿ ''ಸದೇವ'' ಇತ್ಯಾದಿಕಮಿತ್ಯತ ಆಹ – ಅಸದ್ಧೇತ್ಯಾದೀತಿ ।

ಬೌದ್ಧರು ಸೂತ್ರವನ್ನು ವ್ಯಾಖ್ಯಾನಿಸಿ ಪಾರಮಾರ್ಥಿಕವಾದ ಶೂನ್ಯವೆಂಬ ತತ್ತ್ವದಲ್ಲಿ ಎಲ್ಲಾ ಸೂತ್ರಗಳಿಗೆ ತಾತ್ಪರ್ಯವಿದೆಯೆಂದು ಅದ್ವೈತಿಗಳಂತೆ ಹೇಳಲು ಸಾಧ್ಯವಿಲ್ಲ. ಹಾಗೇ ಹೇಳಲು ತತ್ತ್ವಾವೇದಕವಾದ ಪ್ರಮಾಣಗಳೇ ಬೌದ್ಧರಲ್ಲಿ ಇರುವುದಿಲ್ಲ. ಆದರೆ ಮಾಯಾವಾದಮತದಲ್ಲಿ 'ಸದೇವ ಸೌಮ್ಯ ಇದಮಗ್ರ ಆಸೀತ್' ಇತ್ಯಾದಿ ಶ್ರುತಿವಾಕ್ಯಗಳು ಪ್ರಮಾಣವಾಗಿವೆ. ಆದ್ದರಿಂದ ಇಬ್ಬರ ಮತದಲ್ಲಿಯೂ ವೈಲಕ್ಷಣ್ಯವಿದೆ.

ಈ ಆಕ್ಷೇಪಕ್ಕೆ 'ಅಸದ್ವಾ' ಇತ್ಯಾದಿ ಶ್ಲೋಕದಿಂದ ಉತ್ತರಿಸುತ್ತಿದ್ದಾರೆ.

ಪ್ರಕಾಶಃ – ನನು ತೇನ ಅಸದರ್ಥಕತ್ವಮಾಗಮಾದೇರುಚ್ಯತೇ, ಮಯಾ ತ್ವ್ಯಾವಹಾರಿಕಸದರ್ಥಕತ್ವಮಿತ್ಯತ ಆಹ – ಅಪೌರುಷೇಯೇತಿ ।

ಮಾಯಾವಾದಮತದಂತೆ ಬೌದ್ಧರೂ ಸಹ 'ಅಸದೇವ ಇದಮಗ್ರ ಆಸೀತ್' ಇದರ ಪ್ರಮಾಣವನ್ನು ಆಧಾರವನ್ನಾಗಿ ನೀಡಬಹುದು. ಆಗಮವೆಲ್ಲವೂ ಅಸತ್‌ಪದಾರ್ಥವನ್ನು ಪ್ರತಿಪಾದಿಸುತ್ತದೆಂದು ಬೌದ್ಧರು ಹೇಳುತ್ತಾರೆ. ಆದರೆ ಮಾಯಾವಾದಿಗಳು ವ್ಯಾವಹಾರಿಕವಾದ ಸತ್‌ಪದಾರ್ಥವನ್ನು ಆಗಮಗಳೆಲ್ಲವೂ ಪ್ರತಿಪಾದಿಸುತ್ತವೆಂದು ಹೇಳುತ್ತಾರೆ. ಹೀಗೆ ಇಬ್ಬರಮತದಲ್ಲಿಯೂ ವೈಲಕ್ಷಣ್ಯವಿದೆಯಲ್ಲವೇ? ಎಂಬ ಪ್ರಶ್ನೆಗೆ 'ಅಪೌರುಷೇಯ' ಎಂಬ ಶ್ಲೋಕದಿಂದ ಉತ್ತರಿಸುತ್ತಿದ್ದಾರೆ. ವ್ಯಾವಹಾರಿಕವಾದ ಸತ್‌ಪದಾರ್ಥದ ಪ್ರತಿಪಾದನೆಯಿಂದ ಶುದ್ಧವಾದ ಪ್ರಾಮಾಣ್ಯವು ಸಂತೋಷವನ್ನು ಕೊಡುವುದಿಲ್ಲ ಎಂದರ್ಥ.

ಪ್ರಕಾಶಃ – ಅಯುಕ್ತಂ ಚ ಮಿಥ್ಯಾರ್ಥಕಥನಮಿತ್ಯಾಹ – ಅಸಕೃದಿತಿ । ತನ್ಮತದೂಷಣಸ್ಯ ಫಲಮಾಹ – ಸೌಗತಾ ಇತಿ ।

ಮತ್ತು ಮಿಥ್ಯಾರ್ಥ ಪ್ರತಿಪಾದನೆಯನ್ನು ಹೇಳುವುದೇ ತಪ್ಪು ಎಂಬುದಾಗಿ 'ಅಸಕೃತ್' ಎಂಬ ಮಾತಿನಿಂದ ಹೇಳುತ್ತಿದ್ದಾರೆ. ಹೀಗೆ ಮಾಯಾವಾದ ಮತವನ್ನು ದೂಷಿಸಿದ್ದಕ್ಕೆ ಏನು ಪ್ರಯೋಜನ ? ಎಂಬ ಪ್ರಶ್ನೆಗೆ 'ಸೌಗತಾಃ' ಎಂಬುದರಿಂದ ಉತ್ತರಿಸಿದ್ದಾರೆ. ಬೌದ್ಧರನ್ನು ಹೇಗೆ ಪರಿತ್ಯಾಗ ಮಾಡುತ್ತೇವೆಯೋ ಅದಕ್ಕಿಂತ ಹೆಚ್ಚು ಈ ಮಾಯಾವಾದಿಗಳನ್ನು ಪರಿತ್ಯಾಗ ಮಾಡಬೇಕೆಂಬುದೇ ದೂಷಣೆಯ ಫಲ.

ಪ್ರಕಾಶಃ – 'ಪ್ರವಿಶ್ಯ' ವಿಚಾರ್ಯ । ನನು ''ಅಸ್ಮಾಯಾಮೇಧಾಸ್ರಜೋ ವಿನಿಃ'' ಇತಿ ಮಾಯಾವೀತಿ ಭಾವ್ಯಮ್, ಸತ್ಯಮ್, ''ವ್ರೀಹ್ಯಾದಿಭ್ಯಶ್ಚ'' ಇತಿ ಇನಿಪ್ರತ್ಯಯೇ ಮಾಯೀತಿ ಸಾಧು । ಸ್ಪಷ್ಟ ಇತಿ । ಉಪನ್ಯಾಸಮುಖೇನ ವಿವೃತ ಇತ್ಯರ್ಥಃ ।

'ಪ್ರವಿಶ್ಯ' ಎಂಬ ಪದಕ್ಕೆ 'ವಿಚಾರ ಮಾಡಿ' ಎಂದರ್ಥ.

ಶಂಕಾ - ಗ್ರಂಥಕಾರರು 'ಮಾಯೀ' ಎಂಬ ಶಬ್ದವನ್ನು ಪ್ರಯೋಗಿಸಿದ್ದಾರೆ. ವಸ್ತುತಃ 'ಅಸ್ಮಾಯಾಮೇಧಾಸ್ರಜೋ ವಿನಿಃ' ಎಂಬ ಸೂತ್ರದಿಂದ 'ತದಸ್ಯ ಅಸ್ತೀತಿ' ಎಂಬರ್ಥದಲ್ಲಿ ಮಾಯಾಶಬ್ದಕ್ಕೆ 'ವಿನಿ' ಪ್ರತ್ಯಯವು ಬರಬೇಕು. ಆವಾಗ 'ಮಾಯಾವೀ' ಎಂಬ ರೂಪಕ್ಕೆ ಸಾಧುವಾಗುತ್ತದೆ ಹೊರತು, 'ಮಾಯೀ' ಎಂಬ ರೂಪವು ಸಾಧುವಾಗುವುದಿಲ್ಲ.

ಸಮಾಧಾನ - 'ವ್ರೀಹ್ಯಾದಿಭ್ಯಶ್ಚ' ಎಂಬ ಸೂತ್ರದಲ್ಲಿ 'ವ್ರೀಹಿ' ಮೊದಲಾದ ಶಬ್ದಗಳಿಗೆ 'ಇನಿ' ಪ್ರತ್ಯಯವು ಹೇಳಲ್ಪಟ್ಟಿದೆ. 'ಮಾಯಾ' ಶಬ್ದವನ್ನು ಆಕೃತಿಗಣವನ್ನಾಗಿ ಪರಿಗಣಿಸಿದಾಗ 'ವ್ರೀಹಿ' ಮೊದಲಾದ ಶಬ್ದಗಳಂತೆ ಇದಕ್ಕೂ ಸಹ 'ತದಸ್ಯ ಅಸ್ತಿ' ಎಂಬರ್ಥದಲ್ಲಿ 'ಇನಿ' ಪ್ರತ್ಯಯವು ಬರುತ್ತದೆ. ಇನಿ ಪ್ರತ್ಯಯ ಬಂದರೆ 'ಮಾಯೀ' ಎಂಬ ರೂಪವು ಸಾಧುವಾಗುತ್ತದೆ.

'ಸ್ಪಷ್ಟಃ' ಎಂಬ ಶಬ್ದಕ್ಕೆ ಈ ಹಿಂದೆ ಉಪನ್ಯಾಸರೂಪದಲ್ಲಿ ಟೀಕೆಯನ್ನು ವ್ಯಾಖ್ಯಾನಿಸುವಾಗಲೇ ವಿವರಿಸಿದ್ದಾಗಿದೆ ಎಂದರ್ಥ.

ಪ್ರಕಾಶಃ – ಏತೇನ ಅತ್ರಾನ್ತರ್ಯಾಮೀ ನಾರಾಯಣಶ್ಚತುರ್ಮುಖೋ ವೇತಿ ಪೂರ್ವಪಕ್ಷಂ ಕೃತ್ವಾ, ಅಧಿದೈವಾದಿಷು ಶ್ರೂಯಮಾಣೋऽನ್ತರ್ಯಾಮೀ ಶಿವ ಏವ, ಸರ್ವಾನ್ತರತ್ವರೂಪಧರ್ಮಸ್ಯಾಥರ್ವಶಿರಸಿ ''ತೇ ದೇವಾ ರುದ್ರಮಪೃಚ್ಛನ್' ಇತಿ ಪ್ರಸ್ತುತರುದ್ರನಿಷ್ಠತಯಾ ''ಸೋऽನ್ತರಾದನ್ತರಂ ಪ್ರಾವಿಶತ್'' ಇತಿ ಶ್ರವಣಾದಿತಿ ಕೇನಚಿತ್ಪ್ರಲಪಿತಂ ಪ್ರತ್ಯುಕ್ತಂ,

ಶೈವಮತ ನಿರಾಕರಣೆ - ಹೀಗೆ ಮಾಯಾವಾದ ಮತವನ್ನು ನಿರಾಕರಿಸಿದ್ದರಿಂದ, ಶೈವಮತವನ್ನೂ ಸಹ ನಿರಾಕರಿಸಿದಂತಾಯಿತು.

ಶೈವರ ಅಧಿಕರಣ ರಚನೆ ಹೀಗಿದೆ - ಅಂತರ್ಯಾಮಿಯೆಂದು ಪ್ರತಿಪಾದ್ಯನಾದವನು ನಾರಾಯಣನೋ, ಅಥವಾ ಚತುರ್ಮುಖನೋ, ಅಥವಾ ಶಿವನೋ ? ಎಂದು ಸಂಶಯ. ನಾರಾಯಣ ಅಥವಾ ಚತುರ್ಮುಖಬ್ರಹ್ಮನು ಅಂತರ್ಯಾಮಿಯೆಂದು ಪೂರ್ವಪಕ್ಷ.

ಅಧಿದೈವಾದಿ ಪ್ರಕರಣದಲ್ಲಿ ಅಂತರ್ಯಾಮಿಯೆಂದು ಶ್ರುತನಾದವನು ಶಿವನಾಗಿದ್ದಾನೆ ಹೊರತು, ನಾರಾಯಣನಾಗಲೀ, ಚತುರ್ಮುಖನಾಗಲೀ ಅಲ್ಲ. ಏಕೆಂದರೆ ''ಸೋऽಂತರಾದಂತರಂ ಪ್ರಾವಿಶತ್'' ಎಂಬುದಾಗಿ ಶಿವನೇ ಅಂತರ್ಯಾಮಿಯಾಗಿ ಪ್ರವೇಶಿಸಿದ್ದಾನೆಂದು ಶ್ರುತಿಯು ಹೇಳುತ್ತಿದೆ. ಇಲ್ಲಿರುವ 'ಸಃ' ಎಂಬ ಪದವು ರುದ್ರನನ್ನೇ ಹೇಳುತ್ತದೆಂದು ಹೇಗೆ ನಿಶ್ಚಯಿಸುತ್ತೀರಿ? ಎಂದರೆ ಹಿಂದೆ 'ತೇ ದೇವಾ ರುದ್ರಮಪೃಚ್ಛನ್' ಎಂಬುದಾಗಿ ರುದ್ರನೇ ಸರ್ವಾಂತರತ್ವಧರ್ಮದಿಂದ ಕೂಡಿದವನಾಗಿ ಪ್ರಸಕ್ತನಾಗಿದ್ದಾನೆ. ಹಿಂದೆ ಪ್ರಸಕ್ತನಾದ ರುದ್ರನನ್ನೇ ಇಲ್ಲಿರುವ 'ಸಃ' ಎಂಬ ಪದದಿಂದ ವಿವಕ್ಷಿಸಬೇಕು.

ಶೈವರ ಈ ಜೊಳ್ಳುಮಾತುಗಳಿಗೆ ಅರ್ಥವೇ ಇಲ್ಲ.

ಪ್ರಕಾಶಃ – ಸೂತ್ರೋಪಾತ್ತಪ್ರಧಾನಪಕ್ಷತ್ಯಾಗಾಯೋಗಾತ್ । ''ದಿವ್ಯೋ ದೇವ ಏಕೋ ನಾರಾಯಣಃ'' ಇತಿ ಮೂಲೋಕ್ತಸಮಾಖ್ಯಾವಿರೋಧೇನ, ತತ್ರ ತತ್ರ ಭಾಷ್ಯೋದಾಹೃತಾನೇಕವಚನವಿರೋಧೇನ ಚ ಶಿವಾನ್ತರ್ಯಾಮಿತ್ವಸ್ಯ ಬಾಧಿತತ್ವಾಚ್ಚ ।

ಏಕೆಂದರೆ ಸೂತ್ರದಲ್ಲಿ ಪ್ರಧಾನವೇ ಅಂತರ್ಯಾಮಿಯೆಂಬ ಪೂರ್ವಪಕ್ಷವನ್ನು ನಿರಾಕರಿಸಿರುವಾಗ ನಾರಾಯಣನೆಂಬ ಅಥವಾ ಚತುರ್ಮುಖನೆಂಬ ಪೂರ್ವಪಕ್ಷವನ್ನು ಮಾಡುವುದು ಬಹಳ ತಪ್ಪಾಗುತ್ತದೆ. ಮತ್ತು 'ದಿವ್ಯೋ ದೇವ ಏಕೋ ನಾರಾಯಣಃ' ಎಂಬುದಾಗಿ ಸಮಾಖ್ಯಾಪ್ರಮಾಣದಿಂದ ವಿರೋಧ ಬರುತ್ತದೆ. ಮತ್ತು ಅನೇಕ ಕಡೆ ಅಲ್ಲಲ್ಲಿ ಭಾಷ್ಯದಲ್ಲಿ ಉದಾಹರಿಸಲ್ಪಟ್ಟ ವಿಷ್ಣುವಿಷಯಕವಾದ ಅನೇಕ ವಾಕ್ಯಗಳ ವಿರೋಧವೂ ಸಹ ಈ ಶೈವರಿಗೆ ಬರುತ್ತದೆ. ಆದ್ದರಿಂದ ಆ ಎಲ್ಲಾ ಪ್ರಮಾಣಗಳಿಂದ ಶಿವನೇ ಅಂತರ್ಯಾಮಿಯಾಗಿದ್ದಾನೆ ಎಂಬ ಮಾತಿಗೆ ಬಾಧದೋಷ ಬರುತ್ತದೆ.

ಪ್ರಕಾಶಃ – ''ಸೋऽನ್ತರಾದನ್ತರಂ ಪ್ರಾವಿಶತ್'' ಇತಿ ಅಥರ್ವಶಿರೋವಾಕ್ಯೇऽಪಿ ನ ಶಿವಸ್ಯಾನ್ತರ್ಯಾಮಿತ್ವಮುಚ್ಯತೇ, ಕಿನ್ತು 'ಸಃ' ಇತಿ ಪ್ರಾಕ್ ಪ್ರಕೃತರುದ್ರಾನ್ತರ್ಯಾಮಿಣಂ ನಾರಾಯಣಮೇವ ಪರಾಮೃಶ್ಯ ''ಅನ್ತರಾದನ್ತರಂ ಪ್ರಾವಿಶದ್ವಿಶಶ್ಚೈವಾನ್ತರಾ'' ಇತಿ ನಾರಾಯಣಸ್ಯೈವಾನ್ತರ್ಯಾಮಿತ್ವಮುಚ್ಯತೇ।

ಮತ್ತು ''ಸೋऽಂತರಾದಂತರಂ ಪ್ರಾವಿಶತ್'' ಎಂಬ ಅಥರ್ವಶಿರೋವಾಕ್ಯದಲ್ಲಿಯೂ ಶಿವನಿಗೆ ಅಂತರ್ಯಾಮಿತ್ವವನ್ನು ಹೇಳಿರುವುದಿಲ್ಲ. ಹೊರತಾಗಿ 'ಸಃ' ಎಂಬ ಪದವು ಹಿಂದೆ ಪ್ರಕೃತನಾದ ರುದ್ರನ ಅಂತರ್ಯಾಮಿಯಾದ ನಾರಾಯಣನನ್ನೇ ಪರಾಮರ್ಶೆ ಮಾಡುತ್ತದೆ. ಅಂತಹ ನಾರಾಯಣನು ಎಲ್ಲರಲ್ಲಿಯೂ ಪ್ರವೇಶಿಸಿದನು ಎಂಬುದಾಗಿ ನಾರಾಯಣನ ಅಂತರ್ಯಾಮಿತ್ವವನ್ನೇ ಈ ಶ್ರುತಿಯಲ್ಲಿ ಹೇಳಲಾಗಿದೆ.

प्रकाशः – ''विश प्रवेशने'' इतिधातुनिष्पन्नविष्णुशब्दार्थस्य ''सर्वा दिशो विष्टोऽस्मि'' इत्यैतरेयभाष्योक्तदिशा 'प्राविशत्' इत्यनेन ज्ञापनाच्च । अन्यथा –

'अन्तर्बहिश्च तत्सर्वं व्याप्य नारायणः स्थितः ।'

इत्यादिविरोधापत्तेः ।

ವಿಚಾರ ಮಾಡಿದರೆ 'ವಿಷ್ಣು' ಎಂಬ ಪದವು 'ವಿಶಪ್ರವೇಶನೇ' ಎಂಬ ಧಾತುವಿನಿಂದ ನಿಷ್ಪನ್ನವಾಗಿದೆ. ಈ ವಿಷ್ಣುಶಬ್ದದ ಅರ್ಥವನ್ನೇ ''ಸರ್ವಾ ದಿಶೋ ವಿಷ್ಟೋऽಸ್ಮಿ'' ಎಂಬ ಐತರೇಯ ಭಾಷ್ಯದ ಪ್ರಕಾರ 'ಪ್ರಾವಿಶತ್' ಎಂಬ ಪದವು ಹೇಳುತ್ತಿದೆ. ವಿಷ್ಣು ಶಬ್ದಾರ್ಥವನ್ನೇ 'ಪ್ರಾವಿಶತ್' ಎಂಬ ಪದವು ಹೇಳುತ್ತಿರುವುದರಿಂದ 'ಸೋ೦ऽತರಾತ್' ಎಂಬ ಪದವು ವಿಷ್ಣುಪರವೇ ಆಗಬೇಕು ಹೊರತು, ಶಿವಪರವಾಗುವುದಿಲ್ಲ. ಹೀಗೆ ಹೇಳದಿದ್ದರೆ - 'ಅಂತರ್ಬಹಿಶ್ಚ ತತ್ಸರ್ವಂ ವ್ಯಾಪ್ಯ ನಾರಾಯಣಃ ಸ್ಥಿತಃ' ಎಂಬ ವಾಕ್ಯದ ವಿರೋಧ ಬರಬೇಕಾದೀತು.

प्रकाशः – विस्तरस्तु गुरुपादकृतपरतत्त्वप्रकाशिकायां ध्येयः । सूत्रास्वारस्यं च रामानुजमत इव ज्ञेयम् ।

इति श्रीमत्सर्वतन्त्रस्वतन्त्रसुधीन्द्रतीर्थगुरुपादशिष्यराघवेन्द्रयतिकृते चन्द्रिकाप्रकाशे अन्तर्याम्यधिकरणम् सम्पूर्णम् ॥

ಶೈವಮತಖಂಡನೆಯ ಇನ್ನೂ ಹೆಚ್ಚಿನ ವಿಚಾರವನ್ನು ಗುರುಗಳು ರಚಿಸಿರುವ ಪರತತ್ತ್ವಪ್ರಕಾಶಿಕೆಯನ್ನು ಓದಿ ತಿಳಿದುಕೊಳ್ಳಬೇಕು. ಇವರ ಮತದಲ್ಲಿರುವ ಸೂತ್ರಗಳ ಅಸ್ವಾರಸ್ಯವನ್ನು ರಾಮಾನುಜಮತದಂತೆ ತಿಳಿದುಕೊಳ್ಳಬೇಕು.

ಇಲ್ಲಿಗೆ ಶ್ರೀರಾಘವೇಂದ್ರತೀರ್ಥಶ್ರೀಪಾದರಿಂದ ವಿರಚಿತವಾದ ಪ್ರಕಾಶಟಪ್ಪಣಿಯ ಕನ್ನಡಾನುವಾದದಲ್ಲಿ ಅಂತರ್ಯಾಮ್ಯಧಿಕರಣವು ಮುಕ್ತಾಯವಾಯಿತು.

* * * * * * *

ಶ್ರೀಕೃಷ್ಣಾರ್ಪಣಮಸ್ತು.

ಗುರುರಾಜೀಯಮ್ – ನನು ಚ ಭವತ್ಪಕ್ಷೇऽಪಿ 'ಅಧಿದೇವಾದಿಷು' ಇತ್ಯಸ್ಯ ಯಥಾಶ್ರುತಸ್ಯಾನನ್ವಯಃ । 'ಪ್ರಕರಣೇಷು' ಇತ್ಯುಕ್ತಾವಪಿ ಲಕ್ಷಣಾ ಸ್ಯಾದಿತ್ಯತ ಆಹ – ವರಂ ಹೀತಿ ।। ಲಕ್ಷಣಾಪ್ರಯೋಜಕಂ ಪ್ರಯೋಜನಂ ಚಾಹ – ಏವಂ ಹೀತಿ ।।

।। ಇತಿ ಶ್ರೀಕೇಶವಭಟ್ಟಾರಕೇಣ ವಿರಚಿತಾಯಾಂ ಭಾವದೀಪಿಕಾಯಾಮ್
ಅನ್ತರ್ಯಾಮ್ಯಾಧಿಕರಣಂ ಸಮ್ಪೂರ್ಣಮ್ ।। ೯ ।।

ಸಾರ

ಅದ್ವೈತಿಗಳ ಅಧಿಕರಣ ಶರೀರ ಹೀಗಿದೆ - ಬೃಹದಾರಣ್ಯಕೋಪನಿಷತ್ತಿನಲ್ಲಿ 'ಯಃ ಪೃಥಿವ್ಯಾಂ ತಿಷ್ಠನ್' ಇತ್ಯಾದಿ ವಾಕ್ಯವನ್ನೇ ವಿಷಯವೆನ್ನುತ್ತಾರೆ. ಜೀವನಾಗಲೀ ಅಥವಾ ಯಾರಾದರೂ ಒಬ್ಬ ಯೋಗಿಯಾಗಲೀ, ಪೃಥಿವ್ಯಾದಿ ಲೋಕಗಳ ಅಂತರ್ಯಾಮಿಯಾಗಿರಬಹುದು. ಬ್ರಹ್ಮನಿಗೆ ಶರೀರವಿಲ್ಲದ ಕಾರಣ ಅಂತರ್ಯಾಮಿಯೆನಿಸಲಾರನೆಂದು ಪೂರ್ವಪಕ್ಷ.

ಸಕಲ ಪ್ರಪಂಚವನ್ನೇ ಶರೀರವನ್ನಾಗಿ ಹೊಂದಿರುವ ಅಚಿಂತ್ಯವಾದ ಮಾಯಾಶಕ್ತಿಯನ್ನು ಪಡೆದಿರುವ ಬ್ರಹ್ಮನಿಗೆ ಶರೀರವಿಲ್ಲದಿದ್ದರೂ ಪ್ರಪಂಚವನ್ನು ನಿಯಮನ ಮಾಡುವ ಸಾಮರ್ಥ್ಯವಿದೆ. ಜೀವಾತ್ಮನಿಗೂ, ಪರಮಾತ್ಮನಿಗೂ ಅಭೇದವಿರುವುದರಿಂದ ಇವನಿಗೆ ಇನ್ನೊಬ್ಬ ನಿಯಾಮಕನ ಅವಶ್ಯಕತೆಯಿರುವುದಿಲ್ಲ. ಮತ್ತು ಅದೇ ಪ್ರಕರಣದಲ್ಲಿ ಆತ್ಮತ್ವ, ಅಮೃತತ್ವ ಮೊದಲಾದ ಧರ್ಮಗಳು ಅದೃಶ್ಯತ್ವಾದಿ ಧರ್ಮಗಳೂ ಸಹ ಕೇಳಿಸುತ್ತಿವೆ. ಇವೆಲ್ಲವೂ ಬ್ರಹ್ಮನ ಅಸಾಧಾರಣ ಧರ್ಮಗಳಾದ್ದರಿಂದ ಬ್ರಹ್ಮನೇ ಅಂತರ್ಯಾಮಿಯಾಗಿದ್ದಾನೆ ಹೊರತು ಜೀವನಲ್ಲವೆಂದು ಸಿದ್ಧಾಂತ. ಅದ್ವೈತಿಗಳ ಈ ಅಧಿಕರಣ ಶರೀರವು ಅಯುಕ್ತವಾಗಿದೆ. 'ಯಃ ಆತ್ಮನೀ ತಿಷ್ಠನ್' ಇತ್ಯಾದಿ ಶ್ರುತಿಗಳಲ್ಲಿ ಜೀವನಿಗೂ ಸಹ ಪರಮಾತ್ಮನು ನಿಯಾಮಕನಾಗಿದ್ದಾನೆಂದು ಹೇಳಲ್ಪಟ್ಟಿದೆ. ಅವರಿಬ್ಬರಿಗೂ ಏಕ್ಯವಿದ್ದಲ್ಲಿ ನಿಯಮ್ಯನಿಯಾಮಕಭಾವವು ಹೇಗೆ ಉಪಪನ್ನವಾಗುತ್ತದೆ? ಕಾಲ್ಪನಿಕ ಭೇದವನ್ನು ಒಪ್ಪುವುದಾದರೆ ಈಶ್ವರನಿಗೂ ಸಹ ಮತ್ತೊಬ್ಬ ನಿಯಾಮಕನಿರಬಹುದಲ್ಲವೇ? ಈಶ್ವರನು ಸ್ವತಂತ್ರನಾದ್ದರಿಂದ ಮತ್ತೊಬ್ಬ ನಿಯಾಮಕನ ಅವಶ್ಯಕತೆಯಿಲ್ಲವೆಂದು ಕೊನೆಯಲ್ಲಿ ಉತ್ತರಿಸುವುದಾದರೆ, ಮೊದಲೇ ಈ ಉತ್ತರವನ್ನು ಹೇಳಿ ಏಕೆ ಜಾಣತನವನ್ನು ತೋರಿಸಲಿಲ್ಲ?

'ನಚ ಸ್ಮಾರ್ತಮತದ್ಧರ್ಮಾಭಿಲಾಪಾತ್' ಎಂಬ ಎರಡನೆಯ ಸೂತ್ರಕ್ಕೆ ಅದ್ವೈತಿಗಳ ವ್ಯಾಖ್ಯಾನ ಹೀಗಿದೆ - ಈ ಪ್ರಕರಣದಲ್ಲಿ ಹೇಳಲ್ಪಟ್ಟ ಅದೃಶ್ಯತ್ವವು ಅಂತರ್ಯಾಮಿಯಲ್ಲಿ ಕೂಡುವುದಿಲ್ಲ. ದ್ರಷ್ಟೃತ್ವ, ಆತ್ಮತ್ವ ಮೊದಲಾದ

ಧರ್ಮಗಳು ಪ್ರಕೃತಿಯಲ್ಲಿ ಕೂಡುವುದಿಲ್ಲ ಎಂದು ವ್ಯಾಖ್ಯಾನಿಸುತ್ತಾರೆ. 'ಶಾರೀರಶ್ಚೋಭಯೇಽಪಿ ಹಿ ಭೇದೇನೈವ ಮಧೀಯತೇ' ಎಂಬ ಮೂರನೆಯ ಸೂತ್ರ ವ್ಯಾಖ್ಯಾನ ಹೀಗಿದೆ - ಕಾಣ್ವಮಾಧ್ಯಂದಿನ ಶಾಖೆಗಳಲ್ಲಿ ಹೇಳಲ್ಪಟ್ಟ ಭೇದವು ಸತ್ಯವಲ್ಲ. ಜೀವಬ್ರಹ್ಮರಿಗೆ ಐಕ್ಯವೇ ಇದೆ. ಆದ್ದರಿಂದ ಇವರಿಬ್ಬರಿಗೂ ನಿಯಮ್ಯನಿಯಾಮಕಭಾವವನ್ನಾಗಲೀ ಅದರಿಂದ ಭೇದದ ಸಮರ್ಥನೆಯಾಗಲೀ ಮಾಡಲು ಸಾಧ್ಯವಿಲ್ಲ. ಅದ್ವೈತಿಗಳ ಎರಡನೆಯ ಸೂತ್ರವು ಪ್ರಥಮಸೂತ್ರದಲ್ಲಿರುವ 'ತದ್ಧರ್ಮವ್ಯಪದೇಶಾತ್' ಎಂಬ ಭಾಗದಿಂದಲೇ ಪುನರುಕ್ತವಾಗಿದೆ. ಮೂರನೆಯ ಸೂತ್ರದಲ್ಲಿ ನಿಯಮ್ಯನಿಯಾಮಕರಿಗೆ ಭೇದವೇ ಸ್ಪಷ್ಟವಾಗಿ ಕೇಳಿಸುತ್ತಿರುವಾಗ ಆ ಭೇದವನ್ನು ಕಲ್ಪನಿಕವೆಂದು ಹೇಳುವುದು ಮೂರ್ಖತನ.

ರಾಮಾನುಜ ಭಾಷ್ಯದಲ್ಲಿ ಜೀವನೇ ಅಂತರ್ಯಾಮಿಯೆಂದು ಪೂರ್ವಪಕ್ಷ. ಸಕಲ ಲೋಕ ನಿಯಂತೃತ್ವ ಎಂಬ ಧರ್ಮದಿಂದ ಪರಮಾತ್ಮನೇ ನಿಯಾಮಕನಾದ ಅಂತರ್ಯಾಮಿಯೆಂದು ಸಿದ್ಧಾಂತ.

ಇವರ ಮತವೂ ಸಹ ಯುಕ್ತವಾಗಿದೆ. ಅದ್ವೈತ ಮತದಲ್ಲಿ ಹಾಗೂ ವಿಶಿಷ್ಟಾದ್ವೈತ ಮತದಲ್ಲಿ ಅಧಿದೈವಾದಿಷು ಎಂಬ ಪದವು ವ್ಯರ್ಥವಾಗುತ್ತದೆ. ಆದರೆ ದ್ವೈತದರ್ಶನದಲ್ಲಿ 'ಅಧಿದೈವಾದಿಷು ತದ್ಧರ್ಮವ್ಯಪದೇಶಾತ್' ಎಂಬುದಾಗಿ 'ಅಧಿದೈವಾದಿಷು' ಎಂಬ ಪದವನ್ನು ಸಾರ್ಥಕದಲ್ಲಿ ಸೇರದೆ ಹೇತುವಿನಲ್ಲಿ ಸೇರಿರುವ ಕಾರಣ ಅಂತರ್ಯಾಮಿಯೆಂದು ಉಕ್ತನಾದವನು ವಿಷ್ಣುವೇ ಆಗಿದ್ದಾನೆ.

ಅಂತರ್ಯಾಮ್ಯಧಿಕರಣ

(೧-೨-೫)

ಭಾಗ -೩

ನ್ಯಾಯವಿವರಣ, ನ್ಯಾಯವಿವರಣಪಂಚಿಕಾ,
ಅಣುಭಾಷ್ಯ, ತತ್ತ್ವಮಂಜರೀ,
ತಂತ್ರದೀಪಿಕಾ, ನ್ಯಾಯಮುಕ್ತಾವಳಿ ಗ್ರಂಥಗಳ
ಸರಳ ಕನ್ನಡ ಅನುವಾದ

* * *

ಸೂತ್ರಾರ್ಥರತ್ನಾವಳಿ ಗ್ರಂಥದ ಸಂಸ್ಕೃತ ಮೂಲ

॥ श्रीगुरुभ्यो नमः ॥

श्रीमदानन्दतीर्थभगवत्पादाचार्यविरचितम्

न्यायविवरणम्

श्री जयतीर्थविरचिता

न्यायविवरणपञ्जिका

अन्तर्याम्यधिकरणम् (१।२।५)

पृथिव्यादिशरीरत्वं च न निरवकाशम् । यौगिकशरीरत्वोपपत्तेर्विष्णोरपि ॥५॥

ಆಂತರ್ಯಾಮಿಯು ವಿಷ್ಣುವಲ್ಲವೆನ್ನಲು ಪೃಥಿವ್ಯಾದಿಶರೀರತ್ವವು ನಿರವಕಾಶಲಿಂಗವಾಗಿದೆಯೆಂದು ಪೂರ್ವಪಕ್ಷ.

ಶರೀರಶಬ್ದಕ್ಕೆ ಯೌಗಿಕಾರ್ಥವನ್ನು ಸ್ವೀಕರಿಸಿದಾಗ ಪೃಥಿವ್ಯಾದಿಶರೀರತ್ವವೆಂಬ ಲಿಂಗವು ವಿಷ್ಣುವಿನಲ್ಲಿ ಸಾವಕಾಶವಾಗಿದೆಯೆಂದು ಸಿದ್ಧಾಂತ.

ಟೀಕಾ – ॐ अन्तर्याम्यधिदैवादिषु तद्धर्मव्यपदेशात् ॐ ॥ निरवकाशेनामृतत्वादिनाऽक्षिस्थो हरिरेवेति प्रतिपादितेऽपि अन्तर्यामी विष्णोरन्य एव स्यात् । पृथिव्यादिशरीरस्य तत्रावकाशाभावादित्याशङ्कायामाह – पृथिव्यादीति ॥

ಹಿಂದಿನ ಅಧಿಕರಣದಲ್ಲಿ ಅಮೃತತ್ವ ಮೊದಲಾದ ನಿರವಕಾಶಲಿಂಗಗಳ ಬಲದಿಂದ ಚಕ್ಷುರಿಂದ್ರಿಯದಲ್ಲಿರುವವನು ಶ್ರೀಹರಿಯೇ ಆಗಿದ್ದಾನೆಂದು ಪ್ರತಿಪಾದಿಸಲಾಯಿತು. ಆದರೆ ಆಂತರ್ಯಾಮಿಯಾದವನು ವಿಷ್ಣುವಿಗಿಂತ ಭಿನ್ನನಾದ ವ್ಯಕ್ತಿಯೇ ಆಗಬೇಕು. ಏಕೆಂದರೆ ಆಂತರ್ಯಾಮಿ ಪ್ರಕರಣದಲ್ಲಿ ಪೃಥಿವೀ ಮೊದಲಾದವುಗಳು ಯಾರಿಗೆ ಶರೀರವಾಗಿವೆಯೋ ಅವನೇ ಎಲ್ಲರಲ್ಲೂ ಆಂತರ್ಯಾಮಿಯಾಗಿದ್ದಾನೆಂದು ಹೇಳಲಾಗಿದೆ. ಈ ಪೃಥಿವ್ಯಾದಿಶರೀರತ್ವವೆಂಬ ಲಿಂಗವು ನಿರವಕಾಶವಾದ್ದರಿಂದ ವಿಷ್ಣುವನ್ನು ಆಂತರ್ಯಾಮಿಯೆಂದು ಹೇಗೆ ಹೇಳುತ್ತೀರಿ?

ಈ ಆಕ್ಷೇಪಕ್ಕೆ ''ಪೃಥಿವ್ಯಾದಿಶರೀರತ್ವಂ'' ಎಂಬ ಮಾತಿನಿಂದ ಉತ್ತರಿಸುತ್ತಿದ್ದಾರೆ. ಪೃಥಿವ್ಯಾದಿಶರೀರತ್ವವು ನಿರವಕಾಶವಾಗಿಲ್ಲ.

कुतो न? इत्यत आह – यौगिकेति ।। अशरीरस्यापि विष्णोः 'शीर्यते नित्यमेवास्मात्' इत्युक्तरीत्या पृथिव्यादिना योगवृत्तिसिद्धशरीरशब्दवाच्यत्व-सम्भवादित्यर्थः ।

ಏಕೆ ನಿರವಕಾಶವಾಗಿಲ್ಲ? ಎಂಬ ಪ್ರಶ್ನೆಗೆ "ಯೌಗಿಕ" ಇತ್ಯಾದಿ ಮಾತುಗಳಿಂದ ಉತ್ತರಿಸುತ್ತಿದ್ದಾರೆ. ವಸ್ತುತಃ ಪೃಥಿವೀ ಮೊದಲಾದ ಭೂತಪದಾರ್ಥಗಳು ವಿಷ್ಣುವಿಗೆ ಶರೀರವಾಗಿಲ್ಲ. ಆದರೂ ಸಹ 'ಶೀರ್ಯತೇ ನಿತ್ಯಮೇವಾಸ್ಮಾತ್' ಎಂಬ ಅರ್ಥವನ್ನು ವಿವಕ್ಷಿಸಿದಾಗ ಪೃಥಿವ್ಯಾದಿಗಳು ಭಗವಂತನ ಶರೀರವಾಗಬಹುದು. ಅಂದರೆ ಯಾರ ದೆಸೆಯಿಂದ ಪೃಥಿವ್ಯಾದಿಗಳು ನಿತ್ಯವಾಗಿ ನಾಶವನ್ನು ಹೊಂದುತ್ತವೋ ಅಂತಹವನು ಶರೀರೀ ಎನಿಸಿದ್ದಾನೆ. ಹೀಗೆ ಯೋಗವೃತ್ತಿಯಿಂದ ಸಿದ್ಧವಾದ ಶರೀರಶಬ್ದವಾಚ್ಯತ್ವವನ್ನು ವಿಷ್ಣುವಿನಲ್ಲಿ ಕೂಡಿಸಬಹುದು.

योगवृत्त्या विष्णुं प्रति शरीरशब्दवाच्यानीति यावत् । अविदितत्वादिबलेन प्रथमप्राप्ताया अपि रूढेः परित्यागोपपत्तेरिति ।।

ಪೃಥಿವೀ ಮೊದಲಾದವುಗಳು ವಿಷ್ಣುವಿಗೆ ಯೌಗಿಕಾರ್ಥವನ್ನು ವಿವಕ್ಷಿಸಿದಾಗ ಶರೀರವಾಗುತ್ತವೆ. ಎಂದು ತಿಳಿಯಬೇಕು. ಯೋಗಕ್ಕಿಂತ ರೂಢಿಯು ಪ್ರಬಲವಾದ್ದರಿಂದ ವಿಷ್ಣುವಿನಲ್ಲಿ ಯೌಗಿಕಾರ್ಥವನ್ನು ವಿವಕ್ಷಿಸುವುದು ತಪ್ಪಲ್ಲವೇ ಎಂದು ಪ್ರಶ್ನಿಸಬಾರದು. ಅವಿದಿತತ್ವವೇ ಮೊದಲಾದ ವಿಷ್ಣುವಿನ ಲಿಂಗಗಳು ಕೇಳಿಸುತ್ತಿವೆ. ಇವುಗಳ ಬಲದಿಂದ ಮೊದಲು ಪ್ರಾಪ್ತವಾದ ರೂಢಿಯನ್ನು ಬಿಟ್ಟು ಯೌಗಿಕಾರ್ಥವನ್ನು ಸ್ವೀಕರಿಸುವುದು ಸಮಂಜಸವಾಗುತ್ತದೆ.

ಶ್ರೀಜಯತೀರ್ಥಭಿಕ್ಷುಗಳಿಂದ ರಚಿತವಾದ ನ್ಯಾಯವಿವರಣೆಯ ಟೀಕೆಯ
ಕನ್ನಡಾನುವಾದದಲ್ಲಿ ಅಂತರ್ಯಾಮ್ಯಧಿಕರಣವು ಸಮಾಪ್ತವಾಯಿತು.

****

श्रीमदानन्दतीर्थभगवत्पादाचार्यविरचितम्

अणुभाष्यम्

अन्तर्याम्यधिकरणम् (१।२।५)

नियन्ता

ಅಣುಭಾಷ್ಯ - ಪೃಥಿವ್ಯಾದಿಗಳಲ್ಲಿದ್ದು ನಿಯಮನ ಮಾಡುವವನು ಮಹಾವಿಷ್ಣುವೇ ಆಗಿದ್ದಾನೆ.

***

श्री आनन्दतीर्थभगवत्पादाचार्यविरचितम्
ब्रह्मसूत्राणुभाष्यम्
श्रीराघवेन्द्रतीर्थविरचिता
ब्रह्मसूत्राणुभाष्यविवृतिः

तत्वमञ्जरी

अन्तर्याम्यधिकरणम् (१।२।५)

नन्वक्ष्यन्तस्स्थो नियन्ता विष्णुरित्ययुक्तम् । 'एतदमृतम्' इति तत्र हेतूकृतस्यामृतत्वस्य वाजसनेये पञ्चमे 'यः पृथिव्यां तिष्ठन्' इत्युपक्रम्य 'एष त आत्मा अन्तर्याम्यमृतः' इत्यादिना पृथिव्याद्यन्तर्यामिण श्रवणात्तस्य च 'पृथिवी शरीरं' इति पृथिवीशरीरकत्वादिना पृथिव्याद्यभिमानिजीवत्वाद् उपादानप्रकृतित्वाद्वेत्यतः प्राप्तम् – अन्तर्यामीत्यादिसूत्रत्रयम् ।

ಹಿಂದಿನ ಅಧಿಕರಣದಲ್ಲಿ ಚಕ್ಷುರಿಂದ್ರಿಯದಲ್ಲಿ ನಿಯಾಮಕನಾಗಿ ನೆಲೆಸಿದವನು ವಿಷ್ಣುವೇ ಆಗಿದ್ದಾನೆಂದು ನಿರ್ಣಯಿಸಲಾಯಿತು. ಇದು ತಪ್ಪು. ಏಕೆಂದರೆ, 'ಏತದಮೃತಮ್' ಇತ್ಯಾದಿಯಾದ ಶ್ರುತಿಯಲ್ಲಿ

ಅಮೃತತ್ವವೆಂಬ ಧರ್ಮವು ಚಕ್ಷುರಿಂದ್ರಿಯದ ಅಂತರ್ಯಾಮಿಯಲ್ಲಿ ಕೇಳಿಸುತ್ತಿದೆ. ಬೃಹದಾರಣ್ಯಕದ ಐದನೆಯ ಅಧ್ಯಾಯದಲ್ಲಿ 'ಯಃ ಪೃಥಿವ್ಯಾಂ ತಿಷ್ಠನ್' ಎಂದು ಪ್ರಾರಂಭವಾಗಿ 'ಏಷ ತ ಆತ್ಮಾ ಅಂತರ್ಯಾಮ್ಯಮೃತಃ' ಎಂದು ಕೊನೆಗೊಳ್ಳುವ ಶ್ರುತಿಯಲ್ಲಿ ಪೃಥಿವ್ಯಾದಿಗಳ ಅಂತರ್ಯಾಮಿಯಾದ ವ್ಯಕ್ತಿಯ ಧರ್ಮವು ಕೇಳಿಸುತ್ತಿದೆ. ಈ ಅಂತರ್ಯಾಮಿಗೆ 'ತಸ್ಯ ಪೃಥಿವೀ ಶರೀರಮ್' ಎಂಬುದಾಗಿ ಪೃಥಿವ್ಯಾದಿಗಳನ್ನು ಶರೀರವೆಂದು ಹೇಳಲಾಗಿದೆ. ಪೃಥಿವ್ಯಾದಿಗಳು ಶರೀರವಾಗಬೇಕಾದರೆ ಅಭಿಮಾನಿದೇವತೆ ಅಂತರ್ಯಾಮಿಯಾಗಬೇಕು. ಅಥವಾ ಪೃಥಿವಿಗೆ ಉಪಾದಾನಕಾರಣವಾದ ಪ್ರಕೃತಿಯು ಅಂತರ್ಯಾಮಿಯಾಗಬೇಕು; ಹೊರತು ವಿಷ್ಣುವು ಅಂತರ್ಯಾಮಿಯಾಗುವುದಿಲ್ಲ. ಆದ್ದರಿಂದ ಅಮೃತತ್ವಧರ್ಮವುಳ್ಳ ಪೃಥಿವ್ಯಾದಿಗಳ ಅಭಿಮಾನಿಯಾದ ಅಂತರ್ಯಾಮಿಯು ಜೀವಾದಿಗಳೇ ಆಗುತ್ತಾರೆಂಬ ಪೂರ್ವಪಕ್ಷವು ಪ್ರಾಪ್ತವಾಗುತ್ತದೆ. ಇದನ್ನು ಪರಿಹರಿಸುವುದಕ್ಕಾಗಿ ''ಅಂತರ್ಯಾಮಿ'' ಇತ್ಯಾದಿ ಮೂರು ಸೂತ್ರಗಳು ಹೊರಟಿವೆ.

तस्याप्यर्थो – नियन्ता चेति । पूर्ववदनुषङ्गः । स चक्षुरादावमृतत्वेनोक्तः स एको विष्णुरेव सर्वगो नियन्ता अन्तर्यामिशब्दोक्तसर्वप्राण्यन्तस्स्थः सन्नियमनकर्ता । न तु तत्तदभिमानिजीवः तदुपादानप्रकृतिर्वेत्यर्थः ।

ಈ ಅಧಿಕರಣದ ಸಾರವನ್ನೂ ಸಹ 'ನಿಯಂತಾ ಚ' ಎಂಬ ಪದದಿಂದಲೇ ಸಂಗ್ರಹಿಸಿದ್ದಾರೆ. ಇಲ್ಲಿಯೂ ಸಹ 'ಸ ಏಕೋ ವಿಷ್ಣುರೇವ ಸರ್ವಗಃ ನಿಯಂತಾ' ಎಂಬುದಾಗಿ ಹಿಂದಿನಂತೆ ಯೋಜನೆ ಮಾಡಿಕೊಳ್ಳಬೇಕು. ಸಃ ಎಂದರೆ ಚಕ್ಷುರಾದಿ ಇಂದ್ರಿಯಗಳಲ್ಲಿ ಅಮೃತತ್ವ ಮೊದಲಾದ ಧರ್ಮಗಳುಳ್ಳವನಾಗಿ ಪ್ರತಿಪಾದ್ಯನಾದ ಒಬ್ಬನೇ ವಿಷ್ಣುವು ಸರ್ವತ್ರ ವ್ಯಾಪ್ತನಾಗಿದ್ದಾನೆ. ನಿಯಾಮಕನಾಗಿದ್ದಾನೆ. ಅಂತರ್ಯಾಮಿಶಬ್ದದಿಂದ ಪ್ರತಿಪಾದ್ಯನಾಗಿ ಸಕಲಪ್ರಾಣಿಗಳ ಹೃದಯದಲ್ಲಿ ನೆಲೆಸಿದ್ದಾನೆ. ಸಕಲರಿಗೂ ನಿಯಾಮಕನಾಗಿದ್ದಾನೆಂದು ಇದರ ಅರ್ಥ; ಹೊರತು ಪೃಥಿವ್ಯಾದಿಗಳ ಅಭಿಮಾನಿಗಳು; ಆ ಅಭಿಮಾನಿಗಳಾದ ಜೀವರುಗಳು ಅಥವಾ ಪೃಥಿವ್ಯಾದಿಗಳಿಗೆ ಉಪಾದಾನಕಾರಣವಾದ ಪ್ರಕೃತಿಯು ಅಂತರ್ಯಾಮಿಯಾಗಲು ಸಾಧ್ಯವಿಲ್ಲವೆಂದು ಆಣುಭಾಷ್ಯದ ಅರ್ಥ.

कुतः । सर्वैर्लिङ्गैर्युतो हि । 'यं पृथिवी न वेद' 'पृथिवीमन्तर' इत्यादिनोक्त - पृथिव्याद्यभिमानिदेवाविदितत्व अनन्यापेक्षरमणवत्त्वरूपान्तरत्व अमृतत्वाद्येतत्प्रकरणस्थलिङ्गैर्युतत्वादित्यर्थः । पूर्ववद्वा योजना । प्रागुक्तसमुच्चये चशब्दः ।

ಏಕೆಂದರೆ 'ಸರ್ವೈರ್ಲಿಂಗೈಃ ಯುತೋ ಹಿ' ಎಂಬುದರಿಂದ ಉತ್ತರಿಸಿದ್ದಾರೆ. ಅಂದರೆ 'ಯಂ ಪೃಥಿವೀ ನ ವೇದ' 'ಪೃಥಿವೀಮಂತರಃ' ಇತ್ಯಾದಿಯಾದ ಶ್ರುತಿಗಳಲ್ಲಿ ಪೃಥಿವ್ಯಾದ್ಯಭಿಮಾನಿದೇವತೆಗಳಿಂದ ಭಗವಂತನ ತಿಳಿಯದಿರುವಿಕೆ. ಮತ್ತೊಬ್ಬರ ಅಪೇಕ್ಷೆಯಿಲ್ಲದೆ ರಮಣಶೀಲನಾಗಿರುವಿಕೆ, ಅಮೃತತ್ವವನ್ನು ಹೊಂದಿರುವಿಕೆ ಮೊದಲಾದ ಅನೇಕ ಲಿಂಗಗಳು ಅಂತರ್ಯಾಮಿಪ್ರಕರಣದಲ್ಲಿ ಕೇಳಿ ಬರುತ್ತಿವೆ. ಇವೆಲ್ಲವೂ ಸಹ ವಿಷ್ಣುವಿನ ಅಸಾಧಾರಣಲಿಂಗಗಳು. ಇಲ್ಲಿಯೂ ಹಿಂದಿನಂತೆ ಯೋಜನೆಮಾಡಿಕೊಳ್ಳಬಹುದು. ಚಶಬ್ದವು ಹಿಂದೆ ಹೇಳಿದ ಯುಕ್ತಿಯನ್ನು ಸಮುಚ್ಚಯ ಮಾಡುತ್ತಿದೆ.

ननु च शरीरवत्त्वलिङ्गाज्जीव एव कुतो न इत्यतोऽपि - नियन्तेति । 'विश्वजीवान्तरत्वाद्यैः' इत्यन्वेति । हि यस्मात् नियंताऽन्तर्यामी 'यो विज्ञानादन्तरः' 'य आत्मनोऽन्तरः' इत्यादिनोक्तविज्ञानात्मशब्दितसर्वजीवविविक्तत्वरूपान्तरत्वाख्यविश्व जीवान्तरत्वाद्यैर्लिङ्गैः युतोऽतो न जीव इत्यर्थः ।

ಶರೀರವಿರುವಿಕೆ ಮೊದಲಾದ ಲಿಂಗಗಳಿಂದ ಅಂತರ್ಯಾಮಿಯಾದವನು ಜೀವನೇ ಏಕಾಗಬಾರದು? ಎಂಬ ಪ್ರಶ್ನೆಗೂ ಸಹ "ನಿಯಂತಾ ಚ" ಎಂಬುದರಿಂದಲೇ ಉತ್ತರಿಸಿದ್ದಾರೆ. 'ವಿಶ್ವಜೀವಾಂತರತ್ವಾದ್ಯೈಃ' ಎಂಬುದನ್ನು ಸಹ 'ನಿಯಂತಾ' ಎಂಬಲ್ಲಿ ಅನ್ವಯಮಾಡಿಕೊಳ್ಳಬೇಕು. ಹಿ = ಯಾವ ಕಾರಣದಿಂದ, ನಿಯಂತಾ = ಅಂತರ್ಯಾಮಿಯಾಗಿ ನಿಯಾಮಕನಾದವನು ವಿಷ್ಣುವೇ ಆಗಿದ್ದಾನೆ. ಏಕೆಂದರೆ 'ಯೋ ವಿಜ್ಞಾನಾದಂತರಃ' 'ಯೋ ಆತ್ಮನೋ ಅಂತರಃ' ಇತ್ಯಾದಿಯಾಗಿ ಹೇಳಲ್ಪಟ್ಟ ವಿಜ್ಞಾನ ಹಾಗೂ ಆತ್ಮಶಬ್ದದ ಅರ್ಥವೆನಿಸಿದ ಸಕಲ ಜೀವರುಗಳಿಗಿಂತ ಭಗವಂತನು ಭಿನ್ನನಾಗಿದ್ದಾನೆ. ಹೀಗೆ ಸರ್ವಜೀವಭಿನ್ನತ್ವರೂಪವಾದ ವಿಶ್ವಜೀವಾಂತರತ್ವ ಮೊದಲಾದ ಲಿಂಗಗಳಿರುವುದರಿಂದ ಜೀವನು ಅಂತರ್ಯಾಮಿಯಾಗುವುದಿಲ್ಲ.

आद्यपदेन 'य आत्मनि' इत्युक्ताधाराधेयत्वादिग्रहः । न हि जीवाभेदेनाधीतस्य जीवत्वं युक्तमिति भावः ।

'ವಿಶ್ವಜೀವಾಂತರತ್ವಾದ್ಯೈಃ' ಎಂಬಲ್ಲಿರುವ ಆದ್ಯಪದದಿಂದ, 'ಯ ಆತ್ಮನಿ' ಎಂಬ ಶ್ರುತಿಯಲ್ಲಿ ಹೇಳಿದ ಆಧಾರಾಧೇಯತ್ವಭಾವವನ್ನು ಗ್ರಹಣಮಾಡಬೇಕು. ಜೀವನಿಗೂ ಸಹ ಅಂತರ್ಯಾಮಿಯು ಆಧಾರನಾಗಿದ್ದಾನೆಂದು ಆಧಾರಾಧೇಯಭಾವವನ್ನು ಹೇಳಿರುವುದರಿಂದಲೂ ಜೀವನು ಅಂತರ್ಯಾಮಿಯಾಗುವುದಿಲ್ಲ. ಏಕೆಂದರೆ ಜೀವನಿಗಿಂತ ಭಿನ್ನನಾಗಿ ತಿಳಿಯಲ್ಪಟ್ಟವನಿಗೆ ಜೀವತ್ವವು ಯುಕ್ತವಾಗುವುದಿಲ್ಲವೆಂದು ಅಭಿಪ್ರಾಯ.

कथं तर्हि पृथिव्याद्यभिमानिसर्वजीवशरीरकत्वम् अशरीरस्य विष्णोरित्यतोऽपि-नियन्तेति । हि यतो विष्णुर्नियन्ता सर्वनियामकः अतः पृथिव्याद्यभिमानि-सर्वजीवशरीरक इत्यर्थः ।

ಹಾಗಾದರೆ ಪೃಥಿವ್ಯಾದ್ಯಭಿಮಾನಿದೇವತೆಗಳು ಹಾಗೂ ಸಕಲಜೀವರುಗಳೇ ಶರೀರವಾಗಿ ಉಳ್ಳವನು ವಿಷ್ಣು ಹೇಗಾಗುತ್ತಾನೆ? ಅವನಿಗೆ ಶರೀರವು ಇರುವುದಿಲ್ಲವಲ್ಲವೇ? ಎಂಬ ಪ್ರಶ್ನೆಗೆ "ನಿಯಂತಾ ಚ" ಎಂಬುದರಿಂದಲೇ ಸಮಾಧಾನವನ್ನು ತಿಳಿಯಬೇಕು. ಹಿ = ಯಾವ ಕಾರಣದಿಂದ ವಿಷ್ಣುವು ನಿಯಂತಾ ಸಕಲ ನಿಯಾಮಕನಾಗಿದ್ದಾನೋ, ಆ ಕಾರಣದಿಂದ ಪೃಥಿವ್ಯಾದ್ಯಭಿಮಾನಿದೇವತೆಗಳಿಗೆ ಹಾಗೂ ಸಕಲ ಜೀವರುಗಳಿಗೆ ಶರೀರಿಯಾಗಿದ್ದಾನೆಂದರ್ಥ.

यथा लोके शरीरं जीवतन्त्रं तथा सर्वे जीवा विष्णुतन्त्रत्वाद् गौण्या वृत्त्या तच्छरीराणीत्यर्थः ।

'पृथिव्याद्या देवतास्तु देहवद्वद्गान्वतः ।
शरीरमिति चोच्यन्ते यस्य विष्णोर्महात्मनः ।।'

इति बृहद्भाष्योपात्तस्मृतेः । 'शीर्यते नित्यमेवास्मात्' इति भाष्योक्तदिशा सर्वस्य विष्णुना देहादिद्वारा यथायोग्यं शीर्यमाणत्वाच्च योगवृत्त्या सर्वशरीरत्वं युक्तमिति चशब्दार्थः ।। ५ ।।

ಯಾವ ರೀತಿಯಾಗಿ ಲೋಕದಲ್ಲಿ ಶರೀರವು ಜೀವನ ಅಧೀನವಾಗಿರುತ್ತದೋ ಅದೇ ರೀತಿಯಾಗಿ ಸಕಲಜೀವರುಗಳು ವಿಷ್ಣುವಿನ ಅಧೀನರಾಗಿದ್ದಾರೆ ಹೀಗೆ ಅಮುಖ್ಯವೃತ್ತಿಯಿಂದ ಜೀವರುಗಳನ್ನು ಶ್ರುತಿಯು ಭಗವಂತನ ಶರೀರವೆಂದು ಹೇಳಿದೆ.

'ಪೃಥಿವ್ಯಾದ್ಯಾ ದೇವತಾಸ್ತು ದೇಹವದ್ ಯದ್ ವಶತ್ವತಃ।
ಶರೀರಮಿತಿ ಚೋಚ್ಯಂತೇ ಯಸ್ಯ ವಿಷ್ಣೋರ್ಮಹಾತ್ಮನಃ॥'

ಪೃಥಿವೀ ಮೊದಲಾದ ಭೂತಗಳ ಅಭಿಮಾನಿದೇವತೆಗಳು ದೇಹದಂತೆ ಭಗವಂತನಿಗೆ ಅಧೀನರಾಗಿದ್ದಾರೆ. ಆದ್ದರಿಂದಲೇ ಭಗವಂತನ ಶರೀರವೆಂದು ಅವರನ್ನು ಕರೆಯಲಾಗಿದೆ'' ಎಂಬ ಬೃಹದಾರಣ್ಯಕೋಪನಿಷತ್ತಿನ ಭಾಷ್ಯದಲ್ಲಿ ಉದಾಹರಿಸಲ್ಪಟ್ಟ ಸ್ಮೃತಿಯ ಆಧಾರದಿಂದ ಶರೀರಶಬ್ದಾರ್ಥವನ್ನು ತಿಳಿದುಕೊಳ್ಳಬೇಕು. ಮತ್ತು 'ಶೀರ್ಯತೇ ನಿತ್ಯಮೇವಾಸ್ಮಾತ್' ಇತ್ಯಾದಿಯಾಗಿ ಭಾಷ್ಯದಲ್ಲಿ ಹೇಳಿದ ಪ್ರಕಾರ ಎಲ್ಲವೂ ಸಹ ವಿಷ್ಣುವಿನಿಂದ ದೇಹನಾಶದ ಮೂಲಕ ನಾಶಗೊಳಿಸಲ್ಪಡುತ್ತದೆ. ಆದ್ದರಿಂದ ಯಥಾಯೋಗ್ಯವಾಗಿ ಎಲ್ಲವೂ ನಾಶವನ್ನು ಹೊಂದುವುದರಿಂದ ಯೋಗವೃತ್ತಿಯಿಂದ ಸಕಲವೂ ಭಗವಂತನ ಶರೀರವೆನಿಸಿದೆ. ಇಷ್ಟು ನಿಯಂತಾ ಚ ಎಂಬಲ್ಲಿರುವ ಚಶಬ್ದದ ಅರ್ಥ.

ಶ್ರೀರಾಘವೇಂದ್ರತೀರ್ಥಶ್ರೀಪಾದಂಗಳವರಿಂದ ವಿರಚಿತವಾದ

ತತ್ತ್ವಮಂಜರಿಯ ಕನ್ನಡಾನುವಾದದಲ್ಲಿ ಅಂತರ್ಯಾಮ್ಯಧಿಕರಣವು ಮುಗಿಯಿತು.

***

।। ಶ್ರೀಜಾನಕೀವದನಾಮ್ಭೋಜರಾಜಹಂಸಾಯ ರಾಮಚಂದ್ರಾಯ ನಮಃ ।।

।। ಶ್ರೀ ಗುರುಭ್ಯೋ ನಮಃ ।। ಹರಿಃ ಓಂ ।।

ಶ್ರೀ ರಾಘವೇಂದ್ರತೀರ್ಥವಿರಚಿತಾ

ತನ್ತ್ರದೀಪಿಕಾ

ಪ್ರಣಮ್ಯ ಗುಣಸಮ್ಪೂರ್ಣಂ ದೋಷಾತೀತಂ ರಮಾಪತಿಮ್ ।
ಪೂರ್ಣಬೋಧಂ ಗುರೂನನ್ಯಾನ್ ಕುರ್ಮಃ ಸೂತ್ರಾರ್ಥಸಙ್ಗ್ರಹಮ್ ।।

ಪ್ರಥಮಾಧ್ಯಾಯಸ್ಯ ದ್ವಿತೀಯಃ ಪಾದಃ

ಅನ್ತರ್ಯಾಮ್ಯಧಿಕರಣಮ್ (೧।೨।೫)

।। ಓಂ ಅನ್ತರ್ಯಾಮ್ಯಧಿದೈವಾದಿಷು ತದ್ಧರ್ಮವ್ಯಪದೇಶಾತ್ ಓಂ ।। ೧-೨-೧೮ ।।

ಅತ್ರ ನಯೇऽನ್ತಃಸ್ಥಿತಿರೂಪಭಾವಯುಕ್ತಂ ನಿಯಮನಾಖ್ಯಂ ಕ್ರಿಯಾತ್ಮಕಂ ಲಿಙ್ಗಂ ಸಮನ್ವೀಯತೇ । ಅಧಿದೈವಾದಿಪದೇನ ತತ್ತತ್ಪ್ರಕರಣಂ ಲಕ್ಷ್ಯತೇ । ತದಿತಿ ತನ್ತ್ರಮ್ । ತತ್ತ್ವಿತ್ಯಸ್ತಿ ।

ಈ ಅಧಿಕರಣದಲ್ಲಿ 'ಆಂತಃಸ್ಥಿತಿ' ಎಂಬ ಭಾವಧರ್ಮದಿಂದ ಸಹಿತವಾದ ನಿಯಮನ ಎಂಬ ಕ್ರಿಯಾರೂಪವಾದ ಲಿಂಗವನ್ನು ಸಮನ್ವಯಮಾಡುತ್ತಿದ್ದಾರೆ. ಸೂತ್ರದಲ್ಲಿರುವ 'ಅಧಿದೈವಾದಿ' ಎಂಬ ಪದದಿಂದ ಅಧಿದೈವ ಪ್ರಕರಣವನ್ನು ವಿವಕ್ಷಿಸುವಂತೆ ಅಧಿಭೂತಪ್ರಕರಣ, ಅಧ್ಯಾತ್ಮಪ್ರಕರಣಗಳನ್ನೂ ಸಹ ಲಕ್ಷಣಯಾ ವಿವಕ್ಷಿಸಬೇಕು. 'ತದ್ಧರ್ಮವ್ಯಪದೇಶಾತ್' ಎಂಬಲ್ಲಿರುವ 'ತತ್'ಎಂಬ ಪದವನ್ನು ಎರಡು ಬಾರಿ ಆವೃತ್ತಿಮಾಡಿಕೊಳ್ಳಬೇಕು. 'ತತ್ತು' ಎಂಬ ಪದವಂತೂ ಇಲ್ಲಿಯೂ ಅನ್ವಯವಾಗುತ್ತದೆ.

''ಏಷ ತ ಆತ್ಮಾऽನ್ತರ್ಯಾಮ್ಯಮೃತಃ'' ಇತಿ ಶ್ರುತೋऽನ್ತರ್ಯಾಮೀ ಬ್ರಹ್ಮೈವ ನ ತು ಪ್ರಕೃತಿಸ್ತತ್ತದಭಿಮಾನೀ ವಾ । ಕುತಃ? ಅಧಿದೈವಾಧಿಭೂತಾದಿಪ್ರಕರಣೇಷು ತಸ್ಯಾನ್ತರ್ಯಾಮಿಣಃ ಸಮ್ಬನ್ಧಿತಯಾ ತಸ್ಯ ಬ್ರಹ್ಮಣೋ ಧರ್ಮಸ್ಯ ''ಯಂ ಪೃಥಿವೀ ನ ವೇದ ಯಂ ಪೃಥಿವೀಮನ್ತರೋ ಯಮಯತಿ'' ಇತ್ಯಾದಿನಾ ಪೃಥಿವ್ಯಾದ್ಯವಿದಿತತ್ವಾನ್ತರತ್ವಾದೇರ್ವ್ಯಪದೇಶಾದಿತ್ಯರ್ಥಃ ।

'ಏಷ ತ ಆತ್ಮಾನ್ತರ್ಯಾಮ್ಯಮೃತಃ' ಎಂಬ ಶ್ರುತಿಯಲ್ಲಿ ಆಂತರ್ಯಾಮಿಯಾಗಿ ಪ್ರತಿಪಾದ್ಯನಾದವನು ಬ್ರಹ್ಮನೇ ಆಗಿದ್ದಾನೆ. ಪ್ರಕೃತಿಯಾಗಲೀ ಪೃಥಿವ್ಯಾದಿಗಳ ಅಭಿಮಾನಿ ಜೀವರುಗಳಾಗಲೀ ಪ್ರತಿಪಾದ್ಯರಾಗಿಲ್ಲ. ಏಕೆಂದರೆ, ಅಧಿದೈವ, ಅಧಿಭೂತ, ಅಧ್ಯಾತ್ಮಪ್ರಕರಣಗಳಲ್ಲಿ ತಸ್ಯ = ಆಂತರ್ಯಾಮಿಗೆ ಸಂಬಂಧಿಸಿದ, ತಸ್ಯ = ಬ್ರಹ್ಮನ ಧರ್ಮಸ್ಯ = ಯಂ ಪೃಥಿವೀ ನ ವೇದ

ಯಃ ಪೃಥಿವೀಮಂತರೋ ಯಮಯತಿ' ಇತ್ಯಾದಿ ಶ್ರುತಿಗಳಿಂದ ತಿಳಿಯಲ್ಪಡುವ ಪೃಥಿವ್ಯಾದ್ಯವಿದಿತತ್ವ, ಅಂತರತ್ವ ಮೊದಲಾದ ಧರ್ಮಗಳ ವ್ಯಪದೇಶಾತ್ = ಉಲ್ಲೇಖ ಮಾಡಿರುವುದರಿಂದ ಎಂದು.

तत्त्वित्यनुवृत्तावपि पुंनिर्देशो निर्णेयश्रुत्यनुसारात् । तद्धर्मव्यपदेशादित्येव पूर्तावधिदैवेत्युक्तिः पृथिव्यादेश्चेतनत्वसूचनार्था । तेन जडावेद्यत्वं प्रकृत्यादावपि युक्तमिति न शङ्क्यम् ।

ವಸ್ತುತಃ 'ತತ್ತು' ಎಂಬ ಪದವು ಅನುವೃತ್ತಿಯಿಂದ ಸಿದ್ಧವಾಗುತ್ತಿದೆ. ಆದರೂ ಸಹ 'ಏಷ ತ ಆತ್ಮಾ' ಎಂಬ ನಿರ್ಣೇಯಶ್ರುತಿಗೆ ಅನುಸಾರಿಯಾಗಿ 'ಅಂತರ್ಯಾಮೀ' ಎಂಬುದಾಗಿ ಪುಲ್ಲಿಂಗ ಪ್ರಯೋಗವನ್ನು ಮಾಡಿದ್ದಾರೆ.

'ತದ್ಧರ್ಮವ್ಯಪದೇಶಾತ್' ಎಂಬುದರಿಂದಲೇ ಸೂತ್ರದ ತಾತ್ಪರ್ಯವನ್ನು ಹೇಳಿದಂತಾಗುತ್ತದೆ. ಪುನಃ ಅಧಿದೈವ ಎಂದು ಹೇಳಿರುವ ಉದ್ದೇಶವೇನೆಂದರೆ ಪೃಥಿವ್ಯಾದಿಗಳು ಚೇತನರಾಗಿದ್ದಾರೆಂಬುದನ್ನು ಸೂಚಿಸುವುದಕ್ಕಾಗಿ. ಇದರಿಂದ ಜಡಪದಾರ್ಥಗಳಿಂದ ತಿಳಿಯಲ್ಪಡದಿರುವಿಕೆಯು ಪ್ರಕೃತ್ಯಾದಿಗಳಲ್ಲಿಯೂ ಯುಕ್ತವಾಗುತ್ತದೆಂಬ ಶಂಕೆಯನ್ನು ನಿರಾಕರಿಸಿದಂತಾಯಿತು.

ननु पृथिव्यादिशरीरत्वलिङ्गात् प्रकृतिजीवौ किं न स्यातामित्यत आह -

॥ ॐ नच स्मार्तमतद्धर्माभिलापात् ॐ ॥ १-२-१९॥

चस्त्वर्थे । शारीरश्चेत्यनुकृष्यते । स्मार्तं साङ्ख्यस्मृत्युक्तं प्रधानम् । अन्तर्यामी तदेव न तु स्मार्तं शारीरो जीवश्च । कुतः? अतद्धर्माभिलापात् । तयोः स्मार्तजीवयोर्धर्माणां त्रिगुणत्वसंसारित्वादीनामभिलापाभावादित्यर्थः ।

'ಯಸ್ಯ ಪೃಥಿವೀ ಶರೀರಮ್' ಎಂಬ ಶ್ರುತಿಯಲ್ಲಿ ಹೇಳಲ್ಪಟ್ಟ ಪೃಥಿವ್ಯಾದಿಶರೀರತ್ವವೆಂಬ ಲಿಂಗದಿಂದ ಪ್ರಕೃತಿ ಅಥವಾ ಅಭಿಮಾನಿಜೀವರು ಏಕೆ ಅಂತರ್ಯಾಮಿಗಳಾಗಬಾರದು? ಎಂಬ ಆಕ್ಷೇಪಕ್ಕೆ ಉತ್ತರವನ್ನು ನೀಡುವುದಕ್ಕಾಗಿ ಮುಂದಿನ ಸೂತ್ರ ಹೊರಟಿದೆ. "ಓಂ ನ ಚ ಸ್ಮಾರ್ತಮತದ್ಧರ್ಮಾಭಿಲಾಪಾತ್ ಓಂ"

ಸೂತ್ರಾರ್ಥ ಹೀಗಿದೆ - ಸೂತ್ರದಲ್ಲಿರುವ ಚ ಶಬ್ದವನ್ನು ತು ಶಬ್ದದ ಅರ್ಥದಲ್ಲಿ ಬಳಸಿದ್ದಾರೆ. ಶಾರೀರಶ್ಚ ಎಂಬ ಮುಂದಿನ ಸೂತ್ರದ ಪದವನ್ನು ಇಲ್ಲಿ ಅನುಕರ್ಷಮಾಡಬೇಕು. 'ಸ್ಮಾರ್ತಮ್' ಎಂದರೆ ಸಾಂಖ್ಯಸ್ಮೃತಿಯಲ್ಲಿ ಹೇಳಲ್ಪಟ್ಟಿರುವ ಪ್ರಕೃತಿ ಎಂದರ್ಥ. ಅಂತರ್ಯಾಮಿಯು ಬ್ರಹ್ಮನೇ ಆಗಿದ್ದಾನೆ ಹೊರತು ಸ್ಮೃತಿಸಿದ್ಧವಾದ ಪ್ರಕೃತಿಯಾಗಲೀ ಶಾರೀರನಾದ ಜೀವನಾಗಲೀ ಆಗುವುದಿಲ್ಲ. ಏಕೆಂದರೆ, ಅತದ್ಧರ್ಮಾಭಿಲಾಪಾತ್ ಸ್ಮಾರ್ತವಾದ ಪ್ರಕೃತಿ ಮತ್ತು ಜೀವರುಗಳ, ತ್ರಿಗುಣತ್ವ, ಸಂಸಾರಿತ್ವ ಮೊದಲಾದ ಧರ್ಮಗಳನ್ನು, ಅಭಿಲಾಪಾಭಾವಾತ್ = ಉಲ್ಲೇಖಮಾಡದ ಕಾರಣ ಎಂದು.

शारीरत्वं तु ''शीर्यते नित्यमेवास्मात्'' इत्यादिना सावकाशमिति भावः ।

ಸೂತ್ರದಲ್ಲಿ 'ಶೀರ್ಯತೇ ನಿತ್ಯಮೇವಾಸ್ಮಾತ್' ಎಂಬ ಪ್ರಮಾಣವನ್ನು ಅನುಸರಿಸಿ ಪೃಥಿವ್ಯಾದಿಶರೀರತ್ವವು ಬ್ರಹ್ಮನಲ್ಲಿ ಸಾವಕಾಶವಾಗಿದೆಯೆಂದು ತಿಳಿಸಿದ್ದಾರೆ.

स्मार्तत्युक्तिः स्मृत्युक्तदिशा सर्वस्य तदुपादानकतया तदभेदेन तत्स्वरूपत्वाभिप्रयेण पृथिव्यादिशरीरत्वमिति पूर्वपक्षे युक्तिं सूचयितुम् ।

ಸ್ಮಾರ್ತ ಎಂದು ಹೇಳಿದ್ದರಿಂದ ಸಾಂಖ್ಯಸ್ಮೃತಿಯ ಪ್ರಕಾರ ಸಕಲವಸ್ತುಗಳು ಪ್ರಕೃತಿಗೆ ಉಪಾದಾನಕಾರಣವಾದ್ದರಿಂದ ಪ್ರಕೃತಿಯಿಂದ ಅಭಿನ್ನವಾಗಿವೆ. ಆದ್ದರಿಂದಲೇ ಪ್ರಕೃತಿಯು ಸಕಲಪದಾರ್ಥಗಳ ಸ್ವರೂಪವಾಗಿದೆಯೆಂಬ ಅಭಿಪ್ರಾಯದಿಂದ ಪೃಥಿವ್ಯಾದಿಶರೀರತ್ವವು ಪ್ರಕೃತಿಗೆ ಯುಕ್ತವಾಗುತ್ತದೆ. ಈ ಪೂರ್ವಪಕ್ಷಯುಕ್ತಿಯನ್ನು ಸೂಚಿಸಿದ್ದಾರೆ.

शारीरेत्युक्तिरपि शारीरत्वात्तत्तच्छरीरत्वं तत्तदभिमानिजीवस्य युक्तमिति सूचयितुमित्याहुः ।

ಇದರಂತೆ ಸೂತ್ರದಲ್ಲಿ ಶಾರೀರವೆಂಬ ಪದವೂ ಸಹ ಶರೀರವುಳ್ಳವರಾದ್ದರಿಂದ ಅಭಿಮಾನಿಜೀವರುಗಳು ಪೃಥಿವ್ಯಾದಿಗಳನ್ನೇ ಶರೀರವನ್ನಾಗಿ ಹೊಂದಿದ್ದಾರೆ ಎಂಬರ್ಥದಲ್ಲಿದೆ. ಆದ್ದರಿಂದ ಇದು ಯುಕ್ತವಾಗುತ್ತದೆಂದು ಸೂಚಿಸಿದ್ದಾರೆಂದು ಹೇಳುತ್ತಾರೆ.

तत्त्वप्रदीपे तु कापिलस्मृतिमात्रल्पितं, नतु श्रुत्युक्तमिति स्मार्तमित्युक्तम् ।

ತತ್ತ್ವಪ್ರದೀಪದಲ್ಲಾದರೂ ಸಾಂಖ್ಯರ ಪ್ರಕೃತಿಯು ಕಾಪಿಲಸ್ಮೃತಿಯಿಂದ ಮಾತ್ರ ಕಲ್ಪಿತವಾಗಿದೆ; ಹೊರತು ಶ್ರುತಿಸಿದ್ಧವಾಗಿಲ್ಲವೆಂದು ಸೂಚಿಸಲು ''ಸ್ಮಾರ್ತಮ್'' ಎಂದು ಪ್ರಯೋಗಿಸಿದ್ದಾರೆಂದು ಹೇಳಿದ್ದಾರೆ.

प्रसज्यप्रतिषेधार्थकनञः क्रियासापेक्षत्वेनाऽसामर्थ्येऽपि ''असूर्यं पश्याः'' इत्यादाविवाकर्तरि चेति ज्ञापनात् समासः ।।

ಸೂತ್ರದಲ್ಲಿರುವ ನ್ಞಪದವು ಪ್ರಸಜ್ಯಪ್ರತಿಷೇಧಾರ್ಥಕದಲ್ಲಿರುವುದರಿಂದ ಕ್ರಿಯಾಸಾಪೇಕ್ಷವಾಗಿದೆ. ಆದ್ದರಿಂದ ಸಮಾಸವನ್ನು ಹೊಂದುವುದಿಲ್ಲ. ಆದರೆ 'ಅಕರ್ತರಿ ಚ ಕಾರಕೇ ಸಂಜ್ಞಾಯಾಮ್' ಎಂಬ ವ್ಯಾಕರಣ ಸೂತ್ರದಿಂದ ಸೂಚಿಸಿದಂತೆ 'ಅಸೂರ್ಯಂ ಪಶ್ಯಾಃ' ಎಂಬಲ್ಲಿ ಹೇಗೆ ಸಮಾಸವಾಗುತ್ತದೋ ಅದರಂತೆ ಇಲ್ಲಿಯೂ ಸಹ ಸಮಾಸವಾಗಿದೆಯೆಂದು ತಿಳಿಯಬೇಕು.

जीवपक्षे साधकं नेत्युक्त्वा बाधकं चाह -

।। ॐ शारीरश्चोभयेपि हि भेदेनैनमधीयते ॐ ।। १-२-२० ।।

ಜೀವನು ಅಂತರ್ಯಾಮಿಯಾಗಿದ್ದಾನೆಂಬ ಪಕ್ಷದಲ್ಲಿ ಯಾವುದೇ ಸಾಧಕಪ್ರಮಾಣಗಳಿರುವುದಿಲ್ಲವೆಂದು ಹೇಳಿ ಬಾಧಕಪ್ರಮಾಣವು ಇರುತ್ತದೆಂದು ತಿಳಿಸಲು ಮುಂದಿನ ಸೂತ್ರ ಹೊರಟಿದೆ. 'ಓಂ ಶಾರೀರಶ್ಚೋಭಯೇಽಪಿ ಹಿ ಭೇದೇನೈನಮಧೀಯತೇ ಓಂ'

नेति वर्तते । 'आत्मनोऽन्तरः' इति माध्यन्दिनायनाः 'विज्ञानादन्तरो विविक्तः' इति काण्वाश्चैनं जीवं प्रकृतादन्तर्यामिणो भेदेनाधीयते हि तस्मादतो न शारीरश्चान्तर्यामीत्यर्थः ।

ಸೂತ್ರಾರ್ಥ ಹೀಗಿದೆ -- ಹಿಂದಿನ ಸೂತ್ರದಿಂದ ನ ಎಂಬುದನ್ನು ಅನುವೃತ್ತಿ ಮಾಡಬೇಕು. ಹಿ= ಯಾವ ಕಾರಣದಿಂದ, ಭೇದೇನೈನಮಧೀಯತೇ = ಆತ್ಮನೋಽಂತರಃ ಎಂಬುದಾಗಿ ಮಾಧ್ಯಂದಿನಶಾಖಿಗಳು ಹಾಗೂ 'ವಿಜ್ಞಾನಾದಂತರಃ' ಎಂಬುದಾಗಿ ಕಾಣ್ವಶಾಖಿಗಳು ಜೀವನನ್ನು ಅಂತರ್ಯಾಮಿಯಿಂದ ಭಿನ್ನನಾಗಿದ್ದಾನೆಂದು ಅಧ್ಯಯನ ಮಾಡುತ್ತಾರೋ, ಅತಃ = ಆ ಕಾರಣದಿಂದ, ಶಾರೀರಶ್ಚ = ಜೀವನೂ ಸಹ, ನ = ಅಂತರ್ಯಾಮಿಯಾಗುವುದಿಲ್ಲ.

आत्मविज्ञानशब्दयोर्जीवार्थत्वादिति भावः । चकारो ''यस्तेजसि तिष्ठन्'' इत्यादिभेदाध्ययनात् चित्प्रकृतिर्नान्तर्यामीति समुच्चयार्थ इति तत्त्वप्रदीपकोक्तिः ।

ಏಕೆಂದರೆ ಆತ್ಮಾ ಮತ್ತು ವಿಜ್ಞಾನಶಬ್ದಗಳು ಜೀವ ಎಂಬರ್ಥದಲ್ಲಿ ಇರುವುದರಿಂದ ಎಂದು ಅಭಿಪ್ರಾಯ. ಸೂತ್ರದಲ್ಲಿರುವ ಚಶಬ್ದವು 'ಯಸ್ತೇಜಸಿ ತಿಷ್ಠನ್' ಎಂಬುದಾಗಿ ಚಿತ್ಕೃತಿಯನ್ನು ಅಂತರ್ಯಾಮಿಯಿಂದ ಭಿನ್ನವಾಗಿ ಅಧ್ಯಯನ ಮಾಡುವುದರಿಂದ ಚಿತ್ಕೃತಿಯು ಅಂತರ್ಯಾಮಿಯಾಗುವುದಿಲ್ಲವೆಂಬುದನ್ನು ಸಮುಚ್ಚಯ ಮಾಡುತ್ತಿದೆ. ಹೀಗೆ ತತ್ವಪ್ರದೀಪಕಾರರು ವ್ಯಾಖ್ಯಾನಿಸುತ್ತಾರೆ.

नञोऽनुकर्षणार्थ इति टीकोक्तिः । आद्यसूत्रेऽनुवृत्तावधारणव्यावर्त्यं सयुक्तिकं दर्शयितुमिमौ योगौ ।।५।।

ಟೀಕೆಯಲ್ಲಿ ಹಿಂದಿನ ಸೂತ್ರದಿಂದ ನ್ಞ್ ಎಂಬುದನ್ನು ಅನುವೃತ್ತಿಮಾಡಿಕೊಳ್ಳುವುದಕ್ಕಾಗಿ ಚಶಬ್ದವನ್ನು ಹೇಳಿರುತ್ತಾರೆಂದು ವ್ಯಾಖ್ಯಾನಿಸಿದ್ದಾರೆ.

ಮೊದಲನೆಯ ಸೂತ್ರದಲ್ಲಿ ಅನುವೃತ್ತವಾದ ತತ್ತು ಎಂಬುದು ಅವಧಾರಣಾರ್ಥದಲ್ಲಿದೆ. ಇದರಿಂದ ವ್ಯಾವರ್ತ್ಯವಾದ ವಿಷಯವನ್ನು ಯುಕ್ತಿಬದ್ಧವಾಗಿ ತೋರಿಸಲು ಮುಂದಿನ ಎರಡು ಸೂತ್ರಗಳನ್ನು ರಚಿಸಿದ್ದಾರೆ.

ಶ್ರೀರಾಘವೇಂದ್ರತೀರ್ಥಶ್ರೀಪಾದಂಗಳವರಿಂದ ರಚಿತವಾದ

ತಂತ್ರದೀಪಿಕಾದ ಕನ್ನಡಾನುವಾದದಲ್ಲಿ ಅಂತರ್ಯಾಮ್ಯಧಿಕರಣವು ಸಮಾಪ್ತವಾಯಿತು.

ಅಂತರ್ಯಾಮ್ಯಧಿಕರಣ (೧-೨-೫)

ಶ್ರೀ ರಾಘವೇಂದ್ರತೀರ್ಥವಿರಚಿತಾ

ಶ್ರೀನ್ಯಾಯಮುಕ್ತಾವಲಿಃ

ಅನ್ತರ್ಯಾಮ್ಯಧಿಕರಣಮ್ (೧।೨।೯)

।। ॐ अन्तर्याम्याधिदैवादिषु तद्धर्मव्यपदेशात् ॐ।। ५ ।।

।। ॐ नच स्मार्तमतद्धर्माभिलापात् ॐ ।।

।। ॐ शारीरश्चोभयेऽपि हि भेदेनैनमधीयते ॐ ।।

ಅತ್ರಾಮೃತತ್ವಮುಖೇನ ಆಕ್ಷೇಪಾತ್ ಆಕ್ಷೇಪಿಕೀ ಸಂಗತಿಃ । ವಾಜಸನೇಯೇ ಪಂಚಮೇऽಧ್ಯಾಯೇ ''ಏಷ ತ ಆತ್ಮಾ ಅನ್ತರ್ಯಾಮ್ಯಮೃತ'' (ಬೃ.೫-೭-೩) ಇತಿಶ್ರುತಃ ಅನ್ತರ್ಯಾಮೀ ಕಿಂ ಪ್ರಕೃತಿಜೀವೌ ವಾ ಉತ ವಿಷ್ಣುರಿತಿ ಸಂದೇಹಃ ।

ಈ ಅಧಿಕರಣದಲ್ಲಿ ಅಮೃತತ್ವವೆಂಬ ಧರ್ಮವನ್ನು ಆಕ್ಷೇಪಮಾಡಿದ್ದರಿಂದ ಹಿಂದಿನ ಅಧಿಕರಣದಿಂದ ಆಕ್ಷೇಪಿಕೀ ಸಂಗತಿಯು ಇರುತ್ತದೆ. ಬೃಹದಾರಣ್ಯಕೋಪನಿಷತ್ತಿನ ಐದನೆಯ ಅಧ್ಯಾಯದಲ್ಲಿ 'ಏಷ ತೇ ಆತ್ಮಾ ಅಂತರ್ಯಾಮ್ಯಮೃತಃ' ಎಂಬುದಾಗಿ ಅಮೃತತ್ವ ಧರ್ಮಕ್ಕೆ ಆಶ್ರಯನಾದ ವ್ಯಕ್ತಿ ಅಂತರ್ಯಾಮಿಯಾಗಿದ್ದಾನೆಂದು ಹೇಳಲಾಗಿದೆ. ಈ ಅಂತರ್ಯಾಮಿಯು ಪ್ರಕೃತಿ ಹಾಗೂ ಜೀವರೋ ಅಥವಾ ವಿಷ್ಣುವೋ ಎಂದು ಸಂದೇಹ.

ಪ್ರಕೃತಿರಿತ್ಯೇಕಃ ಪೂರ್ವಃ ಪಕ್ಷಃ । 'ಯಸ್ಯ ಪೃಥಿವೀ ಶರೀರಮ್' ಇತ್ಯಾದಿನಾ ಶ್ರುತಪೃಥಿವ್ಯಾದ್ಯಾತ್ಮಕತ್ವರೂಪಪೃಥಿವ್ಯಾದಿಶರೀರಕತ್ವಸ್ಯ ಸರ್ವೋಪಾದಾನೇ ಪ್ರಕೃತೌ ಸಂಭವಾತ್ । ಶರೀರಪದಸ್ಯ ''ಪೂರ್ವಪಕ್ಷಸ್ಯ ಶರೀರಮ್'' ಇತ್ಯಾದೌ ಸ್ವರೂಪೇऽಪಿ ಸಂಭವಾತ್ ।

ಪ್ರಕೃತಿಯೇ ಅಂತರ್ಯಾಮಿಯಾಗಿದೆಯೆಂದು ಮೊದಲನೆಯಪೂರ್ವಪಕ್ಷ. ಏಕೆಂದರೆ, 'ಯಸ್ಯ ಪೃಥಿವೀ ಶರೀರಮ್' ಇತ್ಯಾದಿ ಶ್ರುತಿಯಲ್ಲಿ ಕೇಳಿಸುತ್ತಿರುವ ಪೃಥಿವ್ಯಾದ್ಯಾತ್ಮಕತ್ವವನ್ನೇ ಪೃಥಿವ್ಯಾದಿಶರೀರಕತ್ವವನ್ನಾಗಿ ಹೇಳಲಾಗಿದೆ. ಈ ಪೃಥಿವ್ಯಾದ್ಯಾತ್ಮಕತ್ವವು ಎಲ್ಲ ಕಾರ್ಯಗಳಿಗೆ ಉಪಾದಾನಕಾರಣವಾದ ಪ್ರಕೃತಿಯಲ್ಲೇ ಉಪಪನ್ನವಾಗುತ್ತದೆ.

ಶರೀರಪದಕ್ಕೆ ಕೇವಲ 'ಸ್ವರೂಪ' ಎಂದರ್ಥ. 'ಪೂರ್ವಪಕ್ಷಸ್ಯ ಶರೀರಮ್' ಎಂದು ಪ್ರಯೋಗಿಸುತ್ತಾರೆ. ಇಲ್ಲಿರುವ ಶರೀರಶಬ್ದವು ಪೂರ್ವಪಕ್ಷದ ಸ್ವರೂಪ ಎಂಬರ್ಥದಲ್ಲಿ ಪ್ರಸಿದ್ಧವಾಗಿದೆ. ಆದರಂತೆ 'ಪೃಥಿವೀಶರೀರಮ್' ಎಂದು ಹೇಳಿದಾಗ ಪೃಥಿವಿಯ ಸ್ವರೂಪವೆಂದರ್ಥವೆಂದು ಹೇಳಬೇಕು.

''ವ್ಯಾಪ್ತಂ ಕಾರ್ಯೇಷು ಕಾರಣಮ್'' ಇತ್ಯಾದಿನಾ ಕಾರಣಸ್ಯ ಕಾರ್ಯಸ್ಥತ್ವೇನ ಯಃ ಪೃಥಿವ್ಯಾಂ ತಿಷ್ಠನ್ನಿತ್ಯಾದೇರಪ್ಯುಪಪತ್ತೇಃ ।

'ವ್ಯಾಪ್ತಂ ಕಾರ್ಯೇಷು ಕಾರಣಮ್' ಇತ್ಯಾದಿಯಾಗಿ ಕಾರಣವು ಕಾರ್ಯದಲ್ಲಿರುತ್ತದೆಂದು ತಿಳಿಯುತ್ತಿದೆ. ಆದ್ದರಿಂದ 'ಯಃ ಪೃಥಿವ್ಯಾಂ ತಿಷ್ಠನ್' ಎಂಬುದಾಗಿ ಕಾರ್ಯಕ್ಕೂ ಕಾರಣಕ್ಕೂ ಭೇದವನ್ನು ಹೇಳಿದ್ದಾರೆಂಬ ಗೊಂದಲಕ್ಕೆ ಅವಕಾಶವಿಲ್ಲ. ಕಾರ್ಯಕಾರಣಗಳಿಗೆ ಅಭೇದವಿದ್ದರೂ ಸಹ ಕಾರಣವು ಕಾರ್ಯದಲ್ಲಿರುತ್ತದೆಂಬ ವ್ಯವಹಾರವು ಲೋಕದಲ್ಲಿದೆ.

कार्यकारणयोर्भेदाभेदेन तादात्म्यतत्स्थत्वयोरविरोधात् । कार्यस्य कारणाधीनत्वेन यः पृथिवीमन्तरो यमयतीत्यादेः गौणत्वेनोपपत्तेरिति ।

ಕಾರ್ಯ ಹಾಗೂ ಕಾರಣಗಳಿಗೆ ಭೇದವು ಇಲ್ಲದ ಕಾರಣ ತಾದಾತ್ಮ್ಯವನ್ನು ಹೇಳಬಹುದು. ಮತ್ತು ಕಾರ್ಯಕಾರಣಗಳಿಗೆ ಭೇದಾಭೇದವಿರುವುದರಿಂದ ವಕ್ಯವನ್ನು ಮತ್ತು ಕಾರ್ಯದಲ್ಲಿ ಕಾರಣವಿದೆ ಎಂದೂ ಸಹ ಹೇಳಬಹುದು. ಎರಡಕ್ಕೂ ವಿರೋಧ ಬರುವುದಿಲ್ಲ. ಕಾರ್ಯವು ಕಾರಣದ ಅಧೀನವಾದ್ದರಿಂದ 'ಯಃ ಪೃಥಿವೀಂ ಅಂತರೋ ಯಮಯತಿ' ಎಂಬುದನ್ನು ಕೂಡಿಸಬೇಕು. ಅಂದರೆ ಉಪಾದಾನಕಾರಣದ ಅಧೀನವಾಗಿದೆಯೆಂದು ಗೌಣವಾಗಿ ವ್ಯಾಖ್ಯಾನಿಸಬೇಕು.

पृथिव्यादितत्तदभिमानिजीवा एव वा तत्तदन्तर्यामीत्यन्यः । तान्प्रति पृथिव्यादेः स्थूलशरीरत्वात् ।

ಅಥವಾ ಪೃಥಿವ್ಯಾದಿಗಳಿಗೆ ಅಭಿಮಾನಿಯಾದ ಜೀವರುಗಳೇ ಅಂತರ್ಯಾಮಿಯಾಗುತ್ತಾರೆ. ಅಭಿಮಾನಿ ದೇವತೆಗಳಿಗೆ ಪೃಥಿವ್ಯಾದಿಗಳು ಸ್ಥೂಲವಾದ ಶರೀರವಾದ್ದರಿಂದ ಎಂದು ಎರಡನೆಯ ಪೂರ್ವಪಕ್ಷ.

एवं च प्रकृत्यादिरेवात्रामृतोऽन्य इति प्राचीनामृतत्वं नाक्षिस्थस्य विष्णुत्वसाधकमिति ।

ಆದ್ದರಿಂದ ಪ್ರಕೃತ್ಯಾದಿಗಳೇ ಅಮೃತತ್ವಧರ್ಮವುಳ್ಳ ಅಂತರ್ಯಾಮಿಯೆಂದು ಸಿದ್ಧವಾಗುತ್ತದೆ. ಆದ್ದರಿಂದ ಹಿಂದಿನ ಅಧಿಕರಣದಲ್ಲಿ ಚಕ್ಷುರಿಂದ್ರಿಯದಲ್ಲಿರುವ ವ್ಯಕ್ತಿಗೆ ಅಮೃತತ್ವಧರ್ಮದಿಂದ ವಿಷ್ಣುತ್ವವನ್ನು ಸಮರ್ಥಿಸಿದ್ದು ತಪ್ಪಾಗುತ್ತದೆ. ಇಷ್ಟು ಪೂರ್ವಪಕ್ಷ.

सिद्धान्तस्तु ।। यं पृथिवी न वेद यः पृथिवीमन्तरो यमयतीत्यादिनोक्तस्य कात्स्न्येंन पृथिव्यादिदेवाविदितत्वस्य बाह्यापेक्षां विना रममाणत्वरूपान्तरत्वस्य च लिंगस्य ''न ते विष्णो जायमानः'' (ऋ.५-९९-२) ''स योऽतोऽश्रुतोऽगतोऽमतोऽदृष्टः सर्वेषां भूतानामन्तरपुरुषः'' इत्यादिश्रुत्या (ऐ.३-२-४) विष्ण्वेकधर्मत्वात् पृथिव्यादेः जडत्वे अप्रसक्तनिरासप्रसङ्गात् यमित्यस्य वैयर्थ्याच्च ।

ಸಿದ್ಧಾಂತ ಹೀಗಿದೆ - 'ಯಂ ಪೃಥಿವೀಂ ನ ವೇದ ಯಃ ಪೃಥಿವೀಮಂತರೋ ಯಮಯತಿ' ಇತ್ಯಾದಿ ವಾಕ್ಯದಲ್ಲಿ ಪೃಥಿವ್ಯಾದಿ ಅಭಿಮಾನಿ ದೇವತೆಗಳಿಗೆ ಸಂಪೂರ್ಣವಾಗಿ ಯಾವ ವ್ಯಕ್ತಿಯು

ತಿಳಿಯಲಾರನೋ ಅವನೇ ಅಂತರ್ಯಾಮಿಯಾಗಿದ್ದಾನೆಂದು ಹೇಳಲಾಗಿದೆ. ಮತ್ತು ಬಾಹ್ಯಪದಾರ್ಥಗಳ ಅಪೇಕ್ಷೆಯಿಲ್ಲದೆ ಸುಖಿಸುವವನಾಗಿದ್ದಾನೆಂದು ಹೇಳಲಾಗಿದೆ. ಹೀಗೆ ಪೃಥಿವ್ಯಾದ್ಯವಿದಿತತ್ವ, ಅಂತರತ್ವ ಮೊದಲಾದ ಲಿಂಗಗಳು ವಿಷ್ಣುವೇ ಅಂತರ್ಯಾಮಿಯಾಗಿದ್ದಾನೆಂಬುದಕ್ಕೆ ಸಾಧಕಗಳಾಗಿವೆ. ಅಷ್ಟೇ ಅಲ್ಲದೇ 'ನ ತೇ ವಿಷ್ಣೋ ಜಾಯಮಾನಃ' ಎಂಬ ಋಗ್ವೇದಶ್ರುತಿಯಲ್ಲಿ, 'ಸ ಯೋಽತೋಽಶ್ರುತೋಽಗತೋಽಮತೋಽದೃಷ್ಟಃ ಸರ್ವೇಷಾಂ ಭೂತಾನಾಮಂತರಪುರುಷಃ' ಎಂಬ ಏತರೇಯಶ್ರುತಿಯಲ್ಲಿ ಹೇಳಲ್ಪಟ್ಟಧರ್ಮಗಳೆಲ್ಲವೂ ಕೇವಲ ವಿಷ್ಣುವಿನ ಅಸಾಧಾರಣಲಿಂಗಗಳಾಗಿವೆ. ಒಂದು ವೇಳೆ ಜಡವಾದ ಪ್ರಕೃತಿಯನ್ನು ಅಂತರ್ಯಾಮಿಯೆಂದು ವಿವಕ್ಷಿಸಿದರೆ 'ಯಂ ಪೃಥಿವೀ ನ ವೇದ' ಎಂದರೆ ಪೃಥಿವ್ಯಾದಿ ಜಡಪದಾರ್ಥಗಳಿಂದ ತಿಳಿಯಲಾರನೆಂದು ವಿವಕ್ಷಿಸಿದರೆ ಅಪ್ರಸಕ್ತವಾದದ್ದನ್ನು ನಿರಾಸಮಾಡಿದಂತಾಗುತ್ತದೆ. ಮತ್ತು 'ಯಂ' ಎಂಬುದು ವ್ಯರ್ಥವಾಗುತ್ತದೆ.

शरीरत्वस्य शीर्यत इति शरीरमिति योगेन वा शरीरवदीशनियम्यत्वेन गौण्या वृत्त्या वा युक्तत्वेन यः पृथिव्यामित्यादेः क्लेशेनानेयत्वात् ।

ಶರೀರಶಬ್ದಕ್ಕೆ 'ಶೀರ್ಯತೇ ಇತಿ ಶರೀರಮ್' 'ನಾಶ ಹೊಂದುವ ಪದಾರ್ಥವು ಶರೀರ' ಎಂದು ಯೌಗಿಕವಾದ ಅರ್ಥವನ್ನು ಸ್ವೀಕರಿಸಿದಾಗ ಭಗವಂತನ ಅಧೀನವಾಗಿ ನಾಶವನ್ನು ಹೊಂದುತ್ತದೆಂದು ಹೇಳಿದಂತಾಗುತ್ತದೆ. ಶರೀರವು ಹೇಗೆ ಜೀವನಿಂದ ನಿಯಮ್ಯವಾಗಿದೆಯೋ ಅದರಂತೆ ಸಕಲಪದಾರ್ಥಗಳು ಭಗವಂತನಿಂದ ನಿಯಮ್ಯವಾಗಿವೆ ಎಂದು ಗೌಣೀವೃತ್ತಿಯನ್ನೂ ಸಹ ಹೇಳಬಹುದು. ಹೀಗೆ 'ಯಃ ಪೃಥಿವ್ಯಾಮ್' ಇತ್ಯಾದಿ ಶ್ರುತಿಯನ್ನು ಸುಲಭವಾಗಿ ವ್ಯಾಖ್ಯಾನಿಸಲು ಬರುತ್ತದೆ.

प्रकृतिजीवयोः त्रिगुणत्वसंसारित्वाद्यसाधारणधर्माभावात् ''य आत्मनोऽन्तरो विज्ञानादन्तरो विविक्तः'' इति जीवादन्तर्यामिणो भेदव्यपदेशाच्च अन्तर्यामी विष्णुरेवेत्यमृतत्वमपि तस्यैवेति । फले तु पूर्वाक्षेपसमाधी ।। ५ ।।

ಪ್ರಕೃತಿ ಹಾಗೂ ಜೀವರನ್ನುಅಂತರ್ಯಾಮಿಯೆಂದು ವಿವಕ್ಷಿಸಲು ಸಾಧ್ಯವಿಲ್ಲ. ಏಕೆಂದರೆ ಶ್ರುತಿಯಲ್ಲಿ ತ್ರಿಗುಣತ್ವ ಮೊದಲಾದ ಪ್ರಕೃತಿಯ ಧರ್ಮವನ್ನಾಗಲೀ, ಸಂಸಾರಿತ್ವವೇ ಮೊದಲಾದ ಜೀವನ ಧರ್ಮಗಳನ್ನಾಗಲೀ ಹೇಳಿರುವುದಿಲ್ಲ. ಅಷ್ಟೇ ಅಲ್ಲದೆ 'ಯ ಆತ್ಮನೋಽಂತರೋ ವಿಜ್ಞಾನಾದಂತರೋ ವಿವಿಕ್ತಃ' ಎಂಬುದಾಗಿ ಜೀವನಿಗಿಂತ ಅಂತರ್ಯಾಮಿಯು ಭಿನ್ನನಾಗಿದ್ದಾನೆಂದು ಹೇಳಲಾಗಿದೆ. ಆದ್ದರಿಂದ ವಿಷ್ಣುವೇ ಅಂತರ್ಯಾಮಿಯಾಗಿದ್ದಾನೆ. ಅಮೃತತ್ವಧರ್ಮವೂ ಸಹ ಅವನದ್ದೇ ಆಗಿದೆ.

ಹಿಂದಿನ ಅಧಿಕರಣದಲ್ಲಿ ಸಾಧಿಸಲ್ಪಟ್ಟ ಅಮೃತತ್ವವನ್ನು ಆಕ್ಷೇಪಿಸುವುದು ಪೂರ್ವಪಕ್ಷದ ಫಲ. ಅದಕ್ಕೆ ಸಮಾಧಾನವಾಗಿ ಸಿದ್ಧಾಂತದ ಫಲ.

ಶ್ರೀರಾಘವೇಂದ್ರತೀರ್ಥಶ್ರೀಪಾದಂಗಳವರಿಂದ ರಚಿತವಾದ
ನ್ಯಾಯಮುಕ್ತಾವಳಿಯ ಕನ್ನಡಾನುವಾದದಲ್ಲಿ ಅಂತರ್ಯಾಮ್ಯಧಿಕರಣವು ಸಮಾಪ್ತವಾಯಿತು.

सूत्रार्थरत्नावलिः

अन्तर्याम्यधिकरणम् (१।२।५)

अत्रान्तःस्थत्वरूपभावसहितं नियमनक्रियात्मकं लिङ्गं ब्रह्मणि समन्वीयते ।

ॐ ॥ अन्तर्याम्यधिदैवादिषु तद्धर्मव्यपदेशात् ॥ ॐ ॥ १८ ॥

ननु प्रकृतिरेवान्तर्यामी । 'यस्य पृथिवी'(बृ. ५।७।३) इत्यादिना पृथिव्यादि-शरीरव्यपदेशात् । शरीरशब्दस्य स्वरूपेऽपि प्रयोगदर्शनेन तस्य तत्रोपपत्तेः । नच 'यः पृथिव्याम्' इत्यादिना पृथिव्यादिस्थत्वोक्तिविरोधः । 'व्याप्तं कार्येषु कारणम्' इति वचनात् । तस्य तत्रोपपत्तेः । न च प्रकृतेरचेतनत्वेन पृथिव्यादिनियामकत्वा-योगः । कार्यस्य कारणाधीनत्वेन चेतनप्रकृतेरपि नियामकत्वोपचारोपपत्तेः । न चामृतत्व-विरोधः । तस्य विष्ण्वाविवात्रापि योगेनोपपत्तेः । तत्तज्जीवानां वा - एतदन्तर्यामित्वम् । पृथिव्यादिशरीरत्वादेस्तेष्वपि सुघटत्वात् । ततश्च प्रवृत्यादेरेवान्त र्यामित्वेन तत्र श्रुतममृतत्वं नाक्षिस्थस्य विष्णुत्वसाधकमिति प्राप्ते सूत्रितम् ।

ॐ।। अन्तर्याम्यधिदैवादिषु तद्धर्मव्यपदेशादिति ।। अस्यार्थः – 'एष त आत्माऽन्तर्यामि' (बृ.५।७।३) इति श्रुत्युक्तोऽन्तर्यामी विष्णुरेव न प्रधानादि । कुतः? अधिदैवादिषु अधिदैवाध्यात्माधिभूतादिप्रकरणेषु । तद्धर्मव्यपदेशात् तस्मिन् अन्तर्यामिणि तस्य 'यं पृथिवी न वेद' (बृ. ५।७।३) श्रुतौ उक्तस्याविदितत्वादिब्रह्म धर्मस्य व्यपदेशात् उक्तत्वादित्यर्थः ।

एवञ्च पृथिव्यादिदेवताऽविदितत्वान्तराख्यधर्मव्यपदेशादन्तर्यामी विष्णुरेवेति सिद्धम् ।।

ॐ॥ नच स्मार्तमतद्धर्माभिलापात् ॥ॐ

ಏವಂ ನಿರವಕಾಶಲಿಙ್ಗೇನ ವಿಷ್ಣೋರನ್ತರ್ಯಾಮಿತ್ವಂ ಸಮರ್ಥ್ಯ, ಪ್ರಕೃತ್ಯಾದೇರನ್ತರ್ಯಾಮಿತ್ವಂ ತತ್ಪ್ರಕೃತಿಜೀವಸಾಧಾರಣಂ ಯುಕ್ತ್ಯಾ ಪರಾಕುರ್ವತ್ ಸೂತ್ರಮಾಹ –

ॐ ॥ न च स्मार्तमतद्धर्माभिलापादिति ॥ अस्यार्थः । चः समुच्चये । स्मार्तं कापिलस्मृत्युक्तम् । प्रधानं जीवश्च अन्तर्यामी न । कुतः? अतद्धर्माभिलापात् तद्धर्माणां प्रधानजीवधर्माणां त्रिगुणत्वसंसारित्वादीनाम् । अनभिलापात् अनुक्तत्वादित्यर्थः ।

ಏವಞ್ಚ ವಿಷ್ಣ್ವಸಾಧಾರಣಪೃಥಿವ್ಯಾದ್ಯವಿದಿತ್ವಾದಿಧರ್ಮೋಪದೇಶವತ್ ಕಪಿಲಸ್ಮೃತ್ಯುಕ್ತಪ್ರಕೃತಿ-ಪ್ರಧಾನಜೀವಾಸಾಧಾರಣೋಪಾದಾನತ್ವಜಡತ್ವತ್ರಿಗುಣತ್ವಸಂಸಾರಿತ್ವಾದಿಧರ್ಮಾಣಾಮನುಕ್ತತ್ವಾತ್ ಅನ್ತರ್ಯಾಮೀ ವಿಷ್ಣುರೇವೇತಿ ಸಿದ್ಧಮ್ ।

ॐ ॥ शारीरश्चोभयेऽपि हि भेदेनैनमधीयते ॥ॐ

ಜೀವಸ್ಯಾನ್ತರ್ಯಾಮಿತ್ವಂ ತತ್ಸಾಧಕಾಭಾವೇನ ನಿರಸ್ತಮಪಿ ಪುನರ್ಬಾಧಕಾಖ್ಯವಿಶೇಷಯುಕ್ತ್ಯಾ ನಿರಾಕುರ್ವತ್ ಸೂತ್ರಮುಪನ್ಯಸ್ಯತಿ –

ॐ॥ शारीरश्चोभयेऽपि हि भेदेनैनमधीयत इति ॥ अस्यार्थः – चो नञोऽनुकर्षणार्थः । हि यस्मात् । उभये माध्यन्दिनाः काण्वाश्च । आत्मनोऽन्तरः (बृ.५।७।२२) विज्ञानादन्तरः (बृ.४।५।२२) इति । एनं जीवम् । अन्तर्यामिणः सकाशात् । भेदेन भिन्नत्वेन । अधीयते पठन्ति । तस्माच्छारीरो जीवश्च नान्तर्यामीत्यर्थः ।

ಏವಞ್ಚೋಭಯಶಾಖಿಭಿಃ 'आत्मानमन्तरः' ಇತಿ, 'विज्ञानादन्तरः' ಇತಿ ಚ ಜೀವಸ್ಯ ಬ್ರಹ್ಮಣೋ ಭೇದೇನೋಪದೇಶಾದನ್ತರ್ಯಾಮೀ ವಿಷ್ಣುರೇವೇತಿ ಸಿದ್ಧಮ್ ।

॥ ಇತಿ ಅನ್ತರ್ಯಾಮ್ಯಧಿಕರಣಮ್ ॥

॥ ಪರಿಪೂರ್ಣಚಂದ್ರಿಕೆಯಲ್ಲಿ ಆಂತರ್ಯಾಮ್ಯಧಿಕರಣವು ಮುಗಿಯಿತು ॥

॥ ಶ್ರೀಮದ್ಭೇಶಾರ್ಪಣಮಸ್ತು ॥

ಪರಿಪೂರ್ಣಚಂದ್ರಿಕಾ

ಅದೃಶ್ಯತ್ವಾಧಿಕರಣ
(೧-೨-೬)

ಭಾಗ -೧

ಬ್ರಹ್ಮಸೂತ್ರ, ಸೂತ್ರದೀಪಿಕಾ, ಬ್ರಹ್ಮಸೂತ್ರಭಾಷ್ಯ,
ಸತ್ತರ್ಕದೀಪಾವಳಿ, ತತ್ವಪ್ರಕಾಶಿಕಾ,
ಭಾವದೀಪ ಇವುಗಳ ವಿವರಣೆಯೊಂದಿಗೆ
ಸರಳ ಕನ್ನಡ ಅನುವಾದ

* * *

ಭಾಷ್ಯದೀಪಿಕಾ ಹಾಗೂ ವಾಕ್ಯಾರ್ಥಮಂಜರೀ -
ಸಂಪೂರ್ಣ ಸಂಸ್ಕೃತ ಮೂಲ.

ॐ॥ नच स्मार्तमतद्धर्माभिलापात् ॥ॐ

एवं निरवकाशलिङ्गेन विष्णोरन्तर्यामित्वं समर्थ्य, प्रकृत्यादेरन्तर्यामित्वं तत्प्रकृतिजीवसाधारणं युक्त्या पराकुर्वत् सूत्रमाह –

ॐ ॥ न च स्मार्तमतद्धर्माभिलापादिति ॥ अस्यार्थः । चः समुच्चये । स्मार्तं कापिलस्मृत्युक्तम् । प्रधानं जीवश्च अन्तर्यामी न । कुतः? अतद्धर्माभिलापात् तद्धर्माणां प्रधानजीवधर्माणां त्रिगुणत्वसंसारित्वादीनाम् । अनभिलापात् अनुक्तत्वादित्यर्थः ।

एवञ्च विष्ण्वसाधारणपृथिव्याद्यविदित्वादिधर्मोपदेशवत् कपिलस्मृत्युक्तप्रकृति-प्रधानजीवासाधारणोपादानत्वजडत्वत्रिगुणत्वसंसारित्वादिधर्माणामनुक्तत्वात् अन्तर्यामी विष्णुरेवेति सिद्धम् ।

ॐ ॥ शारीरश्चोभयेऽपि हि भेदेनैनमधीयते ॥ॐ

जीवस्यान्तर्यामित्वं तत्साधकाभावेन निरस्तमपि पुनर्बाधकाख्यविशेषयुक्त्या निराकुर्वत् सूत्रमुपन्यस्यति –

ॐ॥ शारीरश्चोभयेऽपि हि भेदेनैनमधीयत इति ॥ अस्यार्थः – चो नञोऽनुकर्षणार्थः । हि यस्मात् । उभये माध्यन्दिनाः काण्वाश्च । आत्मनोऽन्तरः (बृ.५।७।२२) विज्ञानादन्तरः (बृ.४।५।२२) इति । एनं जीवम् । अन्तर्यामिणः सकाशात् । भेदेन भिन्नत्वेन । अधीयते पठन्ति । तस्माच्छारीरो जीवश्च नान्तर्यामीत्यर्थः ।

एवञ्चोभयशाखिभिः 'आत्मानमन्तरः' इति, 'विज्ञानादन्तरः' इति च जीवस्य ब्रह्मणो भेदेनोपदेशादन्तर्यामी विष्णुरेवेति सिद्धम् ।

॥ इति अन्तर्याम्यधिकरणम् ॥

॥ ಪರಿಪೂರ್ಣಚಂದ್ರಿಕೆಯಲ್ಲಿ ಅಂತರ್ಯಾಮ್ಯಧಿಕರಣವು ಮುಗಿಯಿತು ॥

॥ ಶ್ರೀಮದ್ಭೇಶಾರ್ಪಣಮಸ್ತು ॥

ಪರಿಪೂರ್ಣಚಂದ್ರಿಕಾ

ಅದೃಶ್ಯತ್ವಾಧಿಕರಣ
(೧-೨-೬)

ಭಾಗ -೧

ಬ್ರಹ್ಮಸೂತ್ರ, ಸೂತ್ರದೀಪಿಕಾ, ಬ್ರಹ್ಮಸೂತ್ರಭಾಷ್ಯ,
ಸತ್ತರ್ಕದೀಪಾವಳಿ, ತತ್ವಪ್ರಕಾಶಿಕಾ,
ಭಾವದೀಪ ಇವುಗಳ ವಿವರಣೆಯೊಂದಿಗೆ
ಸರಳ ಕನ್ನಡ ಅನುವಾದ

* * *

ಭಾಷ್ಯದೀಪಿಕಾ ಹಾಗೂ ವಾಕ್ಯಾರ್ಥಮಂಜರೀ -
ಸಂಪೂರ್ಣ ಸಂಸ್ಕೃತ ಮೂಲ.

॥ ಶ್ರೀಗುರುಭ್ಯೋ ನಮಃ ॥

ಅದೃಶ್ಯತ್ವಾಧಿಕರಣ

ದೇವದೇವೋತ್ತಮ ದೇವತಾಸಾರ್ವಭೌಮ
ಅಖಿಲಾಂಡಕೋಟಬ್ರಹ್ಮಾಂಡನಾಯಕ, ಚತುರ್ದಶಲೋಕಗುರುಗಳಾದ
ಶ್ರೀವೇದವ್ಯಾಸದೇವರಿಂದ ಅನುಗ್ರಹಿಸಲ್ಪಟ್ಟ

ಬ್ರಹ್ಮಮೀಮಾಂಸಾಶಾಸ್ತ್ರ

ಅದೃಶ್ಯತ್ವಾದಿಗುಣಗಳುಳ್ಳವನೂ ಸಹ ಮಹಾವಿಷ್ಣುವೇ

ॐ ॥ ಅದೃಶ್ಯತ್ವಾದಿಗುಣಕೋ ಧರ್ಮೋಕ್ತೇಃ ॥ ॐ (೧-೨-೨೧)

ಅಥರ್ವಣಿಕೋಪನಿಷತ್ತಿನಲ್ಲಿ 'ಯತ್ತದದ್ರೇಶ್ಯಮ್' ಇತ್ಯಾದಿಯಾಗಿ ಹೇಳಲ್ಪಟ್ಟ ಅದೃಶ್ಯತ್ವಾದಿಗುಣಗಳು ಪರಮಾತ್ಮನಲ್ಲೇ ಬರುತ್ತವೆ. ಏಕೆಂದರೆ ಮೋಕ್ಷಕಾರಣವಾದ ಪರವಿದ್ಯೆಗೆ ಅಕ್ಷರರೂಪನಾದ ಭಗವಂತನನ್ನು ವಿಷಯನೆಂದು ಹೇಳಿರುವುದರಿಂದ.

ಶ್ರೀಜಗನ್ನಾಥಯತಿಗಳಿಂದ ರಚಿಸಲ್ಪಟ್ಟ

ಸೂತ್ರದೀಪಿಕಾ

ಸೂತ್ರದೀಪಿಕಾ — ಅದೃಶ್ಯತ್ವಾದಿಗುಣಕಃ 'ಯತ್ತದದ್ರೇಶ್ಯಮ್' ಇತಿ ಶ್ರುತ್ಯುಕ್ತಾದೃಶ್ಯತ್ವಾದಿ-ಧರ್ಮವಿಶಿಷ್ಟಾಕ್ಷರಶಬ್ದವಾಚ್ಯೋ ವಿಷ್ಣುರೇವ ನ ಪ್ರಕೃತ್ಯಾದಿಃ । ಕುತಃ? ಧರ್ಮೋಕ್ತೇಃ ಋಗಾದಿಪರ ವಿದ್ಯಾವಿಷಯತ್ವರೂಪವಿಷ್ಣುಧರ್ಮಸ್ಯ 'ಯಯಾ' ಇತಿ ಶ್ರುತ್ಯುಕ್ತತ್ವಾದಿತ್ಯರ್ಥಃ ।।

ಅರ್ಥ - ಅದೃಶ್ಯತ್ವಾದಿಗುಣಕಃ = ಯತ್ತದದ್ರೇಶ್ಯಂ ಎಂಬ ಶ್ರುತಿಯಲ್ಲಿ ಹೇಳಲ್ಪಟ್ಟ ಅದೃಶ್ಯತ್ವಾದಿ ಧರ್ಮಗಳಿಂದ ವಿಶಿಷ್ಟನಾದವನು ಅಕ್ಷರಶಬ್ದವಾಚ್ಯನಾದ ವಿಷ್ಣುವೇ ಆಗುತ್ತಾನೆ ಹೊರತು ಪ್ರಕೃತ್ಯಾದಿಗಳಲ್ಲ. ಏಕೆಂದರೆ ಧರ್ಮೋಕ್ತೇಃ = ಋಗ್ವೇದವೇ ಮೊದಲಾದ ಪರವಿದ್ಯಾವಿಷಯತ್ವವೆಂಬ ವಿಷ್ಣುವಿನ ಧರ್ಮವನ್ನು ಯಯಾ ಎಂಬ ಶ್ರುತಿಯಲ್ಲಿ ಹೇಳಿರುವುದರಿಂದ,

ಶ್ರೀಮದಾನನ್ದತೀರ್ಥಭಗವತ್ಪಾದಾಚಾರ್ಯವಿರಚಿತ-

ಬ್ರಹ್ಮಸೂತ್ರಭಾಷ್ಯಮ್

ಭಾಷ್ಯಮ್ — ಅದೃಶ್ಯತ್ವಾದಿಗುಣಾ ವಿಷ್ಣೋರುಕ್ತಾಃ ।

ಅನುವಾದ - ಆನಂದಮಯಾಧಿಕರಣದಲ್ಲಿ ಅದೃಶ್ಯತ್ವ ಮೊದಲಾದ ಗುಣಗಳನ್ನು ವಿಷ್ಣುವಿನಲ್ಲಿ ಸ್ಥಾಪಿಸಲಾಗಿದೆ. ಆದರೆ ಮುಂಡಕೋಪನಿಷತ್ತಿನಲ್ಲಿ ಅಕ್ಷರನಲ್ಲಿ ಅದೃಶ್ಯತ್ವವನ್ನು ಹೇಳಿದ್ದು ಕಾಣಿಸುತ್ತಿದೆ.

ಪ್ರತಿಪದಾರ್ಥ -- ಈ ಅಧಿಕರಣದಲ್ಲಿ ದೃಶ್ಯತ್ವಾಭಾವ ಮೊದಲಾದ ಲಿಂಗಗಳನ್ನು ಬ್ರಹ್ಮನಲ್ಲಿ ಸಮನ್ವಯ ಮಾಡಲಾಗಿದೆ. ಹಿಂದಿನ ಅಧಿಕರಣದಿಂದ ಮತ್ತೆ ಬೇರೆ ಅಧಿಕರಣದ ವಿಷಯ ವಾಕ್ಯಗಳಿಂದ ಸಂಗತಿಯನ್ನು ಸಾಂಗತ್ಯದ ಮೂಲಕ ವಿಷಯವಾಕ್ಯವನ್ನು ಉದಾಹರಿಸುವವರಾಗಿ ವಿಷಯ, ಸಂಶಯ ಪೂರ್ವಪಕ್ಷಗಳನ್ನು ಹೇಳುತ್ತಿದ್ದಾರೆ -

ಅದೃಶ್ಯತ್ವಾದಿ ಗುಣಾಃ = ಕಣ್ಣಿಗೆ ಕಾಣಿಸದಿರುವಿಕೆ, ಮೊದಲಾದ ಅಥಾವರೂಪವಾದ ಧರ್ಮಗಳನ್ನು, ವಿಷ್ಣೋಃ = ವಿಷ್ಣುವಿಗೆ, ಉಕ್ತಾಃ = ಆನಂದಮಯಾಧಿಕರಣದಲ್ಲಿ ಹೇಳಲ್ಪಟ್ಟವೆ.(೧)

ಭಾಷ್ಯಮ್ — ತತ್ರ —

'ಯತ್ತದದ್ರೇಶ್ಯಮಗ್ರಾಹ್ಯಮಗೋತ್ರಮವರ್ಣಮಚಕ್ಷುಃಶ್ರೋತ್ರಂ ತದಪಾಣಿಪಾದಮ್ ।
ನಿತ್ಯಂ ವಿಭುಂ ಸರ್ವಗತಂ ಸುಸೂಕ್ಷ್ಮಂ ತದವ್ಯಯಂ ಯದ್ ಭೂತಯೋನಿಂ ಪರಿಪಶ್ಯನ್ತಿ ಧೀರಾಃ'
(ಮುಂ.೧-೧-೬) ಇತ್ಯುಕ್ತ್ವಾ —

(೧) ಭಾಷ್ಯದೀಪಿಕಾ — ಅತ್ರಾಧಿಕರಣೇ ದೃಶ್ಯತ್ವಾಬಾಭಾವಾಲ್ಯಲಿಙ್ಗಂ ಬ್ರಹ್ಮಣಿ ಸಮನ್ವೀಯತೇ । ಪೂರ್ವಾಧಿಕರಣತದ್ವಿಷಯಸಙ್ಗತಿವಿಷಯವಾಕ್ಯೋದಾಹರಣಪೂರ್ವಕಂ ವಿಷಯಸಂಶಯೌ ಸಯುಕ್ತಿಕೌ ಪೂರ್ವಪಕ್ಷಂ ಚ ಸೂಚಯತಿ — ಅದೃಶ್ಯತ್ವಾದೀತಿ ।। 'ಗುಣಾಃ' ಶುಭಧರ್ಮಾಃ । ಆದಿಪದೇನಾನಾತ್ಮ್ಯಾದಿಗ್ರಹಣಮ್ । ಉಕ್ತಾ ಇತಿ ।। ಆನನ್ದಮಯಸ್ಯ 'ಅದೃಶ್ಯೇ' ಇತಿ ವಾಕ್ಯೇನೇತಿ ಚ ಶೇಷಃ । ಉಪಲಕ್ಷಣಮೇತತ್ । ಅನ್ತಃಸ್ಯಸ್ಯ 'ನ ವಿಜಾನನ್ತಿ' (ತೈ.ಆ.೩-೧೧) ಇತ್ಯನೇನ ಸರ್ವಗತಸ್ಯ 'ಸ ಯೋऽತೋऽಶ್ರುತಃ' (ಐ.ಆ. ೩-೨-೪) ಇತ್ಯನೇನ ಅನ್ತರ್ಯಾಮಿಣಃ 'ಯಂ ಪೃಥಿವೀ ನ ವೇದ' (ಬೃ. ೫-೭-೩) ಇತ್ಯವ್ಯವಹಿತಪೂರ್ವಾಧಿಕರಣೋದಾಹೃತವಾಕ್ಯೇನ ಚೇತ್ಯಪಿ ದ್ರಷ್ಟವ್ಯಮ್ ।

ಅನುವಾದ - ''ಯಾವ ತತ್ತ್ವವು ಅದೃಶ್ಯವು ಮನಸ್ಸಿನಿಂದ ತಿಳಿಯಲು ಅಶಕ್ಯವೋ ವಸಿಷ್ಠ ಮೊದಲಾದ ಗೋತ್ರಗಳುಳ್ಳದ್ದೂ, ಪ್ರಾಕೃತ ಬಣ್ಣವಿಲ್ಲದ್ದೂ, ಪ್ರಾಕೃತ ಕಣ್ಣುಗಳುಳ್ಳದ್ದೂ ಮೊದಲಾದ ಇಂದ್ರಿಯಗಳು ಇಲ್ಲವೋ ಪ್ರಾಕೃತವಾದ ರೂಪ ಇಲ್ಲವೋ ಪ್ರಾಕೃತ ಕಿವಿಗಳಿಲ್ಲದ್ದು ಪ್ರಾಕೃತ ಕರ್ಮೇಂದ್ರಿಯಗಳಿಲ್ಲದ್ದು ನಾಶವಿಲ್ಲದ್ದು ಎಲ್ಲೆಡೆ ತುಂಬಿರುವಂತಹದ್ದು ಎಲ್ಲರ ಒಳಗಡೆ ಅಂತರ್ಯಾಮಿಯಾಗಿರುವಂತಹದ್ದು ಅಣುವಾಗಿರುವಂತಹದ್ದು ಕುಗ್ಗುವಿಕೆ ಮೊದಲಾದ ಧರ್ಮಗಳಿಲ್ಲದ್ದು ಆಗಿದೆಯೊ ಅಂತಹ ಪರಿಪೂರ್ಣವಾದ ವಸ್ತುವನ್ನೇ ಜ್ಞಾನಿಗಳು ಜಗತ್ತಿಗೆ ಕಾರಣವನ್ನಾಗಿ ತಿಳಿಯುತ್ತಾರೆ. ಹೀಗೆ ಮುಂಡಕೋಪನಿಷತ್ತಿನಲ್ಲಿ ಹೇಳಿದೆ.

ಪ್ರತಿಪದಾರ್ಥ -- ತತ್ರ = ಆವಿಷಯದಲ್ಲಿ, ಯತ್ = ಯಾವ ತತ್ತ್ವವು, ಅದ್ರೇಶ್ಯಂ = ಸಂಪೂರ್ಣವಾಗಿ ನೋಡಲು ಸಾಧ್ಯವಿಲ್ಲವೋ, ಅಗ್ರಾಹ್ಯ = ಬುದ್ಧಿಯಿಂದ ಗ್ರಹಿಸಲು ಸಾಧ್ಯವಿಲ್ಲವೋ, ಅಗೋತ್ರಂ = ವಸಿಷ್ಠ ಮೊದಲಾದ ಗೋತ್ರರೆಂದು ಹೇಳಲು ಬರುವುದಿಲ್ಲವೋ, ಅವರ್ಣಂ = ಪ್ರಾಕೃತವಾದ ರೂಪವಿಲ್ಲದ್ದೋ, ಅಚಕ್ಷುಃ = ಪ್ರಾಕೃತವಾದ ಕಣ್ಣುಗಳು ಇಲ್ಲದ್ದೋ, ಅಶ್ರೋತ್ರಂ = ಪ್ರಾಕೃತವಾದ ಕಿವಿಗಳೂ ಇಲ್ಲದ್ದೋ, ತದಪಾಣಿಪಾದಂ = ಪ್ರಾಕೃತವಾದ ಕರ್ಮೇಂದ್ರಿಯಗಳಿಂದ ರಹಿತವಾಗಿದೆಯೋ, ನಿತ್ಯಂ = ಸ್ವರೂಪತಃ ನಾಶವಿಲ್ಲದ್ದು, ವಿಭುಂ = ಎಲ್ಲೆಡೆ ವ್ಯಾಪಿಸಿದೆಯೋ, ಸರ್ವಗತಂ = ಎಲ್ಲರ ಒಳಗಡೆ ಅಂತರ್ಯಾಮಿಯಾಗಿದೆಯೋ, ಸುಸೂಕ್ಷ್ಮಂ = ಅತ್ಯಂತ, ಸೂಕ್ಷ್ಮವಾಗಿದೆಯೋ, ತದವ್ಯಯಂ = ಕುಗ್ಗುವಿಕೆ ಮುಂತಾದ ಧರ್ಮಗಳಿಲ್ಲದ್ದೋ, ತತ್= ಅಂತಹ, ಪರಿಪೂರ್ಣವಾದ ತತ್ತ್ವವನ್ನು, ಧೀರಾಃ = ಜ್ಞಾನಿಗಳು, ಯದ್ಭೂತಯೋನಿಂ = ಜಗತ್ತಿನ ಸೃಷ್ಟ್ಯಾದಿಕಾರಣವನ್ನಾಗಿ, ಪರಿಪಶ್ಯಂತಿ = ತಿಳಿಯುತ್ತಾರೆ. ಇತ್ಯುಕ್ತ್ವಾ = ಮುಂಡಕೋಪನಿಷತ್ತಿನಲ್ಲಿ ಹೀಗೆ ಹೇಳಿದೆ.(೧)

---

(೧) **ಭಾಷ್ಯದೀಪಿಕಾ** – ಉಕ್ತಾ ಇತ್ಯಾವರ್ತತೇ । 'ಉಕ್ತ್ವಾ' ಇತ್ಯನಂತರಮ್ ಆಖ್ಯಾತ ಇತಿ ಶೇಷಃ । ತೇನ ಕ್ತ್ವಾಪ್ರತ್ಯಯೋಪಪತ್ತಿಃ । ಚಂದ್ರಿಕಾಯಾಂ ತು – ಇತ್ಯುಕ್ತ್ವಾ ಪ್ರತೀಯತ ಇತಿ ಭಾಷ್ಯೇ ಕ್ರಿಯಯೋಃ ಸಮಾನಕರ್ತೃಕತ್ವಾಭಾವೇऽಪಿ ಕ್ತ್ವಾಪ್ರತ್ಯಯೋ 'ಯದೇವೈಶಂ ನರಃ ಶ್ರುತ್ವಾ ಸರ್ವಪಾಪೈಃ ಪ್ರಮುಚ್ಯತೇ' ಇತಿವದ್ ದ್ರಷ್ಟವ್ಯಮಿತ್ಯುಕ್ತೇರಪ್ಯಯಮೇವಾಭಿಪ್ರಾಯಃ । ಪರ ಇತೀತ್ಯನಂತರಂ ವಾಕ್ಯ ಇತಿ ಶೇಷಃ । 'ತಸ್ಮಾಚ್ಚ' ಇತಿ ಪದದ್ವಯಂ ಭಾಷ್ಯಕಾರೀಯಮ್ । ತಥಾಚೇತ್ಥಂ ಯೋಜನಾ – ಪೂರ್ವೆ ಯೇ ಅದೃಶ್ಯತ್ವಾದಿಗುಣಾ ವಿಷ್ಣೋರುಕ್ತಾಸ್ತೇ ಯತ್ರ ಕಸ್ಯಚಿದಕ್ಷರಸ್ಯೋಕ್ತಾಸ್ತತ್ರಾऽಥರ್ವಣऽದೃಶ್ಯತ್ವಾದಿಗುಣಕಾಕ್ಷರವಿಷಯೆ 'ಯತ್ತದದ್ರೇಶ್ಯಮಗ್ರಾಹ್ಯಮ್' ಇತ್ಯಾದ್ಯುಕ್ತ್ವಾ ತಥಾ ತತ್ರೈವ 'ಯಥೋರ್ಣನಾಭಿಃ' ಇತ್ಯಾದಿ 'ವಿಶ್ವಮ್' ಇತ್ಯಂತ ವಾಕ್ಯಂ ಚೋಕ್ತ್ವಾ ಪಠಿತ್ವಾ ಅನಂತರಮಾಮ್ನಾತೇ -

'ದಿವ್ಯೋ ಹ್ಯಮೂರ್ತಃ ಪುರುಷಃ ಸ ಬಾಹ್ಯಾಭ್ಯಂತರೋ ಹ್ಯಜಃ ।
ಅಪ್ರಾಣೋ ಹ್ಯಮನಾಃ ಶುಭ್ರೋ ಹ್ಯಕ್ಷರಾತ್ ಪರತಃ ಪರಃ ।।'

ಇತ್ಯುತ್ತರವಾಕ್ಯೇ 'ತಸ್ಮಾದಕ್ಷರಾತ್' ಪ್ರಕೃತಾದಕ್ಷರಾದಪಿ 'ಪರಃ' ಉತ್ತಮಃ 'ಪ್ರತೀಯತೇ' ಪ್ರತಿಪಾದ್ಯತಯಾ

ಭಾಷ್ಯಮ್ –

'ಯಥೋರ್ಣನಾಭಿಃ ಸೃಜತೇ ಗೃಹ್ಣತೇ ಚ ಯಥಾ ಪೃಥಿವ್ಯಾಮೋಷಧಯಃ ಸಮ್ಭವನ್ತಿ ।
ಯಥಾ ಸತಃ ಪುರುಷಾತ್ ಕೇಶಲೋಮಾನಿ ತಥಾऽಕ್ಷರಾತ್ ಸಮ್ಭವತೀಹ ವಿಶ್ವಮ್ ॥'
(ಮುಂ.೧-೧-೭.) ಇತ್ಯುಕ್ತ್ವಾ,

ತಸ್ಮಾಚ್ಚ – 'ಅಕ್ಷರಾತ್ ಪರತಃ ಪರಃ' (ಮುಂ. ೨-೧-೨.)ಇತಿ ಪರಃ ಪ್ರತೀಯತೇ । ಅತೋऽಬ್ರವೀತ್ - ಸೂ - ॐ ॥ ಅದೃಶ್ಯತ್ವಾದಿಗುಣಕೋ ಧರ್ಮೋಕ್ತೇಃ ॥ ॐ ॥ ೨೧ ॥

ಅನುವಾದ - ಜೇಡರಹುಳು ಬಲೆಯನ್ನು ತನ್ನ ಬಾಯಿಂದ ನಿರ್ಮಿಸುತ್ತದೆ. ಕೆಲಸವಾದ ಮೇಲೆ ತಾನೇ ತಿಂದುಬಿಡುತ್ತದೆ. ಇದರಂತೆ ಭೂಮಿಯಲ್ಲಿ ಸಸ್ಯ ಮೊದಲಾದುವುಗಳು ಹುಟ್ಟುತ್ತವೆ ಅದರಂತೆ, ಬದುಕಿರುವ ಮನುಷ್ಯನ ಶರೀರದಿಂದ ಕೇಶ, ರೋಮ ಮೊದಲಾದವುಗಳು ಹುಟ್ಟುತ್ತವೆ ಇದರಂತೆ, ನಾಶರಹಿತನಾದ ಪರಮಾತ್ಮನ ದೆಸೆಯಿಂದ ಸಮಸ್ತ ಬ್ರಹ್ಮಾಂಡವು ಹುಟ್ಟುತ್ತದೆ. ಹೀಗೆ ಶ್ರುತಿಯಲ್ಲಿ ಹೇಳಿ ಅಂತಹ ಸರ್ವೋತ್ತಮನಾದ ಅಕ್ಷರತತ್ವಕ್ಕಿಂತ, ಉತ್ತಮವಾದ ವಸ್ತುವಿಗಿಂತಲೂ ಉತ್ತಮವಾದುದೆಂದು, ವಿಷ್ಣುವನ್ನು ಸರ್ವೋತ್ತಮನೆಂದು ಹೇಳಿದೆ. ಇಲ್ಲಿ ಅದೃಶ್ಯತ್ವವನ್ನು ಅಕ್ಷರತತ್ವದಲ್ಲಿ ವಿಶೇಷಣವಾಗಿ

ಜ್ಞಾಯತ ಇತಿ । ಅನೇನ ಪೂರ್ವೋಕ್ತಾದೃಶ್ಯತ್ವಸ್ಯ ವಿಷ್ಣ್ವನ್ಯನಿಷ್ಟತ್ವಾಕ್ಷೇಪಾತ್ ಪೂರ್ವೇणाऽನನ್ದಮಯಾಧಿಕರಣೇನ ಅಸ್ಯಾऽಕ್ಷೇಪಿಕಾ ಸङ್ಗತಿಃ । ಅದೃಶ್ಯತ್ವಾದಿರೂಪೋ ವಿಷಯಃ। ಕಿಂ ವಿಷ್ಣೋರ್ನ್ಯಸ್ಯ ವೇತಿ ಸನ್ದೇಹಃ । ನ ವಿಷ್ಣೋರದೃಶ್ಯತ್ವಾದೀತಿ ಪೂರ್ವಃ ಪಕ್ಷಃ । ಅದೃಶ್ಯತ್ವಾದಿವಿಶಿಷ್ಟೇ 'ಅಕ್ಷರಾತ್ ಸಮ್ಭವತಿ' ಇತ್ಯಕ್ಷರಶಬ್ದಶ್ರವಣಾತ್ ತಸ್ಯ ಚ ತತ್ಪರತ್ವೋಕ್ತ್ಯಾ ವಿಷ್ಣೋಃ ನಿರವಕಾಶತ್ವಾದಿತಿ ಪೂರ್ವಪಕ್ಷಯುಕ್ತಿಶ್ಚ ಸೂಚಿತಾ ಭವತೀತಿ । ಶ್ರುತ್ಯರ್ಥಸ್ತು – 'ಯತ್' ಪರವಿದ್ಯಾಗಮ್ಯಮಕ್ಷರಂ 'ತದ್ ಅದ್ರೇಶ್ಯಂ' ದೃಶ್ಯಶಬ್ದಿತಚಕ್ಷುರಾದಿ ಜ್ಞೇಯಭಿನ್ನಮ್ । 'ಅಗ್ರಾಹ್ಯಂ' ಮನೋಗ್ರಾಹ್ಯಭಿನ್ನಮ್ । 'ಅಗೋತ್ರಂ' ನ ವಿದ್ಯತೇ ಗೋತ್ರಾದಿಕಂ ಯಸ್ಯ ತದ್ಧಿ ತಯೋಚ್ಯತೇ ಇತಿ ಸುಧೋಕ್ತೇರ್ವಸಿಷ್ಠಾದಿಗೋತ್ರಹೀನಮ್ । 'ಅವರ್ಣಂ' ಪ್ರಾಕೃತಶುಕ್ಲಾದಿವರ್ಣಹೀನಮ್ । ಅದೃಶ್ಯತ್ವಾದಿಶಬ್ದೈರ್ದೃಶ್ಯಾದ್ಯನ್ಯೋನ್ಯಾಭಾವೋऽಭಿಧೀಯತ ಇತಿ ಸುಧೋಕ್ತೇಃ ಗೋತ್ರವರ್ಣಾಭಿನ್ನತ್ವಂ ಚಾರ್ಥಃ । ತತ್ 'ಅಚಕ್ಷುಃಶ್ರೋತ್ರಂ' ಪ್ರಾಕೃತಜ್ಞಾನೇನ್ದ್ರಿಯಾದಿಶೂನ್ಯಮ್ । ತತ್ 'ಅಪಾಣಿಪಾದಂ' ಪ್ರಾಕೃತಕರ್ಮೇನ್ದ್ರಿಯಶೂನ್ಯಂ 'ನಿತ್ಯಂ' ಸ್ವರೂಪನಾಶರಹಿತಂ 'ವಿಭುಂ' ಸಮರ್ಥಂ 'ಸರ್ವಗತಂ' ವ್ಯಾಪ್ತಂ 'ಸುಸೂಕ್ಷ್ಮಮ್' ಅತ್ಯನ್ತಾವ್ಯಕ್ತಂ 'ಯದ್ ಭೂತಯೋನಿಂ' 'ಧೀರಾಃ' ಜ್ಞಾನಿನಃ ಪರಿಪಶ್ಯನ್ತಿ 'ತದ್ ಅಕ್ಷರಮ್' ಅವ್ಯಯಂ ದೇಹತೋ ನಾಶಶೂನ್ಯಮಿತಿ । ಅತ್ರ ತಚ್ಛಬ್ದಸ್ಯ ಸರ್ವತ್ರಾನ್ವಯಾಯ ತ್ರಿರ್ಗ್ರಹಣಮ್ । ಭೂತಯೋನಿಪದಂ ಚ ಸತ್ತರ್ಕದೀಪಾವಲ್ಯಾಂ ಭೂತಾನಾಮ್ ಆಕಾಶಾದೀನಾಂ ಬ್ರಹ್ಮಾದಿವೇತನಾನಾಂ ವಾ ಕೇಷಾಞ್ಚಿತ್ ಸ್ತ್ರೀವ್ಯವಧಾನೇನ ವಿನಾ ಸ್ವದೇಹಾದೇರುತ್ಪಾದಕಮಿತಿ ವ್ಯಾಖ್ಯಾತಮ್ । ಧೀರಾ ಇತ್ಯನೇನಾದೃಶ್ಯತ್ವ-ದೃಶ್ಯತ್ವಯೋರ್ವಿರೋಧಃ ಪರಿಹೃತಃ ।।

ಹೇಳಿದ್ದರಿಂದ. ಅಕ್ಷರಶಬ್ದದಿಂದ ವಾಚ್ಯವಾದ ವಸ್ತು ಯಾವುದು? ಎಂಬ ಸಂಶಯಕ್ಕೆ ಅವಕಾಶ ಇದೆ. ಆದ್ದರಿಂದ ಸೂತ್ರಕಾರರು ಉತ್ತರಿಸುತ್ತಿದ್ದಾರೆ.

ಓಂ ॥ ಅದೃಶ್ಯತ್ವಾದಿಗುಣಕೋ ಧರ್ಮೋಕ್ತೇಃ ॥ ಓಂ ಎಂಬುದಾಗಿ.

ಇದನ್ನೇ ದೃಷ್ಟಾಂತ ಪುರಸ್ಸರವಾಗಿ ಸ್ಪಷ್ಟಪಡಿಸುತ್ತಾರೆ –

ಪ್ರತಿಪದಾರ್ಥ -- ಊರ್ಣನಾಭಿಃ = ಜೇಡರಹುಳು, ಯಥಾ = ಯಾವರೀತಿಯಾಗಿ, ಸೃಜತೇ = ತನ್ನ ಎಂಜಲಿನಿಂದ ಬಲೆಯನ್ನು ಸೃಷ್ಟಿಸುತ್ತದೋ, ಗೃಹ್ಣತೇ = ಕೆಲಸವಾದ ಮೇಲೆ ತಾನೇ ತಿನ್ನುತ್ತದೋ, ಚ = ಮತ್ತು, ಯಥಾ = ಯಾವರೀತಿಯಾಗಿ, ಪೃಥಿವ್ಯಾಂ = ಭೂಮಿಯಲ್ಲಿ, ಓಷಧಯಃ = ಶಕ್ತಿಗಳು, ಸಂಭವಂತಿ = ಹುಟ್ಟುತ್ತವೋ, ಯಥಾ = ಯಾವರೀತಿಯಾಗಿ, ಸತಃ = ಬದುಕಿರುವ, ಪುರುಷಾತ್ = ಪುರುಷನ ಶರೀರದಿಂದ, ಕೇಶಲೋಮಾನಿ = ಕೇಶ, ರೋಮ, ಮೊದಲಾದವು, ಸಂಭವಂತಿ = ಪುನಃ ಪುನಃ ಹುಟ್ಟುತ್ತವೋ, ತಥಾ = ಅದೇರೀತಿಯಾಗಿ, ಅಕ್ಷರಾತ್ = ನಾಶರಹಿತನಾದ ಪರಮಾತ್ಮನ ದೆಸೆಯಿಂದ, ವಿಶ್ವಮ್ = ಸಕಲ ಜಗತ್ತೂ, ಸಂಭವತಿ = ಹುಟ್ಟುತ್ತದೆ, ಇತಿ = ಹೀಗೆ, ಇಹ = ಮುಂಡಕೋಪನಿಷತ್ತಿನಲ್ಲಿ, ಉಕ್ತ್ವಾ = ಹೇಳಿ, ತಸ್ಮಾತ್ = ಅಂತಹ, ಪರತಃ = ಸರ್ವೋತ್ತಮವಾದ, ಅಕ್ಷರಾತ್= ಅಕ್ಷರತತ್ತ್ವದ ದೆಸೆಯಿಂದ, ಪರಃ = ಶ್ರೇಷ್ಠನಾದ ಭಗವಂತನನ್ನು ಹೇಳಿದ್ದು, ಪ್ರತೀಯತೇ = ಕಾಣಿಸುತ್ತದೆ. ಅತಃ = ಅಂತಹ, ಅಕ್ಷರ ತತ್ತ್ವವು ಯಾವುದು ಎಂಬ ಶಂಕೆಗೆ, ಬ್ರವೀತಿ = ಸೂತ್ರಕಾರರೇ ಉತ್ತರಿಸುತ್ತಿದ್ದಾರೆ ''ಅದೃಶ್ಯತ್ವಾದಿಗುಣಕೋ ಧರ್ಮೋಕ್ತೇಃ''.(೧)

---

(೧) ಭಾಷ್ಯದೀಪಿಕಾ – ಏತದೇವ ದೃಷ್ಟಾನ್ತೋಕ್ತ್ಯಾ ಸ್ಪಷ್ಟಯತಿ – ಯಥೇತಿ ॥ 'ಯಥೋರ್ಣನಾಭಿಃ' ತನ್ತುವಾಯಃ 'ಸೃಜತೇ' ಸ್ವೋಪಭುಕ್ತವಸ್ತೂನಿ ತನ್ತ್ವಾತ್ಮನಾ ಪರಿಣತಾನಿ ಸ್ವದೇಹಾನ್ನಿಷ್ಕಾಸಯತಿ । 'ಗೃಹ್ಣತೇ' ಚಕ್ರಾದ್ಯಾಕಾರತಯಾ ಬಹಿರ್ನಿಷ್ಕಾಸಿತಂ ವಸ್ತು ಪುನರನ್ತಃ ಸ್ವೋದರೇ ಗೃಹ್ಣಾತಿ । ತಥಾ ವಿಶ್ವಂ ಪ್ರಲಯೇ ನಿಗೀರ್ಣಂ ಸೃಷ್ಟೌ ಅಕ್ಷರಾತ್ ಸಮ್ಭವತಿ । ದೃಷ್ಟಾನ್ತಾನ್ತರಮಾಹ – ಯಥೇತಿ ॥ 'ಓಷಧಯಃ' ಅಕ್ಷುಪಾದಯಃ । ದೃಷ್ಟಾನ್ತಾನ್ತರಮಾಹ – ಯಥೇತಿ ॥ 'ಸತಃ' ಜೀವವತಃ ಪುರುಷಾಚ್ಛರೀರಾತ್ ಶಿರಸ್ಯಾಃ ಕೇಶಾಃ, ಅನ್ಯಾನಿ ಲೋಮಾನಿ ತಾನಿ । 'ಇಹ' ಲೋಕೇ 'ವಿಶ್ವಂ' ನಾನಾವಿಧಕಾರ್ಯಂ 'ಸಮ್ಭವತಿ' ಜಾಯತ ಇತ್ಯರ್ಥಃ । ಅತ್ರ ಬ್ರಹ್ಮಣೋ ಭೂತಕಾರಣತ್ವಂ ತತ್ಕರ್ತೃತ್ವರೂಪಂ ನ ತೂಪಾದಾನತ್ವಮಿತಿ ವಕ್ತುಮಾದ್ಯೋ ದೃಷ್ಟಾನ್ತಃ । ಅಕ್ಷುರಾದಿಜನನೇ ಪೃಥಿವೀ ಬೀಜಮಿವ ವಿಶ್ವಸೃಷ್ಟೌ ಬ್ರಹ್ಮ ತತ್ಕರ್ಮಾಪೇಕ್ಷತ ಇತಿ ವಕ್ತುಂ ದ್ವಿತೀಯಃ । ಅನಾಯಾಸೇನ ಸೃಷ್ಟಿರಿತಿ ವಕ್ತುಂ ತೃತೀಯಃ ॥

ದಿವ್ಯ ಇತ್ಯಾದಿವಾಕ್ಯಂ ತು 'ದಿವ್ಯಃ' ಅಜ್ಞತಃ 'ಅಮೂರ್ತಃ' ನಿಯತಪರಿಚ್ಛಿನ್ನಪರಿಮಾಣರಹಿತಃ । ಕಿನ್ತು ಬಾಹ್ಯ ಆಭ್ಯನ್ತರಶ್ಚ । 'ಅಪ್ರಾಣೋ ಹ್ಯಮನಾಃ' ಇತಿ ಪದಾಭ್ಯಾಂ ಷೋಡಶಕಲಾರಾಹಿತ್ಯಮುಚ್ಯತೇ । 'ಶುಭ್ರಃ' ಶುದ್ಧಃ ಜಡಾತ್ 'ಪರತಃ ಅಕ್ಷರಾತ್' ಚಿತ್ಪ್ರಕೃತೇಃ ಪರ ಇತಿ ಕರ್ಮನಿರ್ಣಯಟೀಕಾಯಾಂ ವ್ಯಾಖ್ಯಾತಮ್ ॥ ಸಿದ್ಧಾನ್ತಯತ್ಸೂತ್ರಮವತಾರಯತಿ – ಅತ ಇತಿ ॥ ಇತಿ ಸಜ್ಞತಿಸಮ್ಭವಾದ್ ಇತಿ ಶಙ್ಕಾಸದ್ಭಾವಾಚ್ಚ ತದುತ್ತರರೂಪಂ ಸೂತ್ರಮಬ್ರವೀದ್ಬಾದರಾಯಣ ಇತ್ಯರ್ಥಃ । ತತ್ಸೂತ್ರಂ ಪಠತಿ – ಅದೃಶ್ಯತ್ವಾದೀತಿ ॥

ಭಾಷ್ಯಮ್ – पृथिव्यादिदृष्टान्तमुक्त्वा 'अक्षरात् सम्भवतीह विश्वम्' (मुं.१-१-७) इत्यतः परं तत्परतः पराभिधानात् 'कूटस्थोऽक्षर उच्यते' (भ.गी. १५-१६) इति स्मृतेश्च प्रकृतेः प्राप्तिः ।

ಪೃಥಿವಿ, ಜೇಡರ ಹುಳ, ಮನುಷ್ಯ ಮೊದಲಾದ ದೃಷ್ಟಾಂತಗಳನ್ನು ಹೇಳಿ, 'ಅಕ್ಷರತತ್ವದಿಂದ ಸಮಸ್ತ ಜಗತ್ತು ಹುಟ್ಟುತ್ತದೆ' ಎಂದು ಹೇಳಿ, ಆನಂತರ ಅದಕ್ಕಿಂತ ಸರ್ವೋತ್ತಮನನ್ನಾಗಿ ಹೇಳಿದ ಕಾರಣ 'ಕೂಟಸ್ಥೋऽಕ್ಷರ ಉಚ್ಯತೇ' ಎಂಬುದಾಗಿ ಗೀತೆಯಲ್ಲಿ ಹೇಳಿದ್ದರಿಂದಲೂ ಸಹ ಅಕ್ಷರ ಶಬ್ದದಿಂದ ಲಕ್ಷ್ಮೀದೇವಿಯು ಹೇಳಲ್ಪಟ್ಟಿದ್ದಾಳೆ. ಆದ್ದರಿಂದ ಉಲ್ಲೇಖಿಸಲ್ಪಟ್ಟದೆ.

ಪ್ರತಿಪದಾರ್ಥ -- ಅದೃಶ್ಯತ್ವ ಮೊದಲಾದ ಗುಣಗಳು ವಿಷ್ಣುವಿನದ್ದು ಅಲ್ಲವೆಂದಾದರೆ ವಾಕ್ಯಕ್ಕೆ ನಿರ್ವಿಷಯತ್ವ ಬರುವ ಕಾರಣ ಅಪ್ರಾಮಾಣ್ಯದೋಷವು ಬರುತ್ತದೆ. ಈ ಪ್ರಶ್ನೆಯನ್ನು ಪರಿಹರಿಸುವುದಕ್ಕಾಗಿ ಪೂರ್ವಪಕ್ಷವನ್ನೇ ಸಮರ್ಥಿಸುತ್ತಿದ್ದಾರೆ.

ಪೃಥಿವ್ಯಾದಿದೃಷ್ಟಾಂತಂ = ಪೃಥಿವಿ, ಜೇಡರ ಹುಳ, ಮನುಷ್ಯ ಮೊದಲಾದ ಉದಾಹರಣೆಗಳನ್ನು, ಉಕ್ತ್ವಾ = ಹೇಳಿ, ಅಕ್ಷರಾತ್ = ಅಕ್ಷರತತ್ವದಿಂದ, ವಿಶ್ವಂ = ಪ್ರಪಂಚವು ಸಂಭವತಿ ಹುಟ್ಟುತ್ತದೆ, ಇತಿ = ಈ ರೀತಿಯಾಗಿ, ಉಕ್ತ್ವಾ = ಹೇಳಿ, ತತ್ = ಆ ಅಕ್ಷರ ತತ್ವಕ್ಕಿಂತ, ಪರತಃ = ಉತ್ತಮವಾದ ವಸ್ತು, ಪರ = ಉತ್ತಮವಾದ ವಸ್ತುವನ್ನು, ಅಭಿಧಾನಾತ್ = ಕೊನೆಯಲ್ಲಿ ಹೇಳಿರುವುದರಿಂದ, ಆಪ್ತೇ ಅಲ್ಲದೆ ಕೂಟಸ್ಥೋऽಕ್ಷರ ಉಚ್ಯತೇ' ನಿರ್ವಿಕಾರಳಾದ ಲಕ್ಷ್ಮೀದೇವಿಯು ಅಕ್ಷರಶಬ್ದವಾಚ್ಯಳಾಗಿದ್ದಾಳೆ. ಇತಿ = ಈ ರೀತಿಯಾಗಿ, ಸ್ಮೃತೇಃ ಚ = ಗೀತೆಯಲ್ಲಿ ಹೇಳಿರುವುದರಿಂದಲೂ, ಪ್ರಕೃತೇಃ = ಚಿತ್ಪ್ರಕೃತಿಯೆನಿಸಿದ ಲಕ್ಷ್ಮೀದೇವಿಗೆ, ಪ್ರಾಪ್ತಿಃ = ಅದೃಶ್ಯತ್ವವು ಪ್ರಾಪ್ತವಾಗುತ್ತದೆ.(೧)

---

(೧) **ಭಾಷ್ಯದೀಪಿಕಾ – नन्वदृश्यत्वादिकं विष्णोर्न चेत् – तर्हि वाक्यस्य निर्विषयतयाऽप्रामाण्यं स्याद् इत्यतः पूर्वपक्षं विशदयति – पृथिव्यादीति ।। श्रुतावूर्णनाभिदृष्टान्तस्य प्राधान्येऽपि तत्र सृजत इत्यनेन कर्तृत्वमात्रप्रतीतेः पूर्वपक्षानुकूलस्योपादानतया जगत्कारणत्वस्याप्रतीतेः तं परित्यज्य पृथिव्यादीत्युक्तम् । चः समुच्चये । तया चेत्थं योजना – पृथिव्यादिदृष्टान्तमुक्त्वा अनन्तरमुक्तात् 'अक्षरात् सम्भवतीह विश्वम्' इत्यतो वाक्यात् 'परम्' अनन्तरमधीतेन 'अक्षरात्परतः परः' इति वाक्येन 'तत्परतः' तस्मात् कारणीभूतादक्षरात् परतः परस्योत्तमस्योक्तत्वात्, तथा 'कूटस्थोऽक्षर उच्यते' इति स्मृतेश्च जडप्रकृतेश्चित्प्रकृतेश्चादृश्यत्वादिप्राप्तिरिति ।।**

अत्रायं विवेकः – यदा जडप्रकृतेः पूर्वपक्षविषयता तदाऽक्षरशब्दो हेतुः तत्परतः पराभिधानं च । तस्य निरवकाशत्वे अक्षरात्परत इति च व्यधिकरणे पञ्चम्यौ । यदा च चित्प्रकृतेस्तदाऽक्षरशब्दस्तत्परो हेतुः । समानाधिकरणे पञ्चम्यौ । स्मृतेश्चेत्यपि हेतुरिति । स्मृतिश्चात्राधिकरणे व्याख्याता ।।

ಭಾಷ್ಯಮ್ – ಬ್ರಹ್ಮಶಬ್ದಾತ್ತತ್ಪರತಃ ಪರಾಭಿಧಾನಾದೇವ ಚ ಹಿರಣ್ಯಗರ್ಭಸ್ಯ ।

ಅನುವಾದ - ಅಥವಾ 'ಸ ಬ್ರಹ್ಮವಿದ್ಯಾಮ್' ಎಂಬ ಬ್ರಹ್ಮಪ್ರಕರಣದಲ್ಲಿ ಬ್ರಹ್ಮಶಬ್ದವು ಕೇಳಿಸುತ್ತಿದೆ. ಮತ್ತು ವಿಷ್ಣು ಅಕ್ಷರತತ್ತ್ವಕ್ಕಿಂತ ಉತ್ತಮೋತ್ತಮನೆಂದು ಹೇಳಿರುವ ಕಾರಣ, ಚತುರ್ಮುಖಬ್ರಹ್ಮನೂ ಸಹ ಅಕ್ಷರಶಬ್ದದಿಂದ ಪ್ರತಿಪಾದ್ಯನಾಗಬಹುದು.

ಪ್ರತಿಪದಾರ್ಥ -- ಅದೃಶ್ಯತ್ವ ಎಂಬ ಧರ್ಮವು ಚತುರ್ಮುಖಬ್ರಹ್ಮನಲ್ಲಿಯೂ ಬರಬಹುದೆಂದು ಮತ್ತೊಂದು ಬಗೆಯ ಪೂರ್ವಪಕ್ಷವನ್ನು ತೋರಿಸುತ್ತಿದ್ದಾರೆ.

ಬ್ರಹ್ಮಶಬ್ದಾತ್ = ಬ್ರಹ್ಮಪದದ ಪ್ರಯೋಗವು ಕಾಣಸುತ್ತಿರುವುದರಿಂದ, ತತ್ ಪರತಃ = ಶ್ರೀತತ್ವಕ್ಕಿಂತ, ಚ = ಮತ್ತು, ಪರಾಭಿಧಾನಾದೇವ = ವಿಷ್ಣುವನ್ನು ಸರ್ವೋತ್ತಮನೆಂದು ಹೇಳಿರುವುದರಿಂದ, ಹಿರಣ್ಯಗರ್ಭಸ್ಯ = ಚತುರ್ಮುಖಬ್ರಹ್ಮದೇವರಿಗೂ, ತತ್ಪ್ರಾಪ್ತಿಃ = ಅದೃಶ್ಯತ್ವವು ಪ್ರಾಪ್ತವಾಗುತ್ತದೆ. ಹೀಗೆ ಲಕ್ಷ್ಮೀದೇವಿ, ಅಥವಾ ಚತುರ್ಮುಖ ಬ್ರಹ್ಮದೇವರಲ್ಲಿ ವಿಷ್ಣುವಿನ ಅದೃಶ್ಯತ್ವಧರ್ಮವು ಬರುತ್ತದೆಂದು ಪೂರ್ವಪಕ್ಷ.(೧)

ಭಾಷ್ಯಮ್ – 'ತಮೇವ ವಿದ್ವಾನಮೃತ ಇಹ ಭವತಿ' (ತೈ.ಆ. ೩-೧೨-೭.) 'ತತ್ಕರ್ಮ ಹರಿತೋಷಂ ಯತ್ ಸಾ ವಿದ್ಯಾ ತನ್ಮತಿರ್ಯಯಾ ।' 'ಅಥ ದ್ವೇ ವಾವ ವಿದ್ಯೇ ವೇದಿತವ್ಯೇ ಪರಾ ಚೈವಾಪರಾ ಚ । ತತ್ರ ಯೇ ವೇದಾ ಯಾನ್ಯಙ್ಗಾನಿ ಯಾನ್ಯುಪಾಙ್ಗಾನಿ ಯಾನಿ ಪ್ರತ್ಯಙ್ಗಾನಿ ಸಾऽಪರಾ । ಅಥ ಪರಾ ಯಯಾ ಸ ಹರಿರ್ವೇದಿತವ್ಯೋ ಯೋऽಸಾವದೃಶ್ಯೋ ನಿರ್ಗುಣಃ ಪರಃ ಪರಮಾತ್ಮಾ' ಇತ್ಯಾದಿನಾ ತದ್ಧರ್ಮತ್ವೇನಾವಗತಪರವಿದ್ಯಾವಿಷಯತ್ವೋಕ್ತೇರ್ವಿಷ್ಣುರೇವಾದೃಶ್ಯತ್ವಾದಿಗುಣಕಃ ॥ ೨೧ ॥

ಅನುವಾದ - ಸಿದ್ಧಾಂತ ಹೀಗಿದೆ – 'ಹೀಗೆ ಭಗವಂತನನ್ನು ತಿಳಿದರೆ ಮಾತ್ರ ಮೋಕ್ಷ' ಎಂದು ಮತ್ತು 'ಯಾವುದು ಭಗವಂತನಿಗೆ ಸಂತೋಷಕರವಾಗುತ್ತದೋ ಅಂತಹದ್ದೇ ಸತ್ಕರ್ಮ ಎನಿಸುತ್ತದೆ; ಯಾವ ವಿದ್ಯೆಯಿಂದ ಭಗವದ್ವಿಷಯಕವಾದ ಬುದ್ಧಿಯು ಹುಟ್ಟುತ್ತದೋ ಅದೇ ಪರವಿದ್ಯೆ ಎನಿಸುತ್ತದೆ.

---

(೧) ಭಾಷ್ಯದೀಪಿಕಾ – ಪೂರ್ವಪಕ್ಷಾನ್ತರಂ ವಕ್ತಿ – ಬ್ರಹ್ಮಶಬ್ದಾದಿತಿ ।।'ಸ ಬ್ರಹ್ಮವಿದ್ಯಾಮ್' ಇತ್ಯಾದೌ ಶ್ರುತಬ್ರಹ್ಮಶಬ್ದಾದಿತ್ಯರ್ಥಃ । ಬ್ರಹ್ಮಶಬ್ದೋ ವಿಷ್ಣಾವೇವ ಮುಖ್ಯ ಇತಿ ತಸ್ಯೈವ ಸಾಧಕೌ ನೇತರಸ್ಯೇತ್ಯತೌ ಹೇತ್ವನ್ತರಮಾಹ – ಪರತ ಇತಿ ।। ವ್ಯಧಿಕರಣೇ ಪಞ್ಚಮ್ಯೌ । ತಥಾ ಚ - ಹಿರಣ್ಯಗರ್ಭಾಖ್ಯಾದಕ್ಷರಾತ್ 'ಪರತಃ' ಶ್ರೀತತ್ತ್ವಾತ್ ಪರಸ್ಯ ವಿಷ್ಣೋರಭಿಧಾನಾದಿತ್ಯರ್ಥಃ । ಏವಶಬ್ದೇನ ಹೇತೋರ್ನಿರವಕಾಶತ್ವಂ ನಾತ್ರ ಹೇತ್ವನ್ತರಂ ಗವೇಷಣೀಯಮಿತಿ ಚ ಸೂಚಯತಿ । ಹಿರಣ್ಯಗರ್ಭಸ್ಯ ಪ್ರಾಪ್ತಿರಿತ್ಯನ್ವಯಃ । ಉಪಲಕ್ಷಣಮೇತತ್ । 'ಕರ್ತಾರಮೀಶಮ್' ಇತೀಶಶಬ್ದಶ್ರವಣಾದ್ ರುದ್ರಸ್ಯ ವಾ ಅದೃಶ್ಯತ್ವಾದಿಪ್ರಾಪ್ತಿರಿತಿ ವಕ್ಷ್ಯಮಾಣಮತ್ರಾಪಿ ದ್ರಷ್ಟವ್ಯಮ್ । ಅಸ್ಮಿನ್ ಪಕ್ಷೇ ಈಶಶಬ್ದಸ್ಯ ವಿಷ್ಣೌ ಸಾವಕಾಶತ್ವಶಙ್ಕಾಯಾಮನನ್ತರಂ ತತ್ಪರತಃ ಪರಾಭಿಧಾನಾದಿತ್ಯಪಿ ಯೋಜ್ಯಮ್ । ಅತ್ರಾಪಿ ವ್ಯಧಿಕರಣೇ ಪಞ್ಚಮ್ಯೌ ।।

ಅಧಿಕಾರವನ್ನು ಹೊಂದಿದ ಮೇಲೆ ತಿಳಿಯಬೇಕಾದ ವಿದ್ಯೆಗಳು ಎರಡು. ಪರ-ಅಪರ ಎಂದು. ಈ ಎರಡು ವಿದ್ಯೆಗಳಲ್ಲಿ ಋಗ್ವೇದ ಮೊದಲಾದ ನಾಲ್ಕುವೇದಗಳು ಶಿಕ್ಷಾ, ವ್ಯಾಕರಣ, ಛಂದಸ್ಸು, ನಿರುಕ್ತ, ಜ್ಯೋತಿಷ್ಯ ಮತ್ತು ಕಲ್ಪ ಎಂಬ ಆರು ವೇದಾಂಗಗಳು ವೈದ್ಯಶಾಸ್ತ್ರ, ಧರ್ಮಶಾಸ್ತ್ರ, ಗಾಂಧರ್ವಶಾಸ್ತ್ರ, ಸ್ಥಾಪತ್ಯಗಳೆಂಬ ಉಪಾಂಗಗಳು, ಮತ್ತು ಕಲೆ ಮೊದಲಾದವುಗಳು ಇವೆಲ್ಲವೂ ಸಹ ಅಪರವಿದ್ಯೆಗಳು. ಇನ್ನು ಪರವಿದ್ಯೆಯೆಂದರೆ ಶ್ರುತಿಪ್ರಸಿದ್ಧನಾದ, ಸಾಕಲ್ಯದಿಂದ ತಿಳಿಯಲು ಅಸಾಧ್ಯನಾದ, ಪ್ರಾಕೃತಗುಣಗಳಿಂದ ರಹಿತನಾದ, ಉತ್ತಮೋತ್ತಮನಾದ, ಸಕಲ ಪ್ರೇರಕನಾದ, ಪಾಪಪರಿಹಾರಕನೂ ಆದ ಪರಮಾತ್ಮನು ಯಾವ ವಿದ್ಯೆಯಿಂದ ತಿಳಿಯಲು ಅರ್ಹನಾಗಿದ್ದಾನೋ ಅಂತಹ ವಿದ್ಯೆಯೇ ಪರ ಎಂಬ ಶಬ್ದದಿಂದ ವಾಚ್ಯವಾಗಿದೆ.

ಇವೇ ಮೊದಲಾದ ವಾಕ್ಯಗಳಿಂದ ಪರವಿದ್ಯಾವಿಷಯತ್ವವನ್ನು ವಿಷ್ಣುವಿಗೆ ಹೇಳಿರುವುದರಿಂದ ಅದೃಶ್ಯತ್ವಾದಿಗಳು ವಿಷ್ಣುವಿನ ಅಸಾಧಾರಣವಾದ ಧರ್ಮಗಳೇ ಆಗಿವೆಯೆಂದು ನಿರ್ಣಯವಾಗುತ್ತದೆ.

ಪ್ರತಿಪದಾರ್ಥ -- ಹೀಗೆ ಪೂರ್ವಪಕ್ಷವು ಪ್ರಾಪ್ತವಾದರೆ ಅದನ್ನು ನಿರಾಕರಿಸುವುದಕ್ಕಾಗಿ ಸೂತ್ರವನ್ನು ವ್ಯಾಖ್ಯಾನಿಸುತ್ತಿದ್ದಾರೆ.

ತಮ್ = ಪರಮಾತ್ಮನನ್ನು, ಏವಂ = ಹಿಂದೆ ಹೇಳಿದ ಪ್ರಕಾರದಲ್ಲಿ ಅನಂತ ಗುಣಗಳುಳ್ಳವನನ್ನಾಗಿ, ವಿದ್ವಾನ್ = ತಿಳಿದರೆ, ಇಹ = ಈ ಲೋಕದಲ್ಲಿ, ಅಮೃತಃ = ಮುಕ್ತನಾಗುತ್ತಾನೆ. ಹೀಗೆ ತೈತ್ತಿರೀಯೋಪನಿಷತ್ತು ಹೇಳಿದೆ.

ಮತ್ತು ಯತ್ = ಯಾವುದು, ಹರಿತೋಷಂ = ಪರಮಾತ್ಮನಿಗೆ, ಸಂತೋಷಕರವಾಗಿದೆಯೋ, ತತ್ಕರ್ಮ = ಅದೇ ಸತ್ಕರ್ಮವು, ಯಯಾ = ಯಾವ ವಿದ್ಯೆಯಿಂದ, ತನ್ಮತಿಃ = ಪರಮಾತ್ಮನ ತಿಳಿವಳಿಕೆಯು ಪ್ರಾಪ್ತವಾಗುತ್ತದೋ, ಸಾ = ಅದೇ, ವಿದ್ಯಾ = ಪ್ರವಿದ್ಯೆಯು ಹೀಗೆ ಹೇಳಿರುವುದರಿಂದ ಶ್ರುತಿಪ್ರತಿಪಾದ್ಯನು ಪರಮಾತ್ಮನೇ ಆಗುತ್ತಾನೆ.

ಅಥ = ಅಧಿಕಾರಸಂಪತ್ತಿಯ ಅನಂತರ, ವೇದಿತವ್ಯೇ = ತಿಳಿಯಲು ಯೋಗ್ಯವಾದವುಗಳು, ದ್ವೇ ವಾವ ವಿದ್ಯೇ = ಎರಡೇ ವಿದ್ಯೆಗಳು, ಪರ = ಪರವಿದ್ಯೆ, ಚ = ಮತ್ತು, ಅಪರಾ ಚ = ಅಪರವಿದ್ಯೆ ಎಂದು.

ತತ್ರ = ಈ ಎರಡು ವಿದ್ಯೆಗಳಲ್ಲಿ, ಯೇ = ಯಾವುದು, ವೇದಾಃ = ಋಗ್ವೇದ ಮೊದಲಾದ ನಾಲ್ಕುವೇದಗಳು, ಯಾನಿ ಅಂಗಾನಿ = ವೇದಾರ್ಥಗಳನ್ನು ತಿಳಿಯಲು ಅನುಕೂಲಕರವಾದ, ಶಿಕ್ಷಾದಿ ಶಾಸ್ತ್ರಗಳು, ಯಾನಿ ಉಪಾಂಗಾನಿ = ವೈದ್ಯಶಾಸ್ತ್ರ ಧರ್ಮಶಾಸ್ತ್ರ ಮೊದಲಾದ ಉಪಾಂಗಗಳು, ಯಾನಿ ಪ್ರತ್ಯಾಂಗಾನಿ = ಉಳಿದ ಕಲೆ ಮೊದಲಾದವುಗಳು, ಸಾ = ಇವೆಲ್ಲವೂ ಸಹ, ಅಪರಾ = ಅಪರವಿದ್ಯಾ ಎಂಬ ಶಬ್ದದಿಂದ ಪ್ರತಿಪಾದ್ಯವಾಗಿವೆ. ಅಥ = ಅನಂತರ, ಪರಾ = ಪರವಿದ್ಯೆಯಂದರೆ, ಯಃ = ಯಾವ ಶ್ರುತಿಪ್ರಸಿದ್ಧನಾದ, ಅದೃಶ್ಯಃ = ಸಂಪೂರ್ಣವಾಗಿ ತಿಳಿಯಲು ಅನರ್ಹನಾದ, ನಿರ್ಗುಣಃ = ಪ್ರಾಕೃತಗುಣಗಳಿಂದ ರಹಿತನಾದ, ಪರಃ = ಸರ್ವೋತ್ತಮನಾದ,

ಪರಮಾತ್ಮಾ = ಸಕಲನಿಯಾಮಕನಾದ, ಅಸೌ = ಅಂತಹ, ಹರಿಃ = ಪಾಪಪರಿಹಾರಕನಾದ ಪರಮಾತ್ಮನು, ಯಯಾ = ಯಾವ ವಿದ್ಯೆಯಿಂದ, ವೇದಿತವ್ಯಃ = ತಿಳಿಯಲು ಯೋಗ್ಯನೋ, ಸಾ = ಅಂತಹ ವಿದ್ಯೆಯು, ಪರಾ = ಪರಶಬ್ದವಾಚ್ಯವಾಗುತ್ತದೆ.

ಇತ್ಯಾದಿನಾ = ಇವೇ ಮೊದಲಾದವಾಕ್ಯಗಳಿಂದ, ತದ್ಧರ್ಮತ್ವೇನ = ಭಗವಂತನ ಧರ್ಮ ಎಂಬುದಾಗಿ, ಅವಗತ = ತಿಳಿಯಲ್ಪಟ್ಟ, ಪರವಿದ್ಯಾವಿಷಯತ್ವೋಕ್ತೇಃ = ಪರವಿದ್ಯಾ ವಿಷಯತ್ವವನ್ನು ಹೇಳಿರುವುದರಿಂದ, ವಿಷ್ಣುರೇವ = ಮಹಾವಿಷ್ಣುವೇ, ಅದೃಶ್ಯತ್ವಾದಿಗುಣಕಃ = ಅದೃಶ್ಯತ್ವಮೊದಲಾದ ಧರ್ಮಗಳುಳ್ಳವನಾಗುತ್ತಾನೆ.(೧)

(೧) **ಭಾಷ್ಯದೀಪಿಕಾ** – ಏವಂ ಪ್ರಾಸಂ ಪೂರ್ವಪಕ್ಷಂ ಪ್ರತಿಕ್ಷೇಪ್ತುಂ ಸೂತ್ರಂ ವ್ಯಾಚಷ್ಟೇ – ತಮೇವಮಿತಿ ।। 'ತಮೇವಮ್' ಇತ್ಯೇಕಂ ಶ್ರುತಿವಾಕ್ಯಮ್ । 'ತತ್' ಇತ್ಯಪರಂ ಸ್ಮೃತಿವಾಕ್ಯಮ್ । 'ಅಥ' ಇತ್ಯನ್ಯಚ್ಚುತಿವಾಕ್ಯಮ್ । ಆದಿಪದೇನ 'ತದೇತದ್ ಬ್ರಹ್ಮ' (ಬೃ.೪-೫-೧೯.) 'ತ್ರಿಪಾದಸ್ಯಾಮೃತಮ್' (ಋ.೧೦-೯೦-೩.) ಇತ್ಯಾದಿಕಂ ಗೃಹ್ಯತೆ । ತಸ್ಯ ವಿಷ್ಣೋರ್ಧರ್ಮಸ್ತದ್ಧರ್ಮಃ ತಸ್ಯ ಭಾವಸ್ತತ್ತ್ವಂ ತೇನೇತಿ ವಿಗ್ರಹಃ । ಪ್ರಕಾರೇ ತೃತೀಯಾ । ಅವಗತತ್ವಂ ಪ್ರಸಿದ್ಧತ್ವಂ ವಿಷಯತ್ವವಿಶೇಷಣಮ್ । ಅಮೃತತ್ವಾದೇರಪ್ಯುಪಲಕ್ಷಕಮೇತತ್ । ಅತ್ರೇತಿ ಶೇಷಃ । ಸೂತ್ರೇऽನುವೃತ್ತಸ್ಯ ತತ್ತ್ವಿತ್ಯಸ್ಯಾರ್ಥೋ ವಿಷ್ಣುರೇವೇತಿ । ಅತ್ರಾದೃಶ್ಯತ್ವಂ ದೃಶ್ಯಭಿನ್ನತ್ವಮ್ । ತಚ್ಚ ಸ್ವರೂಪಮ್, ನತು ಗೋತ್ರಾದ್ಯತ್ಯನ್ತಾಭಾವವದ್ಬ್ರಹ್ಮಭಿನ್ನಮ್ । ತತ್ರ ತದ್ಧರ್ತ್ತಂ ಬ್ರಹ್ಮಸ್ವರೂಪಮಿತಿ ವಿಶೇಷಂ ವಕ್ತುಮ್ ಅದೃಶ್ಯತ್ವಾದಯೋ ಗುಣಾ ಯಸ್ಯೇತಿ ಬಹುವ್ರೀಹಿತ್ವಂ ಚ ಸೂಚಯಿತುಂ ಶುಭಧರ್ಮಾರ್ಥಕಗುಣಶಬ್ದಪ್ರಯೋಗಃ ಕಪ್ರತ್ಯಯಶ್ಚ । ತಥಾ ಚೇತ್ಥಂ ಸೂತ್ರಭಾಷ್ಯಯೋಜನಾ - ಅದೃಶ್ಯತ್ವಾದಿಗುಣಕಸ್ತತ್ತು ವಿಷ್ಣುರೇವ । ಕುತಃ? ಅತ್ರ ಪ್ರಕರಣೇ 'ಅಥ ಪರಾ ಯಯಾ ತದಕ್ಷರಮಧಿಗಮ್ಯತೇ' (ಮುಂ. ೧-೧-೫.) 'ತದೇತದಕ್ಷರಂ ಬ್ರಹ್ಮ' (ಮುಂ.೨-೨-೨) 'ಪುರುಷ ಏವೇದಂ ವಿಶ್ವಂ ಕರ್ಮ ತಪೋಬ್ರಹ್ಮ ಪರಾಮೃತಮ್' (ಮುಂ.೨.೧.೧೦) ಇತಿ ವಾಕ್ಯೇಷು ತಸ್ಯಾದೃಶ್ಯತ್ವಾದಿಗುಣಕಸ್ಯ ಪರವಿದ್ಯಾವಿಷಯತ್ವರೂಪಧರ್ಮೋಕ್ತೇಃ । ನ ಚ ತಸ್ಯ ಪರವಿದ್ಯಾವಿಷಯತ್ವೋಕ್ತಾವಪಿ ಕುತೋ ವಿಷ್ಣುತ್ವಮಿತಿ ವಾಚ್ಯಮ್ । ಯತಸ್ತತ್ 'ತಮೇವಮ್' ಇತ್ಯಾದಿನಾ ತದ್ಧರ್ಮತ್ವೇನಾವಗತಮಿತಿ । ಅತ್ರ 'ತಮೇವಮ್' ಇತಿ ಶ್ರುತೌ ಮೋಕ್ಷಸಾಧನಜ್ಞಾನವಿಷಯತ್ವೋಕ್ತ್ಯಾ ವಿಷ್ಣೋಃ ಪರವಿದ್ಯಾವಿಷಯತ್ವಮುಕ್ತಂ ಭವತಿ । ಮೋಕ್ಷಸಾಧನವಿದ್ಯಾಯಾ ಏವ ಪರವಿದ್ಯಾತ್ವಾತ್ । ತತ್ಕರ್ಮೇತಿ ಸ್ಮೃತಾವಪಿ ಯದ್ಧರಿತುಷ್ಟಿಕರಂ ತದೇವ ಕರ್ಮ । ಯಯಾ 'ತನ್ಮತಿಃ' ಹರೇಃ ಜ್ಞಾನಂ ಭವತಿ, ಸೈವ ವಿದ್ಯೇತ್ಯುಕ್ತತ್ವೇನ ತಸ್ಯ ಪರವಿದ್ಯಾ-ವಿಷಯತ್ವಮುಚ್ಯತೇ । 'ದ್ವೇ ವಿದ್ಯೇ ವೇದಿತವ್ಯೇ' (ಮುಂ.೧-೧-೪.) ಇತ್ಯತ್ರಾಪಿ ವಿಷ್ಣೋಃ ಪರವಿದ್ಯಾವಿಷಯತ್ವಮುಚ್ಯತ ಇತಿ ನ ಹೇತುವಿಶೇಷಣಾಸಿದ್ಧಿಃ । ಅಥೇತಿ ಪ್ರಕರಣಾರಮ್ಭೇ । ವಾವೇತ್ಯವಧಾರಣೇ । ಚೌ ಪರಸ್ಪರಸಮುಚ್ಚಯೇ । ತಥಾ ಚ ಪರಾ ಚಾಪರಾ ಚ ದ್ವೇ ವಿದ್ಯೇ ಜ್ಞಾತವ್ಯೇ । 'ತತ್ರ' ಪರಾಪರಯೋರ್ಮಧ್ಯೇ 'ಯೇ ವೇದಾಃ' ಋಗಾದ್ಯಾಃ ಯಾನಿ ಶಿಕ್ಷಾದಿಷಡಙ್ಗಾನಿ 'ಯಾನ್ಯುಪಾಙ್ಗಾನಿ' ಆಯುರ್ವೇದಗಾನ್ಧರ್ವಾದೀನಿ । 'ಯಾನಿ ಪ್ರತ್ಯಙ್ಗಾನಿ' ಶಿಷ್ಟಾಃ ಕಲಾ ವಿದ್ಯಾಃ ಸाऽಪರಾ । ಅಥೇತ್ಯರ್ಥಾನ್ತರೇ । ಯोऽಸೌ 'ಅದೃಶ್ಯೋ' ದೃಶ್ಯಾದನ್ಯೋ 'ನಿರ್ಗುಣಃ' ಸತ್ತ್ವಾದಿಹೀನಃ 'ಪರಃ' ವಿಲಕ್ಷಣಃ 'ಪರಮಾತ್ಮಾ' ಸರ್ವೋತ್ತಮೋ ವ್ಯಾಪ್ತಃ ಸ ಹರಿರ್ಯಯಾ ವೇದಿತವ್ಯಃ ಸಾ ಋಗಾದಿರೂಪೈವ ಪರೇತಿ ಶ್ರುತ್ಯರ್ಥಃ । ತಥಾ ಚ ಯಥೈಕಸ್ಯ ಕರ್ಮಣಃ ಸಕಾಮತ್ವನಿಷ್ಕಾಮತ್ವರೂಪೋಪಾಧಿಭೇದಾತ್ ಪ್ರವೃತ್ತನಿವೃತ್ತಪದೋದಿತತ್ವಂ ತಥಾ

श्रीपद्मनाभतीर्थविरचितसत्तर्कदीपावळ्याम्:

ॐ अदृश्यत्वादिगुणको धर्मोक्तेः ॐ ॥ १-२-२१ ॥

'अदृश्येऽनात्म्ये' इत्यादिना अदृश्यत्वादिगुणा विष्णोरुक्तास्ते चाथर्वणे अक्षरस्योच्यन्ते ॥ यत्तदद्रेश्यमग्राह्यमिति ॥ नचैतदक्षरं विष्णुः । तस्य तस्मात्परत्वेन श्रूयमाणत्वात् । 'अक्षरात्परतः परः' इति एवम्प्राप्ते । सूत्रमवतारयति – अदृश्यत्वेति ॥ अदृश्यत्वादिगुणकमक्षरं विष्णुरेव न प्रकृतिहिरण्यगर्भाविति प्रतिपिपादयिषया प्रसक्तिं दर्शयति – पृथिव्यादीत्यादिना ॥ अस्यार्थः । पृथिवीदृष्टान्तेन क्षरमुच्यमानं प्रकृतिर्भवेत् । कूटस्थोऽक्षर उच्यते । 'उत्तमः पुरुषस्त्वन्यः' इति स्मृत्या प्रकृतेरक्षरत्वेनोच्यमानत्वात् ।

''अदृश्येऽनात्म्ये'' इत्यादि श्रुतियिंद अदृश्यत्वादिगुणगळु विष्णुविन धर्मवेंदु हिंदिन अधिकरणदल्लि हेळलायितु. आदरे इदे धर्मगळु अथर्वणोपनिषत्तिनल्लि अक्षरनामकनाद व्यक्तियल्लि केळिसुत्तिदे 'यत्तदद्रेश्यमग्राह्यं' इत्यादियागि. विष्णुवे अक्षरनेंदु हेळलागदु. अक्षरवेनिसिद वस्तुविगिंत विष्णु परमोत्कृष्टनागिद्दानेंदु 'अक्षरात् परतः परः' एंब श्रुतियु हेळुत्तिदे. इप्पु पूर्वपक्ष.

इदन्नु परिहरिसुवुदक्कागि सूत्रवु हॊरटिदे. अदृश्यत्वादिगुणगळुळ्ळ अक्षरनु विष्णुवे आगिद्दानें; हॊरतु प्रकृतियागलीं हिरण्यगर्भनागलीं अल्ल. हीगे प्रतिपादिसुवुदक्कागि प्रसक्तियन्नु हेळुत्तिद्दारॆ ''पृथिव्यादि'' इत्यादि भाष्यदिंद. इदर अर्थ हीगिदे. पृथिवीदृष्टान्तदिंद अक्षरनन्नु हेळिद्दरिंद प्रकृतियें अक्षरशब्दवाच्यवागबेकु. ''कूटस्थो अक्षर उच्यतॆ'' एंदु, ''उत्तमपुरुषस्त्वन्यः'' एंदु हेळिद्दरिंद प्रकृतियें अक्षरशब्दवाच्यवागुत्तदे.

'ब्रह्मा देवानां प्रथमः सम्बभूव विश्वस्य कर्ता भुवनस्य गोप्ता ।
स ब्रह्मविद्यां सर्वविद्याप्रतिष्ठामथर्वाय ज्येष्ठपुत्राय प्राह ॥'

विष्णुविषयकत्वकर्मादिविषयकत्वरूपोपाधिभेदादृगादीनाम् एव परापरविद्यात्वोपपत्तिरिति भावः । न चानुव्याख्याने ब्रह्मसूत्रस्य परविद्यात्वोक्तिविरोधः । अनुग्राह्यतया ऋगादीनामनुग्राहकतया ब्रह्मसूत्रस्य च परविद्यात्वोपपत्तेः ।

इत्युपक्रम्य श्रूयमाणमदृश्यत्वादिगुणकमक्षरं हिरण्यगर्भो वा भवेत् । तस्मिन्नपि ब्रह्मशब्दसम्भवात्

ಅಥವಾ ಚತುರ್ಮುಖಬ್ರಹ್ಮನೂ ಸಹ ಅಕ್ಷರಶಬ್ದವಾಚ್ಯನಾಗಬಹುದು.

'ಬ್ರಹ್ಮಾದೇವಾನಾಂ ಪ್ರಥಮಃ ಸಂಬಭೂವ ವಿಶ್ವಸ್ಯ ಕರ್ತಾ ಭುವನಸ್ಯ ಗೋಪ್ತಾ । ಸ ಬ್ರಹ್ಮವಿದ್ಯಾಂ ಸರ್ವವಿದ್ಯಾಪ್ರತಿಷ್ಠಾಮಥರ್ವಾಯ ಜ್ಯೇಷ್ಠಪುತ್ರಾಯ ಪ್ರಾಹ'

ಎಂದು ಪ್ರಾರಂಭವಾಗಿ ಕೇಳಿಸುತ್ತಿರುವ ಶ್ರುತಿಯಲ್ಲಿ ಅದೃಶ್ಯತ್ವಾದಿಗುಣಗಳುಳ್ಳ ಅಕ್ಷರನು ಹಿರಣ್ಯಗರ್ಭನೇ ಎಂದು ತಿಳಿದು ಬರುತ್ತಿದೆ. ಏಕೆಂದರೆ ಬ್ರಹ್ಮಶಬ್ದವು ಅವನಲ್ಲೇ ಲೋಕಪ್ರಸಿದ್ಧವಾಗಿದೆ.

पुरुषोत्तमस्त्वेतदक्षरं न भवत्येव । तस्मात्परत्वेनोपरि श्रूयमाणत्वादित्येतन्निषेधति – तमेवेत्यादिना ।।

ಅಕ್ಷರಕ್ಕಿಂತ ಪರಮೋತ್ಕೃಷ್ಟನಾದ ಪುರುಷೋತ್ತಮನಾದ ವಿಷ್ಣುವು ಈ ಅಕ್ಷರಶಬ್ದವಾಚ್ಯನಾಗಲು ಸಾಧ್ಯವಿಲ್ಲ. ಏಕೆಂದರೆ, ಅಕ್ಷರಕ್ಕಿಂತ ಉತ್ತಮತ್ವವನ್ನು ಹೇಳಿರುವುದರಿಂದ ಎಂಬ ಆಕ್ಷೇಪವನ್ನು ನಿರಾಕರಿಸುತ್ತಿದ್ದಾರೆ ''ತಮೇವ'' ಇತ್ಯಾದಿ ಭಾಷ್ಯದಿಂದ.

अस्यार्थः । 'अथ परा यया तदक्षरमधिगम्यते' 'यत्तददृश्यम्' इति परविद्याविषयत्ववचनाद् विष्णुरेवादृश्यत्वादिगुणकोऽक्षरः । परविद्याविषयत्वस्य 'तमेवं विद्वानमृत इह भवति' इत्यादिवाक्यान्तरेषु विष्ण्वेकनिष्ठत्वेन तद्धर्मत्वेनोक्तत्वात् ।

ಇದರ ಅರ್ಥ ಹೀಗಿದೆ; 'ಅಥ ಪರಾ ಯಯಾ ತದಕ್ಷರಮಧಿಗಮ್ಯತೇ' 'ಯತ್ತದ್ರೇಶ್ಯಮ್' ಇತ್ಯಾದಿಯಾಗಿ ಯಾವಾತನು ಅಕ್ಷರಶಬ್ದವಾಚ್ಯನಾಗಿದ್ದಾನೋ ಅವನು ಪರವಿದ್ಯೆಗೂ ಸಹ ವಿಷಯನಾಗಿದ್ದಾನೆಂದು ಶ್ರುತಿಯು ಹೇಳುತ್ತಿದೆ. ಮೋಕ್ಷವನ್ನು ದಯಪಾಲಿಸುವ ಮಹಾವಿಷ್ಣುವೇ ಪರವಿದ್ಯೆಗೆ ವಿಷಯನಾಗಿದ್ದಾನೆಂಬುದು ಪ್ರಸಿದ್ಧವಾಗಿದೆ. ಅಂತಹ ವಿಷ್ಣುವೇ ಅದೃಶ್ಯತ್ವಾದಿಗುಣಗಳುಳ್ಳ ಅಕ್ಷರನೂ ಸಹ ಆಗುತ್ತಾನೆ. ಭಗವಂತನು ಪರವಿದ್ಯೆಗೆ ವಿಷಯನಾಗಿದ್ದಾನೆಂಬ ವಿಚಾರವು 'ತಮೇವಂ ವಿದ್ವಾನಮೃತ ಇಹ ಭವತಿ' ಇತ್ಯಾದಿ ಬೇರೆ ಶ್ರುತಿಗಳಿಂದ ಸಿದ್ಧವಾಗಿದೆ. ಇದು ವಿಷ್ಣುವಿನಲ್ಲಿ ಮಾತ್ರವಿರುವುದರಿಂದ ಅವನ ಅಸಾಧಾರಣಧರ್ಮವಾಗಿದೆಯೆಂದು ಆ ಶ್ರುತಿಯಲ್ಲಿ ಹೇಳಿರುತ್ತಾರೆ.

वेदानामपरविद्याविषयत्वं यज्ञाद्यर्थान्तरविषयत्वविवक्षया तेषामेव परविद्याविषयत्वं विष्णुविषयत्वविवक्षयेत्यवगन्तव्यम् ।

ವೇದಗಳು ಯಾವಾಗ ವಿಷ್ಣುವನ್ನು ಬಿಟ್ಟುಯಜ್ಞಮೊದಲಾದ ಬೇರೆ ವಿಚಾರವನ್ನು ಪ್ರತಿಪಾದಿಸುತ್ತವೋ ಆವಾಗ ಅಪರವಿದ್ಯೆ ಎನಿಸುತ್ತವೆ. ಅದೇ ವೇದಗಳೇ ಯಾವಾಗ ವಿಷ್ಣುವನ್ನು ಪ್ರತಿಪಾದಿಸುತ್ತವೋ ಆವಾಗ ಪರವಿದ್ಯೆ ಎನಿಸುತ್ತವೆಯೆಂದು ತಿಳಿಯಬೇಕು.

ತದುಕ್ತಂ ಪರಮಸಂಹಿತಾಯಾಮ್–

'ಋಗಾಯಾ ಅಪರಾ ವಿದ್ಯಾ ಯದಾ ವಿಷ್ಣೋರ್ನ ವಾಚಕಾಃ ।
ತಾ ಏವ ಪರಮಾ ವಿದ್ಯಾ ಯದಾ ವಿಷ್ಣೋಸ್ತು ವಾಚಕಾಃ ।।'

ಇದನ್ನೇ ಪರಮಸಂಹಿತೆಯಲ್ಲಿ ಹೀಗೆ ಹೇಳಿದ್ದಾರೆ.

ಋಗಾದ್ಯಾ ಅಪರಾ ವಿದ್ಯಾ ಯದಾ ವಿಷ್ಣೋರ್ನ ವಾಚಕಾಃ।
ತಾ ಏವ ಪರಮಾ ವಿದ್ಯಾ ಯದಾ ವಿಷ್ಣೋಸ್ತು ವಾಚಕಾಃ॥

ಯಾವಾಗ ಋಗ್ವೇದಾದಿವಿದ್ಯೆಗಳು ವಿಷ್ಣುವನ್ನು ಪ್ರತಿಪಾದಿಸುವುದಿಲ್ಲವೋ ಆವಾಗ ಅವು ಅಪರವಿದ್ಯೆ ಎನಿಸುತ್ತವೆ. ಅದೇ ಋಗ್ವೇದಾದಿಗಳು ವಿಷ್ಣುವನ್ನು ಯಾವಾಗ ಪ್ರತಿಪಾದಿಸುತ್ತವೋ ಅವೇ ಆವಾಗ ಪರವಿದ್ಯೆ ಎನಿಸುತ್ತವೆ.

ಇತಿ ವಿಷ್ಣುರೇವಾದೃಶ್ಯತ್ವಾದಿಗುಣಕಾಕ್ಷರಂ ನ ಪ್ರಕೃತಿಹಿರಣ್ಯಗರ್ಭಾವಿತ್ಯೇತದ್ಧೇತ್ವನ್ತರೇಣ ಸೂತ್ರಮುಪನ್ಯಸ್ಯ ಸಾಧಯತಿ – ವಿಶೇಷಣೇತ್ಯಾದಿನಾ ।।

ಹೀಗೆ ವಿಷ್ಣುವೇ ಅದೃಶ್ಯತ್ವಾದಿಗುಣಗಳುಳ್ಳ ಅಕ್ಷರನೆನಿಸುತ್ತಾನೆ; ಹೊರತು ಪ್ರಕೃತಿಯಾಗಲೀ ಹಿರಣ್ಯಗರ್ಭನಾಗಲೀ ಅಕ್ಷರಶಬ್ದವಾಚ್ಯರಾಗುವುದಿಲ್ಲ, ಈ ವಿಷಯವನ್ನು ಮತ್ತೊಂದು ಹೇತುವಿನಿಂದ ಪ್ರತಿಪಾದಿಸುವುದಕ್ಕಾಗಿ ಸೂತ್ರವನ್ನು ಉಪನ್ಯಾಸಮಾಡಿ ಸಾಧಿಸುತ್ತಿದ್ದಾರೆ. ವಿಶೇಷಣ ಇತ್ಯಾದಿಯಾಗಿ.

'ಯಃ ಸರ್ವಜ್ಞಃ' ಇತ್ಯಾದಿವತ್ 'ಅಕ್ಷರಾತ್ಪರತಃ ಪರಃ' ಇತಿ ವಿಶೇಷ್ಯಮಾಣತ್ವಾದಪ್ಯದೃಶ್ಯತ್ವಾದಿಗುಣಕಾಕ್ಷರಂ ವಿಷ್ಣುಃ । ವಿಶ್ವಯೋನ್ಯಕ್ಷರಸ್ಯಾವರತ್ವಾಸಮ್ಭವಾತ್ । 'ಅಕ್ಷರಾತ್ಪರತಃ ಪರಃ' ಇತ್ಯವಧಿತ್ವೇನೋಚ್ಯಮಾನಂ ಕ್ಷರಂ ತಸ್ಮಾದನ್ಯದೇವ । ತದೇತದಾಹ – ಅಪರಮಿತಿ ।।

'ಯಃ ಸರ್ವಜ್ಞಃ' ಎಂಬ ಶ್ರುತಿಯಲ್ಲಿ ಸರ್ವಜ್ಞತ್ವವನ್ನು ವಿಶೇಷಣವನ್ನಾಗಿ ಹೇಳಿದಂತೆ 'ಅಕ್ಷರಾತ್ ಪರತಃ ಪರಃ' ಎಂಬಲ್ಲಿಯೂ ಪರತಃಪರತ್ವವನ್ನು ವಿಶೇಷಣವನ್ನಾಗಿ ಮುಂದೆ ಹೇಳುವುದರಿಂದ ಅದೃಶ್ಯತ್ವಾದಿಗುಣಗಳುಳ್ಳ ಅಕ್ಷರನು ವಿಷ್ಣುವೇ ಆಗುತ್ತಾನೆ.

ಜಗತ್ತಿಗೆ ಕಾರಣವಾದ ಅಕ್ಷರಕ್ಕೆ ಅವರತ್ವವನ್ನು ಹೇಳುವುದು ತಪ್ಪಾಗುತ್ತದೆ. ಆದ್ದರಿಂದ ಅಕ್ಷರವು ಸರ್ವೋತ್ಕೃಷ್ಟವಾದ ಪದಾರ್ಥವಾದ್ದರಿಂದ ವಿಷ್ಣುವೇ ಆಗಬೇಕು. ಇನ್ನು 'ಅಕ್ಷರಾತ್ ಪರತಃ ಪರಃ' ಎಂಬಲ್ಲಿ ಅವಧಿಯೆಂದು ಕೇಳಿಸಲ್ಪಡುತ್ತಿರುವ ಅಕ್ಷರವೇ ಬೇರೆಯಾಗಿದೆ. ಈ ಅಭಿಪ್ರಾಯದಿಂದ ''ಅಪರಂ'' ಇತ್ಯಾದಿಭಾಷ್ಯವು ಹೊರಟಿದೆ.

ನಚ 'ಕರ್ತಾರಮೀಶಮ್' ಇತಿ ವಿಶೇಷ್ಯಮಾಣತ್ವಾದದೃಶ್ಯತ್ವಾದಿಗುಣಕಮಕ್ಷರಂ ರುದ್ರ ಇತಿ ವಾಚ್ಯಮ್ । ಯದಾ 'ಪಶ್ಯತ್ಯನ್ಯಮೀಶಮ್' ಇತ್ಯಜ್ಞಪ್ರಸಿದ್ಧೇಶಾದನ್ಯಸ್ಯ ವಿಷ್ಣೋರೇವ ವಿವಕ್ಷಿತತ್ವಾದಿತ್ಯಾಹ – ಜುಷ್ಟಮಿತಿ ।।

ಕರ್ತಾರಮೀಶಮ್ ಎಂದು ಮುಂದೆ ವಿಶೇಷಣವನ್ನು ಹೇಳಿದ್ದರಿಂದ ಅದೃಶ್ಯತ್ವಾದಿ ಗುಣವುಳ್ಳವನು ಈಶಶಬ್ದವಾಚ್ಯನಾದ ರುದ್ರನೇ ಏಕಾಗಬಾರದು. 'ಯದಾ ಪಶ್ಯತ್ಯಕೃತಮೀಶಮ್' ಎಂಬುದಾಗಿ ಅಜ್ಞಾನಿಗಳ ಪ್ರಸಿದ್ಧಿಯನ್ನು ವಿವಕ್ಷಿಸಿ ಈಶಶಬ್ದವಾಚ್ಯನಾದ ರುದ್ರನಿಗಿಂತ ವಿಷ್ಣು ಅನ್ಯನಾಗಿದ್ದಾನೆಂದು ಹೇಳಿರುವುದರಿಂದ ವಿಷ್ಣುವೇ ಅಕ್ಷರನಾಗುತ್ತಾನೆ. ಈ ಅಭಿಪ್ರಾಯದಿಂದ ''ಜುಷ್ಟಮ್'' ಎಂಬ ವಾಕ್ಯವು ಹೊರಟಿದೆ.

ॐ ವಿಶೇಷಣಭೇದವ್ಯಪದೇಶಾಭ್ಯಾಂ ಚ ನೇತರೌ ॐ ॥ ೧-೨-೨೨ ॥

ॐ ರೂಪೋಪನ್ಯಾಸಾಚ್ಚ ॐ ॥ ೧-೨-೨೩ ॥

ವಿಷ್ಣುರೇವಾತ್ರೋಚ್ಯತ ಇತ್ಯೇತದುತ್ತರತ್ರೇಣ ಸಾಧಯತ್ಸೂತ್ರಮುಪನ್ಯಸ್ಯ ವ್ಯಾಚಷ್ಟೇ – ರೂಪೇತ್ಯಾದಿನಾ ।। ಪ್ರಾಕೃತಾಕಾರರಹಿತತ್ವೇನ 'ಅವರ್ಣಮಚಕ್ಷುಃಶ್ರೋತ್ರಮ್' ಇತ್ಯುಕ್ತೋऽಪ್ಯಪ್ರಾಕೃತ-ರೂಪವತ್ತ್ವೇನ ಮುಖ್ಯರೂಪವಾನ್ ವಿಷ್ಣುರೇವಾತ್ರೋಚ್ಯತ ಇತ್ಯರ್ಥಃ ।।

ವಿಷ್ಣುವೇ ಅಕ್ಷರಶಬ್ದವಾಚ್ಯನಾಗಿದ್ದಾನೆಂದು ಸಾಧಿಸುವುದಕ್ಕಾಗಿ ಮತ್ತೊಂದು ಯುಕ್ತಿಯನ್ನು ಹೇಳುವ ಸೂತ್ರವನ್ನು ಉಪನ್ಯಾಸಮಾಡಿ ವ್ಯಾಖ್ಯಾನಿಸುತ್ತಿದ್ದಾರೆ ''ರೂಪೋಪನ್ಯಾಸಾಚ್ಚ'' ಎಂಬುದಾಗಿ. ಪ್ರಾಕೃತವಾದ ಆಕಾರವಿಲ್ಲದ ಕಾರಣ ಭಗವಂತನು ಅವರ್ಣ, ಅಚಕ್ಷು, ಅಶ್ರೋತ್ರನೆನಿಸಿದ್ದಾನೆ. 'ಅಚಕ್ಷುರಶ್ರೋತ್ರಂ' ಎಂದು ಶ್ರುತಿಯಲ್ಲಿ ಹೇಳಲ್ಪಟ್ಟ ವ್ಯಕ್ತಿಯೂ ಸಹ ಪ್ರಾಕೃತವಾದ ಚಕ್ಷುರಾದಿ ಇಂದ್ರಿಯಗಳಿಲ್ಲದವನು. ಆದ್ದರಿಂದ ಅಪ್ರಾಕೃತರೂಪವುಳ್ಳ ಪರಮಾತ್ಮನೇ ಶ್ರುತಿಪ್ರತಿಪಾದ್ಯನಾಗಿದ್ದಾನೆ ಎಂದರ್ಥ.

।। ಇತಿ ಶ್ರೀಪದ್ಮನಾಭತೀರ್ಥವಿರಚಿತಸತ್ತರ್ಕದೀಪಾವಳ್ಯಾಮ್:
ಅನ್ತರ್ಯಾಮ್ಯಾಧಿಕರಣಮ್ ।।

ತತ್ವಪ್ರಕಾಶಿಕಾ –

ॐ ಅದೃಶ್ಯತ್ವಾದಿಗುಣಕೋ ಧರ್ಮೋಕ್ತೇಃ ॐ ॥ ೧-೨-೨೧ ॥

ಅತ್ರಾऽಕ್ಷರಶಬ್ದಸಾಹಿತ್ಯೇನ ಅನ್ಯತ್ರಪ್ರಸಿದ್ಧಾದೃಶ್ಯತ್ವಾದಿಲಿಙ್ಗಾನಾಂ ಬ್ರಹ್ಮಣಿ ಸಮನ್ವಯಪ್ರತಿಪಾದನಾದಸ್ತಿ ಶಾಸ್ತ್ರಾದಿಸಙ್ಗತಿಃ । ಶ್ರುತ್ಯಾದಿಸಙ್ಗತಿಂ ವಿಷಯವಾಕ್ಯೋದಾಹರಣೇನ ವಿಷಯಸಂಶಯೌ ಸಯುಕ್ತಿಕಂ ಪೂರ್ವಪಕ್ಷಂ ಚ ಸೂಚಯತಿ – ಅದೃಶ್ಯತ್ವಾದೀತಿ ।।

ಈ ಅಧಿಕರಣದಲ್ಲಿ ಅಕ್ಷರಶಬ್ದದ ಸಂಬಂಧವಿರುವ ಪ್ರಯುಕ್ತ ವಿಷ್ಣುವನ್ನು ಬಿಟ್ಟು ಬೇರೆಡೆ ಪ್ರಸಿದ್ಧವಾದ ಅದೃಶ್ಯತ್ವವೇ ಮೊದಲಾದ ಲಿಂಗಗಳನ್ನು ವಿಷ್ಣುವಿನಲ್ಲಿ ಸಮನ್ವಯ ಮಾಡಲಾಗಿದೆ. ಆದ್ದರಿಂದಲೇ ಈ ಅಧಿಕರಣಕ್ಕೆ ಶಾಸ್ತ್ರಸಂಗತಿ, ಅಧ್ಯಾಯಸಂಗತಿ ಹಾಗೂ ಪಾದಸಂಗತಿಗಳು ಇರುತ್ತವೆ. ಶ್ರುತಿಸಂಗತಿ, ಅಧಿಕರಣಸಂಗತಿಗಳನ್ನು ವಿಷಯವಾಕ್ಯವನ್ನು ಉದಾಹರಿಸುವ ಮೂಲಕ ತೋರಿಸುತ್ತಿದ್ದಾರೆ. ಮತ್ತು ವಿಷಯ, ಸಂಶಯ, ಹಾಗೂ ಯುಕ್ತಿಬದ್ಧವಾದ ಪೂರ್ವಪಕ್ಷಗಳನ್ನೂ ಸಹ ಸೂಚನೆ ಮಾಡುತ್ತಿದ್ದಾರೆ. ''ಅದೃಶ್ಯತ್ವಾದಿ'' ಇತ್ಯಾದಿ ಭಾಷ್ಯದಿಂದ.

तत्वप्रकाशिका – 'अदृश्येऽनात्म्ये' इत्यानन्दमयस्य अदृश्यत्वादिगुणा उक्ताः । ते चाथर्वणे कस्यचिदक्षरस्योच्यन्ते –

'ಅದೃಶ್ಯೇಽನಾತ್ಮ್ಯೇ' ಎಂಬ ಶ್ರುತಿಯಲ್ಲಿ ಆನಂದಮಯನಿಗೆ ಅದೃಶ್ಯತ್ವಾದಿಗುಣಗಳು ಹೇಳಲ್ಪಟ್ಟಿವೆ. ಅಂತಹ ಗುಣಗಳನ್ನು ಅಥರ್ವಣೋಪನಿಷತ್ತು ಯಾರೋ ಒಬ್ಬ ಅಕ್ಷರನಿಗೆ ಹೇಳುತ್ತಿದೆ.

तत्वप्रकाशिका – 'अथ परा यया तदक्षरमधिगम्यते',

'यत्तदद्रेश्यमग्राह्यमगोत्रमवर्णमचक्षुः श्रोत्रं तदपाणिपादम् ।
नित्यं विभुं सर्वगतं सुसूक्ष्मं तदव्ययं यद्भूतयोनिं परिपश्यन्ति धीराः ।।'
'यथोर्णनाभिः सृजते गृह्णते च यथा पृथिव्यामोषधयः सम्भवन्ति ।
यथा सतः पुरुषात् केशलोमानि तथाऽक्षरात्सम्भवतीह विश्वम्' इति ।

ಈ ಅಧಿಕರಣದ ವಿಷಯವಾಕ್ಯ ಹೀಗಿದೆ ''अथ परा यया तदक्षरमधिगम्यते'

''यत्तदद्रेश्यमग्राह्यमगोत्रमवर्णमचक्षुः श्रोत्रं तदपाणिपादम् ।
नित्यं विभुं सर्वगतं सुसूक्ष्मं तदव्ययं यद्भूतयोनिं परिपश्यन्ति धीराः ।।'
'यथोर्णनाभिः सृजते गृह्णते च यथा पृथिव्यामोषधयः सम्भवन्ति ।
यथा सतः पुरुषात् केशलोमानि तथाऽक्षरात् संभवतीह विश्वम्''

''ಯಾವ ವಿದ್ಯೆಯಿಂದ ಅಕ್ಷರನು ತಿಳಿಯುತ್ತಾನೋ ಅದೇ ಪರವಿದ್ಯೆಯು''.

''ಅಂತಹ ಅಕ್ಷರನು ಸಂಪೂರ್ಣವಾಗಿ ತಿಳಿಯಲಾರನು. ಯಾವುದೇ ಇಂದ್ರಿಯಗಳಿಂದ ಗ್ರಹಿಸಲು ಸಾಧ್ಯವಿಲ್ಲದವನು ವಸಿಷ್ಠಮೊದಲಾದ ಗೋತ್ರಗಳಿಲ್ಲದವನು. ಪ್ರಾಕೃತವಾದ ರೂಪವಿಲ್ಲದವನು ಪ್ರಾಕೃತವಾದ ಚಕ್ಷುಸ್ಸು, ಶ್ರೋತ್ರ ಮೊದಲಾದ ಜ್ಞಾನೇಂದ್ರಿಯಗಳಿಂದ ರಹಿತನು. ಹಸ್ತ, ಪಾದ ಮೊದಲಾದ ಕರ್ಮೇಂದ್ರಿಯಗಳಿಂದಲೂ ರಹಿತನು. ಅನಾದಿನಿತ್ಯನು; ಸರ್ವತ್ರವ್ಯಾಪ್ತನು. ಸೂಕ್ಷ್ಮಾತಿಸೂಕ್ಷ್ಮನು. ನಾಶರಹಿತನು. ಬ್ರಹ್ಮಾದಿ ಸಕಲದೇವತೆಗಳಿಗೂ ಕಾರಣಕರ್ತನು. ಹೀಗೆ ಜ್ಞಾನಿಗಳು

ಯಾವ ಭಗವಂತನನ್ನು ತಿಳಿಯುತ್ತಾರೋ ಆಂತಹ ಅಕ್ಷರನು ನಾಶರಹಿತನಾಗಿದ್ದಾನೆ'.

'ಯಾವ ರೀತಿಯಾಗಿ ಜೇಡರ ಹುಳು ತನ್ನ ಎಂಜಲಿನಿಂದ ಬಲೆಯನ್ನು ರಚನೆ ಮಾಡಿ ಆನಂತರ ಅದನ್ನೇ ನುಂಗಿಬಿಡುತ್ತದೋ, ಅಥವಾ ಯಾವ ರೀತಿಯಲ್ಲಿ ಪೃಥಿವಿಯಲ್ಲಿ ಸಸ್ಯಗಳು ಹುಟ್ಟುತ್ತವೋ ಯಾವ ರೀತಿಯಾಗಿ ಜೀವಂತನಾದ ಪುರುಷನ ದೇಹದಿಂದ ಕೇಶಲೋಮಾದಿಗಳು ಹುಟ್ಟುತ್ತವೋ ಅದರಂತೆ ಅಕ್ಷರನಿಂದ ಈ ವಿಶ್ವವು ಹುಟ್ಟುತ್ತದೆ'. ಎಂಬುದಾಗಿ.

तत्वप्रकाशिका – तेषां च विष्वन्यनिष्ठत्वे प्रागुक्तानन्दमयत्वं चान्यस्यैव स्यादित्यवश्यं निर्णेतव्यता । तददृश्यत्वादि लिङ्गजातमत्र विषयः । विष्णोरन्यस्य वेति सन्देहः । आनन्दमये श्रुतत्वमक्षरशब्दस्य सन्देहबीजम् ।

ಆಂತಹ ಅದೃಶ್ಯತ್ವಾದಿಗುಣಗಳು ವಿಷ್ಣುವನ್ನು ಬಿಟ್ಟು ಬೇರೆಯವರಲ್ಲಿ ಬರುವುದಾದರೆ ಹಿಂದೆ ನಿರ್ಣಯಿಸಿದ ಆನಂದಮಯತ್ವವೂ ಸಹ ಬೇರೆಯವರಲ್ಲೇ ಬರಬೇಕಾಗುತ್ತದೆ ಏಕೆಂದರೆ ಆನಂದಮಯನಿಗೆ ಅದೃಶ್ಯತ್ವಾದಿಗುಣಗಳು ಹೇಳಲ್ಪಟ್ಟಿವೆ. ಆದ್ದರಿಂದ ಅದೃಶ್ಯತ್ವಾದಿ ಗುಣಗಳು ಯಾರ ಧರ್ಮವೆಂದು ಅವಶ್ಯವಾಗಿ ನಿರ್ಣಯಿಸಬೇಕು. ಆದ್ದರಿಂದ ಅದೃಶ್ಯತ್ವಾದಿ ಗುಣಗಳ ಸಮೂಹವೇ ಈ ಅಧಿಕರಣದ ವಿಷಯ. ವಿಷ್ಣುವಿನದ್ದೋ ಅಥವಾ ಬೇರೆಯವರದ್ದೋ ಎಂದು ಸಂದೇಹ. ಆನಂದಮಯನಲ್ಲಿ ಈ ಲಿಂಗವು ಶ್ರುತವಾದ್ದರಿಂದ, 'ಇದು ಆನಂದಮಯನದ್ದೇ' ಎಂಬ ಶ್ರುತಿವಾಕ್ಯ ಮತ್ತು ಅಕ್ಷರಶಬ್ದವು ಸಂದೇಹಕ್ಕೆ ಕಾರಣಗಳಾಗಿವೆ.

तत्वप्रकाशिका – न विष्णोरदृश्यत्वादीति तावत्पूर्वः पक्षः । अदृश्यत्वादिगुणके 'अक्षरात् सम्भवतीह विश्वम्' इत्यक्षरशब्दश्रवणात् । तस्य च विष्णौ निरवकाशत्वात् । यतः अस्मादप्यक्षरादुत्तरवाक्ये परः प्रतीयते ।

ಅದೃಶ್ಯತ್ವಾದಿಗುಣಗಳು ವಿಷ್ಣುವಿನ ಧರ್ಮವಲ್ಲವೆಂದು ಪೂರ್ವಪಕ್ಷ. ಏಕೆಂದರೆ ಈ ಅದೃಶ್ಯತ್ವಾದಿ ಗುಣಗಳುಳ್ಳ ಪದಾರ್ಥದಲ್ಲಿ ''ಅಕ್ಷರಾತ್ ಸಂಭವತೀಹ ವಿಶ್ವಮ್'' ಎಂಬುದಾಗಿ ಅಕ್ಷರಶಬ್ದವು ಕೇಳಿಸುತ್ತಿದೆ. ಈ ಅಕ್ಷರಶಬ್ದವು ವಿಷ್ಣುವಿನಲ್ಲಿ ನಿರವಕಾಶವಾಗಿದೆ. ಏಕೆಂದರೆ ಈ ಅಕ್ಷರಕ್ಕಿಂತ ಶ್ರೇಷ್ಠವಾದದ್ದು ಮತ್ತೊಂದು ಪದಾರ್ಥವಿದೆ ಎಂಬುದಾಗಿ ಮುಂದಿನ ವಾಕ್ಯದಿಂದ ತಿಳಿಯುತ್ತಿದೆ.

तत्वप्रकाशिका –

'दिव्या ह्यमूर्तः पुरुषः स बाह्याभ्यन्तरो ह्यजः ।
अप्राणो ह्यमनाः शुभ्रो ह्यक्षरात्परतः परः' इति ।

''दिव्यो ह्यमूर्तः पुरुषः स बाह्याभ्यंतरो ह्यजः ।
अप्राणो ह्यमनाः शुभ्रो ह्यक्षरात् परतः परः ॥''
परिपूर्णचंद्रिका

ದಿವ್ಯಸ್ವರೂಪನಾದವನು, ಅಮೂರ್ತನಾದವನು, ಪುರುಷನು, ವಿಶ್ವದ ಒಳಗೂ ಹೊರಗೂ ನೆಲೆಸಿರುವವನು, ಉತ್ಪತ್ತಿನಾಶವಿಲ್ಲದವನು, ಪ್ರಾಣ ಮೊದಲಾದ ಷೋಡಶಕಲೆಗಳಿಂದ ಶೂನ್ಯನಾದವನು, ಪ್ರಾಕೃತಮನಸ್ಸಿಲ್ಲದವನು, ಶುದ್ಧಸ್ವರೂಪಿ ಇಂತಹ ಸರ್ವೋತ್ತಮನು ಅಕ್ಷರ ತತ್ವಕ್ಕಿಂತ ಶ್ರೇಷ್ಠನಾಗಿದ್ದಾನೆ ಎಂದು.

तत्वप्रकाशिका – नहि विष्णोरपि परोऽस्ति इति; अतः 'न विष्णुरदृश्यत्वादिगुणक इति, नानन्दमयोऽपि' इति भावः ।

ವಿಷ್ಣುವಿಗಿಂತ ಶ್ರೇಷ್ಠನಾದವನು ಮತ್ತೊಬ್ಬನಿಲ್ಲ. ಆದ್ದರಿಂದ ಅದೃಶ್ಯತ್ವಾದಿ ಗುಣವುಳ್ಳವನು ವಿಷ್ಣುವೆಂದು ನಿರ್ಣಯಿಸಲಾಗದು. ಆದ್ದರಿಂದಲೇ ಆನಂದಮಯನೂ ಸಹ ವಿಷ್ಣುವಾಗುವುದಿಲ್ಲವೆಂದು ಪೂರ್ವಪಕ್ಷ.

तत्वप्रकाशिका – सिद्धान्तयत्सूत्रं तावदवतारयति – अत इति ।। अदृश्यत्वादिकं न विष्णोश्चेत्तर्हि वाक्यस्य निर्विषयतयाऽप्रामाण्यं स्यादित्यतः पूर्वपक्षं विशदयति – पृथिव्यादीति ।।

ಸಿದ್ಧಾಂತವನ್ನು ಸ್ಥಾಪನೆಮಾಡುವುದಕ್ಕಾಗಿ ಸೂತ್ರವನ್ನು ಉಲ್ಲೇಖಿಸಲು ಹೊರಟಿದ್ದಾರೆ "ಅತಃ' ಎಂಬುದಾಗಿ. ಅದೃಶ್ಯತ್ವಾದಿಗಳು ವಿಷ್ಣುವಿನ ಧರ್ಮವಾಗದಿದ್ದರೆ "ಯತ್ತದದ್ರೇಶ್ಯಂ'' ಎಂಬ ವಾಕ್ಯವು ನಿರ್ವಿಷಯವಾಗುವಂತಹ ಪರಿಸ್ಥಿತಿ ಬರುತ್ತದೆ. ಆದ್ದರಿಂದಲೇ ಅಪ್ರಮಾಣವೂ ಆಗಬೇಕಾಗುತ್ತದೆ. ಈ ಕಾರಣಕ್ಕಾಗಿ ಪೂರ್ವಪಕ್ಷವನ್ನು ಸ್ಪಷ್ಟವಾಗಿ ತೋರಿಸಲು "ಪೃಥಿವ್ಯಾದಿ'' ಇತ್ಯಾದಿ ಭಾಷ್ಯದ ಮಾತು ಹೊರಟಿದೆ.

तत्वप्रकाशिका – अदृश्यत्वादिकं जडप्रकृतेर्भवेत् । अस्याः पृथिव्यादिदृष्टान्तेन उपादानतया जगत्कारणत्वोक्तेः । न चायं कारणत्वमात्रे दृष्टान्त इति वाच्यमित्यतो वाक्यादनन्तरम् 'अक्षरात्परतः परः' इति तस्मात्परतः पराभिधानात् ।

ಸ್ಪಷ್ಟವಾದ ಪೂರ್ವಪಕ್ಷ ಹೀಗಿದೆ -- ಜಡಪ್ರಕೃತಿಯು ಅದೃಶ್ಯತ್ವಾದಿಧರ್ಮಗಳಿಗೆ ಆಧಾರವಾಗಬಹುದು. ಏಕೆಂದರೆ ಪೃಥಿವ್ಯಾದಿಗಳನ್ನು ದೃಷ್ಟಾಂತವನ್ನಾಗಿ ನೀಡಿ ಉಪಾದಾನವೆಂದು ಜಗತ್ಕಾರಣತ್ವವನ್ನು ಶ್ರುತಿಯು ಹೇಳಿದೆ. ಕೇವಲ ಕಾರಣತ್ವವಿಷಯದಲ್ಲಿ ಇದು ದೃಷ್ಟಾಂತವಾಗಲು ಸಾಧ್ಯವಿಲ್ಲ. ಏಕೆಂದರೆ, ಕಾರಣಪ್ರತಿಪಾದಕವಾದ ವಾಕ್ಯದ ಮುಂದೆ 'ಅಕ್ಷರಾತ್ ಪರತಃ ಪರಃ' ಎಂಬ ವಾಕ್ಯವು ಕೇಳಿಸುತ್ತಿದೆ. ಇದು ಅಕ್ಷರತತ್ವಕ್ಕಿಂತ ಮತ್ತೊಂದು ಪರವಸ್ತು ಇದೆ ಎಂದು ಹೇಳುತ್ತಿದೆ. ಆದ್ದರಿಂದ ಅಕ್ಷರಶಬ್ದದಿಂದ ವಿಷ್ಣುವನ್ನು ವಿವಕ್ಷಿಸಿ, ಇಂತಹ ವಿಷ್ಣುವಿಗೆ ಕಾರಣತ್ವವನ್ನು ಶ್ರುತಿ ಹೇಳುತ್ತಿದೆ ಎಂದು ಅರ್ಥೈಸಲಾಗದು.

ತತ್ವಪ್ರಕಾಶಿಕಾ – ಚೇತನಪ್ರಕೃತೇರ್ವಾऽದೃಶ್ಯತ್ವಾದಿಕಮ್ । ತಸ್ಯಾಮಕ್ಷರಶಬ್ದಸ್ಯ ಸ್ಮೃತಿಸಿದ್ಧತ್ವಾತ್ । ನ ಚಾಸೌ ಶಬ್ದಃ ಪರಮಾತ್ಮನ್ಯಪಿ ಸಮ್ಭವತೀತಿ ವಾಚ್ಯಮ್ । ತತ್ಪರತಃಪರಾಭಿಧಾನಾತ್ । ತಚ್ಚ ತಸ್ಯಾಮಕ್ಷರಾತ್ಪರತಃಪರ ಇತಿ ಸಮಾನಾಧಿಕರಣ್ಯೇನೋಪಪನ್ನಮ್ । ವಿಕಾರಿತ್ವೇನ ಜಗತ್ಕಾರಣತ್ವವಚನಂ ತಸ್ಯಾ ವಿಕಾರಾಭಿಮಾನಿತ್ವಾದ್ಯುಜ್ಯತೇ ।

ಎರಡನೆಯಪೂರ್ವಪಕ್ಷ—ಅಥವಾ ಚೇತನಪ್ರಕೃತಿಯುಅದೃಶ್ಯತ್ವಾದಿಗಳಿಗೆಆಶ್ರಯವಾಗಬಹುದು. ಇಂತಹ ಚೇತನಪ್ರಕೃತಿಯಲ್ಲಿ ಅಕ್ಷರಶಬ್ದದ ಪ್ರಯೋಗವು ಸ್ಮೃತಿಯಿಂದಲೇ ಸ್ಪಷ್ಟವಾಗಿ ಸಿದ್ಧವಾಗಿದೆ. ಅಕ್ಷರಶಬ್ದವು ಪರಮಾತ್ಮನಲ್ಲಿ ಉಪಪನ್ನವಾಗುತ್ತದೆಂದು ಹೇಳಬಾರದು. ಏಕೆಂದರೆ ಅಕ್ಷರತತ್ತ್ವಕ್ಕಿಂತಲೂ ಒಬ್ಬನು ಶ್ರೇಷ್ಠನಾಗಿದ್ದಾನೆಂದು ಶ್ರುತಿಯು ಹೇಳುತ್ತಿದೆ. ಒಂದು ವೇಳೆ ವಿಷ್ಣುವನ್ನೇ ಅಕ್ಷರನೆಂದು ಹೇಳಿದರೆ "ಅಕ್ಷರಾತ್ ಪರತಃ ಪರಃ 'ಪರವಾದ ಅಕ್ಷರಕ್ಕಿಂತ ಉತ್ತಮವು' ಎಂದು ಹೇಳಿರುವುದು ಸರಿಯಲ್ಲ. ಆದರೆ ಪ್ರಕೃತಿಯಲ್ಲಿ ಇದು ಸಾಮಾನಾಧಿಕರಣ್ಯದಿಂದ ಉಪಪನ್ನವಾಗುತ್ತದೆ. ಹಾಗೂ ಅಕ್ಷರವು ವಿಕಾರವನ್ನು ಹೊಂದಿ ಜಗತ್ತಿಗೆ ಕಾರಣವಾಗುತ್ತದೆಂಬ ಮಾತು ಕೇಳಿಸುತ್ತಿರಬಹುದು. ಆದರೂ ಇದನ್ನು ವಿಕಾರಕ್ಕೆ ಅಭಿಮಾನಿಯಾದ್ದರಿಂದ ಲಕ್ಷ್ಮೀದೇವಿಯಲ್ಲಿ ಕೂಡಿಸಬಹುದು -- ಎಂದರೆ;

'ಪರತಃ ಅಕ್ಷರಾತ್' ಎಂಬುದಾಗಿ ಶ್ರೇಷ್ಠವಾದ ಶ್ರೀತತ್ವಕ್ಕಿಂತ ಎಂದು ಸಾಮಾನ್ಯಾಧಿಕರಣ್ಯದಿಂದ ಅನ್ವಯವನ್ನು ಹೇಳಿದರೆ ಮಾತ್ರ ಇದು ಕೂಡುತ್ತದೆ. ಇಲ್ಲಿ ಶ್ರೀತತ್ವವು ವಿಕಾರತ್ವದಿಂದ ಜಗತ್ತಿಗೆ ಕಾರಣವೆಂದು ಹೇಳಬಹುದು. ಅಂದರೆ ಲಕ್ಷ್ಮೀದೇವಿಯು ವಿಕಾರಕ್ಕೆ ಅಭಿಮಾನಿಯಾದ್ದರಿಂದ ಇದು ಉಪಪನ್ನವಾಗುತ್ತದೆ.

ತತ್ವಪ್ರಕಾಶಿಕಾ – ಹಿರಣ್ಯಗರ್ಭಸ್ಯ ವಾऽದೃಶ್ಯತ್ವಾದಿಕಮ್ । ಸ ಬ್ರಹ್ಮವಿದಾಮಿತ್ಯಾದಿಬ್ರಹ್ಮ ಶಬ್ದಾತ್ । ನ ಚ ಬ್ರಹ್ಮಶಬ್ದೋ ವಿಷ್ಣೌ ಮುಖ್ಯ ಇತಿ ತದ್ಗ್ರಹಣ್ । ತತ್ಪರತಃಪರಾಭಿಧಾನಾತ್ ।

ಮೂರನೆಯ ಪೂರ್ವಪಕ್ಷ – ಅಥವಾ ಹಿರಣ್ಯಗರ್ಭನು ಅದೃಶ್ಯತ್ವಧರ್ಮಕ್ಕೆ ಆಶ್ರಯನಾಗಬಹುದು. ಏಕೆಂದರೆ ಇದೇ ಪ್ರಕರಣದ ಪ್ರಾರಂಭದಲ್ಲಿ 'ಸಃ ಬ್ರಹ್ಮವಿದ್ಯಾಮ್' ಎಂಬುದಾಗಿ ಬ್ರಹ್ಮಶಬ್ದವು ಕೇಳಿಸುತ್ತಿದೆ. ವಿಷ್ಣುವಿನಲ್ಲಿ ಬ್ರಹ್ಮಶಬ್ದವು ಮುಖ್ಯವಾಗಿದೆಯಲ್ಲವೇ? ಎಂದು ಪ್ರಶ್ನಿಸಬಾರದು. ಏಕೆಂದರೆ ಬ್ರಹ್ಮನಿಗಿಂತಲೂ ವಿಷ್ಣುವಿಗೆ ಉತ್ತಮತ್ವವನ್ನು ಇದೇ ಶ್ರುತಿ ಹೇಳುತ್ತಿದೆ. ಆದ್ದರಿಂದ ಬ್ರಹ್ಮಶಬ್ದದಿಂದ ಚತುರ್ಮುಖನನ್ನೇ ವಿವಕ್ಷಿಸಬೇಕಾಗುತ್ತದೆ.

ತತ್ವಪ್ರಕಾಶಿಕಾ – ರುದ್ರಸ್ಯ ವೈತದದೃಶ್ಯತ್ವಾದಿಲಿಙ್ಗಜಾತಮ್ । 'ಕರ್ತಾರಮೀಶಮ್' ಇತಿ ಈಶಶಬ್ದಶ್ರವಣಾತ್ । ನಚ ಈಶಶಬ್ದೋ ವಿಷ್ಣಾವಪಿ ಸಮ್ಭವತೀತಿ ತದ್ಗ್ರಹಃ । ತತ್ಪರತಃಪರಾಭಿಧಾನಾದೇವೇತಿ ಭಾವಃ ।

ಪರಿಪೂರ್ಣಚಂದ್ರಿಕಾ

ನಾಲ್ಕನೆಯ ಪೂರ್ವಪಕ್ಷ. ಅಥವಾ ರುದ್ರನೂ ಅದೃಶ್ಯತ್ವಾದಿಧರ್ಮಗಳಿಗೆ ಆಶ್ರಯನಾಗಬಹುದು. 'ಕರ್ತಾರಮೀಶಮ್' ಎಂಬುದಾಗಿ ಈಶಶಬ್ದವು ಕೇಳಿಸುತ್ತಿದೆ. ಈಶಶಬ್ದವನ್ನು ವಿಷ್ಣುವಿನಲ್ಲೂ ಸಹ ಕೂಡಿಸಬಹುದಲ್ಲವೇ ಎಂದು ಪ್ರಶ್ನಿಸಬಾರದು. ಇಲ್ಲಿಯೂ ಸಹ ಈಶನಿಗಿಂತಲೂ ವಿಷ್ಣುವು ಶ್ರೇಷ್ಠನಾಗಿದ್ದಾನೆಂದು ಶ್ರುತಿಯು ಹೇಳಿದೆ. ಆದ್ದರಿಂದ ರುದ್ರನನ್ನೇ ಈಶಶಬ್ದದಿಂದ ವಿವಕ್ಷಿಸಬೇಕಾಗುತ್ತದೆ.

तत्वप्रकाशिका – एवं प्राप्तं पूर्वपक्षं प्रतिक्षेप्तुं सूत्रं व्याचष्टे – तमेवमिति ।। अदृश्यत्वादिगुणको विष्णुरेव ।

ಹೀಗೆ ನಾಲ್ಕು ಬಗೆಯ ಪೂರ್ವಪಕ್ಷಗಳನ್ನು ನಿರಾಕರಿಸುವುದಕ್ಕಾಗಿ ಸೂತ್ರವನ್ನು ''ತಮೇವಮ್'' ಇತ್ಯಾದಿಯಾಗಿ ವ್ಯಾಖ್ಯಾನಿಸುತ್ತಿದ್ದಾರೆ. ಅದೃಶ್ಯತ್ವಾದಿ ಧರ್ಮಗಳಿಗೆಲ್ಲಾ ಆಶ್ರಯನಾಗಿರುವವನು ವಿಷ್ಣುವೇ ಆಗಿದ್ದಾನೆ.

तत्वप्रकाशिका – ''अथ परा यया तदक्षरमधिगम्यते'' इत्यदृश्यत्वादिगुणकस्य परविद्याविषयत्वोक्तेः । परविद्याविषयत्वस्य च श्रुतिस्मृतिभिः विष्णुधर्मत्वेनाव-गतत्वादित्यर्थः ।

'ಅಥ ಪರಾ ಯಯಾ ತಕ್ಷರಮಧಿಗಮ್ಯತೇ' ಎಂಬ ಶ್ರುತಿಯಲ್ಲಿ ಅದೃಶ್ಯತ್ವಾದಿ ಗುಣವುಳ್ಳಂತಹ ವ್ಯಕ್ತಿಯಲ್ಲಿಯೇ ಪರವಿದ್ಯಾವಿಷಯತ್ವವು ಹೇಳಲ್ಪಟ್ಟಿದೆ. ಪರವಿದ್ಯೆಗೆ ವಿಷಯನಾದವನು ವಿಷ್ಣುವೇ ಆಗಿದ್ದಾನೆಂಬ ವಿಚಾರವು ಶ್ರುತಿಸ್ಮೃತಿಗಳಿಂದ ಸ್ಪಷ್ಟವಾಗಿ ತಿಳಿಯುತ್ತಿದೆ ಎಂದರ್ಥ.

तत्वप्रकाशिका – 'तमेवम्' इति श्रुतौ मोक्षसाधनविद्याविषयत्वोक्त्या विष्णोः परविद्याविषयत्वमुक्तं भवति । मोक्षसाधनविद्यायाः परविद्यात्वत् ।

'ತಮೇವಂ ವಿದ್ವಾನಮೃತ ಇಹ ಭವತಿ' ಎಂಬ ಶ್ರುತಿಯೂ ಸಹ ಭಗವಂತನ ಜ್ಞಾನವೇ ಮೋಕ್ಷಕ್ಕೆ ಸಾಧನವಾಗಿದೆಯೆಂದು ಹೇಳುತ್ತಿದೆ. ಇದರಿಂದ ವಿಷ್ಣುವೇ ಪರವಿದ್ಯೆಗೆ ವಿಷಯನಾಗಿದ್ದಾನೆಂದು ಹೇಳಿದಂತಾಗುತ್ತದೆ. ಏಕೆಂದರೆ ಮೋಕ್ಷಕ್ಕೆ ಸಾಧನವಾದ ವಿದ್ಯೆಯೇ ಪರವಿದ್ಯೆ ಎನಿಸುತ್ತದೆ.

तत्वप्रकाशिका – 'तत्कर्म' इति स्मृतौ च सैव परविद्या यया हरेर्ज्ञानं भवतीति तस्य परविद्याविषयत्वमुच्यते ।

''ತತ್ಕರ್ಮ ಹರಿತೋಷಂ ಯತ್'' ಎಂಬ ಸ್ಮೃತಿಯೂ ಸಹ ಯಾವುದರಿಂದ ಭಗವಂತನ ಜ್ಞಾನವು ಉಂಟಾಗುತ್ತದೋ ಅದೇ ಪರವಿದ್ಯೆ ಎನಿಸುತ್ತದೆ ಎಂದು ಹೇಳಿದೆ. ಆದ್ದರಿಂದಲೂ ಪರವಿದ್ಯೆಗೆ ವಿಷಯನಾದವನು ಭಗವಂತನೇ ಆಗುತ್ತಾನೆ.

तत्वप्रकाशिका – 'द्वे विद्ये' इत्यत्र च यदा वेदाद्यन्यविषयतया योज्यते तदा तस्याऽपरविद्यात्वम् । यदा पुनरेतैः स हरिर्वेद्यो भवति तदा परविद्यात्वमिति हरेः परविद्याविषयत्वमुच्यते ।

''द್ವೇವಿದ್ಯೇವೇದಿತವ್ಯೇ'' ಎಂಬಲ್ಲಿವೇದವನ್ನುವಿಷ್ಣುವಿಗಿಂತ ಬೇರೆಯವರಲ್ಲಿಸಮನ್ವಯಮಾಡಿದರೆ ಅಪರವಿದ್ಯೆ ಎನಿಸುತ್ತದೆ. ಆದೇ ವೇದದ ಮತುಗಳಿಂದ ಭಗವಂತನನ್ನು ತಿಳಿದರೆ ಆದು ಪರವಿದ್ಯೆ ಎನಿಸುತ್ತದೆ. ಹೀಗೆ ಪರವಿದ್ಯೆಗೆ ವಿಷಯನಾದವನು ವಿಷ್ಣುವೆಂದು ಇದರಿಂದಲೂ ನಿರ್ಣಯವಾಗುತ್ತದೆ.

तत्वप्रकाशिका – तदुक्तम् –

'ऋगाद्या अपराविद्या यदा विष्णोर्न वाचकाः ।
ता एव परमा विद्या यदा विष्णोस्तु वाचकाः' इति ।।२१।।

ಈ ವಿಚಾರವು ಮುಂದಿನ ಪ್ರಮಾಣದಿಂದ ಸ್ಪಷ್ಟವಾಗುತ್ತದೆ.

''ಋಗಾದ್ಯಾ ಅಪರಾವಿದ್ಯಾ ಯದಾ ವಿಷ್ಣೋರ್ನ ವಾಚಕಾಃ।
ತಾ ಏವ ಪರಮಾ ವಿದ್ಯಾ ಯದಾ ವಿಷ್ಣೋಸ್ತು ವಾಚಕಾಃ॥''

'ಋಗ್ವೇದ ಯಜುರ್ವೇದ ಮೊದಲಾದ ಸಚ್ಛಾಸ್ತ್ರಗಳು ಯಾವಾಗ ವಿಷ್ಣುವನ್ನು ಪ್ರತಿಪಾದಿಸುವುದಿಲ್ಲವೋ ಆವಾಗ ಅಪರವಿದ್ಯೆ ಎನಿಸುತ್ತವೆ. ಆದೇ ಋಗ್ವೇದಾದಿ ಸಚ್ಛಾಸ್ತ್ರಗಳು ಯಾವಾಗ ವಿಷ್ಣುವನ್ನು ಪ್ರತಿಪಾದಿಸುತ್ತವೋ ಆವಾಗ ಪರವಿದ್ಯೆ ಎನಿಸುತ್ತವೆ' ಎಂದು.

ಭಾವದೀಪಃ –

ॐ अदृश्यत्वादिगुणको धर्मोक्तेः ॐ

इत्यन्तभाष्यं सङ्गतिपरत्वेन व्याचष्टे – अदृश्य इति ।। अदृश्यत्वादीत्यादिपदेन-नात्म्यपदोक्तजीवगुणराहित्यं स्वामिराहित्यमित्यादिग्रहः ।

ಭಾಷ್ಯದಲ್ಲಿ ''ಇತಿ'' ಎಂಬಲ್ಲಿಯ ತನಕ ಇರುವ ವಾಕ್ಯಗಳು ಈ ಅಧಿಕರಣಕ್ಕೆ ಹಿಂದಿನ ಅಧಿಕರಣದಿಂದ ಇರುವಂತಹ ಸಂಗತಿಯನ್ನು ತೋರಿಸಲು ಹೊರಟಿವೆ ಎಂಬುದಾಗಿ ಟೀಕೆಯಲ್ಲಿ ''ಅದೃಶ್ಯೇ'' ಇತ್ಯಾದಿ ವಾಕ್ಯಗಳಿಂದ ವ್ಯಾಖ್ಯಾನಿಸುತ್ತಿದ್ದಾರೆ. ಭಾಷ್ಯದಲ್ಲಿ ''ಅದೃಶ್ಯತ್ವಾದಿ'' ಎಂದು ಹೇಳಿದ್ದಾರೆ. ''ಆದಿ'' ಪದದಿಂದ ''ಅದೃಶ್ಯೇऽನಾತ್ಮ್ಯೇ'' ಇತ್ಯಾದಿ ಶ್ರುತಿಯಲ್ಲಿ ಕೇಳಿಸುತ್ತಿರುವ ''ಅನಾತ್ಮ್ಯೇ'' ಎಂಬ ಪದದಿಂದ ತಿಳಿಯುವಂತಹ ಜೀವನಲ್ಲಿರುವ ಗುಣಗಳು ಪರಮಾತ್ಮನಲ್ಲಿ ಇರುವುದಿಲ್ಲವೆಂದು ಮತ್ತು ಜೀವನಿಗೆ ಮತ್ತೊಬ್ಬ ಸ್ವಾಮಿ ಇರುವಂತೆ ಪರಮಾತ್ಮನಿಗೆ ಅಂತಹ ಸ್ವಾಮಿ ಇರುವುದಿಲ್ಲವೆಂದು ತಿಳಿಸಿದ್ದಾರೆ.

ಪರಿಪೂರ್ಣಚಂದ್ರಿಕಾ

ಭಾವದೀಪಃ – ತತ್ರೇತ್ಯಸ್ಯ ತಾತ್ಪರ್ಯಂ ತೇಚೇತಿ ।।''ವಿಶ್ವಮಿತ್ಯುಕ್ತ್ವಾ'' ಇತ್ಯನ್ತಸ್ಯ ತಾತ್ಪರ್ಯಮ್ – ಆರ್ಥರ್ವಣ ಇತ್ಯಾದಿ ।। ಕುತ್ರೋಚ್ಯನ್ತ ಇತ್ಯತೋ ''ಯತ್ತತ್'' ಇತಿ ಭಾಷ್ಯಂ ಪ್ರಾಪ್ತಮಿತ್ಯುಪೇತ್ಯ, ತತ್ ಪಠತಿ – ಅಥೇತಿ ।।

ಭಾಷ್ಯದಲ್ಲಿರುವ ''ತತ್ರ'' ಎಂಬ ಪದಕ್ಕೆ ಟೀಕೆಯಲ್ಲಿ ''ತೇ ಚ'' ಇತ್ಯಾದಿಯಾಗಿ ತಾತ್ಪರ್ಯವನ್ನು ಹೇಳಿದ್ದಾರೆ. ''ವಿಶ್ವಂ ಇತ್ಯುಕ್ತ್ವಾ'' ಎಂಬಲ್ಲಿಯ ತನಕ ಈ ಅಧಿಕರಣದ ವಿಷಯವಾಕ್ಯವನ್ನು ತೋರಿಸಿದ್ದಾರೆ. ಆ ಸಮಗ್ರ ವಿಷಯವಾಕ್ಯದ ತಾತ್ಪರ್ಯವನ್ನು ''ಆಥರ್ವಣೇ'' ಎಂದು ಹೇಳಿರುತ್ತಾರೆ. ಆಕ್ಷರನು ಎಲ್ಲಿ ಶ್ರುತನಾಗಿದ್ದಾನೆ? ಎಂಬ ಪ್ರಶ್ನೆಗೆ ''ಯತ್ತದದ್ರೇಶ್ಯಂ'' ಇತ್ಯಾದಿ ವಾಕ್ಯವನ್ನು ಭಾಷ್ಯದಲ್ಲಿ ಉಲ್ಲೇಖಿಸಿದ್ದಾರೆ ಎಂಬುದಾಗಿ ವಿವರಿಸುತ್ತಾ, ಆದೇ ವಾಕ್ಯವನ್ನು ಸಂಪೂರ್ಣವಾಗಿ ಪಠಿಸುತ್ತಿದ್ದಾರೆ ''ಅಥ'' ಇತ್ಯಾದಿ ಟೀಕೆಯಿಂದ.

ಭಾವದೀಪಃ – ಗುಣಾನಾಮಕ್ಷರನಿಷ್ಠತಾಪ್ರದರ್ಶನಾಯ ವಾ ಸಿದ್ಧಾನ್ತಹೇತುಪ್ರದರ್ಶನಾರ್ಥಂ ತದುಪಯೋಗಿತಯಾ ವಾ ಪೂರ್ವಶೇಷೋಕ್ತಿಃ ।

''ಯತ್ತದದ್ರೇಶ್ಯಂ'' ಎಂಬಲ್ಲಿಂದ ವಿಷಯವಾಕ್ಯವನ್ನು ಭಾಷ್ಯದಲ್ಲಿ ತೋರಿಸಿದ್ದಾರೆ. ಆದರೆ ಟೀಕೆಯಲ್ಲಿ ಅದರ ಹಿಂದಿನ ವಾಕ್ಯವೆನಿಸಿದ ''ಅಥ ಪರಾ'' ಎಂಬುದರಿಂದಲೇ ವಿಷಯವಾಕ್ಯವನ್ನು ಪ್ರದರ್ಶಿಸಿದ್ದಾರೆ. ಕಾರಣವೇನೆಂದರೆ ಅದೃಶ್ಯತ್ವಾದಿ ಗುಣಗಳೆಲ್ಲವೂ ಆಕ್ಷರನಲ್ಲಿಯೇ ಶ್ರುತವಾಗಿದೆ ಎಂದು ತೋರಿಸಬೇಕಾಗಿದೆ. ಮತ್ತು ಸಿದ್ಧಾಂತ ಹೇತುವನ್ನೂ ಸಹ ಪ್ರದರ್ಶನ ಮಾಡಬೇಕಾಗಿದೆ. ಆದಕ್ಕೆ ಉಪಯೋಗಿಯಾಗುವಂತೆ ಹಿಂದಿನ ವಾಕ್ಯವನ್ನೂ ಸಹ ಉಲ್ಲೇಖಿಸಿದ್ದಾರೆಂದು ತಿಳಿಯಬೇಕು.

ಭಾವದೀಪಃ – ಭಾಷ್ಯೇ ವಿಚ್ಛಿದ್ಯ ಪಾಠಾತ್ ಸಙ್ಗತ್ಯಾಬ್ರುತ್ಯರ್ಥಮ್ ಅಕ್ಷರಬ್ರಹ್ಮೈಕ್ಯಸೂಚನಾಯ ಸಮಗ್ರೋಕ್ತಿಃ । ದೃಷ್ಟಾನ್ತೋಕ್ತೇರಪ್ಯುಪನ್ಯಾಸಸ್ಯ ಕೃತ್ಯಮಗ್ರೇ ವ್ಯಕ್ತಮ್ ।

ವಿಷಯವಾಕ್ಯವನ್ನು ತೋರಿಸುವಾಗ ಭಾಷ್ಯದಲ್ಲಿ ''ಇತ್ಯುಕ್ತ್ವಾ'' ಎಂದು ಮಧ್ಯದಲ್ಲಿ ವಿಚ್ಛೇದ ಮಾಡಿ ಪುನಃ ಮುಂದಿನ ವಾಕ್ಯವನ್ನು ತೋರಿಸಿದ್ದಾರೆ. ಆದರೆ ಟೀಕೆಯಲ್ಲಿ ಹಾಗೆ ವಿಚ್ಛೇದ ಮಾಡದೇ ಒಟ್ಟಿಗೆ ವಾಕ್ಯವನ್ನು ಪ್ರದರ್ಶನ ಮಾಡಿದ್ದಾರೆ. ಕಾರಣವೇನೆಂದರೆ ಸಂಗತಿ ತೋರಿಸಬೇಕಾಗಿದೆ. ಮತ್ತು ಹಿಂದಿನ ಮುಂದಿನ ವಾಕ್ಯಗಳಲ್ಲಿ ಪ್ರತಿಪಾದ್ಯವಾದ ಆಕ್ಷರತತ್ವವು ಒಂದೇ ಆಗಿದೆ ಎಂದು ತಿಳಿಸಬೇಕಾಗಿದೆ. ಈ ದೃಷ್ಟಿಯಿಂದ ಟೀಕೆಯಲ್ಲಿ ಸಮಗ್ರವಾಕ್ಯವನ್ನು ಒಟ್ಟಿಗೆ ನೀಡಿದ್ದಾರೆ. ''ಯಥೋರ್ಣನಾಭಿಃ'' ಇತ್ಯಾದಿಯಾದ ದೃಷ್ಟಾಂತವಚನವನ್ನು ಭಾಷ್ಯದಲ್ಲಿ ಮತ್ತು ಟೀಕೆಯಲ್ಲಿ ಏಕೆ ಉಲ್ಲೇಖಿಸಿದ್ದಾರೆ? ಎಂಬುದರ ಬಗ್ಗೆ ಮುಂದೆ ಸ್ಪಷ್ಟಪಡಿಸುತ್ತೇವೆ.

ಭಾವದೀಪಃ – ಅದ್ರೇಶ್ಯಂ ಚಕ್ಷುರಾದಿನಾ ಅದೃಶ್ಯಮ್ । ಅಗ್ರಾಹ್ಯಂ ಮನಸಾ । ಅವರ್ಣಂ ಬ್ರಾಹ್ಮಣ್ಯಾದಿವರ್ಣಹೀನಮ್ । ಸಂಹರ್ತೃತ್ವಮಧಿಕಂ ವದನ್ ಭೂತಯೋನಿಮಿತ್ಯುಕ್ತಕಾರಣತ್ವಂ ಸ್ಪಷ್ಟಯತಿ – ಯಥೋರ್ಣನಾಭಿರಿತಿ ।।

ಅದ್ರೇಶ್ಯಂ = ಚಕ್ಷುರಿಂದ್ರಿಯವೇ ಮೊದಲಾದವುಗಳಿಂದ ನೋಡಲು ಸಾಧ್ಯವಿಲ್ಲದವನು. ಅಗ್ರಾಹ್ಯಂ = ಮನಸ್ಸಿನಿಂದಲೂ ಸಹ ತಿಳಿಯಲು ಸಾಧ್ಯವಿಲ್ಲದವನು. ಅವರ್ಣಂ = ಬ್ರಾಹ್ಮಣ್ಯವೇ ಮೊದಲಾದ ವರ್ಣವಿಲ್ಲದವನು.

ಸಂಹರ್ತೃತ್ವವನ್ನು ಅಧಿಕವಾಗಿ ಹೇಳುವವರಾಗಿ ''ಭೂತಯೋನಿಂ'' ಎಂಬುದರಿಂದ ತಿಳಿಯಲ್ಪಟ್ಟ ಕಾರಣತ್ವವನ್ನೇ ಸ್ಪಷ್ಟಪಡಿಸುತ್ತಿದ್ದಾರೆ ''ಯಥೋರ್ಣನಾಭಿಃ'' ಇತ್ಯಾದಿ ವಾಕ್ಯದಿಂದ.

ಭಾವದೀಪಃ – ಕಾರಣತ್ವಂ ಕರ್ತೃತ್ವರೂಪಮಿತಿ ವಕ್ತುಮಾದ್ಯಃ । ಅಕ್ಷರಜನನೇ ಪೃಥಿವೀಬೀಜಮಿವ ವಿಶ್ವಸೃಷ್ಟ ತತ್ತತ್ಕರ್ಮಾಪೇಕ್ಷತ ಇತಿ ವಕ್ತುಂ ದ್ವಿತೀಯಃ । ಅನಾಯಾಸೇನ ತತ್ಸೃಷ್ಟಿರಿತಿ ವಕ್ತುಂ ತೃತೀಯೋ ದೃಷ್ಟಾನ್ತಃ ।

''ಯಥೋರ್ಣನಾಭಿಃ'' ಇತ್ಯಾದಿ ವಾಕ್ಯಶೇಷದಿಂದ ಮೂರು ದೃಷ್ಟಾಂತಗಳನ್ನು ಶ್ರುತಿಯು ಹೇಳುತ್ತಿದೆ. ಅಕ್ಷರತತ್ವದಲ್ಲಿ ಶ್ರುತವಾದ ಕಾರಣತ್ವವು ಕರ್ತೃತ್ವರೂಪವಾಗಿದೆ ಎಂದು ತಿಳಿಸುವುದಕ್ಕಾಗಿ ಮೊದಲನೆಯ ಊರ್ಣನಾಭಿಯ ದೃಷ್ಟಾಂತವನ್ನು ನೀಡಲಾಗಿದೆ. ಮೊಳಕೆಯು ಹುಟ್ಟಬೇಕೆಂದರೆ ಭೂಮಿಯು ಹೇಗೆ ಕಾರಣವಾಗುತ್ತದೆಯೋ ಹಾಗೆಯೇ ಸಕಲಜೀವರಾಶಿಗಳು ಹುಟ್ಟಬೇಕಾದರೆ ಆವರವರ ಕರ್ಮಗಳೇ ಕಾರಣವಾಗಿದೆ ಎಂದು ತಿಳಿಸಲು ಎರಡನೆಯ ಪೃಥಿವೀಯಿಂದ ಹುಟ್ಟುವ ಓಷಧಿ ದೃಷ್ಟಾಂತವನ್ನು ನೀಡಲಾಗಿದೆ. ಭಗವಂತನು ಅನಾಯಾಸವಾಗಿ ಸೃಷ್ಟ್ಯಾದಿಗಳನ್ನು ಮಾಡುತ್ತಾನೆಂದು ತಿಳಿಸಲು ಮೂರನೆಯ ಕೇಶಲೋಮ ದೃಷ್ಟಾಂತವನ್ನು ನೀಡಲಾಗಿದೆ.

ಭಾವದೀಪಃ – ಸತೋ ಜೀವತಃ ಪುರುಷಾದ್ದೇಹಾತ್ । ಶಿರಸ್ಥಾಃ ಕೇಶಾಃ । ಅನ್ಯಾನಿ ಲೋಮಾನಿ । ಸರ್ವಸ್ಯ ತಾತ್ಪರ್ಯಮಾಹ – ತೇಷಾಮಿತಿ ।।

ಸತಃ = ಜೀವಂತವಾದ, ಪುರುಷಾತ್ = ದೇಹದ ದಸೆಯಿಂದ, ಕೇಶಾಃ = ತಲೆಯಲ್ಲಿರುವ ಕೂದಲುಗಳು, ಲೋಮಾನಿ = ದೇಹದಲ್ಲಿರುವ ಕೂದಲುಗಳು ಹುಟ್ಟುತ್ತವೆ. ಎಂದು ಶ್ರುತಿಯ ಪದಗಳಿಗೆ ಅರ್ಥ. ಸಮಗ್ರ ಶ್ರುತಿಯ ತಾತ್ಪರ್ಯವನ್ನು ''ತೇಷಾಂ'' ಇತ್ಯಾದಿ ವಾಕ್ಯದಿಂದ ಹೇಳುತ್ತಿದ್ದಾರೆ.

ಭಾವದೀಪಃ – ಅಕ್ಷರಶ್ರುತ್ಯಾ ದೃಷ್ಟಾನ್ತಪೂರ್ವಮುಕ್ತೋಪಾದಾನತ್ವಯುಕ್ತ್ಯಾ 'ತಸ್ಮಾದಕ್ಷರಾದ್' ಇತಿ ಭಾಷ್ಯಶೇಷೋಕ್ತದಿಶಾ ವಿಷ್ಣಾವಯೋಗೇ ಚಾನ್ಯನಿಷ್ಟತ್ವ ಇತ್ಯರ್ಥಃ ।

ಅಕ್ಷರಶ್ರುತಿಯಿಂದ ದೃಷ್ಟಾಂತಪೂರ್ವಕವಾಗಿ ಹೇಳಲ್ಪಟ್ಟ ಉಪಾದಾನತ್ವ ಯುಕ್ತಿಯಿಂದ ''ತಸ್ಮಾದಕ್ಷರಾದ್'' ಎಂಬ ಭಾಷ್ಯಶೇಷದ ಮಾತಿನಿಂದ ವಿಷ್ಣುವಿನಲ್ಲಿ ಅದೃಶ್ಯತ್ವಾದಿ ಗುಣಗಳು ಯುಕ್ತವಾಗುವುದಿಲ್ಲ ಹೊರತಾಗಿ ಬೇರೆಯವರಲ್ಲಿಯೇ ಯುಕ್ತವಾಗುತ್ತದೆ ಎಂದು ''ತೇಷಾಂ'' ಇತ್ಯಾದಿ ವಾಕ್ಯಗಳ ಅಭಿಪ್ರಾಯ.

ಭಾವದೀಪಃ – ಉಕ್ತಾ ಇತ್ಯನ್ತವಾಕ್ಯಸ್ಯ ತಾತ್ಪರ್ಯಮ್ – ಪ್ರಾಗುಕ್ತೇತಿ ।। ಇತೀತಿ ।। ಪೂರ್ವಾಕ್ಷೇಪರೂಪಸಙ್ಗತಿಸಮ್ಭವಾದ್ಧೇತೋರಿತ್ಯರ್ಥಃ ।।

ಪರಿಪೂರ್ಣಚಂದ್ರಿಕಾ

''ಪ್ರಾಗುಕ್ತ'' ಎಂಬ ಪದದಿಂದ ಹಿಂದೆ ''ಅದೃಶ್ಯತ್ವಾದಿ ಗುಣಾಃ ಉಕ್ತಾಃ'' ಇತ್ಯಾದಿ ವಾಕ್ಯದಿಂದ ಹೇಳಲ್ಪಟ್ಟ ಅಭಿಪ್ರಾಯವನ್ನು ಪರಾಮರ್ಶಿಸುತ್ತಿದ್ದಾರೆ. ''ಇತಿ ಅವಶ್ಯಂ'' ಎಂಬಲ್ಲಿರುವ ''ಇತಿ'' ಎಂಬ ಪದಕ್ಕೆ ಹಿಂದಿನ ಅಧಿಕರಣದಿಂದ ಆಕ್ಷೇಪರೂಪವಾದ ಸಂಗತಿಯಿರುವ ಕಾರಣ ಎಂದರ್ಥ.

ಭಾವದೀಪಃ – ನಿರ್ಣೇತವ್ಯತೇತಿ ।। ತೇಷಾಮಿತ್ಯನುಕರ್ಷಃ । ಭಾಷ್ಯೇ ಗುಣಾ ಇತಿ ಬಹುವಚನೋಕ್ತೇರಾಹ – ಜಾತಮಿತಿ ।। ಪಾದಸಙ್ಗತ್ಯರ್ಥಮ್ – ಲಿಙ್ಗೇತಿ ।।

''ನಿರ್ಣೇತವ್ಯತಾ'' ಎಂಬ ಪದದ ಅನಂತರ ''ತೇಷಾಂ'' ಎಂಬ ಪದವನ್ನು ಅನುಕರ್ಷ ಮಾಡಬೇಕು. ಭಾಷ್ಯದಲ್ಲಿ ''ಅದೃಶ್ಯತ್ವಾದಿಗುಣಾಃ'' ಎಂದು ಬಹುವಚನ ಹೇಳಿದ್ದರಿಂದ ಟೀಕೆಯಲ್ಲಿ ''ಲಿಂಗ ಜಾತಂ'' ಎಂಬುದಾಗಿ ಜಾತ ಪದವನ್ನು ಪ್ರಯೋಗಿಸಿದ್ದಾರೆ. ಪಾದಸಂಗತಿಯನ್ನು ತಿಳಿಸುವುದಕ್ಕಾಗಿ ಲಿಂಗಪದವನ್ನು ಪ್ರಯೋಗಿಸಿದ್ದಾರೆ.

ಭಾವದೀಪಃ – ತದೇವ ಭಾಷ್ಯಂ ಪೂರ್ವಪಕ್ಷತದ್ಯುಕ್ತಿತತ್ಫಲಪರತ್ವೇನ ವ್ಯಾಕರ್ತುಂ ಪರಃ ಪ್ರತೀಯತ ಇತ್ಯುಕ್ತಿಲಬ್ಧಪ್ರತಿಜ್ಞಾಮಾಹ – ನ ವಿಷ್ಣೋರಿತಿ ।।

ಸಂಗತಿಪರವಾದ ಭಾಷ್ಯವನ್ನೇ ಪೂರ್ವಪಕ್ಷವನ್ನು, ಪೂರ್ವಪಕ್ಷಯುಕ್ತಿ ಮತ್ತು ಪೂರ್ವಪಕ್ಷಫಲ ಪರವಾಗಿ ವಾಖ್ಯಾನಿಸುವವರಾಗಿ ''ಪರಃ ಪ್ರತೀಯತೇ'' ಎಂಬ ಭಾಷ್ಯದಲ್ಲಿರುವ ಮಾತಿನಿಂದ ದೊರೆಯಲ್ಪಟ್ಟ ಪ್ರತಿಜ್ಞಾಶಯವನ್ನು ''ನ ವಿಷ್ಣೋಃ'' ಇತ್ಯಾದಿ ವಾಕ್ಯದಿಂದ ಹೇಳುತ್ತಿದ್ದಾರೆ.

ಭಾವದೀಪಃ – ವಿಷ್ಣೋರ್ನ ಚೇನ್ನಿರ್ವಿಷಯಂ ವಾಕ್ಯಮಿತ್ಯತ ಉಕ್ತಮ್ – ತಾವದಿತಿ ।। ಅನ್ಯಸ್ಯ ತು ಪಶ್ಚಾದ್ ವಿವರಿಷ್ಯಾಮ ಇತ್ಯರ್ಥಃ । ಕುತ ಇತ್ಯತಃ ತತ್ರೇತ್ಯಾದಿ ।। 'ಅಕ್ಷರಾತ್ಸಮ್ಭವತೀಹ ವಿಶ್ವಮ್' ಇತ್ಯುಕ್ತ್ವೇತ್ಯನ್ತಪೂರ್ವವಾಕ್ಯಂ ಪ್ರಾಸಮಿತಿ ಮತ್ವಾऽऽಹ – ಅದೃಶ್ಯತ್ವಾದಿಗುಣಕ ಇತಿ।। ಭಾಷ್ಯಸ್ಯತತ್ರೇತ್ಯಸ್ಯರ್ಥೋऽಯಮ್ ।

''ನ ವಿಷ್ಣೋಃ'' ಇತ್ಯಾದಿ ವಾಕ್ಯಗಳ ಅಭಿಪ್ರಾಯ ಹೀಗಿದೆ - ವಿಷ್ಣು ಅದೃಶ್ಯತ್ವಾದಿ-ಗುಣಗಳುಳ್ಳವನಾಗದಿದ್ದಲ್ಲಿ ವಾಕ್ಯವು ನಿರ್ವಿಷಯವಾಗಬೇಕಾಗುತ್ತದಲ್ಲವೇ? ಎಂಬ ಪ್ರಶ್ನೆಗೆ ''ತಾವತ್'' ಎಂಬ ಪದವನ್ನು ಪ್ರಯೋಗಿಸಿದ್ದಾರೆ. ಅಂದರೆ ಆ ವಾಕ್ಯಕ್ಕೆ ವಿಷ್ಣು ವಿಷಯನಾಗದಿದ್ದರೂ ಬೇರೆಯವರು ವಿಷಯರಾಗುತ್ತಾರೆ ಎಂಬುದನ್ನು ಮುಂದೆ ತಿಳಿಸುತ್ತೇವೆ ಎಂದು ''ತಾವತ್'' ಎಂಬ ಪದದಿಂದ ಸೂಚನೆ ಮಾಡಿದ್ದಾರೆ.

ವಿಷ್ಣು ಏಕೆ ಅದೃಶ್ಯತ್ವಾದಿ ಗುಣಗಳುಳ್ಳವನಾಗುವುದಿಲ್ಲ ? ಎಂಬ ಪ್ರಶ್ನೆಗೆ ಭಾಷ್ಯದಲ್ಲಿ ''ತತ್ರ'' ಎಂಬಲ್ಲಿಂದ ಪ್ರಾರಂಭಿಸಿ ''ಅಕ್ಷರಾತ್ಸಂಭವತೀಹ ವಿಶ್ವಮ್'' ಎಂಬಲ್ಲಿಯ ತನಕ ಉತ್ತರಿಸಿದ್ದಾರೆ. ಈ ಅಭಿಪ್ರಾಯದಿಂದ ಟೀಕೆಯಲ್ಲಿ ''ಅದೃಶ್ಯತ್ವಾದಿಗುಣಕೇ'' ಇತ್ಯಾದಿಯಾಗಿ ಹೇಳುತ್ತಿದ್ದಾರೆ. ಭಾಷ್ಯದಲ್ಲಿರುವ ''ತತ್ರ'' ಎಂಬ ಪದದ ಅರ್ಥವನ್ನು ''ಅದೃಶ್ಯತ್ವಾದಿಗುಣಕೇ'' ಎಂದಿದ್ದಾರೆ.

ಭಾವದೀಪಃ – ತಥಾಪಿ ಕುತೋ ನ ವಿಷ್ಣುರಿತ್ಯತಃ ''ಅಕ್ಷರಾತ್ಪರತಃ ಪರ'' ಇತಿ ಶ್ರುತೇರಪಿ ನಾಕ್ಷರಾತ್ಸಮ್ಭವತೀತ್ಯಸ್ಯಾಃ ನಿರವಕಶತ್ವಾಮಿತಿ ನ್ಯಯವಿವರಣೋಕ್ತದಿಶಾऽಕ್ಷರಶಬ್ದಸ್ಯ ವಿಷ್ಣೌ ನಿರವಕಶತ್ವಂ ವಕ್ತುಂ ಪ್ರವೃತ್ತಂ ತಸ್ಮಾಚ್ಚೇತ್ಯಾದಿಭಾಷ್ಯವಾಕ್ಯಶೇಷಂ ಸ್ಮತ್ವಾऽऽಹ – ತಸ್ಯ ಚೇತಿ ।।

ಆದರೂ ಸಹ ವಿಷ್ಣು ಏಕೆ ಆದೃಶ್ಯತ್ವಾದಿ ಗುಣಗಳುಳ್ಳವನಾಗುವುದಿಲ್ಲ? ಎಂಬ ಪ್ರಶ್ನೆಗೆ ''ಅಕ್ಷರಾತ್ಪರತಃ ಪರಃ'' ಎಂಬ ಶ್ರುತಿಗಿಂತಲೂ ''ಅಕ್ಷರಾತ್ಸಂಭವತೀಹ ವಿಶ್ವಂ'' ಎಂಬ ವಾಕ್ಯವು ನಿರವಕಾಶವಾಗಿಲ್ಲ ಎಂಬ ನ್ಯಾಯವಿವರಣದಲ್ಲಿ ಹೇಳಿದಂತೆ ಅಕ್ಷರ ಶಬ್ದಕ್ಕೆ ವಿಷ್ಣುವಿನಲ್ಲಿ ನಿರವಕಾಶತ್ವವನ್ನು ಸಾಧಿಸುವುದಕ್ಕಾಗಿ ''ತಸ್ಮಾಚ್ಚ'' ಇತ್ಯಾದಿ ಭಾಷ್ಯದ ವಾಕ್ಯಶೇಷವು ಹೊರಟಿರುತ್ತದೆ. ಈ ಅಭಿಪ್ರಾಯದಿಂದ ''ತಸ್ಯ ಚ'' ಇತ್ಯಾದಿ ಟೀಕೆಯು ಹೊರಟಿದೆ.

ಭಾವದೀಪಃ – ತತ್ರ ಹೇತುತ್ವೇನ ಭಾಷ್ಯಶೇಷಂ ವ್ಯಾಚಷ್ಟೇ – ಯತ ಇತಿ ।। ತಸ್ಮಾದಿತ್ಯಸ್ಯ ವ್ಯವಹಿತಯತ್ಕಿಞ್ಚಿತ್ಪರಾಮರ್ಶಿತ್ವಭ್ರಮನಿರಾಸಾಯಾಸ್ಮಾದಪ್ಯಕ್ಷರಾದಿತಿ ವ್ಯಾಖ್ಯಾ । ಭಾಷ್ಯೇ ಇತ್ಯತಃ ಪರಮಿತ್ಯಗ್ರೇತನಭಾಷ್ಯಾನುರೋಧಾದಿಹಾಪೀತಿ ಶಬ್ದಾನನ್ತರಂ ''ವಾಕ್ಯ'' ಇತಿ ಶೇಷಃ ।

ಈ ವಿಷಯದಲ್ಲಿ ಕಾರಣವನ್ನು ಭಾಷ್ಯದ ವಾಕ್ಯಶೇಷದಿಂದಲೇ ತೋರಿಸುತ್ತಿದ್ದಾರೆ ''ಯತಃ'' ಇತ್ಯಾದಿ ಟೀಕೆಯಿಂದ. ''ತಸ್ಮಾತ್'' ಎಂಬ ಪದವು ವ್ಯವಹಿತವಾದ ಯಾವುದಾದರೂ ಒಂದನ್ನು ಪರಾಮರ್ಶಿಸಬಹುದೆಂಬ ಭ್ರಮೆಯನ್ನು ನಿರಾಕರಿಸುವುದಕ್ಕಾಗಿ ''ಅಸ್ಮಾದಪ್ಯಕ್ಷರಾತ್'' ಎಂದು ವ್ಯಾಖ್ಯಾನಿಸಿದ್ದಾರೆ. ಮುಂದಿನ ಭಾಷ್ಯದಲ್ಲಿರುವ ''ಇತಿ'' ಶಬ್ದದ ಅನಂತರ 'ವಾಕ್ಯೇ'ವೆಂಬುದನ್ನು ಇಟ್ಟುಕೊಂಡಿದ್ದರಿಂದ ಇಲ್ಲಿಯೂ ಸಹ 'ವಾಕ್ಯೇ' ಎಂಬುದನ್ನು ಶೇಷಪೂರಣ ಮಾಡಿಕೊಳ್ಳಬೇಕೆಂದು ತಿಳಿಯುತ್ತದೆ.

ಭಾವದೀಪಃ – ಅಸ್ಮಾದಪ್ಯಕ್ಷರಾದ್ ।। ಅಕ್ಷರಾತ್ಸಮ್ಭವತೀತಿ ವಾಕ್ಯಾದುತ್ತರವಾಕ್ಯೇऽ-ಸ್ಮಾದಪ್ಯಕ್ಷರಾತ್ಪರಃ ಪ್ರತೀಯತ ಇತ್ಯರ್ಥಃ । ಏತೇನ ಭಾಷ್ಯೇ ತಸ್ಮಾದಿತಿ ಪೂರ್ವವಾಕ್ಯಮಕ್ಷರಂ ಚ ಪರಾಮೃಶ್ಯತ ಇತಿ ದರ್ಶಿತಮ್ ।

''ಅಸ್ಮಾದಪ್ಯಕ್ಷರಾತ್'' ಎಂದರೆ ''ಅಕ್ಷರಾತ್ಸಂಭವತಿ'' ಎಂಬ ಮುಂದಿನ ವಾಕ್ಯದಲ್ಲಿ ಈ ಅಕ್ಷರನಿಗಿಂತಲೂ ಉತ್ತಮನಿದ್ದಾನೆಂದು ತಿಳಿಯುತ್ತದೆ ಎಂದರ್ಥ. ಹೀಗೆ ಹೇಳಿದ್ದರಿಂದ ಭಾಷ್ಯದಲ್ಲಿ ''ತಸ್ಮಾತ್'' ಎಂಬ ಪೂರ್ವವಾಕ್ಯವನ್ನು ಮತ್ತು ಅಕ್ಷರನನ್ನು ಪರಾಮರ್ಶ ಮಾಡಿಕೊಳ್ಳಬೇಕೆಂದು ತಿಳಿಸಿದಂತಾಯಿತು.

ಭಾವದೀಪಃ – ''ಇತ್ಯುಕ್ತ್ವಾ ಪ್ರವೃತ್ತೇ ಉತ್ತರವಾಕ್ಯೇ'' ಇತಿ ಯೋಜನಾತ್ ಕ್ತ್ವಾಶ್ರುತ್ಯುಪಪತ್ತಿಃ । ತತ್ಕಿಮುತ್ತರವಾಕ್ಯಮ್? ಇತ್ಯತೋ 'ಅಕ್ಷರಾತ್ಪರತಃ ಪರಃ' ಇತ್ಯೇತತ್ ಪ್ರವೃತ್ತಮಿತಿ ಮತ್ವಾ 'ಪರೋ ವಿಷ್ಣುಃ' ಇತ್ಯತ್ರ ಲಿಙ್ಗಾನಿ ವಕ್ತುಂ ಶೇಷಪೂರ್ವಕಮಾಹ – ದಿವ್ಯೋ ಹೀತಿ ।।

ಭಾಷ್ಯದಲ್ಲಿ ''ಇತ್ಯುಕ್ತ್ವಾ ಪ್ರವೃತ್ತೇ ಉತ್ತರವಾಕ್ಯೇ'' ಎಂದು ಯೋಜನೆ ಮಾಡಿಕೊಳ್ಳಬೇಕು. ಇದರಿಂದ 'ಕ್ತ್ವಾ' ಪ್ರತ್ಯಯಾಂತ ಶ್ರುತಿಯು ಉಪಪನ್ನವಾಗುತ್ತದೆ. ಉತ್ತರವಾಕ್ಯ ಯಾವುದು? ಎಂಬ ಪ್ರಶ್ನೆಗೆ ''ಅಕ್ಷರಾತ್ಪರತಃ ಪರಃ'' ಎಂಬ ವಾಕ್ಯವು ಹೊರಟಿದೆ. ಈ ದೃಷ್ಟಿಯಿಂದ ವಿಷ್ಣುವೇ ಶ್ರೇಷ್ಠನಾಗಿದ್ದಾನೆ ಎಂಬ ವಿಷಯದಲ್ಲಿ ಲಿಂಗವನ್ನು ಹೇಳುವುದಕ್ಕಾಗಿ ಉಳಿದ ವಾಕ್ಯಭಾಗವನ್ನು ''ದಿವ್ಯೋ ಹಿ'' ಇತ್ಯಾದಿಯಾಗಿ ವಿವಕ್ಷಿಸುತ್ತಿದ್ದಾರೆ.

ಭಾವದೀಪಃ – ದಿವ್ಯೋऽತ್ಯದ್ಭುತಃ । ಅಮೂರ್ತೋ ನಿಯತಪರಿಚ್ಛಿನ್ನಪರಿಮಾಣರಹಿತಃ । ಕಿನ್ತು ಬಾಹ್ಯಃ ಆಭ್ಯನ್ತರಶ್ಚ । 'ಅಪ್ರಾಣೋ ह्यमನಾಃ' ಇತಿ ಷೋಡಶಕಲಾರಾಹಿತ್ಯಮುಚ್ಯತೇ । ಶುಭ್ರಃ ಶುದ್ಧ ಇತಿ ಕರ್ಮನಿರ್ಣಯಟೀಕೋಕ್ತಾರ್ಥೌ ಬೋಧ್ಯಃ।

ದಿವ್ಯಃ = ಅತ್ಯದ್ಭುತನಾದವನು, ಅಮೂರ್ತಃ = ನಿಯತವಾದ ಪರಿಚ್ಛಿನ್ನಪರಿಮಾಣ ಇಲ್ಲದವನು, ಹೊರತಾಗಿ ಹೊರಗಡೆ ಒಳಗಡೆ ಎಲ್ಲಾ ಕಡೆಯೂ ತುಂಬಿರುವವನು. ''ಅಪ್ರಾಣೋ ಹ್ಯಮನಾಃ'' ಎಂಬುದರಿಂದ ಷೋಡಶಕಲಾರಹಿತನೆಂದು ತಿಳಿಸಲಾಗಿದೆ. ''ಶುಭ್ರಃ'' ಎಂಬ ಪದಕ್ಕೆ ಕರ್ಮನಿರ್ಣಯ ಟೀಕೆಯಲ್ಲಿ ಹೇಳಿರುವ ರೀತಿಯಾಗಿ ಶುದ್ಧನಾದವನು ಎಂಬರ್ಥವನ್ನು ತಿಳಿಯಬೇಕು.

ಭಾವದೀಪಃ – ನಹೀತಿ ।। 'ಸೈವ ಹಿ ಸತ್ಯಾದಯಃ' ಇತ್ಯಾದೌ ತಸ್ಯೈಕಸ್ಯೈವ ಪರತ್ವೋಕ್ತೇಃ । 'ಸಾ ಕಾಷ್ಠಾ ಸಾ ಪರಾ ಗತಿಃ' ಇತ್ಯಾದೇರಿತಿ ಭಾವಃ । ಏತೇನ 'ಅಕ್ಷರಾತ್ಸಮ್ಭವತಿ' ಇತಿ ವಾಕ್ಯಸ್ಥಾಕ್ಷರಶಬ್ದಸ್ಯ ನಿರವಕಾಶತ್ವಮಿತ್ಯರ್ಥೋ ದರ್ಶಿತಃ ।। ಅತ ಇತಿ ।। ನಿರವಕಾಶಾಕ್ಷರಶಬ್ದಾದಿತ್ಯರ್ಥಃ । ಉಕ್ತೇತ್ಯನ್ತವಾಕ್ಯತಾತ್ಪರ್ಯಮ್ ''ಅದೃಶ್ಯತ್ವಾದಿ'' ಇತಿ ಅದ್ರೇಶ್ಯವಾಕ್ಯೇ ಅದೃಶ್ಯವಾಕ್ಯೇ ಚ ಶ್ರುತೇತ್ಯರ್ಥಃ ।।

ವಿಷ್ಣು ಒಬ್ಬನೇ ಸರ್ವೋತ್ತಮನೆಂದು ಹೇಳಲಾಗಿದೆ. ''ಸಾ ಕಾಷ್ಠಾ ಸಾ ಪರಾ ಗತಿಃ'' ಎಂಬುದೇ ಈ ವಿಷಯದಲ್ಲಿ ಪ್ರಮಾಣವಾಗಿದೆ. ಹೀಗೆ ಹೇಳಿದ್ದರಿಂದ ''ಅಕ್ಷರಾತ್ಸಂಭವತಿ'' ಎಂಬ ವಾಕ್ಯದಲ್ಲಿರುವ ''ಅಕ್ಷರ'' ಶಬ್ದಕ್ಕೆ ನಿರವಕಾಶತ್ವವನ್ನು ಸಮರ್ಥಿಸಿದಂತಾಯಿತು. ''ಅತಃ'' ಎಂಬ ಪದಕ್ಕೆ ನಿರವಕಾಶವಾದ ಅಕ್ಷರ ಶ್ರುತಿಯ ಬಲದಿಂದ ಎಂದರ್ಥ.

''ಉಕ್ತಃ'' ಎಂಬಲ್ಲಿಯ ತನಕದ ವಾಕ್ಯದ ತಾತ್ಪರ್ಯವನ್ನು ''ಅದೃಶ್ಯತ್ವಾದಿಗುಣಕಃ'' ಎಂಬುದರಿಂದ ಹೇಳಿದ್ದಾರೆ. ''ಯತ್ತದದ್ರೇಶ್ಯಂ'' ಎಂಬ ವಾಕ್ಯದಲ್ಲಿ ಮತ್ತು ಅದೃಶ್ಯತ್ವ ವಾಕ್ಯದಲ್ಲಿಯೂ ಶ್ರುತವಾಗಿದೆ ಎಂದರ್ಥ.

ಭಾವದೀಪಃ – ಪ್ರಕೃತೇಃ ಪ್ರಾಸಿರಿತಿ ಪ್ರಕೃತಿಪದಸ್ಯ ಜಡಪರತ್ವಂ ತಾವದುಪೇತ್ಯ ಭಾಷ್ಯಂ ವ್ಯಾಚಷ್ಟೇ – ಜಡೇತಿ ।। ಅಸ್ಯೇತಿ ।। ಅದೃಶ್ಯತ್ವಾದಿಗುಣಕಾಕ್ಷರಸ್ಯೇತ್ಯರ್ಥಃ ।

''ಪ್ರಕೃತೇಃ ಪ್ರಾಪ್ತಿಃ'' ಪ್ರಕೃತಿಗೂ ಸಹ ಅದೃಶ್ಯತ್ವಾದಿಗಳು ಉಪಪನ್ನವಾಗುತ್ತವೆ ಎಂಬಲ್ಲಿರುವ ಪ್ರಕೃತಿ ಪದಕ್ಕೆ ಜಡಪರತ್ವವನ್ನು ಅಂಗೀಕರಿಸಿ ಭಾಷ್ಯವನ್ನು ವ್ಯಾಖ್ಯಾನಿಸುತ್ತಿದ್ದಾರೆ ''ಜಡ'' ಇತ್ಯಾದಿಯಾಗಿ. ''ಅಸ್ಯ'' ಎಂಬ ಪದಕ್ಕೆ ಅದೃಶ್ಯತ್ವಾದಿ ಗುಣಗಳುಳ್ಳ ಅಕ್ಷರನಿಗೆ ಎಂದರ್ಥ.

ಭಾವದೀಪಃ – 'ಯಥೋರ್ಣನಾಭಿಃ' ಇತ್ಯತ್ರ ಸ್ಫುಟಮುಪಾದಾನತ್ವಾಪ್ರತೀತೇಃ ''ಪೃಥಿವ್ಯಾದಿ'' ಇತ್ಯುಕ್ತಮ್ । ಭಾಷ್ಯಟೀಕಯೋಃ 'ಯಥೋರ್ಣನಾಭಿಃ' ಇತ್ಯುಕ್ತಿಸ್ತು ಸಿದ್ಧಾನ್ತೇ ಉಪಯುಜ್ಯತ ಇತಿ ಭಾವಃ ।

''ಯಥೋರ್ಣನಾಭಃ'' ಎಂಬ ಶ್ರುತಿಯಲ್ಲಿ ಸ್ಪಷ್ಟವಾಗಿ ಉಪಾದಾನಕಾರಣತ್ವವು ಪ್ರತೀತವಾಗುತ್ತಿಲ್ಲ. ಆದಕ್ಕೋಸ್ಕರ ಪೃಥಿವೀ ದೃಷ್ಟಾಂತವನ್ನು ನೀಡಿರುತ್ತಾರೆ. ಭಾಷ್ಯ ಹಾಗೂ ಟೀಕೆಗಳಲ್ಲಿ ಊರ್ಣನಾಭ ದೃಷ್ಟಾಂತವನ್ನು ಏಕೆ ಉಲ್ಲೇಖಿಸಿದ್ದಾರೆ? ಎಂದರೆ ಸಿದ್ಧಾಂತಕ್ಕೆ ಉಪಯೋಗವಾಗುತ್ತದೆ ಎಂಬ ಅಭಿಪ್ರಾಯದಿಂದ.

ಭಾವದೀಪಃ – ಪ್ರಾಗುಕ್ತನ್ಯಾಯವಿವರಣಾನುರೋಧೇನಾಕ್ಷರಾದಿತ್ಯುತ್ತರಭಾಷ್ಯಂ ಲಿಙ್ಗನಿರವಕಾಶತೋತ್ಸ್ಯರ್ಥೆ ಪ್ರವೃತ್ತಮಿತಿ ಮತ್ವಾऽವತಾರಯತಿ – **ನಚೇತಿ** ।। ತಥಾಚ ವಿಷ್ಣಾವಪಿ ತದ್ಯುಕ್ತಮಿತಿ ಭಾವಃ ।

ಹಿಂದೆ ಉಲ್ಲೇಖಿಸಿದ ನ್ಯಾಯವಿವರಣಾನುಸಾರಿಯಾಗಿ ''ಅಕ್ಷರಾತ್'' ಎಂಬ ಮುಂದಿನ ಭಾಷ್ಯವು ಲಿಂಗಕ್ಕೆ ನಿರವಕಾಶತ್ವವನ್ನು ಸಮರ್ಥಿಸುವುದಕ್ಕಾಗಿ ಹೊರಟಿದೆ ಎಂಬ ಅಭಿಪ್ರಾಯದಿಂದ ''ನಚ'' ಇತ್ಯಾದಿಯಾಗಿ ಅವತಾರಿಕೆ ನೀಡುತ್ತಿದ್ದಾರೆ. ಆದ್ದರಿಂದ ವಿಷ್ಣುವಿನಲ್ಲಿಯೂ ಸಹ ಅಕ್ಷರ ಶ್ರುತಿಯು ಉಪಪನ್ನವಾಗುತ್ತದೆ ಎಂದು ತಿಳಿಯಬೇಕು.

ಭಾವದೀಪಃ – ದೃಷ್ಟಾನ್ತವೈಯರ್ಥ್ಯೇ ಸತ್ಯಪಿ ಇತ್ಯತಃ ಪರಮಿತಿ ಭಾಷ್ಯೋಕ್ತಂ ದೋಷಾನ್ತರಂ ವ್ಯನಕ್ತಿ – **ಇತ್ಯತೋ ವಾಕ್ಯಾದಿತಿ** ।। ತಚ್ಛಬ್ದಾರ್ಥಃ – **ತಸ್ಮಾದಿತಿ** ।। ಕಾರಣತ್ವೇನೋಕ್ತಾಕ್ಷರಾದಿತ್ಯರ್ಥಃ ।

ದೃಷ್ಟಾಂತವೈಯರ್ಥ್ಯದೋಷ ಇರುವಾಗಲೇ ಭಾಷ್ಯದಲ್ಲಿ ''ಪರಂ'' ಎಂಬ ಪದದಿಂದ ಹೇಳಲ್ಪಟ್ಟ ಮತ್ತೊಂದು ದೋಷವನ್ನು ''ಇತ್ಯತೋ ವಾಕ್ಯಾತ್'' ಎಂಬ ಟೀಕೆಯಿಂದ ವ್ಯಾಖ್ಯಾನಿಸುತ್ತಿದ್ದಾರೆ. ''ತತ್'' ಶಬ್ದದ ಅರ್ಥವೇ ''ತಸ್ಮಾತ್'' ಎಂದು ತಿಳಿಯಬೇಕು. ಅಂದರೆ ಜಗತ್ಕಾರಣವೆಂದು ಹೇಳಲ್ಪಟ್ಟ ಅಕ್ಷರನ-ದೆಸೆಯಿಂದ ಎಂದರ್ಥ.

ಭಾವದೀಪಃ – ವಿಷ್ಣೋಃ ಪರತ್ವೋಕ್ತೇಃ ತದವಧ್ಯಕ್ಷರತ್ವಮಯುಕ್ತಮ್ । ಜಡತ್ವೇ ತು ತತಃ ಪರತಃ ಶ್ರೀತತ್ತ್ವಾತ್ಪರೋ ವಿಷ್ಣುರಿತಿ ಯುಕ್ತಮಿತಿ ಉಪಾದಾನತ್ವಂ ಜಡಪ್ರಕೃತೇರೇವ ದೃಷ್ಟಾನ್ತವೈಯರ್ಥ್ಯೇ ಚ ನೇತಿ ಭಾವಃ ।

ಭಾವದೀಪಃ – ವಿಷ್ಣುವು ಸರ್ವೋತ್ತಮನಾದ್ದರಿಂದ ಅವನಿಗೆ ಅಕ್ಷರವು ಅವಧಿಯಾಗಿದೆ ಎಂದು ಹೇಳಿದ್ದು ತಪ್ಪು. ಜಡವಾದ ಪ್ರಕೃತಿಯು ಅವಧಿಭೂತವಾದ ಅಕ್ಷರವೆಂದು ಪರಿಗಣಿಸಿದರೆ ಅಂತಹ ಜಡವಾದ ಅಕ್ಷರದ ದಸೆಯಿಂದ ಲಕ್ಷ್ಮೀದೇವಿಯು ಶ್ರೇಷ್ಠಳಾಗಿದ್ದಾಳೆ. ಅವಳಿಗಿಂತಲೂ ವಿಷ್ಣು ಶ್ರೇಷ್ಠನಾಗಿದ್ದಾನೆ ಎಂದು ಹೇಳಬಹುದು. ಮತ್ತು ಜಡಪ್ರಕೃತಿಗೆ ಉಪಾದಾನಕಾರಣತ್ವವೂ ಸಹ ಇರುವುದರಿಂದ ದೃಷ್ಟಾಂತಕ್ಕೆ ವೈಯರ್ಥ್ಯ ದೋಷವು ಬರುವುದಿಲ್ಲ ಎಂದು ಅಭಿಪ್ರಾಯ.

ಭಾವದೀಪಃ – ಏತೇನ 'ಅಕ್ಷರಾತ್ಸಮ್ಭವತಿ' ಇತ್ಯಸ್ಯಾಃ ನಿರವಕಾಶತ್ವಮಿತಿ ನ್ಯಾಯವಿವರಣೋಕ್ತಮ್ ಇತ್ಯನ್ತಸ್ಯೋಪಾದಾನಸ್ಯ ನಿರವಕಾಶತ್ವಮಿತ್ಯರ್ಥಾನ್ತರಂ ದರ್ಶಿತಮ್ । ಕೂಟಸ್ಥೇತ್ಯಾದಿ ವ್ಯಾಚಷ್ಟೇ – ಚೇತನೇತಿ ।।

ಹೀಗೆ ಹೇಳಿದ್ದರಿಂದ "ಅಕ್ಷರಾತ್ಸಂಭವತಿ" ಎಂಬ ಶ್ರುತಿಗೆ ನಿರವಕಾಶತ್ವವನ್ನು ಉಪಾದಾನತ್ವರೂಪವಾದ ಲಿಂಗಕ್ಕೂ ಸಹ ನಿರವಕಾಶತ್ವವನ್ನು ತಿಳಿಸಿದಂತಾಯಿತೆಂಬ ಮತ್ತೊಂದು ವ್ಯಾಖ್ಯಾನವನ್ನು ತೋರಿಸಿದಂತಾಯಿತು. "ಕೂಟಸ್ಥ" ಇತ್ಯಾದಿಯಾಗಿ ಹೇಳಿದ್ದನ್ನೇ "ಚೇತನ" ಇತ್ಯಾದಿಯಾಗಿ ವ್ಯಾಖ್ಯಾನಿಸುತ್ತಿದ್ದಾರೆ.

ಭಾವದೀಪಃ – ನ್ಯಾಯವಿವರಣಮನುರುಧ್ಯ ಪೂರ್ವೋಕ್ತದಿಶಾ ಅಕ್ಷರಶಬ್ದನಿರವಕಾಶತ್ವೋಕ್ತಿ-ಪರತಯಾ ಪೂರ್ವಭಾಷ್ಯಮೇವ ಶಙ್ಕಾಪೂರ್ವಂ ಯೋಜಯತಿ – ನಚೇತಿ ।।

ನ್ಯಾಯವಿವರಣಕ್ಕೆ ಅನುಸಾರಿಯಾಗಿ ಹಿಂದೆ ಹೇಳಿದ ಪ್ರಕಾರ ಅಕ್ಷರ ಶಬ್ದವು ನಿರವಕಾಶವಾಗಿದೆ ಎಂಬ ಅರ್ಥದಲ್ಲಿಯೂ ಹಿಂದೆ ಹೇಳಿದ ಭಾಷ್ಯವನ್ನೇ ಶಂಕಾಪೂರ್ವಕವಾಗಿ ಯೋಜನೆ ಮಾಡುತ್ತಿದ್ದಾರೆ "ನಚ" ಇತ್ಯಾದಿ ವಾಕ್ಯದಿಂದ.

ಭಾವದೀಪಃ – ಅಕ್ಷರನ್ಯಾಯನಯೇನೇತಿ ಭಾವಃ । ಚಿತ್ಪ್ರಕೃತೌ ವಾ ಕಥಂ ಯುಕ್ತಮ್ ಅನ್ತರಾಲೇ ಕಸ್ಯಚಿದಭಾವೇನ ಪರತ ಇತ್ಯುಕ್ತ್ಯಯೋಗಾತ್ । ಅತ ಆಹ – ತಚ್ಚೇತಿ ।

ಅಕ್ಷರಾಧಿಕರಣದ ನ್ಯಾಯದಂತೆ ಇಲ್ಲಿಯೂ ಸಹ ತಿಳಿಯಬೇಕು. ಚಿತ್ಪ್ರಕೃತಿಯನ್ನು ಅಕ್ಷರಶಬ್ದ ಪ್ರತಿಪಾದ್ಯವೆಂದು ತಿಳಿದರೆ 'ಅಕ್ಷರಾತ್ ಪರತಃ ಪರತ್ವ'ವನ್ನು ವಿಷ್ಣುವಿಗೆ ಹೇಳಲು ಸಾಧ್ಯವಿಲ್ಲ. ಶ್ರೀತತ್ವಕ್ಕಿಂತ ಶ್ರೇಷ್ಠನಾದ ವಿಷ್ಣುವಿಗಿಂತ ಮತ್ತೊಂದು ಶ್ರೇಷ್ಠವಾದ ಪದಾರ್ಥವು ಇರುವುದಿಲ್ಲವಲ್ಲ? ಎಂಬ ಪ್ರಶ್ನೆಗೆ "ತಚ್ಚ" ಇತ್ಯಾದಿಯಾದ ಟೀಕೆಯಿಂದ ಉತ್ತರಿಸುತ್ತಿದ್ದಾರೆ.

ಭಾವದೀಪಃ – ಯುಜ್ಯತ ಇತಿ ।। ವಿಷ್ಣಾವವಿಕಾರಿತ್ವಾದತದಭಿಮಾನಿತ್ವಾಚ್ಚ ನ ಯುಜ್ಯತ ಇತಿ ಭಾವಃ । ಬ್ರಹ್ಮೇತ್ಯಾದಿ ವ್ಯಾಚಷ್ಟೇ – ಹಿರಣ್ಯಗರ್ಭಸ್ಯ ವೇತಿ ।। ತತ್ಪರತ ಇತಿ ।। ಪರಾವಧಿತ್ವೇನೋಕ್ತಾಕ್ಷರತ್ವಾಯೋಗಾನ್ನ ವಿಷ್ಣುಗ್ರಹಣಮಿತ್ಯರ್ಥಃ ।

ಭಾವದೀಪಃ – ವಿಷ್ಣುವಿನಲ್ಲಿ ವಿಕಾರವೂ ಇರುವುದಿಲ್ಲ ಅಭಿಮಾನಿತ್ವವೂ ಸಹ ಇರುವುದಿಲ್ಲವಾದ್ದರಿಂದ ಕೂಡುವುದಿಲ್ಲ ಎಂದು ತಿಳಿಯಬೇಕು. ಚತುರ್ಮುಖಬ್ರಹ್ಮಾದಿಗಳೂ ಸಹ ಅದೃಶ್ಯತ್ವಾದಿ ಗುಣಗುಳ್ಳವರಾಗಬಹುದೆಂದು "ಹಿರಣ್ಯಗರ್ಭಸ್ಯ ವಾ" ಇತ್ಯಾದಿ ವಾಕ್ಯಗಳಿಂದ ವ್ಯಾಖ್ಯಾನಿಸುತ್ತಿದ್ದಾರೆ. "ತತ್ ಪರತಃ" ಎಂದರೆ ಪರಕ್ಕೆ ಅವಧಿ ಎಂದು ಹೇಳಲ್ಪಟ್ಟ ವ್ಯಕ್ತಿಗೆ ಅಕ್ಷರತ್ವವು ಕೂಡುವುದಿಲ್ಲವಾದ್ದರಿಂದ ವಿಷ್ಣುವನ್ನು ಸ್ವೀಕರಿಸಲಾಗದು ಎಂದು ಅಭಿಪ್ರಾಯ.

ಭಾವದೀಪಃ – ವಿರಿಞ್ಚಸ್ಯಾಕ್ಷರತ್ವೇ ತು ಪರತಃ ಶ್ರೀತತ್ತ್ವಾತ್ ಪರೋ ವಿಷ್ಣುರಿತಿ ಭಾವಃ । ತದುಕ್ತಂ ತತ್ತ್ವಪ್ರದೀಪೇ – ತಸ್ಮಾತ್ ಪರಸ್ಯಾಃ ಪ್ರಕೃತೇಃ ಪರಸ್ಯ ಹರೇರಭಿಧಾನಾದಿತಿ ।

ಒಂದು ವೇಳೆ ಚತುರ್ಮುಖಬ್ರಹ್ಮದೇವರೇ ಅಕ್ಷರರಾದಲ್ಲಿ ಪರಶಬ್ದ ವಾಚ್ಯಳಾದ ಲಕ್ಷ್ಮೀದೇವಿಗಿಂತಲೂ ವಿಷ್ಣು ಪರನಾಗಿದ್ದಾನೆಂದು ತಿಳಿಯಬೇಕು. ಇದನ್ನೇ ತತ್ತ್ವಪ್ರದೀಪದಲ್ಲಿ - "ತಸ್ಮಾತ್ ಪರಸ್ಯಾಃ ಪಕೃತೇಃ ಪರಸ್ಯ ಹರೇರಭಿಧಾನಾತ್" - "ಚತುರ್ಮುಖಬ್ರಹ್ಮನಿಗಿಂತಲೂ ಶ್ರೇಷ್ಠಳಾದ ಲಕ್ಷ್ಮೀದೇವಿಗಿಂತಲೂ ಕೂಡ ಶ್ರೀಹರಿಯು ಶ್ರೇಷ್ಠನೆಂದು ಹೇಳಿರುವುದರಿಂದ" ಎಂದು ವ್ಯಾಖ್ಯಾನಿಸಿದ್ದಾರೆ.

ಭಾವದೀಪಃ – ಈಶಪದಪ್ರಾಪ್ತೋಽಪಿ ನ ರುದ್ರ ಇತ್ಯಗ್ರೇ ಭಾಷಣಾನ್ನಿರವಕಾಶತ್ವೋಕ್ತಿಸೌಕರ್ಯಾಯ ಅತ್ರೈವಾಹ – ರುದ್ರಸ್ಯೇತಿ ।। ವಿಷ್ಣಾವಪೀತಿ ।। ಅನ್ತರ್ನಯನ್ಯಾಯೇನೇತಿ ವಾ ಶಬ್ದಾದೇವೇತ್ಯತ್ರೇಶಶಬ್ದಪರ್ಯಾಯೇಶಾನಶಬ್ದಸ್ಯ ಸಮನ್ವೇಷಮಾಣತ್ವಾದ್ಧೇತಿ ಭಾವಃ ।

ಈಶಪದವೂ ಸಹ ರುದ್ರನನ್ನು ಪ್ರತಿಪಾದಿಸುವುದಿಲ್ಲವೆಂದು ಮುಂದೆ ಸಮರ್ಥಿಸುತ್ತೇವೆ. ಪ್ರಕೃತ ನಿರವಕಾಶತ್ವವನ್ನು ತಿಳಿಸುವುದಕ್ಕಾಗಿ ಮುಂದೆ ಹೇಳುವ ವಿಷಯವನ್ನೇ ಇಲ್ಲಿ "ರುದ್ರಸ್ಯ" ಇತ್ಯಾದಿಯಾಗಿ ಹೇಳಿದ್ದಾರೆ. ಅಂತರಾಧಿಕರಣದ ನ್ಯಾಯದಿಂದ ಮತ್ತು "ಶಬ್ದಾದೇವ" ಎಂಬ ಸೂತ್ರದಿಂದ ಈಶಶಬ್ದಕ್ಕೆ ಪರ್ಯಾಯಶಬ್ದವೆನಿಸಿದ ಈಶಾನಶಬ್ದವನ್ನು ಸಮನ್ವಯ ಮಾಡುತ್ತಾರೆಂದು ತಿಳಿಯಬೇಕು.

ಭಾವದೀಪಃ – ತತ್ಪರತ ಇತಿ ।। ರುದ್ರಸ್ಯಾಕ್ಷರತ್ವೇ ತು ಪರತಶ್ಚತುರ್ಮುಖಾತ್ಪರೋ ವಿಷ್ಣುರಿತಿ ಯುಕ್ತಮ್ । ಅಸ್ಮಿನ್ ಪಕ್ಷೇ ಶ್ರೀತತ್ತ್ವಮೀಶ್ವರಕೋಟಿನಿವಿಷ್ಟಮಿತಿ ಭಾವಃ । ಭಾಷ್ಯಂ ವ್ಯುತ್ಕ್ರಮೇಣ ವ್ಯಾಚಷ್ಟೇ – ಅದೃಶ್ಯತ್ವೇತಿ ।। ತತ್ತ್ವಿತ್ಯನುವೃತ್ತಸ್ಯಾರ್ಥಃ – ವಿಷ್ಣುರೇವೇತಿ ।।

ರುದ್ರನು ಅಕ್ಷರನಾದಲ್ಲಿ ಅವನಿಗಿಂತಲೂ ಶ್ರೇಷ್ಠನಾದ ಚತುರ್ಮುಖಬ್ರಹ್ಮನಿಗಿಂತಲೂ ಶ್ರೇಷ್ಠನಾದವನು ವಿಷ್ಣುವೆಂದು ಹೇಳಬಹುದು. ಆದರೆ ಈ ಪಕ್ಷದಲ್ಲಿ ಈಶ್ವರ ಕೋಟಿಯಲ್ಲಿ ಶ್ರೀತತ್ತ್ವವೂ ಸಹ ಸೇರಿರುತ್ತದೆ ಎಂದು ಅಭಿಪ್ರಾಯ. ಭಾಷ್ಯವನ್ನು ವಿಪರೀತಕ್ರಮದಿಂದಲೂ ವ್ಯಾಖ್ಯಾನಿಸುತ್ತಿದ್ದಾರೆ "ಅದೃಶ್ಯತ್ವ" ಇತ್ಯಾದಿಯಾಗಿ. ಅನುವೃತ್ತವಾದ "ತತ್ತು" ಎಂಬ ಪದದ ಅರ್ಥವನ್ನೇ "ವಿಷ್ಣುರೇವ" ಎಂದಿದ್ದಾರೆ.

ಭಾವದೀಪಃ – ಹೇತ್ವುಕ್ತಿಪರಂ ವಾಕ್ಯಂ ದರ್ಶಯಂಸ್ತದ್ಧರ್ಮತ್ವೇನಾವಗತಪರವಿಚೇತಿ ಭಾಷ್ಯಮಾಕಾಙ್ಕ್ಷಾನುರೋಧೇನ ವಿಚ್ಛಿದ್ಯ ವ್ಯಾಕುರ್ವನ್ ಸೂತ್ರಖಣ್ಡಾರ್ಥಮಾಹ – ಅಥ ಪರೇತಿ ।।

ಹೇತುವನ್ನು ಸಮರ್ಥಿಸುವ ವಾಕ್ಯವನ್ನು ತೋರಿಸುತ್ತಾ ವಿಷ್ಣುವಿನ ಧರ್ಮವೆಂದು ತಿಳಿಸುತ್ತಿರುವ "ಪರವಿದ್ಯಾ" ಇತ್ಯಾದಿ ಭಾಷ್ಯವನ್ನು ಆಕಾಂಕ್ಷೆಗೆ ಅನುಸಾರಿಯಾಗಿ ತುಂಡರಿಸಿ ವ್ಯಾಖ್ಯಾನಿಸುತ್ತಿದ್ದಾರೆ. ಮತ್ತು ಸೂತ್ರದ ಒಂದು ಭಾಗದ ವ್ಯಾಖ್ಯಾನವನ್ನೂ ಸಹ ಮಾಡುತ್ತಿದ್ದಾರೆ "ಅಥ ಪರಃ" ಇತ್ಯಾದಿ ಟೀಕೆಯಿಂದ.

ಭಾವದೀಪಃ – ತಮೇವೇತ್ಯಾದೇರರ್ಥಃ – ಶ್ರುತೀತಿ ।। ಶ್ರುತಿ ಚ ಸ್ಮೃತಿಶ್ಚ ತಾಭಿರಿತ್ಯರ್ಥಃ ।। ಹರೇರ್ಜ್ಞಾನಮಿತಿ ।। ಅನೇನ ತನ್ಮತಿರಿತಿ ಪರಾಮರ್ಶಪ್ರದರ್ಶನಾಯ ಪೂರ್ವಪಾದೋಕ್ತಿರಿತಿ ಸೂಚಿತಮ್ ।

"ತಮೇವ" ಇತ್ಯಾದಿ ಶ್ರುತಿಯ ಅರ್ಥವನ್ನೇ "ಶ್ರುತಿ" ಎಂದು ಹೇಳಿದ್ದಾರೆ. ಅಂದರೆ ಶ್ರುತಿ ಹಾಗೂ ಸ್ಮೃತಿಗಳಿಂದ ಎಂದರ್ಥ. ಶ್ರೀಹರಿಯ ಜ್ಞಾನವೆಂದು ಅನ್ವಯ. ಹೀಗೆ ಹೇಳಿದ್ದರಿಂದ "ತನ್ಮತಿಃ" ಎಂಬಲ್ಲಿರುವ "ತತ್" ಪದದಿಂದ ಯಾವುದನ್ನು ಪರಾಮರ್ಶಿಸಬೇಕೆಂಬುದನ್ನು ತಿಳಿಸುವುದಕ್ಕಾಗಿ ಪೂರ್ವಪಾದವನ್ನೂ ಸಹ ಉಲ್ಲೇಖಿಸಿದ್ದಾರೆಂದು ಸೂಚಿಸಿದಂತಾಯಿತು.

ಭಾವದೀಪಃ – ಪರಾಪರವಿದ್ಯಯೋರ್ಭೇದಭ್ರಾನ್ತಿಂ ನಿರಸ್ಯನ್ ಪರಾಪರವಿಷಯತ್ವರೂಪೋಪಾಧಿಕೃತಭೇದಮಾಹ – ಯದೇತಿ ।। ಅನ್ಯೇತಿ ।। ಕರ್ಮಾದಿವಿಷಯತಯಾ ।। ತದುಕ್ತಮಿತಿ ।। ಆಥರ್ವಣಭಾಷ್ಯ ಇತ್ಯರ್ಥಃ ।

ಪರವಿದ್ಯೆ ಮತ್ತು ಅಪರವಿದ್ಯೆಗಳು ಭಿನ್ನವಿಷಯಕವಾಗಿದೆ ಎಂಬ ಭ್ರಾಂತಿಯನ್ನು ನಿರಾಕರಿಸುತ್ತಾ ಪರವಿಷಯತ್ವ ಹಾಗೂ ಅಪರವಿಷಯತ್ವ ಎಂಬ ಉಪಾಧಿಗಳ ಭೇದವಷ್ಟೇ ಇರುತ್ತದೆ ಎಂದು "ಯದಾ" ಇತ್ಯಾದಿ ವಾಕ್ಯದಿಂದ ಸಮರ್ಥಿಸಿದ್ದಾರೆ. "ಅನ್ಯ" ಎಂದರೆ ಕರ್ಮ ಮೊದಲಾದವುಗಳನ್ನು ವಿಷಯಿಕರಿಸುವುದರಿಂದ ಎಂದರ್ಥ. "ತದುಕ್ತಂ" ಎಂದರೆ ಆಥರ್ವಣಭಾಷ್ಯದಲ್ಲಿ ಹೇಳಿದ್ದಾರೆಂದು ಅರ್ಥ.

ಭಾವದೀಪಃ – ಯಥೈಕಮೇವ ಕರ್ಮಾಭಿಸನ್ಧಿಭೇದಾತ್ ಪ್ರವೃತ್ತಂ ನಿವೃತ್ತಮಿತಿ ಚೋಚ್ಯತೇ, ತಥೇತಿ ಭಾವಃ । ಏತೇನ ಋಗಾದ್ಯಪರವಿದ್ಯಾವಿಷಯೇ ಶಾಸ್ತ್ರಯೋನೌ ಹರೌ ನ ತದ್ವಿರುದ್ಧಪರವಿದ್ಯಾವಿಷಯತ್ವಮಿತಿ ನಿರಸ್ತಮ್ ।

ಯಾವ ರೀತಿಯಾಗಿ ಒಂದೇ ಕರ್ಮವು ಬೇರೆ ಬೇರೆ ಅನುಸಂಧಾನದಿಂದ ಪ್ರವೃತ್ತಕರ್ಮ ಹಾಗೂ ನಿವೃತ್ತಕರ್ಮವೆಂದು ಪ್ರಭೇದವನ್ನು ತಾಳುತ್ತದೊ, ಅದೇ ರೀತಿಯಾಗಿ ಒಂದೇ ವಿದ್ಯೆ ಬೇರೆ ಬೇರೆ ಉಪಾದಿಗಳಿಂದ ಪ್ರಭೇದವನ್ನು ಹೊಂದಿದೆ ಎಂದು ತಿಳಿಯಬೇಕು. ಹೀಗೆ ಹೇಳಿದ್ದರಿಂದ ಋಗ್ವೇದವೇ ಮೊದಲಾದ ಅಪರವಿದ್ಯೆಗೆ ವಿಷಯನಾದ ಶ್ರೀಹರಿಯಲ್ಲಿ ತದ್ವಿರುದ್ಧವಾದ ಪರವಿದ್ಯಾವಿಷಯತ್ವವು ಬರುವುದಿಲ್ಲವೆಂಬ ಆಕ್ಷೇಪವನ್ನು ನಿರಾಕರಿಸಿದಂತಾಯಿತು.

ಭಾವದೀಪಃ – ಭಾಷ್ಯೇ ಯಾನ್ಯಙ್ಗಾನೀತಿ ಶಿಕ್ಷಾದೀನಿ ಷಡಙ್ಗಾನ್ಯುಚ್ಯನ್ತೇ । ಆಯುರ್ವೇದೋ ಧನುರ್ವೇದೋ ಗಾನ್ಧರ್ವಃ ಸ್ಥಾಪತ್ಯಂ ಚೋಪಾಙ್ಗಾನಿ ಶಿಷ್ಟಾ ಕಲಾ ವಿದ್ಯಾಃ ಪ್ರತ್ಯಙ್ಗಾನೀತಿ ತತ್ತ್ವಪ್ರದೀಪೋಕ್ತಾರ್ಥಃ ।। ೨೧ ।।

ಭಾಷ್ಯದಲ್ಲಿ 'ಅಂಗಾನಿ' ಎಂಬ ಪದದಿಂದ ಶಿಕ್ಷಾ, ವ್ಯಾಕರಣ ಮೊದಲಾದ ಷಡಂಗಗಳನ್ನು, ಆರ್ಯುವೇದ, ಧನುರ್ವೇದ, ಗಾಂಧರ್ವ, ಸ್ಥಾಪತ್ಯ ಮೊದಲಾದ ಉಪಾಂಗಗಳನ್ನು, ಉಳಿದ ಕಲೆ, ವಿದ್ಯೆ ಮೊದಲಾದ ಪ್ರತ್ಯಂಗಗಳನ್ನು ಸಂಗ್ರಹಿಸಿದ್ದಾರೆಂದು ತತ್ತ್ವಪ್ರದೀಪದಲ್ಲಿ ವ್ಯಾಖ್ಯಾನಿಸಿದ್ದಾರೆ.

ವಾಕ್ಯಾರ್ಥಮಞ್ಜರಿ –

ॐ ಅದೃಶ್ಯತ್ವಾದಿಗುಣಕೋ ಧರ್ಮೋಕ್ತೇಃ ॐ

ಅಥೇತಿ ।। ಅಥಾಪರವಿದ್ಯಾನಿರೂಪಣಾನನ್ತರಂ ಪರಾಪರವಿದ್ಯಾ ನಿರೂಪ್ಯತ ಇತಿ ಶೇಷಃ । ಯಯಾ ವಿದ್ಯಯಾ ತತ್ ಪ್ರಸಿದ್ಧಮಕ್ಷರಮ್ ಅಕ್ಷರಶಬ್ದಾಭಿಧೇಯಂ ಬ್ರಹ್ಮ ಅಧಿ ಅಧಿಕತ್ವೇನ ಗಮ್ಯತೇ ಅವಗಮ್ಯತೇ ಸಾ ಪರವಿದ್ಯೇತ್ಯರ್ಥಃ । ಪ್ರಸಿದ್ಧಾಕ್ಷರವ್ಯಾವೃ...ತತ್ಸ್ವರೂಪಂ ನಿರೂಪಯತಿ – **ಯತ್ತದದ್ರೇಶ್ಯಮಿತ್ಯಾದಿನಾ ।।** ಯತ್ಪೂರ್ವೋಕ್ತಮಕ್ಷರಮದ್ರೇಶ್ಯಮದೃಶ್ಯಮ್ ಅಗ್ರಾಹ್ಯಂ ಕೇನಾಪಿ ಗ್ರಹೀತುಮಶಕ್ಯಮ್ । ಅಗೋತ್ರಂ ಭಾರದ್ವಾಜಾದಿಗೋತ್ರರಹಿತಮ್ । ಅವರ್ಣಂ ಪ್ರಾಕೃತವರ್ಣರಹಿತಂ ಬ್ರಾಹ್ಮಣಾದಿವರ್ಣರಹಿತಂ ವಾ । ಅಚಕ್ಷುಃಶ್ರೋತ್ರಂ ಚಕ್ಷುಃಶ್ರೋತ್ರೋಪಲಕ್ಷಿತಪ್ರಾಕೃತಜ್ಞಾನೇನ್ದ್ರಿಯರಹಿತಮ್ । ಅಪಾಣಿಪಾದಮ್ ಪಾಣಿಪಾದೋಪಲಕ್ಷಿತಪ್ರಾಕೃತಕಮನ್ದ್ರಿಯರಹಿತಮ್ । ನಿತ್ಯಸ್ವರೂಪತೋ ದೇಹತಶ್ಚಾವಿನಾಶಿ । ವಿಭುಂ ಸಮರ್ಥಮ್ । ಸರ್ವಗತಂ ಸರ್ವತ್ರ ವ್ಯಾಪ್ತಮ್ । ಸುಸೂಕ್ಷ್ಮಂ ಜೀವಾದಪ್ಯತಿಶಯೇನ ಸೂಕ್ಷ್ಮಮ್ । ಅವ್ಯಯಂ ಹ್ರಾಸರಹಿತಮ್ । ನನ್ವೇವಮಕ್ಷರಸ್ಯಾದೃಶ್ಯತ್ವೇऽಧಿಗಮ್ಯತ ಇತಿ ದೃಶ್ಯತ್ವೋಕ್ತಿಃ ಕಥಮಿತ್ಯತ ಆಹ – **ಯದ್ಭೂತಯೋನಿಮಿತಿ ।।** ಭೂತಯೋನಿಂ ಜಗತ್ಕಾರಣಂ ಯದಕ್ಷರಂ ತದ್ಧೀರಾಃ ಪಂಡಿತಾಃ ಪರಿಪಶ್ಯನ್ತಿ । ಸ್ವಯೋಗ್ಯತಾನುಸಾರೇಣ ಜಾನನ್ತಿ । ಅನೇನಾಧೀರಾಣಾಮದೃಶ್ಯಮಿತ್ಯುಕ್ತಂ ಭವತಿ । ಲೋಕೇ ಪಿತುರನ್ಯಸ್ಯೈವಮಾರಕತ್ವದರ್ಶನಾನ್ನ ತಥೇಹಾನ್ಯಸ್ಯ ಸಂಹರ್ತೃತ್ವಂ ಮನ್ತವ್ಯಮಿತಿ ಭಾವೇನ ಸ್ರಷ್ಟೃತ್ವಂ ಸಂಹರ್ತೃತ್ವಂ ಚ ಸದೃಷ್ಟಾನ್ತಮುಪಪಾದಯತಿ – **ಯಥೇತಿ ।।** ಸದೃಷ್ಟಾನ್ತೋ ಯಥಾ ಊರ್ಣನಾಭಿಸ್ತನ್ತುವಾಯಕಃ ಸ್ವಭುಕ್ತಮನ್ನಾದಿಕಂ ತನ್ತ್ವಾದ್ಯಾಕಾರೇಣ ಸೃಜತೇ ಪುನರ್ಗೃಹ್ಣತೇ ಸಂಹರತಿ ಚ ತಥाऽಕ್ಷರಶಬ್ದೋಕ್ತೋ ಭಗವಾನಪಿ ಪೂರ್ವಕಲ್ಪೇ ಭುಕ್ತಂ ಜಗತ್ ಸೃಜತೇ ಸಂಹರತಿ ಚ, ಕಿಮನುಸೃತ್ಯ ಸೃಜತ ಇತ್ಯತೋ ದೃಷ್ಟಾನ್ತೇನಾಹ – **ಯಥೇತಿ ।।** ಯಥಾ ಪೃಥಿವೀ ಶಾಲ್ಯಾದಿನಾನಾಬೀಜಾನ್ಯಪೇಕ್ಷ್ಯ ತತ್ತದಙ್ಕುರಾನ್ ಜನಯತಿ, ತಥಾ ಚೇತನಾನಾಂ ವಿವಿಧಕರ್ಮಾಣ್ಯಪೇಕ್ಷ್ಯ, ತತ್ ಸೃಜತೀತ್ಯುಕ್ತಂ ಭವತಿ । ಕುಲಾಲವನ್ನಾಕ್ಷರಸ್ಯ ಕ್ಲೇಶೇನ ಸ್ರಷ್ಟೃತ್ವಮ್ ಇತಿ ಸದೃಷ್ಟಾನ್ತಮಾಹ – **ಯಥೇತಿ ।।** ಸತಶ್ಚೇತನಾಧಿಷ್ಠಿತಾತ್ ಪುರುಷದೇಹಾಚ್ಚಿರಸಿ ವಿದ್ಯಮಾನಾಃ ಕೇಶಾಃ ದೇಹೇ ವಿದ್ಯಮಾನಾನಿ ಲೋಮಾನಿ ಅನಾಯಾಸೇನ ಭವನ್ತಿ । ತಥाऽಕ್ಷರಾದಿಹಾಸ್ವತನ್ತ್ರವರ್ಗೇ ವಿಶ್ವಂ ಸರ್ವಮನಾಯಾಸೇನ ಭವತ್ಯುತ್ಪದ್ಯತ ಇತ್ಯರ್ಥಃ । ಪ್ರಕೃತ್ಯಾದೀನಾಮಪ್ಯದೃಶ್ಯತ್ವಂ ವಕ್ಷ್ಯಾಮೀತಿ ತಾವಚ್ಛಬ್ದಃ ।। **ದಿವ್ಯ ಇತಿ ।।** ದಿವ್ಯोऽಲೌಕಿಕಃ । ಅಮೂರ್ತಃ ಅಪರಿಚ್ಛಿನ್ನಪರಿಮಾಣಃ ಪುರುಷಃ

ಪೂರ್ಣಷಡ್ಗುಣಃ ಬಾಹ್ಯಾಭ್ಯನ್ತರಃ ಬಹಿರನ್ತಶ್ಚ ನಿಯಾಮಕತಯಾ ಸ್ಥಿತಃ ಅಜಃ ಉತ್ಪತ್ತಿರಹಿತಃ ।। **ಅಪ್ರಾಣೋ ಹ್ಯಮನಾ ಇತಿ** ।। ಷೋಡಶಕಲಾರಹಿತಃ ಶುಭ್ರಃ ಅಕ್ಷರಾಜಡಪ್ರಕೃತೇಃ ಪರಾಚ್ಛೀತತ್ತ್ವಾತ್ಪರಃ ಉತ್ತಮ ಇತ್ಯರ್ಥಃ ।। ॐ ಅದೃಶ್ಯತ್ವಾದಿಗುಣಕೋ ಧರ್ಮೋಕ್ತೇಃ ॐ ಅದೃಶ್ಯತ್ವಮ್ ಆದಿ ಯೇಷಾಮ್ ಅಗ್ರಾಹ್ಯತ್ವಾದೀನಾಂ ತೇऽದೃಶ್ಯತ್ವಾದಯಃ ಅದೃಶ್ಯತ್ವಾದಯೋ ಗುಣಾ ಯಸ್ಯಾಸೌ ಅದೃಶ್ಯತ್ವಾದಿಗುಣಾಃ ಸ ಏವಾದೃಶ್ಯತ್ವಾದಿಗುಣಕಃ ಸ ಚ ವಿಷ್ಣುರೇವ ।। **ಅಥ ಪರೇತಿ** ।। ಋಗಾದಿಪರವಿದ್ಯಾವಿಷಯತ್ವರೂಪ ತದ್ಧರ್ಮಾಭಿಧಾನಾದಿತ್ಯರ್ಥಃ । ವಾಕ್ಯಸ್ಯ 'ಯತ್ತದದ್ರೇಶ್ಯಮ್' ಇತ್ಯಾದೇಃ ।। **ನಚೇತಿ** ।। ತಥಾಚ ವಿಷ್ಣುಗ್ರಹಣೋಪಪತ್ತೇರಿತಿ ಭಾವಃ । ಇತ್ಯತ ಇತ್ಯನುವಾದಸ್ತಸ್ಮಾತ್ಪರತಃ ಅದೃಶ್ಯತ್ವಾದಿಗುಣಕಾಕ್ಷರಾತ್ಪರತ, ಏವಮಗ್ರೇऽಪಿ ।। **ಸಾಮಾನಾಧಿಕರಣ್ಯೇನೇತಿ** ।। ಪರತಃ ಬ್ರಹ್ಮಾದ್ಯುತ್ತಮಾದಕ್ಷರಾದಿತ್ಯಕ್ಷರಪರಶಬ್ದಯೋಶ್ಚಿತ್ಪ್ರಕೃತಿರೂಪೈಕಾರ್ಥಪ್ರತಿಪಾದಕತ್ವೇನೇತ್ಯರ್ಥಃ ।। **ಸ ಬ್ರಹ್ಮೇತಿ** ।। 'ಸ ಬ್ರಹ್ಮವಿದ್ಯಾಮಥರ್ವಾಯ ಜ್ಯೇಷ್ಠಪುತ್ರಾಯ ಪ್ರಾಹ' ಇತ್ಯತ್ರೇತ್ಯರ್ಥಃ ।। **ಕರ್ತಾರಮಿತಿ** ।। 'ಕರ್ತಾರಮೀಶಂ ಪುರುಷಂ ಬ್ರಹ್ಮಯೋನಿಮ್' ಇತ್ಯತ್ರೇತ್ಯರ್ಥಃ । ಶ್ರುತ್ಯಾದೌ ಪರವಿದ್ಯಾವಿಷಯತ್ವಪರಶಬ್ದಾಭಾವಾತ್ಕಥಂ ತದುದಾಹರಣಮಿತ್ಯತಸ್ತದುಪಪಾದಯತಿ – **ತಮೇವೇತ್ಯಾದಿನಾ** ।। ಭಾಷ್ಯೇऽಙ್ಗಾನಿ ಶಿಕ್ಷಾದೀನಿ ಷಟ್ ಉಪಾಙ್ಗಾನಿ ಆಯುರ್ವೇದಾದೀನಿ ಪञ್ಚ ಶಿಷ್ಟಾಃ ಕಲಾವಿದ್ಯಾಃ ಪ್ರತ್ಯಙ್ಗಾನೀತಿ ತತ್ತ್ವಪ್ರದೀಪಾನುಸಾರೇಣ ಧ್ಯೇಯಮ್ ।। **ಅನ್ಯೇತಿ** ।। ಕರ್ಮಾದೀತ್ಯರ್ಥಃ । ತದುಕ್ತಮಾಥರ್ವಣಭಾಷ್ಯೇ, ಏತದರ್ಥಞ್ಚ ಬ್ರಹ್ಮಮೀಮಾಂಸಾಶಾಸ್ತ್ರವ್ಯುತ್ಪಾದಿತನ್ಯಾಯಾನುಪಕೃತವೇದಾದಯೋ ವಿಷ್ಣೋರೇವ ವಾಚಕಾಸ್ತದುಪಕೃತಾಸ್ತದ್ವಾಚಕಾ ಭವನ್ತೀತಿ ಸುಧಾನುಸಾರೇಣ ಧ್ಯೇಯಃ ।। ೨೧ ।।

ಬ್ರಹ್ಮಮೀಮಾಂಸಾಶಾಸ್ತ್ರ

ಸರ್ವಜ್ಞರಲ್ಲದ ಬ್ರಹ್ಮಾದಿಗಳು ಅದೃಶ್ಯರಲ್ಲ

ಸೂ – ॐ ।। ವಿಶೇಷಣಭೇದವ್ಯಪದೇಶಾಭ್ಯಾಂ ಚ ನೇತರೌ ।। ।। ॐ ।। ೨೨ ।।

ಸೂತ್ರಾರ್ಥ -- ಬ್ರಹ್ಮರುದ್ರಾದಿಗಳಾಗಲೀ ಜಡಪ್ರಕೃತಿಯಾಗಲೀ ಅದೃಶ್ಯತ್ವಾದಿ ಗುಣವುಳ್ಳವರಾಗುವುದಿಲ್ಲ. ಏಕೆಂದರೆ ಸರ್ವಜ್ಞತ್ವ ಮೊದಲಾದ ವಿಶೇಷಣಗಳನ್ನು ಅಕ್ಷರಕ್ಕಿಂತ ಭೇದವನ್ನು ಹೇಳಿರುವುದರಿಂದ.

ಶ್ರೀಜಗನ್ನಾಥಯತಿಗಳಿಂದ ರಚಿಸಲ್ಪಟ್ಟ

ಸೂತ್ರದೀಪಿಕಾ

ಸೂತ್ರದೀಪಿಕಾ – ಚಃ ಸಮುಚ್ಚಯೇ । ಇತರೌ ಪ್ರಕೃತಿದ್ವಯಮ್ । ವಿರಿಞ್ಚರುದ್ರೌ ಚ ನಾದೃಶ್ಯತ್ವಾದಿಗುಣಕೌ । ಕುತಃ? ವಿಶೇಷಣಭೇದವ್ಯಪದೇಶಾತ್ । ಪ್ರತಿಜ್ಞಾದ್ವಯೇ ಕ್ರಮೇಣೈಕೈಕಹೇತ್ವನ್ವಯಃ । ಸಾರ್ವಜ್ಞಾದಿವಿಶೇಷಣಾತ್ । 'ತಸ್ಮಾದೇತತ್' ಇತಿ ಅದೃಶ್ಯತ್ವಾದಿಗುಣಕಾಕ್ಷರಾದ್ ವಿರಿಞ್ಚರುದ್ರಯೋರ್ಭೇದೋಕ್ತೇಶ್ಚೇತ್ಯರ್ಥಃ ।

ಅರ್ಥ -ಚಶಬ್ದವು ಸಮುಚ್ಚಯಾರ್ಥದಲ್ಲಿದೆ. ಇತರೌ = ಬ್ರಹ್ಮ, ರುದ್ರರು ಅಥವಾ ಜಡಪ್ರಕೃತಿಯು, ನ = ಅದೃಶ್ಯತ್ವಾದಿಗುಣಗಳುಳ್ಳವರಲ್ಲ. ಏಕೆಂದರೆ ಚ = ಧರ್ಮಗಳನ್ನು ಹೇಳಿರುವುದರಿಂದ, ಮಾತ್ರವಲ್ಲ, ವಿಶೇಷಣಭೇದವ್ಯಪದೇಶಾಭ್ಯಾಮ್ = ಯಃ ಸರ್ವಜ್ಞಃ ಎಂದು ಸರ್ವಜ್ಞತ್ವ ಮೊದಲಾದ ವಿಶೇಷಣಗಳನ್ನು ಮತ್ತು 'ತಸ್ಮಾದೇತದ್ ಬ್ರಹ್ಮ' ಎಂಬುದಾಗಿ ಬ್ರಹ್ಮ, ರುದ್ರರನ್ನು ಅದೃಶ್ಯತ್ವಾದಿ ಗುಣವುಳ್ಳ ಅಕ್ಷರನಾಮಕ ಪರಮಾತ್ಮನಿಂದ ಭಿನ್ನರೆಂದು ಹೇಳಿರುವುದರಿಂದ.

ಶ್ರೀಮದಾನನ್ದತೀರ್ಥಭಗವತ್ಪಾದಾಚಾರ್ಯವಿರಚಿತ-

ಬ್ರಹ್ಮಸೂತ್ರಭಾಷ್ಯಮ್

ಭಾಷ್ಯಮ್ – ಸೂ – ॐ ॥ ವಿಶೇಷಣಭೇದವ್ಯಪದೇಶಾಭ್ಯಾಂ ಚ ನೇತರೌ ॥ ॥ ॐ ॥ ೨೨ ॥ 'ಯಃ ಸರ್ವಜ್ಞಃ ಸರ್ವವಿದ್ ಯಸ್ಯ ಜ್ಞಾನಮಯಂ ತಪಃ' (ಮುಂ. ೧-೧-೯) ಇತಿ ವಿಶೇಷಣಾನ್ನ ಪ್ರಕೃತಿಃ । 'ತಸ್ಮಾದೇತದ್ ಬ್ರಹ್ಮ ನಾಮ ರೂಪಮನ್ನಂ ಚ ಜಾಯತೇ'(ಮುಂ. ೧-೧-೯) ಇತಿ ಭೇದವ್ಯಪದೇಶಾನ್ನ ವಿರಿಞ್ಚಿಃ ।

ಅನುವಾದ - ಮಾಂಡೂಕ್ಯೋಪನಿಷತ್ತಿನಲ್ಲಿ 'ಯಾರು ಎಲ್ಲವನ್ನೂ ತಿಳಿದು ವಿಶೇಷಾಕಾರವಾಗಿಯೂ ತಿಳಿದಿದ್ದಾನೋ, ಯಾರ ಆಲೋಚನೆಯು ವಿಜ್ಞಾನಸ್ವರೂಪವಾಗಿದೆಯೋ' ಹೀಗೆ ಅದೃಶ್ಯಗುಣವುಳ್ಳವನಲ್ಲಿ ವಿಶೇಷಣಗಳನ್ನು ನೀಡಲಾಗಿದೆ. ಆದ್ದರಿಂದ ಲಕ್ಷ್ಮಿಯು ಅದೃಶ್ಯತ್ವಗುಣವನ್ನು ಹೊಂದಿರುವುದಿಲ್ಲ.

ಮತ್ತು 'ಅದೃಶ್ಯನಾದ ಅಕ್ಷರನಿಂದಲೇ ಚತುರ್ಮುಖಬ್ರಹ್ಮ ಮೊದಲಾದ ಹೆಸರುಗಳು ಹಾಗೂ ಚತುರ್ಮುಖ ಮೊದಲಾದ ರೂಪಗಳು, ಅನ್ನ ಮೊದಲಾದವುಗಳು ಮತ್ತು ಇವುಗಳ ಅಭಿಮಾನಿದೇವತೆಗಳು ಹುಟ್ಟುತ್ತಾರೋ' ಹೀಗೆ ಚತುರ್ಮುಖ ಬ್ರಹ್ಮದೇವರಿಂದ ಭೇದವನ್ನು ಹೇಳಿರುವ ಕಾರಣ ಚತುರ್ಮುಖಬ್ರಹ್ಮನು ಅದೃಶ್ಯನಾಗುವುದಿಲ್ಲ.

ಪ್ರತಿಪದಾರ್ಥ -- ಪ್ರಕೃತಿ ಹಾಗೂ ಚತುರ್ಮುಖ ಬ್ರಹ್ಮನು ಅದೃಶ್ಯತ್ವಧರ್ಮವನ್ನು ಹೊಂದಿರುವುದಿಲ್ಲವೆಂಬ ಸಿದ್ಧಾಂತವನ್ನೇ ಉಪೋದ್ಬಲಿಸಲು ಮತ್ತೊಂದು ಸೂತ್ರವನ್ನು ಪಠಿಸಿ ವ್ಯಾಖ್ಯಾನಿಸುತ್ತಿದ್ದಾರೆ.

ಯಃ = ಯಾವಾತನು, ಸರ್ವಜ್ಞಃ = ಎಲ್ಲವನ್ನೂ ತಿಳಿದಿದ್ದಾನೋ, ಸರ್ವವಿತ್ = ಎಲ್ಲ ಪದಾರ್ಥವನ್ನೂ ವಿಶೇಷಾಕಾರವಾಗಿಯೂ ತಿಳಿದಿದ್ದಾನೋ, ಯಸ್ಯ = ಯಾರ ತಪಃ ಆಲೋಚನೆಯು, ಜ್ಞಾನಮಯಂ = ವಿಜ್ಞಾನಸ್ವರೂಪವಾಗಿದೆಯೋ, ಇತಿ = ಹೀಗೆ ವಿಶೇಷಣಾತ್ = ಅದೃಶ್ಯನಲ್ಲಿ ವಿಶೇಷಣವನ್ನು ಹೇಳಿದ್ದರಿಂದ, ಪ್ರಕೃತಿಃ = ಲಕ್ಷ್ಮಿಯು, ನ = ಅದೃಶ್ಯತ್ವಗುಣವನ್ನು ಹೊಂದಿರುವುದಿಲ್ಲ.

ಮತ್ತು ತಸ್ಮಾತ್ = ಅದೃಶ್ಯನಾದ ಅಕ್ಷರನಿಂದಲೇ, ಏತದ್‌ಬ್ರಹ್ಮ ನಾಮ = ಚತುರ್ಮುಖಬ್ರಹ್ಮನೆಂಬ ಹೆಸರು, ರೂಪಂ = ರೂಪಗಳು, ಅನ್ನಂ ಚ = ಆಹಾರಗಳೂ ಸಹ ಜಾಯತೇ ಹುಟ್ಟುತ್ತವೋ, ಇತಿ = ಹೀಗೆ, ಭೇದವ್ಯಪದೇಶಾತ್ = ಭೇದವನ್ನೇ ಹೇಳಿರುವುದರಿಂದ, ನ ವಿರಿಂಚಃ = ಚತುರ್ಮುಖನೂ ಸಹ ಅದೃಶ್ಯನಾಗುವುದಿಲ್ಲ.(೧)

(೧) **ಭಾಷ್ಯದೀಪಿಕಾ** – ಯದುಕ್ತಂ ಪ್ರಕೃತಿವಿರಿಂಚಯೋರದೃಶ್ಯತ್ವಾದಿಗುಣಕತ್ವಮಿತಿ ತತ್ಸಿದ್ಧಾನ್ತಹೇತೋಃ ಪರಪಕ್ಷನಿರಾಸೇऽಪಿ ವ್ಯಾಪಾರಾತ್ ತದ್ಧರ್ಮೋಕ್ತೇರಿತ್ಯನೇನೋಕ್ತಸ್ಯ ಪರವಿದ್ಯಾವಿಷಯತ್ವಸ್ಯ ವಿಷ್ಣೋರನ್ಯತ್ರ ನಿರವಕಾಶತ್ವಾನ್ಯಥಾನುಪಪತ್ತ್ಯಾ ನಿರಾಕೃತಮಪಿ ವಿಶೇಷಯುಕ್ತ್ಯಾ ನಿರಾಕುರ್ವತ್ಸೂತ್ರಂ ಪಠಿತ್ವಾ ವ್ಯಾಚಷ್ಟೇ – **ವಿಶೇಷಣೇತಿ** ।। ವ್ಯಪದೇಶಶಬ್ದ ಉಭಯಾನ್ವಯೀತ್ಯಾಶಯೇನೋಭಯಶ್ರುತಿಮಾಹ – ಯ ಇತಿ ।।'ಭೇದಃ' ಅನ್ಯತ್ವಮ್ । ಚಶಬ್ದಸ್ಯ ನ ಕೇವಲಂ ಧರ್ಮೋಕ್ತೇಃ, ಕಿನ್ತು ವಿಶೇಷಣಭೇದವ್ಯಪದೇಶಾಭ್ಯಾಮ್ ಇತಿ ಸಮುಚ್ಚಯಾರ್ಥತ್ವಸ್ಯ ಸ್ಪಷ್ಟತ್ವಾತ್ನ ತಸ್ಯಾರ್ಥ ಉಕ್ತಃ । ಪ್ರಕೃತಿಃ ವಿರಿಞ್ಚ ಇತ್ಯನೇನ ಇತರಾ ಇತರಶ್ಚೇತಿ ವಿಗ್ರಹಾಶ್ರಯೇಣೇತರಶಬ್ದಾರ್ಥೋऽಭಿಹಿತಃ । ಉಭಯತ್ರಾದೃಶ್ಯತ್ವಾದಿಗುಣಕ ಇತ್ಯನುಷಜ್ಯತೇ । ಪ್ರಕೃತಿಪಕ್ಷೇ ಲಿಙ್ಗವಿಪರಿಣಾಮಃ । ತಥಾ ಚ 'ಯಸ್ಸರ್ವಜ್ಞಃ' ಇತಿ ವಾಕ್ಯೇ ತಸ್ಯಾದೃಶ್ಯತ್ವಾದಿಗುಣಕಸ್ಯ 'ವಿಶೇಷಣಾತ್' ಸಾರ್ವಜ್ಞ್ಯಾದಿವಿಶೇಷಣೋಕ್ತೇರ್ನ ದೃಶ್ಯತ್ವಾದಿಗುಣಾ ಜಡಪ್ರಕೃತಿಃ । ಏವಂ 'ತಸ್ಮಾತ್' ಇತಿ ವಾಕ್ಯೇ ವಿರಿಞ್ಚಸ್ಯ ತಸ್ಮಾದಕ್ಷರಾಜ್ಜನ್ಯತ್ವರೂಪಭೇದಕಧರ್ಮೋಕ್ತ್ಯಾ ಭೇದವ್ಯಪದೇಶಾನ್ನಾದೃಶ್ಯತ್ವಾದಿಗುಣೋ ವಿರಿಞ್ಚ ಇತಿ ಯೋಜನಾ ।।

ಆಥರ್ವಣೇ 'ಯಃ ಸರ್ವಜ್ಞಃ ಸರ್ವವಿತ್' ಇತ್ಯತಃ ಪೂರ್ವವಾಕ್ಯೇ 'ತಪಸಾ ಚೀಯತೇ ಬ್ರಹ್ಮ' (ಮುಂ.೧-೧-೮) ಇತ್ಯತ್ರ ಪರಬ್ರಹ್ಮತಪಸಾ ಸಮ್ಬಧ್ಯತ ಇತ್ಯುಕ್ತಮ್ । ತತ್ ತಪಶ್ಚಾಬ್ದಸ್ಯಾऽಲೋಚನಾರ್ಥತಯाऽಜ್ಞಾನಪ್ರತೀತೌ ತನ್ನಿರಾಸಾಯ 'ಯಸ್ಯ ಜ್ಞಾನಮಯಂ ತಪಃ' ಇತಿ ವಾಕ್ಯಾನ್ತರಂ ಪ್ರವೃತ್ತಮ್ । ತಸ್ಯ ಯಸ್ಯ 'ತಪಃ' ಆಲೋಚನಕ್ರಿಯಾ 'ಜ್ಞಾನಮಯಂ' ತದಾತ್ಮಕಮೇವ ನ ಸಂಶಯಾದ್ಯಾತ್ಮಕಮಿತ್ಯರ್ಥಃ । ಕುತಸ್ತಪಸಃ ಸನ್ತಾಪಾನ್ಯಪೂರ್ಣಯಥಾರ್ಥ-ಜ್ಞಾನಾತ್ಮಕತ್ವಮಿತ್ಯಾಕಾಙ್ಕಾಯಾಂ ತಸ್ಯ ಸರ್ವಜ್ಞತ್ವಾದಾಪ್ತಕಾಮತ್ವಾದಿತಿ ಹೇತುಪ್ರದರ್ಶನಾಯ 'ಯಸ್ಸರ್ವಜ್ಞಃ' ಇತಿ ಪೂರ್ವವಾಕ್ಯೋಪನ್ಯಾಸಃ । ತದರ್ಥಸ್ತು – 'ಯಃ ಸರ್ವಜ್ಞಃ' ಸರ್ವವಿಷಯಕಸಾಮಾನ್ಯಜ್ಞಾನವಾನ್ 'ಸರ್ವವಿತ್' ಸರ್ವವಿಷಯಕವಿಶೇಷಜ್ಞಾನವಾಂಶ್ಚ । ಸರ್ವಸ್ಯ ಲಬ್ಧಾ ಸರ್ವಕಾಮಃ ಸರ್ವೋತ್ಪಾದಕೋ ವೇತಿ । ತತ್ತ್ವಪ್ರದೀಪೇ ತು – ವಿದ ಸತ್ತಾಯಾಮಿತಿ ಧಾತುವ್ಯಾಖ್ಯಾನಾತ್ ಸರ್ವತ್ರ ವಿದ್ಯತ ಇತಿ ಸರ್ವವಿದಿತ್ಯುಕ್ತಮ್ ।।

ಭಾಷ್ಯಮ್ – 'ಅಪರಂ ತ್ವಕ್ಷರಂ ಯಾ ಸಾ ಪ್ರಕೃತಿರ್ಜಡರೂಪಿಕಾ ।
ಶ್ರೀಃ ಪರಾ ಪ್ರಕೃತಿಃ ಪ್ರೋಕ್ತಾ ಚೇತನಾ ವಿಷ್ಣುಸಂಶ್ರಯಾ ॥
ತಾಮಕ್ಷರಂ ಪರಂ ಪ್ರಾಹುಃ ಪರತಃ ಪರಮಕ್ಷರಮ್ ।
ಹರಿಮೇವಾಖಿಲಗುಣಮಕ್ಷರತ್ರಯಮೀರಿತಮ್ ॥'

ಇತಿ ಸ್ಕಾನ್ದೇ ತ್ರ್ಯಕ್ಷರಾಭಿಧಾನಾದಕ್ಷರಾತ್ ಪರತಃ ಪರ ಇತ್ಯಪಿ ವಿಶೇಷಣಮೇವ ।

ಅನುವಾದ - ಜಡರೂಪವಾದ ಪ್ರಕೃತಿಯು 'ಅಪರ' ಅಕ್ಷರ ಎಂಬ ಶಬ್ದವಾಚ್ಯವಾಗಿದೆ. ಉತ್ತಮವಾದ ಪ್ರಕೃತಿಯು ಚೇತನರೂಪಿಯಾದ ಲಕ್ಷ್ಮೀದೇವಿಯಾಗಿದ್ದಾಳೆ. ಇವಳು ವಿಷ್ಣುವನ್ನು ಆಶ್ರಯಿಸಿದ್ದಾಳೆ. ಇವಳೇ ಶ್ರೀಶಬ್ದದಿಂದ ವಾಚ್ಯಳಾಗಿದ್ದಾಳೆ. ಇಂತಹ ಲಕ್ಷ್ಮೀದೇವಿಯನ್ನು 'ಪರ ಅಕ್ಷರ' ಎಂದು ಹೇಳುತ್ತಾರೆ. ಸಕಲಗುಣಪರಿಪೂರ್ಣನಾದ ವಿಷ್ಣುವನ್ನು ಅಕ್ಷರಕ್ಕಿಂತ ಉತ್ತಮೋತ್ತಮ ಎನ್ನುತ್ತಾರೆ. ಇವನು ಈ ರೀತಿಯಾಗಿ ಸ್ಕಾಂದಪುರಾಣದಲ್ಲಿ ಮೂರು ಬಗೆಯ ಅಕ್ಷರತತ್ವಗಳನ್ನು ಹೇಳಿರುವ ಕಾರಣ 'ಅಕ್ಷರಾತ್ ಪರತಃ ಪರಃ' 'ಪರತಃ ಪರ ಅಕ್ಷರ' ಎಂಬ ಮಾತು ವಿಷ್ಣುವಿಗೇ ವಿಶೇಷಣವಾಗುತ್ತದೆ.

ಪ್ರತಿಪದಾರ್ಥ -- ಆಥರ್ವಣೋಪನಿಷತ್ತಿನಲ್ಲಿ 'ಯಃ ಸರ್ವಜ್ಞಃ' ಎಂಬ ಹಿಂದಿನ ವಾಕ್ಯದಲ್ಲಿ ತಪಃಶಬ್ದವು ಕೇಳಿಸುತ್ತಿದೆ. ಆಲೋಚನಾರ್ಥದಲ್ಲಿರುವ ಈ ಶಬ್ದದಿಂದ ಅಜ್ಞಾನವೂ ಸಹ ಭಗವಂತನಲ್ಲಿದೆ ಎಂಬ ಭ್ರಾಂತಿಯು ಬರುತ್ತದೆ ಅದನ್ನು ಪರಿಹರಿಸುವುದಕ್ಕಾಗಿ ಮತ್ತೊಂದು ಶ್ರುತಿಯನ್ನು ಉದಾಹರಿಸುತ್ತಿದ್ದಾರೆ.

ಯಾ = ಯಾವ, ಪ್ರಕೃತಿಃ = ಜಡಪ್ರಕೃತಿಯದೆಯೋ, ಸಾ = ಅದು, ಅಪರಂ = ಅಪರ ಎಂಬ ಅಕ್ಷರಂ ಅಕ್ಷರಶಬ್ದವಾಚ್ಯವಾಗಿದೆ. ಪರ = ಉತ್ತಮವಾದ, ಪ್ರಕೃತಿಃ = ಪ್ರಕೃತಿಯೆಂದರೆ, ಚೇತನಾ = ಚಿದ್ರೂಪಳಾದವಳು, ವಿಷ್ಣುಸಂಶ್ರಯಾ = ವಿಷ್ಣುವನ್ನೇ ಆಶ್ರಯಿಸಿದವಳು, ಶ್ರೀ = ಶ್ರೀಶಬ್ದದಿಂದ ವಾಚ್ಯಳಾದವಳು ಹೀಗೆ, ಪ್ರೋಕ್ತಾ = ಹೇಳಲ್ಪಟ್ಟಿದೆ.

ಇವಳನ್ನು ಪರಂ ಅಕ್ಷರಂ = ಪರ ಅಕ್ಷರಾ ಎಂದೂ, ಪ್ರಾಹುಃ = ಹೇಳುತ್ತಾರೆ. ಪರತಃ = ಇಂತಹ ಲಕ್ಷ್ಮೀದೇವಿಗಿಂತಲೂ, ಪರಮಕ್ಷರಮ್ = ಉತ್ತಮನಾದ ಅಕ್ಷರನೆಂದು, ಅಖಿಲಗುಣಂ = ಸಕಲಗುಣಪರಿಪೂರ್ಣನಾದ, ಹರಿಮೇವ = ಪಾಪ-ಪರಿಹಾರಕನಾದ ಪರಮಾತ್ಮನನ್ನೇ ಜ್ಞಾನಿಗಳು, ಪ್ರಾಹುಃ = ಹೇಳುತ್ತಾರೆ. ಹೀಗೆ ಅಕ್ಷರತ್ರಯಂ = ಮೂರು ಬಗೆಯ ಅಕ್ಷರಗಳನ್ನು, ಈರಿತಮ್ = ಹೇಳಲಾಗಿದೆ. ಇತಿ = ಹೀಗೆ, ಸ್ಕಾಂದೇ = ಸ್ಕಾಂದಪುರಾಣದಲ್ಲಿ, ತ್ರ್ಯಕ್ಷರಾಭಿಧಾನಾತ್ = ಮೂರು ಬಗೆಯ ಅಕ್ಷರಗಳನ್ನು ಹೇಳಿರುವ ಕಾರಣ, ಅಕ್ಷರಾತ್ ಪರತಃ ಪರಃ = ಅಕ್ಷರ ಎಂಬ ಶಬ್ದವಾಚ್ಯಳಾದ ಲಕ್ಷ್ಮಿಗಿಂತಲೂ ಉತ್ತಮನು, ಇತ್ಯಪಿ = ಹೀಗೆಂಬ ವಾಕ್ಯದಲ್ಲಿ ಹೇಳಿದ

'ಯಸ್ಯ ಯಃ' ಇತಿ ಯಚ್ಛಬ್ದದ್ವಯಸ್ಯ 'ತಸ್ಮಾತ್' ಅಕ್ಷರಾತ್ 'ಏತದ್ ಬ್ರಹ್ಮ' ಚತುರ್ಮುಖಾಖ್ಯಂ 'ನಾಮ ರೂಪಮಚ್ಚ' ತದಭಿಮಾನಿದೈವತಂ ಚೋತ್ಪದ್ಯತ ಇತ್ಯುತ್ತರವಾಕ್ಯಗತತಚ್ಛಬ್ದೇನಾನ್ವಯಃ ।।

ಪರಿಪೂರ್ಣಚಂದ್ರಿಕಾ

ಅಕ್ಷರಾತ್ ಪರತಃ ಪರತ್ವಂ ಸಹ, ವಿಶೇಷಣಮೇವ = ವಿಷ್ಣುವಿನಲ್ಲೇ ಇರುವಂತಹ ವಿಶೇಷಣಗಳಾಗಿವೆ.(೧)

ಭಾಷ್ಯಮ್ – 'ಜುಷ್ಟಂ ಯದಾ ಪಶ್ಯತ್ಯನ್ಯಮೀಶಮಸ್ಯ ಮಹಿಮಾನಮಿತಿ ವೀತಶೋಕಃ' (ಮುಂ.೩-೧-೨) ಇತಿ ಭೇದವ್ಯಪದೇಶಾದೀಶಪದಪ್ರಾಪ್ತೋऽಪಿ ನ ರುದ್ರಃ ॥೨೨॥

ಅನುವಾದ - 'ತಾನು ಆರಾಧನೆ ಮಾಡುವ, ಪ್ರಸಿದ್ಧನಾದ ರುದ್ರನಿಗಿಂತ ಬೇರೆಯಾದ ಭಗವಂತನನ್ನು ಹಿಂದೆ ಹೇಳಿದ ಅವನ ಮಹಿಮೆಯನ್ನು ಯಾವ ಜೀವನು ಸಾಕ್ಷಾತ್ಕರಿಸಿಕೊಳ್ಳುತ್ತಾನೋ ಅವನು ದುಃಖದಿಂದ ರಹಿತನಾಗುತ್ತಾನೆ'.

ಈ ರೀತಿಯಾಗಿ ಮುಂಡಕ ಉಪನಿಷತ್ತಿನಲ್ಲಿ ರುದ್ರದೇವರಿಂದ ಭೇದವನ್ನು ಅಕ್ಷರನಿಗೆ ಹೇಳಿರುವ ಕಾರಣ ಈಶಪದದಿಂದ ಪ್ರಸಕ್ತನಾದವನೂ ಸಹ ವಿಷ್ಣುವೇ ಆಗುತ್ತಾನೆ; ರುದ್ರನಲ್ಲ.

---

(೧) **ಭಾಷ್ಯದೀಪಿಕಾ** – ನನು ನ ವಿಷ್ಣೋರದೃಶ್ಯತ್ವಾದಿಗುಣಕತ್ವಂ, ಪರತಃ ಪರಾಭಿಧಾನೇನಾಕ್ಷರಶ್ರುತೇಸ್ತತ್ರ ನಿರವಕಾಶತ್ವಾದಿತ್ಯತೋ ವಿಶೇಷಣಭೇದವ್ಯಪದೇಶಾದಿತಿ ಸೂತ್ರಖಂಡಸ್ಯಾರ್ಥಾನ್ತರಮಾಹ – **ಅಪರಮಿತಿ** ।। ತುಶಬ್ದೋऽವಧಾರಣೇ । 'ಅಕ್ಷರತ್ರಯಮ್' ಅಕ್ಷರಸ್ಯ ತ್ರಯಮ್ 'ಈರಿತಮ್' ಅಕ್ಷರಂ ತ್ರಿವಿಧಂ ಪ್ರೋಕ್ತಮ್ ಇತಿ ಯಾವತ್ । ತಿಸ್ರೋ ವಿಧಾಃ ವ್ಯಕ್ತಿನಿರ್ದೇಶಪೂರ್ವಕಂ ದರ್ಶಯತಿ – **ಅಪರಮಿತಿ** ।। ಯಾ ಯದಪರಮಕ್ಷರಂ ಸಾ ಜಡರೂಪಿಕಾ ಪ್ರಕೃತಿರೇವ । ಯಾ ಯತ್ಪರಮಕ್ಷರಂ 'ಪ್ರೋಕ್ತಾ' ಪ್ರೋಕ್ತಂ ವೃದ್ಧೈಸ್ತಾಂ ತದ್ ಯಾ ವಿಷ್ಣುಸಂಶ್ರಯಾ ಪರಾ ಉತ್ತಮಾ ಚೇತನಾ ಪ್ರಕೃತಿಃ ಶ್ರೀಃ ಲಕ್ಷ್ಮೀಃ ತಾಂ ಪ್ರಾಹುಃ । ಯತ್ಪರತಃ ಪರಮಕ್ಷರಮೀರಿತಂ ತಜ್ಜಡಪ್ರಕೃತೇಃ ಪರಾಚ್ಛೀತತ್ತ್ವಾದಖಿಲಗುಣಂ ಹರಿಮೇವ ಪ್ರಾಹುರಿತಿ ಸ್ಮೃತ್ಯರ್ಥಃ । ಇತಿ ಸ್ಕಾನ್ದೇ ಇತ್ಯಸ್ಯ 'ತ್ರಯಕ್ಷರಾಭಿಧಾನಾತ್' ಅಕ್ಷರತ್ರೈವಿಧ್ಯಸ್ಯೋಕ್ತತ್ವಾದಿತ್ಯನೇನಾನ್ವಯಃ । ಅಕ್ಷರಾತ್ ಪರತಃ ಪರ ಇತ್ಯಪೀತಿ । ಇತಿ ವಾಕ್ಯೋಕ್ತಮಕ್ಷರಾತ್ಪರತಃ ಪರತ್ವಮಪೀತ್ಯರ್ಥಃ । ಅಪಿಃ ಸಮುಚ್ಚಯೇ । ತಸ್ಯೇತಿ ಶೇಷಃ । ತೇನೈವಕಾರಸ್ಯಾನ್ವಯಃ । ತಥಾ ಚ ನ ಕೇವಲಂ ಸಾರ್ವಜ್ಞಂ ವಿಶೇಷಣಮ್, ಕಿನ್ತ್ವಕ್ಷರಾತ್ ಪರತಃ ಪರತ್ವಮಪಿ ತಸ್ಯ ವಿಷ್ಣ್ವಾಖ್ಯಪ್ರಕೃತಾಕ್ಷರಸ್ಯೈವ ವಿಶೇಷಣಂ, ನ ತು ಪ್ರಕೃತಾಕ್ಷರಮವಧೀಕೃತ್ಯಾನ್ಯಸ್ಯ ಕಸ್ಯಚಿದ್ ವಿಶೇಷಣಮ್ । ಯೇನಾಕ್ಷರಶ್ರುತೇರ್ವಿಷ್ಣಾವವಕಾಶಾಭಾವಃ । ನ ಚಾಕ್ಷರಸ್ಯಾಕ್ಷರಾತ್ ಪರತಃ ಪರತ್ವಂ ವಿರುದ್ಧಮಿತಿ ವಾಚ್ಯಮ್ । 'ಅಪರಮ್' ಇತಿ ಸ್ಕಾನ್ದೇ ತ್ರಯಕ್ಷರಾಭಿಧಾನಾದ್ ಅಕ್ಷರಾನ್ತರಾತ್ ಪರಾದಸ್ಯಾಕ್ಷರಸ್ಯ ಪರತ್ವೋಪಪತ್ತೇರಿತಿ ಯೋಜನಾ । ಅಕ್ಷರತ್ರಯಾಭಿಧಾನೇನ ಅಕ್ಷರಾತ್ ಪರತಃ ಪರ ಇತ್ಯತ್ರ ಸಾಮಾನಾಧಿಕರಣ್ಯೇನ ವೈಯಧಿಕರಣ್ಯೇನ ವಾऽನ್ವಯೋ ದರ್ಶಿತಃ । ಪ್ರಮೇಯದೀಪೇ ತು – ಅಕ್ಷರಾಚ್ಛ್ರೀತತ್ವಾತ್ ಪರತಃ ಪರೋऽತ್ಯುತ್ತಮ ಇತಿ ತಜ್ಜಾಷ್ಯದಿಶಾ ಶ್ರುತ್ಯರ್ಥ ಉಕ್ತಃ । ಅನೇನಾಕ್ಷರಾತ್ಪರತಃ ಪರ ಇತ್ಯಪಿ ತಸ್ಯೈವ ವಿಶೇಷಣಂ, ನ ತ್ವನ್ಯಸ್ಯ । ನ ಚಾಕ್ಷರಾತ್ಪರತಃ ಪರತ್ವಂ ವಿರುದ್ಧಮಿತಿ ವಾಚ್ಯಮ್ । ಭೇದವ್ಯಪದೇಶಾತ್ । 'ಅಕ್ಷರತ್ರಯಮೀರಿತಮ್' ಇತ್ಯಕ್ಷರಾಣಾಮವಾನ್ತರಭೇದೋಕ್ತೇಃ ಪಾಣ್ಡವಸ್ಯಾರ್ಜುನಸ್ಯ ಸ್ವಾಧಮಕಾರ್ತವೀರ್ಯಾರ್ಜುನಾದಿವ ಅಕ್ಷರಾತ್ಪರಾದಕ್ಷರಾನ್ತರಾದಸ್ಯಾಕ್ಷರಸ್ಯ ಪರತ್ವೋಪಪತ್ತೇರಿತಿ ಸೂತ್ರಖಂಡಸ್ಯಾರ್ಥಾನ್ತರಮುಕ್ತಂ ಭವತಿ ।।

ಪ್ರತಿಪದಾರ್ಥ -- 'ಅನ್ಯ' ಎಂಬ ಶಬ್ದವು ಕೇಳಿಸುತ್ತಿರುವುದರಿಂದ ರುದ್ರನೇಕೆ ಆದೃಶ್ಯತ್ವಗುಣವುಳ್ಳವನಾಗಬಾರದು ಎಂಬ ಪ್ರಶ್ನೆಗೆ ಉತ್ತರಿಸುತ್ತಿದ್ದಾರೆ.

ಮಷ್ಟಂ = ತಾನು ಆರಾಧಿಸುವ, ಅನ್ಯಮ್ ಈಶಂ = ರುದ್ರನಿಗಿಂತ ಭಿನ್ನನಾದ, ಅಸ್ಯ = ಮೊದಲೇ ಹೇಳಿದ ವಿಷ್ಣುವಿನ, ಮಹಿಮಾನಂ = ಮಹಿಮೆಯನ್ನು, ಯದಾ = ಯಾವಾಗ, ಪಶ್ಯತಿ = ಜೀವನು ಸಾಕ್ಷಾತ್ಕರಿಸಿಕೊಳ್ಳುತ್ತಾನೋ, ಇತಿ = ಆವಾಗ, ವೀತಶೋಕಃ = ದುಃಖರಹಿತನಾಗುತ್ತಾನೆ. ಇತಿ = ಹೀಗೆ, ಭೇದವ್ಯಪದೇಶಾತ್ = ರುದ್ರದೇವರ ದೆಸೆಯಿಂದ ಭೇದವನ್ನು ಹೇಳಿರುವ ಕಾರಣ, ಈಶಪದಪ್ರಾಪ್ತೋಪಿ = ಈಶಪದದಿಂದ ಪ್ರಸಕ್ತನಾದವನೂ ಸಹ, ನ ರುದ್ರಃ = ರುದ್ರನಾಗುವುದಿಲ್ಲ; ಹೊರತು ವಿಷ್ಣುವೇ ಆಗುತ್ತಾನೆ.(೧)

ತತ್ವಪ್ರಕಾಶಿಕಾ –

ॐ ।। ವಿಶೇಷಣಭೇದವ್ಯಪದೇಶಾಭ್ಯಾಂ ಚ ನೇತರೌ ।। ॐ

ಯದುಕ್ತಂ ಪ್ರಕೃತಿವಿರಿಞ್ಚಯೋರದೃಶ್ಯತ್ವಾದಿಗುಣಕತ್ವಮಿತಿ ತದರ್ಥಾನ್ನಿರಾಕೃತಮಪಿ ವಿಶೇಷಯುಕ್ತ್ಯಾ ಪರಾಕುರ್ವತ್ಸೂತ್ರಂ ಪಠಿತ್ವಾ, ವ್ಯಾಚಷ್ಟೇ – ವಿಶೇಷಣೇತಿ ।।

ಪ್ರಧಾನ, ಚತುರ್ಮುಖ ಬ್ರಹ್ಮ ಇವರಿಬ್ಬರೂ ಆದೃಶ್ಯತ್ವಾದಿಗುಣಗಳಿಂದ ಯುಕ್ತರಾಗಿದಾರೆಂಬ ಪೂರ್ವಪಕ್ಷವನ್ನು 'ಧರ್ಮೋಕ್ತೇಃ' ಎಂಬ ಯುಕ್ತಿಯಿದ ಈಗಾಗಲೇ ಆರ್ಥಾತ್ ನಿರಾಕರಣೆ ಮಾಡಿದಂತಾಗಿದೆ ಆದರೂ ಸಹ ವಿಶೇಷಯುಕ್ತಿಯಿಂದ, ಆ ಪೂರ್ವ ಪಕ್ಷವನ್ನು ನಿರಾಕರಣೆ ಮಾಡುವುದಕ್ಕಾಗಿ ಸೂತ್ರವನ್ನು ಪಠಿಸುತ್ತಾ ವ್ಯಾಖ್ಯಾನಿಸುತ್ತಿದ್ದಾರೆ ವಿಶೇಷಣ ಇತ್ಯಾದಿಯಾಗಿ.

ತತ್ವಪ್ರಕಾಶಿಕಾ – 'ತಪಸಾ ಚೀಯತೇ ಬ್ರಹ್ಮ' ಇತ್ಯತ್ರಾಜ್ಞಾನಪ್ರತೀತೌ ತನ್ನಿರಾಸಾಯ 'ಯಸ್ಯ ಜ್ಞಾನಮಯಂ ತಪಃ' ಇತ್ಯುಕ್ತಾರ್ಥೇ ಹೇತುತಯಾऽದೃಶ್ಯತ್ವಾದಿಗುಣಕಸ್ಯ ಸಾರ್ವಜ್ಞವಿಶೇಷಣೋಕ್ತೇರ್ನಾಚೇತನ-ಪ್ರಕೃತೇರದೃಶ್ಯತ್ವಾದಿಗುಣಕತ್ವಮ್ ।

(೧) ಭಾಷ್ಯದೀಪಿಕಾ – ನನು 'ಅನ್ಯಮ್' ಇತಿ ಶಬ್ದಶ್ರವಣಾದದೃಶ್ಯತ್ವಾದಿಗುಣಕೋ ರುದ್ರಃ ಕಿಂ ನ ಸ್ಯಾದಿತಿ ಶಙ್ಕೋತ್ತರತಯाऽपಿ ಭೇದವ್ಯಪದೇಶಾನ್ನೇತರ ಇತಿ ಸೂತ್ರಾಂಶಂ ವ್ಯಾಚಷ್ಟೇ – ಜುಷ್ಟಮಿತಿ ।। ಯದ್ಯಪಿ ತಥाऽಪೀತ್ಯರ್ಥೇऽಪಿಶಬ್ದಃ । ರುದ್ರोऽಪೀತಿ ಸಮುಚ್ಚಯೇ ವಾ । ನ ಕೇವಲಂ ಪೂರ್ವಹೇತೋಃ, ಕಿನ್ತು ಭೇದವ್ಯಪದೇಶಾದಪೀತಿ ಸಮುಚ್ಚಯೇ ವಾ । ರುದ್ರ ಇತೀತರಶಬ್ದಸ್ಯಾರ್ಥಾನ್ತರೋಕ್ತಿಃ । ನ ಚೇತರಶಬ್ದಸ್ಯ ಜಡಪ್ರಕೃತಿವಿರಿಞ್ಚರುದ್ರಪರತ್ವೇ ದ್ವಿವಚನಾನುಪಪತ್ತಿರಿತಿ ವಾಚ್ಯಮ್ । ವಿರಿಞ್ಚಿರುದ್ರಯೋಶ್ಚೇತನತ್ವೇನೈಕೀಕೃತ-ತ್ವಾತ್ । ತಥಾ ಚ ಯದ್ಯಪೀಶಶಬ್ದಾದ್ ರುದ್ರोऽಪ್ಯದೃಶ್ಯತ್ವಾದಿಗುಣಕತ್ವೇನ 'ಪ್ರಾಸಃ' ಪ್ರತೀತಃ, ತಥाऽಪಿ 'ಜುಷ್ಟಮ್' ಇತಿ ವಾಕ್ಯೇ ಪ್ರವೃತ್ತವಿಷ್ಣವಾಖ್ಯಾಕ್ಷರಸ್ಯೇಶಶಬ್ದಿತರುದ್ರಾದನ್ಯತ್ವವ್ಯಪದೇಶಾದಪಿ ನಾದೃಶ್ಯತ್ವಾದಿಗುಣಕो ರುದ್ರ ಇತಿ ಯೋಜನಾ । ಶ್ರುತಿಸ್ತು – ಆನನ್ದಮಯಾಧಿಕರಣೇ ವ್ಯಾಖ್ಯಾತಾ ।।

ತಪಸಾ ಜೀಯತೇ ಬ್ರಹ್ಮ - ಬ್ರಹ್ಮನು ತಪಸ್ಸನ್ನು ಆಚರಿಸುತ್ತಾನೆ ಎಂಬ ವಾಕ್ಯವನ್ನು ಕೇಳಿದಾಗ ಬ್ರಹ್ಮನಲ್ಲಿ ಅಜ್ಞಾನ ಇದೆ ಎಂದು ತಿಳಿಯುತ್ತದೆ. ಅದನ್ನು ನಿರಾಕರಣೆ ಮಾಡುವುದಕ್ಕಾಗಿ 'ಯಸ್ಯ ಜ್ಞಾನಮಯಂ ಮಯಂ ತಪಃ' ಯಾರ ತಪಸ್ಸು ಜ್ಞಾನಸ್ವರೂಪವಾಗಿದೆಯೋ ಎಂಬುದಾಗಿ 'ತಪಃ' ಎಂಬ ಶಬ್ದದ ಅರ್ಥವನ್ನು ಸ್ಪಷ್ಟ ಪಡಿಸಲಾಗಿದೆ. ಅಂದರೆ ಬ್ರಹ್ಮನ ತಪಸ್ಸು ಜ್ಞಾನಸ್ವರೂಪವಾಗಿದೆ ಎಂಬುದನ್ನು ತಿಳಿಸಲು ಅದೃಶ್ಯತ್ವಾದಿಗುಣಗಳುಳ್ಳ ಅಕ್ಷರನಿಗೆ 'ಯಃ ಸರ್ವಜ್ಞಃ ಸರ್ವವಿತ್' ಎಂಬಲ್ಲಿ ಸರ್ವಜ್ಞತ್ವವೆಂಬ ವಿಶೇಷಣವನ್ನು ಹೇಳಲಾಗಿದೆ. ಆದ್ದರಿಂದ ಅಚೇತನ ಪ್ರಕೃತಿಗೆ ಅದೃಶ್ಯತ್ವಾದಿ ಗುಣಗಳನ್ನು ಹೇಳಲು ಸಾಧ್ಯವಿಲ್ಲ

तत्वप्रकाशिका – तस्मादक्षरादेतद् ब्रह्म चतुर्मुखाख्यं जायत इति विरिञ्चस्य तज्जन्यतया तस्माद्भेव्यपदेशान्नासावप्यदृश्यत्वादिगुणक इत्यर्थः ।

ಮತ್ತು ಅಕ್ಷರನಿಂದ ಚತುರ್ಮುಖನು ಹುಟ್ಟಿದನು, ಎಂದು ಶ್ರುತಿಯು ಹೇಳುತ್ತಿರುವುದರಿಂದ ಚತುರ್ಮುಖನು ಅಕ್ಷರತತ್ವಕ್ಕಿಂತ ಭಿನ್ನನೆಂದು ಸ್ಪಷ್ಟವಾಗುತ್ತದೆ. ಆದ್ದರಿಂದ ಅದೃಶ್ಯತ್ವಾದಿ-ಗುಣಗಳುಳ್ಳವನು ಚತುರ್ಮುಖಬ್ರಹ್ಮನಾಗುವುದಿಲ್ಲ ಎಂದು ಅಭಿಪ್ರಾಯ.

तत्वप्रकाशिका – ज्ञानवेदनयोः सामान्यविशेषतयाऽर्थान्तरत्वम् । 'विद्लृ लाभे' विदोत्पत्तावित्यतो वा ।

ಇಲ್ಲಿರುವ ಜ್ಞಾನ ಎಂಬ ಶಬ್ದಕ್ಕೆ ಸಾಮಾನ್ಯಜ್ಞಾನವೆಂದೂ, ವೇದನ ಎಂದರೆ ವಿಶೇಷಜ್ಞಾನವೆಂದೂ ತಿಳಿಯಬೇಕು. ಅಥವಾ 'ವಿದೂಲೃ ಲಾಭೇ' ಎಂಬ ಧಾತುವಿನಂತೆ 'ಲಾಭ' ಎಂಬ ಅರ್ಥವನ್ನು ವಿದಉತ್ಪತ್ತೌ ಎಂಬ ಧಾತುವಿನಂತೆ ಉತ್ಪತ್ತಿ ಎಂಬ ಅರ್ಥವನ್ನೂಸಹ ತಿಳಿಯಬಹುದು. ಅಂದರೆ ಸಕಲ ವಸ್ತುಗಳೂ ಯಾವ ವಿಷ್ಣುವಿಗೆ ಲಾಭವಾಗುತ್ತದೋ ಅಥವಾ ಸಕಲವಸ್ತುಗಳನ್ನೂ ಯಾರು ಸೃಷ್ಟಿ ಮಾಡುತ್ತಾನೋ ಎಂಬ ಎರಡು ಅರ್ಥಗಳನ್ನು ಹೇಳಿದಂತಾಗುತ್ತದೆ.

तत्वप्रकाशिका – न विष्णोरदृश्यत्वादिगुणकत्वम् । परतःपराभिधानेन अक्षरशब्दस्य विष्णौ निरवकाणत्वादित्यतः सूत्रखण्डस्यार्थान्तरमाह – अपरमिति ।।

ವಿಷ್ಣುವಿಗೆ ಅದೃಶ್ಯತ್ವಾದಿಗುಣಗಳನ್ನು ಹೇಳಲಾಗದು ಏಕೆಂದರೆ ಅಕ್ಷರಕಿಂತ ಶ್ರೇಷ್ಠವಾದ ವಸ್ತು ಬೇರೆ ಇರುತ್ತದೆ ಎಂದು ಶ್ರುತಿಯು ಹೇಳುತ್ತಿದೆ. ಅಕ್ಷರಶಬ್ದವು ನಿರವಕಾಶವಾದ ಪ್ರಯುಕ್ತ ಅದಕ್ಕೆ ವಿಷ್ಣು ಎಂಬ ಅರ್ಥವನ್ನು ಹೇಳಲು ಸಾಧ್ಯವಿಲ್ಲವಲ್ಲಾ ಈ ಆಶಂಕೆಗೆ ಉತ್ತರಿಸಲು 'ಅಪರಮ್' ಇತ್ಯಾದಿಯಾಗಿ ಹೇಳಿದ್ದಾರೆ.

तत्वप्रकाशिका – भवेदक्षरश्रुतेर्विष्णावेवकाशाभावो यदि 'अक्षरात्परतः परः' इत्यत्र प्रकृताक्षरमवधीकृत्य कस्याचित्परत्वमुच्यत । न एतदस्ति ।

'ಅಕ್ಷರಾತ್ ಪರತಃ ಪರಃ' ಎಂಬಲ್ಲಿ ಯಾವ ಅಕ್ಷರವು ಪ್ರಕೃತವಾಗಿದೆಯೋ ಅದನ್ನೇ ಅವಧಿಯನ್ನಾಗಿಸಿ ಮತ್ತೊಬ್ಬರಿಗೆ ಪರತ್ವವನ್ನು ಹೇಳಿದಪಕ್ಷದಲ್ಲಿ ಅಕ್ಷರ ಶ್ರುತಿಗೆ ವಿಷ್ಣುವಿನಲ್ಲಿ ಅವಕಾಶವಿರುತ್ತಿರಲಿಲ್ಲ. ಆದರೆ ಹಾಗೆ ಹೇಳುತ್ತಿಲ್ಲ.

तत्वप्रकाशिका – किन्तु प्रकृताक्षरस्यैव अक्षरात्परतःपरत्वविशेषणमुच्यते । न चाक्षरस्याक्षरात्परतःपरत्वं विरुद्धमिति वाच्यम् । त्र्यक्षराभिधानादक्षरान्तरादस्याक्षरस्य परत्वोपपत्तेरिति भावः ।

ಹೊರತಾಗಿ, ಯಾವ ಜಗತ್ತಿಗೆ ಕಾರಣವಾದ ಅಕ್ಷರವಿದೆಯೋ ಅಂತಹ ವಸ್ತುವಿನಲ್ಲೇ 'ಅಕ್ಷರಾತ್ ಪರತಃ ಪರಃ' ಪರತ್ವವನ್ನು ಹೇಳಲಾಗಿದೆ. ಅಕ್ಷರ ಪದಾರ್ಥವು ಒಂದೇ ಆಗಿರುವಾಗ ಅಕ್ಷರನಿಗಿಂತ ಪರತ್ವವನ್ನು ಆದೇ ವಸ್ತುವಿನಲ್ಲಿ ಹೇಳುವುದು ವಿರುದ್ಧವಾಗುತ್ತದಲ್ಲವೇ? ಎಂದು ಪ್ರಶ್ನಿಸಬಾರದು. ಅಕ್ಷರಶಬ್ದದಿಂದ ಪ್ರತಿಪಾದ್ಯವಾದ ಪದಾರ್ಥಗಳು ಒಟ್ಟು ಮೂರು ಇರುತ್ತವೆ ಆದ್ದರಿಂದ ವಿಷ್ಣುವಿಗಿಂತ ಭಿನ್ನವಾದ ಯಾವ ಅಕ್ಷರ ಶಬ್ದ ಪ್ರತಿಪಾದ್ಯ ವಸ್ತುವಿದೆಯೋ ಅದಕ್ಕಿಂತ ಉತ್ತಮತ್ವವನ್ನು ವಿಷ್ಣುವಿಗೆ ಹೇಳಬಹುದು. ಹೀಗೆ ಶ್ರುತಿಯ ಅಭಿಪ್ರಾಯವಿರುವುದರಿಂದ ವಿರೋಧವಿಲ್ಲವೆಂದು ತಿಳಿಯಬೇಕು.

तत्वप्रकाशिका – ईशशब्दात् अदृश्यत्वादिगुणको रुद्र इत्यस्योत्तरतयाऽपि सूत्रशेषं व्याचष्टे – जुष्टमिति ।।

'कर्त्तारमीशं' ಎಂಬಲ್ಲಿ ಈಶಶಬ್ದವು ಕೇಳಿಸುತ್ತಿರುವುದರಿಂದ ರುದ್ರನನ್ನು ಸ್ವೀಕರಿಸಬೇಕಲ್ಲವೇ? ಎಂಬ ಪೂರ್ವಪಕ್ಷಕ್ಕೆ ಉತ್ತರಿಸಲು ಭಾಷ್ಯಕಾರರು ಸೂತ್ರದಲ್ಲಿರುವ 'ಭೇದವ್ಯಪದೇಶಾತ್' ಎಂಬ ಭಾಗವನ್ನು ವ್ಯಾಖ್ಯಾನಿಸುತ್ತಿದ್ದಾರೆ ''ಜುಷ್ಟಮ್'' ಇತ್ಯಾದಿಯಾಗಿ.

तत्वप्रकाशिका – अस्याक्षरस्यान्यमीशमिति प्रसिद्धेशाद्रुद्राद्भेदव्यपदेशान्न रुद्रोऽदृश्यत्वादिगुणक इत्यर्थः ।

ಅಕ್ಷರ ಎಂಬ ಪರಮಾತ್ಮನಿಗೆ ''ಅನ್ಯಮೀಶಂ'' ಎಂಬುದಾಗಿ ಈಶಶಬ್ದವಾಚ್ಯತ್ವವನ್ನು ಹೇಳಲಾಗಿದೆ. ಆದ್ದರಿಂದ ಪರಮಾತ್ಮನೇ ಮುಖ್ಯವಾಗಿ ಈಶಶಬ್ದದಿಂದ ವಾಚ್ಯನಾಗುತ್ತಾನೆ. ಪ್ರಸಿದ್ಧನಾದ ರುದ್ರನಿಗಿಂತ ಪರಮಾತ್ಮನಿಗೆ ಭೇದವನ್ನು ಹೇಳಿರುವುದರಿಂದ ರುದ್ರನು ಅದೃಶ್ಯತ್ವಾದಿ ಗುಣವುಳ್ಳವನಾಗುವುದಿಲ್ಲ.

तत्वप्रकाशिका – यदपि पृथिव्यादिदृष्टान्तेन जगत्कारणत्ववचनं तत्कारणत्वमात्रतात्पर्यम् । ब्रह्माक्षरेशशब्दास्तु विष्णावेव मुख्याः । बाधकाभावस्योक्तत्वात् ।। २२ ।।

ಇನ್ನು ಪೃಥಿವ್ಯಾದಿ ದೃಷ್ಟಾಂತದಿಂದ ಜಗತ್ಕಾರಣತ್ವದ ಮಾತೂ ಸಹ ಕೇವಲ ಕಾರಣತ್ವದಲ್ಲಷ್ಟೇ ತಾತ್ಪರ್ಯವನ್ನು ಹೊಂದಿದೆ. ಬ್ರಹ್ಮ, ಅಕ್ಷರ, ಈಶಶಬ್ದಗಳು ವಿಷ್ಣುವಿನಲ್ಲೇ ಮುಖ್ಯವಾಗಿವೆ. ಈ ವಿಷಯದಲ್ಲಿ ಯಾವುದೇ ಬಾಧಕವಿಲ್ಲವೆಂಬುದನ್ನು ಮುಂದೆ ಸ್ಪಷ್ಟ ಪಡಿಸುತ್ತೇವೆ.

ಭಾವದೀಪಃ –

ॐ विशेषणभेदव्यपदेशाभ्यां च नेतरौ ॐ ।।

ननु पूर्वं कयापि युक्त्या प्रकृत्यादेरनिरासाद् विशेषणभेदव्यपदेशाभ्यां चेति कथं चशब्द इत्यत आह – तदर्थादिति ।।

॥ ಓಂ ವಿಶೇಷಣಭೇದವ್ಯಪದೇಶಾಭ್ಯಾಂ ಚ ನೇತರೌ ಓಂ ॥

ಹಿಂದಿನ ಸೂತ್ರದಲ್ಲಿ ಪ್ರಕೃತಿ ಹಾಗೂ ಚತುರ್ಮುಖಬ್ರಹ್ಮದೇವರನ್ನು ಅದೃಶ್ಯತ್ವಾದಿ-ಗುಣಗಳುಳ್ಳವರಲ್ಲವೆಂದು ಯಾವುದೇ ಯುಕ್ತಿಗಳಿಂದಲೂ ಸಹ ನಿರಾಕರಿಸಿಲ್ಲ. ಹೀಗಿರುವಾಗ "ವಿಶೇಷಣಭೇದವ್ಯಪದೇಶಾಭ್ಯಾಂ ಚ" ಎಂಬಲ್ಲಿ "ಚ" ಎಂಬ ಶಬ್ದವನ್ನು ಏಕೆ ಹೇಳಿದ್ದಾರೆ? ಎಂಬ ಪ್ರಶ್ನೆಗೆ "ತದರ್ಥಾತ್" ಎಂಬ ಪದದಿಂದ ಉತ್ತರಿಸಿದ್ದಾರೆ.

ಭಾವದೀಪಃ – धर्मोक्तेरिति हेतोः स्वपक्षसाधन इव विष्णुरेवेत्यवधारणव्यावर्त्य-पूर्वपक्षकोटिनिरासेऽपि व्यापारादिति भावः ।

ಮುಂದಿನ ಸೂತ್ರದಲ್ಲಿ "ಧರ್ಮೋಕ್ತೇಃ" ಎಂಬ ಹೇತುವಿನಿಂದ ವಿಷ್ಣು ಒಬ್ಬನೇ ಅದೃಶ್ಯತ್ವಾದಿ ಗುಣಗಳುಳ್ಳವನಾಗಿದ್ದಾನೆಂಬ ಸ್ವಪಕ್ಷಸಾಧನೆಯಲ್ಲಿ ಹೇತುವನ್ನು ಹೇಳಿದ್ದಾರೆ. ಈ ಅವಧಾರಣೆಯಿಂದ ಪೂರ್ವಪಕ್ಷಕೋಟಿಯನ್ನೂ ಸಹ ಅರ್ಥಾತ್ ನಿರಾಕರಿಸಿದಂತಾಗುತ್ತದೆ.

ಭಾವದೀಪಃ – तपसेति ।। चीयते सम्बद्ध्यते ब्रह्म परं ब्रह्मेत्यर्थः । ज्ञानमयं ज्ञानात्मकं न त्वालोचनात्मकमित्युक्तार्थ इत्यर्थः । विवृतमेतत् कर्मनिर्णय-टीकायाम् । सर्वज्ञत्वात् सर्वविच्छन्दिताप्तकामत्वाद्यस्य तपो ज्ञानस्वरूपं न त्वालोचनात्मकं सन्तापात्मकं वा । अज्ञो ह्यालोचयति । अनाप्तकामस्तपस्यति । 'स तपस्तप्त्वा । इदं सर्वमसृजत' इत्यस्य व्याख्यानमेतदिति वा ।

"ಚೀಯತೇ" ಎಂಬ ಶಬ್ದಕ್ಕೆ ಸಂಬಂಧವನ್ನು ಹೊಂದಲಾಗುತ್ತದೆ ಎಂದರ್ಥ. "ಬ್ರಹ್ಮ" ಎಂಬ ಶಬ್ದಕ್ಕೆ ಪರಬ್ರಹ್ಮನ ವಿಷಯದಲ್ಲಿ ಎಂದರ್ಥ. "ಜ್ಞಾನಮಯಂ" ಎಂಬುದು ಜ್ಞಾನಸ್ವರೂಪವೇ ಹೊರತು ಆಲೋಚನಾತ್ಮಕವಲ್ಲ. ಇದನ್ನು ಕರ್ಮನಿರ್ಣಯ ಟೀಕೆಯಲ್ಲಿ ವಿವರಿಸಿದ್ದಾರೆ. ಸರ್ವಜ್ಞನಾಗಿರುವುದರಿಂದ "ಸರ್ವವಿತ್" ಶಬ್ದಪ್ರತಿಪಾದ್ಯವಾದ ಆಪ್ತಕಾಮತ್ವವಿರುವುದರಿಂದ ಯಾರ ತಪಸ್ಸು ಜ್ಞಾನಸ್ವರೂಪವಾಗಿದೆಯೋ ಹೊರತು ಆಲೋಚನಸ್ವರೂಪವಾಗಿಲ್ಲವೋ ಅಥವಾ ಸಂತಾಪಸ್ವರೂಪವೂ ಆಗಿಲ್ಲವೋ ಅಂತಹ ತಪಸ್ಸನ್ನು ವಿವಕ್ಷಿಸಬೇಕು. ಅಜ್ಞಾನಿಯಾದವನಷ್ಟೇ ಆಲೋಚಿಸುತ್ತಾನೆ ಆಪ್ತಕಾಮನೇ ತಪಸ್ಸನ್ನು ಆಚರಿಸುತ್ತಾನೆ. ಇದು "ಸ ತಪಸ್ತಪ್ತ್ವಾ ಇದಂ ಸರ್ವಮಸೃಜತ್" ಎಂಬುದರ ವ್ಯಾಖ್ಯಾನವಾಗಿದೆ.

ಭಾವದೀಪಃ – ನಾಚೇತನೇತಿ ।। ಚಿತ್ಪ್ರಕೃತಿನಿಷೇಧಸ್ತು ನಾನೇನ ಸಮ್ಭವತಿ । ತಸ್ಯಾ ಅತ್ರೋಕ್ತಾಕ್ಷರತ್ವೇ ವಿಶ್ವಕರ್ತೃತ್ವಪ್ರಾಪ್ತ್ಯಾ ಸಾರ್ವಜ್ಞಸ್ಯಾಪಿ ಶಕ್ಯಶಙ್ಕತ್ವಾತ್ । ಶ್ರುತೇಃ ಸಙ್ಕುಚಿತ-ಸಾರ್ವಜ್ಞಪರತ್ವಸಮ್ಭವಾಚ್ಚ ಜಡಪ್ರಕೃತಿಮಾತ್ರನಿಷೇಧೇ ಹೇತುರಯಮಿತಿ ಭಾವಃ ।

ಅಚೇತನಪ್ರಕೃತಿಯನ್ನಷ್ಟೇ ನಿಷೇಧ ಮಾಡಬಹುದು ಹೊರತು ಚಿತ್ಪ್ರಕೃತಿಯನ್ನಲ್ಲ. ಏಕೆಂದರೆ ಚಿತ್ಪ್ರಕೃತಿಯನ್ನು ಅಕ್ಷರವೆಂದು ಪರಿಗಣಿಸಿದರೆ ವಿಶ್ವಕರ್ತೃತ್ವವನ್ನೂ ಸಹ ಹೇಳಿದಂತಾಗುತ್ತದೆ ಆದರಲ್ಲಿ ಸರ್ವಜ್ಞತ್ವವನ್ನು ಶಂಕಿಸಬಹುದು. ಶ್ರುತಿಯು ಹೇಳುವ ಸಾರ್ವಜ್ಞ್ಯವನ್ನು ಸಂಕೋಚ ಮಾಡಬಹುದಾದ್ದರಿಂದ ಜಡಪ್ರಕೃತಿಯನ್ನಷ್ಟೇ ನಿಷೇಧ ಮಾಡಲು ಇದು ಹೇತುವಾಗಿದೆ ಎಂದು ತಿಳಿಯಬೇಕು.

ಭಾವದೀಪಃ –'ಏತದ್ಬ್ರಹ್ಮ ಚತುರ್ಮುಖಃ' ಇತಿ ತಚ್ಛಾಙ್ಕ್ಯದಿಶಾऽರ್ಥಮಾಹ – ತಸ್ಮಾದಿತಿ ।। ಚತುರ್ಮುಖಾಖ್ಯಮಿತಿ ನಾಗರೂಪಾನ್ನಾಭಿಮಾನೀತಿ ಯೋಜ್ಯಮ್ । ಪೂರ್ವವಾಕ್ಯೇ 'ತಪಸಾ ಚೀಯತೇ ಬ್ರಹ್ಮ' ಇತಿ ಬ್ರಹ್ಮಪದೇನ ಪರಬ್ರಹ್ಮೋಕ್ತಾವಪ್ಯತ್ರ ಜಾಯತ ಇತ್ಯುಕ್ತಬಾಧಕಾದ್ಯೋಕ್ತಿರ್ಯುಕ್ತೇತಿ ಭಾವಃ ।

"ಏತದ್ಬ್ರಹ್ಮ" ಎಂದರೆ ಚತುರ್ಮುಖನೇ ಆಗಿದ್ದಾನೆಂದು ಭಾಷ್ಯದ ಪ್ರಕಾರ ಅರ್ಥವನ್ನು "ತಸ್ಮಾತ್" ಇತ್ಯಾದಿಯಾಗಿ ಹೇಳಿದ್ದಾರೆ. ಚತುರ್ಮುಖನೆಂಬ ಬ್ರಹ್ಮನು ನಾಮ, ರೂಪ ಮತ್ತು ಅನ್ನಗಳಿಗೆ ಅಭಿಮಾನಿಯಾಗಿದ್ದಾನೆ. ಇವನು ಅಕ್ಷರನಿಂದ ಹುಟ್ಟಿದಕಾರಣ ಅಕ್ಷರನನ್ನೇ ಚತುರ್ಮುಖಬ್ರಹ್ಮನೆಂದು ವಿವಕ್ಷಿಸಲು ಸಾಧ್ಯವಿಲ್ಲ. ಹಿಂದಿನ ವಾಕ್ಯದಲ್ಲಿ "ತಪಸಾ ಚೀಯತೇ ಬ್ರಹ್ಮ" ಎಂಬಲ್ಲಿರುವ ಬ್ರಹ್ಮಪದದಿಂದ ಮಹಾವಿಷ್ಣುವು ಪ್ರತಿಪಾದ್ಯನಾದರೂ ಪ್ರಕೃತ "ಜಾಯತೇ" ಎಂಬ ಬಾಧಕದಿಂದ ಮಹಾವಿಷ್ಣುವನ್ನು ಬಿಟ್ಟು ಬೇರೆಯವನು ಪ್ರತಿಪಾದ್ಯನಾಗುತ್ತಾನೆಂದು ಹೇಳುವುದು ತಪ್ಪಲ್ಲವೆಂದು ತಿಳಿಯಬೇಕು.

ಭಾವದೀಪಃ – ತಥಾಚ ನ ಶ್ಲೋಕಶಬ್ದೇನ ದ್ವಿರುಕ್ತೇನ ಭೇದಶ್ರುತಿಂ ವಿನಾ ವಸ್ತ್ವದ್ವಯ ಕುತ್ರಚಿದುಚ್ಯತ ಇತಿ ತಾರ್ತೀಯಗೀತಾಭಾಷ್ಯಸ್ಥವಾಕ್ಯಾವಿರೋಧ ಇತಿ ಧ್ಯೇಯಮ್ ।

ಆದ್ದರಿಂದ ಒಂದೇ ಶಬ್ದವನ್ನು ಎರಡುಬಾರಿ ಹೇಳಿದಾಗ ಭೇದಶ್ರುತಿ ಇಲ್ಲದಿದ್ದರೆ ಎರಡು ವಸ್ತುಗಳು ಎಲ್ಲಿಯೂ ಸಹ ಪ್ರತಿಪಾದ್ಯವಾಗುವುದಿಲ್ಲ ಎಂಬ ಮೂರನೇ ಅಧ್ಯಾಯದ ಗೀತಾಭಾಷ್ಯದಲ್ಲಿರುವ ವಾಕ್ಯದಿಂದಲೂ ಸಹ ವಿರೋಧವನ್ನು ಪರಿಹರಿಸಿದಂತಾಯಿತು.

ಭಾವದೀಪಃ – ವಿದ್‌ಲೃ ಲಾಭ ಇತಿ ।। ಸರ್ವಂ ವಿನ್ದತ ಇತಿ ವಾ, ಸರ್ವಂ ವೇದಯತಿ ಉತ್ಪಾದಯತೀತಿ ವಾ ಸರ್ವವಿತ್ । ಆಪ್ತಕಾಮಃ ಸರ್ವೋತ್ಪಾದಕೋ ವೇತ್ಯರ್ಥಃ ।

''ಸರ್ವಂ ವಿಂದತೇ'' ಅಥವಾ ''ಸರ್ವಂ ವೇದಯತಿ'' = ಉತ್ಪಾದಯತಿ ಎಲ್ಲವನ್ನು ತಿಳಿದಿದ್ದಾನೆ ಮತ್ತು ಎಲ್ಲವನ್ನೂ ಹುಟ್ಟಿಸುತ್ತಾನೆ ಎಂದು ''ಸರ್ವವಿತ್'' ಶಬ್ದವು ನಿಷ್ಪನ್ನವಾಗಿದೆ ಎಂದು ತಿಳಿಯಬೇಕು. ಅಥವಾ ಆಪ್ತಕಾಮನಾದವನು ಎಲ್ಲದಕ್ಕೂ ಉತ್ಪಾದಕನಾಗಿದ್ದಾನೆಂದೂ ಸಹ ತಿಳಿಯಬಹುದು.

ಭಾವದೀಪಃ – ಸೂತ್ರಖಣ್ಡಸ್ಯಾರ್ಥಾನ್ತರಮಿತಿ ।। ಪರತಃ ಪರತ್ವರೂಪವಿಶೇಷಣಾದಕ್ಷರವ್ಯಕ್ತೀನಾಂ ಭೇದವ್ಯಪದೇಶಾದಿತ್ಯರ್ಥಾನ್ತರಮಿತ್ಯರ್ಥಃ । ಆಕಾಙ್ಕ್ಷಾಮನುರುಧ್ಯ ಭಾಷ್ಯಮೇವಕಾರವ್ಯಾವೃತ್ತಿಂ ವದನ್ ವ್ಯಾಚಷ್ಟೇ – ಭವೇದಿತಿ ।।

ಸೂತ್ರಖಂಡಕ್ಕೆ ಮತ್ತೊಂದು ಬಗೆಯ ಅರ್ಥ ಹೀಗಿದೆ - ''ಪರತಃ ಪರತ್ವ'' ಎಂಬ ವಿಶೇಷಣದಿಂದ ಅಕ್ಷರವ್ಯಕ್ತಿಗಳಿಗೆ ಭೇದವನ್ನು ಹೇಳಿರುವುದರಿಂದ ಎಂದು. ಆಕಾಂಕ್ಷೆಗೆ ಅನುಸಾರಿಯಾಗಿ ''ಏವ'' ಕಾರದಿಂದ ವ್ಯಾವೃತ್ತವಾದದ್ದನ್ನು ತಿಳಿಸುತ್ತಾ ಭಾಷ್ಯವನ್ನು ವ್ಯಾಖ್ಯಾನಿಸುತ್ತಿದ್ದಾರೆ ''ಭವೇತ್'' ಇತ್ಯಾದಿಯಾಗಿ.

ಭಾವದೀಪಃ – ತ್ರಿಅಕ್ಷರೋಕ್ತಾವಪಿ ಕಥಂ ವಿಶೇಷಣಮಿತ್ಯತೋ ''ಅಕ್ಷರಾತ್ಪರತಃ ಪರಸ್ಯಾಕ್ಷರಾನ್ತರತ್ವವಚನಾತ್'' ಇತಿ ನ್ಯಾಯವಿವರಣೋಕ್ತಂ ಸಂಯೋಜಯತಿ – ಅಕ್ಷರಾನ್ತರಾದಿತಿ ।। ಅಕ್ಷರದ್ವಯೋಕ್ತಾವಪಿ ಪೂರ್ತೌ ತ್ರಿಅಕ್ಷರೋಕ್ತಿರಕ್ಷರಾಜ್ಜಡಪ್ರಕೃತೇಃ ಪರತಃ ಶ್ರೀತತ್ತ್ವಾತ್ಪರೋ ವಿಷ್ಣುರಿತಿ ವೈಯ್ಯಧಿಕರಣ್ಯೇನ ಪರತೋऽಕ್ಷರಾತ್ ಶ್ರೀತತ್ತ್ವಾದಿತಿ ಸಾಮಾನಾಧಿಕರಣ್ಯೇನ ಚಾನ್ವಯಾಯೇತ್ಯಾಹುಃ – ಅನ್ಯಮೀಶಮಿತೀತಿ ।।

ಮೂರುಬಗೆಯ ತತ್ವವನ್ನು ಹೇಳಿರುವುದರಿಂದ ಪರತಃ ಪರತ್ವವು ಹೇಗೆ ವಿಶೇಷಣವಾಗುತ್ತದೆ? ಎಂಬ ಪ್ರಶ್ನೆಗೆ ''ಅಕ್ಷರಾತ್ಪರತಃ ಪರಸ್ಯಾಕ್ಷರಾನ್ತರತ್ವವಚನಾತ್'' ಎಂಬ ನ್ಯಾಯವಿವರಣದ ಮಾತನ್ನು ಯೋಜನೆ ಮಾಡುತ್ತಿದ್ದಾರೆ ''ಅಕ್ಷರಾನ್ತರಾತ್'' ಇತ್ಯಾದಿಯಾಗಿ. ವಸ್ತುತಃ ಎರಡು ಬಗೆಯ ಅಕ್ಷರಗಳನ್ನು ಹೇಳಿದ್ದರೆ ಸಾಕಾಗುತ್ತಿತ್ತು. ಆದರೂ ಕೂಡ ಮೂರನೆಯ ಅಕ್ಷರವನ್ನು ಹೇಳಿದ್ದರಿಂದ ಆಕ್ಷರ ತತ್ವವೆನಿಸಿದ ಜಡಪ್ರಕೃತಿಗಿಂತಲೂ ಲಕ್ಷ್ಮೀದೇವಿಯು ಶ್ರೇಷ್ಠಳು, ಆವಳಿಗಿಂತಲೂ ಮಹಾವಿಷ್ಣು ಶ್ರೇಷ್ಠನೆಂದು ''ಅಕ್ಷರಾತ್'' ಮತ್ತು ''ಪರತಃ'' ಎಂಬೆರಡು ಪದಗಳಿಗೆ ವೈಯ್ಯಧಿಕರಣ್ಯದಿಂದ ಅರ್ಥವನ್ನು ತಿಳಿಯಬೇಕು. ಅಥವಾ ಶ್ರೇಷ್ಠಳಾದ ಅಕ್ಷರಳೆನಿಸಿದ ಲಕ್ಷ್ಮೀದೇವಿಗಿಂತ ವಿಷ್ಣು ಶ್ರೇಷ್ಠನಾಗಿದ್ದಾನೆಂದು 'ಅಕ್ಷರಾತ್' ಮತ್ತು 'ಪರತಃ' ಎಂಬೆರಡು ಪದಗಳಿಗೆ ಸಾಮಾನಾಧಿಕರಣ್ಯದಿಂದಲೂ ಸಹ ಅನ್ವಯವನ್ನು ತಿಳಿಯಬಹುದು ಎಂದು ಕೆಲವರು ವ್ಯಾಖ್ಯಾನಿಸುತ್ತಾರೆ.

ಭಾವದೀಪಃ – ಅನ್ಯೋ ಮಾರ್ಗಮ್ ಇತ್ಯುಕ್ತೇ ಪ್ರಸಿದ್ಧಮಾರ್ಗಾದನ್ಯತ್ವವದ್ ಅನ್ಯಮೀಶಮಿತ್ಯುಕ್ತೇ ಪ್ರಸಿದ್ಧೇಶ್ವರಾದ್ ರುದ್ರಾದನ್ಯತ್ವಪ್ರತೀತೇರಿತಿ ಭಾವಃ । ಏತದರ್ಥಾನ್ತರಮುಪೇತ್ಯೋಕ್ತಮಿತಿ ಕೃತ್ವಾ

आनन्दमयनयोक्त्या द्युभ्वादिनये वक्ष्यमाणेन जीवादन्यः स्वतन्त्रोऽयमित्यार्थवर्ण-भाष्येण च न विरोधः ।

ಬೇರೆ ಮಾರ್ಗವೆಂದು ಹೇಳಿದರೆ ಪ್ರಸಿದ್ಧ ಮಾರ್ಗಕ್ಕಿಂತ ಬೇರೆಯಾದ ಮಾರ್ಗವೆಂಬ ಅರ್ಥವು ತಿಳಿಯುವಂತೆ "ಅನ್ಯಮೀಶಂ" ಎಂದು ಹೇಳಿದಾಗ ಪ್ರಸಿದ್ಧನಾದ ರುದ್ರನೆಂಬ ಈಶ್ವರನಿಗಿಂತ ಭಿನ್ನನಾದವನು ಎಂಬ ಅರ್ಥವು ತಿಳಿಯುತ್ತದೆ ಎಂದು ಅಭಿಪ್ರಾಯ. ಇದು ಮತ್ತೊಂದು ಅರ್ಥವೆಂದು ಅಂಗೀಕರಿಸಿ ವ್ಯಾಖ್ಯಾನಿಸಿದ್ದಾರೆ ಎಂದು ತಿಳಿಯಬೇಕು. ಹಿಂದೆ ಆನಂದಮಯಾಧಿಕರಣದಲ್ಲಿ ಹೇಳಿದಂತೆ ಮತ್ತು ಮುಂದೆ ದ್ಯುಭ್ವಾದ್ಯಧಿಕರಣದಲ್ಲಿ ಹೇಳುವಂತೆ ಜೀವನಿಗಿಂತ ಭಿನ್ನನಾದ ವಿಷ್ಣು ಸ್ವತಂತ್ರನಾಗಿ ಇರುತ್ತಾನೆ ಎಂದು ತಿಳಿಯಬೇಕು. ಹೀಗೆ ಹೇಳಿದ್ದರಿಂದ ಆಥರ್ವಣಭಾಷ್ಯದಿಂದಲೂ ವಿರೋಧ ಬರುವುದಿಲ್ಲ.

भावदीपः – नचानेकार्थत्वं दोषः, वचनेनैव प्रतीयमानत्वादर्थस्य कल्पनाभावादित्यादिना कर्मनिर्णये निरासात् ।। कारणत्वमात्रेति ।। विवृतमेतत् प्रकृतिनयानुव्याख्याने । नचोर्णनाभिजनितॄणां च विकारितेत्यादिना ।। २२ ।।

ಒಂದು ಪದಕ್ಕೆ ಅನೇಕಾರ್ಥವನ್ನು ಹೇಳುವುದು ದೋಷವಲ್ಲ. ಏಕೆಂದರೆ ಶಬ್ದವನ್ನು ಕೇಳುವುದರಿಂದಲೇ ಎರಡು ಅರ್ಥಗಳು ಉಪಸ್ಥಿತವಾಗುತ್ತಿರುವಾಗ ಕಲ್ಪನೆ ಮಾಡಬೇಕಾಗಿಲ್ಲ ಎಂದು ಕರ್ಮನಿರ್ಣಯದಲ್ಲಿ ಅನೇಕಾರ್ಥವನ್ನು ಹೇಳುವುದು ದೋಷವಾಗುತ್ತದೆ ಎಂಬುದನ್ನು ನಿರಾಕರಿಸಿದ್ದಾರೆ. "ಕಾರಣತ್ವಮಾತ್ರ" ಎಂದರೆ ಪ್ರಕೃತ್ಯಧಿಕರಣದ ಅನುವ್ಯಾಖ್ಯಾನದಲ್ಲಿ ವಿವರಿಸಿದಂತೆ ತಿಳಿಯಬೇಕು. ಊರ್ಣನಾಭಿ ಮೊದಲಾದವುಗಳಲ್ಲಿ ವಿಕಾರವಿಕಾರಿಭಾವವು ಇರುವುದಿಲ್ಲವೆಂದು ಹೇಳಿರುತ್ತಾರೆ.

वाक्यार्थमञ्जरी – अर्थादिति ।। परविद्याविषयत्वस्य विष्णोरन्यत्र निरवकाशत्वान्यथानुपपत्त्येत्यर्थः ।। ॐ विशेषणभेदव्यपदेशाभ्यां च नेतरौ ॐ ।। इतरौ चेतनप्रकृतिचतुर्मुखौ नादृश्यत्वादिगुणकौ 'यः सर्वज्ञः' इति सर्वज्ञत्वरूपविशेषणव्यपदेशात् । अदृश्यत्वादगुणकभेदव्यपदेशाच्चेत्यर्थः । चीयते सम्बद्धयते तपोऽकुरुतेति यावत् ।। अज्ञानप्रतीताविति ।। 'तप आलोचने' इति धातुः । आलोचनं चाज्ञस्यैवेति भावः ।। ज्ञानमयमिति ।। यस्य ब्रह्मणस्तपो ज्ञानमयं ज्ञानस्वरूपमेव, नत्वालोचनात्मकम् । कुतः? अज्ञो ह्यालोचयति, नचायम्, तथा यतः सर्वज्ञ इति हेतुतयेत्यर्थः । सामान्यविशेषवस्तुगतसामान्य-विशेषाकारविषयतया सर्वैर्ज्ञेया धर्माः सामान्यधर्माः । सर्वाज्ञेयाः विशेषधर्माः क्रमेण तदुभयविषयकत्वेन सामान्यविशेषज्ञानत्वयोरवान्तरविशेष इति न पुनरुक्तिरिति भावः । स्फुटमेतन्मनोविज्ञानशब्दयोरपुनरुक्तिप्रतिपादकानन्दमयसुधायाम् – विद्वत्

ಲಾಭ ಇತಿ ।। ತಥಾಚ ಸರ್ವೆ ವಿನ್ದತೇ ಲಭತ ಇತಿ ವಾ, ಸರ್ವೆ ವೇದಯತೇ ಉತ್ಪಾದಯತೀತಿ ವಾ ಸರ್ವವಿತ್ । ಸತ್ಯಕಾಮಃ ಸರ್ವೋತ್ಪಾದಕೊ ವೇತ್ಯರ್ಥ ಉಕ್ತೊ ಭವತಿ । ಸೂತ್ರಖಣ್ಡಸ್ಯ ವಿಶೇಷಣವ್ಯಪದೇಶಾದಿತ್ಯಸ್ಯ । ಪ್ರಕೃತಾಕ್ಷರಮ್ ಅದೃಶ್ಯತ್ವಾದಿಗುಣಕಮ್ ।। **ಸೂತ್ರಶೇಷಮಿತಿ** ।। ಭೇದವ್ಯಪದೇಶಾನ್ನೇತರ ಇತ್ಯಂಶಮ್ ।। **ಅನ್ಯಮೀಶಮಿತಿ** ।। ಅನ್ಯೊ ಮಾರ್ಗ ಇತ್ಯುಕ್ತೆ ಪ್ರಸಿದ್ಧಮಾರ್ಗಾದ ನ್ಯತ್ವಪ್ರತೀತಿವದಿತಿ ಭಾವಃ ।।೨೨।।

ಬ್ರಹ್ಮಮೀಮಾಂಸಾಶಾಸ್ತ್ರ
ಶುದ್ಧವಾದ ಹಳದಿ ಬಣ್ಣ ಭಗವಂತನಿಗೆ ಮಾತ್ರ

ಸೂ - ॐ ।। ರೂಪೊಪನ್ಯಾಸಾಚ್ಚ ।। ॐ ।। ೨೩ ।।

ಸೂತ್ರಾರ್ಥ -- ಶ್ರುತಿಯಲ್ಲಿ 'ರುಗ್ಮವರ್ಣಂ' ಎಂಬುದಾಗಿ ಆಪ್ರಾಕೃತವಾದ ಪೀತವರ್ಣವನ್ನು ಅಕ್ಷರನಿಗೆ ಹೇಳಲಾಗಿದೆ. ಆದ್ದರಿಂದ ಬ್ರಹ್ಮನೇ ಅದೃಶ್ಯನಾಗುತ್ತಾನೆ.

।। ಶ್ರೀವೇದವ್ಯಾಸದೇವರಿಂದ ರಚಿಸಲ್ಪಟ್ಟ ಬ್ರಹ್ಮಮೀಮಾಂಸಾಶಾಸ್ತ್ರದಲ್ಲಿ
ಅದೃಶ್ಯತ್ವಾಧಿಕರಣವು ಸಮಾಪ್ತವಾಯಿತು ।।

ಶ್ರೀಜಗನ್ನಾಥಯತಿಗಳಿಂದ ರಚಿಸಲ್ಪಟ್ಟ

ಸೂತ್ರದೀಪಿಕಾ

ಸೂತ್ರದೀಪಿಕಾ — 'यदा पश्यः पश्यते' इति विष्वसाधारणस्वर्णरूप- प्रतिपादनाच्च अदृश्यत्वादिगुणको विष्णुरेवेत्यर्थः ।।

ಅರ್ಥ - ಚ = ಕೇವಲ ಧರ್ಮವನ್ನು ಹೇಳಿರುವುದರಿಂದ ಮಾತ್ರವಲ್ಲ; ಮತ್ತೇನೆಂದರೆ, ರೂಪೋಪನ್ಯಾಸಾತ್ = 'यदा पश्यः पश्यते' ಎಂಬುದಾಗಿ ವಿಷ್ಣುವಿನಲ್ಲಿ ಅಸಾಧಾರಣವಾದ ಸುವರ್ಣರೂಪವನ್ನು ಪ್ರತಿಪಾದನೆ ಮಾಡಿರುವುದರಿಂದ ಅದೃಶ್ಯತ್ವಾದಿಗುಣವುಳ್ಳವನು ವಿಷ್ಣುವೇ ಆಗುತ್ತಾನೆಂದರ್ಥ.

।। ಸೂತ್ರದೀಪಿಕೆಯಲ್ಲಿ ಅದೃಶ್ಯತ್ವಾಧಿಕರಣವು ಸಮಾಪ್ತವಾಯಿತು ।।

ಅದೃಶ್ಯತ್ವಾಧಿಕರಣ (೧-೨-೬)

आनन्दमयनयोक्त्या द्युभ्वादिनये वक्ष्यमाणेन जीवादन्यः स्वतन्त्रोऽयमित्यार्थर्वण-भाष्येण च न विरोधः ।

ಬೇರೆ ಮಾರ್ಗವೆಂದು ಹೇಳಿದರೆ ಪ್ರಸಿದ್ಧ ಮಾರ್ಗಕ್ಕಿಂತ ಬೇರೆಯಾದ ಮಾರ್ಗವೆಂಬ ಅರ್ಥವು ತಿಳಿಯುವಂತೆ "ಆನ್ಯಮೀಶಂ" ಎಂದು ಹೇಳಿದಾಗ ಪ್ರಸಿದ್ಧನಾದ ರುದ್ರನೆಂಬ ಈಶ್ವರನಿಗಿಂತ ಭಿನ್ನನಾದವನು ಎಂಬ ಅರ್ಥವು ತಿಳಿಯುತ್ತದೆ ಎಂದು ಅಭಿಪ್ರಾಯ. ಇದು ಮತ್ತೊಂದು ಅರ್ಥವೆಂದು ಅಂಗೀಕರಿಸಿ ವ್ಯಾಖ್ಯಾನಿಸಿದ್ದಾರೆ ಎಂದು ತಿಳಿಯಬೇಕು. ಹಿಂದೆ ಆನಂದಮಯಾಧಿಕರಣದಲ್ಲಿ ಹೇಳಿದಂತೆ ಮತ್ತು ಮುಂದೆ ದ್ಯುಭ್ವಾದ್ಯಧಿಕರಣದಲ್ಲಿ ಹೇಳುವಂತೆ ಜೀವನಿಗಿಂತ ಭಿನ್ನನಾದ ವಿಷ್ಣು ಸ್ವತಂತ್ರನಾಗಿ ಇರುತ್ತಾನೆ ಎಂದು ತಿಳಿಯಬೇಕು. ಹೀಗೆ ಹೇಳಿದ್ದರಿಂದ ಆಥರ್ವಣಭಾಷ್ಯದಿಂದಲೂ ವಿರೋಧ ಬರುವುದಿಲ್ಲ.

भावदीपः – नचानेकार्थत्वं दोषः, वचनेनैव प्रतीयमानत्वादर्थस्य कल्पनाभावादित्यादिना कर्मनिर्णये निरासात् ।। **कारणत्वमात्रेति** ।। विवृतमेतत् प्रकृतिनयानुव्याख्याने । नचोर्णनाभिजनितृणां च विकारितेत्यादिना ।। २२ ।।

ಒಂದು ಪದಕ್ಕೆ ಅನೇಕಾರ್ಥವನ್ನು ಹೇಳುವುದು ದೋಷವಲ್ಲ. ಏಕೆಂದರೆ ಶಬ್ದವನ್ನು ಕೇಳುವುದರಿಂದಲೇ ಎರಡು ಅರ್ಥಗಳು ಉಪಸ್ಥಿತವಾಗುತ್ತಿರುವಾಗ ಕಲ್ಪನೆ ಮಾಡಬೇಕಾಗಿಲ್ಲ ಎಂದು ಕರ್ಮನಿರ್ಣಯದಲ್ಲಿ ಅನೇಕಾರ್ಥವನ್ನು ಹೇಳುವುದು ದೋಷವಾಗುತ್ತದೆ ಎಂಬುದನ್ನು ನಿರಾಕರಿಸಿದ್ದಾರೆ. "ಕಾರಣತ್ವಮಾತ್ರ" ಎಂದರೆ ಪ್ರಕೃತ್ಯಧಿಕರಣದ ಅನುವ್ಯಾಖ್ಯಾನದಲ್ಲಿ ವಿವರಿಸಿದಂತೆ ತಿಳಿಯಬೇಕು. ಊರ್ಣನಾಭಿ ಮೊದಲಾದವುಗಳಲ್ಲಿ ವಿಕಾರವಿಕಾರಿಭಾವವು ಇರುವುದಿಲ್ಲವೆಂದು ಹೇಳಿರುತ್ತಾರೆ.

वाक्यार्थमञ्जरी – **अर्थादिति** ।। परविद्याविषयत्वस्य विष्णोरन्यत्र निरवकाशत्वान्यथानुपपत्त्येत्यर्थः ।। **ॐ विशेषणभेदव्यपदेशाभ्यां च नेतरौ ॐ** ।। इतरौ चेतनप्रकृतिचतुर्मुखौ नादृश्यत्वादिगुणकौ 'यः सर्वज्ञः' इति सर्वज्ञत्वरूपविशेषणव्यपदेशात् । अदृश्यत्वादगुणकभेदव्यपदेशाच्चेत्यर्थः । चीयते सम्बद्ध्यते तपोऽकुरुतेति यावत् ।। **अज्ञानप्रतीताविति** ।। 'तप आलोचने' इति धातुः । आलोचनं चाज्ञस्यैवेति भावः ।। **ज्ञानमयमिति** ।। यस्य ब्रह्मणस्तपो ज्ञानमयं ज्ञानस्वरूपमेव, नत्वालोचनात्मकम् । कुतः? अज्ञो ह्यालोचयति, नचायम्, तथा यतः सर्वज्ञ इति हेतुतयेत्यर्थः । सामान्यविशेषवस्तुगतसामान्य-विशेषाकारविषयतया सर्वैर्ज्ञेया धर्माः सामान्यधर्माः । सर्वाज्ञेयाः विशेषधर्माः क्रमेण तदुभयविषयकत्वेन सामान्यविशेषज्ञानत्वयोरवान्तरविशेष इति न पुनरुक्तिरिति भावः । स्फुटमेतन्मनोविज्ञानशब्दयोरपुनरुक्तिप्रतिपादकानन्दमयसुधायाम् – विद्वत्

ಲಾಭ ಇತಿ ।। ತಥಾಚ ಸರ್ವೆ ವಿನ್ದತೇ ಲಭತ ಇತಿ ವಾ, ಸರ್ವೆ ವೇದಯತೇ ಉತ್ಪಾದಯತೀತಿ ವಾ ಸರ್ವವಿತ್ । ಸತ್ಯಕಾಮಃ ಸರ್ವೋತ್ಪಾದಕೊ ವೇತ್ಯರ್ಥ ಉಕ್ತೊ ಭವತಿ । ಸೂತ್ರಖಣ್ಡಸ್ಯ ವಿಶೇಷಣವ್ಯಪದೇಶಾದಿತ್ಯಸ್ಯ । ಪ್ರಕೃತಾಕ್ಷರಮ್ ಅದೃಶ್ಯತ್ವಾದಿಗುಣಕಮ್ ।। **ಸೂತ್ರಶೇಷಮಿತಿ** ।। ಭೇದವ್ಯಪದೇಶಾನ್ನೇತರ ಇತ್ಯಂಶಮ್ ।। **ಅನ್ಯಮೀಶಮಿತಿ** ।। ಅನ್ಯೊ ಮಾರ್ಗ ಇತ್ಯುಕ್ತೆ ಪ್ರಸಿದ್ಧಮಾರ್ಗಾದನ್ಯತ್ವಪ್ರತೀತಿವದಿತಿ ಭಾವಃ ।।೨೨।।

ಬ್ರಹ್ಮಮೀಮಾಂಸಾಶಾಸ್ತ್ರ
ಶುದ್ಧವಾದ ಹಳದಿ ಬಣ್ಣ ಭಗವಂತನಿಗೆ ಮಾತ್ರ

ಸೂ - ॐ ।। ರೂಪೊಪನ್ಯಾಸಾಚ್ಚ ।। ॐ ।। ೨೩ ।।

ಸೂತ್ರಾರ್ಥ -- ಶ್ರುತಿಯಲ್ಲಿ 'ರುಗ್ಮವರ್ಣಂ' ಎಂಬುದಾಗಿ ಅಪ್ರಾಕೃತವಾದ ಪೀತವರ್ಣವನ್ನು ಅಕ್ಷರನಿಗೆ ಹೇಳಲಾಗಿದೆ. ಆದ್ದರಿಂದ ಬ್ರಹ್ಮನೇ ಅದೃಶ್ಯನಾಗುತ್ತಾನೆ.

।। ಶ್ರೀವೇದವ್ಯಾಸದೇವರಿಂದ ರಚಿಸಲ್ಪಟ್ಟ ಬ್ರಹ್ಮಮೀಮಾಂಸಾಶಾಸ್ತ್ರದಲ್ಲಿ
ಅದೃಶ್ಯತ್ವಾಧಿಕರಣವು ಸಮಾಪ್ತವಾಯಿತು ।।

ಶ್ರೀಜಗನ್ನಾಥಯತಿಗಳಿಂದ ರಚಿಸಲ್ಪಟ್ಟ

ಸೂತ್ರದೀಪಿಕಾ

ಸೂತ್ರದೀಪಿಕಾ -- 'यदा पश्यः पश्यते' इति विष्वसाधारणस्वर्णरूप- प्रतिपादनाच्च अदृश्यत्वादिगुणको विष्णुरेवेत्यर्थः ।।

ಅರ್ಥ - ಚ = ಕೇವಲ ಧರ್ಮವನ್ನು ಹೇಳಿರುವುದರಿಂದ ಮಾತ್ರವಲ್ಲ; ಮತ್ತೇನೆಂದರೆ, ರೂಪೋಪನ್ಯಾಸಾತ್ = 'यदा पश्यः पश्यते' ಎಂಬುದಾಗಿ ವಿಷ್ಣುವಿನಲ್ಲಿ ಅಸಾಧಾರಣವಾದ ಸುವರ್ಣರೂಪವನ್ನು ಪ್ರತಿಪಾದನೆ ಮಾಡಿರುವುದರಿಂದ ಅದೃಶ್ಯತ್ವಾದಿಗುಣವುಳ್ಳವನು ವಿಷ್ಣುವೇ ಆಗುತ್ತಾನೆಂದರ್ಥ.

।। ಸೂತ್ರದೀಪಿಕೆಯಲ್ಲಿ ಅದೃಶ್ಯತ್ವಾಧಿಕರಣವು ಸಮಾಪ್ತವಾಯಿತು ।।

ಅದೃಶ್ಯತ್ವಾಧಿಕರಣ (೧-೨-೬)

ಶ್ರೀಮದಾನನ್ದತೀರ್ಥಭಗವತ್ಪಾದಾಚಾರ್ಯವಿರಚಿತ-

ಬ್ರಹ್ಮಸೂತ್ರಭಾಷ್ಯಮ್

ಭಾಷ್ಯಮ್ – 'ಯದಾ ಪಶ್ಯಃ ಪಶ್ಯತೇ ರುಕ್ಮವರ್ಣಂ ಕರ್ತಾರಮೀಶಂ ಪುರುಷಂ ಬ್ರಹ್ಮಯೋನಿಮ್' (ಮುಂ. ೩-೧-೩.) ಇತಿ ।

ಅನುವಾದ - ಮಾಂಡೂಕ್ಯೋಪನಿಷತ್ತಿನಲ್ಲಿ 'ಜ್ಞಾನಿಯಾದ ಜೀವನು ಯಾವಾಗ ಸುವರ್ಣ ವರ್ಣದಲ್ಲಿರುವ ಜಗತ್ತಿಗೆ ಕರ್ತೃವಾದ, ಎಲ್ಲಕ್ಕೂ ಒಡೆಯನಾದ, ಪುರುಷಶಬ್ದ-ವಾಚ್ಯನಾದ ಚತುರ್ಮುಖಬ್ರಹ್ಮದೇವರಿಗೂ ಕಾರಣನಾಗಿರುವ ಪರಮಾತ್ಮನನ್ನು ನೋಡುತ್ತಾನೋ' ಎಂಬುದಾಗಿ ಅಕ್ಷರನಲ್ಲಿ ಹಳದಿವರ್ಣವನ್ನು ಹೇಳಲಾಗಿದೆ. ಇದರಿಂದಲೂ ಅದೃಶ್ಯತ್ವಧರ್ಮವುಳ್ಳವನು ವಿಷ್ಣುವೇ ಎಂದು ನಿರ್ಣಯವಾಗುತ್ತದೆ.

ಪ್ರತಿಪದಾರ್ಥ -- ಮತ್ತೊಂದು ಯುಕ್ತಿಯಿಂದ ಅದೃಶ್ಯತ್ವಾದಿ ಗುಣಗಳನ್ನು ಸಾಧಿಸುವುದಕ್ಕಾಗಿ ಸೂತ್ರವನ್ನು ಪಠಿಸಿ ಸೂತ್ರದಲ್ಲೇ ಇರುವ ಶ್ರುತಿಯನ್ನು ಉದಾಹರಿಸುತ್ತಿದ್ದಾರೆ.

ಪಶ್ಯಃ = ಜ್ಞಾನಿಯಾದ ಜೀವನು, ಯದಾ = ಯಾವಾಗ, ರುಗ್ಮವರ್ಣಂ = ಸುವರ್ಣಬಣ್ಣದಲ್ಲಿರುವ, ಕರ್ತಾರಂ = ಜಗತ್ತಿಗೆ ಒಡೆಯನಾದ ಜಗತ್ತಿಗೆ ಕರ್ತೃವಾದ, ಈಶಂ = ಎಲ್ಲ ಪದಾರ್ಥಗಳಿಗೂ ಸ್ವಾಮಿಯಾದ, ಪುರುಷಂ = ಪುರುಷಶಬ್ದವಾಚ್ಯನಾದ, ಬ್ರಹ್ಮಯೋನಿಂ = ಚತುರ್ಮುಖಬ್ರಹ್ಮದೇವರಿಗೂ ಕಾರಣನಾದ ಪರಮಾತ್ಮನನ್ನು, ಪಶ್ಯತೇ = ನೋಡುತ್ತಾನೋ, ಇತಿ = ಹೀಗೆ ಅದೃಶ್ಯತ್ವಗುಣವುಳ್ಳ ಪರಮಾತ್ಮನಲ್ಲಿ ಭಂಗಾರವರ್ಣವನ್ನು ವಿಶೇಷಣವನ್ನಾಗಿ ಹೇಳಲಾಗಿದೆ.(೧)

---

(೧) ಭಾಷ್ಯದೀಪಿಕಾ – ಯುಕ್ತ್ಯನ್ತರೇಣ ವಿಷ್ಣೋರೇವಾದೃಶ್ಯತ್ವಾದಿಗುಣಕತ್ವಂ ಸಾಧಯತ್ಸೂತ್ರಂ ಪಠಿತ್ವಾ ತದುಪಾತ್ತಶ್ರುತಿಮೇವೋದಾಹರತಿ – ರೂಪೋಪನ್ಯಾಸೇತಿ ।। ಇತಿ ರೂಪೋಪನ್ಯಾಸಾದಿತ್ಯನ್ವಯಃ । ಸೂತ್ರೇ ಚಶಬ್ದೋ ಯುಕ್ತಿಸಮುಚ್ಚಯೇ । ತಥಾ ಚ – ನ ಕೇವಲಂ ಧರ್ಮೋಕ್ತೇಃ, ಕಿನ್ತ್ವದೃಶ್ಯತ್ವಾದಿಗುಣಕಸ್ಯ 'ಯದಾ' ಇತಿ ಶ್ರುತೌ ಶುದ್ಧರುಗ್ಮರೂಪೋಕ್ತೇಶ್ಚಾದೃಶ್ಯತ್ವಾದಿಗುಣಕೋ ವಿಷ್ಣುರೇವೇತಿ ಯೋಜನಾ । ಅತ್ರ ಯದೇತಿ ವಾಕ್ಯಸ್ಯ 'ತದಾ ವಿದ್ವಾನ್ ಪುಣ್ಯಪಾಪೇ ವಿಧೂಯ ನಿರಞ್ಜನಃ ಪರಮಂ ಸಾಮ್ಯಮುಪೈತಿ' (ಮುಂ. ೩-೧-೩) ಇತಿ ವಾಕ್ಯಶೇಷೇಣಾನ್ವಯಃ । ಪಶ್ಯತೀತಿ ಪಶ್ಯೋ ದ್ರಷ್ಟಾ ಜೀವಃ । ಯದಾ 'ರುಗ್ಮವರ್ಣಂ' ಶುದ್ಧಹೇಮವರ್ಣಂ 'ಬ್ರಹ್ಮಯೋನಿಂ' ಹಿರಣ್ಯಗರ್ಭಕಾರಣಮ್, ಅತ ಏವ ಜಗತಃ ಕರ್ತಾರಂ 'ಪುರುಷಂ' ಪೂರ್ಣಷಡ್ಗುಣಂ 'ಸ್ವಸ್ಯೇಶಂ' ವಿಷ್ಣುಂ 'ಪಶ್ಯತೇ' ಪಶ್ಯತಿ ತದಾऽಸೌ 'ವಿದ್ವಾನ್' ಜೀವನ್ಮುಕ್ತಃ 'ಪುಣ್ಯಪಾಪೇ' ಅಪ್ರಾರಬ್ಧೇ ಅನಿಷ್ಟಪುಣ್ಯಂ ಪಾಪಂ ಚ ವಿಧೂಯ 'ನಿರಞ್ಜನಃ' ಜ್ಞಾನೋತ್ತರವಿಕರ್ಮಕೃತಾಶುಚಿತ್ವಾದಿದೋಷರಹಿತಃ, 'ಅಞ್ಜನಾಖ್ಯಾವಿದ್ಯಾರಹಿತಃ' ಇತಿ ಸುಧೋಕ್ತೇರಜ್ಞಾನರಹಿತೋ ವಾ 'ಪರಮಂ ಸಾಮ್ಯಂ' ಪೂರ್ಣಾನನ್ದತ್ವಾದಿಸಾಮ್ಯಂ ನಿರ್ದುಃಖತ್ವಾದಿಸಾಮ್ಯಂ ವಾ

ಭಾಷ್ಯಮ್ – 'एको नारायण आसीन्न ब्रह्मा न च शङ्करः । स मुनिर्भूत्वा समचिन्तयत् । तत एते व्यजायन्त विश्वो हिरण्यगर्भोऽग्नियमो वरुणरुद्रेन्द्रा इति । तस्य हैतस्य परमस्य नारायणस्य चत्वारि रूपाणि शुक्लं रक्तं रौग्मं कृष्णमिति । स एतान्येतेभ्योऽभ्यचीक्लृपत् । विमिश्राणि व्यमिश्रयत् ।

ಅನುವಾದ - ಮುಖ್ಯವಾಗಿ ನಾರಾಯಣನೊಬ್ಬನೇ ಪ್ರಳಯಕಾಲದಲ್ಲಿ ಇದ್ದನು. ಚತುರ್ಮುಖಬ್ರಹ್ಮನು ಅಥವಾ ರುದ್ರನು ಯಾರೂ ಸಹ ಇರಲಿಲ್ಲ. ನಾರಾಯಣನು ಮೌನವನ್ನು ತಾಳಿ ಸೃಷ್ಟಿಯನ್ನು ಮಾಡಲು ಇಚ್ಛಿಸಿದನು. ಅನಂತರ ಆ ಭಗವಂತನಿಂದ ವಾಯು ಮೊದಲಾದ ದೇವತೆಗಳು ಮಹದಾದಿತತ್ವಗಳು ಹುಟ್ಟಿದವು. ಹಾಗೂ ವಾಯುದೇವರು, ಚತುರ್ಮುಖಬ್ರಹ್ಮ, ಅಗ್ನಿ, ಯಮ ವರುಣ ರುದ್ರ, ಇಂದ್ರ ಮೊದಲಾದ ದೇವತೆಗಳು ಹುಟ್ಟಿದರು. ಮಹಾಮಹಿಮೆಯುಳ್ಳ ಸರ್ವೋತ್ತಮನಾದ ಭಗವಂತನ ನಾಲ್ಕುರೂಪಗಳು ಬಿಳಿ, ಕೆಂಪು, ಹಳದಿ, ಕಪ್ಪು ಎಂಬ ನಾಲ್ಕು ಬಣ್ಣದವು. ಭಗವಂತನು ಪ್ರಾಕೃತ ಬಣ್ಣಗಳಿಂದ ಕೂಡಿದ ಮೂಲಭೂತವಾದ ಬಣ್ಣಗಳನ್ನು ಬ್ರಹ್ಮಾದಿ ದೇವತೆಗಳಿಗೆ ಮೀಸಲಾಗಿಟ್ಟನು. ಮೊದಲೇ ಮಿಶ್ರವಾದ ಆ ಬಣ್ಣಗಳನ್ನು ಪುನಃ ಪ್ರಾಕೃತರೂಪಗಳಿಂದ ಮಿಶ್ರವಾದವುಗಳನ್ನಾಗಿ ಮಾಡಿ ಮನುಷ್ಯರಿಗೆ ಮೀಸಲಾಗಿಟ್ಟನು.

ಪ್ರತಿಪದಾರ್ಥ -- ಬ್ರಹ್ಮಾದಿದೇವತೆಗಳಿಗೂ ಸಹ ರೂಪವಿರುವುದರಿಂದ ರೂಪೋಪನ್ಯಾಸ ಎಂಬ ಹೇತು ವಿಷ್ಣುತ್ವನಿಶ್ಚಾಯಕವಲ್ಲ ಎಂಬ ಆಕ್ಷೇಪಕ್ಕೆ ಉತ್ತರಿಸುತ್ತಿದ್ದಾರೆ.

ನಾರಾಯಣಃ = ನಾರಾಯಣನೇ, ಏಕಃ = ಪ್ರಧಾನವಾಗಿ, ಆಸೀತ್ = ಪ್ರಳಯಕಾಲದಲ್ಲಿ ಇದ್ದನು, ನ ಬ್ರಹ್ಮ = ಬ್ರಹ್ಮದೇವರು ಇರಲಿಲ್ಲ. ನಚ ಶಂಕರಃ = ರುದ್ರದೇವರೂ ಇರಲಿಲ್ಲ. ಸಃ = ಅಂತಹ ನಾರಾಯಣನು, ಮುನಿರ್ಭೂತ್ವಾ = ಮೌನವನ್ನು ತಾಳಿ, ಸಮಚಿಂತಯತ್ = ಸೃಷ್ಟಿಯನ್ನು ಮಾಡಲು ಆಲೋಚಿಸಿದನು. ತತಃ = ಅನಂತರ ಏತೇ = ಮಹದಾದಿತತ್ವಗಳು, ವ್ಯಜಾಯಂತ = ಹುಟ್ಟಿದವು. ಮತ್ತು, ವಿಶ್ವ = ವಾಯುದೇವರು, ಹಿರಣ್ಯಗರ್ಭಃ = ಚತುರ್ಮುಖಬ್ರಹ್ಮದೇವರು, ಅಗ್ನಿಃ = ಅಗ್ನಿಯು, ಯಮಃ = ಯಮನು, ವರುಣಃ = ವರುಣನು, ರುದ್ರಃ = ರುದ್ರನು, ಇಂದ್ರಃ = ಇಂದ್ರದೇವರು ಇವರೇ ಮೊದಲಾದವರು, ಇತಿ = ಹುಟ್ಟಿದರು.

ತಸ್ಯ = ಸೃಷ್ಟಿಮಾಡಿ ಪ್ರಸಿದ್ಧನಾದ, ಏತಸ್ಯ = ಮಹಾಮಹಿಮೆಯುಳ್ಳ, ಪರಮಸ್ಯ =

'ಉಪೈತಿ' ಪ್ರಾಪ್ನೋತೀತಿ ಶ್ರುತ್ಯರ್ಥಃ । ತತ್ತ್ವೋದ್ಯೋತಟೀಕಾಯಾಂ ತ್ವಿಯಂ ಶ್ರುತಿಃ ಮುಕ್ತಪರತಯಾ ವ್ಯಾಖ್ಯಾತಾ । ಪರಮಿತ್ಯೇತದಭಿವ್ಯಕ್ತಮಿತಿ ಚ ವ್ಯಾಖ್ಯಾತಮ್ ।।

ಸರ್ವೋತ್ತಮನಾದ, ನಾರಾಯಣಸ್ಯ = ನಾರಾಯಣನ, ರೂಪಾಣಿ = ರೂಪಗಳು, ಚತ್ವಾರಿ = ನಾಲ್ಕು, ಶುಕ್ಲಂ = ಬಿಳಿ, ರಕ್ತಂ = ಕೆಂಪು, ರೌಗ್ಮಂ = ಹಳದಿ, ಕೃಷ್ಣಮಿತಿ = ಕಪ್ಪು ಎಂಬುದಾಗಿ.

ಸಃ = ಆ ನಾರಾಯಣನು, ಏತಾನಿ = ಈ ನಾಲ್ಕು ಬಣ್ಣಗಳನ್ನು, ಏತೇಭ್ಯಃ = ಬ್ರಹ್ಮಾದಿದೇವತೆಗಳಿಗೆ, ವ್ಯಚೀಕ್ಲಪತ್ = ಮೀಸಲಾಗಿಟ್ಟನು. ವಿಮಿಶ್ರಾಣಿ = ಮೊದಲೇ ಮಿಶ್ರಿತವಾದ ಆ ಬಣ್ಣಗಳನ್ನು, ಪುನಃ = ಪ್ರಾಕೃತರೂಪದಿಂದ, ವ್ಯಮಿಶ್ರಯತ್ = ವಿಶೇಷವಾಗಿ ಮಿಶ್ರಣಮಾಡಿ ಮನುಷ್ಯರಿಗೆ ಮೀಸಲಾಗಿಟ್ಟನು.(೧)

ಭಾಷ್ಯಮ್ – अत एतादृगेव तद्रूपम् इति तस्यैव हि रूपाण्यभिधीयन्ते ॥೨೩॥

॥ इत्यदृश्यत्वाधिकरणम् ॥ ೬ ॥

ಈ ಶ್ರುತಿಗಳ ಆಧಾರದಿಂದ ಶುಕ್ಲ, ಪೀತ ಮೊದಲಾದವುಗಳು ಭಗವಂತನದ್ದೇ ಬಣ್ಣಗಳೆಂದು ನಿಶ್ಚಯವಾಗುತ್ತದೆ; ಆದ್ದರಿಂದ ಶ್ರುತಿಯಲ್ಲಿ 'ರುಗ್ಮವರ್ಣಂ' ಎಂದು ಹೇಳಿದ್ದು ವಿಷ್ಣುವಿನ ವಿಶೇಷಣವೆಂದು ತಿಳಿಯಬೇಕು.

ಶ್ರುತಿಪದಾರ್ಥ -- ಅತಃ = ಮಿಶ್ರಣವನ್ನು ಮಾಡಿರುವ ಕಾರಣ, ತದ್ರೂಪಂ = ಆ ಭಗವಂತನ ರೂಪಗಳು, ಏತಾದೃಕ್ ಏವ = ಶುದ್ಧವಾದ ಶುಕ್ಲ ಪೀತ ಮೊದಲಾದ

(೧) ಭಾಷ್ಯದೀಪಿಕಾ – ननु ब्रह्मादीनामपि रूपसद्भावात् कुतो रूपोपन्यासेनास्य विष्णुत्वनिश्चय इत्यत आह – एक इति ॥ 'इदमग्रे' इत्युपसिक्रियते । अत एव न्यायदीपिकायां जगदादावित्युक्तम् । हेत्यास्वादने । एतेभ्य इति तादर्थ्ये चतुर्थी । तथा च इदमस्य जगतोऽग्रे प्रलये नारायणः 'एकः' स्वतन्त्र आसीत् । न तदा चतुर्मुखशङ्करौ, न स्वस्वव्यापारावास्ताम् । 'सः' विष्णुस्तदा 'मुनिः' मननशीलो मौनी वा भूत्वा 'समचिन्तयत्' एते जायन्तामिति ध्यानरूपां चिन्तामकरोत् । 'ततः' तस्य चिन्तनादेते व्यजायन्त । के ते? यो 'विश्वो' वायुः, यश्च हिरण्यगर्भः, येऽप्यादय एत इत्यर्थः । ततः किमित्यत आह – 'तस्य' श्रुत्यादिप्रसिद्धस्य 'एतस्य' सर्वजीवशरीरगस्य 'परमस्य' सर्वोत्तमस्य नारायणस्य 'रूपाणि' वर्णाश्चत्वारि भवन्ति । कानि तानि? शुक्लादीनि । किञ्चातः? 'सः' नारायणः पूर्वमेव 'विमिश्राणि' स्वेन मिश्रीकृतानि रूपाणि 'एतेभ्यो' वायुप्रभृत्युक्तदेवानामर्थे 'अभ्यचीक्लृपत्' क्लृप्तान्यकरोत् । तानि विमिश्राणि पुनरपि 'व्यमिश्रयत्' मानुषादौ विशेषेण मिश्रीचकार । यद्वा – स एतानि रूपाणि व्यमिश्रयत्, विमिश्राणि चैतेभ्योऽभ्यचीक्लृपदित्यर्थः । शुद्धानि रूपाणि तु स्वस्यैवाकरोदिति भावः ॥ अत्राऽन्वयोजना तत्त्वप्रदीपटीकयोरुक्ता । द्वितीया तु टीकायामिति ध्येयम् ॥

ಸ್ವರೂಪಗಳು, ಇತಿ = ಹೀಗೆ, ತಸ್ಯೈವ ಹಿ = ವಿಷ್ಣುವಿನದ್ದೇ, ರೂಪಾಣಿ = ರೂಪಗಳು, ಅಭಿಧೀಯಂತೇ = ಹೇಳಲ್ಪಟ್ಟವೆ ಹೀಗೆ ವಿಷ್ಣುವಿನಲ್ಲಿ ರೂಪಗಳನ್ನು ಹೇಳಿದ್ದರಿಂದ ಅದೃಶ್ಯತ್ವವೆಂಬ ಧರ್ಮಕ್ಕೆ ಆಶ್ರಯನಾದವನು ವಿಷ್ಣುವೇ ಆಗಿದ್ದಾನೆಂದು ನಿರ್ಣಯವಾಯಿತು.(೧)

तत्वप्रकाशिका –

ॐ ।। रूपोपन्यासाच्च ।। ॐ

युक्त्यन्तरेण विष्णोरेवादृश्यत्वादिगुणकत्वं साधयत्सूत्रमुपन्यस्य, तदुपात्तश्रुतिमेवोदाहरति – रूपेति ।।

ಮತ್ತೊಂದು ಯುಕ್ತಿಯಿಂದ ವಿಷ್ಣುವೇ ಅದೃಶ್ಯತ್ವಾದಿಗುಣಗಳಿಗೆ ಆಶ್ರಯನಾಗಿದ್ದಾನೆಂಬ ವಿಷಯವನ್ನು ಸಮರ್ಥಿಸುವುದಕ್ಕಾಗಿ ಸೂತ್ರವನ್ನು ಉಪನ್ಯಾಸ ಮಾಡಿ ಸೂತ್ರದಿಂದಲೇ ಸೂಚಿತವಾದ ಶ್ರುತಿಯನ್ನು "ರೂಪ" ಇತ್ಯಾದಿಯಾಗಿ ಉದಾಹರಿಸುತ್ತಿದ್ದಾರೆ.

तत्वप्रकाशिका – 'द्रष्टा = जीवः, यदा रुग्मवर्णं हिरण्यगर्भकारणं जगत्कर्तारं पश्यति तदाऽसौ विद्वान् अनिष्टं पुण्यं पापं च विहाय, निर्लेपः पूर्णानन्दत्वादिसाम्यं प्राप्नोति' इत्यदृश्यत्वादिगुणकस्य रुग्मरूपोपन्यासाच्च, असौ विष्णुरेवेत्यर्थः ।

ಪಶ್ಯಃ ಎಂಬ ಶಬ್ದಕ್ಕೆ ನೋಡುವವನು ಎಂದರ್ಥ. ಜೀವನು ಯಾವಾಗ ಸುವರ್ಣಕಾಂತಿಯಿಂದ ಕೂಡಿರುವ ಚತುರ್ಮುಖಬ್ರಹ್ಮನಿಗೂ ಕಾರಣನಾದ ಜಗತ್ತಿಗೆ ಕರ್ತೃವಾದ ಭಗವಂತನನ್ನು ನೋಡುತ್ತಾನೋ ಆವಾಗ ವಿದ್ವಾಂಸನೆನಿಸಿ ಅನಿಷ್ಟವಾದ ಪುಣ್ಯ ಹಾಗೂ ಪಾಪಗಳನ್ನು ಬಿಟ್ಟು ದೋಷಗಳಿಂದ ನಿರ್ಮುಕ್ತನಾಗುತ್ತಾನೆ. ಮತ್ತು ಪೂರ್ಣವಾದ ಆನಂದವನ್ನು ಹೊಂದುವ ಮೂಲಕ ಭಗವಂತನ ಸಾಮ್ಯವನ್ನು ಪಡೆಯುತ್ತಾನೆ.

(೧) ಭಾಷ್ಯದೀಪಿಕಾ – ततः किमित्यत आह – अत इति ।। अतो मिश्रीकरणात् तद्रूपं तस्य विष्णो रूपम् 'एतादृगेव' शुद्धं शुक्लादिस्वरूपमेव । न तु वाय्वादिरूपमिव मिश्रमित्यर्थः । यद्यप्यत्र 'तस्य हैतस्य' इत्यादिकमेवोदाहरणीयम्, प्रकृतोपयुक्तत्वात्, न तु 'एको नारायणः' इत्यादिकम् । तथाऽपि 'एतेभ्यः' इत्यस्यार्थस्य प्रत्ययार्थं तदंशोदाहरणं कृतम् । इतीति ।'हि' यस्माद् 'इति' उदाहृतवाक्येन 'रूपाणि' शुद्धरौग्मादिरूपाणि तस्य विष्णोरेवाभिधीयन्ते, नेतरेषां, तस्माच्चाप्रयोजकता शङ्क्येत्यर्थः । अनेन सूत्रे सामान्येनोक्तत्वेऽपि रूपशब्दः शुद्धरूपपरः । तच्चान्यत्र नास्ति । 'ध्येयः सदा' इति सूर्ये प्रतीतमपि मिश्रमेवेति लिङ्गस्यान्यत्र निरवकाशत्वमुक्तं भवति ।

ಹೀಗೆ ಶ್ರುತಿಯಲ್ಲಿ ಅದೃಶ್ಯತ್ವಾದಿ ಗುಣವುಳ್ಳ ವ್ಯಕ್ತಿಗೆ ಭಂಗಾರವರ್ಣವನ್ನು ಹೇಳಿರುವುದರಿಂದಲೂ ವಿಷ್ಣುವೇ ಅದೃಶ್ಯತ್ವಾದಿಗುಣಗಳಿಗೆ ಆಶ್ರಯನಾಗಿದ್ದಾನೆಂದು ನಿರ್ಣಯವಾಗುತ್ತದೆ.

ತತ್ವಪ್ರಕಾಶಿಕಾ – ನನು ಬ್ರಹ್ಮಾದೀನಾಮಪಿ ರೂಪಸದ್ಭಾವಾತ್ ಕುತೋ ರೂಪೋಪನ್ಯಾಸೇನಾಸ್ಯ ವಿಷ್ಣುತ್ವನಿಶ್ಚಯ ಇತ್ಯತ ಆಹ – ಏಕ ಇತಿ ।।

ಶಂಕೆ -- ಬ್ರಹ್ಮಾದಿ ದೇವತೆಗಳಿಗೂ ಸಹ ರೂಪವಿರುವುದರಿಂದ ರೂಪೋಪನ್ಯಾಸವೆಂಬ ಹೇತುವು ಹೇಗೆ ವಿಷ್ಣುತ್ವನಿಶ್ಚಾಯಕವಾಗುತ್ತದೆ? ಎಂಬ ಪ್ರಶ್ನೆಗೆ ''ಏಕಃ'' ಎಂಬುದರಿಂದ ಉತ್ತರಿಸುತ್ತಾರೆ.

ತತ್ವಪ್ರಕಾಶಿಕಾ – ವಿಶ್ವೋ ವಾಯುಃ, ವಿಮಿಶ್ರಾಣಿ = ಏತೇಭ್ಯೋऽಭ್ಯಚೀಕ್ಲೃಪತ್ । ವ್ಯಮಿಶ್ರಯದಿತಿ ಮಾನುಷಾದೌ ವಿಶೇಷೇಣ ಮಿಶ್ರೀಚಕಾರೇತ್ಯರ್ಥಃ । ಸ ಏತಾನಿ ವ್ಯಾಮಿಶ್ರಯತ್ । ವಿಮಿಶ್ರಾಣಿ ಚ, ಏತೇಭ್ಯೋऽಭ್ಯಚೀಕ್ಲೃಪದಿತಿ ವಾ ।

ವಿಶ್ವಶಬ್ದಕ್ಕೆ ವಾಯು ಎಂದರ್ಥ. ವಿಮಿಶ್ರಾಣಿ = ಮಿಶ್ರವಾದ ವರ್ಣಗಳನ್ನು, ಏತೇಭ್ಯಃ = ಬ್ರಹ್ಮ, ಇಂದ್ರ ಮೊದಲಾದ ದೇವತೆಗಳಿಗೆ ಕೊಡಲ್ಪಟ್ಟವು ಎಂದರ್ಥ. ವ್ಯಮಿಶ್ರಯತ್ ಎಂದರೆ ಮನುಷ್ಯಾದಿಗಳಿಗೆ ವಿಶೇಷವಾಗಿ ಮಿಶ್ರಣ ಮಾಡಿಕೊಡಲ್ಪಟ್ಟ ಎಂದರ್ಥ. ಅಥವಾ ಆ ರೂಪಗಳು ಮಿಶ್ರಮಾಡಲ್ಪಟ್ಟವು; ಮಿಶ್ರಿತವಾದ ರೂಪಗಳು ವಾಯುದೇವಾದಿಗಳಲ್ಲಿ ವ್ಯವಸ್ಥಿತವಾಗಿ ಇಡಲ್ಪಟ್ಟಿವೆ ಎಂದರ್ಥ.

ತತ್ವಪ್ರಕಾಶಿಕಾ – 'ತಸ್ಯ ಹೈತಸ್ಯೈತ್ಯಾದೇರವಾತ್ರೋಪಯುಕ್ತತ್ವೇऽಪ್ಯೇತಾನ್ಯೇತೇಭ್ಯ ಇತ್ಯಸ್ಯಾರ್ಥಪ್ರತೀತ್ಯರ್ಥಮನ್ಯಾಂಶೋದಾಹರಣಮ್ । ತಸ್ಮಾದ್ ವಿಷ್ಣೋರೇವ ಅದೃಶ್ಯತ್ವಾದಿಗುಣಕತ್ವಮಿತಿ ಸ ಏವाऽऽನನ್ದಮಯ ಇತಿ ಸಿದ್ಧಮ್ ।। ೨೩ ।।

।। ಇತಿ ಶ್ರೀಮಜ್ಜಯತೀರ್ಥಮಿಕ್ಷುವಿರಚಿತಾಯಾಂ ತತ್ವಪ್ರಕಾಶಿಕಾಯಾಮ್
ಅದೃಶ್ಯತ್ವಾಧಿಕರಣಮ್ ।।

ಪ್ರಕೃತಕ್ಕೆ ತಸ್ಯ ಹೈತಸ್ಯ ಎಂಬಲ್ಲಿಂದ ಕೃಷ್ಣಮಿತಿ ಎಂಬಲ್ಲಿಯ ತನಕದ ಭಾಗವು ಉಪಯುಕ್ತವಾಗಿರುತ್ತದೆ. ಆದ್ದರಿಂದ ಉಳಿದದ್ದನ್ನು ಏಕೋ ನಾರಾಯಣಃ ಎಂಬುದು ಏತಾನ್ಯೇತೇಭ್ಯಃ ವ್ಯಚೀಕ್ಲೃಪತ್ ಎಂಬುದು ಸ್ಪಷ್ಟವಾಗಿರುವುದರಿಂದ ಇದನ್ನು ನೀಡಿದ್ದಾರೆಂದು ತಿಳಿಯಬೇಕು. ಆದ್ದರಿಂದ ಇಲ್ಲಿಯ ತನಕ ನಡೆಸಿದ ವಿಚಾರದಿಂದ ವಿಷ್ಣುವೇ ಅದೃಶ್ಯತ್ವಾದಿಗುಣಗಳಿಗೆ ಆಶ್ರಯನಾಗಿದ್ದಾನೆ; ಅವನೇ ಆನಂದಮಯನಾಗಿದ್ದಾನೆಂದು ಸಿದ್ಧವಾಯಿತು.

॥ ಇಲ್ಲಿಗೆ ಶ್ರೀಜಯತೀರ್ಥಭಿಕ್ಷುಗಳಿಂದ ವಿರಚಿತವಾದ ತತ್ವಪ್ರಕಾಶಿಕ ಕನ್ನಡಾನುವಾದದಲ್ಲಿ
ಅದೃಶ್ಯತ್ವಾಧಿಕರಣವು ಮುಗಿಯಿತು ॥
ಪರಿಪೂರ್ಣಚಂದ್ರಿಕಾ

ಭಾವದೀಪಃ – ॐ रूपोपन्यासाच्च ॐ ।। सूत्रे चशब्दादाह – युक्त्यन्तरेणेति ।। सिद्धान्तहेतोः परपक्षनिरासेऽपि व्यापारोऽस्तीति वा लिङ्गस्य निरवकाशत्वव्यक्त्यर्थं वा विष्णोरेवेत्युक्तम् ।

।। ಓಂ ರೂಪೋಪನ್ಯಾಸಾಚ್ಚ ಓಂ ।।

ಸೂತ್ರದಲ್ಲಿರುವ ''ಚ'' ಶಬ್ದಕ್ಕೆ ''ಯುಕ್ಯಂತರೇಣ'' ಎಂದು ವ್ಯಾಖ್ಯಾನಿಸಿದ್ದಾರೆ. ಸಿದ್ಧಾಂತ ಹೇತುವು ಪೂರ್ವಪಕ್ಷವನ್ನೂ ಸಹ ನಿರಾಕರಿಸುತ್ತದೆ ಎಂದು ಅಥವಾ ಸಿದ್ಧಾಂತ ಹೇತು ನಿರವಕಾಶವಾಗಿದೆ ಎಂದು ತಿಳಿಸುವುದಕ್ಕಾಗಿ ''ವಿಷ್ಣೋರೇವ'' ಎಂದು ಅವಧಾರಣೆಯನ್ನು ಮಾಡಿರುತ್ತಾರೆ.

ಭಾವದೀಪಃ – भाष्यस्य सूत्रेणान्वयं मत्वाऽर्थमाह – द्रष्टेति ।। पश्यतीति पश्यो द्रष्टा । 'प्राग्घाध्माधेट्दृशः शः' इति शप्रत्यये पश्यादेशः । ब्रह्मयोनिं हिरण्यगर्भकारणम् । 'अत एव कर्तारम्' 'तदा विद्वान् पुण्यपापे विधूय निरञ्जनः परमं साम्यमुपैति' इति शेषार्थोक्त्याऽकाङ्क्षां पूरयति – तदेति ।।

ಭಾಷ್ಯಕ್ಕೆ ಸೂತ್ರದ ಜೊತೆಗೆ ಅನ್ವಯವನ್ನು ತಿಳಿಸುತ್ತಾ ವ್ಯಾಖ್ಯಾನ ಮಾಡುತ್ತಿದ್ದಾರೆ ''ದ್ರಷ್ಟಾ'' ಇತ್ಯಾದಿಯಾಗಿ. ಶ್ರುತಿಯಲ್ಲಿರುವ ''ಪಶ್ಯಃ'' ಎಂಬ ಪದದ ಅರ್ಥವನ್ನೇ ''ದ್ರಷ್ಟಾ'' ಎಂದು ಹೇಳಿರುತ್ತಾರೆ. ''ಪ್ರಾಘ್ರಾಧ್ಮಾಧ್ವೇಟ್‌ದೃಶಃ ಶಃ'' ಎಂಬ ಸೂತ್ರಾನುಸಾರಿಯಾಗಿ ''ಶ'' ಪ್ರತ್ಯಯವು ಪರದಲ್ಲಿ ಇದ್ದಾಗ 'ದೃಶ್' ಧಾತುವಿಗೆ 'ಪಶ್ಯ' ಎಂಬ ಆದೇಶವು ಬರುತ್ತದೆ. ''ಬ್ರಹ್ಮಯೋನಿಂ'' ಎಂದರೆ ಚತುರ್ಮುಖಬ್ರಹ್ಮನಿಗೂ ಕಾರಣನಾದವನು ಎಂದರ್ಥ. ಆದ್ದರಿಂದಲೇ ಜಗತ್ಕರ್ತಾ ಆಗಿದ್ದಾನೆಂದು ತಿಳಿಯಬೇಕು. ''ತದಾ ವಿದ್ವಾನ್ ಪುಣ್ಯಪಾಪೇ ವಿಧೂಯ ನಿರಂಜನಃ ಪರಮಂ ಸಾಮ್ಯಮುಪೈತಿ'' ಎಂಬ ಉಳಿದ ಶ್ರುತಿಯ ಭಾಗದ ಅರ್ಥವನ್ನು ಹೇಳುತ್ತಾ ಆಕಾಂಕ್ಷೆಯನ್ನು ಪೂರ್ಣ ಮಾಡುತ್ತಿದ್ದಾರೆ ''ತದಾ'' ಇತ್ಯಾದಿ ವಾಕ್ಯಗಳಿಂದ.

ಭಾವದೀಪಃ – अप्रकृतत्वभ्रान्तिं निराह – असौ विद्वानिति ।। पुण्यपापमनिष्टमिति तन्नाष्योक्तेराह – अनिष्टमनपेक्षमिति ।। सञ्चितपुण्यपापे इत्यर्थः । अपौनरुक्त्या निरञ्जनपदार्थमाह – निर्लेप इति ।।

ಪ್ರಕೃತವಾಗಿಲ್ಲವೆಂಬ ಭ್ರಾಂತಿಯನ್ನು ''ಅಸೌ ವಿದ್ವಾನ್'' ಎಂಬುದರಿಂದ ನಿರಾಕರಿಸಿದ್ದಾರೆ. ಪುಣ್ಯ ಹಾಗೂ ಪಾಪಗಳೆರಡೂ ಅನಿಷ್ಟವೆಂದು ಉಪನಿಷದ್‌ಭಾಷ್ಯದಲ್ಲಿಯೇ ಹೇಳಿದ್ದಾರೆ. 'ಅನಿಷ್ಟಂ' ಎಂದರೆ ಅನಪೇಕ್ಷಿತವಾದದ್ದು ಎಂದರ್ಥ. ಸಂಚಿತವಾದ ಪುಣ್ಯ ಹಾಗೂ ಪಾಪಗಳೆರಡನ್ನು ಎಂದರ್ಥ. ಪುನರುಕ್ತಿ ಬಾರದಂತೆ 'ನಿರಂಜನಂ' ಪದದ ಅರ್ಥವನ್ನು 'ನಿರ್ಲೇಪಃ' ಇತ್ಯಾದಿಯಾಗಿ ಹೇಳಿದ್ದಾರೆ.

ಭಾವದೀಪಃ – 'तदधिगम उत्तरपूर्वाघयोरश्लेषविनाशौ' इति वक्ष्यमाणदिशा ज्ञानानन्तरभाविपापकृताशुचित्वादिलेपरहित इत्यर्थः । परमशब्दार्थः – पूर्णेति ।।

ईशशब्दस्य रुद्रपरत्वशङ्कनात्तस्य वैष्णवत्वाय तत्रैव वाक्येऽनेकविष्णुलिङ्गप्रदर्शनाय समग्रवाक्यार्थोक्तिरित्याहुः ।

''ತದಧಿಗಮ ಉತ್ತರಪೂರ್ವಾಘಯೋರಶ್ಲೇಷವಿನಾಶೌ'' ಎಂಬ ಸೂತ್ರದಲ್ಲಿ ಹೇಳುವಂತೆ ಅಪರೋಕ್ಷ ಜ್ಞಾನದ ಅನಂತರ ಪುಣ್ಯ ಪಾಪಗಳು ಅಂಟುವುದಿಲ್ಲವೆಂದು ತಿಳಿಯಬೇಕು. 'ಪರಮ' ಶಬ್ದದ ಅರ್ಥವನ್ನೇ 'ಪೂರ್ಣ' ಎಂದು ಹೇಳಿದ್ದಾರೆ. 'ಈಶ' ಶಬ್ದಕ್ಕೆ ರುದ್ರನೆಂಬ ಅರ್ಥವನ್ನು ಹೇಳಬಹುದಲ್ಲವೆ? ಎಂಬ ಶಂಕೆಯನ್ನು ಪರಿಹರಿಸುವುದಕ್ಕಾಗಿ ಈಶ ಶಬ್ದವು ವಿಷ್ಣುವನ್ನೇ ಪ್ರತಿಪಾದಿಸುತ್ತದೆ. ಏಕೆಂದರೆ ಅದೇ ವಾಕ್ಯದಲ್ಲಿ ವಿಷ್ಣುವಿನ ಅನೇಕ ಲಿಂಗಗಳು ಇರುತ್ತವೆ ಎಂದು ತಿಳಿಸುವುದಕ್ಕಾಗಿ ಸಮಗ್ರ ವಾಕ್ಯದ ಅರ್ಥವನ್ನು ಹೇಳಿದ್ದಾರೆಂದು ಕೆಲವರು ವ್ಯಾಖ್ಯಾನಿಸುತ್ತಾರೆ.

भावदीपः – 'धिया निगृह्यमाणोऽपि भ्रुवोर्मध्यात्प्रजापतेः । सद्योऽजायत तन्मन्युः कुमारो नीललोहितः ।।' इति तृतीयस्कन्धाद्युक्त्या रुद्रस्य ब्रह्मजातत्वेन ब्रह्मयोनित्वाद्ययोगादिति ।

''ಧಿಯಾ ನಿಗೃಹ್ಯಮಾಣೋಽಪಿ ಭ್ರುವೋರ್ಮಧ್ಯಾತ್ಪ್ರಜಾಪತೇಃ । ಸದ್ಯೋಽಜಾಯತ ತನ್ಮನ್ಯುಃ ಕುಮಾರೋ ನೀಲಲೋಹಿತಃ ॥'' ಎಂದು ತೃತೀಯ ಸ್ಕಂಧದಲ್ಲಿ ಹೇಳಿದಂತೆ ಬ್ರಹ್ಮದೇವರ ಭ್ರೂ ಮಧ್ಯಪ್ರದೇಶದಿಂದ ರುದ್ರದೇವರು ಹುಟ್ಟಿದರೆಂದು ತಿಳಿಯುತ್ತದೆ. ಇಂತಹ ರುದ್ರದೇವರು ಬ್ರಹ್ಮದೇವರಿಗೆ ಜನಕರಾಗಲು ಸಾಧ್ಯವಿಲ್ಲವೆಂದು ಅಭಿಪ್ರಾಯ.

भावदीपः – यद्वा पश्यतीति पश्यो जीवः । संसारेऽपि साम्यसत्त्वात् परममिति । अभिव्यक्तमिति यावत् । अत्र 'पुण्यपापे विधूय निरञ्जनः' इति मुक्तलिङ्गमिति तत्त्वोद्योतटीकायां मुक्तभेदपरतया व्याख्यानेऽपि इह 'जुष्टं यदा' इति 'प्राणो ह्येष सर्वभूतैः' इति पूर्वोत्तरवाक्यमनुरुध्य जीवन्मुक्तपरतया व्याख्यानाय समग्रवाक्यार्थोक्तिः ।

ಅಥವಾ 'ಪಶ್ಯತಿ ಇತಿ ಪಶ್ಯಃ' ಎಂಬ ವ್ಯುತ್ಪತ್ತಿಯಿಂದ ಜೀವನೆಂಬ ಅರ್ಥವನ್ನು ತಿಳಿಯಬೇಕು. ಸಂಸಾರದಲ್ಲಿಯೂ ಸಹ ಸಾಮ್ಯವಿರುವುದರಿಂದ ''ಪರಮಂ'' ಎಂಬ ಅರ್ಥವನ್ನು ತಿಳಿಯಬೇಕು.

''ಪುಣ್ಯಪಾಪೇ ವಿಧೂಯ ನಿರಂಜನಃ'' ಎಂಬುದು ಮುಕ್ತರ ಲಿಂಗವಾಗಿದೆ ಎಂಬುದಾಗಿ ತತ್ತ್ವೋದ್ಯೋತ ಟೀಕೆಯಲ್ಲಿ ಮುಕ್ತರಿಂದ ಭೇದವನ್ನು ತಿಳಿಸುವುದಕ್ಕಾಗಿ ಈ ಶ್ರುತಿಯನ್ನು ಉಲ್ಲೇಖಿಸಿದ್ದಾರೆ. ಆದರೂ ಸಹ ಪ್ರಕೃತ ''ಜುಷ್ಟಂ ಯದಾ'' ಮತ್ತು ''ಪ್ರಾಣೋ ಹ್ಯೇಷ ಸರ್ವಭೂತೈಃ'' ಎಂಬ ಹಿಂದಿನ ಮುಂದಿನ ವಾಕ್ಯಗಳಿಗೆ ಅನುಸಾರಿಯಾಗಿ ಜೀವಭೇದಪರವಾಗಿ ಇಲ್ಲಿ ವ್ಯಾಖ್ಯಾನಿಸಿದ್ದಾರೆ. ಅದಕ್ಕೋಸ್ಕರವಾಗಿಯೇ ಸಮಗ್ರವಾದ ಅರ್ಥವನ್ನು ಹೇಳಿದ್ದಾರೆ ಎಂದು ತಿಳಿಯಬೇಕು.

ಪರಿಪೂರ್ಣಚಂದ್ರಿಕಾ

ಭಾವದೀಪಃ – ಏತೇಭ್ಯ ಇತಿ ಚತೇರ್ಥೀ ವಾಯುಪ್ರಭೃತ್ಯುಕ್ತದೇವತಾನಾಮರ್ಥ ಇತ್ಯರ್ಥಃ ।। **अन्यांशेति ।। तर्हि 'तत एते व्यजायन्त' इत्यादिनैव पूर्येत, मैवम् । पूर्वशेषोक्तेरपि तत इत्यस्यार्थप्रतीत्यर्थत्वादिति भावः । फलोक्त्योपसंहरति – तस्मादिति ।।**

''ಏತೇಭ್ಯಃ''ಎಂಬುದು ಚತುರ್ಥೀವಿಭಕ್ತಿಯಾಗಿದೆ. ''ವಾಯುದೇವರಿಂದ ಹುಟ್ಟಿದ ಸಕಲ ದೇವತೆಗಳಿಗೂ'' ಎಂದು ಇದರ ಅರ್ಥ. ''ಅನ್ಯಾಂಶೋದಾಹರಣಮ್'' ಎಂದು ಟೀಕೆಯಲ್ಲಿ ಹೇಳಿದ್ದಾರೆ. ಹಾಗಾದರೆ ''ತತಃ ಏತೇ ವ್ಯಜಾಯಂತ'' ಎಂದಷ್ಟೇ ಹೇಳಿದ್ದರೆ ಸಾಕಾಗಿತ್ತಲ್ಲವೆ? ಎಂದು ಪ್ರಶ್ನಿಸಬಾರದು. ''ತತಃ'' ಎಂಬ ಪದದ ಅರ್ಥವನ್ನು ತಿಳಿಸುವುದಕ್ಕಾಗಿ ಹಿಂದಿನ ವಾಕ್ಯಶೇಷವನ್ನು ಉಲ್ಲೇಖಿಸಿದ್ದಾರೆಂದು ಅಭಿಪ್ರಾಯ. ಫಲವನ್ನು ಹೇಳುವ ಮುಖಾಂತರ ಉಪಸಂಹಾರ ಮಾಡುತ್ತಿದ್ದಾರೆ ''ತಸ್ಮಾತ್'' ಇತ್ಯಾದಿಯಾಗಿ.

ಭಾವದೀಪಃ – **निरवकाशानेकलिङ्गसत्वात् परपक्षे बाधकभावाच्चेति सूत्रत्रयहेत्वंशार्थः । ''अदृश्यत्वादिगुणकः तत्तु''इति प्रतिज्ञार्थः विष्णोरेवेत्यादि । नेतराविति्युक्तप्रधानादयो नेत्यस्यार्थः एवेति । अद्रेश्यवाक्योक्तम् अदृश्यवाक्योक्तं चादृश्यत्वादिकमित्यर्थः ।**

ನಿರವಕಾಶವಾದ ವಿಷ್ಣುವಿನ ಅನೇಕ ಲಿಂಗಗಳಿರುವುದರಿಂದ ಮತ್ತು ಪರಪಕ್ಷದಲ್ಲಿ ಬಾಧಕಗಳಿರುವುದರಿಂದ ಎಂದು ಮೂರೂ ಸೂತ್ರಗಳಲ್ಲಿರುವ ಹೇತುವಿನ ಅರ್ಥ. ''ಅದೃಶ್ಯತ್ವಾದಿಗುಣಕಃ ತತ್ತು'' ಎಂಬ ಪ್ರತಿಜ್ಞೆಯ ಅರ್ಥವನ್ನೇ ಟೀಕೆಯಲ್ಲಿ ''ವಿಷ್ಣುರೇವ'' ಎಂದು ಹೇಳಿದ್ದಾರೆ. ''ನೇತರೌ'' ಎಂಬುದರಿಂದ ತಿಳಿಯಲ್ಪಟ್ಟ ಪ್ರಧಾನಾದಿಗಳು ಅದೃಶ್ಯತ್ವಾದಿ ಗುಣಗಳುಳ್ಳವಲ್ಲ ಎಂಬ ಅರ್ಥವನ್ನು ''ಏವ'' ಎಂಬುದರಿಂದ ಸೂಚಿಸಿದ್ದಾರೆ. ಅದ್ರೇಶ್ಯವಾಕ್ಯದಿಂದ ಹಾಗೂ ಅದೃಶ್ಯತ್ವವಾಕ್ಯದಿಂದ ತಿಳಿಯಲ್ಪಟ್ಟ ಅದೃಶ್ಯತ್ವಾದಿಗಳು ವಿಷ್ಣುವಿನಲ್ಲಿಯೇ ಬರುತ್ತವೆ ಎಂದು ಅರ್ಥ.

ಭಾವದೀಪಃ – **यत्त्वत्र केनचिदुक्तं पञ्चकोटिकसंशयो नेताराविति सूत्रोक्तकोटिद्वयविरुद्ध इति, तन्न । चन्द्रिकायामेव समाधानात् ।**

ಕೆಲವರು ಐದು ಬಗೆಯ ಸಂಶಯಗಳನ್ನು ಕೋಟಿದ್ವಯವನ್ನಷ್ಟೇ ನಿರಾಕರಿಸುವ ''ನೇತರೌ'' ಎಂಬ ಸೂತ್ರದಿಂದ ಪರಿಹರಿಸಲು ಸಾಧ್ಯವಿಲ್ಲವೆಂದು ಆಕ್ಷೇಪಿಸಿದ್ದಾರೆ. ಇದು ತಪ್ಪು. ತಾತ್ಪರ್ಯಚಂದ್ರಿಕೆಯಲ್ಲಿ ಈ ಪ್ರಶ್ನೆಗೆ ಸಮಾಧಾನವನ್ನು ನೀಡಿದ್ದಾರೆ.

ಭಾವದೀಪಃ – **यदपि प्रथमदृष्टान्तमुल्लङ्घ्य द्वितीयदृष्टान्तानुरोधेन प्रधानपूर्वपक्षोक्ति रयुक्तेति, तदपि न । प्रथमदृष्टान्तस्यापि मायावादिरीत्या उपादानत्व एव सम्भवात् । स्पष्टत्वार्थं टीकादौ द्वितीयोक्तेः ।**

ಶ್ರುತಿಯಲ್ಲಿರುವ ಮೊದಲನೆಯ ದೃಷ್ಟಾಂತವನ್ನು ಬಿಟ್ಟು ಎರಡನೆಯ ದೃಷ್ಟಾಂತಕ್ಕೆ ಅನುಸರಿಸಿ ಪ್ರಕೃತಿಪರವಾಗಿ ಪೂರ್ವಪಕ್ಷವನ್ನು ಹೇಳಿದ್ದು ತಪ್ಪಲ್ಲವೆ? ಎಂದೂ ಸಹ ಪ್ರಶ್ನಿಸಬಾರದು. ಮೊದಲನೆಯ

ದೃಷ್ಟಾಂತವೂ ಸಹ ಮಾಯಾವಾದಿಗಳ ಪ್ರಕಾರ ಉಪಾದಾನವೆಂಬ ಅರ್ಥದಲ್ಲಿಯೇ ಪರ್ಯವಸಾನವಾಗುತ್ತದೆ. ಸ್ಪಷ್ಟವಾಗಿ ಅರ್ಥವಾಗುವ ಕಾರಣ ಟೀಕೆಯಲ್ಲಿ ಎರಡನೆಯ ದೃಷ್ಟಾಂತವನ್ನೇ ಸ್ವೀಕರಿಸಿದ್ದಾರೆ.

ಭಾವದೀಪಃ – ಈಶಶ್ರುತ್ಯಾ ರುದ್ರಪ್ರಾಪ್ತಿರಪ್ಯುಕ್ತಾ । ಬ್ರಹ್ಮಯೋನಿತ್ವಾದಿಲಿಙ್ಗ-ವಿರೋಧಿತ್ವಾದಿತ್ಯಪಿ ನ । ಬ್ರಹ್ಮಯೋನಿತ್ವಾದೇರ್ಬಹ್ವ್ರೀಹ್ಯಾಶ್ರಯಣೇನ ಸಾವಕಾಶತ್ವೋಪಪತ್ತೇಃ । ರುದ್ರಪ್ರಾಪ್ತೇಶ್ಚನ್ದ್ರಿಕಾಯಾಮುಪಪಾದನಾಚ್ಚ । ಏವಮನ್ಯದಪಿ ತದೀಯಂ ದುರ್ವಚನಂ ನಿರಸ್ಯಮ್ ।। ೨೩ ।।

।। ಇತಿ ಶ್ರೀರಾಘವೇನ್ದ್ರಯತಿಕೃತೇ ಭಾವದೀಪೇ ಅದೃಶ್ಯತ್ವಾಧಿಕರಣಮ್ ।।

ಭಾವದೀಪಃ – ಈಶಶ್ರುತಿ ಇರುವುದರಿಂದ ರುದ್ರನೂ ಸಹ ಪೂರ್ವಪಕ್ಷಕ್ಕೆ ವಿಷಯನಾಗುತ್ತಾನೆ ಎಂದು ಹೇಳಿದ್ದೇ ತಪ್ಪು? ಹಾಗಾದಲ್ಲಿ ಬ್ರಹ್ಮಯೋನಿತ್ವವೇ ಮೊದಲಾದ ಲಿಂಗಗಳಿಗೆ ವಿರೋಧ ಬರುತ್ತದೆ ಎಂದು ಕೆಲವರು ಆಕ್ಷೇಪಿಸುತ್ತಾರೆ. ಇದನ್ನೂ ಸಹ ನಿರಾಕರಿಸಿದಂತಾಯಿತು. ಏಕೆಂದರೆ 'ಬ್ರಹ್ಮಯೋನಿತ್ವ' ಎಂಬುದು ಬಹುವ್ರೀಹಿ ಸಮಾಸವನ್ನು ಆಶ್ರಯಿಸಿದ ಕಾರಣ ಸಾವಕಾಶವಾಗುತ್ತದೆ. ಮತ್ತು ರುದ್ರನೂ ಸಹ ಹೇಗೆ ಪೂರ್ವಪಕ್ಷಕ್ಕೆ ವಿಷಯನಾಗುತ್ತಾನೆ ಎಂಬ ವಿಷಯವನ್ನು ತಾತ್ಪರ್ಯಚಂದ್ರಿಕೆಯಲ್ಲಿ ಸ್ಪಷ್ಟಪಡಿಸಲಾಗಿದೆ. ಉಳಿದ ಪೂರ್ವಪಕ್ಷಗಳ ವಿಷಯದಲ್ಲಿಯೂ ಸಹ ಬೇರೆಯವರ ದುರಭಿಪ್ರಾಯಗಳನ್ನು ನಿರಾಕರಿಸಬೇಕು.

॥ ಇಲ್ಲಿಗೆ ಭಾವದೀಪದ ಕನ್ನಡಾನುವಾದದಲ್ಲಿ ಅದೃಶ್ಯತ್ವಾಧಿಕರಣವು ಮುಗಿಯಿತು ॥

ವಾಕ್ಯಾರ್ಥಮಞ್ಜರೀ – ।। ॐ ರುಪೋಪನ್ಯಾಸಾಚ್ಚ ॐಃ ।। **ರುಗ್ಮವರ್ಣಮಿತಿ ।।** ರುಗ್ಮರುಪಾಭಿಧಾನಾಚ್ಚಾದೃಶ್ಯತ್ವಾದಿಗುಣಕೋವಿಷ್ಣುರೇವೇತ್ಯರ್ಥಃ ।। ಪಶ್ಯತೀತಿ ಪಶ್ಯ ಇತ್ಯಾಶ್ಯೇನೋಕ್ತಂ ''ದೃಷ್ಟೇತಿ ತದಾ ವಿದ್ವಾನಪುಣ್ಯಪಾಪೇ ವಿಧೂಯ ನಿರಂಜನಃ ಪರಮಂ ಸಾಮ್ಯಮುಪೈತಿ'' ಇತಿ ಶೇಷಾರ್ಥೋಕ್ತ್ಯಾಕಾಂಕ್ಷಾಂ ಪೂರಯತಿ ।। **ತದೇತಿ** ।। ಪುಣ್ಯನಾಶಸ್ಯಾಪುರುಷಾರ್ಥತ್ವಾದಾಹ ।। ಅನಿಷ್ಟಪುಣ್ಯಮಿತಿ ।। ಅಪರೋಜನಾತ್ಪೂರ್ವಭಾವಿಪುಣ್ಯಂ ದ್ವಿವಿಧಂ ಕಾಮ್ಯಮಕಾಮ್ಯಂ ಚ ತತ್ರಾಕಾಮ್ಯಮಪರೋಕ್ಷ ಜ್ಞಾನಾಯ ಭವತಿ ।। ಕಾಮ್ಯಂ ಚ ದ್ವಿವಿಧಮ್ । ಇಷ್ಟಮನಿಷ್ಟಂ ಚ । ತತ್ರೇಷ್ಟಮಪ್ಯಾರಬ್ಧಮಪಿ ನ ನಶ್ಯತಿ । ಇಷ್ಟನಾಶಸ್ಯಾಪುರುಷಾರ್ಥತ್ವಾತ್ ಅನಿಷ್ಟ ತು ನಶ್ಯತೀತಿ ಚತುರ್ಥ ಏವೋತ್ತರತ್ರ ಸ್ಪಷ್ಟಮ್ । ಪುಣ್ಯಪಾಪೇ ವಿಧೂಯೇತ್ಯನೇನಪೌನರುಕ್ತ್ಯವಾರಣಾಯ ನಿರಂಜನ ಶಬ್ದಾರ್ಥಮಾಹ । ನಿರ್ಲೇಪ ಇತಿ । ಜ್ಞಾನೋತ್ತರಕಾಲೀನಾನಿಷ್ಟಪುಣ್ಯಪಾಪಲೇಪರಹಿತ ಇತ್ಯರ್ಥಃ । ಪೂರ್ಣೇತಿ । ಯೋಗ್ಯತಾನುಸಾರೇಣೇದಮ್ । ಏತೇಭ್ಯಃ ವಿಶ್ವಾದಿಭ್ಯಃ । ಅಭ್ಯಚೀಕ್ಲೃಪತ್ ದತ್ತವಾನ್ ವಿಶೇಷೇಣವಿಶ್ವಾದಿಗತರುಪಾಪೇಕ್ಷಯಾ । ಭಾಷ್ಯೇ ಅತ ಏತದಿತಿ । ಅತಃ ದೇವಾದಿರುಪಾಣಾಂ ಶುದ್ಧತ್ವಾಭಾವಾದೇತಚ್ಛುದ್ಧಂ ಶುಕ್ಲಾದಿ ಏತದ್ರೂಪಮ್ ಏತಸ್ಯ ಹರೇರುಪಮಿತ್ಯರ್ಥಃ ।। ೪ ।।

।। ಇತಿ ಶ್ರೀಶರ್ಕರಾಶ್ರೀನಿವಾಸಾವಿರಚಿತಾಯಾಂ ವಾಕ್ಯಾರ್ಥಮಞ್ಜರ್ಯಾಮ್ ಅದೃಶ್ಯತ್ವಾಧಿಕರಣಮ್ ।। ೬ ।।

* * * *

ಪರಿಪೂರ್ಣಚಂದ್ರಿಕಾ

ಅದೃಶ್ಯತ್ವಾಧಿಕರಣ
(೧-೨-೬)

ಭಾಗ - ೨

ತಾತ್ಪರ್ಯಚಂದ್ರಿಕಾ, ಪ್ರಕಾಶ,

ಪ್ರತಿಯೊಂದು ವಾಕ್ಯಗಳ ವಿಶೇಷ ವಿವರಣೆಯೊಂದಿಗೆ

ಸರಳ ಅನುವಾದ

* * *

ಮತ್ತು

ಗುರುರಾಜೀಯಮ್, ಭಾಟ್ಟಸಂಗ್ರಹ,
ಶಾಂಕರಭಾಷ್ಯ, ಭಾಮತೀ,
ರಾಮಾನುಜಭಾಷ್ಯ ಇವುಗಳ ಸಂಪೂರ್ಣ ಅಡಿಟಿಪ್ಪಣಿಯೊಂದಿಗೆ

॥ ಶ್ರೀಲಕ್ಷ್ಮೀಹಯಗ್ರೀವೋ ವಿಜಯತೇತಮಾಮ್ ॥
॥ ಶ್ರೀಮಧ್ವರಾಜೋ ವಿಜಯತೇತರಾಮ್ ॥
॥ ಶ್ರೀಗುರುಭ್ಯೋ ನಮಃ ॥

ಶ್ರೀಬ್ರಹ್ಮಣ್ಯತೀರ್ಥಶ್ರೀಪಾದಶಿಷ್ಯ ಶ್ರೀವ್ಯಾಸತೀರ್ಥವಿರಚಿತಾ

ತಾತ್ಪರ್ಯಚಂದ್ರಿಕಾ

अथ अदृश्यत्वाधिकरणम्

ಸಂಗತಿ ಹಾಗೂ ಸಂಶಯ ಪರಂಪರೆ

॥ ॐ अदृश्यत्वादिगुणको धर्मोक्तेः ॐ ॥

अत्रान्तर्यामिणो ब्रह्मत्वे हेतूकृतस्य "यं पृथिवी न वेद" इत्युक्तस्यादृश्यत्वस्याक्षेपेण पूर्वपक्षोत्थानादनन्तरसङ्गतिः ।

ಅನುವಾದ - ಈ ಅಧಿಕರಣದಲ್ಲಿ ಅದೃಶ್ಯತ್ವವೆಂಬ ಧರ್ಮವನ್ನು ಪರಮಾತ್ಮನಲ್ಲಿ ಸಮನ್ವಯ ಮಾಡುತ್ತಿದ್ದಾರೆ. ಹಿಂದಿನ ಅಧಿಕರಣದಲ್ಲಿ ಪರಮಾತ್ಮನೇ ಅಂತರ್ಯಾಮಿಯೆನ್ನಲು 'ಯಂ ಪೃಥಿವೀ ನ ವೇದ' ಇತ್ಯಾದಿ ಸ್ಥಿತಿಗಳಿಂದ ತಿಳಿಯಲ್ಪಡುವ ಅದೃಶ್ಯತ್ವಾದಿಗಳನ್ನು ಹೇತುಗಳನ್ನಾಗಿ ಮಾಡಿದರು. ಆ ಹೇತುವು ಪರಮಾತ್ಮನಲ್ಲಿ ಅಸಿದ್ಧವಾಗಿದೆಯೆಂದು ಆಕ್ಷೇಪ ಮಾಡಿ ಪೂರ್ವಪಕ್ಷ ಮಾಡುತ್ತಿರುವುದರಿಂದ ಹಿಂದಿನ ಅಧಿಕರಣದಿಂದ ಆನಂತರ್ಯಸಂಗತಿಯಿರುತ್ತದೆಂದು ತಿಳಿಯಬೇಕು.

अत्रादृश्यत्वादिगुणकमक्षरं किं प्रकृत्यादि किं वा विष्णुरिति चिन्ता ।

ಈ ಅಧಿಕರಣದ ಸಂಶಯ ಪರಂಪರೆ ಹೀಗಿದೆ - ಅದೃಶ್ಯತ್ವಾದಿಗುಣಗಳನ್ನು ಹೊಂದಿರುವ ಅಕ್ಷರವು ಪ್ರಕೃತ್ಯಾದಿಗಳೋ? ಅಥವಾ ವಿಷ್ಣುವೋ? ಎಂದು ಸಂಶಯ.

तदर्थं ब्रह्मणोऽक्षरत्वे "अक्षरात्परतः परः" इति वाक्यशेषोक्तं अक्षरस्य परत्वावधित्वं न सम्भवति उत सम्भवतीति ।

ಹಿಂದಿನ ಸಂಶಯವು ಪರಿಹಾರವಾಗಬೇಕೆಂದರೆ ಬ್ರಹ್ಮನು ಅಕ್ಷರನಾಗಿದ್ದಾನೆನ್ನಲು 'ಅಕ್ಷರಾತ್ಪರತಃ ಪರಃ' ಎಂಬ ವಾಕ್ಯಶೇಷದಲ್ಲಿ ಹೇಳಲ್ಪಟ್ಟ ಪರತ್ವಾವಧಿತ್ವವು ಅಕ್ಷರನಲ್ಲಿ ಯುಕ್ತವಾಗುವುದಿಲ್ಲವೋ? ಅಥವಾ ಯುಕ್ತವಾಗುತ್ತದೋ? ಎಂದು ಸಂಶಯ.

तदर्थं परत्वावधिभूतमक्षरमदृश्यत्वादिगुणकाक्षरादनन्यद् उतान्यदिति ।

अनन्यत्वे परत्वावधित्वस्य ब्रह्मणयोगात् न तस्याक्षरत्वं युक्तम्, अन्यत्वे तु युक्तम् ।।

ಹಿಂದಿನ ಸಂಶಯವು ಪರಿಹಾರವಾಗಬೇಕೆಂದರೆ ಪರತ್ವಕ್ಕೆ ಅವಧಿಯಾಗಿರುವಂತಹ ಅಕ್ಷರವು ಅದೃಶ್ಯತ್ವಾದಿಗುಣವುಳ್ಳ ಅಕ್ಷರಕ್ಕಿಂತ ಅಭಿನ್ನವಾಗಿದೆಯೋ? ಅಥವಾ ಭಿನ್ನವಾಗಿದೆಯೋ? ಎಂಬ ಸಂಶಯವು ಪರಿಹಾರವಾಗಬೇಕು. ಅಭಿನ್ನವಾಗಿದೆಯೆಂದರೆ ಪರತ್ವಾವಧಿತ್ವವು ಬ್ರಹ್ಮನಲ್ಲಿ ಅಯುಕ್ತವಾದ್ದರಿಂದ ಬ್ರಹ್ಮನಿಗೆ ಅಕ್ಷರತ್ವವು ಯುಕ್ತವಾಗುವುದಿಲ್ಲ. ಭಿನ್ನವಾಗಿರುವುದಾದರೆ ಬ್ರಹ್ಮನಿಗೆ ಅಕ್ಷರತ್ವವು ಯುಕ್ತವಾಗುತ್ತದೆ.

ಶ್ರೀರಾಘವೇಂದ್ರತೀರ್ಥವಿರಚಿತ
ಪ್ರಕಾಶ

प्रकाशः —

ॐ अदृश्यत्वादिगुणको धर्मोक्तेः ॐ ।। भाष्ये ''अदृश्यत्वादिगुणा विष्णोरुक्ताः'' इति सामान्येनोक्तेः,

ವಿವರಣೆ - ಅದೃಶ್ಯತ್ವಾಧಿಕರಣವು ಪ್ರಾರಂಭವಾಗುತ್ತಿದೆ. ಮೊದಲು ಈ ಅಧಿಕರಣಕ್ಕೆ ಹಿಂದಿನ ಅಧಿಕರಣದಿಂದ ಸಂಗತಿಯನ್ನು ಸಮರ್ಥಿಸುತ್ತಿದ್ದಾರೆ. ಗ್ರಂಥಕಾರರು ಆಕ್ಷೇಪಿಕೇ ಸಂಗತಿಯನ್ನು ಹೇಳುವ ಮೂಲಕ ಅದೃಶ್ಯತ್ವಾಧಿಕರಣಕ್ಕೆ ಆಂತರ್ಯಾಮ್ಯಧಿಕರಣದಿಂದ ಸಂಗತಿಯನ್ನು ತೋರಿಸಿದ್ದಾರೆ. ಭಾಷ್ಯದಲ್ಲಿ ''ಅದೃಶ್ಯತ್ವಾದಿಗುಣಾ ವಿಷ್ಣೋರುಕ್ತಾಃ'' ಎಂದು ಸಾಮಾನ್ಯವಾಗಿ ಹೇಳಿರುವುದರಿಂದ ಹಿಂದಿನ ಅಧಿಕರಣದಿಂದ ಅಥವಾ ಆನಂದಮಯಾಧಿಕರಣದಿಂದಲೂ ಸಂಗತಿಯು ಪ್ರಾಪ್ತವಾಗುತ್ತದೆ.

ಪ್ರಕಾಶಃ – ತತ್ವಪ್ರದೀಪೇ ಚ ''–''ಅದೃಶ್ಯೇऽನಾತ್ಮ್ಯೇ'' ''ಸಹೈವ ಸನ್ತಂ ನ ವಿಜಾನನ್ತಿ ದೇವಾಃ'' ''ಸ ಯೋऽತೋऽಶ್ರುತಃ'' ಇತ್ಯಾದಿನಾ ಅದೃಶ್ಯತ್ವಾದಿಗುಣಾಃ ವಿಷ್ಣೋರುಕ್ತಾಃ'' ಇತ್ಯಾದಿಪದಪ್ರಯೋಗಾತ್

ಭಾಷ್ಯಾನುಸಾರವಾಗಿ ತತ್ವಪ್ರದೀಪಪದಲ್ಲಿಯೂ ''ಅದೃಶ್ಯೇऽನಾತ್ಮ್ಯೇ'' ಎಂಬ ಆನಂದಮಯಾಧಿಕರಣದ ವಿಷಯವಾಕ್ಯದಿಂದ ''ಸಹೈವ ಸಂತಂ ನ ವಿಜಾನಂತಿ ದೇವಾಃ'' ಎಂಬ ವಿಷಯವಾಕ್ಯದಿಂದ ಮತ್ತು ''ಸ ಯೋऽತೋಶ್ರುತಃ'' ಎಂಬ ಹಿಂದಿನ ಆಂತರ್ಯಾಮ್ಯಧಿಕರಣದ ವಿಷಯವಾಕ್ಯದಿಂದ ಅದೃಶ್ಯತ್ವಾದಿಗುಣಗಳನ್ನು ವಿಷ್ಣುವಿನಲ್ಲಿ ಈ ಅಧಿಕರಣವು ಸಮರ್ಥಿಸುತ್ತಿದೆ ಎಂದು ಹೇಳಿದ್ದಾರೆ. ಆದ್ದರಿಂದ ಇದೂ ಸಹ ಒಂದು ಸಂಗತಿ ಪ್ರತಿಪಾದಕ ಸಂವಾದ.

ಪ್ರಕಾಶಃ – ಟೀಕಾಯಾಮ್ ''ಅದೃಶ್ಯೇऽನಾತ್ಮ್ಯೇ'' ಇತಿ ವಿಶಿಷ್ಯೋಕ್ತಾವಪಿ ತುಲ್ಯನ್ಯಾಯತಯಾ ಪ್ರಾಪ್ತಾಂ ''ಪೂರ್ವವದದೃಶ್ಯತ್ವಾದಿಬಲೇನ ರೂಢಿಂ ಪರಿತ್ಯಜ್ಯ ಯೋಗವೃತ್ತ್ಯಾऽಕ್ಷರಶಬ್ದೋ ವಿಷ್ಣೌ ಸಂಭವತಿ'' ಇತಿ ನ್ಯಾಯವಿವರಣಟೀಕೋಕ್ತ್ಯಾ ಚ ಲಬ್ಧಾಂ ಪೂರ್ವಸಙ್ಗತಿಮಾಹ – **ಅತ್ರೇತಿ ।**

ಹಾಗೂ ತತ್ವಪ್ರಕಾಶಿಕೆಯಲ್ಲಿ ''ಅದೃಶ್ಯೇऽನಾತ್ಮ್ಯೇ'' ಎಂಬುದಾಗಿ ಆನಂದಮಯಾಧಿಕರಣದ ವಿಷಯ-ವಾಕ್ಯವನ್ನಷ್ಟೇ ವಿಶೇಷವಾಗಿ ಹೇಳಿದ್ದಾರೆ. ಆದರೂ ಸಹ ಸಮಾನ ನ್ಯಾಯದಿಂದ ಹಿಂದಿನ ಆಂತರ್ಯಾಮ್ಯಧಿಕರಣದ 'ಸ ಯೋऽತೋಶ್ರುತಃ' ಎಂಬ ವಾಕ್ಯವನ್ನೂ ಸಹ ಉಪಲಕ್ಷಣಯಾ ಸ್ವೀಕರಿಸಬೇಕು ಎಂದು ಹೇಳಿದ್ದಾರೆ. ಹಾಗೂ ನ್ಯಾಯವಿವರಣೆ ಟೀಕೆಯಲ್ಲಿ ''ಪೂರ್ವವದದೃಶ್ಯತ್ವಾದಿಬಲೇನ ರೂಢಿಂ ಪರಿತ್ಯಜ್ಯ ಯೋಗವೃತ್ತ್ಯಾऽಕ್ಷರಶಬ್ದೋ ವಿಷ್ಣೌ ಸಂಭವತಿ'' ಹಿಂದಿನ ಅಧಿಕರಣದಂತೆ ಅಕ್ಷರಶಬ್ದವು ಅದೃಶ್ಯತ್ವಾದಿ ಹೇತುಗಳಿಂದ ರೂಢಿಯನ್ನು ಬಿಟ್ಟು ಯೋಗವೃತ್ತಿಯಿಂದಲೇ ವಿಷ್ಣುವಿನಲ್ಲಿ ಸಮನ್ವಯವಾಗುತ್ತದೆ ಎಂದು ಹೇಳಿರುತ್ತಾರೆ. ಹೀಗೆ, ಭಾಷ್ಯದಲ್ಲಿ ಹೇಳಿದ ಸಾಮಾನ್ಯವಚನ, ತತ್ವಪ್ರದೀಪದಲ್ಲಿನ ಪ್ರಯೋಗಗಳು, ತತ್ವಪ್ರಕಾಶಿಕಾ ವಾಕ್ಯ ಪರ್ಯಾಲೋಚನೆ ಮತ್ತು ನ್ಯಾಯವಿವರಣ ಟೀಕಾವಾಕ್ಯಗಳಿಂದ ಈ ಅಧಿಕರಣಕ್ಕೆ ಹಿಂದಿನ ಆಂತರ್ಯಾಮ್ಯಧಿಕರಣದಿಂದ ಸಂಗತಿಯಿರುತ್ತದೆಂಬುದು ಎಲ್ಲ ರೀತಿಯಿಂದಲೂ ಸ್ಪಷ್ಟವಾಗುತ್ತದೆ. ಇದನ್ನು 'ಅತ್ರ' ಎಂಬ ವಾಕ್ಯದಿಂದ ಹೇಳುತ್ತಿದ್ದಾರೆ.

ಪ್ರಕಾಶಃ – ನನು ಅದೃಶ್ಯತ್ವಂ ಸಾಮಾನ್ಯಂ, ಪೃಥಿವ್ಯವಿದಿತತ್ವಂ ವಿಶೇಷಃ, ತೇನ ಕಥಂ ತದಾಕ್ಷೇಪ ಇತಿ,

'ಯತ್ತ ದದ್ರೇಶ್ಯಂ' ಎಂಬ ಶ್ರುತಿಯಲ್ಲಿ ಕೇಳಿಸುತ್ತಿರುವ ಅದೃಶ್ಯತ್ವವು ಸಾಮಾನ್ಯರೂಪವಾಗಿವೆ. 'ಯಂ ಪೃಥಿವೀ ನ ವೇದ' ಎಂಬಲ್ಲಿ ಕೇಳಿಸುತ್ತಿರುವ ಪೃಥಿವ್ಯವಿದಿತತ್ವ ರೂಪ ಧರ್ಮವು ವಿಶೇಷ ರೂಪವಾಗಿದೆ. ಹೀಗಿರುವಾಗ ಸಾಮಾನ್ಯವಾದ ಅದೃಶ್ಯತ್ವಾದಿಧರ್ಮವು ವಿಷ್ಣುವಿನಲ್ಲಿ ಇಲ್ಲದ ಕಾರಣ ವಿಶೇಷರೂಪವಾದ ಪೃಥಿವ್ಯವಿದಿತತ್ವ ಎಂಬ ಧರ್ಮವೂ ಸಹ ವಿಷ್ಣುವಿನಲ್ಲಿ ಬರುವುದಿಲ್ಲವೆಂದು ಹೇಗೆ ಹೇಳುತ್ತೀರಿ? ಎರಡೂ ಸಹ ಒಂದೇ ಆಗಿದ್ದಲ್ಲಿ ಹಾಗೇ ಹೇಳಬಹುದಿತ್ತು. ಆದರೆ ಸಾಮಾನ್ಯ ವಿಶೇಷಭಾವವಿರುವುದರಿಂದ ಅದೃಶ್ಯತ್ವವಿಲ್ಲದಿದ್ದರೆ ಪೃಥಿವ್ಯವಿದಿತತ್ವವು ಬರುವುದಿಲ್ಲವೆಂದು ಹೇಳಲಾಗದು.

ಪ್ರಕಾಶಃ – ಮೈವಂ, ಸರ್ವಾದೃಶ್ಯತ್ವವತಿ ತದೇಕದೇಶಪೃಥಿವ್ಯವಿದಿತತ್ವಸ್ಯಾಪಿ ''ಮುಖನಾಸಿಕಾವಚನೋऽನುನಾಸಿಕಃ'' ಇತ್ಯತ್ರ ಮಹಾಭಾಷ್ಯೋಕ್ತೇನ ಪ್ರಾಸಾದವಾಸಿನ್ಯಾಯೇನ ಸತ್ತ್ವಾಢ್ಢಾ,

ಈ ಆಕ್ಷೇಪಕ್ಕೆ ನಾಲ್ಕು ಬಗೆಯಲ್ಲಿ ಉತ್ತರಿಸುತ್ತಿದ್ದಾರೆ. ಮೊದಲನೆಯ ಸಮಾಧಾನ ಹೀಗಿದೆ - ಪ್ರಾಸಾದವಾಸಿನ್ಯಾಯದಿಂದ ಸಾಮಾನ್ಯವಿಲ್ಲದಿದ್ದರೆ ವಿಶೇಷವು ಬರುವುದಿಲ್ಲವೆಂಬುದನ್ನು ತಿಳಿಯಬೇಕು. ಅಂದರೆ ಸಕಲ ಪದಾರ್ಥಗಳಿಂದ ತಿಳಿಯಲಾರನೆಂದು ಹೇಳಿದಾಗ ಸರ್ವಪದಾರ್ಥಗಳ ಏಕದೇಶವಾದ ಪೃಥಿವ್ಯಾದಿಗಳಿಂದಲೂ ಸಹ ತಿಳಿಯಲಾರನೆಂದೇ ಅರ್ಥ. ಸಮಗ್ರ ಪ್ರಾಸಾದಕ್ಕೆ ಒಡೆಯನಾದವನು ಆದರ ಏಕದೇಶಕ್ಕೂ ಹೇಗೆ ಒಡೆಯನಾಗಿರುತ್ತಾನೋ ಆದರಂತೆ ಈ ಪ್ರಾಸಾದವಾಸಿನ್ಯಾಯವು ''ಮುಖ ನಾಸಿಕಾವಚನೋऽನುನಾಸಿಕಃ'' ಎಂಬ ಸೂತ್ರದ ಮಹಾಭಾಷ್ಯದಲ್ಲಿ ಹೇಳಲ್ಪಟ್ಟಿರುತ್ತದೆ.

ಪ್ರಕಾಶಃ – ಪೃಥಿವ್ಯಾದ್ಯಧಿದೈವಾದಿಸರ್ವವಿದಿತತ್ವಸ್ಯ ಅದೃಶ್ಯತ್ವರೂಪತ್ವಾಢ್ಢಾ,

ಅಥವಾ ಎರಡನೆಯ ಸಮಾಧಾನ ಹೀಗೆ - 'ಯಂ ಪೃಥಿವೀ ನ ವೇದ' 'ಯಮ್ ಆಕಾಶೋ ನ ವೇದ' ಇತ್ಯಾದಿಯಾಗಿ ಅಧಿದೇವಾದಿ ಇಪ್ಪತ್ತೊಂದು ಪ್ರಕರಣಗಳಲ್ಲಿ ಪ್ರತಿಯೊಂದರಿಂದಲೂ ಅವನು ತಿಳಿಯಲಾರನೆಂದು ನಿರೂಪಿಸಲಾಗಿದೆ. ಇದರಿಂದ ಯಾರಿಂದಲೂ ಸಹ ಪರಮಾತ್ಮನು ತಿಳಿಯಲಾರನೆಂದು ಸರ್ವಾದೃಶ್ಯತ್ವವನ್ನೇ ಹೇಳಿದಂತಾಗುತ್ತದೆ. ಅಂದರೆ ಪೃಥಿವ್ಯಾದಿಅಧಿದೈವಾದಿಸರ್ವಾವಿದಿತತ್ವವು ಅದೃಶ್ಯತ್ವ ರೂಪವೇ ಆಗಿರುವುದರಿಂದ ಸಾಮಾನ್ಯವಿಶೇಷಭಾವವನ್ನು ಹೇಳಬೇಕಾಗಿಲ್ಲ.

ಪ್ರಕಾಶಃ – ''ಸಹೈವ ಸನ್ತಂ ನ ವಿಜಾನನ್ತಿ ದೇವಾಃ'' ಇತ್ಯತ್ರೈವ ಕೈಮುತ್ಯಲಬ್ಧತ್ವಾಢ್ಢಾ,

ಅಥವಾ ಅಂತಃಸ್ಥತ್ವಾಧಿಕರಣದಲ್ಲಿ ಆನಂದಮಯಾಧಿಕರಣವನ್ನು ಆಕ್ಷೇಪ ಮಾಡಿಕೊಂಡಂತೆ ಇಲ್ಲಿಯೂ ತಿಳಿಯಬೇಕು. ''ಸಹೈವ ಸಂತಂ ನ ವಿಜಾನಂತಿ ದೇವಾಃ'' ಎಂಬುದಾಗಿ ದೇವತೆಗಳೇ ತಮ್ಮ ಜೊತೆಗಿರುವ ಭಗವಂತನನ್ನೇ ತಿಳಿಯಲಾರರೆಂದು ಹೇಳಿದ ಮೇಲೆ ಉಳಿದವರು ತಿಳಿಯುವುದಿಲ್ಲವೆಂದು ಪ್ರತ್ಯೇಕ ಹೇಳಬೇಕೇನು ? ಎಂಬ ಕೈಮುತ್ಯನಾಯದಿಂದ ಸರ್ವಾವಿದಿತತ್ವವನ್ನು ಅಂತಃಸ್ಥತ್ವಾಧಿಕರಣದಲ್ಲಿ ಹೇಳಿದ್ದರು, ಆದರಂತೆ ಪ್ರಕೃತದಲ್ಲಿಯೂ ಪೃಥಿವೀ, ಆಕಾಶ ಮೊದಲಾದ ಯಾವುದೇ ಪದಾರ್ಥಗಳಿಂದಲೂ ಭಗವಂತನು ತಿಳಿಯಲಾರನೆಂದು ಹೇಳಿದಮೇಲೆ ಉಳಿದವರು ತಿಳಿಯುತ್ತಾರೆಂದು ಹೇಳಬೇಕೇನು ? ಎಂಬುದಾಗಿ ಕೈಮುತ್ಯನ್ಯಾಯವನ್ನು ವಿವಕ್ಷಿಸಿದಾಗ ಪೃಥಿವ್ಯಾದ್ಯವಿದಿತತ್ವವು ಅದೃಶ್ಯತ್ವರೂಪವೆಂದೇ ನಿರ್ಣಯವಾಗುತ್ತದೆ. ಇದು ಮೂರನೆಯ ಸಮಾಧಾನ.

ಪ್ರಕಾಶಃ – ಉಭಯತ್ರಾಪಿ ಅಪರಿಚ್ಛಿನ್ನವೈಭವಸ್ಯ ವಿವಕ್ಷಿತತ್ವಾಢ್ಢಾ ತದಾಕ್ಷೇಪಾತ್ ।।

ಅಥವಾ 'ಯತ್ತ ದದ್ರೇಶ್ಯಂ' ಎಂಬ ವಾಕ್ಯಕ್ಕೆ ಭಗವಂತನ ಅಪರಿಚ್ಛಿನ್ನವೈಭವವನ್ನು ಹೇಳುವುದರಲ್ಲೇ ತಾತ್ಪರ್ಯವಿದೆ. ಆದರಂತೆ 'ಯಂ ಪೃಥಿವೀ ನ ವೇದ' ಇತ್ಯಾದಿ ವಾಕ್ಯಗಳಿಗೂ ಭಗವಂತನ ಅಪರಿಚ್ಛಿನ್ನವೈಭವವನ್ನು ಹೇಳುವುದರಲ್ಲೇ ತಾತ್ಪರ್ಯವಿದೆ. ಹೀಗೆ ಎರಡೂ ಶ್ರುತಿಗಳಿಗೆ ಅಪರಿಚ್ಛಿನ್ನ ವೈಭವ

ಪ್ರಕಾಶಃ – तत्वप्रदीपे च ''–''अदृश्येऽनात्म्ये'' ''सहैव सन्तं न विजानन्ति देवाः'' ''स योऽतोऽश्रुतः'' इत्यादिना अदृश्यत्वादिगुणाः विष्णोरुक्ताः'' इत्यादिपदप्रयोगात्

ಭಾಷ್ಯಾನುಸಾರವಾಗಿ ತತ್ವಪ್ರದೀಪದಲ್ಲಿಯೂ ''ಅದೃಶ್ಯೇಽನಾತ್ಮ್ಯೇ'' ಎಂಬ ಆನಂದಮಯಾಧಿಕರಣದ ವಿಷಯವಾಕ್ಯದಿಂದ ''ಸಹೈವ ಸಂತಂ ನ ವಿಜಾನಂತಿ ದೇವಾಃ'' ಎಂಬ ವಿಷಯವಾಕ್ಯದಿಂದ ಮತ್ತು ''ಸ ಯೋಽತೋಶ್ರುತಃ'' ಎಂಬ ಹಿಂದಿನ ಅಂತರ್ಯಾಮ್ಯಧಿಕರಣದ ವಿಷಯವಾಕ್ಯದಿಂದ ಅದೃಶ್ಯತ್ವಾದಿಗುಣಗಳನ್ನು ವಿಷ್ಣುವಿನಲ್ಲಿ ಈ ಅಧಿಕರಣವು ಸಮರ್ಥಿಸುತ್ತಿದೆ ಎಂದು ಹೇಳಿದ್ದಾರೆ. ಆದ್ದರಿಂದ ಇದೂ ಸಹ ಒಂದು ಸಂಗತಿ ಪ್ರತಿಪಾದಕ ಸಂವಾದ.

ಪ್ರಕಾಶಃ – टीकायाम् ''अदृश्येऽनात्म्ये'' इति विशिष्योक्तावपि तुल्यन्यायतया प्राप्तां ''पूर्ववददृश्यत्वादिबलेन रूढिं परित्यज्य योगवृत्त्याऽक्षरशब्दो विष्णौ सम्भवति'' इति न्यायविवरणटीकोक्तत्वा च लब्धां पूर्वसङ्गतिमाह – अत्रेति ।

ಹಾಗೂ ತತ್ವಪ್ರಕಾಶಿಕೆಯಲ್ಲಿ ''ಅದೃಶ್ಯೇಽನಾತ್ಮ್ಯೇ'' ಎಂಬುದಾಗಿ ಆನಂದಮಯಾಧಿಕರಣದ ವಿಷಯ-ವಾಕ್ಯವನ್ನಷ್ಟೇ ವಿಶೇಷವಾಗಿ ಹೇಳಿದ್ದಾರೆ. ಆದರೂ ಸಹ ಸಮಾನ ನ್ಯಾಯದಿಂದ ಹಿಂದಿನ ಅಂತರ್ಯಾಮ್ಯಧಿಕರಣದ 'ಸ ಯೋಽತೋಶ್ರುತಃ' ಎಂಬ ವಾಕ್ಯವನ್ನೂ ಸಹ ಉಪಲಕ್ಷಣಯಾ ಸ್ವೀಕರಿಸಬೇಕು ಎಂದು ಹೇಳಿದ್ದಾರೆ. ಹಾಗೂ ನ್ಯಾಯವಿವರಣೆ ಟೀಕೆಯಲ್ಲಿ ''ಪೂರ್ವವದದೃಶ್ಯತ್ವಾದಿಬಲೇನ ರೂಢಿಂ ಪರಿತ್ಯಜ್ಯ ಯೋಗವೃತ್ತ್ಯಾऽಕ್ಷರಶಬ್ದೋ ವಿಷ್ಣೌ ಸಂಭವತಿ'' ಹಿಂದಿನ ಅಧಿಕರಣದಂತೆ ಅಕ್ಷರಶಬ್ದವು ಅದೃಶ್ಯತ್ವಾದಿ ಹೇತುಗಳಿಂದ ರೂಢಿಯನ್ನು ಬಿಟ್ಟು ಯೋಗವೃತ್ತಿಯಿಂದಲೇ ವಿಷ್ಣುವಿನಲ್ಲಿ ಸಮನ್ವಯವಾಗುತ್ತದೆ ಎಂದು ಹೇಳಿರುತ್ತಾರೆ. ಹೀಗೆ, ಭಾಷ್ಯದಲ್ಲಿ ಹೇಳಿದ ಸಾಮಾನ್ಯವಚನ, ತತ್ವಪ್ರದೀಪದಲ್ಲಿನ ಪ್ರಯೋಗಗಳು, ತತ್ವಪ್ರಕಾಶಿಕಾ ವಾಕ್ಯ ಪರ್ಯಾಲೋಚನೆ ಮತ್ತು ನ್ಯಾಯವಿವರಣ ಟೀಕಾವಾಕ್ಯಗಳಿಂದ ಈ ಅಧಿಕರಣಕ್ಕೆ ಹಿಂದಿನ ಅಂತರ್ಯಾಮ್ಯಧಿಕರಣದಿಂದ ಸಂಗತಿಯಿರುತ್ತದೆಂಬುದು ಎಲ್ಲ ರೀತಿಯಿಂದಲೂ ಸ್ಪಷ್ಟವಾಗುತ್ತದೆ. ಇದನ್ನು 'ಅತ್ರ' ಎಂಬ ವಾಕ್ಯದಿಂದ ಹೇಳುತ್ತಿದ್ದಾರೆ.

ಪ್ರಕಾಶಃ – ननु अदृश्यत्वं सामान्यं, पृथिव्यविदितत्वं विशेषः, तेन कथं तदाक्षेप इति,

'ಯತ್ತ ದದ್ರೇಶ್ಯಂ' ಎಂಬ ಶ್ರುತಿಯಲ್ಲಿ ಕೇಳಿಸುತ್ತಿರುವ ಅದೃಶ್ಯತ್ವವು ಸಾಮಾನ್ಯರೂಪವಾಗಿವೆ. 'ಯಂ ಪೃಥಿವೀ ನ ವೇದ' ಎಂಬಲ್ಲಿ ಕೇಳಿಸುತ್ತಿರುವ ಪೃಥಿವ್ಯವಿದಿತತ್ವ ರೂಪ ಧರ್ಮವು ವಿಶೇಷ ರೂಪವಾಗಿದೆ. ಹೀಗಿರುವಾಗ ಸಾಮಾನ್ಯವಾದ ಅದೃಶ್ಯತ್ವಾದಿಧರ್ಮವು ವಿಷ್ಣುವಿನಲ್ಲಿ ಇಲ್ಲದ ಕಾರಣ ವಿಶೇಷರೂಪವಾದ ಪೃಥಿವ್ಯವಿದಿತತ್ವ ಎಂಬ ಧರ್ಮವೂ ಸಹ ವಿಷ್ಣುವಿನಲ್ಲಿ ಬರುವುದಿಲ್ಲವೆಂದು ಹೇಗೆ ಹೇಳುತ್ತೀರಿ? ಎರಡೂ ಸಹ ಒಂದೇ ಆಗಿದ್ದಲ್ಲಿ ಹಾಗೇ ಹೇಳಬಹುದಿತ್ತು. ಆದರೆ ಸಾಮಾನ್ಯ ವಿಶೇಷಭಾವವಿರುವುದರಿಂದ ಅದೃಶ್ಯತ್ವವಿಲ್ಲದಿದ್ದರೆ ಪೃಥಿವ್ಯವಿದಿತತ್ವವು ಬರುವುದಿಲ್ಲವೆಂದು ಹೇಳಲಾಗದು.

ಪ್ರಕಾಶಃ – ನೈವಂ, ಸರ್ವಾದೃಶ್ಯತ್ವವತಿ ತದೇಕದೇಶಪೃಥಿವ್ಯವಿದಿತತ್ವಸ್ಯಾಪಿ ''ಮುಖನಾಸಿಕಾವಚನೋऽನುನಾಸಿಕಃ'' ಇತ್ಯತ್ರ ಮಹಾಭಾಷ್ಯೋಕ್ತೇನ ಪ್ರಾಸಾದವಾಸಿನ್ಯಾಯೇನ ಸತ್ತ್ವಾದ್ಧಾ,

ಈ ಆಕ್ಷೇಪಕ್ಕೆ ನಾಲ್ಕು ಬಗೆಯಲ್ಲಿ ಉತ್ತರಿಸುತ್ತಿದ್ದಾರೆ. ಮೊದಲನೆಯ ಸಮಾಧಾನ ಹೀಗಿದೆ - ಪ್ರಾಸಾದವಾಸಿನ್ಯಾಯದಿಂದ ಸಾಮಾನ್ಯವಿಲ್ಲದಿದ್ದರೆ ವಿಶೇಷವು ಬರುವುದಿಲ್ಲವೆಂಬುದನ್ನು ತಿಳಿಯಬೇಕು. ಆಂದರೆ ಸಕಲ ಪದಾರ್ಥಗಳಿಂದ ತಿಳಿಯಲಾರನೆಂದು ಹೇಳಿದಾಗ ಸರ್ವಪದಾರ್ಥಗಳ ಏಕದೇಶವಾದ ಪೃಥಿವ್ಯಾದಿಗಳಿಂದಲೂ ಸಹ ತಿಳಿಯಲಾರನೆಂದೇ ಅರ್ಥ. ಸಮಗ್ರ ಪ್ರಾಸಾದಕ್ಕೆ ಒಡೆಯನಾದವನು ಅದರ ಏಕದೇಶಕ್ಕೂ ಹೇಗೆ ಒಡೆಯನಾಗಿರುತ್ತಾನೋ ಅದರಂತೆ ಈ ಪ್ರಾಸಾದವಾಸಿನ್ಯಾಯವು ''ಮುಖ ನಾಸಿಕಾವಚನೋऽನುನಾಸಿಕಃ'' ಎಂಬ ಸೂತ್ರದ ಮಹಾಭಾಷ್ಯದಲ್ಲಿ ಹೇಳಲ್ಪಟ್ಟಿರುತ್ತದೆ.

ಪ್ರಕಾಶಃ – ಪೃಥಿವ್ಯಾದ್ಯಧಿದೈವಾದಿಸರ್ವವಿದಿತತ್ವಸ್ಯ ಅದೃಶ್ಯತ್ವರೂಪತ್ವಾದ್ಧಾ,

ಅಥವಾ ಎರಡನೆಯ ಸಮಾಧಾನ ಹೀಗೆ - 'ಯಂ ಪೃಥಿವೀ ನ ವೇದ' 'ಯಮ್ ಆಕಾಶೋ ನ ವೇದ' ಇತ್ಯಾದಿಯಾಗಿ ಅಧಿದೇವಾದಿ ಇಪ್ಪತ್ತೊಂದು ಪ್ರಕರಣಗಳಲ್ಲಿ ಪ್ರತಿಯೊಂದರಿಂದಲೂ ಅವನು ತಿಳಿಯಲಾರನೆಂದು ನಿರೂಪಿಸಲಾಗಿದೆ. ಇದರಿಂದ ಯಾರಿಂದಲೂ ಸಹ ಪರಮಾತ್ಮನು ತಿಳಿಯಲಾರನೆಂದು ಸರ್ವಾದೃಶ್ಯತ್ವವನ್ನೇ ಹೇಳಿದಂತಾಗುತ್ತದೆ. ಆಂದರೆ ಪೃಥಿವ್ಯಾದಿಅಧಿದೈವಾದಿಸರ್ವಾವಿದಿತತ್ವವು ಅದೃಶ್ಯತ್ವ ರೂಪವೇ ಆಗಿರುವುದರಿಂದ ಸಾಮಾನ್ಯವಿಶೇಷಭಾವವನ್ನು ಹೇಳಬೇಕಾಗಿಲ್ಲ.

ಪ್ರಕಾಶಃ – ''ಸಹೈವ ಸನ್ತಂ ನ ವಿಜಾನನ್ತಿ ದೇವಾಃ'' ಇತ್ಯತ್ರೈವ ಕೈಮುತ್ಯಲಬ್ಧತ್ವಾದ್ಧಾ,

ಅಥವಾ ಆಂತಃಸ್ಥತ್ವಾಧಿಕರಣದಲ್ಲಿ ಆನಂದಮಯಾಧಿಕರಣವನ್ನು ಆಕ್ಷೇಪ ಮಾಡಿಕೊಂಡಂತೆ ಇಲ್ಲಿಯೂ ತಿಳಿಯಬೇಕು. ''ಸಹೈವ ಸಂತಂ ನ ವಿಜಾನಂತಿ ದೇವಾಃ'' ಎಂಬುದಾಗಿ ದೇವತೆಗಳೇ ತಮ್ಮ ಜೊತೆಗಿರುವ ಭಗವಂತನನ್ನೇ ತಿಳಿಯಲಾರರೆಂದು ಹೇಳಿದ ಮೇಲೆ ಉಳಿದವರು ತಿಳಿಯುವುದಿಲ್ಲವೆಂದು ಪ್ರತ್ಯೇಕ ಹೇಳಬೇಕೇನು ? ಎಂಬ ಕೈಮುತ್ಯನಾಯದಿಂದ ಸರ್ವಾವಿದಿತತ್ವವನ್ನು ಆಂತಃಸ್ಥತ್ವಾಧಿಕರಣದಲ್ಲಿ ಹೇಳಿದ್ದರು, ಅದರಂತೆ ಪ್ರಕೃತದಲ್ಲಿಯೂ ಪೃಥಿವೀ, ಆಕಾಶ ಮೊದಲಾದ ಯಾವುದೇ ಪದಾರ್ಥಗಳಿಂದಲೂ ಭಗವಂತನು ತಿಳಿಯಲಾರನೆಂದು ಹೇಳಿದಮೇಲೆ ಉಳಿದವರು ತಿಳಿಯುತ್ತಾರೆಂದು ಹೇಳಬೇಕೇನು ? ಎಂಬುದಾಗಿ ಕೈಮುತ್ಯನ್ಯಾಯವನ್ನು ವಿವಕ್ಷಿಸಿದಾಗ ಪೃಥಿವ್ಯಾದ್ಯವಿದಿತತ್ವವು ಅದೃಶ್ಯತ್ವರೂಪವೆಂದೇ ನಿರ್ಣಯವಾಗುತ್ತದೆ. ಇದು ಮೂರನೆಯ ಸಮಾಧಾನ.

ಪ್ರಕಾಶಃ – ಉಭಯತ್ರಾಪಿ ಅಪರಿಚ್ಛಿನ್ನವೈಭವಸ್ಯ ವಿವಕ್ಷಿತತ್ವಾದ್ಧಾ ತದಾಕ್ಷೇಪಾತ್ ।।

ಆಥವಾ 'ಯತ್ತ ದದ್ರೇಶ್ಯಂ' ಎಂಬ ವಾಕ್ಯಕ್ಕೆ ಭಗವಂತನ ಅಪರಿಚ್ಛಿನ್ನವೈಭವವನ್ನು ಹೇಳುವುದರಲ್ಲೇ ತಾತ್ಪರ್ಯವಿದೆ. ಆದರಂತೆ 'ಯಂ ಪೃಥಿವೀ ನ ವೇದ' ಇತ್ಯಾದಿ ವಾಕ್ಯಗಳಿಗೂ ಭಗವಂತನ ಅಪರಿಚ್ಛಿನ್ನವೈಭವವನ್ನು ಹೇಳುವುದರಲ್ಲೇ ತಾತ್ಪರ್ಯವಿದೆ. ಹೀಗೆ ಎರಡೂ ಶ್ರುತಿಗಳಿಗೆ ಅಪರಿಚ್ಛಿನ್ನ ವೈಭವ

ಉಪಪಾದನದಲ್ಲಿ ತಾತ್ಪರ್ಯವಿರುವುದರಿಂದ ಆದರ ಆಧಾರದಿಂದ ಪೃಥಿವ್ಯಾದ್ಯವಿಹಿತತ್ವದಿಂದ ಸರ್ವಾದೃಶ್ಯತ್ವವನ್ನು ಆಕ್ಷೇಪಿಸಲಾಗಿದೆ. ಇದು ನಾಲ್ಕನೆಯ ಸಮಾಧಾನ.

ಪ್ರಕಾಶಃ – ಯದತ್ರೋಭಾಭ್ಯಾಮುಕ್ತಂ – ಪ್ರಾಕ್ ಪ್ರಧಾನಸ್ಯ ದ್ರಷ್ಟೃತ್ವಾದ್ಯಯೋಗೇನ ನಿರಾಸೇऽಪೀಹ ತಥಾ ಬಾಧಕಾಭಾವಾದದೃಶ್ಯತ್ವಾದಿಕಂ ಪ್ರಧಾನಸ್ಯ ಸ್ಯಾದಿತಿ ಶಙ್ಕೋದಯಾತ್ಸಙ್ಗತಿರಿತಿ, ತನ್ನ,

ಈ ಸಂದರ್ಭದಲ್ಲಿ ಇಬ್ಬರು ಪರವಾದಿಗಳು ಈ ಅಧಿಕರಣಕ್ಕೆ ಹೀಗೆ ಸಂಗತಿ ಹೇಳುತ್ತಾರೆ - ಹಿಂದಿನ ಅಧಿಕರಣದಲ್ಲಿ ದ್ರಷ್ಟೃತ್ವಾದಿ ಧರ್ಮಗಳು ಶ್ರುತಿಯಲ್ಲಿ ಕೇಳಿಸುತ್ತಿರುವುದರಿಂದ ಪ್ರಧಾನಕ್ಕೆ ಅಂತರ್ಯಾಮಿತ್ವವನ್ನು ಸಮರ್ಥಿಸಲು ಆಗಲಿಲ್ಲ. ಆದ್ದರಿಂದ ಶ್ರುತಿಗೆ ಪ್ರಧಾನಪರತ್ವವನ್ನು ನಿರಾಕರಿಸಲಾಯಿತು. ಆದರೆ ಅಂತಹ ದ್ರಷ್ಟೃತ್ವಾದಿಬಾಧಕಗಳು ಈ ಅಧಿಕರಣದಲ್ಲಿ ಕೇಳಿಸದ ಕಾರಣ ಪ್ರಧಾನಕ್ಕೆ ಅದೃಶ್ಯತ್ವಾದಿಧರ್ಮಗಳನ್ನು ಹೇಳಬಹುದಲ್ಲವೇ? ಎಂಬ ಶಂಕೋತ್ಥಾಪನ ಪೂರ್ವಕವಾಗಿ ಸಂಗತಿಯನ್ನು ಹೇಳಿರುತ್ತಾರೆ.

ಇದು ಸರಿಯಲ್ಲ.

ಪ್ರಕಾಶಃ – ಸಾಕ್ಷಾತ್ಸೌತ್ರಹೇತ್ವಾಕ್ಷೇಪಸಮ್ಭವೇನೇದೃಶಸ್ಯಾನಾದರಣೀಯತ್ವಾದಿತಿ ಭಾವೇನೋಕ್ತಂ – ಬ್ರಹ್ಮತ್ವೇ ಹೇತ್ವಕೃತಸ್ಯೇತಿ ।

ಏಕೆಂದರೆ ನೇರವಾಗಿ ಸೂತ್ರದಲ್ಲಿ ಹೇಳಲ್ಪಟ್ಟ ಹೇತುವನ್ನೇ ಆಕ್ಷೇಪ ಮಾಡಲು ಬರುವಾಗ ಅದೃಶ್ಯತ್ವದಿಂದ ಆಕ್ಷೇಪ ಮಾಡುವುದು ಸರಿಯಾಗುವುದಿಲ್ಲ. ಈ ಅಭಿಪ್ರಾಯದಿಂದ ಗ್ರಂಥಕಾರರು 'ಬ್ರಹ್ಮತ್ವೇ ಹೇತೂಕೃತಸ್ಯ' ಎಂದು ಹೇಳಿರುತ್ತಾರೆ.

ಪ್ರಕಾಶಃ – ಏತೇನೈವ ಪ್ರಾಗ್ ಹೇತ್ವಕೃತೇನ ಅದೃಶ್ಯತ್ವರೂಪಬ್ರಹ್ಮಧರ್ಮೇಣ ಬ್ರಹ್ಮ ಕಿಂ ನಾಕ್ಷರಶಬ್ದೇನೋಚ್ಯತೇ ಇತ್ಯಾಶಙ್ಕಾಯಾ ಅಪ್ಯನವಕಾಶಃ । ''ಅದೃಶ್ಯೇऽನಾತ್ಮ್ಯೇ'' ಇತ್ಯಾದಿರೀಕಾದಿ ತ್ತು ಫಲಪರಮಿತಿ ಭಾವಃ ।

ಹೀಗೆ ಹೇಳಿದ್ದರಿಂದ ಮತ್ತೊಂದು ಶಂಕೆಯನ್ನು ನಿರಾಕರಿಸಿದಂತಾಯಿತು. ಹಿಂದೆ ಬ್ರಹ್ಮನ ವಿಷಯದಲ್ಲಿ ಅದೃಶ್ಯತ್ವವೆಂಬ ಧರ್ಮವನ್ನು ಹೇತುವನ್ನಾಗಿ ಹೇಳಲಾಯಿತು. ಅಂತಹ ಹೇತುವನ್ನು ಪ್ರಕೃತ ಅಧಿಕರಣದಲ್ಲಿ ಆಕ್ಷೇಪಿಸಲಾಗಿದೆ. ಆದ್ದರಿಂದ ಅದೃಶ್ಯತ್ವವೆಂಬ ಬ್ರಹ್ಮನ ಧರ್ಮದಿಂದ ಬ್ರಹ್ಮನು ಅಕ್ಷರ ಶಬ್ದವಾಚ್ಯನಾಗಬಹುದೆಂದು ಹೇಳಲು ಸಾಧ್ಯವಿಲ್ಲ.

ವಸ್ತುತಃ ಹಿಂದಿನ ಅಧಿಕರಣದಿಂದಲೇ ಸಂಗತಿಯನ್ನು ತೋರಿಸಬೇಕು. ಆದರೆ ತತ್ವಪ್ರಕಾಶಿಕೆಯಲ್ಲಿರುವ ''ಅದೃಶ್ಯೇऽನಾತ್ಮ್ಯೇ'' ಇತ್ಯಾದಿ ವಾಕ್ಯವು ಆನಂದಮಯಾಧಿಕರಣದಿಂದ ಸಂಗತಿಯನ್ನು ತೋರಿಸುವುದಕ್ಕಾಗಿ ಹೊರಟಿರುವುದಲ್ಲ ಹೊರತು, ಈ ಅಧಿಕರಣದ ಫಲವನ್ನು ಹೇಳಲು ಹೊರಟಿದೆ ಎಂದು ತಿಳಿಯಬೇಕು.

ಪ್ರಕಾಶಃ – ನನು ಪೂರ್ವಂ ತದ್ಧರ್ಮಮಿಲಾಪಾಭಾವೇನ ಪ್ರಧಾನನಿರಾಸೇऽಪಿ ನೇಹ ತಥಾ, ಪೃಥಿವ್ಯಾದಿದೃಷ್ಟಾನ್ತಪೂರ್ವಂ ವಿಶ್ವೋಪಾದಾನತ್ವರೂಪತದ್ಧರ್ಮಾಭಿಲಾಪಾದಿತಿ ವಾ, ಪೂರ್ವತ್ರ ಅವಿದಿತತ್ವ-ರೂಪಾದೃಶ್ಯತ್ವಾದಿಬಾಧಕೇನ ಶರೀರಶಬ್ದೇ ರೂಢಿತ್ಯಾಗವದತ್ರ ಅಕ್ಷರಶಬ್ದೇ ನಾದೃಶ್ಯತ್ವಾದಿಲಿಙ್ಗೇನ ರೂಢಿತ್ಯಾಗಃ, ''ಅಕ್ಷರಾತ್ಪರಃ ಪರಃ'' ಇತ್ಯುತ್ಕರ್ಷವಿಧಿತ್ವಶ್ರವಣಾದಿತಿ ವಾ ಪೂರ್ವವೈಷಮ್ಯೇಣಾಪಿ ಸಙ್ಗತಿರಸ್ತೀತಿ ಚೇತ್,

ಆಕ್ಷೇಪ - ಗ್ರಂಥಕಾರರು ಮತ್ತೊಂದು ಬಗೆಯಲ್ಲಿಯೂ ಸಂಗತಿಯನ್ನು ತೋರಿಸಬಹುದಿತ್ತು. ಈ ಹಿಂದಿನ ಅಧಿಕರಣದಲ್ಲಿ ಪ್ರಧಾನದ ಧರ್ಮಗಳು ಕೇಳಿಸದ ಕಾರಣ ಪ್ರಧಾನ ಪೂರ್ವಪಕ್ಷವನ್ನು ನಿರಾಕರಿಸಿದ್ದು ಯುಕ್ತವಾಗಿದೆ. ಆದರೆ ಇಲ್ಲಿ ಹಾಗೆ ಪ್ರಧಾನ ಪಕ್ಷವನ್ನು ನಿರಾಕರಿಸಲು ಸಾಧ್ಯವಿಲ್ಲ. ಏಕೆಂದರೆ ''ಯಥಾ ಪೃಥಿವ್ಯಾತ್ ಓಷಧಯಃ ಸಂಭವಂತಿ ಯಥಾ ಸತಃ ಪುರುಷಾತ್ ಕೇಶಲೋಮಾನಿ ತಥಾಕ್ಷಾರಾತ್ ಸಂಭವಂತೀಹ ವಿಶ್ವಂ' ಎಂಬುದಾಗಿ 'ಯತ್ತ ದದ್ರೇಶ್ಯಂ' ಎಂಬ ವಾಕ್ಯದ ಮುಂದಿನ ವಾಕ್ಯದಲ್ಲಿ ಪೃಥಿವ್ಯಾದಿದೃಷ್ಟಾಂತವನ್ನು ನೀಡುತ್ತಾ ವಿಶ್ವೋಪಾದಾನತ್ವವೆಂಬ ಪ್ರಕೃತಿಯ ಧರ್ಮವನ್ನು ಹೇಳಲಾಗಿದೆ. ಇಂತಹ ಪ್ರಕೃತಿಯ ಅಸಾಧಾರಣ ಧರ್ಮದಿಂದ ಪ್ರಕೃತಿಯೇ ಅದೃಶ್ಯತ್ವಾದಿಗುಣವುಳ್ಳದ್ದೆಂದು ಪೂರ್ವಪಕ್ಷ ಮಾಡಬಹುದು.

ಅಥವಾ ಈ ಹಿಂದೆ ಅವಿದಿತತ್ವರೂಪವಾದ ಅದೃಶ್ಯತ್ವವೆಂಬ ಬಾಧಕಧರ್ಮವು ಇರುವ ಕಾರಣ ಶರೀರಶಬ್ದಕ್ಕೆ ದೇಹವೆಂಬ ರೂಢ್ಯರ್ಥವನ್ನು ಬಿಟ್ಟು ಕೇವಲ ನಿಯಮ್ಯ ಎಂಬರ್ಥವನ್ನು ಸ್ವೀಕರಿಸಲಾಯಿತು. ಆದರೆ ಇಲ್ಲಿ ಕೇಳಿಸುತ್ತಿರುವ ಅಕ್ಷರ ಶಬ್ದಕ್ಕೆ ಅದೃಶ್ಯತ್ವವೆಂಬ ಲಿಂಗದಿಂದ ರೂಢ್ಯರ್ಥವನ್ನು ಬಿಡಲು ಕಾರಣವಿಲ್ಲ. ಏಕೆಂದರೆ 'ಅಕ್ಷರಾತ್ಪರತಃ ಪರಃ' ಎಂಬುದಾಗಿ ಉತ್ಕರ್ಷಕ್ಕೆ ಅವಧಿಯನ್ನು ಹೇಳಿರುವುದರಿಂದ ಅಕ್ಷರ ಶಬ್ದದಿಂದ ವಿಷ್ಣುವನ್ನು ಸ್ವೀಕರಿಸಿದರೆ ಉತ್ಕರ್ಷ ಅವಧಿತ್ವವೇ ವಿಷ್ಣುವಿಗೆ ಬಾರದಿರಬೇಕಾದೀತು. ಆದ್ದರಿಂದ ಪ್ರಕೃತಿಯೇ ಅದೃಶ್ಯತ್ವಾದಿಗುಣವುಳ್ಳ ಅಕ್ಷರ ಎನಿಸುತ್ತದೆ. ಹೀಗೆ ಎರಡು ಬಗೆಯಲ್ಲಿ ಹಿಂದಿನ ಅಧಿಕರಣಕ್ಕಿಂತ ವಿಲಕ್ಷಣವಾದ ಮತ್ತು ಸುದೃಢವಾದ ಪೂರ್ವಪಕ್ಷವನ್ನು ಮಾಡಬಹುದಾದ್ದರಿಂದ ಸಂಗತಿಯನ್ನು ತೋರಿಸ ಬಹುದಲ್ಲವೇ?

ಪ್ರಕಾಶಃ – ಸತ್ಯಂ, ಪ್ರಧಾನಹೇತ್ವಾಕ್ಷೇಪಸಮ್ಭವೇ ತಸ್ಯೈವ ವಾಚ್ಯತ್ವಾತ್, ಸಿದ್ಧಾನ್ತಶಙ್ಕಾಬೀಜ-ನಿರಾಸಾರ್ಥತ್ವಾಚ್ಚ ಪೂರ್ವಹೇತ್ವಾಕ್ಷೇಪ ಏವೋಕ್ತಃ ।

ಸಮಾಧಾನ - ಹೌದು, ನೀವು ಹೇಳಿದಂತೆಯೂ ಸಂಗತಿಯನ್ನು ತೋರಿಸಬಹುದಿತ್ತು. ಆದರೆ ಪ್ರಧಾನ ಹೇತುವಾಗಿರುವ ಸೂತ್ರದಲ್ಲಿ ಹೇಳಲ್ಪಟ್ಟ ಅದೃಶ್ಯತ್ವವೆಂಬ ಧರ್ಮವನ್ನೇ ಆಕ್ಷೇಪ ಮಾಡಲು ಬರುವಾಗ ಅದರ ಮೂಲಕವಾಗಿಯೇ ಸಂಗತಿಯನ್ನು ಹೇಳಬೇಕು; ಹೊರತು ಸೂತ್ರದಲ್ಲಿ ಹೇಳಲ್ಪಡದ ವಿಶ್ವೋಪಾದಾನತ್ವಾದಿ ಧರ್ಮಗಳನ್ನು ಆಕ್ಷೇಪಿಸುವುದು ಪ್ರಧಾನವಾಗುವುದಿಲ್ಲ. ಮತ್ತು ಕೇವಲ ಅದೃಶ್ಯತ್ವಧರ್ಮದಿಂದಲೇ ಸಿದ್ಧಾಂತಿಯು ವಿಷ್ಣುವನ್ನು ಅಕ್ಷರಶಬ್ದವಾಚ್ಯನೆಂದು ಸಮರ್ಥಿಸುತ್ತಾನೆ. ಇಂತಹ ಸಿದ್ಧಾಂತಿಗೆ ಮೂಲಭೂತವಾದ ಅದೃಶ್ಯತ್ವವೆಂಬ ಧರ್ಮವನ್ನೇ ಆಕ್ಷೇಪಿಸಿದಾಗ ಪ್ರಬಲವಾದ ಸಂಗತಿಯನ್ನು

ತೋರಿಸಿದಂತಾಗುತ್ತದೆ. ಆದಕ್ಕೋಸ್ಕರ ಗ್ರಂಥಕಾರರು ಅದೃಶ್ಯತ್ವಧರ್ಮರೂಪಹೇತ್ವಾಕ್ಷೇಪದಿಂದಲೇ ಸಂಗತಿಯನ್ನು ಹೇಳಿರುತ್ತಾರೆ.

ಪ್ರಕಾಶಃ – ವಿಷಯಸಂಶಯಟೀಕಾಂ ವ್ಯನಕ್ತಿ – ಅತ್ರೇತಿ । ಟೀಕಾಯಾಮೇವ ಅಪೇಕ್ಷಿತಸಮಗ್ರವಿಷಯವಾಕ್ಯಂ ವ್ಯಕ್ತಮ್ । ಯದ್ಯಪಿ ಗುಣಜಾತಮೇವಾತ್ರ ವಿಷಯಃ, ಲಿಙ್ಗಪಾದತ್ವಾತ್, ಟೀಕಾಯಾಂ ತಥೈವೋಕ್ತೇಶ್ಚ ।

ವಿಷಯ ಹಾಗೂ ಸಂಶಯಗಳನ್ನು ನಿರೂಪಿಸುವ ಟೀಕೆಯನ್ನು ವ್ಯಾಖ್ಯಾನಿಸುತ್ತಿದ್ದಾರೆ. 'ಅತ್ರ' ಇತ್ಯಾದಿ ಗ್ರಂಥದಿಂದ. ಟೀಕೆಯಲ್ಲಿಯೇ ಅಪೇಕ್ಷಿತವಾದ ಸಮಗ್ರವಿಷಯವಾಕ್ಯವನ್ನು ಉಲ್ಲೇಖಿಸಿರುತ್ತಾರೆ. ಆದ್ದರಿಂದ ಗ್ರಂಥಕಾರರು ಇಲ್ಲಿ ಪ್ರತ್ಯೇಕವಾಗಿ ಅದನ್ನು ಉಲ್ಲೇಖಿಸಿಲ್ಲ.

ವಸ್ತುತಃ ಈ ಅಧಿಕರಣದಲ್ಲಿ ಭಗವಂತನ ಗುಣಗಳನ್ನಷ್ಟೇ ಸಮನ್ವಯ ಮಾಡುತ್ತಿದ್ದಾರೆ. ಏಕೆಂದರೆ ಲಿಂಗಪಾದವಾದ್ದರಿಂದ. ಟೀಕೆಯಲ್ಲಿಯೂ ಸಹ ಅನೇಕ ಲಿಂಗಗಳ ಸಮನ್ವಯವೇ ಈ ಅಧಿಕರಣದ ಉದ್ದೇಶವೆಂದು ಹೇಳಿದ್ದಾರೆ. ಹೀಗಿರುವಾಗ ಅದೃಶ್ಯತ್ವಾದಿಗುಣವುಳ್ಳ ಅಕ್ಷರಶಬ್ದವಾಚ್ಯನು ವಿಷ್ಣುವೆಂದು ಏಕೆ ಸಮರ್ಥಿಸುತ್ತಿದ್ದೀರಿ?

ಪ್ರಕಾಶಃ – ತಥಾऽಪ್ಯಕ್ಷರಸ್ಯ ವಿಶೇಷ್ಯತ್ವಾತ್ತಸ್ಯ ಚೋಪಾದಾನತ್ವಾತ್ ನ ಬ್ರಹ್ಮೇತಿ ಪೂರ್ವಪಕ್ಷಯುಕ್ತಿಂ ಸೂಚಯಿತುಂ ತಥೋಕ್ತಮ್ । ಅತ ಏವ ಟೀಕಾಯಾಮ್ ಅಕ್ಷರಶಾಬ್ದಸಾಹಿತ್ಯೇನ ಅನ್ಯತ್ರಪ್ರಸಿದ್ಧಿರದೃಶ್ಯತ್ವಾದಿಲಿಙ್ಗಾನಾಮುಕ್ತಾ ।

ಈ ಪ್ರಶ್ನೆಗೆ ಅವಕಾಶವಿಲ್ಲ. ಅದೃಶ್ಯತ್ವಾದಿಗುಣಗಳುಳ್ಳವನು ಅಕ್ಷರನೇ ಆಗಿದ್ದಾನೆ. ಅನೇಕ ಗುಣಗಳಿಗೆ ಅಕ್ಷರನು ವಿಶೇಷ್ಯನಾದ್ದರಿಂದ ಇಲ್ಲಿ ಅಕ್ಷರಶಬ್ದದ ಸಮನ್ವಯವನ್ನು ಸ್ವೀಕರಿಸಲಾಗಿದೆ. ಅಂತಹ ಅಕ್ಷರವು ಉಪಾದಾನವೆಂದು ಹೇಳಲ್ಪಟ್ಟದ್ದರಿಂದ ಬ್ರಹ್ಮನು ಅದೃಶ್ಯನಲ್ಲ ಎಂಬ ಪೂರ್ವಪಕ್ಷಯುಕ್ತಿಯನ್ನು ಸೂಚಿಸುವುದಕ್ಕಾಗಿ ಅಕ್ಷರನನ್ನು ಸ್ವೀಕರಿಸಿದ್ದಾರೆ. ಆದ್ದರಿಂದಲೇ ಟೀಕೆಯಲ್ಲಿ ಅಕ್ಷರಶಬ್ದ ಸಹಿತವಾಗಿಯೇ ಅದೃಶ್ಯತ್ವಾದಿಲಿಂಗಗಳಿಗೆ ಅನ್ಯತ್ರಪ್ರಸಿದ್ಧಿಯನ್ನು ಹೇಳಿದ್ದಾರೆ.

ಪ್ರಕಾಶಃ – ನನ್ವೇವಮಕ್ಷರನಾಮೈವ ಸಮನ್ವೀಯತಾಮ್ । ಪಾದಸಙ್ಗತಿಸ್ತು ಉತ್ತರಾಧಿಕರಣ ಇವ ಅನೇಕಲಿಙ್ಗಸಮನ್ವಯಾರ್ಥತ್ವಾತ್ ಫಲತೋ ಭವಿಷ್ಯತಿ । ಉಪಾದಾನತ್ವಾದಕ್ಷರಂ ನ ಬ್ರಹ್ಮೇತಿ ಪೂರ್ವಪಕ್ಷಶ್ಚ ಋಜುಃ । ಉಪಾದಾನತ್ವಾದಕ್ಷರಸ್ಯಾನ್ಯತ್ವೇನ ತದ್ವಿಶೇಷಣತ್ವಾದ್ ಗುಣಜಾತಮಪ್ಯನ್ಯಸ್ಯೇತಿ ಪೂರ್ವಪಕ್ಷಸ್ತು ವಕ್ರಃ –

ಶಂಕಾ - ಎಲ್ಲಾ ಗುಣಗಳು ಅಕ್ಷರನಲ್ಲಿ ವಿಶೇಷಣವಾಗಿರುವುದಾದರೆ ಅಕ್ಷರಶಬ್ದವನ್ನೇ ಈ ಅಧಿಕರಣದಲ್ಲಿ ಸಮನ್ವಯ ಮಾಡಬಹುದಲ್ಲವೇ? ಹೀಗೆ ಅಕ್ಷರ ಶಬ್ದವನ್ನು ಸಮನ್ವಯ ಮಾಡಿದಾಗ ಪಾದಸಂಗತಿಯು ಬೆಳೆಯುವುದಿಲ್ಲವೆಂಬ ಆತಂಕಕ್ಕೆ ಅವಕಾಶವಿಲ್ಲ. ಮುಂದಿನ ವೈಶ್ವಾನರಾಧಿಕರಣದಲ್ಲಿ

'ವೈಶ್ವಾನರ' ಎಂಬ ಒಂದು ನಾಮದ ಸಮನ್ವಯದಿಂದ ಅನೇಕ ಲಿಂಗಗಳ ಸಮನ್ವಯವು ಸಿದ್ಧವಾಗುವಂತೆ ಇಲ್ಲಿಯೂ ಸಹ ಒಂದು ಅಕ್ಷರ ನಾಮದ ಸಮನ್ವಯದಿಂದ ಅನೇಕ ಲಿಂಗಗಳ ಸಮನ್ವಯವಾಗಿ ಫಲತಃ ಪಾದಸಂಗತಿಯು ಸಿದ್ಧವಾಗುತ್ತವೆ. ಮತ್ತು ಅಕ್ಷರವು ಉಪಾದಾನವಾಗಿರುವುದರಿಂದ ಅಕ್ಷರನು ಬ್ರಹ್ಮನಲ್ಲ ಎಂಬ ಪೂರ್ವಪಕ್ಷ ಮಾಡುವುದೂ ಸಹ ನೇರವಾದ ಮಾರ್ಗ. ಒಂದು ವೇಳೆ ಗುಣಗಳ ಸಮನ್ವಯವೆಂದು ಹೇಳಿದರೆ ವಕ್ರವಾದ ಪೂರ್ವಪಕ್ಷವನ್ನು ತೋರಿಸಿದಂತಾಗುತ್ತದೆ. ಏಕೆಂದರೆ ಉಪಾದಾನವಾಗಿರುವ ಅಕ್ಷರವು ಬೇರೆಯಾಗಿದೆ. ಆದರ ವಿಶೇಷಣವಾಗಿರುವ ಗುಣಗಳೂ ಭಿನ್ನನಾದವನಿಗೇ ಯುಕ್ತ. ಹೀಗಿರುವಾಗ ಅಕ್ಷರವು ಉಪಾದಾನವಾದ ಮಾತ್ರದಿಂದ ಗುಣಗಳು ಬ್ರಹ್ಮನಲ್ಲಿವೆ ಎಂದು ಏಕೆ ಹೇಳಬಾರದು ? ಎಂಬುದಾಗಿ ಗೊಂದಲವಾಗುತ್ತದೆ. ಅದಕ್ಕೋಸ್ಕರ ಅಕ್ಷರಶಬ್ದದ ಸಮನ್ವಯ ಮಾಡುವುದೇ ಎಲ್ಲಾ ರೀತಿಯಿಂದಲೂ ಸೂಕ್ತವಾಗಿದೆಯಲ್ಲವೇ?

ಪ್ರಕಾಶಃ – ಇತಿ ಚೇನ್ನ, ಅಕ್ಷರಶಬ್ದಸಮನ್ವಯಸ್ಯಾಪ್ಯಕ್ಷರಾಧಿಕರಣೇ ಸೇತ್ಸ್ಯಮಾನತ್ವಾತ್ । ನಚ ತೇನೈವೇದಂ ಗತಾರ್ಥಂ, ಪರತ್ವಾವಧಿತ್ವಾದಿನಾ ಬಾಧಕೇನ ತಸ್ಯೇಹಾಪವಾದೇನ ಪೂರ್ವಪಕ್ಷಕರಣಾತ್ ।

ಇದು ತಪ್ಪು. ಏಕೆಂದರೆ ಅಕ್ಷರ ಶಬ್ದದ ಸಮನ್ವಯವನ್ನೂ ಸಹ ಮುಂದೆ ಅಕ್ಷರಾಧಿಕರಣದಲ್ಲಿ ಮಾಡಿಯೇ ಮಾಡುತ್ತಾರೆ. ಆದ್ದರಿಂದ ಪ್ರತ್ಯೇಕವಾಗಿ ಇಲ್ಲಿ ಅಕ್ಷರಶಬ್ದದ ಸಮನ್ವಯದ ಅವಶ್ಯಕತೆ ಇರುವುದಿಲ್ಲ. ಹಾಗಾದರೆ ಮೂರನೇ ಪಾದದಲ್ಲಿರುವ ಅಕ್ಷರಾಧಿಕರಣದಿಂದಲೇ ಈ ಅಧಿಕರಣವು ಗತಾರ್ಥವಾಯಿತಲ್ಲವೇ? ಎಂದು ಪ್ರಶ್ನಿಸಬಾರದು. ಪರತ್ವ, ಅವಧಿತ್ವ ಮೊದಲಾದ ಬಾಧಕಗಳಿರುವುದರಿಂದ ಆದನ್ನು (ಅಕ್ಷರಾಧಿಕರಣವನ್ನು) ಅಪವಾದಿಸಿ ಇಲ್ಲಿ ಪೂರ್ವಪಕ್ಷ ಮಾಡಲಾಗಿದೆ.

ಪ್ರಕಾಶಃ – ಅನ್ಯತ್ರಾಸಮನ್ವಿತಗುಣಜಾತಸಮನ್ವಯಸ್ಯೈವೇಹ ಕಾರ್ಯತ್ವಾತ್ । ಅಸ್ಮಿನ್ ಪಾದೇ ಅನ್ಯಸಾಹಿತ್ಯೇನೈವ ಅನ್ಯತ್ರಪ್ರಸಿದ್ಧೇರಾಶ್ರಿತತ್ವಾತ್, ಗುಣಸಮನ್ವಯೇ ಚ ಪೂರ್ವಸಙ್ಗತೇಃ ಸಾಕ್ಷಾಲ್ಲಾಭಾಚ್ಚ ಗುಣಜಾತಮೇವಾತ್ರ ಚಿನ್ತಿತಮ್ । **ಪ್ರಕೃತ್ಯಾದೀತಿ** । ವಿದಚಿತ್ಪ್ರಕೃತಿವಿರಿಞ್ಚರುದ್ರಾ ಇತ್ಯರ್ಥಃ ।

ಬೇರೆ ಅಧಿಕರಣಗಳಲ್ಲಿ ಸಮನ್ವಯ ಮಾಡಬಿರುವ ಗುಣಗಳ ಸಮೂಹವನ್ನೇ ಇಲ್ಲಿ ಸಮನ್ವಯ ಮಾಡಬೇಕು. ಮತ್ತು ಈ ಪಾದದಲ್ಲಿ ಇರುವ ಪ್ರತಿಯೊಂದು ಅಧಿಕರಣಗಳಲ್ಲಿಯೂ ಮತ್ತೊಂದು ಶಬ್ದದ ಸಾಹಿತ್ಯದಿಂದ ಲಿಂಗಗಳಿಗೆ ಅನ್ಯತ್ರಪ್ರಸಿದ್ಧಿಯನ್ನು ಆಶ್ರಯಿಸಲಾಗಿದೆ. ಆದರಂತೆ ಈ ಅಧಿಕರಣದಲ್ಲಿಯೂ ಅಕ್ಷರಶಬ್ದದ ಸಾಹಿತ್ಯದಿಂದ ಆದೃಶ್ಯತ್ವಧರ್ಮಕ್ಕೆ ಅನ್ಯತ್ರಪ್ರಸಿದ್ಧಿಯನ್ನು ಆಶ್ರಯಿಸಲಾಗಿದೆ. ಆದ್ದರಿಂದ ಪ್ರತಿಯೊಂದು ಅಧಿಕರಣಗಳ ಆಸುಪೂರ್ವಿಣಾಗಿ ಆದೃಶ್ಯತ್ವಾದಿಗುಣಗಳ ಸಮನ್ವಯವೇ ಈ ಅಧಿಕರಣದಲ್ಲಿ ಯುಕ್ತವಾಗುತ್ತವೆ. ಮತ್ತು ಆದೃಶ್ಯತ್ವಾದಿಗುಣಗಳ ಸಮನ್ವಯವನ್ನು ಮಾಡುವುದರಿಂದ ಹಿಂದಿನ ಅಧಿಕರಣದಿಂದ ಸಂಗತಿಯು ನೇರವಾಗಿ ದೊರೆಯುತ್ತದೆ. ಆದ್ದರಿಂದ ಅನೇಕ ಗುಣಗಳ ಸಮನ್ವಯವೇ ಈ ಅಧಿಕರಣದ ಉದ್ದೇಶವೆಂದು ತಿಳಿಯಬೇಕು.

ಗ್ರಂಥದಲ್ಲಿರುವ ಪ್ರಕೃತ್ಯಾದಿ ಎಂಬ ಪದಕ್ಕೆ ಚಿತ್‌ಪ್ರಕೃತಿ, ಅಚಿತ್‌ಪ್ರಕೃತಿ, ಬ್ರಹ್ಮ, ರುದ್ರ ಮೊದಲಾದವರು ಎಂದರ್ಥ.

प्रकाशः – यद्यप्यत्र टीकायाम् ''अक्षरात्सम्भवतीह विश्वम्'' इति कारणवाक्य-स्थाक्षरब्रह्मशब्दानां विष्णाववकाशमाशङ्क्य परत्वावधित्वश्रवणेनोज्जीवनात्, तदनुरोधेन विष्णुरिति चिन्तानन्तरं कारणवाक्यस्थाक्षरब्रह्मेशशब्दाः किं प्रकृत्यादिपरा अथ विष्णुपरा इति चिन्ता प्रदर्शनीया ।

ಶಂಕಾ - ಟೀಕೆಯಲ್ಲಿ 'ಅಕ್ಷರಾತ್ಸಂಭವತೀಹ ವಿಶ್ವಮ್'' ಎಂಬುದಾಗಿ ಕಾರಣವಾಕ್ಯದಲ್ಲಿರುವ ಅಕ್ಷರ ಬ್ರಹ್ಮ ಮೊದಲಾದ ಶಬ್ದಗಳಿಗೆ ವಿಷ್ಣುವಿನಲ್ಲಿ ಅವಕಾಶವನ್ನು ಆಶಂಕಿಸಿ ಪರತ್ವಾವಧಿತ್ವವು ಕೇಳಿಸುತ್ತಿರುವುದರಿಂದ ಅಕ್ಷರ, ಬ್ರಹ್ಮ ಮೊದಲಾದ ಶಬ್ದಗಳು ವಿಷ್ಣುವಿನಲ್ಲಿ ಬರುವುದಿಲ್ಲವೆಂದು ಪೂರ್ವಪಕ್ಷವನ್ನು ಉಜ್ಜೀವನಗೊಳಿಸಿದ್ದಾರೆ. ಆದ್ದರಿಂದ ಅದಕ್ಕೆ ಅನುಸಾರಿಯಾಗಿ ಪ್ರಕೃತ ಗ್ರಂಥಕಾರರು ವಿಷ್ಣುಃ ಎಂಬ ಚಿಂತೆಯ ಅನಂತರ ಕಾರಣವಾಕ್ಯದಲ್ಲಿರುವ ಅಕ್ಷರ, ಬ್ರಹ್ಮ, ಈಶ ಮೊದಲಾದ ಶಬ್ದಗಳು ಪ್ರಕೃತ್ಯಾದಿಗಳನ್ನು ಪ್ರತಿಪಾದಿಸುತ್ತವೋ? ಅಥವಾ ವಿಷ್ಣುವನ್ನು ಪ್ರತಿಪಾದಿಸುತ್ತವೋ ಎಂಬ ಸಂಶಯಕೋಟಿಯನ್ನು ತೋರಿಸಬೇಕಿತ್ತು. ಇದನ್ನು ಏಕೆ ತೋರಿಸಿಲ್ಲ?

प्रकाशः – तथाऽपि तुल्यन्यायतया सा चिन्ता स्पष्टेति वा,

ಸಮಾಧಾನ - ಹೌದು, ಸಮಾನನ್ಯಾಯದಿಂದ ಈ ಚಿಂತೆಯನ್ನು ಶಿಷ್ಯಂದಿರೇ ಸ್ವತಃ ಮಾಡಿಕೊಳ್ಳಬೇಕೆಂದು ಸ್ಪಷ್ಟವಾಗಿರುವುದರಿಂದ ಗ್ರಂಥಕಾರರು ಉಲ್ಲೇಖಿಸಿಲ್ಲ. ಗ್ರಂಥಕಾರರು ಹೇಳದಿದ್ದರೂ ಇದನ್ನು ಇಟ್ಟುಕೊಳ್ಳಬೇಕು.

प्रकाशः – वाक्यशेषस्थाक्षरस्य परत्वावधित्वेन निकृष्टत्वे तदन्यप्राचीनाक्षरस्यापि न ब्रह्मत्वमिति हेतुहेतुमद्भावस्येव प्राचीनकारणवाक्यस्थब्रह्मेशशब्दयोः न ब्रह्मपरत्वमित्यत्र स्पष्टं हेतुहेतुमद्भावाप्रतीतेरक्षरस्यापि अब्रह्मत्वात्तद्युक्तकारणवाक्यस्य तत्समानाधिकरणब्रह्मेशशब्दयोरपि न ब्रह्मपरत्वमिति अक्षरस्य अब्रह्मत्वद्धारैव कारणवाक्यादेरब्रह्मपरत्वोक्त्यवश्यम्भावाद्वा,

ಸಮಾಧಾನಾಂತರ - ಅಥವಾ ಒಂದು ವೇಳೆ 'ಅಕ್ಷರಾತ್ಪರತಃ ಪರಃ' ಎಂಬ ವಾಕ್ಯಶೇಷದಲ್ಲಿ ಇರುವ ಅಕ್ಷರವು ಪರತ್ವಕ್ಕೆ ಅವಧಿಯಾದ ವಸ್ತುವಿಗಿಂತ ನಿಕೃಷ್ಟವಾಗಿದೆಯೆಂದು ಹೇಳಿದರೆ. ಈ ವಾಕ್ಯಶೇಷದ ಮೊದಲಿರುವ 'ಅಕ್ಷರಾತ್ಸಂಭವತೀಹ ವಿಶ್ವಮ್'' ಎಂಬಲ್ಲಿರುವ ವಾಕ್ಯಶೇಷದಲ್ಲಿರುವ ಅಕ್ಷರದಿಂದ ಅಭಿನ್ನವಾದ ಪೂರ್ವವಾಕ್ಯಸ್ಥವಾದ ಅಕ್ಷರಶಬ್ದವೂ ಸಹ ಬ್ರಹ್ಮನನ್ನು ಪ್ರತಿಪಾದಿಸುವುದಿಲ್ಲ. ನಿಕೃಷ್ಟವಾದ ವಸ್ತುವನ್ನೇ ಪ್ರತಿಪಾದಿಸುತ್ತದೆ ಎಂದಾಗುತ್ತದೆ. ಹೀಗೆ ಹೇತುಹೇತುಮದ್ಭಾವವು ಸ್ಪಷ್ಟವಾಗಿ ಇರುತ್ತದೆ. ಇಲ್ಲಿದ್ದಂತೆ ಹಿಂದಿನ ಕಾರಣವಾಕ್ಯದಲ್ಲಿರುವ ಬ್ರಹ್ಮ, ಈಶ ಮೊದಲಾದ ಶಬ್ದಗಳಿಗೆ ಬ್ರಹ್ಮಪರತ್ವವಿರುವುದಿಲ್ಲವೆನ್ನಲು ಸ್ಪಷ್ಟವಾಗಿ ಹೇತುಹೇತುಮದ್ಭಾವವು ಪ್ರತೀತವಾಗುತ್ತಿಲ್ಲ. ಆದ್ದರಿಂದ ಅಕ್ಷರವೂ ಬ್ರಹ್ಮವಾಗದಿದ್ದರೆ ಅಕ್ಷರಶಬ್ದದಿಂದ ಕೂಡಿರುವ ಕಾರಣವಾಕ್ಯಕ್ಕೆ ಹಾಗೂ ಅಕ್ಷರಶಬ್ದದ

ಸಾಮಾನಾಧಿಕರಣ್ಯವನ್ನು ಹೊಂದಿರುವ ಬ್ರಹ್ಮ, ಈಶ ಶಬ್ದಗಳಿಗೂ ಸಹ ಬ್ರಹ್ಮಪರತ್ವವು ಸಿದ್ಧವಾಗುವುದಿಲ್ಲ. ಆದ್ದರಿಂದ ಅಕ್ಷರವು ಬ್ರಹ್ಮವಲ್ಲದ ಕಾರಣ ಇದರ ಮೂಲಕ ಕಾರಣವಾಕ್ಯವೂ ಸಹ ಬ್ರಹ್ಮಪರವಾಗುವುದಿಲ್ಲವೆಂದು ಒಪ್ಪಬೇಕು. ಇನ್ನಕ್ಕಿಂತ ವಾಕ್ಯಶೇಷದಲ್ಲಿರುವ ಅಕ್ಷರಶಬ್ದವು ಬ್ರಹ್ಮವಾಗದಿದ್ದರೆ ಹಿಂದಿನ ವಾಕ್ಯದಲ್ಲಿರುವ ಅಕ್ಷರಶಬ್ದವೂ ಸಹ ಬ್ರಹ್ಮವಾಗುವುದಿಲ್ಲವೆಂದು ಹೇಳುವುದು ಸುಲಭವಾಗುತ್ತದೆ. ಆದ್ದರಿಂದ ಅಕ್ಷರಶಬ್ದದ ಮೂಲಕವೇ ಸಂಗತಿಯನ್ನು ತೋರಿಸಿದ್ದಾರೆ.

ಪ್ರಕಾಶಃ – सङ्गतिभाष्यन्यायविवरणतट्टीकानुरोधाद्वा अक्षरमुखेव चिन्तोपदर्शिता ।

ಅಥವಾ ಸಂಗತಿಯನ್ನು ನಿರೂಪಣೆ ಮಾಡುವ ಭಾಷ್ಯ, ನ್ಯಾಯವಿವರಣ ಹಾಗೂ ನ್ಯಾಯವಿವರಣ ಟೀಕೆಗಳಲ್ಲಿ ಅಕ್ಷರಶಬ್ದದ ಮೂಲಕವೇ ಸಂಶಯವನ್ನು ತೋರಿಸಿದ್ದಾರೆ; ಹೊರತು, ಬ್ರಹ್ಮ, ಈಶ ಮೊದಲಾದ ಶಬ್ದಗಳಿಂದ ಸಂಶಯವನ್ನು ತೋರಿಸಿರುವುದಿಲ್ಲ. ಹೀಗೆ ಅನೇಕ ಕಾರಣಗಳಿರುವುದರಿಂದ ವಿಷ್ಣುಪರವಾದ ಚಿಂತಾಕ್ರಮವನ್ನು ಹೇಳದೇ ಅಕ್ಷರ ಶಬ್ದದ ಮೂಲಕ ಚಿಂತಾಕ್ರಮವನ್ನು ಹೇಳಿದ್ದಾರೆ.

फलफलिभावमस्फुटत्वादाह – अनन्यत्व इति । यदि वक्ष्यमाणदिशा प्रकृतहानाप्रकृतकल्पनादोषापत्त्या ''अक्षरात्परतः'' इत्युक्ताक्षरस्य ''अक्षरात्सम्भवतीह विश्वम्'' इति पूर्वोक्तस्य चाक्षरस्यैकत्वं, तदा अदृश्यत्वादिगुणकस्य विश्वकारणत्वेनोक्तस्यैव परत्वावधित्वात् तस्य च सर्वोत्तमे विष्णावयोगात्, यथायथं प्रकृत्यादीति पूर्वपक्षे फलम्,

ಫಲಫಲಿಭಾವವು ಅಸ್ಪಷ್ಟವಾಗಿರುವುದರಿಂದ ಅದನ್ನು ಸ್ವತಃ ಗ್ರಂಥಕಾರರೇ 'ಅನನ್ಯತ್ವೇ' ಎಂಬ ವಾಕ್ಯದಿಂದ ಹೇಳಿರುತ್ತಾರೆ. ಹೇಗೆಂದರೆ - ಒಂದು ವೇಳೆ ಮುಂದೆ ಹೇಳುವ ಪ್ರಕಾರ 'ಪ್ರಕೃತಹಾನ ಹಾಗೂ ಅಪ್ರಕೃತಕಲ್ಪನಾ' ಎಂಬ ದೋಷಗಳು ಬರುವುದರಿಂದ ''ಅಕ್ಷರಾತ್ಪರತಃ ಪರಃ'' ಎಂಬಲ್ಲಿ ಹೇಳಿದ ಅಕ್ಷರ ಶಬ್ದದಿಂದ ವಾಚ್ಯವಾದ ವಸ್ತುವೇ ''ಅಕ್ಷರಾತ್ಸಂಭವತೀಹ ವಿಶ್ವಮ್'' ಎಂಬ ಹಿಂದಿನ ವಾಕ್ಯದಲ್ಲಿರುವ ಅಕ್ಷರಶಬ್ದದಿಂದಲೂ ಪ್ರತಿಪಾದ್ಯವಾಗುತ್ತದೆಂದು ಎರಡು ಅಕ್ಷರಗಳಿಗೂ ಏಕ್ಯವನ್ನು ಹೇಳಬೇಕು. ಆದರೆ ಅದೃಶ್ಯತ್ವಾದಿಗುಣಗಳುಳ್ಳವೆಂದು, ವಿಶ್ವಕ್ಕೆ ಕಾರಣವಾಗಿರುವ ವಸ್ತುವೇ ಪರತ್ವಕ್ಕೆ ಅವಧಿಯಾಗಿದೆ. ಆದ್ದರಿಂದ ಇಂತಹ ಪರತ್ವಾವಧಿತ್ವವು ಸರ್ವೋತ್ತಮನಾದ ವಿಷ್ಣುವಿನಲ್ಲಿ ಕೂಡುವುದಿಲ್ಲ. ಆದ್ದರಿಂದ ಯಥಾಯೋಗ್ಯವಾಗಿ ಪ್ರಕೃತ್ಯಾದಿಗಳೇ ಅದೃಶ್ಯತ್ವಾದಿಗುಣಗಳುವುಗಳು ಎಂದು ಪೂರ್ವಪಕ್ಷದ ಫಲ.

प्रकाशः – यदा तु ''अक्षरत्रयमीरितम्'' इति वक्ष्यमाणरीत्या अन्यत्वं, तदा ''अक्षरात्परतः'' इत्युक्ताक्षरस्यापरत्वात् परत्वावधित्वस्य ब्रह्मण्यभावात्, परविद्याविषयत्वेन विष्णुरेवेति सिद्धान्ते फलमित्यर्थः ।

ಒಂದು ವೇಳೆ ''ಅಕ್ಷರತ್ರಯಮೀರಿತಮ್'' ಇತ್ಯಾದಿಯಾಗಿ ಮುಂದೆ ಹೇಳುವ ಪ್ರಕಾರ 'ಅಕ್ಷರತ್ಸಂಭವತೀಹ ವಿಶ್ವಂ' ಎಂಬಲ್ಲಿರುವ ಅಕ್ಷರಶಬ್ದ ವಾಚ್ಯವಾದ ವಸ್ತು ಬೇರೆಯಾದರೆ ಆಗ 'ಅಕ್ಷರಾತ್ಪರತಃ' ಎಂಬಲ್ಲಿ ಹೇಳಲ್ಪಟ್ಟ ಅಕ್ಷರವೂ ಸಹ ಬೇರೆಯಾಯಿತು. ಆವಾಗ ಪರತ್ವಾವಧಿತ್ವವು ಬ್ರಹ್ಮನಲ್ಲಿ ಬಾರದ ಕಾರಣ ಪರವಿದ್ಯಾವಿಷಯನಾದ ವಿಷ್ಣುವೇ ಅದೃಶ್ಯತ್ವಾದಿಗುಣಗಳ್ಳುವನಾಗುತ್ತಾನೆಂಬುದು ಸಿದ್ಧಾಂತದ ಫಲ.

ಸಾರ

ಹಿಂದಿನ ಅಧಿಕರಣದಲ್ಲಿ ಅಂತರ್ಯಾಮಿಯು ವಿಷ್ಣುವೇ ಆಗಿದ್ದಾನೆನ್ನಲು ಸಾಕಲ್ಯೇನ ಅವಿದಿತತ್ವವನ್ನು ಹೇತುವನ್ನಾಗಿ ಮಾಡಿದರು. ಅಂದರೆ ಅದೃಶ್ಯತ್ವವನ್ನು ಹೇತುವೆಂದು ಹೇಳಿದಂತಾಯಿತು. ಮತ್ತು ಆನಂದಮಯಾಧಿಕರಣದಲ್ಲಿ ಆನಂದಮಯನಾದ ವಿಷ್ಣುವಿಗೆ 'ಅದೃಶ್ಯೇऽನಾತ್ಮ್ಯೇ' ಎಂಬ ತೈತ್ತೀರಿಯದಲ್ಲಿ ಹೇಳಲ್ಪಟ್ಟ ಅದೃಶ್ಯತ್ವಗುಣವನ್ನು ಹೇಳಿದ್ದಾರೆ. ಈ ಅದೃಶ್ಯತ್ವಗುಣವು ವಿಷ್ಣುವಿನಲ್ಲಿ ಬರುವುದಿಲ್ಲವೆಂದು ಈ ಅಧಿಕರಣದಲ್ಲಿ ಆಕ್ಷೇಪ ಮಾಡುತ್ತಿದ್ದಾರೆ. ಆದ್ದರಿಂದ ಹಿಂದಿನ ಅಧಿಕರಣದಿಂದ ಆನಂತರ್ಯ ಸಂಗತಿಯು ಇರುತ್ತದೆ. ಮತ್ತು ಆನಂದಮಯಾಧಿಕರಣದಿಂದಲೂ ಪರಂಪರಯಾ ಸಂಗತಿಯು ಇರುತ್ತದೆ.

'ಅಕ್ಷರಾತ್ಪರತಃ ಪರಃ' ಎಂಬುದಾಗಿ ಯಾವ ಅಕ್ಷರವು ಪ್ರಸಕ್ತವಾಗಿದೆಯೋ, ಅದೇ ಅಕ್ಷರವು 'ಅಕ್ಷರಾತ್ಸಂಭವತೀಹ ವಿಶ್ವಂ' ಎಂಬಲ್ಲಿರುವ ಅಕ್ಷರಶಬ್ದದಿಂದಲೂ ಪ್ರತಿಪಾದ್ಯವಾದರೆ ಅದೃಶ್ಯತ್ವಾದಿಗುಣವುಳ್ಳ ಜಗತ್ಕಾರಣತ್ವೇನ ಹೇಳಲ್ಪಟ್ಟ ಪರತ್ವಾವಧಿತ್ವವು ಸರ್ವೋತ್ತಮನಾದ ವಿಷ್ಣುವಿನಲ್ಲಿ ಬರುವುದಿಲ್ಲ. ಆದ್ದರಿಂದ ಪ್ರಕೃತ್ಯಾದಿಗಳೇ ಅಕ್ಷರಶಬ್ದವಾಚ್ಯರಾಗುತ್ತಾರೆಂಬುದು ಪೂರ್ವಪಕ್ಷದ ಗುರಿ.

'ಅಕ್ಷರತ್ರಯಮೀರಿತಮ್' ಎಂದು ಮುಂದೆ ಹೇಳುವ ಪ್ರಕಾರ 'ಅಕ್ಷರಾತ್ಪರತಃ' ಎಂಬಲ್ಲಿ ಹೇಳಲ್ಪಟ್ಟ ಅಕ್ಷರವೇ ಬೇರೆ. 'ಅಕ್ಷರತ್ಸಂಭವತೀಹ ವಿಶ್ವಂ' ಎಂಬಲ್ಲಿ ಹೇಳಲ್ಪಟ್ಟ ಅಕ್ಷರವೇ ಬೇರೆ ಎಂದು ವಿವಕ್ಷಿಸಿದರೆ ಪರತ್ವಾವಧಿತ್ವವು ವಿಷ್ಣುವಿನಲ್ಲಿ ಬರುವುದಿಲ್ಲ. ಆವಾಗ ಪರವಿದ್ಯೆಯ ವಿಷಯನಾದ್ದರಿಂದ ವಿಷ್ಣುವೇ ಅಕ್ಷರನೆನಿಸುತ್ತಾನೆಂಬುದು ಸಿದ್ಧಾಂತದ ಗುರಿ.

• • • • •

ಪ್ರಕೃತಿ, ಬ್ರಹ್ಮಾದಿಗಳೇ ಅದೃಶ್ಯರೆಂದು ಪೂರ್ವಪಕ್ಷ

ಪೂರ್ವಪಕ್ಷಸ್ತು – ಜಡಪ್ರಕೃತೇರೇವಾದೃಶ್ಯತ್ವಾದಿ,

ಅದೃಶ್ಯತ್ವಾದಿಗುಣಕೇऽಕ್ಷರೇ ಪೃಥಿವ್ಯಾದಿದೃಷ್ಟಾನ್ತಪೂರ್ವಕಂ ''ತಥಾऽಕ್ಷರಾತ್ಸಮ್ಭವತೀಹ ವಿಶ್ವಮ್'' ಇತಿ ವಿಶ್ವೋಪಾದಾನತ್ವೋಕ್ತೇಃ ।

ಅನುವಾದ - ಪೂರ್ವಪಕ್ಷ ಹೀಗಿದೆ - ಅದೃಶ್ಯತ್ವಾದಿ ಗುಣವುಳ್ಳದ್ದು ಜಡಪ್ರಕೃತಿಯೇ ಆಗಿದೆ. ಏಕೆಂದರೆ ಅದೃಶ್ಯತ್ವಾದಿ ಗುಣವುಳ್ಳ ಅಕ್ಷರಶಬ್ದ ಪ್ರತಿಪಾದ್ಯವಾದ ವಸ್ತುವಿನಲ್ಲಿ ಪೃಥಿವೀ ಮೊದಲಾದವುಗಳನ್ನು ದೃಷ್ಟಾಂತವನ್ನಾಗಿ ನೀಡುತ್ತಾ 'ತಥಾऽಕ್ಷರಾತ್ಸಂಭವತೀಹ ವಿಶ್ವಮ್'' ಎಂಬುದಾಗಿ ವಿಶ್ವೋಪಾದಾನತ್ವವನ್ನು ಶ್ರುತಿಯು ಹೇಳಿದೆ. ವಿಶ್ವಕ್ಕೆ ಉಪಾದಾನವಾಗಿರುವ ವಸ್ತು ಜಡಪ್ರಕೃತಿಯೇ ಆಗಿರುವುದರಿಂದ ಅದೇ ಅದೃಶ್ಯತ್ವಾದಿಗುಣವುಳ್ಳ ಅಕ್ಷರಶಬ್ದವಾಚ್ಯವಾಗಬೇಕು.

ನಚ ಕಾರಣತ್ವಮಾತ್ರೇऽಯಂ ದೃಷ್ಟಾನ್ತಃ, ತಸ್ಯ ''ಸಮ್ಭವತೀಹ ವಿಶ್ವಮ್'' ಇತ್ಯನೇನೈವ ಸಿದ್ಧ್ಯಾ ದೃಷ್ಟಾನ್ತವೈಯರ್ಥ್ಯಾತ್ । ಅಬಾಧೇऽನ್ತರಙ್ಗಸ್ಯೋಪಾದಾನತ್ವಸ್ಯ ತ್ಯಾಗಾಯೋಗಾಚ್ಚ ।

'ತಥಾऽಕ್ಷರತ್ಸಂಭವತೀಹ ವಿಶ್ವಮ್' ಎಂಬ ಶ್ರುತಿಯು ಕೇವಲ ವಿಶ್ವಕ್ಕೆ ಕಾರಣವಾಗಿರುವ ಪದಾರ್ಥವನ್ನಷ್ಟೇ ಹೇಳುತ್ತಿದೆ ಹೊರತು, ಉಪಾದಾನಕಾರಣತ್ವವನ್ನು ಹೇಳುತ್ತಿಲ್ಲವೆಂದು ಆಶಂಕಿಸಬಾರದು. ಏಕೆಂದರೆ 'ಸಂಭವತೀಹ ವಿಶ್ವಮ್' ಎಂಬ ಮಾತಿನಿಂದಲೇ ಕಾರಣತ್ವವು ತಿಳಿಯುವಾಗ ಪುನಃ ಪೃಥಿವೀ ಮೊದಲಾದವುಗಳನ್ನು ದೃಷ್ಟಾಂತವನ್ನಾಗಿ ನೀಡಿದ್ದು ವ್ಯರ್ಥವಾಗುತ್ತದೆ. ದೃಷ್ಟಾಂತವು ಸಾರ್ಥಕವಾಗಬೇಕೆಂದರೆ ಉಪಾದಾನಕಾರಣವನ್ನೇ ಶ್ರುತಿಯು ಹೇಳುತ್ತಿದೆಯೆಂದು ಒಪ್ಪಬೇಕು.

ಮತ್ತು ನಿಮಿತ್ತಕಾರಣ ಹಾಗೂ ಉಪಾದಾನಕಾರಣಗಳಲ್ಲಿ ಉಪಾದಾನ ಕಾರಣವೇ ಅಂತರಂಗವಾಗಿದೆ. ಸ್ವತಃ ತಾನೇ ಕಾರ್ಯರೂಪವನ್ನು ತಾಳುವುದರಿಂದ ನಿಮಿತ್ತಕಾರಣಕ್ಕಿಂತ ಪ್ರಬಲವಾಗಿದೆ. ಅಂತರಂಗವನ್ನು ಸ್ವೀಕರಿಸಲು ಬಾಧವಿಲ್ಲದೇ ಇರುವಾಗ ಹೀಗೆ ಅಂತರಂಗವಾಗಿರುವ ಉಪಾದಾನಕಾರಣತ್ವ ಎಂಬರ್ಥವನ್ನು ಬಿಟ್ಟು ಬಹಿರಂಗವಾದ ನಿಮಿತ್ತಕಾರಣ ಎಂಬರ್ಥವನ್ನು ಒಪ್ಪುವುದು ತಪ್ಪಾಗುತ್ತದೆ.

ಚಿತ್ಪ್ರಕೃತೇರ್ವाऽದೃಶ್ಯತ್ವಾದಿಕಮ್ ತತ್ರಾಕ್ಷರಶಬ್ದಸ್ಯ ''ಕೂಟಸ್ಥೋऽಕ್ಷರ ಉಚ್ಯತೇ'' ಇತ್ಯಾದಿಸ್ಮೃತಿಸಿದ್ಧತ್ವಾತ್ । ನ ಚಾಕ್ಷರಾಧಿಕರಣನ್ಯಾಯೇನ ಬ್ರಹ್ಮಣಿ ಸ ಸಾವಕಾಶ ಇತಿ ವಾಚ್ಯಂ, ವಿಶ್ವೋಪಾದಾನತ್ವಸ್ಯ ತತ್ರ ಅಸಮ್ಭವಾತ್ ಚಿತ್ಪ್ರಕೃತೌ ತು ವಿಶ್ವೋಪಾದಾನಾಭಿಮಾನಿತ್ವೇನ ತತ್ಸಮ್ಭವಾತ್ ।

ಅಥವಾ ಚತ್ತಕ್ಷತಿಯೇ ಅದೃಶ್ಯತ್ವಗುಣವುಳ್ಳದ್ದೆಂದು ಪೂರ್ವಪಕ್ಷ ಮಾಡಬಹುದು. ಚತ್ತಕ್ಷತಿಯೆನಿಸಿದ ಲಕ್ಷ್ಮೀದೇವಿಯಲ್ಲಿ ''ಕೂಟಸ್ಥೋಽಕ್ಷರ ಉಚ್ಯತೇ'' ಎಂಬುದಾಗಿ ಭಗವದ್ಗೀತೆಯು ಅಕ್ಷರಶಬ್ದಪ್ರತಿಪಾದ್ಯತ್ವವನ್ನು ಹೇಳುತ್ತಿದೆ. ಆದ್ದರಿಂದ ಅದೃಶ್ಯತ್ವಾದಿಗುಣವುಳ್ಳ ಅಕ್ಷರಶಬ್ದವಾಚ್ಯಳಾದವಳು ಲಕ್ಷ್ಮೀದೇವಿಯೇ ಆಗುತ್ತಾಳೆ.

ಇನ್ನು ಅಕ್ಷರಾಧಿಕರಣದ ನ್ಯಾಯದಿಂದ ಬ್ರಹ್ಮನಲ್ಲಿ ಅಕ್ಷರಶಬ್ದವು ಸಾವಕಾಶವಾಗಿದೆಯಲ್ಲವೇ? ಎಂದು ಶಂಕಿಸಬಾರದು. ಏಕೆಂದರೆ ಬ್ರಹ್ಮನು ವಿಶ್ವಕ್ಕೆ ಉಪಾದಾನಕಾರಣನಾಗಲು ಸಾಧ್ಯವಿಲ್ಲ. ಶ್ರುತಿಯು ವಿಶ್ವಕ್ಕೆ ಉಪಾದಾನಕಾರಣವಾದ ವಸ್ತುವಿನಲ್ಲೇ ಅಕ್ಷರಶಬ್ದಪ್ರತಿಪಾದ್ಯತ್ವವನ್ನು ಹೇಳುತ್ತಿದೆ. ಹಾಗಾದರೆ ಲಕ್ಷ್ಮೀದೇವಿಯಲ್ಲಿಯೂ ಸಹ ಉಪಾದಾನಕಾರಣತ್ವವು ಅಸಂಭಾವಿತವಾಗಿದೆಯಲ್ಲವೇ? ಎಂದು ಪ್ರಶ್ನಿಸಬಾರದು. ವಿಶ್ವಕ್ಕೆ ಉಪಾದಾನಕಾರಣವಾದ ಜಡಪ್ರಕೃತಿಗೆ ಲಕ್ಷ್ಮೀದೇವಿಯು ಅಭಿಮಾನಿದೇವತೆಯಾಗಿದ್ದಾಳೆ. ಆದ್ದರಿಂದ ಅವಳಲ್ಲಿ ಉಪಾದಾನಕಾರಣತ್ವವನ್ನು ಹೇಳುವುದು ತಪ್ಪಾಗುವುದಿಲ್ಲ.

ಚತುರ್ಮುಖೋ ವಾऽದೃಶ್ಯತ್ವಾದಿಗುಣಕಃ, ''ಸ ಬ್ರಹ್ಮವಿದ್ಯಾಮ್'' ಇತಿ ಬ್ರಹ್ಮಶಬ್ದಾತ್ । ನಚ ವಿಷ್ಣೌ ಸ ಮುಖ್ಯ ಇತಿ ವಾಚ್ಯಂ, ಪೂರ್ವತ್ರ ''ಬ್ರಹ್ಮಾ ದೇವಾನಾಂ ಪ್ರಥಮಃ ಸಮ್ಬಭೂವ'' ಇತಿ, ತತ್ತರತ್ರ ಚ

'ತಸ್ಮಾದೇತದ್ ಬ್ರಹ್ಮ ನಾಮ ರೂಪಮನ್ನಂ ಚ ಜಾಯತೇ ।'

ಇತಿ ಜಾಯಮಾನತ್ವಲಿಙ್ಗೇನ ಚತುರ್ಮುಖಪರೇಣ ಬ್ರಹ್ಮಶಬ್ದೇನ ಸನ್ದಶಸ್ಯ ''ಸ ಬ್ರಹ್ಮವಿದ್ಯಾಮ್'' ಇತಿ ಬ್ರಹ್ಮಶಬ್ದಸ್ಯ ಅನ್ಯಪರತ್ವಾಯೋಗಾತ್ ।

ಅಥವಾ ಅದೃಶ್ಯತ್ವಾದಿಗುಣಗಳುಳ್ಳವನು ಚತುರ್ಮುಖಬ್ರಹ್ಮನಾಗಿದ್ದಾನೆಂದು ಪೂರ್ವಪಕ್ಷ ಮಾಡಬಹುದು. ''ಸ ಬ್ರಹ್ಮವಿದ್ಯಾಮ್'' ಎಂಬುದಾಗಿ ಚತುರ್ಮುಖನಲ್ಲಿ ಪ್ರಸಿದ್ಧವಾದ ಬ್ರಹ್ಮಶಬ್ದವು ಕೇಳಿಸುತ್ತಿರುವುದೇ ಇದಕ್ಕೆ ಮುಖ್ಯ ಕಾರಣ.

ವಿಷ್ಣುವಿನಲ್ಲಿಯೂ ಬ್ರಹ್ಮಶಬ್ದವು ಮುಖ್ಯವಾಗಿಯೇ ಇದೆಯಲ್ಲವೇ? ಎಂದು ಪ್ರಶ್ನಿಸಬಾರದು. ಏಕೆಂದರೆ 'ಸ ಬ್ರಹ್ಮವಿದ್ಯಾಮ್' ಎಂಬ ಶ್ರುತಿಯ ಹಿಂದಿನ ವಾಕ್ಯದಲ್ಲಿ 'ಬ್ರಹ್ಮಾ ದೇವಾನಾಂ ಪ್ರಥಮಃ ಸಂಬಭೂವ' ಎಂಬುದಾಗಿ ಚತುರ್ಮುಖಬ್ರಹ್ಮನು ಮೊದಲು ಹುಟ್ಟಿದನು ಎಂದು ಹೇಳಲಾಗಿದೆ. ಮುಂದೆಯೂ ಸಹ 'ತಸ್ಮಾದೇತದ್ ಬ್ರಹ್ಮ ನಾಮ ರೂಪಮನ್ನಂ ಚ ಜಾಯತೇ ।' ಎಂಬುದಾಗಿ ಚತುರ್ಮುಖಬ್ರಹ್ಮನ ಉತ್ಪತ್ತಿಯನ್ನೇ ಹೇಳಲಾಗಿದೆ. ಈ ಜಾಯಮಾನತ್ವಲಿಂಗವು ಚತುರ್ಮುಖನಲ್ಲಿ ಉಪಪನ್ನವಾಗುತ್ತದೆ; ಹೊರತು ವಿಷ್ಣುವಿನಲ್ಲಿ ಕೂಡುವುದಿಲ್ಲ. ಆದ್ದರಿಂದ ಚತುರ್ಮುಖ ಪರವಾದ

ಬ್ರಹ್ಮಶಬ್ದದಿಂದ ಸಂದಷ್ಟವಾದ್ದರಿಂದ 'ಸ ಬ್ರಹ್ಮವಿದ್ಯಾಮ್' ಎಂಬ ಶ್ರುತಿಯಲ್ಲಿರುವ ಬ್ರಹ್ಮಶಬ್ದವೂ ಸಹ ಚತುರ್ಮುಖಬ್ರಹ್ಮನನ್ನೇ ಪ್ರತಿಪಾದಿಸಬೇಕು; ಹೊರತು ವಿಷ್ಣುವನ್ನು ಪ್ರತಿಪಾದಿಸಲು ಸಾಧ್ಯವಿಲ್ಲ.

ರುದ್ರೋ ವಾऽದೃಶ್ಯತ್ವಾದಿಗುಣಕಃ, ''ಕರ್ತಾರಮೀಶಮ್'' ಇತಿ ಈಶಶಬ್ದಾತ್ । ನಚ ''ಶಬ್ದಾದೇವ ಪ್ರಮಿತಃ'' ಇತಿ ವಕ್ಷ್ಯಮಾಣನ್ಯಾಯೇನ ಸ ವಿಷ್ಣುಪರ ಇತಿ ವಾಚ್ಯಂ, ರುದ್ರೇ ಪ್ರಸಿದ್ಧಸರ್ವಜ್ಞಶಬ್ದಾತ್ । ನ ಚಾಸೌ ಯೌಗಿಕತ್ವೇನ ಪ್ರಕೃತಾಕ್ಷರಸ್ಯ ವಿಶೇಷಣಂ, ನತು ರುಢ್ಯಾಖ್ಯವಿಶೇಷ್ಯಪರ ಇತಿ ವಾಚ್ಯಂ, ರೂಢೇರ್ಬಲವತ್ತ್ವಾತ್ । ''ಸರ್ವವಿತ್'' ಇತ್ಯನೇನ ಪುನರುಕ್ತೇಶ್ಚ ।

ಅಥವಾ ಅದೃಶ್ಯತ್ವಾದಿಗುಣಗಳುಳ್ಳವನು ರುದ್ರನೆಂದು ಪೂರ್ವಪಕ್ಷ ಮಾಡಬಹುದು. 'ಕರ್ತಾರಮೀಶಮ್' ಎಂಬುದಾಗಿ ರುದ್ರನಲ್ಲಿ ಪ್ರಸಿದ್ಧವಾದ ಈಶಶಬ್ದವು ಕೇಳಿಸುತ್ತಿರುವುದೇ ಇದಕ್ಕೆ ಮುಖ್ಯಕಾರಣ.

'ಶಬ್ದಾದೇವ ಪ್ರಮಿತಃ' ಎಂಬ ಮುಂಬರುವ ಸೂತ್ರದಲ್ಲಿ ಹೇಳುವ ನ್ಯಾಯದಂತೆ ಈಶಶಬ್ದವು ಮುಖ್ಯವಾಗಿ ವಿಷ್ಣುಪರವಾಗುತ್ತದೆಯಲ್ಲವೇ? ಎಂದು ಪ್ರಶ್ನಿಸಬಾರದು. ರುದ್ರನಲ್ಲಿ ಪ್ರಸಿದ್ಧವಾಗಿರುವ ಸರ್ವಜ್ಞಶಬ್ದವನ್ನು ಶ್ರುತಿಯು ಉಲ್ಲೇಖಿಸುತ್ತಿದೆ. ಆದ್ದರಿಂದ ರುದ್ರನೇ ಈಶಪದವಾಚ್ಯನಾಗಿದ್ದಾನೆ.

ಸರ್ವಜ್ಞಶಬ್ದವು ಯೌಗಿಕವಾಗಿದೆ. ಆದ್ದರಿಂದ ಪ್ರಕೃತವಾಗಿರುವ ಅಕ್ಷರನಲ್ಲಿ ವಿಶೇಷಣವಾಗಿ ಪ್ರಯುಕ್ತವಾಗಿದೆ; ಹೊರತು ರುದ್ರನೆಂಬ ವಿಶೇಷ್ಯವನ್ನು ಹೇಳಲು ಸಾಧ್ಯವಿಲ್ಲವಲ್ಲವೇ? ಎಂದು ಪ್ರಶ್ನಿಸಬಾರದು. ಸರ್ವಜ್ಞಶಬ್ದಕ್ಕೆ ಯೋಗಾರ್ಥವನ್ನು ಅನುಸರಿಸುವುದಕ್ಕಿಂತ ರುದ್ರನೆಂಬ ರೂಢ್ಯರ್ಥವನ್ನು ಅನುಸರಿಸುವುದೇ ಸೂಕ್ತವಾಗಿದೆ. ಏಕೆಂದರೆ ಯೋಗಕ್ಕಿಂತ ರೂಢಿಯು ಪ್ರಬಲವಾಗಿರುತ್ತದೆ. ಅಷ್ಟೇ ಅಲ್ಲದೆ ಸರ್ವಜ್ಞಶಬ್ದಕ್ಕೆ ಎಲ್ಲವನ್ನು ತಿಳಿದವನು ಎಂಬ ಯೋಗಾರ್ಥವನ್ನು ವಿವಕ್ಷಿಸುವುದಾದರೆ 'ಸರ್ವವಿತ್' ಎಂಬ ಮುಂದಿನ ಪದದಿಂದ ಪುನರುಕ್ತಿಯೂ ಸಹ ಬರುತ್ತದೆ.

ತಸ್ಮಾದುಕ್ತಬಾಧಕಾತ್ ''ಅಕ್ಷರಾತ್ಪರತಃ ಪರಃ'' ಇತಿ ನಿಕೃಷ್ಟತ್ವೇನ ಶ್ರುತತ್ವಾಚ್ಚಾಕ್ಷರಂ ನ ಬ್ರಹ್ಮ ।

ಆದ್ದರಿಂದ ಮೇಲೆ ಹೇಳಿದ ಬಾಧಕಗಳಿರುವುದರಿಂದ ಮತ್ತು ''ಅಕ್ಷರಾತ್ಪರತಃ ಪರಃ'' ಎಂಬುದಾಗಿ ಅಕ್ಷರಪದಾರ್ಥವನ್ನು ನಿಕೃಷ್ಟವಾಗಿ ಹೇಳಿರುವುದರಿಂದಲೂ ವಿಷ್ಣುವನ್ನು ಅಕ್ಷರನೆಂದು ವಿವಕ್ಷಿಸಲು ಸಾಧ್ಯವಿಲ್ಲ.

ನಚ ''ತಥಾऽಕ್ಷರಾತ್'' ಇತ್ಯಾದಾವೇವಾಕ್ಷರಶಬ್ದೋ ಬ್ರಹ್ಮಪರಃ, ''ಅಕ್ಷರಾತ್ಪರತಃ ಪರಃ'' ಇತ್ಯತ್ರ ತ್ವ ಪ್ರಕೃತಿಪರ ಇತಿ ವಾಚ್ಯಮ್,

ಪ್ರಶ್ನೆ :- ''ತಥಾऽಕ್ಷರಾತ್ಪರಂಭವತೀಹ ವಿಶ್ವಮ್'' ಎಂಬಲ್ಲಿ ಮಾತ್ರ ಅಕ್ಷರಶಬ್ದವು ವಿಷ್ಣುಪರವಾಗಲಿ, ''ಅಕ್ಷರಾತ್ಪರತಃ ಪರಃ'' ಎಂಬಲ್ಲಿ ನಿಕೃಷ್ಟವಾಗಿ ಶ್ರುತವಾದ ಅಕ್ಷರಶಬ್ದವು ಪ್ರಕೃತಿಪರವಾಗಲಿ, ಎರಡೂ ಕಡೆ ಇರುವ ಅಕ್ಷರಶಬ್ದವು ಒಂದೇ ಪದಾರ್ಥವನ್ನು ಹೇಳಬೇಕೆಂಬ ನಿಯಮವೇನು?

प्रकृतहानाप्रकृतस्वीकारापातात् ।

ಸಮಾಧಾನ - ಹೀಗೆ ಹೇಳಬಾರದು. ಹೀಗೆ ಅರ್ಥೈಸಿದರೆ ಪ್ರಕೃತವಾದ ಬ್ರಹ್ಮನನ್ನು ಬಿಟ್ಟು ಅಪ್ರಕೃತವಾದ ಪ್ರಕೃತಿಯನ್ನು ಸ್ವೀಕರಿಸಿದಂತಾಗುತ್ತದೆ. ಆದ್ದರಿಂದ 'ಪ್ರಕೃತಹಾನ ಮತ್ತು ಅಪ್ರಕೃತಸ್ವೀಕಾರ' ಎಂಬೆರಡು ದೋಷಗಳು ಬರುವ ಕಾರಣ ಎರಡೂ ಕಡೆ ಒಂದೇ ವಸ್ತುವನ್ನೇ ಪ್ರತಿಪಾದ್ಯವೆನ್ನಬೇಕು.

पूर्वपक्षे त्विदं निकृष्टत्वं चित्प्रकृतिपक्षे 'अक्षरात्परतः' इति पञ्चम्यो-स्सामानाधिकरण्येन, पक्षान्तरे तु वैयधिकरण्येन युक्तम् ।

ಪೂರ್ವಪಕ್ಷ ಮಾಡುವಾಗ 'ಅಕ್ಷರಾತ್ಪರತಃ ಪರಃ' ಎಂಬ ವಾಕ್ಯವು ಅಸಂಗತವಾಗುವುದಿಲ್ಲ. ಏಕೆಂದರೆ ಚಿತ್ಪ್ರಕೃತಿಪಕ್ಷದಲ್ಲಿ 'ಅಕ್ಷರಾತ್ಪರತಃ' ಎಂಬ ಎರಡು ಪದಗಳ ಮುಂದೆ ಇರುವ ಎರಡು ಪಂಚಮೀ ವಿಭಕ್ತಿಗಳಿಗೆ ಸಮಾನಾಧಿಕರಣ್ಯವು ಇರುವ ಪ್ರಯುಕ್ತ ಅವು ಒಂದೇ ವಸ್ತುವನ್ನು ಪ್ರತಿಪಾದಿಸುತ್ತದೆ. ಅಂದರೆ ಪರತಃ ಅಕ್ಷರಾತ್ = ಅಕ್ಷರವೆನಿಸಿದ ಪರಶಬ್ದವಾಚ್ಯವಾದ ಲಕ್ಷ್ಮೀದೇವಿಗಿಂತಲೂ, ಪರಃ = ವಿಷ್ಣು ಉತ್ತಮನಾಗಿದ್ದಾನೆ ಎಂದು ವ್ಯಾಖ್ಯಾನಿಸಬೇಕು. ಉಳಿದ ಮೂರು ಪೂರ್ವಪಕ್ಷಗಳಲ್ಲಿ 'ಅಕ್ಷರಾತ್ಪರತಃ' ಎಂಬಲ್ಲಿರುವ ಎರಡು ಪಂಚಮೀವಿಭಕ್ತಿಗಳು ಒಂದೇ ವಸ್ತುವನ್ನು ಪ್ರತಿಪಾದಿಸದೇ ಬೇರೆ ಬೇರೆ ಪದಾರ್ಥವನ್ನು ವ್ಯಧಿಕರಣವಾಗಿ ಹೇಳುತ್ತವೆ. ಅಂದರೆ ಅಕ್ಷರಶಬ್ದವಾಚ್ಯವಾದ ಜಡಪ್ರಕೃತಿಗಿಂತ 'ಪರತಃ' ಉತ್ತಮಳಾದ ಲಕ್ಷ್ಮೀದೇವಿಗಿಂತ, 'ಪರಃ' ವಿಷ್ಣು ಉತ್ತಮನಾಗಿದ್ದಾನೆ. ಹೀಗೆ ವ್ಯಾಖ್ಯಾನಿಸಬೇಕು.

न चाब्रह्मपक्षे परविद्याविषयत्वं बाधकम्,

ಪ್ರಶ್ನೆ - ಚತುರ್ಮುಖಾದಿಗಳನ್ನು ಅದೃಶ್ಯತ್ವಾದಿಗುಣಗಳುಳ್ಳವರೆಂದು ಪೂರ್ವಪಕ್ಷ ಮಾಡಿದಾಗ ಪರವಿದ್ಯಾವಿಷಯತ್ವವು ಬಾಧಕವಾಗುತ್ತಲ್ಲವೇ? ಯಾರು ಅಕ್ಷರ ಶಬ್ದವಾಚ್ಯನಾಗಿದ್ದಾನೋ ಅವನನ್ನೇ ಶ್ರುತಿಯು ಪರವಿದ್ಯಾವಿಷಯನೆಂದು ಹೇಳುತ್ತಿದೆ. ಈ ಪರವಿದ್ಯಾವಿಷಯತ್ವವು ವಿಷ್ಣುವನ್ನು ಬಿಟ್ಟು ಬೇರೆ ಯಾರಲ್ಲಿಯೂ ಬಾರದಿದ್ದಾಗ ಹೇಗೆ ಅವರನ್ನು ಪೂರ್ವಪಕ್ಷ ಮಾಡುತ್ತೀರಿ?

''परा चैवापरा च । तत्रापरा ऋग्वेदो यजुर्वेदः'' इत्यपरविद्यात्वेनोक्तऋगादि-विषये शास्त्रयोनौ ब्रह्मण्येव तत्प्रतियोगिभूतपरविद्याविषयत्वासम्भवात् ।

ಪರಿಹಾರ - ಪರವಿದ್ಯಾವಿಷಯತ್ವವು ಬಾಧಕವಾಗುವುದಿಲ್ಲ. ಇದನ್ನು ಸಿದ್ಧಾಂತಿಗಳು ಅಂಗೀಕರಿಸಿಲ್ಲ. ಏಕೆಂದರೆ ''ಪರಾ ಚೈವಾಪರಾ ಚ ತತ್ರಾಪರಾ ಋಗ್ವೇದೋ ಯಜುರ್ವೇದಃ'' ವಿದ್ಯೆಯು ಪರ ಮತ್ತು ಅಪರ ಎಂದು ಎರಡು ವಿಧವಾಗಿದೆ. ಋಗ್ವೇದ, ಯಜುರ್ವೇದ ಮೊದಲಾದವುಗಳೆಲ್ಲವೂ ಅಪರವಿದ್ಯಾ ಎನಿಸಿದೆ. ಅವುಗಳಿಂದೆಲ್ಲಾ ಮುಖ್ಯವಾಗಿ ಪ್ರತಿಪಾದ್ಯನಾದವನು ಎಂದರೆ ಶಾಸ್ತ್ರೈಕಸಮಧಿಗಮ್ಯನಾದವನು ವಿಷ್ಣುವೇ ಆಗಿದ್ದಾನೆಂದು ಶಾಸ್ತ್ರಯೋನಿತ್ವಾಧಿಕರಣದಲ್ಲಿ ಸಿದ್ಧಾಂತಿಗಳು ಸಮರ್ಥಿಸಿದ್ದಾರೆ. ಇದರಿಂದ ವಿಷ್ಣು ಅಪರವಿದ್ಯೆಗೆ ವಿಷಯನಾಗಿದ್ದಾನೆಂದು ಸಿದ್ಧವಾಗುತ್ತದೆ. ಹೀಗಿರುವಾಗ ಆದಕ್ಕೆ ವಿರುದ್ಧವಾದ ಪರವಿದ್ಯಾವಿಷಯತ್ವವನ್ನು ವಿಷ್ಣುವಿನಲ್ಲಿ ಹೇಗೆ ತಾನೆ ಒಪ್ಪಲು ಸಾಧ್ಯವಾಗುತ್ತದೆ ? ಆದ್ದರಿಂದ ವಿಷ್ಣು ಅಪರವಿದ್ಯೆಗೆ ವಿಷಯನಾಗಿದ್ದಾನೆ. ಪ್ರಕೃತ್ಯಾದಿಗಳೆಲ್ಲವೂ ಪರವಿದ್ಯೆಗೆ ವಿಷಯವಾಗಿದೆ ಎಂದೇ ಹೇಳಬೇಕು.

''ಅಥ ಪರಾ ಯಯಾ ತದಕ್ಷರಮಧಿಗಮ್ಯತೇ'' ಇತಿ ಶ್ರುತ್ಯಾ ಪ್ರಕೃತೇರೇವ ತತ್ಸಮ್ಭವಾಚ ।।

ಆಷ್ಟೇ ಅಲ್ಲದೆ ''ಅಥ ಪರಾ ಯಯಾ ತದಕ್ಷರಮಧಿಗಮ್ಯತೇ'' ಎಂಬ ಶ್ರುತಿಯು ಋಗಾದಿಗಳು ಅಪರವಿದ್ಯೆ ಎನಿಸಿದೆ. ಇದಕ್ಕಿಂತ ಮತ್ತೊಂದು ವಿದ್ಯೆಯು ಪರವಿದ್ಯೆಯಾಗಿದೆ. ಅಂತಹ ಪರವಿದ್ಯೆಯಿಂದ ಅಕ್ಷರ ಪದಾರ್ಥವು ತಿಳಿಯಲ್ಪಡುತ್ತದೆ ಎಂದು ಹೇಳುತ್ತಿದೆ. ಇದರಿಂದ ಚಿತ್ಪ್ರಕೃತಿಯೇ ಪರವಿದ್ಯೆಗೆ ವಿಷಯವಾಗಿದೆಯೆಂದು ತಿಳಿಯುತ್ತದೆ. ವಿಷ್ಣುವೇ ಪರವಿದ್ಯೆಗೆ ವಿಷಯನಾಗಿದ್ದಲ್ಲಿ 'ಯಯಾ ತದಕ್ಷರಮಧಿಗಮ್ಯತೇ' ಎಂದು ಹೇಳದೇ 'ಯಯಾ ವಿಷ್ಣುಃ ಅಧಿಗಮ್ಯತೇ' ಎಂದು ಶ್ರುತಿಯು ಹೇಳಬೇಕಾಗಿತ್ತು. ಆದರೆ ಚಿತ್ಪ್ರಕೃತಿಯಲ್ಲಿ ಪ್ರಸಿದ್ಧವಾದ ಅಕ್ಷರಶಬ್ದವನ್ನು ಹೇಳಿರುವುದರಿಂದ ವಿಷ್ಣು ಪರವಿದ್ಯೆಗೆ ವಿಷಯನಾಗುವುದಿಲ್ಲವೆಂಬ ವಿಚಾರವು ಸ್ಪಷ್ಟವಾಗುತ್ತದೆ.

ಪ್ರಕಾಶಃ –

ತಪಾದಾನತ್ವಾಕ್ಷರಬ್ರಹ್ಮೇಶಶಬ್ದಾನ್ ಕ್ರಮೇಣ ಪ್ರಧಾನಶ್ರೀಬ್ರಹ್ಮರುದ್ರಪ್ರಾಪಕಾನ್ ಟೀಕೋಕ್ತಾನ್ ವ್ಯಞ್ಜಯನ್ ಚತುರ್ವಿಧಪೂರ್ವಪಕ್ಷಟೀಕಾಂ ವ್ಯನಕ್ತಿ – ಜಡಪ್ರಕೃತೇರೇವೇತ್ಯಾದಿನಾ ।

ವಿವರಣೆ – ಪೂರ್ವಪಕ್ಷದ ಟೀಕಾಭಾಗವನ್ನು ವಿವರಿಸುತ್ತಿದ್ದಾರೆ - ಶ್ರುತಿಯಲ್ಲಿ ಉಪಾದಾನತ್ವ, ಅಕ್ಷರ, ಬ್ರಹ್ಮ, ಈಶ ಮೊದಲಾದ ಶಬ್ದಗಳು ಕೇಳಿಸುತ್ತಿವೆ. ಇವೆಲ್ಲವೂ ಪೂರ್ವಪಕ್ಷಕ್ಕೆ ಪ್ರಾಪಕವಾದ ಲಿಂಗಗಳಾಗಿವೆ. ಜಡಪ್ರಕೃತಿಯು ಅದೃಶ್ಯತ್ವಗುಣವುಳ್ಳದ್ದೆಂದು ಸಾಧಿಸಲು ಉಪಾದಾನ ಶಬ್ದವಿದೆ. ಲಕ್ಷ್ಮೀದೇವಿಯೇ ಅದೃಶ್ಯತ್ವಗುಣವುಳ್ಳವಳೆಂದು ತಿಳಿಸಲು ಅಕ್ಷರಶಬ್ದವಿದೆ. ಬ್ರಹ್ಮ, ರುದ್ರಾದಿಗಳು ಅದೃಶ್ಯತ್ವಾದಿಗುಣವುಳ್ಳವರೆಂದು ತಿಳಿಸಲು, ಬ್ರಹ್ಮ, ಈಶ ಮೊದಲಾದ ಶಬ್ದಗಳಿವೆ. ಹೀಗೆ ಟೀಕೆಯಲ್ಲಿ ಹೇಳಲ್ಪಟ್ಟ ಕಾರಣಗಳನ್ನು ಸ್ಪಷ್ಟಪಡಿಸುತ್ತಾ ಪೂರ್ವಪಕ್ಷ ಟೀಕೆಯನ್ನು ನಾಲ್ಕು ಪೂರ್ವಪಕ್ಷಗಳನ್ನು ಮಾಡುವ ಮುಖಾಂತರ ವ್ಯಾಖ್ಯಾನಿಸುತ್ತಿದ್ದಾರೆ 'ಜಡಪ್ರಕೃತೇರೇವ' ಇತ್ಯಾದಿ ವಾಕ್ಯದಿಂದ.

प्रकाशः – ननु अत्र निर्धारित एक एवादृश्यत्वादिगुणक इति पूर्वपक्षः, उत अनिर्धारितो यः कश्चिदिति, सर्वेऽपीति वा ।

ಆಕ್ಷೇಪ - ಪೂರ್ವಪಕ್ಷವನ್ನು ಏನೆಂದು ಮಾಡುತ್ತೀರಿ ? ವಿಷ್ಣುವನ್ನು ಬಿಟ್ಟು ಯಾರಾದರೂ ಒಬ್ಬನು ಮಾತ್ರ ಅದೃಶ್ಯತ್ವಾದಿಗುಣವುಳ್ಳವನೆಂದೋ? ಅಥವಾ ವಿಷ್ಣುಗಿಂತ ಬೇರೆಯಾದವರಲ್ಲಿ ಯಾರಾದರೂ ಸಹ ಅದೃಶ್ಯತ್ವಾದಿಗುಣವುಳ್ಳವರು ಆಗಬಹುದೆಂದೋ ? ಅಥವಾ ವಿಷ್ಣುವನ್ನು ಬಿಟ್ಟು ಎಲ್ಲರೂ ಅದೃಶ್ಯತ್ವಾದಿ-ಗುಣವುಳ್ಳವರಾಗುತ್ತಾರೆಂದೋ ?

प्रकाशः – नाद्यः, अनेकप्रापकसत्त्वेन निर्धारणायोगात् ।

ಮೊದಲನೆಯ ಪಕ್ಷ ಸರಿಯಿಲ್ಲ. ಏಕೆಂದರೆ ಒಬ್ಬನನ್ನೇ ಪೂರ್ವಪಕ್ಷಕ್ಕೆ ವಿಷಯನೆಂದು ಸಾಧಿಸಲಾಗದು. ಅನೇಕರನ್ನು ಪೂರ್ವಪಕ್ಷವಿಷಯವನ್ನಾಗಿ ಹೇಳಲು ಲಿಂಗಗಳಿರುವಾಗ ಒಬ್ಬನನ್ನೇ ಪೂರ್ವಪಕ್ಷವಿಷಯನೆಂದು ನಿರ್ಧರಿಸುವುದು ತಪ್ಪಾಗುತ್ತದೆ.

प्रकाशः – न द्वितीयः, संशयादविशेषापत्तेः ।

ಎರಡನೆಯ ಪಕ್ಷವೂ ತಪ್ಪು. ಅನಿರ್ಧಾರಿತರಾದ ಯಾರಾದರೊಬ್ಬರು ಅದೃಶ್ಯತ್ವಗುಣವುಳ್ಳವರಾಗ-ಬಹುದೆಂಬ ಎರಡನೆಯ ಪಕ್ಷವನ್ನು ಒಪ್ಪಿದರೆ ಈ ಪಕ್ಷದಲ್ಲಿ ಯಾರನ್ನೂ ನಿಶ್ಚಯ ಮಾಡಿ ಹೇಳಿಲ್ಲವಾದ್ದರಿಂದ ರುದ್ರನು ಅದೃಶ್ಯತ್ವ ಗುಣವುಳ್ಳವನು ಎಂದು ಹೇಳಿದರೆ ಬ್ರಹ್ಮ ಏಕಾಗಬಾರದು ? ಎಂಬ ಪ್ರಶ್ನೆ ಬರುತ್ತದೆ. ಅವನನ್ನು ಹೇಳಿದರೆ ಪ್ರಕೃತಿ ಏಕಲ್ಲ ? ಎಂದು ಹೀಗೆ ಸಂಶಯ ಬರುವ ಕಾರಣ ಸಂಶಯ ಹಾಗೂ ಪೂರ್ವಪಕ್ಷಗಳಿಗೆ ವ್ಯತ್ಯಾಸವಿಲ್ಲದಂತಾಗಿ ಅವು ಒಂದೇ ಆಗಬೇಕಾಗುತ್ತವೆ. ಸಂಶಯದಂತೆ ಪೂರ್ವಪಕ್ಷವನ್ನು ಮಾಡಿದಂತಾಗುತ್ತದೆ.

प्रकाशः – न तृतीयः, वाक्यभेदापातात्

ಮೂರನೆಯ ಪಕ್ಷವೂ ತಪ್ಪು. ಒಂದುವೇಳೆ ಎಲ್ಲರೂ ಅದೃಶ್ಯತ್ವಾದಿಗುಣವುಳ್ಳವರಾಗಬಹುದೆಂದು ಹೇಳಿದರೆ ವಾಕ್ಯಭೇದಾಪತ್ತಿಯು ಬರುತ್ತದೆ. ಅಂದರೆ ಒಂದೇ ವಾಕ್ಯವು ಬೇರೆ ಬೇರೆ ವ್ಯಕ್ತಿಗಳನ್ನು ಪ್ರತಿಪಾದಿಸಿದಂತಾಗುತ್ತದೆ.

प्रकाशः – इति चेन्न, अक्षरब्रह्मेशशब्दानाम् अन्यप्रापकाणाम् अविनाशित्वेन ''मम योनिर्महद्ब्रह्म'' इत्यादिवचनेन कार्यस्य कारणाधीनतयेशितृत्वेन प्रधान एवोपपत्तेरित्यादिरूपेण पक्षचतुष्टयेऽप्यवधारणसम्भवेन आद्यस्य युक्तत्वादिति भावेन – **प्रकृतेरेवेत्युक्तम्** । ''चित्प्रकृतेर्वा'' इत्यादिवाशब्दात् द्वितीयतृतीयावपि युक्ताविति सूचितम् ।

ಸಮಾಧಾನ - ಇದು ತಪ್ಪು. ಏಕೆಂದರೆ ಜಡಪ್ರಕೃತಿಯು ನಿತ್ಯವಾಗಿದೆ. ಆದ್ದರಿಂದ ಅಕ್ಷರಶಬ್ದದಿಂದ

ಪ್ರತಿಪಾದ್ಯವಾಗುತ್ತದೆ. ''ಮಮ ಯೋನಿರ್ಮಹದ್ಬ್ರಹ್ಮ' ಎಂಬ ಶ್ರುತಿಯು ಜಡಪ್ರಕೃತಿಯನ್ನೇ ಬ್ರಹ್ಮ ಎಂದು ಹೇಳುತ್ತಿದೆ. ಮತ್ತು ಕಾರ್ಯವು ಕಾರಣದ ಅಧೀನವಾದ್ದರಿಂದ ಸಕಲಕಾರ್ಯರೂಪವಾದ ಪ್ರಪಂಚಕ್ಕೆ ಕಾರಣವಾಗಿರುವ ಜಡಪ್ರಕೃತಿಯು ನಿಯಾಮಕವಾಗಿದೆ. ಆದ್ದರಿಂದಲೇ ಈಶಿತೃತ್ವವನ್ನು ಹೇಳಿದಂತಾಗಿ ಈಶಶಬ್ದ ಪ್ರತಿಪಾದ್ಯತ್ವವೂ ಸಹ ಜಡಪ್ರಕೃತಿಯಲ್ಲಿ ಯುಕ್ತವಾಗುತ್ತದೆ. ಹೀಗೆ ಜಡಪ್ರಕೃತಿಯನ್ನು ಪೂರ್ವಪಕ್ಷ ವಿಷಯವನ್ನಾಗಿ ಸ್ವೀಕರಿಸಿದಾಗ ಅಕ್ಷರ, ಬ್ರಹ್ಮ, ಈಶ ಮೊದಲಾದ ಎಲ್ಲ ಶಬ್ದಗಳೂ ಉಪಪನ್ನವಾಗುತ್ತದೆ. ಆದ್ದರಿಂದ ಮೊದಲನೆಯ ಪೂರ್ವಪಕ್ಷ ಕೋಟಿಯಲ್ಲಿ ಯಾವುದೇ ಗೊಂದಲವಿಲ್ಲ. ಇದರಂತೆ ಚಿತ್ಪ್ರಕೃತಿಯನ್ನು ಅಥವಾ ಚತುರ್ಮುಖಬ್ರಹ್ಮನನ್ನು ಅಥವಾ ರುದ್ರನನ್ನು ಪೂರ್ವಪಕ್ಷ ವಿಷಯವನ್ನಾಗಿ ಪರಿಗಣಿಸಿದಾಗ ಈ ಅಕ್ಷರ, ಬ್ರಹ್ಮ, ಈಶ ಶಬ್ದಗಳೆಲ್ಲವೂ ಯುಕ್ತವಾಗುತ್ತವೆಂಬುದನ್ನು ತಿಳಿದುಕೊಳ್ಳಬೇಕು. ಆದ್ದರಿಂದ ಯಾವುದೇ ಪೂರ್ವಪಕ್ಷ ಕೋಟಿಯನ್ನು ಸ್ವೀಕರಿಸಿದಾಗಲೂ ಅವಧಾರಣಪುರಸ್ಸರವಾಗಿ ಪೂರ್ವಪಕ್ಷ ಮಾಡಲು ಬಂದಂತಾಗುತ್ತದೆ. ಹೀಗಿರುವಾಗ ಗೊಂದಲಕ್ಕೆ ಅವಕಾಶವೇ ಇಲ್ಲ. ಆದ್ದರಿಂದ ನೀವು ಪ್ರಶ್ನಿಸಿದ ಮೂರು ವಿಕಲ್ಪಗಳಲ್ಲಿ ಮೊದಲನೆಯ ವಿಕಲ್ಪದಂತೆ ಎಂದರೆ ನಿರ್ಧಾರಿತವಾದ ಒಂದೇ ವಸ್ತು ಪೂರ್ವಪಕ್ಷಕ್ಕೆ ವಿಷಯವಾಗಿದೆಯೆಂದು ಹೇಳುತ್ತೇವೆ.

ಆದ್ದರಿಂದಲೇ ಗ್ರಂಥಕಾರರು ಪೂರ್ವಪಕ್ಷಗಳನ್ನು ತೋರಿಸುವಾಗ ಮೊದಲು 'ಪ್ರಕೃತೇರೇವ' ಎಂಬುದಾಗಿ (ಏವಕಾರ) ಅವಧಾರಣಪುರಸ್ಸರವಾಗಿ ಪೂರ್ವಪಕ್ಷವನ್ನು ತೋರಿಸಿದ್ದಾರೆ. ಮುಂದೆ 'ಚಿತ್ಪ್ರಕೃತೇರ್ವಾ' ಇತ್ಯಾದಿಯಾಗಿ 'ವಾ' ಶಬ್ದದಿಂದ ಎರಡು ಹಾಗೂ ಮೂರನೆಯ ಪೂರ್ವಪಕ್ಷಗಳೂ ಸಹ ಯುಕ್ತವಾಗುತ್ತವೆಂಬುದನ್ನು ತೋರಿಸಿದ್ದಾರೆ. ಈ ಸೂಕ್ಷ್ಮವನ್ನು ಗಮನಿಸಬೇಕು.

ಪ್ರಕಾಶಃ – ದ್ವಿತೀಯೇ ವಿಷ್ಣ್ವನ್ಯತ್ವೇನ ಅವಧಾರಣಸಮ್ಭವಾತ್ ನ ಸನ್ದೇಹಾದವಿಶೇಷಃ । ಅತ ಏವ ಟೀಕಾಯಾಂ ''ವಿಷ್ಣೋರನ್ಯಸ್ಯ'' ಇತಿ ಸಂಶಯೋಕ್ತಿಃ, ''ನ ವಿಷ್ಣೋರದೃಶ್ಯತ್ವಾದಿತಿ ತಾವತ್ಪೂರ್ವಪಕ್ಷಃ'' ಇತ್ಯುಕ್ತಿಃ, ''ನ ವಿಷ್ಣ್ವರದೃಶ್ಯತ್ವಾದಿಗುಣಕಃ'' ಇತ್ಯುಪಸಂಹಾರಶ್ಚ ।

ಅಥವಾ ಅನಿರ್ಧಾರಿತವಾದ ಯಾರಾದರೂ ಒಬ್ಬರು ಅದೃಶ್ಯತ್ವಾದಿಗುಣಗಳುಳ್ಳವರೆಂದು ಪೂರ್ವಪಕ್ಷ ಮಾಡಬಹುದು. ಈ ಪಕ್ಷದಲ್ಲಿ ವಿಷ್ಣುವಿಗಿಂತ ಅನ್ಯರೇ ಅದೃಶ್ಯತ್ವಾದಿಗುಣಗುಳ್ಳವರೆಂದು ಅವಧಾರಣ ಮಾಡಬಹುದು. ಆದ್ದರಿಂದ ಸಂದೇಹಕ್ಕಿಂತ ಪೂರ್ವಪಕ್ಷವು ವಿಲಕ್ಷಣವಾಗಿದೆಯೆಂದು ಹೇಳಿದಂತಾಗುತ್ತದೆ. ಏಕೆಂದರೆ ಸಂದೇಹದಲ್ಲಿ ನಿರ್ಧಾರವಿರುವುದಿಲ್ಲ. ಪ್ರಕೃತ ಪೂರ್ವಪಕ್ಷದಲ್ಲಿ ವಿಷ್ಣುವನ್ನು ಬಿಟ್ಟು ಬೇರೆಯವರೇ ಅದೃಶ್ಯತ್ವಾದಿಗುಣವುಳ್ಳವರೆಂದು ಹೇಳುವುದರಿಂದ ನಿರ್ಧಾರಣವಿರುತ್ತದೆ. ಆದ್ದರಿಂದಲೇ ಟೀಕೆಯಲ್ಲಿ ''ವಿಷ್ಣೋರನ್ಯಸ್ಯ ವಾ'' ಎಂದು ಸಂಶಯವನ್ನು ತೋರಿಸಿದ್ದಾರೆ. ಮತ್ತು ''ನ ವಿಷ್ಣೋರದೃಶ್ಯತ್ವಾದಿ ಇತಿ ತಾವತ್ ಪೂರ್ವಪಕ್ಷಃ'' ವಿಷ್ಣುವಿನಲ್ಲಿ ಅದೃಶ್ಯತ್ವಾದಿಗಳು ಬರುವುದಿಲ್ಲವೆಂದಷ್ಟೇ ಪೂರ್ವಪಕ್ಷ ಎಂದು ಪ್ರಾರಂಭದಲ್ಲಿ ಹೇಳಿದ್ದು; ಹಾಗೂ ''ನ ವಿಷ್ಣುರದೃಶ್ಯತ್ವಾದಿಗುಣಕಃ'' ವಿಷ್ಣು ಅದೃಶ್ಯತ್ವಾದಿಗುಣಗಳುಳ್ಳವನಲ್ಲ ಎಂದು ಉಪಸಂಹಾರದಲ್ಲಿ ಹೇಳಿದ್ದಾರೆ.

ಪ್ರಕಾಶಃ – ತೃತೀಯೇ ವಾಕ್ಯಭೇದಸ್ಯ ನ್ಯಾಯಪ್ರಾಪ್ತತ್ವಾದಿತಿ ।

ಅಥವಾ ಎಲ್ಲರೂ ಅದೃಶ್ಯತ್ವಾದಿಗುಣಗಳುಳ್ಳವರು ಎಂದು ಪೂರ್ವಪಕ್ಷ ಮಾಡಬಹುದು. ಹಾಗಾದರೆ ವಾಕ್ಯಭೇದ ರೂಪ ದೋಷವು ಬರುತ್ತದಲ್ಲವೆ? ಎಂದರೆ ನ್ಯಾಯಪ್ರಾಪ್ತವಾದ್ದರಿಂದ ವಾಕ್ಯಭೇದವನ್ನು ದೋಷವೆಂದು ಪರಿಗಣಿಸಬಾರದು.

ಪ್ರಕಾಶಃ – ಯದ್ವಾ – ''ನ ವಿಷ್ಣೋರದೃಶ್ಯತ್ವಾದಿ'' ಇತಿ ಟೀಕೋಕ್ತನ್ಯಾಯಚ್ಛೇದಾಭಿಪ್ರಾಯಂ ಜಡಪ್ರಕೃತೇರೇವೇತ್ಯವಧಾರಣಂ, ನತು ಕೋಟ್ಯನ್ತರವ್ಯವಚ್ಛೇದಾಶಯಮ್ ।

ಅಥವಾ ಮೊದಲನೆಯ ಪಕ್ಷವನ್ನು ಬಿಟ್ಟು 'ಅನಿರ್ಧಾರಿತ' ಎಂಬ ಹಾಗೂ 'ಯಃಕಶ್ಚಿತ್' ಎಂಬ ಎರಡನೆಯ ಮತ್ತು ಮೂರನೆಯ ಪಕ್ಷವನ್ನಷ್ಟೇ ಒಪ್ಪುತ್ತೇವೆ. ಹಾಗಾದರೆ 'ಜಡಪ್ರಕೃತೇರೇವ' ಎಂಬುದಾಗಿ ಅವಧಾರಣವನ್ನು ಹೇಗೆ ಮಾಡಿದ್ದಾರೆ ಎಂದರೆ 'ನ ವಿಷ್ಣೋರದೃಶ್ಯತ್ವಾದಿ' ಎಂಬ ಟೀಕೆಯಲ್ಲಿ ಹೇಳಲ್ಪಟ್ಟ ವಿಷ್ಣುವನ್ನು ವ್ಯವಚ್ಛೇದ ಮಾಡುವುದಕ್ಕಾಗಿ 'ಜಡಪ್ರಕೃತೇರೇವ' ಎಂದು ಏವಕಾರವನ್ನು ಹೇಳಿದ್ದಾರೆ ಹೊರತು, ಲಕ್ಷ್ಮೀ, ಚತುರ್ಮುಖಬ್ರಹ್ಮ ಇವರನ್ನು ವ್ಯವಚ್ಛೇದ ಮಾಡುವುದಕ್ಕಾಗಿ ಏವಕಾರವನ್ನು ಹೇಳಿದ್ದಲ್ಲ. ಆ ವಿಷಯದಲ್ಲಿ ಅಭಿಪ್ರಾಯವಿಲ್ಲ.

ಪ್ರಕಾಶಃ – तेन ''न विष्णोरदृश्यत्वादि'' इति टीकोक्तस्य ''अदृश्यत्वादिकं जडप्रकृतेर्भवेत्'' इति टीकोक्तस्य च सङ्ग्रहः कृतो भवति ।

ಹೀಗೆ ಹೇಳಿದ್ದರಿಂದ ''ನ ವಿಷ್ಣೋರದೃಶ್ಯತ್ವಾದಿ'' ಎಂಬ ಟೀಕೆಯಲ್ಲಿ ಹೇಳಲ್ಪಟ್ಟ ಮತ್ತು ''ಅದೃಶ್ಯತ್ವಾದಿಕಂ ಜಡಪ್ರಕೃತೇರ್ಭವೇತ್'' ಎಂಬ ಟೀಕೆಯಲ್ಲಿ ಹೇಳಲ್ಪಟ್ಟ ಪ್ರಮೇಯವನ್ನು ಸಂಗ್ರಹಿಸಿದಂತಾಗುತ್ತದೆ.

ಪ್ರಕಾಶಃ – तेन विष्णोर्न चेन्निर्विषयतया वाक्यमिदममानं स्यादिति शङ्का च निरस्ता भवति ।

ಹೀಗೆ ಹೇಳಿದ್ದರಿಂದ ಒಂದು ವೇಳೆ ವಿಷ್ಣು ಅದೃಶ್ಯತ್ವಾದಿಗುಣಗಳುಳ್ಳವನಾಗದಿದ್ದರೆ ವಾಕ್ಯವು ನಿರ್ವಿಷಯಕವಾಗಿ ಅಪ್ರಮಾಣವಾಗಬೇಕಾಗುತ್ತದಲ್ಲವೇ? ಎಂಬ ಆಕ್ಷೇಪವನ್ನು ನಿರಾಸ ಮಾಡಿದಂತಾಯಿತು.

ಪ್ರಕಾಶಃ – ''अस्य पृथिव्यादिदृष्टान्तेनोपादानतया जगत्कारणत्वोक्तेः'' इति टीकां व्यनक्ति – **अदृश्यत्वेति** । 'दृष्टान्ते' इत्येतदुपादानत्वसिध्यर्थमुक्तम् । ऊर्णनाभेरादित्वेऽपि 'पृथिव्यादि' इत्युक्तेर्गतिर्वक्ष्यते ।

'ಅಸ್ಯ ಪೃಥಿವ್ಯಾದಿದೃಷ್ಟಾಂತೇನೋಪಾದಾನತಯಾ ಜಗತ್ಕಾರಣತ್ವೋಕ್ತೇಃ' ಎಂಬ ಟೀಕೆಯನ್ನು 'ಅದೃಶ್ಯತ್ವ' ಎಂಬ ವಾಕ್ಯದಿಂದ ವ್ಯಾಖ್ಯಾನಿಸುತ್ತಿದ್ದಾರೆ. 'ದೃಷ್ಟಾಂತೇ' ಎಂದು ಏಕೆ ಹೇಳಿದ್ದಾರೆಂದರೆ ಉಪಾದಾನತ್ವವನ್ನು ಸಮರ್ಥಿಸುವುದಕ್ಕಾಗಿ. ವಸ್ತುತಃ ಶ್ರುತಿಯಲ್ಲಿ ಊರ್ಣಾನಾಭ್ಯಾದಿ ದೃಷ್ಟಾಂತವು ಮೊದಲಿದೆ. ಅದಕ್ಕನುಸಾರಿಯಾಗಿ ಗ್ರಂಥಕಾರರು 'ಪೃಥಿವ್ಯಾದಿ' ಎಂದು ಹೇಳುವ ಮೊದಲು

'ಊರ್ಣನಾಭ್ಯಾದಿಃ' ಎಂದು ಹೇಳಬೇಕಿತ್ತು. ಆದರೆ ಹೀಗೆ ವ್ಯತ್ಯಾಸ ಮಾಡಿ ಹೇಳಲು ಕಾರಣವೇನೆಂಬುದನ್ನು ಮುಂದೆ ಸ್ಪಷ್ಟಪಡಿಸಲಾಗುತ್ತದೆ.

प्रकाशः – उपादानत्वमेव शङ्कापूर्वं व्यनक्ति – **नचेति । 'तस्य' कारणत्व-मात्रस्य । अन्तरङ्गस्येति । कार्यानुस्यूतत्वादुपादानस्येति भावः ।**

ಜಡಪ್ರಕೃತಿಗೆ ಹೇಳಲ್ಪಟ್ಟ ಉಪಾದಾನತ್ವವನ್ನೇ ಶಂಕಾಪೂರ್ವಕವಾಗಿ ವ್ಯಾಖ್ಯಾನಿಸುತ್ತಿದ್ದಾರೆ. 'ನಚ' ಇತ್ಯಾದಿ ವಾಕ್ಯದಿಂದ. 'ತಸ್ಯ' ಎಂಬ ಪದಕ್ಕೆ 'ಕೇವಲ ಕಾರಣತ್ವಕ್ಕೆ' ಎಂದರ್ಥ. ಉಪಾದಾನತ್ವವು ಆಂತರಂಗವಾಗಿದೆಯೆಂದು ಗ್ರಂಥದಲ್ಲಿ ಹೇಳಿರುತ್ತಾರೆ. ಏಕೆಂದರೆ ಯಾವುದು ಉಪಾದಾನಕಾರಣವಾಗಿರುತ್ತದೋ, ಅದು ಕಾರ್ಯದ ಜೊತೆಗೆ ಅನುಸ್ಯೂತವಾಗಿ ಹೆಣೆದುಕೊಂಡಿರುತ್ತದೆ. ನಿಮಿತ್ತಕಾರಣವು ಕಾರ್ಯಕ್ಕಿಂತ ಭಿನ್ನವಾಗಿರುವುದರಿಂದ ಬಹಿರಂಗವಾಗಿದೆಯೆಂದು ತಿಳಿಯಬೇಕು.

प्रकाशः – एतेन टीकायामेवमाशङ्क्य, तथाऽक्षरब्रह्मेशशब्दानां च विष्णावव्यकाशमाशङ्क्य सर्वत्र परतः पराभिधानेनैवोज्जीवनं यत्कृतं तदुपलक्षणमिति सूचितम् । तथा च वक्ष्यति ''इति निकृष्टत्वेन श्रुतत्वाच्च'' इति ।

ತತ್ತ್ವಪ್ರಕಾಶಿಕಾ ಟೀಕೆಯಲ್ಲಿ ಚಂದ್ರಿಕಾ ಗ್ರಂಥದಲ್ಲಿ ಹೇಳಿದ ಪ್ರಕಾರ ಆಶಂಕೆ ಮಾಡಿ ಅಕ್ಷರ, ಬ್ರಹ್ಮ, ಈಶ ಮೊದಲಾದ ಪೂರ್ವಪಕ್ಷಪ್ರಾಪಕ ಲಿಂಗಗಳಿಗೆ ವಿಷ್ಣುವಿನಲ್ಲಿ ಸಾವಕಾಶತ್ವವನ್ನು ಆಶಂಕಿಸಿದ್ದಾರೆ. ಅನಂತರ 'ಅಕ್ಷರಾತ್ಪರತಃ ಪರಃ' ಎಂಬುದಾಗಿ ಅಕ್ಷರಶಬ್ದವಾಚ್ಯವಾದ ಪದಾರ್ಥಕ್ಕೆ ನಿಕೃಷ್ಟತ್ವವು ಕೇಳಿಸುತ್ತಿರುವುದರಿಂದ ವಿಷ್ಣು ಅಕ್ಷರನಾಗುವುದಿಲ್ಲವೆಂದು ಪೂರ್ವಪಕ್ಷವನ್ನು ದೃಢಪಡಿಸಿದ್ದಾರೆ. ಆಂದರೆ ಅಕ್ಷರ, ಬ್ರಹ್ಮ ಮೊದಲಾದ ಶಬ್ದಗಳಿಗೆ ಎಲ್ಲಾ ಸಾವಕಾಶತ್ವವನ್ನು ಆಶಂಕಿಸಿದರೆ ಅದನ್ನೂ ಕೇವಲ ಪರತಃ ಪರಾಭಿಧಾನವೆಂಬ ಒಂದೇ ಹೇತುವಿನಿಂದ ನಿರಾಕರಿಸಿದ್ದಾರೆ. ಟೀಕೆಯಲ್ಲಿ ಹೀಗೆ ಹೇಳಿದ್ದು ಕೇವಲ ಉಪಲಕ್ಷಣವಾಗಿದೆಯೆಂದು ಗ್ರಂಥಕಾರರು ಇಲ್ಲಿ ಸೂಚಿಸಿದ್ದಾರೆ. ಆಂದರೆ ಜಡಪ್ರಕೃತಿ, ಲಕ್ಷ್ಮೀ, ಚತುರ್ಮುಖಬ್ರಹ್ಮ, ರುದ್ರ ಎಲ್ಲರಲ್ಲಿಯೂ ಸಹ ಉಪಾದಾನತ್ವ, ಬ್ರಹ್ಮ ಮೊದಲಾದ ಶಬ್ದಗಳಲ್ಲವೂ ನಿರವಕಾಶವಾಗಿಯೇ ಇರುತ್ತವೆಂಬುದನ್ನೂ ಸಹ ಗ್ರಂಥದಿಂದ ಸ್ಪಷ್ಟವಾಗಿ ತಿಳಿದುಕೊಳ್ಳಬೇಕು. ಆದ್ದರಿಂದ ಮುಂದೆ 'ಇತಿ ನಿಕೃಷ್ಟತ್ವೇನ ಶ್ರುತತ್ವಾಚ್ಚ' ಎಂಬುದಾಗಿ 'ಚ' ಶಬ್ದವನ್ನು ಹೇಳುತ್ತಾರೆ.

प्रकाशः – ''चेतनप्रकृतेर्वा'' इत्यादिटीकां व्यनक्ति – **चित्प्रकृतेर्वेति । अक्षराधिकरणन्यायेनेति । ''अक्षरमम्बरान्तधृतेः'' इत्यत्र ''एतस्मिन् खल्वक्षरे गार्ग्यकाश ओतश्च प्रोतश्च'' इति श्रुतमक्षरं किं चित्प्रकृतिरथ विष्णुरिति संशये, ''ये त्वक्षरमनिर्देश्यमव्यक्तम्'' इत्यादौ श्रीतत्त्वे अक्षरशब्दप्रयोगात्, क्षरातीते विष्णौ तदयोगात् श्रीतत्त्वमेवेति प्राप्ते, चतुर्विधनाशरहिते विष्णावेव अक्षरशब्दप्रवृत्तिनिमित्तस्य पौष्कल्यात्, ''तस्मादक्षरं तस्मादक्षरमित्याचक्षते एतमेव**

सन्तम्'' इति श्रुत्यादौ तस्य प्रयोगाच्च विष्णुरेव अक्षरशब्दमुख्यार्थ इति तृतीयपादे वक्ष्यमाणन्यायेनेत्यर्थः ।

'ಚೇತನಪ್ರಕೃತೇರ್ವಾ' ಇತ್ಯಾದಿ ಟೀಕೆಯನ್ನು 'ಚಿತ್ಪ್ರಕೃತೇರ್ವಾ' ಎಂಬ ಗ್ರಂಥದಿಂದ ವ್ಯಾಖ್ಯಾನಮಾಡುತ್ತಿದ್ದಾರೆ. 'ಅಕ್ಷರಾಧಿಕರಣನ್ಯಾಯೇನ' ಎಂದು ಗ್ರಂಥದಲ್ಲಿ ಹೇಳಿದ್ದಾರೆ. ಮುಂದೆ ಮೂರನೆಯ ಪಾದದಲ್ಲಿ ಹೇಳುವ ಅಕ್ಷರಾಧಿಕರಣದ ನ್ಯಾಯವನ್ನು ಹೀಗೆ ತಿಳಿಯಬೇಕು.

'ಓಂ ಅಕ್ಷರಮಂಬರಾಂತಧೃತೇಃ ಓಂ' ಎಂದು ಅಕ್ಷರಾಧಿಕರಣ ಪ್ರಾರಂಭವಾಗುತ್ತದೆ.

''ಏತಸ್ಮಿನ್ ಖಲ್ವಕ್ಷರೇ ಗಾರ್ಗ್ಯಾಕಾಶ ಓತಶ್ಚ ಪ್ರೋತಶ್ಚ'' ಎಂಬುದು ಈ ಅಕ್ಷರಾಧಿಕರಣದ ವಿಷಯವಾಕ್ಯ. ಇದರಲ್ಲಿ 'ಅಕ್ಷರ' ಎಂಬ ಶಬ್ದವು ಕೇಳಿಸುತ್ತಿದೆ. ಈ ಶಬ್ದದಿಂದ ಚಿತ್ಪ್ರಕೃತಿಯು ಹೇಳಲ್ಪಟ್ಟಿದೆಯೋ? ಅಥವಾ ವಿಷ್ಣುವೋ? ಎಂದು ಸಂಶಯ.

''ಯೇ ತ್ವಕ್ಷರಮನಿರ್ದೇಶ್ಯಮವ್ಯಕ್ತಮ್'' ಇತ್ಯಾದಿಯಾಗಿ ಚಿತ್ಪ್ರಕೃತಿಯಲ್ಲಿಯೇ ಅಂದರೆ ಲಕ್ಷ್ಮೀದೇವಿಯಲ್ಲಿಯೇ ಅಕ್ಷರಶಬ್ದವನ್ನು ಪ್ರಯೋಗಿಸಲಾಗಿದೆ. ಮತ್ತು ಕ್ಷರಾಕ್ಷರಪದಾರ್ಥಗಳಿಗಿಂತ ಮಿಗಿಲಾದ ವಿಷ್ಣುವಿನಲ್ಲಿ ಅಕ್ಷರಶಬ್ದದ ಪ್ರಯೋಗವು ಅಯುಕ್ತವಾಗುತ್ತದೆ. ಏಕೆಂದರೆ ಶ್ರುತಿಯಲ್ಲಿ ಅಕ್ಷರವನ್ನು ನಿಕೃಷ್ಟಪದಾರ್ಥವೆಂದು ಪರಿಗಣಿಸಲಾಗಿದೆ. ಆದ್ದರಿಂದ ಲಕ್ಷ್ಮೀದೇವಿಯೇ ಅಕ್ಷರಶಬ್ದದಿಂದ ಪ್ರತಿಪಾದ್ಯಳಾಗುತ್ತಾಳೆಂದು ಪೂರ್ವಪಕ್ಷ.

ವಿಷ್ಣುವೇ ಅಕ್ಷರಶಬ್ದದ ಮುಖ್ಯಪ್ರತಿಪಾದ್ಯನು. ಏಕೆಂದರೆ ನಾಲ್ಕು ಬಗೆಯ ನಾಶರಹಿತನಾದ ವಿಷ್ಣುವಿನಲ್ಲೇ ನಾಶರಾಹಿತ್ಯವನ್ನೇ ಹೇಳುವ ಅಕ್ಷರಶಬ್ದದ ಪ್ರಯೋಗವನ್ನು ಮಾಡುವುದು ಅತ್ಯಂತ ಸಮಂಜಸವಾಗಿದೆ. ಏಕೆಂದರೆ ಅಕ್ಷರಶಬ್ದದ ಪ್ರವೃತ್ತಿನಿಮಿತ್ತವು ವಿಷ್ಣುವಿನಲ್ಲಿ ಮಾತ್ರ ಪುಷ್ಕಳವಾಗಿ ಬರುತ್ತಿವೆ. ಅಷ್ಟೇ ಅಲ್ಲದೆ ''ತಸ್ಮಾದಕ್ಷರಂ ತಸ್ಮಾದಕ್ಷರಮಿತ್ಯಾಚಕ್ಷತೇ ಏತಮೇವ ಸಂತಮ್'' ಎಂಬುದಾಗಿ ಶ್ರುತಿಯಲ್ಲಿ ಭಗವಂತನಲ್ಲಿಯೇ ಅಕ್ಷರಶಬ್ದವನ್ನು ಪ್ರಯೋಗಿಸಿದ್ದು ಕಾಣಿಸುತ್ತಿದೆ. ಆದ್ದರಿಂದ ವಿಷ್ಣುವೇ ಮುಖ್ಯವಾಗಿ ಅಕ್ಷರಶಬ್ದ ಪ್ರತಿಪಾದ್ಯನೆಂದು ಸಿದ್ಧಾಂತ. ಹೀಗೆ ಮೂರನೇ ಪಾದದಲ್ಲಿ ಈ ವಿಷಯವನ್ನು ಸಮರ್ಥಿಸಿದ್ದಾರೆ.

प्रकाशः – निर्विकारे श्रीतत्त्वेऽपि कथमुपादानत्वमित्यतः ''तस्या विकाराभिमानित्वाद्युज्यते'' इति टीकोक्तमेव व्यक्तमाह – चित्प्रकृतौ त्विति । ''हिरण्यगर्भस्य वा'' इत्यादिटीकां व्यनक्ति – चतुर्मुखो वेति ।

ಚಿತ್ಪ್ರಕೃತಿಯು ನಿರ್ವಿಕಾರವಾಗಿದೆ. ಹೀಗಿರುವಾಗ ಉಪಾದಾನ ಕಾರಣತ್ವವನ್ನು ಶ್ರೀತತ್ವಕ್ಕೆ ಹೇಗೆ ಹೇಳುತ್ತೀರಿ ? ಎಂಬ ಪ್ರಶ್ನೆಗೆ ''ತಸ್ಯಾ ವಿಕಾರಾಭಿಮಾನಿತ್ವಾದ್ಯುಜ್ಯತೇ'' ಲಕ್ಷ್ಮೀದೇವಿಯು ವಿಕಾರವನ್ನು ಹೊಂದುವ ಜಡಪ್ರಕೃತಿಗೆ ಅಭಿಮಾನಿದೇವತೆಯಾಗಿರುವುದರಿಂದ ಉಪಾದಾನಕಾರಣಳೆನಿಸುತ್ತಾಳೆ ಎಂದು ಉತ್ತರವನ್ನು ಟೀಕೆಯಲ್ಲಿ ಹೇಳಿದ್ದಾರೆ. ಅದನ್ನೇ ಸ್ಪಷ್ಟ ಪಡಿಸುತ್ತಾ ಗ್ರಂಥಕಾರರು 'ಚಿತ್‌ಪ್ರಕೃತೌ ತು' ಎಂದು ಹೇಳುತ್ತಿದ್ದಾರೆ.

''ಹಿರಣ್ಯಗರ್ಭಸ್ಯ ವಾ'' ಇತ್ಯಾದಿ ಟೀಕೆಯನ್ನು 'ಚತುರ್ಮುಖೋ ವಾ' ಎಂಬ ವಾಕ್ಯದಿಂದ ವ್ಯಾಖ್ಯಾನಿಸುತ್ತಿದ್ದಾರೆ.

ಸ ಬ್ರಹ್ಮೇತಿ ।

'ಬ್ರಹ್ಮಾ ದೇವಾನಾಂ ಪ್ರಥಮಸ್ಸಮ್ಬಭೂವ ವಿಶ್ವಸ್ಯ ಕರ್ತಾ ಭುವನಸ್ಯ ಗೋಪ್ತಾ ।
ಸ ಬ್ರಹ್ಮವಿದ್ಯಾಂ ಸರ್ವವಿದ್ಯಾಪ್ರತಿಷ್ಠಾಮಥರ್ವಾಯ ಜ್ಯೇಷ್ಠಪುತ್ರಾಯ ಪ್ರಾಹ ।।'

ಇತಿ ವಾಕ್ಯೇ ಬ್ರಹ್ಮಶಬ್ದಾದಿತ್ಯರ್ಥಃ । ತಸ್ಯ ಚತುರ್ಮುಖಪರತ್ವ ಏವೈತದ್ವಿದ್ಯಾಯಾಸ್ತತ್ಪರತ್ವಮಿಪ್ಯತಸ್ತತ್ಸಾಧಯತಿ – **ನ ಚೇತ್ಯಾದಿನಾ ।**

'ಸ ಬ್ರಹ್ಮ' ಎಂಬ ಗ್ರಂಥದಿಂದ ಮುಂದೆ ಹೇಳುವ ವಾಕ್ಯವನ್ನು ಗ್ರಹಣ ಮಾಡಬೇಕು.

ಈ ವಾಕ್ಯದಲ್ಲಿ ಚತುರ್ಮುಖಬ್ರಹ್ಮನನಲ್ಲಿ ಬ್ರಹ್ಮಶಬ್ದದ ಪ್ರಯೋಗವು ಬಹಳವಾಗಿ ಇದೆ.

ಬ್ರಹ್ಮಾ ದೇವಾನಾಂ ಪ್ರಥಮಸ್ಸಂಬಭೂವ ವಿಶ್ವಸ್ಯ ಕರ್ತಾ ಭುವನಸ್ಯ ಗೋಪ್ತಾ ।
ಸ ಬ್ರಹ್ಮವಿದ್ಯಾಂ ಸರ್ವವಿದ್ಯಾಪ್ರತಿಷ್ಠಾಮಥರ್ವಾಯ ಜ್ಯೇಷ್ಠಪುತ್ರಾಯ ಪ್ರಾಹ ।।

ಎಂಬುದಾಗಿ. ಇಲ್ಲಿ ಎಲ್ಲ ದೇವತೆಗಳ ಮೊದಲು ಬ್ರಹ್ಮದೇವರೇ ಹುಟ್ಟದರು ಎಂದು ಹೇಳಲಾಗಿದೆ. ಈ ವಾಕ್ಯದಲ್ಲಿ ಮೊದಲು ಹುಟ್ಟದನೆಂದು ಹೇಳಿದ ಕಾರಣ ಚತುರ್ಮುಖನೇ ಬ್ರಹ್ಮಶಬ್ದದಿಂದ ಪ್ರತಿಪಾದ್ಯನು. ಈ ಬ್ರಹ್ಮನು ಚತುರ್ಮುಖನಾದರೆ ಮಾತ್ರ 'ಸ ಬ್ರಹ್ಮವಿದ್ಯಾಂ' ಎಂಬಂತಹ ವಾಕ್ಯವು ಚತುರ್ಮುಖ ಪರವಾಗುತ್ತದೆ ಆದ್ದರಿಂದ ಆದನ್ನು 'ನಚ' ಇತ್ಯಾದಿ ವಾಕ್ಯದಿಂದ ಪ್ರತಿಪಾದಿಸುತ್ತಿದ್ದಾರೆ.

ಪ್ರಕಾಶಃ – ಪೂರ್ವತ್ರೇತಿ । ಅತ ಏವ ತತ್ವಪ್ರದೀಪೇ ''ಬ್ರಹ್ಮಾ ದೇವಾನಾಮ್'' ಇತಿ ಪೂರ್ವವಾಕ್ಯಮಪ್ಯುದಾಹೃತಮಿತಿ ಭಾವಃ ।

'ಪೂರ್ವತ್ರ' ಎಂದರೆ 'ಸ ಬ್ರಹ್ಮವಿದ್ಯಾಂ' ಎಂಬ ವಾಕ್ಯದ ಹಿಂದೆಯೂ ಸಹ ಚತುರ್ಮುಖಬ್ರಹ್ಮದೇವನೇ ಪ್ರಸ್ತುತನಾಗಿದ್ದಾನೆ. ಇದನ್ನು ತಿಳಿಸುವುದಕ್ಕಾಗಿಯೇ ತತ್ವಪ್ರದೀಪದಲ್ಲಿ 'ಬ್ರಹ್ಮಾದೇವಾನಾಂ' ಎಂಬ ಹಿಂದಿನ ವಾಕ್ಯವನ್ನೂ ಸಹ ಉದಾಹರಿಸಿದ್ದಾರೆ.

ಪ್ರಕಾಶಃ – ಜಾಯಮಾನತ್ವೇತಿ । 'ಸಮ್ಬಭೂವ ಜಾಯತೇ' ಇತಿ ಚ ಪದಾಭ್ಯಾಮುಕ್ತೇನೇತ್ಯರ್ಥಃ । ತಪಾದಾನತ್ವಂ ಚ ತದಭಿಮಾನಿತ್ವೇನೇತಿ ಭಾವಃ । ಏವಮಗ್ರೇऽಪಿ ।

ಗ್ರಂಥದಲ್ಲಿ ಜಾಯಮಾನತ್ವವು ಚತುರ್ಮುಖನ ಲಿಂಗವೆಂದು ಹೇಳಿದ್ದಾರೆ. ಇದು 'ಸಂಬಭೂವ' ಹಾಗೂ 'ಜಾಯತೇ' ಎಂಬೆರಡು ಪದಗಳಿಂದ ಸ್ಪಷ್ಟವಾಗುತ್ತದೆ. ಉಪಾದಾನಕಾರಣತ್ವವನ್ನು ಚತುರ್ಮುಖನಿಗೆ ಅಭಿಮಾನಿದೇವತೆಯಾದ ಕಾರಣ ಕೂಡಿಸಬೇಕು. ಮುಂದೆಯೂ ಸಹ ರುದ್ರಾದಿ ದೇವತೆಗಳಲ್ಲಿ ಅವರು ಅಭಿಮಾನಿದೇವತೆಗಳಾದ್ದರಿಂದಲೇ ಉಪಾದಾನಕಾರಣತ್ವವನ್ನು ಕೂಡಿಸಬೇಕೆಂಬುದನ್ನೂ ತಿಳಿದುಕೊಳ್ಳಬೇಕು.

प्रकाशः – ''रुद्रस्य वा'' इत्यादिटीकां व्यनक्ति – रुद्रो वेति । ईशशब्दादिति । प्रकृतादृश्यत्वादिगुणकाक्षर एव ''यदा पश्यःपश्यते रुग्मवर्णं कर्तारमीशम्'' इत्युत्तरवाक्ये श्रुतत्वादित्यर्थः ।

'रुद्रस्य वा' ಇತ್ಯಾದಿ ಟೀಕೆಯನ್ನು 'रुद्रो वा' ಎಂಬುದುದರಿಂದ ವ್ಯಾಖ್ಯಾನಿಸುತ್ತಿದ್ದಾರೆ. 'ईशशब्दात्' ಎಂದು ಗ್ರಂಥದಲ್ಲಿ ಹೇಳಿದ್ದಾರೆ. ಅಂದರೆ ಪ್ರಕೃತವಾದ ಅದೃಶ್ಯತ್ವಾದಿಗುಣಗಳುಳ್ಳ ಅಕ್ಷರನೇ 'यदा पश्यःपश्यते रुग्मवर्णं कर्तारमीशम्' ಎಂಬುದಾಗಿ ಮುಂದಿನ ವಾಕ್ಯದಲ್ಲಿಯೂ ಶ್ರುತನಾಗಿದ್ದಾನೆ. ಆದ್ದರಿಂದ ಎಂದು ಅರ್ಥ.

प्रकाशः – शब्दादेवेति । अत्रैव तृतीयपादे ''ईशानो भूतभव्यस्य'' इति श्रुत ईशानो वायुरुत विष्णुरिति सन्देहे, ''ऊर्ध्वं प्राणमुन्नयति'' इति प्राणव्यवस्थापकत्वस्य, ''मध्ये वामनमासीनम्'' इति मध्यमत्वस्य, ''विश्वेदेवा उपासते'' इति विश्वदेवोपास्यत्वस्य च श्रवणात्तेषां च 'एवमेवैष प्राण इतरान्प्राणान्पृथक्पृथगेव सन्निधत्ते'' ''योऽयं मध्यमः प्राणः'' ''कुविन्दङ्ग'' इति श्रुतिभिर्वायुधर्मत्वाद्वायुरिति प्राप्ते, लिङ्गसहस्रादपि श्रुतेर्बलवत्त्वात् निरवकाशवामनश्रुत्या ईशानपदप्रवृत्तिनिमित्तस्य प्रेरकत्वादेर्विष्णावेव पौष्कल्यादीशानो विष्णुरेवेति वक्ष्यते, ईशशब्दस्य चेशानशब्दपर्यायत्वादिति भावः ।

'शब्दादेव' ಎಂದು ಗ್ರಂಥದಲ್ಲಿದೆ ಎಂಬ ಇದೇ ಅಧ್ಯಾಯದ ಮೂರನೇ ಪಾದದಲ್ಲಿ

ಓಂ शब्दादेव प्रमितः ಓಂ

ಎಂಬ ಸೂತ್ರವು ಪ್ರಸಕ್ತವಾಗಿದೆ. ಈ ಸೂತ್ರದಲ್ಲಿ ಹೇಳಿದ ನ್ಯಾಯ ಹೀಗಿದೆ - ''ईशानो भूतभव्यस्य'' ಎಂಬುದು ಈ ಅಧಿಕರಣದ ವಿಷಯವಾಕ್ಯವಾಗಿದೆ. ಇದರಲ್ಲಿ ಕೇಳಿಸುತ್ತಿರುವ 'ईशान' ಎಂಬ ಶಬ್ದವು ವಾಯುಪರವೋ? ಅಥವಾ ವಿಷ್ಣುಪರವೋ? ಎಂದು ಸಂಶಯ.

''ऊर्ध्वं प्राणमुन्नयति'' ಪ್ರಾಣವ್ಯವಸ್ಥಾಪಕತ್ವ ಎಂಬ ಲಿಂಗವು ಕೇಳಿಸುತ್ತಿದೆ. ''मध्ये वामनमासीनं'' ಎಂಬುದಾಗಿ ಮಧ್ಯಮತ್ವಲಿಂಗವು ಕೇಳಿಸುತ್ತಿದೆ. ''विश्वेदेवा उपासते'' ಎಂಬುದಾಗಿ ವಿಶ್ವದೇವೋಪಾಸ್ಯತ್ವವು ಕೇಳಿಸುತ್ತಿದೆ. ಈ ಮೂರೂ ಲಿಂಗಗಳು ವಾಯುವಿನ ಧರ್ಮವೇ ಆಗಿದೆ. ಏಕೆಂದರೆ 'एवमेव एष प्राणः इतरान्प्राणान् पृथक् पृथगेव सन्निधत्ते'' ಎಂಬುದರಿಂದ ವಾಯುದೇವನೇ ಪ್ರಾಣವ್ಯವಸ್ಥಾಪಕನೆಂದು ತಿಳಿಯುತ್ತದೆ. ''योऽयं मध्यमः प्राणः'' ಎಂಬ ವಾಕ್ಯದಿಂದ ಮಧ್ಯಮತ್ವವು ಮುಖ್ಯಪ್ರಾಣನ ಲಿಂಗವೆಂದು ತಿಳಿಯುತ್ತದೆ. ''कुविदंग'' ಎಂಬ ಶ್ರುತಿಯಿಂದ ವಿಶ್ವದೇವೋಪಾಸ್ಯತ್ವವೂ ಸಹ ವಾಯುವಿನ ಲಿಂಗವೆಂದು ತಿಳಿಯುತ್ತದೆ. ಆದ್ದರಿಂದ

ಈಶಾನ ಶಬ್ದದಿಂದ ಪ್ರತಿಪಾದ್ಯನಾದವನು ವಾಯುದೇವನೇ ಆಗಿದ್ದಾನೆಂದು ಪೂರ್ವಪಕ್ಷ.

ಸಾವಿರಲಿಂಗಗಳಿಗಿಂತಲೂ ಶ್ರುತಿಯೇ ಬಲಿಷ್ಠ. ಆದ್ದರಿಂದ ನಿರವಕಾಶವಾಗಿರುವ ವಾಮನಶ್ರುತಿಯ ಬಲದಿಂದ ಮತ್ತು 'ಈಶಾನ' ಪದದ ಪ್ರೇರಕತ್ವವೆಂಬ ಪ್ರವೃತ್ತಿನಿಮಿತ್ತದಿಂದ ವಿಷ್ಣುವೇ 'ಈಶಾನ' ಶಬ್ದದಿಂದ ಪ್ರತಿಪಾದ್ಯನಾಗಿದ್ದಾನೆಂದು ನಿರ್ಣಯವಾಗುತ್ತದೆ. ಹೀಗೆ ಮುಂದೆ ಹೇಳುತ್ತಾರೆ. 'ಈಶ' ಶಬ್ದ ಹಾಗೂ 'ಈಶಾನ' ಶಬ್ದಗಳು ಪರ್ಯಾಯಪದಗಳಾದ್ದರಿಂದ ಈ ಅಧಿಕರಣದಲ್ಲಿ 'ಈಶಾನ' ಶಬ್ದವನ್ನು ವಿಷ್ಣುವಿನಲ್ಲಿ ಸಮರ್ಥಿಸಿದಾಗ 'ಈಶ' ಶಬ್ದವೂ ಸಮನ್ವಿತವಾದಂತೆ ಆಗುತ್ತದೆ ಎಂದು ತಿಳಿಯಬೇಕು.

प्रकाशः – यद्यपि ''सर्वत्र'' इति नये, ''अत्ता'' इति नये च आदित्यादिति-श्रुत्योरिवान्तर्नन्यायेनेशशब्दस्यापि सावकाशत्वशङ्का सुशका ।

ಪ್ರಶ್ನೆ - ಸರ್ವಗತತ್ವಾಧಿಕರಣದಲ್ಲಿ ಮತ್ತು ಅತ್ತೃತ್ವಾಧಿಕರಣದಲ್ಲಿ ಆದಿತ್ಯಶ್ರುತಿ ಹಾಗೂ ಆದಿತಿಶ್ರುತಿಗಳು ವಿಷ್ಣುಪರವೆಂದು ಸಮರ್ಥಿಸಲಾಗಿದೆ. ಆದರಂತೆ ಅಂತರಧಿಕರಣದ ನ್ಯಾಯದಿಂದ ಈಶ ಶಬ್ದವೂ ಸಹ ಸಾವಕಾಶವಾಗಿದೆಯೆಂದು ಶಂಕಿಸಬಹುದಲ್ಲವೇ? ಅಂದರೆ ಅಂತರಧಿಕರಣದ ನ್ಯಾಯದಿಂದಲೇ ಈಶ ಶಬ್ದವು ಭಗವತ್ಪರವಾಗಿದೆಯೆಂದು ಸುಲಭವಾಗಿ ತಿಳಿಯುವಾಗ ಪುನಃ 'ಶಬ್ದಾದೇವ ಪ್ರಮಿತಃ' ಎಂಬ ಅಧಿಕರಣದಿಂದ ಸಾವಕಾಶವಾಗಿದೆಯೆಂದು ಏಕೆ ಶಂಕಿಸುತ್ತಿದ್ದಾರೆ ?

प्रकाशः – तथाऽपि तदधिकरणविषयवाक्ये ईशशब्दस्य तत्पर्यायस्य वा श्रवणाभावाद्वा, तत्रैव अत्र वाक्ये निरवकाशविष्णुलिङ्गाभावेन तच्छायाविषयत्वाद्वा, तत्र तात्पर्यमात्रमेवाधिदैवगतशब्दानामुक्तं, नतु शक्तिरपीति भावेन वा, ''शब्दादेव'' इत्यत्रेशशब्दपर्यायस्येशानशब्दस्य साक्षादेव समन्वयोक्तेर्वा – ''शब्दादेव प्रमितः'' इति वक्ष्यमाणन्यायेनेत्युक्तम् ।

ಸಮಾಧಾನ - ಹೌದು, ಆದರೆ ಅಂತರಧಿಕರಣದ ವಿಷಯವಾಕ್ಯದಲ್ಲಿ 'ಈಶ' ಶಬ್ದವಾಗಲೀ 'ಈಶ' ಶಬ್ದಕ್ಕೆ ಪರ್ಯಾಯಪದವಾದ 'ಈಶಾನ' ಶಬ್ದವಾಗಲೀ ಕೇಳಿಸುತ್ತಿಲ್ಲ. ಆದ್ದರಿಂದ ಇಲ್ಲಿ ಅಂತರಧಿಕರಣ ನ್ಯಾಯವನ್ನು ಉಲ್ಲೇಖಿಸಿಲ್ಲ. ಅಥವಾ ಅಂತರಧಿಕರಣದ ವಿಷಯವಾಕ್ಯದಲ್ಲಿ ನಿರವಕಾಶವಾದ ವಿಷ್ಣುಲಿಂಗಗಳಿರುವಂತೆ ಪ್ರಕೃತ ವಾಕ್ಯದಲ್ಲಿ ಅಂತಹ ವಿಷ್ಣುಲಿಂಗಗಳು ಇರುವುದಿಲ್ಲ. ಆದ್ದರಿಂದ ಆ ಅಧಿಕರಣದ ನ್ಯಾಯಕ್ಕೆ ಇದು ವಿಷಯವಾಗುವುದಿಲ್ಲ. ಅಥವಾ ಅಂತರಧಿಕರಣದಲ್ಲಿ ಎಲ್ಲಾ ಅಧಿದೈವಿಕ ಪದಗಳಿಗೆ ವಿಷ್ಣುವಿನಲ್ಲಿ ತಾತ್ಪರ್ಯವನ್ನಷ್ಟೇ ಹೇಳಿರುತ್ತಾರೆ ಹೊರತು, ಶಕ್ತ್ಯವೃತ್ತಿಯನ್ನು ಹೇಳಿರುವುದಿಲ್ಲ. ಅಥವಾ 'ಶಬ್ದಾದೇವ' ಎಂಬ ಸೂತ್ರದಲ್ಲಿ 'ಈಶ' ಶಬ್ದಕ್ಕೆ ಪರ್ಯಾಯಪದವಾಗಿರುವ 'ಈಶಾನ' ಶಬ್ದವನ್ನು ನೇರವಾಗಿ ಸಮನ್ವಯ ಮಾಡಿರುತ್ತಾರೆ. ಈ ಎಲ್ಲ ಕಾರಣಗಳಿಂದ ಗ್ರಂಥಕಾರರು 'ಶಬ್ದಾದೇವ ಪ್ರಮಿತಃ' ಎಂಬ ಮುಂದಿನ ನ್ಯಾಯದಿಂದಲೇ ಸಾವಕಾಶತ್ವವನ್ನು 'ಈಶ' ಎಂಬ ಶಬ್ದಕ್ಕೆ ಆಶಂಕಿಸಿದ್ದಾರೆ.

प्रकाशः – प्रसिद्धेति ।

'यस्सर्वज्ञः सर्वविद्यस्य ज्ञानमयं तपः ।
तस्मादेतद्ब्रह्म नाम रूपमन्नं च जायते ।।'

इति श्रुतसर्वज्ञशब्दात्, तस्य च

'कृशानुरेतास्सर्वज्ञो धूर्जटिर्नीललोहितः ।'

इत्यमरोक्त्या रुद्रे प्रसिद्धत्वादित्यर्थः ।

ಗ್ರಂಥದಲ್ಲಿ 'ಪ್ರಸಿದ್ಧೇತಿ' ಎಂದರೆ ಸರ್ವಜ್ಞ ಶಬ್ದವು ರುದ್ರನಲ್ಲಿ ಪ್ರಸಿದ್ಧವಾಗಿದೆಯೆಂದು ಹೇಳಿದ್ದಾರೆ. ಅದು ಹೀಗೆ -

'ಯಸ್ಸರ್ವಜ್ಞಃ ಸರ್ವವಿದ್ಯಸ್ಯ ಜ್ಞಾನಮಯಂ ತಪಃ।
ತಸ್ಮಾದೇತದ್ಬ್ರಹ್ಮ ನಾಮ ರೂಪಮನ್ನಂ ಚ ಜಾಯತೇ॥'

ಎಂಬ ಶ್ರುತಿಯಲ್ಲಿ ಕೇಳಿಸುತ್ತಿರುವ 'ಸರ್ವಜ್ಞ' ಶಬ್ದವು

'ಕೃಶಾನುರೇತಾಸ್ಸರ್ವಜ್ಞೋ ಧೂರ್ಜಟಿರ್ನೀಲಲೋಹಿತಃ।'

ಎಂಬ ಅಮರಕೋಶದ ಮಾತಿನಂತೆ ರುದ್ರನಲ್ಲಿಯೇ ಪ್ರಸಿದ್ಧವಾಗಿದೆಯೆಂದರ್ಥ.

प्रकाशः – यौगिकत्वे दोषमाह – सर्वविदिति । प्रातिस्विकबाधकोक्त्या अन्यप्रापकाणां निरवकाशत्वमुक्त्वा टीकाद्युक्तेन साधारणबाधकान्तरेणापि तदाह – अक्षरादिति ।

ಸರ್ವಜ್ಞಶಬ್ದವು ಯೌಗಿಕವಾದರೆ ದೋಷ ಬರುತ್ತದೆಂಬುದನ್ನು 'ಸರ್ವವಿತ್' ಎಂಬ ವಾಕ್ಯದಿಂದ ಹೇಳಿರುತ್ತಾರೆ. ಹಿಂದೆ (ಮೇಲ್ನೋಟಕ್ಕೆ ತೋರುವ) ಪ್ರಾತಿಸ್ವಿಕವಾದ ಬಾಧಕಗಳನ್ನು ಹೇಳುವ ಮೂಲಕ ಪೂರ್ವಪಕ್ಷಪ್ರಾಪಕವಾದ ಎಲ್ಲಾ ಲಿಂಗಗಳಿಗೆ ನಿರವಕಾಶತ್ವವನ್ನು ಹೇಳಿದರು. ಪ್ರಕೃತ ಟೀಕೆಯಲ್ಲಿ ಹೇಳಲ್ಪಟ್ಟ ಎಲ್ಲ ಪೂರ್ವಪಕ್ಷಲಿಂಗಗಳಿಗೆ ಸಾಧಾರಣವಾದ ಒಂದು ಬಾಧಕವನ್ನು 'ಅಕ್ಷರಾತ್' ಎಂಬ ಒಂದು ವಾಕ್ಯದಿಂದ ಹೇಳುತ್ತಿದ್ದಾರೆ.

प्रकाशः – यद्यपि टीकायां कारणत्वस्य अक्षरब्रह्मेशशब्दानां च सावकाशत्वमाशङ्क्य, ''अक्षरात्परतः परः'' इतिश्रुतिनिकृष्टत्वेनैव तेषां निरवकाशत्वमुक्तं, नतु दृष्टान्तोक्तविश्वोपादानत्वादिना ।

ಟೀಕೆಯಲ್ಲಿ ಕಾರಣತ್ವ, ಅಕ್ಷರಶಬ್ದ, ಬ್ರಹ್ಮಶಬ್ದ, ಈಶಶಬ್ದ ಇವುಗಳಿಗೆಲ್ಲಾ ಸಾವಕಾಶತ್ವವನ್ನು ಆಶಂಕಿಸಿ ''ಅಕ್ಷರಾತ್ಪರತಃ ಪರಃ'' ಎಂಬ ಶ್ರುತಿಯಿಂದ ತಿಳಿಯುತ್ತಿರುವ ನಿಕೃಷ್ಟತ್ವದಿಂದಲೇ ಅವುಗಳಿಗೆಲ್ಲಾ

ನಿರವಕಾಶತ್ವವನ್ನು ಸಮರ್ಥಿಸಿದ್ದಾರೆ ಹೊರತು, ಶ್ರುತಿಯಲ್ಲಿ ಹೇಳಲ್ಪಟ್ಟ ವಿಶ್ವೋತ್ಪಾದಾನತ್ವವೇ ಮೊದಲಾದ ದೃಷ್ಟಾಂತ ಮಾತುಗಳಿಂದ ನಿರವಕಾಶತ್ವವನ್ನು ಸಮರ್ಥಿಸಿರುವುದಿಲ್ಲ.

प्रकाशः – तथाऽपि सति बाधके त्यागायोगात् – ''अक्षरात्परतः परः इति श्रुतेरपि'' इति न्यायविवरणगतापिशब्दस्य बाधकान्तरसमुच्चयार्थत्वमुपेत्य प्रातिस्विकबाधकोक्त्या च निरवकाशत्वमुक्तमिति ज्ञेयम् ।

ಆದರೂ ಸಹ ಬಾಧಕವಿದ್ದಾಗ ಬಿಡುವುದು ತಪ್ಪಾಗುತ್ತದೆ. ಆದ್ದರಿಂದ ಮತ್ತು 'ಅಕ್ಷರಾತ್ಪರತಃ ಪರಃ ಇತಿ ಶ್ರುತೇರಪಿ' ಎಂಬ ನ್ಯಾಯವಿವರಣದಲ್ಲಿರುವ 'ಅಪಿ' ಶಬ್ದವು ಮತ್ತೊಂದು ಬಾಧಕಕ್ಕೆ ಸಮುಚ್ಚಾಯಕವಾಗಿದೆ ಎಂಬ ಅರ್ಥವನ್ನು ಅಂಗೀಕರಿಸಿ ಪ್ರಾತಿಸ್ವಿಕವಾದ ಬಾಧಕವನ್ನು ಹೇಳುವ ಮೂಲಕ ನಿರವಕಾಶತ್ವವನ್ನು ಗ್ರಂಥಕಾರರು ಹೇಳಿದ್ದಾರೆಂದು ತಿಳಿಯಬೇಕು.

प्रकाशः – अन्त्यचिन्तास्थानन्यत्वकोटिं साधयितुं निकृष्टत्वेन श्रुतत्वं शङ्कापूर्वं साधयति – नचेति ।।

ತದರ್ಥ ಚಿಂತೆಗಳನ್ನು ತೋರಿಸುವಾಗ ಕೊನೆಯ ಚಿಂತೆಯಲ್ಲಿ ಅನನ್ಯತ್ವಕೋಟಿಯನ್ನು ಸಾಧಿಸಲು ಹೊರಟಿದ್ದಾರೆ. ಅಂದರೆ 'ಅಕ್ಷರತ್ಸಂಭವತೀಹ ವಿಶ್ವಮ್' ಎಂಬಲ್ಲಿ ಕೇಳಿಸುತ್ತಿರುವ ಅಕ್ಷರಶಬ್ದದ ಅರ್ಥ ಹಾಗೂ 'ಅಕ್ಷರಾತ್ಪರತಃ ಪರಃ' ಎಂಬಲ್ಲಿ ಕೇಳಿಸುತ್ತಿರುವ ಅಕ್ಷರಶಬ್ದದ ಅರ್ಥ ಒಂದೇ ಆಗಿರುವುದರಿಂದ ವಿಷ್ಣು ಪ್ರತಿಪಾದ್ಯನಾಗುವುದಿಲ್ಲ ಎಂದು ಪೂರ್ವಪಕ್ಷವನ್ನು ಮಾಡಲು ಹೊರಟಿದ್ದಾರೆ. ಇಲ್ಲಿ ನಿಕೃಷ್ಟತ್ವೇನ ಕೇಳಿಸುತ್ತಿರುವ ಅಕ್ಷರಶಬ್ದವನ್ನು ಶಂಕಾಪೂರ್ವಕವಾಗಿ ಸಾಧಿಸುತ್ತಿದ್ದಾರೆ 'ನಚ' ಇತ್ಯಾದಿ ವಾಕ್ಯಗಳಿಂದ. ಶ್ರುತಹಾನ ಅಶ್ರುತಕಲ್ಪನಾಗಳೆಂಬ ದೋಷವು ಬರುವ ಕಾರಣ ಎರಡೂ ಕಡೆಯಿರುವ ಅಕ್ಷರಶಬ್ದ ಪ್ರತಿಪಾದ್ಯನು ಒಬ್ಬನೇ ಆಗಿದ್ದಾನೆಂದು ಒಪ್ಪಬೇಕೆಂದು ಈ ವಾಕ್ಯದ ಅಭಿಪ್ರಾಯ.

प्रकाशः – विष्णोरिव पूर्वपक्षकोटीनामपि निकृष्टत्वेन श्रुतत्वमयुक्तं, श्रीतत्त्वापेक्षया विष्णोरर्वागन्यस्य अभावात्, तत्र सामानाधिकरण्येनान्वये चतुर्मुखादावयोगादित्यतः, ''तस्यां सामानाधिकरण्ये उपपन्नम्'' इति टीकोपलक्षणमिति भावेन ''तस्मात्परस्याः प्रकृतेः परस्य हरेरभिधानादेव च'' इति तत्त्वप्रदीपोक्तं हृदि कृत्वा सर्वत्र तदुपपत्तिमाह – पूर्वपक्ष इति ।।

ವಿಷ್ಣುವಿನಲ್ಲಿ ನಿಕೃಷ್ಟತ್ವವು ಇಲ್ಲದ ಕಾರಣ ಅಕ್ಷರಶಬ್ದ ಪ್ರತಿಪಾದ್ಯತ್ವವು ಹೇಗೆ ಬರುವುದಿಲ್ಲವೋ, ಅದರಂತೆ ಉಳಿದ ಪೂರ್ವಪಕ್ಷಕೋಟಿಗಳಲ್ಲಿಯೂ ನಿಕೃಷ್ಟವಾಗಿ ಕೇಳಿಸುತ್ತಿರುವ ಅಕ್ಷರಶಬ್ದ ಪ್ರತಿಪಾದ್ಯತ್ವವು ಬರುವುದಿಲ್ಲ. ಏಕೆಂದರೆ ಲಕ್ಷ್ಮೀದೇವಿಗಿಂತ ಉತ್ತಮನು, ವಿಷ್ಣುವಿಗಿಂತ ಅಧಮನೂ ಆದ ಒಬ್ಬ ವ್ಯಕ್ತಿಯು ಇದ್ದಿದ್ದರೆ ಆವಾಗ ಅಕ್ಷರಶಬ್ದದಿಂದ ಲಕ್ಷ್ಮಿಯು ಪ್ರತಿಪಾದ್ಯಳು. ಅವಳಿಗಿಂತ ಪರನಾದವನು ಇನ್ನೊಬ್ಬನು, ಅವನಿಗಿಂತ ಉತ್ತಮನಾದವನು ವಿಷ್ಣುವೆಂದು ಹೇಳಬಹುದಿತ್ತು. ಆದರೆ ಅಂತಹ ಒಬ್ಬ ವ್ಯಕ್ತಿಯು ಇರಲು

ಸಾಧ್ಯವಿಲ್ಲ. ಇನ್ನು ಸಾಮಾನಾಧಿಕರಣ್ಯದಿಂದ 'ಅಕ್ಷರಾತ್ಪರತಃ' ಎಂಬೆರಡು ಪದಗಳು ಒಂದೇ ವಸ್ತುವನ್ನು ಹೇಳುತ್ತವೆಂದು ಒಪ್ಪಿದರೆ ಚತುರ್ಮುಖಾದಿಗಳಲ್ಲಿ ಅಕ್ಷರಶಬ್ದ ಪ್ರತಿಪಾದ್ಯತ್ವವು ಕೂಡುವುದಿಲ್ಲ. ಈ ಪ್ರಶ್ನೆಗೆ ಟೀಕೆಯಲ್ಲಿ 'ತಸ್ಮಾಂ ಸಾಮಾನಾಧಿಕರಣ್ಯೇನ ಉಪಪನ್ನಮ್' ಎಂದು ಉತ್ತರಿಸಿದ್ದಾರೆ. ಇದು ಕೇವಲ ಉಪಲಕ್ಷಣವಾಗಿದೆಯೆಂಬ ಅಭಿಪ್ರಾಯದಿಂದ ''ತಸ್ಮಾತ್ ಪರಸ್ಯಾಃ ಪ್ರಕೃತೇಃ ಪರಸ್ಯ ಹರೇರಭಿಧಾನಾದೇವ ಚ'' ಎಂಬ ತತ್ತ್ವಪ್ರದೀಪದ ಮಾತನ್ನು ಮನಸ್ಸಿನಲ್ಲಿಟ್ಟುಕೊಂಡು ಎಲ್ಲ ಪೂರ್ವಪಕ್ಷಕೋಟಿಗಳಲ್ಲಿಯೂ ಅಕ್ಷರಾತ್ಪರತಃ ಪರತ್ವವು ಯುಕ್ತವಾಗುತ್ತದೆಂದು 'ಪೂರ್ವಪಕ್ಷೇ' ಎಂಬ ಗ್ರಂಥದಿಂದ ಪ್ರತಿಪಾದಿಸುತ್ತಿದ್ದಾರೆ.

ಪ್ರಕಾಶಃ – ಪಕ್ಷಾನ್ತರೇ ತ್ವಿತಿ । 'ಅಕ್ಷರಾತ್' ಚತುರ್ಮುಖಾತ್ 'ಪರತಃ' ಶ್ರೀತತ್ತ್ವಾತ್ ಪರ ಇತಿ ಚತುರ್ಮುಖಪಕ್ಷೇ; ರುದ್ರಪಕ್ಷೇ ತು 'ಅಕ್ಷರಾತ್' ರುದ್ರಾತ್ 'ಪರತಃ' ಚತುರ್ಮುಖಾತ್ ಪರ ಇತಿ ಪುಮ್ಮಾತ್ರವಿವಕ್ಷಯಾ ಧ್ಯೇಯಮಿತಿ ಭಾವಃ ।

ಚತುರ್ಮುಖಪಕ್ಷದಲ್ಲಿ ಶ್ರುತಿಗೆ ಹೀಗರ್ಥ - ಅಕ್ಷರಾತ್ = ಚತುರ್ಮುಖನಿಗಿಂತ, ಪರತಃ = ಲಕ್ಷ್ಮೀದೇವಿಗಿಂತಲೂ, ಪರಃ = ವಿಷ್ಣು ಉತ್ತಮನಾಗಿದ್ದಾನೆ ಎಂದು. ಮತ್ತು ರುದ್ರಪಕ್ಷದಲ್ಲಿ ಹೀಗರ್ಥ - ಅಕ್ಷರಾತ್ = ರುದ್ರನಿಗಿಂತ, ಪರತಃ = ಉತ್ತಮನಾದ ಚತುರ್ಮುಖನಿಗಿಂತ, ಪರಃ = ವಿಷ್ಣು ಸರ್ವೋತ್ತಮನು ಎಂದು. ರುದ್ರಪಕ್ಷದಲ್ಲಿ ಕೇವಲ ಪುರುಷರನ್ನೇ ವಿವಕ್ಷಿಸಬೇಕು. ಇಲ್ಲದಿದ್ದರೆ ಸರಸ್ವತಿ, ಲಕ್ಷ್ಮೀ ಮೊದಲಾದವರು ಮಧ್ಯದಲ್ಲಿರುವುದರಿಂದ ವಿಷ್ಣುವಿಗೆ 'ಅಕ್ಷರತ್ ಪರತಃ' ಪರತ್ವವನ್ನು ಹೇಳಲು ಬರುವುದಿಲ್ಲವೆಂದು ತಿಳಿಯಬೇಕು.

ಪ್ರಕಾಶಃ – ನನು ಯಥಾ ಸಿದ್ಧಾನ್ತೇ ನಿಕೃಷ್ಟತ್ವಶ್ರವಣಂ ಬಾಧಕಂ ತಥಾ ಪೂರ್ವಪಕ್ಷೇऽಪಿ ಪರವಿದ್ಯಾವಿಷಯತ್ವಂ ಬಾಧಕಮಿತ್ಯಾಶಙ್ಕ್ಯ, ''ಯದಾ ವೇದಾದಿ ಅನ್ಯವಿಷಯತಯಾ ಯೋಜ್ಯತೇ, ತದಾ ತಸ್ಯಾಪರವಿದ್ಯಾತ್ವಮ್'' ಇತ್ಯಾದಿಸಿದ್ಧಾನ್ತಟೀಕಾವ್ಯಾವರ್ತ್ಯೈ ಚ ಪರಾಪರವಿದ್ಯಯೋಃ ಭಿನ್ನಾರ್ಥತ್ವಮುಪೇತ್ಯಾಹ – ನಚೇತಿ ।

ಯಾವರೀತಿಯಾಗಿ ಸಿದ್ಧಾಂತದಲ್ಲಿ ನಿಕೃಷ್ಟತ್ವವು ಬಾಧಕವಾಗಿದೆಯೋ ಆದರಂತೆ ಪೂರ್ವಪಕ್ಷದಲ್ಲಿಯೂ ಸಹ ಪರವಿದ್ಯಾವಿಷಯತ್ವವು ಬಾಧಕವಾಗಿದೆಯಲ್ಲವೇ? ಎಂದು ಆಶಂಕಿಸಿ ''ಯದಾ ವೇದಾದಿ ಅನ್ಯವಿಷಯತಯಾ ಯೋಜ್ಯತೇ, ತದಾ ತಸ್ಯಾಪರವಿದ್ಯಾತ್ವಮ್'' ಎಂಬ ಸಿದ್ಧಾಂತ ಟೀಕೆಯಿಂದ ವ್ಯಾವರ್ತ್ಯವಾದ ಪೂರ್ವಪಕ್ಷವನ್ನು 'ನಚ' ಇತ್ಯಾದಿ ಗ್ರಂಥದಿಂದ ತೋರಿಸುತ್ತಿದ್ದಾರೆ. ಮತ್ತು ಪರವಿದ್ಯೆ ಹಾಗೂ ಅಪರವಿದ್ಯೆಗಳು ಭಿನ್ನಾರ್ಥವಾಗಿವೆ ಎಂದು ಅಂಗೀಕರಿಸಿ ಪೂರ್ವಪಕ್ಷ ಮಾಡುತ್ತಿದ್ದಾರೆ. (ಸಿದ್ಧಾಂತದಲ್ಲಿ ಪರವಿದ್ಯೆಗೆ ವಿಷಯವಾದ ಋಗಾದಿಗಳೇ ಅಪರವಿದ್ಯೆಗೂ ಸಹ ವಿಷಯವಾಗಿವೆ ಎಂದು ಸಮಾನಾರ್ಥಕತ್ವವನ್ನು ಹೇಳುತ್ತಾರೆ. ಆದರೆ ಪೂರ್ವಪಕ್ಷದಲ್ಲಿ ಪರವಿದ್ಯೆಯೇ ಬೇರೆ ಅಪರವಿದ್ಯೆಯೇ ಬೇರೆ ಎಂದು ಒಪ್ಪಿರುತ್ತಾರೆಂದು ತಿಳಿಯಬೇಕು.)

प्रकाशः – ऋगादिविषयत्वोपपादनाय 'शास्त्रयोनौ' इत्युक्तम्, शास्त्रयोनिसूत्रे तथोक्तत्वादिति भावः । **प्रतियोगीति** । विरोधीत्यर्थः । **प्रकृतेरिति** । प्रकृत्यादेरेवेत्यर्थः ।

ವಿಷ್ಣು ಋಗಾದಿವೇದಗಳಿಗೆ ವಿಷಯನಾಗಿದ್ದಾನೆಂಬುದನ್ನು ಉಪಪಾದಿಸುವುದಕ್ಕಾಗಿ 'ಶಾಸ್ತ್ರಯೋನೌ' ಎಂದು ಹೇಳಿದ್ದಾರೆ. ಅಂದರೆ 'ಶಾಸ್ತ್ರಯೋನಿತ್ವಾತ್' ಎಂಬ ಸೂತ್ರದಲ್ಲಿ ಅಪರವಿದ್ಯೆಗೆ ವಿಷಯನಾಗಿದ್ದಾನೆಂದು ಹೇಳಿರುತ್ತಾರೆ ಎಂದರ್ಥ. 'ಪ್ರತಿಯೋಗಿ' ಶಬ್ದಕ್ಕೆ 'ವಿರೋಧಿ' ಎಂದರ್ಥ. 'ಪ್ರಕೃತೇಃ' ಎಂದರೆ ಪ್ರಕೃತ್ಯಾದಿಗಳಿಗೆ ಎಂದರ್ಥ. ಆದ್ದರಿಂದ ಅಪರವಿದ್ಯೆಗೆ ವಿಷಯನಾದ ವಿಷ್ಣು ವಿರೋಧಿಯಾದ ಪರವಿದ್ಯೆಗೆ ವಿಷಯನಾಗುವುದಿಲ್ಲ. ಅನಿವಾರ್ಯವಾಗಿ ಪ್ರಕೃತ್ಯಾದಿಗಳೇ ಪರವಿದ್ಯೆಗೆ ವಿಷಯವಾಗಿವೆಯೆಂದು ಒಪ್ಪಬೇಕು.

प्रकाशः – ननु ''अक्षरात्परतः परः'' इति वाक्योक्तपरवस्तु किञ्चिदुपेत्य अत्र प्रकृत्यादिरिति पूर्वपक्षकरणे,

'चित्त्वे तु तेन कार्त्स्न्येनावेद्यत्वं नेश्वरं विना ।'

इति प्रागुक्तदिशा अपरिच्छिन्नवैभवत्वपर्यवसन्नं मुख्यमदृश्यत्वं निकृष्टत्वेनाभ्युपेते प्रकृत्यादौ पूर्वपक्षिणा शङ्कितुमुशक्यमिति कथमेतादृश्यस्य आनन्दमयादावुक्तस्य विष्णुधर्मस्य पूर्वपक्षे आक्षेपः स्यात् ।

ಪ್ರಧಾನ ಆಕ್ಷೇಪ - ಈ ಅಧಿಕರಣದಲ್ಲಿ ಪ್ರಕೃತ್ಯಾದಿಗಳೇ ಅಕ್ಷರಶಬ್ದವಾಚ್ಯರಾಗುತ್ತಾರೆಂದು ಪೂರ್ವಪಕ್ಷ ಮಾಡಲಾಗಿದೆ. ಇದು ಎಷ್ಟು ಸರಿ? ಎಂಬುದನ್ನು ವಿಚಾರ ಮಾಡಬೇಕು. ಏಕೆಂದರೆ ಪೂರ್ವಪಕ್ಷದ ಫಲವೇನೆಂದರೆ ಹಿಂದಿನ ಅಧಿಕರಣದಲ್ಲಿ ಹೇಳಲ್ಪಟ್ಟ ಪೃಥಿವ್ಯಾದ್ಯವಿದಿತತ್ವವೆಂಬ ಧರ್ಮವು ವಿಷ್ಣುವಿನಲ್ಲಿ ಕೂಡುವುದಿಲ್ಲವೆಂದು ತಿಳಿಸುವಿಕೆ. ಅಂದರೆ ಸಂಪೂರ್ಣವಾಗಿ ವಿಷ್ಣು ತಿಳಿಯಲಾರನೆಂದು ಹಿಂದಿನ ಅಧಿಕರಣದಲ್ಲಿ ನಿರ್ಣಯಿಸಲಾಯಿತು. ಈ ಧರ್ಮವು ಪ್ರಕೃತ್ಯಾದಿಗಳಲ್ಲಿಯೂ ಸಹ ಬರುತ್ತದೆಂದು ಈ ಪೂರ್ವಪಕ್ಷದ ಫಲವೆಂದು ಹೇಳಬೇಕು; ಆದರೆ 'ಅಕ್ಷರಾತ್ಪರತಃ ಪರಃ' ಎಂಬ ವಾಕ್ಯದಿಂದ ಮತ್ತೊಬ್ಬ ಉತ್ತಮಪುರುಷನನ್ನು ಒಪ್ಪಿ ಪ್ರಕೃತ್ಯಾದಿಗಳು ನಿಕೃಷ್ಟವಾಗಿವೆ; ಆದ್ದರಿಂದ ಅಕ್ಷರಶಬ್ದ ಪ್ರತಿಪಾದ್ಯವಾಗಿವೆಯೆಂದು ಪೂರ್ವಪಕ್ಷ ಮಾಡುತ್ತಿದ್ದೀರಿ. ಹೀಗೆ ಹೇಳಿದರೆ, 'ಚಿತ್ತ್ವೇ ತು ತೇನ ಕಾರ್ತ್ಸ್ನ್ಯೇನಾವೇದ್ಯತ್ವಂ ನೇಶ್ವರಂ ವಿನಾ ।' ಎಂದು ಹಿಂದಿನ ಅಧಿಕರಣದಲ್ಲಿ ಹೇಳಲ್ಪಟ್ಟ ಅಪರಿಚ್ಛಿನ್ನವೈಭವತ್ವದಲ್ಲಿ ಪರ್ಯವಸಾನವಾಗುವ ಮುಖ್ಯ ಅದೃಶ್ಯತ್ವವನ್ನು ನಿಕೃಷ್ಟವಾದ ಪ್ರಕೃತ್ಯಾದಿಗಳಲ್ಲಿ ಪೂರ್ವಪಕ್ಷಿಯು ಹೇಳಲು ಸಾಧ್ಯವಿಲ್ಲ. ಅಂದರೆ ಪೂರ್ವಪಕ್ಷಕಾರನ ಉದ್ದೇಶವೇ ಪೂರ್ಣವಾಗುವುದಿಲ್ಲ. ಆದ್ದರಿಂದ ಆನಂದಮಯಾಧಿಕರಣದಲ್ಲಿ ಹೇಳಲ್ಪಟ್ಟ ಅಥವಾ ಹಿಂದಿನ ಅಧಿಕರಣದಲ್ಲಿ ಹೇಳಲ್ಪಟ್ಟ ಅದೃಶ್ಯತ್ವವೆಂಬ ವಿಷ್ಣುವಿನ ಧರ್ಮವನ್ನು ಪೂರ್ವಪಕ್ಷದಲ್ಲಿ ಆಕ್ಷೇಪ ಮಾಡಲು ಬರುವುದಿಲ್ಲವಲ್ಲವೇ?

ಅದೃಶ್ಯತ್ವಾಧಿಕರಣ (೧-೨-೬)

ಪ್ರಕಾಶಃ – ನ ಚಾತ್ರ ಶ್ರುತನಿಕೃಷ್ಟತ್ವಸ್ಯ ಪರತ್ವಸ್ಯ ಚ ಅಕ್ಷರತ್ವೇನಾಭಿಮತೇ ಪ್ರಕೃತ್ಯಾದಾವೇವ ಕಥಞ್ಚಿದುಪನ್ನತಾऽಭಿಪ್ರೇತೇತಿ ಈಶ್ವರಪರತ್ವಮೇವ ನೋಪೇಯತೇ ಪೂರ್ವಪಕ್ಷಿಣೇತಿ ವಾಚ್ಯಂ,

ಅವಾಂತರ ಸಮಾಧಾನ - ಶ್ರುತಿಯಲ್ಲಿ 'ಅಕ್ಷರಾತ್ಪರತಃ ಪರಃ' ಎಂಬುದಾಗಿ ಪರತ್ವಕ್ಕೆ ಅವಧಿ ಭೂತವಾದ ಪ್ರಕೃತ್ಯಾದಿಗಳು ಅಕ್ಷರಶಬ್ದ ಪ್ರತಿಪಾದ್ಯವಾಗಿವೆ. ಇಂತಹ ಪ್ರಕೃತ್ಯಾದಿಗಳು ನಿಕೃಷ್ಟವಾದ್ದರಿಂದಲೇ ಅಕ್ಷರಶಬ್ದ ಪ್ರತಿಪಾದ್ಯವೆಂದು ಒಪ್ಪುತ್ತೇವೆ. ಆದರೂ ಪರತ್ವವನ್ನೂ ಸಹ ನಿಕೃಷ್ಟವಾದ ಪ್ರಕೃತ್ಯಾದಿಗಳಲ್ಲಿಯೇ ಒಪ್ಪುತ್ತೇವೆ. ಇದನ್ನು ಅನಿವಾರ್ಯವಾಗಿ ಕೂಡಿಸಲೇಬೇಕು. ಏನೇ ಆದರೂ ಈಶ್ವರನನ್ನು ಸರ್ವೋತ್ತಮನೆಂದು ಮಾತ್ರ ಒಪ್ಪಲು ಸಾಧ್ಯವಿಲ್ಲವೆಂದು ಪೂರ್ವಪಕ್ಷಿಗಳ ಅಭಿಪ್ರಾಯ . ಇದು ತಪ್ಪು.

ಪ್ರಕಾಶಃ – ತಥಾತ್ವೇ ಪೂರ್ವತ್ರ ನಿರ್ಣೀತಾದೃಶ್ಯತ್ವರೂಪವಿಷ್ಣುಲಿಙ್ಗೇನ ಅಕ್ಷರಸ್ಯ ವಿಷ್ಣುತ್ವಮೇವೋಪೇತ್ಯ ಪರಾಪರತ್ವೋಪಪತ್ತಿರುಚ್ಯತಾಮ್ ।

ಏಕೆಂದರೆ ಹೀಗೆ ಅಪರತ್ವ ಪರತ್ವಗಳನ್ನು ಪ್ರಕೃತಿಯಲ್ಲೇ ಒಪ್ಪುವುದಾದರೆ ಹಿಂದಿನ ಅಧಿಕರಣಗಳಲ್ಲಿ ನಿರ್ಣಯಿಸಲ್ಪಟ್ಟ ಅದೃಶ್ಯತ್ವವೆಂಬ ವಿಷ್ಣುಲಿಂಗದ ಬಲದಿಂದಲೇ ಅಕ್ಷರಶಬ್ದವಾಚ್ಯನು ವಿಷ್ಣುವೇ ಆಗಿದ್ದಾನೆಂದು ನಿರ್ಣಯಿಸೋಣ. ಪರವತ್ಪಾವಧಿತ್ವವನ್ನು ವಿಷ್ಣುವಿನಲ್ಲಿ ಹೇಳಲು ಹೇಗೆ ಸಾಧ್ಯವೆಂದು ಪ್ರಶ್ನಿಸಬಾರದು. ನೀವು ಪರತ್ವವನ್ನು ನಿಕೃಷ್ಟತ್ವವನ್ನು ಪ್ರಕೃತಿಯಂಬ ಒಂದೇ ಪದಾರ್ಥದಲ್ಲಿ ಒಪ್ಪಿದಂತೆ ನಾವೂ ಸಹ ವಿಷ್ಣುವಿನಲ್ಲಿ ಅನಿವಾರ್ಯವಾಗಿ ಪರತ್ವಾವಧಿತ್ವವನ್ನು ಮತ್ತು ಅಕ್ಷರಶಬ್ದ ಪ್ರತಿಪಾದ್ಯತ್ವವನ್ನು ಒಪ್ಪುತ್ತೇವೆ.

ಪ್ರಕಾಶಃ – ನಚ ''ಅಕ್ಷರಾತ್'' ಇತ್ಯಾದಿನಾ ಶ್ರುತೋಪಾದಾನತ್ವಾದಿನಾ ವಿಷ್ಣುನಿರಾಸೇನ ಪ್ರಕೃತ್ಯಾದಿರುಚ್ಯತ ಇತಿ ವಾಚ್ಯಂ,

ಅವಾಂತರ ಆಕ್ಷೇಪ - ಹಾಗಾದರೆ 'ಅಕ್ಷರಾತ್ಪರತಃ ಪರಃ' ಇತ್ಯಾದಿ ವಾಕ್ಯದಲ್ಲಿ ಕೇಳಿಸುತ್ತಿರುವ ನಿಕೃಷ್ಟತ್ವವನ್ನು ತ್ಯಾಗ ಮಾಡೋಣ. ಆಲ್ಲೇ ಕೇಳಿಸುತ್ತಿರುವ ಉಪಾದಾನತ್ವ, ಬ್ರಹ್ಮಶಬ್ದ ಮೊದಲಾದ ಲಿಂಗಗಳಿಂದ ಪ್ರಕೃತ್ಯಾದಿಗಳೇ ಅಕ್ಷರಶಬ್ದವಾಚ್ಯವಾಗಿವೆಯೆಂದು ಸಮರ್ಥಿಸೋಣ. ಈ ಪೂರ್ವಪಕ್ಷಲಿಂಗಗಳಿಂದಲೂ ವಿಷ್ಣುಪಕ್ಷವನ್ನು ನಿರಾಸ ಮಾಡಬಹುದು. ಆದ್ದರಿಂದ ಪ್ರಕೃತ್ಯಾದಿಗಳಿಗೇ ಪರತ್ವಾವಧಿತ್ವಾದಿಗಳು ಬರುತ್ತದೆ. ಇದು ತಪ್ಪು.

ಪ್ರಕಾಶಃ – ಟೀಕಾಯಾಂ ಪರತ್ವಾವಧಿತ್ವಬಾಧಕಬಲೇನ ಪೂರ್ವಪಕ್ಷಪ್ರಾಪಕಾಣಾಂ ನಿರವಕಾಶತ್ವೋಕ್ತೇರಿತಿ ಚೇತ್

ಅವಾಂತರ ಸಮಾಧಾನ - ಹೀಗೆ ನಿಕೃಷ್ಟತ್ವವನ್ನು ಬಿಡುವುದಾದರೆ ಟೀಕೆಯನ್ನೇ ಬಿಟ್ಟಂತಾಗುತ್ತದೆ. ಏಕೆಂದರೆ ಟೀಕೆಯಲ್ಲಿ ಪರತ್ವಾವಧಿತ್ವವೆಂಬ ಪ್ರಬಲವಾದ ಬಾಧಕಯುಕ್ತಿ ಬಲದಿಂದ ಪೂರ್ವಪಕ್ಷಪ್ರಾಪಕ-ಯುಕ್ತಿಗಳಿಗೆ ನಿರವಕಾಶತ್ವವನ್ನು ಸಮರ್ಥಿಸಿದ್ದಾರೆ. ಟೀಕಾ ಮಾತನ್ನೇ ಬಿಟ್ಟಂತಾಗುವುದರಿಂದ ನಿಕೃಷ್ಟತ್ವವನ್ನು ವಿವಕ್ಷೆ ಮಾಡದೇ ಇರಬಾರದು.

ಒಟ್ಟಾರೆ ಪೂರ್ವಪಕ್ಷಿಯು ಅಕ್ಷರಶಬ್ದವಾಚ್ಯತ್ವವನ್ನು ಪ್ರಕೃತ್ಯಾದಿಗಳಲ್ಲಿ ಒಪ್ಪಿದಾಗ ಹಿಂದಿನ ಅಧಿಕರಣದಲ್ಲಿ ನಿರ್ಣಯಿಸಲ್ಪಟ್ಟ ಸಾಕಲ್ಯೇನ ಅವಿದಿತತ್ವ, ಅಪರಿಚ್ಛಿನ್ನವೈಭವತ್ವ, ಸರ್ವೋತ್ತಮತ್ವ ಮೊದಲಾದ ಲಿಂಗಗಳನ್ನೂ ಸಹ ಪ್ರಕೃತ್ಯಾದಿಗಳಲ್ಲಿಯೇ ಒಪ್ಪಬೇಕಾಗುತ್ತದೆ ಹಾಗೇ ಒಪ್ಪಿದಾಗ ಇಲ್ಲಿ ನಿಕೃಷ್ಟತ್ವವನ್ನು ಒಪ್ಪಿ ಅಕ್ಷರಶಬ್ದಪ್ರತಿಪಾದ್ಯತ್ವವನ್ನು ಸಮರ್ಥಿಸಲು ಹೇಗೆ ಸಾಧ್ಯ ? ಎಂದು ಆಕ್ಷೇಪದ ಸಾರಾಂಶ.

प्रकाशः – मैवम्, अदृश्यत्वं चक्षुरगोचरत्वमित्युपेत्य ''अदृश्येऽनात्म्ये'' इत्युक्तादृश्यत्वस्यापि प्रकृत्यादावाशङ्कनात् । पूर्वाक्षेपचन्द्रिका त्वर्थान्तराभिप्राया ।

ಪ್ರಧಾನ ಸಮಾಧಾನ - ಈ ಆಕ್ಷೇಪವು ಸರಿಯಿಲ್ಲ. ಏಕೆಂದರೆ ಅದೃಶ್ಯತ್ವ ಶಬ್ದಕ್ಕೆ ಅಪರಿಚ್ಛಿನ್ನವೈಭವವೆಂದಾಗಲೀ, ಸಾಕಲ್ಯೇನ ತಿಳಿಯಲು ಸಾಧ್ಯವಿಲ್ಲವೆಂದಾಗಲೀ ಹೇಳಬಾರದು. ಕೇವಲ ಚಕ್ಷುರಿಂದ್ರಿಯಕ್ಕೆ ಗೋಚರನಾಗುವುದಿಲ್ಲವೆಂದಷ್ಟೇ ಅರ್ಥವನ್ನು ವಿವಕ್ಷಿಸಬೇಕು. ಪ್ರಕೃತ್ಯಾದಿಗಳು ಅತ್ಯಂತ ಸೂಕ್ಷ್ಮವಾದ್ದರಿಂದ ಚಕ್ಷುರಿಂದ್ರಿಯಕ್ಕೆ ಗೋಚರವಾಗುತ್ತಿಲ್ಲ. ಆದ್ದರಿಂದಲೇ ''ಅದೃಶ್ಯೇಽನಾತ್ಮ್ಯೇ'' ಎಂಬ ಶ್ರುತಿಯಲ್ಲಿ ಹೇಳಲ್ಪಟ್ಟ ಅದೃಶ್ಯತ್ವವನ್ನೂ ಪ್ರಕೃತ್ಯಾದಿಗಳಲ್ಲಿ ಪೂರ್ವಪಕ್ಷಿಯು ಆಶಂಕಿಸಿದ್ದಾನೆ. ಮತ್ತು ಹಿಂದಿನ ಅಧಿಕರಣದಿಂದ ಆಕ್ಷೇಪವನ್ನು ತೋರಿಸುವ ಚಂದ್ರಿಕಾ ವಾಕ್ಯಕ್ಕೂ ಸಹ ಬೇರೆಯಾಗಿಯೇ ಅರ್ಥೈಸಬೇಕು.

प्रकाशः – न चैवमपि ब्रह्मरुद्रयोर्जीवत्वेन ''अचक्षुश्श्रोत्रं तदपाणिपादम्'' इत्युक्तजीवधर्मभूतचक्षुरादिराहित्यं कथं घटताम् येन ''अदृश्येऽनात्म्ये'' इत्यनात्म्यपदोक्तस्य जीवगुणराहित्यस्य टीकोक्त आक्षेप उपपद्येतेति वाच्यं,

ಆಕ್ಷೇಪ - ಬ್ರಹ್ಮ ಹಾಗೂ ರುದ್ರ ಇಬ್ಬರೂ ಸಹ ಜೀವರಾಗಿದ್ದಾರೆ. ಹೀಗಿರುವಾಗ ''ಅಚಕ್ಷುಃಶ್ರೋತ್ರಂ ತದಪಾಣಿಪಾದಂಮ್'' ಎಂಬಲ್ಲಿ ಹೇಳಲ್ಪಟ್ಟ ಜೀವನ ಧರ್ಮವೆನಿಸಿದ ಚಕ್ಷುರಾದಿರಾಹಿತ್ಯವನ್ನು ಹೇಗೆ ಕೂಡಿಸುವುದು? ಏಕೆಂದರೆ, ಬ್ರಹ್ಮ ರುದ್ರಾದಿಗಳು ಜೀವರಾದ ಮೇಲೆ ಚಕ್ಷುರಾದಿಂದ್ರಿಯಗಳು ಇರಬೇಕಲ್ಲವೇ? ಒಂದು ವೇಳೆ ಇದನ್ನು ಕೂಡಿಸುವುದಾದರೆ ಮಾತ್ರ 'ಅದೃಶ್ಯೇಽನಾತ್ಮ್ಯೇ' ಎಂಬಲ್ಲಿ 'ಅನಾತ್ಮ್ಯೇ' ಎಂಬ ಪದದಿಂದ ಹೇಳಲ್ಪಟ್ಟ ಜೀವಗುಣರಾಹಿತ್ಯವು ಟೀಕೆಯಲ್ಲಿ ಹೇಳಲ್ಪಟ್ಟ ಆಕ್ಷೇಪದ ಅಭಿಪ್ರಾಯವಾಗುತ್ತಿತ್ತು. ಆದರೆ ಜೀವಗುಣರಾಹಿತ್ಯವನ್ನು ಆಕ್ಷೇಪದ ಅಭಿಪ್ರಾಯವೆಂದೇ ಹೇಳಲು ಸಾಧ್ಯವಿಲ್ಲವಲ್ಲವೇ?

प्रकाशः – तयोर्जीवत्वमेव नेतीति वा, जीवोत्तमत्वेनेतरजीववैलक्षण्येन वा तदुपपत्तिरित्याशयादिति ।

ಸಮಾಧಾನ - ಇದು ತಪ್ಪು. ಬ್ರಹ್ಮ ಹಾಗೂ ರುದ್ರನಿಗೆ ಜೀವತ್ವವನ್ನೇ ಪೂರ್ವಪಕ್ಷಕಾರನು ಒಪ್ಪುವುದಿಲ್ಲ. ಅಂದರೆ ಪೂರ್ವಪಕ್ಷಕಾರನು ಬ್ರಹ್ಮ ಹಾಗೂ ರುದ್ರಾದಿಗಳನ್ನು ಪರಮಾತ್ಮನೆಂದೇ ಒಪ್ಪುತ್ತಾನೆ. ಅಥವಾ ಅವರು ಜೀವೋತ್ತಮರಾಗಿರುವುದರಿಂದ ಇತರ ಜೀವರುಗಳಿಗಿಂತ ವಿಲಕ್ಷಣರಾಗಿರುತ್ತಾರೆ. ಆದ್ದರಿಂದಲೂ ಚಕ್ಷುರಾದಿರಾಹಿತ್ಯವನ್ನು ಶ್ರುತಿ ಹೇಳುವಂತೆ ಅವರಲ್ಲಿ ಕೂಡಿಸಬಹುದು ಎಂದು ಪೂರ್ವಪಕ್ಷದ ಅಭಿಪ್ರಾಯ.

ಇಲ್ಲಿಗೆ ಪೂರ್ವಪಕ್ಷವು ಮುಗಿಯಿತು.

ಗುರುರಾಜೀಯಮ್ – ।। ॐ ಅದೃಶ್ಯತ್ವಾದಿಗುಣಕೋ ಧರ್ಮೋಕ್ತೇಃ ॐ ।। ಪೂರ್ವಪಕ್ಷಸಿದ್ಧಾನ್ತಯೋಃ ಫಲಫಲಿಭಾವಮಾಹ – ಅನನ್ಯತ್ವ ಇತಿ ।। ಅಕ್ಷರಾಧಿಕರಣನ್ಯಾಯೇನೇತಿ ।। 'ಅಕ್ಷರಮಮ್ಬರಾನ್ತ-ಧೃತೇಃ' ಇತ್ಯಧಿಕರಣನ್ಯಾಯೇನೇತ್ಯರ್ಥಃ । ನನ್ವೇವಂ ಚಿತ್ಪ್ರಕೃತೇರಪ್ಯದೃಶ್ಯತ್ವಮಿತ್ಯಪಿ ನ ಸ್ಯಾತ್ । ತಸ್ಯಾ ಅಪಿ ವಿಶ್ವೋಪಾದನತ್ವಾಸಮ್ಭವಾದಿತ್ಯತ ಆಹ – ಚಿತ್ಪ್ರಕೃತೌ ತ್ವಿತಿ ।। ರೂಢೇರಿತಿ ।। 'ಕೃಶಾನುರೇತಾಸ್ಸರ್ವಜ್ಞಃ' ಇತ್ಯಭಿಧಾನಾದಿತಿ ಭಾವಃ ।। ಸಾಮಾನಾಧಿಕರಣ್ಯೇನೇತಿ ।। ಪರಂ ಯದಕ್ಷರಂ ತಸ್ಮಾದಿತಿ ಸಾಮಾನಾಧಿಕರಣ್ಯೇನೇತ್ಯರ್ಥಃ ।।

ಸಾರ

ಪೂರ್ವಪಕ್ಷ ಹೀಗಿದೆ - ಆನಂದಮಯಾಧಿಕರಣದಲ್ಲಿ 'ಅದೃಶ್ಯೇऽನಾತ್ಮ್ಯೇ' ಎಂದು ತೈತ್ತಿರೀಯ ವಾಕ್ಯವನ್ನು ಉಲ್ಲೇಖಮಾಡಿ ವಿಷ್ಣುವಿನಲ್ಲಿ ಅದೃಶ್ಯತ್ವಗುಣವನ್ನು ಹೇಳಲಾಗಿದೆ. ಮತ್ತು ಹಿಂದಿನ ಅಂತರ್ಯಾಮ್ಯಧಿಕರಣದಲ್ಲಿ "ಸ ಯೋऽತೋऽಶ್ರುತೋಮತೋ" ಇತ್ಯಾದಿ ಏತರೇಯೋಪನಿಷತ್ತಿನ ವಾಕ್ಯದಿಂದ ವಿಷ್ಣುವಿಗೆ ಅದೃಶ್ಯತ್ವ ಗುಣವನ್ನು ನಿರ್ಣಯಿಸಲಾಗಿದೆ. ಆದರೆ ಮಾಂಡೂಕ್ಯೋಪನಿಷತ್ತಿನಲ್ಲಿ ಇದೇ ಅದೃಶ್ಯತ್ವಗುಣವನ್ನು ಅಕ್ಷರತತ್ತ್ವಕ್ಕೆ ಹೇಳಲಾಗಿದೆ. ಈ ಅಕ್ಷರತತ್ವವನ್ನು ವಿಷ್ಣುವೆಂದು ನಿರ್ಣಯಿಸಲಾಗದು. ಏಕೆಂದರೆ 'ಅಕ್ಷರತ್ಸಂಭವತೀಹ ವಿಶ್ವಮ್' ಅಕ್ಷರತತ್ವದಿಂದ ಜಗತ್ತು ಹುಟ್ಟತ್ತು ಎಂದು ಹೇಳಿ. 'ಅಕ್ಷರತ್ಪರತಃ ಪರಃ' ಎಂಬುದಾಗಿ ಅಕ್ಷರತತ್ತ್ವಕ್ಕಿಂತಲೂ ವಿಷ್ಣು ಉತ್ತಮೋತ್ತಮನಾಗಿದ್ದಾನೆಂದು ಶ್ರುತಿ ಹೇಳುತ್ತಿದೆ. ಒಂದು ವೇಳೆ ವಿಷ್ಣುವೇ ಅಕ್ಷರನಾದರೆ ಅವನಿಗಿಂತ ಉತ್ತಮನಾದವನನ್ನು ಹೇಳಬೇಕಾಗುತ್ತದೆ. ಆವಾಗ ವಿಷ್ಣು ಸರ್ವೋತ್ತಮತ್ವವೇ ಭಗ್ನವಾಗುವ ಪ್ರಸಂಗ ಬರುತ್ತದೆ. ಆದ್ದರಿಂದ ಅಕ್ಷರತತ್ತ್ವ ವಿಷ್ಣುವಲ್ಲವೆಂಬುದನ್ನು ಒಪ್ಪಬೇಕು.

ಹಾಗಾದರೆ ಅಕ್ಷರತತ್ವ ಎಂದರೆ ಯಾವುದು ? ಜಡಪ್ರಕೃತಿಯಾಗಬಹುದು. ಶ್ರುತಿಯು 'ತಥಾಕ್ಷರಾತ್ಸಂಭವತೀಹ ವಿಶ್ವಮ್' ಎಂದು ಜಗತ್ತಿಗೆ ಉಪಾದಾನ ಕಾರಣವಾಗಿರುವುದನ್ನು ಅಕ್ಷರ ಎಂದು ಹೇಳುತ್ತಿದೆ. ಜಡಪ್ರಕೃತಿಪಕ್ಷದಲ್ಲಿ ಈ ಉಪಾದಾನಕಾರಣತ್ವವು ಸಮಂಜಸವಾಗುತ್ತದೆ. ಶ್ರುತಿಯಲ್ಲಿ ಕಾರಣತ್ವವನ್ನಷ್ಟೇ ಹೇಳಿರುವುದರಿಂದ ನಿಮಿತ್ತಕಾರಣವೆಂದು ವಿವಕ್ಷಿಸಬಹುದಲ್ಲವೇ? ಎಂದು ಪ್ರಶ್ನಿಸಬಾರದು. ನಿಮಿತ್ತಕಾರಣಕ್ಕಿಂತ ಉಪಾದಾನಕಾರಣವು ಅಂತರಂಗವಾದ್ದರಿಂದ ಬಹಿರಂಗವಾದ ನಿಮಿತ್ತಕಾರಣಯೆಂಬರ್ಥವನ್ನು ಬಡಬೇಕಾಗುತ್ತದೆ.

ಅಥವಾ ಚೇತನಪ್ರಕೃತಿಯನ್ನು ಅಕ್ಷರವೆನ್ನಬಹುದು. ಗೀತೆಯಲ್ಲಿ ಲಕ್ಷ್ಮೀದೇವಿಯನ್ನು ಅಕ್ಷರವೆಂದು ಹೆಸರಿಸಲಾಗಿದೆ. ವಿಶ್ವಕ್ಕೆ ಉಪಾದಾನಕಾರಣವಾದ ಜಡಪ್ರಕೃತಿಗೆ ಇವಳು ಅಭಿಮಾನಿಯಾದ್ದರಿಂದ ಲಕ್ಷ್ಮೀದೇವಿಯನ್ನು ಉಪಾದಾನಕಾರಣವೆಂದು ಹೇಳಬಹುದು.

ಅಥವಾ ಚತುರ್ಮುಖನೂ ಸಹ ಅಕ್ಷರನಾಗಬಹುದು. ಶ್ರುತಿಯಲ್ಲಿ ಬ್ರಹ್ಮ ಎಂಬ ಹೆಸರು ಪ್ರಸ್ತುತವಾಗಿದೆ. ಜಾಯಮಾನತ್ವ ಮೊದಲಾದ ಲಿಂಗಗಳ ಬಲದಿಂದ ಬ್ರಹ್ಮಶಬ್ದವು ಚತುರ್ಮುಖನನ್ನೇ ಪ್ರತಿಪಾದಿಸುತ್ತದೆ ಹೊರತು

ವಿಷ್ಣುವನ್ನಲ್ಲ. ಚತುರ್ಮುಖನು ಜಗತ್ತಿಗೆ ಕಾರಣನೂ ಆಗಿದ್ದಾನೆ. ಆದ್ದರಿಂದ ಅವನೂ ಸಹ ಇಲ್ಲಿ ಅಕ್ಷರನೆಂದು ಪ್ರಸ್ತುತನಾಗಿರಬಹುದು.

ಅಥವಾ ರುದ್ರನಲ್ಲಿ ಪ್ರಸಿದ್ಧವಾದ ಈಶ ಶಬ್ದವು ಈ ಪ್ರಕರಣದಲ್ಲಿ ಕೇಳಿಸುತ್ತಿರುವುದರಿಂದ ರುದ್ರನು ಅದೃಶ್ಯತ್ವಾದಿಗುಣಗಳುಳ್ಳ ಅಕ್ಷರನಾಗಬಹುದು.

ಹೀಗೆ ನಾಲ್ಕು ಬಗೆಯಲ್ಲಿ ಪೂರ್ವಪಕ್ಷ ಮಾಡಬಹುದು. ವಿಚಾರ ಮಾಡಿದರೆ ವಿಷ್ಣುವನ್ನು ಅಕ್ಷರನೆಂದು ಒಪ್ಪಲು ತೊಂದರೆಯೇ ಇದೆ. ಶ್ರುತಿಯಲ್ಲಿ ಯಾವುದು ಅಕ್ಷರತತ್ತ್ವವಾಗಿದೆಯೋ? ಅದು ಅಧಮವೆಂದು ಹೇಳಿದೆ. ವಿಷ್ಣು ಸರ್ವೋತ್ತಮನಾದ್ದರಿಂದ ಅಧಮನಾಗಲು ಸಾಧ್ಯವಿಲ್ಲ. ಪರವಿದ್ಯಾವಿಷಯತ್ವವನ್ನು ಶ್ರುತಿ ಹೇಳುತ್ತಿರುವುದರಿಂದ ವಿಷ್ಣುವೇ ಅಕ್ಷರನಾಗಿದ್ದಾನೆಂದು ಒಪ್ಪಬೇಕಲ್ಲವೇ? ಎಂಬ ಪ್ರಶ್ನೆಗೂ ಸಹ ಅವಕಾಶವಿಲ್ಲ. ಶಾಸ್ತ್ರಯೋನಿತ್ವಾಧಿಕರಣದಲ್ಲಿ ಋಗ್ವೇದಾದಿಗಳನ್ನು ಅಪರವಿದ್ಯೆಯಂದು ಅಂಗೀಕರಿಸಿ ಅಂತಹ ಶಾಸ್ತ್ರಗಳಿಂದಲ್ಲಾ ವಿಷ್ಣು ಪ್ರತಿಪಾದ್ಯನೆಂದು ಸಿದ್ಧಾಂತಿಗಳೇ ಒಪ್ಪಿದ್ದಾರೆ. ಅಪರವಿದ್ಯೆಗೆ ವಿಷಯನಾದ ಮೇಲೆ ಅದಕ್ಕೆ ವಿರುದ್ಧವಾದ ಪರವಿದ್ಯೆಗೆ ವಿಷ್ಣು ವಿಷಯನಾಗಲಾರನು. ಹಾಗಾಗಿ ಬೇರೆ ಜಡಪ್ರಕೃತ್ಯಾದಿಗಳನ್ನೇ ಪರವಿದ್ಯೆಗೆ ವಿಷಯವೆಂದು ಒಪ್ಪಬೇಕಾಗುತ್ತದೆ.

• • • • •

ಮತ ತ್ರಯಗಳಲ್ಲಿ ಪರವಿದ್ಯಾ ವಿಚಾರ

तात्पर्यचन्द्रिका

सिद्धान्तस्तु – परविद्याविषयत्वं तावद्भाष्योक्तश्रुत्यादिभिर्विष्णोरेव । युक्तं च ऋगादिवेद्यस्यापि विष्णोः परविद्याविषयत्वं,

ಅನುವಾದ - ಸಿದ್ಧಾಂತ ಹೀಗಿದೆ - ಪರವಿದ್ಯೆಗೆ ವಿಷಯನಾದವನು ವಿಷ್ಣುವೇ ಆಗಿದ್ದಾನೆಂದು ಭಾಷ್ಯದಲ್ಲಿ ಉದಾಹರಿಸಿದ ಅನೇಕ ಶ್ರುತಿ, ಸ್ಮೃತಿಗಳಿಂದ ಸಿದ್ಧವಾಗಿದೆ. ಮತ್ತು ಋಗ್ವೇದವೇ ಮೊದಲಾದ ವಿದ್ಯೆಗಳಿಂದ ವಿಷ್ಣುವು ವೇದ್ಯನಾಗಿದ್ದರೂ ಅವನು ಪರವಿದ್ಯೆಗೆ ವಿಷಯನಾಗುತ್ತಾನೆಂಬುದು ಯುಕ್ತವೇ ಆಗಿದೆ.

यतः,

प्रवृत्तं च निवृत्तं च यथैकं कर्म कथ्यते ।
उपाधिभेदाद्विद्याऽपि तथैवैका पराऽपरा ।।

ಏಕೆಂದರೆ 'प्रवृत्तं च निवृत्तं च यथैकं कर्म कथ्यते । उपाधिभेदाद्विद्याऽपि तथैवैका पराऽपरा ।।' ಹೇಗೆ ಒಂದೇ ಕರ್ಮವು ಉಪಾಧಿಭೇದದಿಂದ ಪ್ರವೃತ್ತಿಕರ್ಮ ಹಾಗೂ

ಇಲ್ಲಿಗೆ ಪೂರ್ವಪಕ್ಷವು ಮುಗಿಯಿತು.

ಗುರುರಾಜೀಯಮ್ – ।। ॐ ಅದೃಶ್ಯತ್ವಾದಿಗುಣಕೋ ಧರ್ಮೋಕ್ತೇಃ ॐ ।। ಪೂರ್ವಪಕ್ಷಸಿದ್ಧಾನ್ತಯೋಃ ಫಲಫಲಿಭಾವಮಾಹ – ಅನನ್ಯತ್ವ ಇತಿ ।। ಅಕ್ಷರಾಧಿಕರಣನ್ಯಾಯೇನೇತಿ ।। 'ಅಕ್ಷರಮಮ್ಬರಾನ್ತ-ಧೃತೇಃ' ಇತ್ಯಧಿಕರಣನ್ಯಾಯೇನೇತ್ಯರ್ಥಃ । ನನ್ವೇವಂ ಚಿತ್ಪ್ರಕೃತೇರಪ್ಯದೃಶ್ಯತ್ವಮಿತ್ಯಪಿ ನ ಸ್ಯಾತ್ । ತಸ್ಯಾ ಅಪಿ ವಿಶ್ವೋಪಾದನತ್ವಾಸಮ್ಭವಾದಿತ್ಯತ ಆಹ – ಚಿತ್ಪ್ರಕೃತೌ ತ್ವಿತಿ ।। ಊಢೇರಿತಿ ।। 'ಕೃಷ್ಣಾನುರೇತಾಸ್ಸರ್ವಜ್ಞಃ' ಇತ್ಯಭಿಧಾನಾದಿತಿ ಭಾವಃ ।। ಸಾಮಾನಾಧಿಕರಣ್ಯೇನೇತಿ ।। ಪರಂ ಯದಕ್ಷರಂ ತಸ್ಮಾದಿತಿ ಸಾಮಾನಾಧಿಕರಣ್ಯೇನೇತ್ಯರ್ಥಃ ।।

ಸಾರ

ಪೂರ್ವಪಕ್ಷ ಹೀಗಿದೆ - ಆನಂದಮಯಾಧಿಕರಣದಲ್ಲಿ 'ಅದೃಶ್ಯೇಽನಾತ್ಮ್ಯೇ' ಎಂದು ತೈತ್ತಿರೀಯ ವಾಕ್ಯವನ್ನು ಉಲ್ಲೇಖಮಾಡಿ ವಿಷ್ಣುವಿನಲ್ಲಿ ಅದೃಶ್ಯತ್ವಗುಣವನ್ನು ಹೇಳಲಾಗಿದೆ. ಮತ್ತು ಹಿಂದಿನ ಅಂತರ್ಯಾಮ್ಯಧಿಕರಣದಲ್ಲಿ ''ಸ ಯೋಽತೋಽಶ್ರುತೋಮತೋ'' ಇತ್ಯಾದಿ ಏತರೇಯೋಪನಿಷತ್ತಿನ ವಾಕ್ಯದಿಂದ ವಿಷ್ಣುವಿಗೆ ಅದೃಶ್ಯತ್ವ ಗುಣವನ್ನು ನಿರ್ಣಯಿಸಲಾಗಿದೆ. ಆದರೆ ಮಾಂಡೂಕ್ಯೋಪನಿಷತ್ತಿನಲ್ಲಿ ಇದೇ ಅದೃಶ್ಯತ್ವಗುಣವನ್ನು ಅಕ್ಷರತತ್ತ್ವಕ್ಕೆ ಹೇಳಲಾಗಿದೆ. ಈ ಅಕ್ಷರತತ್ವವನ್ನು ವಿಷ್ಣುವೆಂದು ನಿರ್ಣಯಿಸಲಾಗದು. ಏಕೆಂದರೆ 'ಅಕ್ಷರತ್ಸಂಭವತೀಹ ವಿಶ್ವಮ್' ಅಕ್ಷರತತ್ವದಿಂದ ಜಗತ್ತು ಹುಟ್ಟಿತು ಎಂದು ಹೇಳಿ. 'ಅಕ್ಷರತ್ಪರತಃ ಪರಃ' ಎಂಬುದಾಗಿ ಅಕ್ಷರತತ್ತ್ವಕ್ಕಿಂತಲೂ ವಿಷ್ಣು ಉತ್ತಮೋತ್ತಮನಾಗಿದ್ದಾನೆಂದು ಶ್ರುತಿ ಹೇಳುತ್ತಿದೆ. ಒಂದು ವೇಳೆ ವಿಷ್ಣುವೇ ಅಕ್ಷರನಾದರೆ ಅವನಿಗಿಂತ ಉತ್ತಮನಾದವನನ್ನು ಹೇಳಬೇಕಾಗುತ್ತದೆ. ಆಗ ವಿಷ್ಣು ಸರ್ವೋತ್ತಮತ್ವವೇ ಭಗ್ನವಾಗುವ ಪ್ರಸಂಗ ಬರುತ್ತದೆ. ಆದ್ದರಿಂದ ಅಕ್ಷರತತ್ತ್ವ ವಿಷ್ಣುವಲ್ಲವೆಂಬುದನ್ನು ಒಪ್ಪಬೇಕು.

ಹಾಗಾದರೆ ಅಕ್ಷರತತ್ವ ಎಂದರೆ ಯಾವುದು ? ಜಡಪ್ರಕೃತಿಯಾಗಬಹುದು. ಶ್ರುತಿಯು 'ತಥಾಕ್ಷರಾತ್ಸಂಭವತೀಹ ವಿಶ್ವಮ್' ಎಂದು ಜಗತ್ತಿಗೆ ಉಪಾದಾನ ಕಾರಣವಾಗಿರುವುದನ್ನು ಅಕ್ಷರ ಎಂದು ಹೇಳುತ್ತಿದೆ. ಜಡಪ್ರಕೃತಿಪಕ್ಷದಲ್ಲಿ ಈ ಉಪಾದಾನಕಾರಣತ್ವವು ಸಮಂಜಸವಾಗುತ್ತದೆ. ಶ್ರುತಿಯಲ್ಲಿ ಕಾರಣತ್ವವನ್ನಷ್ಟೇ ಹೇಳಿರುವುದರಿಂದ ನಿಮಿತ್ತಕಾರಣವೆಂದು ವಿವಕ್ಷಿಸಬಹುದಲ್ಲವೇ? ಎಂದು ಪ್ರಶ್ನಿಸಬಾರದು. ನಿಮಿತ್ತಕಾರಣಕ್ಕಿಂತ ಉಪಾದಾನಕಾರಣವು ಅಂತರಂಗವಾದ್ದರಿಂದ ಬಹಿರಂಗವಾದ ನಿಮಿತ್ತಕಾರಣಯೆಂಬರ್ಥವನ್ನು ಬಿಡಬೇಕಾಗುತ್ತದೆ.

ಅಥವಾ ಚೇತನಪ್ರಕೃತಿಯನ್ನು ಅಕ್ಷರವೆನ್ನಬಹುದು. ಗೀತೆಯಲ್ಲಿ ಲಕ್ಷ್ಮೀದೇವಿಯನ್ನು ಅಕ್ಷರವೆಂದು ಹೆಸರಿಸಲಾಗಿದೆ. ವಿಶ್ವಕ್ಕೆ ಉಪಾದಾನಕಾರಣವಾದ ಜಡಪ್ರಕೃತಿಗೆ ಇವಳು ಅಭಿಮಾನಿಯಾದ್ದರಿಂದ ಲಕ್ಷ್ಮೀದೇವಿಯನ್ನು ಉಪಾದಾನಕಾರಣವೆಂದು ಹೇಳಬಹುದು.

ಅಥವಾ ಚತುರ್ಮುಖನೂ ಸಹ ಅಕ್ಷರನಾಗಬಹುದು. ಶ್ರುತಿಯಲ್ಲಿ ಬ್ರಹ್ಮ ಎಂಬ ಹೆಸರು ಪ್ರಸ್ತುತವಾಗಿದೆ. ಜಾಯಮಾನತ್ವ ಮೊದಲಾದ ಲಿಂಗಗಳ ಬಲದಿಂದ ಬ್ರಹ್ಮಶಬ್ದವು ಚತುರ್ಮುಖನನ್ನೇ ಪ್ರತಿಪಾದಿಸುತ್ತದೆ ಹೊರತು

ವಿಷ್ಣುವನ್ನಲ್ಲ. ಚತುರ್ಮುಖನು ಜಗತ್ತಿಗೆ ಕಾರಣನೂ ಆಗಿದ್ದಾನೆ. ಆದ್ದರಿಂದ ಅವನೂ ಸಹ ಇಲ್ಲಿ ಅಕ್ಷರನೆಂದು ಪ್ರಸ್ತುತನಾಗಿರಬಹುದು.

ಅಥವಾ ರುದ್ರನಲ್ಲಿ ಪ್ರಸಿದ್ಧವಾದ ಈಶ ಶಬ್ದವು ಈ ಪ್ರಕರಣದಲ್ಲಿ ಕೇಳಿಸುತ್ತಿರುವುದರಿಂದ ರುದ್ರನು ಅದೃಶ್ಯತ್ವಾದಿಗುಣಗಳುಳ್ಳ ಅಕ್ಷರನಾಗಬಹುದು.

ಹೀಗೆ ನಾಲ್ಕು ಬಗೆಯಲ್ಲಿ ಪೂರ್ವಪಕ್ಷ ಮಾಡಬಹುದು. ವಿಚಾರ ಮಾಡಿದರೆ ವಿಷ್ಣುವನ್ನು ಅಕ್ಷರನೆಂದು ಒಪ್ಪಲು ತೊಂದರೆಯೇ ಇದೆ. ಶ್ರುತಿಯಲ್ಲಿ ಯಾವುದು ಅಕ್ಷರತತ್ತ್ವವಾಗಿದೆಯೋ? ಅದು ಅಧಮವೆಂದು ಹೇಳಿದೆ. ವಿಷ್ಣು ಸರ್ವೋತ್ತಮನಾದ್ದರಿಂದ ಅಧಮನಾಗಲು ಸಾಧ್ಯವಿಲ್ಲ. ಪರವಿದ್ಯಾವಿಷಯತ್ವವನ್ನು ಶ್ರುತಿ ಹೇಳುತ್ತಿರುವುದರಿಂದ ವಿಷ್ಣುವೇ ಅಕ್ಷರನಾಗಿದ್ದಾನೆಂದು ಒಪ್ಪಬೇಕಲ್ಲವೇ? ಎಂಬ ಪ್ರಶ್ನೆಗೂ ಸಹ ಅವಕಾಶವಿಲ್ಲ. ಶಾಸ್ತ್ರಯೋನಿತ್ವಾಧಿಕರಣದಲ್ಲಿ ಋಗ್ವೇದಾದಿಗಳನ್ನು ಅಪರವಿದ್ಯೆಯೆಂದು ಅಂಗೀಕರಿಸಿ ಅಂತಹ ಶಾಸ್ತ್ರಗಳಿಂದಲ್ಲಾ ವಿಷ್ಣು ಪ್ರತಿಪಾದ್ಯನೆಂದು ಸಿದ್ಧಾಂತಿಗಳೇ ಒಪ್ಪಿದ್ದಾರೆ. ಅಪರವಿದ್ಯೆಗೆ ವಿಷಯನಾದ ಮೇಲೆ ಅದಕ್ಕೆ ವಿರುದ್ಧವಾದ ಪರವಿದ್ಯೆಗೆ ವಿಷ್ಣು ವಿಷಯನಾಗಲಾರನು. ಹಾಗಾಗಿ ಬೇರೆ ಜಡಪ್ರಕೃತ್ಯಾದಿಗಳನ್ನೇ ಪರವಿದ್ಯೆಗೆ ವಿಷಯವೆಂದು ಒಪ್ಪಬೇಕಾಗುತ್ತದೆ.



• • • • •

ಮತ ತ್ರಯಗಳಲ್ಲಿ ಪರವಿದ್ಯಾ ವಿಚಾರ

ತಾತ್ಪರ್ಯಚಂದ್ರಿಕಾ

ಸಿದ್ಧಾನ್ತಸ್ತು – ಪರವಿದ್ಯಾವಿಷಯತ್ವಂ ತಾವದ್ಭಾಷ್ಯೋಕ್ತಶ್ರುತ್ಯಾದಿಭಿರ್ವಿಷ್ಣೋರೇವ । ಯುಕ್ತಂ ಚ ಋಗಾದಿವೇದ್ಯಸ್ಯಾಪಿ ವಿಷ್ಣೋಃ ಪರವಿದ್ಯಾವಿಷಯತ್ವಂ,

ಅನುವಾದ - ಸಿದ್ಧಾಂತ ಹೀಗಿದೆ - ಪರವಿದ್ಯೆಗೆ ವಿಷಯನಾದವನು ವಿಷ್ಣುವೇ ಆಗಿದ್ದಾನೆಂದು ಭಾಷ್ಯದಲ್ಲಿ ಉದಾಹರಿಸಿದ ಅನೇಕ ಶ್ರುತಿ, ಸ್ಮೃತಿಗಳಿಂದ ಸಿದ್ಧವಾಗಿದೆ. ಮತ್ತು ಋಗ್ವೇದವೇ ಮೊದಲಾದ ವಿದ್ಯೆಗಳಿಂದ ವಿಷ್ಣುವು ವೇದ್ಯನಾಗಿದ್ದರೂ ಅವನು ಪರವಿದ್ಯೆಗೆ ವಿಷಯನಾಗುತ್ತಾನೆಂಬುದು ಯುಕ್ತವೇ ಆಗಿದೆ.

ಯತಃ,

ಪ್ರವೃತ್ತಂ ಚ ನಿವೃತ್ತಂ ಚ ಯಥೈಕಂ ಕರ್ಮ ಕಥ್ಯತೇ ।
ತಥಾಧಿಭೇದಾದ್ವಿದ್ಯಾऽಪಿ ತಥೈವೈಕಾ ಪರಾऽಪರಾ ।।

ಏಕೆಂದರೆ 'ಪ್ರವೃತ್ತಿಂ ಚ ನಿವೃತ್ತಂ ಚ ಯಥೈಕಂ ಕರ್ಮ ಕಥ್ಯತೇ । ಉಪಾಧಿಭೇದಾದ್ವಿದ್ಯಾऽಪಿ ತಥೈವೈಕಾ ಪರಾऽಪರಾ ।।' ಹೇಗೆ ಒಂದೇ ಕರ್ಮವು ಉಪಾಧಿಭೇದದಿಂದ ಪ್ರವೃತ್ತಿಕರ್ಮ ಹಾಗೂ

ನಿವೃತ್ತಕರ್ಮವೆಂಬ ಪ್ರಭೇದವನ್ನು ಹೊಂದಿದೆಯೋ, ಆದೇ ರೀತಿಯಾಗಿ ಒಂದೇ ವಿದ್ಯೆಯು ಉಪಾಧಿ ಭೇದದಿಂದ ಪರವಿದ್ಯೆ ಹಾಗೂ ಅಪರವಿದ್ಯೆಯನಿಸುತ್ತದೆ.

ಯಥೈಕಮೇವ ಕರ್ಮ ನಿಷ್ಕಾಮಜ್ಞಾನಪೂರ್ವಕತ್ವೋಪಾಧಿನಾ ನಿವೃತ್ತಂ, ಸಕಾಮತ್ವಾಯುಪಾಧಿನಾ ಚ ಪ್ರವೃತ್ತಮ್,

'ನಿಷ್ಕಾಮಂ ಜ್ಞಾನಪೂರ್ವಂ ಚ ನಿವೃತ್ತಮಿತಿ ಚೋಚ್ಯತೇ ।'

ಇತ್ಯಾದಿಸ್ಮೃತೇಃ, ಯಥಾ ಚೈಕಮೇವಾನ್ನಮುಪಾಧಿಭೇದಾತ್ ಪಥ್ಯಮಪಥ್ಯಂ ಚ, ತಥಾ ಋಗಾದಿರೂಪೈಕೈವ ವಿದ್ಯಾ ಸನ್ನ್ಯಾಯೈಃ ಪ್ರಮಿತಬ್ರಹ್ಮವಿಷಯಕಶಕ್ತಿತಾತ್ಪರ್ಯೋಪಾಧಿನಾ ಪರಾ, ಮೋಕ್ಷಸಾಧನಪ್ರಮಾಹೇತುತ್ವಾತ್ ಅನ್ಯಥಾ ತ್ವಪರಾ, ತದಹೇತುತ್ವಾತ್ ।

ಯಾವರೀತಿಯಾಗಿ ಒಂದೇ ಕರ್ಮವು 'ನಿಷ್ಕಾಮಜ್ಞಾನಪೂರ್ವಕತ್ವ' ಎಂಬ ಉಪಾಧಿಯಿಂದ ನಿವೃತ್ತಕರ್ಮವೆಂದೂ ಸಕಾಮಜ್ಞಾನಪೂರ್ವಕತ್ವವೆಂಬ ಉಪಾಧಿಯಿಂದ ಪ್ರವೃತ್ತಕರ್ಮವೆಂದೂ 'ನಿಷ್ಕಾಮಂ ಜ್ಞಾನಪೂರ್ವಂ ಚ ನಿವೃತ್ತಮಿತಿ ಚೋಚ್ಯತೇ' ಇತ್ಯಾದಿ ಸ್ಮೃತಿಯಿಂದ ಕರೆಸಿಕೊಳ್ಳುತ್ತದೋ, ಅಥವಾ ಯಾವರೀತಿಯಾಗಿ ಒಂದೇ ಅನ್ನವು ಬೇರೆ ಬೇರೆ ಉಪಾಧಿಗಳಿಂದ ಪಥ್ಯವೂ ಅಪಥ್ಯವೂ ಆಗುತ್ತದೋ, (ಆರೋಗ್ಯಕ್ಕೆ ಹಿತಕರವಾದ ಪದಾರ್ಥಗಳನ್ನು ಅನ್ನದ ಜೊತೆಗೆ ಸೇರಿಸಿ ತಿಂದಾಗ ಅನ್ನವು ಪಥ್ಯವಾಗುತ್ತದೆ. ಆರೋಗ್ಯಕ್ಕೆ ಅಹಿತವಾದ ಪದಾರ್ಥಗಳನ್ನು ಅನ್ನದ ಜೊತೆಗೆ ಸೇರಿಸಿ ತಿಂದಾಗ ಆ ಅನ್ನವು ಅಪಥ್ಯವಾಗುತ್ತದೆ.) ಆದೇ ರೀತಿಯಾಗಿ ಋಗ್ವೇದವೇ ಮೊದಲಾದ ಒಂದೇ ವಿದ್ಯೆಯು ಸನ್ನ್ಯಾಯಗಳಿಂದ ಪ್ರಮಿತವಾದ ಬ್ರಹ್ಮವಿಷಯಕವಾದ ಶಕ್ತಿತಾತ್ಪರ್ಯವೆಂಬ ಉಪಾಧಿಯಿಂದ ಪರವಿದ್ಯೆಯನಿಸುತ್ತದೆ. ಏಕೆಂದರೆ ಮೋಕ್ಷಕ್ಕೆಸಾಧನವಾದ ಯಥಾರ್ಥಜ್ಞಾನಕ್ಕೆ ಕಾರಣವಾಗಿರುವುದರಿಂದ. ಯಾವಾಗ ಋಗ್ವೇದಾದಿಗಳು ಸನ್ನ್ಯಾಯಗಳಿಗೆ ವಿಷಯವಾಗುವುದಿಲ್ಲವೋ, ಆವಾಗ ಅವೇ ಅಪರವಿದ್ಯೆಯೆನಿಸುತ್ತವೆ. ಮೋಕ್ಷಕ್ಕೆ ಸಾಧನವಾದ ಯಥಾರ್ಥಜ್ಞಾನಕ್ಕೆ ಕಾರಣವಾಗದ್ದರಿಂದ.

ತದುಕ್ತಮ್ –

'ಋಗಾದ್ಯಾ ಅಪರಾ ವಿದ್ಯಾ ಯದಾ ವಿಷ್ಣೋರ್ನ ವಾಚಕಾಃ ।
ತಾ ಏವ ಪರಮಾ ವಿದ್ಯಾ ಯದಾ ವಿಷ್ಣೋಸ್ತು ವಾಚಕಾಃ ।।' ಇತಿ ।

ಇದನ್ನೇ ಅಥರ್ವಣೋಪನಿಷದ್ ಭಾಷ್ಯದಲ್ಲಿ ಹೀಗೆ ಹೇಳಿದ್ದಾರೆ -

'ಋಗಾದ್ಯಾ ಅಪರಾ ವಿದ್ಯಾ ಯದಾ ವಿಷ್ಣೋರ್ನ ವಾಚಕಾಃ।
ತಾ ಏವ ಪರಮಾ ವಿದ್ಯಾ ವಿಷ್ಣೋಸ್ತು ವಾಚಕಾಃ।।'

ಪರಿಪೂರ್ಣಚಂದ್ರಿಕಾ

ಋಗ್ವೇದಾದಿಗಳು ಯಾವಾಗ ವಿಷ್ಣುವನ್ನು ಪ್ರತಿಪಾದಿಸುವುದಿಲ್ಲವೋ, ಆವಾಗ ಅಪರವಿದ್ಯೆಯನಿಸುತ್ತದೆ. ಯಾವಾಗ ವಿಷ್ಣುವನ್ನು ಪ್ರತಿಪಾದಿಸುತ್ತದೋ, ಆವಾಗಲೇ ಪರವಿದ್ಯೆಯೆನಿಸುತ್ತದೆ ಎಂಬುದಾಗಿ ಜಿಜ್ಞಾಸಾಧಿಕರಣ ಅನುವ್ಯಾಖ್ಯಾನ ಟೀಕೆಯಲ್ಲಿಯೂ ಇದರ ಬಗ್ಗೆ ಹೆಚ್ಚಿನ ವಿಚಾರ ಮಾಡಲಾಗಿದೆ.

यत्त्वन्यैरुक्तं परशब्द ऋगादिविशेषरूपोपनिषत्परः, तत्सन्निधानाचापरशब्दो गोबलीवर्दन्यायेनोपनिषदितरऋगादिपर इति,

ಆದ್ವೈತಿಗಳು ಪರಾಪರ ವಿದ್ಯೆಯ ಬಗ್ಗೆ ಹೀಗೆ ಹೇಳುತ್ತಾರೆ - ಋಗ್ವೇದಾದಿಗಳ ಏಲ ಭಾಗವೆನಿಸಿದ ಉಪನಿಷತ್ತುಗಳು ಪರವಿದ್ಯೆಯನಿಸುತ್ತದೆ. ಆವುಗಳ ಸನ್ನಿಧಾನದಿಂದ ಗೋಬಲೀವರ್ದನ್ಯಾಯದಿಂದ ಉಪನಿಷತ್ತನ್ನು ಬಿಟ್ಟು ಉಳಿದ ಋಗ್ವೇದಾದಿಗಳು ಆಂದರೆ ಮಂತ್ರಭಾಗವು ಅಪರವಿದ್ಯೆಯನಿಸುತ್ತದೆ. ಗೋಬಲೀವರ್ದನ್ಯಾಯದಲ್ಲಿ ಬಲಿವರ್ದ ಶಬ್ದವಿರುವುದರಿಂದ ಗೋ ಶಬ್ದಕ್ಕೆ ಕೇವಲ ಹಸುವೆಂದು ಅರ್ಥೈಸುವಂತೆ ಪರಶಬ್ದವು ಪ್ರತ್ಯೇಕವಾಗಿರುವುದರಿಂದ ಅಪರಶಬ್ದದಿಂದ ಉಪನಿಷತ್ತುಗಳನ್ನು ಬಿಟ್ಟು ಕೇವಲ ಋಗ್ವೇದಾದಿಗಳನ್ನು ವಿವಕ್ಷಿಸಬೇಕು.

तन्न, ''सर्वे वेदा यत्पदमामनन्ति'' ''वेदैश्च सर्वैरहमेव वेद्यः'' इत्यादिश्रुतिस्मृतिर्ब्रह्मणः सर्ववेदवेद्यत्वात् ।

ಇದು ತಪ್ಪು. ''ಸರ್ವೇ ವೇದಾ ಯತ್ಪದಮಾಮನಂತಿ'' ಇವೇ ಮೊದಲಾದ ಶ್ರುತಿಗಳು ಹಾಗೂ ''ವೇದೈಶ್ಚ ಸರ್ವೈರಹಮೇವ ವೇದ್ಯಃ'' ಮೊದಲಾದ ಸ್ಮೃತಿಗಳು ಬ್ರಹ್ಮನು ಸಕಲವೇದಗಳಿಂದ ವೇದ್ಯನಾಗಿದ್ದಾನೆಂದು ಪ್ರತಿಪಾದಿಸುತ್ತಿವೆ.

उपनिषत्स्वपि ज्ञेयशुद्धब्रह्माविषयाणाम् उपासनादिवाक्यानां बहूनां, मन्त्रेष्वपि ज्योतिरधिरणोक्तन्यायेन ब्रह्मपरभागस्य च दर्शनाच ।

ಉಪನಿಷತ್ತುಗಳು ಪರವಿದ್ಯೆಯಂದು ಹೇಳಿದ್ದೇ ತಪ್ಪು. ಏಕೆಂದರೆ ಉಪನಿಷತ್ತಿನಲ್ಲಿ ಜ್ಞೇಯನಾದ ಶುದ್ಧಬ್ರಹ್ಮನನ್ನು ವಿಷಯೀಕರಿಸದ ಉಪಾಸನಾದಿಗಳನ್ನು ಹೇಳುವ ಅನೇಕ ವಾಕ್ಯಗಳು ಇರುತ್ತವೆ. ಶುದ್ಧಬ್ರಹ್ಮನನ್ನಷ್ಟೇ ಪ್ರತಿಪಾದಿಸುತ್ತಿದ್ದರೆ ಪರವಿದ್ಯೆಯೆಂದು ಹೇಳಬಹುದಿತ್ತು. ಮತ್ತು ಮಂತ್ರಭಾಗದಲ್ಲಿಯೂ ಜ್ಯೋತಿರಧಿಕರಣದಲ್ಲಿ ಹೇಳಲ್ಪಟ್ಟ ನ್ಯಾಯದಿಂದ ಅನೇಕ ಬ್ರಹ್ಮಪ್ರತಿಪಾದಕವಾದ ಭಾಗಗಳಿವೆಯೆಂದು ಕಾಣಿಸುತ್ತಿದೆ.

'रूपं द्विविधं नीलमनीलं च' इतिवत्, ''द्वे विद्ये परा चैवापरा च'' इत्यत्र परापरशब्दयोर्विरुद्धार्थत्वप्रतीतेश्च । नहि नीलपदमनीलविशेषपरं भवति ।

'ರೂಪವು ಎರಡುವಿಧವಾಗಿದೆ. ನೀಲ ಮತ್ತು ಅನೀಲ ಎಂದು' ವಿರುದ್ಧಾರ್ಥ ಪ್ರತಿಪಾದಕ ವಾಕ್ಯದಲ್ಲಿ ಹೇಳಿದಂತೆ 'ಎರಡು ವಿದ್ಯೆಗಳನ್ನು ತಿಳಿಯಬೇಕು. ಪರವಿದ್ಯೆ ಅಪರವಿದ್ಯೆಯೆಂದು' ಎಂಬ ವಾಕ್ಯದಲ್ಲಿಯೂ ಪರಾಪರಶಬ್ದಗಳಿಗೆ ಪರಸ್ಪರವಾಗಿ ವಿರುದ್ಧಾರ್ಥವೇ ಪ್ರತೀತವಾಗುತ್ತಿದೆ. ನೀಲ ಮತ್ತು ಅನೀಲವೆಂದು ಹೇಳಿದಾಗ ನೀಲಪದಕ್ಕೆ ಅನೀಲದ ವಿಶೇಷರೂಪವನ್ನು ಹೇಳುತ್ತಿದೆಂದು ಯಾರೂ ವ್ಯಾಖ್ಯಾನಿಸುವುದಿಲ್ಲ. ಆದ್ದರಿಂದ ಪರವಿದ್ಯೆಯ ವಿಶೇಷ ಅಪರವಿದ್ಯೆ ಎಂದು ಹೇಳಲಾಗಿದು.

यत्तु कैश्चिदुक्तं – परोक्षज्ञानमपरविद्या, भक्तिरूपमपरोक्षज्ञानं तु परविद्येति,

ರಾಮಾನುಜರು ಹೀಗೆ ಹೇಳುತ್ತಾರೆ - ಪರೋಕ್ಷಜ್ಞಾನವು ಅಪರವಿದ್ಯೆ, ಭಕ್ತಿರೂಪವಾದ ಅಪರೋಕ್ಷಜ್ಞಾನವು ಪರವಿದ್ಯೆಯಂದು.

तन्न, श्रुतौ ऋगादीनामपरविद्यात्वेनोक्तत्वात्, ''यया तदक्षरमधिगम्यते'' इति,

'येनाक्षरं पुरुषं वेद सत्यं प्रोवाच तां तत्त्वतो ब्रह्मविद्याम् ।'

इति च ज्ञानकरणस्यैव परविद्यात्वेनोक्तत्वाच्चेह विद्याशब्दस्य ज्ञानार्थत्वायोगात् ।

ಇದು ತಪ್ಪು. ಶ್ರುತಿಯಲ್ಲಿ ಋಗಾದಿಗಳನ್ನು ಅಪರವಿದ್ಯೆಯೆಂದು ಹೇಳಿದ್ದಾರೆ. ''ಯಯಾ ತದಕ್ಷರಮಧಿಗಮ್ಯತೇ'' ಎಂದೂ, ಮತ್ತು ''ಯೇನಾಕ್ಷರಂ ಪುರುಷಂ ವೇದ ಸತ್ಯಂ ಪ್ರೋವಾಚ ತಾಂ ತತ್ತ್ವತೋ ಬ್ರಹ್ಮವಿದ್ಯಾಮ್'' ಎಂಬುದಾಗಿಯೂ ಜ್ಞಾನಕ್ಕೆ ಕರಣವಾದದ್ದಷ್ಟೇ ಪರವಿದ್ಯೆಯೆಂದು ಹೇಳಿರುವುದರಿಂದ ಪ್ರಕೃತ ವಿದ್ಯಾಶಬ್ದಕ್ಕೆ ಜ್ಞಾನವೆಂಬರ್ಥವನ್ನು ಹೇಳುವುದು ತಪ್ಪಾಗುತ್ತದೆ.

नच 'अधिगम्यते' इत्यस्य प्राप्यत इत्यर्थः, अधिपूर्वस्य गमेर्ज्ञाने प्रसिद्धेः ।

'ಅಧಿಗಮ್ಯತೇ' ಎಂಬ ಶಬ್ದಕ್ಕೆ ಹೊಂದಲ್ಪಡುತ್ತಾನೆ ಎಂದರ್ಥವೂ ಸರಿಯಲ್ಲ. ಏಕೆಂದರೆ ಅಧಿಪೂರ್ವಕವಾದ ಗಮು ಧಾತುವಿಗೆ ಜ್ಞಾನವೆಂಬರ್ಥವು ಪ್ರಸಿದ್ಧವಾಗಿದೆ.

यद्यपि ''व्रजयजोर्भावे क्यप्'' इत्यनेन सूत्रेण भावे क्यप्प्रत्ययो विहितः । तथाऽपि ''सञ्ज्ञायां समजनिषदनिपतमनविद'' इति सूत्रे वृत्तौ 'भाव इति न स्वर्यते' इत्युक्तत्वात्, समजन्ति तस्यामिति समज्या, निषीदन्ति तस्यामिति निषद्येति समज्यादिशब्दानां भावार्थत्वाभावस्योक्तत्वाच्च क्यबन्तोऽपि विद्याशब्दो वेदनकरणेऽपि मुख्य एव ।

ವಸ್ತುತಃ ವಿದ್ಯಾಶಬ್ದವನ್ನು ಜ್ಞಾನವೆಂಬರ್ಥದಲ್ಲಿಯೇ ಉಪಯೋಗಿಸಬೇಕು. ಏಕೆಂದರೆ ''ವ್ರಜಯಜೋರ್ಭಾವೇ ಕ್ಯಪ್'' ಎಂಬ ಸೂತ್ರದಿಂದ ಭಾವಾರ್ಥದಲ್ಲಿ ಕ್ಯಪ್‌ಪ್ರತ್ಯಯವು ವಿಧಾನ ಮಾಡಲ್ಪಟ್ಟಿದೆ. ಆದ್ದರಿಂದ ವಿದ್‌ಧಾತುವಿಗೆ ಕ್ಯಪ್ ಪ್ರತ್ಯಯ ಬಂದು ವಿದ್ಯಾ ಎಂಬ ಶಬ್ದವು ಭಾವಾರ್ಥದಲ್ಲಿ ನಿಷ್ಪನ್ನವಾಗಿದೆ. ಆದರೂ ಸಹ 'ಸಂಜ್ಞಾಯಾಂಸಮಜನಿಷದ' ಎಂಬ ಸೂತ್ರದಲ್ಲಿ 'ಭಾವ ಇತಿ ನ ಸ್ವರ್ಯತೇ' ಭಾವ ಎಂಬುದು ಅನುವೃತ್ತವಾಗುವುದಿಲ್ಲ ಎಂದು ಹೇಳಿರುವುದರಿಂದ 'ಸಮಜಂತಿ ತಸ್ಮಾಮಿತಿ ಸಮಜ್ಯಾ,' 'ನಿಷೀದಂತಿ ತಸ್ಮಾಮಿತಿ ನಿಷದ್ಯಾ' ಎಂಬುದಾಗಿ ಸಮಜ್ಯಾದಿ ಶಬ್ದಗಳಿಗೆ ಭಾವಾರ್ಥತ್ವವು ಇರುವುದಿಲ್ಲವೆಂದು ಹೇಳಿದ್ದರಿಂದಲೂ ಕೃಬಂತವಾದರೂ ಸಹ (ಭಾವಾರ್ಥಕವಾದರೂ) ವಿದ್ಯಾಶಬ್ದ ಅದನ್ನು ಜ್ಞಾನಕರಣ ಎಂಬ ಮುಖ್ಯವಾದ ಅರ್ಥದಲ್ಲಿಯೂ ಹೇಳಬಹುದು.

'आगमोत्थं विवेकाच्च द्विधा ज्ञानं तथोच्यते ।।'

इति पराशरवचनं तु आगमोत्थत्वविवेकोत्थत्वाभ्यां ज्ञानस्य द्वैविध्यमाह, न त्वत्रत्यपरापरशब्दयोः परोक्षापरोक्षज्ञानार्थताम् । ऊर्णनाभ्यादिरपि निमित्तमेवेत्यन्यत्रोक्तम् ।

''स ब्रह्मविद्याम्'' इत्यत्र च ब्रह्मशब्दो न चतुर्मुखपरः, ''सर्वविद्याप्रतिष्ठां येनाक्षरं पुरुषं वेद सत्यम्'' इति परविद्याविषयत्वादिब्रह्मलिङ्गात् ।

'ಆಗಮೋತ್ಥಂ ವಿವೇಕಾಚ್ಚ ದ್ವಿಧಾ ಜ್ಞಾನಂ ತಥೋಚ್ಯತೇ' ಎಂಬ ಪರಾಶರರ ಮಾತಿನಲ್ಲಿ ಆಗಮದಿಂದ ಹುಟ್ಟಿದ ಜ್ಞಾನ ಹಾಗೂ ವಿವೇಕದಿಂದ ಹುಟ್ಟಿದ ಜ್ಞಾನವೆಂದು ದ್ವೈವಿಧ್ಯವನ್ನು ಹೇಳಿದ್ದಾರೆ ಹೊರತು, ಇಲ್ಲಿರುವ ಪರಾಪರಶಬ್ದಗಳಿಗೆ ಪರೋಕ್ಷಜ್ಞಾನ, ಅಪರೋಕ್ಷಜ್ಞಾನವೆಂಬರ್ಥವನ್ನು ಹೇಳಿರುವುದಿಲ್ಲ.

ಊರ್ಣನಾಭ್ಯಾದಿ ದೃಷ್ಟಾಂತಗಳೂ ಸಹ ಉಪಾದಾನಕಾರಣಕ್ಕೆ ಉದಾಹರಣೆಯಾಗುವುದಿಲ್ಲ. ಊರ್ಣನಾಭಿಯು ತಾನು ರಚಿಸಿದ ಬಲೆಗೆ ನಿಮಿತ್ತ ಕಾರಣವೇ ಆಗಿದೆಯೆಂಬ ವಿಚಾರವನ್ನು ಪ್ರಕೃತ್ಯಧಿಕರಣದ ನ್ಯಾಯಸುಧಾ ಗ್ರಂಥದಲ್ಲಿ ಸ್ಪಷ್ಟಪಡಿಸಲಾಗಿದೆ.

'ಸ ಬ್ರಹ್ಮವಿದ್ಯಾಮ್' ಎಂಬಲ್ಲಿರುವ ಬ್ರಹ್ಮಶಬ್ದವು ಚತುರ್ಮುಖಪರವಲ್ಲ. ಏಕೆಂದರೆ ''ಸರ್ವವಿದ್ಯಾಪ್ರತಿಷ್ಠಾಂ ಯೇನಾಕ್ಷರಂ ಪುರುಷಂ ವೇದ ಸತ್ಯಮ್'' ಎಂಬುದಾಗಿ ಪರವಿದ್ಯಾವಿಷಯತ್ವವೇ ಮೊದಲಾದ ವಿಷ್ಣುವಿನ ಲಿಂಗಗಳು ಕೇಳಿಸುತ್ತಿರುವುದರಿಂದ.

प्रकाशः –

''धर्मोक्तेः'' इति सूत्रोपात्तनिरवकाशपरविद्याविष्यत्वरूपभगवल्लिङ्गादिनाऽन्यप्रापकाणां सावकाशत्वात्, ''अक्षरात्परतः'' इत्युक्ताक्षरस्यान्यत्वेन बाधकाभावाच्च विष्णुरेवादृश्यत्वादिगुणकं अक्षरमिति भावेन, लिङ्गनिरवकाशत्वं तावत् ''परविद्याविषयत्वस्य श्रुतिस्मृतिभिर्विष्णुधर्मत्वेनावगतत्वात्'' इति टीकोक्तं व्यनक्ति – **परविद्येति ।**

ವಿವರಣೆ - 'अदृश्यत्वादिगुणकोधर्मोक्तेः' ಎಂಬ ಸೂತ್ರದಲ್ಲಿ 'धर्मोक्तेः' ಎಂಬ ಸೂತ್ರಭಾಗದಿಂದ ನಿರವಕಾಶರೂಪವಾದ ಪರವಿದ್ಯಾವಿಷಯತ್ವವೆಂಬ ಪರಮಾತ್ಮನ ಲಿಂಗವನ್ನು ಹೇಳಿರುತ್ತಾರೆ. ಈ ಲಿಂಗದಿಂದ ಪೂರ್ವಪಕ್ಷ ಪ್ರಾಪಕವಾದ ಲಿಂಗಗಳೆಲ್ಲವೂ ಸಾವಕಾಶವಾಗಿವೆಯೆಂದು ತಿಳಿಯುತ್ತದೆ. ಮತ್ತು 'अक्षरात्परतः परः' ಎಂಬಲ್ಲಿ ಹೇಳಲ್ಪಟ್ಟ ಅಕ್ಷರವು ಬೇರೆಯಾಗಿರುವುದರಿಂದ ಬಾಧಕವೂ ಸಹ ಇರುವುದಿಲ್ಲ. ಆದ್ದರಿಂದ ವಿಷ್ಣುವೇ ಅದೃಶ್ಯತ್ವಾದಿಗುಣಗಳುಳ್ಳ ಅಕ್ಷರನಾಗಿದ್ದಾನೆ. ಈ ಅಭಿಪ್ರಾಯದಿಂದ ಸೂತ್ರದಲ್ಲಿ ಹೇಳಲ್ಪಟ್ಟ ಲಿಂಗವು ನಿರವಕಾಶವಾಗಿದೆಯೆಂಬುದನ್ನು ''परविद्याविषयत्वस्य श्रुतिस्मृतिभिर्विष्णुधर्मत्वेनावगतत्वात्'' ಎಂಬ ಟೀಕೆಯಿಂದ ಸ್ಪಷ್ಟಪಡಿಸಿದ್ದಾರೆ. ಅದನ್ನೇ 'परविद्या' ಇತ್ಯಾದಿ ಗ್ರಂಥದಿಂದ ಇಲ್ಲಿ ವಿವರಿಸುತ್ತಾರೆ.

प्रकाशः – ''अथ परा यया तदक्षरमधिगम्यते'' इत्युक्तमित्यर्थः । मोक्षसाधनविद्याया एव परविद्यात्वात्, तद्विषयत्वस्य च ''तमेवं विद्वानमृत इह भवति''

'तत्कर्म हरितोषं यत्सा विद्या तन्मतिर्यया ।'

''द्वे विद्ये वेदितव्ये परा चैवापरा च । तत्र ये वेदा यान्यङ्गानि यानि प्रत्यङ्गानि सा परा । अथपरा यया स हरिर्वेदितव्यो योऽसावदृश्यो निर्गुणः परः परमात्मा'' इत्यादिभिर्विष्णोरेव सिद्धमित्यर्थः ।

ಪರವಿದ್ಯೆಯೆಂದರೆ ''अथ परा यया तदक्षरमधिगम्यते'' ಎಂಬ ಶ್ರುತಿಯಲ್ಲಿ ಹೇಳಲ್ಪಟ್ಟ ವಿದ್ಯೆಯೆಂದರ್ಥ. ಯಾವ ವಿದ್ಯೆಯು ಮೋಕ್ಷಕ್ಕೆ ಸಾಧನವಾಗಿದೆಯೋ, ಅದೇ ಪರವಿದ್ಯೆಯೆನಿಸುತ್ತದೆ. ಈ ಪರವಿದ್ಯೆಗೆ ವಿಷ್ಣುವೇ ವಿಷಯನಾಗಿದ್ದಾನೆಂದು ಪ್ರಮಾಣಗಳಿಂದ ಸಿದ್ಧವಾಗಿವೆ - ''तमेवं विद्वानमृत इह भवति'' ''तत्कर्म हरितोषं यत्सा विद्या तन्मतिर्यया ।'' ''द्वे विद्ये वेदितव्ये परा चैवापरा च । तत्र ये वेदा यान्यङ्गानि यानि प्रत्यङ्गानि सा परा । अथा परा

ಯಯಾ ಸ ಹರಿರ್ವೇದಿತವ್ಯೋ ಯೋಽಸಾವದೃಶ್ಯೋ ನಿರ್ಗುಣಃ ಪರಃ ಪರಮಾತ್ಮಾ'' ಈ ಎಲ್ಲಾ ವಾಕ್ಯಗಳಿಂದ ಪರವಿದ್ಯೆಗೆ ವಿಷ್ಣುವೇ ವಿಷಯನಾಗಿದ್ದಾನೆಂದು ಸ್ಪಷ್ಟವಾಗುತ್ತದೆ.

ಪ್ರಕಾಶಃ – ನನ್ವುಕ್ತಮಪರವಿದ್ಯಾವಿಷಯಸ್ಯ ಪರವಿದ್ಯಾವಿಷಯತ್ವಮಯುಕ್ತಮಿತ್ಯತೊ ''– ''ದ್ವೇ ವಿದ್ಯೇ ವೇದಿತವ್ಯೇ'' ಇತ್ಯತ್ರ ಚ'' ಇತ್ಯಾದಿಟೀಕಾಂ ವಿವೃಣ್ವನ್ನಾಹ – ಯುಕ್ತಂ ಚೇತಿ ।

ಆಕ್ಷೇಪ - ವಿಷ್ಣು ಅಪರವಿದ್ಯೆಗೆ ವಿಷಯನಾಗಿರುವುದರಿಂದ ಪರವಿದ್ಯೆಗೆ ಹೇಗೆ ವಿಷಯನಾಗುತ್ತಾನೆ ?

ಸಮಾಧಾನ - ಈ ಆಕ್ಷೇಪಕ್ಕೆ ''-''ದ್ವೇ ವಿದ್ಯೇ ವೇದಿತವ್ಯೇ'' ಇತ್ಯತ್ರ ಚ'' ಎಂಬ ಟೀಕೆಯನ್ನು ವ್ಯಾಖ್ಯಾನಿಸುತ್ತಾ 'ಯುಕ್ತಂ ಚ' ಎಂಬ ಗ್ರಂಥದಿಂದ ಉತ್ತರಿಸುತ್ತಿದ್ದಾರೆ.

ಪ್ರಕಾಶಃ – ಕುತ ಇತ್ಯತಃ, ಋಗಾದೇರೇವ ಪರವಿದ್ಯಾತ್ವಾದಿತಿ ಭಾವೇನಾಹ – ಯತ ಇತಿ । ಶ್ಲೋಕೇನಾನ್ವಯಃ । 'ಅತಃ' ಇತಿ ಯೋಜ್ಯಮ್ । ಪೂರ್ವಾರ್ಧಂ ವ್ಯನಕ್ತಿ – ಯಥೇತಿ ।

ವಿಷ್ಣು ಪರವಿದ್ಯೆಗೆ ವಿಷಯನಾಗಿದ್ದಾನೆಂದು ಯಾವ ಪ್ರಮಾಣದಿಂದ ಹೇಳುತ್ತೀರಿ? ಎಂದರೆ ಋಗ್ವೇದಾದಿಗಳೇ ಪರವಿದ್ಯೆಯೆನಿಸಿವೆ. ಆದ್ದರಿಂದ ವಿಷ್ಣು ಪರವಿದ್ಯೆಗೂ ವಿಷಯಾಗಿದ್ದಾನೆ ಎಂದು ಹೇಳುತ್ತೇವೆ ಎಂಬ ಅಭಿಪ್ರಾಯದಿಂದ 'ಯತಃ' ಎಂದು ಹೇಳಿದ್ದಾರೆ. 'ಯತಃ' ಎಂಬುದನ್ನು ಶ್ಲೋಕದಜೊತೆಗೆ ಅನ್ವಯ ಮಾಡಿಕೊಳ್ಳಬೇಕು. ಆದ್ದರಿಂದ 'ಅತಃ' ಎಂಬುದನ್ನು ಶ್ಲೋಕದಲ್ಲಿ ಇಟ್ಟುಕೊಳ್ಳಬೇಕು. ಶ್ಲೋಕದ ಪೂರ್ವಾರ್ಧವನ್ನು 'ಯಥಾ' ಇತ್ಯಾದಿ ಗ್ರಂಥದಿಂದ ಸ್ವತಃ ಗ್ರಂಥಕಾರರೇ ವ್ಯಾಖ್ಯಾನಿಸುತ್ತಿದ್ದಾರೆ.

ಪ್ರಕಾಶಃ –

'ನಿಷ್ಕಾಮಂ ಜ್ಞಾನಪೂರ್ವಂ ತು ನಿವೃತ್ತಮಿತಿ ಚೋಚ್ಯತೇ ।
ನಿವೃತ್ತಂ ಸೇವಮಾನಸ್ತು ಬ್ರಹ್ಮಾಭ್ಯೇತಿ ಸನಾತನಮ್ ।।'

ಇತಿ ವ್ಯಾಸಸ್ಮೃತೇರಿತ್ಯರ್ಥಃ । ಸ್ವರ್ಗಾದಿಫಲಕಾಮನಾಂ ವಿನೇತ್ಯರ್ಥಃ । 'ಕರ್ಮ' ಇತ್ಯುಪಲಕ್ಷಣಂ ಶ್ಲೋಕ ಇತಿ ಭಾವೇನಾಹ – ಯಥಾ ಚೇತಿ ।

ನಿಷ್ಕಾಮಂ ಜ್ಞಾನಪೂರ್ವಕಂ ತು ನಿವೃತ್ತಮಿತಿ ಚೋಚ್ಯತೇ।
ನಿವೃತ್ತಂ ಸೇವಮಾನಸ್ತು ಬ್ರಹ್ಮಾಭ್ಯೇತಿ ಸನಾತನಮ್ ॥

ನಿಷ್ಕಾಮ ಜ್ಞಾನಪೂರ್ವಕವಾಗಿ ಮಾಡುವ ಕರ್ಮವು ನಿವೃತ್ತಕರ್ಮವೆನಿಸುತ್ತದೆ. ಹೀಗೆ ನಿವೃತ್ತಕರ್ಮವನ್ನು ಆಚರಿಸುವವರು ಬ್ರಹ್ಮನನ್ನು ಪಡೆಯುತ್ತಾನೆ ಎಂದು ವ್ಯಾಸಸ್ಮೃತಿಯಲ್ಲಿ ಹೇಳಲಾಗಿದೆ. ನಿಷ್ಕಾಮಕರ್ಮಯೆಂದರೆ ಸ್ವರ್ಗಾದಿಫಲಗಳನ್ನು ಅಪೇಕ್ಷಿಪದದೆ ಮಾಡಲ್ಪಡುವ ಕರ್ಮಗಳೆಂದರ್ಥ. ಶ್ಲೋಕದಲ್ಲಿರುವ ಕರ್ಮವೆಂಬ ಪದವು ಉಪಲಕ್ಷಣವಾಗಿದೆಯೆಂಬ ಅಭಿಪ್ರಾಯದಿಂದ 'ಯಥಾ ಚ' ಇತ್ಯಾದಿ ವಾಕ್ಯದಲ್ಲಿ ಮತ್ತೊಂದು ದೃಷ್ಟಾಂತವನ್ನು ಹೇಳಿರುತ್ತಾರೆ.

ಪ್ರಕಾಶಃ – ಉತ್ತರಾರ್ಧಂ ಸ್ಪಷ್ಟಯತಿ – **ತಯೇತಿ** । **ಸನ್ನ್ಯಾಯೈರಿತಿ** । **ಬಲಾಬಲವತ್ತ್ವಾದಿನಾ ಸಮ್ಯಗವಧೃತೋಪಕ್ರಮಾದಿಭಿರಿತ್ಯರ್ಥಃ** । **ಪ್ರಮಿತೇತಿ** । ನಿತ್ಯಸಾಪೇಕ್ಷತ್ವಾತ್ಸಮಾಸಃ । **ತದುಕ್ತಮಿತಿ** । **ಆಥರ್ವಣಭಾಷ್ಯೇ** ।

ಶ್ಲೋಕದ ಉತ್ತರಾರ್ಧವನ್ನು ವ್ಯಾಖ್ಯಾನಿಸುತ್ತಿದ್ದಾರೆ. 'ತಥಾ' ಇತ್ಯಾದಿ ವಾಕ್ಯದಿಂದ. 'ಸನ್ನ್ಯಾಯೈಃ' ಎಂಬ ಪದಕ್ಕೆ ಪ್ರಾಬಲ್ಯ-ದೌರ್ಬಲ್ಯ ಮುಂತಾದ್ದರಿಂದ ಚೆನ್ನಾಗಿ ನಿರ್ಣಯಿಸಿದ ಉಪಕ್ರಮಾದಿಗಳಿಂದ ಎಂದರ್ಥ. 'ಪ್ರಮಿತಬ್ರಹ್ಮವಿಷಯಕಶಕ್ತಿತಾತ್ಪರ್ಯೋಪಾಧಿನಾ' ಎಂಬುದು ಸಮಸ್ತಪದವಾಗಿದೆ. ವಸ್ತುತಃ ಪ್ರಮಿತಪದಕ್ಕೆ ಸಮಾಸವನ್ನು ಮಾಡಲು ಸಾಮರ್ಥ್ಯವಿರುವುದಿಲ್ಲ. ಆದರೂ ಸಹ ನಿತ್ಯಸಾಪೇಕ್ಷವಾದ್ದರಿಂದ 'ದೇವದತ್ತಸ್ಯಗುರುಕುಲಂ' ಎಂಬಲ್ಲಿ ಹೇಗೋ ಹಾಗೇ ಸಮಾಸವನ್ನು ಮಾಡಿದ್ದಾರೆಂದು ತಿಳಿಯಬೇಕು. 'ತದುಕ್ತಂ' ಎಂದರೆ ಆಥರ್ವಣಭಾಷ್ಯದಲ್ಲಿ ಹೇಳಲಾಗಿದೆ ಎಂದರ್ಥ.

ಪ್ರಕಾಶಃ – **ಸ್ವಮತೇ ಪರಾಪರವಿದ್ಯಾತ್ವಮುಪಾಧಿಭೇದೇನೈಕತ್ರೈವ ಟೀಕಾದ್ಯುಕ್ತಂ ವ್ಯುತ್ಪಾದ್ಯ, ಪ್ರಸಙ್ಗಾತ್ ಪರಭಾಷ್ಯಾದ್ಯುಕ್ತಿಮನೂದ್ಯ ನಿರಾಹ – ಯತ್ತಿತಿ** ।

ಇಲ್ಲಿಯ ತನಕ ಒಂದೇ ವಿದ್ಯೆಯಲ್ಲಿಯೇ ಉಪಾಧಿಭೇದದಿಂದ ಪರವಿದ್ಯೆ ಅಪರವಿದ್ಯೆಗಳನ್ನು ಕೂಡಿಸಬೇಕೆಂದು ಸಿದ್ಧಾಂತದ ಪ್ರಕಾರ ವ್ಯಾಖ್ಯಾನಿಸಿದರು. ಈಗ ಪ್ರಾಸಂಗಿಕವಾಗಿ ಆದ್ವೈತಿಗಳ ಭಾಷ್ಯದಲ್ಲಿ ಹೇಳಲಟ್ಟ ಪರವಿದ್ಯಾ ಹಾಗೂ ಅಪರವಿದ್ಯೆಗಳ ಸ್ವರೂಪವನ್ನು ಅನುವಾದ ಮಾಡಿ ನಿರಾಕರಿಸಲು ಹೊರಟಿದ್ದಾರೆ. 'ಯತ್' ಇತ್ಯಾದಿ ಗ್ರಂಥದಿಂದ.

ಪ್ರಕಾಶಃ – ನನು ಋಗಾದೀನಾಂ ಕರ್ಮಬೋಧಕತ್ವಾತ್ ಕಥಂ ಬ್ರಹ್ಮಪರತೇತಿ ಚೇತ್, ಕಿಮೇಕದೇಶಸ್ಯಾನ್ಯಪರತ್ವಮ್ ಉತ ಕೃತ್ಸ್ನಸ್ಯ । ಆದ್ಯ ಆಹ – **ಉಪನಿಷತ್ಸ್ವಪೀತಿ** । ದ್ವಿತೀಯ ಆಹ – **ಮನ್ತ್ರೇಷ್ವಪೀತಿ** । ''ಜ್ಯೋತಿಶ್ಚರಣಾಭಿಧಾನಾತ್'' ಇತ್ಯತ್ರ ಸ್ವಪ್ರದರ್ಶಿತನ್ಯಾಯೇನೇತ್ಯರ್ಥಃ ।

ಋಗ್ವೇದಾದಿಗಳು ಕರ್ಮಬೋಧಕಗಳಾಗಿವೆ. ಹೀಗಿರುವಾಗ ಅವುಗಳಿಗೆ ಬ್ರಹ್ಮಪರತ್ವವನ್ನು ಹೇಗೆ ಒಪ್ಪುತ್ತೀರಿ ? ಎಂದರೆ ವೇದದ ಏಕದೇಶಕ್ಕೆ ಕರ್ಮಪರತ್ವವನ್ನು ಒಪ್ಪುತ್ತೀರೋ? ಅಥವಾ ಸಮಸ್ತವೇದಕ್ಕೂ ಕರ್ಮಪರತ್ವವನ್ನು ಒಪ್ಪುತ್ತೀರೋ? ಮೊದಲನೆಯ ಪಕ್ಷದಲ್ಲಿ 'ಉಪನಿಷತ್ಸ್ವಪಿ' ಎಂಬ ವಾಕ್ಯದಿಂದ ಉತ್ತರಿಸಿದ್ದಾರೆ. ಎರಡನೆಯ ಪಕ್ಷದಲ್ಲಿ 'ಮಂತ್ರೇಷು' ಎಂಬ ವಾಕ್ಯದಿಂದ ಉತ್ತರಿಸಿದ್ದಾರೆ. ''ಜ್ಯೋತಿಶ್ಚರಣಾಭಿಧಾನಾತ್'' ಎಂಬ ಸೂತ್ರದಲ್ಲಿ ಸಿದ್ಧಾಂತಿಗಳು ತೋರಿಸಿರುವ ನ್ಯಾಯದಿಂದ ಮಂತ್ರಭಾಗವೂ ಸಹ ಬ್ರಹ್ಮಪರವಾಗಿದೆಯೆಂಬುದನ್ನು ತಿಳಿಯಬೇಕು.

ಪ್ರಕಾಶಃ – **ಪರಾಪರಶಬ್ದಯೋರ್ವಿಶೇಷಸಾಮಾನ್ಯಭಾವೇನ ಅರ್ಥವರ್ಣನಮಯುಕ್ತಮಿತ್ಯಾಹ – ರೂಪಮಿತಿ** ।

ಪರಶಬ್ದವು ವಿದ್ಯಾವಿಶೇಷವನ್ನು ಹೇಳುತ್ತಿದೆ. ಅಪರಶಬ್ದವು ಸಾಮಾನ್ಯವನ್ನು ಹೇಳುತ್ತಿದೆಯೆಂಬ ವ್ಯಾಖ್ಯಾನವೂ ಅಯುಕ್ತವಾಗಿದೆಯೆಂದು 'ರೂಪಂ' ಎಂಬ ವಾಕ್ಯದಿಂದ ಸ್ಪಷ್ಟಪಡಿಸುತ್ತಿದ್ದಾರೆ.

ಪ್ರಕಾಶಃ – 'द्वे विद्ये वेदितव्ये' ब्रह्मविषये परोक्षापरोक्षरूपे द्वे ज्ञाने उपादेये इत्यर्थ इति रामानुजभाष्योक्तमनूद्य प्रत्याह – **यत्त्विति ।**

'द्वे विद्ये वेदितव्ये' ಬ್ರಹ್ಮವಿಷಯೇ ಪರೋಕ್ಷಾಪರೋಕ್ಷರೂಪೇ ದ್ವೇ ಜ್ಞಾನೇ ಉಪಾದೇಯೇ ಇತ್ಯರ್ಥಃ' 'द्वे विद्ये वेदितव्ये' ಎಂದರೆ ಬ್ರಹ್ಮವಿಷಯಕವಾದ ಪರೋಕ್ಷಜ್ಞಾನ ಹಾಗೂ ಅಪರೋಕ್ಷಜ್ಞಾನಗಳನ್ನು ಸ್ವೀಕರಿಸಬೇಕು ಎಂದರ್ಥ' ಹೀಗೆ ರಾಮಾನುಜಭಾಷ್ಯದಲ್ಲಿ ಮಾಡಲ್ಪಟ್ಟ ವ್ಯಾಖ್ಯಾನವನ್ನು ಅನುವಾದ ಮಾಡಿ ನಿರಾಕರಿಸುತ್ತಿದ್ದಾರೆ 'यत्तु,' ಇತ್ಯಾದಿ ಗ್ರಂಥದಿಂದ

ಪ್ರಕಾಶಃ – विद्याशब्दस्य ज्ञानार्थत्वसम्भवेऽपि इह तद्ग्रहणमयुक्तमित्याह – **ययेति ।** 'यया' विद्यया 'अधिगम्यते' प्राप्यत इत्यर्थसम्भवात्र ज्ञानकरणमिह विद्याशब्दार्थ इत्यत आह – **नचेति ।**

ವಿದ್ಯಾಶಬ್ದಕ್ಕೆ ಜ್ಞಾನವೆಂಬರ್ಥವು ಇರಬಹುದು. ಆದರೆ ಪರವಿದ್ಯಾ ಮತ್ತು ಅಪರವಿದ್ಯಾ ಎಂಬಲ್ಲಿರುವ ವಿದ್ಯಾಶಬ್ದವು ಜ್ಞಾನವೆಂಬರ್ಥದಲ್ಲಿ ಇರುವುದಿಲ್ಲವೆಂದು 'ಯಯಾ' ಇತ್ಯಾದಿ ವಾಕ್ಯದಿಂದ ಸಮರ್ಥಿಸುತ್ತಿದ್ದಾರೆ. 'ಯಯಾ' ಯಾವ ವಿದ್ಯೆಯಿಂದ 'ಅಧಿಗಮ್ಯತೇ' ಬ್ರಹ್ಮನು ಹೊಂದಲ್ಪಡುತ್ತಾನೋ ಅವನೇ ಆಕ್ಷರನು ಎಂಬರ್ಥವನ್ನು ಮಾಡಬಹುದಾದ್ದರಿಂದ ಜ್ಞಾನಕರಣವೆಂಬರ್ಥದಲ್ಲಿ ವಿದ್ಯಾಶಬ್ದವನ್ನು ಏಕೆ ಪ್ರಯೋಗಿಸಬೇಕು? ಎಂಬ ಪ್ರಶ್ನೆಗೆ 'नच' ಇತ್ಯಾದಿ ವಾಕ್ಯದಿಂದ ಉತ್ತರಿಸಿರುತ್ತಾರೆ.

ಪ್ರಕಾಶಃ – ननु ''व्रजयजोर्भावे क्यप्'' इति पूर्वसूत्रादनुवृत्तस्य भावार्थकस्यैव क्यपः ''सञ्ज्ञायां समजनिषदनिपतमनविदषुङ्शीङ्भृञिणः'' इति सूत्रे विहितत्वात्,

'तत्प्राप्तिहेतुज्ञानं च कर्म चोक्तं महामुने ।
आगमोत्थं विवेकाच्च द्विधा ज्ञानं तथोच्यते ।।'

इति पराशरवचने प्रयोगाच्च ज्ञानमेव विद्याशब्दार्थ इत्याशङ्क्याह – **यद्यपीति ।**

ಆಕ್ಷೇಪ - ವಿದ್ಯಾಶಬ್ದವು ಜ್ಞಾನವೆಂಬರ್ಥದಲ್ಲಿಯೇ ಸಾಧುವಾಗುತ್ತದೆ. ಏಕೆಂದರೆ ''व्रजयजोर्भावे क्यप्'' ಎಂಬ ಹಿಂದಿನ ಸೂತ್ರದಿಂದ 'संज्ञायां समजनिषदनिपतमनविदषुञ्शीङ्भृञिणः' ಎಂಬ ಮುಂದಿನ ಸೂತ್ರದಲ್ಲಿ ಭಾವಾರ್ಥಕದಲ್ಲಿರುವ 'क्यप्' ಪ್ರತ್ಯಯವು ಅನುವೃತ್ತವಾಗುತ್ತದೆ. ಭಾವಾರ್ಥದಲ್ಲಿ ವಿದ್ ಧಾತುವಿಗೆ 'क्यप्' ಪ್ರತ್ಯಯ ಬಂದು ವಿದ್ಯಾಶಬ್ದವು ನಿಷ್ಪನ್ನವಾಗಿದೆ. ಆದ್ದರಿಂದ ಜ್ಞಾನವೆಂಬರ್ಥವನ್ನೇ ಹೇಳಬೇಕು. ಇದನ್ನೇ

'ತತ್ಪ್ರಾಪ್ತಿಹೇತುಜ್ಞಾನಂ ಚ ಕರ್ಮ ಚೋಕ್ತಂ ಮಹಾಮುನೇ।
ಆಗಮೋತ್ಥಂ ವಿವೇಕಾಚ್ಚ ದ್ವಿಧಾ ಜ್ಞಾನಂ ತಥೋಚ್ಯತೇ ॥'

ಎಂಬುದಾಗಿ ಪರಾಶರರ ಮಾತಿನಲ್ಲಿ ಜ್ಞಾನವೆಂಬರ್ಥದಲ್ಲಿ ವಿದ್ಯಾಶಬ್ದವನ್ನು ಪ್ರಯೋಗಿಸಿದ್ದು ಕಾಣಸುತ್ತಿದೆ. ಆದ್ದರಿಂದ ಪರವಿದ್ಯಾ ಹಾಗೂ ಅಪರವಿದ್ಯಾ ಎಂಬಲ್ಲಿರುವ ವಿದ್ಯಾಶಬ್ದಕ್ಕೆ ಜ್ಞಾನವೆಂದೇ ಅರ್ಥ.

ಸಮಾಧಾನ - ಈ ಆಕ್ಷೇಪಕ್ಕೆ 'ಯದ್ಯಪಿ' ಎಂಬ ಗ್ರಂಥದಿಂದ ಉತ್ತರಿಸುತ್ತಿದ್ದಾರೆ.

ಪ್ರಕಾಶಃ – ಭಾವ ಇತಿತಿ । ''ವ್ರಜಯಜೋರ್ಭಾವೇ'' ಇತ್ಯವ್ಯವಹಿತಂ ಭಾವಪದಂ ನ ಸ್ವರ್ಯತೇ, ವ್ಯವಹಿತಂ ತ್ವನುವರ್ತ್ಯತ ಇತಿ ಭಾವಃ । ತಥಾ ಚ – 'ಭಾವೇ ಅಕರ್ತರಿ ಚ ಕಾರಕೇ ಸಂಜ್ಞಾಯಾಮ್' ಇತ್ಯೇತತ್ ''ಕೃತ್ಯಲ್ಯುಟೋ ಬಹುಲಮ್'' ಇತಿ ಸೂತ್ರಪರ್ಯನ್ತಮನುವರ್ತತೇ ।

'ವ್ರಜಯಜೋರ್ಭಾವೇ' ಎಂಬ ಹಿಂದಿನ ಸೂತ್ರದಿಂದ ಭಾವ ಎಂಬ ಪದವನ್ನು ಅನುವೃತ್ತಿ ಮಾಡಿಕೊಂಡಿದ್ದಲ್ಲಿ ಜ್ಞಾನವೆಂಬರ್ಥವನ್ನು ಮಾತ್ರ ವಿದ್ಯಾಶಬ್ದಕ್ಕೆ ವಿವಕ್ಷಿಸಬಹುದಿತ್ತು. ಆದರೆ ವ್ಯವಹಿತವಾದ 'ಭಾವೇ ಅಕರ್ತರಿ ಚ ಕಾರಕೇ ಸಂಜ್ಞಾಯಾಮ್' ಎಂಬ ಸೂತ್ರದಲ್ಲಿರುವ 'ಭಾವೇ' ಎಂಬ ಪದವನ್ನು ಅನುವೃತ್ತಿ ಮಾಡಿಕೊಳ್ಳಲಾಗಿದೆ. ಏಕೆಂದರೆ ಈ ಸೂತ್ರವು 'ಕೃತ್ಯಲ್ಯುಟೋ ಬಹುಲಮ್' ಎಂಬ ಸೂತ್ರದ ತನಕ ಎಲ್ಲಾ ಸೂತ್ರಗಳಲ್ಲಿಯೂ ಅನುವೃತ್ತವಾಗುತ್ತದೆ. ಆದ್ದರಿಂದ ವಿದ್ಯಾಶಬ್ದಕ್ಕೆ ಕೇವಲ ಜ್ಞಾನವೆಂಬರ್ಥವನ್ನು ಹೇಳಲು ಸಾಧ್ಯವಿಲ್ಲ.

ಪ್ರಕಾಶಃ – ಏವಂ ಚೇಹ 'ಭಾವೇ' ಇತ್ಯನುವರ್ತಮಾನೇ ''ವ್ರಜಯಜೋರ್ಭಾವೇ'' ಇತಿ ಪುನರ್ಭಾವಗ್ರಹಣಮ್ 'ಅಕರ್ತರಿ ಚ ಕಾರಕೇ' ಇತ್ಯಸ್ಯ ವ್ಯಾವರ್ತನೇನ ಭಾವ ಏವ ಯಥಾ ಸ್ಯಾದಿತ್ಯೇವಮರ್ಥಮ್ ।

ಆದ್ದರಿಂದ ಇಲ್ಲಿ 'ಭಾವೇ ಅಕರ್ತರಿ ಚ ಕಾರಕೇ ಸಂಜ್ಞಾಯಾಮ್' ಎಂಬ ಸೂತ್ರದಿಂದಲೇ 'ಭಾವೇ' ಎಂಬ ಪದವು ಅನುವೃತ್ತವಾಗುತ್ತದೆ. ಹೀಗಿದ್ದರೂ 'ವ್ರಜಯಜೋರ್ಭಾವೇ' ಎಂಬ ಸೂತ್ರದಲ್ಲಿ ಪುನಃ ಭಾವೇ ಎಂದೇಕೆ ಹೇಳಿದರು ? ಎಂಬ ಪ್ರಶ್ನೆ ಸಹಜವಾಗಿ ಬರುತ್ತದೆ. 'ವ್ಯರ್ಥಮಪಿ ಕಂಚಿದರ್ಥಂ ಜ್ಞಾಪಯತಿ' ಎಂಬ ನಿಯಮದ ಪ್ರಕಾರ ಏನೋ ಒಂದು ಸಾರ್ಥಕ್ಯವನ್ನು ತಿಳಿಸುವುದಕ್ಕಾಗಿ 'ವ್ರಜಯಜೋರ್ಭಾವೇ' ಎಂಬ ಸೂತ್ರದಲ್ಲಿ ಭಾವೇ ಎಂಬ ಪದವನ್ನು ಪ್ರಯೋಗಿಸಲಾಗಿದೆ. ಅದೇನೆಂದರೆ 'ಅಕರ್ತರಿ ಚ ಕಾರಕೇ ಸಂಜ್ಞಾಯಾಮ್' ಎಂಬಲ್ಲಿ ಹೇಳಲಾದ ಕರ್ತೃಭಿನ್ನವಾದ ಕಾರಕಗಳಲ್ಲಿ ಎಂಬುದನ್ನು ವ್ಯಾವರ್ತ್ಯ ಮಾಡುವುದಕ್ಕಾಗಿ; ಕೇವಲ ಭಾವಾರ್ಥದಲ್ಲಿ ಮಾತ್ರ ಕೃಪ್ ಪ್ರತ್ಯಯವು ಬರುತ್ತದೆಂದು ತಿಳಿಸುವುದಕ್ಕಾಗಿ ಪುನಃ 'ಭಾವೇ' ಎಂಬ ಪದವನ್ನು ಪ್ರಯೋಗಿಸಲಾಗಿದೆ. ಆದ್ದರಿಂದ ಅನುವೃತ್ತಿಯಿಂದ ಸಿದ್ಧವಾಗುತ್ತಿದ್ದರೂ ಪುನಃ 'ಭಾವೇ' ಎಂದು ಹೇಳಿದ್ದರಿಂದ ಕೃಪ್ ಪ್ರತ್ಯಯವು ಕೇವಲ ಭಾವಾರ್ಥದಲ್ಲಿ ಬರುತ್ತದೆಂಬ ಪ್ರಯೋಜನವನ್ನು ಸೂತ್ರಕಾರನು ವಿವಕ್ಷಿಸಿದ್ದಾನೆಂದು ತಿಳಿಯಬೇಕು.

ಪ್ರಕಾಶಃ – ಅಸ್ಯ ಚ ಭಾವಪದಸ್ಯ 'ಸಂಜ್ಞಾಯಾಮ್' ಇತ್ಯತ್ರ ಅನುವೃತ್ತೌ ಹಿ ವಿದ್ಯಾಶಬ್ದೋ ಜ್ಞಾನ ಏವ ಮುಖ್ಯಃ ಸ್ಯಾತ್ ।

ಪ್ರಕೃತ 'ವ್ರಜಯಜೋರ್ಭಾವೇ' ಎಂಬ ಸೂತ್ರದಲ್ಲಿರುವ ಭಾವಪದವನ್ನು 'ಸಂಜ್ಞಾಯಾಂ ಸಮಜನಿಷದ'' ಎಂಬ ಸೂತ್ರದಲ್ಲಿ ಅನುವೃತ್ತಿಮಾಡಿಕೊಂಡಿದ್ದರೆ ವಿದ್ಯಾಶಬ್ದವು ಜ್ಞಾನವೆಂಬರ್ಥದಲ್ಲಿಯೇ ಮುಖ್ಯವಾಗಿ ಪ್ರಯುಕ್ತವಾಗುತ್ತಿತ್ತು.

ಪ್ರಕಾಶಃ – तत्तु 'न स्वर्यते' स्वरितत्वेन नोच्चार्यते नानुवर्त्यत इत्युक्तत्वात् ''संज्ञायां समजनिषद'' इति सूत्रे क्यबेवानुवर्तते । नतु 'अकर्तरि च कारके' इत्येतद्वचावर्तकं 'भावे' इत्येतत् पदं,

ಆದರೆ 'ಭಾವೇ' ಎಂಬ ಪದವನ್ನು 'ವ್ರಜಯಜೋರ್ಭಾವೇ' ಎಂಬ ಸೂತ್ರದಿಂದ ಅನುವೃತ್ತಿ ಮಾಡಿಕೊಂಡಿಲ್ಲ. ಏಕೆಂದರೆ 'न स्वर्यते' ಎಂದರೆ ಸ್ವರಿತಸ್ವರದಲ್ಲಿ 'ವ್ರಜಯಜೋರ್ಭಾವೇ' ಎಂಬಲ್ಲಿರುವ 'ಭಾವೇ' ಎಂಬ ಪದವನ್ನು ಉಚ್ಚಾರ ಮಾಡಿಲ್ಲ. ಆದ್ದರಿಂದ ಅದನ್ನು ಅನುವೃತ್ತಿ ಮಾಡಿಕೊಳ್ಳಲು ಸಾಧ್ಯವಿಲ್ಲ ಎಂದು ಹೇಳಿದ್ದರಿಂದ 'ಸಂಜ್ಞಾಯಾಂ ಸಮಜನಿಷದ' ಎಂಬ ಸೂತ್ರದಲ್ಲಿ 'ವ್ರಜಯಜೋರ್ಭಾವೇ' ಎಂಬ ಸೂತ್ರದಲ್ಲಿರುವ 'ಕ್ಯಪ್' ಎಂಬ ಪ್ರತ್ಯಯವನ್ನೇ ಅನುವೃತ್ತಿ ಮಾಡಿಕೊಳ್ಳಬೇಕು ಹೊರತು 'अकर्तरि च कारके' ಎಂಬುದನ್ನು ವ್ಯಾವೃತ್ತಿ ಮಾಡುವ 'ಭಾವೇ' ಎಂಬ ಪದವನ್ನು ಅನುವೃತ್ತಿ ಮಾಡಿಕೊಳ್ಳಬಾರದು.

ಪ್ರಕಾಶಃ – स्वरितत्वाभावेन ''स्वरितेनाधिकारः'' इत्युक्तस्वरितनिबन्धनाधिकार-शब्दितानुवृत्तेरयोगात् । उत्तरत्र ''कृत्यल्युटः'' इति सूत्रपर्यन्तं सामान्यतोऽनुवर्तमाने भावे कर्तृव्यतिरिक्तकारके च क्यपो विधानात्, वेदनरूपभाव इव वेदनकरणेऽपि मुख्य एवेत्यर्थः ।

ಯಾವುದಾದರೂ ಪದವನ್ನು ಪಾಣಿನಿಸೂತ್ರದಲ್ಲಿ ಅನುವೃತ್ತಿ ಮಾಡಿಕೊಳ್ಳಬೇಕಾದರೆ ಅಂತಹ ಪದವನ್ನು ಸೂತ್ರಕಾರನು ಸ್ವರಿತಸ್ವರದಲ್ಲಿ ಉಚ್ಚರಿಸಿರುತ್ತಾನೆ. ಆದ್ದರಿಂದಲೇ ''ಸ್ವರಿತೇನಾಧಿಕಾರಃ'' ಸ್ವರಿತಸ್ವರದಲ್ಲಿ ಉಚ್ಚರಿಸಲ್ಪಟ್ಟದ್ದು ಅಧಿಕಾರಸೂತ್ರವಾಗುತ್ತದೆಂದು ಪಾಣಿನಿಯೇ ಹೇಳಿದ್ದಾನೆ. 'ಭಾವೇ' ಎಂಬುದು ಹಾಗೂ 'अकर्तरि च कारके संज्ञायाम्' ಎಂಬುದು ಸ್ವರಿತಸ್ವರದಲ್ಲಿ ಉಚ್ಚರಿಸಲ್ಪಟ್ಟಿಲ್ಲ. ಆದ್ದರಿಂದ 'कृत्यल्युटो बहुलम्' ಎಂಬ ಸೂತ್ರದ ತನಕ ಎಲ್ಲೆಡೆಯೂ 'ಭಾವೇ' ಎಂಬುದೂ 'अकर्तरि च कारके संज्ञायाम्' ಎಂಬುದೂ ಅನುವೃತ್ತವಾಗುತ್ತದೆ. ಇದರಿಂದ ಭಾವಾರ್ಥದಲ್ಲಿ ಮತ್ತು ಕರ್ತೃವ್ಯತಿರಿಕ್ತವಾದ ಕಾರಕದಲ್ಲಿ 'ಕ್ಯಪ್' ಪ್ರತ್ಯಯವನ್ನು 'ಸಂಜ್ಞಾಯಾಂ ಸಮಜನಿಷದ' ಎಂಬ ಸೂತ್ರವು ವಿಧಾನ ಮಾಡುತ್ತಿದೆ ಎಂದು ಹೇಳಿದಂತಾಗುತ್ತದೆ. ಅಂದರೆ 'ಕ್ಯಪ್' ಪ್ರತ್ಯಯವು ಭಾವಾರ್ಥದಲ್ಲಿಯೂ ಬರುತ್ತದೆ. ಹಾಗೂ ಕರ್ತೃವ್ಯತಿರಿಕ್ತವಾದ, ಕರಣ, ಅಧಿಕರಣ, ಕರ್ಮ ಮೊದಲಾದ ಅರ್ಥಗಳಲ್ಲಿಯೂ 'ಕ್ಯಪ್' ಪ್ರತ್ಯಯವು ಬರುತ್ತದೆಂದು ಹೇಳಿದಂತಾಯಿತು. ಆದ್ದರಿಂದ ವಿದ್ಯಾಶಬ್ದವು ಜ್ಞಾನವೆಂಬರ್ಥವನ್ನು ಹೇಳುವಂತೆ ಜ್ಞಾನಕರಣ ಎಂಬರ್ಥವನ್ನೂ ಸಹ ಮುಖ್ಯವಾಗಿಯೇ ಹೇಳುತ್ತದೆ.

ಆದೃಶ್ಯತ್ವಾಧಿಕರಣ (೧-೨-೬)

ಪ್ರಕಾಶಃ – ಉಕ್ತಂ ಚ ಪ್ರಕ್ರಿಯಾಪ್ರಸಾದೇऽಪಿ ''ಅನನ್ತರಭಾವಗ್ರಹಣಂ ನ ಸ್ವರ್ಯತೇ । ತೇನ ಭಾವಾದಾವರ್ಥೇ'' ಇತಿ । ಅತ ಏವೋಕ್ತಂ ಸುಧಾಯಾಂ ಜಿಜ್ಞಾಸಾನಯೇ – ''ಯಥಾರ್ಥಜ್ಞಾನತತ್ಸಾಧನಯೋ ರ್ವಿದ್ಯಾಶಬ್ದಸ್ಯ ಯೋಗರೂಢಿಭ್ಯಾಂ ಪ್ರವೃತ್ತತ್ವಾತ್'' ಇತಿ ।

ಇದೇ ವಿಷಯವನ್ನು ಪ್ರಕ್ರಿಯಾಪ್ರಸಾದವೆಂಬ ವ್ಯಾಕರಣ ಗ್ರಂಥದಲ್ಲಿ ಹೀಗೆ ಹೇಳಿದ್ದಾರೆ - ''ಅನಂತರಭಾವಗ್ರಹಣಂ ನ ಸ್ವರ್ಯತೇ । ತೇನ ಭಾವಾದಾವರ್ಥೇ'' ಅನಂತರವಿರುವ ಭಾವಶಬ್ದವು ಸ್ವರಿತಸ್ವರದಲ್ಲಿ ಉಚ್ಚರಿಸಲ್ಪಟ್ಟಿಲ್ಲ. ಆದ್ದರಿಂದ ಭಾವಾದ್ಯರ್ಥಗಳಲ್ಲಿಯೇ 'ಕೃಪ್' ಪ್ರತ್ಯಯವು ಬರುತ್ತದೆ ಎಂದು. ಆದ್ದರಿಂದಲೇ ನ್ಯಾಯಸುಧೆಯ ಜಿಜ್ಞಾಸಾಧಿಕರಣದಲ್ಲಿಯೂ ''ಯಥಾರ್ಥಜ್ಞಾನತತ್ಸಾಧನಯೋರ್ವಿದ್ಯಾಶಬ್ದಸ್ಯ ಯೋಗರೂಢಿಭ್ಯಾಂ ಪ್ರವೃತ್ತತ್ವಾತ್'' ಎಂದು ಹೇಳಲಾಗಿದೆ.

ಪ್ರಕಾಶಃ – ಪರಾಶರವಚನಸ್ಯ ಗತಿಮಾಹ – **ಆಗಮೋತ್ಥಮಿತಿ । ಪರೋಕ್ಷೇತಿ । ಯಥಾಯೋಗ್ಯಮನ್ವಯಃ ।**

ಪರಾಶರರ ಮಾತಿನ ಅಭಿಪ್ರಾಯವನ್ನು 'ಆಗಮೋತ್ಥಮ್' ಇತ್ಯಾದಿ ವಾಕ್ಯದಿಂದ ವಿವರಿಸುತ್ತಿದ್ದಾರೆ. ಪರೋಕ್ಷ, ಅಪರೋಕ್ಷ ಎಂಬೆರಡು ಪದಗಳು ಕ್ರಮವಾಗಿ ಪರ ಮತ್ತು ಅಪರಶಬ್ದಗಳಲ್ಲಿ ಅನ್ವಯವನ್ನು ಹೊಂದುತ್ತವೆ.

ಪ್ರಕಾಶಃ – ಏವಂ ಪರವಿದ್ಯಾವಿಷಯತ್ವಮನ್ಯತ್ರ ಅನವಕಾಶತಯಾ ಸಮರ್ಥ್ಯ ಪ್ರಸಙ್ಗಾತ್ಪರೋಕ್ತಂ ಚ ವ್ಯುದಸ್ಯೇದಾನೀಂ ಪೂರ್ವಪಕ್ಷಪ್ರಾಪಕಾಣಾಂ ಕ್ರಮೇಣ ಸಾವಕಾಶತ್ವಮಾಹ – **ಊರ್ಣನಾಭ್ಯಾದಿರಿತಿ ।**

ಇಲ್ಲಿಯ ತನಕ ಪರವಿದ್ಯಾವಿಷಯತ್ವವನ್ನು ನಿರವಕಾಶವಾದ ಲಿಂಗವೆಂದು ಸಮರ್ಥಿಸಿದರು. ಪ್ರಾಸಂಗಿಕವಾಗಿ ಆದ್ವೈತಿಗಳ ಪರಾಪರವಿದ್ಯೆಯ ವಿಚಾರವನ್ನು ವಿಮರ್ಶಿಸಿದರು. ಪ್ರಕೃತ ಪೂರ್ವಪಕ್ಷ ಪ್ರಾಪಕವಾದ ಲಿಂಗಗಳೆಲ್ಲವೂ ಸಾವಕಾಶವಾಗಿವೆಯೆಂದು ಕ್ರಮವಾಗಿ ಪ್ರತಿಪಾದಿಸುತ್ತಿದ್ದಾರೆ. ಊರ್ಣನಾಭ್ಯಾದಿ' ಇತ್ಯಾದಿ ವಾಕ್ಯದಿಂದ.

ಪ್ರಕಾಶಃ – 'ಅನ್ಯತ್ರ' ಪ್ರಕೃತ್ಯಧಿಕರಣಾನುವ್ಯಾಖ್ಯಾನಾದೌ । ತಥಾ ಚ ತದ್ಧಲಾತ್ ''ಅಕ್ಷರಾತ್ಸಮ್ಭವತಿ'' ಇತ್ಯತ್ರ ಪಞ್ಚಮ್ಯಾ ನೋಪಾದಾನತ್ವಮರ್ಥಃ, ಕಿನ್ತು ನಿಮಿತ್ತತ್ವಮೇವೇತ್ಯರ್ಥಃ ।

'ಅನ್ಯತ್ರ' ಎಂದರೆ ಪ್ರಕೃತ್ಯಧಿಕರಣದ ಅನುವಾಖ್ಯಾನಾದಿಗಳಲ್ಲಿ ಎಂದರ್ಥ. ಊರ್ಣನಾಭ್ಯಾದಿಗಳಲ್ಲಿ ನಿಮಿತ್ತಕಾರಣವೇ ಕಂಡಿರುವುದರಿಂದ 'ಅಕ್ಷರಾತ್ಸಂಭವತೀ' ಎಂಬಲ್ಲಿರುವ ಪಂಚಮೀವಿಭಕ್ತಿಗೆ ಉಪಾದಾನಕಾರಣವೆಂದರ್ಥವಲ್ಲ; ಹೊರತಾಗಿ ಅಕ್ಷರವು ಜಗತ್ತಿಗೆ ನಿಮಿತ್ತಕಾರಣವೆಂದೇ ಅರ್ಥ.

ಪ್ರಕಾಶಃ – ಏತೇನೋಪಾದಾನತ್ವರೂಪಬಾಧಕಾಭಾವೇನ ಅಕ್ಷರಶಬ್ದೋऽಕ್ಷರಾಧಿಕರಣನ್ಯಾಯೇನ ಸಾವಕಾಶ ಇತಿ ನ ಚಿತ್ಪ್ರಕೃತಿರಿತಿ ಪಕ್ಷೋऽಪಿ ಯುಜ್ಯತ ಇತಿ ಸಿದ್ಧತ್ವಾನ್ನೋಕ್ತಮ್ । ಚತುರ್ಮುಖಪ್ರಾಪಕಂ ಸಾವಕಾಶಯತಿ – **ಸ ಇತಿ** । ಆದಿಪದೇನ ಸಾರ್ವಜ್ಞ್ಯಾದಿಲಿಙ್ಗಂ ಗೃಹ್ಯತೇ ।

ಹೀಗೆ ಹೇಳಿದ್ದರಿಂದ ಉಪಾದಾನತ್ವವೆಂಬ ಬಾಧಕವಿಲ್ಲದ ಕಾರಣ ಅಕ್ಷರಶಬ್ದವು ಅಕ್ಷರಾಧಿಕರಣದ ನ್ಯಾಯದಿಂದ ವಿಷ್ಣುವಿನಲ್ಲಿ ಸಾವಕಾಶವಾಯಿತು. ಇಂತಹ ಅಕ್ಷರಶ್ರುತಿಯ ಬಲದಿಂದ ಚತುರ್ಮುಖನ ಪಕ್ಷವನ್ನು ಸಮರ್ಥಿಸಲಾಗದೆಂಬ ವಿಚಾರವು ಸಿದ್ಧವಾಯಿತು. ಆದ್ದರಿಂದಲೇ ಪ್ರತ್ಯೇಕವಾಗಿ ಇದನ್ನು ಹೇಳಿರುವುದಿಲ್ಲ. ಚತುರ್ಮುಖಬ್ರಹ್ಮನಿಗೆ ಪ್ರಾಪಕವಾದ ಬ್ರಹ್ಮಶಬ್ದವನ್ನು ಆದಿಪದದಿಂದ ಸರ್ವಜ್ಞತ್ವಾದಿಲಿಂಗಗಳನ್ನು ಸಾವಕಾಶ ಮಾಡುತ್ತಿದ್ದಾರೆ. 'ಸಃ' ಇತ್ಯಾದಿ ವಾಕ್ಯದಿಂದ.

गुरुराजीयम् – पक्षान्तरे त्विति ।। चतुर्मुखरुद्रपक्ष इत्यर्थः । न स्वर्यते नानुवर्तत इत्यर्थः । अन्यत्र न्यायामृते । उपादानत्वभङ्ग इत्यर्थः ।

ಸಾರ

ಸಿದ್ಧಾಂತವನ್ನು ಪ್ರಾರಂಭಿಸುತ್ತಿದ್ದಾರೆ. ಮೊದಲು ಪರವಿದ್ಯಾವಿಷಯತ್ವವು ವಿಷ್ಣುವಿನ ಅಸಾಧಾರಣ-ಲಿಂಗವಾಗಿದೆಯೆಂಬುದನ್ನು ಸಮರ್ಥಿಸುತ್ತಿದ್ದಾರೆ. ಪೂರ್ವಪಕ್ಷ ಮಾಡುವಾಗ ಅಪರವಿದ್ಯೆಗೆ ವಿಷ್ಣುವು ವಿಷಯನಾಗಿದ್ದಾನೆ ಹೊರತು, ಪರವಿದ್ಯೆಗೆ ವಿಷಯನಾಗುವುದಿಲ್ಲವೆಂದು ಸಮರ್ಥಿಸಿದ್ದರು. ಇದು ತಪ್ಪು. ಯಾವ ಋಗ್ವೇದಾದಿಗಳು ಅಪರವಿದ್ಯೆಯೆಂದು ಪೂರ್ವಪಕ್ಷಕಾರರು ಹೇಳಿದರೋ ಅದೇ ಋಗ್ವೇದಾದಿಗಳು ಪರವಿದ್ಯೆಯೆಂದೂ ಆಗುತ್ತವೆ. ಉಪಾಧಿಭೇದದಿಂದ ಒಂದೇ ಶಾಸ್ತ್ರವು ಪರವಿದ್ಯೆಯೂ ಆಗುತ್ತದೆ. ಅಪರವಿದ್ಯೆಯೂ ಆಗುತ್ತದೆ. ಯಾವರೀತಿಯಾಗಿ ಒಂದೇ ಕರ್ಮವು ನಿಷ್ಕಾಮಭಾವನೆಯಿಂದ ಆಚರಿಸಿದಾಗ ನಿವೃತ್ತಕರ್ಮವಾಗುತ್ತದೆ. ಸಕಾಮ ಭಾವನೆಯಿಂದ ಆಚರಿಸಿದಾಗ ಪ್ರವೃತ್ತಕರ್ಮವಾಗುತ್ತದೆ. ಅಥವಾ ನಾವು ತಿನ್ನುವ ಅನ್ನವು ಆರೋಗ್ಯಕ್ಕೆ ಹಿತವಾದ ಪದಾರ್ಥಗಳನ್ನು ಸೇರಿಸಿ ತಿಂದಾಗ ಪಥ್ಯವಾಗುತ್ತದೆ. ಆರೋಗ್ಯಕ್ಕೆ ಅಹಿತವಾದ ಪದಾರ್ಥವನ್ನು ಸೇರಿಸಿ ತಿಂದಾಗ ಅಪಥ್ಯವಾಗುತ್ತದೆ. ಇದರಂತೆ ಒಂದೇ ಋಗ್ವೇದಾದಿ ಶಾಸ್ತ್ರಗಳು ಉಪಕ್ರಮಾದಿ ತಾತ್ಪರ್ಯಲಿಂಗಗಳಿಂದ ವಿಚಾರಮಾಡಿ ಬ್ರಹ್ಮನನ್ನು ತಿಳಿದಾಗ ಪರವಿದ್ಯೆಯೆನಿಸುತ್ತದೆ, ಇಲ್ಲದಿದ್ದರೆ ಅಪರವಿದ್ಯೆಯೆನಿಸುತ್ತದೆ. ಆದ್ದರಿಂದ ಶ್ರೀಮದಾಚಾರ್ಯರ ಮಾತು 'ಋಗಾದ್ಯಾ ಅಪರಾ ವಿದ್ಯಾ ಯದಾ ವಿಷ್ಣೋರ್ನ ವಾಚಕಾಃ । ತಾ ಏವ ಪರಮಾ ವಿದ್ಯಾ ಯದಾ ವಿಷ್ಣೋಸ್ತು ವಾಚಕಾಃ ।।' 'ಯಾವಾಗ ಋಗ್ವೇದಾದಿಗಳು ವಿಷ್ಣುವನ್ನು ಪ್ರತಿಪಾದಿಸದೆ, ಉಪಾಸನಾ, ಕರ್ಮ ಮೊದಲಾದವನ್ನಷ್ಟೇ ಪ್ರತಿಪಾದಿಸುತ್ತವೋ ಆವಾಗ ಅಪರವಿದ್ಯೆಯೆನಿಸುತ್ತವೆ. ಯಾವಾಗ ವಿಷ್ಣುವನ್ನು ಪ್ರತಿಪಾದಿಸುತ್ತವೋ ಆವಾಗ ಪರವಿದ್ಯೆಯೆನಿಸುತ್ತಿವೆ' ಎಂದು. ಈ ಮಾತನ್ನು ಎಂದೂ ಮರೆಯಬಾರದು.

ಈ ಸಂದರ್ಭದಲ್ಲಿ ಆದ್ವೈತಿಗಳು ಏನು ಹೇಳುತ್ತಾರೆಂಬುದನ್ನು ತಿಳಿಯಬೇಕು. ವೇದವು ಮಂತ್ರ ಹಾಗೂ ಉಪನಿಷತ್ತುಎಂದುಎರಡುವಿಧ. ಉಪನಿಷತ್ ಭಾಗವುಪರವಿದ್ಯೆಯಾಗುತ್ತದೆ,ಮಂತ್ರಭಾಗವುಅಪರವಿದ್ಯೆಯಾಗುತ್ತದೆ. ಏಕೆಂದರೆ ಉಪನಿಷತ್ ಭಾಗವು ಶುದ್ಧಬ್ರಹ್ಮನನ್ನು ಪ್ರತಿಪಾದಿಸುವ ಮೂಲಕ ಮೋಕ್ಷಕಾರಣವಾಗಿದೆ. ಮಂತ್ರಭಾಗವು ಉಪಾಸನಾ, ಕರ್ಮ ಮೊದಲಾದವುಗಳನ್ನೆಲ್ಲಾ ಪ್ರತಿಪಾದನೆ ಮಾಡುವುದರಿಂದ ಮೋಕ್ಷಸಾಧನವಾಗಿಲ್ಲ ಎಂದು ಆದ್ವೈತಿಗಳ ಅಭಿಪ್ರಾಯ.

ಇದು ಸರಿಯಲ್ಲ. ಏಕೆಂದರೆ ಸಕಲ ಶ್ರುತಿಸ್ಮೃತಿಗಳಿಂದ ಮುಖ್ಯವಾಗಿ ಬ್ರಹ್ಮನೊಬ್ಬನೇ ಪ್ರತಿಪಾದ್ಯನಾಗಿದ್ದಾನೆ. ಆದ್ದರಿಂದ ಕೇವಲ ಉಪನಿಷತ್ ಭಾಗದಿಂದ ಪ್ರತಿಪಾದ್ಯನೆಂಬ ನಿರ್ಣಯ ತಪ್ಪಾಗುತ್ತದೆ. ವಿಚಾರ ಮಾಡಿದರೆ

ಮಂತ್ರಭಾಗವು ಉಪಾಸನಾದಿಗಳನ್ನು ವಿವರಿಸುವಂತೆ ಉಪನಿಷತ್ತಿನಲ್ಲಿಯೂ ಅನೇಕ ಕಡೆ ಬ್ರಹ್ಮನವಿಚಾರವು ಇರದೆ ಉಪಾಸನಾದಿಗಳ ವಿಚಾರವೇ ಇರುವುದು ಕಾಣಸುತ್ತದೆ. ಇನ್ನು ಮಂತ್ರಭಾಗದಲ್ಲಿಯೂ ಅನೇಕಕಡೆ ಬ್ರಹ್ಮವಿಚಾರವು ಪ್ರಸಕ್ತವಾಗಿದೆ. ಆದ್ದರಿಂದ ಆದ್ವೈತಿಗಳ ಅಭಿಪ್ರಾಯ ಸರಿಯಲ್ಲ.

ಇನ್ನು ರಾಮಾನುಜರು ಪರೋಕ್ಷಜ್ಞಾನವನ್ನು ಅಪರವಿದ್ಯೆಯೆಂದೂ, ಭಕ್ತಿರೂಪವಾದ ಅಪರೋಕ್ಷಜ್ಞಾನವನ್ನು ಪರವಿದ್ಯೆಯೆಂದೂ ಹೇಳುತ್ತಾರೆ. ಇದೂ ಸಹ ತಪ್ಪು. ವಿದ್ಯಾಶಬ್ದಕ್ಕೆ ಜ್ಞಾನಕರಣವೆಂದರ್ಥ. ಏಕೆಂದರೆ 'ಯಯಾ ತದಕ್ಷರಮಧಿಗಮ್ಯತೇ' ಎಂಬ ಶ್ರುತಿಯಿಂದ ಇದು ಸ್ಪಷ್ಟವಾಗುತ್ತದೆ. ಮತ್ತು ವ್ಯಾಕರಣದ ಪ್ರಕಾರ 'ವಿದ್' ಧಾತುವಿಗೆ 'ಕ್ಯಪ್' ಪ್ರತ್ಯಯವು ಬಂದು ವಿದ್ಯಾ ಎಂಬ ರೂಪವು ನಿಷ್ಪನ್ನವಾಗಿದೆ. ಈ 'ಕ್ಯಪ್' ಪ್ರತ್ಯಯವು ಭಾವಾರ್ಥದಲ್ಲಿರುವಂತೆ ಕರಣ, ಆಧಿಕರಣ ಮೊದಲಾದ ಅರ್ಥಗಳಲ್ಲಿಯೂ ಬರುತ್ತದೆ. ಆದ್ದರಿಂದ ಜ್ಞಾನವೆಂಬರ್ಥವನ್ನು ಹೇಳುವಂತೆ ಜ್ಞಾನಕರಣವೆಂಬರ್ಥವನ್ನೂ ಸಹ ವಿದ್ಯಾಶಬ್ದಕ್ಕೆ ಹೇಳಬಹುದು. ಪ್ರಕೃತ ಜ್ಞಾನಕರಣವೆಂಬರ್ಥವನ್ನೇ ವಿವಕ್ಷಿಸಬೇಕು.

ಪೂರ್ವಪಕ್ಷ ಮಾಡುವಾಗ ಊರ್ಣನಾಭಿ ಮೊದಲಾದ ದೃಷ್ಟಾಂತಗಳನ್ನು ನೀಡಿ ಶ್ರುತಿಯಲ್ಲಿ ಉಪಾದಾನಕಾರಣತ್ವವೇ ಪ್ರಸಕ್ತವಾಗಿದೆಯೆಂದು ಹೇಳಿದ್ದರು ಇದೂ ಸಹ ತಪ್ಪು. ಊರ್ಣನಾಭಿ, ಪೃಥಿವೀ ಮೊದಲಾದವುಗಳೆಲ್ಲವೂ ನಿಮಿತ್ತಕಾರಣವೇ ಆಗಿವೆ ಹೊರತು, ಉಪಾದಾನಕಾರಣವಾಗಿರುವುದಿಲ್ಲವೆಂಬ ವಿಚಾರವನ್ನು ಪ್ರಕೃತ್ಯಧಿಕರಣದ ಅನುವ್ಯಾಖ್ಯಾನ ಸುಧಾದಿಗ್ರಂಥಗಳನ್ನು ಓದಿ ತಿಳಿದುಕೊಳ್ಳಬೇಕು. ಆದ್ದರಿಂದ ಶ್ರುತಿಯು ನಿಮಿತ್ತಕಾರಣವನ್ನೇ ಹೇಳುತ್ತಿದೆ. ಇದು ಬ್ರಹ್ಮನಲ್ಲಿ ಯುಕ್ತವಾಗುತ್ತದೆ. ಇದರ ಜೊತೆಗೆ ಸರ್ವಜ್ಞತ್ವ, ಪರವಿದ್ಯಾವಿಷಯತ್ವ ಮೊದಲಾದ ಲಿಂಗಗಳೆಲ್ಲವೂ ವಿಷ್ಣುವಿನದ್ದೇ ಆಗಿರುತ್ತವೆಂದು ತಿಳಿಯಬೇಕು.

• • • • •

ವಿಶೇಷಣ ಹಾಗೂ ಭೇದವ್ಯಪದೇಶ ಹೇತುಗಳಲ್ಲಿರುವ ಸ್ವಾರಸ್ಯ ವರ್ಣನೆ

तात्पर्यचन्द्रिका

यच्चोक्तं सर्वज्ञपदं रुद्राख्यविशेष्यपरमिति, तन्न, तस्य चतुर्मुखजन्यतया तज्जनकत्वायोगात् । किन्तु प्रकृतस्याक्षरस्य सर्वज्ञत्वविशेषणपरम् ।

ಅನುವಾದ - ಹಿಂದೆ ಪೂರ್ವಪಕ್ಷ ಮಾಡುವಾಗ ಶ್ರುತಿಯಲ್ಲಿರುವ ಸರ್ವಜ್ಞಪದವು ರುದ್ರನೆಂಬ ವಿಶೇಷ್ಯಪದಾರ್ಥವನ್ನು ಹೇಳುತ್ತಿದೆ ಹೊರತು, ವಿಶೇಷಣವಾಚಕವಾಗಿಲ್ಲವೆಂದು ಹೇಳಲಾಗಿತ್ತು. ಇದು ತಪ್ಪು. ಒಂದು ವೇಳೆ ಸರ್ವಜ್ಞಪದವು ರುದ್ರನೆಂಬ ವಿಶೇಷ್ಯನನ್ನು ಹೇಳುವುದಾದರೆ ಮುಂದೆ ಆದೇ ಶ್ರುತಿಯಲ್ಲಿ ಸರ್ವಜ್ಞನಿಂದ ಚತುರ್ಮುಖನು ಹುಟ್ಟಿದನೆಂದು ಹೇಳಲಾಗಿದೆ. ರುದ್ರನು ಚತುರ್ಮುಖನಿಂದ ಹುಟ್ಟಿದ್ದಾನೆ ಹೊರತು, ಚತುರ್ಮುಖನಿಗೆ ಜನಕನಾಗಿಲ್ಲ. ಆದ್ದರಿಂದ ಸರ್ವಜ್ಞಪದವು ರುದ್ರನನ್ನು ಹೇಳುವುದಿಲ್ಲ ಹೊರತಾಗಿ, ಹಿಂದೆ ಪ್ರಕೃತವಾಗಿರುವ ಅಕ್ಷರನಲ್ಲಿ ಸರ್ವಜ್ಞತ್ವವನ್ನು ವಿಶೇಷಣವನ್ನಾಗಿ ಹೇಳುತ್ತಿದೆ.

ಪರಿಪೂರ್ಣಚಂದ್ರಿಕಾ

अत एव सूत्र विशेषणपदम् ।

ಆದ್ದರಿಂದಲೇ 'ವಿಶೇಷಣಭೇದವ್ಯಪದೇ:ಶಾಭ್ಯಾಂ ಚ ನೇತರೌ' ಎಂಬ ಸೂತ್ರದಲ್ಲಿ 'ವಿಶೇಷಣ' ಎಂಬ ಪದವನ್ನು ಸೂತ್ರಕಾರರು ಬಳಸಿದ್ದಾರೆ. ಸರ್ವಜ್ಞಪದವು ವಿಶೇಷ್ಯವಾಚಕವಾಗಿಲ್ಲ ಹೊರತು, ವಿಶೇಷಣವಾಚಕವೇ ಆಗಿದೆ ಎಂಬುದು ಇದರ ಆಂತರ್ಯ.

'सर्ववित्' इत्यनेन पौनरुक्त्यं च टीकायामेव त्रेधा परिहृतम् ।

ಮತ್ತು ಹಿಂದೆ ಪೂರ್ವಪಕ್ಷ ಮಾಡುವಾಗ ಸರ್ವಜ್ಞಪದವು ವಿಶೇಷಣವಾಚಕವಾದಲ್ಲಿ 'ಸರ್ವವಿತ್' ಎಂಬ ಮುಂದಿನ ಪದದಿಂದ ಪುನರುಕ್ತಿ ಬರುತ್ತದೆಂದು ಆಕ್ಷೇಪಿಸಿದ್ದರು. ಈ ಪುನರುಕ್ತಿ ದೋಷವನ್ನು ಟೀಕೆಯಲ್ಲಿಯೇ ಮೂರು ಪ್ರಕಾರದಲ್ಲಿ ಪರಿಹರಿಸಿದ್ದಾರೆ. 'ಸರ್ವವಿತ್' ಎಂಬ ಪದವು ಸರ್ವಜ್ಞತ್ವವನ್ನು ಹೇಳುತ್ತಿಲ್ಲ; ಸರ್ವೋತ್ಕಾದಕತ್ವಾದಿಗಳನ್ನು ಹೇಳುತ್ತಿದೆ ಇತ್ಯಾದಿಯಾಗಿ.

यद्यपि सर्वज्ञत्वविशेषणं चित्प्रकृतिचतुर्मुखरुद्राणाम् अक्षरत्वनिषेधेऽपि हेतूकर्तुं शक्यं, विष्णोरन्यस्य मुख्यसार्वज्ञ्याभावात् ।

ಮತ್ತೇನೆಂದರೆ ಭಾಷ್ಯದಲ್ಲಿ ಜಡಪ್ರಕೃತಿಯನ್ನು ಅಕ್ಷರವಲ್ಲವೆಂದು ನಿಷೇಧಮಾಡುವುದಕ್ಕಾಗಿ ಮಾತ್ರ ಸರ್ವಜ್ಞತ್ವವಿಶೇಷಣವನ್ನು ಹೇಳಿರುತ್ತಾರೆ. ವಾಸ್ತವಿಕವಾಗಿ ಚಿತ್ಪ್ರಕೃತಿ, ಚತುರ್ಮುಖಬ್ರಹ್ಮ, ರುದ್ರ ಮೊದಲಾದವರೂ ಸಹ ಅಕ್ಷರಶಬ್ದವಾಚ್ಯರಲ್ಲ ಎಂದು ನಿಷೇಧ ಮಾಡುವುದಕ್ಕಾಗಿಯೂ ಸರ್ವಜ್ಞತ್ವ ಎಂಬ ವಿಶೇಷಣವನ್ನು ಹೇತುವನ್ನಾಗಿ ಮಾಡಬಹುದು. ಏಕೆಂದರೆ ವಿಷ್ಣುವನ್ನು ಬಿಟ್ಟು ಬೇರೆ ಯಾರಲ್ಲಿಯೂ ಮುಖ್ಯವಾದ ಸರ್ವಜ್ಞತ್ವವು ಇರುವುದಿಲ್ಲವಾದ್ದರಿಂದ.

तथाऽपि चित्प्रकृत्यादीनामक्षरत्वे विश्वकर्तृत्वेन सर्वज्ञत्वस्यापि शक्यशङ्कत्वात्, श्रुतेरमुख्यसार्वज्ञ्यविषयत्वसम्भवाच्च जडप्रकृतिमात्रनिषेधे भाष्ये हेतूकृतम् ।

ಆದರೂ ಸಹ ಚಿತ್ಪ್ರಕೃತಿ, ಚತುರ್ಮುಖಬ್ರಹ್ಮ, ರುದ್ರ ಮೊದಲಾದವರೂ ಅಕ್ಷರಶಬ್ದವಾಚ್ಯರಾಗಿದ್ದರೆ ವಿಶ್ವಕರ್ತೃತ್ವ ಎಂಬ ಹೇತುವಿನಿಂದ ಸರ್ವಜ್ಞತ್ವವನ್ನೂ ಸಹ ಪೂರ್ವಪಕ್ಷಕಾರನು ಅವರಲ್ಲಿ ಆಶಂಕಿಸುತ್ತಾ. ಹೀಗಿರುವಾಗ ವಿವಾದಾಸ್ಪದವಾದ ಸರ್ವಜ್ಞತ್ವವನ್ನು ಹೇತುವನ್ನಾಗಿ ಮಾಡಲು ಸಾಧ್ಯವಿಲ್ಲ. ಮತ್ತು ಶ್ರುತಿಯು ಅಮುಖ್ಯವಾದ ಸಾರ್ವಜ್ಞ್ಯವನ್ನು ಹೇಳಬಹುದು. ಇಂತಹ ಅಮುಖ್ಯವಾದ ಸಾರ್ವಜ್ಞ್ಯವು ಚಿತ್ಪ್ರಕೃತ್ಯಾದಿಗಳಲ್ಲಿ ಬರುತ್ತದೆ. ಆದ್ದರಿಂದ ಭಾಷ್ಯಕಾರರು ಜಡಪ್ರಕೃತಿಯನ್ನು ಮಾತ್ರ ನಿಷೇಧಮಾಡುವುದಕ್ಕಾಗಿ ಭಾಷ್ಯದಲ್ಲಿ ಸರ್ವಜ್ಞತ್ವವನ್ನು ಹೇತುವನ್ನಾಗಿ

ಹೇಳಿರುತ್ತಾರೆ. ಜಡಪ್ರಕೃತಿಯಲ್ಲಿ ಜ್ಞಾನಕ್ಕೆ ಪ್ರಸಕ್ತಿಯೇ ಇಲ್ಲದ ಕಾರಣ ಅಮುಖ್ಯವಾದ ಸರ್ವಜ್ಞತ್ವವನ್ನೂ ಸಹ ಹೇಳಲು ಸಾಧ್ಯವಿಲ್ಲ.

यद्यपि च भेदव्यपदेशः चित्प्रकृतिनिषेधेऽपि हेतूकर्तुं शक्यः, ''अक्षरात्परतः परः'' इति चित्प्रकृतितोऽपि भेदव्यपदेशात् ।

ವಾಸ್ತವಿಕವಾಗಿ ಭಾಷ್ಯಕಾರರು ಭೇದವ್ಯಪದೇಶವೆಂಬ ಹೇತುವನ್ನು ಚತುರ್ಮುಖ ಹಾಗೂ ರುದ್ರರನ್ನು ನಿಷೇಧಮಾಡುವುದಕ್ಕಾಗಿ ಮಾತ್ರ ಬಳಸಿದ್ದಾರೆ. ವಿಚಾರ ಮಾಡಿದರೆ ಚಿತ್ಪ್ರಕೃತಿಯನ್ನು ನಿಷೇಧಮಾಡುವುದಕ್ಕಾಗಿಯೂ ಬಳಸಬಹುದು. ಏಕೆಂದರೆ 'ಅಕ್ಷರಾತ್ಪರತಃ ಪರಃ' ಎಂಬುದಾಗಿ ಶ್ರುತಿಯು ಅಕ್ಷರನಾಮಕಳಾದ ಲಕ್ಷ್ಮೀದೇವಿಗಿಂತ ಉತ್ತಮತ್ವವನ್ನು ಹೇಳುವ ಮೂಲಕ ಚಿತ್ ಪ್ರಕೃತಿಯಿಂದಲೂ ಭೇದವನ್ನು ಹೇಳುತ್ತಿದೆ.

तथाऽपि नाक्षरस्याक्षरात्परतः परत्वं, विरोधादिति शङ्कोदयादक्षरभेदोक्तिं विना चित्प्रकृतितो भेदव्यपदेशो न सिद्ध्यतीति चतुर्मुखरुद्रमात्रनिषेधे भाष्ये हेतूकृतः ।

ಆದರೂ ಸಹ ಅಕ್ಷರನಿಗೆ ಅಕ್ಷರಕ್ಕಿಂತ ಉತ್ತಮತ್ವವು ತಿಳಿಯುವುದಿಲ್ಲ. ತಾನೇ ತನ್ನಿಂದ ಉತ್ತಮನೆಂದು ಹೇಳಿದಂತಾಗಿ ವಿರೋಧ ಬರುತ್ತದೆ. ಇದನ್ನು ಪರಿಹರಿಸಬೇಕೆಂದರೆ ಅಕ್ಷರದಲ್ಲಿಯೇ ಅವಾಂತರ ಪ್ರಭೇದವನ್ನು ಹೇಳಬೇಕು. ಅಂದರೆ ಅಧಮಾಕ್ಷರ, ಮಧ್ಯಮಾಕ್ಷರ, ಉತ್ತಮಾಕ್ಷರವೆಂಬ ಭೇದವನ್ನು ಹೇಳಿ ಮಧ್ಯಮಾಕ್ಷರಳೆನಿಸಿದ ಲಕ್ಷ್ಮೀದೇವಿಗಿಂತಲೂ ಉತ್ತಮಾಕ್ಷರನೆನಿಸಿದ ಭಗವಂತನು ಶ್ರೇಷ್ಠನಾಗಿದ್ದಾನೆಂಬ ಅರ್ಥವನ್ನು 'ಅಕ್ಷರಾತ್ಪರತಃ ಪರಃ' ಎಂಬ ಶ್ರುತಿಗೆ ಹೇಳಬೇಕು. ಹೀಗೆ ಅಕ್ಷರರಲ್ಲಿ ಭೇದವನ್ನು ಹೇಳದೇ ಸುಲಭವಾಗಿ ಚಿತ್ಪ್ರಕೃತಿಗಿಂತ ಭಗವಂತನಲ್ಲಿ ಭೇದವನ್ನು ತಿಳಿಯಲು ಸಾಧ್ಯವಿಲ್ಲ. ಅದಕ್ಕೋಸ್ಕರ ಭಾಷ್ಯದಲ್ಲಿ ಚತುರ್ಮುಖಬ್ರಹ್ಮ, ರುದ್ರ ಇವರಿಬ್ಬರನ್ನು ಮಾತ್ರ ನಿಷೇಧ ಮಾಡುವುದಕ್ಕಾಗಿ ಭೇದವ್ಯಪದೇಶವೆಂಬ ಹೇತುವನ್ನು ಉಪಯೋಗಿಸಿದ್ದಾರೆ.

यद्यपि चात्र सौत्र इतरशब्दो जडप्रकृतिचतुर्मुखरुद्रपरः, तथाऽपि चतुर्मुख-रुद्रयोश्चेतनत्वेनैकीकृतत्वात् द्विवचनं युक्तम् ।

ವಾಸ್ತವಿಕವಾಗಿ 'ವಿಶೇಷಣಭೇದವ್ಯಪದೇಶಾಭ್ಯಾಂ ಚ ನೇತರೌ' ಎಂಬಲ್ಲಿರುವ ಇತರ ಶಬ್ದವು ಜಡಪ್ರಕೃತಿ, ಚತುರ್ಮುಖ, ರುದ್ರ ಮೂವರನ್ನು ಹೇಳುತ್ತಿದೆ. ಆದ್ದರಿಂದ 'ಇತರೇ' ಎಂಬುದಾಗಿ ಬಹುವಚನವನ್ನು ಪ್ರಯೋಗಿಸಬೇಕಿತ್ತು.

ಆದರೂ ಚತುರ್ಮುಖ ಹಾಗೂ ರುದ್ರರನ್ನು ಚೇತನತ್ವವೆಂಬ ಧರ್ಮದಿಂದ ಒಂದೇ ಪದಾರ್ಥವನ್ನಾಗಿ ಸ್ವೀಕರಿಸಿ ದ್ವಿವಚನವನ್ನು ಪ್ರಯೋಗಿಸಿದ್ದಾರೆಂದು ತಿಳಿಯಬೇಕು. ಚತುರ್ಮುಖಬ್ರಹ್ಮ,

ರುದ್ರ ಇವರಿಬ್ಬರನ್ನೂ ಒಂದು ವಸ್ತುವನ್ನಾಗಿ ಪರಿಗಣಿಸಿ ಜಡಪ್ರಕೃತಿಯನ್ನು ಮತ್ತೊಂದು ವಸ್ತುವನ್ನಾಗಿ ಪರಿಗಣಿಸಿ 'ಇತರೌ' ಎಂದು ಸೂತ್ರಕಾರರು ಹೇಳಿರುತ್ತಾರೆ.

''अक्षरत्रयमीरितम्'' इति भाष्योक्तस्मृत्या चाक्षरव्यक्तीनां भेदव्यपदेशात्,

'ಅಕ್ಷರತ್ರಯಮೀರಿತಮ್' ಎಂದು ಭಾಷ್ಯದಲ್ಲಿ ಉದಾಹರಿಸಿದ ಸ್ಮೃತಿಯ ಆಧಾರದಿಂದ ಅಕ್ಷರ ವ್ಯಕ್ತಿಗಳಲ್ಲಿ ಭೇದವಿದೆಯೆಂದು ತಿಳಿಯುತ್ತದೆ. ಅಂದರೆ ಈಗಾಗಲೇ ಹೇಳಿದಂತೆ, ಅಧಮಾಕ್ಷರ, ಮಧ್ಯಮಾಕ್ಷರ, ಉತ್ತಮಾಕ್ಷರವೆಂಬ ಭೇದವಿದೆಯೆಂದು ತಿಳಿಯಬೇಕು.

पाण्डवस्यार्जुनस्येव कार्तवीर्यार्जुनादिव ।
ब्रह्माक्षरस्य परता स्यादब्रह्माक्षराद्ध्रुवम् ।।

तदुक्तं न्यायविवरणे – ''अक्षरात्परतः परस्याप्यक्षरान्तरत्ववचनात्'' इति ।

ಕಾರ್ತವೀರ್ಯಾರ್ಜುನ, ಪಾಂಡವಾರ್ಜುನ ಎಂಬುದಾಗಿ ಇಬ್ಬರು ಅರ್ಜುನರಿದ್ದಾರೆ. ಕಾರ್ತವೀರ್ಯಾರ್ಜುನನಿಗಿಂತ ಪಾಂಡವಾರ್ಜುನನು ಉತ್ತಮನಾಗಿದ್ದಾನೆ. ಈ ವಿವಕ್ಷೆಯಿಂದ ಅರ್ಜುನನಿಗಿಂತ ಅರ್ಜುನನು ಉತ್ತಮನು ಎಂಬ ವಾಕ್ಯವನ್ನು ಪ್ರಯೋಗಿಸಬಹುದು. ಅದರಂತೆ ಅಕ್ಷರವು ಎರಡು ವಿಧ - ಬ್ರಹ್ಮಾಕ್ಷರ, ಅಬ್ರಹ್ಮಾಕ್ಷರ ಎಂದು. ಅಬ್ರಹ್ಮಾಕ್ಷರಕ್ಕಿಂತ ಬ್ರಹ್ಮಾಕ್ಷರವು ಉತ್ತಮವಾದ್ದರಿಂದ ಅಕ್ಷರಕ್ಕಿಂತ ಅಕ್ಷರವು ಉತ್ತಮವಾಗಿದೆ ಎಂಬ ವಾಕ್ಯವನ್ನು ಪ್ರಯೋಗಿಸಬಹುದು.

ಇದನ್ನೇ ನ್ಯಾಯವಿವರಣೆಯಲ್ಲಿ ''ಅಕ್ಷರಾತ್ಪರತಃ ಪರಸ್ಯಾಪ್ಯಕ್ಷರಾಂತರತ್ವವಚನಾತ್'' 'ಅಕ್ಷರಕ್ಕಿಂತ ಅಕ್ಷರವು ಉತ್ತಮವಾಗಿದೆಯೆಂದು ಹೇಳಬಹುದು' ಎಂದಿದ್ದಾರೆ.

'प्रकृताप्रकृतत्यागस्वीकारौ बाधके सति ।
दोषाय नैवैतस्यैव रेवतीष्विति वाक्यवत् ।।

ಅಕ್ಷರಶಬ್ದದಿಂದ ವಿಷ್ಣುವನ್ನು ಸ್ವೀಕರಿಸಿದರೆ ಪ್ರಕೃತಹಾನ ಅಪ್ರಕೃತಸ್ವೀಕಾರಗಳೆಂಬ ದೋಷಗಳಿಗೆ ಅವಕಾಶವಿದೆಯಲ್ಲವೇ? ಎಂದು ಪ್ರಶ್ನಿಸಬಾರದು. ಬಾಧಕವಿದ್ದಾಗ ಪ್ರಕೃತಹಾನ ಅಪ್ರಕೃತ ಸ್ವೀಕಾರಮಾಡುವುದು ತಪ್ಪಾಗುವುದಿಲ್ಲ. ಪೂರ್ವಮೀಮಾಂಸೆಯಲ್ಲಿ ಬರುವ 'ರೇವತೀಷು' ಎಂಬ ವಾಕ್ಯವೇ ಇದಕ್ಕೆ ಉದಾಹರಣೆ.

यथा ''एतस्यैव रेवतीषु वारवन्तीयमग्निष्टोमसाम कृत्वा पशुकामो ह्येतेन यजेत'' इत्यत्र यजेः प्रकृतवाचिन्येतच्छब्दे सत्यपि प्रकृताग्निष्टुदाख्ययागत्यागः अप्रकृतयागान्तरस्वीकारश्च दोषाय नैव भवतः, प्रकृतपरत्वे वाक्यभेदात्,

पूर्वमीमांसेयल्लि 'एतस्यैव रेवतीषु वारवंतीयमग्निष्टोमसाम कृत्वा पशुकामो ह्येतेन यजेत' एंब वाक्यवु प्रसक्तवागुत्तदे. इल्लि केळिसुत्तिरुव 'यजे' एंब प्रकृत्यर्थवन्नु हेळुव एतत् शब्दविदे. आदरू सह प्रकृतवाद 'अग्निष्टुत्' एंब यागवन्नु बिट्टु अप्रकृतवाद मत्तोंदु यागवन्नु स्वीकार माडलागिदे. ऒंदु वेळे प्रकृतवाद यागवन्ने स्वीकरिसिदरे वाक्यभेददोषवु बरुत्तदे. हीगे बाधकविरुवुदरिंद प्रकृतवाद्दन्नु बिट्टु अप्रकृतवाद्दन्नु मीमांसकरु हेगे स्वीकरिसिद्दारो, अदरंते इल्लियू तिळियबेकु.

तथा ''अक्षरात्परतः'' इत्यस्य प्रकृतादृश्यत्वादिगुणकाक्षरपरतायाः बाधितत्वात्त्यागः, अप्रकृतप्रकृत्याख्याक्षरस्वीकारश्च ।

पूर्वमीमांसा दृष्टांतदंते 'अक्षरात्परतः' एंबल्लियू प्रकृतवाद अदृश्यत्वादिगुणगळुळ्ळ विष्णुपरत्ववन्नु अक्षरशब्दक्के हेळिदरे बाधकविदे. आद्दरिंद प्रकृतवाद विष्णुवेंबर्थवन्नु बिट्टु अप्रकृतवाद प्रकृतियेंबर्थवन्नु अक्षरशब्दक्के हेळबेकु.

अत्र सूत्रक्रमस्तत्तद्विषयवाक्यक्रमादिति ।।

ई अधिकरणदल्लिरुव सूत्रगळ विन्यासवु विषयवाक्यद क्रमक्के अनुसारियागिदेयेंबुदन्नु गमनिसबेकु.

प्रकाशः –

यदपि रुद्रप्रापकेशशब्दोपोद्बलकं सर्वज्ञपदमिति, तत्राह – **यच्चेति** ।। ''यस्सर्वज्ञः'' इत्यस्योत्तरार्धे

'तस्मादेतद्ब्रह्म नामरूपमन्नं च जायते ।'

इति चतुर्मुखजनकत्वश्रवणात्, तस्य च रुद्रे अनुपपत्तेरित्याह – **तस्येति** ।

विवरणे - रुद्रनेे अक्षरशब्दवाच्यनागिद्दानेन्नलु निरवकाशवाद ईशशब्दवु आधारवागिदे. इंतह ईशशब्दक्के निरवकाशत्ववन्नु सर्वज्ञपदवु समर्थिसुत्तिदे. आद्दरिंद सर्वज्ञपदवु रुद्रनेंब विशेष्यनन्नु प्रतिपादिसुवुदरिंद पूर्वपक्षप्रापकवागिदेयेंदु हिंदे पूर्वपक्षदल्लि हेळिद्दरु. अदन्नु 'यच्च' इत्यादि ग्रंथदिंद निराकरिसुत्तिद्दारे.

ಯಾವ ಶ್ರುತಿವಾಕ್ಯದಲ್ಲಿ 'ಸರ್ವಜ್ಞಃ' ಎಂಬ ಪದವು ಕೇಳಿಸುತ್ತಿದೆಯೋ, ಅದರ ಉತ್ತರಾರ್ಧದಲ್ಲಿ 'ತಸ್ಮಾದೇತದ್ಬ್ರಹ್ಮ ನಾಮರೂಪಮನ್ನಂ ಚ ಜಾಯತೇ' ಎಂಬಂತೆ ಸರ್ವಜ್ಞನಾದವನು ಚತುರ್ಮುಖಬ್ರಹ್ಮನಿಗೆ ಜನಕನಾಗಿದ್ದಾನೆಂದು ಹೇಳಲಾಗಿದೆ. ಇದು ರುದ್ರನಲ್ಲಿ ಅನುಪಪನ್ನವಾಗಿದೆಯೆಂದು 'ತಸ್ಯ' ಎಂಬ ವಾಕ್ಯದಿಂದ ಸಮರ್ಥಿಸುತ್ತಿದ್ದಾರೆ.

ಪ್ರಕಾಶಃ –

'ಬ್ರಹ್ಮಣಃ ಪ್ರಥಮೇ ಕಲ್ಪೇ ಶಿವಃ ಪ್ರಥಮಜಸ್ಸ್ಮೃತಃ ।'

ಇತ್ಯಾದ್ಯಾರ್ಥವರ್ಣಭಾಷ್ಯೋಕ್ತಸ್ಮೃತೇರಿತಿ ಭಾವಃ । **ಪ್ರಕೃತಸ್ಯೇತಿ** । ವಿಶ್ವಹೇತುತಯಾ ಪ್ರಕೃತಸ್ಯೇತ್ಯರ್ಥಃ । **ಸೂತ್ರ ಇತಿ** । ''ವಿಶೇಷಣಭೇದವ್ಯಪದೇಶಾಭ್ಯಾಂ ಚ ನೇತರೌ'' ಇತಿ ಸೂತ್ರೇ ಸಾರ್ವಜ್ಞ್ಯವಿಶೇಷಣಾದಿತ್ಯುಕ್ತಮಿತ್ಯರ್ಥಃ ।

'ಬ್ರಹ್ಮಣಃ ಪ್ರಥಮೇ ಕಲ್ಪೇ ಶಿವಃ ಪ್ರಥಮಜಸ್ಸ್ಮೃತಃ ।' ಎಂಬುದಾಗಿ ಬ್ರಹ್ಮನಿಂದ ರುದ್ರನು ಮೊದಲು ಹುಟ್ಟಿದನೆಂದು ಆಥರ್ವಣಭಾಷ್ಯದಲ್ಲಿ ಹೇಳಲ್ಪಟ್ಟ ಸ್ಮೃತಿಯಿಂದ ಸಿದ್ಧವಾಗಿದೆ. 'ಪ್ರಕೃತಸ್ಯ' ಎಂದರೆ ಜಗತ್ಕಾರಣನಾಗಿ ಪ್ರಕೃತನಾದ ಎಂದರ್ಥ. 'ಸೂತ್ರೇ' ಎಂದರೆ 'ವಿಶೇಷಣಭೇದವ್ಯಪದೇಶಾಭ್ಯಾಂ ಚ ನೇತರೌ' ಎಂಬ ಸೂತ್ರದಲ್ಲಿ ಎಂದರ್ಥ. ಇದರಲ್ಲಿ ಸರ್ವಜ್ಞತ್ವವನ್ನು ವಿಶೇಷಣವೆಂದು ತಿಳಿಸಲು ವಿಶೇಷಣಪದವನ್ನು ಉಲ್ಲೇಖಿಸಿದ್ದಾರೆ.

ಪ್ರಕಾಶಃ – ನನು ಯೌಗಿಕತ್ವೇ 'ಸರ್ವವಿತ್' ಇತ್ಯನೇನ ಪುನರುಕ್ತತೋಕ್ತೇತ್ಯತ ಆಹ – **ಸರ್ವವಿದಿತಿ** । **ತ್ರೇಧೇತಿ** । ಸಾಮಾನ್ಯವಿಶೇಷತಯಾ ವಾ, ಸರ್ವಂ ವಿನ್ದತಿ ಲಭತ ಇತಿ ವಾ, ಸರ್ವಮುತ್ಪಾದಯತೀತ್ಯುತ್ಪತ್ತ್ಯರ್ಥಕತ್ವೇನ ವಾ ವಿದಿಧಾತುರ್ನೇಯ ಇತ್ಯುಕ್ತಮಿತ್ಯರ್ಥಃ ।

ಸರ್ವಜ್ಞಪದವನ್ನು ಯೌಗಿಕವೆಂದು ಹೇಳಿದರೆ, ಮುಂದಿರುವ 'ಸರ್ವವಿತ್' ಎಂಬ ಪದದಿಂದ ಪುನರುಕ್ತಿದೋಷವು ಬರುತ್ತದಲ್ಲವೇ? ಎಂಬ ಪ್ರಶ್ನೆಗೆ 'ಸರ್ವವಿತ್' ಎಂಬ ವಾಕ್ಯದಿಂದ ಉತ್ತರಿಸುತ್ತಿದ್ದಾರೆ. ಪುನರುಕ್ತಿದೋಷವನ್ನು ಟೀಕೆಯಲ್ಲಿ ಮೂರು ಪ್ರಕಾರವಾಗಿ ಪರಿಹರಿಸಿದ್ದಾರೆ.

೧. ಸರ್ವಜ್ಞಪದಕ್ಕೆ ಸಾಮಾನ್ಯವಾಗಿ ಎಲ್ಲವನ್ನು ತಿಳಿದಿದ್ದಾನೆಂದರ್ಥ. 'ಸರ್ವವಿತ್' ಪದಕ್ಕೆ ವಿಶೇಷವಾಗಿ ಎಲ್ಲವನ್ನು ತಿಳಿದಿದ್ದಾನೆಂದರ್ಥ.

೨. ಸರ್ವಂ ವಿಂದತಿ = ಎಲ್ಲವನ್ನು ಹೊಂದಿದ್ದಾನೆ ಎಂದು, 'ಸರ್ವವಿತ್' ಎಂಬ ಪದಕ್ಕೆ ಅರ್ಥವನ್ನು ವಿವಕ್ಷಿಸಬೇಕು.

೩. 'ವಿದಉತ್ಪತ್ತೌ' ಎಂಬ ಧಾತುವನ್ನು ವಿವಕ್ಷಿಸಿದಾಗ 'ಸರ್ವಮ್ ಉತ್ಪಾದಯತಿ' ಎಲ್ಲವನ್ನು ಹುಟ್ಟಿಸುತ್ತಾನೆ ಎಂದು 'ಸರ್ವವಿತ್' ಪದಕ್ಕೆ ಅರ್ಥ. ಹೀಗೆ ಮೂರು ಪ್ರಕಾರದಲ್ಲಿ 'ಸರ್ವವಿತ್' ಎಂಬ ಪದದ ಅರ್ಥವನ್ನು ತಿಳಿದುಕೊಳ್ಳಬೇಕು.

प्रकाशः – अत्र रामानुजभाष्यादौ ''विशेषणभेद'' इति हेतुद्वयस्य प्रत्येकं प्रधानादिमात्रनिरासकत्वमुपेत्यैकैकस्य प्रधानादिमात्रनिरासकत्ववर्णनं दूषितम् ।

'विशेषणभेदव्यपदेशाभ्यां च नेतरौ' ಎಂಬ ಸೂತ್ರವನ್ನು ವ್ಯಾಖ್ಯಾನಿಸುವಾಗ ರಾಮಾನುಜ ಹಾಗೂ ಶಾಂಕರ ಭಾಷ್ಯದಲ್ಲಿ ವಿಶೇಷಣವೆಂಬ ಹೇತು ಹಾಗೂ ಭೇದವ್ಯಪದೇಶವೆಂಬ ಹೇತುಗಳೆರಡು ಪ್ರತ್ಯೇಕವಾಗಿ ಪ್ರಧಾನಾದಿ ಪೂರ್ವಪಕ್ಷಗಳನ್ನು ಮಾತ್ರ ನಿರಾಸಮಾಡುತ್ತೇವೆ ಎಂದೇ ಹೇಳಬೇಕು ಹೊರತು, ಒಂದೊಂದು ಹೇತುಗಳು ಕೇವಲ ಒಂದೊಂದು ಪೂರ್ವಪಕ್ಷವನ್ನು ನಿರಾಸ ಮಾಡುತ್ತವೆ ಎಂದು ಹೇಳಬಾರದು ಎಂದು ವ್ಯಾಖ್ಯಾನಿಸಿದ್ದಾರೆ.

प्रकाशः – भाष्ये तु 'विशेषणात्' इत्यस्य प्रधानमात्रव्यावर्तकत्वं, भेदव्यपदेशस्य ब्रह्मरुद्रमात्रनिषेधकत्वमुक्तम् ।

ಆದರೆ ಆಚಾರ್ಯರು ಭಾಷ್ಯದಲ್ಲಿ 'ವಿಶೇಷಣಾತ್' ಎಂಬ ಹೇತು ಕೇವಲ ಪ್ರಧಾನವನ್ನಷ್ಟೇ ವ್ಯಾವರ್ತನೆ ಮಾಡುತ್ತದೆ. 'ಭೇದವ್ಯಪದೇಶ' ಎಂಬ ಹೇತು ಕೇವಲ ಬ್ರಹ್ಮರುದ್ರಪಕ್ಷವನ್ನಷ್ಟೇ ನಿರಾಕರಿಸುತ್ತದೆಂದು ಹೇಳಿದ್ದಾರೆ.

प्रकाशः – तत्र परोक्तदूषणालग्नतां वक्तुम् अक्षरस्य सर्वज्ञत्वविशेषणे किं लब्धमित्यतः प्रवृत्तं ''–

यः सर्वज्ञः सर्वविद्यस्य ज्ञानमयं तपः ।

इति विशेषणात्र प्रकृतिः'' इति भाष्यमाक्षिप्य समाधत्ते – **यद्यपीति** ।

ಹೀಗೆ ಹೇಳಿದಾಗ ರಾಮಾನುಜರು ಒಂದೊಂದು ಹೇತುವಿನಿಂದ ಒಂದೊಂದು ಪೂರ್ವಪಕ್ಷವನ್ನಷ್ಟೇ ನಿರಾಕರಿಸಿದರೆ ಯಾವ ದೋಷಗಳನ್ನು ಹೇಳುತ್ತಾರೋ, ಆ ದೋಷಗಳು ನಮಗೆ ಬರುವುದಿಲ್ಲವೆಂದು ಸಾಧಿಸಬೇಕು. ಮತ್ತು ಅಕ್ಷರನಲ್ಲಿ ಸರ್ವಜ್ಞತ್ವವನ್ನು ವಿಶೇಷಣವನ್ನಾಗಿ ಹೇಳಿದ್ದರಿಂದ ಏನು ಪ್ರಯೋಜನವೆಂಬುದನ್ನು ತಿಳಿಸಬೇಕು. ಈ ಎರಡು ಉದ್ದೇಶದಿಂದ 'यः सर्वज्ञः सर्वविद् यस्य ज्ञानमयं तपः । ಇತಿ ವಿಶೇಷಣಾನ್ನ ಪ್ರಕೃತಿಃ' ಎಂಬ ಭಾಷ್ಯವು ಹೊರಟಿದೆ. ಈ ಭಾಷ್ಯವನ್ನು ಆಕ್ಷೇಪ ಮಾಡಿ ಸಮಾಧಾನ ನೀಡಿದ್ದಾರೆ 'ಯದ್ಯಪಿ' ಇತ್ಯಾದಿ ಗ್ರಂಥದಿಂದ.

प्रकाशः – प्रकृतिपदस्य टीकायां जडपरत्वेन वर्णनस्यापि तात्पर्यमुक्तं भवति ।

'ಯದ್ಯಪಿ' ಇತ್ಯಾದಿ ವಾಕ್ಯದಿಂದ ಟೀಕೆಯಲ್ಲಿ ಪ್ರಕೃತಿಪದಕ್ಕೆ ಕೇವಲ ಜಡಪರತ್ವವನ್ನು ಅಂಗೀಕರಿಸಿದ್ದರ ತಾತ್ಪರ್ಯವನ್ನೂ ಹೇಳಿದಂತಾಯಿತು. ಅಂದರೆ ಪ್ರಕೃತಿ ಪದದಿಂದ ಚಿತ್ಪ್ರಕೃತಿಯನ್ನೂ ಸಹ ವಿವಕ್ಷಿಸಬಹುದು. ಆದರೆ ಜಡಪ್ರಕೃತಿಯನ್ನು ಮಾತ್ರ ಟೀಕೆಯಲ್ಲಿ ಯಾಕೆ ಸ್ವೀಕರಿಸಿದ್ದಾರೆ ಎಂದರೆ ಸರ್ವಜ್ಞತ್ವವನ್ನು ಇದರಲ್ಲಿ ಆಕ್ಷೇಪಮಾಡಲೂ ಸಹ ಬರುವುದಿಲ್ಲವೆಂದು ತೋರಿಸುವುದಕ್ಕಾಗಿ.

ಪ್ರಕಾಶಃ – ಸೂತ್ರಖಣ್ಡವ್ಯಾಖ್ಯಾನಪರಂ –

'ತಸ್ಮಾದೇತದ್ಬ್ರಹ್ಮ ನಾಮ ರೂಪಮನ್ನಂ ಚ ಜಾಯತೇ ।'

ಇತಿ ಭೇದವ್ಯಪದೇಶಾನ್ನ ವಿರಿಞ್ಚಃ । ''ಜುಷ್ಟಂ ಯದಾ ಪಶ್ಯತ್ಯನ್ಯಮೀಶಮಸ್ಯ ಮಹಿಮಾನಮಿತಿ ವೀತಶೋಕಃ'' ಇತಿ ಭೇದವ್ಯಪದೇಶಾದೀಶಪದಪ್ರಾಪ್ತೋऽಪಿ ನ ರುದ್ರಃ'' ಇತಿ ಭಾಷ್ಯಮಾಕ್ಷಿಪ್ಯ ಸಮಾಧತ್ತೇ – **ಯದ್ಯಪಿ ಚೇತಿ ।**

'ಭೇದವ್ಯಪದೇಶಾಭ್ಯಾಂ' ಎಂಬ ಸೂತ್ರದ ಭಾಗವನ್ನು ವ್ಯಾಖ್ಯಾನಮಾಡುವ 'ತಸ್ಮಾದೇತದ್ಬ್ರಹ್ಮ ನಾಮ ರೂಪಮನ್ನಂ ಚ ಜಾಯತೇ । ಇತಿ ಭೇದವ್ಯಪದೇಶಾನ್ನ ವಿರಿಂಚಃ ।' ''ಜುಷ್ಟಂ ಯದಾ ಪಶ್ಯತ್ಯನ್ಯಮೀಶಮಸ್ಯ ಮಹಿಮಾನಮಿತಿ ವೀತಶೋಕಃ'' ಇತಿ ಭೇದವ್ಯಪದೇಶಾದೀಶಪದಪ್ರಾಪ್ತೋऽಪಿ ನ ರುದ್ರಃ'' ಇತ್ಯಾದಿ ಭಾಷ್ಯವನ್ನು ಆಕ್ಷೇಪ ಮಾಡಿ ಸಮಾಧಾನ ಹೇಳುವುದಕ್ಕಾಗಿ 'ಯದ್ಯಪಿ ಚ' ಎಂಬ ವಾಕ್ಯವು ಹೊರಟಿದೆ.

ಪ್ರಕಾಶಃ – ಭೇದವ್ಯಪದೇಶಕವಾಕ್ಯಮಾಹ – **ಅಕ್ಷರಾದಿತಿ ।**

ಭೇದವನ್ನು ಹೇಳುವ ವಾಕ್ಯವನ್ನು 'ಅಕ್ಷರಾತ್' ಎಂಬುದರಿಂದ ತೋರಿಸುತ್ತಿದ್ದಾರೆ.

ಪ್ರಕಾಶಃ – ನನು ವಿಶೇಷಣಭೇದವ್ಯಪದೇಶಾಭ್ಯಾಂ ಯದಿ ಜಡಪ್ರಕೃತಿಬ್ರಹ್ಮರುದ್ರಾಣಾಂ ನಿರಾಸಸ್ತರ್ಹಿ ''ನೇತರೇ'' ಇತಿ ಬಹುವಚನಾನ್ತನಿರ್ದೇಶಃ ಸ್ಯಾದಿತ್ಯಾಶಙ್ಕ್ಯ ಸಮಾಧಾನಮಾಹ – **ಯದ್ಯಪಿ ಚೇತಿ ।**

ವಿಶೇಷಣ ಹಾಗೂ ಭೇದವ್ಯಪದೇಶಗಳಿಂದ ಜಡಪ್ರಕೃತಿ, ಬ್ರಹ್ಮ, ರುದ್ರ ಇವರುಗಳೆನ್ನೆಲ್ಲಾ ನಿರಾಸ ಮಾಡುವುದಾದರೆ ''ನೇತರೇ'' ಎಂದು ಬಹುವಚನಾಂತವಾದ ನಿರ್ದೇಶವನ್ನೇ ಮಾಡಬೇಕಿತ್ತಲ್ಲವೇ ? ಎಂದು ಆಶಂಕಿಸಿ ಸಮಾಧಾನವನ್ನು ಹೇಳುವುದಕ್ಕಾಗಿ 'ಯದ್ಯಪಿ ಚ' ಎಂಬ ವಾಕ್ಯವು ಹೊರಟಿದೆ.

ಪ್ರಕಾಶಃ – ಏವಂ ಪೃಥಿವ್ಯಾದಿದೃಷ್ಟಾನ್ತೋಕ್ತ್ಯಾದಿನಿ ಪೂರ್ವಪಕ್ಷೋಪೋದ್ಬಲಕಾನಿ ಸಿದ್ಧಾನ್ತಬಾಧಕಾನಿ ನಿರಸ್ಯೇದಾನೀಂ, ಯತ್ ''ಅಕ್ಷರಾತ್ಪರತಃ'' ಇತಿ ನಿಕೃಷ್ಟತ್ವೇನ ಶ್ರುತತ್ವರೂಪಂ ಬಾಧಕಾನ್ತರಂ, ತದಪಿ ನೇತ್ಯಾಹ – **ಅಕ್ಷರೇತಿ ।**

ಇಲ್ಲಿಯ ತನಕ ಪೃಥಿವ್ಯಾದಿದೃಷ್ಟಾಂತಗಳನ್ನು ಹೇಳಿರುವುದೇ ಮೊದಲಾದ ಪೂರ್ವಪಕ್ಷಕ್ಕೆ ಉಪೋದ್ಬಲಕವಾಗಿರುವ ಹಾಗೂ ಸಿದ್ಧಾಂತಕ್ಕೆ ಬಾಧಕವಾಗಿರುವ ಲಿಂಗಗಳನ್ನು ನಿರಾಕರಿಸಿದ್ದಾಯಿತು. ಈಗ 'ಅಕ್ಷರಾತ್ಪರತಃ ಪರಃ' ಎಂಬಲ್ಲಿ ಅಕ್ಷರನಿಗೆ ಕೇಳಿಸಲ್ಪಟ್ಟ ನಿಕೃಷ್ಟತ್ವವೆಂಬ ಮತ್ತೊಂದು ಬಾಧಕವನ್ನೂ ಸಹ 'ಅಕ್ಷರ' ಎಂಬ ವಾಕ್ಯದಿಂದ ನಿರಾಕರಿಸುತ್ತಿದ್ದಾರೆ.

ಪ್ರಕಾಶಃ – ಏತೇನ ''ಭೇದವ್ಯಪದೇಶ'' ಇತಿ ಸೂತ್ರಖಣ್ಡಸ್ಯ ಅಕ್ಷರವ್ಯಕ್ತೀನಾಂ

अपरं त्वक्षरं या सा प्रकृतिर्जडरूपिका ।
श्रीः परा प्रकृतिः प्रोक्ता चेतना विष्णुसंश्रया ।।

तामक्षरं परं प्राहुः परतः परमक्षरम् ।
हरिमेवाखिलगुणमक्षरत्रयमीरितम् ।।

इति स्मृत्या भेदव्यपदेशादित्यप्यर्थ उक्तो भवति । पञ्चम्यन्तस्य श्लोकेनान्वयः ।

ಹೀಗೆ ಹೇಳಿದ್ದರಿಂದ ಭೇದವ್ಯಪದೇಶವೆಂಬ ಸೂತ್ರದ ಭಾಗಕ್ಕೆ ಅಕ್ಷರವ್ಯಕ್ತಿಗಳಿಗೆ ಸ್ಮೃತಿಪ್ರತಿಪಾದಿತವಾದ ಪರಸ್ಪರ ಭೇದವಿರುವುದರಿಂದ ಎಂಬರ್ಥವನ್ನು ಹೇಳಿದಂತಾಯಿತು.

ಸ್ಮೃತಿವಾಕ್ಯವು ಹೀಗಿದೆ -

'अपरं त्वक्षरं या सा प्रकृतिर्जडरूपिका ।
श्रीः परा प्रकृतिः प्रोक्ता चेतना विष्णुसंश्रया ।।

तामक्षरं परं प्राहुः परतः परमक्षरम् ।
हरिमेवाखिलगुणमक्षरत्रयमीरितम् ।।'

ಇಲ್ಲಿ ಜಡರೂಪವಾದ ಪ್ರಕೃತಿಯು ಅಪರ ಅಕ್ಷರ, ಚೇತನರೂಪವಾದ ಲಕ್ಷ್ಮಿಯು ಪರ ಅಕ್ಷರ ಇವೆರಡೂ ವಿಷ್ಣುವನ್ನೇ ಆಶ್ರಯಿಸಿದೆ. ಅಂತಹ ವಿಷ್ಣು ಉತ್ತಮನಾದ ಪರತಃ ಪರನಾದ (ಪರಮ) ಅಕ್ಷರನಾಗಿದ್ದಾನೆ. ಜ್ಞಾನಿಗಳು ಗುಣಪೂರ್ಣನಾದ ಹರಿಯನ್ನೇ 'ಪರಮಾಕ್ಷರ' ಎಂದು ಕರೆಯುತ್ತಾರೆ. ಹೀಗೆ ಮೂರು ಬಗೆಯ ಅಕ್ಷರಗಳಿಗೆ ಪರಸ್ಪರ ಭೇದವನ್ನು ಹೇಳಲಾಗಿದೆ. ಪಂಚಮ್ಯಂತವಾದ ಪದಕ್ಕೆ ಶ್ಲೋಕದಲ್ಲಿ ಅನ್ವಯ ಮಾಡಬೇಕು.

प्रकाशः – उभयोरर्जुनशब्दवाच्यत्वेऽपि परापरभाव इवेहापि स इत्यर्थः । ननूक्तमत्र प्रकृतहानाप्रकृतस्वीकारौ स्याताामिति, तत्र ''परविद्याविषयत्वबलेन प्रकृतपरित्यागाप्रकृतग्रहणयोरुपपत्तेः'' इति न्यायविवरणटीकोक्तमाह – प्रकृतेति । दृष्टान्तभागविवरणपूर्वं श्लोकं व्याचष्टे – ययेति ।

ಕಾರ್ತವೀರ್ಯಾರ್ಜುನ ಹಾಗೂ ಪಾಂಡವಾರ್ಜುನರಿಬ್ಬರು 'ಅರ್ಜುನ' ಎಂಬ ಒಂದೇ ಶಬ್ದದಿಂದ ಪ್ರತಿಪಾದ್ಯರಾಗಿದ್ದಾರೆ. ಆದರೂ ಸಹ ಅವರಿಬ್ಬರಲ್ಲಿ ಒಬ್ಬನು ಉತ್ತಮನು, ಮತ್ತೊಬ್ಬನು ಅಧಮನು ಹೇಗೆ ಆಗಿದ್ದಾನೋ, ಅದರಂತೆ ಇಲ್ಲಿಯೂ ಸಹ ಮೂರು ಅಕ್ಷರಗಳಲ್ಲಿ ಮಧ್ಯಮ, ಉತ್ತಮ, ಅಧಮರೆಂಬ ವಿಭಾಗವನ್ನು ಹೇಳಬಹುದು.

ವಿಷ್ಣುವನ್ನು ಅಕ್ಷರನೆಂದು ವಿವಕ್ಷಿಸಿದರೆ ಪ್ರಕೃತಹಾನ ಹಾಗೂ ಅಪ್ರಕೃತ ಸ್ವೀಕಾರವನ್ನು ಮಾಡಿದಂತಾಗುತ್ತದಲ್ಲವೇ? ಎಂಬ ಪ್ರಶ್ನೆಗೆ ಸಮಾಧಾನವನ್ನು ನ್ಯಾಯವಿವರಣ ಟೀಕೆಯಲ್ಲಿ

''ಪರವಿದ್ಯಾವಿಷಯತ್ವಬಲೇನ ಪ್ರಕೃತಪರಿತ್ಯಾಗಾಪ್ರಕೃತಗ್ರಹಣಯೋರುಪಪತ್ತೇಃ'' ಪರವಿದ್ಯಾವಿಷಯತ್ವವೆಂಬ ನಿರವಕಾಶಲಿಂಗದಿಂದ ಪ್ರಕೃತ ಪರಿತ್ಯಾಗ, ಅಪ್ರಕೃತ ಸ್ವೀಕಾರವು ದೋಷವಾಗುವುದಿಲ್ಲವೆಂದು ಹೇಳಿದ್ದಾರೆ. ಅದನ್ನೇ 'ಪ್ರಕೃತ' ಇತ್ಯಾದಿ ವಾಕ್ಯದಿಂದ ಸಮರ್ಥಿಸುತ್ತಿದ್ದಾರೆ. ದೃಷ್ಟಾಂತ ಭಾಗವನ್ನು ವಿವರಿಸುವ ಮೂಲಕವಾಗಿ ಶ್ಲೋಕವನ್ನು ಸ್ವತಃ ಗ್ರಂಥಕಾರರೇ ವ್ಯಾಖ್ಯಾನಿಸುತ್ತಿದ್ದಾರೆ 'ಯಥಾ' ಇತ್ಯಾದಿ ವಾಕ್ಯದಿಂದ.

ಪ್ರಕಾಶಃ – ದ್ವಿತೀಯಸ್ಯ ದ್ವಿತೀಯೇ ಪಾದೇ ''ಸಮೇಷು ಕರ್ಮ ಯುಕ್ತಂ ಸ್ಯಾತ್'' ಇತಿ ದ್ವಾದಶೇऽಧಿಕರಣೇ ''ತ್ರಿವೃದಗ್ನಿಷ್ಟುದಗ್ನಿಷ್ಟೋಮಸ್ತಸ್ಯ ವಾಯವ್ಯಾಸ್ವೇಕವಿಂಶಮಗ್ನಿಷ್ಟೋಮಸಾಮ ಕೃತ್ವಾ ಬ್ರಹ್ಮವರ್ಚಸಕಾಮೋ ಯಜೇತ'' ಇತ್ಯಗ್ನಿಷ್ಟುತ್ಸಂಜ್ಞಕಂ ಯಾಗಂ ವಿಧಾಯ ಪುನಃಶ್ರುತಮ್ ''ಏತಸ್ಯೈವ ರೇವತೀಷು ವಾರವನ್ತೀಯಮಗ್ನಿಷ್ಟೋಮಸಾಮ ಕೃತ್ವಾ ಪಶುಕಾಮೋ ಹ್ಯೇತೇನ ಯಜೇತ'' ಇತಿ ವಾಕ್ಯಮುದಾಹೃತ್ಯ ಕಿಂ ಪೂರ್ವಸ್ಮಿನ್ ಯಾಗೇ ಪಶುಫಲಾಯ ರೇವತ್ಯಾಧಾರಂ ವಾರನ್ತೀಯಂ ಗುಣೋ ವಿಧೀಯತೇ ಅಥ ಕರ್ಮಾನ್ತರಮಿತಿ ವಿಶಯೇ, ವಿಶಿಷ್ಟಯಾಗಾನ್ತರವಿಧೌ ಗೌರವಾತ್, ಪ್ರಕೃತಹಾನಾದಿದೋಷಾತ್, ಏತಚ್ಛಬ್ದಾಚ್ಚ ಪೂರ್ವತ್ರೈವ ಫಲಾಯ ಗುಣವಿಧಿಃ । ನಚ ಯಾಗಸ್ಯ ವಾರವನ್ತೀಯಾಖ್ಯಸಾಮಾಶ್ರಯತ್ವಾಯೋಗಃ, ಅಙ್ಗಾವತಾರನ್ಯಾಯೇನ ಯಾಗಾಙ್ಗಸ್ತೋತ್ರದ್ವಾರಾ ತದುಪಪತ್ತೇಃ । ನ ಚಾಗ್ನಿಷ್ಟೋಮಸ್ಯ ಸ್ತೋತ್ರನ್ವಯಃ ಫಲಾನ್ವಯಶ್ಚ ವಿಧೇಯ ಇತಿ ವಾಕ್ಯಭೇದಃ, ಕ್ರತ್ವರ್ಥವಾರವನ್ತೀಯಸ್ಯಾಪ್ಯಗ್ನಿಷ್ಟೋಮಸ್ತೋತ್ರನ್ವಯಸಿದ್ಧೇಃ ತಸ್ಯಾವಿಧೇಯತ್ವಾದಿತಿ ಪ್ರಾಪ್ತೇ, ಆಶ್ರಯಾಶ್ರಯಿಭಾವಸ್ಯ ಕ್ರಿಯಾಕಾರಕರೂಪತ್ವಾದ್, ಯಾಗಸ್ಯ ಸಾಮ್ನಶ್ಚ ಕ್ರಿಯಾಕಾರಕಭಾವಾಯೋಗೇನಾಶ್ರಯಾಶ್ರಯಿಭಾವಾನುಪಪತ್ತೇಃ, ಅಙ್ಗಾವತಾರನ್ಯಾಯಸ್ಯಾಙ್ಗಾಙ್ಗಿಭಾವ-ವಿಷಯತ್ವಾತ್, ಕ್ರತ್ವರ್ಥತ್ವೇನ ವಾರವನ್ತೀಯಸ್ಯಾಪ್ಯಗ್ನಿಷ್ಟೋಮಸಮ್ಬನ್ಧದರ್ಶನೇನ ಪ್ರಕೃತೇ ತದಸಿದ್ಧೇಃ, ಶಬ್ದಗಮ್ಯೇऽರ್ಥೇ ಸಾಮಾನ್ಯತೋ ದೃಷ್ಟಸ್ಯಾನವತಾರಾತ್, ಏತಚ್ಛಬ್ದಸ್ಯ ಚ ಪ್ರಸ್ತೂಯಮಾನಪರತ್ವಾದ್ ವಿಶಿಷ್ಟಂ ಕರ್ಮಾನ್ತರಮಿತಿ ಸಿದ್ಧಾನ್ತಿತಮ್ ।

''ಸಮೇಷು ಕರ್ಮಯುಕ್ತಂ ಸ್ಯಾತ್'' (೨-೨-೧೨)[೧]

(೧) **ಭಾಟ್ಟಸಙ್ಗ್ರಹಃ** –

ಅಥ ದ್ವಾದಶಂ ವಾರವನ್ತೀಯಾದಿನಾಂ ಕರ್ಮಾನ್ತರಾಧಿಕರಣಮ್ ॥

ಸಮೇಷು ಕರ್ಮಯುಕ್ತಂ ಸ್ಯಾತ್ ॥ ೨೪ ॥

ಪೂರ್ವನ್ಯಾಯೇನೇಹ ಶಙ್ಕನಾದಾಪವಾದಿಕೀ **ಸಙ್ಗತಿಃ** । 'ತ್ರಿವೃದಗ್ನಿಷ್ಟುದಗ್ನಿಷ್ಟೋಮಸ್ತಸ್ಯ ವಾಯವ್ಯಾಸ್ವೇಕವಿಂಶಮಗ್ನಿಷ್ಟೋಮಸಾಮ ಕೃತ್ವಾ ಬ್ರಹ್ಮವರ್ಚಸಕಾಮೋ ಯಜೇತ' ಇತ್ಯಗ್ನಿಷ್ಟುತ್ಸಂಜ್ಞಕಂ ಯಾಗಂ ವಿಧಾಯ 'ಏತಸ್ಯೈವ ರೇವತೀಷು ವಾರವನ್ತೀಯಮಗ್ನಿಷ್ಟೋಮಸಾಮ ಕೃತ್ವಾ ಪಶುಕಾಮೋ ಹ್ಯೇತೇನ ಯಜೇತ' ಇತಿ ಶ್ರೂಯತೇ । **ಅಸ್ಯಾರ್ಥಃ** ಅಗ್ನಿಷ್ಟೋಮವಿಕಾರಭೂತोऽಗ್ನಿಷ್ಟುತ್ಸಂಜ್ಞಕಃ ಕಶ್ಚಿದೇಕಾಹಃ । ಸ ಚ ಪೃಷ್ಠಸ್ತೋತ್ರೇಷು ತ್ರಿವೃತ್ಸ್ತೋಮಯುಕ್ತತಯಾ ತ್ರಿವೃದಿತ್ಯುಚ್ಯತೇ । ಅಗ್ನಿಷ್ಟೋಮಸ್ತೋತ್ರೇಣ ಸಮಾಪ್ಯತ್ವಾದಗ್ನಿಷ್ಟೋಮ ಇತಿ ಚೋಚ್ಯತೇ ।

ಅದೃಶ್ಯತ್ವಾದ್ಧಿಕರಣ (೦-೨-೬)

''ತ್ರಿವೃದಗ್ನಿಷ್ಟುದಗ್ನಿಷ್ಟೋಮಸ್ತಸ್ಯ ವಾಯವ್ಯಸ್ತೇಕವಿಂಶಮಗ್ನಿಷ್ಟೋಮಸಾಮ ಕೃತ್ವಾ ಬ್ರಹ್ಮವರ್ಚಸಕಾಮೋ ಯಜೇತ'' ಎಂಬ ವಾಕ್ಯದಲ್ಲಿ 'ಅಗ್ನಿಷ್ಟುತ್' ಎಂಬ ಯಾಗವನ್ನು ವಿಧಾನ ಮಾಡಲಾಗಿದೆ. ಹೀಗೆ ವಿಧಿಸಿ ಪುನಃ ''ಏತಸ್ಯೈವ ರೇವತೀಷು ವಾರವಂತೀಯಮಗ್ನಿಷ್ಟೋಮಸಾಮ ಕೃತ್ವಾ ಪಶುಕಾಮೋ ಹ್ಯೇತೇನ ಯಜೇತ'' ಎಂದು ಮುಂದಿನ ಶ್ರುತಿವಾಕ್ಯವು ಹೇಳುತ್ತಿದೆ. ಈ ಶ್ರುತಿವಾಕ್ಯಗಳ ಅರ್ಥ ಹೀಗಿದೆ - ಪ್ರಸಿದ್ಧವಾದ ಅಗ್ನಿಷ್ಟೋಮಯಾಗದ ವಿಕೃತಿಯಾಗವನ್ನು 'ಅಗ್ನಿಷ್ಟುತ್' ಎಂದು ಕರೆಯುತ್ತಾರೆ. ಇದು ಒಂದು ದಿವಸದಲ್ಲಿ ಮಾಡಬೇಕಾದ ಯಾಗವಾಗಿದೆ. ಇದನ್ನು 'ತ್ರಿವೃತ್' ಎಂದು ಅಗ್ನಿಷ್ಟೋಮವೆಂದೂ ಸಹ ಕರೆಯುತ್ತಾರೆ. ಮೂರು ಬಾರಿ ಅನುಷ್ಠಿಸಲಾದ ಅಗ್ನಿಷ್ಟುತ್ ಹೋಮವು ಅಗ್ನಿಷ್ಟೋಮ ಎನಿಸುತ್ತದೆ. ಇಂತಹ 'ಅಗ್ನಿಷ್ಟುತ್' ಎಂಬ ಯಾಗದಲ್ಲಿ ಇಪ್ಪತ್ತೊಂದು ಸಾಮಮಂತ್ರಗಳಿಂದ ಕೂಡಿರುವ ಅಗ್ನಿಷ್ಟೋಮಸ್ತೋತ್ರಕ್ಕೆ ಸಾಧನವಾಗಿರುವ ಸಾಮವನ್ನು ಪ್ರಕೃತಿಯಾಗದಲ್ಲಿ ಉಚ್ಚರಿಸಲಾಗುತ್ತದೆ. 'ಯಜ್ಞಾಯಜ್ಞಾ ವೋऽಗ್ನಯಃ'' ಇತ್ಯಾದಿಯಾಗಿ ಆಗ್ನೇಯ ಋಕ್‌ಗಳಲ್ಲಿ ಆರೂಢಮಾಡಿ ಆ ಸಾಮವನ್ನು ಪಠಿಸಲಾಗಿದೆ. ಆದನ್ನು

'ಅನ್ಯತ್ರ' ಎಂದರೆ ನ್ಯಾಯಾಮೃತಾದಿ ಗ್ರಂಥಗಳಲ್ಲಿ ಎಂದರ್ಥ. 'ಯೋನಿಪದಾದಿ' ಎಂಬಲ್ಲಿರುವ ಆದಿಪದದಿಂದ 'ಸಂಭವತೀಹ ವಿಶ್ವಮ್' ಎಂಬಲ್ಲಿರುವ 'ಸಂಭವ' ಶಬ್ದವು, 'ಅನ್ನಂ ಚ ಜಾಯತೇ'' ಎಂಬಲ್ಲಿರುವ 'ಜಾಯತೇ' ಎಂಬ ಪದ ಮುಂತಾದ್ದು ಅನುಪಪನ್ನವಾಗುತ್ತದೆಂದು ತಿಳಿಯಬೇಕು. 'ಯೋನಿ' ಪದದಂತೆ 'ಸಂಭವ' ಎಂಬ ಶಬ್ದ ಹಾಗೂ 'ಜಾಯತೇ' ಎಂಬ ಶಬ್ದ ಕಾರಣತ್ವವನ್ನೇ ತಿಳಿಸುತ್ತಿದೆ ಎಂದು ಅಭಿಪ್ರಾಯ.

प्रकाशः – आदिसूत्रार्थं सिद्धान्ताननुगुणतया दूषयति – **किञ्चेति** ।

ಅದ್ವೈತಿಗಳ ಪ್ರಥಮಸೂತ್ರಾರ್ಥವು ಸಿದ್ಧಾಂತಕ್ಕೆ ಅನನುಗುಣವಾಗಿದೆಯೆಂದು ನಿರಾಕರಿಸುತ್ತಿದ್ದಾರೆ 'ಕಿಂಚ' ಇತ್ಯಾದಿ ವಾಕ್ಯದಿಂದ.

प्रकाशः – एवं हि सूत्रार्थः – अदृश्यत्वादिगुणको भूतयोनिः परमात्मैव, ''यस्सर्वज्ञः सर्ववित्'' इत्यादिना सार्वज्ञ्यादिधर्मोक्तेरिति ।

ಅದ್ವೈತಿಗಳ ಪ್ರಥಮ ಸೂತ್ರಾರ್ಥ ಹೀಗಿದೆ -

'ಅದೃಶ್ಯತ್ವಾದಿಗುಣಕೋ ಧರ್ಮೋಕ್ತೇಃ' ಅದೃಶ್ಯತ್ವಾದಿ ಗುಣಗಳುಳ್ಳವನು ಜಗತ್ತಿಗೆ ಕಾರಣನಾಗಿದ್ದಾನೆ. ಅಂತಹ ವ್ಯಕ್ತಿಯು ಪರಮಾತ್ಮನೇ ಆಗಿದ್ದಾನೆ. ಏಕೆಂದರೆ 'ಯಸ್ಸರ್ವಜ್ಞಃ ಸರ್ವವಿತ್' ಇತ್ಯಾದಿಯಾಗಿ ಸರ್ವಜ್ಞತ್ವವೇ ಮೊದಲಾದ ಧರ್ಮಗಳನ್ನು ಹೇಳಿರುವುದರಿಂದ.

प्रकाशः – तथा चैवंविधं ब्रह्म कथमधिष्ठानमित्यर्थः ।

ಅದ್ವೈತಿಗಳ ಈ ಸೂತ್ರ ವ್ಯಾಖ್ಯಾನವು ಅವರ ಸಿದ್ಧಾಂತಕ್ಕೆ ಮುಳ್ಳಾಗಿದೆ. ಏಕೆಂದರೆ ಸರ್ವಜ್ಞತ್ವಾದಿ ವಿಶಿಷ್ಟನಾದ ಬ್ರಹ್ಮನನ್ನು ಜಗತ್ತಿಗೆ ಕಾರಣನಾಗಿದ್ದಾನೆಂದು ಸೂತ್ರವು ಹೇಳುತ್ತಿದೆ. ಆದರೆ ಶುದ್ಧಬ್ರಹ್ಮನು ಜಗತ್ತಿನ ಅಧ್ಯಾಸಕ್ಕೆ ಅಧಿಷ್ಠಾನನಾಗಿದ್ದಾನೆ. ವಿಶಿಷ್ಟಬ್ರಹ್ಮನನ್ನು ಅಧಿಷ್ಠಾನನೆಂದು ಹೇಳಲು ಹೇಗೆ ಸಾಧ್ಯ?

प्रकाशः – ननु एते धर्मा अतात्त्विकाः, अतो न दोष इति चेत्, तर्हि तैः प्रधानादिनिरासायोगात् सिद्धान्तानुत्पत्तिरिति भावः ।

ಸರ್ವಜ್ಞತ್ವಾದಿಧರ್ಮಗಳೆಲ್ಲವೂ ಅತಾತ್ವಿಕವಾಗಿವೆ, ಆದ್ದರಿಂದ ಅಧಿಷ್ಠಾನನಾಗಲು ಬಾಧಕವಿಲ್ಲವೆಂದು ಅದ್ವೈತಿಗಳು ಉತ್ತರಿಸಬಹುದು. ಹಾಗಾದರೆ ಪ್ರಧಾನಾದಿಗಳನ್ನು ನಿರಾಸ ಮಾಡಿ ಸಿದ್ಧಾಂತವನ್ನು ಸ್ಥಾಪನೆ ಮಾಡಲು ಸಾಧ್ಯವಿಲ್ಲ. ಅತಾತ್ವಿಕವಾದ ಧರ್ಮಗಳಿಂದ ಪ್ರಧಾನಾದಿಗಳನ್ನು ನಿರಾಕರಿಸಲು ಹೇಗೆ ಸಾಧ್ಯ ?

ಪ್ರಕಾಶಃ – ಯಚ್ಚೋಕ್ತಮಿತಿ ।

'ದಿವ್ಯೋ ಹ್ಯಮೂರ್ತಃ ಪುರುಷಃ ಸ ಬಾಹ್ಯಾಭ್ಯನ್ತರೋ ಹ್ಯಜಃ ।
ಅಪ್ರಾಣೋ ಹ್ಯಮನಾಶ್ಶುಭ್ರ ಅಕ್ಷರಾತ್ ಪರತಃ ಪರಃ ।।'

ಇತ್ಯದೃಶ್ಯತ್ವಾದಿಗುಣಕಭೂತಯೋನೇಃ ಶಾರೀರಾದ್ವಿಲಕ್ಷಣತ್ವೇನ ದಿವ್ಯತ್ವಾಮೂರ್ತತ್ವಾದಿನಾ ವಿಶೇಷಣಾನ್ನ ಜೀವಃ । ತಥಾ ಪ್ರಕೃತಸ್ಯ ಭೂತಯೋನೇ ''ಅಕ್ಷರಾತ್ಪರತಃಪರಃ'' ಇತ್ಯಕ್ಷರಾತ್ಪರತಃ ಪ್ರಧಾನಾತ್ಪಞ್ಚಮೀನಿರ್ದಿಷ್ಟಾತ್ಪರ ಇತಿ ಪ್ರಥಮಾನ್ತತ್ವೇನ ಭೇದವ್ಯಪದೇಶಾನ್ನ ಪ್ರಧಾನಂ ಭೂತಯೋನಿರಿತ್ಯರ್ಥ ಇತ್ಯುಕ್ತಮಿತ್ಯರ್ಥಃ ।

ಅದ್ವೈತಿಗಳ 'ವಿಶೇಷಣಭೇದವ್ಯಪದೇಶಾಭ್ಯಾಂ ಚ ನೇತರೌ' ಎಂಬ ಎರಡನೆಯ ಸೂತ್ರ ವ್ಯಾಖ್ಯಾನ ಹೀಗಿದೆ -

'ದಿವ್ಯೋ ಹ್ಯಮೂರ್ತಃ ಪುರುಷಃ ಸ ಬಾಹ್ಯಾಭ್ಯಂತರೋ ಹ್ಯಜಃ । ಅಪ್ರಾಣೋ ಹ್ಯಮನಾಶ್ಶುಭ್ರಃ' ಇತ್ಯಾದಿಯಾಗಿ ಶ್ರುತಿಯು ದಿವ್ಯತ್ವ, ಅಮೂರ್ತತ್ವ ಮೊದಲಾದ ಧರ್ಮಗಳನ್ನು ಅಕ್ಷರತತ್ತ್ವದಲ್ಲಿ ಹೇಳುತ್ತಿದೆ. ಈ ವಿಶೇಷಣಗಳನ್ನು ಅಕ್ಷರನಿಗೆ ಕೊಟ್ಟಿದ್ದರಿಂದ ಜೀವನು ಅಕ್ಷರನಲ್ಲ. ಅಂದರೆ ದಿವ್ಯ ಎಂದರೆ ಸ್ವತಃ ಪ್ರಕಾಶಮಾನನಾದವನು ಎಂದರ್ಥ. ಜೀವನು ಸ್ವತಃ ಪ್ರಕಾಶಮಾನನಾಗದ ಕಾರಣ ಅಕ್ಷರನಾಗಲು ಸಾಧ್ಯವಿಲ್ಲ. ಪ್ರಕೃತಿಯೂ ಸಹ ಅಕ್ಷರತತ್ತ್ವವಲ್ಲ. ಏಕೆಂದರೆ ''ಅಕ್ಷರಾತ್ಪರತಃ ಪರಃ'' ಎಂಬುದಾಗಿ ಪ್ರಕೃತಿಗಿಂತ ಇಲ್ಲಿ ಪ್ರಕೃತವಾದ ಅಕ್ಷರತತ್ತ್ವವು ಭಿನ್ನವಾಗಿವೆಯೆಂದು ಹೇಳಲಾಗಿದೆ. 'ಅಕ್ಷರಾತ್ಪರತಃ' ಎಂಬುದಾಗಿ ಪಂಚಮೀ ನಿರ್ದಿಷ್ಟವಾದ ವಸ್ತುವಿಗಿಂತ ಪರಃ ಎಂದು ಪ್ರಥಮ ನಿರ್ದಿಷ್ಟವಾಗಿ ಭೇದವನ್ನು ಹೇಳಿದ್ದರಿಂದ ಪ್ರಧಾನವು ಅಕ್ಷರವಾಗುವುದಿಲ್ಲ. ಆದ್ದರಿಂದ ನಾಮರೂಪಾತ್ಮಕವಾದ ಪ್ರಪಂಚಕ್ಕೆ ಉಪಾದಾನಕಾರಣವಾದ ಭೂತಸೂಕ್ಷ್ಮವು ಪರ ಅಕ್ಷರ ಎನಿಸಿದೆ. ಪ್ರಕೃತಿಗಿಂತ ಉತ್ತಮವಾದ್ದರಿಂದ ಭೂತಸೂಕ್ಷ್ಮವು ಪರ ಅಕ್ಷರವಾಗುತ್ತದೆ. ವಿಕಾರ ಹೊಂದದ ಪರಬ್ರಹ್ಮನು, ವಿಕಾರ ಹೊಂದುವ ಪರ ಅಕ್ಷರಕ್ಕಿಂತ ಭಿನ್ನನಾಗಿದ್ದಾನೆ ಎಂದು 'ಅಕ್ಷರಾತ್ಪರತಃ ಪರಃ' ಎಂಬ ಶ್ರುತಿಯು ಹೇಳುತ್ತಿದೆ. ಅಂದರೆ ಭೂತಸೂಕ್ಷ್ಮಕ್ಕಿಂತ ಪರಬ್ರಹ್ಮನು ಭಿನ್ನನಾಗಿದ್ದಾನೆಂದು ಹೇಳಿದ್ದರಿಂದ ಪ್ರಕೃತಿಯಾಗಲೀ, ಭೂತಸೂಕ್ಷ್ಮವಾಗಲೀ ಅಕ್ಷರತತ್ತ್ವವೆನಿಸಲು ಸಾಧ್ಯವಿಲ್ಲ. ಇಷ್ಟು ಅದ್ವೈತಿಗಳ ವ್ಯಾಖ್ಯಾನ.

ಪ್ರಕಾಶಃ – ತತ್ರ ಏತದಧಿಕರಣಬೋಧ್ಯೇ ನಿರ್ವಿಶೇಷೇ ಭೂತಯೋನಿಶಬ್ದಾರ್ಥೇ ಬ್ರಹ್ಮಣಿ ತತ್ತ್ವತೋ ದಿವ್ಯತ್ವಾದಿವಿಶೇಷಣಸ್ಯ ಭೇದಸ್ಯ ಚ ಅಭಾವೇನ ತಾಭ್ಯಾಂ ಜೀವಪ್ರಧಾನವ್ಯಾವೃತ್ತ್ಯಯೋಗಾತ್ ।

ಆರೋಪಿತಯೋಸ್ತಯೋಸ್ತತ್ರ ಸಮ್ಭವೋऽಸ್ತೀತಿ ಚೇತ್ತತ್ರಾಹ – ವಸ್ತುತ ಇತಿ ।

ಅದ್ವೈತಿಗಳ ಈ ವ್ಯಾಖ್ಯಾನವು ಅಸಾಧುವಾಗಿದೆ - ಏಕೆಂದರೆ ನಿರ್ವಿಶೇಷನಾದ ಶುದ್ಧಬ್ರಹ್ಮನು ಈ ಅಧಿಕರಣದಿಂದ ಪ್ರತಿಪಾದ್ಯನಾಗಿದ್ದಾನೆ. ಯಾವುದೇ ಧರ್ಮಗಳಿಲ್ಲದ ಭೂತಯೋನಿ ಶಬ್ದಾರ್ಥನಾದ ಬ್ರಹ್ಮನಲ್ಲಿ ತಾತ್ವಿಕವಾದ ದಿವ್ಯತ್ವಾದಿವಿಶೇಷಣಗಳಾಗಲೀ, ಭೇದವನ್ನಾಗಲೀ ಹೇಳಲು ಸಾಧ್ಯವಿಲ್ಲ. ಹೀಗಿರುವಾಗ ದಿವ್ಯತ್ವಾದಿವಿಶೇಷಣಗಳಿಂದ ಹಾಗೂ ಭೇದದಿಂದ ಜೀವ ಮತ್ತು ಪ್ರಕೃತಿಯನ್ನು ವ್ಯಾವೃತ್ತಿ ಮಾಡಲು ಸಾಧ್ಯವಿಲ್ಲ.

ಆರೋಪಿತವಾದ ದಿವ್ಯತ್ವಾದಿವಿಶೇಷಣಗಳಿಂದ ಜೀವ ಮತ್ತು ಪ್ರಧಾನರನ್ನು ವ್ಯಾವೃತ್ತಿ ಮಾಡಬಹುದಲ್ಲವೇ? ಎಂದು ಆಶಂಕಿಸಿದರೆ ಅದಕ್ಕೆ 'ವಸ್ತುತಃ' ಎಂಬ ಗ್ರಂಥದಿಂದ ಉತ್ತರಿಸುತ್ತಿದ್ದಾರೆ.

ಪ್ರಕಾಶಃ – ''ವಿಶೇಷಣ'' ಇತ್ಯಾದಿಕಂ ಲಕ್ಷಣಯಾ ಶುದ್ಧಂ ಬೋಧಯತೀತಿ ಭೇದಭೇದಕೋಭಯಭ್ರಂಶೋऽಪಿ ನಿವರ್ತಯಿಷ್ಯತ ಇತ್ಯತ ಆಹ – ಶುದ್ಧಬೋಧನೇನೇತಿ ।

ಸೂತ್ರದಲ್ಲಿ 'ವಿಶೇಷಣ' ಹಾಗೂ 'ಭೇದಪದಗಳು' ಲಕ್ಷಣಯಾ ಶುದ್ಧ ಬ್ರಹ್ಮನನ್ನು ಪ್ರತಿಪಾದಿಸುತ್ತಿವೆ. ಇದರಿಂದ ಭೇದಭ್ರಮ ಹಾಗೂ ಭೇದಕಭ್ರಮಗಳೂ ಸಹ ನಿವೃತ್ತಿಯಾಗುತ್ತವೆಂದು ಆಕ್ಷೇಪಿಸಿದರೆ 'ಶುದ್ಧಬೋಧನೇನ' ಎಂಬುದರಿಂದ ಉತ್ತರಿಸುತ್ತಿದ್ದಾರೆ.

ಪ್ರಕಾಶಃ – ಉಪಲಕ್ಷಣಮೇತತ್, ತ್ವನ್ಮತೇ ಮನ್ಮತ ಇವ ವಿಶೇಷಹೇತೋರನುಪನ್ಯಾಸೇನ ದಿವ್ಯಪುರುಷತ್ವಾದಿವಿಶೇಷಣೇನ ಪ್ರಧಾನೇऽಪ್ಯಯುಕ್ತೇನ ದ್ವಯೋರಪಿ ನಿರಾಸಸಮ್ಭವಾತ್ ''ಸ ಕಾರಣಂ ಕಾರಣಾಧಿಪಾಧಿಪಃ'' ಇತಿವದಕ್ಷರಾತ್ಪರತೋ ಜೀವಾದಿತ್ವಪಿ ವಕ್ತುಂ ಶಕ್ಯತ್ವೇನ ಭೇದವ್ಯಪದೇಶೇನಾಪಿ ದ್ವಯೋರ್ನಿರಾಸಸಮ್ಭವೇನ ಪ್ರತ್ಯೇಕಮೇಕೈಕನಿರಾಸಾಯೋಗಾತ್ ।

ಉಪಲಕ್ಷಣಯಾ ಇದನ್ನು ತಿಳಿಯಬೇಕು. ನಮ್ಮ ಮತದಲ್ಲಿ ಸೂತ್ರದಲ್ಲಿರುವ ವಿಶೇಷಣ ಹಾಗೂ ಭೇದಪದಗಳು ವಿಶೇಷಹೇತುಗಳನ್ನು ಹೇಳುವ ಮೂಲಕ ಸಾರ್ಥಕಗಳಾಗಿವೆ. ಆದರೆ ನಿಮ್ಮ ಮತದಲ್ಲಿ ಯಾವುದೇ ವಿಶೇಷಹೇತುಗಳನ್ನು ಹೇಳದ ಕಾರಣ ವ್ಯರ್ಥವಾಗಿವೆ. ಕೇವಲ ವಿಶೇಷಣಪದವಷ್ಟೇ ಸಾಕು. ಆದರಿಂದಲೇ 'ದಿವ್ಯಪುರುಷತ್ವ' ಮುಂತಾದ ವಿಶೇಷಣದಿಂದ ಜೀವನನ್ನು ನಿರಾಕರಿಸಿದಂತೆ ಪ್ರಧಾನನ್ನೂ ಸಹ ನಿರಾಕರಿಸಬಹುದು. ಹೀಗಿರುವಾಗ ಭೇದವ್ಯಪದೇಶಕಪದವು ವ್ಯರ್ಥವಾಗುತ್ತದೆ. ಅಥವಾ 'ಸ ಕಾರಣಂ ಕಾರಣಾಧಿಪಾಧಿಪಃ' ಎಂಬ ಶ್ರುತಿಗೆ ನೀವು ಕಾರಣವಾಗಿರುವ ಪ್ರಧಾನಕ್ಕೆ ಜೀವನು ಅಧಿಪತಿಯಾಗಿದ್ದಾನೆ. ಅಂತಹ ಜೀವನಿಗೆ ಬ್ರಹ್ಮನು ಅಧಿಪತಿಯಾಗಿದ್ದಾನೆಂದು ವ್ಯಾಖ್ಯಾನಿಸುತ್ತೀರಿ. ಇದರಂತೆ 'ಅಕ್ಷರಾತ್ಪರತಃ ಪರಃ' ಎಂಬಲ್ಲಿಯೂ ಅಕ್ಷರವೆಂದರೆ ಪ್ರಕೃತಿ, ಅದಕ್ಕಿಂತ ಪರನಾದವನು ಜೀವ, ಜೀವನಿಗಿಂತಲೂ ಪರನಾದವನು ಬ್ರಹ್ಮನೆಂದು ಹೇಳಬಹುದು. ಹೀಗೆ ವ್ಯಾಖ್ಯಾನಿಸುವುದರಿಂದ ಅಕ್ಷರದಿಂದ ಭೇದವು ಸಿದ್ಧವಾಗುವಂತೆ, ಜೀವನಿಂದ ಭೇದವು ಸಿದ್ಧವಾಗುತ್ತದೆ. ಆದ್ದರಿಂದ ಭೇದವ್ಯಪದೇಶವೆಂಬ ಹೆಸುವಿನಿಂದಲೇ ಪ್ರಕೃತಿ ಹಾಗೂ ಜೀವರನ್ನು ನಿರಾಸ ಮಾಡಬಹುದು. ಆದ್ದರಿಂದ ಪ್ರತ್ಯೇಕವಾಗಿ ಒಂದೊಂದನ್ನು ಮಾತ್ರ ನಿರಾಸ ಮಾಡುವುದು

ಅಯುಕ್ತವಾಗುತ್ತದೆ.

ಪ್ರಕಾಶಃ – ವಿಶೇಷಣಭೇದಾಭ್ಯಾಂ ಕ್ರಮೇಣ ಜೀವಪ್ರಧಾನನಿರಾಸೇ ಸೂತ್ರೇ 'ನೇತರೇ' ಇತ್ಯೇವ ಸ್ತ್ರೀಲಿಙ್ಗೇನ ನಪುಂಸಕಲಿಙ್ಗೇನ ವಾ ನಿರ್ದೇಷ್ಟವ್ಯತ್ವೇನ 'ನೇತರೌ' ಇತ್ಯಸ್ಯ ಅಸ್ವಾರಸ್ಯಂ ಚ ।

ಮತ್ತು ವಿಶೇಷಣ ಹಾಗೂ ಭೇದಪದಗಳಿಂದ ಜೀವ ಮತ್ತು ಪ್ರಧಾನವನ್ನು ಕ್ರಮವಾಗಿ ನೀವು ನಿರಾಕರಿಸುತ್ತೀರಿ. ಹಾಗಾದರೆ ಸೂತ್ರದಲ್ಲಿ 'ನೇತರೇ' ಎಂದು ಹೇಳಬೇಕಿತ್ತು. 'ನೇತರೌ' ಎಂಬುದು ತಪ್ಪಾಗುತ್ತದೆ. ಏಕೆಂದರೆ ಜೀವನನ್ನು ನಿರಾಕರಿಸುವುದಕ್ಕಾಗಿ 'ಇತರಃ' ಎನ್ನಬೇಕು. ಪ್ರಧಾನವನ್ನು ನಿರಾಕರಿಸುವುದಕ್ಕಾಗಿ 'ಇತರಂ' ಎನ್ನಬೇಕು. 'ಇತರಚ್ಚ ಇತರಂ ಚ ನೇತರೇ' ಎಂದು ರೂಪವಾಗುತ್ತದೆ. ಅಥವಾ ಪ್ರಕೃತಿಯನ್ನು ವಿವಕ್ಷಿಸಿದಾಗ 'ಇತರಚ್ಚ ಇತರಾಚ ಇತರೇ' ಎಂದೇ ಆಗುತ್ತದೆ. ಆದ್ದರಿಂದ 'ನೇತರೇ' ಎಂಬುದಾಗಿ ಸ್ತ್ರೀಲಿಂಗಪ್ರಯೋಗವನ್ನಾಗಲೀ, ನಪುಂಸಕಪ್ರಯೋಗವನ್ನಾಗಲೀ ಮಾಡಬೇಕಿತ್ತು. 'ನೇತರೌ' ಎಂಬ ಪುಲ್ಲಿಂಗಪ್ರಯೋಗವು ತಪ್ಪಾಗುತ್ತದೆ. 'ವಿಶೇಷಣ' 'ಭೇದ' ಎಂಬೆರಡು ಪದಗಳಿಂದ ಜೀವಪ್ರಧಾನರನ್ನು ಕ್ರಮವಾಗಿ ನಿರಾಕರಿಸಬೇಕಾದರೆ ಅದಕ್ಕನುಗುಣವಾಗಿ 'ಇತರ' ಶಬ್ದವನ್ನೂ ಸಹ ಪ್ರತ್ಯೇಕ ಪ್ರಯೋಗಿಸಬೇಕು ಹೊರತು ವಿಪರೀತವಾಗಿ 'ಇತರಂ ಚ ಇತರಚ್ಚ' ಎಂದು ಹೇಳಬಾರದೆಂದು ಅಭಿಪ್ರಾಯ. ಹಾಗಾಗಿ ಸೂತ್ರದಲ್ಲಿರುವ 'ಇತರೌ' ಎಂಬುದು ನಿಮ್ಮ ಮತದಲ್ಲಿ ಅಸ್ವರಸವಾದ ಅರ್ಥವುಳ್ಳದ್ದಾಗಿದೆ.

ಪ್ರಕಾಶಃ – ಮನ್ಮತೇ ತು ದ್ವಾಭ್ಯಾಂ ಹೇತುಭ್ಯಾಂ ಕ್ರಮೇಣ ಪ್ರಧಾನಚೇತನಯೋರ್ನಿರಾಸ ಇತಿ 'ನೇತರೌ' ಇತಿ ಪುಲ್ಲಿಙ್ಗಸ್ಯ ಸ್ವಾರಸ್ಯಮಿತ್ಯಪಿ ಧ್ಯೇಯಮ್ ।

ನಮ್ಮ ಮತದಲ್ಲಿ ಎರಡು ಹೇತುಗಳಿಂದ ಕ್ರಮವಾಗಿ ಪ್ರಧಾನ ಹಾಗೂ ಚೇತನರನ್ನು ನಿರಾಸ ಮಾಡುವುದಕ್ಕಾಗಿ 'ಇತರೌ' ಎಂದು ಹೇಳಲಾಗಿದೆ. ಚೇತನವು ಆನಂತರ ಪ್ರಸಕ್ತವಾಗುವುದರಿಂದ ಪುಲ್ಲಿಂಗ ನಿರ್ದೇಶವೂ ಸ್ವರಸವಾಗುತ್ತದೆಂದು ತಿಳಿಯಬೇಕು.

ಪ್ರಕಾಶಃ – 'ರೂಪಶಬ್ದಾಪ್ರಯೋಗಾತ್' ಇತ್ಯುಪಲಕ್ಷಣಂ, ತ್ವನ್ಮತೇ ಪೂರ್ವಸೂತ್ರಯೋರನ್ಯತರ-ವಿವಕ್ಷಿತೈಕವಿಜ್ಞಾನನಿಬನ್ಧನಸರ್ವವಿಜ್ಞಾನಾನನ್ತರ್ಗತತ್ವಾತ್ಸರ್ವಾತ್ಮಭಾವಸ್ಯೇತ್ಯಪಿ ಧ್ಯೇಯಮ್ ।। ಇದಮಧಿಕರಣಂ ಪರೈರಭ್ಯಮೇವೇತ್ಯಾಹ – ಅತ್ರಾಪೀತಿ ।

ಅದ್ವೈತಿಗಳು 'ರೂಪೋಪನ್ಯಾಸಾಚ್ಚ' ಎಂಬ ಮೂರನೆಯ ಸೂತ್ರಕ್ಕೆ ಹೀಗೆ ವ್ಯಾಖ್ಯಾನಿಸುತ್ತಾರೆ -

ಈ ಸೂತ್ರದಲ್ಲಿ ಅಕ್ಷರತತ್ತ್ವದಿಂದ ಪ್ರಪಂಚದ ಸೃಷ್ಟಿಯನ್ನು ಹೇಳಲಾಗಿದೆ. ಅಂತಹ ಅಕ್ಷರನ ಅಂಗಾಂಗಗಳ ಸ್ವರೂಪವನ್ನು 'ಅಗ್ನಿರ್ಮೂರ್ಧಾ' ಎಂಬ ಶ್ರುತಿಯು ವರ್ಣಿಸುತ್ತಿದೆ. ಜೀವನಲ್ಲಿ ಇಂತಹ ವರ್ಣನೆಯು ಕೂಡುವುದಿಲ್ಲ. ಜಡವಾದ ಪ್ರಕೃತಿಯು ಸರ್ವಭೂತಗಳ ಅಂತರಾತ್ಮವಾಗಲು ಸಾಧ್ಯವಿಲ್ಲ. ಆದ್ದರಿಂದ ಬ್ರಹ್ಮನೇ ಅಕ್ಷರನಾಗಿದ್ದಾನೆ ಎಂದು.

ಈ ಸೂತ್ರ ವ್ಯಾಖ್ಯಾನವೂ ಸಹ ಅಸಾಧುವಾಗಿದೆ. ಸರ್ವಾತ್ಮಕತ್ವವೆಂಬ ಅರ್ಥದಲ್ಲಿ ರೂಪಶಬ್ದವನ್ನು ಯಾರೂ ಸಹ ಪ್ರಯೋಗಿಸುವುದಿಲ್ಲ ಎಂದು ಒಂದು ದೋಷ. ಗ್ರಂಥದಲ್ಲಿ ಹೇಳಲ್ಪಟ್ಟ ಈ ದೋಷವು

ಉಪಲಕ್ಷಣವೆಂದು ತಿಳಿಯಬೇಕು. ನಿಮ್ಮ ಮತದಲ್ಲಿ ಹಿಂದಿನೆರಡು ಸೂತ್ರಗಳಲ್ಲಿ ಸಮಸ್ತ ಜಗತ್ತಿಗೆ ಬ್ರಹ್ಮನು ಉಪಾದಾನಕಾರಣನೆಂದು ಹೇಳಿದ್ದರಿಂದ ಅವನ ಜ್ಞಾನದಿಂದಲೇ ಎಲ್ಲವನ್ನೂ ತಿಳಿದಂತಾಗುತ್ತದೆಂದು ಹೇಳಿದಂತಾಗುತ್ತದೆ. ಆದರಿಂದಲೇ ಸರ್ವಾತ್ಮಕತ್ವವೆ ತಿಳಿಯುವಾಗ ಈ ಸೂತ್ರವು ಪುನಃ ಅದನ್ನೇ ಸಮರ್ಥಿಸಿದರೆ ಪುನರುಕ್ತವಾಗುತ್ತದೆಂಬ ಮತ್ತೊಂದು ದೋಷವನ್ನು ತಿಳಿಯಬೇಕು.

ಅದ್ವೈತಿಗಳಿಗೆ ಹಿಂದಿನ ಅಧಿಕರಣಗಳಂತೆ ಈ ಅಧಿಕರಣವೂ ಸಹ ಅನಾರಂಭಣೀಯವಾಗಿದೆ ಎಂಬ ವಿಚಾರವನ್ನು 'ಅತ್ರಾಪಿ' ಎಂಬ ಗ್ರಂಥದಿಂದ ಪ್ರತಿಪಾದಿಸಿದ್ದಾರೆ.

ಗುರುರಾಜೀಯಮ್ – ನ ಸಾರೂಪ್ಯನಿಯಮ ಇತಿ ।। ನ ಖಲ್ವ ಬಾಹ್ಯಸಾರೂಪ್ಯನಿಬನ್ಧನ-ತಸ್ಸರ್ವೋ ವಿಭ್ರಮ ಇತಿ ನಿಯಮನಿಮಿತ್ತಮಸ್ತಿ । ಆನ್ತರಾದಪಿ ಕಾಮಕ್ರೋಧೋನ್ಮಾದಸ್ವಾಪ್ನಾದೇರ್ಮಾನಸಾಪಚಾರಾತ್ಸಾರೂಪ್ಯಾನಪೇಕ್ಷಾತ್ತಸ್ಯಾಪಿ ಭ್ರಮಸ್ಯ ದರ್ಶನಾತ್ । ಅಪಿ ಚ ಹೇತುಮತಿ ವಿಭ್ರಮೇ ತದಭಾವಾದನುಯೋಗೋ ಯುಜ್ಯತೇ । 'ಅನಾದ್ಯವಿದ್ಯಾತದ್ವಾಸನಾ-ಪ್ರವಾಹಮಧ್ಯಪತಿತಸ್ತು ನಾನುಯೋಗಮರ್ಹತಿ' ಇತಿ ತದುಕ್ತೇರಿತಿ ಭಾವಃ । ನನ್ವೇತದಧಿಕರಣ-ಪೂರ್ವಪಕ್ಷದಶಾಯಾಮಾರಮ್ಭಾಧಿಕರಣಸಿದ್ಧಾನ್ತಾನುಮೇಶಾನ್ನ ತೇನಾಸ್ಯ ಗತಾರ್ಥತೇತ್ಯತ ಆಹ – **ವಿವರ್ತಪರತ್ವ ಇತಿ ।। ಅನ್ಯತ್ರೇತಿ ।।** ನ್ಯಾಯಾಮೃತ ಇತ್ಯರ್ಥಃ ।। **ಇತಿ ಭಾಷ್ಯಾರ್ಥ ಇತ್ಯರ್ಥ ಇತಿ ।।** ನ ಚೈವಂ ಟೀಕಾಗತಸೂತ್ರಖಣ್ಡಸ್ಯೇತಿ ಖಣ್ಡಶಬ್ದೋ ವ್ಯರ್ಥಃ । 'ನೇತರಾ'ದಿತ್ಯಸ್ಯ ವ್ಯಾಖ್ಯಾತತ್ವೇನ ವ್ಯಾವರ್ತ್ಯತ್ವೋಪಪತ್ತೇರಿತಿ ಜ್ಞೇಯಮ್ ।।

ಸಾರ

ಶಾಂಕರಭಾಷ್ಯದಲ್ಲಿ ಆದೃಶ್ಯತ್ವಾಧಿಕರಣದ ರಚನೆ ಹೀಗಿದೆ - 'ಯತ್ತದದ್ರೇಶ್ಯಮ್' ಎಂಬ ಆಥರ್ವಣೋಪನಿಷತ್ತಿನ ವಾಕ್ಯವು ವಿಷಯವಾಗಿದೆ. ಈ ಶ್ರುತಿಯಲ್ಲಿ ಕೇಳಿಸುತ್ತಿರುವ ಆದೃಶ್ಯತ್ವಾದಿಗುಣಗಳು ಪ್ರಧಾನದಲ್ಲಿ ಬರುತ್ತವೆ. ಏಕೆಂದರೆ ಅದೇ ಶ್ರುತಿಯಲ್ಲಿ ಮುಂದೆ 'ಯದ್ಭೂತಯೋನಿಮ್' ಎಂಬುದಾಗಿ ಭೂತಯೋನಿ ಶಬ್ದವನ್ನು ಪ್ರಯೋಗಿಸಲಾಗಿದೆ. ಯೋನಿ ಶಬ್ದಕ್ಕೆ ಉಪಾದಾನಕಾರಣವೆಂದರ್ಥ. ಆದ್ದರಿಂದಲೇ ಶ್ರುತಿಯು 'ಯಥೋರ್ಣನಾಭಿಃ' ಎಂಬುದಾಗಿ ಜೇಡರ ಹುಳುವಿನ ದೇಹ, ಭೂಮಿ, ಪುರುಷದೇಹಗಳನ್ನು ಉದಾಹರಣೆಯನ್ನಾಗಿ ನೀಡಿದೆ. ಆದ್ದರಿಂದ ಜಗತ್ತಿಗೆ ಉಪಾದಾನಕಾರಣವಾದ ಜಡಪ್ರಕೃತಿಯು ಭೂತಯೋನಿಯೆಂದು ಕರೆಯಲ್ಪಡುತ್ತದೆ. ಆದ್ದರಿಂದ ಆದೃಶ್ಯತ್ವಾದಿಗುಣವುಳ್ಳ ಅಕ್ಷರವೆಂದರೆ ಜಡಪ್ರಕೃತಿಯಾಗುತ್ತದೆಂದು ತಿಳಿಯಬೇಕು. 'ಅಕ್ಷರಾತ್ಪರತಃ ಪರಃ' ಎಂದು ಅಕ್ಷರತತ್ತ್ವಕ್ಕಿಂತ ಬ್ರಹ್ಮನು ಭಿನ್ನನಾಗಿದ್ದಾನೆಂದು ಹೇಳಿರುವುದರಿಂದ ಬ್ರಹ್ಮನನ್ನು ಅಕ್ಷರನೆಂದು ಹೇಳಲು ಸಾಧ್ಯವಿಲ್ಲ. ಅಥವಾ ಭೂತಯೋನಿ ಶಬ್ದಕ್ಕೆ ನಿಮಿತ್ತಕಾರಣವೆಂದು ಅರ್ಥೈಸಿದರೆ ಪುಣ್ಯಪಾಪಗಬಳ ಮೂಲಕ ಜಗತ್ತಿಗೆ ಕಾರಣನಾದ ಜೀವಾತ್ಮನು ಅಕ್ಷರಶಬ್ದವಾಚ್ಯನಾಗುತ್ತಾನೆ. ಇಷ್ಟು ಪೂರ್ವಪಕ್ಷ.

ಶಾಂಕರಭಾಷ್ಯದಂತೆ ಸಿದ್ಧಾಂತ - ಜಗತ್ತು ಬ್ರಹ್ಮನ ಪರಿಣಾಮವೆಂದು ನಾವು ಹೇಳುವುದಿಲ್ಲ ಹೊರತು, ಬ್ರಹ್ಮನವಿವರ್ತವಾಗಿದೆ. ಯಾವರೀತಿಯಾಗಿ ರಜ್ಜುವಿಗೆ ಸರ್ಪವು ವಿವರ್ತಕಾರಣವಾಗಿದೆಯೋ, ಆದರಂತೆ ಜಗತ್ತಿಗೆ ಬ್ರಹ್ಮನು ವಿವರ್ತಕಾರಣನಾಗಿದ್ದಾನೆ. ಇಂತಹ ವಿವರ್ತಕಾರಣವನ್ನು ಭೂತಯೋನಿಶಬ್ದವು ಪ್ರತಿಪಾದಿಸುತ್ತಿದೆ. ಮತ್ತು 'ಅಕ್ಷರಾತ್ಸಂಭವಿತೀಹ ವಿಶ್ವಮ್' ಎಂಬುದಾಗಿ ಅಕ್ಷರತತ್ತ್ವವನ್ನು ಜಗತ್ಕಾರಣವೆಂದು ಹೇಳಿ, ಅದೇ ಅಕ್ಷರತತ್ತ್ವವನ್ನು 'ಯಃ ಸರ್ವಜ್ಞಃ' ಎಂಬುದಾಗಿ ಸರ್ವಜ್ಞವೆಂದು ಶ್ರುತಿ ಹೇಳಿದೆ. ಸರ್ವಜ್ಞತ್ವಾದಿಗಳು ಬ್ರಹ್ಮನ ಧರ್ಮವೇ ಹೊರತು, ಪ್ರಕೃತಿಯ ಧರ್ಮವಲ್ಲ. ಆದ್ದರಿಂದ ಅದೃಶ್ಯತ್ವಾದಿಗುಣಗಳುಳ್ಳವನು ಬ್ರಹ್ಮನೇ ಆಗುತ್ತಾನೆ. ಮತ್ತು 'ಯಯಾ ತದಕ್ಷರಮಧಿಗಮ್ಯತೇ' ಎಂಬುದಾಗಿ ಪರವಿದ್ಯೆಗೆ ಅಕ್ಷರತತ್ತ್ವವು ವಿಷಯವಾಗಿದೆಯೆಂದು ತಿಳಿಯುತ್ತಿದೆ. ಅಕ್ಷರನು ಬ್ರಹ್ಮನಾಗದಿದ್ದರೆ ಪರವಿದ್ಯೆಗೆ ವಿಷಯನೂ ಸಹ ಆಗಲಾರನು. ಆದ್ದರಿಂದ ಜಗತ್ತಿನ ಅಧ್ಯಾಸಕ್ಕೆ ಅಧಿಷ್ಠಾನನಾದ ಶುದ್ಧಬ್ರಹ್ಮನೇ ಅದೃಶ್ಯತ್ವಾದಿಗುಣಗಳುಳ್ಳವನು.

ಅದ್ವೈತಿಗಳ ಈ ಅಧಿಕರಣ ಶರೀರ ಸರಿಯಿಲ್ಲ. ಏಕೆಂದರೆ ಸರ್ಪದ ಆರೋಪಕ್ಕೆ ಹಗ್ಗವು ಹೇಗೆ ಅಧಿಷ್ಠಾನವೋ, ಅದರಂತೆ ಪ್ರಪಂಚದ ಆರೋಪಕ್ಕೆ ಬ್ರಹ್ಮನು ಅಧಿಷ್ಠಾನನಾಗಿದ್ದಾನೆ. ಅಂತಹ ಬ್ರಹ್ಮನು ವಾಚ್ಯನಾದರೆ ನಿರ್ಧರ್ಮಕನಾದ ಶುದ್ಧಬ್ರಹ್ಮನಲ್ಲಿ 'ಧರ್ಮೋಕ್ತೇಃ' ಎಂಬ ಸೂತ್ರೋಕ್ತ ಕಾರಣ ವಚನವು ತಪ್ಪಾಗುತ್ತದೆ. ಮತ್ತು 'ಸೂರ್ಯದ್ವಾರೇಣ ವಿರಜಾಃ ಪ್ರಯಾಂತಿ' ಎಂಬುದಾಗಿ ಸೂರ್ಯನ ಮಾರ್ಗದಲ್ಲಿ ಬ್ರಹ್ಮನನ್ನು ಹೊಂದುತ್ತಾರೆಂದು ಶ್ರುತಿ ಹೇಳುತ್ತಿದೆ. ಅಂತಹ ಬ್ರಹ್ಮನು ಕಾರ್ಯಬ್ರಹ್ಮನಾಗಿದ್ದಾನೆ ಹೊರತು, ಅಧಿಷ್ಠಾನನಾದ ಬ್ರಹ್ಮನಲ್ಲ. ಆದುದರಿಂದ ನಿರ್ಗುಣನಿಗೆ ಇವೆಲ್ಲವೂ ಬಾಧಕವಾಗುತ್ತವೆ. ಆದ್ದರಿಂದ ಅದ್ವೈತಿಗಳ ಅಧಿಕರಣಶರೀರವು ಅಸಾಧುವಾಗಿದೆ.

• • • • •

ರಾಮಾನುಜರ ಅಧಿಕರಣ ವಿಮರ್ಶೆ ಮತ್ತು ಟೀಕೆಯ ಕಠಿಣಪದಾರ್ಥಗಳು

तात्पर्यचन्द्रिका

केचित्तु – अदृश्यत्वादिगुणकत्वं प्रधानस्य, अक्षरात्परतः परत्वं तु जीवस्येति प्राप्ते, द्वयमपि परमात्मन इति सिद्धान्त इत्याहुः ।

ಅನುವಾದ - ರಾಮಾನುಜರು ಹೀಗೆ ಹೇಳುತ್ತಾರೆ - ಅದೃಶ್ಯತ್ವಾದಿಗುಣಕತ್ವವು ಪ್ರಕೃತಿಯ ಧರ್ಮವಾಗಿದೆ. ಮತ್ತು ಅಕ್ಷರಾತ್ಪರತಃ ಪರತ್ವವೆಂಬುದು ಜೀವನ ಧರ್ಮವಾಗಿದೆಯೆಂಬುದು ಪೂರ್ವಪಕ್ಷ. ಎರಡೂ ಸಹ ಪರಮಾತ್ಮನ ಧರ್ಮಗಳೇ ಆಗಿವೆಯೆಂದು ಸಿದ್ಧಾಂತ.

तन्न,

'दिव्यो ह्यमूर्तः पुरुषः स बाह्याभ्यन्तरो ह्यजः ।
अप्राणो ह्यमनाश्शुभ्रो अक्षरात्परतः परः ।।'

इति अमूर्तत्वव्याप्तत्वाप्राणत्वादिविशिष्टत्वेन श्रुतेऽक्षरात्परतः परे जीवत्वशङ्कानुदयादिति ।।

ರಾಮಾನುಜರ ಈ ಅಭಿಪ್ರಾಯವು ಅಸಾಧುವಾಗಿದೆ.

'ದಿವ್ಯೋ ಹ್ಯಮೂರ್ತಃ ಪುರುಷಃ ಸ ಬಾಹ್ಯಾಭ್ಯಂತರೋ ಹ್ಯಜಃ । ಅಪ್ರಾಣೋ ಹ್ಯಮನಾಶ್ಶುಭ್ರೋ ಅಕ್ಷರಾತ್ಪರತಃ ಪರಃ' ಎಂಬುದಾಗಿ ದಿವ್ಯತ್ವ, ಅಮೂರ್ತತ್ವ ವ್ಯಾಪ್ತತ್ವ, ಪ್ರಾಣತ್ವ ಮೊದಲಾದ ಧರ್ಮಗಳಿಂದ ಅಕ್ಷರಾತ್ಪರತಃ ಪರವು ವಿಶಿಷ್ಟವಾಗಿದೆಯೆಂದು ಶ್ರುತಿ ಹೇಳುತ್ತಿದೆ. ಆದರೆ ಜೀವನಲ್ಲಿ ಅಮೂರ್ತತ್ವ ಮೊದಲಾದ ಯಾವುದೇ ಧರ್ಮಗಳು ಇರುವುದಿಲ್ಲ. ಆದ್ದರಿಂದ ಜೀವನು ಅಕ್ಷರಾತ್ಪರತಃ ಪರನಾಗುತ್ತಾನೆಂದು ಶಂಕೆಯೇ ಹುಟ್ಟುವುದಿಲ್ಲ.

टीकाक्षरार्थस्तु – पृथिव्यादिदृष्टान्तेनेति । श्रुतौ ऊर्णनाभिदृष्टान्तस्य प्राथम्येऽपि तत्र 'सृजते' इत्यनेन कर्तृत्वप्रतीतेः 'पृथिव्यादि' इत्युक्तम् ।

ಟೀಕೆಯಲ್ಲಿರುವ ಕೆಲವು ಕಠಿಣಪದಗಳ ಅರ್ಥ ಹೀಗಿದೆ - 'ಪೃಥಿವ್ಯಾದಿದೃಷ್ಟಾಂತೇನ' ಎಂದು ಹೇಳಿದ್ದಾರೆ. ವಸ್ತುತಃ 'ಯಥೋರ್ಣನಾಭಿಃ ಸೃಜತೇ ಗೃಹ್ಣತೇ ಚ ಯಥಾ ಪೃಥಿವ್ಯಾಮ್ ಓಷಧಯಃ ಸಂಭವಂತಿ' ಎಂಬುದಾಗಿ ಊರ್ಣನಾಭಿದೃಷ್ಟಾಂತವು ಮೊದಲು ಪ್ರಸಕ್ತವಾಗಿದೆ. ಆನಂತರ ಪೃಥಿವೀ ದೃಷ್ಟಾಂತವು ಪ್ರಸಕ್ತವಾಗಿದೆ. ಅದಕ್ಕನುಗುಣವಾಗಿ ಟೀಕೆಯಲ್ಲಿಯೂ 'ಊರ್ಣನಾಭಿದೃಷ್ಟಾಂತೇನ' ಎಂದೇ ಹೇಳಬೇಕಿತ್ತು. ಆದರೆ ಊರ್ಣನಾಭಿದೃಷ್ಟಾಂತವನ್ನು ನೀಡುವಾಗ 'ಸೃಜತೇ' ಎಂಬ ಪದದಿಂದ ಕರ್ತೃತ್ವದ ಪ್ರತೀತಿಯು ಬರುತ್ತದೆ. ಆದ್ದರಿಂದ ಉಪಾದಾನಕಾರಣವೆಂಬರ್ಥವನ್ನು ಸುಲಭವಾಗಿ ಹೇಳಬಹುದು. ಆದರೆ ಪೃಥಿವ್ಯಾದಿದೃಷ್ಟಾಂತವನ್ನು ನೀಡುವಾಗ 'ಸೃಜತೇ' ಎಂಬ ಪದವು ಇಲ್ಲವಾದ್ದರಿಂದ ಕರ್ತೃತ್ವ ಪ್ರತೀತಿ ಬರುವುದಿಲ್ಲ. ಈ ಅಭಿಪ್ರಾಯದಿಂದ 'ಪೃಥಿವ್ಯಾದಿದೃಷ್ಟಾಂತೇನ' ಎಂದು ಹೇಳಿರುತ್ತಾರೆ.

सामानाधिकरण्येनेति । चित्प्रकृतेरुक्तमादत्तमस्याभावेन 'अक्षरात्परतः' इति पञ्चम्योर्वैयधिकरण्यायोगादिति भावः ।

'ಸಾಮಾನಾಧಿಕರಣ್ಯೇನ' ಎಂಬ ಟೀಕೆಗೆ ಹೀಗರ್ಥ - ಚಿತ್ಪ್ರಕೃತಿಗಿಂತ ಉತ್ತಮವಾದ ವಸ್ತು ಯಾವುದಿದೆಯೋ ಆದಕ್ಕಿಂತ ಉತ್ತಮವಾದ ಮತ್ತೊಂದು ವಸ್ತು ಇರುವುದಿಲ್ಲ. ಆದ್ದರಿಂದ 'ಅಕ್ಷರಾತ್' 'ಪರತಃ' ಎಂಬಲ್ಲಿರುವ ಎರಡು ಪಂಚಮೀ ವಿಭಕ್ತಿಗಳಿಗೆ ಸಾಮಾನಾಧಿಕರಣ್ಯವನ್ನು ವಿವಕ್ಷಿಸಬೇಕು. ಅಂದರೆ ಶ್ರೇಷ್ಠವಾದ ಚಿತ್ಪ್ರಕೃತಿಗಿಂತ ಎಂದು ಹೊರತು, ವೈಯಧಿಕರಣ್ಯದಿಂದ ಅರ್ಥವನ್ನು ಹೇಳಬಾರದು. ಅಂದರೆ ಅಕ್ಷರಶಬ್ದವಾಚ್ಯವಾದ ಚಿತ್ಪ್ರಕೃತಿಗಿಂತ ಉತ್ತಮೋತ್ತಮವೆಂಬ ಅರ್ಥವನ್ನು ವಿವಕ್ಷಿಸಬಾರದೆಂದು ಅಭಿಪ್ರಾಯ.

उक्तार्थे हेतुतयेति । ''तपसा चीयते'' इत्यत्रालोचनार्थेन तपश्शब्देनाज्ञानप्रतीतौ तन्निरासाय ''यस्य ज्ञानमयं तपः'' इत्यनेनोक्ते पूर्णज्ञानत्वे हेतुतया सार्वज्ञ्योक्तेरित्यर्थः ।

ಟೀಕೆಯಲ್ಲಿ 'ಉಕ್ತಾರ್ಥೇ ಹೇತುತಯಾ' ಎಂದು ಹೇಳಿದ್ದಾರೆ. ಇದರ ಅರ್ಥ ಹೀಗಿದೆ - 'ತಪಸಾ ಚೀಯತೇ ಬ್ರಹ್ಮ' ಎಂಬ ಶ್ರುತಿಯನ್ನು ಹೇಳಿದಾಗ ಚತುರ್ಮುಖಬ್ರಹ್ಮದೇವರು ಆಲೋಚನಾಪೂರ್ವಕವಾದ ತಪಸ್ಸನ್ನು ಮಾಡಿದರೆಂದು ತಿಳಿಯುತ್ತದೆ. ಹೀಗೆ ಆಲೋಚನಾರ್ಥವನ್ನು ವಿವಕ್ಷಿಸಿದರೆ ಚತುರ್ಮುಖಬ್ರಹ್ಮದೇವರಿಗೆ ಅಜ್ಞಾನವಿದೆಯೆಂದು ಹೇಳಿದಂತಾಗುತ್ತದೆ. ಇದನ್ನು ನಿರಾಕರಿಸುವುದಕ್ಕೋಸ್ಕರ 'ಯಸ್ಯ ಜ್ಞಾನಮಯಂ ತಪಃ' ಎಂದು ತಪಶ್ಶಬ್ದಕ್ಕೆ ಪೂರ್ಣಜ್ಞಾನತ್ವವೆಂಬ ಅರ್ಥವನ್ನು ಹೇಳಿದ್ದಾರೆ. ಇದರಿಂದ ಸರ್ವಜ್ಞತ್ವಕ್ಕೆ ಹೇತುವನ್ನು ಹೇಳಿದಂತಾಗುತ್ತದೆ. 'ಉಕ್ತಾರ್ಥೇ ಹೇತುತಯಾ' ಎಂದರೆ ಪೂರ್ಣಜ್ಞಾನತ್ವಕ್ಕೆ ಕಾರಣವನ್ನಾಗಿ ಹೇಳಲ್ಪಟ್ಟ ಸಾರ್ವಜ್ಞ್ಯೋಕ್ತಿಯಿಂದ ಎಂದರ್ಥ.

सूत्रखण्डस्यार्थान्तरमाहेति । सूत्रे विशेषणशब्दस्य न केवलं सर्वज्ञत्व-विशेषणादित्येवार्थः, किन्तु अक्षरात्परतः परत्वविशेषणादित्यप्यर्थः । एवं भेदशब्दस्य हिरण्यगर्भाद्व्रह्मा भेदमात्रं नार्थः, किन्त्वक्षरव्यक्तीनां भेदोऽपि । तथा चाक्षराणां भेदव्यपेशादक्षरात्परतः परत्वमक्षरस्यैव विशेषणमित्यपि सूत्रयोजनेति भाष्यार्थ इत्यर्थः ।

ಟೀಕೆಯಲ್ಲಿ 'ಸೂತ್ರಖಂಡಸ್ಯಾರ್ಥಾಂತರಮಾಹ' ಎಂದು ಹೇಳಿದ್ದಾರೆ. ಇದರ ಅರ್ಥ ಹೀಗಿದೆ - ಸೂತ್ರದಲ್ಲಿರುವ ವಿಶೇಷಣಪದವು ಕೇವಲ ಸರ್ವಜ್ಞತ್ವ ಮೊದಲಾದ ವಿಶೇಷಣಗಳಿರುವುದರಿಂದ ಎಂದಷ್ಟೇ ಅರ್ಥವನ್ನು ಹೇಳುತ್ತಿಲ್ಲ ಹೊರತಾಗಿ, 'ಅಕ್ಷರಾತ್ ಪರತಃ ಪರತ್ವ' ಎಂಬ ವಿಶೇಷಣವಿರುವುದರಿಂದ ಎಂಬರ್ಥವನ್ನೂ ಹೇಳುತ್ತಿದೆ. ಇದರಂತೆ ಸೂತ್ರದಲ್ಲಿರುವ ಭೇದವೆಂಬ

ಶಬ್ದವು ಹಿರಣ್ಯಗರ್ಭನಿಂದ, ಅಥವಾ ರುದ್ರನಿಂದಷ್ಟೇ ಭೇದವನ್ನು ಹೇಳುತ್ತಿಲ್ಲ ಹೊರತಾಗಿ ಅಕ್ಷರವ್ಯಕ್ತಿಗಳ ಭೇದವನ್ನೂ ಸಹ ಹೇಳುತ್ತಿದೆ. ಆದ್ದರಿಂದ ಅಕ್ಷರವ್ಯಕ್ತಿಗಳಲ್ಲಿ ಭೇದವ್ಯಪದೇಶವಿರುವುದರಿಂದ ಅಕ್ಷರಾತ್ಪರತಃ ಪರತ್ವವು ಅಕ್ಷರನಾಮಕನಾದ ಭಗವಂತನಿಗೇ ವಿಶೇಷಣವಾಗಿದೆ ಎಂದೂ ಸೂತ್ರವನ್ನು ಯೋಜನೆ ಮಾಡಬೇಕು. ಹೀಗೆ ಭಾಷ್ಯಕಾರರ ಅಭಿಪ್ರಾಯವಿದೆಯೆಂದು 'ಸೂತ್ರಖಂಡಸ್ಯ' ಎಂಬ ಟೀಕೆಯ ಅಭಿಪ್ರಾಯ.

'इत्युक्त्वा प्रतीयते' इति भाष्ये क्रिययोस्समानकर्तृकत्वाभावेऽपि क्त्वाप्रत्ययः

'यदोर्वंशं नरः श्रुत्वा सर्वपापैः प्रमुच्यते ।'

इतिवद्द्रष्टव्यः ।।

।। इति श्रीब्रह्मण्यतीर्थपूज्यश्रीपादशिष्यव्यासतीर्थविरचितायां तात्पर्यचन्द्रिकायाम् अदृश्यत्वाधिकरणं सम्पूर्णम् ।।

'ಇತ್ಯುಕ್ತ್ವಾ ಪ್ರತೀಯತೇ' ಎಂದು ಭಾಷ್ಯದಲ್ಲಿ ಹೇಳಿದ್ದಾರೆ. 'ಇತ್ಯುಕ್ತ್ವಾ' ಎಂದರೆ ಶ್ರುತಿಯು ಹೀಗೆ ಹೇಳಿ, 'ಪ್ರತೀಯತೇ' ಎಂದರೆ ನಮಗೆ ತೋರುತ್ತದೆ ಎಂದರ್ಥ. ಕ್ರಿಯೆಯು ಶ್ರುತಿಯಲ್ಲಿದೆ, ಪ್ರತೀತಿಯು ನಮ್ಮಲ್ಲಿದೆ. ಹೀಗಿರುವಾಗ ಕ್ರಿಯೆಗೆ ಸಮಾನಕರ್ತೃಕತ್ವವನ್ನು ಹೇಳಿದಂತಾಗಲಿಲ್ಲ. ಎಲ್ಲಿ ಸಮಾನಕರ್ತೃಕತ್ವವಿರುತ್ತದೋ ಆಲ್ಲಷ್ಟೇ 'ಕ್ತ್ವಾ' ಪ್ರತ್ಯಯವನ್ನು ಪ್ರಯೋಗಿಸಬೇಕಲ್ಲವೇ? ಎಂದು ಪ್ರಶ್ನಿಸಬಹುದು. 'ಯದೋರ್ವಂಶಂ ನರಃ ಶ್ರುತ್ವಾ ಸರ್ವಪಾಪೈಃ ಪ್ರಮುಚ್ಯತೇ'' ಮನುಷ್ಯನು ಯದುವಂಶವನ್ನು ಕೇಳಿ ಸರ್ವಪಾಪಗಳಿಂದ ಮುಕ್ತನಾಗುತ್ತಾನೆ ಎಂಬ ಪ್ರಯೋಗದಂತೆ ಇದೂ ಸಹ ಸಾಧುವಾಗುತ್ತದೆಂದು ತಿಳಿಯಬೇಕು.

ಇಲ್ಲಿಗೆ ತಾತ್ಪರ್ಯಚಂದ್ರಿಕೆಯ ಕನ್ನಡಾನುವಾದದಲ್ಲಿ ಅದೃಶ್ಯತ್ವಾಧಿಕರಣವು ಸಮಾಪ್ತವಾಯಿತು.

प्रकाशः –

केचित्त्विति ।। अत्र ''अथ परा'' इत्यादिवाक्ये प्रधानपुरुषौ प्रतिपाद्येते उत परमात्मेति संशये,

ವಿವರಣೆ - ರಾಮಾನುಜರ ಅಧಿಕರಣ ಶರೀರ ಹೀಗಿದೆ - 'ಅಥ ಪರಾ' ಇತ್ಯಾದಿ ವಾಕ್ಯದಲ್ಲಿ ಪ್ರತಿಪಾದ್ಯರಾದವರು ಪ್ರಕೃತಿ ಹಾಗೂ ಪುರುಷರೋ? ಅಥವಾ ಪರಮಾತ್ಮನೋ ? ಎಂದು ಸಂದೇಹ.

ಪ್ರಕಾಶಃ – ''यत्तदद्रेश्यम्'' ಇತ್ಯಾದಿನಾ ಪೃಥಿವ್ಯಾದ್ಯಚೇತನಗತದೃಶ್ಯತ್ವಾದೀನಾಂ ನಿಷೇಧಾತ್, ತಜ್ಜಾತೀಯಮಚೇತನಂ ಪ್ರಧಾನಮೇವಾದೃಶ್ಯತ್ವಾದಿಗುಣಕಂ ಭೂತಯೋನ್ಯಕ್ಷರಮ್, ''अक्षरात्परतः परः'' ಇತಿ ತು ತಸ್ಯಾಧಿಷ್ಠಾತಾ ಪುರುಷ ಏವೇತಿ ತಾವೇವಾತ್ರ ಪ್ರತಿಪಾದ್ಯಾವಿತಿ ಪ್ರಾಪ್ತೇ,

'ಯತ್ತದದ್ರೇಶ್ಯಮ್' ಇತ್ಯಾದಿ ವಾಕ್ಯದಿಂದ ಪೃಥಿವೀ ಮೊದಲಾದ ಜಡಪದಾರ್ಥಗಳಲ್ಲಿ ದೃಶ್ಯತ್ವ ಮೊದಲಾದ ಧರ್ಮಗಳನ್ನು ನಿಷೇಧ ಮಾಡಲಾಗಿದೆ. ಅಂತಹ ದೃಶ್ಯತ್ವಾದಿಗಳಿಗೆ ಅಧಿಷ್ಠಾನವಾದದ್ದೂ ಸಹ ಪೃಥಿವ್ಯಾದಿಗಳಿಗೆ ಸಮಾನಜಾತೀಯವಾದ ಜಡಪದಾರ್ಥವೇ ಆಗಬೇಕು. ಅಂದರೆ ಪ್ರಕೃತಿಯೇ ಅದೃಶ್ಯತ್ವಾದಿಗುಣಗಳಿಗೆ ಆಧಾರವಾಗಿದೆಯೆಂದು ಹೇಳಬೇಕು. ಅಂತಹ ಪ್ರಕೃತಿಯು ಭೂತಗಳಿಗೆ ಕಾರಣವಾಗಿದೆ. ಮತ್ತು ಅಕ್ಷರಶಬ್ದವಾಚ್ಯವಾಗಿದೆ. 'ಅಕ್ಷರಾತ್ಪರತಃ ಪರಃ' ಎಂದರೆ ಅಕ್ಷರನಾಮಕವಾದ ಪ್ರಕೃತಿಗೆ ಅಧಿಷ್ಠಾನನಾದ ಜೀವನೆಂದರ್ಥ. ಹೀಗೆ ಪ್ರಕೃತಿ ಹಾಗೂ ಜೀವರು 'अथ परा' ಎಂಬ ಶ್ರುತಿಯಿಂದ ಪ್ರತಿಪಾದ್ಯರಾಗಿದ್ದಾರೆಂದು ಪೂರ್ವಪಕ್ಷ.

ಪ್ರಕಾಶಃ – ಪ್ರಧಾನಪುರುಷಯೋರಸಮ್ಭಾವಿತಸ್ಯ ಸಾರ್ವಜ್ಞ್ಯಾದಿಧರ್ಮಸ್ಯೋಕ್ತೇಃ ಫಲಾಭಿಸನ್ಧಿರಹಿತಕರ್ಮಾರಾಧ್ಯತ್ವಪರಾಪರವಿದ್ಯಾವಿಷಯತ್ವಾದಿನಾ ವಿಶೇಷ್ಯಮಾಣತ್ವಾತ್, ಅಕ್ಷರಾದ್ ಅವ್ಯಾಕೃತಾದ್ ಭೂತಸೂಕ್ಷ್ಮಾತ್ಪರತಃ ಸಮಷ್ಟಿಪುರುಷಾತ್ ಪರ ಇತಿ ಭೇದವ್ಯಪದೇಶಾತ್, ''अग्निर्मूर्धा'' ಇತ್ಯಾದಿನಾ ಜಗದ್ರೂಪೋಪನ್ಯಾಸಾಚ್ಚ ನ ಪ್ರಧಾನಜೀವಾವತ್ರೋಚ್ಯೇತೇ, ಕಿನ್ತು ಪರಮಾತ್ಮೈವೇತ್ಯಾಹುರಿತ್ಯರ್ಥಃ ।

ಪ್ರಕೃತಿ ಹಾಗೂ ಪುರುಷರಲ್ಲಿ ಅಸಂಭಾವಿತವಾದ ಸರ್ವಜ್ಞತ್ವ ಮೊದಲಾದ ಧರ್ಮಗಳನ್ನು ಶ್ರುತಿ ಹೇಳುತ್ತಿದೆ. ಹಾಗೂ ಫಲದ ಅಭಿಲಾಷೆಯಿಲ್ಲದೆ ಮಾಡಲ್ಪಟ್ಟ ಕರ್ಮದಿಂದ ಆರಾಧ್ಯನಾಗಿರುವಿಕೆ. ಪರಾಪರವಿದ್ಯೆಗೆ ವಿಷಯನಾಗಿರುವಿಕೆ ಮೊದಲಾದ ಗುಣಗಳನ್ನು ಹೇಳಿರುವುದರಿಂದ ಪ್ರಕೃತಿ ಹಾಗೂ ಪುರುಷರು ಶ್ರುತಿಪ್ರತಿಪಾದ್ಯರಾಗುವುದಿಲ್ಲ. ಹೊರತಾಗಿ ಪರಮಾತ್ಮನೇ ಪ್ರತಿಪಾದ್ಯನಾಗುತ್ತಾನೆ. 'ಅಕ್ಷರಾತ್ಪರತಃ ಪರಃ ಎಂಬ ಶ್ರುತಿಗೆ ಹೀಗರ್ಥ - ಅಕ್ಷರಾತ್ = ಅವ್ಯಾಕೃತವಾದ ಭೂತಸೂಕ್ಷ್ಮಕ್ಕಿಂತ, ಪರತಃ = ಶ್ರೇಷ್ಠನಾದ ಸಮಷ್ಟಿಪುರುಷನಿಗಿಂತ (ನಿತ್ಯಮುಕ್ತಜೀವನಿಗಿಂತ) ಪರಃ = ಶ್ರೇಷ್ಠನಾದವನು ಎಂದು. ಹೀಗೆ ಭೂತಸೂಕ್ಷ್ಮಕ್ಕಿಂತ ಮತ್ತು ಪುರುಷನಿಗಿಂತ ಭೇದವು ಹೇಳಲ್ಪಟ್ಟಿರುವುದರಿಂದ ಪ್ರಕೃತಿಪುರುಷರು ಪ್ರತಿಪಾದ್ಯರಾಗುವುದಿಲ್ಲ. ಮತ್ತು 'ಅಗ್ನಿರ್ಮೂರ್ಧಾ' ಇತ್ಯಾದಿ ವಾಕ್ಯದಿಂದ ಜಗದ್ರೂಪವು ಹೇಳಲ್ಪಟ್ಟಿದೆ. ಪ್ರಕೃತಿ ಹಾಗೂ ಜೀವರಿಗೆ ಜಗದ್ರೂಪತ್ವವು ಕೂಡುವುದಿಲ್ಲ. ಆದ್ದರಿಂದ ಪರಮಾತ್ಮನೇ ಶ್ರುತಿಪ್ರತಿಪಾದ್ಯನೆಂದು ಸಿದ್ಧಾಂತ.

ಪ್ರಕಾಶಃ – ತದುಕ್ತಂ –

दृश्यत्वादेर्निषेधो विकृतिमति भवत्यक्षरे सन्निकर्षा-
त्पञ्चायुक्ताक्षरं यत्तदवधिकपरः पञ्चविंशोऽस्तु मा भूत् ।

ಪರಿಪೂರ್ಣಚಂದ್ರಿಕಾ

सर्वज्ञत्वादिदृष्टेः प्रथमसमुदितं त्वक्षरं ब्रह्म शुद्धं
पश्चादुक्तं तु जीवादिकमवधितया भेदतस्तत्परोक्तेः ।। इति ।

ತಮ್ಮ ಸಿದ್ಧಾಂತವನ್ನು ರಾಮಾನುಜರು ಶ್ಲೋಕದಲ್ಲಿ ಹೀಗೆ ಸಂಗ್ರಹಿಸಿದ್ದಾರೆ -

ದೃಶ್ಯತ್ವಾದೇರ್ನಿಷೇಧೋ ವಿಕೃತಿಮತಿ ಭವತ್ಯಕ್ಷರೇ ಸನ್ನಿಕರ್ಷಾತ್
ಪಂಚಾಯುಕ್ತಾಕ್ಷರಂ ಯತ್ತದವಧಿಕಪರಃ ಪಂಚವಿಂಶೋಽಸ್ತು ಮಾ ಭೂತ್ ।
ಸರ್ವಜ್ಞತ್ವಾದಿದೃಷ್ಟೇಃ ಪ್ರಥಮಸಮುದಿತಂ ತತ್ಪರಂ ಬ್ರಹ್ಮ ಶುದ್ಧಂ
ಪಶ್ಚಾದುಕ್ತಂ ತು ಜೀವಾದಿಕಮವಧಿತಯಾ ಭೇದತಸ್ತತ್ಪರೋಕ್ತೇಃ ॥

ಎಂಬುದಾಗಿ ಪೃಥಿವ್ಯಾದಿಗಳಲ್ಲಿರುವ ದೃಶ್ಯತ್ವಾದಿಗಳ ನಿಷೇಧವನ್ನು ವಿಕಾರವುಳ್ಳ ಅಕ್ಷರವೆನಿಸಿದ ಪ್ರಧಾನದಲ್ಲೇ ಮಾಡಬೇಕು. ಏಕೆಂದರೆ ಪೃಥೀವೀ ಪದದ ಮುಂದೆ ಹತ್ತಿರದಲ್ಲಿ ಪ್ರಧಾನವು ಪ್ರಸಕ್ತವಾಗಿರುವುದರಿಂದ. ಹತ್ತಿರದಲ್ಲಿರುವುದರಿಂದಲೇ ಪಂಚಮ್ಯಂತವಾದ ಅಕ್ಷರಶಬ್ದದಿಂದಲೂ ಪ್ರಧಾನವೇ ಪ್ರತಿಪಾದ್ಯವಾಗುತ್ತದೆ. ಪ್ರಧಾನವೇ ಅವಧಿಯಾಗಿವುಳ್ಳ ಉತ್ತಮನು ಯಾರೆಂದರೆ ಇಪ್ಪತ್ತೈದನೆಯ ತತ್ತ್ವವೆನಿಸಿದ ಜೀವನು.

ಈ ಪೂರ್ವಪಕ್ಷ ಸರಿಯಿಲ್ಲ. ಮೊದಲು ಸರ್ವಜ್ಞತ್ವಾದಿ ಧರ್ಮಗಳಿಂದ ಪ್ರಸಕ್ತನಾದ ಅಕ್ಷರವೆಂದರೆ ಶುದ್ಧಬ್ರಹ್ಮನೇ ಆಗುತ್ತಾನೆ. ಅನಂತರ ಭಿನ್ನತ್ವೇನ ಪ್ರಸಕ್ತವಾದ ಅಕ್ಷರವೆಂದರೆ ಪ್ರಧಾನ ಅಥವಾ ಜೀವಾದಿಗಳು ಆಗುತ್ತವೆ. ಏಕೆಂದರೆ 'ಪರತಃ' ಎಂಬ ಅವಧಿಪೂರ್ವಕವಾಗಿ ಭೇದವನ್ನು ಹೇಳಿರುವುದರಿಂದ.

प्रकाशः – जीवत्वशङ्केति । उपलक्षणमेतत्, मन्मतरीत्या निरवकाशोपादानत्वादिना पूर्वपक्षसम्भवे सावकाशदृश्यत्वादिनिषेधेनेह नियमेन अचेतनोपस्थित्ययोगात्,

ಗ್ರಂಥದಲ್ಲಿ ಜೀವನೆಂಬ ಶಂಕೆ ಕೂಡುವುದಿಲ್ಲವೆಂದು ಹೇಳಿದ್ದು ಕೇವಲ ಉಪಲಕ್ಷಣವಾಗಿದೆ - ನಮ್ಮ ಮತದ ಪ್ರಕಾರ ನಿರವಕಾಶವಾದ ಉಪಾದಾನತ್ವಾದಿಗಳಿಂದಲೇ ಸುಲಭವಾಗಿ ಪೂರ್ವಪಕ್ಷವನ್ನು ಮಾಡಲು ಬರುವಾಗ ಸಾವಕಾಶವಾದ ದೃಶ್ಯತ್ವಾದಿಧರ್ಮಗಳನ್ನು ನಿಷೇಧ ಮಾಡುವ ಮೂಲಕ ಪೂರ್ವಪಕ್ಷ ಮಾಡುವುದು ತಪ್ಪಾಗುತ್ತದೆ. ಅಂದರೆ ಜಡಭೂತವಾದ ವಸ್ತುವಿನಲ್ಲಿರುವ ದೃಶ್ಯತ್ವವನ್ನು ನಿಷೇಧಮಾಡಿದ ಮಾತ್ರದಿಂದ ನಿಯಮೇನ ಜಡದ ಉಪಸ್ಥಿತಿಯೇ ಬರುತ್ತದೆಂಬ ನಿಯಮವಿರುವುದಿಲ್ಲ.

प्रकाशः –''अवर्णमचक्षुःश्रोत्रम्'' इत्यादिना चेतनधर्मब्राह्मणत्वादिवर्णचक्षुरादि-करणनिषेधेनेह भूतयोनिश्चेतन इत्यपि वक्तुं शक्यत्वेन तेन प्रधानमात्रपूर्वपक्षा-योगात् । द्वितीयसूत्रे अक्षरव्यक्तीनां भेदव्यपदेशासिद्धेः तेन प्रकृतिनिरासस्य क्लिष्टत्वादित्यपि ज्ञेयम् ।।

ಮತ್ತು ಅಚೇತನಧರ್ಮವನ್ನು ನಿಷೇಧ ಮಾಡುವ ಪ್ರಯುಕ್ತ ಆದಕ್ಕೆ ಆಶ್ರಯವಾದದ್ದೂ ಸಹ ಅಚೇತನವೇ ಆಗುತ್ತದೆಂಬ ನಿಯಮವನ್ನು ನೀವು ಹೇಳುವುದಾದರೆ ಆದೇ ಶ್ರುತಿಯಲ್ಲಿಯೇ

''ಅವರ್ಣಮಚಕ್ಷುಃಶ್ರೋತ್ರಮ್'' ಇತ್ಯಾದಿಯಾಗಿ ಚೇತನನ ಧರ್ಮವೆನಿಸಿದ ಬ್ರಾಹ್ಮಣತ್ವವೇ ಮೊದಲಾದ ವರ್ಣಗಳು, ಚಕ್ಷುರಿಂದ್ರಿಯಾದಿ ಇಂದ್ರಿಯಗಳು ಮೊದಲಾದ ಚೇತನನ ಧರ್ಮವನ್ನು ನಿಷೇಧ ಮಾಡಲಾಗಿದೆ. ಆದ್ದರಿಂದ ಅದಕ್ಕೆ ಆಶಯವಾಗಿ ಚೇತನವೇ ಅಕ್ಷರನಾಗಿದ್ದಾನೆಂದೂ ಸಹ ಹೇಳಬಹುದು. ಆದ್ದರಿಂದ ನಿಷೇಧಮಾಡುವ ಪ್ರಯುಕ್ತ ಪ್ರಧಾನವು ಮಾತ್ರವೇ ಪೂರ್ವಪಕ್ಷಕ್ಕೆ ವಿಷಯವಾಗಲು ಸಾಧ್ಯವಿಲ್ಲ.

ಮತ್ತು ಎರಡನೆಯ ಸೂತ್ರವನ್ನು ವ್ಯಾಖ್ಯಾನಿಸುವಾಗ ಅಕ್ಷರವ್ಯಕ್ತಿಗಳಿಗೆ ಈವರೆಗೂ ಭೇದವ್ಯಪದೇಶವು ಸಿದ್ಧವಾಗಿಲ್ಲ. ಆದ್ದರಿಂದ ಪ್ರಕೃತಿಯನ್ನು ನಿರಾಸಮಾಡುವುದೂ ಸಹ ಅತ್ಯಂತ ಕ್ಲಿಷ್ಟವಾಗಿದೆಯೆಂದು ತಿಳಿಯಬೇಕು.

ಪ್ರಕಾಶಃ – **यत्तु कश्चिदाह – अदृश्यत्वादिगुणकं प्रधानं जीवो वा शिवो वेति विशये, महदादिपरिणामिनो भूतयोनित्वसम्भवात् प्रधानमक्षरं, ''प्रधानममृताक्षरम्'' इति श्वेताश्वतरश्रुतौ अमृतशब्दे जीवेऽक्षरपदप्रयोगात् जीवो वेति प्राप्ते, सार्वज्ञ्यादितद्धर्मोक्तेः शिव एवेति,**

ಶೈವರ ಅಧಿಕರಣ ಶರೀರ ಹೀಗಿದೆ - ಅದೃಶ್ಯತ್ವಾದಿಗುಣಗಳುಳ್ಳದ್ದು ಪ್ರಧಾನವೋ, ಜೀವನೋ, ಅಥವಾ ಶಿವನೋ ಎಂದು ಸಂಶಯ. ಮಹದಾದಿತತ್ವರೂಪದಲ್ಲಿ ಪರಿಣಾಮವನ್ನು ಹೊಂದಿರುವ ವಸ್ತುವೇ ಭೂತಯೋನಿಯಾಗುತ್ತದೆ. ಆದ್ದರಿಂದ ಪ್ರಕೃತಿಯು ಅಕ್ಷರಶಬ್ದವಾಚ್ಯವಾಗುತ್ತದೆ. 'ಪ್ರಧಾನಮಮೃತಾಕ್ಷರಮ್' ಎಂದು ಶ್ವೇತಾಶ್ವತರಶ್ರುತಿಯಲ್ಲಿ ಅಮೃತಶಬ್ದದಿಂದ ಪ್ರತಿಪಾದ್ಯನಾದ ಜೀವನಲ್ಲಿ ಅಕ್ಷರಪದವನ್ನು ಪ್ರಯೋಗಿಸಲಾಗಿದೆ. ಇದರಿಂದ ಜೀವನೂ ಸಹ ಅಕ್ಷರನಾಗಬಹುದು. ಇಷ್ಟು ಪೂರ್ವಪಕ್ಷ. ಸಾರ್ವಜ್ಞ್ಯ ಮೊದಲಾದ ಧರ್ಮಗಳನ್ನು ಶ್ರುತಿ ಹೇಳುತ್ತಿರುವುದರಿಂದ ಶಿವನೇ ಅದೃಶ್ಯತ್ವಾದಿಗುಣವುಳ್ಳ ಅಕ್ಷರನಾಗಿದ್ದಾನೆಂದು ಸಿದ್ಧಾಂತ.

ಪ್ರಕಾಶಃ – **तत्र, ''नारायणाद्ब्रह्मा जायते'' ''नारायणाद्रुद्रो जायते'' ''रुद्रस्य शिर उत्पिपेष''**

'न यस्येन्द्रो वरुणो न मित्रो व्रतमर्यमा न मिनन्ति रुद्रः' । इत्यादिना जननमरणाज्ञानादिमति रुद्रे मुख्यसार्वज्ञ्ययोगात् ।

ಇದು ತಪ್ಪು. ''ನಾರಾಯಣಾದ್ಬ್ರಹ್ಮಾ ಜಾಯತೇ'' ''ನಾರಾಯಣಾದ್ರುದ್ರೋ ಜಾಯತೇ'' ಇತ್ಯಾದಿ ಶ್ರುತಿಯಿಂದ ನಾರಾಯಣನಿಂದ ರುದ್ರನು ಜನಿಸಿದ್ದಾನೆಂದು ತಿಳಿಯುತ್ತದೆ. ''ರುದ್ರಸ್ಯ ಶಿರ ಉತ್ಪಿಪೇಷ'' ಎಂಬ ಶ್ರುತಿಯಿಂದ ರುದ್ರನಿಗೆ ಮರಣವೂ ತಿಳಿಯುತ್ತಿದೆ. 'ನ ಯಸ್ಯೇಂದ್ರೋ ವರುಣೋ ನ ಮಿತ್ರೋ ವ್ರತಮರ್ಯಮಾ ನ ಮಿನಂತಿ ರುದ್ರಃ' ಎಂಬುದರಿಂದ ಅಜ್ಞಾನವು ರುದ್ರನಲ್ಲಿ ಪ್ರತೀತವಾಗುತ್ತಿದೆ. ಹೀಗೆ ಜನನ, ಮರಣ, ಅಜ್ಞಾನಾದಿ ದೋಷಗಳಿಂದ ಯುಕ್ತನಾದ ರುದ್ರನಲ್ಲಿ ಮುಖ್ಯವಾದ ಸರ್ವಜ್ಞತ್ವವನ್ನು ಹೇಳಲು ಸಾಧ್ಯವಿಲ್ಲ.

ಪ್ರಕಾಶಃ –

'तत्कर्म हरितोषं यत्सा विद्या तन्मतिर्यया ।'

''अथ परा यया स हरिर्वेदितव्यो योऽसावदृश्यो निर्गुणः परः परमात्मा'' ''ऋगाद्या अपराः विद्याः'' इत्यादिवचनसिद्धपरविद्याविषयत्वरूपविष्णुलिङ्गविरोधेन, शिव इति सिद्धान्तस्यानुदयात् ।

ಮತ್ತು 'तत्कर्म हरितोषं यत्सा विद्या तन्मतिर्यया ।' 'अथ परा यया स हरिर्वेदितव्यो योऽसावदृश्यो निर्गुणः परः परमात्मा'' ''ऋगाद्या अपराः विद्याः'' ಇವೇ ಮೊದಲಾದ ಶ್ರುತಿಗಳಿಂದ ಪರವಿದ್ಯಾವಿಷಯನಾದವನೇ ಅಕ್ಷರಶಬ್ದವಾಚ್ಯನಾಗಿದ್ದಾನೆಂದು ಸಿದ್ಧವಾಗುತ್ತದೆ. ಪರವಿದ್ಯಾವಿಷಯತ್ವವು ವಿಷ್ಣುವಿನ ಲಿಂಗವೇ ಆಗಿದೆ. ಹೀಗೆ ವಿಷ್ಣುಲಿಂಗದ ವಿರೋಧವಿರುವ ಪ್ರಯುಕ್ತ ಶಿವನು ಅಕ್ಷರಶಬ್ದವಾಚ್ಯನಾಗುತ್ತಾನೆಂಬ ಸಿದ್ಧಾಂತವು ಹುಟ್ಟುವುದಿಲ್ಲ.

ಪ್ರಕಾಶಃ – ''अन्यम्'' इति प्रसिद्धेशशब्दिताद्रुद्रादस्य भूतयोन्यक्षरस्य भेदोक्तेश्च ।

'तामक्षरं परं प्राहुः परतः परमक्षरम् ।
हरिमेव..... ।।'

इत्यादिस्मृतिविरोधाच्च । आथर्वणभाष्योदाहृतानेकवचनजातविरोधाच्चेत्यादि ध्येयम् ।

ಮತ್ತು 'अन्यमीशम्' ಎಂಬುದಾಗಿ ಶ್ರುತಿಯು ಈಶಶಬ್ದದಿಂದ ಪ್ರತಿಪಾದ್ಯನಾದ ರುದ್ರನಿಗಿಂತ ಭೂತಯೋನಿಗೆ ಕಾರಣನಾದ ಅಕ್ಷರನಿಗೆ ಭೇದವನ್ನು ಹೇಳುತ್ತಿದೆ. ಮತ್ತು 'तामक्षरं परं प्राहुः परतः परमक्षरम् । हरिमेव ..... ।।' ಇತ್ಯಾದಿ ಗೀತಾಕಾತ್ಪರ್ಯದಾಹೃತ ಸ್ಮೃತಿಯು ಅಕ್ಷರಾತ್ಪರತಃ ಪರನಾದವನು ವಿಷ್ಣುವೇ ಎಂದು ಪ್ರತಿಪಾದಿಸುತ್ತಿದೆ. ಇದರ ವಿರೋಧವೂ ಸಹ ಬರುತ್ತದೆ. ಇದರ ಜೊತೆಗೆ ಆಥರ್ವಣಭಾಷ್ಯದಲ್ಲಿ ಉದಾಹರಿಸಲ್ಪಟ್ಟ ಅನೇಕ ವಚನಗಳ ವಿರೋಧವೂ ಸಹ ಬರುತ್ತದೆಂದು ತಿಳಿಯಬೇಕು.

ಪ್ರಕಾಶಃ – ''यथोर्णनाभिस्सृजते गृह्णते च'' इति श्रवणात् 'ऊर्णनाभ्यादिदृष्टान्तेन' इति वाच्ये 'पृथिवी' इत्याद्युक्तिः टीकायां न युक्तेत्याशङ्क्याह – श्रुताविति ।

ಟೀಕೆಯ ಕೆಲವು ಕಠಿಣಪದಗಳ ಅರ್ಥವನ್ನು ಗ್ರಂಥಕಾರರು ಬರೆಯುತ್ತಿದ್ದಾರೆ. 'पृथिव्यादिदृष्टान्तेन' ಎಂದು ಗ್ರಂಥದಲ್ಲಿ ಹೇಳಿದ್ದಾರೆ. ಆದರೆ 'यथोर्णनाभिस्सृजते गृह्णते च' ಎಂದು ಶ್ರುತಿಯ

ಪ್ರಾರಂಭವಿರುವುದರಿಂದ 'ಊರ್ಣನಾಭ್ಯಾದಿದೃಷ್ಟಾಂತೇನ' ಎಂದು ಹೇಳಬೇಕಿತ್ತಲ್ಲವೇ? ಎಂಬ ಪ್ರಶ್ನೆಗೆ 'ಶ್ರುತೌ' ಎಂಬ ವಾಕ್ಯದಿಂದ ಉತ್ತರಿಸುತ್ತಿದ್ದಾರೆ.

ಪ್ರಕಾಶಃ – ''ಊರ್ಣನಾಭಿಪೃಥಿವ್ಯಾದಿದೃಷ್ಟಾನ್ತೇನ ಅಕ್ಷರಸ್ಯ ಜಗದುಪಾದಾನತ್ವಮುಕ್ತ್ವಾ'' ಇತಿ ತತ್ತ್ವಪ್ರದೀಪವಾಕ್ಯಂ ತು ಅತದ್ಗುಣಸಂವಿಜ್ಞಾನಾಶ್ರಯೇಣ ವಾ, ಊರ್ಣನಾಭಿದೇಹಸ್ಯೋಪಾದಾನತ್ವಾಭಿಪ್ರಾಯೇಣ ವಾ ಕಥಞ್ಚಿನ್ನೇಯಮಿತಿ ಭಾವಃ ।

ಹಾಗಾದರೆ ತತ್ತ್ವಪ್ರದೀಪದಲ್ಲಿ ''ಊರ್ಣನಾಭಪೃಥಿವ್ಯಾದಿದೃಷ್ಟಾಂತೇನ ಅಕ್ಷರಸ್ಯ ಜಗದುಪಾದಾನತ್ವಮುಕ್ತ್ವಾ'' ಊರ್ಣನಾಭಿ, ಪೃಥಿವೀ ಮೊದಲಾದ ದೃಷ್ಟಾಂತಗಳನ್ನು ಹೇಳುವ ಮೂಲಕ ಅಕ್ಷರನಿಗೆ ಜಗದುಪಾದಾನತ್ವವನ್ನು ಹೇಳಿ ಎಂದು ವ್ಯಾಖ್ಯಾನಿಸಿದ್ದಾರೆ. ಈ ವಾಕ್ಯಕ್ಕೆ ಹೇಗೆ ಅರ್ಥೈಸುವುದು ಎಂದರೆ ಹೀಗೆ - 'ಅತದ್ಗುಣಸಂವಿಜ್ಞಾನ ಬಹುವ್ರೀಹಿ ಸಮಾಸ'ವನ್ನು ಆಶ್ರಯಿಸಿದಾಗ ಊರ್ಣನಾಭಿಯನ್ನು ಬಿಟ್ಟು ಪೃಥಿವ್ಯಾದಿದೃಷ್ಟಾಂತದಿಂದ ಎಂಬರ್ಥವು ತಿಳಿಯುತ್ತದೆ. ಅಥವಾ ಜೇಡರ ಬಲೆಗೆ ಜೇಡರಹುಳುವಿನ ಶರೀರವು ಉಪಾದಾನಕಾರಣವಾಗಿದೆಯೆಂದು ಕಥಂಚಿತ್ ವ್ಯಾಖ್ಯಾನಿಸಬೇಕೆಂದು ತಿಳಿಯಬೇಕು.

ಪ್ರಕಾಶಃ – ''ತಚ್ಚ ತಸ್ಯಾಮ್ ಅಕ್ಷರಾತ್ಪರತ ಇತಿ ಸಾಮಾನಾಧಿಕರಣ್ಯೇನೋಪಪನ್ನಮ್'' ಇತಿ ವಾಕ್ಯಂ ಸಾಮಾನಾಧಿಕರಣ್ಯೇ ಹೇತೂಕ್ತ್ಯಾ ವ್ಯನಕ್ತಿ – ಚಿತ್ಪ್ರಕೃತೇರಿತಿ ।

''ತಚ್ಚ ತಸ್ಯಾಮ್ ಅಕ್ಷರಾತ್ಪರತ ಪರಃ ಇತಿ ಸಾಮಾನಾಧಿಕರಣ್ಯೇನೋಪಪನ್ನಮ್'' ಎಂದು ಟೀಕಾ ವಚನವನ್ನು ಸಾಮಾನಾಧಿಕರಣ್ಯದಲ್ಲಿ ಹೇತುವನ್ನಾಗಿ ಹೇಳಿದ್ದಾರೆಂದು ಗ್ರಂಥಕಾರರು 'ಚಿತ್ಪ್ರಕೃತೇಃ' ಎಂಬ ವಾಕ್ಯದಿಂದ ವ್ಯಾಖ್ಯಾನಿಸುತ್ತಿದ್ದಾರೆ.

ಪ್ರಕಾಶಃ – ದ್ವಿತೀಯಸೂತ್ರೇ – ''ತಪಸಾ ಚೀಯತೇ ಬ್ರಹ್ಮ'' ಇತ್ಯತ್ರ ಅಜ್ಞಾನಪ್ರತೀತೌ ತನ್ನಿರಾಸಾಯ ''ಯಸ್ಯ ಜ್ಞಾನಮಯಂ ತಪಃ'' ಇತ್ಯುಕ್ತಾರ್ಥೇ ಹೇತುತಯಾ ಅದೃಶ್ಯತ್ವಾದಿಗುಣಸ್ಯ ಸಾರ್ವಜ್ಞ್ಯವಿಶೇಷಣೋಕ್ತೇಃ'' ಇತಿ ವಾಕ್ಯಂ ವ್ಯನಕ್ತಿ – ತಪಸೇತಿ ।

ಎರಡನೆಯ ಸೂತ್ರದಲ್ಲಿ - ''ತಪಸಾ ಚೀಯತೇ ಬ್ರಹ್ಮ'' ಇತ್ಯತ್ರ ಅಜ್ಞಾನಪ್ರತೀತೌ ತನ್ನಿರಾಸಾಯ 'ಯಸ್ಯ ಜ್ಞಾನಮಯಂ ತಪಃ' ಇತ್ಯುಕ್ತಾರ್ಥೇ ಹೇತುತಯಾ ಅದೃಶ್ಯತ್ವಾದಿಗುಣಕಸ್ಯ ಸಾರ್ವಜ್ಞ್ಯವಿಶೇಷಣೋಕ್ತೇಃ' ''ತಪಸಾ ಚೀಯತೇ ಬ್ರಹ್ಮ'' ಎಂಬ ವಾಕ್ಯದಿಂದ ಬ್ರಹ್ಮದೇವರಿಗೆ ಅಜ್ಞಾನವಿದೆಯೆಂಬ ಪ್ರತೀತಿಯು ಬರುತ್ತದೆ. ಅದನ್ನು ನಿರಾಕರಿಸುವುದಕ್ಕಾಗಿ 'ಯಸ್ಯ ಜ್ಞಾನಮಯಂ ತಪಃ' ಎಂಬುದಾಗಿ ಹಿಂದೆ ಹೇಳಿದ ಅರ್ಥದಲ್ಲಿ ಹೇತುವನ್ನಾಗಿ ಅದೃಶ್ಯತ್ವಾದಿಗುಣಗಳಿಗೆ ಸಾರ್ವಜ್ಞವಿಶೇಷಣವನ್ನು ಹೇಳಲಾಗಿದೆ'' ಎಂಬ ಟೀಕೆಯಲ್ಲಿರುವ ಈ ವಾಕ್ಯವನ್ನು 'ತಪಸಾ' ಎಂಬ ಗ್ರಂಥದಿಂದ ವ್ಯಾಖ್ಯಾನಿಸುತ್ತಿದ್ದಾರೆ.

ಪ್ರಕಾಶಃ – ತಪಸಾ ಸಮ್ಬಧ್ಯತೇ, ಬ್ರಹ್ಮ ಕರ್ತೃ, ಅತಪದಿತಿ ಫಲಿತೋऽರ್ಥಃ । ಅರ್ಥಾನ್ತರಂ ವಿಶದಯತಿ – ಸೂತ್ರೇತಿ । ಪೂರ್ವಪಕ್ಷಭಾಷ್ಯೇ ಅನುಪಪತ್ತಿಂ ಸಮಾಧತ್ತೇ – ಇತ್ಯುಕ್ತ್ವೇತಿ ।

ತಪಸ್ಸಿನಿಂದ ಬ್ರಹ್ಮನು ಸಂಬಂಧವನ್ನು ಹೊಂದುತ್ತಾನೆಂದು 'ತಪಸಾ ಚೀಯತೇ ಬ್ರಹ್ಮ' ಎಂಬ ಶ್ರುತಿಗೆ ಅರ್ಥ. ಅಂದರೆ ಬ್ರಹ್ಮನು ಕರ್ತೃ ತಪಸ್ಸನ್ನು ಆಚರಿಸಿದನು ಎಂದು ಫಲಿತಾರ್ಥ. ಮತ್ತೊಂದು ವ್ಯಾಖ್ಯಾನವನ್ನು 'ಸೂತ್ರ' ಎಂಬುದರಿಂದ ಸ್ಪಷ್ಟಪಡಿಸುತ್ತಿದ್ದಾರೆ. ಪೂರ್ವಪಕ್ಷಭಾಷ್ಯದಲ್ಲಿರುವ ಅನುಪಪತ್ತಿಗೆ ಸಮಾಧಾನವನ್ನು ನೀಡುತ್ತಿದ್ದಾರೆ 'ಇತ್ಯುಕ್ತ್ವಾ' ಎಂಬುದಾಗಿ.

ಪ್ರಕಾಶಃ – तत्र यथा 'वर्तमानः' इत्यधाहारस्तथाऽत्रापि, 'इत्युक्त्वा' 'श्रुते वाक्ये' इति वा ''इत्यभिधानात् परतः परः प्रतीयते'' इति वा अध्याहारेण योज्यमिति भावः ।।

॥ इति श्रीमत्सर्वतन्त्रस्वतन्त्रसुधीन्द्रतीर्थगुरुपादशिष्यराघवेन्द्रयतिकृते चन्द्रिकाप्रकाशे अदृश्यत्वाधिकरणं सम्पूर्णम् ॥

ಭಾಗವತದಲ್ಲಿರುವ 'ಯದೋರ್ವಂಶಂ ನರಃ ಶ್ರುತ್ವಾ ಸರ್ವಪಾಪೈಃ ಪ್ರಮುಚ್ಯತೇ' ಎಂಬಲ್ಲಿ 'ಶ್ರುತ್ವಾ' ಎಂಬ ಪದದ ಅನಂತರ 'ವರ್ತಮಾನಃ' ಎಂಬ ಪದವನ್ನು ಅಧ್ಯಾಹಾರ ಮಾಡಿಕೊಳ್ಳುತ್ತೇವೋ, ಅದರಂತೆ 'ಇತ್ಯುಕ್ತ್ವಾ ಪ್ರತೀಯತೇ' ಎಂಬಲ್ಲಿಯೂ ಸಹ 'ಇತ್ಯುಕ್ತ್ವಾ' ಎಂಬ ಪದದ ಅನಂತರ 'ಶ್ರುತೇ ವಾಕ್ಯೇ' ಎಂಬುದಾಗಿ ಅಥವಾ 'ಇತ್ಯಭಿಧಾನಾತ್ ಪರತಃ ಪರಃ ಪ್ರತೀಯತೇ' ಎಂಬುದಾಗಿ ಅಧ್ಯಾಹಾರ ಮಾಡಿಕೊಂಡು ಭಾಷ್ಯದ ಅರ್ಥವನ್ನು ತಿಳಿದುಕೊಳ್ಳಬೇಕು.

ಇಲ್ಲಿಗೆ ಶ್ರೀರಾಘವೇಂದ್ರತೀರ್ಥಶ್ರೀಪಾದರಿಂದ ವಿರಚಿತವಾದ ಪ್ರಕಾಶಟಿಪ್ಪಣಿಯ ಕನ್ನಡಾನುವಾದದಲ್ಲಿ ಅದೃಶ್ಯತ್ವಾಧಿಕರಣವು ಮುಕ್ತಾಯವಾಯಿತು.

* * * * * * *

ಶ್ರೀಕೃಷ್ಣಾರ್ಪಣಮಸ್ತು.

ಗುರುರಾಜೀಯಮ್ – नन्वित्युक्त्वा प्रतीयत इति वचनं प्रति श्रुतेः कर्तृत्वात्प्रतीतिं प्रति पुरुषस्य कर्तृत्वेन समानकृत्वाभावात् त्वाप्रत्ययानुपपत्तिरित्यत आह – **इत्युक्त्वेति** ।। श्रवणं प्रति पुरुषस्य मोचनं प्रति च पापानां कर्तृत्वेन समानकर्तृत्वाभावेन त्वाप्रत्ययानुपपत्तिः । यदि च तत्र श्रुत्वा स्थित इति

शेषपूरणेन समानकर्तृत्वं तर्हि प्रकृतेऽपि विचार्यमाण इति शेषपूरणेन समानकर्तृत्वमित्यभिप्रायः ।।

।। इति श्रीकेशवभट्टारकेण विरचितायां भावदीपिकायाम्
अदृश्यत्वाधिकरणं सम्पूर्णम् ।। ६ ।।

ಸಾರ

ಅದೃಶ್ಯತ್ವಾದಿಗುಣವುಳ್ಳದ್ದು ಪ್ರಕೃತಿ. ಅಕ್ಷರಾತ್ಪರತಃ ಪರನಾದವನು ಜೀವನೆಂದು ಪೂರ್ವಪಕ್ಷಮಾಡಿ ಎರಡೂ ಸಹ ಪರಮಾತ್ಮನೇ ಎಂದು ರಾಮಾನುಜರು ಸಿದ್ಧಾಂತ ಮಾಡಿದ್ದಾರೆ. ಇದು ತಪ್ಪು. ಏಕೆಂದರೆ

'ದಿವ್ಯೋ ಹ್ಯಮೂರ್ತಃ ಪುರುಷಃ ಸ ಬಾಹ್ಯಾಭ್ಯಂತರೋ ಹ್ಯಜಃ।
ಅಪ್ರಾಣೋ ಹ್ಯಮನಾಶ್ಶುಭ್ರೋ ಅಕ್ಷರಾತ್ಪರತಃ ಪರಃ' ॥

ಎಂಬುದಾಗಿ ದಿವ್ಯತ್ವ, ಅಮೂರ್ತತ್ವ ವ್ಯಾಪ್ತತ್ವ, ಪ್ರಾಣತ್ವ ಮೊದಲಾದ ಧರ್ಮಗಳಿಂದ ಅಕ್ಷರಾತ್ಪರತಃ ಪರವು ವಿಶಿಷ್ಟವಾಗಿದೆಯೆಂದು ಶ್ರುತಿ ಹೇಳುತ್ತಿದೆ. ಆದರೆ ಜೀವನಲ್ಲಿ ಅಮೂರ್ತತ್ವ ಮೊದಲಾದ ಯಾವುದೇ ಧರ್ಮಗಳು ಇರುವುದಿಲ್ಲ. ಆದ್ದರಿಂದ ಜೀವನು ಅಕ್ಷರಾತ್ಪರತಃ ಪರನಾಗುತ್ತಾನೆಂದು ಶಂಕೆಯೇ ಹುಟ್ಟುವುದಿಲ್ಲ.

ಅದೃಶ್ಯತ್ವಾಧಿಕರಣ

(೧-೨-೬)

ಭಾಗ -೩

ನ್ಯಾಯವಿವರಣ, ನ್ಯಾಯವಿವರಣಪಂಚಿಕಾ,
ಅಣುಭಾಷ್ಯ, ತತ್ವಮಂಜರೀ,
ತಂತ್ರದೀಪಿಕಾ, ನ್ಯಾಯಮುಕ್ತಾವಳಿ ಗ್ರಂಥಗಳ
ಸರಳ ಕನ್ನಡ ಅನುವಾದ

* * *

ಸೂತ್ರಾರ್ಥರತ್ನಾವಳಿ ಗ್ರಂಥದ ಸಂಸ್ಕೃತ ಮೂಲ

॥ श्रीगुरुभ्यो नमः ॥

श्रीमदानन्दतीर्थभगवत्पादाचार्यविरचितम्

न्यायविवरणम्

श्री जयतीर्थविरचिता

न्यायविवरणपञ्जिका

अदृश्यत्वाधिकरणम् (१।२।६)

न्यायविवरणम् – 'अक्षरात् परतः परः' इति श्रुतेरपि नाक्षरात् सम्भवतीत्यस्याः निरवकाशत्वम् । अक्षरात् परतः परस्याप्यक्षरान्तरत्ववचनात् ।।

ಅಕ್ಷರಾತ್ ಪರತಃ ಪರಃ' ಎಂಬ ಶ್ರುತಿಗಿಂತಲೂ ಅಕ್ಷರಾತ್ ಸಂಭವತೀಹ ವಿಶ್ವಮ್ ಎಂಬ ಶ್ರುತಿಗೆ ನಿರವಕಾಶತ್ವವನ್ನು ಹೇಳಬಾರದು. ಏಕೆಂದರೆ ಜಗತ್ತಿಗೆ ಕಾರಣವಾದ ಅಕ್ಷರಕ್ಕೆ ಈ ಶ್ರುತಿಯಲ್ಲಿ ಅಕ್ಷರನಿಂದ ಉತ್ತಮೋತ್ತಮತ್ವವು ಹೇಳಲ್ಪಟ್ಟಿದೆ. ಅಕ್ಷರನಿಂದ ಉತ್ತಮೋತ್ತಮತ್ವ, ಹಾಗೂ ಅಕ್ಷರಶಬ್ದಪ್ರತಿಪಾದ್ಯತ್ವ ಒಬ್ಬನೇ ವ್ಯಕ್ತಿಗೆ ಅಸಂಭಾವಿತವಲ್ಲ. ಮೂರು ಬಗೆಯ ಅಕ್ಷರಗಳಿರುವುದರಿಂದ ಮುಖ್ಯವಾದ ಅಕ್ಷರಶಬ್ದವಾಚ್ಯನು ವಿಷ್ಣುವಾಗಿದ್ದಾನೆಂದಭಿಪ್ರಾಯ.

ಟೀಕಾ – ॐ अदृश्यत्वादिगुणको धर्मोक्तेः ॐ ।। 'यत् तदद्रेश्यम्' इत्युक्तं विष्णोरन्यत्रैव स्यात् । तस्मिन् 'अक्षरात् सम्भवतीह विश्वम्' इत्यक्षरशब्दश्रवणात् । तस्य च प्रधानादौ रूढत्वात् ।

'ಅಕ್ಷರಾತ್ ಸಂಭವತೀಹ ವಿಶ್ವಮ್' ಎಂಬಲ್ಲಿ ಅಕ್ಷರಶಬ್ದವು ಪ್ರಕೃತ್ಯಾದಿಗಳಲ್ಲಿ ರೂಢವಾಗಿದೆ. ಆದ್ದರಿಂದ 'ಯತ್ ತದದ್ರೇಶ್ಯಮ್' ಎಂಬ ಶ್ರುತಿಯಲ್ಲಿ ಹೇಳಲ್ಪಟ್ಟ ಅದೃಶ್ಯತ್ವವು ವಿಷ್ಣುವಿಗೆ ಯುಕ್ತವಾಗುವುದಿಲ್ಲ; ಹೊರತು ಅಂತಹ ಪ್ರಕೃತ್ಯಾದಿಗಳೇ ಅದೃಶ್ಯತ್ವಾದಿಗುಣಗಳುಳ್ಳವುಗಳು. ಏಕೆಂದರೆ, ಅಕ್ಷರಶಬ್ದವು ಪ್ರಕೃತ್ಯಾದಿಗಳಲ್ಲಿ ರೂಢವಾಗಿದೆ.

यद्यपि पूर्ववददृश्यत्वादिबलेन रूढिं परित्यज्य योगवृत्त्याऽक्षरशब्दो विष्णौ सम्भवति । तथाप्यत्र न विष्णुविषयोऽङ्गीकर्तुं शक्यते ।

ವಸ್ತುತಃ ಹಿಂದಿನಅಧಿಕರಣದಲ್ಲಿ ಅದೃಶ್ಯತ್ವಾದಿಲಿಂಗಗಳ ಬಲದಿಂದ ರೂಢಿಯನ್ನು ಬಿಟ್ಟು ಯೌಗಿಕವೃತ್ತಿಯಿಂದ ವಿಷ್ಣುವಿನಲ್ಲಿ ಅಕ್ಷರಶಬ್ದಪ್ರತಿಪಾದ್ಯತ್ವವನ್ನು ಹೇಳಬಹುದು. ಆದರೂ ಸಹ ಪ್ರಕೃತ ಅಕ್ಷರಶಬ್ದವಾಚ್ಯತ್ವವನ್ನು ವಿಷ್ಣುವಿಗೆ ಹೇಳಲು ಸಾಧ್ಯವಿಲ್ಲ.

'अक्षरात् परतः परः' इत्युत्तरश्रुत्या अस्मादृश्यत्वादिगुणकाद् विश्वयोनेरक्षरात् परतः परस्याभिधानात् । न हि विष्णोः परोऽङ्गीक्रियते । इत्येवं प्राप्ते

ಏಕೆಂದರೆ 'ಅಕ್ಷರಾತ್ ಪರತಃ ಪರಃ' ಎಂಬ ಮುಂದಿನ ಶ್ರುತಿಯಿಂದ ಅದೃಶ್ಯತ್ವಾದಿಗುಣಗಳುಳ್ಳ ಜಗತ್ತಿಗೆ ಕಾರಣವಾದ ಅಕ್ಷರದಿಂದ ಉತ್ತಮೋತ್ತಮತ್ವವನ್ನು ವಿಷ್ಣುವಿನಲ್ಲಿ ಹೇಳಲಾಗಿದೆ. ಅಕ್ಷರಶಬ್ದದಿಂದ ವಿಷ್ಣು ಪ್ರತಿಪಾದ್ಯನಾದರೆ ಅವನಿಗಿಂತ ಉತ್ತಮನಾದ ಮತ್ತೊಬ್ಬ ವ್ಯಕ್ತಿಯು ಇರಬೇಕಾಗುತ್ತದೆ. ಇಷ್ಟು ಪೂರ್ವಪಕ್ಷ.

समाधत्ते – अक्षरादिति ।। 'श्रुतेः' इति पञ्चमी । अस्याः श्रुतेरिति वर्तते ।

ಈ ಪೂರ್ವಪಕ್ಷಕ್ಕೆ 'ಅಕ್ಷರಾತ್ ಪರತಃ ಪರಃ' ಎಂಬ ಶ್ರುತಿಯಿಂದ ಸಮಾಧಾನವನ್ನು ಹೇಳುತ್ತಿದ್ದಾರೆ. 'ಶ್ರುತೇಃ' ಎಂಬುದು ಪಂಚಮ್ಯಂತವಾದ ಪದವಾಗಿದೆ. 'ಅಸ್ಯಾಃ ಶ್ರುತೇಃ' ಎಂದು ಶೇಷಪೂರಣಮಾಡಿಕೊಂಡು ಅನ್ವಯ ಹೇಳಬೇಕು.

अक्षरात् परतः पराभिधात्र्यामुक्तश्रुतौ विद्यमानायामपि 'अक्षरात् सम्भवतीह विश्वम्' इत्यक्षरश्रुतेः विष्णौ निरवकाशत्वं नास्तीत्यर्थः ।

ಅಕ್ಷರನಿಂದ ಉತ್ತಮೋತ್ತಮತ್ವವನ್ನು ಹೇಳುವ ಅಕ್ಷರಾತ್ ಪರತಃ ಪರ ಎಂಬ ಶ್ರುತಿರಬಹುದು. ಆದರೂ ಸಹ 'ಅಕ್ಷರಾತ್ ಸಂಭವತೀಹ ವಿಶ್ವಮ್' ಅಕ್ಷರನಿಂದ ಈ ಜಗತ್ತು ಹುಟ್ಟುತ್ತದೆ ಎಂಬಅಕ್ಷರ ಶ್ರುತಿಯು ವಿಷ್ಣುವಿನಲ್ಲಿ ನಿರವಕಾಶವಾಗುವುದಿಲ್ಲ. ಅಂದರೆ ಈ ಶ್ರುತಿಯಲ್ಲಿರುವ ಅಕ್ಷರಶಬ್ದದಿಂದಲೂ ವಿಷ್ಣುವೇ ವಾಚ್ಯನಾಗುತ್ತಾನೆಂದರ್ಥ.

कुतः? अस्यैव विश्वयोनेरक्षरस्याक्षरात् परतः परत्वमुत्तरश्रुत्योच्यते । न त्वेतत्प्रतियोगिकपरत्वं वाऽनन्य इत्यङ्गीकारात् ।

ಏಕೆಂದರೆ, 'ಅಕ್ಷರಾತ್ ಸಂಭವತೀಹ ವಿಶ್ವಮ್' ಎಂಬ ಶ್ರುತಿಯು ಯಾವ ವ್ಯಕ್ತಿಗೆ ಜಗತ್ಕಾರಣತ್ವವನ್ನು ಹೇಳುತ್ತಿದೆಯೋ ಅದೇ ವ್ಯಕ್ತಿಗೇ 'ಅಕ್ಷರಾತ್ ಪರತಃ ಪರಃ' ಎಂಬ ಶ್ರುತಿಯು

ಉತ್ತಮೋತ್ತಮತ್ವವನ್ನು ಹೇಳುತ್ತಿದೆ. ಹೊರತು ಜಗತ್ಕಾರಣನಾದ ವ್ಯಕ್ತಿಪ್ರತಿಯೋಗಿಕವಾದ ಪರತ್ವವನ್ನು ಬೇರೆಯವರಿಗೆ ಹೇಳುತ್ತಿಲ್ಲ ಎಂದು ಅಂಗೀಕರಿಸಲಾಗಿದೆ.

अक्षरात् परतः परत्वं चाक्षरत्वं चैकस्यैव व्याहतमित्यत आह – अक्षरादिति ।।

ಒಬ್ಬನೇ ವ್ಯಕ್ತಿಗೆ ಅಕ್ಷರನಿಂದ ಉತ್ತಮೋತ್ತಮತ್ವವು ಹಾಗೂ ಉತ್ತಮತ್ವವು ಕೂಡುವುದಿಲ್ಲವೆಂದು ಹೇಳಬಾರದು. ಏಕೆಂದರೆ, ವ್ಯಾಹತಿ ಬರುತ್ತದೆಂಬ ಆಕ್ಷೇಪಕ್ಕೆ 'ಅಕ್ಷರಾತ್ ಪರತಃ ಪರಃ' ಎಂಬ ವಾಕ್ಯದಿಂದ ಉತ್ತರಿಸುತ್ತಿದ್ದಾರೆ.

स्यादियं व्याहतिर्यदि 'यस्मादक्षरात् परतः परः, तदेवाक्षरं स्वयमिति ब्रूमः । न चैवम् । 'अपरं त्वक्षरं या सा' इत्यादिनाऽक्षरत्रयाभिधानेनाक्षरात् परतः परस्याप्यक्षरान्तरत्ववचनात् ।

ಈ ವ್ಯಾಹತಿದೋಷವು ಬರುತ್ತಿತ್ತು. ಒಂದು ವೇಳೆ ಯಾವ ವ್ಯಕ್ತಿಯು ಅಕ್ಷರನಿಗಿಂತ ಉತ್ತಮೋತ್ತಮನಾಗಿದ್ದಾನೋ ಅವನೇ ಸ್ವತಃ ಅಕ್ಷರನೂ ಆಗಿದ್ದಾನೆಂದು ಹೇಳಿದ್ದರೆ. ಹಾಗೆ ಹೇಳುವುದಿಲ್ಲ. ಹೊರತಾಗಿ 'ಅಪರಂ ತ್ವಕ್ಷರಂ ಯಾ ಸಾ' ಇತ್ಯಾದಿಯಾಗಿ ಪ್ರಮಾಣವಿದೆ. ಮೂರುಪದಾರ್ಥಗಳು ಅಕ್ಷರವೆನಿಸಿವೆ. ಅವುಗಳಲ್ಲಿ ಮೊದಲನೆಯ ಅಕ್ಷರವು ಜಡರೂಪವಾಗಿದೆ. ಅದಕ್ಕಿಂತ ಉತ್ತಮವಾದ ಅಕ್ಷರವೆಂದರೆ ಲಕ್ಷ್ಮೀದೇವಿ. ಅವಳಿಗಿಂತ ಉತ್ತಮನಾದ ಅಕ್ಷರನೆಂದರೆ ಭಗವಂತನೆಂದು ತಿಳಿಯಬೇಕು. ಹೀಗೆ ಪ್ರಮಾಣವಚನದಲ್ಲಿ ಹೇಳಿದ್ದರಿಂದ ಅಕ್ಷರನಿಂದ ಉತ್ತಮೋತ್ತಮನಿಗೂ ಅಕ್ಷರಾಂತರತ್ವವು ಯುಕ್ತವಾಗುತ್ತದೆ. ಆದ್ದರಿಂದ ಮುಖ್ಯತಃ ಅಕ್ಷರಶಬ್ದವಾಚ್ಯನಾದವನು ವಿಷ್ಣುವೇ ಆಗುತ್ತಾನೆ.

परविद्याविषयत्वबलेन प्रकृतिपरित्यागाप्रकृतग्रहणयोरुपपत्तेरिति ।।

ಹೀಗೆ ಅರ್ಥವನ್ನು ಹೇಳಿದರೆ ಪ್ರಕೃತವಾದ ಪ್ರಧಾನವೆಂಬ ಅಕ್ಷರಶಬ್ದಾರ್ಥವನ್ನು ಬಿಟ್ಟು ಅಪ್ರಕೃತವಾದ ವಿಷ್ಣುವೆಂಬರ್ಥವನ್ನು ಸ್ವೀಕರಿಸಿದಂತಾಗಿ ಪ್ರಕೃತಹಾನ ಹಾಗೂ ಅಪ್ರಕೃತಕಲ್ಪನಾ ಎಂಬ ದೋಷಗಳು ಬರುತ್ತವಲ್ಲವೇ? ಎಂದು ಪ್ರಶ್ನಿಸಬಾರದು. ಪರವಿದ್ಯಾವಿಷಯತ್ವವೆಂಬ ಲಿಂಗದ ಬಲದಿಂದ ಇದು ದೋಷವಾಗುವುದಿಲ್ಲ. ಪ್ರಬಲವಾದ ಬಾಧಕವಿದ್ದಾಗ ಪ್ರಕೃತಹಾನ, ಅಪ್ರಕೃತಕಲ್ಪನೆಗಳು ದೋಷವಾಗುವುದಿಲ್ಲವೆಂದರ್ಥ.

ಶ್ರೀಜಯತೀರ್ಥಭಿಕ್ಷುಗಳಿಂದ ರಚಿತವಾದ ನ್ಯಾಯವಿವರಣೆಯ ಟೀಕೆಯ

ಕನ್ನಡಾನುವಾದದಲ್ಲಿ ಅದೃಶ್ಯತ್ವಾಧಿಕರಣವು ಸಮಾಪ್ತವಾಯಿತು.

ಪರಿಪೂರ್ಣಚಂದ್ರಿಕಾ

श्रीमदानन्दतीर्थभगवत्पादाचार्यविरचितम्

अणुभाष्यम्

अदृश्यत्वाधिकरणम् (१।२।६)

दृश्यत्वावुजीतस्तदा

ಅಣುಭಾಷ್ಯ - ಅದೃಶ್ಯತ್ವಾದಿಗುಣಗಳಿಂದ ಕೂಡಿದವನೂ ಸಹ ಪರಮಾತ್ಮನೇ ಆಗಿದ್ದಾನೆ.

***

श्री आनन्दतीर्थभगवत्पादाचार्यविरचितम्
ब्रह्मसूत्राणुभाष्यम्
श्रीराघवेन्द्रतीर्थविरचिता
ब्रह्मसूत्राणुभाष्यविवृतिः

तत्वमञ्जरी

अदृश्यत्वाधिकरणम् (१।२।६)

नन्वथापि यदुक्तं 'यं पृथिवी न वेद', 'अदृष्टेऽनात्म्ये' इत्यादिना विष्णोरदृश्यत्वादिकं तदाथर्वणे 'अथ परा यया तदक्षरमधिगम्यते', 'यत्तदद्रेश्यमग्राह्यम्' इत्यादिनाऽक्षरस्योच्यते ।

ಹಿಂದಿನ ಅಧಿಕರಣದಲ್ಲಿ 'ಯಂ ಪೃಥಿವೀ ನ ವೇದ' ಎಂಬ ಶ್ರುತಿಯಿಂದ ಆನಂದಮಯಾಧಿಕರಣದಲ್ಲಿ 'ಅದೃಶ್ಯೇऽನಾತ್ಮೇ' ಎಂಬ ಶ್ರುತಿಯಿಂದ ಅದೃಶ್ಯತ್ವಾದಿಗಳು ವಿಷ್ಣುವಿನ ಧರ್ಮವೆಂದು ಪ್ರತಿಪಾದಿಸಲಾಯಿತು. ಇದು ತಪ್ಪು. ಏಕೆಂದರೆ ಅಥರ್ವಶೋಪನಿಷತ್ತಿನಲ್ಲಿ 'ಅಥ ಪರಾ ಯಯಾ ತದಕ್ಷರಮಧಿಗಮ್ಯತೇ'

ಎಂಬುದಾಗಿ ಮತ್ತು 'ಯತ್ತದದ್ರೇಶ್ಯಮಗ್ರಾಹ್ಯಮ್' ಎಂಬುದಾಗಿ ಅದೃಶ್ಯತ್ವಾದಿಗಳು ಅಕ್ಷರದ ಧರ್ಮವಾಗಿವೆ ಎಂದು ಹೇಳಲಾಗಿದೆ.

तच्चाक्षरं 'यथा पृथिव्यामोषधयः सम्भवन्ति' इति दृष्टान्तपूर्वकं 'अक्षरात्सम्भवतीह विश्वम्' इति विश्वोपादानकारणत्वेनाक्षरात्परतः पर इत्युत्कर्षावधित्वेन च श्रुतमित्यनुपादाने सर्वोत्कृष्टे विष्णावनुपपन्नं सत् चिदचित्प्रकृतिविरिञ्चिरुद्रा वा तदन्यतममेव वा ब्रह्म ईशश्रुत्यादिप्रापकवशादुपेयमित्यतः प्राप्तम् - अदृश्यत्वादिगुणक इत्यादियोगत्रयम् ।

ಅಂತಹ ಅಕ್ಷರವು 'ಯಥಾ ಪೃಥಿವ್ಯಾಮೋಷಧಯಃ ಸಂಭವಂತಿ' ಎಂಬುದಾಗಿ ದೃಷ್ಟಾಂತಪೂರ್ವಕವಾಗಿ 'ಅಕ್ಷರಾತ್ ಸಂಭವತೀಹ ವಿಶ್ವಮ್' ಎಂದು ವಿಶ್ವಕ್ಕೆ ಉಪಾದಾನಕಾರಣವಾಗಿದೆಯೆಂದು ಹೇಳಲ್ಪಟ್ಟದೆ. ಅಷ್ಟೇ ಅಲ್ಲದೆ 'ಅಕ್ಷರಾತ್ ಪರತಃ ಪರಃ' ಎಂಬುದಾಗಿ ಪರಮೋತ್ಕೃಷ್ಟವಾದ ಮತ್ತೊಂದು ವಸ್ತುವಿಗೆ ಅಕ್ಷರವು ಅವಧಿಯಾಗಿದೆಯೆಂದು ಶ್ರುತವಾಗಿದೆ. ಆದ್ದರಿಂದ ವಿಶ್ವಕ್ಕೆ ಉಪಾದಾನಕಾರಣನಾಗದ ಪರಮೋತ್ಕೃಷ್ಟನಾದ ವಿಷ್ಣು ಅಕ್ಷರಶಬ್ದದಿಂದ ವಾಚ್ಯನಾಗುವುದಿಲ್ಲ. ಆದ್ದರಿಂದಲೇ ಅದೃಶ್ಯತ್ವವು ವಿಷ್ಣುವಿನ ಧರ್ಮವಾಗುವುದಿಲ್ಲ. ಹೊರತಾಗಿ ಚಿತ್ಪ್ರಕೃತಿ, ಅಚಿತ್ಪ್ರಕೃತಿ, ಚತುರ್ಮುಖಬ್ರಹ್ಮ, ರುದ್ರ, ಇವರುಗಳು ಅದೃಶ್ಯತ್ವಾದಿಧರ್ಮಗಳಿಗೆ ಆಶ್ರಯರಾಗುತ್ತಾರೆ. ಅಥವಾ ಇವರಲ್ಲಿ ಯಾರಾದರೊಬ್ಬರೂ ಸಹ ಅದೃಶ್ಯತ್ವಾದಿಧರ್ಮವುಳ್ಳವರು ಆಗಬಹುದು. ಏಕೆಂದರೆ, ಬ್ರಹ್ಮಶ್ರುತಿ ಈಶಶ್ರುತಿ ಮೊದಲಾದವುಗಳು ಆಧಾರವಾಗಿವೆ. ಎಂಬ ಶಂಕೆಗೆ ಉತ್ತರಿಸುವುದಕ್ಕಾಗಿ "'ಅದೃಶ್ಯತ್ವಾದಿಗುಣಕಃ'" ಇವೇ ಮೊದಲಾದ ಮೂರು ಸೂತ್ರಗಳು ಹೊರಟಿವೆ.

तदर्थः - दृश्यत्वाद्युज्झितः सदेति । पूर्ववदनुषङ्गः । स प्राक् 'अदृश्येऽनात्म्ये' इत्यादिनोक्तः एको विष्णुरेव दृश्यत्वाद्युज्झितः । न तु चित्प्रकृत्यादिरनेकः ।

ಈ ಅದೃಶ್ಯತ್ವಾದ್ಯಧಿಕರಣದ ಸಾರವನ್ನು 'ದೃಶ್ಯತ್ವಾದ್ಯುಜ್ಝಿತಃ ಸದಾ' ಎಂಬ ಅಣುಭಾಷ್ಯದಿಂದ ಸಂಗ್ರಹಿಸಿದ್ದಾರೆ. 'ಸ ಏಕಃ ವಿಷ್ಣುರೇವ ದೃಶ್ಯತ್ವಾದ್ಯುಜ್ಝಿತಃ' ಎಂಬುದನ್ನು ಹಿಂದಿನಂತೆ ಇಲ್ಲಿಯೂ ಸಹ ಅನುಷಂಗ ಮಾಡಬೇಕು. ಹಿಂದೆ ಅದೃಶ್ಯೇಽನಾತ್ಮೇ' ಎಂಬ ಶ್ರುತಿಯಲ್ಲಿ ಅದೃಶ್ಯತ್ವಾದಿಧರ್ಮಗಳಿಂದ ವಿಶಿಷ್ಟನಾದ ವಿಷ್ಣುವೇ 'ಯತ್ತದದ್ರೇಶ್ಯಮ್' ಎಂಬ ಪ್ರಕೃತ ಶ್ರುತಿಯಲ್ಲಿಯೂ ಸಹ ಅದೃಶ್ಯತ್ವಾದಿಧರ್ಮಗಳುಳ್ಳವನೆಂದು ಶ್ರುತನಾಗಿದ್ದಾನೆ. ಅಂದರೆ ಅದೃಶ್ಯತ್ವಾದಿಧರ್ಮಗಳುಳ್ಳ ಅಕ್ಷರಪದವಾಚ್ಯನಾಗಿದ್ದಾನೆಂದರ್ಥ; ಹೊರತು ಚಿತ್ಪ್ರಕೃತ್ಯಾದಿಗಳಲ್ಲ.

कुतः । लिङ्गैः सर्वैर्युतो हि । 'अथ परा यया तदक्षरमधिगम्यते' इति, 'यः सर्वज्ञः' इति, 'रुग्मवर्णं कर्तारमीशम्' इति परविद्याविषयत्वसार्वज्ञरूपान्तरा – मिश्ररुग्मवर्णाद् एतत्प्रकरणस्थसर्वलिङ्गयुतत्वादित्यर्थः ।

ಚಿತ್‌ಪ್ರಕೃತಿ, ಅಚಿತ್‌ಪ್ರಕೃತಿ ಮೊದಲಾದವುಗಳು ಏಕೆ ಅಕ್ಷರಪದವಾಚ್ಯವಲ್ಲ? ಎಂಬ ಪ್ರಶ್ನೆಗೆ 'ಲಿಂಗೈಃ ಸರ್ವೈರ್ಯುತೋ ಹಿ' ಎಂಬುದರಿಂದ ಉತ್ತರಿಸಲಾಗಿದೆ. ಅಂದರೆ 'ಅಥ ಪರಾ ಯಯಾ ತದಕ್ಷರಮಧಿಗಮ್ಯತೇ' 'ಯಃ ಸರ್ವಜ್ಞಃ' 'ರುಗ್ಮವರ್ಣಂ ಕರ್ತಾರಮ್' ಇವೇ ಮೊದಲಾದ ಶ್ರುತಿಗಳಲ್ಲಿ ಪರವಿದ್ಯಾವಿಷಯತ್ವ, ಸರ್ವಜ್ಞತ್ವ, ಚೇರೆ ರೂಪಗಳಿಂದ ಮಿಶ್ರವಾಗದ ಭಂಗಾರವರ್ಣ ಮೊದಲಾದ ಲಿಂಗಗಳಿಂದ ಕೂಡಿರುವ ಈ ಪ್ರಕರಣವು ವಿಷ್ಣುವನ್ನೇ ಪ್ರತಿಪಾದಿಸುತ್ತಿದೆ. ಈ ಎಲ್ಲ ಧರ್ಮಗಳು ವಿಷ್ಣುವಿನಲ್ಲಿ ಅಸಾಧಾರಣವಾಗಿವೆ ಎಂದರ್ಥ.

ಏತೈರ್ಲಿಙ್ಗೈರ್ಯುತೋ ದೃಶ್ಯತ್ವಾದ್ಯುಜ್ಝಿತೋ ವಿಷ್ಣುರೇವ । ತೇಷಾಂ ಲಿಙ್ಗಾನಾಂ ಭಾಷ್ಯೋಕ್ತಶ್ರುತ್ಯಾದಿಭಿಃ ವಿಷ್ಣೌ ಪ್ರಸಿದ್ಧೇರಿತಿ ವಾऽರ್ಥಃ ।

ಈ ವಿಷ್ಣುವಿನ ಅಸಾಧಾರಣಧರ್ಮಗಳ ಬಲದಿಂದ ಅದೃಶ್ಯತ್ವಧರ್ಮವುಳ್ಳವನು ವಿಷ್ಣುವೇ ಆಗಿದ್ದಾನೆಂದು ನಿರ್ಣಯಿಸಬಹುದು. ಏಕೆಂದರೆ ಆ ಎಲ್ಲಾ ಲಿಂಗಗಳೂ ಭಾಷ್ಯದಲ್ಲಿ ಉದಾಹರಿಸಿದ ಶ್ರುತಿ ಸ್ಮೃತಿಗಳ ಆಧಾರದಿಂದ ವಿಷ್ಣುವಿನಲ್ಲೇ ಪ್ರಸಿದ್ಧವಾಗಿವೆ. 'ಲಿಂಗೈಃ ಸರ್ವೈರ್ಯುತೋ ಹಿ' ಎಂಬುದಕ್ಕೆ ಹೀಗೆಯೂ ಅರ್ಥೈಸಬಹುದು.

ಅಕ್ಷರಶಬ್ದಸ್ಯ ನಪುಂಸಕಲಿಙ್ಗತ್ವೇನ ದೃಶ್ಯತ್ವಾದ್ಯುಜ್ಝಿತಮಿತಿ ವಾच್ಯೇ ಪುಲ್ಲಿಙ್ಗೋಕ್ತಿಃ ವಿಷ್ಣುಪದಾನ್ವಯಾಯ ವಾ, 'ಪರತಃ ಪರಃ' ಇತ್ಯುಕ್ತಪರವಸ್ತ್ವಪೇಕ್ಷಯಾ ವಾ ।

ಅಕ್ಷರಶಬ್ದವು ನಪುಂಸಕಲಿಂಗವಾದ್ದರಿಂದ 'ದೃಶ್ಯತ್ವಾದ್ಯುಜ್ಝಿತಮ್' ಎಂದು ಆಚಾರ್ಯರು ಹೇಳಬೇಕಿತ್ತು. ಆದರೂ ಸಹ ಪುಲ್ಲಿಂಗವನ್ನು ಪ್ರಯೋಗಿಸಿದ್ದರಿಂದ ವಿಷ್ಣುಪದದ ಜೊತೆಗೆ ದೃಶ್ಯತ್ವಾದ್ಯುಜ್ಝಿತ ಎಂಬ ಪದಕ್ಕೆ ಅನ್ವಯ ಎಂಬುದನ್ನು ಸೂಚಿಸಿದ್ದಾರೆ. ಅಥವಾ 'ಪರತಃ ಪರಃ' ಎಂದು ಹೇಳಲ್ಪಟ್ಟ ಪರವಸ್ತುವನ್ನು ಅಪೇಕ್ಷಿಸಿಯೂ ಸಹ ಪುಲ್ಲಿಂಗವನ್ನು ಪ್ರಯೋಗಿಸಿದ್ದಾರೆ.

ತೇನ 'ಯತ್ತದದ್ರೇಶ್ಯಮ್' ಇತ್ಯಾದಿನಾ ದೃಶ್ಯತ್ವಾದಿಹೀನಂ, 'ಅಕ್ಷರಾತ್ಸಮ್ಭವತಿ' ಇತಿ ಕಾರಣತ್ವೇನೋಕ್ತಮ್ 'ಅಕ್ಷರಾತ್ಪರತಃ ಪರಃ' ಇತಿ ಪರತ್ವೇನೋಕ್ತಂ ಚ ವಸ್ತ್ವೇಕಮಿತಿ ದರ್ಶಿತತ್ವರತ್ ಪರಾವಧ್ಯಕ್ಷರಮನ್ಯದಿತಿ ಸೂಚನಾನ್ನ ಪರಾವಧಿತ್ವಂ ದೃಶ್ಯತ್ವಾದ್ಯುಜ್ಝಿತಾಕ್ಷರಸ್ಯ ವಿಷ್ಣುತ್ವೇ ಬಾಧಕಮ್ । 'ಅಕ್ಷರಾತ್ಸಂಭವತಿ' ಇತಿ ಪಞ್ಚಮ್ಯಪಿ ಕಾರಣತ್ವಮಾತ್ರೇ ನತ್ಪಾದನತ್ವ ಇತಿ ಭಾವಃ ।

ಹೀಗೆ ಹೇಳಿದ್ದರಿಂದ ಮತ್ತೊಂದು ಪ್ರಯೋಜನವನ್ನು ಸೂಚಿಸಿದಂತಾಯಿತು. ಅದೇನೆಂದರೆ 'ಯತ್ತದದ್ರೇಶ್ಯಮ್' ಇತ್ಯಾದಿಯಾದ ಶ್ರುತಿಯಲ್ಲಿ ದೃಶ್ಯತ್ವಾದಿಗುಣಗಳಿಂದ ರಹಿತನೆಂದು ಪ್ರತಿಪಾದಿತನಾದ 'ಅಕ್ಷರಾತ್ ಸಂಭವತಿ' ಇತ್ಯಾದಿ ಶ್ರುತಿಯಲ್ಲಿ ಜಗತ್ಕಾರಣನೆಂದು ಪ್ರತಿಪಾದಿತನಾದ, 'ಅಕ್ಷರಾತ್ ಪರತಃ ಪರಃ' ಎಂಬ ಶ್ರುತಿಯಲ್ಲಿ ಸರ್ವೋತ್ಕೃಷ್ಟನೆಂದು ಪ್ರತಿಪಾದಿತನಾದ ವ್ಯಕ್ತಿಯು ಒಬ್ಬನೇ ಆಗಿದ್ದಾನೆಂದು ತೋರಿಸಿದ್ದಾರೆ. ಇಂತಹ ಸರ್ವೋತ್ಕೃಷ್ಟವಾದ ವಸ್ತುವಿಗೆ ಅವಧಿಯಾಗಿರುವ ಅಕ್ಷರವು ಬೇರೆಯಾಗಿದೆಯೆಂದು ಸೂಚಿಸಿದ್ದರಿಂದಲೂ, ಅಕ್ಷರವು ಸರ್ವೋತ್ಕೃಷ್ಟವಾದ ವಸ್ತುವಿಗೆ ಅವಧಿಯಾಗಿದೆ. ದೃಶ್ಯತ್ವಾದಿರಹಿತವಾದ ಅಕ್ಷರಪದವಾಚ್ಯತ್ವವು ವಿಷ್ಣುವಿಗೆ ಬಾಧಕವಾಗುವುದಿಲ್ಲ. ಇನ್ನು 'ಅಕ್ಷರಾತ್ ಸಂಭವತಿ' ಎಂಬಲ್ಲಿರುವ

ಪಂಚಮೀವಿಭಕ್ತಿಯು ಕೇವಲ ಕಾರಣತ್ವವನ್ನು ಸೂಚಿಸುತ್ತದೆ; ಹೊರತು ಉಪಾದಾನಕಾರಣತ್ವವನ್ನು ಸೂಚಿಸುವುದಿಲ್ಲವೆಂದು ಅಭಿಪ್ರಾಯ.

अत्र यद्यपि श्रुतौ दृश्यत्वाद्युज्झितत्ववत् 'नित्यं विभुं सर्वगतं सुसूक्ष्मं यद्भूतयोनिम्' इति भावरूपगुणान्तरमपि श्रुतम् ।

ವಸ್ತುತಃ ಈ ಶ್ರುತಿಯಲ್ಲಿ ದೃಶ್ಯತ್ವಾಭಾವವೆಂಬ ಧರ್ಮವನ್ನು ಸಮನ್ವಯಮಾಡುತ್ತಿರುವಂತೆ 'ನಿತ್ಯಂ ವಿಭುಂ ಸರ್ವಗತಂ ಸುಸೂಕ್ಷ್ಮಂ ಯದ್ಭೂತಯೋನಿಮ್' ಇತ್ಯಾದಿಯಾಗಿ ಭಾವರೂಪವಾದ ಗುಣಾಂತರಗಳೂ ಸಹ ಕೇಳಿಸುತ್ತಿವೆ.

सूत्रे च 'अदृश्यत्वादिगुणकः' इति भावाभावसाधारण्येन गुणपरम् । तथाऽपि सर्वगतत्वसुसूक्ष्मत्वादेः 'सर्वत्र सिद्धः' इत्यादौ हरौ सिद्धत्वाद् इहादृश्यत्वादिसमन्वय एव तात्पर्यात् 'दृश्यत्वाद्युज्झितः' इत्युक्तम् ।

ಮತ್ತು ಸೂತ್ರದಲ್ಲಿಯೂ ಸಹ 'ಅದೃಶ್ಯತ್ವಾದಿಗುಣಕಃ' ಎಂದು ಭಾವ ಹಾಗೂ ಅಭಾವಗಳಲ್ಲಿ ಸಾಧಾರಣವಾದ ಗುಣವನ್ನು ಪ್ರತಿಪಾದಿಸುವ ಪದವನ್ನು ಬಳಸಲಾಗಿದೆ. ಆದರೂ ಸಹ ಸರ್ವಗತತ್ವ, ಸುಸೂಕ್ಷ್ಮತ್ವ ಮೊದಲಾದ ಧರ್ಮಗಳು 'ಸರ್ವತ್ರಪ್ರಸಿದ್ಧೋಪದೇಶಾತ್' ಎಂಬ ಸೂತ್ರದಲ್ಲಿಯೇ ಶ್ರೀಹರಿಯಲ್ಲಿ ಸಿದ್ಧವಾಗಿವೆ. ಆದ್ದರಿಂದ ಪುನಃ ಇಲ್ಲಿ ಅದೃಶ್ಯತ್ವಾದಿ ಧರ್ಮಗಳ ಸಮನ್ವಯವನ್ನು ತೋರಿಸುವುದರಲ್ಲಿ ಮಾತ್ರ ತಾತ್ಪರ್ಯವಿರುವುದರಿಂದ "ದೃಶ್ಯತ್ವಾದ್ಯುಜ್ಝಿತಃ" ಎಂದು ಹೇಳಿದ್ದಾರೆ.

अनुभाष्ये च 'दृश्यत्वाद्यभावाख्यम्' इति । यद्वा भावधर्माणां बहुत्वादभावधर्माणाम् अल्पत्वाद् भावान्तरोपलक्षकतया इहानुवर्त्य सर्वज्ञः सर्वगतः सन् दृश्यत्वाद्युज्झित इति व्याख्येयम् ।

ಅನುವ್ಯಾಖ್ಯಾನದಲ್ಲಿಯೂ ಸಹ "ದೃಶ್ಯತ್ವಾದ್ಯಭಾವಾಖ್ಯಂ" ಎಂದು ಹೇಳಿದ್ದಾರೆ. ಆಥವಾ ಭಾವಧರ್ಮಗಳು ಬಹಳವಾಗಿವೆ; ಅಭಾವಧರ್ಮಗಳು ಸ್ವಲ್ಪಮಾತ್ರ ಇವೆ. ಭಾವಧರ್ಮಗಳನ್ನು ಉಪಲಕ್ಷಣ ಮಾಡುವುದಕ್ಕಾಗಿ 'ದೃಶ್ಯತ್ವಾದ್ಯುಜ್ಝಿತಃ' ಎಂದು ಹೇಳಿದ್ದಾರೆ. ಅಥವಾ ಸರ್ವಗತಃ ಎಂಬುದನ್ನು ಇಲ್ಲಿಯೂ ಅನುವೃತ್ತಿಮಾಡಿಕೊಂಡು ಸರ್ವಜ್ಞನಾಗಿ, ಸರ್ವಗತನಾಗಿ ದೃಶ್ಯತ್ವಾದಿಧರ್ಮಗಳಿಂದ ರಹಿತನಾಗಿದ್ದಾನೆಂದು ಈ ಪಕ್ಷದಲ್ಲಿ ವ್ಯಾಖ್ಯಾನ ಮಾಡಬೇಕು.

अत्र दृश्यत्वाद्युज्झितत्वं नाम साकल्येन चक्षुर्मनःप्रभृत्यगोचरत्वमपरिच्छेद्य-वैभवत्वं इति यावत् । तत् न कदाचिद् हीयत इति भावेनोक्तं – सदा दृश्यत्वाद्युज्झित इति ।

ಇಲ್ಲಿ ದೃಶ್ಯತ್ವಾದ್ಯುಜ್ಝಿತನೆಂದರೆ ಚಕ್ಷುರಿಂದ್ರಿಯ, ಮನಸ್ಸು ಮೊದಲಾದವುಗಳಿಗೆ ಸಂಪೂರ್ಣವಾಗಿ ತಿಳಿಯಲಾರನು; ಅಪರಿಮಿತವಾದ ವೈಭವವುಳ್ಳವನು ಎಂದರ್ಥ. ಈ ಅಪರಿಮಿತವಾದ ವೈಭವವು

ಭಗವಂತನಿಗೆ ಯಾವ ಕಾಲದಲ್ಲಿಯೂ ನಾಶವಾಗುವುದಿಲ್ಲವೆಂದು ಸೂಚಿಸಲು ''ಸದಾ ದೃಶ್ಯತ್ವಾದ್ಯುಜ್ಜೀತಃ'' ಎಂದು ಹೇಳಿರುತ್ತಾರೆ.

तेन श्रुतौ नित्यपदम् अदृश्यत्वादेरपि विशेषणमिति दर्शितम् । यद्वा सदेति अत्ता नियन्ता चेत्यत्राप्यन्वेति । तथाच ईश्वरक्रियाऽपि नित्येत्युक्तं भवति । विवृतं चानुव्याख्याने क्रियानित्यत्वम् ।।६।।

ಹೀಗೆ ಹೇಳಿದ್ದರಿಂದ ಶ್ರುತಿಯಲ್ಲಿರುವ ನಿತ್ಯ ಎಂಬ ಪದವು ಅದೃಶ್ಯತ್ವಾದಿಗಳಲ್ಲಿಯೂ ಅನ್ವಯವನ್ನು ಹೊಂದುತ್ತದೆಂದು ಸ್ಪಷ್ಟವಾಗುತ್ತದೆ. ಅಥವಾ ಸದಾ ಎಂಬ ಪದವು ಅತ್ತಾ ನಿಯಂತಾ ಎಂಬುದರ ಜೊತೆಗೂ ಅನ್ವಯವನ್ನು ಹೊಂದುತ್ತದೆ. ಸದಾ ಅತ್ತಾ, ಸದಾ ನಿಯಂತಾ ಎಂದು ಹೇಳಿದಾಗ ಭಗವಂತನ ಕ್ರಿಯೆಯು ನಿತ್ಯವಾಗಿದೆಯೆಂದೂ ಹೇಳಿದಂತಾಗುತ್ತದೆ. ಭಗವತ್ ಕ್ರಿಯೆಯು ಹೇಗೆ ನಿತ್ಯವಾಗುತ್ತದೆಯೆಂಬ ವಿಚಾರವನ್ನು ಅನುವ್ಯಾಖ್ಯಾನದಲ್ಲಿ ಸ್ಪಷ್ಟಪಡಿಸಲಾಗಿದೆ.

ಶ್ರೀರಾಘವೇಂದ್ರತೀರ್ಥಶ್ರೀಪಾದಂಗಳವರಿಂದ ವಿರಚಿತವಾದ

ತತ್ತ್ವಮಂಜರಿಯ ಕನ್ನಡಾನುವಾದದಲ್ಲಿ ಅದೃಶ್ಯತ್ವಾಧಿಕರಣವು ಮುಗಿಯಿತು.

***

।। श्रीजानकीवदनाम्भोजराजहंसाय रामचन्द्राय नमः ।।

।। श्री गुरुभ्यो नमः ।। हरिः ॐ ।।

श्री राघवेन्द्रतीर्थविरचिता

तन्त्रदीपिका

अदृश्यत्वाधिकरणम् (१।२।६)

।। ॐ अदृश्यत्वादिगुणको धर्मोक्तेः ॐ ।। १-२-२१ ।।

अत्र नये अभावात्मकलिङ्गं समन्वीयते । अदृश्यत्वादयो गुणा यस्य ''अक्षरात्परतः परः'' इत्युक्तपरस्य स तथा । ''शेषाद्विभाषा'' इति कः ।

ಈ ಅಧಿಕರಣದಲ್ಲಿ 'ಯತ್ತದದ್ರೇಶ್ಯಮ್' ಇತ್ಯಾದಿ ಶ್ರುತಿಯಲ್ಲಿರುವ ಅಭಾವರೂಪವಾದ ಲಿಂಗಗಳನ್ನು ವಿಷ್ಣುವಿನಲ್ಲಿ ಸಮನ್ವಯಮಾಡುತ್ತಿದ್ದಾರೆ. ಅದೃಶ್ಯತ್ವವೇ ಮೊದಲಾದ ಗುಣಗಳು ಅಕ್ಷರಾತ್ ಪರತಃ ಪರಃ' ಎಂಬ ಶ್ರುತಿಪ್ರತಿಪಾದ್ಯನಾದ ವ್ಯಕ್ತಿಯಲ್ಲಿ ಹೇಳಲ್ಪಟ್ಟವೆ. ಅವನೇ ಅಕ್ಷರಕ್ಕಿಂತ ಪರಮೋತ್ಕೃಷ್ಟವಾದ ವ್ಯಕ್ತಿಯೇ ಅದೃಶ್ಯತ್ವಾದಿಗುಣಕಃ = ಅದೃಶ್ಯತ್ವಾದಿಗುಣಗಳುಳ್ಳವನು. ಇಲ್ಲಿ ಗುಣಶಬ್ದದ ಮುಂದೆ 'ಶೇಷಾದ್ವಿಭಾಷಾ' ಎಂಬ ಪಾಣಿನಿಯ ಸೂತ್ರದ ಪ್ರಕಾರ ಕಪ್ರತ್ಯಯವು ಬಂದಿದೆ.

''यत्तददेद्रश्यमग्राह्यम्'' इत्युक्तदृश्यत्वादिगुणकमक्षरं ब्रह्मैव । न तु चिदचित्प्रकृतिविरिञ्चरुद्राः । ''अथ परा यया तदक्षरमधिगम्यते'' इति ऋगादिपरावि ाद्याविषयत्वरूपधर्मोक्तेरित्यर्थः ।

ಸೂತ್ರಾರ್ಥ ಹೀಗಿದೆ - 'ಯತ್ತದದ್ರೇಶ್ಯಮಗ್ರಾಹ್ಯಮ್' ಇತ್ಯಾದಿ ಶ್ರುತಿಯಲ್ಲಿ ಹೇಳಲ್ಪಟ್ಟರುವ ಅದೃಶ್ಯತ್ವಾದಿಗುಣಗಳುಳ್ಳ ಅಕ್ಷರನು ಬ್ರಹ್ಮನೇ ಆಗಿದ್ದಾನೆ. ಚಿತ್‌ಪ್ರಕೃತಿಯಾಗಲೀ, ಅಚಿತ್ ಪ್ರಕೃತಿಯಾಗಲೀ ಚತುರ್ಮುಖಬ್ರಹ್ಮರುದ್ರಾದಿಗಳಾಗಲೀ ಪ್ರತಿಪಾದ್ಯರಲ್ಲ. ಏಕೆಂದರೆ 'ಅಥ ಪರಾ ಯಯಾ ತದಕ್ಷರಮಧಿಗಮ್ಯತೇ' ಎಂಬುದಾಗಿ ಋಗ್ವೇದಾದಿ ಪರವಿದ್ಯಾವಿಷಯತ್ವವೆಂಬ ಧರ್ಮವನ್ನು ಹೇಳಿರುವುದರಿಂದ ಎಂದು.

''परतः परः'' इति श्रुत्यनुसारात्पुंनिर्देशः । तेनादृश्यत्वादिगुणकमक्षरं परतः पर इत्युक्तपरवस्तु चैकमित्युक्त्या परत्वावध्यक्षरमन्यदिति प्राप्तेर्न सिद्धान्तेऽक्षरात् परत्वं बाधकमिति ज्ञापितम् ।

'ಪರತಃ ಪರಃ' ಎಂಬ ಶ್ರುತಿಯಲ್ಲಿ ಪುಲ್ಲಿಂಗನಿರ್ದೇಶವಿದೆ. ಇದಕ್ಕನುಸಾರಿಯಾಗಿ ಸೂತ್ರದಲ್ಲಿಯೂ 'ಅದೃಶ್ಯತ್ವಾದಿಗುಣಕಃ' ಎಂದು ಪುಲ್ಲಿಂಗಪ್ರಯೋಗವನ್ನು ಮಾಡಿರುತ್ತಾರೆ. ಇದರಿಂದ ಅದೃಶ್ಯತ್ವಾದಿ ಗುಣಗಳುಳ್ಳ ಅಕ್ಷರವು ಹಾಗೂ 'ಪರತಃ ಪರಃ' ಎಂದು ಹೇಳಲ್ಪಟ್ಟ ಸರ್ವೋತ್ಕೃಷ್ಟವಸ್ತುವು ಒಂದೇ ಆಗಿದೆ ಎಂದು ಹೇಳಿದಂತಾಯಿತು. ಪರತ್ವಕ್ಕೆ ಅವಧಿಯಾದ ಅಕ್ಷರವೇ ಬೇರೆ ಎಂದು ಹೇಳಿದಂತಾಯಿತು. ಆದ್ದರಿಂದ ಅಕ್ಷರದಿಂದ ಸರ್ವೋತ್ಕೃಷ್ಟವಾಗಿರುವಿಕೆಯು ಸಿದ್ಧಾಂತದಲ್ಲಿ ಬಾಧಕವಾಗುವುದಿಲ್ಲವೆಂದು ಸೂಚಿಸಿದ್ದಾರೆ.

अदृश्यत्वादिरिति वाच्ये गुणेत्युक्तिः दृश्यादन्यददृश्यमिति विग्रहेण दृश्याद्यन्योन्याभावश्च गुण इति विधिरूपत्वादीशाख्यधर्मिस्वरूपत्वं न विरुद्धमिति द्योतयितुम् । तथापि विशेषाद्धर्मधर्मित्वमिति सूचयितुं बहुव्रीह्यर्थः कः ।

ಅದೃಶ್ಯತ್ವಾದಿ ಎಂದು ಹೇಳಬಹುದಿತ್ತು; ಆದರೂ ಸಹ 'ಗುಣ'ವೆಂದು ಏಕೆ ಹೇಳಿದ್ದಾರೆಂದರೆ 'ದೃಶ್ಯಾತ್ ಅನ್ಯತ್ ಅದೃಶ್ಯಮ್' ಎಂಬ ವಿಗ್ರಹದಿಂದ ದೃಶ್ಯಾದಿಗಳ ಭೇದವು ಗುಣವಾದ್ದರಿಂದ ವಿಧಿರೂಪವಾಗಿದೆ. ಹಾಗಾಗಿ ಈಶ ಎಂಬ ಧರ್ಮಿತ್ವರೂಪತ್ವವು ವಿರುದ್ಧವಾಗುವುದಿಲ್ಲವೆಂದು ಸೂಚಿಸುವುದಕ್ಕೋಸ್ಕರ. ಹೀಗೆ ಈಶನಿಗಿಂತ ಅಭಿನ್ನವಾಗಿದ್ದರೂ ವಿಶೇಷಬಲದಿಂದ ಅದೃಶ್ಯತ್ವಾದಿಗಳಿಗೂ ಧರ್ಮಿಗೂ ಧರ್ಮ-ಧರ್ಮಿಭಾವವು ಯುಕ್ತವಾಗುತ್ತದೆಂದು ಸೂಚಿಸಲು ಬಹುವ್ರೀಹಿಸಮಾಸವನ್ನು ತಿಳಿಸುವ ಕಪ್ರತ್ಯಯವನ್ನು ಸೇರಿಸಿದ್ದಾರೆ.

अवधारणव्यावर्त्यं विशेषयुक्त्या निरस्यति –

।। ॐ विशेषणभेदव्यपदेशाभ्यां च नेतरौ ॐ ।। १-२-२२ ।।

ವಿಶೇಷಯುಕ್ತಿಯಿಂದ ಅವಧಾರಣದಿಂದ ವ್ಯಾವರ್ತ್ಯವಾದ ಪೂರ್ವಪಕ್ಷವನ್ನು ನಿರಾಕರಿಸುವುದಕ್ಕಾಗಿ ಮುಂದಿನ ಸೂತ್ರ ಹೊರಟಿದೆ. ''ಓಂ ವಿಶೇಷಣಭೇದವ್ಯಪದೇಶಾಭ್ಯಾಂ ಚ ನೇತರೌ ಓಂ''

विरिञ्चरुद्रयोः चेतनत्वेनैकीकारेण जडप्रकृतिविरिञ्चरुद्राणामितराविति द्विवचनेनात्र ग्रहणम् ।

ಇತರೌ ಎಂಬಲ್ಲಿರುವ ದ್ವಿವಚನವು ತಪ್ಪಲ್ಲ. ಏಕೆಂದರೆ, ಚತುರ್ಮುಖಬ್ರಹ್ಮ ಹಾಗೂ ರುದ್ರ ಇಬ್ಬರನ್ನೂ ಚೇತನತ್ವಧರ್ಮದಿಂದ ಸಂಗ್ರಹಿಸಿದ್ದರಿಂದ. ಹೀಗೆ ಜಡಪ್ರಕೃತಿ, ಚತುರ್ಮುಖಬ್ರಹ್ಮ, ರುದ್ರ ಮೂವರನ್ನೂ 'ಇತರೌ' ಎಂಬ ದ್ವಿವಚನಪ್ರತ್ಯಯದಿಂದಲೇ ಸಂಗ್ರಹಿಸಿದ್ದಾರೆ.

इतरौ नादृश्यत्वादिगुणकौ । कुतः? ''यः सर्वज्ञः'' इति सार्वज्ञविशेषणात् । परतः परत्वविशेणाच्च जडप्रकृतिर्न । ''तस्मादेतद् ब्रह्म'' इति च विरिञ्चरुद्रयोरदृश्यत्वादिगुणकाक्षराद् भेदव्ययदेशाच्च न विरिञ्चरुद्राविति यथाक्रमं हेतू । चशब्दस्य न केवलं धर्मोक्तेः किन्त्वाभ्यां हेतुभ्यां चेत्यर्थः । तेनान्यत्रापि सिद्धान्तहेतोः परपक्षनिरासेऽपि व्यापार इति सूचितम् ।

ಸೂತ್ರಾರ್ಥ ಹೀಗಿದೆ -- ಇತರೌ = ಪ್ರಕೃತ್ಯಾದಿಗಳು, ನ = ಅದೃಶ್ಯತ್ವಾದಿಗುಣಗಳುಳ್ಳವರಲ್ಲ. ಏಕೆಂದರೆ ವಿಶೇಷಣಭೇದವ್ಯಪದೇಶಾಭ್ಯಾಮ್ = ಯಃ ಸರ್ವಜ್ಞಃ ಎಂಬುದಾಗಿ ಸರ್ವಜ್ಞತ್ವವು ವಿಶೇಷಣವಾಗಿದೆ. ಅಕ್ಷರಾತ್ ಪರತಃ ಪರಃ' ಎಂಬುದಾಗಿ ಪರತಃಪರತ್ವವು ವಿಶೇಷಣವಾಗಿದೆ. ಈ ಎರಡು ಹೇತುಗಳಿಂದ ಜಡಪ್ರಕೃತಿಯು ಅದೃಶ್ಯತ್ವಧರ್ಮವುಳ್ಳದ್ದಲ್ಲ. 'ತಸ್ಮಾದೇತದ್‌ಬ್ರಹ್ಮ' ಎಂಬುದಾಗಿ 'ಅನ್ಯಮೀಶಮ್' ಎಂಬುದಾಗಿಯೂ ವಿರಿಂಚ ಹಾಗೂ ರುದ್ರರನ್ನು ಅದೃಶ್ಯತ್ವಾದಿಗುಣವುಳ್ಳ

ಅಕ್ಷರನಿಂದ ಭಿನ್ನವೆಂದು ಶ್ರುತಿ ಹೇಳಿದೆ. ಆದ್ದರಿಂದ ಚತುರ್ಮುಖಬ್ರಹ್ಮ, ಹಾಗೂ ರುದ್ರದೇವರು ಅದೃಶ್ಯತ್ವಾದಿಗುಣಗಳುಳ್ಳವರಲ್ಲ. ಹೀಗೆ ಇಲ್ಲಿ ವಿಶೇಷಣ ಹಾಗೂ ಭೇದವ್ಯಪದೇಶಗಳು ಕ್ರಮವಾಗಿ ಹೇತುವಾಗಿವೆಯೆಂದು ತಿಳಿಯಬೇಕು. ಸೂತ್ರದಲ್ಲಿರುವ ಚಶಬ್ದವು ಧರ್ಮೋಕ್ತಿಯಿಂದ ಮಾತ್ರವಲ್ಲದೇ ಹಿಂದೆ ಹೇಳಿದ ಎರಡು ಯುಕ್ತಿಗಳಿಂದಲೂ ಸಹ ಎಂಬರ್ಥದಲ್ಲಿ ಪ್ರಯುಕ್ತವಾಗಿದೆ. ಇದರಿಂದ ಬೇರೆ ಸ್ಥಳದಲ್ಲಿಯೂ ಸಿದ್ಧಾಂತಸ್ಥಾಪಕವಾದ ಹೇತು ಪರಪಕ್ಷನಿರಾಕರಣೆಗೂ ಸಹ ಸಾಧನವಾಗುತ್ತದೆಂದು ಸೂಚಿಸಿದಂತಾಯಿತು.

चिदचितोः प्रकृतित्वेनैक्यं जीवत्वेन च ब्रह्मरुद्रयोरिति इतराविति चत्वारोऽपि गृह्यन्त इत्यप्याहुः ।।

ಚಿತ್‌ಪ್ರಕೃತಿ ಹಾಗೂ ಅಚಿತ್‌ಪ್ರಕೃತಿಗಳನ್ನು ಪ್ರಕೃತಿತ್ವಧರ್ಮದಿಂದ ಏಕೀಕರಿಸಿ ಮತ್ತು ಚತುರ್ಮುಖಬ್ರಹ್ಮ ರುದ್ರರನ್ನು ಜೀವತ್ವೇನ ಏಕೀಕರಿಸಿ, ಇತರೌ ಎಂಬ ಪದದಿಂದ ನಾಲ್ವರನ್ನು ಸಂಗ್ರಹಿಸಿದ್ದಾರೆಂದೂ ಸಹ ಹೇಳುತ್ತಾರೆ.

इतश्चैवमित्याह -

।। ॐ रूपोपन्यासाच्च ॐ ।। १-२-२३ ।।

ಮತ್ತೊಂದು ಕಾರಣದಿಂದಲೂ ಅದೃಶ್ಯತ್ವಾದಿಗುಣಗಳುಳ್ಳವನು ಮಹಾವಿಷ್ಣುವೇ ಆಗಿದ್ದಾನೆಂದು ಸಮರ್ಥಿಸುತ್ತಿದ್ದಾರೆ. 'ಓಂ ರೂಪೋಪನ್ಯಾಸಾಚ್ಚ ಓಂ''.

''यदा पश्यः पश्यते रुग्मवर्णम्'' इति रुग्मवर्णोपन्यासाच्च अदृश्यत्वादिगुणको ब्रह्मैवेत्यर्थः । अन्येषां मिश्ररूपत्वेन विष्णोरेव शुद्धरूपतया तस्यैवात्र ग्रहणादिति भावः ।।६।।

ಸೂತ್ರಾರ್ಥಹೀಗಿದೆ - 'ಯದಾ ಪಶ್ಯಃ ಪಶ್ಯತೇ ರುಗ್ಮವರ್ಣಮ್' ಎಂಬುದಾಗಿ ಶುದ್ಧವಾದ ಭಂಗಾರವರ್ಣವನ್ನು ಶ್ರುತಿ ಹೇಳಿದೆ. ಆದ್ದರಿಂದ ಅದೃಶ್ಯತ್ವಾದಿಗುಣಗಳುಳ್ಳವನು ಅಂತಹ ಬ್ರಹ್ಮನೇ ಆಗಬೇಕೆಂದರ್ಥ. ಬೇರೆಯವರಿಗೆ ಮಿಶ್ರರೂಪವಿರುವುದರಿಂದ ವಿಷ್ಣುವಿಗೆ ಮಾತ್ರ ಶುದ್ಧವಾದ ಭಂಗಾರದ ರೂಪವಿರುವುದರಿಂದ ವಿಷ್ಣುವನ್ನೇ ಸ್ವೀಕರಿಸಬೇಕೆಂದು ಅಭಿಪ್ರಾಯ.

ಶ್ರೀರಾಘವೇಂದ್ರತೀರ್ಥಶ್ರೀಪಾದಂಗಳವರಿಂದ ರಚಿತವಾದ

ತಂತ್ರದೀಪಿಕಾದ ಕನ್ನಡಾನುವಾದದಲ್ಲಿ ಅದೃಶ್ಯತ್ವಾಧಿಕರಣವು ಸಮಾಪ್ತವಾಯಿತು.

श्री राघवेन्द्रतीर्थविरचिता

श्रीन्यायमुक्तावलिः

अदृश्यत्वाधिकरणम् (१।२।६)

।। ॐ अदृश्यत्वादिगुणको धर्मोक्तेः ॐ ।। ६ ।।
।। ॐ विशेषणभेदव्यपदेशाभ्यां च नेतरौ ॐ ।।
।। ॐ रूपोपन्यासाच्च ॐ ।।

अत्र ''यं पृथिवी न वेदे''त्युक्तादृश्यत्वाख्यप्राचीनहेत्वाक्षेपात्संगतिः । आथर्वणे ''द्वे विद्ये वेदितव्ये'' इत्युपक्रम्य ''अथ परा यया तदक्षरमधिगम्यते'' ''यत्तदद्रेश्य मग्राह्यमगोत्रमवर्णम्'' इत्यादिनोक्तादृश्यत्वादिगुणकम् अक्षरात्संभवतीह विश्वमिति विश्वकारणतया श्रुतमक्षरं किं चिदचित्प्रकृतिविरिंचिरुद्राः उत विष्णुरिति संदेहः ।

ಈ ಅಧಿಕರಣದಲ್ಲಿ 'यं पृथिवी न वेद' ಎಂಬ ಶ್ರುತಿಯಲ್ಲಿ ಹೇಳಲ್ಪಟ್ಟ ಅದೃಶ್ಯತ್ವವೆಂಬ ಹಿಂದಿನ ಅಧಿಕರಣದ ಧರ್ಮವನ್ನು ಆಕ್ಷೇಪಮಾಡುತ್ತಿರುವುದರಿಂದ ಸಂಗತಿಯು ಇರುತ್ತದೆ.

ಆಥರ್ವಣೋಪನಿಷತ್ತಿನಲ್ಲಿ 'द्वे विद्ये वेदितव्ये' ಎಂದು ಪ್ರಾರಂಭಮಾಡಿ 'अथ परा यया तदक्षरमधिगम्यते' 'यत्तदद्रेश्यमग्राह्यम्' ಇತ್ಯಾದಿವಾಕ್ಯದಿಂದ ಅದೃಶ್ಯತ್ವಾದಿ-ಗುಣಗಳುಳ್ಳ ವ್ಯಕ್ತಿಯು ಅಕ್ಷರನಾಗಿದ್ದಾನೆಂದು ಹೇಳಲಾಗಿದೆ. ಹಾಗೂ 'अक्षरात् संभवतीह विश्वम्' ಎಂಬುದಾಗಿ ವಿಶ್ವಕ್ಕೆ ಕಾರಣನಾದ ಅಕ್ಷರನು ಅದೃಶ್ಯತ್ವಾದಿಗುಣಗಳುಳ್ಳವನೆಂದು ಹೇಳಲಾಗಿದೆ.

ಅದೃಶ್ಯತ್ವಾದಿಗುಣಗಳುಳ್ಳ ಈ ಅಕ್ಷರನು ಚಿತ್‌ಪ್ರಕೃತಿ ಅಚಿತ್‌ಪ್ರಕೃತಿ ಚತುರ್ಮುಖಬ್ರಹ್ಮ ಅಥವಾ ರುದ್ರ ಇವರುಗಳೋ ಅಥವಾ ವಿಷ್ಣುವೋ ಎಂದು ಸಂದೇಹ.

''यथा पृथिव्यामोषधयः'' इत्युपादानदृष्टान्तबलेनाबाधेन अन्तरङ्गत्यागायोगेन च अक्षरादितिश्रुतोपादानकारणत्वरूपलिंगात् जडप्रकृतिरित्येकः पूर्वः पक्षः ।।

'यथा पृथिव्यामोषधयः' ಎಂಬುದಾಗಿ ಉಪಾದಾನಕಾರಣವನ್ನು ದೃಷ್ಟಾಂತವನ್ನಾಗಿ ನೀಡಿದ್ದರಿಂದ ಇದಕ್ಕೆ ಬಾಧವಿಲ್ಲದ ಕಾರಣ ಅಂತರಂಗನ್ಯಾಯವಾಗಿದೆ. ಇದನ್ನು ಬಿಟ್ಟು ಬಹಿರಂಗವಾದ

ನಿಮಿತ್ತಕಾರಣವೆಂಬರ್ಥವನ್ನು ಸ್ವೀಕರಿಸಬಾರದು. ನಿಮಿತ್ತಕಾರಣಕ್ಕಿಂತ ಉಪಾದಾನಕಾರಣವು ಬಲಿಷ್ಠವಾಗಿದೆ. ಇದರ ಆಧಾರದಿಂದ 'ಅಕ್ಷರಾತ್ ಸಂಭವತೀಹ ವಿಶ್ವಮ್' ಎಂಬ ಶ್ರುತಿಯೂ ಸಹ ಉಪಾದಾನಕಾರಣತ್ವವನ್ನೇ ಹೇಳುತ್ತದೆ. ಈ ಉಪಾದಾನಕಾರಣತ್ವವೆಂಬ ಲಿಂಗದ ಬಲದಿಂದ ಜಡಪ್ರಕೃತಿಯು ಅದೃಶ್ಯತ್ವಗುಣವುಳ್ಳ ಅಕ್ಷರಶಬ್ದವಾಚ್ಯವಾಗಿದೆಯೆಂದು ಮೊದಲನೆಯ ಪೂರ್ವಪಕ್ಷ.

''कूटस्थोऽक्षर उच्यते''इति स्मृतावक्षरपदस्य श्रीतत्त्वे प्रयोगादुपादानाभिमानित्वेन उपादानत्वस्यापि संभवाच्चित्प्रकृतिरित्यन्यः ।।

'ಕೂಟಸ್ಥೋಕ್ಷರ ಉಚ್ಯತೇ' ಎಂದು ಭಗವದ್ಗೀತೆಯಲ್ಲಿ ಲಕ್ಷ್ಮೀದೇವಿಯಲ್ಲಿ ಅಕ್ಷರಪದವನ್ನು ಪ್ರಯೋಗಿಸಲಾಗಿದೆ. ಲಕ್ಷ್ಮೀದೇವಿಯು ಉಪಾದಾನಕ್ಕೆ ಅಭಿಮಾನಿದೇವತೆಯಾದ್ದರಿಂದ ಅವಳಲ್ಲಿಯೂ ಗೌಣವಾದ ಉಪಾದಾನತ್ವವನ್ನು ಹೇಳಬಹುದು. ಆದರಿಂದ ಆದೃಶ್ಯತ್ವಾದಿಗುಣಗಳುಳ್ಳ ಅಕ್ಷರಳು ಲಕ್ಷ್ಮೀದೇವಿಯು ಆಗಿದ್ದಾಳೆ ಎಂದು ಇನ್ನೊಂದು ಪೂರ್ವಪಕ್ಷ.

''स ब्रह्मविद्याम्'' इत्युपक्रमे ब्रह्मशब्दाच्चतुर्मुखो वा कर्तारमीशमित्युत्तरत्रेशपद श्रवणाद्रुद्रो वेत्यपरौ ।

'ಸ ಬ್ರಹ್ಮವಿದ್ಯಾಮ್' ಎಂದು ಪ್ರಾರಂಭದಲ್ಲಿ ಬ್ರಹ್ಮಶಬ್ದವಿರುವುದರಿಂದ ಚತುರ್ಮುಖನು ಅಕ್ಷರಶಬ್ದವಾಚ್ಯನಾಗಿದ್ದಾನೆಂದು ಮೂರನೆಯ ಪೂರ್ವಪಕ್ಷ.

'ಕರ್ತಾರಮೀಶಮ್' ಎಂಬುದಾಗಿ ಮುಂದೆ ಈಶಶಬ್ದವು ಕೇಳಿಸುತ್ತಿರುವುದರಿಂದ ರುದ್ರನು ಅದೃಶ್ಯತ್ವಾದಿಗುಣಗಳುಳ್ಳ ಅಕ್ಷರನಾಗಿದ್ದಾನೆಂಬುದು ನಾಲ್ಕನೆಯ ಪೂರ್ವಪಕ್ಷ.

न चाक्षरादिशब्दा विष्णौ सावकाशाः । अक्षरात्परतः पर इत्युत्कर्षावधितया निर्देशेनोक्ताक्षरस्य निकृष्टत्वेन विष्णुत्वायोगात् ।

ಅಕ್ಷರಾದಿಶಬ್ದಗಳು ವಿಷ್ಣುವಿನಲ್ಲಿ ಸಾವಕಾಶವಾಗಿವೆಯೆಂದು ಹೇಳಬಾರದು. ಅಕ್ಷರಾತ್ ಪರತಃ ಪರಃ ಎಂಬುದಾಗಿ ಅಕ್ಷರತತ್ವಕ್ಕಿಂತ ವಿಷ್ಣು ಸರ್ವೋತ್ಕೃಷ್ಟನಾಗಿದ್ದಾನೆಂದು ಹೇಳಲಾಗಿದೆ. ಇದರಿಂದ ಅಕ್ಷರತತ್ವವು ನಿಕೃಷ್ಟವೆಂದು ತಿಳಿಯುತ್ತದೆ. ಪರಮೋತ್ಕೃಷ್ಟನಾದ ಮಹಾವಿಷ್ಣುವು ನಿಕೃಷ್ಟನಾಗಲು ಸಾಧ್ಯವಿಲ್ಲ.

अत एव च कारणत्वमात्रे अक्षरात्सम्भवतीति पञ्चमीति प्रत्युक्तम् ।

ಆದ್ದರಿಂದಲೇ ಅಕ್ಷರಾತ್ ಸಂಭವತಿ ಎಂಬಲ್ಲಿರುವ ಪಂಚಮೀವಿಭಕ್ತಿಯು ಕಾರಣತ್ವವನ್ನಷ್ಟೇ ಹೇಳುತ್ತಿದೆ ಹೊರತು ಉಪಾದಾನಕಾರಣವನ್ನುಹೇಳುತ್ತಿಲ್ಲವೆಂಬ ವಾದವನ್ನು ನಿರಾಕರಿಸಿದಂತಾಯಿತು.

चित्प्रकृतिपक्षे अक्षरात्परत इति पञ्चम्योः सामानाधिकरण्येन पक्षान्तरेषु वैयधिकरण्येनोपपत्तेरिति ।।

ಚಿತ್‌ಪ್ರಕೃತಿಯು ಅಕ್ಷರವೆಂದು ವಿವಕ್ಷಿಸಿದಾಗ ಅಕ್ಷರಾತ್ ಪರತಃ ಎಂಬಲ್ಲಿರುವ ಎರಡು ಪಂಚಮೀವಿಭಕ್ತಿಗಳು ಅಕ್ಷರನಾಮಕಳಾದ ಉತ್ತಮಳಾದ ಲಕ್ಷ್ಮೀದೇವಿ ಎಂಬುದಾಗಿ ಒಂದೇ ಅರ್ಥದಲ್ಲಿ ಸಮಾನಾಧಿಕರಣದಿಂದ ಪ್ರಯುಕ್ತವಾಗಿವೆ. ಇತರ ಪಕ್ಷಗಳಲ್ಲಿ ವೈಯಧಿಕರಣ್ಯೇನ ಪ್ರಯುಕ್ತವಾಗಿವೆ. ಅಂದರೆ 'ಅಕ್ಷರಾತ್' ಎಂದರೆ ಜಡಪ್ರಕೃತಿಗಿಂತ 'ಪರತಃ' ಉತ್ತಮಳಾದ ಲಕ್ಷ್ಮೀದೇವಿ ಅವಳಿಗಿಂತ 'ಪರಃ' ಮಹಾವಿಷ್ಣುವು ಉತ್ತಮನಾಗಿದ್ದಾನೆ ಹೀಗೆ ಅಕ್ಷರಶಬ್ದವೇ ಬೇರೆ ಪದಾರ್ಥವನ್ನು ಪರಶಬ್ದವೇ ಮತ್ತೊಂದು ಪದಾರ್ಥವನ್ನು ಪ್ರತಿಪಾದಿಸುತ್ತದೆಂದು ತಿಳಿಯಬೇಕು.

सिद्धान्तस्तु ।। ''अत परा यया स हरिर्वेदितव्यः'' ''सा विद्या तन्मतिर्यया'' इत्यादिश्रुतिस्मृतिभिः विष्वेकनिष्ठऋगादिपरविद्याविषयत्वरूपतद्धर्मात् ।

ಸಿದ್ಧಾಂತ ಹೀಗಿದೆ - 'ಅಥ ಪರಾ ಯಯಾ ಸ ಹರಿರ್ವೇದಿತವ್ಯಃ' ಎಂಬ ಶ್ರುತಿಯಿಂದ 'ಸಾ ವಿದ್ಯಾ ತನ್ಮತಿರ್ಯಯಾ' ಎಂಬ ಸ್ಮೃತಿಯಿಂದ ಋಗ್ವೇದಾದಿ ಪರವಿದ್ಯಾವಿಷಯತ್ವವು ವಿಷ್ಣುವಿನ ಅಸಾಧಾರಣಧರ್ಮವಾಗಿದೆಯೆಂದು ತಿಳಿಯುತ್ತದೆ.

''यदा पश्यः पश्यते रुग्मवर्णम्'' इति रूपोपन्यासात् । अन्येषां ''विमिश्राणि व्यमिश्रयत्'' इत्यादिश्रुत्या मिश्ररूपत्वेन शुद्धरूपस्य तदेकनिष्ठत्वात् ।

'ಯದಾ ಪಶ್ಯಃ ಪಶ್ಯತೇ ರುಗ್ವರ್ಣಮ್' ಎಂಬುದಾಗಿ ಶುದ್ಧವಾದ ಭಂಗಾರವರ್ಣವನ್ನು ಅಕ್ಷರನಲ್ಲಿ ಶ್ರುತಿ ಹೇಳುತ್ತಿದೆ. ಆದರೆ ವಿಷ್ಣುವನ್ನು ಬಿಟ್ಟು ಉಳಿದೆಲ್ಲ ದೇವತೆಗಳಿಗೆ ವಿಮಿಶ್ರಾಣಿ ವಿಮಿಶ್ರಯತ್ ಇತ್ಯಾದಿ ಶ್ರುತಿಯಿಂದ ಮಿಶ್ರಬಣ್ಣ ಇರುತ್ತದೆಂದು ತಿಳಿಯುತ್ತದೆ. ಮಿಶ್ರವಲ್ಲದ ಶುದ್ಧವಾದ ಭಂಗಾರವರ್ಣ ಇರುವುದು ವಿಷ್ಣುವಿಗೆ ಮಾತ್ರ.

अक्षरत्रयमीरितमितिस्मृत्या (स्कान्द.पु.) परावधित्वेनोक्ताक्षरस्यान्यत्वेना-विष्णुतया परावाधित्वेन निर्देशस्याबाधकत्वात् ।

'ಅಕ್ಷರತ್ರಯಮೀರಿತಮ್' ಎಂಬ ಸ್ಕಾಂದಪುರಾಣದ ಸ್ಮೃತಿಯಿಂದ ಸರ್ವೋತ್ಕೃಷ್ಟನಿಗೆ ಅವಧಿಯಾದ ಅಕ್ಷರವು ಮತ್ತೊಂದಿದೆ ಎಂದು ತಿಳಿಯುತ್ತದೆ. ಆದ್ದರಿಂದ ವಿಷ್ಣುವನ್ನು ಸರ್ವೋತ್ಕೃಷ್ಟವಸ್ತುವಿಗೆ ಅವಧಿ- ಯೆಂದು ಹೇಳಬೇಕಾಗಿಲ್ಲ. ಆದ್ದರಿಂದಲೇ ಪರಾವಧಿತ್ವವನ್ನು ಅಕ್ಷರಕ್ಕೆ ನಿರ್ದೇಶಿಸಿದ್ದೂ ಸಹ ಬಾಧಕವಾಗುವುದಿಲ್ಲ. ಅಂದರೆ ಮೂರು ಬಗೆಯ ಅಕ್ಷರಗಳಿವೆ. ಅವುಗಳಲ್ಲಿ ನೀಚ ಮಧ್ಯಮ ಉತ್ತಮ ಎಂಬ ಪ್ರಭೇದವಿದೆ. ನೀಚವಾದ ಅಕ್ಷರತತ್ವವು ಪರತತ್ವಕ್ಕೆ ಅವಧಿಯಾಗುತ್ತದೆಂದು ತಿಳಿಯಬೇಕು.

पृथिव्यादिदृष्टान्तस्य कारणत्वमात्रे तात्पर्यसम्भवात् । ब्रह्मेशादिशब्दस्य विष्णावेव मुख्यत्वात् ।

ಪೃಥಿವ್ಯಾದಿ ದೃಷ್ಟಾಂತವನ್ನು ಕಾರಣತ್ವವಿಷಯದಲ್ಲಷ್ಟೇ ತಿಳಿಯಬೇಕು. ಬ್ರಹ್ಮ ಈಶ ಮೊದಲಾದ ಶಬ್ದಗಳೆಲ್ಲವೂ ವಿಷ್ಣುವಿನಲ್ಲಿ ಮಾತ್ರವೇ ಮುಖ್ಯವಾಗಿರುತ್ತವೆ.

जडपक्षे यः सर्वज्ञ इत्युक्तसार्वज्ञरूपविशेषणायोगात् । ''तस्मादेतद्ब्रह्म नामरूपमन्नं च जायत'' इति ''जुष्टं यदा पश्यत्यन्यमीशम्'' इति ब्रह्मरुद्रयोरक्षराद्भेदव्यपदेशाच्च अदृश्यत्वादिगुणकं परतः परत्वेन श्रुतमक्षरं विष्णुरेवेति ।। फले तु अदृश्यत्वादिगुणयुक्तानन्दमयाक्षेपतत्समाधी ।।६।।

ಜಡವಾದ ಪದಾರ್ಥವು ಅಕ್ಷರವೆಂದು ವಿವಕ್ಷಿತವಾದಾಗ 'यः सर्वज्ञः' ಇತ್ಯಾದಿಯಿಂದ ಹೇಳಲ್ಪಟ್ಟ ಸರ್ವಜ್ಞತ್ವಾದಿಗಳು ವಿಶೇಷಣವಾಗಲು ಸಾಧ್ಯವಿಲ್ಲ. 'तस्माद्देतद् ब्रह्म नामरूपमन्नं च जायते' ಎಂಬುದಾಗಿ ಅಕ್ಷರತತ್ವಕ್ಕೆ ಭೇದವನ್ನು ಹೇಳಲಾಗಿದೆ. 'जुष्टं यदा पश्यत्यन्यमीशम्' ಎಂಬುದಾಗಿ ರುದ್ರನಿಂದಲೂ ಭೇದವನ್ನು ಹೇಳಲಾಗಿದೆ. ಆದ್ದರಿಂದ ಅಕ್ಷರತತ್ವವನ್ನೇ ರುದ್ರಾದಿಗಳೆಂದು ಹೇಳಲು ಸಾಧ್ಯವಿಲ್ಲ. ಆದ್ದರಿಂದ ಪರತಃ ಪರತ್ವೇನ ಪ್ರತಿಪಾದ್ಯನಾದ ಅದೃಶ್ಯತ್ವಾದಿ ಗುಣಗಳುಳ್ಳ ಅಕ್ಷರನು ಮಹಾವಿಷ್ಣುವೇ ಆಗುತ್ತಾನೆಂದು ನಿರ್ಣಯವಾಗುತ್ತದೆ.

ಅದೃಶ್ಯತ್ವಾದಿಗುಣಗಳುಳ್ಳ ಆನಂದಮಯನು ವಿಷ್ಣುವಾಗುವುದಿಲ್ಲವೆಂದು ಪೂರ್ವಪಕ್ಷದ ಫಲ. ಅದರ ನಿರಾಕರಣೆಯೇ ಸಿದ್ಧಾಂತದ ಫಲ.

ಶ್ರೀರಾಘವೇಂದ್ರತೀರ್ಥಶ್ರೀಪಾದಂಗಳವರಿಂದ ರಚಿತವಾದ

ನ್ಯಾಯಮುಕ್ತಾವಳಿಯ ಕನ್ನಡಾನುವಾದದಲ್ಲಿ ಅದೃಶ್ಯತ್ವಾಧಿಕರಣವು ಸಮಾಪ್ತವಾಯಿತು.

सूत्रार्थरत्नावलिः

अदृश्यत्वाधिकरणम् (१।२।६)

अत्रादृश्यत्वाद्यभावाख्यलिङ्गं ब्रह्मणि समन्वीयते –

ॐ।। अदृश्यत्वादिगुणको धर्मोक्तेः ।। ॐ

ननु 'यत्तदद्रेश्यम्' (मु.१।१।६) इत्युक्तादृश्यत्वादिगुणको न विष्णुः किन्तु जडप्रकृतिः । 'अक्षरात् सम्भवतीह' इति अक्षरशब्दश्रवणात् । नचाक्षरशब्दो विष्णावपि सावकाशः । तत्परतः पराभिधानात् । नच विष्णोः परोऽस्ति । पृथिव्यादिदृष्टान्तेनोपादानतया जगत्कारणत्वाभिधानाच्च । चित्प्रकृतेरेवैतदृश्यत्वादिकम् । तस्यामक्षरशब्दस्य 'कूटस्थः' इति (भ.गी.१५।१६) स्मृतिसिद्धत्वात् । विकारित्वेन जगत्कारणत्ववचनं विकाराभिमानित्वाद्युज्यते । 'अक्षरात् परतः' (मुं.२।१।२) इत्येतदपि परतोऽक्षरादिति सामानाधिकरण्येनोपपद्यते । हिरण्यगर्भस्य वा एतददृश्यत्वादिकम् । 'स ब्रह्मविद्याम्' (मुं.१।१।१) इत्यादि ब्रह्मशब्दात् । रुद्रस्य वा एतददृश्यत्वादिकम् । 'कर्तारमीशम्' (मुं. ३।१।३) इतीशशब्दश्रवणादिति प्राप्ते सूचितम् –

ॐ ।। अदृश्यत्वादिगुणको धर्मोक्तेरिति ।। अस्यार्थः – अदृश्यत्वादिगुणकः 'यत् तदद्रेश्यम्' इति श्रुत्युक्तादृश्यत्वादिधर्मविशिष्टाक्षरशब्दवाच्यो विष्णुरेव । न प्रकृत्यादिः । कुतः? धर्मोक्तेः ऋगादिपरविद्याविषयत्वरूपविष्णुधर्मस्य 'यया' इति श्रुत्युक्तत्वादित्यर्थः ।।

एवञ्च 'अथ परा यया' इत्यदृश्यत्वादिगुणकस्य परविद्याविषयत्वाभिधानात् अदृश्यत्वादिगुणको विष्णुरेवेति सिद्धम् ।

ॐ ।। विशेषणभेदव्यपदेशाभ्यां च नेतरौ ।। ॐ

ननु विष्णुप्रापकपरविद्याविषयत्ववत् जडप्रकृतिविरिञ्चरुद्रप्रापकानामपि भावात् 'त एव अदृश्यत्वादिगुणकाः किं न स्युः?' इत्यतो विशेषयुक्त्या पराकुर्वत् सूत्रं पठति –

ॐ ।। विशेषणभेदव्यपदेशाभ्यां च नेताविति ।। अस्यार्थः । चः समुच्चये । इतरौ प्रकृतिद्वयं विरिञ्चरुद्रौ च । नादृश्यत्वादिगुणकौ । कुतः? विशेषणभेदव्यपदेशाभ्याम् । प्रतिज्ञाद्वये क्रमेणैकैकहेत्वन्वयः । 'यः सर्वज्ञः' इति (मुं.१।१।९) सार्वज्ञ्यादिविशेषणात् । 'तस्मादेतत्' इति (मुं.१।१।९) अदृश्यत्वादिगुणकाक्षराद् विरिञ्चरुद्रयोर्भेदोक्तेश्चेत्यर्थः ।।

एवञ्च जडप्रकृतित्वविरोधिसार्वज्ञ्यादिविशेषणस्य 'तस्मादेतत्' इति विरिञ्चत्वविरोधि 'जुष्टं यदा पश्यत्यन्यम्' इति रुद्रत्वविरोधिभेदव्यपदेशस्य चाभावेनासम्भवात् । नच परतः पराभिधानान्न विष्णुरिति वाच्यम् । 'अपरं त्वक्षरम्' इति त्र्यक्षराभिधानेन परतो मध्यमाक्षरात् परत्वसम्भवेनाविरोधाददृश्यत्वादिगुणको विष्णुरेवेति सिद्धम् ।

ॐ।। रूपोपन्यासाच्च ।।ॐ

युक्त्यन्तरेण विष्णोरेवादृश्यत्वादिगुणकत्वं साधयत् सूत्रमवतारयति –

ॐ।। रूपोपन्यासाचेति ।। अस्यार्थः – 'यदा पश्यः पश्यत'(मुं. ३।१।३) इति विष्ण्वसाधारणस्वर्णरूपप्रतिपादनाच्चादृश्यत्वादिगुणको विष्णुरेवेत्यर्थः ।।

एवञ्च विष्ण्वसाधारणरुक्मरूपप्रतिपादनात् । 'एको नारायणः' इत्यत्र शुक्लादिरूपाणां मनुष्यादौ मिश्रीकरणस्योक्तत्वात् अदृश्यत्वादिगुणको विष्णुरेवेति सिद्धम् ।।

।। इति सूत्रार्थरत्नावळ्यां अदृश्यत्वाधिकरणम् ।।

॥ ಪರಿಪೂರ್ಣಚಂದ್ರಿಕೆಯಲ್ಲಿ ಅದೃಶ್ಯತ್ವಾಧಿಕರಣವು ಮುಗಿಯಿತು ॥
॥ ಶ್ರೀಮದ್ಭೃಶಾರ್ಪಣಮಸ್ತು ॥

ವೈಶ್ವಾನರಾಧಿಕರಣ

(೧-೨-೭)

ಭಾಗ -೧

ಬ್ರಹ್ಮಸೂತ್ರ, ಸೂತ್ರದೀಪಿಕಾ, ಬ್ರಹ್ಮಸೂತ್ರಭಾಷ್ಯ,
ಸತ್ತರ್ಕದೀಪಾವಳಿ, ತತ್ವಪ್ರಕಾಶಿಕಾ,
ಭಾವದೀಪ ಇವುಗಳ ವಿವರಣೆಯೊಂದಿಗೆ
ಸರಳ ಕನ್ನಡ ಅನುವಾದ

* * *

ಭಾಷ್ಯದೀಪಿಕಾ ಹಾಗೂ ವಾಕ್ಯಾರ್ಥಮಂಜರೀ -
ಸಂಪೂರ್ಣ ಸಂಸ್ಕೃತ ಮೂಲ.

॥ ಶ್ರೀಗುರುಭ್ಯೋ ನಮಃ ॥

ವೈಶ್ವಾನರಾಧಿಕರಣ

ದೇವದೇವೋತ್ತಮ ದೇವತಾಸಾರ್ವಭೌಮ
ಅಖಿಲಾಂಡಕೋಟಿಬ್ರಹ್ಮಾಂಡನಾಯಕ, ಚತುರ್ದಶಲೋಕಗುರುಗಳಾದ
ಶ್ರೀವೇದವ್ಯಾಸದೇವರಿಂದ ಅನುಗ್ರಹಿಸಲ್ಪಟ್ಟ

ಬ್ರಹ್ಮಮೀಮಾಂಸಾಶಾಸ್ತ್ರ

'ವೈಶ್ವಾನರ' ಎಂಬ ಹೆಸರು ಮಹಾವಿಷ್ಣುವಿಗೆ ಮಾತ್ರ

॥ अथ वैश्वानराधिकरणम् ॥

ಸೂ – ॐ ॥ वैश्वानरः साधारणशब्दविशेषात् ॥ ॐ ॥ ೨೪ ॥

ಸೂತ್ರಾರ್ಥ - 'ಅಯಮಗ್ನಿಃ ವೈಶ್ವಾನರಃ' ಇತ್ಯಾದಿ ವಾಕ್ಯಗಳಲ್ಲಿ ಉಲ್ಲೇಖಿಸಲ್ಪಟ್ಟ ವೈಶ್ವಾನರನು ವಿಷ್ಣುವೇ ಆಗಿದ್ದಾನೆ. ಏಕೆಂದರೆ ಅಗ್ನಿ ಮತ್ತು ವಿಷ್ಣು ಇಬ್ಬರಲ್ಲಿಯೂ ಸಾಧಾರಣವಾದ ವೈಶ್ವಾನರ ಎಂಬ ಶಬ್ದದಲ್ಲಿ 'ಆತ್ಮ' ಎಂಬ ವಿಶೇಷಣವನ್ನು ನೀಡಿದ್ದರಿಂದ.

ಶ್ರೀಜಗನ್ನಾಥಯತಿಗಳಿಂದ ರಚಿಸಲ್ಪಟ್ಟ

ಸೂತ್ರದೀಪಿಕಾ

सूत्रदीपिका — वैश्वानरः 'यस्त्वेतम्' इत्यादि वाक्यगतवैश्वानरादि-शब्दवाच्यो विष्णुरेव न त्वग्निः । कुतः? साधारणशब्दविशेषात् अग्नाविष्णोः साधारणस्य वैश्वानरशब्दस्य 'आत्मानं वैश्वानरम्' इति श्रुतावात्मशब्देन विशेषितत्वादित्यर्थः ।

ಅರ್ಥ - ವೈಶ್ವಾನರಃ = 'ಯಸ್ತ್ವೇತಮ್' ಇತ್ಯಾದಿಯಾಗಿ ಛಾಂದೋಗ್ಯದಲ್ಲಿರುವ ವೈಶ್ವಾನರಶಬ್ದದಿಂದ ವಾಚ್ಯನಾದವನು ವಿಷ್ಣುವೇ; ಹೊರತು ಅಗ್ನಿಯಲ್ಲ. ಏಕೆಂದರೆ, ಸಾಧಾರಣಶಬ್ದವಿಶೇಷಾತ್ = ಅಗ್ನಿ ಹಾಗೂ ವಿಷ್ಣು ಇಬ್ಬರಲ್ಲಿಯೂ ಸಾಧಾರಣವಾದ ವೈಶ್ವಾನರಶಬ್ದಕ್ಕೆ 'ಆತ್ಮಾನಂ ವೈಶ್ವಾನರಮ್' ಎಂಬ ಶ್ರುತಿಯಲ್ಲಿ ಆತ್ಮಶಬ್ದವನ್ನು ವಿಶೇಷಣವನ್ನಾಗಿ ಹೇಳಲಾಗಿದೆ.

ಶ್ರೀಮದಾನನ್ದತೀರ್ಥಭಗವತ್ಪಾದಾಚಾರ್ಯವಿರಚಿತ-

ಬ್ರಹ್ಮಸೂತ್ರಭಾಷ್ಯಮ್

ಭಾಷ್ಯಮ್ — ಅದೃಶ್ಯತ್ವಾದಿಗುಣೇಷು ಸರ್ವಗತತ್ವಂ 'ಯಸ್ತ್ವೇತಮೇವಂ ಪ್ರಾದೇಶಮಾತ್ರಮಭಿವಿಮಾನಮಾತ್ಮಾನಂ ವೈಶ್ವಾನರಮುಪಾಸ್ತೇ' (ಛಾ. ೫-೧೮-೧.)ಇತಿ ವೈಶ್ವಾನರಸ್ಯೋಕ್ತಮಿತಿ ॥

ಅನುವಾದ- ಹಿಂದಿನಅಧಿಕರಣದಲ್ಲಿಅದೃಶ್ಯತ್ವವೆಂಬಗುಣದಸಮನ್ವಯವನ್ನುಮಾಡುವಾಗ ಸರ್ವಗತತ್ವವನ್ನು ವಿಷ್ಣುವಿನಲ್ಲಿ ಹೇಳಲಾಯಿತು. ಆದರೆ ಛಾಂದೋಗ್ಯಶ್ರುತಿಯು ಅದೇ ಸರ್ವಗತತ್ವಗುಣವನ್ನು ವೈಶ್ವಾನರನಲ್ಲಿ ಹೇಳುತ್ತಿದೆ. 'ಯಾವ ಅಧಿಕಾರಿಯು ಒಂಭತ್ತುಅಂಗುಲದಷ್ಟು ಪರಿಮಾಣವುಳ್ಳ, ಎಲ್ಲ ದಿಕ್ಕುಗಳಲ್ಲಿ ಸಂಚಾರಮಾಡುತ್ತಿರುವ ಎಲ್ಲರ ಹೃದಯದಲ್ಲಿ ನೆಲೆಸಿರುವ ವೈಶ್ವಾನರ ಎಂಬ ಶಬ್ದದಿಂದ ಪ್ರತಿಪಾದ್ಯನಾದವನನ್ನು ಉಪಾಸನೆ ಮಾಡುತ್ತಾನೋ' ಹೀಗೆ ವೈಶ್ವಾನರನಿಗೆ ಸರ್ವಗತತ್ವವು ಹೇಳಲ್ಪಟ್ಟಿದೆ.

ಪ್ರತಿಪದಾರ್ಥ-- ಈ ಅಧಿಕರಣದಲ್ಲಿ ಪಾಚಕತ್ವವೇ ಮೊದಲಾದ ಅನೇಕ ಲಿಂಗಗಳನ್ನು ಸಮನ್ವಯ ಮಾಡುವುದಕ್ಕಾಗಿ ಬ್ರಹ್ಮನಲ್ಲಿ ವೈಶ್ವಾನರ ಎಂಬ ನಾಮಾತ್ಮಕಶಬ್ದದ ಸಮನ್ವಯವನ್ನು ಮಾಡುತ್ತಿದ್ದಾರೆ. ಹಿಂದಿನ ಅಧಿಕರಣದಿಂದ ಸಂಗತಿಯನ್ನು ತೋರಿಸುತ್ತಾ ವಿಷಯವಾಕ್ಯವನ್ನು ಉದಾಹರಿಸುವ ಮೂಲಕ ವಿಷಯಾದಿಗಳನ್ನು ಸೂಚನೆ ಮಾಡುತ್ತಿದ್ದಾರೆ.

ಅದೃಶ್ಯತ್ವಾದಿಗುಣೇಷು = ವಿಷ್ಣುವಿನಲ್ಲಿ ಸಮನ್ವಯಿಸಿದ ಅದೃಶ್ಯತ್ವ ಮೊದಲಾದ ಗುಣಗಳ ಮಧ್ಯದಲ್ಲಿ, ಸರ್ವಗತತ್ವಂ = ಸರ್ವಗತತ್ವ ಎಂಬ ಧರ್ಮವನ್ನೂ, ಸಮನ್ವಯ ಮಾಡಲಾಯಿತು. ಆದರೆ ಈ ಗುಣವನ್ನು ಛಾಂದೋಗ್ಯದಲ್ಲಿ ಯಃ = ಯಾವ ಅಧಿಕಾರಿಯು, ಪ್ರಾದೇಶಮಾತ್ರಂ = ಒಂಭತ್ತು ಅಂಗುಲದಷ್ಟು ಪರಿಮಾಣವುಳ್ಳ, ಅಭಿವಿಮಾನಂ = ಎಲ್ಲ ದಿಕ್ಕುಗಳಲ್ಲಿ ಸಂಚರಿಸುತ್ತಿರುವ, ಆತ್ಮಾನಂ = ಎಲ್ಲರ ಸ್ವಾಮಿಯಾದ, ವೈಶ್ವಾನರಂ = ವೈಶ್ವಾನರ ಎಂಬ ಶಬ್ದದಿಂದ ವಾಚ್ಯನಾದವನನ್ನು, ಉಪಾಸ್ತೇ = ಉಪಾಸನೆ ಮಾಡುತ್ತಾನೋ, ಇತಿ = ಹೀಗೆ, ವೈಶ್ವಾನರಸ್ಯ = ವೈಶ್ವಾನರನಿಗೆ, ಉಕ್ತಮ್ = (ಸರ್ವಗತತ್ವವನ್ನು) ಹೇಳಲಾಗಿದೆ.(೧)

(೧) **ಭಾಷ್ಯದೀಪಿಕಾ -** ಅತ್ರಾಧಿಕರಣೇ ಪಾಚಕತ್ವಾದ್ಯನೇಕಲಿಙ್ಗಸಮನ್ವಯಸಿದ್ಧ್ಯರ್ಥಂ ಬ್ರಹ್ಮಣಿ ವೈಶ್ವಾನರನಾಮಸಮನ್ವಯಃ ಕ್ರಿಯತೇ । ಪೂರ್ವಾಧಿಕರಣಸಙ್ಗತಿಂ ವಿಷಯವಾಕ್ಯೋದಾಹರಣಪೂರ್ವಕಂ ವಿಷಯಾದಿಕಂ ವೈಶ್ವಾನರಾಧಿಕರಣ (೧-೨-೭)

ಭಾಷ್ಯಮ್ – ಅತ ಆಹ –

ಸೂ – ॐ ॥ ವೈಶ್ವಾನರಃ ಸಾಧಾರಣಶಬ್ದವಿಶೇಷಾತ್ ॥ ॐ ॥ ೨೪ ॥

ಅಗ್ನಾವಿಷ್ಣ್ವೋಃ ಸಾಧಾರಣಸ್ಯ ವೈಶ್ವಾನರಶಬ್ದಸ್ಯ ವಿಷ್ಣಾವೇವ ಪ್ರಸಿದ್ಧಾತ್ಮಶಬ್ದೇನ ವಿಶೇಷಣಾದ್ ವೈಶ್ವಾನರೋ ವಿಷ್ಣುರೇವ ॥ ೨೪ ॥

ವೈಶ್ವಾನರ ಯಾರು? ಎಂಬುದನ್ನು ನಿರ್ಧರಿಸುವುದಕ್ಕಾಗಿ ಸೂತ್ರಕಾರರು ವೈಶ್ವಾನರಃ ಇತ್ಯಾದಿಯಾಗಿ ಹೇಳುತ್ತಿದ್ದಾರೆ. ಅಗ್ನಿ ಮತ್ತು ವಿಷ್ಣು ಇಬ್ಬರನ್ನೂ ಪ್ರತಿಪಾದನೆ ಮಾಡುವ ವೈಶ್ವಾನರ ಎಂಬ ಪದಕ್ಕೆ ವಿಷ್ಣುವಿನಲ್ಲೇ ಮುಖ್ಯಪ್ರತಿಪಾದ್ಯತ್ವವನ್ನು ಹೇಳಬೇಕು. ಏಕೆಂದರೆ ವಿಷ್ಣುವಿನಲ್ಲೇ ಪ್ರಸಿದ್ಧವಾದ ಆತ್ಮಶಬ್ದದಿಂದ ಗುಣವನ್ನು ಹೇಳಿರುವುದರಿಂದ ವಿಷ್ಣುವೇ ವೈಶ್ವಾನರನಾಗುತ್ತಾನೆ.

ಪ್ರತಿಪದಾರ್ಥ -- ಸಿದ್ಧಾಂತವನ್ನು ತೋರಿಸುವುದಕ್ಕಾಗಿ ಸೂತ್ರವನ್ನು ಪಠಿಸಿ ವ್ಯಾಖ್ಯಾನಿಸುತ್ತಿದ್ದಾರೆ. ಅತಃ= ಈಪೂರ್ವಪಕ್ಷವನ್ನುಪರಿಹರಿಸಲು, ಆಹ= ಸೂತ್ರಕಾರರು ಈ ಸೂತ್ರವನ್ನು ಹೇಳುತ್ತಿದ್ದಾರೆ. ಅಗ್ನಾವಿಷ್ಣ್ವೋಃ = ಅಗ್ನಿ ಹಾಗೂ ವಿಷ್ಣು ಇವರಿಬ್ಬರಲ್ಲಿ, ಸಾಧಾರಣಸ್ಯ = ಸಮಾನವಾದ ವಾಚಕತ್ವವು ತೋರಿದರೂ, ವೈಶ್ವಾನರಶಬ್ದಸ್ಯ = ವೈಶ್ವಾನರ ಎಂಬ ಪದಕ್ಕೆ, ವಿಷ್ಣಾವೇವ = ವಿಷ್ಣುವಿನಲ್ಲೇ ಮುಖ್ಯಪ್ರತಿಪಾದ್ಯತ್ವವನ್ನು ಹೇಳಬೇಕು. ಏಕೆಂದರೆ ಪ್ರಸಿದ್ಧಾತ್ಮಶಬ್ದೇನ = ಶ್ರೀಹರಿಯಲ್ಲಿಯೇ ಪ್ರಸಿದ್ಧವಾದ ಆತ್ಮಶಬ್ದದಿಂದ, ವಿಶೇಷಣಾತ್ = ವಿಶೇಷಣವನ್ನಾಗಿಸಿರುವುದರಿಂದ,

---

ಸೂಚಯತಿ – ಅದೃಶ್ಯತ್ವಾದಿತಿ ।। ಉಕ್ತಮಿತ್ಯಸ್ಯಾऽವೃತ್ತಿಃ ಶ್ರುತಾವಿತಿ ಶೇಷಃ । ತಥಾ ಚ – ಗತಾಧಿಕರಣೋದಾಹೃತಮುಂಡಕಶ್ರುತ್ಯುಕ್ತಾದೃಶ್ಯತ್ವಾದಿಗುಣೇಷು ಮಧ್ಯೇ 'ನಿತ್ಯಂ ವಿಭುಂ ಸರ್ವಗತಮ್' (ಮುಂ.೧-೧-೬) ಇತ್ಯನೇನ ಯತ್ಸರ್ವಗತತ್ವಮುಕ್ತಂ ತಚ್ಛಾಂದೋಗಶ್ರುತೌ 'ಯಸ್ತ್ವೇತಮ್' ಇತ್ಯನೇನ ವೈಶ್ವಾನರಸ್ಯೋಕ್ತಮಿತಿ ಯೋಜನಾ । ಅನೇನ ಛಾಂದೋಗಶ್ರುತಿಸ್ಥವೈಶ್ವಾನರಶಬ್ದಸ್ಯಾನ್ಯನಿಷ್ಠತ್ವಾಕ್ಷೇಪಮುಖೇನ ಪೂರ್ವೋಕ್ತಸರ್ವಗತತ್ವಾದೇರನ್ಯನಿಷ್ಠತ್ವಾಕ್ಷೇಪಾತ್ ಪೂರ್ವೇಣಾಸ್ಯಾऽಕ್ಷೇಪಿಕೀ ಸಙ್ಗತಿರುಕ್ತಾ ಭವತಿ । ವೈಶ್ವಾನರೋ ವಿಷಯಃ, ವಿಷ್ಣುರನ್ಯೋ ವೇತಿ ಸನ್ದೇಹಶ್ಚ ಸೂಚಿತಃ ।

ಶ್ರುತ್ಯರ್ಥಸ್ತು – 'ಯಸ್ತು' ಅಧಿಕಾರೀ 'ಪ್ರಾದೇಶಮಾತ್ರಂ' ದೇಹಹೃದಯೇ ತಾವತ್ಪರಿಮಾಣಕಮ್ । ತತ್ತ್ವಪ್ರದೀಪರೀತ್ಯಾऽಧಿಕಾರ್ಯಪೇಕ್ಷಯಾ ಪ್ರಾದೇಶಮಾತ್ರಮಿತಿ ವಾ । 'ಅಭಿವಿಮಾನಮ್' ಅಭಿತೋ ವಿಗತಂ ಮಾನಂ ಮರ್ಯಾದಾ ಯಸ್ಯ ತಂ, ಸರ್ವಗತಮ್ ಇತಿ ಯಾವತ್ । 'ಆತ್ಮಾನಮ್' ಆತತಗುಣಮ್ 'ಏತಂ' ಶರೀರಸ್ಥಂ 'ವೈಶ್ವಾನರಂ' ತದಾಖ್ಯವಿಷ್ಣುಮ್ 'ಏವಂ' ವಕ್ಷ್ಯಮಾಣರೀತ್ಯಾ ಉಪಾಸ್ತೇ 'ಸೋऽನ್ನಮತ್ತಿ' (ಛಾ.೫.೧೮.೧) ಸ್ವಯೋಗ್ಯಭೋಗ್ಯಮನುಭವತೀತಿ ।

ವೈಶ್ವಾನರಃ = ವೈಶ್ವಾನರಶಬ್ದದಿಂದ, ಮುಖ್ಯವಾಚ್ಯನಾದವನು, ವಿಷ್ಣುರೇವ = ವಿಷ್ಣುವೇ ಆಗುತ್ತಾನೆ.(೧)

श्रीपद्मनाभतीर्थविरचितसत्तर्कदीपावळ्याम्ः

ॐ वैश्वानरः साधारणशब्दविशेषात् ॐ ॥ १-२-२४ ॥

गताधिकरणेनोत्तराधिकरणस्याक्षेपिकीं सङ्गतिं दर्शयति – अदृश्यत्वेति ।। 'नित्यं विभुं सर्वगतम्' इति यत् सर्वगतत्वमुक्तं तन्न विष्णोरेव । श्रुत्यन्तरे वैश्वानरस्योच्यमानत्वात् । अभितो विगतमानत्वेनाभिविमानमात्मानं वैश्वानरमिति वैश्वानराग्नाविव

(१) ಭಾಷ್ಯದೀಪಿಕಾ – ಸಿದ್ಧಾನ್ತಯತಸೂತ್ರಮವತಾರಯತಿ – ಅತ ಇತಿ ।। ಸಾಧಾರಣಸ್ಯೇತ್ಯನನ್ತರಮಪೀತಿ ಶೇಷಃ । ಸಾಧಾರಣ್ಯಂ ಸಾಮ್ಯಮ್ । ತತ್ರ ಶ್ರುತೇರ್ನೋಭಯತ್ರ ಪ್ರಸಿದ್ಧತ್ವರೂಪಂ, ವೈಶ್ವಾನರಶಬ್ದಸ್ಯಾನ್ಯತ್ರೈವ ಪ್ರಸಿದ್ಧತ್ವಾತ್ । ಕಿನ್ತು ಶ್ರುತೇಃ ಪ್ರಸಿದ್ಧತೊ ಲಿಙ್ಗೇನ ಸಾಮ್ಯರೂಪಂ, ತದಪಿ ನಿರವಕಾಶತ್ವೇನ ಪ್ರಕಾರೇಣ, ವೈಶ್ವಾನರಶ್ರುತೇಃ ವಿಷ್ಣೌ ಪ್ರಸಿದ್ಧತ್ವಭಾವೇನ ತತ್ರ ನಿರವಕಾಶತ್ವಾತ್ ಪೂರ್ವೋಕ್ತಸರ್ವಗತತ್ವಸ್ಯಾಪಿ ವಿಷ್ಣೋರನ್ಯತ್ರ ನಿರವಕಾಶತ್ವಾತ್ । ತಥಾ ಚ – ಯದ್ಯಪಿ ಅಗ್ನಾವಿಷ್ಣ್ವೋಃ ಪ್ರತಿಜ್ಞಾವಿಷಯಯೋಃ ಸತೋಃ ಪೂರ್ವಪಕ್ಷಸಾಧಕವೈಶ್ವಾನರಶಬ್ದೋ ನಿರವಕಾಶತ್ವೇನ ಪ್ರಕಾರೇಣೋತ್ತರಪಕ್ಷಸಾಧಕಲಿಙ್ಗಸಾಧಾರಣಃ । ಶ್ರುತಿಲಿಙ್ಗಯೋರ್ನಿರವಕಾಶತ್ವೇನ ಸಾಮ್ಯೇऽಪಿ ಲಿಙ್ಗಾಚ್ಛ್ರುತಿಃ ಪ್ರಬಲಾ । ತಸ್ಮಾದಗ್ನಿರೇವೇತಿ ಪ್ರಾಪ್ತಮ್ । ತಥಾऽಪಿ ಸಾಧಾರಣಸ್ಯಾಪಿ ವೈಶ್ವಾನರಶಬ್ದಸ್ಯ ವಿಷ್ಣ್ವೇಕನಿಷ್ಠತಯಾ ಶ್ರುತ್ಯಾದಿಸಿದ್ಧೇನ 'ಆತ್ಮಾನಂ ವೈಶ್ವಾನರಮ್' ಇತ್ಯಾತ್ಮಶಬ್ದೇನ 'ವಿಶೇಷಣಾತ್' ವಿಶೇಷಿತತ್ವಾದ್ ವಿಷ್ಣುಪರತ್ವಸಮ್ಭವಾತ್ । ಪ್ರಸಿದ್ಧ್ಯಾದೇರನ್ಯಥೋಪಪನ್ನತ್ವೇನ ನಿರ್ಣಯಕಾರಣಾಭಾವಾಚ್ಛಬ್ದವಿಶೇಷಾದಾತ್ಮಶಬ್ದಾದ್ ವೈಶ್ವಾನರೊ ವಿಷ್ಣುರೇವ, 'ನ ದೇವತಾಭೂತಂ ಚ' ಇತ್ಯಾವೃತ್ತ್ಯಾ ಸೂತ್ರಭಾಷ್ಯಯೋರ್ಯೋಜನಾ । ಅನೇನ ನಿರ್ಣಯೇನೈವ ಪೂರ್ವಪಕ್ಷಃ ಸೂಚಿತಃ । ಅತ್ರ ಪಕ್ಷೇ ಲಿಙ್ಗಪ್ರಾಬಲ್ಯನಿರಾಸಾಯ ಸಾಧಾರಣ್ಯೋಕ್ತಿಃ । ಸಿದ್ಧಾನ್ತಶ್ರುತೇಃ ಸಾವಕಾಶತ್ವಜ್ಞಾಪನಾಯ ಸಾಧಾರಣ್ಯೋಕ್ತಿರಿತಿ ಕೇಚಿತ್ ।।

ಯದ್ವಾ – ಭಾಷ್ಯಟೀಕಾಸ್ವಾರಸ್ಯಾದನಿರ್ಣಯೇನೈವ ಪೂರ್ವಪಕ್ಷಃ । ಅತ್ರ ಪಕ್ಷೇ ಸಾಧಾರಣ್ಯಂ ಪ್ರತಿ ಧರ್ಮಿತ್ವಂ ಶಬ್ದಸ್ಯೈವ, ನ ಲಿಙ್ಗಸ್ಯಾಪಿ । ಅಗ್ನಾವಿಷ್ಣ್ವೋರಿತಿ ವಿಷಯಸಪ್ತಮೀ । ತಥಾ ಚ ಯತೋऽಗ್ನಾವಿಷ್ಣ್ವೋರ್ಯದ್ಯಪಿ ವೈಶ್ವಾನರಶಬ್ದಃ ಸಾಧಾರಣಃ ಸಮ್ಭವದ್ ವೃತ್ತಿಕಃ । ತಥಾऽಪಿ ಪ್ರಸಿದ್ಧಿಮುಖೇನ ನಿರವಕಾಶತ್ವೇನ ಲಿಙ್ಗಸ್ಯ ಸಾಧಾರಣಶ್ಚ । ತತಃ ಪೂರ್ವೋತ್ತರಪಕ್ಷಸಾಧಕಯೋಃ ಸಮಬಲತ್ವಾದನಿರ್ಣಯಃ । ತಥಾऽಪ್ಯುಭಯತ್ರ ಸಾಧಾರಣಸ್ಯಾಪಿ ವೈಶ್ವಾನರಶಬ್ದಸ್ಯೇತ್ಯಾದಿಕಾ ಯೋಜನಾ ದ್ರಷ್ಟವ್ಯಾ ।।

ವಿಷ್ಣಾವಪಿ । 'ಸ ಏಷ ವೈಶ್ವಾನರೋ ವಿಶ್ವರೂಪಃ' ಇತ್ಯಾದಿನಾ ಪ್ರಯುಕ್ತತ್ವಾತ್ಸಾಧಾರಣೋ ನ ವಿಷ್ಣೋರೇವಾವಗಮಕ ಇತಿ ಪ್ರಾಪ್ತೇ ಸೂತ್ರಂ ಪಠಿತ್ವಾ ವ್ಯಾಚಷ್ಟೇ – ವೈಶ್ವಾನರ ಇತ್ಯಾದಿನಾ ।।

ಹಿಂದಿ ಅಧಿಕರಣದಿಂದ ಈ ಅಧಿಕರಣಕ್ಕೆ ಆಕ್ಷೇಪಿಕೀಸಂಗತಿಯನ್ನು ತೋರಿಸುತ್ತಿದ್ದಾರೆ. 'ಅದೃಶ್ಯತ್ವ,' ಇತ್ಯಾದಿ ಭಾಷ್ಯದಿಂದ. 'ನಿತ್ಯಂ ವಿಭುಂ ಸರ್ವಗತಮ್' ಎಂಬ ಶ್ರುತಿಯಿಂದ ಹೇಳಲ್ಪಟ್ಟ ಸರ್ವಗತತ್ವವು ವಿಷ್ಣುವಿನಲ್ಲಿ ಯುಕ್ತವಾಗುವುದಿಲ್ಲ. ಏಕೆಂದರೆ ಮತ್ತೊಂದು ಶ್ರುತಿಯು ವೈಶ್ವಾನರನನ್ನು ಸರ್ವಗತನೆಂದು ಹೇಳುತ್ತಿದೆ.

ಶ್ರುತಿಯಲ್ಲಿರುವ ಅಭಿವಿಮಾನಂ ಎಂಬ ಪದದಿಂದ 'ಅಭಿತಃ ವಿಗತಂ ಮಾನಂ' ಎಂಬ ನಿಷ್ಪತ್ತಿಯನ್ನು ವಿವಕ್ಷಿಸಿದಾಗ ಸರ್ವಗತನೆಂಬ ಅರ್ಥವು ದೊರೆಯುತ್ತದೆ. 'ಅಭಿವಿಮಾನಂ ಆತ್ಮಾನಂ ವೈಶ್ವಾನರಂ' ಎಂದು ವೈಶ್ವಾನರಶಬ್ದವು ಅಗ್ನಿಯಲ್ಲಿ ಪ್ರಸಿದ್ಧವಾಗಿರುವಂತೆ ವಿಷ್ಣುವಿನಲ್ಲಿಯೂ ಪ್ರಸಿದ್ಧವಾಗಿದೆ. ಆದ್ದರಿಂದ ಉಭಯತ್ರ ಸಾಧಾರಣವಾದ ಈ ಶಬ್ದವು ವಿಷ್ಣು ಒಬ್ಬನನ್ನೇ ಪ್ರತಿಪಾದಿಸುತ್ತದೆಂದು ನಿರ್ಣಯಿಸಲಾಗದು. ಇದನ್ನು ಪರಿಹರಿಸುವುದಕ್ಕಾಗಿ ಸೂತ್ರವನ್ನು ಪಠಿಸಿ ವ್ಯಾಖ್ಯಾನಿಸುತ್ತಿದ್ದಾರೆ ''ವೈಶ್ವಾನರಃ'' ಇತ್ಯಾದಿ ಭಾಷ್ಯದಿಂದ.

ತತ್ತ್ವಪ್ರಕಾಶಿಕಾ –

।। ॐ ವೈಶ್ವಾನರಃ ಸಾಧಾರಣಶಬ್ದವಿಶೇಷಾತ್ ॐ ।।

ಅತ್ರ ಲೋಕತೋऽನ್ಯತ್ರಪ್ರಸಿದ್ಧವೈಶ್ವಾನರನಾಮ್ನಃ ಪಾಚಕತ್ವಾದ್ಯನೇಕಲಿಙ್ಗಸಮನ್ವಯಸಿದ್ಧಯೇ ಬ್ರಹ್ಮಣಿ ಸಮನ್ವಯಪ್ರತಿಪಾದನಾದಸ್ತಿ ಶಾಸ್ತ್ರಾದಿಸಙ್ಗತಿಃ ।

ಈ ಅಧಿಕರಣದಲ್ಲಿ ಲೋಕತಃ ಅನ್ಯತ್ರಪ್ರಸಿದ್ಧವಾದ ವೈಶ್ವಾನರ ಎಂಬ ನಾಮಾತ್ಮಕಶಬ್ದದ ಸಮನ್ವಯವನ್ನು ವಿಷ್ಣುವಿನಲ್ಲಿ ಸಮನ್ವಯಿಸುತ್ತಿದ್ದಾರೆ. ಹೀಗೆ ಒಂದು ನಾಮಾತ್ಮಕಶಬ್ದದ ಸಮನ್ವಯವನ್ನು ಮಾಡುವುದರಿಂದ ಪಾಚಕತ್ವವೇ ಮೊದಲಾದ ಅನೇಕ ಲಿಂಗಗಳ ಸಮನ್ವಯವು ಬ್ರಹ್ಮನಲ್ಲಿ ಸಿದ್ಧವಾಗುತ್ತದೆ. ಹೀಗೆ ಅನೇಕ ಲಿಂಗಗಳ ಸಮನ್ವಯವನ್ನು ಮಾಡುವುದರ ದೊಡ್ಡ ಲಾಭವನ್ನು ಉದ್ದೇಶಿಸಿ ''ವೈಶ್ವಾನರ'' ಎಂಬ ನಾಮದ ಸಮನ್ವಯವನ್ನು ಈ ಅಧಿಕರಣದಲ್ಲಿ ಮಾಡುತ್ತಿರುವುದರಿಂದ ಶಾಸ್ತ್ರಸಂಗತಿ, ಅಧ್ಯಾಯಸಂಗತಿ ಹಾಗೂ ಪಾದಸಂಗತಿಗಳು ಇರುತ್ತವೆಂದು ತಿಳಿಯಬೇಕು.

ತತ್ತ್ವಪ್ರಕಾಶಿಕಾ – ಶ್ರುತ್ಯಾದಿಸಙ್ಗತಿಂ ವಿಷಯವಾಕ್ಯೋದಾಹರಣಪೂರ್ವಕಂ ವಿಷಯಾದಿಕಂ ಚ ಸೂಚಯತಿ – ಅದೃಶ್ಯತ್ವಾದೀತಿ ।।

ಇನ್ನು ಶ್ರುತಿಸಂಗತಿ ಹಾಗೂ ಅಧಿಕರಣ ಸಂಗತಿಗಳನ್ನು ವಿಷಯವಾಕ್ಯವನ್ನು ಉದಾಹರಿಸುವ ಮೂಲಕ ''ಅದೃಶ್ಯತ್ವಾದಿ'' ಎಂಬ ಭಾಷ್ಯದ ವಾಕ್ಯ ತೋರಿಸುತ್ತಿದೆ. ಈ ವಾಕ್ಯದಿಂದ ಈ ಅಧಿಕರಣದ ವಿಷಯವೂ ಸಹ ತಿಳಿಯುತ್ತದೆ.

ತತ್ವಪ್ರಕಾಶಿಕಾ – ಗತಾಧಿಕರಣೇऽದೃಶ್ಯತ್ವಾದಿಗುಣಾ ವಿಷ್ಣೋರುಕ್ತಾಸ್ತೇಷು ಸರ್ವಗತತ್ವಂ ಚೋಕ್ತಂ 'ನಿತ್ಯಂ ವಿಭುಂ ಸರ್ವಗತಮ್' ಇತಿ ।

ಹಿಂದಿನ ಅಧಿಕರಣದಲ್ಲಿ ಅದೃಶ್ಯತ್ವಾದಿ ಗುಣಗಳಿಗೆ ಆಶ್ರಯನಾದವನು ವಿಷ್ಣುವೇ ಆಗಿದ್ದಾನೆಂದು ನಿರ್ಣಯಿಸಿದ್ದಾಯಿತು. ಆದರೆ ಯಾವ ವಾಕ್ಯದಲ್ಲಿ ಅದೃಶ್ಯತ್ವಾದಿಗುಣಗಳು ಹೇಳಲ್ಪಟ್ಟಿವೆಯೋ ಆದೇ ವಾಕ್ಯದಲ್ಲಿ ಸರ್ವಗತತ್ವವೂ ಸಹ ಹೇಳಲಾಗಿದೆ ''ನಿತ್ಯಂ ವಿಭುಂ ಸರ್ವಗತಮ್'' ಎಂಬುದಾಗಿ.

ತತ್ವಪ್ರಕಾಶಿಕಾ – ತದದೃಶ್ಯತ್ವಾದಿಗುಣೇಷೂಕ್ತಂ ಸರ್ವಗತತ್ವಂ ಚ ಛಾನ್ದೋಗ್ಯಶ್ರುತೌ 'ಅಭಿವಿಮಾನ'ಪದೇನ ವೈಶ್ವಾನರಸ್ಯೋಕ್ತಮ್ ।

ಈ ಅದೃಶ್ಯತ್ವಾದಿಗುಣಗಳ ಮಧ್ಯದಲ್ಲಿ ಸರ್ವಗತತ್ವವೆಂಬುದೂ ಸಹ ಒಂದುಗುಣವಾಗಿದೆ. ಇದನ್ನು ಪಂಚಮಾಧ್ಯಾಯದ ಛಾಂದೋಗ್ಯಶ್ರುತಿಯಲ್ಲಿ 'ಅಭಿವಿಮಾನ' ಎಂಬ ಪದದಿಂದ ವೈಶ್ವಾನರನೇ ಸರ್ವಗತನಾಗಿದ್ದಾನೆಂದು ಹೇಳಲಾಗಿದೆ.

ತತ್ವಪ್ರಕಾಶಿಕಾ – ಅಭಿತೋ ವಿಗತಂ ಮಾನಂ ಮರ್ಯಾದಾ ಯಸ್ಯೇತಿ । 'ಮಾನಂ ಜ್ಞಾನಂ ಲಯಶ್ಚೈವ ಮರ್ಯಾದಾ ಚೈವ (ಚಾಪಿ) ಕಥ್ಯತೇ' ಇತ್ಯಭಿಧಾನಾತ್ ।

ಅಭಿವಿಮಾನಶಬ್ದಕ್ಕೆ ಯಾವ ರೀತಿಯಿಂದಲೂ ಪರಿಮಾಣ ಇಲ್ಲದವನೆಂದು ಅರ್ಥ. ''ಮಾನಂ ಜ್ಞಾನಂ ಲಯಶ್ಚೈವ ಮರ್ಯಾದಾ ಚೈವ ಕಥ್ಯತೇ'' ಎಂಬ ಕೋಶದ ಆಧಾರದಿಂದ ಮಾನಶಬ್ದಕ್ಕೆ ಮರ್ಯಾದಾ = ಪರಿಮಿತಿ ಎಂಬರ್ಥವು ಸ್ಪಷ್ಟವಾಗುತ್ತದೆ. ಹೀಗೆ ಅಭಿವಿಮಾನ ಪದದಿಂದ ಸರ್ವಗತತ್ವವು ತಿಳಿಯುತ್ತದೆ. ಇದು ವೈಶ್ವಾನರನಲ್ಲಿ ಇದೆಯೆಂದು ಛಾಂದೋಗ್ಯವು ಹೇಳುತ್ತಿದೆ.

ತತ್ವಪ್ರಕಾಶಿಕಾ – ತಸ್ಯ ಚ ವೈಶ್ವನರಸ್ಯ ವಿಷ್ಣೋರಿತರತ್ವೇ ಸರ್ವಗತತ್ವಮಪ್ಯನ್ಯಸ್ಯ ಪ್ರಸಜ್ಯೇತ ಇತ್ಯವಶ್ಯನಿರ್ಣೇಯತ್ವಮ್ ।

ಹೀಗೆ ಛಾಂದೋಗ್ಯದಲ್ಲಿ ಹೇಳಲ್ಪಟ್ಟ ವೈಶ್ವಾನರನು ವಿಷ್ಣುವಿಗಿಂತ ಬೇರೆಯವನಾದರೆ ಸರ್ವಗತನೂ ಅವನೇ ಆಗಬೇಕು; ಆದ್ದರಿಂದ ವೈಶ್ವಾನರಶಬ್ದದಿಂದ ವಾಚ್ಯನಾದವನು ಯಾರೆಂದು ಅವಶ್ಯವಾಗಿ ನಿರ್ಣಯಿಸಬೇಕು.

तत्वप्रकाशिका – स वैश्वानरो विषयः । किं विष्णुरन्यो वा? इति संशयः । सर्वगतत्वमन्यत्र प्रसिद्धिश्च सन्देहबीजम् ।

ಆದ್ದರಿಂದ ಈ ಅಧಿಕರಣಕ್ಕೆ ವೈಶ್ವಾನರನೇ ವಿಷಯನಾಗಿದ್ದಾನೆ. ಇವನು ವಿಷ್ಣುವೇ ಆಗಿದ್ದಾನೋ ಅಥವಾ ಬೇರೆಯವನೇ ಆಗಿದ್ದಾನೋ ಎಂದು ಸಂಶಯ. ಸರ್ವಗತತ್ವವು ಬೇರೆಯವನಲ್ಲಿ ಹಾಗೂ ವಿಷ್ಣುವಿನಲ್ಲಿ ಪ್ರಸಿದ್ಧವಾಗಿರುವಿಕೆಯೇ ಸಂದೇಹಕ್ಕೆ ಕಾರಣವಾಗಿದೆ.

तत्वप्रकाशिका – नायं वैश्वानरो विष्णुः किन्त्वग्निदेवता तेजोभूतं वा स्यादिति पूर्वः पक्षः । वैश्वानरश्रुतेः ।

ಇಂತಹ ವೈಶ್ವಾನರನು ವಿಷ್ಣುವಾಗಲು ಸಾಧ್ಯವಿಲ್ಲ. ಹೊರತಾಗಿ ಅಗ್ನಿದೇವತೆ ಅಥವಾ ಭೌತಿಕವಾದ ತೇಜಸ್ಸು ವೈಶ್ವಾನರ ಎನಿಸಿದೆಯೆಂದು ಪೂರ್ವಪಕ್ಷ. ಈ ವಿಷಯದಲ್ಲಿ ವೈಶ್ವಾನರ ಶ್ರುತಿಯೇ ಆಧಾರವಾಗಿದೆ.

तत्वप्रकाशिका – नच वाच्यं सर्वगतत्वलिङ्गाद्वैश्वानरो विष्णुरिति । लिङ्गस्य श्रुतितो दुर्बलत्वात् ।

ಸರ್ವಗತತ್ವವೆಂಬ ಲಿಂಗದ ಆಧಾರದಿಂದ ವಿಷ್ಣುವೇ ವೈಶ್ವಾನರನಾಗಿದ್ದಾನೆಂದು ಏಕೆನಿರ್ಣಯಿಸಬಾರದು ಎಂದು ಪ್ರಶ್ನಿಸಬಾರದು. ಲಿಂಗವು ಶ್ರುತಿಗಿಂತ ದುರ್ಬಲವಾಗಿದೆ. ಅಗ್ನಿದೇವತೆಯಲ್ಲಿ ಶ್ರುತಿಯು ಪ್ರಮಾಣವಾಗಿರುವುದರಿಂದ ಅವನನ್ನೇ ವೈಶ್ವಾನರನೆಂದು ಹೇಳಬೇಕು.

तत्वप्रकाशिका – नच लिङ्गस्य निरवकाशत्वेन प्राबल्याच्छ्रुतिबाधकत्वमिति मन्तव्यम् । श्रुतेरपि प्रसिद्धितो निरवकाशत्वात् ।

ಲಿಂಗವು ನಿರವಕಾಶವಾಗಿರುವುದರಿಂದ ಬಲಿಷ್ಠವಾಗಿದೆ. ಇದು ಶ್ರುತಿಯನ್ನು ಬಾಧಿಸಬಹುದಲ್ಲವೇ ಎಂದು ಪ್ರಶ್ನಿಸಬಾರದು. ಶ್ರುತಿಗಿಂತಲೂ ಲಿಂಗವು ಲೋಕಪ್ರಸಿದ್ಧಿಯಿಂದ ನಿರವಕಾಶವಾಗಿದೆ. ಆದ್ದರಿಂದ ಅತ್ಯಂತಬಲಿಷ್ಠವಾದ ಶ್ರುತಿಯನ್ನು ಲಿಂಗವು ಬಾಧಿಸಲು ಸಾಧ್ಯವಿಲ್ಲ.

तत्वप्रकाशिका – श्रुतेः विष्णुविषयत्वेऽग्न्यादिविषयतया लोकप्रसिद्धिबाधाद् वैदिकविद्याभेदव्यवहारविरोधाच्च ।

ವೈಶ್ವಾನರಶ್ರುತಿಯು ವಿಷ್ಣುವನ್ನು ಪ್ರತಿಪಾದಿಸುವುದಾದರೆ ಲೋಕದಲ್ಲಿ ಅಗ್ನಿವಿಷಯಕವಾಗಿಮಾಡುವ ಪ್ರಯೋಗಕ್ಕೆ ಬಾಧವು ಬರುತ್ತದೆ. ಅಷ್ಟೇ ಅಲ್ಲದೆ ಇದು ಅಗ್ನಿವಿದ್ಯೆ ಇದು ಆತ್ಮವಿದ್ಯೆ ಎಂಬ ಭೇದವ್ಯವಹಾರದ ವಿರೋಧವೂ ಸಹ ಬರುತ್ತದೆ.

तत्वप्रकाशिका – नहि वैश्वानरश्रुतेरग्न्यादिविषयत्वाभावे व्यवहारस्य गत्यन्तरमस्ति । अतः प्रसिद्धिलिङ्गयोरुभयोरपि निरवकाशत्वेन वैश्वानरश्रुतेरग्नाविष्णोः साधारण्यमेव स्यान्न तु लिङ्गेन विष्णुपरतानिश्चयः । अतो न वैश्वानरो विष्णुरिति न सर्वगतत्वं तस्येति भावः ।

ವೈಶ್ವಾನರ ಶ್ರುತಿಯು ಅಗ್ನಿಮೊದಲಾದವರನ್ನು ವಿಷಯೀಕರಿಸದೇ ಇದ್ದಲ್ಲಿ ಲೋಕವ್ಯವಹಾರಕ್ಕೆ ಬೇರೆ ಗತಿಯಿಲ್ಲ. ಆದ್ದರಿಂದ ಲೋಕಪ್ರಸಿದ್ಧಿ ಹಾಗೂ ಲಿಂಗ ಎರಡೂ ಸಹ ನಿರವಕಾಶವಾಗಿವೆ. ಆದ್ದರಿಂದ ವೈಶ್ವಾನರಶ್ರುತಿಯು ಅಗ್ನಿ ಹಾಗೂ ವಿಷ್ಣು ಇಬ್ಬರಲ್ಲಿಯೂ ಸಾಧಾರಣವಾಗಿದೆಯೆಂದು ಹೇಳಿದಂತಾಯಿತು. ಹೀಗಿರುವಾಗ ಕೇವಲ ಸರ್ವಗತತ್ವವೆಂಬ ಲಿಂಗದ ಬಲದಿಂದ ವಿಷ್ಣುವೇ ವೈಶ್ವಾನರನಾಗಿದ್ದಾನೆಂದು ನಿಶ್ಚಯಿಸಲು ಸಾಧ್ಯವಿಲ್ಲ. ಆದ್ದರಿಂದ ವೈಶ್ವಾನರನು ವಿಷ್ಣುವಲ್ಲ. ಆದ್ದರಿಂದ ಸರ್ವಗತನೂ ಸಹ ವಿಷ್ಣುವಾಗುವುದಿಲ್ಲವೆಂದು ಅಭಿಪ್ರಾಯ.

तत्वप्रकाशिका – सिद्धान्तयत्सूत्रमवतार्य व्याचष्टे – अत इति ।। अयं वैश्वानरो विष्णुरेव ।

ಈ ಪೂರ್ವಪಕ್ಷವನ್ನು ನಿರಾಕರಿಸುತ್ತಾ ಸಿದ್ಧಾಂತವನ್ನು ಸ್ಥಾಪನೆ ಮಾಡುವುದಕ್ಕಾಗಿ ಸೂತ್ರಕ್ಕೆ ಅವತಾರಿಕೆಯನ್ನು ಕೊಡುವ ಮೂಲಕ ವ್ಯಾಖ್ಯಾನಿಸುತ್ತಿದ್ದಾರೆ "ಅತಃ" ಇತ್ಯಾದಿಯಾಗಿ. ಈ ಶ್ರುತಿಯಲ್ಲಿ ಕೇಳಿಸುತ್ತಿರುವ ವೈಶ್ವಾನರನು ವಿಷ್ಣುವೇ ಆಗಿದ್ದಾನೆ.

तत्वप्रकाशिका – 'आत्मानं वैश्वानरम्' इत्यात्मशब्दात् । न चोक्तरीत्या साधारणवैश्वानर- श्रुतिसङ्गावादनिर्णय इति वाच्यम् ।

'ಆತ್ಮಾನಂ ವೈಶ್ವಾನರಮ್' ಎಂಬುದಾಗಿ ಆತ್ಮಶಬ್ದವು ಪ್ರಯುಕ್ತವಾಗಿದೆ. ವಿಷ್ಣುವಿನಲ್ಲಷ್ಟೇ ಪ್ರಸಿದ್ಧವಾದ ಈ ಆತ್ಮಶಬ್ದದ ಬಲದಿಂದ ವೈಶ್ವಾನರನು ವಿಷ್ಣುವೇ ಆಗಿದ್ದಾನೆಂದು ನಿರ್ಣಯಿಸಬೇಕು. ಹಿಂದೆ ಹೇಳಿದ ಪ್ರಕಾರ ವೈಶ್ವಾನರ ಶಬ್ದವು ಅಗ್ನಿ ಹಾಗೂ ವಿಷ್ಣುವಿನಲ್ಲಿ ಸಾಧಾರಣವಾಗಿರುವುದರಿಂದ ನಿರ್ಣಯಿಸಲು ಸಾಧ್ಯವಿಲ್ಲವಲ್ಲವೇ ಎಂದು ಪ್ರಶ್ನಿಸಬಾರದು.

तत्वप्रकाशिका – साधारणस्यापि वैश्वानरशब्दस्य 'आत्मशब्दः परे विष्णौ नान्यत्र क्वचि-दिष्यते' इत्यादौ विष्णावेव प्रसिद्धत्वेनान्यत्रानवकाशात्मशब्दसामानाधिकरण्येन विष्णुपरत्वस्य सम्भवात् ।

ಹೌದು; ಇಬ್ಬರಲ್ಲಿಯೂ ಸಾಧಾರಣವಾಗಿರಬಹುದು. ಆದರೂ "ಆತ್ಮಶಬ್ದಃ ಪರೇ ವಿಷ್ಣೌ ನಾನ್ಯತ್ರ ಕ್ವಚಿದಿಷ್ಯತೇ" ಇತ್ಯಾದಿಯಾಗಿ ವಿಷ್ಣುವಿನಲ್ಲಷ್ಟೇ ಪ್ರಸಿದ್ಧವಾಗಿದ್ದು, ಬೇರೆಯವರಲ್ಲಿ ಕಥಂಚಿದಪಿ

ಪ್ರಯೋಗಿಸಲು ಸಾಧ್ಯವಿಲ್ಲದ ಆತ್ಮಶಬ್ದದ ಸಾಮಾನಾಧಿಕರಣ್ಯದ ಬೆಂಬಲದಿಂದ ವೈಶ್ವಾನರಶಬ್ದದಿಂದ ಪ್ರತಿಪಾದ್ಯನಾದವನು ವಿಷ್ಣುವೇ ಆಗಿದ್ದಾನೆಂದು ನಿರ್ಣಯಿಸಬಹುದು.

तत्वप्रकाशिका – प्रसिद्ध्यादेरन्यथाऽपि सिद्ध्या सावकाशत्वस्य वक्ष्यमाणत्वादिति भावः ।।२४।।

ಇನ್ನು ಲೋಕಪ್ರಸಿದ್ಧಿ ಮೊದಲಾದವುಗಳನ್ನು ಬೇರೆ ರೀತಿಯಲ್ಲಿಯೂ ಉಪಪಾದಿಸಬಹುದು. ಆ ಪ್ರಸಿದ್ಧಿಯು ಸಾವಕಾಶವಾಗಿದೆಯೆಂಬ ವಿಚಾರವನ್ನು ಮುಂದೆ ಸ್ಪಷ್ಟಪಡಿಸುತ್ತೇವೆ.

भावदीपः – ॐ वैश्वानरः साधारणशब्दविशेषात् ॐ ।। नाम्न इति ।। 'श्रुतिर्लिङ्गाधिका परा' इत्यनुभाष्योक्तेः । आपाततोऽन्यत्र रूढत्वात् ।

।। ಓಂ ವೈಶ್ವಾನರಃ ಸಾಧಾರಣಶಬ್ದವಿಶೇಷಾತ್ ಓಂ ।।

ವೈಶ್ವಾನರಾಧಿಕರಣದಲ್ಲಿ ವೈಶ್ವಾನರವೆಂಬ ನಾಮಾತ್ಮಕಶಬ್ದದ ಸಮನ್ವಯವನ್ನು ವಿಷ್ಣುವಿನಲ್ಲಿ ತೋರಿಸುತ್ತಿದ್ದಾರೆ. ''ಶ್ರುತಿರ್ಲಿಂಗಾಧಿಕಾ ಪರಾ:'' ಎಂದು ಒಂದು ವೈಶ್ವಾನರ ಶಬ್ದದ ಸಮನ್ವಯದಿಂದ ಅನೇಕ ಲಿಂಗಗಳ ಸಮನ್ವಯವು ಸಿದ್ಧವಾಗುತ್ತದೆಂಬ ಅನುವ್ಯಾಖ್ಯಾನದ ಮಾತನ್ನು ಇಲ್ಲಿ ಸ್ಮರಿಸಿಕೊಳ್ಳಬೇಕು. ''ವೈಶ್ವಾನರ'' ಎಂಬ ಶಬ್ದವು ಲೋಕದಲ್ಲಿ ಆಪಾತತಃ ಅನ್ಯತ್ರಪ್ರಸಿದ್ಧವಾಗಿದೆ.

भावदीपः – 'विश्वजीवान्तरत्वाद्यैः' इत्यणुभाष्योक्तिस्तु सिद्धान्तदिशा ब्रह्मणि यौगिकत्वाभिप्रायेणेति भावः ।

ವಸ್ತುತಃ ಅಣುಭಾಷ್ಯದಲ್ಲಿ ''ವಿಶ್ವಜೀವಾಂತರತ್ವಾದ್ಯೈಃ'' ಎಂದು ವೈಶ್ವಾನರ ಶಬ್ದವನ್ನು ಲಿಂಗಾತ್ಮಕವೆಂದು ಹೇಳಿದ್ದಾರೆ. ಆದರ ವಿರೋಧವು ಬರುತ್ತದಲ್ಲವೇ? ಎಂದು ಸಹಜವಾಗಿ ಪ್ರಶ್ನೆ ಬರುತ್ತದೆ. ಆದರೆ ಅಣುಭಾಷ್ಯದಲ್ಲಿ ಸಿದ್ಧಾಂತದ ಪ್ರಕಾರ ವೈಶ್ವಾನರ ಶಬ್ದವು ಯೌಗಿಕವಾಗಿದೆ ಎಂದು ತಿಳಿಸಿದ್ದಾರೆ. ಇಲ್ಲದಿದ್ದರೆ ''ವೈಶ್ವಾನರತ್ವಾದ್ಯೈಃ'' ಎಂದೇ ಹೇಳುತ್ತಿದ್ದರು. ಹೀಗೆ ಹೇಳದ ಕಾರಣ ಲಿಂಗಾತ್ಮಕಶಬ್ದದ ಸಮನ್ವಯವು ಇಲ್ಲಿ ವಿವಕ್ಷಿತವಾಗಿಲ್ಲವೆಂದು ತಿಳಿಯುತ್ತದೆ.

भावदीपः – कथं तर्हात्र पादे निवेश? इत्यतः, फलतः पादसङ्गतिरन्तर्नय इवेत्याह – पाचकत्वेति ।।

ಹಾಗಾದರೆ ವೈಶ್ವಾನರ ಶಬ್ದವು ನಾಮಾತ್ಮಕವಾದಲ್ಲಿ ಇದನ್ನು ಪ್ರಥಮಪಾದದಲ್ಲಿ ಸೇರಿಸಬೇಕಿತ್ತಲ್ಲವೆ? ಲಿಂಗ ಪಾದದಲ್ಲಿ ಇದರ ಸಮನ್ವಯವು ಆಪ್ರಸ್ತುತವಲ್ಲವೆ? ಎಂಬ ಪ್ರಶ್ನೆ ಬರುತ್ತದೆ. ಆದರೆ ನೇರವಾಗಿ ಲಿಂಗದ ಸಮನ್ವಯವನ್ನು ಈ ಪಾದದಲ್ಲಿ ಮಾಡದಿದ್ದರೂ ಫಲತಃ ಲಿಂಗದ ಸಮನ್ವಯವು

ಸಿದ್ಧವಾಗುತ್ತಿರುವುದರಿಂದ ಪಾದಸಂಗತಿಯು ಯುಕ್ತವಾಗುತ್ತದೆಂದು ತಿಳಿಯಬೇಕು. ಯಾವ ರೀತಿಯಾಗಿ ನಾಮಪಾದದಲ್ಲಿ ಆಂತರಾಧಿಕರಣವು ಲಿಂಗಸಮನ್ವಯವನ್ನು ಮಾಡುತ್ತಿದ್ದರೂ ಫಲತಃ ನಾಮಸಮನ್ವಯದಲ್ಲಿ ಪರ್ಯವಸನವಾಗುವುದರಿಂದ ಪಾದಸಂಗತಿಯನ್ನು ಹೊಂದಿದೆಯೋ ಅದರಂತೆ ಇಲ್ಲಿಯೂ ತಿಳಿಯಬೇಕು. ಈ ಅಭಿಪ್ರಾಯದಿಂದ ಟೀಕೆಯಲ್ಲಿ "ಪಾಚಕತ್ವಾದಿ" ಎಂಬ ಮಾತು ಹೊರಟಿದೆ.

ಭಾವದೀಪಃ – 'तद् यद् भक्तं प्रथममागच्छेत् तद्धोमीयम्' इति 'वैश्वानरे तद् हुतं भवति' इत्यादिना पाचकत्वहोमाधारत्वगार्हपत्याद्यङ्गकत्वादिश्रवणादिति भावः ।

"ತದ್ಯದ್ ಭಕ್ತಂ ಪ್ರಥಮಮಾಗಚ್ಛೇತ್ ತದ್ಧೋಮೀಯಂ" ಎಂಬುದಾಗಿ ಮತ್ತು "ವೈಶ್ವಾನರೇ ತದ್ ಹುತಂ ಭವತಿ" ಎಂದು ಪಾಚಕತ್ವ ಹೋಮಾಧಾರತ್ವ ಗಾರ್ಹಪತ್ಯಾದ್ಯಂಗತ್ವ ಮೊದಲಾದ ಅನೇಕ ಲಿಂಗಗಳು ವೈಶ್ವಾನರ ಪ್ರಕರಣದಲ್ಲಿ ಹೇಳಲ್ಪಟ್ಟವೆ. ಆದ್ದರಿಂದ ವೈಶ್ವಾನರವೆಂಬ ಒಂದು ನಾಮಾತ್ಮಕ ಶಬ್ದವನ್ನು ಸಮನ್ವಯ ಮಾಡುವುದರಿಂದ ಪಾಚಕತ್ವವೇ ಮೊದಲಾದ ಅನೇಕ ಲಿಂಗಗಳ ಸಮನ್ವಯವು ಸುಲಭವಾಗಿ ಸಿದ್ಧವಾಗುತ್ತದೆಂದು ತಿಳಿಯಬೇಕು.

ಭಾವದೀಪಃ – यद्यपि पाचकत्वं कर्मेति वक्ष्यति । तथापि लिङ्गत्वमप्यस्तीति वा तदन्यलिङ्गापेक्षया वा एवमुक्तिः । अधिकं चन्द्रिकायाम् ।

ವಸ್ತುತಃ ಪಾಚಕತ್ವವು "ಕರ್ಮವಾಗಿದೆ" ಎಂದು ಮುಂದೆ ಹೇಳುತ್ತಾರೆ. ಆದರೂ ಲಿಂಗವೂ ಸಹ ಆಗಿದೆ ಎಂಬ ಅಂಶವನ್ನು ಗಮನಿಸಬೇಕು. ಅಥವಾ ಪಾಚಕತ್ವವು ಕರ್ಮವಷ್ಟೇ ಆಗಿದೆ ಎಂದು ವಿವಕ್ಷಿಸುವುದಾದರೆ ಪಾಚಕತ್ವವನ್ನು ಬಿಟ್ಟು ಉಳಿದ ಲಿಂಗಗಳ ಸಮನ್ವಯಕ್ಕಾಗಿ ಈ ಆಧಿಕರಣವು ಹೊರಟಿದೆ ಎಂದೂ ಸಹ ತಿಳಿಯಬಹುದು. ಹೆಚ್ಚಿನ ವಿಷಯವನ್ನು ಚಂದ್ರಿಕೆಯಲ್ಲಿ ತಿಳಿಯಬಹುದು.

ಭಾವದೀಪಃ – इत्यन्तं भाष्यं सङ्गतिपरत्वेन तावद् व्याकर्तुं परिष्करोति – गतेति ।। भाष्यं व्याचष्टे – अदृश्यत्वादिगुणेषूक्तमिति ।।

"ಇತಿ" ಎಂಬಲ್ಲಿಯತನಕ ಇರುವ ಭಾಷ್ಯವನ್ನು ಸಂಗತಿಪರವಾಗಿ ವ್ಯಾಖ್ಯಾನಿಸುವುದಕ್ಕಾಗಿ "ಗತಾಧಿಕರಣೇ" ಎಂಬ ಟೀಕೆಯು ಹೊರಟಿದೆ. "ಅದೃಶ್ಯತ್ವಾದಿಗುಣೇಷೂಕ್ತಂ" ಎಂಬ ಟೀಕೆಯು ಭಾಷ್ಯವನ್ನು ವ್ಯಾಖ್ಯಾನಿಸುತ್ತಿದೆ.

ಭಾವದೀಪಃ – 'यस्त्वेतम्' इत्यादेरर्थः – छन्दोगेति ।। पञ्चमे वैश्वानरविद्यायामित्यर्थः । प्रथमबृहद्भाष्योक्तमाह – मानमिति ।।

"ಯಸ್ತ್ವೇತಮೇವಂ" ಎಂದು ಭಾಷ್ಯದಲ್ಲಿ ಉದಾಹರಿಸಿದ ಛಾಂದೋಗ್ಯಶ್ರುತಿಯನ್ನು ಟೀಕೆಯಲ್ಲಿ "ಛಂದೋಗಶ್ರುತೌ" ಎಂಬುದಾಗಿ ವ್ಯಾಖ್ಯಾನಿಸುತ್ತಿದ್ದಾರೆ. ಈ ಛಾಂದೋಗ್ಯದ ಮಾತು ಐದನೆಯ

ಅಧ್ಯಾಯದ ವೈಶ್ವಾನರವಿದ್ಯೆಯಲ್ಲಿ ಪ್ರಸಕ್ತವಾಗಿದೆ. ಬೃಹದಾರಣ್ಯಕಭಾಷ್ಯದ ಪ್ರಥಮಾಧ್ಯಾಯದಲ್ಲಿ ಹೇಳಿದ ಮಾತನ್ನು ''ಮಾನಂ ಜ್ಞಾನಂ'' ಎಂಬುದರಿಂದ ತೋರಿಸುತ್ತಿದ್ದಾರೆ.

ಭಾವದೀಪಃ – ಭಾವಮಾಹ – ತಸ್ಯೇತಿ ।। ವಕ್ಷ್ಯಮಾಣನ್ಯಾಯೇನೇತರತ್ವ ಇತ್ಯರ್ಥಃ । ಇತಿ ಸಙ್ಗತಿಸಮ್ಭವಾದಿತಿ ಹೇತ್ವರ್ಥೋऽತ್ರೇತಿ ಶಬ್ದಃ

ಒಟ್ಟು ಅಭಿಪ್ರಾಯವನ್ನು ''ತಸ್ಯ ಚ'' ಎಂಬ ವಾಕ್ಯದಿಂದ ತೋರಿಸಿದ್ದಾರೆ. ಮುಂದೆ ಹೇಳುವ ನ್ಯಾಯದಿಂದ ವೈಶ್ವಾನರನು ವಿಷ್ಣುವಾಗದಿದ್ದಲ್ಲಿ ಎಂದು ''ತಸ್ಯಚ'' ಎಂಬ ವಾಕ್ಯದ ಅಭಿಪ್ರಾಯ. ''ಪ್ರಸಜ್ಯತೇತ್ಯವಶ್ಯನಿರ್ಣಯತ್ವಂ'' ಎಂಬಲ್ಲಿ ''ಇತಿ'' ಶಬ್ದವು ಹೀಗೆ ಸಂಗತಿಯು ಕೂಡುವುದರಿಂದ ಎಂಬುದಾಗಿ ಹೇತ್ವರ್ಥದಲ್ಲಿದೆ ಎಂದು ತಿಳಿಯಬೇಕು.

ಭಾವದೀಪಃ – ಕಿಂ ವಿಷ್ಣುರಿತಿ ।। ಕಿಂ ವಿಷ್ಣುರೇವ ವಾऽನ್ಯೋऽಪಿ ವಾ ಇತ್ಯರ್ಥಃ । ವಿಷ್ಣುರೇವ ವೇತಿ ಸಿದ್ಧಾನ್ತಕೋಟೇಃ ಶೇಷೋ ವಾ

ಟೀಕೆಯಲ್ಲಿ ''ಕಿಂ ವಿಷ್ಣುಃ'' ಎಂದು ಹೇಳಿದ್ದಾರೆ. ಅಂದರೆ ವಿಷ್ಣುವೊಬ್ಬನೇ ವೈಶ್ವಾನರ ಶಬ್ದದಿಂದ ಪ್ರತಿಪಾದ್ಯನೊ? ಅಥವಾ ವಿಷ್ಣುವಿನ ಜೊತೆಗೆ ಬೇರೆಯವರೂ ಸಹ ಪ್ರತಿಪಾದ್ಯರಾಗಿದ್ದಾರೊ? ಎಂದರ್ಥ. ವಿಷ್ಣುವೊಬ್ಬನೇ ವೈಶ್ವಾನರಶಬ್ದದಿಂದ ಪ್ರತಿಪಾದ್ಯನಾಗಿದ್ದಾನೆ ಎಂಬುದು ಸಿದ್ಧಾಂತ ಕೋಟಿಯ ಅಂಶವಾಗಿದೆ.

ಭಾವದೀಪಃ – ತದೇವ ಭಾಷ್ಯಂ ಪೂರ್ವಪಕ್ಷತಯುಕ್ತಿತತ್ಫಲೋಕ್ತಿಪರತ್ವೇನ ವ್ಯಾಚಷ್ಟೇ – ನಾಯಮಿತಿ ।। ವಿಷ್ಣುರಿತ್ಯಸ್ಯ ವಿಷ್ಣುರೇವೇತ್ಯರ್ಥಃ । ದೇವತಾಭೂತಂ ಚೇತಿ ಸೂತ್ರಮನುರುಧ್ಯವಾऽಹ – ಕಿನ್ತ್ವಿತಿ ।।

ಸಂಗತಿ ಪರವಾಗಿ ವ್ಯಾಖ್ಯಾನಿಸಿದ ಭಾಷ್ಯವನ್ನೇ ಪೂರ್ವಪಕ್ಷ, ಪೂರ್ವಪಕ್ಷಯುಕ್ತಿ, ಪೂರ್ವಪಕ್ಷಫಲ ಇವುಗಳ ಪರವಾಗಿಯೂ ವ್ಯಾಖ್ಯಾನಿಸುತ್ತಿದ್ದಾರೆ ''ನಾಯಂ'' ಇತ್ಯಾದಿ ವಾಕ್ಯದಿಂದ. ''ವಿಷ್ಣುರಿತ್ಯಸ್ಯ'' ಎಂಬ ಶಬ್ದಕ್ಕೆ ವಿಷ್ಣುವೊಬ್ಬನೇ ಎಂದು ಅರ್ಥೈಸಬೇಕು. ''ನ ದೇವತಾ ಭೂತಂ ಚ'' ಎಂಬ ಸೂತ್ರದಲ್ಲಿರುವ ದೇವತಾ ಹಾಗೂ ಭೂತಪದಗಳನ್ನು ಅನುಸರಿಸಿ ಅದರಿಂದ ನಿರಾಸವಾಗುವ ಪೂರ್ವಪಕ್ಷವನ್ನು ''ಕಿಂತು'' ಎಂಬ ಮಾತಿನಿಂದ ತೋರಿಸುತ್ತಿದ್ದಾರೆ.

ಭಾವದೀಪಃ – ವಿಷ್ಣುರಿತ್ಯಪ್ಯನುಕರ್ಷಃ । 'ವೈಶ್ವಾನರಸ್ಯ' ಇತಿ ಭಾಷ್ಯಸೂಚಿತಂ ತಾವದಾಹ – ವೈಶ್ವಾನರೇತಿ ।।

''ಕಿಂತು'' ಎಂಬ ವಾಕ್ಯದಲ್ಲಿ ''ವಿಷ್ಣುಃ'' ಎಂಬುದನ್ನೂ ಸಹ ಅನುಕರ್ಷ ಮಾಡಬೇಕು. ''ವೈಶ್ವಾನರಸ್ಯ'' ಎಂಬ ಭಾಷ್ಯದಲ್ಲಿರುವ ಪದದಿಂದ ಸೂಚಿತವಾದ ಪ್ರಮೇಯವನ್ನು ''ವೈಶ್ವಾನರಶ್ರುತೇಃ'' ಎಂಬುದರಿಂದ ಹೇಳಿದ್ದಾರೆ.

ಭಾವದೀಪಃ – ಅಗ್ರಾವಿಷ್ಣ್ವೋಃ ಸಾಧಾರಣಸ್ಯೇತಿ ಭಾಷ್ಯೋಕ್ತಂ ಸಾಧಾರಣ್ಯಮಗ್ರಾವಿಷ್ಣ್ವೋಃ ವಿವರಿಷ್ಯನ್ ಶ್ರುತಿಲಿಙ್ಗಯೋಸ್ತುಲ್ಯಬಲತ್ವಂ ವಕ್ತುಮಾಹ – ನಚೇತಿ ।। ಪ್ರಾಬಲ್ಯಾದಿತಿ ।। ಅನ್ತರಾದಿನಯನ್ಯಾಯೇನೇತಿ ಭಾವಃ ।

''ಅಗ್ನಾವಿಷ್ಣೂಃ ಸಾಧಾರಣಸ್ಯೇತಿ'' ಎಂಬುದಾಗಿ ಭಾಷ್ಯದಲ್ಲಿ ಹೇಳಿರುವ ಸಾಧಾರಣ್ಯವನ್ನು ಅಗ್ನಿ ಮತ್ತು ವಿಷ್ಣುವಿನಲ್ಲಿ ವಿವರಿಸುತ್ತಿದ್ದಾರೆ. ಮತ್ತು ಅಗ್ನಿಶ್ರುತಿ ಹಾಗೂ ಲಿಂಗಗಳು, ವಿಷ್ಣುಶ್ರುತಿ ಹಾಗೂ ಲಿಂಗಗಳು ಎರಡೂ ಕಡೆ ಸಮಾನವಾದ ಬಲವನ್ನು ಹೊಂದಿವೆ ಎಂದು ತಿಳಿಸುವುದಕ್ಕಾಗಿ ''ನ ಚ ವಾಚ್ಯಂ'' ಎಂಬ ಟೀಕಾಪಂಕ್ತಿಯು ಹೊರಟಿದೆ. ''ಪ್ರಾಬಲ್ಯಾತ್'' ಎಂದರೆ ಅಂತರಾಧಿಕರಣದ ನ್ಯಾಯದಿಂದ ಪ್ರಬಲವಾಗಿದೆ ಎಂದು ತಿಳಿಯಬೇಕು.

ಭಾವದೀಪಃ – ಶ್ರುತೇರಪೀತ್ಯುಕ್ತಮೇವ ಸಾಕ್ಷಾದಪೀತಿ ಸೂತ್ರವ್ಯಾವರ್ತ್ಯಂ ವ್ಯನಕ್ತಿ – ಶ್ರುತೇರಿತಿ ।। ಲೋಕಪ್ರಸಿದ್ಧೀತಿ ।। ಲೋಕವ್ಯವಹಾರಾಭಾವಾಪಾತಾದಿತ್ಯರ್ಥಃ । ನೈಷ್ಫಲ್ಯಂ ಸ್ಯಾದಿತಿ ಭಾವಃ ।

''ಶ್ರುತೇರಪಿ'' ಎಂಬ ವಾಕ್ಯದಿಂದ ಹೇಳಲ್ಪಟ್ಟ ವಿಷಯವನ್ನೇ ''ಸಾಕ್ಷಾದಪ್ಯವಿರೋಧಂ'' ಎಂಬ ಸೂತ್ರದಿಂದ ವ್ಯಾವರ್ತ್ಯವಾದ ಪೂರ್ವಪಕ್ಷವನ್ನು ''ಶ್ರುತೇಃ ವಿಷ್ಣುವಿಷಯತ್ವೇ'' ಎಂಬ ವಾಕ್ಯದಿಂದ ಸ್ಪಷ್ಟವಾಗಿ ತೋರಿಸುತ್ತಿದ್ದಾರೆ. ''ಲೋಕಪ್ರಸಿದ್ಧಿಬಾಧಾತ್'' ಎಂದರೆ ಲೋಕವ್ಯವಹಾರವೇ ಇಲ್ಲದಂತಾಗಬೇಕಾಗುತ್ತದೆ ಎಂದು ಅಭಿಪ್ರಾಯ. ಅಂದರೆ ವೈಶ್ವಾನರಶಬ್ದವು ವಿಷ್ಣುವನ್ನು ಪ್ರತಿಪಾದಿಸಿದರೆ ಲೋಕದಲ್ಲಿ ಅಗ್ನಿಯಲ್ಲಿ ಮಾಡುವ ಪ್ರಯೋಗವು ನಿಷ್ಫಲವಾಗಬೇಕಾಗುತ್ತದೆ ಎಂದು ಅಭಿಪ್ರಾಯ.

ಭಾವದೀಪಃ – ಏತೇನಾನ್ತರಾದಿನಯೇಷ್ವಪಿ ನಿರವಕಾಶಲಿಙ್ಗೇನೋಕ್ತಃ ಶ್ರುತಿಬಾಧೋ ನ ಸಮ್ಮತ ಇತಿ ಪೂರ್ವೋಕ್ತಸರ್ವಾಕ್ಷೇಪೋ ದರ್ಶಿತಃ । 'ಅಭಿವ್ಯಕ್ತೇಃ' ಇತ್ಯಾದಿಸೂತ್ರಾಣಾಂ ವ್ಯಾವರ್ತ್ಯಚೋದ್ಯಮಾಹ – ವೈದಿಕೇತಿ ।।

ಹೀಗೆ ಹೇಳಿದ್ದರಿಂದ ಆಂತರಾದ್ಯಧಿಕರಣಗಳಲ್ಲಿ ನಿರವಕಾಶಲಿಂಗದಿಂದ ಹೇಳಲ್ಪಟ್ಟ ಶ್ರುತಿಬಾಧವು ಸಮ್ಮತವಲ್ಲ ಎಂದು ಪೂರ್ವಪಕ್ಷಿಗಳು ಅಭಿಪ್ರಾಯ ಪಡುತ್ತಾರೆಂದು ತಿಳಿಯುತ್ತದೆ. ಆದ್ದರಿಂದ ಈ ಅಧಿಕರಣದಲ್ಲಿ ಮಾಡುತ್ತಿರುವ ಆಕ್ಷೇಪದಿಂದ ಹಿಂದಿನ ಅಧಿಕರಣಗಳ ಪ್ರಮೇಯವನ್ನೂ ಸಹ ಆಕ್ಷೇಪಿಸುತ್ತಿದ್ದಾರೆಂದು ತಿಳಿಸಿದಂತಾಯಿತು. ''ಅಭಿವ್ಯಕ್ತೇರಿತ್ಯಾಶ್ಮರಥ್ಯಾಃ'' ಎಂಬ ಸೂತ್ರದಿಂದ ವ್ಯಾವರ್ತ್ಯವಾದ ಪೂರ್ವಪಕ್ಷವನ್ನು ''ವೈದಿಕವಿದ್ಯಾಭೇದ'' ಎಂಬ ಮಾತಿನಿಂದ ತೋರಿಸುತ್ತಿದ್ದಾರೆ.

ಭಾವದೀಪಃ – ಅಗ್ನ್ಯಾದಿಸರ್ವಶಬ್ದಾನಾಂ ವಿಷ್ಣೌ ಮುಖ್ಯತ್ವೇ ಸರ್ವಸ್ಯ ವಿಷ್ಣುವಿದ್ಯಾತ್ವೇನೇಯಮಗ್ನಿವಿದ್ಯಾ ಇಯಮಾತ್ಮವಿದ್ಯೇತಿ ಭೇದವ್ಯವಹಾರೋ ನ ಸ್ಯಾತ್ । ಅಸ್ತಿ ಚ ವ್ಯವಹಾರಃ । ತೇನ ತೇಷಾಮಗ್ನ್ಯಾದಿವಾಚಿತ್ವಂ ಸಿದ್ಧಮಿತಿ ತದ್ವಿರೋಧಾನ್ನ ವೈಶ್ವಾನರಾದಿಶಬ್ದಾನಾಂ ವಿಷ್ಣುವಿಷಯತ್ವಮಿತ್ಯರ್ಥಃ ।

ಅಗ್ನಿ ಮೊದಲಾದ ಸಕಲ ಶಬ್ದಗಳು ವಿಷ್ಣುವನ್ನೇ ಮುಖ್ಯವಾಗಿ ಪ್ರತಿಪಾದಿಸುವುದಾದರೆ ಎಲ್ಲವೂ ಸಹ ವಿಷ್ಣುವಿದ್ಕೆ ಎಂದು ಹೇಳಿದಂತಾಯಿತು. ಆವಾಗ ''ಇದು ಅಗ್ನಿವಿದ್ಕೆ'', ''ಇದು ಆತ್ಮವಿದ್ಕೆ'' ಎಂಬ ಭೇದವ್ಯವಹಾರವೇ ತಪ್ಪಾದೀತು. ಆದರೆ ವಿದ್ಯಾಭೇದದ ವ್ಯವಹಾರವು ಲೋಕದಲ್ಲಿ ಪ್ರಸಿದ್ಧವಾಗಿದೆ. ಇದರಿಂದ ಅಗ್ನಿ ಮೊದಲಾದ ಶಬ್ದಗಳಿಗೆ ಅಗ್ನಿಪ್ರತಿಪಾದಕತ್ವವನ್ನು ಒಪ್ಪಲೇಬೇಕಾಗುತ್ತದೆ. ಇದರ ವಿರೋಧವು ಬರುವುದರಿಂದ ವೈಶ್ವಾನರಾದಿಶಬ್ದಗಳಿಗೆ ವಿಷ್ಣುವಿಷಯತ್ವವನ್ನು ಹೇಳಲು ಬರುವುದಿಲ್ಲ ಎಂದು ನಿರ್ಣಯವಾಯಿತು.

ಭಾವದೀಪಃ – ವ್ಯವಹಾರಸ್ಯ ನಿರವಕಾಶತ್ವಂ ವ್ಯನಕ್ತಿ – ನಹೀತಿ ।। ಏವಂ ಚ ಸಿದ್ಧಂ ಸಾಧಾರಣ್ಯಮಿತ್ಯಾಹ – ಅತ ಇತಿ ।। ವ್ಯವಹಾರಸ್ಯಾಗ್ನ್ಯಾದಿವಿಷಯತ್ವಂ ವಿನಾ ಗತ್ಯನ್ತರಾಭಾವಾದಿತ್ಯರ್ಥಃ ।

ಭಾವದೀಪಃ –ಲೋಕವ್ಯವಹಾರವು ನಿರವಕಾಶವಾಗಿದೆಯೆಂದು ''ನಹಿ'' ಎಂಬ ವಾಕ್ಯದಿಂದ ವ್ಯಾಖ್ಯಾನಿಸುತ್ತಿದ್ದಾರೆ. ಹೀಗೆ ಸಿದ್ಧವಾದ ಪ್ರಮೇಯವು ಎರಡೂ ಕಡೆ ಸಮಾನವಾಗಿದೆ ಎಂಬ ವಿಷಯವನ್ನು ''ಅತಃ'' ಎಂಬ ವಾಕ್ಯವು ಪ್ರತಿಪಾದಿಸುತ್ತಿದೆ. ವ್ಯವಹಾರಕ್ಕೆ ಅಗ್ನಿ ಮೊದಲಾದ ದೇವತೆಗಳೇ ವಿಷಯವೆಂದು ಒಪ್ಪದಿದ್ದರೆ ಬೇರೆ ಗತಿ ಇಲ್ಲವೆಂದು ತಿಳಿಯಬೇಕು.

ಭಾವದೀಪಃ – ಅಗ್ನಾವಿಷ್ಣೋರಿತಿ 'ದೇವತಾದ್ವನ್ದ್ವೇ ಚ' ಇತ್ಯನಙಾದೇಶಃ । ಅನ್ತರ್ನಯ ಇವೋಭಯಬಾಧೈಕ್ಯಂ ತು ನಾऽಶಙ್ಕ್ಯಮ್ ।

ಭಾಷ್ಯದಲ್ಲಿರುವ ''ಅಗ್ನಾವಿಷ್ಣೋಃ'' ಎಂಬ ಪ್ರಯೋಗವು ತಪ್ಪಲ್ಲ. ಏಕೆಂದರೆ ''ದೇವತಾದ್ವಂದ್ವೇ ಚ'' ಎಂಬ ಸೂತ್ರದಿಂದ ಅನ ಆದೇಶವು ಬರುವುದರಿಂದ ''ಅಗ್ನಾವಿಷ್ಣೋಃ'' ಎಂಬ ರೂಪವು ಸಿದ್ಧವಾಗಿದೆ.

ಭಾವದೀಪಃ – ಭೂತಸಾಧಾರಣಶ್ರುತ್ಯಾ ಪ್ರಾಪ್ತಂ ಜಡೇನಾಭೇದಾಯೋಗಾತ್ ।

ಅಂತರಾಧಿಕರಣದ ನ್ಯಾಯದಂತೆ ಎರಡಕ್ಕೂ ಬಾಧ ಬರುವುದರಿಂದ ಐಕ್ಯವನ್ನು ಒಪ್ಪುವುದು ಸುಲಭವಲ್ಲವೇ? ಎಂದು ಶಂಕಿಸಬಾರದು. ಏಕೆಂದರೆ ಅಗ್ನಿದೇವತೆಯಲ್ಲಪ್ಪೇಲ್ಲದೆ ಜಡವಾದ ಅಗ್ನಿಯಲ್ಲೂ ಪ್ರಯೋಗವಿರುವುದರಿಂದ ಜಡಭೂತವಾದ ಅಗ್ನಿಯ ಜೊತೆಗೆ ಐಕ್ಯವನ್ನು ಹೇಳುವುದು ಅಯುಕ್ತವಾಗುತ್ತದೆ.

ಭಾವದೀಪಃ – ಕಥಂ ತರ್ಹಿ ವೈಶ್ವಾನರಸ್ಯೋಕ್ತಮಿತಿ ಭಾಷ್ಯಮಿತ್ಯತೋ ಭಾವಮಾಹ – ಅತ ಇತಿ ।। ಶ್ರುತೇಃ ಸಾಧಾರಣ್ಯಾದಿತ್ಯರ್ಥಃ ।

ಭಾವದೀಪಃ – ಹಾಗಾದರೆ ''ವೈಶ್ವಾನರಸ್ಯೋಕ್ತಂ ಇತಿ''ಎಂಬುದಾಗಿ ಭಾಷ್ಯದಲ್ಲಿ ಹೇಗೆ ಹೇಳಿದರು? ಎಂಬ ಪ್ರಶ್ನೆಗೆ ''ಅತಃ'' ಎಂಬ ವಾಕ್ಯದಿಂದ ಉತ್ತರಿಸುತ್ತಿದ್ದಾರೆ. ಶ್ರುತಿಯು ಎರಡೂ ಕಡೆ ಸಾಧಾರಣವಾಗಿರುವುದರಿಂದ ಎಂದು ಇದರ ಅರ್ಥ.

ಭಾವದೀಪಃ – ಸರ್ವಗತತ್ವಮಿತ್ಯನ್ತವಾಕ್ಯಸ್ಯ ತಾತ್ಪರ್ಯಮ್ – ನ ಸರ್ವೇತಿ ।। ವಿಷ್ಣುರಿತೀತ್ಯನನ್ತರಂ ತಸ್ಯೇತೀತ್ಯನನ್ತರಂ ಚ ನಿಶ್ಚಯ ಇತ್ಯನುಷಙ್ಗಃ ।

''ಸರ್ವಗತತ್ವಂ'' ಎಂಬಲ್ಲಿಯತನಕದ ವಾಕ್ಯದ ತಾತ್ಪರ್ಯವನ್ನು ''ನ ಸರ್ವ'' ಎಂಬುದರಿಂದ ಸ್ಪಷ್ಟಪಡಿಸುತ್ತಿದ್ದಾರೆ. ವಿಷ್ಣುಃ ಎಂಬುದರ ಆನಂತರ ಮತ್ತು ''ತಸ್ಯ'' ಎಂಬುದರ ಆನಂತರ ''ನಿಶ್ಚಯಃ'' ಎಂಬ ಪದವನ್ನು ಆನುಷಂಗ ಮಾಡಿಕೊಳ್ಳಬೇಕು.

ಭಾವದೀಪಃ – ವ್ಯುತ್ಕ್ರಮೇಣ ಭಾಷ್ಯಂ ವ್ಯಾಚಷ್ಟೇ – ಅಯಮಿತಿ ।। ಶ್ರುತಿಸಾಧಾರಣ್ಯೇ ವಿಶೇಷಶ್ರುತ್ಯಾದೇಃ ನಿಶ್ಚಯ ಇತಿ ನ್ಯಾಯವಿವರಣಾದಿನಾ ಹೇತ್ವಂಶಂ ವ್ಯಾಚಷ್ಟೇ – ಆತ್ಮಾನಮಿತಿ ।।

ಭಾಷ್ಯವನ್ನು ವ್ಯುತ್ಕ್ರಮವಾಗಿ ವ್ಯಾಖ್ಯಾನಿಸುತ್ತಿದ್ದಾರೆ ''ಅಯಂ ವೈಶ್ವಾನರಃ'' ಇತ್ಯಾದಿಯಾಗಿ. ಶ್ರುತಿಯು ಉಭಯ ಸಾಧಾರಣವಾದಾಗ ವಿಶೇಷ ಶ್ರುತಿಯು ನಿಶ್ಚಾಯಕವಾಗುತ್ತದೆ ಎಂಬ ನ್ಯಾಯವಿವರಣದ ಪ್ರಕಾರ ಹೇತ್ವಂಶವನ್ನು ವ್ಯಾಖ್ಯಾನಿಸುತ್ತಿದ್ದಾರೆ ''ಆತ್ಮಾನಂ'' ಇತ್ಯಾದಿಯಾಗಿ.

ಭಾವದೀಪಃ – ವಿಶೇಷಣಪದಕೃತ್ಯಂ ವ್ಯಾವರ್ತ್ಯ ಪೂರ್ವಮಾಹ – ನಚೇತಿ ।। ವಕ್ಷ್ಯಮಾಣತ್ವಾತ್ ಸಾಕ್ಷಾದಪೀತ್ಯಾದಿ ಸೂತ್ರೇಷ್ವಿತಿ ಭಾವಃ ।।

ಸೂತ್ರದಲ್ಲಿರುವ 'ವಿಶೇಷಣ' ಪದದ ಸಾರ್ಥಕ್ಯವನ್ನು ಹೇಳುವ ಮೂಲಕ ವ್ಯಾವರ್ತವಾದ ಪೂರ್ವಪಕ್ಷವನ್ನು ''ನ ಚ'' ಎಂಬ ವಾಕ್ಯದಿಂದ ತೋರಿಸುತ್ತಿದ್ದಾರೆ. ''ವಕ್ಷ್ಯಮಾಣತ್ವಾತ್'' ಎಂದರೆ ''ಸಾಕ್ಷಾದಪ್ಯವಿರೋಧಂ ಜೈಮಿನಿಃ'' ಎಂಬ ಸೂತ್ರದಲ್ಲಿ ಹೇಳುತ್ತಾರೆಂದು ತಿಳಿಯಬೇಕು.

ವಾಕ್ಯಾರ್ಥಮಞ್ಜರೀ – ಅನ್ಯತ್ರ ಪ್ರಸಿದ್ಧೇತಿ ।। ನಚ ಸೂತ್ರಭಾಷ್ಯಯೋರಸ್ಯಾಗ್ರವಿಷ್ಣ್ವೋಃ ಸಾಧಾರಣ್ಯೋಕ್ತ್ಯೋಭಯತ್ರ ಪ್ರಸಿದ್ಧತ್ವಮಿತಿ ವಾಚ್ಯಮ್ । ವೈಶ್ವಾನರಶಬ್ದಾದೀ....ನ್ಯತ್ರಪ್ರಸಿದ್ಧಿಸರ್ವಗ ತತ್ವಾಖ್ಯವಿಷ್ಣು-ಲಿಙ್ಗಯೋರುಭಯೋರಪಿ ನಿರವಕಾಶತ್ವೇನ ತುಲ್ಯಬಲತ್ವಾಭಿಪ್ರಾಯೇಣೈವ ತತ್ರ ಸಾಧಾರಣ್ಯೋಕ್ತ್ಯೋಭಯತ್ರ ಪ್ರಸಿದ್ಧ್ಯಭಿಪ್ರಾಯೇಣ ತದನಭಿಧಾನಾದಿತಿ ಭಾವಃ ।। **ವೈಶ್ವಾನರನಾಮ್ನ ಇತಿ ।।** ನಚ 'ವಿಶ್ವಜೀವಾನ್ತರತ್ವಾದ್ಯೈರ್ಲಿಙ್ಗೈಃ' ಇತ್ಯಾಣುಭಾಷ್ಯೇऽಸ್ಯ ಲಿಙ್ಗತ್ವೋಕ್ತ್ಯಾ ಕಥಂ ನಾಮತ್ವಮಿತಿ ವಾಚ್ಯಮ್ । ತಸ್ಯ ಸಿದ್ಧಾನ್ತೇ ವೈಶ್ವಾನರಶಬ್ದಸ್ಯ ಯೌಗಿಕತ್ವಪ್ರದರ್ಶನಾಯಾವಯವಾಯ 'ಕಥನ ಏವ ತಾತ್ಪರ್ಯೇಣಾಲಿಙ್ಗತ್ವಕಥನಂ ತಾತ್ಪರ್ಯಾಭಾವಾತ್ । ಅನ್ಯಥಾ ವೈಶ್ವಾನರತ್ವಾದ್ಯೈರಿತಿ ಬ್ರೂಯಾದಿತಿ ಭಾವಃ । ಪಾದಸಙ್ಗತ್ಯರ್ಥಮಾಹ – **ಪಾಚಕತ್ವಾಯನೇಕಲಿಙ್ಗಸಮನ್ವಯಸಿದ್ಧ್ಯರ್ಥ ಇತಿ ।।** ಯದ್ಯಪಿ ಪಾಚಕತ್ವಂ ಕರ್ಮೇತಿ ವಕ್ಷ್ಯತಿ, ತಥಾಪಿ ಲಿಙ್ಗತ್ವಮಪ್ಯಸ್ತೀತೀಯಮುಕ್ತಿಃ ।। **ಅಭಿವಿಮಾನಪದೇನೇತಿ ।।** ನಚ ಪ್ರಾದೇಶತ್ವಮಾತ್ರೋಕ್ತಿವಿರೋಧಃ, ವ್ಯೋಮವಚ್ಚೇತಿ ವಕ್ಷ್ಯಮಾಣತ್ವಾತ್ । ತೇಜೋಭೂತಂ ಭೂತಾಗ್ನಿಃ । ಪ್ರಸಿದ್ಧಿತಃ ಲೌಕಿಕವೈದಿಕಪ್ರಸಿದ್ಧಿತಃ । ತದೇವ

ಕ್ರಮೇಣೋಪಪಾದಯತಿ – **ಶ್ರುತೇರಿತ್ಯಾದಿನಾ** ।। ವೈದಿಕೇತಿ ।। ವೇದಪ್ರಸಿದ್ಧೋ ಯೋऽಯಂ ವಿದ್ಯಾಭೇದವ್ಯವಹಾರಃ, ಇಯಂ ವೈಶ್ವಾನರವಿದ್ಯಾ, ನೇಯಮಿತ್ಯಾದಿರೂಪಸ್ತಸ್ಮಾದ್ವಿರೋಧಾದಿತ್ಯರ್ಥಃ । 'ದೇವತಾ ದ್ವನ್ದ್ವೇ ಚ' ಇತ್ಯನಙಾದೇಶೇऽಗ್ನಾವೈಶ್ಣವಂ ಚ ಕ್ರಮಮಿತ್ಯಾದಿವದಗ್ನಾವಿಷ್ಣೋರಿತ್ಯುಪಪನ್ನಮ್ ।। **ॐ ವೈಶ್ವಾನರಃ ಸಾಧಾರಣಶಬ್ದವಿಶೇಷಾತ್ ॐ** ।। ವೈಶ್ವಾನರಮುಪಾಸ್ತೇ ಇತ್ಯಾದ್ಯುಕ್ತವೈಶ್ವಾನರೋ ವಿಷ್ಣುರೇವ । ಅಗ್ನಿವಿಷ್ಣುಸಾಧಾರಣವೈಶ್ವಾನರಶಬ್ದಸ್ಯಾತ್ಮಶಬ್ದೇನ ವಿಶೇಷಣಾದಿತ್ಯರ್ಥಃ । ವೈಶ್ವಾನರಶಬ್ದಸ್ಯ ವಿಷ್ಣು..ಸಮ್ಭವಾದಿತ್ಯನ್ವಯಃ । ಕುತ ಇತ್ಯತ ಉಕ್ತಮ್ – **ಆತ್ಮಶಬ್ದಸಾಮಾನಾಧಿಕರಣ್ಯೇನೇತಿ** ।। ಆತ್ಮಾನಂ ವೈಶ್ವಾನರಮಿತಿ ಸಾಮಾನಾಧಿಕರಣ್ಯೇನೇತ್ಯರ್ಥಃ । ತಸ್ಯಾಪ್ಯನ್ಯಪರತ್ವಂ ಕಿಂ ಸ್ಯಾದಿತ್ಯತ ಉಕ್ತಮ್ – ಅನ್ಯತ್ರಾನವಕಾಶೇತಿ ।। ತತ್ಕುತ ಇತ್ಯತ ಉಕ್ತಮ್ – ಆತ್ಮಶಬ್ದ ಇತಿ ।। ೨೪ ।।

ಬ್ರಹ್ಮಮೀಮಾಂಸಾಶಾಸ್ತ್ರ
ಭಗವದ್ಗೀತೆಯ ಆಧಾರದಿಂದ ವೈಶ್ವಾನರನನ್ನು ತಿಳಿಯಬೇಕು

ಸೂ -ॐ।। ಸ್ಮರ್ಯಮಾಣಮನುಮಾನಂ ಸ್ಯಾದಿತಿ ।। ॐ ।।೨೫।।

ಸೂತ್ರಾರ್ಥ -- 'ಅಹಂ ವೈಶ್ವಾನರೋ ಭೂತ್ವಾ' ಎಂಬುದಾಗಿ ಭಗವದ್ಗೀತೆಯಲ್ಲಿ ವಿಷ್ಣುವನ್ನೇ ವೈಶ್ವಾನರನೆಂದು ಹೇಳಿರುವುದರಿಂದ ಈ ಸ್ಮೃತಿಯು ಧ್ಯಾಂಧೋಗ್ಯದಲ್ಲಿ ಹೇಳಲ್ಪಟ್ಟ ವೈಶ್ವಾನರನೂ ಸಹ ಬ್ರಹ್ಮನೇ ಆಗಿದ್ದಾನೆಂಬುದಕ್ಕೆ ಜ್ಞಾಪಕವಾಗಿದೆ.

ಶ್ರೀಜಗನ್ನಾಥಯತಿಗಳಿಂದ ರಚಿಸಲ್ಪಟ್ಟ

ಸೂತ್ರದೀಪಿಕಾ

ಸೂತ್ರದೀಪಿಕಾ – ಇತಿ ಸ್ಮರ್ಯಮಾಣಮ್ 'ಅಹಂ ವೈಶ್ವಾನರೋ ಭೂತ್ವಾ' ಇತಿ ಸ್ಮೃತ್ಯುಕ್ತಂ ವಿಷ್ಣೋರ್ವೈಶ್ವಾನರತ್ವಮ್, ಅನುಮಾನಂ ವೈಶ್ವಾನರವಿದ್ಯಾಯಾಃ ಗೀತೋಕ್ತಭಗವತ್ಪರತ್ವಸ್ಯಾನುಮಾಪಕಂ ಸ್ಯಾದ್ ಭವೇದಿತ್ಯರ್ಥಃ ।

ಪರಿಪೂರ್ಣಚಂದ್ರಿಕಾ

ಅರ್ಥ - ಇತಿ ಸ್ಮರ್ಯಮಾಣಂ = 'ಅಹಂ ವೈಶ್ವಾನರೋ ಭೂತ್ವಾ' ಎಂಬುದಾಗಿ ಭಗವದ್ಗೀತೆಯಲ್ಲಿ ವಿಷ್ಣುವಿಗೆ ಹೇಳಲ್ಪಟ್ಟ ವೈಶ್ವಾನರತ್ವವು, ಅನುಮಾನಂ = ಛಾಂದೋಗ್ಯದಲ್ಲಿ ಹೇಳಲ್ಪಟ್ಟ ವೈಶ್ವಾನರನೂ ಸಹ ಬ್ರಹ್ಮನೇ ಆಗಿದ್ದಾನೆಂಬುದಕ್ಕೆ ಜ್ಞಾಪಕವು, ಸ್ಯಾತ್ = ಆಗುತ್ತದೆ.

ಶ್ರೀಮದಾನನ್ದತೀರ್ಥಭಗವತ್ಪಾದಾಚಾರ್ಯವಿರಚಿತ-
ಬ್ರಹ್ಮಸೂತ್ರಭಾಷ್ಯಮ್

ಭಾಷ್ಯಮ್ – 'अहं वैश्वानरो भूत्वा प्राणिनां देहमाश्रितः ।'(ಭ.ಗೀ.೧೫-೧೪) इति स्मर्यमाणमत्रापि स एवोच्यत इत्यस्यानुमापकम् । समाख्यानात् । इतिशब्दः समाख्याप्रदर्शकः ॥ २५ ॥

''ನಾನು ವೈಶ್ವಾನರನಾಗಿ ಎಲ್ಲ ಪ್ರಾಣಿಗಳ ದೇಹದಲ್ಲಿ ನೆಲೆಸಿದ್ದೇನೆ' ಹೀಗೆ ಭಗವದ್ಗೀತೆಯಲ್ಲಿ ಶ್ರೀಕೃಷ್ಣನು ಹೇಳಿದ್ದಾನೆ. ಇದರಿಂದ ಪ್ರಕೃತದಲ್ಲಿಯೂ ವಿಷ್ಣುವೇ ವೈಶ್ವಾನರನೆಂದು ಊಹಿಸಬೇಕು.ಗೀತೆಯು ಛಾಂದೋಗ್ಯದ ಈ ಮಾತಿಗೆ ಸಮಾಖ್ಯಾಪ್ರಮಾಣವಾಗಿದೆ ಎಂಬುದನ್ನು ಸೂಚಿಸುವುದಕ್ಕಾಗಿ ಸೂತ್ರದಲ್ಲಿ ''ಇತಿ'' ಎಂಬ ಶಬ್ದವನ್ನು ಹೇಳಿದ್ದಾರೆ.

ಪ್ರತಿಪದಾರ್ಥ-- ವೈಶ್ವಾನರ ಎಂಬ ಶಬ್ದವು ಅಗ್ನಿ ಹಾಗೂ ವಿಷ್ಣು ಇಬ್ಬರಲ್ಲಿಯೂ ಸಾಧಾರಣವಾಗಿದೆಯಲ್ಲವೇ ಎಂಬ ಆಶಂಕೆಗೆ ಮತ್ತೊಂದು ಹೇತುವನ್ನು ಹೇಳುವ ಮೂಲಕ ವಿಷ್ಣುವೇ ವೈಶ್ವಾನರನೆಂದು ಸಾಧಿಸುವುದಕ್ಕಾಗಿ ಸೂತ್ರವನ್ನು ಪಠಿಸುತ್ತಿದ್ದಾರೆ.

ಅಹಂ = ನಾನು, ವೈಶ್ವಾನರಃ = ವೈಶ್ವಾನರನೆಂಬ, ಭೂತ್ವಾ = ರೂಪವನ್ನು ತಾಳಿ, ಪ್ರಾಣಿನಾಂ = ಸಕಲ ಪ್ರಾಣಿಗಳ, ದೇಹಂ = ದೇಹವನ್ನು, ಆಶ್ರಿತಃ = ಪ್ರವೇಶಿಸಿದ್ದೇನೆ. ಇತಿ = ಹೀಗೆ, ಸ್ಮರ್ಯಮಾಣಂ = ಗೀತೆಯೆಂಬ ಸ್ಮೃತಿಯಲ್ಲಿ ಶ್ರೀಕೃಷ್ಣನು ಹೇಳಿದ್ದಾನೆ. ಅತ್ರಾಪಿ = ವೈಶ್ವಾನರ ಸೂತ್ರದಲ್ಲಿಯೂ, ಸ ಏವ = ಆ ಶ್ರೀಕೃಷ್ಣನೇ, ಉಚ್ಯತೇಜ = ವೈಶ್ವಾನರನೆಂದು ಪ್ರತಿಪಾದ್ಯನಾಗುತ್ತಾನೆ. ಇತ್ಯಸ್ಯ = ಈ ವಿಷಯದಲ್ಲಿ, ಅನುಮಾಪಕಂ = ಜ್ಞಾಪಕವಾದ ಯುಕ್ತಿಯಾಗಿದೆ. ಸಮಾಖ್ಯಾನಾತ್ = ವೈಶ್ವಾನರವಿದ್ಯೆ ಮತ್ತು ಭಗವದ್ಗೀತೆ ಎರಡರಲ್ಲಿಯೂ ಒಂದೇ ವೈಶ್ವಾನರಶಬ್ದವು ಕೇಳಿಸುತ್ತಿರುವುದರಿಂದ. ಇತಿ ಶಬ್ದಃ = ಸೂತ್ರದಲ್ಲಿರುವ ಇತಿಶಬ್ದವು, ಸಮಾಖ್ಯಾಪ್ರದರ್ಶಕಃ = ಸಮಾಖ್ಯಾ ಎಂಬ ಪ್ರಮಾಣವನ್ನು ತೋರಿಸುತ್ತಿದೆ.(೧)

(೧) ಭಾಷ್ಯದೀಪಿಕಾ – नन्वात्मशब्दस्याग्रादिष्वमुख्यत्वाभ्युपगमेन सामानाधिकरण्याविरोधात् तेषामेव वैश्वानरत्वं किं न स्यादित्याशङ्कां परिहर्तुं समाख्यारूपहेत्वन्तरेण वैश्वानरस्य विष्णुत्वं निश्चाययत्सूत्रं पठित्वा व्याचष्टे – स्मर्यमाणमिति ।। सूत्रभाष्ययोः 'स्मर्यमाणम्'

ಶ್ರೀಪದ್ಮನಾಭತೀರ್ಥವಿರಚಿತಸತ್ತರ್ಕದೀಪಾವಳ್ಯಾಮ್:

ॐ स्मर्यमाणमनुमानं स्यादिति ॐ ॥ १-२-२५ ॥

वैश्वानरशब्दप्रतिपाद्यो विष्णुरेवेत्येतद् भगवद्वाक्यसंवादेन दर्शयत्सूत्रं पठित्वा व्याचष्टे – स्मर्यमाणमित्यादिना ।। समाख्यानं व्याख्यानम् ।।

ವೈಶ್ವಾನರಶಬ್ದದಿಂದ ಪ್ರತಿಪಾದ್ಯನಾದವನು ವಿಷ್ಣುವೇ ಆಗಿದ್ದಾನೆ. ಈ ವಿಷಯದಲ್ಲಿ ಭಗವದ್ವಾಕ್ಯವು ಸಂವಾದವಾಗಿದೆಯೆಂದು ತೋರಿಸುತ್ತಾ ಸೂತ್ರವನ್ನು ಪಠಿಸಿ ವ್ಯಾಖ್ಯಾನಿಸುತ್ತಿದ್ದಾರೆ 'स्मर्यमाणमिति' ಇತ್ಯಾದಿಯಾಗಿ. समाख्यान ಶಬ್ದಕ್ಕೆ ವ್ಯಾಖ್ಯಾನ ಎಂದರ್ಥ.

तत्वप्रकाशिका –

ॐ स्मर्यमाणमनुमानं स्यादिति ॐ ॥ १-२-२५ ॥

नन्वात्मशब्दस्यामुख्यवृत्तिमभ्युपेत्याग्न्यादीनामेव वैश्वानरत्वं किं न स्यादित्याशङ्कां परिहर्तुं हेत्वन्तरेण वैश्वानरस्य विष्णुत्वं निश्चाययत्सूत्रमुपन्यस्य व्याचष्टे – स्मर्यमाणमिति ।।

ಆತ್ಮಶಬ್ದದ ಆಧಾರದಿಂದ ವಿಷ್ಣುವೇ ವೈಶ್ವಾನರನೆನ್ನಬೇಕೆಂದು ಹಿಂದಿನ ಸೂತ್ರದಲ್ಲಿ ಸಮರ್ಥಿಸಿದ್ದಾಯಿತು. ಆದರೆ ಆತ್ಮಶಬ್ದಕ್ಕೆ ಅಮುಖ್ಯವೃತ್ತಿಯನ್ನು ಸ್ವೀಕರಿಸಿ ಅಗ್ನಿದೇವತೆ, ಭೌತಿಕವಾದ ಅಗ್ನಿ ಮೊದಲಾದ ಅರ್ಥದಲ್ಲಿ ವೈಶ್ವಾನರಶಬ್ದವನ್ನು ಏಕೆ ಪ್ರಯೋಗಿಸಬಾರದು? ಎಂಬ ಶಂಕೆಯನ್ನು

'अहं वैश्वानरो भूत्वा' इति गीतास्मृत्युक्तं विष्णोर्वैश्वानरत्वम् 'अत्र' वैश्वानरविद्यायामपि 'सः' गीतोक्तो भगवानेव वैश्वानरपदेनोच्यते 'इत्यस्य' एवंरूपस्यार्थस्य 'अनुमानम्' अनुमापकं 'स्यात्' भवेदिति योजना । नन्वहमिति विष्णुना कृष्णेनोक्तेः स्मृत्युक्तवैश्वानरस्य विष्णुत्वेऽपि अत्रोक्तवैश्वानरस्य कुतो विष्णुत्वमित्यत आह – समाख्यानादिति ।। अस्याः स्मृतेरिति शेषः । तथा च गीतास्मृतेः वैश्वानरविद्यासमानोक्ति रूपत्वादस्यास्तत्समाख्यानान्निश्चयो भवतीत्यर्थः । समाख्यायुक्तिर्न सूत्रोक्तेत्यत आह – इतिशब्द इति ।। 'प्रदर्शकः' सूचकः । तथा च - इति स्मर्यमाणमित्यस्य इति समाख्याय मानमित्यर्थाभ्युपगमादितिशब्दः समानोक्तिरूपसमाख्यालिङ्गज्ञापक इति भावः । अत्र सूत्रे समाख्यारूपहेत्वन्तरोक्तावपि तस्याऽत्मशब्दाख्यपूर्वहेतोरनिश्चायकत्वशङ्कामुखेन तन्निरासाय प्रवृत्तत्वाच्चशब्दाभावः ।।

ಪರಿಹರಿಸುವುದಕ್ಕಾಗಿ ಮುಂದಿನ ಸೂತ್ರವು ಹೊರಟಿದೆ. ಈ ವಿಷಯದಲ್ಲಿಮತ್ತೊಂದು ಹೇತುವನ್ನು ಹೇಳುವ ಮೂಲಕ ವಿಷ್ಣುವೇ ವೈಶ್ವಾನರನಾಗಿದ್ದಾನೆಂದು ಈ ಸೂತ್ರದಿಂದ ಸಾಧಿಸುತ್ತಿದ್ದಾರೆ. ಅದಕ್ಕಾಗಿ ಸೂತ್ರವನ್ನು ಉಪನ್ಯಾಸ ಮಾಡಿ ''ಸ್ಮರ್ಯಮಾಣಮ್'' ಇತ್ಯಾದಿಯಾಗಿ ಭಾಷ್ಯಕಾರರು ವ್ಯಾಖ್ಯಾನಿಸುತ್ತಿದ್ದಾರೆ.

तत्वप्रकाशिका – 'अहं वैश्वानरो भूत्वा' इति स्मृत्युक्तं विष्णोः वैश्वानरत्वमत्र वैश्वानरविद्यायामपि स गीतोक्तो भगवानेव वैश्वानरपदेनोच्यत इत्यस्यार्थस्यानुमापकं भवति ।

'ಅಹಂ ವೈಶ್ವಾನರೋ ಭೂತ್ವಾ' ಎಂಬುದಾಗಿ ಭಗವದ್ಗೀತೆಯಲ್ಲಿ ವಿಷ್ಣುವೇ ವೈಶ್ವಾನರನಾಗಿದ್ದಾನೆ ಎಂದು ಹೇಳಲಾಗಿದೆ. ಇದರಿಂದ ಗೀತೋಕ್ತನಾದ ವಿಷ್ಣುವೇ ಪ್ರಕೃತ ವೈಶ್ವಾನರವಿದ್ಯೆಯಲ್ಲಿಯೂ ಪ್ರತಿಪಾದ್ಯನಾಗಿದ್ದಾನೆಂದು ಅನುಮಾನದಿಂದ ಸಾಧಿಸಿದಂತಾಗುತ್ತದೆ.

तत्वप्रकाशिका – स्मृतौ विष्णोर्वैश्वानरत्वोक्तेर्वैश्वानरविद्यायामप्यसावुच्यत इति भावः । स्मृत्युक्तवैश्वानरस्य विष्णुत्वेऽप्यत्रोक्तस्य कुतो विष्णुत्वम्? इत्यत आह – समाख्यानादिति ।। समाख्यानयुक्तिर्न सूत्रितेत्यत आह – इतीति ।। अनेन 'इति स्मर्यमाणम्' इत्यन्वयः सूचितो भवति ।।२५।।

ಭಗವದ್ಗೀತೆಯಲ್ಲಿ ವಿಷ್ಣುವನ್ನು ವೈಶ್ವಾನರನೆಂದು ಹೇಳಲಾಗಿದೆ. ಆದ್ದರಿಂದ ಅವನೇ ವೈಶ್ವಾನರವಿದ್ಯೆಯಲ್ಲಿಯೂ ಪ್ರತಿಪಾದ್ಯನಾಗಿದ್ದಾನೆಂದು ಸೂತ್ರದ ಅಭಿಪ್ರಾಯ. ಗೀತೆಯಲ್ಲಿ ಹೇಳಲ್ಪಟ್ಟ ವೈಶ್ವಾನರನು ವಿಷ್ಣುವೆಂದು ನಿಶ್ಚಯವಾದರೂ ವೈಶ್ವಾನರವಿದ್ಯೆಯಲ್ಲಿ ಹೇಳಲ್ಪಟ್ಟವನು ವಿಷ್ಣುವೇ ಆಗಿದ್ದಾನೆಂದು ಏಕೆ ನಿಶ್ಚಯವಾಗಬೇಕು? ಎಂಬ ಪ್ರಶ್ನೆಗೆ ''ಸಮಾಖ್ಯಾನಾತ್'' ಎಂಬುದರಿಂದ ಉತ್ತರಿಸಿದ್ದಾರೆ. ಆ ಸಮಾಖ್ಯಾಪ್ರಮಾಣವನ್ನು ಸೂತ್ರಕಾರರು ಹೇಳಿಲ್ಲವಲ್ಲವೇ? ಎಂಬ ಪ್ರಶ್ನೆಗೆ ''ಇತಿ'' ಎಂಬುದರಿಂದ ಉತ್ತರಿಸಿದ್ದಾರೆ. ಹೀಗೆ ಈ ಭಾಷ್ಯದಿಂದ 'ಇತಿ ಸ್ಮರ್ಯಮಾಣಂ' ಎಂಬುದಾಗಿ ಸೂತ್ರದಲ್ಲಿ ಅನ್ವಯವನ್ನು ವಿವಕ್ಷಿಸಿ ಸೂತ್ರಾರ್ಥವನ್ನು ಭಾಷ್ಯಕಾರರು ಸ್ಪಷ್ಟಪಡಿಸಿದ್ದಾರೆ.

ಭಾವದೀಪಃ – ॐ स्मर्यमाणमनुमानं स्यादिति ॐ ।। सूत्रे चशब्दाभावाच्छङ्का-निवर्तकत्वेन सूत्रमवतारयति – नन्विति ।।

।। ಓಂ ಸ್ಮರ್ಯಮಾಣಮನುಮಾನಂ ಸ್ಯಾದಿತಿ ಓಂ ।।

ಸೂತ್ರದಲ್ಲಿ ''ಚ'' ಶಬ್ದವು ಇರುವುದಿಲ್ಲ ಆದ್ದರಿಂದ ಶಂಕಾಪರಿಹಾರಕವಾಗಿ ಸೂತ್ರಕ್ಕೆ ಅವತಾರಿಕೆ ನೀಡುತ್ತಿದ್ದಾರೆ ''ನನು'' ಇತ್ಯಾದಿಯಾಗಿ.

ಭಾವದೀಪಃ – ಅಗ್ನ್ಯಾದೀನಾಮೇವೇತಿ ।। ಅಗ್ನಿದೇವತಾತೇಜೋಭೂತವಿಷ್ಣೂನಾಂ ತ್ರಯಾಣಾಮೇವೇತ್ಯರ್ಥಃ । ಯದ್ಧೋಪಲಕ್ಷಿತವಿಘಾನ್ತರಾಭಿಪ್ರಾಯೇಣ ಬಹುವಚನೋಕ್ತಿಃ ।

"ಅಗ್ನ್ಯಾದೀನಾಮೇವ" ಎಂಬ ಶಬ್ದಕ್ಕೆ ಅಗ್ನಿದೇವತೆ, ಭೌತಿಕವಾದ ತೇಜಸ್ಸು, ವಿಷ್ಣು ಮೂರರಲ್ಲಿಯೂ ಸಹ ಎಂದರ್ಥ. ಅಥವಾ ಉಪಲಕ್ಷಿತವಾದ ಮತ್ತೊಂದು ವಿದ್ಯೆಯನ್ನು ವಿವಕ್ಷಿಸಿ "ಅಗ್ನ್ಯಾದೀನಾಂ" ಎಂದು ಬಹುವಚನವನ್ನು ಪ್ರಯೋಗಿಸಿದ್ದಾರೆ.

ಭಾವದೀಪಃ – ವೈಶ್ವಾನರತ್ವಮಿತ್ಯುಪಲಕ್ಷಣಮ್ । ಇನ್ದ್ರಾಕಾಶಪ್ರಾಣಗಾಯತ್ರೀತ್ಯಾದಿಕಮಿತ್ಯರ್ಥಃ । ಸ್ಮೃತಿಸಮಾಖ್ಯಾಪ್ಯುಪಲಕ್ಷಣಂ 'ಯೋ ದೇವಾನಾಂ ನಾಮಧಾ ಏಕ ಏವ' 'ನಾಮಾನಿ ಸರ್ವಾಣಿ' ಇತ್ಯಾದೇರಿತಿ ಭಾವಃ ।

"ವೈಶ್ವಾನರತ್ವಂ" ಎಂಬುದು ಉಪಲಕ್ಷಣವಾಗಿದೆ. ಇಂದ್ರ, ಆಕಾಶ, ಪ್ರಾಣ, ಗಾಯತ್ರೀ ಇವುಗಳನ್ನು ಇಲ್ಲಿ ವಿವಕ್ಷಿಸಬೇಕು. ಸ್ಮೃತಿಸಮಾಖ್ಯಾವೂ ಸಹ ಇಲ್ಲಿ ಉಪಲಕ್ಷಣವಾಗಿದೆ. "ಯೋ ದೇವಾನಾಂ ನಾಮಾಧಾ ಏಕ ಏವ" ಎಂಬುದನ್ನು ಮತ್ತು "ನಾಮಾನಿ ಸರ್ವಾಣಿ" ಇತ್ಯಾದಿಗಳನ್ನು ಇಲ್ಲಿ ವಿವಕ್ಷಿಸಬೇಕೆಂದು ಅಭಿಪ್ರಾಯ.

ಭಾವದೀಪಃ – ಕ್ರಮೇಣ ಭಾಷ್ಯಪದಾನಾಮರ್ಥಮಾಹ – ಅಹಮಿತಿ ।। ಇತ್ಯನ್ವಯ ಇತಿ ಸೂತ್ರ ಇತಿ ಯೋಜ್ಯಮ್ । ಭಾಷ್ಯೇ 'ಅಹಂ ವೈಶ್ವಾನರೋ ಭೂತ್ವಾ ಪ್ರಾಣಿನಾಂ ದೇಹಮಾಶ್ರಿತಃ' ಇತಿ ಸ್ಮರ್ಯಮಾಣಮಿತ್ಯುಕ್ತೇರಿತಿ ಭಾವಃ ।

ಕ್ರಮವಾಗಿ ಭಾಷ್ಯದಲ್ಲಿರುವ ಪದಗಳ ಅರ್ಥವನ್ನು "ಅಹಂ" ಇತ್ಯಾದಿ ವಾಕ್ಯದಿಂದ ಸ್ಪಷ್ಟಪಡಿಸುತ್ತಿದ್ದಾರೆ. "ಇತಿ ಆನ್ವಯಃ ಎಂದು ಸೂತ್ರದಲ್ಲಿ ಅನ್ವಯ ಮಾಡಿಕೊಳ್ಳಬೇಕು. ಭಾಷ್ಯದಲ್ಲಿ "ಅಹಂ ವೈಶ್ವಾನರೋ ಭೂತ್ವಾ ಪ್ರಾಣಿನಾಂ ದೇಹಮಾಶ್ರಿತಃ" ಎಂದು "ಸ್ಮರ್ಯಮಾಣಂ" ಎಂದು ಹೇಳಿರುವುದರಿಂದ ಎಂದು ವಿವಕ್ಷಿಸಬೇಕು.

ಭಾವದೀಪಃ – ತಥಾಚ ವೈಶ್ವಾನರೋ ವಿಷ್ಣುರೇವ । 'ಅಹಂ ವೈಶ್ವಾನರಃ' ಇತಿ ಗೀತಾಯಾಂ ಸ್ಮರ್ಯಮಾಣತ್ವಾದಿತಿ ಭಾವಃ । ಏತೇನ ನ್ಯಾಯವಿವರಣೋಕ್ತಸ್ಯ ವಿಶೇಷಶ್ರುತ್ಯಾದೇರಿತ್ಯಾದಿಪದಸ್ಯ ಸಮಾಖ್ಯಾನಾಮಿತ್ಯರ್ಥಃ । ತತ್ಕೃತ್ಯಂ ಚ ದರ್ಶಿತಂ ಭವತಿ ।।

ಆದ್ದರಿಂದ ವಿಷ್ಣುವೆ ವೈಶ್ವಾನರನಾಗಿದ್ದಾನೆ. ಏಕೆಂದರೆ "ಅಹಂ ವೈಶ್ವಾನರಃ" ಎಂಬುದಾಗಿ ಗೀತೆಯ ಆಧಾರವಿರುವುದರಿಂದ. ಹೀಗೆ ಹೇಳಿದ್ದರಿಂದ ನ್ಯಾಯವಿವರಣದಲ್ಲಿ ಹೇಳಲ್ಪಟ್ಟ "ವಿಶೇಷಶ್ರುತ್ಯಾದೇಃ" ಎಂಬಲ್ಲಿರುವ "ಆದಿ" ಪದದಿಂದ ಸಮಾಖ್ಯಾ ಪ್ರಮಾಣವನ್ನು ವಿವಕ್ಷಿಸಬೇಕೆಂದು ತಿಳಿಯುತ್ತದೆ. ಇದರ ಕೃತ್ಯವನ್ನು ಈಗ ತೋರಿಸಿದಂತಾಯಿತು.

ವಾಕ್ಯಾರ್ಥಮಞ್ಜರಿ – ॐ ಸ್ಮರ್ಯಮಾಣಮನುಮಾನಂ ಸ್ಯಾದಿತಿ ॐ ।। ಇತ್ಯಹಂ ವೈಶ್ವಾನರೋ ಭೂತ್ವೇತ್ಯೇವಂ ಸ್ಮರ್ಯಮಾಣಂ ಗೀತಾಸ್ಮೃತ್ಯುಕ್ತಂ ವಿಷ್ಣೋರೇವ ವೈಶ್ವಾನರತ್ವಮ್ । ಏತತ್ಸ್ಮೃತ್ಯುಕ್ತವೈಶ್ವಾನರಸ್ಯ ವಿಷ್ಣುತ್ವಸ್ಯಾನುಮಾನಮನುಮಾಪಕಮ್ । ಸಮಾಖ್ಯಾರೂಪೇಣ ಸಾಧಕಂ ಸ್ಯಾದಿತ್ಯರ್ಥಃ ।। **ಸಮಾಖ್ಯಾನಾದಿತಿ ।।** ನಿರ್ಣೀತಸ್ಥಲೇ ಸಮಾನೋಕ್ತಿರೂಪಸಮಾಖ್ಯಾಯಾ **'ಇದಂ ವಾಕ್ಯಮೇತತ್ಪರಮ್, ಏತತ್ಸಮಾಖ್ಯಾವತ್ತ್ವಾದ್'** ಇತ್ಯನುಮಾನರೂಪೇಣ ವಾಕ್ಯತಾತ್ಪರ್ಯ-ನಿರ್ಣಾಯಕತ್ವಾದಿತಿ ಭಾವಃ ।। **ಇತಿ ಸ್ಮರ್ಯಮಾಣೇತಿ ।।** ಸ್ಮೃತೇರ್ದ್ವಿಸ್ಥತ್ವಾದಿತಿ ಭಾವಃ ।।೨೯।।

ಬ್ರಹ್ಮಮೀಮಾಂಸಾಶಾಸ್ತ್ರ

'ವೈಶ್ವಾನರ' ಎಂಬ ಉಪಾಸನೆ ಅತ್ಯವಶ್ಯ

ಸೂ - ॐ ।। ಶಬ್ದಾದಿಭ್ಯೋಽನ್ತಃಪ್ರತಿಷ್ಠಾನಾನ್ನೇತಿ ಚೇನ್ನ ತಥಾ ದೃಷ್ಟ್ಯುಪದೇಶಾದಸಮ್ಭವಾತ್ ಪುರುಷವಿಧಮಪಿ ಚೈನಮಧೀಯತೇ ।। ॐ ।। ೨೬ ।।

ಸೂತ್ರಾರ್ಥ – 'ಅಯಮಗ್ನಿಃ' ಎಂಬಲ್ಲಿ ವೈಶ್ವಾನರನಿಗೆ ಅಗ್ನಿಶಬ್ದವನ್ನು ಪ್ರಯೋಗಿಸಿರುವುದರಿಂದ ಮತ್ತು 'ವೈಶ್ವಾನರೇ ತದ್ಧುತಮ್' ಎಂಬಲ್ಲಿ ಹೋಮಾಧಾರತ್ವ ಗಾರ್ಹಪತ್ಯ ಮೊದಲಾದ ಪ್ರಭೇದಗಳನ್ನು ಹೇಳಿರುವುದರಿಂದ, 'ಯೋ ಯಮ್ ಆಂತಃಪುರುಷೇ' ಎಂಬುದಾಗಿ ದೇಹದಲ್ಲಿ ಕುಳಿತು ಆಹಾರವನ್ನು ಜೀರ್ಣಮಾಡುವಂತಹ ಕ್ರಿಯೆಯನ್ನು ಹೇಳಿರುವುದರಿಂದ ವೈಶ್ವಾನರನು ವಿಷ್ಣುವಲ್ಲ ಎಂದು ಆಕ್ಷೇಪ.

ಇದು ತಪ್ಪು. ಏಕೆಂದರೆ ಅಗ್ನಿ ಮೊದಲಾದ ಹೆಸರುಗಳಿಂದ ಮತ್ತು ಆಯಾ ಕ್ರಿಯೆಗಳಿಂದ ಭಗವಂತನನ್ನು ಉಪಾಸನೆ ಮಾಡುವುದಕ್ಕಾಗಿ ಶ್ರುತಿಗಳಲ್ಲಿ ಹಾಗೆ ಹೇಳಲಾಗಿದೆ. ಲಿಂಗಗಳು ಆದ್ದರಿಂದ ಅಗ್ನಿಶ್ರುತಿ ಹಾಗೂ ಅಗ್ನಿಯ ಲಿಂಗಗಳು ಸಾವಕಾಶಗಳಾಗಿವೆ. ಮತ್ತು ಈ ಪ್ರಕರಣದ ಪ್ರಾರಂಭದಲ್ಲಿ ಹೇಳಲ್ಪಟ್ಟ 'ಕೋ ನ ಆತ್ಮಾ' ಇತ್ಯಾದಿಯಾಗಿ ಆತ್ಮಾದಿ ಶಬ್ದಗಳು ಅಗ್ನಿಯಲ್ಲಿ ಅಸಂಭಾವಿತಗಳಾದ್ದರಿಂದಲೂ ಅಗ್ನಿಯು ವೈಶ್ವಾನರನಲ್ಲ. ಆಷ್ಟೇ ಅಲ್ಲದೆ ಈ ವೈಶ್ವಾನರನಿಗೆ ಪುರುಷಸೂಕ್ತದಲ್ಲಿ ಪ್ರತಿಪಾದ್ಯನಾದ ನಾರಾಯಣನ ಗುಣಗಳನ್ನು ಹೇಳಿರುವುದರಿಂದಲೂ ವೈಶ್ವಾನರನು ವಿಷ್ಣುವೇ ಆಗಿದ್ದಾನೆಂದು ನಿರ್ಣಯವಾಗುತ್ತದೆ.

ಶ್ರೀಜಗನ್ನಾಥಯತಿಗಳಿಂದ ರಚಿಸಲ್ಪಟ್ಟ

ಸೂತ್ರದೀಪಿಕಾ

सूत्रदीपिका — युक्तिसमुच्चये चशब्दः । शब्दादिभ्यः अग्निशब्दहोमाधिकरणत्वलिङ्गादित्यर्थः । अन्तःप्रतिष्ठानात् पाचकत्वेन शरीरान्तरावस्थानाच्च वैश्वानरो न विष्णुः, किन्तु अग्निरेवेति चेन्न । कुतः? तथा दृष्ट्युपदेशात् तथा अग्न्यादिनामलिङ्गकर्मवत्त्वेन दृष्ट्युपदेशात् उपासनोपदेशादित्यर्थः । तथा च अग्न्यादिश्रुतिलिङ्गानां विष्णौ सावकाशत्वान्न तद्विरोध इति भावः । किञ्चात्रोक्तात्मत्वब्रह्मत्वादीनाम् अग्न्यादावसम्भवाच्च वैश्वानरो विष्णुरेव । अपि च यतः छन्दोगाः एनम् वैश्वानरं पुरुषविधं पुरुषसूक्तप्रतिपाद्यनारायणसमानगुणकमेवाधीयतेऽभिदधति । अतोऽपि विष्णुरेवेत्यर्थः । चशब्देन पुरुषसूक्तस्य विष्णुपरत्वं बहुप्रमाणसिद्धमिति सूचितम् ।।

ಅರ್ಥ -- ಚಶಬ್ದವು ಯುಕ್ತಿಸಮುಚ್ಚಯವನ್ನು ಮಾಡುತ್ತಿದೆ. ಶಬ್ದಾದಿಭ್ಯಃ = ಅಗ್ನಿಶಬ್ದ ಹೋಮಾಧಿಕರಣತ್ವ ಮೊದಲಾದ ಲಿಂಗಗಳಿರುವುದರಿಂದ, ಅಂತಃಪ್ರತಿಷ್ಠಾನಾತ್ = ಪಾಚಕತ್ವದಿಂದ ಶರೀರದ ಒಳಗಡೆ ಇದ್ದಾನೆಂದು ಹೇಳಿರುವುದರಿಂದ ವೈಶ್ವಾನರನು ನ= ವಿಷ್ಣುವಾಗುವುದಿಲ್ಲ. ಹೊರತಾಗಿ ಅಗ್ನಿಯೇ ಆಗುತ್ತಾನೆ. ಇತಿ ಚೇನ್ನ = ಹೀಗೆ ಹೇಳಿದರೆ, ಇದು ತಪ್ಪು. ಏಕೆಂದರೆ ತಥಾ = ಹಾಗೆ ಅಗ್ನಿ ಮೊದಲಾದ ಶಬ್ದಗಳು, ಲಿಂಗಗಳು, ದೃಷ್ಟ್ಯುಪದೇಶಾತ್ = ಉಪಾಸನೆಗೋಸ್ಕರ ಹೇಳಲ್ಪಟ್ಟಿವೆ. ಆದ್ದರಿಂದ ಅಗ್ನಿ ಮೊದಲಾದ ಶ್ರುತಿಗಳು ಹಾಗೂ ಅಗ್ನಿಯ ಲಿಂಗಗಳು ವಿಷ್ಣುವಿನಲ್ಲಿ ಸಾವಕಾಶವಾಗುವುದರಿಂದ ಆದರ ವಿರೋಧವು ಬರುವುದಿಲ್ಲವೆಂದು ಅಭಪ್ರಾಯ. ಮತ್ತು ಇಲ್ಲಿ ಹೇಳಲ್ಪಟ್ಟ ಆತ್ಮತ್ವ, ಬ್ರಹ್ಮತ್ವ ಮೊದಲಾದವುಗಳು ಅಗ್ನಿಯಲ್ಲಿ ಅಸಂಭಾವಿತವಾದ್ದರಿಂದ ವೈಶ್ವಾನರನು ವಿಷ್ಣುವೇ ಆಗುತ್ತಾನೆ ಮತ್ತು ಯಾವ ಕಾರಣದಿಂದ ಛಂದೋಗರು, ಏನಮ್ = ಈ ವೈಶ್ವಾನರನನ್ನು ಪುರುಷವಿಧಂ = ಪುರುಷಸೂಕ್ತ ಪ್ರತಿಪಾದ್ಯನಾದ ನಾರಾಯಣನಿಗೆ ಸಮಾನವಾದ ಗುಣಗಳುಳ್ಳವನೆಂದು ಅಧೀಯತೇ = ಅಧ್ಯಯನ ಮಾಡುತ್ತಾರೆ. ಆ ಕಾರಣದಿಂದಲೂ ವಿಷ್ಣುವೇ ವೈಶ್ವಾನರನಾಗುತ್ತಾನೆ. ಚಶಬ್ದದಿಂದ ಪುರುಷಸೂಕ್ತಕ್ಕೆ ಹೇಳಲ್ಪಟ್ಟ ವಿಷ್ಣುಪರತ್ವವು ಬಹುಪ್ರಮಾಣಗಳಿಂದ ಸಿದ್ಧವಾಗಿದೆಯೆಂದು ಸೂಚಿಸಿದ್ದಾರೆ.

श्रीमदानन्दतीर्थभगवत्पादाचार्यविरचित-

ब्रह्मसूत्रभाष्यम्

भाष्यम् – 'अयमग्निर्वैश्वानरः (बृ.७ -९-१.)

'वैश्वानरमृत आजातमग्निम्' (ऋ.६-७-१)इत्यादिशब्दः ।

'वैश्वानरे तद्धुतं भवति'(छां.५- २४-४)

'हृदयं गार्हपत्यो मनोऽन्वाहार्यपचन आस्यमाहवनीयः' (छां. ५-१८-२.) इत्यायग्निलिङ्गमादिशब्दोक्तम् ।

'येनेदमन्नं पच्यते' (बृ.७-९-१.)

'तद्यद् भक्तं प्रथममागच्छेत् तद्धोमीयम्' (छां. ५-१९-१.)इत्यादिना पाचकत्वेनान्तःप्रतिष्ठानं च प्रतीयते । तस्मान्न विष्णुरिति चेत् –

ಅನುವಾದ - 'ಅಂತಃಸ್ಥನಾದ ಅಗ್ನಿಯು ವೈಶ್ವಾನರನಾಗಿದ್ದಾನೆ' ಎಂದು ಬೃಹದಾರಣ್ಯಕದಲ್ಲಿ ಹೇಳಲಾಗಿದೆ. 'ಆಕಾರವಾಚ್ಯನಾದ ತನ್ನ ಜ್ಞಾನವು ದೇವತೆಗಳಿಗೆ ಬರುವುದಕ್ಕೋಸ್ಕರ ವೈಶ್ವಾನರನ್ನು ಅಗ್ನಿಯೆಂದು ತಿಳಿ' ಇವೇ ಮೊದಲಾದ ಆಧಾರಗಳಿಂದ ಸೂತ್ರದಲ್ಲಿ ಹೇಳಿರುವ ಶಬ್ದ ಎಂಬ ಪದದಿಂದ ಈ ಅರ್ಥವು ದೊರೆಯುತ್ತದೆ.

ಮತ್ತು ಛಾಂದೋಗ್ಯದಲ್ಲಿ 'ವೈಶ್ವಾನರೇ ತದ್ಹುತಮ್' ಎಂಬ ಹೋಮಾಧಾರತ್ವವು, 'ಹೃದಯಂ ಗಾರ್ಹಪತ್ಯಃ' ಎಂಬ ಗಾರ್ಹಪತ್ಯಾದಿ ಪ್ರಭೇದಗಳು ಸೂತ್ರದ ಆದಿಶಬ್ದದಿಂದ ಹೇಳಲ್ಪಟ್ಟ ಅಗ್ನಿಯ ಧರ್ಮಗಳು.

ಇದರಂತೆ ಬೃಹದಾರಣ್ಯಕದಲ್ಲಿ 'ಯಾರಿಂದ ಅನ್ನವು ಪಚನವಾಗುತ್ತಿದೆಯೋ' ಎಂದು ಹೇಳಲಾಗಿದೆ ಮತ್ತು ಛಾಂದೋಗ್ಯದಲ್ಲಿ 'ಏನೇನು ತಿನ್ನುತ್ತೇವೋ ಮೊದಲು ಅದು ಹೊರಬರುತ್ತದೆ. ಆದೇ ಹೋಮದ್ರವ್ಯವೆನಿಸಿಕೊಳ್ಳುತ್ತದೆ' ಎನ್ನಲಾಗಿದೆ. ಇವೇ ಮೊದಲಾದ ಪ್ರಮಾಣಗಳಿಂದ ಅಗ್ನಿಗೆ ಸಕಲ ಪಾಚಕರೂಪನಾಗಿ ಶರೀರದಲ್ಲಿ ಇರುವಿಕೆಯು ಶ್ರುತಿಗಳಿಂದ ತಿಳಿಯುತ್ತದೆ. ಆದ್ದರಿಂದ ವಿಷ್ಣುವು ವೈಶ್ವಾನರನಲ್ಲ. ಇಷ್ಟು ಆಕ್ಷೇಪ.

ಪ್ರತಿಪದಾರ್ಥ -- ವೈಶ್ವಾನರನು ವಿಷ್ಣುವೇ ಅಲ್ಲ ಎಂದು ಆಕ್ಷೇಪಿಸಿ ಸಮಾಧಾನವನ್ನು ಹೇಳುವುದಕ್ಕಾಗಿ ಸೂತ್ರದಲ್ಲಿರುವ ಆಕ್ಷೇಪಾಂಶವನ್ನು ವ್ಯಾಖ್ಯಾನಿಸುತ್ತಿದ್ದಾರೆ.

ಅಯಮಗ್ನಿಃ = ಈ ಅಗ್ನಿಶಬ್ದವು, ವೈಶ್ವಾನರಃ = ವೈಶ್ವಾನರನನ್ನು ಪ್ರತಿಪಾದಿಸುತ್ತಿದೆ.

ಹೀಗೆ ಬೃಹದಾರಣ್ಯಕದಲ್ಲಿ ಹೇಳಲಾಗಿದೆ. ಮತ್ತು ಆ ಋತೇ = ಆಕಾರವಾಚ್ಯನಾದ ತನ್ನ ಜ್ಞಾನವು ದೇವತೆಗಳಿಗೆ ಉಂಟಾಗಲಿ ಎಂದು, ಜಾತಂ = ಹುಟ್ಟಿದ, ವೈಶ್ವಾನರಂ = ವೈಶ್ವಾನರನನ್ನು, ಅಗ್ನಿಂ = ಅಗ್ನಿಯೆಂದು ತಿಳಿ ಇತ್ಯಾದಿಯಾಗಿ ಋಗ್ವೇದವು ಹೇಳಿದೆ. ಶಬ್ದಃ = ಸೂತ್ರದಲ್ಲಿರುವ ಶಬ್ದ ಎಂಬುದರಿಂದ ಈ ಪ್ರಮಾಣಗಳು ಸೂಚಿತವಾಗಿವೆ.

ವೈಶ್ವಾನರೇ = ವೈಶ್ವಾನರನಲ್ಲಿ, ತದ್ಭುತಮ್ ಭವತಿ = ಅನ್ನವೆಲ್ಲವೂ ಭಸ್ಮವಾಗುತ್ತದೆ. ಹೃದಯಂ = ವೈಶ್ವಾನರನ ಹೃದಯವೇ, ಗಾರ್ಹಪತ್ಯಂ = ಗಾರ್ಹಪತ್ಯ ಎನಿಸಿದೆ. ಮನಃ = ಮನಸ್ಸು, ಅನ್ವಾಹಾರ್ಯಪಚನಃ = ಅನ್ವಾಹಾರ್ಯಪಚನ ಎನಿಸಿದೆ. ಆಸ್ಯಂ = ಮುಖವು, ಆಹವನೀಯಃ = ಆಹವನೀಯ ಎನಿಸಿದೆ. ಹೀಗೆ ಛಾಂದೋಗ್ಯದಲ್ಲಿ ಹೇಳಲಾಗಿದೆ. ಇತ್ಯಾದಿ = ಇವೇ ಮೊದಲಾದವು, ಅಗ್ನಿಲಿಂಗಂ = ಅಗ್ನಿಯ ಧರ್ಮಗಳು.

ಇವುಗಳೆಲ್ಲವೂ ಸೂತ್ರದಲ್ಲಿರುವ ಆದಿಶಬ್ದೋಕ್ತಂ = ಆದಿಶಬ್ದದಿಂದ ಹೇಳಲ್ಪಟ್ಟಿವೆ.

ಬೃಹದಾರಣ್ಯಕೋಪನಿಷತ್ತಿನಲ್ಲಿ ಯೇನ = ಯಾರಿಂದ, ಇದಂ = ಎಲ್ಲರಿಂದ ತಿನ್ನಲ್ಪಟ್ಟ, ಅನ್ನಂ = ಅನ್ನವು, ಪಚ್ಯತೇ = ಪಚನವಾಗುತ್ತದೋ, ಮತ್ತು ಛಾಂದೋಗ್ಯದಲ್ಲಿ ತದ್ಯದ್ ಭಕ್ತಂ = ನಾವೆಲ್ಲ ತಿನ್ನಲ್ಪಟ್ಟ ಆಹಾರವು, ಪ್ರಥಮಮಾಗಚ್ಛೇತ್ = ಜೀರ್ಣವಾಗುತ್ತದೋ, ತದ್ಭೋಮೀಯಮ್ = ಅದು ಹೋಮದ್ರವ್ಯ ಎನಿಸಿಕೊಳ್ಳುತ್ತದೆ, ಇತ್ಯಾದಿನಾ = ಇವೇ ಮೊದಲಾದ ಪ್ರಮಾಣಗಳಿಂದ, ಪಾಚಕತ್ವೇನ = ಸಕಲ ಪಾಚಕರೂಪನಾಗಿ, ಅಂತಃ = ಶರೀರದಲ್ಲಿ, ಪ್ರತಿಷ್ಠಾನಂ ಚ = ಇರುವಿಕೆಯೂ ಸಹ, ಪ್ರತೀಯತೇ = ಶ್ರುತಿಗಳಿಂದ ತಿಳಿಯುತ್ತದೆ. ತಸ್ಮಾತ್ = ಈ ಎಲ್ಲ ಕಾರಣಗಳಿಂದ, ನ ವಿಷ್ಣುಃ = ವೈಶ್ವಾನರನು ವಿಷ್ಣುವಲ್ಲ. ಇತಿ ಚೇತ್ = ಹೀಗೆ ಆಕ್ಷೇಪಿಸಿದರೆ, ನ = ಯುಕ್ತವಲ್ಲ.[೧]

---

(೧) ಭಾಷ್ಯದೀಪಿಕಾ – ವೈಶ್ವಾನರಸ್ಯ ವಿಷ್ಣುತ್ವಮಾಕ್ಷಿಪ್ಯ ಸಮಾದಧತ್ಸೂತ್ರಮುಪನ್ಯಸ್ಯ ಆಕ್ಷೇಪಾಂಶಂ ತಾವದ್ ವ್ಯಾಚಷ್ಟೇ – ಶಬ್ದಾದಿಭ್ಯ ಇತಿ ।। 'ಅಯಮಗ್ನಿರ್ವೈಶ್ವಾನರೋ ಯೋऽಯಮನ್ತಃಪುರುಷೇ' (ಬೃ.೭.೯) ಇತಿ ಬೃಹದಾರಣ್ಯಕವಾಕ್ಯಮ್ ।।

'ಮೂರ್ಧಾನಂ ದಿವೋ ಅರತಿಂ ಪೃಥಿವ್ಯಾ ವೈಶ್ವಾನರಮೃತ ಆಜಾತಮಗ್ನಿಮ್ ।
ಕವಿಂ ಸಂರಾಜಮತಿಥಿಂ ಜನಾನಾಮಾಸನ್ನಾ ಪಾತ್ರಂ ಜನಯನ್ತ ದೇವಾಃ ।।'

(ಋ. ೬-೭-೧.) ಇತಿ ಋಗ್ವೇದವಾಕ್ಯಮ್ ।।

ಇತ್ಯಾದೀತಿ ಕರ್ಮಧಾರಯಃ । ತಥಾ ಚ ಇತ್ಯಾದಿರೂಪಃ ಶಬ್ದಃ ಸೌತ್ರಶಬ್ದಪದೇನೋಕ್ತ ಇತ್ಯರ್ಥಃ । ಯದ್ವಾ – 'ಇತ್ಯಾದಿ' ಏವಮಾದಿವಾಕ್ಯಜಾತಂ 'ಶಬ್ದಃ' ಸೌತ್ರಶಬ್ದಪದೇನ ಗೃಹೀತ ಇತ್ಯರ್ಥಃ । ಆದಿಶಬ್ದೇನೈತಜ್ಜಾತೀಯಕಂ ಶ್ರುತ್ಯನ್ತರವಾಕ್ಯಂ ಗೃಹ್ಯತೇ ।।

'ವೈಶ್ವಾನರೇ' ಇತಿ ಶ್ರುತ್ಯನ್ತರವಾಕ್ಯಮ್ ।। 'ಹೃದಯಮ್' ಇತ್ಯಾದಿ ಛಾನ್ದೋಗಶ್ರುತಿಃ ।।

ಇತ್ಯಾದ್ಯಗ್ನಿಲಿಙ್ಗಮಿತಿ ।। ಏವಮಾದಿವಾಕ್ಯೋಕ್ತಾಗ್ನಿಲಿಙ್ಗಮಿತ್ಯರ್ಥಃ । ಆದಿಶಬ್ದೇನ 'ನಾಭಿಂ ಯಜ್ಞಾನಾಂ ಸದನಂ ರಯೀಣಾಮ್' (ಋ. ೬-೭-೨.) ಇತ್ಯಾದಿವಾಕ್ಯೋಕ್ತಾನಿ ಗೃಹ್ಯನ್ತೇ । 'ಆದಿಶಬ್ದೋಕ್ತಮ್' ಸೌತ್ರಾದಿಶಬ್ದೋಕ್ತಮಿತ್ಯರ್ಥಃ । 'ಯೇನೇದಮನ್ನಂ ಪಚ್ಯತೇ ಯದಿದಮದ್ಯತೇ' ಇತ್ಯೇತದಪಿ 'ಅಯಮಗ್ನಿರ್ವೈಶ್ವಾನರೋ ಯೋऽಯಮನ್ತಃ ಪುರುಷೇ' (ಬೃ.೭-೯-೧.)ಇತ್ಯತಃ ಪರಂ ಬೃಹದಾರಣ್ಯಕಶ್ರುತಮ್ ।। 'ತದಪ್ಯುಕ್ತಮ್' ಇತಿ ಛಾನ್ದೋಗ್ಯವಾಕ್ಯಮ್ ।।

इत्यादिनेति ।। वाक्येनेति शेषः । कुरुपाण्डवन्यायेन 'सर्वकर्मा सर्वलिङ्गः' इति श्रुत्यनुसारादादिपदोक्तलिङ्गात् पार्थक्येन कर्म बोधयितुं सूत्रेऽन्तः प्रतिष्ठानादित्युक्तम् ।। यद्वा - 'पाचकत्वेनान्तःप्रतिष्ठानं प्रधानलिङ्गत्वेनाभिमतत्वात् पृथगुक्तम्' इति तत्त्वप्रदीपोक्तेः प्रधानलिङ्गत्वादिदं पृथगुक्तमित्यभिप्रेत्य तल्लिङ्गं तत्कर्मोक्त्या दर्शयति – पाचकत्वेनेति ।। इत्यम्भूतलक्षणे तृतीया । अनेन सूत्रेऽन्तःप्रतिष्ठानपदेन न केवलं तत्तद्धृदयान्तरावस्थानमात्रं विवक्षितं, किन्तु सव्यापारमित्युक्तं भवति । अत एव 'येनेदमन्नं पच्यते' 'तद्यद्धुक्तम्' इत्युभयबोधकश्रुत्युदाहरणम् । चः समुच्चये ।। ततः किमित्यत आह – तस्मादिति ।। यस्मादेवमग्निपक्षेऽपि श्रुतिलिङ्गाद्यस्ति, विष्णुपक्षे तु त्वयैवाऽत्मशब्दः समाख्यानं चोक्तम्, तस्मादुभयत्र श्रुत्यादिसाम्याद् वैश्वानरो विष्णुरेवेति निश्चयो न युज्यत इत्यर्थः ।।

ननु 'यस्त्वेतम्' इति विचार्यवाक्ये वैश्वानरशब्दसमानाधिकृताग्निशब्दाभावाद् वाक्यान्तरगताग्निशब्दस्य कथं शङ्काहेतुत्वमिति चेत् – न, अत्र सर्ववैश्वानरविद्यानां विचार्यत्वात्, अत एवानेकवाक्योद्धारः । यद्वा – पूर्वपक्षेऽपि सिद्धान्त इव समाख्यां प्रदर्शयितुं समाख्यारूपेण तत्तद्वाक्योद्धारो युक्तः । अयमिति वाक्येऽर्यामत्युक्तः क इत्यत आह – योऽयमिति ।। तथा च – 'योऽयमन्तः पुरुषे' पुरुषस्यान्तःस्थितं भगवान् 'अयमग्निः' अङ्गशब्दितशरीरनेतृत्वात् तच्छब्दवाच्यः । विश्वगुणसम्बन्धी न रीयते चेति वैश्वानरश्चेति योजना । तद्वचापारमाह – येनेति ।। इदं किमित्यत आह – यदिदमिति ।। अद्यते भक्ष्यते प्राणिभिः ।

'मूर्धानम्' इति मन्त्रे षष्ठ्यर्थः कार्यकारणभावसम्बन्धः । 'मूर्धत्वं विष्णोरङ्गाङ्गभेदात्' इति तत्त्वप्रदीपोक्तेः मूर्धानमरतिमित्यभेदोक्तिः । ऋतायेति वेदान्तरे पठ्यते ऋत इति सप्तमी तादर्थ्ये । तथा च दिवः कारणभूतमूर्धानं लोके गमनेनारतिदर्शनाद् रतिविरुद्धगतिसाधनत्वाद् गौण्या वृत्त्या 'अरमलमतति गच्छति येन पुरुषः सोऽरतिः पादः' इति तत्त्वप्रदीपोक्तेः मुख्यया वृत्त्या अरतिः पादः । ऋ गतावित्यस्मात् करणे अतिप्रत्यये निष्पन्नोऽरतिशब्दः पादे मुख्य एवेत्यपि केचित् । तत्तु तत्त्वप्रदीपचन्द्रिकानुक्तम् । तत्त्वप्रदीपे अरशब्दोपपदादतेः, चन्द्रिकायां नञुपपदाद् रमेरस्य निष्पत्तेरुक्तत्वात् । तथा च - पृथिव्याः अरतिं कारणीभूतपादं जनानाम् आक्रते सम्यग्ज्ञानाय 'जातम्' अभिव्यक्तं 'कविं' सर्वज्ञं 'सम्राजम्' अखण्डेशम् 'अन्नं थम्' इति श्रुतेः थशब्दोऽन्नवाची । तृतीयोऽतिशये । तथा च 'अतिथिम्' अत्यन्नम् । पात्रमित्यनेनापि जनानामित्येतत्सम्बध्यते । तथा च जनानां 'पातारं' रक्षकं 'वैश्वानरं' विश्वजीवान्तरत्वयोगेन तच्छब्दवाच्यम् 'अग्निम्' अङ्गनेतारं विष्णुं प्रसिद्धं च देवा आसन् । अविभक्तिकोऽयं निर्देशः । आस्यशब्दस्यासन्नादेशः । तथा च आसन् स्वास्यतया आजनयन्त । अडभावश्छान्दसः । आ समन्तात् सर्वकर्म स्वकुर्वन्निति सिद्धान्तरीत्या

ಭಾಷ್ಯಮ್ – ನ, 'ಅಥ ಹೇಮಮಾತ್ಮಾನಮಣೋರಣೀಯಾಂಸಂ ಪರತಃ ಪರಂ ವಿಶ್ವಂ ಹರಿಮುಪಾಸೀತೇತಿ । ಸರ್ವನಾಮಾ ಸರ್ವಕರ್ಮಾ ಸರ್ವಲಿಙ್ಗಃ ಸರ್ವಗುಣಃ ಸರ್ವಕಾಮಃ ಸರ್ವಧರ್ಮಃ ಸರ್ವರೂಪ ಇತಿ ।' 'ಸ ಯ ಏತಮೇವಮಾತ್ಮಾನಂ ವಿಶ್ವಂ ಹರಿಮಾದರಮುಪಾಸ್ತೇ ತಸ್ಯ ಸರ್ವೇಷು ಲೋಕೇಷು ಸರ್ವೇಷು ಭೂತೇಷು ಸರ್ವೇಷು ದೇವೇಷು ಸರ್ವೇಷು ವೇದೇಷು ಕಾಮಚಾರೋ ಭವತಿ' ಇತಿ ತತ್ತನ್ನಾಮಲಿಙ್ಗಾದಿನಾ ತಸ್ಯೈವ ದೃಷ್ಟ್ಯುಪದೇಶಾನ್ಮಹೋಪನಿಷದಿ ।।

ಶ್ರುತ್ಯರ್ಥಃ ।।

ತತ್ತ್ವಪ್ರದೀಪೇ ತು – ವಿಶ್ವನರಸ್ಥಮ್ ಋತೇ ವೇದೇ 'ಆ ಸಮನ್ತಾಜ್ಜಾತಂ' ವ್ಯಕ್ತಮ್ 'ಅಗ್ನಿಮ್' ಅಙ್ಗನೇತಾರಂ 'ಸಮ್ರಾಜಂ' ಸಮ್ಯಗ್ ರಾಜನ್ತಮ್ 'ಅತಿಥಿಂ' ಸರ್ವಾನತಿಶಾಯ್ಯ ಸ್ಥಿತಂ ಪಾತಾರಮ್ ಅಗ್ನಿಂ ಜನಾನಾಮ್ 'ಆಸನ್' ಆಶ್ರಯಮ್ 'ಆಜನಯನ್ತ' ಆ ಸಮನ್ತಾಜ್ಜನಯಾಞ್ಚಕ್ರುಃ । ಅಗ್ನಾದಿದೇವಾ ಇತಿ ವಿಶೇಷಾರ್ಥ ಉಕ್ತಃ । ಕೇಚಿತ್ತು – ಜನಿಬಾಧಕಾಙ್ಯೋಗಾದಾಜನಯನ್ತ ಅಕುರ್ವನ್ನಿತ್ಯುಕ್ತಮಿತ್ಯಾಹುಃ । ತತ್ತೂದಾಹೃತತತ್ತ್ವಪ್ರದೀಪ-ವಿರುದ್ಧಮ್ । ಅತೋऽನೇಕಾರ್ಥತ್ವಾದ್ ಧಾತೂನಾಂ ವಿಷ್ಣುಜನ್ಯೇऽಗ್ನೌ ದೇವಜನ್ಯತ್ವಾಯೋಗಾದ್ ಜನೇರುತ್ಪತ್ತ್ಯರ್ಥಾ-ಯೋಗಾಚ್ಚ । ಅಕುರ್ವನ್ನಿತ್ಯುಕ್ತಮಿತಿ ಆಙ್ವಿಶ್ಲೇಷೇಣೈವ ಟೀಕಾ ವ್ಯಾಖ್ಯೇಯಾ । ಪೂರ್ವಪಕ್ಷೀ ತು ಶ್ರುತಿಗತಾಗ್ನಾದಿಶಬ್ದಾನ್ ಪ್ರಸಿದ್ಧಾಗ್ನಿಪರಾನೇವ ಮನ್ಯತೇ ।।

'ವೈಶ್ವಾನರೇ ತದ್ಧುತಮ್' ಇತಿ ವಾಕ್ಯಾರ್ಥಸ್ತು - 'ತಸ್ಮಾದು ಹೈವಿದ್ ಯದ್ಯಪಿ ಚಣ್ಡಾಲಾಯೋಚ್ಛಿಷ್ಟಂ ಪ್ರಯಚ್ಛೇದಾತ್ಮನಿ ಹೈವಾಸ್ಯ ವೈಶ್ವಾನರೇ ಹುತಂ ಸ್ಯಾತ್' (ಛಾಂ. ೫-೨೪-೪.) ಇತಿ ಛಾನ್ದೋಗಸಮಾಖ್ಯಾವಾಕ್ಯಾದವಗನ್ತವ್ಯಃ । ತದರ್ಥಸ್ತು – ಯದಿ 'ಏವಂವಿತ್' ಉಕ್ತರೀತ್ಯಾ ವೈಶ್ವಾನರಜ್ಞಾನೀ ಉಚ್ಛಿಷ್ಟಾದ್ಯನರ್ಹಾಯಾಪಿ ಚಣ್ಡಾಲಾಯೋಚ್ಛಿಷ್ಟಂ 'ಪ್ರಯಚ್ಛೇತ್' ದದ್ಯಾತ್ । ತದಾ ತದ್ಧುತಮುಚ್ಛಿಷ್ಟಂ ಚಣ್ಡಾಲಾನ್ತರ್ಯಾಮಿಣಿ ವೈಶ್ವಾನರೇ ಹುತಂ ಸ್ಯಾತ್ನ ಪಾಪಕರಂ ಭವತಿ । ಪ್ರತ್ಯುತ ಮಹಾಫಲಮೇವೇತಿ । ಅನೇನಾऽಹುತಿಸ್ಥಾನತ್ವಲಿಙ್ಗಮುಚ್ಯತೇ ।'ಹೃದಯಂ' ಹೃದಯಸ್ಥೋ ವಿಷ್ಣುರ್ಗಾರ್ಹಪತ್ಯಪದವಾಚ್ಯ ಇತ್ಯರ್ಥಃ । ಏವಮುತ್ತರತ್ರಾಪಿ । 'ಅನ್ವಾಹಾರ್ಯಪಚನಃ' ದಕ್ಷಿಣಾಗ್ನಿರನ್ವಾಹಾರ್ಯ ಓದನೋऽತ್ರ ಪಚ್ಯತ ಇತಿ ವ್ಯುತ್ಪತ್ತಿಸಮ್ಭವಾತ್ । ಪೂರ್ವಪಕ್ಷೇ ತು ಗಾರ್ಹಪತ್ಯಂ ವೈಶ್ವಾನರಸ್ಯ ಪ್ರಸಿದ್ಧಾಗ್ನೇರ್ಹೃದ ಯಸ್ಥಾನೀಯಮಿತ್ಯಾದಿರರ್ಥಃ ।।

'ತದ್ ಯದ್ಧಕ್ತಮ್' ಇತಿ ವಾಕ್ಯಾರ್ಥಸ್ತು – 'ತತ್' ತದಾ ಭೋಜನವೇಲಾಯಾಂ 'ಯದ್ಧಕ್ತಮ್' ಅನ್ನಂ 'ಪ್ರಥಮಮಾಗಚ್ಛೇತ್' ಆಸ್ಯಂ ಪ್ರತಿ ಪ್ರಾಣಾಹುತಿರೂಪೇಣ । 'ತದ್ಧೋಮೀಯಂ' ಪಾಚಕತ್ವೇನಾನ್ತಃಸ್ಥಿತಸ್ಯಾಗ್ನೇರ್ಹೋಮದ್ರವ್ಯಮಿತಿ । ಅನೇನಾಗ್ನೌ ಹೂಯಮಾನದ್ರವ್ಯಸ್ಯಾಗ್ನಿಃ ಪಾಚಕ ಇತಿ ಸಿದ್ಧಮಿತಿ ಪಾಚಕತ್ವಾಖ್ಯಲಿಙ್ಗಮುಕ್ತಂ ಭವತಿ । ಯದ್ಯಪಿ 'ಯೇನೇದಮ್' ಇತಿ ಪೂರ್ವವಾಕ್ಯೇ 'ಅಯಮಗ್ನಿಃ' ಇತಿ ತತ್ಪೂರ್ವವಾಕ್ಯಸಾಹಿತ್ಯಾತ್ ಪಾಚಕತ್ವೇನಾನ್ತಃಪ್ರತಿಷ್ಠಾನೋಕ್ತಾವಪಿ ನ 'ತದ್ಯದ್ಧಕ್ತಮ್' ಇತಿ ವಾಕ್ಯೇ ತತ್ ಪ್ರತೀಯತೇ । ತಥಾऽಪಿ 'ತದ್ಧೋಮೀಯಮ್' ಇತ್ಯನೇನಾನ್ತಸ್ಥಿತಸ್ಯ ಹೋಮ್ಯಮಿತ್ಯುಕ್ತತ್ವಾತ್ ತತ್ಪ್ರತ್ಯಾಯಕತ್ವೋಪಪತ್ತಿಃ ।।

ಅನುವಾದ - ಈ ಆಕ್ಷೇಪವು ತಪ್ಪು. ಏಕೆಂದರೆ ಮಹೋಪನಿಷತ್ತಿನಲ್ಲಿ –

'ವೈಶ್ವಾನರಪ್ರಕರಣದಲ್ಲಿಯೇ ಪ್ರಸಿದ್ಧವಾಗಿ ಸರ್ವಾಂತಸ್ಥನಾದ ಪುರುಷನನ್ನು ಅಣುವಿಗಿಂತಲೂ ಅಣುವೆಂದು, ಮಹತ್‌ಪದಾರ್ಥಕ್ಕಿಂತಲೂ ದೊಡ್ಡವನೆಂದು, ಸಕಲಗುಣಗಳಿಂದ ಪೂರ್ಣನಾದ ಪಾಪಪರಿಹಾರಕನಾದ ಪರಮಾತ್ಮನನ್ನು ಉಪಾಸನೆ ಮಾಡಿರಿ' ಎಂದು ಹೇಳಲಾಗಿದೆ. ಅವನೇ ಸಕಲಶಬ್ದಗಳಿಂದ ವಾಚ್ಯನಾಗಿದ್ದಾನೆ. ಸಕಲ ಕೆಲಸಗಳನ್ನು ಮಾಡಿಸುವವನಾಗಿದ್ದಾನೆ. ಎಲ್ಲ ಧರ್ಮಗಳಿಂದ ಯುಕ್ತನಾಗಿದ್ದಾನೆ. ಅನಂತಗುಣಗಳಿಂದ ಪರಿಪೂರ್ಣನಾಗಿದ್ದಾನೆ. ಪೂರ್ಣಕಾಮನೂ, ಸರ್ವಧಾರಕನೂ, ಚೇತನಾಚೇತನಾತ್ಮಕವಾದ ಸಕಲವಸ್ತುಗಳೇ ಪ್ರತಿಮೆಯಾಗಿ ಉಳ್ಳವನೂ ಆಗಿದ್ದಾನೆ. ಹೀಗೆ ಯಾವ ಅಧಿಕಾರಿಯು ಪರಮಾತ್ಮನನ್ನು ಸರ್ವನಿಯಾಮಕನೆಂದೂ, ಎಲ್ಲೆಡೆ ವ್ಯಾಪಿಸಿದ್ದಾನೆಂದೂ ತನ್ನ ಹೃದಯದಲ್ಲಿ ಸರಿಯಾಗಿ ಉಪಾಸನೆ ಮಾಡುತ್ತಾನೋ ಅಂತಹ ಅಧಿಕಾರಿಗೆ ಎಲ್ಲ ಲೋಕಗಳಲ್ಲಿ ಎಲ್ಲ ಭೂತಗಳಲ್ಲಿ, ಸಕಲ ವೇದಗಳಲ್ಲಿ, ಸಕಲ ದೇವತೆಗಳಲ್ಲಿ ಮನಬಂದಂತೆ ಪ್ರವೃತ್ತಿಯು ಉಂಟಾಗುತ್ತದೆ. ಹೀಗೆ ಆಯಾ ಹೆಸರು, ಗುಣ, ಧರ್ಮ ಇವುಗಳನ್ನು ವಿಷ್ಣುವಿನ ಧ್ಯಾನಕ್ಕೋಸ್ಕರ ಹೇಳಿರುವುದರಿಂದ ವೈಶ್ವಾನರ ಮೊದಲಾದ ನಾಮಗಳು ಹಾಗೂ ಪಾಚಕತ್ವ ಮೊದಲಾದ ಧರ್ಮಗಳು ವಿಷ್ಣುವಿನಲ್ಲೇ ಸಮನ್ವಯವಾಗುತ್ತವೆ.

ಪ್ರತಿಪದಾರ್ಥ-- ಪರಿಹಾರವನ್ನು ನೀಡುವ ಸೂತ್ರದ ಭಾಗವನ್ನು ವ್ಯಾಖ್ಯಾನಿಸುತ್ತಿದ್ದಾರೆ.

ನ = ಪೂರ್ವಪಕ್ಷವು ಸರಿಯಲ್ಲ. ಏಕೆಂದರೆ, ಅಥ = ಅನಂತರ, ಹ = ಪ್ರಸಿದ್ಧನಾದ, ಇಮಂ = ಪುರುಷನನ್ನು, ಆತ್ಮಾನಂ = ಸರ್ವಾಂತರ್ಯಾಮಿಯಾದವನನ್ನು, ಅಣೋರಣೀಯಾಂಸಂ = ಅಣುವಿಗಿಂತಲೂ ಅಣುತಮನಾದವನೆಂದು, ಪರತಃ = ಮಹತ್ತದಾರ್ಥಕ್ಕಿಂತಲೂ, ಪರಂ = ದೊಡ್ಡವನೆಂದು, ವಿಶ್ವಂ = ಸಕಲ ದೇಶಕಾಲಗುಣಗಳಿಂದ ಪರಿಪೂರ್ಣನಾದವನೆಂದು, ಹರಿಂ = ಪಾಪಪರಿಹಾರಕನೆಂದು, ಉಪಾಸೀತ = ಉಪಾಸನೆಮಾಡಬೇಕು. ಇತಿ = ಹೀಗೆ ಹೇಳಲಾಗಿದೆ.

ಮತ್ತು ಸಃ = ಅವನೇ, ಸರ್ವನಾಮ = ಸಕಲಶಬ್ದಪ್ರತಿಪಾದ್ಯನು, ಸರ್ವಕರ್ಮಾ = ಸಕಲ ಕ್ರಿಯೆಗಳನ್ನು ಮಾಡಿಸುವವನು, ಸರ್ವಲಿಂಗಃ = ಸಕಲ ಧರ್ಮಗಳುಳ್ಳವನು, ಸರ್ವಗುಣಃ = ಅನಂತಗುಣಪರಿಪೂರ್ಣನು, ಸರ್ವಕಾಮಃ = ಪೂರ್ಣವಾದ ಕಾಮನೆಯುಳ್ಳವನು, ಸರ್ವಧರ್ಮಃ = ಸಕಲಧಾರಕನು, ಸರ್ವರೂಪಃ = ಚೇತನಾಚೇತನವೆಂಬ ಸಕಲಪದಾರ್ಥಗಳೇ ಪ್ರತಿಮೆಯಾಗಿ ಉಳ್ಳವನು, ಇತಿ = ಹೀಗೆಯೂ ಹೇಳಲಾಗಿದೆ.

ಮತ್ತು ಸಃ = ಯಾವ ಪ್ರಸಿದ್ಧವಾದ ಅಧಿಕಾರಿಯು, ಏತಂ = ಇಂತಹ ಪರಮಾತ್ಮನನ್ನು, ಏವಂ = ಹೀಗೆ, ಆತ್ಮಾನಂ = ಸರ್ವನಿಯಾಮಕನೆಂದು, ವಿದ್ವಾಂ = ಎಲ್ಲಡೆ ವ್ಯಾಪಿಸಿದ್ದಾನೆಂದು, ಹರಿಂ = ಶ್ರೀಹರಿಯನ್ನು, ಆರಾತ್ = ಹೃದಯದಲ್ಲಿ, ಆರಂ = ಚೆನ್ನಾಗಿ, ಉಪಾಸ್ತೇ = ಉಪಾಸನೆ ಮಾಡುತ್ತಾನೋ, ತಸ್ಯ = ಅಂತಹ ಅಧಿಕಾರಿಗೆ, ಸರ್ವೇಷು ಲೋಕೇಷು = ಎಲ್ಲಾ ಲೋಕಗಳಲ್ಲಿ, ಸರ್ವೇಷು ಭೂತೇಷು = ಸಕಲ ಪ್ರಾಣಿಗಳಲ್ಲಿ, ಸರ್ವೇಷು ದೇವೇಷು = ಸಕಲ ದೇವತೆಗಳಲ್ಲಿ, ಸರ್ವೇಷು ವೇದೇಷು = ಸಕಲ ವೇದಗಳಲ್ಲಿ, ಕಾಮಚಾರಃ = ಮನಬಂದಂತೆ ಪ್ರವೃತ್ತಿಯು, ಭವತಿ = ಆಗುತ್ತದೆ.

ಇತಿ = ಹೀಗೆ, ತತ್ತನ್ನಾಮಲಿಂಗಾದಿನಾ = ಆಯಾ ಹೆಸರು ಗುಣಧರ್ಮ ಇವುಗಳಿಂದ, ತಸ್ಮೈವ = ಆ ವಿಷ್ಣುವಿಗೇ, ಮಹೋಪನಿಷದಿ = ಮಹೋಪನಿಷತ್ತಿನಲ್ಲಿ, ದೃಷ್ಟಿ = ತಿಳಿವಳಿಕೆಗಾಗಿ, ಉಪದೇಶಾತ್ = ಹೇಳಿರುವುದರಿಂದ ವೈಶ್ವಾನರನು ವಿಷ್ಣುವೇ ಆಗುತ್ತಾನೆ.(೧)

---

(೧) **ಭಾಷ್ಯದೀಪಿಕಾ** – ಪರಿಹಾರಸೂತ್ರಾಂಶಂ ವ್ಯಾಚಷ್ಟೇ – ನೇತಿ ।। ತಸ್ಮಾನ್ನ ವಿಷ್ಣುರಿತಿ ಪೂರ್ವವಾಕ್ಯೇನಾಸ್ಯ ನತ್ರರ್ಥಸ್ಯಾನ್ವಯಃ । ಕುತೋ ನೇತ್ಯತಸ್ತತ್ರ ಭಾಷ್ಯೇ 'ತಸ್ಮಾದಿತ್ಯುಕ್ತಮ್' ಇತ್ಯಾವೃತ್ಯಾ ಹೇತುತ್ವೇನ ಸಂಯೋಜ್ಯಮ್ । ಸೂತ್ರೇ ತ್ವತ ಇತ್ಯಾಕರ್ಷಣೀಯಮ್ । ಆತ್ಮಶಬ್ದಾದಿಪೂರ್ವಹೇತೋರೇವೇತಿ ತದರ್ಥಃ । ನ ಚೇತರತ್ರಾಪ್ಯಸ್ತಿ ಶ್ರುತ್ಯಾದಿಕಮಿತ್ಯನಿರ್ಣಯಃ । ತೇಷಾಮನ್ಯತ್ರ ಮುಖ್ಯತೋ ಯೋಗೇನ ವಿಷ್ಣಾವೇವ ಸಾವಕಾಶಾತ್ ವೋಪಪತ್ತೇರಿತ್ಯಧ್ಯಾಹಾರಃ ।।

ಕುತೋऽಶ್ಮಾದಿನಾಮಕರ್ಮಣಾಂ ವಿಷ್ಣಾವೇವ ಸಾವಕಾಶತ್ವಂ ಜ್ಞಾಯತ ಇತ್ಯತಸ್ತತ್ರ ಹೇತುಸಮರ್ಪಕಂ 'ತಥಾ ದೃಷ್ಟ್ಯುಪದೇಶಾತ್' ಇತ್ಯಂಶಮ್ ಉಪದೇಶಪದೋಕ್ತಶ್ರುತ್ಯುದಾಹರಣಪೂರ್ವಕಂ ವ್ಯಾಚಷ್ಟೇ – ಅಥೇತಿ ।। ಪ್ರಕರಣಾನ್ತರಾರಮ್ಭಾರ್ಥೋऽಯಮಥಶಬ್ದಃ । ಪ್ರಥಮೇತಿಶಬ್ದೋ ವಿಧಿಸಮಾಪ್ತೌ । ದ್ವಿತೀಯಸ್ಯ ಇತ್ಯುಪಾಸೀತೇತ್ಯನ್ವಯಃ । ತಥಾ ಚ 'ಏತಮಾತ್ಮಾನಮ್' ಆದಾನಾದಿಕರ್ತಾರಮ್ 'ಅಣೋರಣೀಯಾಂಸಂ' ಸೂಕ್ಷ್ಮಾದಪಿ ಸೂಕ್ಷ್ಮಂ 'ಪರತಃ' ಮಹತಃ ಪರಂ 'ವಿಶ್ವಂ' ಪೂರ್ಣಂ ಹರಿಮುಪಾಸೀತೇತ್ಯರ್ಥಃ । ಕಿಮಿತೀತ್ಯತಃ ಉಪಾಸನಾಪ್ರಕಾರಮಾಹ – ಸರ್ವೇತಿ ।। ಇತಿಶಬ್ದಃ ಪ್ರತ್ಯೇಕಂ ಸಮ್ಬಧ್ಯತೇ । ತಥಾ ಚ ಮುಖ್ಯತಃ ಇನ್ದ್ರಾದಿಸರ್ವನಾಮವಾನಿತ್ಯುಪಾಸೀತ । 'ಸರ್ವಕರ್ಮಾ' 'ನರ್ತೆ ತ್ವಕ್ರಿಯತೇ' ಇತ್ಯಾದೇಃ ಸ್ವಾತನ್ತ್ರ್ಯೇಣ ಸರ್ವಕ್ರಿಯಾಕರ್ತೇತ್ಯುಪಾಸೀತ । ಲಿಙ್ಗಂ ಲಕ್ಷಣಮ್ । ವಜ್ರಧರತ್ವಾದಿಸರ್ವಲಿಙ್ಗ ಇತ್ಯುಪಾಸೀತ । ಜ್ಞಾನಾನನ್ದಾದಿಸರ್ವಗುಣಪೂರ್ಣ ಇತ್ಯುಪಾಸೀತ । ಏತದಿಚ್ಛಯೈವ ಸರ್ವಂ ಭವತೀತಿ ಸರ್ವಕಾಮಃ ಪೂರ್ಣಕಾಮ ಇತ್ಯುಪಾಸೀತ । ಭೇದಸಂಯೋಗವಿಭಾಗಾದಿಸರ್ವಧರ್ಮಾಸ್ತದಧೀನಾ ಇತಿ ವಾ, ಸರ್ವಜ್ಞತ್ವಾದಿಸರ್ವಧರ್ಮವತ್ತ್ವಾದ್ವಾ ಸರ್ವಧರ್ಮ ಇತ್ಯುಪಾಸೀತ । ಸರ್ವತ್ರ ರೂಪಮಸ್ಯೇತಿ ವಾ ಸರ್ವಂ ಜಗದಸ್ಯ ರೂಪಂ ಪ್ರತಿಮೇತಿ ವಾ ಸರ್ವರೂಪ ಇತ್ಯುಪಾಸೀತ ।।

ಏವಮುಪಾಸಕಸ್ಯ ಫಲಮಾಹ – ಸ ಇತಿ ।।'ಸಃ' ಪ್ರಸಿದ್ಧಃ ಯೋऽಧಿಕಾರೀ ಏತಮಾತ್ಮಾನಮ್ ಅಣೋರಣೀಯಾಂಸಂ ಪರತಃ ಪರಮೇವ ವಿಶ್ವಂ ಹರಿಮೇವ, ನಾನ್ಯಮ್, 'ಆರಾತ್' ಸಮೀಪೇ ಸ್ವಹೃದಯೇ 'ಅರಮ್' ಅಲಂ ಸಮ್ಯಗುಪಾಸ್ತೇ ತಸ್ಯೈವಮವ್ಯಾಸ್ತೇ ವ್ಯಾಪ್ತರೂಪೋಪಾಸಕಸ್ಯ ಸರ್ವೇಷು ಲೋಕೇಷು ಸರ್ವೇಷು 'ಭೂತೇಷು' ಪ್ರಾಣಿಷು ಸರ್ವೇಷು ಲೋಕೇಷು ಸ್ಥಿತೇಷು

ಭಾಷ್ಯಮ್ – 'ಅನಾತ್ತತ್ವಾದನಾತ್ಮಾನ ಊನತ್ವಾದ್ ಗುಣರಾಶಿತಃ । ಅಬ್ರಹ್ಮಾಣಃ ಪರೇ ಸರ್ವೇ ಬ್ರಹ್ಮಾऽತ್ಮಾ ವಿಷ್ಣುರೇವ ಹಿ ।' ಇತ್ಯಾದಿನಾ, 'ಕೋ ನ ಆತ್ಮಾ ಕಿಂ ಬ್ರಹ್ಮ' (ಛಾಂ.೯-೧೧-೧.) ಇತ್ಯಾರಮ್ಭಾಚ್ಚಾನ್ಯೇಷಾಮಸಮ್ಭವಾದ್ ವಿಷ್ಣುರೇವ ವೈಶ್ವಾನರಃ ।

ಅನುವಾದ - "ಬೇರೆ ದೇವತೆಗಳನ್ನು ಸರ್ವೋತ್ತಮರೆಂದು ಜ್ಞಾನಿಗಳು ಒಪ್ಪಿಲ್ಲ. ಆದ್ದರಿಂದ ಅವರು ಆತ್ಮಶಬ್ದದಿಂದ ಮುಖ್ಯವಾಗಿ ಪ್ರತಿಪಾದ್ಯರಾಗುವುದಿಲ್ಲ. ಅಷ್ಟೇ ಅಲ್ಲದೆ ಕಲ್ಯಾಣಗುಣಗಳ ರಾಶಿಯಿಂದ ಊನರಾ(ಕಡಿಮೆಯಾ)ಗಿರುತ್ತಾರೆ. ವಿಷ್ಣುವಿನಿಂದ ಭಿನ್ನರಾದ ಆ ದೇವತೆಗಳು ಬ್ರಹ್ಮಪದವಾಚ್ಯರೂ ಆಗುವುದಿಲ್ಲ. ಆದ್ದರಿಂದ ಗುಣಪೂರ್ಣರೂ ಪರಮಾತ್ಮನೇ ಸರ್ವಸ್ವಾಮಿಯಾಗಿದ್ದಾನೆ" ಇವೇ ಮೊದಲಾದ ಪ್ರಮಾಣಗಳ ಆಧಾರದಿಂದ; ಮತ್ತು ಛಾಂದೋಗ್ಯದಲ್ಲಿ "ನಮಗೆ ಯಾರು ನಿಯಾಮಕನಾಗಿದ್ದಾನೋ" ಎಂಬುದಾಗಿ ವೈಶ್ವಾನರಪ್ರಕರಣವು ಪ್ರಾರಂಭವಾಗಿರುವುದರಿಂದಲೂ ಈ ಪ್ರಕರಣದಲ್ಲಿ ಪ್ರಸ್ತುತನಾದ ವೈಶ್ವಾನರನು ವಿಷ್ಣುವೇ ಆಗುತ್ತಾನೆ.

ಪ್ರತಿಪದಾರ್ಥ -- ದೇವರೆಯವರಲ್ಲಿ ಪ್ರಸಿದ್ಧವಾದ ಶ್ರುತಿ, ಲಿಂಗಾದಿಗಳನ್ನು ವಿಷ್ಣುವಿನಲ್ಲಿ ಸಾವಕಾಶವೆಂದು ಸಮರ್ಥಿಸಿದ್ದಾಯಿತು. ಪ್ರಕೃತ ಆತ್ಮಶಬ್ದಾದಿಗಳು ದೇರೆ ಕಡೆ ನಿರವಕಾಶವಾಗಿವೆ ಎಂಬುದನ್ನು ನಿರಾಕರಿಸುತ್ತಿದ್ದಾರೆ.

ಅನಾಪ್ತತ್ವಾತ್ = ವ್ಯಾಪಕತ್ವವು ಇಲ್ಲದ ಕಾರಣ, ಅನಾತ್ಮಾನಃ = ವಿಷ್ಣುವಿಗಿಂತ ಅತಿರಿಕ್ತರಾದ ದೇವತೆಗಳು ಆತ್ಮಶಬ್ದವಾಚ್ಯರಲ್ಲ. ಗುಣರಾಶಿತಃ = ಕಲ್ಯಾಣಗುಣಗಳ ರಾಶಿಯಿಂದ, ಊನತ್ವಾತ್ = ನ್ಯೂನರಾಗಿರುವುದರಿಂದ, ಹರೇಃ = ವಿಷ್ಣುವಿನಿಂದ ಭಿನ್ನರಾದ, ಸರ್ವೇ = ಸಕಲ ಚೇತನರು, ಅಬ್ರಹ್ಮಾಣಃ = ಬ್ರಹ್ಮಪದವಾಚ್ಯರಾಗಿಲ್ಲ. ಬ್ರಹ್ಮಾತ್ಮಾ = ಗುಣಪರಿಪೂರ್ಣನು, ವಿಷ್ಣುರೇವ = ಪರಮಾತ್ಮನೇ ಆಗಿದ್ದಾನೆ. ಚ = ಮತ್ತು, ಆತ್ಮಾ = ಸರ್ವಸ್ವಾಮಿಯಾಗಿದ್ದಾನೆ, ಹಿ = ಇದು ಪ್ರಸಿದ್ಧವಷ್ಟೇ.

ಇತ್ಯಾದಿನಾ = ಇವೇ ಮೊದಲಾದ ಪ್ರಮಾಣಗಳಿಂದ, ಮತ್ತು ಸಃ = ನಮ್ಮನ್ನು, ಕಃ = ಯಾರು, ಆತ್ಮಾ = ಅಂತರ್ನಿಯಾಮಕನಾಗಿದ್ದಾನೋ, ಕಂ ಬ್ರಹ್ಮ = ಗುಣಪೂರ್ಣವಾದ ಅಂತಹ ವಸ್ತು ಯಾವುದು?, ಇತಿ = ಹೀಗೆ, ಆರಂಭಾಚ್ಚ = ವೈಶ್ವಾನರ ಪ್ರಕರಣವು ಛಾಂದೋಗ್ಯದಲ್ಲಿ ಪ್ರಾರಂಭವಾಗಿರುವುದರಿಂದ, ಅನ್ಯೇಷಾಂ = ಅಗ್ನ್ಯಾದಿಗಳಿಗೆ, ಅಸಂಭವಾತ್ = ವೈಶ್ವಾನರನಲ್ಲಿ ಹೇಳಿದ ಗುಣಗಳು ಅಸಂಭವಿತವಾಗಿರುವುದರಿಂದ, ವಿಷ್ಣುರೇವ = ವಿಷ್ಣುವೇ, ವೈಶ್ವಾನರಃ = ವೈಶ್ವಾನರನೆನಿಸಿದ್ದಾನೆ.(೧)

ಭೂತೇಷ್ವಿತಿ ವಾ । ವೇದೇಷು ಸರ್ವೇಷು, ವೇದೇಷು ಯಥೇಷ್ಟಸಞ್ಚಾರಃ ಕಾಮಸಞ್ಚರಣಸರ್ವಪೂಜ್ಯತ್ವಸರ್ವಜ್ಞತ್ವಾದಿಃ ಸ್ಯಾದ್ ಇತ್ಯರ್ಥಸ್ತತ್ತ್ವಪ್ರದೀಪೇऽಭಿಹಿತಃ । 'ಇತಿ' ಮಹೋಪನಿಷದೀತ್ಯನ್ವಯಃ ।

ಸೌತ್ರತಥಾಶಬ್ದಾರ್ಥಮಾಹ – ತತ್ತದಿತಿ ।। ಅಗ್ನ್ಯಾದಿನಾಮಲಿಙ್ಗಾದಿಮತ್ತ್ವೇನೇತ್ಯರ್ಥಃ । ಆದಿಪದೇನ ತತ್ತತ್ಕಮಾದಿಗ್ರಹಣಮ್ । ಪ್ರಧಾನಸೂತ್ರೇऽಭಿಹಿತಂ ತತ್ತ್ವೇನೇತದತ್ರಾಪಿ ವಿಪರಿಣಾಮೇನ ಸಂಯೋಜ್ಯಮಿತ್ಯಾಶಯೇನಾऽಹ – ತಸ್ಯೈವೇತಿ ।। ವಿಷ್ಣೋರೇವೇತ್ಯರ್ಥಃ । ನ ತ್ವಗ್ನ್ಯಾದೇರಿತ್ಯೇವಾರ್ಥಃ । 'ದೃಶ್ಯತ್ವುಪದೇಶಾತ್' ಉಪಾಸನೋಪದೇಶಾತ್ । ಶ್ರುತೌ ಹರಿಮೇವ ಉಪಾಸ್ತ ಇತ್ಯವಧಾರಣೇನಾನ್ಯವ್ಯಾವೃತ್ತ್ಯವಗಮಾದಿತಿ ಭಾವಃ ।।

(೧) ಭಾಷ್ಯದೀಪಿಕಾ – ಏವಮನ್ಯಶ್ರುತಿಲಿಙ್ಗಾದೀನಾಂ ವಿಷ್ಣೌ ಸಾವಕಾಶತ್ವೋಪಪಾದಕತಯಾ ತಥೇತ್ಯಂಶಂ ವೈಶ್ವಾನರಾಧಿಕರಣ (೧-೨-೭)

ಭಾಷ್ಯಮ್ – 'ಚನ್ದ್ರಮಾ ಮನಸೋ ಜಾತಃ । ಚಕ್ಷೋಃ ಸೂರ್ಯೋ ಅಜಾಯತ' (ತೈ.ಆ. ೩-೧೨) ಇತ್ಯಾದಿನಾ ಯಃ ಪುರುಷಾಖ್ಯೋ ವಿಷ್ಣುರಭಿಹಿತಸ್ತದ್ವಿಧಮೇವಾತ್ರ 'ಮೂರ್ಧೈವ ಸುತೇಜಾಶ್ಚಕ್ಷುರ್ವಿಶ್ವರೂಪಃ ಪ್ರಾಣಃ ಪೃಥಗ್ವರ್ತ್ಮಾ' (ಛಾಂ. ೫-೧೮-೨.) ಇತ್ಯಾದಿನೈನಂ ವೈಶ್ವಾನರಮಧೀಯತೇ ॥

ಅನುವಾದ - ಅಚ್ಚೇ ಅಲ್ಲದೆ 'ಮನಸ್ಸಿನಿಂದ ಚಂದ್ರನು ಜನಿಸಿದನು ಚಕ್ಷುರಿಂದ್ರಿಯದಿಂದ ಆದಿತ್ಯನು ಹುಟ್ಟಿದನು' ಎಂದು ಪುರುಷಸೂಕ್ತವು ಹೇಳುತ್ತಿದೆ. ಈ ಪುರುಷಸೂಕ್ತ ಹೇಳುವ ಕ್ರಮದಲ್ಲಿಯೇ ವೈಶ್ವಾನರಪ್ರಕರಣವು ಭಗವಂತನನ್ನು ವರ್ಣಿಸಿದೆ. ಜಾಜ್ವಲ್ಯಮಾನವಾದ

ವ್ಯಾಖ್ಯಾಯ ಆತ್ಮಶಬ್ದಾದೇರನ್ಯತ್ರ ನಿರವಕಾಶೋಕ್ತಿಪರತಯಾऽಸಮ್ಭವಾದಿತ್ಯಂಶಂ ಪ್ರಮಾಣೋದಾಹರಣಪೂರ್ವಕಂ ವ್ಯಾಖ್ಯಾತಿ – **ಅನಾತ್ತತ್ವಾದಿತಿ** ॥ ಯೋಜನಾ ತು – ಇತ್ಯಾದಿನಾ ಪ್ರಮಾಣೇನ ವಿಷ್ಣೋರನ್ಯೇಷಾಮ್ ಆತ್ಮತ್ವಬ್ರಹ್ಮತ್ವಾಸಮ್ಭವೋಕ್ತೇಃ, ಅತ ಏವ ಆತ್ಮಶಬ್ದಾದೇರನ್ಯತ್ರಾಸಮ್ಭವಾದಿತಿ । ಯದ್ವಾ – ನ ಕೇವಲಮ್ ಾತ್ಮಶಬ್ದಶ್ರುತಿಸಮಾಖ್ಯಾಭ್ಯಾಂ, ಕಿನ್ತು ಪ್ರಕರಣಬಲಾಚ್ಚ ವೈಶ್ವಾನರಸ್ಯ ವಿಷ್ಣುತ್ವನಿಶ್ಚಯೋ ಭವತೀತ್ಯಾಹ – **ಅನಾತ್ತತ್ವಾದಿತಿ** ॥ ಆದಿಶಬ್ದೇನ 'ಬ್ರಹ್ಮಶಬ್ದಃ ಪರೇ ವಿಷ್ಣೌ' ಇತ್ಯಾದಿಕಂ ಗೃಹ್ಯತೇ । ತಥಾ ಚೈತ್ಥಂ ಯೋಜನಾ - 'ಕೋ ನ ಆತ್ಮಾ ಕಿಂ ಬ್ರಹ್ಮ' 'ಇತ್ಯಾರಭ್ಯಾಚ್ಚ' ಇತ್ಯಾರಭ್ಯಾಧೀತಾತ್ ಪ್ರಕರಣಾಚ್ಚ ವಿಷ್ಣುರೇವ ವೈಶ್ವಾನರಃ । ಬ್ರಹ್ಮಾತ್ಮಶಬ್ದಯೋರೇತದುಪಕ್ರಮೇ ಶ್ರವಣೇऽಪಿ ಕುತೋऽಸ್ಯಾಃ ವೈಶ್ವಾನರವಿದ್ಯಾಯಾಃ ವಿಷ್ಣುಪ್ರಕರಣತ್ವಮ್ 'ಅನಾತ್ತತ್ವಾತ್' ಇತ್ಯಾದಿನಾ ಪ್ರಮಾಣೇನ ವಿಷ್ಣೋರನ್ಯೇಷಾಮಾತ್ಮಶಬ್ದಾರ್ಥವ್ಯಾಪ್ತತ್ವ-ಗುಣಪೂರ್ಣತ್ವಯೋರಸಮ್ಭವಾವಗಮಾದಿತಿ । ಅನೇನ ಸೂತ್ರೇ ಆರಮ್ಭಾದಿತಿ ಪದಮಧ್ಯಾಹೃತ್ಯ ತೇನಾಪಿಶಬ್ದಃ ಸಂಯೋಜ್ಯಃ । ಅಸಮ್ಭವಾದಿತಿ ಹೇತುಸ್ತು ಆತ್ಮಶಬ್ದಾದೇರನ್ಯತ್ರಾನವಕಾಶತ್ವಸಾಧಕತಯೋಭಯತ್ರ ಸಂಯೋಜ್ಯ ಇತ್ಯುಕ್ತಂ ಭವತಿ । ಅತ ಏವ ಭಾಷ್ಯೇ ಅಗ್ನಿಶ್ರುತ್ಯಾದೀನಾಂ ವಿಷ್ಣೌ ಸಾವಕಾಶತ್ವಸಾಧಕತಯೇತ್ಯಾದಿ-ವ್ಯಾಖ್ಯಾನಾನ್ತರಂ ವಿಷ್ಣುಪಕ್ಷಸಾಧಕಾತ್ಮಶಬ್ದಾದೇರನ್ಯತ್ರಾನವಕಾಶತ್ವಸಾಧಕಾಸಮ್ಭವಾದಿತಿ ಹೇತೌ ವ್ಯಾಖ್ಯಾತವ್ಯೇऽಪಿ ತದ್ ವಿಹಾಯಾऽರಮ್ಭಾದಿತ್ಯಧ್ಯಾಹೃತಹೇತೂಪನ್ಯಾಸಾನನ್ತರಮಸಮ್ಭವಾದಿತ್ಯುಪನ್ಯಸ್ತಮ್ । ಟೀಕಾಯಾಮಪಿ – ನ ಚಾऽತ್ಮಶಬ್ದಾದೇರನ್ಯತ್ರಾಸ್ತ್ಯವಕಾಶ ಇತಿ ಪ್ರತಿಜ್ಞಾಯ ಪ್ರಕರಣಬಲಾಚ್ಚೇತ್ಯಧ್ಯಾಹಾರ್ಯಹೇತುಂ ಚ ಪ್ರದರ್ಶ್ಯ, ಅನನ್ತರಮಾತ್ಮಶಬ್ದಪ್ರಕರಣಯೋರ್ನಿರವಕಾಶತ್ವಸಾಧಕಾಸಮ್ಭವಾದಿತ್ಯಂಶೋ ವ್ಯಾಖ್ಯಾತಃ । ತಥಾ ದೃಷ್ಟ್ಯುಪದೇಶಾದಸಮ್ಭವಾದಿತಿವನ್ನಾಧ್ಯಾಹೃತಹೇತೋರವಾನ್ತರಸಾಧ್ಯೇನಾನ್ವಯಃ, ಕಿನ್ತು ಪ್ರಧಾನೇನೈವೇತಿ ಜ್ಞಾಪನಾಯ ವಿಷ್ಣುರೇವ ವೈಶ್ವಾನರ ಇತಿ ಪುನರುಕ್ತಿಃ । ಉದ್ದೇಶ್ಯವಿಧೇಯನಿರ್ದೇಶಸ್ಯೈಚ್ಛಿಕತ್ವಾದ್ ವ್ಯತ್ಯಾಸಃ । 'ಹಿ' ಯಸ್ಮಾದ್ ವಿಷ್ಣೋಃ 'ಪರೇ' ಅನ್ಯೇ ಗುಣೈಃ 'ಅನಾತ್ತತ್ವಾತ್' ಅವ್ಯಾಪ್ತತ್ವಾತ್ ಸರ್ವೋತ್ಕೃಷ್ಟತ್ವೇನ ವೈದಿಕೈರಸ್ವೀಕೃತತ್ವಾದ್ವಾ 'ಅನಾತ್ಮಾನಃ' ಅನಾತ್ಮಶಬ್ದಮುಖ್ಯಾರ್ಥಾಃ । ಯಸ್ಮಾಚ್ಚ ಗುಣರಾಶಿತ ಊನತ್ವಾದಬ್ರಹ್ಮಾಣಶ್ಚ । ತಸ್ಮಾತ್ 'ಬ್ರಹ್ಮಾऽತ್ಮಾ' ತಚ್ಛಬ್ದಮುಖ್ಯವಾಚ್ಯೋ ವಿಷ್ಣುರೇವ ಸಿದ್ಧ ಇತ್ಯರ್ಥಃ ॥ ಛಾನ್ದೋಗ್ಯೇ ಹಿ 'ಕೋ ನ ಆತ್ಮಾ ಕಿಂ ಬ್ರಹ್ಮ' ಇತಿ ಮಿಲಿತ್ವಾ ಮೀಮಾಂಸಮಾನೈಃ ಪ್ರತ್ಯಬ್ದಯಜ್ಞಕೃತ್ತ್ವನಿ ಮಿತ್ತಾನ್ಮಹಾಶಾಲಸಞ್ಜ್ಞೈಃ ಪಞ್ಚಭಿರ್ಮಹಾಮುನಿಭಿರುದ್ದಾಲಕೋದ್ದಿಷ್ಟೈಸ್ತದ್ಯುಕ್ತೈಃ ಪರಿಪೃಷ್ಟೋ ರಾಜಾऽಶ್ವಪತಿ-ರ್ವೈಶ್ವಾನರಮುಪದಿದೇಶ । 'ನಃ' ಅಸ್ಮಾಕಮ್ ಉಪಾಸ್ಯ ಆತ್ಮಾ 'ಕಃ' ಕಿಂಲಕ್ಷಣಃ । ಬ್ರಹ್ಮ ಚ 'ಕಿಂ' ಕಿಂಲಕ್ಷಣಮಿತ್ಯರ್ಥಃ ॥

ಸ್ವರ್ಗಲೋಕವು ವೈಶ್ವಾನರನ ಶಿರೋಭಾಗವಾಗಿದೆ. ಪ್ರಕಾಶಮಾನನಾದ ಸೂರ್ಯನು ಆವನ ಕಣ್ಣು; ಪ್ರಾಯು ಆವನ ಪ್ರಾಣ ಹೀಗೆ ವೈಶ್ವಾನರನನ್ನು ವರ್ಣಿಸಲಾಗಿದೆ.

ಪ್ರತಿಪದಾರ್ಥ -- ಶ್ರುತಿಯ ಸಮಾಖ್ಯಾದಿಂದ ವೈಶ್ವಾನರ ಎಂಬ ಶಬ್ದದಿಂದ ವಿಷ್ಣುವನ್ನೇ ಪ್ರತಿಪಾದಿಸುವುದಕ್ಕಾಗಿ 'ಪುರುಷವಿಧಮಪ್ಯೇನಮಧೀಯತೇ' ಎಂಬ ಸೂತ್ರದ ಭಾಗವನ್ನು ವ್ಯಾಖ್ಯಾನಿಸುತ್ತಿದ್ದಾರೆ.

ಪುರುಷಸೂಕ್ತದಲ್ಲಿ ಚಂದ್ರಮಾಃ = ಚಂದ್ರನು, ಮನಸಃ ಜಾತಃ = ಮನಸ್ಸಿನ ದೆಸೆಯಿಂದ ಹುಟ್ಟಿದನು. ಚಕ್ಷೋಃ = ಚಕ್ಷುರಿಂದ್ರಿಯದಿಂದ, ಸೂರ್ಯಃ = ಆದಿತ್ಯನು, ಅಜಾಯತ = ಜನಿಸಿದನು. ಇತ್ಯಾದಿನಾ = ಪುರುಷಸೂಕ್ತವು ವರ್ಣಿಸಿದ ಇದೇ ಕ್ರಮದಿಂದ, ಯಃ = ಯಾವ, ಪುರುಷಾಖ್ಯಃ = ಪುರುಷಶಬ್ದವಾಚ್ಯನಾದ ಪರಮಾತ್ಮನು, ಅಭಿಹಿತಃ = ಪ್ರತಿಪಾದ್ಯನಾಗಿದ್ದಾನೋ, ತದ್ವಿಧಮೇವ = ತಾದೃಶಗುಣವಿಶಿಷ್ಟನಾದವನನ್ನೇ ಆದೇ ಕ್ರಮದಲ್ಲಿಯೇ, ಅತ್ರ = ವೈಶ್ವಾನರ ಪ್ರಕರಣದಲ್ಲಿ, ಮೂರ್ಧೈವ ಸುತೇಜಾಃ = ಸ್ವರ್ಗಲೋಕವೇ ವೈಶ್ವಾನರ ಶಿರೋಭಾಗವು, ವಿಶ್ವರೂಪಃ = ಎಲ್ಲಿಡೆ ಪ್ರಕಾಶರೂಪನಾದ ಸೂರ್ಯನು, ಚಕ್ಷುಃ = ಕಣ್ಣು, ಪ್ರಾಣಃ = ಪ್ರಾಣವು, ಪೃಥಗ್ವರ್ತ್ಮಾ = ಪ್ರತ್ಯೇಕಮಾರ್ಗವುಳ್ಳ ವಾಯು, ಇತ್ಯಾದಿನಾ = ಇವೇ ಮೊದಲಾದ ವಾಕ್ಯಗಳಿಂದ, ಏನಮ್ = ಇಂತಹ ವೈಶ್ವಾನರಂ ವೈಶ್ವಾನರನನ್ನು, ಅಧೀಯತೇ = ಧಂದೋಗರು ಅಧ್ಯಯನ ಮಾಡುತ್ತಾರೆ. ಹೀಗೆ ವೈಶ್ವಾನರನು ವಿಷ್ಣುವೇ ಆಗಿದ್ದಾನೆಂದು ಸಿದ್ಧವಾಗುತ್ತದೆ.(೧)

भाष्यम् – चशब्देन सकलवेदतन्त्रपुराणादिषु विष्णुपरत्वं पुरुषसूक्तस्य दर्शयति ।

ಅನುವಾದ - 'ಪುರುಷಮಿದಮಪಿ ಚ' ಎಂಬ ಸೂತ್ರದಲ್ಲಿರುವ ಚ ಶಬ್ದದಿಂದ ಸಕಲವೇದ, ತಂತ್ರ, ಪುರಾಣಗಳಲ್ಲಿ ಪುರುಷಸೂಕ್ತವು ವಿಷ್ಣುವನ್ನೇ ಪ್ರತಿಪಾದಿಸುತ್ತದೆಂಬುದು ಪ್ರಸಿದ್ಧವಾಗಿದೆ ಎಂದು ಸೂಚಿಸಿದ್ದಾರೆ.

(೧) **ಭಾಷ್ಯದೀಪಿಕಾ** – श्रुतिसमाख्यया च वैश्वानरस्य विष्णुत्वमुपपादयितुं प्रवृत्तं 'पुरुषविधमप्येनमधीयते' इत्यंशं व्याचष्टे – **चन्द्रमा इति** ।। अत्र 'चन्द्रमाः' इति वाक्यं प्रतीकत्वेन गृहीतम् । उदाहरणवाक्यं तु 'चक्षोः सूर्यो अजायत' इति ध्येयम् । प्रथमादिपदेन 'शीर्ष्णो द्यौः समवर्तत, प्राणाद्वायुरजायत, पद्भ्यां भूमिः' (तै.आ. ३-१२.) इत्यादिकं द्वितीयादिपदेन 'सन्दोहो बहुलो वस्तिरेव रयिः पृथिव्येव पादौ' इत्यादिकं गृह्यते । एतमित्यस्य व्याख्यानं – वैश्वानरमिति ।। तथा च – यस्मात् पुरुषसूक्ते 'शीर्ष्णो द्यौः समवर्तत, चक्षोस्सूर्यो अजायत' इत्यादिना शब्देन यः पुरुषाख्यो विष्णुः यद्विधो द्युम्वादिजनकशीर्षादिमानभिहितः, तद्विधमेव द्युम्वादिजनकशीर्षादिमत्त्वप्रकारोपेतमेवात्र छान्दोग्ये 'मूर्धैव सुतेजाः' इत्यादिना वाक्येनैनं वैश्वानरमधीयते छन्दोगाः तस्मात् पुरुषसूक्तसमाख्ययाऽपि वैश्वानरो विष्णुरेवेति योजना ।

ಪ್ರತಿಪದಾರ್ಥ -- ಪುರುಷಸೂಕ್ತವು ವಿಷ್ಣುಪರವಾದರೆ ಅದರ ಸಮಾಖ್ಯಾದಿಂದ ವೈಶ್ವಾನರ ವಿದ್ಯೆಯು ವಿಷ್ಣುಪರವೆಂದು ನಿರ್ಣಯವಾಗುತ್ತಿತ್ತು. ಆದರೆ ಪುರುಷಸೂಕ್ತವು ವಿಷ್ಣುಪರವೇ ಆಗಿದೆ ಎಂಬುದನ್ನು ಹೇಗೆ ನಿರ್ಣಯಿಸುತ್ತೀರಿ? ಎಂಬ ಪ್ರಶ್ನೆಗೆ ಉತ್ತರಿಸುತ್ತಿದ್ದಾರೆ. -

ಚ ಶಬ್ದೇನ = ಪುರುಷವಿಧಮಪಿ ಚ ಎಂಬ ಸೂತ್ರದಲ್ಲಿರುವ ಚ ಶಬ್ದದಿಂದ ಋಗಾದಿ ಸಕಲವೇದಗಳು, ತಂತ್ರ, ಪಂಚರಾತ್ರ ಮಹಾಭಾರತಗಳು, ಪುರಾಣಾದಿಷು = ಸಕಲಪುರಾಣಗಳು ಇವುಗಳಲ್ಲಿ, ಪುರುಷಸೂಕ್ತಸ್ಯ = ಪುರುಷಸೂಕ್ತಕ್ಕೆ , ವಿಷ್ಣುಪರತ್ವಂ = ಮುಖ್ಯವಾದ ವಿಷ್ಣುಪರತ್ವವನ್ನು, ದರ್ಶಯತಿ = ಸೂಚಿಸಿದ್ದಾರೆ.(೧)

ಭಾಷ್ಯಮ್ – ತಥಾ ಚ ಬ್ರಾಹ್ಮೇ –

'ಯಥೈವ ಪೌರುಷಂ ಸೂಕ್ತಂ ನಿತ್ಯಂ ವಿಷ್ಣುಪರಾಯಣಮ್ ।
ತಥೈವ ಮೇ ಮನೋ ನಿತ್ಯಂ ಭೂಯಾದ್ ವಿಷ್ಣುಪರಾಯಣಮ್ ॥' ಇತಿ ।

ಅನುವಾದ - ಇದೇ ವಿಷಯದಲ್ಲಿ ಬ್ರಾಹ್ಮಪುರಾಣದ ಆಧಾರ ಹೀಗಿದೆ. ಪುರುಷಸೂಕ್ತವು ಕೇವಲ ವಿಷ್ಣುವನ್ನು ಹೇಗೆ ಪ್ರತಿಪಾದಿಸುತ್ತದೋ ಅದರಂತೆ ನನ್ನ ಮನಸ್ಸು ನಿರಂತರವಾಗಿ ವಿಷ್ಣುವಿನಲ್ಲೇ ಆಸಕ್ತವಾಗಲಿ .

ಪ್ರತಿಪದಾರ್ಥ -- ಪುರುಷಸೂಕ್ತವು ವಿಷ್ಣುಪರವೇ ಆಗಿದೆ ಎನ್ನಲು ಪುರಾಣದ ಆಧಾರವನ್ನು ನೀಡುತ್ತಿದ್ದಾರೆ. ತಥಾ ಚ = ಇದೇ ವಿಷಯದಲ್ಲಿ, ಬ್ರಾಹ್ಮೇ = ಬ್ರಹ್ಮ ಪುರಾಣವು ಹೀಗೆ ಹೇಳಿದೆ - ಯಥೈವ = ಯಾವ ರೀತಿಯಾಗಿ, ಪೌರುಷಂ = ಪುರುಷಸಂಬಧಿಯಾದ, ಸೂಕ್ತಮ = ಸೂಕ್ತವು, ನಿತ್ಯಮ್ = ಯಾವಾಗಲು, ವಿಷ್ಣುಪರಾಯಣಂ = ವಿಷ್ಣುವನ್ನೇ ಪ್ರತಿಪಾದಿಸುತ್ತದೋ, ತಥೈವಾ = ಹಾಗೆಯೇ, ಮೇ = ನನ್ನ, ಮನಃ = ಮನಸ್ಸು, ನಿತ್ಯಮ್ = ನಿರಂತರವಾಗಿ, ವಿಷ್ಣುಪರಾಯಣಮ್ = ವಿಷ್ಣುವಿನಲ್ಲೇ ಆಸಕ್ತವಾಗಿ, ಭೂಯಾತ್ = ಆಗಲಿ, ಇತಿ = ಎಂದು.(೨)

---

(೧) **ಭಾಷ್ಯದೀಪಿಕಾ** – ನನು ಪುರುಷಸೂಕ್ತಸ್ಯ ವಿಷ್ಣುಪರತ್ವೇ ಭವೇತ್ತತ್ಸಮಾಖ್ಯಯಾ ಏತದ್ವಿದ್ಯಾಯಾ ವಿಷ್ಣುಪರತ್ವಂ, ತದೇವ ಕುತ ಇತ್ಯತ ಆಹ – ಚಶಬ್ದೇನೇತಿ ।। ಶ್ರುತೇರಾಧಿಕ್ಯಾತ್ ಪ್ರಥಮಂ ಪ್ರತಿಜ್ಞಾ । 'ಪುರುಷಸೂಕ್ತಸ್ಯ' ಇತ್ಯನಂತರಂ 'ಪ್ರಸಿದ್ಧಮಿತಿ' ಶೇಷಃ । 'ದರ್ಶಯತಿ' ಸೂಚಯತಿ ಸೂತ್ರಕಾರ ಇತ್ಯರ್ಥಃ । ಆತ್ಮಶಬ್ದಸ್ಮೃತಿಸಮಾಖ್ಯಾಪ್ರಕರಣಸಮುಚಯಸ್ಯೇವ ಪ್ರಕರಣಶ್ರುತಿಸಮುಚಯಸ್ಯಾಪಿ ಅಪಿಪದೇನೈವ ಸಿದ್ಧತ್ವಾನ್ನ ತತ್ರೋಪಕ್ಷೀಣಶ್ರಶಬ್ದ ಇತಿ ಭಾವಃ ।।

(೨) **ಭಾಷ್ಯದೀಪಿಕಾ** – ಕಿಂ ತಚ್ಚೇದಾದೀತ್ಯತಃ ಶ್ರುತೇಃ ಸಾಕ್ಷಾತ್ಪ್ರತಿಜ್ಞಾತಾರ್ಥಸಾಧಕತ್ವಾತ್ ಪ್ರತಿಜ್ಞಾಕ್ರಮಮತಿಕ್ರಮ್ಯ ಸಾಕ್ಷಾತ್ಪ್ರತಿಜ್ಞಾತಾರ್ಥಸಾಧಕತ್ವಾದಾದೌ ಪುರಾಣವಾಕ್ಯಂ ಪಠತಿ – ತಥಾ ಚೇತಿ ।। ಸೂತ್ರೇ ಪುರುಷಸೂಕ್ತಸ್ಯ ವಿಷ್ಣುಪರತ್ವಂ ಸಿದ್ಧಮಿತಿ ಯಥೋಕ್ತಂ ತಥಾ ಬ್ರಾಹ್ಮೇ ಚೋಕ್ತಮಿತ್ಯರ್ಥಃ । ಚಃ ಸಮುಚಯೇ । ಏವಮ್ ಉತ್ತರತ್ರಾಪಿ 'ಉಕ್ತಮ್' ಇತಿ ಪದಾಧ್ಯಾಹಾರೇಣ ಸಪ್ತಮ್ಯಂತಪದಾನಾಮನ್ವಯೋ ದ್ರಷ್ಟವ್ಯಃ ।

ಭಾಷ್ಯಮ್ – ಚತುರ್ವೇದಶಿಖಾಯಾಂ ಚ –

'ಸಹಸ್ರಶೀರ್ಷಾ ಪುರುಷಃ ಸಹಸ್ರಾಕ್ಷಃ ಸಹಸ್ರಪಾತ್' ಇತಿ । 'ಏಷ ಹ್ಯೇವಾಚಿನ್ತ್ಯಃ ಪರಃ ಪರಮೋ ಹರಿರಾದಿರನಾದಿರನನ್ತೋऽನನ್ತಶೀರ್ಷೋऽನನ್ತಾಕ್ಷೋऽನನ್ತಬಾಹುರನನ್ತಗುಣೋऽನನ್ತರೂಪಃ'ಇತಿ ।

ಅನುವಾದ - 'ಸಹಸ್ರಶೀರ್ಷಾ ಪುರುಷಃ ಸಹಸ್ರಾಕ್ಷಃ ಸಹಸ್ರಪಾತ್' ಎಂಬುದಾಗಿ ಪುರುಷಸೂಕ್ತದಲ್ಲಿ ಪ್ರತಿಪಾದ್ಯನಾದ ಆ ಚಿಂತ್ಯನಾದ ಲೌಕವಿಲಕ್ಷಣನೂ, ಸರ್ವೋತ್ತಮನೂ, ಅನಾದಿಯೂ, ಅನಂತನೂ ಆದ ಶ್ರೀಹರಿಯು ಅನಂತ ಮುಖವುಳ್ಳವನು, ಅನಂತವಾದ ಕಣ್ಣುಗಳುಳ್ಳವನು, ಅನಂತವಾದ ತೋಳುಗಳುಳ್ಳವನು, ಅಸಂಖ್ಯವಾದ ರೂಪಗಳೂ, ಗುಣಗಳೂ ಉಳ್ಳವನು. ಎಂಬುದಾಗಿ ಚತುರ್ವೇದಶಿಖೆಯು ಹೇಳಿದೆ.

ಪ್ರತಿಪದಾರ್ಥ -- ಪುರುಷಸೂಕ್ತವು ವಿಷ್ಣುವನ್ನೇ ಪ್ರತಿಪಾದಿಸುತ್ತದೆನ್ನಲು ಶ್ರುತಿಯನ್ನು ಪ್ರಮಾಣವಾಗಿ ಹೇಳುತ್ತಿದ್ದಾರೆ -

ಚತುರ್ವೇದ ಶಿಖಾಯಾಂ ಚ = ಚತುರ್ವೇದ ಶಿಖಾ ಎಂಬ ಗ್ರಂಥದಲ್ಲೂ ಹೀಗೆ ಹೇಳಲಾಗಿದೆ, ಸಹಸ್ರಶೀರ್ಷಾ ಪುರುಷಃ = ಅನಂತವಾದ ಶಿರಸ್ಸುಗಳುಳ್ಳ, ಪುರುಷ ಶ್ರೇಷ್ಠನಾದ ನಾರಾಯಣನು, ಸಹಸ್ರಾಕ್ಷಃ = ಅನಂತವಾದ ಕಣ್ಣುಗಳುಳ್ಳವನು, ಸಹಸ್ರಪಾತ್ = ಅನಂತವಾದ ಕಾಲುಗಳುಳ್ಳವನು, ಇತಿ = ಹೀಗೆ, ಏಷ ಹ್ಯೇವ = ಇಂತಹ ವ್ಯಕ್ತಿಯೇ, ಅಚಿಂತ್ಯಃ = ಅಪ್ರಮೇಯನು, ಪರಃ = ವಿಲಕ್ಷಣನೂ, ಪರಮಃ = ಉತ್ತಮನೂ, ಹರಿಃ = ಪಾಪ ನಾಶಕನು, ಆದಿಃ = ಜಗತ್ ಕಾರಣನು, ಅನಾದಿಯು, ಅನಂತಃ = ನಾಶವಿಲ್ಲದವನೂ, ಅನಂತಶೀರ್ಷಃ = ಅನಂತವಾದ ತಲೆಗಳುಳ್ಳವನೂ, ಅನಂತಾಕ್ಷಃ = ಅನಂತವಾದ ಕಣ್ಣುಗಳುಳ್ಳವನೂ, ಅನಂತಬಾಹುಃ = ಅನಂತವಾದ ಬಾಹುಗಳುಳ್ಳವನೂ, ಅನಂತಗುಣಃ = ಅನಂತವಾದ ಗುಣಗಳುಳ್ಳವನೂ, ಅನಂತರೂಪಃ = ಅನಂತವಾದ ರೂಪಗಳುಳ್ಳವನು, ಇತಿ = ಹೀಗೆ.(೧)

'ನಿತ್ಯಂ' ನಿಯಮೇನ 'ವಿಷ್ಣುಪರಾಯಣಂ' ವಿಷ್ಣೌ ಮಹಾತಾತ್ಪರ್ಯವತ್ । ದ್ವಿತೀಯಸ್ಯ ನಿತ್ಯಮಿತ್ಯಸ್ಯ ಸದೇತ್ಯರ್ಥಃ । 'ಇತಿ ಬ್ರಾಹ್ಮ ಇತಿ' ಇತಿಶಬ್ದಾನ್ವಯಃ । ಸಿದ್ಧಾರ್ಥಸ್ಯೈವ ದೃಷ್ಟಾನ್ತತ್ವಾದನೇನ ಬ್ರಾಹ್ಮವಚನೇನ ವಿವಕ್ಷಿತಾರ್ಥೋ ಜ್ಞಾಯತೇ ।।

(೧) ಭಾಷ್ಯದೀಪಿಕಾ – ಪ್ರತಿಜ್ಞಾತಾಂ ಶ್ರುತಿಂ ದರ್ಶಯಿತುಂ ಪ್ರಥಮಮೇವ ತತ್ಸ್ಥಾನಮಾಹ – ಚತುರ್ವೇದಶಿಖಾಯಾಂ ಚೇತಿ ।। ಅತ್ರ ಚತುರ್ವೇದಶಿಖಾಶ್ರುತಿಃ 'ಸಹಸ್ರ' ಇತ್ಯಾರಭ್ಯ 'ಸಹಸ್ರಪಾತ್' ಇತ್ಯನ್ತೇನ ಪುರುಷಸೂಕ್ತಮುಪನ್ಯಸ್ಯ 'ಏಷ ಹ್ಯೇವ' ಇತ್ಯನೇನ 'ಸಹಸ್ರಶೀರ್ಷಾ ಪುರುಷಃ' ಇತ್ಯುಕ್ತೋ ಹರಿರೇವ ನಾನ್ಯ ಇತ್ಯೇತತ್ಸೂಕ್ತಂ ವಿಷ್ಣುಪರತಯಾ ವ್ಯಾಖ್ಯಾತೀತಿ ಪ್ರಕೃತಸಙ್ಗತಿಃ । ಸುಪ ಆಕಾರೋ ವೈದಿಕಃ । ಏಷಃ ಕ ಇತ್ಯತೋ ಯಃ 'ಪರೋ' ವಿಲಕ್ಷಣಃ ಅತ ಏವ 'ಅಚಿನ್ತ್ಯಃ' ಮನಸಾ 'ಪರಮಃ' ಉತ್ತಮಃ 'ಆದಿಃ' ಕಾರಣಭೂತಃ 'ಅನಾದಿಃ' ಉತ್ಪತ್ತಿಶೂನ್ಯಃ

ಭಾಷ್ಯಮ್ – ಬೃಹತ್ಸಂಹಿತಾಯಾಂ ಚ -

'ಯಥಾ ಹಿ ಪೌರುಷಂ ಸೂಕ್ತಂ ವಿಷ್ಣೋರೇವಾಭಿಧಾಯಕಮ್ ।
ನ ತಥಾ ಸರ್ವವೇದಾಶ್ಚ ವೇದಾಙ್ಗಾನಿ ಚ ನಾರದ ॥' ಇತ್ಯಾದಿ ।

ಅನುವಾದ – ಬೃಹತ್ ಸಂಹಿತೆಯಲ್ಲೂ ಸಹ ಹೀಗೆ ಹೇಳಲಾಗಿದೆ ಎಲೈ ನಾರದರೆ ! ಪುರುಷಸೂಕ್ತವು ಹೇಗೆ ವಿಷ್ಣುವನ್ನೇ ಪ್ರತಿಪಾದಿಸುತ್ತದೋ ಅದರಂತೆ ವೇದ ವೇದಾಂಗಗಳೂ ಸಹ ಭಗವಂತನನ್ನು ಪ್ರತಿಪಾದಿಸುವುದಿಲ್ಲ.

ಪ್ರತಿಪದಾರ್ಥ -- ಬೃಹತ್ ಸಂಹಿತಾಯಾಂ ಚ = ಬೃಹತ್ ಸಂಹಿತೆಯಲ್ಲಿಯೂ ಸಹ, ಯಥಾ ಹಿ = ಹೀಗೆ, ಪೌರುಷಂ ಸೂಕ್ತಂ = ಪುರುಷಸೂಕ್ತವು, ವಿಷ್ಣೋರೇವಾ = ವಿಷ್ಣುವನ್ನೇ, ಅಭಿಧಾಯಕಮ್ = ಹೇಳುತ್ತದೋ, ತಥಾ = ಹಾಗೆ, ಸರ್ವೇ ವೇದಾಶ್ಚ = ಋಗಾದಿ ಸಕಲವೇದಗಳು, ವೇದಾಂಗಾನಿ = ಶಿಕ್ಷಾದಿ ಷಡಂಗಗಳೂ, ನ ತಥಾ = ಪುರುಷಸೂಕ್ತದಂತೆ ಸಷ್ಟವಾಗಿ ಭಗವಂತನನ್ನು ಪ್ರತಿಪಾದಿಸುವುದಿಲ್ಲ. ನಾರದಾ = ಎಲೈ ನಾರದರೆ ಈ ವಿಷಯವನ್ನು ತಿಳಿಯಿರಿ, ಇತ್ಯಾದಿ = ಇವೇ ಮೊದಲಾದ ಬ್ರಹ್ಮದೇವರ ಮಾತುಗಳಿಂದ ಈ ವಿಷಯವನ್ನು ಸ್ಪಷ್ಟಪಡಿಸಿಕೊಳ್ಳಬೇಕು.(೧)

'ಅನನ್ತಃ' ನಾಶಶೂನ್ಯಃ, ಸ್ವರೂಪತೋऽಪರಿಚ್ಛಿನ್ನೋ ವಾ ಹರಿಃ ಸ ಇತ್ಯಾಹ । ಕುತೋऽಯಂ ಪುರುಷಃ ಸಹಸ್ರಶೀರ್ಷಾ? 'ಹಿ' ಯಸ್ಮಾದನನ್ತಶೀರ್ಷ । ಕುತಃ ಸಹಸ್ರಾಕ್ಷಃ? ಯಸ್ಮಾದಯಮನನ್ತಾಕ್ಷಃ। ಕುತೋऽಯಂ ಸಹಸ್ರಪಾತ್? ಯಸ್ಮಾದನನ್ತಬಾಹುಃ । ಅನನ್ತಪಾದಿತ್ಯಸ್ಯಾप್ಯುಪಲಕ್ಷಕಮೇತತ್ । ಏವಂ ಪೂರ್ವವಾಕ್ಯೇऽಪಿ 'ಸ ಭೂಮಿಮ್' ಇತ್ಯುತ್ತರವಾಕ್ಯೇऽप್ಯುಪಪಾದಕಮಾಹ – ಅನನ್ತಗುಣೋऽನನ್ತರೂಪೋऽನನ್ತಾऽಕಾರ ಇತಿ ।। ಚತುರ್ವೇದಶಿಖಾಯಾಮಿತ್ಯನ್ವಯಃ ।

(೧) ಭಾಷ್ಯದೀಪಿಕಾ – ಬ್ರಾಹ್ಮವಾಕ್ಯಸ್ಯ ಪುರುಷಸೂಕ್ತಸ್ಯ ಲಕ್ಷಣಯಾ ವಿಷ್ಣುಪರತ್ವೇऽನ್ಯಪರತ್ವೇऽಪಿ ವಾ ಸಾವಕಾಶತ್ವಾನ್ನ ತತ್ಪ್ರತಿಜ್ಞಾತಾರ್ಥನಿಶ್ಚಾಯಕಮಿತ್ಯತೋ ವ್ಯಾಖ್ಯಾನವ್ಯಾಖ್ಯೇಯಭಾವಾಖ್ಯದ್ವಾರಮನ್ತರೇಣ ಪುರುಷಸೂಕ್ತಂ ಮುಖ್ಯತೋ ವಿಷ್ಣೋರೇವಾಭಿಧಾಯಕಮಿತಿ ಸಾಕ್ಷಾತ್ಪ್ರತಿಜ್ಞಾತಾರ್ಥಸಾಧಕಂ ಸ್ಮೃತಿವಾಕ್ಯಂ ತತ್ಸ್ಥಾನನಿರ್ದೇಶಪೂರ್ವಕಂ ಪಠತಿ – ಬೃಹತ್ಸಂಹಿತಾಯಾಂ ಚೇತಿ ।। ಚಕಾರಃ ಪೂರ್ವಸಮುಚ್ಚಯಾರ್ಥಃ । 'ವೇದಾಙ್ಗಾನಿ' ಶಿಕ್ಷಾದೀನಿ ಬ್ರಹ್ಮವಾಕ್ಯಮೇತತ್ । 'ಇತ್ಯಾದಿ' ಬೃಹತ್ಸಂಹಿತಾಯಾಮುಕ್ತಮಿತ್ಯನ್ವಯಃ । ಆದಿಪದೇನ 'ಸರ್ವತಃ ಪೌರುಷೇ ಸೂಕ್ತೇ ಗುಣಾ ವಿಷ್ಣೋರುದೀರಿತಾಃ' ಇತಿ ಬ್ರಹ್ಮತರ್ಕಾದಿಗ್ರಹಣಮ್ । 'ಸರ್ವತಃ' ಸರ್ವೇ ಗುಣಾಃ । ಸಾಮಾನ್ಯೇನೇತಿ ಶೇಷಃ । ಸರ್ವಸ್ಮಿನ್, ಸರ್ವಸ್ಮಾತ್ ವೇದತದಙ್ಗೇಭ್ಯೋऽತಿಶಯೇನೇತಿ ವಾ ।।

भाष्यम् –

'यस्माद्यज्जायते चाङ्गाल्लोकवेदादिकं हरेः ।
तन्नामवाच्यमङ्गं तद् यथा ब्रह्मादिकं मुखम् ॥'

इति नारदीयवचनान्नाभेदोक्तिविरोधः ॥ २६ ॥

ಅನುವಾದ - ಸಕಲ ಪದಾರ್ಥಗಳೂ, ಲೋಕಗಳೂ,ಯಾವ ಶ್ರೀಹರಿಯ ಅಂಗದಿಂದ ಹುಟ್ಟಿ ಅವನನ್ನೇ ಆಶ್ರಯಿಸಿ, ಅವನಲ್ಲೇ ಲೀನವಾಗುತ್ತದೋ, ಅಂತಹ ಅಂಗಗಳನ್ನು , ಬ್ರಾಹ್ಮಣನೇ ವಿಷ್ಣುವಿನ ಮುಖ ಎಂಬಂತೆ ಆಯಾ ಲೋಕ ವೇದಗಳ ಹೆಸರಿನಿಂದಲೇ ಕರೆಯಬೇಕು. ಹೀಗೆ ನಾರದ ಪುರಾಣದ ವಚನವಿರುವುದರಿಂದ ವೈಶ್ವಾನರ ವಿದ್ಯೆಯಲ್ಲಿ ಪರಮಾತ್ಮನ ಶಿರಸ್ಸಿಗೂ ಸ್ವರ್ಗಲೋಕಕ್ಕೂ ಅಭೇದವನ್ನು ಹೇಳಿರುವುದಕ್ಕೆ ವಿರೋಧವು ಬರುವುದಿಲ್ಲ.

ಪ್ರತಿಪದಾರ್ಥ -- ಯಸ್ಮಾತ್ = ಯಾವ, ಹರೇಃ = ಶ್ರೀಹರಿಯ, ಅಂಗಾತು = ಅವಯವದಿಂದ, ಲೋಕವೇದಾದಿಕಮ್ = ಲೋಕ ಹಾಗೂ ವೇದಗಳು, ಜಾಯತೇ = ಹುಟ್ಟುತ್ತವೋ, ತತಃ = ಅವುಗಳು, ತನ್ನಾಮ ವಾಚ್ಯಮ್ = ಅವೇ ಹೆಸರುಗಳಿಂದ ಕರೆಸಿಕೊಳ್ಳುತ್ತವೆ, ಅಂಗಂಚ = ಅವನ ಅವಯವವು, ತನ್ನಾಮವಾಚ್ಯಮ್ = ಆ ವಸ್ತು ಶಬ್ದ ವಾಚ್ಯವೇ ಆಗುತ್ತದೆ, ಯಥಾ = ಹೇಗೆಂದರೆ, ಬ್ರಹ್ಮಾದಿಕಮ್ = ಬ್ರಾಹ್ಮಣಾದಿವರ್ಣಗಳು, ಮುಖಮ್ = ಮುಖವೆಂದು, ಕರೆಯುತ್ತಾರೋ, ಇತಿ = ಹೀಗೆ, ನಾರದೀಯ ವಿರೋಧಮ್ = ಪರಮಾತ್ಮನ ಅವಯವಗಳಿಂದ ಅಭಿನ್ನವೆಂಬ ವ್ಯವಹಾರವು ವಿರುದ್ಧವಾಗುವುದಿಲ್ಲ.(१)

---

(१) **भाष्यदीपिका** – ननु पुरुषसूक्ते द्युभ्वादिजनकशीर्षादिमत्त्वं पुरुषस्योच्यते । वैश्वानरविद्यायां तु वैश्वानरस्य तदभेद उच्यते । तदुभयोर्विरुद्धार्थत्वान्नेयं समाख्येत्यत आह – **यस्मादिति** ।।'लोकः' स्वर्गादिः 'वेदः' ऋगादिः । यद्यपि नात्र छान्दोग्ये वेदाभेद उच्यते इति न तद्गतिर्वक्तव्या । तथाऽपि श्रुत्यन्तरगताभेदवाक्यार्थनिर्णयायायमंशः प्रवृत्तः । यद्वा – वेदशब्देन 'उर एव वेदिः' इत्युक्ता वेदिर्गृह्यते । 'तृतीयोऽतिशये' इत्युक्तत्वात् । 'वेद्यादिकम्' इति पाठःस्वरसः । तथा च 'यस्मात् यस्माद् हरेरङ्गात् यद्यत् लोकवेदादिकं जायते', यदाश्रित्य तिष्ठति, यत्र लीयते च तज्जनकमङ्गं तस्मात् 'तन्नामवाच्यं' तस्य लोकादेर्यन्नाम वाचकशब्दः, तेन मुख्यवाच्यं भवति । अत एव तदभिन्नत्वेन प्रतीयते च । न तावता तयोरभेदो मन्तव्य इत्यर्थः । अत्र दृष्टान्तमाह – **यथेति** ।। मुखमित्युपलक्षणम् । तथा च – भगवन्मुखादिर्ब्राह्मणादिजातिजनकत्वाद् ब्राह्मणादिनाम्नोच्यते 'ब्राह्मणोऽस्य मुखमासीत्' (तै.आ.३-१२) इत्यादौ । अत एव तदभिन्नत्वेन प्रतीयते च सामानाधिकरण्यात् । तद्वदत्रापीत्यर्थः । न ह्यत्र पुरुषोत्तममुखादिभिरभेदो ब्राह्मणादीनामुच्यते, 'पञ्चयां शूद्रो अजायत' (तै.आ. ३-१२.)

ಶ್ರೀಪದ್ಮನಾಭತೀರ್ಥವಿರಚಿತಸತ್ತರ್ಕದೀಪಾವಳ್ಯಾಮ್:

ॐ शब्दादिभ्योऽन्तःप्रतिष्ठानान्नेति चेन्न तथा दृष्ट्युपदेशादसम्भवात् पुरुषविधमपि चैनमधीयते ॐ ॥ १-२-२६ ॥

उक्तार्थमाक्षिप्यं समर्थयत्सूत्रं पठित्वा व्याचष्टे – शब्देत्यादिना ॥

इत्युत्तरवाक्यविरोधात् । इति वचनादित्युक्तत्वाद् वैश्वानराङ्गानां 'मूर्धैव' इति लोकाद्यभेदोक्तिनिमित्तो विरोधो नेत्यर्थः । अभेदप्रत्ययकोक्तेस्तज्जन्यजनकभाव-विवक्षापूर्वकत्वादिति भावः । अनेन भगवतो मूर्धा सुतेजस्त्वादिगुणयोगात् सुतेजःशब्दित स्वर्गजनकत्वात् सुतेजा इत्युच्यते ॥

एवं 'चक्षुर्विश्वरूपः' सर्वप्रकाशकत्वगुणयोगाद् विश्वरूपशब्दितसूर्यजनकत्वात् तच्छब्देनोच्यते । 'प्राणः पृथग्वर्त्माऽऽत्मा' (छां. ५-१८-२.) वायुजनकत्वात् तच्छब्दित इति श्रुत्यर्थः सूचितः । आत्मशब्दः स्वरूपार्थो मध्यदेहार्थो वा । छान्दोग्यभाष्ये तु – 'मूर्धा विष्णोश्चिरः स्वर्गाधारं धुनामकम्' अतितेजसा सुतेजोनामकं च । विश्वानि रूपाणि विषयत्वेन यस्येति विग्रहाश्रयेण सर्वरूपातिदर्शनाच्चक्षुर्विश्वरूपाख्यम् । एवं विष्णोः प्राणो नृसिंहाख्यो वाय्वादिप्राणशक्यं यत्र भवति तस्य पृथग्वर्त्माऽऽत्मा पृथग्विलक्षणो मार्गो यस्य स चासावात्मा चेति, इति निमित्तान्तरेण श्रुतिर्व्याख्याता । एवं बहुलरयि-पृथिवीशब्दिताका शवारिवसुन्धरादेवताजनकत्वात् सन्दोहवस्तिपादपदोक्तानि मध्यदेहकटिप्रपदरूपाणि भगवतो वैश्वानरस्याङ्गानि तत्तच्छब्दवाच्यानीत्यपि ज्ञातव्यम् ॥

अनेन 'शब्दादिभ्यः' अग्र्यादिश्रुतेः गार्हपत्याद्यङ्गवत्त्वादिलिङ्गाच्च पाचकत्वेनान्तः-प्रतिष्ठानाच्च वैश्वानरो विष्णुरेवेति निश्चयो न युज्यत इति चेत् – न, अन्यश्रुतिलिङ्गादीनां विष्णौ सावकाशत्वेनाऽत्मशब्दादेरेव निश्चयोपपत्तेः । कुतः सावकाशत्वम्? 'तथा दृष्ट्युपदेशात्' अग्र्यादिनामलिङ्गकर्मवत्त्वेन विष्णोरुपासनोपदेशात् । न चाऽत्मशब्दादेरन्यत्रास्त्यवकाशः, अन्यत्राऽऽत्मत्वादेरसम्भवात् । न केवलमात्मशब्दस्मृतिसमाख्यानाद्वैश्वानरो विष्णुरेवेति निश्चयः, अपि तु आरम्भाच्च प्रकरणबलाच्च । नच वैश्वानरविद्याया विष्णुप्रकरणत्वसिद्धिः, 'को न आत्मा किं ब्रह्म' इति विचारपूर्वकमस्याऽरभ्याधीतत्वात् । न चाऽत्मत्व-ब्रह्मत्वोपक्रमेऽपि कुतोऽस्य विष्णुपरता, आत्मत्वब्रह्मत्वादीनामग्र्यादावसम्भवात् । न केवलं स्मृतिसमाख्याप्रकरणबलाद्वैश्वानरो विष्णुरेवेति निश्चीयते, किन्तु यतः पुरुषसूक्ते पुरुषो यद्विधोऽभिहितः तद्विधमेवैनं विष्णुं 'मूर्धैव' इत्यादिनाऽधीयते छन्दोगाः । अतः श्रुतिसमाख्यानादपि । चशब्दः पुरुषसूक्तस्य विष्णुपरत्वं बहुप्रमाणसिद्धमिति द्योतयतीति सूत्रवृत्तिर्दर्शिता भवति ॥

ಪರಿಪೂರ್ಣಚಂದ್ರಿಕಾ

ಹಿಂದೆ ಹೇಳಿದ ಪ್ರಮೇಯವನ್ನು ಆಕ್ಷೇಪಿಸಿ ಉತ್ತರಿಸುವುದಕ್ಕಾಗಿ ಸೂತ್ರವನ್ನು ಪಠನ ಮಾಡಿ ವ್ಯಾಖ್ಯಾನಿಸುತ್ತಿದ್ದಾರೆ ''ಶಬ್ದಾದಿಭ್ಯಃ'' ಇತ್ಯಾದಿಯಾಗಿ.

ಅಸ್ಯಾರ್ಥಃ – 'ಆತ್ಮಾನಂ ವಿಶ್ವಾನರಮ್' ಇತ್ಯಾತ್ಮಶಬ್ದೇನ ವಿಶೇಷಿತೋऽಪ್ಯಯಂ ವೈಶ್ವಾನರವಿದ್ಯಾಪ್ರತಿಪಾದ್ಯೋ ನ ವಿಷ್ಣುಃ, 'ಅಯಮಗ್ನಿರ್ವೈಶ್ವಾನರಃ' 'ವೈಶ್ವಾನರಮೃತ ಆಜಾತಮಗ್ನಿಮ್' ಇತ್ಯಾದಿನಾಗ್ನಿಶಬ್ದೇನ ವಿಶೇಷ್ಯಮಾಣತ್ವಾತ್ ।

ಇದರ ಅರ್ಥ ಹೀಗಿದೆ -- 'ಆತ್ಮಾನಂ ವೈಶ್ವಾನರಂ' ಎಂಬಲ್ಲಿ ಆತ್ಮಶಬ್ದವನ್ನು ವಿಶೇಷಣವನ್ನಾಗಿ ಹೇಳಿದ ಮಾತ್ರದಿಂದ ವೈಶ್ವಾನರಶಬ್ದದಿಂದ ಪ್ರತಿಪಾದ್ಯನಾದವನು ವಿಷ್ಣುವೇ ಆಗಿದ್ದಾನೆಂದು ಅಥವಾ ವೈಶ್ವಾನರವಿದ್ಯೆಯಿಂದ ನಿರ್ಣಯಿಸಲಾಗದು. ಏಕೆಂದರೆ 'ಅಯಮಗ್ನಿರ್ವೈಶ್ವಾನರಃ' 'ವೈಶ್ವಾನರಮೃತ ಆಜಾತಮಗ್ನಿಮ್' ಇತ್ಯಾದಿಯಾಗಿ ಅಗ್ನಿಶಬ್ದವನ್ನು ವೈಶ್ವಾನರನಲ್ಲಿ ವಿಶೇಷಣವನ್ನಾಗಿ ಹೇಳಲಾಗಿದೆ.

ಲಿಙ್ಗವಶಾದಪ್ಯಗ್ನಿರೇವಾತ್ರ ವೈಶ್ವಾನರಃ । ತಥಾಹಿ 'ವೈಶ್ವಾನರೇ ತದ್ಧುತಂ ಭವತಿ' ಇತಿ ಹವಿರಾಧಾರತ್ವಮಾತ್ಮನೋ ವೈಶ್ವಾನರಸ್ಯೇತ್ಯಾಭ್ಯ ಹೃದಯಂ ಗಾರ್ಹಪತ್ಯೇ ಇತ್ಯುಚ್ಯಮಾನಮಪ್ಯಗ್ನಿಲಿಙ್ಗಮ್ 'ಅಯಮಗ್ನಿರ್ವೈಶ್ವಾನರೋ ಯೇನೇದಮನ್ನಂ ಪಚ್ಯತೇ ತದ್ ಯದ್ಭುಕ್ತಂ ಪ್ರಥಮಮಾಗಚ್ಛೇತ್ ತದ್ಧೋಮೀಯಂ ಪ್ರಥಮಾಮಾಹುತಿಂ ಜುಹುಯಾತ್ ತಾಂ ಜುಹುಯಾತ್ ಪ್ರಾಣಾಯ ಸ್ವಾಹಾ' ಇತ್ಯಾದಿ ಶರೀರಾನ್ತಃಸ್ಥಿತಾಗ್ನಿಘಾನಾನ್ಯೇತೇ ಯುಜ್ಯನ್ತೇ ।

ಲಿಂಗದ ಆಧಾರದಿಂದಲೂ ಸಹ ಅಗ್ನಿಯೇ ಇಲ್ಲಿ ವೈಶ್ವಾನರನಾಗಿದ್ದಾನೆ. ಅದು ಹೀಗೆ --ವೈಶ್ವಾನರೇ ತದ್ಧುತಂ ಭವತಿ' ಎಂಬುದಾಗಿ ಹವಿರಾಧಾರತ್ವ ಎಂಬ ಲಿಂಗವು, ಹಾಗೂ 'ಆತ್ಮನಃ ವೈಶ್ವಾನರಸ್ಯ' ಎಂದು ಪ್ರಾರಂಭವಾಗಿ 'ಹೃದಯಂ ಗಾರ್ಹಪತ್ಯೇ' ಎಂದು ಹೇಳಿರುವುದರಿಂದ ಗಾರ್ಹಪತ್ಯತ್ವವೆಂಬ ಲಿಂಗವು ಹಾಗೂ 'ಅಯಮಗ್ನಿರ್ವೈಶ್ವಾನರೋ ಯೇನೇದಮನ್ನಂ ಪಚ್ಯತೇ ತದ್ ಯದ್ಭುಕ್ತಂ ಪ್ರಥಮಮಾಗಚ್ಛೇತ್ ತದ್ಧೋಮೀಯಂ ಪ್ರಥಮಮಾಹುತಿಂ ಜುಹುಯಾತ್ ತಾಂ ಜುಹುಯಾತ್ ಪ್ರಾಣಾಯ ಸ್ವಾಹಾ' ಎಂಬುದಾಗಿ ಶರೀರಾಂತಃಸ್ಥಿತನಾದ ಅಗ್ನಿಗೆ ಆಹುತಿದಾನ, ಹೀಗೆ ಶರೀರಾಂತಃಸ್ಥಿತತ್ವ ಮೊದಲಾದ ಲಿಂಗಗಳೆಲ್ಲವೂ ಅಗ್ನಿಯಲ್ಲಿಯೇ ಯುಕ್ತವಾಗುತ್ತವೆ.

'ಅಥ ಹೈಮಮಾತ್ಮಾನಮ್' ಇತ್ಯಾದಿಮಹೋಪನಿಷದ್ವಾಕ್ಯೇ ಅಗ್ರಾದಿನಾಮಭಿಃ ಪಾಚಕತ್ವಾದಿಧರ್ಮೈರ್ವಿಷ್ಣೂಪಾಸ್ತೇರುಪದಿಷ್ಟತ್ವೇನಾತ್ರ ವಹ್ನ್ಯಾದಿಪ್ರಾಪಕಶಬ್ದಲಿಙ್ಗಾಭಾವಾತ್ । ಅರಮತ್ಯನ್ನಮಿತ್ಯರ್ಥಃ ।

'ಅಥ ಹೇಮಮಾತ್ಮಾನಮ್' ಇತ್ಯಾದಿಯಾದ ಮಹೋಪನಿಷದ್‌ವಾಕ್ಯದಲ್ಲಿ ಅಗ್ನಿ ಮೊದಲಾದ ನಾಮಾತ್ಮಕಶಬ್ದಗಳಿಂದ ಮತ್ತು ಪಾಚಕತ್ವವೇ ಮೊದಲಾದ ಧರ್ಮಗಳಿಂದ ವಿಷ್ಣುವನ್ನು ಉಪಾಸನೆ ಮಾಡಬೇಕೆಂದು ಉಪದೇಶಿಸಲಾಗಿದೆ. ಆದ್ದರಿಂದ ವಹ್ನ್ಯಾದಿಪ್ರಾಪಕವಾದ ಯಾವುದೇ ಶಬ್ದಗಳಾಗಲೀ ಲಿಂಗಗಳಾಗಲೀ ಇರುವುದಿಲ್ಲವೆಂದು ತಿಳಿಯಬೇಕು. 'ಅರಮ್' ಎಂಬುದಕ್ಕೆ ಅನ್ನ ಎಂದರ್ಥ.

ಶ್ರೀಪದ್ಮನಾಭತೀರ್ಥವಿರಚಿತಸತ್ತರ್ಕದೀಪಾವಳ್ಯಾಮ್:

ॐ शब्दादिभ्योऽन्तःप्रतिष्ठानान्नेति चेन्न तथा दृष्ट्युपदेशादसम्भवात् पुरुषविधमपि चैनमधीयते ॐ ॥ १-२-२६ ॥

उक्तार्थमाक्षिप्य समर्थयत्सूत्रं पठित्वा व्याचष्टे – शब्देत्यादिना ।।

इत्युत्तरवाक्यविरोधात् । इति वचनादित्युक्तत्वाद् वैश्वानराङ्गानां 'मूर्धैव' इति लोकाद्यभेदोक्तिनिमित्तो विरोधो नेत्यर्थः । अभेदप्रत्यायकोक्तेस्तज्जन्यजनकभाव-विवक्षापूर्वकत्वादिति भावः । अनेन भगवतो मूर्धा सुतेजस्त्वादिगुणयोगात् सुतेजःशब्दित स्वर्गजनकत्वात् सुतेजा इत्युच्यते ।।

एवं 'चक्षुर्विश्वरूपः' सर्वप्रकाशकत्वगुणयोगाद् विश्वरूपशब्दितसूर्यजनकत्वात् तच्छब्देनोच्यते । 'प्राणः पृथग्वर्त्माऽऽत्मा' (छां. ५-१८-२.) वायुजनकत्वात् तच्छब्दित इति श्रुत्यर्थः सूचितः । आत्मशब्दः स्वरूपार्थो मध्यदेहार्थो वा । छान्दोग्यभाष्ये तु – 'मूर्धा विष्णोश्चिरः स्वर्गाधारं द्युनामकम्' अतितेजसा सुतेजोनामकं च । विश्वानि रूपाणि विषयत्वेन यस्येति विग्रहाश्रयेण सर्वरूपातिदर्शनाच्चक्षुर्विश्वरूपाख्यम् । एवं विष्णोः प्राणो नृसिंहाख्यो वाय्वादिप्राणशक्त्यं यत्र भवति तस्य पृथग्वर्त्माऽऽत्मा पृथग्विलक्षणो मार्गो यस्य स चासावात्मा चेति, इति निमित्तान्तरेण श्रुतिर्व्याख्याता । एवं बहुलरयि-पृथिवीशब्दिताका शवारिवसुन्धरादेवताजनकत्वात् सन्दोहवस्तिपादपदोक्तानि मध्यदेहकटिप्रपदरूपाणि भगवतो वैश्वानरस्याङ्गानि तत्तच्छब्दवाच्यानीत्यपि ज्ञातव्यम् ।।

अनेन 'शब्दादिभ्यः' अग्न्यादिश्रुतेः गार्हपत्याद्यङ्गवत्त्वादिलिङ्गाच्च पाचकत्वेनान्तः-प्रतिष्ठानाच्च वैश्वानरो विष्णुरेवेति निश्चयो न युज्यत इति चेत् – न, अन्यश्रुतिलिङ्गादीनां विष्णौ सावकाशत्वेनाऽत्मशब्दादेरेव निश्चयोपपत्तेः । कुतः सावकाशत्वम्? 'तथा दृष्ट्युपदेशात्' अग्न्यादिनामलिङ्गकर्मवत्त्वेन विष्णोरुपासनोपदेशात् । न चाऽत्मशब्दादेरन्यत्रास्त्यवकाशः, अन्यत्राऽत्मत्वादेरसम्भवात् । न केवलमात्मशब्दस्मृतिसमाख्यानाद्वैश्वानरो विष्णुरेवेति निश्चयः, अपि तु आरम्भाच्च प्रकरणबलाच्च । नच वैश्वानरविद्याया विष्णुप्रकरणत्वसिद्धिः, 'को न आत्मा किं ब्रह्म' इति विचारपूर्वकमस्याऽरभ्याधीतत्वात् । न चाऽत्मत्व-ब्रह्मत्वोपक्रमेऽपि कुतोऽस्य विष्णुपरता, आत्मत्वब्रह्मत्वादीनामग्न्यादावसम्भवात् । न केवलं स्मृतिसमाख्याप्रकरणबलाद्वैश्वानरो विष्णुरेवेति निश्चीयते, किन्तु यतः पुरुषसूक्ते पुरुषो यद्विधोऽभिहितः तद्विधमेवैनं विष्णुं 'मूर्धैव' इत्यादिनाऽधीयते छन्दोगाः । अतः श्रुतिसमाख्यानादपि । चशब्दः पुरुषसूक्तस्य विष्णुपरत्वं बहुप्रमाणसिद्धमिति द्योतयतीति सूत्रवृत्तिर्दर्शिता भवति ।।

ಹಿಂದೆ ಹೇಳಿದ ಪ್ರಮೇಯವನ್ನು ಆಕ್ಷೇಪಿಸಿ ಉತ್ತರಿಸುವುದಕ್ಕಾಗಿ ಸೂತ್ರವನ್ನು ಪಠನ ಮಾಡಿ ವ್ಯಾಖ್ಯಾನಿಸುತ್ತಿದ್ದಾರೆ ''ಶಬ್ದಾದಿಭ್ಯಃ'' ಇತ್ಯಾದಿಯಾಗಿ.

ಅಸ್ಯಾರ್ಥಃ – 'ಆತ್ಮಾನಂ ವಿಶ್ವಾನರಮ್' ಇತ್ಯಾತ್ಮಶಬ್ದೇನ ವಿಶೇಷಿತೋऽಪ್ಯಯಂ ವೈಶ್ವಾನರವಿದ್ಯಾಪ್ರತಿಪಾದ್ಯೋ ನ ವಿಷ್ಣುಃ, 'ಅಯಮಗ್ನಿರ್ವೈಶ್ವಾನರಃ' 'ವೈಶ್ವಾನರಮೃತ ಆಜಾತಮಗ್ನಿಮ್' ಇತ್ಯಾದಿನಾಗ್ನಿಶಬ್ದೇನ ವಿಶೇಷ್ಯಮಾಣತ್ವಾತ್ ।

ಇದರ ಅರ್ಥ ಹೀಗಿದೆ -- 'ಆತ್ಮಾನಂ ವೈಶ್ವಾನರಂ' ಎಂಬಲ್ಲಿ ಆತ್ಮಶಬ್ದವನ್ನು ವಿಶೇಷಣವನ್ನಾಗಿ ಹೇಳಿದ ಮಾತ್ರದಿಂದ ವೈಶ್ವಾನರಶಬ್ದದಿಂದ ಪ್ರತಿಪಾದ್ಯನಾದವನು ವಿಷ್ಣುವೇ ಆಗಿದ್ದಾನೆಂದು ಅಥವಾ ವೈಶ್ವಾನರವಿದ್ಯೆಯಿಂದ ನಿರ್ಣಯಿಸಲಾಗದು. ಏಕೆಂದರೆ 'ಅಯಮಗ್ನಿರ್ವೈಶ್ವಾನರಃ' 'ವೈಶ್ವಾನರಮೃತ ಆಜಾತಮಗ್ನಿಮ್' ಇತ್ಯಾದಿಯಾಗಿ ಅಗ್ನಿಶಬ್ದವನ್ನು ವೈಶ್ವಾನರನಲ್ಲಿ ವಿಶೇಷಣವನ್ನಾಗಿ ಹೇಳಲಾಗಿದೆ.

ಲಿಙ್ಗವಶಾದಪ್ಯಗ್ನಿರೇವಾತ್ರ ವೈಶ್ವಾನರಃ । ತಥಾಹಿ 'ವೈಶ್ವಾನರೇ ತದ್ಧುತಂ ಭವತಿ' ಇತಿ ಹವಿರಾಧಾರತ್ವಮಾತ್ಮನೋ ವೈಶ್ವಾನರಸ್ಯೇತ್ಯಾರಭ್ಯ ಹೃದಯಂ ಗಾರ್ಹಪತ್ಯೇ ಇತ್ಯುಚ್ಯಮಾನಮಪ್ಯಗ್ನಿಲಿಙ್ಗಮ್ 'ಅಯಮಗ್ನಿರ್ವೈಶ್ವಾನರೋ ಯೇನೇದಮನ್ನಂ ಪಚ್ಯತೇ ತದ್ ಯದ್ಧುಕ್ತಂ ಪ್ರಥಮಮಾಗಚ್ಛೇತ್ ತದ್ಧೋಮೀಯಂ ಪ್ರಥಮಾಮಾಹುತಿಂ ಜುಹುಯಾತ್ ತಾಂ ಜುಹುಯಾತ್ ಪ್ರಾಣಾಯ ಸ್ವಾಹಾ' ಇತ್ಯಾದಿ ಶರೀರಾನ್ತಃಸ್ಥಿತಾಗ್ನಿಧಾನಾನ್ಯೇತೇ ಯುಜ್ಯನ್ತೇ ।

ಲಿಂಗದ ಆಧಾರದಿಂದಲೂ ಸಹ ಅಗ್ನಿಯೇ ಇಲ್ಲಿ ವೈಶ್ವಾನರನಾಗಿದ್ದಾನೆ. ಅದು ಹೀಗೆ --ವೈಶ್ವಾನರೇ ತದ್ಧುತಂ ಭವತಿ' ಎಂಬುದಾಗಿ ಹವಿರಾಧಾರತ್ವ ಎಂಬ ಲಿಂಗವು, ಹಾಗೂ 'ಆತ್ಮನಃ ವೈಶ್ವಾನರಸ್ಯ' ಎಂದು ಪ್ರಾರಂಭವಾಗಿ 'ಹೃದಯಂ ಗಾರ್ಹಪತ್ಯೇ' ಎಂದು ಹೇಳಿರುವುದರಿಂದ ಗಾರ್ಹಪತ್ಯತ್ವವೆಂಬ ಲಿಂಗವು ಹಾಗೂ 'ಅಯಮಗ್ನಿರ್ವೈಶ್ವಾನರೋ ಯೇನೇದಮನ್ನಂ ಪಚ್ಯತೇ ತದ್ ಯದ್ಧುಕ್ತಂ ಪ್ರಥಮಮಾಗಚ್ಛೇತ್ ತದ್ಧೋಮೀಯಂ ಪ್ರಥಮಮಾಹುತಿಂ ಜುಹುಯಾತ್ ತಾಂ ಜುಹುಯಾತ್ ಪ್ರಾಣಾಯ ಸ್ವಾಹಾ' ಎಂಬುದಾಗಿ ಶರೀರಾಂತಃಸ್ಥಿತನಾದ ಅಗ್ನಿಗೆ ಆಹುತಿದಾನ, ಹೀಗೆ ಶರೀರಾಂತಃಸ್ಥಿತತ್ವ ಮೊದಲಾದ ಲಿಂಗಗಳೆಲ್ಲವೂ ಅಗ್ನಿಯಲ್ಲಿಯೇ ಯುಕ್ತವಾಗುತ್ತವೆ.

'ಅಥ ಹೈಮಮಾತ್ಮಾನಮ್' ಇತ್ಯಾದಿಮಹೋಪನಿಷದ್ವಾಕ್ಯೇ ಅಗ್ರ್ಯಾದಿನಾಮಭಿಃ ಪಾಚಕತ್ವಾದಿಧರ್ಮೈರ್ವಿಷ್ಣೂಪಾಸ್ತೇರುಪದಿಷ್ಟತ್ವೇನಾತ್ರ ವಹ್ನ್ಯಾದಿಪ್ರಾಪಕಶಬ್ದಲಿಙ್ಗಾಭಾವಾತ್ । ಅರಮತ್ವನಮಿತ್ಯರ್ಥಃ ।

'ಅಥ ಹೇಮಮಾತ್ಮಾನಮ್' ಇತ್ಯಾದಿಯಾದ ಮಹೋಪನಿಷದ್‌ವಾಕ್ಯದಲ್ಲಿ ಅಗ್ನಿ ಮೊದಲಾದ ನಾಮಾತ್ಮಕಶಬ್ದಗಳಿಂದ ಮತ್ತು ಪಾಚಕತ್ವವೇ ಮೊದಲಾದ ಧರ್ಮಗಳಿಂದ ವಿಷ್ಣುವನ್ನು ಉಪಾಸನೆ ಮಾಡಬೇಕೆಂದು ಉಪದೇಶಿಸಲಾಗಿದೆ. ಆದ್ದರಿಂದ ವಹ್ನ್ಯಾದಿಪ್ರಾಪಕವಾದ ಯಾವುದೇ ಶಬ್ದಗಳಾಗಲೀ ಲಿಂಗಗಳಾಗಲೀ ಇರುವುದಿಲ್ಲವೆಂದು ತಿಳಿಯಬೇಕು. 'ಅರಮ್' ಎಂಬುದಕ್ಕೆ ಅನ್ನ ಎಂದರ್ಥ.

'ಕೋ ನ ಆತ್ಮಾ ಕಿಂ ಬ್ರಹ್ಮ' ಇತ್ಯುಪಕ್ರಮ್ಯ ನಿರೂಪ್ಯಮಾಣತ್ವಾದಯಂ ವೈಶ್ವಾನರೋ ವಿಷ್ಣುರೇವ ನಾಗ್ನಿಃ । ಅನಾತ್ತತ್ವಾದಿವಾಕ್ಯೇನ ಆತ್ಮಬ್ರಹ್ಮಶಬ್ದಯೋಃ ವಿಷ್ಣ್ವನ್ಯತ್ರಾಸಮ್ಭಾವಿತತ್ವಸ್ಯ ಕಥನಾತ್ ಪುರುಷಸೂಕ್ತಸಂವಾದಾಚ್ಚಾಯಂ ವೈಶ್ವಾನರಶಬ್ದೇನ ವಿಷ್ಣುರೇವೋಚ್ಯತೇ ।

'ಕೋ ನ ಆತ್ಮಾ ಕಿಂ ಬ್ರಹ್ಮ' ಎಂದು ಪ್ರಾರಂಭವಾಗಿ ನಿರೂಪಣೆ ಮಾಡುತ್ತಿರುವುದರಿಂದ ಈ ವೈಶ್ವಾನರನು ವಿಷ್ಣುವೇ ಆಗಿದ್ದಾನೆ ಹೊರತು ಅಗ್ನಿಯಲ್ಲ. 'ಅನಾತ್ತತ್ವಾತ್' ಇತ್ಯಾದಿ ವಾಕ್ಯದಿಂದ ಆತ್ಮಾ ಹಾಗೂ ಬ್ರಹ್ಮಶಬ್ದಗಳು ವಿಷ್ಣುವನ್ನು ಬಿಟ್ಟು ಬೇರೆ ಯಾರಲ್ಲಿಯೂ ಉಪಪನ್ನವಾಗುವುದಿಲ್ಲ ಎಂದು ಹೇಳಲಾಗಿದೆ. ಅಷ್ಟೇ ಅಲ್ಲದೆ ಪುರುಷಸೂಕ್ತದ ಸಂವಾದವಿರುವುದರಿಂದಲೂ ವೈಶ್ವಾನರಶಬ್ದದಿಂದ ವಿಷ್ಣುವೇ ಪ್ರತಿಪಾದ್ಯನಾಗಿದ್ದಾನೆ.

ತಥಾಹಿ 'ಚನ್ದ್ರಮಾ ಮನಸೋ ಜಾತಃ ಚಕ್ಷೋಸ್ಸೂರ್ಯೋ ಅಜಾಯತ' ಇತ್ಯಾದಿ ಪುರುಷಸೂಕ್ತವಾಕ್ಯೇನ ಯಃ ಸಹಸ್ರಶೀರ್ಷಾ ಪುರುಷ ಉಕ್ತಃ ಸ ಏವಾತ್ರ ಪ್ರತ್ಯಭಿಜ್ಞಾಯತೇ ಆತ್ಮನೋ ವೈಶ್ವಾನರಸ್ಯ 'ಮೂರ್ಧೈವ ಸುತೇಜಾಃ ಚಕ್ಷುಃ ವಿಶ್ವರೂಪಃ' ಇತ್ಯಾದಿನಾ ।

'ಚಂದ್ರಮಾ ಮನಸೋ ಜಾತಃ ಚಕ್ಷೋಃ ಸೂರ್ಯೋ ಅಜಾಯತ' ಇತ್ಯಾದಿಯಾದ ಪುರುಷಸೂಕ್ತದ ವಾಕ್ಯದಿಂದ ಯಾವ ಸಾವಿರಾರು ತಲೆಗಳುಳ್ಳ ಪುರುಷನು ಪ್ರತಿಪಾದ್ಯನಾಗಿದ್ದಾನೋ ಅವನೇ ಇಲ್ಲಿಯೂ ಸಹ ಪ್ರತಿಪಾದ್ಯನಾಗಿದ್ದಾನೆ. ಆತ್ಮಶಬ್ದದಿಂದ ಮತ್ತು ವೈಶ್ವಾನರಶಬ್ದದಿಂದ 'ಮೂರ್ಧೈವ ಸುತೇಜಾಃ ಚಕ್ಷುಃ ವಿಶ್ವರೂಪಃ' ಇತ್ಯಾದಿ ವಾಕ್ಯದಿಂದ ಪ್ರತಿಪಾದ್ಯನಾಗಿದ್ದಾನೆ.

ಪುರುಷಸೂಕ್ತಸ್ಯ ವಿಷ್ಣ್ವೇಕಪರತ್ವಂ ಸಕಲವೇದೇತಿಹಾಸಾದಿಷು ಅವಿಗಾನಸಿದ್ಧಂ ತಥಾಹ್ಯುಕ್ತಮ್ । 'ಯಥೈವ ಪೌರುಷಮ್' ಇತ್ಯಾದಿಭಿಃ ಪುರಾಣವಾಕ್ಯೈಃ

ಪುರುಷಸೂಕ್ತವು ಕೇವಲ ವಿಷ್ಣುಪರವಾಗಿದೆ ಎಂದು ಸಕಲವೇದ ಇತಿಹಾಸಾದಿಗಳಲ್ಲಿ ವಿವಾದವಿಲ್ಲದೇ ಸಿದ್ಧವಾಗಿದೆಯೆಂದು 'ಯಥೈವ ಪೌರುಷಂ ಸೂಕ್ತಮ್' ಇತ್ಯಾದಿ ಪುರಾಣವಾಕ್ಯಗಳಿಂದ ಹೇಳಿರುತ್ತಾರೆ.

ಪುರುಷಾವಯವೇಭ್ಯೋ ಭೇದೇನ ನಿರ್ದಿಷ್ಟಾನಾಂ ದ್ಯುಲೋಕಾದೀನಾಂ ವೈಶ್ವಾನರಮೂರ್ಧಾದಿಭಿರಭೇದೇನ ವ್ಯಪದೇಶಸ್ಯ ಗತಿರುಚ್ಯತೇ ಯಸ್ಮಾದಿತ್ಯನೇನ ।

ಪುರುಷನ ಅವಯವಗಳಿಂದ ದ್ಯುಲೋಕಾದಿಗಳಿಗೆ ಭೇದವು ನಿರ್ದಿಷ್ಟವಾಗಿದೆ. ಆದರೂ ವೈಶ್ವಾನರನ ತಲೆ (ಮೂರ್ಧಾ) ಮೊದಲಾದ ಅವಯವಗಳಿಂದ ಅಭೇದವು ಹೇಳಲ್ಪಟ್ಟಿದೆ. ಹೀಗೆ ಅಭೇದವನ್ನು ಹೇಳಲು ಏನು ಕಾರಣವೆಂಬುದನ್ನು ''ಯಸ್ಮಾತ್' ಎಂಬ ಭಾಷ್ಯದಿಂದ ಸಮರ್ಥಿಸುತ್ತಿದ್ದಾರೆ.

ಯಸ್ಮಾದ್ ಯಸ್ಮಾದ್ ವಿಷ್ಣ್ವಙ್ಗಾದ್ ಯದ್ ಯಲ್ಲೋಕಾದಿಕಂ ಜಾಯತೇ ತತ್ತನ್ನಾಮ್ನಾ ತಜ್ಜನಕಮಙ್ಗಮುಚ್ಯತೇ । ಅತೋ 'ಮೂರ್ಧೈವ ಸುತೇಜಾಃ' ಇತ್ಯಾದಿವ್ಯಪದೇಶೋ ಘಟತೇ ।

ಯಾವ ಯಾವ ವಿಷ್ಣುವಿನ ಅವಯವಗಳಿಂದ ಯಾವ ಯಾವ ಲೋಕಾದಿಗಳು ಹುಟ್ಟುತ್ತವೋ ಆ ಭಗವಂತನ ಅವಯವಗಳಿಗೆ ಆಯಾಯಾ ಲೋಕಗಳ ಹೆಸರುಗಳು ಬಂದಿರುತ್ತವೆಂದು ತಿಳಿಯಬೇಕು.

ಆದ್ದರಿಂದಲೇ 'ಮೂರ್ಧೈವ ಸುತೇಜಾಃ' ಇತ್ಯಾದಿಯಾಗಿ ಮಾತುಗಳು ಉಪಪನ್ನವಾಗತ್ತವೆ.

यथा 'ब्राह्मणोऽस्य मुखमासीद् बाहू राजन्यः कृतः' इत्यादौ ब्राह्मणादिजनकेषु मुखादिषु ब्राह्मणादिपदव्यपदेशः । नत्वत्र पुरुषोत्तममुखादिभिरभेदो ब्राह्मणादीनामुच्यते । 'पद्भ्यां शूद्रो अजायत' इत्यादिवाक्यशेषविरोधात् । अर्थान्तरशब्दानां भगवदवयवेषु वृत्तिः विद्वद्रूढ्या योगवृत्त्या वा अवगन्तव्येत्यर्थः ।।

ಉದಾಹರಣೆ -- 'ಬ್ರಾಹ್ಮಣೋಽಸ್ಯ ಮುಖಮಾಸೀದ್ ಬಾಹೂ ರಾಜನ್ಯಃ ಕೃತಃ' ಇತ್ಯಾದಿ ಸ್ಥಳಗಳಲ್ಲಿ ಬ್ರಾಹ್ಮಣರಿಗೆ ಜನಕವಾದ ಪುರುಷನ ಮುಖಾದಿ ಅವಯವಗಳಲ್ಲಿ ಬ್ರಾಹ್ಮಣ ಮೊದಲಾದ ಪದಗಳ ವ್ಯಪದೇಶವು ಇರುತ್ತದೆ. ಇಲ್ಲಿ ಪುರುಷನ ಮುಖದಿಂದ ಬ್ರಾಹ್ಮಣರಿಗೆ ಅಭೇದವನ್ನು ತಿಳಿಯಬಾರದು. ಏಕೆಂದರೆ ''ಪದ್ಭ್ಯಾಂ ಶೂದ್ರೋ ಅಜಾಯತ'' ಇತ್ಯಾದಿ ವಾಕ್ಯಶೇಷದ ವಿರೋಧವು ಬರುತ್ತದೆ. ಅಂದರೆ ಶೂದ್ರರಿಗೂ ಸಹ ಅಭೇದವನ್ನು ಹೇಳಬೇಕಾಗುತ್ತದೆ. ಬ್ರಾಹ್ಮಣರಿಂದ ಅಭಿನ್ನನಾದವನು ಶೂದ್ರನಿಂದ ಅಭಿನ್ನನಾಗಲು ಹೇಗೆ ಸಾಧ್ಯ ? ಬೇರೆ ಶಬ್ದಗಳನ್ನು ಭಗವಂತನ ಅವಯವಗಳಲ್ಲಿ ವಿದ್ವದ್ರೂಢಿಯಿಂದ ಅಥವಾ ಯೋಗವೃತ್ತಿಯಿಂದ ಕೂಡಿಸಬೇಕು.

तत्वप्रकाशिका –

ॐ शब्दादिभ्योऽन्तःप्रतिष्ठानान्नेति चेन्न तथा दृष्ट्युपदेशादसम्भवात् पुरुषविधमपि चैनमधीयते ॐ ।। १-२-२६ ।।

वैश्वानरस्य विष्णुत्वमाक्षिप्य समादधत्सूत्रमुपन्यस्याऽक्षेपांशं तावद् व्याचष्टे – शब्दादिभ्य इति ।।

ವೈಶ್ವಾನರನು ವಿಷ್ಣುವೇ ಆಗಿದ್ದಾನೆಂಬ ವಿಷಯವನ್ನು ಆಕ್ಷೇಪಿಸಿ ಸಮಾಧಾನವನ್ನು ಮಾಡುವ ಸೂತ್ರವನ್ನು ಪಠಿಸಿ ಸೂತ್ರದಲ್ಲಿರುವ ಆಕ್ಷೇಪಭಾಗವನ್ನು ವ್ಯಾಖ್ಯಾನಿಸುತ್ತಿದ್ದಾರೆ ''ಶಬ್ದಾದಿಭ್ಯಃ'' ಇತ್ಯಾದಿಯಾಗಿ.

तत्वप्रकाशिका – यदुक्तमात्मशब्दविशेषणात् समाख्यानाच्च वैश्वानरस्य विष्णुत्वनिश्चय इति तदयुक्तम् । यथा खलु वैश्वानरस्य विष्णुत्वनिश्चायकाऽत्मशब्दादि विद्यते तथाऽग्नित्वनिश्चायकस्यापि विद्यमानत्वात् ।

ಹಿಂದೆ ಆತ್ಮಶಬ್ದವು ವಿಶೇಷಣವಾಗಿರುವುದರಿಂದ ಮತ್ತು 'ಅಹಂ ವೈಶ್ವಾನರೋ ಭೂತ್ವಾ' ಎಂಬ ಸಮಾಖ್ಯಾಪ್ರಮಾಣವಿರುವುದರಿಂದ ವೈಶ್ವಾನರನು ವಿಷ್ಣುವೇ ಆಗಿದ್ದಾನೆಂದು ನಿರ್ಣಯಿಸಲಾಯಿತು. ಆದರೆ ಇದು ತಪ್ಪು. ಏಕೆಂದರೆ ಯಾವರೀತಿಯಾಗಿ ಆತ್ಮಶಬ್ದದ ವಿಶೇಷಣದಿಂದ ವಿಷ್ಣುವೇ ವೈಶ್ವಾನರನೆಂದು ನಿಶ್ಚಯಿಸುತ್ತೀರೋ, ಅದೇ ರೀತಿಯಾಗಿ ಅಗ್ನಿಯೂ ಸಹ ವೈಶ್ವಾನರನಾಗಿದ್ದಾನೆ ಎಂಬ ವಿಷಯದಲ್ಲಿ ಅನೇಕ ಪ್ರಮಾಣಗಳಿವೆ.

ತತ್ವಪ್ರಕಾಶಿಕಾ – ತಥಾಹಿ । ವೈಶ್ವಾನರಶಬ್ದಸ್ಯಾऽತ್ಮಶಬ್ದಸಮಾನಾಧಿಕೃತತ್ವವದಗ್ನಿಶಬ್ದಸಮಾನಾಧಿಕೃತತ್ವಂ ಚ ಶ್ರೂಯತೇ 'ಅಯಮಗ್ನಿಃ' ಇತಿ ಬೃಹದಾರಣ್ಯಕೇ 'ವೈಶ್ವಾನರಮ್' ಇತ್ಯಾಸ್ಯಾಮೃಚಿ ಚ ।

ಅದು ಹೀಗೆ -- ವೈಶ್ವಾನರಶಬ್ದಕ್ಕೆ ಆತ್ಮಶಬ್ದದ ಸಾಮಾನಾಧಿಕರಣ್ಯವಿರುವಂತೆ ಅಗ್ನಿಶಬ್ದದ ಸಾಮಾನಾಧಿಕರಣ್ಯವೂ ಸಹ 'ಆಯಮಗ್ನಿರ್ವೈಶ್ವಾನರಃ' ಎಂಬ ಬೃಹದಾರಣ್ಯಕದಲ್ಲಿ ಕೇಳಿಸುತ್ತಿದೆ. 'ವೈಶ್ವಾನರಮೃತ ಆಜಾತಮಗ್ನಿಂ' ಎಂಬ ಶ್ರುತಿಯಲ್ಲಿಯೂ ಅಗ್ನಿಶಬ್ದದ ಸಾಮಾನಾಧಿಕರಣ್ಯವಿರುವುದು ಕಾಣಿಸುತ್ತಿದೆ.

ತತ್ವಪ್ರಕಾಶಿಕಾ – ತಥಾऽಗ್ನಿಲಿಙ್ಗಂ ಚ ವೈಶ್ವಾನರೇ ಹೋಮಾಧಿಕರಣತ್ವಂ ಗಾರ್ಹಪತ್ಯಾಯತ್ವಂ ಚ ಶ್ರೂಯತೇ 'ವೈಶ್ವಾನರೇ ತದ್ಧುತಮ್' ಇತ್ಯಾದೌ । ತಥಾ ವೈಶ್ವಾನರೇ ಪಾಚಕತ್ವಾಖ್ಯಮಗ್ನಿಕರ್ಮ ಚ ಶ್ರೂಯತೇ ।

ಇದರಂತೆ ಅಗ್ನಿಜ್ಞಾಪಕವಾದ ಲಿಂಗಗಳೂ ಸಹ ಇರುತ್ತವೆ. ಹೋಮಾಧಿಕರಣತ್ವ, ಗಾರ್ಹಪತ್ಯಾದಿಅಂಗತ್ವ ಮೊದಲಾದವು 'ವೈಶ್ವಾನರೇ ತದ್ಧುತಮ್' 'ವೈಶ್ವಾನರನಲ್ಲಿ ಹೋಮ ಮಾಡಿದಂತಾಗುತ್ತದೆ' ಇತ್ಯಾದಿ ಶ್ರುತಿಗಳಲ್ಲಿ ಕಾಣಿಸುತ್ತಿದೆ. ಅದೇ ರೀತಿಯಾಗಿ ಪಾಚಕತ್ವವೆಂಬ ಅಗ್ನಿಯ ಕರ್ಮವೂ ಸಹ ವೈಶ್ವಾನರನಲ್ಲಿ ಕೇಳಿಸುತ್ತಿದೆ.

ತತ್ವಪ್ರಕಾಶಿಕಾ – 'ಅಯಮಗ್ನಿರ್ವೈಶ್ವಾನರೋ ಯೋऽಯಮನ್ತಃಪುರುಷೇ ಯೇನೇದಮನ್ನಂ ಪಚ್ಯತೇ ಯದಿದಮದ್ಯತೇ' ಇತಿ ಬೃಹದಾರಣ್ಯಕೇ ।

ಆ ಶ್ರುತಿ ಹೀಗಿದೆ -- "ಅಯಮಗ್ನಿರ್ವೈಶ್ವಾನರೋ ಯೋऽಯಮಂತಃಪುರುಷೇ ಯೇನೇದಮನ್ನಂ ಪಚ್ಯತೇ ಯದಿದಮದ್ಯತೇ' 'ಪುರುಷನಾದವನು ಯಾವ ಅನ್ನವನ್ನು ಭಕ್ಷಿಸುತ್ತಾನೋ ಆ ಅನ್ನವು ಅಗ್ನಿಯಿಂದ ಪಾಕ ಮಾಡಲ್ಪಟ್ಟರುತ್ತದೆ' ಎಂಬುದಾಗಿ ಬೃಹದಾರಣ್ಯಕೋಪನಿಷತ್ತಿನಲ್ಲಿ ಹೇಳಲ್ಪಟ್ಟಿದೆ.

ತತ್ವಪ್ರಕಾಶಿಕಾ – 'ತಥೋಕ್ತಮ್' ಇತಿ ಛಾನ್ದೋಗ್ಯೇ ಚ । ತಸ್ಮಾದ್ವೈಶ್ವಾನರಸ್ಯ ವಿಷ್ಣುತ್ವ ಜ್ಞಾಪಕವದಗ್ನಿತ್ವಜ್ಞಾಪಕಸ್ಯಾಪಿ ಸತ್ವಾನ್ನ ವಿಷ್ಣುರೇವಾಯಮಿತಿ ನಿಶ್ಚಯೋ ಯುಜ್ಯತ ಇತ್ಯರ್ಥಃ ।

ಮತ್ತು ಛಾಂದೋಗ್ಯೋಪನಿಷತ್ತಿನಲ್ಲಿಯೂ 'ತದ್ಯದ್ಭಕ್ಷಮ್' 'ಭೋಜನಕಾಲದಲ್ಲಿ ಯಾವ ಅನ್ನವು

ಮೊದಲು ಪ್ರಾಣಾಹುತಿರೂಪದಿಂದ ಸ್ವೀಕರಿಸಲಾಗುತ್ತದೋ ಅದು ಜಾಠರದಲ್ಲಿರುವ ವೈಶ್ವಾನರನಿಗೆ ಹೋಮದ್ರವ್ಯವಾಗಿದೆ' ಎಂದು ಹೇಳಲಾಗಿದೆ. ಈ ಕಾರಣದಿಂದಲೂ ವೈಶ್ವಾನರನು ವಿಷ್ಣುವೇ ಆಗಿದ್ದಾನೆಂಬ ವಿಷಯದಲ್ಲಿ ಆತ್ಮಶಬ್ದದ ಸಾಮಾನಾಧಿಕರಣ್ಯವು ಜ್ಞಾಪಕವಾಗಿರುವಂತೆ ವೈಶ್ವಾನರನು ಅಗ್ನಿಯಾಗಿದ್ದಾನೆಂಬ ವಿಷಯದಲ್ಲೂ ಅನೇಕ ಲಿಂಗಗಳಿರುತ್ತವೆಂದು ತಿಳಿಯುತ್ತದೆ. ಆದ್ದರಿಂದ ವಿಷ್ಣುವೇ ವೈಶ್ವಾನರನಾಗಿದ್ದಾನೆಂದು ನಿಶ್ಚಯಿಸಲು ಬರುವುದಿಲ್ಲವೆಂದು ಅಭಿಪ್ರಾಯ. ಇಷ್ಟು ಪೂರ್ವಪಕ್ಷ.

तत्वप्रकाशिका – अत्र सर्ववैश्वानरविद्यानां विचार्यत्वात् तत्तद्वाक्योद्धारो युक्त एव समाख्यारूपेण वा ।

ಈ ಅಧಿಕರಣದಲ್ಲಿ ಸಕಲಶ್ರುತಿಯಲ್ಲಿ ಇರುವ ವೈಶ್ವಾನರ ಶಬ್ದಗಳು ವಿಚಾರಮಾಡಲು ಅರ್ಹವಾಗಿವೆ. ಆದ್ದರಿಂದ ವೈಶ್ವಾನರ ಶಬ್ದವಿರುವ ಎಲ್ಲ ವಾಕ್ಯಗಳನ್ನು ವಿಷಯವಾಕ್ಯವನ್ನಾಗಿ ಪರಿಗಣಿಸುವುದು ಯುಕ್ತವೇ ಆಗಿದೆ. ಅಥವಾ ಸಮಾಖ್ಯಾಪ್ರಮಾಣಕ್ಕಾಗಿ ಭಿನ್ನ ಭಿನ್ನ ವಾಕ್ಯಗಳನ್ನು ಉಲ್ಲೇಖಿಸಿರುವುದು ಯುಕ್ತವಾಗಿದೆಯೆಂದು ತಿಳಿಯಬೇಕು.

तत्वप्रकाशिका – 'मूर्धानं दिवः' इति मन्त्रार्थः – दिवः कारणभूतं मूर्धानं पृथिव्याः कारणभूतं पादं जनानां सम्यज्ज्ञानायाभिव्यक्तं सर्वज्ञमखण्डेशमत्यन्नं जनानां पातारं वैश्वानरमग्निं देवाः स्वास्यतयाऽकुर्वन् – इति ।

''ಮೂರ್ಧಾನಂ ದಿವಃ'' ಎಂಬ ಶ್ರುತ್ಯರ್ಥ ಹೀಗಿದೆ. ಯಾರ ತಲೆಯು ದ್ಯುಲೋಕಕ್ಕೆ ಕಾರಣವಾಗಿದೆಯೋ, ಯಾರ ಕಾಲುಗಳು ಪೃಥಿವಿಗೆ ಕಾರಣವಾಗಿದೆಯೋ, ಯಾರು ಸಾತ್ವಿಕಜನರಿಗೆ ಸಮ್ಯಗ್‌ಜ್ಞಾನವನ್ನು ಪ್ರಕಟಪಡಿಸುತ್ತಾನೋ ಅಂತಹ ವ್ಯಕ್ತಿಯೇ ಸರ್ವಜ್ಞನಾಗಿದ್ದಾನೆ. ಸಕಲಕ್ಕೂ ಒಡೆಯನಾಗಿದ್ದಾನೆ. ಅವನೇ ವಿಪುಲವಾದ ಅನ್ನನು. ಸಕಲ ಜನರಿಗೆ ರಕ್ಷಕನು. ಇಂತಹ ವೈಶ್ವಾನರಾಗ್ನಿಯನ್ನು ದೇವತೆಗಳು ತಮ್ಮ ಮುಖವನ್ನಾಗಿ ಮಾಡಿಕೊಂಡರು'' ಎಂದು.

तत्वप्रकाशिका – गतिसाधनत्वादरतिः पादः । 'ऋताय जातम्' इति समाख्यानात्सप्तमी तादर्थ्ये । 'अन्नं धम्' इति हि श्रुतिः । 'अग्निर्देवानां मुखम्' इति च । 'वैश्वानरे तद्धुतं भवति' इति वाक्यार्थः । एवंवित् यद्यपि चाण्डालायोच्छिष्टं प्रयच्छेत् आत्मनि हैवास्य तद्वैश्वानरे हुतं स्यादिति वाक्यादवगन्तव्यः ।

ಗಮನಕ್ಕೆ ಸಾಧನವಾಗಿದ್ದರಿಂದ ಆರತಿಪದಕ್ಕೆ ಪಾದವೆಂದರ್ಥ. 'ಋತಾಯ ಜಾತಮ್' ಎಂಬ ಸಮಾಖ್ಯಾಶ್ರುತಿಯು ಪ್ರಮಾಣವಾಗಿರುವುದರಿಂದ ಪ್ರಕೃತ ಸಪ್ತಮೀವಿಭಕ್ತಿಯು ತಾದರ್ಥ್ಯದಲ್ಲಿ (ಆದಕ್ಕೋಸ್ಕರ ಎಂಬರ್ಥದಲ್ಲಿ) ಪ್ರಯುಕ್ತವಾಗಿದೆ. 'ಅನ್ನಂ ಧಮ್' ಅತ್ಯಂತವಾದ ಅನ್ನವಿದ್ದವನು ಎಂದು ಶ್ರುತಿಯಿರುತ್ತದೆ. 'ಅಗ್ನಿರ್ದೇವಾನಾಂ ಮುಖಮ್' ಅಗ್ನಿಯು ದೇವತೆಗಳಿಗೆ ಮುಖನಾಗಿದ್ದಾನೆ ಎಂದೂ

ಶ್ರುತಿಯಿರುತ್ತದೆ. ''ವೈಶ್ವಾನರೇ ತದ್ಧುತಮ್ ಭವತಿ'' ಎಂಬುದರ ಅರ್ಥವನ್ನು 'ಏವಂವಿತ್' ಎಂಬ ವಾಕ್ಯದಿಂದ ತಿಳಿಯಬೇಕು. ಈ ರೀತಿಯಾಗಿ ವೈಶ್ವಾನರನನ್ನು ತಿಳಿದವನು ವಸ್ತುತಃ ಚಾಂಡಾಲನಿಗೆ ತನ್ನ ಉಚ್ಛಿಷ್ಟವನ್ನು ನೀಡಿದರೂ ಸಹ ಆ ಚಾಂಡಾಲನಲ್ಲಿರುವ ವೈಶ್ವಾನರನಲ್ಲಿ ಹೋಮಮಾಡಿದಂತಾಗುತ್ತದೆ ಎಂದಿದರರ್ಥ.

तत्वप्रकाशिका – भक्तम् = अन्नम् । परिहारसूत्रांशं व्याचष्टे – नेति ।।

'ಭಕ್ತಮ್' ಎಂಬ ಶಬ್ದಕ್ಕೆ ಅನ್ನವು ಎಂದರ್ಥ. ಈ ರೀತಿಯಾದ ಪೂರ್ವಪಕ್ಷವನ್ನು ಪರಿಹಾರಮಾಡುವ ಸೂತ್ರದ ಭಾಗವನ್ನು ''ನ'' ಇತ್ಯಾದಿಯಾಗಿ ವ್ಯಾಖ್ಯಾನಿಸುತ್ತಿದ್ದಾರೆ.

तत्वप्रकाशिका –उभयत्र श्रुत्यादिसाम्याद्वैश्वानरस्य विष्णुत्वनिश्चयोपपत्तेः ।

ಅಗ್ನಿದೇವತೆ ಹಾಗೂ ವಿಷ್ಣುವಿನಲ್ಲಿ ಶ್ರುತಿ ಹಾಗೂ ಲಿಂಗಾದಿಗಳು ಸಮಾನವಾಗಿರುವುದರಿಂದ ವಿಷ್ಣುವೇ ವೈಶ್ವಾನರನಾಗಿದ್ದಾನೆಂದು ನಿಶ್ಚಯಿಸಲಾಗದು ಎಂಬ ಪೂರ್ವಪಕ್ಷವು ಅಯುಕ್ತವಾಗಿದೆ. ಏಕೆಂದರೆ ಇಬ್ಬರಲ್ಲಿಯೂ ಶ್ರುತಿಲಿಂಗಾದಿಗಳು ಸಮಾನವಾಗಿದ್ದರೂ ಸಾವಕಾಶತ್ವ ನಿರವಕಾಶತ್ವಗಳ ಬಲದಿಂದ ನಿರ್ಣಯಿಸಬಹುದು.

तत्वप्रकाशिका – तत्र यदग्निनाम लिङ्गं कर्म च वैश्वानरे श्रूयते तद्विष्णौ सावकाशम् । 'अथ हेममात्मानम्' इत्यग्न्यादिनामलिङ्गकर्मत्वेन विष्णोरुपासनोपदेशात् ।

ಈ ವಿಷಯದಲ್ಲಿ ಅಗ್ನಿ ಎಂಬ ನಾಮ, ಅಗ್ನಿಯ ಲಿಂಗ ಪಾಚಕತ್ವವೆಂಬ ಕರ್ಮ ಇವೆಲ್ಲವೂ ವೈಶ್ವಾನರನಲ್ಲಿ ಏನು ಕೇಳಿಸುತ್ತಿವೆಯೋ ಅವೆಲ್ಲವೂ ವಿಷ್ಣುವಿನಲ್ಲಿ ಸಾವಕಾಶವಾಗಿದೆ. ಹೇಗೆಂದರೆ 'ಅಥ ಹೇಮಮಾತ್ಮಾನಮ್' ಎಂಬುದಾಗಿ ಶ್ರುತಿಯಲ್ಲಿ ನಾನಾ ಲಿಂಗ, ಕರ್ಮಗಳಿಂದ ವಿಷ್ಣುವನ್ನು ಉಪಾಸನೆ ಮಾಡಬೇಕೆಂದು ಉಪದೇಶಿಸಲಾಗಿದೆ.

तत्वप्रकाशिका – न चात्मशब्दादेरन्यस्त्यवकाशः । अतो निरवकाशेन सावकाशबाधोपपत्तेः युज्यते वैश्वानरस्य विष्णुत्वनिश्चय इति भावः ।

ವಿಷ್ಣುವಿನಲ್ಲಿ ಪ್ರಸಿದ್ಧವಾದ ಆತ್ಮಶಬ್ದಾದಿಗಳಿಗೆ ಬೇರೆ ಕಡೆ ಅವಕಾಶವಿರುವುದಿಲ್ಲ. ಆದ್ದರಿಂದ ನಿರವಕಾಶವಾದ ಆತ್ಮಶಬ್ದದ ಬಲದಿಂದ ಸಾವಕಾಶವಾದ ಅಗ್ನಿಶಬ್ದ ಮೊದಲಾದವುಗಳಿಗೆ ಬಾಧವು ಬರುತ್ತದೆ. ಆದ್ದರಿಂದ ವೈಶ್ವಾನರನು ವಿಷ್ಣುವೇ ಆಗಿದ್ದಾನೆಂದು ನಿಶ್ಚಯಿಸಬಹುದು.

तत्वप्रकाशिका – नच वाच्यमुपासनार्थमुक्तत्वादेव 'योषितमग्निं ध्यायीत' इत्यादाविवाऽसत्वम् । 'नाविद्यमानं ब्रुवते वेदा ध्यातुं न वैदिकाः' इत्यादिवचनात् । वाक्यान्तरस्याविरोधेन योऽर्थः स्याप्यते तदर्थत्वाच ।

ಇನ್ನು ಉಪಾಸನೆಗೋಸ್ಕರ ಹೇಳಿದ್ದರಿಂದಲೇ ಅದು ಅಸತ್ತಾಗಿದೆ ಎಂದು ಹೇಳುತ್ತೇವೆ. ಯಾವ ರೀತಿಯಲ್ಲಿ 'ಯೋಷಿತಮಗ್ನಿಂ ಧ್ಯಾಯೀತ' ಎಂಬಲ್ಲಿ 'ಸ್ತ್ರೀಯನ್ನು ಅಗ್ನಿಯನ್ನಾಗಿ ತಿಳಿಯಬೇಕು' ಎಂದು ಹೇಳಿದಾಗ ಸ್ತ್ರೀಯಲ್ಲಿ ಅಗ್ನಿಯು ಅಸತ್ತಾಗಿದೆಯೋ ಅದೇ ರೀತಿಯಾಗಿ ವಿಷ್ಣುವಿನಲ್ಲಿ ಉಪಾಸನೆಗೋಸ್ಕರ ಹೇಳಿರುವ ನಾಮಲಿಂಗಾದಿಗಳೆಲ್ಲವೂ ಅಸತ್ತಾಗಿರುತ್ತವೆ ಎಂದರೆ ಹೀಗೆ ಹೇಳಬಾರದು. ಏಕೆಂದರೆ 'ನಾವಿದ್ಯಮಾನಂ ಬ್ರುವತೇ ವೇದಾ ಧ್ಯಾತುಂ ನ ವೈದಿಕಾಃ' 'ಇಲ್ಲದೇ ಇರುವುದನ್ನು ಉಪಾಸನೆಗೋಸ್ಕರ ವೇದಗಳು ಹಾಗೂ ತದನುಸಾರಿಯಾದ ಸ್ಮೃತಿಗಳು ಹೇಳುವುದಿಲ್ಲ' ಎಂಬ ಪ್ರಮಾಣವು ಆಧಾರವಾಗಿದೆ. ಆದಲ್ಲದೇ 'ಅಹಂ ವೈಶ್ವಾನರೋ ಭೂತ್ವಾ' ಎಂಬ ಗೀತಾವಾಕ್ಯಕ್ಕೆ ಅವಿರುದ್ಧವಾದ ಅರ್ಥವನ್ನೇ 'ವೈಶ್ವಾನರಮುಪಾಸ್ತೇ' ಎಂಬ ವಾಕ್ಯಕ್ಕೆ ಹೇಳಬೇಕು. ಆದ್ದರಿಂದಲೂ ಅಸದರ್ಥವನ್ನು ಈ ವಾಕ್ಯವು ಹೇಳುವುದಿಲ್ಲ.

तत्वप्रकाशिका – विश्वं = पूर्णम् । आरात् = समीपे स्वहृदये । प्रथम 'इति'शब्दो विधिसमाप्तौ । द्वितीयस्य इत्युपासीतेत्यन्वयः । प्रकरणबलाच्च वैश्वानरस्य विष्णुत्वनिश्चयो भवतीत्याह – अनात्तत्वादिति ।।

ವಿಶ್ವ = ಪೂರ್ಣ, ಆರಾತ್ = ಸಮೀಪದಲ್ಲಿ ಎಂದರೆ ತನ್ನ ಹೃದಯದಲ್ಲೇ. ಇಲ್ಲಿ ಮೊದಲಿರುವ ಇತಿಶಬ್ದವು ವಿಧಿವಾಕ್ಯದ ಸಮಾಪ್ತ್ಯರ್ಥದಲ್ಲಿದೆ. ಎರಡನೆಯ ಇತಿಶಬ್ದವು 'ಇತ್ಯುಪಾಸೀತ' ಎಂಬಲ್ಲಿ ಅನ್ವಯವನ್ನು ಹೊಂದುತ್ತದೆ. ಪ್ರಕರಣದ ಬಲದಿಂದಲೂ ಸಹ ವಿಷ್ಣುವೇ ವೈಶ್ವಾನರನಾಗಿದ್ದಾನೆಂದು ಸಿದ್ಧವಾಗುತ್ತದೆ ಎಂದು "ಅನಾತ್ತತ್ವಾತ್" ಎಂಬ ವಾಕ್ಯದಿಂದ ಹೇಳುತ್ತಿದ್ದಾರೆ.

तत्वप्रकाशिका – 'को न आत्मा किं ब्रह्म' इति विचारपूर्वकं वैश्वानरविद्याया आरभ्याधीतत्वेन विष्णुप्रकरणत्वाच्च वैश्वानरो विष्णुरेवेति निश्चयो भवति । 'अनात्तत्वात्' इति वचनेन विष्णोरन्येषां आत्मत्वाद्यसम्भवादित्यर्थः ।

'ಕೋ ನ ಆತ್ಮಾ ಕಿಂ ಬ್ರಹ್ಮ' ಉಪಾಸ್ಯನಾದ ಆತ್ಮನು ಯಾರು ಅವನು ಯಾವ ಪ್ರಕಾರದಲ್ಲಿದ್ದಾನೆ. ಈ ರೀತಿಯಾಗಿ ವಿಚಾರಪೂರ್ವಕವಾಗಿ ವೈಶ್ವಾನರವಿದ್ಯೆಯು ಪ್ರಾರಂಭವಾಗಿದೆ. ಆದ್ದರಿಂದ ಇದು ವಿಷ್ಣುಪ್ರಕರಣವೇ ಆಗಿದೆ ಎಂದು ನಿಶ್ಚಯವಾಗುತ್ತದೆ. ಏಕೆಂದರೆ ಆತ್ಮ ಹಾಗೂ ಬ್ರಹ್ಮಶಬ್ದಗಳು ಮುಖ್ಯವಾಗಿ ವಿಷ್ಣುವನ್ನೇ ಪ್ರತಿಪಾದಿಸುತ್ತವೆ. ಹಾಗೂ "ಅನಾತ್ತತ್ವಾತ್" ಎಂಬ ಮಾತಿನಿಂದ ವಿಷ್ಣುವಿಗಿಂತ ಭಿನ್ನರಾದವರು ಆತ್ಮಶಬ್ದಾದಿಗಳಿಂದ ಪ್ರತಿಪಾದ್ಯರಾಗುವುದಿಲ್ಲವೆಂದು ಸ್ಪಷ್ಟವಾಗುತ್ತದೆ.

तत्वप्रकाशिका – श्रुतिसमाख्यया च वैश्वानरस्य विष्णुत्वमुपपादयति।। चन्द्रमा इति ।। यः पुरुषाख्यो विष्णुः पुरुषसूक्ते "शीर्ष्णो द्यौः समवर्तत' 'चक्षोः सूर्यो अजायत' 'प्राणाद्वायुरजायत' 'पद्भ्यां भूमिरजायत' इत्यादिना वाक्येन

ದ್ಯುಮ್ವಾದಿಜನಕಶೀರ್ಷಾದಿಮಾನಭಿಹಿತಸ್ತದ್ವಿಧಮೇವಾತ್ರ ವೈಶ್ವಾನರಂ ಚಾಧೀಯತೇ ಛಾಂದೋಗಾಃ 'ಮೂರ್ಧೈವ ಸುತೇಜಾಶ್ಚಕ್ಷುರ್ವಿಶ್ವರೂಪಃ ಪ್ರಾಣಃ ಪೃಥಗ್ವರ್ತ್ಮಾ ಪೃಥಿವ್ಯೈವ ಪಾದೌ' ಇತ್ಯಾದಿನಾ ವಾಕ್ಯೇನ । ಅತಃ ಪುರುಷಸೂಕ್ತಸಮಾಖ್ಯಯಾಽಪಿ ವಿಷ್ಣುರೇವ ವೈಶ್ವಾನರ ಇತ್ಯರ್ಥಃ ।

ಸಮಾಖ್ಯಾಶ್ರುತಿಯನ್ನು ಪ್ರಮಾಣವನ್ನಾಗಿ ನೀಡಿ ವಿಷ್ಣುವೇ ವೈಶ್ವಾನರನಾಗಿದ್ದಾನೆಂದು ಸಮರ್ಥಿಸುತ್ತಿದ್ದಾರೆ. ''ಚಂದ್ರಮಾ'' ಇತ್ಯಾದಿಯಾಗಿ. ಪುರುಷನೆಂಬ ವಿಷ್ಣುವು ಪುರುಷಸೂಕ್ತದಲ್ಲಿ 'ಶೀರ್ಷ್ಣೋ ದ್ಯೌಃ ಸಮವರ್ತತ' ತಲೆಯಿಂದ ದ್ಯುಲೋಕವು ಹುಟ್ಟಿತು. 'ಚಕ್ಷೋಃ ಸೂರ್ಯೋ ಅಜಾಯತ' ಕಣ್ಣಿನಿಂದ ಸೂರ್ಯನು ಹುಟ್ಟಿದನು. 'ಪ್ರಾಣಾದ್ ವಾಯುರಜಾಯತ' = ಪ್ರಾಣದಿಂದ ವಾಯುವು ಹುಟ್ಟಿದನು. 'ಪದ್ಭ್ಯಾಂ ಭೂಮಿರಜಾಯತ' ಕಾಲುಗಳಿಂದ ಭೂಮಿಯು ಹುಟ್ಟಿತು ಇತ್ಯಾದಿ ವಾಕ್ಯದಿಂದ ದ್ಯುಲೋಕ, ಸೂರ್ಯ ಮೊದಲಾದವುಗಳಿಗೆ ಜನಕವಾದ ತಲೆ ಮೊದಲಾದ ಅವಯವಗಳುಳ್ಳವನೆಂದು ಹೇಳಲ್ಪಟ್ಟಿದ್ದಾನೆ. ಅದರಂತೆ ಛಾಂದೋಗ್ಯಶ್ರುತಿಯಲ್ಲಿಯೂ ಸಹ 'ಮೂರ್ಧೈವ ಸುತೇಜಾಶ್ಚಕ್ಷುರ್ವಿಶ್ವರೂಪಃ ಪ್ರಾಣಃ ಪೃಥಗ್ವರ್ತ್ಮಾ ಪೃಥಿವ್ಯೇವ ಪಾದೌ' ಎಂಬುದಾಗಿ ಪುರುಷಸೂಕ್ತದಲ್ಲಿ ವರ್ಣನೆ ಮಾಡಿದಂತೆ ಭಗವಂತನ ಅವಯವಗಳನ್ನು ವರ್ಣನೆ ಮಾಡಲಾಗಿದೆ. ಹೀಗೆ ಪುರುಷಸೂಕ್ತರೂಪಸಮಾಖ್ಯಾಪ್ರಮಾಣದಿಂದಲೂ ವಿಷ್ಣುವೇ ವೈಶ್ವಾನರನಾಗಿದ್ದಾನೆಂದು ನಿರ್ಣಯವಾಗುತ್ತದೆ.

ತತ್ವಪ್ರಕಾಶಿಕಾ – ನನು ಪುರುಷಸೂಕ್ತಸ್ಯ ವಿಷ್ಣುಪರತ್ವೇ ಭವೇತ್ತತ್ಸಮಾಖ್ಯಯೈತದ್ವಿಧಾಯಾ ವಿಷ್ಣುಪರತ್ವಂ ತದೇವ ಕುತ ಇತ್ಯತ ಆಹ – ಚಶಬ್ದೇನೇತಿ ।। ವಿಷ್ಣುಪರತ್ವಂ ಪುರುಷಸೂಕ್ತಸ್ಯ (ಪ್ರ) ಸಿದ್ಧಮಿತಿ ಸೂಚಯತೀತ್ಯರ್ಥಃ । ಅಪಿಪದೇನೈವೋಭಯಸಮುಚ್ಚಯಸಿದ್ಧೇರನ್ಯತ್ರೋಪಕ್ಷೀಣಶ್ಚಶಬ್ದಃ । ಕಿಂ ತದ್ಭೇದಾದಿ? ಇತ್ಯತಸ್ತದ್ವಿಧಾರಯತಿ – ತಥಾ ಚೇತಿ ।।

ಪುರುಷಸೂಕ್ತವು ವಿಷ್ಣುಪರವಾದರೆ ಆಗ ಇಂತಹ ಸಮಾಖ್ಯಾಪ್ರಮಾಣದಿಂದ ವೈಶ್ವಾನರವಿದ್ಯೆಯು ವಿಷ್ಣುಪರವೆಂದು ನಿಶ್ಚಯಿಸಬಹುದು. ಆದರೆ ಪುರುಷಸೂಕ್ತವು ವಿಷ್ಣುಪರವೇ ಆಗಿದೆ ಎಂಬುದನ್ನು ಹೇಗೆ ನಿರ್ಣಯಿಸುತ್ತೀರಿ ಎಂಬ ಪ್ರಶ್ನೆಗೆ ''ಚಶಬ್ದೇನ'' ಎಂದು ಉತ್ತರಿಸಿದ್ದಾರೆ. ಚ ಶಬ್ದವು ಪುರುಷಸೂಕ್ತವು ವಿಷ್ಣುಪರವಾಗಿದೆ ಎಂಬ ವಿಷಯವನ್ನು ಸೂಚಿಸುತ್ತಿದೆ. ಅಪಿ ಪದದಿಂದಲೇ ಪ್ರಕರಣ ಹಾಗೂ ಸಮಾಖ್ಯಾಪ್ರಮಾಣಗಳ ಸಮುಚ್ಚಯವು ಸಿದ್ಧವಾಗುತ್ತಿರಬೇಕಾದರೆ ಚಶಬ್ದದ ಅರ್ಥವು ಕ್ಷೀಣವಾಯಿತೆಂದು ಶಂಕಿಸಬಾರದು. ಏಕೆಂದರೆ ಚಶಬ್ದದ ಅರ್ಥವು ಹಾಗೂ ಅಪಿಶಬ್ದದ ಅರ್ಥವೇ ಬೇರೆಯಾಗಿರುವುದರಿಂದ. ಪುರುಷಸೂಕ್ತವು ವಿಷ್ಣುಪರವೇ ಆಗಿದೆ ಎನ್ನುವುದಕ್ಕೆ ಏನು ಪ್ರಮಾಣ ಎಂಬ ಪ್ರಶ್ನೆಗೆ ''ತಥಾ ಚ'' ಎಂಬುದರಿಂದ ಪ್ರಮಾಣವನ್ನು ಉದಾಹರಿಸುತ್ತಿದ್ದಾರೆ.

ತತ್ವಪ್ರಕಾಶಿಕಾ – ಶ್ರುತೇಃ ಪ್ರಥಮಪ್ರತಿಜ್ಞಾನೇऽಪಿ ತಸ್ಯಾಃ ಪುರುಷಸೂಕ್ತಮುಪನ್ಯಸ್ಯ ವಿಷ್ಣುಪರತಯಾ ವ್ಯಾಖ್ಯಾನ್ಯಾಃ ಸಾಕ್ಷಾತ್ಪ್ರತಿಜ್ಞಾತಾರ್ಥಾಸಾಧಕತ್ವಾನ್ನ ಪ್ರಥಮಮುದಾಹರಣಮ್ । ಪ್ರತಿಜ್ಞಾ

त्वाधिक्यक्रमाभिप्राया । परो विलक्षणः । आदिपदेन 'सर्वतः पौरुषे सूक्ते गुणा विष्णोरुदीरिताः' इति ब्रह्मतर्कादिग्रहणम् ।

ಪ್ರಮಾಣಪ್ರಶ್ನೆಯಲ್ಲಿ ವಸ್ತುತಃ ಶ್ರುತಿಯನ್ನು ಮೊದಲು ಪ್ರಮಾಣವಾಗಿ ಪ್ರತಿಜ್ಞೆ ಮಾಡಬೇಕು, ಆದರೆ ಪುರಾಣವಾಕ್ಯವನ್ನೇಕೆ ಪ್ರಮಾಣವನ್ನಾಗಿ ನೀಡಿದರೆಂದರೆ ಪೂರ್ವವಾಕ್ಯದಲ್ಲಿ ಶ್ರುತಿಪ್ರಮಾಣವಿಷಯದಲ್ಲಿ ಪ್ರತಿಜ್ಞೆಯನ್ನು ಮಾಡಿದ್ದರು. ಪ್ರಕೃತ ಪ್ರಮಾಣವನ್ನಾಗಿ ನೀಡಲ್ಪಟ್ಟ ಶ್ರುತಿಯಲ್ಲಿ ಮೊದಲು ಪುರುಷಸೂಕ್ತವನ್ನು ಹೇಳಿ, ಅನಂತರ ಅದನ್ನು ವಿಷ್ಣುಪರವಾಗಿ ಯೋಜನೆ ಮಾಡಿದ್ದಾರೆ. ಇದನ್ನು ವ್ಯಾಖ್ಯಾನಿಸುವ ಈ ಪುರುಷಸೂಕ್ತದ ಮಂತ್ರವು ನೇರವಾಗಿ ಪ್ರತಿಜ್ಞೆಮಾಡಲ್ಪಟ್ಟ ಅರ್ಥವನ್ನು ಸಾಧಿಸದ ಕಾರಣ ಇದನ್ನು ಮೊದಲು ಉದಾಹರಿಸಿಲ್ಲ. ಹಾಗಾದರೆ ಪ್ರತಿಜ್ಞೆಯನ್ನೇಕೆ ಮಾಡಿದರೆಂದರೆ ವಿಷ್ಣುವಿಷಯದಲ್ಲಿ ಅನೇಕ ಪ್ರಮಾಣಗಳಿವೆ ಎಂಬ ವಿವಕ್ಷೆಯಿಂದಷ್ಟೇ ಮೊದಲು ಶ್ರುತಿಯನ್ನು ಪ್ರತಿಜ್ಞೆಮಾಡಿದ್ದಾರೆ. ''ಪರಃ'' ಎಂಬ ಶಬ್ದಕ್ಕೆ ವಿಲಕ್ಷಣವಾದವನು ಎಂದರ್ಥ. ಆದಿಪದದಿಂದ 'ಪುರುಷಸೂಕ್ತದಲ್ಲಿ ಎಲ್ಲ ಮಂತ್ರಗಳಲ್ಲಿಯೂ ವಿಷ್ಣುವಿನ ಗುಣವೇ ಹೇಳಲ್ಪಟ್ಟಿದೆ' ಎಂಬ ಬ್ರಹ್ಮತರ್ಕದ ಮಾತನ್ನು ವಿವಕ್ಷಿಸಬೇಕು.

तत्वप्रकाशिका – ननु पुरुषसूक्ते द्युम्वादिजनकशीर्षादिमत्त्वं पुरुषस्योच्यते वैश्वानरविद्यायां पुनर्वैश्वानरस्य तदभेदोऽतो विरुद्धार्थत्वान्नेयं समाख्येत्यत आह – यस्मादिति ।।

ಪುರುಷಸೂಕ್ತದಲ್ಲಿ ದ್ಯುಲೋಕ ಮೊದಲಾದವುಗಳಿಗೆ ಭಗವಂತನ ತಲೆಯು ಜನಕವಾಗಿದೆಯೆಂದು ಹೇಳಿದ್ದಾರೆ. ಆದರೆ ವೈಶ್ವಾನರವಿದ್ಯೆಯಲ್ಲಿ ವೈಶ್ವಾನರನ ತಲೆಯೇ ದ್ಯುಲೋಕವಾಗಿದೆ ಎಂಬುದಾಗಿ ಅಭೇದವನ್ನು ಹೇಳಿದ್ದಾರೆ. ಹೀಗೆ ಎರಡಕ್ಕೂ. ವಿರುದ್ಧಾರ್ಥತ್ವವಿರುವುದರಿಂದ ಪುರುಷಸೂಕ್ತವು ಸಮಾಖ್ಯಾಪ್ರಮಾಣವೆಂದು ಹೇಗೆ ಪರಿಗಣಿಸಲು ಸಾಧ್ಯ? ಎಂಬ ಪ್ರಶ್ನೆಗೆ ''ಯಸ್ಮಾತ್'' ಎಂಬುದರಿಂದ ಉತ್ತರಿಸುತ್ತಿದ್ದಾರೆ.

तत्वप्रकाशिका – वैश्वानराङ्गानां सूर्याद्यभेदोक्तावपि न पुरुषसूक्तवैश्वानरविद्ययोः विरोधः, अभेदोक्तेरपि तज्जन्यजनकभावविवक्षावत्त्वादिति भावः ।। २६ ।।

ವೈಶ್ವಾನರನ ತಲೆ ಮೊದಲಾದ ಅಂಗಗಳಿಗೆ ಸೂರ್ಯಾದಿಗಳಿಂದ ಅಭೇದವನ್ನು ಹೇಳಿರಬಹುದು. ಆದರೂ ಪುರುಷಸೂಕ್ತಕ್ಕೂ ವೈಶ್ವಾನರವಿದ್ಯೆಗೂ ವಿರೋಧವು ಬರುವುದಿಲ್ಲ. ಏಕೆಂದರೆ ಜನ್ಯಜನಕಭಾವವಿವಕ್ಷೆಯಿಂದ ಅಥವಾ ಆಧಾರಾಧೇಯಭಾವವಿವಕ್ಷೆಯಿಂದ ಹಾಗೆ ಅಭೇದವನ್ನು ವೈಶ್ವಾನರವಿದ್ಯೆಯಲ್ಲಿ ಹೇಳಿರುತ್ತಾರೆಂದು ತಿಳಿಯಬೇಕು.

ಭಾವದೀಪಃ –

ॐ ಶಬ್ದಾದಿಭ್ಯೋऽನ್ತಃಪ್ರತಿಷ್ಠಾನಾತ್ ॐ।।

ಉಭಯತ್ರ ವಿಶೇಷಶ್ರುತ್ಯಾದೌ ಪುನಃ ಸಾವಕಾಶತ್ವನಿರವಕಾಶತ್ವಪ್ರಾಬಲ್ಯಾನ್ನಿಶ್ಚಯ ಇತಿ ನ್ಯಾಯವಿವರಣೋಕ್ತಮುಭಯತ್ರ ವಿಶೇಷಶ್ರುತ್ಯಾದಿಕಂ ವ್ಯಞ್ಜಯನ್ ತದನುರೋಧೇನ ಭಾಷ್ಯಂ ವ್ಯಾಚಷ್ಟೇ – ಯದುಕ್ತಮಿತ್ಯಾದಿನಾ ।।

॥ ॐ ಶಬ್ದಾದಿಭ್ಯೋ೦ऽನ್ತಃಪ್ರತಿಷ್ಠಾನಾತ್ ॐ ॥

"ಉಭಯತ್ರ ವಿಶೇಷಶ್ರುತ್ಯಾದೌ ಪುನಃ ಸಾವಕಾಶತ್ವನಿರವಕಾಶತ್ವಪ್ರಾಬಲ್ಯಾನ್ನಿಶ್ಚಯಃ" ಎಂಬುದಾಗಿ ನ್ಯಾಯವಿವರಣದಲ್ಲಿ ಹೇಳಿರುತ್ತಾರೆ. ಈ ವಾಕ್ಯದಲ್ಲಿರುವ "ಉಭಯತ್ರ ವಿಶೇಷಶ್ರುತ್ಯಾದಿಕಂ" ಎಂಬ ಪದದ ಅರ್ಥವನ್ನು ಅನುಸರಿಸಿ ಭಾಷ್ಯವನ್ನು ವ್ಯಾಖ್ಯಾನಿಸಲು ಹೊರಟಿದ್ದಾರೆ "ಯದುಕ್ತಂ" ಇತ್ಯಾದಿಯಾಗಿ.

ಭಾವದೀಪಃ – ಸಮಾಖ್ಯಾನಾಚ್ಚೇತಿ ।। ವಿಶೇಷಶ್ರುತ್ಯಾದಾವಿತ್ಯತ್ರಾದಿಪದಾರ್ಥೋಕ್ತಿಃ । ಛಾನ್ದೋಗ್ಯೇ ಅಗ್ನಿಪದಾಭಾವಾದಾಹ – ಬೃಹದಾರಣ್ಯಕ ಇತಿ ।। ಸಪ್ತಮಾಧ್ಯಾಯ ಇತ್ಯರ್ಥಃ । ತಸ್ಯಾಪ್ಯತ್ರ ವಿಷಯತ್ವಮಿತ್ಯಗ್ರೇ ವ್ಯಕ್ತಂ ಭಾಷ್ಯೇ ।

ಟೀಕೆಯಲ್ಲಿರುವ "ಸಮಾಖ್ಯಾನಾಚ್ಚ" ಎಂಬುದು ನ್ಯಾಯವಿವರಣದಲ್ಲಿರುವ ವಿಶೇಷಶ್ರುತ್ಯಾದೌ" ಎಂಬಲ್ಲಿರುವ ಆದಿಪದದ ವ್ಯಾಖ್ಯಾನವಾಗಿದೆಯೆಂದು ತಿಳಿಯಬೇಕು. ಛಾಂದೋಗ್ಯಶ್ರುತಿಯಲ್ಲಿ ಅಗ್ನಿಪದವು ಕೇಳಿಸದ ಕಾರಣ ಬೃಹದಾರಣ್ಯಕ ಶ್ರುತಿಯನ್ನು ಅನುಸರಿಸಿದ್ದಾರೆಂದು "ಬೃಹದಾರಣ್ಯಕೇ" ಎಂದು ಹೇಳಿದ್ದಾರೆ. ಏಳನೇ ಅಧ್ಯಾಯದ ಬೃಹದಾರಣ್ಯಕೋಪನಿಷತ್ತಿನಲ್ಲಿ "ವೈಶ್ವಾನರಂ" ಎಂಬ ಶ್ರುತಿಯು ಕೇಳಿಸುತ್ತಿದೆ ಎಂದು ತಿಳಿಯಬೇಕು. ಆದೂ ಸಹ ಈ ಅಧಿಕರಣಕ್ಕೆ ವಿಷಯವಾಗಿದೆಯೆಂಬ ವಿಚಾರವು ಮುಂದಿನ ಭಾಷ್ಯದಿಂದ ಸ್ಪಷ್ಟವಾಗುತ್ತದೆ.

ಭಾವದೀಪಃ – ನಾಮಲಿಙ್ಗಾದಿನೇತ್ಯಾದಿಪದಾತ್ ಸರ್ವಕರ್ಮೇತ್ಯಗ್ರೇತನಸ್ಮೃತ್ಯನುರೋಧಾದಾಹ – ಕರ್ಮೇತಿ ।। ತಥಾಚಾಸ್ಯ ಕ್ರಿಯಾರೂಪತ್ವಾಲ್ಲಿಙ್ಗಸಙ್ಗ್ರಹಕಾದಿಪದೇನೈವಾನುಕ್ತ್ವಾऽನ್ತಃಪ್ರತಿಷ್ಠಾನಾದಿತಿ ಸೂತ್ರೇ ಪೃಥಗುಕ್ತಿರ್ಯುಕ್ತೇತಿ ಭಾವಃ ।

"ನಾಮಲಿಂಗಾದಿನಾ" ಎಂಬಲ್ಲಿರುವ ಆದಿ ಪದದಿಂದ "ಸರ್ವಕರ್ಮ" ಎಂದು ಮುಂದೆ ಉದಾಹರಿಸುವ ಶ್ರುತಿಯನ್ನು ವಿವಕ್ಷಿಸಬೇಕು. ಆದಕ್ಕೆ ಅನುಸಾರಿಯಾಗಿ "ಕರ್ಮ" ಇತ್ಯಾದಿ ಟೀಕೆಯು ಹೊರಟಿದೆ. ಪಾಚಕತ್ವ ಕ್ರಿಯಾವಿಶೇಷವಾಗಿದೆ. ಆದ್ದರಿಂದ ಸೂತ್ರದಲ್ಲಿರುವ ಆದಿ ಪದದಿಂದ ಲಿಂಗಗಳಷ್ಟೇ ಸಂಗ್ರಹವಾಗುತ್ತವೆ. ಕ್ರಿಯಾ ರೂಪವಾದ ಪಾಚಕತ್ವವು ಸಂಗ್ರಹವಾಗುವುದಿಲ್ಲವೆಂಬ ಉದ್ದೇಶದಿಂದ "ಅಂತಃ ಪ್ರತಿಷ್ಠಾನಾತ್" ಎಂದು ಸೂತ್ರದಲ್ಲಿ ಪ್ರತ್ಯೇಕವಾಗಿ ಇದನ್ನು ಉಲ್ಲೇಖಿಸಿದ್ದಾರೆಂಬ ಆಂಶವನ್ನು ಗಮನಿಸಬೇಕು.

ಭಾವದೀಪಃ – तत्त्वप्रदीपे तु प्रधानलिङ्गत्वात् पृथगुक्तिरित्युक्तम् । अन्तःप्रतिष्ठानन्यत्तयर्थं पूर्वशेषमाह – अयमिति ।।

ತತ್ವಪ್ರದೀಪದಲ್ಲಿ ''ಅಂತಃ ಪ್ರತಿಷ್ಠಾನಾತ್'' ಎಂಬುದಾಗಿ ಪಾಚಕತ್ವ ಧರ್ಮವನ್ನು ಪ್ರತ್ಯೇಕವಾಗಿ ಸಂಗ್ರಹಿಸಲು ಬೇರೆ ಕಾರಣವನ್ನೇ ಹೇಳಿದ್ದಾರೆ. ಪಾಚಕತ್ವವು ಪ್ರಧಾನವಾದ ಲಿಂಗವಾಗಿರುವುದರಿಂದ ಸೂತ್ರಕಾರರು ಪ್ರತ್ಯೇಕವಾಗಿ ವಿವಕ್ಷಿಸಿದ್ದಾರೆಂದು ಹೇಳಿದ್ದಾರೆ. ಅಂತಃ ಪ್ರತಿಷ್ಠಾನತ್ವವು ಸ್ಪಷ್ಟವಾಗಿ ತಿಳಿಯಬೇಕೆಂಬ ಉದ್ದೇಶದಿಂದ ಶ್ರುತಿಯ ಹಿಂದಿನ ವಾಕ್ಯವನ್ನು ''ಅಯಮಗ್ನಿಃ'' ಎಂಬುದರಿಂದ ಉಲ್ಲೇಖಿಸಿದ್ದಾರೆ.

ಭಾವದೀಪಃ – आगच्छेदास्यं छान्दोग्ये च पचनरूपाग्निकर्म श्रूयत इत्यर्थः । तस्मादिति भाष्यपदमनूद्यार्थमाह – तस्मादिति ।। उक्तहेत्वन्वयाय न विष्णुरित्येतत् सावधारणं व्याचष्टे – न विष्णुरेवेति ।।

ಛಾಂದೋಗ್ಯದಲ್ಲಿಯೂ ಪಚನರೂಪವಾದ ಅಗ್ನಿ ಕ್ರಿಯೆಯು ಕೇಳಿಸುತ್ತಿದೆ ಎಂದು ತಿಳಿಯಬೇಕು. ''ತಸ್ಮಾತ್'' ಎಂಬ ಭಾಷ್ಯದ ಪದವನ್ನು ಅನುವಾದ ಮಾಡಿ ''ತಸ್ಮಾತ್'' ಎಂಬ ವಾಕ್ಯದಿಂದಲೇ ಅರ್ಥವನ್ನು ಹೇಳುತ್ತಿದ್ದಾರೆ. ಹಿಂದೆ ಹೇಳಿದ ಹೇತುವಿಗೆ ಅನ್ವಯವನ್ನು ತಿಳಿಸುವುದಕ್ಕಾಗಿ ''ನ ವಿಷ್ಣುಃ'' ಎಂಬುದನ್ನು ಸಾವಧಾರಣವಾಗಿ ವ್ಯಾಖ್ಯಾನಿಸುತ್ತಿದ್ದಾರೆ ''ನ ವಿಷ್ಣುರೇವ'' ಎಂಬುದಾಗಿ.

ಭಾವದೀಪಃ – समाख्येति ।। तत्तद्वाक्योद्धार इत्यनुषङ्गः । सिद्धान्ते 'अहं वैश्वानरो भूत्वा' इति यथा समाख्या तथा वैश्वानरोऽग्निरित्यप्यस्ति । 'अयमग्निः' इति समाख्येति वक्तुमित्यर्थः ।

ಟೀಕೆಯಲ್ಲಿರುವ ''ಸಮಾಖ್ಯಾರೂಪೇಣ'' ಎಂಬುದರಿಂದ ಆಯಾ ವಾಕ್ಯಗಳನ್ನು ವಿವಕ್ಷಿಸಬೇಕೆಂದು ತಿಳಿಯಬೇಕು. ಅಂದರೆ ಸಿದ್ಧಾಂತದಲ್ಲಿ ಯಾವರೀತಿಯಾಗಿ ''ಅಯಂ ವೈಶ್ವಾನರೋ ಭೂತ್ವಾ'' ಎಂದು ಸಮಾಖ್ಯಾಪ್ರಮಾಣವು ಕೇಳಿಸುತ್ತಿದೆಯೋ, ಅದೇ ರೀತಿಯಾಗಿ ಪೂರ್ವಪಕ್ಷದಲ್ಲಿಯೂ ಅಗ್ನಿಯು ವೈಶ್ವಾನರನಾಗಿದ್ದಾನೆನ್ನಲು ''ಅಯಂ ಅಗ್ನಿಃ'' ಎಂಬುದಾಗಿ ಸಮಾಖ್ಯಾಪ್ರಮಾಣವು ಇರುತ್ತದೆ ಎಂದು ತಿಳಿಯಬೇಕು.

ಭಾವದೀಪಃ – इति मन्त्रेति ।। 'मूर्धानं दिवो अरतिं पृथिव्या वैश्वानरमृत आजातमग्निम् । कविं सम्राजमतिथिं जनानामासन्नापात्रं जनयन्त देवाः ।।' इति मन्त्रस्यार्थ उच्यत इत्यर्थः ।

ಟೀಕೆಯಲ್ಲಿ ''ಇತಿ ಮಂತ್ರಾರ್ಥಃ'' ಎಂದು ಹೇಳಿದ್ದಾರೆ - ''ಮೂರ್ಧಾನಂ ದಿವೋ ಅರತಿಂ ಪೃಥಿವ್ಯಾ ವೈಶ್ವಾನರಮೃತ ಆಜಾತಮಗ್ನಿಮ್ । ಕವಿಂ ಸಮ್ರಾಜಮತಿಥಿಂ ಜನಾನಾಮಾಸನ್ನಾ ಪಾತ್ರಂ ಜನಯಂತ ದೇವಾಃ'' ಎಂದು ಮಂತ್ರದ ಅರ್ಥವನ್ನು ಹೇಳುತ್ತಾರೆಂದು ತಿಳಿಯಬೇಕು.

ಭಾವದೀಪಃ – पुरुषसूक्तेनैकार्थत्वायार्थोक्तिः । ऋते सम्यग् ज्ञानाय, सम्यगित्याङोऽर्थः । जनानामित्यत्राप्याकर्षः । जातं 'जर्नि प्रादुर्भावे' अभिव्यक्तमित्यर्थः । कविमित्यादेरर्थः सर्वज्ञमित्यादि । पात्रं पातारम् । आसन् आस्ये । आस्यतयेति यावत् । आजनयन्त आकुर्वन् ।

ಪುರುಷಸೂಕ್ತದ ಜೊತೆಗೆ ಶ್ರುತಿಗೆ ಒಂದೇ ಅರ್ಥವನ್ನು ತಿಳಿಸುವುದಕ್ಕಾಗಿ "ದಿವಃ" ಇತ್ಯಾದಿಯಾಗಿ ಶ್ರುತ್ಯರ್ಥವನ್ನು ಹೇಳುತ್ತಿದ್ದಾರೆ. ಋತೇ = ಸಮಿಚೀನವಾದ ಜ್ಞಾನಕ್ಕೋಸ್ಕರ. "ಆಙ್" ಎಂಬ ಉಪಸರ್ಗದ ಅರ್ಥವನ್ನು "ಸಮ್ಯಗ್" ಎಂದು ಹೇಳಿದ್ದಾರೆ. "ಜನಾನಾಂ" ಎಂಬುದನ್ನು ಇಲ್ಲೂ ಸಹ ಇಟ್ಟುಕೊಳ್ಳಬೇಕು. "ಜಾತಂ" ಎಂಬ ಪದವು "ಜನೀ ಪ್ರಾದುರ್ಭಾವೇ" ಎಂಬ ಧಾತುವಿನಿಂದ ನಿಷ್ಪನ್ನವಾದ್ದರಿಂದ "ಅಭಿವ್ಯಕ್ತವಾಗಿದೆ" ಎಂಬರ್ಥದಲ್ಲಿ ಇದೆ. "ಕವಿಂ" ಎಂಬುದರ ಅರ್ಥ "ಸರ್ವಜ್ಞಂ" ಎಂದು ಹೇಳಿದ್ದಾರೆ. ಪಾತ್ರಂ = ರಕ್ಷಿಸುವವನನ್ನು, ಆಸನ್ = ಮುಖದಲ್ಲಿ. ಆಂದರೆ ತಮ್ಮ ಮುಖವನ್ನಾಗಿ ಮಾಡಿಕೊಂಡರು ಎಂದರ್ಥ. "ಆಜನಯಂತ" ಎಂದರೆ 'ಮಾಡಿದರು' ಎಂದರ್ಥ.

ಭಾವದೀಪಃ – गतीति ।। लोके गमनेनारतिदर्शनाद् रतिविरुद्धगतिसाधनत्वात् पादोऽरतिशब्दार्थ इत्यर्थः ।। तादर्थ्य इति ।। 'चर्मणि द्वीपिनं हन्ति दन्तयोर्हन्ति कुञ्जरम्' इत्यादाविवेति भावः

ಲೋಕದಲ್ಲಿ ಗಮನದಿಂದ ಅರತಿಯು ಕಾಣಿಸುತ್ತಿದೆ. ರತಿಗೆ ವಿರುದ್ಧವಾದ್ದರಿಂದ ಆಂದರೆ ಗಮನಕ್ಕೆ ಸಾಧನವಾದ್ದರಿಂದ ಅರತಿ ಶಬ್ದಕ್ಕೆ ಪಾದವೆಂಬ ಅರ್ಥವು ಲಭಿಸುತ್ತದೆ. "ಋತಾಯ ಜಾತಂ" ಎಂಬಲ್ಲಿ ತಾದರ್ಥ್ಯದಲ್ಲಿ ಸಪ್ತಮೀವಿಭಕ್ತಿಯು ಬಂದಿದೆ. "ಚರ್ಮಣಿ ದ್ವೀಪಿನಂ ಹಂತಿ ದಂತಯೋರ್ಹಂತಿ ಕುಂಜರಂ" ಎಂಬ ದೃಷ್ಟಾಂತದಂತೆ ತಿಳಿಯಬೇಕು.

ಭಾವದೀಪಃ – एवंविदिति ।। वैश्वानरज्ञानी । यद्यपि यदि, तस्मान्न विष्णुरितीत्यन्तभाष्यमनुवर्त्य तेन नञोऽन्वयमुपेत्यर्थमाह – उभयत्रेति । कुत इत्याकाङ्क्षायां 'तस्यैव दृष्ट्युपदेशाद्' इति भाष्यस्य साक्षादनन्वयान्न्यायविवरणोक्तं हेतुं संयोज्य तदुपपादकत्वेन भाष्यं योजयति – उभयत्रेति ।। ।।

"ಏವಂ ವಿತ್" ಎಂಬ ಪದಕ್ಕೆ ವೈಶ್ವಾನರನನ್ನು ತಿಳಿದವನು ಎಂದರ್ಥ. "ಯದ್ಯಪಿ" = ಒಂದು ವೇಳೆ. "ತಸ್ಮಾನ್ನವಿಷ್ಣುಃ" ಎಂಬಲ್ಲಿಯ ತನಕದ ಭಾಷ್ಯವನ್ನು ಅನುವೃತ್ತಿ ಮಾಡಿಕೊಂಡು "ನಞ್" ಗೆ ಅನ್ವಯವನ್ನು ಅಂಗೀಕರಿಸಿ ಅರ್ಥವನ್ನು "ಉಭಯತ್ರ" ಎಂಬ ವಾಕ್ಯದಿಂದ ಹೇಳುತ್ತಿದ್ದಾರೆ. ಏನು ಕಾರಣ? ಎಂಬ ಆಶಂಕೆಗೆ "ತಸ್ಯೈವ ದೃಷ್ಟ್ಯುಪದೇಶಾತ್" ಎಂಬ ಭಾಷ್ಯಕ್ಕೆ ನೇರವಾಗಿ ಅನ್ವಯವಿಲ್ಲದ ಕಾರಣ ನ್ಯಾಯವಿವರಣದಲ್ಲಿ ಹೇಳಿದ ಹೇತುವನ್ನು ಸಂಯೋಜನೆ ಮಾಡಿ ಅದಕ್ಕೆ ಉಪಪಾದಕವಾಗಿ ಭಾಷ್ಯವನ್ನು ಯೋಜನೆ ಮಾಡುತ್ತಿದ್ದಾರೆ "ಉಭಯತ್ರ" ಇತ್ಯಾದಿ ವಾಕ್ಯದಿಂದ.

ಪರಿಪೂರ್ಣಚಂದ್ರಿಕಾ

ಭಾವದೀಪಃ – ಏವಞ್ಚ ಗಾಯತ್ರೀನಯೇ 'ತಥಾ ಚೇತೋऽರ್ಪಣ' ಇತ್ಯನೇನ ಗಾಯತ್ರ್ಯಾದ್ಯಪ್ರಸಿದ್ಧಶಬ್ದಸ್ಯ ವಿಷ್ಣೌ ಪ್ರಯೋಗೇ ಪ್ರಯೋಜನೋಕ್ತಿರಿಹ ತು ವೈಶ್ವಾನರನಾಮಾದೇಃ ಸಾವಕಾಶತ್ವೋಕ್ತಿರಿತ್ಯಪೌನರುಕ್ತ್ಯಮಿತಿ ಭಾವಃ ।। ನಚೇತಿ ।।

ಟೀಕೆಯಲ್ಲಿ "ಉಭಯತ್ರ ಶ್ರುತ್ಯಾದಿ" ಎಂಬ ವಾಕ್ಯದಿಂದ ಗಾಯತ್ಯಧಿಕರಣದಿಂದ ಪುನರುಕ್ತಿದೋಷವನ್ನು ಪರಿಹರಿಸಿದ್ದಾರೆ. ಗಾಯತ್ಯಧಿಕರಣದಲ್ಲಿ "ತಥಾ ಚೇತೋऽರ್ಪಣಾತ್" ಎಂಬ ಸೂತ್ರದಿಂದ ಗಾಯತ್ರೀ ಮೊದಲಾದ ಶಬ್ದಗಳನ್ನು ವಿಷ್ಣುವಿನಲ್ಲಿ ಸಮನ್ವಯ ಮಾಡುವುದರ ಪ್ರಯೋಜನವನ್ನು ಸಾಧಿಸಿದ್ದಾರೆ. ಆದರೆ ಈ ಅಧಿಕರಣದಲ್ಲಿ ವೈಶ್ವಾನರ ಮೊದಲಾದ ಶಬ್ದಗಳಿಗೆ ಸಾವಕಾಶತ್ವವನ್ನು ಸಮರ್ಥಿಸುತ್ತಿದ್ದಾರೆ. ಹೀಗೆ ಎರಡು ಅಧಿಕರಣಗಳು ಭಿನ್ನವಿಷಯಕವಾಗಿರುವುದರಿಂದ ಪುನರುಕ್ತಿಯು ಬರುವುದಿಲ್ಲವೆಂದು ತಿಳಿಯಬೇಕು.

ಭಾವದೀಪಃ – 'ಅನಾತ್ತತ್ವಾದನಾತ್ಮಾನಃ' ಇತ್ಯಾದೇರಿತಿ ಭಾವಃ । ಬಲಾದಿತ್ಯುಕ್ತಿಲಬ್ಧಮಾಹ – ಅತ ಇತಿ ।। ಉಪಾಸನಾ ಹಿ ಜ್ಞಾನಾದನ್ಯಾ ಅರ್ಥಹೀನಾऽಪಿ ಸ್ಯಾದಿತ್ಯಾಶಙ್ಕಾಪನುತ್ತಯೇ ಸೂತ್ರಭಾಷ್ಯಯೋಃ ದೃಶೀತ್ಯುಕ್ತಂ ತದ್ ವ್ಯನಕ್ತಿ – ನಚ ವಾಚ್ಯಮಿತಿ ।।

ಆತ್ಶಬ್ದಕ್ಕೆ "ಆನಾತ್ತ್ವಾದನಾತ್ಮಾನಃ" ಎಂಬ ನಿರ್ವಚನವನ್ನು ಅಪೇಕ್ಷಿಸಿ ಬೇರೆ ಕಡೆ ಪ್ರಯೋಗಿಸಬಹುದಲ್ಲವೆ? ಎಂಬುದನ್ನು "ನಚ" ಎಂಬ ವಾಕ್ಯದಿಂದ ನಿರಾಕರಿಸುತ್ತಿದ್ದಾರೆ. "ಬಲಾತ್" ಎಂಬುದರಿಂದ ಲಭ್ಯವಾದ ಅರ್ಥವನ್ನು "ಅತಃ" ಎಂಬ ವಾಕ್ಯದಿಂದ ಹೇಳುತ್ತಿದ್ದಾರೆ. ಉಪಾಸನೆಯು ಜ್ಞಾನಕ್ಕಿಂತ ಭಿನ್ನವಾಗಿದೆ ಮತ್ತು ಅರ್ಥಹೀನವಾಗಿದೆ ಎಂಬ ಆಶಂಕೆಯನ್ನು ಪರಿಹರಿಸುವುದಕ್ಕಾಗಿ ಸೂತ್ರ ಹಾಗೂ ಭಾಷ್ಯದಲ್ಲಿ "ದೃಷ್ಟಿ" ಎಂಬ ಪದವನ್ನು ಪ್ರಯೋಗಿಸಿದ್ದಾರೆ. ಆದನ್ನು "ನಚ ವಾಚ್ಯಂ" ಎಂದು ಟೀಕೆಯಲ್ಲಿ ವ್ಯಾಖ್ಯಾನಿಸುತ್ತಿದ್ದಾರೆ.

ಭಾವದೀಪಃ – ನಾವಿದ್ಯಮಾನಮಿತಿ ತೈತ್ತಿರೀಯಭಾಷ್ಯೋಕ್ತಸ್ಮೃತಿಃ । ಆದಿಪದೇನ **'ನಚ ರಮನ್ತ್ಯಹೋ ಅಸದುಪಾಸನಯಾ' ಇತ್ಯಾದಿ ಗೃಹ್ಯತೇ ।। ವಾಕ್ಯಾನ್ತರಸ್ಯೇತಿ ।। 'ಅಹಂ ವೈಶ್ವಾನರೋ ಭೂತ್ವಾ' ಇತಿ** ಸಮಾಖ್ಯಾತ್ವೇನೋಕ್ತವಾಕ್ಯಾನ್ತರಸ್ಯಾವಿರೋಧೇನ ಯೋऽರ್ಥಃ ಸ್ಯಾಪ್ಯತೇ ತದರ್ಥತ್ವಾಚ್ಚಾಸ್ಯ ವಾಕ್ಯಸ್ಯ ನಾಸದರ್ಥಕತ್ವಮಿತ್ಯರ್ಥಃ ।

"ನಾವಿದ್ಯಮಾನಂ" ಎಂಬುದು ತೈತ್ತಿರೀಯಭಾಷ್ಯದಲ್ಲಿ ಹೇಳಿದ ಸ್ಮೃತಿವಾಕ್ಯವೆಂದು ತಿಳಿಯಬೇಕು. ಆದಿ ಪದದಿಂದ "ನಚ ರಮಂತ್ಯಹೋ ಅಸದುಪಾಸನಯಾ" ಇವೇ ಮೊದಲಾದ ಪ್ರಮಾಣಗಳನ್ನು ವಿವಕ್ಷಿಸಬೇಕು. "ವಾಕ್ಯಾಂತರಸ್ಯ" ಎಂದರೆ "ಅಹಂ ವೈಶ್ವಾನರೋ ಭೂತ್ವಾ" ಎಂಬ ಸಮಾಖ್ಯಾಪ್ರಮಾಣದಿಂದ ಹೇಳಲ್ಪಟ್ಟ ವಾಕ್ಯಾಂತರದಿಂದ ವಿರೋಧವಿಲ್ಲವೆಂದು ಅರ್ಥ. ಈ ವಾಕ್ಯಕ್ಕೆ ಆದೇ ಅರ್ಥವನ್ನು ಸ್ಥಾಪನೆ ಮಾಡುವುದರಿಂದ ಅಸದರ್ಥಕತ್ವವನ್ನು ಒಪ್ಪಬಾರದು.

ಭಾವದೀಪಃ – ಯಥಾ ನನು 'ಮೂರ್ಧ್ನೈವ ಸುತೇಜಾಃ' ಇತ್ಯಾದಿನಾ ದ್ರವ್ಯಾದಿತಾದಾತ್ಮ್ಯಮವಿದ್ಯಮಾನಮುಚ್ಯತ ಇತ್ಯತ ಆಹ – ವಾಕ್ಯಾನ್ತರಸ್ಯೇತಿ ।। 'ಶೀರ್ಷ್ಣೋ ದ್ಯೌಃ ಸಮವರ್ತತ' ಇತ್ಯಸ್ಯ ವಿವರಿಷ್ಯತೇ ಚೈತದಗ್ರೇ । ಯಥಾ 'ಹೃದಯಂ ಗಾರ್ಹಪತ್ಯೋ ಮನೋऽನ್ವಾಹಾರ್ಯಪಚನ' ಇತ್ಯಾದಿನಾ ವೈಶ್ವಾನರಾಙ್ಗಾನಾಂ ಗಾರ್ಹಪತ್ಯಾದ್ಯೈಕ್ಯಮವಿದ್ಯಮಾನಮೇವೋಚ್ಯತ ಇತ್ಯತ ಆಹ – ವಾಕ್ಯಾನ್ತರಸ್ಯೇತಿ ।।

ಅಥವಾ ''ಮೂರ್ಧೈವ ಸುತೇಜಾಃ'' ಎಂಬುದಾಗಿ ದ್ರವ್ಯಾದಿತಾದಾತ್ಮ್ಯವನ್ನು ಹೇಳಲಾಗಿದೆ. ಇದು ಅವಿದ್ಯಮಾನವಾಗಿದೆಯಲ್ಲವೆ? ಎಂಬ ಪ್ರಶ್ನೆಗೆ ''ವಾಕ್ಯಾಂತರಸ್ಯ'' ಎಂಬುದರಿಂದ ಉತ್ತರಿಸಿದ್ದಾರೆ. ವಾಕ್ಯಾಂತರಸ್ಯ ಎಂದರೆ '' ಶೀರ್ಷ್ಣೋ ದ್ಯೌಃ ಸಮವರ್ತತ'' ಎಂದು ಪುರುಷಸೂಕ್ತದಲ್ಲಿ ಭಗವಂತನಿಗೆ ದ್ಯುಲೋಕವೇ ತಲೆಯೆಂದು ಹೇಳಲಾಗಿದೆ. ಈ ವಿಷಯವನ್ನು ಮುಂದೆ ಸ್ಪಷ್ಟಪಡಿಸುತ್ತಾರೆ. ಅಥವಾ ''ಹೃದಯಂ ಗಾರ್ಹಪತ್ಯೋ ಮನೋऽನ್ವಾಹಾರ್ಯಪಚನಃ'' ಇತ್ಯಾದಿಯಾಗಿ ವೈಶ್ವಾನರನಿಗೆ ಅಂಗವಾದ ಗಾರ್ಹಪತ್ಯಾದಿಗಳಿಂದ ಐಕ್ಯವನ್ನು ಹೇಳುತ್ತಿದ್ದೀರಿ ಇದು ಅವಿದ್ಯಮಾನವಾಗಿದೆಯಲ್ಲವೇ? ಎಂಬ ಪ್ರಶ್ನೆಗೆ ''ವಾಕ್ಯಾಂತರಸ್ಯ'' ಎಂಬ ವಾಕ್ಯದಿಂದ ಉತ್ತರಿಸುತ್ತಿದ್ದಾರೆಂದು ತಿಳಿಯಬೇಕು.

ಭಾವದೀಪಃ – 'ಮೂರ್ಧೈವ ಸುತೇಜಾಃ' ಇತ್ಯಾದೇರವಿರೋಧೇನ ಯಸ್ತಾದಾತ್ಮ್ಯಾದನ್ಯೋऽರ್ಥಃ 'ಯಸ್ಮಾದ್ ಯದ್ ಜಾಯತೇ ಚಾಙ್ಗಾದ್' ಇತ್ಯಾದಿನಾ ಸ್ಥಾಪ್ಯತೇ, ತದರ್ಥತ್ವಾಚ್ಚ ಹೃದಯಮಿತ್ಯಾದೇರಿತಿ ನಾಸದರ್ಥಕತ್ವಮಿತ್ಯರ್ಥಃ । ಕೋऽರ್ಥಸ್ತರ್ಹಿ ಯೋಷಿತಮಗ್ನಿಮಿತ್ಯಸ್ಯೇತ್ಯತೋऽಪಿ ।। ವಾಕ್ಯಾನ್ತರಸ್ಯೇತಿ ।।

ಮೂರ್ಧೈವ ಸುತೇಜಾಃ'' ಎಂಬ ವಚನಗಳಿಗೆ ವಿರೋಧವಿಲ್ಲದಂತೆ ತಾದಾತ್ಮ್ಯಕ್ಕಿಂತ ಬೇರೆ ಅರ್ಥವನ್ನು ಹೇಳಬಹುದು. ದ್ಯುಲೋಕಾದಿಗಳು ಭಗವಂತನ ಯಾವ ಅಂಗಗಳಿಂದ ಹುಟ್ಟುತ್ತವೋ ಆ ಪದಾರ್ಥಗಳಿಗೆ ಭಗವಂತನ ಆ ಅಂಗಗಳಿಂದ ಐಕ್ಯವನ್ನು ಹೇಳಲಾಗಿದೆ. ಆದರೂ ಸಹ ಅಸದರ್ಥಕತ್ವವನ್ನು ಹೇಳಿದಂತಾಗುವುದಿಲ್ಲವೆಂದು ತಿಳಿಯಬೇಕು. ಹಾಗಾದರೆ ''ಯೋಷಿತಮಗ್ನಿಂ'' ಎಂಬಲ್ಲಿ ಹೇಗೆ ಅರ್ಥೈಸಬೇಕೆಂಬುದಕ್ಕೆ ''ವಾಕ್ಯಾಂತರಸ್ಯ'' ಎಂಬುದರಿಂದಲೇ ಉತ್ತರಿಸುತ್ತಿದ್ದಾರೆ.

ಭಾವದೀಪಃ – 'ತಸ್ಮಿನ್ನೇತಸ್ಮಿನ್ನಗ್ನೌ ದೇವಾ ರೇತೋ ಜುಹ್ವತಿ' ಇತಿ ವಾಕ್ಯಾನ್ತರಸ್ಯ ಯೋऽರ್ಥಃ ರೇತೋರೂಪಾಹುತ್ಯಾಧಾರತ್ವಂ ತದರ್ಥತ್ವಾಚ್ಚ ಯೋಷಿತಮಿತಿ ವಾಕ್ಯಸ್ಯೇತಿ । ಪ್ರಕೃತಶ್ರುತ್ಯೈಕ್ಯಾರ್ಥಾಯ ಸ್ವಹೃದಯ ಇತ್ಯುಕ್ತಿಃ ।

ಯೋಷಿತವೆಂಬ ಅಗ್ನಿಯಲ್ಲಿ ದೇವತೆಗಳು ರೇತಸ್ಸಿನಿಂದ ಹೋಮಿಸುತ್ತಾರೆ. ಹೀಗೆ ವಾಕ್ಯಾಂತರವೆನಿಸಿದ ''ಯೋಷಿತಮಗ್ನಿಂ'' ಎಂಬುದಕ್ಕೆ ಅರ್ಥವನ್ನು ಹೇಗೆ ಮಾಡುತ್ತೇವೋ ಅಂದರೆ ''ರೇತಸ್'' ಎಂಬ ಆಹುತಿಗೆ ಆಧಾರವಾಗಿದೆ. ಆದ್ದರಿಂದ ''ಯೋಷಿತಂ'' ಎಂಬ ವಾಕ್ಯವು ಉಪಪನ್ನವಾಗುತ್ತದೆ ಎಂದು ತಿಳಿಯಬೇಕು. ಪ್ರಕೃತ ಶ್ರುತಿಯಿಂದ ಐಕಾರ್ಥ್ಯವನ್ನು ಹೇಳುವುದುಕ್ಕೋಸ್ಕರ ''ಸ್ವಹೃದಯ'' ಎಂದು ಹೇಳಿದ್ದಾರೆ.

ಭಾವದೀಪಃ – ಶ್ರುತೌ ಸರ್ವಕರ್ಮಾ 'ನ ಋತೇ ತ್ವತ್ ಕ್ರಿಯತೇ' ಇತ್ಯಾದೇಃ । ವಜ್ರಧರತ್ವಾದೀನಿ ಸರ್ವಾಣಿ ಲಿಙ್ಗಾನಿ ಚಾಸ್ಯೈವೇತಿ ಸರ್ವಲಿಙ್ಗ. । ತದಿಚ್ಛಯೈವ ಸರ್ವಮಿತಿ ಸರ್ವಕಾಮಃ ।

ಶ್ರುತಿಯಲ್ಲಿರುವ "ಸರ್ವಕರ್ಮಾ", "ನ ಋತೇ ತ್ವತ್ ಕ್ರಿಯತೇ" ಇತ್ಯಾದಿಗಳನ್ನು ವಿವಕ್ಷಿಸಬೇಕು. ಈ ಎಲ್ಲಾ ಶ್ರುತಿಗಳು ವಿಷ್ಣುವನ್ನೇ ಪ್ರತಿಪಾದಿಸುತ್ತವೆ. ವಜ್ರಧರತ್ವವೇ ಮೊದಲಾದ ಸಕಲ ಲಿಂಗಗಳೆಲ್ಲವೂ ವಿಷ್ಣುವಿನದ್ದೇ ಆಗಿವೆ. "ಸರ್ವಕಾಮಃ" ಎಂದರೆ ಭಗವಂತನ ಇಚ್ಛೆಯಿಂದಲೇ ಎಲ್ಲವೂ ಎಂದರ್ಥ.

ಭಾವದೀಪಃ – ಗುಣಾಃ ಜ್ಞಾನಾದಯಃ । ಧರ್ಮಾಃ ಸರ್ವಜ್ಞಾದಯಃ । ಸಂಯೋಗವಿಯೋಗಾದಿಧರ್ಮಾಃ ತದಧೀನಾ ಇತಿ ವಾ ಸರ್ವಧರ್ಮಃ । ಸರ್ವತ್ರ ರೂಪಮಸ್ಯೇತಿ ವಾ ಸರ್ವಮಸ್ಯ ರೂಪಂ ಪ್ರತಿಮೇತಿ ವಾ ಸರ್ವರೂಪಃ ।

"ಗುಣಾಃ" = ಜ್ಞಾನಾದಿ ಗುಣಗಳು. ಧರ್ಮಾಃ = ಸರ್ವಜ್ಞತ್ವಾದಿಗಳು. ಸಂಯೋಗ ಹಾಗೂ ವಿಯೋಗ ಮೊದಲಾದ ಧರ್ಮಗಳು ಭಗವದಧೀನವಾಗಿವೆ ಎಂಬರ್ಥದಲ್ಲಿಯೂ "ಸರ್ವಧರ್ಮಃ" ಎಂಬ ಪದವನ್ನು ಪ್ರಯೋಗಿಸಿದ್ದಾರೆ. "ಸರ್ವರೂಪಃ" ಎಂಬ ಪದಕ್ಕೆ ಎಲ್ಲಾಕಡೆ ಭಗವಂತನ ರೂಪವಿದೆ ಎಂದರ್ಥ. ಅಥವಾ ಎಲ್ಲವೂ ಭಗವಂತನ ಪ್ರತಿಮೆಯಾಗಿದೆ ಎಂದರ್ಥ.

ಭಾವದೀಪಃ – ಅಲಂ ಸಮ್ಯಗಿತಿ ಅವಶಿಷ್ಟಪದಾರ್ಥಸ್ತತ್ತ್ವಪ್ರದೀಪೋಕ್ತಃ । ಶಬ್ದಾದೇವೇತ್ಯತ್ರ ಶ್ರುತ್ಯಾದೇರುಪಕ್ರಮೋಪಸಂಹಾರಯೋಃ ಶ್ರುತತ್ವೇ ತನ್ನಿಶ್ಚಾಯಕತಯಾ ಲಿಙ್ಗತ್ವಮಿತಿ ವಕ್ಷ್ಯಮಾಣದಿಶಾ ಅನ್ತರನಯ ಇವಾತ್ಮಬ್ರಹ್ಮಶಬ್ದಯೋರುಪಕ್ರಮೇ ಶ್ರುತತ್ವೇನ ತಸ್ಯ ವೈಷ್ಣವತ್ವಂ ನಿಶ್ಚಾಯಯದಾತ್ಮಾದಿಶಬ್ದದ್ವಯಂ ಪ್ರಕರಣಸ್ಯ ವೈಷ್ಣವತ್ವಂ ನಿರ್ಧಾರ್ಯ ತತ್ರಸ್ಥವೈಶ್ವಾನರನಾಮ್ನೋ ವಿಷ್ಣ್ವರ್ಥತ್ವಮವಧಾರಯತೀತಿ ಭಾವೇನಾಸಮ್ಭವಾದಿತಿ ಸೂತ್ರಖಣ್ಡಭಾಷ್ಯಂ ವ್ಯನಕ್ತಿ – ಪ್ರಕರಣಬಲಾಚ್ಚೇತಿ ।।

"ಅಲಂ" ಎಂಬ ಪದಕ್ಕೆ ಚೆನ್ನಾಗಿ ಎಂದರ್ಥ. ಉಳಿದ ಪದಗಳ ಅರ್ಥವು ತತ್ತ್ವಪ್ರದೀಪದಲ್ಲಿ ಸ್ಪಷ್ಟವಾಗಿದೆ. "ಶಬ್ದಾದೇವ" ಎಂಬ ಸೂತ್ರದಲ್ಲಿ ಶ್ರುತಿಗಳ ಉಪಕ್ರಮ ಹಾಗೂ ಉಪಸಂಹಾರಗಳಲ್ಲಿ ಭಗವಂತನ ಲಿಂಗಗಳೇ ಕೇಳಿಸುತ್ತಿರುವುದರಿಂದ ಲಿಂಗಗಳೆಲ್ಲವೂ ಭಗವತ್ಪರವಾಗಿವೆ ಎಂದು ತಿಳಿಯಬೇಕು. ಯಾವರೀತಿಯಾಗಿ ಅಂತರಾಧಿಕರಣದಲ್ಲಿ ಉಪಕ್ರಮ ಹಾಗೂ ಉಪಸಂಹಾರದ ಬಲದಿಂದ ವಿಷ್ಣುಪರವೆಂದು ನಿರ್ಣಯಿಸಿದರೋ, ಆದೇರೀತಿಯಾಗಿ ಆತ್ಮ, ಬ್ರಹ್ಮ ಮೊದಲಾದ ಶಬ್ದಗಳು ಉಪಕ್ರಮದಲ್ಲಿ ಕೇಳಿಸುತ್ತಿರುವುದರಿಂದ ಸಮಗ್ರ ವೈಶ್ವಾನರಪ್ರಕರಣವು ಭಗವಂತನನ್ನೇ ಪ್ರತಿಪಾದಿಸುತ್ತದೆ ಎಂದು ಸ್ಪಷ್ಟವಾಗುತ್ತದೆ. ಈ ಅಭಿಪ್ರಾಯದಿಂದ "ಅಸಂಭವಾತ್" ಎಂಬ ಸೂತ್ರಭಾಗವನ್ನು ಮತ್ತು ಭಾಷ್ಯವನ್ನು "ಪ್ರಕರಣಬಲಾಚ್ಚ" ಎಂಬ ವಾಕ್ಯದಿಂದ ವ್ಯಾಖ್ಯಾನಿಸುತ್ತಿದ್ದಾರೆ.

ಭಾವದೀಪಃ – ನ ಕೇವಲಮಾತ್ಮಶಬ್ದಸ್ಮೃತಿಸಮಾಖ್ಯಾಭ್ಯಾಮಿತಿ ಚಾರ್ಥಃ । ಭಾಷ್ಯೇ ಇತ್ಯಾದಿನೇತ್ಯಸ್ಯಾನ್ಯೇಷಾಮಸಂಭವಾದಿತ್ಯನೇನಾನ್ವಯಃ ಆರಮ್ಭಾಚ್ಚೇತ್ಯಸ್ಯ ವಿಷ್ಣುರಿತ್ಯಾದಿನಾऽನ್ವಯ ಮುಪೇತ್ಯ ವ್ಯಾಚಷ್ಟೇ – ಕೋ ನ ಇತಿ ।। ಆರಮಭಾಚ್ಚೇತ್ಯಸ್ಯಾರ್ಥಃ ಆರಭ್ಯ ಉಪಕ್ರಮ್ಯಾಧೀತತ್ವೇನ ।

ಕೇವಲ ಆತ್ಮಶಬ್ದ ಮತ್ತು ಸ್ಮೃತಿಸಮಾಖ್ಯಾಗಳಿಂದಷ್ಟೇ ಭಗವಂತನೇ ವೈಶ್ವಾನರನೆಂದು ಸಿದ್ಧವಾಗುವುದಿಲ್ಲ ಹೊರತಾಗಿ ಬೇರೆಯವರಲ್ಲಿ ಈ ಆತ್ಮಶಬ್ದ ಹಾಗೂ ಸ್ಮೃತಿಸಮಾಖ್ಯಾಗಳು ಅಸಂಭಾವಿತವಾಗಿರುವುದರಿಂದಲೂ ಭಗವಂತನೇ ವೈಶ್ವಾನರನಾಗಿದ್ದಾನೆಂದು ತಿಳಿಯಬೇಕು. ಈ ಅಭಿಪ್ರಾಯದಿಂದಲೇ ''ಅನ್ಯೇಷಾಮಸಂಭವಾತ್'' ಎಂಬುದರ ಜೊತೆಗೆ ಭಾಷ್ಯದಲ್ಲಿರುವ ''ಇತ್ಯಾದಿನಾ'' ಎಂಬುದಕ್ಕೆ ಅನ್ವಯವನ್ನು ಮಾಡಬೇಕು. ''ಆರಂಭಾಚ್ಚ'' ಎಂಬುದಕ್ಕೆ ''ವಿಷ್ಣು'' ಮೊದಲಾದವುಗಳ ಜೊತೆಗೆ ಅನ್ವಯವನ್ನು ಅಂಗೀಕರಿಸಿ ''ಕೋ ನ'' ಎಂಬುದಾಗಿ ವ್ಯಾಖ್ಯಾನಿಸುತ್ತಿದ್ದಾರೆ. ''ಆರಂಭಾಚ್ಚ ''ಎಂಬುದಕ್ಕೆ 'ಆರಂಭಿಸಿ' ಎಂದರ್ಥ. ಅಂದರೆ ಉಪಕ್ರಮದಲ್ಲಿ ಅಧ್ಯಯನ ಮಾಡಿರುವುದರಿಂದ ಎಂದರ್ಥ.

ಭಾವದೀಪಃ – ಪ್ರಕರಣತ್ವಾಚ್ಚೇತಿ ।। ತೇನ ಸೂತ್ರೇ ಅಗ್ರೇತನಾಪಿಪದಮಸಮ್ಭವೀತ್ಯತ್ರಾಪ್ಯಾಕೃಷ್ಯತ ಇತಿ ಸೂಚಿತಮ್ । ವಚನೇನೇತ್ಯನೇನೇತ್ಯಾದಿನಾ ವಚನೇನೇತ್ಯಸ್ಯ ಭಾಷ್ಯಸ್ಯಾರ್ಥಃ ಸೂಚಿತಃ

''ಪ್ರಕರಣಾಚ್ಚಾಚ್ಚ'' ಎಂಬುದರಿಂದ ಸೂತ್ರದಲ್ಲಿ ಮುಂದಿರುವ ''ಅಪಿ'' ಪದವು ''ಅಸಂಭವಾಚ್ಚ'' ಎಂಬಲ್ಲಿಯೂ ಸಹ ಅನ್ವಯವನ್ನು ಹೊಂದುತ್ತದೆ ಎಂದು ಸೂಚಿಸಿದ್ದಾರೆ. ''ವಚನೇನ'' ಎಂದು ಹೇಳಿದ್ದರಿಂದ ''ಇತ್ಯಾದಿನಾ ವಚನೇನ'' ಎಂಬ ಭಾಷ್ಯದ ಅರ್ಥವನ್ನು ಸೂಚಿಸಿದ್ದಾರೆ.

ಭಾವದೀಪಃ – ಶ್ರುತೇತಿ ।। ತಥಾಚ ನ 'ಸ್ಮರ್ಯಮಾಣಮ್' ಇತ್ಯನೇನ ಪೌನರುಕ್ತ್ಯಮಿತಿ ಭಾವಃ । ಸಮಾಖ್ಯಾ ಚಾತ್ರಾರ್ಥತಃ । ನತು ಜಿಜ್ಞಾಸಾನಯೋಕ್ತಪರೋ ದಿವೇತಿ ಸಮಾಖ್ಯಾವಚ್ಚಬ್ದತ ಇತಿ ಜ್ಞೇಯಮ್ ।

ಟೀಕೆಯಲ್ಲಿ ''ಶ್ರುತಿ'' ಎಂದು ಹೇಳಿದ್ದರಿಂದ ''ಸ್ಮರ್ಯಮಾಣಂ'' ಎಂಬ ಸೂತ್ರದಿಂದ ಪುನರುಕ್ತಿಯು ಬರುವುದಿಲ್ಲವೆಂದು ತಿಳಿಯಬೇಕು. ಸಮಾಖ್ಯಾಪ್ರಮಾಣವು ಇಲ್ಲಿ ಆರ್ಥಿಕವಾಗಿ ಬರುತ್ತದೆ ಹೊರತು ಜಿಜ್ಞಾಸಾಧಿಕರಣದಲ್ಲಿ ಹೇಳಿರುವ ''ಪರೊ ದಿವಾ''ಎಂಬ ಸಮಾಖ್ಯಾದಂತೆ ನೇರವಾಗಿ ಶಬ್ದದಿಂದ ತಿಳಿಯುವುದಿಲ್ಲ.

ಭಾವದೀಪಃ – ಚನ್ದ್ರಮಾ ಇತಿ ಭಾಷ್ಯಂ ವಾಕ್ಯಪ್ರತೀಕಮಿತಿ ಮತ್ವಾऽನುರೂಪವಾಕ್ಯಾನಿ ಪಠತಿ – ಶೀರ್ಷ್ಣಾ ಇತಿ ।। ಸುತೇಜಾ ಇತ್ಯಾದೇರ್ದ್ರವ್ಯಾದಿರರ್ಥೋ ಬೋಧ್ಯಃ । ಭಾವಾರ್ಥಮಾಹ – ಅತ ಇತಿ ।।

''ಚಂದ್ರಮಾ ಮನಸೋ ಜಾತಃ'' ಎಂಬ ಭಾಷ್ಯದ ಮಾತನ್ನು ಶ್ರುತಿವಾಕ್ಯಕ್ಕೆ ಪ್ರತೀಕವೆಂದು ತಿಳಿದು ಅನುರೂಪವಾದ ವಾಕ್ಯಗಳೆಲ್ಲವನ್ನು ''ಶೀರ್ಷ್ಣಃ'' ಎಂಬುದರಿಂದ ಪಠಿಸುತ್ತಿದ್ದಾರೆ. ''ಸುತೇಜಾಃ'' ಮೊದಲಾದವುಗಳಿಂದ ದ್ರವ್ಯಾದಿಗಳು ಎಂಬ ಅರ್ಥವು ತಿಳಿಯುತ್ತದೆ. ಒಟ್ಟು ಅಭಿಪ್ರಾಯವನ್ನು ''ಅತಃ'' ಎಂಬುದರಿಂದ ಹೇಳಿದ್ದಾರೆ.

ಭಾವದೀಪಃ – ಸಮಾಖ್ಯಯಾऽಪೀತ್ಯನೇನ ಸೂತ್ರೇ ಪುರುಷವಿಧಮಪೀತ್ಯಪಿಶಬ್ದಃ ಅಸಮ್ಭವಾದಿತ್ಯುಕ್ತಪ್ರಕರಣಸಮುಚ್ಚಯ ಇತಿ ದರ್ಶಿತಮ್ । ಅನನ್ವಯಾದಾಹ – ಪ್ರಸಿದ್ಧಮಿತೀತಿ ।। ಉಕ್ತಸಮುಚ್ಚಯಾರ್ಥೋऽಯಮೇತಮರ್ಥಂ ಕಥಂ ಸೂಚಯೇದಿತ್ಯತ ಆಹ – ಅಪೀತಿ ।।

''ಸಮಾಖ್ಯಯಾಪಿ'' ಎಂಬುದರಿಂದ ಸೂತ್ರದಲ್ಲಿರುವ ''ಪುರುಷವಿಧಮಪಿ''ಎಂಬಲ್ಲಿರುವ 'ಅಪಿ' ಶಬ್ದವು ''ಅಸಂಭವಾಚ್ಚ'' ಎಂಬ ಪ್ರಕರಣಕ್ಕೆ ಸಮುಚ್ಚಯವಾಗಿದೆಂದು ತಿಳಿಸಿದ್ದಾರೆ. ಅನ್ವಯವು ಸ್ಪಷ್ಟವಾಗಿ ತಿಳಿಯದ ಕಾರಣ ''ಪ್ರಸಿದ್ಧಮಿತಿ'' ಎಂದು ಹೇಳಿದ್ದಾರೆ. ಹಿಂದೆ ಹೇಳಿರುವುದನ್ನು ಸಮುಚ್ಚಯ ಮಾಡುವುದಕ್ಕಾಗಿ ಇರುವ ಈ ಪದವು ನೀವು ಹೇಳಿದ ಅರ್ಥವನ್ನು ಹೇಗೆ ಸೂಚಿಸುತ್ತದೆ? ಎಂಬ ಪ್ರಶ್ನೆಗೆ ''ಅಪಿ'' ಎಂಬುದರಿಂದ ಉತ್ತರಿಸಿದ್ದಾರೆ.

ಭಾವದೀಪಃ – ಪ್ರಕರಣಸಮಾಖ್ಯಾರೂಪೋಭಯೇತ್ಯರ್ಥಃ । ದೃಶ್ಚ್ರುಪದೇಶಾದಿತ್ಯಸ್ಯ ತು ಶ್ರುತ್ಯಾದಿಸಾವಕಾಶತ್ವರೂಪಹೇತುಸಾಧಕತ್ವೇನ ಸಾಕ್ಷಾತ್ಪ್ರಕೃತಸಾಧ್ಯೇ ಹೇತುತ್ವಾಭಾವಾದುಭಯೇತ್ಯುಕ್ತಮ್ । ಪರಃ ಪರಮ ಇತ್ಯನಯೋರಪೌನರುಕ್ತ್ಯಾಯಾऽಹ – ಪರ ಇತಿ

ಪ್ರಕರಣ ಹಾಗೂ ಸಮಾಖ್ಯಾ ಎರಡನ್ನೂ ಸಹ ಸೂಚಿಸುತ್ತಿದೆ ಎಂದು ಅಭಿಪ್ರಾಯ. ಸೂತ್ರದಲ್ಲಿರುವ ''ದೃಷ್ಟ್ಯುಪದೇಶಾತ್'' ಎಂಬುದಕ್ಕೆ ಅಗ್ನಿಶ್ರುತ್ಯಾದಿಗಳು ಸಾವಕಾಶವಾಗಿವೆ ಎಂಬ ಹೇತುವನ್ನು ಸಾಧಿಸುವುದಕ್ಕಾಗಿ ಹೇಳಿದ್ದಾರೆಂದು ತಿಳಿಯಬೇಕು. ಹೊರತು ಸಾಕ್ಷಾತ್ತಾಗಿ ಪ್ರಕೃತವಾದ ಸಾಧ್ಯಕ್ಕೆ ಹೇತುವಾಗಿಲ್ಲವೆಂದು ''ಉಭಯ'' ಎಂದು ತಿಳಿಸಿದ್ದಾರೆ. 'ಪರಃ' ಮತ್ತು 'ಪರಮ' ಎಂಬ ಎರಡು ಪದಗಳಿಗೆ ಪುನರುಕ್ತಿ ಬರಬಾರದೆಂಬ ಉದ್ದೇಶದಿಂದ ''ಪರಃ'' ಎಂದು ಹೇಳಿದ್ದಾರೆ.

ಭಾವದೀಪಃ – ಪುರಾಣಾದಿಷ್ವಿತಿ ಭಾಷ್ಯಸ್ಥಾದಿಪದಾರ್ಥಮಾಹ – ಆದಿಪದೇನೇತಿ ।। ಬ್ರಹ್ಮತರ್ಕೇತಿ ।। ತೃತೀಯೇ ಪುರುಷವಿಧಾಯಾಮಿತ್ಯತ್ರ ಭಾಷ್ಯೋಕ್ತಮೇತದ್ವಾಕ್ಯಂ ಸ್ಮೃತೌ ತತ್ತಜ್ಜನಕತ್ವೇನತತ್ತನ್ನಾಮವತ್ತ್ವೋಕ್ತಾವಪಿ ಶ್ರುತಾವಭೇದೋಕ್ತೇಃ ಕಸ್ಸಮಾಧಿರುಕ್ತ ಇತ್ಯತೋऽಭಿಪ್ರಾಯಮಾಹ – ವೈಶ್ವಾನರಾಙ್ಗಾನಾಮಿತಿ ।

''ಪುರಾಣಾದಿಷು'' ಎಂದು ಭಾಷ್ಯದಲ್ಲಿರುವ 'ಆದಿ' ಪದದ ಅರ್ಥವನ್ನು ''ಆದಿಪದೇನ'' ಇತ್ಯಾದಿಯಾಗಿ ಹೇಳಿದ್ದಾರೆ. ಬ್ರಹ್ಮತರ್ಕ ಎಂದರೆ ಮೂರನೆಯ ಪಾದದ ''ಪುರುಷವಿದ್ಯಾಯಾಂ'' ಎಂಬ ಸೂತ್ರದ ಭಾಷ್ಯದಲ್ಲಿ ಈ ವಾಕ್ಯವನ್ನು ಹೇಳಿದ್ದಾರೆಂದು ತಿಳಿಯಬೇಕು. ಸ್ಮೃತಿಯಲ್ಲಿ ಆಯಾ ಪದಾರ್ಥಗಳಿಗೆ ಭಗವಂತನು ಜನಕನಾದ್ದರಿಂದ ಆಯಾ ಹೆಸರುಗಳನ್ನು ಪಡೆದಿದ್ದಾನೆಂಬ ಅರ್ಥವನ್ನು ಹೇಳಿದ್ದಾರೆ. ಆದರೆ ಅಭೇದದ ವಿವಕ್ಷೆಯಿಂದ ಇರುವ ಶ್ರುತಿಗಳಿಗೆ ಏನು ಅರ್ಥವನ್ನು ಹೇಳಿದಂತಾಯಿತು? ಎಂಬ ಪ್ರಶ್ನೆಗೆ ''ವೈಶ್ವಾನರಾಂಗಾನಾಂ'' ಎಂಬುದರಿಂದ ಉತ್ತರಿಸಿದ್ದಾರೆ.

ಭಾವದೀಪಃ – ತಜ್ಜನ್ಯೇತಿ ।। ಸುತೇಜಃಪ್ರಭೃತಿಶಬ್ದೋಕ್ತಶ್ರುಪ್ರಭೃತಿಜನಕತ್ವಂ ವಕ್ತುಂ ತದಭೇದಃ ಶ್ರುತಾವುಚ್ಯತೇ । ತಥಾಚೈಕಾರ್ಥ್ಯಂ ಶ್ರುತ್ಯೋರಿತ್ಯರ್ಥಃ ।

'ಸುತೇಜಃ' ಮೊದಲಾದ ಶಬ್ದಗಳಿಂದ ದ್ಯುಲೋಕವೇ ಮೊದಲಾದವುಗಳಿಗೆ ಭಗವಂತನು ಜನಕನಾದ್ದರಿಂದ ಆವುಗಳಿಂದ ಆಭೇದವು ಶ್ರುತಿಯಲ್ಲಿ ಹೇಳಲ್ಪಟ್ಟಿದೆ. ಆದ್ದರಿಂದ ಎಲ್ಲಾ ಶ್ರುತಿಗೂ ಒಂದೇ ಅರ್ಥದ ವಿವಕ್ಷೆ ಇದೆ ಎಂದು ತಿಳಿಯಬೇಕು.

ಭಾವದೀಪಃ – ಛಾನ್ದೋಗ್ಯಭಾಷ್ಯೇ ತು 'ಕ್ರೀಡಾತ್ಮಕತ್ವಾದ್ ದ್ಯ್ವಾಖ್ಯಂ ಚ ಸುತೇಜಾಶ್ಚಾತಿತೇಜಸಾ । ಸ್ವರ್ಗಾಧಾರಂ ಶಿರೋ ವಿಷ್ಣೋಃ ಸರ್ವರೂಪಾತಿದರ್ಶನಾತ್ ।। ಚಕ್ಷುಸ್ತು ವಿಶ್ವರೂಪಾಖ್ಯಮ್' ಇತ್ಯಾದಿನಾ ಸ್ವರ್ಗಾದ್ಯಾಧಾರಾಙ್ಗವಿಶೇಷಸ್ಯಾತಿತೇಜಸ್ತ್ವಾದಿನಿಮಿತ್ತೇನ ಸುತೇಜಃಪ್ರಭೃತಿಶಬ್ದವಾಚ್ಯತ್ವ ಮುಕ್ತಮ್ ।

ಛಾಂದೋಗ್ಯ ಭಾಷ್ಯದಲ್ಲಿಯಾದರೂ ''ಕ್ರೀಡಾತ್ಮಕತ್ವಾದ್ ದ್ಯ್ವಾಖ್ಯಂ ಚ ಸುತೇಜಾಶ್ಚಾತಿತೇಜಸಾ । ಸ್ವರ್ಗಾಧಾರಂ ಶಿರೋ ವಿಷ್ಣೋಃ ಸರ್ವರೂಪಾತಿದರ್ಶನಾತ್ । ಚಕ್ಷುಸ್ತು ವಿಶ್ವರೂಪಾಖ್ಯಂ'' ಇತ್ಯಾದಿಯಾಗಿ ಸ್ವರ್ಗಾದ್ಯಾಧಾರಾಂಗವಿಶೇಷವು ಅತಿತೇಜಸ್ತ್ವಾದಿ ನಿಮಿತ್ತದಿಂದ 'ಸುತೇಜಃ' ಮೊದಲಾದ ಶಬ್ದವಾಚ್ಯವಾಗಿದೆಯೆಂದು ಹೇಳಿದ್ದಾರೆ.

ಭಾವದೀಪಃ – ತತ್ರಾಧಾರಾಧೇಯಭಾವವಿವಕ್ಷಾ ಜನ್ಯಜನಕಭಾವವಿವಕ್ಷಾಯಾ ಅಪ್ಯುಪಲಕ್ಷಣಮ್ । ಯತೋ ಜನಿಸ್ತತ್ರೈವ ಸ್ಥಿತಿಲಯಾವಿತಿ ಪ್ರಸಿದ್ಧೇಃ । ಅತ ಏವಾತ್ರ ತತ್ತ್ವಪ್ರದೀಪೇ ಯಸ್ಮಾದ್ ಯದ್ ಜಾಯತೇ ತದಾಶ್ರಿತ್ಯ ತಿಷ್ಠತಿ ಲೀಯತೇ ಚೇತ್ಯಾದಿನಾऽಪ್ಯಾಧಾರಾಧೇಯಭಾವಾದಿವಿವಕ್ಷಾऽಪ್ಯುಪಲಕ್ಷಿತಾ ।।

ಭಗವಂತನಿಗೂ ದ್ಯುಲೋಕಕ್ಕೂ ಆಧಾರಾಧೇಯಭಾವದ ವಿವಕ್ಷೆಯು ಜನ್ಯಜನಕಭಾವದ ವಿವಕ್ಷೆಗೆ ಉಪಲಕ್ಷಣವಾಗಿದೆ ಎಂದು ತಿಳಿಯಬೇಕು. ಏಕೆಂದರೆ ಯಾರಿಂದ ಜನ್ಯವಾಗುತ್ತದೋ ಅವನಿಂದಲೇ ಸ್ಥಿತಿ ಹಾಗೂ ಲಯಗಳಾಗುತ್ತವೆ ಎಂಬುದು ಪ್ರಸಿದ್ಧವಾಗಿದೆ. ಆದ್ದರಿಂದಲೇ ತತ್ತ್ವಪ್ರದೀಪದಲ್ಲಿ ಯಾವ ಅಂಗದಿಂದ ಹುಟ್ಟುತ್ತದೆಯೋ ಆ ಅಂಗವನ್ನೇ ಆಶ್ರಯಿಸಿರುತ್ತದೆ ಮತ್ತು ಅದರಲ್ಲಿ ಲಯ ಹೊಂದುತ್ತದೆ ಎಂದು ಆಧಾರಾಧೇಯಭಾವಾದಿ ವಿವಕ್ಷೆಯನ್ನು ಉಪಲಕ್ಷಣವನ್ನಾಗಿ ವಿವಕ್ಷಿಸಿದ್ದಾರೆ.

ವಾಕ್ಯಾರ್ಥಮಞ್ಜರಿ – ॐ ಶಬ್ದಾದಿಭ್ಯೋऽನ್ತಃಪ್ರತಿಷ್ಠಾನಾನ್ನೇತಿ ಚೇನ್ನ ತಥಾ ದೃಷ್ಟ್ಯುಪದೇಶಾದ ಸಮ್ಭವಾತ್ಪುರುಷವಿಧಮಪಿ ಚೈನಮಧೀಯತೇ ॐ ।। ಅಗ್ನ್ಯಾದಿಶಬ್ದಾದ್ ಆದಿಪದೋಕ್ತಂ ಹೋಮಾಧಿಕರಣತ್ವಾದ್ಯಗ್ನಿಲಿಙ್ಗೇಭ್ಯಃ ಅನ್ತಃಪ್ರತಿಷ್ಠಾನಾದನ್ತಃ ಪ್ರವಿಶ್ಯ ಪಚನರೂಪಾಗ್ನಿವ್ಯಾಪಾರಾಚ್ಚ ವೈಶ್ವಾನರೋऽಗ್ನಿರೇವ, ನ ವಿಷ್ಣುರಿತಿ ಚೇನ್ನ । ತೇಷಾಂ ಹರೌ ಸಾವಕಾಶತ್ವಾತ್ । ಕಥಮಗ್ನ್ಯಾದಿನಾಮಲಿಙ್ಗಕರ್ಮತ್ವೇನ ರೂಪೇಣ ದೃಷ್ಟ್ಯುಪದೇಶಾದ್ ವಿಷ್ಣೋರುಪಾಸನೋಪದೇಶಾದ್ ಅಸಮ್ಭವಾತ್ ನ ಆತ್ಮಾ ಕಿಂ ಬ್ರಹ್ಮೋತ್ಪ್ರಮೋಕ್ತಂ ಬ್ರಹ್ಮ ಶಬ್ದಸ್ಯಾಗ್ನಾವಸಮ್ಭವಾಚ್ಚ । ನಾಸೌ ವೈಶ್ವಾನರಃ ಅಗ್ನಿಃ । ಅಪಿಚ 'ಮೂರ್ಧೈವ ಸುತೇಜಾಃ' ಇತ್ಯಾದಿನಾ ಛನ್ದೋಗಾಃ ಏನಂ ವೈಶ್ವಾನರಂ ಪುರುಷವಿಧಂ 'ಶೀರ್ಷ್ಣೋ ದ್ಯೌಃ

(೧) ಭಾಷ್ಯದೀಪಿಕಾ – यदुक्तमग्न्यादिसूक्तादिभिः ब्रह्मोपासकस्याग्न्यादि-प्राप्तिर्भवतीति तच्छुत्युक्तमपि न युक्तम् । 'मद्भक्ता यान्ति मामपि' इत्यादेरन्योपासकस्यान्यप्राप्तेरयोगात् । 'श्रुतोपनिषत्कगत्यभिधानात्' इत्यादौ तदनभ्युपगमाच्चेति भावेनाऽशङ्क्य तत्परिहारतया सूत्रमवतार्य व्याचष्टे – न हीति ।। दीकायामाशङ्क्यावतार्यैत्यन्वयः । शङ्कारूपसूत्रावतारिकां प्रदर्श्यैत्यर्थः । 'हि' यस्मादन्योपासकोऽन्यं प्राप्नुत इत्येतत्प्रमाणविरोधान्न युज्यते । तस्मादुक्तमयुक्तमित्यर्थः । एनमित्यनुवादेन विष्णुमिति व्याकृतम् । अस्मिन्नित्यस्य व्याख्यानमग्न्यादाविति । 'आमनन्ति' प्रतिपादयन्ति श्रुतय इति शेषः । चशब्दः विष्णूपासकस्याग्न्यादिप्राप्तिरयुक्तेति पूर्वपक्षिशङ्काव्यावर्तकः । तेन सिद्धान्तिप्रतिज्ञा, अग्न्यादिप्राप्तिपदेन तदन्तर्गतभगवत्प्राप्तेरेव विवक्षितत्वादिति साक्षाद्धेतुश्च सूचितः । तत्त्वप्रदीपे तु – न केवलमेकत्रैवाऽमनन्ति पठन्ति वाजसनेयाः, किन्त्वन्यत्र 'स यश्चायमस्मिन्' इत्यादौ, एवमन्ये आमनन्ति 'य एष एतस्मिन्' इत्यादौ, अन्ये चाऽमनन्ति 'एतस्याम्' इत्यादौ, अन्ये च 'तत् सृष्ट्वा। तदेवानुप्राविशत्' इत्यादौ । स्मरन्ति च स्मृतिकर्तारः 'यच्चन्द्रमसि यच्चाग्नौ' इत्यादीनि । समुच्चयार्थश्चशब्द इत्युक्तम् । ताः श्रुतीः दर्शयति – य इति ।। 'योऽग्नौ तिष्ठन्' इत्येकं वाजसनेयं वाक्यम् । 'य एषः' इत्यपरं छान्दोग्यवाक्यम् । उभयत्र यच्छब्दस्य तत्रत्यतच्छब्देनान्वयः । 'तेजोमयः' तेजोरूपः 'अमृतमयः' नित्याऽत्मा । आदिशब्देन 'एतमग्नावध्वर्यवः' इत्यादिकं गृह्यते । इत्यादिना आमनन्तीत्यन्वयः । अनेन – न विष्णूपासकस्याग्न्यादिप्राप्त्युक्तिरयुक्ता । कुतः ? अग्न्यादिप्राप्तिपदेन तदन्तर्गतभगवत्प्राप्तेर्विवक्षितत्वात् । नच विष्णोरग्यादन्तर्गतत्वासिद्धिः । यतः 'एनं' विष्णुम् 'अस्मिन्' अग्न्यादौ

ತತ್ವಪ್ರಕಾಶಿಕಾ –

ॐ ।। ಆಮನನ್ತಿ ಚೈನಮಸ್ಮಿನ್ ।। ॐ

ಯದುಕ್ತಮ್ 'ಅಗ್ನ್ಯಾದಿಸೂಕ್ತಾದಿಭಿರ್ಬ್ರಹ್ಮೋಪಾಸಕಸ್ಯಾಗ್ನ್ಯಾದಿಪ್ರಾಪ್ತಿಃ' ಇತಿ ತಚ್ಚುತ್ಯುಕ್ತಮಪಿ ನ ಯುಕ್ತಮ್ । 'ಮದ್ಭಕ್ತಾ ಯಾನ್ತಿ ಮಾಮಪಿ' ಇತ್ಯಾದೇರನ್ಯೋಪಾಸಕಸ್ಯಾನ್ಯಪ್ರಾಪ್ತೇರಯೋಗಾತ್ । 'ಶ್ರುತೋಪನಿಷತ್ಕಗತ್ಯಭಿಧಾನಾಚ್ಚ' ಇತ್ಯಾದೌ ತದನಭ್ಯುಪಗಮಾಚ್ಚೇತಿ ಭಾವೇನಾऽऽಶಙ್ಕ್ಯ, ತತ್ಪರಿಹಾರಾಯ(ರತಯಾ) ಸೂತ್ರಮವತಾರ್ಯ ವ್ಯಾಚಷ್ಟೇ – ನ ಹೀತಿ ।।

ಹಿಂದೆ ಆಗ್ನಿ ಮೊದಲಾದ ಸೂಕ್ತಗಳಿಂದ ಬ್ರಹ್ಮನನ್ನು ಯಾರು ಉಪಾಸನೆ ಮಾಡುತ್ತಾರೋ ಅಂತಹವರಿಗೆ ಅಗ್ನ್ಯಾದಿ ದೇವತೆಗಳು ಪ್ರಾಪ್ತರಾಗುತ್ತಾರೆಂದು ಜೈಮಿನಿಗಳ ಅಭಿಪ್ರಾಯವೆಂದು ಹೇಳಲಾಯಿತು. ಈ ವಿಷಯವು ಶ್ರುತಿಯಲ್ಲಿ ಹೇಳಲ್ಪಟ್ಟಿದ್ದರೂ ಸಹ ಅಯುಕ್ತವಾಗಿದೆ. ಏಕೆಂದರೆ ಮದ್ಭಕ್ತಾ ಯಾಂತಿ ಮಾಮಪಿ' ನನ್ನ ಭಕ್ತರು ನನ್ನನ್ನೇ ಹೊಂದುತ್ತಾರೆ ಹೀಗೆ ಭಗವಂತನ ಮಾತಿನಿಂದ ಮತ್ತೊಬ್ಬನನ್ನು ಉಪಾಸನೆ ಮಾಡುವವನಿಗೆ ಇನ್ನೊಬ್ಬನು ದೊರೆಯಲಾರನು. 'ಶ್ರುತೋಪನಿಷತ್ಕಗತ್ಯಭಿಧಾನಾಚ್ಚ' ಎಂಬ ಸೂತ್ರದಲ್ಲಿಯೂ ಇದೇ ವಿಷಯವನ್ನು ಹೇಳಿದ್ದಾರೆ. ಈ ಅಭಿಪ್ರಾಯದ ಶಂಕೆಯನ್ನು ಪರಿಹಾರಮಾಡುವುದಕ್ಕಾಗಿ ಸೂತ್ರವನ್ನು ಪಠಿಸಿ ವ್ಯಾಖ್ಯಾನಿಸುತ್ತಿದ್ದಾರೆ ''ನಹಿ'' ಇತ್ಯಾದಿಯಾಗಿ.

ತತ್ವಪ್ರಕಾಶಿಕಾ – ನ ವಿಷ್ಣೂಪಾಸಕಸ್ಯಾಗ್ನ್ಯಾದಿಪ್ರಾಪ್ತ್ಯುಕ್ತಿರಯುಕ್ತಾ । ಅಗ್ನ್ಯಾದಿಪ್ರಾಪ್ತಿಪದೇನ ತದನ್ತರ್ಗತಭಗವತ್ಪ್ರಾಪ್ತೇರ್ವಿವಕ್ಷಿತತ್ವಾತ್ । ಯತೋऽಗ್ನ್ಯಾದಾವಪಿ ವಿಷ್ಣುಮಾಮನನ್ತಿ ಶ್ರುತಯ ಇತಿ ಭಾವಃ । ಚಶಬ್ದಃ ಶಙ್ಕಾವ್ಯಾವರ್ತಕಃ । ಅತೋऽಯಂ ವೈಶ್ವಾನರೋ ವಿಷ್ಣುರೇವೇತಿ ತಸ್ಯೈವ ಸರ್ವಗತತ್ವಮಿತಿ ಸಿದ್ಧಮ್ ।। ೩೨ ।।

।। ಇತಿ ಶ್ರೀಮಜ್ಜಯತೀರ್ಥಭಿಕ್ಷುವಿರಚಿತಾಯಾಂ ತತ್ವಪ್ರಕಾಶಿಕಾಯಾಮ್
ವೈಶ್ವನರಾಧಿಕರಣಮ್ ಪ್ರಥಮಾಧ್ಯಾಯಸ್ಯ ದ್ವಿತೀಯಃ ಪಾದಃ।।

ಆಮನನ್ತಿ ಶ್ರುತಯोऽತ ಇತಿ ಸೂತ್ರಾರ್ಥ ಉಕ್ತೋ ಭವತಿ ।

।। ಇತಿ ವೈಶ್ವಾನರಾಧಿಕರಣಮ್ ।। ೭ ।।

।। ಶ್ರೀಮದ್ರಘುನಾಥತೀರ್ಥಪೂಜ್ಯಪಾದಾನಾಂ ಶಿಷ್ಯೇಣ
ಶ್ರೀಮಜ್ಜಗನ್ನಾಥಯತಿನಾ ಕೃತಾಯಾಂ ಶ್ರೀಮದ್ಬ್ರಹ್ಮಸೂತ್ರಭಾಷ್ಯದೀಪಿಕಾಯಾಂ
ಪ್ರಥಮಾಧ್ಯಾಯಸ್ಯ ದ್ವಿತೀಯಃ ಪಾದಃ ।।

ವಿಷ್ಣುವನ್ನು ಉಪಾಸನೆಮಾಡುವ ಭಕ್ತನಿಗೆ ಅಗ್ನಿ ಮೊದಲಾದವರ ಪ್ರಾಪ್ತಿಯಾಗುವುದು ಎಂದು ಹೇಳಿದ್ದು ಅಯುಕ್ತವಲ್ಲ. ಏಕೆಂದರೆ ಅಗ್ನ್ಯಾದಿಪ್ರಾಪ್ತಿ ಎಂಬ ಪದದಿಂದ ಅಗ್ನ್ಯಾದ್ಯಂತರ್ಗತನಾದ ಭಗವಂತನು ದೊರೆಯುತ್ತಾನೆಂಬ ವಿವಕ್ಷೆಯು ಇರುತ್ತದೆ. ಏಕೆಂದರೆ ಶ್ರುತಿಯು ಅಗ್ನ್ಯಾದಿಗಳಲ್ಲಿ ವಿಷ್ಣುವೇ ಆಂತರ್ಯಾಮಿಯಾಗಿದ್ದಾನೆಂದು ಹೇಳುತ್ತಿದೆ. ಸೂತ್ರದಲ್ಲಿರುವ ಚಶಬ್ದವು ಈ ಶಂಕೆಯನ್ನು ಪರಿಹರಿಸುತ್ತಿದೆ. ಆದ್ದರಿಂದ ವೈಶ್ವಾನರ ಎಂಬ ನಾಮಾತ್ಮಕಶಬ್ದದಿಂದ ಪ್ರತಿಪಾದ್ಯನಾದವನು ವಿಷ್ಣುವೇ ಆಗಿದ್ದಾನೆ. ಆದ್ದರಿಂದ ಅವನೇ ಸರ್ವಗತನೆಂದು ಸಿದ್ಧವಾಗುತ್ತದೆ.

ಇಲ್ಲಿಗೆ ಶ್ರೀಜಯತೀರ್ಥಭಿಕ್ಷುಗಳಿಂದ ವಿರಚಿತವಾದ ತತ್ವಪ್ರಕಾಶಿಕೆಯ ಕನ್ನಡಾನುವಾದದಲ್ಲಿ ಪ್ರಥಮಾಧ್ಯಾಯದ ದ್ವಿತೀಯಪಾದವು ಸಮಾಪ್ತವಾಯಿತು.

ಭಾವದೀಪಃ – ॐ आमनन्ति चैनमस्मिन् ॐ ।। तदनभ्युपगमाच्चेति ।। 'नह्यन्यविद्ययाऽन्यगतिर्युक्ता' इति कगत्यन्यथानुपपत्त्या कशब्दितब्रह्मण एव प्रकरणित्वाभ्युपगमादिति भावः । सौत्रचशब्दार्थमाह – न विष्णित्यादिना ।।

॥ ಓಂ ಆಮನಂತಿ ಚೈನಮಸ್ಮಿನ್ ಓಂ॥

ಟೀಕೆಯಲ್ಲಿ ''ತದನಭ್ಯುಪಗಮಾಚ್ಚ''ಎಂದು ಹೇಳಿದ್ದಾರೆ, ಏಕೆಂದರೆ ಒಬ್ಬನ ವಿದ್ಯೆಯಿಂದ ಮತ್ತೊಬ್ಬನ ಗತಿಯು ಯುಕ್ತವಾಗುವುದಿಲ್ಲ. ಹೀಗೆ ಕಗತ್ಯನ್ಯಥಾನುಪಪತ್ತಿಯಿಂದ ''ಕ'' ಎಂಬ ಶಬ್ದದಿಂದ ಪ್ರತಿಪಾದ್ಯನಾದ ಬ್ರಹ್ಮನೇ ಪ್ರಕರಣದಲ್ಲಿ ಪ್ರತಿಪಾದ್ಯನಾಗಿದ್ದಾನೆಂದು ಅಂಗೀಕರಿಸಿರುವುದರಿಂದ ಎಂದು ಅಭಿಪ್ರಾಯ. ಸೂತ್ರದಲ್ಲಿರುವ ''ಚ'' ಶಬ್ದದ ಅರ್ಥವನ್ನು ''ನ ವಿಷ್ಣೂಪಾಸಕ'' ಇತ್ಯಾದಿ ವಾಕ್ಯಗಳಿಂದ ಸ್ಪಷ್ಟಪಡಿಸಿದ್ದಾರೆ.

ಭಾವದೀಪಃ – उपपादकत्वेन सूत्रखण्डभाष्यं व्याचष्टे – यत इति ।। आमनन्ति नामनन्ति चेति भ्रान्तिनिरासायाऽह – चशब्द इति ।। यद्वा समुच्चेयाभावाद् व्यर्थोऽयं चशब्द इत्यत आह – चशब्द इति ।। तत्प्रकारः प्राग् विवृत इति भावः ।

ಈ ವಿಷಯದಲ್ಲಿ ಉಪಪಾದಕವಾಗಿ ಸೂತ್ರದ ಒಂದು ಭಾಗದ ಭಾಷ್ಯವನ್ನು ''ಯತಃ'' ಎಂಬುದರಿಂದ ವ್ಯಾಖ್ಯಾನಿಸಿದ್ದಾರೆ. ಸೂತ್ರದಲ್ಲಿರುವ ಚ ಶಬ್ದದಿಂದ ''ಆಮನಂತಿ ನಾಮನಂತಿ ಚ'' ಎಂಬುದಾಗಿ ಭ್ರಾಂತಿಯು ಬರುತ್ತದೆ. ಆದನ್ನು ನಿರಾಕರಿಸುವುದಕ್ಕಾಗಿ ''ಚ ಶಬ್ದಃ'' ಎಂದು ಹೇಳಿದ್ದಾರೆ. ಅಥವಾ ''ಚ'' ಶಬ್ದಕ್ಕೆ ಸಮುಚ್ಚಯವೆಂಬ ಅರ್ಥವಿಲ್ಲದ ಕಾರಣ ಸೂತ್ರದಲ್ಲಿರುವ ಚ ಶಬ್ದವು ವ್ಯರ್ಥವಾಗುತ್ತದಲ್ಲವೆ? ಎಂಬ ಪ್ರಶ್ನೆಗೂ ಸಹ ಉತ್ತರಿಸುವುದಕ್ಕಾಗಿ ''ಚ ಶಬ್ದಃ'' ಎಂದು ಹೇಳಿದ್ದಾರೆ. ಇದರ ಬಗ್ಗೆ ಹಿಂದೆಯೇ ವಿವರಿಸಿದ್ದಾಗಿದೆ.

ವೈಶ್ವಾನರಾಧಿಕರಣ (೧-೨-೭)

ಭಾವದೀಪಃ – तत्त्वप्रदीपे तु 'नैकत्रैवामनन्ति वाजसनेयिनः । चकारादन्यत्रच 'यश्चायमस्मिन्' इत्यादौ अन्ये चामनन्ति 'एतमस्याम् एतं दिवि' इत्यादि अन्यत्र 'तत् सृष्ट्वा तदवानुप्राविशद्' इत्यादि स्मरन्ति च । यच्चन्द्रमसि यच्चाग्नौ इत्यादीत्युक्तम् ।

ತತ್ತ್ವಪ್ರದೀಪದಲ್ಲಿಯಾದರು "ಬೃಹದಾರಣ್ಯಕದಲ್ಲಿ ಮಾತ್ರ ಹೀಗೆ ಹೇಳುವುದಲ್ಲ , ಸೂತ್ರದಲ್ಲಿ "ಚ" ಶಬ್ದವನ್ನು ಹೇಳಿದ್ದರಿಂದ ಬೇರೆ ವೇದಾಧ್ಯಯನವನ್ನು ಮಾಡುವವರೂ ಸಹ "ಯಶ್ಚಾಯಮಸ್ಮಿನ್" ಇತ್ಯಾದಿಯಾಗಿ ಹೇಳುತ್ತಾರೆ. "ಏತಮಸ್ಯಾಮ್ ಏತಂ ದಿವಿ" ಇತ್ಯಾದಿಯಾಗಿ ಮತ್ತು "ತತ್ಸೃಷ್ಟ್ವಾ ತದೇವಾನುಪ್ಪಾವಿಶತ್" ಇತ್ಯಾದಿಯಾಗಿ ಬೇರೆ ಶ್ರುತಿಯಲ್ಲಿಯೂ ಮತ್ತು "ಯಚ್ಚಂದ್ರಮಸಿ ಯಚ್ಚಾಗ್ನೌ" ಇತ್ಯಾದಿ ಸ್ಮೃತಿಯಲ್ಲಿಯೂ ಭಗವಂತನೇ ಅಗ್ನಿ ಮೊದಲಾದವರಲ್ಲಿ ನೆಲಸಿದ್ದಾನೆಂದು ಹೇಳಲಾಗಿದೆ" ಹೀಗೆ ವ್ಯಾಖ್ಯಾನಿಸಿದ್ದಾರೆ.

ಭಾವದೀಪಃ – अत इति ।। आत्मशब्दश्रुतिस्मृतिसमाख्याप्रकरणरूप-साधकभावात् । परकीयश्रुतिलिङ्गविद्याभेदव्यवहारविरोधादिबाधकाभावाच्चेति सर्वसौत्रहेतुभागार्थः । वैश्वानरो विष्णुरिति साध्यभागार्थः । एवेति 'अत एव न देवता भूतं च' इति सूत्रार्थः ।

"ಅತಃ" ಎಂಬ ಪದಕ್ಕೆ ಆತ್ಮಶಬ್ದ, ಶ್ರುತಿ, ಸ್ಮೃತಿ, ಸಮಾಖ್ಯಾ, ಪ್ರಕರಣ ಎಂಬ ಸಾಧಕ ಪ್ರಮಾಣವಿರುವುದರಿಂದ ಎಂದರ್ಥ. ಪರಕೀಯರು ಹೇಳುವ ಶ್ರುತಿ,ಲಿಂಗ, ವಿದ್ಯಾಭೇದ, ವ್ಯವಹಾರವಿರೋಧ ಮೊದಲಾದ ಯಾವುದೇ ಬಾಧಕಗಳೂ ಸಹ ಇಲ್ಲದ ಕಾರಣದಿಂದ ಎಂಬುದಾಗಿ ಸಕಲ ಸೂತ್ರಗಳಲ್ಲಿರುವ ಹೇತುಭಾಗದ ಅರ್ಥವಾಗಿದೆ. ವೈಶ್ವಾನರನಾದವನು ವಿಷ್ಣುವೇ ಆಗಿದ್ದಾನೆಂಬುದು ಸಾಧ್ಯಭಾಗದ ಅರ್ಥವಾಗಿದೆ. "ಏವ" ಎಂಬುದು "ಅತ ಏವ ನ ದೇವತಾ ಭೂತಂ ಚ " ಎಂಬ ಸೂತ್ರದ ಅರ್ಥವಾಗಿದೆ.

ಭಾವದೀಪಃ – वाजसनेयेत्यादिवक्ष्यस्याप्यत्र प्रागुक्ततवात् तत्रत्यस्य विष्णुत्वोपसंहारे तत्र तत्र सर्वगतत्वाभावेन सर्वगतत्वाक्षेपसमाध्य-योगादयमित्युक्तम् । छान्दोग्यस्य इत्यर्थः ।

ಬೃಹದಾರಣ್ಯಕವಾಕ್ಯವನ್ನು ಹಿಂದೆ ಹೇಳಿದ್ದರಿಂದ ಆ ವಾಕ್ಯವು ವಿಷ್ಣುಪರವೆಂದು ಉಪಸಂಹಾರ ಮಾಡಿದರೆ ಆ ವಾಕ್ಯಗಳಲ್ಲಿ ಸರ್ವಗತತ್ವವು ಕೇಳಿಸದ ಕಾರಣ ಸರ್ವಗತತ್ವದ ಆಕ್ಷೇಪಕ್ಕೆ ಸಮಾಧಾನವನ್ನು ಹೇಳಿದಂತಾಗುವುದಿಲ್ಲ. ಆದ್ದರಿಂದ "ಅಯಂ" ಎಂಬ ಪದಕ್ಕೆ ಛಾಂದೋಗ್ಯದಲ್ಲಿ ಹೇಳಲ್ಪಟ್ಟ ವೈಶ್ವಾನರನು ಎಂದು ಅರ್ಥವನ್ನು ತಿಳಿಯಬೇಕು.

ಭಾವದೀಪಃ – सर्वगतत्वमिति फलोक्तिः । अत्राभिविमानपदोक्तं पूर्वत्र ततमपदोक्तं सर्वगतत्वमित्यर्थः । प्रादेशमात्रत्वं तु सर्वगतस्याप्यङ्गुष्ठमात्रत्वमिव अधिकार्यायपेक्षया हृद्यपेक्षया त्वित्यत्र समाहितं भविष्यति ।

"ಸರ್ವಗತತ್ವಂ" ಎಂದು ಕೊನೆಯಲ್ಲಿ ಈ ಅಧಿಕರಣದ ಫಲವನ್ನು ಹೇಳಿದ್ದಾರೆ. ಪ್ರಕೃತ "ಅಭಿವಿಮಾನ"ಎಂಬ ಪದದಿಂದ ಹಿಂದೆ ಹೇಳಿದ "ತತಂ" ಎಂಬ ಪದದಿಂದ ಹೇಳಲ್ಪಟ್ಟ ಸರ್ವಗತತ್ವವು ಸಿದ್ಧವಾಯಿತೆಂದು ತಿಳಿಯಬೇಕು. ಆದರೂ ಸಹ ಭಗವಂತನಿಗೆ ಪ್ರಾದೇಶಪರಿಮಾಣವು ಹೇಗೆ ಕೂಡುತ್ತದೆ? ಎಂದರೆ, ಸರ್ವಗತನಾದರೂ ಅಂಗುಷ್ಠಪರಿಮಾಣವು ಹೇಗೆ ಬರುತ್ತದೋ ಆದರಂತೆ ಅಧಿಕಾರಿಯ ವಿವಕ್ಷೆಯಿಂದ "ಹೃದ್ಯಪೇಕ್ಷಯಾ ತು" ಎಂಬಲ್ಲಿ ಪ್ರಾದೇಶ ಪರಿಮಾಣವನ್ನು ಭಗವಂತನಿಗೆ ಸಮರ್ಥಿಸುತ್ತಾರೆ.

ಭಾವದೀಪಃ – केचित् स्वदेहान्तर्हृदयावकाशे प्रादेशमात्रं पुरुषं वसन्तमित्यादिस्मृतेरिति भावः ।

ಕೆಲವರು ತಮ್ಮ ದೇಹದ ಹೃದಯಾಕಾಶದಲ್ಲಿ ಪ್ರಾದೇಶ ಪರಿಮಾಣದಿಂದ ವಾಸಿಸುವ ಪುರುಷನನ್ನು "ಪ್ರಾದೇಶಮಾತ್ರಂ ಪುರುಷಂ ವಸಂತಂ" ಇತ್ಯಾದಿ ಶ್ರುತಿಗಳಿರುವುದರಿಂದ ಯುಕ್ತವಾಗುತ್ತದೆಂದು ಹೇಳುತ್ತಾರೆ.

ಭಾವದೀಪಃ – यत्त्वत्र केनचिद् वैश्वानरो भूत्वेत्यत्र वैश्वानराग्न्यभेदादिविकल्पपूर्वं दूषणमुक्तम्, तन्न । वैश्वानरनामको वैश्वानररूपविशेषो भूत्वेत्यर्थोक्तौ दोषाभावात् ।

ಭಾವದೀಪಃ – ಕೆಲವರು 'ವೈಶ್ವಾನರ' ಎಂಬಲ್ಲಿ ವೈಶ್ವಾನರನಿಗೆ ಅಗ್ನಿಯಿಂದ ಅಭೇದವನ್ನು ಆಶಂಕಿಸಿ ದೋಷವನ್ನು ಹೇಳಿದ್ದಾರೆ. ಇದು ತಪ್ಪು. "ವೈಶ್ವಾನರೋ ಭೂತ್ವಾ" ಎಂಬಲ್ಲಿ ವೈಶ್ವಾನರನೆಂಬ ಹೆಸರುಳ್ಳ ಭಗವಂತನ ರೂಪವಿಶೇಷವೇ ಹೇಳಲ್ಪಟ್ಟದೆ. ಹೀಗೆ ಅರ್ಥೈಸಿದಾಗ ಯಾವುದೇ ದೋಷ ಇರುವುದಿಲ್ಲ.

ಭಾವದೀಪಃ – यच्च तृतीये प्रकरणादित्येव वाच्ये असम्भवादित्युक्तिरयुक्तेति, तच्च न । प्रकरणस्य निरवकाशत्वोक्त्यर्थत्वात्तथोक्तेः ।

ಮೂರನೆಯ ಸೂತ್ರದಲ್ಲಿ "ಪ್ರಕರಣಾತ್" ಎಂದಷ್ಟೇ ಹೇಳಬಹುದಾಗಿತ್ತು "ಅಸಂಭವಾತ್" ಎಂಬ ಪದವನ್ನು ಹೇಳಬೇಕಾಗಿರಲಿಲ್ಲವೆಂದು ಕೆಲವರು ಹೇಳುತ್ತಾರೆ. ಇದೂ ಸಹ ತಪ್ಪು. ಏಕೆಂದರೆ ಪ್ರಕರಣವು ನಿರವಕಾಶವಾಗಿದೆ ಎಂಬುದನ್ನು ತಿಳಿಸಲು "ಅಸಂಭವಾಚ್ಚ" ಎಂಬುದಾಗಿ ಹೇಳಿದ್ದಾರೆ.

ಭಾವದೀಪಃ – यच्च पुरुषसूक्तवैश्वानरविद्ययोर्भिन्नार्थत्वेन वैश्वानरस्य पुरुषविधत्वायोग इति, तन्न । टीकायामेव पूर्वं समाधानाद्

ಪುರುಷಸೂಕ್ತ ಹಾಗೂ ವೈಶ್ವಾನರವಿದ್ಯೆ ಇವೆರಡು ಬೇರೆಬೇರೆಯಾಗಿರುವುದರಿಂದ ವೈಶ್ವಾರನಿಗೆ ಪುರುಷರೂಪವು ಕೂಡುವುದಿಲ್ಲವೆಂದು ಹೇಳುತ್ತಾರೆ. ಇದೂ ಸಹ ತಪ್ಪು. ಏಕೆಂದರೆ, ಈ ವಿಷಯವನ್ನು ಈ ಹಿಂದೆ ಟೀಕೆಯಲ್ಲಿ ನಿರಾಕರಿಸಿದ್ದಾರೆ.

ಭಾವದೀಪಃ – ಯದಪಿ ಶಬ್ದಾನಾಂ ಬ್ರಹ್ಮಣಿ ಸಮನ್ವಯೇऽಪ್ಯನ್ಯತ್ರ ವೃತ್ತೇಃ ಸೂತ್ರೇ ಪ್ರತಿಷಿದ್ಧತ್ವಾಭಾವೇನಾನ್ಯತ್ರ ವ್ಯವಹಾರವಿರೋಧಶಙ್ಕಾನುದಯಾತ್ತತ್ಸಮಾಧಾನಾರ್ಥಂ ಸಾಕ್ಷಾದಿತ್ಯಾದಿ-ಪಞ್ಚಸೂತ್ರೀ ವ್ಯರ್ಥೇತ್ಯಾದಿ । ತದಪ್ಯಸಾರಮ್ । ಪ್ರತಿನಯಂ ತತ್ತ್ವಿತ್ಯಧ್ಯಾಹಾರೇಣಾನ್ಯತ್ರ ವೃತ್ತೇಃ ಪ್ರತಿಷಿದ್ಧತ್ವಾತ್ । ಅತೋ ಯಥಾ ಭಾಷ್ಯಟೀಕಾಯಾಮುಕ್ತ ಏವ ಸೂತ್ರಾರ್ಥಃ ಸಮಞ್ಜಸ ಇತಿ ।।

।। ಇತಿ ಶ್ರೀರಾಘವೇನ್ದ್ರಯತಿಕೃತೇ ಭಾವದೀಪೇ ವೈಶ್ವನರಾಧಿಕರಣಮ್ ।।

ಎಲ್ಲಾ ಸೂತ್ರಗಳಲ್ಲಿ ಶಬ್ದಗಳು ಬ್ರಹ್ಮನಲ್ಲಿ ಸಮನ್ವಯವಾಗುತ್ತಿವೆಯೆಂದಷ್ಟೇ ಹೇಳುತ್ತಿದ್ದಾರೆ; ಬೇರೆ ಕಡೆ ಶಬ್ದಗಳು ಬರುವುದೇ ಇಲ್ಲವೆಂದು ಎಲ್ಲಿಯೂ ನಿಷೇಧ ಮಾಡಿಲ್ಲ. ಹೀಗಿರುವಾಗ ವ್ಯವಹಾರವಿರೋಧದ ಶಂಕೆಗೆ ಅವಕಾಶವಿಲ್ಲದ್ದರಿಂದ ಅದನ್ನು ಸಮಾಧಾನ ಮಾಡುವುದಕ್ಕಾಗಿ "ಸಾಕ್ಷಾತ್" ಇತ್ಯಾದಿಯಾದ ಐದು ಸೂತ್ರಗಳು ಹೊರಟ್ಟದ್ದು ವ್ಯರ್ಥವಲ್ಲವೇ? ಎಂದು ಆಕ್ಷೇಪಿಸಬಹುದು. ಇದೂ ಸಹ ತಪ್ಪು. ಪ್ರತಿಯೊಂದು ಅಧಿಕರಣಗಳಲ್ಲಿಯೂ, 'ತತ್ತು' ಎಂಬ ಪದದ ಅಧ್ಯಾಹಾರವಿರುವುದರಿಂದ ವಿಷ್ಣು ಒಬ್ಬನೇ ಆಯಾ ಶಬ್ದಗಳಿಂದ ಪ್ರತಿಪಾದ್ಯನಾಗುತ್ತಾನೆ ಬೇರೆಯವರು ಪ್ರತಿಪಾದ್ಯರಾಗುವುದಿಲ್ಲವೆಂದು ನಿಷೇಧ ಮಾಡಲಾಗಿದೆ. ಆದ್ದರಿಂದ ಭಾಷ್ಯ ಹಾಗೂ ಟೀಕೆಗಳಲ್ಲಿ ವ್ಯಾಖ್ಯಾನ ಮಾಡಿದ ಅರ್ಥವೇ ಸೂತ್ರಗಳ ನಿಜವಾದ ಅರ್ಥವಾಗಿದೆ, ಅತ್ಯಂತ ಸಮಂಜಸವೂ ಆಗಿದೆ.

॥ ಇಲ್ಲಿಗೆ ಭಾವದೀಪದ ಕನ್ನಡಾನುವಾದದಲ್ಲಿ ವೈಶ್ವಾನರಾಧಿಕರಣವು ಮುಗಿಯಿತು ॥

ವಾಕ್ಯಾರ್ಥಮಞ್ಜರೀ – ಅನ್ತರಙ್ಗಾನುಪಪತ್ತಿಂ ಚಾಹ – ಶ್ರುತೇತಿ ।। ತತ್ರ ದ್ವಿತೀಯಾ ವಿದ್ಯಾ ಪರಿಜ್ಞಾನೇನ ಬ್ರಹ್ಮಪ್ರಾಪ್ತೇರುಕ್ತ್ಯಾ ಬ್ರಹ್ಮಣ ಏವ ತದ್ವಿದ್ಯಾವಿಷಯತ್ವಮ್, ನಾಗ್ನೇರಿತಿ ವದತಾನ್ಯಜ್ಞಾನೇನಾನ್ಯಪ್ರಾಪ್ತೇರಭ್ಯುಪಗಮಾದಿತ್ಯರ್ಥಃ ।। ॐ ಆಮನನ್ತಿ ಚೈನಮಸ್ಮಿನ್ ॐ ।। ಏನಂ ವಿಷ್ಣುಮ್ ಅಸ್ಮಿನ್ನಗ್ನೌ 'ಯೋऽಗ್ನೌ ತಿಷ್ಠನ್' ಇತ್ಯಾದಿಶ್ರುತಯ ಆಮನನ್ತಿ ಪ್ರತಿಪಾದಯನ್ತೀತ್ಯರ್ಥಃ । ವ್ಯಾವರ್ತಕಃ ವ್ಯಾವೃತ್ತಿಸಮುಚ್ಚಾಯಕಃ ಏತದಾಶಙ್ಕಾನಿರಾಸಸಮುಚಿತಸ್ಯೈವೋಕ್ತಹೇತೋಃ ಸ್ವಾರ್ಥಸಾಧಕತ್ವಾದಿತಿ ಭಾವಃ ।। ೩೨ ।।

।। ಇತಿ ಶ್ರೀಶರ್ಕರಾಶ್ರೀನಿವಾಸಾವಿರಚಿತಾಯಾಂ ವಾಕ್ಯಾರ್ಥಮಞ್ಜರ್ಯಾಮ್ ವೈಶ್ವನರಾಧಿಕರಣಮ್ ।। ೪ ।।

ವೈಶ್ವಾನರಾಧಿಕರಣ
(೧-೩-೨)

ಭಾಗ - ೨

ತಾತ್ಪರ್ಯಚಂದ್ರಿಕಾ, ಪ್ರಕಾಶ,

ಪ್ರತಿಯೊಂದು ವಾಕ್ಯಗಳ ವಿಶೇಷ ವಿವರಣೆಯೊಂದಿಗೆ

ಸರಳ ಅನುವಾದ

* * *

ಮತ್ತು

ಗುರುರಾಜೀಯಮ್, ಭಾಟ್ಟಸಂಗ್ರಹ,
ಶಾಂಕರಭಾಷ್ಯ, ಭಾಮತೀ,
ರಾಮಾನುಜಭಾಷ್ಯ ಇವುಗಳ ಸಂಪೂರ್ಣ ಅಡಿಟಿಪ್ಪಣಿಯೊಂದಿಗೆ

॥ ಶ್ರೀಲಕ್ಷ್ಮೀಹಯಗ್ರೀವೋ ವಿಜಯತೇತಮಾಮ್ ॥
॥ ಶ್ರೀಮದ್ಧರಾಜೋ ವಿಜಯತೇತರಾಮ್ ॥
॥ ಶ್ರೀಗುರುಭ್ಯೋ ನಮಃ ॥

ಶ್ರೀಬ್ರಹ್ಮಣ್ಯತೀರ್ಥಶ್ರೀಪಾದಶಿಷ್ಯ ಶ್ರೀವ್ಯಾಸತೀರ್ಥವಿರಚಿತಾ

ತಾತ್ಪರ್ಯಚಂದ್ರಿಕಾ

ಅಥ ವೈಶ್ವಾನರಾಧಿಕರಣಮ್

ವೈಶ್ವಾನರಶಬ್ದವು ಉಭಯತ್ರಪ್ರಸಿದ್ಧವಲ್ಲ

।। ॐ वैश्वानरः साधरणशब्दविशेषात् ॐ ।।

अत्र यद्यपि वैश्वानरनाम्नः सूत्र एवाग्नाविष्णवोः साधारण्यस्योक्ततयोभयत्रप्रसिद्धता,

ಅನುವಾದ - ವೈಶ್ವಾನರಾಧಿಕರಣವು ಪ್ರಾರಂಭವಾಗುತ್ತಿದೆ. ಈ ಅಧಿಕರಣದ ಸಂಗತಿಯನ್ನು ಕೆಲವರು ಹೀಗೆ ಉಪಪಾದನೆ ಮಾಡುತ್ತಾರೆ - ಈ ಅಧಿಕರಣದಲ್ಲಿ ಉಭಯತ್ರಪ್ರಸಿದ್ಧವಾದ 'ವೈಶ್ವಾನರ' ಎಂಬ ನಾಮಾತ್ಮಕಶಬ್ದದ ಸಮನ್ವಯವನ್ನು ಮಾಡುತ್ತಿದ್ದಾರೆ. ಆದ್ದರಿಂದಲೇ ಸೂತ್ರಕಾರರು ಅಗ್ನಿ ಹಾಗೂ ವಿಷ್ಣು ಇಬ್ಬರಲ್ಲಿಯೂ 'ವೈಶ್ವಾನರ' ಶಬ್ದವು ಸಾಧಾರಣವಾಗಿದೆಯೆಂದು ಹೇಳಿದ್ದಾರೆ. ವಾಸ್ತವಿಕವಾಗಿ ಅನ್ಯತ್ರಪ್ರಸಿದ್ಧವಾದ ಲಿಂಗಾತ್ಮಕಶಬ್ದಗಳನ್ನಷ್ಟೇ ಈ ಅಧಿಕರಣದಲ್ಲಿ ಸಮನ್ವಯ ಮಾಡಬೇಕು. ಹೀಗಿರುವಾಗ ನಾಮಾತ್ಮಕವೂ ಮತ್ತು ಉಭಯತ್ರಪ್ರಸಿದ್ಧವೂ ಆಗಿರುವಂತಹ 'ವೈಶ್ವಾನರ' ಎಂಬ ಶಬ್ದವನ್ನು ಸಮನ್ವಯ ಮಾಡುವುದು ಅಸಂಗತವಲ್ಲವೇ?

तथाऽप्यन्यत्रप्रसिद्धपाचकत्वादिबहुलिङ्गसमन्वयस्याप्यत्रोक्तेर्बह्वनुग्रहस्य च न्याय्यत्वात् प्रथमातिक्रमे कारणाभावाच्च पादसङ्गतिरित्येके ।

ಈ ಪ್ರಶ್ನೆಗೆ ಉತ್ತರ ಹೀಗಿದೆ - ಅನ್ಯತ್ರಪ್ರಸಿದ್ಧವಾದ ಪಾಚಕತ್ವವೇ ಮೊದಲಾದ ಅನೇಕ ಲಿಂಗಗಳ ಸಮನ್ವಯವೂ ಸಹ ಈ ಅಧಿಕರಣದಲ್ಲಿ ಮಾಡುತ್ತಿದ್ದಾರೆ. ಮತ್ತು ಉಭಯತ್ರಪ್ರಸಿದ್ಧವಾದ ನಾಮಾತ್ಮಕಶಬ್ದಗಳ ಸಮನ್ವಯವನ್ನೂ ಸಹ ಮಾಡುತ್ತಿದ್ದಾರೆ. ಒಂದು ನಾಮಾತ್ಮಕಶಬ್ದದ ಸಮನ್ವಯವು ಅನೇಕೈತಾದೃಶ ಶಬ್ದಸಮನ್ವಯಕ್ಕೆ ಅನುಗ್ರಾಹಕವಾದ್ದರಿಂದ ಈ ಪಾದದಲ್ಲಿ ಇದರ ಸಮನ್ವಯ ಸಂಗತ

ಎಂದು ಒಂದು ಕಾರಣ. ಮತ್ತೊಂದು ಕಾರಣ - ಇಲ್ಲಿ ನಾಮಾತ್ಮಕವಾದ ಉಭಯತ್ರಪ್ರಸಿದ್ಧಶಬ್ದದ ಸಮನ್ವಯವನ್ನು ಮಾಡುತ್ತಿರುವುದರಿಂದ ಈ ಅಧಿಕರಣ ತೃತೀಯಪಾದದಲ್ಲಿ ಸೇರಬೇಕೋ? ಅಥವಾ ಲಿಂಗಾತ್ಮಕಶಬ್ದದ ಸಮನ್ವಯವನ್ನು ಮಾಡುತ್ತಿರುವುದರಿಂದ ಎರಡನೆಯ ಪಾದದಲ್ಲಿ ಸೇರಬೇಕೋ? ಎಂಬ ಪ್ರಶ್ನೆಯು ಪ್ರಾಪ್ತವಾದಾಗ 'ಪ್ರಥಮಾತಿಕ್ರಮೇ ಕಾರಣಾಭಾವಾತ್' 'ಮೊದಲು ಪ್ರಸಕ್ತವಾದದ್ದನ್ನು ಬಿಡಲು ಕಾರಣವಿಲ್ಲ' ಎಂಬ ನ್ಯಾಯವನ್ನು ಅನುಸರಿಸಿ ಉತ್ತರಿಸಬೇಕು. ಅಂದರೆ ಎರಡನೆಯ ಪಾದ ಹಾಗೂ ಮೂರನೆಯ ಪಾದ ಎರಡರಲ್ಲೂ ಸಂಬಂಧವಿದ್ದರೂ ಸಹ ಮೊದಲು ಪ್ರಸಕ್ತವಾದ ಎರಡನೆಯ ಲಿಂಗಪಾದದಲ್ಲಿ ಇದನ್ನು ನಿವೇಶಮಾಡದೇ ಇರುವುದಕ್ಕೆ ಕಾರಣವಿರುವುದಿಲ್ಲ. ಆದ್ದರಿಂದಲೇ ಎರಡನೆಯ ಪಾದದಲ್ಲಿ ಸೇರಿಸಿದ್ದಾರೆ.

ಇತರೇ ತು – ಅನ್ಯತ್ರಪ್ರಸಿದ್ಧಲಿಙ್ಗಾಂಶೇನ ದ್ವಿತೀಯಪಾದಸಮ್ಬನ್ಧಾತ್, ತಮಯತ್ರಪ್ರಸಿದ್ಧನಾಮಾಂಶೇನ ಚ ತೃತೀಯಪಾದಸಮ್ಬನ್ಧಾದುಭಯಾನುಗ್ರಹಾಯ ಪಾದದ್ವಯಮಧ್ಯೇऽಸ್ಯ ನಿವೇಶ ಇತ್ಯಾಹುಃ ।

ಮತ್ತೆ ಕೆಲವರ ಸಮಾಧಾನ ಹೀಗಿದೆ - ಅನ್ಯತ್ರಪ್ರಸಿದ್ಧವಾದ ಲಿಂಗವನ್ನು ಸಮನ್ವಯ ಮಾಡುತ್ತಿರುವುದರಿಂದ ಈ ಅಧಿಕರಣಕ್ಕೆ ಎರಡನೆಯ ಪಾದದಿಂದಲೂ ಸಂಗತಿಯಿರುತ್ತದೆ. ಉಭಯತ್ರಪ್ರಸಿದ್ಧವಾದ ನಾಮಾತ್ಮಕಶಬ್ದದ ಸಮನ್ವಯವೂ ಇರುವುದರಿಂದ ಮೂರನೆಯ ಪಾದದಿಂದಲೂ ಸಂಗತವಾಗುತ್ತದೆ. ಹೀಗಿರುವಾಗ ಯಾವ ಪಾದದಲ್ಲಿ ಸೇರಿಸಬೇಕೆಂಬ ಗೊಂದಲವನ್ನು ಪರಿಹರಿಸುವುದಕ್ಕಾಗಿ ಸೂತ್ರಕಾರರು ಎರಡು ಪಾದಗಳ ಮಧ್ಯದಲ್ಲಿ ಈ ಅಧಿಕರಣವನ್ನು ನಿವೇಶ ಮಾಡಿದ್ದಾರೆ.

ತನ್ನ, ''ಅನ್ಯತ್ರಪ್ರಸಿದ್ಧವೈಶ್ವಾನರನಾಮ್ನಃ'' ಇತಿ ಟೀಕಾವಿರೋಧಾತ್ । ಸೂತ್ರೋಪಾತ್ತವೈಶ್ವಾನರ-ಶಬ್ದಸ್ಯೈವಾನ್ಯತ್ರಪ್ರಸಿದ್ಧಿಸಮ್ಭವೇ ತತ್ಕಲ್ಪನಾದ್ವಯಾಯೋಗಾಚ್ಚ ।

ಇವರಿಬ್ಬರ ಅಭಿಪ್ರಾಯವು ಕೇವಲ ಆಪಾತರಮಣೀಯವಾಗಿದೆ. ಏಕೆಂದರೆ ''ಅನ್ಯತ್ರಪ್ರಸಿದ್ಧ-ವೈಶ್ವಾನರನಾಮ್ನಃ'' ಅನ್ಯತ್ರಪ್ರಸಿದ್ಧವಾದ ವೈಶ್ವಾನರ ಎಂಬ ನಾಮಾತ್ಮಕಶಬ್ದದ ಸಮನ್ವಯವೆಂದು ಟೀಕೆಯಲ್ಲಿ ಹೇಳಿರುವಾಗ ಉಭಯತ್ರಪ್ರಸಿದ್ಧವಾದ ನಾಮಾತ್ಮಕಶಬ್ದ ಸಮನ್ವಯವೆಂಬ ಅಭಿಪ್ರಾಯವು ಟೀಕಾ ವಿರುದ್ಧವಾದ್ದರಿಂದ ಅಸಾಧುವಾಗುತ್ತದೆ. ಮತ್ತು ಸೂತ್ರದಲ್ಲಿ 'ವೈಶ್ವಾನರ' ಎಂಬ ಶಬ್ದದ ಉಲ್ಲೇಖದಿಂದಲೇ ಅನ್ಯತ್ರಪ್ರಸಿದ್ಧವಾಗಿದೆಯೆಂದು ತಿಳಿಯುತ್ತಿರುವಾಗ ಎರಡು ಬಗೆಯ ಕಲ್ಪನೆಗಳು ಅಯುಕ್ತವಾಗುತ್ತವೆ.

ತಸ್ಮಾದಿತ್ಥಂ ಪಾದಸಙ್ಗತಿಃ– ವೈಶ್ವಾನರಶಬ್ದಸ್ಯ ಶ್ರುತ್ಯನ್ತರೇऽಗ್ನೌ ಪ್ರಯೋಗಾದ್ಧಾ, ವಿಷಯವಾಕ್ಯೇऽಗ್ನಿಶಬ್ದಸಾಮಾನಾಧಿಕರಣ್ಯಾದ್ವಾऽನ್ಯತ್ರಪ್ರಸಿದ್ಧತಾ ನಾಭಿಪ್ರೇತಾ,

ಆದ್ದರಿಂದ ವೈಶ್ವಾನರಾಧಿಕರಣಕ್ಕೆ ಪಾದಾಂತರ್ಭಾವಸಂಗತಿಯನ್ನು ಹೀಗೆ ಹೇಳಬೇಕು - ಒಂದು ವೇಳೆ ವೈಶ್ವಾನರ ಶಬ್ದಕ್ಕೆ ನ್ಯಾಯತೌಲ್ಕದಿಂದ ಅಥವಾ ಪ್ರಮಾಣತೌಲ್ಕದಿಂದ ಅನ್ಯತ್ರಪ್ರಸಿದ್ಧಿಯನ್ನು ಹೇಳಿದ್ದರೆ ಉಭಯತ್ರಪ್ರಸಿದ್ಧಿಯನ್ನು ಹೇಳಬಹುದಿತ್ತು. ಆದರೆ ಶ್ರುತ್ಯಂತರದಲ್ಲಿ ಅಗ್ನಿಯಲ್ಲಿ ವೈಶ್ವಾನರಶಬ್ದದ ಪ್ರಯೋಗವಿದೆಯೆಂದಾಗಲೀ, ಅಥವಾ ವಿಷಯವಾಕ್ಯದಲ್ಲಿ ಅಗ್ನಿಶಬ್ದದ ಸಾಮಾನಾಧಿಕರಣ್ಯವಿದೆಯೆಂದಾಗಲೀ ಅನ್ಯತ್ರಪ್ರಸಿದ್ಧಿಯನ್ನು ಹೇಳಿರುವುದಿಲ್ಲ.

येन ''स्थूलभुग्वैश्वानरः प्रथमः पादः'' इति श्रुत्यन्तरे विष्णावपि प्रयोगाद्वा, ''आत्मानं वैश्वानरम्'' इति विषयवाक्ये ''गौणश्चेन्नात्मशब्दात्'' इत्यत्र विष्व-साधारणतयोक्तात्मशब्दसामानाधिकरण्याद्वोभयत्रप्रसिद्धता स्यात् । किन्तु लोकतः ।

ಒಂದು ವೇಳೆ ಹಾಗೇ ಹೇಳಿದ್ದರೆ 'स्थूलभुग्वैश्वानरः प्रथमः पादः' ಎಂಬುದಾಗಿ ವಿಷ್ಣುವಿನಲ್ಲಿಯೂ ಶ್ರುತ್ಯಂತರದಲ್ಲಿ ವೈಶ್ವಾನರಶಬ್ದದ ಪ್ರಯೋಗವಿರುವುದರಿಂದ ಪ್ರಮಾಣತೌಲ್ಕ ಪ್ರಯುಕ್ತವಾಗಿ ಉಭಯತ್ರಪ್ರಸಿದ್ಧಿಯನ್ನು ಹೇಳಬಹುದಿತ್ತು. ಅಥವಾ ''ಆತ್ಮಾನಂ ವೈಶ್ವಾನರಮ್'' ಎಂಬುದಾಗಿ ವಿಷಯವಾಕ್ಯದಲ್ಲಿ ''गौणश्चेन्नात्मशब्दात्'' ಎಂಬ ಸೂತ್ರದಲ್ಲಿ ವಿಷ್ಣುವಿನಲ್ಲಿ ಅಸಾಧಾರಣವಾಗಿ ಪ್ರಯುಕ್ತವಾದ ಆತ್ಮಶಬ್ದದ ಸಾಮಾನಾಧಿಕರಣ್ಯದಿಂದ ಅಂದರೆ ನ್ಯಾಯಸಾಮ್ಯದಿಂದ ಉಭಯತ್ರಪ್ರಸಿದ್ಧಿಯನ್ನು ವೈಶ್ವಾನರಶಬ್ದಕ್ಕೆ ಹೇಳಬಹುದಿತ್ತು. ಆದರೆ ಹಾಗೆ ನಾವು ಹೇಳಿರುವುದಿಲ್ಲ. (ನ್ಯಾಯತೌಲ್ಕದಿಂದ ಅಥವಾ ಪ್ರಮಾಣತೌಲ್ಕದಿಂದ ಅನ್ಯತ್ರಪ್ರಸಿದ್ಧಿಯನ್ನು ಹೇಳಿದರೆ ಮಾತ್ರ ಉಭಯತ್ರಪ್ರಸಿದ್ಧವಾದ ಶಬ್ದಗಳ ಗುಂಪಿನಲ್ಲಿ ಸೇರಿಸಲು ಸಾಧ್ಯವೆಂಬುದನ್ನು ಗಮನಿಸಬೇಕು.) ಮತ್ತೇನೆಂದರೆ ಪ್ರಕೃತ ವೈಶ್ವಾನರ ಶಬ್ದವನ್ನು ಅಗ್ನಿಯಲ್ಲಿ ಲೋಕರೂಢಿಯಿಂದಷ್ಟೇ ಪ್ರಸಿದ್ಧವಾಗಿದೆಯೆಂದು ಹೇಳಲಾಗಿದೆ. ಆದ್ದರಿಂದ ಉಭಯತ್ರಪ್ರಸಿದ್ಧಶಬ್ದಗಳ ಗುಂಪಿನಲ್ಲಿ ಇದು ಸೇರುವುದಿಲ್ಲ.

अत एव टीकायां ''लोकतोऽन्यत्रप्रसिद्ध'' इत्युक्तम् । सूत्रोक्तं साधारण्यं तु अन्यत्रप्रसिद्धेर्विष्णुलिङ्गानां च निरवकाशत्वेन तुल्यबलतया, नतु वैश्वानर-शब्दस्योभयत्रप्रसिद्धतेत्यन्यत्रप्रसिद्धविघातेनैव टीकायां दर्शितम् ।

ಆದ್ದರಿಂದಲೇ ಟೀಕೆಯಲ್ಲಿ ''ಲೋಕತಃ ಅನ್ಯತ್ರಪ್ರಸಿದ್ಧ'' ಎಂದು ಹೇಳಿರುತ್ತಾರೆ. ಹಾಗಾದರೆ ಸೂತ್ರಕಾರರು ಉಭಯಸಾಧಾರಣ ಎಂಬರ್ಥದಲ್ಲಿ ಸಾಧಾರಣ ಎಂಬ ಶಬ್ದವನ್ನು ಏಕೆ ಪ್ರಯೋಗಿಸಿದರು ? ಎಂದರೆ ವೈಶ್ವಾನರಶಬ್ದವು ಅಗ್ನಿಯಲ್ಲಿ ಲೋಕರೂಢಿಯಿಂದ ಪ್ರಸಿದ್ಧವಾದ್ದರಿಂದ ರೂಢಿಪ್ರಯುಕ್ತವಾಗಿ ಬಲಿಷ್ಠವಾಗಿದೆ. ವಿಷ್ಣುಲಿಂಗಗಳು ನಿರವಕಾಶಪ್ರಯುಕ್ತವಾಗಿ ಬಲಿಷ್ಠವಾಗಿವೆ. ಹೀಗೆ ಒಂದೊಂದು ಮುಖದಲ್ಲಿ ಎರಡೂ ಕಡೆಯೂ ವೈಶ್ವಾನರಶಬ್ದವು ಸಮಾನಬಲವನ್ನು ಹೊಂದಿರುವ

ಪ್ರಯುಕ್ತ ಸೂತ್ರಕಾರರು ಉಭಯಸಾಧಾರಣವಾಗಿದೆಯೆಂದು ಹೇಳಿರುತ್ತಾರೆ; ಹೊರತು, ವೈಶ್ವಾನರಶಬ್ದವು ಉಭಯತ್ರಪ್ರಸಿದ್ಧವಾಗಿದೆಯೆಂಬ ದೃಷ್ಟಿಯಿಂದ ಸಾಧಾರಣಶಬ್ದವನ್ನು ಪ್ರಯೋಗಿಸಿಲ್ಲ. ಹೀಗೆ ಅನ್ಯತ್ರಪ್ರಸಿದ್ಧವಾಗಲು ತೊಂದರೆ ಬಾರದಂತೆ ಟೀಕೆಯಲ್ಲಿ ಸಾಧಾರಣಶಬ್ದವನ್ನು ವ್ಯಾಖ್ಯಾನಿಸಿರುತ್ತಾರೆ.

अत्रानुव्याख्याने ''श्रुतिर्लिङ्गाऽधिका परा'' इति वैश्वानरशब्दस्य नामत्वोक्तेर्लोकेऽग्नौ रूढत्वाच्च टीकायां नामतोक्ता । ''विश्वजीवान्तरत्वाद्यैर्लिङ्गैः'' इति सङ्क्षेपभाष्यकारीया लिङ्गत्वोक्तिस्तु सिद्धान्ते ब्रह्मणि यौगिकत्वाभिप्राया ।

ಈ ಅಧಿಕರಣದ ಅನುವ್ಯಾಖ್ಯಾನದಲ್ಲಿ 'ಶ್ರುತಿರ್ಲಿಂಗಾऽಧಿಕಾ ಪರಾ' ಎಂಬುದಾಗಿ ಅನೇಕ ಲಿಂಗಗಳ ಸಮನ್ವಯದ ಉದ್ದೇಶದಿಂದ ಮತ್ತೊಂದು ನಾಮಾತ್ಮಕಶಬ್ದದ ಸಮನ್ವಯವನ್ನು ಈ ಅಧಿಕರಣದಲ್ಲಿ ಮಾಡುತ್ತಿದ್ದಾರೆಂದು ವೈಶ್ವಾನರಶಬ್ದಕ್ಕೆ ನಾಮಾತ್ಮಕತ್ವವನ್ನು ಹೇಳಿರುತ್ತಾರೆ. ಆದರೆ ಅಣುಭಾಷ್ಯದಲ್ಲಿ ''ವಿಶ್ವಜೀವಾಂತರತ್ವಾದ್ಯೈರ್ಲಿಂಗೈಃ'' ವಿಶ್ವಜೀವಾಂತರತ್ವವೇ ಮೊದಲಾದ ಅನೇಕ ಲಿಂಗಗಳ ಸಮನ್ವಯವನ್ನು ಇಲ್ಲಿ ಮಾಡುತ್ತಿದ್ದಾರೆಂದು ಹೇಳಿದ್ದಾರೆ. ಹಾಗಾಗಿ ಎರಡೂ ಗ್ರಂಥಗಳಿಗೆ ಪರಸ್ಪರ ವಿರೋಧಬರುತ್ತದಲ್ಲವೇ? ಎಂಬ ಪ್ರಶ್ನೆ ಸಹಜವಾಗಿ ಬರುತ್ತದೆ. ಆದರೆ ಲೋಕರೂಢಿಯಿಂದ ವೈಶ್ವಾನರಶಬ್ದವು ಅಗ್ನಿಯಲ್ಲಿ ಪ್ರಸಿದ್ಧವಾಗಿದೆಯೆಂಬುದನ್ನು ವಿವಕ್ಷಿಸಿ ಟೀಕೆಯಲ್ಲಿ ನಾಮಾತ್ಮಕತ್ವವನ್ನು ಹೇಳಿದ್ದಾರೆ. ಇನ್ನು ಅಣುಭಾಷ್ಯದಲ್ಲಿ ಲಿಂಗಾತ್ಮಕವೆಂದು ಹೇಳಿದ್ದೇಕೆಂದರೆ ಸಿದ್ಧಾಂತ ಮಾಡುವಾಗ ಬ್ರಹ್ಮನಲ್ಲಿ ವೈಶ್ವಾನರಶಬ್ದವು ಯೌಗಿಕವಾಗಿದೆಯೆಂಬ ಅಭಿಪ್ರಾಯದಿಂದ. ಆದ್ದರಿಂದ ಪರಸ್ಪರ ವಿರೋಧಕ್ಕೆ ಅವಕಾಶವಿಲ್ಲ.

अनन्तरसङ्गतिस्तु, गतधिकरणोक्तसर्वगतत्वाक्षेपेण पूर्वपक्षोत्थानादिति भाष्य एवोक्ता ।

ಈ ಅಧಿಕರಣಕ್ಕೆ ಅನಂತರಸಂಗತಿಯನ್ನು ಹೀಗೆ ತಿಳಿಯಬೇಕು. ಹಿಂದಿನ ಅಧಿಕರಣದಲ್ಲಿ ಹೇಳಲ್ಪಟ್ಟ ಸರ್ವಗತತ್ವವನ್ನು ಆಕ್ಷೇಪಿಸಿ ಪೂರ್ವಪಕ್ಷಮಾಡುತ್ತಿರುವುದರಿಂದ ಅನಂತರ-ಸಂಗತಿಯಿರುತ್ತದೆಂದು ಭಾಷ್ಯದಲ್ಲಿಯೇ ಹೇಳಿರುತ್ತಾರೆ.

ಶ್ರೀರಾಘವೇಂದ್ರತೀರ್ಥವಿರಚಿತ
ಪ್ರಕಾಶ

प्रकाश –

ॐ वैश्वानरः साधारणशब्दविशेषात् ॐ ।। अत्र टीकायां ''लोकतोऽन्यत्रप्रसिद्ध-वैश्वानरनाम्नः पाचकत्वाद्यनेकलिङ्गसमन्वयसिद्धये'' इत्यादिना अस्य नयस्य अत्र पादे अन्तर्भाव उक्तः ।

ವಿವರಣೆ - 'ಓಂ ವೈಶ್ವಾನರಃ ಸಾಧಾರಣಶಬ್ದವಿಶೇಷಾತ್ ಓಂ' ವೈಶ್ವಾನರಾಧಿಕರಣಕ್ಕೆ ಟೀಕೆಯಲ್ಲಿ ಸಂಗತಿಯನ್ನು ಹೀಗೆ ಹೇಳಿದ್ದಾರೆ - 'ಲೋಕತಃ ಅನ್ಯತ್ರಪ್ರಸಿದ್ಧ ವೈಶ್ವಾನರನಾಮ್ನಃ ಪಾಚಕತ್ವಾದ್ಯನೇಕ-ಲಿಂಗಸಮನ್ವಯಸಿದ್ಧಯೇ'' 'ವೈಶ್ವಾನರ' ಶಬ್ದವು ಲೋಕತಃ ಅನ್ಯತ್ರಪ್ರಸಿದ್ಧವಾದ ನಾಮಾತ್ಮಕ ಶಬ್ದವಾಗಿದೆ. ಇದರ ಸಮನ್ವಯ ಹಾಗೂ ಪಾಚಕತ್ವವೇ ಮೊದಲಾದ ಅನೇಕ ಲಿಂಗಗಳ ಸಮನ್ವಯದ ಸಿದ್ಧಿಗೋಸ್ಕರ ಈ ಅಧಿಕರಣ ಹೊರಟಿರುವುದರಿಂದ ಲಿಂಗಪಾದದಲ್ಲಿ ಇದು ಅಂತರ್ಭಾವಸಂಗತಿಯನ್ನು ಹೊಂದುತ್ತದೆಂದು ಹೇಳಿದ್ದಾರೆ.

प्रकाशः – स च सुधायां – ''आद्याधिकरणस्य नात्रान्तर्भावः सम्भवति, नामात्मकशब्दसमन्वयार्थत्वात् । नापि पूर्वत्र, लिङ्गसमन्वयस्याप्यत्र सिद्धत्वात् । न चोभयबहिर्भावः, अन्यत्रप्रसिद्धशब्दविषयत्वात् । न चावक्तव्यता, समन्वयासिद्धि-प्रसङ्गात् । तत्कथमित्यतः – ''लिङ्गाधिका'' इत्यत्र अन्तर्भावः समर्थितः । यद्वा – पादद्वयार्थत्वेन एकत्र प्रवेशानुपपत्तेः; पादद्वयशेषोऽयम्'' इत्यादिना ग्रन्थेन विवृतः ।

ನ್ಯಾಯಸುಧೆಯಲ್ಲಿ ಸಂಗತಿಯನ್ನು ಹೀಗೆ ಹೇಳಿದ್ದಾರೆ - ''ಆದ್ಯಾಧಿಕರಣಸ್ಯ ನಾತ್ರಾಂತರ್ಭಾವಃ ಸಂಭವತಿ, ನಾಮಾತ್ಮಕಶಬ್ದಸಮನ್ವಯಾರ್ಥತ್ವಾತ್ । ನಾಪಿ ಪೂರ್ವತ್ರ, ಲಿಂಗಸಮನ್ವಯಸ್ಯಾಪ್ಯತ್ರ ಸಿದ್ಧತ್ವಾತ್ । ನ ಚೋಭಯಬಹಿರ್ಭಾವಃ, ಅನ್ಯತ್ರಪ್ರಸಿದ್ಧಶಬ್ದವಿಷಯತ್ವಾತ್ । ನ ಚಾವಕ್ತವ್ಯತಾ, ಸಮನ್ವಯಾಸಿದ್ಧಿಪ್ರಸಂಗಾತ್ । ತತ್ಕಥಮಿತ್ಯತಃ ಲಿಂಗಾಧಿಕಾ'' ಇತ್ಯತ್ರ ಅಂತರ್ಭಾವಃ ಸಮರ್ಥಿತಃ । ಯದ್ವಾ - ಪಾದದ್ವಯಾರ್ಥತ್ವೇನ ಏಕತ್ರ ಪ್ರವೇಶಾನುಪಪತ್ತೇಃ; ಪಾದದ್ವಯಶೇಷೋऽಯಮ್'' ವಸ್ತುತಃ ವೈಶ್ವಾನರಾಧಿಕರಣಕ್ಕೆ ಲಿಂಗಪಾದದಲ್ಲಿ ಅಂತರ್ಭಾವಸಂಗತಿಯು ಯುಕ್ತವಾಗುವುದಿಲ್ಲ. ಏಕೆಂದರೆ ನಾಮಾತ್ಮಕಶಬ್ದದ ಸಮನ್ವಯಕ್ಕೋಸ್ಕರ ಈ ಅಧಿಕರಣವು ಹೊರಟಿರುತ್ತದೆ. ಹಿಂದಿನ ಪಾದದಲ್ಲಿಯೂ ಸಂಗತವಾಗುವುದಿಲ್ಲ. ಲಿಂಗಸಮನ್ವಯವನ್ನೂ ಸಹ ಇಲ್ಲಿ ಮಾಡುತ್ತಿರುವುದರಿಂದ. ಮತ್ತು ಎರಡೂ

ಪಾದದಲ್ಲಿಯೂ ಸಂಗತವಾಗುವುದಿಲ್ಲವೆಂದೂ ಸಹ ಹೇಳಲಾಗದು. ಆನ್ಯತ್ರಪ್ರಸಿದ್ಧವಾದ ಶಬ್ದವನ್ನು ಸಮನ್ವಯ ಮಾಡುತ್ತಿದೆ. ಇನ್ನು ಈ ಅಧಿಕರಣವನ್ನು ಆರಂಭಮಾಡುವುದೇ ಬೇಡವೆಂದು ಹೇಳಲಾಗದು. ಹಾಗಾದರೆ ವೈಶ್ವಾನರ ಮೊದಲಾದ ಶಬ್ದಗಳ ಸಮನ್ವಯವು ಸಿದ್ಧವಾಗದೇ ಇರಬೇಕಾದೀತು. ಹೀಗಿರುವಾಗ ಈ ಅಧಿಕರಣಕ್ಕೆ ಹೇಗೆ ಸಂಗತಿಯು ಬರುತ್ತದೆ ಎಂಬ ಪ್ರಶ್ನೆಗೆ ಶ್ರೀಮದಾಚಾರ್ಯರು 'ಲಿಂಗಾಧಿಕಾ' ಎಂಬ ಪದದಿಂದ ಲಿಂಗ ಪಾದದಲ್ಲಿ ಅಂತರ್ಭಾವಸಂಗತಿಯನ್ನು ಸಮರ್ಥಿಸಿದ್ದಾರೆ. ಅಂದರೆ ಅನೇಕ ಲಿಂಗಗಳ ಸಮನ್ವಯವು ಉದ್ದೇಶವಾಗಿರುವುದರಿಂದ ಅಸಂಗತವಲ್ಲ. ಅಥವಾ ನಾಮಪಾದದ ಹಾಗೂ ಲಿಂಗಪಾದದ ಅರ್ಥವನ್ನು ಸಮರ್ಥಿಸುತ್ತಿರುವುದರಿಂದ ಒಂದು ಪಾದದಲ್ಲಿ ಸಂಗತಿಯನ್ನು ತೋರಿಸುವ ಮೂಲಕ ಅಂತರ್ಭಾವವನ್ನು ಮಾಡಲಾಗದು. ಆ ಕಾರಣದಿಂದಲೇ ಎರಡೂ ಪಾದಗಳ ಕೊನೆಯಲ್ಲಿ ನಿವೇಶ ಮಾಡಿ ಪಾದದ್ವಯಗಳಿಗೆ ಶೇಷಭೂತವಾಗಿ ಉಲ್ಲೇಖಿಸಿದ್ದಾರೆ. ಹೀಗೆ ನ್ಯಾಯಸುಧಾಗ್ರಂಥದಲ್ಲಿ ಎರಡು ಬಗೆಯ ಸಂಗತಿಗಳನ್ನು ವಿವರಿಸಿದ್ದಾರೆ.

ಪ್ರಕಾಶಃ – तत्र ''लोकतोऽन्यत्रप्रसिद्ध'' इत्यंशस्य सूत्रविरोधाशङ्कां समाधातुमाह – अत्र यद्यपीति । उत्तानदृशां समाधिद्वयमनूद्य निराह – तथाऽपीति । नाग्न उभयत्रप्रसिद्धत्वेऽपीत्यर्थः ।

ಈ ಸಂದರ್ಭದಲ್ಲಿ ವೈಶ್ವಾನರ ಶಬ್ದವು ಲೋಕತಃ ಆನ್ಯತ್ರಪ್ರಸಿದ್ಧವಾಗಿದೆಯೆಂದು ಟೀಕೆಯಲ್ಲಿ ಹೇಳಿದ್ದಾರೆ. ಇದು ಸೂತ್ರಕ್ಕೆ ವಿರುದ್ಧವಾಗಿದೆಯೆಂಬ ಆಶಂಕೆಯನ್ನು ಸಮಾಧಾನ ಮಾಡುವುದಕ್ಕಾಗಿ 'ಅತ್ರ ಯದ್ಯಪಿ' ಎಂಬ ಗ್ರಂಥವು ಹೊರಟಿದೆ. ಮೇಲ್ನೋಟದ ಅರ್ಥವನ್ನು ಮಾತ್ರ ತಿಳಿಯುವ ಇಬ್ಬರೂ ವಿದ್ವಾಂಸರ ಅಭಿಪ್ರಾಯವನ್ನು ಅನುವಾದ ಮಾಡಿ ನಿರಾಕರಿಸುತ್ತಿದ್ದಾರೆ 'ತಥಾಽಪಿ' ಇತ್ಯಾದಿ ವಾಕ್ಯದಿಂದ. ಅಂದರೆ 'ವೈಶ್ವಾನರ' ಎಂಬ ನಾಮಾತ್ಮಕ ಶಬ್ದವು ಉಭಯತ್ರಪ್ರಸಿದ್ಧವಾಗಿದ್ದರೂ ಸಹ ಎಂದರ್ಥ.

ಪ್ರಕಾಶಃ – प्रथमेति । नामादिना तृतीये, लिङ्गांशेन लिङ्गपादे अन्तर्भावप्राप्तौ प्रथमस्य लिङ्गपादान्तर्भावस्य अतिक्रमे कारणाभावाच्चेत्यर्थः । 'सम्भवे' इत्युक्तसम्भवप्रकारमाह – तस्मादिति । 'सङ्गतिः' अन्तर्भावरूपा ।

ಗ್ರಂಥದಲ್ಲಿ 'ಪ್ರಥಮಾತಿಕ್ರಮಣೇ ಕಾರಣಾಭಾವಾತ್' ಎಂಬ ನ್ಯಾಯವನ್ನು ಹೇಳಿದ್ದಾರೆ. ಇದರ ಅಭಿಪ್ರಾಯ ಹೀಗಿದೆ - ವೈಶ್ವಾನರ ಶಬ್ದವು ನಾಮಾತ್ಮಕವಾಗಿರುವ ಕಾರಣ ಮೂರನೆಯ ಪಾದದಲ್ಲಿ ಸೇರಬೇಕೋ? ಅಥವಾ ಅನೇಕ ಲಿಂಗಗಳನ್ನು ಸಮನ್ವಯಮಾಡುತ್ತಿರುವುದರಿಂದ ಲಿಂಗಪಾದದಲ್ಲಿ ಸೇರಬೇಕೋ? ಎಂಬ ಗೊಂದಲವುಂಟಾದಾಗ 'ಪ್ರಥಮಾತಿಕ್ರಮಣೇ ಕಾರಣಾಭಾವಾತ್' ಪ್ರಥಮಪ್ರಾಪ್ತವಾದ ಲಿಂಗಪಾದದಲ್ಲಿ ಅಂತರ್ಭಾವ ಹೊಂದಲೇ ಇರಲು ಕಾರಣವಿಲ್ಲ ಎಂದರ್ಥ. 'ಸಂಭವೇ' ಎಂದು ಹೇಳಲ್ಪಟ್ಟ ಸಂಭವ ಪ್ರಕಾರವನ್ನೇ 'ತಸ್ಮಾತ್' ಎಂಬ ಗ್ರಂಥದಿಂದ ಪ್ರತಿಪಾದಿಸುತ್ತಿದ್ದಾರೆ. 'ಸಂಗತಿಃ' ಎಂದರೆ ಅಂತರ್ಭಾವರೂಪವಾದ ಸಂಗತಿಯೆಂದರ್ಥ.

ಪ್ರಕಾಶಃ – ಯದಿ ''ಆಕಾಶೋऽರ್ಥಾನ್ತರ'' ಇತ್ಯಾದಾವಿವ ''ವೈಶ್ವಾನರಮೃತ ಆಜಾತಮಗ್ನಿಮ್'' ಇತ್ಯನ್ಯತ್ರ ಪ್ರಯೋಗೇಣ ವಾ, ಸರ್ವಗತತ್ವಾದೇರಿತ್ಯಾದಿಶಬ್ದಸಾಮಾನಾಧಿಕರಣ್ಯೇನ ವಾ, ಶ್ರುತ್ಯನ್ತರಸಾಮಾನಾಧಿಕರಣ್ಯೇನ ವಾ ಅನ್ಯತ್ರಪ್ರಸಿದ್ಧತಾ ಸ್ಯಾತ್, ತದಾ ''ಸ್ಥೂಲಭುಗ್ವೈಶ್ವಾನರಃ'' ಇತ್ಯಾದೌ ಪ್ರಯೋಗಾದಿತೌಲ್ಯಸ್ಯ ವಿಷ್ಣಾವಪಿ ಸತ್ತ್ವೇನ ''ಶ್ರುತ್ಯನ್ತರಾದಿಭಿಃ ತುಲ್ಯಾ'' ಇತ್ಯುಕ್ತ-ಲಕ್ಷಣಸತ್ತ್ವೇನೋಭಯತ್ರಪ್ರಸಿದ್ಧತಾ ಸ್ಯಾತ್ । ನಚೈವಂ, ಕಿನ್ತು ಲೋಕಪ್ರಯೋಗಾತ್ । ಸಚ ವಿಷ್ಣೌ ನೇತಿ ನೋಭಯತ್ರಪ್ರಸಿದ್ಧತೇತ್ಯರ್ಥಃ ।

ಒಂದು ವೇಳೆ ವೈಶ್ವಾನರ ಶಬ್ದವು ಪ್ರಯೋಗತೌಲ್ಯವನ್ನು ಅಥವಾ ಶಬ್ದಸಾಮಾನಾಧಿಕರಣ್ಯವನ್ನು ಹೊಂದಿದ್ದರೆ ಉಭಯತ್ರಪ್ರಸಿದ್ಧವಾಗುತ್ತಿತ್ತು. 'ಆಕಾಶೋऽರ್ಥಾನ್ತರವ್ಯಪದೇಶಾಚ್ಚ' ಇತ್ಯಾದಿ ಸೂತ್ರಗಳಲ್ಲಿ ಹೇಳಿದಂತೆ 'ವೈಶ್ವಾನರಮೃತ ಆಜಾತಮಗಿಮ್' ಎಂಬಲ್ಲಿಯೂ ಸಹ ವೈಶ್ವಾನರಶಬ್ದವು ಅಗ್ನಿಯಲ್ಲಿ ಪ್ರಯೋಗವನ್ನು ಹೊಂದಿದ್ದರೆ; ಅಥವಾ ಸರ್ವಗತತ್ವಾದಿಲಿಂಗಗಳು ಆದಿತಿ ಮುಂತಾದ ಶಬ್ದದ ಸಾಮಾನಾಧಿಕರಣ್ಯವನ್ನು ಹೊಂದಿ ಅನ್ಯತ್ರಪ್ರಸಿದ್ಧವಾದಂತೆ ಆಗಿದ್ದರೆ ವೈಶ್ವಾನರಶಬ್ದಕ್ಕೆ ಶ್ರುತ್ಯಂತರ-ಸಾಮಾನಾಧಿಕರಣ್ಯವಿದ್ದಿದ್ದರೆ. ಅಂದರೆ ಪ್ರಯೋಗ, ಶಬ್ದಸಮಾನಾಧಿಕರಣ್ಯ, ಶ್ರುತ್ಯಂತರ ಸಾಮಾನಾಧಿಕರಣ್ಯ ಇವುಗಳ ಮುಖೇನ ಅನ್ಯತ್ರಪ್ರಸಿದ್ಧವಾಗಿದ್ದರೆ, ಆವಾಗ ''ಸ್ಥೂಲಭುಗ್ವೈಶ್ವಾನರಃ' ಇತ್ಯಾದಿ ವಾಕ್ಯಗಳಿಂದ ವಿಷ್ಣುವಿನಲ್ಲಿ ಪ್ರಯೋಗವು ಸಮಾನವಾಗಿರುವ ಕಾರಣ 'ಶ್ರುತ್ಯಂತರಾದಿಭಃ ತುಲ್ಯಾ' ಎಂಬ ಉಭಯಪ್ರಸಿದ್ಧದ ಲಕ್ಷಣವು ಬರುವುದರಿಂದ ಉಭಯತ್ರಪ್ರಸಿದ್ಧ ಎಂದಾಗುತ್ತಿತ್ತು. ಆದರೆ ಹಾಗಿಲ್ಲ. ಲೋಕಪ್ರಯೋಗದಿಂದಷ್ಟೇ ವೈಶ್ವಾನರಶಬ್ದವು ಅಗ್ನಿಯಲ್ಲಿ ಪ್ರಸಿದ್ಧವಾಗಿದೆ. ಆದರೆ ವಿಷ್ಣುವಿನಲ್ಲಿ ಲೋಕಪ್ರಯೋಗವಿರುವುದಿಲ್ಲ. ವಿಷ್ಣುವಿನಲ್ಲಿರುವ ಶ್ರುತಿಪ್ರಸಿದ್ಧಿಯು ಅಗ್ನಿಯಲ್ಲಿರುವುದಿಲ್ಲ. ಹೀಗಿರುವಾಗ ವೈಶ್ವಾನರಶಬ್ದವು ಹೇಗೆ ಉಭಯತ್ರಪ್ರಸಿದ್ಧವಾಗಲು ಸಾಧ್ಯ?

ಪ್ರಕಾಶಃ – ಸೌತ್ರೋಕ್ತೇಷ್ಟೀಕಾರೀತ್ಯಾ ಗತಿಮಾಹ – **ಸೂತ್ರೋಕ್ತಮಿತಿ** । ''ಅತಃ ಪ್ರಸಿದ್ಧಿಲಿಙ್ಗಯೋರುಭಯೋರಪಿ ನಿರವಕಾಶತ್ವೇನ ವೈಶ್ವಾನರಶ್ರುತೇರಗ್ನಾವಿಷ್ಣೋಸ್ಸಾಧಾರಣ್ಯಮೇವ ಸ್ಯಾತ್'' ಇತಿ ಟೀಕಾಯಾಮಿತ್ಯರ್ಥಃ ।

ಸೂತ್ರದಲ್ಲಿ ಹೇಳಿದ ಸಾಧಾರಣಶಬ್ದಕ್ಕೆ ಏನರ್ಥ? ಎಂಬ ಆಕಾಂಕ್ಷೆಯು ಪ್ರಾಪ್ತವಾದರೆ ಟೀಕೆಯಲ್ಲಿ ಹೇಳಿದಂತೆ ಸಾಮಾಧಾನವನ್ನು ನೀಡುತ್ತಿದ್ದಾರೆ 'ಸೂತ್ರೋಕ್ತಮ್' ಇತ್ಯಾದಿ ವಾಕ್ಯದಿಂದ. ಟೀಕೆಯಲ್ಲಿ 'ಅತಃ ಪ್ರಸಿದ್ಧಿಲಿಂಗಯೋರುಭಯೋರಪಿ ನಿರವಕಾಶತ್ವೇನ ವೈಶ್ವಾನರಶ್ರುತೇರಗ್ನಾವಿಷ್ಣೋಸ್ಸಾಧಾರಣ್ಯಮೇವ ಸ್ಯಾತ್'' ಲೋಕಪ್ರಸಿದ್ಧಿ ಹಾಗೂ ಲಿಂಗ ಇವೆರಡೂ ನಿರವಕಾಶವಾಗಿರುವುದರಿಂದ ವೈಶ್ವಾನರಶ್ರುತಿಯು ಅಗ್ನಿ ಹಾಗೂ ವಿಷ್ಣು ಇಬ್ಬರಲ್ಲಿಯೂ ಸಾಧಾರಣವೇ ಆಗುತ್ತದೆ. ಹೀಗೆ ಟೀಕೆಯಲ್ಲಿ ಹೇಳಿರುತ್ತಾರೆ ಹೊರತು; ಎರಡೂ ಕಡೆ ಪ್ರಮಾಣತೌಲ್ಯವಾಗಲೀ, ನ್ಯಾಯತೌಲ್ಯವಾಗಲೀ ಇರುವುದಿಲ್ಲವೆಂದು ತಿಳಿಯಬೇಕು.

ಪ್ರಕಾಶಃ – या तु न्यायविवरणटीकायां रूढ्याऽन्तरधिकरणन्यायेन च विष्णौ तदितरत्र श्रुतेः साधारण्योक्तिः, सा अभ्युपेत्यवादेन नेया ।

ಇನ್ನು ನ್ಯಾಯವಿವರಣ ಟೀಕೆಯಲ್ಲಿ ಅಜ್ಞಾನಿಗಳ ರೂಢಿಯಿಂದ ಹಾಗೂ ಅಂತರಧಿಕರಣದ ನ್ಯಾಯದಿಂದ ವಿಷ್ಣುವಿನಲ್ಲಿ ಹಾಗೆ ಬೇರೆಕಡೆ ಶ್ರುತಿಯು ಉಭಯಸಾಧಾರಣವಾಗಿದೆ ಎಂದು ಹೇಳಿರುತ್ತಾರೆ. ಈ ಮಾತನ್ನು ಯಾರಾದರೂ ಉಭಯತ್ರಪ್ರಸಿದ್ಧವಾಗಿದೆಯೆಂದು ಪೂರ್ವಪಕ್ಷ ಮಾಡಿದರೆ ಅವರ ಮತವನ್ನು ಅಂಗೀಕಾರ ಮಾಡಿ ಹೇಳಿದ್ದಾರೆ ಹೊರತು, ಸಿದ್ಧಾಂತ ಪ್ರಕಾರ ಹೇಳಿರುವುದಿಲ್ಲವೆಂದು ತಿಳಿಯಬೇಕು.

ಪ್ರಕಾಶಃ – याऽपि तत्त्वप्रदीपे "पूर्वत्रान्यत्रप्रसिद्धिमात्रप्रतिषेधात् ज्वलनजनार्दनयोः साधारणस्य वैश्वानरशब्दस्य विष्णावेव प्रवृत्तिप्रदर्शनेन उभयत्रप्रसिद्धोभयविधपदकदम्बकसमन्वयावसरसूचनमाचरति अग्नाविष्णोरित्यादिना" इत्युक्तिः, साऽपि टीकानुसारात्, यद्यप्येवं साधारण्यं, तथाऽपि लोकतोऽन्त्रप्रसिद्धत्वादत्र निवेश इत्याद्यभिप्रायेण योज्येति भावः ।

ತತ್ತ್ವಪ್ರದೀಪದಲ್ಲಿ ಹೀಗೆ ಹೇಳಿದ್ದಾರೆ - "ಪೂರ್ವತ್ರಾನ್ಯತ್ರಪ್ರಸಿದ್ಧಿಮಾತ್ರಪ್ರತಿಷೇಧಾತ್ ಜ್ವಲನಜನಾರ್ದನಯೋಃ ಸಾಧಾರಣಸ್ಯ ವೈಶ್ವಾನರಶಬ್ದಸ್ಯ ವಿಷ್ಣುವೇವ ಪ್ರವೃತ್ತಿಪ್ರದರ್ಶನೇನ ಉಭಯಪ್ರಸಿದ್ಧೋಭಯವಿಧಪದಕದಂಬಕಸಮನ್ವಯಾವಸರಸೂಚನಮಾಚರತಿಅಗ್ನಾವಿಷ್ಣೋ್ವರಿತ್ಯಾದಿನಾ" "ಮೊದಲನೆಯ ಪಾದದಲ್ಲಿ ಅನ್ಯತ್ರಪ್ರಸಿದ್ಧವಾದ ಶಬ್ದಗಳನ್ನು ಮಾತ್ರ ನಿಷೇಧ ಮಾಡಲಾಗಿದೆ. ಅಗ್ನಿ ಹಾಗೂ ಜನಾರ್ದನರಲ್ಲಿ ವೈಶ್ವಾನರ ಶಬ್ದವು ಸಾಧಾರಣವಾಗಿದೆ. ಇಂತಹ ವೈಶ್ವಾನರಶಬ್ದವನ್ನು ಕೇವಲ ವಿಷ್ಣುವಿನಲ್ಲಿ ಸಮನ್ವಯಗೊಳಿಸುವುದಕ್ಕಾಗಿ ಈ ಅಧಿಕರಣ ಹೊರಟಿದೆ. ಮುಂದಿನ ಪಾದದಲ್ಲಿ ಉಭಯತ್ರಪ್ರಸಿದ್ಧವಾದ ಶಬ್ದಗಳನ್ನು ಸಮನ್ವಯ ಮಾಡುತ್ತಾರೆ. ಆದಕ್ಕೆ ಉಪೋದ್ಘಾತರೂಪದಲ್ಲಿ ಈ ಅಧಿಕರಣದಲ್ಲಿ ಅಗ್ನಿ ಹಾಗೂ ವಿಷ್ಣು ಇಬ್ಬರಲ್ಲಿಯೂ ಸಾಧಾರಣವಾದ 'ವೈಶ್ವಾನರ' ಎಂಬ ಶಬ್ದವನ್ನು ಸಮನ್ವಯ ಮಾಡಲಾಗಿದೆಯೆಂದು 'ಅಗ್ನಾವಿಷ್ಣೋ್ವ' ಇತ್ಯಾದಿ ಭಾಷ್ಯದಿಂದ ಸಮರ್ಥಿಸುತ್ತಿದ್ದಾರೆ ಎಂದು. ತತ್ವಪ್ರದೀಪದ ಈ ವಾಕ್ಯವನ್ನೂ ಸಹ ಟೀಕೆಗೆ ಅನುಸಾರಿಯಾಗಿ ವ್ಯಾಖ್ಯಾನಿಸಬೇಕು. ಅಂದರೆ ಸಾಮಾನ್ಯತಃ ವೈಶ್ವಾನರಶಬ್ದವು ಉಭಯಸಾಧಾರಣವಾಗಿದೆ. ಆದರೂ ಲೋಕತಃ ಅನ್ಯತ್ರಪ್ರಸಿದ್ಧವಾಗಿರುವುದರಿಂದ ಲಿಂಗಪಾದದಲ್ಲಿ ಇದರ ನಿವೇಶನವು ಅತ್ಯಂತ ಸಮಂಜಸವಾಗಿದೆ.

ಪ್ರಕಾಶಃ – ಟೀಕಾಯಾಂ ವೈಶ್ವಾನರಶಬ್ದಸ್ಯ ನಾಮತ್ವೋಕ್ತೇರ್ಮೂಲಂ ವದನ್ अणुभाष्यविरोधशङ्कां च निराह – अत्रेति । **लोकेऽग्नौ** रूढत्वाच्चेति । "बहुभी रूढनामभिः" इत्यणुभाष्योक्तेः, "श्रुतेरपि प्रसिद्धितो निरवकाशत्वात्" इति टीकोक्तेः, "श्रुतेर्देवताभूतविशेषयो रूढत्वात्" इति न्यायविवरणटीकोक्तेः, "वैश्वानरशब्दस्य अविद्धद्रूढ्या अग्निविषयस्यापि" इति सञ्जायरत्नावल्युक्तेश्चेति भावः ।

ಟೀಕೆಯಲ್ಲಿ ವೈಶ್ವಾನರಶಬ್ದವನ್ನು ನಾಮಾತ್ಮಕವೆಂದು ಹೇಳಿದ್ದಾರೆ. ಇದಕ್ಕೆ ವ್ಯಾಖ್ಯೇಯವಾದ ಮೂಲವಸ್ತು ತೋರಿಸುತ್ತಾ ಅನುವ್ಯಾಖ್ಯಾನದ ವಿರೋಧಾಶಂಕೆಯನ್ನು ನಿರಾಕರಿಸುತ್ತಿದ್ದಾರೆ 'ಅತ್ರ' ಇತ್ಯಾದಿ ವಾಕ್ಯದಿಂದ. ಗ್ರಂಥದಲ್ಲಿ 'ಲೋಕೇऽಗ್ನೌ ರೂಢತ್ವಾಚ್ಚ' ಅಗ್ನಿಶಬ್ದವು ಲೋಕದಲ್ಲಿ ರೂಢವಾಗಿರುವುದರಿಂದಲೂ ಎಂದು ಹೇಳಿದ್ದಾರೆ. ಈ ವಿಚಾರವು ಅನೇಕ ಮಾತುಗಳಿಂದ ಸ್ಪಷ್ಟವಾಗುತ್ತದೆ. ಅನುವ್ಯಾಖ್ಯಾನದಲ್ಲಿ ''ಬಹುಭೀ ರೂಢನಾಮಭಿಃ'' 'ಅನೇಕ ರೂಢವಾದ ನಾಮಗಳಿಂದ' ಎಂದು 'ವೈಶ್ವಾನರ' ಶಬ್ದವನ್ನು ನಾಮಾತ್ಮಕವೆಂದು ಹೇಳಿದ್ದಾರೆ. ಟೀಕೆಯಲ್ಲಿ ''ಶ್ರುತೇರಪಿ ಪ್ರಸಿದ್ಧಿತೋ ನಿರವಕಾಶತ್ವಾತ್'' ಎಂಬುದಾಗಿ; ನ್ಯಾಯವಿವರಣ ಟೀಕೆಯಲ್ಲಿ ''ಶ್ರುತೇರ್ದೇವತಭೂತವಿಶೇಷಯೋ ರೂಢತ್ವಾತ್'' ಎಂಬುದಾಗಿ; ಸನ್ನ್ಯಾಯರತ್ನಾವಳಿಯಲ್ಲಿ ''ವೈಶ್ವಾನರಶಬ್ದಸ್ಯ ಆವಿದ್ವದ್ರೂಢ್ಯಾ ಅಗ್ನಿವಿಷಯಸ್ಯಾಪಿ'' ಎಂಬುದಾಗಿ ಶ್ರುತಿ ಹಾಗೂ ಶಬ್ದಗಳಿಂದ 'ವೈಶ್ವಾನರ' ಶಬ್ದವನ್ನು ನಾಮಾತ್ಮಕವೆಂದು ಹೇಳಿರುತ್ತಾರೆ. ಆದ್ದರಿಂದ ಲಿಂಗಾತ್ಮಕವೆಂದು ತಿಳಿಯಬಾರದು.

ಪ್ರಕಾಶಃ – एतेन नामत्वे फलतः, लिङ्गत्वं साक्षादेवैतत्पादान्तर्भावोऽस्य सूचितः ।

ಹೀಗೆ ಹೇಳಿದ್ದರಿಂದ ವೈಶ್ವಾನರ ಶಬ್ದವು ನಾಮಾತ್ಮಕವಾಗಿದ್ದರೂ ಸಹ ಫಲತಃ ಅನೇಕ ಲಿಂಗಗಳ ಸಮನ್ವಯದಲ್ಲಿ ಪರ್ಯವಸಾನವಾಗುವುದರಿಂದ ಲಿಂಗಪಾದದಲ್ಲಿ ಅಂತರ್ಭಾವಸಂಗತಿಯನ್ನು ಹೊಂದುತ್ತದೆಂದು ಹೇಳಿದಂತಾಯಿತು. ಇದರ ಜೊತೆಗೆ ನಾಮಾತ್ಮಕವಾಗಿದ್ದರೂ ಸಹ ಸಿದ್ಧಾಂತದಲ್ಲಿ ಯೌಗಿಕವೆಂದು ಒಪ್ಪಿದ್ದರಿಂದ ಆದೇ ವೈಶ್ವಾನರ ಶಬ್ದವು ಲಿಂಗಾತ್ಮಕವೂ ಸಹ ಆಗಿರುತ್ತದೆ. ಇದರಿಂದ ನೇರವಾಗಿಯೇ ಲಿಂಗಪಾದದಲ್ಲಿ ಅಂತರ್ಭಾವಸಂಗತಿಯನ್ನು ಹೇಳಿದಂತಾಯಿತೆಂದು ಸೂಚಿಸಿದ್ದಾರೆ.

ಪ್ರಕಾಶಃ – एवं ''लोकतोऽन्यत्र'' इत्यादिटीकां व्याख्याय ''श्रुत्यादिसङ्गतिम्'' इत्यादिटीकां व्यनक्ति – अनन्तरेति । पूर्वाधिकरणतद्विषयवाक्याभ्यां एतधिकरणैतद्विषयवाक्ययोरित्यर्थः । आक्षेपप्रकराश्चाग्रे स्पष्टः । नच तद्गाह्यं प्रयोजनमात्रपरम्, उभयपरत्वे बाधकाभावादिति भावः ।

ಹೀಗೆ 'ಲೋಕತಃ ಅನ್ಯತ್ರ' ಇತ್ಯಾದಿ ಟೀಕೆಯನ್ನು ವ್ಯಾಖ್ಯಾನ ಮಾಡಿ 'ಶ್ರುತ್ಯಾದಿಸಂಗತಿಮ್' ಇತ್ಯಾದಿಟೀಕೆಯನ್ನು 'ಅನಂತರ' ಇತ್ಯಾದಿ ವಾಕ್ಯದಿಂದ ವ್ಯಾಖ್ಯಾನಿಸುತ್ತಿದ್ದಾರೆ. 'ಅನಂತರಸಂಗತಿಸ್ತು' ಎಂಬ ಗ್ರಂಥಕ್ಕೆ ಹೀಗರ್ಥ - ಹಿಂದಿನ ಅಧಿಕರಣದಿಂದ ಸಂಗತಿಯನ್ನು ಹಾಗೂ ಮುಂದಿನ ಅಧಿಕರಣದ ವಿಷಯವಾಕ್ಯದಿಂದ ಈ ಅಧಿಕರಣದ ವಿಷಯವಾಕ್ಯಕ್ಕೆ ಸಂಗತಿಯನ್ನುತಿಳಿಯಬೇಕು. ಹಿಂದಿನ ಅಧಿಕರಣದ ಮೇಲೆ ಬರುವ ಆಕ್ಷೇಪ ಪ್ರಕಾರವನ್ನು ಪೂರ್ವಪಕ್ಷ ಸಂದರ್ಭದಲ್ಲಿ ಗ್ರಂಥಕಾರರೇ ಸ್ಪಷ್ಟಪಡಿಸುತ್ತಾರೆ. ಸಂಗತಿಯನ್ನು ಹೇಳುವ ಭಾಷ್ಯವು ಕೇವಲ ಪ್ರಯೋಜನಪರವಾಗಬಹುದಲ್ಲವೇ? ಎಂದರೆ ಉಭಯಪರವಾದರೂ ಬಾಧಕವಿಲ್ಲ. ಆದೇ ಭಾಷ್ಯವು ಸಂಗತಿಪರವೂ ಆಗುತ್ತದೆ. ಪ್ರಯೋಜನಪರವೂ ಆಗುತ್ತದೆಂದು ತಿಳಿಯಬೇಕು.

ಪ್ರಕಾಶಃ – ಏತೇನ –

'ಸಾರ್ವಾತ್ಮ್ಯರೂಪೋಪನ್ಯಾಸಾದಕ್ಷರಂ ಬ್ರಹ್ಮ ವರ್ಣಿತಮ್ ।
ಜಾಠರಾದಾವನೈಕಾನ್ತ್ಯಶಙ್ಕಾ ತಸ್ಯ ನಿರಸ್ಯತೇ ।।'

ಇತಿ ಕಲ್ಪತರೂಕ್ತಸಙ್ಗತಿರ್ನಿರಸ್ತಾ ವೇದಿತವ್ಯಾ । ವೈಶ್ವಾನರನಾಮಸನ್ನಿಹಿತೋನ್ಮಾನತ್ವಮುಖೇನ ಪೂರ್ವತ್ರ ಪ್ರಧಾನಸೂತ್ರಪ್ರತಿಜ್ಞೋಪಾತ್ತಸರ್ವಗತತ್ವಾಕ್ಷೇಪಸಮ್ಭವೇऽಪಿ ಈದೃಶಸ್ಯಾಯುಕ್ತತ್ವಾತ್ । ಸಾರ್ವಾತ್ಮ್ಯರೂಪಶಬ್ದಾಪ್ರಯೋಗೇಣ ತದ್ಗೀತ್ಯಾ ಸಾರ್ವಾತ್ಮ್ಯಸ್ಯ ''ರೂಪೋಪನ್ಯಾಸಾತ್'' ಇತಿ ಸೂತ್ರಾರ್ಥತಯಾ ವರ್ಣನಾಯೋಗಸ್ಯೋಕ್ತತ್ವಾಚ್ಚೇತಿ ।

ಹೀಗೆ ಹೇಳಿದ್ದರಿಂದ ಕಲ್ಪತರುಕಾರ ಹೇಳಿದ ಸಂಗತಿಯನ್ನು ನಿರಾಕರಿಸಿದಂತಾಯಿತು. ಕಲ್ಪತರುವಿನಲ್ಲಿ ಹೀಗಿದೆ -

'ಸಾರ್ವಾತ್ಮ್ಯರೂಪೋಪನ್ಯಾಸದಕ್ಷರಂ ಬ್ರಹ್ಮ ವರ್ಣಿತಮ್ ।
ಜಾಠರಾದಪಸ್ಯೈಕಾನ್ತ್ಯಶಂಕಾ ತಸ್ಯ ನಿರಸ್ಯತೇ ।।'

ಹಿಂದಿನ ಅಧಿಕರಣದಲ್ಲಿ ಅಕ್ಷರನಾಮಕನಾದ ಬ್ರಹ್ಮನಿಗೆ 'ಸರ್ವಾತ್ಮ್ಯ' ಎಂಬ ರೂಪವನ್ನು ಹೇಳಲಾಯಿತು. ಅದೇ ರೂಪವು ವೈಶ್ವಾನರನಲ್ಲಿ ಕೆಳಿಸುತ್ತಿರುವುದರಿಂದ ಜಾಠರಾಗ್ನಿಯಲ್ಲಿ ಅನೈಕಾಂತ್ಯ ದೋಷವು ಬರುತ್ತದೆ. ಹೀಗೆ ಆಕ್ಷೇಪಿಕೀ ಸಂಗತಿಯನ್ನು ತಿಳಿಯಬೇಕು ಎಂಬ ಕಲ್ಪತರುವಿನ ಸಂಗತಿಯು ಅಯುಕ್ತವಾಗಿದೆ. ಏಕೆಂದರೆ ವೈಶ್ವಾನರ ಎಂಬ ನಾಮಾತ್ಮಕಶಬ್ದಕ್ಕೆ ಸನ್ನಿಹಿತವಾದ ಪ್ರಧಾನಸೂತ್ರದಲ್ಲಿ ಪ್ರತಿಜ್ಞಾತವಾದ ಸರ್ವಗತತ್ವದ ಆಕ್ಷೇಪ ಮಾಡುವ ಮೂಲಕವಾಗಿಯೇ ಸಂಗತಿಯನ್ನು ತೋರಿಸಲು ಬರುವಾಗ ಹೀಗೆ ಸಾರ್ವಾತ್ಮ್ಯರೂಪದಿಂದ ಸಂಗತಿಯನ್ನು ತೋರಿಸುವುದು ಅಯುಕ್ತವಾಗುತ್ತದೆ. ಮತ್ತು ಸಾರ್ವಾತ್ಮ್ಯ ಎಂಬರ್ಥದಲ್ಲಿ ರೂಪ ಶಬ್ದದ ಪ್ರಯೋಗವಿಲ್ಲದ ಕಾರಣ ಅದ್ವೈತಿಗಳು 'ರೂಪೋಪನ್ಯಾಸಾತ್' ಎಂಬ ಸೂತ್ರಕ್ಕೆ 'ಸಾರ್ವಾತ್ಮ್ಯ' ಎಂಬರ್ಥವನ್ನು ಹೇಳುವುದೇ ತಪ್ಪಾಗುತ್ತದೆಂದು ತಿಳಿಯಬೇಕು.

ಸಾರ

ಈ ಅಧಿಕರಣದಲ್ಲಿ ನೇರವಾಗಿ ಲಿಂಗವನ್ನು ಸಮನ್ವಯ ಮಾಡುತ್ತಿಲ್ಲ. 'ವೈಶ್ವಾನರ' ಎಂಬ ನಾಮವನ್ನು ಸಮನ್ವಯ ಮಾಡುತ್ತಿದ್ದಾರೆ. ಹಾಗಾದರೆ ಲಿಂಗಸಮನ್ವಯ ಮಾಡುವ ಈ ಪಾದದಲ್ಲಿ ವೈಶ್ವಾನರಾಧಿಕರಣವು ಅಸಂಗತವಾಗುತ್ತದೆಂಬುದು ಮೊದಲನೆಯ ಪ್ರತ್ಯೆ. ಇತಹ 'ವೈಶ್ವಾನರ' ಎಂಬ ನಾಮವು ವಿಷ್ಣುವಿನಲ್ಲಿ ಹಾಗೂ ಅಗ್ನಿಯಲ್ಲಿ ಸಾಧಾರಣವಾಗಿರುವುದರಿಂದ ಉಭಯತ್ರಪ್ರಸಿದ್ಧವಾಗಿದೆ. ಈ ಪಾದದಲ್ಲಿ ಅನ್ಯತ್ರಪ್ರಸಿದ್ಧಶಬ್ದವನ್ನು ಸಮನ್ವಯ ಮಾಡುತ್ತಿರುವುದರಿಂದಲೂ ಈ ಅಧಿಕರಣಕ್ಕೆ ಇಲ್ಲಿ ಸಂಗತಿ ಇರುವುದಿಲ್ಲವೆಂಬುದು ಎರಡನೆಯ ಪ್ರಶ್ನೆ.

ವೈಶ್ವಾನರಾಧಿಕರಣ (೧-೨-೭)

ಟೀಕೆಯಲ್ಲಿ ವೈಶ್ವಾನರಶಬ್ದವನ್ನು ನಾಮಾತ್ಮಕವೆಂದು ಹೇಳಿದ್ದಾರೆ. ಇದಕ್ಕೆ ವ್ಯಾಖ್ಯೇಯವಾದ ಮೂಲವಸ್ತು ತೋರಿಸುತ್ತಾ ಅನುವ್ಯಾಖ್ಯಾನದ ವಿರೋಧಾಶಂಕೆಯನ್ನು ನಿರಾಕರಿಸುತ್ತಿದ್ದಾರೆ 'ಅತ್ರ' ಇತ್ಯಾದಿ ವಾಕ್ಯದಿಂದ. ಗ್ರಂಥದಲ್ಲಿ 'ಲೋಕೇऽಗ್ನೌ ರೂಢತ್ವಾಚ್ಚ' ಅಗ್ನಿಶಬ್ದವು ಲೋಕದಲ್ಲಿ ರೂಢವಾಗಿರುವುದರಿಂದಲೂ ಎಂದು ಹೇಳಿದ್ದಾರೆ. ಈ ವಿಚಾರವು ಅನೇಕ ಮಾತುಗಳಿಂದ ಸ್ಪಷ್ಟವಾಗುತ್ತದೆ. ಅನುವ್ಯಾಖ್ಯಾನದಲ್ಲಿ ''ಬಹುಭಿ: ರೂಢನಾಮಭಿ:'' 'ಅನೇಕ ರೂಢವಾದ ನಾಮಗಳಿಂದ' ಎಂದು 'ವೈಶ್ವಾನರ' ಶಬ್ದವನ್ನು ನಾಮಾತ್ಮಕವೆಂದು ಹೇಳಿದ್ದಾರೆ. ಟೀಕೆಯಲ್ಲಿ ''ಶ್ರುತೇರಪಿ ಪ್ರಸಿದ್ಧಿತೋ ನಿರವಕಾಶತ್ವಾತ್'' ಎಂಬುದಾಗಿ; ನ್ಯಾಯವಿವರಣ ಟೀಕೆಯಲ್ಲಿ ''ಶ್ರುತೇರ್ದೇವತಭೂತವಿಶೇಷಯೋ ರೂಢತ್ವಾತ್'' ಎಂಬುದಾಗಿ; ಸನ್ಯಾಯರತ್ನಾವಳಿಯಲ್ಲಿ ''ವೈಶ್ವಾನರಶಬ್ದಸ್ಯ ಆವಿದ್ವದ್ರೂಢ್ಯಾ ಅಗ್ನಿವಿಷಯಸ್ಯಾಪಿ'' ಎಂಬುದಾಗಿ ಶ್ರುತಿ ಹಾಗೂ ಶಬ್ದಗಳಿಂದ 'ವೈಶ್ವಾನರ' ಶಬ್ದವನ್ನು ನಾಮಾತ್ಮಕವೆಂದು ಹೇಳಿರುತ್ತಾರೆ. ಆದ್ದರಿಂದ ಲಿಂಗಾತ್ಮಕವೆಂದು ತಿಳಿಯಬಾರದು.

ಪ್ರಕಾಶಃ – एतेन नामत्वे फलतः, लिङ्गत्वं साक्षादेवैतत्पादान्तर्भावोऽस्य सूचितः ।

ಹೀಗೆ ಹೇಳಿದ್ದರಿಂದ ವೈಶ್ವಾನರ ಶಬ್ದವು ನಾಮಾತ್ಮಕವಾಗಿದ್ದರೂ ಸಹ ಫಲತಃ ಅನೇಕ ಲಿಂಗಗಳ ಸಮನ್ವಯದಲ್ಲಿ ಪರ್ಯವಸಾನವಾಗುವುದರಿಂದ ಲಿಂಗಪಾದದಲ್ಲಿ ಅಂತರ್ಭಾವಸಂಗತಿಯನ್ನು ಹೊಂದುತ್ತದೆಂದು ಹೇಳಿದಂತಾಯಿತು. ಇದರ ಜೊತೆಗೆ ನಾಮಾತ್ಮಕವಾಗಿದ್ದರೂ ಸಹ ಸಿದ್ಧಾಂತದಲ್ಲಿ ಯೌಗಿಕವೆಂದು ಒಪ್ಪಿದ್ದರಿಂದ ಅದೇ ವೈಶ್ವಾನರ ಶಬ್ದವು ಲಿಂಗಾತ್ಮಕವೂ ಸಹ ಆಗಿರುತ್ತದೆ. ಇದರಿಂದ ನೇರವಾಗಿಯೇ ಲಿಂಗಪಾದದಲ್ಲಿ ಅಂತರ್ಭಾವಸಂಗತಿಯನ್ನು ಹೇಳಿದಂತಾಯಿತೆಂದು ಸೂಚಿಸಿದ್ದಾರೆ.

ಪ್ರಕಾಶಃ – एवं ''लोकतोऽन्यत्र'' इत्यादिटीकां व्याख्याय ''श्रुत्यादिसङ्गतिम्'' इत्यादिटीकां व्यनक्ति – अनन्तरेति । पूर्वाधिकरणतद्विषयवाक्याभ्यां एतधिकरणैतद्विषयवाक्ययोरित्यर्थः । आक्षेपप्रकराश्चाग्रे स्पष्टः । नच तद्भाष्यं प्रयोजनमात्रपरम्, उभयपरत्वे बाधकाभावादिति भावः ।

ಹೀಗೆ 'ಲೋಕತಃ ಅನ್ಯತ್ರ' ಇತ್ಯಾದಿ ಟೀಕೆಯನ್ನು ವ್ಯಾಖ್ಯಾನ ಮಾಡಿ 'ಶ್ರುತ್ಯಾದಿಸಂಗತಿಮ್' ಇತ್ಯಾದಿಟೀಕೆಯನ್ನು 'ಅನಂತರ' ಇತ್ಯಾದಿ ವಾಕ್ಯದಿಂದ ವ್ಯಾಖ್ಯಾನಿಸುತ್ತಿದ್ದಾರೆ. 'ಅನಂತರಸಂಗತಿಸ್ತು' ಎಂಬ ಗ್ರಂಥಕ್ಕೆ ಹೀಗರ್ಥ - ಹಿಂದಿನ ಅಧಿಕರಣದಿಂದ ಸಂಗತಿಯನ್ನು ಹಾಗೂ ಮುಂದಿನ ಅಧಿಕರಣದ ವಿಷಯವಾಕ್ಯದಿಂದ ಈ ಅಧಿಕರಣದ ವಿಷಯವಾಕ್ಯಕ್ಕೆ ಸಂಗತಿಯನ್ನುತಿಳಿಯಬೇಕು. ಹಿಂದಿನ ಅಧಿಕರಣದ ಮೇಲೆ ಬರುವ ಆಕ್ಷೇಪ ಪ್ರಕಾರವನ್ನು ಪೂರ್ವಪಕ್ಷ ಸಂದರ್ಭದಲ್ಲಿ ಗ್ರಂಥಕಾರರೇ ಸ್ಪಷ್ಟಪಡಿಸುತ್ತಾರೆ. ಸಂಗತಿಯನ್ನು ಹೇಳುವ ಭಾಷ್ಯವು ಕೇವಲ ಪ್ರಯೋಜನಪರವಾಗಬಹುದಲ್ಲವೇ? ಎಂದರೆ ಉಭಯಪರವಾದರೂ ಬಾಧಕವಿಲ್ಲ. ಅದೇ ಭಾಷ್ಯವು ಸಂಗತಿಪರವೂ ಆಗುತ್ತದೆ. ಪ್ರಯೋಜನಪರವೂ ಆಗುತ್ತದೆಂದು ತಿಳಿಯಬೇಕು.

ಪ್ರಕಾಶಃ – ಏತೇನ –

'ಸಾರ್ವಾತ್ಮ್ಯರೂಪೋಪನ್ಯಾಸಾದಕ್ಷರಂ ಬ್ರಹ್ಮ ವರ್ಣಿತಮ್ ।
ಜಾಠರಾದಾವನೈಕಾನ್ತ್ಯಶಙ್ಕಾ ತಸ್ಯ ನಿರಸ್ಯತೇ ।।'

ಇತಿ ಕಲ್ಪತರೂಕ್ತಸಙ್ಗತಿರ್ನಿರಸ್ತಾ ವೇದಿತವ್ಯಾ । ವೈಶ್ವಾನರನಾಮಸನ್ನಿಹಿತೋನ್ಮಾನತ್ವಮುಖೇನ ಪೂರ್ವತ್ರ ಪ್ರಧಾನಸೂತ್ರಪ್ರತಿಜ್ಞೋಪಾತ್ತಸರ್ವಗತತ್ವಾಕ್ಷೇಪಸಮ್ಭವೇऽಪಿ ಈದೃಶಸ್ಯಾಯುಕ್ತತ್ವಾತ್ । ಸಾರ್ವಾತ್ಮ್ಯರೂಪಶಬ್ದಾಪ್ರಯೋಗೇಣ ತದ್ಗೀತ್ಯಾ ಸಾರ್ವಾತ್ಮ್ಯಸ್ಯ ''ರೂಪೋಪನ್ಯಾಸಾತ್'' ಇತಿ ಸೂತ್ರಾರ್ಥತಯಾ ವರ್ಣನಾಯೋಗಸ್ಯೋಕ್ತತ್ವಾಚ್ಚೇತಿ ।

ಹೀಗೆ ಹೇಳಿದ್ದರಿಂದ ಕಲ್ಪತರುಕಾರ ಹೇಳಿದ ಸಂಗತಿಯನ್ನು ನಿರಾಕರಿಸಿದಂತಾಯಿತು. ಕಲ್ಪತರುವಿನಲ್ಲಿ ಹೀಗಿದೆ -

'ಸಾರ್ವಾತ್ಮ್ಯರೂಪೋಪನ್ಯಾಸದಕ್ಷರಂ ಬ್ರಹ್ಮ ವರ್ಣಿತಮ್ ।
ಜಾಠರಾದಪಸ್ಯೈಕಾನ್ತ್ಯಶಂಕಾ ತಸ್ಯ ನಿರಸ್ಯತೇ ।।'

ಹಿಂದಿನ ಆಧಿಕರಣದಲ್ಲಿ ಅಕ್ಷರನಾಮಕನಾದ ಬ್ರಹ್ಮನಿಗೆ 'ಸರ್ವಾತ್ಮ್ಯ' ಎಂಬ ರೂಪವನ್ನು ಹೇಳಲಾಯಿತು. ಅದೇ ರೂಪವು ವೈಶ್ವಾನರನಲ್ಲಿ ಕೆಳಿಸುತ್ತಿರುವುದರಿಂದ ಜಾಠರಾಗ್ನಿಯಲ್ಲಿ ಅನೈಕಾಂತ್ಯ ದೋಷವು ಬರುತ್ತದೆ. ಹೀಗೆ ಆಕ್ಷೇಪಿಕೀ ಸಂಗತಿಯನ್ನು ತಿಳಿಯಬೇಕು ಎಂಬ ಕಲ್ಪತರುವಿನ ಸಂಗತಿಯು ಅಯುಕ್ತವಾಗಿದೆ. ಏಕೆಂದರೆ ವೈಶ್ವಾನರ ಎಂಬ ನಾಮಾತ್ಮಕಶಬ್ದಕ್ಕೆ ಸನ್ನಿಹಿತವಾದ ಪ್ರಧಾನಸೂತ್ರದಲ್ಲಿ ಪ್ರತಿಜ್ಞಾತವಾದ ಸರ್ವಗತತ್ವದ ಆಕ್ಷೇಪ ಮಾಡುವ ಮೂಲಕವಾಗಿಯೇ ಸಂಗತಿಯನ್ನು ತೋರಿಸಲು ಬರುವಾಗ ಹೀಗೆ ಸಾರ್ವಾತ್ಮ್ಯರೂಪದಿಂದ ಸಂಗತಿಯನ್ನು ತೋರಿಸುವುದು ಅಯುಕ್ತವಾಗುತ್ತದೆ. ಮತ್ತು ಸಾರ್ವಾತ್ಮ್ಯ ಎಂಬರ್ಥದಲ್ಲಿ ರೂಪ ಶಬ್ದದ ಪ್ರಯೋಗವಿಲ್ಲದ ಕಾರಣ ಅದ್ವೈತಿಗಳು 'ರೂಪೋಪನ್ಯಾಸಾತ್' ಎಂಬ ಸೂತ್ರಕ್ಕೆ 'ಸಾರ್ವಾತ್ಮ್ಯ' ಎಂಬರ್ಥವನ್ನು ಹೇಳುವುದೇ ತಪ್ಪಾಗುತ್ತದೆಂದು ತಿಳಿಯಬೇಕು.

ಸಾರ

ಈ ಆಧಿಕರಣದಲ್ಲಿ ನೇರವಾಗಿ ಲಿಂಗವನ್ನು ಸಮನ್ವಯ ಮಾಡುತ್ತಿಲ್ಲ. 'ವೈಶ್ವಾನರ' ಎಂಬ ನಾಮವನ್ನು ಸಮನ್ವಯ ಮಾಡುತ್ತಿದ್ದಾರೆ. ಹಾಗಾದರೆ ಲಿಂಗಸಮನ್ವಯ ಮಾಡುವ ಈ ಪಾದದಲ್ಲಿ ವೈಶ್ವಾನರಾಧಿಕರಣವು ಅಸಂಗತವಾಗುತ್ತದೆಂಬುದು ಮೊದಲನೆಯ ಪ್ರಶ್ನೆ. ಇಂತಹ 'ವೈಶ್ವಾನರ' ಎಂಬ ನಾಮವು ವಿಷ್ಣುವಿನ್ನು ಹಾಗೂ ಅಗ್ನಿಯಲ್ಲಿ ಸಾಧಾರಣವಾಗಿರುವುದರಿಂದ ಉಭಯತ್ರಪ್ರಸಿದ್ಧವಾಗಿದೆ. ಈ ಪಾದದಲ್ಲಿ ಅನ್ಯತ್ರಪ್ರಸಿದ್ಧಶಬ್ದವನ್ನು ಸಮನ್ವಯ ಮಾಡುತ್ತಿರುವುದರಿಂದಲೂ ಈ ಆಧಿಕರಣಕ್ಕೆ ಇಲ್ಲಿ ಸಂಗ ಇರುವುದಿಲ್ಲವೆಂಬುದು ಎರಡನೆಯ ಪ್ರಶ್ನೆ.

ವೈಶ್ವಾನರಾಧಿಕರಣ (೧-೨-೭)

ಒಂದು 'ವೈಶ್ವಾನರ' ಎಂಬ ನಾಮವನ್ನು ಸಮನ್ವಯ ಮಾಡುವುದರಿಂದ ವೈಶ್ವಾನರನೆನಿಸಿದ ವಿಷ್ಣುವಿಗೆ ಸಂಬಂಧಪಟ್ಟ ಎಲ್ಲ ಲಿಂಗಗಳನ್ನು ಸಮನ್ವಯ ಮಾಡಿದಂತಾಗುವುದರಿಂದ ಈ ಅಧಿಕರಣವು ಇಲ್ಲಿ ಸಂಗತವಾಗುತ್ತದೆ. ಮತ್ತು ಉಭಯತ್ರಪ್ರಸಿದ್ಧವೂ ಆಗುವುದಿಲ್ಲ. ಪ್ರಮಾಣತೌಲ್ಯ ಹಾಗೂ ನ್ಯಾಯತೌಲ್ಯಗಳಿದ್ದರೆ ಮಾತ್ರ ಉಭಯತ್ರಪ್ರಸಿದ್ಧವಾಗುತ್ತದೆ. ಅಂದರೆ ಶ್ರುತಿಯಿಂದ ವಿಷ್ಣುವಿನಲ್ಲಿ ಪ್ರಸಿದ್ಧಿಯನ್ನು ಹೇಳಿದರೆ ಅಂತಹ ಶ್ರುತಿಯಿಂದಲೇ ಅಗ್ನಿಯಲ್ಲಿಯೂ ಪ್ರಸಿದ್ಧಿಯನ್ನು ಹೇಳಬೇಕು. ಅಥವಾ ಲೋಕರೂಢಿಯನ್ನು ಅಗ್ನಿಯಲ್ಲಿ ಹೇಳಿದರೆ ಅಂತಹ ಲೋಕರೂಢಿಯನ್ನೇ ವಿಷ್ಣುವಿನಲ್ಲಿ ಹೇಳಬೇಕು. ಹೀಗಿದ್ದರೆ ಮಾತ್ರ ಉಭಯತ್ರಪ್ರಸಿದ್ಧವೆನಿಸುತ್ತದೆ. ಆದರೆ ಪ್ರಕೃತ ವೈಶ್ವಾನರ ಶಬ್ದವು ಲೋಕರೂಢಿಯಿಂದ ಅಗ್ನಿಯಲ್ಲಿ ಪ್ರಸಿದ್ಧವಾಗಿದೆ. ಶ್ರುತಿಯಿಂದ ವಿಷ್ಣುವಿನಲ್ಲಿ ಪ್ರಸಿದ್ಧವಾಗಿದೆ. ಹೀಗಿರುವಾಗ ಉಭಯತ್ರಪ್ರಸಿದ್ಧವೆನ್ನಲು ಸಾಧ್ಯವಿಲ್ಲ ಹೊರತಾಗಿ, ಲೋಕರೂಢಿಯನ್ನು ವಿವಕ್ಷಿಸಿ ಅನ್ಯತ್ರಪ್ರಸಿದ್ಧವೇ ಆಗುತ್ತದೆ.

'ವೈಶ್ವಾನರ' ಶಬ್ದವು ಲಿಂಗಾತ್ಮಕವೆಂದು 'ವಿಶ್ವಜೀವಾಂತರತ್ವಾದ್ಧೈರ್ಲಿಂಗೈಃ' ಎಂಬ ಅಣುಭಾಷ್ಯದಲ್ಲಿ ಹೇಳಿದಂತೆ ಕಾಣಿಸುತ್ತದೆ. ಇದು ಸಿದ್ಧಾಂತದಲ್ಲಿ 'ವೈಶ್ವಾನರ' ಶಬ್ದವನ್ನು ಯೌಗಿಕವೆಂದು ಹೇಳಿದ್ದಾರೆ ಎಂಬ ಅಭಿಪ್ರಾಯದಿಂದ; ಹೊರತು, ಉಳಿದ ಶಬ್ದಗಳಂತೆ ಪೂರ್ವಪಕ್ಷ ಸಂದರ್ಭದಲ್ಲಿ ಲಿಂಗಾತ್ಮಕವಾಗಿರುವುದಿಲ್ಲ; ನಾಮಾತ್ಮಕವೇ ಆಗಿರುತ್ತದೆ.

ಈ ಅಧಿಕರಣಕ್ಕೆ ಹಿಂದಿನ ಅದೃಶ್ಯತ್ವಾದ್ಯಧಿಕರಣದ ಜೊತೆಗೆ ಆಕ್ಷೇಪಿಕೀ ಸಂಗತಿಯನ್ನು ತಿಳಿಯಬೇಕು. ಅದೃಶ್ಯತ್ವಾದಿಗುಣಗಳು ವಿಷ್ಣುವಿನ ಧರ್ಮವೆಂದು ಅಲ್ಲಿ ಹೇಳಲಾಗಿದೆ. ಅಂತಹ ಅದೃಶ್ಯತ್ವಾದಿಗುಣಗಳನ್ನು ಹೇಳುವ ಉಪನಿಷತ್ತಿನಲ್ಲಿ ಸರ್ವಗತತ್ವವನ್ನೂ ಸಹ ಹೇಳಲಾಗಿದೆ. ಅದೇ ಸರ್ವಗತತ್ವಧರ್ಮವನ್ನು ಛಾಂದೋಗ್ಯೋಪನಿಷತ್ತು ವೈಶ್ವಾನರನಲ್ಲಿ ಹೇಳುತ್ತಿದೆ. ವೈಶ್ವಾನರನು ವಿಷ್ಣುವಲ್ಲದಿದ್ದರೆ ಅದೃಶ್ಯತ್ವಾದಿಗುಣಗಳೂ ಸಹ ವಿಷ್ಣುವಿನ ಧರ್ಮವಾಗುವುದಿಲ್ಲ. ಹೀಗೆ ಹಿಂದಿನ ಅಧಿಕರಣದ ಸಿದ್ಧಾಂತವು ಅಯುಕ್ತವಾಗುತ್ತದೆ. ಈ ಉದ್ದೇಶಕ್ಕೋಸ್ಕರ ಸೂತ್ರಕಾರರು 'ವೈಶ್ವಾನರ' ಎಂಬ ನಾಮಾತ್ಮಕಶಬ್ದವನ್ನು ವಿಷ್ಣುವಿನಲ್ಲಿ ಸಮರ್ಥಿಸಲು ಹೊರಟಿದ್ದಾರೆ.

• • • • •

ಸಂಶಯ ಹಾಗೂ ಪೂರ್ವಪಕ್ಷ

तात्पर्यचन्द्रिका

अत्र वैश्वानरः किमग्न्यादिः किं वा ब्रह्मेति चिन्ता । तदर्थम् अग्निवैश्वानरादिशब्दानां ब्रह्मणि मुख्यत्वेऽग्न्यादिशब्दानां प्रसिद्धाग्न्यादौ लौकिकव्यवहारः, तत्तत्सूक्तानां तत्तद्विद्यानां च ब्रह्मपरत्वे वैदिकसूक्तव्यवस्था विद्याव्यवस्था च न युक्ता उत युक्तेति ।

परिपूर्णचंद्रिका

ಅನುವಾದ - ಸಂಶಯ ಕೋಟಿ ಹೀಗಿದೆ - ವೈಶ್ವಾನರ ಶಬ್ದದಿಂದ ಪ್ರತಿಪಾದ್ಯರಾದವರು ಅಗ್ನ್ಯಾದಿಗಳೋ, ಅಥವಾ ಬ್ರಹ್ಮನೋ? ಒಂದುವೇಳೆ ಅಗ್ನಿ, ವೈಶ್ವಾನರ ಮೊದಲಾದ ಶಬ್ದಗಳು ಬ್ರಹ್ಮನಲ್ಲಿ ಮುಖ್ಯವಾಗಿ ಇರುವುದಾದರೆ ಪ್ರಸಿದ್ಧವಾದ ಅಗ್ನಿ ಮೊದಲಾದವರಲ್ಲಿ ಮಾಡಲ್ಪಡುವ ಲೌಕಿಕವ್ಯವಹಾರವು ಯುಕ್ತವೋ? ಅಯುಕ್ತವೋ? ಬ್ರಹ್ಮನಲ್ಲಿಯೇ ವೈಶ್ವಾನರಾದಿ ಶಬ್ದಗಳು ಮುಖ್ಯವಾಗಿ ಇರುವುದಾದರೆ ಎಲ್ಲಾ ಸೂಕ್ತಗಳು ಹಾಗೂ ವಿದ್ಯೆಗಳೆಲ್ಲವೂ ಬ್ರಹ್ಮಪರವಾದವು, ಆವಾಗ ಇದು ಅಗ್ನಿಸೂಕ್ತ, ಇದು ವಾಯುಸೂಕ್ತ ಎಂಬ ವ್ಯವಸ್ಥೆಯು ಅಯುಕ್ತವಾಗುತ್ತದೋ? ಅಥವಾ ಯುಕ್ತವಾಗುತ್ತದೋ? ಇದರಂತೆ ಎಲ್ಲ ವಿದ್ಯೆಗಳೂ ಬ್ರಹ್ಮಪರವಾದರೆ ಇದು ವೈಶ್ವಾನರವಿದ್ಯೆ, ಇದು ಅಗ್ನಿವಿದ್ಯೆ ಎಂಬ ವ್ಯವಸ್ಥೆಯೂ ಸಹ ಅಯುಕ್ತವಾಗುತ್ತದೋ? ಯುಕ್ತವಾಗುತ್ತದೋ? ಎಂದು ಸಂಶಯ ಬರುತ್ತದೆ.

ಪೂರ್ವಪಕ್ಷಸ್ತ್ವ – ''ಆತ್ಮಾನಂ ವೈಶ್ವಾನರಮುಪಾಸ್ತೇ'' ''ಅಯಮಗ್ನಿರ್ವೈಶ್ವಾನರಃ'' ಇತ್ಯಾದೌ ಶ್ರುತೌ ವೈಶ್ವಾನರೋऽಗ್ನಿದೇವತಾ ವಾ ಭೂತಂ ವಾ, ವೈಶ್ವಾನರಶ್ರುತೇಸ್ತತ್ರ ಪ್ರಸಿದ್ಧೇಃ ।

ಪೂರ್ವಪಕ್ಷ ಹೀಗಿದೆ - ''ಆತ್ಮಾನಂ ವೈಶ್ವಾನರಮುಪಾಸ್ತೇ'' ''ಅಯಮಗ್ನಿರ್ವೈಶ್ವಾನರಃ'' ಎಂಬ ವಿಷಯವಾಕ್ಯದಲ್ಲಿ ಕೇಳಿಸುತ್ತಿರುವ ವೈಶ್ವಾನರನು ಅಗ್ನಿದೇವತೆ ಅಥವಾ ಜಡವಾದ ಅಗ್ನಿಯೆಂದು ಹೇಳಬೇಕು. ಏಕೆಂದರೆ ಲೋಕದಲ್ಲಿ ಈ ಎರಡು ಪದಾರ್ಥಗಳಲ್ಲೇ ವೈಶ್ವಾನರಶಬ್ದವನ್ನು ಎಲ್ಲರೂ ಪ್ರಯೋಗಿಸುತ್ತಾರೆ.

ನಚ ''ಅಹಂ ವೈಶ್ವಾನರಃ'' ಇತಿ ಸ್ಮೃತಿಸಮಾಖ್ಯಾನಾತ್ಪುರುಷಸೂಕ್ತಸಮಾಖ್ಯಾನಾತ್ ''ಕೋ ನ ಆತ್ಮಾ ಕಿಂ ಬ್ರಹ್ಮ'' ಇತಿ ಪ್ರಕರಣಾತ್ ''ಸರ್ವೇ ಪಾಪ್ಮಾನಃ ಪ್ರದೂಯನ್ತೇ'' ಇತಿ ಸ್ವಜ್ಞಾನೇನ ಸರ್ವಪಾಪ್ಮಪ್ರದಾಹಸರ್ವಗತ್ವಾದಿಲಿಙ್ಗಾಚ್ಚ ವೈಶ್ವಾನರೋ ಬ್ರಹ್ಮೇತಿ ವಾಚ್ಯಂ,

ಪ್ರಶ್ನೆ - ಕೇವಲ ಲೋಕರೂಢಿಯಿಂದ ಅಗ್ನಿದೇವತೆಯನ್ನು ಅಥವಾ ಜಡವಾದ ಅಗ್ನಿಯನ್ನು ವೈಶ್ವಾನರವೆಂದು ಹೇಳಲು ಸಾಧ್ಯವಿಲ್ಲ. ಏಕೆಂದರೆ 'ಅಹಂ ವೈಶ್ವಾನರಃ' ಎಂಬ ಗೀತಾಸ್ಮೃತಿಯ ಸಮಾಖ್ಯಾಪ್ರಮಾಣವು ವಿಷ್ಣುವಿನ ವಿಷಯದಲ್ಲಿದೆ. ಮತ್ತು ಪುರುಷಸೂಕ್ತದಲ್ಲಿ ಯಾವ ಪುರುಷನು ವರ್ಣಿಸಲ್ಪಟ್ಟಿದ್ದಾನೋ? ಅವನೇ ವೈಶ್ವಾನರ ಪ್ರಕರಣದಲ್ಲಿ ಪ್ರತಿಪಾದ್ಯನಾಗಿದ್ದಾನೆಂದು ತಿಳಿಯುತ್ತಿದೆ. ಹೀಗೆ ಪುರುಷಸೂಕ್ತ ಸಮಾಖ್ಯಾಪ್ರಮಾಣವು ವಿಷ್ಣುವಿನ ವಿಷಯದಲ್ಲಿ ಆಧಾರವಾಗಿದೆ. ಮತ್ತು ''ಕೋ ನ ಆತ್ಮಾ ಕಿಂ ಬ್ರಹ್ಮ'' ಎಂಬುದಾಗಿ ವೈಶ್ವಾನರ ಪ್ರಕರಣವು ವಿಷ್ಣುವಿನಲ್ಲಿ ಪ್ರಸಿದ್ಧವಾದ ಆತ್ಮ ಹಾಗೂ ಬ್ರಹ್ಮಶಬ್ದಗಳಿಂದ ಪ್ರಾರಂಭವಾಗುತ್ತಿದೆ. ಮತ್ತು ''ಸರ್ವೇ ಪಾಪ್ಮಾನಃ ಪ್ರದೂಯಂತೇ'' ಎಂಬುದಾಗಿ ಅವನ ವೈಶ್ವಾನರನ ಜ್ಞಾನದಿಂದ ಸಕಲ ಪಾಪಗಳು ಪರಿಹಾರವಾಗುತ್ತವೆಂದು ಹೇಳಲಾಗಿದೆ. ಮತ್ತು ಸರ್ವಗತತ್ವಾದಿಲಿಂಗಗಳೂ ಸಹ ವೈಶ್ವಾನರನ ಪ್ರಕರಣದಲ್ಲಿ ಕೇಳಿಬರುತ್ತಿವೆ. ಇವುಗಳ ಆಧಾರದಿಂದ ವೈಶ್ವಾರನು ವಿಷ್ಣುವೇ ಆಗಬೇಕಲ್ಲವೇ?

समाख्याप्रकरणलिङ्गानां श्रुतितो दुर्बलत्वात् । बहुत्वप्रयुक्तप्राबल्यादपि स्वभावप्राबल्यस्य बलवत्त्वाच्च ।

उक्तं हि –

'द्विविधं बलवत्त्वं च बहुत्वाच्च स्वभावतः ।
तयोस्त्वभावो बलवान् उपजीव्यादिकश्च सः ।।'

इति ।

ಉತ್ತರ - ಇದು ತಪ್ಪು. ವಿಷ್ಣುವಿನ ವಿಷಯದಲ್ಲಿ ನೀವು ಹೇಳಿದ ಸಮಾಖ್ಯಾ, ಪ್ರಕರಣ, ಲಿಂಗಗಳೆಲ್ಲವೂ ಶ್ರುತಿಗಿಂತ ದುರ್ಬಲವಾಗಿದೆ. ಬಹುತ್ವಪ್ರಯುಕ್ತವಾಗಿ ಆವುಗಳೆಲ್ಲವೂ ಪ್ರಬಲವಾಗಿವೆಯಲ್ಲವೇ? ಎಂಬ ಪ್ರಶ್ನೆಗೂ ಅವಕಾಶವಿಲ್ಲ. ಏಕೆಂದರೆ ಬಹುತ್ವಪ್ರಯುಕ್ತವಾದ ಪ್ರಾಬಲ್ಯಕ್ಕಿಂತ ಸ್ವಭಾವಪ್ರಯುಕ್ತವಾದ ಪ್ರಾಬಲ್ಯವೇ ಶ್ರೇಷ್ಠವಾಗಿದೆ. ಇದನ್ನು ವಿಷ್ಣುತತ್ವನಿರ್ಣಯದಲ್ಲಿ ಉದಾಹರಿಸಲ್ಪಟ್ಟ ಬ್ರಹ್ಮತರ್ಕವಾಕ್ಯದಲ್ಲಿ ಹೀಗೆ ಹೇಳಿದ್ದಾರೆ -

'ದ್ವಿವಿಧಂ ಬಲವತ್ತ್ವಂ ಚ ಬಹುತ್ವಾಚ್ಚ ಸ್ವಭಾವತಃ ।
ತಯೋಸ್ತ್ವಭಾವೋ ಬಲವಾನ್ ಉಪಜೀವ್ಯಾದಿಕಶ್ಚ ಸಃ ।।'

ಎಂದರೆ ಪ್ರಾಬಲ್ಯವು ಸ್ವಭಾವಪ್ರಯುಕ್ತವಾಗಿ ಮತ್ತು ಬಹುತ್ವಪ್ರಯುಕ್ತವಾಗಿ ಎರಡು ವಿಧ. ಇವುಗಳ ಮಧ್ಯೆ ಸ್ವಭಾವಪ್ರಯುಕ್ತವಾದ ಪ್ರಾಬಲ್ಯವೇ ಉಪಜೀವ್ಯವಾದ್ದರಿಂದ ಶ್ರೇಷ್ಠವಾಗಿರುತ್ತದೆಂದು.

प्रकाशः –

प्रकाशः – विषयसंशयटीकां व्यनक्ति – अत्रेति । छान्दोग्ये पञ्चमेऽध्याये वैश्वानरविद्यायां ''प्राचीनशालसत्ययज्ञेन्द्रद्युम्नजनबुडिलोद्दालकाः समेत्य मीमांसां चक्रुः को न आत्मा किं ब्रह्मेति । ते मीमांसमाना निश्चयमलभमानाः केकयं राजानमुपसद्योचुः आत्मानमेव वैश्वानरं सम्प्रत्यध्येषि । तमेव नो ब्रूहि'' इत्युपक्रम्य श्रूयते

ವಿವರಣೆ - ಈ ಅಧಿಕರಣದ ವಿಷಯ ಹಾಗೂ ಸಂಶಯಗಳನ್ನು ನಿರೂಪಿಸುವ ಟೀಕೆಯನ್ನು ವ್ಯಾಖ್ಯಾನಿಸುತ್ತಿದ್ದಾರೆ 'अत्र' ಇತ್ಯಾದಿ ಗ್ರಂಥದಿಂದ. ಛಾಂದೋಗ್ಯದ ಪಂಚಮಾಧ್ಯಾಯದ ವೈಶ್ವಾನರವಿದ್ಯೆಯು ಹೀಗೆ ಪ್ರಾರಂಭವಾಗುತ್ತದೆ - ''प्राचीनशालसत्ययज्ञेन्द्रद्युम्नजनबुडिलोद्दालकाः समेत्य मीमांसां चक्रुः को न आत्मा किं ब्रह्मेति । ते मिमांसमाना निश्चयमलभमानाः

ಕೇಕಯಂ ರಾಜಾನಮುಪಸದ್ಯೋಚುಃ ಆತ್ಮಾನಮೇವ ವೈಶ್ವಾನರಂ ಸಂಪ್ರತ್ಯಧ್ಯೇಷಿ । ತಮೇವ ನೋ ಬ್ರೂಹಿ'' ಉಪಮನ್ಯುವಿನ ಮಗನಾದ ಪ್ರಾಚೀನಶಾಲನು, ಪುರುಷನ ಮಗನಾದ ಸತ್ಯಯಜ್ಞನು, ಪಲ್ಲವಿಯೆಂಬುವನ ಮಗನಾದ ಇಂದ್ರದ್ಯುಮನು, ಶರ್ಕರಾಕ್ಷನ ಮಗನಾದ ಜನ ಎಂಬುವನು, ಅಶ್ವತರಾಶ್ವನ ಮಗನಾದ ಬುಡಿಲನು ಇವರೆಲ್ಲರೂ ಪ್ರತಿವರ್ಷದಲ್ಲಿ ಚೆನ್ನಾಗಿ ಯಜ್ಞವನ್ನು ಆಚರಿಸುತ್ತಿದ್ದರು ಮತ್ತು ಸರಿಯಾದ ವೇದಾರ್ಥಗಳನ್ನು ತಿಳಿದಿದ್ದರು. ಈ ಐವರು ಒಂದು ಕಡೆ ಸೇರಿ ನಮ್ಮ ಉಪಾಸ್ಯನಾದ ವೈಶ್ವಾನರನ ಲಕ್ಷಣವೇನು? ಬ್ರಹ್ಮನಾಮಕನಾದ ಪರಮಾತ್ಮನ ಲಕ್ಷಣವೇನು ? ಎಂಬ ವಿಮರ್ಶೆಯಲ್ಲಿ ತೊಡಗಿದರು.

ಹೀಗೆ ಪರಮಾತ್ಮನ ಬಗ್ಗೆ ವಿಮರ್ಶೆಗೆ ತೊಡಗಿದ ಇವರಿಗೆ ಸ್ವತಃ ತಮಗೇ ವಿಶೇಷ ನಿರ್ಣಯವನ್ನು ಮಾಡಲು ಸಾಧ್ಯವಾಗಲಿಲ್ಲ. ಆವಾಗ ಐವರೂ ಸೇರಿ ಉದ್ದಾಲಕರನ್ನು ಸೃಠಿಸಿಕೊಂಡು ಆರುಣನ ಮಗನಾದ ಉದ್ದಾಲಕರು ವೈಶ್ವಾನರನಾಮಕನಾದ ಪರಮಾತ್ಮನನ್ನು ಚೆನ್ನಾಗಿ ತಿಳಿಸಿದ್ದಾರೆ. ಆದ್ದರಿಂದ ಅವರ ಬಳಿ ಹೋಗಿ ಕೇಳೋಣ ಎಂದು ಉದ್ದಾಲಕರನ್ನು ಸಮೀಪಿಸಿದರು. ಆನಂತರ ಉದ್ದಾಲಕರು ಅವರೆಲ್ಲರನ್ನೂ ಕರೆದುಕೊಂಡು ಕೇಕಯದೇಶದ ರಾಜನಾದ ಅಶ್ವಪತಿಯ ಬಳಿ ತೆರಳಿದರು. ಅವರೆಲ್ಲರೂ ಸೇರಿ ಕೇಕಯರಾಜನ ಬಳಿ ವೈಶ್ವಾನರನಾಮಕ ಪರಮಾತ್ಮನನ್ನು ತಾವು ಚೆನ್ನಾಗಿ ತಿಳಿದಿದ್ದೀರಿ, ಅವನನ್ನು ನಮಗೆ ತಿಳಿಸಿಕೊಡಿ ಎಂದು ವಿಜ್ಞಾಪಿಸಿದರು. ಹೀಗೆ ವೈಶ್ವಾನರ ಪ್ರಕರಣವು ಪ್ರಾರಂಭವಾಗುತ್ತದೆ.

प्रकाशः – ''यस्त्वेतमेवं प्रादेशमात्रमभिविमानं वैश्वानरमुपास्ते स सर्वेषु लोकेषु सर्वेषु भूतेषु सर्वेष्वात्मस्वन्नमत्ति तस्य ह वा एतस्यात्मनो वैश्वानरस्य मूर्धैव सुतेजाः चक्षुर्विश्वरूपः प्राणः पृथग्वर्त्मा सन्दोहो बहुलो वस्तिरेव रयिः पृथव्येव पादावुर एव वेदिर्लोमानि बर्हिर्हृदयं गार्हपत्यो मनोऽन्वाहार्यपचन आस्यमाहवनीयः'' इत्यादि ।

''ಯಸ್ತ್ವೇತಮೇವಂ ಪ್ರಾದೇಶಮಾತ್ರಮಭಿವಿಮಾನಂ ವೈಶ್ವಾನರಮುಪಾಸ್ತೇ ಸ ಸರ್ವೇಷು ಲೋಕೇಷು ಸರ್ವೇಷು ಭೂತೇಷು ಸರ್ವೇಷ್ವಾತ್ಮಸ್ವನ್ನಮತ್ತಿ ತಸ್ಯ ಹ ವಾ ಏತಸ್ಯಾತ್ಮನೋ ವೈಶ್ವಾನರಸ್ಯ ಮೂರ್ಧೈವ ಸುತೇಜಾಃ ಚಕ್ಷುರ್ವಿಶ್ವರೂಪಃ ಪ್ರಾಣಃ ಪೃಥಗ್ವರ್ತ್ಮಾ ಸಂದೋಹೋ ಬಹುಲೋ ವಸ್ತಿರೇವ ರಯಿಃ ಪೃಥವ್ಯೇವ ಪಾದಾವುರ ಏವ ವೇದಿರ್ಲೋಮಾನಿ ಬರ್ಹಿರ್ಹೃದಯಂ ಗಾರ್ಹಪತ್ಯೋ ಮನೋಽನ್ವಾಹಾಯರ್ಪಚನ ಆಸ್ಯಮಾಹವನೀಯಃ'' ಮುಂದೆ ವೈಶ್ವಾನರ ಪ್ರಕರಣದಲ್ಲಿ ಹೀಗಿದೆ - ನೀವೆಲ್ಲರೂ ವೈಶ್ವಾನರನಾಮಕನ ಅವಯವಗಳನ್ನು ಮಾತ್ರ ತಿಳಿದು ಆದರ ಫಲವಾಗಿ ಯಥೇಷ್ಟವಾಗಿ ಅನ್ನವನ್ನು ತಿನ್ನುತ್ತಿದ್ದೀರಿ. ಯಾರು ಪ್ರಾದೇಶದ ಪರಿಮಾಣದಲ್ಲಿರುವ ಹೃದಯಕಮಲದಲ್ಲಿ ಪ್ರಾದೇಶಪರಿಮಾಣದಿಂದಲೇ ನೆಲೆಸಿ ಪ್ರಾದೇಶನೆಂದು ಕರೆಸಿಕೊಳ್ಳುವ ಸರ್ವತ್ರವ್ಯಾಪ್ತನಾದ ವೈಶ್ವಾನರನನ್ನು ಮುಂದೆ ಹೇಳುವಂತೆ 'ಸುತೇಜಾಃ' ಮೊದಲಾದ ಎಲ್ಲಾ ಅವಯವಗಳಿಂದ ಕೂಡಿ ಆರಾಧಿಸುತ್ತಾನೋ, ಅವನು ದೇವತಾಪುರುಷನಾಗಿದ್ದರೆ ಎಲ್ಲ ಲೋಕಗಳಲ್ಲಿ ಎಲ್ಲಾ ಜಡ ಹಾಗೂ ಚೇತನರಲ್ಲಿ ಸನ್ನಿಹಿತನಾಗಿ ಎಲ್ಲ ಅನ್ನವನ್ನು ತಿನ್ನುತ್ತಾನೆ. ವೈಶ್ವಾನರನ ಶಿರಸ್ಸು ಸುತೇಜಾ, ಕಣ್ಣು ವಿಶ್ವರೂಪ, ಪ್ರಾಣವಾಯುವು ಪೃಥಗ್ವರ್ತ್ಮಾ, ಮಧ್ಯದೇಹವು ಬಹುಲ, ಕಟಿಪ್ರದೇಶವು ರಯಿ, ಪಾದಗಳು ಪೃಥಿವೀ, ಎದೆಯು ಯಜ್ಞವೇದಿಯ

ಅಭಿಮಾನಿದೇವತೆಗೆ ಯಜ್ಞಕುಂಡಕ್ಕೆ ಆಶ್ರಯವಾಗಿದ್ದು ಯಜ್ಞವೇದಿಕೆಯಲ್ಲಿರುತ್ತದೆ. ಅದರಂತೆ ರೋಮಗಳು ಬರ್ಹಿಯಲ್ಲಿ; ಹೃದಯವು ಗಾರ್ಹಪತ್ಯಾಗ್ನಿಯಲ್ಲಿ; ಮನಸ್ಸು ಅನ್ವಾಹರ್ಯಪಚನಾಗ್ನಿಯಲ್ಲಿ, ಮುಖವು ಆಹವನೀಯಾಗ್ನಿಯಲ್ಲಿ ಇರುತ್ತದೆಂದು ತಿಳಿಯಬೇಕು. ಹೀಗೆ ವೈಶ್ವಾನರನ ವರ್ಣನೆಯು ಇರುತ್ತವೆ. ಛಾಂದೋಗ್ಯದ ಈ ವಾಕ್ಯಗಳು ವೈಶ್ವಾನರಾಧಿಕರಣಕ್ಕೆ ವಿಷಯವಾಗಿದೆ.

ಪ್ರಕಾಶಃ – ತಥಾ ವಾಜಸನೇಯೇ ಸಪ್ತಮೇ ''ಅಯಮಗ್ನಿರ್ವೈಶ್ವಾನರೋ ಯೋऽಯಮನ್ತಃ ಪುರುಷೇ ಯೇನೇದಮನ್ನಂ ಪಚ್ಯತೇ ಯದಿದಮದ್ಯತೇ'' ಇತ್ಯಾದಿ । ತಥಾ ವೈಶ್ವಾನರಸೂಕ್ತೇ –

'ಮೂರ್ಧಾನಂ ದಿವೋ ಅರತಿಂ ಪೃಥಿವ್ಯಾ ವೈಶ್ವಾನರಮೃತ ಆಜಾತಮಗ್ನಿಮ್ ।
ಕವಿಂ ಸಮ್ರಾಜಮತಿಥಿಂ ಜನಾನಾಮಾಸನ್ನಾ ಪಾತ್ರಂ ಜನಯನ್ತ ದೇವಾಃ ।।'

ಇತ್ಯಾದಿ । ತತ್ರ ಸರ್ವತ್ರ ಶ್ರುತೌ ವೈಶ್ವಾನರೋ ವಿಷಯ ಇತ್ಯರ್ಥಃ ।

ಇದರಂತೆ ಬೃಹದಾರಣ್ಯಕದ ಏಳನೇ ಅಧ್ಯಾಯದಲ್ಲಿ ''ಅಯಮಗ್ನಿರ್ವೈಶ್ವಾನರೋ ಯೋऽಯಮಂತಃ ಪುರುಷೇ ಯೇನೇದಮನ್ನಂ ಪಚ್ಯತೇ ಯದಿದಮದ್ಯತೇ'' ಯಾವ ಅಗ್ನಿಯು ಸಕಲಪುರುಷರ ಒಳಗಡೆ ನಿಂತು ತಿನ್ನುವ ಅನ್ನವನ್ನು ಪಚನ ಮಾಡುತ್ತಾನೋ, ಅವನೇ ವೈಶ್ವಾನರನಾಗಿದ್ದಾನೆ ಎಂದು ಹೇಳಲಾಗಿದೆ. ಮತ್ತು ವೈಶ್ವಾನರ ಸೂಕ್ತದಲ್ಲಿ - ''ಮೂರ್ಧಾನಂ ದಿವೋ ಅರತಿಂ ಪೃಥಿವ್ಯಾ ವೈಶ್ವಾನರಮೃತ ಆಜಾತಮಗ್ನಿಮ್ । ಕವಿಂ ಸಮ್ರಾಜಮತಿಥಿಂ ಜನಾನಾಮಾಸನ್ನಾ ಪಾತ್ರಂ ಜನಯಂತ ದೇವಾಃ ॥'' ಎಂದು ವೈಶ್ವಾನರನನ್ನು ವರ್ಣಿಸಲಾಗಿದೆ. ಈ ವಾಕ್ಯಗಳಲ್ಲಿ ಕೇಳಿಸುತ್ತಿರುವ ವೈಶ್ವಾನರನು ಅಧಿಕರಣಕ್ಕೆ ವಿಷಯನಾಗಿದ್ದಾನೆಂದರ್ಥ.

ಪ್ರಕಾಶಃ – ಅತ ಏವ ಟೀಕಾಯಾಂ 'ಸಃ ವೈಶ್ವಾನರಃ'' ಇತಿ ತಚ್ಚಬ್ದೇನ ಸಙ್ಗತ್ಯರ್ಥಂ ಪೂರ್ವಪ್ರಕೃತಚ್ಛಾನ್ದೋಗ್ಯಸ್ಥವೈಶ್ವಾನರಪ್ರತೀತಾವಪಿ ತದುಪಲಕ್ಷಣಮಿತಿ ಭಾವೇನ ''ವೈಶ್ವಾನರಃ'' ಇತಿ ಸಾಮಾನ್ಯೋಕ್ತಿಃ । 'ವೈಶ್ವಾನರಃ' ಇತ್ಯುಪಲಕ್ಷಣಂ, ಪ್ರಾಕ್ ಪಾದದ್ವಯೇನ ಸಮನ್ವಿತಾ ಅಶೇಷವಿದ್ಯಾಗತಾಃ ಅಶೇಷಸೂಕ್ತಸ್ಥಾ ಅಗ್ರ್ಯಾದಿನಾನಾಶಬ್ದಾ ಅಪಿ ಉದಾಹರಣಮಿತಿ ಧ್ಯೇಯಮ್, ಪ್ರಾಚೀನ-ಸರ್ವನಯೋಕ್ತಾಕ್ಷೇಪಸಮಾಧಾನಾರ್ಥತ್ವಾದಸ್ಯಾಧಿಕರಣಸ್ಯ ।

ಆದ್ದರಿಂದಲೇ ಟೀಕೆಯಲ್ಲಿ 'ಸಃ ವೈಶ್ವಾನರಃ' ಎಂಬುದಾಗಿ 'ತತ್' ಶಬ್ದದಿಂದ ಹಿಂದಿನ ಅಧಿಕರಣದಿಂದ ಸಂಗತಿಯು ದೊರೆಯುವುದಕ್ಕಾಗಿ ಹಿಂದಿನ ಅಧಿಕರಣದಲ್ಲಿ ಪ್ರಸಕ್ತವಾದ ಛಾಂದೋಗ್ಯವನ್ನೇ ವಿಷಯವಾಕ್ಯವನ್ನಾಗಿ ಉಲ್ಲೇಖಿಸಿದ್ದಾರೆ. ವಸ್ತುತಃ ಬೃಹದಾರಣ್ಯಕಾದಿ ವಚನಗಳೂ ಸಹ ವಿಷಯವಾಗಿದ್ದರೂ ಕೇವಲ ಸಂಗತಿಗೋಸ್ಕರ ಟೀಕೆಯಲ್ಲಿ ಛಾಂದೋಗ್ಯಉಪನಿಷತ್ತನ್ನು ಉಲ್ಲೇಖಿಸಿದ್ದಾರೆ. ಅದು ಕೇವಲ ಉಪಲಕ್ಷಣವಾಗಿದೆ. ಈ ಅಭಿಪ್ರಾಯದಿಂದಲೇ ಗ್ರಂಥಕಾರರು ಎಲ್ಲ ಶ್ರುತಿಗಳಲ್ಲಿ ಸಾಧಾರಣವಾದ 'ವೈಶ್ವಾನರಃ' ಎಂಬ ಸಾಮಾನ್ಯವಾದ ಪದವನ್ನಷ್ಟೇ ಪ್ರಯೋಗಿಸಿದ್ದಾರೆ.

'ವೈಶ್ವಾನರ' ಎಂಬುದು ಉಪಲಕ್ಷಣವಾಗಿದೆ. ಅಂದರೆ ಹಿಂದಿನ ಎರಡು ಪಾದಗಳಲ್ಲಿ ಸಮನ್ವಯ ಮಾಡಲ್ಪಟ್ಟ ಎಲ್ಲ ವಿದ್ಯೆಗಳಲ್ಲಿರುವ, ಎಲ್ಲ ಸೂಕ್ತಗಳಲ್ಲಿರುವ ಅಗ್ನಿ ಮೊದಲಾದ ಅನೇಕಶಬ್ದಗಳ ಸಮನ್ವಯವೂ ಮತ್ತೊಂದು ದೊಡ್ಡ ಉದ್ದೇಶವಾಗಿದೆ. ಎಲ್ಲಾ ಅಧಿಕರಣಗಳ ಸೂಕ್ತ ಹಾಗೂ ವಿದ್ಯೆಗಳಲ್ಲಿ ಪ್ರಸಕ್ತವಾದ ಶಬ್ದಗಳೆನ್ನೆಲ್ಲ ಸಮನ್ವಯ ಮಾಡುವುದಕ್ಕಾಗಿಯೇ ಈ ಅಧಿಕರಣವನ್ನು ಕೊನೆಯಲ್ಲಿ ಹೇಳಿರುತ್ತಾರೆಂಬುದನ್ನು ಗಮನಿಸಬೇಕು. ಆದ್ದರಿಂದ ಹಿಂದಿನ ಎಲ್ಲ ಅಧಿಕರಣಗಳ ಪ್ರಮೇಯವನ್ನು ಆಕ್ಷೇಪ ಮಾಡಿ ಸಮಾಧಾನಮಾಡುವುದಕ್ಕಾಗಿಯೇ ಈ ಅಧಿಕರಣ ಹೊರಟಿರುತ್ತದೆ.

ಪ್ರಕಾಶಃ – ಅತ ಏವಾಗ್ರೇ ''ಅಗ್ನಿವೈಶ್ವಾನರಾದಿಶಬ್ದಾನಾಮ್'' ಇತ್ಯುಕ್ತಿಃ, ''ವೈಶ್ವಾನರಾದಯಶ್ಶಬ್ದಾ ಅಪಿ ತದ್ವಾಚಿನಃ'' ಇತ್ಯನುಖ್ಯಾನೇ ಸುಧಾಯಾಂ – 'ವೈಶ್ವಾನರಾದಯಃ' ಇತ್ಯಾದಿಶಬ್ದಪ್ರಯೋಗಾದ್ವೈಶ್ವಾನರಶಬ್ದಸ್ಯೋಪಲಕ್ಷಣತ್ವಮಿತಿ ದರ್ಶಯತಿ'' ಇತ್ಯುಕ್ತಮ್ ।

ಈ ಉದ್ದೇಶದಿಂದಲೇ ಮುಂದೆ 'ಅಗ್ನಿವೈಶ್ವಾನರಾದಿಶಬ್ದಾನಾಮ್' ಎಂಬುದಾಗಿ ಆದಿಪದವನ್ನು ಗ್ರಂಥಕಾರರು ಬಳಸಿದ್ದಾರೆ. ಅನುವ್ಯಾಖ್ಯಾನದಲ್ಲಿಯೂ ''ವೈಶ್ವಾನರಾದಯಃ ಶಬ್ದಾ ಅಪಿ ತದ್ವಾಚಿನಃ' ಎಂಬುದಾಗಿ; ಮತ್ತು ನ್ಯಾಯಸುಧೆಯಲ್ಲಿ 'ವೈಶ್ವಾನರಾದಯಃ' ಇತ್ಯಾದಿಶಬ್ದಪ್ರಯೋಗಾತ್ ವೈಶ್ವಾನರ-ಶಬ್ದಸ್ಯೋಪಲಕ್ಷಣತ್ವಮಿತಿ ದರ್ಶಯತಿ'' ಎಂಬುದಾಗಿ ಆದಿಪದವನ್ನು ಪ್ರಯೋಗಿಸಿದ್ದರಿಂದ ವೈಶ್ವಾನರ ಶಬ್ದವು ಉಪಲಕ್ಷಣವಾಗಿದೆಯೆಂದು ತಿಳಿಯಬೇಕು ಎಂದು ಹೇಳಿರುತ್ತಾರೆ. ಇದರಿಂದ ಸಕಲ ಪಾದಗಳಲ್ಲಿ ಪ್ರಸಕ್ತವಾದ ಸೂಕ್ತ ಹಾಗೂ ವಿದ್ಯೆಗಳಲ್ಲಿರುವ ಶಬ್ದಗಳ ಸಮನ್ವಯವು ಈ ಅಧಿಕರಣದ ಉದ್ದೇಶವೆಂದು ಸ್ಪಷ್ಟವಾಗುತ್ತದೆ.

ಪ್ರಕಾಶಃ – ಆತ್ಮಶಬ್ದಾದಿಸಾಧಕೋಪೇತತ್ವೇನ ಪ್ರಾಧಾನ್ಯಾತ್ಸೂತ್ರಾದೌ ತಸ್ಯೈವೋಕ್ತಿಃ । **ಅಗ್ನೀತಿ** । ದೇವತೇತ್ಯರ್ಥಃ । ಆದಿಪದೇನ ಭೂತಾಗ್ನಿಃ । ಏತೇನ ಟೀಕಾಯಾಮ್ ''ಅನ್ಯೋ ವಾ'' ಇತ್ಯುಕ್ತಾನ್ಯಶಬ್ದಾರ್ಥೋ ವಿವೃತಃ ।

ಹಾಗಾದರೆ ವೈಶ್ವಾನರ ಶಬ್ದವನ್ನೇ ಏಕೆ ಸ್ವೀಕರಿಸಿದಿರಿ ? ಎಂಬ ಪ್ರಶ್ನೆ ಬರುತ್ತದೆ. 'ವೈಶ್ವಾನರ' ಶಬ್ದವನ್ನೇ ಉಲ್ಲೇಖಿಸಲು ಕಾರಣವಿದೆ. ಆತ್ಮಶಬ್ದ, ಶ್ರುತಿ, ಸ್ಮೃತಿಗಳ ಸಮಾಖ್ಯಾ ಇವೆಲ್ಲವೂ ಬಹಳವಾಗಿ ಇರುವುದರಿಂದ ಸೂತ್ರದಲ್ಲಿ ಪ್ರಧಾನವಾಗಿ ವೈಶ್ವಾನರ ಶಬ್ದವನ್ನೇ ಸ್ವೀಕರಿಸಿದ್ದಾರೆ. ಗ್ರಂಥದಲ್ಲಿ 'ಅಗ್ನ್ಯಾದಿಃ' ಎಂಬಲ್ಲಿರುವ ಅಗ್ನಿಶಬ್ದಕ್ಕೆ ದೇವತೆಯೆಂದರ್ಥ. ಆದಿಪದದಿಂದ ಜಡವಾದ ಅಗ್ನಿಯನ್ನು ಸ್ವೀಕರಿಸಬೇಕು. ಹೀಗೆ ಹೇಳಿದ್ದರಿಂದ ಟೀಕೆಯಲ್ಲಿರುವ 'ಅನ್ಯೋ ವಾ' ಎಂಬ ಮಾತಿಗೆ ಅಗ್ನಿದೇವತೆಯೋ? ಜಡವಾದ ಅಗ್ನಿಯೋ? ಎಂಬುದಾಗಿ ಅನ್ಯಶಬ್ದದ ಅರ್ಥವನ್ನು ವಿವರಿಸಿದಂತಾಯಿತು.

ಪ್ರಕಾಶಃ – ಅತ್ರ 'ಬ್ರಹ್ಮ' ಇತಿ ಚಿನ್ತಾನನ್ತರಂ, ವೈಶ್ವಾನರಶ್ರುತೇರನ್ಯತ್ರಪ್ರಸಿದ್ಧ್ಯನುಸಾರೇಣ ಸಮಾಖ್ಯಾಪ್ರಕರಣಲಿಙ್ಗಾನಿ ವಿಷ್ಣುಪ್ರಾಪಕಾಣ್ಯಗ್ನೌ ನೇಯಾನಿ ಉತ ತದನುಸಾರೇಣ ಪ್ರಸಿದ್ಧಿರ್ನೇಯೇತಿ ಚಿನ್ತಾ, ತದರ್ಥೆ ಸಮಾಖ್ಯಾದ್ಯನುರೋಧೇನ ಪ್ರಸಿದ್ಧೇರ್ನಯನೇ ಬಾಧಕಮಸ್ತ್ಯುತ ನೇತಿ ಚಿನ್ತಾ ಟೀಕಾಯಾಂ ಪೂರ್ವೋತ್ತರಪ್ರಾಪಕಯೋಸ್ತೌಲ್ಯೋಕ್ತೇಸ್ತಾಮನುಸೃತ್ಯ ನೋಕ್ತಾ । ಸ್ವರೀತ್ಯಾ ತು ವಕ್ತವ್ಯೈವ ।

ಗ್ರಂಥದಲ್ಲಿ ಸಂಶಯಕೋಟಿಗಳನ್ನು ತೋರಿಸುವ 'ಕಿಂ ವಾ ಬ್ರಹ್ಮ' ಎಂಬ ಸಂಶಯದ ಅನಂತರ ವೈಶ್ವಾನರ ಶ್ರುತಿಯನ್ನು ಅನ್ಯತ್ರಪ್ರಸಿದ್ಧಿಗೆ ಅನುಸಾರಿಯಾಗಿ ಸಮಾಖ್ಯಾ, ಪ್ರಕರಣ ಹಾಗೂ ಲಿಂಗಗಳೆಂಬ ವಿಷ್ಣುಪ್ರಾಪಕಗಳನ್ನು ಅಗ್ನಿಯಲ್ಲಿ ಸಮನ್ವಯ ಮಾಡಬೇಕೋ? ಅಥವಾ ಸಮಾಖ್ಯಾ, ಪ್ರಕರಣ, ಲಿಂಗಗಳಿಗೆ ಅನುಸಾರಿಯಾಗಿ ಲೋಕಪ್ರಸಿದ್ಧಿಯನ್ನು ಸಮನ್ವಯಗೊಳಿಸಬೇಕೋ? ಒಂದು ವೇಳೆ ಸಮಾಖ್ಯಾದಿ ತಾತ್ಪರ್ಯಗಳಿಗೆ ಅನುಸಾರಿಯಾಗಿ ಲೋಕಪ್ರಸಿದ್ಧಿಯನ್ನು ಅನುಸರಿಸುವುದಾದರೆ ಬಾಧಕವು ಇರುತ್ತದೋ? ಅಥವಾ ಇಲ್ಲವೋ? ಎಂಬ ಸಂಶಯವನ್ನು ತೋರಿಸಬೇಕಿತ್ತು. ಆದರೆ ಟೀಕೆಯಲ್ಲಿ ಪೂರ್ವಪ್ರಾಪಕ ಹಾಗೂ ಸಿದ್ಧಾಂತಪ್ರಾಪಕ ಲಿಂಗಗಳಿಗೆ ಸಮಾನಬಲವನ್ನು ಹೇಳಿರುವುದರಿಂದ ಅದಕ್ಕನುಸಾರಿಯಾಗಿ ಗ್ರಂಥಕಾರರು ಈ ಸಂಶಯಗಳನ್ನು ತೋರಿಸಿರುವುದಿಲ್ಲ. ಒಂದು ವೇಳೆ ನಿರ್ಣಯಾತ್ಮಕವಾದ ಪೂರ್ವಪಕ್ಷವನ್ನು ಮಾಡಿದ್ದರೆ ಒಂದಕ್ಕೆ ಅನುಸಾರಿಯಾಗಿ ಮತ್ತೊಂದನ್ನು ಕೊಂಡೊಯ್ಯಬಹುದಿತ್ತು. ಆದರೆ ಸಮಾನಬಲವಿರುವುದರಿಂದ ವಿಷ್ಣು ಹಾಗೂ ಅಗ್ನಿಯೆಂಬ ನಿರ್ಣಯವನ್ನು ಮಾಡಲು ಸಾಧ್ಯವಿಲ್ಲವೆಂದು ಟೀಕೆಯಲ್ಲಿ ಹೇಳಿದ್ದಾರೆ. ಗ್ರಂಥಕಾರರ ಪ್ರಕಾರವಂತೂ ಈ ಚಿಂತೆಗಳನ್ನು ತೋರಿಸಲೇಬೇಕು. ಏಕೆಂದರೆ ಮುಂದೆ ಪೂರ್ವಪಕ್ಷವನ್ನು ಮಾಡುವಾಗ ನಿರ್ಣಯಾತ್ಮಕವಾದ ಪೂರ್ವಪಕ್ಷವನ್ನು ಮಾಡಿರುತ್ತಾರೆ.

ಪ್ರಕಾಶಃ – ರೀತಿದ್ವಯಸಾಧಾರಣ್ಯೇನ ತು ಶ್ರುತ್ಯಾದಿಕಂ ಬ್ರಹ್ಮಣಿ ನೇತುಂ ನ ಶಕ್ಯಮ್ ತತ ಶಕ್ಯಮಿತಿ ಚಿನ್ತಾ ಧ್ಯೇಯಾ । ಏತದುಪಯುಕ್ತಾಂ ಪ್ರಸಿದ್ಧೇರ್ನಿರವಕಾಶತ್ವರೂಪಾಂ ಚಿನ್ತಾಮಾಹ – ತದರ್ಥಮಿತಿ । ಮುಖ್ಯತ್ವ ಇತಿ । ಸಿದ್ಧಾನ್ತಿನಾ ಲಕ್ಷಣಾದೇರನಙ್ಗೀಕಾರಾದೇವಮುಕ್ತಮ್ ।

ಟೀಕಾಕಾರರ ಮತ್ತು ಗ್ರಂಥಕಾರರ ಪ್ರಕಾರ ಉಭಯಸಾಧಾರಣವಾದ ಸಂಶಯವನ್ನು ತೋರಿಸಬೇಕೆಂದರೆ ಶ್ರುತ್ಯಾದಿಗಳು ಬ್ರಹ್ಮನಲ್ಲಿ ಸಮನ್ವಯಗೊಳ್ಳಲು ಸಮರ್ಥವಾಗುವುದಿಲ್ಲವೋ? ಅಥವಾ ಸಮರ್ಥವಾಗುತ್ತವೋ? ಎಂಬ ಸಂಶಯವನ್ನು ತೋರಿಸಬೇಕು. ಈ ಸಂಶಯಕ್ಕೆ ಉಪಯುಕ್ತವಾದ ಲೋಕಪ್ರಸಿದ್ಧಿಗೆ ನಿರವಕಾಶತ್ವವನ್ನು ಹೇಳುವ ಸಂಶಯವನ್ನು 'ತದರ್ಥಮ್' ಎಂಬ ಗ್ರಂಥದಿಂದ ತೋರಿಸುತ್ತಿದ್ದಾರೆ. ಸಿದ್ಧಾಂತಿಗಳು ಲಕ್ಷಣಾದಿಗಳನ್ನು ಅಂಗೀಕಾರ ಮಾಡದ ಕಾರಣ 'ಮುಖ್ಯತ್ವೇ' ಎಂಬುದಾಗಿ ಹೇಳಿದ್ದಾರೆ.

ಪ್ರಕಾಶಃ – ಯದಿ ವಕ್ಷ್ಯಮಾಣದಿಶಾ ನ ಯುಕ್ತಾ, ತದಾ ನಿರವಕಾಶಲೋಕಪ್ರಸಿದ್ಧ್ಯಾದಿವಶಾದಗ್ನ್ಯಾದಿರೇವ ವೈಶ್ವಾನರಾದಿಶಬ್ದಾರ್ಥಃ । ಯದಾ ತು ''ಸಾಕ್ಷಾದಪ್ಯವಿರೋಧಮ್'' ''ಅಭಿವ್ಯಕ್ತೇಃ'' ಇತ್ಯಾದಿವಕ್ಷ್ಯಮಾಣದಿಶಾ ಯುಕ್ತಾ, ತದಾ ಬಾಧಕಾಭಾವತ್ಸಮಾಖ್ಯಾದಿವಶಾದ್ ಬ್ರಹ್ಮೈವೇತಿ ಸಿದ್ಧಾನ್ತೇ ಫಲಫಲಿಭಾವೋऽಗ್ರೇ ಪೂರ್ವಪಕ್ಷಾದಿವಿವರಣರೀತ್ಯಾ ಸ್ಪಷ್ಟ ಇತಿ ಭಾವಃ ।

ಒಂದು ವೇಳೆ ಮುಂದೆ ಹೇಳುವ ಪ್ರಕಾರ ಸೂತ್ರಾದಿ ವ್ಯವಸ್ಥೆಗಳು ಅಯುಕ್ತವಾದರೆ ಆಗ ನಿರವಕಾಶವಾದ ಲೋಕಪ್ರಸಿದ್ಧ್ಯಾದಿಗಳ ಬಲದಿಂದ ಅಗ್ನ್ಯಾದಿಗಳೇ ವೈಶ್ವಾನರ ಮೊದಲಾದ ಶಬ್ದಗಳಿಂದ ಪ್ರತಿಪಾದ್ಯರಾಗುತ್ತಾರೆ. ಇದು ಪೂರ್ವಪಕ್ಷದ ಫಲಫಲಿಭಾವ.

ಒಂದು ವೇಳೆ 'ಸಾಕ್ಷಾದಪ್ಯವಿರೋಧಮ್' 'ಅಭಿವ್ಯಕ್ತೇಃ' ಇತ್ಯಾದಿ ಮುಂದೆ ಹೇಳುವ ಸೂತ್ರಗಳಿಂದ ಹೇಳುವ ಪ್ರಕಾರ ಸೂಕ್ತಾದಿವ್ಯವಸ್ಥೆಯು ಯುಕ್ತವಾಗುವುದಾದರೆ ಆಗ ಬಾಧಕವಿಲ್ಲದ ಕಾರಣ ಸಮಾಖ್ಯಾದಿತಾತ್ಪರ್ಯಲಿಂಗಗಳ ಆಧಾರದಿಂದ ಬ್ರಹ್ಮನೇ ವೈಶ್ವಾನರಶಬ್ದದಿಂದ ಪ್ರತಿಪಾದ್ಯನಾಗುತ್ತಾನೆಂಬುದು ಸಿದ್ಧಾಂತದ ಫಲಫಲಿಭಾವ.

ಈ ಫಲಫಲಿಭಾವಗಳು ಮುಂದೆ ಪೂರ್ವಪಕ್ಷವನ್ನು ವಿವರಣ ಮಾಡುವುದರಿಂದಲೇ ಸ್ಪಷ್ಟವಾಗುತ್ತದೆಂದು ಗ್ರಂಥಕಾರರು ತೋರಿಸಿರುವುದಿಲ್ಲ.

प्रकाशः – अत्र टीकायां ''श्रुतेरपि प्रसिद्धितो निरवकाशत्वात्'' इत्यादिना श्रुतेर्निरवकाशत्वमात्रप्रयुक्तप्राबल्योक्तिप्रतीतावपि ''लिङ्गस्य श्रुतितो दुर्बलत्वात्'' इति पूर्ववाक्येन श्रुतित्वप्रयुक्तप्राबल्यमपि अभिमतम् । एवञ्च वैश्वानरश्रुतेः श्रुतित्वनिरवकाशत्वरूपोभयप्रयुक्तप्राबल्यात्पाचकत्वादिलिङ्गस्य निरवकाशत्व-निमित्ताप्राबल्यात्, एवं प्रबलश्रुतिलिङ्गबलेन समाख्याप्रकरणलिङ्गरूपविष्णु-प्रापकाणां बाधादग्निरेव वैश्वानरः ।

ಟೀಕೆಯಲ್ಲಿ ''ಶ್ರುತೇರಪಿ ಪ್ರಸಿದ್ಧಿತೋ ನಿರವಕಾಶತ್ವಾತ್'' 'ಲೋಕಪ್ರಸಿದ್ಧಿಗಿಂತ ಶ್ರುತಿಯು ನಿರವಕಾಶವಾಗಿದೆ'. ಇತ್ಯಾದಿ ಮಾತುಗಳಿಂದ ಶ್ರುತಿಗೆ ನಿರವಕಾಶತ್ವಮಾತ್ರಪ್ರಯುಕ್ತವಾದ ಪ್ರಾಬಲ್ಯವನ್ನು ಹೇಳಿದ್ದಾರೆಂದು ತೋರುತ್ತದೆ. ಆದರೆ 'ಲಿಂಗಸ್ಯ ಶ್ರುತಿತೋ ದುರ್ಬಲತ್ವಾತ್' ಎಂಬ ಹಿಂದಿನ ವಾಕ್ಯವನ್ನು ಗಮನಿಸಿದಾಗ ನಿರವಕಾಶತ್ವಪ್ರಯುಕ್ತವಷ್ಟೇ ಅಲ್ಲ; ಶ್ರುತಿತ್ವಪ್ರಯುಕ್ತವಾದ ಪ್ರಾಬಲ್ಯವೂ ಟೀಕಾಕಾರರಿಗೆ ಅಭಿಪ್ರೇತವಾಗಿದೆಯೆಂದು ತಿಳಿಯುತ್ತದೆ. ಆದ್ದರಿಂದ ವೈಶ್ವಾನರ ಶ್ರುತಿಗೆ ಶ್ರುತಿತ್ವ ಹಾಗೂ ನಿರವಕಾಶತ್ವವೆಂಬ ಉಭಯಪ್ರಯುಕ್ತವಾಗಿ ಪ್ರಾಬಲ್ಯವಿರುತ್ತದೆ. ಪಾಚಕತ್ವಾದಿಲಿಂಗಗಳಿಗೆ ಕೇವಲ ನಿರವಕಾಶತ್ವಪ್ರಯುಕ್ತವಾಗಿ ಪ್ರಾಬಲ್ಯವಿರುತ್ತದೆ. ಹೀಗಿರುವಾಗ ಪ್ರಬಲವಾದ ಶ್ರುತಿ ಹಾಗೂ ಲಿಂಗಗಳ ಬಲದಿಂದ ಅಗ್ನಿಯು ವೈಶ್ವಾನರನೆಂದು ನಿರ್ಣಯಿಸಬಹುದು. ಮತ್ತು ಇಂತಹ ಬಲಿಷ್ಠವಾದ ಶ್ರುತಿ ಹಾಗೂ ಲಿಂಗಗಳಿಂದ ವಿಷ್ಣುವಿನ ವಿಷಯದಲ್ಲಿರುವ ಸಮಾಖ್ಯಾ, ಪ್ರಕರಣ, ಲಿಂಗಗಳೆಲ್ಲವೂ ಬಾಧಿತವಾಗುತ್ತವೆ.

प्रकाशः – टीकायां पूर्वोत्तरपक्षप्रापकयोर्द्वयोरपि निरवकाशत्वेन तौल्योक्तिस्त्वभ्युपेत्यवादेनेति भावेन ''नायं वैश्वानरो विष्णुः; किन्तु'' इत्यादिटीकां विवृण्वन् पूर्वपक्षयति – **पूर्वपक्षस्त्विति** ।

ಆದರೆ ಟೀಕೆಯಲ್ಲಿ ಪೂರ್ವಪಕ್ಷಪ್ರಾಪಕವಾದ ಶ್ರುತಿ, ಲಿಂಗಾದಿಗಳನ್ನು ಸಿದ್ಧಾಂತಸ್ಥಾಪಕವಾದ ಸಮಾಖ್ಯಾದಿ ತಾತ್ಪರ್ಯಲಿಂಗಗಳನ್ನು ನಿರವಕಾಶವೆಂದು ಒಪ್ಪಿ ಸಮಾನಬಲವೆಂದು ಹೇಳಿರುತ್ತಾರೆ. ವಸ್ತುತಃ ಶ್ರುತಿ, ಲಿಂಗಾದಿಗಳು ಮಾತ್ರ ನಿರವಕಾಶವೆಂದು ಪೂರ್ವಪಕ್ಷಕಾರರ ಅಭಿಪ್ರಾಯ. ಟೀಕೆಯಲ್ಲಿ ಹಾಗೇ ಹೇಳಿದ್ದು ಅಭ್ಯುಗಮವಾದದಿಂದ ಎಂದು ತಿಳಿಯಬೇಕು. ಈ ಅಭಿಪ್ರಾಯದಿಂದ ಪ್ರಕೃತ ಗ್ರಂಥಕಾರರು 'ನಾಯಂ

ವೈಶ್ವಾನರೋ ವಿಷ್ಣುಃ; ಕಿಂತು' ಇತ್ಯಾದಿ ಟೀಕೆಯನ್ನು ವ್ಯಾಖ್ಯಾನಿಸುತ್ತಾ ಪೂರ್ವಪಕ್ಷ ಮಾಡುತ್ತಿದ್ದಾರೆ - 'ಪೂರ್ವಪಕ್ಷಸ್ತು' ಇತ್ಯಾದಿ ಗ್ರಂಥದಿಂದ.

ಪ್ರಕಾಶಃ – ಟೀಕಾಯಾಮ್ 'ಅಯಮ್' ಇತ್ಯುಕ್ತ್ವಾ ಪ್ರಾಕ್ ಪ್ರಕೃತಚ್ಛಾನ್ದೋಗ್ಯಸ್ಯಸ್ಯ ಪರಾಮರ್ಶ ಉಪಲಕ್ಷಣಮಿತಿ ಭಾವೇನ ಚ್ಛಾನ್ದೋಗ್ಯಬೃಹದಾರಣ್ಯಕಸ್ಥಯೋರ್ವಾಕ್ಯವಿಶೇಷಯೋರುಕ್ತಿಃ ''ಆತ್ಮಾನಮ್'' ಇತಿ ''ಅಯಮಗ್ನಿಃ'' ಇತಿ ಚ । ಆದಿಪದೇನ ''ವೈಶ್ವಾನರಮೃತ ಆಜಾತಮಗ್ನಿಮ್'' ಇತ್ಯಸ್ಯಾಮೃಚೀತಿ ಗೃಹ್ಯತೇ ।

ಟೀಕೆಯಲ್ಲಿ 'ಅಯಮ್' ಎಂಬ ಶಬ್ದದಿಂದ 'ಅಯಮಗ್ನಿರ್ವೈಶ್ವಾನರಃ' ಎಂಬ ಛಾಂದೋಗ್ಯದ ಮಾತನ್ನು ಉಲ್ಲೇಖಿಸಿದ್ದಾರೆ. ಇದು ಹಿಂದೆ ಪ್ರಕೃತವಾದ ಛಾಂದೋಗ್ಯದ ಮಾತಿನಿಂದ ಸಂಗತಿಯು ದೊರೆಯುವುದಕ್ಕೋಸ್ಕರ. ಇದು ಕೇವಲ ಉಪಲಕ್ಷಣವಾಗಿದೆಯೆಂಬ ಅಭಿಪ್ರಾಯದಿಂದ ಗ್ರಂಥಕಾರರು ಛಾಂದೋಗ್ಯ ಹಾಗೂ ಬೃಹದಾರಣ್ಯಕದ ವಾಕ್ಯಗಳಲ್ಲಿರುವ 'ಆತ್ಮಾನಮ್' ಎಂಬ ಪದವನ್ನು ಹಾಗೂ 'ಅಯಮಗ್ನಿಃ' ಎಂಬ ವಾಕ್ಯವನ್ನೂ ಉಲ್ಲೇಖಿಸಿದ್ದಾರೆ. ಆದಿಪದದಿಂದ 'ವೈಶ್ವಾನರಮೃತ ಆಜಾತಮಗ್ನಿಮ್' ಎಂಬ ಋಗ್ವೇದದ ಮಾತನ್ನೂ ಸಹ ಸ್ವೀಕರಿಸಬೇಕು.

ಪ್ರಕಾಶಃ – ''ಅತ ಏವ ನ ದೇವತಾ ಭೂತಂ ಚ'' ಇತಿಸೂತ್ರವ್ಯಾವರ್ತ್ಯಮಾಹ – ಅಗ್ನಿದೇವತೇತಿ । ಭೂತಮಿತಿ । ತೇಜೋರೂಪಂ ಜಡಮಿತ್ಯರ್ಥಃ । ''ನಚ ವಾಚ್ಯಂ ಸರ್ವಗತತ್ವಲಿಙ್ಗಾದ್ ವೈಶ್ವಾನರೋ ವಿಷ್ಣುಃ'' ಇತಿ ಟೀಕೋಪಲಕ್ಷಣಂ ಸೂತ್ರೋಕ್ತಸಾಧಕಮಾತ್ರಸ್ಯೇತಿ ಭಾವೇನ ತಾಂ ವ್ಯಾಚಷ್ಟೇ – ನಚೇತಿ ।

'ಅತ ಏವ ನ ದೇವತಾ ಭೂತಂ ಚ' ಎಂಬ ಸೂತ್ರದಿಂದ ನಿರಾಕೃತವಾಗುವ ಪೂರ್ವಪಕ್ಷವನ್ನು 'ಅಗ್ನಿದೇವತಾ' ಎಂಬ ಗ್ರಂಥದಿಂದ ತೋರಿಸುತ್ತಿದ್ದಾರೆ. 'ಭೂತಮ್' ಎಂದರೆ ತೇಜೋರೂಪವಾದ ಜಡವಾದ ಅಗ್ನಿಯೆಂದರ್ಥ.

ಟೀಕೆಯಲ್ಲಿ 'ನಚ ವಾಚ್ಯಂ ಸರ್ವಗತತ್ವಲಿಂಗಾದ್ ವೈಶ್ವಾನರೋ ವಿಷ್ಣುಃ' ಎಂದು ಸರ್ವಗತತ್ವಲಿಂಗವನ್ನು ಮಾತ್ರ ಸಿದ್ಧಾಂತಸ್ಥಾಪಕವಾದ ಧರ್ಮವನ್ನಾಗಿ ವಿವಕ್ಷಿಸಿದ್ದಾರೆ. ಇದು ಉಪಲಕ್ಷಣವಾಗಿದೆ. ಸೂತ್ರದಲ್ಲಿ ಹೇಳಲ್ಪಟ್ಟ ಸಮಾಖ್ಯಾ ಹಾಗೂ ಶ್ರುತಿ, ಸ್ಮೃತಿಗಳ ಪ್ರಮಾಣವನ್ನೆಲ್ಲಾ ಉಪಲಕ್ಷಣಯಾ ಇದರಿಂದ ತಿಳಿದುಕೊಳ್ಳಬೇಕು. ಈ ಅಭಿಪ್ರಾಯದಿಂದ ಗ್ರಂಥಕಾರರು 'ನಚ' ಎಂಬ ವಾಕ್ಯದಿಂದ ಟೀಕೆಯನ್ನು ವ್ಯಾಖ್ಯಾನಿಸುತ್ತಿದ್ದಾರೆ.

ಪ್ರಕಾಶಃ – ''ಸ್ಮರ್ಯಮಾಣಮ್'' ಇತಿ ಸೂತ್ರೋಪಾತ್ತಾತ್ ''ಅಹಂ ವೈಶ್ವಾನರೋ ಭೂತ್ವಾ'' ಇತಿ ಸ್ಮೃತಿಸಮಾಖ್ಯಾನಾತ್, ''ಪುರುಷವಿಧಮಪಿ'' ಇತಿ ಸೂತ್ರಾಂಶೋಕ್ತಾತ್ ''ಶೀರ್ಷ್ಣೋ ದ್ಯೌಃ ಸಮವರ್ತತ'' ಇತಿ ಪುರುಷಸೂಕ್ತಸಮಾಖ್ಯಾನಾತ್, ''ಅಸಮ್ಭವಾತ್'' ಇತಿ ಸೂತ್ರಖಣ್ಡೋಕ್ತಾತ್ ''ಕೋ ನ ಆತ್ಮಾ'' ಇತಿ ಬ್ರಹ್ಮಪ್ರಕರಣಾದಿತ್ಯರ್ಥಃ ।

'ಸ್ಮರ್ಯಮಾಣಮ್' ಎಂಬ ಸೂತ್ರದಲ್ಲಿ ಉಲ್ಲೇಖಿಸಿದ 'ಅಹಂ ವೈಶ್ವಾನರೋ ಭೂತ್ವಾ' ಎಂಬ ಸ್ಮೃತಿಯ ಸಮಾಖ್ಯಾವಿರುವುದರಿಂದ 'ಪುರುಷವಿಧಮಪಿ' ಎಂಬ ಸೂತ್ರದ ಭಾಗದಿಂದ ಉಲ್ಲೇಖಿಸಿದ "ಶೀರ್ಷ್ಣೋ ದ್ಯೌಃ ಸಮವರ್ತತ' ಎಂಬ ಪುರುಷಸೂಕ್ತದ ಸಮಾಖ್ಯಾಬಲದಿಂದ 'ಅಸಂಭವಾತ್' ಎಂಬ ಸೂತ್ರದ ಭಾಗದಿಂದ ತಿಳಿಯಲ್ಪಡುವ 'ಕೋ ನ ಆತ್ಮಾ' ಎಂಬ ಬ್ರಹ್ಮಪ್ರಕರಣವೆಂಬ ಪ್ರಮಾಣದಿಂದ ಎಂದು ಟೀಕೆಯ ಅರ್ಥ.

प्रकाशः – ''असम्भवात्पुरुषविधमपि'' इत्यंशोक्तप्रकरणश्रुतिसमाख्याभ्याम् उपलक्षणत्वेनोपात्तलिङ्गान्याप्याह – सर्वे इति । अभिविमानपदेन अमितो विगतं मानं मर्यादा यस्येति टीकोक्तव्युत्पत्त्योक्तं सर्वगतत्वम् ।

'ಅಸಂಭವಾತ್ಪುರುಷವಿಧಮಪಿ' ಎಂಬ ಸೂತ್ರದ ಭಾಗದಿಂದ ಪ್ರಕರಣ ಹಾಗೂ ಶ್ರುತಿ, ಸಮಾಖ್ಯಾಗಳೆಲ್ಲವೂ ಕೇವಲ ಉಪಲಕ್ಷಣವಾಗಿದೆ ಎಂಬುದಾಗಿ ತಿಳಿದು ಸರ್ವಪಾಪರಾಹಿತ್ಯವೆಂಬ ಲಿಂಗವನ್ನೂ ಸಹ ವಿವಕ್ಷಿಸಬೇಕೆಂದು 'ಸರ್ವ' ಇತ್ಯಾದಿ ಗ್ರಂಥದಿಂದ ಹೇಳುತ್ತಿದ್ದಾರೆ. ಅಂದರೆ ಯಾವ ವೈಶ್ವಾನರನನ್ನು ತಿಳಿಯುವುದರಿಂದ ಸಕಲಪಾಪಗಳಿಂದ ದೂರನಾಗುತ್ತಾನೋ, ಅಂತಹವನು ವೈಶ್ವಾನರನೆಂದು ಹೇಳಿದ್ದರಿಂದ ವಿಷ್ಣುವೇ ಎಂದು ನಿರ್ಣಯಿಸಬಹುದೆಂದು ಅಭಿಪ್ರಾಯ. 'ಅಭಿವಿಮಾನ' ಎಂಬ ಪದಕ್ಕೆ 'ಅಭಿತಃ ಮಾನಂ ಯಸ್ಯ' 'ಹೋಗಲ್ಪಟ್ಟ ಮಿತಿಯುಳ್ಳವನು' ಎಂಬ ವ್ಯುತ್ಪತ್ತಿಯಿಂದ ಪರಿಮಿತಿಯಿಲ್ಲದವನು ಎಂದರ್ಥವು ದೊರೆಯುತ್ತದೆ. ಇದರಿಂದ ಸರ್ವಗತನಾಗಿದ್ದಾನೆಂದು ಸರ್ವಗತತ್ವಧರ್ಮವನ್ನು ತಿಳಿದಂತಾಗುತ್ತದೆ.

प्रकाशः – एतेन ''अन्तरधिकरणन्यायेन विष्णावपि श्रुतेर्वृत्तिरस्तीति चेत्'' इति न्यायविवरणटीकोक्तन्यायो विष्णुप्रापकसत्त्वरूपो विवृतः ।

ಹೀಗೆ ಹೇಳಿದ್ದರಿಂದ 'ಅಂತರಧಿಕರಣನ್ಯಾಯೇನ ವಿಷ್ಣಾವಪಿ ಶ್ರುತೇರ್ವೃತ್ತಿರಸ್ತೀತಿ ಚೇತ್' ಎಂಬ ನ್ಯಾಯವಿವರಣಟೀಕೆಯಲ್ಲಿರುವ ನ್ಯಾಯಶಬ್ದಕ್ಕೆ ಸಮಾಖ್ಯಾ, ಶ್ರುತಿ, ಸ್ಮೃತಿ ಹಾಗೂ ಬ್ರಹ್ಮಪ್ರಕರಣಗಳೆಂಬ ವಿಷ್ಣುಪ್ರಾಪಕಲಿಂಗಗಳು ಎಂಬರ್ಥವನ್ನು ಹೇಳಿದಂತಾಯಿತು.

प्रकाशः – ''लिङ्गस्य श्रुतितो दुर्बलत्वात्'' इत्यपि टीकावाक्यमुपलक्षणत्वेन वा, कैमुत्यलब्धत्वाभिप्रायेण वा व्याचष्टे – समाख्येति ।

ಟೀಕೆಯಲ್ಲಿ 'ಲಿಂಗಸ್ಯ ಶ್ರುತಿತೋ ದುರ್ಬಲತ್ವಾತ್' ಶ್ರುತಿಗಿಂತ ವಿಷ್ಣುವಿನ ಲಿಂಗಗಳು ದುರ್ಬಲವಾಗಿವೆಯೆಂದು ಹೇಳಿದ್ದಾರೆ. ಇದು ಉಪಲಕ್ಷಣ ಎಂಬ ಅಭಿಪ್ರಾಯದಿಂದ; ಅಥವಾ ಲಿಂಗವೇ ದುರ್ಬಲವಾಗಿರಬೇಕಾದರೆ ಲಿಂಗಕ್ಕಿಂತ ಕನಿಷ್ಠವಾಗಿರುವ ಸಮಾಖ್ಯಾ ಮೊದಲಾದ ಪ್ರಮಾಣಗಳು ದುರ್ಬಲವೆಂದು ಪ್ರತ್ಯೇಕವಾಗಿ ಹೇಳಬೇಕೇನು ? ಎಂಬ ಕೈಮುತ್ಯದಿಂದ ಸಿಗುವ ಅಭಿಪ್ರಾಯವನ್ನು ಗ್ರಂಥಕಾರರು 'ಸಮಾಖ್ಯಾ' ಇತ್ಯಾದಿ ವಾಕ್ಯದಿಂದ ವ್ಯಾಖ್ಯಾನಿಸುತ್ತಿದ್ದಾರೆ.

ಪ್ರಕಾಶಃ – ಶ್ರುತಿತ ಇತಿ । ವೈಶ್ವಾನರಶ್ರುತಿತ ಇತ್ಯರ್ಥಃ । ಸರ್ವಾಪೇಕ್ಷಯಾ ಶ್ರುತಿಪ್ರಾಬಲ್ಯಸ್ಯ ''ಶಬ್ದಾದೇವ ಪ್ರಮಿತಃ'' ಇತ್ಯತ್ರ ಸೇತ್ಸ್ಯಮಾನತ್ವಾದಿತಿ ಭಾವಃ । ಅನ್ತರ್ನಯೇ ತು ನಿರವಕಾಶಲಿಙ್ಗೇನ ಶ್ರುತಿಬಾಧಃ ನಾತ್ರ ತಥೇತಿ ಭಾವಃ ।

'ಶ್ರುತಿತಃ' ಎಂದರೆ ವೈಶ್ವಾನರಶ್ರುತಿಯಿಂದ ಎಂದರ್ಥ. ಸಕಲಪ್ರಮಾಣಗಳಿಗಿಂತಲೂ ಶ್ರುತಿಯೇ ಪ್ರಬಲವಾಗಿರುತ್ತದೆಂಬ ವಿಚಾರವನ್ನು 'ಶಬ್ದಾದೇವ ಪ್ರಮಿತಃ' ಎಂಬ ಸೂತ್ರದಲ್ಲಿ ಸಮರ್ಥಿಸುತ್ತಾರೆಂದು ತಿಳಿಯಬೇಕು. ನಿರವಕಾಶವಾದ ಲಿಂಗದಿಂದ ಶ್ರುತಿಯು ಬಾಧಿತವಾಗುತ್ತವೆಂದು ಅಂತರಧಿಕರಣದಲ್ಲಿ ಕೇವಲ ಸಮರ್ಥಿಸಿರುತ್ತಾರೆ. ಆದರೆ ಪ್ರಕೃತ ವಿಷ್ಣುಪ್ರಾಪಕವಾದ ಲಿಂಗಗಳಿಗೆ ಅಂತಹ ನಿರವಕಾಶತ್ವವು ಇರುವುದಿಲ್ಲವೆಂದು ತಿಳಿಯಬೇಕು.

ಪ್ರಕಾಶಃ – ಯದ್ಯಪಿ ಸಿದ್ಧಾನ್ತೇ ಸಮಾಖ್ಯಾದಿಕಮಿವ ''ಅಭಿವಿಮಾನಮಾತ್ಮಾನಮ್'' ಇತ್ಯಾತ್ಮಶ್ರುತಿರಪ್ಯಸ್ತಿ । ತಥಾऽಪಿ ತದಾಚ್ಛಾದನೇನ ವಾ, ವಕ್ಷ್ಯಮಾಣದಿಶಾ ನಿರವಕಾಶಯಾ ಪರಪ್ರಾಬಲ್ಯನ್ಯಾಯೇನ ಪ್ರಬಲಯಾ ಚರಮವೈಶ್ವಾನರಶ್ರುತ್ಯಾ ಪೂರ್ವಸ್ಯ ಆತ್ಮಶಬ್ದಸ್ಯ ಕಥಞ್ಚಿನ್ನೇಯತ್ವಾದಿತಿ ವಾ, ತಸ್ಯಾಪ್ಯಗ್ನ್ಯಾದಿಶಬ್ದವದ್ವಿಷ್ಣೌ ಮುಖ್ಯತ್ವಂ ನೇತಿ ವಾऽಭಿಪ್ರಾಯೇಣ ತದನುಕ್ತಿಃ । ತಥಾ ಚ ವಕ್ಷ್ಯತಿ ''ಆತ್ಮಶ್ರುತೇಶ್ಚ ನ ಬ್ರಹ್ಮಣಿ ಮುಖ್ಯತಾ'' ಇತಿ ।

ವಸ್ತುತಃ ಸಿದ್ಧಾಂತದಲ್ಲಿ ಸಮಾಖ್ಯಾ ಶ್ರುತಿ ಮೊದಲಾದ ಪ್ರಮಾಣಗಳಿರುವಂತೆ ''ಅಭಿವಿಮಾನಮಾತ್ಮಾನಮ್'' ಎಂಬ ಆತ್ಮಶ್ರುತಿಯೂ ಸಹ ಇದೆ. ಇದನ್ನು ಪೂರ್ವಪಕ್ಷಕಾರನು ಉಲ್ಲೇಖಿಸಬೇಕಿತ್ತು. ಆದರೆ ತನಗೆ ಈ ಆತ್ಮಶ್ರುತಿಯು ಪ್ರಬಲವಾದ ಬಾಧಕವಾಗಿದೆಯೆಂಬ ವಿವಕ್ಷೆಯಿಂದ ಪೂರ್ವಪಕ್ಷಕಾರನು ಇದನ್ನು ಮುಚ್ಚಿ ತನ್ನ ಮತವನ್ನು ಸ್ಥಾಪಿಸುತ್ತಿದ್ದಾನೆ. ಅಥವಾ ಮುಂದೆ ಹೇಳುವ ಪ್ರಕಾರ ವೈಶ್ವಾನರಶ್ರುತಿಯು ನಿರವಕಾಶವಾಗಿದೆ. ಮತ್ತು ಆತ್ಮಶ್ರುತಿಗಿಂತ ಪರದಲ್ಲಿದೆ. ಪೂರ್ವಕ್ಕಿಂತ ಪರವು ಪ್ರಬಲವಾದ್ದರಿಂದ ಅಪಚ್ಛೇದನ್ಯಾಯದಂತೆ ಪರಪ್ರಬಲನ್ಯಾಯದಿಂದ ವೈಶ್ವಾನರಶ್ರುತಿಯೇ ಆತ್ಮಶ್ರುತಿಗಿಂತ ಬಲಿಷ್ಠವಾಗಿದೆ. ಆತ್ಮಶಬ್ದಕ್ಕೆ ಅಗ್ನ್ಯಾದಿಗಳಲ್ಲಿ ಕಥಂಚಿತ್ ಯೋಜನೆ ಮಾಡಬೇಕೆಂಬ ವಿವಕ್ಷೆಯಿಂದ ಆತ್ಮಶ್ರುತಿಯನ್ನು ಉಲ್ಲೇಖಿಸಿರುವುದಿಲ್ಲ. ಅಥವಾ ಅಗ್ನಿ ಮೊದಲಾದ ಶಬ್ದಗಳು ವಿಷ್ಣುವನ್ನು ಮುಖ್ಯವಾಗಿ ಹೇಗೆ ಪ್ರತಿಪಾದಿಸಲಾರವೋ? ಆದರಂತೆ ಆತ್ಮಶಬ್ದವೂ ಸಹ ವಿಷ್ಣುವನ್ನು ಮುಖ್ಯವಾಗಿ ಪ್ರತಿಪಾದಿಸುವುದಿಲ್ಲವೆಂಬ ಕಾರಣದಿಂದ ಆತ್ಮಶ್ರುತಿಯನ್ನು ಪೂರ್ವಪಕ್ಷಿಯು ಉಲ್ಲೇಖಿಸಿರುವುದಿಲ್ಲ. ಆದ್ದರಿಂದಲೇ 'ಆತ್ಮಶ್ರುತೇಶ್ಚ ನ ಬ್ರಹ್ಮಣಿ ಮುಖ್ಯತಾ' ಆತ್ಮಶ್ರುತಿಯು ಬ್ರಹ್ಮನಲ್ಲಿ ಮುಖ್ಯವಾಗಿರುವುದಿಲ್ಲವೆಂದು ಹೇಳುತ್ತಾರೆ.

ಪ್ರಕಾಶಃ –''ನಚ ಲಿಙ್ಗಸ್ಯ ನಿರವಕಾಶತ್ವೇನ ಪ್ರಾಬಲ್ಯಾತ್ ಶ್ರುತಿಬಾಧಕತ್ವಮ್'' ಇತಿ ಶಙ್ಕೋತ್ತರೇ ಅಪ್ಯುಪಲಕ್ಷಣಮಿತಿ ಭಾವೇನ ಸ್ವಯಂ ಸಮಾಖ್ಯಾದೀನಾಂ ಬಹುತ್ವಾತ್ ಪ್ರಾಬಲ್ಯಮಿತಿ ಶಙ್ಕಾನ್ತರಂ ಹೃದಿ ಕೃತ್ವಾ ಸಮಾಧಿಮಾಹ – ಬಹುತ್ವೇತಿ ।

ಟೀಕೆಯಲ್ಲಿ ''ನಚ ಲಿಂಗಸ್ಯ ನಿರವಕಾಶತ್ವೇನ ಪ್ರಾಬಲ್ಯಾತ್ ಶ್ರುತಿಬಾಧಕತ್ವಮ್'' ಲಿಂಗವು ನಿರವಕಾಶವಾಗಿ ಬಲಿಷ್ಠವಾಗಿರುವುದರಿಂದ ಶ್ರುತಿಗೆ ಬಾಧಕವಾಗಿದೆ ಎಂಬ ಶಂಕೆ ಹಾಗೂ ಉತ್ತರಗಳನ್ನು

ಉಪಲಕ್ಷಣವಾಗಿ ಹೇಳಿದ್ದಾರೆ. ಅಂದರೆ ಸಮಾಖ್ಯಾ ಮೊದಲಾದವುಗಳು ಬಹಳವಾಗಿರುವುದರಿಂದ ಬಲಿಷ್ಠವಾಗಿದೆಯಲ್ಲವೇ? ಎಂಬ ಶಂಕೆಗೆ ಶ್ರುತಿಯು ಸ್ವಭಾವತಃ ಬಲಿಷ್ಠವಾಗಿದೆಯೆಂದು ಪೂರ್ವಪಕ್ಷಕಾರರು ಉತ್ತರಿಸುತ್ತಾರೆ. ಇದನ್ನು ಉಪಲಕ್ಷಣಯಾ ವಿವೆಚಿಸಬೇಕು. ಈ ಅಭಿಪ್ರಾಯದಿಂದ 'ಬಹುತ್ವ' ಇತ್ಯಾದಿ ಗ್ರಂಥವು ಹೊರಟಿವೆ.

प्रकाशः – उक्तं हीति । विष्णुतत्त्वनिर्णयोदाहृतब्रह्मतर्कवाक्य इत्यर्थः । 'सः' स्वभावः उपजीव्यत्वनिरवकाशत्वश्रुतित्वरूप इत्यर्थः ।

'ಉಕ್ತಂ ಹಿ' ಎಂದರೆ ವಿಷ್ಣುತತ್ತ್ವನಿರ್ಣಯದಲ್ಲಿ ಉದಾಹರಿಸಲ್ಪಟ್ಟ ಬ್ರಹ್ಮತರ್ಕದ ವಾಕ್ಯದಲ್ಲಿ ಹೇಳಿದ್ದಾರೆಂದರ್ಥ. 'ಸಃ' ಎಂಬ ಶಬ್ದಕ್ಕೆ ಸ್ವಭಾವ ಎಂದರ್ಥ. ಸ್ವಭಾವತಃ ಪ್ರಬಲವೆಂದರೆ ಉಪಜೀವ್ಯತ್ವ, ನಿರವಕಾಶತ್ವ, ಶ್ರುತಿತ್ವ ರೂಪವಾದ ಪ್ರಾಬಲ್ಯವೆಂದು ಅಭಿಪ್ರಾಯ.

प्रकाशः – यद्यपि पूर्वपक्षेऽपि वैश्वानरश्रुतिरिव ''अयमग्निः'' इत्याद्यग्निश्रुतिः, ''वैश्वानरे तद् हुतं भवति हृदयं गार्हपत्यो मनोऽन्वाहार्यपचन आस्यमाहवनीयः'' इति ''येनेदमन्नं पच्यते'' इत्यादिना श्रुतानि होमाधिकरणत्वागार्हपत्याद्यङ्गकत्व-पाचकत्वादिलिङ्गानि च सन्तीति प्रापकबाहुल्यमस्ति । तथाऽपि टीकायां ''श्रुतितः'' इत्युक्तन्यनुरोधेन तन्मात्रेणैव बहुत्वकृतप्राबल्यस्य बाध उक्तः ।

ವಸ್ತುತಃ ಸಿದ್ಧಾಂತದಲ್ಲಿ ಅನೇಕ ಪ್ರಾಪಕಲಿಂಗಗಳಿರುವಂತೆ ಪೂರ್ವಪಕ್ಷದಲ್ಲಿಯೂ ಇರುತ್ತವೆ. ವೈಶ್ವಾನರ ಶ್ರುತಿಯಂತೆ 'ಅಯಮಗ್ನಿಃ' ಇತ್ಯಾದಿ ಅಗ್ನಿ ಶ್ರುತಿಗಳು 'ವೈಶ್ವಾನರೇ ತದ್ ಹುತಂ ಭವತಿ' ಎಂಬುದರಿಂದ ಹೋಮಾಧಿಕರಣತ್ವವೆಂಬ ಲಿಂಗ, 'ಹೃದಯಂ ಗಾರ್ಹಪತ್ಯೋ ಮನೋಽನ್ವಹಾರ್ಯಪಚನ ಆಸ್ಯಮಾಹವನೀಯಃ' ಎಂಬುದರಿಂದ 'ಗಾರ್ಹಪತ್ಯಾದ್ಯಂಗಕತ್ವ' 'ಯೇನೇದಮನ್ನಮ್' ಎಂಬುದರಿಂದ 'ಪಾಚಕತ್ವ' ಮೊದಲಾದ ಲಿಂಗಗಳೆಲ್ಲವೂ ಪೂರ್ವಪಕ್ಷವಿಷಯಗಳಲ್ಲಿ ಪ್ರಮಾಣಗಳಾಗಿವೆ. ಇದನ್ನೂ ಸಹ ಗ್ರಂಥಕಾರರು ಪೂರ್ವಪಕ್ಷದಲ್ಲಿ ತೋರಿಸಬೇಕಿತ್ತು. ಆದರೂ ಸಹ ಟೀಕೆಯಲ್ಲಿ ''ಶ್ರುತಿತಃ'' ಎಂದು ಹೇಳಿದ್ದರಿಂದ ಅದಕ್ಕನುಸಾರಿಯಾಗಿ ಗ್ರಂಥಕಾರರು ವ್ಯಾಖ್ಯಾನಿಸಿದ್ದಾರೆ. ಶ್ರುತಿಯಿಂದ ಎಂದು ಹೇಳಿದ್ದರಿಂದ ಲಿಂಗಬಾಹುಲ್ಯ ಪ್ರಯುಕ್ತ ಬರುವ ಪ್ರಾಬಲ್ಯಕ್ಕೆ ಬಾಧವನ್ನು ಹೇಳಿದಂತಾಗುತ್ತದೆ ಎಂದಭಿಪ್ರಾಯ. ಅಂದರೆ ಸಿದ್ಧಾಂತದಲ್ಲಿ ಅನೇಕ ಪ್ರಾಪಕಗಳಿದ್ದರೂ ಶ್ರುತಿಯು ಕೇವಲ ಸ್ವಭಾವಪ್ರಯುಕ್ತವಾಗಿ ಬಲಿಷ್ಠವಾಗಿ ಆ ಎಲ್ಲಾ ಲಿಂಗಗಳನ್ನು ಬಾಧಿಸುತ್ತದೆ. ಇಷ್ಟರಿಂದಲೇ ಪೂರ್ವಪಕ್ಷಕಾರನ ಅಭಿಪ್ರಾಯವು ಸಿದ್ಧವಾಗುವಾಗ ಸಿದ್ಧಾಂತದಂತೆ ಪೂರ್ವಪಕ್ಷದಲ್ಲಿಯೂ ಅನೇಕ ಪ್ರಾಪಕಗಳಿರುವಾಗ ಪೂರ್ವಪಕ್ಷಕಾರನ ಅಭಿಪ್ರಾಯವು ನಿರ್ಣಯವಾಗುತ್ತದೆಂದು ಪ್ರತ್ಯೇಕ ಹೇಳಬೇಕೇನು? ಎಂಬ ಕೈಮುತ್ಯವನ್ನು ಗ್ರಂಥಕಾರರು ತಿಳಿಸಿದ್ದಾರೆ.

ಸಾರ

ಛಾಂದೋಗ್ಯಾದಿ ಉಪನಿಷತ್ತುಗಳಲ್ಲಿ ಪ್ರಸ್ತುತನಾದ ವೈಶ್ವಾನರನು ಜಡವಾದ ಅಗ್ನಿ ಅಥವಾ ಅಗ್ನಿದೇವತೆ ಹೊರತು; ವಿಷ್ಣುವಲ್ಲ. ಏಕೆಂದರೆ ಲೋಕದಲ್ಲಿ ಶ್ರುತ್ಯುಕ್ತ 'ವೈಶ್ವಾನರ' ಶಬ್ದವನ್ನು ಇವರಿಬ್ಬರಲ್ಲಿಯೇ ಪ್ರಯೋಗಿಸುತ್ತಾರೆ. ಆದ್ದರಿಂದ ಶ್ರುತಿಯು ಅಗ್ನಿಯೇ ವೈಶ್ವಾನರನೆನ್ನಲು ಪ್ರಬಲವಾದ ಪ್ರಮಾಣವಾಗಿದೆ. ವಸ್ತುತಃ ಸರ್ವಗತತ್ವಧರ್ಮವು ವಿಷ್ಣುವಿನಲ್ಲಿರಬಹುದು. ಆದರೆ ಲಿಂಗಕ್ಕಿಂತ ಶ್ರುತಿಯು ಪ್ರಬಲವಾಗಿರುವುದರಿಂದ ಅಗ್ನಿಯೇ ವೈಶ್ವಾನರಶಬ್ದದಿಂದ ಪ್ರತಿಪಾದ್ಯನಾಗಬೇಕು. ಶ್ರುತಿಸಮಾಖ್ಯಾ, ಪುರುಷಸೂಕ್ತ ಸಮಾಖ್ಯಾ, ಆತ್ಮಶಬ್ದ, ಬ್ರಹ್ಮಪ್ರಕರಣ, ಸರ್ವಗತತ್ವಲಿಂಗ ಇವೇ ಮೊದಲಾದ ಅನೇಕ ಪ್ರಮಾಣಗಳು ಸಿದ್ಧಾಂತ ಸ್ಥಾಪಕಗಳಾಗಿವೆಯಲ್ಲವೇ? ಎಂದು ಪ್ರಶ್ನಿಸಬಾರದು. ಸ್ವಭಾವತಃ ಬಲಿಷ್ಠವಾದ ಒಂದೇ ಶ್ರುತಿಯು ಆ ಎಲ್ಲ ಲಿಂಗಗಳನ್ನು ಬಾಧಿಸುತ್ತದೆ. ಹೀಗೆ ಶ್ರುತಿಯ ಆಧಾರದಿಂದ ಅಗ್ನಿದೇವತೆಯು ವೈಶ್ವಾನರನಾಗಿದ್ದಾನೆಂದು ಪೂರ್ವಪಕ್ಷಕಾರನ ಅಭಿಪ್ರಾಯ.

• • • • •

ನಿರ್ಧಾರಿತ ಪೂರ್ವಪಕ್ಷವೋ ? ಅನಿರ್ಧಾರಿತ ಪೂರ್ವಪಕ್ಷವೋ ?

ತಾತ್ಪರ್ಯಚನ್ದ್ರಿಕಾ

न चान्तरायधिकरणन्यायेन वैश्वानराग्न्यादिश्रुतिः ब्रह्मणि मुख्येति सावकाशा, लिङ्गं तु निरवकाशमिति वाच्यं, तथात्वे श्रुतेरन्यत्रप्रसिद्धयोगात् ।

ಅನುವಾದ - ಪ್ರಶ್ನೆ - ಅಂತಃಸ್ಥತ್ವಾಧಿಕರಣದ ನ್ಯಾಯದಿಂದ ವೈಶ್ವಾನರ, ಅಗ್ನಿ ಮೊದಲಾದ ಶ್ರುತಿಗಳು ಬ್ರಹ್ಮನಲ್ಲಿ ಮುಖ್ಯವಾಗಿ ಸಮನ್ವಯಗೊಂಡಿವೆ. ಆದ್ದರಿಂದ ಅಜ್ಞಾನಿಗಳಲ್ಲಿ ಪ್ರಸಿದ್ಧವಾಗಿರುವ ವೈಶ್ವಾನರಾದಿಶಬ್ದಗಳು ಸಾವಕಾಶವಾದವು. ವಿಷ್ಣುವಿನಲ್ಲಿರುವ ಸರ್ವಗತತ್ವಾದಿ ಲಿಂಗಗಳು ನಿರವಕಾಶವಾಗಿವೆಯಲ್ಲವೇ?

ಉತ್ತರ - ಇದು ತಪ್ಪು. ಹಾಗಾದರೆ ಶ್ರುತಿಗೆ ಅನ್ಯತ್ರಪ್ರಸಿದ್ಧಿಯೇ ಕೂಡದೇ ಹೋಗಬೇಕಾಗುತ್ತದೆ. ಆಗ - 'ಶಬ್ದಗಳು ಅನ್ಯತ್ರಪ್ರಸಿದ್ಧವಾಗಿವೆ' ಎಂಬುದೇ ತಪ್ಪಾಗಬೇಕಾಗುತ್ತದೆ. ಅಗ್ನಿ ಮೊದಲಾದ ಶಬ್ದಗಳನ್ನು ಲೋಕದಲ್ಲಿ ವಿಷ್ಣುವನ್ನು ಬಿಟ್ಟು ಬೇರೆ ಕಡೆ ಪ್ರಯೋಗಿಸುತ್ತಾರೆ. ಇದೆಲ್ಲವೂ ನಿಮ್ಮ ಪ್ರಕಾರ ಅಯುಕ್ತವಾಗಬೇಕಾದೀತು ಎಂದಭಿಪ್ರಾಯ.

नच "जगद्वाचित्वात्" इति वक्ष्यमाणन्यायेन लौकिकैरन्यत्रैव शब्दव्यवहारात् प्रसिद्ध्युपपत्तिरिति वाच्यं, ब्रह्मणि मुख्यत्वे अन्यत्रप्रसिद्धिव्यवहारस्यैवायोगात् ।

ಪ್ರಶ್ನೆ - ಜ್ಞಾನಿಗಳು 'ಜಗದ್ವಾಚಿತ್ವಾತ್' ಎಂಬ ಮುಂದೆ ಹೇಳುವ ನ್ಯಾಯದಿಂದ ವಿಷ್ಣುವಿನಲ್ಲೇ ಪ್ರಸಿದ್ಧವಾಗಿರುವ ಶಬ್ದಗಳನ್ನು ಲೋಕವ್ಯವಹಾರಕ್ಕೋಸ್ಕರ ಬೇರೆ ಕಡೆ ಪ್ರಯೋಗಿಸುತ್ತಾರೆ. ಹೀಗೆ ಹೇಳುವುದರಿಂದಲೂ ಶಬ್ದಗಳಿಗೆ ಅನ್ಯತ್ರಪ್ರಸಿದ್ಧಿಯನ್ನು ಉಪಪಾದಿಸಬಹುದಲ್ಲವೇ?

ಉತ್ತರ - ಇದೂ ಸಹ ತಪ್ಪು. ಹಾಗಾದರೆ ಎಲ್ಲಾ ಶಬ್ದಗಳು ಬ್ರಹ್ಮನಲ್ಲಿ ಮುಖ್ಯವಾಗಿರುವುದರಿಂದ ಅನ್ಯತ್ರಪ್ರಸಿದ್ಧ ಎಂಬ ವ್ಯವಹಾರವೇ ಇಲ್ಲವಾದೀತು. ಆಗಬೇರೆ ಕಡೆ ವ್ಯವಹಾರ ಮಾಡುವುದೇ ಕೂಡುವುದಿಲ್ಲ.

यदि च "शरीररूपकविन्यस्तगृहीतेः" इति वक्ष्यमाणन्यायेन मुख्यार्थभूतब्रह्म-सम्बन्धादन्यत्र प्रयोगः, तर्हि गङ्गादिशब्दानां तीरादाविव अन्यत्र लक्षणादिः स्यात् ।

ಪ್ರಶ್ನೆ - "ಶರೀರರೂಪಕವಿನ್ಯಸ್ತಗೃಹಿತೇಃ" ಎಂಬ ಮುಂದೆ ಹೇಳುವ ನ್ಯಾಯದಿಂದ ಮುಖ್ಯಾರ್ಥನಾದ ಬ್ರಹ್ಮನ ಸಂಬಂಧದಿಂದಷ್ಟೇ ಬೇರೆ ಪದಾರ್ಥಗಳಲ್ಲಿ ಶಬ್ದಗಳನ್ನು ಪ್ರಯೋಗಿಸುತ್ತೇವೆ. ಹೀಗೆ ಹೇಳುವುದರಿಂದಲೂ ಅನ್ಯತ್ರಪ್ರಸಿದ್ಧಿಯನ್ನು ಉಪಪಾದಿಸಬಹುದು.

ಉತ್ತರ - ಹಾಗಾದರೆ ಗಂಗಾದಿ ಶಬ್ದಗಳಿಗೆ ತೀರಾದಿಗಳಲ್ಲಿ ಹೇಗೆ ಲಕ್ಷಣಾ ಮಾಡುತ್ತೇವೋ ಆದರಂತೆ ಸಕಲ ಶಬ್ದಗಳಿಗೆ ಲೋಕದಲ್ಲಿರುವ ಸರ್ವಪದಾರ್ಥಗಳಲ್ಲಿ ಲಕ್ಷಣಾಮಾಡಬೇಕಾದ ಪ್ರಸಂಗ ಬರುತ್ತದೆ.

तथा च ब्रह्मणि मुख्यानामिन्द्रादिशब्दानाम् अग्न्यादौ, अग्न्यादिशब्दानां चेन्द्रादौ प्रयोगस्स्यात् ।

नहि तीरपुरुषमाणवकचित्रलिखितसिंहादौ गङ्गागव्यान्निसिंहशब्दा एव प्रयुज्यन्ते,

नतु रूढ्या योगेन वा गङ्गादिवाचिपदान्तराणीति नियमोऽस्ति । अन्यथाऽग्न्यादौ बह्वादिशब्दस्याप्यप्रयोगः स्यात् ।

ಎಲ್ಲಾ ಶಬ್ದಗಳಿಗೆ ಹೀಗೆ ಲಕ್ಷಣಾ ಮಾಡುವುದಾದರೆ ಬ್ರಹ್ಮನಲ್ಲಿ ಮುಖ್ಯವಾದ ಇಂದ್ರಾದಿಶಬ್ದಗಳಿಗೆ ಅಗ್ನ್ಯಾದಿಗಳಲ್ಲಿಯೂ ಲಕ್ಷಣಾ ಮಾಡಬಹುದು. ಮತ್ತು ಅಗ್ನ್ಯಾದಿ ಶಬ್ದಗಳಿಗೆ ಇಂದ್ರಾದಿಗಳಲ್ಲಿಯೂ ಲಕ್ಷಣಾ ಮಾಡಿ ಪ್ರಯೋಗ ಮಾಡಬೇಕಾದೀತು ! ಅಂದರೆ ಅಗ್ನಿಯನ್ನು ಇಂದ್ರನೆಂದು, ಇಂದ್ರನನ್ನು ಅಗ್ನಿಯೆಂದು ಕರೆಯಬಹುದು. ಏಕೆಂದರೆ ತೀರ, ಪುರುಷ, ಮಾಣವಕ, ಚಿತ್ರಲಿಖಿತಸಿಂಹ, ಇವುಗಳಲ್ಲಿ, ಗಂಗಾಶಬ್ದ, ಮಂಚಶಬ್ದ, ಅಗ್ನಿಶಬ್ದ, ಸಿಂಹಶಬ್ದಗಳನ್ನೇ ಕ್ರಮವಾಗಿ ಪ್ರಯೋಗ ಮಾಡಬೇಕೆಂಬ ನಿಯಮವಿರುವುದಿಲ್ಲ ಎಂದರೆ ರೂಢಿಯಿಂದಲೋ ಅಥವಾ ಯೋಗದಿಂದಲೋ

ಗಂಗೆ ಮೊದಲಾದವುಗಳನ್ನು ಪ್ರತಿಪಾದಿಸುವ ಬೇರೆ ಶಬ್ದಗಳನ್ನೇ ಪ್ರಯೋಗಿಸಬೇಕೆಂಬ ನಿಯಮವೇ ಇರುವುದಿಲ್ಲ. ಹೀಗೊಪ್ಪದಿದ್ದರೆ ಅಂದರೆ ಈ ಶಬ್ದವನ್ನು ಇಲ್ಲಿಯೇ ಪ್ರಯೋಗಿಸಬೇಕೆಂದು ಆಗ್ರಹಿಸುವುದಿಲ್ಲವಾದರೆ ಅಗ್ನ್ಯಾದಿಗಳಲ್ಲಿ 'ವಹ್ನಿ' ಎಂಬ ಶಬ್ದವನ್ನು 'ಹುತಾಷನ' ಎಂಬ ಶಬ್ದವನ್ನೂ ಸಹ ಪ್ರಯೋಗ ಮಾಡದೇ ಇರಬೇಕಾದೀತು.

नच "समाकर्षात्" इति वक्ष्यमाणन्यायेन । वाचकत्वाविशेषेऽपि राज्ञि भृत्ये च जयिशब्दस्येव, अग्न्यादिशब्दानां ब्रह्मणि मुख्यत्वमन्यत्रामुख्यत्वं चेति युक्तं,

ಶಂಕಾ - ನಾಲ್ಕನೆಯ ಪಾದದಲ್ಲಿರುವ ಸಮಾಕರ್ಷಾಧಿಕರಣದ ನ್ಯಾಯದಂತೆ ಇಲ್ಲಿ ಪ್ರಯೋಗ ಮಾಡಬಹುದೇ? ಎಂದರೆ 'ಜಯೀ' ಎಂಬ ಶಬ್ದವನ್ನು ರಾಜನಲ್ಲಿ ಮತ್ತು ಭೃತ್ಯನಲ್ಲಿ ಪ್ರಯೋಗಿಸಲಾಗುತ್ತದೆ. ಇಬ್ಬರಲ್ಲಿಯೂ 'ಜಯೀ' ಎಂಬ ಶಬ್ದದ ವಾಚಕತ್ವವು ಸಾಧಾರಣವಾಗಿದೆ. ಆದರೆ ಈ ಶಬ್ದವು ಮುಖ್ಯವಾದ ಜಯವನ್ನು ರಾಜನಲ್ಲಿ ಹೇಳುತ್ತಿದೆ. ಅಮುಖ್ಯವಾದ ಜಯವನ್ನು ಭೃತ್ಯನಲ್ಲಿ ಹೇಳುತ್ತಿದೆ. ಇದು ಸಮಾಕರ್ಷಾಧಿಕರಣ ನ್ಯಾಯ ಇಲ್ಲಿ ಹೇಳಿದಂತೆ ಅಗ್ನ್ಯಾದಿಶಬ್ದಗಳು ಬ್ರಹ್ಮನಲ್ಲಿ ಮುಖ್ಯವಾಗಿರುತ್ತವೆ. ಅಗ್ನ್ಯಾದಿಗಳಲ್ಲಿ ಅಮುಖ್ಯವಾಗಿರುತ್ತದೆಂದು ಹೇಳಬಹುದಲ್ಲವೇ?

'भृत्यो जयी' इत्यत्र हि भृत्यशब्दस्य भृत्ये मुख्यत्वात्तदन्वयाय जयिशब्दस्यामुख्यता । ब्रह्मणोऽन्यत्र तु कश्चिदपि शब्दो न मुख्योऽस्ति, यदन्वयाय शब्दान्तरस्यामुख्यता ।

ಉತ್ತರ - ದೃಷ್ಟಾಂತವು ವಿಷಮವಾಗಿದೆ. ಏಕೆಂದರೆ 'ಭೃತ್ಯಃ ಜಯೀ' ಎಂದು ಹೇಳಿದಾಗ 'ಜಯೀ' ಎಂಬ ಶಬ್ದಕ್ಕೆ ಅಮುಖ್ಯಾರ್ಥವನ್ನು ಸ್ವೀಕರಿಸುವುದು ಅನಿವಾರ್ಯ. ಏಕೆಂದರೆ ಭೃತ್ಯಶಬ್ದಕ್ಕೆ ಭೃತ್ಯನಲ್ಲಿ ಮುಖ್ಯಾರ್ಥವಿರುತ್ತದೆ. ಅದರ ಜೊತೆಗೆ ಅನ್ವಯ ಮಾಡುವುದಕ್ಕಾಗಿ 'ಜಯೀ' ಎಂಬ ಶಬ್ದಕ್ಕೆ ಅಮುಖ್ಯಾರ್ಥವನ್ನು ಸ್ವೀಕರಿಸುತ್ತೇವೆ. ಅದರಂತೆ ಬ್ರಹ್ಮನ ವಿಷಯದಲ್ಲಿ ಹೇಳಲಾಗದು. ಏಕೆಂದರೆ ಬ್ರಹ್ಮನನ್ನು ಬಿಟ್ಟು ಬೇರೆ ಪದಾರ್ಥಗಳನ್ನು ಪ್ರತಿಪಾದಿಸಲು ಯಾವುದೇ ಶಬ್ದಗಳಿರುವುದಿಲ್ಲ. ಹಾಗೇನಾದರೂ ಅಗ್ನ್ಯಾದಿಗಳಲ್ಲಿ ಮುಖ್ಯವಾದ ಶಬ್ದವಿದ್ದಿದ್ದರೆ ಆದರ ಜೊತೆಗೆ ಅನ್ವಯ ಮಾಡುವುದಕ್ಕಾಗಿ ಮತ್ತೊಂದು ಶಬ್ದಕ್ಕೆ ಅಮುಖ್ಯಾರ್ಥವನ್ನು ಸ್ವೀಕರಿಸಬಹುದಿತ್ತು. ಉದಾಹರಣೆ - 'ಅಗ್ನಿಃ ಸ್ವಾಹಾಪತಿಃ' ಎಂದು ಹೇಳಿದಾಗ 'ಸ್ವಾಹಾಪತಿ' ಶಬ್ದವು ಮುಖ್ಯವಾಗಿ ಅಗ್ನಿಯಲ್ಲಿದ್ದಿದ್ದರೆ 'ಅಗ್ನಿ' ಶಬ್ದಕ್ಕೆ ಅಮುಖ್ಯಾರ್ಥವನ್ನು ಮಾಡಬಹುದಿತ್ತು. ಆದರೆ ಎಲ್ಲಾ ಶಬ್ದಗಳು ವಿಷ್ಣುಪರವೆಂದಾಗ 'ಸ್ವಾಹಾಪತಿ' ಶಬ್ದವೂ ಸಹ ವಿಷ್ಣು ಪರವೇ ಆಗುತ್ತದೆ.

एतेन हानादिव्यवहाराय अन्यत्र प्रयोग इति परास्तम् । अग्निव्यहारस्याग्निशब्देनैव सिद्धेर्वह्न्यादिशब्दाप्रयोगापातात् ।

ಪ್ರಶ್ನೆ - ಹಾನಾದಿವ್ಯವಹಾರಕ್ಕೋಸ್ಕರ ಬೇರೆ ಕಡೆ ಶಬ್ದಗಳನ್ನು ಪ್ರಯೋಗಿಸುತ್ತೇವೆ. ಆದ್ದರಿಂದ ಅವ್ಯವಸ್ಥಾದೋಷವು ಹೇಗೆ ಬರುತ್ತದೆ?

ಉತ್ತರ - ಈ ಪ್ರಶ್ನೆಯೂ ಸಹ ನಿರಾಕೃತವಾಯಿತು. ಏಕೆಂದರೆ ಅಗ್ನಿವ್ಯವಹಾರವನ್ನು ಅಗ್ನಿಶಬ್ದದಿಂದಲೇ ಮಾಡಲು ಬರುವಾಗ ವಹ್ನ್ಯಾದಿಶಬ್ದಗಳನ್ನೇಕೆ ಪ್ರಯೋಗಿಸಬೇಕು. ಆದ್ದರಿಂದ ಅವ್ಯವಸ್ಥಾದೋಷವು ಇದ್ದೇ ಇರುತ್ತದೆ.

अत एव पाचकत्वाद्यग्निलिङ्गानामात्मश्रुतेश्च न ब्रह्मणि मुख्यता, अन्यत्राप्रयोगापातात् ।

ಇಲ್ಲಿಯ ತನಕ ಅನ್ಯತ್ರಪ್ರಸಿದ್ಧಿಯೆಂಬ ನಿರವಕಾಶಲಿಂಗದಿಂದ ಪೂರ್ವಪಕ್ಷ ಶ್ರುತಿಗೆ ಪ್ರಾಬಲ್ಯವನ್ನು ಸಮರ್ಥಿಸಿದರು. ಈ ಕಾರಣದಿಂದಲೇ ಸಿದ್ಧಾಂತ ಪ್ರಾಪಕವಾದ ಪಾಚಕತ್ವಾದಿ ಲಿಂಗಗಳು ಹಾಗೂ ಆತ್ಮಶ್ರುತಿ ಇವುಗಳೂ ಸಹ ಬ್ರಹ್ಮನಲ್ಲಿ ಮುಖ್ಯವಾಗಿ ಬರುವುದಿಲ್ಲವೆಂದು ತಿಳಿಯುತ್ತದೆ. ಹಾಗೇನಾದರೂಬ್ರಹ್ಮನಲ್ಲಿ ಮುಖ್ಯವಾಗುವುದಾದರೆ ಅನ್ಯತ್ರಪ್ರಯೋಗವು ಕೂಡದೇ ಇರಬೇಕಾದೀತು.

किञ्चेन्द्राग्न्यादिशब्दानां ब्रह्मण्येव मुख्यत्वे सूक्तव्यवस्था, विद्याव्यवस्था च न स्यात्, अमुख्यवृत्त्या तद्व्यवस्थाया निरस्तत्वात् ।

ಮತ್ತು ಇಂದ್ರ, ಅಗ್ನಿ ಮೊದಲಾದ ಶಬ್ದಗಳು ಬ್ರಹ್ಮನಲ್ಲಿಯೇ ಮುಖ್ಯವಾಗಿ ಇರುವುದಾದರೆ ಇದು ಅಗ್ನಿಸೂಕ್ತ, ಇದು ವಾಯುಸೂಕ್ತ ಎಂಬ ವ್ಯವಸ್ಥೆಯೂ, ಹಾಗೂ ಇದು ಅಗ್ನಿವಿದ್ಯೆ, ಇದು ವೈಶ್ವಾನರ ವಿದ್ಯೆ ಎಂಬ ವ್ಯವಸ್ಥೆಯೂ ತಪ್ಪಾಗಬೇಕಾದೀತು. ಅಮುಖ್ಯವೃತ್ತಿಯಿಂದ ಮಾಡಲ್ಪಡುವ ವ್ಯವಸ್ಥೆಯನ್ನು ಈಗಾಗಲೇ ನಿರಾಕರಿಸಿದ್ದೇವೆ.

टीकादौ वैश्वानरश्रुतेस्साधारण्योक्तिस्तु श्रुतित्वप्रयुक्ते विशेषे सत्येव श्रुतिलिङ्गयोर्निरवकाशत्वप्रयुक्तसाधारण्यमभिप्रेत्य ।

ಶ್ರುತಿತ್ವ ಪ್ರಯುಕ್ತವಾದ ವಿಶೇಷವಿದ್ದರೆ ಮಾತ್ರ ಶ್ರುತಿಗಾಗಿ ಲಿಂಗಗಳಿಗೆ ನಿರವಕಾಶತ್ವ ಪ್ರಯುಕ್ತವಾದ ಸಾಧಾರಣ್ಯವು ಬರುತ್ತದೆ ಎಂಬ ಅಭಿಪ್ರಾಯದಿಂದ ವೈಶ್ವಾನರಶ್ರುತಿ ಸಾಧಾರಣ ಎಂದು ಟೀಕಾದಿಗಳಲ್ಲಿ ಹೇಳಲಾಗಿದೆ. ಇದರ ಅಭಿಪ್ರಾಯ ಹೀಗಿದೆ - ಪೂರ್ವಪಕ್ಷಯುಕ್ತಿಯು ಸಿದ್ಧಾಂತ ಯುಕ್ತಿಗಿಂತ ಪ್ರಬಲವಾಗಿರುವುದಾದರೆ ಟೀಕೆ, ಭಾಷ್ಯ ಮತ್ತು ಸೂತ್ರಗಳಲ್ಲಿ ಪೂರ್ವಪಕ್ಷಯುಕ್ತಿಗೆ ಏಕೆ ಪ್ರಾಬಲ್ಯವನ್ನು ಹೇಳಿರುವುದಿಲ್ಲ ಎಂದರೆ ಸೂತ್ರದಲ್ಲಿ ಸಾಧಾರಣಶಬ್ದವನ್ನು ಬಳಸಿದ್ದಾರೆ. ಅದಕ್ಕನುಗುಣವಾಗಿ ಶ್ರುತಿಯಲ್ಲಿ ಶ್ರುತಿತ್ವಪ್ರಯುಕ್ತವಾಗಿರುವ ಪ್ರಾಬಲ್ಯವನ್ನು ವಿವಕ್ಷೆ ಮಾಡದೇ ಕೇವಲ ನಿರವಕಾಶಪ್ರಯುಕ್ತವಾದ ಪ್ರಾಬಲ್ಯವನ್ನು ವಿವಕ್ಷಿಸಿದ್ದಾರೆ. ಹೀಗೆ ಹೇಳಿದಾಗ ಮಾತ್ರವೇ ಸೂತ್ರದಲ್ಲಿರುವ 'ಸಾಧಾರಣ' ಎಂಬ ಶಬ್ದವನ್ನು ವ್ಯಾಖ್ಯಾನಿಸಿದಂತಾಗುತ್ತದೆ. ಪೂರ್ವಪಕ್ಷ ಶ್ರುತಿ ಹಾಗೂ ಸಿದ್ಧಾಂತದ

ಲಿಂಗಗಳಲ್ಲಿ ನಿರವಕಾಶತ್ವವು ಸಾಧಾರಣವಾಗಿರುವುದರಿಂದ ವಿಷ್ಣುವೇ ವೈಶ್ವಾನರವೆಂಬ ನಿಶ್ಚಯವನ್ನು ಮಾಡಲಾಗದೆಂದು ಪೂರ್ವಪಕ್ಷ ಮಾಡಿದ್ದಾರೆ.

ಟೀಕಾಯಾಂ ಲಿಙ್ಗಸ್ಯ ನಿರವಕಾಶತ್ವೋಕ್ತಿರಪಿ ಸ್ವತೋऽವಕಾಶಾಭಾವಾಭಿಪ್ರಾಯಾ, ಅನ್ಯಥಾ 'ಸರ್ವಗತತ್ವಂ ಚ ನ ತಸ್ಯ' ಇತಿ ಟೀಕಾವಿರೋಧಾತ್ ।

ಟೀಕೆಯಲ್ಲಿ ಸಿದ್ಧಾಂತ ಲಿಂಗಕ್ಕೆ ನಿರವಕಾಶತ್ವವನ್ನು ಹೇಳಿದ್ದಾರೆ. ಆದರೆ ಸ್ವತಃ ಅವಕಾಶವಿಲ್ಲವೆಂಬ ಅಭಿಪ್ರಾಯದಿಂದಷ್ಟೇ ಅದನ್ನು ಅರ್ಥೈಸಿಕೊಳ್ಳಬೇಕು. ಇಲ್ಲದಿದ್ದರೆ ಉಪಸಂಹಾರ ಮಾಡುವ ಟೀಕೆಯಲ್ಲಿ 'ಸರ್ವಗತತ್ವಂ ಚ ನ ತಸ್ಯ' ವಿಷ್ಣುವಿನಲ್ಲಿ ಸರ್ವಗತತ್ವವೂ ಸಹ ಬರುವುದಿಲ್ಲವೆಂದು ಹೇಳಿದ್ದು ವಿರುದ್ಧವಾಗುತ್ತದೆ.

''ನತು ಲಿಙ್ಗೇನ ವಿಷ್ಣುಪರತಾನಿಶ್ಚಯಃ'' ಇತಿ ಟೀಕಾಯಾಮಪಿ 'ಕಿನ್ತು ಪ್ರಸಿದ್ಧ್ಯಾऽಗ್ನ್ಯಾದಿ ಪರತ್ವನಿಶ್ಚಯಃ'' ಇತಿ ಶೇಷಃ ।

'ನ ತು ಲಿಂಗೇನ ವಿಷ್ಣುಪರತಾನಿಶ್ಚಯಃ' ಎಂಬ ಟೀಕೆಯನ್ನು ನೋಡಿದಾಗಲೂ ಸಂದೇಹಾತ್ಮಕವಾದ ಪೂರ್ವಪಕ್ಷವನ್ನೇ ಮಾಡಿದ್ದಾರೆಂದು ತೋರುತ್ತದೆ. ಆದರೆ ಆ ವಾಕ್ಯದ ಆನಂತರ 'ಕಿಂತು ಪ್ರಸಿದ್ಧ್ಯಾऽಗ್ನ್ಯಾದಿಪರತ್ವನಿಶ್ಚಯಃ' ಹೊರತಾಗಿ ಪ್ರಸಿದ್ಧಿಯಿಂದ ಅಗ್ನ್ಯಾದಿ ಪರತ್ವವೇ ನಿಶ್ಚಯವಾಗುತ್ತದೆ ಎಂಬುದನ್ನು ಶೇಷಪೂರ್ಣಮಾಡಿಕೊಳ್ಳಬೇಕು. ಹೀಗೆ ಮಾಡಿದಾಗ ಅಗ್ನಿಯೇ ವೈಶ್ವಾನರನಾಗಿದ್ದಾನೆಂಬ ನಿಶ್ಚಯಾತ್ಮಕವಾದ ಪೂರ್ವಪಕ್ಷವನ್ನು ಮಾಡಿದಂತಾಗುತ್ತದೆ.

ಯದ್ವಾ – ಟೀಕಾದಿಸ್ವಾರಸ್ಯಾಯ ವಿಷ್ಣುಪರತ್ವಾನಧ್ಯವಸಾಯೇನ ಪೂರ್ವಪಕ್ಷೋऽಸ್ತು । ಏವಞ್ಚ ಪಕ್ಷದ್ವಯೇऽಪ್ಯತೀತಸರ್ವಾಧಿಕರಣಾಕ್ಷೇಪಃ । ಅತ ಏವಾಸ್ಯ ಪಾದದ್ವಯಾನ್ತ್ಯತೇತಿ ।।

ಅಥವಾ ಟೀಕೆ, ಭಾಷ್ಯ, ಸೂತ್ರಗಳಿಗೆ ಸ್ವಾರಸ್ಯಕರವಾದ ಅರ್ಥವನ್ನು ತಿಳಿಯಬೇಕೆಂದರೆ ವಿಷ್ಣುವೇ ವೈಶ್ವಾನರನಾಗಿದ್ದಾನೆಂಬ ನಿರ್ಣಯವನ್ನು ಮಾಡಲಾಗದೆಂದು ವಿಷ್ಣುಪರತ್ವಾನಧ್ಯವಸಾಯದಿಂದ ಪೂರ್ವಪಕ್ಷವನ್ನು ವಿವಕ್ಷಿಸಬಹುದು.

ಈ ಎರಡು ವಿಧ ಪೂರ್ವಪಕ್ಷವನ್ನು ಇಟ್ಟುಕೊಂಡಾಗಲೂ ಪ್ರಥಮಪಾದ ಹಾಗೂ ದ್ವಿತೀಯಪಾದಗಳಲ್ಲಿರುವ ಎಲ್ಲ ಅಧಿಕರಣಗಳನ್ನು ಆಕ್ಷೇಪ ಮಾಡಿದಂತಾಗುತ್ತದೆ. ಅದಕ್ಕೋಸ್ಕರವೇ ಈ ಅಧಿಕರಣವು ಎರಡು ಪಾದಗಳ ಕೊನೆಯಲ್ಲಿ ಪ್ರಸಕ್ತವಾಗಿದೆ.

ಪ್ರಕಾಶಃ –

ಏವಂ ಶ್ರುತೇಃ ಶ್ರುತಿತ್ವಪ್ರಯುಕ್ತಪ್ರಾಬಲ್ಯಮುಪಪಾದ್ಯ ಇದಾನೀಂ ನಿರವಕಾಶತ್ವೇನಾಪಿ ಪ್ರಾಬಲ್ಯಂ ವಕ್ತುಮ್ 'ಅನ್ತರಧಿಕರಣನ್ಯಾಯೇನ ವಿಷ್ಣಾವಪಿ ಶ್ರುತೇಃ ವೃತ್ತಿರಸ್ತೀತಿ ಚೇತ್' ಇತಿ

ನ್ಯಾಯವಿವರಣಟೀಕೋಕ್ತಮತ್ರಾಪಿ ಗ್ರಾಹ್ಯಮಿತಿ ಭಾವೇನ 'नच लिङ्गस्य'' ಇತ್ಯಾದಿಟೀಕಾಂ ವ್ಯಾಚಷ್ಟೇ – ನ ಚೇತ್ಯಾದಿನಾ ।

ವಿವರಣೆ - ಇಲ್ಲಿಯ ತನಕ ಶ್ರುತಿಗೆ ಶ್ರುತಿತ್ವಪ್ರಯುಕ್ತವಾದ ಪ್ರಾಬಲ್ಯವನ್ನು ಸಮರ್ಥಿಸಿದ್ದಾಯಿತು. ಈಗ ನಿರವಕಾಶತ್ವ ಪ್ರಯುಕ್ತವಾಗಿಯೂ ಸಹ ಪ್ರಾಬಲ್ಯವಿರುತ್ತದೆಂಬುದನ್ನು ಸಮರ್ಥಿಸಲು 'ಅಂತರಧಿಕರಣನ್ಯಾಯೇನ ವಿಷ್ಣ್ವವಪಿ ಶ್ರುತೇಃ ವೃತ್ತಿರಸ್ತೀತಿ ಚೇತ್' 'ಅಂತರಧಿಕರಣದ ನ್ಯಾಯದಿಂದ ವಿಷ್ಣುವಿನಲ್ಲಿಯೂ ಶ್ರುತಿಯು ಬರುವುದಾದರೆ' ಎಂಬ ನ್ಯಾಯವಿವರಣೆಯ ಟೀಕೆಯಲ್ಲಿ ಹೇಳಿದ್ದನ್ನು ಇಲ್ಲಿಯೂ ಸ್ವೀಕರಿಸಬೇಕೆಂಬ ಅಭಿಪ್ರಾಯದಿಂದ 'नच लिंगस्य' ಇತ್ಯಾದಿ ಟೀಕೆಯನ್ನು ವ್ಯಾಖ್ಯಾನಿಸುತ್ತಿದ್ದಾರೆ - 'नच' ಇತ್ಯಾದಿ ಗ್ರಂಥದಿಂದ.

ಪ್ರಕಾಶಃ – अन्तरादीति । ''अन्तस्तद्धर्म'' ಇತ್ಯತ್ರಾಧಿದೈವಗತಾಶೇಷನಾಮ್ನಾಂ ನಿರವಕಾಶಲಿಙ್ಗೇನ ವಿಷ್ಣೌ ಮುಖ್ಯತ್ವೋಕ್ತೇಃ, ''चेतोर्पणनिगदात्'' ಇತ್ಯತ್ರ ಅಶೇಷನಾಮ್ನಾಂ ವಿಷ್ಣಾವುಪಾಸನಾರ್ಥತ್ವೋಕ್ತೇಃ, ''ज्योतिश्चरण'' ಇತ್ಯತ್ರಾಶೇಷಸ್ತೂಕ್ತಸ್ಯಾಗ್ನಿಜ್ಯೋತಿರಾದಿಶಬ್ದಾನಾಂ ವಿಷ್ಣೌ ಮುಖ್ಯತ್ವೋಕ್ತೇರಿತಿ ಭಾವಃ ।

'ಅಂತರಾದ್ಯಧಿಕರಣೇನ' ಎಂಬುದಕ್ಕೆ ಹೀಗರ್ಥ - 'ಅಂತಸ್ತದ್ಧರ್ಮೋಪದೇಶಾತ್' ಎಂಬ ಸೂತ್ರದಲ್ಲಿ ಆಧಿದೈವಿಕವಾದ ಸಕಲಶಬ್ದಗಳ ಸಮನ್ವಯವನ್ನು ನಿರವಕಾಶಲಿಂಗದಿಂದ ವಿಷ್ಣುವಿನಲ್ಲಿ ಮುಖ್ಯವಾಗಿ ಸಮರ್ಥಿಸಿದ್ದಾರೆ. ಮತ್ತು 'ಚೇತೋರ್ಪಣನಿಗದಾತ್' ಎಂಬ ಸೂತ್ರದಲ್ಲಿ ನಾಮಾತ್ಮಕವಾದ ಸಕಲಶಬ್ದಗಳ ಸಮನ್ವಯವು ಉಪಾಸನೆಗೋಸ್ಕರ ವಿಷ್ಣುವಿನಲ್ಲಿ ಸಾರ್ಥಕಗಳಾಗುತ್ತವೆಂದು ಸಮರ್ಥಿಸಿದ್ದಾರೆ. 'ಜ್ಯೋತಿಶ್ಚರಣಾಭಿಧಾನಾತ್' ಎಂಬ ಸೂತ್ರದಲ್ಲಿ ಸಕಲ ಸೂತ್ರಗಳಲ್ಲಿರುವ ಅಗ್ನಿ, ಜ್ಯೋತಿ ಮೊದಲಾದ ಶಬ್ದಗಳಿಗೆ ವಿಷ್ಣುವಿನಲ್ಲಿ ಮುಖ್ಯಪ್ರತಿಪಾದ್ಯತ್ವವನ್ನು ಸಮರ್ಥಿಸಿದ್ದಾರೆ. ಆದ್ದರಿಂದ ಎಂದರ್ಥ.

ಪ್ರಕಾಶಃ – केचित्तु – ''अन्तर उपपत्तेः'' ಇತ್ಯತ್ರಾಗ್ನಿಪ್ರಯುಕ್ತಾಹಂಶಬ್ದಸ್ಯ ವಿಷ್ಣೌ ಮುಖ್ಯತ್ವೋಕ್ತೇಸ್ತನ್ಯಾಯೇನೇತ್ಯರ್ಥ ಇತ್ಯಾಹುಃ । तच्चिन्त्यं, ''शास्त्रदृष्ट्या'' ಇತ್ಯತ್ರೈವ ಮುಖ್ಯತ್ವಸಿದ್ಧೇಃ ಅತ್ರ ಭಾಷ್ಯಾದೌ ತಸ್ಯೈವ ಸ್ಮರಣಾತ್ । ತಾವತಾऽಗ್ನಿಶಬ್ದಸ್ಯ ವಿಷ್ಣೌ ಮುಖ್ಯತ್ವಾಸಿದ್ಧೇಶ್ಚೇತಿ । ''अन्तरधिकरणन्यायेन'' ಇತಿ ಕ್ವಚಿತ್ಪಾಠಃ ।

ಕೆಲವರು 'ಆಂತರ ಉಪಪತ್ತೇಃ' ಎಂಬಲ್ಲಿ ಅಗ್ನಿಯಿಂದ ಪ್ರಯೋಗಿಸಲ್ಪಟ್ಟ 'ಅಹಂ' ಶಬ್ದಕ್ಕೆ ವಿಷ್ಣುವಿನಲ್ಲಿ ಮುಖ್ಯಾರ್ಥತ್ವವನ್ನು ಹೇಳಲಾಗಿದೆ. ಆ ನ್ಯಾಯದಿಂದ ಎಂಬರ್ಥವನ್ನು 'ಅಂತರಾದ್ಯಧಿಕರಣನ್ಯಾಯೇನ' ಎಂಬ ಪದಕ್ಕೆ ವ್ಯಾಖ್ಯಾನಿಸುತ್ತಾರೆ. ಇವರ ಅಭಿಪ್ರಾಯವು ಸರಿಯೋ? ಅಲ್ಲವೋ? ಎಂಬುದನ್ನು ಯೋಚನೆ ಮಾಡಬೇಕು. ಏಕೆಂದರೆ 'ಶಾಸ್ತ್ರದೃಷ್ಟ್ಯಾ' ಎಂಬ ಸೂತ್ರದಲ್ಲಿಯೇ 'ಅಹಂ' ಶಬ್ದವು ವಿಷ್ಣುವಿನಲ್ಲಿ ಮುಖ್ಯವಾಗಿದೆಯೆಂದು ಸಿದ್ಧವಾಗಿದೆ. ಈ ಭಾಷ್ಯದಲ್ಲಿ ಅದನ್ನು ಕೇವಲ ಸ್ಮರಿಸಿಕೊಳ್ಳುತ್ತಿದ್ದಾರೆ. ಮತ್ತು 'ಅಹಂ' ಶಬ್ದಕ್ಕೆ ವಿಷ್ಣುವಿನಲ್ಲಿ ಮುಖ್ಯತ್ವವನ್ನು ಹೇಳಿದ ಮಾತ್ರದಿಂದ ಅಗ್ನಿಶಬ್ದಕ್ಕೆ ವಿಷ್ಣುವಿನಲ್ಲಿ ಮುಖ್ಯತ್ವವನ್ನು ಸಾಧಿಸಿದಂತಾಗುವುದಿಲ್ಲ. ಇನ್ನೂ ಕೆಲವು ಪುಸ್ತಕಗಳಲ್ಲಿ 'ಅಂತರಧಿಕರಣನ್ಯಾಯೇನ' ಎಂಬ ಪಾಠವಿದೆ. ಈ ಪಕ್ಷದಲ್ಲಂತೂ ನಾವು ಹೇಳಿದ ಅರ್ಥವೇ ಸಾಧುವೆಂದು ತಿಳಿಯುತ್ತದೆ.

प्रकाशः – तथात्व इति । लिङ्गनिरवकाशत्वेन श्रुतेर्ब्रह्मणि मुख्यत्व इत्यर्थः । तथा च निरवकाशाया श्रुत्या लिङ्गमेवाग्नौ सावकाशयितव्यमिति भावः ।

'तथात्वे' ಎಂದರೆ ಲಿಂಗವು ನಿರವಕಾಶವಾದ್ದರಿಂದ ಶ್ರುತಿಯು ಬ್ರಹ್ಮನಲ್ಲಿ ಮುಖ್ಯವಾಗಿ ಸಂಭವಿಸುವುದಾದರೆ ಎಂದರ್ಥ. ಆದ್ದರಿಂದ ನಿರವಕಾಶವಾದ ಶ್ರುತಿಯಬಲದಿಂದ ಲಿಂಗವನ್ನೇ ಅಗ್ನಿಯಲ್ಲಿ ಸಾವಕಾಶಮಾಡಬೇಕೆಂದು ಅಭಿಪ್ರಾಯ.

प्रकाशः – यद्यपि प्राक् समाख्यादिकमपि प्रकृतम् । तथाऽपि टीकायां ''लिङ्गस्य निरवकाशत्वे'' इति लिङ्गमात्रोक्तेःस्तदनुरोधेन वा, लिङ्गनिरवकाशत्वेन निरवकाशश्रुतिबाधो नेति सिद्धौ तादृशसमाख्यानादिना नेति कैमुत्यसिद्धत्वाद्वा, पूर्वत्र 'अन्तस्तद्धर्मोपदेशात्'' ''आकाशस्तल्लिङ्गात्'' ''अत एव प्राणः'' इत्यादौ सर्वत्र लिङ्गनिरवकाशत्वमाश्रित्य श्रुतेर्ब्रह्मणि मुख्यत्वोक्तेस्तत्सर्वाक्षेपाय तत्साधारण्योक्त्यर्थत्वाद्वा लिङ्गमात्रोक्तिः ।

प्रकाशः – तथा च वक्ष्यति – ''अतीतसर्वाधिकरणाक्षेपः'' इति । टीकायां लिङ्गमात्रोक्ताविदमेव बीजमित्याहुः ।

ಮತ್ತೇನೆಂದರೆ ಹಿಂದೆ ಸಾಮಾಖ್ಯಾದಿಗಳೂ ಸಹ ಪ್ರಕೃತವಾಗಿವೆ. ಆದರೂ ಗ್ರಂಥಕಾರರು ಲಿಂಗವನ್ನಷ್ಟೇ ಉಲ್ಲೇಖಿಸುತ್ತಿದ್ದಾರೆ. ಇದಕ್ಕೇನು ಕಾರಣ? ಎಂದರೆ ಟೀಕೆಯಲ್ಲಿ ಲಿಂಗವು ನಿರವಕಾಶವೆಂದು ಲಿಂಗವನ್ನಷ್ಟೇ ಉಲ್ಲೇಖಿಸಿರುವುದರಿಂದ ಅದಕ್ಕನುಸಾರಿಯಾಗಿ ಇಲ್ಲಿಯೂ ಸಹ ಗ್ರಂಥಕಾರರು ಲಿಂಗವನ್ನು ಮಾತ್ರ ಉಲ್ಲೇಖಿಸುತ್ತಿದ್ದಾರೆ. ಅಥವಾ ನಿರವಕಾಶವಾದ ಲಿಂಗದಿಂದಲೇ ನಿರವಕಾಶವಾದ ಶ್ರುತಿಗೆ ಬಾಧವು ಬರುವುದಿಲ್ಲವೆಂದು ಸಿದ್ಧವಾದ ಮೇಲೆ ನಿರವಕಾಶವಾದ ಸಮಾಖ್ಯಾ ಮೊದಲಾದ ಪ್ರಮಾಣಗಳಿಂದಲೂ ಸಹ ಬಾಧವು ಬರುವುದಿಲ್ಲವೆಂದು ಪ್ರತ್ಯೇಕ ಹೇಳಬೇಕೇನು ? ಎಂಬ ಕೈಮುತ್ಯನ್ಯಾಯದಿಂದ ಸಿದ್ಧವಾಗಿರುವುದರಿಂದ ಪ್ರತ್ಯೇಕವಾಗಿ ಅವುಗಳನ್ನು ಹೇಳಿರುವುದಿಲ್ಲ. ಅಥವಾ ಹಿಂದೆ 'ಅಂತಸ್ತದ್ಧರ್ಮೋಪದೇಶಾತ್' 'ಆಕಾಶಸ್ತಲ್ಲಿಂಗಾತ್' 'ಅತ ಏವ ಪ್ರಾಣಃ' ಇತ್ಯಾದಿ ಸೂತ್ರಗಳಲ್ಲೆಲ್ಲಾ ಲಿಂಗವು ನಿರವಕಾಶವಾಗಿದೆ ಎಂಬ ಪೂರ್ವಪಕ್ಷವನ್ನೇ ಆಶ್ರಯಿಸಿ ಬ್ರಹ್ಮನಲ್ಲಿ ಶ್ರುತಿಗೆ ಮುಖ್ಯಪ್ರತಿಪಾದ್ಯತ್ವವನ್ನು ಸಮರ್ಥಿಸಲಾಗಿದೆ. ಎಲ್ಲಾ ಅಧಿಕರಣಗಳಲ್ಲಿಯೂ ಲಿಂಗವೇ ಸಾಧಾರಣವಾಗಿರುವುದರಿಂದ ಇಲ್ಲಿಯೂ ಸಹ ಅದನ್ನೇ ಸ್ವೀಕರಿಸಿದ್ದಾರೆ. ಆದ್ದರಿಂದ ಈ ಎಲ್ಲ ಅಧಿಕರಣಗಳನ್ನು ಆಕ್ಷೇಪಿಸುವುದಕ್ಕೋಸ್ಕರ, ಅಥವಾ ಅವುಗಳಲ್ಲಿ ಸಾಧಾರಣವಾದ ಅಂಶವನ್ನು ಹೇಳುವುದಕ್ಕೋಸ್ಕರ ಕೇವಲ ಲಿಂಗವನ್ನು ಮಾತ್ರ ಹೇಳಿದ್ದು ಆದ್ದರಿಂದಲೇ ಮುಂದೆ 'ಅತೀತಸರ್ವಾಧಿಕರಣಾಕ್ಷೇಪಃ' ಎಂದು ಹೇಳುತ್ತಾರೆ. ಮೇಲೆ ಹೇಳಿದ ಕಾರಣಗಳಿರುವುದರಿಂದಲೇ ಟೀಕೆಯಲ್ಲಿಯೂ ಕೇವಲ ಲಿಂಗವನ್ನು ಸ್ವೀಕರಿಸಿದ್ದಾರೆ.

ಪರಿಪೂರ್ಣಚಂದ್ರಿಕಾ

ಪ್ರಕಾಶಃ – ''ನ ಹಿ ವೈಶ್ವಾನರಶ್ರುತೇರಗ್ನ್ಯಾದಿವಿಷಯತ್ವಾಭಾವೇ ವ್ಯವಹಾರಸ್ಯ ಗತ್ಯನ್ತರಮಸ್ತಿ'' ಇತಿ ಟೀಕಾಂ ವಿವರೀತುಂ ಸಮ್ಭಾವಿತಗತ್ಯನ್ತರಮಾಶಙ್ಕ್ಯ ನಿರಾಹ – ನಚೇತಿ ।

'ನ ಹಿ ವೈಶ್ವಾನರಶ್ರುತೇರಗ್ನ್ಯಾದಿವಿಷಯತ್ವಾಭಾವೇ ವ್ಯವಹಾರಸ್ಯ ಗತ್ಯಂತರಮಸ್ತಿ' ವೈಶ್ವಾನರ ಶ್ರುತಿಯು ಅಗ್ನ್ಯಾದಿಗಳನ್ನು ವಿಷಯೀಕರಿಸದಿದ್ದರೆ ವ್ಯವಹಾರಕ್ಕೆ ಬೇರೆ ಗತಿಯಿರುವುದಿಲ್ಲ ಎಂಬ ಟೀಕೆಯನ್ನು ವಿಸ್ತರಿಸುವುದಕ್ಕಾಗಿ ಗತ್ಯಂತರವನ್ನು ಆಕ್ಷೇಪಿಸಿ ಉತ್ತರಿಸುತ್ತಿದ್ದಾರೆ 'ನಚ' ಇತ್ಯಾದಿ ಗ್ರಂಥದಿಂದ.

ಪ್ರಕಾಶಃ – ಚತುರ್ಥಪಾದೇ ''ಸಮಾಕರ್ಷಾತ್'' ಇತ್ಯಾಧಿಕರಣೇ ಶಬ್ದಾನಾಂ ವಿಷ್ಣಾವೇವ ಮುಖ್ಯತ್ವೇನಾನ್ಯತ್ರ ಅಮುಖ್ಯತ್ವಾಪತ್ತ್ಯಾ ಮಾಣವಕಾದಾವಗ್ನಿಶಬ್ದಪ್ರಸಿದ್ಧ್ಯದರ್ಶನೇನಾನ್ಯತ್ರ-ಪ್ರಸಿದ್ಧ್ಯಯೋಗಾತ್, ವಿಷ್ಣಾವೇವ ಪ್ರಸಿದ್ಧ್ಯಾಪತ್ತೇಶ್ಚೇತಿ ಶಙ್ಕಾಯಾಂ ಲೋಕಸ್ಯ ಜಗತ್ಯೇವ ಶಬ್ದ-ಯವಹಾರೇಣ ತತ್ರೈವ ತಚ್ಛ್ರೋತೄಣಾಂ ವ್ಯುತ್ಪತ್ತೇರ್ವಿಷ್ಣೌ ತಥಾ ಬಹುಲವ್ಯವಹಾರಾಭಾವೇನ ವ್ಯುತ್ಪತ್ತ್ಯಭಾವಾಚ್ಚ ಜಗತಿ ಪ್ರಸಿದ್ಧೇಃ 'ಅಗ್ನಿರ್ಮಾಣವಕಃ' ಇತಿ ವ್ಯವಹಾರಾದನವಗತಾಗ್ನಿಶಬ್ದಮುಖ್ಯಾರ್ಥಸ್ಯ ಮಾಣವಕೇ ಅಗ್ನಿಶಬ್ದವ್ಯುತ್ಪತ್ತ್ಯಾ ತಸ್ಯ ತತ್ರೈವ ಪ್ರಸಿದ್ಧಿವದನವಗತಭಗವದ್ರೂಪಮುಖ್ಯಾರ್ಥಸ್ಯ ಭಗವದ್-ಜ್ಞಾನಮೂಲತ್ವೇನ ಅನ್ಯಥೋಪಪತ್ತೇರಿತಿ ''ಜಗದ್ವಾಚಿತ್ವಾತ್'' ಇತಿ ಗುಣಸೂತ್ರೋಕ್ತ್ಯಾಯೇನೇತ್ಯರ್ಥಃ ।

ಪ್ರಥಮಾಧ್ಯಾಯದ ನಾಲ್ಕನೆಯ ಪಾದದಲ್ಲಿರುವ ಬರುವ 'ಸಮಾಕರ್ಷಾತ್' ಎಂಬ ಅಧಿಕರಣದಲ್ಲಿ ಹೀಗೆ ಹೇಳಿದ್ದಾರೆ. ಸಕಲ ಶಬ್ದಗಳೆಲ್ಲವೂ ವಿಷ್ಣುವನ್ನೇ ಪ್ರತಿಪಾದನೆ ಮಾಡುವುದಾದರೆ ಉಳಿದ ಪದಾರ್ಥಗಳಲ್ಲಿ ಅಮುಖ್ಯವಾಗಿರುತ್ತದೆಂದು ಹೇಳಿದಂತಾಯಿತು. ಆಗ ಮಾಣವಕಾದಿಗಳಲ್ಲಿ ಅಗ್ನಿಶಬ್ದವನ್ನು ಅಮುಖ್ಯವಾಗಿ ಪ್ರಯೋಗಿಸುವುದರಿಂದ ಹೇಗೆ ಅಗ್ನಿಶಬ್ದವು ಮಾಣವಕಾದಿಗಳಲ್ಲಿ ಪ್ರಸಿದ್ಧವಾಗಿಲ್ಲವೋ? ಆದರಂತೆ ಅಮುಖ್ಯವಾದ ಸಕಲಪದಾರ್ಥಗಳಲ್ಲಿರುವ ಶಬ್ದಗಳೆಲ್ಲವೂ ಅನ್ಯತ್ರಪ್ರಸಿದ್ಧವಾಗದೇ ಇರಬೇಕಾದೀತು. ಮತ್ತು ವಿಷ್ಣುವಿನಲ್ಲಿ ಮುಖ್ಯವಾಗಿರುವುದರಿಂದ ಅವನಲ್ಲಿ ಮಾತ್ರವೇ ಶಬ್ದಗಳು ಪ್ರಸಿದ್ಧವಾಗಬೇಕಾದೀತು. ಹೀಗೆ ಆಕ್ಷೇಪ ಮಾಡಿಕೊಂಡು ಎಲ್ಲರೂ ಶಬ್ದಗಳನ್ನು ಜಗತ್ತಿನಲ್ಲೇ ವ್ಯವಹಾರ ಮಾಡುತ್ತಿದ್ದಾರೆ. ಆ ವ್ಯವಹಾರಕ್ಕೆ ಅನುಸಾರಿಯಾಗಿ ವ್ಯುತ್ಪತ್ತಿಯನ್ನೂ ಸಹ ಜಗತ್ತಿನಲ್ಲಿಯೇ ಹೇಳಿರುತ್ತಾರೆ. ಆ ಶಬ್ದವನ್ನು ಶ್ರವಣ ಮಾಡಿದವರಿಗೂ ಸಹ ಜಗತ್ತಿನಲ್ಲೇ ಆ ಶಬ್ದದ ವ್ಯುತ್ಪತ್ತಿ ಬರುತ್ತಿದೆ. ಆದರೆ ವಿಷ್ಣುವಿನಲ್ಲಿ ಹಾಗೆ ಬಹುಲವಾದ ವ್ಯವಹಾರವಿಲ್ಲದ ಕಾರಣ ವಿಷ್ಣುವಿನಲ್ಲಿ ಶಬ್ದಗಳ ವ್ಯುತ್ಪತ್ತಿಯನ್ನು ಲೌಕಿಕರು ತಿಳಿದಿರುವುದಿಲ್ಲ. ಯಾವರೀತಿಯಾಗಿ 'ಅಗ್ನಿರ್ಮಾಣವಕಃ' ಎಂಬ ವ್ಯವಹಾರದಿಂದ ಮಾಣವಕನಲ್ಲಷ್ಟೇ ಅಗ್ನಿಶಬ್ದ ಪ್ರಯೋಗವನ್ನು ತಿಳಿದು ಅಗ್ನಿಶಬ್ದದ ಮುಖ್ಯಾರ್ಥವನ್ನು ಯಾರು ತಿಳಿದಿರುವುದಿಲ್ಲವೋ, ಅವನಿಗೆ ಅಗ್ನಿಶಬ್ದವನ್ನು ಕೇಳಿದಾಗ ಮಾಣವಕನ ಜ್ಞಾನವೇ ಬರುತ್ತದೆ. ಅಗ್ನಿಶಬ್ದವು ಅವನಿಗೆ ಮಾಣವಕನಲ್ಲಿಯೇ ಪ್ರಸಿದ್ಧವಾಗಿರುತ್ತದೆ. ಆದರಂತೆ ಲೌಕಿಕರಿಗೆ ಭಗವಂತನ ಅರಿವು ಇಲ್ಲದ ಕಾರಣ ಸಕಲಶಬ್ದಗಳು ಅವನನ್ನೇ ಪ್ರತಿಪಾದಿಸುತ್ತವೆಂಬ ವಿಚಾರವು ತಿಳಿದಿರುವುದಿಲ್ಲ. ಭಗವಂತನ ಅಜ್ಞಾನದ ಮೂಲಕವಾಗಿ ಸಕಲಶಬ್ದಗಳನ್ನು ಭಗವಂತನಲ್ಲಿ ವ್ಯವಹರಿಸದೇ ಲೋಕದಲ್ಲಿಯೇ ವ್ಯವಹರಿಸುತ್ತಾರೆ. ಈ ವಿಷಯವನ್ನು 'ಜಗದ್ವಾಚಿತ್ವಾತ್' ಎಂಬ ಗುಣಸೂತ್ರದಲ್ಲಿ ಪ್ರತಿಪಾದಿಸಿದ್ದಾರೆ.

प्रकाशः – तथात्व इति । लिङ्गनिरवकाशत्वेन श्रुतेर्ब्रह्मणि मुख्यत्व इत्यर्थः । तथा च निरवकाशया श्रुत्या लिङ्गमेवाग्नौ सावकाशयितव्यमिति भावः ।

'तथात्वे' ಎಂದರೆ ಲಿಂಗವು ನಿರವಕಾಶವಾದ್ದರಿಂದ ಶ್ರುತಿಯು ಬ್ರಹ್ಮನಲ್ಲಿ ಮುಖ್ಯವಾಗಿ ಸಂಭವಿಸುವುದಾದರೆ ಎಂದರ್ಥ. ಆದ್ದರಿಂದ ನಿರವಕಾಶವಾದ ಶ್ರುತಿಯಬಲದಿಂದ ಲಿಂಗವನ್ನೇ ಅಗ್ನಿಯಲ್ಲಿ ಸಾವಕಾಶಮಾಡಬೇಕೆಂದು ಅಭಿಪ್ರಾಯ.

प्रकाशः – यद्यपि प्राक् समाख्यादिकमपि प्रकृतम् । तथाऽपि टीकायां ''लिङ्गस्य निरवकाशत्वे'' इति लिङ्गमात्रोक्तेःस्तदनुरोधेन वा, लिङ्गनिरवकाशत्वेन निरवकाशश्रुतिबाधो नेति सिद्धौ तादृशसमाख्यानादिना नेति कैमुत्यसिद्धत्वाद्वा, पूर्वत्र 'अन्तस्तद्धर्मोपदेशात्'' ''आकाशस्तल्लिङ्गात्'' ''अत एव प्राणः'' इत्यादौ सर्वत्र लिङ्गनिरवकाशत्वमाश्रित्य श्रुतेर्ब्रह्मणि मुख्यत्वोक्तेस्तत्सर्वाक्षेपाय तत्साधारण्योक्त्यर्थत्वाद्वा लिङ्गमात्रोक्तिः ।

प्रकाशः – तथा च वक्ष्यति – ''अतीतसर्वाधिकरणाक्षेपः'' इति । टीकायां लिङ्गमात्रोक्ताविदमेव बीजमित्याहुः ।

ಮತ್ತೇನೆಂದರೆ ಹಿಂದೆ ಸಾಮಾಖ್ಯಾದಿಗಳೂ ಸಹ ಪ್ರಕೃತವಾಗಿವೆ. ಆದರೂ ಗ್ರಂಥಕಾರರು ಲಿಂಗವನ್ನಷ್ಟೇ ಉಲ್ಲೇಖಿಸುತ್ತಿದ್ದಾರೆ. ಇದಕ್ಕೇನು ಕಾರಣ? ಎಂದರೆ ಟೀಕೆಯಲ್ಲಿ ಲಿಂಗವು ನಿರವಕಾಶವೆಂದು ಲಿಂಗವನ್ನಷ್ಟೇ ಉಲ್ಲೇಖಿಸಿರುವುದರಿಂದ ಅದಕ್ಕನುಸಾರಿಯಾಗಿ ಇಲ್ಲಿಯೂ ಸಹ ಗ್ರಂಥಕಾರರು ಲಿಂಗವನ್ನು ಮಾತ್ರ ಉಲ್ಲೇಖಿಸುತ್ತಿದ್ದಾರೆ. ಅಥವಾ ನಿರವಕಾಶವಾದ ಲಿಂಗದಿಂದಲೇ ನಿರವಕಾಶವಾದ ಶ್ರುತಿಗೆ ಬಾಧವು ಬರುವುದಿಲ್ಲವೆಂದು ಸಿದ್ಧವಾದ ಮೇಲೆ ನಿರವಕಾಶವಾದ ಸಮಾಖ್ಯಾ ಮೊದಲಾದ ಪ್ರಮಾಣಗಳಿಂದಲೂ ಸಹ ಬಾಧವು ಬರುವುದಿಲ್ಲವೆಂದು ಪ್ರತ್ಯೇಕ ಹೇಳಬೇಕೇನು ? ಎಂಬ ಕೈಮುತ್ಯನ್ಯಾಯದಿಂದ ಸಿದ್ಧವಾಗಿರುವುದರಿಂದ ಪ್ರತ್ಯೇಕವಾಗಿ ಅವುಗಳನ್ನು ಹೇಳಿರುವುದಿಲ್ಲ. ಅಥವಾ ಹಿಂದೆ 'ಅಂತಸ್ತದ್ಧರ್ಮೋಪದೇಶಾತ್' 'ಆಕಾಶಸ್ತಲ್ಲಿಂಗಾತ್' 'ಅತ ಏವ ಪ್ರಾಣಃ' ಇತ್ಯಾದಿ ಸೂತ್ರಗಳಲೆಲ್ಲಾ ಲಿಂಗವು ನಿರವಕಾಶವಾಗಿದೆ ಎಂಬ ಪೂರ್ವಪಕ್ಷವನ್ನೇ ಆಶ್ರಯಿಸಿ ಬ್ರಹ್ಮನಲ್ಲಿ ಶ್ರುತಿಗೆ ಮುಖ್ಯಪ್ರತಿಪಾದ್ಯತ್ವವನ್ನು ಸಮರ್ಥಿಸಲಾಗಿದೆ. ಎಲ್ಲಾ ಅಧಿಕರಣಗಳಲ್ಲಿಯೂ ಲಿಂಗವೇ ಸಾಧಾರಣವಾಗಿರುವುದರಿಂದ ಇಲ್ಲಿಯೂ ಸಹ ಅದನ್ನೇ ಸ್ವೀಕರಿಸಿದ್ದಾರೆ. ಆದ್ದರಿಂದ ಈ ಎಲ್ಲ ಅಧಿಕರಣಗಳನ್ನು ಆಕ್ಷೇಪಿಸುವುದಕ್ಕೋಸ್ಕರ, ಅಥವಾ ಅವುಗಳಲ್ಲಿ ಸಾಧಾರಣವಾದ ಅಂಶವನ್ನು ಹೇಳುವುದಕ್ಕೋಸ್ಕರ ಕೇವಲ ಲಿಂಗವನ್ನು ಮಾತ್ರ ಹೇಳಿದ್ದು ಆದ್ದರಿಂದಲೇ ಮುಂದೆ 'ಅತೀತಸರ್ವಾಧಿಕರಣಾಕ್ಷೇಪಃ' ಎಂದು ಹೇಳುತ್ತಾರೆ. ಮೇಲೆ ಹೇಳಿದ ಕಾರಣಗಳಿರುವುದರಿಂದಲೇ ಟೀಕೆಯಲ್ಲಿಯೂ ಕೇವಲ ಲಿಂಗವನ್ನು ಸ್ವೀಕರಿಸಿದ್ದಾರೆ.

ಪರಿಪೂರ್ಣಚಂದ್ರಿಕಾ

ಪ್ರಕಾಶಃ – ''ನ ಹಿ ವೈಶ್ವಾನರಶ್ರುತೇರಗ್ನ್ಯಾದಿವಿಷಯತ್ವಾಭಾವೇ ವ್ಯವಹಾರಸ್ಯ ಗತ್ಯನ್ತರಮಸ್ತಿ'' ಇತಿ ಟೀಕಾಂ ವಿವರೀತುಂ ಸಮ್ಭಾವಿತಗತ್ಯನ್ತರಮಾಶಙ್ಕ್ಯ ನಿರಾಹ – ನಚೇತಿ ।

'ನ ಹಿ ವೈಶ್ವಾನರಶ್ರುತೇರಗ್ನ್ಯಾದಿವಿಷಯತ್ವಾಭಾವೇ ವ್ಯವಹಾರಸ್ಯ ಗತ್ಯಂತರಮಸ್ತಿ' ವೈಶ್ವಾನರ ಶ್ರುತಿಯು ಅಗ್ನ್ಯಾದಿಗಳನ್ನು ವಿಷಯೀಕರಿಸದಿದ್ದರೆ ವ್ಯವಹಾರಕ್ಕೆ ಬೇರೆ ಗತಿಯಿರುವುದಿಲ್ಲ ಎಂಬ ಟೀಕೆಯನ್ನು ವಿಸ್ತರಿಸುವುದಕ್ಕಾಗಿ ಗತ್ಯಂತರವನ್ನು ಆಕ್ಷೇಪಿಸಿ ಉತ್ತರಿಸುತ್ತಿದ್ದಾರೆ 'ನಚ' ಇತ್ಯಾದಿ ಗ್ರಂಥದಿಂದ.

ಪ್ರಕಾಶಃ – ಚತುರ್ಥಪಾದೇ ''ಸಮಾಕರ್ಷಾತ್'' ಇತ್ಯಾಧಿಕರಣೇ ಶಬ್ದಾನಾಂ ವಿಷ್ಣಾವೇವ ಮುಖ್ಯತ್ವೇನಾನ್ಯತ್ರ ಅಮುಖ್ಯತ್ವಾಪತ್ತ್ಯಾ ಮಾಣವಕಾದಾವಗ್ನಿಆದಿಶಬ್ದಪ್ರಸಿದ್ಧ್ಯದರ್ಶನೇನಾನ್ಯತ್ರ-ಪ್ರಸಿದ್ಧ್ಯಯೋಗಾತ್, ವಿಷ್ಣಾವೇವ ಪ್ರಸಿದ್ಧ್ಯಾಪತ್ತೇಶ್ಚೇತಿ ಶಙ್ಕಾಯಾಂ ಲೋಕಸ್ಯ ಜಗತ್ಯೇವ ಶಬ್ದ ವ್ಯವಹಾರೇಣ ತತ್ರೈವ ತಚ್ಛ್ರೋತೄಣಾಂ ವ್ಯುತ್ಪತ್ತೇರ್ವಿಷ್ಣೌ ತಥಾ ಬಹುಲವ್ಯವಹಾರಾಭಾವೇನ ವ್ಯುತ್ಪತ್ತ್ಯಭಾವಾಚ್ಚ ಜಗತಿ ಪ್ರಸಿದ್ಧೇಃ 'ಅಗ್ನಿರ್ಮಾಣವಕಃ' ಇತಿ ವ್ಯವಹಾರಾದನವಗತಾಗ್ನಿಶಬ್ದಮುಖ್ಯಾರ್ಥಸ್ಯ ಮಾಣವಕೇ ಅಗ್ನಿಶಬ್ದವ್ಯುತ್ಪತ್ತ್ಯಾ ತಸ್ಯ ತತ್ರೈವ ಪ್ರಸಿದ್ಧಿವದನವಗತಭಗವದ್ರೂಪಮುಖ್ಯಾರ್ಥಸ್ಯ ಭಗವದ-ಜ್ಞಾನಮೂಲತ್ವೇನ ಅನ್ಯಥೋಪಪತ್ತೇರಿತಿ ''ಜಗದ್ವಾಚಿತ್ವಾತ್'' ಇತಿ ಗುಣಸೂತ್ರೋಕ್ತನ್ಯಾಯೇನೇತ್ಯರ್ಥಃ ।

ಪ್ರಥಮಾಧ್ಯಾಯದ ನಾಲ್ಕನೆಯ ಪಾದದಲ್ಲಿರುವ ಬರುವ 'ಸಮಾಕರ್ಷಾತ್' ಎಂಬ ಅಧಿಕರಣದಲ್ಲಿ ಹೀಗೆ ಹೇಳಿದ್ದಾರೆ. ಸಕಲ ಶಬ್ದಗಳೆಲ್ಲವೂ ವಿಷ್ಣುವಿನ್ನೇ ಪ್ರತಿಪಾದನೆ ಮಾಡುವುದಾದರೆ ಉಳಿದ ಪದಾರ್ಥಗಳಲ್ಲಿ ಅಮುಖ್ಯವಾಗಿರುತ್ತದೆಂದು ಹೇಳಿದಂತಾಯಿತು. ಆವಾಗ ಮಾಣವಕಾದಿಗಳಲ್ಲಿ ಅಗ್ನಿಶಬ್ದವನ್ನು ಅಮುಖ್ಯವಾಗಿ ಪ್ರಯೋಗಿಸುವುದರಿಂದ ಹೇಗೆ ಅಗ್ನಿಶಬ್ದವು ಮಾಣವಕಾದಿಗಳಲ್ಲಿ ಪ್ರಸಿದ್ಧವಾಗಿಲ್ಲವೋ? ಆದರಂತೆ ಅಮುಖ್ಯವಾದ ಸಕಲಪದಾರ್ಥಗಳಲ್ಲಿರುವ ಶಬ್ದಗಳೆಲ್ಲವೂ ಅನ್ಯತ್ರಪ್ರಸಿದ್ಧವಾಗದೇ ಇರಬೇಕಾದೀತು. ಮತ್ತು ವಿಷ್ಣುವಿನಲ್ಲಿ ಮುಖ್ಯವಾಗಿರುವುದರಿಂದ ಅವನಲ್ಲಿ ಮಾತ್ರವೇ ಶಬ್ದಗಳು ಪ್ರಸಿದ್ಧವಾಗಬೇಕಾದೀತು. ಹೀಗೆ ಆಕ್ಷೇಪ ಮಾಡಿಕೊಂಡು ಎಲ್ಲರೂ ಶಬ್ದಗಳನ್ನು ಜಗತ್ತಿನಲ್ಲೇ ವ್ಯವಹಾರ ಮಾಡುತ್ತಿದ್ದಾರೆ. ಆ ವ್ಯವಹಾರಕ್ಕೆ ಅನುಸಾರಿಯಾಗಿ ವ್ಯುತ್ಪತ್ತಿಯನ್ನೂ ಸಹ ಜಗತ್ತಿನಲ್ಲಿಯೇ ಹೇಳಿರುತ್ತಾರೆ. ಆ ಶಬ್ದವನ್ನು ಶ್ರವಣ ಮಾಡಿದವರಿಗೂ ಸಹ ಜಗತ್ತಿನಲ್ಲೇ ಆ ಶಬ್ದದ ವ್ಯುತ್ಪತ್ತಿ ಬರುತ್ತಿದೆ. ಆದರೆ ವಿಷ್ಣುವಿನಲ್ಲಿ ಹಾಗೆ ಬಹುಲವಾದ ವ್ಯವಹಾರವಿಲ್ಲದ ಕಾರಣ ವಿಷ್ಣುವಿನಲ್ಲಿ ಶಬ್ದಗಳ ವ್ಯುತ್ಪತ್ತಿಯನ್ನು ಲೌಕಿಕರು ತಿಳಿದಿರುವುದಿಲ್ಲ. ಯಾವರೀತಿಯಾಗಿ 'ಅಗ್ನಿರ್ಮಾಣವಕಃ' ಎಂಬ ವ್ಯವಹಾರದಿಂದ ಮಾಣವಕನಲ್ಲಷ್ಟೇ ಅಗ್ನಿಶಬ್ದದ ಪ್ರಯೋಗವನ್ನು ತಿಳಿದು ಅಗ್ನಿಶಬ್ದದ ಮುಖ್ಯಾರ್ಥವನ್ನು ಯಾರು ತಿಳಿದಿರುವುದಿಲ್ಲವೋ, ಅವನಿಗೆ ಅಗ್ನಿಶಬ್ದವನ್ನು ಕೇಳಿದಾಗ ಮಾಣವಕನ ಜ್ಞಾನವೇ ಬರುತ್ತದೆ. ಅಗ್ನಿಶಬ್ದವು ಅವನಿಗೆ ಮಾಣವಕನಲ್ಲಿಯೇ ಪ್ರಸಿದ್ಧವಾಗಿರುತ್ತದೆ. ಆದರಂತೆ ಲೌಕಿಕರಿಗೆ ಭಗವಂತನ ಅರಿವು ಇಲ್ಲದ ಕಾರಣ ಸಕಲಶಬ್ದಗಳು ಅವನನ್ನೇ ಪ್ರತಿಪಾದಿಸುತ್ತವೆಂಬ ವಿಚಾರವು ತಿಳಿದಿರುವುದಿಲ್ಲ. ಭಗವಂತನ ಅಜ್ಞಾನದ ಮೂಲಕವಾಗಿ ಸಕಲಶಬ್ದಗಳನ್ನು ಭಗವಂತನಲ್ಲಿ ವ್ಯವಹರಿಸದೇ ಲೋಕದಲ್ಲಿಯೇ ವ್ಯವಹರಿಸುತ್ತಾರೆ. ಈ ವಿಷಯವನ್ನು 'ಜಗದ್ವಾಚಿತ್ವಾತ್' ಎಂಬ ಗುಣಸೂತ್ರದಲ್ಲಿ ಪ್ರತಿಪಾದಿಸಿದ್ದಾರೆ.

ಪ್ರಕಾಶಃ – ''साक्षादप्यविरोधम्'' इति सूत्रव्यावर्त्यमाह – ब्रह्मणीति । एतेनात्र नयेऽन्यत्र व्यवहारे ''साक्षात्'' इति सूत्रेणोक्ते सति, तस्य गत्युक्तिस्तत्र युज्यते । स एवायमयुक्त इत्याक्षिप्यत इति तेन गतार्थत्वमपि नेति दर्शितम् । तथा चानुवर्त्तते ''समाकर्षात्'' इत्यत्र टीकायां ''सर्वशब्दानां परमात्मैकवाचित्वे अन्यत्र व्यवहाराभावात्'' इति ।

'ಸಾಕ್ಷಾದಪ್ಯವಿರೋಧಂ ಜೈಮಿನಿಃ' ಎಂಬ ಸೂತ್ರದಿಂದ ವ್ಯಾವರ್ತ್ಯವಾದ ಪೂರ್ವಪಕ್ಷವನ್ನು 'ಬ್ರಹ್ಮಣಿ' ಎಂಬ ವಾಕ್ಯದಿಂದ ತೋರಿಸುತ್ತಿದ್ದಾರೆ. ಹೀಗೆ ಹೇಳಿದ್ದರಿಂದ ಪುನರುಕ್ತಿದೋಷವನ್ನು ಪರಿಹರಿಸಿದಂತಾಯಿತು. 'ಜಗದ್ವಾಚಿತ್ವಾತ್' ಎಂಬ ಸೂತ್ರದಲ್ಲಿ ಅನ್ಯತ್ರವ್ಯವಹಾರಕ್ಕೆ ಗತಿಯನ್ನು ಹೇಳುತ್ತಾರೆ. ಆದೇ ವಿಷಯವನ್ನು 'ಸಾಕ್ಷಾದಪ್ಯವಿರೋಧಮ್' ಎಂಬ ಸೂತ್ರವೂ ಸಹ ಪ್ರತಿಪಾದನೆ ಮಾಡುತ್ತಿರುವುದರಿಂದ ಜಗದ್ವಾಚಿತ್ವ ಸೂತ್ರದಿಂದ ಇದಕ್ಕೆ ಪುನರುಕ್ತಿ ದೋಷವು ಬರುತ್ತದಲ್ಲವೇ? ಎಂದು ಪ್ರಶ್ನಿಸಬಾರದು. ಏಕೆಂದರೆ ಈ ಸೂತ್ರದಲ್ಲಿ ಭಗವಂತನನ್ನು ಪ್ರತಿಪಾದಿಸುವ ಶಬ್ದವನ್ನು ಬೇರೆಕಡೆ ವ್ಯವಹರಿಸಬಹುದೆಂದಷ್ಟೇ ಹೇಳುತ್ತಾರೆ. ಇದು ಹೇಗೆ ಕೂಡುತ್ತದೆ? ಎಂಬ ಪ್ರಶ್ನೆಗೆ 'ಜಗದ್ವಾಚಿತ್ವಾತ್' ಎಂಬ ಸೂತ್ರದಲ್ಲಿ ಮುಂದೆ ಉತ್ತರಿಸುತ್ತಾರೆ. ಅನ್ಯತ್ರ ವ್ಯವಹಾರವೇ ಅಯುಕ್ತವಾಗಿವೆ ಎಂಬ ಆಕ್ಷೇಪವನ್ನು ಈ ಸೂತ್ರದಲ್ಲಿ ಮಾಡುತ್ತಿರುವುದರಿಂದ ಆದರಿಂದ ಪುನರುಕ್ತಿದೋಷವನ್ನು ಹೇಳಲಾಗದು. ಈ ಸೂತ್ರದ ವಿಷಯವನ್ನು ಪ್ರತಿಪಾದಿಸಿದರೆ ಮಾತ್ರ ಆ ಸೂತ್ರವು ಹೊರಡಲು ಸಾಧ್ಯ. ಆದ್ದರಿಂದಲೇ ಸಮಾಕರ್ಷಾಧಿಕರಣದ ಟೀಕೆಯಲ್ಲಿ 'सर्वशब्दानां ಪರಮಾತ್ಮೈಕವಾಚಿತ್ವೇ ಅನ್ಯತ್ರ ವ್ಯವಹಾರಾಭಾವಾತ್' ಸಕಲಶಬ್ದಗಳು ಪರಮಾತ್ಮನನ್ನೇ ಪ್ರತಿಪಾದಿಸುವುದಾದರೆ ಲೋಕದಲ್ಲಿ ವ್ಯವಹಾರವನ್ನೇ ಮಾಡಲು ಸಾಧ್ಯವಿಲ್ಲ ಎಂದು ಆಕ್ಷೇಪ ಮಾಡಿದ್ದಾರೆ.

ಪ್ರಕಾಶಃ – ''साक्षात्'' इति सूत्रव्यावर्त्यम् अन्यत्र व्यवहारायोगमाशङ्कते – **यदि चेति** । ''आनुमानिकमप्येकेषामिति चेन्न शरीररूपक'' इति नये अव्यक्तादिशब्दवाच्यं विष्णुरन्यद्वेति संशये, अव्यक्तादिशब्दानां प्रधानादावेव प्रसिद्धेः, परमात्मैकवाचित्वे प्रधानादौ तद्व्यवहाराभावापातात्, अवाचकत्वेऽप्यनभिज्ञानादिना व्यवहारे च अव्यवस्थापातात् अन्यदिति प्राप्ते, परमात्मतन्त्रत्वेन शरीरसमे प्रधानादौ तत्तच्छब्दवाच्यस्य परमात्मनो विन्यस्ततया तत्सम्बन्धेन तत्रापि शब्दप्रवृत्त्युपपत्तेः, प्रधानादितत्तद्वस्तुविशिष्टस्यैव विष्णोरव्यक्तादि-शब्दवाच्यत्वस्वीकारेण तत्तच्छब्दमुख्यार्थेश्वरसम्बन्धस्य तत्र तत्र व्यवस्थिततया अन्यत्र व्यवहाराव्यवस्थानापत्तेः, विष्णुरेवाव्यक्तादिशब्दमुख्यार्थ इति चतुर्थपादे वक्ष्यमाणन्यायेनेत्यर्थः ।

'ಸಾಕ್ಷಾತ್' ಎಂಬ ಸೂತ್ರದಿಂದ ವ್ಯಾವರ್ತ್ಯವಾದ ಅನ್ಯತ್ರ ವ್ಯವಹಾರವು ಹೇಗೆ ಕೂಡುತ್ತದೆ ? ಎಂಬ ಆಕ್ಷೇಪವನ್ನು 'ಯದಿ ಚ' ಎಂಬ ಗ್ರಂಥದಿಂದ ತೋರಿಸುತ್ತಿದ್ದಾರೆ.

'ಆನುಮಾನಿಕಮಪ್ಯೇಕೇಷಾಮಿತಿ ಚೇನ್ನ ಶರೀರರೂಪಕವಿನ್ಯಸ್ತಗೃಹೀತೇರ್ದರ್ಶಯತೀತಿಚ' ಎಂಬ ಸೂತ್ರದಲ್ಲಿ ಹೀಗೆ ಹೇಳಿದ್ದಾರೆ. ಅವ್ಯಕ್ತಾದಿಶಬ್ದಗಳು ವಿಷ್ಣುವನ್ನು ಪ್ರತಿಪಾದಿಸುತ್ತವೋ, ಅಥವಾ ಪ್ರಕೃತ್ಯಾದಿಗಳನ್ನೋ ಎಂದು ಸಂಶಯ. ಪ್ರಕೃತ್ಯಾದಿಗಳಲ್ಲಿ ಪ್ರಸಿದ್ಧವಾಗಿರುವುದರಿಂದ ಅವ್ಯಕ್ತಾದಿಶಬ್ದಗಳು ವಿಷ್ಣುವನ್ನು ಪ್ರತಿಪಾದಿಸಲು ಸಾಧ್ಯವಿಲ್ಲ. ಎಲ್ಲಾ ಶಬ್ದಗಳು ಅವನೊಬ್ಬನನ್ನೇ ಪ್ರತಿಪಾದಿಸುವುದಾದರೆ ಪ್ರಕೃತ್ಯಾದಿಗಳಲ್ಲಿ ವ್ಯವಹಾರವನ್ನೇ ಮಾಡದೇ ಇರಬೇಕಾದ ಪ್ರಸಂಗ ಬರುತ್ತದೆ. ಮತ್ತು ಅವ್ಯಕ್ತಾದಿಶಬ್ದಗಳು ಪ್ರಧಾನಕ್ಕೆ ವಾಚಕವಾಗದಿದ್ದರೆ ಅಜ್ಞಾನದಿಂದ ವ್ಯವಹಾರವನ್ನು ಮಾಡಿದಂತಾಯಿತು. ಆವಾಗ ಘಟಶಬ್ದದಿಂದ ಪಟವನ್ನು, ಪಟಶಬ್ದದಿಂದ ಘಟವನ್ನು ವ್ಯವಹಾರ ಮಾಡಬೇಕಾಗುತ್ತದೆ. ಹೀಗೆ ಯಾವಶಬ್ದದಿಂದ ಏನನ್ನು ಪ್ರತಿಪಾದಿಸಬೇಕೆಂಬ ವ್ಯವಸ್ಥೆಯನ್ನೇ ಮಾಡಲಾಗದು. ಇಷ್ಟು ಪೂರ್ವಪಕ್ಷ.

ಸಿದ್ಧಾಂತ ಹೀಗಿದೆ - ಪ್ರಧಾನಾದಿಗಳು ಪರಮಾತ್ಮನಿಂದ ನಿಯಮ್ಯವಾಗಿವೆ. ಆದ್ದರಿಂದ ಅವನಿಗೆ ಶರೀರದಂತಿದೆ. ಆದ್ದರಿಂದಲೇ ಪ್ರಕೃತ್ಯಾದಿಶಬ್ದಗಳಿಂದ ಪ್ರತಿಪಾದ್ಯನಾದ ಪರಮಾತ್ಮನು ಪ್ರಧಾನಾದಿಗಳಲ್ಲಿ ನೆಲೆಸಿದ್ದರಿಂದ ಅವನ ಸಂಬಂಧದಿಂದ ಶಬ್ದಗಳು ಪ್ರಧಾನಾದಿಗಳನ್ನು ಪ್ರತಿಪಾದಿಸುತ್ತವೆ. ಯಾವ ಪದಾರ್ಥದಲ್ಲಿ ಭಗವಂತನು ಯಾವರೂಪದಿಂದ ಇರುತ್ತಾನೋ, ಅಂತಹ ರೂಪವನ್ನು ಪ್ರತಿಪಾದಿಸುವ ಶಬ್ದಗಳನ್ನೇ ಆಯಾ ವಸ್ತುಗಳಲ್ಲಿ ಪ್ರಯೋಗಿಸಲಾಗುತ್ತದೆ. ಆದ್ದರಿಂದ ಸಕಲಶಬ್ದಗಳಿಗೆ ಭಗವಂತನೇ ಮುಖ್ಯಾರ್ಥನಾಗಿದ್ದಾನೆ. ಹಾಗೂ ಅವನ ಸಂಬಂಧವು ಯಾವ ಪದಾರ್ಥದಲ್ಲಿಯೇ ಆಲ್ಲಿಯೇ ಆ ಶಬ್ದಕ್ಕೆ ಮುಖ್ಯಾರ್ಥವನ್ನು ಹೇಳುತ್ತೇವೆ. ಹಾಗೂ ಉಳಿದೆಲ್ಲಾ ಪದಾರ್ಥಗಳಲ್ಲಿ ಬೇರೆ ವ್ಯವಹಾರವನ್ನು ಮಾಡುತ್ತೇವೆ. ಹೀಗೆ ಅನ್ಯತ್ರ ವ್ಯವಹಾರವನ್ನು ಕೂಡಿಸಬಹುದು. ಆದ್ದರಿಂದ ವಿಷ್ಣುವೇ ಅವ್ಯಕ್ತಾದಿಶಬ್ದಗಳಿಂದ ಮುಖ್ಯವಾಗಿ ಪ್ರತಿಪಾದ್ಯನಾಗಿದ್ದಾನೆಂದು ಆನುಮಾನಿಕಾಧಿಕರಣದಲ್ಲಿ ಸಮರ್ಥಿಸುತ್ತಾರೆ.

प्रकाशः – ''तथा सति लोके लक्षणेतरवृत्त्यभावापत्तेः'' इति समाकर्षनयस्य-टीकावाक्यं हृदि कृत्वाऽऽह – **तर्हीति** । गौणीवृत्तिरादिपदार्थः । टीकोपलक्षणमिति सूचितम् ।

'तथा सति लोके लक्षणेतरवृत्त्यभावापत्तेः' ಭಗವಂತನ ಸಂಬಂಧದಿಂದ ಇತರ ಪದಾರ್ಥಗಳು ಪ್ರತಿಪಾದ್ಯವಾಗುವುದಾದರೆ ಲಕ್ಷಣಾವೃತ್ತಿಯನ್ನು ಬಿಟ್ಟು ಉಳಿದ ವೃತ್ತಿಗಳೇ ಇಲ್ಲದಂತಾಯಿತು ಎಂಬ ಸಮಾಕರ್ಷಾಧಿಕರಣದ ಟೀಕಾವಾಕ್ಯವನ್ನು ಮನಸ್ಸಿನಲ್ಲಿಟ್ಟುಕೊಂಡು 'ತರ್ಹಿ' ಎಂಬುದರಿಂದ ಆಕ್ಷೇಪಿಸುತ್ತಿದ್ದಾರೆ. ಆದಿಪದದಿಂದ ಗೌಣೀವೃತ್ತಿಯನ್ನು ವಿವಕ್ಷಿಸಬೇಕು. ಟೀಕೆಯಲ್ಲಿ ಹೇಳಿದ ಲಕ್ಷಣಾ ಎಂಬ ಶಬ್ದವು ಉಪಲಕ್ಷಣವಾಗಿದೆಯೆಂದು ಇದರಿಂದ ಸೂಚಿಸಿದಂತಾಯಿತು. ಅಂದರೆ ಲಕ್ಷಣಾವೃತ್ತಿ ಹಾಗೂ ಗೌಣೀವೃತ್ತಿಗಳಷ್ಟೇ ಇರಬೇಕಾದೀತು ಎಂದಭಿಪ್ರಾಯ.

प्रकाशः – मुख्यार्थसम्बन्धनिमित्तेन शब्दप्रयोगस्य तादृशत्वादिति भावः । अस्तु को दोष इत्यत आह – **तथा चेति** ।

ಮುಖ್ಯಾರ್ಥಸಂಬಂಧನಿಮಿತ್ತದಿಂದ ಶಬ್ದಪ್ರಯೋಗವನ್ನು ಸಕಲಪದಾರ್ಥಗಳಲ್ಲಿ ಮಾಡುತ್ತಿದ್ದೀರಿ. ಹಾಗಾದರೆ ಗಂಗಾ ಸಂಬಂಧವು ತೀರದಲ್ಲಿರುವುದರಿಂದ ಲಕ್ಷಣಾ ಮಾಡಿದಂತೆ ಇಲ್ಲಿಯೂ ಸಹ ಲಕ್ಷಣಾವನ್ನು ಮಾಡಿದಂತಾಯಿತು. ಲಕ್ಷಣಾವೃತ್ತಿಯನ್ನೇ ಮಾಡೋಣ ಏನು ತಪ್ಪು? ಎಂಬ ಪ್ರಶ್ನೆಗೆ 'ತಥಾ ಚ' ಎಂಬ ವಾಕ್ಯದಿಂದ ಉತ್ತರಿಸುತ್ತಿದ್ದಾರೆ.

ಪ್ರಮಾಣಃ – ಯದ್ಯಪಿ ಲೋಕೇ ಶಬ್ದವ್ಯವಹಾರಾವ್ಯವಸ್ಥಾನಿವರ್ತಕಂ ''ಶರೀರರೂಪಕವಿನ್ಯಸ್ತ-ಗೃಹೀತೇಃ'' ಇತ್ಯೇತದೇವ, ನ ತತೋऽನ್ಯದಸ್ತಿ । ಅತ ಏವ ಟೀಕಾಯಾಮ್ ''ಅವಾಚಕೈರ್ವ್ಯವಹಾರೇऽವ್ಯವಸ್ಥಾಪಾತಾತ್'' ಇತಿ ಸಮಾಕರ್ಷನಯೇ, ''ಅವಾಚಕತ್ವಾವಿಶೇಷೇಣ ಘಟಾದಿಶಬ್ದಾನಾಂ ಪಟಾದೌ ವ್ಯವಹಾರಪ್ರಸಙ್ಗಾತ್'' ಇತ್ಯವ್ಯಕ್ತನಯೇ ಚ ಅವ್ಯವಸ್ಥಾ ''ಶರೀರರೂಪಕ'' ಇತ್ಯಾದಿಸೂತ್ರಾಂಶಾವ್ಯಾವರ್ತ್ಯತಯೈವೋಕ್ತಾ, ಪ್ರಾಗುಕ್ತದಿಶಾ ವ್ಯವಸ್ಥಾಸಮರ್ಥನಂ ಚ ಸುಶಕಮ್ ।

ವಾಸ್ತವಿಕವಾಗಿ ಲೋಕದಲ್ಲಿರುವ ಶಬ್ದವ್ಯವಹಾರದ ಅವ್ಯವಸ್ಥಾದೋಷವನ್ನು ಅನುಮಾನಿಕಾಧಿಕರಣ-ದಲ್ಲಿರುವ 'ಶರೀರರೂಪಕವಿನ್ಯಸ್ತಗೃಹೀತೇಃ' ಎಂಬ ಸೂತ್ರವೇ ಪರಿಹರಿಸಬೇಕು. ಅವ್ಯವಸ್ಥೆಯ ಪರಿಹಾರವನ್ನು ಬೇರೆಲ್ಲಿಯೂ ಮಾಡಲಾಗುವುದಿಲ್ಲ. ಆದ್ದರಿಂದಲೇ ಟೀಕೆಯಲ್ಲಿ 'ಅವಾಚಕೈರ್ವ್ಯವಹಾರೇऽ-ವ್ಯವಸ್ಥಾಪಾತಾತ್' ಶಬ್ದಗಳು ಲೌಕಿಕಪದಾರ್ಥಗಳಲ್ಲಿ ಅವಾಚಕವಾದರೆ ವ್ಯವಹಾರವು ಅವ್ಯವಸ್ಥೆಯಾಗಬೇಕಾದೀತು ಎಂದು ಹೇಳಿದ್ದಾರೆ. ಸಮಾಕರ್ಷಾಧಿಕರಣದಲ್ಲಿ 'ಅವಾಚಕತ್ವಾವಿಶೇಷೇಣ ಘಟಾದಿಶಬ್ದಾನಾಂ ಪಟಾದೌ ವ್ಯವಹಾರಪ್ರಸಂಗಾತ್' ಎಲ್ಲವೂ ವಿಷ್ಣುವನ್ನೇ ಪ್ರತಿಪಾದಿಸುವುದಾದರೆ ಘಟ-ಪಟಾದಿಗಳು ಶಬ್ದಗಳು ಅವನ್ನು ಪ್ರತಿಪಾದಿಸುವುದಿಲ್ಲವೆಂದಾಯಿತು. ಆವಾಗ ಅವಾಚಕತ್ವವು ಎಲ್ಲೆಡೆಯೂ ಇರುವುದರಿಂದ ಘಟಾದಿಶಬ್ದಗಳನ್ನು ಪಟಾದಿಗಳಲ್ಲಿಯೂ ವ್ಯವಹರಿಸುವ ಪ್ರಸಂಗ ಬರುತ್ತದೆಂದು ಹೇಳಿದ್ದಾರೆ. ಈ ಆಕ್ಷೇಪವನ್ನು ಸಮಾಕರ್ಷಾಧಿಕರಣದಲ್ಲಿ ಮಾಡಿಕೊಂಡು ''ಶರೀರರೂಪಕ ವಿನ್ಯಸ್ತೇಗೃಹಿತೇಃ'' ಎಂಬ ಅನುಮಾನಿಕಾಧಿಕರಣದಲ್ಲಿರುವ ಸೂತ್ರದ ಭಾಗದಿಂದಲೇ ಪರಿಹರಿಸಿದ್ದಾರೆ. ಮತ್ತು 'ಶರೀರರೂಪಕವಿನ್ಯಸ್ತ' ಇತ್ಯಾದಿ ಸೂತ್ರವೇ ಅವ್ಯವಸ್ಥೆಯನ್ನು ಹೇಗೆ ಪರಿಹರಿಸುತ್ತದೆಂಬ ವಿಚಾರವನ್ನು ಶರೀರರೂಪಕ ಸೂತ್ರವನ್ನು ವ್ಯಾಖ್ಯಾನಿಸುವಾಗ ನಾವೇ ತೋರಿಸಿದ್ದೇವೆ. ಹೀಗಿರುವಾಗ 'ಸಾಕ್ಷಾದಪ್ಯವಿರೋಧಮ್' ಎಂಬ ಸೂತ್ರದಲ್ಲಿ ಅವ್ಯವಸ್ಥಾಶಂಕೆಯನ್ನು ಏಕೆ ಮಾಡಿಕೊಂಡರು?

ಪ್ರಕಾಶಃ – ತಥಾऽಪಿ ಟೀಕಾಯಾಮ್ ''ಅವಾಚಕೈಃ'' ಇತಿ ''ಅವಾಚಕತ್ವಾವಿಶೇಷೇಣ'' ಇತಿ ಅವ್ಯವಸ್ಥಾಯಾಮವಾಚಕತ್ವಸ್ಯ ನಿಮಿತ್ತತಯೋಪಾದಾನಾತ್, ''–''ಸಮಾಕರ್ಷಾತ್'' ಇತಿ ವಕ್ಷ್ಯಮಾಣನ್ಯಾಯಸ್ಯ ಅತ್ರಾಭಿಪ್ರೇತತ್ವೇನ ಲಕ್ಷಣಾನಾಶ್ರಯಣಾತ್'' ಇತ್ಯಾನುಮಾನಿಕಸೂತ್ರ-ಟೀಕೋಕ್ತದಿಶಾ ''ಶರೀರರೂಪಕ'' ಇತ್ಯಾದಿಶತಾತ್ಪರ್ಯಾರ್ಥಾನಭಿಜ್ಞಾನೇನ, ಯಥಾ ''ತಥಾ ಸತಿ ಲೋಕೇ ಲಕ್ಷಣೇತರವೃತ್ತ್ಯಭಾವಾಪತ್ತೇಃ'' ಇತಿ ಸಮಾಕರ್ಷಸೂತ್ರೇ ಪೂರ್ವಪಕ್ಷಿಣ ಆಪಾದನಂ, ತಥಾ ವಿಶೇಷಾನಭಿಜ್ಞಸ್ಯ ತತ್ತಚ್ಛಬ್ದಮುಖ್ಯಾರ್ಥಭೂತೇಶ್ವರಸಮ್ಬನ್ಧಸ್ಯ ಸರ್ವತ್ರ ಸತ್ತ್ವಾದಿತ್ಯೇತಾವನ್ಮಾತ್ರಂ ಜಾನತಃ ಪೂರ್ವಪಕ್ಷಿಣಃ ಏತದವ್ಯವಸ್ಥಾಪಾದನಮಿತಿ ಧ್ಯೇಯಮ್ ।

ಆದರೂ ಸಹ ಅವ್ಯಕ್ತಾಧಿಕರಣದಲ್ಲಿ ಹಾಗೂ ಸಮಾಕರ್ಷಾಧಿಕರಣದ ಟೀಕೆಯಲ್ಲಿ 'ಅವಾಚಕೈಃ' ಎಂದು ಮತ್ತು 'ಅವಾಚಕತ್ವಾವಿಶೇಷೇಣ' ಎಂದು ಅವಾಚಕತ್ವವನ್ನೇ ನಿಮಿತ್ತವನ್ನಾಗಿ ಹೇಳಿರುತ್ತಾರೆ. ಆದ್ದರಿಂದ ಇಷ್ಟು ಉತ್ತರವನ್ನು ತಿಳಿಯಬೇಕು. ''ಶರೀರರೂಪಕವಿನ್ಯಸ್ತಗೃಹೀತೇಃ'' ಎಂಬ ಸೂತ್ರದಲ್ಲಿ ಶಬ್ದದಿಂದ ಮುಖ್ಯವಾಗಿ ಪ್ರತಿಪಾದ್ಯನಾದ ಭಗವಂತನ ಸಂಬಂಧ ಅವ್ಯಕ್ತಾದಿಗಳಲ್ಲಿರುವುದರಿಂದ ಅವುಗಳು ಶಬ್ದಪ್ರತಿಪಾದ್ಯವಾಗುತ್ತವೆ ಎಂದು ಹೇಳುವುದಷ್ಟೇ ತಾತ್ಪರ್ಯವಲ್ಲ. 'ಸಮಾಕರ್ಷಾತ್' ಇತಿ ವಕ್ಷ್ಯಮಾಣನ್ಯಾಯಸ್ಯ ಅಕ್ಷಾಭಿಪ್ರೇತತ್ವೇನ ಲಕ್ಷಣಾನಾಶ್ರಯಣಾತ್' ಎಂಬ ಅನುಮಾನಿಕಸೂತ್ರದ ಟೀಕೆಯಲ್ಲಿ ಹೇಳಿದಂತೆ ಸಮಾಕರ್ಷಾಧಿಕರಣದಲ್ಲಿ ಹೇಳುವ ನ್ಯಾಯವನ್ನು ಅವ್ಯಕ್ತಾಧಿಕರಣದಲ್ಲಿಯೂ ವಿವಕ್ಷಿಸಬೇಕು. ಸಮಾಕರ್ಷಾಧಿಕರಣದಲ್ಲಿ ಶಬ್ದಗಳು ಪರಮಮುಖ್ಯವೃತ್ತಿಯಿಂದ ಭಗವಂತನನ್ನು; ಮುಖ್ಯವೃತ್ತಿಯಿಂದ ಇತರ ಪದಾರ್ಥಗಳನ್ನು ಪ್ರತಿಪಾದಿಸುತ್ತವೆಂದು ಹೇಳಲಾಗಿದೆ. ಆ ಉತ್ತರವನ್ನು ಅನುಮಾನಿಕಾಧಿಕರಣದಲ್ಲಿಯೂ ವಿವಕ್ಷಿಸಿದಾಗ 'ತಥಾ ಸತಿ ಲೋಕೇ ಲಕಣೇತರವೃತ್ತಿಭಾವಾಪತೇಃ' ಲಕ್ಷಣಾವೃತ್ತಿಯನ್ನು ಬಿಟ್ಟು ಬೇರೆ ವೃತ್ತಿಯೇ ಇಲ್ಲದಂತಾಗಬೇಕಾದಿತೆಂಬ ಆಕ್ಷೇಪಕ್ಕೆ ಅವಕಾಶವಿರುವುದಿಲ್ಲ. ಆದ್ದರಿಂದ ಯಾವ ವ್ಯಕ್ತಿಯು ಭಗವಂತನ ಸಂಬಂಧದಿಂದಷ್ಟೇ ಉಳಿದಪದಾರ್ಥಗಳು ಶಬ್ದಪ್ರತಿಪಾದ್ಯವಾಗಿವೆಯೆಂದು ತಿಳಿದಿರುತ್ತಾನೋ, ಅಂತಹ ವ್ಯಕ್ತಿಯು ಮಾತ್ರ ಅವ್ಯವಸ್ಥೆಯನ್ನು ಆಶಂಕಿಸುತ್ತಾನೆ. ನಿಜವಾಗಿಯೂ ಯಾರು ಅನುಮಾನಿಕಾಧಿಕರಣದಲ್ಲಿ ಯಾವ ಅಭಿಪ್ರಾಯವನ್ನು ತಾಳಿದ್ದಾರೆಂಬುದನ್ನು ಅರ್ಥಮಾಡಿಕೊಂಡಿರುತ್ತಾನೋ? ಅಂತಹ ವ್ಯಕ್ತಿಯು ಹೀಗೆ ಅವ್ಯವಸ್ಥಾಪ್ರಸಂಗವನ್ನು ಆಕ್ಷೇಪಿಸಲು ಸಾಧ್ಯವಿಲ್ಲವೆಂದು ತಿಳಿಯಬೇಕು.

ಪ್ರಕಾಶಃ – अत एव टीकादौ ''शरीररूपक'' इति सूत्रे न व्यवस्थासमर्थनं स्पष्टमुक्तम् । अस्माभिस्तु – पूर्वं विवेकार्थं स्पष्टमुक्तम् । अन्यथा लक्षणादिवृत्त्या-पादानस्यानिष्टत्वं न सिध्येत् ।

ಆದ್ದರಿಂದ ಈ ಟೀಕೆಯಲ್ಲಿ 'ಶರೀರರೂಪಕ' ಎಂಬ ಸೂತ್ರದಿಂದ ವ್ಯವಸ್ಥೆಯನ್ನು ಸಮರ್ಥಿಸಿಲ್ಲ ಎಂದು ಸ್ಪಷ್ಟವಾಗಿ ಹೇಳಿರುತ್ತಾರೆ. ನಾವೂ ಸಹ ಹಿಂದೆ ವಿವೇಕಕ್ಕೋಸ್ಕರ ಅನುಮಾನಿಕಾಧಿಕರಣವನ್ನು ಸ್ಪಷ್ಟವಾಗಿ ವಿವರಿಸಿದ್ದೇವೆ. ಹೀಗೊಪ್ಪದಿದ್ದರೆ ಲಕ್ಷಣಾವೃತ್ತಿಯೇ ಇರಬೇಕಾದೀತೆಂಬ ಆಕ್ಷೇಪಕ್ಕೆ ಅನಿಷ್ಟತ್ವವನ್ನು ಸಮರ್ಥಿಸಿದಂತಾಗುವುದಿಲ್ಲ.

ಪ್ರಕಾಶಃ – अस्य समाधिस्तु ''कल्पनोपदेशात्'' इत्यादावन्यत्रापि वाचकत्वोक्त्या भविष्यति । अत एवाग्रे ''वाचकत्वाविशेषेऽपि'' इति वक्ष्यते ।

ಆದ್ದರಿಂದ ಅವ್ಯವಸ್ಥಾಪ್ರಸಂಗವೆಂಬ ಆಶಂಕೆಗೆ ಮುಂದೆ ಸಮಾಕರ್ಷಾಧಿಕರಣದಲ್ಲಿಯೇ ಸ್ಪಷ್ಟವಾದ ಉತ್ತರವು ದೊರೆಯಲು ಸಾಧ್ಯ. ಏಕೆಂದರೆ 'ಕಲ್ಪನೋಪದೇಶಾತ್' ಎಂಬ ಸಮಾಕರ್ಷಾಧಿಕರಣದ ಸೂತ್ರದಲ್ಲಿ ಬೇರೆಕಡೆಯೂ ಸಹ ವಾಚಕತ್ವವು ಇರುತ್ತದೆಂದು ವಿವರಿಸಿದ್ದಾರೆ. ಆದ್ದರಿಂದಲೇ ಮುಂದೆ 'ವಾಚಕತ್ವಾವಿಶೇಷೇऽಪಿ' ಎಂದು ಹೇಳುತ್ತಾರೆ. ಆದ್ದರಿಂದ ಈ ಅಧಿಕರಣದಲ್ಲಿರುವ 'ಸಾಕ್ಷಾದಪ್ಯವಿರೋಧಮ್' ಎಂಬ ಸೂತ್ರದಿಂದ ಅವ್ಯವಸ್ಥಾದೋಷವನ್ನು ಸಂಪೂರ್ಣ ಪರಿಹರಿಸಿರುವುದಿಲ್ಲ.

ಪ್ರಕಾಶಃ – 'तीर' इति सप्रयोजनलक्षणायाः, 'पुरुष' इति रूढलक्षणायाः, 'माणवक' इति सप्रयोजनोपचारस्य, ''चित्रलिखितसिंहादौ'' इति तु रूढोपचारस्योदाहरणम् । तीराद्यन्यलाक्षणिकादिरादिपदार्थः । एतेन 'लक्षणादिः' इत्यादिपदार्थो विवृतः ।

ಗ್ರಂಥದಲ್ಲಿ 'ತೀರ' 'ಪುರುಷ' 'ಮಾಣವಕ', 'ಚಿತ್ರಲಿಖಿತಸಿಂಹ' ಎಂದು ನಾಲ್ಕು ದೃಷ್ಟಾಂತಗಳನ್ನು ನೀಡಿದ್ದಾರೆ. ಒಂದೊಂದು ದೃಷ್ಟಾಂತಗಳಲ್ಲಿಯೂ ವೈಲಕ್ಷಣ್ಯವನ್ನು ತಿಳಿಯಬೇಕು. ತೀರದಲ್ಲಿ ಸಪ್ರಯೋಜನವಾದ ಲಕ್ಷಣಾವಿರುತ್ತದೆ. ಗಂಗಾಪದದಿಂದ ತೀರವನ್ನು ಹೇಳಲು ಪಾವಿತ್ರ್ಯ, ಶೀತಲತ್ವಾದಿ ಪ್ರಯೋಜಗಳಿರುತ್ತವೆಂದು ಅರ್ಥ. ಪುರುಷನಲ್ಲಿ ಮಂಚ ಶಬ್ದವನ್ನು ರೂಢಲಕ್ಷಣಾದಿಂದ ಕರೆಯಲಾಗುತ್ತದೆ. ಮಾಣವಕನಲ್ಲಿ ಅಗ್ನಿಶಬ್ದ ಪ್ರಯೋಗವನ್ನು ಪ್ರಯೋಜನೋಪಚಾರವೆಂಬ ಲಕ್ಷಣಾದಿಂದ ಮಾಡಲಾಗುತ್ತದೆ. ಅಂದರೆ ತೇಜಸ್ಸು ಮೊದಲಾದವುಗಳನ್ನು ತಿಳಿಸುವುದಕ್ಕಾಗಿ ಔಪಚಾರಿಕ ಪ್ರಯೋಗವನ್ನು ಮಾಡಲಾಗುತ್ತದೆಂದರ್ಥ. ಚಿತ್ರಲಿಖಿತಸಿಂಹದಲ್ಲಿ ಸಿಂಹ ಶಬ್ದವನ್ನು ರೂಢೋಪಚಾರದಿಂದ ಲಕ್ಷಣಾಮಾಡಲಾಗುತ್ತದೆಂದು ತಿಳಿಯಬೇಕು. 'ಚಿತ್ರಲಿಖಿತಸಿಂಹಾದೌ' ಎಂಬಲ್ಲಿರುವ ಆದಿಪದದಿಂದ ತೀರವನ್ನು ಬಿಟ್ಟು ಉಳಿದ ಲಾಕ್ಷಣಿಕಶಬ್ದಗಳನ್ನು ವಿವಕ್ಷಿಸಬೇಕು. ಹೀಗೆ ಹೇಳಿದ್ದರಿಂದ 'ಲಕ್ಷಣಾದಿಃ' ಎಂಬ ಟೀಕೆಯಲ್ಲಿರುವ ಆದಿಪದಾರ್ಥವನ್ನು ವಿವರಿಸಿದಂತಾಯಿತು.

ಪ್ರಕಾಶಃ – **न त्विति । 'नद्यां घोषः, सुरसरिति घोषः' इत्यादेरपि दर्शनादिति भावः । अन्यथेति । एक एव शब्दो लक्षणीये प्रयोज्यो, न तु तत्पर्याय इत्यङ्गीकार इत्यर्थः । वह्न्यादीति । तस्यापि विष्णौ मुख्यस्यान्यत्र लक्षणादिनैव वृत्तेरिति भावः ।**

'नतु' ಎಂಬ ವಾಕ್ಯದ ಅಭಿಪ್ರಾಯ ಹೀಗಿದೆ - ತೀರದಲ್ಲಿ ಗಂಗಾಪದವನ್ನೇ ಪ್ರಯೋಗ ಮಾಡುತ್ತಾರೆ. ಗಂಗಾಪದಕ್ಕೆ ಪರ್ಯಾಯಶಬ್ದವೆನಿಸಿದ 'ನದೀ' ಶಬ್ದವನ್ನು ಅಥವಾ 'ಸುರಸರಿತ್' ಎಂಬ ಶಬ್ದವನ್ನು, ಪ್ರಯೋಗಮಾಡಬಾರದೆಂದೇನೂ ನಿಯಮವಿಲ್ಲ. ಲಕ್ಷಣಾ ಮಾಡುವುದು ನಿಶ್ಚಿತವಾದ ಮೇಲೆ ಗಂಗಾಪದದಿಂದಲೇ ಲಕ್ಷಣಾ ಮಾಡಬೇಕೆಂದು ನಿಯಮವಿಲ್ಲ. 'नद्यां घोषः' ಎಂದು, 'ಸುರಸರಿತಿ ಘೋಷಃ' ಎಂದೂ ಸಹ ಲೋಕದಲ್ಲಿ ಪ್ರಯೋಗ ಮಾಡುವುದು ಕಂಡಿದೆಯೆಂದು ತಿಳಿಯಬೇಕು. ಒಂದು ವೇಳೆ ಲಕ್ಷಣೀಯವಾದ ತೀರಾದಿಗಳಲ್ಲಿ ಒಂದೇ ಶಬ್ದವನ್ನು ಪ್ರಯೋಗಿಸಬೇಕೇ ಹೊರತು ಪರ್ಯಾಯಶಬ್ದಗಳನ್ನು ಪ್ರಯೋಗಿಸಬಾರದೆಂದು ಅಂಗೀಕರಿಸಿದರೆ ಬರುವ ಬಾಧಕವನ್ನು 'अन्यथा' ಎಂಬ ವಾಕ್ಯದಿಂದ ತೋರಿಸುತ್ತಿದ್ದಾರೆ. ಹಾಗಾದರೆ ಅಗ್ನಿದೇವತೆಯಲ್ಲಿ 'ವಹ್ನಿ' ಮೊದಲಾದ ಶಬ್ದಗಳನ್ನು ಪ್ರಯೋಗ ಮಾಡದೇ ಇರಬೇಕಾದೀತು. ಏಕೆಂದರೆ ವಹ್ನಿಶಬ್ದವೂ ಸಹ ವಿಷ್ಣುವಿನಲ್ಲಿ ಮುಖ್ಯವಾಗಿರುತ್ತದೆ. ಬೇರೆ ಕಡೆ ಲಕ್ಷಣಾ ಮಾಡಿಯೇ ಕೂಡಿಸಬೇಕು. ಲಕ್ಷಣೀಯವಾದ ಪದಾರ್ಥದಲ್ಲಿ ಪರ್ಯಾಯಶಬ್ದಗಳನ್ನು ಪ್ರಯೋಗಿಸಬಾರದೆಂದು ನೀವು ಹೇಳುವುದಾದರೆ ಅಗ್ನಿಯಲ್ಲಿ 'ವಹ್ನಿ' ಎಂಬ ಪರ್ಯಾಯ ಶಬ್ದವನ್ನು ಪ್ರಯೋಗ ಮಾಡದೇ ಇರಬೇಕಾದೀತೆಂದು ಅಭಿಪ್ರಾಯ. ಇದು 'वह्न्यादि' ಎಂಬ ಗ್ರಂಥದ ಅಭಿಪ್ರಾಯ.

ಪ್ರಕಾಶಃ – ನನು ನ ಶಬ್ದಾನಾಂ ಬ್ರಹ್ಮಣಿ ಮುಖ್ಯತ್ವೇऽಪ್ಯನ್ಯತ್ರ ಲಕ್ಷಣಾದಿ, ಯೇನಾವ್ಯವಸ್ಥಾ, ಕಿನ್ತು ತತ್ರಾಪಿ ''ಕಲ್ಪನೋಪದೇಶಾತ್'' ಇತಿ ನ್ಯಾಯೇನ ಮುಖ್ಯತ್ವಮೇವ । ನ ಚಾಕ್ಷಾದಿ-ಶಬ್ದವದುಭಯತ್ರಸಾಮ್ಯಾಪತ್ತಿಃ, ನ್ಯೂನಾಧಿಕಭಾವವತ್ತ್ವಾದಿತಿ ಭಾವೇನ ಶಙ್ಕತೇ – ನನ್ವೇತಿ ।

ಪ್ರಶ್ನೆ - ಶಬ್ದಗಳೆಲ್ಲವೂ ಬ್ರಹ್ಮನಲ್ಲಿ ಮುಖ್ಯವಾಗಿರುತ್ತವೆಂದು ಹೇಳಿದ ಮಾತ್ರಕ್ಕೆ ಬೇರೆ ಪದಾರ್ಥಗಳಲ್ಲಿ ಲಕ್ಷಣಾ ಮಾಡಬೇಕಾದ ಪ್ರಸಂಗ ಬರುತ್ತದೆಂದು ಆಕ್ಷೇಪಿಸಬಾರದು. ಹಾಗೇನಾದರೂ ಸಿದ್ಧಾಂತಿಗಳು ಲಕ್ಷಣಾವನ್ನು ಒಪ್ಪಿದರೆ 'ಇಂದ್ರನಲ್ಲಿ ಅಗ್ನಿಶಬ್ದದ ಪ್ರಯೋಗವೂ ಬರಲಿ' ಎಂದು ಅವ್ಯವಸ್ಥೆಗೆ ಅವಕಾಶವಿರುತ್ತಿತ್ತು. ಆದರೆ ಬೇರೆ ಪದಾರ್ಥಗಳಲ್ಲಿಯೂ 'ಕಲ್ಪನೋಪದೇಶಾತ್' ಎಂಬ ಸೂತ್ರದಲ್ಲಿ ಹೇಳಿದ ನ್ಯಾಯದಂತೆ ಮುಖ್ಯತ್ವವನ್ನೇ ಒಪ್ಪುತ್ತೇವೆ. ಹಾಗಾದರೆ ಅಕ್ಷಾದಿ ಶಬ್ದಗಳಂತೆ ವಿಷ್ಣು ಹಾಗೂ ಬೇರೆ ಪದಾರ್ಥಗಳಲ್ಲಿ ಶಬ್ದವು ಸಮಾನವಾಗಿ ಬರುತ್ತದಲ್ಲವೇ? ಎಂಬ ಉಭಯತ್ರ ಸಾಮ್ಯವನ್ನು ಆಕ್ಷೇಪಿಸಬಾರದು. ವಿಷ್ಣುವಿನಲ್ಲಿ ಪರಮಮುಖ್ಯವೃತ್ತಿಯಿಂದ ಶಬ್ದವಿರುತ್ತದೆ. ಉಳಿದ ಪದಾರ್ಥಗಳಲ್ಲಿ ಮುಖ್ಯವೃತ್ತಿಯಿಂದ ಇರುತ್ತದೆಂದು ತಾರತಮ್ಯವನ್ನು ಹೇಳುತ್ತೇವೆ. ಹೀಗೆ ಹೇಳಿದರೆ ಯಾವುದೇ ಅವ್ಯವಸ್ಥೆಗೆ ಅವಕಾಶವಿಲ್ಲವೇ? ಎಂಬುದಾಗಿ 'ನಚ' ಎಂಬ ಗ್ರಂಥದಿಂದ ಸಿದ್ಧಾಂತಿಗಳು ಆಶಂಕಿಸುತ್ತಿದ್ದಾರೆ.

ಪ್ರಕಾಶಃ – 'ಇತಿ ನ್ಯಾಯೇನ ಬ್ರಹ್ಮಣಿ ಮುಖ್ಯತ್ವಮನ್ಯತ್ರಾಮುಖ್ಯತ್ವಮ್' ಇತ್ಯನ್ವಯಃ । ತತ್ರ ಹಿ, ಮುಖ್ಯತಾ ಕಿಮುಭಯತ್ರ ತುಲ್ಯಾ ಕಿಂ ಬ್ರಹ್ಮಣ್ಯಧಿಕಾ ಅನ್ಯತ್ರ ಹೀನೇತಿ ಸಂಶಯೇ, ಹೀನತ್ವೇ ಮುಖ್ಯವೃತ್ತಿತ್ವಾಭಾವಾತ್ ತುಲ್ಯೇತಿ ಪ್ರಾಪ್ತೇ, ಯೋಗರೂಢಯೋರಿವ ಮುಖ್ಯತ್ವೇऽಪಿ ನ್ಯೂನಾಧಿಕಭಾವಸಮ್ಭವಾತ್, ಬ್ರಹ್ಮಣಿ ಪರಮಮುಖ್ಯತ್ವಮನ್ಯತ್ರ ತ್ವಪರಮಮುಖ್ಯವೃತ್ತಿತ್ವಮಿತಿ ವಕ್ಷ್ಯತೇ, ತೇನ ನ್ಯಾಯೇನೇತ್ಯರ್ಥಃ ।

ಗ್ರಂಥದಲ್ಲಿ 'ವಕ್ಷ್ಯಮಾಣನ್ಯಾಯೇನ' ಎಂಬುದಕ್ಕೆ 'ಬ್ರಹ್ಮಣಿ ಮುಖ್ಯತ್ವಮ್, ಅನ್ಯತ್ರಾಮುಖ್ಯತ್ವಮ್' ಎಂಬಲ್ಲಿ ಅನ್ವಯ ಮಾಡಬೇಕು. 'ಕಲ್ಪನೋಪದೇಶಾತ್' ಎಂಬ ಸೂತ್ರದಲ್ಲಿ ವಿಷ್ಣುವಿನಲ್ಲಿ ಹಾಗೂ ಲೋಕದಲ್ಲಿ ಎರಡೂ ಕಡೆ ಶಬ್ದಗಳಿಗೆ ವಾಚಕತ್ವವೇ ಇರುತ್ತದೆಂದು ಹೇಳಲಾಗಿದೆ. ಸಮಾಕರ್ಷಾಧಿಕರಣದಲ್ಲಿ ಅದನ್ನು ಹೀಗೆ ಆಕ್ಷೇಪಿಸಿದ್ದಾರೆ. ಹಿಂದೆ ಹೇಳಲ್ಪಟ್ಟ ವಾಚಕತ್ವವು ವಿಷ್ಣು ಹಾಗೂ ಬೇರೆ ಪದಾರ್ಥಗಳಲ್ಲಿ ಸಮಾನವಾಗಿರುತ್ತದೋ? ಅಥವಾ ಬ್ರಹ್ಮನಲ್ಲಿ ಅಧಿಕವಾಗಿದ್ದು ಬೇರೆಕಡೆ ನ್ಯೂನವಾಗಿರುತ್ತದೋ? ಎಂದು ಸಂಶಯವನ್ನು ತೋರಿಸಿ; ಒಂದು ವೇಳೆ ಬ್ರಹ್ಮನನ್ನು ಬಿಟ್ಟು ಬೇರೆ ಕಡೆ ನ್ಯೂನವಾಗಿರುವುದಾದರೆ ಮುಖ್ಯವೃತ್ತಿತ್ವವನ್ನು ಹೇಳಲು ಸಾಧ್ಯವಿಲ್ಲ. ಆದ್ದರಿಂದ ತಾರತಮ್ಯವನ್ನು ಒಪ್ಪದೇ ಎರಡೂ ಕಡೆ ಸಮಾನವಾಗಿರಬೇಕು. ಇಷ್ಟು ಆಕ್ಷೇಪ.

ಯಾವರೀತಿಯಾಗಿ ಯೋಗ ಹಾಗೂ ರೂಢಿಗಳೆರಡೂ ಮುಖ್ಯವೇ ಆಗಿದ್ದರೂ ಯೋಗಕ್ಕಿಂತ ರೂಢಿಯನ್ನು ಬಲಿಷ್ಠವೆಂದು ಎಲ್ಲರೂ ಒಪ್ಪಿದ್ದಾರೋ, ಆದರಂತೆ ಬ್ರಹ್ಮನಲ್ಲಿ ಪರಮಮುಖ್ಯವೃತ್ತಿಯಿಂದ; ಬೇರೆ ಪದಾರ್ಥಗಳಲ್ಲಿ ಅಮುಖ್ಯವೃತ್ತಿಯಿಂದ ಶಬ್ದಗಳಿರಬಹುದು. ಈ ವಿಷಯವನ್ನು ಆ ಅಧಿಕರಣದಲ್ಲಿ ಸಮರ್ಥಿಸುತ್ತೇವೆ. ಇದನ್ನು 'ವಕ್ಷ್ಯಮಾಣನ್ಯಾಯೇನ' ಎಂಬ ಪದದಿಂದ ಗ್ರಂಥಕಾರರು ಹೇಳಿದ್ದಾರೆ.

ವೈಶ್ವಾನರಾಧಿಕರಣ (೧-೨-೭)

ಪ್ರಕಾಶಃ – 'तीर' इति सप्रयोजनलक्षणायाः, 'पुरुष' इति रूढलक्षणायाः, 'माणवक' इति सप्रयोजनोपचारस्य, ''चित्रलिखितसिंहादौ'' इति तु रूढोपचारस्योदाहरणम् । तीराद्यन्यलाक्षणिकादिरादिपदार्थः । एतेन 'लक्षणादिः' इत्यादिपदार्थो विवृतः ।

ಗ್ರಂಥದಲ್ಲಿ 'ತೀರ' 'ಪುರುಷ' 'ಮಾಣವಕ', 'ಚಿತ್ರಲಿಖಿತಸಿಂಹ' ಎಂದು ನಾಲ್ಕು ದೃಷ್ಟಾಂತಗಳನ್ನು ನೀಡಿದ್ದಾರೆ. ಒಂದೊಂದು ದೃಷ್ಟಾಂತಗಳಲ್ಲಿಯೂ ವೈಲಕ್ಷಣ್ಯವನ್ನು ತಿಳಿಯಬೇಕು. ತೀರದಲ್ಲಿ ಸಪ್ರಯೋಜನವಾದ ಲಕ್ಷಣಾವಿರುತ್ತದೆ. ಗಂಗಾಪದದಿಂದ ತೀರವನ್ನು ಹೇಳಲು ಪಾವಿತ್ರ್ಯ, ಶೀತಲತ್ವಾದಿ ಪ್ರಯೋಜನಗಳಿರುತ್ತವೆಂದು ಅರ್ಥ. ಪುರುಷನಲ್ಲಿ ಮಂಚ ಶಬ್ದವನ್ನು ರೂಢಲಕ್ಷಣಾದಿಂದ ಕರೆಯಲಾಗುತ್ತದೆ. ಮಾಣವಕನಲ್ಲಿ ಅಗ್ನಿಶಬ್ದ ಪ್ರಯೋಗವನ್ನು ಪ್ರಯೋಜನೋಪಚಾರವೆಂಬ ಲಕ್ಷಣಾದಿಂದ ಮಾಡಲಾಗುತ್ತದೆ. ಅಂದರೆ ತೇಜಸ್ಸು ಮೊದಲಾದವುಗಳನ್ನು ತಿಳಿಸುವುದಕ್ಕಾಗಿ ಔಪಚಾರಿಕ ಪ್ರಯೋಗವನ್ನು ಮಾಡಲಾಗುತ್ತದೆಂದರ್ಥ. ಚಿತ್ರಲಿಖಿತಸಿಂಹದಲ್ಲಿ ಸಿಂಹ ಶಬ್ದವನ್ನು ರೂಢೋಪಚಾರದಿಂದ ಲಕ್ಷಣಾಮಾಡಲಾಗುತ್ತದೆಂದು ತಿಳಿಯಬೇಕು. 'ಚಿತ್ರಲಿಖಿತಸಿಂಹಾದೌ' ಎಂಬಲ್ಲಿರುವ ಆದಿಪದದಿಂದ ತೀರವನ್ನು ಬಿಟ್ಟು ಉಳಿದ ಲಾಕ್ಷಣಿಕಶಬ್ದಗಳನ್ನು ವಿವಕ್ಷಿಸಬೇಕು. ಹೀಗೆ ಹೇಳಿದ್ದರಿಂದ 'ಲಕ್ಷಣಾದಿಃ' ಎಂಬ ಟೀಕೆಯಲ್ಲಿರುವ ಆದಿಪದಾರ್ಥವನ್ನು ವಿವರಿಸಿದಂತಾಯಿತು.

ಪ್ರಕಾಶಃ – न त्विति । 'नद्यां घोषः, सुरसरिति घोषः' इत्यादेरपि दर्शनादिति भावः । अन्येथेति । एक एव शब्दो लक्षणायै प्रयोज्यो, न तु तत्पर्याय इत्यङ्गीकार इत्यर्थः । वह्न्यादीति । तस्यापि विष्णौ मुख्यस्यान्यत्र लक्षणादिनैव वृत्तेरिति भावः ।

'ನತು' ಎಂಬ ವಾಕ್ಯದ ಅಭಿಪ್ರಾಯ ಹೀಗಿದೆ - ತೀರದಲ್ಲಿ ಗಂಗಾಪದವನ್ನೇ ಪ್ರಯೋಗ ಮಾಡುತ್ತಾರೆ. ಗಂಗಾಪದಕ್ಕೆ ಪರ್ಯಾಯಶಬ್ದವೆನಿಸಿದ 'ನದೀ' ಶಬ್ದವನ್ನು ಅಥವಾ 'ಸುರಸರಿತ್' ಎಂಬ ಶಬ್ದವನ್ನು, ಪ್ರಯೋಗಮಾಡಬಾರದೆಂದೇನೂ ನಿಯಮವಿಲ್ಲ. ಲಕ್ಷಣಾ ಮಾಡುವುದು ನಿಶ್ಚಿತವಾದ ಮೇಲೆ ಗಂಗಾಪದದಿಂದಲೇ ಲಕ್ಷಣಾ ಮಾಡಬೇಕೆಂದು ನಿಯಮವಿಲ್ಲ. 'ನದ್ಯಾಂ ಘೋಷಃ' ಎಂದು, 'ಸುರಸರಿತಿ ಘೋಷಃ' ಎಂದೂ ಸಹ ಲೋಕದಲ್ಲಿ ಪ್ರಯೋಗ ಮಾಡುವುದು ಕಂಡಿದೆಯೆಂದು ತಿಳಿಯಬೇಕು. ಒಂದು ವೇಳೆ ಲಕ್ಷಣೀಯವಾದ ತೀರಾದಿಗಳಲ್ಲಿ ಒಂದೇ ಶಬ್ದವನ್ನು ಪ್ರಯೋಗಿಸಬೇಕೇ ಹೊರತು ಪರ್ಯಾಯಶಬ್ದಗಳನ್ನು ಪ್ರಯೋಗಿಸಬಾರದೆಂದು ಅಂಗೀಕರಿಸಿದರೆ ಬರುವ ಬಾಧಕವನ್ನು 'ಅನ್ಯಥಾ' ಎಂಬ ವಾಕ್ಯದಿಂದ ತೋರಿಸುತ್ತಿದ್ದಾರೆ. ಹಾಗಾದರೆ ಅಗ್ನಿದೇವತೆಯಲ್ಲಿ 'ವಹ್ನಿ' ಮೊದಲಾದ ಶಬ್ದಗಳನ್ನು ಪ್ರಯೋಗ ಮಾಡದೇ ಇರಬೇಕಾದೀತು. ಏಕೆಂದರೆ ವಹ್ನಿಶಬ್ದವೂ ಸಹ ವಿಷ್ಣುವಿನಲ್ಲಿ ಮುಖ್ಯವಾಗಿರುತ್ತದೆ. ಬೇರೆ ಕಡೆ ಲಕ್ಷಣಾ ಮಾಡಿಯೇ ಕೂಡಿಸಬೇಕು. ಲಕ್ಷಣೀಯವಾದ ಪದಾರ್ಥದಲ್ಲಿ ಪರ್ಯಾಯಶಬ್ದಗಳನ್ನು ಪ್ರಯೋಗಿಸಬಾರದೆಂದು ನೀವು ಹೇಳುವುದಾದರೆ ಅಗ್ನಿಯಲ್ಲಿ 'ವಹ್ನಿ' ಎಂಬ ಪರ್ಯಾಯ ಶಬ್ದವನ್ನು ಪ್ರಯೋಗ ಮಾಡದೇ ಇರಬೇಕಾದೀತೆಂದು ಅಭಿಪ್ರಾಯ. ಇದು 'ವಹ್ನ್ಯಾದಿ' ಎಂಬ ಗ್ರಂಥದ ಅಭಿಪ್ರಾಯ.

प्रकाशः – ननु न शब्दानां ब्रह्मणि मुख्यत्वेऽप्यन्यत्र लक्षणादि, येनाव्यवस्था, किन्तु तत्रापि ''कल्पनोपदेशात्'' इति न्यायेन मुख्यत्वमेव । न चाक्षादि-शब्दवदुभयत्रसाम्यापत्तिः, न्यूनाधिकभाववत्त्वादिति भावेन शङ्कते – नचेति ।

ಪ್ರಶ್ನೆ - ಶಬ್ದಗಳೆಲ್ಲವೂ ಬ್ರಹ್ಮನಲ್ಲಿ ಮುಖ್ಯವಾಗಿರುತ್ತವೆಂದು ಹೇಳಿದ ಮಾತ್ರಕ್ಕೆ ಬೇರೆ ಪದಾರ್ಥಗಳಲ್ಲಿ ಲಕ್ಷಣಾ ಮಾಡಬೇಕಾದ ಪ್ರಸಂಗ ಬರುತ್ತದೆಂದು ಆಕ್ಷೇಪಿಸಬಾರದು. ಹಾಗೇನಾದರೂ ಸಿದ್ಧಾಂತಿಗಳು ಲಕ್ಷಣಾವನ್ನು ಒಪ್ಪಿದರೆ 'ಇಂದ್ರನಲ್ಲಿ ಅಗ್ನಿಶಬ್ದದ ಪ್ರಯೋಗವೂ ಬರಲಿ' ಎಂದು ಅವ್ಯವಸ್ಥೆಗೆ ಅವಕಾಶವಿರುತ್ತಿತ್ತು. ಆದರೆ ಬೇರೆ ಪದಾರ್ಥಗಳಲ್ಲಿಯೂ 'ಕಲ್ಪನೋಪದೇಶಾತ್' ಎಂಬ ಸೂತ್ರದಲ್ಲಿ ಹೇಳಿದ ನ್ಯಾಯದಂತೆ ಮುಖ್ಯತ್ವವನ್ನೇ ಒಪ್ಪುತ್ತೇವೆ. ಹಾಗಾದರೆ ಅಕ್ಷಾದಿ ಶಬ್ದಗಳಂತೆ ವಿಷ್ಣು ಹಾಗೂ ಬೇರೆ ಪದಾರ್ಥಗಳಲ್ಲಿ ಶಬ್ದವು ಸಮಾನವಾಗಿ ಬರುತ್ತದಲ್ಲವೇ? ಎಂಬ ಉಭಯತ್ರ ಸಾಮ್ಯವನ್ನು ಆಕ್ಷೇಪಿಸಬಾರದು. ವಿಷ್ಣುವಿನಲ್ಲಿ ಪರಮಮುಖ್ಯವೃತ್ತಿಯಿಂದ ಶಬ್ದವಿರುತ್ತದೆ. ಉಳಿದ ಪದಾರ್ಥಗಳಲ್ಲಿ ಮುಖ್ಯವೃತ್ತಿಯಿಂದ ಇರುತ್ತದೆಂದು ತಾರತಮ್ಯವನ್ನು ಹೇಳುತ್ತೇವೆ. ಹೀಗೆ ಹೇಳಿದರೆ ಯಾವುದೇ ಅವ್ಯವಸ್ಥೆಗೆ ಅವಕಾಶವಿಲ್ಲವೇ? ಎಂಬುದಾಗಿ 'ನಚ' ಎಂಬ ಗ್ರಂಥದಿಂದ ಸಿದ್ಧಾಂತಿಗಳು ಆಶಂಕಿಸುತ್ತಿದ್ದಾರೆ.

प्रकाशः – 'इति न्यायेन ब्रह्मणि मुख्यत्वमन्यत्रामुख्यत्वम्' इत्यन्वयः । तत्र हि, मुख्यता किमुभयत्र तुल्या किं ब्रह्मण्यधिका अन्यत्र हीनेति संशये, हीनत्वे मुख्यवृत्तित्वाभावात् तुल्येति प्राप्ते, योगरूढ्योरिव मुख्यत्वेऽपि न्यूनाधिकभावसम्भवात्, ब्रह्मणि परममुख्यत्वमन्यत्र त्वपरममुख्यवृत्तित्वमिति वक्ष्यते, तेन न्यायेनेत्यर्थः ।

ಗ್ರಂಥದಲ್ಲಿ 'वक्ष्यमाणन्यायेन' ಎಂಬುದಕ್ಕೆ 'ಬ್ರಹ್ಮಣಿ ಮುಖ್ಯತ್ವಮ್, ಅನ್ಯತ್ರಾಮುಖ್ಯತ್ವಮ್' ಎಂಬಲ್ಲಿ ಅನ್ವಯ ಮಾಡಬೇಕು. 'ಕಲ್ಪನೋಪದೇಶಾತ್' ಎಂಬ ಸೂತ್ರದಲ್ಲಿ ವಿಷ್ಣುವಿನಲ್ಲಿ ಹಾಗೂ ಲೋಕದಲ್ಲಿ ಎರಡೂ ಕಡೆ ಶಬ್ದಗಳಿಗೆ ವಾಚಕತ್ವವೇ ಇರುತ್ತದೆಂದು ಹೇಳಲಾಗಿದೆ. ಸಮಾಕರ್ಷಾಧಿಕರಣದಲ್ಲಿ ಅದನ್ನು ಹೀಗೆ ಆಕ್ಷೇಪಿಸಿದ್ದಾರೆ. ಹಿಂದೆ ಹೇಳಲ್ಪಟ್ಟ ವಾಚಕತ್ವವು ವಿಷ್ಣು ಹಾಗೂ ಬೇರೆ ಪದಾರ್ಥಗಳಲ್ಲಿ ಸಮಾನವಾಗಿರುತ್ತದೋ? ಅಥವಾ ಬ್ರಹ್ಮನಲ್ಲಿ ಅಧಿಕವಾಗಿದ್ದು ಬೇರೆಕಡೆ ನ್ಯೂನವಾಗಿರುತ್ತದೋ? ಎಂದು ಸಂಶಯವನ್ನು ತೋರಿಸಿ; ಒಂದು ವೇಳೆ ಬ್ರಹ್ಮನನ್ನು ಬಿಟ್ಟು ಬೇರೆ ಕಡೆ ನ್ಯೂನವಾಗಿರುವುದಾದರೆ ಮುಖ್ಯವೃತ್ತಿತ್ವವನ್ನು ಹೇಳಲು ಸಾಧ್ಯವಿಲ್ಲ. ಆದ್ದರಿಂದ ತಾರತಮ್ಯವನ್ನು ಒಪ್ಪದೇ ಎರಡೂ ಕಡೆ ಸಮಾನವಾಗಿರಬೇಕು. ಇಷ್ಟು ಆಕ್ಷೇಪ.

ಯಾವರೀತಿಯಾಗಿ ಯೋಗ ಹಾಗೂ ರೂಢಿಗಳೆರಡೂ ಮುಖ್ಯವೇ ಆಗಿದ್ದರೂ ಯೋಗಕ್ಕಿಂತ ರೂಢಿಯನ್ನು ಬಲಿಷ್ಠವೆಂದು ಎಲ್ಲರೂ ಒಪ್ಪಿದ್ದಾರೋ, ಅದರಂತೆ ಬ್ರಹ್ಮನಲ್ಲಿ ಪರಮಮುಖ್ಯವೃತ್ತಿಯಿಂದ; ಬೇರೆ ಪದಾರ್ಥಗಳಲ್ಲಿ ಅಮುಖ್ಯವೃತ್ತಿಯಿಂದ ಶಬ್ದಗಳಿರಬಹುದು. ಈ ವಿಷಯವನ್ನು ಆ ಅಧಿಕರಣದಲ್ಲಿ ಸಮರ್ಥಿಸುತ್ತೇವೆ. ಇದನ್ನು 'वक्ष्यमाणन्यायेन' ಎಂಬ ಪದದಿಂದ ಗ್ರಂಥಕಾರರು ಹೇಳಿದ್ದಾರೆ.

प्रकाशः – वाचकत्वाविशेषेऽपीति । ''कल्पनोपदेशात्'' इति न्यायेन हरौ तदन्यत्र चेति भावः । **अमुख्यत्वमिति** । किञ्चिन्मुख्यत्वं न तु लक्षणादिरित्यर्थः । **न मुख्योऽस्तीति** । सर्वशब्दानां लोके तुल्यवृत्तित्वेन भृत्यजयिशब्दयोरिव भृत्ये वृत्तितारतम्याभाव इत्यर्थः । एतेनेत्युक्तं व्यनक्ति – **अज्ञीति** ।

'वाचकत्वाविशेषेऽपि' ಎಂಬುದಕ್ಕೆ ಹೀಗರ್ಥ - 'कल्पनोपदेशात्' ಎಂಬ ಸೂತ್ರದಲ್ಲಿ ಶ್ರೀಹರಿಯಲ್ಲಿ ಮತ್ತು ಬೇರೆ ಪದಾರ್ಥಗಳಲ್ಲಿ ವಾಚಕತ್ವವನ್ನು ಸಮಾನವಾಗಿ ಹೇಳಿದ್ದಾರೆಂದು. 'अमुख्यत्वम्' ಎಂದರೆ ಭೃತ್ಯನಲ್ಲಿ 'जयिः' ಶಬ್ದವನ್ನು ಸ್ವಲ್ಪಮುಖ್ಯವೃತ್ತಿಯಿಂದ ಹೇಳುತ್ತೇವೆ ಹೊರತು, ಲಕ್ಷಣಾಮಾಡಬೇಕೆಂದರ್ಥವಲ್ಲ ಎಂದು. 'न मुख्योऽस्ति' ಎಂದರೆ ಸಕಲಶಬ್ದಗಳು ಲೋಕದಲ್ಲಿ ಸಮಾನವಾಗಿರುವುದರಿಂದ ಭೃತ್ಯನಲ್ಲಿ 'जयिः' ಎಂಬ ಶಬ್ದದಂತೆ ಪ್ರಕೃತ ವೃತ್ತಿಯಲ್ಲಿ ತಾರತಮ್ಯವಿರುವುದಿಲ್ಲವೆಂದು ಅಭಿಪ್ರಾಯ. 'एतेन' ಎಂದು ಹೇಳಿದ್ದನ್ನೇ 'अज्ञि' ಇತ್ಯಾದಿ ಗ್ರಂಥದಿಂದ ಪ್ರತಿಪಾದಿಸುತ್ತಿದ್ದಾರೆ.

प्रकाशः – एवं श्रुतेर्निरवकाशतयाऽपि प्राबल्योपपादनेन ''नहि वैश्वानर-श्रुतेरग्न्यादिविषयत्वाभावे व्यवहारस्य गत्यन्तरमस्ति'' इति टीकाविवरणेन ''साक्षात्'' इति सूत्रव्यावर्त्यमुक्तवेदानीं 'शब्दादिभ्योऽन्तः प्रतिष्ठानान्नेति चेत्' इति सूत्रांशोक्तलिङ्गनिरवकाशत्वमप्यत्र ग्राह्यमिति भावेनाह – **अत एवेति** ।

ಹೀಗೆ ಶ್ರುತಿಗೆ ನಿರವಕಾಶತ್ವವನ್ನು ಸಮರ್ಥಿಸುವ ಮೂಲಕವಾಗಿಯೂ ಪ್ರಾಬಲ್ಯವನ್ನು ಉಪಪಾದಿಸಿದರು. ಮತ್ತು ''नहि वैश्वानरश्रुतेः अग्न्यादिविषयत्वाभावे व्यवहारस्य गत्यंतरमस्ति' ಎಂಬ ಟೀಕೆಯನ್ನು ವಿವರಣೆ ಮಾಡುವ ಮೂಲಕ 'साक्षात्' ಎಂಬ ಸೂತ್ರದಿಂದ ವ್ಯಾವರ್ತ್ಯವಾದ ಪೂರ್ವಪಕ್ಷವನ್ನೂ ಸಹ ತೋರಿಸಿದರು. ಈಗ 'शब्दादिभ्योऽन्तः प्रतिष्ठानान्नेति चेत्' ಎಂಬ ಸೂತ್ರಾಂಶದಿಂದ ಹೇಳಲ್ಪಟ್ಟ ಲಿಂಗಕ್ಕೆ ನಿರವಕಾಶತ್ವವನ್ನು ಕೂಡ ಇಲ್ಲಿ ವಿವಕ್ಷಿಸಬೇಕೆಂಬ ಅಭಿಪ್ರಾಯದಿಂದ 'अत एव' ಎಂಬ ಗ್ರಂಥವು ಹೊರಟಿರುತ್ತದೆ.

प्रकाशः – प्राग्विवृतान्यस्माभिर्लिङ्गानि । आत्मश्रुतेश्चेति । एतेन ''शब्दादिभ्यः'' इति सूत्रभाष्यटीकायां – ''यथा खलु वैश्वानरस्य विष्णुत्वनिश्चायकात्मशब्दादि विद्यते'' इत्यादिना लिङ्गानां विष्णुप्रापकात्मशब्दसमाख्यादिना साम्यमुक्तं, तत्त्वम्पुपेत्यवादेन वा, ''साक्षात्'' इत्यादावग्रेऽन्यत्र प्रयोगोपपत्तेर्वक्ष्यमाणत्वेनात्म श्रुत्यादेः विष्णौ मुख्यत्वस्य निर्बाधादिति भावेन वेति भावः ।

ಲಿಂಗಗಳೆಲ್ಲವನ್ನೂ ಹಿಂದೆ ನಾವು ವಿವರಿಸಿದ್ದೇವೆ. 'ಆತ್ಮಶ್ರುತೇಶ್ಚ' ಎಂದು ಹೇಳಿದ್ದರಿಂದ ಇನ್ನೊಂದು ಆಕ್ಷೇಪವನ್ನು ಪರಿಹರಿಸಿದಂತಾಯಿತು. ಆಕ್ಷೇಪ ಹಿಗೀದೆ -'ಶಬ್ದಾದಿಭ್ಯಃ' ಎಂಬ ಸೂತ್ರಭಾಷ್ಯಟೀಕೆಯಲ್ಲಿ 'ಯಥಾ ಖಲು ವೈಶ್ವಾನರಸ್ಯ ವಿಷ್ಣುತ್ವನಿಶ್ಚಾಯಕಾತ್ಶಶಬ್ದಾದಿ ವಿದ್ಯತೇ'' ಇತ್ಯಾದಿ ವಾಕ್ಯಗಳಿಂದ ಲಿಂಗಗಳಿಗೆ ವಿಷ್ಣುಪ್ರಾಪಕವಾದ ಆತ್ಮಶಬ್ದ, ಸಮಾಖ್ಯಾ ಮುಂತಾದ್ದರಿಂದ ಸಾಮ್ಯವನ್ನು ಹೇಳಿದ್ದಾರೆ. ಇದು ಹೇಗೆ ಎಂದು?

ಈ ಆಕ್ಷೇಪಕ್ಕೆ ಎರಡು ಬಗೆಯಲ್ಲಿ ಉತ್ತರಿಸಬಹುದು. ಅಂಗೀಕಾರವಾದ ಮಾಡಿದ್ದರಿಂದ ಹಾಗೇ ಸಾಮ್ಯವನ್ನು ಹೇಳಿದ್ದಾರೆಂದು ಒಂದು ಸಮಾಧಾನ. ಮತ್ತೊಂದು 'ಸಾಕ್ಷಾದಪ್ಯವಿರೋಧಮ್'ಎಂಬ ಮುಂದಿನ ಸೂತ್ರದಲ್ಲಿ ಅಗ್ನಿಶಬ್ದಕ್ಕೆ ಅನ್ಯತ್ರಪ್ರಯೋಗವು ಹೇಗೆ ಉಪಪನ್ನವಾಗುತ್ತದೆಂಬುದನ್ನು ಸಮರ್ಥಿಸುವುದರಿಂದ ವಿಷ್ಣುವಿನಲ್ಲಿರುವ ಆತ್ಮಶ್ರುತಿಗೆ ಮುಖ್ಯತ್ವವು ಬಾಧವಿಲ್ಲದೇ ಉಪಪನ್ನವಾಗುತ್ತದೆಂದು ತಿಳಿಸುವುದಕ್ಕಾಗಿಯೂ ಸಾಮ್ಯವನ್ನು ಹೇಳಿದ್ದಾರೆಂದು ಮತ್ತೊಂದು ಸಮಾಧಾನವನ್ನು ತಿಳಿಯಬೇಕು.

ಪ್ರಕಾಶಃ – ಅತ ಏವೋತ್ತಂ ವ್ಯನಕ್ತಿ – **ಅನ್ಯತ್ರೇತಿ** । ''ಅಭಿವ್ಯಕ್ತೇಃ'' ಇತ್ಯಾದಿಸೂತ್ರ-ವ್ಯಾವರ್ತ್ಯೋಕ್ತಿಪರಾಂ ''ವೈದಿಕವಿಧಾಭೇದವ್ಯವಹಾರವಿರೋಧಾಚ್ಚ'' ಇತಿ ಟೀಕಾಂ ವಿವೃಣೋತಿ – **ಕಿಞ್ಚೇತ್ಯಾದಿನಾ** ।

'ಅತ ಏವ' ಎಂಬ ಗ್ರಂಥದಲ್ಲಿ ಹೇಳಿದ್ದನ್ನೇ 'ಅನ್ಯತ್ರ' ಎಂಬ ವಾಕ್ಯದಿಂದ ಸ್ಪಷ್ಟಪಡಿಸುತ್ತಿದ್ದಾರೆ. 'ಅಭಿವ್ಯಕ್ತೇಃ' ಇತ್ಯಾದಿ ಸೂತ್ರದಿಂದ ವ್ಯಾವರ್ತ್ಯವಾದ ಪೂರ್ವಪಕ್ಷವನ್ನು ಸಮರ್ಥಿಸುವ 'ವೈದಿಕವಿದ್ಯಾಭೇದ-ವ್ಯವಹಾರವಿರೋಧಾಚ್ಚ' ಎಂಬ ಟೀಕೆಯನ್ನು 'ಕಿಂಚ' ಇತ್ಯಾದಿ ವಾಕ್ಯದಿಂದ ವಿವರಿಸುತ್ತಿದ್ದಾರೆ.

ಪ್ರಕಾಶಃ – ಇದಮಗ್ನಿಸೂಕ್ತಮಿದಂ ವಾಯುಸೂಕ್ತಮಿತ್ಯಾದಿಸೂಕ್ತವ್ಯವಸ್ಥಾ, ತಥಾ ಇಯಮಾತ್ಮವಿದ್ಯಾ ಇಯಂ ವೈಶ್ವಾನರವಿದ್ಯಾ ಇಯಮಕ್ಷಿವಿದ್ಯಾ ಇಯಂ ಪ್ರಾಣವಿದ್ಯಾ ಚೇತ್ಯಾದಿವಿದ್ಯಾವ್ಯವಸ್ಥಾ ಚ ನ ಸ್ಯಾದಿತ್ಯರ್ಥಃ । **ನಿರಸ್ತತ್ವಾದಿತಿ** । ''ಬ್ರಹ್ಮಣಿ ಮುಖ್ಯಾನಾಮಿನ್ದ್ರಾದಿಶಬ್ದಾನಾಮ್'' ಇತ್ಯಾದಿನಾ ನಿರಸ್ತಪ್ರಾಯತ್ವಾದಿತ್ಯರ್ಥಃ ।

ಮಂತ್ರಭಾಗದಲ್ಲಿರುವ ಇದು ಅಗ್ನಿಸೂಕ್ತ, ಇದು ವಾಯುಸೂಕ್ತ ಎಂಬ ಸೂಕ್ತವ್ಯವಸ್ಥೆಯು ತಪ್ಪಾಗಬೇಕಾದೀತು. ಉಪನಿಷದ್ಭಾಗದಲ್ಲಿರುವ ಇದು ಆತ್ಮವಿದ್ಯೆ, ಇದು ವೈಶ್ವಾನರವಿದ್ಯೆ, ಇದು ಆಕ್ಷಿವಿದ್ಯೆ, ಇದು ಪ್ರಾಣವಿದ್ಯೆ ಎಂಬ ವಿದ್ಯಾವ್ಯವಸ್ಥೆಯೂ ಸಹ ತಪ್ಪಾಗಬೇಕಾದೀತೆಂದು 'ಕಿಂಚ' ಇತ್ಯಾದಿ ವಾಕ್ಯದ ಅಭಿಪ್ರಾಯವಾಗಿದೆ. 'ನಿರಸ್ತತ್ವಾತ್' ಎಂಬುದಕ್ಕೆ ಬ್ರಹ್ಮನಲ್ಲಿ ಮುಖ್ಯವಾಗಿರುವ ಇಂದ್ರಾದಿಶಬ್ದಗಳನ್ನು ಆಗ್ನ್ಯಾದಿಗಳಲ್ಲಿಯೂ ಪ್ರಯೋಗಿಸಬೇಕಾದೀತೆಂಬ ವಾಕ್ಯದಿಂದ ಹಿಂದೆಯೇ ನಿರಾಸ ಮಾಡಿದ್ದಾಗಿದೆ ಎಂದರ್ಥ.

ಪ್ರಕಾಶಃ – ನನ್ವಗ್ನಿಶ್ರುತ್ಯಾದೇರ್ವಿಷ್ಣುಪ್ರಾಪಕಾತ್ಪ್ರಾಬಲ್ಯೋಕ್ತೌ ಸೂತ್ರಭಾಷ್ಯಟೀಕಾವಿರೋಧ ಇತ್ಯಾಶಙ್ಕ್ಯಾಹ – **ಟೀಕಾದಾವಿತಿ** । ಜಾತ್ಯಾ ನಿರವಕಾಶತ್ವೇನ ಚ ಶ್ರುತೇಃ ಪ್ರಾಬಲ್ಯಂ ಸ್ವಯಮುಕ್ತಂ,

ಅಗ್ನಿಶ್ರುತ್ಯಾದಿಗಳಿಗೆ ವಿಷ್ಣುಪ್ರಾಪಕವಾದ ಲಿಂಗಾದಿಗಳಿಗಿಂತಲೂ ಪ್ರಾಬಲ್ಯವನ್ನು ಗ್ರಂಥಕಾರರು ಹೇಳುತ್ತಿದ್ದಾರೆ. ಆದರೆ ಸೂತ್ರ, ಭಾಷ್ಯ, ಟೀಕೆಗಳಲ್ಲಿ ಪೂರ್ವಪಕ್ಷಪ್ರಾಪಕಲಿಂಗಕ್ಕೂ ಸಿದ್ಧಾಂತ ಪ್ರಾಪಕ ಲಿಂಗಕ್ಕೂ ಸಮಾನ ಬಲವನ್ನು ಹೇಳಿದ್ದಾರೆ. ಅವುಗಳ ವಿರೋಧವು ಬರುತ್ತದಲ್ಲವೇ? ಎಂಬ ಆಶಂಕೆಗೆ 'ಟೀಕಾದೌ' ಎಂಬುದರಿಂದ ಉತ್ತರಿಸುತ್ತಿದ್ದಾರೆ. ವೈಶ್ವಾನರಶ್ರುತಿಗೆ ವಾಸ್ತವಿಕವಾಗಿ ಸ್ವತಃ ಪ್ರಾಬಲ್ಯವಿದೆ ಮತ್ತು ನಿರವಕಾಶತ್ವ ಪ್ರಯುಕ್ತವಾಗಿಯೂ ಪ್ರಾಬಲ್ಯವಿದೆ. ಈ ಉದ್ದೇಶದಿಂದ ಗ್ರಂಥಕಾರರು ಪೂರ್ವಪಕ್ಷ ಪ್ರಾಪಕವಾದ ಶ್ರುತಿಗೆ ಪ್ರಾಬಲ್ಯವನ್ನು ಸ್ಥಾಪಿಸಿದ್ದಾರೆ.

ಪ್ರಕಾಶಃ – ಟೀಕಾದೌ ತು ಸೌತ್ರಸಾಧಾರಣಶಬ್ದಸ್ವಾರಸ್ಯಮನುರುಧ್ಯ ಜಾತ್ಯಾ ಪ್ರಾಬಲ್ಯಮನುಪಪಾದ್ಯ ಶ್ರುತೇರ್ಲಿಙ್ಗಸ್ಯ ನಿರವಕಾಶತ್ವೇನ ಸಾಮ್ಯಮುಪೇತ್ಯ ಸಾಧಾರಣ್ಯಮುಕ್ತಂ, ಜಾತ್ಯಾ ಬಲವತ್ತ್ವಮಸ್ಮದುಕ್ತರೀತ್ಯಾऽನುಮತಮೇವ । ಅತೋ ನ ವಿರೋಧ ಇತಿ ಭಾವಃ ।

ಟೀಕೆ, ಭಾಷ್ಯ ಮೊದಲಾದವುಗಳಲ್ಲಿ ಸೂತ್ರದಲ್ಲಿರುವ ಸಾಧಾರಣ ಶಬ್ದದ ಸ್ವಾರಸ್ಯವನ್ನು ಅನುಸರಿಸಿ ಕೇವಲ ನಿರವಕಾಶತ್ವ ಪ್ರಯುಕ್ತವಾದ ಪ್ರಾಬಲ್ಯವನ್ನಷ್ಟೇ ವಿವಕ್ಷಿಸಿದ್ದಾರೆ. ನಿರವಕಾಶತ್ವ ಪ್ರಯುಕ್ತವಾಗಿ ಪ್ರಾಬಲ್ಯವನ್ನು ವಿವಕ್ಷಿಸಿದಾಗ ಸಿದ್ಧಾಂತ ಪ್ರಾಪಕವಾದ ಯುಕ್ತಿಗಳಿಂದ ಸಾಮ್ಯವು ಬರುತ್ತದೆ. ಇದರಿಂದ ಉಭಯಸಾಧಾರಣವಾಗಿದೆಯೆಂದು ಸೂತ್ರದ ಪದಕ್ಕೆ ಸ್ವಾರಸ್ಯವನ್ನು ಹೇಳಿದಂತಾಗುತ್ತದೆ. ಜಾತ್ಯಾಪ್ರಾಬಲ್ಯವನ್ನು ಟೀಕಾದಿಗಳಲ್ಲಿ ಉಲ್ಲೇಖಿಸಿರುವುದಿಲ್ಲ. ಗ್ರಂಥಕಾರರು ಹೇಳಲ್ಪಟ್ಟ ಈ ಜಾತ್ಯಾ ಪ್ರಾಬಲ್ಯವು ಟೀಕಾದಿಗಳಿಗೆ ಸಮ್ಮತವೇ ಆಗಿದೆ. ಆದ್ದರಿಂದ ಯಾವುದೇ ವಿರೋಧಕ್ಕೂ ಅವಕಾಶವಿಲ್ಲವೆಂದು ತಿಳಿಯಬೇಕು.

ಪ್ರಕಾಶಃ – ಶ್ರುತಿಲಿಙ್ಗಯೋರಿತಿ । ವೈಶ್ವಾನರಶ್ರುತಿಸರ್ವಗತತ್ವಲಿಙ್ಗಯೋರಿತ್ಯರ್ಥಃ । ನನು ಟೀಕೋಕ್ತರೀತ್ಯಾ ಲಿಙ್ಗಸ್ಯ ನಿರವಕಾಶತ್ವೇ ವೈಶ್ವಾನರोऽಗ್ನಿರೇವೇತಿ ಕಥಂ ನಿರ್ಣಯೇನ ಪೂರ್ವಪಕ್ಷಃ, ಶ್ರುತ್ಯಾ ಲಿಙ್ಗಬಾಧೋ ವಾ ಕಥಮಿತ್ಯತ ಆಹ – ಟೀಕಾಯಾಮಿತಿ । ಸಿದ್ಧಾನ್ತದಿಶೇತ್ಯರ್ಥಃ ।

ಗ್ರಂಥದಲ್ಲಿರುವ 'ಶ್ರುತಿಲಿಂಗಯೋಃ' ಎಂಬುದಕ್ಕೆ 'ವೈಶ್ವಾನರಶ್ರುತಿ' ಹಾಗೂ ಸರ್ವಗತತ್ವ ಎಂಬ ಲಿಂಗಗಳಿಗೆ ಎಂದರ್ಥ.

ಟೀಕೆಯಲ್ಲಿ ಹೇಳಿದ ಪ್ರಕಾರ ಲಿಂಗವು ನಿರವಕಾಶವಾದರೆ ವೈಶ್ವಾನರನಾದವನು ಅಗ್ನಿಯೇ ಆಗಿದ್ದಾನೆಂದು ನಿರ್ಣಯಿಸಲು ಹೇಗೆ ಸಾಧ್ಯ ? ಮತ್ತು ಶ್ರುತಿಯಿಂದ ಲಿಂಗವು ಬಾಧಿತವಾಗುತ್ತದೆಂದು ಪೂರ್ವಪಕ್ಷಕಾರನು ಹೇಳಲು ಹೇಗೆ ಸಮರ್ಥನಾಗುತ್ತಾನೆ ? ಎಂಬ ಪ್ರಶ್ನೆಗೆ 'ಟೀಕಾಯಾಮ್' ಎಂಬ ವಾಕ್ಯದಿಂದ ಉತ್ತರಿಸುತ್ತಿದ್ದಾರೆ. ಸಿದ್ಧಾಂತದ ಪ್ರಕಾರ ಎಂದು ಇಲ್ಲಿ ಇಟ್ಟುಕೊಳ್ಳಬೇಕು.

ಪ್ರಕಾಶಃ – ವಸ್ತುತಃ ಪೂರ್ವಪಕ್ಷೇ ಸರ್ವಗತತ್ವಲಿಙ್ಗಮಗ್ನೌ ಸಾವಕಾಶಮಿತಿ ಟೀಕಾಶಯಃ ।

ಪೂರ್ವಪಕ್ಷಕಾರನು ಸಿದ್ಧಾಂತದ ಪ್ರಕಾರ ಅಂಗೀಕಾರ ಮಾಡಿ ಸಿದ್ಧಾಂತಪ್ರಾಪಕವಾದ ಲಿಂಗವನ್ನು ನಿರವಕಾಶವೆಂದು ಹೇಳಿದ್ದಾನೆ. ವಾಸ್ತವಿಕವಾಗಿ ಪೂರ್ವಪಕ್ಷದಲ್ಲಿ ಸರ್ವಗತತ್ವಾದಿಲಿಂಗಗಳು ಅಗ್ನಿಯಲ್ಲಿ ಸಾವಕಾಶವೇ ಆಗಿರುತ್ತದೆಂಬುದು ಟೀಕೆಯ ಅಭಿಪ್ರಾಯ.

ಪರಿಪೂರ್ಣಚಂದ್ರಿಕಾ

प्रकाशः – एवं तर्हि विष्णुरेवेति सिद्धान्त्यभिमतनिर्णयाक्षेपपरग्रन्थः कथमित्यत आह – **न त्वित्यादि ।**

ಹೀಗೆ ಪೂರ್ವಪಕ್ಷವನ್ನು ನಿರ್ಣಾಯಾತ್ಮಕವಾಗಿ ಮಾಡುವುದಾದರೆ ಟೀಕೆಯಲ್ಲಿ ವಿಷ್ಣುವೇ ವೈಶ್ವಾನರನಾಗಿದ್ದಾನೆಂಬ ಸಿದ್ಧಾಂತಿಗಳಿಗೆ ಅಭಿಮತವಾದ ನಿರ್ಣಯವು ಹೇಗೆ ಆಗುತ್ತದೆ ಎಂಬ ಆಕ್ಷೇಪವನ್ನು ಮಾಡಿದ್ದು ಹೇಗೆ ಕೂಡುತ್ತದೆ? ಏಕೆಂದರೆ ಟೀಕಾಮಾತನ್ನು ನೋಡಿದಾಗ ಅನಿರ್ಣಯಾತ್ಮಕವಾದ ಪೂರ್ವಪಕ್ಷವೇ ಸಮ್ಮತವೆಂದು ತಿಳಿಯುತ್ತದಲ್ಲವೇ? ಎಂಬ ಪ್ರಶ್ನೆಗೆ 'ನತು' ಎಂಬ ವಾಕ್ಯದಿಂದ ಉತ್ತರಿಸುತ್ತಿದ್ದಾರೆ.

प्रकाशः – एवं स्वोक्तरीत्या श्रुतित्वनिरवकाशत्वोभयप्रयुक्तप्राबल्यं टीकायामप्यभिमतमित्युपेत्य टीकावाक्यानि तदनुगुणतया व्याख्याय, इदानीं पक्षान्तरमाह – **यद्वेति ।**

ಇಲ್ಲಿಯ ತನಕ ತಾವು ಹೇಳಲ್ಪಟ್ಟ ಶ್ರುತಿತ್ವ ಹಾಗೂ ನಿರವಕಾಶತ್ವವೆಂಬ ಉಭಯಪ್ರಯುಕ್ತವಾದ ಪ್ರಾಬಲ್ಯವನ್ನು ಸಮರ್ಥಿಸಿ ಟೀಕೆಗೂ ಸಹ ಇದು ಅಭಿಮತವಾಗಿದೆಯೆಂದು ಅಂಗೀಕರಿಸಿ ಟೀಕಾವಾಕ್ಯಗಳನ್ನು ಅದಕ್ಕನುಗುಣವಾಗಿ ವ್ಯಾಖ್ಯಾನಿಸಿದರು. ಈಗ ಮತ್ತೊಂದು ಪಕ್ಷವನ್ನು 'ಯದ್ವಾ' ಇತ್ಯಾದಿ ಗ್ರಂಥದಿಂದ ಹೇಳುತ್ತಿದ್ದಾರೆ.

प्रकाशः – टीकादौ जात्या प्राबल्यं, श्रुतेरनुक्त्वा निरवकाशत्वमात्रेण श्रुतिलिङ्गयोः साम्यमुपेत्य विष्णुरेव वैश्वानर इति विष्णुपरतानिश्चयो न युक्त इत्युक्तं, तत्स्वारस्यानुरोधेनेत्यर्थः । पूर्वपक्षफलमाह – **एवञ्चेति ।**

ಟೀಕೆ, ಭಾಷ್ಯಾದಿಗಳಲ್ಲಿ ವೈಶ್ವಾನರಶ್ರುತಿಗೆ ಸ್ವಭಾವತಃ ಪ್ರಾಬಲ್ಯವನ್ನು ಹೇಳದೇ, ಕೇವಲ ನಿರವಕಾಶತ್ವಪ್ರಯುಕ್ತವಾದ ಪ್ರಾಬಲ್ಯವನ್ನು ಹೇಳಿ ಪೂರ್ವಪಕ್ಷಶ್ರುತಿ ಹಾಗೂ ಸಿದ್ಧಾಂತಲಿಂಗಗಳಿಗೆ ಸಾಮ್ಯವನ್ನು ಅಂಗೀಕರಿಸಲಾಗಿದೆ. ಆದರಿಂದ ವಿಷ್ಣುವೇ ವೈಶ್ವಾನರನಾಗಿದ್ದಾನೆಂದು ನಿಶ್ಚಯವನ್ನು ಮಾಡಲು ಸಾಧ್ಯವಿಲ್ಲವೆಂದು ಹೇಳಿದ್ದಾರೆ. ಅದಕ್ಕನುಸಾರಿಯಾಗಿ ಈ ವ್ಯಾಖ್ಯಾನವೂ ಹೊರಟಿದೆ. ಪೂರ್ವಪಕ್ಷಫಲವನ್ನು 'ಏವಂಚ' ಎಂಬ ಗ್ರಂಥದಿಂದ ತೋರಿಸುತ್ತಿದ್ದಾರೆ.

प्रकाशः – स्वाभिमतश्रुतेः द्वेधा प्राबल्यपक्षे निरवकाशत्वप्रयुक्तप्राबल्यपक्षे चेत्यर्थः । यथा नामधेयपादे उद्भिदादिचतुरधिकरण्या वाजपेयनयपूर्वपक्षे तथेति भावः ।

'ಏವಂಚ' ಎಂಬ ಗ್ರಂಥಕ್ಕೆ ಸ್ವಾಭಿಮತವಾದ ಶ್ರುತಿಗೆ ಎರಡು ಬಗೆಯಲ್ಲಿ ಪ್ರಾಬಲ್ಯವನ್ನು ವಿವಕ್ಷಿಸಿದಾಗ ಅಥವಾ ನಿರವಕಾಶತ್ವಪ್ರಯುಕ್ತವಾದ ಪ್ರಾಬಲ್ಯವನ್ನು ವಿವಕ್ಷಿಸಿದಾಗ ಎಂದರ್ಥ.

ಈ ವೈಶ್ವಾನರಾಧಿಕರಣವು ಎರಡು ಪಾದಗಳಲ್ಲಿರುವ ಎಲ್ಲಾ ಅಧಿಕರಣಗಳ ಸಿದ್ಧಾಂತ ಪ್ರಮೇಯವನ್ನು ಆಕ್ಷೇಪಿಸುತ್ತಿದೆ. ಯಾವ ರೀತಿಯಾಗಿ ಪೂರ್ವಮೀಮಾಂಸೆಯ ನಾಮಧೇಯಪಾದದಲ್ಲಿ ವಾಜಪೇಯಾಧಿಕರಣದ ಪೂರ್ವಪಕ್ಷವನ್ನು ಮಾಡುವಾಗ ಉದ್ಭಿದಾದಿ ನಾಲ್ಕು ಅಧಿಕರಣಗಳನ್ನು ಆಕ್ಷೇಪ ಮಾಡಲಾಗಿದೆಯೋ, ಅದರಂತೆ ಇಲ್ಲಿಯೂ ತಿಳಿಯಬೇಕು.

ಪ್ರಕಾಶಃ – ದ್ವಿತೀಯಪಕ್ಷೇऽಪಿ ಸರ್ವತ್ರ ಸಿದ್ಧಾನ್ತ್ಯಭಿಮತನಿರ್ಣಯಾಕ್ಷೇಪಾದಿತಿ ಭಾವಃ । ಟೀಕಾದೌ ಪೂರ್ವಾಧಿಕರಣಾಕ್ಷೇಪಃ ಸಙ್ಗತಿಪ್ರದರ್ಶನಾಯೇತಿ ಭಾವಃ ।

ಎರಡನೆಯ ಪಕ್ಷದಲ್ಲಿಯೂ ಸಿದ್ಧಾಂತಗಳಿಗೆ ಅಭಿಮತವಾದ ಎಲ್ಲಾ ಅಧಿಕರಣಗಳ ನಿರ್ಣಯವನ್ನು ಆಕ್ಷೇಪಮಾಡಲಾಗಿದೆಯೆಂದು ತಿಳಿಯಬೇಕು. ಹಾಗಾದರೆ ಟೀಕಾದಿಗಳಲ್ಲಿ ಕೇವಲ ಹಿಂದಿನ ಅಧಿಕರಣವನ್ನಷ್ಟೇ ಏಕೆ ಆಕ್ಷೇಪ ಮಾಡಿದರು ಎಂದರೆ, ಕೇವಲ ಸಂಗತಿಯನ್ನು ತೋರಿಸುವುದಕ್ಕಾಗಿ ಎಂದು ತಿಳಿಯಬೇಕು.

ಪ್ರಕಾಶಃ – ಉಕ್ತಂ ಚ ತತ್ತ್ವಪ್ರದೀಪೇ ''ಪಾದದ್ವಯಾರ್ಥನಿಗಮನಾಯ ಸರ್ವನಾಮ್ನಾಂ ಸರ್ವಲಿಙ್ಗಾನಾಂ ಚ ಸಮನ್ವಯದೃಢೀಕರಣಾತ್ಕೋऽಯಮಧಿಕರಣರಾಜ ಆರಭ್ಯತೇ'' ಇತಿ ।।

ಈ ವಿಷಯವನ್ನು ತತ್ತ್ವಪ್ರದೀಪದಲ್ಲಿಯೂ ಹೇಳಿದ್ದಾರೆ. 'ಪಾದದ್ವಯಾರ್ಥನಿಗಮನಾಯ ಸರ್ವನಾಮ್ನಾಂ ಸರ್ವಲಿಙ್ಗಾನಾಂ ಚ ಸಮನ್ವಯದೃಢೀಕರಣಾತ್ಕೋऽಯಮಧಿಕರಣರಾಜ ಆರಭ್ಯತೇ' ಎರಡು ಪಾದಗಳಲ್ಲಿರುವ ಎಲ್ಲಾ ನಾಮಾತ್ಮಕ ಹಾಗೂ ಲಿಂಗಾತ್ಮಕಶಬ್ದಗಳ ಸಮನ್ವಯವನ್ನು ದೃಢಪಡಿಸುವುದಕ್ಕಾಗಿ ಈ ವೈಶ್ವಾನರಾಧಿಕರಣವು ಹೊರಟಿದೆ. ಎರಡು ಪಾದಗಳಲ್ಲಿರುವ ಎಲ್ಲಾ ಅಧಿಕರಣಗಳಿಗೆ ಇದು ರಾಜನ ಸ್ಥಾನದಲ್ಲಿದೆ ಎಂದು ಅಭಿಪ್ರಾಯ.

ಗುರುರಾಜೀಯಮ್ – ॐ ವೈಶ್ವಾನರस्साधरणशब्दविशेषात् ॐ ।। अन्ययेति ।। ब्रह्मणि मुख्यानामिन्द्रादिशब्दानामग्नादावग्नादिशब्दानां चेन्द्रादौ प्रयोगाभाव इत्यर्थः । अग्निशब्दस्य लक्षणयाऽन्यादिपरत्वेनैव व्यवहारोपपत्तौ तत्पर्यायशब्दान्तरस्यापि लक्षणया तत्कथने मानाभावादिति भावः । नच **समाकर्षादिति** वक्ष्यमाणन्यायेनेति । कल्पनोपदेशादिति न्यायेनान्यत्रापि मुख्यामुख्यवृत्तीनामङ्गीकारात् । वाचकत्वाविशेषेऽपि तदधीनत्वादिति न्यायेन समाकर्षन्यायेन च ब्रह्मणि मुख्यत्वेऽप्यन्यत्राप्यमुख्यप्रयोगस्सम्भवतीति नच युक्तमित्यर्थः ।। अत एवेति । शास्त्रदृष्ट्येति न्यायेनेत्यर्थः ।। **निरस्तत्वादिति** ।। इन्द्रादिशब्दानामग्नादिशब्दानां चेन्द्रादौ प्रयोगापत्तिरूपबाधकोक्त्या निरस्तत्वादित्यर्थः । नन्वेवं वैश्वानरश्रुतेरन्यत्रैव प्रसिद्धत्वे टीकायां साधारण्योक्तिरयुक्तेत्यत आह – **टीकादाविति** ।। यद्वा श्रुतेः प्राबल्यमुपपाद्यावधारणेन पूर्वपक्षे टीकाभाष्यसूत्रविरोध इत्यत आह – **टीकादाविति** ।।

ನನ್ವೇವಂ ಸರ್ವಗತತ್ವಾದಿವಿಷ್ಣುಲಿಙ್ಗಾನಾಮಗ್ರೌ ಸಾವಕಾಶತ್ವೇ 'ಪ್ರಸಿದ್ಧಿರ್ಲಿಙ್ಗಯೋರುಭಯೋರಪಿ ನಿರವಕಾಶತ್ವೇನ' ಇತ್ಯಾದಿಟೀಕಾವಿರೋಧ ಇತ್ಯತ ಆಹ – **ಟೀಕಾಯಾಮಿತಿ** । ನನು ಟೀಕಾಯಾಂ ಲಿಙ್ಗನಿರವಕಾಶತ್ವಸ್ಯೋಕ್ತತ್ವಾದುಭಯೋರ್ನಿರವಕಾಶತ್ವಸ್ಯ ವ್ಯಾಹತತ್ವಾನ್ನ ನಿರವಕಾಶತ್ವೇನ ಸಾಮ್ಯಂ ಶ್ರುತಿಲಿಙ್ಗಯೋಷ್ಟೀಕಾದಾವಭಿಪ್ರೇತಮಿತ್ಯತೋ ವಾऽऽಹ – **ಟೀಕೇತಿ** ।। ನನು ಲಕ್ಷಣಾದಿನಾऽಪಿ ಕಲ್ಪ್ಯಾವಕಾಶಾಭಾವಾಭಿಪ್ರಾಯೇತ್ಯರ್ಥಃ ।। **ಅನ್ಯಥೇತಿ** ।। ಸರ್ವಥಾ ನಿರವಕಾಶತ್ವಾಭಿಪ್ರಾಯತ್ವ ಇತ್ಯರ್ಥಃ ।

अत्रेतिशब्दस्याऽऽद्यसूत्रानुषक्तेन 'विष्णुर्वैश्वानरः' इत्यनेनान्वयः । तथा च 'विष्णुर्वैश्वानरः' इति गीतायां स्मर्यमाणं विष्णोर्वैश्वानरत्वम् अत्रापि स एव वैश्वानर इत्यस्यानुमापकमिति सूत्राक्षरार्थः ।

ಈ ಸೂತ್ರದಲ್ಲಿರುವ 'ಸ್ಯಾದಿತಿ' ಎಂಬಲ್ಲಿ ಇತಿ ಶಬ್ದವು ಮೊದಲನೆಯ ಸೂತ್ರದಲ್ಲಿರುವ 'ತತ್ತು' ಎಂಬುದರಿಂದ ತಿಳಿಯುವ 'ವಿಷ್ಣುಃ ವೈಶ್ವಾನರಃ' ಎಂಬುದರ ಜೊತೆಗೆ ಅನ್ವಯವನ್ನು ಹೊಂದುತ್ತದೆ. ಆಂದರೆ ಪ್ರಥಮಸೂತ್ರದಲ್ಲಿ ಪ್ರಸಕ್ತವಾದ 'ವಿಷ್ಣುಃ ವೈಶ್ವಾನರಃ' ಎಂಬುದನ್ನು ಈ ಸೂತ್ರದಲ್ಲಿ ಅನುಷಂಗ ಮಾಡಿಕೊಂಡು ಅನ್ವಯವನ್ನು ಹೇಳಬೇಕು. ಆದ್ದರಿಂದ ವಿಷ್ಣುವೇ ವೈಶ್ವಾನರನಾಗಿದ್ದಾನೆನ್ನಲು ಭಗವದ್ಗೀತೆಯಲ್ಲಿ ಹೇಳಿರುವುದು ಊಹೆ ಮಾಡಲು ಕಾರಣವಾಗಿದೆ. ಗೀತೆಯಲ್ಲಿ ವೈಶ್ವಾನರನಾದವನು ವಿಷ್ಣುವೆಂದು ಹೇಳಿದ್ದರಿಂದ ಆವನೇ ಇಲ್ಲಿರುವ ವೈಶ್ವಾನರ ಪದದಿಂದ ಪ್ರತಿಪಾದ್ಯನಾಗುತ್ತಾನೆಂದು ಊಹಿಸಬೇಕು. ಇಷ್ಟು ಎರಡನೆಯ ಸೂತ್ರದ ಅರ್ಥ.

तृतीये वैश्वानरशब्दमात्रविषयासाधरणबाधकोद्धारः ।

'ಓಂ ಶಬ್ದಾದಿಭ್ಯೋಽಂತಃ ಪ್ರತಿಷ್ಠಾನಾನ್ನೇತಿ ಚೇನ್ನ ತಥಾ ದೃಷ್ಟ್ಯುಪದೇಶಾದಸಂಭವಾತ್ಪುರುಷ-

---

यः पूर्वमुपास्यतयोपदिष्टो वैश्वानरस्तस्यावयवभूतानग्न्यादित्यादीन् सुतेजोविश्वरूपादिनामधेयानुपासकशरीरे मूर्धादिपादान्तेषु सम्पादयति । मूर्धैव सुतेजाः उपासकस्य मूर्धैव परमात्ममूर्धभूता द्यौरित्यर्थः । चक्षुर्विश्वरूपः आदित्य इत्यर्थः । प्राणः पृथग्वर्त्मा वायुरित्यर्थः । सन्देहो बहुलः उपासकस्य मध्यकाय एव परमात्ममध्यकायभूत आकाश इत्यर्थः । पृथिव्येव पादौ अस्य पादावेव तत्पादभूता पृथिवीत्यर्थः । एवमुपासकः स्वशरीरे परमात्मानं त्रैलोक्यशरीरं वैश्वानरं सन्निहितमनुसन्धाय स्वकीयान्पुरोलोमहृदयमनआस्यानि प्राणाहुत्याधारस्य परमात्मनो वैश्वानरस्य वेदिबर्हिर्गार्हपत्यान्वाहार्यपचनाहवनीयानग्निहोत्रोपकरणभूतान् परिकल्प्य प्राणाहुतेश्चाग्निहोत्रत्वं परिकल्प्यैवंविधेन प्राणाग्निहोत्रेण परमात्मानं वैश्वानरमाराधयेदिति 'उर एव वेदिर्लोमानि बर्हिर्हृदयं गार्हपत्यः' इत्यादिनोपदिश्यते । अतः परमात्मा पुरुषोत्तम एव वैश्वानर इति सिद्धम् ।।

विधमपि चैनमधीयते ओ' एंबुदु मूरनेय सूत्र. ई सूत्रदल्लि वैश्वानर शब्दवु मात्र विषयदल्लिरुव असाधारणवाद बाधकवन्नु परिहरिसिद्दारे. ऊळिद सूत्रगळल्लि वैश्वानर शब्दिंद ऊपलक्षितवाद अनेक शब्दगळ विषयदल्लिरुव बाधकगळन्नु परिहरिसिद्दारेंबुदन्नु तिळियबेकु.

"तथा चेतोऽर्पणनिगदात्" इत्यत्र ब्रह्मणि प्रसिद्धशब्दत्यागेन गायत्र्यादि-शब्दप्रयोगे प्रयोजनं नेत्याशङ्का निरस्ता,

गायत्र्यधिकरणदल्लिरुव 'तथा चेतोऽर्पणनिगदात्' एंब सूत्रक्किंत ई सूत्रदल्लि वैलक्षण्यविद. गायत्र्यधिकरणदल्लि ब्रह्मनल्लि प्रसिद्धवाद शब्दगळन्नु बिट्टु बेरे कडे प्रसिद्धवाद 'गायत्री' मोदलाद शब्दगळनु प्रयोगिसलु एनु प्रयोजन? एंब आकांक्षेगे ऊत्तरवन्नु नीडिद्दारे.

अत्र त्वग्न्यादिशब्दानां पाचकत्वादिलिङ्गानां च ब्रह्मणि निरवकाशत्वशङ्कानिरस्यत इति भेदः ।

ई सूत्रदल्लि अग्नि मोदलाद शब्दगळु हागू पाचकत्ववे मोदलाद लिंगगळु परमात्मनल्लि हेगे बरुत्तवे? एंब प्रश्नेगे ऊत्तरिसिद्दारे. हीगे एरडू सूत्रगळिगे वैलक्षण्यविरुवुदरिंद पुनरुक्ति दोष बरुवुदिल्ल.

चतुर्थे परमतनिरासः ।

'ओं अत, एव न देवता भूतं च ओं' एंबुदु नाल्कनेय सूत्र. इदरल्लि परमतवन्नु निरास माडिद्दारे.

पञ्चमे प्रस्तुते वैश्वानरशब्दसमन्वये समाप्ते सर्वशब्दविषयसाधारण-बाधकोद्धाराय लौकिकस्य वैदिकस्य चान्यत्र व्यवहारस्य गत्युक्तिः ।

'ओं साक्षादप्यविरोधं जैमिनिः ओं' एंबुदु ऐदनेय सूत्र. ई सूत्रदल्लि वैश्वानर शब्दद समन्वयवु समाप्तवाद मेले वैश्वानर शब्दिंद ऊपलक्षितवाद सकलशब्दगळ विषयदल्लि प्रसक्तवाद असाधारण बाधकगळन्नेल्ला परिहरिसिद्दारे. अदक्कोस्कर बेरे कडे माडुव लौकिक व्यवहारक्के हागू वैदिक व्यवहारक्के गतियन्नु हेळिद्दारे.

वाच्यार्थधीव्यवहितं लक्षणादिकं विना साक्षान्मुख्यवृत्त्या ब्रह्मणः शब्दार्थत्वेऽपि व्यवहाराविरोध इति चास्याक्षरार्थः ।

ಸಕಲ ಶಬ್ದಗಳು ಬ್ರಹ್ಮನನ್ನು ಮುಖ್ಯವಾಗಿ ಪ್ರತಿಪಾದಿಸುತ್ತಿವೆ ಹೊರತು, ಲಕ್ಷಣಾ ವೃತ್ತಿಯಿಂದಲೋ, ಗೌಣೀವೃತ್ತಿಯಿಂದಲೋ ಪ್ರತಿಪಾದಿಸುತ್ತಿಲ್ಲ. ಲಕ್ಷಣಾದಿಗಳೆಲ್ಲವೂ ವಾಚ್ಯಾರ್ಥಜ್ಞಾನದಿಂದ ವ್ಯವಹಿತವಾಗಿವೆ. ಅಂದರೆ ವಾಚ್ಯಾರ್ಥಜ್ಞಾನ ಬಂದು ಅನಂತರ ಲಕ್ಷಣಾಜ್ಞಾನವು ಬರಬೇಕು. ಇಂತಹ ಲಕ್ಷಣಾದಿಗಳು ಬ್ರಹ್ಮನಲ್ಲಿ ಬರುವುದಿಲ್ಲ. ನೇರವಾಗಿ ಮುಖ್ಯವೃತ್ತಿಯಿಂದಲೇ ಸಕಲ ಶಬ್ದಗಳಿಂದ ಪ್ರತಿಪಾದ್ಯನಾಗಿದ್ದಾನೆ. ಆದರೂ ಸಹ ಲೌಕಿಕ ವ್ಯವಹಾರದ ವಿರೋಧವು ಬರುವುದಿಲ್ಲವೆಂದು ಈ ಸೂತ್ರದ ಅರ್ಥ.

षष्ठादिषु चतुर्षु साधारणबाधकोद्धाराय वैदिक्याः सूक्तादिव्यवस्थायाः गत्युक्तिः ।

ಆರನೆಯ ಸೂತ್ರದಿಂದ ನಾಲ್ಕು ಸೂತ್ರಗಳಲ್ಲಿ ಸಾಧಾರಣವಾದ ಬಾಧಕಗಳನ್ನು ಪರಿಹರಿಸುವುದಕ್ಕಾಗಿ ವೈದಿಕಸೂಕ್ತಾದಿಗಳ ವ್ಯವಸ್ಥೆಗೆ ಗತಿಯನ್ನು ಹೇಳಿರುತ್ತಾರೆ.

. यद्यप्यनुस्मृत्यनन्तरमभिव्यक्तिरभिव्यक्त्यनन्तरं सम्पत्तिः । तथाऽप्यभिव्यक्त्यनन्तरमपि सम्पत्तेः प्राग् अनुस्मृतिरपेक्षितेति दर्शयितुम् अनुस्मृतेर्मध्ये उक्तिरिति सूत्रक्रमः ।

ವಾಸ್ತವಿಕವಾಗಿ ಅನುಸ್ಮೃತಿಯು ಮೊದಲು ಅನಂತರ ಅಭಿವ್ಯಕ್ತಿ, ಅನಂತರ ಸಂಪತ್ತಿ, ಈ ಕ್ರಮದಲ್ಲಿಯೇ ಸೂತ್ರಗಳನ್ನು ಹೇಳಬೇಕು. ಅಂದರೆ ಮೊದಲು ಭಗವಂತನ ಧ್ಯಾನ; ಅನಂತರ ಸಾಕ್ಷಾತ್ಕಾರ; ಅನಂತರ ಭಗವಂತನ ಪ್ರಾಪ್ತಿಯಾಗುತ್ತದೆ. ಇದಕ್ಕನುಸಾರಿಯಾಗಿಯೇ ಸೂತ್ರಗಳನ್ನು ಹೇಳಬೇಕಿತ್ತು. ಆದರೆ ಅಭಿವ್ಯಕ್ತಿಯ ಅನಂತರ ಅನುಸ್ಮೃತಿಯನ್ನು ಸೂತ್ರದಲ್ಲಿ ಹೇಳಿದ್ದು ಏಕೆ? ಎಂಬ ಪ್ರಶ್ನೆ ಬರುತ್ತದೆ. ಆದರೆ ಸೂತ್ರಕಾರರು ಹೀಗೆ ವ್ಯತ್ಯಾಸ ಮಾಡಿ ಹೇಳಿದ್ದರಿಂದ ಒಂದು ಪ್ರಮೇಯವನ್ನು ತಿಳಿಸಿದ್ದಾರೆ. ಏನೆಂದರೆ ಅಪರೋಕ್ಷ ಜ್ಞಾನವಾದ ಮೇಲೂ ಸಹ ಭಗವಂತನ ಉಪಾಸನೆಯನ್ನು ಮಾಡಬೇಕು. ಇದನ್ನು ತಿಳಿಸುವುದಕ್ಕಾಗಿ ಮಧ್ಯದಲ್ಲಿ ಅನುಸ್ಮೃತಿಯನ್ನು ಹೇಳಿದ್ದಾರೆ. ಆದ್ದರಿಂದ ಒಂಭತ್ತು ಸೂತ್ರಗಳ ಜೋಡಣೆಯು ಅತ್ಯಂತ ಸ್ವಾರಸ್ಯಮಯವಾಗಿದೆ.

नच "साक्षात्" इत्यादिसूत्रपञ्चकं समन्वयानुपपत्तिसमाधिरूपत्वादध्यायान्ते स्यादिति शङ्क्यम्,

ಶಂಕಾ - 'ಸಾಕ್ಷಾದಪ್ಯವಿರೋಧಂ' ಎಂಬ ಸೂತ್ರದಿಂದ ಪ್ರಾರಂಭಿಸಿ ನಾಲ್ಕು ಸೂತ್ರಗಳು ಸಮನ್ವಯದ ವಿಷಯದಲ್ಲಿ ಪ್ರಸಕ್ತವಾಗುವ ಅನುಪಪತ್ತಿಗೆ ಸಮಾಧಾನವನ್ನು ನೀಡುತ್ತಿವೆ. ಆದ್ದರಿಂದ ಸಮನ್ವಯಾಧ್ಯಾಯದ ಕೊನೆಯಲ್ಲಿಯೇ ಈ ನಾಲ್ಕು ಸೂತ್ರಗಳನ್ನು ಹೇಳಬೇಕಿತ್ತಲ್ಲವೇ?

ಚತುರ್ಥಪಾದೇ ಪದವರ್ಣಸ್ವರಾದಿಸಮನ್ವಯಸ್ಯಾಪಿ ವಕ್ಷ್ಯಮಾಣತ್ವಾತ್ತದವಸ್ಥಾಯಾಂ ಚ ಸೂಕ್ತಾದಿಭಾವಸ್ಯೈವಾಭಾವೇನ ತದನುಪಪತ್ತಿಶಙ್ಕಾನುದಯಾತ್, ತಥಾऽಗ್ನ್ಯಾದಿಸೂಕ್ತಾದಿಸ್ಥಪದಾದಿ-ಸಮನ್ವಯನಿಷ್ಠಾನಾಂ ಪುಂಸಾಮಗ್ನ್ಯಾದಾವೇವ ಬ್ರಹ್ಮಣೋऽಭಿವ್ಯಕ್ತ್ಯಾದೇರಭಾವೇನ ಪರಿಹಾರಾಸಙ್ಗತೇಃ,

ಸಮಾಧಾನ - ಹೀಗೆ ಶಂಕಿಸಬಾರದು. ಏಕೆಂದರೆ ನಾಲ್ಕನೆಯ ಪಾದದಲ್ಲಿ ಪ್ರತಿಯೊಂದು ಪದ, ವರ್ಣ, ಸ್ವರ, ಇವುಗಳ ಸಮನ್ವಯವನ್ನೂ ಸಹ ಹೇಳುತ್ತಾರೆ. ಈ ಸಂದರ್ಭದಲ್ಲಿ ಸೂಕ್ತಗಳ ಸ್ವರೂಪವೇ ಅಪ್ರಸಕ್ತವಾಗುತ್ತದೆ. ಆದ್ದರಿಂದ ಆದರ ಮೇಲೆ ಬರುವ ಅನುಪಪತ್ತಿ ಶಂಕೆಯು ಹುಟ್ಟಲು ಸಾಧ್ಯವೇ ಇಲ್ಲ. ಮತ್ತು ಯಾವ ಉಪಾಸಕರು ಸೂಕ್ತಗಳಿಂದ ಭಗವಂತನನ್ನು ಆರಾಧಿಸುತ್ತಾರೋ, ಅಂತಹವರಿಗೆ ಭಗವಂತನು ಅಗ್ನಿ ಮೊದಲಾದ ಅಧಿಷ್ಠಾನಗಳಲ್ಲೇ ಪ್ರಾಪ್ಯನಾಗುತ್ತಾನೆ. ಆದರೆ ಯಾವ ಉಪಾಸಕರು ಸೂಕ್ತಗಳಲ್ಲಿರುವ ಪ್ರತಿಯೊಂದು ಪದ, ವರ್ಣ, ಸ್ವರಾದಿಗಳಿಂದ ಭಗವಂತನನ್ನು ಉಪಾಸನೆ ಮಾಡುತ್ತಾರೋ, ಅವರಿಗೆ ಕೇವಲ ಅಗ್ನಿ ಮೊದಲಾದ ಅಧಿಷ್ಠಾನದಲ್ಲಿ ಮಾತ್ರ ಪ್ರಾಪ್ಯನಾಗುವುದಲ್ಲ; ಅವರು ವ್ಯಾಪ್ತೋಪಾಸಕರಾದ್ದರಿಂದ ಎಲ್ಲೆಡೆಯೂ ಭಗವಂತನು ಅವರಿಂದಲೇ ಪ್ರಾಪ್ಯನಾಗುತ್ತಾನೆ. ಈ ವಿಷಯವು ಚತುರ್ಥಪಾದದಲ್ಲಿ ಪ್ರಸಕ್ತವಾಗಿದೆ. ಆದ್ದರಿಂದ ಸೂಕ್ತವ್ಯವಸ್ಥೆಯ ಅನುಪಪತ್ತಿಯನ್ನು ಇಲ್ಲಿಯೇ ಪರಿಹರಿಸಬೇಕು. ಹೊರತು ನಾಲ್ಕನೇಯ ಪಾದದದಲ್ಲಿ ಪರಿಹರಿಸುವುದು ಅಸಂಗತವಾಗುತ್ತದೆ.

ತಯೋಭಯತ್ರಪ್ರಸಿದ್ಧಸಮನ್ವಯೋಕ್ತ್ಯನನ್ತರಂ ಬ್ರಹ್ಮಣಿ ಮುಖ್ಯತ್ವೇऽನ್ಯತ್ರ ಪ್ರಯೋಗೋ ನ ಸ್ಯಾತ್ ಇತ್ಯಾಶಙ್ಕಾಯಾ ಅನ್ಯತ್ರ ಮುಖ್ಯತ್ವೇ ಬ್ರಹ್ಮಣಿ ಸ ನ ಸ್ಯಾದಿತಿ ಪ್ರತಿಶಙ್ಕಾಪ್ರತಿರುದ್ಧತ್ವೇನಾನುದಯಾಚ್ಚ ಅತ್ರೈವ ಯುಕ್ತತ್ವಾದಿತಿ ।।

ಇನ್ನು ಉಭಯಪ್ರಸಿದ್ಧಿ ಸಮನ್ವಯವನ್ನು ಪೂರ್ಣಗೊಳಿಸುವ ಮೂರನೆಯಪಾದದ ಕೊನೆಯಲ್ಲಿ ಈ ನಾಲ್ಕು ಸೂತ್ರಗಳನ್ನು ಉಲ್ಲೇಖಿಸಬೇಕಿತ್ತಲ್ಲವೇ? ಎಂಬ ಪ್ರಶ್ನೆ ಬರುತ್ತದೆ. ಆದರೆ ಉಭಯತ್ರಪ್ರಸಿದ್ಧವಾದ ಶಬ್ದಗಳನ್ನು ಸಮನ್ವಯ ಮಾಡಿದ ಮೇಲೆ ಬ್ರಹ್ಮನಲ್ಲಿ ಸಕಲ ಸೂಕ್ತಗಳು ಮುಖ್ಯವಾಗಿರುವುದಾದರೆ ಬೇರೆ ದೇವತೆಗಳಲ್ಲಿ ಪ್ರಯೋಗವೇ ಮಾಡದಿರಬೇಕಾದೀತು ಎಂದು ಆಕ್ಷೇಪ ಮಾಡಿದಾಗ ಪ್ರತಿಯಾಗಿ ಬೇರೆ ಕಡೆ ಮುಖ್ಯವಾಗಿ ಪ್ರಯೋಗಿಸುವುದಾದರೆ ಬ್ರಹ್ಮನಲ್ಲಿಯೂ ಪ್ರಯೋಗವು ಬಾರದಿರಬೇಕಾದೀತೆಂಬ ಶಂಕೆಯನ್ನು ಮಾಡಲು ಬರುತ್ತದೆ. ಏಕೆಂದರೆ ಎರಡೂ ಕಡೆ ಸಮಾನವಾಗಿ ಪ್ರಸಿದ್ಧವಾದ ಶಬ್ದಗಳ ಸಮನ್ವಯವು ಮೂರನೆಯ ಪಾದದಲ್ಲಿ ಪ್ರಸಕ್ತವಾದ್ದರಿಂದ.

ಹೀಗೆ ಪ್ರತಿ ಶಂಕೆಯಿಂದ ಪ್ರತಿರುದ್ಧವಾಗುವ ಕಾರಣ ಮತ್ತು ಈ ಶಂಕೆ ಹುಟ್ಟಲು ಆಲ್ಲಿ ಪ್ರಸಕ್ತಿಯೇ ಇಲ್ಲದ ಕಾರಣ ಮೂರನೆಯ ಪಾದದಲ್ಲಿಯೂ ಈ ನಾಲ್ಕು ಸೂತ್ರಗಳಿಗೆ ಸಂಗತಿಯಿರುವುದಿಲ್ಲ. ಈ ಕಾರಣದಿಂದ ಸೂತ್ರಕಾರರು ಎರಡನೆಯ ಪಾದದ ಕೊನೆಯಲ್ಲಿಯೇ ಈ ನಾಲ್ಕು ಸೂತ್ರಗಳನ್ನು ಹೇಳಿದ್ದಾರೆ.

ಪ್ರಕಾಶಃ —

ಆಥೇತಿ । ''ವೈಶ್ವಾನರಃ ಸಾಧಾರಣಶಬ್ದವಿಶೇಷಾತ್'' ಇತ್ಯತ್ರ ಸಾಧಾರಣಸ್ಯ ಶ್ರುತಿಲಿಙ್ಗಯೋರ್ನಿರವಕಾಶತ್ವಾದಿನಾ ಅಗ್ನಾವಿಷ್ಣ್ವೋಃ ಸಾಧಾರಣಸ್ಯ ವೈಶ್ವಾನರಶಬ್ದಸ್ಯ ''ಆತ್ಮನಂ ವೈಶ್ವಾನರಮ್'' ಇತ್ಯಾತ್ಮಶಬ್ದೇನ ವಿಶೇಷಣಾದಿತ್ಯಾತ್ಮಶ್ರುತಿರೂಪಸ್ಯೇತ್ಯರ್ಥಃ ।

ವಿವರಣೆ - 'ಓಂ ವೈಶ್ವಾನರಃ ಸಾಧಾರಣ ಶಬ್ದವಿಶೇಷಾತ್ ಓಂ' ಎಂದು ಪ್ರಥಮಸೂತ್ರ. ಈ ಸೂತ್ರದಲ್ಲಿರುವ 'ಸಾಧಾರಣ ಶಬ್ದವಿಶೇಷಾತ್' ಎಂಬ ಪದಕ್ಕೆ ಹೀಗರ್ಥ. ಶ್ರುತಿ ಹಾಗೂ ಲಿಂಗಗಳು ನಿರವಕಾಶವಾಗಿರುವುದರಿಂದ ಅಗ್ನಿ ಹಾಗೂ ವಿಷ್ಣು ಇಬ್ಬರಿಗೂ ಸಾಧಾರಣವಾಗಿ ವಾಚಕವಾದ ವೈಶ್ವಾನರ ಶಬ್ದಕ್ಕೆ 'ಆತ್ಮಾನಂ ವೈಶ್ವಾನರಮ್' ಎಂಬುದಾಗಿ ವಿಷ್ಣುವಿನಲ್ಲೇ ಪ್ರಸಿದ್ಧವಾದ 'ಆತ್ಮ' ಎಂಬ ಶಬ್ದವನ್ನು ವಿಶೇಷವನ್ನಾಗಿ ಹೇಳಿರುವುದರಿಂದ ವೈಶ್ವಾನರನು ವಿಷ್ಣುವೇ ಹೊರತು ಅಗ್ನಿಯಲ್ಲ. ಹೀಗೆ ಶ್ರುತಿಯನ್ನು ಸಾಧಕಪ್ರಮಾಣವನ್ನಾಗಿ ಈ ಸೂತ್ರ ಹೇಳಿದೆ. ಇದು 'ಆದ್ಯ' ಎಂಬ ಗ್ರಂಥದ ಅಭಿಪ್ರಾಯ.

ಪ್ರಕಾಶಃ — 'ದ್ವಿತೀಯೇ' ''ಸ್ಮರ್ಯಮಾಣಮನುಮಾನಂ ಸ್ಯಾತ್'' ಇತ್ಯತ್ರ । ''ಅಹಂ ವೈಶ್ವಾನರೋ ಭೂತ್ವಾ'' ಇತಿ ಸ್ಮೃತಿಸಮಾಖ್ಯಾರೂಪಸ್ಯ ಸ್ವಪಕ್ಷೇ ಸಾಧಕಸ್ಯೇತ್ಯರ್ಥಃ ।

ದ್ವಿತೀಯೇ ಎಂಬುದಕ್ಕೆ 'ಓಂ ಸ್ಮರ್ಯಮಾಣಮನುಮಾನಂ ಸ್ಯಾದಿತಿ ಓಂ' ಎಂಬುದು ಎರಡನೆಯ ಸೂತ್ರದಲ್ಲಿ ಎಂದರ್ಥ. ಈ ಸೂತ್ರದಲ್ಲಿ 'ಅಹಂ ವೈಶ್ವಾನರೋ ಭೂತ್ವಾ ಪ್ರಾಣಾನಾಂ ದೇಹಮಾಶ್ರಿತಃ' ನಾನು ವೈಶ್ವಾನರನೆನಿಸಿ ಪ್ರಾಣಗಳ ದೇಹವನ್ನು ಆಶ್ರಯಿಸಿದ್ದೇನೆ ಎಂದು ಭಗವದ್ಗೀತೆಯೆಂಬ ಸ್ಮೃತಿಯಲ್ಲಿ ಹೇಳಿರುವುದು ಪ್ರಕೃತದಲ್ಲಿ ವಿಷ್ಣುವೇ ವಾಚ್ಯನೆಂದು ಊಹೆ ಮಾಡಲು ಕಾರಣವಾಗುತ್ತದೆಂದು ಹೇಳಿದ್ದಾರೆ. ಹೀಗೆ 'ಸ್ಮೃತಿಸಮಾಖ್ಯಾ' ಎಂಬ ಸ್ವಪಕ್ಷ ಸಾಧಕವನ್ನು ಹೇಳುತ್ತಿದೆ. (ಸಮಾನೋಕ್ತಿಃ ಸಮಾಖ್ಯಾ, ಒಂದೇ ರೀತಿಯ ಎರಡು ಮಾತುಗಳು 'ಸಮಾಖ್ಯಾ' ಎನಿಸುತ್ತವೆ. ಭಗವದ್ಗೀತೆಯಲ್ಲಿ ವೈಶ್ವಾನರನು ತಾನಾಗಿದ್ದೇನೆಂದು ಶ್ರೀಕೃಷ್ಣ ಹೇಳಿಕೊಂಡಿದ್ದಾನೆ. ಛಾಂದೋಗ್ಯದಲ್ಲಿಯೂ ಅದೇ ವೈಶ್ವಾನರನ ವರ್ಣನೆ ಇದೆ. ಹಾಗಾಗಿ ಗೀತೆಯು ಛಾಂದೋಗ್ಯ ಶ್ರುತಿಗೆ ಸಮಾಖ್ಯಾ ಪ್ರಮಾಣವಾಗಿದೆ.)

ಪ್ರಕಾಶಃ — ಅತ್ರ ಪರೈರಿತಿಶಬ್ದೋ ಯಸ್ಮಾದಿತ್ಯರ್ಥೇ ವ್ಯಾಖ್ಯಾತಃ । ಸ ನ ಯುಕ್ತಃ, ಕರಣಾರ್ಥಲ್ಯುಡನ್ತಾನುಮಾನಶಬ್ದೇನೈವ ತದರ್ಥಲಾಭೇನ ಇತಿ ಶಬ್ದಾಭಾವೇऽಪ್ಯನ್ವಯ-ಸಮ್ಭವಾದತಿಶಯಾಭಾವಾಚ್ಚ ಹೇತ್ವರ್ಥಕತ್ವಸ್ಯ ವ್ಯರ್ಥತ್ವಾದಿತಿ ಭಾವೇನ ತಸ್ಯಾರ್ಥಮಾಹ —

ಅತ್ರೇತಿ ।

ಸೂತ್ರದಲ್ಲಿರುವ 'ಇತಿ' ಶಬ್ದಕ್ಕೆ ಆದ್ಯೃತಿಗಳು 'ಯಸ್ಮಾತ್' 'ಯಾವ ಕಾರಣದಿಂದ' ಎಂಬರ್ಥವನ್ನು ಹೇಳುತ್ತಾರೆ. ಇದು ತಪ್ಪು. ಸೂತ್ರದಲ್ಲಿರುವ ಅನುಮಾನ ಶಬ್ದವು ಕರಣಾರ್ಥದಲ್ಲಿರುವ ಲ್ಯುಟ್ ಪ್ರತ್ಯಯಾಂತವಾಗಿದೆ. ಆದ್ದರಿಂದ ಅನುಮಾನ ಶಬ್ದದಿಂದಲೇ ಯಾವ ಕಾರಣದಿಂದ ಎಂಬರ್ಥವು ದೊರೆಯುವಾಗ 'ಇತಿ' ಶಬ್ದವಿಲ್ಲದಿದ್ದರೂ ಅನ್ವಯವನ್ನು ಮಾಡಬಹುದು. ಮತ್ತು ಆದ್ಯೃತಿಗಳ ಅರ್ಥವನ್ನು ವಿವಕ್ಷಿಸಿದಾಗ ಯಾವುದೇ ಆತಿಶಯವೂ ಸಹ ಇರುವುದಿಲ್ಲ. ಆದ್ದರಿಂದ ಹೇತ್ವರ್ಥದಲ್ಲಿ 'ಇತಿ' ಶಬ್ದವನ್ನು ವಿವಕ್ಷಿಸುವುದು ವ್ಯರ್ಥವಾಗುತ್ತದೆ. ಆದ್ದರಿಂದ ಸೂತ್ರದಲ್ಲಿರುವ 'ಇತಿ' ಶಬ್ದಕ್ಕೆ ಸ್ಮರ್ಯಮಾಣ ಶಬ್ದಕ್ಕೆ ಅನ್ವಯ ಮಾಡಿದಾಗ 'ಇತಿ ಸ್ಮರ್ಯಮಾಣಮ್' ಎಂದಾಗುತ್ತದೆ. ಆಗ 'ಹೀಗೆ ಸ್ಮೃತಿಯಲ್ಲಿ ಹೇಳಿರುವುದು' ಎಂಬರ್ಥವನ್ನು ತಿಳಿಯಬೇಕು. 'ಅನುಮಾನಂ' ಎಂದರೆ 'ಅನುಮಾಪಕಮ್' ಎಂದರ್ಥ. ಸ್ಮೃತಿಯಲ್ಲಿ ಹೇಳಿರುವುದು ಅನುಮಾಪಕವಾಗಿದೆ ಎಂದು ನಾವು ಹೇಳುವಂತೆ 'ಇತಿ' ಶಬ್ದವು ಸಮಾಖ್ಯಾ ಪ್ರಮಾಣವನ್ನು ಸೂಚಿಸುತ್ತಿದೆಯೆಂದು ಹೇಳಬೇಕು. ಈ ಅಭಿಪ್ರಾಯದಿಂದ 'ಅತ್ರ' ಇತ್ಯಾದಿ ವಾಕ್ಯವು ಹೊರಟಿದೆ.

ಪ್ರಕಾಶಃ – ಯದ್ವಾ – ಭಾಷ್ಯೇ ''ಇತಿಶಬ್ದಃ ಸಮಾಖ್ಯಾಪ್ರದರ್ಶಕಃ'' ಇತ್ಯುಕ್ತಮ್ । ''ಅನೇನ 'ಇತಿ ಸ್ಮರ್ಯಮಾಣಮ್' ಇತ್ಯನ್ವಯಃ ಸೂಚಿತೋ ಭವತಿ'' ಇತ್ಯುಕ್ತಂ ಟೀಕಾಯಾಮ್ । ತಾವತಾ ಕಥಮರ್ಥೋ ಲಬ್ಧ ಇತ್ಯತಃ ತದ್ಯನಕ್ತಿ – ಅತ್ರೇತಿ ।

ಅಥವಾ ಭಾಷ್ಯದಲ್ಲಿ ಮೇಲೆ ಹೇಳಿದಂತೆ 'ಇತಿಶಬ್ದಃ ಸಮಾಖ್ಯಾಪ್ರದರ್ಶಕಃ' ಇತಿ ಶಬ್ದವು ಸಮಾಖ್ಯಾಪ್ರಮಾಣವನ್ನು ಪ್ರದರ್ಶಿಸುತ್ತಿದೆ ಎಂದು ಹೇಳಿದ್ದಾರೆ. ಟೀಕೆಯಲ್ಲಿಯೂ ಸಹ 'ಅನೇನ' 'ಇತಿ ಸ್ಮರ್ಯಮಾಣಂ' ಇತ್ಯನ್ವಯಃ ಸೂಚಿತೋ ಭವತಿ' ಹೀಗೆ ಹೇಳಿದ್ದರಿಂದ 'ಇತಿ ಸ್ಮರ್ಯಮಾಣಂ' ಎಂಬ ಅನ್ವಯವನ್ನು ಸೂಚಿಸಿದಂತಾಯಿತು' ಎಂದು ವ್ಯಾಖ್ಯಾನಿಸಿದ್ದಾರೆ. ಹೀಗೆ ಹೇಳಿದ್ದರಿಂದ ಸೂತ್ರಾರ್ಥವನ್ನು ಏನು ಹೇಳಿದಂತಾಯಿತು? ಎಂಬ ಪ್ರಶ್ನೆಗೆ 'ಅತ್ರ' ಎಂಬ ವಾಕ್ಯದಿಂದ ಉತ್ತರಿಸುತ್ತಿದ್ದಾರೆ. ಅಂದರೆ ಪ್ರಥಮಸೂತ್ರದಿಂದ 'ವೈಶ್ವಾನರಃ ವಿಷ್ಣುಃ' ಎಂಬುದನ್ನು ಅನುಷಂಗ ಮಾಡಿಕೊಂಡಾಗ ಸಂಪೂರ್ಣ ಸೂತ್ರಾರ್ಥದ ಅಭಿಪ್ರಾಯವು ಸ್ಪಷ್ಟವಾಗುತ್ತದೆಂದು ತಿಳಿಯಬೇಕು.

ಪ್ರಕಾಶಃ – ಆದ್ಯಸೂತ್ರೇ ''ತತ್ತು ಸಮನ್ವಯಾತ್'' ಇತ್ಯತೋऽನುವೃತ್ತಸ್ಯ 'ತತ್' ಇತ್ಯಸ್ಯಾರ್ಥಾನುವಾದಃ – ವಿಷ್ಣುರಿತಿ । ಅಹಂಶಬ್ದಸ್ಯ ವಿಷ್ಣ್ವವತಾರಭೂತಕೃಷ್ಣಾರ್ಥಕತ್ವಾತ್ 'ವಿಷ್ಣುರ್ವೈಶ್ವಾನರ ಇತಿ ಗೀತಾಯಾಮ್' ಇತ್ಯುಕ್ತಮ್ ।

ಪ್ರಥಮಸೂತ್ರದಲ್ಲಿ 'ತತ್ತು ಸಮನ್ವಯಾತ್' ಎಂಬ ಸೂತ್ರದಿಂದ ಅನುವೃತ್ತವಾದ 'ತತ್' ಎಂಬ ಪದದ ಅರ್ಥದ ಅನುವಾದವನ್ನು 'ವಿಷ್ಣುಃ' ಎಂದು ಹೇಳಿದ್ದಾರೆ. ಹಾಗಾದರೆ ವಿಷ್ಣುವೇ ವೈಶ್ವಾನರನೆಂದು ಇಲ್ಲಿ ಹೇಳುತ್ತಿದ್ದಾರೆ. ಆದರೆ ಗೀತೆಯಲ್ಲಿ 'ಅಹಂ ವೈಶ್ವಾನರಃ' ಎಂದಿದೆಯಲ್ಲವೇ? ಎಂಬ ಆಕಾಂಕ್ಷೆಯು ಪ್ರಾಪ್ತವಾದರೆ 'ಅಹಂ' ಶಬ್ದಕ್ಕೆ ವಿಷ್ಣುವಿನ ಅವತಾರನಾದ ಶ್ರೀಕೃಷ್ಣನೆಂದರ್ಥ. ಆದ್ದರಿಂದ 'ನಾನು ವೈಶ್ವಾನರನಾಗಿದ್ದೇನೆಂದು ಶ್ರೀಕೃಷ್ಣನು ಹೇಳಿದರೆ ವಿಷ್ಣುವೇ ವೈಶ್ವಾನರನು' ಎಂದು ಗೀತೆಯಲ್ಲಿ ಹೇಳಿದಂತಾಯಿತು.

ಪ್ರಕಾಶಃ – ತೃತೀಯ ಇತಿ । ''ಶಬ್ದಾದಿಭ್ಯೋऽನ್ತಃ ಪ್ರತಿಷ್ಠಾನಾನ್ನೇತಿ ಚೇನ್ನ ತಥಾ ದೃಷ್ಟ್ಯುಪದೇಶಾದಸಮ್ಭವಾತ್ಪುರುಷವಿಧಮಪಿ ಚೈನಮಧೀಯತೇ'' ಇತ್ಯತ್ರಾಗ್ನ್ಯಾದಿಶಬ್ದಾದ್ ಹೋಮಾಧಾರತ್ವಗಾರ್ಹಪತ್ಯಾದ್ಯಙ್ಗಕತ್ವಪಾಚಕತ್ವಾದಿಲಿಙ್ಗೇಭ್ಯಃ ''ಯೋऽಯಮನ್ತಃಪುರುಷೇ'' ಇತಿ ಅನ್ತಃಪ್ರತಿಷ್ಠಾನಾನ್ನ ವಿಷ್ಣುರಿತಿ ಶಙ್ಕಿತೇ, ಅಗ್ನ್ಯಾದಿನಾಮಲಿಙ್ಗಾದಿಮತ್ತ್ವೇನ ಉಪಾಸನೋಪದೇಶೇನ ತೇಷಾಂ ಸಾವಕಾಶತ್ವಾತ್, ''ಕೋ ನ ಆತ್ಮಾ ಕಿಂ ಬ್ರಹ್ಮ'' ಇತ್ಯುಕ್ತಾऽತ್ಮತ್ವಾದೇರನ್ಯತ್ರಾಸಮ್ಭವಾತ್, ''ಶೀರ್ಷ್ಣೋ ದ್ಯೌಸ್ಸಮವರ್ತತ'' ಇತ್ಯಾದಿನಾ ಪುರುಷಸೂಕ್ತೋಕ್ತಪುರುಷಸದೃಶಸ್ಯೈವಾತ್ರ ''ಮೂರ್ಧೈವ ಸುತೇಜಾಃ'' ಇತ್ಯಾದಿನಾऽಭಿಧಾನಾದ್ ವಿಷ್ಣುರೇವೇತಿ ನಿರವಕಾಶೇನ ಸಾವಕಾಶಸ್ಯ ಬಾಧೋಪಪತ್ತೇರಿತ್ಯುಕ್ತತ್ವಾದಿತಿ ಭಾವಃ ।

ತೃತೀಯೇ ಎಂಬ ಪ್ರತೀಕದ ಅರ್ಥ ಹೀಗೆ - 'ಓಂ ಶಬ್ದಾದಿಭ್ಯೋऽನ್ತಃ ಪ್ರತಿಷ್ಠಾನಾನ್ನೇತಿ ಚೇನ್ನ ತಥಾ ದೃಷ್ಟ್ಯುಪದೇಶಾದಸಂಭವಾತ್ಪುರುಷ- ವಿಧಮಪಿ ಚೈನಮಧೀಯತೇ ಓಂ' ಎಂಬುದು ಮೂರನೆಯ ಸೂತ್ರ. ಈ ಸೂತ್ರದಲ್ಲಿ ಅಗ್ನಿ ಮೊದಲಾದ ಶಬ್ದಗಳ ಆಧಾರದಿಂದ ಹೋಮಾಧಾರತ್ವ, ಗಾರ್ಹಪತ್ಯಾದ್ಯಙ್ಗಕತ್ವ, ಪಾಚಕತ್ವ ಮೊದಲಾದ ಲಿಂಗಗಳ ಆಧಾರದಿಂದ ''ಯೋऽಯಮಂತಃಪುರುಷೇ'' ಎಂಬುದಾಗಿ ದೇಹದ ಒಳಗೆ ಇರುವ ವೈಶ್ವಾನರನು ಅಗ್ನಿಯೇ ಆಗುತ್ತಾನೆ ಹೊರತು; ವಿಷ್ಣುವಲ್ಲ ಎಂದು ಆಶಂಕಿಸಿದರೆ ಅದು ಸರಿಯಲ್ಲ. ಏಕೆಂದರೆ ಅಗ್ನಿ ಮೊದಲಾದ ನಾಮಗಳಿಂದ ಹೋಮಾಧಾರತ್ವ ಮೊದಲಾದ ಲಿಂಗಗಳಿಂದ ವಿಷ್ಣುವನ್ನು ಉಪಾಸನೆ ಮಾಡುವುದಕ್ಕಾಗಿ ಶ್ರುತಿಯು ಹಾಗೇ ಹೇಳುತ್ತಿದೆ. ಆದ್ದರಿಂದ ಅಗ್ನಿವಿಷಯದಲ್ಲಿ ನೀವು ಹೇಳಿದ ಶ್ರುತಿಲಿಂಗಾದಿ ಪ್ರಮಾಣಗಳೆಲ್ಲವೂ ಸಾವಕಾಶವಾಗಿವೆ. ಮತ್ತು ''ಕೋ ನ ಆತ್ಮಾ ಕಿಂ ಬ್ರಹ್ಮ'' ಇತ್ಯಾದಿ ಶ್ರುತಿಗಳಲ್ಲಿ ಹೇಳಲ್ಪಟ್ಟ ಆತ್ಮ ಮೊದಲಾದ ಶಬ್ದಗಳು ವಿಷ್ಣುವನ್ನು ಬಿಟ್ಟು ಬೇರೆ ಕಡೆ ಬರಲು ಸಾಧ್ಯವಿಲ್ಲ. ಮತ್ತು 'ಶೀರ್ಷ್ಣೋದ್ಯೌಃ ಸಮವರ್ತತ' ಇತ್ಯಾದಿಯಾಗಿ ಪುರುಷಸೂಕ್ತದಲ್ಲಿ ವರ್ಣಿಸಲ್ಪಟ್ಟ ಪುರುಷನೇ ಇಲ್ಲಿಯೂ ಸಹ 'ಮೂರ್ಧೈವ ಸುತೇಜಾಃ' ಇತ್ಯಾದಿಯಾಗಿ ಚರ್ಣಿತನಾದ್ದರಿಂದ ವಿಷ್ಣುವೇ ವೈಶ್ವಾನರನೆಂದು ನಿರ್ಣಯಿಸಬಹುದು. ನಿರವಕಾಶವಾದ ಈ ಪ್ರಮಾಣಗಳಿಂದ ಸಾವಕಾಶವಾದ ಪೂರ್ವಪಕ್ಷ ಯುಕ್ತಿಗಳೆಲ್ಲವೂ ಬಾಧಿತವಾಗುತ್ತವೆಂದು ಮೂರನೆಯ ಸೂತ್ರದ ಅಭಿಪ್ರಾಯ.

ಪ್ರಕಾಶಃ – ಬಾಧಕೇತಿ । ಯದ್ಯಪಿ ''ಅಸಮ್ಭವಾತ್'' ಇತ್ಯಾದ್ಯಂಶೇನ ಸಾಧಕೋಕ್ತಿರಪ್ಯಸ್ತಿ, ತಥಾऽಪಿ ತದುಕ್ತೇಃ ಪರಪಕ್ಷೇ ಬಾಧಕೋಕ್ತ್ಯಾ ಬಾಧಕನಿರಾಸೇऽಪಿ ವ್ಯಾಪಾರಾತ್ 'ಬಾಧಕೋದ್ಧಾರಃ' ಇತ್ಯುಕ್ತಮ್ । ಅತ ಏವ ಪ್ರಕರಣಾದಿತ್ಯನುಕ್ತ್ವಾ 'ಅಸಮ್ಭವಾತ್' ಇತ್ಯುಕ್ತಮ್ ।

ವಾಸ್ತವಿಕವಾಗಿ ಸೂತ್ರದಲ್ಲಿ 'ಅಸಂಭವಾತ್' ಎಂಬ ಪದದಿಂದ ಸಾಧಕಪ್ರಮಾಣವನ್ನೂ ಹೇಳಿರುತ್ತಾರೆ. ಆದರೂ ಗ್ರಂಥಕಾರರು 'ಬಾಧಕೋದ್ಧಾರಃ' ಎಂದಷ್ಟೇ ಏಕೆ ಹೇಳಿದರು? ಎಂದರೆ 'ಅಸಂಭವಾತ್' ಎಂಬ ಪದವು ಸಾಧಕವನ್ನು ಹೇಳುವುದರ ಜೊತೆಗೆ ಪರಪಕ್ಷದಲ್ಲಿ ಬಾಧಕವನ್ನು ಹೇಳುವ ಮುಖಾಂತರ ಬಾಧಕದ

ಪರಿಹಾರವನ್ನು ಮಾಡುತ್ತಿದೆಯೆಂದು ತಿಳಿಸಬೇಕಾಗಿದೆ. ಆದ್ದರಿಂದಲೇ ಸೂತ್ರದಲ್ಲಿ 'ಪ್ರಕರಣಾತ್' ಎಂದು ಹೇಳದೇ 'ಅಸಂಭವಾತ್' ಎಂದು ಹೇಳಿದ್ದಾರೆ. ಒಂದು ವೇಳೆ ಅಗ್ನಿಯು ವೈಶ್ವಾನರನಾದರೆ, ಆತ್ಮಶಬ್ದ, ಬ್ರಹ್ಮಶಬ್ದ ಮೊದಲಾದವುಗಳೆಲ್ಲವೂ ಅಸಂಭವಿತವಾಗುತ್ತದೆಂದು ಪರಪಕ್ಷದಲ್ಲಿ ಬಾಧಕವನ್ನು ತಿಳಿಸಿದ್ದಾರೆ.

ಪ್ರಕಾಶಃ –''तथा दृष्टचपदेशात्'' इत्यंशस्य गायत्र्यधिकरणोक्तेना-पौनरुक्त्यमाह – **तथा चेतोऽर्पणेति ।**

ಗಾಯತ್ಯಧಿಕರಣದಲ್ಲಿ 'ತಥಾ ಚೇತೋಽರ್ಪಣೇತಿ' ಎಂದು ಹೇಳಿದ್ದನ್ನೇ ಈ ಸೂತ್ರದಲ್ಲಿ 'ತಥಾ ದೃಷ್ಟ್ಯುಪದೇಶಾತ್' ಎಂದು ಹೇಳುತ್ತಿದ್ದಾರೆ. ಆದ್ದರಿಂದ ಪುನರುಕ್ತಿ ದೋಷ ಬಂತಲ್ಲವೇ? ಎಂಬ ಪ್ರಶ್ನೆಗೆ 'ತಥಾ ಚೇತೋಽರ್ಪಣ' ಎಂಬ ಗ್ರಂಥದಿಂದ ಉತ್ತರಿಸುತ್ತಿದ್ದಾರೆ. ಪರಮಾತ್ಮನಲ್ಲೇ ಪ್ರಸಿದ್ಧವಾದ ಶಬ್ದಗಳನ್ನು ಬಿಟ್ಟು ಇತರತ್ರ ಪ್ರಸಿದ್ಧವಾದ ಶಬ್ದಗಳನ್ನೇಕೆ ಸಮನ್ವಯ ಮಾಡಬೇಕು ? ಎಂಬ ಪ್ರಶ್ನೆಗೆ 'ತಥಾ ಚೇತೋಽರ್ಪಣ ನಿಗದಾತ್' ಎಂಬ ಸೂತ್ರದಿಂದ ಉತ್ತರಿಸಿದ್ದಾರೆ. ಇಲ್ಲಿ ಬೇರೆ ದೇವತೆಗಳನ್ನು ಪ್ರತಿಪಾದಿಸುವ ಶಬ್ದಗಳು ಪರಮಾತ್ಮನಲ್ಲಿ ಬರುವುದೇ ಇಲ್ಲವೆಂದು ಶಂಕೆಯು ಪ್ರಾಪ್ತವಾದರೆ ಉಪಾಸನಗೋಸ್ಕರ ಹಾಗೇ ಶ್ರುತಿಗಳು ಹೇಳುತ್ತವೆಂದು ಉತ್ತರಿಸಿದ್ದಾರೆ. ಹೀಗೆ ವಿಷಯ ಒಂದೇ ಆದರೂ ಪ್ರಯೋಜನಗಳು ಬೇರೆಯಾಗಿರುವುದರಿಂದ ವೈಲಕ್ಷಣ್ಯವನ್ನು ತಿಳಿಯಬೇಕು.

ಪ್ರಕಾಶಃ – चतुर्थ इति । ''अत एव न देवता भूतं च'' इत्यत्र 'अत एव' निरवकाशाऽत्मशब्दादिहेतोरेव देवतादिर्नेत्यर्थः । साधकोक्तिबाधकोद्धारयोर-नन्तरं परमतनिरासस्यावसरप्राप्तेरिति भावः ।

ಚತುರ್ಥೇ ಎಂಬ ಪ್ರತೀಕದ ಅಭಿಪ್ರಾಯ ಹೀಗೆ - 'ಓಂ ಅತ ಏವ ನ ದೇವತಾ ಭೂತಂ ಚ ಓಂ' ಎಂಬುದು ನಾಲ್ಕನೆಯ ಸೂತ್ರ. ಈ ಸೂತ್ರದಲ್ಲಿ ಅತಏವ = ನಿರವಕಾಶವಾದ ಆತ್ಮಶಬ್ದವೇ ಮೊದಲಾದ ಹೇತುಗಳಿಂದಲೇ ವೈಶ್ವಾನರ ಪ್ರಕರಣದಲ್ಲಿ ಅಗ್ನಿದೇವತೆಯು ಪ್ರತಿಪಾದ್ಯನಲ್ಲವೆಂದು ಹೇಳಿರುತ್ತಾರೆ.

ಹೀಗೆ ಮೊದಲ ನಾಲ್ಕು ಸೂತ್ರಗಳಲ್ಲಿ ಸಾಧಕ ಪ್ರಮಾಣಗಳನ್ನು ಹಾಗೂ ಬಾಧಕ ಪ್ರಮಾಣಗಳಿಲ್ಲವೆಂದು ಹೇಳಿದನಂತರವೇ ಮುಂದೆ ಪರಮತ ನಿರಾಸವನ್ನು ಮಾಡಲು ಅವಕಾಶ ಬರುತ್ತದೆ ಎಂದು ತಿಳಿಯಬೇಕು.

ಪ್ರಕಾಶಃ – पञ्चम इति । ''साक्षादप्यविरोधं जैमिनिः'' इत्यत्र । **षष्ठादिष्विति ।** ''अभिव्यक्तेरित्याश्मरथ्यः'' ''अनुस्मृतेर्बादरिः'' ''सम्पत्तेरिति जैमिनिस्तथा हि दर्शयति'' ''आमनन्ति चैनमस्मिन्'' इत्येतेषु । **साधारणेति ।** उक्तवक्ष्यमाणसर्वशब्दसाधारणेत्यर्थः ।

'ಪಂಚಮೇ' ಎಂದರೆ 'ಸಾಕ್ಷಾದಪ್ಯವಿರೋಧಂ ಜೈಮಿನಿಃ' ಎಂಬ ಐದನೆಯ ಸೂತ್ರದಲ್ಲಿ ಲೌಕಿಕವಾದ, ವೈದಿಕವಾದ ಅನ್ಯತ್ರವ್ಯವಹಾರಕ್ಕೆ ಗತಿಯನ್ನು ಹೇಳಿದ್ದಾರೆ. 'ಷಷ್ಠಾದಿಷು' ಎಂದರೆ 'ಅಭಿವ್ಯಕ್ತೇರಿತ್ಯಾಶ್ಮರಥ್ಯಃ' 'ಅನುಸ್ಮೃತೇರ್ಬಾದರಿಃ' 'ಸಂಪತ್ತೇರಿತಿ ಜೈಮಿನಿಸ್ತಥಾ ಹಿ ದರ್ಶಯತಿ' 'ಆಮನಂತಿ ಚೈನಮಸ್ಮಿನ್' ಪರಿಪೂರ್ಣಚಂದ್ರಿಕಾ

ಎಂಬುದಾಗಿ ಆರನೆಯ ಸೂತ್ರದಿಂದ ಒಂಭತ್ತನೆಯ ಸೂತ್ರದ ತನಕ ನಾಲ್ಕು ಸೂತ್ರಗಳಲ್ಲಿ ವೈದಿಕವಾದ ಸೂಕ್ತಾದಿ ವ್ಯವಸ್ಥೆಗಳನ್ನು ಮಾಡಿರುತ್ತಾರೆ ಎಂದರ್ಥ. 'ಸಾಧರಣ' ಎಂದರೆ ಹಿಂದೆ ಹೇಳಿದ, ಮುಂದೆ ಹೇಳುವ ಸಕಲ ಶಬ್ದಗಳಲ್ಲಿ ಸಾಧಾರಣವಾದ ಬಾಧಕಗಳನ್ನು ಪರಿಹರಿಸುವುದಕ್ಕಾಗಿ ಎಂದರ್ಥ.

ಪ್ರಕಾಶಃ – ತತ್ರಾಪಿ ಪೌರ್ವಾಪರ್ಯಮಾಕ್ಷಿಪ್ಯ ಸಮಾಧತ್ತೇ – ಯದ್ಯಪೀತಿ । ಪಞ್ಚಮಾದೇರತ್ರಾನಿವೇಶಮಾಶಙ್ಕ್ಯ ತ್ರೇಧಾ ಸಮಾಧಿಮಾಹ – ನಚೇತಿ ।

ಮೊದಲು 'ಅನುಸ್ಮೃತೇರ್ಬಾದರಿಃ' ಎಂಬ ಸೂತ್ರವನ್ನು ಹೇಳಿ 'ಅಭಿವ್ಯಕ್ತೇರಿತ್ಯಾಶ್ಮರಥ್ಯಃ' ಎಂಬ ಸೂತ್ರವನ್ನು ನಂತರ ಹೇಳಬೇಕಿತ್ತಲ್ಲವೇ? ಎಂಬ ಪ್ರಶ್ನೆಗೆ 'ಯದ್ಯಪಿ' ಎಂಬ ವಾಕ್ಯದಿಂದ ಸಮಾಧಾನ ನೀಡುತ್ತಿದ್ದಾರೆ. ಐದನೆಯ ಸೂತ್ರದಲ್ಲಿ ನಾಲ್ಕುಸೂತ್ರಗಳನ್ನು ಎರಡನೆಯ ಪಾದದ ಕೊನೆಯಲ್ಲೇಕೆ ನಿವೇಶ ಮಾಡಿದ್ದಾರೆ. ಅಧ್ಯಾಯದ ಕೊನೆಯಲ್ಲಿ ನಿವೇಶ ಮಾಡಬೇಕಿತ್ತಲ್ಲವೇ? ಎಂಬ ಆಕಾಂಕ್ಷೆಗೆ ಮೂರು ಬಗೆಯಲ್ಲಿ ಸಮಾಧಾನವನ್ನು ನೀಡುತ್ತಿದ್ದಾರೆ 'ನಚ' ಇತ್ಯಾದಿ ವಾಕ್ಯದಿಂದ.

ಪ್ರಕಾಶಃ – ಪದಾದೀತಿ । ಪದವರ್ಣಸ್ವರಾದಿಸಮನ್ವಯಾದಿನಿಷ್ಠಾನಾಂ ಚತುರ್ಮುಖಾಖ್ಯತ್ತಮಾಧಿಕಾರಿತ್ವೇನ ತೇಷಾಂ ವ್ಯಾಪ್ತದರ್ಶಿತ್ವಾದಿತಿ ಭಾವಃ । ತರ್ಹಿ ತೃತೀಯಪಾದಾನ್ತೇ ನಿವೇಶಃ ಸ್ಯಾದಿತ್ಯತ ಆಹ – ತಯೋಭಯತ್ರೇತಿ ।।

ನಾಲ್ಕನೆಯ ಪಾದದಲ್ಲಿ ಪದ, ವರ್ಣ, ಸ್ವರ ಮೊದಲಾದ ಸಮನ್ವಯವನ್ನು ತಿಳಿಯುವಂತಹ ಚತುರ್ಮುಖಬ್ರಹ್ಮದೇವರೇ ಮೊದಲಾದ ಉತ್ತಮಾಧಿಕಾರಿಗಳು ಪ್ರಸಕ್ತರಾಗಿದ್ದಾರೆ. ಅಂತಹ ವ್ಯಾಪ್ತದರ್ಶಿಗಳಿಗೆ ಭಗವಂತನು ಎಲ್ಲಾ ಅಧಿಷ್ಠಾನಗಳಲ್ಲಿಯೂ ಉಪಾಸನೆಗೆ ಅರ್ಹನಾಗಿದ್ದಾನೆ. ಕೇವಲ ಅಗ್ನಿ ಮೊದಲಾದ ಒಂದೊಂದು ಅಧಿಷ್ಠಾನಗಳನ್ನು ಹೇಳುವುದು ತಪ್ಪಾಗುತ್ತದೆ. ವ್ಯಾಪ್ತೋಪಾಸ್ಯನಾದ್ದರಿಂದ ಎಲ್ಲೆಡೆ ಭಗವಂತನು ಉಪಾಸನೆಗೆ ಅರ್ಹನಾಗಿರುತ್ತಾನೆ. ಆದ್ದರಿಂದ ಈ ಸೂತ್ರಗಳಿಗೆ ಅಲ್ಲಿ ಅವಕಾಶವಿರುವುದಿಲ್ಲ. ಹಾಗಾದರೆ ಮೂರನೆಯ ಪಾದದ ಕೊನೆಯಲ್ಲಿ ನಿವೇಶ ಮಾಡಬಹುದಲ್ಲವೇ? ಎಂಬ ಪ್ರಶ್ನೆಗೆ 'ತಥೋಭಯತ್ರ' ಎಂಬ ಗ್ರಂಥದಿಂದ ಉತ್ತರಿಸಿದ್ದಾರೆ.

ಗುರುರಾಜೀಯಮ್ – ಸೂತ್ರಾಕ್ಷರಾರ್ಥ ಇತಿ । ಇದಂಶಬ್ದವದಿತಿಶಬ್ದೇನ ಪೂರ್ವಸೂತ್ರೇ ಪ್ರಕೃತವೈಶ್ವಾನರವಿಷ್ಣುಪರಾಮರ್ಶಾತ್ ತಸ್ಯ ಸ್ಮರ್ಯಮಾಣತ್ವೋಕ್ತ್ಯಾ ಸ್ಮೃತಿಶ್ರುತ್ಯೋರೇಕಾರ್ಥತ್ವಪ್ರದರ್ಶನೇನ ಸಮಾಖ್ಯಾಪ್ರದರ್ಶಕತ್ವಂ ಭಾಷ್ಯ ಇತಿಶಬ್ದಸ್ಯೋಕ್ತಮಿತಿ ಭಾವಃ ।

ಸಾರ

ಪ್ರಥಮಸೂತ್ರದಲ್ಲಿ ಶ್ರುತಿ ಎಂಬ ಸಾಧಕ ಪ್ರಮಾಣವನ್ನು ಹೇಳಿರುತ್ತಾರೆ. ಎರಡನೆಯ ಸೂತ್ರದಲ್ಲಿ ಸಮಾಖ್ಯಾಪ್ರಮಾಣವನ್ನು ಹೇಳಿರುತ್ತಾರೆ. ಸ್ವಪಕ್ಷ ಸಾಧಕವನ್ನು ಹೇಳಿದ ಮೇಲೆ ಮೂರನೆಯ ಸೂತ್ರದಲ್ಲಿ ವೈಶ್ವಾನರ ಶ್ರುತಿಯಲ್ಲಿರುವ ಅಸಾಧಾರಣವಾದ ಬಾಧಕವನ್ನು ಪರಿಹರಿಸಿದ್ದಾರೆ. ನಾಲ್ಕನೆಯ ಸೂತ್ರದಲ್ಲಿ ಪರಮತ ನಿರಾಕರಣೆ

ಇದೆ. ಐದನೆಯ ಸೂತ್ರದಲ್ಲಿ ವೈಶ್ವಾನರ ಶಬ್ದದ ಸಮನ್ವಯವು ಸಿದ್ಧವಾಯಿತಾದ್ದರಿಂದ ಸಕಲ ಶಬ್ದಗಳ ವಿಷಯದಲ್ಲಿರುವ ಬಾಧಕವನ್ನು ಪರಿಹರಿಸಿದ್ದಾರೆ. ಆರನೆಯ ಸೂತ್ರದಿಂದ ಮುಂದಿನ ನಾಲ್ಕು ಸೂತ್ರಗಳಲ್ಲಿ ವೇದದಲ್ಲಿರುವ ಸೂಕ್ಷಾದಿ ವ್ಯವಸ್ಥೆಗಳನ್ನು ಅನೇಕ ಬಗೆಯಲ್ಲಿ ಸಮರ್ಥಿಸಿದ್ದಾರೆ. ಈ ಕ್ರಮದಲ್ಲಿ ಚಿಂತಿಸಿದಾಗ ಸೂತ್ರಗಳ ಜೋಡಣೆಯು ಅತ್ಯಂತ ಸ್ವರಸವಾಗಿದೆಯೆಂದು ಸ್ಪಷ್ಟವಾಗಿ ತಿಳಿಯುತ್ತದೆ.

ಕೊನೆಯ ನಾಲ್ಕು ಸೂತ್ರಗಳು ವೈಶ್ವಾನರವೆಂಬ ನಾಮಾತ್ಮಕ ಶಬ್ದದ ಸಮನ್ವಯಕ್ಕಾಗಿ ಹೊರಟಿರುವುದಿಲ್ಲ. ಸಕಲ ಶಬ್ದಗಳ ಸಮನ್ವಯವನ್ನು ಭಗವಂತನಲ್ಲೇ ಮಾಡಿದಾಗ ಬರುವಂತಹ ಬಾಧಕವನ್ನಷ್ಟೇ ಪರಿಹರಿಸಿದೆ. ವಾಸ್ತವಿಕವಾಗಿ ನಾಲ್ಕನೆಯ ಪಾದದ ಕೊನೆಯಲ್ಲಿ ಈ ನಾಲ್ಕು ಸೂತ್ರಗಳನ್ನು ಹೇಳಬೇಕಿತ್ತೆ ಎಂದೆನಿಸುತ್ತದೆ. ಆದರೆ ಕೇವಲ ಪದ, ವರ್ಣ ಸ್ವರಗಳ, ಸಮನ್ವಯದಲ್ಲಿ ಪರ್ಯವಸಾನ ಗೊಳ್ಳುವ ನಾಲ್ಕನೆಯ ಪಾದದಲ್ಲಿ ಈ ಸೂತ್ರಗಳು ಅಸಂಗತವೇ ಆಗುತ್ತಿದ್ದವು. ಆದ್ದರಿಂದ ಸೂತ್ರಕಾರರು ನಾಮಾತ್ಮಕ ಹಾಗೂ ಲಿಂಗಾತ್ಮಕ ಶಬ್ದಗಳ ಸಮನ್ವಯವು ಮುಗಿಯುತ್ತಿರುವ ಸಂದರ್ಭದಲ್ಲಿ ಈ ನಾಲ್ಕು ಸೂತ್ರಗಳನ್ನು ಹೇಳಿದ್ದು ಅತ್ಯಂತ ಸಂಗತವೇ ಆಗಿದೆ.

ಶಂಕರ, ರಾಮಾನುಜರ ಪ್ರಥಮ ಸೂತ್ರಾರ್ಥ ವಿಮರ್ಶೆ

तात्पर्यचन्द्रिका

अन्ये तु – ''अयमग्निर्वैश्वानरः'' इत्यादिप्रयोगात् जाठरभूताग्निदेवतारूपत्रय-साधारणस्य वैश्वानरशब्दस्य, जीवेश्वरसाधारणस्याऽत्मशब्दस्य च ''मूर्धैव सुतेजाः'' इति द्युमूर्धत्वादिना विशेषणादित्यायसूत्रार्थ इत्याहुः ।

ಅನುವಾದ - ಶಾಂಕರ ಭಾಷ್ಯದಲ್ಲಿ ಸೂತ್ರಾರ್ಥವನ್ನು ಹೀಗೆ ಹೇಳಿದ್ದಾರೆ - ಛಾಂದೋಗ್ಯದಲ್ಲಿ 'ಅಯಮಗ್ನಿರ್ವೈಶ್ವಾನರಃ' ಎಂಬುದಾಗಿ ವೈಶ್ವಾನರ ಶಬ್ದವು ಕೇಳಿಸುತ್ತಿದೆ. ಜಾಠರಾಗ್ನಿ, ಭೂತಾಗ್ನಿ, ಅಗ್ನಿದೇವತೆ ಮೂವರಲ್ಲಿಯೂ ವೈಶ್ವಾನರ ಶಬ್ದವು ಸಮಾನವಾಗಿ ಪ್ರಯೋಗಿಸಲ್ಪಡುತ್ತದೆ. ಪ್ರಕರಣದ ಪ್ರಾರಂಭದಲ್ಲಿ ಜೀವ ಹಾಗೂ ಈಶ್ವರರಲ್ಲಿ ಸಾಧಾರಣವಾದ ಆತ್ಮಶಬ್ದವು ಕೇಳಿಸುತ್ತಿರುವುದರಿಂದ ಜೀವನೂ ಸಹ ವೈಶ್ವಾನರನೆನಿಸಬಹುದು. ಇಷ್ಟು ಪೂರ್ವಪಕ್ಷ.

ವೈಶ್ವಾನರ ಹಾಗೂ ಆತ್ಮಶಬ್ದಗಳು ಸಾಧಾರವಾಗಿದ್ದರೂ 'ಮೂರ್ಧೈವ ಸುತೇಜಾಃ' ಇತ್ಯಾದಿಯಾಗಿ ಸ್ವರ್ಗಾದಿಲೋಕಗಳೇ ವೈಶ್ವಾರನ ಅವಯವವಾಗಿದೆಯೆಂದು ಶ್ರುತಿಹೇಳುತ್ತಿದೆ. ಹೀಗೆ ಜೀವನಲ್ಲಿಲ್ಲದ ವಿಶೇಷಣಗಳನ್ನು ವೈಶ್ವಾನರಲ್ಲಿ ಹೇಳಿದ್ದರಿಂದ ಬ್ರಹ್ಮನೇ ಇಲ್ಲಿ ವೈಶ್ವಾನರ ಶಬ್ದದಿಂದ ಪ್ರತಿಪಾದ್ಯನಾಗುತ್ತಾನೆಂದು ಸಿದ್ಧಾಂತ.

तन्न, ''सोऽयमात्मा चतुष्पात्, स्थूलभुग्वैश्वानरः'' इत्यात्मन्यपि वैश्वानरशब्ददर्शनेन त्रितयसाधारण्योक्त्ययोगात् ।

ವೈಶ್ವಾನರ ಶಬ್ದವು ಜಾಠರಾಗ್ನಿ, ಭೂತಾಗ್ನಿ, ಅಗ್ನಿದೇವತೆ ಮೂರರಲ್ಲಿಯೂ ಸಾಧಾರಣವಾಗಿದೆ. ಆದ್ದರಿಂದ ಬ್ರಹ್ಮನು ವೈಶ್ವಾನರನಾಗುವುದಿಲ್ಲವೆಂಬ ವ್ಯಾಖ್ಯಾನವೇ ತಪ್ಪು. 'ಸೋऽಯಮಾತ್ಮಾ ಚತುಷ್ಪಾತ್, ಸ್ಥೂಲಭುಗ್ವೈಶ್ವಾನರಃ' ಎಂದು ಮಾಂಡೂಕ್ಯೋಪನಿಷತ್ತಿನಲ್ಲಿ ವೈಶ್ವಾನರಶಬ್ದವನ್ನು ಬ್ರಹ್ಮನಲ್ಲಿಯೂ ಮಾಡಲಾಗಿದೆ. ಹೀಗಿರುವಾಗ ವೈಶ್ವಾನರ ಶಬ್ದವು ಮೂರರಲ್ಲಿ ಮಾತ್ರ ಸಾಧಾರಣವೆಂದು ಹೇಳಿದ್ದು ಅಯುಕ್ತವಾಗುತ್ತದೆ.

ಜಾಠರಾಗ್ನೇರಪಿ ಭೂತಜಾತಿತ್ವೇನ ಪೃಥಗುಕ್ತ್ಯಯೋಗಾಚ್ಚ ।

ಮತ್ತು ಜಾಠರಾಗ್ನಿಯೂ ಸಹ ಅಗ್ನಿಜಾತಿಯಾದ್ದರಿಂದ ಭೂತಾಗ್ನಿಯಲ್ಲಿಯೇ ಸೇರುವಾಗ ಪ್ರತ್ಯೇಕವಾಗಿ ಪರಿಗಣಿಸಿದ್ದು ತಪ್ಪಾಗುತ್ತದೆ.

ಭಾಷ್ಯೋಕ್ತಶ್ರುತ್ಯಾದಿಭಿರಾತ್ಮಶಬ್ದಸ್ಯ ಬ್ರಹ್ಮಣ್ಯೇವ ಮುಖ್ಯತಯಾ ಜೀವಸಾಧಾರಣಾಭಾವಾಚ್ಚ ।

ಆತ್ಮ ಶಬ್ದವು ಜೀವ ಹಾಗೂ ಬ್ರಹ್ಮರಲ್ಲಿ ಸಾಧಾರವಾಗಿವೆಯೆಂದು ಆದ್ವೈತಿಗಳು ಹೇಳಿದರು. ಆದರೆ ಭಾಷ್ಯದಲ್ಲಿ ಉದಾಹರಿಸಿದ ಅನೇಕ ಶ್ರುತಿ, ಸ್ಮೃತಿಗಳಿಂದ ಬ್ರಹ್ಮನಲ್ಲಿ ಮಾತ್ರ ಆತ್ಮಶಬ್ದವು ಮುಖ್ಯವಾಗಿರುತ್ತದೆಂದು ತಿಳಿಯುತ್ತವೆ. ಹೀಗಿರುವಾಗ ಜೀವಬ್ರಹ್ಮರಲ್ಲಿ ಸಾಧಾರಣವಾಗಿದೆಯೆಂದು ಹೇಳುವುದು ಅಯುಕ್ತವಾಗಿದೆ.

ಸ್ವೀಕೃತಂ ಚ ತ್ವಯಾऽಪಿ ''ದ್ಯುಭ್ವಾದ್ಯಾಯತನಮ್'' ಇತ್ಯತ್ರಾತ್ಮಶಬ್ದಸ್ಯ ಬ್ರಹ್ಮಸಾಧಾರಣ್ಯಮ್ । ಅನ್ಯಥಾ ''ತಮೇವೈಕಂ ಜಾನಥ ಆತ್ಮಾನಮ್'' ಇತ್ಯಾತ್ಮಶಬ್ದಸ್ಯ ಜೀವಶಬ್ದತ್ವೇನ ಸೂತ್ರೇ 'ಅತಶ್ಚಬ್ದಾತ್' ಇತಿ ಹೇತುನಾ ಜೀವನಿರಾಸಸ್ಯ, 'ಸ್ವಶಬ್ದಾತ್' ಇತ್ಯನೇನೋಕ್ತಾತ್ಮಶಬ್ದೇನ ಬ್ರಹ್ಮತ್ವಸಾಧನಸ್ಯ ಚಾಯೋಗಾತ್ ।।

ನೀವೂ ಸಹ ಆತ್ಮಶಬ್ದವು ಬ್ರಹ್ಮನಲ್ಲಿ ಅಸಾಧಾರಣವಾಗಿದೆಯೆಂದು 'ದ್ಯುಭ್ವಾದ್ಯಾಯತನಮ್' ಎಂಬ ಸೂತ್ರದಲ್ಲಿ ಒಪ್ಪಿದ್ದೀರಿ. ಇಲ್ಲದಿದ್ದರೆ 'ತಮೇವೈಕಂ ಜಾನಥ ಆತ್ಮಾನಮ್' ಎಂಬಲ್ಲಿ ಆತ್ಮಶಬ್ದವು ಜೀವಪ್ರತಿಪಾದಕವಾಗುವುದರಿಂದ ಸೂತ್ರದಲ್ಲಿ 'ಅತಶ್ಚಬ್ದಾತ್' ಎಂಬ ಹೇತುವಿನಿಂದ ಜೀವನನ್ನು ನಿರಾಸ ಮಾಡಿದಂತಾಗುವುದಿಲ್ಲ. 'ಸ್ವಶಬ್ದಾತ್' ಎಂಬ ಸೂತ್ರದ ಭಾಗದಿಂದ ಹೇಳಲ್ಪಟ್ಟ ಆತ್ಮಶಬ್ದದಿಂದ ದ್ಯುಭ್ವಾದ್ಯಾಯತನನಾಗುವವನು ಬ್ರಹ್ಮನೇ ಆಗಿದ್ದಾನೆಂದೂ ಸಹ ನಿರ್ಣಯಿಸಲು ಆಗುವುದಿಲ್ಲ. ಆದ್ದರಿಂದ ಆದ್ವೈತಿಗಳ ಪ್ರಥಮಸೂತ್ರವ್ಯಾಖ್ಯಾನವು ಅಸಾಧುವಾಗಿದೆ.

ಕೇಚಿತ್ತು – ಜಾಠರಭೂತಾಗ್ನಿದೇವತೇಶ್ವರರೂಪಚತುಷ್ಟಯಸಾಧಾರಣಸ್ಯ ವೈಶ್ವಾನರಶಬ್ದಸ್ಯ, ಮುಮುಕ್ಷುಭಿರೌಪಮನ್ಯವಪ್ರಭೃತಿಭಿರ್ಜಿಜ್ಞಾಸ್ಯಮಾನತ್ವಾದಿಭಿರ್ಬ್ರಹ್ಮಲಿಙ್ಗೈರ್ವಿಶೇಷಣಾದಿತ್ಯರ್ಥ ಇತ್ಯಾಹುಃ।

ರಾಮಾನುಜರ ಪ್ರಥಮಸೂತ್ರವ್ಯಾಖ್ಯಾನ ಹೀಗಿದೆ - ಜಾಠರಾಗ್ನಿ, ಭೂತಾಗ್ನಿ, ಆಗ್ನಿದೇವತೆ, ಪರಬ್ರಹ್ಮ ಈ ನಾಲ್ಕರಲ್ಲಿಯೂ ಸಾಧಾರಣವಾದ ವೈಶ್ವಾನರಶಬ್ದಕ್ಕೆ ಪರಮಾತ್ಮನಲ್ಲಿ ಮಾತ್ರ ಇರುವ ಧರ್ಮಗಳನ್ನು ವಿಶೇಷಣವನ್ನಾಗಿ ಹೇಳಲಾಗಿದೆ. ಮುಮುಕ್ಷುಗಳಾದ ಔಪಮನ್ಯುವೇ ಮೊದಲಾದ ಐದು ಮಂದಿ ಶಿಷ್ಯಂದಿರು ಬ್ರಹ್ಮನ ಜಿಜ್ಞಾಸೆಯನ್ನು ಮಾಡಿದ್ದಾರೆ. ಆವಾಗ ವೈಶ್ವಾನರನೇ ಬ್ರಹ್ಮನೆಂದು ರಾಜನು ಉಪದೇಶಿಸಿದ್ದಾನೆ. ಹೀಗೆ ಜಿಜ್ಞಾಸಾಮಾನತ್ವ ಮುಂತಾದ ಬ್ರಹ್ಮನ ಲಿಂಗಗಳಿಂದ ವೈಶ್ವಾನರನಿಗೆ ವಿಶೇಷಣಗಳನ್ನು ಹೇಳಿದ್ದರಿಂದ ವೈಶ್ವಾನರನು ಬ್ರಹ್ಮನೇ ಆಗುತ್ತಾನೆಂದು ಸಿದ್ಧಾಂತ ಮಾಡಿದ್ದಾರೆ.

तन्न, जाठरस्य पृथगुक्तयोगस्योक्तत्वात् ।

ಅದ್ವೈತಿಗಳಂತೆ ಇವರ ವ್ಯಾಖ್ಯಾನವೂ ಇರುತ್ತದೆ. ಎಂದರೆ ಜಾಠರಾಗ್ನಿಯನ್ನು ಪ್ರತ್ಯೇಕವಾಗಿ ಪರಿಗಣಿಸಿದ್ದು ತಪ್ಪಾಗುತ್ತದೆಂಬುದು ಇವರಿಗೂ ಸಮಾನ ಎಂದರ್ಥ.

''आत्मानं वैश्वानरम्'' इति साक्षाद्वैश्वानरविशेषणाऽत्मश्रुतिग्रहणसम्भवे प्राकरणिकलिङ्गरूपविशेषणग्रहणायोगाच्च ।।

ಮತ್ತು 'ಆತ್ಮಾನಂ ವೈಶ್ವಾನರಮ್' ಎಂಬುದಾಗಿ ವೈಶ್ವಾನರನಲ್ಲಿ ನೇರವಾಗಿ ವಿಶೇಷಣವಾಗಿರುವ ಆತ್ಮಶ್ರುತಿಯಿಂದಲೇ ಬ್ರಹ್ಮನು ವೈಶ್ವಾನರನಾಗಿದ್ದಾನೆಂದು ಹೇಳಲು ಬರುವಾಗ ಪ್ರಕರಣದಿಂದ ಲಭಿಸುವ ಲಿಂಗವೆಂಬ ವಿಶೇಷಣದಿಂದ ಪರಮಾತ್ಮನನ್ನು ವೈಶ್ವಾನರನೆಂದು ನಿರ್ಣಯಿಸುವುದು ಅಯುಕ್ತವಾಗಿದೆ.

प्रकाशः –

अन्ये त्विति । ''आत्मानं वैश्वानरमुपास्ते'' इत्यत्र वैश्वानरः किं जाठराग्निः भूताग्निर्वा दिव्यदेवता वा जीवात्मा वा परमात्मा वेति संशये,

ವಿವರಣೆ - 'ಅನ್ಯೇತ್ವಿತಿ' ಎಂಬ ಗ್ರಂಥದ ಅಭಿಪ್ರಾಯ ಹೀಗೆ - ಅದ್ವೈತಿಗಳ ಅಧಿಕರಣ ಶರೀರ ಹೀಗಿದೆ - 'ಆತ್ಮಾನಂ ವೈಶ್ವಾನರಮುಪಾಸ್ತೇ' ಎಂಬುದು ಈ ಅಧಿಕರಣದ ವಿಷಯವಾಕ್ಯ. ಇಲ್ಲಿ ಕೇಳಿಸುತ್ತಿರುವ ವೈಶ್ವಾನರವು ಜಾಠರಾಗ್ನಿಯೋ? ಭೌತಿಕವಾದ ಅಗ್ನಿಯೋ? ದಿವ್ಯದೇವತೆಯೋ? ಜೀವಾತ್ಮನೋ? ಪರಮಾತ್ಮನೋ? ಎಂದು ಸಂಶಯ.

प्रकाशः – 'अयमग्निर्वैश्वानरो योऽयमन्तः पुरुषे'' इति जाठराग्नौ, ''विश्वस्मा अग्निं भुवनाय देवा वैश्वानरम्'' इति बाह्ये भूताग्नौ, ''वैश्वानरस्य

सुमतौ स्याम'' इति देवतायां प्रयोगाद्वैश्वानरशब्दस्य त्रितयसाधारण्या-
ज्जाठराग्न्यादिरेव वा, आत्मशब्दस्य जीवे रूढत्वात्तद्वलाज्जीवो वेति प्राप्ते,

'ಅಯಮಗ್ನಿರ್ವೈಶ್ವಾನರಃ ಯೋऽಯಮಂತಃ ಪುರುಷೇ' ಎಂಬ ಶ್ರುತಿಯು ಜಾಠರಾಗ್ನಿಯನ್ನು ವೈಶ್ವಾನರನೆನ್ನುತ್ತಿದೆ. 'ವಿಶ್ವಸ್ಯಾ ಆಗ್ನಿಂ ಭುವನಾಯ ದೇವಾ ವೈಶ್ವಾನರಮ್' ಎಂಬ ಶ್ರುತಿಯು ಭೂತಾಗ್ನಿಯನ್ನು ವೈಶ್ವಾನರನೆನ್ನುತ್ತಿದೆ. 'ವೈಶ್ವಾನರಸ್ಯ ಸುಮತೌ ಸ್ಯಾಮ' ಎಂಬ ಶ್ರುತಿಯು ದೇವತೆಯನ್ನು ವೈಶ್ವಾನರನೆನ್ನುತ್ತಿದೆ. ಹೀಗೆ ವೈಶ್ವಾನರ ಶಬ್ದವು ಮೂವರಲ್ಲಿಯೂ ಸಾಧಾರಣವಾಗಿರುವುದರಿಂದ ಜಾಠರಾಗ್ನಿ, ಭೌತಿಕಾಗ್ನಿ, ಅಗ್ನಿದೇವತೆ ಇವರೇ ವೈಶ್ವಾನರ ಶಬ್ದದಿಂದ ಪ್ರತಿಪಾದ್ಯರಾಗುತ್ತಾರೆ. ಅಥವಾ ವೈಶ್ವಾನರ ಪ್ರಕರಣದಲ್ಲಿ ಆತ್ಮಶಬ್ದವು ಕೇಳಿಸುತ್ತಿದೆ. ಈ ಆತ್ಮಶಬ್ದವು ಜೀವನಲ್ಲಿ ರೂಢವಾದ್ದರಿಂದ ಜೀವನೂ ಸಹ ವೈಶ್ವಾನರನಾಗಬಹುದು. ಇಷ್ಟು ಪೂರ್ವಪಕ್ಷ.

ಪ್ರಕಾಶಃ – ''एतस्यात्मनो वैश्वानरस्य द्यौर्मूर्धैव'' इत्यादिना द्युमूर्धत्वादिश्रवणात्, ''को न आत्मा किं ब्रह्म'' इति ब्रह्मशब्दश्रवणात्, तयोश्चान्यत्रायोगात्, वैश्वानरशब्दस्य विश्वश्चासौ नरश्चेति विश्वनरः सर्वात्मकः पुरुष इत्यर्थः । विश्वनर एव वैश्वानर इति योगवृत्त्या ब्रह्मणि सम्भवात्, आत्मशब्दस्य जीववद् ब्रह्मण्यपि वृत्तेः वैश्वानरो ब्रह्मेति सिद्धान्त इत्याहुः ।

'ಏತಸ್ಯಾತ್ಮನೋ ವೈಶ್ವಾನರಸ್ಯ ದ್ಯೌರ್ಮೂರ್ಧೈವ' ಇತ್ಯಾದಿ ವಾಕ್ಯದಿಂದ ದ್ಯುಲೋಕವೇ ಯಾರ ತಲೆಯಾಗಿದೆಯೋ, ಅವನೇ ವೈಶ್ವಾನರನೆಂದು ಶ್ರುತಿ ಹೇಳುತ್ತಿದೆ. ಮತ್ತು 'ಕೋ ನ ಆತ್ಮಾ ಕಿಂ ಬ್ರಹ್ಮ' ಎಂಬಲ್ಲಿ ಬ್ರಹ್ಮಶಬ್ದವು ಕೇಳಿಸುತ್ತಿರುವುದರಿಂದ ಈ ಬ್ರಹ್ಮಶಬ್ದವು ಬೇರೆ ಕಡೆ ಬರಲು ಸಾಧ್ಯವಿಲ್ಲದ ಕಾರಣ ಸರ್ವಾತ್ಮಕನಾದ ಪುರುಷನೇ ವೈಶ್ವಾನರನಾಗಿದ್ದಾನೆ. 'ವೈಶ್ವಾನರ' ಶಬ್ದಕ್ಕೆ 'ವಿಶ್ವಶ್ಚಾಸೌ ನರಶ್ಚ ವಿಶ್ವನರಃ, ವಿಶ್ವನರಃ ಏವ ವೈಶ್ವಾನರಃ' ಎಂಬ ಯೌಗಿಕವಾದ ವ್ಯುತ್ಪತ್ತಿಯನ್ನು ತಿಳಿಯಬೇಕು. ಸಕಲ ಆತ್ಮರ ಸ್ವರೂಪನಾದ್ದರಿಂದ ವಿಶ್ವನರನಾಗಿದ್ದಾನೆ. ಸ್ವಾರ್ಥದಲ್ಲಿ 'ಅಣ್' ಪ್ರತ್ಯಯ ಮಾಡಿದಾಗ ವಿಶ್ವಾನರನೇ ವೈಶ್ವಾನರನೆನಿಸುತ್ತಾನೆ. ಆತ್ಮಶಬ್ದವು ಜೀವನಂತೆ ಬ್ರಹ್ಮನಲ್ಲಿಯೂ ಉಪಪನ್ನವಾಗುವುದರಿಂದ ವೈಶ್ವಾನರನಾದವನು ಬ್ರಹ್ಮನೇ ಆಗುತ್ತಾನೆಂದು ಸಿದ್ಧಾಂತ.

ಪ್ರಕಾಶಃ – तत्र सूत्रार्थनिरासेनैतन्निरस्तमिति भावेन तमनूद्य निराह – **अयमिति ।**

ಸೂತ್ರಾರ್ಥನಿರಾಸ ಮಾಡುವುದರಿಂದಲೇ ಆದ್ವೈತಿಗಳ ಅಧಿಕರಣಶರೀರವೂ ಸಹ ನಿರಾಕೃತವಾಗುತ್ತದೆಂಬ ಅಭಿಪ್ರಾಯದಿಂದ ಗ್ರಂಥಕಾರರು ಸೂತ್ರಾರ್ಥವನ್ನು ಅನುವಾದ ಮಾಡಿ ನಿರಾಕರಿಸುತ್ತಿದ್ದಾರೆ. 'ಅಯಂ' ಇತ್ಯಾದಿ ವಾಕ್ಯದಿಂದ.

प्रकाशः – जाठरेति । अन्यथा 'अत एव न देवता भूतं जाठरश्च' इति निर्देशः स्यादिति भावः ।

ಭೌತಿಕಾಗ್ನಿಯಲ್ಲಿಯೇ ಜಠರಾಗ್ನಿಯೂ ಸಹ ಸೇರುತ್ತದೆ. ಇಲ್ಲದಿದ್ದರೆ ಜಾಠರಾಗ್ನಿಯನ್ನು ಪ್ರತ್ಯೇಕವಾಗಿ ನಿರಾಕರಿಸಲು 'अत एव न देवता भूतं च जाठरश्च' ಎಂದು ಸೂತ್ರದಲ್ಲಿ ಹೇಳಬೇಕಿತ್ತು ಎಂದು 'जाठर' ಎಂಬ ಪ್ರತೀಕದ ಅರ್ಥ.

प्रकाशः – जीवकोटेरप्युत्थानमाह – भाष्योक्तेति । ''अयमात्मा ब्रह्म''

'अनात्तत्वादनात्मान ऊनत्वाद्गुणराशितः ।'

इत्यादिभिरित्यर्थः ।

ಜೀವಕೋಟಿಕವಾದ ಪೂರ್ವಪಕ್ಷವೂ ಸಹ ಹುಟ್ಟುವುದಿಲ್ಲವೆಂದು 'भाष्योक्त' ಎಂಬ ವಾಕ್ಯದಿಂದ ಹೇಳುತ್ತಿದ್ದಾರೆ. 'अयमात्मा ब्रह्म' 'अनात्तत्वदनात्मान ऊनत्वाद्गुणराशितः ।' ಇವೇ ಮೊದಲಾದ ಶ್ರುತಿಸ್ಮೃತಿಗಳಿಂದ ಆತ್ಮಶಬ್ದವು ಬ್ರಹ್ಮನನ್ನೇ ಪ್ರತಿಪಾದಿಸುತ್ತದೆ ಹೊರತು ಜೀವನಲ್ಲಿ ಬರುವುದಿಲ್ಲವೆಂದು ತಿಳಿಯಬೇಕು.

प्रकाशः – स्वीकृतत्वमेव व्युत्थितं प्रति विपक्षे बाधकोक्त्याऽऽह – अन्यथेति ।।

ಆತ್ಮಶಬ್ದವು ಪರಮಾತ್ಮನನ್ನೇ ಪ್ರತಿಪಾದಿಸುತ್ತದೆಂದು ನೀವೂ ಸಹ ಒಪ್ಪಬೇಕು. ಇಲ್ಲದಿದ್ದರೆ ವಿಪಕ್ಷದಲ್ಲಿ ಬಾಧಕಬರುತ್ತದೆಂದು 'अन्यथा' ಇತ್ಯಾದಿ ವಾಕ್ಯದಿಂದ ಸಮರ್ಥಿಸುತ್ತಿದ್ದಾರೆ.

प्रकाशः – केचित्त्विति । वैश्वानरः किं परमात्मेति शक्यनिर्णय उत नेति संशये,

'केचित्' ಎಂದರೆ ರಾಮಾನುಜರು. ಅವರ ಅಧಿಕರಣ ಶರೀರ ಹೀಗಿದೆ - ವೈಶ್ವಾನರ ಶಬ್ದದಿಂದ ಪ್ರತಿಪಾದ್ಯನಾದವನು ಪರಮಾತ್ಮನೆಂದು ನಿಶ್ಚಯ ಮಾಡಲು ಸಾಧ್ಯವಿದೆಯೋ? ಇಲ್ಲವೊ? ಎಂದು ಸಂಶಯ.

प्रकाशः – जीवपरसाधारणाऽऽत्मशब्दसत्त्वेऽप्यात्मशब्दस्य ''वैश्वानरमात्मानम्'' इति जीवे अप्रसिद्धवैश्वानरशब्दविशेषितत्वेन जीवविषयत्वशङ्कानुदयात्,

ವಾಸ್ತವಿಕವಾಗಿ ವೈಶ್ವಾನರ ಪ್ರಕರಣದಲ್ಲಿ ಆತ್ಮಶಬ್ದವು ಕೇಳಿಸುತ್ತಿದೆ. ಈ ಆತ್ಮಶಬ್ದವು ಜೀವನಲ್ಲಿ ಹಾಗೂ ಪರಮಾತ್ಮನಲ್ಲಿ ಸಾಧಾರಣವಾಗಿದೆ. ಆದರೂ ಜೀವನನ್ನು ಆತ್ಮನೆಂದು ಸ್ವೀಕರಿಸಲು ಸಾಧ್ಯವಿಲ್ಲ.

'ವೈಶ್ವಾನರಮಾತ್ಮಾನಮ್' ಎಂಬುದಾಗಿ ಜೀವನಲ್ಲಿ ಅಪ್ರಸಿದ್ಧವಾದ ವೈಶ್ವಾನರಶಬ್ದವನ್ನು ವಿಶೇಷಣವನ್ನಾಗಿ ಶ್ರುತಿ ಹೇಳುತ್ತಿದೆ. ಈ ಕಾರಣದಿಂದ ಜೀವವಿಷಯಕವಾದ ಶಂಕೆಯು ಹುಟ್ಟಲು ಸಾಧ್ಯವೇ ಇಲ್ಲ.

ಪ್ರಕಾಶಃ – ಜಾಠರಭೂತದೇವತಾಸು ಪ್ರಾಗುಕ್ತರೀತ್ಯಾ ಪ್ರಯೋಗದರ್ಶನಾತ್, ಪರಮಾತ್ಮನಿ ಚ ''ತದಾತ್ಮನ್ಯೇವ ಹೃದಯೇऽಗ್ನೌ ವೈಶ್ವಾನರೇ ಪ್ರಾಸ್ಯತ್'' ಇತಿ ಪ್ರಯೋಗದರ್ಶನಾತ್, ವೈಶ್ವಾನರಶಬ್ದಸ್ಯ ಜಾಠರಾದಿಚತುಷ್ಟಯಸಾಧಾರಣ್ಯಾತ್;

ಇನ್ನು ಜಾಠರಾಗ್ನಿಯಲ್ಲಿ, ಭೂತಾಗ್ನಿಯಲ್ಲಿ ಮತ್ತು ಅಗ್ನಿದೇವತೆಯಲ್ಲಿ ಹಿಂದೆ ಹೇಳಿದಂತೆ ಪ್ರಯೋಗವು ಕಾಣಸುತ್ತಿದೆ. ಪರಮಾತ್ಮನಲ್ಲಿಯೂ 'ತದಾತ್ಮನ್ಯೇವ ಹೃದಯೇऽಗ್ನೌ ವೈಶ್ವಾನರೇ ಪ್ರಾಸ್ಯತ್' ಎಂದು ವೈಶ್ವಾನರ ಶಬ್ದ ಪ್ರಯೋಗವು ಕಾಣಸುತ್ತಿದೆ. ಹೀಗೆ ವೈಶ್ವಾನರ ಶಬ್ದವು ನಾಲ್ಕು ಪದಾರ್ಥಗಳಲ್ಲಿ ಸಾಧಾರಣವಾಗಿದೆ.

ಪ್ರಕಾಶಃ – ಉಪಕ್ರಮಗತಬ್ರಹ್ಮಾತ್ಮಶಬ್ದಯೋರ್ಮಿಥಃ ಪ್ರತಿಬದ್ಧತ್ವೇನಾನಿರ್ಧಾರಕತ್ವಾತ್, ಅನ್ನಾದನರೂಪಫಲಸ್ಯ ಚ ಸರ್ವತ್ರೋಪಪನ್ನತ್ವಾದಶಕ್ಯನಿರ್ಣಯ ಇತಿ ಪ್ರಾಪ್ತೇ,

ಹಾಗೂ ಉಪಕ್ರಮದಲ್ಲಿ ಬ್ರಹ್ಮಶಬ್ದ ಹಾಗೂ ಆತ್ಮಶಬ್ದಗಳು ಕೇಳಿಸುತ್ತಿವೆ. ಬ್ರಹ್ಮಶಬ್ದವು ವೈಶ್ವಾನರನನ್ನು ನಿರ್ಧಾರ ಮಾಡಲು ಹೊರಟರೆ ಜೀವನಲ್ಲಿ ಪ್ರಸಿದ್ಧವಾದ ಆತ್ಮಶಬ್ದವು ಪ್ರತಿಬಂಧಕವಾಗುತ್ತದೆ. ಆತ್ಮಶಬ್ದವು ವೈಶ್ವಾನರನನ್ನು ನಿರ್ಧಾರ ಮಾಡಲು ಹೊರಟರೆ, ಪರಮಾತ್ಮನಲ್ಲಿ ಪ್ರಸಿದ್ಧವಾದ ಬ್ರಹ್ಮಶಬ್ದವು ಪ್ರತಿಬಂಧಕವಾಗುತ್ತದೆ. ಹೀಗೆ ಎರಡೂ ಶಬ್ದಗಳು ಪರಸ್ಪರ ಪ್ರತಿಬಧ್ಧ ಪ್ರತಿಬಂಧಕಗಳಾಗಿ ಜೀವನನ್ನು ಅಥವಾ ಬ್ರಹ್ಮನನ್ನು ವೈಶ್ವಾನರನೆಂದು ನಿರ್ಣಯ ಮಾಡಲು ಬಿಡುವುದಿಲ್ಲ. ಇದರಂತೆ ಶ್ರುತಿಯಲ್ಲಿ 'ಅನ್ನಾದನ' ಎಂಬ ಫಲವು ಕೇಳಿಸುತ್ತಿದೆ. ನಾವು ತಿನ್ನುವ ಅನ್ನವನ್ನು ಜೀರ್ಣಮಾಡುವಿಕೆಯು, ತಿನ್ನುವಿಕೆಯು, ವಿಷ್ಣುವಿನಲ್ಲಿಯೇ ಉಪಪನ್ನವಾಗಬೇಕಾಗಿಲ್ಲ. ಜಾಠರಾಗ್ನಿಯಲ್ಲಿ ಅಥವಾ ಅಗ್ನಿದೇವತೆಯಲ್ಲಿ ಎಲ್ಲೆಡೆಯೂ ಇದು ಉಪಪನ್ನವಾಗುತ್ತದೆ. ಆದ್ದರಿಂದ ವೈಶ್ವಾನರನು ಪರಮಾತ್ಮನೇ ಆಗಿದ್ದಾನೆಂದು ನಿರ್ಧಾರ ಮಾಡಲು ಸಾಧ್ಯವಿಲ್ಲವೆಂದು ಪೂರ್ವಪಕ್ಷ.

ಪ್ರಕಾಶಃ – ''ಕೋ ನ ಆತ್ಮಾ ಕಿಂ ಬ್ರಹ್ಮ'' ಇತಿ ಸರ್ವೇಷಾಂ ಜೀವಾನಾಮ್ ಆತ್ಮಭೂತಂ ಬ್ರಹ್ಮ ಕಿಮಿತಿ ಪ್ರಶ್ನಕರಣಾತ್, ಉತ್ತರೇ ಚ ''ಆತ್ಮಾನಂ ವೈಶ್ವಾನಮ್'' ಇತಿ ಬ್ರಹ್ಮಶಬ್ದಸ್ಥಾನೇ ಸರ್ವತ್ರ ವೈಶ್ವಾನರಶಬ್ದಪ್ರಯೋಗಾಚ್ಚಾಯಂ ವೈಶ್ವಾನರಃ ಪರಮಾತ್ಮೇತಿ ನಿರ್ಣೇತುಂ ಶಕ್ಯತ ಏವ,

'ಕೋ ನ ಆತ್ಮಾ ಕಿಂ ಬ್ರಹ್ಮ' ಎಂಬುದಾಗಿ ಪ್ರಾರಂಭದಲ್ಲಿ ಸಕಲ ಜೀವರುಗಳಿಗೆ ಆತ್ಮನಾಗಿರುವ ಬ್ರಹ್ಮನು ಯಾರು? ಎಂಬುದಾಗಿ ಪ್ರಶ್ನಿಸಲಾಗಿದೆ. ಇದಕ್ಕೆ ಉತ್ತರ ನೀಡುವಾಗ 'ಆತ್ಮಾನಂ ವೈಶ್ವಾನರಮ್' ಎಂದು ಬ್ರಹ್ಮಶಬ್ದದ ಸ್ಥಾನದಲ್ಲಿ ವೈಶ್ವಾನರಶಬ್ದವನ್ನು ಪ್ರಯೋಗಿಸಲಾಗಿದೆ. ಬ್ರಹ್ಮನ ಬಗ್ಗೆ ಪ್ರಶ್ನಿಸಿದಾಗ ಆತ್ಮನೇ ವೈಶ್ವಾನರನೆಂದು ಉತ್ತರಿಸಿದ್ದರಿಂದ ವೈಶ್ವಾನರನು ಪರಮಾತ್ಮನೇ ಆಗಿದ್ದಾನೆಂದು ನಿರ್ಣಯಿಸಬಹುದು.

प्रकाशः – चतुष्टयसाधाणस्यापि वैश्वानरशब्दस्यास्मिन् प्रकरणे मुमुक्षुभिरौपमन्यवादिभिर्जिज्ञास्यत्वसर्वात्मत्वादिभिर्ब्रह्मधर्मैर्विशेष्यमाणत्वादित्यर्थ इत्याहुरित्यर्थः ।

ವ್ಯುತಃ ವೈಶ್ವಾನರ ಶಬ್ದವು ನಾಲ್ವರಲ್ಲಿಯೂ ಸಾಧಾರಣವಾಗಿದೆ. ಆದರೂ ಈ ಪ್ರಕರಣದಲ್ಲಿ ಮುಮುಕ್ಷುಗಳಾದ ಔಪಮನ್ಯ ಮೊದಲಾದವರಿಂದ ವೈಶ್ವಾನರನು ಜಿಜ್ಞಾಸ್ಯನಾಗಿದ್ದಾನೆಂದು ತಿಳಿಯುತ್ತಿದೆ. ಇದರಿಂದ ಮತ್ತು ಸರ್ವಾತ್ಮಕತ್ವವೇ ಮೊದಲಾದ ಬ್ರಹ್ಮನ ಲಿಂಗಗಳು ಇವನಿಗೆ ವಿಶೇಷಣ ಎಂದು ಕೇಳಿಸುತ್ತಿರುವುದರಿಂದ ವೈಶ್ವಾನರನು ಬ್ರಹ್ಮನೇ ಆಗಿದ್ದಾನೆಂದು ನಿರ್ಣಯವಾಗುತ್ತದೆ. ಇಷ್ಟು ರಾಮಾನುಜರು ಮಾಡಿರುವ ಸಿದ್ಧಾಂತ.

प्रकाशः – आत्मश्रुतीति । तस्या ब्रह्मसाधारण्योपपादनस्य त्वन्मतेऽपि तुल्यत्वादिति भावः ।।

ಆತ್ಮಶ್ರುತಿಯು ಬ್ರಹ್ಮನಲ್ಲಿ ಮಾತ್ರ ಉಪಪನ್ನವಾಗುತ್ತದೆಂದು ಅದ್ವೈತಿಗಳಂತೆ ವಿಶಿಷ್ಟಾದ್ವೈತಿಗಳೂ ಸಹ ಒಪ್ಪಬೇಕು ಎಂದು ಆತ್ಮಶ್ರುತಿ ಎಂಬ ಪ್ರತೀಕದ ಅಭಿಪ್ರಾಯ.

गुरुराजीयम् – जाठराग्नेरपि भूतजातित्वेनेति ।। भूतताविशेषाद्भौमदिव्यादिवत् जाठरस्याप्युपादानं कार्यम् । जाठरत्वरूपावान्तरोपाधिविवक्षया तस्य पृथगुपादाने भौमादीनामपि भौमत्वादिधर्मोपाधिना पृथग्ग्रहणापत्त्याऽर्ध-जरतीयानुपपत्तेरिति भावः ।। उक्तत्वादिति ।। जाठराग्नेरपि भूतजातित्वेन पृथगुक्त्य योगादित्यनेनोक्तत्वादित्यर्थः ।

ಸಾರ

ಶಾಂಕರ ಭಾಷ್ಯದಲ್ಲಿ ಸೂತ್ರಾರ್ಥವನ್ನು ಹೀಗೆ ಹೇಳಿದ್ದಾರೆ - ಛಾಂದೋಗ್ಯದಲ್ಲಿ 'ಆಯಮಗ್ನಿರ್ವೈಶ್ವಾನರಃ' ಎಂಬುದಾಗಿ ವೈಶ್ವಾನರ ಶಬ್ದವು ಕೇಳಿಸುತ್ತಿದೆ. ಜಾಠರಾಗ್ನಿ, ಭೂತಾಗ್ನಿ, ಅಗ್ನಿದೇವತೆ ಮೂರವರಲ್ಲಿಯೂ ವೈಶ್ವಾನರ ಶಬ್ದವು ಸಮಾನವಾಗಿ ಪ್ರಯೋಗಿಸಲ್ಪಡುತ್ತದೆ. ಪ್ರಕರಣದ ಪ್ರಾರಂಭದಲ್ಲಿ ಜೀವ ಹಾಗೂ ಈಶ್ವರರಲ್ಲಿ ಸಾಧಾರಣವಾದ ಆತ್ಮಶಬ್ದವು ಕೇಳಿಸುತ್ತಿರುವುದರಿಂದ ಜೀವನೂ ಸಹ ವೈಶ್ವಾನರನೆನಿಸಬಹುದು. ಇಷ್ಟು ಪೂರ್ವಪಕ್ಷ.

ವೈಶ್ವಾನರ ಹಾಗೂ ಆತ್ಮಶಬ್ದಗಳು ಸಾಧಾರಣವಾಗಿದ್ದರೂ 'ಮೂರ್ಧೈವ ಸುತೇಜಾಃ' ಇತ್ಯಾದಿಯಾಗಿ ಸ್ವರ್ಗಾದಿಲೋಕಗಳೇ ವೈಶ್ವಾನರನ ಅವಯವವಾಗಿದೆಯೆಂದು ಶ್ರುತಿ ಹೇಳುತ್ತಿದೆ. ಹೀಗೆ ಜೀವನಲ್ಲಿಲ್ಲದ ವಿಶೇಷಣಗಳನ್ನು ವೈಶ್ವಾನರನಲ್ಲಿ ಹೇಳಿದ್ದರಿಂದ ಬ್ರಹ್ಮನೇ ಇಲ್ಲಿ ವೈಶ್ವಾನರ ಶಬ್ದದಿಂದ ಪ್ರತಿಪಾದ್ಯನಾಗುತ್ತಾನೆಂದು ಸಿದ್ಧಾಂತ.

ಪರಿಪೂರ್ಣಚಂದ್ರಿಕಾ

ಶಂಕರ ಭಾಷ್ಯದ ಈ ವ್ಯಾಖ್ಯಾನವು ಅಯುಕ್ತವಾಗಿದೆ. ಏಕೆಂದರೆ ವೈಶ್ವಾನರಶಬ್ದವು ಜಾಠರಾಗ್ನಿ, ಭೂತಾಗ್ನಿ, ಅಗ್ನಿದೇವತೆ ಮೂರರಲ್ಲಿ ಮಾತ್ರ ಸಾಧಾರಣವಾಗಿಲ್ಲ. ಆತ್ಮನಲ್ಲಿಯೂ ಸಹ ಸಾಧಾರಣವಾಗಿರುವುದರಿಂದ ತ್ರಿತಯ ಸಾಧಾರಣವೆಂಬ ಆದ್ವೈತಿಗಳ ಮಾತು ತಪ್ಪಾಗುತ್ತದೆ.

ಮತ್ತು ಆತ್ಮಶಬ್ದವು ಜೀವ ಹಾಗೂ ಈಶ್ವರರಲ್ಲಿ ಸಾಧಾರಣವಾಗಿದೆಯೆಂದು ಸಾಧಾರಣಶಬ್ದದ ಅರ್ಥವನ್ನು ಹೇಳಿದರೆ; 'ದ್ಯುಭ್ವಾದ್ಯಾಯತನಂ ಸ್ವ ಶಬ್ದಾತ್' ಎಂಬಲ್ಲಿ 'ಸ್ವಶಬ್ದಾತ್' ಎಂಬ ಶಬ್ದಕ್ಕೆ 'ಆತ್ಮಶಬ್ದಾತ್' ಎಂದು ವ್ಯಾಖ್ಯಾನಿಸಿ ದ್ಯುಭ್ವಾದ್ಯಾಯತನತ್ವವನ್ನು ಬ್ರಹ್ಮನಲ್ಲಿ ಸಮರ್ಥಿಸಿದ್ದಾರೆ. ಇದರಿಂದ ಆತ್ಮಶಬ್ದವು ಕೇವಲ ಬ್ರಹ್ಮನನ್ನು ಪ್ರತಿಪಾದಿಸುತ್ತದೆಂದು ಅವರು ಒಪ್ಪಿದ್ದಾರೆ. ಇಲ್ಲಿವರೆಗೆ 'ನಾನುಮಾನಮತಚ್ಛಬ್ದಾತ್' ಎಂಬ ಸೂತ್ರದಲ್ಲಿ ಆತ್ಮಶಬ್ದ ಜೀವನಲ್ಲಿಲ್ಲದ ಕಾರಣ ಜೀವನು ದ್ಯುಭ್ವಾದ್ಯಾಯತನನಾಗುವುದಿಲ್ಲವೆಂದು ನಿರಾಕರಿಸಿದ್ದು ಅವರ ಪ್ರಕಾರವೇ ತಪ್ಪಾಗುತ್ತದೆ.

ರಾಮಾನುಜ ಭಾಷ್ಯದಲ್ಲಿ ಪ್ರಥಮ ಸೂತ್ರವ್ಯಾಖ್ಯಾನ ಹೀಗಿದೆ -

ಜಾಠರಾಗ್ನಿ, ಭೂತಾಗ್ನಿ, ಅಗ್ನಿದೇವತೆ, ಪರಬ್ರಹ್ಮ ಈ ನಾಲ್ಕರಲ್ಲಿಯೂ ಸಾಧಾರಣವಾದ ವೈಶ್ವಾನರಶಬ್ದಕ್ಕೆ ಪರಮಾತ್ಮನಲ್ಲಿ ಮಾತ್ರ ಇರುವ ಧರ್ಮಗಳನ್ನು ವಿಶೇಷಣವನ್ನಾಗಿ ಹೇಳಲಾಗಿದೆ. ಮುಮುಕ್ಷುಗಳಾದ ಔಪಮನ್ಯವೇ ಮೊದಲಾದ ಐದು ಮಂದಿ ಶಿಷ್ಯಂದಿರು ಬ್ರಹ್ಮನ ಜಿಜ್ಞಾಸೆಯನ್ನು ಮಾಡಿದ್ದಾರೆ. ಆವಾಗ ವೈಶ್ವಾನರನೇ ಬ್ರಹ್ಮನೆಂದು ರಾಜನು ಉಪದೇಶಿಸಿದ್ದಾನೆ. ಹೀಗೆ ಜಿಜ್ಞಾಸ್ಯಮಾನತ್ವ ಮುಂತಾದ ಬ್ರಹ್ಮನ ಲಿಂಗಗಳಿಂದ ವೈಶ್ವಾನರನಿಗೆ ವಿಶೇಷಣಗಳನ್ನು ಹೇಳಿದ್ದರಿಂದ ವೈಶ್ವಾನರನು ಬ್ರಹ್ಮನೇ ಆಗುತ್ತಾನೆಂದು ಸಿದ್ಧಾಂತ ಮಾಡಿದ್ದಾರೆ.

ಆದ್ವೈತಿಗಳಂತೆ ಇವರ ವ್ಯಾಖ್ಯಾನವೂ ಇರುತ್ತದೆ. ಜಾಠರಾಗ್ನಿಯನ್ನು ಪ್ರತ್ಯೇಕವಾಗಿ ಪರಿಗಣಿಸಿದ್ದು ತಪ್ಪಾಗುತ್ತದೆಂಬುದು ಇವರಿಗೂ ಸಮಾನ.

ಮತ್ತು 'ಆತ್ಮಾನಂ ವೈಶ್ವಾನರಮ್' ಎಂಬುದಾಗಿ ವೈಶ್ವಾನರನಲ್ಲಿ ನೇರವಾಗಿ ವಿಶೇಷಣವಾಗಿರುವ ಆತ್ಮಶ್ರುತಿಯಿಂದಲೇ ಬ್ರಹ್ಮನು ವೈಶ್ವಾನರನಾಗಿದ್ದಾನೆಂದು ಹೇಳಲು ಬರುವಾಗ ಪ್ರಕರಣದಿಂದ ಲಭಿಸುವ ಲಿಂಗವೆಂಬ ವಿಶೇಷಣದಿಂದ ಪರಮಾತ್ಮನನ್ನು ವೈಶ್ವಾನರನೆಂದು ನಿರ್ಣಯಿಸುವುದು ಅಯುಕ್ತವಾಗಿದೆ.

• • • • •

ಶಾಂಕರ ರಾಮಾನುಜ ಭಾಷ್ಯಗಳಲ್ಲಿನ ದ್ವಿತೀಯ ಸೂತ್ರಾರ್ಥ ವಿಮರ್ಶೆ

तात्पर्यचन्द्रिका

यच्चयोक्तमन्यैः–

'यस्याश्विरास्यं द्यौर्मूर्धा खं नाभिश्चरणौ क्षितिः ।
सूर्यश्चक्षुर्दिशः श्रोत्रं..... ।।'

वैश्वानराधिकरण (೧-೨-೭)

ಇತ್ಯಾದಿನೇಶ್ವರೇ ಸ್ಮರ್ಯಮಾಣಂ ತ್ರೈಲೋಕ್ಯಾತ್ಮಕಂ ರೂಪಂ ಮೂಲಭೂತಾಂ ಶ್ರುತಿಮನುಮಾಪಯತ್, ಸಮಾನವಿಷಯಾಂ ''ಮೂರ್ಧ್ನೋ ವ ಸುತೇಜಾಃ'' ಇತ್ಯಾದಿವೈಶ್ವಾನರವಿಧಾಮನುಮಾಪಯತ್, ವೈಶ್ವಾನರಸ್ಯೇಶ್ವರತ್ವೇ ಲಿಙ್ಗಮಿತಿ ದ್ವಿತೀಯಸೂತ್ರಾರ್ಥ ಇತಿ,

ಅನುವಾದ - ಆದ್ಯೈತಿಗಳ ಎರಡನೆಯ ಸೂತ್ರವ್ಯಾಖ್ಯಾನ ಹೀಗಿದೆ -

'ಸ್ಮರ್ಯಮಾಣಂ ಅನುಮಾನಂ ಸ್ಯಾದಿತಿ'

ಯಸ್ಯಾಗ್ನಿರಾಸ್ಯಂ ದ್ಯೌರ್ಮೂರ್ಧಾ ಖಂ ನಾಭಿಶ್ಚರಣೌ ಕ್ಷಿತಿಃ।
ಸೂರ್ಯಶ್ಚಕ್ಷುರ್ದಿಶಃ ಶ್ರೋತ್ರಂ ತಸ್ಮೈ ಲೋಕಾತ್ಮನೇ ನಮಃ..... ॥

ಯಾರಿಗೆ ಅಗ್ನಿಯು ಮುಖವಾಗಿದೆಯೋ, ಸ್ವರ್ಗಲೋಕವು ತಲೆಯಾಗಿದೆಯೋ, ಆಕಾಶವು ನಾಭಿಯಾಗಿದೆಯೋ, ಭೂಮಿಯು ಕಾಲುಗಳೋ, ಸೂರ್ಯನು ಚಕ್ಷುಸ್ಸೋ, ಸಕಲ ದಿಕ್ಕುಗಳು ಕಿವಿಯೋ, ಅಂತಹ ಲೋಕಸ್ವರೂಪನಿಗೆ ನಮಸ್ಕಾರ.

ಹೀಗೆ ಶ್ರುತಿ ವಾಕ್ಯದಿಂದ ಈಶ್ವರನು ತ್ರಿಲೋಕಸ್ವರೂಪನೆಂದು ತಿಳಿಯುತ್ತದೆ. ಈ ಸ್ಮೃತಿವಾಕ್ಯಕ್ಕೆ ಮೂಲಭೂತವಾಗಿ ಒಂದು ಶ್ರುತಿಯು ಇರಲೇಬೇಕು. ಆ ಶ್ರುತಿಯು ಈ ವಾಕ್ಯದಲ್ಲಿ ಹೇಳಲ್ಪಟ್ಟ ವಿಷಯವನ್ನೇ ಪ್ರತಿಪಾದಿಸಬೇಕು. ಅದು ಯಾವುದೆಂದರೆ 'ಮೂರ್ಧ್ನೋ ವ ಸುತೇಜಾಃ' ಇತ್ಯಾದಿಯಾಗಿ ವೈಶ್ವಾನರವಿದ್ಯೆಯಲ್ಲಿ ಪ್ರಸಕ್ತವಾಗುವ ಶ್ರುತಿವಾಕ್ಯ. ಸ್ಮೃತಿವಾಕ್ಯದಲ್ಲಿ ಬ್ರಹ್ಮನು ಪ್ರತಿಪಾದ್ಯನಾದ್ದರಿಂದ ಅದಕ್ಕೆ ಮೂಲಭೂತವಾದ ವೈಶ್ವಾನರ ಶ್ರುತಿಯೂ ಸಹ ಬ್ರಹ್ಮಪರವಾಗಬೇಕೆಂದು ಎರಡನೇ ಸೂತ್ರದ ಅರ್ಥ.

ತನ್ನ, ''ಚಕ್ಷುಷೀ ಚನ್ದ್ರಸೂರ್ಯೌ ದಿಶಃ ಶ್ರೋತ್ರೇ'' ಇತ್ಯಾದಿಶ್ರುತ್ಯನ್ತರಸ್ಯಾಪಿ ಉಕ್ತಸ್ಮೃತಿಮೂಲತ್ವಸಮ್ಭವೇನ ವೈಶ್ವಾನರವಿಧಾಯಾಸ್ತನ್ಮೂಲತ್ವಾಸಿದ್ಧೇಃ ।

ಇದು ತಪ್ಪು. 'ಚಕ್ಷುಷೀ ಚಂದ್ರಸೂರ್ಯೌ ದಿಶಃ ಶ್ರೋತ್ರೇ' ಇತ್ಯಾದಿಯಾಗಿ ಅಥರ್ವಣ ಶ್ರುತಿಯೂ ಸಹ ನೀವು ಉಲ್ಲೇಖಿಸಿದ ಸ್ಮೃತಿಗೆ ಮೂಲವಾಗಬಹುದು. ಹೀಗಿರುವಾಗ ವೈಶ್ವಾನರವಿದ್ಯೆಯೇ ಮೂಲಶ್ರುತಿಯೆಂದು ನಿರ್ಣಯಿಸಲಾಗದು.

''ಅಹಂ ವೈಶ್ವಾನರಃ'' ಇತಿ ಸಾಕ್ಷಾದೀಶ್ವರಸ್ಯ ವೈಶ್ವಾನರತ್ವಬೋಧಕಸ್ಮೃತೌ ಸತ್ಯಾಂ ಬಕಬನ್ಧಪ್ರಯಾಸಾಯೋಗಾಚ್ಚ ।।

ಮತ್ತು 'ಅಹಂ ವೈಶ್ವಾನರಃ' ಎಂಬ ಸ್ಮೃತಿವಾಕ್ಯವು ನೇರವಾಗಿ ಈಶ್ವರನಿಗೆ ವೈಶ್ವಾನರತ್ವವನ್ನು ಸಮರ್ಥಿಸುತ್ತಿರುವಾಗ ಬಕಬಂಧಪ್ರಯಾಸವು ಅಯುಕ್ತವಾಗಿದೆ. (ಬಕಪಕ್ಷಿಯನ್ನು ಹಿಡಿಯುವುದಕ್ಕಾಗಿ

ಬೆಣ್ಣೆಯನ್ನು ಬಕಪಕ್ಷಿಯ ತಲೆಯ ಮೇಲೆ ಇಟ್ಟು ಅದು ಕರಗಿ ಕಣ್ಣಲ್ಲಿ ಹೋದಾಗ ಅದನ್ನು ಹಿಡಿಯೋಣವೆಂದು ಯೋಚನೆ ಮಾಡುವುದು ಹೇಗೆ ಅತ್ಯಂತ ಪ್ರಯಾಸವೋ, ಅದರಂತೆ ನೇರವಾಗಿಯೇ ವಿಷ್ಣುವನ್ನು ವೈಶ್ವಾನರನೆಂದು ಹೇಳುವ ಸ್ಮೃತಿವಾಕ್ಯವು ಇರಬೇಕಾದರೆ ಅಸ್ಪಷ್ಟವಾದ ಮತ್ತೊಂದು ಸ್ಮೃತಿವಾಕ್ಯದ ಆಧಾರದ ಮೂಲಕ ವಿಷ್ಣುವೇ ವೈಶ್ವಾನರನಾಗಿದ್ದಾನೆಂದು ನಿರ್ಣಯಿಸುವುದು ಅತ್ಯಂತ ಪ್ರಯಾಸಕರವಾಗಿದೆ.)

केचित्तु – द्युप्रभृतिपृथिव्यन्तं रूपं श्रुतिस्मृतिष्वीश्वरेऽभिज्ञातमिह प्रत्यभिज्ञायमानं वैश्वानरस्येश्वरत्वेऽनुमानं लिङ्गमित्यर्थ इत्याहुः ।

ರಾಮಾನುಜರು ಎರಡನೆಯ ಸೂತ್ರವನ್ನು ಹೀಗೆ ವ್ಯಾಖ್ಯಾನಿಸಿದ್ದಾರೆ - ದ್ಯುಲೋಕದಿಂದ ಪ್ರಾರಂಭಿಸಿ ಪೃಥಿವೀಲೋಕದ ತನಕ ಎಲ್ಲ ಲೋಕಗಳನ್ನು ಶ್ರುತಿ, ಸ್ಮೃತಿಗಳಲ್ಲಿ ಈಶ್ವರನ ಅವಯವಗಳನ್ನಾಗಿ ನಿರೂಪಿಸಲಾಗಿದೆ. ಇಂತಹ ಅವಯವಗಳು ಬ್ರಹ್ಮನಿಗಿರುತ್ತದೆಂದು 'ಅಗ್ನಿರ್ಮೂರ್ಧಾ' ಇತ್ಯಾದಿ ಸ್ಮೃತಿಗಳು ಹೇಳುತ್ತಿದೆ. ಅದನ್ನೇ ವೈಶ್ವಾನರನಿಗೆ ಇಲ್ಲಿ ಹೇಳುತ್ತಿರುವುದರಿಂದ ವೈಶ್ವಾನರನು ವಿಷ್ಣುವೇ ಆಗಿದ್ದಾನೆನ್ನಲು ನಿರ್ಧಾರಕ ಪ್ರಮಾಣವಾಗಿದೆ.

तन्न, स्मर्यमाणशब्दस्य प्रत्यभिज्ञायमानार्थत्वे स्वारस्यभङ्गात् । ''अहं वैश्वानरः'' इत्यादिषूक्तस्येह ''आत्मानं वैश्वानरम्'' इति श्रुतिप्रत्यभिज्ञासम्भवे लिङ्गप्रत्यभिज्ञोक्तत्वयोगाच्च ।।

ಇದೂ ಸಹ ತಪ್ಪು. ಸ್ಮರ್ಯಮಾಣಶಬ್ದಕ್ಕೆ ಗೀತಾಸ್ಮೃತಿಯ ಆಧಾರವಿದೆಯೆಂದು ಸುಲಭವಾಗಿ ವ್ಯಾಖ್ಯಾನಿಸಲು ಬರುವಾಗ 'ಪ್ರತ್ಯಭಿಜ್ಞಾಯಮಾನ' ಎಂಬರ್ಥವನ್ನು ಹೇಳಿದರೆ ಸ್ವಾರಸ್ಯವು ಭಂಗವಾಗುತ್ತದೆ. ಮತ್ತು 'ಅಹಂ ವೈಶ್ವಾನರಃ' ಇತ್ಯಾದಿ ಸ್ಮೃತಿಗಳಲ್ಲಿ ಹೇಳಿದ್ದನ್ನು 'ಆತ್ಮಾನಂ ವೈಶ್ವಾನರಮ್' ಎಂಬ ಶ್ರುತಿಯು ಪ್ರತ್ಯಭಿಜ್ಞಾ ಮಾಡುತ್ತಿದೆ. ಹೀಗೆ ಶ್ರುತಿಪ್ರತ್ಯಭಿಜ್ಞಾವನ್ನೇ ಹೇಳಲು ಬರುವಾಗ ಲಿಂಗಪ್ರತ್ಯಭಿಜ್ಞಾವನ್ನು ಹೇಳುವುದು ಅಯುಕ್ತವಾಗುತ್ತದೆ.

प्रकाशः –

मतद्वयेऽपि द्वितीयादिसूत्रार्थान् क्रमेणान्वय निराह – **यच्चोक्तमन्यैरिति । इत्यादिनेति ।**

'मूर्धानं यस्य विप्रा वदन्ति खं चैव नाभिश्चन्द्रसूर्यौ च नेत्रे ।
दिशः श्रोत्रे विद्धि पादौ क्षितिं च सोऽचिन्त्यात्मा सर्वभूतप्रणेता ।।'

ಇತ್ಯಾದಿರಾದಿಪದಾರ್ಥಃ ।

ವಿವರಣೆ - ಶಾಂಕರ ಮತ ಹಾಗೂ ರಾಮಾನುಜ ಮತದಲ್ಲಿ ದ್ವಿತೀಯಾದಿ ಸೂತ್ರಗಳನ್ನು ಹೇಗೆ ವ್ಯಾಖ್ಯಾನಿಸಿದ್ದಾರೆಂದು ಕ್ರಮವಾಗಿ ಅನುವಾದ ಮಾಡಿ ನಿರಾಕರಿಸುತ್ತಿದ್ದಾರೆ 'ಯಚ್ಚೋಕ್ತಂ' ಇತ್ಯಾದಿ ಗ್ರಂಥದಿಂದ. 'ಇತ್ಯಾದಿನಾ' ಎಂಬಲ್ಲಿರುವ ಆದಿಪದದಿಂದ

'ದೌರ್ಮೂರ್ಧಾನಂ ಯಸ್ಯ ವಿಪ್ರಾ ವದಂತಿ ಖಂ ಚೈವ ನಾಭಿಶ್ಚಂದ್ರಸೂರ್ಯೌ ಚ ನೇತ್ರೇ।
ದಿಶಃ ಶ್ರೋತ್ರೇ ವಿದ್ಧಿ ಪಾದೌ ಕ್ಷಿತಿಂ ಚ ಸೋಽಚಿಂತ್ಯಾತ್ಮಾ ಸರ್ವಭೂತಪ್ರಣೇತಾ ॥'

ಎಂಬ ಸ್ಮೃತಿಯನ್ನು ಇಟ್ಟುಕೊಳ್ಳಬೇಕು.

ಪ್ರಕಾಶಃ – ಮೂಲಭೂತಾಮಿತಿ । ಸ್ಮೃತೀನಾಂ ಶ್ರುತಿಮೂಲತ್ವಸ್ಯ ಪೂರ್ವತನ್ತ್ರೇ ಸ್ಮೃತಿನಯೇ ವ್ಯವಸ್ಥಾಪನಾತ್, ತುಲ್ಯಾರ್ಥಾಯಾ ಏವ ಮೂಲತ್ವಾದತ್ರ ಚ ದ್ಯುಪ್ರಭೃತೀನಾಂ ವೈಶ್ವಾನರಸ್ಯ ಮೂರ್ಧಾದ್ಯವಯವತ್ವೇನ ''ಮೂರ್ಧೈವ ಸುತೇಜಾಃ'' ಇತ್ಯಾದಿನಾ ಉಚ್ಯಮಾನತ್ವೇನ ತುಲ್ಯಾರ್ಥತ್ವಾದೇತದ್ವಾಕ್ಯಮನುಮಾಪಯತಿ, ಸ್ಮೃತಿಶ್ಚ ಬ್ರಹ್ಮವಿಷಯೇತಿ ಮೂಲಭೂತಶ್ರುತೇರಪಿ ತಥಾತ್ವಂ ಗಮಯಿಷ್ಯತೀತ್ಯರ್ಥಃ ।

'ಮೂಲಭೂತಾಮ್' ಎಂಬುದರ ತಾತ್ಪರ್ಯ ಹೀಗಿದೆ - ಸಕಲ ಸ್ಮೃತಿಗಳು ಶ್ರುತಿ ಮೂಲವಾಗಿರುತ್ತವೆಂದು ಪೂರ್ವಮೀಮಾಂಸೆಯ ಸ್ಮೃತ್ಯಧಿಕರಣದಲ್ಲಿ ವ್ಯವಸ್ಥೆ ಮಾಡಿದ್ದಾರೆ. ಆದ್ದರಿಂದ ಸ್ಮೃತಿಯು ಯದ್ವಿಷಯಕವಾಗಿರುತ್ತದೋ ತದ್ವಿಷಯಕವಾದ ಶ್ರುತಿಯೂ ಸಹ ಇದ್ದೇ ಇರುತ್ತದೆ. ಮತ್ತು ಮೂಲವಾಗಿರುವುದು ಎಂದರೆ ಸಮಾನವಾದ ಅರ್ಥವನ್ನು ಹೊಂದಿರುವುದು ಎಂದರ್ಥ. ಪ್ರಕೃತ ಸ್ಮೃತಿವಾಕ್ಯದಲ್ಲಿ ಸ್ವರ್ಗ ಮೊದಲಾದ ಲೋಕಗಳು ವೈಶ್ವಾನರನ ಶಿರಸ್ಸು ಮೊದಲಾದ ಅವಯವಗಳಾಗಿವೆಯೆಂದು ವರ್ಣಿಸಲಾಗಿದೆ. ವೈಶ್ವಾನರವಿದ್ಯೆಯೂ ಸಹ 'ಮೂರ್ಧೈವ ಸುತೇಜಾಃ' ಇತ್ಯಾದಿಯಾಗಿ ವೈಶ್ವಾನರನನ್ನು ಅದೇ ಕ್ರಮದಲ್ಲಿ ವರ್ಣನೆ ಮಾಡಿ. ಇದರಿಂದ ವೈಶ್ವಾನರವಿದ್ಯೆಯಲ್ಲಿರುವ ವಾಕ್ಯವು ವಿಷ್ಣುಪರವೆಂದು ನಿರ್ಣಯವಾಗುತ್ತದೆ. ಸ್ಮೃತಿವಾಕ್ಯವು ಬ್ರಹ್ಮವಿಷಯಕವಾಗಿರುವುದರಿಂದ ಅದಕ್ಕೆ ಮೂಲಭೂತವಾದ ಶ್ರುತಿವಾಕ್ಯವೂ ಸಹ ಬ್ರಹ್ಮವಿಷಯವೇ ಆಗಬೇಕೆಂದರ್ಥ.

ಪ್ರಕಾಶಃ – ಶ್ರುತ್ಯನ್ತರಸ್ಯಾಪೀತಿ । ಸ್ಮೃತಿವಚನಂ ಹಿ ಸ್ವಮೂಲತ್ವೇನ ಶ್ರುತಿಂ ಕಲ್ಪಯತಿ, ನ ತು ವೈಶ್ವಾನರವಿದ್ಯಾಮೇವ ಕಲ್ಪಯಿತುಂ ಶಕ್ನೋತಿ,

'ಅಗ್ನಿರ್ಮೂರ್ಧಾ ಚಕ್ಷುಷೀ ಚನ್ದ್ರಸೂರ್ಯೌ ದಿಶಃ ಶ್ರೋತ್ರೇ ವಾಗ್ವಿವೃತಾಶ್ಚ ವೇದಾಃ ।
ವಾಯುಃ ಪ್ರಾಣೋ ಹೃದಯಂ ವಿಶ್ವಮಸ್ಯ ಪದ್ಭ್ಯಾಂ ಪೃಥಿವೀ ..... ॥'

ಇತ್ಯಾಥರ್ವಣವಾಕ್ಯಮೂಲತ್ವೇನಾಪಿ ಸಮ್ಭವೇನ ಕಲ್ಪಕಸ್ಯಾನ್ಯಥಾಸಿದ್ಧತ್ವಾದಿತ್ಯರ್ಥಃ ।

ಶ್ರುತ್ಯಂತರಸ್ಯಾಪಿ ಎಂಬುದರ ತಾತ್ಪರ್ಯ ಹೀಗೆ - ಸ್ಮೃತಿವಚನವು ತನಗೆ ಮೂಲವಾದ ಶ್ರುತಿಯನ್ನು ಮಾತ್ರ ಊಹಿಸುತ್ತದೆ. ಆದರೆ ವೈಶ್ವಾನರವಿದ್ಯೆಯಲ್ಲಿರುವ ಶ್ರುತಿಯೇ ತನಗೆ ಮೂಲವಾಗಿದೆಯೆಂದು ಸ್ಮೃತಿವಾಕ್ಯದಿಂದ ಕಲ್ಪಿಸಲು ಸಾಧ್ಯವಿಲ್ಲ.

ಅಗ್ನಿರ್ಮೂರ್ಧಾ ಚಕ್ಷುಷೀ ಚಂದ್ರಸೂರ್ಯೌ ದಿಶಃ ಶ್ರೋತ್ರೇ ವಾಗ್ವಿವೃತಾಶ್ಚ ವೇದಾಃ।
ವಾಯುಃ ಪ್ರಾಣೋ ಹೃದಯಂ ವಿಶ್ವಮಸ್ಯ ಪದ್ಭ್ಯಾಂ ಪೃಥಿವೀ..... ॥

ಎಂಬ ಆಥರ್ವಣ ಶ್ರುತಿಯೂ ಸಹ ನೀವು ಉದಾಹರಿಸಿದ ಸ್ಮೃತಿಗೆ ಮೂಲವಾಗಬಹುದು. ಆದ್ದರಿಂದ ಆದ್ದರಿಂದ ನಿಮ್ಮ ಸ್ಮೃತಿವಾಕ್ಯದ ಕಲ್ಪನೆಯು ಅನ್ಯಥಾಸಿದ್ಧವಾಯಿತು.

प्रकाशः – ननु श्रुतौ ''अग्निर्मूर्धा'' इति श्रूयते, स्मृतौ च ''द्यौः'' इति । तथा च कथं तन्मूलकत्वमिति चेन्न,

ಶ್ರುತಿಯಲ್ಲಿ 'ಅಗ್ನಿರ್ಮೂರ್ಧಾ' ಎಂದು ಕೇಳಿಸುತ್ತಿದೆ. ಆದರೆ ನೀವು ಉದಾಹರಿಸಿದ ಆಥರ್ವಣ ಶ್ರುತಿಯಲ್ಲಿ 'ದ್ಯೌಃ ಮೂರ್ಧಾ' ಎಂದು ಕೇಳಿಸುತ್ತಿದೆ. ಹೀಗೆ ಭಿನ್ನ ವಿಷಯಕವಾದ್ದರಿಂದ ಆಥರ್ವಣ ಶ್ರುತಿಯು ಮೂಲವಾಗಲು ಹೇಗೆ ಸಾಧ್ಯ ?

प्रकाशः – ''असौ वा व लोकोऽग्निर्गौतम'' इति श्रुतेरग्नेर्द्युशब्द-पर्यायत्वादिति तात्पर्यात् । न केवलं तेन वैश्वानरविद्याया ब्रह्मविषयत्वसिद्धिः, गतिसम्भवे क्लिष्टकल्पनयोगश्चेत्याह – अहमिति ।।

ಇದು ತಪ್ಪು. 'ಅಸೌ ವಾ ವ ಲೋಕೋಽಗ್ನಿರ್ಗೌತಮ' ಎಂಬುದಾಗಿ ದ್ಯುಲೋಕವನ್ನೇ ಅಗ್ನಿಯೆಂದು ನೀವು ವ್ಯಾಖ್ಯಾನಿಸುತ್ತೀರಿ. ಆದ್ದರಿಂದ 'ದ್ಯು' ಶಬ್ದ ಹಾಗೂ 'ಅಗ್ನಿ' ಶಬ್ದಗಳು ಪರ್ಯಾಯಪದಗಳಾಗಿವೆ. ಆದ್ದರಿಂದ 'ಅಗ್ನಿರ್ಮೂರ್ಧಾ' ಎಂಬ ಶಬ್ದಕ್ಕೂ 'ದ್ಯೌಃ ಮೂರ್ಧಾ' ಎಂಬ ಶಬ್ದಕ್ಕೂ ಒಂದೇ ಅರ್ಥವಿರುವುದರಿಂದ ಆಥರ್ವಣ ಶ್ರುತಿಯು ಮೂಲವಾಗಬಹುದು.

ಕೇವಲ ಮೂಲವಾಗುವುದಿಲ್ಲವೆಂಬ ಕಾರಣದಿಂದಷ್ಟೇ ವೈಶ್ವಾನರವಿದ್ಯೆಗೆ ಬ್ರಹ್ಮವಿಷಯತ್ವವು ಸಿದ್ಧವಾಗುವುದೆಂದಲ್ಲ. ಸುಲಭವಾಗಿಯೇ ವೈಶ್ವಾನರ ವಿದ್ಯೆಗೆ ವಿಷ್ಣುಪರತ್ವವನ್ನು ಸಮರ್ಥಿಸಲು ಬರುವಾಗ ಕ್ಲಿಷ್ಟಕಲ್ಪನೆಯು ಅಯುಕ್ತವಾಗಿದೆಯೆಂಬುದಾಗಿ 'ಅಹಂ' ಇತ್ಯಾದಿ ವಾಕ್ಯದಿಂದ ಸಮರ್ಥಿಸುತ್ತಿದ್ದಾರೆ.

प्रकाशः – केचित्त्विति । सूत्रे इतिशब्दः प्रकारवचनः, ''अनुमानशब्दः ''श्रुतिलिङ्गवाक्य'' इति श्रुत्यादिसहपठितासाधारणधर्मरूपलिङ्गपरः, स्मर्यमाणशब्दः प्रत्यभिज्ञायमानपरः ।

ರಾಮಾನುಜರ ಎರಡನೆಯ ಸೂತ್ರವ್ಯಾಖ್ಯಾನವನ್ನು 'ಕೇಚಿತ್ತು' ಇತ್ಯಾದಿ ವಾಕ್ಯದಿಂದ ಅನುವಾದ ಮಾಡುತ್ತಿದ್ದಾರೆ. ಇವರ ಪ್ರಕಾರ ಸೂತ್ರದಲ್ಲಿರುವ 'ಇತಿ' ಶಬ್ದವು 'ಪ್ರಕಾರ' ಎಂಬರ್ಥದಲ್ಲಿದೆ. ಅನುಮಾನ ಶಬ್ದವು 'ಶ್ರುತಿರ್ಲಿಂಗಂ ಸಮಾಖ್ಯಾಚ' ಎಂಬಲ್ಲಿರುವ ಶ್ರುತ್ಯಾದಿಗಳ ಜೊತೆಗೆ ಪಠಿತವಾದ

ಅಸಾಧಾರಣ ಧರ್ಮವೆಂಬ ಲಿಂಗವನ್ನು ಹೇಳುತ್ತಿದೆ. ಸ್ಮರ್ಯಮಾಣ ಶಬ್ದವು ಪ್ರತ್ಯಭಿಜ್ಞಾನವನ್ನು ಹೇಳುತ್ತಿದೆ.

ಪ್ರಕಾಶಃ – ತಥಾ ಚ ''ಅಗ್ನಿರ್ಮೂರ್ಧಾ ಚಕ್ಷುಷೀ ಚಂದ್ರಸೂರ್ಯೌ'' ''ದ್ಯೌರ್ಮೂರ್ಧಾನಂ ಯಸ್ಯ ವಿಪ್ರಾ ವದಂತಿ'' ಇತ್ಯಾದಿಶ್ರುತಿಸ್ಮೃತಿಷು 'ಇತಿ' ಇತ್ಯಂಭೂತಂ ದ್ಯುವಾದಿರೂಪಮೀಶ್ವರೇ ಅವಗತಮ್ 'ಇಹ' ವೈಶ್ವಾನರವಿದ್ಯಾಯಾಂ ''ಮೂರ್ಧೈವ ಸುತೇಜಾಃ'' ಇತ್ಯಾದಿನಾ 'ಸ್ಮರ್ಯಮಾಣಂ' ಪ್ರತ್ಯಭಿಜ್ಞಾಯಮಾನಂ ಲಿಙ್ಗಂ ಸ್ಯಾತ್, ಶ್ರುತ್ಯಾದಾವವಗತಂ ದ್ಯುಪ್ರಭೃತ್ಯಾತ್ಮಕತ್ವರೂಪಂ ಲಕ್ಷಣಂ ಲಿಙ್ಗಮಿಹ ಪ್ರತ್ಯಭಿಜ್ಞಾಯತ ಇತ್ಯರ್ಥಃ ।

ಆದ್ದರಿಂದ 'ಅಗ್ನಿಮೂರ್ಧಾ ಚಕ್ಷುಷೀ ಚಂದ್ರಸೂರ್ಯೌ', 'ದ್ಯೌರ್ಮೂರ್ಧಾನಂ ಯಸ್ಯ ವಿಪ್ರಾ ವದಂತಿ' ಇವೇ ಮೊದಲಾದ ಶ್ರುತಿ, ಸ್ಮೃತಿಗಳಲ್ಲಿ - ಇತಿ = ಈ ಪ್ರಕಾರವಾದ ದ್ಯುಲೋಕವೇ ರೂಪವಾಗಿರುವಿಕೆಯು ಈಶ್ವರನಲ್ಲಿ ತಿಳಿಯುತ್ತದೆ. ಪ್ರಕೃತ ಇಹ = ವೈಶ್ವಾನರ ವಿದ್ಯೆಯಲ್ಲಿ, 'ಮೂರ್ಧೈವ ಸುತೇಜಾಃ' ಇತ್ಯಾದಿ ವಾಕ್ಯದಿಂದ, ಸ್ಮರ್ಯಮಾಣಂ = ಪ್ರತ್ಯಭಿಜ್ಞಾ ಮಾಡಲ್ಪಟ್ಟದ್ದು ಲಿಂಗವಾಗಿ ಇರುತ್ತದೆ. ಶ್ರುತ್ಯಾದಿಯಲ್ಲಿ ತಿಳಿಯಲ್ಪಟ್ಟ ದ್ಯುಲೋಕವೇ ಮೊದಲಾದ ಸ್ವರೂಪವಾಗಿರುವಿಕೆಯೆಂಬ ಲಕ್ಷಣವು ವೈಶ್ವಾನರನು ಬ್ರಹ್ಮನೆನ್ನಲು ಗಮಕವಾಗಿದೆಯೆಂದು ಸೂತ್ರಾರ್ಥ.

''ಅನುಸ್ಮೃತೇಶ್ಚ'' ಇತ್ಯತ್ರ 'ಅನುಸ್ಮೃತಿಶಬ್ದಸ್ಯ ಪ್ರತ್ಯಭಿಜ್ಞಾಪರತ್ವೇನ ಸೂತ್ರಕಾರೈಃ ಪ್ರಯುಕ್ತತ್ವಾತ್' ಇತಿ ಶ್ರುತಪ್ರಕಾಶೋಕ್ತೇಃ ಕಥಮೇವಂ ದೂಷಣಮಿತ್ಯತ – ಸ್ವಾರಸ್ಯೇತ್ಯುಕ್ತಮ್ । ಉಕ್ತರೀತ್ಯಾ ಸ್ವಾರಸ್ಯಸಮ್ಭವೇ ತತ್ತ್ಯಾಗಾಯೋಗಾತ್ ।

ಗ್ರಂಥಕಾರರು 'ಸ್ಮರ್ಯಮಾಣ' ಶಬ್ದಕ್ಕೆ 'ಪ್ರತ್ಯಭಿಜ್ಞಾಯಮಾಣ' ಎಂಬರ್ಥವು ತಪ್ಪಾಗುತ್ತದೆಂದು ಹೇಳಿದ್ದಾರೆ. ಆದರೆ 'ಅನುಸ್ಮೃತೇಶ್ಚ' ಇತ್ಯತ್ರ 'ಅನುಸ್ಮೃತಿಶಬ್ದಸ್ಯ ಪ್ರತ್ಯಭಿಜ್ಞಾಪರತ್ವೇನ ಸೂತ್ರಕಾರೈಃ ಪ್ರಯುಕ್ತತ್ವಾತ್' ಎಂದರೆ ''ಅನುಸ್ಮೃತೇಶ್ಚ' ಎಂಬ ಸೂತ್ರದಲ್ಲಿ 'ಅನುಸ್ಮೃತಿ' ಶಬ್ದಕ್ಕೆ 'ಪ್ರತ್ಯಭಿಜ್ಞಾ' ಎಂಬರ್ಥವನ್ನೇ ಸೂತ್ರಕಾರರು ಹೇಳಿರುತ್ತಾರೆ'. ಹೀಗೆ ಶ್ರುತಪ್ರಕಾಶದಲ್ಲಿ ಹೇಳಲಾಗಿದೆ. 'ಅನುಸ್ಮೃತೇಶ್ಚ' ಎಂಬ ಸೂತ್ರದಲ್ಲಿ 'ಅನುಸ್ಮೃತಿ' ಶಬ್ದಕ್ಕೆ 'ಪ್ರತ್ಯಭಿಜ್ಞಾ' ಎಂಬರ್ಥವನ್ನು ಮಾಡಿರುವುದರಿಂದ ಇಲ್ಲಿಯೂ ಸಹ 'ಸ್ಮರ್ಯಮಾಣ' ಶಬ್ದಕ್ಕೆ 'ಪ್ರತ್ಯಭಿಜ್ಞಾ' ಎಂಬರ್ಥವನ್ನು ಮಾಡಬಹುದು. ಹೀಗಿರುವಾಗ 'ಸ್ಮರ್ಯಮಾಣ' ಶಬ್ದಕ್ಕೆ 'ಪ್ರತ್ಯಭಿಜ್ಞಾಮಾನ' ಎಂಬರ್ಥವು ತಪ್ಪಾಗುತ್ತದೆಂದು ಹೇಗೆ ಹೇಳಿದರು? ಎಂದರೆ, ಆದಕ್ಕೆ ಗ್ರಂಥದಲ್ಲಿ 'ಸ್ವಾರಸ್ಯ' ಎಂಬುದರಿಂದ ಉತ್ತರವನ್ನು ಹೇಳಿದ್ದಾರೆ. ಅಂದರೆ ನಾವು ಹೇಳುವಂತೆ ಗೀತಾಸ್ಮೃತಿಯು ಗಮಕವಾಗಿದೆಯೆಂಬರ್ಥವನ್ನು ಹೇಳುವ ಮುಖಾಂತರ ಸ್ವಾರಸ್ಯವಾಗಿ ವ್ಯಾಖ್ಯಾನಿಸಲು ಬರುತ್ತದೆ. ಅದನ್ನು ಬಿಟ್ಟು 'ಪ್ರತ್ಯಭಿಜ್ಞಾಮಾನ' ಎಂಬರ್ಥವನ್ನು ಹೇಳುವುದು ಅಸ್ವರಸವಾಗಿದೆಯೆಂಬುದು ಗ್ರಂಥಕಾರರ ಅಭಿಪ್ರಾಯ ಹೊರತು, 'ಸ್ಮರ್ಯಮಾಣ' ಶಬ್ದಕ್ಕೆ ಪ್ರತ್ಯಭಿಜ್ಞಾಯಮಾನವೆಂಬರ್ಥವೇ ತಪ್ಪಾಗುತ್ತದೆಂದು ಅಭಿಪ್ರಾಯವಲ್ಲ.

ಪ್ರಕಾಶಃ – ಸೂತ್ರಕಾರೋಕ್ತಿಸ್ತು ಅನುಶಬ್ದಬಲಾದ್ವಾ, ಸ್ವಾರಸ್ಯಾಸಮ್ಭವಾದ್ವಾ ಪ್ರತ್ಯಭಿಜ್ಞಾರ್ಥತ್ವಾಶಯೇತಿ ಯುಕ್ತಮಿತಿ ಭಾವಃ ।

ಹಾಗಾದರೆ 'ಅನುಸ್ಮೃತೇಶ್ಚ' ಎಂಬ ಸೂತ್ರದಲ್ಲಿ 'ಪ್ರತ್ಯಭಿಜ್ಞಾನ' ಎಂಬರ್ಥದಲ್ಲಿ ಸೂತ್ರಕಾರರು 'ಅನುಸ್ಮೃತಿ' ಶಬ್ದವನ್ನು ಏಕೆ ಉಪಯೋಗಿಸಿದ್ದಾರೆ ? ಎಂದರೆ ಸ್ಮೃತಿ ಶಬ್ದವು 'ಸ್ಮರಣೆ' ಎಂಬರ್ಥದಲ್ಲಿ ಪ್ರಸಿದ್ಧವಾಗಿದೆ. 'ಅನು' ಶಬ್ದದ ಬಲದಿಂದ ಸ್ಮೃತಿಶಬ್ದವು 'ಪ್ರತ್ಯಭಿಜ್ಞಾನ' ಎಂಬರ್ಥವನ್ನು ಹೇಳುತ್ತದೆ. ಬೇರೆ ಅರ್ಥದಲ್ಲಿ ಅನುಸ್ಮೃತಿಶಬ್ದವು ಅಲ್ಲಿ ಅಸ್ವರಸವಾಗಿರುವುದರಿಂದ ಸ್ವಾರಸ್ಯಕ್ಕೊಸ್ಕರ 'ಪ್ರತ್ಯಭಿಜ್ಞಾ' ಎಂಬರ್ಥವನ್ನೇ ಸ್ವೀಕರಿಸುತ್ತಾರೆ. ಇಲ್ಲಿ 'ಸ್ಮೃತಿ' ಎಂಬರ್ಥವನ್ನೇ ತೆಗೆದುಕೊಳ್ಳಲು ಬರುವಾಗ 'ಪ್ರತ್ಯಭಿಜ್ಞಾ' ಎಂಬರ್ಥವನ್ನು ತೆಗೆದುಕೊಳ್ಳುವುದು ತಪ್ಪಾಗುತ್ತದೆ.

ಪ್ರಕಾಶಃ – ಅಹಮಿತಿ । ಶ್ರುತ್ಯಾದಾವವಗತಂ ದ್ಯುಪ್ರಭೃತ್ಯವಯವತ್ವರೂಪಂ ಲಿಙ್ಗಮಿಹ ಪ್ರತ್ಯಭಿಜ್ಞಾಯತ ಇತ್ಯುಕ್ತಿವತ್, ''ಅಹಂ ವೈಶ್ವಾನರೋ ಭೂತ್ವಾ'' ಇತಿ ಸ್ಮೃತೌ ವಿಷ್ಣಾವವಗಂ ತವೈಶ್ವನಾರಶ್ರುತಿರಿಹ ಪ್ರತ್ಯಭಿಜ್ಞಾಯತ ಇತ್ಯಪಿ ವಕ್ತುಂ ಶಕ್ಯತ್ವೇನ ಲಿಙ್ಗಾಲ್ಲವಚ್ಛ್ರುತಿ-ಪ್ರತ್ಯಭಿಜ್ಞೋಕ್ತಿರೇವ ಜ್ಯಾಯಸೀತಿ ತತ್ತ್ಯಾಗಾಯೋಗಾತ್ ।

'ಅಹಂ ವೈಶ್ವಾನರಃ' ಇತ್ಯಾದಿ ಗ್ರಂಥಕ್ಕೆ ಹೀಗರ್ಥ - ಶ್ರುತ್ಯಾದಿಗಳಿಂದ ತಿಳಿಯಲ್ಪಡುವ ದ್ಯುಪ್ರಭೃತ್ಯವಯವ ಎಂಬ ಲಿಂಗವನ್ನು ಇಲ್ಲಿ ಪ್ರತ್ಯಭಿಜ್ಞಾನ ಮಾಡಬೇಕೆಂದು ನೀವು ಹೇಳುತ್ತಿದ್ದೀರಿ. ಆದರೆ 'ಅಹಂ ವೈಶ್ವಾನರೋ ಭೂತ್ವಾ' ಇತ್ಯಾದಿ ಸ್ಮೃತಿಯಲ್ಲಿ ವಿಷ್ಣುವಿನಲ್ಲಿ ತಿಳಿಯಲ್ಪಡುವ ವೈಶ್ವಾನರ ಶ್ರುತಿಯನ್ನೇ ಇಲ್ಲಿ ಪ್ರತ್ಯಭಿಜ್ಞಾ ಮಾಡಲು ಬರುತ್ತದೆಂದೂ ಸಹ ಹೇಳಲು ಸಾಧ್ಯವಿದೆ. ಮತ್ತು ಲಿಂಗವನ್ನು ಪ್ರತ್ಯಭಿಜ್ಞಾ ಮಾಡುವುದಕ್ಕಿಂತ ಬಲಿಷ್ಠವಾದ ಶ್ರುತಿಯನ್ನು ಪ್ರತ್ಯಭಿಜ್ಞಾ ಮಾಡುವುದೇ ಶ್ರೇಷ್ಠವಾಗಿದೆ. ಇಂತಹ ಶ್ರುತಿಯನ್ನು ತ್ಯಾಗಮಾಡುವುದರಲ್ಲಿ ಅರ್ಥವಿಲ್ಲ.

ಪ್ರಕಾಶಃ – ತಥಾ ಚ 'ಸ್ಮರ್ಯಮಾಣಾ ಶ್ರುತಿಃ'' ಇತ್ಯೇವ ಸೂತ್ರಣಂ ಸ್ಯಾತ್, ಲಘು ಚೈವಂ ಸತಿ ಸೂತ್ರಂ ಸ್ಯಾದಿತ್ಯರ್ಥಃ । ಕಿಞ್ಚಾನುಮಾನಶಬ್ದಸ್ಯ ಲಿಙ್ಗಪರತ್ವೇ ''ಸ್ಮರ್ಯಮಾಣಂ ಲಿಙ್ಗಮ್'' ಇತ್ಯೇವ ನಿರ್ದೇಶಸ್ಯಾಲ್ಲಾಘವಾದಿತಿ ಧ್ಯೇಯಮ್ ।

ಆದ್ದರಿಂದ 'ಸ್ಮರ್ಯಮಾಣಾಮ್ ಶ್ರುತಿಃ' ಎಂದಷ್ಟೇ ಸೂತ್ರವನ್ನು ಹೇಳಿದ್ದರೆ ಸಾಕಾಗುತ್ತಿತ್ತು. ಹೀಗೆ ಹೇಳುವುದರಿಂದ ಸೂತ್ರವೂ ಲಘುವಾಗುತ್ತದೆ. ಹಾಗೂ ಶ್ರುತಿಯನ್ನು ಪ್ರತ್ಯಭಿಜ್ಞಾನ ಮಾಡಿದಂತಾಗುತ್ತದೆ. ಇದರಂತೆ ಅನುಮಾನ ಶಬ್ದಕ್ಕೆ ಲಿಂಗವೆಂಬರ್ಥವನ್ನು ವಿವಕ್ಷಿಸುವುದಾದರೆ 'ಸ್ಮರ್ಯಮಾಣಂ ಲಿಂಗಂ' ಎಂದೇ ಸೂತ್ರವನ್ನು ನಿರ್ದೇಶಿಸಬಹುದಿತ್ತು. ಹಾಗೇ ನಿರ್ದೇಶಿಸುವುದರಿಂದಲೂ ಸೂತ್ರವು ಲಘುವಾಗುತ್ತದೆ.

ಸಾರ

'ಯಸ್ಯಾಗ್ನಿರಸ್ಯಾಮ್' ಇತ್ಯಾದಿ ಶ್ರುತಿಗಳು ದ್ಯುಲೋಕಾದಿಗಳು ಬ್ರಹ್ಮನ ಅವಯವಗಳೆಂದು ಹೇಳಲ್ಪಟ್ಟಿದೆ. ಶ್ರುತಿಗೆ ಅನುಸಾರಿಯಾಗಿ ಸ್ಮೃತಿಯನ್ನು ವ್ಯಾಖ್ಯಾನಿಸಬೇಕಾದ್ದರಿಂದ ದ್ಯುಲೋಕಾದಿಗಳು ಬ್ರಹ್ಮನ ಅವಯವಗಳೆಂದೇ ಶ್ರುತಿಗಳೂ ಸಹ ಹೇಳುತ್ತಿವೆ. ಆದರೆ ಬ್ರಹ್ಮನೇ ವೈಶ್ವಾನರನೆಂದು ಆದ್ಯೃತಿಗಳ ವ್ಯಾಖ್ಯಾನ.

ದ್ಯುಲೋಕದಿಂದ ಪೃಥಿವೀ ಲೋಕಪರ್ಯಂತ. ಸಕಲ ಲೋಕಗಳೂ ಬ್ರಹ್ಮನ ಅವಯವಗಳೇ ಆಗಿವೆಯೆಂದು 'ಅಗ್ನಿರ್ಮೂರ್ಧಾ' ಇತ್ಯಾದಿ ಶ್ರುತಿಗಳು ಪ್ರತಿಪಾದಿಸುತ್ತಿದೆ. ಅಂದರೆ ಶ್ರುತಿಯಲ್ಲಿ ಮಾಡಲ್ಪಟ್ಟ ಉಲ್ಲೇಖವೇ ವೈಶ್ವಾನರನು ಬ್ರಹ್ಮನಾಗಿದ್ದಾನೆನ್ನಲು ಕಾರಣವಾಗಿದೆ.ಯೆಂದು ರಾಮಾನುಜರು ವ್ಯಾಖ್ಯಾನಿಸುತ್ತಾರೆ.

ಇವರಿಬ್ಬರ ಅಭಿಪ್ರಾಯವೂ ಸರಿಯಿಲ್ಲ. ಚಕ್ಷುಷೀ ಚಂದ್ರಸೂರ್ಯೌ ಇತ್ಯಾದಿ ಶ್ರುತಿಯೂ ಸಹ ಸ್ಮೃತಿ ಮೂಲವಾಗಿದೆ. ಮತ್ತು 'ಅಹಂ ವೈಶ್ವಾನರಃ' ಎಂಬ ಶ್ರುತಿಯಲ್ಲಿ ನೇರವಾಗಿಯೇ ಈಶ್ವರನನ್ನು ವೈಶ್ವಾನರನೆಂದು ಹೇಳಿದ್ದಾರೆ. ರಾಮಾನುಜರು 'ಸ್ಮರ್ಯಮಾಣ' ಶಬ್ದಕ್ಕೆ 'ಪ್ರತ್ಯಭಜ್ಞಾನಮಾಯ' ಎಂಬರ್ಥವನ್ನು ಹೇಳಿದ್ದಾರೆ. ಈ ಅರ್ಥವು ಸೂತ್ರಾರ್ಥ ಸ್ವಾರಸ್ಯಕ್ಕೆ ಭಂಗವನ್ನುಂಟು ಮಾಡುತ್ತಿದೆ.

• • • • •

ಉಳಿದ ಸೂತ್ರಾರ್ಥಗಳ ವಿಮರ್ಶೆ

ತಾತ್ಪರ್ಯಚನ್ದ್ರಿಕಾ

ಯಚ್ಚೋಕ್ತಮನ್ಯೈಃ – ''ಮನೋ ಬ್ರಹ್ಮೇತ್ಯುಪಾಸೀತ'' ಇತ್ಯಾದಿವಜ್ಜಾಠರೇ ವೈಶ್ವಾನರೇ ಈಶ್ವರದೃಷ್ಟ್ಯುಪದೇಶೋ ವಾ, ''ಮನೋಮಯಃ ಪ್ರಾಣಶರೀರಃ'' ಇತ್ಯಾದಿವದ್ವೈಶ್ವಾನರೋಪಾಧೇರೀಶ್ವರಸ್ಯ ದ್ರಷ್ಟವ್ಯತ್ವೇನೋಪದೇಶೋ ವಾ ತೃತೀಯಸೂತ್ರಸ್ಥತಥಾದೃಷ್ಟ್ಯುಪದೇಶಶಬ್ದಾರ್ಥ ಇತಿ,

ಅನುವಾದ - 'ಶಬ್ದಾದಿಭ್ಯೋಽಂತಃ ಪ್ರತಿಷ್ಠಾನಾನ್ನೇತಿ ಚೇನ್ನ ತಥಾ ದೃಷ್ಟ್ಯುಪದೇಶಾದ ಸಂಭಾವತ್ಪುರುಷವಿಧಮಪಿ ಚೈನಮಧೀಯತೇ' ಎಂಬ ಮೂರನೆಯ ಸೂತ್ರಕ್ಕೆ ಆದ್ಯೃತಿಗಳ ಸೂತ್ರವ್ಯಾಖ್ಯಾನ ಹೀಗಿದೆ - ಅಗ್ನಿ, ವೈಶ್ವಾನರ ಮೊದಲಾದ ಶಬ್ದಗಳು ಬ್ರಹ್ಮನನ್ನು ಬಿಟ್ಟು ಬೇರೆ ಪದಾರ್ಥವನ್ನೇ ಪ್ರತಿಪಾದಿಸುತ್ತಿದೆ. 'ತದ್ಯದ್ಭುಕ್ತಂ' ಎಂಬುದು ಪ್ರಾಣಾಹುತಿಗೆ ಅಧಿಕರಣವಾದ ಅಗ್ನಿಯನ್ನು ಹೇಳುತ್ತಿದೆ. 'ಪುರುಷೇ ಅಂತಃಪ್ರತಿಷ್ಠಿತಮ್' ಎಂಬ ವಾಕ್ಯವು ಉದರದಲ್ಲಿ ಇರುತ್ತದೆಂದು ಹೇಳಿದೆ. ಈ ಎಲ್ಲಾ ಕಾರಣಗಳಿಂದ ಇಲ್ಲಿ ಹೇಳಲ್ಪಟ್ಟ ವೈಶ್ವಾನರನು ಜಾಠರಾಗ್ನಿಯೇ ಆಗಬೇಕೆಂದು ಹೇಳುವುದು ಸರಿಯಲ್ಲ. 'ಮನೋ ಬ್ರಹ್ಮೇತಿ ಉಪಾಸೀತ' ಮನಸ್ಸನ್ನೇ ಬ್ರಹ್ಮನೆಂದು ಉಪಾಸನೆ

ಮಾಡಬೇಕೆಂದು ಹೇಳಿದಂತೆ, ಜಾಠರಾಗ್ನಿಯನ್ನೇ ಬ್ರಹ್ಮನೆಂದು ಉಪಾಸನೆ ಮಾಡುವುದಕ್ಕಾಗಿ ವೈಶ್ವಾನರನಲ್ಲಿ ಬ್ರಹ್ಮತ್ವವನ್ನು ಶ್ರುತಿ ಹೇಳುತ್ತಿದೆ.

ಅಥವಾ ಜಾಠರಾಗ್ನಿಯು ವೈಶ್ವಾನರನಿಗೆ ಉಪಾಧಿಯಾಗಿದೆ. 'ಮನೋಮಯಃ ಪ್ರಾಣಶರೀರಃ' ಇತ್ಯಾದಿಗಳಲ್ಲಿ ಮನೋಮಯತ್ವಾದಿಗಳು ಉಪಾಧಿಯಾದಂತೆ ಜಾಠರಾಗ್ನಿಯೂ ಸಹ ಉಪಾಧಿಯಾಗಿದೆ. ಕೇವಲ ಜಾಠರಾಗ್ನಿಯನ್ನು ಇಲ್ಲಿ ಹೇಳಿದರೆ 'ಸ ಏಷೋಽಗ್ನಿಃ ವೈಶ್ವಾನರಃ' ಎಂಬ ಶ್ರುತಿಯಲ್ಲಿ ಹೇಳಲ್ಪಟ್ಟ ಪುರುಷತ್ವವು ಅಸಂಭಾವಿತವಾಗುತ್ತದೆ. ಮತ್ತು 'ಮೂರ್ಧೈವ ಸುತೇಜಾಃ' ಇತ್ಯಾದಿಗಳೂ ಸಹ ಅಸಂಭಾವಿತವಾಗುತ್ತದೆ. ಬ್ರಹ್ಮನು ಸರ್ವಾತ್ಮಕನಾದ್ದರಿಂದ ಮತ್ತು ಪುರುಷನೂ, ಪುರುಷಾಂತರ್ಗತನೂ ಆಗಿರುವುದರಿಂದ ಇವೆಲ್ಲವೂ ಉಪಪನ್ನವಾಗುತ್ತದೆ. ಆದ್ದರಿಂದ ವೈಶ್ವಾನರನು ಬ್ರಹ್ಮನೇ ಆಗಿದ್ದಾನೆಂದು ನಿರ್ಣಯವಾಗುತ್ತದೆ.

ಹೀಗೆ ಆದ್ವೈತಿಗಳು ಮೂರನೆಯ ಸೂತ್ರವನ್ನು ವ್ಯಾಖ್ಯಾನಿಸುತ್ತಾ 'ತಥಾ ದೃಷ್ಟ್ಯುಪದೇಶಾತ್' ಎಂಬ ಪದಕ್ಕೆ ಎರಡು ಬಗೆಯಲ್ಲಿ ವ್ಯಾಖ್ಯಾನವನ್ನು ಮಾಡಿದ್ದಾರೆ.

तत्र न तावदाद्यः, वैश्वानरस्य मनोवत् प्रतीकत्वे मनश्शब्दस्ये वैश्वानरशब्दस्यापि ब्रह्मणि समन्वयोक्तव्ययोगात् । वैश्वानरज्ञानेन सर्वपाप्मप्रदाह-श्रवणायोगाच्च । अत एव न द्वितीयः । नहि सोपाधिकस्योपासनेन ज्ञानेन वा सर्वपाप्मदाहः ।

ಹೀಗೆ ವೈಶ್ವಾನರನು ಬ್ರಹ್ಮನಿಗೆ ಪ್ರತೀಕ ಅಥವಾ ಉಪಾಧಿಯೆಂದು 'ತಥಾ ದೃಷ್ಟ್ಯುಪದೇಶಾತ್' ಎಂಬ ಸೂತ್ರದ ಭಾಗಕ್ಕೆ ಎರಡು ಬಗೆಯಲ್ಲಿ ವ್ಯಾಖ್ಯಾನಿಸಿದರು. ಇವುಗಳಲ್ಲಿ ಮೊದಲನೆಯ ಪಕ್ಷ ತಪ್ಪು. ವೈಶ್ವಾನರನು ಮನಸ್ಸಿನಂತೆ ಪ್ರತೀಕನಾದರೆ ಆ ಶಬ್ದವು ಬ್ರಹ್ಮನಿಗೆ ಹೇಗೆ ವಾಚಕವಾಗುತ್ತದೆ? 'ಮನ' ಎಂಬ ಶಬ್ದವು ಬ್ರಹ್ಮನನ್ನು ಹೇಗೆ ಪ್ರತಿಪಾದಿಸುವುದಿಲ್ಲವೋ ಆದರಂತೆ ವೈಶ್ವಾನರಶಬ್ದವೂ ಸಹ ಬ್ರಹ್ಮನನ್ನು ಪ್ರತಿಪಾದಿಸುವುದಿಲ್ಲ. ಮತ್ತು ಇಂತಹ ಪ್ರತೀಕಗಳಲ್ಲಿ ಬ್ರಹ್ಮೋಪಾಸನೆಯನ್ನು ಮಾಡುವುದರಿಂದ 'ಸರ್ವೇ ಪಾಪ್ಮಾನಃ ಪ್ರದೂಯಂತೇ' ಎಂಬುದಾಗಿ ಸಕಲ ಪಾಪಗಳು ಕ್ಷಯವಾಗುತ್ತವೆಂದು ಶ್ರುತಿ ಹೇಳಿದೆ. ಇದು ಕೇವಲ ಪ್ರತೀಕದ ಉಪಾಸನೆಯಿಂದ ಸಾಧ್ಯವಾಗುವುದಿಲ್ಲ. ಆದ್ದರಿಂದಲೇ ಎರಡನೆಯ ಪಕ್ಷವೂ ಸಹ ತಪ್ಪು. ಸೋಪಾಧಿಕಬ್ರಹ್ಮನ ಉಪಾಸನೆಯಿಂದ ಅಥವಾ ಜ್ಞಾನದಿಂದ ಸಕಲಪಾಪಗಳು ಕ್ಷಯವಾಗಲು ಸಾಧ್ಯವಿಲ್ಲ. ಅದು ನಿರ್ಗುಣೋಪಾಸನೆಯಿಂದಷ್ಟೇ ಸಾಧ್ಯ.

यच्चोक्तं – पुरुषविधशब्देन द्युमूर्धत्वादिकमुच्यत इति, तन्न, त्वन्मते 'विशेषात्' इत्यत्रापि द्युमूर्धत्वादेरुक्तत्वेन पुनरुक्तेः ।

ಇನ್ನು 'ಪುರುಷವಿಧಮಪಿ' ಎಂಬಲ್ಲಿರುವ ಪುರುಷವಿಧ ಶಬ್ದಕ್ಕೆ ಸ್ವರ್ಗಲೋಕವೇ ಶಿರಸ್ಸಾಗಿದೆಯೆಂದು ಅರ್ಥವನ್ನು ಹೇಳಿದ್ದಾರೆ. ಇದು ತಪ್ಪು. ಪ್ರಥಮಸೂತ್ರದಲ್ಲಿರುವ 'ವಿಶೇಷಾತ್' ಎಂಬ ಪದಕ್ಕೂ ಸಹ ಅದ್ವೈತಿಗಳು ಹೀಗೆಯೇ ವ್ಯಾಖ್ಯಾನ ಮಾಡಿದ್ದಾರೆ. ಅದೇ ದ್ಯುಮೂರ್ಧತ್ವವನ್ನು ಇಲ್ಲಿಯೂ ಹೇಳಿದರೆ ಪುನರುಕ್ತಿ ದೋಷವು ಬರುತ್ತಿದೆ.

ಯಚ್ಚೋಕ್ತಂ – ವಿನೈವ ಜಾಠರಾಗ್ನೇಃ ಪ್ರತೀಕೋಪಾಧಿಕಲ್ಪನಾಭ್ಯಾಂ ಸಾಕ್ಷಾತ್ಕೇವಲಸ್ಯ ಬ್ರಹ್ಮಣಃ ಉಪಸನಾಸ್ವೀಕಾರೇऽಪ್ಯವಿರೋಧಃ । ಕೇವಲೇऽಪ್ಯಗ್ನಿವೈಶ್ವಾನರಶಬ್ದಾವಗ್ರಣೀತ್ವಾದಿಗುಣಯೋಗೇನ ವರ್ತೇತೇ ಇತಿ,

'ಸಾಕ್ಷದಪ್ಯವಿರೋಧಮ್' ಎಂಬ ಸೂತ್ರಕ್ಕೆ ಹೀಗೆ ವ್ಯಾಖ್ಯಾನಿಸಿದ್ದಾರೆ - ಜಾಠರಾಗ್ನಿಯು ಬ್ರಹ್ಮನ ಪ್ರತೀಕವಾಗಿದೆ. ಅಥವಾ ಉಪಾಧಿಯಾಗಿದೆಯೆಂದು ಕಲ್ಪನೆ ಮಾಡದಿದ್ದರೂ ಸಾಕ್ಷಾತ್ತಾಗಿ ಅಂದರೆ ಕೇವಲ ಬ್ರಹ್ಮನ ಉಪಾಸೆಯನ್ನು ಸ್ವೀಕಾರ ಮಾಡಿದರೂ ಸಹ ವಿರೋಧ ಬರುವುದಿಲ್ಲ. ಕೇವಲ ಅಗ್ನಿ, ವೈಶ್ವಾನರ ಮೊದಲಾದ ಶಬ್ದಗಳಿಂದ ಬ್ರಹ್ಮನ ಗುಣವು ತಿಳಿಯುತ್ತಿದೆ. ಮೇಲಿನ ಸ್ಥಾನಕ್ಕೆ ಕರೆದೊಯ್ಯುತ್ತಾನಾದ್ದರಿಂದ ಅಗ್ನಿಯೆನಿಸಿದ್ದಾನೆ. ವಿಶ್ವನರನಿಗೆ ಸಂಬಂಧಿಸಿದ್ದನಾದ್ದರಿಂದ ವೈಶ್ವಾನರನೆನಿಸಿದ್ದಾನೆ. ಹೀಗೆ ಬ್ರಹ್ಮನನ್ನು ಉಪಾಸನೆ ಮಾಡಲು ಬರುತ್ತದೆಂದು ಸೂತ್ರದ ಅಭಿಪ್ರಾಯ.

ತನ್ನ, ಸಾಕ್ಷಾಚ್ಛಬ್ದಸ್ಯ ಕೈವಲ್ಯಾರ್ಥತಾಯಾಃ ಕ್ಲಿಷ್ಟತ್ವಾತ್ । ಅತೀತಾನಾಮಾಕಾಶಾದಿ-ಶಬ್ದಾನಾಮಾಗಾಮಿನಾಮಕ್ಷಾರಾದಿಶಬ್ದಾನಾಮಪಿ ಯೌಗಿಕತ್ವಾಪತ್ತ್ಯಾऽಸ್ಮಾಕಂ ಮತ ಇವ ಸಮನ್ವಯಾಧ್ಯಾಯಸ್ಯ ತತ್ತಚ್ಛಬ್ದಪ್ರವೃತ್ತಿಗುಣಪೂರ್ತ್ಯರ್ಥತ್ವಾಪಾತಾಚ ।

ಇದೂ ಸಹ ತಪ್ಪು. 'ಸಾಕ್ಷಾತ್' ಎಂಬ ಶಬ್ದಕ್ಕೆ 'ವ್ಯವಧಾನವಿಲ್ಲದೆ' ಎಂಬರ್ಥವು ಲೋಕಪ್ರಸಿದ್ಧವಾಗಿದೆ. ಅದನ್ನು ಬಿಟ್ಟು 'ಕೇವಲ' ಎಂಬರ್ಥವನ್ನು ಹೇಳುವುದು ಅತ್ಯಂತ ಕ್ಲಿಷ್ಟಕರವಾದದ್ದು. ಮತ್ತು ಇಲ್ಲಿರುವ ಅಗ್ನಿ, ವೈಶ್ವಾನರ ಶಬ್ದಗಳಿಗೆ ಯೌಗಿಕಾರ್ಥವನ್ನು ಅಂಗೀಕರಿಸಿದರೆ ಹಿಂದೆ ಪ್ರಸಕ್ತವಾದ ಆಕಾಶಾದಿಶಬ್ದಗಳಿಗೆ ಹಾಗೂ ಮುಂದೆ ಬರುವ ಅಕ್ಷರಾದಿಶಬ್ದಗಳಿಗೂ ಸಹ ಯೌಗಿಕಾರ್ಥವನ್ನು ಅದ್ವೈತಿಗಳು ಒಪ್ಪಬೇಕಾಗುತ್ತದೆ. ಆವಾಗ ನಮ್ಮ ಮತದಂತೆ ಸಮನ್ವಯಾಧ್ಯಾಯವು ಆಯಾ ಶಬ್ದಗಳ ಪ್ರವೃತ್ತಿನಿಮಿತ್ತವೆನಿಸಿದ ಗುಣಪೂರ್ಣತ್ವವನ್ನು ಸಮರ್ಥಿಸುವುದರಲ್ಲೇ ಪರ್ಯವಸಾನವಾಗಿ ಅದ್ವೈತಿಗಳು ಸಮನ್ವಯಾಧ್ಯಾಯದಿಂದ ಬ್ರಹ್ಮನಲ್ಲಿ ಸಕಲಗುಣಪರಿಪೂರ್ಣತ್ವವನ್ನು ಒಪ್ಪಿದಂತಾಗುತ್ತದೆ.

ಯಚ್ಚೋಕ್ತಂ ಬ್ರಹ್ಮಪಕ್ಷೇ ಪ್ರಾದೇಶಮಾತ್ರಶ್ರುತಿರ್ಯುಕ್ತೇತಿ ಶಙ್ಕಾನಿರಾಸಾರ್ಥಮ್ ''ಅಭಿವ್ಯಕ್ತೇಃ'' ಇತ್ಯಾದಿಸೂತ್ರಾಣೀತಿ, ತನ್ನ, ''ಅರ್ಭಕೌಕಸ್ತ್ವಾನ್ನೇತಿ ಚೇತ್'' ಇತ್ಯನೇನ, ಅತ್ರಾಪಿ ''ತಥಾ ದೃಷ್ಟ್ಯಪದೇಶಾತ್'' ಇತ್ಯನೇನ ಚಾಸ್ಯಾಃ ಪರಿಹೃತತ್ವಾದಿತಿ ದಿಕ್ ।।

ಬ್ರಹ್ಮನ ವಿಷಯದಲ್ಲಿ ಪ್ರಾದೇಶಮಾತ್ರಪರಿಮಾಣವನ್ನು ಹೇಳುವ ಶ್ರುತಿಯು ಅಯುಕ್ತವಾಗಿದೆಯಲ್ಲವೇ? ಎಂಬ ಆಶಂಕೆಯನ್ನು ಪರಿಹರಿಸುವುದಕ್ಕಾಗಿ 'ಅಭಿವ್ಯಕ್ತೇಃ' ಇತ್ಯಾದಿ ಸೂತ್ರಗಳು ಹೊರಟಿವೆಯೆಂದು ಅದ್ವೈತಿಗಳು ವ್ಯಾಖ್ಯಾನಿಸುತ್ತಾರೆ. ಇದೂ ಸಹ ತಪ್ಪು. ಏಕೆಂದರೆ ಹಿಂದೆ 'ಅರ್ಭಕೌಕಸ್ತ್ವಾನ್ನೇತಿ ಚೇನ್ನ' ಎಂಬ ಸೂತ್ರದಿಂದ ಹಾಗೂ ಈ ಅಧಿಕರಣದಲ್ಲಿರುವ 'ತಥಾ ದೃಷ್ಟ್ಯುಪದೇಶಾತ್' ಎಂಬ ಸೂತ್ರದ ಭಾಗದಿಂದಲೇ ಪ್ರಾದೇಶಪರಿಮಾಣವು ಬ್ರಹ್ಮನಲ್ಲಿ ಇರುತ್ತದೆಂದು ಸಾಧಿಸಿದ್ದಾಗಿದೆ. ಪುನಃ ಈ ಸೂತ್ರದಲ್ಲಿಯೂ ಅದನ್ನೇ ಹೇಳಿದರೆ ಪುನರುಕ್ತಿ ಬರುತ್ತದೆ. ಅದ್ವೈತಿಗಳ ಮತದ ಈ ನಿರಾಕರಣೆಯು ಕೇವಲ ದಿಕ್‌ಪ್ರದರ್ಶನವಾಗಿದೆ.

अत्रापि परपक्षेऽपि वैश्वानरस्य जीवत्वं निषिध्य ब्रह्मेत्युक्तेस्तद्भेदार्थतैव ।।

ಪ್ರತಿಯೊಂದು ಅಧಿಕರಣಗಳಂತೆ ಈ ಅಧಿಕರಣದಲ್ಲಿಯೂ ಅದ್ವೈತಿಗಳು ವೈಶ್ವಾನರನಿಗೆ ಜೀವತ್ವವನ್ನು ನಿಷೇಧ ಮಾಡಿ ಬ್ರಹ್ಮತ್ವವನ್ನು ಸಾಧಿಸಿದ್ದರಿಂದ ಜೀವಬ್ರಹ್ಮ ಭೇದವನ್ನೇ ಒಪ್ಪಿಕೊಂಡಿದ್ದಾರೆ.

केचित्तु कथमपरिच्छिन्नस्य प्रादेशमात्रत्वमिति शङ्कानिरासकम् ''अभिव्यक्तेः'' इति सूत्रम् । उपासनार्थं प्रादेशमात्रत्वेनाभिव्यक्तेरिति च तस्यार्थः । मूर्धप्रभृत्यवयवैः पुरुषविधत्वोक्तिः किमर्थेति शङ्कानिरासकम् ''अनुस्मृतेः'' इति सूत्रम् । पुरुषविधत्वेनानुस्मृत्यर्थं तदुक्तिरिति च तस्यार्थः । कथमुरःप्रभृतीनां वैश्वादित्वोक्तिरिति शङ्कानिरासकं ''सम्पत्तेः'' इति सूत्रम् । प्राणाहुतेरग्निहोत्रत्व-सम्पादनाय उरःप्रभृतीनां वैश्वादित्वोक्तिरिति च तस्यार्थ इत्याहुः ।

ರಾಮಾನುಜರ ಉಳಿದ ಸೂತ್ರಗಳ ವ್ಯಾಖ್ಯಾನ ಹೀಗಿದೆ -

'ಅಭಿವ್ಯಕ್ತೇರಿತ್ಯಾಶ್ಮರಥ್ಯಃ' - ವ್ಯಾಪ್ತನಾದ ಪರಮಾತ್ಮನು ಪ್ರಾದೇಶಪರಿಮಾಣದಲ್ಲಿರಲು ಹೇಗೆ ಸಾಧ್ಯ ? ಎಂಬ ಶಂಕೆಯನ್ನು ಪರಿಹರಿಸುವುದಕ್ಕಾಗಿ 'ಅಭಿವ್ಯಕ್ತೇಃ' ಎಂಬ ಸೂತ್ರವು ಹೊರಟಿದೆ. ಉಪಾಸನೆ ಮಾಡುವುದಕ್ಕಾಗಿ ಬುದ್ಧಿಯ ಸೌಕರ್ಯಕ್ಕೋಸ್ಕರ ಶ್ರುತಿಯು ವೈಶ್ವಾನರನನ್ನು 'ಪ್ರಾದೇಶ ಮಾತ್ರಮ್' ಎಂದು ಪರಿಚ್ಛೇದವನ್ನು ಹೇಳುತ್ತಿದೆ. ಇದು ಆಶ್ಮರಥ್ಯಾಚಾರ್ಯರ ಅಭಿಪ್ರಾಯ.

'ಅನುಸ್ಮೃತೇಃ ಬ್ಯಾದರಿಃ' - ಪ್ರಕರಣದ ಕೊನೆಯಲ್ಲಿ 'ಯಸ್ತು ಏತಮ್ ಏವಮ್' ಎಂಬುದಾಗಿ ದ್ಯುಲೋಕವನ್ನೇ ಶಿರಸ್ಸನ್ನಾಗಿ ಉಳ್ಳವನೆಂದು ವೈಶ್ವಾರನನ್ನು ಉಪಾಸನೆ ಮಾಡಬೇಕೆಂದು ಹೇಳಲಾಗಿದೆ. ಆದಕ್ಕಾಗಿ ಈ ಪ್ರಕರಣದಲ್ಲಿ ಪುರುಷನಂತೆ ಅಂಗಾಂಗಗಳನ್ನು ವರ್ಣಿಸಲಾಗಿದೆ. ಇದು ಬಾದರಿಯ ಮತ. ಹೀಗೆ ಪುರುಷವಿಧತ್ವವನ್ನು ಏಕೆ ಹೇಳಿದ್ದು ಎಂಬ ಶಂಕೆಯನ್ನು ನಿರಾಕರಿಸುವುದಕ್ಕೋಸ್ಕರ ಈ ಸೂತ್ರವು ಹೊರಟಿದೆ.

ವೈಶ್ವಾನರಾಧಿಕರಣ (೧-೨-೭)

'ಸಂಪತ್ತೇರಿತಿ ಜೈಮಿನಿಸ್ತಥಾಹಿ ದರ್ಶಯತಿ' - ವೈಶ್ವಾನರನ ಅನೇಕ ಅವಯವಗಳನ್ನು ಯಜ್ಞದ ಅಂಗಗಳೆಂದು ವರ್ಣಿಸಲಾಗಿದೆ. 'ಅವನ ಎದೆಯು ಯಜ್ಞವೇದಿಕೆ' ಇತ್ಯಾದಿಯಾಗಿ. ಇದಕ್ಕೆ ಕಾರಣವೇನೆಂದರೆ ನಾವು ಪ್ರತಿನಿತ್ಯ ಆಚರಿಸುವ ಪ್ರಾಣಾಗ್ನಿಹೋತ್ರವು ಸಫಲವಾಗಬೇಕೆಂದು ಶ್ರುತಿಯು ಹಾಗೇ ಹೇಳಿದೆ. ಹೀಗೆ ಪ್ರಾಣಾಹುತಿಗೆ ಅಗ್ನಿಹೋತ್ರತ್ವವೆಂಬ ಸಂಪತ್ತಿಗೋಸ್ಕರ ಯಜ್ಞಾಂಗ ಕಲ್ಪನೆಯು ಯುಕ್ತವಾಗಿದೆಯೆಂದು ಈ ಸೂತ್ರವು ಹೇಳುತ್ತಿದೆ. ಆದ್ದರಿಂದ ಭಗವಂತನ ಎದೆ ಮೊದಲಾದವು ಯಜ್ಞವೇದಿಕೆಯಾಗಲು ಹೇಗೆ ಸಾಧ್ಯ ? ಎಂಬ ಆಶಂಕೆಯನ್ನು ಪರಿಹರಿಸುವುದಕ್ಕಾಗಿ ಈ ಸೂತ್ರ ಹೊರಟಿದೆ.

'ಆಮನಂತಿ ಚೈನಮಸ್ಮಿನ್' ಪರಮಾತ್ಮನನ್ನು ಉಪಾಸಕನ ದೇಹದಲ್ಲಿ ಪ್ರಾಣಾಹುತಿಗೆ ಆಧಾರನನ್ನಾಗಿ ಛಾಂದೋಗರು ಹೇಳುತ್ತಾರೆ.

ಹೀಗೆ ರಾಮಾನುಜರು ಒಂಭತ್ತು ಸೂತ್ರಗಳನ್ನು ವ್ಯಾಖ್ಯಾನಿಸಿದ್ದಾರೆ.

तन्न, अभिव्यक्त्यादिसूत्राणां भिन्नविषयत्वादाश्मरथ्यादिपदसूचितविकल्पो न स्यात् । प्रतिसूत्रं साध्याध्याहारश्च स्यात् ।।

ಇದು ತಪ್ಪು. ರಾಮಾನುಜ ಭಾಷ್ಯದ ಪ್ರಕಾರ ಈ ಎಲ್ಲ ಸೂತ್ರಗಳು ಬೇರೆ ಬೇರೆ ವಿಷಯವನ್ನು ಸಮರ್ಥಿಸುತ್ತಿವೆ. ಹೀಗಿರುವಾಗ ಆಶ್ಮಾರಥ್ಯಾದಿ ಪದಗಳಿಂದ ಸೂಚಿತವಾದ ವಿಕಲ್ಪವು ಅಸ್ವರಸವಾಗುತ್ತದೆ. ಮತ್ತು ಪ್ರತಿಯೊಂದು ಸೂತ್ರಗಳಲ್ಲಿ ಸಾಧ್ಯವನ್ನು ಅಧ್ಯಾಹಾರ ಮಾಡಿಕೊಳ್ಳಬೇಕಾಗುತ್ತದೆ. ಆದರೆ ನಮ್ಮ ಪ್ರಕಾರ 'ಅಭಿವ್ಯಕ್ತೇರಿತ್ಯಾಶ್ಮರಥ್ಯಃ' ಇತ್ಯಾದಿ ಸೂತ್ರಗಳು ಬೇರೆ ಬೇರೆ ಋಷಿಗಳ ಹೆಸರುಗಳನ್ನು ಉಲ್ಲೇಖ ಮಾಡಿ ಒಂದೇ ವಿಷಯದಲ್ಲಿ ಅಭಿಪ್ರಾಯಭೇದವನ್ನು ಹೇಳುತ್ತಿವೆ. ಹೀಗೆ ವ್ಯಾಖ್ಯಾನಿಸುವುದೇ ಸ್ವರಸ.

टीकाक्षरार्थस्तु – गतिसाधनत्वादरतिः पाद इति । लोके गमनेनारतिदर्शनाद् रतिविरुद्धगतिसाधनत्वात्पादोऽरतिशब्दार्थ इत्यर्थः ।

ಟೀಕೆಯಲ್ಲಿ 'ಗತಿಸಾಧನತ್ವಾದರತಿಃ ಪಾದಃ' ಎಂದು ಹೇಳಿದ್ದಾರೆ. ಇಲ್ಲಿರುವ 'ಅರತಿ' ಶಬ್ದಕ್ಕೆ 'ಪಾದ' ಎಂದರ್ಥ. ಲೋಕದಲ್ಲಿ ನಡೆಯುವುದರಿಂದ ಸುಖವಾಗುವುದಿಲ್ಲ. ಹೀಗೆ ರತಿವಿರುದ್ಧವಾದ ಅಂದರೆ ಸುಖಕ್ಕೆ ವಿರುದ್ಧವಾದ ಗಮನಕ್ಕೆ ಪಾದವು (ಕಾಲುಗಳು) ಸಾಧನವಾಗಿದೆ. ಆದ್ದರಿಂದ 'ಅರತಿ' ಶಬ್ದಕ್ಕೆ 'ಪಾದ' ಎಂಬರ್ಥವನ್ನು ವಿವಕ್ಷಿಸಬೇಕು.

वाक्यान्तरस्याविरोधेनेत्यादि । भाष्योदाहृतश्रुतौ ''सर्वलिङ्गः सर्वगुणः'' इत्यादौ श्रुतस्य सर्वशब्दस्य दुःखित्वादिजीवलिङ्गं नार्थः, निरवद्यत्वादिविरुद्धत्वादित्यर्थः ।

'ವಾಕ್ಯಾಂತರಸ್ಯಾವಿರೋಧೇನೇ' ಎಂದು ಟೀಕೆಯಲ್ಲಿ ಹೇಳಿದ್ದಾರೆ. ಭಾಷ್ಯದಲ್ಲಿ ಉದಾಹರಿಸಲ್ಪಟ್ಟ ಶ್ರುತಿಯಲ್ಲಿ 'ಸರ್ವಲಿಂಗಃ ಸರ್ವಗುಣಃ' ಎಂಬುದಾಗಿ ಸರ್ವಶಬ್ದವು ಕೇಳಿಸುತ್ತಿದೆ. ಈ ಸರ್ವಶಬ್ದಕ್ಕೆ ದುಃಖಿತ್ವವೇ ಮೊದಲಾದ ಜೀವನ ಲಿಂಗಗಳನ್ನು ವಿವಕ್ಷಿಸಬಾರದು ಹೊರತಾಗಿ ನಿರವದ್ಯತ್ವ .....

अपिपदेनोभयसमुच्चयसिद्धेरित्यादि । सूत्रे 'पुरुषविधम्' इत्यनेनैवोच्यमानायाः श्रुतिसमाख्यायाः द्वितीयसूत्रोक्तस्मृतिसमाख्यया, असम्भवशब्दोक्तप्रकरणेन च समुच्चयस्यापिशब्देनैव सिद्धेश्चशब्दः शङ्कानिवृत्यर्थः सन् भाष्योक्तस्यैव सूचक इत्यर्थः ।

'ಅಪಿಪದೇನೋಭಯಸಮುಚ್ಚಯ ಸಿದ್ದೇನ' ಎಂದು ಟೀಕೆಯಲ್ಲಿ ಹೇಳಿದ್ದಾರೆ. ಇದರ ಅಭಿಪ್ರಾಯ ಹೀಗಿದೆ - ಸೂತ್ರದಲ್ಲಿ 'ಪುರುಷವಿಧಂ' ಎಂದು ಹೇಳಿರುವುದರಿಂದಲೇ ಶ್ರುತಿ ಸಮಾಖ್ಯಾ ಹಾಗೂ ಎರಡನೆಯ ಸೂತ್ರದಲ್ಲಿ ಹೇಳಲ್ಪಟ್ಟ ಸ್ಮೃತಿ ಸಮಾಖ್ಯೆಯೂ ಸಹ ತಿಳಿಯುತ್ತದೆ. 'ಸಂಭವ' ಶಬ್ದದಿಂದ ಹೇಳಲ್ಪಟ್ಟ ಪ್ರಕರಣದಿಂದ ಎಂಬ ಸಮುಚ್ಚಯವೂ ಸಹ ತಿಳಿಯುತ್ತದೆ. ಆದರೂ ಸಹ ಸೂತ್ರದಲ್ಲಿ 'ಚ' ಶಬ್ದವನ್ನೇಕೆ ಹೇಳಿದ್ದಾರೆಂದರೆ ಶಂಕೆಯನ್ನು ನಿವೃತ್ತಿ ಮಾಡುವ ಮೂಲಕ ಭಾಷ್ಯದಲ್ಲಿ ಹೇಳಿದ್ದನ್ನೆಲ್ಲಾ ಸೂಚನೆ ಮಾಡುವುದಕ್ಕಾಗಿ ಎಂದು ತಿಳಿಯಬೇಕು.

प्रागुक्तैवानुपपत्तिरिति । वैदिकाग्यादिसूक्तादिव्यवहारस्याग्यादि-प्रतिपादकत्वनिमित्तकत्वेन मुख्यत्वाङ्गीकारे ''सर्वनामा'' इत्यादिश्रुतिविरोधादिरूप प्रागुक्तानुपपत्तिरेव व्यवहारस्याभिव्यक्त्यादिनिमित्तकत्वनोपचरितत्वाङ्गीकारे हेतुरित्यर्थः ।

ಟೀಕೆಯಲ್ಲಿ 'ಪ್ರಾಗುಕ್ತೈವಾನುಪಪತ್ತಿಃ' ಎಂದಿದೆ. ಇದಕ್ಕೆ ಹೀಗರ್ಥ. ವೇದದಲ್ಲಿ ಅಗ್ನಿಸೂಕ್ತ, ವಾಯುಸೂಕ್ತ, ಇತ್ಯಾದಿ ವ್ಯವಹಾರಗಳಿವೆ. ಈ ಸೂಕ್ತವ್ಯವಸ್ಥೆಯನ್ನು ಆಯಾ ಸೂಕ್ತಗಳು ಅಗ್ನಿ ಮೊದಲಾದವರನ್ನು ಪ್ರತಿಪಾದಿಸುವ ಕಾರಣ ಮಾಡುವುದಾದರೆ ಅಗ್ನಿ ಮೊದಲಾದವರಲ್ಲಿ ಆಯಾ ಸೂಕ್ತಗಳಿಗೆ ಮುಖ್ಯಾರ್ಥವನ್ನು ಅಂಗೀಕರಿಸಿದಂತಾಗುತ್ತದೆ. ಆವಾಗ 'ಸರ್ವನಾಮಾ' ಇತ್ಯಾದಿ ಶ್ರುತಿಗಳ ವಿರೋಧವು ಪ್ರಾಪ್ತವಾಗುತ್ತದೆ. ಆದ್ದರಿಂದ ಹಿಂದೆ ಹೇಳಿದ ಪ್ರಕಾರ ಆಯಾ ಅಧಿಷ್ಠಾನಗಳಲ್ಲಿ ಭಗವಂತನ ಉಪಾಸನೆಗೋಸ್ಕರ ಸೂಕ್ತಾದಿ ವ್ಯವಸ್ಥೆಯಿರುತ್ತದೆಂದು ಔಪಚಾರಿಕವಾದ ಅರ್ಥವನ್ನು ಅಂಗೀಕರಿಸಬೇಕು ಎಂದರ್ಥ.

भाष्योदाहृतश्रुतौ 'अरम्' इत्यस्य सम्यगित्यर्थ इति तत्त्वप्रदीप एवोक्तमिति ।।

।। इति श्रीमद्ब्रह्मण्यतीर्थपूज्यपादानां शिष्येण व्यासयतिना विरचितायां श्रीमद्भाष्यटीकाया विवृतौ तात्पर्यचन्द्रिकायां प्रथमाध्यायस्य द्वितीयः पादः ।।२।।

ಭಾಷ್ಯದಲ್ಲಿ ಉದಾಹರಿಸಲ್ಪಟ್ಟ ಶ್ರುತಿಯಲ್ಲಿ 'ಅರಮ್' ಎಂದಿದೆ. ಇದಕ್ಕೆ 'ಸಮ್ಯಕ್' (ಚೆನ್ನಾಗಿ) ಎಂಬರ್ಥವನ್ನು ತತ್ತ್ವಪ್ರದೀಪದಲ್ಲೇ ಹೇಳಿರುತ್ತಾರೆ.

ಇಲ್ಲಿಗೆ ಶ್ರೀಮದ್ಬ್ರಹ್ಮಣ್ಯತೀರ್ಥಪೂಜ್ಯಶ್ರೀಪಾದರ ಶಿಷ್ಯರಾದ
ಶ್ರೀವ್ಯಾಸತೀರ್ಥಯತಿಗಳಿಂದ ವಿರಚಿತವಾದ ಭಾಷ್ಯಟೀಕೆಯ ವಿವೃತಿಯಾದ ತಾತ್ಪರ್ಯಚಂದ್ರಿಕೆಯಲ್ಲಿ
ಪ್ರಥಮಾಧ್ಯಾಯದ ದ್ವಿತೀಯಪಾದವು ಸಮಾಪ್ತವಾಯಿತು.

॥ ಶ್ರೀ ಕೃಷ್ಣಾರ್ಪಣಮಸ್ತು ॥

ಪ್ರಕಾಶಃ –

''शब्दादिभ्यः'' इति सूत्रे शङ्कभागार्थस्याविरोधात् सिद्धान्तांशार्थमनूद्य प्रत्याह – यच्चेति । 'अत एव' इत्याद्युक्तं व्यनक्ति – न हीति ।

ವಿವರಣೆ - 'ಶಬ್ದಾದಿಭ್ಯಃ' ಎಂಬ ಮೂರನೆಯ ಸೂತ್ರದಲ್ಲಿ ಪೂರ್ವಪಕ್ಷ ಭಾಗದಲ್ಲಿ ನಮಗೂ ಅದ್ವೈತಿಗಳಿಗೂ ವಿರೋಧವಿರುವುದಿಲ್ಲ. ಆದರೆ ಸಿದ್ಧಾಂತ ಭಾಗದಲ್ಲಿ ವಿರೋಧವಿದೆ. ಆದಕ್ಕೋಸ್ಕರ ಕೇವಲ ಸಿದ್ಧಾಂತ ಭಾಗವನ್ನು ಅನುವಾದ ಮಾಡಿ ನಿರಾಕರಿಸುತ್ತಿದ್ದಾರೆ 'ಯಚ್ಚ' ಇತ್ಯಾದಿ ವಾಕ್ಯದಿಂದ. 'ಅತ ಏವ' ಇತ್ಯಾದಿಯಾಗಿ ಹೇಳಿದ್ದನ್ನು ತಾವೇ ವ್ಯಾಖ್ಯಾನಿಸುತ್ತಿದ್ದಾರೆ. 'ನಹಿ' ಇತ್ಯಾದಿ ವಾಕ್ಯದಿಂದ

सर्वपाप्मेति । ''तद्यथैषीकातूलमग्नौ प्रोतं प्रदूयते एवं हैवास्य सर्वे पाप्मानः प्रदूयन्ते'' इत्युक्तब्रह्मज्ञानफलस्य प्रतीकज्ञानादसिद्धेरिति भावः ।

'ಸರ್ವಪಾಪಪ್ರದಾಹಃ' ಎಂದು ಗ್ರಂಥದಲ್ಲಿದೆ. ಅಂದರೆ - 'ತದ್ಯಥೈಷೀಕಾತೂಲಮಗ್ನೌ ಪ್ರೋತಂ ಪ್ರದೂಯತೇ ಏವಂ ಹೈವಾಸ್ಯ ಸರ್ವೇ ಪಾಪ್ಮನಃ ಪ್ರದೂಯಂತೇ' ಎಂಬ ವಾಕ್ಯದಲ್ಲಿ ಬ್ರಹ್ಮಜ್ಞಾನದಿಂದ ಸರ್ವಪಾಪರಾಹಿತ್ಯವೆಂಬ ಫಲವು ದೊರೆಯುತ್ತದೆಂದು ಹೇಳಲಾಗಿದೆ. ಈ ಫಲವು ಬ್ರಹ್ಮಜ್ಞಾನದಿಂದಲೇ ದೊರೆಯಬೇಕು ಹೊರತು, ಪ್ರತೀಕಜ್ಞಾನದಿಂದ ದೊರೆಯಲು ಸಾಧ್ಯವಿಲ್ಲವೆಂದರ್ಥ.

प्रकाशः – पुरुषविधशब्देनेति । यद्यपि परभाष्ये 'पुरुषमपि चैनम्' इत्यपि सूत्रपाठ उक्तः, तथाऽपि स पाठोऽप्रामाणिक इति भावेनायमेव पाठोऽनूदितः, ये तु 'पुरुषविधमपि' इति पठन्ति, तेषां मते द्युमूर्धत्वादिपृथिवी-प्रतिष्ठितत्वान्तं यत्पुरुषविधत्वं, तद्गृह्यत इत्युक्तेरिति भावः ।

ಗ್ರಂಥದಲ್ಲಿ 'ಪುರುಷವಿಧಶಬ್ದೇನ' ಎಂದು ಹೇಳಿದ್ದಾರೆ. ವಾಸ್ತವಿಕವಾಗಿ ಅದ್ವೈತ ಭಾಷ್ಯದಲ್ಲಿ 'ಪುರುಷವಿಧಮಪಿ' ಎಂಬ ಪಾಠದ ಬದಲು 'ಪುರುಷಮಪಿ ಚೈನಮ್' ಎಂಬ ಪಾಠವನ್ನು ಅನುಕರಿಸಿದ್ದಾರೆ. ಆದರೆ ಈ ಪಾಠವು ಅಪ್ರಾಮಾಣಿಕವಾಗಿದೆಯೆಂಬ ಅಭಿಪ್ರಾಯದಿಂದ ಗ್ರಂಥಕಾರರು ಅದರ ಅನುವಾದವನ್ನೇ ಮಾಡಿಲ್ಲ. 'ಪುರುಷವಿಧಮಪಿ' ಎಂಬ ಸಾಧುಪಾಠವನ್ನೇ ಅದ್ವೈತಿಗಳು ಅನುಸರಿಸಬೇಕೆಂದು 'ಪುರುಷವಿಧಶಬ್ದೇನ' ಎಂದು ಹೇಳಿದ್ದಾರೆ. ಏಕೆಂದರೆ 'ಯೇ ತು ಪುರುಷವಿಧಮಪಿ' ಇತಿ ಪಠಂತಿ, ತೇಷಾಂ ಮತೇ ದ್ಯುಮೂರ್ಧತ್ವಾದಿಪೃಥಿವೀಪ್ರತಿಷ್ಠಿತತ್ವಾಂತಂ ಯತ್ಪುರುಷವಿಧತ್ವಂ ತದ್ ಗೃಹ್ಯತೇ' ಎಂದು ಹೇಳಿರುತ್ತಾರೆ. ಅಂದರೆ 'ಪುರುಷವಿಧಮ್' ಎಂಬ ಮತ್ತೊಂದು ಪಾಠವಿದೆ ಎಂಬುದಾಗಿ ಅವರೂ ಸಹ ಒಪ್ಪಿದ್ದಾರೆ. ಆದ್ದರಿಂದ 'ಪುರುಷವಿಧಮಪಿ' ಎಂಬ ಪಾಠವನ್ನು ಅನುಸರಿಸುವುದು ಸಾಧುವಾಗಿದೆ.

ಪ್ರಕಾಶಃ – ವಿಶೇಷಾದಿತೀತಿ । ಆಚಸೂತ್ರೇऽಪೀತ್ಯರ್ಥಃ । ''ಅತ ಏವ'' ಇತಿ ಸೂತ್ರಾರ್ಥೋ ನಾತೀವ ವಿರುದ್ಧ ಇತಿ ತದ್ಪೇಕ್ಷ್ಯ ''ಸಾಕ್ಷಾದಪಿ'' ಇತಿ ಸೂತ್ರಾರ್ಥಂ ನಿರಾಹ – ಯಚ್ಚೋಕ್ತಮಿತಿ ।

'ವಿಶೇಷಾತ್ ಇತ್ಯತ್ರಾಪಿ' ಎಂದು ಗ್ರಂಥದಲ್ಲಿ ಹೇಳಿದ್ದಾರೆ. ಮೊದಲನೆಯ ಸೂತ್ರದಲ್ಲಿಯೂ 'ಸಾಧಾರಣ ಶಬ್ದವಿಶೇಷಾತ್' ಎಂಬುದರಿಂದ ಪುನರುಕ್ತಿ ಬರುತ್ತದೆಂದು ತಿಳಿಯಬೇಕು. 'ಅತ ಏವ ನ ದೇವತಾ' ಎಂಬ ಸೂತ್ರಾರ್ಥದಲ್ಲಿ ಹೆಚ್ಚಿಗೆ ವಿರೋಧ ಕಾಣಿಸುವುದಿಲ್ಲವೆಂದು ಉಪೇಕ್ಷಿಸಿ 'ಸಾಕ್ಷಾದಪಿ' ಎಂಬ ವದನೆಯ ಸೂತ್ರಾರ್ಥವನ್ನು ನಿರಾಕರಿಸುತ್ತಿದ್ದಾರೆ 'ಯಚ್ಚೋಕ್ತಂ' ಇತ್ಯಾದಿಯಾಗಿ.

'ಅತ ಏವ ನ ದೇವತಾ ಭೂತಂ ಚ' ಎಂಬುದರ ಅಭಿಪ್ರಾಯ ಹೀಗೆ -

ಜಡವಾದ ಅಗ್ನಿಯ ತಲೆಯು ದ್ಯುಲೋಕವಾಗಲು ಸಾಧ್ಯವಿಲ್ಲ. ಅಗ್ನಿದೇವತೆಗೂ ಸಹ ಅಂತಹ ಸಾಮರ್ಥ್ಯವಿಲ್ಲ. ಆದರೆ ಶ್ರುತಿಯು ವೈಶ್ವಾನರನು ದ್ಯುಲೋಕವನ್ನೇ ಶಿರಸ್ಸನ್ನಾಗಿ ಮಾಡಿಕೊಂಡಿದ್ದಾನೆಂದು ವಿಶಾಲರೂಪವನ್ನು ಮತ್ತು ಆತ್ಮಶಬ್ದ ಪ್ರತಿಪಾದ್ಯನೆಂದೂ ಹೇಳುತ್ತಿದೆ. ಈ ಕಾರಣದಿಂದ ಅಗ್ನಿದೇವತೆಯಾಗಲೀ, ಜಡವಾದ ಅಗ್ನಿಯಾಗಲೀ, ವೈಶ್ವಾನರನೆನಿಸಲು ಸಾಧ್ಯವಿಲ್ಲವೆಂದು ನಾಲ್ಕನೆಯ ಸೂತ್ರಕ್ಕೆ ವ್ಯಾಖ್ಯಾನಿಸುತ್ತಾರೆ.

ಇವರ ಈ ಸೂತ್ರವ್ಯಾಖ್ಯಾನದಲ್ಲಿ ಖಂಡಿಸಬೇಕಾದ ಅಂಶವೇನೂ ಇರುವುದಿಲ್ಲ.

ಪ್ರಕಾಶಃ – ಪೂರ್ವೆ ಜಾಠರಾಗ್ನಿಪ್ರತೀಕೋ ಜಾಠರಾಗ್ನ್ಯಪಾಧಿಕೋ ವಾ ಪರಮೇಶ್ವರ ಉಪಾಸ್ಯ ಇತ್ಯುಕ್ತಮ್, ಇದಾನೀಂ ವಿನೈವ ಪ್ರತೀಕೋಪಾಧಿಕಲ್ಪನಾಮ್ಯಾಂ ಕೇವಲಸ್ಯೈವ ಅಗ್ನಿವೈಶ್ವಾನರ-ಶಬ್ದವಾಚ್ಯತ್ವಮುಚ್ಯತ ಇತ್ಯುಕ್ತಮಿತ್ಯರ್ಥಃ ।

ಶ್ಲಿಷ್ಟತ್ವಾದಿತಿ । ಅನ್ಯವಧಾನಾರ್ಥತ್ವಾತ್ತಸ್ಯೇತ್ಯರ್ಥಃ । ಗುಣಪೂರ್ತೀತಿ । ತಥಾ ಚೈತತ್ಸೂತ್ರಂ ತ್ವನ್ಮತಪ್ರತಿಕೂಲಮಿತಿ ಭಾವಃ ।

'ಸಾಕ್ಷಾದಪ್ಯವಿರೋಧಂ ಜೈಮಿನಿಃ'

'ತಥಾದೃಷ್ಟ್ಯುಪದೇಶಾತ್' ಎಂಬುದಾಗಿ ಹಿಂದೆ ಜಾಠರಾಗ್ನಿಯು ಬ್ರಹ್ಮನಿಗೆ ಪ್ರತೀಕವಾಗಿದೆ. ಅಥವಾ ಉಪಾಧಿಯಾಗಿದೆಯೆಂದು ಹೇಳಿದರು. ಆದರೆ ಜೈಮಿನ್ಯಾಚಾರ್ಯರು ಪ್ರತೀಕ ಅಥವಾ ಉಪಾಧಿಗಳ ಕಲ್ಪನೆಯಿಲ್ಲದೆ ನೇರವಾಗಿ ಪರಬ್ರಹ್ಮನೇ ವೈಶ್ವಾನರಶಬ್ದದಿಂದ ವಾಚ್ಯನಾಗುತ್ತಾನೆಂದು ಹೇಳುತ್ತಾರೆ. 'ಮೂರ್ಧೈವ ಸುತೇಜಾಃ' ಎಂದು ಹೇಳಿದಂತೆ ಅವನ ಅಂಗಾಂಗಗಳ ವರ್ಣನೆಯಿರುವುದರಿಂದ ಪುರುಷವಿಧತ್ವವು ಅವನಿಗೆ ಉಪಪನ್ನವಾಗುತ್ತದೆ. ಬ್ರಹ್ಮನು ಸರ್ವಾತ್ಮಕನಾದ್ದರಿಂದ ಅನೇಕ ಅವಯವಗಳ ಸಮುದಾಯದಲ್ಲಿ ಅಂತಃಪ್ರವಿಷ್ಟನೂ ಆಗುತ್ತಾನೆ. ಹೀಗೆ ಪುರುಷತ್ವ ಹಾಗೂ ಪುರುಷಾಂತಃ ಪ್ರವಿಷ್ಟತ್ವಗಳರಡೂ ಉಪಪನ್ನವಾಗುವುದರಿಂದ ವ್ಯಾಪ್ತನಾದ ಬ್ರಹ್ಮನೇ ವೈಶ್ವಾನರನಾಗುತ್ತಾನೆಂದು ಅರ್ಥ.

'ಕ್ಲಿಷ್ಟತ್ವಾತ್' ಎಂದರೆ ಈ ಬಗೆಯ ಅದ್ವೈತಿಗಳ ವ್ಯಾಖ್ಯಾನವು ಅತ್ಯಂತ ಕ್ಲಿಷ್ಟಕರವಾಗಿದೆ. 'ಸಾಕ್ಷಾತ್' ಎಂಬ ಶಬ್ದಕ್ಕೆ ಅವ್ಯವಧಾನವೆಂಬ ಅರ್ಥವಿರುತ್ತದೆ ಹೊರತು, 'ಕೇವಲ' ಎಂಬರ್ಥವು ಇರುವುದಿಲ್ಲ. 'ಗುಣಪೂರ್ತಿ' ಎಂಬ ಭಾಗಕ್ಕೆ ಗುಣಪೂರ್ಣತ್ವವನ್ನು ಈ ಸೂತ್ರವು ಹೇಳುತ್ತಿರುವುದರಿಂದ ಅದು ಅದ್ವೈತಮತಕ್ಕೆ ಪ್ರತಿಕೂಲವೇ ಆಗಿದೆಯೆಂದು ಅರ್ಥವನ್ನು ತಿಳಿಯಬೇಕು.

ಪ್ರಕಾಶಃ – ಕಿಞ್ಚ ''ತಥಾ ದೃಷ್ಟ್ಯುಪದೇಶಾತ್'' ಇತ್ಯನೇನೈವ ಶಙ್ಕಾಯಾಃ ಪರಿಹೃತತ್ವಾತ್, ಸಾಕ್ಷಾತ್ತತ್ಪ್ರತಿಪಾದಕತ್ವೋಕ್ತಾವತಿಶಯಾಭಾವಾತ್, ಪ್ರತಿಕೂಲತ್ವಾಚ್ಚ ನ ವಾಚ್ಯಮೇವೈತದಿತ್ಯಪಿ ಧ್ಯೇಯಮ್ ।

ಯಚ್ಚೋಕ್ತಮಿತಿ । ''ಯಸ್ತ್ವೇತಂ ಪ್ರಾದೇಶಮಾತ್ರಮ್'' ಇತಿ ಶ್ರುತಪ್ರಾದೇಶಮಾತ್ರಶ್ರುತಿಃ ಕಥಮಿತ್ಯಾಕಾಙ್ಕ್ಷಾಯಾಮ್ ಅತಿಮಾತ್ರಸ್ಯಾಪೀಶ್ವರಸ್ಯ ಪ್ರಾದೇಶಮಾತ್ರಪರಿಮಾಣಹೃದಯಾದಿಸ್ಥಾನೇಷು ಉಪಾಸಕಾನಾಮಭಿವ್ಯಜ್ಯಮಾನತ್ವಾದ್ವಾ, ಹೃದಯಾದಾವನುಸ್ಮರ್ತವ್ಯತ್ವಾದ್ವಾ ''ಪ್ರಾದೇಶಮಾತ್ರಮಿವ ಹ ವೈ ದೇವಾಸ್ಸಂವಿದಿತಾ ಅಭಿಸಮ್ಪನ್ನಾಸ್ಸ್ಮಃ'' ಇತಿ ಶ್ರುತ್ಯಾ ಪ್ರಾದೇಶಮಾತ್ರತ್ವಸಮ್ಪತ್ತ್ಯಾ ವಾ ಪ್ರಾದೇಶಮಾತ್ರತ್ವಂ ಯುಕ್ತಮಿತ್ಯರ್ಥಃ ।

ಮತ್ತು ಈ ಸೂತ್ರವು ಹೊರಟಿದ್ದೇ ವ್ಯರ್ಥ. ಏಕೆಂದರೆ 'ತಥಾ ದೃಷ್ಟ್ಯುಪದೇಶಾತ್' ಎಂಬುದರಿಂದಲೇ ವೈಶ್ವಾನರನನ್ನು ಪ್ರತೀಕದಲ್ಲಿ ಅಥವಾ ಉಪಾಧಿಯಲ್ಲಿ ಉಪಾಸನೆ ಮಾಡಬೇಕೆಂದು ಹೇಳಿದ ಮೇಲೆ ಪುನಃ ಸಾಕ್ಷಾತ್ತಾಗಿ ಅಂತಹ ವೈಶ್ವಾನರನನ್ನು ಪ್ರತಿಪಾದನೆ ಮಾಡುವುದರಲ್ಲಿ ಏನೂ ಅತಿಶಯವಿಲ್ಲ. ಮತ್ತು ನಿರ್ಗುಣಬ್ರಹ್ಮನ ಪ್ರತಿಪಾದನೆಗೆ ಪ್ರತಿಕೂಲವೇ ಆಗಿರುತ್ತದೆ.

'ಅಭಿವ್ಯಕ್ತೇರಿತ್ಯಾಶ್ಮರಥ್ಯಃ'

ಬ್ರಹ್ಮನು ವ್ಯಾಪ್ತನಾಗಿರುವುದರಿಂದ ಪ್ರಾದೇಶಮಾತ್ರ ಶ್ರುತಿಯನ್ನು ಹೇಗೆ ಕೂಡಿಸುವುದು ? ಎಂಬ ಆಶಂಕೆಗೆ ಉತ್ತರಿಸುತ್ತಿದ್ದಾರೆ. ಈಶ್ವರನು ವ್ಯಾಪ್ತನಾಗಿದ್ದರೂ ಪ್ರಾದೇಶಮಾತ್ರ ಪರಿಮಾಣವಿರುವ ಹೃದಯ ಮೊದಲಾದ ಸ್ಥಾನಗಳಲ್ಲಿ ಉಪಾಸಕರಿಗೆ ಅಭಿವ್ಯಕ್ತನಾಗುತ್ತಾನಾದ್ದರಿಂದ, ಅಥವಾ ಆ ಸ್ಥಾನಗಳಲ್ಲಿ

ಧ್ಯಾನಯೋಗ್ಯನಾದ್ದರಿಂದ ಅಥವಾ - ಅಂಗುಷ್ಠ ಮಾತ್ರ ಪರಿಮಿತಿಯಲ್ಲಿ ಪ್ರತ್ಯಕ್ಷನಾಗುವುದರಿಂದ ವೈಶ್ವಾನರನಿಗೆ ಹೇಳಿದ 'ಪ್ರಾದೇಶಮಾತ್ರಮ್' ಎಂಬ ವಿಶೇಷಣವು ಯುಕ್ತವಾಗುತ್ತದೆಂದು ಆಶ್ಮರಥ್ಯರು ಹೇಳುತ್ತಾರೆ.

'ಅನುಸ್ಮೃತೇರ್ಬಾದರಿಃ'

ಅಂಗುಷ್ಠ ಗಾತ್ರದ ಹೃದಯಪ್ರದೇಶದಲ್ಲಿ ಬ್ರಹ್ಮನು ಇರುತ್ತಾನೆಂದು ಧ್ಯಾನ ಮಾಡಬೇಕು. ಆದ್ದರಿಂದ ವ್ಯಾಪ್ತನಾಗಿದ್ದರೂ 'ಪ್ರಾದೇಶಮಾತ್ರಮ್' ಎಂಬ ವಿಶೇಷಣವು ಯುಕ್ತವಾಗುತ್ತದೆಂದು ಬಾದರಿಯ ಋಷಿಗಳು ಹೇಳುತ್ತಾರೆ.

'ಸಂಪತ್ತೇರಿತಿ ಜೈಮಿನಿಸ್ತಥಾಹಿ ದರ್ಶಯತಿ'

ವೈಶ್ವಾನರನಿಗೆ ತಲೆಯಿಂದ ಒಂದು ಗೇಣಿನ ಕೆಳಗಡೆ ಅಂಗಗಳನ್ನು ಹೇಳಲಾಗಿದೆ. ಇದನ್ನೇ ಪ್ರಾದೇಶವೆಂದು ಕರೆಯುತ್ತಾರೆ. ಆದ್ದರಿಂದ ಅವನನ್ನು 'ಪ್ರಾದೇಶಮಾತ್ರಮ್' ಎಂದು ಶ್ರುತಿ ಹೇಳಿದೆ. ವಾಜಸನೇಯ ಶಾಖೆಯಲ್ಲಿಯೂ ಹೀಗೆಯೇ ಹೇಳಲಾಗಿದೆ - 'ಪ್ರಾದೇಶಮಾತ್ರಮಿವ ಹ ವೈ ದೇವಾಃ ಸಂವಿದಿತಾ ಅಭಿಸಂಪನ್ನಾಃ ಸ್ಮಃ' ದ್ಯುಲೋಕದಿಂದ ಪೃಥಿವಿಯ ತನಕದ ಸ್ಥಾನಗಳು ವ್ಯಾಪ್ತನಾದ ಬ್ರಹ್ಮನಿಗೆ ಪ್ರಾದೇಶಮಾತ್ರವಾಗಿವೆ ಎಂಬುದು ಜೈಮಿನ್ಯಾಚಾರ್ಯರ ಮತ.

'ಆಮನಂತಿ ಚೈನಮಸ್ಮಿನ್'

ಶ್ರುತಿಯು ಹುಬ್ಬಿನಿಂದ ಕೆಳತುಟಿಯ ತನಕದ ಮುಖಭಾಗವನ್ನು ಪ್ರಾದೇಶಪರಿಮಿತವಾಗಿದೆಯೆಂದು ಹೇಳಿ ಅದು ಜೀವನ ಸ್ಥಾನವಾಗಿದೆಯೆಂದು ಹೇಳಿದೆ. ಏನಂ = ಬ್ರಹ್ಮನನ್ನು, ಅಸ್ಮಿನ್ = ಈ ಪ್ರಾದೇಶ ಸ್ಥಾನದಲ್ಲಿ, ಆಮನಂತಿ = ಹೇಳುತ್ತಾರೆ.

ಹೀಗೆ ಆದ್ವೈತಿಗಳು ಒಂಭತ್ತು ಸೂತ್ರಗಳಿಗೂ ವ್ಯಾಖ್ಯಾನವನ್ನು ಮಾಡುತ್ತಾರೆ.

प्रकाशः – ''हृद्यपेक्षया'' इत्यग्रेतनेनापि परिहृतत्वं ध्येयमिति भावेनाह – इति दिगिति । यद्वा केषाञ्चिन्मते ''शब्दादिभ्यः'' इत्यादि सूत्रार्थदूषणं कुतो न कृतमित्यत आह – इति दिगिति ।

'ಅಭಿವ್ಯಕ್ತೇರಿತ್ಯಾಶ್ಮರಥ್ಯಃ' ಇತ್ಯಾದಿ ಸೂತ್ರಗಳಲ್ಲಿ ಬ್ರಹ್ಮನಿಗೆ ಪ್ರಾದೇಶಪರಿಮಾಣವನ್ನು ಸಮರ್ಥಿಸಲಾಗಿದೆಯೆಂದು ಆದ್ವೈತಿಗಳು ವ್ಯಾಖ್ಯಾನಿಸಿದ್ದಾರೆ. ಇದು 'ಅರ್ಭಕೌಕಸ್ತ್ವಾತ್' ಇತ್ಯಾದಿ ಸೂತ್ರದಲ್ಲಿ 'ತಥಾ ದೃಷ್ಟ್ಯುಪದೇಶಾತ್' ಎಂಬ ಭಾಗದಿಂದಲೇ ಸಮರ್ಥಿಸಿದ್ದಾರೆ. ಆದ್ದರಿಂದ ಪುನರುಕ್ತಿ ದೋಷ ಬರುತ್ತದೆ. ಮತ್ತು ಮುಂದೆ 'ಹೃದ್ಯಪೇಕ್ಷಯಾ' ಎಂಬುದರಿಂದಲೂ ಇದನ್ನು ಪರಿಹರಿಸುತ್ತಾರೆಂದು ತಿಳಿಯಬೇಕು. ಅಂದರೆ ಹಿಂದೆ 'ಅರ್ಭಕೌಕಸ್ತ್ವಾತ್' ಎಂಬ ಸೂತ್ರದಿಂದ; ಈಗ 'ತಥಾ ದೃಷ್ಟ್ಯುಪದೇಶಾತ್' ಎಂಬುದರಿಂದ; ಮುಂದೆ 'ಹೃದ್ಯಪೇಕ್ಷಯಾ' ಎಂಬುದರಿಂದ ಇವರ ಅಭಿಪ್ರಾಯವನ್ನು ನಿರಾಕರಿಸಿದ್ದಾರೆ. ಈ ಅಭಿಪ್ರಾಯದಿಂದ 'ಇತಿ ದಿಕ್' ಎಂದು ಗ್ರಂಥಕಾರರು ದಿಕ್‌ಪ್ರದರ್ಶನವನ್ನು ಮಾಡಿದ್ದಾರೆ. ಅಥವಾ

ರಾಮಾನುಜರ ಮತದಲ್ಲಿ 'ಶಬ್ದಾದಿಭ್ಯಃ' ಎಂಬ ಸೂತ್ರವನ್ನು 'ಸಾಕ್ಷಾದಪಿ' ಎಂಬ ಸೂತ್ರಾರ್ಥವನ್ನು ಏಕೆ ನಿರಾಕರಿಸಿಲ್ಲ ? ಎಂಬ ಪ್ರಶ್ನೆಗೂ 'ಇತಿ ದಿಕ್' ಎಂದು ಹೇಳಿರುತ್ತಾರೆ.

ಪ್ರಕಾಶಃ – **तथा हि – तत्सूत्रमग्र्यादिशब्दादिना जाठराग्नेर्वैश्वानरत्व-शङ्कानिरासकमित्युक्तमयुक्तं, जाठरस्य भूतत्वेन पृथक्शङ्कायोगात्, ''अत एव'' इति सूत्रे तन्निरासात् । अवश्यवक्तव्यपरसाधकसाधकाशत्वोक्त्या बाधकोद्धारापरत्वसम्भवे अन्यथावर्णनायोगाच्च । 'पुरुषमपि' इति पाठस्य असाम्प्रदायिकत्वात् । अग्निशब्दस्य अगनयनादिना भगवद्गचित्त्वं वक्तुं ''साक्षादपि'' इति सूत्रमित्यपि न, शब्दमात्रस्य विष्णुवाचित्वे अन्यत्रान्यवहारविरोधरूपबाधकोद्धारत्वसम्भवेऽन्यथोक्तयोगादित्यादि ज्ञेयमिति भावः । 'अत्रापि' एतदधिकरणेऽपीत्यर्थः ।।**

ರಾಮಾನುಜರ ಸೂತ್ರವ್ಯಾಖ್ಯಾನವು ಅಸಾಧುವಾಗಿದೆಯೆಂದು ತಿಳಿಯುವ ಮೊದಲು ಅವರು ಮಾಡುವ ಸೂತ್ರ ವ್ಯಾಖ್ಯಾನ ಏನೆಂದು ತಿಳಿಯೋಣ.

'ಶಬ್ದಾದಿಭ್ಯೋಽಂತಃ ಪ್ರತಿಷ್ಠಾನಾನ್ನೇತಿ ಚೇನ್ನ ತಥಾ ದೃಷ್ಟ್ಯುಪದೇಶಾದಸಂಭವಾಯತ್ಪುರುಷ-ವಿಧಮಪಿ ಚೈನಮಮಧೀಯತೇ'

ಅಗ್ನಿಶಬ್ದ ಪ್ರಯೋಗ ಮೊದಲಾದ ಕಾರಣಗಳಿಂದ ವೈಶ್ವಾನರನು ಜಾಠರಾಗ್ನಿಯೆಂದು ಹೇಳಬಾರದು. ಏಕೆಂದರೆ ಜಾಠರಾಗ್ನಿಯು ಬ್ರಹ್ಮನ ಶರೀರವಾಗಿದೆಯೆಂದು ಉಪಾಸನೆ ಮಾಡುವುದಕ್ಕಾಗಿ ಅಗ್ನ್ಯಾದಿ ಶಬ್ದಗಳನ್ನು ವೈಶ್ವಾನರನಲ್ಲಿ ಹೇಳಲಾಗಿದೆ. ಜಾಠರಾಗ್ನಿಗೆ 'ಮೂರ್ಧೈವ ಸುತೇಜಾಃ' ಇತ್ಯಾದಿ ಹೇಳಲ್ಪಟ್ಟ ತ್ರೈಲೋಕ್ಯಶರೀರತ್ವಾದಿಗಳು ಅಸಂಭಾವಿತವಾಗಿವೆ. ಅಷ್ಟೇ ಅಲ್ಲದೆ 'ಸ ಏಷೋ ಅಗ್ನಿಃ ವೈಶ್ವಾನರಃ ಯತ್ಪುರುಷಃ' ಎಂಬುದಾಗಿ ವೈಶ್ವಾನರನನ್ನು 'ಪುರುಷ' ಎನ್ನಲಾಗಿದೆ. 'ಸಹಸ್ರ ಶೀರ್ಷಾ ಪುರುಷಃ' ಎಂದು ಪುರುಷಸೂಕ್ತದಿಂದ ಪರಬ್ರಹ್ಮನೇ ಮಾಚ್ಯನಾಗಬೇಕಾದ್ದರಿಂದ ಅವನೇ ವೈಶ್ವಾನರನು.

ಹೀಗೆ ರಾಮಾನುಜರು ವ್ಯಾಖ್ಯಾನಿಸಿದ್ದಾರೆ. ಇದು ತಪ್ಪು. ಜಾಠರಾಗ್ನಿಯು ಭೌತಿಕಾಗ್ನಿಯಲ್ಲಿಯೇ ಸೇರುವುದರಿಂದ ಪ್ರತ್ಯೇಕವಾಗಿ ಆಕ್ಷೇಪ ಮಾಡಿ ಉತ್ತರಿಸಲು 'ಶಬ್ದಾದಿಭ್ಯಃ' ಎಂಬ ಸೂತ್ರವು ಹೊರಡಬೇಕಾಗಿಲ್ಲ. ಆದ್ದರಿಂದ ಮೂರನೆಯ ಸೂತ್ರವ್ಯಾಖ್ಯಾನವು ಅಸಾಧುವಾಗಿದೆ. ಹಾಗೂ 'ಅತ ಏವ ನ ದೇವತಾ' ಎಂಬ ಸೂತ್ರದಲ್ಲಿ ಈ ಆಕ್ಷೇಪವನ್ನು ನಿರಾಕರಿಸಲಾಗಿದೆ. ಆದ್ದರಿಂದ ಈ ಸೂತ್ರದಲ್ಲಿ ಜಾಠರಾಗ್ನಿಯ ನಿರಾಕರಣೆ ಸರಿಯಲ್ಲ.

'ಅತ ಏವ ನ ದೇವತಾ ಭೂತಂ ಚ'

ಹಿಂದೆ ಹೇಳಿದ ಕಾರಣಗಳಿಂದಲೇ ಅಗ್ನಿದೇವತೆಯಾಗಲೀ, ಭೂತಾಗ್ನಿಯಾಗಲಿ, ವೈಶ್ವಾನರರೆನಿಸುವುದಿಲ್ಲ.

ರಾಮಾನುಜರ ಈ ಸೂತ್ರವ್ಯಾಖ್ಯಾನವು ತಪ್ಪಾಗಿದೆ. ಏಕೆಂದರೆ ನಾವು ಹೇಳಿದಂತೆ ನಾಲ್ಕನೆಯ ಸೂತ್ರವು

ಪರಪಕ್ಷನಿರಾಸಕ್ಕೋಸ್ಕರ ಹೊರಟಿದೆ ಎಂದು ವ್ಯಾಖ್ಯಾನಿಸಲು ಬರುವಾಗ ಅನ್ಯಥಾ ವರ್ಣನೆಯು ಅಯುಕ್ತವಾಗಿದೆ. ಮತ್ತು ಮೂರನೆಯ ಸೂತ್ರದಲ್ಲಿ 'ಪುರುಷಮಪಿ' ಎಂಬ ಪಾಠವನ್ನು ಇವರೂ ಸಹ ಸ್ವೀಕರಿಸಿದ್ದಾರೆ. ಇದು ಅಸಂಪ್ರಾದಾಯಿಕವಾದ ಪಾಠ.

'ಸಾಕ್ಷಾದಪ್ಯವಿರೋಧಂ ಜೈಮಿನಿಃ'

ವಿಶ್ವ ನರರನ್ನು ನಿಯಮಿಸುವ ಕಾರಣ ವೈಶ್ವಾನರ ಶಬ್ದವು ಪರಬ್ರಹ್ಮವಾಚಕವಾಗುತ್ತದೆ. ಆದರಂತೆ ಶ್ರೇಷ್ಠಸ್ಥಾನಕ್ಕೆ ಕೊಂಡೊಯ್ಯುತ್ತಾನಾದ್ದರಿಂದ ಅಗ್ನಿಶಬ್ದವು ಪರಬ್ರಹ್ಮವಾಚಕವಾಗುತ್ತದೆ. ಇದು ಜೈಮಿನಿಗಳ ಅಭಿಪ್ರಾಯ.

ಐದನೆಯ ಈ ಸೂತ್ರವ್ಯಾಖ್ಯಾನವೂ ಸಹ ಅಸಾಧುವಾಗಿದೆ. ಸಕಲ ಶಬ್ದಗಳು ವಿಷ್ಣುವಾಚಿಯಾದರೆ ಅನ್ಯತ್ರವ್ಯವಹಾರವೇ ಕೂಡುವುದಿಲ್ಲವೆಂಬ ಬಾಧಕದ ಪರಿಹಾರಕ್ಕೋಸ್ಕರ ಐದನೆಯ ಸೂತ್ರವು ಹೊರಟಿದೆಯೆಂದು ವ್ಯಾಖ್ಯಾನಿಸಲು ಬರುವಾಗ ಬೇರೆ ರೀತಿಯಾದ ವ್ಯಾಖ್ಯಾನವು ಅಯುಕ್ತವಾಗಿದೆಯೆಂದು ತಿಳಿಯಬೇಕು.

'ಅತ್ಯಾಪಿ' ಎಂದರೆ ಈ ಅಧಿಕರಣದಲ್ಲಿಯೂ ಎಂದರ್ಥ.

प्रकाशः – अपरिच्छिन्नस्येति । अभिविमानपदोक्तस्येत्यर्थः । **'अभिव्यक्तेः' उपासकाभिव्यक्त्यर्थं तद्बुद्धिस्थतयेति यावत्** । द्युप्रभृतिप्रदेशसम्बन्धिन्यामात्र या परिच्छिन्नत्वरूपं प्रादेशमात्रत्वमित्याश्मरथ्यो मन्यत इत्यर्थः । **'अनुस्मृत्यर्थं' उपासनार्थम्** ।

'ಅಪರಿಚ್ಛಿನ್ನಸ್ಯ' ಎಂದರೆ ಅಭಿವಿಮಾನಪದದಿಂದ ಹೇಳಲ್ಪಟ್ಟ ವ್ಯಾಪ್ತತ್ವಕ್ಕೆ ಎಂದರ್ಥ. 'ಅಭಿವ್ಯಕ್ತೇಃ' ಎಂದರೆ 'ಉಪಾಸಕನ ಅಭಿವ್ಯಕ್ತಿಗೋಸ್ಕರ' ಎಂದರ್ಥ. ಬುದ್ಧಿಸೌಕರ್ಯಕ್ಕಾಗಿ ಎಂದು ತಿಳಿಯಬೇಕು. ಅಂದರೆ ದ್ಯುಲೋಕವೇ ಮೊದಲಾದ ಪ್ರದೇಶಕ್ಕೆ ಸಂಬಂಧಪಟ್ಟ ಪ್ರಾದೇಶ ಎಂಬ ಪರಿಮಾಣವುಳ್ಳವನು. ಪ್ರಾದೇಶಮಾತ್ರ ಶಬ್ದದಿಂದ ಪ್ರತಿಪಾದ್ಯನಾಗುತ್ತಾನೆಂದು ಆಶ್ಮರಥ್ಯರು ಹೇಳುತ್ತಾರೆಂದು ತಿಳಿಯಬೇಕು. 'ಅನುಸ್ಮೃತ್ಯರ್ಥಮ್' ಎಂದರೆ 'ಉಪಾಸನೆಗೋಸ್ಕರ' ಎಂದರ್ಥ.

प्रकाशः – विकल्प इति । अस्मन्मतरीत्या सूक्तव्यवस्थारूपैकार्थ एव नानानिमित्तोक्त्या ''लोपः शाकल्यस्य'' इत्यादाविव मुनिग्रहणेन सूचितविकल्पो युज्यते, नान्यथेत्यर्थः । **साध्येति** । ''अभिव्यक्तेः'' इत्यत्र प्रादेशमात्रत्वमिति, ''अनुस्मृतेः'' इत्यत्र पुरुषविधत्वमिति, ''सम्पत्तेः'' इत्यत्र द्युप्रभृतीनाम्। वेदित्वाद्युपदेश इत्यध्याहार इत्यर्थः ।

'ವಿಕಲ್ಪಃ' ಎಂದರೆ ನಮ್ಮ ಮತದ ಪ್ರಕಾರ ಸೂಕ್ತವ್ಯವಸ್ಥೆಯೆಂಬ ಒಂದೇ ಅರ್ಥವನ್ನು ಸಮರ್ಥಿಸುವುದಕ್ಕಾಗಿ ಅನೇಕ ನಿಮಿತ್ತಗಳನ್ನು ಭಿನ್ನಭಿನ್ನ ಋಷಿಗಳ ಪ್ರಕಾರ ಹೇಳಲಾಗಿದೆ. ವ್ಯಾಕರಣದಲ್ಲಿ

ಒಂದೇ ವಿಚಾರವನ್ನು ಬೇರೆ ಬೇರೆ ಋಷಿಗಳು 'ಲೋಪಃ ಶಾಕಲ್ಯಸ್ಯ' ಇತ್ಯಾದಿ ಸೂತ್ರಗಳಿಂದ ಹೇಳುವಂತೆ ಇಲ್ಲಿಯೂ ಸಹ ವಿಕಲ್ಪವನ್ನು ಆಶ್ರಯಿಸಿದ್ದೇವೆ. ಹೀಗೆಯೇ ಅರ್ಥವನ್ನು ಹೇಳಬೇಕು ಹೊರತು, ನೀವು ಹೇಳುವ ಅರ್ಥದಲ್ಲಿ ಭಿನ್ನಭಿನ್ನ ಮುನಿಗಳ ಗ್ರಹಣವು ವ್ಯರ್ಥವಾಗುತ್ತದೆಂದು ತಿಳಿಯಬೇಕು. ಮತ್ತು 'ಅಭಿವ್ಯಕ್ತೇಃ' ಎಂಬಲ್ಲಿ ಪ್ರಾದೇಶಮಾತ್ರತ್ವವನ್ನು 'ಅನುಸ್ಮೃತೇಃ' ಪುರುಷವಿಧತ್ವವನ್ನು, 'ಸಂಪತ್ತೇಃ' ಎಂಬಲ್ಲಿ 'ಉರಃಪ್ರಭೃತೀನಾಂ ವೇದಿತ್ವಾದ್ಯುಪದೇಶವನ್ನು' ನೀವು ಅಧ್ಯಾಹಾರ ಮಾಡಿಕೊಳ್ಳಬೇಕು. ಇದು 'ಸಾಧ್ಯಾಧ್ಯಾಹಾರ' ಎಂಬುದರ ಅಭಿಪ್ರಾಯ.

ಪ್ರಕಾಶಃ – ಯದ್ಯಪ್ಯತ್ರ ಭಾಷ್ಯದಿಶಾ ಅಭಿವ್ಯಕ್ತೇರ್ನಿಮಿತ್ತಾದಗ್ನ್ಯಾದಿಸೂಕ್ತನಿಯಮ ಇತ್ಯಾಶ್ಮರಥ್ಯ ಇತ್ಯರ್ಥಪ್ರತೀತ್ಯಾ ಸಿದ್ಧಾನ್ತೇऽಪ್ಯಧ್ಯಾಹಾರಃ ಸಾಧ್ಯಸ್ಯಾವಿಶಿಷ್ಟ ಇತ್ಯತಃ – **ಪ್ರತಿಸೂತ್ರಮಿತ್ಯುಕ್ತಮ್** । ಅತ ಏವ ಭಾಷ್ಯೇ ಪ್ರತಿಸೂತ್ರಮೇತದೇವ ಸಾಧ್ಯಮುಕ್ತಮ್ । ತಥಾ ಚೈಕತ್ರ ಅಧ್ಯಾಹೃತಮೇವ ಅನುವರ್ತಿಷ್ಯತೇ ಸರ್ವತ್ರೇತಿ ಭಾವಃ ।

ವಾಸ್ತವಿಕವಾಗಿ ನಮ್ಮ ಸಿದ್ಧಾಂತದಲ್ಲಿಯೂ ಸಹ ಭಾಷ್ಯದಲ್ಲಿ ಹೇಳಿದಂತೆ 'ಅಭಿವ್ಯಕ್ತೇರ್ನಿಮಿತ್ತಾಗ್ನ್ಯಾದಿಸೂಕ್ತನಿಯಮಃ' ಇತಿ ಆಶ್ಮರಥ್ಯಃ ಎಂದು ಅರ್ಥವನ್ನು ಹೇಳಿದ್ದರಿಂದ ಅಧ್ಯಾಹಾರವನ್ನು ಮಾಡಿಕೊಳ್ಳಲೇಬೇಕು. ಆದ್ದರಿಂದ ಪರರಿಗೆ ಮಾತ್ರ ದೋಷ ಹೇಳಿದ್ದು ಹೇಗೆ ಸರಿಯಾಗುತ್ತದೆ ? ಎಂದರೆ ಆದಕ್ಕೋಸ್ಕರ ಗ್ರಂಥಕಾರರು 'ಪ್ರತಿಸೂತ್ರಮ್' ಎಂಬ ಪದವನ್ನು ಹೇಳಿದ್ದಾರೆ. ಆದ್ದರಿಂದಲೇ ಭಾಷ್ಯದಲ್ಲಿ ಪ್ರತಿಯೊಂದು ಸೂತ್ರಗಳಲ್ಲಿ ಒಂದೇ ಸಾಧ್ಯವನ್ನು ಹೇಳಿದ್ದಾರೆ. ಆದ್ದರಿಂದ ಒಮ್ಮೆ ಅಧ್ಯಾಹಾರ ಮಾಡಿಕೊಂಡರೆ ಸಾಕು; ಎಲ್ಲಾ ಸೂತ್ರಗಳಲ್ಲಿ ಅದು ಅನುವೃತ್ತವಾಗುತ್ತದೆ. ಹೊರತು ಪ್ರತಿಯೊಂದು ಸೂತ್ರಗಳಲ್ಲಿಯೂ ಅನುವೃತ್ತಿಯನ್ನು ಮಾಡಿಕೊಳ್ಳಬೇಕಾಗಿಲ್ಲ.

ಪ್ರಕಾಶಃ – ಯದ್ವಾ – 'ಅಭಿವ್ಯಕ್ತೇಃ ಸಾಕ್ಷಾದಪ್ಯವಿರೋಧ ಇತ್ಯಾಶ್ಮರಥ್ಯಃ' ಇತ್ಯಾದಿರೂಪೇಣ ಪ್ರತಿಸೂತ್ರಮನ್ವಯಃ । 'ಸಾಕ್ಷಾದಪಿ' ಅನನ್ಯಯೋಗೇನ ಮುಖ್ಯವೃತ್ತ್ಯೈವ ಬ್ರಹ್ಮಣಃ ಸರ್ವಸೂಕ್ತಪ್ರತಿಪಾದ್ಯತ್ವೇऽಪಿ ಅಗ್ನ್ಯಾದಿಸೂಕ್ತವ್ಯವಸ್ಥಾಯಾ ಅವಿರೋಧ ಇತ್ಯಾಶ್ಮರಥ್ಯಾದಿರ್ಮನ್ಯತೇ, ಅಭಿವ್ಯಕ್ತ್ಯಾದೇಃ ನಿಮಿತ್ತಾದಿತ್ಯೇವಂ ರೂಪೇಣಾರ್ಥೋಪಪತ್ತೇಃ ಅನುವೃತ್ತಸ್ಯ ಪರ್ಯವಸಿತೋಕ್ತಿರ್ಭಾಷ್ಯೇ ।। **ಸೂಕ್ತನಿಯಮ ಇತಿ** । ಅತोऽಸ್ಮಾಕಂ ನ ಕಾಪ್ಯಧ್ಯಾಹಾರಸ್ತವ ತು ಪ್ರತಿಸೂತ್ರಮಿತಿ ಭಾವಃ ।।

ಅಥವಾ ಅಧ್ಯಾಹಾರವೇ ಬೇಡ ಎಲ್ಲದಕ್ಕೂ 'ಸಾಕ್ಷಾದಪ್ಯವಿರೋಧಃ' ಎಂಬಲ್ಲಿಯೇ ಅನ್ವಯವನ್ನು ಮಾಡಬಹುದು. 'ಅಭಿವ್ಯಕ್ತೇಃ ಸಾಕ್ಷಾದಪ್ಯವಿರೋಧಃ' ಎಂದು 'ಅನುಸ್ಮೃತೇಃ ಸಾಕ್ಷಾದಪ್ಯವಿರೋಧಃ' ಎಂದು ಅನ್ವಯವನ್ನು ಸುಲಭವಾಗಿ ಮಾಡಬಹುದು. 'ಸಾಕ್ಷಾತ್' ಎಂದರೆ ಬೇರೆ ಅರ್ಥದ ವ್ಯವಧಾನವಿಲ್ಲದೆ; ಮುಖ್ಯವೃತ್ತಿಯಿಂದಲೇ ಬ್ರಹ್ಮನು ಸಕಲ ಸೂತ್ರಗಳಿಂದ ಪ್ರತಿಪಾದ್ಯನಾಗಿದ್ದರೂ ಸಹ ಅಗ್ನ್ಯಾದಿ ಸೂಕ್ತಗಳ ವ್ಯವಸ್ಥೆಗೆ ವಿರೋಧವಿಲ್ಲ. ಹೀಗೆ ಆಶ್ಮರಥ್ಯಾದಿ ಋಷಿಗಳು ಹೇಳುತ್ತಾರೆ. ಹಾಗಾದರೆ

ಆಚಾರ್ಯರು ಭಾಷ್ಯದಲ್ಲಿ ಅನುವೃತ್ತಿಯನ್ನು ಮಾಡಿದ್ದಾರಲ್ಲವೇ? ಎಂದರೆ ಪರ್ಯವಸಿತವಾದ ಅರ್ಥವನ್ನು ಹೇಳಿದ್ದಾರೆ ಹೊರತು, ಅನುವೃತ್ತಿಯನ್ನು ಮಾಡಿಲ್ಲ. ಸೂಕ್ತನಿಯಮಃ ಎಂದರೆ ಆದ್ದರಿಂದ ನಮ್ಮ ಸಿದ್ಧಾಂತದಲ್ಲಿ ಯಾವ ಸೂತ್ರದಲ್ಲಿಯೂ ಅಧ್ಯಾಹಾರವನ್ನು ಮಾಡಬೇಕಾಗಿಲ್ಲ. ನಿಮ್ಮ ಸಿದ್ಧಾಂತದಲ್ಲಿ ಪ್ರತಿಸೂತ್ರಗಳಲ್ಲಿಯೂ ಅಧ್ಯಾಹಾರವನ್ನು ಮಾಡಬೇಕೆಂದು ತಿಳಿಯಬೇಕು.

प्रकाशः – यत्तु उक्तरीत्या वैश्वानरशब्दस्य जाठरादिषु चतुर्षु साधारणस्य शिवासाधारणब्रह्माऽत्मादिशब्दैर्विशेषणाच्छिव एव वैश्वानर इति, तदप्येतेनैव निरस्तम्,

ಶೈವರ ಅಧಿಕರಣ ಶರೀರ ಹೀಗಿದೆ - ವೈಶ್ವಾನರ ಶಬ್ದವು ಜಾಠರಾಗ್ನಿ, ಭೂತಾಗ್ನಿ, ಅಗ್ನಿದೇವತೆ, ಜೀವ ಈ ನಾಲ್ಕರಲ್ಲಿ ಸಾಧಾರಣವಾಗಿದೆ. ಆದರೆ ಶಿವನಲ್ಲಿ ಅಸಾಧಾರಣವಾದ ಬ್ರಹ್ಮಶಬ್ದ, ಆತ್ಮಶಬ್ದಗಳನ್ನು ವಿಶೇಷಣವನ್ನಾಗಿ ಹೇಳಿರುವುದರಿಂದ ಶಿವನೇ ವೈಶ್ವಾನರನಾಗುತ್ತಾನೆಂದು ಸಿದ್ಧಾಂತ.

ಇವರ ಮತವೂ ಸಹ ಆದ್ವೈತಮತದ ನಿರಾಕರಣೆಯಿಂದಲೇ ನಿರಾಕೃತವಾಯಿತು.

प्रकाशः – जाठरस्य पार्थक्यायोगादेरुक्तत्वात् । ब्रह्माऽत्मादिशब्दस्य विष्ण्वेकनिष्ठताया भाष्यादौ बहुधा प्रतिपादनात् । ''अहं वैश्वानरः'' इति स्मृतिविरोधात् । पुरुषसूक्तविरोधाच्च, पुरुषसूक्तवैष्णवतायाश्च भाष्ये स्पष्टत्वात् । सूत्रार्थनिरासप्रकारस्तु केषाञ्चिन्मत इव ध्येयः अनतिभिन्नार्थत्वात् सूत्राणामिति ।।

ಜಾಠರಾಗ್ನಿಯು ಭೌತಿಕಾಗ್ನಿಯ ಪ್ರಭೇದವೇ ಆಗಿರುವುದರಿಂದ ಪ್ರತ್ಯೇಕವಾಗಿ ಅದನ್ನು ಪರಿಗಣಿಸಿದ್ದು ಅಯುಕ್ತವಾಗಿದೆ. ಮತ್ತು ಬ್ರಹ್ಮಶಬ್ದ, ಆತ್ಮಶಬ್ದ ಮೊದಲಾದವು ಕೇವಲ ವಿಷ್ಣುನಿಷ್ಠವಾಗಿವೆಯೆಂದು ಭಾಷ್ಯಾದಿಗಳಲ್ಲಿ ಅನೇಕ ಪ್ರಮಾಣಗಳಿಂದ ಸಾಧಿಸಲಾಗಿದೆ. ಮತ್ತು 'ಅಹಂ ವೈಶ್ವಾನರಃ' ಎಂಬುದಾಗಿ ಶ್ರೀಕೃಷ್ಣನು ತನ್ನನ್ನು ವೈಶ್ವಾನರನೆಂದು ಹೇಳಿಕೊಂಡಿದ್ದರಿಂದ ಶಿವನನ್ನು ವೈಶ್ವಾನರನೆಂದು ಹೇಳಿದರೆ ಗೀತಾಸ್ಮೃತಿಯ ವಿರೋಧವು ಬರುತ್ತದೆ. ಪುರುಷಸೂಕ್ತದ ವಿರೋಧವೂ ಸಹ ಬರುತ್ತದೆ. ಏಕೆಂದರೆ ಪುರುಷಸೂಕ್ತವು ವಿಷ್ಣುವನ್ನೇ ಪ್ರತಿಪಾದಿಸುತ್ತದೆಂದು ಭಾಷ್ಯದಲ್ಲಿ ಸ್ಪಷ್ಟಪಡಿಸಿದ್ದಾರೆ. ಶೈವರ ಸೂತ್ರಾರ್ಥ ನಿರಾಕರಣ ಪ್ರಕಾರವನ್ನು ರಾಮಾನುಜ ಮತದಂತೆ ತಿಳಿಯಬೇಕು. ಅವರಿಗಿಂತ ವಿಶೇಷವಾದ ಅರ್ಥವನ್ನೇನೂ ಇವರು ಹೇಳುವುದಿಲ್ಲವಾದ್ದರಿಂದ ಪ್ರತ್ಯೇಕವಾಗಿ ನಿರಾಕರಿಸಬೇಕಾಗಿಲ್ಲ.

प्रकाशः – ''शब्दादिभ्यः'' इति सूत्रे ''मूर्धानं दिवोऽरतिं पृथिव्याः'' इत्यस्यामृचि गतिसाधनत्वादरतिः पादः पृथिव्याः कारणमिति व्याख्यातम् । तद्वचनक्ति – गतीति ।

ಟೀಕೆಯ ಕಠಿಣಪದಾರ್ಥಗಳನ್ನು ಗ್ರಂಥದಲ್ಲಿ ಹೇಳುತ್ತಿದ್ದಾರೆ. 'ಶಬ್ದಾದಿಭ್ಯಃ' ಎಂಬ ಸೂತ್ರದಲ್ಲಿ 'ಮೂರ್ಧಾನಂ ದಿವೋಽರತಿಂ ಪೃಥಿವ್ಯಾಃ' ಎಂಬ ಋಙ್ ಮಂತ್ರದಲ್ಲಿ ಅರತಿ ಶಬ್ದಕ್ಕೆ ಗತಿಸಾಧನವಾದ್ದರಿಂದ ಪಾದ ಎಂಬರ್ಥವನ್ನು ವಿವಕ್ಷಿಸಬೇಕು. ಭಗವಂತನ ಪಾದವು ಪೃಥಿವಿಗೆ ಕಾರಣವಾಗಿದೆಯೆಂದು ಟೀಕೆಯಲ್ಲಿ ವ್ಯಾಖ್ಯಾನಿಸಿದ್ದಾರೆ. ಅದನ್ನೇ 'ಗತಿ' ಇತ್ಯಾದಿ ವಾಕ್ಯದಿಂದ ವ್ಯಾಖ್ಯಾನಿಸುತ್ತಿದ್ದಾರೆ.

ಪ್ರಕಾಶಃ – ಅರತಿಶಬ್ದೇ ಗತಿರುಚ್ಯತೇ । ಪಾದಸ್ಯ ತತ್ಸಾಧನತ್ವಾತ್, ಕಾರ್ಯಗಮನೇನ ತತ್ಸಾಧನಂ ಪಾದೋ ಲಕ್ಷ್ಯತೇ । ಅರತಿಶಬ್ದಾರ್ಥೋ ಗತಿಃ ಕಥಮಿತ್ಯತೋऽವಯವಾರ್ಥೇನೇತ್ಯಾಹ – ಲೋಕ ಇತಿ । ನಞೋ ವಿರುದ್ಧಾರ್ಥತ್ವಾದ್ ರತಿವಿರುದ್ಧಾ ಅರತಿರಿತಿ ಗತಿರೇವೋಚ್ಯತ ಇತಿ ।

'ಅರತಿ' ಶಬ್ದಕ್ಕೆ ಗತಿ ಎಂದರ್ಥ. ಪಾದವು ಗಮನಕ್ಕೆ ಸಾಧನವಾದ್ದರಿಂದ ಲಕ್ಷಣಯಾ ಪಾದವನ್ನು ವಿವಕ್ಷಿಸಬೇಕು. ಅರತಿ ಶಬ್ದಕ್ಕೆ ಗತಿಯೆಂಬರ್ಥವನ್ನು ಹೇಗೆ ವಿವಕ್ಷಿಸುತ್ತೀರಿ? ಎಂಬ ಪ್ರಶ್ನೆಗೆ ಅವಯವಾರ್ಥದಿಂದ ಎಂದು 'ಲೋಕ' ಎಂಬ ವಾಕ್ಯದಲ್ಲಿ ಹೇಳಿದ್ದಾರೆ. 'ನಞ್'ಗೆ ವಿರುದ್ಧ ಎಂಬರ್ಥವನ್ನು ವಿವಕ್ಷಿಸಿದಾಗ ರತಿಗೆ ವಿರುದ್ಧವಾದ್ದರಿಂದ ಅಂದರೆ ಸುಖಕ್ಕೆ ವಿರುದ್ಧವಾದ್ದರಿಂದ ಅರತಿ ಶಬ್ದದಿಂದ ಗತಿಯು ವಾಚ್ಯವಾಗುತ್ತದೆಂದು ತಿಳಿಯಬೇಕು. ನಡೆಯುವುದರಿಂದ ದುಃಖವೇ ಆಗುತ್ತದೆ ಹೊರತು, ಸುಖವಾಗುವುದಿಲ್ಲ.

ಪ್ರಕಾಶಃ – ತತ್ತ್ವಪ್ರದೀಪೇ ತು – 'ನ ರತಿರ್ಯೇನೇತಿ ಸೋऽರತಿಃ ಪಾದಃ ಇತ್ಯರ್ಥಃ' ಇತ್ಯುಕ್ತಮ್'

ತತ್ತ್ವಪ್ರದೀಪದಲ್ಲಿ - 'ನ ರತಿಃ ಯೇನ ಸಃ ಅರತಿಃ' ಎಂದು ವ್ಯುತ್ಪತ್ತಿಯನ್ನು ಮಾಡಿದ್ದರಿಂದ 'ಅರತಿ' ಶಬ್ದಕ್ಕೆ 'ಪಾದ' ಎಂಬರ್ಥವನ್ನು ಹೇಳಿದ್ದಾರೆ. ಈ ಪಕ್ಷದಲ್ಲಿ ಲಕ್ಷಣಾ ಮಾಡಬೇಕಾಗಿಲ್ಲ.

ಪ್ರಕಾಶಃ – ''ಸಂಪತ್ತೇಃ'' ಇತಿ ಸೂತ್ರವ್ಯಾಖ್ಯಾಯಾಮ್ । ''ಅತ್ರ ವ್ಯವಹಾರಸ್ಯೋಪಚರಿತತ್ವಾಙ್ಗೀಕಾರೇ ಪ್ರಾಗುಕ್ತೈವಾನುಪಪತ್ತಿಃ'' ಇತ್ಯೇತದ್ದುರ್ಗಮಾರ್ಥತ್ವಾದ್ವಚನಕ್ತಿ – ವೈದಿಕಸ್ಯೇತಿ ।

'ಸಂಪತ್ತೇರಿತಿ ಜೈಮಿನಿಸ್ತಥಾಹಿದರ್ಶಯತಿ' ಎಂಬ ಸೂತ್ರವನ್ನು ವ್ಯಾಖ್ಯಾನ ಮಾಡುವಾಗ ಟೀಕೆಯಲ್ಲಿ 'ಅತ್ರ ವ್ಯವಹಾರಸ್ಯೋಪಚರಿತತ್ವಾಂಗೀಕಾರೇ ಪ್ರಾಗುಕ್ತೈವಾನುಪಪತ್ತಿಃ' ಎಂದು ಹೇಳಿದ್ದಾರೆ. ಈ ವಾಕ್ಯವು ಏನನ್ನು ಹೇಳಲು ಹೊರಟಿದೆ ಎಂದು ಸುಲಭವಾಗಿ ಅರ್ಥವಾಗುವುದಿಲ್ಲ. ಅದಕ್ಕೋಸ್ಕರ ಗ್ರಂಥಕಾರರು 'ವೈದಿಕಸ್ಯ' ಎಂದು ವ್ಯಾಖ್ಯಾನಿಸುತ್ತಿದ್ದಾರೆ.

ಪ್ರಕಾಶಃ – ''ವಿಶ್ವಂ ಹರಿಮಾರಾದರಮುಪಾಸ್ತೇ'' ಇತಿ ಶ್ರುತೌ 'ಅರಮ್'

इत्यस्यार्थाप्रतीतेराह – भाष्येति । एवेति टीकाकारानुक्तेर्निमित्तमेतदिति सूचितम् । शिष्टमुपन्यासमुखेन विशदीकृतमिति भावः । पेटिकासङ्गतिस्तु प्रागेवोक्तेति ।।

।। इति वैश्वानराधिकरणम् ।।

॥ इति श्रीमत्सर्वतन्त्रस्वतन्त्रसुधीन्द्रतीर्थगुरुपादशिष्यराघवेन्द्रयतिकृते
चन्द्रिकाप्रकाशे प्रथमाध्यायस्य द्वितीयः पादः सम्पूर्णः ॥२॥

'विश्वं हरिमारादरमुपास्ते' ಎಂಬ ಶ್ರುತಿಯಲ್ಲಿ 'ಆರಮ್' ಎಂಬ ಪದದ ಅರ್ಥವು ಸ್ಪಷ್ಟವಾಗಿ ತಿಳಿಯದ ಕಾರಣ 'ಭಾಷ್ಯ' ಇತ್ಯಾದಿ ವಾಕ್ಯದಿಂದ ಅದನ್ನು ವಿವರಿಸುತ್ತಿದ್ದಾರೆ. 'ತತ್ಪ್ರದೀಪೇ ಏವ' ಎಂದು ಹೇಳಿದ್ದರಿಂದ ಟೀಕೆಯಲ್ಲಿ ಹೇಳಿಲ್ಲವೆಂದು ಸೂಚಿಸಿದ್ದಾರೆ. ಟೀಕೆಯಲ್ಲಿರುವ ಉಳಿದ ಕಠಿಣಪದಗಳ ಅರ್ಥವನ್ನು ಉಪನ್ಯಾಸದಿಂದ ವ್ಯಾಖ್ಯಾನಿಸುವಾಗಲೇ ವಿವರಿಸಿದ್ದಾಗಿದೆ. ಪೇಟಿಕಾಸಂಗತಿಯನ್ನೂ ಸಹ ಹಿಂದೆಯೇ ಹೇಳಿದ್ದೇವೆ.

ಇಲ್ಲಿಗೆ ಸರ್ವತಂತ್ರ ಸ್ವತಂತ್ರರಾದ ಶ್ರೀಶ್ರೀಸುಧೀಂದ್ರತೀರ್ಥಗುರುಗಳ ಶಿಷ್ಯರಾದ
ಶ್ರೀರಾಘವೇಂದ್ರತೀರ್ಥಯತಿಗಳಿಂದ ರಚಿಸಲ್ಪಟ್ಟ ಚಂದ್ರಿಕಾಪ್ರಕಾಶದಲ್ಲಿ
ಪ್ರಥಮಾಧ್ಯಾಯದ ದ್ವಿತೀಯ ಪಾದವು ಸಮಾಪ್ತವಾಯಿತು.

* * * * * * *

ಶ್ರೀ ಭಾರತೀರಮಣ ಮುಖ್ಯಪ್ರಾಣಾಂತರ್ಗತ ಶ್ರೀಕೃಷ್ಣಾರ್ಪಣಮಸ್ತು.

गुरुराजीयम् – वैश्वानरोपाधेरिति बहुव्रीहिः ।। गतिसाधनत्वादरतिरिति ।। रतिशब्दस्य रमणे नञश्च विरोधे प्रसिद्धत्वात् क्रुसप्रसिद्धिबललब्धलक्षणाऽपि शक्तितुल्येति भावः । अत्र टीकायामासन्नित्यस्य तयेत्युक्तिः पद्दन् नित्यादिनाऽऽस्य शब्दस्यासन्नादेशविधानादासन्निति 'सुपां सुलुक्' इति विभक्तिलोपविधानाच्चेति ज्ञातव्यम् ।। प्रगुक्तैवेति ।। विष्णुसूक्तमित्यादौ सर्वत्र देवतासम्बन्धेनैव सूक्तव्यवहारात् प्रतिपाद्यप्रतिपादकसम्बन्ध एव मुख्यः सूक्तादिव्यवहारप्रयोजक इत्यभिप्रेत्याग्न्यादिसूक्तेषु मुख्यप्रयोजकस्य बाधादुपचारत्वं सूक्तानामुक्तम् । भावबोधे

तु षष्ठ्यर्थस्य सम्बन्धस्यैवाग्रेः सूक्तमित्यादौ निमित्तत्वात् । 'एकशतं षष्ठ्यर्थः' इति महाभाष्योक्तरीत्या सर्वेषामविशेषादेवदत्तस्य पुत्रः देवदत्तस्य पौत्रः देवदत्तस्य नप्तेत्यादाविव परम्परासम्बन्धस्यापि मुख्यत्वभिप्रेत्य सूक्तानां मुख्यार्थतोक्तेति ज्ञेयम् ।। वैश्वानराधिकरणं सम्पूर्णम् ।।७।।

।। इति श्रीमद्विद्याधीशतीर्थपूज्यपादशिष्येण केशवभट्टारकेण विरचितायां चन्द्रिकावाक्यविवृतौ भावदीपिकायां प्रथमाध्यायस्य द्वितीयपादः समाप्तः ।। २ ।।

।। श्री मध्वेशार्पणमस्तु ।।

ಸಾರ

ವೈಶ್ವಾನರನು ಬ್ರಹ್ಮನ ಪ್ರತೀಕ ಮಾಗೂ ಉಪಾಧಿಯೆಂದು 'तथा दृष्ट्युपदेशात्' ಎಂಬ ಸೂತ್ರಕ್ಕೆ ಅರ್ಥೈಸುತ್ತಾರೆ. ಆದರೆ ವೈಶ್ವಾನರನು ಪ್ರತೀಕವಾದರೆ ಬ್ರಹ್ಮವಾಚಕವಾಗಲು ಹೇಗೆ ಸಾಧ್ಯ ? ಮನಸ್ಸು ಬ್ರಹ್ಮನಿಗೆ ಪ್ರತೀಕವಾದ ಮಾತ್ರದಿಂದ 'ಮನಸ್' ಶಬ್ದದಿಂದ ಬ್ರಹ್ಮನು ಪ್ರತಿಪಾದ್ಯನಾಗುತ್ತಾನೇನು? ಮತ್ತು ಅಂತಹ ಪ್ರತೀಕೋಪಾಸನೆಯಿಂದ ಯಾವುದೇ ಪಾಪಗಳೂ ಸಹ ಕ್ಷಯವಾಗುವುದಿಲ್ಲ. ಕೇವಲ ನಿರ್ಗುಣೋಪಾಸನೆಯಿಂದಷ್ಟೇ ಪಾಪಕ್ಷಯವಾಗುತ್ತದೆಂಬುದು ಅದ್ವೈತಿಗಳ ಸಿದ್ಧಾಂತ. 'अर्भकौकस्त्वात्' ಮತ್ತು 'तथादृष्ट्युपदेशात्' ಇತ್ಯಾದಿ ಸೂತ್ರಗಳಲ್ಲಿ ಬ್ರಹ್ಮನಿಗೆ ಪ್ರಾದೇಶ ಮಾತ್ರ ಪರಿಮಾಣವನ್ನು ಸಮರ್ಥಿಸಿದ್ದಾಗಿದೆ. ಪುನಃ ಇಲ್ಲಿಯೂ ಅದನ್ನೇ ಪ್ರತಿಪಾದಿಸಿದರೆ ಪುನರುಕ್ತಿ ಬರುತ್ತದೆಂದು ತಿಳಿಯಬೇಕು. ರಾಮಾನುಜ ಭಾಷ್ಯದಲ್ಲಿಯ 'अभिव्यक्तेरिति' ಇತ್ಯಾದಿ ನಾಲ್ಕು ಸೂತ್ರಗಳು ಬೇರೆ ಬೇರೆ ವಿಷಯವನ್ನು ಪ್ರತಿಪಾದಿಸುತ್ತವೆಂದು ಹೇಳಿದ್ದಾರೆ. ಆದರೆ ಒಂದೇ ವಿಷಯದಲ್ಲಿ ಅಭಿಪ್ರಾಯ ಭೇದಗಳನ್ನು ಸೂಚಿಸುತ್ತಿದೆಯೆಂದು ಹೇಳುವುದೇ ಸ್ವರಸವಾಗುತ್ತದೆ.

ವೈಶ್ವಾನರಾಧಿಕರಣ
(೧-೨-೭)

ಭಾಗ -೩

ನ್ಯಾಯವಿವರಣ, ನ್ಯಾಯವಿವರಣಪಂಚಿಕಾ,
ಅಣುಭಾಷ್ಯ, ತತ್ವಮಂಜರೀ,
ತಂತ್ರದೀಪಿಕಾ, ನ್ಯಾಯಮುಕ್ತಾವಳಿ ಗ್ರಂಥಗಳ
ಸರಳ ಕನ್ನಡ ಅನುವಾದ

* * *

ಸೂತ್ರಾರ್ಥರತ್ನಾವಳಿ ಗ್ರಂಥದ ಸಂಸ್ಕೃತ ಮೂಲ

॥ श्रीगुरुभ्यो नमः ॥

श्रीमदानन्दतीर्थभगवत्पादाचार्यविरचितम्

न्यायविवरणम्

श्री जयतीर्थविरचिता

न्यायविवरणपञ्जिका

वैश्वानराधिकरणम् (१।२।७)

न्यायविवरणम् – श्रुतिसाधारण्ये विशेषश्रुत्यादेर्निश्चयः । उभयत्र विशेषश्रुत्यादौ पुनः सावकाशत्वनिरवकाशत्वबलान्निश्चयः ॥७॥

॥ इति न्यायविवरणे प्रथमाध्यायस्य द्वितीयः पादः ॥

ವೈಶ್ವಾನರಶ್ರುತಿಯು ಮಹಾವಿಷ್ಣುವಿನಲ್ಲಿ ಹಾಗೂ ಅಗ್ನ್ಯಾದಿದೇವತೆಗಳಲ್ಲಿ ಸಾಧಾರಣವಾಗಿದೆ. ಆದರೂ ಸಹ 'ಆತ್ಮಾನಂ ವೈಶ್ವಾನರಮುಪಾಸ್ತೇ' ಎಂಬುದಾಗಿ ವಿಷ್ಣುವಿನಲ್ಲಿ ಮಾತ್ರ ಪ್ರಸಿದ್ಧವಾದ ಆತ್ಮಪದವನ್ನು ವೈಶ್ವಾನರನಿಗೆ ವಿಶೇಷಣವನ್ನಾಗಿ ಹೇಳಿರುವುದರಿಂದ ಮತ್ತು 'ಅಹಂ ವೈಶ್ವಾನರಃ' ಇತ್ಯಾದಿಯಾದ ನಿರವಕಾಶಶ್ರುತಿಸ್ಮೃತಿಗಳ ಸಮಾಖ್ಯಾಬಲದಿಂದ ಮಹಾವಿಷ್ಣುವೇ ವೈಶ್ವಾನರನೆಂಬ ನಾಮಾತ್ಮಕಶಬ್ದದಿಂದ ಪ್ರತಿಪಾದ್ಯನಾಗುತ್ತಾನೆಂದು ನಿಶ್ಚಯಿಸಬಹುದು. ಎರಡು ಪಕ್ಷಗಳಲ್ಲಿಯೂ ವಿಶೇಷ- ಶ್ರುತಿಗಳಿದ್ದರೂ ಸಹ ಸಾವಕಾಶತ್ವ, ಹಾಗೂ ನಿರವಕಾಶತ್ವಗಳ ಬಲದಿಂದ ಭಗವಂತನೇ ಶ್ರುತಿಪ್ರತಿಪಾದ್ಯನೆಂದು ನಿಶ್ಚಯಿಸಬಹುದು.

ಇಲ್ಲಿಗೆ ಶ್ರೀಮದಾನಂದತೀರ್ಥಭಗವತ್ಪಾದಾಚಾರ್ಯವಿರಚಿತ ನ್ಯಾಯವಿವರಣದಲ್ಲಿ ಪ್ರಥಮಾಧ್ಯಾಯ ದ್ವಿತೀಯಪಾದವು ಸಮಾಪ್ತವಾಯಿತು.

श्रीमदानन्दतीर्थभगवत्पादाचार्यविरचितम्

अणुभाष्यम्

वैश्वानराधिकरणम् (१।२।७)

विश्वजीवान्तरत्वाद्यैः लिङ्गैः सर्वैः युतः सः हि

ಅಣುಭಾಷ್ಯ - ವಿಶ್ವಜೀವಾಂತರತ್ವವೆಂಬ ಲಿಂಗದಿಂದ ಯುಕ್ತನಾದ್ದರಿಂದ ಮಹಾವಿಷ್ಣುವೇ 'ವೈಶ್ವಾನರ' ಎನಿಸಿದ್ದಾನೆ. ಅಗ್ನಿ, ವಾಯು, ಸೂರ್ಯ ಮೊದಲಾದ ಪದಗಳಿಂದಲೂ ವಾಚ್ಯನಾಗಿದ್ದಾನೆ. ಅಗ್ನಿ ಸೂಕ್ತ, ಅಗ್ನಿವಿದ್ಯೆ ಮೊದಲಾದವುಗಳಿಂದಲೂ ಪ್ರತಿಪಾದ್ಯನಾಗಿದ್ದಾನೆ. ಹೀಗೆ ಅನ್ಯತ್ರಪ್ರಸಿದ್ಧವಾದ ಸಕಲ ಲಿಂಗಗಳಿಂದ ಕೂಡಿದವನೂ ಮಹಾವಿಷ್ಣುವೇ ಎಂದು ನಿರ್ಣಯವಾಯಿತು.

***

श्री आनन्दतीर्थभगवत्पादाचार्यविरचितम्
ब्रह्मसूत्राणुभाष्यम्
श्रीराघवेन्द्रतीर्थविरचिता
ब्रह्मसूत्राणुभाष्यविवृतिः

तत्वमञ्जरी

वैश्वानराधिकरणम् (१।२।७)

ननु दृश्यत्वाद्युज्झितः अक्षरात्परतः परो विष्णुरित्ययुक्तम् । तद्धर्मस्य सर्वगतत्वस्य छान्दोग्ये पञ्चमे 'यस्त्वेतं प्रादेशमात्रमभिविमानमात्मानं वैश्वानरमुपास्ते' इति वैश्वानरस्य अभितो विगतं मानं मर्यादा यस्येत्यभिविमानपदेन प्रतीतेः वैश्वानरशब्दस्य

चाग्नौ रुढत्वात्, वैश्वानरे तद्धुतं, इति, 'हृदयं गार्हपत्ये' इत्यादिनोक्तहोमाधारत्व – गार्हपत्याद्यङ्गत्व - पाचकत्वाद्यनेकलिङ्गानां भावेन चाग्र्यर्थत्वात् ।

ಹಿಂದಿನ ಅಧಿಕರಣದಲ್ಲಿ ಅದೃಶ್ಯತ್ವಗುಣವುಳ್ಳವನು ಅಕ್ಷರಾತ್ ಪರತಃ ಪರನು ವಿಷ್ಣುವೇ ಆಗಿದ್ದಾನೆಂದು ನಿರ್ಣಯಿಸಲಾಯಿತು. ಇದು ತಪ್ಪು. ಏಕೆಂದರೆ, ಅದೃಶ್ಯತ್ವಧರ್ಮವು ಮತ್ತು ಸರ್ವಗತತ್ವವು ವೈಶ್ವಾನರನ ಧರ್ಮವಾಗಿದೆಯೆಂದು ಛಾಂದೋಗ್ಯದ ಐದನೆಯ ಅಧ್ಯಾಯದಲ್ಲಿ ಹೇಳಲಾಗಿದೆ. 'ಯಸ್ತ್ವೇತಂ ಪ್ರಾದೇಶಮಾತ್ರಮಭಿವಿಮಾನಮಾತ್ಮಾನಂ ವೈಶ್ವಾನರಮುಪಾಸ್ತೇ' ಪ್ರಾದೇಶಪರಿಮಾಣವನ್ನು ಹೊಂದಿದ್ದರೂ ಎಲ್ಲೆಡೆ ವ್ಯಾಪ್ತನಾದ ವೈಶ್ವಾನರನನ್ನು ಯಾರು ಉಪಾಸನೆ ಮಾಡುತ್ತಾನೋ' ಎಂಬುದಾಗಿ. ಈ ಶ್ರುತಿಯಲ್ಲಿ ಅಭಿವಿಮಾನಂ ಎಂಬ ಪದಕ್ಕೆ 'ಅಭಿತಃ ವಿಗತಂ ಮಾನಂ ಯಸ್ಯ' ಎಂಬ ವ್ಯುತ್ಪತ್ತಿಯಿಂದ ಸರ್ವಗತನಾಗಿದ್ದಾನೆಂಬ ಅರ್ಥವು ಪ್ರತೀತವಾಗುತ್ತದೆ. ವೈಶ್ವಾನರಶಬ್ದವು ಅಗ್ನಿಯಲ್ಲಿ ರೂಢವಾಗಿದೆ. ಮತ್ತು ಹೋಮಾಧಾರತ್ವ, ಗಾರ್ಹಪತ್ಯಾದ್ಯಂಗತ್ವ, ಪಾಚಕತ್ವಮೊದಲಾದ ಅಗ್ನಿಯ ಲಿಂಗಗಳು ಈ ಪ್ರಕರಣದಲ್ಲಿ ಕೇಳಿಸುತ್ತಿವೆ. ಆದ್ದರಿಂದ ಛಾಂದೋಗ್ಯಶ್ರುತಿಯಲ್ಲಿ ಹೇಳಲ್ಪಟ್ಟ ವ್ಯಕ್ತಿಯು ಅಗ್ನಿಯೇ ಆಗಿದ್ದಾನೆ.

विष्ण्वर्थत्वे च वैश्वानरादिशब्दानामग्र्यादौ प्रयोगस्य सूक्तविद्याव्यवस्थायाश्चायोगात् प्राचीनसर्वगतोऽप्यग्निदेवता भूतं वा । न च कालाऽकाशादेरिव अग्राविष्णोरप्यस्तु सर्वगतत्वमिति शंक्यम् । बाधकाभावेन पूर्वत्र सर्वगतमित्यनेन अत्राभिविमानपदेन चानन्यात्तन्निरतिशयस्यैव सर्वगतत्वस्य प्रतीतेः । तस्य च द्वयोरयोगादित्यतः प्राप्तं - वैश्वानरः साधारणशब्दविशेषात् – इत्यादिसूत्रनवकम् ।

ಒಂದು ವೇಳೆ ವೈಶ್ವಾನರನು ವಿಷ್ಣುವೇ ಆಗಿದ್ದಾನೆಂದು ಹೇಳುವುದಾದರೆ ವೈಶ್ವಾನರಾದಿಶಬ್ದಗಳನ್ನು ಅಗ್ನಿ ಮೊದಲಾದವರಲ್ಲಿ ಪ್ರಯೋಗಮಾಡುವ ವ್ಯವಸ್ಥೆಯು ಅಸಾಧುವಾಗುತ್ತದೆ. ಮತ್ತು ಇದು ಅಗ್ನಿಸೂಕ್ತ ಇದು ವಾಯುಸೂಕ್ತವೆಂಬ ವ್ಯವಸ್ಥೆಯೂ ಸಹ ತಪ್ಪಾಗುತ್ತದೆ. ಆದ್ದರಿಂದ ಹಿಂದೆ ಸರ್ವಗತನೆಂದು ಹೇಳಲ್ಪಟ್ಟವನೂ ಸಹ ಅಗ್ನಿದೇವತೆಯೇ ಆಗಲಿ. ಅಥವಾ ಜಡವಾದ ಅಗ್ನಿಯಾಗಲಿ.

ಕಾಲ ಹಾಗೂ ಆಕಾಶಗಳು ಎಲ್ಲೆಡೆ ವ್ಯಾಪ್ತವಾಗಿವೆ. ಅದರಂತೆ ಅಗ್ನಿ ಹಾಗೂ ವಿಷ್ಣು ಇಬ್ಬರೂ ಸಹ ಎಲ್ಲೆಡೆ ವ್ಯಾಪ್ತರಾಗಿರಬಹುದಲ್ಲವೇ? ಎಂದೂ ಶಂಕಿಸಬಾರದು. ಏಕೆಂದರೆ, ಹಿಂದೆ ಅದೃಶ್ಯತ್ವಗುಣವುಳ್ಳ ವ್ಯಕ್ತಿಯಲ್ಲಿ ಹೇಳಲ್ಪಟ್ಟ ಸರ್ವಗತತ್ವವು ಹಾಗೂ ಛಾಂದೋಗ್ಯದಲ್ಲಿ ಅಭಿವಿಮಾನ ಎಂಬ ಪದದಿಂದ ಹೇಳಲ್ಪಟ್ಟ ಸರ್ವಗತತ್ವವು ಮತ್ತೊಬ್ಬರ ಅಧೀನವಾಗದೇ ನಿರತಿಶಯವಾದ ಧರ್ಮವುಳ್ಳದ್ದಾಗಿದೆ. ಎಂದು ನಿರ್ಣಯಿಸಲಾಗಿದೆ. ಈ ಅರ್ಥವನ್ನು ಸ್ವೀಕರಿಸಲು ಯಾವುದೇ ಬಾಧಕಗಳು ಇರುವುದಿಲ್ಲ. ಸ್ವತಂತ್ರವಾದ ನಿರತಿಶಯವಾದ ಸರ್ವಗತತ್ವವು ಇಬ್ಬರಲ್ಲಿ ಬರಲು ಸಾಧ್ಯವಿಲ್ಲ. ಆದ್ದರಿಂದ ಲೋಕರೂಢಿಯಂತೆ ಮತ್ತು ಶ್ರುತಿಪ್ರಸಿದ್ಧಿಯಂತೆ ವೈಶ್ವಾನರಶಬ್ದವಾಚ್ಯನು ಮತ್ತು ಸರ್ವಗತನೂ ಅಗ್ನಿಯೇ ಆಗುತ್ತಾನೆ. ಸರ್ವಗತನಾದ್ದರಿಂದ ಅದೃಶ್ಯತ್ವಗುಣವುಳ್ಳವನೂ ಸಹ ಅಗ್ನಿಯೇ ಆಗುತ್ತಾನೆ.

ಪರಿಪೂರ್ಣಚಂದ್ರಿಕಾ

ಈ ಪೂರ್ವಪಕ್ಷವನ್ನು ನಿರಾಕರಿಸುವುದಕ್ಕಾಗಿ 'ವೈಶ್ವಾನರಃ ಸಾಧಾರಣಶಬ್ದವಿಶೇಷಾತ್' ಎಂಬ ಒಂಭತ್ತು ಸೂತ್ರಗಳು ಹೊರಟಿವೆ.

तदर्थः – विश्वजीवान्तरत्वादैर्लिङ्गैः सर्वैर्युतः स हीति । एको विष्णुरेवेत्यन्वेति । स प्राक् सर्वगतत्वादिनोक्तः एको विष्णुरेव ।

ಈ ಒಂಭತ್ತುಸೂತ್ರಗಳ ಅಭಿಪ್ರಾಯವನ್ನು ''ವಿಶ್ವಜೀವಾಂತರತ್ವಾದ್ಯೈಃ ಲಿಂಗೈಃ ಸರ್ವೈರ್ಯುತಃ ಸ ಹಿ'' ಎಂಬ ಮಾತಿನಿಂದ ಆಣುಭಾಷ್ಯದಲ್ಲಿ ಸಂಗ್ರಹಿಸಿದ್ದಾರೆ. 'ಏಕೋ ವಿಷ್ಣುರೇವ' ಎಂಬುದನ್ನು ಇದರ ಜೊತೆಗೆ ಅನ್ವಯಮಾಡಬೇಕು. ಹಿಂದೆ ಸರ್ವಗತತ್ವಾದಿ ಧರ್ಮಗಳಿಂದ ಪ್ರತಿಪಾದ್ಯನಾದ ಒಬ್ಬನೇ ವಿಷ್ಣು ವೈಶ್ವಾನರಾದಿಶಬ್ದಗಳಿಂದಲೂ ಸಹ ಪ್ರತಿಪಾದ್ಯನಾಗಿದ್ದಾನೆ.

यौगिकवैश्वानरशब्दितविश्वजीवान्तरत्वादैः होमाधारत्वगार्हपत्याद्यङ्गत्वादैर्लिङ्गैर्युक्तो वैश्वानराग्न्यादिशब्दैस्तत्सूक्तैः तद्विद्याभिश्च प्रतिपाद्य इति यावत् । नत्वग्न्यादिदेवता भूतं चेत्यर्थः ।

ಯೌಗಿಕವಾದ ವೈಶ್ವಾನರಮೊದಲಾದ ಶಬ್ದಗಳಿಂದ ತಿಳಿಯಲ್ಪಡುವ ವಿಶ್ವಜೀವಾಂತರತ್ವವೇ ಮೊದಲಾದ ಲಿಂಗಗಳಿಂದ ಹಾಗೂ ಹೋಮಾಧಾರತ್ವ, ಗಾರ್ಹಪತ್ಯಾದ್ಯಂಗತ್ವ ಮೊದಲಾದ ಲಿಂಗಗಳಿಂದ ಕೂಡಿದವನಾಗಿ ವೈಶ್ವಾನರ, ಅಗ್ನಿ, ಮೊದಲಾದ ನಾಮಾತ್ಮಕಶಬ್ದಗಳಿಂದ ವಿಷ್ಣುವೇ ಪ್ರತಿಪಾದ್ಯನಾಗಿದ್ದಾನೆ. ಆಷ್ಟೇ ಅಲ್ಲದೆ, ಅಂತಹ ಸೂಕ್ತಗಳಿಂದಲೂ ಸಹ ಪ್ರತಿಪಾದ್ಯನಾಗಿದ್ದಾನೆ. ಹೊರತು ಅಗ್ನಿದೇವತೆಯಾಗಲೀ, ಪಂಚಭೂತಗಳಲ್ಲಿ ಸೇರಿರುವ ಜಡವಾದ ಅಗ್ನಿಯಾಗಲೀ ವೈಶ್ವಾನರ ಮೊದಲಾದ ಶಬ್ದಗಳಿಂದ ಪ್ರತಿಪಾದ್ಯವಾಗುವುದಿಲ್ಲ.

कुतः । लिङ्गै सर्वैर्युतो स हि - इत्यावृत्तिः । लिङ्गशब्दोऽत्र प्रमापकमात्रपरः । आत्मश्रुतिप्रकरणश्रुतिस्मृतिसमाख्याभिर्युतत्वादित्यर्थः ।

ಏಕೆ ಎಂಬ ಪ್ರಶ್ನೆಗೆ ''ಲಿಂಗೈಃ ಸರ್ವೈರ್ಯುತೋ ಹಿ'' ಎಂಬುದನ್ನು ಆವೃತ್ತಿಮಾಡಿಕೊಂಡು ಉತ್ತರವನ್ನು ತಿಳಿಯಬೇಕು. ಲಿಂಗಶಬ್ದಕ್ಕೆ 'ಯಥಾರ್ಥಜ್ಞಾನವನ್ನು ಹುಟ್ಟಿಸುವ ಪ್ರಮಾಣಗಳು' ಎಂದರ್ಥ. ಆತ್ಮಶಬ್ದ, ಪ್ರಕರಣ, ಶ್ರುತಿ, ಸ್ಮೃತಿಗಳ ಸಮಾಖ್ಯಾಪ್ರಮಾಣ ಇವುಗಳಿಂದಲ್ಲ ಕೂಡಿರುವ ಕಾರಣ ವಿಷ್ಣುವೇ ವೈಶ್ವಾನರನಾಗುತ್ತಾನೆ.

'वैश्वानरमात्मानम्' इत्यात्मश्रुतेः, 'को न आत्मा किं ब्रह्म' इत्याद्युपक्रमेणास्य ब्रह्मप्रकरणत्वात्, 'शीर्ष्णो द्यौः समवर्तत' इत्यादिना पुरुषसूक्तोक्तस्य 'मूर्धैव सुतेजाः' इत्यादिना वैश्वानरविद्यायामाम्नानेनार्थतः पुरुषसूक्तोक्तसमाख्यानात्, 'अहं वैश्वानरो भूत्वा' इति गीतासमाख्यानाच्चेति च ।

'ವೈಶ್ವಾನರಮಾತ್ಮಾನಂ' ಎಂಬುದಾಗಿ ಆತ್ಮಶ್ರುತಿಯ ಬಲದಿಂದ, 'ಕೋ ನ ಆತ್ಮಾ ಕಿಂ ಬ್ರಹ್ಮ,' ಎಂದು ಪ್ರಾರಂಭವಾಗುವ ಕಾರಣ ಇದು ಬ್ರಹ್ಮಪ್ರಕರಣವೇ ಆಗಿದೆಯಾದ್ದರಿಂದ, 'ಶೀರ್ಷ್ಣೋ ದ್ಯೌಃ ಸಮವರ್ತತ' ಎಂಬುದಾಗಿ ಪುರುಷಸೂಕ್ತದಲ್ಲಿ ಯಾವವ್ಯಕ್ತಿಯು ಪ್ರತಿಪಾದ್ಯನಾಗಿದ್ದಾನೋ ಅವನೇ 'ಮೂರ್ಧ್ನೋ ವ ಸುತೇಜಾಃ' ಇತ್ಯಾದಿಯಾದ ವೈಶ್ವಾನರವಿದ್ಯೆಯಲ್ಲಿ ಪ್ರಸಕ್ತವಾದ ವಾಕ್ಯಗಳಿಂದಲೂ ಸಹ ಪ್ರತಿಪಾದ್ಯನಾಗಿದ್ದಾನೆ. ಆದ್ದರಿಂದ ಪುರುಷಸೂಕ್ತದ ಸಮಾಖ್ಯಾಪ್ರಮಾಣವನ್ನು ಹೇಳಿದಂತಾಯಿತು. ಈ ಸಮಾಖ್ಯಾದಿಂದ ಅಷ್ಟೇ ಅಲ್ಲದೆ 'ಅಹಂ ವೈಶ್ವಾನರೋ ಭೂತ್ವಾ,' ಎಂಬುದಾಗಿ ಭಗವದ್ಗೀತೆಯ ವಾಕ್ಯದ ಸಮಾಖ್ಯಾಪ್ರಮಾಣವೂ ಸಹ ಇರುತ್ತದೆಂದು ತಿಳಿಯಬೇಕು.

अग्रादिलिङ्गानां विष्णावुपासनार्थत्वेन सावकाशत्वस्य विश्वजीवान्तरत्वोक्त्यैव सर्वशब्दमुख्यार्थविष्णुसम्बन्धादन्यत्र हानाद्यर्थशब्दप्रयोगस्य तत्तत्सूक्तविद्याप्रतिपाद्यस्य विष्णोः उपासककर्तृकानु-स्मृत्यभिव्यक्तिप्रास्याऽधिष्ठानानाम् अग्रादीनां व्यवस्थया 'पृथग्रूपाणि विष्णोस्तु' इत्यादिऋग्भाष्योक्तदिशा नामरूपभेदव्यवस्थया च सूक्तादिव्यवस्थायाश्चोपपत्तेरिति भावः ।

ವೈಶ್ವಾನರವಿದ್ಯೆಯಲ್ಲಿ ಅಗ್ನ್ಯಾದಿಲಿಂಗಗಳು ಏಕೆ ಹೇಳಲ್ಪಟ್ಟವೆ ಎಂದರೆ ವಿಷ್ಣುವನ್ನು ಆ ಕ್ರಮದಲ್ಲಿ ಉಪಾಸನೆ ಮಾಡಬೇಕೆಂದು ವಿವಕ್ಷೆಯಿರುವ ಕಾರಣದಿಂದ. ಹೀಗೆ ಆವೆಲ್ಲವೂ ವಿಷ್ಣುವಿನಲ್ಲಿ ಸಾವಕಾಶವಾಗಿವೆ. ವಿಶ್ವಜೀವಾಂತರತ್ವವೇ ಮೊದಲಾದ ಲಿಂಗಗಳಿಂದ ವೈಶ್ವಾನರವೇ ಮೊದಲಾದ ಶಬ್ದಗಳು ಮುಖ್ಯತಃ ಸರ್ವಶಬ್ದಪ್ರತಿಪಾದ್ಯನಾದ ವಿಷ್ಣುವಿನ ಪ್ರತಿಪಾದಕಗಳಾಗಿವೆಯೆಂದು ತಿಳಿಯುತ್ತದೆ. ಜ್ಞಾನಿಗಳು ಭಗವಂತನ ಸನ್ನಿಧಾನದಿಂದ ಅಗ್ನ್ಯಾದಿಗಳಲ್ಲಿ ಆಯಾ ಶಬ್ದಗಳನ್ನು ಪ್ರಯೋಗಿಸುತ್ತಾರೆ. ಹಾಗೂ ಅಜ್ಞಾನಿಗಳು ಅಜ್ಞಾನದಿಂದ ಅಗ್ನ್ಯಾದಿಗಳಲ್ಲಿ ಪ್ರಯೋಗಿಸುತ್ತಾರೆ. ಮತ್ತು ಎಲ್ಲ ಸೂಕ್ತಗಳಿಂದಲೂ ವಿಷ್ಣುವೇ ಪ್ರತಿಪಾದ್ಯನಾಗಿದ್ದಾನೆ. ಆದರೂ ಸಹ ಉಪಾಸಕರ ಅನುಸಂಧಾನಕ್ಕೋಸ್ಕರ ಆಯಾ ರೂಪಗಳಲ್ಲಿ ವಿಷ್ಣುವಿನ ಸನ್ನಿಧಾನ ಹಾಗೂ ವಿಷ್ಣುವಿನ ಪ್ರಾಪ್ತಿ ದೇವತೆಗಳಲ್ಲಿರುವ ವಿಷ್ಣುವಿನ ಅಧಿಷ್ಠಾನಸಾಮರ್ಥ್ಯ ಇವುಗಳನ್ನು ಅನುಸರಿಸಿ ಅಗ್ನಿಸೂಕ್ತ, ವಾಯುಸೂಕ್ತ ಇತ್ಯಾದಿಯಾದ ವ್ಯವಸ್ಥೆಯನ್ನು ಮಾಡಲಾಗಿದೆ. 'ಪೃಥಗ್‌ರೂಪಾಣಿ ವಿಷ್ಣೋಸ್ತು' ಇತ್ಯಾದಿಯಾಗಿ ಋಗ್ಭಾಷ್ಯದಲ್ಲಿ ಹೇಳುವ ಪ್ರಕಾರ ಭಗವಂತನ ನಾಮ ಹಾಗೂ ರೂಪಗಳ ಭೇದವ್ಯವಸ್ಥೆಯಿಂದ ಸೂಕ್ತವ್ಯವಸ್ಥೆಯೂ ಸಹ ಯುಕ್ತವಾಗುತ್ತದೆಂದು ತಿಳಿಯಬೇಕು.

स्थानैक्यैन तद्गतानामैक्योक्तिवद् वक्ष्यमाणदिशा हृदया-काशस्याङ्गुष्ठमात्रोक्तिवच्च प्रादेशमात्रत्वस्याप्युपपत्तेरिति भावः । 'हृदये सर्वशो व्यापी प्रादेशः पुरुषोत्तमः' इति षष्ठे बृहद्भाष्योक्तेः ।

ಸ್ಥಾನೈಕ್ಯವನ್ನು ವಿವಕ್ಷಿಸಿ 'ಎಲ್ಲ ಹಸುಗಳು ಒಂದಾದವು' ಎಂಬ ಪ್ರಯೋಗವಿರುವಂತೆ ಮತ್ತು ಮುಂದೆ ಹೇಳುವ ಪ್ರಕಾರ ಹೃದಯಾಕಾಶವು ಅಂಗುಷ್ಠಪರಿಮಾಣದಲ್ಲಿರುವುದರಿಂದ ಆಲ್ಲಿರುವ ಪರಮಾತ್ಮನೂ ಸಹ ಅಂಗುಷ್ಠಪರಿಮಾಣವನ್ನು ಹೊಂದಿದ್ದಾನೆ ಎಂಬುದಾಗಿ ಪ್ರಾದೇಶಮಾತ್ರಪರಿಮಾಣವು ವಿಷ್ಣುವಿಗೆ ಸಂಬಂಧವಾಗುತ್ತದೆಂದು ತಿಳಿಯಬೇಕು. 'ಹೃದಯೇ ಸರ್ವಶೋ ವ್ಯಾಪೀ ಪ್ರಾದೇಶಃ ಪುರುಷೋತ್ತಮಃ'

ಎಲ್ಲೆಡೆ ವ್ಯಾಪ್ತನಾದ ಭಗವಂತನು ಹೃದಯದಲ್ಲಿ ಪ್ರಾದೇಶಪರಿಮಾಣದಲ್ಲಿದ್ದಾನೆಂದು ಬೃಹದಾರಣ್ಯಕದ ಆರನೆಯ ಅಧ್ಯಾಯದ ಭಾಷ್ಯದಲ್ಲಿ ಹೇಳಿರುತ್ತಾರೆ.

अत्र 'श्रुतिर्लिङ्गाधिका परा' इति अनुभाष्ये वैश्वानरशब्दस्य लोकतोऽग्नौ रुढिमाश्रित्य नामत्वोक्तावपि इह विष्णौ यौगिकत्वाल्लिङ्गत्वोक्तिरविरुद्धा ।

ಶ್ರೀಮದಾಚಾರ್ಯರು 'ಶ್ರುತಿರ್ಲಿಂಗಾಧಿಕಾ ಪರಾ' ಎಂಬುದಾಗಿ ಅನುವ್ಯಾಖ್ಯಾನದಲ್ಲಿ ವೈಶ್ವಾನರ ಶಬ್ದವನ್ನು ಲೌಕಿಕರೂಢಿಯಿಂದ ಅಗ್ನಿಯಲ್ಲಿರುವ ನಾಮಾತ್ಮಕವೆಂದು ಹೇಳಿದ್ದಾರೆ. ಆದರೆ ಅಣುಭಾಷ್ಯದಲ್ಲಿ ವಿಶ್ವಜೀವಾಂತರತ್ವವೇ ಮೊದಲಾದ ಲಿಂಗಗಳಿಂದ ಯೌಗಿಕವಾಗಿದೆಯೆಂದಿಟ್ಟುಕೊಂಡು ಲಿಂಗಾತ್ಮಕವೆಂದು ಹೇಳಿದ್ದಾರೆ. ಆದ್ದರಿಂದ ಎರಡೂ ಗ್ರಂಥಗಳಿಗೆ ವಿರೋಧವಿಲ್ಲ.

पादार्थमुपसंहरति – विश्वजीवेति । 'प्रसिद्धैरन्यवस्तुषु' इत्यस्ति । 'सर्वेषु भूतेष्वेतमेव ब्रह्म' इत्युक्तविश्वजीवान्तरस्थत्वाद्वैरन्यवस्तुषु प्रसिद्धैः सर्वलिङ्गैर्युतः स एको विष्णुरेव हि । नान्यत्र प्रसिद्ध इत्यर्थः ।। ७ ।।

इति श्रीमदानन्दतीर्थभगवत्पादाचार्यविरचितस्य ब्रह्मसूत्राणुभाष्यस्य टीकायां राघवेन्द्रयतिकृतायां तत्त्वमञ्जर्याख्यायां प्रथमाध्यायस्य द्वितीयः पादः ।। २ ।।

ಎರಡನೇ ಪಾದದ ಅರ್ಥವನ್ನು ಹೇಳುತ್ತಾ ಉಪಸಂಹಾರ ಮಾಡುತ್ತಿದ್ದಾರೆ. 'ಪ್ರಸಿದ್ಧೈರನ್ಯವಸ್ತುಷು' ಎಂಬುದನ್ನು 'ವಿಶ್ವಜೀವಾಂತರತ್ವಾದ್ಯೈಃ' ಎಂಬಲ್ಲಿ ಅನ್ವಯ ಮಾಡಬೇಕು. 'ಸರ್ವೇಷು ಭೂತೇಷು ಏತಮೇವ ಬ್ರಹ್ಮ' ಎಂಬಲ್ಲಿ ಹೇಳಲ್ಪಟ್ಟ ವಿಶ್ವಜೀವಾಂತರಸ್ಥತ್ವವೇ ಮೊದಲಾದ ಬೇರೆ ಪದಾರ್ಥಗಳಲ್ಲಿ ಪ್ರಸಿದ್ಧವಾದ ಸಕಲ ಲಿಂಗಗಳಿಂದ ಯುಕ್ತನಾದವನು ಒಬ್ಬನೇ ಆದ ಮಹಾವಿಷ್ಣುವೇ ಆಗಿದ್ದಾನೆ; ಹೊರತು ಇತರ ಯಾವುದೇ ಪದಾರ್ಥಗಳು ಪ್ರತಿಪಾದ್ಯವಾಗುವುದಿಲ್ಲ. ಆದ್ದರಿಂದ ಅನ್ಯತ್ರಪ್ರಸಿದ್ಧವಾದ ಲಿಂಗಾತ್ಮಕಶಬ್ದಗಳೆಲ್ಲವೂ ಭಗವತ್ಪರವೇ ಆಗಿವೆಯೆಂದು ನಿರ್ಣಯವಾಯಿತು.

ಇಲ್ಲಿಗೆ ಶ್ರೀಮದಾನಂದತೀರ್ಥಭಗವತ್ಪಾದಾಚಾರ್ಯರಿಂದ ರಚಿತವಾದ ಬ್ರಹ್ಮಸೂತ್ರಾಣುಭಾಷ್ಯದ ಶ್ರೀರಾಘವೇಂದ್ರತೀರ್ಥರಿಂದ ರಚಿಸಲ್ಪಟ್ಟ ತತ್ವಮಂಜರೀಗ್ರಂಥದ ಪ್ರಥಮಾಧ್ಯಾಯದ ಎರಡನೆಯ ಪಾದದ ಕನ್ನಡಾನುವಾದವು ಸಮಾಪ್ತವಾಯಿತು.

***

।। श्रीजानकीवदनाम्भोजराजहंसाय रामचन्द्राय नमः ।।
।। श्री गुरुभ्यो नमः ।। हरिः ॐ ।।

श्री राघवेन्द्रतीर्थविरचिता

तन्त्रदीपिका

प्रणम्य गुणसम्पूर्णं दोषातीतं रमापतिम् ।
पूर्णबोधं गुरूनन्यान् कुर्मः सूत्रार्थसङ्ग्रहम् ।।

प्रथमाध्यायस्य द्वितीयः पादः

वैश्वानराधिकरणम् (१।२।७)

।। ॐ वैश्वानरः साधारणशब्दविशेषात् ॐ ।। १-२-२४ ।।

अत्र नये पाचकत्वाद्यनेकलिङ्गयुतं वैश्वानरनाम समन्वीयते ।

ಈ ಅಧಿಕರಣದಲ್ಲಿ ಪಾಚಕತ್ವವೇ ಮೊದಲಾದ ಅನೇಕ ಲಿಂಗಗಳಿಂದ ಕೂಡಿರುವ 'ವೈಶ್ವಾನರ' ಎಂಬ ನಾಮಾತ್ಮಕಶಬ್ದವನ್ನು ಸಮನ್ವಯಮಾಡುತ್ತಿದ್ದಾರೆ.

तत्त्वित्यस्ति । ''आत्मानं वैश्वानरमुपास्ते'', ''अयमग्निर्वैश्वानरः'' इत्यादौ श्रुतो वैश्वानरो ब्रह्मैव न त्वग्निः । कुतः? साधारणशब्दस्य अग्नाविष्णुसाधारणस्यापि वैश्वानरशब्दस्य विशेषादात्मपदेन विशेषणादित्यर्थः ।

ಈ ಸೂತ್ರದಲ್ಲಿ 'ತತ್ತು' ಎಂಬ ಪದಗಳು ಅನುವೃತ್ತವಾಗುತ್ತವೆ. 'ಆತ್ಮಾನಂ ವೈಶ್ವಾನರಮುಪಾಸ್ತೇ' 'ಅಯಮಗ್ನಿರ್ವೈಶ್ವಾನರಃ' ಇತ್ಯಾದಿ ವಾಕ್ಯಗಳಲ್ಲಿ ಶ್ರುತನಾದ ವೈಶ್ವಾನರನು ಬ್ರಹ್ಮನೇ ಆಗಿದ್ದಾನೆ; ಹೊರತು ಅಗ್ನಿಯಲ್ಲ. ಏಕೆಂದರೆ, ಸಾಧಾರಣಶಬ್ದಸ್ಯ = ಅಗ್ನಿ ಮತ್ತು ವಿಷ್ಣು ಇಬ್ಬರಲ್ಲಿಯೂ ವೈಶ್ವಾನರಶಬ್ದವು ಸಮಾನವಾಗಿರಬಹುದು. ಆದರೆ ಆ ವೈಶ್ವಾನರಶಬ್ದಕ್ಕೆ ವಿಶೇಷಾತ್ = ಆತ್ಮಪದವು ವಿಶೇಷಣವಾಗಿರುವುದರಿಂದ ಎಂದು.

ಆತ್ಮಶಬ್ದಃ ಅಗ್ನಾವಮುಖ್ಯೋऽಪಿ ಪುಂಯತ ಇತ್ಯತಃ ಸಮಾಖ್ಯಾಮಾಹ -

।। ॐ ಸ್ಮರ್ಯಮಾಣಮನುಮಾನಂ ಸ್ಯಾದಿತಿ ॐ ।। ೧-೨-೨೫ ।।

ಆತ್ಮಶಬ್ದವು ಅಗ್ನಿಯಲ್ಲಿ ಅಮುಖ್ಯವಾಗಿದ್ದರೂ ಸಹ ಅಮುಖ್ಯಪ್ರಯೋಗವನ್ನು ಮಾಡಬಹುದಲ್ಲವೇ ಎಂಬ ಆಕ್ಷೇಪಕ್ಕೆ ಸಮಾಧಾನ ನೀಡಲು ಸಮಾಖ್ಯಾಪ್ರಮಾಣವನ್ನು ಹೇಳುತ್ತಿದ್ದಾರೆ. ''ಓಂ ಸ್ಮರ್ಯಮಾಣಂ ಅನುಮಾನಂ ಸ್ಯಾದಿತಿ ಓಂ''.

ವೈಶ್ವಾನರೋ ಬ್ರಹ್ಮೇತ್ಯಸ್ತಿ । ತೇನ ಇತಿಶಬ್ದಾನ್ವಯಃ । ಅನುಮೀಯತೇऽನೇನೇತ್ಯನುಮಾನಮ್ । ''ಅಹಂ ವೈಶ್ವಾನರಃ'' ಇತಿ ಗೀತಾಯಾಂ ಸ್ಮರ್ಯಮಾಣಂ ವಿಷ್ಣೋವೈಶ್ವಾನರತ್ವಮತ್ರಾಪಿ ಸ ಏವ ವೈಶ್ವಾನರ ಇತ್ಯಸ್ಯಾನುಮಾಪಕಂ ಸ್ಯಾದಿತ್ಯರ್ಥಃ ।

'ವೈಶ್ವಾನರಃ ಬ್ರಹ್ಮ' ಎಂಬ ಎರಡು ಪದಗಳನ್ನು ಅನುವೃತ್ತಿಮಾಡಿಕೊಳ್ಳಬೇಕು. ಇವುಗಳ ಜೊತೆಗೆ ಇತಿ ಶಬ್ದವು ಅನ್ವಯವನ್ನು ಹೊಂದುತ್ತದೆ. ಯಾವುದರಿಂದ ಅನುಮಾನಮಾಡಲ್ಪಡುತ್ತದೋ ಅದು 'ಅನುಮಾನ' ಎನಿಸುತ್ತದೆ. 'ಅಹಂ ವೈಶ್ವಾನರಃ' ಎಂಬುದಾಗಿ ಗೀತೆಯಲ್ಲಿ ವಿಷ್ಣುವಿಗೆ ಹೇಳಲ್ಪಟ್ಟ ವೈಶ್ವಾನರತ್ವವೇ ವೈಶ್ವಾನರಪ್ರಕರಣದಲ್ಲಿಯೂ ಸಹ ವೈಶ್ವಾನರನು ವಿಷ್ಣುವೇ ಆಗಿದ್ದಾನೆ ಎಂಬುದಕ್ಕೆ ಅನುಮಾಪಕವಾಗಿದೆ ಎಂದರ್ಥ.

''ಅಹಂ ವೈಶ್ವಾನರಃ'' ಇತಿ ಸ್ಮೃತಿಸಮಾಖ್ಯಾನಾದಿತಿ ಭಾವಃ ।

'ಅಹಂ ವೈಶ್ವಾನರಃ' ಎಂಬ ಗೀತಾಸ್ಮೃತಿರೂಪಸಮಾಖ್ಯಾಪ್ರಮಾಣವಿರುವುದರಿಂದ ವೈಶ್ವಾನರವಿದ್ಯೆಯಲ್ಲಿ ಪ್ರತಿಪಾದ್ಯನಾದವನು ವಿಷ್ಣುವೇ ಆಗಿದ್ದಾನೆಂದು ನಿರ್ಣಯವಾಯಿತು.

ಉಕ್ತಮಾಕ್ಷಿಪ್ಯಾಹ -

।। ॐ ಶಬ್ದಾದಿಭ್ಯೋऽನ್ತಃ ಪ್ರತಿಷ್ಠಾನಾನ್ನೇತಿ ಚೇನ್ನ ತಥಾ ದೃಷ್ಟ್ಯುಪದೇಶಾದಸಮ್ಭವಾತ್ ಪುರುಷವಿಧಮಪಿ ಚೈನಮಧೀಯತೇ ॐ ।। ೧-೨-೨೬ ।।

ಹಿಂದೆ ಹೇಳಿದ್ದನ್ನು ಆಕ್ಷೇಪಮಾಡಿ ಸಮಾಧಾನವನ್ನು ನೀಡುವ ಸೂತ್ರವನ್ನು ಪಠಿಸುತ್ತಿದ್ದಾರೆ. 'ಓಂ ಶಬ್ದಾದಿಭ್ಯೋऽಂತಃಪ್ರತಿಷ್ಠಾನಾನ್ನೇತಿ ಚೇನ್ನ ತಥಾ ದೃಷ್ಟ್ಯುಪದೇಶಾದಸಂಭವಾತ್ ಪುರುಷವಿಧಮಪಿ ಚೈನಮಧೀಯತೇ ಓಂ''.

ಆದಿಪದಾಲ್ಲಿಙ್ಗಾನಿ । ಅನ್ತಃಪ್ರತಿಷ್ಠಾನೇನ ತತ್ಕರ್ಮೋಪಲಕ್ಷ್ಯತೇ । ''ಅಯಮಗ್ನಿಃ'' ಇತ್ಯಾದ್ಯಗ್ನಿಶಬ್ದಾತ್ ''ವೈಶ್ವಾನರೇ ತದ್ ಹುತಮ್'' ಇತಿ ''ಹೃದಯಂ ಗಾರ್ಹಪತ್ಯಮ್'' ಇತ್ಯಾದಿನಾ ಹೋ ಮಾದ್ಯಾಧಾರತ್ವಗಾರ್ಹಪತ್ಯಾದ್ಯಙ್ಗತ್ವಲಿಙ್ಗೇಭ್ಯೋ ''ಯोऽಯಮನ್ತಃಪುರುಷೇ'', ''ಯೇನೇದಮನ್ನಂ ಪಚ್ಯತೇ'' ಇತ್ಯನ್ತಃಪ್ರತಿಷ್ಠಾನೇನ ಪಚನವ್ಯಾಪಾರಾತ್ ಪಾಚಕತ್ವೇನಾನ್ತಃಪ್ರತಿಷ್ಠಾನಾದಿತಿ ವಾ ವೈಶ್ವಾನರೋ ನ ಬ್ರಹ್ಮೇತಿ ಚೇತ್ ।

।। श्रीजानकीवदनाम्भोजराजहंसाय रामचन्द्राय नमः ।।
।। श्री गुरुभ्यो नमः ।। हरिः ॐ ।।

श्री राघवेन्द्रतीर्थविरचिता

तन्त्रदीपिका

प्रणम्य गुणसम्पूर्णं दोषातीतं रमापतिम् ।
पूर्णबोधं गुरूनन्यान् कुर्मः सूत्रार्थसङ्ग्रहम् ।।

प्रथमाध्यायस्य द्वितीयः पादः

वैश्वानराधिकरणम् (१।२।७)

।। ॐ वैश्वानरः साधारणशब्दविशेषात् ॐ ।। १-२-२४ ।।

अत्र नये पाचकत्वाद्यनेकलिङ्गयुतं वैश्वानरनाम समन्वीयते ।

ಈ ಅಧಿಕರಣದಲ್ಲಿ ಪಾಚಕತ್ವವೇ ಮೊದಲಾದ ಅನೇಕ ಲಿಂಗಗಳಿಂದ ಕೂಡಿರುವ 'ವೈಶ್ವಾನರ' ಎಂಬ ನಾಮಾತ್ಮಕಶಬ್ದವನ್ನು ಸಮನ್ವಯಮಾಡುತ್ತಿದ್ದಾರೆ.

तत्त्वित्यस्ति । ''आत्मानं वैश्वानरमुपास्ते'', ''अयमग्निर्वैश्वानरः'' इत्यादौ श्रुतो वैश्वानरो ब्रह्मैव न त्वग्निः । कुतः? साधारणशब्दस्य अग्नाविष्णुसाधारणस्यापि वैश्वानरशब्दस्य विशेषादात्मपदेन विशेषणादित्यर्थः ।

ಈ ಸೂತ್ರದಲ್ಲಿ 'ತತ್ತು' ಎಂಬ ಪದಗಳು ಅನುವೃತ್ತವಾಗುತ್ತವೆ. 'ಆತ್ಮಾನಂ ವೈಶ್ವಾನರಮುಪಾಸ್ತೇ' 'ಅಯಮಗ್ನಿರ್ವೈಶ್ವಾನರಃ' ಇತ್ಯಾದಿ ವಾಕ್ಯಗಳಲ್ಲಿ ಶ್ರುತನಾದ ವೈಶ್ವಾನರನು ಬ್ರಹ್ಮನೇ ಆಗಿದ್ದಾನೆ; ಹೊರತು ಆಗ್ನಿಯಲ್ಲ. ಏಕೆಂದರೆ, ಸಾಧಾರಣಶಬ್ದಸ್ಯ = ಆಗ್ನಿ ಮತ್ತು ವಿಷ್ಣು ಇಬ್ಬರಲ್ಲಿಯೂ ವೈಶ್ವಾನರಶಬ್ದವು ಸಮಾನವಾಗಿರಬಹುದು. ಆದರೆ ಆ ವೈಶ್ವಾನರಶಬ್ದಕ್ಕೆ ವಿಶೇಷಾತ್ = ಆತ್ಮಪದವು ವಿಶೇಷಣವಾಗಿರುವುದರಿಂದ ಎಂದು.

ಆತ್ಮಶಬ್ದಃ ಅಗ್ರಾವಮುಖ್ಯೋऽಪಿ ಯುಜ್ಯತ ಇತ್ಯತಃ ಸಮಾಖ್ಯಾಮಾಹ -

।। ॐ ಸ್ಮರ್ಯಮಾಣಮನುಮಾನಂ ಸ್ಯಾದಿತಿ ॐ ।। ೧-೨-೨೫ ।।

ಆತ್ಮಶಬ್ದವು ಅಗ್ನಿಯಲ್ಲಿ ಅಮುಖ್ಯವಾಗಿದ್ದರೂ ಸಹ ಅಮುಖ್ಯಪ್ರಯೋಗವನ್ನು ಮಾಡಬಹುದಲ್ಲವೇ ಎಂಬ ಆಕ್ಷೇಪಕ್ಕೆ ಸಮಾಧಾನ ನೀಡಲು ಸಮಾಖ್ಯಾಪ್ರಮಾಣವನ್ನು ಹೇಳುತ್ತಿದ್ದಾರೆ. ''ಓಂ ಸ್ಮರ್ಯಮಾಣಂ ಅನುಮಾನಂ ಸ್ಯಾದಿತಿ ಓಂ''.

ವೈಶ್ವಾನರೋ ಬ್ರಹ್ಮೇತ್ಯಸ್ತಿ । ತೇನ ಇತಿಶಬ್ದಾನ್ವಯಃ । ಅನುಮೀಯತೇऽನೇನೇತ್ಯನುಮಾನಮ್ । ''ಅಹಂ ವೈಶ್ವಾನರಃ'' ಇತಿ ಗೀತಾಯಾಂ ಸ್ಮರ್ಯಮಾಣಂ ವಿಷ್ಣೋವೈಶ್ವಾನರತ್ವಮತ್ರಾಪಿ ಸ ಏವ ವೈಶ್ವಾನರ ಇತ್ಯಸ್ಯಾನುಮಾಪಕಂ ಸ್ಯಾದಿತ್ಯರ್ಥಃ ।

'ವೈಶ್ವಾನರಃ ಬ್ರಹ್ಮ' ಎಂಬ ಎರಡು ಪದಗಳನ್ನು ಅನುವೃತ್ತಿಮಾಡಿಕೊಳ್ಳಬೇಕು. ಇವುಗಳ ಜೊತೆಗೆ ಇತಿ ಶಬ್ದವು ಅನ್ವಯವನ್ನು ಹೊಂದುತ್ತದೆ. ಯಾವುದರಿಂದ ಅನುಮಾನಮಾಡಲ್ಪಡುತ್ತದೋ ಅದು 'ಅನುಮಾನ' ಎನಿಸುತ್ತದೆ. 'ಅಹಂ ವೈಶ್ವಾನರಃ' ಎಂಬುದಾಗಿ ಗೀತೆಯಲ್ಲಿ ವಿಷ್ಣುವಿಗೆ ಹೇಳಲ್ಪಟ್ಟ ವೈಶ್ವಾನರತ್ವವೇ ವೈಶ್ವಾನರಪ್ರಕರಣದಲ್ಲಿಯೂ ಸಹ ವೈಶ್ವಾನರನು ವಿಷ್ಣುವೇ ಆಗಿದ್ದಾನೆ ಎಂಬುದಕ್ಕೆ ಅನುಮಾಪಕವಾಗಿದೆ ಎಂದರ್ಥ.

''ಅಹಂ ವೈಶ್ವಾನರಃ'' ಇತಿ ಸ್ಮೃತಿಸಮಾಖ್ಯಾನಾದಿತಿ ಭಾವಃ ।

'ಅಹಂ ವೈಶ್ವಾನರಃ' ಎಂಬ ಗೀತಾಸ್ಮೃತಿರೂಪಸಮಾಖ್ಯಾಪ್ರಮಾಣವಿರುವುದರಿಂದ ವೈಶ್ವಾನರವಿದ್ಯೆಯಲ್ಲಿ ಪ್ರತಿಪಾದ್ಯನಾದವನು ವಿಷ್ಣುವೇ ಆಗಿದ್ದಾನೆಂದು ನಿರ್ಣಯವಾಯಿತು.

ಉಕ್ತಮಾಕ್ಷಿಪ್ಯಾಹ -

।। ॐ ಶಬ್ದಾದಿಭ್ಯೋऽನ್ತಃ ಪ್ರತಿಷ್ಠಾನಾನ್ನೇತಿ ಚೇನ್ನ ತಥಾ ದೃಷ್ಟ್ಯುಪದೇಶಾದಸಮ್ಭವಾತ್ ಪುರುಷವಿಧಮಪಿ ಚೈನಮಧೀಯತೇ ॐ ।। ೧-೨-೨೬ ।।

ಹಿಂದೆ ಹೇಳಿದ್ದನ್ನು ಆಕ್ಷೇಪಮಾಡಿ ಸಮಾಧಾನವನ್ನು ನೀಡುವ ಸೂತ್ರವನ್ನು ಪಠಿಸುತ್ತಿದ್ದಾರೆ. 'ಓಂ ಶಬ್ದಾದಿಭ್ಯೋऽಂತಃಪ್ರತಿಷ್ಠಾನಾನ್ನೇತಿ ಚೇನ್ನ ತಥಾ ದೃಷ್ಟ್ಯುಪದೇಶಾದಸಂಭವಾತ್ ಪುರುಷವಿಧಮಪಿ ಚೈನಮಧೀಯತೇ ಓಂ''.

ಆದಿಪದಾಲ್ಲಿಙ್ಗಾನಿ । ಅನ್ತಃಪ್ರತಿಷ್ಠಾನೇನ ತತ್ಕರ್ಮೋಪಲಕ್ಷ್ಯತೇ । ''ಅಯಮಗ್ನಿಃ'' ಇತ್ಯಾದ್ಯಗ್ನಿಶಬ್ದಾತ್ ''ವೈಶ್ವಾನರೇ ತದ್ ಹುತಮ್'' ಇತಿ ''ಹೃದಯಂ ಗಾರ್ಹಪತ್ಯಮ್'' ಇತ್ಯಾದಿನಾ ಹೋಮಾದ್ಯಾಧಾರತ್ವಗಾರ್ಹಪತ್ಯಾದ್ಯಙ್ಗತ್ವಲಿಙ್ಗೇಭ್ಯೋ ''ಯೋऽಯಮನ್ತಃಪುರುಷೇ'', ''ಯೇನೇದಮನ್ನಂ ಪಚ್ಯತೇ'' ಇತ್ಯನ್ತಃಪ್ರತಿಷ್ಠಾನೇನ ಪಚನವ್ಯಾಪಾರಾತ್ ಪಾಚಕತ್ವೇನಾನ್ತಃಪ್ರತಿಷ್ಠಾನಾದಿತಿ ವಾ ವೈಶ್ವಾನರೋ ನ ಬ್ರಹ್ಮೇತಿ ಚೇತ್ ।

'ಶಬ್ದಾದಿಭ್ಯಃ' ಎಂಬಲ್ಲಿರುವ ಆದಿಪದದಿಂದ ಲಿಂಗಗಳನ್ನು ವಿವಕ್ಷಿಸಬೇಕು. 'ಅಯಮಗ್ನಿರ್ವೈಶ್ವಾನರಃ ಯೋऽಯಮಂತಃಪುರುಷೇ' ಎಂಬ ಬೃಹದಾರಣ್ಯಕೋಪನಿಷತ್ತಿನಲ್ಲಿ ಅಂತಃಪ್ರತಿಷ್ಠಾನದಿಂದ ಅಗ್ನಿಯ ಕಾರ್ಯವನ್ನು ಉಪಲಕ್ಷಣಯಾ ವಿವಕ್ಷಿಸಬೇಕು. ಅಯಮಗ್ನಿಃ ಎಂಬಲ್ಲಿ ಅಗ್ನಿಶಬ್ದದಿಂದ 'ವೈಶ್ವಾನರೇ ತದ್ಭೂತಂ ಭವತಿ' ಎಂಬುದಾಗಿ ಮತ್ತು 'ಹೃದಯಂ ಗಾರ್ಹಪತ್ಯೇ' ಎಂಬುದರಿಂದ ಹೇಳಲ್ಪಟ್ಟ ಹೋಮಾದ್ಯಾಧಾರತ್ವ ಗಾರ್ಹಪತ್ಯಾದ್ಯಂಗತ್ವ ಮೊದಲಾದ ಲಿಂಗಗಳಿಂದ ಮತ್ತು 'ಯೋऽಯಮಂತಃಪುರುಷೇ ಯೇನೇದಮನ್ನಂ ಪಚ್ಯತೇ' ಎಂಬುದಾಗಿ ಅಂತಃಪ್ರತಿಷ್ಠಿತನಾಗಿ ಮಾಡಲ್ಪಡುವ ಪಚನಕ್ರಿಯೆಯೆಂಬ ವ್ಯಾಪಾರದಿಂದ ಅಥವಾ ಪಾಚಕನಾಗಿ ಅಂತಃಪ್ರತಿಷ್ಠಿತನಾಗಿರುವುದರಿಂದ ವೈಶ್ವಾನರನು ಬ್ರಹ್ಮನಾಗಲು ಸಾಧ್ಯವಿಲ್ಲವೆಂದು ಆಕ್ಷೇಪ.

न । कुतः? तथा अग्न्यादिनामलिङ्गकर्मवत्त्वेन दृष्ट्युपदेशाद् उपासनोपदेशात् तेषां सावकाशत्वादिति भावः । दृष्टिपदात् नाविद्यमानध्यानमिति सूचितम् ।

ಇದು ಸರಿಯಲ್ಲ. ಏಕೆಂದರೆ, ತಥಾ = ಅಗ್ನ್ಯಾದಿನಾಮಗಳು ಲಿಂಗ ಮತ್ತು ಕ್ರಿಯೆ ಇವುಗಳು ವಿಷ್ಣುವಿನಲ್ಲಿಯೇ ಯುಕ್ತವಾಗುತ್ತವೆ. ಏಕೆಂದರೆ, ತಥಾ ದೃಷ್ಟ್ಯುಪದೇಶಾತ್ = ಉಪಾಸನೆಯನ್ನು ಉಪದೇಶಿಸುವುದಕ್ಕಾಗಿ ಹಾಗೆ ಹೇಳಿರುತ್ತಾರೆ. ಅಗ್ನ್ಯಾದಿನಾಮಗಳು, ಲಿಂಗಗಳು ಮತ್ತು ಕ್ರಿಯೆಗಳು ಹೀಗೆ ವಿಷ್ಣುವಿನಲ್ಲಿ ಸಾವಕಾಶವಾಗಿವೆಯೆಂದು ತಿಳಿಯಬೇಕು. ದೃಷ್ಟಿಪದದಿಂದ ಇಲ್ಲದಿರುವ ವಿಷಯವನ್ನು ಧ್ಯಾನಮಾಡಲು ಸಾಧ್ಯವಿಲ್ಲವೆಂದು ಸೂಚಿಸಿದ್ದಾರೆ.

किञ्च ''को न आत्मा किं ब्रह्म'' इत्युपक्रमोक्तात्मत्वाद्यसम्भवात् । ब्रह्मप्रकरणाच्चेति यावत् । अपि किञ्चेत्यर्थः ।

ಮತ್ತು 'ಕೋ ನ ಆತ್ಮಾ ಕಿಂ ಬ್ರಹ್ಮ' ಎಂಬುದಾಗಿ ಉಪಕ್ರಮದಲ್ಲಿ ಹೇಳಿರುವ ಆತ್ಮತ್ವಾದಿಗಳು ಅಯುಕ್ತವಾದ್ದರಿಂದ ಮತ್ತು ಬ್ರಹ್ಮಪ್ರಕರಣವಾಗಿರುವುದರಿಂದ ಎಂದು ಅಭಿಪ್ರಾಯ. ಅಪಿ = ಅಷ್ಟೇ ಅಲ್ಲದೆ ಎಂದರ್ಥ.

एनं वैश्वानरं पुरुषविधं पुरुषो यद्विधस्तद्विधमधीयते छन्दोगा यतोऽतोऽपीति योज्यम् ।

ಏನಂ = ಈ ವೈಶ್ವಾನರನನ್ನು, ಪುರುಷವಿಧಂ = ಪುರುಷನು ಯಾವ ವಿಧದಲ್ಲಿದ್ದಾನೋ ಆ ವಿಧದಲ್ಲಿ, ಅಧೀಯತೇ = ಛಂದೋಗರು ಯಾವ ಕಾರಣದಿಂದ ಅಧ್ಯಯನ ಮಾಡುತ್ತಾರೋ ಆ ಕಾರಣದಿಂದ ಎಂದು ಯೋಜನೆ ಮಾಡಿಕೊಳ್ಳಬೇಕು.

''शीर्ष्णो द्यौः समवर्तत'' इत्यादिना पुरुषसूक्तोक्तपुरुषविधमेवैनं ''मूर्धैव सुतेजाः'' इत्यादिना अधीयत इति तत्समाख्यानादपीत्यर्थः । चशब्दः पुरुषसूक्तस्य वैष्णवत्वप्रसिद्धिद्योतकः ।

'ಶೀರ್ಷ್ಣೋ ದ್ಯೌಃ ಸಮವರ್ತತ' ಇತ್ಯಾದಿಯಾಗಿ ಪುರುಷಸೂಕ್ತದಲ್ಲಿ ಹೇಳಲ್ಪಟ್ಟಿರುವ ಪುರುಷನಂತೆಯೇ ಈ ವೈಶ್ವಾನರನೂ ಸಹ 'ಮೂರ್ಧೈವ ಸುತೇಜಾಃ' ಇತ್ಯಾದಿಯಾಗಿ ಇರುತ್ತಾನೆಂದು ಅಧ್ಯಯನ ಮಾಡುತ್ತಾರೆ. ಆದ್ದರಿಂದ ಪುರುಷಸೂಕ್ತದ ಸಮಾಖ್ಯಾಪ್ರಮಾಣದಿಂದಲೂ ಸಹ ಎಂದು ಅರ್ಥ. ಚಶಬ್ದವು ಪುರುಷಸೂಕ್ತಕ್ಕೆ ವೈಷ್ಣವತ್ವಪ್ರಸಿದ್ಧಿಯನ್ನು ಸೂಚಿಸುತ್ತದೆ.

अन्तःप्रतिष्ठानस्य कर्मत्वाद् पृथगुक्तिः । तत्वप्रदीपे तु प्रधानलिङ्गत्वात् पृथगुक्तमित्युक्तम् । तथा चेतोऽर्पणेत्यत्र प्रसिद्धशब्दत्यागे प्रयोजनोक्तिः । इह तु शब्दादेः सावकाशत्वोक्तिरिति मेदः ।।

ಅಂತಃಪ್ರತಿಷ್ಠಾನವುಕ್ರಿಯಾರೂಪವಾಗಿದೆ. ಆದ್ದರಿಂದಪ್ರತ್ಯೇಕವಾಗಿಹೇಳಿದ್ದಾರೆ. ತತ್ವಪ್ರದೀಪದಲ್ಲಾದರೋ ಪ್ರಧಾನಲಿಂಗವಾದ್ದರಿಂದ ಪ್ರತ್ಯೇಕವಾಗಿ ಉಲ್ಲೇಖಿಸಿದ್ದಾರೆಂದು ಹೇಳಿದ್ದಾರೆ.

'ತಥಾ ಚೇತೋಽರ್ಪಣ' ಎಂಬಲ್ಲಿ ಪ್ರಸಿದ್ಧಶಬ್ದವನ್ನು ಪರಿತ್ಯಾಗಮಾಡಲು ಪ್ರಯೋಜನವನ್ನು ಹೇಳಿದ್ದಾರೆ. ಆದರೆ ಇಲ್ಲಿ ಶಬ್ದಮೊದಲಾದವುಗಳಿಗೆ ಸಾವಕಾಶತ್ವವನ್ನು ಹೇಳಲಾಗಿದೆಯೆಂದು ಎರಡು ಸೂತ್ರಗಳಿಗೂ ವೈಲಕ್ಷಣ್ಯವಿದೆ.

प्रसिद्धेर्देवता भूतं च किं न स्यादित्यत आह -

।। ॐ अत एव न देवता भूतं च ॐ ।। १-२-२७ ।।

ಪ್ರಸಿದ್ಧಿಯಕಾರಣದಿಂದಅಗ್ನಿದೇವತೆಯಾಗಲೀ, ಜಡವಾದಅಗ್ನಿಯಾಗಲೀ, ಏಕೆವೈಶ್ವಾನರನೆನಿಸಬಾರದು? ಎಂಬ ಆಕ್ಷೇಪಕ್ಕೆ ಸಮಾಧಾನವನ್ನು ಹೇಳುತ್ತಿದ್ದಾರೆ. 'ಓಂ ಅತ ಏವ ನ ದೇವತಾ ಭೂತಂ ಚ ಓಂ'

आत्मशब्दादिति हेतोरेवाग्निर्देवता तेजोभूतं च वैश्वानरो न भवतीत्यर्थः ।

ಸೂತ್ರಾರ್ಥ ಹೀಗಿದೆ. ಆತ್ಮಶಬ್ದ ಮೊದಲಾದ ಹೇತುವಿನಿಂದಲೇ ಅಗ್ನಿದೇವತೆಯಾಗಲೀ ಜಡವಾದ ತೇಜಸ್ಸಿನ ರೂಪದಲ್ಲಿರುವ ಅಗ್ನಿಯಾಗಲೀ ವೈಶ್ವಾನರವಲ್ಲವೆಂದು ಅರ್ಥ.

अग्न्यादिशब्दानां ब्रह्मैकवाचित्वेऽग्न्यादौ व्यवहारविरोधः फलाभावादित्यत आह -

।। ॐ साक्षादप्यविरोधं जैमिनिः ॐ ।। १-२-२८ ।।

ಅಗ್ನ್ಯಾದಿಶಬ್ದಗಳು ಕೇವಲ ಬ್ರಹ್ಮನನ್ನು ಪ್ರತಿಪಾದಿಸುವುದಾದರೆ ನಿಷ್ಫಲವಾಗುತ್ತವೆ. ಆದ್ದರಿಂದ ಅಗ್ನ್ಯಾದಿಗಳಲ್ಲಿ ವ್ಯವಹಾರಮಾಡುವುದರ ವಿರೋಧಬರುತ್ತದಲ್ಲವೇ? ಈ ಆಕ್ಷೇಪಕ್ಕೆ ಸಮಾಧಾನವನ್ನು ನೀಡುವುದಕ್ಕಾಗಿ ಮುಂದಿನ ಸೂತ್ರ ಹೊರಟಿದೆ. 'ಓಂ ಸಾಕ್ಷಾದಪ್ಯವಿರೋಧಂ ಜೈಮಿನಿಃ ಓಂ'.

वाच्यार्थधीव्यवहितं लक्षणादिकं विना साक्षात् मुख्यवृत्त्या ब्रह्मणः अग्न्यादिशब्दार्थत्वेऽप्यन्यत्र व्यवहाराविरोधं जैमिनिराहेत्यर्थः । हानाद्यर्थत्वादिति भावः ।

ಸೂತ್ರಾರ್ಥ ಹೀಗಿದೆ -- ವಾಚ್ಯಾರ್ಥಜ್ಞಾನದಿಂದ ತಡೆಯಲ್ಪಟ್ಟ ಲಕ್ಷಣಾ ಮೊದಲಾದವುಗಳಿಲ್ಲದೆ ಸಾಕ್ಷಾತ್ = ಮುಖ್ಯವೃತ್ತಿಯಿಂದ ಬ್ರಹ್ಮನು ಅಗ್ನಿ ಮೊದಲಾದ ಪದಗಳ ಅರ್ಥನಾಗಿದ್ದಾನೆ. ಆದರೂ ಸಹ ಬೇರೆ ಕಡೆ ವ್ಯವಹಾರವನ್ನು ಮಾಡುವುದಕ್ಕಾಗಿ ಪ್ರಯೋಗಿಸಲಾಗಿದೆಯೆಂದು ಜೈಮಿನಿ ಋಷಿಗಳು ಹೇಳುತ್ತಾರೆಂದರ್ಥ. ಪರಿತ್ಯಾಗಮಾಡುವಿಕೆ, ಸ್ವೀಕರಿಸುವಿಕೆ ಮೊದಲಾದ ಪ್ರಯೋಜನಗಳಿರುವುದರಿಂದ ವ್ಯವಹಾರವು ನಿಷ್ಪ ಲವಲ್ಲವೆಂದು ಅಭಿಪ್ರಾಯ.

अग्न्यादिशब्दानां ब्रह्मणि मुख्यत्वे सूक्तादिव्यवस्था न स्यादित्यत आह -

।। ॐ अभिव्यक्तेरित्याश्मरथ्यः ॐ ।। १-२-२९।।

ಅಗ್ನಿಮೊದಲಾದ ಶಬ್ದಗಳು ಬ್ರಹ್ಮನಲ್ಲಿ ಮುಖ್ಯವಾಗಿ ಇರುತ್ತವೆಂದು ಹೇಳುವುದಾದರೆ ಇದು ಅಗ್ನಿಸೂಕ್ತ, ಇದು ವಾಯುಸೂಕ್ತ ಮೊದಲಾದ ವ್ಯವಸ್ಥೆಗಳು ತಪ್ಪಾಗುತ್ತವಲ್ಲವೇ? ಎಂಬ ಆಕ್ಷೇಪಕ್ಕೆ ಉತ್ತರಿಸುವುದಕ್ಕಾಗಿ ಮುಂದಿನ ಸೂತ್ರ ಹೊರಟಿದೆ. 'ಓಂಅಭಿವ್ಯಕ್ತೇರಿತ್ಯಾಶ್ಮರಥ್ಯಃ ಓಂ'.

अग्न्यादिसूक्तादिनियम इति शेषः । अग्न्यादिसूक्तादिभिर्ब्रह्मोपास्तावग्न्यादिष्वेव तस्याभिव्यक्तेरिति भावेनाग्न्यादिसूक्तादिनियम इत्याश्मरथ्यो मन्यत इत्यर्थः ।

ಸೂತ್ರಾರ್ಥ ಹೀಗಿದೆ -- ಅಗ್ನಿಸೂಕ್ತ, ವಾಯುಸೂಕ್ತ ಇತ್ಯಾದಿ ನಿಯಮವು ಎಂಬುದನ್ನು ಶೇಷಪೂರಣ ಮಾಡಿಕೊಳ್ಳಬೇಕು. ಅಗ್ನ್ಯಾದಿಸೂಕ್ತಗಳಿಂದ ಬ್ರಹ್ಮನನ್ನು ಉಪಾಸನೆ ಮಾಡಿದರೆ ಅಗ್ನ್ಯಾದಿಗಳಲ್ಲಿಯೇ ಬ್ರಹ್ಮನ ಅಭಿವ್ಯಕ್ತಿಯಾಗುತ್ತದೆಂಬ ಅಭಿಪ್ರಾಯದಿಂದ ಅಗ್ನ್ಯಾದಿಸೂಕ್ತ ಮೊದಲಾದ ನಿಯಮವು ಇರುತ್ತದೆಂದು ಆಶ್ಮರಥ್ಯಾಚಾರ್ಯರು ತಿಳಿಯುತ್ತಾರೆಂದರ್ಥ.

प्रकारान्तरेण व्यवस्थामाह -

।। ॐ अनुस्मृतेर्बादरिः ॐ ।। १-२-३० ।।

ಮತ್ತೊಂದು ಪ್ರಕಾರದಿಂದ ಸೂಕ್ತವ್ಯವಸ್ಥೆಯನ್ನು ಹೇಳಲು ಮುಂದಿನ ಸೂತ್ರವು ಹೊರಟಿದೆ 'ಓಂ ಅನುಸ್ಮೃತೇರ್ಬಾದರಿಃ ಓಂ'

तत्तत्सूक्ताद्युपासकैरग्न्यादिष्वेव ब्रह्मणोऽनुस्मृतेर्हेतोः सूक्तादिव्यवस्थेति बादरिर्मन्यते । अनुस्मृतेः पूर्वत्वेऽयमभिव्यक्त्यनन्तरमपि सा कार्येति द्योतयितुं तदनन्तरमुक्तिः ।

ಆಯಾ ಸೂಕ್ತಗಳ ಉಪಾಸನೆ ಮಾಡುವುದರಿಂದ ಅಗ್ನ್ಯಾದಿಗಳಲ್ಲಿಯೇ ಬ್ರಹ್ಮನನ್ನು ಧ್ಯಾನಮಾಡಬೇಕು ಎಂಬ ಕಾರಣದಿಂದ ಸೂಕ್ತಾದಿಗಳ ವ್ಯವಸ್ಥೆಯು ಯುಕ್ತವಾಗಿದೆಯೆಂದು ಶುಕಾಚಾರ್ಯರು ತಿಳಿಯುತ್ತಾರೆ. ಅಭಿವ್ಯಕ್ತಿಗಿಂತ ಅನುಸ್ಮೃತಿಯನ್ನು ಮೊದಲು ಹೇಳಬೇಕಿತ್ತು; ಆದರೂ ಸಹ ಅಭಿವ್ಯಕ್ತಿಯ ಅನಂತರವೂ ಸಹ ಅನುಸ್ಮೃತಿಯನ್ನು ಮಾಡಬಹುದೆಂದು ಸೂಚಿಸುವುದಕ್ಕಾಗಿ ಮೊದಲು ಅಭಿವ್ಯಕ್ತಿಯನ್ನು ಹೇಳಿರುತ್ತಾರೆ.

ನಿಮಿತ್ತಾನ್ತರಮಾಹ -

।। ॐ सम्पत्तेरिति जैमिनिस्तथा हि दर्शयति ॐ ।। १-२-३१ ।।

ಮತ್ತೊಂದು ಕಾರಣವನ್ನು ಹೇಳುವ ಸೂತ್ರ ಹೀಗಿದೆ - ಓಂ ಸಂಪತ್ತೇರಿತಿ ಜೈಮಿನಿಸ್ತಥಾ ಹಿ ದರ್ಶಯತಿ ಓಂ'

अग्न्यादिसूक्ताद्युपासकानामग्न्यादिप्राप्तेर्निमित्तादिति भावेन सूक्तादिनियम इति जैमिनिर्मन्यते । तदुपास्तौ तत्प्राप्तिः कुतः? तथा हि दर्शयति । ''तं यथा यथोपासते तदेव भवति'' इति हि प्रसिद्धा श्रुतिः जैमिनिमतं यथा तथा दर्शयतीत्यर्थः । भवतीत्यस्य प्राप्नुवन्तीत्यर्थः।

ಅಗ್ನ್ಯಾದಿ ಸೂಕ್ತಗಳಿಂದ ಉಪಾಸನೆ ಮಾಡುವವರಿಗೆ ಅಗ್ನ್ಯಾದಿಗಳ ಪ್ರಾಪ್ತಿಯಾಗುತ್ತದೆ. ಈ ಕಾರಣದಿಂದ ಸೂಕ್ತಾದಿಗಳ ನಿಯಮವು ಯುಕ್ತವಾಗುತ್ತದೆಂದು ಜೈಮಿನಿ ಋಷಿಗಳು ತಿಳಿಯುತ್ತಾರೆ. ಅಗ್ನ್ಯಾದಿ ಸೂಕ್ತಗಳಿಂದ ಉಪಾಸನೆ ಮಾಡಿದರೆ ಅಗ್ನ್ಯಾದಿಗಳು ದೊರೆಯುತ್ತಾರೆಂದು ಹೇಗೆ ತಿಳಿಯುತ್ತದೆ? ಎಂಬ ಪ್ರಶ್ನೆಗೆ 'ತಥಾ ಹಿ ದರ್ಶಯತಿ' ಎಂದು ಉತ್ತರಿಸಿದ್ದಾರೆ. ಅಂದರೆ ತಂ ಯಥಾ ಯಥಾ ಉಪಾಸತೇ ತದೇವ ಭವತಿ ಎಂದು ಪ್ರಸಿದ್ಧವಾದ ಶ್ರುತಿಯು ಜೈಮಿನಿಯ ಅಭಿಪ್ರಾಯವನ್ನು ಸಮ್ಮತಿಸುತ್ತದೆ. ಭವತಿ ಎಂಬುದಕ್ಕೆ ಹೊಂದುತ್ತಾರೆ ಎಂಬರ್ಥವು ಅರ್ಥಾತ್ ಸಿದ್ಧವಾಗುತ್ತದೆ.

ब्रह्मोपास्तावग्न्यादिप्राप्तिः कथमित्यत आह -

।। ॐ आमनन्ति चैनमस्मिन् ॐ ।। १-२-३२ ।।

ಬ್ರಹ್ಮನನ್ನು ಉಪಾಸನೆ ಮಾಡಿದರೆ ಅಗ್ನ್ಯಾದಿಗಳು ದೊರೆಯುತ್ತಾರೆಂದು ಹೇಗೆ ಹೇಳಲು ಸಾಧ್ಯ ? ಎಂಬ ಪ್ರಶ್ನೆಗೆ ಸಮಾಧಾನ ನೀಡಲು ಮುಂದಿನ ಸೂತ್ರ ಹೊರಟಿದೆ. 'ಓಂ ಆಮನಂತಿ ಚೈನಮಸ್ಮಿನ್ ಓಂ'

चशब्दः शङ्काव्यावर्तकः । एनं विष्णुमस्मिन्नग्न्यादौ । तस्य देवता भूतत्वेति प्रकृतत्वात् । ''योऽग्नौ तिष्ठन्'' इत्यादिना आमनन्ति श्रुतय इत्यर्थः । अग्न्यादिप्राप्तिपदेन तत्स्थब्रह्मप्राप्तेर्विवक्षितत्वादिति भावः । श्रुत्यनुसारादेनमिति पुंनिर्देशः ।

ಸೂತ್ರದಲ್ಲಿರುವ ಚಶಬ್ದವು ಆಕ್ಷೇಪವನ್ನು ವ್ಯಾವೃತ್ತಿ ಮಾಡುತ್ತಿದೆ. ಏನಂ = ವಿಷ್ಣುವನ್ನು ಅಸ್ಮಿನ್ = ಅಗ್ನ್ಯಾದಿಗಳಲ್ಲಿ. ಅಗ್ನ್ಯಾದಿಗಳು ದೇವತಾಭೂತಂ ಚ ಎಂಬುದಾಗಿ ಪ್ರಸಕ್ತರಾಗಿರುವುದರಿಂದ 'ಯೋಽಗ್ನೌ ತಿಷ್ಠನ್' ಇತ್ಯಾದಿಯಾಗಿ ಆಮನಂತಿ = ಶ್ರುತಿಗಳು ಹೇಳುತ್ತವೆ ಎಂದರ್ಥ. ಅಗ್ನ್ಯಾದಿಪ್ರಾಪ್ತಿ ಎಂಬ ಪದದಿಂದ ಅಗ್ನ್ಯಾದಿಗಳಲ್ಲಿರುವ ಬ್ರಹ್ಮನ ಪ್ರಾಪ್ತಿಯೇ ವಿವಕ್ಷಿತವಾಗಿದೆಯೆಂದು ಅಭಿಪ್ರಾಯ. ಶ್ರುತಿಯನ್ನು ಅನುಸರಿಸಿ ಏನಂ ಎಂಬುದಾಗಿ ಪುಲ್ಲಿಂಗ ಪ್ರಯೋಗವನ್ನು ಮಾಡಿದ್ದಾರೆ.

जैमिन्याद्युक्तिस्तेषां प्रसिद्ध्यर्था । शब्दानां लोकव्यवहाराविरोधं वदन् सूक्तादिनियमं चाहेति जैमिनेर्द्वैरुपादानम् ।।७।।

ಜೈಮಿನ್ಯಾದಿಗಳನ್ನು ಸೂತ್ರಕಾರರು ಏಕೆ ಉಲ್ಲೇಖಿಸಿದ್ದಾರೆಂದರೆ, ಶಿಷ್ಯರನ್ನು ಪ್ರಸಿದ್ಧಿಪಡಿಸುವುದಕ್ಕಾಗಿ. ಶಬ್ದಗಳಿಗೆ ಲೋಕವ್ಯವಹಾರದ ವಿರೋಧವಿಲ್ಲವೆಂದು ಹೇಳುತ್ತಾ, ಸೂಕ್ತಾದಿಗಳ ನಿಯಮವನ್ನೂ ಸಹ ಹೇಳುತ್ತಾ೦ಬ ಕಾರಣದಿಂದ ಜೈಮಿನಿಗಳನ್ನು ಎರಡು ಬಾರಿ ಸೂತ್ರಕಾರರು ಉಲ್ಲೇಖಿಸಿದ್ದಾರೆ.

अत्राद्यनये विष्णोस्सर्वशक्तिप्रबोधकत्वं सर्वगतस्याप्यल्पस्थानस्थितत्वं च । अत्तेति नयेऽदनक्रिया । गुहानये सारभोक्तृत्वमेकस्याप्यनेकत्वं च । अन्तरनये ब्रह्मादेरीशं विना स्वावरनेतृत्वायोगः । अन्तर्यामिनये सर्वस्य तच्छौर्यत्वात् तत्तन्त्रत्वाद्वा तच्छरीरत्वम् । अदृश्यत्वनये गोत्राद्यभावस्येशाख्यधर्मितो भेदेऽपि दृश्याद्यन्योन्याभावस्य तत्स्वरूपत्वं सिद्धम् । अन्त्यनये सूक्तादिव्यवस्थेत्यादि ध्येयम् ।।

इति श्रीमद्राघवेन्द्रयतिकृतायां तन्त्रदीपिकायां प्रथमाध्यायस्य द्वितीयः पादः

ಈ ಪಾದದ ಮೊದಲನೆಯ ಅಧಿಕರಣದಲ್ಲಿ ವಿಷ್ಣುವಿಗೆ ಸರ್ವಶಕ್ತಿಪ್ರಬೋಧಕತ್ವ ಎಂಬ ಧರ್ಮವನ್ನು ಮತ್ತು ಸರ್ವಗತನಾದರೂ ಸಹ ಅಲ್ಪಸ್ಥಾನಸ್ಥಿತನಾಗಿದ್ದಾನೆಂದು ಹೇಳಲಾಗಿದೆ. ಅತ್ಯತ್ವಾದಿಕರಣದಲ್ಲಿ ಅದನರೂಪ ಕ್ರಿಯೆಯನ್ನು ಸಮನ್ವಯ ಮಾಡಲಾಗಿದೆ. ಗುಹಾಧಿಕರಣದಲ್ಲಿ ಸಾರಭೋಕ್ತೃತ್ವವನ್ನು ಹಾಗೂ [illegible]ನಿಗೇ ಅನೇಕತ್ವವನ್ನೂ ಸಹ ಹೇಳಲಾಗಿದೆ.

ಆಂತರಾಧಿಕರಣದಲ್ಲಿ ಪರಮಾತ್ಮನನ್ನು ಬಿಟ್ಟು ಬ್ರಹ್ಮಾದಿಗಳಿಗೆ ತಮಗಿಂತ ನೀಚರನ್ನು ಪ್ರೇರಣೆ ಮಾಡುವ ಶಕ್ತಿಯು ಇಲ್ಲವೆಂದು ನಿರೂಪಿಸಲಾಗಿದೆ. ಅಂತರ್ಯಾಮ್ಯಧಿಕರಣದಲ್ಲಿ ಎಲ್ಲವೂ ಸಹ ಭಗವಂತನಿಂದ ನಾಶವಾಗುವುದರಿಂದ ಅಥವಾ ಅವನ ಅಧೀನವಾಗುವುದರಿಂದ ಅವನ ಶರೀರವಾಗಿದೆಯೆಂದು ನಿರೂಪಿಸಲಾಗಿದೆ. ಅದೃಶ್ಯತ್ವಾಧಿಕರಣದಲ್ಲಿ ಗೋತ್ರಾದ್ಯಭಾವರೂಪ ಧರ್ಮವು ಭಗವಂತನೆಂಬ ಧರ್ಮಿಯಿಂದ ಭಿನ್ನವಾಗಿದ್ದರೂ ದೃಶ್ಯಾದಿಗಳ ಭೇದರೂಪಧರ್ಮವು ಪರಮಾತ್ಮನ ಸ್ವರೂಪವೆಂದು ಸಾಧಿಸಲಾಗಿದೆ. ಕೊನೆಯ ಅಧಿಕರಣದಲ್ಲಿ ಸೂಕ್ತಾದಿವ್ಯವಸ್ಥೆಯನ್ನು ಮಾಡಲಾಗಿದೆಯೆಂದು ತಿಳಿಯಬೇಕು.

ಇಲ್ಲಿಗೆ ಶ್ರೀರಾಘವೇಂದ್ರತೀರ್ಥರಿಂದ ರಚಿತವಾದ ತಂತ್ರದೀಪಿಕಾ ಗ್ರಂಥದ ಕನ್ನಡಾನುವಾದದಲ್ಲಿ ಮೊದಲನೆಯ ಅಧ್ಯಾಯದ ಎರಡನೆಯ ಪಾದವು ಸಮಾಪ್ತವಾಯಿತು.

।। श्रीकृष्णार्पणमस्तु ।।

श्री राघवेन्द्रतीर्थविरचिता

श्रीन्यायमुक्तावलिः

वैश्वानराधिकरणम् (१।२।७)

॥ ॐ वैश्वानरः साधारणशब्दविशेषात् ॐ ॥ ७ ॥

॥ ॐ स्मर्यमाणमनुमानं स्यादिति ॐ ॥ ॥ ॐ शब्दादिभ्योऽन्तःप्रतिष्ठानान्नेति चेन्न तथा दृष्ट्युपदेशादसम्भवात्पुरुषविधमपि चैनमधीयते ॐ ॥ ॥ॐ अत एव न देवता भूतं च ॐ ॥ ॥ साक्षादप्यविरोधं जैमिनिः ॐ ॥ ॥ ॐ अभिव्यक्तेरित्याश्मरथ्यः ॐ ॥ ॥ ॐ अनुस्मृतेर्बादरिः ॐ ॥ ॥ ॐ सम्पत्तेरिति जैमिनिस्तथा हि दर्शयति ॐ ॥ ॥ॐ आमनन्ति चैनमस्मिन् ॐ ॥

अत्र प्राचीनादृश्यत्वादिगुणमध्यश्रुतसर्वगतत्वाक्षेपात्सङ्गतिः ।

ಈ ಅಧಿಕರಣದಲ್ಲಿ ಹಿಂದಿನ ಅಧಿಕರಣದಲ್ಲಿ ಹೇಳಲ್ಪಟ್ಟ ಅದೃಶ್ಯತ್ವಾದಿಗುಣಗಳ ಮಧ್ಯದಲ್ಲಿ ಕೇಳಿಸುತ್ತಿರುವ ಸರ್ವಗತತ್ವವನ್ನು ಆಕ್ಷೇಪಿಸಲಾಗಿದೆ. ಆದ್ದರಿಂದ ಸಂಗತಿಯು ಇರುತ್ತದೆ.

ಛಾನ್ದೋಗ್ಯೇ ಪಞ್ಚಮೇऽಧ್ಯಾಯೇ ''ಅಭಿವಿಮಾನಮಾತ್ಮಾನಂ ವೈಶ್ವಾನರಮುಪಾಸ್ತೇ''(ಛಾ.೫-೧೮-೧) ಇತಿ ವಾಜಸನೇಯೇ ಚ ಸಪ್ತಮೇऽಧ್ಯಾಯೇ ''ಅಯಮಗ್ನಿರ್ವೈಶ್ವನರೋ ಯोऽಯಮನ್ತಃಪುರುಷೇ ಯೇನೇದಮನ್ನಂ ಪಚ್ಯತೇ'' ಇತಿ (ಬೃ.೭-೯-೧) ವೈಶ್ವಾನರವಿದ್ಯಾಗತಃ ತಥಾ ''ವೈಶ್ವಾನರಮೃತ ಆಜಾತಮಾಗ್ನಿಮ್'' (ಋ.೬-೭-೧) ಇತ್ಯಾದಿಸೂಕ್ತಗತೊ ವೈಶ್ವಾನರಃ ಕಿಂ ಭೂತದಭಿಮಾನಿದೇವತೇ ವಾ ವಿಷ್ಣುರ್ವೇತಿ ಸನ್ದೇಹಃ ।

ಛಾಂದೋಗ್ಯದ ಐದನೆಯ ಅಧ್ಯಾಯದಲ್ಲಿ 'ಅಭಿವಿಮಾನಮಾತ್ಮಾನಂ ವೈಶ್ವಾನರಮುಪಾಸ್ತೇ' ಎಂಬ ವಾಕ್ಯವು ಕೇಳಿಸುತ್ತಿದೆ. ಮತ್ತು ಬೃಹದಾರಣ್ಯಕದ ಏಳನೆಯ ಅಧ್ಯಾಯದಲ್ಲಿ 'ಅಯಮಗ್ನಿರ್ವೈಶ್ವಾನರೋ ಯೋऽಯಮಂತಃಪುರುಷೇ ಯೇನೇದಮನ್ನಂ ಪಚ್ಯತೇ' ಎಂಬುದಾಗಿ ವೈಶ್ವಾನರವಿದ್ಯೆಯು ಪ್ರಸಕ್ತವಾಗಿದೆ. ಆದರಂತೆ ಋಗ್ವೇದದಲ್ಲಿ 'ವೈಶ್ವಾನರಮೃತ ಆಜಾತಮಗ್ನಿಮ್' ಎಂಬುದಾಗಿ ವೈಶ್ವಾನರನು ಶ್ರುತನಾಗಿದ್ದಾನೆ. ಈ ಎಲ್ಲ ವಾಕ್ಯಗಳು ಈ ಅಧಿಕರಣಕ್ಕೆ ವಿಷಯವಾಗಿವೆ.

ಇಲ್ಲಿ ಕೇಳಿಸುತ್ತಿರುವ ವೈಶ್ವಾನರನು ಜಡವಾದ ಅಗ್ನಿ ಅಥವಾ ತದಭಿಮಾನಿದೇವತೆಯೋ ಅಥವಾ ವಿಷ್ಣುವೋ ಎಂದು ಸಂದೇಹ.

वैश्वानराग्न्यादिशब्दानां अग्नावेव लोकप्रसिद्धे । छान्दोग्ये ''वैश्वानरे तद्धुतं भवति'' (छां.५-२४-४)''हृदयं गार्हपत्ये'' (छ.५-१८-२) इत्यादिना श्रुतहोमाधारत्वगार्हपत्याद्यङ्गकत्वस्य काण्वश्रुतौ पाचकत्वादेश्च लिङ्गस्य श्रवणात् ।

ವೈಶ್ವಾನರ ಅಗ್ನಿ ಮೊದಲಾದ ಶಬ್ದಗಳು ಲೋಕರೂಢಿಯಿಂದ ಅಗ್ನಿಯಲ್ಲೇ ಪ್ರಸಿದ್ಧವಾಗಿವೆ. ಮತ್ತು ಛಾಂದೋಗ್ಯದಲ್ಲಿ ವೈಶ್ವಾನರೇ ತದ್ಧುತಂ ಭವತಿ' ಎಂಬುದಾಗಿ ಹೋಮಾಧಾರತ್ವವೆಂಬ ಲಿಂಗವು ಕೇಳಿಸುತ್ತಿದೆ. 'ಹೃದಯಂ ಗಾರ್ಹಪತ್ಯೇ' ಎಂಬ ಛಾಂದೋಗ್ಯದಲ್ಲಿ ಗಾರ್ಹಪತ್ಯಾದ್ಯಂಗತ್ವವು ಕೇಳಿಸುತ್ತಿದೆ. ಕಾಣ್ವಶ್ರುತಿಯಲ್ಲಿ ಪಾಚಕತ್ವಲಿಂಗವು ಕೇಳಿಸುತ್ತಿದೆ. ಇವೆಲ್ಲವೂ ಸಹ ಅಗ್ನಿದೇವತೆಯಲ್ಲೇ ಯುಕ್ತವಾಗುತ್ತವೆ.

तेषां च विष्णौ मुख्यत्वे लोकव्यवहारविरोधात् । सर्वविद्याया वैष्णवत्वापत्त्या इयमग्निविद्या इयमन्यविद्येत्यादिव्यवस्थायोगाच्च वैश्वानरो भूतं देवता वा ।

ಒಂದು ವೇಳೆ ವೈಶ್ವಾನರಾದಿಶಬ್ದಗಳನ್ನು ವಿಷ್ಣುವಿನಲ್ಲಿ ಮುಖ್ಯವಾಗಿ ಪ್ರಯೋಗಿಸುವುದಾದರೆ ಲೋಕವ್ಯವಹಾರದ ವಿರೋಧ ಬರುತ್ತದೆ. ಮತ್ತು ವೇದದಲ್ಲಿರುವ ಸಕಲವಿದ್ಯೆಗಳೂ ವೈಷ್ಣವವಿದ್ಯೆಗಳೆಂದಾಗಿ ಇದು ಅಗ್ನಿವಿದ್ಯೆ, ಇದು ವಾಯುವಿದ್ಯೆ ಎಂಬ ವ್ಯವಸ್ಥೆಯೇ ತಪ್ಪಾಗುತ್ತದೆ. ಆದ್ದರಿಂದ ಜಡವಾದ ಅಗ್ನಿಯಾಗಲೀ, ಅಭಿಮಾನಿದೇವತೆಯಾಗಲೀ ವೈಶ್ವಾನರಶಬ್ದವಾಚ್ಯವಾಗುತ್ತದೆಂದು ತಿಳಿಯಬೇಕು.

न च सिद्धान्तीयलिङ्गसमाख्याप्रकरणानां बाहुल्यात् निरवकाशत्वाच्च अग्निरेवेत्यनिर्णयः इति शङ्क्यम् ।

ಸಿದ್ಧಾಂತಕ್ಕೆ ಪ್ರಾಪಕವಾದ ಲಿಂಗ, ಸಮಾಖ್ಯಾ, ಪ್ರಕರಣಗಳು ಬಹಳವಾಗಿ ಇರುತ್ತವೆ. ಮತ್ತು ನಿರವಕಾಶವಾಗಿವೆ. ಆದ್ದರಿಂದ ಅಗ್ನಿಯೇ ವೈಶ್ವಾನರನಾಗಿದ್ದಾನೆಂದು ಹೇಗೆ ನಿರ್ಣಯಿಸುತ್ತೀರಿ? ಎಂದು ಪ್ರಶ್ನಿಸಬಾರದು.

श्रुतेः स्वभावतो बलवत्त्वात् तावतापि अभिविमानपदेन अभितो विगतं मानं मर्यादा यस्येत्युक्तसर्वगतस्य वैश्वानरस्य अनिर्णये प्राचीनं सर्वगतमितिश्रुतमक्षरमपि विष्णुरेवेति सिद्धान्त्यभिमतनिर्णायायोग इति पूर्व पक्षः ।।

ಶ್ರುತಿಯು ಸ್ವಾಭಾವಿಕವಾಗಿ ಬಲಿಷ್ಠವಾಗಿರುತ್ತದೆ. ಅಂತಹ ಶ್ರುತಿಯಲ್ಲಿ ಕೇಳಿಸುತ್ತಿರುವ 'ಅಭಿವಿಮಾನ' ಪದದಿಂದ ತಿಳಿಯುವ ಸರ್ವಗತತ್ವವು ವೈಶ್ವಾನರನಲ್ಲಿದೆಯೆಂದು ನಿರ್ಣಯಿಸಲಾಗದು. ಆದ್ದರಿಂದ ಹಿಂದಿನ ಅಧಿಕರಣದಲ್ಲಿ ಸಮರ್ಥಿಸಲ್ಪಟ್ಟ ಸರ್ವಗತತ್ವವು ಮತ್ತು ಸರ್ವಗತತ್ವಧರ್ಮವುಳ್ಳ ಆಕ್ಷರನು ವಿಷ್ಣುವೇ ಆಗಿದ್ದಾನೆಂದು ಸಿದ್ಧಾಂತಿಗಳು ನಿರ್ಣಯಿಸಲು ಸಾಧ್ಯವಿಲ್ಲ. ಇಷ್ಟು ಪೂರ್ವಪಕ್ಷ.

सिद्धान्तस्तु ।। आत्मानमितिश्रुताऽत्मशब्दादभिविमानमित्युक्तसर्वगतत्वलिङ्गाद् इदं वैश्वानरो भूत्वेति स्मृतिसमाख्यानात् ''को न आत्मा किं ब्रह्म'' इति विचारपूर्वकमुपक्रम्यैतद्विद्याया अधीतत्वेन ब्रह्मप्रकरणत्वात् शीर्ष्णो द्यौः समवर्ततेति पुरुषसूक्तोक्तस्य द्युरादिजनकशीर्षाद्यवयवकस्यैव मूर्धैव सुतेजा इत्यर्थतोऽत्र विद्यायामुक्त्या पुरुषसूक्तसमाख्यानाच्च निरवकाशसाधकसद्भावाद् वैश्वानरादिशब्दानां अग्न्यादिलिङ्गानां च तथोपासनार्थतया ईशे सावकाशत्वाद्विष्णौ मुख्यानामपि शब्दानां अनन्यगतिकतया शब्दधीनहानादिव्यवहारसिद्ध्यर्थमन्यत्र व्यवहाराविरोधात् ।

ಸಿದ್ಧಾಂತ ಹೀಗಿದೆ - ಆತ್ಮಾನಂ ಎಂಬ ಶ್ರುತಿಯಲ್ಲಿ ಕೇಳಿಸುತ್ತಿರುವ ಆತ್ಮಶಬ್ದದ ಬಲದಿಂದ ಅಭಿಮಾನಂ ಎಂಬ ಶ್ರುತಿಯಲ್ಲಿ ಕೇಳಿಸುತ್ತಿರುವ ಸರ್ವಗತತ್ವಲಿಂಗದಿಂದ ಅಹಂ ವೈಶ್ವಾನರೋ ಭೂತ್ವಾ ಎಂಬ ಸ್ಮೃತಿಸಮಾಖ್ಯಾಪ್ರಮಾಣದಿಂದ 'ಕೋ ನ ಆತ್ಮಾ ಕಿಂ ಬ್ರಹ್ಮ' ಎಂಬುದಾಗಿ ವಿಚಾರಪೂರ್ವಕವಾಗಿ ಉಪಕ್ರಮಮಾಡಿ ಈ ವಿದ್ಯೆಯನ್ನು ಅಧ್ಯಯನ ಮಾಡುತ್ತಿರುವ ಕಾರಣ ವೈಶ್ವಾನರವಿದ್ಯೆಯು ಬ್ರಹ್ಮಪ್ರಕರಣವಾಗಿದೆಯೆಂದು ಸ್ಪಷ್ಟವಾಗಿರುವುದರಿಂದ ಮತ್ತು ಶೀರ್ಷ್ಣೋ ದ್ಯೌಃ ಸಮವರ್ತತ ಎಂಬ ಪುರುಷಸೂಕ್ತದಲ್ಲಿ ಹೇಳಲ್ಪಟ್ಟ ದ್ಯುಲೋಕಾದಿಗಳಿಗೆ ಭಗವಂತನ ಅವಯವಗಳು ಜನಕವಾಗಿವೆ. ಅದನ್ನೇ ಮೂರ್ಧೈವ ಸುತೇಜಾಃ ಎಂಬುದಾಗಿ ವೈಶ್ವಾನರವಿದ್ಯೆಯು ಹೇಳುತ್ತಿದೆ. ಅಂದರೆ ಪುರುಷಸೂಕ್ತದಿಂದ ಭಗವಂತನೇ ಪ್ರತಿಪಾದ್ಯನೆಂಬ ವಿಚಾರವು ಪ್ರಸಿದ್ಧವಾಗಿದೆ. ಅಂತಹ ವ್ಯಕ್ತಿಯನ್ನೇ ವೈಶ್ವಾನರವಿದ್ಯೆಯು ಪ್ರತಿಪಾದಿಸುತ್ತಿರುವುದರಿಂದ ಭಗವಂತನೇ ಇಲ್ಲಿ ಪ್ರಸಕ್ತನಾಗಿದ್ದಾನೆಂದು ತಿಳಿಯುತ್ತದೆ. ಹೀಗೆ ನಿರವಕಾಶಸಾಧಕಪ್ರಮಾಣವು ಇರುತ್ತದೆ. ಹಾಗೂ ವೈಶ್ವಾನರ ಮೊದಲಾದ ಶಬ್ದಗಳನ್ನು ಅಗ್ನಿಮೊದಲಾದ ದೇವತೆಗಳ ಲಿಂಗಗಳನ್ನು ಕೇವಲ ಭಗವಂತನಲ್ಲಿ ಮಾಡುವ ಉಪಾಸನೆಗೋಸ್ಕರ ಶ್ರುತಿ ಹೇಳಿದೆ. ಆದ್ದರಿಂದ ಅಗ್ನ್ಯಾದಿ ಲಿಂಗಗಳು ಹಾಗೂ ಶ್ರುತಿಗಳು ಸಾವಕಾಶವಾಗಿವೆಯೆಂದು ತಿಳಿಯಬೇಕು. ವಸ್ತುತಃ ಸಕಲಶಬ್ದಗಳೂ ಭಗವಂತನನ್ನೇ ಪ್ರತಿಪಾದಿಸುತ್ತವೆ. ಆದರೂ ಬೇರೆ ಗತಿಯಿಲ್ಲದೆ ಉಳಿದ ಪದಾರ್ಥಗಳ ಹಾನಾದಿ ವ್ಯವಹಾರಕ್ಕೋಸ್ಕರ ಬೇರೆ ಕಡೆ ಆಮುಖ್ಯವಾಗಿ ಪ್ರಯೋಗಿಸುತ್ತಾರೆ. ಆದ್ದರಿಂದ ಲೋಕವ್ಯವಹಾರದ ವಿರೋಧಕ್ಕೆ ಅವಕಾಶವಿಲ್ಲ.

अग्न्यादिविद्यादिभिः ब्रह्मोपासनया अग्न्यादावेव विष्णोः व्यक्तत्वानुस्मरणीयत्वप्राप्त्यरूपनिमित्तैः विद्यादिव्यवस्थोपपत्तेः। बाधकाभावाद्वैश्वानरो विष्णुरेवेति प्राचीनोऽपि स एवेति ।। फले तु पूर्वाक्षेपसमाधी ।। ७ ।।

।। इति श्रीराघवेन्द्रयतिकृतायां न्यायमुक्तावल्याम् आद्येऽध्याये द्वितीयः पादः ।।

ಅಗ್ನಿಮೊದಲಾದ ವಿದ್ಯೆಗಳಿಂದ ಬ್ರಹ್ಮನನ್ನು ಉಪಾಸನೆ ಮಾಡಿದಾಗ ಅಂತಹ ದೇವತೆಗಳಲ್ಲೇ ವಿಷ್ಣು ಪ್ರಕಟನಾಗುತ್ತಾನೆ. ಈ ಕಾರಣಕ್ಕಾಗಿ ಅಂತಹ ಅಧಿಷ್ಠಾನಗಳಲ್ಲಿ ಭಗವಂತನನ್ನು ಉಪಾಸನೆಮಾಡಬೇಕೆಂದು ಅಗ್ನಿವಿದ್ಯೆ ವಾಯುವಿದ್ಯೆ ಇತ್ಯಾದಿಯಾದ ವ್ಯವಸ್ಥೆಯನ್ನು ಮಾಡಲಾಗಿದೆ.

ಈ ಎಲ್ಲ ಕಾರಣಗಳಿಂದ ಮತ್ತು ಯಾವುದೇ ಬಾಧಕಗಳಿಲ್ಲದ್ದರಿಂದ ವಿಷ್ಣುವೇ ವೈಶ್ವಾನರನಾಗಿದ್ದಾನೆ. ಆದ್ದರಿಂದ ಹಿಂದಿನ ಅಧಿಕರಣದಲ್ಲಿ ಸರ್ವಗತತ್ವಧರ್ಮಕ್ಕೆ ಆಶ್ರಯನಾದ ಅಕ್ಷರನೂ ಸಹ ವಿಷ್ಣುವೇ ಆಗಿದ್ದಾನೆಂದು ನಿರ್ಣಯವಾಗುತ್ತದೆ.

ಹಿಂದಿನ ಅಧಿಕರಣದ ಪ್ರಮೇಯವನ್ನು ಆಕ್ಷೇಪಿಸುವುದು ಪೂರ್ವಪಕ್ಷದ ಫಲ. ಅದನ್ನು ನಿರಾಕರಿಸುವುದು ಸಿದ್ಧಾಂತದ ಫಲ.

ಇಲ್ಲಿಗೆ ಶ್ರೀರಾಘವೇಂದ್ರಯತಿಗಳಿಂದ ವಿರಚಿತವಾದ ನ್ಯಾಯಮುಕ್ತಾವಳಿಯ ಕನ್ನಡಾನುವಾದದಲ್ಲಿ
ಪ್ರಥಮಾಧ್ಯಾಯದ ದ್ವಿತೀಯಪಾದವು ಮುಗಿಯಿತು.

सूत्रार्थरत्नावलिः

वैश्वानराधिकरणम् (१।२।७)

अत्र पाचकाद्यनेकलिङ्गसमन्वयसिद्ध्यर्थं ब्रह्मणि वैश्वानरनामसमन्वयः क्रियते ।

ॐ।। वैश्वानरः साधारणशब्दविशेषात् ।।ॐ

ननु नायं वैश्वानरो विष्णुः । साधकशून्यत्वात् । सर्वगतत्वलिङ्गस्यान्यत्रप्रसिद्ध वैश्वानरश्रुत्या बाधितत्वात् । नच लिङ्गस्य निरवकाशत्वेन तेन श्रुतिबाधः । श्रुतेरपि निरवकाशत्वात् । वैश्वानरश्रुतेर्निबाधसाधकशून्यत्वेन अग्निविष्णोः साधारण्येन चान्यतर

निश्चायकत्वाभावात् । अतो वैश्वानरो न विष्णुरिति प्राप्ते सूत्रमाह –

ॐ।। वैश्वानरः साधारणशब्दविशेषादिति ।। अस्यार्थः – वैश्वानरः 'यस्त्वेतम्' इत्यादि (छां. ५।१८।१) वाक्यगतवैश्वानरादिशब्दवाच्यो विष्णुरेव नत्वग्निः । कुतः? साधारणशब्दविशेषात् । अग्निविष्ण्वोः साधारणस्य वैश्वानरशब्दस्य 'आत्मानं वैश्वानरम्' इति श्रुतावात्मशब्देन विशेषितत्वादित्यर्थः ।।

एवञ्च साधारणस्यापि वैश्वानरशब्दस्य विष्ण्वैकनिष्ठतया श्रुत्यादिसिद्धेन 'आत्मानं वैश्वानरम्' इत्यात्मशब्दविशेषितत्वाद् विष्णुपरत्वसम्भवात् । प्रसिद्ध्यादेरन्यथोपपन्नत्वेन निर्णयकारणाभावाच्छन्दोविशेषादात्मशब्दाद् वैश्वानरो विष्णुरेवेति सिद्धम् ।

ॐ।। स्मर्यमाणमनुमानं स्यादिति ।।ॐ

ननु नायं वैश्वानरो विष्णुरेवेति घटते । सामानाधिकरण्याविरोधात् । विष्णुत्वनिश्चायकवदग्निनिश्चायकसद्भावात् इति प्राप्ते सूत्रमाह –

ॐ।। स्मर्यमाणमनुमानं स्यादितीति ।। अस्यार्थः – इति स्मर्यमाणम् 'अहं वैश्वानरो भूत्वा' (गी.१५।१४) इत्युक्तं विष्णोर्वैश्वानरत्वम् । अनुमानं वैश्वानरविद्यायाः गीतोक्तभगवत्परत्वस्यानुमापकम् । स्यात् भवेदित्यर्थः ।

एवञ्च गीतास्मृतेर्वैश्वानरविद्यासमानोक्तिरूपत्वादस्याः तत्समाख्यानात् निर्णायकत्वात्वेन वैश्वानरो विष्णुरेवेति सिद्धम् ।

ॐ।। शब्दादिभ्योऽन्तः प्रतिष्ठानान्नेति चेन्न तथा दृष्ट्युपदेशादसम्भवात् पुरुषविधमपि चैनमधीयते ।।ॐ

ननु '' 'वैश्वानरमृत आजातमग्निम्' (ऋ. ६।७।१) इत्यग्निशब्दस्य 'वैश्वानरे तद्धुतं भवति । हृदयं गार्हपत्य' (छां.५।१८।२) इत्यग्निलिङ्गस्य 'येनेदमन्नं पच्यते' (बृ.७।९।१) इत्यादिना पाचकत्वेनान्तःप्रतिष्ठानस्य च श्रवणात् । एतेषां विष्णावनवकाशात्'' इत्यादिना वैश्वानरस्य विष्णुत्वमाक्षिप्य समादधत् सूत्रमाह –

ॐ।। शब्दादिभ्योऽन्तः प्रतिष्ठानान्नेति चेन्न तथा दृष्ट्युपदेशादसम्भवात् पुरुषविधमपि चैनमधीयत इति ।। अस्यार्थः – युक्तिसमुच्चये चशब्दः ।

शब्दादिभ्यः अग्निशब्द होमाधिकरणत्वलिङ्गादित्यर्थः । अन्तःप्रतिष्ठानात् पाचकत्वेन शारीरान्तरावस्थानाच्च । वैश्वानरो न विष्णुः किन्तु अग्निरेवेति चेन्न । कुतः? तथा दृष्ट्युपदेशात् । अग्न्यादिनामलिङ्गकर्मवत्त्वेन दृष्ट्युपदेशात् उपासनोपदेशादित्यर्थः । तथा च अग्न्यादिश्रुतिलिङ्गानां विष्णौ सावकाशत्वान्न तद्विरोध इति भावः । किञ्च अत्रोक्तात्मत्वब्रह्मत्वादीनां अग्न्यादावसम्भवाच्च वैश्वानरो विष्णुरेव । अपि च यतः छन्दोगाः एनं वैश्वानरम् । पुरुषविधं पुरुषसूक्तप्रतिपाद्यनारायणसमानगुणकमेव । अधीयते अभिदधति । अतोऽपि विष्णुरेवेत्यर्थः । चशब्देन पुरुषसूक्तस्य विष्णुपरत्वं बहुप्रमाणसिद्धमिति सूचयति ।

एवञ्च 'सर्वनामा सर्वकर्मा' इत्यादिना महोपनिषदि तत्तन्नामलिङ्गत्वेन दृष्ट्युपदेशात् । 'को न आत्मा किं ब्रह्म' इति (छां.५।११।१) विष्णोरेवारम्भात् । 'चन्द्रमा मनसो जातः; (तै.आ.३।१२) इत्यादिना, 'यः पुरुषाख्यो विष्णुरभिहितो मूर्धैव सुतेजा' (छां.५।१८।२) इत्यादिना वैश्वानरस्य तद्विधानत्वाभिधानाच्च । ततश्च वैश्वानरो विष्णुरेवेति सिद्धम् ।

ॐ ॥ अत एव न देवता भूतं च ॥ ॐ

ननु 'वैश्वानरशब्दस्य तेजसि भूतेऽग्निदेवतायां च प्रसिद्धत्वादत्राप्यसौ तत्परः स्यात्' इति प्राप्ते तन्निरासाय सूत्रमुपन्यस्यति –

ॐ ॥ अत एव न देवता भूतं चेति ॥ अस्यार्थः – साक्षात् मुख्यवृत्त्या । अपि ब्रह्मणोऽग्न्यादिशब्दवाच्यत्वेऽपि । अविरोधम् अज्ञानादिनिमित्तान्तरेण अग्न्यादौ तत्तच्छब्दविरोधाभावम् । जैमिनिराचार्यो वक्तीत्यर्थः ।

एवञ्चाग्न्यादिशब्दानां ब्रह्मवदग्र्यवाचित्वेपि अग्न्यादिज्ञानार्थमभिज्ञैरन्यत्र व्यवहारात् । अनभिज्ञैस्तु परममुख्यार्थभगवदज्ञानादेव मुख्यार्थेऽग्न्यादावेव प्रयोगेण प्रसिद्धचुपपत्तेरग्न्यादिशब्दा विष्णुवाचकाः । नच जैमिन्यादिमतानां व्यासमतेन परस्परं विरोधः । व्यासचित्तस्थितं मतापरपर्यायं ज्ञानाख्यमहाकाशमपेक्ष्य गृहाद्यच्छिन्नाकाशत्वपरिमितविषयाणि कानिचिदेतान्यूरीकृत्य जैमिन्याद्या व्यवहरन्ति । 'व्यासचित्तस्थिताकाशात्' इति स्मृतेः । अतस्तेषां मतानामविरोध इति सिद्धम् ।

ॐ॥ अभिव्यक्तेरित्याश्मरथ्यः ॥ॐ (२९)

ननु "लौकिकप्रसिद्धेरज्ञानादिमूलत्वेनान्यथोपपत्तावपि वैदिकाग्र्यादिसूक्त- मन्त्रा दिप्रसिद्धचन्यथाऽनुपपत्त्याऽग्र्यादीनां सूक्तादिगताग्र्यादिशब्दवाच्यत्वं स्यात् । तत्राज्ञान ादिमूलकत्वकल्पनाऽयोगेनान्यथोपपत्त्यभावात् । नापि व्यवहारार्थत्वेनान्यथोपपत्तिः । अनादित्वात्" इति प्राप्ते, सूत्रितम् –

ॐ॥ अभिव्यक्तेरित्याश्मरथ्य इति ॥ अस्यार्थः – अभिव्यक्तेः अग्र्यादिषु ब्रह्मोपास्तौ कृतायां तेषु ब्रह्मणोऽभिव्यक्तेः । तन्निमित्तोऽग्र्यादिसूक्तनियम इति आश्मरथ्याचार्यो मन्यत इत्यर्थः ।

एवञ्च अग्र्यादिसूक्तैरुपासकानामग्र्यादौ च भगवभिव्यक्तया सूक्तनियमसम्भवादग्र्यादि दशब्दवाच्यो विष्णुरेवेति सिद्धम् । ततश्चाश्मरथ्याचार्यमतेनाविरोध इति सिद्धम् ॥

(३०) ॐ ॥ अनुस्मृतेर्बादरिः ॥ ॐ

प्रकारान्तरेण सूक्तादिनियमस्यान्यथोपपत्तिं कथयत् सूत्रमुपन्यस्यति –

ॐ ॥ अनुस्मृतेर्बादरिरिति ॥ अस्यार्थः – अनुस्मृतेः तत्तसूक्तायुपासकैरग्र्यादिष वेव ब्रह्मणोऽनुस्मृतेः अनुसन्धानाद्धेतोः । अग्र्यादिसूक्तव्यवस्थेति बादरिर्वक्तीत्यर्थः ।

एवञ्च अग्र्यादिसूक्तैरुपासकानामग्र्यादौ विष्णोः स्मर्तव्यत्वात् सूक्तनियमसम्भवाद् अग्र्यादिशब्दवाच्यो विष्णुरेवेति सिद्धम् । तथा च बदरात्मजस्य शुकाचार्यस्य मतस्याविरोध इति स्थितम् ।

(३१) ॐ ॥ सम्पत्तेरिति जैमिनिस्तथा हि दर्शयति ॥ ॐ

रीत्यन्तरेण सूक्तनियमस्यान्यथोपपत्तिं प्रतिपादयत् सूत्रं व्याचष्टे –

ॐ॥ सम्पत्तेरिति जैमिनिस्तथा हि दर्शयतीति ॥ अस्यार्थः – हि यस्मात् । 'तं तथा' इति हि प्रसिद्धाश्रुतिः तथा दर्शयति यथा जैमिनिमतं तथा प्रतिपादयति । तस्मात् जैमिनिः स्वोक्त्यनुकूलश्रुत्यनुसारेण सम्पत्तेः अग्र्यादिसूक्तोपासकानामग्र्यादि- प्राप्तिहेतोः । तद्विवक्षया सूक्तादिनियम इति आहेत्यर्थः ।

ಎವಞ್ಚ ಅಗ್ನಾದಿಸೂಕ್ತಾದಿಷು ಮುಖ್ಯತಃ ಪರಬ್ರಹ್ಮಣ ಏವ ಪ್ರತಿಪಾದ್ಯತ್ವೇऽಪಿ ಸೂಕ್ತಾದಿನಿಯಮೋ ಯುಜ್ಯತೇ । ಭಗವದುಪಾಸಕಾನಾಮಗ್ನಾದಿಪ್ರಾಪ್ತಿರ್ಭವತಿ । ಅತೋ ಲೌಕಿಕವ್ಯವಹಾರಾವಿರೋಧ ಇತಿ ಜೈಮಿನಿರ್ಮನ್ಯತೇ । ಅತಃ ಸೂಕ್ತನಿಯಮोऽಭ್ಯುಪಗನ್ತವ್ಯ ಇತಿ ಸಿದ್ಧಮ್ ।

(೩೨) ॐ॥ ಆಮನನ್ತಿ ಚೈನಮಸ್ಮಿನ್ ॥ॐ

ನನ್ವಗ್ನಾದಿಸೂಕ್ತಾದಿಭಿಃ ಬ್ರಹ್ಮೋಪಾಸಕಸ್ಯಾಗ್ನಾದಿಪ್ರಾಪ್ತಿರ್ಭವತೀತಿ ವಕ್ತುಂ ನ ಯುಕ್ತಮ್ । 'ಮದ್ಭಕ್ತಾ ಯಾನ್ತಿ' (ಗೀ.೭।೨೩) ಇತ್ಯಾದೇರನ್ಯೋಪಾಸಕಸ್ಯಾನ್ಯಪ್ರಾಪ್ತ್ಯಯೋಗಾತ್ । ಶ್ರುತೇತಿ ಸೂತ್ರೇ ತದನಭ್ಯುಪಗಮಾಚ್ಚೇತಿ ಪ್ರಾಪ್ತೇ ಸೂತ್ರಮಾಹ –

ॐ॥ ಆಮನನ್ತಿ ಚೈನಮಸ್ಮಿನ್ನಿತಿ ॥ ಅಸ್ಯಾರ್ಥಃ – ಚಃ ಶಙ್ಕಾನಿವರ್ತಕಃ । ಯಸ್ಮಾತ್ ಏನಂ ವಿಷ್ಣುಮ್ । ಅಗ್ನಾದೌ ಆಮನನ್ತಿ ತತ್ಸ್ಥತಯಾ 'ಯोऽಗ್ನೌ ತಿಷ್ಠನ್' (ಬೃ.೫।೭।೯) ಇತ್ಯಾದ್ಯಾಃ ಶ್ರುತಯಃ ಪ್ರತಿಪಾದಯನ್ತಿ । ತಸ್ಮಾತ್ ಕಥಮಗ್ನಾದಿಷು ವಿಷ್ಣೂಪಾಸ್ತ್ಯाऽಗ್ನಾದಿ ಪ್ರಾಪ್ತಿರ್ಭವತೀತಿ ಶಙ್ಕಾ ನಿವೃತ್ತಾ । ಕುತಃ? ಅಗ್ನಾದಿಪದೇನ ತತ್ಸ್ಥಭಗವತ್ಪ್ರಾಪ್ತೇರೇವಾಭಿಪ್ರೇತತ್ವಾದಿತ್ಯರ್ಥಃ ।

ಎವಞ್ಚ ತತ್ತತ್ಸೂಕ್ತೋಪಾಸಕಾನಾಮಗ್ನಾದಿಪದೇನ ತದನ್ತರ್ಗತವಿಷ್ಣುಪ್ರಾಪ್ತೇರ್ವಿವಕ್ಷಿತತ್ವಾತ್ । ವಿಷ್ಣೂಪಾಸಕಸ್ಯ ಅಗ್ನಾದಿಪ್ರಾಪ್ತ್ಯುಕ್ತೇರಯೋಗಾತ್ । ನಚ ವಿಷ್ಣೋರಗ್ನಾದ್ಯನ್ತರ್ಗತತ್ವಾಸಿದ್ಧಿಃ । 'ಯोऽಗ್ನೌ ತಿಷ್ಠನ್' ಇತ್ಯಾದಿಶ್ರುತೇಃ । ಅತोऽಗ್ನಾದಿಶಬ್ದವಾಚ್ಯो ವಿಷ್ಣುರೇವೇತಿ ಸಿದ್ಧಮ್ ॥

॥ ಇತಿ ಸೂತ್ರಾರ್ಥರತ್ನಾವಳ್ಯಾಂ ವೈಶ್ವಾನರಾಧಿಕರಣಮ್ ಪ್ರಥಮಾಧ್ಯಾಯಸ್ಯ ದ್ವಿತೀಯಃ ಪಾದಃ॥

॥ ಪರಿಪೂರ್ಣಚಂದ್ರಿಕೆಯಲ್ಲಿ ವೈಶ್ವಾನರಾಧಿಕರಣವು ಮುಗಿಯಿತು ॥

॥ ಶ್ರೀಮದ್ವೇಶಾರ್ಪಣಮಸ್ತು ॥

ದ್ಯುಭ್ವಾದ್ಯಧಿಕರಣ

(೧-೩-೧)

ಭಾಗ -೧

ಬ್ರಹ್ಮಸೂತ್ರ, ಸೂತ್ರದೀಪಿಕಾ, ಬ್ರಹ್ಮಸೂತ್ರಭಾಷ್ಯ, ಭಾಷ್ಯದೀಪಿಕಾ,
ಸತ್ತರ್ಕದೀಪಾವಳಿ, ತತ್ವಪ್ರಕಾಶಿಕಾ,
ಭಾವದೀಪ, ವಾಕ್ಯಾರ್ಥಮಂಜರೀ

॥ ಶ್ರೀಗುರುಭ್ಯೋ ನಮಃ ॥

ದೇವದೇವೋತ್ತಮ ದೇವತಾಸಾರ್ವಭೌಮ
ಅಖಿಲಾಂಡಕೋಟಿಬ್ರಹ್ಮಾಂಡನಾಯಕ, ಚತುರ್ದಶಲೋಕಗುರುಗಳಾದ
ಶ್ರೀವೇದವ್ಯಾಸದೇವರಿಂದ ಅನುಗ್ರಹಿಸಲ್ಪಟ್ಟ

ಬ್ರಹ್ಮಮೀಮಾಂಸಾಶಾಸ್ತ್ರ

ದ್ಯುಭ್ವಾದ್ಯಧಿಕರಣ

ಸ್ವರ್ಗಾದಿ ಲೋಕಗಳಿಗೆ ಮಹಾವಿಷ್ಣುವೇ ಆಧಾರ

॥ ಅಥ ತೃತೀಯಃ ಪಾದಃ ॥

॥ ಅಥ ದ್ಯುಭ್ವಾದಧಿಕರಣಮ್ ॥

ಸೂ – ॐ ॥ ದ್ಯುಭ್ವಾದ್ಯಾಯತನಂ ಸ್ವಶಬ್ದಾತ್ ॥ ॐ ॥ ೧ ॥

'ಯಸ್ಮಿನ್ ದ್ಯೌಃ' ಎಂಬ ಮಂತ್ರದಲ್ಲಿ ಸ್ವರ್ಗ, ಭೂಮಿ ಮೊದಲಾದವುಗಳಿಗೆ ಆಶ್ರಯನಾಗಿ ಹೇಳಲ್ಪಟ್ಟವನು ವಿಷ್ಣುವೇ ಆಗಿದ್ದಾನೆ. ವಿಷ್ಣುವಿಗೆ ಮಾತ್ರ ಸಂಬಂಧಿಸಿದ ಆತ್ಮಶಬ್ದವು ಈ ವಿಷಯದಲ್ಲಿ ಆಧಾರವಾಗಿದೆ.

ಶ್ರೀಜಗನ್ನಾಥಯತಿಗಳಿಂದ ರಚಿಸಲ್ಪಟ್ಟ

ಸೂತ್ರದೀಪಿಕಾ

ಸೂತ್ರದೀಪಿಕಾ – ದ್ಯುಭ್ವಾದ್ಯಾಯತನಂ 'यस्मिन्' इति वाक्योक्तस्वर्गभूम्यादिसर्वाश्रयो विष्णुरेव न त्वन्यः । कुतः? स्वशब्दात् । स्वेतिशब्दः स्वशब्दः स्वशब्दगृहीत-ब्रह्मवाचकात्मशब्दादिभ्यः ॥

ಅರ್ಥ --ದ್ಯುಭ್ವಾದ್ಯಾಯತನಂ = 'ಯಸ್ಮಿನ್' ಎಂಬ ಮಾಂಡೂಕ್ಯೋಪನಿಷತ್ತಿನವಾಕ್ಯದಲ್ಲಿ ಸ್ವರ್ಗ ಭೂಮಿ ಮೊದಲಾದುಗಳಿಗೆ ಆಶ್ರಯನಾಗಿ ಹೇಳಲ್ಪಟ್ಟರುವವನು ವಿಷ್ಣುವೇ ಆಗಿದ್ದಾನೆ ಹೊರತು ಬೇರೆಯವರಲ್ಲ. ಏಕೆಂದರೆ ಸ್ವಶಬ್ದಾತ್ = ಸ್ವ ಎಂಬ ಶಬ್ದವೇ ಸ್ವಶಬ್ದ ಎನಿಸುತ್ತದೆ. ವಿಷ್ಣುವಿಗೆ ಮಾತ್ರ ವಾಚಕವಾದ ಆತ್ಮಶಬ್ದದ ಆಧಾರದಿಂದ.

श्रीमदानन्दतीर्थभगवत्पादाचार्यविरचित-

ब्रह्मसूत्रभाष्यम्

भाष्यम् – तत्र चान्यत्र च प्रसिद्धानां शब्दानां विष्णौ समन्वयं प्रायेणास्मिन् पादे दर्शयति ।

ಅನುವಾದ - ಭಗವಂತನಲ್ಲಿ ಮತ್ತು ಬೇರೆಯವರಲ್ಲಿ ಪ್ರಸಿದ್ಧವಾಗಿರುವ ಶಬ್ದಗಳ ಸಮನ್ವಯವನ್ನು ವಿಷ್ಣುವಿನಲ್ಲಿ ಪರಮಮುಖ್ಯವೃತ್ತಿಯಿಂದ ಮಾಡಿ ತೋರಿಸುತ್ತಿದ್ದಾರೆ. ಮತ್ತು ಆದಕ್ಕೆ ಸಂಬಂಧಪಟ್ಟ ಕೆಲವುಬೇರೆ ವಿಷಯಗಳ ಪ್ರಸಕ್ತಿಯು ಈ ಪಾದದಲ್ಲಿ ಇರುತ್ತದೆ.

ಪ್ರತಿಪದಾರ್ಥ- ಉಭಯತ್ರಪ್ರಸಿದ್ಧವಾದ ನಾಮಲಿಂಗಾತ್ಮಕಶಬ್ದಗಳ ಸಮನ್ವಯ ಮಾಡುವುದಕ್ಕಾಗಿ ಮೂರನೆಯ ಪಾದವು ಹೊರಟದೆ. ಈ ವಿಷಯವನ್ನು ಭಾಷ್ಯಕಾರರು ಹೇಳುತ್ತಿದ್ದಾರೆ.

ತತ್ರ = ಭಗವಂತನಲ್ಲಿ, ಚ ಮತ್ತು ಅನ್ಯತ್ರ = ಬೇರೆಯವರಲ್ಲಿ, ಪ್ರಸಿದ್ಧಾನಾಂ ಶ್ರುತಿಯಿಂದ ಹಾಗೂ ವ್ಯವಹಾರದಿಂದ ಪ್ರಸಿದ್ಧವಾದ, ಶಬ್ದಾನಾಂ= ನಾಮಾತ್ಮಕಶಬ್ದಗಳ ಹಾಗೂ ಲಿಂಗಾತ್ಮಕಶಬ್ದಗಳ, ವಿಷ್ಣೌ = ನಾರಾಯಣನಲ್ಲಿ, ಸಮನ್ವಯಂ = ಪರಮಮುಖ್ಯವೃತ್ತಿಯಿಂದ ಸಮನ್ವಯವನ್ನು, ಅಸ್ಮಿನ್ = ಈ, ಪಾದೇ = ಮೂರನೆಯ ಪಾದದಲ್ಲಿ, ಪ್ರಾಯೇಣ = ಬಹುತೇಕವಾಗಿ, ದರ್ಶಯತಿ = ತೋರಿಸುತ್ತಿದ್ದಾರೆ. (ದೇವತಾಧಿಕರಣ ಹಾಗೂ ಅವಶೋದ್ಯಾಧಿಕರಣಗಳಲ್ಲಿ ಸಮನ್ವಯ ಮಾಡದ ಕಾರಣ ಪ್ರಾಯೇಣ ಎಂದು ಹೇಳಿದ್ದಾರೆ.)[೧]

भाष्यम् – विष्णोः परविद्याविषयत्वमुक्तम् । तत्र 'यस्मिन् द्यौः पृथिवी चान्तरिक्षमोतं मनः सह प्राणैश्च सर्वैः । तमेवैकं जानथ आत्मानम्'

(೧) ಭಾಷ್ಯದೀಪಿಕಾ – एतत्पादप्रतिपाद्यं दर्शयति – तत्रेति ।। अन्योन्यसमुच्चये चशब्दौ । देवताधिकरणापशूद्राधिकरणयोः समन्वयाकरणात् तद्व्यावृत्त्यर्थं – 'प्रायेण' प्राचुर्येणेति । तथा च प्रायेणास्मिन् तृतीये पादे 'तत्र' हरौ तस्मात् 'अन्यत्र' रुद्रप्रकृत्यादौ च श्रुतिलिङ्गादिभिः प्रसिद्धानां नामलिङ्गात्मकशब्दानां विष्णौ 'समन्वयं' परममुख्यया वृत्त्या तात्पर्यप्रबलहेतुभिः 'दर्शयति' प्रतिपादयति सूत्रकृदित्यर्थः ।

ದ್ಯುಭ್ವಾದ್ಯಧಿಕರಣ (೧-೩-೧)

(ಮುಂ. ೨-೨-೯.)ಇತ್ಯತ್ರ । 'ಪ್ರಾಣಾನಾಂ ಗ್ರನ್ಥಿರಸಿ ರುದ್ರೋ ಮಾऽऽವಿಶಾನ್ತಕಃ' (ಮಹಾನಾ-೩೯.)'ಪ್ರಾಣೇಶ್ವರಃ ಕೃತ್ತಿವಾಸಾಃ ಪಿನಾಕೀ' (ಘೃತಸೂಕ್ತಮ್) ಇತ್ಯಾದಿನಾ ರುದ್ರಸ್ಯ ಪ್ರಾಣಾಧಾರತ್ವಪ್ರತೀತೇಃ 'ಸ ಏಷೋऽನ್ತಶ್ಚರತೇ ಬಹುಧಾ ಜಾಯಮಾನಃ' (ಮುಂ.೨-೨-೬.)ಇತಿ ಜೀವಲಿಙ್ಗಾಚ್ಚ ತಯೋಃ ಪ್ರಾಪ್ತಿರಿತಿ ॥

ಆದೃಶ್ಯತ್ವಾದ್ಯಧಿಕರಣದಲ್ಲಿ ಪರವಿದ್ಯೆಗೆ ವಿಷಯನಾದವನು ಎಷ್ಟು ಎಂದು ಹೇಳಲಾಯಿತು. ಆದರೆ ಆ ಪರವಿದ್ಯಾವಿಷಯತ್ವವು ಆಥರ್ವಣಶ್ರುತಿಯಲ್ಲಿ ''ಯಸ್ಮಿನ್ ದ್ಯೌಃ'' ಇತ್ಯಾದಿಯಾಗಿ ಯಾವ ವ್ಯಕ್ತಿಯು ದ್ಯುಲೋಕ, ಭೂಲೋಕ ಮೊದಲಾದವುಗಳಿಗೆ ಆಶ್ರಯನಾಗಿದ್ದಾನೋ ಅಂತಹವನಲ್ಲಿ ಹೇಳಲ್ಪಟ್ಟಿದೆ. ಅಲ್ಲಿ ಹೇಳಲ್ಪಟ್ಟ ದ್ಯುಭ್ವಾದ್ಯಾಯತನತ್ವ ಎಂಬ ಲಿಂಗವು ರುದ್ರದೇವರಲ್ಲಿ ಅಥವಾ ಜೀವರಲ್ಲಿ ಹೇಳಬಹುದು. ಏಕೆಂದರೆ ಸ್ವರ್ಗಲೋಕ ಭೂಲೋಕ ಇವುಗಳಿಗೆ ಆಶ್ರಯನಾದವನು ಇಂದ್ರಿಯಗಳಿಗೆ ಆಧಾರನಾಗಿದ್ದಾನೆಂದು 'ಮನಃ ಸಹ ಪ್ರಾಣೈಶ್ಚ ಸರ್ವೈಃ ' ಎಂಬ ಶ್ರುತಿಯಲ್ಲಿ ಹೇಳಲಾಗಿದೆ. 'ಪ್ರಾಣಾನಾಂ ಗ್ರಂಥಿರಸಿ ರುದ್ರೋ ಮಾವಿಶಾನ್ತಕಃ' ಎಂಬ ಶ್ರುತಿಯಲ್ಲಿ ಪ್ರಾಣ ಮೊದಲಾದ ಇಂದ್ರಿಯಗಳಿಗೆ ಆಶ್ರಯನಾದವನು ರುದ್ರ ಎಂದು ತಿಳಿಯುತ್ತದೆ. ಮತ್ತು ಪ್ರಾಣೇಶ್ವರನೆಂದರೆ ರುದ್ರನೇ ಆಗಿದ್ದಾನೆಂದು 'ಪ್ರಾಣೇಶ್ವರಃ ಕೃತ್ತಿವಾಸಾ ಪಿನಾಕೀ' ಎಂಬ ಘೃತಸೂಕ್ತವು ಹೇಳುತ್ತಿದೆ.

ಅಥವಾ ದ್ಯುಭ್ವಾದಿಲೋಕಗಳಿಗೆ ಆಶ್ರಯನಾದವನು ಜೀವನೂ ಸಹ ಆಗಬಹುದು. 'ಸ 'ಏಷೋऽಂತಶ್ಚರತೇ ಬಹುಧಾ ಜಾಯಮಾನಃ' ಎಂಬ ಈ ಶ್ರುತಿಯು ಜೀವನು ಅನೇಕ ಶರೀರಗಳಲ್ಲಿ ಹುಟ್ಟಿ, ಅದರೊಳಗಿರುತ್ತಾನೆಂಬ ಜೀವನ ಧರ್ಮವನ್ನು ಹೇಳಿದೆ. ಆದ್ದರಿಂದ ರುದ್ರ ಅಥವಾ ಜೀವರುಗಳೇ ದ್ಯುಭ್ವಾದ್ಯಾಯತನತ್ವ ಎಂಬ ಲಿಂಗಕ್ಕೆ ಆಶ್ರಯರಾಗಿದ್ದಾರೆಂದು ಪೂರ್ವಪಕ್ಷ ಪ್ರಾಪ್ತವಾಗುತ್ತದೆ.

ಪ್ರತಿಪದಾರ್ಥ -- ಮೊದಲನೆಯ ಈ ಅಧಿಕರಣದಲ್ಲಿ ದ್ಯುಭ್ವಾದ್ಯಾಯತನತ್ವ (ಸ್ವರ್ಗಲೋಕ, ಭೂಲೋಕ ಮೊದಲಾದವುಗಳಿಗೆ ಆಶ್ರಯನಾಗಿರುವಿಕೆ) ಎಂಬ ಲಿಂಗಾತ್ಕಶಬ್ದವನ್ನು ಪರಮಾತ್ಮನಲ್ಲಿ ಸಮನ್ವಯ ಮಾಡಲಾಗಿದೆ. ಆದಕ್ಕಾಗಿ ಮೊದಲು ರುದ್ರ, ಅಥವಾ ಜೀವಸಾಮಾನ್ಯರೇ ದ್ಯುಭ್ವಾದ್ಯಾಯತನರಾಗಿದ್ದಾರೆಂಬ ಪೂರ್ವಪಕ್ಷವನ್ನು ತೋರಿಸುತ್ತಿದ್ದಾರೆ.

ವಿಷ್ಣೋಃ = ನಾರಾಯಣನಿಗೆ, ಪರವಿದ್ಯಾವಿಷಯತ್ವಂ = ಪರವಿದ್ಯೆಗೆ ವಿಷಯತ್ವವನ್ನು ಉಕ್ತಮ್ = ಹಿಂದಿನ ಆದೃಶ್ಯತ್ವಾಧಿಕರಣದಲ್ಲಿ ಹೇಳಲಾಯಿತು, ತತ್ರ = ಈ ಪರವಿದ್ಯಾವಿಷಯತ್ವವಿಷಯದಲ್ಲಿ ಆಥರ್ವಣೋಪನಿಷತ್ತಿನಲ್ಲಿ, ಯಸ್ಮಿನ್ = ಯಾವನಲ್ಲಿ ದ್ಯುಲೋಕವೆನಿಸಿದ ಸ್ವರ್ಗವು, ಚ = ಮತ್ತು, ಪೃಥಿವೀ = ಭೂಲೋಕವು, ಅಂತರಿಕ್ಷಂ = ಆಕಾಶವು ಓತಂ ಆಶ್ರಯಿಸಿಕೊಂಡಿವೆಯೋ ಮತ್ತು, ಸರ್ವೈಃ = ಎಲ್ಲಾ, ಪ್ರಾಣೈಃ = ಪ್ರಾಣ ಅಪಾನ ಮೊದಲಾದ ಪ್ರಾಣಗಳಿಂದ ಸಹ ಕೂಡಿರುವ, ಮನಃ = ಮನಸ್ಸು, ಓತಂ = ಯಾವ ವ್ಯಕ್ತಿಯನ್ನು ಆಶ್ರಯಿಸಿವೆಯೋ, ತಮೇವ = ಅವನನ್ನೇ,

ಏಕಂ = ಮುಖ್ಯವಾಗಿ, ಆತ್ಮಾನಃ = ಆತ್ಮಶಬ್ದವಾಚ್ಯನನ್ನಾಗಿ, ಜಾನಥ = ತಿಳಿಯಿರಿ. ಇತ್ಯತ್ರ = ಹೀಗೆ ಈ ಶ್ರುತಿಯಲ್ಲಿ, ಅಂತಹ ವ್ಯಕ್ತಿಯೇ ಪರವಿದ್ಯೆಗೆ ವಿಷಯನಾಗಿದ್ದಾನೆಂದು ಹೇಳಲಾಗಿದೆ.

ಮತ್ತು ಪ್ರಾಣಾನಾಂ = ಪ್ರಾಣಗಳಿಗೆ, ಗ್ರಂಥಿಃ = ನಿಯಾಮಕನು, ಅಸಿ = ಆಗಿರುವಿ. ಅಂತಕಃ = ಸಂಹಾರಕನೂ ಸಹ ನೀನೇ ಆಗಿರುವಿ. ಅಂತಹ ರುದ್ರನೇ ಮಾವಿಶ = ನನ್ನನ್ನು ಪ್ರವೇಶಿಸಬೇಡ. ಪ್ರಾಣೇಶ್ವರಃ = ಪ್ರಾಣಗಳಿಗೆ ಒಡೆಯನಾದ, ಕೃತ್ತಿವಾಸಾಃ = ಗಜಚರ್ಮಧಾರಿಯಾದ, ಪಿನಾಕೀ = ಪಿನಾಕವೆಂಬ ಧನುಸ್ಸನ್ನು ಧರಿಸಿದವನು, ಇತ್ಯಾದಿನಾ = ಇವೇ ಮೊದಲಾದ ವಾಕ್ಯಗಳಿಂದ, ಪ್ರಾಣಾಧಾರತ್ವಸ್ಯ = ಪ್ರಾಣಗಳಿಗೆ ಆಶ್ರಯವಾಗಿರುವಿಕೆ ಎಂಬ ಧರ್ಮವು, ರುದ್ರಸ್ಯ = ರುದ್ರದೇವರಿಗೆ, ಪ್ರತೀತೇಃ = ತೋರುತ್ತದೆ. ಆದಕಾರಣ;

ಮತ್ತು ಸ ಏಷಃ = ಇವನೇ, ಅಂತಃ = ಸಕಲಪ್ರಾಣಗಳ ಹೃದಯದಲ್ಲಿ, ಚರತೇ = ಸಂಚರಿಸುತ್ತಾನೆ. ಬಹುಧಾ = ಅನೇಕ ರೂಪಗಳನ್ನು ಹೊಂದಿ, ಜಾಯಮಾನಃ = ಹುಟ್ಟುತ್ತಾನೆ. ಇತಿ = ಹೀಗೆ, ಜೀವಲಿಂಗಾಚ್ಚ = ಜೀವನ ಲಿಂಗಗಳೂ ಸಹ ಇರುವುದರಿಂದ, ತಯೋಃ = ರುದ್ರ, ಹಾಗೂ ಜೀವರಿಗೆ, ಪ್ರಾಪ್ತಿಃ = ದ್ಯುಭ್ವಾದ್ಯಾಯತನತ್ವವೆಂಬ ಲಿಂಗವು ಪ್ರಾಪ್ತವಾಗುತ್ತದೆ. ಇತಿ = ಇಷ್ಟು ಪೂರ್ವಪಕ್ಷ.[೧]

---

(೧) ಭಾಷ್ಯದೀಪಿಕಾ – ಶ್ರುತ್ಯಾದಿಸಙ್ಗತಿಂ ವಿಷಯವಾಕ್ಯಮುದಾಹೃತ್ಯ ವಿಷಯಸಂಶಯಸಯುಕ್ತಿಕಪೂರ್ವಪಕ್ಷಾನ್ ದರ್ಶಯತಿ – ವಿಷ್ಣೋರಿತಿ ।। ಉಕ್ತಮಿತ್ಯಾವರ್ತತೇ । ತತ್ರೇತ್ಯವ್ಯಯಂ ತದಿತ್ಯರ್ಥೇऽಪಿ । ಅತ್ರೇತ್ಯಪ್ಯಾವರ್ತತೇ । ಆದಿಶಬ್ದ ಉಭಯಾನ್ವಯೀ । ರುದ್ರಸ್ಯೇತಿ ಶೇಷೇ ಷಷ್ಠೀ । ತಯೋರಿತ್ಯೇತತ್ ಪ್ರಧಾನವಾಚ್ಚೋರಪ್ಯುಪಲಕ್ಷಕಮ್ । ತಥಾ ಚಾದೃಶ್ಯತ್ವಾದಿಗುಣಕಾಕ್ಷರಸ್ಯ ವಿಷ್ಣೋಃ ಪರವಿದ್ಯಾವಿಷಯತ್ವಂ ಯತ್ರೋಕ್ತಂ ತತ್ರೈವಾಥರ್ವಣೇ ತತ್ಪರವಿದ್ಯಾವಿಷಯತ್ವಂ

'ಯಸ್ಮಿನ್ ದ್ಯೌಃ ಪೃಥಿವೀ ಚಾನ್ತರಿಕ್ಷಮೋತಂ ಮನಃ ಸಹ ಪ್ರಾಣೈಶ್ಚ ಸರ್ವೈಃ ।
ತಮೇವೈಕಂ ಜಾನಥ ಆತ್ಮಾನಮನ್ಯಾ ವಾಚೋ ವಿಮುಞ್ಚಥ ।।'(ಮುಂ.೨–೨–೫)

'ಅಮೃತಸ್ಯೈಷ ಸೇತುಃ' ಇತ್ಯತ್ರ ಇತಿ ವಾಕ್ಯೇ ತತ್ರ ದ್ಯುಭ್ವಾದ್ಯಾಶ್ರಯೇ ಉಕ್ತಮಿತ್ಯೇಕಾ ಯೋಜನಾ । ತತ್ರ ದ್ಯುಭ್ವಾದ್ಯಾಯತನತ್ವೇ 'ತಯೋಃ' ರುದ್ರಜೀವಯೋಃ ಪ್ರಾಪ್ತಿಃ । ಕುತಃ? ಅತ್ರ ವಾಕ್ಯೇ ದ್ಯುಭ್ವಾದ್ಯಾಯತನೇ ಪ್ರಾಣಾಧಾರತ್ವಪ್ರತೀತೇಃ ಶ್ರವಣಾತ್ । ತಥಾ 'ಸ ಏಷಃ' ಇತಿ ಜೀವಲಿಙ್ಗಶ್ರವಣಾಚ್ಚ । ನ ಚ 'ಪ್ರಾಣಾಧಾರತ್ವಶ್ರವಣೇऽಪಿ ಕುತೋऽತ್ರ ರುದ್ರಸ್ಯ ಪ್ರಾಪ್ತಿರಿತಿ ವಾಚ್ಯಮ್ । 'ಪ್ರಾಣಾನಾಂ ಗ್ರನ್ಥಿರಸಿ ರುದ್ರೋ ಮಾವಿಶಾನ್ತಕಸ್ತೇನಾನ್ನೇನಾಪ್ಯಾಯಸ್ವ' (ಮಹಾನಾ. ೩೯.) ಇತಿ ತೈತ್ತಿರೀಯವಾಕ್ಯೇನ, ತಥಾ –

'ಯೋ ಬ್ರಹ್ಮ ಬ್ರಹ್ಮಣ ಉಜ್ಜಭಾರ ಪ್ರಾಣೇಶ್ವರಃ ಕೃತ್ತಿವಾಸಾಃ ಪಿನಾಕೀ ।
ಈಶಾನೋ ದೇವಃ ಸ ನ ಆಯುರ್ದಧಾತು' (ಘೃತಸೂಕ್ತಮ್.)

ಇತ್ಯಾದಿಖಿಲಸಂಹಿತಾವಾಕ್ಯೇನ ಚ ರುದ್ರಸ್ಯ ಪ್ರಾಣಾಧಾರತ್ವಪ್ರತೀತೇಃ, ಇತ್ಯಪರಾ ಯೋಜನಾ । ಯದ್ವಾ – ಅಸ್ಮಿನ್ನೇವ ಪಕ್ಷೇ ತಯೋರಿತ್ಯೇತತ್ ಸಮ್ಯನ್ತಮಾಶ್ರಿತ್ಯ ಲಿಙ್ಗಲಿಙ್ಗಿರೂಪಧರ್ಮದ್ವಯಪರತಯಾ ವ್ಯಾಖ್ಯೇಯಮ್ । ತಥಾತ್ವೇ ಆದಿಶಬ್ದೋ 'ರುದ್ರೋ ವಾವ ಲೋಕಾಧಾರಃ' ಇತಿ ವಾಕ್ಯಗ್ರಾಹೀ । ಏವಂ ತತ್ರ ತಯೋಃ ಪ್ರಾಪ್ತಿರಿತಿ

ಭಾಷ್ಯಮ್ – ಅತ ಉಚ್ಯತೇ –

ಸೂ – ॐ ॥ ಯುಭ್ವಾದ್ಯಾಯತನಂ ಸ್ವಶಬ್ದಾತ್ ॥ ॐ ॥ ೧ ॥

'ತಮೇವೈಕಂ ಜಾನಥ ಆತ್ಮಾನಮ್' (ಮುಂ.೨–೨–೫) ಇತ್ಯಾತ್ಮಶಬ್ದಾದ್ ಯುಭ್ವಾದ್ಯಾಶ್ರಯೋ ವಿಷ್ಣುರೇವ ।

'ಆತ್ಮಬ್ರಹ್ಮಾದಯಃ ಶಬ್ದಾಸ್ತಮೃತೇ ವಿಷ್ಣುಮವ್ಯಯಮ್ ।
ನ ಸಮ್ಭವನ್ತಿ ಯಸ್ಮಾತ್ ತೈರ್ನೈವಾऽಪ್ತಾ ಗುಣಪೂರ್ಣತಾ ॥' ಇತಿ ಬ್ರಹ್ಮವೈವರ್ತೇ ॥ ೧ ॥

ಹೀಗೆ ಪೂರ್ವಪಕ್ಷವು ಪ್ರಾಪ್ತವಾದರೆ ಸೂತ್ರಕಾರರು ನಿರಾಕರಿಸುತ್ತಿದ್ದಾರೆ.

'ತಮೇವೈಕಂ ಜಾನಥ' ಎಂಬ ಮಾಂಡೂಕ್ಯೋಪನಿಷತ್ತಿನ ಮಾತಿನಂತೆ ದ್ಯುಭ್ವಾದ್ಯಾಯತನನಾದವನು ಆತ್ಮನಾಗಿದ್ದಾನೆಂದು ತಿಳಿಯುತ್ತದೆ. ಆದ್ದರಿಂದ ವಿಷ್ಣುವೇ

ದೂರಾನ್ವಯೇನ 'ತತ್ರ' ಪರವಿದ್ಯಾವಿಷಯತ್ವೇ ತಯೋ ರುದ್ರಜೀವಯೋಃ ಪ್ರಾಸಿರಿತ್ಯನ್ಯಾ ಯೋಜನಾ ।
ತತ್ರ ಆದ್ಯಯೋಜನಾಯಾಂ ಯುಭ್ವಾದ್ಯಾಯತನತ್ವಸ್ಯ ವಿಷ್ಣ್ವನ್ಯತ್ವಾಕ್ಷೇಪಮುಖೇನ 'ತಮೇವಮ್' ಇತ್ಯಾದಿನಾ 'ಅಮೃತಸ್ಯೈಷ ಸೇತುಃ' (ಮುಂ.೨.೨.೫) ಇತಿ ವಾಕ್ಯಶೇಷಬಲಾತ್ ಪ್ರತೀತಸ್ಯ ಮೋಕ್ಷಜನಕಜ್ಞಾನಜನಕ-ವಿದ್ಯಾವಿಷಯತ್ವರೂಪಸ್ಯ ತತ್ತ್ವಪ್ರದೀಪರೀತ್ಯಾऽನನ್ಯಯೋಗೇನ ಪ್ರಾಧಾನ್ಯೇನ ಜ್ಞೇಯತ್ವರೂಪಸ್ಯ ವಾ ಪರವಿದ್ಯಾವಿಷಯತ್ವಸ್ಯ ಪೂರ್ವೋಕ್ತಸ್ಯ ವಿಷ್ಣೋರಿತರತ್ವಾಕ್ಷೇಪಾದ್ ಅದೃಶ್ಯತ್ವಾಧಿಕರಣೇನಾಸ್ಯಾऽಕ್ಷೇಪಿಕೀ ಸಙ್ಗತಿರುಕ್ತಾ ಭವತಿ । ತಥಾ ಯುಭ್ವಾದ್ಯಾಯತನತ್ವರೂಪೋ ವಿಷಯಃ ದರ್ಶಿತಃ । ದ್ವಿವಿಧದ್ವಿತೀಯಯೋಜನಾಯಾಂ ಸಯುಕ್ತಿಕಪೂರ್ವಪಕ್ಷೋ ದರ್ಶಿತಃ । ತೃತೀಯಾಯಾಂ ತು ಪೂರ್ವಪಕ್ಷಫಲಂ ದರ್ಶಿತಮಿತಿ ದ್ರಷ್ಟವ್ಯಮ್ ।
'ಯಸ್ಮಿನ್' ಪರಮಾತ್ಮನಿ ದ್ಯ್ವಾದಿಲೋಕಾಃ 'ಮನಃ' ತದಭಿಮಾನೀ 'ಸರ್ವೈಃ ಪ್ರಾಣೈಃ' ಇನ್ದ್ರಿಯೈಸ್ತದಭಿಮಾನಿಭಿಶ್ಚ ಸಹ 'ತಂ' ಪ್ರವಿಷ್ಟಂ ಪರಮಾತ್ಮಾನಮ್ 'ಏಕಂ' ಪ್ರಧಾನಂ 'ಜಾನಥ' ಜಾನೀಧ್ವಮ್ ಇತಿ ಶ್ರುತ್ಯರ್ಥಃ ।
ರುದ್ರ ಉ ಮಾ ಆವಿಶ ಇತಿ ಪದಚ್ಛೇದಃ । ಉ ಇತ್ಯವ್ಯಯಂ ಸಮ್ಬುದ್ಧಿದ್ಯೋತಕಂ ನಿಪಾತಃ । ಮಾ ಇತ್ಯವ್ಯಯಂ, ನಾಸ್ಮದಾದೇಶಃ ಮಾಶಬ್ದಃ । ಯದ್ವಾ ಮೇತ್ಯನೇನಾಸ್ಮದಾದೇಶೋ ಮಾಶಬ್ದಶ್ಚೇತ್ಯುಭೌ ತನ್ತ್ರೇಣೋಪಾತ್ತೌ । ಸ ಚ ನಿಷೇಧಾರ್ಥಃ । ತಥಾ ಚ – ಹೇ ರುದ್ರ ತ್ವಂ 'ಪ್ರಾಣಾನಾಮ್' ಇನ್ದ್ರಿಯಾಣಾಂ ಗ್ರಥ್ಯತೇऽಸ್ಮಿನ್ನಿತಿ 'ಗನ್ಥಿಃ' ಆಶ್ರಯಃ 'ಅನ್ತಕಃ' ಸಂಹರ್ತಾ ಚಾಸಿ । ಸ ತ್ವಂ 'ಮಾ' ಮಾಮ್ 'ಆವಿಶ' ಪ್ರವಿಶ ಮಯಿ ಸನ್ನಿಧಿಂ ಕುರ್ವಿತ್ಯರ್ಥಃ । ಯದ್ವಾ – ಹೇ ರುದ್ರ ! ಅನ್ತಕಸ್ತ್ವಂ ಮಾಂ ಮಾ ಪ್ರವಿಶೇತ್ಯರ್ಥಃ । 'ತೇನ' ಆಹುತಿರೂಪೇಣ ದತ್ತೇನ 'ಅನ್ನೇನ' ಮಾಮ್ 'ಆಪ್ಯಾಯಸ್ವ' ಸುಖಯ ।
ಯಃ 'ಬ್ರಹ್ಮಣೇ' ಚತುರ್ಮುಖಾಯ 'ಬ್ರಹ್ಮ' ವೇದಾನ್ 'ಉಜ್ಜಹಾರ' ಉಜ್ಜಹಾರ, ಸ 'ಪ್ರಾಣೇಶ್ವರಃ' ಇನ್ದ್ರಿಯೇಶಃ 'ಕೃತ್ತಿವಾಸಾಃ' ಕೃತ್ತಿಶ್ಚರ್ಮ ವಸನಂ ಯಸ್ಯಾಸೌ, 'ಪಿನಾಕೀ' ಈಶಾನೋ ನ ಆಯುಃ 'ದಧಾತು' ಪುಷ್ಣಾತ್ವಿತಿ ಶ್ರುತ್ಯನ್ತರಾರ್ಥಃ । ಸಿದ್ಧಾನ್ತೇ ತು ರುದ್ರಾದಿಶಬ್ದಾಃ ವಿಷ್ಣುಪರಾಃ । ಯ ಏಷ ಜೀವೋ 'ಬಹುಧಾ' ಬಹುಶರೀರೇಣೋತ್ಪದ್ಯಮಾನಃ ಶರೀರಾನ್ತ :ಸಞ್ಚಾರೀತ್ಯಾಥರ್ವಣಶ್ರುತ್ಯರ್ಥಃ ।

ದ್ಯುಭ್ವಾದ್ಯಾಯತನನಾಗುತ್ತಾನೆ; ಹೊರತು ರುದ್ರನಾಗಲೀ, ಜೀವನಾಗಲೀ ಆಗುವುದಿಲ್ಲ. ಏಕೆಂದರೆ ಆತ್ಮಾ, ಬ್ರಹ್ಮ ಮೊದಲಾದ ಶಬ್ದಗಳೆಲ್ಲವೂ ನಾಶರಹಿತನಾದ ವಿಷ್ಣುವನ್ನೇ ಪ್ರತಿಪಾದಿಸುತ್ತವೆ; ಹೊರತು ಬೇರೆಯವರನ್ನಲ್ಲ. ಚತುರ್ಮುಖಾದಿ ದೇವತೆಗಳೆಲ್ಲರೂ ಗುಣಪೂರ್ಣರಾಗದ ಕಾರಣ ಆತ್ಮಾದಿಶಬ್ದಗಳು ಅವರನ್ನು ಪ್ರತಿಪಾದಿಸುವುದಿಲ್ಲ. ಹೀಗೆ ಬ್ರಹ್ಮವೈವರ್ತಪುರಾಣವು ಹೇಳಿದೆ.

ಪ್ರತಿಪದಾರ್ಥ -- ಹೀಗೆ ಪೂರ್ವಪಕ್ಷವು ಪ್ರಾಪ್ತವಾದರೆ ಸಿದ್ಧಾಂತವನ್ನು ಸ್ಥಾಪನೆ ಮಾಡುವ ಸೂತ್ರವನ್ನು ಹೇಳಿದ ವ್ಯಾಖ್ಯಾನಿಸುತ್ತಿದ್ದಾರೆ.

ತಮೇವ = ವಿಷ್ಣುವನ್ನೇ, ಏಕಂ = ಪ್ರಧಾನವಾಗಿ, ಆತ್ಮಾನಂ = ಆತ್ಮಶಬ್ದವಾಚ್ಯನೆಂದು, ಜಾನಥ = ತಿಳಿಯಿರಿ. ಇತಿ = ಹೀಗೆ, ಆತ್ಮಶಬ್ದಾತ್ = ವಿಷ್ಣುವನ್ನೇ ಪ್ರತಿಪಾದಿಸುವ ಆತ್ಮಶಬ್ದವು ಕೇಳಿಸುತ್ತಿರುವುದರಿಂದ, ವಿಷ್ಣುರೇವ = ಮಹಾವಿಷ್ಣುವೇ, ದ್ಯುಭ್ವಾದ್ಯಾಶ್ರಯಃ = ಸ್ವರ್ಗ ಭೂಮಿ ಮೊದಲಾದ ಲೋಕಗಳಿಗೆ ಆಶ್ರಯನಾಗುತ್ತಾನೆ.

ಆತ್ಮಬ್ರಹ್ಮಾದಯಃ = ಆತ್ಮಾ ಬ್ರಹ್ಮ ಮೊದಲಾದ, ಶಬ್ದಾಃ = ಶಬ್ದಗಳು, ಅವ್ಯಯಂ = ನಾಶರಹಿತನಾದ, ವಿಷ್ಣುಂ = ವಿಷ್ಣುವನ್ನು, ಋತೇ = ಹೊರತಾಗಿ, ನ ಸಂಭವಂತಿ = ಚತುರ್ಮುಖಾದಿ ದೇವತೆಗಳಲ್ಲಿ ಕೂಡುವುದಿಲ್ಲ. ಯಸ್ಮಾತ್ = ಏಕೆಂದರೆ, ತೈಃ = ಚತುರ್ಮುಖಬ್ರಹ್ಮರುದ್ರಾದಿಗಳಿಂದ, ಗುಣಪೂರ್ಣತಾ = ಸಕಲಗುಣಪರಿಪೂರ್ಣತೆಯು, ನೈವಾಪ್ತಾ = ಹೊಂದಲ್ಪಟ್ಟರುವುದಿಲ್ಲ. ಇತಿ = ಹೀಗೆ ಬ್ರಹ್ಮವೈವರ್ತೇ = ಬ್ರಹ್ಮವೈವರ್ತಪುರಾಣದಲ್ಲಿ ಹೇಳಲಾಗಿದೆ.[೧]

---

(೧) ಭಾಷ್ಯದೀಪಿಕಾ – ಸಿದ್ಧಾನ್ತಯತ್ಸೂತ್ರಮವತಾರ್ಯ ವ್ಯಾಚಷ್ಟೇ – ಅತ ಇತಿ ।। ಸೌತ್ರಸ್ವಶಬ್ದಸ್ಯ ಸ್ವಶಬ್ದಪರ್ಯಾಯಾತ್ಮಶಬ್ದಾದಿತಿ ವಿಷ್ಣುತತ್ತ್ವನಿರ್ಣಯೋಕ್ತೇಃ, ಸ್ವೇತಿಶಬ್ದಃ ಸ್ವಶಬ್ದ ಇತಿ ವ್ಯುತ್ಪತ್ತ್ಯಾ ಸ್ವಶಬ್ದಪರ್ಯಾಯಾತ್ಮಶಬ್ದಗ್ರಾಹಿತ್ವಂ ವಿಷ್ಣೋಃ ಸ್ವರೂಪಸ್ಯೈವ ಸಾಕ್ಷಾದ್ವಾಚಕೋ ಹ್ಯಯಮಾತ್ಮಶಬ್ದ ಇತಿ ತತ್ತ್ವಪ್ರದೀಪೋಕ್ತೇಃ, ಸ್ವಸ್ಯ ವಿಷ್ಣೋರೇವ ವಾಚಕಃ ಶಬ್ದಃ ಸ್ವಶಬ್ದ ಇತಿ ವಿಗ್ರಹಾಶ್ರಯೇಣ ಚಾऽತ್ಮಶಬ್ದಪರಾ ಮರ್ಶಿತ್ವಮಾಶ್ರಿತ್ಯ ಸ್ವಶಬ್ದಾದಿತ್ಯೇತದಾತ್ಮಶಬ್ದಾದಿತಿ ವ್ಯಾಖ್ಯಾತಮ್ । ತಥಾ ಚ 'ಇತ್ಯಾತ್ಮಶಬ್ದಾತ್' ಇತ್ಯತ್ರಾऽತ್ಮಶಬ್ದಶ್ರವಣಾದಿತ್ಯರ್ಥಃ । ದ್ಯುಭ್ವಾದ್ಯಾಶ್ರಯ ಇತ್ಯನೇನಾऽಯತನಶಬ್ದೋ ವ್ಯಾಖ್ಯಾತಃ । ಕಚಿದಾಯತನಶಬ್ದಸ್ಯೈವ ಪಾಠಃ । ವಿಷ್ಣುರೇವೇತ್ಯನೇನ ಸಮನ್ವಯಸೂತ್ರಾನುವೃತ್ತಂ ತತ್ತ್ವಿತ್ಯೇತತ್ ಶ್ರುತ್ಯನುಸಾರಾಲ್ಲಿಙ್ಗವಿಪರಿಣಾಮೇನ ವ್ಯಾಖ್ಯಾತಮ್ । ಅನೇನ – 'ಸ್ವಶಬ್ದಾತ್' ವಿಷ್ಣು – ವಾಚಿಸ್ವಶಬ್ದಪರ್ಯಾಯಾತ್ಮಶಬ್ದಾತ್

ಸ್ವಶಬ್ದಾತ್ 'ದ್ಯುಭ್ವಾದ್ಯಾಯತನಂ' ಸ್ವರ್ಗಭೂಮ್ಯಾದಿಸರ್ವಾಶ್ರಯಃ 'ತತ್ತು' ವಿಷ್ಣುರೇವೇತಿ ಸೂತ್ರಾರ್ಥ ಉಕ್ತೋ ಭವತಿ । ಆತ್ಮಶಬ್ದಾದಪಿ ಕುತोऽಯಂ ವಿಷ್ಣುರಿತ್ಯತ ಆಹ – ಆತ್ಮೇತಿ ।। ಯಸ್ಮಾತ್ 'ತೈಃ' ವಿಷ್ಣೋರಿತರೈಶ್ಚತುರ್ಮುಖಾದಿಜೀವೈಃ ಗುಣಪೂರ್ಣತಾ 'ನೈವಾऽಪ್ತಾ' ನ ಸರ್ವಥಾ ಪ್ರಾಪ್ತಾ । ತಸ್ಮಾದಾತ್ಮಬ್ರಹ್ಮಾದಯಃ ಶಬ್ದಾಃ 'ಅವ್ಯಯಂ' ನಿತ್ಯನಿರತಿಶಯಪ್ರವೃತ್ತಿನಿಮಿತ್ತವನ್ತಂ ವಿಷ್ಣುಮ್ 'ಋತೇ' ವಿನಾ ತದನ್ಯಂ 'ನ ಸಮ್ಭವನ್ತಿ' ನ ಮುಖ್ಯತೋ ವಾಚಕತ್ವೇನ ಪ್ರಾಪ್ನುವನ್ತೀತ್ಯರ್ಥಃ । ಅನೇನಾऽತ್ಮಶಬ್ದಸ್ಯಾಪಿ ಗುಣಪೂರ್ತಿರರ್ಥ ಇತ್ಯುಕ್ತಂ ಭವತಿ । ಬ್ರಹ್ಮವೈವರ್ತ ಇತ್ಯನನ್ತರಮನ್ಯತ್ರ ನಿರವಕಾಶತಯೋಕ್ತಾದಿತಿ ಶೇಷಃ । ತಸ್ಮಾದಾತ್ಮ-

ಶ್ರೀಪದ್ಮನಾಭತೀರ್ಥವಿರಚಿತಸತ್ತರ್ಕದೀಪಾವಳ್ಯಾಮ್:

।। ॐ द्युभ्वाद्यायतनं स्वशब्दात् ॐ ।।

श्रीदशप्रमतिभ्यो नमः ।। 'विष्णौ तदितरत्रप्रसिद्धानां शब्दानां विष्णौ मुख्यवृत्तिः' अस्मिन् पादे बाहुल्येन प्रदर्श्यत इत्याह – तत्रेति ।।

ವಿಷ್ಣುವಿನಲ್ಲಿ ಹಾಗೂ ಬೇರೆ ಪದಾರ್ಥಗಳಲ್ಲಿ ಪ್ರಸಿದ್ಧವಾದ ಶಬ್ದಗಳು ವಿಷ್ಣುವಿನಲ್ಲಿ ಮುಖ್ಯವೃತ್ತಿಯಿಂದ ಇರುತ್ತವೆಂದು ಈ ಪಾದದಲ್ಲಿ ಬಹಳವಾಗಿ ಸಮರ್ಥಿಸುತ್ತಿದ್ದಾರೆಂದು "ತತ್ರ" ಇತ್ಯಾದಿ ಗ್ರಂಥದಿಂದ ಹೇಳುತ್ತಿದ್ದಾರೆ.

'यस्मिन् द्यौः' इत्याद्याम्नायते । तत्र श्रूयमाणो द्युभ्वा(द्या?)श्रयो रुद्रस्तावद्भवेत् । 'ओतं मनः सह प्राणैश्च सर्वैः' इति प्राणाधारत्वेनोच्यमानत्वात् । 'प्राणानां ग्रन्थिरसि प्राणेश्वरः' इति च श्रुत्यन्तरेण प्राणाधारत्वस्य रुद्रधर्मत्वेनोक्तत्वात् । 'ग्रथ्यते तस्मिन्' इति ग्रन्थिः = धारकः ।

'ಯಸ್ಮಿನ್ ದ್ಯೌಃ' ಎಂಬುದು ಈ ಅಧಿಕರಣದ ವಿಷಯವಾಕ್ಯವಾಗಿದೆ. ಇದರಲ್ಲಿ ಕೇಳಿಸುತ್ತಿರುವ ದ್ಯುಭ್ವಾದ್ಯಾಯತನತ್ವವೆಂಬ ಧರ್ಮವು ರುದ್ರನಲ್ಲಿ ಬರುತ್ತದೆ. ಏಕೆಂದರೆ 'ಓತಂ ಮನಃ ಪ್ರಾಣೈಶ್ಚ ಸರ್ವೈಃ' ಎಂದು ಪ್ರಾಣಾಧಾರತ್ವಧರ್ಮವುಳ್ಳವನೇ ದ್ಯುಭ್ವಾದ್ಯಾಯತನನಾಗಿದ್ದಾನೆಂದು ಹೇಳಿರುವುದರಿಂದ. ಈ ಪ್ರಾಣಾಧಾರತ್ವವು 'ಪ್ರಾಣಾನಾಂ ಗ್ರಂಥಿರಸಿ ಪ್ರಾಣೇಶ್ವರಃ' ಎಂಬ ಮತ್ತೊಂದು ಶ್ರುತಿಯಿಂದ ರುದ್ರನ ಧರ್ಮವೆಂದು ಸಿದ್ಧವಾಗಿದೆ. ಗ್ರಂಥಿಶಬ್ದಕ್ಕೆ "ಗ್ರಥ್ಯತೇ ತಸ್ಮಿನ್" ಎಂಬ ವ್ಯುತ್ಪತ್ತಿಯಿಂದ ಧಾರಕನು ಎಂದರ್ಥ.

'स एषोऽन्तरश्चरते बहुधा जायमानः' इति परामृष्टत्वात् द्युभ्वाद्याश्रयो जीवो वा भवेद् बहुधाजननस्य जीवलिङ्गत्वात् ।

'ಸ ಏಷೋಽಂತಶ್ಚರತೇ ಬಹುಧಾ ಜಾಯಮಾನಃ' ಎಂಬುದಾಗಿ ಬಹುಧಾ ಜಾಯಮಾನತ್ವವೆಂಬ ಧರ್ಮವನ್ನು ಹೊಂದಿರುವ ಜೀವನನ್ನು ಪರಾಮರ್ಶಿಸಲಾಗಿದೆ. ಆದ್ದರಿಂದ ಇದು ಜೀವನ ಲಿಂಗವಾಗಿದೆ. ಆದ್ದರಿಂದ ಜಾಯಮಾನತ್ವವೆಂಬ ಲಿಂಗಕ್ಕೆ ಆಧಾರನಾದವನೇ ದ್ಯುಭ್ವಾದ್ಯಾಶ್ರಯನಾದ್ದರಿಂದ ಜೀವನು ದ್ಯುಭ್ವಾದ್ಯಾಶ್ರಯನಾಗುತ್ತಾನೆ.

द्युभ्वाद्याश्रयस्यैव 'अथ परा यया तदक्षरमधिगम्यते' इत्युपक्रम्योक्तत्वात्

शब्दादित्यनेनान्वयः ।

यदुक्तं 'परविद्याविषयत्वं विष्णुधर्मः' इति प्राक्, तदपि न सिद्ध्यति । तदाह – विष्णोरित्यादिना ।।

ಯಾವ ವ್ಯಕ್ತಿಯು ದ್ಯುಲೋಕ ಭೂಲೋಕಗಳಿಗೆ ಆಶ್ರಯನಾಗಿದ್ದಾನೋ 'ಅಥಪರಾ ಯಯಾ ತದಕ್ಷರಮಧಿಗಮ್ಯತೇ' ಎಂದು ಪರವಿದ್ಯೆಗೆ ವಿಷಯನಾಗಿದ್ದಾನೆಂದು ಹೇಳಿರುವುದರಿಂದ ವಿಷ್ಣುವೇ ದ್ಯುಭ್ವಾದ್ಯಾಶ್ರಯನಾಗಬೇಕೆಂದು ಹಿಂದೆ ಸಮರ್ಥಿಸಲಾಗಿತ್ತು. ಪರವಿದ್ಯೆಗೆ ವಿಷಯನಾದ್ದರಿಂದ ದ್ಯುಭ್ವಾದ್ಯಾಶ್ರಯನಾಗುತ್ತಾನೆಂಬ ಕಾರ್ಯಕಾರಣಭಾವವೂ ಸಹ ಸಿದ್ಧವಾಗುವುದಿಲ್ಲವೆಂದು ''ವಿಷ್ಣೋಃ'' ಇತ್ಯಾದಿಭಾಷ್ಯದಿಂದ ಹೇಳುತ್ತಿದ್ದಾರೆ. ಇಷ್ಟು ಪೂರ್ವಪಕ್ಷ.

एतन्निराकर्तुं सूत्रं पठित्वा व्याचष्टे – द्युभ्वेत्यादिना ।। 'तमेवेकं जानथ आत्मानम्' इत्यात्मशब्देन विशेषितत्वात् द्युभ्वाद्याश्रयो विष्णुरेव । गुणैरातत्त्ववाच्यात्मशब्दो न विष्णोरन्यत्र स्वार्थं लभते । तथाहि उक्तम् – आत्मब्रह्मेति ।। 'अमृतस्यैष सेतुः' इति मुक्ताधारत्वेनोच्यमानत्वादपि द्युभ्वाद्याश्रयो विष्णुः ।

ಈ ಪೂರ್ವಪಕ್ಷವನ್ನು ನಿರಾಕರಿಸುವುದಕ್ಕಾಗಿ ಸೂತ್ರವನ್ನು ಪಠಿಸುತ್ತಾ ವ್ಯಾಖ್ಯಾನಿಸುತ್ತಿದ್ದಾರೆ. 'ದ್ಯುಭ್ವಾದ್ಯಾಯತನಂ' ಇತ್ಯಾದಿಯಾಗಿ. 'ತಮೇವ ಜಾನಥ ಆತ್ಮಾನಂ' ಎಂಬುದಾಗಿ ಆತ್ಮಶಬ್ದವನ್ನು ವಿಶೇಷಣವನ್ನಾಗಿ ಹೇಳಿರುವುದರಿಂದ ಮಹಾವಿಷ್ಣುವೇ ದ್ಯುಭ್ವಾದ್ಯಾಶ್ರಯನಾಗುತ್ತಾನೆ. ಗುಣಗಳಿಂದ ಪೂರ್ಣನಾದವನೇ ಆತ್ಮಶಬ್ದವಾಚ್ಯನಾಗುತ್ತಾನೆ. ಆದ್ದರಿಂದ ವಿಷ್ಣುವನ್ನು ಬಿಟ್ಟು ಮತ್ತೊಂದು ಪದಾರ್ಥವು ಆತ್ಮಎನಿಸಲಾರದು. ಇದನ್ನೇ ''ಆತ್ಮಬ್ರಹ್ಮಾದಯಃ'' ಇತ್ಯಾದಿ ಶ್ಲೋಕದಲ್ಲಿ ಹೇಳಿರುತ್ತಾರೆ. 'ಅಮೃತಸ್ಯೈಷ ಸೇತುಃ' ಎಂಬಲ್ಲಿ ಮುಕ್ತರಿಗೆ ಆಧಾರನಾಗಿರುವಿಕೆ ಎಂಬ ಧರ್ಮವು ಹೇಳಲ್ಪಟ್ಟದೆ. ಇದರಿಂದಲೂ ದ್ಯುಭ್ವಾದ್ಯಾಶ್ರಯನಾದವನು ವಿಷ್ಣುವಾಗಿದ್ದಾನೆಂದು ನಿರ್ಣಯವಾಗುತ್ತದೆ.

तत्त्वप्रकाशिका –

श्रीमद्धनुमद्भीममध्वान्तर्गतरामकृष्णवेदव्यासात्मकलक्ष्मीहयग्रीवाय नमः।।ॐ।।

।। ॐ द्युभ्वाद्यायतनं स्वशब्दात् ॐ ।।

एतत्पादप्रतिपाद्यं दर्शयति – तत्र चेति ।। हरौ तदितरत्र च श्रुत्यादिप्रसिद्धनामलिङ्गात्मकशब्दानां विष्वेकवाचित्वं प्रबलहेतुभिः प्रतिपादयत्यस्मिन्पादे सूत्रकार इत्यर्थः ।

ಈ ಪಾದದಲ್ಲಿ ಪ್ರತಿಪಾದ್ಯವಾದ ವಿಷಯವನ್ನು ತತ್ರ ಚ ಎಂಬ ವಾಕ್ಯದಿಂದ ತೋರಿಸುತ್ತಿದ್ದಾರೆ.

ಶ್ರೀಹರಿಯಲ್ಲಿ ಮತ್ತು ಬೇರೆ ಕಡೆ ಶ್ರುತಿ ಮೊದಲಾದ ಪ್ರಮಾಣಗಳಿಂದ ಪ್ರಸಿದ್ಧವಾಗಿರುವ ನಾಮಾತ್ಮಕಶಬ್ದಗಳನ್ನು ಹಾಗು ಲಿಂಗಾತ್ಮಕಶಬ್ದಗಳನ್ನು ಕೇವಲ ವಿಷ್ಣುಪರವಾಗಿ ಅನೇಕ ಪ್ರಬಲವಾದ ಹೇತುಗಳಿಂದ ಈ ಪಾದದಲ್ಲಿ ಸೂತ್ರಕಾರರು ಪ್ರತಿಪಾದಿಸುತ್ತಿದ್ದಾರೆ.

ತತ್ವಪ್ರಕಾಶಿಕಾ – ಚಶಬ್ದೌ ಮಿಥಃಸಮುಚ್ಚಯಾರ್ಥೌ । ದೇವತಾಧಿಕರಣವ್ಯಾವೃತ್ತ್ಯರ್ಥಮ್ – ಪ್ರಾಯೇಣೇತಿ ।।

ತತ್ರ ಚ ಅನ್ಯತ್ರ ಚ ಎಂಬಲ್ಲಿರುವ ಎರಡು ಚಶಬ್ದಗಳು ಪರಸ್ಪರ ಸಮುಚ್ಚಯವನ್ನು ತೋರಿಸುತ್ತಿವೆ. ದೇವತಾಧಿಕರಣ ಹಾಗೂ ಆಪಶೂದ್ಯಾಧಿಕರಣಗಳು ಈ ನಿಯಮಕ್ಕೆ ಸಂಬಂಧಪಟ್ಟಲ್ಲವೆಂದು ತಿಳಿಸುವುದಕ್ಕಾಗಿ ಭಾಷ್ಯದಲ್ಲಿ ಪ್ರಾಯೇಣ ಎಂದು ಹೇಳಿದ್ದಾರೆ.

ತತ್ವಪ್ರಕಾಶಿಕಾ – (ಅ)ತತ್ರ 'ರುದ್ರೋ ವಾವ ಲೋಕಾಧಾರಃ' 'ವಾಯುನಾ ವೈ ಗೌತಮಸೂತ್ರೇಣಾಯಂ ಚ ಲೋಕಃ ಪರಶ್ಚ ಲೋಕಃ ಸರ್ವಾಣಿ ಭೂತಾನಿ ಸನ್ದೃಬ್ಧಾನಿ ಭವನ್ತಿ' 'ಆಕಾಶ ಏವ ತದೋತಂ ಚ ಪ್ರೋತಂ ಚ' 'ಸರ್ವೇ ವಾ ಏತೇ ಪ್ರಾಣಾಶ್ಚ ಪ್ರಾಣಿನಶ್ಚ ದೇವಾಶ್ಚ ದಿವ್ಯಾನಿ ಚ ಲೋಕಾಶ್ಚ ಲೋಕಿನಶ್ಚ ಅಲೋಕಾಶ್ಚ ಅಲೋಕಿನಶ್ಚ ವಿಷ್ಣೂವೇವ ಓತಾಶ್ಚ ಪ್ರೋತಾಶ್ಚ' ಇತ್ಯಾದಿನೋಭಯತ್ರ ಪ್ರಸಿದ್ಧಯುಭ್ವಾದ್ಯಾಯತನತ್ವಲಿಙ್ಗಸ್ಯ ಭಗವತಿ ಸಮನ್ವಯಪ್ರತಿಪಾದನಾದಸ್ತಿ ಶಾಸ್ತ್ರಾದಿಸಙ್ಗತಿಃ ।

ಈ ಅಧಿಕರಣದ ವಿಷಯವಾಕ್ಯ ಹೀಗಿದೆ "ರುದ್ರೋ ವಾವ ಲೋಕಾಧಾರಃ' ರುದ್ರನೇ ಸರ್ವಲೋಕಗಳಿಗೆ ಆಶ್ರಯನಾಗಿದ್ದಾನೆಂದು, ಮತ್ತು 'ವಾಯುನಾ ವೈ ಗೌತಮ ಸೂತ್ರೇಣಾಯಂಚ ಪರಶ್ಚ ಲೋಕಃ ಸರ್ವಾಣಿ ಭೂತಾನಿ ಸಂದೃಬ್ಧಾನಿ ಭವಂತಿ' ಯಾರನ್ನು ಆಶ್ರಯಿಸಿ ಸಕಲ ಜಗತ್ತು ನಿಂತಿದೆಯೋ ಅಂತಹ ವಾಯುವೇ ಈ ಲೋಕಕ್ಕೂ ಮತ್ತು ಪರಲೋಕಕ್ಕೂ, ಸಕಲಭೂತಗಳಿಗೂ ಆಶ್ರಯನಾಗಿದ್ದಾನೆ. ಮತ್ತು 'ಆಕಾಶ ಏವ ತದೋತಂ ಚ ಪ್ರೋತಂ ಚ' 'ಆಕಾಶದಲ್ಲಿಯೇ ಸಕಲ ಪ್ರಪಂಚವೂ ಓತಪ್ರೋತವಾಗಿ ಸೇರಿಕೊಂಡಿದೆ' ಎಂದು ಮತ್ತು 'ಸರ್ವೇ ವಾ ಏತೇ ಪ್ರಾಣಾಶ್ಚ ಪ್ರಾಣಿನಶ್ಚ ದೇವಾಶ್ಚ ದಿವ್ಯಾನಿ ಚ ಲೋಕಾಶ್ಚ ಲೋಕಿನಶ್ಚ ಅಲೋಕಾಶ್ಚ ಅಲೋಕಿನಶ್ಚ ವಿಷ್ಣೂವೇವ ಓತಾಶ್ಚ ಪ್ರೋತಾಶ್ಚ' ಸಕಲ ಇಂದ್ರಿಯಗಳು, ಪ್ರಾಣಿಗಳು, ದೇವತೆಗಳು, ಸ್ವರ್ಗದಲ್ಲಿರುವ ಸಕಲ ಪದಾರ್ಥಗಳು, ಭೂರ್ಭುವಾದಿ ಲೋಕಗಳು ಹಾಗೂ ಅಲ್ಲಿರುವ ಅಭಿಮಾನಿ ದೇವತೆಗಳು, ಲೋಕಾಲೋಕಗಳು ಅಲ್ಲಿರುವ ಮುಕ್ತಜೀವರುಗಳು ಹೀಗೆ ಸಕಲ ಪದಾರ್ಥಗಳೂ ವಿಷ್ಣುವಿನಲ್ಲಿ ಓತಪ್ರೋತವಾಗಿ ನೆಲೆಸಿವೆ' ಇವೇ ಮೊದಲಾದ ಶ್ರುತಿಗಳಿಂದ ದ್ಯುಭ್ವಾದ್ಯಾಯತನತ್ವಲಿಂಗವು ಉಭಯತ್ರಪ್ರಸಿದ್ಧವಾಗಿದೆ. ಇಂತಹ ದ್ಯುಭ್ವಾದ್ಯಾಯತನತ್ವಲಿಂಗವನ್ನು ಈ ಅಧಿಕರಣದಲ್ಲಿ ವಿಷ್ಣುವಿನಲ್ಲೇ ಸಮನ್ವಯಮಾಡಲಾಗಿದೆ. ಆದ್ದರಿಂದ ಈ ಅಧಿಕರಣಕ್ಕೆ ಶಾಸ್ತ್ರಸಂಗತಿ ಅಧ್ಯಾಯಸಂಗತಿ ಹಾಗೂ ಪಾದಸಂಗತಿಗಳು ಇರುತ್ತವೆ.

ತತ್ವಪ್ರಕಾಶಿಕಾ – ಶ್ರುತ್ಯಾದಿಸಙ್ಗತಿಂ ವಿಷಯಾವಾಕ್ಯಮುದಾಹೃತ್ಯ ವಿಷಯಸಂಶಯಸಯುಕ್ತಿಕ-ಪೂರ್ವಪಕ್ಷಾನ್ ದರ್ಶಯತಿ – ವಿಷ್ಣೋರಿತಿ ।।

ಇನ್ನು ಶ್ರುತಿಸಂಗತಿ, ಅಧಿಕರಣಸಂಗತಿ ಹಾಗೂ ವಿಷಯವಾಕ್ಯ ಇವುಗಳನ್ನು ತೋರಿಸುತ್ತಾ ವಿಷಯ, ಸಂಶಯ ಹಾಗೂ ಯುಕ್ತಿಬದ್ಧವಾದ ಪೂರ್ವಪಕ್ಷಗಳನ್ನು "ವಿಷ್ಣೋಃ" ಎಂಬ ಭಾಷ್ಯದಿಂದ ತೋರಿಸುತ್ತಿದ್ದಾರೆ.

तत्वप्रकाशिका – अदृश्यत्वादिगुणकाक्षरस्य विष्णोः परविद्याविषयत्वमुक्तम् । तत्परविद्याविषयत्वमाथर्वणे यस्मिन्द्यौरित्युक्तस्य द्युभ्वाद्यायतनस्योच्यते । 'तमेवैकं जानथ आत्मानमन्या वाचो विमुञ्चथामृतस्यैष सेतुः' इति ।

ಹಿಂದಿನ ಪಾದದಲ್ಲಿರುವ ಅದೃಶ್ಯತ್ವಾಧಿಕರಣದಲ್ಲಿ ಅದೃಶ್ಯತ್ವ ಮೊದಲಾದ ಗುಣವುಳ್ಳ ಅಕ್ಷರನಾಮಕನಾದ ವಿಷ್ಣುವಿಗೆ ಪರವಿದ್ಯಾವಿಷಯತ್ವವನ್ನು ಹೇಳಲಾಗಿದೆ. ಆದರೆ ಇದೇ ಪರವಿದ್ಯಾ ವಿಷಯತ್ವವನ್ನು ಆಥರ್ವಣೋಪನಿಷತ್ತು 'ಯಸ್ಮಿನ್ ದ್ಯೌಃ' ಎಂಬ ವಾಕ್ಯದಿಂದ ಪ್ರತಿಪಾದ್ಯನಾದ ದ್ಯುಭ್ವಾದ್ಯಾಯತನನಿಗೆ ಹೇಳುತ್ತಿದೆ. 'ತಮೇವೈಕಂ ಜಾನಥ ಆತ್ಮಾನಮನ್ಯಾವಾಚೋ ವಿಮುಂಚಥ ಅಮೃತಸ್ಯೈಷ ಸೇತುಃ' 'ವಿಷ್ಣುವನ್ನೇ ಮುಖ್ಯವಾಗಿ ತಿಳಿಯಿರಿ. ಉಳಿದ ವಿಷಯಗಳನ್ನು ಬಿಡಿರಿ. ಅವನೇ ಮುಕ್ತರಿಗೆಲ್ಲಾ ಆಧಾರನಾಗಿದ್ದಾನೆ' ಇತ್ಯಾದಿವಾಕ್ಯದಿಂದ ದ್ಯುಭ್ವಾದ್ಯಾಯತನನಲ್ಲಿ ಪರವಿದ್ಯಾ ವಿಷಯತ್ವವು ಹೇಳಲ್ಪಟ್ಟಿದೆ.

तत्वप्रकाशिका – स च यदि विष्णोरितरः स्यात्तदा परविद्याविषयत्वमन्यस्य प्रसज्येतेत्यवश्यं निर्णेयः । तद् द्युभ्वाद्यायतनत्वं विषयः ।

ಈ ದ್ಯುಭ್ವಾದ್ಯಾಯತನತ್ವವೆಂಬ ಲಿಂಗವು ಒಂದುವೇಳೆ ವಿಷ್ಣುವನ್ನು ಬಿಟ್ಟು ಬೇರೆಯವರಲ್ಲಿ ಬರುವುದಾದರೆ ಪರವಿದ್ಯಾವಿಷಯತ್ವ ಎಂಬ ಧರ್ಮವೂ ಸಹ ಬೇರೆಯವರಲ್ಲೇ ಬರಬೇಕಾಗುತ್ತದೆ. ಆದ್ದರಿಂದ ದ್ಯುಭ್ವಾದ್ಯಾಯತನತ್ವ ಎಂಬ ಲಿಂಗವು ಯಾರಲ್ಲಿದೆ ಎಂದು ಅವಶ್ಯವಾಗಿ ನಿರ್ಣಯ ಮಾಡಬೇಕು. ಆದ್ದರಿಂದ ಈ ಅಧಿಕರಣಕ್ಕೆ ಅಂತಹ ದ್ಯುಭ್ವಾದ್ಯಾಯತನತ್ವವೇ ವಿಷಯವಾಗಿದೆ.

तत्वप्रकाशिका – तत्किं विष्णोरन्येषां वेति सन्देहः । उक्तसाधारण्यमेव सन्देहबीजम् । द्युभ्वाद्यायतनत्वं रुद्रप्रधानजीववायूनामिति पूर्वः पक्षः ।

ಈ ದ್ಯುಭ್ವಾದ್ಯಾಯತನತ್ವವು ವಿಷ್ಣುವಿನಲ್ಲಿ ಮಾತ್ರವಿದೆಯೋ ಅಥವಾ ಬೇರೆಯವರಲ್ಲಿಯೂ ಇದೆಯೋ ಎಂದು ಸಂಶಯ. ಈ ಹಿಂದೆ ಹೇಳಿದ ಎರಡೂ ಪ್ರಕಾರದ ಸಾಧಾರಣವಾದ ಶ್ರುತಿಗಳೇ ಸಂದೇಹಕ್ಕೆ ಕಾರಣಗಳಾಗಿವೆ. ದ್ಯುಭ್ವಾದ್ಯಾಯತನತ್ವವು ರುದ್ರ, ಪ್ರಧಾನ, ಜೀವ, ಹಾಗೂ ವಾಯು ಮೊದಲಾದವರಲ್ಲಿ ಯಾರಲ್ಲಾದರೂ ಬರಬಹುದೆಂದು ಪೂರ್ವಪಕ್ಷ.

तत्वप्रकाशिका – अत्रोक्तप्राणाधारत्वस्य 'प्राणानां गन्थिरसि' 'प्राणेश्वरः' इत्यादिना रुद्रे प्रतीतेः । तथा द्युभ्वन्तरिक्षायतनत्वस्य च 'रुद्रो वाव लोकाधारः' इति

तस्मिन्नुक्तत्वात् ।

ಈ ಅಧಿಕರಣದ ವಿಷಯವಾಕ್ಯದಲ್ಲಿ ಕೇಳಿಸುತ್ತಿರುವ ಪ್ರಾಣಾಧಾರತ್ವ ಎಂಬ ಧರ್ಮವು 'ಪ್ರಾಣಾನಾಂ ಗ್ರಂಥಿರಸಿ' ಎಂಬ ಶ್ರುತಿಯಿಂದ ಮತ್ತು 'ಪ್ರಾಣೇಶ್ವರಃ' ಎಂಬ ಶ್ರುತಿಯಿಂದಲೂ ರುದ್ರನಲ್ಲೇ ಪ್ರತೀತವಾಗುತ್ತಿದೆ. ಇದರಂತೆ ದ್ಯುಲೋಕ, ಭೂಲೋಕ, ಅಂತರಿಕ್ಷ ಮೊದಲಾದವುಗಳಿಗೆ ಆಶ್ರಯನಾದವನೂ ಸಹ ರುದ್ರನೇ ಆಗಿದ್ದಾನೆಂದು "ರುದ್ರೋ ವಾವ ಲೋಕಾಧಾರಃ" ಎಂಬ ಶ್ರುತಿಯಿಂದ ಸ್ಪಷ್ಟವಾಗುತ್ತದೆ.

तत्वप्रकाशिका – मनआयतनत्वं च तस्मिन् 'मनो वै रुद्र ओतं च प्रोतं च' इति प्रतीयते । न चैतच्छ्रुतीनां विष्णुविषयत्वम् । अन्तकः कृत्तिवासाः पिनाकीत्यादिरुद्रलिङ्गात् ।

ಮತ್ತು ಮನಸ್ಸಿಗೆ ಆಶ್ರಯನಾದವನೂ ಸಹ ರುದ್ರನೇ ಆಗಿದ್ದಾನೆಂದು 'ಮನೋ ವೈ ರುದ್ರ ಓತಂ ಚ ಪ್ರೋತಂ ಚ' ಎಂಬ ಶ್ರುತಿಯಿಂದ ತಿಳಿಯುತ್ತದೆ. ಈ ಎಲ್ಲ ಶ್ರುತಿಗಳೂ ವಿಷ್ಣುವಿಷಯಕವಾಗಿದೆಯಲ್ಲವೇ ಎಂದು ಪ್ರಶ್ನಿಸಬಾರದು. ಏಕೆಂದರೆ ಈ ಶ್ರುತಿಗಳಲ್ಲಿ ಅಂತಕಃ, ಕೃತ್ತಿವಾಸಾಃ, ಪಿನಾಕೀ ಮೊದಲಾದ ರುದ್ರಲಿಂಗಗಳೇ ಕೇಳಿಸುತ್ತಿವೆ.

तत्वप्रकाशिका – दृष्टफलविधायकरुद्रवाक्यदृष्टान्तेन तत्सर्वाश्रयत्वप्रतिपादक-वाक्यप्रामाण्यानुमानेन च तस्य सर्वाश्रयत्वसिद्धेः ।

ರುದ್ರನೇ ದ್ಯುಭ್ವಾದ್ಯಾಯತನನಾಗಿದ್ದಾನೆ ಎಂಬ ವಿಷಯದಲ್ಲಿ ಅನುಮಾನವೂ ಸಹ ಪ್ರಮಾಣವಾಗಿದೆ. ರುದ್ರನನ್ನು ವರ್ಣಿಸುವ ಕೆಲವು ಶ್ರುತಿವಾಕ್ಯಗಳಿಂದ ದೃಷ್ಟಫಲವು ಸಿಗುತ್ತಿದೆ. ಇಂತಹ ದೃಷ್ಟಫಲವಿಧಾಯಕವಾದ ರುದ್ರಪರವಾಕ್ಯದ ದೃಷ್ಟಾಂತದಿಂದ ರುದ್ರನೇ ಸರ್ವಾಶ್ರಯನಾಗಿದ್ದಾನೆಂದು ಪ್ರತಿಪಾದಿಸುವ ವಾಕ್ಯಕ್ಕೂ ಸಹ ಪ್ರಾಮಾಣ್ಯವನ್ನು ಸಮರ್ಥಿಸಲು ಬರುತ್ತದೆ. ಹೀಗೆ ಅನುಮಾನಪ್ರಮಾಣದಿಂದ ರುದ್ರನೇ ಸರ್ವಾಶ್ರಯನೆಂದು ಸಿದ್ಧನಾಗುತ್ತಾನೆ.

तत्वप्रकाशिका – द्युभ्वादीनां प्रकृतिकार्यत्वात्तदाश्रयत्वं प्रकृतेर्युक्तम् । 'यद्भूतं च भवच्च भविष्यच्चेत्याचक्षते आकाश एव तदोतं च प्रोतं च' इति श्रुतेश्च पूर्ववत्प्रकृतेः सर्वाश्रयत्वाभिधायककापिलागमप्रामाण्यानुमानाच्च ।

ಎರಡನೇ ಪೂರ್ವಪಕ್ಷ -- ಅಥವಾ ಜಡವಾದ ಪ್ರಕೃತಿಯೇ ದ್ಯುಭ್ವಾದ್ಯಾಯತನವಾಗಬಹುದು. ಏಕೆಂದರೆ, ದ್ಯುಲೋಕ, ಭೂಲೋಕ ಎಲ್ಲವೂ ಸಹ ಪ್ರಕೃತಿಯ ಕಾರ್ಯವಾಗಿವೆ. ಈ ಪದಾರ್ಥಗಳಿಗೆಲ್ಲ ಪ್ರಕೃತಿಯೇ ಆಶ್ರಯವಾಗುತ್ತದೆಂಬುದು ಸಮಂಜಸವಾಗಿದೆ. 'ಯದ್ಭೂತಂ ಚ ಭವಚ್ಚ ಭವಿಷ್ಯಚ್ಚೇತ್ಯಾಚಕ್ಷತೇ

ಆಕಾಶ ಏವ ತದೋತಂ ಚ ಪ್ರೋತಂ ಚ' 'ಹಿಂದೆ ಹುಟ್ಟಿದ, ಈಗ ಹುಟ್ಟುತ್ತಿರುವ, ಮುಂದೆ ಹುಟ್ಟಲಿರುವ ಸಕಲಪದಾರ್ಥಗಳೂ ಆಕಾಶದಲ್ಲೇ ಅಂದರೆ ಪ್ರಕೃತಿಯಲ್ಲೇ ಓತಪ್ರೋತವಾಗಿ ಆಶ್ರಯಿಸಿವೆ' ಎಂಬ ಶ್ರುತಿಯ ಆಧಾರದಿಂದ ಪ್ರಕೃತಿಗೆ ಸರ್ವಾಶ್ರಯತ್ವವನ್ನು ಹೇಳಬಹುದು. ಅಥವಾ ರುದ್ರನ ವಿಷಯದಲ್ಲಿ ಅನುಮಾನಪ್ರಾಮಾಣ್ಯವನ್ನು ಹೇಳಿದಂತೆ ಪ್ರಕೃತಿಯ ವಿಷಯದಲ್ಲಿಯೂ ಅನುಮಾನಪ್ರಮಾಣವನ್ನು ಹೇಳಬಹುದು. ಪ್ರಕೃತಿಯನ್ನು ವರ್ಣಿಸುವ ಕೆಲವು ವಾಕ್ಯಗಳಿಗೆ ದೃಷ್ಟಫಲದ ಮೂಲಕವಾಗಿ ಪ್ರಾಮಾಣ್ಯವು ಕಂಡಿರುವುದರಿಂದ ಅದರ ದೃಷ್ಟಾಂತದಿಂದ ಪ್ರಕೃತಿಗೆ ಸರ್ವಾಶ್ರಯತ್ವವನ್ನು ಹೇಳುವ ಕಾಪಿಲಾಗಮಕ್ಕೂ ಸಹ ಪ್ರಾಮಾಣ್ಯವನ್ನು ಅನುಮಾನದಿಂದ ಸಾಧಿಸಬಹುದು. ಹೀಗೆ ಶ್ರುತಿಹಾಗೂ ಅನುಮಾನಗಳ ಪ್ರಮಾಣದ ಆಧಾರದಿಂದ ಪ್ರಕೃತಿಯು ದ್ಯುಭ್ವಾದ್ಯಾಯತನವಾಗಿದೆ ಎಂದು ಹೇಳಬಹುದು.

तत्वप्रकाशिका – 'अरा इव रथनाभौ संहता यत्र नाड्यः स एषोऽन्तश्चरते बहुधा जायमानः' इति द्युभ्वाद्यायतने जीवलिङ्गश्रवणाज्जीवस्य तद्युक्तम् । तस्य जीवत्वादेव प्राणित्वप्रसिद्धेश्च ।

ಮೂರನೆಯ ಪೂರ್ವಪಕ್ಷ -- ಅಥವಾ ಜೀವನೂ ಸಹ ದ್ಯುಭ್ವಾದ್ಯಾಯತನನಾಗಬಹುದು. ಏಕೆಂದರೆ, 'ಅರಾ ಇವ ರಥನಾಭೌ ಸಂಹತಾ ಯತ್ರ ನಾಡ್ಯಃ ಸ ಏಷೋಽಂತಶ್ಚರತೇ ಬಹುಧಾ ಜಾಯಮಾನಃ' 'ಯಾವ ರೀತಿಯಾಗಿ ರಥಚಕ್ರದಲ್ಲಿರುವ ರಂಧ್ರಗಳಲ್ಲಿ ಆರವು (ಚಕ್ರಕ್ಕೆ ಆಧಾರವಾಗಿರುವ ಆಚ್ಚು) ಜೋಡಿಸಲ್ಪಟ್ಟಿರುತ್ತದೋ ಆದೇ ರೀತಿಯಾಗಿ ಈ ದೇಹದಲ್ಲಿ ನಾಡಿಗಳು ಜೋಡಿಸಲ್ಪಟ್ಟಿರುತ್ತವೆ. ಮತ್ತು ಅನೇಕವಿಧವಾದ ಶರೀರದಿಂದ ಹುಟ್ಟುವ ಜೀವನು ಎಲ್ಲಕ್ಕೂ ಆಶ್ರಯನಾಗಿದ್ದಾನೆ' ಹೀಗೆ ಶ್ರುತಿ ಇರುವುದರಿಂದ ದ್ಯುಭ್ವಾದ್ಯಾಯತನನಲ್ಲಿ ನಾನಾವಿಧಶರೀರೋತ್ಪನ್ನತ್ವ ಎಂಬ ಜೀವನ ಲಿಂಗವು ಕೇಳಿಸುತ್ತಿದೆ. ಹಾಗಾಗಿ ಜೀವನೂ ಸಹ ದ್ಯುಭ್ವಾದ್ಯಾಯತನನಾಗಬಹುದು. 'ಜೀವ ಪ್ರಾಣಧಾರಣೇ' ಎಂಬ ಧಾತುವಿನಂತೆ ಜೀವಶಬ್ದದಿಂದ ಪ್ರಾಣಧಾರಣತ್ವವೆಂಬ ಪ್ರವೃತ್ತಿನಿಮಿತ್ತವು ತಿಳಿಯುತ್ತದೆ. ಆದ್ದರಿಂದ ಜೀವನಲ್ಲಿ ಪ್ರಾಣಾಶ್ರಯತ್ವವು ಸ್ಪಷ್ಟವಾಗುತ್ತದೆ. ಈ ಕಾರಣಗಳಿಂದ ಜೀವನು ದ್ಯುಭ್ವಾದ್ಯಾಯತನನಾಗುತ್ತಾನೆ.

तत्वप्रकाशिका – विषयभूतलोकाधारत्वस्य 'वायुना वै गौतमसूत्रेण' इति वायौ श्रुतिसिद्धत्वात् तस्य द्युभ्वाद्यायतनत्वं युक्तम् । तस्य प्राणाधारत्वप्रसिद्धेश्च ।

ನಾಲ್ಕನೆಯಪೂರ್ವಪಕ್ಷ. ಅಥವಾ ವಾಯುವು ದ್ಯುಭ್ವಾದ್ಯಾಯತನನಾಗಬಹುದು. ವಿಷಯವಾಕ್ಯದಲ್ಲಿ ಕೇಳಿಸುತ್ತಿರುವ ಲೋಕಾಧಾರತ್ವವು 'ವಾಯುನಾ ವೈ ಗೌತಮಸೂತ್ರೇಣ' ಎಂಬ ಶ್ರುತಿವಾಕ್ಯದಿಂದ ವಾಯುವಿನಲ್ಲಿ ಸಿದ್ಧವಾಗುತ್ತದೆ. ಮತ್ತು ವಾಯುದೇವನು ಪ್ರಾಣಗಳಿಗೆ ಆಶ್ರಯನಾಗಿದ್ದಾನೆಂಬುದು

ಪ್ರಸಿದ್ಧವೇ ಆಗಿದೆ. ಹಾಗಾಗಿ ವಾಯುದೇವನೂ ಸಹ ದ್ಯುಭ್ವಾದ್ಯಾಯತನನಾಗುತ್ತಾನೆ.

ತತ್ತ್ವಪ್ರಕಾಶಿಕಾ – ವಿಷ್ಣೋರ್ದ್ಯುಭ್ವಾದ್ಯಾಯತನತ್ವಪ್ರಸಿದ್ಧಾವಪಿ ನಾಸಾವತ್ರೋಚ್ಯತೇ । ಬಹುಧಾ ಜನ್ಮಬಾಧಾತ್ ।

ವಿಷ್ಣುವು ದ್ಯುಭ್ವಾದ್ಯಾಯತನನಾಗಿದ್ದಾನೆಂದು ಪ್ರಸಿದ್ಧಿಇರಬಹುದು. ಆದರೆ ಈ ಪ್ರಕರಣದಲ್ಲಿ ಇಲ್ಲಿಯ ತನಕ ಸಮರ್ಥಿಸಿದ ಅನೇಕ ಯುಕ್ತಿಗಳಿಂದ ವಿಷ್ಣುವನ್ನು ದ್ಯುಭ್ವಾದ್ಯಾಯತನನೆಂದು ಹೇಳಲಾಗದು. ಅಷ್ಟೇ ಅಲ್ಲದೆ ಅನೇಕ ವಿಧವಾದ ಜನ್ಮವನ್ನು ತಾಳುತ್ತಾನೆಂಬ ಬಹುಧಾಜಾಯಮಾನತ್ವವೆಂಬ ಬಾಧಕಲಿಂಗವೂ ಸಹ ವಿಷ್ಣುವಿಷಯದಲ್ಲಿ ಕಾಣಿಸುತ್ತಿದೆ.

ತತ್ತ್ವಪ್ರಕಾಶಿಕಾ – ಪರವಿದ್ಯಾವಿಷಯತ್ವಲಿಙ್ಗಾದ್ ವಿಷ್ಣುರಿತಿ ಚೇನ್ನ । ಜೀವೇಶಾಭೇದೇನ ಬ್ರಹ್ಮಗತಲಿಙ್ಗಸ್ಯಾಪಿ ಜೀವೇ ಸಮ್ಭವಾತ್ ।

ಈ ಪ್ರಕರಣವು ಪರವಿದ್ಯಾವಿಷಯಕವಾದ್ದರಿಂದ ವಿಷ್ಣುವನ್ನೇ ಪ್ರತಿಪಾದಿಸಬೇಕಲ್ಲವೇ ಎಂದೂ ಶಂಕಿಸಬಾರದು. ಏಕೆಂದರೆ ಜೀವೇಶ್ವರರಿಗೆ ಅಭೇದವಿರುವುದರಿಂದ ಪರವಿದ್ಯಾವಿಷಯತ್ವವೆಂಬ ಈಶ್ವರನ ಧರ್ಮವು ಜೀವನಲ್ಲಿಯೂ ಬರುತ್ತದೆ.

ತತ್ತ್ವಪ್ರಕಾಶಿಕಾ – ನಚ ತಥಾ ಬಹುಧಾ ಜನ್ಮ ಸಮ್ಭವತಿ । ಕಾರಣಗತಸ್ಯೈವ ಕಾರ್ಯೇ ಸಮ್ಭವಾತ್ ।

ಆದರೆ ಜೀವನಲ್ಲಿರುವ ಬಹುಧಾಜಾಯಮಾನತ್ವವೆಂಬ ಲಿಂಗವನ್ನು ಅಭೇದವಿರುವ ಪ್ರಯುಕ್ತ ಈಶ್ವರನಲ್ಲಿ ಒಪ್ಪಲು ಸಾಧ್ಯವಿಲ್ಲ. ಏಕೆಂದರೆ ಕಾರಣದಲ್ಲಿರುವ ಧರ್ಮವನ್ನು ಕಾರ್ಯದಲ್ಲಿ ಒಪ್ಪಬಹುದೇ ಹೊರತು; ಕಾರ್ಯದಲ್ಲಿರುವ ಧರ್ಮವನ್ನು ಕಾರಣದಲ್ಲಿ ಒಪ್ಪಲು ಸಾಧ್ಯವಿಲ್ಲ.

ತತ್ತ್ವಪ್ರಕಾಶಿಕಾ – ಅತಃ ಪರವಿದ್ಯಾವಿಷಯೋ ದ್ಯುಭ್ವಾದ್ಯಾಶ್ರಯೋ ವಿಷ್ಣೋರಿತರ ಏವೇತಿ ತಸ್ಯೈವಾದೃಶ್ಯತ್ವಾದಿಗುಣಕತ್ವಮಿತಿ ಭಾವಃ ।

ಆದ್ದರಿಂದಯಾವವ್ಯಕ್ತಿಯುಪರವಿದ್ಯಾವಿಷಯನಾಗಿದ್ದಾನೋಅವನೇದ್ಯುಭ್ವಾದ್ಯಾಶ್ರಯನಾಗಿದ್ದಾನೆ. ಹಾಗಾಗಿ ವಿಷ್ಣು ಪರವಿದ್ಯಾವಿಷಯನೆಂದು ಹೇಳಲಾಗದ ಕಾರಣ ದ್ಯುಭ್ವಾದ್ಯಾಶ್ರಯನೂ ಸಹ ಆಗುವುದಿಲ್ಲ. ರುದ್ರಾದಿಗಳೇ ಆಗುತ್ತಾರೆ. ಅಂತಹ ರುದ್ರಾದಿಗಳಲ್ಲೇ ಅದೃಶ್ಯತ್ವಾದಿಗುಣಗಳನ್ನು ಹೇಳಬೇಕೆಂದು ಪೂರ್ವಪಕ್ಷದ ಅಭಿಪ್ರಾಯ.

ತತ್ತ್ವಪ್ರಕಾಶಿಕಾ – ಸಿದ್ಧಾನ್ತಯನ್ ಸೂತ್ರಮವತಾರ್ಯ ವ್ಯಾಚಷ್ಟೇ – ಅತ ಇತಿ ।। ದ್ಯುಭ್ವಾದ್ಯಾಯತನತ್ವೇ ಸ್ವಶಬ್ದಪರ್ಯಾಯಾತ್ಮಶಬ್ದಶ್ರವಣಾದ್ದ್ಯುಭ್ವಾದ್ಯಾಯತನಂ ವಿಷ್ಣುರೇವೇತ್ಯರ್ಥಃ ।

ಆತ್ಮಶಬ್ದಾದಪಿ ಕುತೋ ವಿಷ್ಣುರಿತ್ಯತ ಆಹ – ಆತ್ಮೇತಿ ।।೧।।

ಸಿದ್ಧಾಂತವನ್ನು ಸ್ಥಾಪಿಸುವ ಸೂತ್ರಕ್ಕೆ ಅನತಾರಿಕೆಯನ್ನು ಕೊಡುವ ಮೂಲಕ ವ್ಯಾಖ್ಯಾನಿಸುತ್ತಿದ್ದಾರೆ. ''ಅತಃ'' ಎಂಬುದಾಗಿ. ದ್ಯುಭ್ವಾದ್ಯಾಯತನನಾದವನಲ್ಲಿ ಸ್ವಶಬ್ದದ ಪರ್ಯಾಯಶಬ್ದವೆನಿಸಿದ ಆತ್ಮಶಬ್ದವನ್ನು ಪ್ರಯೋಗಿಸಲಾಗಿದೆ. ಆದ್ದರಿಂದ ವಿಷ್ಣುವೇ ದ್ಯುಭ್ವಾದ್ಯಾಯತನನಾಗುತ್ತಾನೆ ಎಂದರ್ಥ. ಆತ್ಮಶಬ್ದವಿದ್ದರೂ ವಿಷ್ಣು ಎಂಬರ್ಥವನ್ನೇ ಏಕೆ ಸ್ವೀಕರಿಸಬೇಕು? ಎಂಬ ಪ್ರಶ್ನೆಗೆ ''ಆತ್ಮ'' ಎಂಬ ಸ್ಮೃತಿವಾಕ್ಯದಿಂದ ಉತ್ತರಿಸುತ್ತಿದ್ದಾರೆ.

ಭಾವದೀಪಃ – ॐ द्युभ्वाद्यायतनं स्वशब्दात् ॐ ।। पूर्वोक्तदिशा पादार्थत्वाप्रतीतेराह – एतदिति ।। हराविति ।। एषां शब्दानां लोके हराविवान्यत्रप्रयोगाद् व्यक्तिविशेषनिर्णयाय श्रुत्यन्तरान्वेषणे श्रुत्यन्तरेऽन्यत्रैव हरावपि प्रयोगात् श्रुतिसाधारण्येन वा आदिपदोक्तेन भूमाक्षरादिनये वक्ष्यमाणदिशा प्रक्रमसमाख्यासाधारण्येन वा प्रवृत्तिनिमित्तसाधारण्येन वा पूर्वोक्त्न्यायलोकप्रयोगाभ्यां वा प्रसिद्धानामेकोपस्थापनदशायामन्यस्याप्युपस्थापकानामिति यावत् साक्षाद्धर्मिवाचिनां धर्मद्वारा धर्मिवाचिनां च शब्दानामित्यर्थः ।

ಈ ಪಾದದಲ್ಲಿಯೂ ಸಹ ಹಿಂದಿನಂತೆ ಯಾವ ಪ್ರಮೇಯವನ್ನು ಹೇಳುತ್ತಿದ್ದಾರೆಂದು ಸ್ಪಷ್ಟವಾಗಿ ತಿಳಿಯುವುದಿಲ್ಲ. ಆದ್ದರಿಂದ ಸ್ವತಃ ಭಾಷ್ಯಕಾರರೇ ಪಾದಪ್ರಮೇಯವನ್ನು ''ಏತತ್'' ಇತ್ಯಾದಿ ವಾಕ್ಯಗಳಿಂದ ತಿಳಿಸುತ್ತಿದ್ದಾರೆ. ''ಹರೌ'' ಎಂಬುದಕ್ಕೆ ಹೀಗರ್ಥ- ಈ ಅಧಿಕರಣದಲ್ಲಿ ಸಮನ್ವಯ ಮಾಡುತ್ತಿರುವ ಶಬ್ದಗಳು ಭಗವಂತನಲ್ಲಿ ಹೇಗೆ ಪ್ರಸಿದ್ಧವಾಗಿವೆಯೋ ಆದರಂತೆ ಲೋಕದಲ್ಲಿಯೂ ಬೇರೆ ಕಡೆ ಪ್ರಸಿದ್ಧವಾಗಿವೆ. ಹೀಗಿರುವಾಗ ಇಂತಹ ವ್ಯಕ್ತಿಯನ್ನೇ ಪ್ರತಿಪಾದಿಸುತ್ತವೆ ಎಂದು ನಿರ್ಣಯಿಸಲು ಒಂದು ಶ್ರುತಿಯನ್ನು ಅನ್ವೇಷಣೆ ಮಾಡುವುದಾದರೆ ಮತ್ತೊಂದು ಶ್ರುತಿಯಲ್ಲಿ ಬೇರೆ ವ್ಯಕ್ತಿಗಳಲ್ಲಿ ಪ್ರಯೋಗಿಸಿದಂತೆ ಶ್ರೀಹರಿಯಲ್ಲೂ ಪ್ರಯೋಗಿಸಿರುವುದು ಕಾಣಿಸುತ್ತದೆ. ಹೀಗೆ ಭಗವಂತನಲ್ಲಿ ಮತ್ತು ಬೇರೆ ವಿಷಯದಲ್ಲಿ ಶ್ರುತಿಯು ಸಾಧಾರಣವಾಗಿದೆ. ಆದಿ ಪದದಿಂದ ಭೂಮಾಧಿಕರಣ ಮತ್ತು ಅಕ್ಷರಾಧಿಕರಣಗಳಲ್ಲಿ ಹೇಳುವಂತೆ ಉಪಕ್ರಮ ಹಾಗೂ ಸಮಾಖ್ಯಾಪ್ರಮಾಣವು ಎರಡು ವಿಷಯಗಳಲ್ಲಿ ಸಾಧಾರಣವಾಗಿರುವುದರಿಂದ ಈ ಶಬ್ದಗಳು ಉಭಯತ್ರ ಪ್ರಸಿದ್ಧವಾಗಿವೆ. ಅಥವಾ ಎರಡೂ ಕಡೆ ಪ್ರವೃತ್ತಿನಿಮಿತ್ತವು ಸಾಧಾರಣವಾಗಿರುವುದರಿಂದ ಉಭಯತ್ರ ಪ್ರಸಿದ್ಧವಾಗಿವೆ. ಅಥವಾ ಹಿಂದೆ ಹೇಳಿದ ನ್ಯಾಯ ಹಾಗೂ ಲೋಕಪ್ರಯೋಗಗಳಿಂದ ಉಭಯತ್ರ ಪ್ರಸಿದ್ಧವಾಗಿವೆ. ಅಂದರೆ ಶಬ್ದವು ಒಬ್ಬನನ್ನು ತಿಳಿಸುವಾಗ ಮತ್ತೊಬ್ಬನ ಸ್ಮರಣೆಯೂ ಸಹ ಬರುತ್ತದೆಂದು ಅಭಿಪ್ರಾಯ. ಈ ಎಲ್ಲಾ ಕಾರಣಗಳಿಂದ ನೇರವಾಗಿ ಧರ್ಮಿವಾಚಿಯಾದ ಮತ್ತು ಧರ್ಮದ ಮುಖಾಂತರ ಧರ್ಮಿವಾಚಿವಾದ ಶಬ್ದಗಳನ್ನು ಈ ಅಧಿಕರಣದಲ್ಲಿ ಸಮನ್ವಯ ಮಾಡಲಾಗಿದೆ ಎಂದು ತಿಳಿಯಬೇಕು.

ದ್ಯುಭ್ವಾದ್ಯಧಿಕರಣ (೧-೩-೧)

ಭಾವದೀಪಃ – ಪೂರ್ವಂ ನಾಮಲಿಙ್ಗಾನಾಂ ಪ್ರಾಧಾನ್ಯಾಪ್ರಾಧಾನ್ಯಾಭ್ಯಾಂ ಪೌರ್ವಾಪರ್ಯಾತ್ ಪಾದಭೇದೇನ ಸಮನ್ವಯೋಕ್ತಾವಪಿ ಇಹ ನಾಮ್ನಾಂ ಪ್ರಾಧಾನ್ಯಾತ್ ಲಿಙ್ಗಾನಾಂ ಸಮನ್ವಿತತ್ವೇನ ಬುದ್ಧಿಸ್ಥತ್ವಾದ್ ಉಭಯಾನುರೋಧೇನೋಭಯೇಷಾಮಪ್ಯೇಕತ್ರೈವ ಸಮನ್ವಯೋಕ್ತಿರಿತಿ ಭಾವಃ । ಪ್ರಾಗೇವ ವಿಷ್ಣೌ ದತ್ತಪದತ್ವಾತ್ ಕಿಮತ್ರ ಕರ್ತವ್ಯಮಿತ್ಯತಃ ಸಮನ್ವಯಪದಾರ್ಥಂ ವ್ಯನಕ್ತಿ – ವಿಷ್ಣ್ವೇಕವಾಚಿತ್ವಮಿತಿ ।।

ಹಿಂದಿನ ಎರಡು ಪಾದಗಳಲ್ಲಿ ನಾಮಾತ್ಮಕಶಬ್ದಗಳು ಪ್ರಧಾನವಾದ್ದರಿಂದ ಅವುಗಳನ್ನು ಮೊದಲು ಸಮನ್ವಯ ಮಾಡಿದ್ದರು. ಲಿಂಗಾತ್ಮಕಶಬ್ದಗಳು ಅಪ್ರಧಾನವಾದ್ದರಿಂದ ಅನಂತರ ಸಮನ್ವಯ ಮಾಡಿದ್ದರು. ಆದ್ದರಿಂದ ಪ್ರಥಮಪಾದಕ್ಕೂ ದ್ವಿತೀಯಪಾದಕ್ಕೂ ಇರುವ ಪೌರ್ವಾಪರ್ಯವು ಸಮಂಜಸವಾಗಿದೆ ಮತ್ತು ಪಾದಭೇದದಿಂದ ಸಮನ್ವಯ ಮಾಡಿದ್ದೂ ಸಹ ಯುಕ್ತವಾಗಿದೆ. ಆದರಂತೆ ಈ ಪಾದದಲ್ಲಿಯೂ ನಾಮಾತ್ಮಕಶಬ್ದಗಳು ಪ್ರಧಾನವಾದ್ದರಿಂದ ಮತ್ತು ಲಿಂಗಾತ್ಮಕಶಬ್ದಗಳನ್ನು ಅವ್ಯವಹಿತವಾದ ಹಿಂದಿನ ಪಾದದಲ್ಲಿ ಸಮನ್ವಯ ಮಾಡಿದ್ದರಿಂದ ಬುದ್ಧಿಸ್ಥಿತವಾದ್ದರಿಂದ ಎರಡನ್ನೂ ಅನುಸರಿಸಿ ನಾಮಾತ್ಮಕ ಹಾಗೂ ಲಿಂಗಾತ್ಮಕಶಬ್ದಗಳನ್ನು ಈ ಒಂದೇ ಪಾದದಲ್ಲಿ ಸಮನ್ವಯ ಮಾಡಲು ಹೊರಟಿದ್ದಾರೆಂದು ತಿಳಿಯಬೇಕು. ಹಿಂದಿನ ಪಾದದಲ್ಲಿಯೇ ಸಕಲವಿಧವಾದ ಶಬ್ದಗಳನ್ನು ಸಮನ್ವಯ ಮಾಡಿದಮೇಲೆ ಇಲ್ಲಿ ಸಮನ್ವಯ ಮಾಡಲು ಏನು ಉಳಿದಿದೆ? ಎಂಬ ಪ್ರಶ್ನೆಗೆ ಉತ್ತರಿಸಲು ಸಮನ್ವಯ ಪದದ ಅರ್ಥವನ್ನು ವ್ಯಾಖ್ಯಾನಿಸುತ್ತಿದ್ದಾರೆ ''ವಿಷ್ಣ್ವೇಕವಾಚಿತ್ವಂ'' ಇತ್ಯಾದಿಯಾಗಿ.

ಭಾವದೀಪಃ – 'ತತ್ರಾನ್ಯತ್ರಪ್ರಸಿದ್ಧಾನಾಂ ಲಿಙ್ಗನಾಮ್ನಾಂ ಪುನರ್ಹರಿಃ । ವಿಶೇಷಾನ್ಮುಖ್ಯತೋ ವೃತ್ತಿಂ ಸ್ವಸ್ಮಿನ್ನೇವಾತ್ರ ವಕ್ತ್ಯಜಃ' ಇತ್ಯನುವ್ಯಾಖ್ಯಾನೋಕ್ತೇಃ ।

''ತತ್ರಾನ್ಯತ್ರ ಪ್ರಸಿದ್ಧಾನಾಂ ಲಿಂಗನಾಮ್ನಾಂ ಪುನರ್ಹರಿಃ । ವಿಶೇಷಾನ್ಮುಖ್ಯತೋ ವೃತ್ತಿಂ ಸ್ವಸ್ಮಿನ್ನೇವಾತ್ರ ವಕ್ಷ್ಯಜಃ'' ಉಭಯತ್ರ ಪ್ರಸಿದ್ಧವಾದ ಲಿಂಗಾತ್ಮಕ ಹಾಗೂ ನಾಮಾತ್ಮಕವಾದ ಶಬ್ದಗಳ ಸಮನ್ವಯವನ್ನು ಪುನಃ ಈ ಅಧಿಕರಣದಲ್ಲಿ ಮಾಡುತ್ತಿದ್ದಾರೆ. ಏಕೆಂದರೆ ವಿಶೇಷವಾಗಿ ಭಗವಂತನೇ ಆಯಾ ಪದಗಳಿಂದ ಪ್ರತಿಪಾದ್ಯನಾಗಿದ್ದಾನೆ ಎಂಬ ಅನುವ್ಯಾಖ್ಯಾನದ ಮಾತನ್ನು ಇಲ್ಲಿ ಸ್ಮರಿಸಿಕೊಳ್ಳಬೇಕು.

ಭಾವದೀಪಃ – ಅನ್ಯಥಾ ತತ್ತ್ವಿತ್ಯವಧಾರಣಾಯೋಗ ಇತಿ ಭಾವಃ । ಶ್ರುತ್ಯಾದಿಪ್ರಸಿದ್ಧೇತ್ಯುಕ್ತಂ ಶ್ರುತಿಸಾಧಾರಣ್ಯೇನೋಭಯತ್ರ ಪ್ರಸಿದ್ಧತ್ವಂ ತತ್ತ್ವಿತ್ಯವಧಾರಣಾಯೋಗ ಇತಿ ಭಾವಃ । ಶ್ರುತ್ಯಾದಿಪ್ರಸಿದ್ಧೇತ್ಯುಕ್ತಂ ಶ್ರುತಿಸಾಧಾರಣ್ಯೇನೋಭಯತ್ರ ಪ್ರಸಿದ್ಧತ್ವಂ ನ್ಯಾಯವಿವರಣೋಕ್ತಶ್ರುತ್ಯುಕ್ತ್ಯಾ ವ್ಯಞ್ಜಯನ್ನಸ್ಯ ಪಾದಾನ್ತರ್ಭಾವಮಾಹ – ತತ್ರೇತಿ ।।

ಹೀಗೆ ಒಪ್ಪದಿದ್ದರೆ ''ತತ್ತು'' ಎಂಬ ಅವಧಾರಣವು ಅಯುಕ್ತವಾಗುತ್ತದೆಂದು ಅಭಿಪ್ರಾಯ. ''ಶ್ರುತ್ಯಾದಿಪ್ರಸಿದ್ಧ'' ಇತ್ಯಾದಿಯಾಗಿ ಹೇಳಲ್ಪಟ್ಟದ್ದನ್ನು ಶ್ರುತಿಸಾಧಾರಣ್ಯದಿಂದ ಉಭಯತ್ರಪ್ರಸಿದ್ಧಿಯನ್ನು ತಿಳಿಯಬೇಕು. ಈ ವಿಷಯದಲ್ಲಿ ನ್ಯಾಯವಿವರಣದಲ್ಲಿ ಹೇಳಲ್ಪಟ್ಟ ಶ್ರುತಿಯಿಂದ ಸ್ಪಷ್ಟಪಡಿಸುತ್ತಾ ಪಾದಾಂತರ್ಭಾವವನ್ನು ಈ ಅಧಿಕರಣಕ್ಕೆ ''ತತ್ರ'' ಇತ್ಯಾದಿ ವಾಕ್ಯದಿಂದ ಸಮರ್ಥಿಸುತ್ತಿದ್ದಾರೆ.

ಭಾವದೀಪಃ – एवं पादार्थे सतीत्यर्थः । अत्रेति पाठे अधिकरण इत्यर्थः ।

ಹೀಗೆ ಪಾದಾರ್ಥವು ಸಿದ್ಧವಾಗುತ್ತಿರಲು ಎಂದರ್ಥ. ಕೆಲವು ಪುಸ್ತಕಗಳಲ್ಲಿ "ಅತ್ರ" ಎಂಬ ಪಾಠವಿದೆ. ಆಗ 'ಈ ಅಧಿಕರಣದಲ್ಲಿ' ಎಂದು ಹೇಳಬೇಕು.

ಭಾವದೀಪಃ – साधारण्योक्तिपरन्यायविवरणे 'रुद्रो वै लोकायतनम्' इति वाक्योक्तावपि पूर्वपक्षन्यायविवरणे 'रुद्रो वा लोकाधारः' इति वाक्यदर्शनात्तस्यैवात्रोक्तिः स्यूतमस्मिन् जगदिति सूत्रम् ।

ಎರಡೂ ಕಡೆ ಸಾಧಾರಣವಾದ ಶ್ರುತಿಯನ್ನು ಹೇಳುವ ನ್ಯಾಯವಿವರಣದಲ್ಲಿ "ರುದ್ರೋ ವೈ ಲೋಕಾಯತನಮ್" ಎಂಬ ವಾಕ್ಯವನ್ನು ಉಲ್ಲೇಖಿಸಿರಬಹುದು. ಆದರೆ ಪೂರ್ವಪಕ್ಷವನ್ನು ಹೇಳುವ ನ್ಯಾಯವಿವರಣದಲ್ಲಿ "ರುದ್ರೋ ವಾವ ಲೋಕಾಧಾರಃ" ಎಂಬ ವಾಕ್ಯವನ್ನು ತೋರಿಸಿದ್ದಾರೆ. ಆದ್ದರಿಂದ ಅದೇ ವಾಕ್ಯವನ್ನು ಪ್ರಕೃತ ಟೀಕಾರಾಯರು ಉಲ್ಲೇಖಿಸಿದ್ದಾರೆ. "ಸ್ಯೂತಮಸ್ಮಿನ್ ಜಗತ್" ಅಂದರೆ ಇವನಲ್ಲಿ ಜಗತ್ತು ಆಶ್ರಯ ಪಡೆದಿದೆ ಎಂಬುದಾಗಿ ಸೂತ್ರಶಬ್ದಕ್ಕೆ "ಆಧಾರ" ಎಂದರ್ಥ.

ಭಾವದೀಪಃ – सन्दृब्धानि सङ्गतान्येव । तदाधारतया स्थितान्येवेति । न्यायविवरणस्यादिपदोपात्तां श्रुतिमाह – आकाश इति ।। प्रकृतावित्यर्थः । आकाशशब्दः प्रकृतिपर इत्यक्षरनये स्पष्टमिति भावः ।

ಸಂದೃಬ್ಧಾನಿ = ಸಂಗತವೇ ಆದ ಅವನಲ್ಲೇ ಆಶ್ರಯವನ್ನು ಹೊಂದಿ ನೆಲೆಸಿರುವ ಎಂದರ್ಥ. ನ್ಯಾಯವಿವರಣದಲ್ಲಿರುವ 'ಆದಿ' ಪದದಿಂದ ಸ್ವೀಕರಿಸಲ್ಪಟ್ಟ ಶ್ರುತಿಯನ್ನು "ಆಕಾಶಃ" ಎಂಬುದಾಗಿ ಹೇಳಿದ್ದಾರೆ. ಆಕಾಶ ಶಬ್ದಕ್ಕೆ 'ಪ್ರಕೃತಿ' ಎಂದರ್ಥ. ಏಕೆಂದರೆ ಅಕ್ಷರಾಧಿಕರಣದಲ್ಲಿ ಆಕಾಶ ಶಬ್ದವನ್ನು ಪ್ರಕೃತಿಯಲ್ಲಿ ಪ್ರಯೋಗಿಸಿದ್ದು ಸ್ಪಷ್ಟವಾಗಿ ಎಂದು ತಿಳಿಯಬೇಕು.

ಭಾವದೀಪಃ – विष्णुपरत्वेन साक्षादुपात्तश्रुतिमाह – सर्वे वा इति ।। प्राणा इन्द्रियाणि । प्राणिनो देहिनः । प्राणिग्रहणेन गृहीतानामपि देवानां प्राधान्यज्ञापनाय पुनर्ग्रहणम् । दिवि भवानि दिव्यानि कल्पतरुप्रभृतीनि वस्तूनि । लोका भूरादयः । तदभिमानिनो लोकिनः । पूर्ववत् पुनर्ग्रहणम् । भूरादिभ्योऽन्ये वैकुण्ठादयोऽलोकाः। तद्गता मुक्ता अलोकिनः ।

ನೇರವಾಗಿ ವಿಷ್ಣುವನ್ನು ಪ್ರತಿಪಾದಿಸುವ ಶ್ರುತಿಯನ್ನು "ಸರ್ವೇ ವಾ" ಎಂಬುದರಿಂದ ವ್ಯಾಖ್ಯಾನಿಸಿದ್ದಾರೆ. ಈ ಶ್ರುತಿಯಲ್ಲಿರುವ "ಪ್ರಾಣಾಃ" ಎಂದರೆ ಇಂದ್ರಿಯಗಳು ಎಂದರ್ಥ. 'ಪ್ರಾಣಿನಃ' ಎಂಬ ಶಬ್ದಕ್ಕೆ ದೇಹವುಳ್ಳವರು ಎಂದರ್ಥ. ವಸ್ತುತಃ ಪ್ರಾಣ ಶಬ್ದದಿಂದಲೇ ದೇವತೆಗಳು ಸಂಗ್ರಹವಾಗುತ್ತಾರೆ. ಆದರೂ

ಸಹ ದೇವತೆಗಳಿಗೆ ಪ್ರಾಧಾನ್ಯವನ್ನು ಸೂಚಿಸುವುದಕ್ಕಾಗಿ ಪ್ರತ್ಯೇಕವಾಗಿ ದೇವತಾಪದವನ್ನು ಹೇಳಲಾಗಿದೆ. 'ದಿವಿ ಭವಾನಿ ದಿವ್ಯಾನಿ ಎಂದರೆ ಕಲ್ಪತರು ಮೊದಲಾದ ವಸ್ತುಗಳು. ಲೋಕ ಎಂದರೆ ಭೂಲೋಕವೇ ಮೊದಲಾದವುಗಳು. ಅವುಗಳಿಗೆ ಅಭಿಮಾನಿಗಳಾದವರು ಲೋಕಿಗಳು. ಹಿಂದಿನಂತೆ ಇಲ್ಲಿಯೂ ಸಹ ''ಪುನಃ'' ಶಬ್ದವನ್ನು ಹೇಳಿದ್ದಾರೆ. ಆಲೋಕ ಶಬ್ದಕ್ಕೆ ವೈಕುಂಠವೆಂದರ್ಥ. ಅಲ್ಲಿರುವ ಮುಕ್ತರು ಆಲೋಕಿಗಳು.

ಭಾವದೀಪಃ – ओताश्च प्रोताश्चेति ।। अत्यन्तमाश्रिता इत्यर्थः । इत्यन्यत्र टीकाकृद्व्याख्यातेयं श्रुतिः ।। उभयत्रेति ।। हरौ तदितरत्र चेत्यर्थः । विष्विंतरकोटेरनेकत्वेऽपि विष्विंतरत्वे नैकीकरणादुभयत्रेत्युक्तिः ।

''ಓತಾಶ್ಚ ಪ್ರೋತಾಶ್ಚ'' ಎಂಬ ಶಬ್ದಕ್ಕೆ ಬೇರೆ ಆಶ್ರಯವಿಲ್ಲದೆ ಅನನ್ಯವಾಗಿ ಆಶ್ರಯಿಸಿದವರು ಎಂದರ್ಥ. ಹೀಗೆ ಟೀಕಾರಾಯರೇ ಈ ಶ್ರುತಿಗೆ ಬೇರೆ ಕಡೆ ಅರ್ಥವನ್ನು ಹೇಳಿದ್ದಾರೆ. ''ಉಭಯತ್ರ'' ಎಂಬ ಶಬ್ದಕ್ಕೆ ಭಗವಂತನಲ್ಲಿ ಮತ್ತು ಬೇರೆ ಪದಾರ್ಥಗಳಲ್ಲಿ ಎಂದರ್ಥ. ವಿಷ್ಣುವಿಗಿಂತ ಭಿನ್ನವಾದ ಕೋಟಿಗಳು ಅನೇಕವಿದ್ದರೂ ಸಹ ಅವೆಲ್ಲವನ್ನು ಒಂದೇ ಪಕ್ಷದಲ್ಲಿ ಸೇರಿಸಲಾಗಿದೆ. ಆದ್ದರಿಂದ ಉಭಯತ್ರವೆಂಬ ಮಾತು ಸಮಂಜಸವಾಗಿದೆ. ಇಲ್ಲದಿದ್ದರೆ ''ಅನೇಕತ್ರ'' ಎಂದು ಹೇಳಬೇಕಾಗಿತ್ತು.

ಭಾವದೀಪಃ – जीवस्यापीतरकोटित्वेनात्राभिमतत्वेऽपि जीवपरसमाख्याभावेन तत्साधारण्याभावेऽपि पूर्वपक्षकोटिषु रुद्रवायुप्रकृतिषु कचित् प्रसिद्धिमात्रेणोभयत्र प्रसिद्धिसम्भवादिति भावः ।

ವಸ್ತುತಃ ಜೀವನೂ ಸಹ ಇಲ್ಲಿ ವಿಷ್ಣುವಿಗಿಂತ ಇತರಕೋಟಿಯಲ್ಲಿ ಪ್ರವಿಷ್ಟನಾಗಿದ್ದರೂ ಜೀವವಿಷಯಕವಾಗಿ ಸಮಾಖ್ಯಾಪ್ರಮಾಣವು ಇರುವುದಿಲ್ಲ. ಆದ್ದರಿಂದ ತತ್‌ಸಾಧಾರಣವಾದ ಶ್ರುತಿಯನ್ನು ಹೇಳಲಾಗದು. ಆದರೆ ಪೂರ್ವಪಕ್ಷ ಕೋಟಿಯಲ್ಲಿ ರುದ್ರ, ವಾಯು, ಪ್ರಕೃತಿಗಳು ಇರುವುದರಿಂದ ಅವುಗಳ ವಿಷಯದಲ್ಲಿ ಶ್ರುತಿಯು ಸಾಧಾರಣವಾಗಿರುವುದರಿಂದ ಕೆಲವಡೆ ಪ್ರಸಿದ್ಧವಾದ ಮಾತ್ರದಿಂದಲೇ ಉಭಯತ್ರ ಪ್ರಸಿದ್ಧವೆಂದು ಹೇಳಬಹುದು.

ಭಾವದೀಪಃ – यद्वा इत्यादिनेत्यादिपदेन जायमानत्वलिङ्गग्रहः । अधिकं चन्द्रिकायां बोध्यम् । भाष्ये प्रकृतिकोटेरनुक्तावपि तत्त्वनिर्णये न प्रकृतिजीवावित्युक्त्या भाष्येऽपि सा उपलक्ष्येति भावः ।

ಅಥವಾ ''ಇತ್ಯಾದಿನಾ'' ಎಂಬಲ್ಲಿರುವ 'ಆದಿ' ಪದದಿಂದ ''ಜಾಯಮಾನತ್ವ'' ಎಂಬ ಲಿಂಗವನ್ನು ಸ್ವೀಕರಿಸಬಹುದು. ಆವಾಗ ಜೀವನಲ್ಲಿಯೂ ಶ್ರುತಿಸಾಧಾರಣ್ಯವು ಬರುವುದರಿಂದ ಉಭಯತ್ರಪ್ರಸಿದ್ಧಿಯನ್ನು ಕೂಡಿಸಬಹುದು. ಹೆಚ್ಚಿನ ವಿಚಾರವನ್ನು ಚಂದ್ರಿಕೆಯಿಂದಲೇ ತಿಳಿದುಕೊಳ್ಳಬೇಕು. ಭಾಷ್ಯದಲ್ಲಿ ಪ್ರಕೃತಿಯೆಂಬ ಪೂರ್ವಪಕ್ಷಕೋಟಿಯನ್ನು ಹೇಳಿರುವುದಿಲ್ಲ. ಆದರೆ ತತ್ತ್ವನಿರ್ಣಯದಲ್ಲಿ ''ನ ಪ್ರಕೃತಿಜೀವೌ''

ಎಂದು ಹೇಳಿದ್ದರಿಂದ ಪ್ರಕೃತ ಭಾಷ್ಯದಲ್ಲಿಯೂ ಅದು ವಿವಕ್ಷಿತವಾಗಿದೆ ಎಂದು ಉಪಲಕ್ಷಣಯಾ ತಿಳಿದುಕೊಳ್ಳಬೇಕು.

ಭಾವದೀಪಃ – तथाच वक्ष्यत्यभाषितमित्यादिना स्वयमेव ।। शास्त्रादीति ।। भगवतीत्युक्त्या शास्त्रे समन्वयेत्युक्त्याऽध्याये उभयत्रप्रसिद्धिरित्युक्त्या पादे अन्तर्भावसङ्गतिरुपपादितेति व्यक्तम् । एवमग्रेऽपि ।

ಮುಂದೆಯೂ ಸಹ "ವಕ್ಷ್ಯತ್ಯಭಾಷಿತಂ" ಇತ್ಯಾದಿಯಾಗಿ ಇದನ್ನು ಸ್ವತಃ ಭಾಷ್ಯಕಾರರೇ ಹೇಳಿದ್ದಾರೆ. "ಶಾಸ್ತ್ರಾದಿ" ಎಂಬ ಟೀಕೆಗೆ ಹೀಗರ್ಥ - 'ಭಗವತಿ' ಎಂದು ಹೇಳಿದ್ದರಿಂದಲೇ ಶಾಸ್ತ್ರಸಂಗತಿಯನ್ನು ಹೇಳಿದಂತಾಯಿತು. "ಸಮನ್ವಯಾತ್" ಎಂದು ಹೇಳಿದ್ದರಿಂದ ಅಧ್ಯಾಯಸಂಗತಿಯನ್ನು ಹೇಳಿದಂತಾಯಿತು. "ಉಭಯತ್ರಪ್ರಸಿದ್ಧಿಃ" ಎಂದು ಹೇಳಿದ್ದರಿಂದ ಪಾದಸಂಗತಿಯನ್ನು ಹೇಳಿದಂತಾಯಿತು. ಹೀಗೆ ಮೂರು ಬಗೆಯ ಅಂತರ್ಭಾವಸಂಗತಿಯು ಸ್ಪಷ್ಟವಾಗಿ ತಿಳಿಯುತ್ತದೆ. ಮುಂದೆಯೂ ಹೀಗೆಯೇ ಅಂತರ್ಭಾವಸಂಗತಿಗಳನ್ನು ತಿಳಿಯಬೇಕು.

ಭಾವದೀಪಃ –इत्यन्तभाष्यं सङ्गतिपरत्वेन तावद् व्याचष्टे – अदृश्यत्वादीति ।। उक्तमित्यन्तभाष्यस्यायमर्थः । आत्मानमित्यत्रेत्यन्तवाक्यार्थः – तत्परविद्याविषयत्वमित्यादि ।।

"ಇತಿ" ಎಂಬಲ್ಲಿಯ ತನಕ ಇರುವ ಭಾಷ್ಯವನ್ನು ಸಂಗತಿಪರವಾಗಿ ವ್ಯಾಖ್ಯಾನಿಸುತ್ತಿದ್ದಾರೆ "ಅದೃಶ್ಯತ್ವಾದಿ" ಇತ್ಯಾದಿಯಾಗಿ. "ಉಕ್ತಂ" ಎಂಬಲ್ಲಿಯ ತನಕದ ಭಾಷ್ಯದ ಅರ್ಥ ಹೀಗಿದೆ - "ಆತ್ಮಾನಂ" ಎಂಬಲ್ಲಿ "ಇತಿ" ಎಂಬಲ್ಲಿಯ ತನಕದ ವಾಕ್ಯದ ಅರ್ಥವನ್ನು "ತತ್ಪರವಿದ್ಯಾವಿಷಯತ್ವಂ" ಇತ್ಯಾದಿಯಾಗಿ ಹೇಳಿದ್ದಾರೆ.

ಭಾವದೀಪಃ – अत्र भाष्यानुक्तवाक्यशेषोक्तिः सिद्धान्तोपयोगाय वा मुक्तिहेतुज्ञानस्यैव परविद्यात्वात् जानय इत्युक्तज्ञानस्यामृतपदलब्धमुक्तिहेतुत्वसूचनाय वेति भावः ।

ಭಾಷ್ಯದಲ್ಲಿ ಉಲ್ಲೇಖಿಸದ ವಾಕ್ಯಶೇಷವನ್ನು ಹೇಳಿದ್ದಕ್ಕೆ ಏನು ಕಾರಣವೆಂದರೆ ಮುಂದೆ ಸಿದ್ಧಾಂತಕ್ಕೆ ಉಪಯೋಗ ವಾಗಬೇಕೆಂದು, ಅಥವಾ ಮೋಕ್ಷಕ್ಕೆ ಕಾರಣವಾದ ಜ್ಞಾನವೇ ಪರವಿದ್ಯೆಯಾದ್ದರಿಂದ ಎಂದು. "ಜಾನಥ" ಎಂಬುದರಿಂದ ಹೇಳಲ್ಪಟ್ಟ ಭಗವಂತನ ಜ್ಞಾನವು ಅಮೃತಪದದಿಂದ ತಿಳಿಯುವ ಮೋಕ್ಷಕ್ಕೆ ಕಾರಣವಾಗಿದೆ ಎಂದು ಸೂಚಿಸುವುದಕ್ಕಾಗಿಯೂ ವಾಕ್ಯಶೇಷವು ಸಾರ್ಥಕವಾಗಿದೆ.

ಭಾವದೀಪಃ – तत्त्वप्रदीपे तु अनन्ययोगेन प्रधानज्ञेयत्वं ब्रुवोच्यते । तदेव च परविद्याविषयत्वमिति यथाश्रुतभाष्येणैव परविद्याविषयत्वलाभो व्याख्यातः ।

ತತ್ತ್ವಪ್ರದೀಪದಲ್ಲಿಯಾದರೂ, ಅನನ್ಯಯೋಗದಿಂದ ಪ್ರಧಾನವಾಗಿ ತಿಳಿಯುವುದಕ್ಕಾಗಿ ವಾಕ್ಯಶೇಷವನ್ನು

ತಿಳಿಯಬೇಕು. ಆದೇ ಪರವಿದ್ಯೆಗೆ ವಿಷಯವಾಗುತ್ತದೆ ಹೀಗೆ ಯಥಾಶ್ರುತವಾಗಿ ಭಾಷ್ಯದಿಂದ ಪರವಿದ್ಯಾವಿಷಯತ್ವವು ಲಾಭವಾಗುತ್ತದೆ ಎಂದು ವ್ಯಾಖ್ಯಾನಿಸಿದ್ದಾರೆ.

ಭಾವದೀಪಃ – 'ಪ್ರಾಣಾನಾಂ ಗ್ರನ್ಥಿರಸಿ' ಇತ್ಯಾದಿಕೃತ್ಸ್ನಭಾಷ್ಯಶೇಷಸ್ಯ ತಾತ್ಪರ್ಯಮ್ – ಸ ಚೇತಿ ।। ದ್ಯುಭ್ವಾದ್ಯಾಯತನಭೂತ ಆತ್ಮೇತ್ಯರ್ಥಃ । ದ್ಯುಭ್ವಾದ್ಯಾಯತನಸ್ಯೋಚ್ಯತ ಇತ್ಯುಕ್ತಸ್ಯ ತಚ್ಚೇತಿ ಪದೇ ಪರಾಮರ್ಶೇ ಕಾರ್ಯೇऽಪಿ 'ಸ ಚ' ಇತಿ ತಾದೃಶಾತ್ಮಪರಾಮರ್ಶಸ್ತು ಪರವಿದ್ಯಾ-ವಿಷಯತ್ವಾಕ್ಷೇಪಸೌಕರ್ಯಾಯ ।

''ಪ್ರಾಣಾನಾಂ ಗ್ರಂಥಿರಸಿ'' ಇತ್ಯಾದಿಯಾದ ಸಮಸ್ತಭಾಷ್ಯದ ತಾತ್ಪರ್ಯವನ್ನು ''ಸ ಚ'' ಎಂಬ ವಾಕ್ಯದಿಂದ ಹೇಳುತ್ತಿದ್ದಾರೆ. ದ್ಯುಭ್ವಾದ್ಯಾಯತನನಾದ ಆತ್ಮನು ಎಂದು ''ಸ ಚ'' ಎಂಬ ಪದಕ್ಕೆ ಅರ್ಥ . ''ದ್ಯುಭ್ವಾದ್ಯಾಯತನಸ್ಯೋಚ್ಯತೇ'' 'ದ್ಯುಭ್ವಾದ್ಯಾಯತನನಿಗೆ ಹೇಳಲಾಗುತ್ತದೆ' ಎಂದು ಹೇಳಲ್ಪಟ್ಟದ್ದನ್ನು ''ತಸ್ಯ'' ಎಂಬ ಪದದಿಂದ ಪರಾಮರ್ಶ ಮಾಡಬಹುದು. ಆದರೂ ಸಹ ''ಸ ಚ'' ಎಂಬುದಾಗಿ ಪರಾಮರ್ಶ ಮಾಡಲು ಕಾರಣವೇನೆಂದರೆ ಪರಾವಿದ್ಯಾವಿಷಯತ್ವದ ಆಕ್ಷೇಪಕ್ಕೆ ಅನುಕೂಲವಾಗುವುದಕ್ಕಾಗಿ.

ಭಾವದೀಪಃ – ಇತರಸ್ಯಾದಿತಿ ।। ರುದ್ರಾದಿಸಮಾಖ್ಯಾಬಲಾದ್ ರುದ್ರಾದಿರಿತ್ಯರ್ಥಃ । ಉಕ್ತಮಿತ್ಯನ್ತಭಾಷ್ಯಸ್ಯ ಭಾವಮಾಹ – ತದೇತಿ ।। ಇತಿ ಸಙ್ಗತಿಸಮ್ಭವಾದಿತ್ಯರ್ಥಃ ।

ಇತರಃ ಸ್ಮಾತ್'' ಎಂದರೆ ರುದ್ರಾದಿ ಶ್ರುತಿಯ ಸಮಾಖ್ಯಾಪ್ರಮಾಣದಿಂದ ರುದ್ರಾದಿಗಳು ದ್ಯುಭ್ವಾದ್ಯಾಯತನರಾಗುತ್ತಾರೆ ಎಂದರ್ಥ. ''ಉಕ್ತಂ'' ಎಂಬಲ್ಲಿಯ ತನಕದ ಭಾಷ್ಯದ ಅಭಿಪ್ರಾಯವನ್ನು ''ತದಾ'' ಎಂಬುದರಿಂದ ಹೇಳಿದ್ದಾರೆ. ಹೀಗೆ ಸಂಗತಿಯು ಕೂಡುವುದರಿಂದ ಎಂದು ಇದರರ್ಥ.

ಭಾವದೀಪಃ – ಸೂತ್ರೇ ಧರ್ಮಿನಿರ್ದೇಶೇऽಪಿ ತಯೋರಿತಿ ಭಾಷ್ಯಾನುರೋಧಾದ್ ದ್ಯುಭ್ವಾದ್ಯಾಯತನತ್ವಂ ವಿಷಯ ಇತ್ಯುಕ್ತಮ್ । ಆದಿಪದೇನಾನ್ತರಿಕ್ಷಪ್ರಾಣಮನಸಾಂ ಸಙ್ಗ್ರಹಃ । ಭಾಷ್ಯೇ ತಯೋರಿತಿ ದ್ವಿವಚನೋಕ್ತಾವಪಿ ಅಗ್ರೇ ವಾಯುಶ್ಚ ಇತ್ಯುಕ್ತೇರನ್ಯೇಷಾಮಿತ್ಯುಕ್ತಮ್ ।

ಸೂತ್ರದಲ್ಲಿ ಧರ್ಮಿಯನ್ನು ನಿರ್ದೇಶ ಮಾಡಿದ್ದರೂ ಭಾಷ್ಯದಲ್ಲಿ ''ತಯೋಃ'' ಇತ್ಯಾದಿಯಾಗಿ ಹೇಳಿರುವುದರಿಂದ ಆದಕ್ಕನುಸಾರಿಯಾಗಿ ದ್ಯುಭ್ವಾದ್ಯಾಯತನತ್ವವು ವಿಷಯವಾಗಿದೆ ಎಂದು ಹೇಳಿದ್ದಾರೆ. ಆದಿ ಪದದಿಂದ ಆಕಾಶ, ಪ್ರಾಣ, ಮನಸ್ಸು ಇವುಗಳನ್ನೆಲ್ಲಾ ಸಂಗ್ರಹಿಸಬೇಕು. ಭಾಷ್ಯದಲ್ಲಿ ''ತಯೋಃ'' ಎಂಬುದಾಗಿ ದ್ವಿವಚನದಿಂದ ಇಬ್ಬರೇ ಪೂರ್ವಪಕ್ಷಕ್ಕೆ ವಿಷಯವೆಂದು ಹೇಳಿದ್ದರೂ ಸಹ ಮುಂದೆ ''ವಾಯುಶ್ಚ'' ಎಂದು ಹೇಳಿದ್ದರಿಂದ ಟೀಕೆಯಲ್ಲಿ ''ಅನ್ಯೇಷಾಂ'' ಎಂದು ಬಹುವಚನಪ್ರಯೋಗವನ್ನೇ ಮಾಡಿದ್ದಾರೆ.

ಭಾವದೀಪಃ – ತದೇವ ಭಾಷ್ಯಂ ಪೂರ್ವಪಕ್ಷತದ್ಯುಕ್ತಿತತ್ಫಲೋಕ್ತಿಪರತಯಾ ವ್ಯಾಕುರ್ವನ್ ತಯೋಃ ಪ್ರಾಸಿರಿತಿ ಪ್ರತಿಜ್ಞಾಂಶಂ ವ್ಯಾಚಷ್ಟೇ – ದ್ಯುಭ್ವಾದೀತಿ ।। ತಯೋರಿತ್ಯುಪಲಕ್ಷಣಮಿತಿ ಭಾವಃ ।

ಆದೇ ಭಾಷ್ಯವನ್ನು ಪೂರ್ವಪಕ್ಷ, ಪೂರ್ವಪಕ್ಷಯುಕ್ತಿ ಹಾಗೂ ಪೂರ್ವಪಕ್ಷಫಲಪರವಾಗಿ ವ್ಯಾಖ್ಯಾನಿಸುತ್ತಾ ''ತಯೋಃ ಪ್ರಾಪ್ತಿಃ'' ಎಂಬ ಪ್ರತಿಜ್ಞಾಭಾಗವನ್ನು ವ್ಯಾಖ್ಯಾನಿಸುತ್ತಿದ್ದಾರೆ ''ದ್ಯುಭ್ವಾದಿ'' ಇತ್ಯಾದಿಯಾಗಿ. ಭಾಷ್ಯದಲ್ಲಿರುವ ''ತಯೋಃ'' ಎಂಬ ಪದವು ಉಪಲಕ್ಷಣವೆಂದು ತಿಳಿಯಬೇಕು. ನಾಲ್ಕು ಬಗೆಯ ಪೂರ್ವಪಕ್ಷಕೋಟಿಗಳಲ್ಲಿ ಮೊದಲೆರಡು ಪೂರ್ವಪಕ್ಷಕೋಟಿಗಳು ''ಸಾನುಮಾನಂ'' ಎಂಬುದರಿಂದ ವ್ಯಾವರ್ತ್ಯವಾಗಿವೆ. ಮತ್ತೆರಡು ಪೂರ್ವಪಕ್ಷಕೋಟಿಗಳು ''ಪ್ರಾಣಭೃಚ್ಚ'' ಎಂಬುದರಿಂದ ವ್ಯಾವರ್ತ್ಯವಾಗಿವೆ ಎಂದು ತಿಳಿಯಬೇಕು.

एतत्कोटिचतुष्टयं द्विशो द्विशः क्रमेण नानुमानं प्राणभृच्चेति सूत्रद्वयव्यावर्त्यं बोध्यम् । अत एवैवं निर्देशः । यस्मिन्नित्यादेः प्रतीतेरित्यन्तस्यार्थः – अत्रेत्यादि ।। यस्मिन् द्यौरित्यादिवाक्योक्तेत्यर्थः । अत्र श्रुतौ 'जानथ आत्मानम्' इति विवृतिः सर्ववैलक्षण्यप्रदर्शनायेति तत्त्वप्रदीपोक्तिः । अतच्छब्दादिति सौत्रखण्डं यावत्योक्तिपरं प्राणानामित्यादिभाष्यं व्याकुर्वन् प्राणाधारत्वप्रत्यायकांशमाह – प्राणानामिति ।।

''ಯಸ್ಮಿನ್'' ಎಂಬಲ್ಲಿಂದ ಪ್ರಾರಂಭಿಸಿ ''ಪ್ರತೀತೇಃ'' ತನಕದ ಭಾಷ್ಯದ ಅರ್ಥವನ್ನು ''ಅತ್ರ'' ಇತ್ಯಾದಿ ವಾಕ್ಯಗಳಿಂದ ನಿರೂಪಿಸುತ್ತಿದ್ದಾರೆ. ''ಯಸ್ಮಿನ್ ದ್ಯೌಃ'' ಎಂಬ ವಾಕ್ಯದಲ್ಲಿ ಹೇಳಲ್ಪಟ್ಟ ಎಂದರ್ಥ. ಈ ಶ್ರುತಿಯಲ್ಲಿ ''ಜಾನಥ ಆತ್ಮಾನಂ'' ಪದಗಳಿಗೆ ಯೋಜನೆ ಮಾಡಿದ್ದು ಏಕೆಂದರೆ ಸಕಲವೈಲಕ್ಷಣ್ಯವನ್ನು ತೋರಿಸುವುದಕ್ಕಾಗಿ ಎಂದು ತತ್ವಪ್ರದೀಪಕಾರರು ಹೇಳಿದ್ದಾರೆ. ''ಅತಚ್ಛಬ್ದಾತ್'' ಎಂಬ ಸೂತ್ರದ ಭಾಗದಿಂದ ನಿರಾಕೃತವಾಗುವ ಪೂರ್ವಪಕ್ಷವನ್ನು ಮತ್ತು ''ಪ್ರಾಣಾನಾಂ'' ಇತ್ಯಾದಿ ಭಾಷ್ಯವನ್ನು ವ್ಯಾಖ್ಯಾನಿಸುವವರಾಗಿ ''ಪ್ರಾಣಾನಾಂ'' ಇತ್ಯಾದಿ ಟೀಕೆಯು ಹೊರಟಿದೆ.

भावदीपः – श्रुत्यर्थस्तु 'तदभिध्यानादेव तु तल्लिङ्गात् सः' इत्यत्राग्रे टीकायां व्यक्तः । न्यायविवरणे 'यस्मिन् द्यौः' इत्यत्रोक्तानां लिङ्गानामन्यत्र रुद्रादिविषयत्वे शब्दबाहुल्यमित्युक्तलिङ्गत्रये समाख्यात्रयमुक्तम् । तत्रैकत्र प्राणाधारत्वलिङ्गे वाक्यद्वयोक्त्या एका समाख्या भाष्ये प्रकटिता । शिष्टं द्वयं स्वयमाह – तथेति ।।

''ಪ್ರಾಣಾನಾಂ'' ಎಂಬ ಶ್ರುತಿಯ ಅರ್ಥವನ್ನು ಸ್ವತಃ ಟೀಕಾರಾಯರೇ ಮುಂದೆ ''ತದಭಧ್ಯಾನಾದೇವ ತು ತಲ್ಲಿಂಗಾತ್ ಸಃ'' ಎಂಬ ಸೂತ್ರದ ವ್ಯಾಖ್ಯಾನದ ಸಂದರ್ಭದಲ್ಲಿ ಸ್ಪಷ್ಟಪಡಿಸುತ್ತಾರೆ. ''ಯಸ್ಮಿನ್ ದ್ಯೌಃ'' ಎಂಬ ಶ್ರುತಿಯಿಂದ ತಿಳಿಯುವ ಲಿಂಗಗಳು ರುದ್ರನಲ್ಲಿ ಬರುತ್ತವೆಂದು ಹೇಳುವಲ್ಲಿ ಅನೇಕ ಶ್ರುತಿಗಳು ಆಧಾರವಾಗಿದೆ. ಆದ್ದರಿಂದ ಮೂರು ಬಗೆಯ ಲಿಂಗಗಳಿಗೆ ಮೂರು ಬಗೆಯ ಸಮಾಖ್ಯಾಪ್ರಮಾಣಗಳನ್ನು ಹೇಳಿದ್ದಾರೆ. ಅಂತಹ ಮೂರು ಸಮಾಖ್ಯಾಪ್ರಮಾಣಗಳಲ್ಲಿ ಪ್ರಾಣಾಧಾರತ್ವ ಲಿಂಗಕ್ಕೆ ಎರಡು ಶ್ರುತಿಗಳನ್ನು ಉಲ್ಲೇಖಿಸುವ ಮೂಲಕ ಒಂದು ಸಮಾಖ್ಯಾಪ್ರಮಾಣವನ್ನು ಭಾಷ್ಯಕಾರರೇ ತೋರಿಸಿದ್ದಾರೆ. ಉಳಿದ ಎರಡು ಸಮಾಖ್ಯಾಪ್ರಮಾಣಗಳನ್ನು ಸ್ವತಃ ಟೀಕಾರಾಯರು ''ತಥಾ'' ಎಂಬ ವಾಕ್ಯದಿಂದ ತೋರಿಸುತ್ತಿದ್ದಾರೆ.

ಭಾವದೀಪಃ – ಲೋಕಾಧಾರ ಇತಿ ಸಮಾಖ್ಯಯಾ ಏಕಾರ್ಥ್ಯಾಯ ದ್ಯುಭ್ವನ್ತರಿಕ್ಷೇತ್ಯೇತಾವದಂಶೋಕ್ತಿಃ। ಯದ್ವಾ ದ್ಯುಭ್ವಾದ್ಯಾಯತನಸ್ಯೇತ್ಯುಕ್ತೇ ಪೂರ್ವತ್ರೈವಾऽದಿಪದೇನ ಪ್ರಾಣಮನಸೋರಪಿ ಗ್ರಹಣಶಙ್ಕಾ ಸ್ಯಾದಿತ್ಯತೋ ದ್ಯುಭ್ವನ್ತರಿಕ್ಷೇತ್ಯುಕ್ತಿಃ । ತಸ್ಮಿನ್ನಿತಿ ಸ್ವವಚನಮ್ । ಪ್ರತೀಯತ ಇತ್ಯನ್ವಯಃ ।

ದ್ಯುಲೋಕಕ್ಕೆ ಆಶ್ರಯವಾಗಿರುವಿಕೆ ಹಾಗೂ ಆಂತರಿಕ್ಷಕ್ಕೆ ಆಶ್ರಯವಾಗಿರುವಿಕೆ ಎಂಬ ಲಿಂಗಕ್ಕೆ "ರುದ್ರೋ ವಾವ ಲೋಕಾಧಾರಃ" ಎಂಬ ಶ್ರುತಿಯು ಸಮಾಖ್ಯಾಪ್ರಮಾಣವಾಗಿದೆ. ಲಿಂಗ ಹಾಗೂ ಶ್ರುತಿಗಳು ಒಂದೇ ಅರ್ಥದಲ್ಲಿ ಇವೆ ಎಂಬುದನ್ನು ತಿಳಿಸುವುದಕ್ಕಾಗಿ ಟೀಕೆಯಲ್ಲಿ "ದ್ಯುಭ್ವಂತರಿಕ್ಷ" ಎಂದು ಹೇಳಿದ್ದಾರೆ. ಅಥವಾ "ದ್ಯುಭ್ವಾದ್ಯಾಯತನಸ್ಯ" ಎಂದು ಹೇಳಿದರೆ ಹಿಂದಿನಂತೆ ಇಲ್ಲಿಯೂ ಸಹ "ಆದಿ" ಪದದಿಂದ ಪ್ರಾಣನಿಗೆ ಆಶ್ರಯವಾಗಿರುವಿಕೆ ಹಾಗೂ ಮನಸ್ಸಿಗೆ ಆಶ್ರಯವಾಗಿರುವಿಕೆ ಎಂಬೆರಡು ಧರ್ಮಗಳೂ ಸಹ ಸಂಗ್ರಹವಾಗುತ್ತಿದ್ದವು. ಅದಕ್ಕೋಸ್ಕರ ಸ್ಪಷ್ಟವಾಗಿ "ದ್ಯುಭ್ವಂತರಿಕ್ಷ" ಎಂದು ಹೇಳಿದ್ದಾರೆ. "ತಸ್ಮಿನ್" ಎಂಬುದು ಟೀಕಾರಾಯರ ಮಾತೇ ಹೊರತು ಶ್ರುತಿಯಲ್ಲ. "ಪ್ರತೀಯತೇ" ಎಂಬುದನ್ನು ಇಲ್ಲಿಯೂ ಸಹ ಅನ್ವಯ ಮಾಡಿಕೊಳ್ಳಬೇಕು.

ಭಾವದೀಪಃ –'ಮನೋ ವೈ ರುದ್ರಃ' ಇತಿ ತು ಸಮಾಖ್ಯಾಶ್ರುತಿಃ । ಭಾಷ್ಯೇ ಶ್ರುತಿಶೇಷೋಕ್ತೇರುಪಯೋಗಂ ಶಙ್ಕಾಪೂರ್ವಮಾಹ – ನಚೇತಿ ।। ಅನ್ತರ್ನಯೇ ಆಧಿದೈವಿಕಸರ್ವಶಬ್ದಾನಾಂ ಮಹಾಯೋಗವಿದ್ಧದ್ಭೂಢಿಮ್ಯಾಂ ವಿಷ್ಣುನಿಷ್ಠತ್ವೋಕ್ತೇರಿತಿ ಭಾವಃ । ಅನೇಕಶ್ರುತ್ಯುಕ್ತಿಲಿಙ್ಗಬಾಹುಲ್ಯೋತ್ಕರ್ಷೇತಿ ಮತ್ವೋಕ್ತಮಿತ್ಯಾದೀತಿ । ಏತೇನಾನ್ಯತ್ರೋಕ್ತಸಮಾಖ್ಯಾತ್ರಯೇ ಪ್ರಾಣಾಧಾರತ್ವಸಮಾಖ್ಯಾಯಾ ಏವ ಭಾಷ್ಯೇ ಪಾಠಃ ಶ್ರುತ್ಯುಜ್ಜೀವಕಲಿಙ್ಗೋತ್ಕರ್ಷಃ ।

"ಮನೋ ವೈ ರುದ್ರಃ" "ಮನಸ್ಸಿಗೆ ಆಶ್ರಯವಾಗಿರುವಿಕೆ" ಎಂಬುದು ಸಮಾಖ್ಯಾಶ್ರುತಿಯಾಗಿದೆ. ಭಾಷ್ಯದಲ್ಲಿ "ಕೃತ್ತಿವಾಸಾಃ ಪಿನಾಕೀ" ಎಂಬ ಶ್ರುತಿಯ ಉಳಿದ ಭಾಗವನ್ನು ಉಲ್ಲೇಖಿಸಲು ಕಾರಣವೇನು ಎಂಬುದನ್ನು "ನಚ" ಎಂಬ ವಾಕ್ಯದಿಂದ ಶಂಕಾಪೂರ್ವಕವಾಗಿ ವಿವರಿಸುತ್ತಿದ್ದಾರೆ. ಆಂತರಾಧಿಕರಣದಲ್ಲಿ ಆಧಿದೈವಿಕವಾದ ಸಕಲ ಶಬ್ದಗಳನ್ನು ಮಹಾಯೋಗ ಹಾಗೂ ವಿದ್ವದ್ಭೂಢಿಗಳಿಂದ ವಿಷ್ಣುವಿನಲ್ಲೇ ಬರುತ್ತವೆ ಎಂದು ಸಮರ್ಥಿಸಲಾಗಿದೆ. ಆದ್ದರಿಂದ "ಪ್ರಾಣೇಶ್ವರಃ" ಎಂಬ ಶ್ರುತಿಯು ವಿಷ್ಣುವನ್ನೇ ಪ್ರತಿಪಾದಿಸುತ್ತದೆಂದು "ನಚ" ಎಂಬ ವಾಕ್ಯದಿಂದ ಆಶಂಕಿಸುತ್ತಿದ್ದಾರೆ. ಟೀಕೆಯಲ್ಲಿ "ಇತ್ಯಾದಿ" ಎಂದು ಹೇಳಿದ್ದರಿಂದ ಅನೇಕ ಶ್ರುತಿಗಳಲ್ಲಿ ಹೇಳಲ್ಪಟ್ಟ ಲಿಂಗಬಾಹುಲ್ಯವು ರುದ್ರನಲ್ಲೇ ಬರುತ್ತದೆಂದು ತಿಳಿಸಿದ್ದಾರೆ. ಆದ್ದರಿಂದ ಅಂತಕತ್ವ, ಕೃತ್ತಿವಾಸತ್ವ ಮೊದಲಾದ ಲಿಂಗಗಳಷ್ಟೇ ಅಲ್ಲ ಇನ್ನೂ ಹೆಚ್ಚಿನ ಲಿಂಗಗಳಿವೆ ಎಂದು ತಿಳಿಯಬೇಕು.

ಮೂರು ಬಗೆಯ ಸಮಾಖ್ಯಾಪ್ರಮಾಣಗಳಿವೆ ಎಂದು ನ್ಯಾಯವಿವರಣದಲ್ಲಿ ಹೇಳಲಾಗಿದೆ. ಅವುಗಳಲ್ಲಿ ಪ್ರಾಣಾಧಾರತ್ವವೆಂಬ ಸಮಾಖ್ಯಾಪ್ರಮಾಣವನ್ನಷ್ಟೇ ಭಾಷ್ಯದಲ್ಲಿ ಹೇಳಿದ್ದಾರೆ. ಹೀಗೆ ಭಾಷ್ಯದಲ್ಲಿ ಏಕೆ ಹೇಳಿದ್ದಾರೆಂದರೆ ಶ್ರುತಿಗೆ ಉಜ್ಜೀವಕವಾದ ಲಿಂಗವಿದೆ ಎಂದು ತಿಳಿಸುವುದಕ್ಕಾಗಿ.

ಭಾವದೀಪಃ – ಬಾಹುಲ್ಯಂ ಲಿಙ್ಗಶಬ್ದಾನಾಮಿತ್ಯನುಲ್ಯಾಖ್ಯಾನೇ ಲಿಙ್ಗೋಕ್ತಿಃ ಶಬ್ದೋಜ್ಜೀವನಾಯೇತಿ

च दर्शितम् । तथाचात्र समाख्याश्रुतौ विष्णुलिङ्गाभावात् प्रत्युतान्यलिङ्गानामेव श्रवणेनान्तर्नयन्यायाविषयत्वात् श्रुतयोऽपि निरवकाशा इति भावः ।

"ಬಾಹುಲ್ಯಂ ಲಿಂಗಶಬ್ದಾನಾಂ" ಎಂಬ ಅನುವ್ಯಾಖ್ಯಾನದಲ್ಲಿ ಶ್ರುತಿಯನ್ನು ಉಪೋದ್ಬಲಿಸುವುದಕ್ಕಾಗಿ ಲಿಂಗವು ಆವಶ್ಯಕವೆಂದು ಹೇಳಿದ್ದಾರೆ. ಆದ್ದರಿಂದ ಪ್ರಕೃತ ಸಮಾಖ್ಯಾಶ್ರುತಿಯಲ್ಲಿ ಯಾವುದೇ ವಿಷ್ಣುಲಿಂಗಗಳು ಇರುವುದಿಲ್ಲ ಹೊರತಾಗಿ ರುದ್ರಾದಿಗಳ ಲಿಂಗವೇ ಕೇಳಿಸುತ್ತಿವೆ. ಈ ಕಾರಣದಿಂದ ರುದ್ರಪ್ರತಿಪಾದಕವಾದ ಶಬ್ದಗಳು ಅಂತರಾಧಿಕರಣದ ನ್ಯಾಯಕ್ಕೆ ವಿಷಯವಾಗುವುದಿಲ್ಲ. ಆದ್ದರಿಂದಲೇ 'ಶ್ರುತಿಗಳೆಲ್ಲವೂ ನಿರವಕಾಶವೇ ಆಗಿವೆ' ಎಂದು ಪೂರ್ವಪಕ್ಷದ ಅಭಿಪ್ರಾಯ.

भावदीपः – नानुमानात्मकागमपरिकल्पितरुद्रोऽत्र वाच्य इति भाष्योक्तां सौत्रानुमानपदलब्धां युक्तिमाह – दृष्टफलेति ।। रुद्रवाक्येति ।। पाशुपदाति-रूपेत्यर्थः ।।

"ನಾನುಮಾನಾತ್ಕಾಗಮಪರಿಕಲ್ಪಿತರುದ್ರೋಽತ್ರ ವಾಚ್ಯಃ" - ಅನುಮಾನರೂಪವಾದ ಆಗಮದಿಂದ ರುದ್ರನು ಇಲ್ಲಿ ಪ್ರತಿಪಾದ್ಯನಾಗುವುದಿಲ್ಲ ಎಂಬ ಮುಂದಿರುವ ಭಾಷ್ಯದಲ್ಲಿ ಹೇಳಲ್ಪಟ್ಟ ಸೂತ್ರದಲ್ಲಿರುವ ಅನುಮಾನ ಪದದಿಂದ ತಿಳಿಯುವ ಯುಕ್ತಿಯನ್ನು "ದೃಷ್ಟಫಲ" ಇತ್ಯಾದಿ ವಾಕ್ಯದಿಂದ ತೋರಿಸುತ್ತಿದ್ದಾರೆ. "ರುದ್ರವಾಕ್ಯದೃಷ್ಟಾಂತೇನ" ಎಂದರೆ ಪಾಶುಪತಾದಿ ಶಾಸ್ತ್ರದಲ್ಲಿ ರುದ್ರವಿಷಯಕವಾದ ವಾಕ್ಯಗಳ ದೃಷ್ಟಾಂತದಿಂದ ಎಂದರ್ಥ.

भावदीपः – अनुमानेन चेति ।। न केवलं श्रुतिलिङ्गबाहुल्येन रुद्रपरत्वेन सिद्धसमाख्यानादिति चार्थः । तथाच 'नैव शास्त्रं कुवर्त्म तद्' इति पूर्वं तदप्रामाण्यमुक्तमिति न शङ्कचमिति भावः ।

ಕೇವಲ ಶ್ರುತಿಲಿಂಗಗಳ ಬಾಹುಲ್ಯದಿಂದಷ್ಟೇ ಶ್ರುತಿಗಳು ರುದ್ರಪರವೆಂದಲ್ಲ ಹಿಂದೆ ಹೇಳಲ್ಪಟ್ಟ ಸಮಾಖ್ಯಾಪ್ರಮಾಣಗಳಿಂದಲೂ ರುದ್ರನೇ ದ್ಯುಭ್ವಾದ್ಯಾಯತನನಾಗಿದ್ದಾನೆಂದು "ಅನುಮಾನೇನ ಚ"ಎಂಬಲ್ಲಿರುವ 'ಚ' ಶಬ್ದದಿಂದ ತಿಳಿಸಿದ್ದಾರೆ. ಆದ್ದರಿಂದ "ನೈವ ಶಾಸ್ತ್ರಂ ಕುವರ್ತ್ಮ ತತ್" ಎಂಬುದಾಗಿ ಹಿಂದೆ ರುದ್ರಾದಿ ಶಾಸ್ತ್ರಗಳಿಗೆ ಅಪ್ರಾಮಾಣ್ಯವನ್ನು ವಿವಕ್ಷಿಸಬಾರದು ಎಂದು ಪೂರ್ವಪಕ್ಷಕಾರರು ಅಭಿಪ್ರಾಯ ಪಡುತ್ತಾರೆ.

भावदीपः – यद्यपि

'शैवाद्यागमसम्प्राप्तदृष्टेन फलेन च ।
तद्वाक्योपमयान्यच्च प्रमाणत्वेऽनुमीयते ।।
द्युभ्वाद्यधिकरण (೧-೩-೧)

ईशवाक्यत्वत इति चेद् तद्व्यभिचारिणा ।
अप्रामाण्यानुमा च स्याद्... ।।'

इति शास्त्रयोनिनयानुव्याख्याने एवैषा युक्तिराशङ्क्य निरस्ता ।

ವಸ್ತುತಃ

''शैवाद्यागमसंप्राप्तदृष्ट्यनेन फलेन च ।
तदाद्यैक्योपमयान्यच्च प्रमाणत्वेऽनुमीयते ।
ईशवाक्यत्वद इति चेत्तद्गवृभिचारिणा ।
अप्रामाण्यानुमा च स्यात्''

ಇತ್ಯಾದಿಯಾಗಿ ಶಾಸ್ತ್ರಯೋನಿತ್ವಾಧಿಕರಣದ ಅನುವ್ಯಾಖ್ಯಾನದಲ್ಲೇ ಈ ಯುಕ್ತಿಯನ್ನು ಆಶಂಕಿಸಿ ನಿರಾಕರಿಸಿದ್ದಾರೆ.

ಭಾವದೀಪಃ – तथापीह श्रुतिलिङ्गबाहुल्येन प्रबलसमाख्यारूपहेत्वन्तरेण पूर्वपक्षे तद्बलेनेयमभ्युच्चयत्वेनोक्ता । यथा सर्वत्रप्रसिद्धेत्यत्रार्भकौकस्त्वेन सिद्धे चोद्येऽभ्युच्चयत्वेन चक्षुर्मयत्वाद्युक्तिस्तद्वत् । अत एवात्र सूत्रादावतच्छब्दादिति रुद्रश्रुतिलिङ्गासत्त्वोक्त्या समाख्यायाः सावकाशत्वमेवोच्यते न त्वागमाप्रामाण्यमिति भावः ।

ಆದರೂ ಸಹ ಪ್ರಕೃತ ಶ್ರುತಿ ಲಿಂಗಗಳ ಬಾಹುಲ್ಯವಿರುವುದರಿಂದ ಆಪ್ತೇಅಲ್ಲದೆ ಪ್ರಬಲವಾದ ಸಮಾಖ್ಯಾಪ್ರಮಾಣವಿರುವುದರಿಂದ ಪೂರ್ವಪಕ್ಷವು ಹೆಚ್ಚಿನ ಪ್ರಮಾಣಗಳಿಂದ ಬಲಿಷ್ಠವಾಗಿದೆ. ಆದ್ದರಿಂದ ಹಿಂದಿನ ಶಾಸ್ತ್ರಯೋನಿತ್ವಾಧಿಕರಣದ ಮಾತನ್ನು ಇಲ್ಲಿ ವಿವಕ್ಷಿಸಬಾರದು. ಯಾವರೀತಿಯಾಗಿ ''सर्वत्र प्रसिद्धोपदेशात्'' ಎಂಬ ಸೂತ್ರದಲ್ಲಿ ಅರ್ಭಕೌಕಸ್ತ್ವ ಲಿಂಗದಿಂದಲೇ ಪೂರ್ವಪಕ್ಷವು ದೃಢವಾಗಿದ್ದರೂ ಚಕ್ಷುರ್ಮಯತ್ವ ಮೊದಲಾದ ಹೆಚ್ಚಿನ ಯುಕ್ತಿಗಳಿಂದ ಪೂರ್ವಪಕ್ಷವನ್ನು ದೃಢಪಡಿಸುವಂತೆ ಇಲ್ಲಿಯೂ ಸಹ ತಿಳಿಯಬೇಕು. ಆದ್ದರಿಂದಲೇ ಪ್ರಕೃತ ಸೂತ್ರಗಳಲ್ಲಿ ''आतच्छब्दात्'' ಎಂಬುದರಿಂದ ರುದ್ರ ಪ್ರತಿಪಾದ್ಯವಾದ ಶ್ರುತಿ ಲಿಂಗಗಳು ಇಲ್ಲವೆಂದೇ ಹೇಳಿದ್ದಾರೆ. ಇದರಿಂದ ಸಮಾಖ್ಯಾಪ್ರಮಾಣವನ್ನು ಸಾವಕಾಶವೆಂದು ಹೇಳಿದ್ದಾರೆ ಹೊರತು ಆಗಮಕ್ಕೆ ಅಪ್ರಮಾಣ್ಯವನ್ನು ಹೇಳಿರುವುದಿಲ್ಲವೆಂದು ತಿಳಿಯಬೇಕು.

ಭಾವದೀಪಃ – यद्वा 'रुद्रो वाव लोकाधारः' इत्यादिश्रुत्या रुद्रादेः सर्वाधारत्वप्राप्तौ तद्बलेन तादृशागमस्यापि प्रामाण्यसम्भवेनाप्रामाण्यानुमानस्य बाधितत्वात्तदवष्टम्भेन-पूर्वपक्षो युक्तः । समाधिस्तु समाख्याया विष्णुपरत्वसाधनेनैव सेत्स्यतीति भावः ।

ಅಥವಾ ''रुद्रो वाव लोकाधारः'' ಇತ್ಯಾದಿ ಶ್ರುತಿಯಿಂದ ರುದ್ರಾದಿಗಳಲ್ಲಿಯೂ ಸರ್ವಾಧಾರತ್ವವು ಪ್ರಾಪ್ತವಾಗುತ್ತದೆ. ಸರ್ವಾಧಾರತ್ವದ ಬಲದಿಂದ ರುದ್ರ ಪ್ರತಿಪಾದಕವಾದ ಆಗಮಕ್ಕೆ

ಪ್ರಾಮಾಣ್ಯವು ಬರುತ್ತದೆ. ಇದರಿಂದ ಅಪ್ರಾಮಾಣ್ಯಾನುಮಾನವು ಬಾಧಿತವಾಗುತ್ತದೆ. ಅದರ ಬಲದಿಂದ ಪೂರ್ವಪಕ್ಷವು ದೃಢವಾಗುತ್ತದೆ. ಸಮಾಖ್ಯಾಪ್ರಮಾಣಕ್ಕೆ ವಿಷ್ಣುಪರತ್ವವನ್ನು ಸಾಧಿಸುವುದರಿಂದಲೇ ಇದರ ನಿರಾಕರಣೆಯನ್ನು ಮಾಡಿದಂತಾಗುತ್ತದೆ ಎಂದು ತಿಳಿಯಬೇಕು.

ಭಾವದೀಪಃ – तत्त्वनिर्णयोक्तप्रकृतिकोटिमपि सोपपत्तिकमुपपादयति – युभ्वादीनामिति ।। 'खण्डितं रूपमेवात्र विकारोऽपि विकारिणः' इत्युक्त्या भेदस्यापि भावेनाश्रयाश्रयिभावो न विरुद्ध इत्युपेत्य युक्तमित्युक्तम् ।

ತತ್ವನಿರ್ಣಯದಲ್ಲಿ ಪ್ರಕೃತಿಯೂ ಸಹ ದ್ಯುಭ್ವಾದ್ಯಾಯತನವಾಗಬಹುದೆಂದು ಹೇಳಿದ್ದಾರೆ. ಅದನ್ನು ಉಪಪತ್ತಿಸಹಿತವಾಗಿ ಟೀಕೆಯಲ್ಲಿ "ದ್ಯುಭ್ವಾದೀನಾಂ" ಎಂಬ ವಾಕ್ಯದಿಂದ ಪ್ರತಿಪಾದಿಸುತ್ತಿದ್ದಾರೆ. "ಖಂಡಿತಂ ರೂಪಮೇವಾತ್ರ ವಿಕಾರೋಽಪಿ ವಿಕಾರಿಣಃ" ಎಂಬ ಮಾತಿನಂತೆ ಕಾರ್ಯ ಹಾಗೂ ಕಾರಣಗಳಿಗೆ ಭೇದವು ಇರುತ್ತದೆ. ಈ ದೃಷ್ಟಿಯಿಂದ ಆಶ್ರಯಾಶ್ರಯಿಭಾವವನ್ನು ಹೇಳುವುದು ವಿರುದ್ಧವಲ್ಲವೆಂದು ವಿವಕ್ಷಿಸಿ "ಉಕ್ತಂ" ಎಂಬ ಪದವನ್ನು ಟೀಕೆಯಲ್ಲಿ ಪ್ರಯೋಗಿಸಿದ್ದಾರೆ.

ಭಾವದೀಪಃ – 'यत्किञ्च जगत्यां जगद्' इति निर्देशवदिति भावः ।। पूर्ववदिति ।। दृष्टफलेत्यादिपूर्वोक्तदिशेत्यर्थः । 'स एषोऽन्तः' इति भाष्यं सर्वनामपरामर्शं दर्शयन् व्याचष्टे – अरा इवेति ।। 'प्राणभृच्च' इति सौत्रपदसूचितां युक्तिमाह – तस्येति ।।

"ಯತ್ಕಿಂಚ ಜಗತ್ಯಾಂ ಜಗತ್" ಎಂಬಲ್ಲಿ ಕಾರ್ಯಕಾರಣಗಳಿಗೆ ಆಶ್ರಯಾಶ್ರಯಿಭಾವವನ್ನು ಹೇಳಿದಂತೆ ಇಲ್ಲಿಯೂ ತಿಳಿಯಬೇಕು. "ಪೂರ್ವವತ್" ಎಂದರೆ "ದೃಷ್ಟಫಲವಿಧಾಯಕ"ಇತ್ಯಾದಿ ವಾಕ್ಯದಲ್ಲಿ ಹೇಳಿದ ಪ್ರಕಾರವೆಂದರ್ಥ. "ಸ ಏಷೋಽಂತಶ್ಚರತೇ" ಎಂಬ ಭಾಷ್ಯವನ್ನು ಸರ್ವನಾಮದಿಂದ ಯಾವುದನ್ನು ಪರಾಮರ್ಶಿಸಬೇಕೆಂದು ತೋರಿಸುತ್ತಾ ವ್ಯಾಖ್ಯಾನಿಸುತ್ತಿದ್ದಾರೆ "ಅರಾ ಇವ ರಥನಾಭೌ" ಎಂಬ ವಾಕ್ಯದಿಂದ. "ಪ್ರಾಣಭೃಚ್ಚ" ಎಂಬ ಸೂತ್ರದಲ್ಲಿ ಸೂಚಿತವಾದ ಯುಕ್ತಿಯನ್ನು "ತಸ್ಯ" ಎಂಬ ವಾಕ್ಯದಿಂದ ಹೇಳಿದ್ದಾರೆ.

ಭಾವದೀಪಃ – 'जीव प्राणधारणे' इति धातोरिति भावेन जीवत्वादेवेत्युक्तिः । 'प्राणभृच्च' इति चशब्दसूचितकोटिं सयुक्तिकं व्यनक्ति – विषयेति ।। प्रसिद्धेश्चेति ।। 'एवमेवैष प्राण इतरान् प्राणान् पृथक् पृथगेव सन्निधत्ते' इत्यादावित्यर्थः ।।

'ಜೀವ ಪ್ರಾಣಧಾರಣೇ' ಎಂಬ ಧಾತುವಿರುವುದರಿಂದ ಜೀವನಲ್ಲಿ ಪ್ರಾಣಾಧಾರತ್ವಲಿಂಗವು ಯುಕ್ತವಾಗುತ್ತದೆ ಎಂದು ತಿಳಿಯಬೇಕು. "ಪ್ರಾಣಭೃಚ್ಚ" ಎಂಬ ಸೂತ್ರದಲ್ಲಿ 'ಚ' ಶಬ್ದದಿಂದ ಸೂಚಿತವಾದ ಮತ್ತೊಂದು ಪೂರ್ವಪಕ್ಷಕೋಟಿಯನ್ನು ಯುಕ್ತಿಬದ್ಧವಾಗಿ ವ್ಯಾಖ್ಯಾನಿಸುತ್ತಿದ್ದಾರೆ "ವಿಷಯ" ಇತ್ಯಾದಿಯಾಗಿ.

"ಪ್ರಸಿದ್ಧೇಶ್ಚ" ಎಂದರೆ "ಏವಮೇವೈಷ ಪ್ರಾಣ ಇತರಾನ್ ಪ್ರಾಣಾನ್ ಪೃಥಕ್ ಪೃಥಗೇವ ಸನ್ನಿಧತ್ತೇ" ಇತ್ಯಾದಿ ವಾಕ್ಯಗಳಲ್ಲಿ ಪ್ರಾಣಾಧಾರತ್ವವು ಪ್ರಸಿದ್ಧವಾಗಿದೆಯೆಂದು ತಿಳಿಯಬೇಕು.

ಭಾವದೀಪಃ – ವಿಷ್ಣೋರಿತಿ ।। ಪ್ರಾಗುಕ್ತಶ್ರುತಾವಿತಿ ಭಾವಃ ।। ಬಹುಧಾ ಜನ್ಮೇತಿ ।। ಜೀವೇ ತು 'ಜ್ಞೋऽತ ಏವ' ಇತ್ಯತ್ರತ್ಯನ್ಯಾಯೇನ ದೇಹಾಭಿಪ್ರಾಯೇಣ ಜನ್ಮನೋ ಯೋಗೇऽಪಿ ದೇಹತोऽप್ಯಜಾಯಮಾನೇ ಹರೌ ಜನ್ಮಾಯೋಗಾದಿತಿ ಭಾವಃ । ಪ್ರಾಗುಕ್ತದಿಶಾ ನಿರವಕಾಶತ್ವೇನ ಪ್ರಬಲರುದ್ರಸಮಾಖ್ಯಾ-ಬಾಧಾಚ್ಚೇತ್ಯಪಿ ಜ್ಞೇಯಮ್ ।

"ವಿಷ್ಣೋಃ" ಎಂದು ಟೀಕೆಯಲ್ಲಿ ಹೇಳಿದ್ದಾರೆ. ಆಂದರೆ ವಿಷಯವಾಕ್ಯವನ್ನು ಪ್ರದರ್ಶಿಸುವ ಸಂದರ್ಭದಲ್ಲಿ ಹೇಳಿದ ಶ್ರುತಿಯಿಂದ ದ್ಯುಭ್ವಾದ್ಯಾಯತನತ್ವವು ವಿಷ್ಣುವಿನಲ್ಲಿ ಸಿದ್ಧವಾಗಿದೆ ಎಂದು ಅಭಿಪ್ರಾಯ. "ಬಹುಧಾ ಜನ್ಮಬಾಧಾತ್" ಎಂದರೆ ಜೀವನಲ್ಲಿ "ಜ್ಞೋತ ಏವ" ಎಂಬ ಸೂತ್ರದ ಪ್ರಕಾರ ಅನೇಕ ದೇಹಗಳು ಬರುವ ಕಾರಣ ಅನೇಕ ಜನ್ಮಗಳನ್ನು ಅಂಗೀಕರಿಸಬಹುದು. ಆದರೆ ವಿಷ್ಣುವಿನಲ್ಲಿ ಅನೇಕ ದೇಹಗಳಿಂದ ಜನ್ಮ ಬರಲು ಸಾಧ್ಯವಿಲ್ಲದ ಕಾರಣ ಯಾವುದೇ ಪ್ರಕಾರದಲ್ಲಿಯೂ ಜನ್ಮವನ್ನು ಕೂಡಿಸಲಾಗದೆಂದು ತಿಳಿಯಬೇಕು. ಮತ್ತು ಹಿಂದೆ ಹೇಳಿದಪ್ರಕಾರ ನಿರವಕಾಶತ್ವದಿಂದ ಹಾಗೂ ಪ್ರಬಲವಾದ ರುದ್ರನಲ್ಲಿರುವ ಸಮಾಖ್ಯಾಪ್ರಮಾಣದಿಂದ ಬಾಧಬರುವ ಕಾರಣ ವಿಷ್ಣುವಿಗೆ ದ್ಯುಭ್ವಾದ್ಯಾಯತನತ್ವವನ್ನು ಹೇಳಬಾರದು.

ಭಾವದೀಪಃ – ಭೇದಸೂತ್ರವ್ಯಾವರ್ತ್ಯಮಾಹ – ಜೀವೇಶೇತಿ ।। ಬ್ರಹ್ಮಗತೇತಿ ।। ತಥಾಚ ಪ್ರಾಗುಕ್ತಹೇಯತ್ವಾವಚನಾದಿಕಂ ಜೀವೇ ಸಮ್ಭವತೀತಿ ನ ತೇನಾಪಿ ವಿಷ್ಣೋರವಕಾಶ ಇತಿ ಭಾವಃ ।। ಅತ ಇತಿ ।। ಉಕ್ತರೀತ್ಯಾ ನಿರವಕಾಶಸಮಾಖ್ಯಾऽಗಮಪ್ರಾಮಾಣ್ಯಾನುಮಾನಜಾಯಮಾನತ್ವಪ್ರಾಣಾಧಾರತ್ವಲಿಙ್ಗರೂಪಾಣಾಮಿತರಪ್ರಾಪಕಾಣಾಂ ವಿಷ್ಣೌ ಬಾಧಕಾನಾಂ ಸತ್ವಾತ್ ।

ಪ್ರತಿಪದಾರ್ಥ -- ಸ ಏಷೋಂऽತಶ್ಚರತೇ ಎಂಬುದಾಗಿ ಜೀವಲಿಂಗ ಕೇಳಿಸುತ್ತಿರುವುದರಿಂದ ಜೀವನಾಗಲೀ ಅಥವಾ ವಾಯುವಾಗಲೀ ದ್ಯುಭ್ವಾದ್ಯಾಯತನರಾಗಬಹುದಲ್ಲವೇ ಎಂಬ ಆಶಂಕೆಯನ್ನು ಪರಿಹರಿಸುವ ಮೂಲಕ ಸೂತ್ರವನ್ನು ಪಠಿಸಿ ವ್ಯಾಖ್ಯಾನಿಸುತ್ತಿದ್ದಾರೆ.

ಏತೈರೇವ = ಹಿಂದೆ ಹೇಳಿದ, ಹೇತುಭಿಃ = ಕಾರಣಗಳಿಂದಲೇ, ಜೀವಃ = ಜೀವನು, ಚ = ಮತ್ತು, ವಾಯುಃ = ವಾಯುದೇವನು, ನ = ದ್ಯುಭ್ವಾದ್ಯಾಯತನರಾಗುವುದಿಲ್ಲ.(೧)

ಭಾಷ್ಯಮ್ – 'अजायमानो बहुधा विजायते' (तै.आ. ३–१३–१) इति तस्यैव बहुधा जन्मोक्तेः ॥४॥

ಅನುವಾದ - ಏಕೆಂದರೆ ವಿಷ್ಣುವಿಗೆ ವಿಕಾರವಿಲ್ಲದ್ದರಿಂದ ರಾಮ ಕೃಷ್ಣ ಮೊದಲಾದ ಅನೇಕರೂಪಗಳಿಂದ ಅವತರಿಸುತ್ತಾನೆ. ಹೀಗೆ ಶ್ರುತಿ ಇರುವುದರಿಂದ 'ಬಹುಧಾ ಜಾಯಮಾನಃ' ಎಂದು ವಿಷ್ಣುವಿಗೆ ಬಹುವಿಧ ಅವತಾರವನ್ನು ಹೇಳಲಾಗಿದೆ.

ಪ್ರತಿಪದಾರ್ಥ -- ಏಕೆಂದರೆ ಅಜಾಯಮಾನಃ = ಜನ್ಮರಹಿತನಾದರೂ, ಬಹುಧಾ = ಅನಂತರೂಪಗಳಿಂದ, ವಿಜಾಯತೇ = ಪ್ರಕಟನಾಗುತ್ತಾನೆ, ಇತಿ = ಹೀಗೆ, ತಸ್ಯೈವ = ಆ ವಿಷ್ಣುವಿಗೇ, ಬಹುಧಾ = ನಾನಾವಿಧವಾಗಿ, ಜನ್ಮೋಕ್ತೇಃ = ಪ್ರಾದುರ್ಭಾವಾದಿಗಳನ್ನು ಶ್ರುತಿಯು ಹೇಳಿರುವುದರಿಂದ.(೨)

---

(೧) **ಭಾಷ್ಯದೀಪಿಕಾ** – ननु 'स एषोऽन्तश्चरते बहुधा जायमानः' (मुं. २–२–६.) इति जीवलिङ्गश्रवणात् प्राणित्वप्रसिद्धेश्च जीवसामान्यस्य वा, विषयभूतलोकाधारत्वस्य 'वायुना वै गौतम सूत्रेणायं लोकः परश्च लोकः सर्वाणि भूतानि सन्दृब्धानि भवन्ति' (बृ.५–७–२) इति श्रुत्यन्तरे वायुनिष्ठत्वेन प्रसिद्धत्वाद् वायोर्वाऽत्र प्रकरणे द्युभ्वाद्याश्रयत्वेन प्रतिपाद्यता किं न स्यादित्याशङ्कं परिहरत्सूत्रं पठित्वा व्याचष्टे – **प्राणभृच्चेति** ।। **एतैरिति** ।। आत्मशब्दः, मुक्तोपसृप्यत्वम्, अतश्छब्दो रुद्रादिप्रापकश्रुतीनां विष्णुपरत्वमित्येवंरूपैः पूर्वोक्तहेतुभिरित्यर्थः । नात्र हेत्वन्तरं वाच्यमित्येवशब्दार्थः । जीवो वायुरित्यनेन प्राणभृच्छब्दो व्याख्यातः । अत्र वाच्य इत्यनुषज्यते । चः समुच्चये । अनेन सूत्रे चशब्दः प्रागुक्तहेतूनां नानुमानमित्यतो नत्रश्च समाकर्षकः । न केवलं रुद्रोऽत्र न वाच्यः, किन्तु जीवो वायुश्चेति समुच्चयार्थश्चेत्युक्तं भवति ।

(२) **ಭಾಷ್ಯದೀಪಿಕಾ** – ननु 'वायुना वै गौतम' इत्यादिश्रुतेर्विष्णुपरत्वेन वायुसाधकत्वाभावेऽपि बहुधा जन्माख्यलिङ्गेन जीवोऽत्र वाच्यः किं न स्यादित्यत आह – **अजायमान इति** ।। देहतः 'अजायमानः' अविकुर्वाणो 'बहुधा' रामकृष्णादिरूपेण

ಶ್ರೀಪದ್ಮನಾಭತೀರ್ಥವಿರಚಿತಸತ್ತರ್ಕದೀಪಾವಲ್ಯಾಮ್:

॥ ॐ ಪ್ರಾಣಭೃಚ್ಚ ॐ ॥

ಯದುಕ್ತಂ 'ಜೀವೋ ದ್ಯುಭ್ವಾದ್ಯಾಶ್ರಯಃ' ಇತಿ ತಂ ನಿರಾಕುರ್ವತ್ ಸೂತ್ರಂ ಪಠಿತ್ವಾ ವ್ಯಾಚಷ್ಟೇ – ಪ್ರಾಣೇತ್ಯಾದಿನಾ ॥ ,ಉಕ್ತಹೇತುಭಿರ್ಯಥಾ ದ್ಯುಭ್ವಾಶ್ರಯೋ ವಾಯುರ್ನ ಭವತಿ । ತಥಾ ಸುತರಾಂ ಜೀವೋऽಪಿ । ಯತ್ ತತ್ಪ್ರಾಪಕಂ ವಚನಮುಕ್ತಮ್ 'ಸ ಏಷೋನ್ತಶ್ಚರತೇ' ಇತಿ ತದ್ವಿಷ್ಣೋಃ ಶ್ರುತ್ಯಾ ಘಟಯತಿ । ಅಜಾಯಮಾನ ಇತಿ ॥

ಹಿಂದೆ ಜೀವನು ದ್ಯುಭ್ವಾದ್ಯಾಯಶ್ರನಾಗಿದ್ದಾನೆಂದು ಪೂರ್ವಪಕ್ಷ ಮಾಡಲಾಗಿತ್ತು. ಅದನ್ನು ನಿರಾಕರಣೆ ಮಾಡುವುದಕ್ಕಾಗಿ ಸೂತ್ರವನ್ನು ಪಠಿಸುತ್ತಾ ವ್ಯಾಖ್ಯಾನಿಸುತ್ತಿದ್ದಾರೆ ''ಪ್ರಾಣಭೃಚ್ಚ'' ಇತ್ಯಾದಿಯಾಗಿ. ಹಿಂದೆ ಹೇಳಿದ ಹೇತುಗಳಿಂದ ದ್ಯುಭ್ವಾದ್ಯಾಶ್ರಯನಾದವನು ವಾಯುದೇವನು ಹೇಗೆ ಆಗುವುದಿಲ್ಲವೋ, ಅದರಂತೆ ಜೀವನೂ ಸಹ ಸುತರಾಂ ದ್ಯುಭ್ವಾದ್ಯಾಶ್ರಯನಾಗುವುದಿಲ್ಲ. ಜೀವಪ್ರಾಪಕವಾದ ಯಾವ ಶ್ರುತಿವಾಕ್ಯವನ್ನು ಹೇಳಲಾಗಿತ್ತೋ, ಅಂತಹ 'ಸ ಏಷೋಂತಶ್ಚರತೇ' ಎಂಬ ವಾಕ್ಯವನ್ನು ವಿಷ್ಣುವಿನಲ್ಲಿ ಶ್ರುತಿಯ ಆಧಾರದಿಂದ ಸಮನ್ವಯಗೊಳಿಸುತ್ತಿದ್ದಾರೆ ''ಅಜಾಯಮಾನಃ'' ಇತ್ಯಾದಿಯಾಗಿ.

ತತ್ವಪ್ರಕಾಶಿಕಾ –

॥ ॐ ಪ್ರಾಣಭೃಚ್ಚ ॐ ॥

ಉಕ್ತಪ್ರಾಪ್ತಾ ಜೀವವಾಯೂ ಕಿಮತ್ರ ವಾಚ್ಯೌ ನ ಸ್ಯಾತಾಮಿತ್ಯಾಶಙ್ಕಾಂ ಪರಿಹರತ್ಸೂತ್ರಂ ಪಠಿತ್ವಾ ವ್ಯಾಚಷ್ಟೇ – ಪ್ರಾಣಭೃಚ್ಚೇತಿ ॥ ಚಶಬ್ದಾತ್ ಪ್ರಾಗುಕ್ತಹೇತೂನಾಂ ನತ್ರಶ್ಚ ಸಮಾಕರ್ಷಃ । ಆತ್ಮಶಬ್ದೋ ಮುಕ್ತೋಪಸೃಪ್ಯತ್ವಮತಚ್ಛಬ್ದಸ್ತತ್ಪ್ರಾಪಕಶ್ರುತೀನಾಂ ವಿಷ್ಣುಪರತ್ವಮಿತ್ಯುಕ್ತಹೇತವಃ ।

ಹಿಂದೆ ಪೂರ್ವಪಕ್ಷಮಾಡುವಾಗ ಜೀವ ಹಾಗೂ ವಾಯುದೇವತೆಯು ಏಕೆ ದ್ಯುಭ್ವಾದ್ಯಾಯತನರಾಗಿರಬಾರದು ಎಂದು ಆಶಂಕಿಸಲಾಗಿತ್ತು. ಅದನ್ನು ಪರಿಹಾರಮಾಡುವುದಕ್ಕಾಗಿ

'ವಿಜಾಯತೇ' ತತ್ರ ತತ್ರ ಪ್ರಾದುರ್ಭವತೀತ್ಯರ್ಥಃ । ಇತೀತಿ ॥ ಇತಿ ಪುರುಷಸೂಕ್ತಗತವಾಕ್ಯೇನೇತ್ಯರ್ಥಃ । ಯಸ್ಯ ಜನ್ಮಾಸಮ್ಭವೋऽಭಿಹಿತಃ ಪೂರ್ವವಾದಿನಾ ತಸ್ಯೈವ ವಿಷ್ಣೋರ್ ಜೀವಸ್ಯೇತ್ಯೇವಶಬ್ದಾರ್ಥಃ । ತಥಾ ಚ ಲಿಙ್ಗಂ ಸಾವಕಾಶಮಿತಿ ನ ತದ್ವಿರೋಧ ಇತಿ ವಾಕ್ಯಶೇಷಃ ।

ಸೂತ್ರವನ್ನು ಪಠಿಸಿ "ಪ್ರಾಣಭೃಚ್ಚ" ಇತ್ಯಾದಿಯಾಗಿ ವ್ಯಾಖ್ಯಾನಿಸುತ್ತಿದ್ದಾರೆ. ಸೂತ್ರದಲ್ಲಿರುವ ಚಶಬ್ದವು ಹಿಂದೆ ಹೇಳಿರುವ ಆತ್ಮಶಬ್ದಾದಿ ಹೇತುಗಳನ್ನು ಮತ್ತು 'ನಾನುಮಾನಮ್' ಎಂಬಲ್ಲಿರುವ ನಞ್‌ನ್ನು ಅನುಕರ್ಷ ಮಾಡುತ್ತಿದೆ. ಆತ್ಮಶಬ್ದ, ಮುಕ್ತೋಪಸೃಪ್ಯತ್ವ, ಅತಚ್ಛಬ್ದ ಮತ್ತು ತತ್ಪ್ರಾಪಕವಾದ ಶ್ರುತಿ ಇವುಗಳೆಲ್ಲಾ ವಿಷ್ಣುವನ್ನು ಪ್ರತಿಪಾದಿಸುತ್ತಿವೆ ಎಂದಷ್ಟೇ ಅಲ್ಲ. ಜೀವ ಹಾಗೂ ವಾಯುದೇವತೆಯಲ್ಲಿ ಈ ಯಾವ ಹೇತುಗಳೂ ಸಹ ಬರುವುದಿಲ್ಲ.

तत्वप्रकाशिका – ननु 'वायुना वै गौतम' इत्यादिश्रुतेर्विष्णुपरत्वेन वायुसाधकत्वाभावेऽपि बहुधा जन्मलिङ्गेन जीवोऽत्र वाच्यः किं न स्यादित्यत आह – अजायमान इति ।।४।।

'ವಾಯುನಾ ವೈ ಗೌತಮ' ಇತ್ಯಾದಿ ಶ್ರುತಿಗಳು ವಿಷ್ಣುಪರವಾಗಿರುವುದರಿಂದ ವಾಯುವನ್ನು ಪ್ರತಿಪಾದಿಸಲಾರವು. ಆದರೂ ಸಹ ಬಹುಧಾಜಾಯಮಾನತ್ವವೆಂಬ ಲಿಂಗವಿರುವುದರಿಂದ ಜೀವನು ಏಕೆ ಪ್ರತಿಪಾದ್ಯನಾಗಬಾರದು ಎಂಬ ಪ್ರಶ್ನೆಗೆ "ಅಜಾಯಮಾನಃ" ಎಂಬ ಭಾಷ್ಯವು ಉತ್ತರಿಸುತ್ತಿದೆ.

भावदीपः – ॐ प्राणभृच्च ॐ ।। उक्तप्राप्येति ।। लिङ्गसमाख्याभ्यामुक्त-प्राप्येत्यर्थः । भाष्ये चशब्दस्य वायुसमुच्चायकत्वमात्रभ्रमं वारयति – चशब्दादिति ।। न केवलं वायोः समुच्चयः, किन्तु प्रागुक्तहेतूनां नञश्च समाकर्ष इत्यर्थः । तयैव चन्द्रिकोक्तेः ।

ಓಂ ಪ್ರಾಣಾಭೃಚ್ಚ ಓಂ

ಟೀಕೆಯಲ್ಲಿರುವ "ಉಕ್ತಪ್ರಾಪ್ಯ" ಎಂಬ ಪದಕ್ಕೆ ಲಿಂಗ ಹಾಗೂ ಸಮಾಖ್ಯಾಪ್ರಮಾಣಗಳಿಂದ ಹಿಂದೆ ಹೇಳಿದ ಪ್ರಕಾರ ಎಂದರ್ಥ. ಭಾಷ್ಯದಲ್ಲಿ "ವಾಯುಶ್ಚ" ಎಂಬುದಾಗಿ ಹೇಳಿರುತ್ತಾರೆ. ಇಲ್ಲಿರುವ "ಚ" ಶಬ್ದವು ಕೇವಲ ವಾಯುವನ್ನು ಮಾತ್ರ ಜೀವನ ಜೊತೆಗೆ ಸಮುಚ್ಚಯ ಮಾಡುತ್ತಿದೆ ಎಂಬ ಭ್ರಮವನ್ನು ನಿರಾಕರಿಸಲು "ಚ ಶಬ್ದಾತ್" ಎಂಬ ಟೀಕೆಯು ಹೊರಟಿದೆ. ಕೇವಲ ವಾಯುವನ್ನಷ್ಟೇ "ಚ" ಶಬ್ದವು ಸಮುಚ್ಚಯ ಮಾಡುತ್ತಿಲ್ಲ ಹೊರತಾಗಿ ಹಿಂದೆ ಹೇಳಲ್ಪಟ್ಟ ಹೇತುಗಳನ್ನು ಮತ್ತು 'ನಞ್' ಎಂಬುದನ್ನು ಸಮಾಕರ್ಷ ಮಾಡುವುದಕ್ಕಾಗಿಯೂ "ಚ" ಶಬ್ದವು ಹೇಳಲ್ಪಟ್ಟಿದೆ. ಚಂದ್ರಿಕಾ ಗ್ರಂಥದಲ್ಲಿ ಹೀಗೆ ವ್ಯಾಖ್ಯಾನಿಸಿರುತ್ತಾರೆ.

भावदीपः – हेतुभिरिति बहुवचनार्थं व्यनक्ति – आत्मशब्द इति ।। विष्णावेवाऽत्मशब्दस्य रूढत्वान्न शिवादिकान् । 'श्रुतिर्वक्ति' इति एतदधिकरणानु-व्याख्याने । तथा आत्मशब्दं यतो हेतुं कृत्वा जीवं न्यवारयत् । स्वशब्दात्

प्राणभृच्चैव नोक्त इत्येव वेदराट् इति फलाध्यायाद्यपादीयानुव्याख्याने । तथा स्वशब्दपर्यायात्मशब्दादिति तत्त्वनिर्णये । आत्मशब्दादिति हेतोश्चानुकर्षणार्थ इति सुधायां चात्मशब्दमात्रानुकर्षोक्तिस्तु तत्र तन्मात्रोपयोगाद्वा वर्णकान्तराभिप्रायेण वेति ध्येयम् ।

''हेतुभ्यः'' ಎಂಬುದಾಗಿ ಬಹುವಚನವನ್ನು ಭಾಷ್ಯದಲ್ಲಿ ಪ್ರಯೋಗಿಸಿದ್ದಾರೆ. ಅದರ ಅರ್ಥವನ್ನು ಆತ್ಮಶಬ್ದ ಎಂಬ ವಾಕ್ಯದಿಂದ ವಿವರಿಸುತ್ತಿದ್ದಾರೆ.

ವಿಷ್ಣುವಿನಲ್ಲೇ ಆತ್ಮಶಬ್ದವು ರೂಢವಾಗಿರುವುದರಿಂದ ಶ್ರುತಿಯು ರುದ್ರಾದಿಗಳನ್ನು ಹೇಳಿರುವುದಿಲ್ಲ. ಹೀಗೆ ಈ ಅಧಿಕರಣದ ಅನುವ್ಯಾಖ್ಯಾನದಲ್ಲಿ ಆತ್ಮಶಬ್ದವನ್ನಷ್ಟೇ ಸೂತ್ರದಲ್ಲಿ ಅನುಕರ್ಷ ಮಾಡಿದ್ದಾರೆ. ಮತ್ತು ''ಆತ್ಮಶಬ್ದಂ ಯತೋ ಹೇತುಂ ಕೃತ್ವಾ ಜೀವಂ ನ್ಯವಾರಯತ್ ಸ್ವಶಬ್ದಾತ್ ಪ್ರಾಣಭೃಚ್ಚೈವ ನೋಕ್ತ ಇತ್ಯೇವ ವೇದರಾಟ್'' - ಆತ್ಮಶಬ್ದವೆಂಬ ಹೇತುವಿನಿಂದ ಜೀವನನ್ನು ನಿರಾಕರಿಸಲಾಗಿದೆ ಎಂಬುದಾಗಿ ಫಲಾಧ್ಯಾಯದ ಮೊದಲನೇ ಪಾದದ ಅನುವ್ಯಾಖ್ಯಾನದಲ್ಲಿ ಹೇಳಿರುತ್ತಾರೆ. ಇದರಂತೆ ''ಸ್ವಶಬ್ದಪರ್ಯಾಯಆತ್ಮಶಬ್ದಾತ್'' ಎಂದು ''ಚ'' ಶಬ್ದಕ್ಕೆ ಪರ್ಯಾಯಪದವಾದ ಆತ್ಮಶಬ್ದದಿಂದ ಎಂಬುದಾಗಿ ತತ್ತ್ವನಿರ್ಣಯದಲ್ಲಿಯೂ ಹೇಳಿದ್ದಾರೆ. ಇದರಂತೆ ''ಆತ್ಮಶಬ್ದಾದಿತಿ ಹೇತೋಶ್ಚಾನುಕರ್ಷಣಾರ್ಥಃ'' 'ಆತ್ಮಶಬ್ದಾತ್' ಎಂಬುದನ್ನು ಅನುಕರ್ಷ ಮಾಡುವುದಕ್ಕಾಗಿ ಎಂಬುದಾಗಿ ಸುಧೆಯಲ್ಲಿಯೂ ಸಹ ಹೇಳಿದ್ದಾರೆ. ಹೀಗೆ ಎಲ್ಲೆಡೆಯೂ ಕೇವಲ ಆತ್ಮಶಬ್ದದ ಅನುಕರ್ಷವಷ್ಟೇ ವಿವಕ್ಷಿತವಾಗಿರುವಾಗ ಪ್ರಕೃತ ಟೀಕೆಯಲ್ಲಿ ''ಮುಕ್ತೋಪಸೃಪ್ಯತ್ವ'', ''ಅತತ್ ಶಬ್ದ'', ''ತತ್ಪ್ರಕಶ್ರುತಿ'' ಇವುಗಳನ್ನೆಲ್ಲ ಅನುಕರ್ಷ ಮಾಡಿಕೊಳ್ಳಬೇಕೆಂದು ಹೇಳಿದ್ದು ಹೇಗೆ ಯುಕ್ತವಾಗುತ್ತದೆ? ಎಂಬ ಪ್ರಶ್ನೆ ಸಹಜವಾಗಿ ಬರುತ್ತದೆ. ಆದರೆ ಅನುವ್ಯಾಖ್ಯಾನಾದಿಗಳಲ್ಲಿ ಆತ್ಮಶಬ್ದಕ್ಕಷ್ಟೇ ಉಪಯೋಗವಿರುವುದರಿಂದ ಹಾಗೆ ಹೇಳಿದ್ದಾರೆ. ಅಥವಾ ಇದು ಮತ್ತೊಂದು ವ್ಯಾಖ್ಯಾನವೆಂದೂ ಸಹ ತಿಳಿಯಬಹುದು.

भावदीपः – तत्प्रापकेति ।। अतच्छब्दादित्यस्य रुद्रप्रधानवाचिशब्दाभावादित्यर्थोक्त्या तत्प्रापकरुद्रादिशब्दानांविष्णुपरत्वस्यार्थसिद्धत्वात् सोऽपि सौत्रो हेतुः । अत एवातच्छब्दात् प्राणभृचेत्येतन्न्याय्य एव रुद्रादिशब्दानां विष्णुपरत्वमुक्तमिति भावः ।

ಟೀಕೆಯಲ್ಲಿ ''ತತ್ಪ್ರಾಪಕಶ್ರುತೀನಾಂ'' ಎಂದು ಹೇಳಿದ್ದಾರೆ. ಅಂದರೆ ರುದ್ರಾದಿಪ್ರಾಪಕವಾದ ಶ್ರುತಿಗಳೂ ಸಹ ಹೇತುವಾಗಿವೆ. ಏಕೆಂದರೆ ''ಅತಚ್ಛಬ್ದಾತ್'' ಎಂಬ ಸೂತ್ರದ ಭಾಗದಿಂದ ರುದ್ರ ಪ್ರಧಾನ ಮೊದಲಾದವುಗಳನ್ನು ಪ್ರತಿಪಾದಿಸುವ ಶಬ್ದಗಳು ಇಲ್ಲದ ಕಾರಣ ಎಂಬರ್ಥವನ್ನು ಹೇಳಲಾಗಿದೆ. ಆದ್ದರಿಂದ ರುದ್ರ ಪ್ರಾಪಕವಾದ ಆ ಎಲ್ಲ ಶಬ್ದಗಳು ವಿಷ್ಣುಪರವೆಂಬರ್ಥವು ಹಿಂದಿನ ಸೂತ್ರದಿಂದಲೇ ಸಿದ್ಧವಾಗಿದೆ.

ಆದ್ದರಿಂದ ತತ್ಪ್ರಾಪಕಶ್ರುತಿ ಎಂಬುದೂ ಸಹ ಸೂತ್ರದಲ್ಲಿ ವಿವಕ್ಷಿತವಾದ ಹೇತುವೇ ಆಗುತ್ತದೆ. ಆದ್ದರಿಂದಲೇ 'ಅತತ್ ಶಬ್ದಾತ್' 'ಪ್ರಾಣಭೃಚ್ಚ' ಎಂಬ ಸೂತ್ರಗಳ ಭಾಷ್ಯದಲ್ಲಿಯೇ ರುದ್ರಾದಿ ಶಬ್ದಗಳಿಗೆ ವಿಷ್ಣುಪರತ್ವವನ್ನು ಹೇಳಿರುತ್ತಾರೆ ಎಂದು ತಿಳಿಯಬೇಕು.

ಭಾವದೀಪಃ – ಇತ್ಯಾದಿಶ್ರುತೇರಿತಿ ।। ವಾಯುಸಮಾಖ್ಯಾಯಾಃ ಏವಂ ನಾನಾವಿಧೈಃ ಶಬ್ದೈರಿತಿ 'ಅನ್ಯನಾಮ್ನಾಂ ಗತಿರ್ವಿಷ್ಣುಃ' ಇತಿ ಚೋಕ್ತದಿಶಾ ಮಹಾಯೋಗವಿದ್ಭದ್ಧೂಢಿಭ್ಯಾಂ ವಿಷ್ಣುಪರತ್ವೇನೇತ್ಯರ್ಥಃ ।

ವಾಯುಶ್ರುತಿಯ ಸಮಾಖ್ಯೆಯನ್ನು ಈ ಹಿಂದೆ "ಏವಂ ನಾನಾವಿಧೈಃ ಶಬ್ದೈಃ" ಎಂಬುದಾಗಿ ಮತ್ತು "ಅನ್ಯನಾಮ್ನಾಂ ಗತಿರ್ವಿಷ್ಣುಃ" ಎಂಬುದಾಗಿಯೂ ಮಾಹಾಯೋಗ ಹಾಗೂ ವಿದ್ವದ್ರೂಢಿಗಳಿಂದ ವಿಷ್ಣು ಪರವೆಂದು ಸಮರ್ಥಿಸಲಾಯಿತು ಆದ್ದರಿಂದ ಎಂದರ್ಥ.

ಭಾವದೀಪಃ – ಯದ್ಯಪಿ ಬೃಹದಾರಣ್ಯಕೇ ಪಞ್ಚಮೇ ತಚ್ಚ ಯಾಜ್ಞವಲ್ಕ್ಯಸೂತ್ರಮ್ 'ಅವಿದ್ವಾನ್ ತಂ ಚಾನ್ತರ್ಯಾಮಿಣಂ ಬ್ರಹ್ಮ ಗವೀರುದ್ಗಜಸೇ' ಇತಿ । 'ವೇದ ವಾ ಅಹಂ ಗೌತಮ ಸೂತ್ರಂ ತಂ ಚಾನ್ತರ್ಯಾಮಿಣಮಿತಿ ಚ ಸೂತ್ರಾನ್ತರ್ಯಾಮಿಣೋರರ್ದ್ಧಯೋರಪ್ಯುಕ್ತ್ಯಾ 'ಸ್ಮೂತಂ ಜಗದಿದಂ ಯಸ್ಮಿನ್ ಸೂತ್ರಂ ವಾಯುರಸೌ ಸ್ಮೃತಃ' ಇತಿ ತದ್ಭಾಷ್ಯೋಕ್ತ್ಯಾ ಚ ವಾಯುಶಬ್ದೋ ವಾಯುಪರ ಇತಿ ಪ್ರತೀಯತೇ ।

ವಸ್ತುತಃ ಬೃಹದಾರಣ್ಯಕೋಪನಿಷತ್ತಿನ ಪಂಚಮಾಧ್ಯಾಯದಲ್ಲಿ ತಚ್ಚೇತ್ವಂ ಯಾಜ್ಞವಲ್ಕ್ಯ-ಸೂತ್ರಮವಿದ್ವಾನ್ ತಂ ಚಾಂತರ್ಯಾಮಿಣಂ ಬ್ರಹ್ಮ ಗವೀರುದ್ರಗಸೇ ಇತಿ । ವೇದ ವಾ ಅಹಂ ಗೌತಮ ಸೂತ್ರಂ ತಂ ಚಾಂತರ್ಯಾಮಿಣಮಿತಿ ಚ ಸೂತ್ರಾಂತರ್ಯಾಮಿಣೋರ್ದ್ವಯೋರಪ್ಯುಕ್ತ್ಯಾ ಸ್ಮೂತಂ ಜಗದಿದಂ ಯಸ್ಮಿನ್ ಸೂತ್ರಂ ವಾಯುರಸೌ ಸ್ಮೃತಃ ಎಂಬುದಾಗಿ ಹೇಳಿರುವುದರಿಂದ ಬೃಹದಾರಣ್ಯಕ ಭಾಷ್ಯದ ಮಾತಿನಂತೆ ವಾಯುಶಬ್ದವು ವಾಯುಪರವೆಂದೇ ತಿಳಿಯುತ್ತದೆ.

ಭಾವದೀಪಃ – ತಥಾಪಿ 'ತಂ ಚಾಪಿ ಯಮಯೇದ್ ಯಸ್ಮಾದನ್ತರ್ಯಾಮೀ ಹರಿಃ ಸ್ಮೃತಃ' ಇತಿ ತದ್ಭಾಷ್ಯೋಕ್ತ್ಯೈವ ಪಾದಾನ್ತ್ಯಪ್ರಾಣನಯನ್ಯಾಯೇನ ವಾಽನ್ತರ್ಯಾಮಿವಿವಕ್ಷಯಾ ವಿಷ್ಣುಪರತ್ವೇನೇತ್ಯುಕ್ತಮ್ । ಯಥೋತ್ತರನಯೇ ಪ್ರಾಣಪದಸ್ಯ ವಿಷ್ಣುಪರತ್ವಂ ವಕ್ಷ್ಯತಿ । ನಚೈತದರ್ಥದ್ವಯಂ ವಿರುದ್ಧಮ್ ಅನ್ತರ್ಯಾಮಿವಿವಕ್ಷಯೇತ್ಯಾದಿ ।

ಆದರೂ ಸಹ "ತಂ ಚಾಪಿ ಯಮಯೇದ್ಯಸ್ಮಾದಂತರ್ಯಾಮೀ ಹರಿಃ ಸ್ಮೃತಃ" ಎಂದು ಅದೇ ಅಧಿಕರಣದ ಭಾಷ್ಯದಲ್ಲಿ ವಾಯುಶಬ್ದದಿಂದ ಅಂತರ್ಯಾಮಿಯಾದ ಭಗವಂತನು ಮುಖ್ಯವಾಗಿ ಪ್ರತಿಪಾದ್ಯನಾಗಿದ್ದಾನೆಂದು ಹೇಳಿರುತ್ತಾರೆ. ಅಷ್ಟೇ ಅಲ್ಲದೆ ಅಂತಿಮಪ್ರಾಣಾಧಿಕರಣದ ನ್ಯಾಯದಿಂದ ಅಂತರ್ಯಾಮಿವಿವಕ್ಷೆಯಿಂದ ಹಾಗೆ ವಾಯುಪರವಾಗಿ ಹೇಳಿರಬಹುದೆಂದು ತಿಳಿಯಬೇಕು. ಮುಂದಿನ ಅಧಿಕರಣದಲ್ಲಿ ಪ್ರಾಣಪದವು ವಿಷ್ಣುಪರವೆಂದು ಹೇಗೆ ಹೇಳುತ್ತಾರೋ ಹಾಗೆ. ಈ ರೀತಿಯಾಗಿ ಮುಂದಿನ ಅಧಿಕರಣದಲ್ಲಿ 'ನಚ' ಏತದರ್ಥದ್ವಯಂ ವಿರುದ್ಧಮ್ ಅಂತರ್ಯಾಮಿವಿವಕ್ಷಯಾ' ಎಂದು ಒಂದೇ ದ್ಯುಭ್ವಾದ್ಯಧಿಕರಣ (೧-೩-೧)

ಪ್ರಾಣಪದಕ್ಕೆ ಎರಡು ಅರ್ಥಗಳನ್ನು ಹೇಳುವುದು ವಿರುದ್ಧವಲ್ಲ ಆಂತರ್ಯಾಮಿಯೆಂದು ವಿವಕ್ಷಿಸಿದ್ದರಿಂದ. ಇತ್ಯಾದಿಯಾಗಿ ಹೇಳುತ್ತಾರೆ.

ಭಾವದೀಪಃ – वक्ष्यते च 'जीवमुख्यप्राणलिङ्गाद्' इति चेत्तद् व्याख्यातमिति सूत्रेऽपि । 'आकाश एव तदोतं च' इति श्रुतेस्तु आकाशस्य प्रकृतित्वेऽपि 'अम्बरान्तधृतेः' इति अक्षरनये 'पृथिव्यादि प्रकृत्यन्तम्' इति स्मृत्या प्रकृतिद्वारा सर्वस्याक्षराख्यविष्ण्वाश्रितत्वस्यैवाग्रेऽभिदानाद् विष्णोर्धुभ्वाद्यायतनत्वपरत्वेन सावकाशत्वं स्पष्टमिति भावः ।। इत्यत आहेति ।। अजायमान इति वाक्यं च विष्णुपरं पुरुषसूक्तस्थत्वात्तस्य च वैष्णवत्वं प्रागेव साधितमिति भावः ।। ४ ।

'ಜೀವಮುಖ್ಯಪ್ರಾಣಲಿಂಗಾತ್' ಎಂಬ ಸೂತ್ರದಲ್ಲಿಯೂ ಸಹ ಆದನ್ನು ಮುಂದೆ ಹೇಳುತ್ತಾರೆ. ಆಕಾಶ ಏವ ತದೋತಂ ಚ ' ಎಂಬ ಶ್ರುತಿಯಲ್ಲಿಯೂ ಸಹ ಆಕಾಶಶಬ್ದವು ಪ್ರಕೃತಿಪರವಾಗಿರಬಹುದು. ಆದರೂ ಸಹ 'ಅಂಬರಾಂತಧೃತೇಃ' ಎಂಬುದಾಗಿ ಅಕ್ಷರಾಧಿಕರಣದಲ್ಲಿ ''ಪೃಥಿವ್ಯಾದಿಪ್ರಕೃತ್ಯಂತಂ'' ಎಂಬ ಸ್ಮೃತಿಯಿಂದ ಪ್ರಕೃತಿಯ ಮುಖಾಂತರ ಎಲ್ಲವೂ ಅಕ್ಷರನೆಂಬ ವಿಷ್ಣುವಿನಲ್ಲಿ ನೆಲಸಿದೆ ಎಂದು ಮುಂದೆ ಹೇಳುತ್ತಾರೆ. ಆದ್ದರಿಂದ ವಿಷ್ಣುವಿಗೆ ದ್ಯುಭ್ವಾದ್ಯಾಯತನಪರತ್ವವು ಇರುವುದರಿಂದ ಸಾವಕಾಶವಾಗಿದೆ ಎಂಬುದು ಸ್ಪಷ್ಟವಾಗಿದೆ.

ಟೀಕೆಯಲ್ಲಿರುವ ''ಇತ್ಯತ ಆಹ'' ಇತ್ಯಾದಿ ಪದಗಳ ಅರ್ಥ ಹೀಗಿದೆ - ''ಅಜಾಯಮಾನ'' ಎಂಬ ವಾಕ್ಯವೂ ಸಹ ವಿಷ್ಣುಪರವಾಗಿದೆ. ಏಕೆಂದರೆ ಪುರುಷಸೂಕ್ತದಲ್ಲಿಯೂ ಈ ವಿಚಾರವು ಪ್ರಸಕ್ತವಾಗಿರುವುದರಿಂದ ಇದು ವಿಷ್ಣುಪ್ರತಿಪಾದಕವಾಗಿದೆ ಎಂದು ಈ ಹಿಂದೆ ಸಾಧಿಸಿದ್ದೇವೆ.

ವಾಕ್ಯಾರ್ಥಮಞ್ಜರಿ – ॐ प्राणभृच्च ॐ ।। आत्मशब्दमुक्यप्राप्यत्वादितच्छब्देभ्यः जीवमुख्यप्राणौ च नसर्वाश्रयात्वित्यर्थः ।। ४ ।।

ಬ್ರಹ್ಮಮೀಮಾಂಸಾಶಾಸ್ತ್ರ
ಜೀವ-ಬ್ರಹ್ಮರಿಗೆ ಅಭೇದವನ್ನು ಹೇಳಬಾರದು

ಸೂ –ॐ ॥ ಭೇದವ್ಯಪದೇಶಾತ್ ॥ ॐ ॥ ೯ ॥

'ಜುಷ್ಟಂ ಯದಾ ಪಶ್ಯತ್ಯನ್ಯಮೀಶಮ್' ಎಂಬ ಶ್ರುತಿಯಲ್ಲಿ ಜೀವಬ್ರಹ್ಮರಿಗೆ ಭೇದವನ್ನು ಹೇಳಿರುವುದರಿಂದಲೂ ಅವರಿಬ್ಬರಿಗೆ ಐಕ್ಯವನ್ನು ಹೇಳಬಾರದು.

ಶ್ರೀಜಗನ್ನಾಥಯತಿಗಳಿಂದ ರಚಿಸಲ್ಪಟ್ಟ

ಸೂತ್ರದೀಪಿಕಾ

ಸೂತ್ರದೀಪಿಕಾ – 'ಅನ್ಯಮೀಶಾಮ್' ಇತಿ ಜೀವೇಶಯೋರ್ಭೇದೋಕ್ತೇಃ ನ ತಯೋರೈಕ್ಯಮಿತ್ಯರ್ಥಃ ।।

'ಅನ್ಯಮೀಶಮ್' ಎಂಬುದಾಗಿ ಜೀವ ಹಾಗೂ ಪರಮಾತ್ಮರಿಗೆ ಭೇದವನ್ನು ಹೇಳಿರುವುದರಿಂದ ಅವರಿಬ್ಬರಿಗೆ ಐಕ್ಯವನ್ನು ಹೇಳಬಾರದು.

ಶ್ರೀಮದಾನನ್ದತೀರ್ಥಭಗವತ್ಪಾದಾಚಾರ್ಯವಿರಚಿತ-

ಬ್ರಹ್ಮಸೂತ್ರಭಾಷ್ಯಮ್

ಭಾಷ್ಯಮ್ – ನ ಚೈಕ್ಯಂ ವಾಚ್ಯಮ್ । 'ಜುಷ್ಟಂ ಯದಾ ಪಶ್ಯತ್ಯನ್ಯಮೀಶಮಸ್ಯ ಮಹಿಮಾನಮ್' (ಮುಂ.೩-೧-೨) ಇತಿ ಭೇದವ್ಯಪದೇಶಾತ್ ॥೯॥

ಅನುವಾದ - ಈ ಪ್ರಕರಣದಲ್ಲಿ ಜೀವ ಮತ್ತು ಭಗವಂತನಿಗೆ ಐಕ್ಯವು ವಿವಕ್ಷಿತವೆಂದು ಹೇಳುವುದು ಸರಿಯಲ್ಲ. ಏಕೆಂದರೆ ಪೂಜೆಗೆ ಅರ್ಹನಾದ ಪರಮಾತ್ಮನನ್ನು ಯಾವಾಗ ತನ್ನಿಂದ ಭಿನ್ನನನ್ನಾಗಿ, ಒಡೆಯನನ್ನಾಗಿ ನೋಡುತ್ತಾನೋ ಆವಾಗ ಅಂತಹ ಪರಮಾತ್ಮನ ಮಹಿಮೆಯನ್ನು ತಿಳಿದು ಶೋಕಸಾಗರವನ್ನು ದಾಟುತ್ತಾನೆ. ಹೀಗೆ ಜೀವೇಶ್ವರರ ಭೇದವು ಉಪದೇಶಿಸಿರುವುದರಿಂದ.

ಪ್ರತಿಪದಾರ್ಥ-- ಜೀವನೇ ದ್ಯುಭ್ವಾದ್ಯಾಯತನನಾಗಲಿ; ಜೀವ ಹಾಗೂ ಪರಮಾತ್ಮರಿಗೆ ಐಕ್ಯವಿರುವುದರಿಂದ ಆತ್ಮಶಬ್ದಾದಿಗಳ ವಿರೋಧವೂ ಸಹ ಬರುವುದಿಲ್ಲವಲ್ಲವೇ ಎಂಬ ಆಶಂಕೆಯನ್ನು ಪರಿಹರಿಸುವುದಕ್ಕಾಗಿ ಸೂತ್ರವನ್ನು ವಿಶಿಸಿ ವ್ಯಾಖ್ಯಾನಿಸುತ್ತಿದ್ದಾರೆ.

ಐಕ್ಯಂ = ಜೀವೇಶ್ವರರ ಅಭೇದವನ್ನು, ನ ಚ ವಾಚ್ಯಂ = ಹೇಳಬಾರದು. ಏಕೆಂದರೆ
ಜುಷ್ಟಂ = ಪೂಜೆಗೆ ಅರ್ಹನಾದ ಪರಮಾತ್ಮನನ್ನು, ಯದಾ = ಯಾವಾಗ, ಅನ್ಯಂ =

ದ್ಯುಭ್ವಾದ್ಯಧಿಕರಣ (೧-೩-೧)

ತನ್ನಿಂದ ಭಿನ್ನನ್ನಾಗಿ, ಈಶಂ = ಒಡೆಯನನ್ನಾಗಿ, ಪಶ್ಯತಿ = ನೋಡುತ್ತಾನೋ, ತದಾ = ಆವಾಗ, ಅಸ್ಯ = ಈ ಪರಮಾತ್ಮನ, ಮಹಿಮಾನಂ = ಮಹಿಮೆಯನ್ನು ತಿಳಿದು, ವೀತಶೋಕಃ = ಶೋಕರಹಿತನಾಗುತ್ತಾನೆ. ಇತಿ = ಹೀಗೆ, ಭೇದವ್ಯಪದೇಶಾತ್ = ಜೀವೇಶ್ವರರ ಭೇದದ ಉಪದೇಶವಿರುವುದರಿಂದ.(೧)

ಶ್ರೀಪದ್ಮನಾಭತೀರ್ಥವಿರಚಿತಸತ್ತರ್ಕದೀಪಾವಳ್ಯಾಮ್:

।। ॐ ಭೇದವ್ಯಪದೇಶಾತ್ ॐ।।

ಜುಷ್ಟಂ ಯದಾ ಪಶ್ಯತ್ಯನ್ಯಮೀಶಮ್ ಇತಿ ।। ಜೀವಾತ್ ಯುಷ್ಮದ್ಯಾಶ್ರಯಸ್ಯಾತ್ಮನೋ ಭೇದವ್ಯಪದೇಶಾದಪಿ ನಾಸೌ ಜೀವ ಇತ್ಯಾಹ – ಭೇದೇತಿ ।। ಅನೇನ ಯತ್ ಪರಾಭಿಮತಂ ಜೀವೇಶೈಕ್ಯಂ ತದಪಿ ನಿರಸ್ತಂ ಭವತಿ ।।

ಭಾಷ್ಯದಲ್ಲಿ 'ಜುಷ್ಟಂ ಯದಾ ಪಶ್ಯತ್ಯನ್ಯಮೀಶಮ್' ಎಂಬ ಶ್ರುತಿಯನ್ನು ಜೀವಬ್ರಹ್ಮರ ಭೇದವಿಷಯದಲ್ಲಿ ಉಲ್ಲೇಖಿಸಿದ್ದಾರೆ. ಅಂದರೆ ಜೀವನಿಗಿಂತ ದುಃಖ್ವದ್ಯಾಶ್ರಯನಾದ ಆತ್ಮನಿಗೆ ಭೇದವನ್ನು ಹೇಳಿರುವ ಕಾರಣ ಜೀವನೇ ದುಃಖ್ವದ್ಯಾಶ್ರಯನಾಗಲು ಸಾಧ್ಯವಿಲ್ಲವೆಂದರ್ಥ. ಇದನ್ನು 'ಭೇದವ್ಯಪದೇಶಾತ್' ಎಂಬ ಮಾತಿನಿಂದ ಸ್ಪಷ್ಟಪಡಿಸಿದ್ದಾರೆ. ಇದರಿಂದ ಅದ್ವೈತಿಗಳಿಗೆ ಅಭಿಪ್ರೇತವಾದ ಜೀವಬ್ರಹ್ಮೈಕ್ಯವನ್ನು ನಿರಾಕರಿಸಿದಂತಾಯಿತು.

---

(೧) ಭಾಷ್ಯದೀಪಿಕಾ – ನನು ಕಿಂ ಜೀವಲಿಙ್ಗಸ್ಯ ವಿಷ್ಣುಗತತ್ವಪ್ರತಿಪಾದನಾಯಾಸೇನ, ಲಿಙ್ಗಬಲಾಜ್ಜೀವಸ್ಯೈವ ಯುಷ್ಮದ್ಯಾಯತನತ್ವಂ ಸ್ಯಾತ್ । ನ ಚೋಕ್ತಾತ್ಮಶಬ್ದಾದಿಹೇತುವಿರೋಧಃ । ಜೀವೇಶಾಭೇದಾಭಿಪ್ರಾಯೇಣ ಜೀವೇऽಪ್ಯಾತ್ಮಶಬ್ದಾದ್ಯುಕ್ತಿಸಮ್ಭವಾದಿತ್ಯಾಶಙ್ಕಾಂ ಪರಿಹರತ್ಸೂತ್ರಂ ಪಠಿತ್ವಾ ವ್ಯಾಚಷ್ಟೇ – ಭೇದೇತಿ ।। ನೈಕ್ಯಂ ವಾಚ್ಯಮಿತಿ ३।। ಜೀವೇಶ್ವರಯೋಸ್ತ್ರಾಭಿಪ್ರೇತಮಿತಿ ಚ ಶೇಷಃ ४ । ಅನೇನ ಸೂತ್ರೇ ನಾನುಮಾನಮಿತ್ಯತೋ ನಞನುವರ್ತನೀಯಃ । ಸ ಚ ಹೇತುಗತಭೇದಪ್ರತಿಯೋಗಿನಾ ಸಂಯೋಜ್ಯ ಇತ್ಯುಕ್ತಂ ಭವತಿ । ಚಶಬ್ದೋ ಜೀವೈಕ್ಯಪ್ರಯುಕ್ತಾತ್ಮಶಬ್ದವಾಚ್ಯತೈತತ್ಪ್ರಕರಣಬೋಧ್ಯತಾऽಪಿ ನೇತಿ ಸಮುಚ್ಚಯಾರ್ಥಃ । ಕೋऽಸೌ ವ್ಯಪದೇಶ ಇತ್ಯತ ಆಹ – ಜುಷ್ಟಮಿತಿ ।। ಇತಿ ಭೇದವ್ಯಪದೇಶಾದಿತಿ ।। ಇತಿ ಭೇದಶ್ರುತೇರಿತ್ಯರ್ಥಃ । ಅನೇನ – 'ಜುಷ್ಟಮ್' ಇತಿ ವಾಕ್ಯೇ 'ಪಶ್ಯತಿ' ಇತಿ ದರ್ಶನಕರ್ತೃತ್ವೇನ ಪ್ರಕೃತಜೀವಸ್ಯ ಈಶಪದೋಕ್ತೇಶ್ಚ ಈಶ್ವರಾದ್ಭೇದೋಕ್ತೇಃ ನ ತಯೋರೈಕ್ಯಮತ್ರಾಭಿಪ್ರೇತಮಿತಿ ವಾಚ್ಯಮಿತಿ ಸೂತ್ರಾರ್ಥ ಉಕ್ತೋ ಭವತಿ । ಶ್ರುತಿಸ್ತ್ವಾನನ್ದಮಯನಯೇ ವ್ಯಾಕೃತಾ ।

ತತ್ವಪ್ರಕಾಶಿಕಾ –

।। ॐ ಭೇದವ್ಯಪದೇಶಾತ್ ॐ।।

ನನು ಕಿಂ ಜೀವಲಿಙ್ಗಸ್ಯ ವಿಷ್ಣುಪರತ್ವಪ್ರತಿಪಾದನಾಯಾಸೇನ । ಜೀವಸ್ಯೈವ ಬ್ರುಭ್ವಾದ್ಯಾಯತನತ್ವಂ ಕಿಂ ನ ಸ್ಯಾತ್? ನ ಚೋಕ್ತಹೇತುವಿರೋಧಃ । ಜೀವೇಶಾಭೇದಾಭಿಪ್ರಾಯೇಣ ಜೀವೇऽಪ್ಯಾತ್ಮಶಬ್ದಾಭ್ಯುಕ್ತಿ-ಸಮ್ಭವಾದಿತ್ಯಾಶಙ್ಕಾಂ ಪರಿಹರನ್ ಸೂತ್ರಂ ಪಠಿತ್ವಾ ವ್ಯಾಚಷ್ಟೇ – ಭೇದೇತಿ ।। ನೈಕ್ಯಾಭಿಪ್ರಾಯೇಣ ಜೀವ ಏವಾऽತ್ಮಶಬ್ದಾದಿಪ್ರಯೋಗೋऽತ್ರೇತಿ ವಾಚ್ಯಮ್ । ಅತ್ರೈವಾನ್ಯಮೀಶಮಿತಿ ಜೀವೇಶಭೇದವ್ಯಪದೇಶಾದಿತ್ಯರ್ಥಃ ।।೫।।

ಬಹುಧಾ ಜಾಯಮಾನತ್ವವೆಂಬ ಜೀವಲಿಂಗವು ವಿಷ್ಣುಪರವಾಗುತ್ತದೆಂದು ಪ್ರತಿಪಾದಿಸಲು ಅಷ್ಟೊಂದು ಕಷ್ಟಪಡುವ ಅವಶ್ಯಕತೆ ಇರುವುದಿಲ್ಲ. ಜೀವನಿಗೆ ಬ್ರುಭ್ವಾದ್ಯಾಯತನತ್ವವನ್ನು ಹೇಳುವುದರಿಂದಲೇ ಸುಲಭವಾಗಿ ಸಮಸ್ಯೆಯು ಪರಿಹಾರವಾಗುತ್ತದೆ. ಹಾಗಾದರೆ ಹಿಂದೆ ಹೇಳಿರುವ ಆತ್ಮಶ್ರುತಿ ಮೊದಲಾದವುಗಳ ವಿರೋಧ ಬರುತ್ತದಲ್ಲವೇ ಎಂಬ ಶಂಕೆಗೆ ಅವಕಾಶವಿಲ್ಲ. ಏಕೆಂದರೆ ಜೀವ ಹಾಗೂ ಈಶರಿಗೆ ಅಭೇದವೇ ಇರುತ್ತದೆ. ಆದ್ದರಿಂದ ಬ್ರಹ್ಮನಲ್ಲಿ ಬರುವ ಆತ್ಮಶ್ರುತಿಯು ಜೀವನಲ್ಲಿಯೂ ಸಹ ಸಂಭವಿಸುತ್ತದೆ. ಈ ಆಶಂಕೆಯನ್ನು ಪರಿಹರಿಸುವುದಕ್ಕಾಗಿ ಸೂತ್ರವನ್ನು ಪಠಿಸಿ, ''ಭೇದ'' ಇತ್ಯಾದಿಯಾಗಿ ವ್ಯಾಖ್ಯಾನಿಸುತ್ತಿದ್ದಾರೆ.

ಇಲ್ಲಿ ಜೀವ ಹಾಗೂ ಈಶ್ವರನಿಗೆ ಏಕ್ಯವಿರುವುದರಿಂದ ಜೀವನಲ್ಲಿ ಆತ್ಮಶಬ್ದಪ್ರಯೋಗವಿದೆಯೆಂದು ಹೇಳಬಾರದು. ಏಕೆಂದರೆ ಇದೇ ಶ್ರುತಿಯಲ್ಲಿ ಅನ್ಯಮೀಶಮ್' ಎಂಬುದಾಗಿ ಜೀವ ಹಾಗೂ ಈಶ್ವರರಿಗೆ ಭೇದವನ್ನೇ ಪ್ರತಿಪಾದಿಸಲಾಗಿದೆ.

ಭಾವದೀಪಃ – ॐ ಭೇದವ್ಯಪದೇಶಾತ್ ॐ ।। ಉಕ್ತಹೇತೂನಾಂ ಸತ್ತ್ವಾತ್ ತದ್ವಿರೋಧೇನ ಶಙ್ಕಾನರ್ಹಮೇಕತ್ವಂ ಕಥಮಾಶಙ್ಕ್ಯ ನಿರಸ್ಯತ ಇತ್ಯತೊ ನಚೈಕತ್ವಮಿತಿ ಭಾಷ್ಯಂ ವ್ಯಾಚಷ್ಟೇ – ನೈಕ್ಯೇತಿ ।। ಅತ್ರೈವೇತಿ ।। ಏತತ್ಪ್ರಕರಣ ಏವೇತ್ಯರ್ಥಃ ।। ಶ್ರುತ್ಯರ್ಥಸ್ತು ಸರ್ವಸೇಽ್ಯಂ ಜೀವಾದನ್ಯಂ ತದೇತತ್ ಸತ್ಯಮಿತ್ಯಾದಿಪ್ರಾಗುಕ್ತಪ್ರಕಾರೇಣಾಸ್ಯ ಮಹಿಮಾನಂ ಚ ಯದಾ ಪಶ್ಯತಿ ತದಾ ಮುಕ್ತೊ ಭವತೀತ್ಯಾನನ್ದಮಯನಯ ಏವೋಕ್ತ ಇತಿ ಭಾವಃ । ವಿಶೇಷಣಭೇದೇತಿ ಸೂತ್ರೇ ತು ಅರ್ಥಾನ್ತರಮುಪೇತ್ಯ ರುದ್ರಾದನ್ಯತ್ವಪರತ್ವೇನ ವ್ಯಾಖ್ಯಾನಂ ಕೃತಮ್ ।। ೫ ।।

ಓಂ ಭೇದವ್ಯಪದೇಶಾತ್ ಓಂ

ಹಿಂದೆ ಹೇಳಲ್ಪಟ್ಟ ಹೇತುಗಳೆಲ್ಲವೂ ವಿಷ್ಣುವಿನಲ್ಲಿಯೇ ಇರುತ್ತವೆ. ಆದ್ದರಿಂದ ಅವುಗಳ ವಿರೋಧದಿಂದ ಜೀವನಲ್ಲಿ ಬ್ರುಭ್ವಾದ್ಯಾಯತನತ್ವವನ್ನು ಶಂಕಿಸಲೇ ಸಾಧ್ಯವಾಗದು ಹೀಗಿರುವಾಗ ಜೀವಪಕ್ಷವನ್ನು ಅವಲಂಬಿಸಿ

ಬ್ರುಭ್ವಾದ್ಯಧಿಕರಣ (೧-೩-೧)

ಹೇಗೆ ಆಶಂಕಿಸುತ್ತಿದ್ದಿರೀ? ಎಂಬ ಪ್ರಶ್ನೆಗೆ "ನಚ" ಎಂಬ ವಾಕ್ಯದಿಂದ ಉತ್ತರಿಸುತ್ತಿದ್ದಾರೆ. ಶಂಕೆಯನ್ನು ಪರಿಹರಿಸುವುದಕ್ಕಾಗಿ "ನ ಚೈಕತ್ವಂ" ಎಂಬ ಭಾಷ್ಯವನ್ನು ವ್ಯಾಖ್ಯಾನಿಸುತ್ತಿದ್ದಾರೆ "ನೈಕ್ಯಾಭಿಪ್ರಾಯೇಣ" ಟೀಕಾ ವಾಕ್ಯದಿಂದ. "ಆತ್ಮೈವ" ಎಂಬ ಪದಕ್ಕೆ ಈ ಪ್ರಕರಣದಲ್ಲಿ ಎಂದರ್ಥ.

ಶ್ರುತ್ಯರ್ಥಹೀಗಿದೆ - ಜುಷ್ಟಂ = ಎಲ್ಲರಿಂದ ಸೇವ್ಯನಾದ, ಮಹಿಮಾನಾಂ = ಜೀವಾದನ್ಯಂ ತದೇತತ್ಸತ್ಯಂ ಇತ್ಯಾದಿಯಾಗಿ ಹಿಂದೆ ಹೇಳಿದ ಪ್ರಕಾರವಾಗಿ ಇವನ ಮಹಿಮೆಯನ್ನು, ಯದಾ= ಯಾವಾಗ, ಪಶ್ಯತಿ = ನೋಡುತ್ತಾನೋ, ತದಾ = ಆವಾಗ, ಮುಕ್ತೋ ಭವತಿ = ಮೋಕ್ಷವನ್ನು ಹೊಂದುತ್ತಾನೆ. ಹೀಗೆ ಆನಂದಮಯಾಧಿಕರಣದಲ್ಲಿ ಈ ಶ್ರುತ್ಯರ್ಥವು ಸ್ಪಷ್ಟವಾಗಿ ನಿರೂಪಿತವಾಗಿದೆ. "ವಿಶೇಷಣಭೇದಃ" ಎಂಬ ಸೂತ್ರದಲ್ಲಿ ಈ ಶ್ರುತಿಗೆ ಮತ್ತೊಂದು ಅರ್ಥವನ್ನು ಆಂಗೀಕರಿಸಿ ರುದ್ರನಿಗಿಂತ ಭಗವಂತನು ಬಿಂಬನಾಗಿದ್ದಾನೆ ಎಂಬ ಅರ್ಥವನ್ನು ಆಂಗೀಕರಿಸಿ ವ್ಯಾಖ್ಯಾನಿಸಿದ್ದಾರೆ.

ಭಾವದೀಪಃ – ಅನ್ಯಮೀಶಮಿತಿ ।। ಜೀವೇಶಭೇದೇತಿ ।। ಪಶ್ಯತೀತಿ ಸನ್ನಿಹಿತೋ ಜೀವ ಏವ ಯದಿ ನ್ಯಾಯೇನಾನ್ಯತ್ವಪ್ರತಿಯೋಗಿತಯಾऽವೈತಿ । 'ಜೀವಾದನ್ಯಃ ಸ್ವತನ್ತ್ರೋ ಯಃ' ಇತ್ಯಾಥರ್ವಣಭಾಷ್ಯೋಕ್ತೇರಿತಿ ಭಾವಃ ।

"ಅನ್ಯಮೀಶಂ" ಎಂದು ಜೀವೇಶಭೇದವನ್ನು ಹೇಳಿದ್ದಾರೆ. "ಜುಷ್ಟಂ ಯದಾ ಪಶ್ಯತಿ" ಎಂಬಲ್ಲಿ ಸನ್ನಿಹಿತನಾದ ಜೀವನೇ ನ್ಯಾಯದಿಂದ ಅನ್ಯತ್ವದಲ್ಲಿ ಪ್ರತಿಯೋಗಿ ಆಗಿದ್ದಾನೆಂದು ಅನ್ವಯವಾಗುತ್ತದೆ. ಏಕೆಂದರೆ "ಜೀವಾದನ್ಯಃ ಸ್ವತಂತ್ರೋ ಯಃ" ಎಂಬುದಾಗಿ ಆಥರ್ವಣೋಪನಿಷತ್‌ಭಾಷ್ಯದಲ್ಲಿ ಹೇಳಿರುವುದರಿಂದ ಎಂದು ಅಭಿಪ್ರಾಯ.

ವಾಕ್ಯಾರ್ಥಮಞ್ಜರೀ – ॐ ಭೇದವ್ಯಪದೇಶಾತ್ ॐ ।। 'ಅನ್ಯಮೀಶಮ್' ಇತೀಹೈವ ಜೀವಬ್ರಹ್ಮಭೇದವ್ಯಪದೇಶಾನ್ನ ತಯೋರೈಕ್ಯಮಿತ್ಯರ್ಥಃ ।। ೯ ।।

ಬ್ರಹ್ಮಮೀಮಾಂಸಾಶಾಸ್ತ್ರ

ಬ್ರಹ್ಮಪ್ರಕರಣದಲ್ಲಿರುವ ಶಬ್ದಗಳಿಂದ ಬ್ರಹ್ಮನೇ ಪ್ರತಿಪಾದ್ಯನು

ಸೂ – ॐ ॥ ಪ್ರಕರಣಾತ್ ॥ ॐ ॥ ೬ ॥

'ದ್ವೇ ವಿದ್ಯೇ ವೇದಿತವ್ಯೇ' ಎಂದು ಪ್ರಕರಣವು ಪ್ರಾರಂಭವಾಗಿರುವುದರಿಂದ ಇದು ಬ್ರಹ್ಮಪ್ರಕರಣವೇ ಆಗುತ್ತದೆ. ಆದ್ದರಿಂದ ಬ್ರಹ್ಮನೇ ಇಲ್ಲಿ ಈಶಶಬ್ದದಿಂದ ಪ್ರತಿಪಾದ್ಯನಾಗುತ್ತಾನೆ.

ಶ್ರೀಜಗನ್ನಾಥಯತಿಗಳಿಂದ ರಚಿಸಲ್ಪಟ್ಟ

ಸೂತ್ರದೀಪಿಕಾ

ಸೂತ್ರದೀಪಿಕಾ – 'ಅನಶ್ನನ್ನನ್ಯೋ' ಇತ್ಯಾದೇರ್ವಿಷ್ಣುಪ್ರಕರಣತ್ವಾತ್ । ಅತ್ರ ಜೀವಸ್ಯ ವಿಷ್ಣುಭೇದ ಏವೋಚ್ಯತೇ । ನತ್ವನ್ಯಸ್ಮಾದ್ ಭೇದ ಇತ್ಯರ್ಥಃ ।

'ಅನಶ್ನನ್ನನ್ಯಃ ಎಂಬ ಆಥರ್ವಣಶ್ರುತಿಯು ವಿಷ್ಣುಪ್ರಕರಣದಲ್ಲಿದೆ. ಇಲ್ಲಿ ಜೀವನಿಗೆ ವಿಷ್ಣುವಿನಿಂದ ಭೇದವೇ ಹೇಳಲ್ಪಟ್ಟಿದೆ. ಮತ್ತೊಬ್ಬನಿಂದ ಭೇದವು ಹೇಳಿರುವುದಿಲ್ಲ.

ಭಾಷ್ಯಮ್ – 'ದ್ವೇ ವಿದ್ಯೇ ವೇದಿತವ್ಯೇ' (ಮುಂ.೧-೧-೪) ಇತಿ ತಸ್ಯ ಹೈತತ್ ಪ್ರಕರಣಮ್ ॥೬॥

ಅನುವಾದ - ವಿದ್ಯೆಗಳು ಪರವಿದ್ಯೆ, ಅಪರವಿದ್ಯೆ ಎಂದು ಎರಡು ವಿಧ; ಹೀಗೆ ಪ್ರಸ್ತುತವಾದ ಪ್ರಕರಣವು ಪರವಿದ್ಯಾವಿಷಯನಾದ ವಿಷ್ಣುವಿಗೆ ಮಾತ್ರ ಸಂಬಂಧಪಟ್ಟಿದೆ. ಆದ್ದರಿಂದ ಭೇದವನ್ನು ಹೇಳುವ 'ಅನ್ಯಮೀಶಂ' ಎಂಬ ವಾಕ್ಯದಲ್ಲಿ ಪ್ರತಿಪಾದ್ಯನಾದ ಈಶನೆಂದರೆ ವಿಷ್ಣುವೇ ಆಗಿದ್ದಾನೆ.

ಪ್ರತಿಪದಾರ್ಥ -- ಜೀವನು ಯಾರೋ ಒಬ್ಬ ಒಡೆಯನಿಂದ ಭಿನ್ನನಾಗಿದ್ದಾನೆಂದು ಹೇಳಲಾಗಿದೆ. ಆದರೆ ಪರಮಾತ್ಮನಿಂದ ಜೀವನು ಭಿನ್ನನೆಂದು ಹೇಳಲ್ಪವಲ್ಲ ಎಂಬ ಆಶಂಕೆಯನ್ನು ಪರಿಹರಿಸುವುದಕ್ಕಾಗಿ ಸೂತ್ರವನ್ನು ಪಠಿಸಿ ವ್ಯಾಖ್ಯಾನಿಸುತ್ತಿದ್ದಾರೆ.

ವಿದ್ಯೇ = ಬ್ರಹ್ಮವಿದ್ಯೆಯು, ದ್ವೇ = ಎರಡು ವಿಧವಾಗಿ, ವೇದಿತವ್ಯೇ = ತಿಳಿಯಬೇಕು, ಇತಿ = ಹೀಗೆ ಆರಂಭಮಾಡಿ, ತಸ್ಯ ಹಿ = ವಿಷ್ಣುವಿನದ್ದೇ, ಏತತ್ ಪ್ರಕರಣಮ್ = ಈ ಪ್ರಕರಣವೆಂದು ನಿಶ್ಚಯವಾಗುತ್ತದೆ.(೧)

---

(೧) (೧೪) नन्वत्र जीवस्य कस्माच्चिदीशादन्यत्वमुच्यते, न परमात्मनः, अतो न तयोर्भेद इत्याशङ्क्य परिहरत्सूत्रमुपन्यस्य व्याचष्टे – **प्रकरणादिति** ।।१ इतीत्यनन्तरम् 'इत्युपक्रम्याधीतम्' इति शेषः । 'हि' यतः 'एतत्' जुष्टमित्यादिवाक्यजातं यतः 'तस्यैव'

श्रीपद्मनाभतीर्थविरचितसत्तर्कदीपावळ्याम्:

।। ॐ प्रकरणात् ॐ ।।

'द्वे विद्ये वेदितव्ये परा चैवापरा च' 'अथ परा यया तदक्षरमधिगम्यते' इति परविद्याविषयस्य विष्णोः प्रक्रान्तत्वात् । तद्भावाभावात् स एवात्र द्युभ्वाद्याश्रयत्वेनोच्यते नान्य इत्याह – प्रकरणादिति ।।

'द्वे ವಿದ್ಯೇ ವೇದಿತವ್ಯೇ ಪರಾ ಚೈವಾಪರಾ ಚ' 'ಅಥ ಪರಾ ಯಯಾ ತದಕ್ಷರಮಧಿಗಮ್ಯತೇ' ಎಂಬುದಾಗಿ ಪರವಿದ್ಯಾವಿಷಯನಾದ ವಿಷ್ಣುವೇ ಉಪಕ್ರಮದಲ್ಲಿ ಪ್ರಸಕ್ತನಾಗಿದ್ದಾನೆ. ವಿಷ್ಣುವಿಗೆ ಪರವಿದ್ಯಾವಿಷಯತ್ವವನ್ನು ಹೇಳಲು ಯಾವುದೇ ಬಾಧಕಪ್ರಮಾಣಗಳಿಲ್ಲದ ಕಾರಣ ಅಂತಹ ವಿಷ್ಣುವೇ ದ್ಯುಭ್ವಾದ್ಯಾಶ್ರಯನಾಗುತ್ತಾನೆ, ಹೊರತು ಬೇರೆಯವರಲ್ಲವೆಂದು ಪ್ರಕರಣಾತ್ ಎಂಬ ಸೂತ್ರವು ಹೇಳುತ್ತಿದೆ.

तत्त्वप्रकाशिका –

।। ॐ प्रकरणात् ॐ ।।

नन्वत्रजीवस्यकस्माच्चिदीशादन्यत्वमुच्यतेनपरमात्मनोऽतोनतयोभेदइत्याशङ्कां परिहरत् सूत्रमुपन्यस्य व्याचष्टे – प्रकरणादिति ।। नात्र जीवपरमात्मभेदोक्त्यभावः। ईशशब्देनैव परमात्मोक्तेः । तदेव कुतः । 'द्वे विद्ये वेदितव्ये' इति परविद्याविषयवस्तुनोऽत्रारभ्याधीतत्वेनास्य विष्णुप्रकरणत्वादिति भावः ।।६।।

'ಜುಷ್ಟಂ ಯದಾ ಪಶ್ಯತಿ' ಎಂಬ ಶ್ರುತಿಯಲ್ಲಿ ಈಶಪದವಾಚ್ಯನಾದ ವ್ಯಕ್ತಿಗೂ ಮತ್ತು ಜೀವನಿಗೂ ಭೇದವು ಹೇಳಲ್ಪಟ್ಟಿದೆ; ಹೊರತು ಪರಮಾತ್ಮನಿಗೂ ಮತ್ತು ಜೀವನಿಗೂ ಅಭೇದವು ಹೇಳಲ್ಪಟ್ಟಲ್ಲ. ಹೀಗಿರುವಾಗ ಜೀವೇಶಭೇದವು ಶ್ರುತ್ಯುಕ್ತವಾಗಿದೆಯೆಂದು ಹೇಗೆ ಹೇಳುತ್ತೀರಿ? ಎಂಬ ಆಕ್ಷೇಪಕ್ಕೆ ಪರಿಹಾರವನ್ನು ನೀಡುವ ಸೂತ್ರವನ್ನು ಪಠಿಸಿ ವ್ಯಾಖ್ಯಾನಿಸುತ್ತಿದ್ದಾರೆ ''ಪ್ರಕರಣಾತ್'' ಇತ್ಯಾದಿಯಾಗಿ.

परविद्याविषयस्य परमात्मन एव 'प्रकरणं' नान्यस्येत्येवशब्दार्थः । अनेन स्वप्रकरणात् 'द्वे विद्ये वेदितव्ये' इति परविद्याविषयवस्तुनोऽत्राधीतत्वेन विष्णुप्रकरणत्वात् परमात्मन एव भेदव्यपदेशावगतेः न जीवपरमात्मनोरभेदोऽत्राभिप्रेत इति वाच्यमिति सूत्रयोजना दर्शिता भवति ।

ಈ ಶ್ರುತಿಯಲ್ಲಿ ಜೀವಹಾಗೂ ಪರಮಾತ್ಮರಿಗೆ ಭೇದವು ಹೇಳಿಲ್ಲವೆಂದು ತಿಳಿಯಬಾರದು. ಏಕೆಂದರೆ, ಶ್ರುತಿಯಲ್ಲಿ ಈಶಶಬ್ದದಿಂದ ಪರಮಾತ್ಮನೇ ಪ್ರತಿಪಾದ್ಯನಾಗಿದ್ದಾನೆ. ಇದನ್ನಾದರೂ ಹೇಗೆ ನಿರ್ಣಯಿಸುತ್ತೀರಿ? ಎಂದರೆ 'ದ್ವೇ ವಿದ್ಯೇ ವೇದಿತವ್ಯೇ' ಎಂಬುದಾಗಿ ಅಂತಹ ವ್ಯಕ್ತಿಯು ಪರವಿದ್ಯೆಗೆ ವಿಷಯನಾಗಿದ್ದಾನೆಂದು ಹೇಳಲಾಗಿದೆ. ಹೀಗೆ ಪ್ರಾರಂಭಮಾಡಿ ಜೀವೇಶಭೇದವನ್ನು ವರ್ಣನೆ ಮಾಡಿರುವುದರಿಂದ ಇವೆಲ್ಲವೂ ಸಮಗ್ರವಾಗಿ ವಿಷ್ಣುಪ್ರಕರಣವೇ ಆಗಿದೆಯೆಂದು ನಿರ್ಣಯವಾಗುತ್ತದೆ.

ಭಾವದೀಪಃ – ॐ प्रकरणात् ॐ ।। ईशादन्यत्वमिति ।। जीवादन्यत्वस्योक्त्या तदन्यत्वं जीवेऽर्थात् सिद्धमित्येवमुक्तिः । एकप्रमेयतात्पर्यकानेकवाक्यात्मकप्रकरण स्य स्वान्तर्गतवाक्यं स्वतात्पर्यविषयपरमित्यनुमितिद्वारा तदन्तर्गतविप्रतिपन्नशब्दार्थ-निर्णायकत्वेन साक्षाज्जीवपरमात्मभेदसाधकत्वाद् योग्यसाध्योक्तिपूर्वं परम्परया प्रकरणादिति हेतुं योजयति – नात्रेति ।

''ಈಶಾದನ್ಯತ್ವಂ'' ಎಂಬ ಶಬ್ದಕ್ಕೆ ಹೀಗರ್ಥ- ಜೀವರಿಗಿಂತ ಭೇದವನ್ನು ಹೇಳಿರುವುದರಿಂದ ಈಶನಗಿಂತ ಭೇದವು ಜೀವನಲ್ಲಿದೆ ಎಂಬುದು ಅರ್ಥಾತ್ ಸಿದ್ಧವಾಗುತ್ತದೆ. ಒಂದೇ ಪ್ರಮೇಯದಲ್ಲಿ ತಾತ್ಪರ್ಯವುಳ್ಳ ಅನೇಕ ವಾಕ್ಯಗಳ ಸಮೂಹವೇ ಪ್ರಕರಣ ಎನಿಸುತ್ತದೆ. ''ಸ್ವಾಂತರ್ಗತತಾವಾಕ್ಯಂ ಸ್ವತಾತ್ಪರ್ಯವಿಷಯಪರಂ'' ಎಂಬ ಅನುಮಿತಿಯ ಮುಖಾಂತರ ಆ ವಾಕ್ಯಗಳ ಮಧ್ಯದಲ್ಲಿ ಸೇರಿರುವ ವಿಪ್ರತಿಪನ್ನವಾದ ಶಬ್ದಾರ್ಥವನ್ನು ನಿರ್ಣಯಮಾಡುತ್ತವೆ ಹೊರತು ನೇರವಾಗಿ ಜೀವಪರಮಾತ್ಮ ಭೇದವನ್ನು ನಿರ್ಣಯಿಸುವುದಿಲ್ಲ. ಈ ಕಾರಣದಿಂದ ಯೋಗ್ಯವಾದ ಸಾಧ್ಯವನ್ನು ಹೇಳುವ ಮೂಲಕ ಪ್ರಕರಣಾತ್ ಎಂಬ ಹೇತುವನ್ನು ಪರಂಪರಯಾ ಯೋಜನೆ ಮಾಡುತ್ತಿದ್ದಾರೆ ''ತದೇವ'' ಇತ್ಯಾದಿ ವಾಕ್ಯದಿಂದ.

ಭಾವದೀಪಃ – तदेवेति ।। परमात्मार्थकत्वमेवेत्यर्थः । श्रुतिलिङ्गादेरुपक्रमादौ श्रुतत्वे तन्निर्णायकत्वेन लिङ्गत्वस्य वक्ष्यमाणत्वात् ।

'ತದೇವ' ಎಂಬ ಪದಕ್ಕೆ ಪರಮಾತ್ಮವೆಂಬ ಅರ್ಥವೇ ಎಂದರ್ಥ. ಶ್ರುತಿ ಹಾಗೂ ಲಿಂಗಾದಿಗಳು ಉಪಕ್ರಮಾದಿಗಳಲ್ಲಿ ಕೇಳಿಸುತ್ತಿದ್ದರೂ ಆದನ್ನು ನಿರ್ಣಯ ಮಾಡುವುದಕ್ಕಾಗಿ ಲಿಂಗವನ್ನು ಮುದೆ ಹೇಳುತ್ತಾರೆ.

ಭಾವದೀಪಃ – इह च परविद्याविषयत्वलिङ्गस्योपक्रमे श्रवणेनोपक्रमस्य वैष्णवत्वा त्तदादिवाक्यसन्दर्भस्योपक्रान्तार्थविष्णुतात्पर्यकत्वरूपं तत्प्रकरणत्वमवधार्यत इति भावेन भाष्यं व्याचष्टे – द्वे विद्ये इति ।। प्रतीकग्रहणमेतत् ।

ಪ್ರಕೃತ ಪರವಿದ್ಯಾವಿಷಯತ್ವವೆಂಬ ಲಿಂಗವು ಪ್ರಾರಂಭದಲ್ಲಿ ಕೇಳಿಸುತ್ತಿದೆ. ಆದ್ದರಿಂದ ಉಪಕ್ರಮವು ವಿಷ್ಣುಪರವಾಗಿದೆ ಎಂದು ತಿಳಿಯುತ್ತದೆ. ಹೀಗೆ ಪ್ರಾರಂಭವಾಗುವ ಸಮಗ್ರ ವಾಕ್ಯಗಳೆಲ್ಲವು ವಿಷ್ಣುವಿನಲ್ಲಿಯೇ ತಾತ್ಪರ್ಯವನ್ನು ಹೊಂದಿರುತ್ತವೆ ಎಂದು ಪ್ರಕರಣವು ಹೀಗೆ ಸಾಧಿಸುತ್ತದೆ ಎಂದು ತಿಳಿಯಬೇಕು. ಈ

ಅಭಿಪ್ರಾಯದಿಂದ ಭಾಷ್ಯವನ್ನು "ದ್ವೇ ವಿದ್ಯೇ" ಎಂಬ ಟೀಕಾವಾಕ್ಯದಿಂದ ವ್ಯಾಖ್ಯಾನಿಸುತ್ತಿದ್ದಾರೆ. ಇದನ್ನು ಪ್ರತೀಕಗ್ರಹಣವೆಂದು ತಿಳಿಯಬೇಕು.

ಭಾವದೀಪಃ – 'अथ परा, यया तदक्षरमधिगम्यते' इत्यनेनेत्यर्थः । आरभ्य उपक्रम्य । परविद्याविषयवस्तूपक्रम्य तस्यैतद्वाक्यसन्दर्भे पठितत्वादस्य वाक्यसन्दर्भस्य तत्प्रकरणत्वमित्यर्थः ।

"ಅಥ ಪರಾ ಯಯಾ ತದಕ್ಷರಮಧಿಗಮ್ಯತೇ" ಎಂಬುದರಿಂದ ಪರವಿದ್ಯಾವಿಷಯತ್ವವು ತಿಳಿಯುತ್ತಿದೆ ಎಂದರ್ಥ. "ಆರಭ್ಯ" ಪದಕ್ಕೆ 'ಉಪಕ್ರಮಿಸಿ' ಎಂದರ್ಥ. ಪರವಿದ್ಯಾವಿಷಯನಾದ ವಸ್ತುವನ್ನು ಪ್ರಾರಂಭದಲ್ಲಿ ಹೇಳಿ ಆದೇ ವಾಕ್ಯಗಳ ಸಂದರ್ಭದಲ್ಲಿ ದ್ಯುಭ್ವಾದ್ಯಾಶ್ರಯತ್ವವನ್ನು ಪಠಿಸಿರುವುದರಿಂದ ಎಲ್ಲಾ ವಾಕ್ಯಗಳು ವಿಷ್ಣುಪರವೆಂದು ತಿಳಿಯುತ್ತವೆ. ಈ ವಿಷಯದಲ್ಲಿ ವಿಷ್ಣುಪ್ರಕರಣವು ಹೇತುವಾಗಿದೆ ಎಂದು ಭಾವಿಸಬೇಕು.

ಭಾವದೀಪಃ – 'प्राणो ब्रह्म' इत्यादौ प्राणस्योपक्रमेऽपि तदुत्तरत्र विष्णुश्रुतिलिङ्गादिना प्राणस्याधीतत्वाभावेन तत्प्रकरणत्वं नेति व्यभिचारादुपक्रमादित्यनुक्त्वा उपक्रम्याधीतत्वादित्युक्तम् । जायमानत्वादेर्बाधकस्य निरासेन साधकानामुक्त्या चोपक्रान्तविष्णोरेव सर्वत्राधीतत्वस्योक्तत्वान्नासिद्धिरिति भावः ।। ६ ।।

"ಪ್ರಾಣೋ ಬ್ರಹ್ಮ" ಇತ್ಯಾದಿ ಸ್ಥಳಗಳಲ್ಲಿ ವಸ್ತುತಃ ಪ್ರಾಣನೇ ಉಪಕ್ರಮದಲ್ಲಿ ಕೇಳಿಸುತ್ತಿದ್ದರೂ ಮುಂದೆ ವಿಷ್ಣುಲಿಂಗಾದಿಗಳು ಇರುವುದರಿಂದ ಪ್ರಾಣನನ್ನು ತಿಳಿಯಲು ಸಾಧ್ಯವಿಲ್ಲ. ಹಾಗಾಗಿ ಇದನ್ನು ಪ್ರಾಣಪ್ರಕರಣವೆಂದು ಹೇಳಿದರೆ ವ್ಯಭಿಚಾರ ಬರುತ್ತದೆ. ಹಾಗಾಗಿ "ಉಪಕ್ರಮಾತ್" ಎಂದಷ್ಟೇ ಹೇಳದೆ "ಉಪಕ್ರಮ್ಯಾಧೀತತ್ವಾತ್" ಎಂಬುದಾಗಿ ಟೀಕೆಯಲ್ಲಿ ಹೇಳಿರುತ್ತಾರೆ. "ಜಾಯಮಾನತ್ವಾದೇಃ" ಮೊದಲಾದ ಬಾಧಕಗಳನ್ನು ನಿರಾಸೆ ಮಾಡುವ ಮೂಲಕ ಸಾಧಕಗಳನ್ನು ಹೇಳಿರುವುದರಿಂದ ಉಪಕ್ರಮದಲ್ಲಿ ಪ್ರಸಕ್ತನಾದ ವಿಷ್ಣುವೇ ಸಮಗ್ರ ಪ್ರಕರಣದಿಂದ ಅಧ್ಯಯನ ಮಾಡಲು ಅರ್ಹನಾಗಿದ್ದಾನೆ. ಆದ್ದರಿಂದ "ವಿಷ್ಣುಪ್ರಕರಣತ್ವಾತ್" ಎಂಬ ಹೇತುವಿಗೆ ಅಭ್ಯುಚ್ಚಯ ದೋಷವು ಬರುವುದಿಲ್ಲವೆಂದು ತಿಳಿಯಬೇಕು.

ವಾಕ್ಯಾರ್ಥಮಞ್ಜರೀ – ॐ प्रकरणात् ॐ परविद्याविषयवस्तु न एवात्रारभ्याधीतत्वेनास्य ब्रह्मप्रकरणत्वादत्रत्येशो ब्रह्मैवेत्यर्थः ।। ६ ।।

ಬ್ರಹ್ಮಮೀಮಾಂಸಾಶಾಸ್ತ್ರ

ವಿರುದ್ಧ ಧರ್ಮವುಳ್ಳ ಜೀವೇಶ್ವರರಿಗೆ ಅಭೇದವು ಕೂಡದು

सू – ॐ ॥ स्थित्यदनाभ्यां च ॥ ॐ ॥೨॥

ಬ್ರಹ್ಮನಿಗೆ ಕರ್ಮಫಲ ಭೋಗವಿಲ್ಲ. ಜೀವನಿಗೆ ಕರ್ಮಫಲಭೋಗದಿಂದಲೇ ಜೀವನ. ಹೀಗೆ ವಿರುದ್ಧವಾದ ಧರ್ಮಗಳನ್ನು ಜೀವೇಶ್ವರರಿಗೆ ಹೇಳಿರುವುದರಿಂದಲೂ ಅವರಿಬ್ಬರಿಗೆ ಐಕ್ಯವನ್ನು ವಿವಕ್ಷಿಸಬಾರದು.

ಶ್ರೀಜಗನ್ನಾಥಯತಿಗಳಿಂದ ರಚಿಸಲ್ಪಟ್ಟ

ಸೂತ್ರದೀಪಿಕಾ

सूत्रदीपिका – ईशजीवयोः 'द्वा सुपर्णा' इत्यादिवाक्योक्तं कर्मफलानुप- जीव नस्थितिततदुपजीवनरूपहेतुभ्यां न च तयोरैक्यं वाच्यमित्यर्थः ।।

ಈಶ ಹಾಗೂ ಜೀವರಿಗೆ 'ದ್ವಾ ಸುಪರ್ಣಾ' ಇತ್ಯಾದಿ ವಾಕ್ಯದಲ್ಲಿ ಹೇಳಲ್ಪಟ್ಟ ಕರ್ಮಫಲಭೋಗದಿಂದ ಜೀವನ ಸ್ಥಿತಿ, ಕರ್ಮಫಲಭೋಗವಿಲ್ಲದೆ ಬ್ರಹ್ಮನ ಸ್ಥಿತಿ ಹೀಗೆ ವಿರುದ್ಧವಾದ ಧರ್ಮಗಳನ್ನು ಹೇಳಿರುವುದರಿಂದ ಐಕ್ಯವನ್ನು ಹೇಳಬಾರದು.

ಶ್ರೀಮದಾನನ್ದತೀರ್ಥಭಗವತ್ಪಾದಾಚಾರ್ಯವಿರಚಿತ-

ಬ್ರಹ್ಮಸೂತ್ರಭಾಷ್ಯಮ್

ಭಾಷ್ಯಮ್ –

'ದ್ವಾ ಸುಪರ್ಣಾ ಸಯುಜಾ ಸಖಾಯಾ ಸಮಾನಂ ವೃಕ್ಷಂ ಪರಿಷಸ್ವಜಾತೇ ।
ತಯೋರನ್ಯಃ ಪಿಪ್ಪಲಂ ಸ್ವಾದ್ವತ್ತ್ಯನಶ್ನನ್ನನ್ಯೋ ಅಭಿಚಾಕಶೀತಿ ।।' (ಮುಂ.೩-೧-೧)
ಇತೀಶಜೀವಯೋಃ ಸ್ಥಿತ್ಯದನೋಕ್ತೇಃ ।।೭।।

।। ಇತಿ ದ್ಯುಭ್ವಾದ್ಯಧಿಕರಣಮ್ ।। ೧ ।।

ಅನುವಾದ - ''ಎರಡು ಹಕ್ಕಿಗಳು ಸ್ನೇಹಿತರಂತೆ ದೇಹವೆಂಬ ಒಂದೇ ಮರದಲ್ಲಿ ಆಶ್ರಯಿಸಿಕೊಂಡಿವೆ ಆ ಪಕ್ಷಿಗಳಲ್ಲಿ ಜೀವನೆಂಬ ಪಕ್ಷಿಯು ಅಶ್ವತ್ಥವೃಕ್ಷದ ಫಲವನ್ನು ರಸವತ್ತಾಗಿದೆ ಎಂಬ ಭ್ರಾಂತಿಯಿಂದ ತಿನ್ನುತ್ತದೆ. ಮತ್ತೊಂದು ಈಶ ಎಂಬ ಪಕ್ಷಿಯು ಏನನ್ನೂ ತಿನ್ನದೆ ವರ್ಚಸ್ವಿಯಾಗಿ ಒಂದೇ ರೀತಿಯಾಗಿ ಕುಳಿತಿದೆ''. ಹೀಗೆ ಈಶ ಮತ್ತು ಜೀವರಿಗೆ ತಿನ್ನದಿರುವಿಕೆ ಮತ್ತು ತಿನ್ನುವಿಕೆ ಎಂಬ ವಿರುದ್ಧಧರ್ಮಗಳನ್ನು ಹೇಳಿರುವ ಕಾರಣ ಜೀವೇಶ್ವರರ ಅಭೇದವು ಅಸಂಭಾವಿತವಾಗಿದೆ. ಈ ಎಲ್ಲ ಕಾರಣಗಳಿಂದ ದ್ಯುಭ್ವಾದ್ಯಾಯತನತ್ವ ಎಂಬ ಧರ್ಮವು ಭಗವಂತನಲ್ಲಿಯೇ ಸಮನ್ವಯವಾಗುತ್ತದೆ.

ಪ್ರತಿಪದಾರ್ಥ -- ಜೀವೇಶಭೇದಕ್ಕೆ ಶ್ರುತಿಯಷ್ಟೇ ಪ್ರಮಾಣವಲ್ಲ ಲಿಂಗವೂ ಪ್ರಮಾಣವಾಗಿದೆಯೆಂದು ಸೂತ್ರಕಾರರೇ ಹೇಳುತ್ತಿದ್ದಾರೆ.

ಸಯುಜಾ = ಒಟ್ಟಿಗೆ ಸೇರಿ, ಸಖಾಯ = ಸ್ನೇಹಿತರಂತೆ ವರ್ತಿಸುವ, ದ್ವಾ = ಎರಡು, ಸುಪರ್ಣಾ = ಜೀವ ಹಾಗೂ ಈಶ್ವರರೆಂಬ ಪಕ್ಷಿಗಳು, ಸಮಾನಂ ವೃಕ್ಷಂ = ದೇಹವೆಂಬ ಒಂದೇ ಮರವನ್ನು, ಪರಿಷಸ್ವಜಾತೇ = ಆಲಂಗಿಸಿವೆ. ತಯೋಃ = ಈ ಎರಡು ಪಕ್ಷಿಗಳಲ್ಲಿ, ಏಕಂ = ಜೀವನೆಂಬ ಪಕ್ಷಿಯು, ಪಿಪ್ಪಲಂ = ಅಶ್ವತ್ಥಫಲವನ್ನು, ಸ್ವಾದ್ವತ್ತಿ = ಬಹು ರುಚಿಯಾಗಿದೆಯೆಂಬ ಭ್ರಾಂತಿಯಿಂದ ತಿನ್ನುತ್ತದೆ. ಅನ್ಯಃ = ಮತ್ತೊಂದು ಈಶನೆಂಬ ಪಕ್ಷಿಯು, ಅನಶ್ನನ್ = ಏನನ್ನೂ ತಿನ್ನದೆ, ಅಭಿಚಾಕಶೀತಿ = ಒಂದೇ ರೀತಿಯಲ್ಲಿ ವರ್ಚಸ್ವಿಯಾಗಿ ಕುಳಿತಿದೆ. ಇತಿ ಈಶಜೀವಯೋಃ = ಹೀಗೆ ಭಗವಂತನಿಗೆ ಮತ್ತು ಜೀವರಿಗೆ, ಸ್ಥಿತ್ಯದನೋಕ್ತೇಃ = ತಿನ್ನುವಿಕೆ ಹಾಗೂ ತಿನ್ನದಿರುವಿಕೆ ಎಂಬ ಈ ವಿರುದ್ಧಧರ್ಮಗಳನ್ನು ಹೇಳಿರುವುದರಿಂದ ಜೀವೇಶ್ವರರ ಅಭೇದವು ಅಸಂಭಾವಿತವಾಗಿದೆ. ಆದ್ದರಿಂದ

ದ್ಯುಭ್ವಾದ್ಯಾಯತನತ್ವ ಮೊದಲಾದ ಧರ್ಮಗಳೆಲ್ಲವೂ ಭಗವಂತನಲ್ಲಿಯೇ ಸಮನ್ವಯವಾಗುತ್ತವ.(೧)

ಇಲ್ಲಿಗೆ ಭಾಷ್ಯದೀಪಿಕಾನುಸಾರಿಯಾದ ಭಾಷ್ಯದ ಪ್ರತಿಪದಾರ್ಥದಲ್ಲಿ ದ್ಯುಭ್ವಾದ್ಯಧಿಕರಣವು ಮುಗಿಯಿತು.
॥ ಶ್ರೀಮದ್ಭೇಶಾರ್ಪಣಮಸ್ತು ॥

श्रीपद्मनाभतीर्थविरचितसत्तर्कदीपावळ्याम्:

।। ॐ स्थित्यदनाभ्यां ॐ ।।

'द्वा सुपर्णा' इत्यनेन पापकर्तुर्जीवात् कर्मफलमनश्नुतो दीप्यमानस्य युभ्वाद्याश्रयस्य भेदव्यपदेशादपि नासौ जीव इत्याह – स्थितीति ।। अतो युभ्वाद्याश्रयो विष्णुरिति सिद्धम् ।।

।। इति श्रीपद्मनाभतीर्थविरचितसत्तर्कदीपावळ्याम्: युभ्वाद्यधिकरणम् ।।

---

(१) **भाष्यदीपिका** – न केवलं 'जुष्टम्' इति भेदश्रुतेर्न जीवेशभेदोऽत्र प्रकरणे विवक्षित इति ज्ञायते, किन्तु लिङ्गादपीत्याह सूत्रकृत् – **स्थितीति** ।। तदसिद्धिवारणाय श्रुत्युदाहरणेन व्याचष्टे – **द्वा सुपर्णेति** ।। अनेन – 'द्वा सुपर्णा' इत्यत्र श्रुताभ्यां कर्मफलानुपजीवनावस्थितिततदुपजीवनाभ्यां हेतुभ्यां च नैवात्र जीवेशयोरैक्यं वाच्यमिति सूत्रार्थ उक्तो भवति । चशब्दस्तु हेतुसमुच्चायक इति स्पष्टत्वान्न व्याख्यातः । श्रुतावदनस्य प्राथम्येऽपि स्थितेरीशसम्बन्धित्वेनाभ्यर्हितत्वादल्पाक्षरत्वाच्च सूत्रे तदनुसारेण भाष्ये च श्रौतक्रममुल्लङ्घ्य स्थितेः प्रथममुक्तिः ।

'सयुजा' सयुजौ संयुक्तौ उपकार्योपकारकभाववत्तया परस्परापरिहारेण वर्तमानौ 'सखाया' सखायौ प्रीत्या एकदेशस्थौ 'द्वा' द्वौ 'सुपर्णा' सुपर्णौ । सुपर्णसरूपौ । 'सुपर्णा सखाया' इति विशेषणस्वारस्यादस्य समजीवमात्रविषयत्वे सुष्ठुपरमानन्दरूपौ जीवेश्वरौ 'समानम्' एकं 'वृक्षं' देहाख्यम् अश्वत्थं 'परिषस्वजाते' आलिलिङ्गतुः । 'तयोः' सुपर्णयोर्मध्ये ईश्वरात् 'अन्यो' जीवः 'पिप्पलम्' अश्वत्थफलरूपं देहजनितकर्मफलम् 'स्वादु अत्ति' अस्वाद्वेव स्वादुत्वेनैव अश्नाति । जीवात् 'अन्यः' ईश्वरस्तु 'अनश्नन्' जीवाद्यमेवाभुञ्जानः 'अभि' अभितः 'चाकशीति' प्रकाशते । न तु स्वस्थित्यै जीववत् कर्मफलमपेक्षत इति मुण्डकश्रुत्यर्थः ।। १ ।।

'ದ್ವಾ ಸುಪರ್ಣಾ' ಇತ್ಯಾದಿ ಶ್ರುತಿಯಲ್ಲಿ ಪಾಪಕರ್ಮದಲ್ಲಿ ಮುಳುಗಿದ ಜೀವನಿಗಿಂತ ಕರ್ಮಫಲವನ್ನು ಭೋಗಿಸದ ದೇದೀಪ್ಯಮಾನನಾದ ದ್ಯುಭ್ವಾದ್ಯಾಶ್ರಯನಿಗೆ ಭೇದವನ್ನು ಹೇಳಿರುವ ಕಾರಣದಿಂದಲೂ ಜೀವನು ದ್ಯುಭ್ವಾದ್ಯಾಶ್ರಯನಾಗಲು ಸಾಧ್ಯವಿಲ್ಲ. ಇದನ್ನು ಪ್ರತಿಪಾದಿಸುವುದಕ್ಕಾಗಿ 'ಸ್ಥಿತ್ಯದನಾಭ್ಯಾಂ ಚ' ಎಂಬ ಸೂತ್ರವು ಹೊರಟಿದೆ. ಜೀವನಿಗಿಂತ ವಿಲಕ್ಷಣವಾದ ಧರ್ಮವನ್ನು ಶ್ರುತಿ ವಿಷ್ಣುವಿಗೆ ಹೇಳುತ್ತಿದೆ. ಆದ್ದರಿಂದ ದ್ಯುಭ್ವಾದ್ಯಾಶ್ರಯನಾದವನು ವಿಷ್ಣುವೇ ಆಗುತ್ತಾನೆಂದು ಸಿದ್ಧವಾಯಿತು.

॥ ದ್ಯುಭ್ವಾದ್ಯಧಿಕರಣವು ಸಮಾಪ್ತವಾಯಿತು ॥

ತತ್ವಪ್ರಕಾಶಿಕಾ –

।। ॐ स्थित्यदनाभ्यां ॐ ।।

न जीवेशाभेदोऽत्र प्रकरणे विवक्षित इत्येतमर्थं हेत्वन्तरेण साधयत् सूत्रमुपन्यस्य व्याचष्टे – स्थितीति ।।

ಜೀವ ಹಾಗೂ ಪರಮಾತ್ಮನಿಗೆ ಅಭೇದವನ್ನು ಈ ಪ್ರಕರಣವು ಪ್ರತಿಪಾದಿಸುತ್ತಿಲ್ಲ ಎಂಬುದನ್ನು ಮತ್ತೊಂದು ಹೇತುವಿನಿಂದ ಸಾಧಿಸುವಂತಹ ಸೂತ್ರವನ್ನು ಪಠಿಸಿ "ಸ್ಥಿತಿ" ಇತ್ಯಾದಿಯಾಗಿ ವ್ಯಾಖ್ಯಾನಿಸುತ್ತಿದ್ದಾರೆ.

तत्वप्रकाशिका – संयुक्तौ सखायौ द्वौ सुपर्णरूपौ जीवेशौ देहाख्यं पिप्पलमालिलिङ्गतुः । तयोः सुपर्णयोर्मध्येऽन्यो जीवोऽश्वत्थफलरूपं देहजनितकर्मफलमस्वाद्वेव स्वादुत्वेनात्ति । अन्य ईश्वरस्तदनश्नन्नभितः प्रकाशते । ननु स्वस्थित्यै तदपेक्षत इति जीवेशयोः कर्मफलोपजीवनतद्रहितावस्थानाभ्यामुक्ताभ्यां च नैक्यं वाच्यमित्यर्थः ।

ಪರಸ್ಪರಸಂಬಂಧವನ್ನು ಹೊಂದಿರುವ, ಪರಸ್ಪರವಾಗಿ ಪ್ರೇಮಿಸುವ, ಎರಡು ಪಕ್ಷಿರೂಪದಲ್ಲಿರುವ ಜೀವ ಹಾಗೂ ಈಶ್ವರರು ದೇಹವೆಂಬ ಪಿಪ್ಪಲಮರವನ್ನು ಆಲಂಗಿಸಿದ್ದಾರೆ. ಆ ಎರಡು ಪಕ್ಷಿಗಳ ಮಧ್ಯದಲ್ಲಿ ಜೀವನೆಂಬ ಒಂದು ಪಕ್ಷಿಯು ಅಶ್ವತ್ಥಮರದ ಫಲವನ್ನು ತಿನ್ನುತ್ತಿದೆ. ಈ ಫಲವು ದೇಹದಿಂದ ಹುಟ್ಟುವ ಕರ್ಮಫಲ ರೂಪವಾಗಿದೆ. ಆದ್ದರಿಂದಲೇ ಮಧುರವಾಗಿರುವುದಿಲ್ಲ. ಆದರೂ ಸಹ ಮಧುರವೆಂಬ ಭ್ರಾಂತಿಯಿಂದ ಜೀವನು ಆ ಫಲವನ್ನು ಅನುಭವಿಸಿ ತಿನ್ನುತ್ತಿದ್ದಾನೆ. ಆದರೆ ಭಗವಂತನೆಂಬ ಮತ್ತೊಂದು ಪಕ್ಷಿಯು ಅಂತಹ ಫಲವನ್ನು ಆಸ್ವಾದನೆ ಮಾಡದೇ ಎಲ್ಲೆಡೆ ಪ್ರಕಾಶಮಾನವಾಗಿದೆ. ದಷ್ಟಪುಷ್ಟವೂ ಆಗಿದೆ. ಮತ್ತು ತನ್ನ ಬದುಕಿಗಾಗಿ ಆ ಫಲವನ್ನು ಅದು ಅಪೇಕ್ಷಿಸುವುದಿಲ್ಲ. ಹೀಗೆ ಜೀವ ಹಾಗೂ ಈಶ್ವರನಿಗೆ

ಕರ್ಮಫಲಉಪಜೀವನ ಹಾಗೂ ಕರ್ಮಫಲಉಪಜೀವನರಹಿತ ಅವಸ್ಥಾನ ಎಂಬೆರಡು ವಿರುದ್ಧವಾದ ಧರ್ಮಗಳಿರುತ್ತವೆ. ಆದ್ದರಿಂದ ಜೀವೇಶ್ವರರಿಗೆ ಐಕ್ಯವನ್ನು ಹೇಳಬಾರದು.

तत्वप्रकाशिका – अत्र श्रुतिक्रमोल्लङ्घनमीश्वरस्य प्राधान्यज्ञापनार्थम् । स्थितिपदस्याल्पाक्षरत्वराच्च । व्यावहारिकभेदः श्रुत्योच्यत इति चेत् ।

ಸೂತ್ರದಲ್ಲಿ ಜೀವ ಹಾಗೂ ಈಶ್ವರನೆಂದು ಕ್ರಮವಾಗಿ ಶ್ರುತಿಗೆ ಅನುಸಾರಿಯಾಗಿ ಹೇಳಬೇಕಿತ್ತು. ಈ ಕ್ರಮವನ್ನು ಉಲ್ಲಂಘನೆ ಮಾಡಿ ಸ್ಥಿತಿ ಮತ್ತು ಅದನವೆಂದು ಏಕೆ ಹೇಳಿದ್ದಾರೆಂದರೆ ಈಶ್ವರನು ಪ್ರಧಾನನಾಗಿದ್ದಾನೆಂದು ಸೂಚಿಸುವುದಕ್ಕಾಗಿ. ಮತ್ತು ಸ್ಥಿತಿ, ಅದನಗಳಲ್ಲಿ ''ಸ್ಥಿತಿ'' ಎಂಬುದು ಅಲ್ಪಾಕ್ಷರಗಳುಳ್ಳದ್ದರಿಂದ ದ್ವಂದ್ವಸಮಾಸದಲ್ಲಿ ಅಲ್ಪಾಕ್ಷರವುಳ್ಳಪದವೇ ಮೊದಲು ಬರುತ್ತದೆಂಬ ದೃಷ್ಟಿಯಿಂದಲೂ ಸ್ಥಿತಿಯನ್ನೇ ಮೊದಲು ಹೇಳಿದ್ದಾರೆ.

ಪ್ರಕೃತ ಶ್ರುತಿಯಲ್ಲಿ ವ್ಯಾವಹಾರಿಕಭೇದವನ್ನೇ ಹೇಳಿರಬಹುದಲ್ಲವೇ? ಎಂದು ಪ್ರಶ್ನಿಸಬಾರದು.

तत्वप्रकाशिका – व्यावहारिक इति सत्यो मिथ्या वा । आद्ये किमनिष्टम् । न द्वितीयः । मिथ्याभिधायकत्वेऽतत्त्वावेदकत्वेन श्रुतेरप्रामाण्यापातात्। तत्त्ववेदकत्व लक्षणप्रामाण्याभावेऽपि व्यावहारिकं तदस्तीति चेत् । तत्त्वाविषयत्वे प्रामाण्यवाचो युक्तेरयक्तत्वात् ।

ವ್ಯಾವಹಾರಿಕಭೇದವು ಸತ್ಯವೋ ಸುಳ್ಳೋ ಎಂದು ಪ್ರಶ್ನೆ. ಸತ್ಯವೆಂದರೆ ನಮಗೆ ಅದು ಇಷ್ಟವೇ ಆಗಿದೆ. ಸುಳ್ಳೆಂದರೆ ಶ್ರುತಿಯು ಮಿಥ್ಯಾಪ್ರತಿಪಾದಕವಾದ್ದರಿಂದ ಅತತ್ತ್ವಾವೇದಕವಾಗುತ್ತದೆ. ಆಗ ಶ್ರುತಿಗೆ ಅಪ್ರಾಮಾಣ್ಯದೋಷವು ಬರುತ್ತದೆ. ಇನ್ನು ತತ್ತ್ವವೇದಕತ್ವವೆಂಬ ಪ್ರಾಮಾಣ್ಯವು ಶ್ರುತಿಗೆ ಬಾರದಿರಬಹುದು. ಆದರೆ ವ್ಯಾವಹಾರಿಕವಾದ ಪ್ರಾಮಾಣ್ಯವನ್ನು ಹೇಳಬಹುದಲ್ಲವೇ? ಎಂದು ಪ್ರಶ್ನಿಸಬಾರದು. ಏಕೆಂದರೆ, ತಾತ್ವಿಕವಾದ ವಿಷಯವನ್ನು ಪ್ರತಿಪಾದನೆ ಮಾಡದ ಶ್ರುತಿಯು ಪ್ರಾಮಾಣ್ಯಹೊಂದಿದೆ ಎಂಬ ಪ್ರಯೋಗವು ಅತ್ಯಂತ ಅಯುಕ್ತವಾಗಿದೆ.

तत्वप्रकाशिका – मिथ्याभेदानुवादित्वान्न दोष इति चेन्न । वैयर्थ्यात् । निषेधायेति चेन्न । तदभावात् ।

ಶ್ರುತಿಯು ಮಿಥ್ಯಾಭೂತವಾದ ಭೇದವನ್ನು ಕೇವಲ ಅನುವಾದ ಮಾಡುತ್ತಿದೆ. ಆದ್ದರಿಂದ ವಿರೋಧವಿರುವುದಿಲ್ಲವೆಂಬ ಆಕ್ಷೇಪವನ್ನು ಮಾಡಬಾರದು. ಏಕೆಂದರೆ, ಅನುಮಾನಕ್ಕೆ ಇಲ್ಲಿ ಯಾವುದೇ ಪ್ರಯೋಜನವು ಇರುವುದಿಲ್ಲ. ನಿಷೇಧಮಾಡುವುದೇ ಪ್ರಯೋಜನವೆಂದರೆ ಅಂತಹ ಭೇದವನ್ನು ನಿಷೇಧಮಾಡುವ ಯಾವುದೇ ಶ್ರುತಿಯು ಇರುವುದಿಲ್ಲ.

तत्वप्रकाशिका – तत्त्वमसीत्यादिनिषेधोऽस्तीति चेत् । तदनुवादेनायमेव निषेधः किं न स्यात् । अद्वैतस्य प्रमाणान्तरेणासिद्धेर्न तदनुवाद इति चेत् । तर्किं निषेधाय प्रमाणप्राप्त्या भाव्यं प्राप्तिमात्रेण वा । आद्ये निषेधायोगः । द्वितीयेऽस्त्यद्वैतेऽपि तादृशी प्राप्तिः ।

'ತತ್ತ್ವಮಸಿ' ಎಂದು ನಿಷೇಧಶ್ರುತಿ ಇದೆಯಲ್ಲವೇ ಎಂದರೆ 'ತತ್ ತ್ವಮಸಿ' ಎಂಬ ಶ್ರುತಿಯಿಂದ ಅಭೇದವನ್ನು ಅನುವಾದ ಮಾಡಿ 'ದ್ವಾಸುಪರ್ಣಾ' ಎಂಬ ಶ್ರುತಿಯೇ ಅದನ್ನು ನಿಷೇಧಿಸುತ್ತಿದೆ ಎಂದು ವಿಪರೀತವಾಗಿ ಏಕೆ ಹೇಳಬಾರದು?

ಅದ್ವೈತವು ಬೇರೆ ಪ್ರಮಾಣದಿಂದ ಸಿದ್ಧವಾಗದ ಕಾರಣ 'ತತ್ತ್ವಮಸಿ' ಎಂಬ ಶ್ರುತಿಯು ಅನುವಾದರೂಪವಾಗಲು ಸಾಧ್ಯವಿಲ್ಲವಲ್ಲವೇ ಎಂದು ಶಂಕಿಸಬಾರದು. ನಿಷೇಧಕ್ಕೋಸ್ಕರ ಪ್ರಮಾಣದಿಂದ ಪ್ರಾಪ್ತವಾಗಿರಬೇಕೋ ಅಥವಾ ಹೇಗಾದರೂ ಪ್ರಾಪ್ತವಾಗಿದ್ದರೆ ಮಾತ್ರ ಸಾಕೋ ಎಂದು ಪ್ರಶ್ನಿಸುತ್ತೇವೆ. ಪ್ರಥಮಪಕ್ಷದಲ್ಲಿ ಪ್ರಮಾಣದಿಂದ ಪ್ರಾಪ್ತವಾದದ್ದನ್ನು ನಿಷೇಧಮಾಡಲು ಸಾಧ್ಯವೇ ಇಲ್ಲ. ಹೇಗಾದರೂ ಪ್ರಾಪ್ತವಾಗಿರಬಹುದೆಂದರೆ ಅದ್ವೈತವೂ ಸಹ ಪ್ರಾಪ್ತವಾಗಿರಬಹುದು. ಆದ್ದರಿಂದ ಅಂತಹ ಅದ್ವೈತವನ್ನು 'ದ್ವಾಸುಪರ್ಣಾ' ಎಂಬ ಶ್ರುತಿಯು ನಿಷೇಧಿಸಬಹುದು.

तत्वप्रकाशिका – जीवेशयोः प्रमाणं विनाऽसिद्धेः कथं तदभेदस्य कथंचित् प्राप्तिरिति चेत् समं भेदेऽपि । कुतश्चैतच्छ्रुतेर्मिथ्याभेदवादित्वं सिद्धम् । जीवेशभेदस्य मिथ्यात्वादेवेति चेत् । तदेव कुतः? न हि भेदमिथ्यात्वे प्रत्यक्षमस्ति । न चानुमानं श्रुतिसिद्धार्थबाधकम् । स्वस्यैव तद्विरोधेनाऽप्रामाण्यात् ।

ಜೀವ ಹಾಗೂ ಈಶ್ವರರು ಪ್ರಮಾಣವಿಲ್ಲದೆ ಸಿದ್ಧವಾಗುವುದಿಲ್ಲ. ಆದ್ದರಿಂದ ಅವರಲ್ಲಿ ಅಭೇದವು ಕಥಂಚಿತ್ ಪ್ರಾಪ್ತವಾಗಬಹುದಲ್ಲವೇ ಎಂದರೆ ಭೇದವಿಷಯದಲ್ಲಿಯೂ ಹೀಗೆಯೇ ಹೇಳುತ್ತೇವೆ. 'ದ್ವಾ ಸುಪರ್ಣಾ' ಎಂಬ ಶ್ರುತಿಗೆ ಮಿಥ್ಯಾಭೇದವಿಷಯತ್ವವನ್ನು ಹೇಗೆ ಸಾಧಿಸುತ್ತೀರಿ? ಜೀವೇಶಭೇದವು ಮಿಥ್ಯಾಭೂತವಾದ್ದರಿಂದಲೇ 'ದ್ವಾ ಸುಪರ್ಣಾ' ಶ್ರುತಿಯು ಮಿಥ್ಯಾಭೂತವಾದ ಭೇದವನ್ನು ಹೇಳುತ್ತಿದೆಯೆಂದು ಆಕ್ಷೇಪಿಸಿದರೆ, ಆ ಜೀವೇಶಭೇದದ ಮಿಥ್ಯಾತ್ವವು ಹೇಗೆ ಸಿದ್ಧವಾಯಿತೆಂದು ಪ್ರಶ್ನಿಸುತ್ತೇವೆ. ಭೇದಮಿಥ್ಯಾತ್ವವಿಷಯದಲ್ಲಿ ಪ್ರತ್ಯಕ್ಷವು ಪ್ರಮಾಣವಾಗಲು ಸಾಧ್ಯವಿಲ್ಲ. ಅನುಮಾನವು ಶ್ರುತಿಸಿದ್ಧವಾದ ಭೇದವನ್ನು ಬಾಧಿಸುವ ತನಕ ಪ್ರಮಾಣವಾಗುವುದಿಲ್ಲ. ಏಕೆಂದರೆ, ಸ್ವತಃ ತಾನೇ ಅಂದರೆ 'ಭೇದಃ ಮಿಥ್ಯಾ ಭೇದತ್ವಾತ್' ಎಂಬ ಅನುಮಾನವು ದ್ವಾ ಸುಪರ್ಣಾ ಎಂಬ ಶ್ರುತಿಯಿಂದ ಬಾಧಿತವಾಗಿರುವುದರಿಂದ ಅಪ್ರಮಾಣವಾಗಿದೆ.

ಪರಿಪೂರ್ಣಚಂದ್ರಿಕಾ

तत्वप्रकाशिका – श्रुतेर्भेदमात्रपरत्वादनुमानस्य च तद्भेदस्यैव मिथ्यात्वे प्रवृत्तत्वेन भिन्नविषयत्वान्न विरोध इति चेत्तर्हि प्रत्यक्षस्यौष्ण्यमात्रविषयत्वादनुमानस्य च तदौष्ण्यस्यैव मिथ्यात्वसाधकत्वेन भिन्नविषयत्वमिति बाधोच्छेदः स्यात् ।

ಶ್ರುತಿಯು ಕೇವಲ ಭೇದವಿಷಯಕವಾದರೆ ಅನುಮಾನವುಭೇದಮಿಥ್ಯಾತ್ವವನ್ನು ಸಾಧಿಸುತ್ತಿದೆ. ಆದ್ದರಿಂದ ಇವೆರಡು ಭಿನ್ನವಿಷಯಕಗಳಾದ್ದರಿಂದ ಪರಸ್ಪರ ವಿರೋಧವಿಲ್ಲವೆಂದು ಶಂಕಿಸಬಾರದು. ಪ್ರತ್ಯಕ್ಷಪ್ರಮಾಣದಿಂದ ಅಗ್ನಿಯು ಉಷ್ಣವಾಗಿದೆಯೆಂದು ತಿಳಿಯುತ್ತದೆ. ಅನುಮಾನದಿಂದ 'ವಹ್ನಿಃ ಅನುಷ್ಣಃ ದ್ರವ್ಯತ್ವಾತ್' ಎಂಬ ಅನುಮಾನದಿಂದ ಅದೇ ಅಗ್ನಿಯು ಉಷ್ಣವಾಗಿಲ್ಲವೆಂದು ಸಾಧಿಸಬಹುದು. ಇಂತಹ ಸಂದರ್ಭದಲ್ಲಿ ಪ್ರತ್ಯಕ್ಷ ಹಾಗೂ ಅನುಮಾನಗಳು ಭಿನ್ನವಿಷಯಕವಾದ್ದರಿಂದ ಬಾಧವೆಂಬ ಹೇತ್ವಾಭಾಸವೇ ಅಸಿದ್ಧವಾಗಬೇಕಾದೀತು.

तत्वप्रकाशिका – न चागमेन भेदमिथ्यात्वसिद्धिः । तदभावादेव । न च तत्सत्यत्वे मानाभावः । स्वरूपाभिधायकस्यैव सत्यत्वे प्रामाण्यात् । अन्यथा तस्य वैयर्थ्यात् ।

ಇನ್ನು ಆಗಮದಿಂದ ಭೇದಮಿಥ್ಯಾತ್ವವು ಸಿದ್ಧವಾಗುತ್ತದೆಂದು ಹೇಳಬಾರದು. ಏಕೆಂದರೆ ಅಂತಹ ಆಗಮವೇ ಕಾಣಸುತ್ತಿಲ್ಲ. ಭೇದಸತ್ಯತ್ವದ ವಿಷಯದಲ್ಲಿ ಯಾವುದೇ ಪ್ರಮಾಣವಿಲ್ಲವೆಂದು ಹೇಳಬಾರದು. ಭೇದಪ್ರತಿಪಾದಕವಾದ ಶ್ರುತಿಗಳೇ ಭೇದಸತ್ಯತ್ವವಿಷಯದಲ್ಲಿಯೂ ಪ್ರಮಾಣಗಳಾಗಿವೆ. ಇಲ್ಲದಿದ್ದರೆ ಶ್ರುತಿಗಳು ಭೇದವನ್ನು ಪ್ರತಿಪಾದಿಸುವ ವಿಷಯದಲ್ಲಿ ಅರ್ಥವೇ ಇರುವುದಿಲ್ಲ.

तत्वप्रकाशिका – अतो न मिथ्याभेदपरत्वं श्रुतेरित्यलम् । तस्माद् विष्णुरेव द्युभ्वाद्यायतनं परविद्याविषयश्चेति सिद्धम् ।। ७ ।।

।। इति श्रीमज्जयतीर्थभिक्षुविरचितायां तत्वप्रकाशिकायाम्
द्युभ्वाद्यधिकरणम् ।।

ಆದ್ದರಿಂದ ಜುಷ್ಟಂ ಯದಾ ಪಶ್ಯತಿ' ಇತ್ಯಾದಿ ಭೇದಪ್ರತಿಪಾದಕವಾದ ಶ್ರುತಿಗಳು ಮಿಥ್ಯಾಭೂತವಾದ ಭೇದವನ್ನುಪ್ರತಿಪಾದಿಸುತ್ತವೆಂದು ಹೇಳಬಾರದು. ಈ ಎಲ್ಲ ಕಾರಣಗಳಿಂದ ವಿಷ್ಣುವೇ ದ್ಯುಭ್ವಾದ್ಯಾಯತನನಾಗಿದ್ದಾನೆ. ಪರವಿದ್ಯೆಗೆ ಅವನೇ ವಿಷಯನಾಗಿದ್ದಾನೆಂದು ನಿರ್ಣಯವಾಗುತ್ತದೆ.

।। ಇಲ್ಲಿಗೆ ಶ್ರೀಜಯತೀರ್ಥಭಿಕ್ಷುಗಳಿಂದ ವಿರಚಿತವಾದ ತತ್ವಪ್ರಕಾಶಿಕ ಕನ್ನಡಾನುವಾದದಲ್ಲಿ
ದ್ಯುಭ್ವಾದ್ಯಧಿಕರಣವು ಮುಗಿಯಿತು ।।

।। ಶ್ರೀಕೃಷ್ಣಾರ್ಪಣಮಸ್ತು ।।

ದ್ಯುಭ್ವಾದ್ಯಧಿಕರಣ (೧-೩-೧)

ಭಾವದೀಪಃ – ॐ स्थित्यदनाभ्यां च ॐ ।। सूत्रे चशब्दादाह – हेत्वन्तरेणेति ।। कर्मफलोपजीवनतद्रहितावस्थानलक्षणभेदकोक्तिरूपहेत्वन्तरेणेत्यर्थः ।। पिप्पलमिति।। अश्वत्थमित्यर्थः ।

ಓಂ ಸ್ಥಿತ್ಯದನಾಭ್ಯಾಂ ಚ ಓಂ

ಸೂತ್ರದಲ್ಲಿ "ಚ" ಶಬ್ದವನ್ನು ಹೇಳಿರುವುದರಿಂದ "ಹೇತ್ವಂತರೇಣ" ಎಂದು ಹೇಳಿರುತ್ತಾರೆ. ಅಂದರೆ "ಕರ್ಮಫಲೋಪಜೀವನ ತದ್ರಾಹಿತ್ಯ ಎಂಬ ಎರಡು ವಿರುದ್ಧವಾದ ಧರ್ಮಗಳನ್ನು ಹೇಳಿರುವಿಕೆ" ಎಂಬ ಮತ್ತೊಂದು ಹೇತುವಿನಿಂದ ಎಂದರ್ಥ. "ಪಿಪ್ಪಲಂ" ಎಂಬ ಶಬ್ದಕ್ಕೆ ಅಶ್ವತ್ಥವೃಕ್ಷ ಎಂದರ್ಥ.

ಭಾವದೀಪಃ – 'तस्येदाहुः' इति वाक्यशेषविरोधनिरासायाह – अस्वाद्वेवेति ।। 'एकस्तयोः खादति पिप्पलान्नमन्यो निरन्नोऽपि बलेन भूयान्' इत्येकादशस्कन्धवाक्ये अत्तिं विनाप्यदौर्बल्यादिति तात्पर्योक्तिमनुरुद्ध्यार्थमाह – अन्य ईश्वर इत्यादिना ।।

"ತಸ್ಯೇದಾಹುಃ" ಎಂಬ ವಾಕ್ಯಶೇಷದ ವಿರೋಧವನ್ನು ಪರಿಹರಿಸುವುದಕ್ಕಾಗಿ "ಅಸ್ವಾದ್ವೇವಾ" ಎಂದು ಹೇಳಿರುತ್ತಾರೆ. ಅಂದರೆ ಎರಡು ಪಕ್ಷಿಗಳಲ್ಲಿ ಒಂದು ಪಕ್ಷಿ ಅಶ್ವತ್ಥವೃಕ್ಷದ ಫಲವನ್ನು ತಿನ್ನುತ್ತಿದೆ. ಮತ್ತೊಂದು ಅಶ್ವತ್ಥವೃಕ್ಷದ ಫಲವನ್ನು ತಿನ್ನುತ್ತಿಲ್ಲ. ಆದರೂ ಸಹ ಬಹಳವಾಗಿ ಬಲಿಷ್ಠವಾಗಿದೆ. ಎಂಬುದಾಗಿ "ಏಕಸ್ತಯೋಃ ಖಾದತಿ ಪಿಪ್ಪಲಾನ್ನಮನ್ಯೋ ನಿರನ್ನೋಧಿಪಿ ಬಲೇನ ಭೂಯಾನ್" ಎಂದು ಏಕಾದಶ ಸ್ಕಂದದ ಭಾಗವತದಲ್ಲಿ ಹೇಳಲಾಗಿದೆ. ಈ ವಾಕ್ಯಕ್ಕೆ ಶ್ರೀಮದಾಚಾರ್ಯರು ತಾತ್ಪರ್ಯದಲ್ಲಿ "ಅತ್ತಿಂ ವಿನಾಪ್ಯದೋರ್ಬಲ್ಯಾತ್" ಎಂದು ವ್ಯಾಖ್ಯಾನಿಸಿದ್ದಾರೆ. ಅದನ್ನು ಅನುಸರಿಸಿ ಪ್ರಕೃತ ಟೀಕಾರಾಯರು "ಅನ್ಯ ಈಶ್ವರ" ಇತ್ಯಾದಿಯಾಗಿ ಹೇಳುತ್ತಿದ್ದಾರೆ.

ಭಾವದೀಪಃ – गुहानये 'शुभं पिबति' इति वाक्यानुरोधादर्थान्तरमुक्तम् । भाष्योक्तं सूत्रारूढं दर्शयति – कर्मेत्यादिना ।। अत्र श्रुतेर्बुद्धिजीवपरत्वं चन्द्रिकायां निरस्तम् । विस्तृतं च गुरुपादैः श्रुतितात्पर्यकौमुद्याम् ।

ಗುಹಾಧಿಕರಣದಲ್ಲಿ "ಶುಭಂ ಪಿಬತಿ" ಎಂಬ ಪ್ರಮಾಣವನ್ನು ಉಲ್ಲೇಖಿಸಿದ್ದರು. ಆದಕ್ಕೆ ಈ ಅರ್ಥವು ಮತ್ತೊಂದು ವ್ಯಾಖ್ಯಾನವಾಗಿದೆ ಎಂದು ತಿಳಿಯಬೇಕು. ಭಾಷ್ಯದಲ್ಲಿ ಹೇಳಲ್ಪಟ್ಟ ವಿಚಾರವನ್ನು ಸೂತ್ರಾರೂಢ ಮಾಡುತ್ತಿದ್ದಾರೆ "ಕರ್ಮ" ಇತ್ಯಾದಿ ವಾಕ್ಯದಿಂದ. ಇಲ್ಲಿರುವ ಶ್ರುತಿಯು ಬುದ್ಧಿ ಹಾಗೂ ಜೀವರನ್ನು ಪ್ರತಿಪಾದಿಸಬಹುದಲ್ಲವೆ? ಜೀವೇಶ್ವರರನ್ನೇ ಏಕೆ ಪ್ರತಿಪಾದಿಸಬೇಕು? ಎಂಬ ಶಂಕೆಯನ್ನು ತಾತ್ಪರ್ಯಚಂದ್ರಿಕೆಯಲ್ಲಿ ನಿರಾಕರಿಸಿದ್ದಾರೆ. ಮತ್ತು ಗುರುಗಳು ಮಾಡಿರುವ ಶ್ರುತಿತಾತ್ಪರ್ಯಕೌಮುದಿಯಲ್ಲಿ ಹೆಚ್ಚಿನ ವಿಚಾರವನ್ನು ತಿಳಿಯಬೇಕು.

ಭಾವದೀಪಃ – ಅತ್ರ ಶ್ರುತಾವದನಸ್ಯಾದಿತ್ವೇನ ಸೂತ್ರೇऽप್ಯದನಸ್ಥಿತಿಭ್ಯಾಮಿತ್ಯುಕ್ತ್ಯಾ ಭಾವ್ಯಮ್, ಅತ ಆಹ – **ಶ್ರುತೀತಿ** ।। ಸೂತ್ರೇ ಶ್ರುತ್ಯುಕ್ತಕ್ರಮೋಲ್ಲಙ್ಘನಮಿತ್ಯರ್ಥಃ । 'ಅಭ್ಯರ್ಹಿತಂ ಪೂರ್ವಮ್' ಅಲ್ಪಾಚ್ತರಂ ಪೂರ್ವಮ್' ಇತಿ ವ್ಯಾಕರಣಸ್ಮೃತೇರಿತಿ ಭಾವಃ ।

ಈ ಶ್ರುತಿಯಲ್ಲಿ ಅದನವನ್ನು ಮೊದಲು ಹೇಳಲಾಗಿದೆ ಅದಕ್ಕೆ ಅನುಸಾರಿಯಾಗಿ ಸೂತ್ರದಲ್ಲಿ ಅದನಸ್ಥಿತಿಭ್ಯಾಂ ಎಂದು ಹೇಳಬೇಕಿತ್ತಲ್ಲವೆ? ಎಂಬ ಪ್ರಶ್ನೆಗೆ ''ಶ್ರುತಿ'' ಇತ್ಯಾದಿ ಟೀಕೆಯಿಂದ ಉತ್ತರಿಸುತ್ತಿದ್ದಾರೆ. ಸೂತ್ರದಲ್ಲಿ ಶ್ರುತಿಯ ಕ್ರಮವನ್ನು ಉಲ್ಲಂಸಿದ್ದಾರೆ ಎಂದರ್ಥ. ''ಅಭ್ಯರ್ಹಿತಂ ಪೂರ್ವಂ'' ಎಂಬುದಾಗಿ ಯಾವುದು ಅಲ್ಪವಾದ ಅಚ್ ಅಕ್ಷರಗಳಿಂದ ಕೂಡಿರುತ್ತದೆಯೋ ಅದೇ ಪದವು ಮೊದಲು ಬರಬೇಕೆಂದು ವ್ಯಾಕರಣದಲ್ಲಿ ಹೇಳಿರುತ್ತಾರೆ.

ಭಾವದೀಪಃ – ಶ್ರುತೇರ್ವ್ಯಾವಹಾರಿಕಭೇದಪರತ್ವೇನ ವಾ ವ್ಯಾವಹಾರಿಕಪ್ರಾಮಾಣ್ಯೇನ ಮಿಥ್ಯಾಭೇದಪರತ್ವೇನ ವಾ ಮಿಥ್ಯಾಭೇದಾನುವಾದಿತ್ವೇನ ವಾऽನ್ಯಥೋಪಪತ್ತಿಮಾಶಙ್ಕ್ಯ ನಿರಾಕರೋತಿ – **ವ್ಯಾವಹಾರಿಕ ಇತ್ಯಾದಿನಾ** ।। ವ್ಯಾವಹಾರಿಕಮ್ ಅತತ್ತ್ವಾವೇದಕತ್ವರೂಪಮ್ ।

ಶ್ರುತಿಯು ವ್ಯಾವಹಾರಿಕವಾದ ಭೇದವನ್ನು ಪ್ರತಿಪಾದಿಸಬಹುದು, ಅಥವಾ ವ್ಯಾವಹಾರಿಕಪ್ರಾಮಾಣ್ಯದಿಂದ ಮಿಥ್ಯಾಭೂತವಾದ ಭೇದವನ್ನು ಪ್ರತಿಪಾದಿಸಬಹುದು. ಅಥವಾ ಮಿಥ್ಯಾಭೂತವಾದ ಭೇದವನ್ನು ಅನುವಾದ ಮಾಡಬಹುದು. ಹೀಗೆ ''ಜುಷ್ಟಂ ಯದಾ ಪಶ್ಯತಿ'' ಎಂಬ ಶ್ರುತಿಗೆ ಆದ್ಯೆತಕ್ಕೆ ವಿರೋಧ ಬಾರದಂತೆ ಅರ್ಥೈಸಬಹುದಲ್ಲವೆ? ಎಂದು ಆಕ್ಷೇಪಿಸಿ ನಿರಾಕರಿಸುತ್ತಿದ್ದಾರೆ ವ್ಯಾವಹಾರಿಕಃ ಇತ್ಯಾದಿ ವಾಕ್ಯದಿಂದ. ವ್ಯಾವಹಾರಿಕವು ಅತತ್ವಾವೇದಕರೂಪವಾಗಿದೆ.

ಭಾವದೀಪಃ – ವಾಚೋಯುಕ್ತೇರಿತ್ಯೇಕಂ ಪದಮ್ । ವಾಕ್ಯಪ್ರಯೋಗಸ್ಯೇತ್ಯರ್ಥಃ । 'ವಾದ್ದಿಕ್ಪಶ್ಯಚ್ಚೋ ಯುಕ್ತಿದಣ್ಡಹರೇಷು' ಇತ್ಯಲುಕ್ಸಮಾಸಃ ।। **ವೈಯರ್ಥ್ಯಾದಿತಿ** ।। 'ಅಪ್ರಾಪ್ತೇ ಶಾಸ್ತ್ರಮರ್ಥವದ್' ಇತಿ ನ್ಯಾಯಾದಿತಿ ಭಾವಃ ।

''ವಾಚೋ ಯುಕ್ತೇಃ'' ಎಂಬುದು ಒಂದೇ ಪದವಾಗಿದೆ. ವಾಕ್ಯಪ್ರಯೋಗದ ಎಂದರ್ಥ. ಏಕೆಂದರೆ 'ವಾಗ್ದಿಕ್ಪಶ್ಯಚ್ಚೋ ಯುಕ್ತಿದಂಡಹರೇಷು' ಎಂಬ ಸೂತ್ರದಿಂದ ಅಲುಕ್ ಸಮಾಸವಾಗಿದೆ ಅಂದರೆ 'ವಾಚೋ' ಎಂಬಲ್ಲಿರುವ 'ಸುಪ್' ಪ್ರತ್ಯಯವು ಲೋಪವಾಗಿರುವುದಿಲ್ಲ. ''ವೈಯರ್ಥ್ಯಾತ್'' ಎಂದು ಟೀಕೆಯಲ್ಲಿದೆ. ಅಂದರೆ ''ಅಪ್ರಾಪ್ತೇ ಶಾಸಮರ್ಥವತ್'' ಅಪೂರ್ವವಾದ ವಿಚಾರದಲ್ಲಷ್ಟೇ ಶಾಸವು ಪ್ರಮಾಣವಾಗುತ್ತದೆ ಎಂಬ ನ್ಯಾಯವಿರುವುದರಿಂದ ಹೀಗೆ ಹೇಳಿದ್ದಾರೆ.

ಭಾವದೀಪಃ – ಯಜ್ಞಾ, ಅನುವಾದೋ ಹ್ಯರ್ಥವಾದವತ್ ಸ್ತುತ್ಯರ್ಥೆ ವಾ 'ದಧ್ನಾ ಜುಹೋತಿ' ಇತಿವತ್ ಕ್ವಚಿದ್ವಿಧಾನಾರ್ಥೆ ವಾ 'ನೇಹ ನಾನಾಸ್ತಿ ಕಿಞ್ಚನ' ಇತ್ಯತ್ರ ಕಿಞ್ಚನೇತಿವನ್ನಿಷೇಧಾರ್ಥೆ ವಾ । ನ ಪಕ್ಷತ್ರಯಮಪಿ । ಅದರ್ಶನಾದಿತ್ಯರ್ಥಃ । ಶಙ್ಕಃ ಸ್ವಾಶಯಂ ವ್ಯನಕ್ತಿ – ನಿಷೇಧಾಯೇತಿ ।।

ಅಥವಾ ಯಾವರೀತಿಯಾಗಿ ಅರ್ಥವಾದವು ಸ್ತುತಿಗೋಸ್ಕರ ಇರುತ್ತದೆಯೋ ಅದರಂತೆ. ಅಥವಾ "ದಧ್ನಾ ಜುಹೋತಿ" ಎಂಬಲ್ಲಿ ದದಿಯನ್ನು ವಿಧಾನ ಮಾಡುವುದಕ್ಕಾಗಿ ಅನುವಾದ ಮಾಡಿರುತ್ತಾರೋ ಅದರಂತೆ ಇಲ್ಲಿಯೂ ಸಹ ವಿಧಾನ ಮಾಡುವುದಕ್ಕಾಗಿ ಅನುವಾದ ಮಾಡಿರಬಹುದು. ಅಥವಾ "ನೇಹ ನಾಸ್ತಿ ಕಿಂಚನ" ಎಂಬ ಶ್ರುತಿಯಲ್ಲಿ ನಿಷೇಧ ಮಾಡುವುದಕ್ಕೋಸ್ಕರ ಇಲ್ಲಿ ಅನುವಾದ ಮಾಡಿರಬಹುದು. ಹೀಗೆ ಮೂರೂ ಪಕ್ಷಗಳನ್ನು ನಿರಾಕರಿಸಿದ್ದಾರೆ. ಏಕೆಂದರೆ ಭೇದವನ್ನು ನಿಷೇಧ ಮಾಡುವ ಯಾವುದೇ ಶ್ರುತಿಗಳು ಕಾಣುಸುತ್ತಿಲ್ಲವೆಂದರ್ಥ. ಆಶಂಕೆ ಮಾಡುವ ಪೂರ್ವಪಕ್ಷಕಾರನು ತನ್ನ ಅಭಿಪ್ರಾಯವನ್ನು ಸ್ಪಷ್ಟಪಡಿಸುತ್ತಿದ್ದಾನೆ "ನಿಷೇಧಾಯ" ಇತ್ಯಾದಿಯಾಗಿ.

ಭಾವದೀಪಃ – ತಾದೃಶೀ ಪ್ರಾಪ್ತಿರಿತಿ ।। ಆನನ್ದಮಯೇ ಉಕ್ತದಿಶೇತಿ ಭಾವಃ । ಅಙ್ಗೀಕೃತ್ಯ ಚೇದಮುಕ್ತಮ್ । ವಸ್ತುತೋ ಭೇದಮಿಥ್ಯಾತ್ವಮೇವ ನ ಸಿದ್ಧಮ್, ಯೇನ ತದನುವಾದ ಇತ್ಯಾಹ – ಕೃತಶ್ಚೇತಿ ।।

"ತಾದೃಶೀ ಪ್ರಾಪ್ತಿಃ" ಅಂದರೆ ಆನಂದಮಯಾಧಿಕರಣದಲ್ಲಿ ಹೇಳಿದ ಪ್ರಕಾರವಾಗಿ ತಿಳಿಯಬೇಕೆಂದು ಅಭಿಪ್ರಾಯ. ವಸ್ತುತಃ ಇದನ್ನು ಅಂಗೀಕರಿಸಿ ಹೇಳಿದ್ದಾರೆ. ವಿಚಾರ ಮಾಡಿದರೆ ಭೇದಮಿಥ್ಯಾತ್ವವೇ ಸಿದ್ಧವಾಗಿರುವುದಿಲ್ಲ. ಹಾಗೆ ಸಿದ್ಧವಾಗಿದ್ದಲ್ಲಿ ಅದು ಅನುವಾದ ರೂಪವೆಂದು ಹೇಳಬಹುದಿತ್ತು. ಇದನ್ನು "ಕೃತಶ್ಚ" ಎಂಬ ವಾಕ್ಯದಿಂದ ನಿರೂಪಿಸುತ್ತಿದ್ದಾರೆ.

ಭಾವದೀಪಃ – 'ನಾನುಮಾನಮತಚ್ಛಬ್ದಾದ್' ಇತಿ ಸೂತ್ರಮತ್ರಾನುವರ್ತ್ಯ ತಸ್ಯಾನುಮಾನಂ ಭೇದಮಿಥ್ಯಾತ್ವೇ ಮಾನಂ ನ । ಕುತಃ ಅತಚ್ಛಬ್ದಾತ್ । ಮಿಥ್ಯಾತ್ವವಿರುದ್ಧಭೇದಸತ್ಯತ್ವಬೋಧಕಶಬ್ದಾದಿತಿ ವೃತ್ತ್ಯನ್ತರಂ ಮನಸಿ ನಿಧಾಯಾಹ – ನಚೇತಿ ।।

"ನಾನುಮಾನಮತಚ್ಛಬ್ದಾದ್" ಎಂಬ ಸೂತ್ರವನ್ನು ಇಲ್ಲಿ ಅನುವೃತ್ತಿ ಮಾಡಿಕೊಂಡು ಅಂತಹ ಅನುಮಾನವು ಭೇದಮಿಥ್ಯಾತ್ವ ವಿಷಯದಲ್ಲಿ ಪ್ರಮಾಣವಾಗುವುದಿಲ್ಲ. ಏಕೆಂದರೆ "ಅತತ್ ಶಬ್ದಾತ್" 'ಮಿಥ್ಯಾತ್ವಕ್ಕೆ ವಿರುದ್ಧವಾದ ಭೇದ ಸತ್ಯತ್ವವನ್ನು ಪ್ರತಿಪಾದಿಸುವ ಶಬ್ದಗಳು ಇರುವುದರಿಂದ' ಎಂಬುದಾಗಿ ಮತ್ತೊಂದು ಬಗೆಯ ವ್ಯಾಖ್ಯಾನವನ್ನು ಮನಸ್ಸಿನಲ್ಲಿ ಇಟ್ಟುಕೊಂಡು "ನ ಚ" ಇತ್ಯಾದಿ ಟೀಕಾ ಗ್ರಂಥವು ಹೊರಟಿದೆ.

ಪರಿಪೂರ್ಣಚಂದ್ರಿಕಾ

ಭಾವದೀಪಃ – ಅನುಮಾನಂ 'ಭೇದೋ ಮಿಥ್ಯಾ ಭೇದತ್ವಾದ್' ಇತ್ಯನುಮಾನಮಿತ್ಯರ್ಥಃ । ಏತೇನ ಸರ್ವತ್ರ ಪ್ರಸಿದ್ಧೇತಿ ನಯೋಕ್ತಂ 'ದ್ವಾ ಸುಪರ್ಣಾ' ಇತ್ಯಾದಿಶ್ರುತಿವಿರೋಧಾಚ್ಚೇತ್ಯುಕ್ತಂ ವಿವೃತಂ ಧ್ಯೇಯಮ್ । ಅತಚ್ಛಬ್ದಾದಿತ್ಯಸ್ಯ ಅನುಮಾನಮೂಲಭಜತಭೇದಮಿಥ್ಯಾತ್ವಬೋಧಕಶಬ್ದಸ್ಯಾಭಾವಾದಿತ್ಯಪ್ಯರ್ಥಾನ್ತರ-ಮುಪೇತ್ಯಾಹ – **ತದಭಾವಾದೇವೇತಿ ।।**

ಅನುಮಾನಂ ಎಂದರೆ ''ಭೇದೋ ಮಿಥ್ಯಾ ಭೇದತ್ವಾದ್'' ಎಂಬ ಅನುಮಾನ ಎಂದರ್ಥ. ಹೀಗೆ ಹೇಳಿದ್ದರಿಂದ ಸರ್ವಗತತ್ವಾಧಿಕರಣದಲ್ಲಿ ಹೇಳಲ್ಪಟ್ಟ ''ದ್ವಾ ಸುಪರ್ಣಾ'' ಇತ್ಯಾದಿ ಶ್ರುತಿಯ ವಿರೋಧವೂ ಸಹ ಅದ್ವೈತವಾದಿಗಳಿಗೆ ಬರುತ್ತದೆ ಎಂದು ಹೇಳಿದಂತಾಯಿತು. 'ಅತಃ' ಎಂಬ ಪದಕ್ಕೆ ಅನುಮಾನಕ್ಕೆ ಮೂಲಭೂತವಾದ ಭೇದ ಮಿಥ್ಯಾತ್ವ ಪ್ರತಿಪಾದಕವಾದ ಶಬ್ದವಿಲ್ಲದ ಕಾರಣ ಎಂಬ ಮತ್ತೊಂದು ಬಗೆಯ ಅರ್ಥವನ್ನು ಅಂಗೀಕರಿಸಿ ''ತದಭಾವಾದೇವ'' ಎಂದು ಟೀಕೆಯಲ್ಲಿ ಹೇಳಿರುತ್ತಾರೆ.

ಭಾವದೀಪಃ – **ಅತ ಇತಿ ।।** ಶ್ರುತೇರಪ್ರಾಮಾಣ್ಯಾಪತ್ತೇರ್ಮಿಥ್ಯಾತ್ವಸಾಧಕಾಭಾವಾತ್ ಸ್ವತಃಪ್ರಾಮಾಣ್ಯೇನ ಸ್ವಬೋಧ್ಯಸ್ಯ ಸತ್ಯತ್ವಪ್ರಾಪ್ತೇಶ್ಚೇತ್ಯರ್ಥಃ ।। **ತಸ್ಮಾದಿತಿ ।।** ಆತ್ಮಶ್ರುತ್ಯಮೃತ-ಸೇತ್ವಲಿಙ್ಗರೂಪಸಾಧಕಭಾವಾತ್ ತಚ್ಛಬ್ದರೂಪಬಾಧಕಾಭಾವಾತ್ ಪರಪಕ್ಷೇ ಸಾಧಕಾಭಾವಾದ್ ಭೇದಭೇದಕಯೋರುಕ್ತ್ಯಾऽಭೇದಾಯೋಗಾಚ್ಚೇತಿ ಸರ್ವಸೂತ್ರಹೇತ್ವಂಶಾರ್ಥಃ ।

''ಅತಃ'' ಎಂದರೆ ಶ್ರುತಿಗೆ 'ಅಪ್ರಾಮಾಣ್ಯದೋಷವು ಬರಬೇಕಾದ್ದರಿಂದ' 'ಮಿಥ್ಯಾತ್ವಸಾಧಕವಾದ ಪ್ರಮಾಣಗಳು ಇಲ್ಲದ್ದರಿಂದ' 'ಪ್ರಾಮಾಣ್ಯಸ್ವತಸ್ತ್ವವಿರುವುದರಿಂದ ಸ್ವಬೋಧ್ಯವಾದ ಅರ್ಥವು ಸತ್ಯವೇ ಆಗಿರುವುದರಿಂದ' ಎಂಬುದಾಗಿ ಮೂರುಬಗೆಯ ಅರ್ಥವನ್ನು ತಿಳಿಯಬೇಕು. ''ತಸ್ಮಾತ್'' ಎಂದರೆ ಆತ್ಮಶ್ರುತಿ, ಅಮೃತತ್ವ ಎಂಬ ಸಾಧಕ ಪ್ರಮಾಣಗಳು ಇರುವುದರಿಂದ ಮತ್ತು ''ತತ್'' ಶಬ್ದವೆಂಬ ಬಾಧಕಪ್ರಮಾಣಗಳು ಇಲ್ಲದ್ದರಿಂದ ಮತ್ತು ಪರಪಕ್ಷದಲ್ಲಿ ಸಾಧಕಪ್ರಮಾಣಗಳು ಇಲ್ಲದ ಕಾರಣ ಮತ್ತು ಭೇದವು ಯುಕ್ತವಾಗುವುದರಿಂದ ಅಭೇದವು ಅಯುಕ್ತವಾಗುವುದರಿಂದ ಎಂಬುದಾಗಿ ಎಲ್ಲ ಸೂತ್ರಗಳಲ್ಲಿ ಹೇಳಲ್ಪಟ್ಟ ಹೇತುಗಳು ಇರುವುದರಿಂದ ಎಂದರ್ಥ.

ಭಾವದೀಪಃ – **ವಿಷ್ಣುರೇವೇತ್ಯಾದಿಪ್ರತಿಜ್ಞಾರ್ಥಃ** । **ಪರವಿದ್ಯೇತಿ ಭಾಷ್ಯೋಪಸಂಹಾರಃ** । ಅತ್ರ ಸೂತ್ರಾಕ್ಷರಸ್ವಾರಸ್ಯಾದಿಕಂ ಚನ್ದ್ರಿಕಾಯಾಂ ವ್ಯಕ್ತಮುಕ್ತಮ್ । **ತೇನ ಕಸ್ಯಚಿನ್ನೂತನಸ್ಯ ದೂಷಣಾವಕಾಶೋ ನೇತಿ ಜ್ಞೇಯಮ್ ।। ೪ ।।**

।। ಇತಿ ಶ್ರೀರಾಘವೇನ್ದ್ರಯತಿಕೃತೇ ಭಾವದೀಪೇ ದ್ಯುಭ್ವಾದ್ಯಧಿಕರಣಮ್ ।।

''ವಿಷ್ಣುರೇವ'' ಎಂಬುದು ಪ್ರತಿಜ್ಞೆಯಾಗಿದೆ. ''ಪರವಿದ್ಯಾ'' ಎಂಬುದಾಗಿ ಭಾಷ್ಯವನ್ನು ಉಪಸಂಹಾರ ಮಾಡಿದ್ದಾರೆ. ಈ ಅಧಿಕರಣದ ಸೂತ್ರಾರ್ಥಗಳ ಸ್ವಾರಸ್ಯವನ್ನು ಚಂದ್ರಿಕೆಯಿಂದ ತಿಳಿಯಬೇಕು. ಹಾಗೆ

ಭಾವದೀಪಃ – ಯದ್ವಾ, ಅನುವಾದೋ ಹ್ಯರ್ಥವಾದವತ್ ಸ್ತುತ್ಯರ್ಥೆ ವಾ 'ದಧ್ನಾ ಜುಹೋತಿ' ಇತಿವತ್ ಕ್ವಚಿದ್ವಿಧಾನಾರ್ಥೆ ವಾ 'ನೇಹ ನಾನಾಸ್ತಿ ಕಿಞ್ಚನ' ಇತ್ಯತ್ರ ಕಿಞ್ಚನೇತಿವನ್ನಿಷೇಧಾರ್ಥೆ ವಾ । ನ ಪಕ್ಷತ್ರಯಮಪಿ । ಅದರ್ಶನಾದಿತ್ಯರ್ಥಃ । ಶಙ್ಕತೇ ಸ್ವಾಶಯಂ ವ್ಯನಕ್ತಿ – ನಿಷೇಧಾಯೇತಿ ।।

ಅಥವಾ ಯಾವರೀತಿಯಾಗಿ ಅರ್ಥವಾದವು ಸ್ತುತಿಗೋಸ್ಕರ ಇರುತ್ತದೆಯೋ ಅದರಂತೆ. ಅಥವಾ "ದಧ್ನಾ ಜುಹೋತಿ" ಎಂಬಲ್ಲಿ ದದಿಯನ್ನು ವಿಧಾನ ಮಾಡುವುದಕ್ಕಾಗಿ ಅನುವಾದ ಮಾಡಿರುತ್ತಾರೋ ಅದರಂತೆ ಇಲ್ಲಿಯೂ ಸಹ ವಿಧಾನ ಮಾಡುವುದಕ್ಕಾಗಿ ಅನುವಾದ ಮಾಡಿರಬಹುದು. ಅಥವಾ "ನೇಹ ನಾನಾಸ್ತಿ ಕಿಂಚನ" ಎಂಬ ಶ್ರುತಿಯಲ್ಲಿ ನಿಷೇಧ ಮಾಡುವುದಕ್ಕೋಸ್ಕರ ಇಲ್ಲಿ ಅನುವಾದ ಮಾಡಿರಬಹುದು. ಹೀಗೆ ಮೂರೂ ಪಕ್ಷಗಳನ್ನು ನಿರಾಕರಿಸಿದ್ದಾರೆ. ಏಕೆಂದರೆ ಭೇದವನ್ನು ನಿಷೇಧ ಮಾಡುವ ಯಾವುದೇ ಶ್ರುತಿಗಳು ಕಾಣುಸುತ್ತಿಲ್ಲವೆಂದರ್ಥ. ಆಶಂಕೆ ಮಾಡುವ ಪೂರ್ವಪಕ್ಷಕಾರನು ತನ್ನ ಅಭಿಪ್ರಾಯವನ್ನು ಸ್ಪಷ್ಟಪಡಿಸುತ್ತಿದ್ದಾನೆ "ನಿಷೇಧಾಯ" ಇತ್ಯಾದಿಯಾಗಿ.

ಭಾವದೀಪಃ – ತಾದೃಶೀ ಪ್ರಾಪ್ತಿರಿತಿ ।। ಆನನ್ದಮಯೇ ಉಕ್ತದಿಶೇತಿ ಭಾವಃ । ಅಙ್ಗೀಕೃತ್ಯ ಚೇದಮುಕ್ತಮ್ । ವಸ್ತುತೋ ಭೇದಮಿಥ್ಯಾತ್ವಮೇವ ನ ಸಿದ್ಧಮ್, ಯೇನ ತದನುವಾದ ಇತ್ಯಾಹ – ಕೃತಶ್ಚೇತಿ ।।

"ತಾದೃಶೀ ಪ್ರಾಪ್ತಿಃ" ಅಂದರೆ ಆನಂದಮಯಾಧಿಕರಣದಲ್ಲಿ ಹೇಳಿದ ಪ್ರಕಾರವಾಗಿ ತಿಳಿಯಬೇಕೆಂದು ಅಭಿಪ್ರಾಯ. ವಸ್ತುತಃ ಇದನ್ನು ಅಂಗೀಕರಿಸಿ ಹೇಳಿದ್ದಾರೆ. ವಿಚಾರ ಮಾಡಿದರೆ ಭೇದಮಿಥ್ಯಾತ್ವವೇ ಸಿದ್ಧವಾಗಿರುವುದಿಲ್ಲ. ಹಾಗೆ ಸಿದ್ಧವಾಗಿದ್ದಲ್ಲಿ ಅದು ಅನುವಾದ ರೂಪವೆಂದು ಹೇಳಬಹುದಿತ್ತು. ಇದನ್ನು "ಕೃತಶ್ಚ" ಎಂಬ ವಾಕ್ಯದಿಂದ ನಿರೂಪಿಸುತ್ತಿದ್ದಾರೆ.

ಭಾವದೀಪಃ – 'ನಾನುಮಾನಮತಚ್ಛಬ್ದಾದ್' ಇತಿ ಸೂತ್ರಮತ್ರಾನುವರ್ತ್ಯ ತಸ್ಯಾನುಮಾನಂ ಭೇದಮಿಥ್ಯಾತ್ವೇ ಮಾನಂ ನ । ಕುತಃ ಅತಚ್ಛಬ್ದಾತ್ । ಮಿಥ್ಯಾತ್ವವಿರುದ್ಧಭೇದಸತ್ಯತ್ವಬೋಧಕಶಬ್ದಾದಿತಿ ವೃತ್ತ್ಯನ್ತರಂ ಮನಸಿ ನಿಧಾಯಾಹ – ನಚೇತಿ ।।

"ನಾನುಮಾನಮತಚ್ಛಬ್ದಾದ್" ಎಂಬ ಸೂತ್ರವನ್ನು ಇಲ್ಲಿ ಅನುವೃತ್ತಿ ಮಾಡಿಕೊಂಡು ಅಂತಹ ಅನುಮಾನವು ಭೇದಮಿಥ್ಯಾತ್ವ ವಿಷಯದಲ್ಲಿ ಪ್ರಮಾಣವಾಗುವುದಿಲ್ಲ. ಏಕೆಂದರೆ "ಅತತ್ ಶಬ್ದಾತ್" 'ಮಿಥ್ಯಾತ್ವಕ್ಕೆ ವಿರುದ್ಧವಾದ ಭೇದ ಸತ್ಯತ್ವವನ್ನು ಪ್ರತಿಪಾದಿಸುವ ಶಬ್ದಗಳು ಇರುವುದರಿಂದ' ಎಂಬುದಾಗಿ ಮತ್ತೊಂದು ಬಗೆಯ ವ್ಯಾಖ್ಯಾನವನ್ನು ಮನಸ್ಸಿನಲ್ಲಿ ಇಟ್ಟುಕೊಂಡು "ನ ಚ" ಇತ್ಯಾದಿ ಟೀಕಾ ಗ್ರಂಥವು ಹೊರಟಿದೆ.

ಭಾವದೀಪಃ – ಅನುಮಾನಂ 'ಭೇದೋ ಮಿಥ್ಯಾ ಭೇದತ್ವಾದ್' ಇತ್ಯನುಮಾನಮಿತ್ಯರ್ಥಃ । ಏತೇನ ಸರ್ವತ್ರ ಪ್ರಸಿದ್ಧೇತಿ ನಯೋಕ್ತಂ 'ದ್ವಾ ಸುಪರ್ಣಾ' ಇತ್ಯಾದಿಶ್ರುತಿವಿರೋಧಾಚ್ಚೇತ್ಯುಕ್ತಂ ವಿವೃತಂ ಧ್ಯೇಯಮ್ । ಅತಶ್ಚಶಬ್ದಾದಿತ್ಯಸ್ಯ ಅನುಮಾನಮೂಲಭಾಽತಭೇದಮಿಥ್ಯಾತ್ವಬೋಧಕಶಬ್ದಸ್ಯಾಭಾವಾದಿತ್ಯಪ್ಯರ್ಥಾನ್ತರ-ಮುಪೇತ್ಯಾಹ – **ತದಭಾವಾದೇವೇತಿ ।।**

ಅನುಮಾನಂ ಎಂದರೆ ''ಭೇದೋ ಮಿಥ್ಯಾ ಭೇದತ್ವಾದ್'' ಎಂಬ ಅನುಮಾನ ಎಂದರ್ಥ. ಹೀಗೆ ಹೇಳಿದ್ದರಿಂದ ಸರ್ವಗತತ್ವಾದಿಕರಣದಲ್ಲಿ ಹೇಳಲ್ಪಟ್ಟ ''ದ್ವಾ ಸುಪರ್ಣಾ'' ಇತ್ಯಾದಿ ಶ್ರುತಿಯ ವಿರೋಧವೂ ಸಹ ಅದ್ಭುತವಾದಿಗಳಿಗೆ ಬರುತ್ತದೆ ಎಂದು ಹೇಳಿದಂತಾಯಿತು. 'ಆತಃ' ಎಂಬ ಪದಕ್ಕೆ ಅನುಮಾನಕ್ಕೆ ಮೂಲಭೂತವಾದ ಭೇದ ಮಿಥ್ಯಾತ್ವ ಪ್ರತಿಪಾದಕವಾದ ಶಬ್ದವಿಲ್ಲದ ಕಾರಣ ಎಂಬ ಮತ್ತೊಂದು ಬಗೆಯ ಅರ್ಥವನ್ನು ಅಂಗೀಕರಿಸಿ ''ತದಭಾವಾದೇವ'' ಎಂದು ಟೀಕೆಯಲ್ಲಿ ಹೇಳಿರುತ್ತಾರೆ.

ಭಾವದೀಪಃ – **ಅತ ಇತಿ ।।** ಶ್ರುತೇರಪ್ರಾಮಾಣ್ಯಾಪತ್ತೇರ್ಮಿಥ್ಯಾತ್ವಸಾಧಕಾಭಾವಾತ್ ಸ್ವತಃಪ್ರಾಮಾಣ್ಯೇನ ಸ್ವಬೋಧ್ಯಸ್ಯ ಸತ್ಯತ್ವಪ್ರಾಪ್ತೇಶ್ಚೇತ್ಯರ್ಥಃ ।। **ತಸ್ಮಾದಿತಿ ।।** ಆತ್ಮಶ್ರುತ್ಯಮೃತ-ಸೇತುತ್ವಲಿಙ್ಗರೂಪಸಾಧಕಭಾವಾತ್ ತಚ್ಛಬ್ದರೂಪಬಾಧಕಾಭಾವಾತ್ ಪರಪಕ್ಷೇ ಸಾಧಕಾಭಾವಾದ್ ಭೇದಭೇದಕಯೋರುಕ್ತ್ಯಾऽಭೇದಾಯೋಗಾಚ್ಚೇತಿ ಸರ್ವಸೂತ್ರಹೇತ್ವಂಶಾರ್ಥಃ ।

''ಆತಃ'' ಎಂದರೆ ಶ್ರುತಿಗೆ 'ಅಪ್ರಾಮಾಣ್ಯದೋಷವು ಬರಬೇಕಾದ್ದರಿಂದ' 'ಮಿಥ್ಯಾತ್ವಸಾಧಕವಾದ ಪ್ರಮಾಣಗಳು ಇಲ್ಲದ್ದರಿಂದ' 'ಪ್ರಾಮಾಣ್ಯಸ್ವತಸ್ತ್ವವಿರುವುದರಿಂದ ಸ್ವಬೋಧ್ಯವಾದ ಅರ್ಥವು ಸತ್ಯವೇ ಆಗಿರುವುದರಿಂದ' ಎಂಬುದಾಗಿ ಮೂರುಬಗೆಯ ಅರ್ಥವನ್ನು ತಿಳಿಯಬೇಕು. ''ತಸ್ಮಾತ್'' ಎಂದರೆ ಆತ್ಮಶ್ರುತಿ, ಅಮೃತತ್ವ ಎಂಬ ಸಾಧಕ ಪ್ರಮಾಣಗಳು ಇರುವುದರಿಂದ ಮತ್ತು ''ತತ್'' ಶಬ್ದವೆಂಬ ಬಾಧಕಪ್ರಮಾಣಗಳು ಇಲ್ಲದ್ದರಿಂದ ಮತ್ತು ಪರಪಕ್ಷದಲ್ಲಿ ಸಾಧಕಪ್ರಮಾಣಗಳು ಇಲ್ಲದ ಕಾರಣ ಮತ್ತು ಭೇದವು ಯುಕ್ತವಾಗುವುದರಿಂದ ಅಭೇದವು ಅಯುಕ್ತವಾಗುವುದರಿಂದ ಎಂಬುದಾಗಿ ಎಲ್ಲ ಸೂತ್ರಗಳಲ್ಲಿ ಹೇಳಲ್ಪಟ್ಟ ಹೇತುಗಳು ಇರುವುದರಿಂದ ಎಂದರ್ಥ.

ಭಾವದೀಪಃ – ವಿಷ್ಣುರೇವೇತ್ಯಾದಿಪ್ರತಿಜ್ಞಾರ್ಥಃ । ಪರವಿದ್ಯೇತಿ ಭಾಷ್ಯೋಪಸಂಹಾರಃ । ಅತ್ರ ಸೂತ್ರಾಕ್ಷರಸ್ವಾರಸ್ಯಾದಿಕಂ ಚನ್ದ್ರಿಕಾಯಾಂ ವ್ಯಕ್ತಮುಕ್ತಮ್ । ತೇನ ಕಸ್ಯಚಿನ್ನೂತನಸ್ಯ ದೂಷಣಾವಕಾಶೋ ನೇತಿ ಜ್ಞೇಯಮ್ ।। ೪ ।।

।। ಇತಿ ಶ್ರೀರಾಘವೇನ್ದ್ರಯತಿಕೃತೇ ಭಾವದೀಪೇ ದ್ಯುಭ್ವಾದ್ಯಧಿಕರಣಮ್ ।।

''ವಿಷ್ಣುರೇವ'' ಎಂಬುದು ಪ್ರತಿಜ್ಞೆಯಾಗಿದೆ. ''ಪರವಿದ್ಯಾ'' ಎಂಬುದಾಗಿ ಭಾಷ್ಯವನ್ನು ಉಪಸಂಹಾರ ಮಾಡಿದ್ದಾರೆ. ಈ ಅಧಿಕರಣದ ಸೂತ್ರಾರ್ಥಗಳ ಸ್ವಾರಸ್ಯವನ್ನು ಚಂದ್ರಿಕೆಯಿಂದ ತಿಳಿಯಬೇಕು. ಹಾಗೆ

ತಿಳಿಯುವುದರಿಂದ ಕೆಲವರು ಆಪಾದಿಸುವ ಹೊಸ ದೋಷಗಳಿಗೆ ಅವಕಾಶವಿಲ್ಲವೆಂಬ ವಿಚಾರವು ಮನದಟ್ಟಾಗುತ್ತದೆ.

॥ ಇಲ್ಲಿಗೆ ಭಾವದೀಪದ ಕನ್ನಡಾನುವಾದದಲ್ಲಿ ದ್ಯುಭ್ವಾದ್ಯಧಿಕರಣವು ಮುಗಿಯಿತು ॥

ವಾಕ್ಯಾರ್ಥಮಞ್ಜರಿ – ॐ स्थित्यदनाभ्यां च ॐ ॥ ಸ್ಥಿತಿಃ ಕರ್ಮಫಲೋಪಜೀವನಂ ವಿನಾऽವಸ್ಥಾನಮ್ ಅದನಂ ತದುಪಜೀವನಮ್, ತಾಭ್ಯಾಂ ಜೀವಬ್ರಹ್ಮಣೋರ್ನೈಕ್ಯಮಿತ್ಯರ್ಥಃ । ಕರ್ಮಫಲಭೋಗಾನಙ್ಗೀಕಾರೇ ಗುಹಾಧಿಕರಣವಿರೋಧ ಇತ್ಯತ ಆಹ – **नत्विति ॥** क्रमोल्लङ्घनमिति ॥ ತತ್ರಾದನಸ್ಯೈವ ಪ್ರಥಮಮುಕ್ತೇರಿತಿ ಭಾವಃ ॥ **सत्यो मिथ्या वेति ॥** ವ್ಯಾವಹಾರಿಕತ್ವಸ್ಯ ವ್ಯವಹಾರನಿರ್ವಾಹಕತ್ವಸ್ಯ ವ್ಯವಹಾರನಿರ್ವಾಹಕತ್ವವ್ಯವಹಾರಕಾಲೇ ಪ್ರತೀಯಮಾನ ತ್ವಸಾಧಾರಣ್ಯಾದಿತಿ ಭಾವಃ ॥ **व्यावहारिकत्वं तदिति ॥** ವ್ಯಾವಹಾರಿಕಾವೇದನಲಕ್ಷಣಪ್ರಾಮಾಣ್ಯಮಿತ್ಯರ್ಥಃ । ನನು ಪ್ರಾಮಾಣ್ಯೇ ವ್ಯಾವಹಾರಿಕತ್ವಂ ವಿವಕ್ಷಿತಮ್, ತಥಾತ್ವೇ ತತ್ತ್ವಾವೇದನಲಕ್ಷಣ-ಪ್ರಾಮಾಣ್ಯಸ್ಯಾಪಿ ವ್ಯಾವಹಾರಿಕತ್ವೇನಾವಿಶೇಷಪ್ರಸಙ್ಗಾದಿತಿ ಧ್ಯೇಯಮ್ । ವಾಚೋ ಯುಕ್ತೇಃ ವಾಕ್ಪ್ರಯೋಗಸ್ಯ ॥ **न दोष इति ॥** ಮಿಥ್ಯಾಪ್ರತಿಪಾದಕತ್ವಮೇವಾಪ್ರಾಮಾಣ್ಯೇ ಪ್ರಯೋಜಕಮಿತಿ ಭಾವಃ । ವೈಯರ್ಥ್ಯಾದನುವಾದಸ್ಯ ॥ **निषेधोऽस्तीति ॥** ಭೇದಾಭೇದಯೋರನ್ಯನಿಷೇಧರೂಪತ್ವಾದಿತಿ ಭಾವಃ । ಅಯಂ 'द्वा सुपर्णा' ಇತ್ಯನೇನ ಕ್ರಿಯಮಾಣಃ ॥ **अस्तीति ॥** ಆನನ್ದಮಯನಯರೀತ್ಯೇತಿ ಭಾವಃ । ಅನುಮಾನಂ ಭೇದೋ ಮಿಥ್ಯಾ ಭೇದತ್ವಾದಿತ್ಯಾದಿ ಭೇದಸ್ಯ ಮಿಥ್ಯಾತ್ವಂ ಕಿಂ ಪ್ರಮಾಣಬಲಾದಙ್ಗೀಕ್ರಿಯತೇ, ಉತ ತತ್ಸತ್ಯತ್ವೇ ಪ್ರಮಾಣಾಭಾವಾತ್ । ಆಧ್ಯಂ ನಿರಾಕರೋತಿ – **नहीत्यादिना ॥** ದ್ವಿತೀಯಂ ನಿರಾಕರೋತಿ – **नच तत्सत्यत्वमिति ।**

॥ ಇತಿ ಶ್ರೀಶರ್ಕರಾಶ್ರೀನಿವಾಸವಿಚಿತಾ ವಾಕ್ಯಾರ್ಥಮಞ್ಜರ್ಯಾಮ್ ದ್ಯುಭ್ವಾದ್ಯಧಿಕರಣಮ್ ॥

ದ್ಯುಭ್ವಾದ್ಯಧಿಕರಣ
(೧-೩-೨)

ಭಾಗ - ೨

ತಾತ್ಪರ್ಯಚಂದ್ರಿಕಾ, ಪ್ರಕಾಶ,

ಪ್ರತಿಯೊಂದು ವಾಕ್ಯಗಳ ವಿಶೇಷ ವಿವರಣೆಯೊಂದಿಗೆ

ಸರಳ ಅನುವಾದ

***

ಮತ್ತು

ಗುರುರಾಜೀಯಮ್, ಭಾಟ್ಟಸಂಗ್ರಹ,
ಶಾಂಕರಭಾಷ್ಯ, ಭಾಮತೀ,
ರಾಮಾನುಜಭಾಷ್ಯ ಇವುಗಳ ಸಂಪೂರ್ಣ ಅಡಿಟಪ್ಪಣಿಯೊಂದಿಗೆ

ತಿಳಿಯುವುದರಿಂದ ಕೆಲವರು ಆಪಾದಿಸುವ ಹೊಸ ದೋಷಗಳಿಗೆ ಅವಕಾಶವಿಲ್ಲವೆಂಬ ವಿಚಾರವು ಮನದಟ್ಟಾಗುತ್ತದೆ.

॥ ಇಲ್ಲಿಗೆ ಭಾವದೀಪದ ಕನ್ನಡಾನುವಾದದಲ್ಲಿ ದ್ಯುಭ್ವಾದ್ಯಧಿಕರಣವು ಮುಗಿಯಿತು ॥

वाक्यार्थमञ्जरी – ॐ स्थित्यदनाभ्यां च ॐ ।। स्थितिः कर्मफलोपजीवनं विनाऽवस्थानम् अदनं तदुपजीवनम्, ताभ्यां जीवब्रह्मणोर्नैक्यमित्यर्थः । कर्मफलभोगानङ्गीकारे गुहाधिकरणविरोध इत्यत आह – **नत्विति ।। क्रमोल्लङ्घनमिति ।।** तत्रादनस्यैव प्रथममुक्तेरिति भावः ।। **सत्यो मिथ्या वेति ।।** व्यावहारिकत्वस्य व्यवहारनिर्वाहकत्वस्य व्यवहारनिर्वाहकत्वव्यवहारकाले प्रतीयमान त्वसाधारण्यादिति भावः ।। **व्यावहारिकत्वं तदिति ।।** व्यावहारिकावेदनलक्षणप्रामाण्यमित्यर्थः । नतु प्रामाण्ये व्यावहारिकत्वं विवक्षितम्, तथात्वे तत्त्वावेदनलक्षण-प्रामाण्यस्यापि व्यावहारिकत्वेनाविशेषप्रसङ्गादिति ध्येयम् । वाचो युक्तेः वाक्प्रयोगस्य ।। **न दोष इति ।।** मिथ्याप्रतिपादकत्वमेवाप्रामाण्ये प्रयोजकमिति भावः । वैय्यर्थ्यादनुवादस्य ।। **निषेधोऽस्तीति ।।** भेदाभेदयोरन्यनिषेधरूपत्वादिति भावः । अयं 'द्वा सुपर्णा' इत्यनेन क्रियमाणः ।। **अस्तीति ।।** आनन्दमयनयरीत्येति भावः । अनुमानं भेदो मिथ्या भेदत्वादित्यादि भेदस्य मिथ्यात्वं किं प्रमाणबलादङ्गीक्रियते, उत तत्सत्यत्वे प्रमाणाभावात् । आद्यं निराकरोति – **नहीत्यादिना ।।** द्वितीयं निराकरोति – **नच तत्सत्यत्वमिति ।**

।। इति श्रीशार्कराश्रीनिवासविचिता वाक्यार्थमञ्जर्याम् द्युभ्वाद्यधिकरणम् ।।

ದ್ಯುಭ್ವಾದ್ಯಧಿಕರಣ
(೧-೩-೨)

ಭಾಗ - ೨

ತಾತ್ಪರ್ಯಚಂದ್ರಿಕಾ, ಪ್ರಕಾಶ,

ಪ್ರತಿಯೊಂದು ವಾಕ್ಯಗಳ ವಿಶೇಷ ವಿವರಣೆಯೊಂದಿಗೆ

ಸರಳ ಅನುವಾದ

* * *

ಮತ್ತು

ಗುರುರಾಜೀಯಮ್, ಭಾಟ್ಟಸಂಗ್ರಹ,
ಶಾಂಕರಭಾಷ್ಯ, ಭಾಮತೀ,
ರಾಮಾನುಜಭಾಷ್ಯ ಇವುಗಳ ಸಂಪೂರ್ಣ ಅಡಿಟಿಪ್ಪಣಿಯೊಂದಿಗೆ

॥ ಶ್ರೀಲಕ್ಷ್ಮೀಹಯಗ್ರೀವೋ ವಿಜಯತೇತಮಾಮ್ ॥
॥ ಶ್ರೀಮದ್ವರಾಹೋ ವಿಜಯತೇತರಾಮ್ ॥
॥ ಶ್ರೀಗುರುಭ್ಯೋ ನಮಃ ॥

ಶ್ರೀಬ್ರಹ್ಮಣ್ಯತೀರ್ಥಶ್ರೀಪಾದಶಿಷ್ಯಶ್ರೀವ್ಯಾಸತೀರ್ಥವಿರಚಿತಾ

ತಾತ್ಪರ್ಯಚಂದ್ರಿಕಾ

ಪ್ರಥಮಾಧ್ಯಾಯಸ್ಯ ತೃತೀಯಃ ಪಾದಃ

ಅಥ ಯುಷ್ಮದ್ಯಧಿಕರಣಮ್

ಉಭಯತ್ರಪ್ರಸಿದ್ಧಶಬ್ದ ಸಮನ್ವಯದ ಅನಿವಾರ್ಯತೆ ಮತ್ತು ಶಬ್ದಸಂಗತಿ ವಿಚಾರ

॥ ॐ ಯುಷ್ಮದಾಯತನಂ ಸ್ವಶಬ್ದಾತ್ ॐ ॥

ಅತ್ರ –

ಮಾಭೂದನ್ಯೈಕಗತತಾ ಬ್ರಹ್ಮೈಕಗತತಾಽಪಿ ವಾ ।
ಕಿಂ ತೂಭಯಗತತ್ವಂ ಸ್ಯಾದಿತಿ ಶಙ್ಕಾ ನಿರಸ್ಯತೇ ॥ ೧ ॥

ಅನುವಾದ - ಓಂ ದ್ಯುಭ್ವಾದ್ಯಾಯತನಂ ಸ್ವಶಬ್ದಾತ್ ಓಂ ಎಂದು ಪ್ರಾರಂಭವಾಗುವ ಮೂರನೆಯ ಪಾದಕ್ಕೆ ಸಂಗತಿಯನ್ನು ಹೀಗೆ ತಿಳಿಯಬೇಕು -

ಮಾಭೂದನ್ಯೈಕಗತತಾ ಬ್ರಹ್ಮೈಕಗತತಾऽಪಿ ವಾ ।
ಕಿಂ ತೂಭಯಗತತ್ವಂ ಸ್ಯಾದಿತಿ ಶಂಕಾ ನಿರಸ್ಯತೇ ॥ ೧ ॥

ಪೂರ್ವಪಕ್ಷದಲ್ಲಿ ಶಬ್ದಗಳೆಲ್ಲವೂ ವಿಷ್ಣುವನ್ನು ಬಿಟ್ಟು ಬೇರೆ ಪದಾರ್ಥಗಳನ್ನೇ ಪ್ರತಿಪಾದಿಸುತ್ತವೆಂಬುದನ್ನು ಒಪ್ಪುವುದು ಬೇಡ. ಅಥವಾ ಸಿದ್ಧಾಂತಿಗಳು ಹೇಳುವಂತೆ ವಿಷ್ಣುವನ್ನು ಮಾತ್ರ ಪ್ರತಿಪಾದಿಸುತ್ತದೆಂಬುದನ್ನೂ ಸಹ ಒಪ್ಪುವುದು ಬೇಡ. ಹೊರತಾಗಿ ವಿಷ್ಣುವನ್ನು ಹಾಗೂ ಬೇರೆ ಪದಾರ್ಥಗಳೆರಡನ್ನೂ ಪ್ರತಿಪಾದಿಸುತ್ತದೆಂದು ಒಪ್ಪಿದರೆ ಏನು ಸಮಸ್ಯೆ ? ಎಂಬ ಆಶಂಕೆಯನ್ನು ಈ ಪಾದದಲ್ಲಿ ಪರಿಹರಿಸುತ್ತಾರೆ.

पादद्वयापादितोभयप्रसिद्धीनां स्वतःसिद्धोभयप्रसिद्धीनां चोभयपरत्वमेव । नतु ब्रह्मैकपरतेति शङ्काऽत्र निरस्यते । स्पष्टयिष्यते चैतत् ''कम्पनात्'' इत्यत्र ।

ಶಬ್ದಗಳು ಸಹಜವಾಗಿ ಬೇರೆ ಪದಾರ್ಥಗಳನ್ನು ಪ್ರತಿಪಾದಿಸುತ್ತವೆ. ಹೀಗಿರುವಾಗ ಹಿಂದಿನೆರಡು ಪಾದಗಳಲ್ಲಿ ಅನೇಕ ನ್ಯಾಯಗಳಿಂದ ಅಂತಹ ಶಬ್ದಗಳಿಗೆ ವಿಷ್ಣುಪರತ್ವವನ್ನು ಸಮರ್ಥಿಸಲಾಯಿತು. ಈ ಎರಡು ಪಾದಗಳಿಂದ ಶಬ್ದಗಳು ಉಭಯತ್ರಪ್ರಸಿದ್ಧವಾದವು ಅಂದರೆ ಲೋಕರೂಢಿಯಿಂದ ಅನ್ಯತ್ರಪ್ರಸಿದ್ಧವೂ ಆಗಿವೆ. ನ್ಯಾಯಗಳ ಬಲದಿಂದ ವಿಷ್ಣುಪರವೂ ಆಗಿವೆ. ಮತ್ತು ಇನ್ನು ಕೆಲವು ಶಬ್ದಗಳು ಸ್ವಾಭಾವಿಕವಾಗಿ ಉಭಯತ್ರಪ್ರಸಿದ್ಧವಾಗಿವೆ. ಆದ್ದರಿಂದ ಶಬ್ದಗಳಿಗೆ ಉಭಯಪರತ್ವವನ್ನೇ ಹೇಳೋಣ. ಕೇವಲ ವಿಷ್ಣುಪರತ್ವವನ್ನೇ ಏಕೆ ಹೇಳಬೇಕು ? ಎಂಬ ಆಶಂಕೆಯನ್ನು ಈ ಪಾದದಲ್ಲಿ ಪರಿಹರಿಸಿದ್ದಾರೆ. ಮತ್ತು ಇದರ ಬಗ್ಗೆ ಹೆಚ್ಚಿನ ಸ್ಪಷ್ಟೀಕರಣವನ್ನು ಕಂಪನಾಧಿಕರಣದಲ್ಲಿ ನಿರೂಪಿಸುತ್ತಾರೆ.

तदुक्तमनुव्याख्याने –

आहोभयगतत्वं च स्यादतो लिङ्गशब्दयोः ।
इति संशयनुत्त्यर्थमुभयत्र प्रतीतितः ।
शब्दानां वर्तमानानां सलिङ्गानां विशेषतः ।
समन्वयो हरावेव यन्नैवान्यत्र मुख्यतः ।। इति ।

ಇದನ್ನೇ ಅನುವ್ಯಾಖ್ಯಾನದಲ್ಲಿ ಹೀಗೆ ಹೇಳಿದ್ದಾರೆ -

ಆಹೋಽಭಯಗತತ್ವಂ ಚ ಸ್ಯಾದತೋ ಲಿಂಗಶಬ್ದಯೋಃ ।
ಇತಿ ಸಂಶಯನುತ್ಯರ್ಥಮುಭಯತ್ರ ಪ್ರತೀತಿತಃ ।
ಶಬ್ದಾನಾಂ ವರ್ತಮಾನಾನಾಂ ಸಲಿಂಗಾನಾಂ ವಿಶೇಷತಃ ।
ಸಮನ್ವಯೋ ಹರಾವೇವ ಯನ್ನೈವಾನ್ಯತ್ರ ಮುಖ್ಯತಃ ।।

ಲಿಂಗಾತ್ಮಕವಾದ ಹಾಗೂ ನಾಮಾತ್ಮಕವಾದ ಶಬ್ದಗಳೆಲ್ಲವೂ ಉಭಯಗತವೇ ಆಗಲಿ ಎಂಬ ಸಂಶಯವನ್ನು ಇಲ್ಲಿ ಪರಿಹಾರ ಮಾಡುತ್ತಿದ್ದಾರೆ. ವಿಷ್ಣುವಿನಲ್ಲಿ ಹಾಗೂ ಬೇರೆ ಕಡೆ ಶಬ್ದಗಳು ಇರುತ್ತವೆಂದು ಆಪಾತತಃ ತೋರುತ್ತಿದೆ. ಇಂತಹ ಲಿಂಗಸಹಿತವಾದ ಶಬ್ದಗಳಿಗೆ ಶ್ರೀಹರಿಯಲ್ಲಿ ಸಮನ್ವಯವನ್ನು ಮಾಡಲು ಈ ಪಾದವು ಹೊರಟಿದೆ. ಏಕೆಂದರೆ ಶಬ್ದಗಳು ಬೇರೆ ಕಡೆ ಮುಖ್ಯವೃತ್ತಿಯಿಂದ ಇರಲು ಸಾಧ್ಯವಿಲ್ಲ. ಹೀಗೆ ಪಾದಸಂಗತಿಯನ್ನು ತಿಳಿಯಬೇಕು.

ದ್ಯುಭ್ವಾದ್ಯಧಿಕರಣ (೧-೩-೧)

अत्रानुव्याख्याने –

लिङ्गं साधारणं शब्दौ स्थानं लिङ्गमनुग्रहः ।
पुनःशब्दा लिङ्गशब्दौ विचार्या द्विस्थिता इह ।।

इत्येतत्पादीयाधिकरणार्थः सङ्गृहीतः ।

ಈ ಪಾದದಲ್ಲಿ ಒಟ್ಟು ಹದಿನಾಲ್ಕು ಅಧಿಕರಣಗಳಿವೆ. ಹನ್ನೆರಡು ಅಧಿಕರಣಗಳ ಉಪಾಧಿಯನ್ನು ಅನುವ್ಯಾಖ್ಯಾನದ ಶ್ಲೋಕದಲ್ಲಿ ಹೀಗೆ ಸಂಗ್ರಹಿಸಿದ್ದಾರೆ -

ಲಿಂಗಂ ಸಾಧಾರಣಂ ಶಬ್ದೌ ಸ್ಥಾನಂ ಲಿಂಗಮನುಗ್ರಹಃ ।
ಪುನಃಶಬ್ದಾ ಲಿಂಗಶಬ್ದೌ ವಿಚಾರ್ಯಾ ದ್ವಿಸ್ಥಿತಾ ಇಹ ।।

ಎಂಬುದಾಗಿ.

अत्र युष्मादीत्यत्र सर्वाधारत्वलिङ्गं, भूमाक्षराधिकरणयोर्भूमाक्षरनामनी, 'ईक्षति' इत्यत्र सृष्टिस्थानं, 'दहरः' इत्यत्र हृत्पद्मस्थत्वलिङ्गम् 'अनुकृते' इत्यत्रानुकूल्येन गृह्यमाणत्वलिङ्गं, पुनरपिशब्दात् कम्पनात् ज्योतिः आकाशः इति चतुर्ष्वधिकरणेषु क्रमेणेशानवज्रज्योतिराकाशशब्दाः 'सुषुप्ति' इत्यत्र स्वप्नादिद्रष्टृत्वलिङ्गं 'पत्यादि' इत्यत्र ब्राह्मणशब्दश्च विचार्यत इत्यर्थः ।

ಅನುವ್ಯಾಖ್ಯಾನ ಶ್ಲೋಕದ ಅಭಿಪ್ರಾಯ ಹೀಗಿದೆ - ಲಿಂಗಂ ಸಾಧಾರಣಂ = ದ್ಯುಭ್ವಾದ್ಯಧಿಕರಣದಲ್ಲಿ ಉಭಯಸಾಧಾರಣವಾದ ಸರ್ವಾಧಾರತ್ವ ಎಂಬ ಲಿಂಗವನ್ನು ವಿಷ್ಣುವಿನಲ್ಲಿ ಸಮನ್ವಯ ಮಾಡುತ್ತಿದ್ದಾರೆ. ಶಬ್ದೌ = ಭೂಮಾಧಿಕರಣದಲ್ಲಿ ಹಾಗೂ ಅಕ್ಷರಾಧಿಕರಣದಲ್ಲಿ 'ಭೂಮಾ' ಎಂಬ ಶಬ್ದವನ್ನು ಮತ್ತು 'ಅಕ್ಷರ' ಎಂಬ ಶಬ್ದವನ್ನು ವಿಷ್ಣುವಿನಲ್ಲಿ ಸಮನ್ವಯ ಮಾಡುತ್ತಿದ್ದಾರೆ. ಇವೆರಡು ಶಬ್ದಗಳು ಉಭಯತ್ರಪ್ರಸಿದ್ಧವಾಗಿವೆ. ಸ್ಥಾನಂ = ಈಕ್ಷತ್ಯಧಿಕರ್ಮವ್ಯಪದೇಶಾಚ್ಚ ಎಂಬ ಸೂತ್ರದಲ್ಲಿ ಸೃಷ್ಟಿಸ್ಥಾನವನ್ನು ಸಮನ್ವಯ ಮಾಡುತ್ತಿದ್ದಾರೆ. ಲಿಂಗಂ = ದಹರಾಧಿಕರಣದಲ್ಲಿ ಹೃದ್ಪದ್ಮಸ್ಥತ್ವವೆಂಬ ಲಿಂಗವನ್ನು, ಅನುಗ್ರಹಃ = ಅನುಕೃತೇಸ್ತಸ್ಯ ಚ ಎಂಬ ಸೂತ್ರದಲ್ಲಿ ಅನುಕೂಲ್ಯೇನ ಗೃಹ್ಯಮಾಣತ್ವ ಎಂಬ ಲಿಂಗವನ್ನು ಸಮನ್ವಯ ಮಾಡುತ್ತಿದ್ದಾರೆ. ಪುನಃ = ಮತ್ತೂ ಕೂಡ, ಶಬ್ದಾಃ = 'ಶಬ್ದಾದೇವ ಪ್ರಮಿತಃ' ಎಂಬ ಸೂತ್ರದಲ್ಲಿ ಈಶಾನ ಶಬ್ದವನ್ನು, 'ಕಂಪನಾತ್' ಎಂಬ ಸೂತ್ರದಲ್ಲಿ ವಜ್ರಶಬ್ದವನ್ನು, 'ಜ್ಯೋತಿರ್ದರ್ಶನಾತ್' ಎಂಬ ಸೂತ್ರದಲ್ಲಿ ಜ್ಯೋತಿ ಶಬ್ದವನ್ನು, 'ಆಕಾಶೋಽರ್ಥಾಂತರತ್ವಾದಿ ವ್ಯಪದೇಶಾತ್' ಎಂಬ ಸೂತ್ರದಲ್ಲಿ 'ಆಕಾಶ' ಶಬ್ದವನ್ನು

ಸುಷುಪ್ತ್ಯಧಿಕರಣದಲ್ಲಿ ಸ್ವಪ್ನಾದಿದಪ್ಪತ್ವವೆಂಬ ಲಿಂಗವನ್ನು 'ಪತ್ಯಾದಿ ಶಬ್ದೇಭ್ಯಃ' ಎಂಬಲ್ಲಿ ಬ್ರಾಹ್ಮಣ ಶಬ್ದವನ್ನು ವಿಷ್ಣುವಿನಲ್ಲಿವಿಚಾರ ಮಾಡುತ್ತಿದ್ದಾರೆ. ಶ್ಲೋಕದಲ್ಲಿನ ಶಬ್ದಗಳ ಅರ್ಥ - ಇಹ = ಈ ಪಾದದಲ್ಲಿ, ದ್ವಿಸ್ಥಿತಾಃ = ಎರಡು ಕಡೆ ಪ್ರಸಿದ್ಧವಾಗಿರುವ ಲಿಂಗಶಬ್ದ ಮೊದಲಾದ್ದು, ವಿಚಾರ್ಯಾಃ = ವಿಚಾರ ಮಾಡಲ್ಪಡತಕ್ಕವು ಎಂಬುದಾಗಿ.

अत्र च लिङ्गवचनविपरिणामेन सर्वविशेषणेन साधारणशब्देन सर्वेषामुभयत्र प्रसिद्धिः । 'द्विस्थिताः' इत्यनेन तु पूर्वोत्तरपक्षहेतुमत्तोक्तेति भेदः ।

ಶ್ಲೋಕದಲ್ಲಿ 'ಸಾಧಾರಣಂ' ಎಂಬ ಶಬ್ದವನ್ನು ಪ್ರತಿಯೊಂದರಲ್ಲಿಯೂ ವಿಶೇಷಣವನ್ನಾಗಿ ತಿಳಿಯಬೇಕು. ಆಯಾ ಲಿಂಗವಚನಗಳಂತೆ ವ್ಯತ್ಯಾಸ ಮಾಡಿಕೊಂಡು ಅನ್ವಯ ಮಾಡಬೇಕು. ಆದ್ದರಿಂದಲೇ ಸಕಲ ಶಬ್ದಗಳು ಹಾಗೂ ಲಿಂಗಗಳು ಉಭಯಪ್ರಸಿದ್ಧವಾಗಿದೆಯೆಂದು ತಿಳಿಯುತ್ತದೆ. ಶ್ಲೋಕದಲ್ಲಿ 'ದ್ವಿಸ್ಥಿತಾ ಇಹ' ಎಂದು ಹೇಳಿದ್ದರಿಂದ ಪೂರ್ವಪಕ್ಷದಲ್ಲಿ ಹಾಗೂ ಸಿದ್ಧಾಂತ ಪಕ್ಷದಲ್ಲಿ ಹೇತುಗಳು ಸಮಾನವಾಗಿವೆ (ದ್ವಿ = ಎರಡೂ ಪಕ್ಷದಲ್ಲಿ ಸ್ಥಿತಾ = ಸಮಾನವಾಗಿವೆ ಇಹ) ಎಂದರ್ಥ. ಹೀಗೆ ಅರ್ಥವನ್ನು ಹೇಳಿದ್ದರಿಂದ 'ಸಾಧಾರಣಂ' ಎಂಬ ಶಬ್ದದ ಅರ್ಥವನ್ನೇ ಈ ಪದದಿಂದ ಹೇಳಿದಂತಾಗಲಿಲ್ಲ.

देवताधिकरणापशूद्राधिकरणयोस्तु समन्वयाध्याये प्रासङ्गिकत्वात्तदर्थो न सङ्गृहीतः । तदुक्तमनुव्याख्याने ''अधिकारश्च तद्वानिः प्रसङ्गादेव चिन्तितौ'' इति ।

ವಾಸ್ತವಿಕವಾಗಿ ಈ ಪಾದದಲ್ಲಿ ಹದಿನಾಲ್ಕು ಅಧಿಕರಣಗಳಿವೆ, ಆದರೆ ಹನ್ನೆರಡು ಅಧಿಕರಣಗಳಿಗೆ ಮಾತ್ರ ಉಪಾಧಿಯನ್ನು ಹೇರ್ಿದಲ್ಲವೇ? ಎಂದರೆ ದೇವತಾಧಿಕರಣ ಹಾಗೂ ಅಪಶೂದ್ರಾಧಿಕರಣಗಳಲ್ಲಿ ಯಾವುದೇ ಶಬ್ದಗಳ ಸಮನ್ವಯವನ್ನು ಮಾಡುತ್ತಿಲ್ಲ. ಅವೆರಡು ಅಧಿಕರಣಗಳು ಸಮನ್ವಯಾಧ್ಯಾಯದಲ್ಲಿ ಪ್ರಾಸಂಗಿಕವಾಗಿ ಪ್ರಸಕ್ತವಾಗಿರುತ್ತವೆಂದು ತಿಳಿಯಬೇಕು. ಇದನ್ನೇ ಅನುವ್ಯಾಖ್ಯಾನದಲ್ಲಿ 'ಅಧಿಕಾರಶ್ಚ ತದ್ವಾನಿಃ ಪ್ರಸಂಗಾದೇವ ಚಿಂತಿತೌ' ಅಧಿಕಾರವನ್ನು ಹಾಗೂ ಅಧಿಕಾರವಿಲ್ಲದಿರುವಿಕೆಯನ್ನು ಪ್ರಾಸಂಗಿಕವಾಗಿ ಚಿಂತನೆ ಮಾಡಿದ್ದಾರೆಂದು ಹೇಳಿರುತ್ತಾರೆ.

नन्वन्यत्रप्रसिद्धशरीरित्वसाहित्यादन्तर्यामित्वमिव युष्मदायायतनत्वमप्यन्यत्र-प्रसिद्धजायमानत्वादिसाहित्यादन्यत्रप्रसिद्धं युक्तम् । नच वाच्यं लिङ्गपादीयन्यायै-र्जायमानत्वलिङ्गस्यापि विष्णौ सम्भवेनान्यत्रप्रसिद्धिर्नेति । तथात्वे तेन पूर्वपक्षोत्तरयोगादिति चेत् ।

ಆಕ್ಷೇಪ - ಅಂತರ್ಯಾಮಿತ್ವವನ್ನು ಅನ್ಯತ್ರಪ್ರಸಿದ್ಧವಾದ ಲಿಂಗವೆಂದು ಪರಿಗಣಿಸಿ ಅಂತರ್ಯಾಮ್ಯಧಿಕರಣದಲ್ಲಿ ಸಮನ್ವಯ ಮಾಡಿದಿರಿ. ಅಲ್ಲಿ ಅನ್ಯತ್ರಪ್ರಸಿದ್ಧವಾದ 'ಶರೀರಿತ್ವ' ಎಂಬ ಲಿಂಗದ ಜೊತೆಗೆ ಕೂಡಿರುವುದರಿಂದ ಅಂತರ್ಯಾಮಿತ್ವವು ಕೂಡ ಅನ್ಯತ್ರಪ್ರಸಿದ್ಧವಾಗಿದೆಯೆಂದು ಹೇಗೆ ಹೇಳಿದರೋ, ಅದರಂತೆ ದ್ಯುಭ್ವಾದ್ಯಾಯತನತ್ವವೆಂಬ ಲಿಂಗವೂ ಸಹ ಅನ್ಯತ್ರಪ್ರಸಿದ್ಧವಾದ ಜಾಯಮಾನತ್ವವೆಂಬ ಲಿಂಗದ ಜೊತೆಗೆ ಕೂಡಿದೆ. ಆದ್ದರಿಂದ ಅಂತರ್ಯಾಮಿತ್ವದಂತೆ ದ್ಯುಭ್ವಾದ್ಯಾಯತನತ್ವವೂ ಸಹ ಅನ್ಯತ್ರಪ್ರಸಿದ್ಧವೇ ಆಗಬೇಕು. ಇನ್ನು ಲಿಂಗಪಾದದ ನ್ಯಾಯದಂತೆ ಜಾಯಮಾನತ್ವವೆಂಬ ಲಿಂಗವೂ ಸಹ ವಿಷ್ಣುವಿನಲ್ಲೇ ಸಮನ್ವಯವಾಗುವುದರಿಂದ ಅನ್ಯತ್ರಪ್ರಸಿದ್ಧವಾಗಿರುವುದಿಲ್ಲವಲ್ಲವೇ? ಎಂದು ಪ್ರಶ್ನಿಸಬಾರದು. ಹಾಗಾದರೆ ಪ್ರಕೃತ ಜಾಯಮಾನತ್ವವೆಂಬ ಲಿಂಗದಿಂದ ಪೂರ್ವಪಕ್ಷ ಮಾಡಿದ್ದೇ ತಪ್ಪಾಗುತ್ತದೆ.

ಉಚ್ಯತೇ । ಅನ್ಯತ್ರಪ್ರಸಿದ್ಧಸಾಹಚರ್ಯೇಣ ಪರತೋऽನ್ಯತ್ರಪ್ರಸಿದ್ಧತ್ವವ-ನ್ಯಾಯವಿವರಣೋದಾಹೃತಾಭ್ಯಃ ''ರುದ್ರೋ ವೈ ಲೋಕಾಯತನಮ್ । ಲೋಕಾಶ್ಚ ಲೋಕಿನಶ್ಚ ವಿಷ್ಣಾವೇವೋತಾಶ್ಚ'' ಇತ್ಯಾದಿಸಮಾಖ್ಯಾಶ್ರುತಿಭ್ಯ ಉಭಯತ್ರಪ್ರಸಿದ್ಧಸಾಹಚರ್ಯಂ ವಿನಾ ಸ್ವತ ಉಭಯತ್ರಪ್ರಸಿದ್ಧತ್ವಸ್ಯಾಪಿ ಸತ್ತ್ವಾತ್ತೇನ ರೂಪೇಣ ಪಾದಸಙ್ಗತಿಃ । ಅನ್ಯಥಾ ರೂಪಭ್ರಯವತಃ ಕಾಪಿ ವಿಚಾರೋ ನ ಸ್ಯಾತ್ ।

ಸಮಾಧಾನ - ಇದಕ್ಕೆ ಹೀಗೆ ಸಮಾಧಾನ ಹೇಳಬೇಕು. ಅನ್ಯತ್ರಪ್ರಸಿದ್ಧವಾದ ಲಿಂಗದಿಂದ ಸಹಚರಿತವಾದಾಗ ಅನ್ಯತ್ರಪ್ರಸಿದ್ಧ ಹೇಗಾಗುತ್ತದೋ? ಅದರಂತೆ ನ್ಯಾಯವಿವರಣದಲ್ಲಿ ಉದಾಹರಿಸಲ್ಪಟ್ಟ 'ರುದ್ರೋ ವೈ ಲೋಕಾಯತನಮ್ । ಲೋಕಾಶ್ಚ ಲೋಕಿನಶ್ಚ ವಿಷ್ಣಾವೇವೋತಾಶ್ಚ' ಇತ್ಯಾದಿ ಸಮಾಖ್ಯಾಶ್ರುತಿಗಳಿಂದ ದ್ಯುಭ್ವಾದ್ಯಾಯತನತ್ವವು ಉಭಯತ್ರಪ್ರಸಿದ್ಧವಾಗಿದೆ. ಸ್ವತಃ ಈ ಲಿಂಗವೂ ಉಭಯತ್ರಪ್ರಸಿದ್ಧವಾಗಿದೆ ಹೊರತು ಉಭಯತ್ರಪ್ರಸಿದ್ಧವಾದ ಲಿಂಗದ ಸಾಹಚರ್ಯದಿಂದಾಗಿ ಉಭಯತ್ರಪ್ರಸಿದ್ಧವಾಗಿರುವುದಲ್ಲ. ಆದ್ದರಿಂದ ಅನ್ಯತ್ರಪ್ರಸಿದ್ಧವಾದ ಲಿಂಗದ ಜೊತೆಗೆ ಸಾಹಚರ್ಯವನ್ನು ಹೊಂದಿ ಅನ್ಯತ್ರಪ್ರಸಿದ್ಧವಾಗುವುದಕ್ಕಿಂತ ಸ್ವತಃ ಉಭಯತ್ರಪ್ರಸಿದ್ಧವಾಗಿರುವುದೇ ಶ್ರೇಷ್ಠವಾಗಿದೆ. ಹೀಗೆ ದ್ಯುಭ್ವಾದ್ಯಧಿಕರಣಕ್ಕೆ ಪಾದಸಂಗತಿಯನ್ನು ತಿಳಿಯಬೇಕು. ಹೀಗೊಪ್ಪದಿದ್ದರೆ ದ್ಯುಭ್ವಾದ್ಯಾಯತನತ್ವವೆಂಬ ಲಿಂಗವು ಅನ್ಯತ್ರಪ್ರಸಿದ್ಧವೂ ಆಗುತ್ತದೆ, ಉಭಯತ್ರಪ್ರಸಿದ್ಧವೂ ಆಗುತ್ತದೆಂದು ಭಾವಿಸಿ ಎಲ್ಲಿಯೂ ವಿಚಾರ ಮಾಡಲು ಅವಕಾಶವನ್ನು ಹೊಂದದೇ ಇರಬೇಕಾದೀತು.

ಅಥವಾ ಅನ್ಯತ್ರಪ್ರಸಿದ್ಧೇರನ್ಯತ್ರಪ್ರಸಿದ್ಧಾನ್ಯಸಾಹಿತ್ಯಸಾಪೇಕ್ಷತ್ವಾದುಭಯತ್ರಪ್ರಸಿದ್ಧೇಸ್ತು ತನ್ನಿರಪೇಕ್ಷತ್ವಾನ್ನಿರಪೇಕ್ಷಾದರಾತ್ಪಾದಸಙ್ಗತಿಃ ।

ಅಥವಾ ಒಂದು ಶಬ್ದಕ್ಕೆ ಅನ್ಯತ್ರಪ್ರಸಿದ್ಧಿಯನ್ನು ಹೇಳಬೇಕಾದರೆ ಅದು ಬೇರೆಕಡೆ ಪ್ರಸಿದ್ಧವಾದ ಒಂದು ಪದಾರ್ಥವನ್ನು (ಅನ್ಯಪದಾರ್ಥವನ್ನು) ಅಪೇಕ್ಷಿಸುತ್ತದೆ. ಅನ್ಯತ್ರಪ್ರಸಿದ್ಧಿಯು ಅನ್ಯಪದಾರ್ಥ ಸಾಪೇಕ್ಷ ಎಂದರ್ಥ. ಉಭಯತ್ರಪ್ರಸಿದ್ಧವಾದದ್ದಕ್ಕೆ ಅನ್ಯಸಾಹಿತ್ಯ ಸಾಪೇಕ್ಷತ್ವ ಬೇಕಾಗಿಲ್ಲ ಎಂದರೆ ದ್ಯುಭ್ವಾದ್ಯಾಯತನತ್ವವೆಂಬ ಲಿಂಗವನ್ನು ಅನ್ಯತ್ರಪ್ರಸಿದ್ಧವೆಂದು ವಿವಕ್ಷಿಸುವುದು ಅನ್ಯಸಾಹಿತ್ಯದಿಂದ ಸಾಪೇಕ್ಷಿತವಾಗಿದೆ. ಉಭಯತ್ರಪ್ರಸಿದ್ಧವಾಗಿದೆಯೆಂಬುದನ್ನು ವಿವಕ್ಷಿಸುವುದು ನಿರಪೇಕ್ಷಿತವಾಗಿದೆ. ಸಾಪೇಕ್ಷಕ್ಕಿಂತ ನಿರಪೇಕ್ಷವು ಪ್ರಬಲವಾಗಿರುವ ಕಾರಣ ದ್ಯುಭ್ವಾದ್ಯಾಯತನತ್ವಲಿಂಗಕ್ಕೆ ಉಭಯತ್ರಪ್ರಸಿದ್ಧತ್ವವನ್ನು ಅಂಗೀಕರಿಸುವುದೇ ಲೇಸು. ಹೀಗೆ ಪಾದಸಂಗತಿಯನ್ನು ಈ ಅಧಿಕರಣಕ್ಕೆ ತಿಳಿಯಬೇಕು.

ಶ್ರೀರಾಘವೇಂದ್ರತೀರ್ಥವಿರಚಿತ
ಪ್ರಕಾಶ

ಪ್ರಕಾಶಃ —

ॐ द्युभ्वाद्यायतनं स्वशब्दात् ॐ ।। अस्य पादस्यैतदध्यायान्तर्भावसङ्गते-स्समन्वयपरत्वादेव सिद्धेः पूर्वपादद्वयेन सङ्गतिं वक्तुं सर्वनामलिङ्गानां पादद्वयेनैव विष्णौ समन्वितत्वान्नामलिङ्गेभ्योऽन्यस्याभावाद्व्यर्थोऽयं पाद इत्यतः पादफलमाह — अत्रेति ।।

ವಿವರಣೆ - ಪ್ರಥಮಾಧ್ಯಾಯದ ಮೂರನೇ ಪಾದವು ಪ್ರಾರಂಭವಾಗುತ್ತಿದೆ. ಮೊದಲನೆಯ ಅಧಿಕರಣ - 'ದ್ಯುಭ್ವಾದ್ಯಾಧಿಕರಣ' 'ಓಂ ದ್ಯುಭ್ವಾದ್ಯಾಯತನಂ ಸ್ವಶಬ್ದಾತ್ ಓಂ' ಎಂಬ ಸೂತ್ರದಿಂದ ಈ ಅಧಿಕರಣವು ಪ್ರಾರಂಭವಾಗುತ್ತಿದೆ. ಮೂರನೆಯ ಈ ಪಾದವು ಸಮನ್ವಯವನ್ನು ಮಾಡುವ ಮೂಲಕವಾಗಿ ಪ್ರಥಮಾಧ್ಯಾಯದಲ್ಲಿ ಅಂತರ್ಭಾವಸಂಗತಿಯನ್ನು ಹೊಂದಿದೆ. ಇನ್ನು ಪಾದಸಂಗತಿಯನ್ನು ಹೀಗೆ ತಿಳಿಯಬೇಕು. ಹಿಂದಿನ ಎರಡು ಪಾದಗಳಲ್ಲಿ ಸಕಲ ನಾಮಾತ್ಮಕಶಬ್ದಗಳನ್ನು ಸಕಲ ಲಿಂಗಾತ್ಮಕಶಬ್ದಗಳನ್ನು ವಿಷ್ಣುವಿನಲ್ಲಿ ಸಮನ್ವಯ ಮಾಡಿದರು. ವೈದಿಕಸಾಹಿತ್ಯದಲ್ಲಿ ನಾಮಾತ್ಮಕಶಬ್ದಗಳು ಮತ್ತು ಲಿಂಗಾತ್ಮಕಶಬ್ದಗಳು ಎಂಬುದಾಗಿ ಎರಡೇ ವಿಧಶಬ್ದಗಳಿರುತ್ತವೆ. ಇವುಗಳನ್ನೆಲ್ಲಾ ಸಮನ್ವಯ ಮಾಡಿ ಮುಗಿಸಿದ ಮೇಲೆ ಮತ್ತೊಂದು ಬಗೆಯ ಶಬ್ದಗಳ ಸಮನ್ವಯವು ಉಳಿದಿರುವುದಿಲ್ಲ. ಆದ್ದರಿಂದ ಈ ಪಾದವು ಹೊರಟದ್ದು, ವ್ಯರ್ಥವಲ್ಲವೇ? ಎಂಬ ಪ್ರಶ್ನೆಗೆ ಸಮಸ್ತ ಈ ಪಾದದ ಪ್ರಯೋಜನವನ್ನು ತಿಳಿಸುವುದಕ್ಕಾಗಿ 'ಅತ್ರ' ಎಂಬ ಗ್ರಂಥವು ಪ್ರಾರಂಭವಾಗುತ್ತಿದೆ.

ಪ್ರಕಾಶಃ – अस्य इति शङ्का निरस्यत इति श्लोकगतेनान्वयः । पूर्वं द्विपाद्यां लोकतोऽन्यत्रप्रसिद्धानामशेषनाम्नामशेषलिङ्गानामन्यैकगतत्वमाशङ्क्य च न्यायैर्ब्रह्म-गतत्वमुक्तम् ।

'अत्र' ಎಂಬ ಶಬ್ದಕ್ಕೆ 'इति शंका निरस्यते' ಎಂಬ ಶ್ಲೋಕದಲ್ಲಿರುವ ಪದಗಳ ಜೊತೆಗೆ ಅನ್ವಯವನ್ನು ತಿಳಿಯಬೇಕು. ಹಿಂದಿನ ಎರಡು ಪಾದಗಳಲ್ಲಿ ಲೋಕತಃ ಅನ್ಯತ್ರಪ್ರಸಿದ್ಧವಾದ ಸಕಲ ನಾಮಾತ್ಮಕಶಬ್ದಗಳನ್ನು, ಹಾಗೂ ಸಕಲ ಲಿಂಗಾತ್ಮಕಶಬ್ದಗಳನ್ನು ಅನ್ಯಮಾತ್ರಗತವೆಂದು ಆಶಂಕಿಸಿ ಅನೇಕ ನ್ಯಾಯಗಳಿಂದ ಬ್ರಹ್ಮನಲ್ಲಿ ಸಮನ್ವಯ ಮಾಡಿದರು.

ಪ್ರಕಾಶಃ – एवं तर्हि लोकप्रसिद्धिन्याययोरुभयोरनुग्रहायोभयत्र वृत्तिरस्त्विति शङ्का पादद्वयानन्तरमेवोदेतीति साऽत्र पादे निरस्यते । तथाच श्रोत्राकाङ्क्षिततैव सङ्गतिरिति भावः ।

ಹಾಗಾದರೆ ಲೋಕಪ್ರಸಿದ್ಧಿ ಹಾಗೂ ಎರಡು ಪಾದಗಳಲ್ಲಿ ಹೇಳಲ್ಪಟ್ಟ ನ್ಯಾಯಗಳೆರಡನ್ನು ಅನುಗ್ರಹ ಮಾಡುವುದಕ್ಕಾಗಿ ಉಭಯತ್ರಪ್ರಸಿದ್ಧವಾದ ಶಬ್ದಗಳಿರಬಹುದಲ್ಲವೇ? ಎಂಬ ಆಶಂಕೆಯು ಬರುತ್ತದೆ. ಅಂದರೆ ಕೆಲವು ಶಬ್ದಗಳು ಸ್ವತಃ ಲೋಕಪ್ರಸಿದ್ಧವಾಗಿವೆ. ಅವುಗಳನ್ನು ನ್ಯಾಯದ ಬಲದಿಂದ ವಿಷ್ಣುವಿನಲ್ಲಿ ಸಮನ್ವಯ ಮಾಡಿದಾಗ ಒಂದೇ ಶಬ್ದವು ಲೋಕರೂಢಿಯಿಂದ ಲೌಕಿಕ ವಸ್ತುವನ್ನು ಪ್ರತಿಪಾದನೆ ಮಾಡುತ್ತದೆ. ನ್ಯಾಯದ ಬಲದಿಂದ ವಿಷ್ಣುವನ್ನೂ ಸಹ ಪ್ರತಿಪಾದನೆ ಮಾಡುತ್ತದೆ. ಹೀಗೇಕೆ ಒಪ್ಪಬಾರದು. ಎಂಬ ಆಶಂಕೆಯು ಪ್ರಾಪ್ತವಾಗುತ್ತದೆ. ಆದ್ದರಿಂದ ಎರಡೂ ಪಾದಗಳ ಆನಂತರವೇ ಈ ಸಂಶಯವು ಸಂಗತವಾಗುತ್ತದೆಂದು ಅಭಿಪ್ರಾಯ. ಈ ಶಂಕೆಯನ್ನು ಈ ಪಾದದಲ್ಲಿ ನಿರಾಕರಿಸುತ್ತಾರೆ. ಆದ್ದರಿಂದ ಶ್ರೋತೃಗಳ ಆಕಾಂಕ್ಷಾ ಕ್ರಮಕ್ಕೆ ಅನುಸಾರಿಯಾಗಿ ಈ ಪಾದಕ್ಕೆ ಸಂಗತಿಯಿರುತ್ತದೆಂದು ಭಾವಿಸಬೇಕು.

ಪ್ರಕಾಶಃ – केषामित्याकाङ्क्षां पूरयन् श्लोकं व्याचष्टे – पादद्वयेति ।। नामलिङ्गात्मकशब्दानामिति शेषः । पादद्वयोक्तन्यायैरापादितोभयप्रसिद्धिकानाम् इत्यर्थः ।

ಶ್ಲೋಕದಲ್ಲಿ ಉಭಯಗತವಾಗಲಿ ಎಂದಷ್ಟೇ ಹೇಳಿದ್ದಾರೆ. ಯಾವುದು ಉಭಯಗತವಾಗುತ್ತವೆಂಬ ಆಕಾಂಕ್ಷೆಯನ್ನು ಶಾಂತ ಮಾಡುವುದಕ್ಕಾಗಿ ಸ್ವತಃ ತಾವೇ ಶ್ಲೋಕವನ್ನು ವ್ಯಾಖ್ಯಾನಿಸುತ್ತಿದ್ದಾರೆ 'ಪಾದದ್ವಯ' ಇತ್ಯಾದಿ ವಾಕ್ಯದಿಂದ. ನಾಮಲಿಂಗಾತ್ಮಕಶಬ್ದಗಳಿಗೆ ಎಂದು ಶೇಷಪೂರಣೆಯನ್ನು ಮಾಡಿಕೊಳ್ಳಬೇಕು. ಅಂದರೆ ಹಿಂದಿನೆರಡು ಪಾದಗಳಲ್ಲಿ ಹೇಳಲ್ಪಟ್ಟ ನ್ಯಾಯಗಳಿಂದ ಕೆಲವು ಶಬ್ದಗಳಿಗೆ ಉಭಯತ್ರಪ್ರಸಿದ್ಧಿಯನ್ನು ಮೇಲ್ನೋಟಕ್ಕೆ ಹೇಳಿದಂತಾಗಿರುತ್ತದೆ ಅಂತಹ ಶಬ್ದಗಳಿಗೆ ಎಂದರ್ಥ.

ಪ್ರಕಾಶಃ – यद्यपि प्रागुक्तन्यायैर्ब्रह्मण्येव प्रसिद्धिस्सम्पद्यते । नत्वन्यत्रापि । अन्यत्र तु सा लोकत एव । तथापि लोकतोऽन्यत्रप्रसिद्धौ सत्यां यत्नेन ब्रह्मणि तस्यामुक्तायामुभयत्रैव साऽऽपादिता भवतीति भावेनोभयेत्युक्तम् ।

ವಸ್ತುತಃ ಹಿಂದಿನೆರಡು ಪಾದಗಳಲ್ಲಿ ಹೇಳಲ್ಪಟ್ಟ ನ್ಯಾಯಗಳಿಂದ ಶಬ್ದವನ್ನು ಬ್ರಹ್ಮನಲ್ಲಿ ಮಾತ್ರ ಸಮನ್ವಯ ಮಾಡಲು ಬರುತ್ತದೆಂದು ಸಮರ್ಥಿಸಲಾಗಿದೆ. ಹೊರತು, ಬೇರೆ ಕಡೆಯೂ ಬರುತ್ತದೆಂದು ಸಮರ್ಥಿಸಿರುವುದಿಲ್ಲ. ಹಾಗೇನಾದರೂ ಬೇರೆ ಕಡೆ ಪ್ರಸಿದ್ಧಿಯಿದ್ದರೆ ಅದು ಕೇವಲ ಲೋಕರೂಢಿಯಿಂದ ಎಂದು ತಿಳಿಯಬೇಕು. ಆದರೂ ಸಹ ಲೋಕತಃ ಅನ್ಯತ್ರಪ್ರಸಿದ್ಧವಾಗಿರುವಾಗಲೇ ಆ ಶಬ್ದಗಳನ್ನು ಬ್ರಹ್ಮನಲ್ಲಿ ಪ್ರಯತ್ನಪೂರ್ವಕವಾಗಿ ಸಮನ್ವಯ ಮಾಡಿದಾಗ ಆ ಶಬ್ದಗಳು ಉಭಯತ್ರಪ್ರಸಿದ್ಧವಾಗಿವೆ ಎಂದು ಹೇಳಿದಂತಾಗುತ್ತದೆ. ಈ ಅಭವ್ಯಾಯದಿಂದ ಗ್ರಂಥದಲ್ಲಿ 'ಉಭಯಪರತ್ವಮ್' ಎಂದು ಹೇಳಿರುತ್ತಾರೆ.

प्रकाशः – एतेन प्रागेवान्यगतत्वनिरासस्य ''नेतरोऽनुपपत्तेः । अनुपपत्तेस्तु न शारीरः । अनवस्थितेरसम्भवाच्च नेतरः । न च स्मार्तमतद्धर्माभिलापात्'' इत्यादिना कृतत्वान्नैतच्छङ्कावकाश इति निरस्तम् ।

ಆಕ್ಷೇಪ - ಪರಮಾತ್ಮನನ್ನು ಬಿಟ್ಟು ಬೇರೆ ಕಡೆ ಶಬ್ದಗಳು ಬರುವುದೇ ಇಲ್ಲವೆಂಬ ವಿಚಾರವನ್ನು 'ನೇತರೋऽನುಪಪತ್ತೇಃ', 'ಅನುಪಪತ್ತೇಸ್ತು ನ ಶಾರೀರಃ', 'ಅನವಸ್ಥಿತೇರಸಂಭವಾಚ್ಚ ನೇತರಃ', 'ನಚ ಸ್ಮಾರ್ತಮತದ್ಧರ್ಮಾಭಿಲಾಪಾತ್' ಇವೇ ಮೊದಲಾದ ಸೂತ್ರಗಳಿಂದ ಸಮರ್ಥಿಸಿದ್ದಾಗಿದೆ. ಪುನಃ ಅಂತಹ ಶಬ್ದಗಳು ಬೇರೆ ಕಡೆ ಬರುವುದಿಲ್ಲವೆಂಬ ಸಮರ್ಥನೆಗೋಸ್ಕರ ಈ ಪಾದವು ಹೊರಡಬೇಕಾಗಿಲ್ಲವಲ್ಲವೇ?

ಸಮಾಧಾನ - ಈ ಆಕ್ಷೇಪವನ್ನೂ ಸಹ ಈಗ ನಿರಾಕರಿಸಿದಂತಾಯಿತು. ಆದರ ವಿವರಣೆ ಹೀಗಿದೆ -

प्रकाशः – 'नेतरः' इत्यादिना शब्दानामन्यत्र तात्पर्याभावमात्रोक्तावपि शक्तेरनिरासेनोभयत्र शक्तिस्स्यादिति वा येषामुभयगतत्वेऽनुपपत्त्यादेस्स्फुट-प्रतिभासस्तदन्येषां पाददयापादितोभयप्रसिद्धिकानामुभयपरत्वमेवेति वा शङ्कोदयादिति तृतीये सुधायामेव व्यक्तत्वादिति भावः ।

'ನೇತರೋऽನುಪಪತ್ತೇಃ' ಇತ್ಯಾದಿ ಸೂತ್ರಗಳಲ್ಲಿ ಶಬ್ದಗಳಿಗೆ ಬೇರೆ ಕಡೆ ತಾತ್ಪರ್ಯವಿಲ್ಲವೆಂದಷ್ಟೇ ಸಮರ್ಥಿಸಲಾಗಿದೆ ಹೊರತು, ಶಕ್ತಿಯಿಲ್ಲವೆಂದು ನಿರಾಕರಿಸಿಲ್ಲ. ಆದ್ದರಿಂದ ತಾತ್ಪರ್ಯವಿಲ್ಲದಿದ್ದರೂ ಶಕ್ತಿಯಿರಬಹುದು. ಹಾಗಾಗಿ ಒಂದೇ ಶಬ್ದಕ್ಕೆ ವಿಷ್ಣುವಿನಲ್ಲಿ ಹಾಗೂ ಬೇರೆ ಪದಾರ್ಥಗಳಲ್ಲಿ ಶಕ್ತಿಯನ್ನು ಒಪ್ಪಲು ಏನೂ ಆತಂಕವಿಲ್ಲವೆಂಬ ಶಂಕೆಯು ಬಂದೇ ಬರುತ್ತದೆ. ಅಥವಾ ಆನಂದಮಯ ಮೊದಲಾದ ಶಬ್ದಗಳು ಉಭಯತ್ರಪ್ರಸಿದ್ಧವಾಗಿದೆಯೆಂದು ಹೇಳಿದರೆ ಅನುಪಪತ್ತಿಯು ಸ್ಫುಟವಾಗಿ ಗೋಚರಿಸುತ್ತದೆ. ಆದರೆ ಯಾವ ಶಬ್ದಗಳು ಉಭಯತ್ರಪ್ರಸಿದ್ಧವಾದಾಗ ಅನುಪಪತ್ತಿಯು ಸ್ಪಷ್ಟವಾಗಿ ತಿಳಿಯವುದಿಲ್ಲವೋ, ಹಿಂದಿನೆರಡು ಪಾದಗಳಿಂದ ವಿಷ್ಣುವಿನಲ್ಲಿ ಪ್ರಸಿದ್ಧವಾಗಿದೆಯೆಂದು ಲೋಕರೂಢಿಯಿಂದ ಲೋಕದಲ್ಲಿ ಪ್ರಸಿದ್ಧವಾಗಿದೆಯೆಂದು ಆಪಾತತಃ ತೋರುತ್ತದೋ, ಅಂತಹ ಶಬ್ದಗಳಿಗೆ ಉಭಯಪರತ್ವ ಶಂಕಾವನ್ನು ನಿರಾಕರಿಸುವುದಕ್ಕಾಗಿ ಈ ಪಾದವು ಹೊರಡಲೇ ಬೇಕು. ಹೀಗೆ ನ್ಯಾಯಸುಧಾ ಗ್ರಂಥದ ಮೂರನೇ ಪಾದದಲ್ಲಿ ಹೇಳಿರುತ್ತಾರೆ.

ದ್ಯುಭ್ವಾದ್ಯಧಿಕರಣ (೧-೩-೧)

ಪ್ರಕಾಶಃ – अस्य इति शङ्का निरस्यत इति श्लोकगतेनान्वयः । पूर्वं द्विपाद्यां लोकतोऽन्यत्रप्रसिद्धानामशेषनाम्नामशेषलिङ्गानामन्यैकगतत्वमाशङ्क्य च न्यायैर्ब्रह्म-गतत्वमुक्तम् ।

'अत्र' ಎಂಬ ಶಬ್ದಕ್ಕೆ 'इति शंका निरस्यते' ಎಂಬ ಶ್ಲೋಕದಲ್ಲಿರುವ ಪದಗಳ ಜೊತೆಗೆ ಅನ್ವಯವನ್ನು ತಿಳಿಯಬೇಕು. ಹಿಂದಿನ ಎರಡು ಪಾದಗಳಲ್ಲಿ ಲೋಕತಃ ಅನ್ಯತ್ರಪ್ರಸಿದ್ಧವಾದ ಸಕಲ ನಾಮಾತ್ಮಕಶಬ್ದಗಳನ್ನು, ಹಾಗೂ ಸಕಲ ಲಿಂಗಾತ್ಮಕಶಬ್ದಗಳನ್ನು ಅನ್ಯಮಾತ್ರಗತವೆಂದು ಆಶಂಕಿಸಿ ಅನೇಕ ನ್ಯಾಯಗಳಿಂದ ಬ್ರಹ್ಮನಲ್ಲಿ ಸಮನ್ವಯ ಮಾಡಿದರು.

ಪ್ರಕಾಶಃ – एवं तर्हि लोकप्रसिद्धिन्याययोरुभयोरनुग्रहायोभयत्र वृत्तिरस्त्विति शङ्का पादद्वयानन्तरमेवोदेतीति साऽत्र पादे निरस्यते । तथाच श्रोत्राकाङ्क्षिततैव सङ्गतिरिति भावः ।

ಹಾಗಾದರೆ ಲೋಕಪ್ರಸಿದ್ಧಿ ಹಾಗೂ ಎರಡು ಪಾದಗಳಲ್ಲಿ ಹೇಳಲ್ಪಟ್ಟ ನ್ಯಾಯಗಳೆರಡನ್ನು ಅನುಗ್ರಹ ಮಾಡುವುದಕ್ಕಾಗಿ ಉಭಯತ್ರಪ್ರಸಿದ್ಧವಾದ ಶಬ್ದಗಳಿರಬಹುದಲ್ಲವೇ? ಎಂಬ ಆಶಂಕೆಯು ಬರುತ್ತದೆ. ಆಂದರೆ ಕೆಲವು ಶಬ್ದಗಳು ಸ್ವತಃ ಲೋಕಪ್ರಸಿದ್ಧವಾಗಿವೆ. ಅವುಗಳನ್ನು ನ್ಯಾಯದ ಬಲದಿಂದ ವಿಷ್ಣುವಿನಲ್ಲಿ ಸಮನ್ವಯ ಮಾಡಿದಾಗ ಒಂದೇ ಶಬ್ದವು ಲೋಕರೂಢಿಯಿಂದ ಲೌಕಿಕ ವಸ್ತುವನ್ನು ಪ್ರತಿಪಾದನೆ ಮಾಡುತ್ತದೆ. ನ್ಯಾಯದ ಬಲದಿಂದ ವಿಷ್ಣುವನ್ನೂ ಸಹ ಪ್ರತಿಪಾದನೆ ಮಾಡುತ್ತದೆ. ಹೀಗೇಕೆ ಒಪ್ಪಬಾರದು. ಎಂಬ ಆಶಂಕೆಯು ಪ್ರಾಪ್ತವಾಗುತ್ತದೆ. ಆದ್ದರಿಂದ ಎರಡೂ ಪಾದಗಳ ಆನಂತರವೇ ಈ ಸಂಶಯವು ಸಂಗತವಾಗುತ್ತದೆಂದು ಅಭಿಪ್ರಾಯ. ಈ ಶಂಕೆಯನ್ನು ಈ ಪಾದದಲ್ಲಿ ನಿರಾಕರಿಸುತ್ತಾರೆ. ಆದ್ದರಿಂದ ಶ್ರೋತೃಗಳ ಆಕಾಂಕ್ಷಾ ಕ್ರಮಕ್ಕೆ ಅನುಸಾರಿಯಾಗಿ ಈ ಪಾದಕ್ಕೆ ಸಂಗತಿಯಿರುತ್ತದೆಂದು ಭಾವಿಸಬೇಕು.

ಪ್ರಕಾಶಃ – केषामित्याकाङ्क्षां पूरयन् श्लोकं व्याचष्टे – पादद्वयेति ।। नामलिङ्गात्मकशब्दानामिति शेषः । पादद्वयोक्तन्यायैरापादितोभयप्रसिद्धिकानाम् इत्यर्थः ।

ಶ್ಲೋಕದಲ್ಲಿ ಉಭಯಗತವಾಗಲಿ ಎಂದಷ್ಟೇ ಹೇಳಿದ್ದಾರೆ. ಯಾವುದು ಉಭಯಗತವಾಗುತ್ತವೆಂಬ ಆಕಾಂಕ್ಷೆಯನ್ನು ಶಾಂತ ಮಾಡುವುದಕ್ಕಾಗಿ ಸ್ವತಃ ತಾವೇ ಶ್ಲೋಕವನ್ನು ವ್ಯಾಖ್ಯಾನಿಸುತ್ತಿದ್ದಾರೆ 'ಪಾದದ್ವಯ' ಇತ್ಯಾದಿ ವಾಕ್ಯದಿಂದ. ನಾಮಲಿಂಗಾತ್ಮಕಶಬ್ದಗಳಿಗೆ ಎಂದು ಶೇಷಪೂರಣೆಯನ್ನು ಮಾಡಿಕೊಳ್ಳಬೇಕು. ಆಂದರೆ ಹಿಂದಿನೆರಡು ಪಾದಗಳಲ್ಲಿ ಹೇಳಲ್ಪಟ್ಟ ನ್ಯಾಯಗಳಿಂದ ಕೆಲವು ಶಬ್ದಗಳಿಗೆ ಉಭಯತ್ರಪ್ರಸಿದ್ಧಿಯನ್ನು ಮೇಲ್ನೋಟಕ್ಕೆ ಹೇಳಿದಂತಾಗಿರುತ್ತದೆ ಅಂತಹ ಶಬ್ದಗಳಿಗೆ ಎಂದರ್ಥ.

ಪ್ರಕಾಶಃ – यद्यपि प्रागुक्तन्यायैर्ब्रह्मण्येव प्रसिद्धिस्सम्पद्यते । नत्वन्यत्रापि । अन्यत्र तु सा लोकत एव । तथापि लोकतोऽन्यत्रप्रसिद्धौ सत्यां यत्नेन ब्रह्मणि तस्यामुक्तायामुभयत्रैव साऽऽपादिता भवतीति भावेनोभयेत्युक्तम् ।

ವಸ್ತುತಃ ಹಿಂದಿನೆರಡು ಪಾದಗಳಲ್ಲಿ ಹೇಳಲ್ಪಟ್ಟ ನ್ಯಾಯಗಳಿಂದ ಶಬ್ದವನ್ನು ಬ್ರಹ್ಮನಲ್ಲಿ ಮಾತ್ರ ಸಮನ್ವಯ ಮಾಡಲು ಬರುತ್ತದೆಂದು ಸಮರ್ಥಿಸಲಾಗಿದೆ. ಹೊರತು, ಬೇರೆ ಕಡೆಯೂ ಬರುತ್ತದೆಂದು ಸಮರ್ಥಿಸಿರುವುದಿಲ್ಲ. ಹಾಗೇನಾದರೂ ಬೇರೆ ಕಡೆ ಪ್ರಸಿದ್ಧಿಯಿದ್ದರೆ ಅದು ಕೇವಲ ಲೋಕರೂಢಿಯಿಂದ ಎಂದು ತಿಳಿಯಬೇಕು. ಆದರೂ ಸಹ ಲೋಕತಃ ಅನ್ಯತ್ರಪ್ರಸಿದ್ಧವಾಗಿರುವಾಗಲೇ ಆ ಶಬ್ದಗಳನ್ನು ಬ್ರಹ್ಮನಲ್ಲಿ ಪ್ರಯತ್ನಪೂರ್ವಕವಾಗಿ ಸಮನ್ವಯ ಮಾಡಿದಾಗ ಆ ಶಬ್ದಗಳು ಉಭಯತ್ರಪ್ರಸಿದ್ಧವಾಗಿವೆ ಎಂದು ಹೇಳಿದಂತಾಗುತ್ತದೆ. ಈ ಅಭಿವ್ಯಾಯದಿಂದ ಗ್ರಂಥದಲ್ಲಿ 'ಉಭಯಪರತ್ವಮ್' ಎಂದು ಹೇಳಿರುತ್ತಾರೆ.

प्रकाशः – एतेन प्रागेवान्यगतत्वनिरासस्य ''नेतरोऽनुपपत्तेः । अनुपपत्तेस्तु न शारीरः । अनवस्थितेरसम्भवाच्च नेतरः । न च स्मार्तमतद्धर्माभिलापात्'' इत्यादिना कृतत्वान्नैतच्छङ्कावकाश इति निरस्तम् ।

ಆಕ್ಷೇಪ - ಪರಮಾತ್ಮನನ್ನು ಬಿಟ್ಟು ಬೇರೆ ಕಡೆ ಶಬ್ದಗಳು ಬರುವುದೇ ಇಲ್ಲವೆಂಬ ವಿಚಾರವನ್ನು 'ನೇತರೋऽನುಪಪತ್ತೇಃ', 'ಅನುಪಪತ್ತೇಸ್ತು ನ ಶಾರೀರಃ', 'ಅನವಸ್ಥಿತೇರಸಂಭವಾಚ್ಚ ನೇತರಃ', 'ನಚ ಸ್ಮಾರ್ತಮತದ್ಧರ್ಮಾಭಿಲಾಪಾತ್' ಇವೇ ಮೊದಲಾದ ಸೂತ್ರಗಳಿಂದ ಸಮರ್ಥಿಸಿದ್ದಾಗಿದೆ. ಪುನಃ ಅಂತಹ ಶಬ್ದಗಳು ಬೇರೆ ಕಡೆ ಬರುವುದಿಲ್ಲವೆಂಬ ಸಮರ್ಥನೆಗೋಸ್ಕರ ಈ ಪಾದವು ಹೊರಡಬೇಕಾಗಿಲ್ಲವಲ್ಲವೇ?

ಸಮಾಧಾನ - ಈ ಆಕ್ಷೇಪವನ್ನೂ ಸಹ ಈಗ ನಿರಾಕರಿಸಿದಂತಾಯಿತು. ಆದರ ವಿವರಣೆ ಹೀಗಿದೆ -

प्रकाशः – 'नेतरः' इत्यादिना शब्दानामन्यत्र तात्पर्याभावमात्रोक्तावपि शक्तेरनिरासेनोभयत्र शक्तिस्स्यादिति वा येषामुभयगतत्वेऽनुपपत्त्यादेस्स्फुट-प्रतिभासस्तदन्येषां पाददयापादितोभयप्रसिद्धिकानामुभयपरत्वमेवेति वा शङ्कोदयादिति तृतीये सुधायामेव व्यक्तत्वादिति भावः ।

'ನೇತರೋऽನುಪಪತ್ತೇಃ' ಇತ್ಯಾದಿ ಸೂತ್ರಗಳಲ್ಲಿ ಶಬ್ದಗಳಿಗೆ ಬೇರೆ ಕಡೆ ತಾತ್ಪರ್ಯವಿಲ್ಲವೆಂದಷ್ಟೇ ಸಮರ್ಥಿಸಲಾಗಿದೆ ಹೊರತು, ಶಕ್ತಿಯಿಲ್ಲವೆಂದು ನಿರಾಕರಿಸಿಲ್ಲ. ಆದ್ದರಿಂದ ತಾತ್ಪರ್ಯವಿಲ್ಲದಿದ್ದರೂ ಶಕ್ತಿಯಿರಬಹುದು. ಹಾಗಾಗಿ ಒಂದೇ ಶಬ್ದಕ್ಕೆ ವಿಷ್ಣುವಿನಲ್ಲಿ ಹಾಗೂ ಬೇರೆ ಪದಾರ್ಥಗಳಲ್ಲಿ ಶಕ್ತಿಯನ್ನು ಒಪ್ಪಲು ಏನೂ ಆತಂಕವಿಲ್ಲವೆಂಬ ಶಂಕೆಯು ಬಂದೇ ಬರುತ್ತದೆ. ಅಥವಾ ಆನಂದಮಯ ಮೊದಲಾದ ಶಬ್ದಗಳು ಉಭಯತ್ರಪ್ರಸಿದ್ಧವಾಗಿದೆಯೆಂದು ಹೇಳಿದರೆ ಅನುಪಪತ್ತಿಯು ಸ್ಫುಟವಾಗಿ ಗೋಚರಿಸುತ್ತದೆ. ಆದರೆ ಯಾವ ಶಬ್ದಗಳು ಉಭಯತ್ರಪ್ರಸಿದ್ಧವಾದಾಗ ಅನುಪಪತ್ತಿಯು ಸ್ಪಷ್ಟವಾಗಿ ತಿಳಿಯವುದಿಲ್ಲವೋ, ಹಿಂದಿನೆರಡು ಪಾದಗಳಿಂದ ವಿಷ್ಣುವಿನಲ್ಲಿ ಪ್ರಸಿದ್ಧವಾಗಿದೆಯೆಂದು ಲೋಕರೂಢಿಯಿಂದ ಲೋಕದಲ್ಲಿ ಪ್ರಸಿದ್ಧವಾಗಿದೆಯೆಂದು ಆಪಾತತಃ ತೋರುತ್ತದೋ, ಅಂತಹ ಶಬ್ದಗಳಿಗೆ ಉಭಯಪರತ್ವ ಶಂಕಾವನ್ನು ನಿರಾಕರಿಸುವುದಕ್ಕಾಗಿ ಈ ಪಾದವು ಹೊರಡಲೇ ಬೇಕು. ಹೀಗೆ ನ್ಯಾಯಸುಧಾ ಗ್ರಂಥದ ಮೂರನೇ ಪಾದದಲ್ಲಿ ಹೇಳಿರುತ್ತಾರೆ.

ದ್ಯುಭ್ವಾದ್ಯಧಿಕರಣ (೧-೩-೧)

ಪ್ರಕಾಶಃ – ನ ಕೇವಲಂ ತ ಏವ ಪುನರನ್ಯೇऽಪೀತ್ಯಾಹ – ಸ್ವತ ಇತಿ ।। ಶ್ರುತ್ಯಾದಿಸಾಮ್ಯೇನ ವಾ ಪ್ರವೃತ್ತಿನಿಮಿತ್ತಾದಿಸಾಮ್ಯೇನ ವೇತ್ಯರ್ಥಃ ।

ಕೇವಲ ಹಿಂದೆ ಹೇಳಿದ ಪ್ರಕಾರ ಉಭಯತ್ರಪ್ರಸಿದ್ಧವಾದ ಶಬ್ದಗಳ ಸಮನ್ವಯಕ್ಕೋಸ್ಕರ ಮಾತ್ರ ಈ ಪಾದ ಹೊರಟಿರುವುದಲ್ಲ. ಸ್ವತಃ ಯಾವ ಶಬ್ದಗಳು ಉಭಯತ್ರಪ್ರಸಿದ್ಧವಾಗಿವೆಯೋ? ಅವುಗಳ ಸಮನ್ವಯಕ್ಕೋಸ್ಕರವೂ ಈ ಪಾದವು ಹೊರಟಿರುತ್ತದೆಯೆಂಬ ಅಭಿಪ್ರಾಯದಿಂದ 'ಸ್ವತಃ' ಎಂಬ ವಾಕ್ಯವು ಹೊರಟಿದೆ. 'ಸ್ವತಃ' ಎಂಬ ಪದಕ್ಕೆ ಎರಡೂ ಕಡೆ ಶ್ರುತಿಯು ಸಮಾನವಾಗಿರುವುದರಿಂದ ಅಥವಾ ಪ್ರವೃತ್ತಿನಿಮಿತ್ತಾದಿಗಳು ಸಮಾನವಾಗಿರುವುದರಿಂದ ಉಭಯತ್ರಪ್ರಸಿದ್ಧವಾಗಿವೆಯೆಂದರ್ಥವೆಂದು ತಿಳಿಯಬೇಕು.

ಪ್ರಕಾಶಃ – 'ಸರ್ವತ್ರ' ಇತಿ ನಯೋಕ್ತದಿಶಾ ಪೂರ್ವೆ ಶಬ್ದಾನಾಂ ಬ್ರಹ್ಮಣಿ ತಾತ್ಪರ್ಯಮೇವಾವಧಾರಿತಂ ನತು ಶಕ್ತಿರಪೀತಿ ಪಕ್ಷಮುಪೇತ್ಯೋಕ್ತಮುಭಯಪರತ್ವಮೇವ ನತು ಬ್ರಹ್ಮೈಕಪರತೇತಿ ।

ಸರ್ವಗತತ್ವಾಧಿಕರಣದಲ್ಲಿ ಹೇಳಿದಂತೆ ಮೊದಲಿನ ಪಾದಗಳಲ್ಲಿ ಸಕಲ ಶಬ್ದಗಳಿಗೆ ಬ್ರಹ್ಮನಲ್ಲಿ ತಾತ್ಪರ್ಯವನ್ನಷ್ಟೇ ನಿಶ್ಚಯ ಮಾಡಲಾಗಿದೆ. ಹೊರತು ಶಕ್ತಿಯ ನಿಶ್ಚಯವನ್ನು ಮಾಡಿರುವುದಿಲ್ಲ. ಹೀಗೆ ಒಪ್ಪಿದಾಗ ಶಬ್ದಗಳು ಉಭಯಪರವೇ ಆಗುತ್ತವೆ ಹೊರತು, ಕೇವಲ ಬ್ರಹ್ಮಪರವಾಗುವುದಿಲ್ಲವೆಂದು ತಿಳಿಯಬೇಕು.

ಪ್ರಕಾಶಃ – ಏತೇನ ಬ್ರಹ್ಮಪರತ್ವಸ್ಯ ಪೂರ್ವನ್ಯಾಯೇನೈವ ಸಿದ್ಧೇಃ ಕಿಮನೇನ ಪಾದೇನೇತಿ ಶಙ್ಕಾ ಪ್ರತ್ಯುಕ್ತಾ । ಬ್ರಹ್ಮಪರತಾಮಾತ್ರಸಿದ್ಧಾವಪಿ ''ತತ್ತುಸಮನ್ವಯಾತ್'' ಇತ್ಯುಕ್ತಾವಧಾರಣಾನುಪಪತ್ತಿಶಙ್ಕಾಯಾಂ ತತ್ಸಮರ್ಥನಾರ್ಥತ್ವಾದಯಂ ಪಾದಸ್ಸಫಲ ಇತಿ ತಾತ್ಪರ್ಯಾತ್ ।

ಇದರಿಂದ ಮತ್ತೊಂದು ಆಕ್ಷೇಪವನ್ನು ನಿರಾಕರಿಸಿದಂತಾಯಿತು. ಆಕ್ಷೇಪ ಹೀಗಿದೆ - ಬ್ರಹ್ಮಪರತ್ವವು ಹಿಂದಿನ ಪಾದದ ನ್ಯಾಯದಿಂದಲೇ ಸಿದ್ಧವಾಗಿರುವಾಗ ಪುನಃ ಈ ಪಾದದ ಅನಿವಾರ್ಯತೆ ಏನು? ಎಂದು ಆಕ್ಷೇಪ. ಸಮಾಧಾನ ಹೀಗೆ - ಹಿಂದಿನ ಪಾದದ ನ್ಯಾಯಗಳಿಂದ ಬ್ರಹ್ಮಪರತ್ವವಷ್ಟೇ ಸಿದ್ಧವಾಗಿದ್ದರೂ ಮತ್ತೊಂದು ಪದಾರ್ಥವನ್ನು ಪ್ರತಿಪಾದಿಸುವುದಿಲ್ಲವೆಂಬ ವಿಚಾರವು ಸಿದ್ಧವಾಗಿಲ್ಲ. ಆದ್ದರಿಂದ 'ತತ್ತುಸಮನ್ವಯಾತ್' ಎಂಬ ಸೂತ್ರದಲ್ಲಿ ಅವಧಾರಣೆಯು ಅನುಪಪನ್ನವಾಗುತ್ತದೆಂಬ ಶಂಕೆಯು ಬರುತ್ತದೆ. ಅವಧಾರಣೆಯ ಸಮರ್ಥನೆಗೋಸ್ಕರ ಈ ಪಾದವು ಹೊರಟಿದ್ದು ಸಾರ್ಥಕವೆಂದು ತಿಳಿಯಬೇಕು.

ಪ್ರಕಾಶಃ – ಏತೇನ ''ಹರೌ ತದಿತರತ್ರ ಚ ಶ್ರುತ್ಯಾದಿಪ್ರಸಿದ್ಧನಾಮಲಿಙ್ಗಾತ್ಮಕಶಬ್ದಾನಾಂ ವಿಷ್ಣ್ವೇಕವಾಚಿತ್ವಂ ಪ್ರಬಲಹೇತುಭಿಃ ಪ್ರತಿಪಾದಯತ್ಯಸ್ಮಿನ್ಪಾದೇ'' ಇತಿ ಟೀಕಾ ಫಲೋಕ್ತಿಮುಖೇನ ವಿವೃತಾ ।

ಈ ವಿಚಾರದಿಂದ 'ಹರೌ ತದಿತರತ್ರ ಚ ಶ್ರುತ್ಯಾದಿಪ್ರಸಿದ್ಧನಾಮಲಿಂಗಾತ್ಮಕಶಬ್ದಾನಾಂ ವಿಷ್ಣ್ವೇಕವಾಚಿತ್ವಂ ಪ್ರಬಲಹೇತುಭಿಃ ಪ್ರತಿಪಾದಯತ್ಯಸ್ಮಿನ್ಪಾದೇ' ಶ್ರೀಹರಿಯಲ್ಲಿ ಮತ್ತು ಬೇರೆ ಪದಾರ್ಥಗಳಲ್ಲಿ ಶ್ರುತ್ಯಾದಿಗಳಿಂದ ಪ್ರಸಿದ್ಧವಾದ ನಾಮಾತ್ಮಕ ಮತ್ತು ಲಿಂಗಾತ್ಮಕ ಶಬ್ದಗಳನ್ನು ಕೇವಲ ವಿಷ್ಣುನಿಷ್ಠವೆಂದು ಪ್ರಬಲವಾದ ಹೇತುಗಳಿಂದ ಈ ಪಾದವು ಸಮರ್ಥಿಸುತ್ತಿದೆ ಎಂಬ ಟೀಕೆಯನ್ನು ವಿವರಿಸಿದಂತಾಯಿತು. ಆಂದರೆ ಈ ಪಾದದ ಫಲವನ್ನು ಹೇಳುವುದಕ್ಕಾಗಿ ಈ ಟೀಕಾ ಮಾತು ಹೊರಟಿದೆ. ಕೇವಲ ವಿಷ್ಣುವಿನಲ್ಲಿ ಶಬ್ದಗಳು ಸಮನ್ವಯಗೊಳ್ಳುತ್ತವೆಂದು ಈ ಪಾದದಲ್ಲಿ ಹೇಳುತ್ತಿರುವುದರಿಂದ ಈ ಪಾದದ ಫಲವನ್ನು ತಿಳಿಯಬೇಕೆಂದು ಟೀಕೆಯಲ್ಲಿ ಹೇಳಿದ್ದಾರೆ.

प्रकाशः – तत्र वाचित्वोक्तावपीह परत्वोक्तिस्तदेकवाचित्वतदेकपरत्वयोर्द्वयोरप्याक्षेपायेत्याहुः ।

ಟೀಕೆಯಲ್ಲಿ 'ವಿಷ್ಣ್ವೇಕವಾಚಿತ್ವಮ್' ಎಂಬುದಾಗಿ ಶಬ್ದ ವಾಚಿತ್ವವನ್ನು ಹೇಳಿದ್ದಾರೆ. ಆದರೂ ಸಹ ಇಲ್ಲಿ ತಾತ್ಪರ್ಯವನ್ನು ಹೇಳಿದ್ದಾರೆ. ಇದರಿಂದ ಕೇವಲ ವಿಷ್ಣುವನ್ನೇ ಶಕ್ತಿವೃತ್ತಿಯಿಂದ ಪ್ರತಿಪಾದಿಸುತ್ತವೆಂಬ ವಿಷಯದಲ್ಲಿ ಮತ್ತು ತಾತ್ಪರ್ಯವೃತ್ತಿಯಿಂದ ಪ್ರತಿಪಾದಿಸುತ್ತವೆಂಬ ವಿಷಯದಲ್ಲಿ ಆಕ್ಷೇಪವನ್ನು ಸೂಚಿಸಿದಂತಾಯಿತು. ಆಂದರೆ ಯಾವುದೇ ಶಬ್ದಗಳು ಕೇವಲ ವಿಷ್ಣುವಿನಲ್ಲಿ ಶಕ್ತಿವೃತ್ತಿಯಿಂದಾಗಲೀ, ತಾತ್ಪರ್ಯದಿಂದಾಗಲೀ ಇರಲು ಹೇಗೆ ಸಾಧ್ಯ ? ಎಂಬ ಆಕ್ಷೇಪ ಪರಿಹಾರಕ್ಕೋಸ್ಕರ ಈ ಪಾದವು ಹೊರಡುತ್ತಿದೆ ಎಂದು ತಿಳಿಸಿದ್ದಾರೆ.

प्रकाशः – आपादितोभयप्रसिद्धिकाः के शब्दाः? कथं च सा तेषां ? पूर्वोक्तन्यायलोकप्रयोगाभ्यामुभयप्रसिद्धिकत्वे पूर्वत्रापि प्रतिनयमेवं सुवचत्वाद्भस्मलिङ्गादिरूपन्यायस्य लोकप्रसिद्धेश्च प्रत्युदाहरणं भावादित्यत आह – स्पष्टयिष्यते चेति ।।

ಕೆಲವೊಂದು ಶಬ್ದಗಳು ಸ್ವತಃ ಉಭಯಪ್ರಸಿದ್ಧವಾಗಿವೆ. ಇನ್ನೂ ಕೆಲವು ಶಬ್ದಗಳು ಆಪಾದಿತವಾಗಿ ಉಭಯಪ್ರಸಿದ್ಧವಾಗಿವೆ. ಇವುಗಳಿರಡರಲ್ಲಿ ಆಪಾದಿತವಾದ ಉಭಯಪ್ರಸಿದ್ಧ ಶಬ್ದಗಳೆಂದರೆ ಯಾವುದು? ಯಾವ ಕಾರಣದಿಂದ ಅಂತಹ ಶಬ್ದಗಳು ಆಪಾದಿತವಾಗಿ ಉಭಯಪ್ರಸಿದ್ಧಗಳಾದವು? ಒಂದುವೇಳೆ ಹಿಂದಿನ ಅಧಿಕರಣಗಳ ನ್ಯಾಯದಿಂದ ಲೋಕಪ್ರಯೋಗದಿಂದ ಉಭಯಪ್ರಸಿದ್ಧವಾಗಿದೆಯೆಂದು ವಿವಕ್ಷಿಸುವುದಾದರೆ ಹಿಂದಿನ ಪಾದದ ಪ್ರತಿಯೊಂದು ಅಧಿಕರಣಗಳಲ್ಲಿಯೂ ಇಂತಹ ಉಭಯಪ್ರಸಿದ್ಧತ್ವವನ್ನು ಸಮರ್ಥಿಸಬಹುದು. ಏಕೆಂದರೆ ಲೋಕರೂಢಿಯಿಂದ ಆ ಶಬ್ದಗಳೂ ಅನ್ಯತ್ರಪ್ರಸಿದ್ಧವಾಗಿರುತ್ತವೆ. ಶ್ರುತಿಯಲ್ಲಿರುವ ಲಿಂಗಾದಿಗಳಿಂದ ವಿಷ್ಣುವಿನಲ್ಲಿ ಪ್ರಸಿದ್ಧವಾಗಿರುತ್ತವೆ. ಈ ಕಾರಣದಿಂದ ಹಿಂದಿನ ಪಾದದ ಶಬ್ದಗಳೂ ಸಹ ಉಭಯತ್ರಪ್ರಸಿದ್ಧವಾಗಿರುವಾಗ ಈ ಪಾದದ ಶಬ್ದಗಳಲ್ಲಿ ಮಾತ್ರ ಉಭಯತ್ರಪ್ರಸಿದ್ಧ ಶಬ್ದದ ಸಮನ್ವಯವೆಂದು ಹೇಗೆ ಹೇಳುತ್ತೀರಿ ? ಎಂಬ ಪ್ರಶ್ನೆಗೆ 'ಸಷ್ಟಯಿಷ್ಯತೇ ಚೇತಿ' ಎಂಬ ವಾಕ್ಯದಿಂದ ಉತ್ತರಿಸುತ್ತಾರೆ. ಮುಂದೆ ಕಲ್ಪನಾಧಿಕರಣದಲ್ಲಿ ಸಷ್ಟವಾಗುತ್ತದೆಂದು ಅರ್ಥ.

ದ್ಯುಭ್ವಾದ್ಯಧಿಕರಣ (೧-೩-೧)

ಪ್ರಕಾಶಃ – ಭಾಷ್ಯೇऽಸ್ಫುಟತ್ವಾದಾಹ – ತದುಕ್ತಮಿತಿ ।। ಉಭಯಗತತ್ವಶಙ್ಕಾ ನಿರಸ್ಯತೇऽತ್ರೇತ್ಯೇತತ್ತೃತೀಯಾಧ್ಯಾಯಸ್ಯ ತೃತೀಯಪಾದ ಉಕ್ತಮಿತ್ಯರ್ಥಃ ।

ಭಾಷ್ಯದಲ್ಲಿ ಪಾದಸಂಗತಿಯು ಸ್ಪಷ್ಟವಾಗಿ ತಿಳಿಯುವುದಿಲ್ಲ. ಆದಕ್ಕೋಸ್ಕರ ಅನುವ್ಯಾಖ್ಯಾನದ ಮಾತನ್ನು ಉಲ್ಲೇಖಿಸುತ್ತಿದ್ದಾರೆ 'ತದುಕ್ತಮ್' ಇತ್ಯಾದಿ ವಾಕ್ಯದಿಂದ. ಆಂದರೆ ಶಬ್ದಗಳು ಉಭಯಗತ-ವಾಗಿವೆಯಲ್ಲವೇ ? ಎಂಬ ಶಂಕೆಯನ್ನು ಈ ಪಾದದಲ್ಲಿ ಪರಿಹರಿಸಲಾಗುತ್ತಿದೆಯೆಂಬ ವಿಚಾರವನ್ನು ಅನುವ್ಯಾಖ್ಯಾನದ ಮೂರನೆಯ ಅಧ್ಯಾಯದ ಮೂರನೇ ಪಾದದಲ್ಲಿ ಹೇಳಿರುತ್ತಾರೆಂದರ್ಥ.

ಪ್ರಕಾಶಃ – ಆಹೇತ್ಯಸ್ಯ ಹರಾವೇವೇತ್ಯನನ್ತರಮಧ್ಯಾಹೃತೇನೇತಿಶಬ್ದೇನೇತ್ಯಾಹೇತಿ ವಾ ಬ್ರಹ್ಮಣ್ಯೇವ ಸಮನ್ವಯಮಿತಿ ಪೂರ್ವಶ್ಲೋಕಸ್ಯೇನ ವಾऽನ್ವಯಃ । ಅತ್ರ ಶ್ಲೋಕೇತು ''ಇತ್ಯಾಹೈವಂ ಚ ಶಬ್ದಾನಾಮ್'' ಇತ್ಯುಪರಿತನಾನುವ್ಯಾಖ್ಯಾನಸ್ಥಮಿತ್ಯಾಹೇತಿ ಪದಮಾಕೃಷ್ಯಾನ್ವಯೋ ಜ್ಞೇಯಃ ।

ಶ್ಲೋಕದಲ್ಲಿರುವ 'ಆಹ' ಎಂಬ ಕ್ರಿಯಾಪದಕ್ಕೆ ಅನ್ವಯವು ತಿಳಿಯುವುದಿಲ್ಲ. ಆದಕ್ಕೋಸ್ಕರ 'ಹರಾವೇವ' ಎಂಬಲ್ಲಿ 'ಇತಿ' ಎಂಬ ಶಬ್ದವನ್ನು ಅಧ್ಯಾಹಾರ ಮಾಡಿಕೊಂಡು ಆದರಲ್ಲಿ ಅನ್ವಯ ಮಾಡಬೇಕು. ಆವಾಗ 'ಇತ್ಯಾಹ' ಎಂದು ಹೇಳಿದಂತಾಗುತ್ತದೆ. ಅಥವಾ ಈ ಶ್ಲೋಕದ ಹಿಂದಿನ ಶ್ಲೋಕದಲ್ಲಿ 'ಬ್ರಹ್ಮಣ್ಯೇವ ಸಮನ್ವಯಮ್' ಎಂದು ಹೇಳಿದ್ದಾರೆ. ಆದರ ಜೊತೆಗೆ ಅನ್ವಯವನ್ನೂ ಸಹ ತಿಳಿಯಬಹುದು. ಈ ಶ್ಲೋಕದಲ್ಲಿ ಮುಂದಿನ 'ಇತ್ಯಾಹೈವಂ ಚ ಶಬ್ದಾನಾಂ' ಎಂಬಲ್ಲಿರುವ 'ಇತ್ಯಾಹ' ಪದವನ್ನು ಅನುಕರ್ಷ ಮಾಡಿಕೊಂಡು ಅನ್ವಯವನ್ನು ತಿಳಿಯಬೇಕು. ಮೊದಲನೆಯ ಪಕ್ಷದಲ್ಲಿ 'ಇತಿ' ಎಂಬುದನ್ನು ಅಧ್ಯಾಹಾರ ಮಾಡಿಕೊಳ್ಳಬೇಕಾಗುತ್ತದೆ. ಆದರೆ ಎರಡನೆಯ ಈ ಪಕ್ಷದಲ್ಲಿ 'ಇತಿ' ಎಂಬ ಪದವನ್ನು ಅಧ್ಯಾಹಾರ ಮಾಡಿಕೊಳ್ಳಬೇಕಾಗಿಲ್ಲ.

ಪ್ರಕಾಶಃ – 'ಅತಃ' ಇತ್ಯಸ್ಯಾನ್ಯತ್ರಪ್ರಸಿದ್ಧಾನಾಮಶೇಷನಾಮಲಿಙ್ಗಾತ್ಮಕಶಬ್ದಾನಾಂ ದ್ವಿಪಾದ್ಯಾ ಭಗವತ್ಪರತ್ವಸಮರ್ಥನಾದ್ಧೇತೋರಿತ್ಯರ್ಥಃ । ಲೋಕತोऽನ್ಯತ್ರಪ್ರಸಿದ್ಧೇಶ್ಚೋಭಯಾನ್ಯಥಾನುಪಪತ್ತ್ಯೋಭಯ-ಗತತ್ವಂ ಸ್ಯಾದಿತಿ ಸಂಶಯನಿವೃತ್ತ್ಯರ್ಥಮಿತಿ ಸುಧೋಕ್ತೋರ್ಥ ಉಪಲಕ್ಷಣಮ್ । ಕಿನ್ತು ಶ್ರುತ್ಯನ್ತರ-ಸಾಧಾರಣ್ಯಪ್ರವೃತ್ತಿನಿಮಿತ್ತಾದಿಸಾಧಾರಣ್ಯಾದಿತ ಇತ್ಯಪ್ಯತಶ್ಶಬ್ದಾರ್ಥ ಇತಿ ಭಾವಃ ।

ಅನುವ್ಯಾಖ್ಯಾನದ ಶ್ಲೋಕದಲ್ಲಿರುವ 'ಅತಃ' ಎಂಬ ಪದಕ್ಕೆ ಹೀಗರ್ಥ - ''ಅನ್ಯತ್ರಪ್ರಸಿದ್ಧವಾದ ಸಕಲವಿಧವಾದ ನಾಮಾತ್ಮಕ ಹಾಗೂ ಲಿಂಗಾತ್ಮಕಶಬ್ದಗಳನ್ನು ಮೊದಲೆರಡು ಪಾದಗಳಲ್ಲಿ ಭಗವತ್ಪರವೆಂದು ಸಮರ್ಥಿಸಿರುವ ಕಾರಣ'' ಎಂದರ್ಥ. ನ್ಯಾಯಸುಧೆಯಲ್ಲಿ 'ಅತಃ' ಎಂಬ ಪದವನ್ನು ವ್ಯಾಖ್ಯಾನಿಸುತ್ತಾ 'ಲೋಕತಃ ಅನ್ಯತ್ರಪ್ರಸಿದ್ಧೇಶ್ಚೋಭಯಾನ್ಯಥಾನುಪಪತ್ತ್ಯೋಭಯಗತತ್ವಂ ಸ್ಯಾದಿತಿ ಸಂಶಯನಿವೃತ್ತ್ಯರ್ಥಮ್' ಲೋಕತಃ ಅನ್ಯತ್ರಪ್ರಸಿದ್ಧಿಯು ಇರುವ ಕಾರಣ ನ್ಯಾಯಗಳಿಂದ ಸಮನ್ವಯವನ್ನು ಮಾಡಿದ್ದರಿಂದಲೂ ಉಭಯಅನ್ಯಥಾನುಪಪತ್ತಿ ಶಬ್ದಗಳು ಉಭಯಗತವಾಗುತ್ತವಲ್ಲವೇ? ಎಂಬ ಸಂಶಯವನ್ನು ಪರಿಹಾರ ಮಾಡುವುದಕ್ಕೋಸ್ಕರ' ಎಂದು ಹೇಳಿದ್ದಾರೆ. ಇದು ಉಪಲಕ್ಷಣವಾಗಿದೆ. ಇದರ ಜೊತೆಗೆ ಶ್ರುತ್ಯಂತರ ಸಾಧಾರಣ್ಯದಿಂದ ಹಾಗೂ ಪ್ರವೃತ್ತಿನಿಮಿತ್ತಾದಿಗಳ ಸಾಧಾರಣ್ಯದಿಂದಲೂ ಶಬ್ದಗಳು ಉಭಯತ್ರಪ್ರಸಿದ್ಧವಾಗಿರುವ ಕಾರಣ ಎಂಬುದನ್ನು ವಿವಕ್ಷಿಸಬೇಕು. ಹೀಗೆ ಅನುವ್ಯಾಖ್ಯಾನದಲ್ಲಿರುವ 'ಅತಃ' ಎಂಬ ಶಬ್ದದ ಗಾಂಭೀರ್ಯವನ್ನು ಗಂಭೀರವಾಗಿ ಆಲೋಚನೆ ಮಾಡಬೇಕು.

ಪರಿಪೂರ್ಣಚಂದ್ರಿಕಾ

प्रकाशः – अन्यथा उक्तेऽर्थे सर्वत्र नायं संवादस्स्यादिति ज्ञेयम् ।

ಅನುವ್ಯಾಖ್ಯಾನದ 'ಆತಃ' ಎಂಬ ಶಬ್ದಕ್ಕೆ ನ್ಯಾಯಸುಧೆಯಲ್ಲಿ ವ್ಯಾಖ್ಯಾನಿಸಿದ ಅರ್ಥದ ಜೊತೆಗೆ ಉಪಲಕ್ಷಣಯಾ ಮೇಲೆ ಹೇಳಿದ ಅರ್ಥವನ್ನೂ ಸಹ ವಿವಕ್ಷಿಸಬೇಕೆಂದು ಹೇಳಿದ್ದರಿಂದಲೇ ಗ್ರಂಥಕಾರರು ಹೇಳುತ್ತಿರುವ ಎಲ್ಲ ವಿಧವಾದ ಅರ್ಥಗಳಿಗೆ ಅನುವ್ಯಾಖ್ಯಾನವು ಸಂವಾದಿಯಾಗಿದೆಯೆಂದು ಹೇಳಿದಂತಾಗುತ್ತದೆ. ಇಲ್ಲದಿದ್ದರೆ ಎಂದರೆ - ಗ್ರಂಥಕಾರರು ಸ್ವತಃಸಿದ್ಧವಾದ ಉಭಯತ್ರಪ್ರಸಿದ್ಧಶಬ್ದಗಳ ಸಮನ್ವಯಕ್ಕಾಗಿ ಈ ಪಾದ ಹೊರಟಿದೆಯೆಂದು ಹೇಳಿದ್ದಾರೆ. ಒಂದು ವೇಳೆ 'ಆತಃ' ಎಂಬ ಶಬ್ದಕ್ಕೆ ಶ್ರುತ್ಯಂತರ ಸಾಧಾರಣ್ಯದಿಂದ ಹಾಗೂ ಪ್ರವೃತ್ತಿನಿಮಿತ್ತ ಸಾಧಾರಣ್ಯದಿಂದ ಎಂಬರ್ಥವನ್ನು ವಿವಕ್ಷಿಸಿದಿದ್ದಲ್ಲಿ ಗ್ರಂಥಕಾರರ ಈ ವ್ಯಾಖ್ಯಾನಕ್ಕೆ ಆಚಾರ್ಯರ ಸಮ್ಮತಿಯು ಇಲ್ಲದಂತಾಗಬೇಕಾಗುತ್ತದೆ.

प्रकाशः – कथमियं शङ्काऽत्र परिहृतेत्यत उक्तम् उभयत्रेति ।

ಉಭಯಗತವಾದ ಶಬ್ದಗಳಿರಬೇಕಾದರೆ ಪರಮಾತ್ಮನಲ್ಲಿ ಮಾತ್ರ ಶಬ್ದಪ್ರತಿಪಾದ್ಯತ್ವ ಬರುತ್ತದೆಂಬ ಸಿದ್ಧಾಂತವು ಹೇಗೆ ನಿರ್ಣಯವಾಗುತ್ತದೆ? ಎಂಬ ಶಂಕೆಯನ್ನು ಪರಿಹರಿಸುವುದಕ್ಕಾಗಿ 'ಉಭಯತ್ರ' ಇತ್ಯಾದಿಯಾದ ಮಾತುಗಳನ್ನು ಅನುವ್ಯಾಖ್ಯಾನದಲ್ಲಿ ಹೇಳಿದ್ದಾರೆ.

प्रकाशः – हरौ तदन्यत्र च प्रतीतितः पूर्वोक्तन्यायलोकप्रसिद्धिभ्यां वा श्रुत्यन्तरादिसाधारण्यबलेन वोत्पन्नसाधारण्यप्रतीतितो वर्तमानानां नतु वस्तुत उभयत्र प्रवर्तमानानामित्यर्थः ।

ಉಭಯತ್ರ ಇತ್ಯಾದಿ ಅನುವ್ಯಾಖ್ಯಾನಕ್ಕೆ ಹೀಗರ್ಥ - ಶ್ರೀಹರಿಯಲ್ಲಿ ಹಾಗೂ ಲೋಕದಲ್ಲಿ ಶಬ್ದಗಳು ಪ್ರತೀತವಾಗಿವೆ. ಹೀಗೆ ಪ್ರತೀತಿಯಿಂದ, ಅಥವಾ ಶ್ರೀಹರಿಯಲ್ಲಿ ಹಿಂದಿನೆರಡು ಪಾದಗಳಲ್ಲಿ ಹೇಳಿದ ನ್ಯಾಯಗಳ ಬಲದಿಂದ ಪ್ರಸಿದ್ಧವಾಗಿವೆ. ಆದರೆ ಲೋಕದಲ್ಲಿ ಆಪಾತಪ್ರತೀತಿಯಿಂದ ಪ್ರಯೋಗಿಸುವ ಲೋಕರೂಢಿಯಿಂದ ಪ್ರಸಿದ್ಧವಾಗಿವೆ. ಹೀಗೆ, ಅಥವಾ ಶ್ರುತ್ಯಂತರಾದಿ ಸಾಧಾರಣ್ಯದ ಬಲದಿಂದ ಹೀಗೆ ಪ್ರತೀತಿ, ಪ್ರಸಿದ್ಧಿ ಸಾಧಾರಣ್ಯಗಳಿಂದ ಉತ್ಪನ್ನವಾದ ಸಾಧಾರಣ್ಯಪ್ರತೀತಿಯಿಂದ ಇರುವ; ಹೊರತು ವಾಸ್ತವಿಕವಾಗಿ ಇರುವುದಿಲ್ಲ. ಹೀಗೆ ಎರಡೂ ಕಡೆ ಪ್ರವೃತ್ತಿಯನ್ನು ಹೊಂದಿರುವ ಎಂಬುದಾಗಿ ಅರ್ಥ.

प्रकाशः – सलिङ्गानां शब्दानां नाम्नां लिङ्गानां च । हरावेव विशेषतः परममुख्यवृत्त्या तात्पर्येण च । समन्वय इत्याहेत्यन्वय इति प्रागवोचाम ।

ಸಲಿಂಗಾನಾಂ = ಲಿಂಗಸಹಿತವಾದ ಶಬ್ದಗಳಿಗೆ ಎಂದರೆ ನಾಮಾತ್ಮಕಶಬ್ದಗಳಿಗೆ ಹಾಗೂ ಲಿಂಗಾತ್ಮಕಶಬ್ದಗಳಿಗೆ, ಹರಾವೇವ = ಶ್ರೀಹರಿಯಲ್ಲಿಯೇ, ವಿಶೇಷತಃ = ಪರಮಮುಖ್ಯವೃತ್ತಿಯಿಂದ ಮತ್ತು ತಾತ್ಪರ್ಯದಿಂದ ಸಮನ್ವಯವನ್ನು ಮಾಡುತ್ತಿದ್ದಾರೆ ಎಂದರ್ಥ. ಇಲ್ಲಿ 'ಸಮನ್ವಯ ಇತ್ಯಾಹ' ಎಂಬ ಅನ್ವಯವನ್ನು ಈ ಹಿಂದೆಯೇ ಹೇಳಿದ್ದೇವೆ.

ದ್ಯುಭ್ವಾದ್ಯಧಿಕರಣ (೧-೩-೧)

ಪ್ರಕಾಶಃ – ಕುತ ಇತ್ಯತ ಉಕ್ತಂ **ಯದಿತಿ** । **ಯತ್ ಯಸ್ಮಾತ್** । **'ವರ್ತನ್ತೇ' ಇತಿ ಶೇಷಃ** । **''ಶಬ್ದಾಲಿಙ್ಗಾನಿ ಚ''** ಇತ್ಯಗ್ರೇತನೇನಾನ್ವಯಃ ।

ಇದನ್ನು ಹೇಗೆ ನಿರ್ಣಯಿಸುತ್ತೀರಿ? ಎಂಬ ಪ್ರಶ್ನೆಗೆ, 'ಯತ್' ಎಂಬುದರಿಂದ ಉತ್ತರಿಸುತ್ತಿದ್ದಾರೆ. ಯತ್ . ಯಾವ ಕಾರಣಗಳಿಂದ, ಶಬ್ದಗಳೆಲ್ಲವೂ ಪರಮಮುಖ್ಯವೃತ್ತಿಯಿಂದ ಶ್ರೀಹರಿಯನ್ನೇ ಪ್ರತಿಪಾದಿಸುತ್ತಿವೆಯೋ, ಆ ಕಾರಣದಿಂದ ನಿರ್ಣಯಿಸಬಹುದು. 'ವರ್ತಂತೇ' ಎಂಬುದನ್ನು ಶೇಷಪೂರ್ಣ ಮಾಡಿಕೊಳ್ಳಬೇಕು. 'ಶಬ್ದಾಃ ಲಿಂಗಾನಿ ಚ' ಎಂಬ ಮುಂದಿರುವ ಪದಗಳ ಜೊತೆಗೆ ಇದಕ್ಕೆ ಅನ್ವಯ.

ಪ್ರಕಾಶಃ – **ಏತೇನ ''ತತ್ರ ಚಾನ್ಯತ್ರ ಚ''** ಇತ್ಯಾದಿಭಾಷ್ಯಾದೌ **''ಆಹೋಭಯಗತತ್ವಂ ಚ''** ಇತ್ಯಾದಿ ತ್ರಿಪಾದೀ ಸಂಯೋಜ್ಯ ವ್ಯಾಖ್ಯೇಯೇತಿ ಸೂಚಿತಮ್ ।

ಹೀಗೆ ಹೇಳಿದ್ದರಿಂದ 'ತತ್ರ ಚಾನ್ಯತ್ರ ಚ' ಇತ್ಯಾದಿ ಭಾಷ್ಯದ ಮಾತಿನ ಜೊತೆಗೆ 'ಆಹೋಭಯಗತತ್ವಂ ಚ' ಇತ್ಯಾದಿಯಾದ ಅನುವ್ಯಾಖ್ಯಾನದ ಮೂರು ಪಾದಗಳನ್ನು ಸಂಯೋಜನೆ ಮಾಡಿ ವ್ಯಾಖ್ಯಾನಿಸಬೇಕೆಂದು ಸೂಚಿಸಿದಂತಾಯಿತು.

('ಗಂಗಾಸಂಗೇನ ನೈರ್ಮಲ್ಯಂ' ಎಂಬ ಮಂಗಳ ಶ್ಲೋಕದಲ್ಲಿ 'ಸಂಗಮ್ಯಂತೇ ಗುರೋರ್ಗಿರಃ' ಎಂದು ಟೀಕಾಕೃತ್ಪಾದರು ಹೇಳಿದರು. ಆದಕ್ಕೆ ಭಾವದೀಪದಲ್ಲಿ ವ್ಯಾಖ್ಯಾನ ಮಾಡುತ್ತಾ ಗುರುಗಳ ಮಾತಿನ ಜೊತೆಗೆ ನಮ್ಮ ಮಾತನ್ನು ಸೇರಿಸಿದಾಗ ನಮ್ಮ ಮಾತುಗಳು ಶುದ್ಧವಾಗುತ್ತವೆಂದು ಒಂದು ಬಗೆಯಲ್ಲಿ ವ್ಯಾಖ್ಯಾನಿಸಿದರು. ಮತ್ತು ಗುರುಗಳ ಮಾತುಗಳನ್ನೇ ಪರಸ್ಪರವಾಗಿ ಜೋಡಿಸುವುದಷ್ಟೇ ನಮ್ಮ ಕೆಲಸವೆಂದು ಮತ್ತೊಂದು ಬಗೆಯ ವ್ಯಾಖ್ಯಾನವನ್ನು ಮಾಡಿದ್ದರು. ಪ್ರಕೃತ ಭಾಷ್ಯದಲ್ಲಿರುವ ಮಾತಿಗೂ ಅನುವ್ಯಾಖ್ಯಾನದ ಮಾತಿಗೂ ಪರಸ್ಪರ ಯೋಜನೆಯನ್ನು ತೋರಿಸುತ್ತಾ 'ಸಂಗಮ್ಯಂತೇ ಗುರೋರ್ಗಿರಃ 'ಎಂಬ ಪ್ರತಿಜ್ಞೆಯು ಅರ್ಥವತ್ತಾಗಿದೆ ಎಂದು ತೋರಿಸುತ್ತಾರೆ. ಸಜ್ಜನರು ಇಂತಹ ಅಪೂರ್ವವಿಷಯಗಳನ್ನು ಗಮನಿಸಬೇಕು.)

ಪ್ರಕಾಶಃ – **ಏವಂ ಪಾದಸಙ್ಗತಿಮುಕ್ತ್ವೈತತ್ಪಾದೀಯಾಧಿಕರಣೋಪಾಧೀನನುವ್ಯಾಖ್ಯಾನೋಕ್ತಾನಾಹ – ಅತ್ರೇತಿ ।। ಪಾದ ಇತ್ಯರ್ಥಃ** ।

ಇಲ್ಲಿಯ ತನಕ ಮೂರನೇ ಪಾದಕ್ಕೆ ಸಂಗತಿಯನ್ನು ಸಮರ್ಥಿಸಿದ್ದಾಯಿತು. ಈಗ ಈ ಪಾದದಲ್ಲಿರುವ ಎಲ್ಲಾ ಅಧಿಕರಣಗಳ ಉಪಾಧಿಗಳನ್ನು ಅನುವ್ಯಾಖ್ಯಾನದಲ್ಲಿ ಹೇಳಿದಂತೆ ತೋರಿಸುತ್ತಿದ್ದಾರೆ. 'ಅತ್ರ' ಇತ್ಯಾದಿ ವಾಕ್ಯದಿಂದ. 'ಅತ್ರ' ಎಂಬ ಪದಕ್ಕೆ ಈ ಪಾದದಲ್ಲಿ ಎಂದರ್ಥ.

ಪ್ರಕಾಶಃ – **''ಏತಚ್ಚ ನ್ಯಾಯವಿವರಣೇ ಸ್ವಯಮೇವಾಚಾರ್ಯೇಣ ವ್ಯಾಖ್ಯಾತಮಿತಿ ತತ್ರೈವಾವ-ಗನ್ತವ್ಯಮ್''** ಇತಿ ಸುಧಾಯಾಮುಕ್ತತ್ವಾನ್ನ್ಯಾಯವಿವರಣರೀತ್ಯಾ ಸ್ವಯಂ ವ್ಯಾಚಷ್ಟೇ – **ಅತ್ರೇತ್ಯಾದಿನಾ ।। ಶ್ಲೋಕೋಕ್ತಾಧಿಕರಣಾರ್ಥೇಷು ವಿವೇಕಃ ಪ್ರದರ್ಶ್ಯತ ಇತ್ಯರ್ಥಃ ।।**

'ಏತಚ್ಚ ನ್ಯಾಯವಿವರಣೇ ಸ್ವಯಮೇವಾಚಾರ್ಯೈಣ ವ್ಯಾಖ್ಯಾತಮಿತಿ ತತ್ಪೈವಾವಗಂತವ್ಯಮ್' ಈ ಪಾದಗಳ ಅಧಿಕರಣದ ಉಪಾಧಿಯನ್ನು ಸ್ವತಃ ಆಚಾರ್ಯರೇ ನ್ಯಾಯವಿವರಣದಲ್ಲಿ ವ್ಯಾಖ್ಯಾನಿಸಿದ್ದರಿಂದ ಅಲ್ಲಿಯೇ ತಿಳಿಯಬೇಕು ಎಂಬುದಾಗಿ ನ್ಯಾಯಸುಧೆಯಲ್ಲಿ ಹೇಳಿರುತ್ತಾರೆ. ಆದ್ದರಿಂದ ಪ್ರಕೃತ ಗ್ರಂಥಕಾರರು ನ್ಯಾಯವಿವರಣದ ಪ್ರಕಾರ ಅಧಿಕರಣ ಉಪಾಧಿಗಳನ್ನು ಸ್ವತಃ ವ್ಯಾಖ್ಯಾನಿಸುತ್ತಿದ್ದಾರೆ 'ಆತ್ರ' ಇತ್ಯಾದಿ ವಾಕ್ಯದಿಂದ. ಅಂದರೆ ಅನುವ್ಯಾಖ್ಯಾನ ಶ್ಲೋಕದಲ್ಲಿ ಪ್ರತಿಯೊಂದು ಅಧಿಕರಣಗಳ ಉಪಾಧಿಯನ್ನು ಹೇಳಿದ್ದಾರೆ. ಅವುಗಳಲ್ಲಿ ಯಾವ ಯಾವ ಅಧಿಕರಣಗಳಲ್ಲಿ ಯಾವ ಯಾವ ಅರ್ಥವನ್ನು ಹೇಳುತ್ತಾರೆಂಬ ವಿವೇಕವನ್ನು ನಾವು ತೋರಿಸುತ್ತೇವೆ ಎಂದರ್ಥ.

ಪ್ರಕಾಶಃ – ಲಿಙ್ಗಮಿತಿ ।। ಯದ್ಯಪ್ಯತ್ರ ಲಿಙ್ಗಾನಿ ದ್ಯುಲೋಕಾದ್ಯಾಧಾರತ್ವಾದೀನಿ ಬಹೂನಿ । ''ಅತ್ರೋಕ್ತಾನಾಂ ಲಿಙ್ಗಾನಾಮ್'' ಇತಿ ನ್ಯಾಯವಿವರಣ ಏವೋಕ್ತೇಃ । ತಥಾಪ್ಯೇಕವಾಕ್ಯೋಕ್ತತ್ವೇನೈಕವಚನಮಿತಿ ತತ್ರ ಟೀಕಾಯಾಮೇವೋಕ್ತಮಿತಿ ಭಾವಃ ।

'ಲಿಂಗಮಿತಿ' ಎಂಬ ಪ್ರತೀಕದ ಅಭಪ್ರಾಯ ಹೀಗೆ - ವಾಸ್ತವಿಕವಾಗಿ ದ್ಯುಭ್ವಾದ್ಯಧಿಕರಣದಲ್ಲಿ ದ್ಯುಲೋಕಾದ್ಯಾಧಾರತ್ವವೇ ಮೊದಲಾದ ಅನೇಕ ಲಿಂಗಗಳನ್ನು ಸಮನ್ವಯ ಮಾಡುತ್ತಿದ್ದಾರೆ. ಆದ್ದರಿಂದಲೇ 'ಆತ್ರೋಕ್ತಾನಾಂ ಲಿಂಗಾನಾಮ್' ಎಂಬುದಾಗಿ ನ್ಯಾಯವಿವರಣದಲ್ಲಿ ಬಹುವಚನವನ್ನು ಪ್ರಯೋಗಿಸಿದ್ದಾರೆ. ಆದರೂ ಸಹ ಒಂದೇ ವಾಕ್ಯದಲ್ಲಿರುವ ಅನೇಕ ಲಿಂಗಗಳ ಸಮನ್ವಯವನ್ನು ಮಾಡುತ್ತಿರುವುದರಿಂದ 'ಲಿಂಗಮ್' ಎಂದು ಏಕವಚನವನ್ನು ಅನುವ್ಯಾಖ್ಯಾನದಲ್ಲಿ ಹೇಳಿದ್ದಾರೆಂದು ನ್ಯಾಯಸುಧೆಯಲ್ಲಿಯೇ ಹೇಳಿದ್ದಾರೆಂಬುದನ್ನು ಗಮನಿಸಬೇಕು.

ಪ್ರಕಾಶಃ – 'ಪುನರಪಿ' ಇತ್ಯಸ್ಯ ಶಬ್ದಾಃ ಇತ್ಯನ್ವಯಃ । ತೇ ಕುತ್ರೇತ್ಯತ ಆಹ – ಶಬ್ದಾದಿತಿ ।। ''ಶಬ್ದಾದೇವ ಪ್ರಮಿತಃ । ಕಮ್ಪನಾತ್ । ಜ್ಯೋತಿರ್ದರ್ಶನಾತ್ । ಆಕಾಶೋऽರ್ಥಾನ್ತರತ್ವಾದಿವ್ಯಪದೇಶಾತ್''- ಇತ್ಯತ್ರೇತ್ಯರ್ಥಃ ।

'ಪುನರಪಿ' ಎಂಬುದಕ್ಕೆ 'ಶಬ್ದಾಃ' ಎಂಬಲ್ಲಿ ಅನ್ವಯ. ಯಾವುದನ್ನು ಯಾವ ಅಧಿಕರಣದಲ್ಲಿ ಸಮನ್ವಯ ಮಾಡುತ್ತಾರೆಂಬ ಪ್ರಶ್ನೆಗೆ, 'ಶಬ್ದಾತ್' ಎಂಬ ವಾಕ್ಯದಿಂದ ಉತ್ತರಿಸುತ್ತಿದ್ದಾರೆ. ಅಂದರೆ 'ಶಬ್ದಾದೇವ ಪ್ರಮಿತಃ, ಕಂಪನಾತ್, ಜ್ಯೋತಿರ್ದರ್ಶನಾತ್, ಆಕಾಶೋऽರ್ಥಾಂತರತ್ವಾದಿವ್ಯಪದೇಶಾತ್' ಎಂಬ ನಾಲ್ಕು ಅಧಿಕರಣಗಳಲ್ಲಿ ಕ್ರಮವಾಗಿ ಈಶಾನ, ವಜ್ರ, ಜ್ಯೋತಿ, ಆಕಾಶಶಬ್ದಗಳ ಸಮನ್ವಯವನ್ನು ಮಾಡುತ್ತಾರೆಂದು ತಿಳಿಯಬೇಕು.

ಪ್ರಕಾಶಃ – ವಿಚಾರ್ಯನ್ತ ಇತ್ಯರ್ಥ ಇತಿ ।। ಏತೇನ ಪ್ರಾಗುಕ್ತಟೀಕಾವಾಕ್ಯಸ್ಯ ''ನಾಮಲಿಙ್ಗಾತ್ಮಕ ಶಬ್ದಾನಾಂ'' ಇತ್ಯೇತದಿದಮತ್ರೇತಿ ವಿಶಿಷ್ಯ ವಿವೃತಂ ಧ್ಯೇಯಮ್ । ಅನುವ್ಯಾಖ್ಯಾನೋಕ್ತಂ ಸ್ಥಾನಂ ತು ಲಿಙ್ಗ ಸನ್ನಾಮೇತಿ ವಾ ವ್ಯಾಖ್ಯಾಸ್ಯಾಮोऽಗ್ರ ಇತಿ ಭಾವಃ ।

'ವಿಚಾರ್ಯಂತೇ ಇತ್ಯರ್ಥಃ' ಎಂದು ಹೇಳಿದ್ದರಿಂದ ಹಿಂದೆ ಹೇಳಲ್ಪಟ್ಟ ಟೀಕಾವಾಕ್ಯದಲ್ಲಿ 'ನಾಮಲಿಂಗಾತ್ಕಕ ಶಬ್ದಾನಾಮ್' ಯಾವ ಅಧಿಕರಣದಲ್ಲಿ ನಾಮಾತ್ಕಕಶಬ್ದವನ್ನು, ಯಾವ ಅಧಿಕರಣದಲ್ಲಿ ಲಿಂಗಾತ್ಕಕಶಬ್ದವನ್ನು ಸಮನ್ವಯ ಮಾಡುತ್ತಿದ್ದಾರೆಂಬ ವಿಚಾರವನ್ನು ಪ್ರತ್ಯೇಕವಾಗಿ ಹೇಳುತ್ತಾರೆ ಎಂದು ವಿವರಿಸಿದಂತಾಯಿತು. ಅನುವ್ಯಾಖ್ಯಾನದಲ್ಲಿ 'ಸ್ಥಾನಮ್' ಎಂಬ ಪದಕ್ಕೆ ಲಿಂಗವೆಂದರ್ಥ. ಅಥವಾ 'ತತ್' ಎಂಬ ನಾನುವೆಂಬರ್ಥವನ್ನೂ ಹೇಳಬಹುದು. ಹೀಗೆ ಮುಂದೆ ತದಧಿಕರಣದಲ್ಲಿ ವ್ಯಾಖ್ಯಾನಿಸುತ್ತೇವೆ.

ಪ್ರಕಾಶಃ – ಲಿಙ್ಗೇತಿ ।। साधारणासाधारणः इति विपरिणामेनेत्यर्थः । एतेन ''विचार्या'' इत्यपि परिणाम्यत इति सूचितम् ।

'ಲಿಂಗಂ ಸಾಧಾರಣಂ ಶಬ್ದೌ' ಎಂಬಲ್ಲಿರುವ 'ಲಿಂಗಂ' ಎಂಬ ಪದವನ್ನು ವಚನ ವ್ಯತ್ಯಾಸದಿಂದ ಅನ್ವಯ ಮಾಡಿಕೊಳ್ಳಬೇಕೆಂದು 'ಲಿಂಗವಚನವಿಪರಿಣಾಮೇಣ' ಎಂಬುದರಿಂದ ಗ್ರಂಥದಲ್ಲಿ ಹೇಳಿದ್ದಾರೆ. ಅಂದರೆ 'ಸಾಧಾರಣಃ ಶಬ್ದಃ' ಎಂದು, ಸಾಧಾರಣೌ ಶಬ್ದೌ ಎಂದು, 'ಸಾಧಾರಣಾಃ ಶಬ್ದಾಃ' ಎಂದು' ಹೀಗೆ ವಚನ ವಿಪರಿಣಾಮವನ್ನು, ಲಿಂಗ ವಿಪರಿಮಾಣವನ್ನು ಮಾಡಿಕೊಳ್ಳಬೇಕೆಂದರ್ಥ. ಇದರಂತೆ 'ವಿಚಾರ್ಯಾಃ' ಎಂಬುದನ್ನು ಸಹ ವಿಪರಿಣಾಮ ಮಾಡಿಕೊಳ್ಳಬೇಕು. 'ಲಿಂಗಂ ವಿಚಾರ್ಯಂ, ಶಬ್ದೌ ವಿಚಾರ್ಯೌ, ಶಬ್ದಾಃ ವಿಚಾರ್ಯಾಃ' ಎಂಬುದಾಗಿ ವಿಭಕ್ತಿ ವ್ಯತ್ಯಾಸದಿಂದ ಅನ್ವಯವನ್ನು ತಿಳಿಯಬೇಕು.

ಪ್ರಕಾಶಃ – इति भेद इति ।। ''साधारणमित्यस्य यथाऽन्वयं विपरिणामेन सर्वत्रानुवृत्तिरिति ज्ञापनार्थमेवान्तेऽपि द्विस्थिता इत्याह'' इति न्यायविवरणटीकोपलक्षणमिति भावः ।

ಗ್ರಂಥದಲ್ಲಿ 'ಇತಿ ಭೇದಃ' ಎಂದು ಹೇಳಿದ್ದಾರೆ. ಅಂದರೆ ಸಾಧಾರಣ ಶಬ್ದಕ್ಕೂ, 'ದ್ವಿಸ್ಥಿತಾಃ' ಎಂಬ ಶಬ್ದಕ್ಕೂ ಏನು ವ್ಯತ್ಯಾಸ ? ಎಂಬ ಪ್ರಶ್ನೆಗೆ, ಪೂರ್ವೋತ್ತರ ಪಕ್ಷಗಳ ಹೇತುಗಳ ಇರುವಿಕೆಯಿಂದ ಭೇದವನ್ನು ತಿಳಿಯಬೇಕೆಂದು ಗ್ರಂಥದಲ್ಲಿ ಹೇಳಿದ್ದಾರೆ. 'ಸಾಧಾರಣಮಿತ್ಯಸ್ಯ ಯಥಾऽನ್ವಯಂ ವಿಪರಿಣಾಮೇನ ಸರ್ವತ್ರಾನುವೃತ್ತಿರಿತಿ ಜ್ಞಾಪನಾರ್ಥಮೇವಾಂತೇऽಪಿ ದ್ವಿಸ್ಥಿತಾ ಇತ್ಯಾಹ', 'ಸಾಧಾರಣಮ್' ಎಂಬುದನ್ನು ಯಥಾಕ್ರಮದಲ್ಲಿ ಅನ್ವಯ ಮಾಡಿಕೊಂಡು, ಎಲ್ಲೆಡೆ ಅನುವೃತ್ತಿ ಮಾಡಿಕೊಳ್ಳಬೇಕೆಂದು ತಿಳಿಸುವುದಕ್ಕಾಗಿಯೇ 'ದ್ವಿಸ್ಥಿತಾಃ' ಎಂದು ಹೇಳಿದ್ದಾರೆ ಎಂಬ ನ್ಯಾಯವಿವರಣೆಯ ಟೀಕೆಯ ಮಾತನ್ನು ಉಪಲಕ್ಷಣವಾಗಿ ತಿಳಿಯಬೇಕು. ಅಂದರೆ 'ಲಿಂಗಂ ಸಾಧಾರಣಮ್' ಎಂಬಲ್ಲಿರುವ 'ಸಾಧಾರಣಮ್' ಎಂಬುದಕ್ಕೆ ಲಿಂಗಶಬ್ದದಲ್ಲಿ ಮಾತ್ರ ಅನ್ವಯವಲ್ಲ, ಹೊರತಾಗಿ ವಚನ ವ್ಯತ್ಯಾಸದಿಂದ ಎಲ್ಲಾ ಅಧಿಕರಣಗಳ ಉಪಾಧಿಯಲ್ಲಿಯೂ ಅನ್ವಯ ಮಾಡಿಕೊಳ್ಳಬೇಕೆಂದು ತಿಳಿಸುವುದಕ್ಕಾಗಿಯೇ ಕೊನೆಯಲ್ಲಿ 'ದ್ವಿಸ್ಥಿತಾಃ' ಎಂದು ಹೇಳಿರುತ್ತಾರೆ. ಆದ್ದರಿಂದ ಪೂರ್ವಪಕ್ಷ ಹಾಗೂ ಸಿದ್ಧಾಂತ ಪಕ್ಷಗಳಲ್ಲಿ ಹೇತುವಿರುತ್ತದೆಂದು 'ದ್ವಿಸ್ಥಿತಾಃ' ಎಂಬ ಪದವು ತಿಳಿಸುತ್ತಿದೆ. ಅದರ ಜೊತೆಗೆ ಎರಡು ಬಾರಿ ಅನ್ವಯ ಮಾಡಿಕೊಳ್ಳಬೇಕೆಂಬುದನ್ನೂ ಸಹ ತಿಳಿಸುತ್ತಿದೆಯೆಂಬುದನ್ನು ಗಮನಿಸಬೇಕು.

ಪ್ರಕಾಶಃ – ನನ್ವತ್ರ ಚತುರ್ದಶಾಧಿಕರಣಾನಿ । ಉಪಾಧಯಸ್ತು ದ್ವಾದಶೈವೋಕ್ತಾಃ । ತತ್ಕಥಮಿತ್ಯತ ಆಹ – ದೇವತೇತಿ ।।

ಈ ಪಾದದಲ್ಲಿ ಒಟ್ಟು ಹದಿನಾಲ್ಕು ಅಧಿಕರಣಗಳಿವೆ. ಆದರೆ ಅನುವ್ಯಾಖ್ಯಾನದಲ್ಲಿ ಹನ್ನೆರಡು ಉಪಾಧಿಗಳನ್ನಷ್ಟೇ ಹೇಳಿದ್ದಾರೆ ಇದು ಹೇಗೆ ? ಹದಿನಾಲ್ಕು ಉಪಾಧಿಗಳನ್ನು ಹೇಳಬೇಕಿತ್ತಲ್ಲವೇ? ಎಂಬ ಪ್ರಶ್ನೆಗೆ 'ದೇವತಾಧಿಕರಣ' ಎಂಬುದರಿಂದ ಉತ್ತರಿಸುತ್ತಿದ್ದಾರೆ.

ಪ್ರಕಾಶಃ – ತದ್ಧಾನಿಃ ಶೂದ್ರಾಣಾಮಧಿಕಾರಾಭಾವಃ । ಪ್ರಸಙ್ಗಾದಿತಿ ।। ತತ್ರೈವೈತತ್ ಸ್ಪಷ್ಟಯಿಷ್ಯತೇ । ''ಇತೀಮೌ ವಿಷಯಾವಿತ್ಯಧ್ಯಾಹಾರಾಚ್ಚಿನ್ತಿತಾವಿತಿ ಸಾಧ್ವಿತಿ'' ಸುಧಾಯಾಮೇವೋಕ್ತಮ್ ।

'ಅಧಿಕಾರಶ್ಚ ತದ್ಧಾನಿಃ' ಎಂಬಲ್ಲಿರುವ 'ತದ್ಧಾನಿಃ' ಎಂಬ ಪದಕ್ಕೆ ಶೂದ್ರರಿಗೆ ಅಧಿಕಾರವಿಲ್ಲದಿರುವಿಕೆಯು ಎಂದರ್ಥ. 'ಪ್ರಸಂಗಾತ್' ಎಂದರೆ ದೇವತಾಧಿಕರಣ ಹಾಗೂ ಅಪಶೂದ್ರಾಧಿಕರಣಗಳನ್ನು ಪ್ರಾಸಂಗಿಕವಾಗಿ ಚಿಂತನೆ ಮಾಡಿದ್ದಾರೆ ಹೊರತು, ಸಮನ್ವಯ ಮಾಡುವ ಉದ್ದೇಶದಿಂದ ಅಲ್ಲ. ಈ ವಿಚಾರವನ್ನು ಮುಂದೆ ಅಲ್ಲಿಯೇ ಸ್ಪಷ್ಟ ಪಡಿಸುತ್ತೇವೆ. 'ಇತೀಮೌ ವಿಷಯಾವಿತ್ಯಧ್ಯಾಹಾರಾಚ್ಚಿಂತಿತಾವಿತಿ ಸಾಧ್ವಿತಿ' 'ಪ್ರಸಾಂಗಾದೇವ ಚಿಂತಿತೌ' ಎಂಬಲ್ಲಿ 'ಇಮೌ ವಿಷಯೌ' ಎಂಬುದನ್ನು ಅಧ್ಯಾಹಾರ ಮಾಡಿಕೊಳ್ಳುವುದರಿಂದ 'ಚಿಂತಿತೌ' ಎಂಬ ಪುಲ್ಲಿಂಗ ಪ್ರಯೋಗವು ಸಾಧುವಾಗಿದೆ. ಇಲ್ಲದಿದ್ದರೆ ದ್ವಿವಚನ ಪ್ರಯೋಗವು ತಪ್ಪಾಗುತ್ತಿತ್ತು ಎಂದು ಸುಧಾವಾಕ್ಯದಿಂದ ತಿಳಿದುಬರುತ್ತಿದೆ.

ಪ್ರಕಾಶಃ – ಏತೇನ ''ದೇವತಾದ್ಯಧಿಕರಣವ್ಯಾವೃತ್ತ್ಯರ್ಥಂ ಪ್ರಾಯೇಣೇತಿ'' ಇತ್ಯೇತದ್ಟೀಕಾವಾಕ್ಯಂ ವಿವೃತಮ್ । ಏತದಧಿಕರಣಸ್ಯೈತತ್ಪಾದಾದ್ಯನ್ತರ್ಭಾವೋಕ್ತಿಪರಾಂ ''ತತ್ರ ರುದ್ರೋ ವಾವ ಲೋಕಾಧಾರಃ'' ಇತ್ಯಾದಿಟೀಕಾಂ ವಿವರಿತುಮಾಕ್ಷಿಪತಿ – ನನ್ವಿತಿ ।।

'ದೇವತಾದ್ಯಧಿಕರಣವ್ಯಾವೃತ್ತ್ಯರ್ಥಂ ಪ್ರಾಯೇಣೇತಿ' ದೇವತಾಧಿಕರಣ, ಅಪಶೂದ್ರಾಧಿಕರಣಗಳನ್ನು ವಾವೃತ್ತಿ ಮಾಡುವುದಕ್ಕಾಗಿ 'ಪ್ರಾಯೇಣ' ಎಂದು ಹೇಳಿದ್ದಾರೆ ಎಂಬ ಟೀಕಾವಾಕ್ಯವನ್ನು ಮೇಲೆ ಹೇಳಿದ ವಿಚಾರದಿಂದ ವಿವರಿಸಿದಂತಾಯಿತು.

ದ್ಯುಭ್ವಾದ್ಯಧಿಕರಣಕ್ಕೆ ಪಾದಸಂಗತಿಯನ್ನು ತೋರಿಸುವುದಕ್ಕಾಗಿ 'ತತ್ರ ರುದ್ರೋ ವಾವ ಲೋಕಾಧಾರಃ' ಎಂಬ ಟೀಕೆಯನ್ನು ವಿವರಿಸುತ್ತಾ ಆಕ್ಷೇಪ ಮಾಡುತ್ತಿದ್ದಾರೆ. 'ನನು' ಇತ್ಯಾದಿ ವಾಕ್ಯದಿಂದ.

ಪ್ರಕಾಶಃ – ''ಯ ಏಷೋऽನ್ತಶ್ಚರತೇ ಬಹುಧಾ ಜಾಯಮಾನಃ'' ಇತ್ಯುಕ್ತೇರ್ಯಃ । ತಥಾತ್ವ ಇತಿ ।। ಭಾಷ್ಯಾದೌ ತೇನೈವ ಪೂರ್ವಪಕ್ಷಿತ್ವಾತ್ ।

'ಯ ಏಷೋऽಂತಶ್ಚರತೇ ಬಹುಧಾ ಜಾಯಮಾನಃ' ಎಂಬಲ್ಲಿ ಜಾಯಮಾನತ್ವ ಲಿಂಗವು ಕೇಳಿಸುತ್ತಿದೆ. ಇದರ ಬಲದಿಂದ ದ್ಯುಭ್ವಾದ್ಯಾಯತನತ್ವವು ಅನ್ಯತ್ರಪ್ರಸಿದ್ಧವಾಗಿದೆಯಲ್ಲವೇ ಎಂಬುದಾಗಿ 'ನನು' ಇತ್ಯಾದಿ

ವಾಕ್ಯದಿಂದ ಆಕ್ಷೇಪಿಸಿದ್ದಾರೆ. 'ತಥಾತ್ವೇ' ಎಂದರೆ ಜಾಯಮಾನತ್ವ ಲಿಂಗದಿಂದಲೇ ಭಾಷ್ಯಾದಿಗಳಲ್ಲಿ ಪೂರ್ವಪಕ್ಷ ಮಾಡಿದ್ದಾರೆ. ಅಂತಹ ಜಾಯಮಾನತ್ವ ಲಿಂಗವನ್ನು ಅನ್ಯತ್ರಪ್ರಸಿದ್ಧವಲ್ಲವೆಂದು ಹೇಳಿದರೆ ಪೂರ್ವಪಕ್ಷವೇ ಹುಟ್ಟುವುದಿಲ್ಲವೆಂದು ಅಭಿಪ್ರಾಯ.

ಪ್ರಕಾಶಃ – ಸರ್ವತ್ರೇತಿ ನಯಚನ್ದ್ರಿಕಾಯಾಮ್ ''ಅನ್ತರಾಧ್ಯಧಿಕರಣೇಷು ತೈಸ್ತೈರ್ಲಿಙ್ಗೈರ್ವಿಷ್ಣುಪರತೈವ ವ್ಯುತ್ಪಾದಿತಾ । ನತು ತತ್ರ ಮುಖ್ಯತಾ'' ಇತ್ಯಾದ್ಯುಕ್ತದಿಶಾ ಲಿಙ್ಗಪಾದನ್ಯಾಯೈರ್ಲಿಙ್ಗಾನಾಮಶೇಷಾಣಾಂ ವಿಷ್ಣುಪರತ್ವಸಿದ್ಧಾವಪಿ ಮುಖ್ಯತ್ವಸ್ಯಾಸಿದ್ಧೇರ್ಯೌಗಿಕಜಾಯಮಾನಶಬ್ದಸ್ಯ ಲಿಙ್ಗವಾಚಿನೋऽನ್ಯತ್ರೈವ ಮುಖ್ಯತ್ವಾನ್ಮುಖ್ಯಾರ್ಥತ್ಯಾಗಹೇತೋರ್ವಿಷ್ಣುಲಿಙ್ಗಸ್ಯೇಹಾಭಾವಾಭಿಮಾನೇನ ವಾ, ಭಾವೇऽಪಿ ಕಥಞ್ಚಿನ್ನೇಯತ್ವಾಭಿಮಾನೇನ ವಾ ಪೂರ್ವಪಕ್ಷೋದಯಸಮ್ಭವಾದಿತಿ ಭಾವಃ ।

ಸರ್ವಗತತ್ವಾಧಿಕರಣದ ತಾತ್ಪರ್ಯಚಂದ್ರಿಕೆಯಲ್ಲಿ ಹೀಗೆ ಹೇಳಿದ್ದಾರೆ - 'ಅಂತರಾದ್ಯಧಿಕರಣೇಷು ತೈಸ್ತೈರ್ಲಿಂಗೈರ್ವಿಷ್ಣುಪರತೈವ ವ್ಯುತ್ಪಾದಿತಾ ನತು ತತ್ರ ಮುಖ್ಯತಾ' ಅಂತರಾದ್ಯಧಿಕರಣಗಳಲ್ಲಿ ವಿಷಯವಾಕ್ಯಗಳಲ್ಲಿರುವ ಲಿಂಗದಿಂದ ವಿಷ್ಣುಪರತ್ವವನ್ನಷ್ಟೇ ಸಮರ್ಥಿಸಲಾಗಿದೆ. ಹೊರತು ಶಕ್ತ್ಯವೃತ್ತಿಯನ್ನು ಪ್ರತಿಪಾದಿಸದ ಕಾರಣ ಮುಖ್ಯಪ್ರತಿಪಾದ್ಯತ್ವವನ್ನು ಸಮರ್ಥಿಸಿರುವುದಿಲ್ಲ ಎಂದು ಹೇಳಿದ್ದಾರೆ. ಆದರಂತೆ ಲಿಂಗಪಾದದಲ್ಲಿರುವ ನ್ಯಾಯಗಳಂದ ಸಕಲ ಲಿಂಗಗಳು ವಿಷ್ಣುಪರವಾಗಿವೆಯೆಂದು ಸಿದ್ಧವಾಗಿದ್ದರೂ ಸಹ ಮುಖ್ಯವೃತ್ತಿಯಿಂದ ವಿಷ್ಣುವಿನಲ್ಲಿರುತ್ತವೆಂದು ಸಿದ್ಧವಾಗಿರುವುದಿಲ್ಲ. ಹೀಗಿರುವಾಗ ಜಾಯಮಾನ ಶಬ್ದವು ಯೌಗಿಕವಾದ್ದರಿಂದ ಲಿಂಗಪ್ರತಿಪಾದಕವಾಗಿದೆ. ಆದ್ದರಿಂದ ಜೀವಾದಿಗಳನ್ನೇ ಮುಖ್ಯವಾಗಿ ಪ್ರತಿಪಾದಿಸುತ್ತದೆ. ಮುಖ್ಯಾರ್ಥವನ್ನು ಬಿಡಲು ಯಾವುದೇ ವಿಷ್ಣುಲಿಂಗಗಳು ಇಲ್ಲದ ಕಾರಣ ಅನ್ಯತ್ರಪ್ರಸಿದ್ಧವಾಗಿದೆ. ಅಥವಾ ಹಾಗೇನಾದರೂ ವಿಷ್ಣುಲಿಂಗಗಳಿದ್ದರೂ ಸಹ ಅದನ್ನು ಗೌಣವನ್ನಾಗಿ ವಿವಕ್ಷಿಸಿ ವ್ಯಾಖ್ಯಾನಿಸಲು ಬರುತ್ತದೆ ಹೀಗೆ ಪೂರ್ವಪಕ್ಷವನ್ನು ಮಾಡಬಹುದು ಎಂದು ಹೇಳಿದಂತಾಗುತ್ತದೆ.

ಪ್ರಕಾಶಃ – ಟೀಕಾಯಾಂ ''ರುದ್ರೋ ವಾವ ಲೋಕಾಧಾರಃ'' ಇತಿ ಶ್ರುತಿಚತುಷ್ಟಯಾತ್ತ್ಯಾ ಲಿಙ್ಗಸ್ಯೋಭಯತ್ರಪ್ರಸಿದ್ಧ್ಯುಕ್ತೇಶ್ಚತುರ್ಧಾ ತಾತ್ಪರ್ಯಶ್ರುತ್ಯಾಕಾರೋಕ್ತಿಪೂರ್ವಂ ವ್ಯಞ್ಜಯನ್ತುಕ್ತಶಙ್ಕಾಂ ಸಮಾಧತ್ತೇ – ಉಚ್ಯತ ಇತ್ಯಾದಿನಾ ।।

ಟೀಕೆಯಲ್ಲಿ 'ರುದ್ರೋ ವಾವ ಲೋಕಾಧಾರಃ' ಎಂಬುದಾಗಿ ನಾಲ್ಕು ಶ್ರುತಿಗಳಿಂದ ತಿಳಿಯಲ್ಪಟ್ಟ ಲಿಂಗಕ್ಕೆ ಉಭಯತ್ರಪ್ರಸಿದ್ಧಿಯನ್ನು ಹೇಳಿರುತ್ತಾರೆ. ಅಂತಹ ಟೀಕಾ ಮಾತಿಗೆ ನಾಲ್ಕು ಬಗೆಯಲ್ಲಿ ವಿವಕ್ಷಿಸಿ ಹೇಳುವವರಾಗಿ ಶ್ರುತಿಯ ಆಕಾರವನ್ನು ತೋರಿಸುತ್ತಾ ಹಿಂದಿನ ಆಶಂಕೆಗೆ ಸಮಾಧಾನವನ್ನು ನೀಡುತ್ತಿದ್ದಾರೆ 'ಉಚ್ಯತೇ' ಇತ್ಯಾದಿ ಗ್ರಂಥದಿಂದ.

ಪ್ರಕಾಶಃ – 'ಶ್ರುತಿಭ್ಯಃ' ಇತ್ಯಸ್ಯ ಸ್ವತ ಉಭಯತ್ರ ಪ್ರಸಿದ್ಧತ್ವಸ್ಯೇತ್ಯನ್ವಯಃ । ಉಕ್ತರೀತ್ಯಾऽನ್ಯತ್ರಪ್ರಸಿದ್ಧತ್ವಸಮ್ಭವेऽಪಿ ''ಶ್ರುತ್ಯನ್ತರಾದಿಭಿಸ್ತುಲ್ಯೇ'' ಇತ್ಯುಕ್ತದಿಶೋಭಯತ್ರ-ಪ್ರಸಿದ್ಧತ್ವಾಂಶಮಾದಾಯ ಪಾದಸಙ್ಗತಿರಿತ್ಯರ್ಥಃ ।

'ಶ್ರುತಿಭ್ಯಃ' ಎಂಬ ಪದಕ್ಕೆ 'ಸ್ವತಃ ಉಭಯತ್ರಪ್ರಸಿದ್ಧತ್ವಸ್ಯ' ಎಂಬಲ್ಲಿ ಅನ್ವಯ ಮಾಡಬೇಕು. ಅಂದರೆ ಹಿಂದೆ ಹೇಳಿದ ಪ್ರಕಾರ ಲಿಂಗಗಳು ಅನ್ಯತ್ರಪ್ರಸಿದ್ಧವಾಗಿದ್ದರೂ 'ಶ್ರುತ್ಯಂತರಾದಿಭಸ್ತುಲ್ಯಾ' ಎಂಬ ಉಭಯತ್ರಪ್ರಸಿದ್ಧಿಯ ಲಕ್ಷಣವನ್ನು ವಿವಕ್ಷಿಸಿ ಪಾದಸಂಗತಿಯನ್ನು ತಿಳಿಯಬೇಕೆಂದರ್ಥ.

ಪ್ರಕಾಶಃ – ನಿರಪೇಕ್ಷೇತಿ ।। ''ಯದ್ಯೋನ್ಯಾಂ ತದುತ್ತರಯೋರ್ಗಾಯತಿ'' ಇತ್ಯತ್ರ ಯದ್ಯುತ್ತರಾ-ಶಬ್ದಸ್ಯೋತ್ತರಾಗ್ರನ್ಥಪಠಿತಕ್ರಗರ್ಥಕತ್ವಮ್ । ನತ್ತರದೇಶಪಠಿತಕ್ರಗರ್ಥಕತ್ವಮ್ । ತಸ್ಯ ಪೂರ್ವಸಾಪೇಕ್ಷತ್ವಾದುತ್ತರಾಗ್ರನ್ಥಪಠಿತಯೋರಿತ್ಯಸ್ಯ ನಿರಪೇಕ್ಷತ್ವಾತ್ । ತದ್ವದಿತಿ ಭಾವಃ ।

ಉಭಯತ್ರಪಸಿದ್ಧಿಗೆ ನಿರಪೇಕ್ಷತ್ವವನ್ನು ಹೇಳುತ್ತಿದ್ದಾರೆ. ಆದು ಹೀಗೆ - 'ಯದ್ಯೋನ್ಯಾಂ ತದುತ್ತರಯೋರ್ಗಾಯತಿ' ಎಂಬಲ್ಲಿ ಕೇಳಿಸುತ್ತಿರುವ 'ಉತ್ತರಾ' ಎಂಬ ಪದಕ್ಕೆ ಉತ್ತರ ದೇಶವೆಂಬರ್ಥವೋ? ಅಥವಾ 'ಉತ್ತರ' ಎಂಬ ಗ್ರಂಥವೆಂದರ್ಥವೋ? ಎಂಬ ಆಕಾಂಕ್ಷೆಯು ಬರುತ್ತದೆ. ಆದರೂ 'ಉತ್ತರಾ' ಎಂಬ ಗ್ರಂಥದಲ್ಲಿ ಪಠಿತವಾದ ಋಚ್ ಮಂತ್ರವನ್ನು ಗಾನ ಮಾಡುತ್ತಾನೆಂದು ಹೇಳಬೇಕು ಹೊರತು, ಉತ್ತರದೇಶದಲ್ಲಿ ಪಠಿತವಾದ ಋಚ್ ಮಂತ್ರಗಳನ್ನು ಗಾನ ಮಾಡುತ್ತಾನೆಂದು ಹೇಳಬಾರದು. ಏಕೆಂದರೆ ಉತ್ತರ ದೇಶವು ಪೂರ್ವದೇಶವನ್ನು ಅಪೇಕ್ಷಿಸಿದೆ, ಸಾಪೇಕ್ಷತ್ವವಾದ್ದರಿಂದ ದೇಶಾರ್ಥಕತ್ವವನ್ನು ವಿವಕ್ಷಿಸದ ನಿರಪೇಕ್ಷಿತವಾದ 'ಉತ್ತರ ಗ್ರಂಥ'ವೆಂಬರ್ಥವನ್ನೇ ಹೇಳಬೇಕು ಎಂದು. ಹೇಗೆ ಪೂರ್ವಮೀಮಾಂಸೆಯಲ್ಲಿ ಅಂಗೀಕರಿಸಿದ್ದಾರೋ? ಅದರಂತೆ ಇಲ್ಲಿಯೂ ಸಹ ಉಭಯತ್ರಪ್ರಸಿದ್ಧಿಯು ನಿರಪೇಕ್ಷಿತವಾದ್ದರಿಂದ ಪಾದಸಂಗತಿಯನ್ನು ಹೊಂದಿದೆಯೆಂದು ತಿಳಿಯಬೇಕು.

ಗುರುರಾಜೀಯಮ್ – ॐ ಚುಮ್ಬಾಯಾತನಂ ಸ್ವಶಬ್ದಾತ್ ॐ ।। **ದ್ವಿಸ್ಥಿತಾ ಇತ್ಯನೇನ ತ್ವಿತಿ ।।** 'ದ್ವಿಸ್ಥಿತಾಃ' ಇತ್ಯಸ್ಯ ಸಾಧಾರಣ್ಯಾನುವೃತ್ತಿಜ್ಞಾಪಕತ್ವೇನ । ನ್ಯಾಯವಿವರಣಟೀಕಾಯಾಂ ವ್ಯಾಖ್ಯಾನಂ ತು ಸತಿ ಅನ್ತರಙ್ಗಜ್ಞಾಪಕೇ ಬಹಿರಙ್ಗವ್ಯಾಖ್ಯಾನಂ ಕಿಮರ್ಥಂ ಗವೇಷಣೀಯಮಿತ್ಯಾಶಯೇನ । ಇಹ ತು ವ್ಯಾಖ್ಯಾನತೋ ವಿಶೇಷಪ್ರತಿಪತ್ತಿರಿತಿ ನ್ಯಾಯೇನಾಪ್ಯುಪಪತ್ತೇಸ್ಸಮ್ಭವಾದ್ವ್ಯಾಖ್ಯಾನಾನ್ತರಮಿತಿ ದ್ರಷ್ಟವ್ಯಮ್ । ಸ್ವತ ಏವೋಭಯತ್ರಪ್ರಸಿದ್ಧಾನಾಂ ತುಲ್ಯಪ್ರಸಿದ್ಧಿಕತ್ವಾತ್ ಪೂರ್ವಪಕ್ಷೇ ಸಿದ್ಧಾನ್ತ-ಪ್ರಸಿದ್ಧಿಬಾಧಃ । ಸಿದ್ಧಾನ್ತೇ ಚ ಪೂರ್ವಪಕ್ಷಪ್ರಸಿದ್ಧಿಬಾಧಃ । ತಥಾಚ ಕಥಂ ನಿರ್ಣಯ ಇತ್ಯಾಶಙ್ಕ್ಯ **ದ್ವಿಸ್ಥಿತಾ ಇತ್ಯುಕ್ತಮ್** । ತಥಾಚ ಸಿದ್ಧೇ ಸತ್ಯಾರಮ್ಭೋ ನಿಯಮಾರ್ಥ ಇತಿ ನ್ಯಾಯೇನ ಪೂರ್ವೋತ್ತರಪಕ್ಷಹೇತುಮನ್ತ ಇತ್ಯುಕ್ತಂ ಭವತಿ । ಏವಂ ಚಾನ್ಯತ್ರಾಪಿ ಪೂರ್ವೋತ್ತರಪಕ್ಷಹೇತುಮತ್ತಾऽಸ್ತಿ । ಅತ್ರೈವ ಕುತೋ ವಾಚ್ಯೇತ್ಯಾಶಙ್ಕಾ ನಿರಸ್ತಾ ಭವತಿ । ಅಥವೇತ್ಯಾದಿಪಕ್ಷಾಣಾಮುತ್ತರೋತ್ತರಸ್ವಾರಸ್ಯಂ ಸ್ಪಷ್ಟಮೇವ । ನನ್ವಸ್ತೂಕ್ತರೀತ್ಯಾ ಪಾದದ್ವಯಸಙ್ಗತಿಃ । ತಥಾಪಿ ಪ್ರಥಮಾತಿಕ್ರಮೇ ಕಾರಣಾಭಾವಾದಾವೇವ ತನ್ನಿವೇಶೋ ಯುಕ್ತ ಇತ್ಯತ ಉಭಯತ್ರ ಸಾಹಚರ್ಯಂ ವಿನೇತ್ಯುಕ್ತಸ್ಯಾಭಿಪ್ರಾಯಮಾಹ – **ಅಥವೇತಿ ।।**

ಸಾರ

ನಾಮಪಾದದಲ್ಲಿ ಸಕಲ ನಾಮಾತ್ಮಕ ಶಬ್ದಗಳು ಭಗವಂತನ ಹೆಸರುಗಳಾಗಿವೆಯೆಂಬುದನ್ನು ವಿಚಾರ ಮಾಡಿದ್ದಾಯಿತು. ಯೌಗಿಕವಾದ ಸಕಲ ಶಬ್ದಗಳು ಲಿಂಗಸ್ವರೂಪದಲ್ಲಿರುವುದರಿಂದ ಅವುಗಳೂ ಸಹ ಭಗವಂತನ ಗುಣಪ್ರತಿಪಾದಕಗಳಾಗಿವೆಯೆಂಬುದನ್ನೂ ಸಹ ಎರಡನೇ ಪಾದದಲ್ಲಿ ವಿಚಾರ ಮಾಡಿದ್ದಾಯಿತು.

ಶಬ್ದಗಳು ಭಗವಂತನನ್ನು ಪ್ರತಿಪಾದಿಸಲು ಸಾಧ್ಯವಿಲ್ಲ. ಲೋಕರೂಢಿಯಂತೆ ಲೌಕಿಕಪದಾರ್ಥಗಳನ್ನೇ ಪ್ರತಿಪಾದಿಸುತ್ತದೆಂಬುದು ಪೂರ್ವಪಕ್ಷಕಾರನ ಆಗ್ರಹ. ಪ್ರತಿಯೊಂದು ಶಬ್ದಗಳೂ ಭಗವತ್ಪ್ರತಿಪಾದಕಗಳಾಗಿವೆ. ಭಗವಂತನನ್ನು ಬಿಟ್ಟು ಇತರ ಯಾವುದೇ ಪದಾರ್ಥಗಳನ್ನೂ ಸಹ ಪ್ರತಿಪಾದಿಸಲು ಸಾಧ್ಯವೇ ಇಲ್ಲವೆಂಬುದು ಸಿದ್ಧಾಂತಿಗಳ ಆಗ್ರಹ. ಇವರಿಬ್ಬರನ್ನೂ ಸಮಾಧಾನ ಮಾಡಲು ಒಂದು ಉಪಾಯವನ್ನು ಹುಡುಕಬಹುದು. ಸಕಲ ಶಬ್ದಗಳು ಹಾಗೂ ಲಿಂಗಗಳು ಲೌಕಿಕಪದಾರ್ಥಗಳನ್ನೂ ಪ್ರತಿಪಾದಿಸುತ್ತವೆ. ವಿಷ್ಣುವನ್ನೂ ಸಹ ಪ್ರತಿಪಾದಿಸುತ್ತವೆ. ಹೀಗೆ ಹೇಳಿದಾಗ ಇಬ್ಬರಿಗೂ ಗಲಾಟೆಯಾಗಲು ಸಾಧ್ಯವೇ ಇಲ್ಲ. ಆದ್ದರಿಂದ ಉಭಯತ್ರಪ್ರಸಿದ್ಧವೆಂದು ಶಬ್ದಗಳನ್ನು ಒಪ್ಪೋಣ ಏನು ತೊಂದರೆ? ಎಂಬ ಪ್ರಶ್ನೆಯನ್ನು ಅನೇಕ ಮಂದಿ ಮಾಡುತ್ತಾರೆ. ಅದಕ್ಕೆ ಉತ್ತರ ನೀಡುವುದಕ್ಕಾಗಿಯೇ ಮೂರನೇ ಪಾದವು ಹೊರಡುತ್ತಿದೆ. ಈ ಪಾದದಲ್ಲಿ ಉಭಯತ್ರಪ್ರಸಿದ್ಧವಾದ ಶಬ್ದಗಳೆಲ್ಲವೂ ಭಗವಂತನನ್ನೇ ಪ್ರತಿಪಾದಿಸುತ್ತವೆಂದು ಸಾಧಿಸುತ್ತಿದ್ದಾರೆ.

ತಿಳಿಯಬೇಕಾದ ವಿಚಾರವಿಷ್ಟು. ಹಿಂದಿನ ಎರಡು ಪಾದಗಳಲ್ಲಿ ಸಕಲಶಬ್ದಗಳಿಗೆ ಭಗವಂತನಲ್ಲಿ ತಾತ್ಪರ್ಯವಿದೆಯೆಂದು ಹೇಳಿದ್ದಾರೆ ಹೊರತು, ಮುಖ್ಯವಾಚ್ಯತ್ವವನ್ನು ಸಮರ್ಥಿಸಿರುವುದಿಲ್ಲ. ತಾತ್ಪರ್ಯವಿರುವ ಪ್ರಯುಕ್ತ ವಿಷ್ಣುಪರವಾಗುತ್ತವೆಂಬುದಂತೂ ಅನೇಕ ನ್ಯಾಯಗಳಿಂದ ತಿಳಿಯುತ್ತವೆ. ಆದರೆ ಲೋಕರೂಢಿಯೂ ಸಹ ಬೇರೆ ಪದಾರ್ಥಗಳಲ್ಲಿರುವುದರಿಂದ ಶಬ್ದಗಳು ವಿಷ್ಣುವನ್ನು ಪ್ರತಿಪಾದಿಸುವಂತೆ ಇತರ ಪದಾರ್ಥಗಳನ್ನೂ ಸಹ ಪ್ರತಿಪಾದಿಸುತ್ತವೆ. ಹಾಗಾಗಿ ಹಿಂದಿನ ಎರಡು ಪಾದಗಳಲ್ಲಿ ಯಾವ ಶಬ್ದಗಳನ್ನೆಲ್ಲ ಸಮನ್ವಯ ಮಾಡಿದರೋ ಅವೆಲ್ಲವೂ ವಿಷ್ಣುವಿನಲ್ಲೂ ಬರುತ್ತವೆ. ಲೋಕದಲ್ಲಿಯೂ ಬರುತ್ತವೆ. ವಿಷ್ಣುವಿನಲ್ಲಿ ಮಾತ್ರ ಬರುತ್ತವೆಂಬ ನಿರ್ಧಾರವನ್ನು ಮಾಡಲು ಸಾಧ್ಯವಿಲ್ಲ. ಹಾಗಾಗಿ ಹಿಂದಿನೆರಡು ಪಾದಗಳಲ್ಲಿ ಸಮನ್ವಯ ಮಾಡಿದ ಶಬ್ದಗಳನ್ನು ಪುನಃ ಸಮನ್ವಯ ಮಾಡುವ ಅನಿವಾರ್ಯತೆ ಬಹಳವಾಗಿ ಕಾಣಿಸುತ್ತದೆ. ಆದಕ್ಕೋಸ್ಕರವೇ ಈ ಪಾದ ಹೊರಟಿದೆ. ಈ ಪಾದವು ಹೊರಟಿದ್ದರೆ ಸಕಲ ಶಬ್ದಗಳೂ ಉಭಯತ್ರಪ್ರಸಿದ್ಧವೆಂದಾಗಿ ಭಗವಂತನಲ್ಲಿ ಸಕಲಶಬ್ದದ ಸಮನ್ವಯವೂ ಸಿದ್ಧವಾಗದೆ. ಸಕಲ ಗುಣಪರಿಪೂರ್ಣತ್ವದ ಸಿದ್ಧಿಯೂ ಸಹ ಆಗದಿರುವ ಪ್ರಸಂಗ ಬರುತ್ತಿತ್ತು.

ಈ ಪಾದದಲ್ಲಿ ಈಗಾಗಲೇ ಹೇಳಿದಂತೆ ಕೇವಲ ನಾಮಾತ್ಮಕ ಶಬ್ದಗಳ ಸಮನ್ವಯವಷ್ಟೇ ಅಲ್ಲ, ಲಿಂಗಾತ್ಮಕ ಶಬ್ದಗಳ ಸಮನ್ವಯವನ್ನೂ ಸಹ ಮಾಡುತ್ತಿದ್ದಾರೆ. ಒಟ್ಟು ಹದಿನಾಲ್ಕು ಅಧಿಕರಣಗಳು ಈ ಪಾದದಲ್ಲಡಗಿವೆ. ಅವುಗಳಲ್ಲಿ ಮೊದಲನೆಯದು ದ್ಯುಭ್ವಾದ್ಯಧಿಕರಣ. ಸರ್ವಾಧಾರತ್ವವೆಂಬ ಲಿಂಗವನ್ನು ಈ ಮೊದಲನೆಯ ಅಧಿಕರಣದಲ್ಲಿ ವಿಷ್ಣುಮಾತ್ರಪರವೆಂದು ಸಮನ್ವಯ ಮಾಡುತ್ತಾರೆ. ಮುಂದಿನ ಭೂಮಾಧಿಕರಣದಲ್ಲಿ 'ಭೂಮಾ' ಎಂಬ ನಾಮಾತ್ಮಕ ಶಬ್ದದ ಸಮನ್ವಯವನ್ನು, ಅದರ ಮುಂದಿನ ಆಕ್ಷರಾಧಿಕರಣದಲ್ಲಿ 'ಅಕ್ಷರ' ಎಂಬ ನಾಮಾತ್ಮಕ ಶಬ್ದವನ್ನು ವಿಷ್ಣುವಿನಲ್ಲಿ ಸಮರ್ಥನೆ ಮಾಡುತ್ತಾರೆ.

ಪರಿಪೂರ್ಣಚಂದ್ರಿಕಾ

ನಾಲ್ಕನೆಯ ಸದಧಿಕರಣದಲ್ಲಿ ಅನೇಕ ಪ್ರಕರಣಗಳ ಸಮೂಹಾತ್ಮಕವಾದ ಸ್ಥಾನವೆಂಬುದನ್ನು ವಿಷ್ಣುವಿನಲ್ಲಿ ಸಮನ್ವಯ ಮಾಡುತ್ತಾರೆ. ಏವನೆಯ ದಹರಾಧಿಕರಣದಲ್ಲಿ 'ಹೃತ್ಪದ್ಮಸತ್ವ' ಲಿಂಗವನ್ನು, ಅನುಕೃತ್ಯಧಿಕರಣದಲ್ಲಿ 'ಆನುಕೂಲ್ಯೇನ ಗೃಹ್ಯಮಾಣತ್ವ' ಎಂಬ ಲಿಂಗವನ್ನು ಸಮನ್ವಯ ಮಾಡಿದ್ದಾರೆ. ಮುಂದಿನ ವಾಮನಾಧಿರಣದಲ್ಲಿ ಈಶಾನ ಶಬ್ದವನ್ನು ಕಂಪನಾಧಿಕರಣದಲ್ಲಿ ವಜ್ರ ಶಬ್ದವನ್ನು, ಜ್ಯೋತಿರಧಿಕರಣದಲ್ಲಿ ಜ್ಯೋತಿಶಬ್ದವನ್ನು, ಆಕಾಶಾಧಿಕರಣದಲ್ಲಿ ಆಕಾಶ ಶಬ್ದವನ್ನು, ಸುಷುಪ್ತ್ಯಧಿಕರಣದಲ್ಲಿ ಸ್ವಪ್ನಾದಿಪ್ರಪ್ಚತ್ವವೆಂಬ ಲಿಂಗವನ್ನು, ಬ್ರಾಹ್ಮಣಾಧಿಕರಣದಲ್ಲಿ ಬ್ರಾಹ್ಮಣ ಶಬ್ದವನ್ನು ವಿಷ್ಣುವಿನಲ್ಲಿ ಸಮನ್ವಯ ಮಾಡಿದ್ದಾರೆ. ಮಧ್ಯದಲ್ಲಿ ದೇವತಾಧಿಕರಣ ಹಾಗೂ ಅಪಶೂದ್ರಾಧಿಕರಣಗಳು ಬರುತ್ತವೆ. ಆದರೆ ಈ ಎರಡು ಅಧಿಕರಣಗಳಲ್ಲಿ ದೇವತೆಗಳಿಗೆ ಮಾತ್ರ ವೇದಾಧಿಕಾರವಿದೆ. ಶೂದ್ರಾದಿಗಳಿಗೆ ವೇದಾಧಿಕಾರವಿಲ್ಲವೆಂಬ ವಿಚಾರವನ್ನು ಮಾಡಿದ್ದಾರೆ. ಆದ್ದರಿಂದ ಯಾವುದೇ ಲಿಂಗವನ್ನಾಗಲೀ, ಹೆಸರನ್ನಾಗಲೀ, ಈ ಎರಡು ಅಧಿಕರಣಗಳಲ್ಲಿ ಸಮನ್ವಯ ಮಾಡದೆ ಪ್ರಾಸಂಗಿಕವಾದ ವಿಚಾರಗಳನ್ನಷ್ಟೇ ತಿಳಿಸಿದ್ದಾರೆ.

ಮೊದಲನೇ ಈ ದ್ಯುಭ್ವಾದ್ಯಧಿಕರಣದಲ್ಲಿ ಸಮನ್ವಯ ಮಾಡುತ್ತಿರುವ ದ್ಯುಭ್ವಾದ್ಯಾಯತನತ್ವವೆಂಬ ಲಿಂಗವು ಉಭಯತ್ರಪ್ರಸಿದ್ಧವಾಗಿದೆ ಹೊರತು, ಅನ್ಯತ್ರಪ್ರಸಿದ್ಧವಲ್ಲ. ವಸ್ತುತಃ ಜಾಯಮಾನತ್ವವೆಂಬ ಅನ್ಯತ್ರಪ್ರಸಿದ್ಧವಾದ ಲಿಂಗದ ಜೊತೆಗೆ ಇದನ್ನು ಹೇಳಿರುವುದರಿಂದ ಇದೂ ಸಹ ಅನ್ಯತ್ರಪ್ರಸಿದ್ಧವೆಂಬ ಭ್ರಾಂತಿ ಬರುತ್ತದೆ. ಆದರೆ ರುದ್ರನಲ್ಲಿ ಹಾಗೂ ವಿಷ್ಣುವಿನಲ್ಲಿ ಸಾಧಾರಣವಾದ ಶ್ರುತಿಯನ್ನು ನೋಡಿದಾಗ ದ್ಯುಭ್ವಾದ್ಯಾಯತನತ್ವವು ಸ್ವಾಭಾವಿಕವಾಗಿ ಉಭಯತ್ರಪ್ರಸಿದ್ಧವಾಗಿದೆಯೆಂದು ತಿಳಿಯುತ್ತದೆ. ಅನ್ಯತ್ರಪ್ರಸಿದ್ಧವೆಂದು ಹೇಳಬೇಕಾದರೆ ಅನ್ಯತ್ರಪ್ರಸಿದ್ಧವಾದ ಜಾಯಮಾನತ್ವವೆಂಬ ಲಿಂಗವನ್ನು ಅಪೇಕ್ಷಿಸಬೇಕು. ಉಭಯತ್ರಪ್ರಸಿದ್ಧವೆಂಬ ಲಿಂಗವನ್ನು ಹೇಳಬೇಕಾದರೆ ಮತ್ತೊಂದನ್ನು ಅಪೇಕ್ಷಿಸಬೇಕಾಗಿಲ್ಲ. ಸ್ವಾಭಾವಿಕವಾಗಿಯೇ ಉಭಯತ್ರಪ್ರಸಿದ್ಧವಾಗಿದೆಯೆಂದು ತಿಳಿಯಬಹುದು. ಸಾಪೇಕ್ಷಕ್ಕಿಂತ ನಿರಪೇಕ್ಷವು ಪ್ರಬಲವಾಗಿರುವುದರಿಂದ ದ್ಯುಭ್ವಾದ್ಯಾಯತನತ್ವವನ್ನು ಉಭಯತ್ರಪ್ರಸಿದ್ಧವಾದ ಲಿಂಗವೆಂದೇ ಪರಿಗಣಿಸಬೇಕು.

• • • • •

ಅನ್ಯತ್ರಪ್ರಸಿದ್ಧಶಬ್ದಗಳಿಗೂ, ಉಭಯತ್ರಪ್ರಸಿದ್ಧಶಬ್ದಗಳಿಗೂ ಸಾಂಕರ್ಯವಿಲ್ಲ

ತಾತ್ಪರ್ಯಚನ್ದ್ರಿಕಾ

अर्भकौकस्त्वादिरूपं सर्वगतत्वादिकं तु ब्रह्मणि पूर्वपक्षे कयाऽपि श्रुत्या नोच्यत इति न तस्य स्वत उभयत्रप्रसिद्धता ।

ಅನುವಾದ - ಹಿಂದಿನ ಪಾದದಲ್ಲಿ ಸಮನ್ವಯ ಮಾಡಲ್ಪಟ್ಟ ಸರ್ವಗತತ್ವವೆಂಬ ಲಿಂಗವು ಸಕಲ ಪ್ರಾಣಿಗಳ ಹೃದಯ ಪ್ರದೇಶದಲ್ಲಿರುವಿಕೆಯೆಂಬ ಅರ್ಭಕೌಕಸ್ತ್ವರೂಪವಾಗಿದೆ. ಇಂತಹ ಸರ್ವಗತತ್ವಾದಿಗಳನ್ನು ಪೂರ್ವಪಕ್ಷಿಯು ಯಾವುದೇ ಶ್ರುತಿಯಿಂದಲೂ ಸಹ ಬ್ರಹ್ಮನಲ್ಲಿ

ಒಪ್ಪಿರುವುದಿಲ್ಲ. ಆ ಕಾರಣದಿಂದಲೇ ಸರ್ವಗತತ್ವಕ್ಕೆ ಸ್ವತಃ ಉಭಯತ್ರಪ್ರಸಿದ್ಧತ್ವವು ಬರಲು ಸಾಧ್ಯವಿಲ್ಲ.

यद्वा समाख्याश्रुत्यादितौल्याभावोऽप्यन्यत्रप्रसिद्धलक्षणान्तर्गतः । सचेह नास्ति । अन्तर्यामित्वादौ त्वस्ति । ततश्च द्युभ्वाद्ययतनत्वमुभयत्रप्रसिद्धमेव ।

ಅಥವಾ ಅನ್ಯತ್ರಪ್ರಸಿದ್ಧಿಯ ಲಕ್ಷಣದಲ್ಲಿ ಸಮಾಖ್ಯಾಶ್ರುತ್ಯಾದಿತೌಲ್ಯಾಭಾವವನ್ನು ವಿಶೇಷಣವನ್ನಾಗಿ ಹೇಳುತ್ತೇವೆ ಅಂದರೆ ಸಮಾಖ್ಯಾಶ್ರುತಿಯು ಎರಡು ಪಕ್ಷಗಳಲ್ಲಿ ಸಮಾನವಾಗಿರದಿದ್ದರೆ ಅನ್ಯತ್ರಪ್ರಸಿದ್ಧವಾಗುತ್ತದೆಂದು ತಿಳಿಯಬೇಕು. ಸರ್ವಗತತ್ವಾದಿಲಿಂಗಗಳು ಸೂರ್ಯನಲ್ಲಿ ಹಾಗೂ ವಿಷ್ಣುವಿನಲ್ಲಿ ಇದೆಯೆನ್ನಲು ಎರಡೂ ಕಡೆ ಸಮಾನವಾದ ಶ್ರುತಿಗಳು ಇರುವುದಿಲ್ಲ. ಆ ಕಾರಣದಿಂದಲೇ ಅನ್ಯತ್ರಪ್ರಸಿದ್ಧವೆನಿಸುತ್ತವೆ. ಆದರೆ ದ್ಯುಭ್ವಾದ್ಯಾಯತನತ್ವವೆಂಬ ಲಿಂಗದಲ್ಲಿ ಸಮಾಖ್ಯಾಶ್ರುತ್ಯಾದಿ-ತೌಲ್ಯಾಭಾವವು ಇರುವುದಿಲ್ಲ. ಅಂದರೆ ದ್ಯುಭ್ವಾದ್ಯಾಯತನತ್ವವು ವಿಷ್ಣುವಿನಲ್ಲಿ ಹಾಗೂ ಬೇರೆ ದೇವತೆಗಳಲ್ಲಿ ಇದೆಯೆನ್ನಲು ಸಮಾನವಾದ ಶ್ರುತಿಗಳಿರುತ್ತವೆ. ಆ ಕಾರಣದಿಂದ ಅನ್ಯತ್ರಪ್ರಸಿದ್ಧವೆನಿಸದು. ಅಂತರ್ಯಾಮಿತ್ವಾದಿಗಳಲ್ಲಿ ಸಮಾಖ್ಯಾಶ್ರುತ್ಯಾದಿತೌಲ್ಯಾಭಾವವು ಇರುತ್ತದೆಂದು ತಿಳಿಯಬೇಕು. ಆದ್ದರಿಂದ ಸರ್ವಗತತ್ವ, ಅಂತರ್ಯಾಮಿತ್ವಾದಿಗಳು ಅನ್ಯತ್ರಪ್ರಸಿದ್ಧವೇ ಆಗುತ್ತವೆ. ಆದ್ದರಿಂದ ದ್ಯುಭ್ವಾದ್ಯಾಯತನತ್ವವು ಉಭಯತ್ರಪ್ರಸಿದ್ಧವೇ ಆಗುತ್ತದೆ.

यद्वा सर्वगतत्वादीनीन्द्राकाशादिशब्दवत्स्वरूपेणैवान्यत्रप्रसिद्धानि । नत्वन्यत्र-प्रसिद्धतत्तत्साहचर्यात् । येन द्युभ्वाद्ययतनत्वादिकमपि तत्तत्साहचर्यात्तथा स्यात् ।

ಅಥವಾ ಪ್ರಥಮ ಪಾದದಲ್ಲಿ ಸಮನ್ವಯ ಮಾಡಲ್ಪಟ್ಟ ಇಂದ್ರ, ಆಕಾಶ ಮೊದಲಾದ ಶಬ್ದಗಳು ಸ್ವರೂಪತಃ ಹೇಗೆ ಅನ್ಯತ್ರಪ್ರಸಿದ್ಧವಾಗಿವೆಯೋ? ಅದರಂತೆ ಎರಡನೇ ಪಾದದಲ್ಲಿ ಸಮನ್ವಯ ಮಾಡಲ್ಪಟ್ಟ ಸರ್ವಗತತ್ವಾದಿಲಿಂಗಗಳೂ ಸಹ ಸ್ವಾಭಾವಿಕವಾಗಿಯೇ ಅನ್ಯತ್ರಪ್ರಸಿದ್ಧವಾಗಿವೆ ಹೊರತು, ಅನ್ಯತ್ರಪ್ರಸಿದ್ಧವಾದ ಲಿಂಗದಿಂದ ಅಥವಾ ಶ್ರುತಿಯಿಂದ ಸಹಚರಿತವಾಗಿ ಅನ್ಯತ್ರಪ್ರಸಿದ್ಧವಾಗಿರುವುದಿಲ್ಲ. ಹಾಗಾಗಿದ್ದಲ್ಲಿ ದ್ಯುಭ್ವಾದ್ಯಾಯತನತ್ವಾದಿಗಳೂ ಸಹ ಅನ್ಯತ್ರಪ್ರಸಿದ್ಧವಾದ ಶ್ರುತಿ, ಲಿಂಗಾದಿಗಳ ಸಾಹಚರ್ಯದಿಂದ ಅನ್ಯತ್ರಪ್ರಸಿದ್ಧವಾಗುತ್ತವೆಂದು ಆಕ್ಷೇಪಿಸಬಹುದಿತ್ತು, ಆದರೆ ಹಾಗಿಲ್ಲ. ಆದ್ದರಿಂದ ಸ್ವತಃ ಲೋಕರೂಢಿಯಿಂದ ಅನ್ಯತ್ರಪ್ರಸಿದ್ಧವಾಗಿದ್ದರೆ ಅಂತಹ ಶಬ್ದಗಳು ಅನ್ಯತ್ರಪ್ರಸಿದ್ಧ ಶಬ್ದಗಳೆನಿಸುತ್ತವೆಂದು ತಿಳಿಯಬೇಕು.

तथाहि पूर्णेऽभोक्तरि कर्महीने च ब्रह्मण्यर्भकौकस्त्वादिरूपं सर्वगतत्वमकर्तृत्वं कर्मफलभोक्तृत्वं चायुक्तम् । तथा अनित्यक्रियारूपमन्तरत्वमन्तर्यामित्वं चाक्रिये ब्रह्मणि सदा न युक्तम् ।

ಎರಡನೆಯ ಪಾದದಲ್ಲಿ ಸಮನ್ವಯ ಮಾಡಲ್ಪಟ್ಟ ಲಿಂಗಗಳೆಲ್ಲವೂ ಸಹಜವಾಗಿಯೇ ಅನ್ಯತ್ರಪ್ರಸಿದ್ಧವಾಗಿವೆಯೆಂಬುದನ್ನು ಹೀಗೆ ತಿಳಿಯಬೇಕು. ಪೂರ್ಣನಾದ ಭಗವಂತನಲ್ಲಿ ಸ್ವಲ್ಪ ದೇಶದಲ್ಲಿರುವಿಕೆಯೆಂಬ ಸರ್ವಗತತ್ವವನ್ನು ಹೇಳಲು ಸಾಧ್ಯವಿಲ್ಲ. ಅಭೋಕ್ತೃವಾದ ವಿಷ್ಣುವಿನಲ್ಲಿ ಆತ್ಮತ್ವವೆಂಬ ಭೋಕ್ತೃತ್ವವನ್ನು ಹೇಳಲು ಸಾಧ್ಯವಿಲ್ಲ. ಮತ್ತು ಕರ್ಮರಹಿತನಾದವನಿಗೆ ಕರ್ಮಫಲಭೋಕ್ತೃತ್ವವೂ ಸಹ ಇರುವುದಿಲ್ಲ. ಇದರಂತೆ ನಿತ್ಯಸ್ವರೂಪನಾದ ಆಕ್ರಿಯನಾದ ಭಗವಂತನಲ್ಲಿ ಅನಿತ್ಯವಾದ ಕ್ರಿಯೆಯಾದ ಅಂತಃಸ್ಥಿತ್ವಾ ರಮಣವೆಂಬುದು ಕೂಡುವುದಿಲ್ಲ. ಅಂತರ್ಯಾಮಿತ್ವವೂ ಸಹ ಆಕ್ರಿಯಾ ಸ್ವರೂಪನಾದ ಭಗವಂತನಲ್ಲಿ ಅನಿತ್ಯವಾದ್ದರಿಂದ ನಿರಂತರವಿರಲು ಸಾಧ್ಯವಿಲ್ಲ.

तथा अदृश्यत्वाद्यभावधर्मत्वं भावरूपे ब्रह्मण्ययुक्तम् । ''एवं धर्मान्पृथक्'' इति श्रुत्या ब्रह्मणि धर्मधर्मिभेदनिषेधात् । अत एवानुव्याख्याने तत्र सिद्धान्ते क्रियाया नित्यत्वं भावस्याप्यभावात्मकत्वं च साधितम् ।

ಮತ್ತು ಅದೃಶ್ಯತ್ವವೆಂಬ ಅಭಾವಧರ್ಮವು ಭಾವಸ್ವರೂಪನಾದ ಬ್ರಹ್ಮನಲ್ಲಿ ಅಯುಕ್ತವಾಗುತ್ತದೆ. ಏಕೆಂದರೆ 'ಏವಂ ಧರ್ಮಾನ್ ಪೃಥಕ್' ಎಂಬ ಶ್ರುತಿಯಿಂದ ಬ್ರಹ್ಮನಲ್ಲಿ ಧರ್ಮ ಹಾಗೂ ಧರ್ಮಿಗಳು ಭಿನ್ನವಾಗಿ ಇರಲು ಸಾಧ್ಯವಿಲ್ಲವೆಂದು ನಿಷೇಧ ಮಾಡಲಾಗಿದೆ. ಆದ್ದರಿಂದಲೇ ಅನುವ್ಯಾಖ್ಯಾನದ ಅದೃಶ್ಯತ್ವಾಧಿಕರಣದ ಸಿದ್ಧಾಂತದಲ್ಲಿ ಕ್ರಿಯೆಗೆ ನಿತ್ಯತ್ವವನ್ನು ಭಾವಕ್ಕೂ ಸಹ ಅಭಾವಾತ್ಮಕತ್ವವನ್ನು ಸಮರ್ಥಿಸಿರುತ್ತಾರೆ.

एवञ्च सर्वगतत्वादीनि ब्रह्मण्ययुक्तत्वादेवान्यत्रप्रसिद्धानि । वैश्वानरशब्दस्त्वग्निपर्यायतयाऽन्यत्रप्रसिद्धः ।

ಆದ್ದರಿಂದ ಸರ್ವಗತತ್ವಾದಿಗಳು ಬ್ರಹ್ಮನಲ್ಲಿ ಅಯುಕ್ತವಾದ ಕಾರಣದಿಂದಲೇ ಅನ್ಯತ್ರಪ್ರಸಿದ್ಧವಾಗಿವೆ. ವೈಶ್ವಾನರ ಶಬ್ದವಾದರೂ ಸಹ ಅಗ್ನಿಶಬ್ದದ ಪರ್ಯಾಯಪದವಾದ್ದರಿಂದ ಅನ್ಯತ್ರಪ್ರಸಿದ್ಧವಾಗಿದೆ; ಅಂದರೆ ಸ್ವಾಭಾವಿಕವಾಗಿ ಅನ್ಯತ್ರಪ್ರಸಿದ್ಧವಾಗಿದೆ; ಹೊರತು ಅನ್ಯತ್ರಪ್ರಸಿದ್ಧವಾದ ಮತ್ತೊಂದರ ಅಪೇಕ್ಷೆಯಿಂದಲ್ಲ.

टीकायां सर्वगतत्वादीनामादित्यादिश्रुतिसाहचर्यादन्यत्रप्रसिद्धयुक्तिस्त्वन्यमात्रे प्रसिद्धेः स्वतः सिद्धत्वेऽप्यादित्यादिरूपान्यविशेषाभिप्राया । एवमुत्तत्रापि यथासम्भवं पादसङ्गतिरूह्या ।

ಟೀಕೆಯಲ್ಲಿ ಸರ್ವಗತತ್ವಾದಿಲಿಂಗಗಳೆಲ್ಲವೂ ಆದಿತ್ಯಾದಿ ಶ್ರುತಿಯ ಸಾಹಚರ್ಯದಿಂದ ಅನ್ಯತ್ರಪ್ರಸಿದ್ಧವಾಗಿರುತ್ತವೆಂದು ಹೇಳಲಾಗಿದೆ. ಆ ಟೀಕಾ ಮಾತಿಗೆ, ಬೇರೆ ವಿಷಯದಲ್ಲಿ ಪ್ರಸಿದ್ಧಿಯು

ಸ್ವತಃಸಿದ್ಧವಾಗಿದ್ದರೂ ಸಹ ಆದಿತ್ಯಾದಿರೂಪ ಅನ್ಯವಿಶೇಷದಲ್ಲಿ ಪ್ರಸಿದ್ಧವಾಗಿದೆಯೆಂದು ತಿಳಿಸುವುದರಲ್ಲಿ ಅಭಪ್ರಾಯ. ಹೀಗೆ ಮುಂದಿನ ಅಧಿಕರಣಗಳಲ್ಲಿಯೂ ಯಥಾಕ್ರಮವಾಗಿ ಪಾದಸಂಗತಿಯನ್ನು ಊಹಿಸಿಕೊಳ್ಳಬೇಕು.

ಪ್ರಕಾಶಃ –

ನನ್ವೇವಂ ನಿರಪೇಕ್ಷಾದರೇ ಸರ್ವತ್ರಪ್ರಸಿದ್ಧೇತ್ಯಾದಾವುಕ್ತಸರ್ವಗತತ್ವಾದೇರೇವ ಸಮ್ಭವೇನಾನ್ಯ-ಸಾಹಿತ್ಯೇನಾನ್ಯತ್ರಪ್ರಸಿದ್ಧ್ಯುಕ್ತಿರ್ನ ಸ್ಯಾದಿತ್ಯತ ಆಹ – ಅರ್ಭಕೇತಿ ।।

ವಿವರಣೆ - ನಿರಪೇಕ್ಷವಾದ್ದರಿಂದ ದುಃಖ್ಯಾದ್ಯಾಯತನತ್ವವು ಉಭಯತ್ರಪ್ರಸಿದ್ಧವಾಗುತ್ತದೆಂದು ಈ ಹಿಂದೆ ಸಮರ್ಥಿಸಿದ್ದಾಯಿತು. ಹಾಗಾದರೆ ಸರ್ವಗತತ್ವಾಧಿಕರಣದಲ್ಲಿ ಸಮನ್ವಯ ಮಾಡುವ ಸರ್ವಗತತ್ವವೆಂಬ ಲಿಂಗವೂ ಸಹ ಉಭಯತ್ರಪ್ರಸಿದ್ಧವಾಗಬೇಕಾದೀತು. ಏಕೆಂದರೆ ಯಾವರೀತಿಯಾಗಿ ದುಃಖ್ಯಾದ್ಯಾಯತನತ್ವ ಲಿಂಗವು ಸಮಾನವಾದ ಶ್ರುತಿಯ ಬಲದಿಂದ ಸ್ವಾಭಾವಿಕವಾಗಿ ಉಭಯತ್ರಪ್ರಸಿದ್ಧವಾಗಿದೆಯೋ, ಅದರಂತೆ ಸರ್ವಗತತ್ವಲಿಂಗವೂ ಸಹ ಎರಡೂ ಕಡೆ ಸಮಾನವಾದ ಶ್ರುತಿಯ ಬಲದಿಂದ ಉಭಯತ್ರಪ್ರಸಿದ್ಧವಾಗುತ್ತದೆ. ಹೀಗೆ ಹೇಳಿದರೆ ಅನ್ಯಶ್ರುತಿಯ ಸಾಹಿತ್ಯದಿಂದ ಅಂದರೆ ಸೂರ್ಯನಲ್ಲಿರುವ ಶ್ರುತಿ ಸಾಹಿತ್ಯದ ಬಲದಿಂದ ಅನ್ಯತ್ರಪ್ರಸಿದ್ಧವಾಗುತ್ತದೆಂಬ ಮಾತೇ ತಪ್ಪಾಗಬೇಕಾಗುತ್ತದೆ ಎಂಬ ಪ್ರಶ್ನೆಗೆ, 'ಅರ್ಭಕ' ಇತ್ಯಾದಿ ವಾಕ್ಯಗಳಿಂದ ಉತ್ತರಿಸುತ್ತಿದ್ದಾರೆ.

ಪ್ರಕಾಶಃ – ಏವಮನ್ಯತ್ರಪ್ರಸಿದ್ಧತ್ವರೂಪತ್ವಮಸ್ಯ ಲಿಙ್ಗಸ್ಯೋಪೇತ್ಯ ದ್ವೇಧಾ ಗತಿರುಕ್ತಾ । ಅಧುನಾ ತಥಾತ್ವಮೇವಾಸ್ಯ ನಾಸ್ತೀತಿ ಭಾವೇನೋತ್ತರಂ ಸಮಾಧಾನದ್ವಯಮ್ ।

ಇಲ್ಲಿಯ ತನಕ ದುಃಖ್ಯಾದ್ಯಾಯತನತ್ವವೆಂಬ ಲಿಂಗಕ್ಕೆ ಅನ್ಯತ್ರಪ್ರಸಿದ್ಧತ್ವವೂ ಸಹ ಇರುತ್ತದೆ. ಆದರೂ ಸಾಪೇಕ್ಷವಾದ್ದರಿಂದ ಅದನ್ನು ವಿವಕ್ಷಿಸದಾರದೆಂದು ಎರಡು ರೀತಿಯಲ್ಲಿ ಸಮಾಧಾನವನ್ನು ಹೇಳಿದರು. ಆದರೆ ಈಗ ದುಃಖ್ಯಾದ್ಯಾಯತನತ್ವವೆಂಬ ಲಿಂಗಕ್ಕೆ ಅನ್ಯತ್ರಪ್ರಸಿದ್ಧತ್ವವೇ ಇರುವುದಿಲ್ಲವೆಂಬ ಅಭಪ್ರಾಯದಿಂದ ಮತ್ತೆರಡು ರೀತಿಯಲ್ಲಿ ಸಮಾಧಾನಗಳನ್ನು ಹೇಳುತ್ತಿದ್ದಾರೆ.

ಪ್ರಕಾಶಃ – ತತ್ರಾಽಽಂ ''ಶ್ರುತ್ಯಾದಿತೋ ಲೋಕತೋ ವಾऽಪೀತರೇಷು ಪ್ರಸಿದ್ಧತಾ'' ಇತಿ ಯದನ್ಯತ್ರಪ್ರಸಿದ್ಧಿಲಕ್ಷಣಮುಕ್ತಂ ತತ್ರ 'ಶ್ರುತ್ಯಾದಿತೌಲ್ಯಾಭಾವೇ ಸತಿ' ಇತಿ ವಿಶೇಷಣಂ ದೇಯಮ್ । ಅತೋ ನ ದೋಷ ಇತ್ಯಾಹ – ಯದ್ವೇತಿ ।।

ಮೊದಲನೆಯ ಸಮಾಧಾನ ಹೀಗಿದೆ - 'ಶ್ರುತ್ಯಾದಿತೋ ಲೋಕತೋ ವಾऽಪೀತರೇಷು ಪ್ರಸಿದ್ಧತಾ' ಎಂಬ ವಾಕ್ಯದಿಂದ ಶ್ರುತಿಯಿಂದ ಅಥವಾ ಲೋಕರೂಢಿಯಿಂದ ಬೇರೆಯವರಲ್ಲಿ ಪ್ರಸಿದ್ಧವಾಗಿದ್ದರೆ ಅಂತಹ ಶಬ್ದಗಳು ಅನ್ಯತ್ರಪ್ರಸಿದ್ಧವಾಗುತ್ತವೆಂದು ಅನ್ಯತ್ರಪ್ರಸಿದ್ಧಿಯ ಲಕ್ಷಣವನ್ನು ಹೇಳಿದರು. ಈ ಅನ್ಯತ್ರಪ್ರಸಿದ್ಧಿಯ ಲಕ್ಷಣವಾಕ್ಯದಲ್ಲಿ 'ಶ್ರುತ್ಯಾದಿತೌಲ್ಯಾಭಾವೇ ಸತಿ' ಎಂಬ ವಿಶೇಷಣವನ್ನು ವಿವಕ್ಷಿಸಬೇಕು. ಅಂದರೆ ವಿಷ್ಣುವಿನಲ್ಲಿ ಹಾಗೂ ಬೇರೆಯವರಲ್ಲಿ ಸಮಾನವಾದ ಶ್ರುತಿ ಇಲ್ಲದೇ ಇದ್ದಾಗ ಲೋಕರೂಢಿಯಿಂದ ಅನ್ಯತ್ರಪ್ರಸಿದ್ಧವಾಗಿದ್ದರೆ

ಅಂತಹ ಶಬ್ದಗಳು ಅನ್ಯತ್ರಪ್ರಸಿದ್ಧವಾಗುತ್ತವೆಂದು ತಿಳಿಯಬೇಕು. ಹೀಗೆ ವಿವಕ್ಷಿಸಿದಾಗ ದ್ಯುಭ್ವಾದ್ಯಾಯತನತ್ವದಲ್ಲಿ ಶ್ರುತ್ಯಾದಿ ತೌಲ್ಯವೇ ಇರುತ್ತವೆ. ಎರಡೂ ಕಡೆ ಸಮಾನವಾದ ಶ್ರುತಿಗಳೇ ಇರುವುದರಿಂದ ಅನ್ಯತ್ರಪ್ರಸಿದ್ಧಿಯ ಲಕ್ಷಣವನ್ನು ಹೇಳಿದಂತಾಗುವುದಿಲ್ಲವೆಂದು 'ಯದ್ವಾ' ಇತ್ಯಾದಿ ವಾಕ್ಯದಿಂದ ಪ್ರತಿಪಾದಿಸುತ್ತಿದ್ದಾರೆ.

ಪ್ರಕಾಶಃ – 'श्रुत्यादितः' इति पदस्थाने 'स्वतः' इति पदं प्रक्षिप्येतरेषु प्रसिद्धत्वं लोकतस्त्वत एव वेत्यन्यत्रप्रसिद्धत्वलक्षणं वाच्यम् । तच्चेह नास्ति । पूर्वत्रास्तीत्याह – **यद्वा सर्वगतत्वादीनीति ।।**

ಅಥವಾ ಎರಡನೆಯ ಸಮಾಧಾನ 'श्रुत्यादितः' ಎಂಬ ಪದದ ಬದಲು 'स्वतः' ಎಂಬ ಪದವನ್ನು ಇಟ್ಟುಕೊಳ್ಳಬೇಕು. ಆಗ 'इतरेष्वप्रसिद्धत्वं लोकतः स्व एव वा' ಎಂದು ಲಕ್ಷಣದ ಸ್ವರೂಪ. ಬೇರೆ ಪದಾರ್ಥಗಳಲ್ಲಿ ಲೋಕರೂಢಿಯಿಂದ ಸ್ವಾಭಾವಿಕವಾಗಿ ಪ್ರಸಿದ್ಧವಾದ ಶಬ್ದಗಳಷ್ಟೇ ಅನ್ಯತ್ರಪ್ರಸಿದ್ಧವಾಗುತ್ತದೆಂದು ಹೇಳಿದಂತಾಗುತ್ತದೆ. ಅಂತಹ ಅನ್ಯತ್ರಪ್ರಸಿದ್ಧಿಯ ಲಕ್ಷಣವು ದ್ಯುಭ್ವಾದ್ಯಾಯತನತ್ವವೆಂಬ ಲಿಂಗದಲ್ಲಿ ಬರಲು ಸಾಧ್ಯವಿಲ್ಲ. ಏಕೆಂದರೆ ದ್ಯುಭ್ವಾದ್ಯಾಯನತ್ವವೆಂಬ ಲಿಂಗವು ಸ್ವಾಭಾವಿಕವಾಗಿದೆ. ಆದರೆ ಹಿಂದಿನ ಸರ್ವಗತತ್ವಾದಿ ಧರ್ಮಗಳಲ್ಲಿ ಇಂತಹ ಲಕ್ಷಣಗಳು ಇರುತ್ತವೆಂದು 'ಯದ್ವಾ' ಇತ್ಯಾದಿ ಗ್ರಂಥದಿಂದ ಪ್ರತಿಪಾದಿಸುತ್ತಿದ್ದಾರೆ.

ಪ್ರಕಾಶಃ – पूर्वोदाहरणानां स्वतोऽन्यत्रप्रसिद्धतामाह – **तथाहीति ।।** कुत इत्यत उक्तम् **'एवंधर्मान्'** इति । टीकाविरोधमाशङ्क्याह – **टीकायामिति ।। उत्तरत्रेति ।।** उत्तराधिकरणेषु । **पादसङ्गतिः** पादान्तर्भावः ।

ಹಿಂದಿನ ಪಾದದಲ್ಲಿ ಪ್ರಸಕ್ತವಾದ ಎಲ್ಲಾ ಲಿಂಗಗಳೂ ಸಹ ಸ್ವಾಭಾವಿಕವಾಗಿ ಅನ್ಯತ್ರಪ್ರಸಿದ್ಧವಾಗಿವೆಯೆಂದು 'ತಥಾಹಿ' ಇತ್ಯಾದಿ ವಾಕ್ಯದಿಂದ ಪ್ರತಿಪಾದಿಸುತ್ತಿದ್ದಾರೆ. ಭಾವರೂಪನಾದ ಬ್ರಹ್ಮನಲ್ಲಿ ಅಭಾವರೂಪವಾದ ಧರ್ಮಗಳೇಕೆ ಬರುವುದಿಲ್ಲ ? ಎಂಬ ಪ್ರಶ್ನೆಗೆ 'एवं धर्मान्' ಎಂಬ ವಾಕ್ಯದಿಂದ ಉತ್ತರಿಸಿದ್ದಾರೆ. ಈ ವಿಷಯದಲ್ಲಿ ಟೀಕೆಯ ವಿರೋಧ ಬರುತ್ತದಲ್ಲವೇ? ಎಂಬ ಪ್ರಶ್ನೆಗೆ 'टीकायाम्' ಎಂಬ ವಾಕ್ಯದಿಂದ ಉತ್ತರಿಸಿದ್ದಾರೆ. 'ಉತ್ತರತ್ರ' ಎಂಬ ಪದಕ್ಕೆ 'ಮುಂದಿನ ಅಧಿಕರಣಗಳಲ್ಲಿ' ಎಂದರ್ಥ. 'ಪಾದಸಂಗತಿಃ' ಎಂದರೆ 'ಪಾದದಲ್ಲಿ ಅಂತರ್ಭಾವ ರೂಪವಾದ ಸಂಗತಿ' ಎಂದರ್ಥ.

ಪ್ರಕಾಶಃ – भूमनये प्राणाभेदेन प्रतीतभूमनाग्रः 'प्राणो नूत्क्रामत्' इति श्रुतनिरवकाशोत्क्रमणलिङ्गेन, अक्षरनये श्रुत्यन्तरसिद्धचन्द्राद्याधारत्वश्रीतत्वलिङ्गेनाक्षरनाग्रः, ईक्षतिनये **'बहुस्याम्'** इति श्रुतविकारूपलिङ्गेन **'सदेव'** इति श्रुतसन्नाग्रः दहरनयादावाकाशश्रुत्यादिना हृत्पद्मस्थत्वादेरन्यत्रप्रसिद्धत्वेत्युक्तदिशा चतुर्धाऽन्तर्भावसङ्गतिरूह्येत्यर्थः । समाख्याश्रुतितौल्यस्य सर्वत्रासम्भवाद्यथासम्भवमित्युक्तम् ।

ಆಕ್ಷೇಪ - ಈ ಅಧಿಕರಣದಲ್ಲಿ ಸಮನ್ವಯ ಮಾಡುತ್ತಿರುವ 'ಭೂಮ' ಮೊದಲಾದ ಶಬ್ದಗಳನ್ನು ಉಭಯತ್ರಪ್ರಸಿದ್ಧವೆಂದು ಹೇಗೆ ಹೇಳುತ್ತೀರಿ? ಇವುಗಳೂ ಸಹ ಅನ್ಯತ್ರಪ್ರಸಿದ್ಧವೇ ಆಗುತ್ತವೆ. ಏಕೆಂದರೆ ಭೂಮಾಧಿಕರಣದಲ್ಲಿ ಮುಖ್ಯಪ್ರಾಣನನ್ನು ಪ್ರತಿಪಾದಿಸುವ 'ಭೂಮಾ' ಎಂಬ ಶಬ್ದವು 'ಪ್ರಾಣೋನೂತ್ಕಮತಿ' ಎಂಬ ನಿರವಕಾಶವಾದ ಉತ್ಕ್ರಮಣವೆಂಬ ಲಿಂಗದಿಂದ ಮುಖ್ಯಪ್ರಾಣನಲ್ಲಿ ಪ್ರಸಿದ್ಧವಾಗಿದೆ. ಆಕ್ಷರಾಧಿಕರಣದಲ್ಲಿ ಸಮನ್ವಯ ಮಾಡಬೇಕಾದ ಆಕ್ಷರಶಬ್ದವೂ ಸಹ ಮತ್ತೊಂದು ಶ್ರುತಿಯಿಂದ ಸಿದ್ಧವಾದ ಚಂದ್ರದ್ಯಾಧಾರತ್ವವೆಂಬ ಲಕ್ಷ್ಮೀದೇವಿಯ ಲಿಂಗದಿಂದ ಅನ್ಯತ್ರಪ್ರಸಿದ್ಧವಾಗಿದೆ. ಸದಧಿಕರಣದಲ್ಲಿ ಸಮನ್ವಯ ಮಾಡಬೇಕಾದ 'ಸತ್' ಶಬ್ದವೂ ಸಹ ಈಕ್ಷತ್ಯಧಿಕರಣದಲ್ಲಿರುವ 'ಬಹುಸ್ಯಾಮ್' ಎಂಬ ಶ್ರುತಿಯಿಂದ ಸಿದ್ಧವಾದ ವಿಕಾರ ಎಂಬ ಲಿಂಗದಿಂದ ಅನ್ಯತ್ರಪ್ರಸಿದ್ಧವಾಗಿದೆ. ದಹರಾಧಿಕರಣದಲ್ಲಿ ಸಮನ್ವಯ ಮಾಡುವ 'ಹೃದಯಪುಣ್ಡರೀಕ' ಎಂಬ ಲಿಂಗವು ಆಕಾಶಶ್ರುತಿಯಿಂದ ಅನ್ಯತ್ರಪ್ರಸಿದ್ಧವಾಗಿದೆ. ಹೀಗಿರುವಾಗ ಇವುಗಳನ್ನೆಲ್ಲಾ ಉಭಯತ್ರಪ್ರಸಿದ್ಧವೆಂದು ಹೇಗೆ ಹೇಳುತ್ತೀರಿ?

ಸಮಾಧಾನ - ಈ ಆಕ್ಷೇಪಕ್ಕೆ ಈಗಾಗಲೇ ಹೇಳಿದ ನಾಲ್ಕು ಬಗೆಯ ಸಮಾಧಾನವನ್ನು ತಿಳಿದುಕೊಳ್ಳಬೇಕು.

೧. 'ದ್ಯುಭ್ವಾದ್ಯಾಯತನತ್ವ' ಮೊದಲಾದ ಲಿಂಗಗಳಿಗೆ ಸಮಾನವಾದ ಶ್ರುತಿಯ ಬಲದಿಂದ ಅನ್ಯತ್ರಪ್ರಸಿದ್ಧಿಯೂ ಇರುತ್ತದೆ. ಉಭಯತ್ರಪ್ರಸಿದ್ಧಿಯೂ ಸಹ ಇರುತ್ತದೆ. ಇವೆರಡರಲ್ಲಿ ಉಭಯತ್ರಪ್ರಸಿದ್ಧತ್ವವನ್ನು ವಿವಕ್ಷಿಸಬೇಕು.

೨. ಅನ್ಯತ್ರಪ್ರಸಿದ್ಧಿಯು, ಅನ್ಯತ್ರಪ್ರಸಿದ್ಧವಾದ ಮತ್ತೊಂದು ಲಿಂಗವನ್ನು ಅಪೇಕ್ಷಿಸುತ್ತದೆ. ಉಭಯತ್ರಪ್ರಸಿದ್ಧಿಯು ಮತ್ತೊಂದು ಲಿಂಗವನ್ನು ಅಪೇಕ್ಷಿಸದೇ ಸಮಾಖ್ಯಾಶ್ರುತಿಯ ಬಲದಿಂದ ಸ್ವತಃ ಉಭಯತ್ರಪ್ರಸಿದ್ಧವಾಗುತ್ತದೆ. ಸಾಪೇಕ್ಷ ಹಾಗೂ ನಿರಪೇಕ್ಷಗಳಲ್ಲಿ ನಿರಪೇಕ್ಷವಾದದ್ದನ್ನೇ ಆಧರಿಸಬೇಕಾದ್ದರಿಂದ ದ್ಯುಭ್ವಾದ್ಯಾಯತನತ್ವಾದಿಗಳೆಲ್ಲವೂ ಉಭಯತ್ರಪ್ರಸಿದ್ಧವೆಂದು ವಿವಕ್ಷಿಸಬೇಕು.

೩. ದ್ಯುಭ್ವಾದ್ಯಾಯತನತ್ವಾದಿಗಳಿಗೆ ಅನ್ಯತ್ರಪ್ರಸಿದ್ಧತ್ವವನ್ನು ಒಪ್ಪುವುದೇ ಬೇಕಾಗಿಲ್ಲ. ಏಕೆಂದರೆ 'ಶ್ರುತ್ಯಾದಿತೋ ಲೋಕತೋ ವಾऽಪೀತರೇಷು ಪ್ರಸಿದ್ಧಾ' ಎಂಬ ಅನ್ಯತ್ರಪ್ರಸಿದ್ಧಿಯ ಲಕ್ಷಣದಲ್ಲಿ 'ಶ್ರುತ್ಯಾದಿತೌಲ್ಯಾಭಾವೇ ಸತಿ' ಎಂಬುದನ್ನು ವಿಶೇಷಣವನ್ನಾಗಿ ಹೇಳಿದ್ದರಿಂದ ಸರ್ವಗತತ್ವಾದಿಲಿಂಗಗಳಿಗೆ ಹಾಗೂ ಭೂಮಾದಿ ಶಬ್ದಗಳಿಗೆ ಅನ್ಯತ್ರಪ್ರಸಿದ್ಧಿಯ ಸಾಹಚರ್ಯದಿಂದ ಅನ್ಯತ್ರಪ್ರಸಿದ್ಧತ್ವವಿದ್ದರೂ ಸಹ ಎಲ್ಲಿ ಶ್ರುತ್ಯಾದಿತೌಲ್ಯವು ಇರುವುದಿಲ್ಲವೋ ಅಲ್ಲಿಯೂ ಸಹ ಅನ್ಯತ್ರಪ್ರಸಿದ್ಧಿಯ ಲಕ್ಷಣಬರುತ್ತದೆ. ಭೂಮಾ, ದ್ಯುಭ್ವಾದ್ಯಾಯತನತ್ವ ಮೊದಲಾದೆಡೆ ಸಮಾಖ್ಯಾಶ್ರುತಿಯ ತೌಲ್ಯವಿರುವುದರಿಂದ ಅನ್ಯತ್ರಪ್ರಸಿದ್ಧಿಯ ಲಕ್ಷಣ ಬರುವುದಿಲ್ಲವೆಂದು ತಿಳಿಯಬೇಕು.

೪. ಅಥವಾ ಅನ್ಯತ್ರಪ್ರಸಿದ್ಧವಾದ ಲಿಂಗದ ಸಾಹಚರ್ಯದಿಂದ ಅನ್ಯತ್ರಪ್ರಸಿದ್ಧವಾಗುತ್ತದೆಂಬ ಪರಿಕಲ್ಪನೆಯನ್ನೇ ಒಪ್ಪುವುದಿಲ್ಲ; ಹೊರತಾಗಿ ಸ್ವಾಭಾವಿಕವಾಗಿ ಯಾವುದು ಲೋಕರೂಢಿಯಿಂದ ಅನ್ಯತ್ರಪ್ರಸಿದ್ಧವಾಗಿರುತ್ತದೋ, ಅದನ್ನು ಮಾತ್ರ ಅನ್ಯತ್ರಪ್ರಸಿದ್ಧವೆಂದು ಹೇಳಬೇಕು. ಸರ್ವಗತತ್ವಾದಿಗಳೆಲ್ಲವೂ ಅನ್ಯತ್ರಪ್ರಸಿದ್ಧವಾದ ಶ್ರುತ್ಯಾದಿಗಳ ಸಾಹಚರ್ಯದಿಂದ ಅನ್ಯತ್ರಪ್ರಸಿದ್ಧವಾಗಿರುವುದಲ್ಲ. ಹೊರತಾಗಿ ಬೇರೆಡೆ

ಪ್ರಸಿದ್ಧವಾಗಿವೆಯೆಂಬುದನ್ನು ತಿಳಿಸಲು ಮಾತ್ರ ಆಯಾ ಅಧಿಕರಣಗಳಲ್ಲಿ ಶ್ರುತ್ಯಾದಿ ಪ್ರಮಾಣಗಳನ್ನು ಹೇಳಿರುತ್ತಾರೆ.

ಪ್ರಕೃತ ದ್ಯುಭ್ವಾದ್ಯಾಯತನತ್ವಾದಿಗಳಲ್ಲಿ ಲೋಕರೂಢಿಯಿಂದ ಸ್ವಾಭಾವಿಕವಾಗಿ ಅನ್ಯತ್ರಪ್ರಸಿದ್ಧತ್ವವು ಇಲ್ಲದ ಕಾರಣ ಅನ್ಯತ್ರಪ್ರಸಿದ್ಧಿಯ ಲಕ್ಷಣ ಬರುವುದಿಲ್ಲವೆಂದು ತಿಳಿಯಬೇಕು. ಹಾಗಾಗಿ ಸರ್ವಗತತ್ವಾದಿಧರ್ಮಗಳು ಅನ್ಯತ್ರಪ್ರಸಿದ್ಧವಾದ ಶಬ್ದಗಳೇ ಆಗುತ್ತವೆ. ದ್ಯುಭ್ವಾದ್ಯಾಯತನತ್ವಗಳು ಉಭಯತ್ರಪ್ರಸಿದ್ಧವೇ ಆಗುತ್ತವೆ ಪರಸ್ಪರ ಸಾಂಕರ್ಯ ದೋಷಕ್ಕೆ ಅವಕಾಶವಿರುವುದಿಲ್ಲ. ಸಮಾಖ್ಯಾಶ್ರುತಿ ಸಮಾನತ್ವವು ಎಲ್ಲಾ ಕಡೆ ಇಲ್ಲವಾದ್ದರಿಂದ ಗ್ರಂಥದಲ್ಲಿ 'ಯಥಾಸಂಭವಮ್' ಎಂದು ಹೇಳಲಾಗಿದೆ.

ಗುರುರಾಜೀಯಮ್ – ನನು ಬ್ರಹ್ಮಣೋऽಲೌಕಿಕಸ್ವರೂಪಸರ್ವಗತತ್ವಪ್ರತಿಪಾದಕಸ್ಯಾನ್ತರ್ಹೃದಯೇऽಣೀಯಾನಿತ್ಯಾದಿವಾಕ್ಯಸ್ಯ ಸತ್ತ್ವೇನ ತಸ್ಯ ನ್ಯಾಯವಿವರಣೇ ಪೂರ್ವಪಕ್ಷ ಉದಾಹರಣೇऽಪಿ ವಸ್ತುತ ಉಭಯತ್ರಪ್ರಸಿದ್ಧತಾ ಸ್ಯಾದಿತ್ಯತ ಆಹ – **ಅಭೇಕೇತಿ** ।। ನನ್ವನ್ಯತ್ರಪ್ರಸಿದ್ಧೇಷ್ವಪಿ ಸರ್ವಗತತ್ವಾದಿಷು ಸಮಾಖ್ಯಾಶ್ರುತ್ಯಾದಿತೌಲ್ಯಸ್ಯೈವೋಕ್ತರೀತ್ಯಾ ಸತ್ತ್ವೇನೋಭಯತ್ರಪ್ರಸಿದ್ಧತಾ ಸ್ಯಾದಿತ್ಯತ ಆಹ – **ಯದ್ವೇತಿ** ।। ಅಸ್ಮಿನ್ಪಕ್ಷೇऽನ್ಯತ್ರಪ್ರಸಿದ್ಧಿಲಕ್ಷಣೇ ಸಮಾಖ್ಯಾಶ್ರುತ್ಯಾದಿತೌಲ್ಯಾಭಾವರೂಪವಿಶೇಷಣಪ್ರಕ್ಷೇಪಃ ಕರ್ತವ್ಯ ಇತೀಮಮೇವಾಸ್ವರಸಂ ಮನಸಿ ನಿಧಾಯ ಪಕ್ಷಾನ್ತರಮಾಹ – **ಯದ್ವೇತಿ** ।।

ಸಾರ

ಈ ಅಧಿಕರಣದಲ್ಲಿ ಸಮನ್ವಯ ಮಾಡುತ್ತಿರುವ 'ಭೂಮಾ' ಮೊದಲಾದ ಶಬ್ದಗಳನ್ನು ಉಭಯತ್ರಪ್ರಸಿದ್ಧವೆಂದು ಹೇಗೆ ಹೇಳುತ್ತೀರಿ? ಇವುಗಳೂ ಸಹ ಅನ್ಯತ್ರಪ್ರಸಿದ್ಧವೇ ಆಗುತ್ತವೆ. ಏಕೆಂದರೆ ಭೂಮಾಧಿಕರಣದಲ್ಲಿ ಮುಖ್ಯಪ್ರಾಣನನ್ನು ಪ್ರತಿಪಾದಿಸುವ 'ಭೂಮಾ' ಎಂಬ ಶಬ್ದವು 'ಪ್ರಾಣೋನೂತ್ಯಮತಿ' ಎಂಬ ನಿರವಕಾಶವಾದ ಉತ್ಕ್ರಮಣವೆಂಬ ಲಿಂಗದಿಂದ ಮುಖ್ಯಪ್ರಾಣನಲ್ಲಿ ಪ್ರಸಿದ್ಧವಾಗಿದೆ. ಅಕ್ಷರಾಧಿಕರಣದಲ್ಲಿ ಸಮನ್ವಯ ಮಾಡಬೇಕಾದ ಅಕ್ಷರಶಬ್ದವೂ ಸಹ ಮತ್ತೊಂದು ಶ್ರುತಿಯಿಂದ ಸಿದ್ಧವಾದ ಚಂದ್ರಾದ್ಯಾಧಾರತ್ವವೆಂಬ ಲಕ್ಷ್ಮೀದೇವಿಯ ಲಿಂಗದಿಂದ ಅನ್ಯತ್ರಪ್ರಸಿದ್ಧವಾಗಿದೆ. ಸದಧಿಕರಣದಲ್ಲಿ ಸಮನ್ವಯ ಮಾಡಬೇಕಾದ 'ಸತ್' ಶಬ್ದವೂ ಸಹ 'ಬಹುಸ್ಯಾಮ್' ಎಂಬ ಶ್ರುತಿಯಿಂದ ಸಿದ್ಧವಾದ ವಿಕಾರ ಎಂಬ ಲಿಂಗದಿಂದ ಅನ್ಯತ್ರಪ್ರಸಿದ್ಧವಾಗಿದೆ. ದಹರಾಧಿಕರಣದಲ್ಲಿ ಸಮನ್ವಯ ಮಾಡುವ 'ಹೃತ್ಪದ್ಮಸ್ಥತ್ವ' ಎಂಬ ಲಿಂಗವೂ ಆಕಾಶಶ್ರುತಿಯಿಂದ ಅನ್ಯತ್ರಪ್ರಸಿದ್ಧವಾಗಿದೆ. ಹೀಗಿರುವಾಗ ಇವುಗಳನ್ನೆಲ್ಲಾ ಉಭಯತ್ರಪ್ರಸಿದ್ಧವೆಂದು ಹೇಗೆ ಹೇಳುತ್ತೀರಿ?

ಈ ಆಕ್ಷೇಪಕ್ಕೆ ಈಗಾಗಲೇ ಹೇಳಿದ ನಾಲ್ಕು ಬಗೆಯ ಸಮಾಧಾನವನ್ನು ತಿಳಿದುಕೊಳ್ಳಬೇಕು.

೧. 'ದ್ಯುಭ್ವಾದ್ಯಾಯತನತ್ವ' ಮೊದಲಾದ ಲಿಂಗಗಳಿಗೆ ಸಮಾನವಾದ ಶ್ರುತಿಯ ಬಲದಿಂದ ಅನ್ಯತ್ರಪ್ರಸಿದ್ಧಿಯೂ ಇರುತ್ತದೆ. ಉಭಯತ್ರಪ್ರಸಿದ್ಧಿಯೂ ಸಹ ಇರುತ್ತದೆ. ಇವರಡರಲ್ಲಿ ಉಭಯತ್ರಪ್ರಸಿದ್ಧತ್ವವನ್ನು ವಿವಕ್ಷಿಸಬೇಕು.

ದ್ಯುಭ್ವಾದ್ಯಧಿಕರಣ (೧-೩-೧)

೨. ಅನ್ಯತ್ರಪ್ರಸಿದ್ಧಿಯು, ಅನ್ಯತ್ರಪ್ರಸಿದ್ಧವಾದ ಮತ್ತೊಂದು ಲಿಂಗವನ್ನು ಅಪೇಕ್ಷಿಸುತ್ತದೆ. ಉಭಯತ್ರಪ್ರಸಿದ್ಧಿಯು ಮತ್ತೊಂದು ಲಿಂಗವನ್ನು ಅಪೇಕ್ಷಿಸದೇ ಸಮಾಖ್ಯಾಶ್ರುತಿಯ ಬಲದಿಂದ ಸ್ವತಃ ಉಭಯತ್ರಪ್ರಸಿದ್ಧವಾಗುತ್ತದೆ. ಸಾಪೇಕ್ಷ ಹಾಗೂ ನಿರಪೇಕ್ಷಗಳಲ್ಲಿ ನಿರಪೇಕ್ಷವಾದದ್ದನ್ನೇ ಆಧರಿಸಬೇಕಾದ್ದರಿಂದ ದ್ಯುಭ್ವಾದ್ಯಾಯತನತ್ವಾದಿಗಳೆಲ್ಲವೂ ಉಭಯತ್ರಪ್ರಸಿದ್ಧವೆಂದು ವಿವಕ್ಷಿಸಬೇಕು.

೩. ದ್ಯುಭ್ವಾದ್ಯಾಯತನತ್ವಾದಿಗಳಿಗೆ ಅನ್ಯತ್ರಪ್ರಸಿದ್ಧತ್ವವನ್ನು ಒಪ್ಪುವುದೇ ಬೇಕಾಗಿಲ್ಲ. ಏಕೆಂದರೆ 'ಶ್ರುತ್ಯಾದಿತೋ ಲೋಕತೋ ವಾऽಪೀತರೇಷು ಪ್ರಸಿದ್ಧತಾ' ಎಂಬ ಅನ್ಯತ್ರಪ್ರಸಿದ್ಧಿಯ ಲಕ್ಷಣದಲ್ಲಿ 'ಶ್ರುತ್ಯಾದಿತೌಲ್ಯಾಭಾವೇ ಸತಿ' ಎಂಬುದನ್ನು ವಿಶೇಷಣವನ್ನಾಗಿ ಹೇಳಿದ್ದರಿಂದ ಸರ್ವಗತತ್ವಾದಿಲಿಂಗಗಳಿಗೆ ಹಾಗೂ ಭೂಮಾದಿ ಶಬ್ದಗಳಿಗೆ ಅನ್ಯತ್ರಪ್ರಸಿದ್ಧಿಯ ಸಾಹಚರ್ಯದಿಂದ ಅನ್ಯತ್ರಪ್ರಸಿದ್ಧತ್ವವಿದ್ದರೂ ಸಹ ಎಲ್ಲಿ ಶ್ರುತ್ಯಾದಿತೌಲ್ಯವು ಇರುವುದಿಲ್ಲವೋ ಅಲ್ಲಿಯೂ ಸಹ ಅನ್ಯತ್ರಪ್ರಸಿದ್ಧಿಯ ಲಕ್ಷಣಬರುತ್ತದೆ. ಭೂಮಾ, ದ್ಯುಭ್ವಾದ್ಯಾಯತನತ್ವ ಮೊದಲಾದೆಡೆ ಸಮಾಖ್ಯಾಶ್ರುತಿಯ ತೌಲ್ಯವಿರುವುದರಿಂದ ಅನ್ಯತ್ರಪ್ರಸಿದ್ಧಿಯ ಲಕ್ಷಣ ಬರುವುದಿಲ್ಲವೆಂದು ತಿಳಿಯಬೇಕು.

೪. ಅನ್ಯತ್ರಪ್ರಸಿದ್ಧವಾದ ಲಿಂಗದ ಸಾಹಚರ್ಯದಿಂದ ಅನ್ಯತ್ರಪ್ರಸಿದ್ಧವಾಗುತ್ತದೆಂಬ ಪರಿಕಲ್ಪನೆಯನ್ನೇ ಒಪ್ಪುವುದಿಲ್ಲ; ಹೊರತಾಗಿ ಸ್ವಾಭಾವಿಕವಾಗಿ ಯಾವುದು ಲೋಕರೂಢಿಯಿಂದ ಅನ್ಯತ್ರಪ್ರಸಿದ್ಧವಾಗಿರುತ್ತದೋ, ಅದನ್ನು ಮಾತ್ರ ಅನ್ಯತ್ರಪ್ರಸಿದ್ಧವೆಂದು ಹೇಳಬೇಕು. ಸರ್ವಗತತ್ವಾದಿಗಳೆಲ್ಲವೂ ಅನ್ಯತ್ರಪ್ರಸಿದ್ಧವಾದ ಶ್ರುತ್ಯಾದಿಗಳ ಸಾಹಚರ್ಯದಿಂದ ಅನ್ಯತ್ರಪ್ರಸಿದ್ಧವಾಗಿರುವುದಲ್ಲ. ಹೊರತಾಗಿ ಬೇರೆಕಡೆ ಪ್ರಸಿದ್ಧವಾಗಿವೆಯೆಂಬುದನ್ನು ತಿಳಿಸಲು ಮಾತ್ರ ಆಯಾ ಅಧಿಕರಣಗಳಲ್ಲಿ ಶ್ರುತ್ಯಾದಿ ಪ್ರಮಾಣಗಳನ್ನು ಹೇಳಿರುತ್ತಾರೆ.

ಪ್ರಕೃತ ದ್ಯುಭ್ವಾದ್ಯಾಯತನತ್ವಾದಿಗಳಲ್ಲಿ ಲೋಕರೂಢಿಯಿಂದ ಸ್ವಾಭಾವಿಕವಾಗಿ ಅನ್ಯತ್ರಪ್ರಸಿದ್ಧತ್ವವು ಇಲ್ಲದ ಕಾರಣ ಅನ್ಯತ್ರಪ್ರಸಿದ್ಧಿಯ ಲಕ್ಷಣ ಬರುವುದಿಲ್ಲವೆಂದು ತಿಳಿಯಬೇಕು. ಹಾಗಾಗಿ ಸರ್ವಗತತ್ವಾದಿಧರ್ಮಗಳು ಅನ್ಯತ್ರಪ್ರಸಿದ್ಧವಾದ ಶಬ್ದಗಳೇ ಆಗುತ್ತವೆ. ದ್ಯುಭ್ವಾದ್ಯಾಯತನತ್ವಗಳು ಉಭಯತ್ರಪ್ರಸಿದ್ಧವೇ ಆಗುತ್ತವೆ ಪರಸ್ಪರ ಸಾಂಕರ್ಯ ದೋಷಕ್ಕೆ ಅವಕಾಶವಿರುವುದಿಲ್ಲ.

• • • • •

ಅಧಿಕರಣ ಸಂಗತಿ ಹಾಗೂ ಸಂಶಯ ಪರಂಪರೆ

तात्पर्यचन्द्रिका

पूर्वपादान्त्योत्तरपादाद्ययोश्चाधिकरणयोर्नावान्तरसङ्गत्यपेक्षेत्युक्तम् । यद्वा पूर्वत्रेवात्राप्यात्मशब्देन सिद्धान्तादातिदेशिक्यवान्तरसङ्गतिः ।

ಅನುವಾದ - ದ್ಯುಭ್ವಾದ್ಯಧಿಕರಣಕ್ಕೆ ಹಿಂದಿನ ಅಧಿಕರಣದಿಂದ ಸಂಗತಿಯನ್ನು ತೋರಿಸಬೇಕಾಗಿಲ್ಲ. ಏಕೆಂದರೆ ಎರಡನೇ ಪಾದದ ಪ್ರಾರಂಭದಲ್ಲಿ ಹೇಳಿದ ಪ್ರಕಾರ ಹಿಂದಿನ ಪಾದದ ಕೊನೆಯ ಅಧಿಕರಣದಿಂದ ಮುಂದಿನ ಪಾದದ ಮೊದಲನೆಯ ಅಧಿಕರಣಕ್ಕೆ ಅವಾಂತರ ಸಂಗತಿಯ ಅಪೇಕ್ಷೆಯು

ಇರುವುದಿಲ್ಲ. ಅಥವಾ ಸಂಗತಿ ಸಹಜವಾಗಿ ಇದ್ದರೆ ಅದನ್ನು ಬಿಡಬೇಕಾಗಿಲ್ಲ. ಆದ್ದರಿಂದ ಹಿಂದಿನ ವೈಶ್ವಾನರಾಧಿಕರಣದಲ್ಲಿ ಆತ್ಮ ಶಬ್ದವನ್ನು ಪ್ರಧಾನ ಹೇತುವನ್ನಾಗಿ ಹೇಳಿದ್ದಾರೆ. ಆ ಆತ್ಮಶಬ್ದವು ವಿಷ್ಣುವಿನಲ್ಲಿ ಕೂಡುವುದಿಲ್ಲವೆಂದು ಆಕ್ಷೇಪಿಸುತ್ತಿರುವುದರಿಂದ 'ಆತಿದೇಶಿಕೀ' ಎಂಬ ಅವಾಂತರ ಸಂಗತಿಯನ್ನು ತಿಳಿಯಬಹುದು.

अत्र ''यस्मिन्द्यौः'' इत्यादिनोक्तं द्युभ्वाद्यायतनत्वं किं रुद्रादेः किं वा विष्णोरिति चिन्ता । तदर्थमात्मशब्दादयः किं गौणाः किं वा मुख्या इति । तदर्थं तेषां मुख्यत्वे बाधकमस्त्युत नेति । तदर्थं जायमानत्वं किं विष्णोर्न युक्तमुत युक्तमिति । तदर्थं किं शरीरग्रहणादिकमेव जननं किं वा प्रादुर्भावोऽपीति ।

ಈ ಅಧಿಕರಣದ ಸಂಶಯಕೋಟಿಗಳು ಹೀಗಿವೆ - 'ಯಸ್ಮಿನ್ದ್ಯೌಃ' ಇತ್ಯಾದಿ ಶ್ರುತಿಯಲ್ಲಿ ಪ್ರತಿಪಾದಿಸಲ್ಪಟ್ಟ ದ್ಯುಭ್ವಾದ್ಯಾಯತನತ್ವವೆಂಬ ಲಿಂಗವು ರುದ್ರಾದಿಗಳಲ್ಲಿ ಬರುತ್ತದೋ? ಅಥವಾ ವಿಷ್ಣುವಿನಲ್ಲೋ? ಈ ಸಂಶಯದ ಪರಿಹಾರಕ್ಕಾಗಿ ಆತ್ಮಶಬ್ದಾದಿಗಳು ಗೌಣವೋ? ಅಥವಾ ಮುಖ್ಯವೋ? ಇದರ ಪರಿಹಾರಕ್ಕಾಗಿ ಆತ್ಮಶಬ್ದಾದಿಗಳು ಮುಖ್ಯವಾದರೆ ಬಾಧಕವಿದೆಯೋ? ಇಲ್ಲವೋ? ಇದರ ಪರಿಹಾರಕ್ಕಾಗಿ ಜಾಯಮಾನತ್ವಲಿಂಗವು ವಿಷ್ಣುವಿನಲ್ಲಿ ಯುಕ್ತವಾಗುತ್ತದೋ? ಇಲ್ಲವೋ? ಇದರ ಪರಿಹಾರಕ್ಕಾಗಿ ಶರೀರ ಸ್ವೀಕಾರವೇ ಜನನವೋ? ಅಥವಾ ಪ್ರಾದುರ್ಭಾವವೂ ಸಹ ಜನನವೆನಿಸುತ್ತದೋ? ಎಂಬ ಸಂಶಯವು ಪರಿಹಾರವಾಗಬೇಕು.

ಪ್ರಕಾಶಃ –

एवं पादान्तर्भावसङ्गत्युक्तिपरटीकां समर्थ्य, इदानीं या तु ''श्रुत्यादिसङ्गतिम् '' इत्यादिकाऽदृश्यत्वनयेनास्य सङ्गत्युक्तिपरभाष्यटीका सा न युक्तैव । तथात्वे तदानन्तर्यप्रसङ्गेन व्यवधानायोगादिति मन्दाशङ्कां व्युदसितुं सा फलोक्तिपरा । सङ्गतिपदं च फलपरम् ।

ವಿವರಣೆ - ಇಲ್ಲಿಯ ತನಕ ದ್ಯುಭ್ವಾದ್ಯಧಿಕರಣವು ಮೂರನೇ ಪಾದದಲ್ಲಿ ಹೇಗೆ ಅಂತರ್ಭಾವ ಹೊಂದುತ್ತದೆ ಎಂಬುದಾಗಿ ಸಂಗತಿಯನ್ನು ಸಮರ್ಥಿಸುವ ಟೀಕೆಯನ್ನು ವ್ಯಾಖ್ಯಾನಿಸಿದರು. ಈಗ 'ಶ್ರುತ್ಯಾದಿ ಸಂಗತಿರ್ಮ' ಇತ್ಯಾದಿಯಾಗಿ ಅದೃಶ್ಯತ್ವಾಧಿಕರಣದಿಂದ ಈ ಅಧಿಕರಣಕ್ಕೆ ಸಂಗತಿಯನ್ನು ಭಾಷ್ಯ ಹಾಗೂ ಟೀಕೆಗಳಲ್ಲಿ ಹೇಳಿರುತ್ತಾರೆ. ಅದು ಅತ್ಯಂತ ಅಯುಕ್ತವಾಗಿದೆ. ಏಕೆಂದರೆ ಅದೃಶ್ಯತ್ವಾಧಿಕರಣದಿಂದ ದ್ಯುಭ್ವಾದ್ಯಧಿಕರಣಕ್ಕೆ ಸಂಗತಿ ಇರುವುದಾದಲ್ಲಿ ಅದೃಶ್ಯತ್ವಾಧಿಕರಣದ ಅನಂತರವೇ ಈ ಅಧಿಕರಣವನ್ನು ಉಲ್ಲೇಖಿಸಬೇಕಿತ್ತು. ಮಧ್ಯದಲ್ಲಿ ಬೇರೆ ಅಧಿಕರಣಗಳ ವ್ಯವಧಾನವು ಇರಬಾರದಿತ್ತು ಎಂಬ ಮಂದಜನರ ಆಶಂಕೆಯನ್ನು ಪರಿಹರಿಸುವುದಕ್ಕಾಗಿ ಹೊರಟಿದ್ದಾರೆ. ಅಂದರೆ ಭಾಷ್ಯ ಹಾಗೂ ಟೀಕೆಗಳಲ್ಲಿ

अदृश्यत्वाधिकरणदिंद संगतियन्नु तोरिसिल्ल. केवल ई अधिकरणद फलवन्नष्टे हेळिरुत्तारेंदु तिळियबेकु. संगति पदक्के फलवेंदु अर्थैसबेकु.

प्रकाशः – आनन्दमयनयोक्तदिशा येनकेनचित्पूर्वेण सङ्गतिरपेक्षिता नत्वव्यवहितेनेत्येतदाशयं वेति भावेन पादान्त्याद्यनययोस्सङ्गतिनियमबुद्धिं शिष्याणां व्युदसितुमुक्तं स्मारयन्नस्ति चेन्न त्याज्येति सङ्गतिं चाह – पूर्वेत्यादिना ।।

अथवा आनंदमयाधिकरणदल्लि हेळिद प्रकार - यावुदादरू हिंदिन अधिकरणदिंद संगतियिद्दरे साकु; अव्यवहितवाद हिंदिन अधिकरणदिंदलेऽ संगतियिरबेकेंदेनू नियमविल्ल. ई अभिप्रायदिंद हिंदिन पादद कॊनेय अधिकरणदिंद मुंदिन पादद मॊदलनेय अधिकरणक्के संगतियन्नु हेळलेबेकेंब नियमबुद्धियु शिष्यरिगे बरबारदेंदु हिंदे हेळिद्दरु. आदन्नु स्मरणेगे तरुत्ता; ऒंदु वेळे हिंदिन पादद अधिकरणदिंद संगतियिद्दरे बिडबारदेंब अभिप्रायवुळ्ळवरागि संगतियन्नु तोरिसुत्तिद्दारे 'पूर्व' इत्यादि वाक्यदिंद.

प्रकाशः – एतेन यदुक्तं श्रुतप्रकाशे 'पूर्वस्मिन्नधिकरणे द्युपृथिव्यादिसम्बन्धिनः परमात्मत्वमुक्तम् । द्युपृथिव्यादिसम्बन्धित्वं परमात्मव्यतिरिक्तस्य दृश्यत इति शङ्कयैतदारम्भ इति सङ्गतिः' इति तन्निरस्तम् ।

हीगे संगतियन्नु तोरिसिद्दरिंद श्रुतप्रकाशदल्लि हेळिद संगतियन्नु निराकरिसिदंतायितु. श्रुतप्रकाशवु संगतियन्नु हीगे तोरिसिदे - हिंदिन अधिकरणदल्लि द्यु, पृथिवी मॊदलादवुगळ संबंधवु परमात्मनिगे हेळलायितु. अंतह द्यु, पृथिवी मॊदलादवुगळ संबंधवु परमात्मनिंगिंत व्यतिरिक्तवादवनल्लि केळिसुत्तिदेयल्लवे ऎंब शंकेयन्नु परिहरिसुवुदक्कागि ई अधिकरणवु हॊरडुत्तिदेयेंदु.

प्रकाशः – पूर्वाधिकरणप्रधानहेतुनैव सङ्गतिसम्भवे सम्बन्धसामान्यमुखेन सङ्गत्युक्त्ययोगादिति ।

इदु तप्पु. हिंदिन अधिकरणदल्लि आत्मशब्दवु हेतुत्वेन प्रसक्तवागिदे. अंतह प्रधान हेतुवाद आत्मशब्दिंदलेऽ संगतियन्नु तोरिसुवुदु स्वरस. नीवु हेळिद द्यु, पृथिव्यादिगळ संबंधवु गुणसूत्रदिंद गौणवागि प्रसक्तवागिदे. मत्तु केवल संबंधसामान्यदिंद संगतियन्नु हेळुत्तिद्दीरि. आद्दरिंद गौणवाद हेतुविन आधारदिंद संगतियन्नु तोरिसुवुदु स्वरसवल्ल.

प्रकाशः – विषयसंशयटीकां व्यनक्ति – अत्रेत्यादिना ।। 'इत्यादिना उक्तम्' इत्यनेन ''तद् द्युभ्वाद्यायतनत्वं विषयः'' इति टीकास्थतच्छब्दार्थो विवृतः ।

ವಿಷಯ ಹಾಗೂ ಸಂಶಯಗಳನ್ನು ನಿರೂಪಿಸುವ ಟೀಕೆಯನ್ನು 'ಅತ್ರ' ಇತ್ಯಾದಿ ವಾಕ್ಯದಿಂದ ವ್ಯಾಖ್ಯಾನಿಸುತ್ತಿದ್ದಾರೆ. 'ಇತ್ಯಾದಿನಾ ಉಕ್ತಮ್' ಎಂಬ ಗ್ರಂಥದಲ್ಲಿರುವ 'ತದ್ ದ್ಯುಭ್ವಾದ್ಯಾಯತನತ್ವಂ ವಿಷಯಃ' ಎಂಬ ಟೀಕೆಯಲ್ಲಿರುವ 'ತತ್' ಶಬ್ದದ ಅರ್ಥವನ್ನು ವಿವರಿಸಿದಂತಾಯಿತು. ಅಂದರೆ 'ಯಸ್ಮಿನ್‌ದ್ಯೌಃ' ಎಂಬ ಶ್ರುತಿಯಲ್ಲಿ ಹೇಳಲ್ಪಟ್ಟ ಎಂಬುದಾಗಿ 'ತತ್' ಶಬ್ದದ ಅರ್ಥವನ್ನು ತಿಳಿಯಬೇಕು.

ಪ್ರಕಾಶಃ – ಆಥರ್ವಣೆ ''ದ್ವೇ ವಿದ್ಯೇ ವೇದಿತವ್ಯೇ ಪರಾ ಚೈವಾಪರಾ ಚ'' ಇತ್ಯುಪಕ್ರಮ್ಯ ಶ್ರೂಯತೇ ''ಯಸ್ಮಿನ್ ದ್ಯೌಃ ಪೃಥಿವೀ ಚಾನ್ತರಿಕ್ಷಮೋತಂ ಮನಸ್ಸಹ ಪ್ರಾಣೈಶ್ಚ ಸರ್ವೈಃ । ತಮೇವೈಕಂ ಜಾನಥ ಆತ್ಮಾನಮನ್ಯಾ ವಾಚೋ ವಿಮುಂಚಥ । ಅಮೃತಸ್ಯೈಷ ಸೇತುಃ । ಅರಾ ಇವ ರಥನಾಭೌ ಸಂಹತಾ ಯತ್ರ ನಾಡ್ಯಃ । ಸ ಏಷೋऽನ್ತಶ್ಚರತೇ ಬಹುಧಾ ಜಾಯಮಾನಃ । ಓಮಿತ್ಯೇವ ಧ್ಯಾಯತ ಆತ್ಮಾನಂ ಸ್ವಸ್ತಿ ವಃ ಪಾರಾಯ ತಮಸಃ ಪರಸ್ತಾತ್ । ಯಸ್ಸರ್ವಜ್ಞಸ್ಸರ್ವವಿತ್'' ಇತ್ಯಾದಿ ।

'ದ್ವೇ ವಿದ್ಯೇ ವೇದಿತವ್ಯೇ ಪರಾ ಚೈವಾಪರಾ ಚ' ಎಂದು ಉಪಕ್ರಮ ಮಾಡಿ 'ಯಸ್ಮಿನ್‌ದ್ಯೌಃ ಪೃಥಿವೀಚಾಂತರಿಕ್ಷಮೋತಂ ಮನಸಸಹ ಪ್ರಾಣೈಶ್ಚ ಸರ್ವೈಃ । ತಮೇವೈಕಂ ಜಾನಥ ಆತ್ಮಾನಮನ್ಯಾ ವಾಚೋ ವಿಮುಂಚಥ । ಅಮೃತಸ್ಯೈಷ ಸೇತುಃ । ಅರಾ ಇವ ರಥನಾಭೌ ಸಂಹತಾ ಯತ್ರ ನಾಡ್ಯಃ । ಸ ಏಷೋऽಂತಶ್ಚರತೇ ಬಹುಧಾ ಜಾಯಮಾನಃ । ಓಮಿತ್ಯೇವ ಧ್ಯಾಯತ ಆತ್ಮಾನಂ ಸ್ವಸ್ತಿ ವಃ ಪಾರಾಯ ತಮಸಃ ಪರಸ್ತಾತ್ । ಯಸ್ಸರ್ವಜ್ಞಸ್ಸರ್ವವಿತ್' ಇತ್ಯಾದಿಯಾಗಿ ಆಥರ್ವಣದಲ್ಲಿ ಕೇಳಿಸುತ್ತಿದೆ.

ಪ್ರಕಾಶಃ – ತತ್ರ ದ್ಯುಶ್ಚಾನ್ತರಿಕ್ಷಮನಃಪ್ರಾಣಾಯತನತ್ವಂ ವಿಷಯ ಇತ್ಯರ್ಥಃ । ಸೂತ್ರೇ ಯಥಾಶ್ರುತಿ ಧರ್ಮಿನಿರ್ದೇಶೇऽಪಿ ಲಿಙ್ಗತಾದ್ಯೋತನಾಯ ಯಥಾಟೀಕಂ ಭಾವಾನ್ತನಿರ್ದೇಶಃ ।

ಈ ವಾಕ್ಯದಲ್ಲಿ ಕೇಳಿಸುತ್ತಿರುವ ದ್ಯುಲೋಕ, ಭೂಲೋಕ, ಅಂತರಿಕ್ಷಲೋಕ, ಮನಸ್ಸು, ಪ್ರಾಣ ಇವುಗಳಿಗೆ ಆಶ್ರಯನಾಗಿರುವವನು ಯಾರು ಎಂದು ಇಲ್ಲಿನ ವಿಷಯ ಎಂದು ಅರ್ಥ. ಸೂತ್ರದಲ್ಲಿ 'ದ್ಯುಭ್ವಾದ್ಯಾಯತನಮ್' ಎಂಬುದಾಗಿ ಧರ್ಮಿಯನ್ನು ನಿರ್ದೇಶ ಮಾಡಿದ್ದರೂ ಸಹ ಇದು ಲಿಂಗಾತ್ಮಕವಾಗಿದೆಯೆಂದು ಸ್ಪಷ್ಟಪಡಿಸುವುದಕ್ಕಾಗಿ ಟೀಕೆಯಲ್ಲಿ 'ದ್ಯುಭ್ವಾದ್ಯಾಯತನತ್ವಮ್' ಎಂದು ಭಾವಪ್ರಧಾನ ನಿರ್ದೇಶ ಮಾಡಿದ್ದಾರೆ. ಆದನ್ನೇ ಪ್ರಕೃತ ಗ್ರಂಥಕಾರರು ಅನುವಾದ ಮಾಡಿದ್ದಾರೆಂದು ತಿಳಿಯಬೇಕು.

ಪ್ರಕಾಶಃ – ರುದ್ರಾದೇರಿತಿ ।। ರುದ್ರಪ್ರಧಾನವಾಯುಜೀವಾನಾಮನ್ಯತಮಸ್ಯೇತ್ಯರ್ಥಃ । ಏತೇನಾನ್ಯೇಷಾಮಿತಿ ಟೀಕಾಸ್ಥಾನ್ಯಶಬ್ದಾರ್ಥೋ ವಿವೃತಃ । ಪ್ರಾಪಕಪ್ರಾಬಲ್ಯಾಶಯೇನ ರುದ್ರಸ್ಯ ಪೂರ್ವೆ ಸ್ವಶಾಬ್ದೇನ ಚ ನಿರ್ದೇಶಃ ।

'ರುದ್ರಾದೇಃ' ಎಂಬ ಪದಕ್ಕೆ ರುದ್ರ, ಪ್ರಕೃತಿ, ವಾಯು, ಜೀವ ಇವರಲ್ಲಿ ಯಾರಾದರೊಬ್ಬರಿಗೆ ಎಂದರ್ಥ. ಹೀಗೆ ವ್ಯಾಖ್ಯಾನಿಸಿದ್ದರಿಂದ ಟೀಕೆಯಲ್ಲಿರುವ 'ಅನ್ಯೇಷಾಮ್' ಎಂಬ ಅನ್ಯಶಬ್ದಕ್ಕೆ ರುದ್ರಾದಿಗಳಲ್ಲಿ ಯಾರಾದರೊಬ್ಬರು ಎಂಬರ್ಥವನ್ನು ಹೇಳಿದಂತಾಯಿತು. ರುದ್ರ, ಪ್ರಕೃತಿ, ವಾಯು, ಜೀವ ಇವರೆಲ್ಲರೂ

ಪೂರ್ವಪಕ್ಷಕ್ಕೆ ವಿಷಯವಾಗಿರುವಾಗ ರುದ್ರನನ್ನೇ ಏಕೆ ಸ್ವೀಕರಿಸಿದ್ದಾರೆ? ಎಂದರೆ ರುದ್ರನು ದ್ಯುಭ್ವಾದ್ಯಾಯತನನಾಗಿದ್ದಾನೆಂಬ ವಿಷಯದಲ್ಲಿ ಅನೇಕ ಪ್ರಾಪಕಗಳಿವೆ. ಆದ್ದರಿಂದ ಉಳಿದ ಪೂರ್ವಪಕ್ಷಗಳಿಗಿಂತ ರುದ್ರನ ವಿಷಯದಲ್ಲಿ ಪ್ರಾಬಲ್ಯವಿರುವ ಪ್ರಯುಕ್ತ ರುದ್ರನನ್ನೇ ಪ್ರಧಾನವಾಗಿ ಸ್ವೀಕರಿಸಿದ್ದಾರೆ.

ಪ್ರಕಾಶಃ – ಟೀಕಾಯಾಂ ಬಹುವಚನೋಕ್ತಾವಪ್ಯೇಕವಚನೋಕ್ತಿಃ ಪೂರ್ವಪಕ್ಷಕೋಟೀನಾಂ ಬಹುತ್ವೇ ಕಥಂ ಲಿಙ್ಗಸ್ಯೋಭಯತ್ರಪ್ರಸಿದ್ಧತ್ವಮ್ । ಕಿನ್ತು ಬಹುಷು ಪ್ರಸಿದ್ಧತ್ವಮೇವ ಸ್ಯಾದಿತಿ ಶಙ್ಕಾನಿರಾಸಾಯ ಪೂರ್ವಪಕ್ಷಕೋಟಿತ್ವೇನ ಬಹ್ವನಾಮೇಕೀಕರಣಾದಿತಿ ಭಾವೇನೇತ್ಯಾಹುಃ ।

ಟೀಕೆಯಲ್ಲಿ 'ಅನ್ಯೇಷಾಮ್' ಎಂಬುದಾಗಿ ಬಹುವಚನವನ್ನು ಹೇಳಿದ್ದಾರೆ. ಆದರೆ ಪ್ರಕೃತ 'ರುದ್ರಾದೇಃ' ಎಂಬ ಗ್ರಂಥದಲ್ಲಿ ಏಕವಚನವನ್ನು ಹೇಳಿದ್ದಾರೆ. ಹೀಗೇಕೆ ವ್ಯತ್ಯಾಸ ಮಾಡಿದ್ದಾರೆ? ಎಂಬ ಪ್ರಶ್ನೆಗೆ ಹೀಗೆ ಉತ್ತರಿಸಬೇಕು. ಪೂರ್ವಪಕ್ಷಕೋಟಿಗಳು ಅನೇಕವಾಗಿರುವುದರಿಂದ ದ್ಯುಭ್ವಾದ್ಯಾಯತನತ್ವವೆಂಬ ಲಿಂಗವು ಉಭಯತ್ರಪ್ರಸಿದ್ಧವೆಂದು ಹೇಗೆ ಹೇಳುವುದು? ಹೊರತಾಗಿ, ಅನೇಕ ಕಡೆ ಪ್ರಸಿದ್ಧವಾಗಿದೆ ಎಂದೇ ಹೇಳಬೇಕಲ್ಲವೇ? ಎಂಬ ಶಂಕೆಯು ಪ್ರಾಪ್ತವಾಗುತ್ತದೆ. ಅದಕ್ಕೋಸ್ಕರ ಸಕಲವಿಧ ಪೂರ್ವಪಕ್ಷಕೋಟಿಗಳನ್ನು ಏಕೀಕರಿಸಿ ಅಂದರೆ ಪೂರ್ವಪಕ್ಷಕೋಟಿತ್ವೇನ ರುದ್ರ, ಪ್ರಕೃತಿ, ವಾಯು, ಜೀವರನ್ನು ಸೇರಿಸಿ ಒಂದು ಗುಂಪನ್ನಾಗಿ ವಿವಕ್ಷಿಸಿ ದ್ಯುಭ್ವಾದ್ಯಾಯತನನಾದವರು ವಿಷ್ಣುವೋ? ಅಥವಾ ಬೇರೆಯವರೋ? ಎಂದು ಆಶಂಕಿಸುತ್ತಿದ್ದಾರೆ. ಹೀಗೆ ವಿವಕ್ಷಿಸಿದಾಗ ದ್ಯುಭ್ವಾದ್ಯಾಯತನತ್ವವು ವಿಷ್ಣುವಿನಲ್ಲಿ ಹಾಗೂ ಬೇರೆಯವರಲ್ಲಿ ಪ್ರಸಿದ್ಧವಾಗಿರುವುದರಿಂದ ಉಭಯತ್ರಪ್ರಸಿದ್ಧವೆನಿಸುತ್ತದೆ.

ಪ್ರಕಾಶಃ – ಅತ್ರ ಯದ್ಯಪಿ ಭಾಷ್ಯೇ ತತ್ವಪ್ರದೀಪಸನ್ಯಾಯರತ್ನಾವಲ್ಯೋಶ್ಚ ಪ್ರಧಾನಕೋಟೇರ್ದುರ್ಭ್ವಾದ್ಯಾಯತನತ್ವಪ್ರಾಪ್ತಿರ್ವಾ ತನ್ನಿರಾಸೋ ವಾ ನ ಭವತಿ ।

ವಾಸ್ತವಿಕವಾಗಿ ಭಾಷ್ಯದಲ್ಲಿ, ತತ್ತ್ವಪ್ರದೀಪದಲ್ಲಿ ಮತ್ತು ಸನ್ಯಾಯರತ್ನಾವಳಿಯಲ್ಲಿ ಪ್ರಧಾನವು ದ್ಯುಭ್ವಾದ್ಯಾಯತನವಾಗಿದೆಯೆಂದು ಪೂರ್ವಪಕ್ಷವನ್ನಾಗಲೀ, ಆದರ ನಿರಾಸವನ್ನಾಗಿ ಮಾಡಿರುವುದಿಲ್ಲ. ಹೀಗಿರುವಾಗ ಪ್ರಕೃತ ಗ್ರಂಥದಲ್ಲಿರುವ ಆದಿಪದದಿಂದ ಪ್ರಧಾನವನ್ನು ಹೇಗೆ ವಿವಕ್ಷಿಸುತ್ತೀರಿ?

ಪ್ರಕಾಶಃ – ತಥಾಪಿ ಟೀಕಾಯಾಂ ''ಸ್ವಶಬ್ದಪರ್ಯಾಯಾತ್ಸಶಬ್ದಾನ್ನ ಪ್ರಕೃತಿಜೀವಾವಭಿಧೀಯೇತೇ'' ಇತಿ ವಿಷ್ಣುತತ್ವನಿರ್ಣಯೋಕ್ತ್ಯನುರೋಧೇನ ಪ್ರಧಾನಕೋಟೇರಪ್ಯುಕ್ತೇಸ್ತದನುರೋಧೇನಾತ್ರಾಪ್ಯಾದಿಪದೇನ ತದುಕ್ತಿಃ ।

ಹೌದು ಆದರೆ, ಆದರೆ ಟೀಕೆಯಲ್ಲಿ ''ಸ್ವಶಬ್ದ ಪರ್ಯಾಯಾತ್ಸಶಬ್ದಾನ್ನ ಪ್ರಕೃತಿಜೀವಾವಭಿಧೀಯೇತೇ' ಎಂಬ ವಾಕ್ಯವಿದೆ. ಸ್ವಶಬ್ದಕ್ಕೆ ಪರ್ಯಾಯಪದವೆನಿಸಿದ .ಆತ್ಮಶಬ್ದದ ಬಲದಿಂದ ಪ್ರಕೃತಿಯಾಗಲೀ, ಜೀವನಾಗಲೀ, ಪ್ರತಿಪಾದ್ಯರಾಗುವುದಿಲ್ಲ ಎಂದರ್ಥ. ಹೀಗೆ ವಿಷ್ಣುತತ್ತ್ವನಿರ್ಣಯದಲ್ಲಿ ಹೇಳಲ್ಪಟ್ಟ ಮಾತನ್ನು ಅನುಸರಿಸಿ ಪ್ರಕೃತಿಯು ದ್ಯುಭ್ವಾದ್ಯಾಯತನವಾಗಿದೆಯೆಂದು ಆಕ್ಷೇಪಿಸಿ ನಿರಾಕರಿಸಿದ್ದಾರೆ. ಆ ಟೀಕೆಯನ್ನು

ಅನುಸರಿಸಿ ಪ್ರಕೃತ ಗ್ರಂಥಕಾರರು ಆದಿಪದದಿಂದ ಪ್ರಧಾನವನ್ನು ವಿವಕ್ಷಿಸುತ್ತಿದ್ದಾರೆ. ಅಂದರೆ ಗ್ರಂಥದಲ್ಲಿ ಪ್ರಧಾನಪಕ್ಷವನ್ನು ಟೀಕೆಯಲ್ಲಿ ಹೇಳ್ಯಾರೆ ಎಂದು ಉಲ್ಲೇಖಿಸಿದ್ದಾರೆ. ಟೀಕಾರಾಯರು ವಿಷ್ಣುತತ್ತ್ವನಿರ್ಣಯದಲ್ಲಿ ಶ್ರೀಮದಾಚಾರ್ಯರು ಹೇಳಿದ್ದಾರೆಂದು ವಿವಕ್ಷಿಸಿದ್ದಾರೆ.

ಪ್ರಕಾಶಃ – ಏವಂ ದ್ಯುಭ್ವಾದ್ಯಾಯತನಂ, ನಾನುಮಾನಂ, ಪ್ರಾಣಭೃಚ್ಚ ಇತಿ ಪ್ರತಿಜ್ಞಾಂಶೋಪಯುಕ್ತಚಿನ್ತಾಮುಕ್ತ್ವಾ ಸ್ವಶಬ್ದಾತ್ ಮುಕ್ತೋಪಸೃಪ್ಯವ್ಯಪದೇಶಾದಿತಿ ಹೇತ್ವಂಶವ್ಯಾವರ್ತ್ಯಶಙ್ಕೋಪಯುಕ್ತಚಿನ್ತಾಮಾಹ – ಆತ್ಮಶಬ್ದಾದಯ ಇತಿ ।।

ಇಲ್ಲಿಯತನಕ ದ್ಯುಭ್ವಾದ್ಯಾಯತನಮ್, ನಾನುಮಾನಮ್, ಪ್ರಾಣಭೃಚ್ಚ ಇತ್ಯಾದಿ ಸೂತ್ರಗಳಲ್ಲಿರುವ ಪ್ರತಿಜ್ಞಾಭಾಗಕ್ಕೆ ಉಪಯುಕ್ತವಾದ ಸಂಶಯಕೋಟಿಗಳನ್ನು ಹೇಳಿದರು. ಪ್ರಕೃತ ಸ್ವಶಬ್ದಾತ್, ಮುಕ್ತೋಪಸೃಪ್ಯವ್ಯಪದೇಶಾತ್ ಇತ್ಯಾದಿ ಹೇತು ಭಾಗದಿಂದ ವ್ಯಾವರ್ತ್ಯವಾದ ಪೂರ್ವಪಕ್ಷಕ್ಕೆ ಉಪಯೋಗವಾಗುವ ಸಂಶಯಕೋಟಿಗಳನ್ನು 'ಆತ್ಮಶಬ್ದಾದಯಃ' ಇತ್ಯಾದಿ ವಾಕ್ಯದಿಂದ ಹೇಳುತ್ತಿದ್ದಾರೆ.

ಪ್ರಕಾಶಃ – ಆದಿಪದೇನಾಮೃತಸೇತ್ತ್ವರೂಪಮುಕ್ತೋಪಸೃಪ್ಯತ್ವಲಿಙ್ಗಂ, ಬ್ರಹ್ಮಪ್ರಕರಣೇ, ತಮೇವೈಕಂ ಜಾನಥ ಆತ್ಮಾನಮಿತ್ಯಾದಿವಾಕ್ಯೋಕ್ತಾಹೇಯತ್ವೋಕ್ತಿಹೇಯತ್ವಾನುಕ್ತ್ಯನ್ಯಹೇಯತ್ವೋಕ್ತಯೋ ವಾ ಲಿಙ್ಗಪ್ರಕರಣಸಮಾಖ್ಯಾ ಏವ ವಾ ಗ್ರಾಹ್ಯಾಃ ।

'ಆತ್ಮಶಬ್ದಾದಯಃ' ಎಂಬಲ್ಲಿರುವ ಆದಿಪದದಿಂದ 'ಅಮೃತಸೇತುತ್ವ', 'ಮುಕ್ತೋಪಸೃಪ್ಯತ್ವ' ಎಂಬಲಿಂಗಗಳನ್ನು, ಬ್ರಹ್ಮಪ್ರಕರಣದಲ್ಲಿ, 'ತಮೇವೈಕಂ ಜಾನಥ ಆತ್ಮಾನಮ್' ಇತ್ಯಾದಿ ವಾಕ್ಯದಲ್ಲಿ ಹೇಳಲ್ಪಟ್ಟ ಅಹೇಯತ್ವ ವಚನ ಅಥವಾ ಹೇಯತ್ವದ ಅನುಕ್ತಿ, ಅನ್ಯ ಹೇಯತ್ವ ಉಕ್ತಿಗಳನ್ನು ಸ್ವೀಕರಿಸಬಹುದು, ಅಥವಾ ಲಿಂಗ, ಪ್ರಕರಣ, ಸಮಾಖ್ಯಾಪ್ರಮಾಣಗಳನ್ನೇ ಸ್ವೀಕರಿಸಬಹುದು

ಪ್ರಕಾಶಃ – ಅತಶ್ಚಬ್ದಾದಿತಿ ಹೇತ್ವಂಶವ್ಯಾವರ್ತ್ಯಶಙ್ಕೋಪಯುಕ್ತಚಿನ್ತಾಮಾಹ – ತದರ್ಥೆ ಬಾಧಕಮಸ್ತ್ವಿತ ನೇತೀತ್ಯಾದಿನಾ ।।

'ಅತಶ್ಚಬ್ದಾತ್' ಎಂಬ ಹೇತುವಿನ ಭಾಗದಿಂದ ಪರಿಹಾರವಾಗುವ ಪೂರ್ವಪಕ್ಷಕ್ಕೆ ಉಪಯುಕ್ತವಾಗುವ ಸಂಶಯವನ್ನು 'ತದರ್ಥಂ ಬಾಧಕಮಸ್ತಿ ಉತ ನ' ಇತ್ಯಾದಿಯಾಗಿ ತೋರಿಸಿದ್ದಾರೆ.

ಪ್ರಕಾಶಃ – ಜಾಯಮಾನತ್ವಮಿತಿ ।। ಅತ್ರ ಯದ್ಯಪಿ 'ರುದ್ರೋ ವಾವ ಲೋಕಾಧಾರ' ಇತ್ಯಾದಿಸಮಾಖ್ಯಾ ವಿಷ್ಣೌ ನ ಯುಕ್ತಾऽಥ ಯುಕ್ತೇತಿ । ತದರ್ಥೆ ಸಮಾಖ್ಯಾಗತರುದ್ರಾದಿಶಬ್ದಾ ನಿರವಕಾಶಾ ಉತ ವಿಷ್ಣೌ ಸಾವಕಾಶಾ ಇತ್ಯಾದಿಚಿನ್ತಾಪ್ಯುಪದರ್ಶನೀಯಾ ।

ಸಂಶಯ ಕೋಟಿಗಳನ್ನು ತೋರಿಸುವಾಗ ಜಾಯಮಾನತ್ವವು ವಿಷ್ಣುವಿನಲ್ಲಿ ಅಯುಕ್ತವಾಗುತ್ತದೋ? ಯುಕ್ತವಾಗುತ್ತದೋ? ಎಂದು ಹೇಳಿದ್ದಾರೆ. ವಾಸ್ತವಿಕವಾಗಿ 'ರುದ್ರೋ ವಾವ ಲೋಕಾಧಾರಃ' ಇತ್ಯಾದಿ ಸಮಾಖ್ಯಾಪ್ರಮಾಣವು ವಿಷ್ಣುವಿನಲ್ಲಿ ಅಯುಕ್ತವಾಗುತ್ತದೋ? ಅಥವಾ ಯುಕ್ತವಾಗುತ್ತದೋ? ಆದಕ್ಕೋಸ್ಕರ ಸಮಾಖ್ಯಾಪ್ರಮಾಣದಲ್ಲಿರುವ ರುದ್ರಾದಿ ಶಬ್ದಗಳು ನಿರವಕಾಶವಾಗಿವೆಯೋ? ಅಥವಾ

ಪೂರ್ವಪಕ್ಷಕ್ಕೆ ವಿಷಯವಾಗಿರುವಾಗ ರುದ್ರನನ್ನೇ ಏಕೆ ಸ್ವೀಕರಿಸಿದ್ದಾರೆ? ಎಂದರೆ ರುದ್ರನು ದ್ಯುಭ್ವಾದ್ಯಾಯತನನಾಗಿದ್ದಾನೆಂಬ ವಿಷಯದಲ್ಲಿ ಅನೇಕ ಪ್ರಾಪಕಗಳಿವೆ. ಆದ್ದರಿಂದ ಉಳಿದ ಪೂರ್ವಪಕ್ಷಗಳಿಗಿಂತ ರುದ್ರನ ವಿಷಯದಲ್ಲಿ ಪ್ರಾಬಲ್ಯವಿರುವ ಪ್ರಯುಕ್ತ ರುದ್ರನನ್ನೇ ಪ್ರಧಾನವಾಗಿ ಸ್ವೀಕರಿಸಿದ್ದಾರೆ.

ಪ್ರಕಾಶಃ – ಟೀಕಾಯಾಂ ಬಹ್ವವಚನೋಕ್ತಾವಪ್ಯೇಕವಚನೋಕ್ತಿಃ ಪೂರ್ವಪಕ್ಷಕೋಟೀನಾಂ ಬಹುತ್ವೇ ಕಥಂ ಲಿಙ್ಗಸ್ಯೋಭಯತ್ರಪ್ರಸಿದ್ಧತ್ವಮ್ । ಕಿನ್ತು ಬಹುಷು ಪ್ರಸಿದ್ಧತ್ವಮೇವ ಸ್ಯಾದಿತಿ ಶಙ್ಕಾನಿರಾಸಾಯ ಪೂರ್ವಪಕ್ಷಕೋಟಿತ್ವೇನ ಬಹ್ವನಾಮೈಕೀಕರಣಾದಿತಿ ಭಾವೇನೇತ್ಯಾಹುಃ ।

ಟೀಕೆಯಲ್ಲಿ 'ಅನ್ಯೇಷಾಮ್' ಎಂಬುದಾಗಿ ಬಹುವಚನವನ್ನು ಹೇಳಿದ್ದಾರೆ. ಆದರೆ ಪ್ರಕೃತ 'ರುದ್ರಾದೇಃ' ಎಂಬ ಗ್ರಂಥದಲ್ಲಿ ಏಕವಚನವನ್ನು ಹೇಳಿದ್ದಾರೆ. ಹೀಗೇಕೆ ವ್ಯತ್ಯಾಸ ಮಾಡಿದ್ದಾರೆ? ಎಂಬ ಪ್ರಶ್ನೆಗೆ ಹೀಗೆ ಉತ್ತರಿಸಬೇಕು. ಪೂರ್ವಪಕ್ಷಕೋಟಿಗಳು ಅನೇಕವಾಗಿರುವುದರಿಂದ ದ್ಯುಭ್ವಾದ್ಯಾಯತನತ್ವವೆಂಬ ಲಿಂಗವು ಉಭಯತ್ರಪ್ರಸಿದ್ಧವೆಂದು ಹೇಗೆ ಹೇಳುವುದು? ಹೊರತಾಗಿ, ಅನೇಕ ಕಡೆ ಪ್ರಸಿದ್ಧವಾಗಿದೆ ಎಂದೇ ಹೇಳಬೇಕಲ್ಲವೇ? ಎಂಬ ಶಂಕೆಯು ಪ್ರಾಪ್ತವಾಗುತ್ತದೆ. ಅದಕ್ಕೋಸ್ಕರ ಸಕಲವಿಧ ಪೂರ್ವಪಕ್ಷಕೋಟಿಗಳನ್ನು ಏಕೀಕರಿಸಿ ಅಂದರೆ ಪೂರ್ವಪಕ್ಷಕೋಟಿತ್ವೇನ ರುದ್ರ, ಪ್ರಕೃತಿ, ವಾಯು, ಜೀವರನ್ನು ಸೇರಿಸಿ ಒಂದು ಗುಂಪನ್ನಾಗಿ ವಿವಕ್ಷಿಸಿ ದ್ಯುಭ್ವಾದ್ಯಾಯತನನಾದವರು ವಿಷ್ಣುವೋ? ಅಥವಾ ಬೇರೆಯವರೋ? ಎಂದು ಆಶಂಕಿಸುತ್ತಿದ್ದಾರೆ. ಹೀಗೆ ವಿವಕ್ಷಿಸಿದಾಗ ದ್ಯುಭ್ವಾದ್ಯಾಯತನತ್ವವು ವಿಷ್ಣುವಿನಲ್ಲಿ ಹಾಗೂ ಬೇರೆಯವರಲ್ಲಿ ಪ್ರಸಿದ್ಧವಾಗಿರುವುದರಿಂದ ಉಭಯತ್ರಪ್ರಸಿದ್ಧವೆನಿಸುತ್ತದೆ.

ಪ್ರಕಾಶಃ – ಅತ್ರ ಯದ್ಯಪಿ ಭಾಷ್ಯೇ ತತ್ವಪ್ರದೀಪಸನ್ಯಾಯರತ್ನಾವಲ್ಯೋಶ್ಚ ಪ್ರಧಾನಕೋಟೇರ್ದ್ಯುಭ್ವಾದ್ಯಾಯತನತ್ವಪ್ರಾಪ್ತಿರ್ವಾ ತನ್ನಿರಾಸೋ ವಾ ನ ಭವತಿ ।

ವಾಸ್ತವಿಕವಾಗಿ ಭಾಷ್ಯದಲ್ಲಿ, ತತ್ತ್ವಪ್ರದೀಪದಲ್ಲಿ ಮತ್ತು ಸನ್ನ್ಯಾಯರತ್ನಾವಳಿಯಲ್ಲಿ ಪ್ರಧಾನವು ದ್ಯುಭ್ವಾದ್ಯಾಯತನವಾಗಿದೆಯಂದು ಪೂರ್ವಪಕ್ಷವನ್ನಾಗಲೀ, ಅದರ ನಿರಾಸವನ್ನಾಗಿ ಮಾಡಿರುವುದಿಲ್ಲ. ಹೀಗಿರುವಾಗ ಪ್ರಕೃತ ಗ್ರಂಥದಲ್ಲಿರುವ ಆದಿಪದದಿಂದ ಪ್ರಧಾನವನ್ನು ಹೇಗೆ ವಿವಕ್ಷಿಸುತ್ತೀರಿ?

ಪ್ರಕಾಶಃ – ತಥಾಪಿ ಟೀಕಾಯಾಂ ''ಸ್ವಶಬ್ದಪರ್ಯಾಯಾತ್ಮಶಬ್ದಾನ್ನ ಪ್ರಕೃತಿಜೀವಾವಭಿಧೀಯೇತೇ'' ಇತಿ ವಿಷ್ಣುತತ್ವನಿರ್ಣಯೋಕ್ತ್ಯನುರೋಧೇನ ಪ್ರಧಾನಕೋಟೇರಪ್ಯುಕ್ತೇಸ್ತದನುರೋಧೇನಾತ್ರಾಪ್ಯಾದಿಪದೇನ ತದುಕ್ತಿಃ ।

ಹೌದು ಆದರೆ, ಆದರೆ ಟೀಕೆಯಲ್ಲಿ ''ಸ್ವಶಬ್ದ ಪರ್ಯಾಯಾತ್ಮಶಬ್ದಾನ್ನ ಪ್ರಕೃತಿಜೀವಾವಭಿಧೀಯೇತೇ' ಎಂಬ ವಾಕ್ಯವಿದೆ. ಸ್ವಶಬ್ದಕ್ಕೆ ಪರ್ಯಾಯಪದವೆನಿಸಿದ .ಆತ್ಮಶಬ್ದದ ಬಲದಿಂದ ಪ್ರಕೃತಿಯಾಗಲೀ, ಜೀವನಾಗಲೀ, ಪ್ರತಿಪಾದ್ಯರಾಗುವುದಿಲ್ಲ ಎಂದರ್ಥ. ಹೀಗೆ ವಿಷ್ಣುತತ್ತ್ವನಿರ್ಣಯದಲ್ಲಿ ಹೇಳಲ್ಪಟ್ಟ ಮಾತನ್ನು ಅನುಸರಿಸಿ ಪ್ರಕೃತಿಯು ದ್ಯುಭ್ವಾದ್ಯಾಯತನವಾಗಿದೆಯೆಂದು ಆಕ್ಷೇಪಿಸಿ ನಿರಾಕರಿಸಿದ್ದಾರೆ. ಆ ಟೀಕೆಯನ್ನು

ಅನುಸರಿಸಿ ಪ್ರಕೃತ ಗ್ರಂಥಕಾರರು ಆದಿಪದದಿಂದ ಪ್ರಧಾನವನ್ನು ವಿವಕ್ಷಿಸುತ್ತಿದ್ದಾರೆ. ಅಂದರೆ ಗ್ರಂಥದಲ್ಲಿ ಪ್ರಧಾನಪಕ್ಷವನ್ನು ಟೀಕೆಯಲ್ಲಿ ಹೇಳಿದ್ದಾರೆ ಎಂದು ಉಲ್ಲೇಖಿಸಿದ್ದಾರೆ. ಟೀಕಾರಾಯರು ವಿಷ್ಣುತತ್ತ್ವನಿರ್ಣಯದಲ್ಲಿ ಶ್ರೀಮದಾಚಾರ್ಯರು ಹೇಳಿದ್ದಾರೆಂದು ವಿವಕ್ಷಿಸಿದ್ದಾರೆ.

ಪ್ರಕಾಶಃ – ಏವಂ ದ್ಯುಭ್ವಾದ್ಯಾಯತನಂ, ನಾನುಮಾನಂ, ಪ್ರಾಣಭೃಚ್ಚೇತಿ ಪ್ರತಿಜ್ಞಾಂಶೋಪಯುಕ್ತಚಿನ್ತಾಮುಕ್ತ್ವಾ ಸ್ವಶಬ್ದಾತ್ ಮುಕ್ತೋಪಸೃಪ್ಯವ್ಯಪದೇಶಾದಿತಿ ಹೇತ್ವಂಶಾವ್ಯಾವರ್ತ್ಯಶಙ್ಕೋಪಯುಕ್ತಚಿನ್ತಾಮಾಹ – ಆತ್ಮಶಬ್ದಾದಯ ಇತಿ ।।

ಇಲ್ಲಿಯತನಕ ದ್ಯುಭ್ವಾದ್ಯಾಯತನಮ್, ನಾನುಮಾನಮ್, ಪ್ರಾಣಭೃಚ್ಚ ಇತ್ಯಾದಿ ಸೂತ್ರಗಳಲ್ಲಿರುವ ಪ್ರತಿಜ್ಞಾಭಾಗಕ್ಕೆ ಉಪಯುಕ್ತವಾದ ಸಂಶಯಕೋಟಿಗಳನ್ನು ಹೇಳಿದರು. ಪ್ರಕೃತ ಸ್ವಶಬ್ದಾತ್, ಮುಕ್ತೋಪಸೃಪ್ಯವ್ಯಪದೇಶಾತ್ ಇತ್ಯಾದಿ ಹೇತು ಭಾಗದಿಂದ ವ್ಯಾವರ್ತ್ಯವಾದ ಪೂರ್ವಪಕ್ಷಕ್ಕೆ ಉಪಯೋಗವಾಗುವ ಸಂಶಯಕೋಟಿಗಳನ್ನು 'ಆತ್ಮಶಬ್ದಾದಯಃ' ಇತ್ಯಾದಿ ವಾಕ್ಯದಿಂದ ಹೇಳುತ್ತಿದ್ದಾರೆ.

ಪ್ರಕಾಶಃ – ಆದಿಪದೇನಾಮೃತಸೇತ್ವರೂಪಮುಕ್ತೋಪಸೃಪ್ಯತ್ವಲಿಙ್ಗಂ, ಬ್ರಹ್ಮಪ್ರಕರಣೇ, ತಮೇವೈಕಂ ಜಾನಥ ಆತ್ಮಾನಮಿತ್ಯಾದಿವಾಕ್ಯೋಕ್ತಾಹೇಯತ್ವೋಕ್ತಿಹೇಯತ್ವಾನುಕ್ತ್ಯನ್ಯಹೇಯತ್ವೋಕ್ತಯೋ ವಾ ಲಿಙ್ಗಪ್ರಕರಣಸಮಾಖ್ಯಾ ಏವ ವಾ ಗ್ರಾಹ್ಯಾಃ ।

'ಆತ್ಮಶಬ್ದಾದಯಃ' ಎಂಬಲ್ಲಿರುವ ಆದಿಪದದಿಂದ 'ಅಮೃತಸೇತುತ್ವ', 'ಮುಕ್ತೋಪಸೃಪ್ಯತ್ವ' ಎಂಬಲಿಂಗಗಳನ್ನು, ಬ್ರಹ್ಮಪ್ರಕರಣದಲ್ಲಿ, 'ತಮೇವೈಕಂ ಜಾನಥ ಆತ್ಮಾನಮ್' ಇತ್ಯಾದಿ ವಾಕ್ಯದಲ್ಲಿ ಹೇಳಲ್ಪಟ್ಟ ಅಹೇಯತ್ವ ವಚನ ಅಥವಾ ಹೇಯತ್ವದ ಅನುಕ್ತಿ, ಅನ್ಯ ಹೇಯತ್ವ ಉಕ್ತಿಗಳನ್ನು ಸ್ವೀಕರಿಸಬಹುದು, ಅಥವಾ ಲಿಂಗ, ಪ್ರಕರಣ, ಸಮಾಖ್ಯಾಪ್ರಮಾಣಗಳನ್ನೇ ಸ್ವೀಕರಿಸಬಹುದು

ಪ್ರಕಾಶಃ – ಅತಶ್ಚಬ್ದಾದಿತಿ ಹೇತ್ವಂಶಾವ್ಯಾವರ್ತ್ಯಶಙ್ಕೋಪಯುಕ್ತಚಿನ್ತಾಮಾಹ – ತದರ್ಥಂ ಬಾಧಕಮಸ್ತ್ಯುತ ನೇತೀತ್ಯಾದಿನಾ ।।

'ಅತಶ್ಚಬ್ದಾತ್' ಎಂಬ ಹೇತುವಿನ ಭಾಗದಿಂದ ಪರಿಹಾರವಾಗುವ ಪೂರ್ವಪಕ್ಷಕ್ಕೆ ಉಪಯುಕ್ತವಾಗುವ ಸಂಶಯವನ್ನು 'ತದರ್ಥಂ ಬಾಧಕಮಸ್ತಿ ಉತ ನ' ಇತ್ಯಾದಿಯಾಗಿ ತೋರಿಸಿದ್ದಾರೆ.

ಪ್ರಕಾಶಃ – ಜಾಯಮಾನತ್ವಮಿತಿ ।। ಅತ್ರ ಯದ್ಯಪಿ 'ರುದ್ರೋ ವಾವ ಲೋಕಾಧಾರ' ಇತ್ಯಾದಿಸಮಾಖ್ಯಾ ವಿಷ್ಣೌ ನ ಯುಕ್ತಾऽಥ ಯುಕ್ತೇತಿ । ತದರ್ಥೆ ಸಮಾಖ್ಯಾಗತರುದ್ರಾದಿಶಬ್ದಾ ನಿರವಕಾಶಾ ಉತ ವಿಷ್ಣೌ ಸಾವಕಾಶಾ ಇತ್ಯಾದಿಚಿನ್ತಾಪ್ಯುಪದರ್ಶನೀಯಾ ।

ಸಂಶಯ ಕೋಟಿಗಳನ್ನು ತೋರಿಸುವಾಗ ಜಾಯಮಾನತ್ವವು ವಿಷ್ಣುವಿನಲ್ಲಿ ಅಯುಕ್ತವಾಗುತ್ತದೋ? ಯುಕ್ತವಾಗುತ್ತದೋ? ಎಂದು ಹೇಳಿದ್ದಾರೆ. ವಾಸ್ತವಿಕವಾಗಿ 'ರುದ್ರೋ ವಾವ ಲೋಕಾಧಾರಃ' ಇತ್ಯಾದಿ ಸಮಾಖ್ಯಾಪ್ರಮಾಣವು ವಿಷ್ಣುವಿನಲ್ಲಿ ಅಯುಕ್ತವಾಗುತ್ತದೋ? ಅಥವಾ ಯುಕ್ತವಾಗುತ್ತದೋ? ಅದಕ್ಕೊಸ್ಕರ ಸಮಾಖ್ಯಾಪ್ರಮಾಣದಲ್ಲಿರುವ ರುದ್ರಾದಿ ಶಬ್ದಗಳು ನಿರವಕಾಶವಾಗಿವೆಯೋ? ಅಥವಾ

ವಿಷ್ಣುವಿನಲ್ಲಿ ಸಾವಕಾಶವಾಗಿವೆಯೋ? ಇತ್ಯಾದಿ ಕ್ರಮದಲ್ಲಿ ಸಂಶಯಕೋಟಿಗಳನ್ನು ತೋರಿಸಬೇಕಿತ್ತು. ಜಾಯಮಾನತ್ವದ ಬಗ್ಗೆ ಸಂಶಯವನ್ನು ತೋರಿಸುವ ಅವಶ್ಯಕತೆವಿರಲಿಲ್ಲವೆಂಬ ಪ್ರಶ್ನೆ ಬರುತ್ತದೆ.

ಪ್ರಕಾಶಃ – ತಥಾಪಿ ರುದ್ರಸಮಾಖ್ಯಾಯಾಷ್ಟೀಕೋಕ್ತರೀತ್ಯಾ ವಕ್ಷ್ಯಮಾಣದಿಶಾ ಚ ಬಲವತ್ತ್ವೇऽಪಿ ಇತರಸಮಾಖ್ಯಯೋರ್ವಿಷ್ಣುಸಮಾಖ್ಯಾಪ್ರತಿರೋಧೇನ ಜಾಯಮಾನತ್ವಲಿಙ್ಗೇನೈವ ತಯೋರುಜೀವನಾದ್ವಾ ಪ್ರಾಕರಣಿಕಬಾಧಕೋಪದರ್ಶನಂ ಕಾರ್ಯಮಿತ್ಯಾಶಯಾದ್ವಾ ಉಪಲಕ್ಷಣತ್ವಾದ್ವಾ ಜಾಯಮಾನತ್ವಕೋಟಿಕ-ಚಿನ್ತೈವೋಕ್ತಾ ।

ಆದರೆ ರುದ್ರನ ವಿಷಯದಲ್ಲಿರುವ ಸಮಾಖ್ಯಾಪ್ರಮಾಣವು ಟೀಕೆಯಲ್ಲಿ ಹೇಳಿದಂತೆ ಗ್ರಂಥಕಾರರೇ ಮುಂದೆ ಹೇಳುವಂತೆ ಅತ್ಯಂತ ಬಲಿಷ್ಠವಾಗಿದೆ. ಆದರೆ ಉಳಿದ ಪ್ರಕೃತಿ, ಜೀವಾದಿಗಳಲ್ಲಿರುವ ಸಮಾಖ್ಯಾಪ್ರಮಾಣಕ್ಕೆ ಹಾಗೇ ಪ್ರಾಬಲ್ಯವಿರುವುದಿಲ್ಲ ವಿಷ್ಣುವಿನ ವಿಷಯದಲ್ಲೂ ಸಮಾಖ್ಯಾಪ್ರಮಾಣವಿದೆ. ಜೀವಾದಿಗಳಲ್ಲಿಯೂ ಸಹ ಸಮಾಖ್ಯಾಪ್ರಮಾಣವಿದೆಯೆಂದಂತಾಗಿ ವಿಷ್ಣುವಿನ ಸಮಾಖ್ಯಾಪ್ರಮಾಣದಿಂದ ಪ್ರತಿರುದ್ಧವಾಗುತ್ತವೆ. ಆವಾಗ ಜಾಯಮಾನತ್ವಲಿಂಗದಿಂದಲೇ ಜೀವನ ವಿಷಯದಲ್ಲಿರುವ ಸಮಾಖ್ಯಾಪ್ರಮಾಣಗಳನ್ನು ಉಜ್ಜೀವನಗೊಳಿಸಬೇಕು. ಈ ದೃಷ್ಟಿಯಿಂದ ಗ್ರಂಥಕಾರರು ಜಾಯಮಾನತ್ವ ವಿಷಯದಲ್ಲಿರುವ ಸಂಶಯಕೋಟಿಯನ್ನೇ ತೋರಿಸಿದ್ದಾರೆ. ಅಥವಾ ಜಾಯಮಾನತ್ವ ಲಿಂಗವು ಪ್ರಕರಣದಲ್ಲಿಯೇ ಕೇಳಿಸುತ್ತಿದೆ. ಪ್ರಕರಣದಲ್ಲಿರುವ ಜಾಯಮಾನತ್ವಲಿಂಗದಿಂದ ಬಾಧಕವನ್ನು ತೋರಿಸುವುದು ಅತ್ಯಂತ ಯುಕ್ತವೆಂಬ ಅಭಿಪ್ರಾಯದಿಂದ ಜಾಯಮಾನತ್ವಸಂಶಯಕೋಟಿಯನ್ನೇ ತೋರಿಸಿರಬಹುದು. ಅಥವಾ ನೀವು ಹೇಳಿದ ಸಮಾಖ್ಯಾಪ್ರಮಾಣ ವಿಷಯದಲ್ಲಿರುವ ಸಂಶಯಕೋಟಿಗಳನ್ನು ಜಾಯಮಾನತ್ವ ಕೋಟಿಕವಾದ ಚಿಂತೆಯಿಂದ ಉಪಲಕ್ಷಣವನ್ನಾಗಿ ಸ್ವೀಕರಿಸಬಹುದು. ಹೀಗೆ ಮೂರುಬಗೆಯ ವಿವಕ್ಷೆಯಿರುವುದರಿಂದ ಗ್ರಂಥಕಾರರ ಧಾಟಿ ಸಾಧುವಾಗಿದೆ.

ಪ್ರಕಾಶಃ – ಯದಿ ಶರೀರಗ್ರಹಣಮೇವ ಜನನಂ ತಸ್ಯಾಶರೀರೇ ವಿಷ್ಣಾವಯೋಗಾದ್ಬಾಧಕಾದಾತ್ಮ-ಶಬ್ದಾದೀನಾಂ ಗೌಣತ್ವಾತ್ಸಮಾಖ್ಯಾದಿಬಲೇನ ರುದ್ರಾದಿರೇವೇತಿ ಪೂರ್ವಪಕ್ಷೇ ಫಲಮ್ । ಯದಿ ವಿಪರೀತಂ ತದಾ ವಿಷ್ಣುರಿತಿ ಸಿದ್ಧಾನ್ತೇ ಫಲಮಿತಿ ಸ್ಪಷ್ಟಃ ಫಲಫಲಿಭಾವ ಇತಿ ಭಾವಃ ।

ಶರೀರವನ್ನು ಸ್ವೀಕರಿಸುವಿಕೆಯೇ ಜನನವೆನಿಸುತ್ತದೆ. ಶರೀರವಿಲ್ಲದ ಕಾರಣ ವಿಷ್ಣುವಿನಲ್ಲಿ ಜನನವು ಕೂಡುವುದಿಲ್ಲವಾದ್ದರಿಂದ ಬಾಧಕವಿರುವ ಪ್ರಯುಕ್ತ ಆತ್ಮಶಬ್ದಾದಿಗಳಿಗೆ ಗೌಣಾರ್ಥವನ್ನೇ ಮಾಡಬೇಕು. ಆದ್ದರಿಂದ ಸಮಾಖ್ಯಾದಿ ಪ್ರಮಾಣಗಳ ಆಧಾರದಿಂದ ರುದ್ರಾದಿಗಳೇ ದ್ಯುಭ್ವಾದ್ಯಾಯತನರಾಗುತ್ತಾರೆಂಬುದು ಪೂರ್ವಪಕ್ಷದ ಗುರಿ.

ಒಂದು ವೇಳೆ ಶರೀರವನ್ನು ಸ್ವೀಕರಿಸುವಿಕೆಯೇ ಜನನವಲ್ಲ. ಪ್ರಾದುರ್ಭಾವಾದಿಗಳೂ ಸಹ ವಿಷ್ಣುವಿಗೆ ಜನನವೆನಿಸುತ್ತದೆಂದು ಹೇಳುವುದಾದರೆ ಆವಾಗ ಯಾವುದೇ ಬಾಧಕಗಳಿಲ್ಲದ ಕಾರಣ ಆತ್ಮಶಬ್ದಾದಿಗಳಿಗೆ ಮುಖ್ಯಾರ್ಥವನ್ನೇ ಸ್ವೀಕರಿಸಬೇಕು. ಸಮಾಖ್ಯಾಪ್ರಮಾಣಗಳು ಆತ್ಮಶಬ್ದಾದಿಗಳಿಂದ ಬಾಧಿತವಾಗುತ್ತವೆ. ಆದ್ದರಿಂದ ವಿಷ್ಣುವೇ ದ್ಯುಭ್ವಾದ್ಯಾಯತನನಾಗುತ್ತಾನೆಂಬುದು ಸಿದ್ಧಾಂತದ ಗುರಿ. ಹೀಗೆ ಫಲ-ಫಲಿಭಾವವನ್ನು ತಿಳಿಯಬೇಕು.

ಪರಿಪೂರ್ಣಚಂದ್ರಿಕಾ

ಪ್ರಕಾಶಃ – यद्यपि टीकायां जायमानत्वबाधकेनात्मशब्दस्यैवामुख्यत्वमाशङ्कितम् । नतु मुक्तोपसृप्यत्वादेः । प्रत्युत तेनैवात्मशब्दस्य मुख्यत्वमुक्तं मुक्तोपसृप्यसूत्रे ।

ವಾಸ್ತವಿಕವಾಗಿ ಟೀಕೆಯಲ್ಲಿ ಜಾಯಮಾನತ್ವವೆಂಬ ಬಾಧಕವಿರುವುದರಿಂದ ಆತ್ಮಶಬ್ದಕ್ಕೇನೇ ಮುಖ್ಯಾರ್ಥವನ್ನು ಮಾಡಬೇಕೆಂದು ಹೇಳಿರುತ್ತಾರೆ ಹೊರತು, ಮುಖ್ಯೋಪಸೃಪ್ಯತ್ವವನ್ನು ಗೌಣವನ್ನಾಗಿ ತಿಳಿಯಬೇಕೆಂದು ಹೇಳಿರುವುದಿಲ್ಲ. ಆದರೆ ಗ್ರಂಥಕಾರರು ತದರ್ಥಚಿಂತೆಯನ್ನು ತೋರಿಸುವಾಗ ಆತ್ಮಶಬ್ದಾದಿಗಳು ಗೌಣವೋ, ಮುಖ್ಯವೋ ಎಂದು ವಿಕಲ್ಪಿಸಿ, ಮುಖ್ಯವಾಗುವುದಾದರೆ ಬಾಧಕವಿದೆಯೋ, ಇಲ್ಲವೋ ಎಂದು ವಿಕಲ್ಪಿಸಿ, ಮುಂದೆ ಜಾಯಮಾನತ್ವ ಲಿಂಗವು ವಿಷ್ಣುವಿನಲ್ಲಿ ಅಯುಕ್ತವೋ, ಯುಕ್ತವೋ ಎಂದು ಹೇಳಿದ್ದಾರೆ. ಇದರಿಂದ ಜಾಯಮಾನತ್ವಲಿಂಗವು ಮುಕ್ತೋಪಸೃಪ್ಯತ್ವಲಿಂಗವನ್ನೂ ಸಹ ಗೌಣವನ್ನಾಗಿ ಮಾಡುತ್ತದೆಂದು ಹೇಳಿದಂತಾಯಿತು. ಆದರೆ ಟೀಕೆಯಲ್ಲಿ ಹೀಗೆ ಹೇಳಿರುವುದಿಲ್ಲ. ಅಷ್ಟೇ ಅಲ್ಲದೆ ಟೀಕೆಯಲ್ಲಿ ಮುಕ್ತೋಪಸೃಪ್ಯತ್ವದ ಬಲದಿಂದ ಆತ್ಮಶಬ್ದವು ಮುಖ್ಯವಾಗಿದೆಯೆಂದೇ ಹೇಳಿದ್ದಾರೆ. ಆದ್ದರಿಂದ ಟೀಕೆಯು ಗ್ರಂಥಕಾರರ ಮಾತಿಗೆ ವಿಸಂವಾದಿ ಆಗಿದೆಯಲ್ಲವೇ? ಎಂಬ ಪ್ರಶ್ನೆ ಬರುತ್ತದೆ.

ಪ್ರಕಾಶಃ – तथापीह श्रुतेर्विष्णौ मुख्याया अपि जीवलिङ्गेनामुख्यत्वशङ्कायां तुल्यन्यायतया लिङ्गस्यापि सा भवत्येवेत्याशयेन जायमानत्वलिङ्गेनात्मशब्दादयो गौणा इति बहुवचनोक्तिः । टीकायां तु मुक्तोपसृप्यसूत्रे चशब्दाभावात्तत्स्वारस्याय तथोक्तिरिति भावः ।

ಆದರೆ ಪ್ರಕೃತ ವಿಷ್ಣುವಿನಲ್ಲಿ ಮುಖ್ಯವಾಗಿರುವ ಶ್ರುತಿಗೆ ಎಂದರೆ ಅಲ್ಲಿ ಪಠಿತವಾದ ಆತ್ಮಶಬ್ದಾದಿಗಳಿಗೆ ಜಾಯಮಾನತ್ವವೆಂಬ ಜೀವಲಿಂಗದ ಬಲದಿಂದ ಅಮುಖ್ಯತ್ವವನ್ನು ಆಶಂಕಿಸಬಹುದು. ಆದೇ ಜಾಯಮಾನತ್ವ ಲಿಂಗದ ಬಲದಿಂದಲೇ ಮುಖ್ಯೋಪಸೃಪ್ಯತ್ವವೆಂಬ ಲಿಂಗಕ್ಕೂ ಸಹ ಅಮುಖ್ಯತ್ವದ ಆಶಂಕೆ ಬಂದೇ ಬರುತ್ತದೆ. ಈ ಅಭಿಪ್ರಾಯದಿಂದ ಗ್ರಂಥಕಾರರು ಜಾಯಮಾನತ್ವ ಲಿಂಗದಿಂದ ಆತ್ಮಶಬ್ದಾದಿಗಳು ಗೌಣವಾಗುತ್ತವೆ ಎಂಬುದಾಗಿ ಬಹುವಚನವನ್ನು ಪ್ರಯೋಗಿಸಿದ್ದಾರೆ. ಇಲ್ಲದಿದ್ದರೆ 'ಆತ್ಮಶಬ್ದಃ' ಎಂಬುದಾಗಿ ಏಕವಚನವನ್ನೇ ಪ್ರಯೋಗಿಸಬೇಕಾಗಿತ್ತು. ಆದರೆ ಟೀಕಾರಾಯರ ಅಭಿಪ್ರಾಯವೇ ಬೇರೆ ಇದೆ. ಮುಖ್ಯೋಪಸೃಪ್ಯತ್ವವು ಪ್ರತ್ಯೇಕ ಲಿಂಗವೆನ್ನಲು ಸೂತ್ರದಲ್ಲಿ 'ಚ' ಶಬ್ದವಿರುವುದಿಲ್ಲ. ಆದ್ದರಿಂದ ಹಿಂದಿನ ಸೂತ್ರದಲ್ಲಿ ಹೇಳಲ್ಪಟ್ಟ ಆತ್ಮಶಬ್ದವೆಂಬ ಲಿಂಗವು ಮುಖ್ಯವಾಗಿದೆಯೆಂದು ತಿಳಿಸುವುದಕ್ಕಾಗಿಯೇ ಮುಖ್ಯೋಪಸೃಪ್ಯತ್ವವನ್ನು ಮುಂದಿನ ಸೂತ್ರದಲ್ಲಿ ಹೇಳಿದ್ದಾರೆ. ಇದರ ಸ್ವಾರಸ್ಯಕ್ಕೋಸ್ಕರ ಟೀಕೆಯಲ್ಲಿ ಹಾಗೇ ಹೇಳಿರುತ್ತಾರೆ. ಆದ್ದರಿಂದ ಟೀಕಾರಾಯರ ಅಭಿಪ್ರಾಯವೇ ಬೇರೆ ರೀತಿಯಾಗಿರುವುದರಿಂದ ವಿಸಂವಾದವು ಗ್ರಂಥಕ್ಕೆ ಬರುವುದಿಲ್ಲ. ಆತ್ಮಶಬ್ದಕ್ಕೆ ಮುಖ್ಯಾರ್ಥವನ್ನೇ ಸ್ವೀಕರಿಸಬೇಕೆನ್ನಲು ಮುಖ್ಯೋಪಸೃಪ್ಯತ್ವವನ್ನು ನಾವು ಹೇತುವನ್ನಾಗಿ ಹೇಳಿದಾಗ ಪೂರ್ವಪಕ್ಷಿಯು ಜಾಯಮಾನತ್ವವೆಂಬ ಲಿಂಗದಿಂದ ಮುಖ್ಯೋಪಸೃಪ್ಯತ್ವವನ್ನು ಆಕ್ಷೇಪಿಸುತ್ತಾನೆ. ಆತ್ಮಶಬ್ದವನ್ನೂ ಸಹ ಆಕ್ಷೇಪಿಸುತ್ತಾನೆ. ಅವನ ಅಭಿಪ್ರಾಯವನ್ನು ಖಂಡಿಸುವುದಕ್ಕಾಗಿ ಗ್ರಂಥಕಾರರು

'ತೇಷಾಮ್' ಎಂಬುದಾಗಿ ಬಹುವಚನವನ್ನು ಪ್ರಯೋಗಿಸಿರುತ್ತಾರೆ.

ಪ್ರಕಾಶಃ – ಅತ್ರ ಯದ್ಯಪಿ ಚ ವಿಷ್ಣೋರಿತಿ ಚಿನ್ತಾನನ್ತರಂ ತದರ್ಥಮಾತ್ಮಶಬ್ದಾದಿಕಂ ರುದ್ರಾದಿಜೀವೇ ನೇತುಂ ಶಕ್ಯಮುತಾಶಕ್ಯಮಿತಿ ಚಿನ್ತಾ ತದರ್ಥಮತ್ರ ಪ್ರಕರಣೇ ನಿರವಕಾಶಜೀವ-ವಿಷ್ಣುಪ್ರಾಪಕಬಲೇನ ತಯೋರಭೇದ ಆಶ್ರಯಿತುಂ ಶಕ್ಯ ಉತಾಶಕ್ಯ ಇತಿ ಚಿನ್ತಾ ತದರ್ಥಮನ್ಯಮೀಶಮಿತ್ಯಾದಿಭೇದಾಶ್ರುತಿರ್ಜೀವವಿಷ್ಣುನಿಷ್ಠಾऽಥ ನೇತಿ ಚಿನ್ತಾ ತದರ್ಥಮೀಶಶಬ್ದಃ ಕಿಂ ವಿಷ್ವನ್ಯಯತ್ಕಿಞ್ಚಿತ್ಪರ ಉತ ಪ್ರಕರಣಬಲಾದ್ವಿಷ್ಣುಪರ ಏವೇತಿ ಭೇದಾದಿಸೂತ್ರವ್ಯಾವರ್ತ್ಯಶಙ್ಕೋಪಯುಕ್ತಾ ಚಿನ್ತಾಪರಮ್ಪರಾऽಪಿ ವಾಚ್ಯಾ ।

ಪ್ರಶ್ನೆ - 'ವಿಷ್ಣೋಃ' ಎಂಬ ಸಂಶಯದ ಆನಂತರ ಆದಕ್ಕೋಸ್ಕರ ಆತ್ಮಶಬ್ದಾದಿಗಳು ರುದ್ರಾದಿಜೀವರಲ್ಲಿ ಸಮನ್ವಯವಾಗುತ್ತವೋ ಅಥವಾ ಆಗುವುದಿಲ್ಲವೋ? ಎಂಬ ಕೋಟಿಯನ್ನು ಹೇಳಿ ಈ ಸಂಶಯದ ಪರಿಹಾರಕ್ಕಾಗಿ ಪ್ರಕರಣದಲ್ಲಿ ನಿರವಕಾಶವಾದ ಜೀವ ಹಾಗೂ ವಿಷ್ಣುಪ್ರಾಪಕವಾದ ಲಿಂಗಗಳ ಬಲದಿಂದ ಅವರಿಬ್ಬರಿಗೂ ಏಕ್ಯವನ್ನು ಹೇಳಬಹುದೋ ಇಲ್ಲವೋ? ಈ ಸಂಶಯದ ಪರಿಹಾರಕ್ಕಾಗಿ 'ಅನ್ಯಮೀಶಮ್' ಎಂಬ ಭೇದಶ್ರುತಿಯಲ್ಲಿ ಹೇಳಲ್ಪಟ್ಟ ಭೇದವು ಜೀವ ಹಾಗೂ ವಿಷ್ಣುವಿಷಯಕವಾಗಿದೆಯೋ ಅಥವಾ ಇಲ್ಲವೋ? ಈ ಸಂಶಯದ ಪರಿಹಾರಕ್ಕಾಗಿ ಈಶಶಬ್ದವು ವಿಷ್ಣುವಿಗಿಂತ ಅನ್ಯವಾದ ಯಾವುದಾದರೂ ಒಂದು ವಸ್ತುವನ್ನು ಪ್ರತಿಪಾದಿಸುತ್ತದೋ, ಅಥವಾ ವಿಷ್ಣುವನ್ನೇ ಪ್ರತಿಪಾದಿಸುತ್ತದೋ, ಇತ್ಯಾದಿ ಭೇದಾದಿಸೂತ್ರಗಳಿಂದ ವ್ಯಾವರ್ತ್ಯವಾದ ಪೂರ್ವಪಕ್ಷೆ ಉಪಯುಕ್ತವಾಗುವಂತೆ ಸಂಶಯಪರಂಪರೆಯನ್ನು ತೋರಿಸಬೇಕಿತ್ತಲ್ಲವೇ?

ಪ್ರಕಾಶಃ – ತಥಾಪಿ ಸ್ಪಷ್ಟತ್ವಾದ್ವಾ ಸೂತ್ರಕ್ರಮೇ ವಕ್ಷ್ಯಮಾಣಪ್ರಕಾರೇಣಾಭೇದಶಙ್ಕಾಯಾ ರುದ್ರಾದಿ-ಕೋಟಿಚತುಷ್ಟಯಸಾಧಾರಣ್ಯಾಭಾವಾದ್ವಾ ಸಾऽಪಿ ಶಙ್ಕಾ ಜಾಯಮಾನತ್ವರೂಪಜೀವಲಿಙ್ಗನಿರವಕಾಶತ್ವ-ಪ್ರಯುಕ್ತೈವೇತಿ ತನ್ನಿರವಕಾಶತ್ವಾದಿಚಿನ್ತೋಕ್ತ್ಯೈವೋಕ್ತಪ್ರಾಯೇತಿ ವಾ ನೋಕ್ತಾ ।

ಉತ್ತರ - ಹೌದು. ಆದರೆ ಇದನ್ನು ಹೇಳದಿರಲು ನಾಲ್ಕು ಕಾರಣಗಳಿವೆ. ಏನೆಂದರೆ - ಈ ಚಿಂತೆಗಳು ಸ್ಪಷ್ಟವಾಗಿರುವುದರಿಂದ ಗ್ರಂಥಕಾರರು ಹೇಳಿಲ್ಲ. ಅಥವಾ ಸೂತ್ರಕ್ರಮದಲ್ಲಿ ಮುಂದೆ ಹೇಳುವ ಪ್ರಕಾರ ನಾಲ್ಕು ಪೂರ್ವಪಕ್ಷಕೋಟಿಗಳಲ್ಲಿ ಅಭೇದಶಂಕೆಯನ್ನು ಮಾಡಲು ಸಾಧ್ಯವಿಲ್ಲ. ರುದ್ರ, ವಾಯು, ಪ್ರಕೃತಿ, ಜೀವ ಈ ನಾಲ್ಕು ಪದಾರ್ಥಗಳೂ ಸಹ ದ್ಯುಭ್ವಾದ್ಯಾಯತನರಾಗಬಹುದೆಂದು ಪೂರ್ವಪಕ್ಷ ಮಾಡಲಾಗಿದೆ. ರುದ್ರಾದಿಗಳಿಗೆ ವಿಷ್ಣುವಿನಿಂದ ಅಭೇದವನ್ನು ಹೇಳಬಹುದಾದರೂ ಪ್ರಕೃತಿಗೆ ವಿಷ್ಣುವಿನಿಂದ ಅಭೇದವನ್ನು ಆಶಂಕಿಸಲು ಸಾಧ್ಯವಿಲ್ಲ. ಆದ್ದರಿಂದ ಅಭೇದಕೋಟಿಕವಾದ ಸಂಶಯಗಳನ್ನು ಗ್ರಂಥಕಾರರು ತೋರಿಸಿಲ್ಲ; ಹೊರತಾಗಿ, ಜಾಯಮಾನತ್ವ ಕೋಟಿಕವಾದ ಸಂಶಯಗಳನ್ನು ತೋರಿಸಿದ್ದಾರೆ. ಈ ಜಾಯಮಾನತ್ವವಾದರೂ ವಾಯು, ರುದ್ರ, ಪ್ರಕೃತಿ, ಜೀವ ಎಲ್ಲರಲ್ಲಿಯೂ ಸಹ ಸಾಧಾರಣವಾಗಿ ಬರುತ್ತದೆ. ಪ್ರಕೃತಿಯೂ ಸಹ ನಾನಾ ರೂಪವನ್ನು ತಾಳುವುದರಿಂದ ಜಾಯಮಾನವಾಗಿದೆ ಎಂದು ಹೇಳಬಹುದು. ಹೀಗೆ ಕೋಟಿಚತುಷ್ಟಯದಲ್ಲಿ ಸಾಧಾರಣವಾದ ಜಾಯಮಾನತ್ವವನ್ನೇ ಗ್ರಂಥಕಾರರು ಸಂಶಯಕೋಟಿಯಲ್ಲಿ ಸೇರಿಸಿದ್ದಾರೆ ಹೊರತು ಕೋಟಿಚತುಷ್ಟಯದಲ್ಲಿ ಸಾಧಾರಣವಾಗದ ಅಭೇದಕೋಟಿಯನ್ನು ಗ್ರಂಥಕಾರರು ಸೇರಿಸಿರುವುದಿಲ್ಲ.

ಅಥವಾ ಆತ್ಮಶಬ್ದ, ಮುಕ್ತೋಪಸೃಪ್ಯತ್ವ ಮೊದಲಾದ ನಿರವಕಾಶಲಿಂಗಗಳು ವಿಷ್ಣುವಿನ ವಿಷಯದಲ್ಲಿ ಇರುವಂತೆ ಜಾಯಮಾನತ್ವವೆಂಬ ನಿರವಕಾಶಲಿಂಗವು* ಜೀವನ ವಿಷಯದಲ್ಲೂ ಇರುತ್ತದೆ. ಹೀಗೆ ಇಬ್ಬರಲ್ಲಿಯೂ ಸಮಾನವಾದ ಲಿಂಗಗಳಿರುವ ಪ್ರಯುಕ್ತ ಅಭೇದವನ್ನೇ ಒಪ್ಪಬೇಕೆಂದು ಶಂಕಿಸಬಹುದು. ಆದ್ದರಿಂದ ಅಭೇದಶಂಕೆಗೆ ಉಪಯುಕ್ತವಾದ ಸಂಶಯಕ್ಕೆ ಮೂಲಭೂತವಾಗಿರುವುದು ಜಾಯಮಾನತ್ವಲಿಂಗಕ್ಕೆ ನಿರವಕಾಶತ್ವ ಶಂಕೆ. ಈ ಜಾಯಮಾನತ್ವ ಶಂಕೆಯನ್ನು ತೋರಿಸುವುದರಿಂದಲೇ ಅಭೇದ ಶಂಕೆಯನ್ನೂ ಸಹ ಹೇಳಿದಂತಾಗುತ್ತದೆ ಎಂಬ ಅಭಿಪ್ರಾಯದಿಂದ ಗ್ರಂಥಕಾರರು ಮೂಲಭೂತವಾದ ಜಾಯಮಾನತ್ವದ ಸಂಶಯವನ್ನೇ ತೋರಿಸಿದ್ದಾರೆ.

ಪ್ರಕಾಶಃ – ಯದ್ವಾ 'आत्मशब्दादयः किं गौणा' इत्यस्य जीवाभेदेन नेया इत्यप्यर्थः । ''जीवेशाभेदेन ब्रह्मगतलिङ्गस्य जीवे सम्भवात्'' इति टीकोक्तेः । तथाच साऽपि चिन्तोक्तैवेति ।

ಅಥವಾ ಅಭೇದವಿಷಯಕವಾದ ಸಂಶಯಕೋಟಿಯನ್ನು ಗ್ರಂಥಕಾರರು ಹೇಳಿಯೇ ಇದ್ದಾರೆ. 'ಆತ್ಮಶಬ್ದಾದಯಃ ಕಿಂ ಗೌಣಾಃ' ಎಂಬಲ್ಲಿರುವ ಗೌಣಶಬ್ದಕ್ಕೆ ಜೀವಾಭೇದವನ್ನು ಒಪ್ಪಿ ಕೂಡಿಸಬಹುದೋ? ಎಂದರ್ಥ. ಗೌಣಶಬ್ದಕ್ಕೆ ಅಭೇದವನ್ನು ಒಪ್ಪಬೇಕೆಂಬುದು 'ಜೀವೇಶಾಭೇದೇನ ಬ್ರಹ್ಮಗತಲಿಂಗಸ್ಯ ಜೀವೇ ಸಂಭವಾತ್' ಎಂಬ ಟೀಕೆಯಲ್ಲಿ ಹೇಳಿದ್ದಾರೆ. ಆದ್ದರಿಂದ 'ಗೌಣಾಃ' ಎಂಬ ಪದದಿಂದಲೇ ಗ್ರಂಥಕಾರರು ಅಭೇದವಿಷಯಕವಾದ ಸಂಶಯಪರಂಪರೆಯನ್ನೂ ಸಹ ತೋರಿಸಿದ್ದಾರೆ. ಆದ್ದರಿಂದ ಗ್ರಂಥಕಾರರು ಅಭೇದವಿಷಯಕವಾದ ಸಂಶಯಪರಂಪರೆಯನ್ನು ತೋರಿಸದೆ ಜಾಯಮಾನತ್ವವಿಷಯಕವಾದ ಸಂಶಯಪರಂಪರೆಯನ್ನೇ ತೋರಿಸಿದ್ದಾರೆಂಬ ಆಕ್ಷೇಪವೇ ತಪ್ಪು.

ಗುರುರಾಜೀಯಮ್ – पूर्वपादान्त्यस्योत्तरपादाद्यस्य चाधिकरणस्यावान्तर-सङ्गतेरावश्यकत्वं वदन्तं प्रत्याह्युचयेनाह – यद्वेति ।।

ಸಾರ

ಹಿಂದಿನ ಅಧಿಕರಣದಿಂದ ಈ ಅಧಿಕರಣಕ್ಕೆ ಸಂಗತಿಯನ್ನು ತೋರಿಸಬೇಕಾಗಿಲ್ಲ. ಏಕೆಂದರೆ ಪಾದದ ಮೊದಲನೇ ಅಧಿಕರಣಕ್ಕೆ ಸಂಗತಿ ಇರುವುದಿಲ್ಲ. ಹಾಗೇನಾದರೂ ಸಹಜವಾಗಿ ಸಂಗತಿ ಇದ್ದರೂ ಸಹ ಅದನ್ನು ತಿಳಿಯುವುದು ತಪ್ಪಲ್ಲ. ಹಿಂದಿನ ವೈಶ್ವಾನರಾಧಿಕರಣದಲ್ಲಿ ಸಿದ್ಧಾಂತಹೇತುವನ್ನಾಗಿ ಬಳಸಲ್ಪಟ್ಟ ಆತ್ಮಶಬ್ದವನ್ನು ವಿಚಾರ ಮಾಡುತ್ತಿರುವುದರಿಂದ ಆತೀದೇಶಿಕೀ ಸಂಗತಿಯನ್ನು ಹೇಳಿದರೆ ತಪ್ಪಿಲ್ಲ.

'ಯಸ್ಯೈದ್ಯೌಃ' ಇತ್ಯಾದಿ ಶ್ರುತಿಯಲ್ಲಿ ದ್ಯುಭ್ವಾದ್ಯಾಯತನತ್ವವೆಂಬ ಲಿಂಗವು ಕೇಳಿಸುತ್ತಿದೆ. ಇದು ರುದ್ರನಲ್ಲಿ ಬರುತ್ತದೆಂಬುದು ಪೂರ್ವಪಕ್ಷಕಾರನ ಆಗ್ರಹ, ವಿಷ್ಣುವಿನಲ್ಲಿ ಬರುತ್ತದೆಂಬುದು ಸಿದ್ಧಾಂತಿಗಳ ಆಗ್ರಹ. ಒಂದು

ವೇಳೆ ಶರೀರವನ್ನು ಸ್ವೀಕಾರ ಮಾಡುವುದೇ ಜನನ = ಹುಟ್ಟುವಿಕೆ ಎಂದಾದರೆ, ಶರೀರವೇ ಇಲ್ಲದ ವಿಷ್ಣುವಿನಲ್ಲಿ ಜಾಯಮಾನತ್ವವು ಅಯುಕ್ತವಾಗುತ್ತದೆ. ಜಾಯಮಾನತ್ವವೆಂಬ ಬಾಧಕಲಿಂಗದಿಂದಲೇ ಪ್ರಕರಣದಲ್ಲಿ ಕೇಳಿಸುತ್ತಿರುವ ಆತ್ಮಶಬ್ದಾದಿಗಳೆಲ್ಲವೂ ವಿಷ್ಣುವನ್ನು ಪ್ರತಿಪಾದಿಸದೇ ಗೌಣವಾದ ಬೇರೆ ಯಾರನ್ನಾದರೂ ಪ್ರತಿಪಾದಿಸುತ್ತದೆಂದು ಹೇಳಬೇಕಾಗುತ್ತದೆ. ಆವಾಗ 'ರುದ್ರೋ ವಾವ ಲೋಕಾಧಾರಃ' ಇತ್ಯಾದಿ ಸಮಾಖ್ಯಾ ಪ್ರಮಾಣಗಳ ಬೆಂಬಲದಿಂದ ರುದ್ರಾದಿಗಳೇ ದ್ಯುಭ್ವಾದ್ಯಾಯತನರಾಗುತ್ತಾರೆಂಬುದು ಪೂರ್ವಪಕ್ಷಕಾರನ ಗುರಿ.

ಜನನ ಶಬ್ದಕ್ಕೆ ಹುಟ್ಟುವಿಕೆ ಎಂಬರ್ಥವನ್ನೇ ಸ್ವೀಕರಿಸಬೇಕಿಲ್ಲ. ಪ್ರಾದುರ್ಭಾವವೆಂಬರ್ಥವನ್ನೂ ಸಹ ಸ್ವೀಕರಿಸಬಹುದು. ಆದ್ದರಿಂದ ಜಾಯಮಾನತ್ವವನ್ನು ವಿಷ್ಣುವಿನಲ್ಲಿ ಹೇಳಲು ಏನೂ ಅಡ್ಡಿಯಿಲ್ಲ ಎಂದು ಒಪ್ಪಿದಾಗ ಆತ್ಮಶಬ್ದಾದಿಗಳೆಲ್ಲವೂ ಬಾಧಕವಿಲ್ಲದ ಕಾರಣ ಮಹಾವಿಷ್ಣುವನ್ನೇ ಮುಖ್ಯವಾಗಿ ಪ್ರತಿಪಾದಿಸುತ್ತವೆ. ಆತ್ಮಶಬ್ದಾದಿಗಳ ಬಲದಿಂದ ರುದ್ರಾದಿಗಳ ವಿಷಯದಲ್ಲಿರುವ ಸಮಾಖ್ಯಾದಿ ಪ್ರಮಾಣಗಳೆಲ್ಲವೂ ದುರ್ಬಲವಾಗುತ್ತವೆ. ಆವಾಗ 'ಯಸ್ಮಿನ್‌ದ್ಯೌಃ' ಇತ್ಯಾದಿ ಶ್ರುತಿಯಲ್ಲಿ ಪ್ರತಿಪಾದಿಸಲ್ಪಟ್ಟ ದ್ಯುಭ್ವಾದ್ಯಾಯತನತ್ವವೆಂಬ ಲಿಂಗವು ಮಹಾವಿಷ್ಣುವಿನಲ್ಲಿ ಸಿದ್ಧವಾಗುತ್ತದೆಂಬ ಸಾಧನೆಯೇ ಸಿದ್ಧಾಂತಿಗಳ ಗುರಿ.

• • • • •

ರುದ್ರ, ಪ್ರಕೃತಿ, ವಾಯು, ಜೀವ, ಈ ನಾಲ್ವರು ದ್ಯುಭ್ವಾದ್ಯಾಯತನರೆಂದು ಪೂರ್ವಪಕ್ಷ

तात्पर्यचन्द्रिका

पूर्वपक्षस्तु । द्युभ्वाद्यायतनं रुद्रः प्रधानं वायुर्जीवो वा । ''रुद्रो वाव लोकाधारः । प्राणानां ग्रन्थिरसि रुद्रः । भूतं च भवच्च भविष्यच्चेत्याचक्षते । आकाश एव तदोतं च प्रोतं च । वायुना वै गौतमसूत्रेणायं च लोकः परश्च लोकः सर्वाणि च भूतानि संदृब्धानि'' इत्यादि समाख्यानात् । जायमानत्वरूपजीवलिङ्गाच्च ।

ಅನುವಾದ - ಈ ಅಧಿಕರಣದ ಪೂರ್ವಪಕ್ಷ ಹೀಗಿದೆ - ದ್ಯುಭ್ವಾದ್ಯಾಯತನರಾದವರು, ರುದ್ರ, ಪ್ರಕೃತಿ, ವಾಯುದೇವತೆ ಅಥವಾ ಜೀವ ಇವರುಗಳೇ ಆಗುತ್ತಾರೆ. ಪ್ರತಿಯೊಬ್ಬರೂ ಸಹ ದ್ಯುಭ್ವಾದ್ಯಾಯತನರಾಗಿದ್ದಾರೆನ್ನಲು ಪ್ರಮಾಣವಿದೆ.

ರುದ್ರನ ವಿಷಯದಲ್ಲಿರುವ ಪ್ರಮಾಣ. 'ರುದ್ರೋ ವಾವ ಲೋಕಾಧಾರಃ' 'ಪ್ರಾಣಾನಾಂ ಗ್ರಂಥಿರಸಿ ರುದ್ರಃ' ಇತ್ಯಾದಿ ಶ್ರುತಿ ವಾಕ್ಯವು ರುದ್ರನು ದ್ಯುಲೋಕ, ಭೂಲೋಕ ಮೊದಲಾದವುಗಳಿಗೆ ಆಶ್ರಯನಾಗಿದ್ದಾನೆ. ಪ್ರಾಣಾಧಾರನೂ ಆಗಿದ್ದಾನೆ ಎಂದು ತಿಳಿಯುತ್ತದೆ.

'ಭೂತಂಚ ಭವಚ್ಚ ಭವಿಷ್ಯಚ್ಚೇತ್ಯಾಚಕ್ಷತೇ, ಆಕಾಶ ಏವ ತದೋತಂ ಚ ಪ್ರೋತಂ ಚ' ಎಂಬ ಶ್ರುತಿಯು ಹಿಂದಿನ ಮುಂದಿನ ಮತ್ತು ಈಗಿನ ಪದಾರ್ಥಗಳೆಲ್ಲವೂ ಪ್ರಕೃತಿಯಲ್ಲೇ ಅನನ್ಯವಾಗಿ

ಆಶ್ರಯಿಸಿಕೊಂಡಿದೆ ಎಂದು ಹೇಳಲಾಗಿದೆ. ಇದರಿಂದ ದ್ಯುಲೋಕವೇ ಮೊದಲಾದವುಗಳಿಗೆ ಆಶ್ರಯವಾದದ್ದು ಪ್ರಕೃತಿಯೆಂದು ತಿಳಿಯುತ್ತದೆ.

'ವಾಯುನಾ ವೈ ಗೌತಮಸೂತ್ರೇಣಾಯಂ ಚ ಲೋಕಃ ಪರಶ್ಚ ಲೋಕಃ ಸರ್ವಾಣಿ ಚ ಭೂತಾನಿ ಸಂದೃಬ್ಧಾನಿ' ಎಲೈ ! ಗೌತಮನೇ ಈ ಎಲ್ಲಾ ಲೋಕವು ಸಕಲ ಭೂತಗಳು ವಾಯುವನ್ನು ಆಶ್ರಯಿಸಿಕೊಂಡಿವೆ ಎಂಬ ಶ್ರುತಿಯು ದ್ಯುಭ್ವಾದ್ಯಾಯತನತ್ವವನ್ನು ವಾಯುದೇವತೆಯಲ್ಲಿ ಹೇಳುತ್ತಿದೆ. ಹೀಗೆ ರುದ್ರ, ಪ್ರಕೃತಿ, ಹಾಗೂ ವಾಯುದೇವತೆಯ ವಿಷಯದಲ್ಲಿ ಸಮಾಖ್ಯಾಪ್ರಮಾಣಗಳು ಕಾಣಿಸುತ್ತಿವೆ.

ಜೀವನೂ ಸಹ ದ್ಯುಭ್ವಾದ್ಯಾಯತನನಾಗಿದ್ದಾನೆನ್ನಬಹುದು. ಏಕೆಂದರೆ ಜಾಯಮಾನತ್ವವೆಂಬ ಲಿಂಗವು ಆ ಪ್ರಕರಣದಲ್ಲಿ ಕೇಳಿಸುತ್ತಿದೆ.

नच ''लोकाश्च लोकिनश्च विष्णावेवोताश्च प्रोताश्च'' इति विष्णावपि समाख्याऽस्तीति वाच्यम् ।

ಪ್ರಶ್ನೆ - ನೀವು ಹೇಗೆ ರುದ್ರಾದಿಗಳ ವಿಷಯದಲ್ಲಿ ಸಮಾಖ್ಯಾಪ್ರಮಾಣವನ್ನು ನೀಡಿದಿರೋ, ಆದರಂತೆ 'ಲೋಕಾಶ್ಚ ಲೋಕಿನಶ್ಚ ವಿಷ್ಣಾವೇವೋತಾಶ್ಚ ಪ್ರೋತಾಶ್ಚ' ಎಂಬುದಾಗಿ ವಿಷ್ಣುವಿನ ವಿಷಯದಲ್ಲಿಯೂ ಸಮಾಖ್ಯಾಪ್ರಮಾಣವು ಕಾಣಿಸುತ್ತಿದೆ. ಇದರ ಆಧಾರದಿಂದ ದ್ಯುಭ್ವಾದ್ಯಾಯತನನಾದವನು ವಿಷ್ಣುವಾಗಿದ್ದಾನೆಂದೂ ಸಹ ಹೇಳಬಹುದಲ್ಲವೇ?

रुद्रसमाख्यायां ''प्राणानां ग्रन्थिरसि रुद्रः । प्राणेश्वरः कृत्तिवासाः पिनाकी । रुद्रो वाव लोकाधारः'' इति बहुरुद्रश्रुतिलिङ्गसद्भावात् ।

ಉತ್ತರ - ಹಾಗೇ ಹೇಳಲಾಗದು ಏಕೆಂದರೆ ರುದ್ರನ ವಿಷಯದಲ್ಲಿ ಸಮಾಖ್ಯಾಪ್ರಮಾಣವು ಅತ್ಯಂತ ಬಲಿಷ್ಠವಾಗಿದೆ - 'ಪ್ರಾಣಾನಾಂ ಗ್ರಂಥಿರಸಿ ರುದ್ರಃ, ಪ್ರಾಣೇಶ್ವರಃ ಕೃತ್ತಿವಾಸಾಃ ಪಿನಾಕೀ, ರುದ್ರೋ ವಾವ ಲೋಕಾಧಾರಃ' ಎಂಬುದಾಗಿ ರುದ್ರನ ವಿಷಯದಲ್ಲಿ ಪ್ರಾಣಾಧಾರತ್ವ, ಪ್ರಾಣೇಶ್ವರತ್ವ, ಕೃತ್ತಿವಾಸಸ್ ಮೊದಲಾದ ಶಬ್ದವಾಚ್ಯತ್ವ ಹೀಗೆ ಅನೇಕ ಶ್ರುತಿ ಹಾಗೂ ಲಿಂಗಗಳು ಕೇಳಿಸುತ್ತಿವೆ. ಇವುಗಳ ಆಧಾರದಿಂದ ರುದ್ರಸಮಾಖ್ಯೆಯು ಅತ್ಯಂತ ಬಲಿಷ್ಠವಾಗಿದೆಯೆಂದು ತಿಳಿಯುತ್ತದೆ.

एतदेवाभिप्रेत्योक्तमनुव्याख्याने ''बाहुल्यं लिङ्गशब्दानाम्'' इति ।

ಆದ್ದರಿಂದಲೇ ಅನುವ್ಯಾಖ್ಯಾನದಲ್ಲಿ 'ಬಾಹುಲ್ಯಂ ಲಿಂಗಶಬ್ದಾನಾಮ್' ಎಂಬ ಮಾತಿನಿಂದ ಲಿಂಗ ಹಾಗೂ ಶ್ರುತಿಗಳು ರುದ್ರನ ವಿಷಯದಲ್ಲಿ ಬಹಳ ಇವೆ ಎಂದು ಹೇಳಿರುತ್ತಾರೆ.

''ವಿಷ್ಣೋರ್ದ್ಯುಭ್ವಾದ್ಯಾಯತನತ್ವಪ್ರಸಿದ್ಧಾವಪಿ'' ಇತ್ಯಾದಿಟೀಕಾಯಾಂ ವಿಷ್ಣುಸಮಾಖ್ಯಾಬಾಧಾರ್ಥಂ ಜಾಯಮಾನತ್ವಲಿಙ್ಗೋಕ್ತಿಸ್ತು ವಿಷ್ಣುಸಮಾಖ್ಯಾತೋ ರುದ್ರಸಮಾಖ್ಯಾಯಾ ಬಲವತ್ತ್ವೇऽಪಿ ವಾಯ್ವಾದಿಸಮಾಖ್ಯಾಯಾಃ ಪ್ರಾಬಲ್ಯಾಭಾವಾತ್ ।

'ವಿಷ್ಣೋಃ ದ್ಯುಭ್ವಾದ್ಯಾಯತನತ್ವಪ್ರಸಿದ್ಧಾವಪಿ' ಇತ್ಯಾದಿ ಟೀಕೆಯಲ್ಲಿ ವಿಷ್ಣುವಿಷಯಕವಾದ ಸಮಾಖ್ಯಾಪ್ರಮಾಣವನ್ನು ಬಾಧಿಸುವುದಕ್ಕಾಗಿ ಜಾಯಮಾನತ್ವಲಿಂಗವನ್ನು ಹೇಳಿರುತ್ತಾರೆ. ಏಕೆಂದರೆ ವಿಷ್ಣು ಸಮಾಖ್ಯೆಗಿಂತ ರುದ್ರ ಸಮಾಖ್ಯೆಯು ಶ್ರುತಿ, ಲಿಂಗಗಳ ಆಧಾರದಿಂದ ಪ್ರಬಲವಾಗಿರಬಹುದು. ಆದರೆ ವಾಯು ಹಾಗೂ ಪ್ರಕೃತಿ ವಿಷಯಕವಾದ ಸಮಾಖ್ಯಾಪ್ರಮಾಣಕ್ಕೆ ಶ್ರುತಿ ಹಾಗೂ ಲಿಂಗಗಳ ಬಲದಿಂದ ಪ್ರಾಬಲ್ಯವನ್ನು ಹೇಳಲು ಸಾಧ್ಯವಿಲ್ಲ; ಹೊರತಾಗಿ ಜಾಯಮಾನತ್ವದಿಂದಲೇ ಪ್ರಾಬಲ್ಯವನ್ನು ಹೇಳಬೇಕು. ಈ ಉದ್ದೇಶದಿಂದ ಜಾಯಮಾನತ್ವಲಿಂಗವನ್ನು ಟೀಕೆಯಲ್ಲಿ ಹೇಳಿರುತ್ತಾರೆ.

ನನು ತಥಾಪಿ ''ದ್ವೇ ವಿದ್ಯೇ ವೇದಿತವ್ಯೇ'' ಇತಿ ವಿಷ್ಣುಪ್ರಕರಣೇನ ''ಅಮೃತಸ್ಯೈಷ ಸೇತುಃ'' ಇತಿ ಮುಕ್ತೋಪಸೃಪ್ಯತ್ವವಿಷ್ಣುಲಿಙ್ಗೇನ ಚ ರುದ್ರಾದಿಸಮಾಖ್ಯಾಯಾ ಬಾಧಃ ।

ಪ್ರಶ್ನೆ - ವಿಷ್ಣುವಿಷಯಕವಾದ ಸಮಾಖ್ಯಾಪ್ರಮಾಣಕ್ಕಿಂತ ಉಳಿದವರ ಸಮಾಖ್ಯಾಪ್ರಮಾಣವು ಬಲಿಷ್ಠವೆಂದು ಸಮರ್ಥಿಸಿದಿರಿ. ಆದರೆ 'ದ್ವೇ ವಿದ್ಯೇ ವೇದಿತವ್ಯೇ' ಎಂಬುದಾಗಿ ಪ್ರಾರಂಭವಾಗಿರುವುದರಿಂದ ಇದು ವಿಷ್ಣುಪ್ರಕರಣವೆಂದು ನಿರ್ಣಯವಾಗುತ್ತದೆ. ಅಷ್ಟೇ ಅಲ್ಲದೆ 'ಅಮೃತಸ್ಯೈಷ ಸೇತುಃ' ಎಂಬುದಾಗಿ ಮುಕ್ತೋಪಸೃಪ್ಯತ್ವವೆಂಬ ವಿಷ್ಣುಲಿಂಗವೇ ಕೇಳಿಸುತ್ತಿದೆ. ವಿಷ್ಣುವಿಷಯಕವಾದ ಪ್ರಕರಣದಿಂದಾಗಲೀ, ಲಿಂಗದಿಂದಾಗಲೀ, ರುದ್ರವಿಷಯಕವಾದ ಸಮಾಖ್ಯಾಪ್ರಮಾಣವೇ ಬಾಧಿತವಾಗಬೇಕು.

ಮುಕ್ತೋಪಸೃಪ್ಯತ್ವಾದೇಶ್ಚ ವಿಷ್ಣುಲಿಙ್ಗತ್ವಂ ''ತನ್ನಿಷ್ಠಸ್ಯ ಮೋಕ್ಷೋಪದೇಶಾತ್ । ಅಸ್ಮಿನ್ನಸ್ಯ ಚ ತದ್ಯೋಗಂ ಶಾಸ್ತಿ'' ಇತ್ಯಾದಿಸೂತ್ರಸಿದ್ಧಮ್ । ಲಿಙ್ಗಪ್ರಕರಣೇ ಚ ಸಮಾಖ್ಯಾತೋ ಬಲವತೀ ।

ಮುಕ್ತೋಪಸೃಪ್ಯತ್ವವೇ ಮೊದಲಾದವುಗಳು ವಿಷ್ಣುವಿನ ಲಿಂಗಗಳಾಗಿವೆಯೆಂಬ ವಿಚಾರವು 'ತನ್ನಿಷ್ಠಸ್ಯ ಮೋಕ್ಷೋಪದೇಶಾತ್' 'ಅಸ್ಮಿನ್ನಸ್ಯ ಚ ತದ್ಯೋಗಂ ಶಾಸ್ತಿ' ಇತ್ಯಾದಿ ಸೂತ್ರಗಳಿಂದ ಸಿದ್ಧವಾಗಿದೆ. ಸಮಾಖ್ಯಾಪ್ರಮಾಣಕ್ಕಿಂತ ಲಿಂಗ ಹಾಗೂ ಪ್ರಕರಣಗಳು ಬಲಿಷ್ಠವಾಗಿರುವ ಕಾರಣ ವಿಷ್ಣುವೇ ದ್ಯುಭ್ವಾದ್ಯಾಯತನನಾಗಬೇಕು.

ನಚ ಸಮಾಖ್ಯಾ ನಿರವಕಾಶಾ । ಅನ್ತರಧಿಕರಣನ್ಯಾಯೇನ ರುದ್ರಾದಿಶಬ್ದಾನಾಂ 'ಶಾಸ್ತ್ರದೃಷ್ಟ್ಯಾ' ಇತಿ ನ್ಯಾಯೇನ ಪಿನಾಕಿತ್ವಾದಿಲಿಙ್ಗಾನಾಂ ಚ ವಿಷ್ಣೌ ಸಾವಕಾಶತ್ವಾತ್ ।

ಉತ್ತರ - ರುದ್ರವಿಷಯಕವಾದ ಸಮಾಖ್ಯಾಪ್ರಮಾಣವು ನಿರವಕಾಶವಾದ ಪ್ರಯುಕ್ತ ಅತ್ಯಂತ ಬಲಿಷ್ಠವಾಗಿದೆಯೆಂದು ಹೇಳುತ್ತೇವೆ.

ಪ್ರಶ್ನೆ - ರುದ್ರವಿಷಯಕವಾದ ಸಮಾಖ್ಯಾಪ್ರಮಾಣವು ನಿರವಕಾಶವಾಗಿಲ್ಲ. ಏಕೆಂದರೆ ಅಂತರಧಿಕರಣದ ನ್ಯಾಯದಿಂದ ರುದ್ರಾದಿಶಬ್ದಗಳೆಲ್ಲವೂ ವಿಷ್ಣುವಿನಲ್ಲಿ ಸಾವಕಾಶವಾಗಿವೆ. ಅಂತಿಮಪ್ರಾಣಾಧಿಕರಣದಲ್ಲಿರುವ 'ಶಾಸ್ತ್ರದೃಷ್ಟ್ಯಾ' ಎಂಬ ಸೂತ್ರದಿಂದ ಪಿನಾಕಿತ್ವವೇ ಮೊದಲಾದ ಲಿಂಗಗಳೆಲ್ಲವೂ ಅಂತರ್ಯಾಮಿ ವಿವಕ್ಷೆಯಿಂದ ವಿಷ್ಣುವಿನಲ್ಲಿ ಸಾವಕಾಶವಾಗಿವೆ. ಆದ್ದರಿಂದ ವಿಷ್ಣುವಿಷಯಕವಾದ ಲಿಂಗಪ್ರಕರಣಗಳೇ ಪ್ರಬಲವಾಗಬೇಕಲ್ಲವೇ?

नच ''स एषोऽन्तश्चरते बहुधा जायमानः'' इति जायमानत्वादिलिङ्ग-विरोधः । ''तमेवैकं जानथ आत्मानम्'' इत्यात्मश्रुत्या तद्बाधात् ।

ಉತ್ತರ - 'ಸ ಏಷೋಽಂತಶ್ಚರತೇ ಬಹುಧಾ ಜಾಯಮಾನಃ' ಎಂಬ ಶ್ರುತಿಯಲ್ಲಿ ಜಾಯಮಾನತ್ವವೆಂಬ ಲಿಂಗವು ಕೇಳಿಸುತ್ತಿದೆ. ಈ ಲಿಂಗದಿಂದ ವಿಷ್ಣುವಿಷಯಕವಾದ ಲಿಂಗಾದಿಗಳು ಬಾಧಿತವಾಗುತ್ತವೆ. ವಿಷ್ಣುವಿನಲ್ಲಿ ಹುಟ್ಟುವಿಕೆಯನ್ನು ಹೇಳಲು ಸಾಧ್ಯವೇ ಇಲ್ಲ.

ಪ್ರಶ್ನೆ - 'ತಮೇವೈಕಂ ಜಾನಥ ಆತ್ಮಾನಮ್' ಎಂಬ ಆತ್ಮಶ್ರುತಿಯಿಂದ ಜಾಯಮಾನತ್ವವೆಂಬ ಲಿಂಗವೇ ಬಾಧಿತವಾಗುತ್ತದೆ. ಆದ್ದರಿಂದ ಜಾಯಮಾನತ್ವವೆಂಬ ಲಿಂಗವು ವಿಷ್ಣುವಿಷಯಕವಾದ ಲಿಂಗವನ್ನು ಬಾಧಿಸಲು ಹೇಗೆ ಸಾಧ್ಯ ?

आत्मशब्दस्य विष्ण्वेकनिष्ठत्वं च ''गौणश्चेन्नात्मशब्दात् । साधारणशब्दविशेषात्'' इति सूत्रसिद्धम् ।

ಆತ್ಮಶಬ್ದವು ವಿಷ್ಣುವಿನಲ್ಲಿ ಮಾತ್ರ ಬರುತ್ತದೆಂಬ ವಿಚಾರವನ್ನು 'ಗೌಣಶ್ಚೇನ್ನಾತ್ಮಶಬ್ದಾತ್, ಸಾಧಾರಣಶಬ್ದವಿಶೇಷಾತ್' ಇತ್ಯಾದಿ ಸೂತ್ರಗಳಿಂದ ಸಾಧಿಸಲಾಗಿದೆ. ಆದ್ದರಿಂದ ಆತ್ಮಶ್ರುತಿಗೆ ಸಾವಕಾಶತ್ವವನ್ನು ಹೇಳಲು ಸಾಧ್ಯವಿಲ್ಲ.

जायमानत्वस्य ब्रह्मणि सावकाशत्वं च ''क्रियाप्रवर्तकत्वेन प्रादुर्भावो हरेर्जनिः'' इत्यनुव्याख्यान आनन्दमयाधिकरण उक्तत्वात्तत्र, ''कारणत्वेन चाकाशादिषु'' इत्यत्र च सिद्धमिति ।

ಇನ್ನು ಜೀವಾದಿ ವಿಷಯಕವಾದ ಜಾಯಮಾನತ್ವವೆಂಬ ಲಿಂಗವು ವಿಷ್ಣುವಿನಲ್ಲೇ ಸಾವಕಾಶವಾಗಿದೆ. ಏಕೆಂದರೆ 'ಕ್ರಿಯಾಪ್ರವರ್ತಕತ್ವೇನ ಪ್ರಾದುರ್ಭಾವೋ ಹರೇರ್ಜನಿಃ' ಎಂಬ ಆನಂದಮಯಾಧಿಕರಣದ ಅನುವ್ಯಾಖ್ಯಾನದಲ್ಲಿ, 'ಭಗವಂತನ ಪ್ರಾದುರ್ಭಾವವೇ ಅವನ ಹುಟ್ಟುವಿಕೆಯೆನಿಸುತ್ತಿದೆ'. ಎಂದು ಸಮರ್ಥಿಸಿದ್ದಾರೆ. 'ಕಾರಣತ್ವೇನ ಚಾಕಾಶಾದಿಷು' ಎಂಬ

ಸೂತ್ರದಲ್ಲಿಯೂ ಸಹ ಭಗವಂತನ ಹುಟ್ಟುವಿಕೆಯೆಂಬ ಶಬ್ದಕ್ಕೆ ಪ್ರಾದುರ್ಭಾವ, ಅಭಿವ್ಯಕ್ತಿ ಮೊದಲಾದ ಅರ್ಥಗಳನ್ನೇ ಹೇಳಿದ್ದಾರೆ. ಆದ್ದರಿಂದ ಜಾಯಮಾನತ್ವವೆಂಬ ಲಿಂಗವು ಸಾವಕಾಶವಾಗಿದೆ. ಇಂತಹ ಲಿಂಗದಿಂದ ವಿಷ್ಣುವಿಷಯಕವಾದ ಲಿಂಗ, ಪ್ರಕರಣಾದಿಗಳಿಗೆ ಬಾಧದೋಷವನ್ನು ಹೇಳಲು ಸಾಧ್ಯವೇ ಇಲ್ಲ. ಹೀಗಿರುವಾಗ ಕೇವಲ ಸಮಾಖ್ಯಾಪ್ರಮಾಣಗಳ ಆಧಾರದಿಂದ ರುದ್ರಾದಿಗಳೇ ದ್ಯುಭ್ವಾದ್ಯಾಯತನರಾಗಿದ್ದಾರೆಂದು ಹೇಗೆ ಹೇಳುತ್ತೀರಿ?

ಪ್ರಕಾಶಃ –

''ದ್ಯುಭ್ವಾದ್ಯಾಯತನತ್ವಂ ರುದ್ರಪ್ರಧಾನಜೀವವಾಯೂನಾಮಿತಿ ಪೂರ್ವಃ ಪಕ್ಷಃ'' ಇತ್ಯಾದಿಟೀಕಾಂ ವಿವೃಣ್ವನ್ ಸಮಾಖ್ಯಾತ್ರಯೇಣ ಜಾಯಮಾನತ್ವರೂಪಜೀವಲಿಙ್ಗೇನ ಚ ಕೋಟಿಚತುಷ್ಟಯಪೂರ್ವಪಕ್ಷಾನಾಹ – ದ್ಯುಭ್ವಾದ್ಯಾಯತನಂ ರುದ್ರ ಇತ್ಯಾದಿನಾ ।।

ವಿವರಣೆ - ಪೂರ್ವಪಕ್ಷವನ್ನು ಪ್ರಾರಂಭಿಸುತ್ತಿದ್ದಾರೆ. 'ದ್ಯುಭ್ವಾದ್ಯಾಯತನತ್ವಂ ರುದ್ರಪ್ರಧಾನಜೀವವಾಯೂನಾಮಿತಿ ಪೂರ್ವಃ ಪಕ್ಷಃ' ದ್ಯುಭ್ವಾದ್ಯಾಯತನತ್ವವು ರುದ್ರ, ಪ್ರಕೃತಿ, ಜೀವ ಹಾಗೂ ವಾಯುದೇವತೆಯಲ್ಲಿ ಇರುತ್ತದೆಂದು ಪೂರ್ವಪಕ್ಷ. ಇತ್ಯಾದಿ ಟೀಕೆಯನ್ನು ವಿವರಿಸುವವರಾಗಿ ಮೂವರಲ್ಲಿರುವ ಸಮಾಖ್ಯಾಪ್ರಮಾಣದಿಂದ ಹಾಗೂ ಜಾಯಮಾನತ್ವವೆಂಬ ಲಿಂಗದಿಂದ ನಾಲ್ಕುಕೋಟಿಯುಳ್ಳ ಪೂರ್ವಪಕ್ಷವನ್ನು ಪ್ರತಿಪಾದಿಸುತ್ತಿದ್ದಾರೆ 'ದ್ಯುಭ್ವಾದ್ಯಾಯತನಂ ರುದ್ರಃ' ಇತ್ಯಾದಿ ವಾಕ್ಯದಿಂದ.

ಪ್ರಕಾಶಃ –ಯಥಾಸೂತ್ರಮಯಂ ನಿರ್ದೇಶಃ । ಬಹೂಪಾದನತ್ವಾಜ್ಜೀವಸ್ಯಾನ್ತೇ ನಿರ್ದೇಶಃ । ''ರುದ್ರೋ ವಾವ'' ಇತಿ ವಾಕ್ಯಂ ರುದ್ರಸ್ಯ ದ್ಯುಭ್ವಾದ್ಯಾಯತನತ್ವೇ । ''ಪ್ರಾಣಾನಾಮ್'' ಇತಿ ವಾಕ್ಯಂ ರುದ್ರಸ್ಯ ಪ್ರಾಣಾಧಾರತ್ವೇ ।

ಗ್ರಂಥದಲ್ಲಿ ಸೂತ್ರದಲ್ಲಿ ನಿರ್ದೇಶವಿರುವಂತೆ 'ದ್ಯುಭ್ವಾದ್ಯಾಯತನಂ ರುದ್ರಃ' ಎಂದು ಹೇಳಿರುತ್ತಾರೆ. ಜೀವನನ್ನು ಕೊನೆಯಲ್ಲಿ ಏಕೆ ಸ್ವೀಕರಿಸಿದ್ದಾರೆಂದರೆ ಅವನ ವಿಷಯದಲ್ಲಿ ದ್ಯುಭ್ವಾದ್ಯಾಯತನತ್ವವನ್ನು ಸಮರ್ಥಿಸಲು ಬಹಳ ಉಪಪಾದನೆಯನ್ನು ಮಾಡಬೇಕು. ಆದಕ್ಕೋಸ್ಕರ ಸೂಚೀಕಟಾಹ ನ್ಯಾಯದಂತೆ ಕೊನೆಯಲ್ಲಿ ಜೀವವಿಷಯಕ ಪೂರ್ವಪಕ್ಷವನ್ನು ಮಾಡಿದ್ದಾರೆ.

'ರುದ್ರೋವಾವ' ಎಂಬ ವಾಕ್ಯವು ರುದ್ರನು ದ್ಯುಭ್ವಾದ್ಯಾಯತನನಾಗಿದ್ದಾನೆನ್ನಲು; 'ಪ್ರಾಣಾನಾಂ ಗ್ರಂಥಿರಸಿ' ಎಂಬ ವಾಕ್ಯವು ರುದ್ರನು ಪ್ರಾಣನಿಗೆ ಆಧಾರನಾಗಿದ್ದಾನೆನ್ನಲು ಪ್ರಮಾಣವಾಗಿದೆಯೆಂದರ್ಥ.

ಪ್ರಕಾಶಃ – ಟೀಕಾಯಾಂ ಭಾಷ್ಯೇ ಸಾಕ್ಷಾದುಪಾತ್ತಸ್ಯ ಪ್ರಾಣಾನಾಮಿತಿ ವಾಕ್ಯಸ್ಯ ಪೂರ್ವಮಾದಿಪದೋಪಾತ್ತಸ್ಯಾನ್ಯತ್ರ ಸಾಕ್ಷಾದುಕ್ತಸ್ಯ ತು ಪಶ್ಚಾದುಕ್ತಾವಪಿ ವಿಷಯವಾಕ್ಯೇ ಕ್ರಮೋಪಾತ್ತ-

लिङ्गोपपादनसौकर्याय ''रुद्रो वाव'' इत्यस्यैवात्र पूर्वमुक्तिः ।

ಟೀಕೆಯಲ್ಲಿ 'ಪ್ರಾಣಾನಾಂ ಗ್ರಂಥಿರಸಿ' ಎಾಬ ವಾಕ್ಯವನ್ನು ಮೊದಲು ಉಲ್ಲೇಖಿಸಿದ್ದಾರೆ. 'ರುದ್ರೋ ವಾವ ಲೋಕಾಧಾರಃ' ಎಂಬುದನ್ನು ಅನಂತರ ಉಲ್ಲೇಖಿಸಿದ್ದಾರೆ. ಏಕೆಂದರೆ ಭಾಷ್ಯದಲ್ಲಿ 'ಪ್ರಾಣಾನಾಂ ಗ್ರಂಥಿರಸಿ' ಎಂಬ ವಾಕ್ಯವನ್ನು ಮೊದಲು ಉಲ್ಲೇಖ ಮಾಡಿ, ಆದಿಪದದಿಂದ 'ರುದ್ರೋ ವಾವ' ಎಂಬ ವಾಕ್ಯವನ್ನು ಸಂಗ್ರಹಿಸಿದ್ದಾರೆ. ನ್ಯಾಯವಿವರಣದಲ್ಲಿ ಭಾಷ್ಯದಲ್ಲಿ ಆದಿಪದೋಪಾತ್ತವಾದ 'ರುದ್ರೋ ವಾವ' ಎಂಬುದನ್ನು ಉಲ್ಲೇಖಿಸಿ ಆದಿಪದದಿಂದ 'ಪ್ರಾಣಾನಾಂ ಗ್ರಂಥಿರಸಿ' ಎಂಬ ವಾಕ್ಯವನ್ನು ವಿವಕ್ಷಿಸಿದ್ದಾರೆ. ಟೀಕಾರಾಯರು ಭಾಷ್ಯದ ಮಾತನ್ನು ಅನುಸರಿಸಿ ಮೊದಲು 'ಪ್ರಾಣಾನಾಂ ಗ್ರಂಥಿರಸಿ' ಎಂಬ ವಾಕ್ಯವನ್ನೇ ಉಲ್ಲೇಖಿಸಿ ಅನಂತರ ಆದಿಪದೋಪಾತ್ತವಾದ್ದನ್ನು ಉಲ್ಲೇಖಿಸಿರುತ್ತಾರೆ. ಆದರೆ ಗ್ರಂಥಕಾರರು ವಿಪರೀತವಾಗಿ ಮೊದಲು 'ರುದ್ರೋ ವಾವ ಲೋಕಾಧಾರಃ' ಎಂಬುದನ್ನು ಉಲ್ಲೇಖಿಸಿ, ಅನಂತರ 'ಪ್ರಾಣಾನಾಂ ಗ್ರಂಥಿರಸಿ' ಎಂಬ ವಾಕ್ಯವನ್ನು ಉಲ್ಲೇಖಿಸಿದ್ದಾರೆ. ಕಾರಣವೇನೆಂದರೆ ವಿಷಯವಾಕ್ಯದಲ್ಲಿ ಮೊದಲು ದ್ಯುಭ್ವಾದ್ಯಾಯತನತ್ವವೆಂಬ ಲಿಂಗವನ್ನು ಹೇಳಿ, ಅನಂತರ ಪ್ರಾಣಾಧಾರತ್ವ ಲಿಂಗವನ್ನು ಹೇಳಲಾಗಿದೆ. ಆದಕ್ಕನುಸಾರಿಯಾಗಿ ಗ್ರಂಥಕಾರರು ಮೊದಲು 'ರುದ್ರೋ ವಾವ ಲೋಕಾಧಾರಃ' ಎಂಬುದನ್ನು ಉಲ್ಲೇಖಿಸಿ, ಅನಂತರ 'ಪ್ರಾಣಾನಾಂ ಗ್ರಂಥಿರಸಿ' ಎಂಬುದನ್ನು ಉಲ್ಲೇಖಿಸಿದ್ದಾರೆ. ಆದ್ದರಿಂದ ವಿವಕ್ಷಾಭೇದದಿಂದ ಟೀಕಾರಾಯರ ಹಾಗೂ ಗ್ರಂಥಕಾರರ ಅಭಿಪ್ರಾಯಗಳು ಸಮಂಜಸವಾಗಿವೆ.

प्रकाशः – तावतैव पूर्तौ द्वितीयवाक्यस्याप्युक्तिर्भाष्योपात्तत्वाद्वा तत्र बहुरुद्रश्रुतिलिङ्गसत्त्वेन विष्णुसमाख्यातः प्राबल्योपपादनाय वेति ज्ञेयम् ।

'ರುದ್ರೋ ವಾವ ಲೋಕಾಧಾರಃ' ಎಂಬುದನ್ನು ಉಲ್ಲೇಖಿಸಿದರೆ ಸಾಕು, 'ಪ್ರಾಣಾನಾಂ ಗ್ರಂಥಿರಸಿ' ಎಂಬ ವಾಕ್ಯವನ್ನೇಕೆ ಉಲ್ಲೇಖಿಸಬೇಕು ? ಎಂದರೆ ರುದ್ರನ ವಿಷಯದಲ್ಲಿ ಹೆಚ್ಚಾದ ಲಿಂಗಗಳು ಇರುವುದು ಪ್ರಾಣಾಧಾರತ್ವವನ್ನು ಹೇಳುವ ವಾಕ್ಯದಲ್ಲೇ; ಹೊರತು ಲೋಕಾಧಾರತ್ವವನ್ನು ಹೇಳುವ ವಾಕ್ಯದಲ್ಲಲ್ಲ. ಈ ಕಾರಣದಿಂದ ವಿಷ್ಣುಸಮಾಖ್ಯಾಪ್ರಮಾಣಕ್ಕಿಂತ ರುದ್ರನ ಸಮಾಖ್ಯಾಪ್ರಮಾಣವು ಪ್ರಬಲವಾಗಿದೆಯೆಂದು ಸಮರ್ಥಿಸುವುದಕ್ಕಾಗಿ ಎರಡನ್ನೂ ಉಲ್ಲೇಖಿಸಬೇಕು.

प्रकाशः – तत्र रुद्रेति सम्बुद्ध्यन्तपाठः साधुः । द्वितीये ''तदधिष्ठानादेवतु'' इत्वत्यत्र टीकायां ''रुद्रत्वं प्राणानामाश्रयोऽन्तकश्चासि । स त्वं मामाविश'' इति व्याख्यानात् ।

ಶ್ರುತಿಯಲ್ಲಿರುವ ರುದ್ರಶಬ್ದವು ಸಂಬುದ್ಧ್ಯಂತವಾದುದು. ಇಂತಹ ರುದ್ರಶಬ್ದವೇ ಸಾಧುವಾಗಿವೆ. ಏಕೆಂದರೆ ಎರಡನೇ ಅಧ್ಯಾಯದ 'ತದಧಿಷ್ಠಾನದೇವತು' ಎಂಬ ಸೂತ್ರಭಾಷ್ಯದ ಟೀಕೆಯಲ್ಲಿ 'ರುದ್ರತ್ವಂ ಪ್ರಾಣಾನಾಮಾಶ್ರಯೋಽಂತಕಶ್ಚಾಸಿ, ಸ ತ್ವಂ ಮಾಮಾವಿಶ' ಎಂದು ವ್ಯಾಖ್ಯಾನಿಸಿದ್ದಾರೆ. ಇಲ್ಲಿ ರುದ್ರಶಬ್ದವನ್ನು ಸಂಬುದ್ಧ್ಯಂತವಾಗಿ ವ್ಯಾಖ್ಯಾನಿಸಿದ್ದರಿಂದ ಪ್ರಕೃತ 'ಪ್ರಾಣಾನಾಂ' ಎಂಬ ಶ್ರುತಿಯಲ್ಲಿರುವ 'ರುದ್ರ' ಶಬ್ದವೂ ಸಂಬುದ್ಧ್ಯಂತವೇ ಆಗುತ್ತದೆ.

ಪ್ರಕಾಶಃ – तद्भूतभवदादिकम् आकाशशब्दिते प्रधाने ओतमित्यर्थः । तच्छब्दपरामर्शद्योतनाय भूतमित्यादिपूर्ववाक्योक्तिः ।

ಹಿಂದಿನ ಮುಂದಿನ ಪದಾರ್ಥಗಳೆಲ್ಲವೂ ಆಕಾಶವೆನಿಸಿದ ಪ್ರಕೃತಿಯಲ್ಲಿ ಆಶ್ರಯಿಸಿವೆ ಎಂಬುದಾಗಿ 'ಭೂತಂ ಚ ಭವಚ್ಚ' ಎಂಬ ಶ್ರುತಿಗೆ ಅರ್ಥವನ್ನು ತಿಳಿಯಬೇಕು. 'ತದೋತಂ' ಎಂಬಲ್ಲಿರುವ 'ತತ್' ಶಬ್ದದಿಂದ ಯಾವುದನ್ನು ಪರಾಮರ್ಶ ಮಾಡಬೇಕೆಂದು ತಿಳಿಸುವುದಕ್ಕಾಗಿ 'ಭೂತಂ ಚ ಭವಚ್ಚ' ಎಂಬ ಹಿಂದಿನ ಶ್ರುತಿವಾಕ್ಯವನ್ನು ಗ್ರಂಥಕಾರರು ಹೇಳಿದ್ದಾರೆ.

ಪ್ರಕಾಶಃ – आकाशशब्दस्याक्षरनये प्रधानपरत्वं व्युदस्य चित्प्रकृतिपरत्वोक्तावपीह पूर्वपक्षी तत्रत्यपूर्वपक्षन्यायेन प्रधानपरत्वमेव मन्यत इति यथाटीकमत्र प्रधानपरतया भूतमित्यादिवाक्योक्तिर्युक्ता ।

ವಾಸ್ತವಿಕವಾಗಿ ಅಕ್ಷರಾಧಿಕರಣದಲ್ಲಿ 'ಆಕಾಶ' ಶಬ್ದದಿಂದ ಜಡವಾದ ಪ್ರಕೃತಿಯು ಪ್ರತಿಪಾದ್ಯವಾಗುವುದಿಲ್ಲ. ಲಕ್ಷ್ಮೀದೇವಿಯೇ ಪ್ರತಿಪಾದ್ಯಳಾಗುತ್ತಾಳೆಂದು ಸಮರ್ಥಿಸಿದ್ದಾರೆ. ಆದರೆ ಈ ಅಧಿಕರಣದ ಪೂರ್ವಪಕ್ಷಿಯು, ಆ ಅಧಿಕರಣದ ಪೂರ್ವಪಕ್ಷ ನ್ಯಾಯದಂತೆ ಜಡವಾದ ಪ್ರಧಾನಪರತ್ವವನ್ನೇ ಅಂಗೀಕರಿಸಿದ್ದಾನೆ. ಆದ್ದರಿಂದ ಟೀಕೆಯಲ್ಲಿ ಹೇಳಿದಂತೆ ಗ್ರಂಥಕಾರರೂ *ಸಹ* ಆಕಾಶಶಬ್ದಕ್ಕೆ ಜಡಪ್ರಕೃತಿಯೆಂದು ವ್ಯಾಖ್ಯಾನಿಸಿ ಪೂರ್ವಪಕ್ಷವನ್ನು ಮಾಡುತ್ತಿದ್ದಾರೆ. ಇದು ಅಯುಕ್ತವಲ್ಲ.

ಪ್ರಕಾಶಃ – सूत्रेणेति ।। स्यूतम् अस्मिन् जगत् इति व्युत्पत्त्या जगदाधारेण वायुना संदृब्धानि सङ्गतानि । तदाधारतयाऽवस्थितानीत्यर्थः ।

'ವಾಯುನಾ ವೈ' ಎಂಬ ಶ್ರುತಿಯಲ್ಲಿರುವ 'ಸೂತ್ರ' ಶಬ್ದಕ್ಕೆ 'ವಾಯು' ಎಂದರ್ಥ. 'ಸ್ಯೂತಮ್ ಅಸ್ಮಿನ್ ಜಗತ್' ಎಂಬ ವ್ಯುತ್ಪತ್ತಿಯಿಂದ ವಾಯುದೇವನಲ್ಲಿ ಸಮಸ್ತ ಜಗತ್ತು ಆಶ್ರಿತವಾಗಿದೆಯೆಂದರ್ಥ. ಆಂದರೆ ಸೂತ್ರೇಣ = ಸಮಸ್ತ ಜಗತ್ತಿಗೆ ಆಧಾರನಾದ ವಾಯುದೇವನಿಂದ, ಸಂದೃಬ್ಧಾನಿ = ಸಂಗತವಾಗಿವೆ ಎಂದರೆ ಅವನ ಆಧಾರದಲ್ಲಿ ಇವೆ ಎಂದು ಶ್ರುತಿಯು ಹೇಳುತ್ತಿದೆ. ಇದರಿಂದ ದ್ಯುಭ್ವಾದ್ಯಾಯತನತ್ವವನ್ನು ವಾಯುದೇವನಲ್ಲಿ ಹೇಳಿದಂತಾಗುತ್ತದೆ.

ಪ್ರಕಾಶಃ – अत्र टीकायां ''विष्णोर्द्युभ्वाद्यायतनत्वप्रसिद्धावपि'' इत्यादिना विष्णुसमाख्यामाशङ्क्य बहुधाजन्मबाध उक्तः । तत्रान्यत्रोक्तश्रुतिलिङ्गबाहुल्येन प्रबलरुद्रसमाख्याबाधोऽपि वाच्य इति भावेन शङ्कोत्तरे वक्ति – नच लोकाश्च लोकिनश्चेति ।।

ಪ್ರಕೃತ ಟೀಕೆಯಲ್ಲಿ 'ವಿಷ್ಣೋರ್ದ್ಯುಭ್ವಾದ್ಯಾಯತನತ್ವಪ್ರಸಿದ್ಧಾವಪಿ' ಇತ್ಯಾದಿ ವಾಕ್ಯದಿಂದ ವಿಷ್ಣು ವಿಷಯದಲ್ಲಿರುವ ಸಮಾಖ್ಯಾಪ್ರಮಾಣಕ್ಕೆ 'ಬಹುಧಾ ಜಾಯಮಾನತ್ವ' ಎಂಬ (ಅನೇಕಬಾರಿ ಹುಟ್ಟುವಿಕೆಯೆಂಬ) ಲಿಂಗದಿಂದ ಬಾಧವು ಬರುತ್ತದೆಂದು ಹೇಳಿದ್ದಾರೆ. ಮತ್ತು ನ್ಯಾಯವಿವರಣದಲ್ಲಿ

ಹೇಳಲ್ಪಟ್ಟ ರುದ್ರನ ವಿಷಯದಲ್ಲಿರುವ ಅನೇಕ ಶ್ರುತಿಲಿಂಗಗಳ ಬಾಹುಲ್ಯದಿಂದ ರುದ್ರನ ವಿಷಯದಲ್ಲಿರುವ ಸಮಾಖ್ಯಾಪ್ರಮಾಣವೇ ಬಲಿಷ್ಠವಾಗುತ್ತದೆ. ಇದರಿಂದಲೂ ವಿಷ್ಣುವಿಷಯದಲ್ಲಿರುವ ಸಮಾಖ್ಯಾಪ್ರಮಾಣವು ಬಾಧಿತವಾಗುತ್ತದೆಂಬ ಅಭಪ್ರಾಯದಿಂದ ಶಂಕೆಯನ್ನು ಹಾಗೂ ಉತ್ತರವನ್ನು 'ನಚ ಲೋಕಾಶ್ಚ ಲೋಕಿನಶ್ಚ' ಎಂಬ ವಾಕ್ಯದಿಂದ ಹೇಳುತ್ತಿದ್ದಾರೆ.

ಪ್ರಕಾಶಃ – ''सर्वेवा ते प्राणाश्च प्राणिनश्च देवाश्च दिव्यानि च लोकाश्च लोकिनश्चालोकाश्चालोकिनश्च विष्णावेवोताश्च प्रोताश्च'' इति विष्णुसमाख्याऽस्तीत्यर्थः । तथाच तद्बलाद्विष्णुविषयत्वमपीति भावः । **प्राणाः** इन्द्रियाणि । **प्राणिनो** देहिनः । दिवि भवानि **दिव्यानि** कल्पतरुप्रभृतीनि वस्तूनि । **लोकाः** भूरादयः । तदभिमानिनो **लोकिनः** । **अलोका** वैकुण्ठादयः । **अलोकिनस्तद्गता** मुक्ता इत्यर्थः ।

'सर्वे वा ते प्राणाश्च प्राणिनश्च देवाश्च दिव्यानि च लोकाश्च लोकिनश्चालोकाश्च अलोकिनश्च विष्णावेवोताश्च प्रोताश्च' ಎಂಬ ಶ್ರುತಿಯು ವಿಷ್ಣುವೇ ಲೋಕಾಧಾರನಾಗಿದ್ದಾನೆನ್ನಲು ಸಮಾಖ್ಯಾಪ್ರಮಾಣವಾಗಿದೆ. ಇದರ ಬಲದಿಂದ 'ಯಸ್ಮಿನ್‌ದ್ಯೌಃ' ಎಂಬ ಶ್ರುತಿಯು ವಿಷ್ಣುವಿಷಯಕವಾಗುತ್ತದೆಂದು ಪ್ರಶ್ನಿಸುತ್ತಿದ್ದಾರೆ. ಶ್ರುತಿಯಲ್ಲಿರುವ ಕೆಲವು ಪದಗಳ ಅರ್ಥ ಹೀಗಿದೆ - ಪ್ರಾಣಾಃ = ಇಂದ್ರಿಯಗಳು, ಪ್ರಾಣಿನಃ = ದೇಹವುಳ್ಳವರು, ದಿವ್ಯಾನಿ = ಸ್ವರ್ಗಲೋಕದಲ್ಲಿ ಇರುವ ಕಲ್ಪತರು ಮೊದಲಾದ ವಸ್ತುಗಳು, ಲೋಕಾಃ = ಭೂರ್ಲೋಕಾದಿಗಳು, ಲೋಕಿನಃ = ಭೂರ್ಲೋಕಾದಿಗಳ ಅಭಿಮಾನಿದೇವತೆಗಳು, ಅಲೋಕಾಃ = ವೈಕುಂಠಾದಿಗಳು, ಅಲೋಕಿನಃ = ವೈಕುಂಠದಲ್ಲಿರುವ ಮುಕ್ತರು.

ಪ್ರಕಾಶಃ – **उक्तमिति ।। एतत्पादीयाधिकरणपूर्वपक्षन्यायसङ्ग्रह उक्तमित्यर्थः । टीकावाक्यविरोधमाशङ्क्याह – विष्णाविति ।। जायमानत्वेति ।। एतेन टीकायां बहुधा जन्मेत्युक्तावपि जन्मरूपलिङ्ग एव तात्पर्यम् ।**

'ಉಕ್ತಮ್' ಎಂದರೆ ಈ ಪಾದದ ಎಲ್ಲಾ ಅಧಿಕರಣಗಳ ಪೂರ್ವಪಕ್ಷ ನ್ಯಾಯದ ಸಂಗ್ರಹವು ಹೇಳಲ್ಪಟ್ಟದೆ ಎಂದರ್ಥ. ಟೀಕಾವಾಕ್ಯದ ವಿರೋಧವನ್ನು ಆಶಂಕಿಸುತ್ತಿದ್ದಾರೆ 'ವಿಷ್ಣು' ಎಂಬ ವಾಕ್ಯದಿಂದ. 'ಜಾಯಮಾನತ್ವ' ಎಂದು ಹೇಳಿದ್ದರಿಂದ ಟೀಕೆಯಲ್ಲಿ ಬಹುಧಾ (ಅನೇಕ ಬಾರಿ) ಜನ್ಮವನ್ನು ಹೇಳಿದ್ದರೂ ಸಹ ಜನ್ಮವೆಂಬ ಲಿಂಗದಲ್ಲಿಯೇ ತಾತ್ಪರ್ಯವೆಂದು ತಿಳಿಯಬೇಕು.

ಪ್ರಕಾಶಃ – **अनेकजडात्मना बहुजननस्येक्षतिनये निरस्तत्वाज्जन्मलिङ्गेनैव विवक्षितसिद्धेश्च बहुधेत्युक्तेरभ्युच्चयत्वेनोपपत्तेरिति भावः ।**

ಅನೇಕ ಬಾರಿ ಜಡ ಸ್ವರೂಪದಲ್ಲಿ ಹುಟ್ಟುವಿಕೆಯನ್ನು ಈಕ್ಷತ್ಯಧಿಕರಣದಲ್ಲಿ ನಿರಾಸ ಮಾಡಲಾಗಿದೆ. ಮತ್ತು ಜನ್ಮವೆಂಬ ಒಂದೇ ಲಿಂಗದಿಂದಲೇ ವಿಷ್ಣುವಿಷಯದಲ್ಲಿರುವ ಸಮಾಖ್ಯಾಶ್ರುತಿಗೆ ಬಾಧವನ್ನು ಹೇಳಲು ಬರುವಾಗ 'ಬಹುಧಾ' ಎಂದು ಹೇಳಿದ್ದು ಕೇವಲ ಅಭ್ಯುಚ್ಚಯಯುಕ್ತಿಗೋಸ್ಕರವೆಂದು ತಿಳಿಯಬೇಕು.

ಪ್ರಕಾಶಃ – एतेन रुद्रसमाख्यायाः प्राबल्येन विष्णुसमाख्यया प्रतिहत्यभावव-द्वाय्वादिसमाख्याया जायमानत्वादिलिङ्गबलेनाप्रतिहतत्वं टीकारीत्योपपाद्यमित्युक्तं भवति । वक्ष्यति चैवं पूर्वपक्षान्तरमपीत्यादि । लिङ्गनिरवकाशत्वं चाग्रे व्यक्तम् ।

ಹೀಗೆ ಹೇಳಿದ್ದರಿಂದ ರುದ್ರನ ವಿಷಯದಲ್ಲಿರುವ ಸಮಾಖ್ಯಾಪ್ರಮಾಣವು ಪ್ರಬಲವಾಗಿದೆ. ಇದಕ್ಕೆ ವಿಷ್ಣುವಿಷಯದಲ್ಲಿರುವ ಸಮಾಖ್ಯಾಪ್ರಮಾಣದಿಂದ ಬಾಧವನ್ನು ಹೇಳಲಾಗದು. ಆದರೆ ವಾಯು ಮೊದಲಾದವರ ವಿಷಯದಲ್ಲಿರುವ ಸಮಾಖ್ಯಾಪ್ರಮಾಣಕ್ಕೆ ಪ್ರಾಬಲ್ಯವು ಇರುವುದಿಲ್ಲವಲ್ಲವೇ? ಎಂದು ಪ್ರಶ್ನಿಸಬಾರದು. ಅಲ್ಲಿಯೂ ಸಹ ಜಾಯಮಾನತ್ವ ಮೊದಲಾದ ಲಿಂಗಗಳ ಬಲದಿಂದ ಪ್ರಾಬಲ್ಯವನ್ನು ಸಮರ್ಥಿಸಿ ವಿಷ್ಣುವಿಷಯಕವಾದ ಸಮಾಖ್ಯಾಪ್ರಮಾಣವನ್ನೇ ವಾಯ್ವಾದಿ ಸಮಾಖ್ಯಾಪ್ರಮಾಣಗಳು ಬಾಧಿಸುತ್ತವೆ ಹೊರತು, ವಿಷ್ಣುಸಮಾಖ್ಯಾದಿಂದ ವಾಯ್ವಾದಿಸಮಾಖ್ಯಾಪ್ರಮಾಣಗಳಿಗೆ ಬಾಧ ಬರುವುದಿಲ್ಲವೆಂದು ಟೀಕೆಯ ಪ್ರಕಾರ ಸಮರ್ಥಿಸಿದಂತಾಯಿತು. ಮತ್ತು ಹೀಗೆಯೇ ಮತ್ತೊಂದು ಪೂರ್ವಪಕ್ಷವನ್ನೂ ಮುಂದೆ ಹೇಳುವವರಿದ್ದಾರೆ. ವಾಯು ಮೊದಲಾದವರ ವಿಷಯದಲ್ಲಿರುವ ಲಿಂಗಕ್ಕೆ ನಿರವಕಾಶತ್ವವೂ ಸಹ ಮುಂದೆಯೇ ಸ್ಪಷ್ಟವಾಗುತ್ತದೆ.

ಪ್ರಕಾಶಃ – नन्वेवं टीकायां ''विष्णोर्युग्भ्वाद्यायतनत्वप्रसिद्धावपि'' इत्यादिना समाख्याबलेन विष्णोर्युग्भ्वाद्यायतनत्वमाशङ्क्य च जायमानत्वलिङ्गेन तद्बाधो न वाच्यः ।

ಶಂಕಾ - ಜಾಯಮಾನತ್ವವೆಂಬ ಲಿಂಗವನ್ನು ಯಾವ ಸಂದರ್ಭದಲ್ಲಿ ಹೇಗೆ ಉಪಯೋಗಿಸಿಕೊಳ್ಳಬೇಕೆಂಬುದನ್ನು ವಿಚಾರ ಮಾಡಬೇಕು. ಗ್ರಂಥಕಾರರು ತಮ್ಮ ಅಭಿಪ್ರಾಯವನ್ನು ಹೀಗೆ ಹೇಳಿದ್ದಾರೆ - ರುದ್ರಸಮಾಖ್ಯಾ ಪ್ರಮಾಣವು ಶ್ರುತಿಲಿಂಗಾದಿಗಳಿಂದ ಸಹಿತವಾದ್ದರಿಂದ ಸ್ವತಃ ಬಲಿಷ್ಠವಾಗಿದೆ. ಇಂತಹ ಬಲಿಷ್ಠವಾದ ರುದ್ರಸಮಾಖ್ಯಾಪ್ರಮಾಣದಿಂದ ವಿಷ್ಣುಸಮಾಖ್ಯಾಪ್ರಮಾಣವು ಬಾಧಿತವಾಗುತ್ತದೆ. ಆದರೆ ವಾಯು, ಪ್ರಕೃತಿ ಮೊದಲಾದವರ ವಿಷಯದಲ್ಲಿರುವ ಸಮಾಖ್ಯಾಪ್ರಮಾಣಕ್ಕೆ ಶ್ರುತಿ, ಲಿಂಗಾದಿಗಳಿಲ್ಲದ ಕಾರಣ ಪ್ರಾಬಲ್ಯವಿರುವುದಿಲ್ಲ. ಆದ್ದರಿಂದ ಜಾಯಮಾನತ್ವವೆಂಬ ಲಿಂಗವನ್ನು ವಾಯು ಮೊದಲಾದವರ ಸಮಾಖ್ಯಾಪ್ರಮಾಣ ವಿಷಯದಲ್ಲಿ ಆಧಾರವನ್ನಾಗಿ ವಿವಕ್ಷಿಸಬೇಕು. ಆವಾಗ ಅವುಗಳು ಬಲಿಷ್ಠವಾಗುತ್ತವೆ. ಅಂತಹ ವಾಯು ಮೊದಲಾದವರ ಸಮಾಖ್ಯಾಪ್ರಮಾಣದಿಂದಲೂ ಸಹ ವಿಷ್ಣುವಿಷಯಕವಾದ ಸಮಾಖ್ಯಾಪ್ರಮಾಣವು ಬಾಧಿತವಾಗುತ್ತದೆ.

ಆದರೆ ಟೀಕೆಯಲ್ಲಿ 'ವಿಷ್ಣೋಃ ದ್ಯುಭ್ವಾದ್ಯಾಯತನತ್ವಪ್ರಸಿದ್ಧಾವಪಿ' ಇತ್ಯಾದಿ ವಾಕ್ಯದಿಂದ ಸಮಾಖ್ಯಾಪ್ರಮಾಣದ ಆಧಾರದಿಂದ ವಿಷ್ಣುವು ದ್ಯುಭ್ವಾದ್ಯಾಯತನನಾಗಿದ್ದಾನೆಂದು ಆಶಂಕಿಸಿ ಜಾಯಮಾನತ್ವಲಿಂಗದಿಂದ ಬಾಧವನ್ನು ಹೇಳಿರುತ್ತಾರೆ. ಆದರೆ ಹೀಗೆ ಹೇಳುವುದು ಬೇಡ.

ಪ್ರಕಾಶಃ – ಅಪಿ ತೂಕ್ತದಿಶಾ ಪ್ರಬಲಯಾ ರುದ್ರಸಮಾಖ್ಯಯಾ ವಿಷ್ಣುಸಮಾಖ್ಯಾಯಾಂ ದೂರೀಕೃತಾಯಾಮಪ್ರತಿಹತಯಾ ವಾಖ್ವಾದಿಸಮಾಖ್ಯಾಯಾ ವಾಖ್ವಾದಿಪ್ರಾಪ್ತಿರಿತ್ಯೇವ ಸಮಾಧಾನಂ ವಾಚ್ಯಮ್ ।

ಹೊರತಾಗಿ ಹಿಂದೆ ಹೇಳಿದ ಪ್ರಕಾರ ಶ್ರುತಿಲಿಂಗಾದಿಗಳಿಂದ ರುದ್ರಸಮಾಖ್ಯಾಪ್ರಮಾಣವು ಅತ್ಯಂತ ಬಲಿಷ್ಠವಾಗಿದೆ. ಇದರಿಂದ ವಿಷ್ಣುಸಮಾಖ್ಯಾಪ್ರಮಾಣವು ಬಾಧಿತವಾಗುತ್ತದೆ. ಆವಾಗ ಯಾವುದೇ ಪ್ರತಿಬಂಧಕವಿಲ್ಲದ ಕಾರಣ ವಾಯು, ಪ್ರಕೃತಿ ಮೊದಲಾದವರ ವಿಷಯದಲ್ಲಿರುವ ಸಮಾಖ್ಯಾಪ್ರಮಾಣವು ಬಲಿಷ್ಠವಾಗುತ್ತದೆ. ಅಂತಹ ಸಮಾಖ್ಯಾಪ್ರಮಾಣಗಳಿಂದ ವಾಯು, ಪ್ರಕೃತಿ ಮೊದಲಾದವರೂ ಸಹ ದ್ಯುಭ್ವಾದ್ಯಾಯತನರಾಗುತ್ತಾರೆಂಬ ಸಮಾಧಾನವನ್ನು ಹೇಳಬಹುದು. ಹೀಗಿರುವಾಗ ಜಾಯಮಾನತ್ವವೆಂಬ ಲಿಂಗವನ್ನು ಆಶ್ರಯಿಸುವ ಆವಶ್ಯಕತೆ ಏನಿದೆ?

ಪ್ರಕಾಶಃ – ನಚ ವಿಷ್ಣುಸಮಾಖ್ಯೇವ ವಾಖ್ವಾದಿಸಮಾಖ್ಯಾऽಪಿ ಬಲವದ್ರುದ್ರಸಮಾಖ್ಯಯಾ ವ್ಯುದಸ್ತಾ ಸತೀ ನಾತ್ರ ವಾಖ್ವಾದಿಪ್ರಾಪಿಕೇತಿ ವಾಚ್ಯಮ್ ।

ವಿಷ್ಣು ಸಮಾಖ್ಯಾಪ್ರಮಾಣವು ಪ್ರಬಲವಾದ ರುದ್ರ ಸಮಾಖ್ಯಾಪ್ರಮಾಣದಿಂದ ಬಾಧಿತವಾಗುವಂತೆ ವಾಯು, ಪ್ರಕೃತಿ ಮೊದಲಾದವರ ವಿಷಯದಲ್ಲಿರುವ ಸಮಾಖ್ಯಾಪ್ರಮಾಣಗಳೂ ಸಹ ಬಲಿಷ್ಠವಾದ ರುದ್ರ ಸಮಾಖ್ಯಾಪ್ರಮಾಣದಿಂದಲೇ ಬಾಧಿತವಾಗುತ್ತಲ್ಲೇ? ಹೀಗಿರುವಾಗ ವಾಯು ಮೊದಲಾದವರು ಹೇಗೆ ಪ್ರಾಪ್ತರಾಗುತ್ತಾರೆ? ಎಂದು ಪ್ರಶ್ನಿಸಬಾರದು.

ಪ್ರಕಾಶಃ – ತಥಾತ್ವೇ ಜನ್ಮಲಿಙ್ಗೇನ ವಿಷ್ಣುಸಮಾಖ್ಯಾಬಾಧಪಕ್ಷेऽಪಿ ತೇನಾಪ್ರತಿಹತಬಲವತ್ಯಾ ರುದ್ರಸಮಾಖ್ಯಯಾ ವಾಖ್ವಾದಿಸಮಾಖ್ಯಾಬಾಧೇನ ತಯೋರತ್ರಾಪ್ರಾಪ್ತೇಃ ।

ಹಾಗೇನಾದರೂ ಗ್ರಂಥಕಾರರು ಹೇಳಿದ ಪಕ್ಷದಲ್ಲಿಯೂ ಅಂದರೆ ಜಾಯಮಾನತ್ವವೆಂಬ ಲಿಂಗದಿಂದ ವಿಷ್ಣು ಸಮಾಖ್ಯಾಪ್ರಮಾಣವು ಬಾಧಿತವಾಗುತ್ತದೆಂಬ ಪಕ್ಷದಲ್ಲಿಯೂ ಸಹ ಯಾವುದೇ ಪ್ರತಿಬಂಧಕವಿಲ್ಲದ ಬಲಿಷ್ಠವಾದ ರುದ್ರ ಸಮಾಖ್ಯಾಪ್ರಮಾಣದಿಂದ ವಾಯು ಮೊದಲಾದವರ ವಿಷಯದಲ್ಲಿರುವ ಸಮಾಖ್ಯಾಪ್ರಮಾಣಗಳೂ ಸಹ ಬಾಧಿತವಾಗುತ್ತವೆ. ಆದ್ದರಿಂದ ಗ್ರಂಥಕಾರರ ಪಕ್ಷದಲ್ಲಿಯೂ ವಾಯು ಮೊದಲಾದವರು ದ್ಯುಭ್ವಾದ್ಯಾಯತನರಾಗುತ್ತಾರೆಂಬ ಸಮರ್ಥನೆಯು ಕಷ್ಟಕರವಾಗುತ್ತದೆ.

ಪ್ರಕಾಶಃ – ತಸ್ಮಾದ್ರುದ್ರಸಮಾಖ್ಯಾಯಾ ಅಪಿ ಸಾವಕಾಶತ್ವೋಪಪಾದನೇನ ರುದ್ರಾದಿಸಮಾಖ್ಯಾತ್ರಯಸ್ಯಾಪಿ ವಿಷ್ಣುಸಮಾಖ್ಯಯಾ ಸಮಾಖ್ಯಾತ್ವೇನ ತುಲ್ಯಬಲತ್ವಾದ್ ರುದ್ರಾದಿಸಮಾಖ್ಯಾಸ್ವನ್ಯತಮಯಾऽಪಿ ವಿಷ್ಣುಸಮಾಖ್ಯಾನಿರಾಸಾಯೋಗಾತ್ ಜನ್ಮಲಿಙ್ಗೇನ ವಿಷ್ಣೌ ನಿರವಕಾಶೇನ ಬಾಧಿತಯಾ ವಿಷ್ಣುಸಮಾಖ್ಯಯಾऽತ್ರ ವಿಷ್ಣೋರ್ಧ್ರುಮ್ವಾದ್ಯಾಯತನತ್ವಾಪ್ರಾಪ್ತೌ ರುದ್ರಾದೌ ಯೋಗ್ಯೇನ ಜನ್ಮಲಿಙ್ಗೇನ ಬಾಧಾದವಿಶೇಷಿತಬಲಾಬಲೇನ ಸಮಾಖ್ಯಾತ್ರಯೇಣ ತುಲ್ಯಬಲೇನ ರುದ್ರಾದಿಕೋಟಿತ್ರಯಸ್ಯ ಜನ್ಮಲಿಙ್ಗೇನ ಜೀವಮಾತ್ರಾಸಾಧಾರಣೇನ ಜೀವಕೋಟೇಶ್ಚ

द्युभ्वाद्यायतनत्वप्राप्तिरिति वक्तव्यम् । एवञ्च टीकायां जन्मलिङ्गेन विष्णुसमाख्याबाधोक्तिः स्वरसा भवतीति चेत् ।

ಆದ್ದರಿಂದ ಅನಿವಾರ್ಯವಾಗಿ ರುದ್ರ ಸಮಾಖ್ಯಾಪ್ರಮಾಣಕ್ಕೂ ಸಹ ಸ್ವಲ್ಪ ಸಾವಕಾಶತ್ವವನ್ನು ಒಪ್ಪಬೇಕಾಗುತ್ತದೆ. ಅಂದರೆ ಶ್ರುತಿ, ಲಿಂಗಾದಿಗಳ ಆಧಾರದಿಂದ ರುದ್ರ ಸಮಾಖ್ಯಾಪ್ರಮಾಣಕ್ಕೆ ಪ್ರಾಬಲ್ಯವನ್ನು ಹೇಳಬಾರದು. ರುದ್ರ ಸಮಾಖ್ಯಾಪ್ರಮಾಣ, ವಾಯು ಸಮಾಖ್ಯಾಪ್ರಮಾಣ, ಪ್ರಕೃತಿ ಸಮಾಖ್ಯಾಪ್ರಮಾಣ ಮೂರೂ ಸಹ ಸಮಾಖ್ಯಾಗಳಾದ್ದರಿಂದ ತೇನ ರೂಪೇಣ ಸಮಾನವಾದ ಬಲವುಳ್ಳವುಗಳಾಗಿವೆ ಎಂದೇ ಹೇಳಬೇಕು. ಆವಾಗ ಈ ಮೂರರಲ್ಲಿ ಯಾವುದೇ ಒಂದು ಸಮಾಖ್ಯಾಪ್ರಮಾಣವೂ ಸಹ ವಿಷ್ಣು ಸಮಾಖ್ಯಾಪ್ರಮಾಣವನ್ನು ನಿರಾಸ ಮಾಡಲು ಸಾಮರ್ಥ್ಯವನ್ನು ಹೊಂದಿರುವುದಿಲ್ಲ. ಹೀಗಿರುವಾಗ ಜಾಯಮಾನತ್ವವೆಂಬ ಲಿಂಗವನ್ನು ಆಶ್ರಯಿಸಲೇ ಬೇಕು. ಈ ಲಿಂಗವು ನಿರವಕಾಶವಾಗಿ ಪ್ರಬಲವಾಗಿರುವುದರಿಂದ ವಿಷ್ಣು ಸಮಾಖ್ಯಾಪ್ರಮಾಣವು ಬಾಧಿತವಾಗುತ್ತದೆ. ಅಂದರೆ ಎಲ್ಲರ ವಿಷಯದಲ್ಲಿಯೂ ಸಮಾಖ್ಯಾಪ್ರಮಾಣಗಳು ಇದ್ದೇ ಇರುತ್ತವೆ. ಇವುಗಳಲ್ಲಿ ಪರಸ್ಪರ ಪ್ರಾಬಲ್ಯ, ದೌರ್ಬಲ್ಯವನ್ನು ವಿಚಾರ ಮಾಡಬಾರದು ಹೊರತಾಗಿ, ಜಾಯಮಾನತ್ವವೆಂಬ ಲಿಂಗದ ಬಲದಿಂದ ವಿಷ್ಣುವಿನ ಸಮಾಖ್ಯಾಪ್ರಮಾಣಕ್ಕೆ ಬಾಧ ದೋಷವನ್ನು ಹೇಳಬೇಕು. ಆದ್ದರಿಂದ ದ್ಯುಭ್ವಾದ್ಯಾಯತನನಾದವನು ವಿಷ್ಣುವಾಗಲು ಸಾಧ್ಯವಿಲ್ಲವೆಂದು ತಿಳಿಯುತ್ತದೆ. ಆ ಸಂದರ್ಭದಲ್ಲಿ ಜಾಯಮಾನತ್ವವೆಂಬ ಲಿಂಗಕ್ಕೆ ಆಶ್ರಯರಾದ ರುದ್ರಾದಿಗಳಲ್ಲಿ ಸಮಾನವಾಗಿ ಸಮಾಖ್ಯಾಪ್ರಮಾಣದ ಆಧಾರದಿಂದ ದ್ಯುಭ್ವಾದ್ಯಾಯನತನತ್ವವು ಪ್ರಾಪ್ತವಾಗುತ್ತದೆ. ಇನ್ನು ಜೀವನಲ್ಲಿ ಕೇವಲ ಜಾಯಮಾನತ್ವಲಿಂಗದ ಬಲದಿಂದ ದ್ಯುಭ್ವಾದ್ಯಾಯತನತ್ವವು ಪ್ರಾಪ್ತವಾಗುತ್ತದೆಂದು ಹೇಳಬೇಕು. ಇದು ಎಲ್ಲ ಜೀವರಲ್ಲೂ ಸಾಧಾರಣವಾದ್ದರಿಂದ ಜೀವಕೋಟಿಗೂ ಬರುತ್ತದೆಂದಾದೀತು. ಹೀಗೆ ವ್ಯಾಖ್ಯಾನಿಸುವುದರಿಂದ ಟೀಕೆಯಲ್ಲಿ ಜಾಯಮಾನತ್ವವೆಂಬ ಲಿಂಗದಿಂದ ವಿಷ್ಣು ಸಮಾಖ್ಯಾಪ್ರಮಾಣಕ್ಕೆ ಬಾಧವನ್ನು ಹೇಳಿರುವುದು ಅತ್ಯಂತ ಸ್ವರಸವಾಗುತ್ತದಲ್ಲವೇ?

प्रकाशः – मैवम् । अन्तकत्वादिलिङ्गेन रुद्रसमाख्याया निरवकाशत्वोक्तिपरपूर्वतन-टीकावाक्यविरोधात् ।

ಸಮಾಧಾನ - ಈ ಆಕ್ಷೇಪವೂ ತಪ್ಪು. ಒಂದು ವೇಳೆ ನಾಲ್ಕು ಸಮಾಖ್ಯಾಪ್ರಮಾಣಗಳು ಸಮಾನ ಬಲವೆಂದು ಹೇಳುವುದಾದರೆ ಟೀಕಾ ವಿರೋಧವೇ ಬರುತ್ತದೆ. ಏಕೆಂದರೆ ಹಿಂದಿನ ಟೀಕೆಯ ಮಾತುಗಳಲ್ಲಿ ಅಂತಕತ್ವವೇ ಮೊದಲಾದ ಲಿಂಗಗಳ ಬಲದಿಂದ ರುದ್ರವಿಷಯಕವಾದ ಸಮಾಖ್ಯಾಪ್ರಮಾಣಕ್ಕೆ ನಿರವಕಾಶತ್ವವನ್ನು ಹೇಳಿರುತ್ತಾರೆ. ಆದ್ದರಿಂದ ರುದ್ರಸಮಾಖ್ಯಾಪ್ರಮಾಣಕ್ಕೆ ಲಿಂಗಬಲದಿಂದ ಪ್ರಾಬಲ್ಯವು ತಿಳಿಯುತ್ತಿರುವಾಗ ಎಲ್ಲಾ ಸಮಾಖ್ಯಾಪ್ರಮಾಣಗಳು ಸಮಾನ ಬಲವೆಂದು ಹೇಳುವುದು ತಪ್ಪಾಗುತ್ತದೆ.

ಪ್ರಕಾಶಃ – ''समाख्याऽपि निरवकाश'' इत्यग्रे वक्ष्यमाणदिशा सावकाशत्वासम्भवाच्च ।

ಮತ್ತು ಮುಂದೆ ಗ್ರಂಥಕಾರರೇ 'ಸಮಾಖ್ಯಾऽಪಿ ನಿರವಕಾಶ' ಇತ್ಯಾದಿ ಗ್ರಂಥದಿಂದ ರುದ್ರ ವಿಷಯಕವಾದ ಸಮಾಖ್ಯಾಪ್ರಮಾಣಕ್ಕೆ ಸಾವಕಾಶತ್ವವನ್ನು ಹೇಳಲು ಸಾಧ್ಯವಿಲ್ಲವೆಂದು ಸಮರ್ಥಿಸುತ್ತಾರೆ.

ಪ್ರಕಾಶಃ – कथं तर्हि प्रकृतिवाय्वोः प्राप्तिः । रुद्रसमाख्याऽज्ञानिन इत्यस्तु । नन्वेक एवात्र पूर्वपक्षीति नियामकमस्ति । द्वितीयाद्यस्मृत्यधिकरणादाविवानेकेषां पूर्ववादित्वोपपत्तेरिति ।

ಹಾಗಾದರೆ ಪ್ರಬಲವಾದ ರುದ್ರ ಸಮಾಖ್ಯಾಪ್ರಮಾಣದಿಂದ ಉಳಿದರಡು ವಾಯು ಸಮಾಖ್ಯಾಪ್ರಮಾಣ, ಹಾಗೂ ಪ್ರಕೃತಿ ಸಮಾಖ್ಯಾಪ್ರಮಾಣಗಳು ಬಾಧಿತವಾಗುತ್ತಲ್ಲವೇ? ಆಗ ಪ್ರಕೃತಿ, ವಾಯುಗಳ ಪ್ರಾಪ್ತಿ ಹೇಗೆ? ಎಂಬ ಪ್ರಶ್ನೆಗೂ ಸಹ ಅವಕಾಶವಿಲ್ಲ. ಏಕೆಂದರೆ ರುದ್ರ ಸಮಾಖ್ಯಾಪ್ರಮಾಣವು ಬಲಿಷ್ಠವಾಗಿರುತ್ತದೆಂದು ಯಾರಿಗೆ ತಿಳಿದೇ ಇರುವುದಿಲ್ಲವೋ ಅಂತಹವನಿಗೆ ವಾಯ್ವಾದಿ ವಿಷಯಕವಾದ ಪೂರ್ವಪಕ್ಷವು ಹುಟ್ಟಬಹುದು. ಒಬ್ಬನೇ ಪೂರ್ವಪಕ್ಷಿ ಇರಬೇಕೆಂದೇನೂ ನಿಯಾಮಕ ಪ್ರಮಾಣವಿಲ್ಲ. ಎರಡನೆಯ ಅಧ್ಯಾಯದ ಮೊದಲನೆಯ ಸ್ಮೃತ್ಯಧಿಕರಣದಲ್ಲಿ ಹೇಳಿದಂತೆ ಅನೇಕ ಪೂರ್ವಪಕ್ಷಿಗಳು ಇರಬಹುದು.

ಪ್ರಕಾಶಃ – नन्वेवमपि रुद्रसमाख्यया विष्णुसमाख्याबाधेऽपि प्राकरणिक-विष्णुप्रापकबहुबाधायोगात् सावकाशत्वाच्च तस्या इति समाख्यया पूर्वपक्षमाक्षिपति – नन्विति ।।

ಹೀಗೆ ಹೇಳಿದರೂ ಸಹ ರುದ್ರಸಮಾಖ್ಯಾದಿಂದ ವಿಷ್ಣುಸಮಾಖ್ಯಾಪ್ರಮಾಣಕ್ಕೆ ಬಾಧವನ್ನೇನೋ ಹೇಳಬಹುದು. ಆದರೆ ಸಂಪೂರ್ಣ ಪ್ರಕರಣದಲ್ಲಿ ಬಹಳವಾಗಿ ವಿಷ್ಣುಲಿಂಗಗಳೇ ಕೇಳಿಸುತ್ತಿವೆ. ರುದ್ರ ಸಮಾಖ್ಯಾವೆಂಬ ಒಂದು ಪ್ರಮಾಣದಿಂದ ವಿಷ್ಣುವಿಷಯಕವಾದ ಅನೇಕ ಪ್ರಾಪಕಗಳಿಗೆ ಬಾಧವನ್ನು ಹೇಳುವುದು ಅಯುಕ್ತವಾಗುತ್ತದೆ. ಮತ್ತು ರುದ್ರಸಮಾಖ್ಯಾಪ್ರಮಾಣವು ವಿಷ್ಣುವಿನಲ್ಲಿ ಸಾವಕಾಶವಾಗಿದೆ. ಆದ್ದರಿಂದ ಸಮಾಖ್ಯಾಬಲದಿಂದ ಪೂರ್ವಪಕ್ಷವನ್ನು ಮಾಡಲು ಹೇಗೆ ಸಾಧ್ಯ ? ಎಂಬ ಆಕ್ಷೇಪವನ್ನು 'ನನು' ಇತ್ಯಾದಿ ವಾಕ್ಯದಿಂದ ತೋರಿಸುತ್ತಿದ್ದಾರೆ.

ಪ್ರಕಾಶಃ – विष्णुप्रकरणेनेति ।। यद्यपि टीकायां ''परविद्याविषयत्व-लिङ्गाद्विष्णुरिति चत्'' इत्युक्तम् ।

ಗ್ರಂಥದಲ್ಲಿ 'ವಿಷ್ಣುಪ್ರಕರಣೇನ' ಎಂದು ಹೇಳಿದ್ದಾರೆ. ಅಂದರೆ ಗ್ರಂಥದಲ್ಲಿ 'द्वे विद्ये वेदितव्ये' ಎಂಬ ವಿಷ್ಣುಪ್ರಕರಣದಿಂದ ರುದ್ರಸಮಾಖ್ಯಾಕ್ಕೆ ಬಾಧವನ್ನು ಹೇಳಿದ್ದಾರೆ. ಆದರೆ ಟೀಕೆಯಲ್ಲಿ 'ಪರವಿದ್ಯಾವಿಷಯತ್ವಲಿಂಗಾದ್ ವಿಷ್ಣುಃ' ಪರವಿದ್ಯಾವಿಷಯತ್ವವೆಂಬ ಲಿಂಗದ ಆಧಾರದಿಂದ ವಿಷ್ಣುವೇ ದ್ಯುಭ್ವಾದ್ಯಾಯತನನಾಗಿದ್ದಾನೆಂದು ಹೇಳಿದ್ದಾರೆ. ಹಾಗಾಗಿ ಟೀಕೆಗೂ ಗ್ರಂಥಕ್ಕೂ ಪರಸ್ಪರ ವಿರೋಧ ಬರುತ್ತದಲ್ಲವೇ?

प्रकाशः – तथापि लिङ्गस्योपक्रमे श्रुतत्वात्तत्र श्रुतलिङ्गस्य च ''श्रुतिलिङ्ग-वाक्यानामुपक्रमोपसंहारयोः श्रुतत्वे तन्निश्चायकतया लिङ्गत्वम्'' इति ''शब्दादेव'' इति सूत्रटीकोक्तरीत्या प्रकरणनिश्चायकत्वेन तल्लिङ्गोपेतोपक्रमवतस्तत्प्रकरणत्वेन ''प्रकरणात्'' इति सूत्रानुसारात् प्रकरणेनेत्युक्तम् ।

ಹೌದು, ಆದರೆ ಪರವಿದ್ಯಾವಿಷಯತ್ವವೆಂಬ ಲಿಂಗವು ಪ್ರಕರಣದ ಪ್ರಾರಂಭದಲ್ಲಿ ಕೇಳಿಸುತ್ತಿದೆ. ಹಾಗೆ ಕೇಳಿಸುತ್ತಿರುವ ಲಿಂಗದ ಬಲದಿಂದ ಪ್ರಕರಣವು ವಿಷ್ಣುಪರವಾಗುತ್ತದೆಂದು ನಿಶ್ಚಯವಾಗುತ್ತದೆ. ಏಕೆಂದರೆ 'ಶಬ್ದಾದೇವ ಪ್ರಮಿತಃ' ಎಂಬ ಸೂತ್ರದ ಟೀಕೆಯಲ್ಲಿ 'ಶ್ರುತಿಲಿಂಗವಾಕ್ಯಾನಾಮುಪಕ್ರಮೋಪಸಂಹಾರಯೋಃ ಶ್ರುತತ್ವೇ ತನ್ನಿಶ್ಚಾಯಕತಯಾ ಲಿಂಗತ್ವಮ್' ಶ್ರುತಿ, ಲಿಂಗ, ವಾಕ್ಯಗಳು ಉಪಕ್ರಮ ಹಾಗೂ ಉಪಸಂಹಾರಗಳಲ್ಲಿ ಕೇಳಿಸಿದರೆ ಅವುಗಳು ಆ ಪ್ರಕರಣವು ಯಾರನ್ನು ಪ್ರತಿಪಾದಿಸುತ್ತದೆನ್ನಲು ನಿಶ್ಚಾಯಕವಾಗುತ್ತವೆ ಎಂಬುದಾಗಿ ಹೇಳಿದ್ದಾರೆ. ಆದ್ದರಿಂದ ಯಾರ ಲಿಂಗವು ಯಾವ ಪ್ರಕರಣದ ಪ್ರಾರಂಭದಲ್ಲಿ ಇರುತ್ತದೋ, ಆ ಪ್ರಕರಣವು ಆ ವ್ಯಕ್ತಿಯನ್ನೇ ಪ್ರತಿಪಾದಿಸುತ್ತದೆಂಬ ನಿಯಮವನ್ನು 'ಪ್ರಕರಣಾತ್' ಎಂಬ ಸೂತ್ರದಲ್ಲಿ ಹೇಳಿರುತ್ತಾರೆ. ಆದಕ್ಕನುಸಾರಿಯಾಗಿ ಪರವಿದ್ಯಾವಿಷಯತ್ವವೆಂಬ ವಿಷ್ಣುಲಿಂಗವು ಪ್ರಕರಣದ ಪ್ರಾರಂಭದಲ್ಲಿ ಕೇಳಿಸುತ್ತಿರುವುದರಿಂದ 'ವಿಷ್ಣು ಪ್ರಕರಣೇನ' ಸಂಪೂರ್ಣ ಪ್ರಕರಣವು ವಿಷ್ಣುವನ್ನೇ ಪ್ರತಿಪಾದಿಸುತ್ತದೆಂದು ನಿಶ್ಚಯಿಸಬಹುದು; ಹೊರತು, ನೇರವಾಗಿ 'ಪರವಿದ್ಯಾವಿಷಯತ್ವಮ್' ಎಂಬ ಲಿಂಗವು ದ್ಯುಭ್ವಾದ್ಯಾಯತನನಾದವನು ವಿಷ್ಣುವೆನ್ನಲು ನಿರ್ಣಾಯಕವಾಗುವುದಿಲ್ಲ. ಆದರೆ ಗ್ರಂಥಕಾರರು ಹೇಳಿದ 'ದ್ವೇ ವಿದ್ಯೇ ವೇದಿತವ್ಯೇ' ಎಂಬ ವಿಷ್ಣುಪ್ರಕರಣವು ನೇರವಾಗಿ ದ್ಯುಭ್ವಾದ್ಯಾಯತನತ್ವಕ್ಕೆ ಲಿಂಗವಾಗುತ್ತದೆಂಬ ವ್ಯತ್ಯಾಸವನ್ನು ತಿಳಿಯಬೇಕು.

प्रकाशः – अत एव ''प्रकरणात्'' इत्यत्र टीका ''द्वे विद्ये वेदितव्ये'' इति परविद्याविषयवस्तुनोऽत्रारभ्याधीतत्वेनास्य विष्णुप्रकरणत्वात्'' इति ।

ಆದ್ದರಿಂದಲೇ 'ಪ್ರಕರಣಾತ್' ಎಂಬ ಸೂತ್ರದಲ್ಲಿ 'ದ್ವೇ ವಿದ್ಯೇ ವೇದಿತವ್ಯೇ' ಎಂಬುದಾಗಿ ಪರವಿದ್ಯಾವಿಷಯನಾದ ವಸ್ತುವಿನ ಬಗ್ಗೆ ಆಧ್ಯಯನವನ್ನು ಹೇಳಿರುವ ಕಾರಣ ವಿಷ್ಣುಪ್ರಕರಣವೆಂದು ನಿಶ್ಚಯಿಸಬಹುದೆಂದು ವ್ಯಾಖ್ಯಾನಿಸಿದ್ದಾರೆ. ಇದರಿಂದ ವಿಷ್ಣುಪ್ರಕರಣವೆಂಬುದೇ ದ್ಯುಭ್ವಾದ್ಯಾಯತನನಾದವನು ವಿಷ್ಣುವೆನ್ನಲು ನೇರವಾಗಿ ಕಾರಣವಾಗಿರುತ್ತದೆ.

प्रकाशः – बाध इति ।। यथा चतुर्थे ''आत्मा प्रकरणात्'' इत्यत्र प्रकरणेन समाख्याया बाधस्तद्वत् । तत्रहि ''य आत्माऽपहतपाप्मा'' इत्यादिप्रकरणेन ''स तेजसि सूर्ये सम्पन्नः'' इति समाख्याया बाधेन ''परं ज्योतिरुपसम्पद्य'' इति श्रुतज्योतिषो विष्णुत्वमुच्यते ।

ಗ್ರಂಥದಲ್ಲಿ 'ಬಾಧಃ' ಎಂದು ರುದ್ರ ಸಮಾಖ್ಯಾಪ್ರಮಾಣಕ್ಕೆ ಬಾಧವನ್ನು ಹೇಳಿದ್ದಾರೆ. ಯಾವರೀತಿಯಾಗಿ ನಾಲ್ಕನೆಯ ಅಧ್ಯಾಯದ 'ಆತ್ಮಾ ಪ್ರಕರಣಾತ್' ೨೦ಬ ಸೂತ್ರದಲ್ಲಿ ಪ್ರಕರಣದಿಂದ ಸಮಾಖ್ಯಾಪ್ರಮಾಣಕ್ಕೆ ಬಾಧವನ್ನು ಹೇಳಿದ್ದಾರೋ, ಆದರಂತೆ ಇಲ್ಲಿಯೂ ತಿಳಿಯಬೇಕು. 'ಯ ಆತ್ಮಾಽಪಹತಪಾಪ್ಮಾ' ಇತ್ಯಾದಿ ಪ್ರಕರಣದಿಂದ 'ಸ ತೇಜಸಿ ಸೂರ್ಯೇ ಸಂಪನ್ನಃ' ಎಂಬ ಸಮಾಖ್ಯಾಪ್ರಮಾಣಕ್ಕೆ ಬಾಧವು ಬರುವುದರಿಂದ 'ಪರಂ ಜ್ಯೋತಿರುಪಸಂಪದ್ಯ' ಎಂಬಲ್ಲಿ ಕೇಳಿಸುತ್ತಿರುವ ಜ್ಯೋತಿಃ ಎಂಬ ಶಬ್ದವು ವಿಷ್ಣುವನ್ನೇ ಪ್ರತಿಪಾದಿಸುತ್ತದೋ ಅದೇ ರೀತಿಯಾಗಿ ಪ್ರಕೃತ 'ದ್ವೇ ವಿದ್ಯೇ ವೇದಿತವ್ಯೇ' ಎಂಬ ವಿಷ್ಣುಪ್ರಕರಣದಿಂದ ರುದ್ರ ಸಮಾಖ್ಯಾಪ್ರಮಾಣಕ್ಕೆ ಬಾಧವು ಬರುತ್ತದೆ.

ಪ್ರಕಾಶಃ – यथा वा दहरनये लिङ्गेन समाख्याया बाधस्तद्वत् । तत्र ह्यपहतपाप्मत्वादिलिङ्गेन ''तस्यान्ते सुषिरं सूक्ष्मम्'' इत्यादिसमाख्याया बाधेन सर्वाधारतया हृत्पद्मस्थत्वं विष्णोरेव । नत्वाकाशादेरित्युच्यते ।

ಅಥವಾ ಯಾವ ರೀತಿಯಾಗಿ ದಹರಾಧಿಕರಣದಲ್ಲಿ ಲಿಂಗದಿಂದ ಸಮಾಖ್ಯಾಪ್ರಮಾಣಕ್ಕೆ ಬಾಧವನ್ನು ಹೇಳಿದ್ದಾರೋ, ಆದರಂತೆಯೂ ಇಲ್ಲಿ ತಿಳಿಯಬಹುದು. ಎಂದರೆ ಹೇಗೆ ದಹರಾಧಿಕರಣದಲ್ಲಿ ಅಪಹತಪಾಪ್ಮತ್ವವೇ ಮೊದಲಾದ ಲಿಂಗಗಳ ಬಲದಿಂದ 'ತಸ್ಯಾಂತೇ ಸುಷಿರಂ ಸೂಕ್ಷ್ಮಮ್' ಎಂಬ ಸಮಾಖ್ಯಾಪ್ರಮಾಣಕ್ಕೆ ಬಾಧವು ಬರುವುದರಿಂದ ಸರ್ವಾಧಾರವಾಗಿ ಕೇಳಿಸುತ್ತಿರುವ ಹೃದ್ಪದ್ಮಸ್ಥತ್ವವೆಂಬ ಲಿಂಗವು ವಿಷ್ಣುವಿನಲ್ಲೇ ಬರುತ್ತದೆ ಹೊರತು, ಆಕಾಶಾದಿಗಳಲ್ಲಿ ಬರುವುದಿಲ್ಲವೆಂದು ಹೇಳಿದ್ದಾರೋ ಆದರಂತೆ ಮುಕ್ತೋಪಸೃಪ್ಯತ್ವವೆಂಬ ವಿಷ್ಣುವಿನ ಲಿಂಗದಿಂದ ರುದ್ರ ಸಮಾಖ್ಯಾಪ್ರಮಾಣಕ್ಕೆ ಬಾಧ ದೋಷವು ಬರುತ್ತದೆ.

ಪ್ರಕಾಶಃ – आदेश्चेत्यादिपदेन प्रकरणम् । लिङ्गत्वं नाम ज्ञापकत्वम् । यद्वा परविद्याविषयत्वमादिपदार्थः । इत्यादीत्यादिपदेन ''अदृश्यत्वादिगुणको धर्मोक्तेः'' इति सूत्रं गृह्यते ।

ಗ್ರಂಥದಲ್ಲಿ 'ಮುಕ್ತೋಪಸೃಪ್ಯತ್ವಾದೇಶ್ಚ' ಎಂಬಲ್ಲಿ ಆದಿ ಪದವನ್ನು ಹೇಳಿದ್ದಾರೆ. ಇದರಿಂದ ಮುಕ್ತೋಪಸೃಪ್ಯತ್ವವೆಂಬ ಲಿಂಗದ ಜೊತೆಗೆ ಪ್ರಕರಣವನ್ನು ವಿವಕ್ಷಿಸಬೇಕು. ಆವಾಗ 'ವಿಷ್ಣುಲಿಂಗತ್ವಮ್' ಎಂಬಲ್ಲಿರುವ ಲಿಂಗ ಎಂಬ ಪದಕ್ಕೆ ಜ್ಞಾಪಕವಾಗಿರುವುದು ಎಂದರ್ಥ. ಅಥವಾ ಆದಿಪದದಿಂದ ಪರವಿದ್ಯಾವಿಷಯತ್ವವೆಂಬ ಲಿಂಗವನ್ನೇ ವಿವಕ್ಷಿಸಬಹುದು. ಆವಾಗ 'ವಿಷ್ಣುಲಿಂಗತ್ವಮ್' ಎಂಬ ಲಿಂಗಪದಕ್ಕೆ ಲಿಂಗವೆಂಬರ್ಥವನ್ನೇ ವಿವಕ್ಷಿಸಬಹುದು. 'ಇತ್ಯಾದಿ ಸೂತ್ರ' ಎಂಬಲ್ಲಿರುವ 'ಅದೃಶ್ಯತ್ವಾದಿಗುಣಕೋ ಧರ್ಮೋಕ್ತೇಃ' ಎಂಬ ಸೂತ್ರವನ್ನು ಇಟ್ಟುಕೊಳ್ಳಬೇಕು.

ಪ್ರಕಾಶಃ – बलवती इति ।। 'शब्दादेव' इत्यत्र तद्बीजात्त्या व्युत्पादयिष्यमाणत्वादिति भावः । ननु ''आनर्थक्यप्रतिहतानां विपरीतं बलाबलम्'' इति न्यायेन समाख्यया बाधः किं नस्यादिति भावेनाशङ्क्यानर्थक्यं नेत्याह –

ನಚೇತಿ ।। ಅನ್ತರಿತಿ ।। ಅಯಂ ನ್ಯಾಯಃ ಪ್ರಾಕ್ ತತ್ರ ತತ್ರ ವಿವೃತಃ । ಶಾಸ್ತ್ರದೃಶ್ಚೇತಿ ನ್ಯಾಯೋऽಪಿ ।

'ಬಲವತೀ' ಎಂದರೆ ಲಿಂಗ ಹಾಗೂ ಪ್ರಕರಣಗಳು ಸಮಾಖ್ಯಾಪ್ರಮಾಣಕ್ಕಿಂತ ಬಲಿಷ್ಠವಾಗಿವೆಯೆಂದು ಅರ್ಥವೆಂದು ಗ್ರಂಥದಲ್ಲಿ ಹೇಳಿದ್ದಾರೆ. ಈ ವಿಷಯವನ್ನು 'ಶಬ್ದಾದೇವ ಪ್ರಮಿತಃ' ಎಂಬ ಸೂತ್ರದಲ್ಲಿ ಕಾರಣಪುರಸ್ಸರವಾಗಿ ಸಮರ್ಥಿಸುತ್ತಾರೆ.

'ಆನರ್ಥಕ್ಯಪ್ರತಿಹತಾನಾಂ ವಿಪರೀತಂ ಬಲಾಬಲಮ್' ನಿರರ್ಥಕವಾಗಿದ್ದರೆ ಪ್ರಾಬಲ್ಯ ಹಾಗೂ ದೌರ್ಬಲ್ಯಗಳು ವಿಪರೀತವಾಗುತ್ತದೆಂಬ ನ್ಯಾಯದಂತೆ ಸಮಾಖ್ಯಾಪ್ರಮಾಣದಿಂದಲೇ ಬಾಧವನ್ನು ಏಕೆ ಹೇಳಬಾರದು? ಎಂಬ ಅಭಿಪ್ರಾಯದಿಂದ ಆಶಂಕಿಸಿ ಆನರ್ಥಕ್ಯವೇ ಇಲ್ಲವೆಂದು ಹೇಳುತ್ತಿದ್ದಾರೆ 'ನಚ' ಎಂಬ ವಾಕ್ಯದಿಂದ.

ಅಂತರಧಿಕರಣ ನ್ಯಾಯವನ್ನು ಹಿಂದೆಯೇ ವಿವರಿಸಿದ್ದಾಗಿದೆ. ಹಾಗೂ 'ಶಾಸ್ತ್ರಾದೃಷ್ಟ್ಯಾತೂಪದೇಶಃ' ಎಂಬ ನ್ಯಾಯವನ್ನೂ ಸಹ ಅಂತಿಮಪ್ರಾಣಾಧಿಕರಣದಲ್ಲಿಯೇ ವಿವರಿಸಿದ್ದಾಗಿದೆ.

ಪ್ರಕಾಶಃ – ಜಾಯಮಾನತ್ವಾದೀತಿ ।। ಮನಃಪ್ರಾಣಾಧಾರತ್ವಮಾದಿಪದಾರ್ಥಃ । ಲಿಙ್ಗಂ ನಿರವಕಾಶಮಿತ್ಯತ ಆಹ – ಜಾಯಮಾನತ್ವಸ್ಯೇತಿ ।। ತತ್ರೇತಿ ।। ಆನನ್ದಮಯಾಧಿಕರಣ ಇತ್ಯರ್ಥಃ ।

'ಜಾಯಮಾನತ್ವಾದಿ' ಎಂಬಲ್ಲಿರುವ ಆದಿಪದದಿಂದ ಮನ ಆಧಾರತ್ವ ಹಾಗೂ ಪ್ರಾಣಾಧಾರತ್ವವನ್ನು ವಿವಕ್ಷಿಸಬೇಕು. ಲಿಂಗವು ನಿರವಕಾಶವಾಗಿದೆಯಲ್ಲವೇ? ಎಂಬ ಪ್ರಶ್ನೆಗೆ 'ಜಾಯಮಾನತ್ವಸ್ಯ' ಎಂಬ ವಾಕ್ಯದಿಂದ ಉತ್ತರಿಸಿದ್ದಾರೆ. 'ತತ್ರ' ಎಂದರೆ ಆನಂದಮಯಾಧಿಕರಣದಲ್ಲಿ ಎಂದರ್ಥ.

ಪ್ರಕಾಶಃ – ಕಾರಣತ್ವೇನ ಚೇತಿ ।। ಚತುರ್ಥಪಾದೇ ''ಆತ್ಮನ ಆಕಾಶಸ್ಸಮ್ಭೂತಃ । ಆಕಾಶಾದ್ವಾಯುಃ । ವಾಯೋರಗ್ನಿಃ'' ಇತ್ಯುದಾಹೃತ್ಯಾತ್ಮನ ಆಕಾಶಾದಿಷು ಜನೇರ್ವಕ್ಷ್ಯಮಾಣತ್ವಾದಿತಿ ಭಾವಃ । ಯಥೋಕ್ತಂ ತತ್ರ ನ್ಯಾಯವಿವರಣೇ ''ವ್ಯಕ್ತ್ಯಪೇಕ್ಷಯಾ ಕಾರ್ಯತ್ವಮ್'' ಇತಿ ।

ನಾಲ್ಕನೆಯ ಪಾದದಲ್ಲಿ 'ಕಾರಣತ್ವೇನ ಚ' ಎಂಬ ಸೂತ್ರದಲ್ಲಿ ಹೀಗೆ ಹೇಳಿದ್ದಾರೆ - 'ಆತ್ಮನ ಆಕಾಶಸ್ಸಂಭೂತಃ', 'ಆಕಾಶಾದ್ವಾಯುಃ', 'ವಾಯೋರಗ್ನಿಃ' ಎಂಬ ವಾಕ್ಯವನ್ನು ಉದಾಹರಿಸಿ ಆತ್ಮನ ದೆಸೆಯಿಂದ ಆಕಾಶಾದಿಗಳೆಲ್ಲವೂ ಹುಟ್ಟುತ್ತವೆಂದು ಹೇಳಿದ್ದಾರೆ. ಇದನ್ನೇ ನ್ಯಾಯವಿವರಣದಲ್ಲಿ 'ವ್ಯಕ್ತಪೇಕ್ಷಯಾ ಕಾರ್ಯತ್ವಮ್' ಎಂದು ಹೇಳಿರುತ್ತಾರೆ.

ಪ್ರಕಾಶಃ – ಅತ್ರ ಪರೈರೇತಚ್ಛಙ್ಕಾನಿರಾಸಾಯ ''ಯಸ್ಮಿನ್ದ್ಯೌಃ'' ಇತ್ಯಾದಿಕಂ ಬ್ರಹ್ಮಪ್ರಕರಣೇ ನಾಸ್ತೀತಿ ಕೃತ್ವಾಚಿನ್ತಯೇದಮಾರಬ್ಧಮಿತ್ಯುಕ್ತಮ್ ।

ಶಂಕಾ - ಈ ಹಿಂದೆ ಪೂರ್ವಪಕ್ಷವು ಹುಟ್ಟಲು ಸಾಧ್ಯವೇ ಇಲ್ಲವೆಂದು ಪ್ರಶ್ನಿಸಲಾಯಿತು. ಈ ಪ್ರಶ್ನೆಗೆ

ಆದ್ದೆಯತಿಗಳು ಹೀಗೆ ಉತ್ತರಿಸಲು ಪ್ರಯತ್ನಿಸಿದ್ದಾರೆ. ವಾಸ್ತವಿಕವಾಗಿ 'ಯಸ್ಮಿನ್‌ದ್ಯೌಃ' ಇತ್ಯಾದಿ ಶ್ರುತಿಗಳು ಬ್ರಹ್ಮಪ್ರಕರಣದಲ್ಲಿಯೇ ಕೇಳಿಸುತ್ತಿವೆ. ಆದರೆ ಬ್ರಹ್ಮಪ್ರಕರಣದಲ್ಲಿ ಇರುವುದಿಲ್ಲವೆಂದು ಇಟ್ಟುಕೊಂಡು ಪೂರ್ವಪಕ್ಷ ಮಾಡಬೇಕು. ಆದ್ದರಿಂದ ಈ ಅಧಿಕರಣವು ಆರಂಭಣೀಯವಾಗುತ್ತದೆ.

ಪ್ರಕಾಶಃ – ಕೈಶ್ಚಿತ್ತು ''ದ್ವೇ ವಿದ್ಯೇ ವೇದಿತವ್ಯೇ'' ಇತ್ಯಾದೇರ್ಬ್ರಹ್ಮಪ್ರಕರಣತ್ವೇऽಪಿ ''ಯಸ್ಮಿನ್'' ಇತ್ಯಾದಿಕಂ ಜೀವಲಿಙ್ಗಾಜ್ಜೀವಪ್ರಕರಣಮಿತಿ ಪ್ರಕರಣಭೇದಮಾಶ್ರಿತ್ಯ ಸಮಾಹಿತಮ್ ।

ಇನ್ನು ರಾಮಾನುಜರು ಹೀಗೆ ಉತ್ತರಿಸಿದ್ದಾರೆ. 'ದ್ವೇ ವಿದ್ಯೇ ವೇದಿತವ್ಯೇ' ಇತ್ಯಾದಿ ವಾಕ್ಯಗಳು ಬ್ರಹ್ಮಪ್ರಕರಣದಲ್ಲಿದ್ದರೂ ಸಹ 'ಯಸ್ಮಿನ್‌ದ್ಯೌಃ' ಇತ್ಯಾದಿ ವಾಕ್ಯಗಳು ಜೀವನ ಪ್ರಕರಣವಾಗಿವೆಯೆಂದು ಜಾಯಮಾನತ್ವವೇ ಮೊದಲಾದ ಲಿಂಗಗಳ ಬಲದಿಂದ ನಿರ್ಧರಿಸಬಹುದು. ಹೀಗೆ ಬೇರೆ ಬೇರೆ ಪ್ರಕರಣವೆಂದು ತಿಳಿದು ದ್ಯುಭ್ವಾದ್ಯಾಯತನನಾದವನು ಜೀವನಾಗಿದ್ದಾನೆಂಬ ಪೂರ್ವಪಕ್ಷ ಹುಟ್ಟಲು ಅಡ್ಡಿಯಿಲ್ಲ.

ಸಾರ

ಈ ಅಧಿಕರಣದ ಪೂರ್ವಪಕ್ಷ ಹೀಗಿದೆ - ದ್ಯುಭ್ವಾದ್ಯಾಯತನನಾದವನು ವಿಷ್ಣುವೇ ಆಗುತ್ತಾನೆಂದು ನಿರ್ಣಯಿಸಲು ಸಾಧ್ಯವಿಲ್ಲ; ಹೊರತಾಗಿ ರುದ್ರ, ಪ್ರಕೃತಿ, ವಾಯು ಅಥವಾ ಜೀವ ಇವರುಗಳೇ ದ್ಯುಭ್ವಾದ್ಯಾಯತನರಾಗುತ್ತೆನ್ನಲು ಪ್ರಮಾಣವಿದೆ. 'ರುದ್ರೋ ವಾವ ಲೋಕಾಧಾರಃ' ಎಂಬ ಶ್ರುತಿಯು ರುದ್ರನ ವಿಷಯದಲ್ಲಿ; 'ಆಕಾಶ ಏವ ತದೋತಂ ಚ' ಎಂಬ ಶ್ರುತಿಯು ಪ್ರಕೃತಿಯ ವಿಷಯದಲ್ಲಿ; 'ವಾಯುನಾ ವೈ' ಎಂಬ ಶ್ರುತಿಯುವಾಯುದೇವನವಿಷಯದಲ್ಲಿ ಹಾಗೂ ಜಾಯಮಾನತ್ವ ಎಂಬಲಿಂಗವು ಜೀವನವಿಷಯದಲ್ಲಿ ಆಧಾರವಾಗಿದೆ. ರುದ್ರ, ಪ್ರಕೃತಿ, ವಾಯು ಈ ಮೂವರು ದ್ಯುಭ್ವಾದ್ಯಾಯತನರಾಗಿದ್ದಾರೆನ್ನಲು ಸಮಾಖ್ಯಾಪ್ರಮಾಣವಿದೆಯೆಂದು ಪೂರ್ವಪಕ್ಷಕಾರರು ಹೇಳುತ್ತಿರುವ ದೊಡ್ಡ ಆಧಾರ. ಆದರೆ ವಿಷ್ಣುವಿಷಯದಲ್ಲಿಯೂ 'ಲೋಕಾಶ್ಚ ಲೋಕಿನಶ್ಚ' ಇತ್ಯಾದಿ ಶ್ರುತಿಯು ಸಮಾಖ್ಯಾಪ್ರಮಾಣವಾಗಿದೆಯೆಂದು ಆಕ್ಷೇಪ ಬರುತ್ತದೆ. ಆದರೆ ರುದ್ರನ ವಿಷಯದಲ್ಲಿರುವ ಸಮಾಖ್ಯಾಪ್ರಮಾಣವು ವಿಷ್ಣುವಿಷಯಕವಾದ ಸಮಾಖ್ಯಾಪ್ರಮಾಣಕ್ಕಿಂತಲೂ ಅತ್ಯಂತ ಬಲಿಷ್ಠವಾಗಿದೆ. ರುದ್ರನಲ್ಲಿ ಪ್ರಸಿದ್ಧವಾದ ಕೃತ್ತಿವಾಸಾ ಮೊದಲಾದ ಶಬ್ದ ಪ್ರಯೋಗ ಹಾಗೂ ಪ್ರಾಣಾಧಾರತ್ವ ಮೊದಲಾದ ಲಿಂಗ ಇವುಗಳ ಬಲದಿಂದ ರುದ್ರವಿಷಯಕವಾದ ಪ್ರಮಾಣವು ಪ್ರಬಲವಾಗಿ ವಿಷ್ಣುವಿಷಯಕವಾದ ಸಮಾಖ್ಯಾಪ್ರಮಾಣವನ್ನು ಬಾಧಿಸುತ್ತದೆ. ಇನ್ನು ವಾಯು ಹಾಗೂ ಪ್ರಕೃತಿವಿಷಯಕವಾದ ಸಮಾಖ್ಯಾಪ್ರಮಾಣವು ಶ್ರುತಿಲಿಂಗಗಳ ಆಧಾರದಿಂದ ಪ್ರಬಲವಾಗದೇ ಇದ್ದರೂ, ಜಾಯಮಾನತ್ವವೆಂಬ ಲಿಂಗದ ಆಧಾರದಿಂದ ಪ್ರಬಲವಾಗಿದೆ. ಆದ್ದರಿಂದ ದುರ್ಬಲವಾದ ವಿಷ್ಣುವಿಷಯಕವಾದ ಸಮಾಖ್ಯಾಪ್ರಮಾಣದಿಂದ ದ್ಯುಲೋಕ, ಭೂಲೋಕಾದಿಗಳಿಗೆ ಆಧಾರನಾದವನು ವಿಷ್ಣುವೇ ಆಗಿದ್ದಾನೆಂದು ನಿಶ್ಚಯಿಸಲು ಸಾಧ್ಯವಿಲ್ಲ.

ಪೂರ್ವಪಕ್ಷಕಾರರ ಮೇಲೆ ಒಂದು ದೊಡ್ಡ ಆಕ್ಷೇಪ ಬರುತ್ತದೆ - ಯಾವ ಪ್ರಕರಣದಲ್ಲಿ ದ್ಯುಭ್ವಾದ್ಯಾಯತನತ್ವವು ಕೇಳಿಸುತ್ತಿದೆಯೋ, ಅದು ವಿಷ್ಣುಪ್ರಕರಣವಾಗಿದೆಯೆಂದು ಉಪಕ್ರಮದ ಆಧಾರದಿಂದ ತಿಳಿಯುತ್ತಿದೆ. ಮತ್ತು ಮುಕ್ತೋಪಸೃಪ್ಯತ್ವವೇ ಮೊದಲಾದ ವಿಷ್ಣುವಿನ ಅಸಾಧಾರಣ

ಲಿಂಗಗಳೂ ಸಹ ಕೇಳಿಬರುತ್ತಿವೆ. ಲಿಂಗ ಹಾಗೂ ಪ್ರಕರಣಗಳು ವಿಷ್ಣುವಿಷಯದಲ್ಲಿರುವಾಗ ಕೇವಲ ಸಮಾಖ್ಯಾಪ್ರಮಾಣದಿಂದ ರುದ್ರಾದಿಗಳನ್ನು ಸಮರ್ಥಿಸಲು ಹೇಗೆ ಸಾಧ್ಯ? ಮತ್ತು ರುದ್ರನ ವಿಷಯದಲ್ಲಿರುವ ಕೃತ್ತಿವಾಸಾ ಮೊದಲಾದ ಶಬ್ದಗಳು ಹಾಗೂ ಪಿನಾಕಿತ್ವ ಮೊದಲಾದ ಲಿಂಗಗಳು ವಿಷ್ಣುವಿನಲ್ಲಿ ಸಾವಕಾಶವಾಗುತ್ತವೆಂಬುದನ್ನು ಅಂತರಧಿಕರಣದಲ್ಲಿ ಹಾಗೂ 'ಶಾಸ್ತ್ರದೃಷ್ಟ್ಯಾ' ಎಂಬ ಸೂತ್ರದಲ್ಲಿ ಈಗಾಗಲೇ ಸಿದ್ಧಾಂತಿಗಳು ಸಮರ್ಥಿಸಿದ್ದಾರೆ. ಅಷ್ಟೇ ಅಲ್ಲದೆ ಜಾಯಮಾನತ್ವವೆಂಬ ಲಿಂಗವೂ ಸಹ ಪ್ರಾದುರ್ಭಾವವೆಂಬರ್ಥದಿಂದ ವಿಷ್ಣುವಿನಲ್ಲಿ ಸಾವಕಾಶವಾಗುತ್ತದೆ. ಹೀಗಿರುವಾಗ ಪೂರ್ವಪಕ್ಷಕಾರರು ತೋರಿಸಿದ ಯುಕ್ತಿಗಳೆಲ್ಲವೂ ಸಾವಕಾಶವಾಗಿ ದುರ್ಬಲವಾಗಿವೆ. ಪೂರ್ವಪಕ್ಷವೇ ಹೊರಡಲು ಸಾಧ್ಯವಿಲ್ಲದಿದ್ದಾಗ, ಈ ಅಧಿಕರಣದ ಪ್ರವೃತ್ತಿಯಾದರೂ ಸಹ ಏಕೆ? ಎಂಬ ದೊಡ್ಡ ಪ್ರಶ್ನೆಯನ್ನು ಪೂರ್ವಪಕ್ಷಕಾರರು ಎದುರಿಸಬೇಕು.

ನಿರವಕಾಶಲಿಂಗಗಳ ಬಲದಿಂದ ಪೂರ್ವಪಕ್ಷ ಸ್ಥಾಪನೆ

तात्पर्यचन्द्रिका

उच्यते । अनुव्याख्यान उक्तिरत्यसिद्धान्तसिद्धजन्यत्वाभिप्राया । नत्वेतत्पूर्वपक्षदशायां जायमानत्वस्य सावकाशता ।

ಅನುವಾದ - ಉತ್ತರ - ಹಿಂದಿನ ಮೂಲದಲ್ಲಿ ಮಾಡಿದ ಪ್ರಶ್ನೆಗೆ ಸಮಾಧಾನವನ್ನು ಹೀಗೆ ತಿಳಿಯಬೇಕು - ಆನಂದಮಯಾಧಿಕರಣದ ಅನುವ್ಯಾಖ್ಯಾನದಲ್ಲಿ ಜಾಯಮಾನತ್ವಲಿಂಗವನ್ನು ಸಾವಕಾಶವೆಂದು ಹೇಳಿದ್ದು ಸತ್ಯ. ಆದರೆ ಈ ಅಧಿಕರಣದ ಸಿದ್ಧಾಂತದಿಂದ ನಿರ್ಣಯವಾದ ಪ್ರಾದುರ್ಭಾವವೆಂಬ ಅರ್ಥವನ್ನು ವಿವಕ್ಷಿಸಿ ಅಲ್ಲಿ ಹೇಳಿದ್ದಾರೆ ಹೊರತು, ಆ ಅಧಿಕರಣದ ಸಿದ್ಧಾಂತವೆಂದು ಪರಿಗಣಿಸಿ ಜಾಯಮಾನತ್ವವು ಪ್ರಾದುರ್ಭಾವ ರೂಪವಾಗಿದೆಯೆಂದು ಹೇಳಿರುವುದಲ್ಲ; ಹೊರತು ಈ ಅಧಿಕರಣದ ಪೂರ್ವಪಕ್ಷ ಸಂದರ್ಭದಲ್ಲಿ ಜಾಯಮಾನತ್ವವು ಸಾವಕಾಶವಾಗಿಲ್ಲ.

''कारणत्वेन'' इत्यत्रत्वेकस्यैव कार्यकारणभावविरोधशङ्कायाः परिहारः । नत्वत्रेवाजन्यस्य जन्मविरोधशङ्कायाः । अत एव तत्र टीका ''स्वस्यैव कार्यकारणभावो विरुद्धः'' इति । अनुव्याख्यानं च ''विरोधः कार्यतद्वतोः'' इति ।

'ಕಾರಣತ್ವೇನ ಚ ಆಕಾಶಾದಿಷು' ಎಂಬ ಸೂತ್ರದಲ್ಲಿಯೂ ಒಬ್ಬನೇ ವ್ಯಕ್ತಿಗೆ ಕಾರ್ಯಕಾರಣಭಾವವು ವಿರುದ್ಧವಾಗುತ್ತದೆಂಬ ಆಶಂಕೆಗೆ ಪರಿಹಾರವನ್ನು ನೀಡಿದ್ದಾರೆ ಹೊರತು, ಈ ಅಧಿಕರಣದಲ್ಲಿ ಸಮರ್ಥಿಸುತ್ತಿರುವಂತೆ ಅಜನ್ಯನಾದ ಪರಮಾತ್ಮನಿಗೆ ಜನ್ಯವು ವಿರುದ್ಧವಾಗುತ್ತದೆಯಲ್ಲವೇ? ಎಂಬ ಶಂಕೆಯನ್ನು ಪರಿಹರಿಸುತ್ತಿಲ್ಲ. ಆದ್ದರಿಂದಲೇ 'ಕಾರಣತ್ವೇನ' ಎಂಬ ಸೂತ್ರದ ಟೀಕೆಯಲ್ಲಿ 'ಸ್ವಸ್ಯೈವ

ಕಾರ್ಯಕಾರಣಭಾವೋ ವಿರುದ್ಧಃ' ತಾನೊಬ್ಬನಿಗೇ ಕಾರ್ಯ-ಕಾರಣ ಭಾವವು ವಿರುದ್ಧವಾಗುತ್ತದೆಂದು ಹೇಳಿದ್ದಾರೆ. ಅನುವ್ಯಾಖ್ಯಾನದಲ್ಲಿಯೂ ಸಸ 'ವಿರೋಧಃ ಕಾರ್ಯತದ್ವತೋಃ' ಎಂಬುದಾಗಿ ಹೇಳಿದ್ದಾರೆ. ಆದ್ದರಿಂದ ಅಜನ್ಯನಾದ ಪರಮಾತ್ಮನಿಗೆ ಜಾಯಮಾನತ್ವವನ್ನು ಹೇಗೆ ಕೂಡಿಸಬೇಕೆಂಬ ವಿಚಾರವನ್ನು ಈ ಅಧಿಕರಣದಲ್ಲಿ ಮಾತ್ರ ಮಾಡುತ್ತಿದ್ದಾರೆ ಹೊರತು, ಬೇರೆ ಅಧಿಕರಣಗಳಲ್ಲಿ ಮಾಡಿರುವುದಿಲ್ಲ. ಹಾಗಾಗಿ ಜಾಯಮಾನತ್ವಲಿಂಗವನ್ನು ನಿರವಕಾಶವೆಂದು ವಿವಕ್ಷಿಸಿ ಪೂರ್ವಪಕ್ಷವನ್ನು ಮಾಡಬಹುದು.

जननमरणयोश्च सामानाधिकरण्यप्रसिद्धेर्देहत्यागलक्षणमरणस्य चेतन एव सम्भवात् । ''यतो वा इमानि भूतानि जायन्ते । येन जातानि जीवन्ति'' इति जीवनादियोगिनि चेतने जननश्रवणाच्च ।

ಜಾಯಮಾನತ್ವವೆಂಬ ಲಿಂಗವು ನಿರವಕಾಶವಾಗಿದೆಯೆಂಬುದನ್ನು ಹೀಗೆ ತಿಳಿಯಬೇಕು - ಜನನ ಹಾಗೂ ಮರಣಗಳು ಸಮಾನಾಧಿಕರಣವಾಗಿವೆಯೆಂದು ಲೋಕಪ್ರಸಿದ್ಧವಾಗಿವೆ. ಅಂದರೆ ಜನನವು ಯಾವ ವ್ಯಕ್ತಿಗಾಗುತ್ತದೋ, ಅವನಿಗೆ ಮರಣವೂ ಆಗಬೇಕು. ಮರಣವೆಂದರೆ ದೇಹತ್ಯಾಗವೆಂದರ್ಥ. ಇಂತಹ ಮರಣವನ್ನು ಚೇತನನಲ್ಲಿಯೇ ಹೇಳಬೇಕು. 'ಯತೋ ವಾ ಇಮಾನಿ ಭೂತಾನಿ ಜಾಯಂತೇ, ಯೇನ ಜಾತಾನಿ ಜೀವಂತಿ' ಎಂಬುದಾಗಿ ಹುಟ್ಟುವಿಕೆ ಮೊದಲಾದ ಧರ್ಮಗಳನ್ನು ಹೊಂದಿದ ಚೇತನನಲ್ಲಿಯೇ ಜನನವು ಕೇಳಿಸುತ್ತಿದೆ.

अनादेरपि जी(वमात्रादेः)वादेः शरीरग्रहणादिरूपं वा पराधीनविशेषावाप्तिरूपं वा जननमस्ति । ब्रह्मणस्तु तदपि नेति द्वितीयाध्याये वक्ष्यते ।

ಜೀವನು ಅನಾದಿಯಾಗಿದ್ದರೂ ಸಹ ಶರೀರವನ್ನು ಸ್ವೀಕರಿಸುವಿಕೆಯೆಂಬ ಜನ್ಮವನ್ನು ಅವನಿಗೆ ಹೇಳಬಹುದು. ಅಥವಾ ಪರಾಧೀನವಿಶೇಷವಾಪ್ತಿಯೆಂಬ ಜನ್ಮವನ್ನು ಜೀವಾದಿಗಳಿಗೆ ಎಂದರೆ ಪ್ರಕೃತ್ಯಾದಿಗಳಿಗೆ ಹೇಳಬಹುದು. ಆದರೆ ಬ್ರಹ್ಮನಿಗೆ ಈ ಎರಡೂ ವಿಧದ ಜನ್ಮವನ್ನು ಹೇಳಲು ಸಾಧ್ಯವಿಲ್ಲವೆಂದು ಎರಡನೆಯ ಅಧ್ಯಾಯದಲ್ಲಿ ಸಮರ್ಥಿಸುತ್ತಾರೆ.

'अजायमानो बहुधा विजायते' इति वाक्यं तु जीवविषयम् । स्वरूपेणाजननात् । देहद्वारा च जननात् । तस्मान्निरवकाशेन भाष्योक्तेन जायमानत्वलिङ्गेन द्युभ्वाद्यायतनं रुद्रादिरेव ।

'ಅಜಾಯಮಾನೋ ಬಹುಧಾ ವಿಜಾಯತೇ' ಎಂಬ ವಾಕ್ಯವು ಜೀವನನ್ನು ಪ್ರತಿಪಾದಿಸುತ್ತಿದೆ ಹೊರತು ಬ್ರಹ್ಮನನ್ನಲ್ಲ. ಸ್ವರೂಪತಃ ಜೀವನಿಗೆ ಜನ್ಮವಿಲ್ಲದ ಕಾರಣ ಅಜಾಯಮಾನನೆನಿಸಿದ್ದಾನೆ.

ಮುಖ್ಯಾದ್ಯಧಿಕರಣ (೧-೩-೧)

ದೇಹದ ಮೂಲಕವಾಗಿ ಜನನವಿರುವ ಪ್ರಯುಕ್ತ 'ಬಹುಧಾ ವಿಜಾಯತೇ' ಎಂದು ಅನೇಕ ಬಾರಿ ಹುಟ್ಟುತ್ತಾನೆಂದು ಕರೆಸಿಕೊಂಡಿದ್ದಾನೆ. ಆದ್ದರಿಂದ ಜಾಯಮಾನತ್ವವೆಂಬ ಲಿಂಗವು ನಿರವಕಾಶವಾಗಿದೆ. ಭಾಷ್ಯದಲ್ಲಿ ಹೇಳಲ್ಪಟ್ಟ ಪ್ರಬಲವಾದ ಈ ಲಿಂಗದಿಂದ ದ್ಯುಭ್ವಾದ್ಯಾಯತನರಾದವರು ರುದ್ರಾದಿಗಳೇ ಆಗಿದ್ದಾರೆಂಬ ಪೂರ್ವಪಕ್ಷವನ್ನು ಮಾಡಬಹುದು.

अनुव्याख्यानन्यायविवरणयोरुक्ता समाख्याऽपि निरवकाशैव । तत्र विष्णुलिङ्गानामश्रवणेन रुद्रादिशब्दानामन्तरधिकरणादिन्यायाविषयत्वात् ।

ಅನುವ್ಯಾಖ್ಯಾನ ಹಾಗೂ ನ್ಯಾಯವಿವರಣೆಗಳಲ್ಲಿ ಹೇಳಲ್ಪಟ್ಟ ರುದ್ರಾದಿವಿಷಯಕವಾದ ಸಮಾಖ್ಯಾಪ್ರಮಾಣಗಳೂ ಸಹ ನಿರವಕಾಶವೇ ಆಗಿವೆ. ಏಕೆಂದರೆ ರುದ್ರಾದಿ ಸಮಾಖ್ಯಾಪ್ರಮಾಣಗಳಲ್ಲಿ ಯಾವುದೇ ವಿಷ್ಣುಲಿಂಗಗಳು ಕೇಳಿಸುತ್ತಿಲ್ಲ. ಆದ್ದರಿಂದ ರುದ್ರಾದಿಶಬ್ದಗಳು ಅಂತರಧಿಕರಣ ಮುಂತಾದ್ದರ ನ್ಯಾಯಕ್ಕೆ ವಿಷಯವಾಗಿರುವುದಿಲ್ಲ. ಒಂದು ವೇಳೆ ವಿಷ್ಣುಲಿಂಗಗಳು ಕೇಳಿಸುತ್ತಿದ್ದರೆ ಆವಾಗ ರುದ್ರ ಮೊದಲಾದ ಶಬ್ದಗಳು ವಿಷ್ಣುವನ್ನು ಪ್ರತಿಪಾದಿಸುತ್ತಿದ್ದವು.

एवं पूर्वपक्षान्तरमपि टीकोक्तरीत्योपपाद्यम् । आत्मशब्दादिकं तु निरवकाश-जायमानत्वलिङ्गानुसारेण जीवादौ कथञ्चिन्नेयमिति ।

ಹೀಗೆ ಜಾಯಮಾನತ್ವಲಿಂಗದಿಂದ ಅಥವಾ ಸಮಾಖ್ಯಾಪ್ರಮಾಣದಿಂದ ಪೂರ್ವಪಕ್ಷವನ್ನು ಮಾಡಬಹುದೆಂದು ತಿಳಿಯಬೇಕು. ಇದರಂತೆ ಬೇರೆ ಪೂರ್ವಪಕ್ಷವನ್ನೂ ಸಹ ಟೀಕೆಯಲ್ಲಿ ಹೇಳಿದಂತೆ ಉಪಪಾದಿಸಬೇಕು. ಆತ್ಮಶಬ್ದಾದಿಗಳನ್ನು ನಿರವಕಾಶವಾದ ಜಾಯಮಾನತ್ವವೆಂಬ ಲಿಂಗಕ್ಕೆ ಅನುಸಾರಿಯಾಗಿ ಜೀವಾದಿಗಳಲ್ಲಿ ಹೇಗಾದರೂ ಕೂಡಿಸಬೇಕು. ಅಂದರೆ ವಿಷ್ಣು ಹಾಗೂ ಜೀವರಿಗೆ ಅಭೇದವಿರುವ ಪ್ರಯುಕ್ತ ಆತ್ಮಶಬ್ದವನ್ನು ಹಾಗೂ ಮುಕ್ತೋಪಸೃಪ್ಯತ್ವವೇ ಮೊದಲಾದ ಲಿಂಗಗಳನ್ನು ಜೀವನಲ್ಲಿ ಕೂಡಿಸಬೇಕೆಂದು ತಿಳಿಯಬೇಕು. ಹೀಗೆ ಜಾಯಮಾನತ್ವವೆಂಬ ಲಿಂಗದಿಂದ ರುದ್ರಾದಿ ಸಮಾಖ್ಯಾಪ್ರಮಾಣಗಳಿಂದ, ಹಾಗೂ ಅಭೇದವಿರುವ ಪ್ರಯುಕ್ತ ಪೂರ್ವಪಕ್ಷವು ಸ್ಥಾಪಿತವಾಗುತ್ತದೆ.

ಪ್ರಕಾಶಃ —

तदुभयं वक्ष्यमाणदिशा न युक्तमिति भावेन निरवकाशलिङ्गेन प्रकरणादेः सर्वस्योपमर्देन सर्वमेव प्रकरणं विष्ण्वन्यपरमिति भाष्यटीकाभिमतं पूर्वपक्षं समर्थयितुमारभते – उच्यत इति ।।

ವಿವರಣೆ - ಆದ್ವೈತಿಗಳ ಹಾಗೂ ರಾಮಾನುಜರ ಈ ಸಮರ್ಥನೆಯು ಮುಂದೆ ಹೇಳುವ ಪ್ರಕಾರ ಅತ್ಯಂತ ಅಯುಕ್ತವಾಗಿದೆ. ಆದ್ದರಿಂದ ಜಾಯಮಾನತ್ವವೆಂಬ ನಿರವಕಾಶಲಿಂಗದ ಬಲದಿಂದ ಪ್ರಕರಣ, ಸಮಾಖ್ಯಾ ಇವುಗಳೆಲ್ಲವೂ ಬಾಧಿತವಾಗುತ್ತವೆ. ಸಂಪೂರ್ಣಪ್ರಕರಣವು ವಿಷ್ಣುವನ್ನು ಬಿಟ್ಟು ಬೇರೆಯವರನ್ನೇ

ಪ್ರತಿಪಾದಿಸುತ್ತದೆಂಬ ಭಾಷ್ಯ ಹಾಗೂ ಟೀಕೆಗಳಿಗೆ ಸಮತ್ಕವಾದ ಪೂರ್ವಪಕ್ಷವನ್ನು ಸಮರ್ಥಿಸಲು ಹೊರಟಿದ್ದಾರೆ 'ಉಚ್ಯತೇ' ಇತ್ಯಾದಿ ಗ್ರಂಥದಿಂದ.

ಪ್ರಕಾಶಃ – ಯದುಕ್ತಂ ಲಿಙ್ಗಪ್ರಕರಣೇ ಸಮಾಖ್ಯಾತೋ ಬಲವತೀ ಇತಿ । ತತ್ಸತ್ಯಮ್ । ತಥಾऽಪಿ ನಿರವಕಾಶಜೀವಲಿಙ್ಗೇನ ಬ್ರಹ್ಮಲಿಙ್ಗಪ್ರಕರಣಯೋರ್ನೇಯತ್ವಾತ್ । ನಚ ತದಪಿ ಸಾವಕಾಶಮಿತ್ಯುಕ್ತಮಿತಿ ವಾಚ್ಯಮ್ । ತತ್ರಾಹ – ಅನುವ್ಯಾಖ್ಯಾನ ಇತಿ ।।

ಹಿಂದ ಪ್ರಶ್ನಿಸುವಾಗ ಲಿಂಗ ಹಾಗೂ ಪ್ರಕರಣಗಳು, ಸಮಾಖ್ಯಾಪ್ರಮಾಣಕ್ಕಿಂತಲೂ ಬಲಿಷ್ಠವಾಗಿವೆಯೆಂದು ಹೇಳಿದ್ದಾರಲ್ಲವೇ? ಎಂದರೆ ಹೌದು, ಆದರೂ ಸಹ ನಿರವಕಾಶವಾದ ಜಾಯಮಾನತ್ವವೆಂಬ ಲಿಂಗದಿಂದ ಬ್ರಹ್ಮವಿಷಯದಲ್ಲಿರುವ ಲಿಂಗ ಹಾಗೂ ಪ್ರಕರಣಗಳು ಬಾಧಿತವಾಗುತ್ತವೆ. ಇನ್ನು ಜಾಯಮಾನತ್ವವೆಂಬ ಲಿಂಗವೂ ಸಹ ಸಾವಕಾಶವೆಂದು ಹೇಳಬಾರದು, ಈ ವಿಷಯವನ್ನು 'ಅನುವ್ಯಾಖ್ಯಾನೇ' ಎಂಬ ವಾಕ್ಯದಿಂದ ಸಮರ್ಥಿಸುತ್ತಿದ್ದಾರೆ.

ಪ್ರಕಾಶಃ – ಪ್ರಕಾರಾನ್ತರೇಣ ಜಾಯಮಾನತ್ವಂ ಜೀವ ಏವೇತಿ ಪ್ರಾದುರ್ಭಾವರೂಪಮೇವ ಜನನಂ ಜಾಯ ಮಾನಶಬ್ದಾರ್ಥೋऽಸ್ತ್ವಿತ್ಯತೋ ವಾऽಹ – ಜನನೇತಿ ।।

ಮತ್ತೊಂದು ಬಗೆಯಲ್ಲಿ ಜಾಯಮಾನತ್ವವೆಂಬ ಲಿಂಗವು ಜೀವನಲ್ಲೇ ಬರುತ್ತದೆಂದು 'ಜನನ' ಇತ್ಯಾದಿ ವಾಕ್ಯದಿಂದ ಪ್ರತಿಪಾದಿಸುತ್ತಿದ್ದಾರೆ. ಅಥವಾ 'ಜನನ' ಶಬ್ದಕ್ಕೆ ಪಾದುರ್ಭಾವವೆಂಬರ್ಥವನ್ನೇ ಸ್ವೀಕರಿಸಿ, ಜಾಯಮಾನತ್ವವೆಂಬ ಲಿಂಗವು ವಿಷ್ಣುವಿನಲ್ಲಿ ಸಾವಕಾಶವಾಗಿದೆಯಲ್ಲವೇ? ಎಂಬ ಪ್ರಶ್ನೆಗೂ ಸಹ 'ಜನನ' ಇತ್ಯಾದಿ ವಾಕ್ಯದಿಂದಲೇ ಉತ್ತರಿಸುತ್ತಿದ್ದಾರೆ.

ಪ್ರಕಾಶಃ – ಸಮ್ಭವಾಚ್ಛ್ರವಣಾಚ್ಚೇತಿ ಹೇತ್ವೋರ್ನ ಜಾಯಮಾನತ್ವಸ್ಯ ಸಾವಕಾಶತೇತಿ ಪೂರ್ವೇಣಾನ್ವಯಃ । ತಸ್ಯೈವಾತ್ರಾನುಷಙ್ಗೋ ವಾ – ಜೀವನಾದಿತಿ ।। ಸರ್ವಪಾಲಕೇ ಪಾಲ್ಯಮಾನತ್ವಾದಿ-ರೂಪಜೀವನಾಯೋಗಾದಿತಿ ಭಾವಃ । ದ್ವಿತೀಯೇತಿ ।। ವಿಯತ್ಪಾದೇ ''ಶ್ರುತ ಏವ'' ಇತ್ಯತ್ರ ಜೀವಸ್ಯಾಸ್ತೀತ್ಯುಚ್ಯತೇ । ''ಅಸಮ್ಭವಸ್ತು ಸತೋऽನುಪಪತ್ತೇಃ'' ಇತ್ಯತ್ರ ಬ್ರಹ್ಮಣೋ ನೇತಿ ವಕ್ಷ್ಯತ ಇತ್ಯರ್ಥಃ । ಪ್ರಾದುರ್ಭಾವೋ ನ ಜನನಶಬ್ದಾರ್ಥ ಇತಿ ಭಾವಃ ।

ಜಾಯಮಾನತ್ವವು ಏಕೆ ಸಾವಕಾಶವಲ್ಲವೆಂದರೆ, ಹಿಂದಿನ ವಾಕ್ಯದಲ್ಲಿರುವ 'ಸಂಭವಾತ್', 'ಶ್ರವಣಾತ್' ಎಂಬುದನ್ನು ಅನ್ವಯ ಮಾಡಿಕೊಳ್ಳಬೇಕು. ಆಂದರೆ ಮರಣ ಹಾಗೂ ಜನನಗಳು ಚೇತನನಲ್ಲಿಯೇ ಕೂಡುವುದರಿಂದ ಎಂದು ಅನ್ವಯ. ಅಥವಾ 'ಸಂಭವಾತ್', 'ಶ್ರವಣಾತ್' ಎಂಬೆರಡು ಪದಗಳನ್ನು ಇಲ್ಲಿರುವ 'ನ ಜಾಯಮಾನತ್ವಸ್ಯ ಸಾವಕಾಶತಾ' ಎಂಬಲ್ಲಿ ಅನ್ವಯ ಮಾಡಬೇಕು.

ಗ್ರಂಥದಲ್ಲಿರುವ 'ಜೀವನಾದಿತಿ' ಎಂಬುದಕ್ಕೆ ಹೀಗರ್ಥ - ಪರಮಾತ್ಮನಲ್ಲಿ ಜನನವು ಇರುವುದಿಲ್ಲ. ಆದರಂತೆ ಸಕಲ ಪಾಲಕನಾದ್ದರಿಂದ ಪಾಲ್ಯಮಾನತ್ವವೂ ಇರುವುದಿಲ್ಲ. ಆಂದರೆ ರಕ್ಷಣೆ ಮಾಡುತ್ತಾನೆ

ದ್ಯುಭ್ವಾದ್ಯಧಿಕರಣ (೧-೩-೧)

ಹೊರತು, ಮತ್ತೊಬ್ಬನಿಂದ ರಕ್ಷಿತನಾಗಿಲ್ಲ. ಹೀಗೆ ಹುಟ್ಟುವಿಕೆ ಮತ್ತು ರಕ್ಷಿಸಿಕೊಳ್ಳುವಿಕೆಯೆಂಬ ಜೀವನವು ಪರಮಾತ್ಮನಲ್ಲಿ ಕೂಡುವುದಿಲ್ಲ ಹೊರತು, ಜೀವನಲ್ಲೇ ಕೂಡುತ್ತದೆಂದು ಅಭಿಪ್ರಾಯ.

'ದ್ವಿತೀಯೇ' ಎಂದರೆ ವಿಯದಧಿಕರಣದಲ್ಲಿರುವ 'ಜ್ಯೋಽತ ಏವ' ಎಂಬ ಸೂತ್ರದಲ್ಲಿ ಜೀವನಿಗೆ ಜನನವು ಕೂಡುತ್ತದೆಂದು ಹೇಳಿರುತ್ತಾರೆ. 'ಅಸಂಭವಸ್ತು ಸತೋऽನುಪಪತ್ತೇಃ' ಎಂಬ ಸೂತ್ರದಲ್ಲಿ ಬ್ರಹ್ಮನಿಗೆ ಜನನವು ಕೂಡುವುದಿಲ್ಲವೆಂದು ಹೇಳಿದ್ದಾರೆ. ಆದ್ದರಿಂದ 'ಜನನ' ಶಬ್ದಕ್ಕೆ ಪ್ರಾದುರ್ಭಾವವೆಂಬರ್ಥವನ್ನು ವಿವಕ್ಷಿಸಲು ಸಾಧ್ಯವಿಲ್ಲ.

ಪ್ರಕಾಶಃ – ನನು ಜನನಂ ಭಗವತ್ಯಪಿ ಶ್ರುತಮಿತ್ಯತ ಆಹ – ಅಜಾಯಮಾನ ಇತಿ ।।

'ಜನಿ ಪ್ರಾದುರ್ಭಾವೇ' ಎಂದು 'ಜನಿ' ಶಬ್ದವು ಪ್ರಾದುರ್ಭಾವವೆಂಬರ್ಥದಲ್ಲಿಯೂ ಸಹ ಇರಬಹುದು. ಆದರೆ ನೀವೇ ಹೇಳುವಂತೆ ಪರಾಧೀನವಿಶೇಷವಾಪ್ತಿಯೇ ಜನನವಾದ್ದರಿಂದ ಇದನ್ನು ಪರಮಾತ್ಮನಲ್ಲಿ ಹೇಳಲು ಸಾಧ್ಯವಿಲ್ಲ. 'ಯತೋ ವಾ ಇಮಾನಿ ಭೂತಾನಿ ಜಾಯಂತೇ' ಎಂಬ ಶ್ರುತಿಯಲ್ಲಿ ಜನನವು ಭಗವಂತನಲ್ಲಿಯೂ ಸಹ ಕೇಳಿಸುತ್ತಿದೆಯಲ್ಲವೇ? ಎಂಬ ಪ್ರಶ್ನೆಗೆ 'ಅಜಾಯಮಾನಃ' ಎಂಬ ವಾಕ್ಯದಿಂದ ಉತ್ತರಿಸುತ್ತಿದ್ದಾರೆ.

ಪ್ರಕಾಶಃ – ಏತೇನ ''ಜನನಮರಣಯೋಶ್ಚ'' ಇತ್ಯಾದಿನಾ ಗ್ರನ್ಥೇನ ''ಸ ಏಷೋऽನ್ತಶ್ಚರತೇ ಬಹುಧಾ ಜಾಯಮಾನ ಇತಿ ಧ್ಯುಭ್ವಾದ್ಯಾಯತನೇ ಜೀವಲಿಙ್ಗಶ್ರವಣಾಜ್ಜೀವಸ್ಯ ತದ್ಯುಕ್ತಮ್'' ಇತ್ಯುಕ್ತಯುಕ್ತತೋಪಪಾದಿತಾ । ತಸ್ಮಾತ್ ಭಗವತಿ ಜನನಾಭಾವಾತ್ ।

ಹೀಗೆ ಹೇಳಿದ್ದರಿಂದ 'ಜನನಮರಣಯೋಶ್ಚ' ಇತ್ಯಾದಿ ಗ್ರಂಥದಿಂದ 'ಸ ಏಷೋऽಂತಶ್ಚರತೇ ಬಹುಧಾ ಜಾಯಮಾನಃ' ಎಂಬುದಾಗಿ ದ್ಯುಭ್ವಾದ್ಯಾಯತನದಲ್ಲಿ ಜೀವಲಿಂಗವು ಕೇಳಿಸುತ್ತಿರುವುದರಿಂದ ಜೀವನಿಗೆ ದ್ಯುಭ್ವಾದ್ಯಾಯತನತ್ವವು ಯುಕ್ತವಾಗುತ್ತದೆಂಬ ಪೂರ್ವಪಕ್ಷವನ್ನು ಉಪಪಾದಿಸಿದಂತಾಯಿತು. 'ತಸ್ಮಾತ್' ಎಂಬ ಪದಕ್ಕೆ ಪರಮಾತ್ಮನಲ್ಲಿ ಜನನವು ಇಲ್ಲದ ಕಾರಣ ಎಂದರ್ಥ.

ಪ್ರಕಾಶಃ – ನಿರವಕಾಶೇನೇತಿ ।। ''ಜ್ಯೋತಿರ್ದರ್ಶನಾತ್'' ಇತ್ಯತ್ರ ''ಸ ವಾ ಅಯಂ ಪುರುಷೋ ಜಾಯಮಾನಶ್ಶರೀರಮಭಿಸಮ್ಪದ್ಯಮಾನಃ'' ಇತಿ ಶ್ರುತಜಾಯಮಾನತ್ವಾದೇರ್ವಿಷ್ಣ್ವಸಾಧಾರಣಜ್ಯೋತಿಃಶ್ರುತ್ಯಾ ಉಪಕ್ರಮೋಪಸಂಹಾರಾಭ್ಯಾಮವಗತಬ್ರಹ್ಮಪರೈಕವಾಕ್ಯಮಧ್ಯಸ್ಥತಯಾऽನ್ತರ್ಣೀತಲಿಙ್ಗತ್ವೇನ ಬ್ರಹ್ಮಣಿ ನಯನಮಿತಿ ವಕ್ಷ್ಯತೇ । ನತ್ವಿಹ ತಥೇತಿ ಭಾವಃ ।

ವಾಸ್ತವಿಕವಾಗಿ ಈ ಅಧಿಕರಣವು 'ಜ್ಯೋತಿರ್ದರ್ಶನಾತ್' ಎಂಬ ಸೂತ್ರದಿಂದ ಪುನರುಕ್ತವಾಗಿದೆಯೆಂದೆನಿಸುತ್ತದೆ. ಏಕೆಂದರೆ 'ಜ್ಯೋತಿರ್ದರ್ಶನಾತ್' ಎಂಬ ಸೂತ್ರದಲ್ಲಿಯೂ ಸಹ 'ಸ ವಾ ಅಯಂ ಪುರುಷೋ ಜಾಯಮಾನಶ್ಶರೀರಮಭಿಸಂಪದ್ಯಮಾನಃ' ಎಂಬ ವಾಕ್ಯದಲ್ಲಿರುವ ಜಾಯಮಾನತ್ವವನ್ನು ವಿಷ್ಣುವಿನಲ್ಲಿ ಆಕ್ಷೇಪಿಸಿ ಉತ್ತರಿಸಿದ್ದಾರೆ. ಇಲ್ಲಿಯೂ ಸಹ ವಿಷ್ಣುವಿನಲ್ಲಿ ಅದೇ

ಜಾಯಮಾನತ್ವವನ್ನು ಆಕ್ಷೇಪಿಸಿ ಉತ್ತರಿಸುತ್ತಿರುವುದರಿಂದ ಪುನರುಕ್ತಿ ಬರುತ್ತದಲ್ಲವೇ? ಎಂಬ ಪ್ರಶ್ನೆ ಬರುತ್ತದೆ. ಆದರೆ 'ಜ್ಯೋತಿರ್ದರ್ಶನಾತ್' ಎಂಬ ಸೂತ್ರದಲ್ಲಿ ಸಮನ್ವಯ ಮಾಡುತ್ತಿರುವ ಜಾಯಮಾನ ಶಬ್ದವು ಅಂತರ್ನೀತವಾದ ಣಿಚ್ ಪ್ರತ್ಯಯಾಂತವಾಗಿದೆ. ಹಾಗಾಗಿ ಹುಟ್ಟಿಸುತ್ತಾನೆ ಎಂಬರ್ಥವನ್ನೇ ಆಲ್ಲಿರುವ ಜಾಯಮಾನ ಶಬ್ದಕ್ಕೆ ಹೇಳಬೇಕು. ಏಕೆಂದರೆ ಉಪಕ್ರಮ ಹಾಗೂ ಉಪಸಂಹಾರಗಳ ಬಲದಿಂದ ಸಮಗ್ರ ಪ್ರಕರಣವು ಬ್ರಹ್ಮಪರವಾಗಿದೆಯೆಂದು ನಿರ್ಣೀತವಾಗಿದೆ. ಆದ್ದರಿಂದ ಮಧ್ಯದಲ್ಲಿರುವ ಜಾಯಮಾನಶಬ್ದಕ್ಕೂ ಬ್ರಹ್ಮಪರವಾಗಿಯೇ ಅರ್ಥಸಬೇಕಾದ್ದರಿಂದ ಹೀಗೆ ಆಂತರ್ನೀತವಾದ ಣಿಚ್ ಪ್ರತ್ಯಯಾಂತವೆಂದು ಪರಿಗಣಿಸುವುದು ಅನಿವಾರ್ಯ. ಆದರೆ ಇಲ್ಲಿ ಸಮನ್ವಯ ಮಾಡುತ್ತಿರುವ ಜಾಯಮಾನ ಶಬ್ದಕ್ಕೆ ಹುಟ್ಟಿಸುತ್ತಾನೆ ಎಂದರ್ಥವಲ್ಲ ಹೊರತು, ಹುಟ್ಟುತ್ತಾನೆ ಎಂದರ್ಥ. ಏಕೆಂದರೆ ಆಲ್ಲಿರುವಂತೆ ಇಲ್ಲಿ ಉಪಕ್ರಮ ಹಾಗೂ ಉಪಸಂಹಾರಗಳ ಬಲದಿಂದ ಬ್ರಹ್ಮ ಪ್ರಕರಣವೆಂದು ನಿರ್ಣಯಿಸಲು ಸಾಧ್ಯವಿಲ್ಲ.

ಪ್ರಕಾಶಃ – ನನು ಜೀವಮಾತ್ರಪ್ರಾಪಕಲಿಙ್ಗೇನ ಕಥಂ ರುದ್ರಾದಿರೇವೇತ್ಯುಕ್ತಿಃ । ಪ್ರಾಪಕಸಮಾಖ್ಯಾಯಾಶ್ಚ ಲಿಙ್ಗಪ್ರಕರಣಾಭ್ಯಾಂ ಬಾಧೋಕ್ತೇರಿತ್ಯತ ಆಹ – **ಅನುವ್ಯಾಖ್ಯಾನೇತಿ ।। ಏವಮಿತಿ ।।** ರುದ್ರಜೀವಪೂರ್ವಪಕ್ಷವತ್ ಪ್ರಧಾನವಾಯುಪೂರ್ವಪಕ್ಷ ಇತ್ಯರ್ಥಃ ।

ಕೇವಲ ಜೀವಪ್ರಾಪಕವಾದ ಜಾಯಮಾನತ್ವಲಿಂಗದಿಂದ ರುದ್ರಾದಿಗಳು ದ್ಯುಭ್ವಾದ್ಯಾಯತನರಾಗಿದ್ದಾರೆಂಬ ಪೂರ್ವಪಕ್ಷವನ್ನು ಮಾಡಲು ಹೇಗೆ ಸಾಧ್ಯ ? ಇನ್ನು ರುದ್ರಾದಿಗಳ ವಿಷಯದಲ್ಲಿ ಸಮಾಖ್ಯಾಪ್ರಮಾಣವನ್ನು ಪ್ರಾಪಕವನ್ನಾಗಿ ಹೇಳಬೇಕು. ಆದರೆ ಅವುಗಳು ವಿಷ್ಣುವಿಷಯಕವಾದ ಲಿಂಗ ಹಾಗೂ ಪ್ರಕರಣಗಳಿಂದ ಬಾಧಿತವಾಗಿವೆಯಲ್ಲವೇ? ಎಂಬ ಪ್ರಶ್ನೆಗೆ 'ಅನುವ್ಯಾಖ್ಯಾನೇ' ಎಂಬ ವಾಕ್ಯದಿಂದ ಉತ್ತರಿಸುತ್ತಿದ್ದಾರೆ. 'ಏವಮ್' ಎಂಬ ಪದಕ್ಕೆ ರುದ್ರ ಹಾಗೂ ಜೀವರ ವಿಷಯದಲ್ಲಿ ಮಾಡಿದ ಪೂರ್ವಪಕ್ಷದಂತೆ ಪ್ರಕೃತಿ ಹಾಗೂ ವಾಯು ವಿಷಯಕವಾದ ಪೂರ್ವಪಕ್ಷವನ್ನು ತಿಳಿಯಬೇಕೆಂದರ್ಥ.

ಪ್ರಕಾಶಃ – ಪ್ರಧಾನಸ್ಯ ಸರ್ವೋಪಾದಾನತ್ವಾತ್ ಸರ್ವಾಧಾರತ್ವಂ ಯುಕ್ತಮ್ । ಕಾಪಿಲಸ್ಮೃತಿಸಿದ್ಧಂ ಚ । ನಚ ತಸ್ಯಾಪ್ರಾಮಾಣ್ಯಮ್ । ದೃಷ್ಟಫಲತದ್ವಾಕ್ಯದೃಷ್ಟಾನ್ತೇನ ಸರ್ವಾಶ್ರಯತ್ವಬೋಧಿನ್ಯಾ ಅಪಿ ಪ್ರಾಮಾಣ್ಯಾನುಮಾನಾತ್ ।

ಪ್ರಕೃತಿಯು ಸಕಲಕ್ಕೂ ಉಪಾದಾನ ಕಾರಣವಾದ್ದರಿಂದ ಸರ್ವಾಧಾರವಾಗಿದೆಯೆಂಬುದು ಯುಕ್ತವಾಗಿದೆ. ಅಷ್ಟೇ ಅಲ್ಲದೆ ಕಾಪಿಲಸ್ಮೃತಿಯ ಆಧಾರದಿಂದಲೂ ಸಹ ಸಿದ್ಧವಾಗಿದೆ. ಇನ್ನು ಕಾಪಿಲಸ್ಮೃತಿಗೆ ಅಪ್ರಾಮಾಣ್ಯವನ್ನು ಹೇಳಲು ಸಾಧ್ಯವಿಲ್ಲ. ಯಾವ ವಾಕ್ಯದಿಂದ ಫಲವು ದೃಷ್ಟವಾಗಿದೆಯೋ, ಆ ವಾಕ್ಯದ ಪ್ರಾಮಾಣ್ಯದ ದೃಷ್ಟಾಂತದಿಂದ ಸರ್ವಾಶ್ರಯತ್ವವನ್ನು ಪ್ರತಿಪಾದಿಸುವ ವಾಕ್ಯಕ್ಕೂ ಸಹ ಪ್ರಾಮಾಣ್ಯವನ್ನು ಊಹಿಸಬಹುದು.

ಪ್ರಕಾಶಃ – ವಾಯೋಶ್ಚ ಪ್ರಾಣಾದ್ಯಾಧಾರತ್ವಂ ಪ್ರಸಿದ್ಧಮೇವೇತ್ಯಾದಿರೂಪೇಣೋಪಪಾದ್ಯಮಿತ್ಯರ್ಥಃ ।

ಇನ್ನು ವಾಯುದೇವನು ಸಕಲ ಪ್ರಾಣಗಳಿಗೆ ಆಧಾರನಾಗಿದ್ದಾನೆಂಬ ವಿಷಯವು ಲೋಕಪ್ರಸಿದ್ಧವೇ ಆಗಿದೆ. ಈ ಕ್ರಮದಲ್ಲಿ ಪ್ರಕೃತಿ ಹಾಗೂ ವಾಯುದೇವತೆಯಲ್ಲಿ ಸರ್ವಾಶ್ರಯತ್ವವನ್ನು ಉಪಪಾದಿಸಬೇಕು.

ಹೊರತು, ಮತ್ತೊಬ್ಬನಿಂದ ರಕ್ಷಿತನಾಗಿಲ್ಲ. ಹೀಗೆ ಹುಟ್ಟುವಿಕೆ ಮತ್ತು ರಕ್ಷಿಸಿಕೊಳ್ಳುವಿಕೆಯೆಂಬ ಜೀವನವು ಪರಮಾತ್ಮನಲ್ಲಿ ಕೂಡುವುದಿಲ್ಲ ಹೊರತು, ಜೀವನಲ್ಲೇ ಕೂಡುತ್ತದೆಂದು ಅಭಿಪ್ರಾಯ.

'ದ್ವಿತೀಯೇ' ಎಂದರೆ ವಿಯದಧಿಕರಣದಲ್ಲಿರುವ 'ಜ್ಞೋऽತ ಏವ' ಎಂಬ ಸೂತ್ರದಲ್ಲಿ ಜೀವನಿಗೆ ಜನನವು ಕೂಡುತ್ತದೆಂದು ಹೇಳಿರುತ್ತಾರೆ. 'ಅಸಂಭವಸ್ತು ಸತೋऽನುಪಪತ್ತೇಃ' ಎಂಬ ಸೂತ್ರದಲ್ಲಿ ಬ್ರಹ್ಮನಿಗೆ ಜನನವು ಕೂಡುವುದಿಲ್ಲವೆಂದು ಹೇಳಿದ್ದಾರೆ. ಆದ್ದರಿಂದ 'ಜನನ' ಶಬ್ದಕ್ಕೆ ಪ್ರಾದುರ್ಭಾವವೆಂಬರ್ಥವನ್ನು ವಿವಕ್ಷಿಸಲು ಸಾಧ್ಯವಿಲ್ಲ.

प्रकाशः – ननु जननं भगवत्यपि श्रुतमित्यत आह – **अजायमान इति ।।**

'ಜನಿ ಪ್ರಾದುರ್ಭಾವೇ' ಎಂದು 'ಜನಿ' ಶಬ್ದವು ಪ್ರಾದುರ್ಭಾವವೆಂಬರ್ಥದಲ್ಲಿಯೂ ಸಹ ಇರಬಹುದು. ಆದರೆ ನೀವೇ ಹೇಳುವಂತೆ ಪರಾಧೀನವಿಶೇಷವಾಪ್ತಯೇ ಜನನವಾದ್ದರಿಂದ ಇದನ್ನು ಪರಮಾತ್ಮನಲ್ಲಿ ಹೇಳಲು ಸಾಧ್ಯವಿಲ್ಲ. 'ಯತೋ ವಾ ಇಮಾನಿ ಭೂತಾನಿ ಜಾಯಂತೇ' ಎಂಬ ಶ್ರುತಿಯಲ್ಲಿ ಜನನವು ಭಗವಂತನಲ್ಲಿಯೂ ಸಹ ಕೇಳಿಸುತ್ತಿದೆಯಲ್ಲವೇ? ಎಂಬ ಪ್ರಶ್ನೆಗೆ 'ಅಜಾಯಮಾನಃ' ಎಂಬ ವಾಕ್ಯದಿಂದ ಉತ್ತರಿಸುತ್ತಿದ್ದಾರೆ.

प्रकाशः – एतेन ''जननमरणयोश्च'' इत्यादिना ग्रन्थेन ''स एषोऽन्तश्चरते बहुधा जायमान इति द्युभ्वाद्यायतने जीवलिङ्गश्रवणाज्जीवस्य तद्युक्तम्'' इत्युक्तयुक्ततोपपादिता । **तस्मात् भगवति जननाभावात् ।**

ಹೀಗೆ ಹೇಳಿದ್ದರಿಂದ 'ಜನನಮರಣಯೋಶ್ಚ' ಇತ್ಯಾದಿ ಗ್ರಂಥದಿಂದ 'ಸ ಏಷೋऽಂತಶ್ಚರತೇ ಬಹುಧಾ ಜಾಯಮಾನಃ' ಎಂಬುದಾಗಿ ದ್ಯುಭ್ವಾದ್ಯಾಯತನನಲ್ಲಿ ಜೀವಲಿಂಗವು ಕೇಳಿಸುತ್ತಿರುವುದರಿಂದ ಜೀವನಿಗೆ ದ್ಯುಭ್ವಾದ್ಯಾಯತನತ್ವವು ಯುಕ್ತವಾಗುತ್ತದೆಂಬ ಪೂರ್ವಪಕ್ಷವನ್ನು ಉಪಪಾದಿಸಿದಂತಾಯಿತು. 'ತಸ್ಮಾತ್' ಎಂಬ ಪದಕ್ಕೆ ಪರಮಾತ್ಮನಲ್ಲಿ ಜನನವು ಇಲ್ಲದ ಕಾರಣ ಎಂದರ್ಥ.

प्रकाशः – **निरवकाशेनेति ।।** ''ज्योतिर्दर्शनात्'' इत्यत्र ''स वा अयं पुरुषो जायमानश्शरीरमभिसम्पद्यमानः'' इति श्रुतजायमानत्वादेर्विष्ण्वसाधारणज्योतिश्श्रुत्या उपक्रमोपसंहाराभ्यामवगतब्रह्मपरैकवाक्यमध्यस्थतयाऽन्तर्णीतणिच्त्वेन ब्रह्मणि नयनमिति वक्ष्यते । नत्विह तथेति भावः ।

ವಾಸ್ತವಿಕವಾಗಿ ಈ ಅಧಿಕರಣವು 'ಜ್ಯೋತಿರ್ದರ್ಶನಾತ್' ಎಂಬ ಸೂತ್ರದಿಂದ ಪುನರುಕ್ತವಾಗಿದೆಯೆಂದೆನಿಸುತ್ತದೆ. ಏಕೆಂದರೆ 'ಜ್ಯೋತಿರ್ದರ್ಶನಾತ್' ಎಂಬ ಸೂತ್ರದಲ್ಲಿಯೂ ಸಹ 'ಸ ವಾ ಅಯಂ ಪುರುಷೋ ಜಾಯಮಾನಶ್ಶರೀರಮಭಿಸಂಪದ್ಯಮಾನಃ' ಎಂಬ ವಾಕ್ಯದಲ್ಲಿರುವ ಜಾಯಮಾನತ್ವವನ್ನು ವಿಷ್ಣುವಿನಲ್ಲಿ ಆಕ್ಷೇಪಿಸಿ ಉತ್ತರಿಸಿದ್ದಾರೆ. ಇಲ್ಲಿಯೂ ಸಹ ವಿಷ್ಣುವಿನಲ್ಲಿ ಅದೇ

ಜಾಯಮಾನತ್ವವನ್ನು ಆಕ್ಷೇಪಿಸಿ ಉತ್ತರಿಸುತ್ತಿರುವುದರಿಂದ ಪುನರುಕ್ತಿ ಬರುತ್ತದಲ್ಲವೇ? ಎಂಬ ಪ್ರಶ್ನೆ ಬರುತ್ತದೆ. ಆದರೆ 'ಜ್ಯೋತಿರ್ದರ್ಶನಾತ್' ಎಂಬ ಸೂತ್ರದಲ್ಲಿ ಸಮನ್ವಯ ಮಾಡುತ್ತಿರುವ ಜಾಯಮಾನ ಶಬ್ದವು ಅಂತರ್ನೀತವಾದ ಣಿಚ್‌ಪ್ರತ್ಯಯಾಂತವಾಗಿದೆ. ಹಾಗಾಗಿ ಹುಟ್ಟಿಸುತ್ತಾನೆ ಎಂಬರ್ಥವನ್ನೇ ಆಲ್ಲಿರುವ ಜಾಯಮಾನ ಶಬ್ದಕ್ಕೆ ಹೇಳಬೇಕು. ಏಕೆಂದರೆ ಉಪಕ್ರಮ ಹಾಗೂ ಉಪಸಂಹಾರಗಳ ಬಲದಿಂದ ಸಮಗ್ರ ಪ್ರಕರಣವು ಬ್ರಹ್ಮಪರವಾಗಿದೆಯೆಂದು ನಿರ್ನೀತವಾಗಿದೆ. ಆದ್ದರಿಂದ ಮಧ್ಯದಲ್ಲಿರುವ ಜಾಯಮಾನಶಬ್ದಕ್ಕೂ ಬ್ರಹ್ಮಪರವಾಗಿಯೇ ಅರ್ಥೈಸಬೇಕಾದ್ದರಿಂದ ಹೀಗೆ ಅಂತರ್ನೀತವಾದ ಣಿಚ್‌ಪ್ರತ್ಯಯಾಂತವೆಂದು ಪರಿಗಣಿಸುವುದು ಅನಿವಾರ್ಯ. ಆದರೆ ಇಲ್ಲಿ ಸಮನ್ವಯ ಮಾಡುತ್ತಿರುವ ಜಾಯಮಾನ ಶಬ್ದಕ್ಕೆ ಹುಟ್ಟಿಸುತ್ತಾನೆ ಎಂದರ್ಥವಲ್ಲ ಹೊರತು, ಹುಟ್ಟುತ್ತಾನೆ ಎಂದರ್ಥ. ಏಕೆಂದರೆ ಆಲ್ಲಿರುವಂತೆ ಇಲ್ಲಿ ಉಪಕ್ರಮ ಹಾಗೂ ಉಪಸಂಹಾರಗಳ ಬಲದಿಂದ ಬ್ರಹ್ಮ ಪ್ರಕರಣವೆಂದು ನಿರ್ಣಯಿಸಲು ಸಾಧ್ಯವಿಲ್ಲ.

ಪ್ರಕಾಶಃ – ನನು ಜೀವಮಾತ್ರಪ್ರಾಪಕಲಿಙ್ಗೇನ ಕಥಂ ರುದ್ರಾದಿರೇವೇತ್ಯುಕ್ತಿಃ । ಪ್ರಾಪಕಸಮಾಖ್ಯಾಯಾಶ್ಚ ಲಿಙ್ಗಪ್ರಕರಣಾಭ್ಯಾಂ ಬಾಧೋಕ್ತೇರಿತ್ಯತ ಆಹ – ಅನುವ್ಯಾಖ್ಯಾನೇತಿ ।। ಏವಮಿತಿ ।। ರುದ್ರಜೀವಪೂರ್ವಪಕ್ಷವತ್ ಪ್ರಧಾನವಾಯುಪೂರ್ವಪಕ್ಷ ಇತ್ಯರ್ಥಃ ।

ಕೇವಲ ಜೀವಪ್ರಾಪಕವಾದ ಜಾಯಮಾನತ್ವಲಿಂಗದಿಂದ ರುದ್ರಾದಿಗಳು ದ್ಯುಭ್ವಾದ್ಯಾಯತನರಾಗಿದ್ದಾರೆಂಬ ಪೂರ್ವಪಕ್ಷವನ್ನು ಮಾಡಲು ಹೇಗೆ ಸಾಧ್ಯ ? ಇನ್ನು ರುದ್ರಾದಿಗಳ ವಿಷಯದಲ್ಲಿ ಸಮಾಖ್ಯಾಪ್ರಮಾಣವನ್ನು ಪ್ರಾಪಕವನ್ನಾಗಿ ಹೇಳಬೇಕು. ಆದರೆ ಅವುಗಳು ವಿಷ್ಣುವಿಷಯಕವಾದ ಲಿಂಗ ಹಾಗೂ ಪ್ರಕರಣಗಳಿಂದ ಬಾಧಿತವಾಗಿವೆಯಲ್ಲವೇ? ಎಂಬ ಪ್ರಶ್ನೆಗೆ 'ಅನುವ್ಯಾಖ್ಯಾನೇ' ಎಂಬ ವಾಕ್ಯದಿಂದ ಉತ್ತರಿಸುತ್ತಿದ್ದಾರೆ. 'ಏವಮ್' ಎಂಬ ಪದಕ್ಕೆ ರುದ್ರ ಹಾಗೂ ಜೀವರ ವಿಷಯದಲ್ಲಿ ಮಾಡಿದ ಪೂರ್ವಪಕ್ಷದಂತೆ ಪ್ರಕೃತಿ ಹಾಗೂ ವಾಯು ವಿಷಯಕವಾದ ಪೂರ್ವಪಕ್ಷವನ್ನು ತಿಳಿಯಬೇಕೆಂದರ್ಥ.

ಪ್ರಕಾಶಃ – ಪ್ರಧಾನಸ್ಯ ಸರ್ವೋಪಾದಾನತ್ವಾತ್ ಸರ್ವಾಧಾರತ್ವಂ ಯುಕ್ತಮ್ । ಕಾಪಿಲಸ್ಮೃತಿಸಿದ್ಧಂ ಚ । ನಚ ತಸ್ಯಾಪ್ರಾಮಾಣ್ಯಮ್ । ದೃಷ್ಟಫಲತದ್ವಾಕ್ಯದೃಷ್ಟಾನ್ತೇನ ಸರ್ವಾಶ್ರಯತ್ವಬೋಧಿನ್ಯಾ ಅಪಿ ಪ್ರಾಮಾಣ್ಯಾನುಮಾನಾತ್ ।

ಪ್ರಕೃತಿಯು ಸಕಲಕ್ಕೂ ಉಪಾದಾನ ಕಾರಣವಾದ್ದರಿಂದ ಸರ್ವಾಧಾರವಾಗಿದೆಯೆಂಬುದು ಯುಕ್ತವಾಗಿದೆ. ಅಷ್ಟೇ ಅಲ್ಲದೆ ಕಾಪಿಲಸ್ಮೃತಿಯ ಆಧಾರದಿಂದಲೂ ಸಹ ಸಿದ್ಧವಾಗಿದೆ. ಇನ್ನು ಕಾಪಿಲಸ್ಮೃತಿಗೆ ಅಪ್ರಾಮಾಣ್ಯವನ್ನು ಹೇಳಲು ಸಾಧ್ಯವಿಲ್ಲ. ಯಾವ ವಾಕ್ಯದಿಂದ ಫಲವು ದೃಷ್ಟವಾಗಿದೆಯೋ, ಆ ವಾಕ್ಯದ ಪ್ರಾಮಾಣ್ಯದ ದೃಷ್ಟಾಂತದಿಂದ ಸರ್ವಾಶ್ರಯತ್ವವನ್ನು ಪ್ರತಿಪಾದಿಸುವ ವಾಕ್ಯಕ್ಕೂ ಸಹ ಪ್ರಾಮಾಣ್ಯವನ್ನು ಊಹಿಸಬಹುದು.

ಪ್ರಕಾಶಃ – ವಾಯೋಶ್ಚ ಪ್ರಾಣಾದ್ಯಾಧಾರತ್ವಂ ಪ್ರಸಿದ್ಧಮೇವೇತ್ಯಾದಿರೂಪೇಣೋಪಪಾದ್ಯಮಿತ್ಯರ್ಥಃ ।

ಇನ್ನು ವಾಯುದೇವನು ಸಕಲ ಪ್ರಾಣಗಳಿಗೆ ಆಧಾರನಾಗಿದ್ದಾನೆಂಬ ವಿಷಯವು ಲೋಕಪ್ರಸಿದ್ಧವೇ ಆಗಿದೆ. ಈ ಕ್ರಮದಲ್ಲಿ ಪ್ರಕೃತಿ ಹಾಗೂ ವಾಯುದೇವತೆಯಲ್ಲಿ ಸರ್ವಾಶ್ರಯತ್ವವನ್ನು ಉಪಪಾದಿಸಬೇಕು.

ದ್ಯುಭ್ವಾದ್ಯಧಿಕರಣ (೧-೩-೧)

ಪ್ರಕಾಶಃ – तर्हि श्रुतिलिङ्गप्रकरणानां का गतिरित्यत आह – आत्मेति ।। कथञ्चिदिति ।। जीवेशाभेदादिनेति भावः ।

ಹಾಗಾದರೆ ವಿಷ್ಣು ವಿಷಯಕವಾದ ಆತ್ಮಶ್ರುತಿ, ಮುಕ್ತೋಪಸೃಪ್ಯತ್ವವೇ ಮೊದಲಾದ ಲಿಂಗಗಳು ಪರವಿದ್ಯಾ ವಿಷಯಕವಾಗಿ ಪ್ರಾರಂಭವಾಗುವ ಪ್ರಕರಣ ಇವುಗಳಿಗೆಲ್ಲ ಏನು ಗತಿ? ಎಂಬ ಪ್ರಶ್ನೆಗೆ 'ಆತ್ಮಾ' ಇತ್ಯಾದಿ ವಾಕ್ಯದಿಂದ ಉತ್ತರಿಸಿದ್ದಾರೆ. ಅಂದರೆ ಜೀವಬ್ರಹ್ಮರಿಗೆ ಐಕ್ಯವಿರುವ ಕಾರಣ ಬ್ರಹ್ಮನಲ್ಲಿರುವ ಮುಕ್ತೋಪಸೃಪ್ಯತ್ವಾದಿಗಳನ್ನು ಜೀವಾದಿಗಳಲ್ಲಿಯೂ ಸಹ ಕೂಡಿಸಬಹುದೆಂಬ ಉತ್ತರವನ್ನು ತಿಳಿಯಬೇಕು.

गुरुराजीयम् – जीवमात्रादेश्रेति । यद्यप्यत्र वायोरपि निरासः । तथाऽपि प्रकृतिरुद्रजीववत् स्वशब्देन सूत्रेऽनुपादानाच्चानुकृष्टस्य वायोः साक्षान्निरासाभावाद्वा जीववद्वदुग्रन्थेनानिरासाद्वा अन्यसाहित्येन निरासेऽपि भूमाधिकरणवत् केवलस्यानिरासाद्वा मात्रपदेन तद्व्यवच्छेद इति ज्ञेयम् । आदिपदेन वायुनीचो गरुडो ग्राह्यः ।

ಸಾರ

ಇದುವರೆಗೂ ಮಾಡಿದ ಪ್ರಶ್ನೆಗೆ ಹೀಗೆ ಉತ್ತರ - ಜಾಯಮಾನತ್ವವೆಂಬ ಲಿಂಗವು ಆನಂದಮಯಾಧಿಕರಣದಿಂದಾಗಲೀ, 'ಕಾರಣತ್ವೇನ ಚ' ಎಂಬ ಸೂತ್ರದಿಂದಾಗಲೀ ಸಾವಕಾಶವಾಗಲು ಸಾಧ್ಯವೇ ಇಲ್ಲ. ಈ ಅಧಿಕರಣದ ಸಿದ್ಧಾಂತವನ್ನು ವಿವಕ್ಷಿಸಿ ಆನಂದಮಯಾಧಿಕರಣದಲ್ಲಿ ಜಾಯಮಾನ ಶಬ್ದಕ್ಕೆ ಪ್ರಾದುರ್ಭಾವವೆಂಬರ್ಥವನ್ನು ಹೇಳಿರುತ್ತಾರೆ. ಹೀಗಿರುವಾಗ ಆ ಅಧಿಕರಣದ ವಚನದಿಂದ ಇಲ್ಲಿ ಸಾವಕಾಶತ್ವವನ್ನು ಸ್ಥಾಪಿಸಲು ಸಾಧ್ಯವಿಲ್ಲ. ಮತ್ತು 'ಕಾರಣತ್ವೇನ' ಇತ್ಯಾದಿ ಸೂತ್ರದಲ್ಲಿಯೂ ಒಬ್ಬನೇ ವ್ಯಕ್ತಿಗೆ ಕಾರ್ಯಕಾರಣಭಾವವು ವಿರುದ್ಧವಾಗುತ್ತದಲ್ಲವೇ? ಎಂಬ ಆಶಂಕೆಗೆ ಉತ್ತರವನ್ನು ನೀಡಿದ್ದಾರೆ ಹೊರತು, ಯಾವುದೇ ತರಹದ ಜನನವಿಲ್ಲದ ಪರಮಾತ್ಮನಿಗೆ ಹುಟ್ಟುವಿಕೆ ಎಂಬುದು ಹೇಗೆ ಕೂಡುತ್ತದೆ ಎಂಬ ಆಶಂಕೆಯು ಅಲ್ಲಿ ಪ್ರಸಕ್ತವೇ ಆಗಿಲ್ಲ. ಅದಕ್ಕೆ ಉತ್ತರವನ್ನೂ ಸಹ ಆದಕ್ಕೆ ನೀಡಿರುವುದಿಲ್ಲ. ಆದ್ದರಿಂದ ಜಾಯಮಾನತ್ವವೆಂಬ ಲಿಂಗವು ಸಾವಕಾಶವಾಗಲು ಸಾಧ್ಯವಿಲ್ಲ; ಹೊರತಾಗಿ ನಿರವಕಾಶವೇ ಆಗಿದೆ. ಏಕೆಂದರೆ ಜನನವಿರುವಂತಹ ಚೇತನನಲ್ಲಿಯೇ ಮರಣವಿರಬೇಕು. 'ಯತೋ ವಾ ಇಮಾನಿ ಭೂತಾನಿ ಜಾಯಂತೇ' ಎಂದು ಚೇತನನಾದ ಜೀವನಲ್ಲಿ ಜನನವು ಕೇಳಿಸುತ್ತಿದೆ. ದೇಹತ್ಯಾಗವೆಂಬ ಮರಣಶೀಲನಾದ ಜೀವನಲ್ಲಿಯೇ ಇದನ್ನು ಕೂಡಿಸಬೇಕು; ಹೊರತು ಮರಣವಿಲ್ಲದ ಪರಮಾತ್ಮನಲ್ಲಿ, ಇಂತಹ ಜನನವನ್ನು ಹೇಳುವುದು ತಪ್ಪಾಗುತ್ತದೆ. ಮತ್ತು ಜನನ ಶಬ್ದಕ್ಕೆ ಭೌತಿಕವಾದ ಶರೀರವನ್ನು ಸ್ವೀಕರಿಸುವುದು ಎಂದರ್ಥ. ಅಥವಾ ಅಸ್ವಾತಂತ್ರ್ಯವನ್ನು ಹೊಂದುವುದು ಎಂದರ್ಥ. ಇವೆರಡನ್ನೂ ಸಹ ಪರಮಾತ್ಮನಲ್ಲಿ ಹೇಳಲು ಸಾಧ್ಯವಿಲ್ಲ. ಆದ್ದರಿಂದ ಜಾಯಮಾನತ್ವವೆಂಬ ಧರ್ಮವೂ ಜೀವನಲ್ಲಿ ಮಾತ್ರ ಬರುತ್ತದೆ ಹೊರತು, ಪರಮಾತ್ಮನಲ್ಲಿ ಬರುವುದಿಲ್ಲ. ಇಂತಹ ಬಲಿಷ್ಠವಾದ ಲಿಂಗದಿಂದ ದ್ಯುಭ್ವಾದ್ಯಾಯತನರಾದವರು ಜೀವರೆನಿಸಿದ ರುದ್ರಾದಿಗಳೇ ಆಗುತ್ತಾರೆ. ಪರಮಾತ್ಮನಾಗಲು ಸಾಧ್ಯವಿಲ್ಲ.

ಅನುವ್ಯಾಖ್ಯಾನ ಹಾಗೂ ನ್ಯಾಯವಿವರಣಗಳಲ್ಲಿ ಹೇಳಲ್ಪಟ್ಟ ಸಮಾಖ್ಯಾಪ್ರಮಾಣವೂ ಸಹ ನಿರವಕಾಶವೇ ಆಗಿದೆ. ಏಕೆಂದರೆ ಸಮಾಖ್ಯಾಪ್ರಮಾಣಗಳಲ್ಲಿ ಯಾವುದೇ ವಿಷ್ಣುಲಿಂಗಗಳು ಕೇಳಿಸುತ್ತಿಲ್ಲ. ಹಾಗೇನಾದರೂ ಕೇಳಿಸಿದ್ದರೆ 'ಅಂತಸ್ತದ್ಧರ್ಮೋಪದೇಶಾತ್' ಎಂಬ ಸೂತ್ರದ ನ್ಯಾಯದಂತೆ ಆ ಪ್ರಮಾಣಗಳು ವಿಷ್ಣುಪರವೆಂದು ಸಮರ್ಥಿಸಬಹುದಿತ್ತು. ಆದ್ದರಿಂದ ಜಾಯಮಾನತ್ವವೆಂಬ ಲಿಂಗದಂತೆ ಸಮಾಖ್ಯಾಪ್ರಮಾಣವೂ ಸಹ ನಿರವಕಾಶವೇ ಆಗಿದೆ. ಇನ್ನು ವಿಷ್ಣುವಿಷಯಕವಾದ ಆತ್ಮಶಬ್ದ, ಮುಕ್ತ್ಯೋಪಸೃಪ್ಯತ್ವವೆಂಬ ಲಿಂಗ, ಪರವಿದ್ಯಾವಿಷಯತ್ವವೆಂಬ ಪ್ರಕರಣ ಇವುಗಳನ್ನೆಲ್ಲಾ ಜೀವಬ್ರಹ್ಮರ ಐಕ್ಯದಿಂದ ಜೀವರಲ್ಲಿ ಕೂಡಿಸಬೇಕು. ಆದ್ದರಿಂದ ದ್ಯುಭ್ವಾದ್ಯಾಯತನರಾದವರು ರುದ್ರ, ಪ್ರಕೃತಿ, ಜೀವಾದಿಗಳೇ ಆಗುತ್ತಾರೆ ಹೊರತು, ವಿಷ್ಣುವಲ್ಲವೆಂಬ ಪೂರ್ವಪಕ್ಷವು ಸ್ಥಾಪಿತವಾಯಿತು.

• • • • •

ಸಿದ್ಧಾಂತ
ವಿಷ್ಣುವಿನ ಹುಟ್ಟು ಲೋಕವಿಲಕ್ಷಣ

ತಾತ್ಪರ್ಯಚಂದ್ರಿಕಾ

ಸಿದ್ಧಾನ್ತಸ್ತು –

ಅಚೇತನಜನೇರನ್ಯಾ ಚೇತನಸ್ಯ ಜನಿರ್ಯಥಾ ।
ತಥೋಭಯಜನೇರನ್ಯಾ ಬ್ರಹ್ಮಣೋऽಪಿ ಜನಿರ್ಮತಾ ।। ೧ ।।

ಅನುವಾದ - ಸಿದ್ಧಾಂತ ಹೀಗಿದೆ - ಲೋಕದಲ್ಲಿ ಅಚೇತನ ಪದಾರ್ಥದ ಹುಟ್ಟುವಿಕೆಯು, ಚೇತನಪದಾರ್ಥದ ಹುಟ್ಟುವಿಕೆಗಿಂತ ವಿಲಕ್ಷಣವಾಗಿರುವುದು ಕಂಡಿದೆ. ಅದರಂತೆ ಚೇತನ ಹಾಗೂ ಅಚೇತನಗಳ ಹುಟ್ಟುವಿಕೆಗಿಂತ ಬ್ರಹ್ಮನ ಹುಟ್ಟುವಿಕೆಯು ವಿಲಕ್ಷಣವಾಗಿದೆ.

''ಅಜಾಯಮಾನೋ ಬಹುಧಾ ವಿಜಾಯತೇ'' ಇತಿ ಬ್ರಹ್ಮಣೋऽಪಿ ಜನೇಃ ಪ್ರಮಿತತ್ವಾತ್ ಪ್ರಸಿದ್ಧಾಚೇತನಾಚೇತನಜನನಾದನ್ಯೈವ ಪ್ರಾದುರ್ಭಾವರೂಪಾ ಬ್ರಹ್ಮಣೋ ಜನಿರಸ್ತು ।

'ಅಜಾಯಮಾನೋ ಬಹುಧಾ ವಿಜಾಯತೇ' ಎಂಬ ವಾಕ್ಯದಿಂದ ಬ್ರಹ್ಮನಿಗೂ ಸಹ ಜನನವು ಇದೆಯೆಂಬುದು ಪ್ರಮಿತವಾಗಿದೆ. ಆದ್ದರಿಂದ ಪ್ರಸಿದ್ಧವಾದ ಚೇತನ ಹಾಗೂ ಅಚೇತನಗಳ ಜನನಕ್ಕಿಂತ ವಿಲಕ್ಷಣವಾದ ಪ್ರಾದುರ್ಭಾವವನ್ನು ಬ್ರಹ್ಮನ ಜನನವೆಂದು ಹೇಳಬಹುದು.

'ಕಿನ್ತು ನಿರ್ದೋಷಚೈತನ್ಯಸುಖಾಂ ನಿತ್ಯಾಂ ಸ್ವಕಾಂ ತನುಮ್ ।
ಪ್ರಕಾಶಯತಿ ಸೈವೇಯಂ ಜನಿರ್ವಿಷ್ಣೋರ್ನ ಚಾಪರಾ ।।' ಇತ್ಯಾದಿಸ್ಮೃತೇಃ ।
ದ್ಯುಭ್ವಾದ್ಯಧಿಕರಣ (೧-೩-೧)

ಪರಮಾತ್ಮನಿಗೆ ಪ್ರಾದುರ್ಭಾವವೆಂಬ ಜನನವನ್ನೇ ಹೇಳಬೇಕು. ಏಕೆಂದರೆ ನಿರ್ದುಷ್ಟವಾದ ಚೈತನ್ಯಾತ್ಮಕವಾದ ನಿತ್ಯವಾದ ತನ್ನ ಸ್ವರೂಪವೇ ಆದ ಸುಖವನ್ನು ಹೊಂದಿದವನಾಗಿ ಬೇರೆ ಬೇರೆ ರೂಪಗಳಿಂದ ತನ್ನ ಶರೀರವನ್ನು ಪ್ರಕಟಪಡಿಸುತ್ತಾನೆ. ಇದನ್ನೇ ವಿಷ್ಣುವಿನ ಜನನವೆನ್ನಬಹುದು. ಬೇರೆ ರೀತಿಯ ಜನನವಿರುವುದಿಲ್ಲ. ಇತ್ಯಾದಿ ಸ್ಮೃತಿಗಳಿಂದ ಮತ್ಸ್ಯ, ಕೂರ್ಮ ಮೊದಲಾದ ರೂಪಗಳಿಂದ ಭಗವಂತನು ಪ್ರಾದುರ್ಭಾವವೇ ಜನನವೆನಿಸುತ್ತದೆಂದು ತಿಳಿಯುತ್ತದೆ.

''अजायमानः'' इत्यादिवाक्यं च ब्रह्मपरमेव । ''तमेवं विद्वानमृत इह भवति'' इत्यादितल्लिङ्गात्पुरुषसूक्तस्यत्वाच ।

'ಅಜಾಯಮಾನಃ' ಎಂಬ ವಾಕ್ಯವೂ ಸಹ ಬ್ರಹ್ಮಪರವೇ ಆಗಿದೆ. ಏಕೆಂದರೆ 'ತಮೇವಂ ವಿದ್ವಾನಮೃತ ಇಹ ಭವತಿ' ಇತ್ಯಾದಿಯಾಗಿ ಮುಕ್ತೋಪಸೃಪ್ಯತ್ವವೆಂಬ ನಿರವಕಾಶವಾದ ಲಿಂಗವಿರುವುದರಿಂದ ಮತ್ತು ಪುರುಷಸೂಕ್ತದಲ್ಲಿಯೂ ಹೇಳಿರುವುದರಿಂದ ಎಂದರೆ ಪುರುಷಸೂಕ್ತವು ವಿಷ್ಣುಪರವಾದ್ದರಿಂದ ಈ ವಾಕ್ಯವೂ ವಿಷ್ಣುಪರವೇ ಆಗುತ್ತದೆ. ಆದ್ದರಿಂದ ಜೀವಪರವಾಗಿ ಈ ವಾಕ್ಯವನ್ನು ಅರ್ಥೈಸಬಾರದು.

एवं चात्मश्रुत्यावनुसाराज्जायमानत्वलिङ्गमेव गौणं नेयम् । नतु विपरीतम् ।

ಆದ್ದರಿಂದ ಸೂತ್ರದಲ್ಲಿರುವ 'स्वशब्दात्' ಎಂಬ ಭಾಗದಿಂದ ತಿಳಿಸಿದ ಆತ್ಮಶ್ರುತಿಗೆ ಅನುಸಾರಿಯಾಗಿ ಜಾಯಮಾನತ್ವವೆಂಬ ಲಿಂಗವನ್ನೇ ಗೌಣವನ್ನಾಗಿ ಮಾಡಬೇಕು ಹೊರತು, ಜಾಯಮಾನತ್ವವೆಂಬ ಲಿಂಗದಿಂದ ಆತ್ಮಶ್ರುತಿಗೆ ಗೌಣಾರ್ಥವನ್ನು ಮಾಡಬಾರದು.

समाख्याऽपि सावकाशा । भाष्योक्तश्रुतिस्मृतिभी रुद्रादिशब्दानां विष्णावेव मुख्यत्वात् । मुक्तोपसृप्यत्वादिकं तु निरवकाशमिति भाष्य एवोक्तम् ।

ರುದ್ರಾದಿಗಳ ವಿಷಯದಲ್ಲಿರುವ ಸಮಾಖ್ಯಾಪ್ರಮಾಣವೂ ಸಾವಕಾಶವಾಗಿದೆ. ಭಾಷ್ಯದಲ್ಲಿ ಉದಾಹರಿಸಲ್ಪಟ್ಟ ಅನೇಕ ಶ್ರುತಿಸ್ಮೃತಿಗಳಿಂದ ರುದ್ರ, ಅಂತಕ ಮೊದಲಾದ ಶಬ್ದಗಳೆಲ್ಲವೂ ವಿಷ್ಣುವನ್ನೇ ಮುಖ್ಯವಾಗಿ ಪ್ರತಿಪಾದಿಸುತ್ತದೆ. ಮುಖ್ಯೋಪಸೃಪ್ಯತ್ವವೆಂಬ ಲಿಂಗವೂ ಸಹ ವಿಷ್ಣುವಿಷಯದಲ್ಲಿ ನಿರವಕಾಶವಾಗಿದೆಯೆಂದು ಭಾಷ್ಯದಲ್ಲಿಯೇ ಸ್ಪಷ್ಟವಾಗಿ ಹೇಳಿದ್ದಾರೆ.

ಪ್ರಕಾಶಃ –

ಅತ್ರ ನಿರವಕಾಶಜನ್ಮರೂಪಜೀವಲಿಙ್ಗಾದಿನಾ ಸ್ವಶಬ್ದಾದಿಸಿದ್ಧಾನ್ತಹೇತ್ವನಾಮನ್ಯಥಾನಯನಾತ್ ತತ್ಸಾವಕಾಶತ್ವೋಕ್ತ್ಯೈವ ಸ್ವಶಬ್ದಾದೇಸ್ಸಾಧಕತ್ವಂ ನಾನ್ಯಥೇತಿ ಭಾವೇನ ''ಅತಶ್ಚಶಬ್ದಾತ್'' ಇತಿ ಸೂತ್ರಖಣ್ಡಸೂಚಿತಮ್ ''ಅಜಾಯಮಾನೋ ಬಹುಧಾ ವಿಜಾಯತ ಇತಿ ತಸ್ಯೈವ ಬಹುಧಾಜನ್ಮೋಕ್ತೇಃ'' ಇತಿ ಭಾಷ್ಯಾಚ್ಚುಕ್ತಂ ಜೀವಲಿಙ್ಗಸಾವಕಾಶತ್ವಂ ತಾವದ್ವ್ಯನಕ್ತಿ – ಅಚೇತನೇತಿ ।।

ವಿವರಣೆ - ಸಿದ್ಧಾಂತವನ್ನು ಪ್ರಾರಂಭಿಸುತ್ತಿದ್ದಾರೆ. ಜಾಯಮಾನತ್ವವೆಂಬ ಲಿಂಗವು ರುದ್ರಾದಿಗಳ ವಿಷಯದಲ್ಲಿ ನಿರವಕಾಶವಾಗಿದೆ. ಇಂತಹ ಲಿಂಗದಿಂದ 'ಸ್ವಶಬ್ದಾತ್' ಎಂಬ ಸೂತ್ರದ ಭಾಗದಿಂದ ತಿಳಿಯಲ್ಪಟ್ಟ, ಆತ್ಮಶಬ್ದವನ್ನು ಗೌಣವನ್ನಾಗಿ ವ್ಯಾಖ್ಯಾನಿಸಬೇಕೆಂದು ಪೂರ್ವಪಕ್ಷಕಾರರು ಆಕ್ಷೇಪಿಸಿದ್ದಾರೆ. ಆದ್ದರಿಂದ ಎಲ್ಲಿಯ ತನಕ ಸಿದ್ಧಾಂತಿಗಳು ಜಾಯಮಾನತ್ವವೆಂಬ ಲಿಂಗವನ್ನು ಸಾವಕಾಶವೆಂದು ಸಮರ್ಥಿಸುವುದಿಲ್ಲವೋ? ಅಲ್ಲಿಯ ತನಕ 'ಸ್ವಶಬ್ದಾತ್' ಎಂಬ ಸೂತ್ರದಿಂದ ತಿಳಿಯಲ್ಪಟ್ಟ ಆತ್ಮಶಬ್ದವೆಂಬ ಹೇತು ನಿರವಕಾಶವೆಂದು ಸಿದ್ಧವಾಗುವುದಿಲ್ಲ. ಅದಕ್ಕೋಸ್ಕರ ಮೊದಲು ಜಾಯಮಾನತ್ವವೆಂಬ ಲಿಂಗಕ್ಕೆ ಸಾವಕಾಶತ್ವವನ್ನು ಸಮರ್ಥಿಸಲು ಹೊರಟಿದ್ದಾರೆ. ಇದರಿಂದ ವಿಷ್ಣುವಿಷಯಕವಾದ ಆತ್ಮಶಬ್ದವೆಂಬ ಹೇತು ನಿರವಕಾಶವಾಗುತ್ತದೆ. ಈ ಅಭಿಪ್ರಾಯದಿಂದ 'ಅತಶ್ಚಬ್ದಾತ್' ಎಂಬ ಸೂತ್ರಭಾಗದಿಂದ ಜೀವವಿಷಯಕವಾದ ಜಾಯಮಾನತ್ವಲಿಂಗವು ಸಾವಕಾಶವಾಗಿದೆಯೆಂದು ಸಾಧಿಸಿದ್ದಾರೆ. ಭಾಷ್ಯದಲ್ಲಿಯೂ ಸಹ 'ಅಜಾಯಮಾನೋ ಬಹುಧಾ ವಿಜಾಯತೇ ಇತಿ ತಸ್ಯೈವ ಬಹುಧಾಜನ್ಮೋಕ್ತೇಃ' ಎಂಬ ಮಾತಿನಿಂದ ವಿಷ್ಣುವಿನಲ್ಲಿ ಜಾಯಮಾನತ್ವವನ್ನು ಸಾವಕಾಶ ಮಾಡಿದ್ದಾರೆ. ಸೂತ್ರ ಹಾಗೂ ಭಾಷ್ಯದಲ್ಲಿ ಹೇಳಲ್ಪಟ್ಟ ಜಾಯಮಾನತ್ವದ ಸಾವಕಾಶತ್ವವನ್ನು ಗ್ರಂಥದಲ್ಲಿ 'ಅಚೇತನ' ಎಂಬ ಶ್ಲೋಕದಿಂದ ವ್ಯಾಖ್ಯಾನಿಸಿದ್ದಾರೆ.

प्रकाशः – परिणामरूपजनेरन्या देहयोगरूपेत्यर्थः । ''ज्ञोऽत एव'' इत्यत्राग्रे स्पष्टेति भावः । चेतनाचेतनजनेः प्रमितत्वात् साऽन्याऽन्यास्तु । नचैवं ब्रह्मणीत्यतः प्रमाणं वदन्नन्येत्युक्तजनिस्वरूपं चाह – अजायमान इति ।।

ಅಚೇತನಕ್ಕೆ ಪರಿಣಾಮವೆಂಬುದೇ ಜನನವೆನಿಸುತ್ತದೆ. ಆದರೆ ಚೇತನನಿಗೆ ದೇಹದ ಸಂಬಂಧವು ಜನನವೆನಿಸುತ್ತದೆ. ಹೀಗೆ ಅಚೇತನದ ಜನನಕ್ಕಿಂತ ಚೇತನನ ಜನನವು ಭಿನ್ನವಾಗಿದೆಯೆಂದು ಲೋಕದಲ್ಲಿ ಸಿದ್ಧವಾಗಿದೆ. ಈ ವಿಚಾರವು 'ಜ್ಞೋಽತ ಏವ' ಎಂಬ ಸೂತ್ರದಿಂದ ಮುಂದೆ ಸ್ಪಷ್ಟವಾಗುತ್ತದೆ. ಚೇತನ ಹಾಗೂ ಅಚೇತನಗಳ ಜನನವು ಪ್ರಮಿತವಾದ್ದರಿಂದ ಭಿನ್ನಭಿನ್ನವಾಗಲಿ, ಆದರೆ ಬ್ರಹ್ಮನ ಜನನವು ಪ್ರಮಿತವಲ್ಲದ ಕಾರಣ ಭಿನ್ನವಾಗಲು ಹೇಗೆ ಸಾಧ್ಯ ? ಎಂಬ ಪ್ರಶ್ನೆಗೆ ಪ್ರಮಾಣವನ್ನು ಹೇಳುತ್ತಾ ಬ್ರಹ್ಮನ ವಿಷಯದಲ್ಲಿ ಜನನ ಶಬ್ದಕ್ಕೆ ಯಾವ ಅರ್ಥವನ್ನು ಹೇಳಬೇಕೆಂದು 'ಅಜಾಯಮಾನಃ' ಎಂಬ ವಾಕ್ಯದಿಂದ ಸ್ಪಷ್ಟಪಡಿಸುತ್ತಿದ್ದಾರೆ.

प्रकाशः – देहादिना जननहीनस्सन् बहुधा नाना मत्स्यकूर्मवराहाद्यात्मना प्रादुर्भवतीत्यर्थः – प्रादुर्भावरूपेति ।। कुत इत्यत आह – किं त्विति ।।

ದೇಹದ ಪ್ರಯುಕ್ತವಾಗಿ ವಿಷ್ಣುವಿಗೆ ಜನನವಿರುವುದಿಲ್ಲ. ಹೊರತಾಗಿ, ಬಹುಧಾ = ಮತ್ಸ್ಯ, ಕೂರ್ಮ, ವರಾಹ ಮೊದಲಾದ ರೂಪಗಳಿಂದ ವಿಜಾಯತೇ = ಪ್ರಾದುರ್ಭವಿಸುತ್ತಾನೆ. ಆದ್ದರಿಂದಲೇ ಶ್ರುತಿಯು 'ಬಹುಧಾ ವಿಜಾಯತೇ' ಎಂದು ಪರಮಾತ್ಮನನ್ನು ಕುರಿತು ಹೇಳಿದೆ. ಪ್ರಾದುರ್ಭಾವರೂಪವಾದ ಜನನವನ್ನು ಏಕೆ ಒಪ್ಪಬೇಕು? ಎಂಬ ಪ್ರಶ್ನೆಗೆ 'ಕಿಂತು' ಎಂಬ ಶ್ಲೋಕದಿಂದ ಉತ್ತರಿಸಿದ್ದಾರೆ.

''स्त्रीपुंमलाभियोगात्मा देहो विष्णुर्न जायते ।
किंतु निर्दोषचैतन्यसुखां नित्यां स्वकां तनुम् ।।

प्रकाशयति सैवेयं जनिर्विष्णोर्न चापरा ।
तथाऽप्यसुरमोहाय परेषां च क्वचित् क्वचित् ।।
दुःखाज्ञानश्रमादींश्च दर्शयेच्छुद्धसद्गुणः ।''

ಪರಮಾತ್ಮನಿಗೆ ಸ್ತ್ರೀ ಹಾಗೂ ಪುರುಷರ ಸಂಪರ್ಕದಿಂದ ದೇಹವು ಬರುವುದಿಲ್ಲ ಹೊರತು, ನಿರ್ದುಷ್ಟವಾದ ಮತ್ತು ನಿತ್ಯವಾದ ತನ್ನ ಸುಖಾತ್ಮಕವಾದ ಶರೀರವನ್ನೇ ಬೇರೆ ಬೇರೆ ರೂಪಗಳಿಂದ ತೋರಿಸುತ್ತಾನೆ. ಇಂತಹ ಪ್ರಾದುರ್ಭಾವವೇ ಪರಮಾತ್ಮನ ಜನನವೆನಿಸಿದೆ. ಆದರೂ ಸಹ ಶುದ್ಧವಾದ ಉತ್ತಮಗುಣಗಳುಳ್ಳ ಭಗವಂತನು ಕೆಲವೊಮ್ಮೆ ಅಸುರ ಮೋಹಕ್ಕಾಗಿ ದುಃಖ, ಅಜ್ಞಾನ, ಶ್ರಮ ಮೊದಲಾದವುಗಳನ್ನು ನಾಟಕ ಮಾಡಿ ತೋರಿಸುತ್ತಾನೆ.

प्रकाशः – इत्यादिविष्णुतत्वनिर्णयोदाहृतब्रह्माण्डपुराणवचनादित्यर्थः । ''प्रत्यक्षत्वं हरेर्जन्म'' इत्यादिरादिपदार्थः । ननूक्तं जीवविषयं तद्वाक्यमिति, तत्राह – अजायमान इति ।।

ಇತ್ಯಾದಿಯಾಗಿ ವಿಷ್ಣುತತ್ವವಿನಿರ್ಣಯದಲ್ಲಿ ಉದಾಹರಿಸಲ್ಪಟ್ಟ ಬ್ರಹ್ಮಾಂಡಪುರಾಣದ ಮಾತಿನಿಂದ ಜನನ ಶಬ್ದಕ್ಕೆ ಪ್ರಾದುರ್ಭಾವವೆಂಬರ್ಥವನ್ನೇ ಮಾಡಬೇಕೆಂದು ತಿಳಿಯುತ್ತದೆ. ಆದಿಪದದಿಂದ 'ಪ್ರತ್ಯಕ್ಷತ್ವಂ ಹರೇರ್ಜನ್ಮ' ನಮಗೆ ಪ್ರತ್ಯಕ್ಷನಾಗುವುದೇ ಭಗವಂತನ ಜನನ. ಇತ್ಯಾದಿ ಮಾತುಗಳನ್ನು ಸಂಗ್ರಹಿಸಬೇಕು. 'ಬಹುಧಾ ವಿಜಾಯತೇ' ಎಂಬ ವಾಕ್ಯವು ಜೀವವಿಷಯವಾಗಿದೆಯೆಂದು ಪೂರ್ವಪಕ್ಷದಲ್ಲಿ ಹೇಳಲ್ಪಟ್ಟದೆಯಲ್ಲವೇ? ಎಂಬ ಪ್ರಶ್ನೆಗೆ 'ಅಜಾಯಮಾನಃ' ಎಂಬ ವಾಕ್ಯದಿಂದ ಉತ್ತರಿಸಿದ್ದಾರೆ.

प्रकाशः – मुक्तिहेतुज्ञानविषयत्वरूपालिङ्गादित्यर्थः । प्रकरणवशाच्च ब्रह्मपरमेतद्वाक्यमित्याह – पुरुषसूक्तस्थत्वाच्चेति ।। पुरुषसूक्तं च विष्णुपरमिति पूर्वाधिकरणे छन्दोऽधिकरणे च भाष्यादौ समर्थितमिति भावः ।

'ಅಜಾಯಮಾನಃ' ಎಂಬ ವಾಕ್ಯವು ವಿಷ್ಣುಪರವೇ ಆಗುತ್ತದೆ. ಏಕೆಂದರೆ ಮುಕ್ತಿಹೇತುವಾದ ಜ್ಞಾನವಿಷಯತ್ವವೆಂಬ ಲಿಂಗವು ಕೇಳಿಸುತ್ತಿರುವುದರಿಂದ. ಪ್ರಕರಣದ ಬಲದಿಂದಲೂ ಈ ವಾಕ್ಯವು ವಿಷ್ಣುಪರವಾಗಿದೆಯೆಂದು 'ಪುರುಷಸೂಕ್ತಸ್ಥತ್ವಾಚ್ಚ' ಎಂಬ ವಾಕ್ಯದಿಂದ ಪ್ರತಿಪಾದಿಸಿದ್ದಾರೆ. ಪುರುಷಸೂಕ್ತವು ವಿಷ್ಣುಪರವಾಗಿದೆಯೆಂಬ ವಿಚಾರವನ್ನು ಹಿಂದಿನ ಅಧಿಕರಣದ ಛಂದೋऽಧಿಕರಣದ ಭಾಷ್ಯದ ಟೀಕೆಗಳಲ್ಲಿ ಸಮರ್ಥಿಸಲಾಗಿದೆಯೆಂದು ತಿಳಿಯಬೇಕು.

ಪ್ರಕಾಶಃ – अस्त्वेवं जीवलिङ्गं सावकाशम् । ततः किमित्यत आह – एवञ्चेति ।। सावकाशत्वे सतीत्यर्थः ।। **लिङ्गमेवेति** ।। श्रुत्यादितो लिङ्गमात्रस्य दुर्बलत्वादिति भावः ।

ಜಾಯಮಾನತ್ವವೆಂಬ ಜೀವನಲಿಂಗವು ಸಾವಕಾಶವಾಗಲಿ, ಇದರಿಂದೇನಾಯಿತು ಎಂಬ ಪ್ರಶ್ನೆಗೆ 'ಏವಂಚ' ಎಂಬ ವಾಕ್ಯದಿಂದ ಉತ್ತರಿಸಿದ್ದಾರೆ. 'ಏವಂಚ' ಎಂದರೆ ಸಾವಕಾಶವಾದರೆ ಎಂದರ್ಥ. 'ಲಿಂಗಮೇವ' ಎಂದರೆ ಶ್ರುತಿಗಿಂತ ಕೇವಲಲಿಂಗವು ದುರ್ಬಲವಾಗಿದೆಯೆಂಬ ಅಭಿಪ್ರಾಯದಿಂದ ಅರ್ಥಮಾಡಿಕೊಳ್ಳಬೇಕು.

ಪ್ರಕಾಶಃ – **गौणमिति** ।। परिणामरूपजनेरेव मुख्यत्वादिति भावः । **नत्विति** ।। श्रुत्यादिबहुबाधायोगादिति भावः ।

ಜಾಯಮಾನತ್ವಲಿಂಗವನ್ನು ಏಕೆ ಗೌಣವನ್ನಾಗಿಸಬೇಕೆಂದರೆ, ಪರಿಣಾಮ ರೂಪವಾದ ಜನಿಯೇ = ಜನನವೇ ಮುಖ್ಯಾರ್ಥವಾದ್ದರಿಂದ ಎಂದು ತಿಳಿಯಬೇಕು. 'ನತು ವಿಪರೀತಮ್' ಎಂಬ ವಾಕ್ಯದಿಂದ ಶ್ರುತಿಯೇ ಮೊದಲಾದ ಬಹುಪ್ರಮಾಣದ ಬಾಧಗಳು ಯುಕ್ತವಾಗುವುದಿಲ್ಲವೆಂದು ತಿಳಿಯಬೇಕು.

ಪ್ರಕಾಶಃ – लिङ्गस्य सावकाशत्वमुक्त्वा समाख्याया अपि ''अतच्छब्दात्'' इति सूत्रांशाभिमतमेव तदाह – **समाख्याऽपीति** ।।

ಜಾಯಮಾನತ್ವವೆಂಬಲಿಂಗವು ಸಾವಕಾಶವಾಗಿದೆಯೆಂದು ಹೇಳಿದ್ದಾಯಿತು. ಸಮಾಖ್ಯಾಪ್ರಮಾಣವೂ ಸಹ ಸಾವಕಾಶವಾಗಿದೆಯೆಂದು ಸೂತ್ರಕಾರರು 'ಅತಚ್ಛಬ್ದಾತ್' ಎಂಬ ಅಂಶದಿಂದಲೇ ಹೇಳಿದ್ದಾರೆಂದು 'ಸಮಾಖ್ಯಾऽಪಿ'ಯೆಂಬ ಗ್ರಂಥದಿಂದ ವ್ಯಾಖ್ಯಾನಿಸಿದ್ದಾರೆ.

ಪ್ರಕಾಶಃ – ''सोऽन्तकस्सरुद्रस्स प्राणभृत् सप्राणनायकस्स ईशो यो हरिः'' इत्यादिश्रुत्या ''रुजं द्रावयते यस्माद्रुद्रस्तस्माज्जनार्दनः'' इत्यादिब्रह्माण्डस्मृतिभिर्विष्णावेव मुख्यवृत्त्युक्तेरिति भावः ।

'ಸೋऽಂತಕಸ್ಸ ರುದ್ರಸ್ಸ ಪ್ರಾಣಭೃತ್ ಸಪ್ರಾಣನಾಯಕಸ್ಸ ಈಶೋ ಯೋ ಹರಿಃ' ಇತ್ಯಾದಿ ಶ್ರುತಿಯಿಂದ ಅಂತಕ, ಪ್ರಾಣಧಾರಕ, ಪ್ರಾಣನಾಯಕ, ರುದ್ರ ಮೊದಲಾದವುಗಳೆಲ್ಲವೂ ವಿಷ್ಣುವಿನ ನಾಮವೇ ಆಗಿವೆಯೆಂದು ಶ್ರುತಿಯು ಹೇಳುತ್ತಿದೆ. ಬ್ರಹ್ಮಾಂಡಪುರಾಣದಲ್ಲಿ 'ರುಜಂ ದ್ರಾವಯತೇ ಯಸ್ಮಾದ್ ರುದ್ರಸ್ತಸ್ಮಾಜ್ಜನಾರ್ದನಃ' ಎಂಬುದಾಗಿ ಜನಾರ್ದನನನ್ನೇ ರುದ್ರನೆಂದು ಹೇಳಲಾಗಿದೆ. ಆದ್ದರಿಂದ ಸಮಾಖ್ಯಾಪ್ರಮಾಣದಲ್ಲಿ ರುದ್ರವಿಷಯಕವಾಗಿ ಕೇಳಿಸುತ್ತಿರುವ ಅಂತಕ, ರುದ್ರ ಮೊದಲಾದವುಗಳೆಲ್ಲವೂ ಮುಖ್ಯವಾಗಿ ವಿಷ್ಣುವನ್ನೇ ಪ್ರತಿಪಾದಿಸುತ್ತವೆ. ಒಂದು ವೇಳೆ ರುದ್ರಪ್ರತಿಪಾದಕವಾಗಿದ್ದಲ್ಲಿ ಸಮಾಖ್ಯಾಪ್ರಮಾಣವನ್ನು ರುದ್ರವಿಷಯಕವೆಂದು ಹೇಳಬಹುದಿತ್ತು.

ದ್ಯುಭ್ವಾದ್ಯಧಿಕರಣ (೧-೩-೧)

ಪ್ರಕಾಶಃ – ಯದಪಿ ಸಮಾಖ್ಯಾಶ್ರುತೌ ನಿರವಕಾಶವಿಷ್ಣುಲಿಙ್ಗಾಭಾವೇನ ''ಅನ್ತಸ್ತದ್ಧರ್ಮೋಪದೇಶಾತ್'' ಇತ್ಯುಕ್ತನ್ಯಾಯಾವಿಷಯತ್ವಂ ಭಾತಿ ।

ವಸ್ತುತಸ್ತು ಸಮಾಖ್ಯಾಶ್ರುತಿಯಲ್ಲಿ ನಿರವಕಾಶವಾದ ಯಾವುದೇ ವಿಷ್ಣುಲಿಂಗಗಳಿರುವುದಿಲ್ಲ. ಆದ್ದರಿಂದ 'ಅಂತಸ್ತದ್ಧರ್ಮೋಪದೇಶಾತ್' ಎಂಬ ನ್ಯಾಯಕ್ಕೆ ಇದು ವಿಷಯವೂ ಆಗುವುದಿಲ್ಲ. ಆದ್ದರಿಂದ ಅಂತಕ, ರುದ್ರ ಮೊದಲಾದವುಗಳೆಲ್ಲವೂ ರುದ್ರಪ್ರತಿಪಾದಕವೇ ಆಗಬೇಕಲ್ಲವೇ? ಎಂಬ ಪ್ರಶ್ನೆ ಸಹಜವಾಗಿ ಬರುತ್ತದೆ.

ಪ್ರಕಾಶಃ – ತಥಾಽಪಿ ''ಶ್ರುತ್ಯರ್ಥನಿರ್ಣಯಾರ್ಥತ್ವಾತ್ ಸ್ಮೃತೇಸ್ತತ್ರ ನಿರೂಪಿತೋಽರ್ಥೋ ಗ್ರಾಹ್ಯೋ ವೇದವಾಕ್ಯೇ । ತದಯೋಗೇ ತು ಲೌಕಿಕಃ'' ಇತಿ ''ಕಮ್ಪನಾತ್'' ಇತಿ ಸೂತ್ರಾಭಿಮತವಕ್ಷ್ಯಮಾಣ-ನ್ಯಾಯೇನ ''ಇತಿಹಾಸಪುರಾಣಾಭ್ಯಾಂ ವೇದಂ ಸಮುಪಬೃಂಹಯೇತ್'' ಇತಿ ಸ್ಮೃತ್ಯಾ ಶ್ರುತ್ಯುಪಬೃಂಹಕೇಷು ''ರುಜಂ ದ್ರಾವಯತೇ'' ಇತ್ಯಾದಿಸ್ಮೃತಿವಾಕ್ಯೇಷ್ವನ್ವರ್ಥಸಂಜ್ಞಾಕರಣಸ್ಯ ಶ್ರುತ್ಯರ್ಥನಿರ್ಣಯಾರ್ಥತ್ವಾತ್ । ಅನ್ಯಥಾ ತಸ್ಯ ವೈಯರ್ಥ್ಯೇನ ನಿರವಕಾಶತಯಾ ಸ್ಮಾರ್ತಯೋಗಸ್ಯಾಜ್ಞಾರೂಢಿತೋ ಬಲವತ್ತ್ವಾತ್ ''ರುಜಂ ದ್ರಾವಯತೇ'' ಇತ್ಯಾದಿಸ್ಮೃತೌ ಯೋಗಮುಕ್ತ್ವಾ ''ವೇದೇಷು ಸಪುರಾಣೇಷು ಗೀಯತೇ'' ಇತಿ ಪ್ರಯೋಗಬಾಹುಲ್ಯರೂಪ-ರೂಢಿಕಥನಾಚ್ಚಾಜ್ಞಾರೂಢಿತೋ ವಿದ್ವದ್ರೂಢೇರ್ಬಲವತ್ತಾಯಾ ಯವವರಾಹಾಧಿಕರಣೋಕ್ತನ್ಯಾಯೈರ್ನಿಪುಣತರಂ ಜನ್ಮಾದಿನಯೇ ಪ್ರತಿಪಾದಿತತ್ವಾದಿತಿ ಭಾವೇನೋಕ್ತಂ – **ಮುಖ್ಯತ್ವಾದಿತಿ** ।

ಹೌದು, ಆದರೂ ಸಹ ಶ್ರುತಿವಾಕ್ಯಗಳಿಗೆ ಅನುಸಾರಿಯಾಗಿ ಸ್ಮೃತಿಯನ್ನು ನಿರ್ಣಯಿಸಬೇಕು. 'ಸ್ಮೃತೇಸ್ತತ್ರ ನಿರೂಪಿತೋಽರ್ಥೋ ಗ್ರಾಹ್ಯೋ ವೇದವಾಕ್ಯೇ ತದಯೋಗೇ ತು ಲೌಕಿಕಃ' ಎಂದು ಕಂಪನಾಧಿಕರಣದಲ್ಲಿ ಗ್ರಂಥಕಾರರು ಹೇಳಿದಂತೆ ಸ್ಮೃತಿಯಲ್ಲಿ ನಿರೂಪಿತವಾದ ಅರ್ಥವನ್ನೇ ಶ್ರುತಿವಾಕ್ಯದಿಂದ ವಿವಕ್ಷಿಸಬೇಕು. ಕೂಡದಿದ್ದಾಗ ಮಾತ್ರ ಬೇರೆ ಅರ್ಥವನ್ನು ವಿವಕ್ಷಿಸಬೇಕೆಂದು ಹೇಳಿದ್ದಾರೆ. ಮತ್ತು 'ಇತಿಹಾಸಪುರಾಣಾಭ್ಯಾಂ ವೇದಂ ಸಮುಪಬೃಂಹಯೇತ್' ಎಂಬ ಪ್ರಮಾಣದಿಂದ ಸ್ಮೃತಿಗೆ ಅನುಸಾರಿಯಾದ ಅರ್ಥವನ್ನು ಹೇಳಬೇಕೆಂದು ತಿಳಿಯುತ್ತದೆ. ಮತ್ತು 'ರುಜಂ ದ್ರಾವಯತೇ' ಇತ್ಯಾದಿಯಾದ ಸ್ಮೃತಿವಾಕ್ಯಗಳು ರುದ್ರಶಬ್ದವನ್ನು ವ್ಯುತ್ಪತ್ತಿಯಿಂದ ವಿಷ್ಣುವಿನಲ್ಲಿ ಸಾಧಿಸುತ್ತವೆ. ಏಕೆಂದರೆ ಈ ಮೊದಲೇ ಶ್ರುತಿಯಲ್ಲಿ ಪ್ರಯೋಗ ಮಾಡಲ್ಪಟ್ಟರುತ್ತದೆ. ರುದ್ರಶಬ್ದವನ್ನು ವಿಷ್ಣುವಿಷಯಕವಾಗಿ ಆದ್ದರಿಂದಲೇ ಸ್ಮೃತಿಗಳು ವಿಷ್ಣುವಿನಲ್ಲಿ ಆಯಾ ಶಬ್ದಗಳನ್ನು ಸಮನ್ವಯ ಮಾಡುತ್ತವೆ. ಹೀಗೆ ನಿರವಕಾಶವಾದ್ದರಿಂದ ಸ್ಮೃತ್ಯುಕ್ತವಾದ ಯೋಗವು ಆಜ್ಞಾರೂಢಿಗಿಂತ ಬಲಿಷ್ಠವಾಗಿರುತ್ತದೆ.

ಮತ್ತು 'ರುಜಂ ದ್ರಾವಯತೇ' ಇತ್ಯಾದಿ ಸ್ಮೃತಿಯಲ್ಲಿ ಯೋಗವನ್ನು ಹೇಳಿ; 'ವೇದೇಷು ಸಪುರಾಣೇಷು ಗೀಯತೇ' ಎಂಬಲ್ಲಿ ಪ್ರಯೋಗ ಬಾಹುಲ್ಯವೆಂಬ ರೂಢಿಯನ್ನು ಹೇಳಿರುವುದರಿಂದಲೂ ಆಜ್ಞಾರೂಢಿಗಿಂತ ವಿದ್ವದ್ರೂಢಿಯು ಬಲಿಷ್ಠವಾಗಿದೆ. ಈ ವಿಷಯವನ್ನು ಪೂರ್ವಮೀಮಾಂಸೆಯ ಯವವರಾಹಾಧಿಕರಣದಲ್ಲಿ ಸಮರ್ಥಿಸಿದ್ದಾರೆ. ಇದನ್ನು ಜನ್ಮಾಧಿಕರಣದಲ್ಲಿ ಗ್ರಂಥಕಾರರು ನಿರೂಪಿಸಿದ್ದಾರೆ. ಈ ಎಲ್ಲಾ ಕಾರಣಗಳಿಂದ ಗ್ರಂಥದಲ್ಲಿ 'ಮುಖ್ಯತ್ವಾತ್' ಎಂದು ಹೇಳಿದ್ದಾರೆ.

ಪ್ರಕಾಶಃ – ತಥಾಚ ''ಮುಖ್ಯಾಮುಖ್ಯಯೋರ್ಮುಖ್ಯೇ ಸಂಪ್ರತ್ಯಯಃ'' ಇತಿ ನ್ಯಾಯೇನ ಮುಖ್ಯಾರ್ಥಸ್ಯ ''ವಿದೇಹಿ ರುದ್ರೋ ರುದ್ರಿಯಂ ಮಹಿತ್ವಮ್ । ಕುಮಾರಶ್ಚಿತ್ಪಿತರಂ ವಂದಮಾನಂ ಪ್ರತಿ ನಾನಾಮರುದ್ರಃ ।' 'ನ ಮಿನಂತಿ ರುದ್ರಃ' । 'ರುದ್ರಸ್ಯ ಶಿರ ಉತ್ಪಿಪೇಷ'' ಇತ್ಯಾದಾವಯೋಗೇऽಪಿ ''ರುದ್ರೋ ವಾವ ಲೋಕಾಧಾರಃ'' ಇತ್ಯಾದಿಶ್ರುತಿಷು ರುದ್ರಾದಿಶಬ್ದೈರ್ಮುಖ್ಯಾರ್ಥಸ್ಯ ವಿಷ್ಣೋರೇವ ಗೃಹೀತೇಸ್ಸಮಾಖ್ಯಾ ನ ರುದ್ರಾದೇರ್ಧುಭ್ವಾದ್ಯಾಯತನತ್ವಪ್ರಾಪಿಕೇತಿ ಭಾವಃ ।

ಆದ್ದರಿಂದ 'ಮುಖ್ಯಾಮುಖ್ಯಯೋರ್ಮುಖ್ಯೇ ಸಂಪ್ರತ್ಯಯಃ' ಎಂಬ ನ್ಯಾಯದಿಂದ ರುದ್ರಶಬ್ದಕ್ಕೆ ಮುಖ್ಯಾರ್ಥನಾದ ವಿಷ್ಣುವನ್ನೇ ವಿವಕ್ಷಿಸಬೇಕು. 'ವಿದೇಹಿ ರುದ್ರೋ ರುದ್ರಿಯಂ ಮಹಿತ್ವಮ್' 'ಕುಮಾರಶ್ಚಿತ್ಪಿತರಂ ವಂದಮಾನಂ ಪ್ರತಿ ನಾನಾಮರುದ್ರಃ', 'ನಾಮಿನಂತಿ ರುದ್ರಃ', 'ರುದ್ರಸ್ಯ ಶಿರ ಉತ್ಪಿಪೇಷ' ಇತ್ಯಾದಿ ಸ್ಥಳಗಳಲ್ಲಿ ರುದ್ರನಿಗೆ ನೀಚತ್ವವನ್ನು, ಅಜ್ಞಾನವನ್ನು ಮತ್ತು ಮರಣವನ್ನು ಹೇಳಿರುವುದರಿಂದ ಇಲ್ಲಿರುವ ರುದ್ರಶಬ್ದಕ್ಕೆ ವಿಷ್ಣುವೆಂಬರ್ಥವನ್ನು ಮುಖ್ಯವಾಗಿ ಸ್ವೀಕರಿಸಲು ಆಗದಿರಬಹುದು. ಆದರೆ ಸಮಾಖ್ಯಾಶ್ರುತಿಯಲ್ಲಿ ಕೇಳಿಸುತ್ತಿರುವ 'ರುದ್ರೋ ವಾವ ಲೋಕಾಧಾರಃ' ಎಂಬಲ್ಲಿರುವ ರುದ್ರಶಬ್ದವು ಮುಖ್ಯವಾಗಿ ವಿಷ್ಣುವನ್ನೇ ಪ್ರತಿಪಾದಿಸುತ್ತದೆ. ಧ್ರುಭ್ವಾದ್ಯಾಯತನತ್ವವೂ ಸಹ ವಿಷ್ಣುವಿನಲ್ಲೇ ಉಪಪನ್ನವಾಗುತ್ತದೆಂದು ತಿಳಿಯಬೇಕು. ಆದ್ದರಿಂದ ಸಮಾಖ್ಯಾವು ರುದ್ರಾದಿಗಳಿಗೆ ಧ್ರುಭ್ವಾದ್ಯಾಯತನತ್ವವನ್ನು ತಂದುಕೊಡುವುದಿಲ್ಲ.

ಪ್ರಕಾಶಃ – ಏತೇನ ''ನನ್ವತ್ರ ರುದ್ರಾದಿಜ್ಞಾಪಕಾಭಾವೇऽಪಿ ಪ್ರಾಣಾನಾಂ ಗ್ರಂಥಿರಸಿ' ಇತ್ಯಾದಿಟೀಕಾಯಾ ನಿಷ್ಕೃಷ್ಟಾರ್ಥ ಉಕ್ತೋ ಭವತಿ ।

ಹೀಗೆ ಹೇಳಿದ್ದರಿಂದ 'ನನ್ವತ್ರ ರುದ್ರಾದಿಜ್ಞಾಪಕಾಭಾವೇऽಪಿ ಪ್ರಾಣಾನಾಂ ಗ್ರಂಥಿರಸಿ' ಇತ್ಯಾದಿ ಟೀಕೆಗೆ ನಿಷ್ಕೃಷ್ಟವಾದ ವ್ಯಾಖ್ಯಾನವನ್ನು ಮಾಡಿದಂತಾಯಿತು.

ಪ್ರಕಾಶಃ – ವಿಷ್ಣುಪ್ರಾಪಕಸ್ಯಾಪಿ ಸಾವಕಾಶತ್ವೇ ನಿರ್ಣಯೋ ದುಶ್ಶಕ ಇತ್ಯತ ಆಹ – **ಮುಕ್ತೇತಿ** ।। ಉಕ್ತಮಿತ್ಯನಂತರಂ 'ತಥಾಚಾತ್ಮಶ್ರುತ್ಯಾದಿಬಲಾದ್ವಿಷ್ಣುರೇವ ಧ್ರುಭ್ವಾದ್ಯಾಯತನಮ್' ಇತಿ ವಾಕ್ಯಶೇಷಃ ।

ವಿಷ್ಣುಪ್ರಾಪಕವಾದ ಲಿಂಗಗಳೂ ಸಹ ಸಾವಕಾಶವಾಗಬಹುದಲ್ಲವೇ? ಹೀಗಿರುವಾಗ ಯಾವ ಪಕ್ಷವನ್ನು ಹೇಗೆ ನಿರ್ಧರಿಸುವುದು ? ಎಂಬ ಪ್ರಶ್ನೆಗೆ 'ಮುಕ್ತ' ಎಂಬ ವಾಕ್ಯದಿಂದ ಉತ್ತರಿಸಿದ್ದಾರೆ. 'ಉಕ್ತಮ್' ಎಂಬ ಪದದ ಆನಂತರ 'ತಥಾಚಾತ್ಮಶ್ರುತ್ಯಾದಿಬಲಾದ್ವಿಷ್ಣುರೇವ ಧ್ರುಭ್ವಾದ್ಯಾಯತನಮ್' ಹೀಗೆ ಆತ್ಮಶ್ರುತಿಯ ಬಲದಿಂದ ವಿಷ್ಣುವೇ ಧ್ರುಭ್ವಾದ್ಯಾಯತನನಾಗುತ್ತಾನೆಂದು ನಿರ್ಣಯವಾಯಿತು ಎಂಬ ವಾಕ್ಯವನ್ನು ಶೇಷಪೂರ್ಣ ಮಾಡಿಕೊಳ್ಳಬೇಕು. ಇಲ್ಲಿಗೆ ಸಿದ್ಧಾಂತವು ಮುಗಿಯಿತು.

ಸಾರ

ಸಿದ್ಧಾಂತದ ಸಾರ ಹೀಗಿದೆ - ಜಾಯಮಾನತ್ವವೆಂಬ ಲಿಂಗವು ಜೀವಾದಿಗಳ ವಿಷಯದಲ್ಲಿ ನಿರವಕಾಶಲಿಂಗವೆಂದು ಪೂರ್ವಪಕ್ಷಕಾರರು ಹೇಳಿದರು. ಆದರೆ ಅದು ಸಾವಕಾಶವೇ ಆಗಿದೆ. ಲೋಕದಲ್ಲಿ ಅಚೇತನಪದಾರ್ಥಕ್ಕಿಂತ ಚೇತನಪದಾರ್ಥದ ಜನನವು ವಿಲಕ್ಷಣವಾಗಿರುವುದು ಕಂಡಿದೆ. ಇಂತಹ ಚೇತನ, ಅಚೇತನ ಪದಾರ್ಥಗಳಿಗಿಂತ ಭಗವಂತನ ಜನನವೂ ಸಹ ಲೋಕವಿಲಕ್ಷಣವಾಗಿದೆ. ಆದ್ದರಿಂದ ಸುಖಸ್ವರೂಪನಾದ ಭಗವಂತನು ಮತ್ಸ್ಯ, ಕೂರ್ಮ, ವರಾಹ ಮೊದಲಾದ ಬೇರೆ ಬೇರೆ ತನ್ನ ಶರೀರಗಳನ್ನು ಪ್ರಕಟಪಡಿಸುತ್ತಾನೆ. ಇದೇ ಅವನ ಜನನವೆನಿಸುತ್ತದೆ ಹೊರತು, ಜೀವಾದಿಗಳಿಗೆ ಬರುವಂತೆ ದೇಹದ ಸಂಬಂಧವನ್ನು ಜನನವೆಂದು ಹೇಳಲಾಗದು. ಆದ್ದರಿಂದ 'ಅಜಾಯಮಾನೋ ಬಹುಧಾ ವಿಜಾಯತೇ' ಇತ್ಯಾದಿ ಶ್ರುತಿಯು ವಿಷ್ಣುವಿಷಯಕವೇ ಆಗಿದೆ. ಯಾವಾಗ ಜಾಯಮಾನತ್ವವೆಂಬ ಪೂರ್ವಪಕ್ಷಲಿಂಗವು ಸಾವಕಾಶವಾಗುತ್ತದೋ, ಆವಾಗ ಆತ್ಮಶ್ರುತಿಯು ನಿರವಕಾಶವಾಗುತ್ತದೆ. ನಿರವಕಾಶವಾದ ಆತ್ಮಶ್ರುತಿಯ ಬಲದಿಂದ ಜಾಯಮಾನತ್ವವೆಂಬ ಲಿಂಗವನ್ನೇ ಗೌಣ ಮಾಡಬೇಕು ಹೊರತು, ವಿಪರೀತವಾಗಿ ಹೇಳಬಾರದು.

ಸಮಾಖ್ಯಾಪ್ರಮಾಣವೂ ಸಹ ಸಾವಕಾಶವಾಗಿದೆ. ಆಚಾರ್ಯರು ಭಾಷ್ಯದಲ್ಲಿ ಅನೇಕ ಶ್ರುತಿ, ಸ್ಮೃತಿಗಳ ಆಧಾರದಿಂದ, ರುದ್ರ, ಅಂತಕ, ಪಿನಾಕ ಮೊದಲಾದ ಶಬ್ದಗಳನ್ನೆಲ್ಲಾ ವಿಷ್ಣುವಿನಲ್ಲೇ ಮುಖ್ಯವಾಗಿ ಪ್ರತಿಪಾದಿಸಿದ್ದಾರೆ. ಹೀಗೆ ಸೂತ್ರಕಾರರು ಹೇಳಲ್ಪಟ್ಟ ಆತ್ಮಶಬ್ದವೆಂಬ ಲಿಂಗದಿಂದ ಮುಕ್ತೋಪಸೃಪ್ಯತ್ವವೆಂಬ ಲಿಂಗದಿಂದ ವಿಷ್ಣುವೇ ದ್ಯುಭ್ವಾದ್ಯಾಯತನನಾಗಿದ್ದಾನೆಂದು ನಿರ್ಣಯವಾಗುತ್ತದೆ.

• • • • •

ಸೂತ್ರಗಳ ವಿನ್ಯಾಸದಲ್ಲಿ ಸ್ವಾರಸ್ಯ

ತಾತ್ಪರ್ಯಚನ್ದ್ರಿಕಾ

अत्र चाद्ये सूत्रे विषयवाक्येनातिसन्निहितश्रुतिरूपस्वपक्षसाधकोक्तिः ।

ಸೂತ್ರಗಳ ವಿನ್ಯಾಸ ಶೈಲಿಯು ಸುಂದರವಾಗಿದೆ. ಮೊದಲನೆಯ ಸೂತ್ರದಲ್ಲಿ ವಿಷಯವಾಕ್ಯದಿಂದ ಅತ್ಯಂತ ಸಮೀಪದಲ್ಲಿರುವ ಆತ್ಮಶ್ರುತಿಯೆಂಬ ಸ್ವಪಕ್ಷಸಾಧಕವನ್ನು ಹೇಳಲಾಗಿದೆ. ಆದ್ದರಿಂದ ಪ್ರಥಮಸ್ಥಾನವು ದ್ಯುಭ್ವಾದ್ಯಾಯತನವೆಂಬ ಸೂತ್ರಕ್ಕೆ ಯುಕ್ತವಾಗಿದೆ.

स्वशब्दादित्येतच्च स्वेति शब्दः स्वशब्द इति विग्रहाश्रयणेन विषयवाक्ये स्वशब्दाभावात्तत्पर्यायात्मशब्दपरम् ।

ಸೂತ್ರದಲ್ಲಿರುವ 'ಸ್ವಶಬ್ದಾತ್' ಎಂಬ ಪದಕ್ಕೆ 'ಸ್ವ ಇತಿ ಶಬ್ದಃ' 'ಸ್ವಶಬ್ದಃ' ಎಂಬ ಸಂಭಾವನಾಪೂರ್ವಪದ ಕರ್ಮಧಾರಯ ಸಮಾಸವನ್ನು ವಿವಕ್ಷಿಸಬೇಕು. ಹೀಗೆ ಹೇಳುವುದರಿಂದ

ವಿಷಯವಾಕ್ಯದಲ್ಲಿ 'ಸ್ವ' ಎಂಬ ಶಬ್ದವು ಇಲ್ಲದ್ದಿದರೂ ಸಹ ಆದಕ್ಕೆ ಪರ್ಯಾಯ ಪದವಾಗಿರುವ ಆತ್ಮಶಬ್ದವು ಇರುತ್ತದೆ. ಇಂತಹ ಆತ್ಮಶಬ್ದವೆಂಬ ವಿಷ್ಣುವಿನಲ್ಲಿರುವ ನಿರವಕಾಶಶ್ರುತಿಯನ್ನು ಪ್ರಮಾಣವನ್ನಾಗಿ ಹೇಳಿದಂತಾಗುತ್ತದೆ.

यथा ''सभाराजाऽमनुष्यपूर्वे'' इत्यत्र राजशब्दस्तत्पर्यायेश्वरादिशब्दपरः ।

ಸ್ವಶಬ್ದದಿಂದ ಪರ್ಯಾಯಪದವೆನಿಸಿದ ಆತ್ಮಶಬ್ದವನ್ನು ಸ್ವೀಕರಿಸುವುದು ತಪ್ಪಲ್ಲ. ಏಕೆಂದರೆ ಪಾಣಿನಿಯ ವ್ಯಾಕರಣದಲ್ಲಿಯೂ 'सभा राजाऽमनुष्यपूर्वे' ಎಂಬ ಸೂತ್ರದಲ್ಲಿ ರಾಜಶಬ್ದದಿಂದ ಆದಕ್ಕೆ ಪರ್ಯಾಯ ಪದವೆನಿಸಿದ 'ಈಶ್ವರ', 'ಇನ' ಎಂಬ ಶಬ್ದಗಳನ್ನೇ ಸ್ವೀಕರಿಸಬೇಕು; ಹೊರತು 'ರಾಜ' ಎಂಬ ಶಬ್ದವನ್ನು ಸ್ವೀಕರಿಸಬಾರದು. ಆದ್ದರಿಂದ 'ಇನಸಭಮ್' 'ಈಶ್ವರ ಸಭಮ್' ಎಂಬ ರೂಪಗಳು ನಿಷ್ಪನ್ನವಾಗುತ್ತವೆಂದು ಸಮರ್ಥಿಸಲಾಗಿದೆ. ಆದರಂತೆ ಪ್ರಕೃತ ಸೂತ್ರದಲ್ಲಿರುವ ಸ್ವಶಬ್ದದಿಂದಲೂ ಸಹ ಆದರ ಪರ್ಯಾಯಪದವೆನಿಸಿದ ಆತ್ಮಶಬ್ದವನ್ನೇ ಸ್ವೀಕರಿಸಬೇಕು.

एतदेवाभिप्रेत्य विष्णुतत्त्वनिर्णये भगवत्पादैरत्रापि टीकाकारैः ''स्वशब्दपर्यायात्मशब्दात्'' इत्युक्तम् ।

ಇದೇ ಅಭಿಪ್ರಾಯದಿಂದ ವಿಷ್ಣುತತ್ವವಿನಿರ್ಣಯದಲ್ಲಿ ಶ್ರೀಮದಾಚಾರ್ಯರು ಮತ್ತು ಪ್ರಕೃತ ಅಧಿಕರಣದ ಟೀಕೆಯಲ್ಲಿ ಟೀಕಾರಾಯರು 'ಸ್ವಶಬ್ದ ಪರ್ಯಾಯ ಆತ್ಮಶಬ್ದಾತ್' ಸ್ವಶಬ್ದಕ್ಕೆ ಪರ್ಯಾಯಪದವೆನಿಸಿದ ಆತ್ಮಶಬ್ದದಿಂದ ಎಂಬ ಮಾತನ್ನು ಹೇಳಿರುತ್ತಾರೆ.

ಪ್ರಕಾಶಃ –

नन्वेवं सूत्रेष्वादौ परसाधकानां सावकाशत्वोक्तिपरमतच्छब्दादित्येतदुक्त्वा स्वशब्दादित्यादिहेतूपन्यासः कार्य इत्यतो वादकथारूपेण ग्रन्थस्य प्रवृत्तत्वात्तत्र च कथालक्षणतट्टीकाद्युक्तदिशा स्वपक्षसाधकस्यादौ वाच्यत्वाद्युक्तस्सूत्रक्रम इति भावेनाह – अत्र चाद्य इति ।।

ವಿವರಣೆ - ಪ್ರಶ್ನೆ - ಗ್ರಂಥಕಾರರು ಪೂರ್ವಪಕ್ಷ ಸ್ಥಾಪಕವಾದ ಜಾಯಮಾನತ್ವವೆಂಬ ಲಿಂಗವನ್ನೂ ಸಮಾಖ್ಯಾಪ್ರಮಾಣವನ್ನು ಸಾವಕಾಶವೆಂದು ಮೊದಲು ಸಮರ್ಥಿಸಿ ಆದರಿಂದಲೇ ಸೂತ್ರದಲ್ಲಿ ಹೇಳಲ್ಪಟ್ಟ ಆತ್ಮಶಬ್ದ ಹಾಗೂ ಮುಕ್ತೋಪಸೃಪ್ಯತ್ವಾದಿಲಿಂಗಗಳಿಗೆ ನಿರವಕಾಶತ್ವವು ಸ್ಥಾಪಿತವಾಗುತ್ತವೆ ಎಂಬ ಅಭಿಪ್ರಾಯದಿಂದ ಮೊದಲು ಪರಪಕ್ಷ ನಿರಾಕರಣೆಯನ್ನು ಮಾಡಿ ಆನಂತರ ಸ್ವಪಕ್ಷಸ್ಥಾಪನೆಯನ್ನು ಮಾಡಿದ್ದಾರೆ. ಇದರಂತೆ ಸೂತ್ರಕಾರರೂ ಸಹ ಹೇಳಬಹುದಿತ್ತು. ಜಾಯಮಾನತ್ವಾದಿ ಲಿಂಗಗಳನ್ನು

ಸಾವಕಾಶತ್ವವೆಂದು ಸಮರ್ಥಿಸುವ 'ಆತಚ್ಛಬ್ದಾತ್' ಎಂಬುದನ್ನು ಮೊದಲು ಹೇಳಿ ಆನಂತರ 'ಸ್ವಶಬ್ದಾತ್' ಎಂಬ ಸ್ವಪಕ್ಷಸಾಧಕವನ್ನು ಆನಂತರ ಹೇಳಬಹುದಿತ್ತಲ್ಲವೇ?

ಉತ್ತರ - ಈ ಗ್ರಂಥವು ವಾದಕಥಾ ರೂಪವಾಗಿದೆ. ಕಥಾಲಕ್ಷಣ ಹಾಗೂ ಅದರ ಟೀಕೆಯಲ್ಲಿ ಹೇಳಿದಂತೆ ವಾದಕಥೆಯಲ್ಲಿ ಸ್ವಪಕ್ಷಸಾಧಕವನ್ನೇ ಮೊದಲು ಹೇಳಿ ಆನಂತರ ಸ್ವಪಕ್ಷದಲ್ಲಿ ಬಾಧಕಗಳನ್ನು ಪರಿಹರಿಸಿ ಕೊನೆಯಲ್ಲಿ ಪರಪಕ್ಷದ ನಿರಾಕರಣೆಯನ್ನು ಮಾಡಬೇಕೆಂದು ಹೇಳಿದ್ದಾರೆ. ಅದಕ್ಕನುಸಾರಿಯಾಗಿ ಸೂತ್ರಕಾರರು ಮೊದಲು ಸ್ವಪಕ್ಷಸಾಧಕವಾದ ಆತ್ಮಶಬ್ದ, ಮುಕ್ತೋಪಸೃಪ್ಯತ್ವಾದಿಲಿಂಗಗಳನ್ನು ಹೇಳಿ ಪರಪಕ್ಷನಿರಾಸಕವಾದ 'ಆತಚ್ಛಬ್ದಾತ್' ಮೊದಲಾದವುಗಳನ್ನು ಆನಂತರ ಹೇಳಿರುತ್ತಾರೆ. ಆದ್ದರಿಂದ ಸೂತ್ರಗಳ ವಿನ್ಯಾಸಕ್ರಮವು ಅರ್ಥವತ್ತಾಗಿದೆಯೆಂಬ ಅಭಿಪ್ರಾಯದಿಂದ 'ಅತ್ರ ಚಾದ್ಯೇ' ಎಂಬ ಗ್ರಂಥವು ಹೊರಟಿದೆ.

ಪ್ರಕಾಶಃ – ಶ್ರುತಿರೂಪೇತಿ ।। ಆತ್ಮಶ್ರುತಿರೂಪೇತ್ಯರ್ಥಃ । ತತ್ರ ಟೀಕಾದೌ ಸ್ವಶಬ್ದಾದಿತಿ ಸೌತ್ರಪದಸ್ಯ ಸ್ವಶಬ್ದಪರ್ಯಾಯೇತಿ ಕಸ್ಮಾದುಕ್ತಮ್ । ಕಥಂ ಚೋಪಪದ್ಯತಾಮಿತ್ಯತ ಆಹ – ಸ್ವಶಬ್ದಾದಿತ್ಯೇತಚ್ಚೇತಿ ।।

'ಶ್ರುತಿರೂಪ' ಎಂದರೆ 'ಆತ್ಮಶ್ರುತಿ' ಎಂದರ್ಥ. ಟೀಕೆಯಲ್ಲಿ 'ಸ್ವಶಬ್ದಾತ್' ಎಂಬುದಾಗಿ ಸೂತ್ರದಲ್ಲಿ ಹೇಳಿದಂತೆಯೇ ಉಲ್ಲೇಖಿಸಬಹುದಿತ್ತು. ಆದರೆ ಸೂತ್ರದಲ್ಲಿರುವ 'ಸ್ವಶಬ್ದಾತ್' ಎಂಬ ಪದಕ್ಕೆ 'ಸ್ವಶಬ್ದಪರ್ಯಾಯಶಬ್ದಾತ್' ಎಂದು ವ್ಯಾಖ್ಯಾನಿಸಿದ್ದಾರೆ. ಹೀಗೇಕೆ ವ್ಯಾಖ್ಯಾನಿಸಿದರು? ಮತ್ತು ಇದು ಹೇಗೆ ಉಪಪನ್ನವಾಗುತ್ತದೆ? ಈ ಪ್ರಶ್ನೆಗೆ 'ಸ್ವಶಬ್ದಾದಿತ್ಯೇತಚ್ಚ' ಎಂಬುದರಿಂದ ಉತ್ತರಿಸಿದ್ದಾರೆ.

ಪ್ರಕಾಶಃ – ಸ್ವೇತಿಶಬ್ದಸ್ತ್ವಶಬ್ದ ಇತಿ ।। ಸ್ವಶ್ಚಾಸೌ ಶಬ್ದಶ್ಚೇತಿ ''ವಿಶೇಷಣಂ ವಿಶೇಷ್ಯೇಣ ಬಹುಲಮ್'' ಇತಿ ಕರ್ಮಧಾರಯಃ । 'ಸ್ವೇತಿ' ಇತಿ ವಿಗ್ರಹಪ್ರದರ್ಶನಮ್ ।।

ಗ್ರಂಥದಲ್ಲಿ 'ಸ್ವ ಇತಿ ಶಬ್ದಃ' 'ಸ್ವಶಬ್ದಃ' ಎಂಬುದಾಗಿ ಹೇಳಿದ್ದಾರೆ. ಇಲ್ಲಿ 'ಸ್ವಶ್ಚಾಸೌ ಶಬ್ದಶ್ಚ ಸ್ವಶಬ್ದಃ' ಎಂಬುದಾಗಿ 'ವಿಶೇಷಣಂ ವಿಶೇಷ್ಯೇಣ ಬಹುಲಮ್' ಎಂಬ ಸೂತ್ರದಂತೆ ಕರ್ಮಧಾರಯ ಸಮಾಸವಾಗಿದೆಯೆಂದು ತಿಳಿಯಬೇಕು. ಗ್ರಂಥದಲ್ಲಿ ಸ್ವೇತಿಶಬ್ದಃ ಸ್ವಶಬ್ದಃ ಎಂದಿದೆ. ಇಲ್ಲಿ ಸ್ವೇತಿ ಎಂಬುದಾಗಿ 'ಸ್ವ' ಶಬ್ದದ ಮುಂದೆ 'ಇತಿ' ಶಬ್ದವನ್ನು ಪಠಣ ಮಾಡಿರುವುದು 'ಸ್ವಶಬ್ದ' ಎಂಬುದರ ವಿಗ್ರಹವಾಕ್ಯ ಪ್ರದರ್ಶನಕ್ಕೋಸ್ಕರ.

ಪ್ರಕಾಶಃ – ಯಥೇತಿ ।। ವ್ಯಾಕರಣೇ ದ್ವಿತೀಯಾಧ್ಯಾಯಸ್ಯ ಚತುರ್ಥಪಾದೇ ''ಸಭಾರಾಜಾऽಮನುಷ್ಯಪೂರ್ವೇ'' ಇತಿ ಸೂತ್ರಮ್ । ತಸ್ಯಾರ್ಥಃ । ರಾಜಶಬ್ದಪೂರ್ವಕೋऽಮನುಷ್ಯ-ಶಬ್ದೋಪಾತ್ತರಕ್ಷಃಪಿಶಾಚಶಬ್ದಪೂರ್ವಕಶ್ಚ ಸಭಾಶಬ್ದಃ ''ಸ ನಪುಂಸಕಮ್'' ಇತಿ ಪ್ರಕೃತನಪುಂಸಕಂ ಭವತಿ ತತ್ಪುರುಷ ಇತಿ । ತತ್ರ ರಾಜಶಬ್ದಸ್ತತ್ಪರ್ಯಾಯಪರೋ ನತು ರಾಜಶಬ್ದಪರಃ । ಇನಸಭಮ್ । ಈಶ್ವರಸಭಮ್ । ರಾಜಪೂರ್ವಕತ್ವೇ ತು ರಾಜಸಭೇತ್ಯೇವ । ನತು ರಾಜಸಭಮಿತಿ । ವೃತ್ತೌ ''ಪರ್ಯಾಯವಚನಸ್ಯೈವೇಷ್ಯತೇ'' ಇತ್ಯುಕ್ತೇಃ ।

ಗ್ರಂಥದಲ್ಲಿ ಸ್ವಶಬ್ದದಿಂದ ಆತ್ಮಶಬ್ದವನ್ನು ವಿವಕ್ಷಿಸಬೇಕು. ಏಕೆಂದರೆ ಶ್ರುತಿಯಲ್ಲಿ 'ಸ್ವ' ಎಂಬ ಶಬ್ದವು ಕೇಳಿಸುತ್ತಿಲ್ಲ. ಹೀಗೆ ಸ್ವೀಕರಿಸುವುದೇನೂ ತಪ್ಪಲ್ಲ. ಏಕೆಂದರೆ ವ್ಯಾಕರಣದಲ್ಲಿ ರಾಜ ಶಬ್ದದಿಂದ ಪರ್ಯಾಯಶಬ್ದಗಳನ್ನೇ ಸ್ವೀಕರಿಸಿ ರೂಪನಿಷ್ಪತ್ತಿಮಾಡಿದ್ದು ಕಾಣಿಸುತ್ತಿದೆ ಎಂದು 'ಯಥಾ' ಎಂಬ ಶಬ್ದದಿಂದ ಹೇಳಿದ್ದಾರೆ. ಇದರ ವಿವರಣೆ ಹೀಗಿದೆ -

ಸಭಾರಾಜಾऽಮನುಷ್ಯಪೂರ್ವೇ

ಪಾಣಿನಿ ವ್ಯಾಕರಣದ ಎರಡನೆಯ ಅಧ್ಯಾಯದ ನಾಲ್ಕನೆಯ ಪಾದದಲ್ಲಿ ಈ ಸೂತ್ರವು ಹೇಳಲ್ಪಟ್ಟಿದೆ. ಇದರ ಅರ್ಥ ಹೀಗಿದೆ - ರಾಜ ಶಬ್ದವು ಮೊದಲಿದ್ದರೆ ಅಥವಾ ಅಮನುಷ್ಯಶಬ್ದದಿಂದ ಸ್ವೀಕರಿಸಬೇಕಾದ 'ರಕ್ಷಃ' ಎಂಬ ಶಬ್ದವಾಗಲೀ, ಅಥವಾ 'ಪಿಶಾಚ' ಎಂಬ ಶಬ್ದವಾಗಲೀ ಮೊದಲಿದ್ದರೆ ಅಂತಹ 'ಸಭಾ' ಶಬ್ದವು 'ಸ ನಪುಂಸಕಮ್' ಎಂಬುದಾಗಿ ಪ್ರಕೃತವಾದ ನಪುಂಸಕ ಸಂಜ್ಞೆಯನ್ನು ಹೊಂದುತ್ತದೆ.

ಇದು ತತ್ಪುರುಷ ಸಮಾಸದಲ್ಲಿ ಮಾತ್ರವೆಂದು ಹೇಳಲಾಗಿದೆ. ಇಲ್ಲಿರುವ ರಾಜ ಶಬ್ದಕ್ಕೆ, ರಾಜ ಶಬ್ದದ ಪರ್ಯಾಯಶಬ್ದಗಳೆಂದರ್ಥ ಹೊರತು, ರಾಜ ಶಬ್ದವೇ ಪೂರ್ವವಾಗಿರಬೇಕೆಂಬ ಅರ್ಥವಲ್ಲ. ರಾಜ ಶಬ್ದಕ್ಕೆ ಪರ್ಯಾಯ ಪದಗಳೆಂದರೆ 'ಇನ' 'ಈಶ್ವರ' ಮೊದಲಾದ ಶಬ್ದಗಳು ಆದ್ದರಿಂದ 'ಸಭಾರಾಜಾऽಮನುಷ್ಯಪೂರ್ವೇ' ಎಂಬ ಸೂತ್ರದಿಂದ ತತ್ಪುರುಷ ಸಮಾಸದಲ್ಲಿ ರಾಜಶಬ್ದದ ಪರ್ಯಾಯವಾದ 'ಇನ' ಎಂಬ ಶಬ್ದವು ಮೊದಲಿದ್ದಾಗ 'ಸಭಾ' ಶಬ್ದವು ನಪುಂಸಕ ಲಿಂಗವನ್ನು ಹೊಂದುತ್ತದೆ. ಆವಾಗ 'ಇನಸಭಮ್' ಎಂದಾಗುತ್ತದೆ ಹೊರತು, 'ಇನಸಭಾ' ಎಂದಾಗುವುದಿಲ್ಲ. ಇದರಂತೆ 'ಈಶ್ವರ ಸಭಮ್' ಎಂದೇ ಆಗುತ್ತದೆ. ಆದರೆ ರಾಜ ಶಬ್ದವೇ ಮೊದಲಿದ್ದರೆ 'ರಾಜಸಭಮ್' ಎಂಬ ರೂಪವು ನಿಷ್ಪನ್ನವಾಗುವುದಿಲ್ಲ ಹೊರತಾಗಿ, 'ರಾಜಸಭಾ' ಎಂದು ಸ್ತ್ರೀಲಿಂಗಾಂತವಾಗಿಯೇ ಉಳಿಯುತ್ತದೆ. ಆದ್ದರಿಂದಲೇ ಕಾಶಿಕಾವೃತ್ತಿಯಲ್ಲಿ 'ಪರ್ಯಾಯವಚನಸ್ಯೈವೇಷ್ಯತೇ' ರಾಜಶಬ್ದದಿಂದ ಪರ್ಯಾಯ ಶಬ್ದವನ್ನಷ್ಟೇ ಸ್ವೀಕರಿಸಬೇಕು ಎಂದು ಹೇಳಲಾಗಿದೆ.

ಪ್ರಕಾಶಃ – 'स्वं रूपं शब्दस्याशब्दसञ्ज्ञा' इत्यत्राद्याध्यायस्याद्यपादे ''जित्पर्याय वचनस्यैव राजार्थम्''इति भाष्यवार्तिकयोरुक्तत्वात् ।

ವ್ಯಾಕರಣದಲ್ಲಿ ಮೊದಲನೆಯ ಅಧ್ಯಾಯದ ಪ್ರಥಮಪಾದದಲ್ಲಿ 'ಸ್ವಂ ರೂಪಂ ಶಬ್ದಸ್ಯಾಶಬ್ದಸಂಜ್ಞಾ' ಎಂಬ ಸೂತ್ರವು ಪ್ರಸ್ತಕವಾಗಿದೆ. ಈ ಸೂತ್ರಕ್ಕೆ ಹೀಗರ್ಥ - ವ್ಯಾಕರಣ ಶಾಸ್ತ್ರದಲ್ಲಿ ಯಾವುದಾದರು ಒಂದು ಶಬ್ದವನ್ನು ಉದ್ದೇಶಿಸಿ ಪ್ರತ್ಯಯಗಳನ್ನು ವಿಧಾನ ಮಾಡಿದರೆ ಆವಾಗ ಆ ಶಬ್ದದಿಂದ ಆದರ ಅರ್ಥವನ್ನು ಸ್ವೀಕರಿಸಬಾರದು. ಶಬ್ದವನ್ನೇ ಸ್ವೀಕರಿಸಬೇಕು. ಉದಾ : 'ಅಗ್ನೇರ್ಢಕ್' ಎಂಬ ಸೂತ್ರದಲ್ಲಿ ಅಗ್ನಿ ಶಬ್ದಕ್ಕೆ 'ಢಕ್' ಎಂಬ ಪ್ರತ್ಯಯವನ್ನು ಹೇಳಿದ್ದಾರೆ. ಇಲ್ಲಿ ಅಗ್ನಿ ಶಬ್ದದಿಂದ ಅಗ್ನಿಯೆಂಬ ಅರ್ಥವನ್ನು ಸ್ವೀಕರಿಸಬಾರದು. ಢಕ್' ಎಂಬ ಪ್ರತ್ಯಯವನ್ನು ಹೇಳಿದ್ದಾರೆ. ಇಲ್ಲಿ ಅಗ್ನಿ ಶಬ್ದದಿಂದ ಅಗ್ನಿಯೆಂಬ ಅರ್ಥವನ್ನು ಸ್ವೀಕರಿಸಬಾರದು. ಶಬ್ದವನ್ನೇ ಸ್ವೀಕರಿಸಬೇಕು. ಹೀಗೆ 'ಸ್ವಂ ರೂಪಂ' ಎಂಬ ಸೂತ್ರವು ಪರಿಭಾಷಾಸೂತ್ರವಾಗಿದೆ. ಈ ಸೂತ್ರದ ಭಾಷ್ಯ ಹಾಗೂ ವಾರ್ತಿಕಗಳಲ್ಲಿ ಮತ್ತೊಂದು ಪರಿಭಾಷೆಗಳನ್ನು ಹೇಳಿರುತ್ತಾರೆ. 'ಜಿತ್‌ಪರ್ಯಾಯ ವಚನಸ್ಯೈವ ರಾಜಾದ್ಯರ್ಥಮ್' ಎಂಬುದಾಗಿ. ಜಕಾರ 'ಇತ್' ಆಗಿರುವಂತಹ ಶಬ್ದಗಳನ್ನು ಸೂತ್ರಗಳಲ್ಲಿ ಹೇಳಿದಾಗ ಅದರ ಪರ್ಯಾಯ ಶಬ್ದವನ್ನಷ್ಟೇ ಸ್ವೀಕರಿಸಬೇಕು ಹೊರತು, ಸೂತ್ರದಲ್ಲಿ ಹೇಳಿರುವ ಶಬ್ದವನ್ನು

ಇಟ್ಟುಕೊಳ್ಳಬಾರದು. ಹೀಗೇಕೆ ಹೇಳಬೇಕೆಂದರೆ 'ಸಭಾರಾಜಾऽಮನುಷ್ಯಪೂರ್ವೇ' ಎಂಬ ಸೂತ್ರದಲ್ಲಿ ಜಕಾರ 'ಇತ್' ಆಗಿರುವಂತಹ 'ರಾಜಾ' ಎಂಬ ಶಬ್ದದಿಂದ ಆದರ ಪರ್ಯಾಯ ಶಬ್ದವನ್ನೇ ಸ್ವೀಕರಿಸಬೇಕು ಹೊರತು, 'ರಾಜ' ಶಬ್ದವನ್ನು ಸ್ವೀಕರಿಸಬಾರದೆನ್ನಲು ಈ ಪರಿಭಾಷೆಯನ್ನು ವಿವಕ್ಷಿಸಬೇಕೆಂದು ಭಾಷ್ಯ ಹಾಗೂ ವಾರ್ತಿಕಗಳಲ್ಲಿ ಸಮರ್ಥಿಸಿರುತ್ತಾರೆ.

ಪ್ರಕಾಶಃ – तस्य चायमर्थः । 'सभाराजा' इति सूत्रे सभाराजाऽमनुष्यपूर्वेति राजशब्दात्परं जकारव्यञ्जनमुच्चार्य राजशब्दो जित्त्वेन जकारेत्सञ्ज्ञकत्वेन निर्देष्टव्यः' । तदनन्तरं 'स्वं रूपं शब्दस्य' इति सूत्रे जित्पर्यायवचनस्यैवेति पठनीयम् । इनसभमित्यादिरूपसिद्ध्यर्थमिति ।

ಭಾಷ್ಯ ಹಾಗೂ ವಾರ್ತಿಕಗಳ ಮಾತಿಗೆ ಹೀಗರ್ಥ - 'ಸಭಾರಾಜಾ' ಎಂಬ ಸೂತ್ರದಲ್ಲಿ 'ಸಭಾರಾಜಾऽಮನುಷ್ಯಪೂರ್ವೇ' ಎಂದು ರಾಜಶಬ್ದದ ಮುಂದೆ ವ್ಯಂಜನಾಕ್ಷರವಾದ 'ಜ್' ಎಂಬ ಅಕ್ಷರವನ್ನು ಉಚ್ಚಾರಣೆ ಮಾಡಿ ರಾಜ ಶಬ್ದವು ಇತ್ತಾದ ಜಕಾರದಿಂದ ಕೂಡಿದೆಯೆಂದು ನಿರ್ದೇಶಿಸಬೇಕು. ತದನಂತರ 'ಸ್ವಂ ರೂಪಂ ಶಬ್ದಸ್ಯ ಅಶಬ್ದ ಸಂಜ್ಞಾ' ಎಂಬ ಸೂತ್ರದಲ್ಲಿ ಜಕಾರ ಇತ್ತಾಗಿರುವ ಶಬ್ದದಿಂದ ಪರ್ಯಾಯ ಶಬ್ದವನ್ನೇ ಸ್ವೀಕರಿಸಬೇಕೆಂದು ತಿಳಿಯಬೇಕು. ಹೀಗೆ ಹೇಳಿದಾಗ 'ಇನಸಭಮ್' ಎಂಬ ರೂಪವು ಸಿದ್ಧವಾಗುತ್ತದೆ. 'ರಾಜಸಭಮ್' ಎಂಬ ರೂಪವು ಸಿದ್ಧವಾಗುವುದಿಲ್ಲವೆಂದು ತಿಳಿಯುತ್ತದೆ.

ಪ್ರಕಾಶಃ – अत्र यद्यपि 'स्वं रूपं शब्दस्य' इति सूत्रे कैयटे 'सभाराजा' इत्यत्र ''अराजेति पर्युदास आश्रीयते । तेन, राजशब्दसदृशानां तत्पर्यायाणामेव ग्रहणं सिध्यति'' इत्युक्तत्वात् 'सभाराजा' इति सूत्र एव च मञ्जर्यां ''द्वावत्र नञौ । अराजपूर्वा अमनुष्यपूर्वेति । तत्र नञिवयुक्तन्यायेन राजशब्दसदृशशब्दाः पर्याया एव गृह्यन्ते'' इत्युक्तेस्तत्राराजेति पदच्छेदेन पर्यायग्रहणं युक्तम् । प्रकृते तु नैवम् ।

ವಾಸ್ತವಿಕವಾಗಿ ಕೈಯಟ ಗ್ರಂಥದಲ್ಲಿ 'ಸ್ವಂ ರೂಪಂ ಶಬ್ದಸ್ಯ' ಎಂಬ ಸೂತ್ರವನ್ನು ವ್ಯಾಖ್ಯಾನ ಮಾಡುತ್ತಾ 'ಸಭಾರಾಜಾ' ಎಂಬ ಸೂತ್ರದಲ್ಲಿ 'ಅರಾಜೇತಿ ಪರ್ಯುದಾಸ ಆಶ್ರೀಯತೇ, ತೇನ ರಾಜಶಬ್ದಸದೃಶಾನಾಂ ತತ್ಪರ್ಯಾಯಾಣಾಮೇವ ಗ್ರಹಣಂ ಸಿದ್ಧ್ಯತಿ' ಎಂದರೆ 'ಅರಾಜ' ಎಂಬುದಾಗಿ ಪರ್ಯುದಾಸವನ್ನು ಆಶ್ರಯಿಸಬೇಕು. ಇದರಿಂದ ರಾಜಶಬ್ದಕ್ಕೆ ಸದೃಶವಾದ ಆದರ ಪರ್ಯಾಯಶಬ್ದವನ್ನು ಸ್ವೀಕರಿಸಬೇಕೆಂದು ತಿಳಿಯುತ್ತದೆ. ಹೀಗೆ ವ್ಯಾಖ್ಯಾನಿಸಲಾಗಿದೆ. ಇದರ ಅರ್ಥ ಹೀಗಿದೆ - ಅರಾಜ ಎಂಬುದಾಗಿ ಪರ್ಯುದಾಸವನ್ನು ಆಶ್ರಯಿಸಿದಾಗ ತದನ್ಯವಾದದ್ದನ್ನು ಮತ್ತು ತತ್‌ಸದೃಶವಾದುದ್ದನ್ನು ಸ್ವೀಕರಿಸಬೇಕೆಂಬ ನಿಯಮವಿರುತ್ತದೆ. 'ಅಬ್ರಾಹ್ಮಣಃ' ಎಂದು ಹೇಳಿದಾಗ ಶೂದ್ರಾದಿಗಳನ್ನು ವಿವಕ್ಷಿಸುತ್ತಾರೆ ಹೊರತು, ಪಾಷಾಣಾದಿಗಳನ್ನು ಯಾರೂ ಸಹ ವಿವಕ್ಷಿಸುವುದಿಲ್ಲ. ಆದರಂತೆ ಅರಾಜ ಎಂಬ ಪರ್ಯುದಾಸದಿಂದಲೂ ರಾಜಶಬ್ದ ಭಿನ್ನವಾದ ಮತ್ತು ರಾಜಶಬ್ದಕ್ಕೆ ಸದೃಶವಾದ 'ಇನ' ಮೊದಲಾದ ಪರ್ಯಾಯ ಶಬ್ದಗಳನ್ನೇ ಸ್ವೀಕರಿಸಬೇಕೆಂದು ಸಿದ್ಧವಾಗುತ್ತದೆ.

ಇನ್ನು 'ಪದಮಂಜರೀ' ಎಂಬ ವ್ಯಾಖ್ಯಾನದಲ್ಲಿ 'ದ್ವಾವತ್ರ ನಞೌ ಆರಾಜಪೂರ್ವ ಅಮನುಷ್ಯಪೂರ್ವ ಇತಿ, ತತ್ರ ನಞ್‌ವಯುಕ್ತನ್ಯಾಯೇನ ರಾಜಶಬ್ದಸದೃಶಶಬ್ದಃ ಪರ್ಯಾಯಾ ಏವ ಗೃಹ್ಯಂತೇ' 'ಸಭಾರಾಜಾ' ಎಂಬ ಸೂತ್ರದಲ್ಲಿ ಎರಡು ಕಡೆ 'ನಞ್' ಇರುತ್ತದೆ. ಆರಾಜಪೂರ್ವ, ಅಮನುಷ್ಯಪೂರ್ವ ಎಂಬುದಾಗಿ. ಯಾವರೀತಿಯಾಗಿ 'ಚಂದ್ರಇವ ಮುಖಂ' ಎಂದು ಹೇಳಿದಾಗ 'ಇವ' ಶಬ್ದದಿಂದ ಚಂದ್ರನಿಗೆ ಸದೃಶವಾದದ್ದನ್ನೇ ವಿವಕ್ಷಿಸಲಾಗುತ್ತದೋ, ಅದರಂತೆ ರಾಜ ಶಬ್ದದಿಂದ ಅದಕ್ಕೆ ಸದೃಶವಾದ ಪರ್ಯಾಯಶಬ್ದಗಳನ್ನೇ ಸ್ವೀಕರಿಸಬೇಕೆಂದು ಹೇಳಲಾಗಿದೆ.

ಕೈಯಟದಲ್ಲಿ 'ಸ್ವಂ ರೂಪಂ ಶಬ್ದಸ್ಯ' ಎಂಬ ಸೂತ್ರ ವ್ಯಾಖ್ಯಾನದ ಸಂದರ್ಭದಲ್ಲಿ ಹೇಳಿದ್ದಾರೆ. ಅಲ್ಲಿ ಮಾತ್ರವಲ್ಲ 'ಸಭಾರಾಜಾ' ಎಂಬ ಸೂತ್ರದ ಪದಮಂಜರೀ ಎಂಬ ವ್ಯಾಖ್ಯಾನದಲ್ಲಿಯೇ ಹೀಗೆ ಹೇಳಿದ್ದಾರೆ. ಈ ಪ್ರಕಾರದಲ್ಲೂ ಸೂತ್ರದಲ್ಲಿ ಆರಾಜ ಎಂದೇ ಪದಚ್ಛೇದ. ಆದ್ದರಿಂದ ಆರಾಜಪೂರ್ವ, ಅಮನುಷ್ಯಪೂರ್ವ ಎಂದು ಸೂತ್ರದಲ್ಲಿ ಪದಚ್ಛೇದವನ್ನು ತಿಳಿಯಬೇಕು. ಕೈಯಟ ಹಾಗೂ ಮಂಜರೀ ವ್ಯಾಖ್ಯಾನಗಳ ಆಧಾರದಿಂದ 'ಆರಾಜಾ' ಎಂದೇ ಪದಚ್ಛೇದವನ್ನು ಮಾಡಬೇಕು. ಆದ್ದರಿಂದ ರಾಜ ಶಬ್ದದಿಂದ ಅದಕ್ಕೆ ಪರ್ಯಾಯಶಬ್ದವೆನಿಸಿದ 'ಇನ', 'ಈಶ್ವರ' ಮೊದಲಾದ ಶಬ್ದಗಳನ್ನು ವಿವಕ್ಷಿಸುವುದು ತಪ್ಪಾಗುವುದಿಲ್ಲ.

ಆದರೆ 'ದ್ಯುಭ್ವಾದ್ಯಾಯತನಂ ಸ್ವಶಬ್ದಾತ್' ಎಂಬ ಪ್ರಕೃತ ಸೂತ್ರದಲ್ಲಿ ಪರ್ಯುದಾಸ ಗ್ರಹಣವು ಕೇಳಿಸುತ್ತಿಲ್ಲ. ಒಂದು ವೇಳೆ 'ಅಸ್ವಶಬ್ದಾತ್' ಎಂದು ಹೇಳಿದ್ದರೆ ವ್ಯಾಕರಣಸೂತ್ರದ ದೃಷ್ಟಾಂತದಿಂದ ಪರ್ಯಾಯಶಬ್ದವನ್ನು ಸ್ವಶಬ್ದದಿಂದ ವಿವಕ್ಷಿಸಬಹುದಿತ್ತು. ಆದರೆ ಹಾಗೇ ಹೇಳದ ಕಾರಣ ಪರ್ಯಾಯಶಬ್ದವೆನಿಸಿದ ಆತ್ಮಶಬ್ದವನ್ನು ವಿವಕ್ಷಿಸಲು ಹೇಗೆ ಸಾಧ್ಯ ? ಎಂಬ ಪ್ರಶ್ನೆ ಬರುತ್ತದೆ.

ಪ್ರಕಾಶಃ – तथापि भाष्यवार्तिकयोर्मते राजशब्दे पर्युदासानाश्रयणात् तन्मतावष्टम्भेन वा न्यायतो वा वचनतो वा यथाकथञ्चिदुपात्तपर्यायस्य ग्रहणमित्यत्राविवादाद्वा राजशब्दस्तत्पर्यायपर इत्युक्तम् ।

ಆದರೆ ಗ್ರಂಥಕಾರರು ಭಾಷ್ಯ ಹಾಗೂ ವಾರ್ತಿಕಮತಗಳ ಅಭಿಪ್ರಾಯದಿಂದ ವ್ಯಾಕರಣ ಸೂತ್ರದ ದೃಷ್ಟಾಂತವನ್ನು ನೀಡಿದ್ದಾರೆ ಹೊರತು, ಕೈಯಟ ಹಾಗೂ ಮಂಜರೀ ವ್ಯಾಖ್ಯಾನದ ಆಧಾರದಿಂದ ದೃಷ್ಟಾಂತ ನೀಡಿದ್ದಲ್ಲ. ಒಬ್ಬೊಬ್ಬ ವೈಯಾಕರಣರ ವಿವಕ್ಷೆಗಳೂ ಭಿನ್ನ ಭಿನ್ನವಾಗಿರುವುದರಿಂದ ಭಾಷ್ಯಕಾರರ ಹಾಗೂ ವಾರ್ತಿಕಕಾರರ ಅಭಿಪ್ರಾಯವನ್ನು ಅವಲಂಬಿಸುವುದು ತಪ್ಪಾಗುವುದಿಲ್ಲ. ಅಥವಾ ಕೈಯಟ ಹಾಗೂ ಮಂಜರೀ ಗ್ರಂಥಗಳಲ್ಲಿ ನಞ್‌ವಯುಕ್ತನ್ಯಾಯದಿಂದ ರಾಜಶಬ್ದದಿಂದ ಪರ್ಯಾಯಶಬ್ದವನ್ನು ಸ್ವೀಕರಿಸಬೇಕೆಂದು ಹೇಳಿದ್ದಾರೆ. ಭಾಷ್ಯ ಹಾಗೂ ವಾರ್ತಿಕಗಳಲ್ಲಿ ನೇರವಾಗಿಯೇ ನ್ಯಾಯವನ್ನು ಹೇಳದೇ ರಾಜಶಬ್ದದಿಂದ ಪರ್ಯಾಯಶಬ್ದವನ್ನು ಸ್ವೀಕರಿಸಬೇಕೆಂದು ಹೇಳಿದ್ದಾರೆ. ಇಬ್ಬರ ಪಕ್ಷದಲ್ಲಿಯೂ ಪರ್ಯಾಯ ಶಬ್ದವನ್ನು ಸ್ವೀಕರಿಸಬೇಕೆಂಬ ವಿಚಾರದಲ್ಲಿ ವಿವಾದವಿರುವುದಿಲ್ಲ. ಈ ರೀತಿ ಅನೇಕ ದೃಷ್ಟಿಗಳಿಂದ ಗ್ರಂಥಕಾರರು ವ್ಯಾಕರಣದ ದೃಷ್ಟಾಂತವನ್ನು ನೀಡಿದ್ದಾರೆಂದು ತಿಳಿಯಬಹುದು.

ಪ್ರಕಾಶಃ – ಯದ್ವಾ ತತ್ರ ಪರ್ಯುದಾಸೇನ ನञ್ಯುಕ್ತಮಿವ ಯುಕ್ತಮನ್ಯಸ್ಮಿನ್ ಸದೃಶಾಧಿಕರಣೇ ಪ್ರತಿಪತ್ತಿಂ ಗಮಯತೀತಿ ನ್ಯಾಯೇನ ಪರ್ಯಾಯಪರತ್ವಸ್ಯ ಸಿದ್ಧತ್ವವದಿಹಾಪಿ ವಿಷಯವಾಕ್ಯೇ ಸ್ವಶಬ್ದಾಭಾವೇನ ತದನ್ಯಥಾನುಪಪತ್ತಿರೂಪನ್ಯಾಯಸಿದ್ಧತ್ವಮೇವ ಪರ್ಯಾಯಪರತ್ವಸ್ಯೇತಿ ಭಾವೇನಾಯಂ ದೃಷ್ಟಾನ್ತ ಉಕ್ತಃ ।

ಅಥವಾ ದೃಷ್ಟಾಂತ - ದಾರ್ಷ್ಟಾಂತಿಕ ಭಾವವನ್ನು ಸಂಪೂರ್ಣವಾಗಿ ತಿಳಿಯಬಹುದು. ಕೈಯಟ ಹಾಗೂ ಮಂಜರೀ ಗ್ರಂಥಗಳ ಪ್ರಕಾರವೂ ಸಹ ಗ್ರಂಥಕಾರರ ದೃಷ್ಟಾಂತವು ತಪ್ಪಾಗುವುದಿಲ್ಲ. ಏಕೆಂದರೆ 'ನಞ್ವಯುಕ್ತನ್ಯಾಯೇನ' ಎಂದರೆ 'ನಞ್' ನಿಂದ ಕೂಡಿರುವ 'ಇವ'ದಿಂದ ಕೂಡಿರುವ ಯಾವುದೇ ಒಂದು ಪದವು ಆದಕ್ಕೆ ಸದೃಶವಾದ ಮತ್ತೊಂದು ಪದವನ್ನೇ ತಿಳಿಸುತ್ತದೆ ಎಂಬ ನ್ಯಾಯದಿಂದ ಪರ್ಯಾಯಪರತ್ವವನ್ನು ನ್ಯಾಯದಿಂದ ಸಮರ್ಥಿಸಿದ್ದಾರೆ. ಸೂತ್ರಕಾರರೂ ಸಹ ನ್ಯಾಯದಿಂದಲೇ ಪರ್ಯಾಯಶಬ್ದವನ್ನು ಸ್ವೀಕರಿಸಬೇಕೆಂದು ವಿವಕ್ಷಿಸಿದ್ದಾರೆ. ಏಕೆಂದರೆ 'ಯಸ್ಮಿನ್ದ್ಯೌಃ ಪೃಥಿವೀ' ಎಂಬುದನ್ನೇ ಎಲ್ಲಾ ವಾದಿಗಳು ವಿಷಯವಾಕ್ಯವನ್ನಾಗಿ ಹೇಳಿರುತ್ತಾರೆ. ಆದರೆ ಸೂತ್ರಕಾರರು ಸ್ವಶಬ್ದವಿದೆಯೆಂದು ಹೇಳಿದ್ದಾರೆ. ಆಥರ್ವಣದಲ್ಲಿ ಎಲ್ಲಿಯೂ ಸಹ ಸ್ವಶಬ್ದವು ಕಾಣಿಸುತ್ತಿಲ್ಲ. ಆದ್ದರಿಂದ 'ಸ್ವಶಬ್ದಾತ್' ಎಂಬುದಕ್ಕೆ ಆತ್ಮಶಬ್ದಾದಿಗಳಿರುವುದರಿಂದ ಎಂಬರ್ಥವನ್ನು ವಿವಕ್ಷಿಸಬೇಕು. ಹೀಗೆ ಅನ್ಯಥಾನುಪಪತ್ತಿಯೆಂಬ ನ್ಯಾಯದಿಂದ ಪರ್ಯಾಯಪದವನ್ನೇ ಸ್ವೀಕರಿಸಬೇಕೆಂದು ತಿಳಿಸಿದ್ದಾರೆ. ಆದ್ದರಿಂದ ಪರ್ಯಾಯಪದವನ್ನು ಸ್ವೀಕರಿಸಬೇಕೆಂಬುದು ಪಾಣಿನಿ ಸೂತ್ರದಲ್ಲಿಯೂ ನ್ಯಾಯಸಿದ್ಧವಾಗಿದೆ. ಇಲ್ಲಿಯೂ ಸಹ ನ್ಯಾಯಸಿದ್ಧವಾಗಿದೆಯೆಂಬ ಅಂಶದಿಂದ ದೃಷ್ಟಾಂತ-ದಾರ್ಷ್ಟಾಂತಿಕ ಭಾವವನ್ನು ತಿಳಿಯಬೇಕು.

ಪ್ರಕಾಶಃ – ಅತ ಏವ ಪ್ರಾಗ್ವಿಷಯವಾಕ್ಯೇ ಸ್ವಶಬ್ದಾಭಾವಾದಿತ್ಯನ್ಯಥಾನುಪಪತ್ತಿರೂಪನ್ಯಾಯ ಉಪಾತ್ತಃ ।

ಆದ್ದರಿಂದಲೇ ಹಿಂದೆ ಗ್ರಂಥಕಾರರು ವಿಷಯವಾಕ್ಯವನ್ನು ತೋರಿಸುವಾಗ 'ಸ್ವಶಬ್ದಾಭಾವಾತ್' ಎಂದು ಅನ್ಯಥಾನುಪಪತ್ತಿಯೆಂಬ ನ್ಯಾಯವನ್ನು ತೋರಿಸಿದ್ದಾರೆಂದು ತಿಳಿಯಬೇಕು.

ಪ್ರಕಾಶಃ – ಕೇಚಿತ್ತು ಕೈಯಟಾದ್ಯುಕ್ತಮೇವಾಯುಕ್ತಮ್ । ಅರಾಜೇತ್ಯುಕ್ತಾವಪಿ ಸ್ವಂ ರೂಪಂ ಶಬ್ದಸ್ಯೈವ ಗ್ರಹಣಾಪತ್ತ್ಯಾ ನಞ್ಸಿವಯುಕ್ತನ್ಯಾಯಾಪ್ರವೃತ್ತೇರಿತಿ ಭಾವೇನೈವಮುಕ್ತಮಿತ್ಯಾಹುಃ ।

ಕೆಲವರು ಕೈಯಟ ಹಾಗೂ ಮಂಜರೀ ಗ್ರಂಥಗಳಲ್ಲಿ ಹೇಳಿದ್ದನ್ನು ತಪ್ಪೆಂದು ಹೇಳುತ್ತಾರೆ. ಏಕೆಂದರೆ 'ಸ್ವಂ ರೂಪಂ' ಎಂಬ ಸೂತ್ರದ ಪ್ರಕಾರ 'ಅರಾಜಾ' ಎಂದು ಹೇಳಿದರೆ 'ಅರಾಜ' ಶಬ್ದವನ್ನೇ ಸ್ವೀಕರಿಸಬೇಕು ಹೊರತು 'ರಾಜಭನ್ನವಾದ' ಎಂಬರ್ಥವನ್ನು ಸ್ವೀಕರಿಸಲು ಬರುವುದಿಲ್ಲ. 'ನಞ್' ಹಾಗೂ 'ಇವ' ಗಳಿಂದ ಕೂಡಿದ ನ್ಯಾಯವು ಶಬ್ದದಿಂದ ಅರ್ಥವನ್ನು ಸ್ವೀಕರಿಸುವ ಸಂದರ್ಭದಲ್ಲಿ ಮಾತ್ರ ಪ್ರವೃತ್ತವಾಗುತ್ತದೆ ಹೊರತು, ಶಬ್ದದಿಂದ ಶಬ್ದವನ್ನೇ ವಿವಕ್ಷಿಸುವಾಗ ಈ ನ್ಯಾಯವು ಪ್ರವೃತ್ತವಾಗುವುದಿಲ್ಲವೆಂದು ಹೇಳುತ್ತಾರೆ.

ಗುರುರಾಜೀಯಮ್ – ಅತಿಸನ್ನಿಹಿತೇತಿ ।। ದ್ವಿತೀಯಸೂತ್ರೋಕ್ತಾಮೃತಸೇತುತ್ವಾಪೇಕ್ಷಯಾऽತಿ-ಸನ್ನಿಹಿತೇತ್ಯರ್ಥಃ ।। ಯಥಾ ಸಭಾರಾಜೇತ್ಯಾದಿ ।।

ವೃಕ್ಷಾದೌ ತದ್ವಿಶೇಷಾಣಾಂ ಸ್ವೇಪರ್ಯಾಯವಿಶೇಷಯೋಃ ।
ಪರ್ಯಾಯಸ್ಯೈವ ರಾಜಾದೌ ಮತ್ಸ್ಯಾದೌ ತದ್ವಿಶೇಷಯೋಃ ।।

ಇತಿ ವಚನಾರ್ಥಃ । ಪರ್ಯಾಯವಚನಸ್ಯೈವ ನ ಸ್ವರೂಪಸ್ಯ ನಾಪಿ ವಿಶೇಷಾಣಾಂ ಚನ್ದ್ರಾದೀನಾಮಿತ್ಯರ್ಥಃ । ಕಥಂ ಪುನರೇತಲ್ಲಭ್ಯತೇ । ದ್ವಾವತ್ರ ನಞೌ । ಅರಾಜಪೂರ್ವಾऽಮನುಷ್ಯಪೂರ್ವಾ ಚೇತಿ । ತತ್ರಾರಾಜಪೂರ್ವೇತಿ ನ ಪ್ರಸಜ್ಯನಿಷೇಧಾರ್ಥಸ್ಯ ಗ್ರಹಣಮ್ । ಅಸಾಮರ್ಥ್ಯೇನ ಸಮಾಸಾನುಪಪತ್ತೇಃ । ಕಿನ್ತು ಪರ್ಯುದಾಸಾರ್ಥಸ್ಯೈವ । ತಥಾಚ ನಞಿವಯುಕ್ತನ್ಯಾಯೇನ ರಾಜಶಬ್ದಸದೃಶಾಃ ಪರ್ಯಾಯಾ ಏವ ಗೃಹ್ಯನ್ತ ಇತಿ ಧ್ಯೇಯಮ್ ।

ಸಾರ

ಪ್ರಥಮಸೂತ್ರವು ಸ್ವಪಕ್ಷ ಸಾಧಕವನ್ನು ಹೇಳುತ್ತಿರುವುದರಿಂದ ಪ್ರಥಮ ಪ್ರಾಪ್ತವಾಗಿದೆ. ವಾದ ಕಥೆಯಲ್ಲಿ ಮೊದಲು ಸ್ವಪಕ್ಷ ಸಾಧಕಗಳನ್ನು ಹೇಳಿ, ಅನಂತರ (ಪರಪಕ್ಷಬಾಧಕಗಳನ್ನು ಹೇಳಬೇಕು) ಪರಪಕ್ಷಗಳನ್ನು ನಿರಾಕರಣೆ ಮಾಡಬೇಕು. ಅದಕ್ಕನುಸಾರಿಯಾಗಿ ಸೂತ್ರಕಾರರು ಮೊದಲು ಸ್ವಪಕ್ಷಸಾಧಕಗಳನ್ನು ಹೇಳಿ ಮುಂದೆ 'ಅತಚ್ಛಬ್ದಾತ್' ಇತ್ಯಾದಿಯಾಗಿ ಪರಪಕ್ಷಗಳನ್ನು ನಿರಾಕರಣೆ ಮಾಡಿದ್ದಾರೆ.

ಸೂತ್ರದಲ್ಲಿರುವ 'ಸ್ವಶಬ್ದಾತ್' ಎಂಬ ಹೇತುವಿನಿಂದ 'ಸ್ವ' ಎಂಬ ಶಬ್ದಕ್ಕೆ ಪರ್ಯಾಯ ಪದವೆನಿಸಿದ ಆತ್ಮಶಬ್ದವನ್ನು ಸ್ವೀಕರಿಸಬೇಕು. ಯಾವರೀತಿಯಾಗಿ ಪಾಣಿನಿ ವ್ಯಾಕರಣದಲ್ಲಿ 'ಸಭಾರಾಜಾऽಮನುಷ್ಯಪೂರ್ವೇ' ಎಂಬ ಸೂತ್ರದಲ್ಲಿ 'ರಾಜಾ' ಎಂಬ ಶಬ್ದಕ್ಕೆ ಪರ್ಯಾಯ ಪದಗಳಾದ ಈಶ್ವರ ಮೊದಲಾದ ಶಬ್ದಗಳನ್ನು ಸ್ವೀಕರಿಸಿದ್ದಾರೋ, ಆದರಂತೆ ಇಲ್ಲಿಯೂ ಸಹ ತಿಳಿಯಬೇಕು.

'ಸ್ವಶಬ್ದಾತ್' ಎಂಬ ಸೂತ್ರ ಭಾಗದ ಗಾಂಭೀರ್ಯ

तात्पर्यचन्द्रिका

आत्मशब्दादित्युक्तौ तु यद्यप्यार्जवं प्रतिपत्तिलाघवं च शब्दलाघवाद्वरम् । तथापि तस्य विष्णावसाधारण्यं न ज्ञापितं स्यात् ।

ಅನುವಾದ - ಸೂತ್ರದಲ್ಲಿ 'ಸ್ವಶಬ್ದಾತ್' ಎಂದು ಹೇಳಿದ್ದಾರೆ. ವಾಸ್ತವಿಕವಾಗಿ 'ಆತ್ಮಶಬ್ದಾತ್' ಎಂದು ಹೇಳಬೇಕಿತ್ತು. ಹಾಗೆ ಹೇಳುವುದರಿಂದ ನೇರವಾಗಿ ಹೇತುವಿನ ಜ್ಞಾನ ಉಂಟಾಗುತ್ತದೆ. ಇನ್ನು ಆತ್ಮಶಬ್ದಕ್ಕಿಂತ 'ಸ್ವ' ಎಂಬ ಶಬ್ದದಲ್ಲಿ ಲಾಘವವಿದೆಯೆಂದು ಹೇಳಬಹುದು. ಆದರೆ 'ಆತ್ಮಶಬ್ದಾತ್' ಎಂಬ ಹೇತುವಿನಿಂದ ಶೀಘ್ರವಾಗಿ ಹೇತುವಿನ ಜ್ಞಾನವುಂಟಾಗುವ ಪ್ರಯುಕ್ತ ಪ್ರತಿಪತ್ತಿಲಾಘವವಿದೆ. ಶಬ್ದಲಾಘವಕ್ಕಿಂತ ಪ್ರತಿಪತ್ತಿಲಾಘವವೇ ಶ್ರೇಷ್ಠ. ಹೀಗಿರುವಾಗ ಸೂತ್ರಕಾರರು ವಕ್ರವಾಗಿ ಹೇತುವಿನ ಜ್ಞಾನವನ್ನು ಹುಟ್ಟಿಸುವ 'ಸ್ವಶಬ್ದಾತ್' ಎಂಬುದನ್ನು ಏಕೆ ಹೇಳಿದರು? ಎಂದರೆ ವಿಷ್ಣುವಿನಲ್ಲಿ ಹೇತು ಅಸಾಧಾರಣವಾಗಿದೆಯೆಂದು ತಿಳಿಸುವುದಕ್ಕೋಸ್ಕರ ಸೂತ್ರಕಾರರು 'ಸ್ವಶಬ್ದಾತ್' ಎಂದು ಹೇಳಿದ್ದಾರೆ. ಇಲ್ಲದ್ದಿದರೆ ವಿಷ್ಣುವಿನಲ್ಲಿ ಅಸಾಧಾರಣ್ಯವು ತಿಳಿಯುತ್ತಿರಲಿಲ್ಲ.

तस्य शब्दस्तच्छब्द इति विग्रहं विवक्षित्वा तच्छब्दादित्युक्तौ तु शब्दविशेषो नोपात्तः स्यात् । अत उभयार्थं स्वशब्दादित्युक्तम् ।

ಅಸಾಧಾರಣ್ಯವನ್ನು ತಿಳಿಸಬೇಕೆಂದರೆ 'ಸ್ವಶಬ್ದಾತ್' ಎಂದೇ ಹೇಳಬೇಕಾಗಿಲ್ಲ. 'ತಸ್ಯಶಬ್ದಃ' 'ತಚ್ಛಬ್ದಃ' ಎಂಬ ವಿಗ್ರಹವನ್ನು ವಿವಕ್ಷಿಸಿ 'ತಚ್ಛಬ್ದಾತ್' ಎಂದೂ ಸಹ ಹೇಳಬಹುದಿತ್ತು. ಹೌದು; ಹೀಗೆ ಹೇಳಿದರೆ ವಿಷ್ಣುವಿನಲ್ಲಿ ಅಸಾಧಾರಣವಾದ ಶಬ್ದವು ಯಾವುದೆಂದು ತಿಳಿಯುತ್ತಿರಲಿಲ್ಲ. ಅಂತಹ ಶಬ್ದ ಆತ್ಮಶಬ್ದವೇ ಆಗಿದೆಯೆಂದು ತಿಳಿಸುವುದಕ್ಕಾಗಿಯೂ ಸೂತ್ರಕಾರರು 'ಸ್ವಶಬ್ದಾತ್' ಎಂದು ಹೇಳಿದ್ದಾರೆ. ಆದ್ದರಿಂದ ವಿಷ್ಣುವಿನಲ್ಲಿ ಅಸಾಧಾರಣವಾಗಿದೆ. ಮತ್ತು ಅದು ಆತ್ಮಶಬ್ದವೇ ಆಗಿದೆ ಎಂಬೆರಡು ಪ್ರಯೋಜನಕ್ಕೋಸ್ಕರ ಸೂತ್ರದಲ್ಲಿ 'ಸ್ವಶಬ್ದಾತ್' ಎಂದು ಹೇಳಿರುತ್ತಾರೆ.

एवमुक्ते श्रुतिवक्त्रत्ववैयर्थ्याय स्वस्य विष्णोरेव शब्दः स्वशब्द इत्यपि विग्रहस्य विवक्षणीयत्वादसाधारण्यं ज्ञापितं भवति ।

ಹೀಗೆ ಸೂತ್ರಕಾರರು 'ಸ್ವಶಬ್ದಾತ್' ಎಂದು ಹೇಳಿದ್ದರಿಂದ ಮತ್ತೊಂದು ಪ್ರಯೋಜವನ್ನು ತಿಳಿಸಿದ್ದಾರೆ. ಶ್ರುತಿಯಲ್ಲಿ 'ಸ್ವ' ಎಂಬ ಶಬ್ದವು ಇಲ್ಲದ ಕಾರಣ 'ಸ್ವಶಬ್ದಾತ್' ಎಂದೇಕೆ ಸೂತ್ರಕಾರರು ಹೇಳಿದರು ಎಂಬ ವೈಯರ್ಥ್ಯಶಂಕೆಯು ಉಂಟಾಗುತ್ತದೆ. ಆವಾಗ ಅನ್ಯಥಾನುಪಪತ್ತಿರೂಪ

ಪ್ರಮಾಣದಿಂದ 'ಸ್ವಸ್ಯ ಏವ ಶಬ್ದಃ ಸ್ವಶಬ್ದಃ' ಎಂಬ ವಿಗ್ರಹವನ್ನು ಆಶ್ರಯಿಸಿ ವಿಷ್ಣುವಿನದ್ದೇ ಶಬ್ದವೆಂಬ ಅರ್ಥವು ತಿಳಿಯುತ್ತದೆ. ಇದರಿಂದ ಆತ್ಮಶಬ್ದವು ವಿಷ್ಣುವಿನ ಅಸಾಧಾರಣ ಹೇತುವೆಂದು ತಿಳಿಸಿದಂತಾಗುತ್ತದೆ. ನೇರವಾಗಿ 'ಆತ್ಮಶಬ್ದಾತ್' ಎಂಬುದನ್ನೇ ಹೇತುವನ್ನಾಗಿ ಮಾಡಿದ್ದಲ್ಲಿ ವಿಷ್ಣುವಿಗೆ ಸಂಬಂಧಪಟ್ಟ ಶಬ್ದವೆಂಬ ಅರಿವು ಉಂಟಾಗುತ್ತಿರಲಿಲ್ಲ. ಈ ಬಗೆಯ ವಿಗ್ರಹವೂ ಕೂಡ ತಿಳಿಯುತ್ತಿರಲಿಲ್ಲ.

एतदेवाभिप्रेत्योक्तं तत्त्वप्रदीपे ''विष्णोः स्वरूपस्यैव साक्षाद्वाचको ह्यात्मशब्दः'' इति । षष्ठीसमासमात्रविवक्षा चेत् ''तद्धर्मोपदेशात् । तल्लिङ्गात्'' इत्यादाविवात्रापि तच्छब्दः प्रयुज्येत ।

ಈ ಅಭಿಪ್ರಾಯದಿಂದಲೇ ತತ್ತ್ವಪ್ರದೀಪದಲ್ಲಿ 'ವಿಷ್ಣೋಃ ಸ್ವರೂಪಸ್ಯೈವ ಸಾಕ್ಷಾದ್ವಾಚಕೋ ಹ್ಯಾತ್ಮಶಬ್ದಃ' ಆತ್ಮಶಬ್ದವು ವಿಷ್ಣುವಿನ ಸ್ವರೂಪಕ್ಕೆ ಸಾಕ್ಷಾದ್ವಾಚಕವಾಗಿದೆಯೆಂದು ಹೇಳಿರುತ್ತಾರೆ.

ಒಂದು ವೇಳೆ ಸೂತ್ರದಲ್ಲಿರುವ 'ಸ್ವಶಬ್ದಾತ್' ಎಂಬ ಪದದಲ್ಲಿ ಷಷ್ಠೀಸಮಾಸವಷ್ಟೇ ವಿವಕ್ಷಿತವಾಗಿದ್ದಲ್ಲಿ, 'ತದ್ಧರ್ಮೋಪದೇಶಾತ್' 'ತಲ್ಲಿಂಗಾತ್' ಇತ್ಯಾದಿ ಸ್ಥಳಗಳಲ್ಲಿ ಹೇಳಿದಂತೆ 'ತಚ್ಛಬ್ದಾತ್' ಎಂದೇ ಹೇಳುತ್ತಿದ್ದರು. ಕರ್ಮಧಾರಯ ಸಮಾಸವಷ್ಟೇ ವಿವಕ್ಷಿತವಾಗಿದ್ದಲ್ಲಿ 'ಆತ್ಮಶಬ್ದಾತ್' ಎಂದು ಹೇಳುತ್ತಿದ್ದರು. ಇವೆರಡನ್ನೂ ಬಿಟ್ಟು 'ಸ್ವಶಬ್ದಾತ್' ಎಂದು ಹೇಳಿರುವ ಪ್ರಯುಕ್ತ ಷಷ್ಠೀಸಮಾಸವನ್ನು ಹಾಗೂ ಸಂಭಾವನಾಪೂರ್ವಪದ ಕರ್ಮಧಾರಯ ಸಮಾಸವನ್ನೂ ವಿವಕ್ಷಿಸಬೇಕೆಂದು ತಿಳಿಯುತ್ತದೆ. ಈ ಎರಡೂ ಸಮಾಸಗಳಿಂದ ವಿಷ್ಣುವಿನ ಅಸಾಧಾರಣವಾಗಿದೆಯೆಂದು ಮತ್ತು ಆತ್ಮವೆಂಬ ಶಬ್ದವಿಶೇಷಣ ಸ್ವರೂಪವಾಗಿದೆಯೆಂದು ಎರಡು ಪ್ರಮೇಯಗಳು ಸಿದ್ಧವಾಗುತ್ತವೆ.

अथवा यथा लोकेऽन्यत्रप्रसिद्धोऽपि स्वशब्दो विष्णोः सकाशात् सम्भूते चतुर्मुखे स्वभूरिति प्रयोगादिवशाद्विष्णौ मुख्यः तथा लोकेऽन्यत्रप्रसिद्धोऽप्यात्मशब्दश्चतुर्मुखे आत्मभूरिति प्रयोगात् –

आत्मेति मुख्यतो विष्णुस्तदन्ये तूपचारतः ।
तयैव स्व इति प्रोक्तस्तस्माद्ब्रह्माऽऽत्मभूः स्वभूः ।।

इति वचनाच्च विष्णौ मुख्य इत्यभिप्रेत्य स्वशब्दादित्युक्तम् ।

ಅಥವಾ 'ಸ್ವಶಬ್ದಾತ್' ಎಂಬುದನ್ನು ದೃಷ್ಟಾಂತದಂತೆ ಸೂತ್ರಕಾರರು ಹೇಳಿದ್ದಾರೆ. ಹೇಗೆಂದರೆ - ಲೋಕದಲ್ಲಿ 'ಸ್ವ' ಎಂಬ ಶಬ್ದವು ಬಂಧು, ಹಣ, ಮೊದಲಾದ ಅರ್ಥಗಳಲ್ಲಿ ಪ್ರಸಿದ್ಧವಾಗಿದ್ದರೂ 'ಸ್ವ' ಎಂದರೆ ಸ್ವತಂತ್ರನಾದ ವಿಷ್ಣುವಿನ ದೆಸೆಯಿಂದ ಹುಟ್ಟದ ಕಾರಣ ಚತುರ್ಮುಖನನ್ನು 'ಸ್ವಭೂಃ'

ಎಂದೇ ಕರೆಯಲಾಗುತ್ತದೆ. ಆದ್ದರಿಂದ ಲೋಕದಲ್ಲಿ 'ಸ್ವ' ಶಬ್ದವು ಅಮುಖ್ಯವಾಗಿ ಪ್ರಯೋಗಿಸಲ್ಪಟ್ಟಿದ್ದರೂ ವಿಷ್ಣುವಿನಲ್ಲಿ ಮುಖ್ಯವಾಗಿಯೇ ಪ್ರಯೋಗಿಸಲಾಗುತ್ತದೆ. ಅದರಂತೆ ಆತ್ಮಶಬ್ದವೂ ಸಹ ವಿಷ್ಣುವನ್ನು ಬಿಟ್ಟು ಲೋಕದಲ್ಲಿ ಜೀವಾದಿಗಳ ವಿಷಯದಲ್ಲಿ ಅಮುಖ್ಯವಾಗಿ ಪ್ರಯೋಗಿಸಲ್ಪಟ್ಟದೆ. ಆದರೂ ಸಹ ಚತುರ್ಮುಖನನ್ನು 'ಆತ್ಮಭೂಃ' ಎಂದು ಕರೆಯುವುದರಿಂದ ಆತ್ಮ ಶಬ್ದವು ವಿಷ್ಣುವಿನಲ್ಲೇ ಮುಖ್ಯವಾಗಿದೆಯೆಂದು ತಿಳಿಯಬೇಕು.

'ಆತ್ಮೇತಿ ಮುಖ್ಯತೋ ವಿಷ್ಣುಸ್ತದನ್ಯೇ ತೂಪಚಾರತಃ । ತಥೈವ ಸ್ವ ಇತಿ ಪ್ರೋಕ್ತಸ್ತಸ್ಮಾದ್ಬ್ರಹ್ಮಾऽऽತ್ಮಭೂಃ ಸ್ವಭೂಃ ॥' 'ಸ್ವ' ಎಂಬ ಶಬ್ದದಂತೆ 'ಆತ್ಮ' ಎಂಬ ಶಬ್ದವೂ ಸಹ ಮುಖ್ಯವಾಗಿ ವಿಷ್ಣುವನ್ನು ಪ್ರತಿಪಾದಿಸುತ್ತದೆ. ಉಳಿದ ಪದಾರ್ಥಗಳನ್ನು ಗೌಣವಾಗಿ ಪ್ರತಿಪಾದಿಸುತ್ತದೆ. ಆದ್ದರಿಂದಲೇ ಬ್ರಹ್ಮನಿಗೆ 'ಸ್ವಭೂಃ' ಎಂದು, 'ಆತ್ಮಭೂಃ' ಎಂದು ಕರೆಯುತ್ತಾರೆ.

ಹೀಗೆ ಪ್ರಮಾಣವಚನವಿರುವ ಪ್ರಯುಕ್ತ 'ಆತ್ಮ' ಎಂಬ ಶಬ್ದವು ವಿಷ್ಣುವಿನಲ್ಲಿ ಮುಖ್ಯವಾಗಿದೆಯೆಂಬ ಅಭಿಪ್ರಾಯದಿಂದ 'ಸ್ವಶಬ್ದಾತ್' ಎಂದು ಹೇಳಿದ್ದಾರೆ.

ಪ್ರಕಾಶಃ –

ಕೇಯಮೇವಂ ಸೂತ್ರಕಾರಸ್ಯ ವಕ್ರಾ ರೀತಿಃ ।। ಆತ್ಮಶಬ್ದಾದಿತ್ಯೇವ ಕೃತೌ ನಾಸೂತ್ರಯದಿತಿ ಭಾವೇನಾಕ್ಷಿಪ್ಯ ಸಮಾಧತ್ತೇ – ಆತ್ಮಶಬ್ದಾದಿತಿ ।।

ಸೂತ್ರಕಾರರು 'ಆತ್ಮಶಬ್ದಾತ್' ಎಂದು ಹೇಳುವ ಬದಲು, 'ಸ್ವಶಬ್ದಾತ್' ಎಂಬ ವಕ್ರಮಾರ್ಗವನ್ನೇಕೆ ಅನುಸರಿಸಿದ್ದಾರೆ. ''ದ್ಯುಭ್ವಾದ್ಯಾಯತನಮ್ ಆತ್ಮಶಬ್ದಾತ್'' ಎಂದೇ ಸೂತ್ರವನ್ನು ರಚಿಸಬಹುದಿತ್ತಲ್ಲವೇ? ಎಂಬ ಅಭಿಪ್ರಾಯದಿಂದ ಆಕ್ಷೇಪ ಮಾಡಿ, ಸಮಾಧಾನ ನೀಡುತ್ತಿದ್ದಾರೆ 'ಆತ್ಮಶಬ್ದಾತ್' ಇತ್ಯಾದಿ ವಾಕ್ಯದಿಂದ.

ಪ್ರಕಾಶಃ – ಆರ್ಜವಮಿತಿ ।। ಸ್ವೇತಿ ಶಬ್ದ ಇತಿ ವಿಗ್ರಹಾಶ್ರಯಣೇ ವಿಷಯವಾಕ್ಯೇ ತದಭಾವಾ-ಲೋಚನೇನ ತತ್ಪರ್ಯಾಯಗ್ರಹಣಸ್ಯ ದುರ್ಬೋಧತ್ವೇನ ವಕ್ರತ್ವಾದೇವಮುಕ್ತೌ ತದಭಾವಾದಾರ್ಜವಮಿತ್ಯರ್ಥಃ ।

ಗ್ರಂಥದಲ್ಲಿ 'ಆರ್ಜವಂ' ಎಂದು ಹೇಳಿದ್ದಾರೆ. ಅಂದರೆ ನೇರವಾಗಿ ತಿಳಿಯುತ್ತದೆಂದರ್ಥ. ಸೂತ್ರದಲ್ಲಿರುವ 'ಸ್ವಶಬ್ದಾತ್' ಎಂಬ ಹೇತುವಿಗೆ 'ಸ್ವ ಇತಿ ಶಬ್ದಃ' 'ಸ್ವಶಬ್ದಃ' ಎಂಬ ವಿಗ್ರಹವನ್ನು ಆಶ್ರಯಿಸಿದರೆ ವಿಷಯವಾಕ್ಯದಲ್ಲಿ 'ಸ್ವ' ಎಂಬ ಶಬ್ದವೇ ಇರುವುದಿಲ್ಲವೆಂದು ಆಲೋಚನೆ ಮಾಡಿ 'ಸ್ವ' ಎಂಬ ಶಬ್ದಕ್ಕೆ ಪರ್ಯಾಯಪದವೆನಿಸಿದ ಆತ್ಮಶಬ್ದವನ್ನು ತಿಳಿಯಬೇಕು. ಇದು ಕಷ್ಟಸಾಧ್ಯವಾದ್ದರಿಂದ ವಕ್ರವಾಗಿದೆ. ಒಂದು ವೇಳೆ 'ಆತ್ಮಶಬ್ದಾತ್' ಎಂಬುದನ್ನೇ ಹೇತು ಮಾಡಿದರೆ ವಿಷಯವಾಕ್ಯದಲ್ಲಿ ಆತ್ಮಶಬ್ದವಿರುವುದರಿಂದ ನೇರವಾಗಿ ಹೇತುವಿನ ಜ್ಞಾನ ಉಂಟಾಗುತ್ತದೆಂದರ್ಥ.

ಪ್ರಕಾಶಃ – ತ್ವತ್ಪಕ್ಷೇऽಪಿ ಶಬ್ದಗೌರವಮಿತ್ಯತ ಆಹ – ಪ್ರತಿಪತ್ತೀತಿ ।। ತರ್ಹಿ ತಲ್ಲಿಙ್ಗಾದಿತ್ಯಾದಾವಿವ ತಚ್ಛಬ್ದಾದಿತ್ಯುಕ್ತಿಸ್ಯಾದಿತ್ಯತ ಆಹ – ತಸ್ಯೇತಿ ।।

'ಆತ್ಮಶಬ್ದಾತ್' ಎಂಬುದನ್ನು ಹೇತುವನ್ನಾಗಿ ಮಾಡಿದರೆ, ಶಬ್ದಗೌರವ ಬರುತ್ತದೆ. 'ಸ್ವ' ಎಂಬ ಪದಕ್ಕಿಂತ ಹೆಚ್ಚಿನ ಅಕ್ಷರಗಳು 'ಆತ್ಮ' ಎಂಬ ಪದದಲ್ಲಿ ಇದೆಯಲ್ಲವೇ? ಎಂಬ ಪ್ರಶ್ನೆಗೆ 'ಪ್ರತಿಪತ್ತಿಲಾಘವಂಚ' ಎಂಬುದರಿಂದ ಉತ್ತರಿಸಿದ್ದಾರೆ. ಶಬ್ದಲಾಘವಕ್ಕಿಂತ ಪ್ರತಿಪತ್ತಿಲಾಘವವೇ ಉತ್ತಮವೆಂದು ಅಭಿಪ್ರಾಯ. ಹಾಗಾದರೆ 'ಸ್ವಶಬ್ದಾತ್' ಎಂದೇ ಏಕೆ ಹೇಳಬೇಕಿತ್ತು? 'ಆಕಾಶಸ್ತಲ್ಲಿಂಗಾತ್' ಎಂಬ ಸೂತ್ರದಲ್ಲಿ 'ತಲ್ಲಿಂಗಾತ್' ಎಂಬ ಪದವನ್ನು ಪ್ರಯೋಗಿಸಿದಂತೆ ಇಲ್ಲಿಯೂ ಕೂಡ 'ತಚ್ಛಬ್ದಾತ್' ಎಂದೇ ಹೇಳಬಹುದಿತ್ತಲ್ಲವೇ? ಎಂಬ ಪ್ರಶ್ನೆಗೆ 'ತಸ್ಯ' ಎಂಬ ವಾಕ್ಯದಿಂದ ಉತ್ತರಿಸಿದ್ದಾರೆ.

ಪ್ರಕಾಶಃ – अत इति ।। अन्यथा न्यासे विवक्षितासिद्धेरसाधारण्यज्ञापन-शब्दविशेषोपादानप्रयोजनरूपोभयार्थमित्यर्थः ।

ಒಂದು ವೇಳೆ 'स्वशब्दात्' ಎಂದು ಹೇಳದೆ, 'तच्छब्दात्' ಎಂಬುದಾಗಿ ಅಥವಾ 'आत्मशब्दात्' ಎಂಬುದಾಗಿ ಸೂತ್ರಕಾರರು ಹೇಳಿದ್ದರೆ, ವಿವಕ್ಷಿತವಾದ ಉದ್ದೇಶವು ಸಿದ್ಧಿಸುತ್ತಿರಲಿಲ್ಲ. ಅಂದರೆ ಆತ್ಮಶಬ್ದವು ಅಸಾಧಾರಣವಾಗಿದೆ ಎಂಬ ವಿಚಾರವಾಗಲೀ, ಅಥವಾ 'ಆತ್ಮ' ಎಂಬ ಶಬ್ದವಿಶೇಷವನ್ನೇ ಸ್ವೀಕರಿಸಬೇಕೆಂಬ ಪ್ರಯೋಜನವಾಗಲೀ ತಿಳಿಯುತ್ತಿರಲಿಲ್ಲ. ಈ ಎರಡನ್ನೂ ತಿಳಿಸುವ ಉದ್ದೇಶದಿಂದ 'स्वशब्दात्' ಎಂದು ಹೇಳಿದ್ದಾರೆ. ಇದು 'ಆತಃ' ಎಂಬ ಶಬ್ದದ ಅರ್ಥ.

ಪ್ರಕಾಶಃ – एवमुक्तौ कथमुभयस्य लाभ इत्यत आह – एवमिति ।। न केवलं स्वेतिशब्द इति विग्रह इत्यपेरर्थः ।

'स्वशब्दात्' ಎಂಬ ಪದಪ್ರಯೋಗದಿಂದ ಎರಡು ಪ್ರಯೋಜನವು ಹೇಗೆ ಲಾಭವಾಗುತ್ತದೆ? ಎಂಬ ಪ್ರಶ್ನೆಗೆ 'ಏವಮುಕ್ತೇ' ಎಂಬ ವಾಕ್ಯದಿಂದ ಉತ್ತರಿಸಿದ್ದಾರೆ. ಕೇವಲ 'स्व इति शब्दः' ಎಂಬ ಸಂಭಾವನಾ ಪೂರ್ವಪದ ಕರ್ಮಧಾರಯ ಸಮಾಸವನ್ನಷ್ಟೇ ವಿವಕ್ಷಿಸಬಾರದೆಂದು 'ಇತ್ಯಪಿ' ಎಂಬಲ್ಲಿರುವ 'ಅಪಿ' ಶಬ್ದದ ಅರ್ಥ.

ಪ್ರಕಾಶಃ – एवं विग्रहद्वयमाश्रित्यैकं समाधिमुक्त्वाऽधुना स्वेति शब्द इत्येव विग्रहः । पूर्वोक्तदिशा स्वशब्दपर्यायात्मशब्दादित्येवार्थः ।

ಆದ್ದರಿಂದ 'स्व इति शब्दः' 'स्वशब्दः' ಎಂಬ ವಿಗ್ರಹವನ್ನು ಮತ್ತು 'स्वस्य शब्दः' 'स्वशब्दः' ಎಂಬ ವಿಗ್ರಹವನ್ನು ಆಶ್ರಯಿಸಿ ಒಂದು ಸಮಾಧಾನವನ್ನು ಹೇಳಿ, ಪ್ರಕೃತ 'स्व इति शब्दः' 'स्वशब्दः' ಎಂಬ ಒಂದೇ ವಿಗ್ರಹವನ್ನಾಶ್ರಯಿಸಿದರೂ ಸಾಕು. ಹಿಂದೆ ಹೇಳಿದಂತೆ ಸ್ವಶಬ್ದಕ್ಕೆ ಪರ್ಯಾಯವಾದ 'आत्मशब्दात्' ಎಂಬ ವಿವಕ್ಷಿತ ಪ್ರಯೋಜನವು ಲಾಭವಾಗುತ್ತದೆಂದು ತಿಳಿಯಬೇಕು.

ಪ್ರಕಾಶಃ – तर्ह्यात्मशब्दादित्येव कुतो नोक्तमित्याशङ्क्य स्वशब्दादित्युक्तौ यथा स्वशब्दो विष्णौ मुख्यस्तथाऽऽत्मशब्दोऽपीत्यभिप्रायसूचनमेवमुक्तेस्सूत्रकारस्य प्रयोजनम् ।

ಹಾಗಾದರೆ ಸೂತ್ರದಲ್ಲಿ 'ಆತ್ಮಶಬ್ದಾತ್' ಎಂದೇ ಹೇಳಬೇಕಿತ್ತು. ಹಾಗೇಕೆ ಹೇಳಲಿಲ್ಲ? ಎಂದು ಆಶಂಕಿಸಿ ಹೀಗೆ ಉತ್ತರಿಸಿದ್ದಾರೆ. ಏನೆಂದರೆ 'ಸ್ವಶಬ್ದಾತ್' ಎಂದು ಹೇಳಿದ್ದರಿಂದ ದೃಷ್ಟಾಂತ-ದಾರ್ಷ್ಟಾಂತಿಕ ಭಾವವನ್ನು ಸೂತ್ರಕಾರರು ತಿಳಿಸಿದ್ದಾರೆ. ಯಾವರೀತಿಯಾಗಿ ಸ್ವಶಬ್ದವು ವಿಷ್ಣುವಿನಲ್ಲಿ ಮುಖ್ಯವಾಗಿದೆಯೋ? ಅದರಂತೆ ಆತ್ಮಶಬ್ದವೂ ಸಹ ವಿಷ್ಣುವಿನಲ್ಲಿ ಮುಖ್ಯವಾಗಿದೆಯೆಂಬ ಅಭಿಪ್ರಾಯವನ್ನು ಸೂಚಿಸುವುದೇ ಸೂತ್ರಕಾರರ ಪ್ರಯೋಗದ ಅಭಿಪ್ರಾಯ.

ಪ್ರಕಾಶಃ – अत एव छान्दोग्यभाष्ये षष्ठे स्वशब्दतुल्यस्यात्मशब्दस्य विष्णौ मुख्यत्वमाचार्यैस्समर्थितमिति भावेन पक्षान्तरमाह – अथवेति ।।

ಆದ್ದರಿಂದಲೇ ಛಾಂದೋಗ್ಯಭಾಷ್ಯದ ಆರನೇ ಅಧ್ಯಾಯದಲ್ಲಿ ಸ್ವಶಬ್ದಕ್ಕೆ ಸಮಾನವಾದ ಆತ್ಮಶಬ್ದವನ್ನು ವಿಷ್ಣುವಿನಲ್ಲೇ ಮುಖ್ಯವಾಗಿ ಸಮರ್ಥಿಸಿ ಶ್ರೀಮದಾಚಾರ್ಯರು ಪ್ರಯೋಗಿಸಿದ್ದಾರೆ. ಈ ಎಲ್ಲಾ ಅಭಿಪ್ರಾಯದಿಂದ ಮತ್ತೊಂದು ಪಕ್ಷವನ್ನು 'ಅಥವಾ' ಇತ್ಯಾದಿ ವಾಕ್ಯದಿಂದ ಗ್ರಂಥಕಾರರು ಹೇಳುತ್ತಿದ್ದಾರೆ.

ಪ್ರಕಾಶಃ – ''स्वयमेव भवतीति स्वभूः'' इति भ्रमनिरासाय विष्णोस्सकाशात् सम्भूत इत्युक्तम् । उक्तं च छान्दोग्यभाष्ये ''स्वयम्भूरिति विष्णुजत्वाद्विरिञ्च उच्यते । नहि विरिञ्चादेव विरिञ्चो जातः । यो ब्रह्माणं विदधातीति श्रुतेः । आत्मा भगवान् । ततो भूतत्वादात्मभूः'' इत्यादि । आदिपदेन ''स्वातन्त्र्यात्स्व इति प्रोक्तः'' इत्यादिवचनं गृह्यते ।

'ಸ್ವಯಮೇವ ಭವತೀತಿ ಸ್ವಭೂಃ' ತಾನೇ ಹುಟ್ಟುತ್ತಾನಾದ್ದರಿಂದ 'ಸ್ವಭೂಃ' ಎಂಬ ಪದದಿಂದ ಪ್ರತಿಪಾದ್ಯನಾಗಿದ್ದಾನೆ ಎಂಬ ಭ್ರಮೆಯನ್ನು ನಿರಾಕರಿಸುವುದಕ್ಕಾಗಿ ಗ್ರಂಥದಲ್ಲಿ 'ವಿಷ್ಣೋಃ ಸಕಾಶಾತ್ ಸಂಭೂತಃ' ಎಂದು ಹೇಳಿದ್ದಾರೆ. ಛಾಂದೋಗ್ಯಭಾಷ್ಯದಲ್ಲಿ ಹೇಳಿದ್ದನ್ನು ಇಲ್ಲಿ ಸ್ಮರಿಸಿಕೊಳ್ಳಬೇಕು - 'ಸ್ವಯಂಭೂರಿತಿ ವಿಷ್ಣುಜತ್ವಾದ್ವಿರಿಂಚ ಉಚ್ಯತೇ । ನಹಿ ವಿರಿಂಚಾದೇವ ವಿರಿಂಚೋ ಜಾತಃ । ಯೋ ಬ್ರಹ್ಮಾಣಂ ವಿದಧಾತೀತಿ ಶ್ರುತೇಃ । ಆತ್ಮಾ ಭಗವಾನ್ । ತತೋ ಭೂತತ್ವದಾತ್ಮಭೂಃ' ಎಂದರೆ 'ಸ್ವಯಂಭೂಃ' ಎಂಬ ಪದದಿಂದ ವಿಷ್ಣುವಿನಿಂದ ಹುಟ್ಟರುವ ಕಾರಣ ವಿರಿಂಚನೇ ಪ್ರತಿಪಾದ್ಯನಾಗಿದ್ದಾನೆ. ವಿರಿಂಚನು ತನ್ನಿಂದಲೇ ಹುಟ್ಟಲು ಸಾಧ್ಯವಿಲ್ಲ. 'ಯೋ ಬ್ರಹ್ಮಾಣಂ ವಿದಧಾತಿ' ಎಂಬ ಶ್ರುತಿಯ ವಿರೋಧ ಬರುತ್ತದೆ. ಆದರಂತೆ 'ಆತ್ಮಾ' ಎಂಬ ಪದಕ್ಕೆ ಭಗವಂತನೆಂದರ್ಥ. ಅವನಿಂದ ಹುಟ್ಟುವ ಕಾರಣ ಚತುರ್ಮುಖನು 'ಆತ್ಮಭೂಃ' ಎಂಬ ಪದದಿಂದಲೂ ಪ್ರತಿಪಾದ್ಯನಾಗುತ್ತಾನೆ ಎಂದು.

ಗ್ರಂಥದಲ್ಲಿ 'ಪ್ರಯೋಗಾದಿವಶಾತ್' ಎಂಬಲ್ಲಿರುವ ಆದಿಪದದಿಂದ 'ಸ್ವಾತಂತ್ರ್ಯಾತ್ ಸ್ವ ಇತಿ ಪ್ರೋಕ್ತಃ' ವಿಷ್ಣು ಸ್ವತಂತ್ರನಾದ್ದರಿಂದ ಸ್ವನೆನಿಸಿದ್ದಾನೆ. ಇತ್ಯಾದಿ ಮಾತುಗಳನ್ನು ಸ್ಮರಿಸಿಕೊಳ್ಳಬೇಕು.

ಸಾರ

ಸೂತ್ರದಲ್ಲಿ 'ಸ್ವಶ್ಚಾತ್' ಎಂದು ಹೇಳಿದ್ದಾರೆ. ವಿಷ್ಣುವಿನಲ್ಲಿ ಅಸಾಧಾರಣವಾಗಿ ಪ್ರಯೋಗಿಸಲ್ಪಟ್ಟ ಆತ್ಮಶಬ್ದವು ಪ್ರಕರಣದಲ್ಲಿ ಕೇಳಿಸುತ್ತಿರುವುದರಿಂದ ಎಂದು ಇದರ ಅರ್ಥ. ಈ ಅರ್ಥವನ್ನು ವಿವಕ್ಷಿಸುವುದಾದರೆ ಸಹಜವಾಗಿ ಶಂಕೆಯು ಉದ್ಭವಿಸುತ್ತದೆ. ಸೂತ್ರಕಾರರು 'ಆತ್ಮಶ್ಚಾತ್' ಎಂದೇ ಹೇಳಬಹುದಿತ್ತಲ್ಲವೇ? ನೇರವಾಗಿ ಇದರಿಂದ ಹೇತುವನ್ನು ತಿಳಿಸಿದಂತಾಗುತ್ತಿತ್ತು. 'ಸ್ವಶ್ಚಾತ್' ಎಂದು ಹೇಳಿದರೆ ವಿಷ್ಣುವಿಗೆ ಸಂಬಂಧಪಟ್ಟ ಶಬ್ದ ಯಾವುದೆಂದು ಮೊದಲು ವಿಮರ್ಶಿಸಿ ಅನಂತರ ಅದು ಆತ್ಮಶಬ್ದವಾಗಿದೆಯೆಂಬುದನ್ನು ಅನ್ಯಥ್ಯಾನುಪಪತ್ತಿ ಪ್ರಮಾಣದಿಂದ ತಿಳಿಯಬೇಕಾಗುತ್ತದೆ. ಇದು ವಕ್ರ ಮಾರ್ಗ. ಸೂತ್ರಕಾರರು ನೇರ ಮಾರ್ಗವನ್ನೇಕೆ ಬಿಟ್ಟರು? ವಕ್ರಮಾರ್ಗವನ್ನೇಕೆ ಹಿಡಿದರು? ಎಂದು.

ಇದು ಮಂದಮತಿಗಳಿಗೆ ಬರುವ ಪ್ರಶ್ನೆಯಷ್ಟೇ ಹೊರತು, ಇದರಲ್ಲಿ ಹುರುಳಿಲ್ಲ. 'ಸ್ವಶ್ಚಾತ್' ಎಂಬ ಶಬ್ದ ಪ್ರಯೋಗದ ಹಿಂದೆ ಬಹಳ ಅರ್ಥವನ್ನು ತುಂಬಿದ್ದಾರೆ ಸೂತ್ರಕಾರರು. 'ಆತ್ಮಾ' ಎಂಬ ಶಬ್ದವು ವಿಷ್ಣುವಿನಲ್ಲಿ ಅಸಾಧಾರಣವಾಗಿದೆ ಮತ್ತು ಈ ಶಬ್ದವಿಶೇಷವನ್ನೇ ಸ್ವೀಕರಿಸಬೇಕು ಎಂಬರಹು ವಿಚಾರಗಳನ್ನು ತಿಳಿಸುವುದಕ್ಕಾಗಿ 'ಸ್ವಶ್ಚಾತ್' ಎಂದು ಹೇಳಿರುವರು. ಒಂದು ವೇಳೆ ಆತ್ಮಶಬ್ದವನ್ನೇ ಬಾಯಿಬಿಟ್ಟು ಹೇಳಿದ್ದರೆ, ಅದು ವಿಷ್ಣುವಿನಲ್ಲಿ ಅಸಾಧಾರಣವಾಗಿದೆಯೆಂದು ತಿಳಿಯುತ್ತಿರಲಿಲ್ಲ. ಇದು ಶಬ್ದವಿಶೇಷವೆಂದೂ ಸಹ ತಿಳಿಯುತ್ತಿರಲಿಲ್ಲ. 'ಸ್ವ ಇತಿ ಶಬ್ದಃ = ಸ್ವಶಬ್ದಃ' ಎಂಬ ಕರ್ಮಧಾರಯವನ್ನು ಆಶ್ರಯಿಸಿದಾಗ ಶಬ್ದವಿಶೇಷವನ್ನೇ ಸ್ವೀಕರಿಸಬೇಕೆಂಬ ಪ್ರಯೋಜನವು ಲಾಭವಾಗುತ್ತದೆ. 'ಸ್ವಸ್ಯ ಶಬ್ದಃ' 'ಸ್ವಶಬ್ದಃ' ಎಂಬ ಷಷ್ಠೀತತ್ಪುರುಷವನ್ನು ಆಶ್ರಯಿಸಿದಾಗ ವಿಷ್ಣುವಿನ ಅಸಾಧಾರಣ ಶಬ್ದವಾಗಿದೆಯೆಂದು ತಿಳಿಯುತ್ತದೆ. 'ಆತ್ಮಶ್ಚಾತ್' ಎಂಬ ಪದಪ್ರಯೋಗದಿಂದ ಈ ಎರಡು ಸಮಾಸಗಳೂ ತಿಳಿಯಲು ಸಾಧ್ಯವಿರಲಿಲ್ಲ. ಈ ಎರಡು ಸಮಾಸಗಳಿಂದ ತಿಳಿಯುವ ಪ್ರಮೇಯವೂ ಸಹ ಸಿದ್ಧವಾಗುತ್ತಿರಲಿಲ್ಲ.

ಅಥವಾ ಸ್ವಶಬ್ದವನ್ನು ದೃಷ್ಟಾಂತವನ್ನು ತಿಳಿಯಬಹುದು. ಲೋಕದಲ್ಲಿ ೧. ತಾನು, ೨. ದುಡ್ಡು, ೩. ಬಂಧು ಮೊದಲಾದ ಅರ್ಥಗಳಲ್ಲಿ ಸ್ವ ಎಂಬ ಶಬ್ದವನ್ನು ಪ್ರಯೋಗಿಸುವುದು ಕಂಡಿದೆ. ಆದರೂ ಸಹ ಚತುರ್ಮುಖನನ್ನು 'ಸ್ವಭೂಃ' ಎಂದು ಕರೆಯಲಾಗುತ್ತದೆ. ಏಕೆಂದರೆ 'ಸ್ವ' ಎನಿಸಿದ ಭಗವಂತನಿಂದ ಹುಟ್ಟಿದ್ದವನಾದ್ದರಿಂದ. ಇದರಿಂದ 'ಸ್ವ' ಶಬ್ದವು ಶ್ರೀಹರಿಯಲ್ಲೇ ಮುಖ್ಯವಾಗಿದೆಯೆಂದು ತಿಳಿಯುತ್ತದೆ. ಆದರಂತೆ ಆತ್ಮಶಬ್ದವನ್ನೂ ಲೋಕದಲ್ಲಿ ಬೇರೆಡೆ ಪ್ರಯೋಗಿಸಬಹುದು. ಆದರೆ ಚತುರ್ಮುಖನನ್ನೇ 'ಆತ್ಮಭೂಃ' ಎಂದೂ ಸಹ ಕರೆಯುತ್ತಾರೆ. ಹಾಗಾದರೆ ಆತ್ಮಶಬ್ದಕ್ಕೆ ಮುಖ್ಯಪ್ರತಿಪಾದ್ಯನು ವಿಷ್ಣುವೇ ಆಗಿದ್ದಾನೆಂದು ಅರ್ಥೈಸಬೇಕು. ಹೀಗೆ ಸ್ವಶಬ್ದವು ಹೇಗೆ ವಿಷ್ಣುವನ್ನೇ ಮುಖ್ಯವಾಗಿ ಪ್ರತಿಪಾದಿಸುತ್ತದೋ? ಆದರಂತೆ ಆತ್ಮಶಬ್ದವೂ ಸಹ ವಿಷ್ಣುವನ್ನೇ ಮುಖ್ಯವಾಗಿ ಪ್ರತಿಪಾದಿಸುತ್ತದೆಂಬ ಇತ್ಯಾದಿ ವಿಚಾರಗಳನ್ನು ಸೂತ್ರಕಾರರು ಇಲ್ಲಿ ಸೆರೆಹಿಡಿದಿದ್ದಾರೆ.

● ● ● ● ●

ಮುಕ್ತೋಪಸೃಪ್ಯತ್ವವೆಂಬ ಎರಡನೆಯ ಸೂತ್ರದ ಸ್ಥಾನಮಾನ

तात्पर्यचन्द्रिका

द्वितीये विषयवाक्यात्किञ्चिद्व्यवहितलिङ्गरूपसाधकोक्तिः ।

ಅನುವಾದ - 'ಮುಕ್ತೋಪಸೃಪ್ಯ ವ್ಯಪದೇಶಾತ್' ಎಂಬ ಎರಡನೆಯ ಸೂತ್ರವು ವಿಷಯವಾಕ್ಯಕ್ಕಿಂತ ಸ್ವಲ್ಪವೇ ವ್ಯವಹಿತವಾದ ಲಿಂಗವೆಂಬ ಸಾಧಕ ಪ್ರಮಾಣವನ್ನು ಹೇಳುತ್ತಿದೆ. ವಿಷಯವಾಕ್ಯಕ್ಕೆ ಹತ್ತಿರವಿರುವ ಮುಕ್ತೋಪಸೃಪ್ಯತ್ವವೆಂಬ ಲಿಂಗವನ್ನು ಹೇಳುತ್ತಿರುವ ಪ್ರಯುಕ್ತ ಮೊದಲನೆಯ ಸೂತ್ರದ ಅನಂತರ ಈ ಸೂತ್ರವು ಹೊರಟಿದ್ದು ಅರ್ಥಪೂರ್ಣವಾಗಿದೆ.

अत्र च टीकोक्तरीत्या जायमानत्वलिङ्गेनात्मश्रुतेर्गौणत्वमस्त्विति शङ्कानिरासात्ततः प्राक् स्वातन्त्र्येण हेत्वन्तरपरत्वाभावाच्चशब्दाभावः ।

ದ್ಯುಭ್ವಾದ್ಯಾಯತನನಾಗಿರುವವನು ವಿಷ್ಣುವೇ ಆಗಿದ್ದಾನೆನ್ನಲು ಪ್ರಥಮಸೂತ್ರದಲ್ಲಿ ಆತ್ಮಶಬ್ದವನ್ನು ಆಧಾರವನ್ನಾಗಿ ಹೇಳಿದರು. ಅದೇ ವಿಷಯದಲ್ಲಿ ಮುಕ್ತೋಪಸೃಪ್ಯತ್ವವೆಂಬ ಲಿಂಗವನ್ನು ಈ ಸೂತ್ರವು ಹೇಳುತ್ತಿರುವ ಕಾರಣ ಸೂತ್ರದಲ್ಲಿ 'ಚ' ಶಬ್ದವನ್ನು ಹೇಳಬೇಕಿತ್ತಲ್ಲವೇ? ಎಂದು ಪ್ರಶ್ನಿಸಬಾರದು. ಏಕೆಂದರೆ ಟೀಕೆಯಲ್ಲಿ ಹೇಳಿದ ಪ್ರಕಾರ ಪ್ರಥಮಸೂತ್ರದಲ್ಲಿ ಆತ್ಮಶ್ರುತಿಯನ್ನು ಆಧಾರವನ್ನಾಗಿ ಹೇಳಿದಮೇಲೆ ಜಾಯಮಾನತ್ವವೆಂಬ ನಿರವಕಾಶಲಿಂಗದಿಂದ ಜೀವನಲ್ಲಿ ಆತ್ಮಶಬ್ದವನ್ನು ಆಕ್ಷೇಪಿಸಲಾಗಿದೆ. ಆ ಆಕ್ಷೇಪವನ್ನು ನಿರಾಕರಿಸುವುದಕ್ಕೋಸ್ಕರ ಈ ಸೂತ್ರವು ಹೊರಡುತ್ತಿದೆ. ಆಂದರೆ ಪ್ರಥಮಸೂತ್ರದ ಮೇಲೆ ಬರುವ ಆಕ್ಷೇಪದ ನಿರಾಕರಣೆಗಾಗಿ ಈ ಸೂತ್ರ ಹೊರಟಿರುವುದರಿಂದ ಚ ಶಬ್ದದ ಆವಶ್ಯಕತೆ ಇರುವುದಿಲ್ಲ. ಜಾಯಮಾನತ್ವವೆಂಬ ಲಿಂಗದಿಂದ ಬರುವ ಆಕ್ಷೇಪಕ್ಕಿಂತ ಮೊದಲು ಈ ಸೂತ್ರ ಸ್ವತಂತ್ರವಾಗಿ ಹೊರಡಲು ಸಾಧ್ಯವಿಲ್ಲ.

इहोपसृप्यत्वं श्रौतसेतुशब्दात् 'प्राप्यान्तररहितत्वे सति प्राप्यत्वम्' । न त्वर्चिरादिवत्प्राप्यत्वमात्रम् ।

ಸೂತ್ರದಲ್ಲಿರುವ 'ಉಪಸೃಪ್ಯತ್ವ' ಎಂಬ ಹೇತುವಿಗೆ ಶ್ರುತಿಯಲ್ಲಿರುವ ಸೇತು ಶಬ್ದದಿಂದ 'ಪ್ರಾಪ್ಯಾಂತರರಹಿತತ್ವೇ ಸತಿ ಪ್ರಾಪ್ಯತ್ವಮ್' ಎಂಬರ್ಥವನ್ನು ಹೇಳಿದಂತಾಗುತ್ತದೆ. ಹೀಗೆ ಹೇಳದಿದ್ದರೆ ಮುಕ್ತಿಯನ್ನು ಕುರಿತು ಹೊರಡುವ ವ್ಯಕ್ತಿಯು ಅರ್ಚಿರ್ಲೋಕ, ಅಹರ್ಲೋಕ ಇವುಗಳ ಮಾರ್ಗದಲ್ಲಿ ಹೋಗುವುದರಿಂದ ಆಯಾ ಲೋಕಗಳ ಅಭಿಮಾನಿ ದೇವತೆಗಳಲ್ಲಿಯೂ ಮುಕ್ತಪ್ರಾಪ್ಯತ್ವವು ಬರಬೇಕಾಗುತ್ತದೆ. ಆದ್ದರಿಂದ ಶ್ರುತಿಯಲ್ಲಿರುವ ಸೇತು ಶಬ್ದದಿಂದ ಮತ್ತೊಬ್ಬರು ಪ್ರಾಪ್ಯರಿರಬಾರದು

ಮತ್ತು ಪ್ರಾಪ್ಯನಾಗಿರಬೇಕೆಂಬ ಅರ್ಥವನ್ನು ವಿವಕ್ಷಿಸಬೇಕು. ಈಗ ವಿಷ್ಣುವನ್ನು ಹೊಂದಿದ ಮೇಲೆ ಬೇರೆ ಯಾರನ್ನೂ ಸಹ ಹೊಂದದ ಕಾರಣ ಮುಕ್ತಪ್ರಾಪ್ಯತ್ವವು ವಿಷ್ಣುವಿನಲ್ಲಿ ಮಾತ್ರ ಬರುತ್ತದೆ.

अत एव भाष्ये ''अमृतस्यैष सेतुः'' इति वाक्यमेवोदाहृतम् । नतु ''परात्परं पुरुषमुपैति'' इति वाक्यमिति न कश्चिद्दोषः ।

ಆದ್ದರಿಂದಲೇ ಶ್ರೀಮದಾಚಾರ್ಯರು ಭಾಷ್ಯದಲ್ಲಿ 'ಅಮೃತಸ್ಯೈಷ ಸೇತುಃ' ಎಂಬ ಸೇತುಪದ ಘಟಿತವಾಗಿರುವಂತಹ ವಿಷಯವಾಕ್ಯವನ್ನೇ ಉದಾಹರಿಸಿದ್ದಾರೆ ಹೊರತು, 'ಪರಾತ್ಪರಂ ಪುರುಷಮುಪೈತಿ' ಎಂಬ ವಾಕ್ಯವನ್ನು ಉದಾಹರಿಸಿಲ್ಲ. ಏಕೆಂದರೆ ಸೇತು ಪದವು ಯಾವ ಅರ್ಥವನ್ನು ಹೇಳುತ್ತಿದೆಯೋ? ಆ ಅರ್ಥವನ್ನು ಇಲ್ಲಿರುವ 'ಉಪೈತಿ' ಎಂಬ ಪದವು ಹೇಳುತ್ತಿಲ್ಲ. ಆದ್ದರಿಂದ ಮುಕ್ತೋಪಸೃಪ್ಯತ್ವವೆಂಬ ಲಿಂಗಕ್ಕೆ ವ್ಯಭಿಚಾರಾದಿ ದೋಷಗಳು ಬರುವುದಿಲ್ಲ.

प्रकाशः –

द्वितीय इति ।। ''मुक्तोपसृप्यव्यपदेशात्'' इत्यत्र ''अमृतस्यैष सेतुः'' इत्यमृतशब्दितमुक्तवर्गाश्रयत्वरूपलिङ्गोक्तिरित्यर्थः ।

ವಿವರಣೆ - 'ದ್ವಿತೀಯೇ' ಎಂಬ ಪ್ರತೀಕದ ಅಭಿಪ್ರಾಯ ಹೀಗೆ - 'ಮುಕ್ತೋಪಸೃಪ್ಯವ್ಯಪದೇಶಾತ್' ಎಂಬುದು ಎರಡನೆಯ ಸೂತ್ರ. ಈ ಸೂತ್ರದಲ್ಲಿ 'ಅಮೃತಸ್ಯೈಷ ಸೇತುಃ' ಎಂಬ ಶ್ರುತಿಯಲ್ಲಿ ಅಮೃತಶಬ್ದದಿಂದ ವಾಚ್ಯರಾದ ಮುಕ್ತರಿಗೆ ಆಶ್ರಯವಾಗಿರುವಿಕೆಯೆಂಬ ಲಿಂಗವನ್ನು ಹೇಳಲಾಗಿದೆ. ಇದು ವಿಷಯವಾಕ್ಯಕ್ಕಿಂತ ಸ್ವಲ್ಪ ಹತ್ತಿರದಲ್ಲಿರುವ ಪ್ರಯುಕ್ತ ಎರಡನೆಯ ಸ್ಥಾನವನ್ನು ಈ ಸೂತ್ರವು ಹೊಂದಿದೆ.

प्रकाशः – मुक्तोपसृप्येति भावप्रधानः । ''द्वेकयोर्द्विवचनैकवचने'' इत्यत्र पाणिनीये 'द्व्येकयोः' इत्यत्रैव ।

ಸೂತ್ರದಲ್ಲಿ ಮುಕ್ತೋಪಸೃಪ್ಯ ಎಂಬ ಪದವು ಭಾವಪ್ರಧಾನದಿಂದ ನಿರ್ದೇಶಿಸಲ್ಪಟ್ಟಿದೆ. ಆದ್ದರಿಂದ 'ಮುಕ್ತೋಪಸೃಪ್ಯತ್ವ ವ್ಯಪದೇಶಾತ್' = ಮುಕ್ತೋಪಸೃಪ್ಯತ್ವವೆಂಬ ಲಿಂಗವನ್ನು ಹೇಳಿರುವುದರಿಂದ ಎಂಬರ್ಥವನ್ನು ವಿವಕ್ಷಿಸಬೇಕು. ಉದಾಹರಣೆ - 'ದ್ವ್ಯೇಕಯೋರ್ದ್ವಿವಚನೈಕವಚನೇ' ಎಂಬ ಪಾಣಿನೀಯ ಸೂತ್ರದಲ್ಲಿ 'ದ್ವಿ' ಹಾಗೂ 'ಏಕ' ಶಬ್ದಗಳಿಂದ ಧರ್ಮಿಯನ್ನು ವಿವಕ್ಷಿಸಬಾರದು. ಹಾಗೇನಾದರು ವಿವಕ್ಷಿಸಿದರೆ 'ದ್ವಿ' ಎಂಬ ಪದವು ಎರಡು ಧರ್ಮಿಯನ್ನು ಹೇಳುತ್ತದೆ. ಮತ್ತು 'ಏಕ' ಶಬ್ದವು ಒಂದು ಧರ್ಮಿಯನ್ನು ಹೇಳುತ್ತದೆ ಎಂದಾದಾಗ ಬಹುತ್ವವು ಬಂದಂತಾಯಿತು. ಆವಾಗ 'ದ್ವ್ಯೇಕೇಷಾಂ' ಎಂಬುದಾಗಿ ಬಹುವಚನವನ್ನು ಪಾಣಿನಿಯು ಪ್ರಯೋಗಿಸಬೇಕಿತ್ತು. ಆದರೆ 'ದ್ವ್ಯೇಕಯೋಃ' ಎಂಬ ದ್ವಿವಚನವನ್ನು ಪ್ರಯೋಗಿಸಿದ್ದರಿಂದ ಭಾವಪ್ರಧಾನದಿಂದ ನಿರ್ದೇಶಿಸಲ್ಪಟ್ಟಿದೆಯೆಂದು ತಿಳಿಯುತ್ತದೆ. ಅಂದರೆ ದ್ವಿತ್ವ ಹಾಗೂ ಏಕತ್ವಗಳು ವಿವಕ್ಷಿತವಾದಾಗ ದ್ವಿವಚನ ಹಾಗೂ ಏಕವಚನಸಂಜ್ಞೆಗಳು ಬರುತ್ತವೆಂದು ಅಭಿಪ್ರಾಯ

ಪಟ್ಟರುತ್ತಾನೆ. ಧರ್ಮಿಗಳು ಅನೇಕವಾಗಿದ್ದರೂ ದ್ವಿತ್ವ ಹಾಗೂ ಏಕತ್ವವೆಂಬ ಎರಡೇ ಧರ್ಮಗಳಿರುವ ಪ್ರಯುಕ್ತ ದ್ವಿವಚನ ಪ್ರಯೋಗವು ಸಾಧುವಾಗುತ್ತದೆ. ಆದರಂತೆ ಪ್ರಕೃತ ಸೂತ್ರದಲ್ಲಿಯೂ ಮುಕ್ತೋಪಸೃಪ್ಯ ಎಂಬ ಪದವನ್ನು ಭಾವಪ್ರಧಾನ ನಿರ್ದೇಶ ಮಾಡಬೇಕು.

ಪ್ರಕಾಶಃ – ಲಿಙ್ಗೋಕ್ತಿಪರತ್ವೇ ಸ್ವಶಬ್ದಾದಿತಿ ಹೇತುಸಮುಚ್ಚಾಯಕಚಶಬ್ದಸ್ಯಾದಿತ್ಯತ ಆಹ – ಅತ್ರ ಚೇತಿ ।। ತತಃ ಪ್ರಾಕ್ ಗೌಣತ್ವಶಙ್ಕಾನಿರಾಸಾತ್ಪ್ರಾಕ್ ।

ಈ ಸೂತ್ರವು ಮುಕ್ತೋಪಸೃಪ್ಯತ್ವವೆಂಬ ಲಿಂಗವನ್ನು ಪ್ರಸ್ತಾಪ ಮಾಡುತ್ತಿದೆಯೆಂದು ಹೇಳಿದಿರಿ. ಹಾಗಾದರೆ ಪ್ರಥಮ ಸೂತ್ರವು ವಿಷ್ಣುವೇ ದ್ಯುಭ್ವಾದ್ಯಾಯತನನಾಗಿದ್ದಾನೆನ್ನಲು ಆತ್ಮಶಬ್ದವೆಂಬ ಹೇತುವನ್ನು ಹೇಳಿದೆ. ಈ ಸೂತ್ರವು ಅದೇ ವಿಷಯದಲ್ಲಿ ಲಿಂಗವನ್ನು ಹೇಳುತ್ತಿದೆಯೆಂದು ಅಭಿಪ್ರಾಯಪಡುವುದಾದರೆ ಹೇತುಸಮುಚ್ಚಾಯಕವಾದ ಚ ಶಬ್ದವನ್ನು ಸೂತ್ರಕಾರರು ಬಳಸಬೇಕಿತ್ತು. 'ಮುಕ್ತೋಪಸೃಪ್ಯವ್ಯಪದೇಶಾತ್' ಎನ್ನುವ ಬದಲು ಮುಕ್ತೋಪಸೃಪ್ಯವ್ಯಪದೇಶಾಚ್ಚ' ಎಂದು ಹೇಳಬೇಕಿತ್ತಲ್ಲವೇ? ಎಂಬ ಪ್ರಶ್ನೆಗೆ 'ಆತ್ರಚ' ಎಂಬ ವಾಕ್ಯದಿಂದ ಉತ್ತರಿಸಿದ್ದಾರೆ. 'ತತಃ ಪ್ರಾಕ್' ಎಂದರೆ ಗೌಣತ್ವ ಶಂಕೆಯನ್ನು ನಿರಾಕರಿಸುವ ಮೊದಲು ಎಂದರ್ಥ.

ಪ್ರಕಾಶಃ – ನನ್ವಯಂ ಯೋಗಶಕ್ಯೋऽವಕ್ತುಮ್ । ''ತನ್ನಿಷ್ಠಸ್ಯ ಮೋಕ್ಷೋಪದೇಶಾತ್ । ಹೇಯತ್ವಾವಚನಾಚ್ಚ'' ಇತ್ಯತ್ರೈವ ''ತಮೇವೈಕಂ ಜಾನಥಾऽತ್ಮಾನಮ್'' ಇತ್ಯುಕ್ತಾತ್ಮಶಬ್ದಸ್ಯ ವಿಷ್ಣೌ ಮುಖ್ಯತಾಯಾಸ್ತಾತ್ಪರ್ಯಸ್ಯ ಚ ಸಿದ್ಧೇಃ । ತಥೈವ ತತ್ರ ಟೀಕಾದೌ ಭಾನಾತ್ ।

ಆಕ್ಷೇಪ - 'ಮುಕ್ತೋಪಸೃಪ್ಯವ್ಯಪದೇಶಾತ್' ಎಂಬ ಸೂತ್ರವನ್ನು ರಚಿಸಿ ಮಾಡುವ ಆವಶ್ಯಕತೆಯೇ ಇಲ್ಲ. ಈ ಸೂತ್ರವು ಮುಕ್ತೋಪಸೃಪ್ಯತ್ವವೆಂಬ ಲಿಂಗದಿಂದ ಆತ್ಮಶಬ್ದವನ್ನು ವಿಷ್ಣುವಿನಲ್ಲಿ ಸಮರ್ಥನೆ ಮಾಡುತ್ತಿದೆಯೆಂದು ಹೇಳಿದಿರಿ. ಆದರೆ ಆನಂದಮಯಾಧಿಕರಣದಲ್ಲಿರುವ 'ತನ್ನಿಷ್ಠಸ್ಯ ಮೋಕ್ಷೋಪದೇಶಾತ್' ಎಂಬ ಸೂತ್ರದಲ್ಲಿ, ಮತ್ತು 'ಹೇಯತ್ವಾವಚನಾಚ್ಚ' ಎಂಬ ಸೂತ್ರದಲ್ಲಿಯೂ ಇದೇ ವಿಚಾರವು ಪ್ರಸಕ್ತವಾಗಿದೆ. 'ತಮೇವೈಕಂ ಜಾನಥಾऽತ್ಮಾನಮ್' ಎಂಬ ಶ್ರುತಿಯಲ್ಲಿರುವ ಆತ್ಮಶಬ್ದವು ಮುಖ್ಯವಾಗಿ ವಿಷ್ಣುವನ್ನೇ ಪ್ರತಿಪಾದಿಸುತ್ತದೆ. ಅವನಲ್ಲೇ ತಾತ್ಪರ್ಯವನ್ನು ಹೊಂದಿದೆಯೆಂದು ಅಲ್ಲಿ ಸಾಧಿಸಿದ್ದಾರೆ. ಆ ಸೂತ್ರಗಳ ಟೀಕೆಯಲ್ಲಿ ಹಾಗೆಯೇ ವ್ಯಾಖ್ಯಾನವೂ ಸಹ ಕಾಣಿಸುತ್ತದೆ.

ಪ್ರಕಾಶಃ – ನಚ ತತ್ರ ''ಜಾನಥಾऽತ್ಮಾನಮನ್ಯಾ ವಾಚೋ ವಿಮುञ्चಥ'' ಇತಿ ಹೇಯತ್ವಾವಚನಾ-ಹೇಯತ್ವವಚನಾನ್ಯಹೇಯತ್ವವಚನೈರೇವ ವೈಷ್ಣವತ್ವಮಾತ್ಮಶಬ್ದಸ್ಯೋಕ್ತಮ್ । ಅತ್ರ ತು ಮುಕ್ತೋಪಸೃಪ್ಯತ್ವಲಿಙ್ಗೇನೇತಿ ವಾಚ್ಯಮ್ ।

ಇನ್ನು ಆನಂದಮಯಾಧಿಕರಣದ ಸೂತ್ರಗಳಲ್ಲಿ 'ಜಾನಥಾऽತ್ಮಾನಮನ್ಯಾ ವಾಚೋ ವಿಮುಂಚಥ' ಎಂಬ ಶ್ರುತಿಯಲ್ಲಿ ಹೇಯತ್ವ ಅವಚನ, ಅಹೇಯತ್ವದ ವಚನ, ಅನ್ಯಹೇಯತ್ವ ವಚನಗಳಿಂದಲೇ ಆತ್ಮಶಬ್ದವು ವಿಷ್ಣು

ಪ್ರತಿಪಾದಕವಾಗಿದೆಯೆಂದು ಆನಂದಮಯಾಧಿಕರಣದ ಸೂತ್ರಗಳಲ್ಲಿ ಹೇಳಿದ್ದಾರೆ. ಆದರೆ ಇಲ್ಲಿ ಮುಕ್ತೋಪಸೃಪ್ಯತ್ವವೆಂಬ ಲಿಂಗದಿಂದ ಆತ್ಮಶಬ್ದವನ್ನು ವಿಷ್ಣುವಿನಲ್ಲಿ ಹೇಳುತ್ತಿದ್ದಾರೆ. ಹೀಗೆ ವ್ಯತ್ಯಾಸವಿದೆಯಲ್ಲವೇ? ಎಂದು ಪ್ರಶ್ನಿಸಬಾರದು.

ಪ್ರಕಾಶಃ – ತತ್ರಾಪಿ ಭಾಷ್ಯೇ ''ಅಮೃತಸ್ಯೈಷ ಸೇತುಃ'' ಇತ್ಯನ್ತಸ್ಯೋದಾಹರಣಾತ್ । ಟೀಕಾಯಾಮ್ ''ಆತ್ಮಶಬ್ದೋ ಮೋಕ್ಷದಾತೃತ್ವಾಹೇಯತ್ವಾಭ್ಯಾಂ ನಿರ್ಗುಣಲಿಙ್ಗಾಭ್ಯಾಮಪಹಿಯತೇ'' ಇತ್ಯುಕ್ತೇಸ್ತನ್ನಿಷ್ಠಸೂತ್ರವಿಷಯತ್ವಸಮ್ಭವಾಚ್ಚ ।

ಆ ಸೂತ್ರಗಳ ಭಾಷ್ಯದಲ್ಲಿಯೂ 'ಅನ್ಯಾವಾಚೋ ವಿಮುಂಚಥ' ಎಂದಷ್ಟೇ ವಿಷಯವಾಕ್ಯವನ್ನು ಹೇಳದೆ ಮುಂದಿರುವ 'ಆಮೃತಸ್ಯೈಷ ಸೇತುಃ' ಎಂಬಲ್ಲಿಯ ತನಕ ವಿಷಯವಾಕ್ಯವನ್ನು ಉದಾಹರಿಸಿದ್ದಾರೆ. ಇದರಿಂದ ಮುಕ್ತೋಪಸೃಪ್ಯತ್ವವೆಂಬ ಲಿಂಗದ ಬಲದಿಂದಲೂ ಆತ್ಮಶಬ್ದವು ವಿಷ್ಣುಪರವಾಗಿರುತ್ತದೆಂದು ಭಾಷ್ಯಕಾರರು ಅಭಿಪ್ರಾಯ ಪಟ್ಟಿದ್ದಾರೆ. ಆದ್ದರಿಂದಲೇ ಟೀಕೆಯಲ್ಲಿ 'ಆತ್ಮಶಬ್ದೋ ಮೋಕ್ಷದಾತೃತ್ವಾಹೇಯತ್ವಾಭ್ಯಾಂ ನಿರ್ಗುಣಲಿಂಗಾಭ್ಯಾಮಪಹ್ರಿಯತೇ' ಆತ್ಮಶಬ್ದವು ಮೋಕ್ಷದಾತೃತ್ವ ಹಾಗೂ ಅಹೇಯತ್ವಗಳೆಂಬ ನಿರ್ಗುಣನ ಲಿಂಗಗಳಿಂದ ಬೇರೆ ಕಡೆ ಬರುವುದಿಲ್ಲವೆಂದು ಹೇಳಿರುತ್ತಾರೆ. ಹಾಗೂ 'ತನ್ನಿಷ್ಠಸ್ಯ ಮೋಕ್ಷೋಪದೇಶಾತ್' ಎಂಬ ಸೂತ್ರದಲ್ಲೂ ಸ್ಪಷ್ಟವಾಗಿ ಮುಕ್ತೋಪಸೃಪ್ಯತ್ವವನ್ನು ಹೇತುವನ್ನಾಗಿ ವಿವಕ್ಷಿಸಿದ್ದಾರೆ. ಹೀಗಿರುವಾಗ ಈ ಸೂತ್ರವು ವ್ಯರ್ಥವಲ್ಲವೇ?

ಪ್ರಕಾಶಃ – ಮೈವಮ್ । ತತ್ರಾತ್ಮಶಬ್ದಸ್ಯ ಜೀವೇ ಮುಖ್ಯತ್ವಮಾಶಙ್ಕ್ಯ ತನ್ನಿಷ್ಠಸ್ಯ ಮೋಕ್ಷೋಪದೇಶಾದಿನಾ ತನ್ನಿರಾಸಃ । ಅತ್ರ ತು ವಿಷ್ಣೌ ಮುಖ್ಯೋऽಪ್ಯಾತ್ಮಶಬ್ದೋऽತ್ರ ಪ್ರಕರಣೇ ಜಾಯಮಾನತ್ವರೂಪನಿರವಕಾಶಜೀವಲಿಙ್ಗಾದಮುಖ್ಯಾರ್ಥಃ ಕಿಂ ನ ಸ್ಯಾದಿತಿ ಶಙ್ಕಾಯಾಂ ಮುಕ್ತೋಪಸೃಪ್ಯತ್ವಲಿಙ್ಗೇನ ತದುದ್ಧಾರಃ । ಹೇಯತ್ವಾವಚನಾದೇರಪ್ಯುಪಲಕ್ಷಣಮೇತತ್ ।

ಸಮಾಧಾನ - ಆನಂದಮಯಾಧಿಕರಣದಲ್ಲಿರುವ ಸೂತ್ರಗಳಿಗೂ ಇಲ್ಲಿಗೂ ವ್ಯತ್ಯಾಸವಿದೆ. ಆತ್ಮಶಬ್ದವು ಜೀವನನ್ನು ಮುಖ್ಯವಾಗಿ ಪ್ರತಿಪಾದಿಸಬಹುದಲ್ಲವೇ? ಎಂಬ ಆಶಂಕೆಗೆ 'ತನ್ನಿಷ್ಠಸ್ಯ ಮೋಕ್ಷೋಪದೇಶಾತ್' 'ಹೇಯತ್ವಾವಚನಾಚ್ಚ' ಎಂಬೆರಡು ಸೂತ್ರಗಳಿಂದ ಅದನ್ನು ನಿರಾಕರಿಸಿದ್ದಾರೆ. ಆದರೆ ಇಲ್ಲಿರುವ ಮುಕ್ತೋಪಸೃಪ್ಯತ್ವಾತ್ ಎಂಬ ಸೂತ್ರದಲ್ಲಿ ವಿಷ್ಣುವಿನಲ್ಲಿ ಆತ್ಮಶಬ್ದವು ಮುಖ್ಯವಾಗಿದ್ದರೂ ಸಹ ಪ್ರಕರಣದಲ್ಲಿ ಜಾಯಮಾನತ್ವವೆಂಬ ನಿರವಕಾಶವಾದ ಜೀವಲಿಂಗವು ಕೇಳಿಸುತ್ತಿದೆ. ಆದ್ದರಿಂದ ಅಮುಖ್ಯಾರ್ಥವನ್ನೇಕೆ ಸ್ವೀಕರಿಸಬಾರದು ಎಂಬ ಆಕ್ಷೇಪಕ್ಕೆ ಮುಕ್ತೋಪಸೃಪ್ಯತ್ವಲಿಂಗದಿಂದ ಉತ್ತರಿಸಿದ್ದಾರೆ. ಹೇಯತ್ವಾವಚನಾದಿಗಳನ್ನು ಇಲ್ಲಿಯೂ ಸಹ ಉಪಲಕ್ಷಣವಾಗಿ ಇಟ್ಟುಕೊಳ್ಳಬೇಕು. ಅಂದರೆ 'ತನ್ನಿಷ್ಠಸ್ಯ' ಎಂಬ ಸೂತ್ರದಲ್ಲಾಗಲೀ, ಈ ಸೂತ್ರದಲ್ಲಾಗಲೀ, ಉತ್ತರ ಒಂದೇ ಆಗಿದ್ದರೂ ಆಕ್ಷೇಪಗಳು ಭಿನ್ನಭಿನ್ನವಾದ್ದರಿಂದ ಪುನರುಕ್ತಿ ದೋಷ ಬರುವುದಿಲ್ಲವೆಂದು ತಿಳಿಯಬೇಕು.

ಪ್ರಕಾಶಃ – ನನು ಚೈವಂ ಯೈರ್ಲಿಙ್ಗೈಃ ಪೂರ್ವಮಾತ್ಮಶಬ್ದಸ್ಯ ವೈಷ್ಣವತ್ವಂ ಸಾಧಿತಂ ತೇಷು ಜಾಗ್ರತ್ಸ್ವೇವ ನಿರವಕಾಶಜೀವಲಿಙ್ಗೇನಾಮುಖ್ಯವೃತ್ತ್ಯಾऽವೈಷ್ಣವತ್ವೇ ಶಙ್ಕಿತೇ ಕಥಂ ತೈರೇವ ಶಙ್ಕಾನಿರಾಸ ಇತಿ ಚೇತ್ ।

ಆಕ್ಷೇಪ - ಹಾಗಾದರೆ ಯಾವ ಲಿಂಗಗಳಿಂದ ಹಿಂದೆ ಆನಂದಮಯಾಧಿಕರಣದಲ್ಲಿ ಆತ್ಮಶಬ್ದವು ವಿಷ್ಣುಪರವಾಗಿದೆಯೆಂದು ಸಾಧಿಸಿದರೋ? ಆ ಲಿಂಗಗಳು ಈಗಲೂ ಸಹ ಎಚ್ಚರವಾಗಿರುವುದರಿಂದ ನಿರವಕಾಶವಾದ ಜೀವಲಿಂಗದಿಂದ ಅಮುಖ್ಯವೃತ್ತಿಯಿಂದ ಅನ್ಯಪರವಾಗಲಿ ಎಂದು ಹೇಗೆ ಆಕ್ಷೇಪಿಸುತ್ತೀರಿ? ಅಷ್ಟೇ ಅಲ್ಲದೇ ಆ ಸೂತ್ರಗಳಲ್ಲಿ ಹೇಳಲ್ಪಟ್ಟ ಹೇತುಗಳಿಂದಲೇ ಶಂಕೆಯನ್ನಾದರೂ ಹೇಗೆ ನಿರಾಕರಿಸುತ್ತೀರಿ?

ಪ್ರಕಾಶಃ – ಸತ್ಯಮ್ ತಸ್ಯಾಗ್ರೇ ''ಅತಶ್ಚಬ್ದಾತ್ । ಪ್ರಾಣಭೃಚ್'' ಇತ್ಯತ್ರ ಸಾವಕಾಶಯಿಷ್ಯಮಾಣತ್ವಂ ಮುಕ್ತೋಪಸೃಪ್ಯತ್ವಾದೇಸ್ತು ನಿರವಕಾಶತ್ವಮಿತಿ ಭಾವೇನ ''ಮುಕ್ತೋಪಸೃಪ್ಯವ್ಯಪದೇಶಾತ್'' ಇತ್ಯುಕ್ತಿರಿತಿ ನ ಕೋऽಪಿ ದೋಷಃ ।

ಸಮಾಧಾನ - ಹೌದು, ಜಾಯಮಾನತ್ವವೆಂಬ ನಿರವಕಾಶಲಿಂಗವನ್ನು ಮುಂದೆ 'ಅತಶ್ಚಬ್ದಾತ್' 'ಪ್ರಾಣಭೃಚ್ಚ' ಎಂಬೆರಡು ಸೂತ್ರಗಳಿಂದ ಸಾವಕಾಶ ಮಾಡುತ್ತಾರೆ. ಮೊದಲು ಮುಕ್ತೋಪಸೃಪ್ಯತ್ವವೆಂಬ ಸಿದ್ಧಾಂತಲಿಂಗವನ್ನು ನಿರವಕಾಶವೆಂದು ಸಮರ್ಥಿಸುವ ಉದ್ದೇಶದಿಂದ 'ಮುಕ್ತೋಪಸೃಪ್ಯವ್ಯಪದೇಶಾತ್' ಎಂಬ ಹೇತುವನ್ನು ಹೇಳಿರುತ್ತಾರೆ. ಅಂದರೆ 'ತನ್ನಿಷ್ಠಸ್ಯ ಮೋಕ್ಷೋಪದೇಶಾತ್' ಎಂಬ ಸೂತ್ರದಲ್ಲಿ ಹೇಳಿರುವ ಹೇತುವನ್ನೇ ಪುನಃ ಉಜ್ಜೀವನ ಮಾಡಿ ಉತ್ತರಿಸುತ್ತಿದ್ದಾರೆ. ಪೂರ್ವಪಕ್ಷಕಾರನಿಂದ ಹೇಳಲ್ಪಟ್ಟ ಲಿಂಗಕ್ಕೆ ಮುಂದಿನ ಸೂತ್ರದಲ್ಲಿ ದೋಷವನ್ನು ಹೇಳುತ್ತಾರೆಂದು ತಿಳಿಯಬೇಕು. ಆದ್ದರಿಂದ ಪುನರುಕ್ತಿ ದೋಷಕ್ಕೆ ಅವಕಾಶವಿಲ್ಲ.

ಪ್ರಕಾಶಃ – ಮುಕ್ತಪ್ರಾಪ್ಯತ್ವಸ್ಯಾರ್ಚಿರಾದಿನಾ ಗಚ್ಛತಾಂ ತದಾ ಪ್ರಾಪ್ಯಸ್ಥಾನೇ ವ್ಯಭಿಚಾರಮಾಶಙ್ಕ್ಯಾಹ – ಇಹೇತಿ ।।

ಪ್ರಶ್ನೆ - ಮುಕ್ತಪ್ರಾಪ್ಯತ್ವವನ್ನು ಪರಮಾತ್ಮನಿಗೆ ಹೇಳುತ್ತಿದ್ದೀರಿ. ಆದರೆ ಮೋಕ್ಷವನ್ನು ಕುರಿತು ಹೊರಡುವ ಜೀವನು ಅರ್ಚಿರ್ಲೋಕ, ಅಹರ್ಲೋಕ ಮೊದಲಾದ ಲೋಕಗಳನ್ನು ಹೊಂದಿ, ಅನಂತರ ಕೊನೆಯಲ್ಲಿ ಮೋಕ್ಷವನ್ನು ಪಡೆಯುತ್ತಾನೆ. ಅರ್ಚಿರ್ಲೋಕಗಳಿಗೆ ಹೋದಾಗ ಆಯಾ ದೇವತೆಗಳನ್ನೂ ಸಹ ಹೊಂದುವುದರಿಂದ ಮುಕ್ತರಿಂದ ಪ್ರಾಪ್ಯತ್ವವು ಆಯಾ ಅಭಿಮಾನಿದೇವತೆಗಳಲ್ಲಿಯೂ ಬರುತ್ತದೆ. ಹಾಗಾಗಿ ಮುಕ್ತಪ್ರಾಪ್ಯತ್ವವೆಂಬ ವಿಷ್ಣುವಿನ ಲಿಂಗಕ್ಕೆ ಇತರ ದೇವತೆಗಳಲ್ಲಿಯೂ ವ್ಯಭಿಚಾರ ಬರುತ್ತದಲ್ಲವೇ?

ಉತ್ತರ - ಈ ಪ್ರಶ್ನೆಗೆ 'ಇಹ' ಎಂಬ ವಾಕ್ಯದಿಂದ ಉತ್ತರಿಸಿದ್ದಾರೆ.

ಪ್ರಕಾಶಃ – ಸೇತುತ್ವಸ್ಯ ಪ್ರಾಪ್ಯಾನ್ತರರಹಿತತ್ವೇ ಸತಿ ಪ್ರಾಪ್ಯತ್ವರೂಪತ್ವಾದಿತ್ಯರ್ಥಃ ।

ಮೇಲಿನ ಪ್ರಶ್ನೆ ಬರಬಾರದೆಂದೇ ಶ್ರುತಿಯು ಸೇತು ಶಬ್ದವನ್ನು ಹೇಳಿದೆ. ಇದರಿಂದ 'ಪ್ರಾಪ್ಯಾಂತರರಹಿತತ್ವೇ ಸತಿ ಪ್ರಾಪ್ಯತ್ವ' ಎಂಬ ಅರ್ಥವನ್ನು ನೇಳಿದಂತಾಗುತ್ತದೆ. ಅಂದರೆ ಯಾರನ್ನು ಹೊಂದಿದ ಮೇಲೆ ಮತ್ತೊಬ್ಬರನ್ನು ಹೊಂದುವುದಿಲ್ಲವೋ? ಮತ್ತು ಹೊಂದಲು ಯೋಗ್ಯನಾಗಿದ್ದಾನೋ? ಅಂತಹವನೇ ಮುಖ್ಯಪ್ರಾಪ್ಯನೆನಿಸುತ್ತಾನೆ. ಅರ್ಚಿರ್ಯೋಕಾದಿಗಳಿಗೆ ಹೋದಮೇಲೆ ಪುನಃ ಮತ್ತೊಬ್ಬ ದೇವತೆಯನ್ನು ಅಥವಾ ವಿಷ್ಣುವನ್ನು ಹೊಂದುವ ಪ್ರಯುಕ್ತ ಪ್ರಾಪ್ಯಾಂತರರಹಿತತ್ವವು ಇರುವುದಿಲ್ಲ.

ಪ್ರಕಾಶಃ – ತಾದೃಶಂ ಚ ಬ್ರಹ್ಮಣ್ಯೇವ ''ವಿಶ್ವಾತ್ಮಾನಂ ಪರಾಯಣಂ, ಮುಕ್ತಾನಾಂ ಪರಮಾಗತಿಃ, ಸಾ ಕಾಷ್ಠಾ ಸಾ ಪರಾಗತಿಃ'' ಇತ್ಯಾದೇರಿತಿ ಭಾವಃ

ಇಂತಹ 'ಪ್ರಾಪ್ಯಾಂತರರಹಿತತ್ವೇ ಸತಿ ಪ್ರಾಪ್ಯತ್ವ' ಎಂಬ ಹೇತುತ್ವವು ಬ್ರಹ್ಮನಲ್ಲಿ ಮಾತ್ರ ಬರುತ್ತದೆ. 'ವಿಶ್ವಾತ್ಮಾನಂ ಪರಾಯಣಮ್' ಎಂಬಲ್ಲಿ ಪರಾಯಣ ಶಬ್ದದಿಂದ ಇವನೇ ಅಂತಿಮವಾಗಿ ಆಶ್ರಯನಾದವನೆಂದು ಶ್ರುತಿ ಹೇಳಿದೆ. ಮತ್ತು 'ಮುಕ್ತಾನಾಂ ಪರಮಾಗತಿಃ' ಎಂಬಲ್ಲಿಯೂ 'ಪರಮಾಗತಿ' ಶಬ್ದದಿಂದ ಅವನೇ ಕೊನೆಯವನಾಗಿ ಪ್ರಾಪ್ಯನೆಂದೂ 'ಸಾ ಕಾಷ್ಠಾ ಸಾ ಪರಾ ಗತಿಃ' ಎಂಬಲ್ಲಿಯೂ ಸಹ ಇದೇ ವಿಷಯವನ್ನೂ ಹೇಳಲಾಗಿದೆ. ಆದ್ದರಿಂದ ಸೇತುತ್ವರೂಪವಾದ ಮುಖ್ಯಪ್ರಾಪ್ಯತ್ವವನ್ನೇ ಇಲ್ಲಿ ವಿವಕ್ಷಿಸಬೇಕು.

ಪ್ರಕಾಶಃ – ಅತ ಏವೇತಿ ।। ಚರಮಪ್ರಾಪ್ಯತ್ವಸ್ಯ ಸೇತುಪದೇನೈವೋಪೈತಿಪದೇನಾ-ಲಾಭಾದೇವೇತ್ಯರ್ಥಃ ।।

ಗ್ರಂಥದಲ್ಲಿರುವ 'ಅತ ಏವ' ಎಂಬ ಶಬ್ದಕ್ಕೆ ಹೀಗರ್ಥ - ಚರಮಪ್ರಾಪ್ಯತ್ವವು ಸೇತು ಪದದಿಂದ ತಿಳಿಯುತ್ತದೆ. ಆದ್ದರಿಂದಲೇ ಭಾಷ್ಯಕಾರರು 'ಅಮೃತಸ್ಯೈಷ ಸೇತುಃ' ಎಂಬ ಶ್ರುತಿಯನ್ನೇ ಉಲ್ಲೇಖಿಸಿದ್ದಾರೆ ಹೊರತು, 'ಪರಾತ್ಪರಂ ಪುರುಷಮುಪೈತಿ' ಎಂಬ ಶ್ರುತಿಯನ್ನು ಉಲ್ಲೇಖಿಸಿಲ್ಲ. ಏಕೆಂದರೆ ಸೇತು ಪದವು ಯಾವ ಅರ್ಥವನ್ನು ಹೇಳುತ್ತದೋ, ಆ ಅರ್ಥವನ್ನು 'ಉಪೈತಿ' ಎಂಬ ಪದವು ಹೇಳುತ್ತಿಲ್ಲ. ಆದ್ದರಿಂದ ಸಕಲ ಮುಕ್ತರಿಗೆ ಅಂತಿಮವಾಗಿ ಆಶ್ರಯನಾದವನು ಪರಮಾತ್ಮನೇ ಆಗಿರುವುದರಿಂದ ಮುಕ್ತೋಪಸೃಪ್ಯತ್ವಲಿಂಗಕ್ಕೆ ಯಾವುದೇ ದೋಷಗಳು ಬರಲು ಸಾಧ್ಯವಿಲ್ಲ. ಇದು ವಿಷ್ಣುವಿನ ಅಸಾಧಾರಣ ಲಿಂಗವಾಗಿದೆ. ಈ ಲಿಂಗದ ಬಲದಿಂದ ಆತ್ಮಶಬ್ದವು ವಿಷ್ಣುವನ್ನೇ ಪ್ರತಿಪಾದಿಸುತ್ತದೆ. ಅಂತಹ ಆತ್ಮಶಬ್ದದಿಂದ ದ್ಯುಭ್ವಾದ್ಯಾಯತನನಾಗಿರುವವನು ವಿಷ್ಣುವೇ ಆಗಿದ್ದಾನೆಂದು ನಿರ್ಣಯಿಸಬೇಕು.

ಗುರುರಾಜೀಯಮ್ – ಆತ್ಮಶಬ್ದಾದಿತ್ಯುಕ್ತೌ ತ್ವಿತಿ ।। ಶಬ್ದಗೌರವೇऽಪಿ ಪ್ರತಿಪತ್ತಿಲಾಘವಾತ್ ಸ್ವಶಬ್ದಾದಿತ್ಯುಕ್ತೌ ಚ ಲಾಘವೇऽಪಿ ಪ್ರತಿಪತ್ತಿಗೌರವೇಣ ಪ್ರತಿಪತ್ತಿಗೌರವಾಪೇಕ್ಷಯಾ ಪ್ರತಿಪತ್ತಿಲಾಘವಸ್ಯೈವ ಜ್ಯಾಯಸ್ತ್ವಾದಾತ್ಮಶಬ್ದಾದಿತ್ಯೇವ ವಕ್ತವ್ಯಮಿತ್ಯರ್ಥಃ । ಏವಮುಕ್ತೇ ತ್ವುಕ್ತಿವಕ್ರತ್ವಾವೈಯರ್ಥ್ಯಾಯೇತಿ ।। 'ಆತ್ಮಶಬ್ದಾತ್' ಇತಿ ವಕ್ತವ್ಯೇ ಸ್ವಶಬ್ದಾದಿತ್ಯುಕ್ತಿವಕ್ರತ್ವಾವೈಯರ್ಥ್ಯಾಯೇತ್ಯರ್ಥಃ । ನನು ಚ 'ತಚ್ಛಬ್ದಾತ್' ಇತ್ಯುಕ್ತಾವಪಿ

ವಿಷಯವಾಕ್ಯ ಆತ್ಮಶಬ್ದಾತಿರಿಕ್ತಶಬ್ದಾನ್ತರಾಭಾವೇನ ವಿಷಯವಾಕ್ಯಸ್ಯಾತ್ಮಶಬ್ದರೂಪಶಬ್ದ-ವಿಶೇಷಲಾಭೇನ ಸ್ವಶಬ್ದಾದಿತಿ ಕಿಮರ್ಥಮುಕ್ತಮ್ । ಅನ್ಯಥಾ 'ಆಕಾಶಸ್ತಲ್ಲಿಙ್ಗಾತ್' ಇತ್ಯಪಿ ನ ವಕ್ತವ್ಯಂ ಸ್ಯಾತ್ । ತಥೋಕ್ತೌ ತು ಲಿಙ್ಗವಿಶೇಷಾಪ್ರತೀತೇರಿತ್ಯರುಚೇರಾಹ – ಅಥವೇತಿ ।। ನನು ನ ಮುಕ್ತಪ್ರಾಪ್ಯತ್ವಂ ವಿಷ್ಣುತ್ವನಿಶ್ಚಾಯಕಮ್ । ತಸ್ಯಾರ್ಚಿರಾದಿಸಾಧಾರಣತ್ವಾದಿತ್ಯತ ಆಹ – ಶ್ರುತೇತಿ ।। 'ಅಮೃತಸ್ಯೈಷ ಸೇತುಃ' ಇತಿ ಶ್ರುತಿಸ್ಥಸೇತುಶಬ್ದಾದಿತ್ಯರ್ಥಃ । ಜಾಯಮಾನಾದಿಶಬ್ದಾನಾಮಿತಿ ವಕ್ಷ್ಯಮಾಣರೀತ್ಯಾ ಭೇದವ್ಯಪದೇಶಸ್ಯ ಜೀವವಿಷಯತ್ವಾತ್ 'ಪ್ರಾಣಮೃಚ್ಚ' ಇತಿ ಯೋಗವಿಭಾಗಮಾತ್ರಸ್ಯೋತ್ತರಾರ್ಥಕರಣೇऽಪಿ ತತ್ಸೂತ್ರೇऽಪ್ಯತ್ರತ್ಯಸಾಧ್ಯಹೇತ್ವನುಕರ್ಷಾದತ್ರೈವ ತತ್ಸೂತ್ರಾರ್ಥೋऽಭಿಪ್ರೇತ ಇತ್ಯಾಶಯೇನಾತ್ರ ವ್ಯಾಖ್ಯಾತಮಿತಿ ದ್ರಷ್ಟವ್ಯಮ್ ।।

ಸಾರ

'ಯಸ್ಮಿನ್ದ್ಯೌಃ ಪೃಥಿವೀ' ಎಂಬ ವಿಷಯವಾಕ್ಯದಿಂದ ಸ್ವಲ್ಪ ಹತ್ತಿರದಲ್ಲಿಯೇ ಮುಕ್ತಪ್ರಾಪ್ಯತ್ವವೆಂಬ ಲಿಂಗವು ಶ್ರುತಿಯಲ್ಲಿ ಕೇಳಿಸುತ್ತಿದೆ. ಮುಕ್ತರಿಂದ ಹೊಂದಲು ಯೋಗ್ಯನಾಗಿರುವವನು ಪರಮಾತ್ಮನೇ ಆಗಿದ್ದಾನೆ ಹೊರತು, ಬೇರಾರೂ ಅಲ್ಲ. ಆದ್ದರಿಂದಲೂ ದ್ಯುಭ್ವಾದ್ಯಾಯತನನಾಗಿರುವವನು ವಿಷ್ಣುವೇ ಆಗಿದ್ದಾನೆಂದು ತಿಳಿಯಬೇಕು.

ಹೀಗೆ ದ್ಯುಭ್ವಾದ್ಯಾಯತನತ್ವವನ್ನು ಸಮರ್ಥಿಸಲು ಮತ್ತೊಂದು ಕಾರಣವನ್ನು ಈ ಸೂತ್ರವು ಹೇಳುವುದಾದರೆ 'ಚ' ಶಬ್ದವನ್ನು ಸೂತ್ರದಲ್ಲಿ ಹೇಳಬೇಕಿತ್ತಲ್ಲವೇ? ಎಂಬ ಪ್ರಶ್ನೆ ಬರುತ್ತದೆ. ಸಮಾಧಾನ ಹೀಗೆ - ಪ್ರಥಮ ಸೂತ್ರದಲ್ಲಿ ಆತ್ಮ ಶಬ್ದವೆಂಬ ಕಾರಣವನ್ನು ಹೇಳಿದ ಮೇಲೆ ಜಾಯಮಾನತ್ವವೆಂಬ ಲಿಂಗದಿಂದ ಆತ್ಮಶಬ್ದವು ಗೌಣಾರ್ಥವನ್ನು ಹೇಳಬಹುದಲ್ಲವೇ? ಎಂಬ ಆಕ್ಷೇಪವು ಬರುತ್ತದೆ. ಅದನ್ನು ನಿರಾಕರಿಸುವುದಕ್ಕಾಗಿ ಈ ಸೂತ್ರ ಹೊರಟಿದೆ ಹೊರತು, ನೇರವಾಗಿ ದ್ಯುಭ್ವಾದ್ಯಾಯತನತ್ವಕ್ಕೆ ಕಾರಣತ್ವವನ್ನು ಸಮರ್ಥಿಸಲು ಹೊರಟಿಲ್ಲ. ಜೀವವಿಷಯದಲ್ಲಿ ಬರುತ್ತಿರುವ ಆಕ್ಷೇಪವನ್ನು ಮಾಡದಿದ್ದರೆ ಈ ಸೂತ್ರಕ್ಕೆ ಪ್ರಸಕ್ತಿಯೇ ಇರುವುದಿಲ್ಲ. ಆದ್ದರಿಂದ ಸ್ವತಂತ್ರವಾಗಿ ಹೇತುವನ್ನು ಹೇಳದ ಕಾರಣ 'ಚ' ಶಬ್ದದ ಅನಿವಾರ್ಯತೆ ಇಲ್ಲ.

'ಮುಕ್ತೋಪಸೃಪ್ಯತ್ವ' ಎಂದರೆ ಮುಕ್ತರಿಂದ ಹೊಂದಲು ಯೋಗ್ಯನಾಗಿರಬೇಕು. ಇವನನ್ನು ಹೊಂದಿದ ಮೇಲೆ ಮತ್ತೊಬ್ಬರನ್ನು ಮುಕ್ತನು ಹೊಂದಬಾರದು ಎಂಬರ್ಥವನ್ನು ವಿವಕ್ಷಿಸಬೇಕು. ಏಕೆಂದರೆ ಮೋಕ್ಷಕ್ಕೆ ಹೋಗಬೇಕಾದರೆ ಅರ್ಚಿರ್ಲೋಕ, ಅಹರ್ಲೋಕ ಇವುಗಳ ಮೂಲಕ ಹೋಗುತ್ತಾನೆ. ಅಲ್ಲಿರುವ ದೇವತೆಗಳೂ ಸಹ ಮೊದಲು ಪ್ರಾಪ್ಯರೇ ಆಗಿದ್ದಾರೆ. ಆದರೆ ಅಂತಿಮವಾಗಿ ಪ್ರಾಪ್ಯನಾಗಿರುವವನು ವಿಷ್ಣುವೇ ಆಗಿದ್ದಾನೆ. ಆದ್ದರಿಂದಲೇ ಮುಕ್ತರಿಗೆ ಅವನು ಸೇತು ಎನಿಸಿದ್ದಾನೆ. 'ಸೇತು' ಪದದ ಈ ಅರ್ಥವನ್ನು ವಿವಕ್ಷಿಸಿಯೇ ಮುಕ್ತೋಪಸೃಪ್ಯತ್ವಲಿಂಗವನ್ನು ಹೇಳುವಾಗ ಭಾಷ್ಯಕಾರರು 'ಅಮೃತಸ್ಯೈಷ ಸೇತುಃ' ಎಂಬ ವಾಕ್ಯವನ್ನೇ ಉದಾಹರಿಸಿದ್ದಾರೆ.

ಪರಿಪೂರ್ಣಚಂದ್ರಿಕಾ

ತಾತ್ಪರ್ಯಚಂದ್ರಿಕಾ

तृतीये तु परपक्षे साधकाभावोक्तिः ।

ಅನುವಾದ - 'ಓಂ ನಾನುಮಾನಮತಚ್ಛಬ್ದಾತ್ ಓಂ' ಎಂಬುದು ಮೂರನೇ ಸೂತ್ರ. ಈ ಸೂತ್ರವು ಪರಪಕ್ಷದಲ್ಲಿ ಯಾವುದೇ ಸಾಧಕಪ್ರಮಾಣಗಳಿಲ್ಲದಿರುವುದನ್ನು ಸಾಧಿಸುವುದಕ್ಕಾಗಿ ಹೊರಟಿದೆ. ಹಿಂದಿನೆರಡು ಸೂತ್ರಗಳಲ್ಲಿ ಸಾಧಕಪ್ರಮಾಣಗಳಿವೆಯೆಂದು ಹೇಳಿದ್ದಾಯಿತು. ಮುಂದೆ ಪರಪಕ್ಷದಲ್ಲಿ ಸಾಧಕಪ್ರಮಾಣಗಳಿಲ್ಲವೆಂದು ಹೇಳುವುದೇ ಸಂಗತವಾಗುವುದರಿಂದ ಇದನ್ನು ಮೂರನೆಯ ಸೂತ್ರವನ್ನಾಗಿ ಪರಿಗಣಿಸಿದ್ದಾರೆ.

तत्र चानुमीयत इत्यनुमानमित्यनुमानशब्देन वा अनुमानशब्दाच्छैषिकेऽणि कृत आनुमानशब्देन वा अनुमानप्रधानपाशुपतसाङ्ख्यागमसिद्धं रुद्रप्रधानाद्युच्यते ।

ಸೂತ್ರದಲ್ಲಿರುವ 'ನಾನುಮಾನಮ್' ಎಂಬುದನ್ನು 'ನ ಅನುಮಾನಮ್' ಎಂದು ಅಥವಾ 'ನ ಅನುಮಾನಮ್' ಎಂದೂ ಸಹ ಪದವಿಭಾಗ ಮಾಡಬಹುದು. 'ಅನುಮೀಯತೇ ಇತಿ ಅನುಮಾನಮ್' ಎಂಬ ವ್ಯುತ್ಪತ್ತಿಯನ್ನು ಅನುಮಾನ ಶಬ್ದಕ್ಕೆ ತಿಳಿಯಬೇಕು. 'ಅ ಅನುಮಾನಮ್' ಎಂದು ಪದವಿಭಾಗಮಾಡಿದಾಗ ಅನುಮಾನ ಶಬ್ದದ ಮೇಲೆ ಶೈಷೇ ಎಂಬ ಸೂತ್ರದಿಂದ ಅಣ್ ಪ್ರತ್ಯಯವು ಪ್ರಾಪ್ತವಾದರೆ ಆದಿವೃದ್ಧಿಯೂ ಬಂದು 'ಆನುಮಾನಮ್' ಎಂಬ ಶಬ್ದವು ನಿಷ್ಪನ್ನವಾಗಿದೆ. ಅನುಮಾನ ಶಬ್ದಕ್ಕಾಗಲೀ, ಅನುಮಾನ ಶಬ್ದಕ್ಕಾಗಲೀ ಅನುಮಾನವೇ ಪ್ರಧಾನವಾಗಿವುಳ್ಳ, ಪಾಶುಪತ, ಸಾಂಖ್ಯ, ಮೊದಲಾದ ಆಗಮಗಳು ಎಂದರ್ಥ. ಇಂತಹ ಆಗಮಗಳಿಂದ ರುದ್ರ ಹಾಗೂ ಪ್ರಧಾನಗಳೇ ದ್ಯುಭ್ವಾದ್ಯಾಯತನರಾಗಿದ್ದಾರೆಂದು ತಿಳಿಯುತ್ತದೆ. ಈ ವಿಷಯದಲ್ಲಿ ಪ್ರಮಾಣವಿಲ್ಲವೆಂದು ಪ್ರತಿಪಾದಿಸುವುದಕ್ಕಾಗಿ ಸೂತ್ರವು ಹೊರಟಿದೆ.

अनेन च परपक्षे साधकाभावं वदता जायमानादिशब्दानामपि जीवशब्दत्वं नास्ति ।

ಹೀಗೆ ಹೇಳಿದ್ದರಿಂದ ಪರಪಕ್ಷದಲ್ಲಿ ಸಾಧಕಪ್ರಮಾಣಗಳಿಲ್ಲವೆಂದು ಹೇಳುವ ಮೂಲಕ ಜಾಯಮಾನ ಮೊದಲಾದ ಜೀವಪ್ರತಿಪಾದಕ ಶಬ್ದಗಳೂ ಸಹ ಪ್ರಕರಣದಲ್ಲಿರುವುದಿಲ್ಲವೆಂದು ತಿಳಿಸಿದ್ದಾರೆ.

ಬ್ರಹ್ಮಣ್ಯಪಿ ಸಮ್ಭವಾದಿತಿ ಸೂಚನಾತ್ ಸ್ವಪಕ್ಷೇ ಬಾಧಕಮಪ್ಯುದ್ಧೃತಮ್ ।

ಬ್ರಹ್ಮನಲ್ಲಿಯೂ ಸಾಧಕವಾದ ಪ್ರಮಾಣಗಳಿವೆಯೆಂದು ಸೂಚಿಸಿದ್ದರಿಂದ ಸ್ವಪಕ್ಷದಲ್ಲಿ ಬಾಧಕಗಳನ್ನು ಇದೇ ಸೂತ್ರವು ಪರಿಹರಿಸುತ್ತಿದೆ.

ಏವಂ ರುದ್ರಸಮಾಖ್ಯಾಸ್ಥಾನಾಂ ರುದ್ರಪಿನಾಕ್ಯಾದಿಶಬ್ದಾನಾಮಪಿ ರುದ್ರಾದಿಶಬ್ದತ್ವಂ ನಾಸ್ತಿಮುಖ್ಯತಃ ।

ಆದ್ದರಿಂದ ರುದ್ರಸಮಾಖ್ಯಾಪ್ರಮಾಣಗಳಲ್ಲಿ ರುದ್ರ, ಪಿನಾಕಿ ಮೊದಲಾದ ರುದ್ರಪ್ರತಿಪಾದಕವಾದ ಶಬ್ದಗಳಾವುದೂ ಸಹ ಮುಖ್ಯವಾಗಿರುವುದಿಲ್ಲ.

ತಥಾ ವಿಷ್ಣುಸಮಾಖ್ಯಾಸ್ಥಾನಾಂ ವಿಷ್ಣ್ವಾದಿಶಬ್ದಾನಾಮಪಿ ರುದ್ರಾದಿಶಬ್ದತ್ವಂ ನಾಸ್ತಿ । ''ನತು ನಾರಾಯಣಾದೀನಾಂ ನಾಮ್ನಾಮನ್ಯತ್ರ ಸಮ್ಭವಃ । ಅನ್ಯನಾಮ್ನಾಂ ಗತಿರ್ವಿಷ್ಣುಃ'' ಇತ್ಯಾದಿ-ಭಾಷ್ಯೋದಾಹೃತಸ್ಮೃತೇಃ ।

ಇದೇ ರೀತಿಯಾಗಿ ವಿಷ್ಣುಸಮಾಖ್ಯಾ ಪ್ರಮಾಣಗಳಲ್ಲಿ ವಿಷ್ಣು ಮೊದಲಾದ ಶಬ್ದಗಳು ರುದ್ರಾದಿಗಳನ್ನು ಪ್ರತಿಪಾದಿಸುವುದಿಲ್ಲ. ಏಕೆಂದರೆ 'ನತು ನಾರಾಯಣಾದೀನಾಂ ನಾಮ್ನಾಮನ್ಯತ್ರ ಸಂಭವಃ । ಅನ್ಯನಾಮ್ನಾಂ ಗರ್ತಿರ್ವಿಷ್ಣುಃ' ನಾರಾಯಣ ಪ್ರತಿಪಾದಕವಾದ ಶಬ್ದಗಳು ಬೇರೆಡೆ ಬರಲು ಸಾಧ್ಯವಿಲ್ಲ. ಆದರೆ ಬೇರೆ ಶಬ್ದಗಳು ವಿಷ್ಣುವನ್ನು ಪ್ರತಿಪಾದಿಸುತ್ತವೆ ಇತ್ಯಾದಿಯಾಗಿ ಭಾಷ್ಯದಲ್ಲಿ ಉದಾಹರಿಸಲ್ಪಟ್ಟ ಶ್ರುತಿಯು ಈ ವಿಷಯದಲ್ಲಿ ಆಧಾರವಾಗಿದೆ.

ತಥಾಚ ರುದ್ರಾದಿಸಮಾಖ್ಯಾ ಸಾವಕಾಶಾ । ವಿಷ್ಣುಸಮಾಖ್ಯಾ ತು ನಿರವಕಾಶೇತ್ಯಪಿ ಸೂಚಿತಮ್ ।

ಆದ್ದರಿಂದ ರುದ್ರಾದಿಸಮಾಖ್ಯಾ ಪ್ರಮಾಣವು ಸಾವಕಾಶವಾಗಿದೆ. ವಿಷ್ಣುಸಮಾಖ್ಯಾ ಪ್ರಮಾಣವಾದರೂ ನಿರವಕಾಶವಾಗಿದೆ ಎಂದು ಸೂಚಿಸಿದ್ದಾರೆ.

ಏವಂ ಚಾನುವ್ಯಾಖ್ಯಾನೇ ''ಬಾಹುಲ್ಯಂ ಲಿಙ್ಗಶಬ್ದಾನಾಮ್'' ಇತ್ಯಾದಿನಾ ''ಪೂರ್ವಪಕ್ಷೇಷು ಯುಕ್ತಯಃ'' ಇತ್ಯನ್ತೇನ ಪೂರ್ವಪಕ್ಷಯುಕ್ತಿಮತ್ತ್ವಾ ''ತಾ ಏವ ಬಲವತ್ಯಸ್ತು ಗತ್ಯನ್ತರವಿವರ್ಜಿತಾಃ । ಸಿದ್ಧಾನ್ತಯುಕ್ತಯೋ ಜ್ಞೇಯಾಃ'' ಇತಿ ಯಃ ಸಿದ್ಧಾನ್ತನ್ಯಾಯ ಉಕ್ತಃ ಸೋಽಪಿ ಸೂತ್ರಾರೂಢಃ ।

ಅನುವ್ಯಾಖ್ಯಾನದಲ್ಲಿ 'ಬಾಹುಲ್ಯಂ ಲಿಂಗಶಬ್ದಾನಾಮ್' ಎಂಬುದರಿಂದ ಪ್ರಾರಂಭಿಸಿ 'ಪೂರ್ವಪಕ್ಷೇಷು ಯುಕ್ತಯಃ' ಎಂಬಲ್ಲಿಯ ತನಕ ಪೂರ್ವಪಕ್ಷಯುಕ್ತಿಗಳನ್ನು ಹೇಳಿ 'ತಾ ಏವ ಬಲವತ್ಯಸ್ತು ಗತ್ಯಂತರವಿವರ್ಜಿತಾಃ । ಸಿದ್ಧಾಂತಯುಕ್ತಯೋ ಜ್ಞೇಯಾಃ' ಎಂಬುದಾಗಿ ಯಾವ ಯಾವ

ಸಿದ್ಧಾಂತ ನ್ಯಾಯಗಳನ್ನು ಹೇಳಿರುತ್ತಾರೋ ಅವುಗಳೂ ಸಹ ಸೂತ್ರಾರೂಢವಾಗಿವೆಯೆಂದು ತಿಳಿಯಬೇಕು.

ಅತ್ರ ಚ ಪ್ರಸಜ್ಯಪ್ರತಿಷೇಧಾರ್ಥಸ್ಯ ನಞಃ ಕ್ರಿಯಾಸಾಪೇಕ್ಷತ್ವೇನಾಸಾಮರ್ಥ್ಯೇऽಪಿ ''ಅಸೂರ್ಯಂ ಪಶ್ಯಾ ರಾಜದಾರಾಃ । ಅಶ್ರಾದ್ಧಭೋಜೀ ಬ್ರಾಹ್ಮಣಃ'' ಇತ್ಯಾದೌ ಸಮಾಸोऽಸ್ತೀತಿ ''ಅಕರ್ತರಿ ಚ ಕಾರಕೇ ಸಞ್ಜ್ಞಾಯಾಮ್'' ಇತ್ಯತ್ರ ಜ್ಞಾಪಿತತ್ವಾದ್ವಾ ನಿರ್ಮಕ್ಷಿಕಮಿತ್ಯಾದಾವಿವ ''ಅರ್ಯಾಭಾವेऽವ್ಯಯೀಭಾವಃ'' ಇತ್ಯವ್ಯಯೀಭಾವಸಮಾಸಾಶ್ರಯಣಾದ್ವಾ ಅತಚ್ಛಬ್ದಾದಿತಿ ಪದಂ ಭಾಷ್ಯೇ ''ತಚ್ಛಬ್ದಾಭಾವಾತ್'' ಇತಿ ವ್ಯಾಖ್ಯಾತಮ್ ।

ಸೂತ್ರದಲ್ಲಿ 'ಅತಚ್ಶಬ್ದಾತ್' ಎಂಬ ಪದವಿದೆ. ಇಲ್ಲಿ ಪ್ರಸಜ್ಯಪ್ರತಿಷೇಧಾರ್ಥದಲ್ಲಿ ನಞ್ ಇರುತ್ತದೋ? ಅಥವಾ ಪರ್ಯುದಾಸಾರ್ಥದಲ್ಲಿರುತ್ತದೋ? ಎಂಬ ವಿಚಾರವು ಪ್ರಾಪ್ತವಾದರೆ ಪ್ರಸಜ್ಯಪ್ರತಿಷೇಧಾರ್ಥದಲ್ಲಿ 'ನಞ್' ಸಮಾಸವನ್ನು ಮಾಡಲಾಗಿದೆಯೆಂದೇ ಹೇಳಬೇಕು. ವಾಸ್ತವಿಕವಾಗಿ ಪ್ರಸಜ್ಯಪ್ರತಿಷೇಧಾರ್ಥದಲ್ಲಿರುವ ನಞ್ ಎಂಬುದು ಕ್ರಿಯಾಸಾಪೇಕ್ಷಿತವಾಗಿರುತ್ತದೆ. ಅಂತಹ ನಞ್‌ಗೆ ಮುಂದಿನ ತತ್‌ಶಬ್ದದ ಜೊತೆಗೆ ಸಾಮರ್ಥ್ಯವಿಲ್ಲದ ಕಾರಣ ಸಮಾಸವಾಗುವುದಿಲ್ಲ. ಆದರೆ 'ಅಸೂರ್ಯಂ ಪಶ್ಯಾಃ ರಾಜದಾರಾಃ', 'ಅಶ್ರಾದ್ಧಭೋಜೀ ಬ್ರಾಹ್ಮಣಃ' ಇತ್ಯಾದಿಯಾಗಿ ಪ್ರಸಜ್ಯ ಪ್ರತಿಷೇಧಾರ್ಥದಲ್ಲಿಯೂ ನಞ್ ಸಮಾಸವನ್ನು ವೈಯ್ಯಾಕರಣರು ಒಪ್ಪಿದ್ದು ಕಾಣಿಸುತ್ತದೆ. ಪಾಣಿನಿಯು 'ಅಕರ್ತರಿ ಚ ಕಾರಕೇ ಸಂಜ್ಞಾಯಾಮ್' ಎಂಬ ಸೂತ್ರದಲ್ಲಿ ಕಾರಕೇ ಎಂಬ ಪದವನ್ನು ಪ್ರತ್ಯೇಕವಾಗಿ ಪರಿಗಣಿಸಿದ್ದರಿಂದಲೇ ಪ್ರಸಜ್ಯಪ್ರತಿಷೇಧಾರ್ಥದಲ್ಲಿಯೂ ನಞ್ ಸಮಾಸವಾಗುತ್ತದೆಂದು ತಿಳಿಸಿರುತ್ತಾನೆ. ಅಥವಾ 'ನಿರ್ಮಕ್ಷಿಕಮ್' ಇತ್ಯಾದಿ ಪ್ರಯೋಗದಂತೆ 'ಅತಚ್ಶಬ್ದಾತ್' ಎಂಬ ಪದವನ್ನು ಅವ್ಯಯೀಭಾವ ಸಮಾಸವನ್ನು ಆಶ್ರಯಿಸಿ. ('ಅರ್ಥಾಭಾವೇ ಅವ್ಯಯೀಭಾವಃ' ಎಂಬುದಾಗಿ ಅವ್ಯಯೀಭಾವ ಸಮಾಸವನ್ನು ಆಶ್ರಯಿಸಿ) ಪ್ರಯೋಗಿಸಿದ್ದಾರೆ. ಹೀಗೆ ವೈಯ್ಯಾಕರಣಗಳ ಪ್ರಯೋಗ ಅಥವಾ ಅವ್ಯಯೀಭಾವ ಸಮಾಸಗಳನ್ನು ದೃಷ್ಟಾಂತವಾಗಿಟ್ಟುಕೊಂಡು ಭಾಷ್ಯದಲ್ಲಿ 'ಅತಚ್ಶಬ್ದಾತ್' ಎಂಬುದಕ್ಕೆ 'ತಚ್ಛಬ್ದಾ ಅಭಾವಾತ್' ಎಂಬುದಾಗಿ ವ್ಯಾಖ್ಯಾನಿಸಿದ್ದಾರೆ.

ಅವ್ಯಯೀಭಾವತ್ವेऽಪ್ಯಂ ನ ಭವತಿ । ''ಅಪಞ್ಚಮ್ಯಾಃ'' ಇತ್ಯುಕ್ತೇಃ ।

ಅವ್ಯಯೀಭಾವ ಸಮಾಸ ಮಾಡಿದರೆ 'ಅವ್ಯಯೀಭಾವಸ್ಯ' ಎಂಬ ಸೂತ್ರಾನುಸಾರ ಸಮಾಸದಿಂದ ಅವ್ಯಯತ್ವ ಬಂದು 'ನಾವ್ಯಯೀಭಾವಸ್ಯಾತೋ೦ತ್ವ ಪಂಚಮ್ಯಾಃ' ಎಂಬ ಸೂತ್ರದಿಂದ 'ಅಂ' ಆದೇಶ ಬಂದು 'ಅತಚ್ಛಬ್ದಮ್' ಎಂದಾಗಬೇಕಲ್ಲವೇ? ಎಂದರೆ ಪಂಚಮಿಯನ್ನು ಬಿಟ್ಟು ಉಳಿದೆಡೆ 'ಅಂ' ಆದೇಶಬರುತ್ತದೆಂದು ಹೇಳಿದ್ದರಿಂದ; 'ಅತಚ್ಶಬ್ದಾತ್' ಎಂಬುದು ಪಂಚಮೀ ವಿಭಕ್ತಿಯಲ್ಲಿರುವ ಪ್ರಯುಕ್ತ 'ಅಂ' ಆದೇಶ ಬರುವುದಿಲ್ಲ.

ಏವಮ್ ''ಅತದ್ಧರ್ಮಾಭಿಲಾಪಾತ್'' ಇತ್ಯಾದಾವಪಿ ದ್ರಷ್ಟವ್ಯಮ್ ।

ಹೀಗೆ 'ಅತದ್ಧರ್ಮಾಭಿಲಾಪಾತ್' ಎಂಬ ಸೂತ್ರದಲ್ಲಿಯೂ 'ಸಮಾಸ ವಿಚಾರವನ್ನು ಎರಡು ಬಗೆಯಲ್ಲಿ ತಿಳಿದುಕೊಳ್ಳಬೇಕು.

ಚತುರ್ಥೇ ಅದ್ವೈತಿನಾ ಜೀವಸ್ಯೈವ ಸಾಙ್ಖ್ಯಾದಿನಾ ಪ್ರಧಾನಾದೇರ್ಬ್ರಹ್ಮಾಭೇದಾನಙ್ಗೀಕಾರಾತ್ ''ಅನ್ಯಮೀಶಾಮ್'' ಇತ್ಯಾದಿಭೇದವ್ಯಪದೇಶಸ್ಯ ಪ್ರಧಾನಾದಿವಿಷಯತ್ವಾಭಾವಾಚ್ಚ ''ಭೇದವ್ಯಪದೇಶಾತ್'' ಇತ್ಯುತ್ತರಹೇತೋರ್ಜೀವಪಕ್ಷಮಾತ್ರನಿರಾಸಕತ್ವಾಯೋಗವಿಭಾಗ ಉತ್ತರಾರ್ಥಃ ।

'ಓಂ ಪ್ರಾಣಭೃಚ್ಚ ಓಂ' ಎಂಬುದು ನಾಲ್ಕನೆಯ ಸೂತ್ರ. ಈ ಸೂತ್ರದಲ್ಲಿ ಜೀವ ಹಾಗೂ ವಾಯು ಇಬ್ಬರು ದ್ಯುಭ್ವಾದ್ಯಾಯತನರಲ್ಲವೆಂದು ಸಮರ್ಥಿಸಲಾಗಿದೆ. ಚಶಬ್ದದಿಂದ ಹಿಂದಿನೆರಡು ಸೂತ್ರಗಳಲ್ಲಿ ಹೇಳಲ್ಪಟ್ಟ ಹೇತುಗಳನ್ನು ಅನುಕರ್ಷ ಮಾಡಬೇಕು. ಹಾಗಾದರೆ ಒಟ್ಟಿಗೆ ಮೂರು ಸೂತ್ರಗಳನ್ನು ಪಠಿಸಬಹುದಿತ್ತು. ಬೇರೆ ಬೇರೆ ಸೂತ್ರಗಳನ್ನಾಗಿ ಏಕೆ ವಿಂಗಡಿಸಿದರು ? ಎಂದರೆ ಮುಂದಿನ ಸೂತ್ರದಲ್ಲಿ 'ಪ್ರಾಣಭೃಚ್ಚ' ಎಂಬುದನ್ನು ಅನುವೃತ್ತಿ ಮಾಡಿಕೊಳ್ಳುವುದಕ್ಕಾಗಿ ಬೇರೆ ಬೇರೆ ಸೂತ್ರಗಳಾಗಿ ವಿಭಾಗ ಮಾಡಿದ್ದಾರೆ.

ಅದ್ವೈತಿಗಳು ಜೀವನಿಗೆ ಹೇಗೆ ಬ್ರಹ್ಮಾಭೇದವನ್ನು ಒಪ್ಪುತ್ತಾರೋ, ಅದರಂತೆ ಸಾಂಖ್ಯರಾಗಲೀ, ಶೈವರಾಗಲೀ ಜೀವನಿಂದ ಪ್ರಧಾನಾದಿಗಳಿಗೆ ಅಭೇದವನ್ನು ಒಪ್ಪುವುದಿಲ್ಲ. ಹಾಗೇ ಒಪ್ಪಿದ್ದಲ್ಲಿ 'ನಾನುಮಾನಮ್' ಇತ್ಯಾದಿ ಮೂರುಸೂತ್ರಗಳಲ್ಲಿ ಹೇಳಲ್ಪಟ್ಟ ಎಲ್ಲಾ ಹೇತುಗಳನ್ನು ಅನುಕರ್ಷ ಮಾಡಬಹುದಿತ್ತು. ಮತ್ತು 'ಅನ್ಯಮೀಶಮ್' ಎಂಬುದಾಗಿ ಹೇಳಲ್ಪಟ್ಟ ಭೇದವ್ಯಪದೇಶವು ಪ್ರಧಾನಾದಿಗಳನ್ನು ವಿಷಯೀಕರಿಸುವುದಿಲ್ಲ. ಆದ್ದರಿಂದ 'ಭೇದವ್ಯಪದೇಶಾತ್' ಎಂಬ ಮುಂದಿನ ಸೂತ್ರವು ಕೇವಲ ಜೀವಪಕ್ಷವನ್ನು ನಿರಾಸ ಮಾಡುತ್ತಿರುವುದರಿಂದ ಯೋಗವಿಭಾಗ ಮಾಡುವುದು ಸಾರ್ಥಕವಾಗಿದೆ.

ತತ್ರ ಚಶಬ್ದೋ ನ ಕೇವಲಂ ಟೀಕೋಕ್ತರೀತ್ಯಾ ಪೂರ್ವೋಕ್ತಹೇತೂನಾಂ ನತ್ರಶ್ಚಾನುಕರ್ಷಣಾರ್ಥಃ । ಕಿನ್ತು ವಾಯುಸಮುಚ್ಚಯಾರ್ಥೋಽಪೀತಿ ದ್ರಷ್ಟವ್ಯಮ್ ।

'ಪ್ರಾಣಭೃಚ್ಚ'ಂ ಎಂಬ ಸೂತ್ರದಲ್ಲಿರುವ ಚಶಬ್ದವು ಟೀಕೆಯಲ್ಲಿ ಹೇಳಿದಂತೆ ಹಿಂದಿನ ಸೂತ್ರಗಳಲ್ಲಿರುವ ಹೇತುಗಳನ್ನಾಗಲೀ ನ್ಞಶ್ ಎಂಬುದನ್ನಾಗಲೀ ಅನುಕರ್ಷಣೆ ಮಾಡುವುದಕ್ಕಾಗಿ ಮಾತ್ರ ಹೇಳಿರುವುದಲ್ಲ. ಹೊರತಾಗಿ ವಾಯುದೇವತೆಯನ್ನು ಸಮುಚ್ಚಯ ಮಾಡುವುದಕ್ಕಾಗಿಯೂ ಹೇಳಲ್ಪಟ್ಟಿದೆಯೆಂದು ತಿಳಿಯಬೇಕು.

प्रकाशः —

तृतीय इति ।। नानुमानमतच्छब्दादित्यत्र ।

ವಿವರಣೆ - ಇಲ್ಲಿಯ ತನಕ ಪ್ರಥಮಸೂತ್ರ ಹಾಗೂ ದ್ವಿತೀಯಸೂತ್ರಗಳ ವಿನ್ಯಾಸ ಕ್ರಮವನ್ನು ಮತ್ತು ಅವುಗಳಲ್ಲಿರುವ ವಿಶೇಷ ವಿಚಾರವನ್ನು ವಿವರಿಸಿದರು. ಪ್ರಕೃತ 'ನಾನುಮಾನಮತಚ್ಛಬ್ದಾತ್' ಎಂಬ ಮೂರನೆಯ ಸೂತ್ರದ ಬಗ್ಗೆ ವಿವರಣೆ ನೀಡುತ್ತಿದ್ದಾರೆ. ಗ್ರಂಥದಲ್ಲಿರುವ 'तृतीये' ಎಂಬ ಪದಕ್ಕೆ 'ನಾನುಮಾನಮತಚ್ಛಬ್ದಾತ್' ಎಂಬ ಮೂರನೆಯ ಸೂತ್ರದಲ್ಲಿ ಎಂದರ್ಥ.

प्रकाशः — अनुमीयत इतीति ।। यद्यपि ल्युट् भावे करणाधिकरणयोश्च विहितः । नतु कर्मणि । तथापि ''कृत्यल्युटो बहुलम्'' इति बहुलग्रहणात्कर्मणि ल्युटि कृते ''युवोरनाकौ'' इत्यनादेशे रूपम् ।

ಸೂತ್ರದಲ್ಲಿರುವ ಅನುಮಾನ ಶಬ್ದದಿಂದ ಪಾಶುಪತಾದ್ಯಾಗಮಗಳೆಂಬ ಅರ್ಥಗಳನ್ನು ತಿಳಿಯಬೇಕೆಂದು 'ಅನುಮೀಯತೇ' ಎಂದು ಗ್ರಂಥದಲ್ಲಿ ಹೇಳಿದ್ದಾರೆ. ಅದು ಹೀಗೆ - ವಾಸ್ತವಿಕವಾಗಿ ಲ್ಯುಟ್ ಪ್ರತ್ಯಯವು ಭಾವಾರ್ಥದಲ್ಲಿ ಮತ್ತು ಕರಣಾರ್ಥದಲ್ಲಿ ಮತ್ತು ಅಧಿಕರಣಾರ್ಥದಲ್ಲಷ್ಟೇ ವಿಧಿಸಲ್ಪಟ್ಟದೆ ಹೊರತು, ಕರ್ಮಾರ್ಥದಲ್ಲಿ ವಿಧಿಸಲ್ಪಟ್ಟಿಲ್ಲ. ಆದರೆ ಕರ್ಮಾರ್ಥದಲ್ಲಿ ಲ್ಯುಟ್ ಪ್ರತ್ಯಯವನ್ನು ವಿವಕ್ಷಿಸಿದಾಗ ಮಾತ್ರ 'ಅನುಮೀಯತೇ ಇತಿ ಅನುಮಾನಮ್' ಎಂಬ ವ್ಯುತ್ಪತ್ತಿಯಿಂದ ಪಾಶುಪತಾದ್ಯಾಗಮಗಳನ್ನು ವಿವಕ್ಷಿಸಲು ಸಾಧ್ಯ. ಆದರೆ ಪಾಣಿನಿಯು ಕರ್ಮಾರ್ಥದಲ್ಲಿ ಲ್ಯುಟ್ ಪ್ರತ್ಯಯವನ್ನು ವಿಧಾನ ಮಾಡದೇ ಇರುವಾಗ ಗ್ರಂಥದಲ್ಲಿ ಹೇಳಿದ ಅರ್ಥವು ಹೇಗೆ ಯುಕ್ತವಾಗುತ್ತದೆ? ಎಂಬ ಪ್ರಶ್ನೆ ಸಹಜವಾಗಿ ಬರುತ್ತದೆ. ಆದರೆ 'कृत्यल्युटो बहुलम्' ಎಂಬ ಸೂತ್ರದಲ್ಲಿ ಬಹುಲ ಗ್ರಹಣವನ್ನು ಪಾಣಿನಿಯು ಮಾಡಿರುವುದರಿಂದ ಕರ್ಮಾರ್ಥದಲ್ಲಿಯೂ ಲ್ಯುಟ್ ಪ್ರತ್ಯಯವು ವಿವಕ್ಷಿತವಾಗಿದೆಯೆಂದು ತಿಳಿಯಬೇಕು. ಹೀಗೆ ಕರ್ಮಾರ್ಥದಲ್ಲಿ ಲ್ಯುಟ್ ಪ್ರತ್ಯಯವು ಬಂದಮೇಲೆ 'युवोरनाकौ' ಎಂಬ ಸೂತ್ರದಿಂದ ಅನ ಆದೇಶವು ಬರುತ್ತದೆ. ಆವಾಗ 'ಅನುಮಾನಮ್' ಎಂಬ ರೂಪವು ಕರ್ಮಾರ್ಥದಲ್ಲಿಯೇ ನಿಷ್ಪನ್ನವಾಗುತ್ತದೆ.

प्रकाशः — ''आनुमानम् अनुमानात्मकागमपरिकल्पितरुद्राख्यं ब्रह्मात्र न वाच्यम्'' इति तत्त्वप्रदीपोक्त्यनुसारादाह — अनुमानशब्दादिति ।।

'ಅನುಮಾನಮ್ ಅನುಮಾನಾತ್ಮಕಾಗಮಪರಿಕಲ್ಪಿತರುದ್ರಾಖ್ಯಂ ಬ್ರಹ್ಮಾತ್ರ ನ ವಾಚ್ಯಮ್' ಸೂತ್ರದಲ್ಲಿರುವ 'ಅನುಮಾನಮ್' ಎಂದರೆ ಅನುಮಾನವೆಂಬ ಆಗಮದಿಂದ ಪರಿಕಲ್ಪಿತವಾದ ರುದ್ರನೆಂಬ ಬ್ರಹ್ಮ. ಇಂತಹ ಬ್ರಹ್ಮನನ್ನು ಇಲ್ಲಿ ವಿವಕ್ಷಿಸಬಾರದು ಎಂದು ತತ್ವಪ್ರದೀಪದಲ್ಲಿ ಹೇಳಿರುತ್ತಾರೆ. ಅದಕ್ಕನುಸಾರಿಯಾಗಿ 'ಅನುಮಾನ ಶಬ್ದಾತ್' ಎಂಬ ಗ್ರಂಥವು ಹೊರಟಿದೆ.

ದ್ಯುಭ್ವಾದ್ಯಧಿಕರಣ (೧-೩-೧)

ಪ್ರಕಾಶಃ – ಶೈಷಿಕೇ ''ಶೇಷೇ'' ಇತ್ಯನೇನಾಪತ್ಯಾದ್ಯರ್ಥೇ ವಿಹಿತೇऽಣ್ಪ್ರತ್ಯಯೇ ಆದಿವೃದ್ಧ್ಯಾದೌ ಸತಿ ರೂಪಮ್ ।

ತದ್ಧಿತಾಧಿಕಾರದಲ್ಲಿ ಅಪತ್ಯಾದ್ಯರ್ಥಗಳಲ್ಲಿ 'ನಞ್' ಪ್ರತ್ಯಯಗಳನ್ನು ವಿಧಿಸಲಾಗಿದೆ. ಅನಂತರ ಕೊನೆಯಲ್ಲಿ 'ಶೇಷೇ' ಎಂಬ ಸೂತ್ರದಿಂದ ಅಪತ್ಯಾದ್ಯರ್ಥವನ್ನು ಬಿಟ್ಟು ಬೇರೆ ಅರ್ಥಗಳಲ್ಲಿಯೂ ಕೆಲವೆಡೆ ಅಣ್ ಪ್ರತ್ಯಯವು ಪ್ರಸಕ್ತವಾಗುತ್ತದೆಂದು ಹೇಳಲಾಗಿದೆ. ಪ್ರಕೃತ ಅನುಮಾನ ಸಂಬಂಧಿ ಎಂಬರ್ಥದಲ್ಲಿ ಅಣ್ ಪ್ರತ್ಯಯವನ್ನು ಮಾಡಿದಾಗ 'ಅಚೋऽಞ್ಣಿತಿ' ಎಂಬ ಸೂತ್ರದಿಂದ ಆದಿವೃದ್ಧಿಯು ಪ್ರಾಪ್ತವಾದರೆ ಆನುಮಾನವೆಂಬ ರೂಪವು ನಿಷ್ಪನ್ನವಾಗುತ್ತದೆ.

ಪ್ರಕಾಶಃ – ಅನುಮಾನಪ್ರಧಾನಕೋ ಯಃ ಪಾಶುಪತಸಾಂಖ್ಯಹೈರಣ್ಯಗರ್ಭ-ಸೌರಸ್ಕಾನ್ದಶಾಕ್ತೇಯಾದ್ಯಾಗಮಃ ತತ್ಸಿದ್ಧಂ ರುದ್ರಪ್ರಧಾನಹಿರಣ್ಯಗರ್ಭಸೂರ್ಯಶಕ್ತಿಪ್ರಭೃತೀತ್ಯರ್ಥಃ ।

ಆನುಮಾನವನ್ನೇ ಪ್ರಧಾನಯುಕ್ತಿಯನ್ನಾಗಿ ಕೂಡಿರುವ ಆಗಮಗಳೆಂದರೆ ಪಾಶುಪತಾಗಮ, ಸಾಂಖ್ಯಾಗಮ, ಹೈರಣ್ಯಗರ್ಭಾಗಮ, ಸೌರಾಗಮ, ಶಾಕ್ತಾಗಮ, ಶಾಕ್ತೇಯಾದ್ಯಾಗಮಗಳು. ಇವುಗಳಿಂದ ಸಿದ್ಧವಾದ ರುದ್ರ, ಪ್ರಕೃತಿ, ಹಿರಣ್ಯಗರ್ಭ, ಸೂರ್ಯ, ಸ್ಕಂಧ, ಶಕ್ತಿ ಮೊದಲಾದವುಗಳು. ಆನುಮಾನ ಶಬ್ದದಿಂದ ಇವರೆಲ್ಲರನ್ನು ಸ್ವೀಕರಿಸಬೇಕು.

ಪ್ರಕಾಶಃ – ಯದ್ಯಪಿ ಟೀಕಾಯಾಂ ರುದ್ರಪ್ರಧಾನೇ ದ್ವೇ ಏವಾನುಮಾನಮಿತ್ಯಸ್ಯಾರ್ಥ ಉಕ್ತಃ ।

ಟೀಕೆಯಲ್ಲಿ ರುದ್ರ ಹಾಗೂ ಪ್ರಧಾನಗಳೆರಡನ್ನೇ ಆನುಮಾನಶಬ್ದದ ಅರ್ಥವೆಂದು ಪರಿಗಣಿಸಿದ್ದಾರೆ. ಆದರೆ ಪ್ರಕೃತ ಗ್ರಂಥದಲ್ಲಿ ರುದ್ರ, ಪ್ರಧಾನಾದಿ ಎಂಬುದಾಗಿ ಆದಿಪದವನ್ನು ಪ್ರಯೋಗಿಸಿದ್ದಾರೆ. ಈ ಆದಿಪದದಿಂದ ಹಿರಣ್ಯಗರ್ಭ, ಸೂರ್ಯ, ಶಕ್ತಿ ಮೊದಲಾದವರನ್ನು ಸ್ವೀಕರಿಸಬೇಕೆಂಬ ಅರ್ಥವನ್ನು ನೀವು ಹೇಳಿದಿರಿ. ಇದು ಹೇಗೆ ಸರಿ?

ಪ್ರಕಾಶಃ – ತಥಾಪಿ ಪೂರ್ವಪಕ್ಷಟೀಕಾಯಾಂ ದೃಷ್ಟಫಲವಿಧಾಯಕವಾಕ್ಯದೃಷ್ಟಾನ್ತೇನ ಸರ್ವಾಶ್ರಯತ್ವ-ಪ್ರತಿಪಾದಕವಾಕ್ಯಪ್ರಾಮಾಣ್ಯಾನುಮಾನೇನ ರುದ್ರಸ್ಯ ಪ್ರಧಾನಸ್ಯ ಚ ಸರ್ವಾಶ್ರಯತ್ವಸಿದ್ಧೇರುಕ್ತತ್ವೇನಾಸ್ಯ ಪೂರ್ವಪಕ್ಷನ್ಯಾಯಸ್ಯ ದುರಾಗಮಮಾತ್ರಸಾಧಾರಣ್ಯಾತ್ ।

ಉತ್ತರ - ಟೀಕೆಯಲ್ಲಿ ರುದ್ರ ಹಾಗೂ ಪ್ರಧಾನ ಎರಡನ್ನು ಮಾತ್ರ ಉಲ್ಲೇಖಿಸಿರಬಹುದು. ಆದರೆ ರುದ್ರ ಹಾಗೂ ಪ್ರಧಾನಗಳಲ್ಲಿ ಯಾವ ಪೂರ್ವಪಕ್ಷ ನ್ಯಾಯವನ್ನು ಹೇಳಿದ್ದಾರೋ, ಆ ನ್ಯಾಯವು ಹಿರಣ್ಯಗರ್ಭಾದಿಗಳಲ್ಲಿಯೂ ಸಮಾನವಾಗಿದೆ. ಪೂರ್ವಪಕ್ಷ ಟೀಕೆಯಲ್ಲಿ ದೃಷ್ಟಫಲವನ್ನು ವಿಧಾನ ಮಾಡುವಂತಹ ಶೈವಾದ್ಯಾಗಮಗಳ ದೃಷ್ಟಾಂತದಿಂದ ಸರ್ವಾಶ್ರಯತ್ವ ಪ್ರತಿಪಾದಕವಾದ ವಾಕ್ಯಕ್ಕೆ ಪ್ರಾಮಾಣ್ಯವನ್ನು ಅನುಮಾನ ಮಾಡಬೇಕೆಂದು ಹೇಳಿದ್ದಾರೆ. ಈ ಅನುಮಾನದಿಂದ ರುದ್ರ ಹಾಗೂ ಪ್ರಧಾನಕ್ಕೆ ಸರ್ವಾಶ್ರಯತ್ವವು ಸಿದ್ಧವಾಗುತ್ತದೆಂದು ಹೇಳಿರುವುದರಿಂದ ಈ ಪೂರ್ವಪಕ್ಷ ನ್ಯಾಯವು ಸಕಲ ದುರಾಗಮಗಳಲ್ಲಿ ಸಾಧಾರಣವಾಗಿದೆ. ಅಂದರೆ ಹಿರಣ್ಯಗರ್ಭಾದಿಗಳನ್ನು ಪ್ರತಿಪಾದಿಸುವ ಹೈರಣ್ಯಗರ್ಭ,

ಸೌರ ಮೊದಲಾದ ಆಗಮಗಳಲ್ಲಿಯೂ ಕೆಲವು ವಾಕ್ಯಗಳು ದೃಷ್ಟಫಲವಿಧಾಯಕವಾಗಿವೆ. ಅಂತಹ ವಾಕ್ಯಗಳಿಗೆ ಪ್ರಾಮಾಣ್ಯವು ಸಿದ್ಧಿಸುವ ಪ್ರಯುಕ್ತ ಸರ್ವಾಶ್ರಯತ್ವವನ್ನು ಪ್ರತಿಪಾದಿಸುವ ಉಳಿದ ವಾಕ್ಯಗಳಿಗೂ ಪ್ರಾಮಾಣ್ಯವನ್ನು ಅನುಮಾನ ಮಾಡಬಹುದು. ಹೀಗೆ ಪ್ರತಿಯೊಂದು ದುರಾಗಮಗಳಲ್ಲಿಯೂ ಸರ್ವಾಶ್ರಯತ್ವ ಪ್ರತಿಪಾದಕವಾದ ವಾಕ್ಯಕ್ಕೆ ಪ್ರಾಮಾಣ್ಯವನ್ನು ಸಾಧಿಸಬಹುದಾದ್ದರಿಂದ ಪೂರ್ವಪಕ್ಷ ನ್ಯಾಯವು ಎಲ್ಲೆಡೆ ಸಾಧಾರಣವಾಗಿದೆ.

ಪ್ರಕಾಶಃ – अतच्छब्दादित्युक्तसिद्धान्तन्यायस्य च दुरागममात्रप्रसिद्धरुद्रप्रधानादेः सर्वस्यापि द्युभ्वाद्यायतनत्वनिरासेऽपि साम्याद् भाष्ये रुद्रोक्तेस्तत्वनिर्णये प्रधानोक्तेष्टीकायामुभयोक्तेश्चोपलक्षणत्वादिति भावेनादिपदप्रयोगः ।

ಪೂರ್ವಪಕ್ಷ ನ್ಯಾಯವು ಎಲ್ಲಾ ದುರಾಗಮಗಳಲ್ಲಿ ಸಾಧಾರಣವಾಗಿದೆಯೆಂಬುದಷ್ಟೇ ಅಲ್ಲ, 'ಅತಚ್ಛಬ್ದಾತ್' ಎಂಬ ಸೂತ್ರ ಭಾಗದಿಂದ ಹೇಳಲ್ಪಟ್ಟ ಸಿದ್ಧಾಂತ ನ್ಯಾಯವೂ ಸಹ ಎಲ್ಲಾ ದುರಾಗಮಗಳ ನಿರಾಸ ವಿಷಯದಲ್ಲಿ ಸಾಧಾರಣವಾಗಿದೆ. ಅಂದರೆ ಪಾಶುಪತಾಗಮ ಹಾಗೂ ಸಾಂಖ್ಯಾಗಮಗಳಲ್ಲಿ ಮುಖ್ಯವಾಗಿ ಪ್ರಸಿದ್ಧರಾಗಿರುವ ರುದ್ರ, ಪ್ರಧಾನ ಮೊದಲಾದ ಶಬ್ದಗಳಿಂದ ಪ್ರತಿಪಾದ್ಯರಾದವರು ರುದ್ರಾದಿಗಳಲ್ಲ; ಹೊರತಾಗಿ ವಿಷ್ಣುವೇ ಆಗಿದ್ದಾನೆ. ರುದ್ರ ಪ್ರತಿಪಾದಕವಾದ ಶಬ್ದಗಳು ಅಲ್ಲಿ ಇರುವುದಿಲ್ಲವೆಂಬ ಸಿದ್ಧಾಂತ ನ್ಯಾಯವನ್ನು ಹೈರಣ್ಯಗರ್ಭಾದ್ಯಾಗಮಗಳಲ್ಲಿಯೂ ಹೇಳಬಹುದು. ಆದ್ದರಿಂದ ರುದ್ರ, ಪ್ರಕೃತಿಗಳು ಹೇಗೆ ದ್ಯುಭ್ವಾದ್ಯಾಯತನರಾಗುವುದಿಲ್ಲವೋ, ಅದರಂತೆ ಹಿರಣ್ಯಗರ್ಭಾದಿಗಳೂ ಸಹ ದ್ಯುಭ್ವಾದ್ಯಾಯತನರಾಗುವುದಿಲ್ಲ.

ಈ ಕಾರಣದಿಂದ ಭಾಷ್ಯದಲ್ಲಿ ಕೇವಲ ರುದ್ರನನ್ನು ಹೇಳಿರುವುದು; ತತ್ವನಿರ್ಣಯದಲ್ಲಿ ಪ್ರಧಾನವನ್ನಷ್ಟೇ ಹೇಳಿರುವುದು; ಹಾಗೂ ಟೀಕೆಯಲ್ಲಿ ರುದ್ರ ಹಾಗೂ ಪ್ರಧಾನರನ್ನು ಹೇಳಿರುವುದು ಉಪಲಕ್ಷಣವಾಗಿದೆಯೆಂದು ತಿಳಿಸಲು ಗ್ರಂಥಕಾರರು 'ರುದ್ರಪ್ರಧಾನಾದಿ' ಎಂಬುದಾಗಿ ಆದಿಶಬ್ದವನ್ನು ಪ್ರಯೋಗಿಸಿದ್ದಾರೆ.

ಪ್ರಕಾಶಃ – एतेनानुमानशब्दस्य व्युत्पत्तिद्वयेऽपि रुद्रार्थत्वे विशेष्यनिघ्नतया पुल्लिङ्गता स्यात् । ''नवेति विभाषा'' इति सूत्रे महाभाष्ये ''अयमितिकरणः परः प्रयुज्यते'' इति ल्युडन्तस्यापि पुल्लिङ्गप्रयोगात् । कैयटे ''क्रियत इति करणः । इतिश्चासौ करणश्च'' इति व्याख्यानादिति निरस्तम् ।

'ರುದ್ರಪ್ರಧಾನಾದಿ' ಎಂಬ ಗ್ರಂಥಕಾರರ ಮಾತಿನಿಂದ ಮತ್ತೊಂದು ಆಕ್ಷೇಪವೂ ನಿರಾಕೃತವಾಯಿತು.

ಆಕ್ಷೇಪ - ಹಿಂದೆ ಹೇಳಿದ ಎರಡು ವ್ಯುತ್ಪತ್ತಿಯನ್ನು ಅನುಮಾನ ಶಬ್ದದಲ್ಲಿ ವಿವಕ್ಷಿಸಿದಾಗಲೂ ಅನುಮಾನ ಶಬ್ದವಾಗಲೀ, ಅನುಮಾನ ಶಬ್ದವಾಗಲೀ, ಪುಲ್ಲಿಂಗದಲ್ಲಿ ಪ್ರಯೋಗಿಸಬೇಕು. ಏಕೆಂದರೆ ರುದ್ರನು ವಿಶೇಷ್ಯನಾಗಿರುವುದರಿಂದ ವಿಶೇಷಣವಾದ ಅನುಮಾನ ಶಬ್ದವು ವಿಶೇಷ್ಯದ ಲಿಂಗವನ್ನು ಅನುಸರಿಸಬೇಕಾದ ಕಾರಣ ಪುಲ್ಲಿಂಗದಲ್ಲಿಯೇ ಪ್ರಯೋಗಿಸಬೇಕು. ಅನುಮಾನ ಶಬ್ದವು ಲ್ಯುಡಂತವಾಗಿದೆ. ಲ್ಯುಟ್ ಪ್ರತ್ಯಯವು

ಭಾವಾರ್ಥದಲ್ಲಿ ಬಂದಾಗ ನಪುಂಸಕಲಿಂಗದಲ್ಲಿಯೇ ಪ್ರಯೋಗಿಸಬೇಕೆಂಬ ನಿಯಮವಿದೆ. ಆದರೆ ಕರಣಾರ್ಥದಲ್ಲಿ ಬಂದಾಗ ಪುಲ್ಲಿಂಗದಲ್ಲಿಯೂ ಪ್ರಯೋಗಿಸುವುದು ಕಂಡಿದೆ. ಪ್ರಕೃತ ಕರ್ಮಾರ್ಥದಲ್ಲಿ 'ಇತಿ' ಶಬ್ದವನ್ನು ಪ್ರಯೋಗಿಸಿದ್ದಾರೆಂದು ಈ ಹಿಂದೆ ಸಮರ್ಥಿಸಲಾಗಿದೆ. ಕರ್ಮಾರ್ಥದಲ್ಲಿ ಪ್ರಯೋಗಿಸಲ್ಪಟ್ಟ 'ಇತಿ' ಶಬ್ದವನ್ನೂ ಸಹ ಪುಲ್ಲಿಂಗದಲ್ಲಿ ಪ್ರಯೋಗ ಮಾಡಬಹುದು. ಉದಾಹರಣೆಗೆ - 'ನವೇತಿ ವಿಭಾಷಾ' ಎಂಬ ಸೂತ್ರವನ್ನು ವ್ಯಾಖ್ಯಾನಿಸುವಾಗ ಮಹಾಭಾಷ್ಯದಲ್ಲಿ 'ಅಯಮಿತಿಕರಣಃ ಪರಃ ಪ್ರಯುಜ್ಯತೇ' ಎಂಬುದಾಗಿ ಲುಡ್ಯಂತವಾದ ಕರಣ ಶಬ್ದವನ್ನು ಪುಲ್ಲಿಂಗದಲ್ಲಿ ಪ್ರಯೋಗಿಸಿದ್ದು ಕಾಣಸುತ್ತಿದೆ. ಕೈಯಟದಲ್ಲಿಯೂ 'ಕ್ರಿಯತ ಇತಿ ಕರಣಃ । ಇತಿಶ್ಚಾಸೌ ಕರಣಶ್ಚ' ಎಂಬ ವ್ಯಾಖ್ಯಾನವನ್ನು ಮಾಡಲಾಗಿದೆ. ಅಂದರೆ ಕರಣ ಶಬ್ದವು 'ಕ್ರಿಯತೇ ಇತಿ' ಎಂಬ ವ್ಯುತ್ಪತ್ತಿಯಿಂದ ಕರ್ಮಾರ್ಥದಲ್ಲಿ ಬಂದಿರುವ ಲುಡ್ಯಂತ ಶಬ್ದವಾಗಿದೆಯೆಂದು ತಿಳಿಯಬೇಕು. 'ಇತಿಶ್ಚಾಸೌ ಕರಣಶ್ಚ' ಎಂದರೆ ಪಾಣಿನಿಯಿಂದ ಪ್ರಯೋಗಿಸಲ್ಪಟ್ಟ 'ಇತಿ' ಶಬ್ದವೆಂದರ್ಥ. ಹೀಗೆ ಕರಣಶಬ್ದವನ್ನು ಪುಲ್ಲಿಂಗದಲ್ಲಿ ಪ್ರಯೋಗಿಸಿರುವ ಪ್ರಯುಕ್ತ ಇಲ್ಲಿರುವ ಅನುಮಾನ ಶಬ್ದವನ್ನಾಗಲೀ, ಅನುಮಾನ ಶಬ್ದವನ್ನಾಗಲೀ ಪುಲ್ಲಿಂಗದಲ್ಲಿಯೇ ಪ್ರಯೋಗಿಸಬೇಕಲ್ಲವೇ?

ಪ್ರಕಾಶಃ – ರುದ್ರಪ್ರಧಾನಾದಿತಿ ಸಾಮಾನ್ಯಸ್ಯ ವಿಶೇಷ್ಯಸ್ಯೋಪಾದಾನಾತ್ ।

ಸಮಾಧಾನ - ಈ ಆಕ್ಷೇಪಕ್ಕೆ ಅವಕಾಶವಿಲ್ಲ. ಒಂದು ವೇಳೆ 'ರುದ್ರಃ' ಎಂದು ಹೇಳಿದ್ದರೆ ಅನುಮಾನ ಶಬ್ದವು ವಿಶೇಷ್ಯದ ಲಿಂಗವನ್ನು ಅನುಸರಿಸಬೇಕಾದ್ದರಿಂದ ಪುಲ್ಲಿಂಗದಲ್ಲಿರಬೇಕಿತ್ತು. ಆದರೆ ರುದ್ರಪ್ರಧಾನಾದಿ ಎಂಬುದಾಗಿ ಆದಿಪದವನ್ನು ಸಾಮಾನ್ಯವಾಗಿ ಪ್ರಯೋಗಿಸಿದ್ದರಿಂದ ನಪುಂಸಕಲಿಂಗದಲ್ಲಿದೆಯೆಂದು ವಿವಕ್ಷಿಸಬಹುದು. ಅದಕ್ಕನುಸಾರಿಯಾಗಿ ಅನುಮಾನ ಶಬ್ದವನ್ನು ನಪುಂಸಕ ಲಿಂಗದಲ್ಲಿ ಹೇಳಿದ್ದು ತಪ್ಪಾಗುವುದಿಲ್ಲ.

ಪ್ರಕಾಶಃ – 'ತತ್ಪ್ರಧಾನತ್ವಾತ್ತಾಚ್ಛಬ್ದ್ಯಮ್' ಇತ್ಯಾಗಮ ಏವಾನುಮಾನಶಬ್ದೇನ ಗೃಹ್ಯತ ಇತ್ಯರ್ಥಃ ।

ಅನುಮಾನ ಶಬ್ದಕ್ಕೆ ಅನುಮಾನಕ್ಕೆ ವಿಷಯವಾದದ್ದು ಎಂಬರ್ಥವನ್ನು ಹೇಳಬಹುದು. ಆನುಮಾನಿಕ ಎಂಬ ಶಬ್ದಕ್ಕೂ ಸಹ ಅನುಮಾನಕ್ಕೆ ಸಂಬಂಧಿಸಿದ್ದು ಎಂಬರ್ಥವನ್ನು ಹೇಳಬಹುದು. ಆದರೆ ನೀವು ಅನುಮಾನವೇ ಪ್ರಧಾನವಾಗಿ ಉಳ್ಳ ಆಗಮವೆಂಬರ್ಥವನ್ನು ಹೇಳುತ್ತಿದ್ದೀರಿ. ಇದು ಹೇಗೆ? ಎಂಬ ಪ್ರಶ್ನೆಗೆ 'ತತ್ಪ್ರಧಾನತ್ವಾತ್ತಾಚ್ಛಬ್ದ್ಯಂ' ಎಂಬ ಮಹಾಭಾಷ್ಯದ ಮಾತಿನಂತೆ ಆಗಮವನ್ನು ಅನುಮಾನವೆಂದು ಹೇಳಬಹುದು. ಆಂದರೆ ಯಾವುದರಲ್ಲಿ ಯಾವುದು ಪ್ರಧಾನವಾಗಿದೆಯೋ, ಅದನ್ನೇ ಆ ಶಬ್ದದಿಂದ ಕರೆಯಬಹುದೆಂಬ ನಿಯಮವಿದೆ. ಶೈವಾದ್ಯಾಗಮಗಳಲ್ಲಿ ಅನುಮಾನವೇ ಪ್ರಧಾನವಾಗಿರುವುದರಿಂದ ಶೈವಾದ್ಯಾಗಮಗಳನ್ನು ಅನುಮಾನವೆಂದು ಕರೆಯಬಹುದು.

ಪ್ರಕಾಶಃ – ನನು

'ಶೈವಾದ್ಯಾಗಮಸಮ್ಪ್ರಾಪ್ತದೃಷ್ಟಗೇನ ಫಲೇನ ತು ।
ತದ್ಧಾಕ್ಯೋಪಮಯಾऽನ್ಯಚ್ಚ ಪ್ರಮಾಣತ್ವೇऽನುಮೀಯತೇ ।।

ಈಶವಾಕ್ಯತ್ವತ ಇತಿ ಚೇತ್ತದ್ವ್ಯಭಿಚಾರಿಣಾ ।
ಅಪ್ರಾಮಾಣ್ಯಾನುಮಾ ಚ ಸ್ಯಾತ್ ..... ।।'

ಇತಿ ಶಾಸ್ತ್ರಯೋನಿನಯಾನುಲ್ಯಾಖ್ಯಾನ ಏವಾತ್ರಾನುಮಾನಪದಸೂಚಿತಪೂರ್ವಪಕ್ಷಬೀಜಸ್ಯ ಟೀಕೋಕ್ತಸ್ಯ ನಿರಸ್ತತ್ವೇನ ಕಥಂ ಪುನರತ್ರಾಗಮಬಲೇನ ತತ್ಸಿದ್ಧಂ ರುದ್ರಪ್ರಧಾನಾದ್ಯಾಶಙ್ಕಾಚ ನಿರಸ್ಯತ ಇತಿ ಚೇತ್ -

ಈ ಅಧಿಕರಣದಲ್ಲಿ ಸೂತ್ರದಲ್ಲಿರುವ ಅನುಮಾನ ಪದದಿಂದ ಸೂಚಿತವಾದ ಪೂರ್ವಪಕ್ಷ ಬೀಜವನ್ನು ಟೀಕೆಯಲ್ಲಿ ನಿರಾಕರಿಸಿದ್ದಾರೆ. ಆದರೆ ಈ ಆಶಂಕೆಯನ್ನು ಶಾಸ್ತ್ರಯೋನಿತ್ವಾಧಿಕರಣದಲ್ಲಿಯೇ ನಿರಾಕರಿಸಿದ್ದಾಗಿದೆ. ಏಕೆಂದರೆ ಶಾಸ್ತ್ರಯೋನಿತ್ವಾಧಿಕರಣದ ಅನುವ್ಯಾಖ್ಯಾನವನ್ನು ನೋಡಿದಾಗ ಈ ವಿಷಯವು ಸ್ಪಷ್ಟವಾಗುತ್ತದೆ -

'ಶೈವಾದ್ಯಾಗಮಸಂಪ್ರಾಪ್ತದೃಷ್ಟಫಲೇನ ಫಲೇನ ತು ।
ತದ್ವಾಕ್ಯೋಪಮಯಾऽನೃತ್ಪ್ರಮಾಣತ್ವೇऽನುಮೀಯತೇ ।।

ಈಶವಾಕ್ಯತ್ವತ ಇತಿ ಚೇತ್ತದ್ವ್ಯಭಿಚಾರಿಣಾ ।
ಅಪ್ರಾಮಾಣ್ಯಾನುಮಾ ಚ ಸ್ಯಾತ್ ..... ।।'

ಶೈವಾದ್ಯಾಗಮಗಳಲ್ಲಿರುವ ದೃಷ್ಟಫಲವನ್ನು ವಿಧಾನ ಮಾಡುವ ವಾಕ್ಯದ ದೃಷ್ಟಾಂತದಿಂದ ಪ್ರಾಮಾಣ್ಯವನ್ನು ಸಾಧಿಸುವುದಾದರೆ ವ್ಯಭಿಚರಿತವಾದ ವಾಕ್ಯಗಳ ದೃಷ್ಟಾಂತದಿಂದ ಅಪ್ರಾಮಾಣ್ಯವನ್ನೂ ಸಹ ಅನುಮಾನ ಮಾಡಬಹುದು. ಆದ್ದರಿಂದ ಶೈವಾದ್ಯಾಗಮಗಳು ಪ್ರಮಾಣವಲ್ಲವೆಂದು ಹೇಳಿದ್ದಾರೆ. ಪುನಃ ನೀವು ಇಲ್ಲಿ ಶೈವಾದ್ಯಾಗಮಗಳ ಆಧಾರದಿಂದ ರುದ್ರ ಪ್ರಧಾನಾದಿಗಳೇ ಪ್ರತಿಪಾದ್ಯರಾಗಬಹುದೆಂದು ಪೂರ್ವಪಕ್ಷ ಮಾಡಿ ನಿರಾಕರಿಸುತ್ತಿದ್ದೀರಿ. ಆದ್ದರಿಂದ ಪುನರುಕ್ತವಾಗುತ್ತದಲ್ಲವೇ?

ಪ್ರಕಾಶಃ – ಅತ್ರೋಚ್ಯತೇ । **ಶ್ರುತಿಲಿಙ್ಗಬಾಹುಲ್ಯೇನ ಪ್ರಬಲಸಮಾಖ್ಯಾರೂಪಹೇತ್ವನ್ತರೇಣ ನಿರವಕಾಶಜಾಯಮಾನತ್ವಲಿಙ್ಗೇನ ಚ ಪೂರ್ವಪಕ್ಷೇ ಸತಿ ಪಾಶುಪತಾದ್ಯಾಗಮಸಿದ್ಧತ್ವಮಭ್ಯುಚಯ-ತ್ವೇನೋಚ್ಯತೇ । ತಥೈವ ಸುಧಾಯಾಮುಕ್ತೇರಿತಿ ।**

ಸಮಾಧಾನ - ಶೈವಾದ್ಯಾಗಮಗಳಿಂದ ಇಲ್ಲಿ ಪೂರ್ವಪಕ್ಷವನ್ನು ನೇರವಾಗಿ ಮಾಡುತ್ತಿಲ್ಲ ಹೊರತಾಗಿ, ಅನೇಕ ಶ್ರುತಿ ಹಾಗೂ ಲಿಂಗಗಳ ಆಧಾರದಿಂದ ಪ್ರಬಲವಾದ ಸಮಾಖ್ಯಾ ಎಂಬ ಹೇತ್ವಂತರದಿಂದ ಮತ್ತು ನಿರವಕಾಶವಾದ ಜಾಯಮಾನತ್ವವೆಂಬ ಲಿಂಗದ ಬಲದಿಂದ ಪೂರ್ವಪಕ್ಷವನ್ನು ಮಾಡಲಾಗಿದೆ. ಈ ಸಂದರ್ಭದಲ್ಲಿ ಶೈವಾದ್ಯಾಗಮಗಳಿಂದಲೂ ಸಿದ್ಧವಾಗಿದೆ ಎಂಬುದನ್ನು ಅಭ್ಯುಚ್ಚಯ ಯುಕ್ತಿಗೋಸ್ಕರ ಉಪಯೋಗಿಸಿಕೊಳ್ಳಲಾಗಿದೆ; ಹೊರತಾಗಿ ಶೈವಾದ್ಯಾಗಮಗಳಿಂದಲೇ ಪೂರ್ವಪಕ್ಷ ಮಾಡುತ್ತಿಲ್ಲ. ಸುಧೆಯಲ್ಲಿಯೂ ಹೀಗೆಯೇ ಹೇಳಿರುತ್ತಾರೆ. ಹೀಗೆ ಕೆಲವರ ಅಭಿಪ್ರಾಯ.

प्रकाशः – यद्वा ''रुद्रो वाव लोकाधारः'' इत्यादिश्रुत्या रुद्रादेस्सर्वाधारत्वप्राप्तौ तत्साहाय्येन तस्य द्युभ्वाद्यायतनत्वप्रतिपादकागमस्यापि प्रामाण्येन ''तद्व्यभिचारिणा । अप्रामाण्यानुमा च स्यात्'' इत्युक्ताप्रामाण्यानुमानस्य बाधितत्वात् ''दृष्टगेन फलेन तु'' इत्यनुमानस्य च समूलत्वात्तेन तत्प्रामाण्योपपत्तेरागमावष्टम्भेन पुनश्शङ्कायां रुद्रादिसमाख्याया वैष्णवत्वोक्त्यैवाप्रामाण्यानुमानं निर्बाधमिति समाधानमित्यभिप्राय इति ।

ಅಥವಾ ಮತ್ತೊಂದು ಬಗೆಯಲ್ಲಿ ಉತ್ತರಿಸಬಹುದು - 'ರುದ್ರೋ ವಾವ ಲೋಕಾಧಾರಃ' ಇತ್ಯಾದಿ ಶ್ರುತಿಯಿಂದ ರುದ್ರಾದಿಗಳು ಸರ್ವಕ್ಕೂ ಆಧಾರರಾಗಿದ್ದಾರೆಂದು ಪೂರ್ವಪಕ್ಷವು ಪ್ರಾಪ್ತವಾದರೆ ಈ ಪೂರ್ವಪಕ್ಷೀಯ ಯುಕ್ತಿಯ ಸಹಾಯದಿಂದ ದ್ಯುಭ್ವಾದ್ಯಾಯತನತ್ವವನ್ನು ಸಮರ್ಥಿಸುವ ಆಗಮಕ್ಕೆ ಪ್ರಾಮಾಣ್ಯವನ್ನು ಸಮರ್ಥಿಸಿದಂತಾಗುತ್ತದೆ. ಆವಾಗ ಶಾಸ್ತ್ರಯೋನಿತ್ವಾಧಿಕರಣದಲ್ಲಿ ಹೇಳಲ್ಪಟ್ಟ 'ತದ್ವ್ಯಭಿಚಾರಿಣಾ । ಅಪ್ರಮಾಣ್ಯಾನುಮಾ ಚ ಸ್ಯಾತ್' ಎಂಬ ಶೈವಾದ್ಯಾಗಮಗಳ ಅಪ್ರಮಾಣ್ಯಾನುಮಾನಕ್ಕೆ ಬಾಧರೂಪದೋಷವನ್ನು ಹೇಳಿದಂತಾಗುತ್ತದೆ. ಯಾವಾಗ ಶೈವಾದ್ಯಾಗಮಗಳ ಅಪ್ರಮಾಣ್ಯಾನುಮಾನಕ್ಕೆ ಬಾಧವು ಬರುತ್ತದೋ, ಆವಾಗ 'ದೃಷ್ಟಗೇನ ಫಲೇನ ತು' ಎಂಬ ಹೇತುವಿನಿಂದ ಶೈವಾದ್ಯಾಗಮಗಳ ಪ್ರಾಮಾಣ್ಯವನ್ನು ಸಾಧಿಸುವ ಅನುಮಾನವು ನಿರ್ದುಷ್ಟವಾಗುತ್ತದೆ. ಏಕೆಂದರೆ 'ರುದ್ರೋ ವಾವ ಲೋಕಾಧಾರಃ' ಎಂಬ ಶ್ರುತಿ ಮೂಲವಾದ್ದರಿಂದ. ಹೀಗೆ ಶೈವಾದ್ಯಾಗಮಗಳಿಗೆ ಪ್ರಾಮಾಣ್ಯವನ್ನು ಸಮರ್ಥಿಸುವ ಅನುಮಾನಕ್ಕೆ ಪ್ರಾಮಾಣ್ಯವು ಉಪಪನ್ನವಾಗುವುದರಿಂದ ಶೈವಾದ್ಯಾಗಮಗಳನ್ನು ಆಶ್ರಯಿಸಿ ದ್ಯುಭ್ವಾದ್ಯಾಯತನರಾಗಿರುವವರು ರುದ್ರಾದಿಗಳು ಆಗಬಹುದಲ್ಲವೇ ? ಎಂಬ ಪೂರ್ವಪಕ್ಷವು ಪುನಃ ಹುಟ್ಟುತ್ತದೆ.

ಈ ಪೂರ್ವಪಕ್ಷದಲ್ಲಿ ರುದ್ರಾದಿ ಸಮಾಖ್ಯಾಪ್ರಮಾಣಗಳಿಗೆ ವೈಷ್ಣವತ್ವವನ್ನು ಪ್ರತಿಪಾದಿಸಿದಾಗ ಅಪ್ರಾಮಾಣ್ಯಾನುಮಾನವು ನಿರ್ಬಾಧಿತವಾಗುತ್ತದೆ. ಅಂದರೆ ರುದ್ರಾದಿಗಳಿಗೆ ದ್ಯುಭ್ವಾದ್ಯಾಯತನತ್ವವನ್ನು ಸಮರ್ಥಿಸುವ ಶೈವಾದ್ಯಾಗಮಗಳಲ್ಲಿರುವ ರುದ್ರಾದಿ ಶಬ್ದಗಳೆಲ್ಲವೂ ವಿಷ್ಣುವನ್ನೇ ಸಮರ್ಥಿಸುತ್ತವೆಂದು ಸಮರ್ಥಿಸಿದಾಗ ಅಪ್ರಾಮಾಣ್ಯವನ್ನು ಸಾಧಿಸುವ ಅನುಮಾನಕ್ಕೆ ಬಾಧದೋಷವಿಲ್ಲವೆಂದು ಹೇಳಿದಂತಾಗುತ್ತದೆ. ಆವಾಗ ಶೈವಾದ್ಯಾಗಮಗಳ ಆಧಾರದಿಂದ ದ್ಯುಭ್ವಾದ್ಯಾಯತನತ್ವವನ್ನು ರುದ್ರಾದಿಗಳಿಗೆ ಹೇಳಲು ಸಾಧ್ಯವಿಲ್ಲವೆಂದು ನಿರ್ಣಯವಾಗುತ್ತದೆ. ಹೀಗೆ ಶಾಸ್ತ್ರಯೋನಿತ್ವಾಧಿಕರಣದ ಸಿದ್ಧಾಂತದ ಮೇಲೆ ಹೆಚ್ಚಿನ ಆಕ್ಷೇಪವನ್ನು ಮಾಡಲು ಸಾಧ್ಯವಿರುವುದರಿಂದ ಪುನರುಕ್ತಿ ದೋಷಕ್ಕೆ ಅವಕಾಶವಿಲ್ಲವೆಂದು ತಿಳಿಯಬೇಕು.

प्रकाशः – ''सोऽन्तकस्सरुद्रः'' इत्यादिभाष्यं सर्वं सूत्रारूढमिति भावेनाह – **अनेन चेति ।। सूत्रेणेत्यर्थः ।। विष्ण्वादिशब्दानामपि रुद्रादिशब्दत्वं नास्तीति ।।** तथात्वे तच्छब्दाभावादिति सूत्रकारो न ब्रूयादिति भावः ।

'ಸೋಂऽತಕಸ್ಸ ರುದ್ರಃ' ಇತ್ಯಾದಿ ಭಾಷ್ಯವನ್ನೆಲ್ಲಾ ಸೂತ್ರಾರೂಢ ಮಾಡುವ ಅಭಿಪ್ರಾಯದಿಂದ 'ಅನೇನ ಚ' ಇತ್ಯಾದಿ ವಾಕ್ಯವು ಹೊರಟಿದೆ. 'ಅನೇನ' ಎಂದರೆ ಸೂತ್ರದಿಂದ ಎಂದರ್ಥ. ರುದ್ರಸಮಾಖ್ಯಾದಲ್ಲಿರುವ ರುದ್ರಾ, ಪಿನಾಕಿ ಮೊದಲಾದ ಶಬ್ದಗಳೆಲ್ಲವೂ ವಿಷ್ಣುವನ್ನೇ ಮುಖ್ಯವಾಗಿ ಪ್ರತಿಪಾದಿಸುತ್ತವೆ. ಮತ್ತು ವಿಷ್ಣು ಸಮಾಖ್ಯಪ್ರಮಾಣದಲ್ಲಿರುವ ವಿಷ್ಣು ಮೊದಲಾದ ಶಬ್ದಗಳು ರುದ್ರಾದಿಗಳನ್ನು ಪ್ರತಿಪಾದಿಸುವುದಿಲ್ಲ. ಹಾಗೇನಾದರೂ ರುದ್ರಾದಿಗಳನ್ನು ವಿಷ್ಣು ಮೊದಲಾದ ಶಬ್ದಗಳು ಪ್ರತಿಪಾದಿಸುವುದಾದಲ್ಲಿ ಸೂತ್ರಕಾರರು 'ಅತಶ್ಚ ಬ್ದಾತ್' ಎಂದು ಹೇಳುತ್ತಿರಲಿಲ್ಲವೆಂದು ತಿಳಿಯಬೇಕು.

ಪ್ರಕಾಶಃ – ಅನುವ್ಯಾಖ್ಯಾನೋಕ್ತಮಪಿ ಸೂತ್ರಾಂಶಾಭಿಮತಮಿತ್ಯಾಹ – ಏವಞ್ಚೇತಿ ।। ಸಮಾಖ್ಯಾದಿಸ್ಥರುದ್ರಪಿನಾಕ್ಯಾದಿಶಬ್ದಾನಾಂ ವಿಷ್ಣೌ ಮುಖ್ಯತ್ವೇ ಸತೀತ್ಯರ್ಥಃ ।

ಅನುವ್ಯಾಖ್ಯಾನದಲ್ಲಿ ಹೇಳಿರುವ 'ಬಾಹುಲ್ಯಂ ಲಿಂಗಶಬ್ದಾನಾಮ್' ಇತ್ಯಾದಿಗಳು ಸೂತ್ರಕ್ಕೆ ಅಭಿಮತವಾಗಿದೆಯೆಂದು 'ಏವಂಚ' ಎಂಬ ವಾಕ್ಯದಿಂದ ಹೇಳುತ್ತಿದ್ದಾರೆ. 'ಏವಂಚ' ಎಂದರೆ ಸಮಾಖ್ಯಾಪ್ರಮಾಣದಲ್ಲಿರುವ ರುದ್ರ, ಪಿನಾಕೀ ಮೊದಲಾದ ಶಬ್ದಗಳು ವಿಷ್ಣುವನ್ನು ಮುಖ್ಯವಾಗಿ ಪ್ರತಿಪಾದನೆ ಮಾಡುವುದಾದರೆ ಎಂದರ್ಥ.

बाहुल्यं लिङ्गशब्दानामनुक्तिश्च विरुद्धता ।
अदृष्टिरन्वयाभावो विपरीतश्रुतिभ्रमः ।।

लिङ्गावकाशराहित्यभ्रमस्तादृग्द्वयं तथा ।
बहुतादृक्त्वमुक्तस्य विरोधोऽर्थात्तयागतिः ।।

समस्तमेतदित्यत्र पूर्वपक्षेषु युक्तयः ।
ता एव बलवत्यस्तु गत्यन्तरविवर्जिताः ।।

सिद्धान्तयुक्तयो ज्ञेया दृश्यन्ते ताश्च सर्वशः ।

बाहुल्यं लिंगशब्दानामनुक्तिश्च विरुद्धता ।
अदृष्टिरन्वयाभावो विपरीतश्रुतिभ्रमः ।।
लिंगावकाशराहित्यभ्रमस्तादृग् द्वयं तथा ।
बहुतादृक्त्वमुक्तस्य विरोधोऽर्थात्तथागतिः ।।
समस्तमेतदित्यत्र पूर्वपक्षेषु युक्तयः ।
ता एव बलवत्यस्तु गत्यंतरविवर्जिताः ।।
सिद्धांतयुक्तयो ज्ञेया दृश्यंते ताश्च सर्वशः ।

ಈ ಪಾದದಲ್ಲಿರುವ ಪ್ರತಿಯೊಂದು ಅಧಿಕರಣಗಳ ಪೂರ್ವಪಕ್ಷಯುಕ್ತಿಯನ್ನು ಹಾಗೂ ಸಿದ್ಧಾಂತ ಯುಕ್ತಿಯನ್ನು ಅನುವ್ಯಾಖ್ಯಾನದಲ್ಲಿ ಹೀಗೆ ಸಂಗ್ರಹಿಸಿದ್ದಾರೆ -

೧. ಬಾಹುಲ್ಯಂ ಲಿಂಗಶಬ್ದಾನಾಂ - ರುದ್ರನೇ ಮೊದಲಾದವರು ದ್ಯುಭ್ವಾದ್ಯಾಯತನರಾಗಿದ್ದಾರೆನ್ನಲು 'ರುದ್ರೋ ಮಾ ವಿಶಾಂತಕಃ', 'ಪ್ರಾಣೇಶ್ವರಃ ಕೃತ್ತಿವಾಸಾಃ', 'ಮನೋ ವೈ ರುದ್ರಃ', 'ರುದ್ರೋ ವಾವ ಲೋಕಾಧಾರಃ' ಇವೇ ಮೊದಲಾದ ಅನೇಕ ಶ್ರುತಿಗಳು ಅಂತಕತ್ವ, ಪಿನಾಕಿತ್ವ ಮೊದಲಾದ ಲಿಂಗಗಳು ಕಾರಣವಾಗಿವೆ. ಆದ್ದರಿಂದ ದ್ಯುಭ್ವಾದ್ಯಾಯತನತ್ವವು ರುದ್ರನ ಧರ್ಮವಾಗಿದೆಯೆಂದು ಪೂರ್ವಪಕ್ಷ. ಇದನ್ನೇ 'ಬಾಹುಲ್ಯಂ ಲಿಂಗಶಬ್ದಾನಾಮ್' ಎಂಬುದರಿಂದ ಸಂಗ್ರಹಿಸಿದ್ದಾರೆ.

೨. ಅನುಕ್ತಿಃ - ಇದು ಭೂಮಾಧಿಕರಣದ ಪೂರ್ವಪಕ್ಷಯುಕ್ತಿ. ಪ್ರಾಣನಿಗಿಂತ ಮತ್ತೊಬ್ಬ ಶ್ರೇಷ್ಠನು ಇರುತ್ತಾನೆಂದು ಶ್ರುತಿಯಲ್ಲಿ ಹೇಳಿಲ್ಲ. ಆದಕಾರಣ ಪ್ರಾಣನೇ ಭೂಮಶಬ್ದವಾಚ್ಯನಾಗಿದ್ದಾನೆಂಬುದು ಪೂರ್ವಪಕ್ಷಯುಕ್ತಿ.

೩. ವಿರುದ್ಧತಾ - ಇದು ಅಕ್ಷರಾಧಿಕರಣದ ಪೂರ್ವಪಕ್ಷಯುಕ್ತಿ. ಹಿಂದೆ ಬ್ರಹ್ಮನಲ್ಲಿ ಸರ್ವಾತ್ಮತ್ವಧರ್ಮವನ್ನು ಸಮರ್ಥಿಸಲಾಗಿದೆ. ಅಕ್ಷರಶಬ್ದವಾಚ್ಯನಾದವನು ಪರಬ್ರಹ್ಮನಾದಲ್ಲಿ 'ನ ತದಶ್ನಾತಿ ಕಿಂಚನ' ಎಂದು ಅನಾತ್ಮತ್ವ ಧರ್ಮವನ್ನು ಹೇಳಿದ್ದು ವಿರುದ್ಧವಾಗುತ್ತದೆ. ಇದು ಅಕ್ಷರಾಧಿಕರಣದ ಪೂರ್ವಪಕ್ಷ.

೪. ಆದೃಷ್ಟಿಃ - ಇದು ಸದಧಿಕರಣದ ಯುಕ್ತಿ. ಉಪಾದಾನಕಾರಣವನ್ನು ಬಿಟ್ಟು ವಿಕಾರನಾದವನೇ ಜಗತ್ತಿಗೆ ಕಾರಣನಾಗಬೇಕು. ಜಗತ್‌ರೂಪದಲ್ಲಿ ವಿಷ್ಣು ಪರಿಣಾಮವಾಗದ ಕಾರಣ ಜಗತ್‌ಕಾರಣನಾಗಲು ಸಾಧ್ಯವಿಲ್ಲ ಎಂದು ಪೂರ್ವಪಕ್ಷದ ಸಾರ.

೫. ಅನ್ವಯಾಭಾವಃ - ಇದು ದಹರಾಧಿಕರಣದ ಪೂರ್ವಪಕ್ಷಯುಕ್ತಿ. ವಿಷ್ಣು ಹೃತ್ಪದ್ಮಸ್ಥಿತನಾಗುವುದಾದರೆ 'ಯಾವಾನ್ ವಾ ಅಯಮ್ ಆಕಾಶಃ' ಎಂಬ ವಾಕ್ಯಕ್ಕೆ ಅನ್ವಯವು ಕೂಡುವುದಿಲ್ಲ.

೬. ವಿಪರೀತಶ್ರುತಿಭ್ರಮಃ - 'ತದೇತದಿತಿ ಮನ್ಯಂತೇ' 'ಕಥಂ ತದ್ವಿಜಾನಿಯಾಂ' ಎಂಬೆರಡು ವಾಕ್ಯಗಳಲ್ಲಿ 'ತತ್' ಮತ್ತು 'ಏತತ್' ಶಬ್ದಗಳಿಂದ ಹಿಂದೆ ಪ್ರಸಕ್ತವಾದ ಜ್ಞಾನಿಸುಖವನ್ನೇ ಪರಾಮರ್ಶ ಮಾಡಬೇಕು. 'ಏಕೋ ವಶೀ' ಎಂಬ ಹಿಂದಿನ ಶ್ರುತಿಯಲ್ಲಿ ಪರಮಾತ್ಮನು ಪ್ರಸ್ತುತನಾಗಿಲ್ಲವೆಂದು ಪೂರ್ವಪಕ್ಷಯು ವಿಪರೀತವಾಗಿ ತಿಳಿಯಲ್ಪಟ್ಟ ಶ್ರುತಿಯೇ ಪೂರ್ವಪಕ್ಷ ಸಾಧಕವಾದ ಯುಕ್ತಿಯಾಗಿದೆ. ಇದು ಆರನೆಯ ಅನುಕೃತ್ಯಧಿಕರಣದ ಪೂರ್ವಪಕ್ಷ ಯುಕ್ತಿ.

೭. ಲಿಂಗಾವಕಾಶರಾಹಿತ್ಯ ಭ್ರಮಃ - 'ಊರ್ಧ್ವಂ ಪ್ರಾಣಮ್ ಉನ್ನಯತಿ' ಎಂಬ ಶ್ರುತಿಯಲ್ಲಿ ಪ್ರಾಣವ್ಯವಸ್ಥಾಪಕತ್ವವೆಂಬ ಲಿಂಗಗಳಿಗೆ ವಿಷ್ಣುವಿನಲ್ಲಿ ಅವಕಾಶವಿರುವುದಿಲ್ಲ. ಆದರೆ ಪೂರ್ವಪಕ್ಷಯ ತಿಳುವಳಿಕೆಯು ಭ್ರಮೆಯಾದ್ದರಿಂದ 'ಲಿಂಗಾವಕಾಶರಾಹಿತ್ಯ ಭ್ರಮ' ಎಂಬುದು ಪೂರ್ವಪಕ್ಷ ಯುಕ್ತಿಯಾಗಿದೆ. ಇದು ವಾಮನಾಧಿಕರಣದ ಪೂರ್ವಪಕ್ಷ ಯುಕ್ತಿ.

೮.,೯, ಎಂಟನೆಯ ಅಪಶೂದ್ರಾಧಿಕರಣಕ್ಕೆ ಹಾಗೂ ಒಂಬತ್ತನೆಯ ದೇವತಾಧಿಕರಣಕ್ಕೆ ಪೂರ್ವಪಕ್ಷ ಯುಕ್ತಿಯನ್ನು ಹೇಳಿರುವುದಿಲ್ಲ.

೧೦. ದ್ವಯಂ ತಾದೃಕ್ - ನಿರವಕಾಶವಾದ ಉದ್ಯತತ್ವವೆಂಬ ಲಿಂಗ ಹಾಗೂ ವಜ್ರಶಬ್ದ ಇವೆರಡೂ ಸಹ ಪೂರ್ವಪಕ್ಷಗಳ ಯುಕ್ತಿಯೆಂದು ಕಂಪನಾಧಿಕರಣದಲ್ಲಿ ತಿಳಿಯಬೇಕು.

೧೧. ಬಹುತಾದೃಕ್ತ್ವಸ್ - ಹನ್ನೊಂದನೆಯ ಜ್ಯೋತಿರಧಿಕರಣದ ಪೂರ್ವಪಕ್ಷ ಯುಕ್ತಿ. ಆದಿತ್ಯ ಜ್ಯೋತಿಷ್ಟ್ವ, ಚಂದ್ರಜ್ಯೋತಿಷ್ಟ್ವ ಮೊದಲಾದ ಏಳು ಲಿಂಗಗಳಿಗೆ ವಿಷ್ಣುವಿನಲ್ಲಿ ಅವಕಾಶವಿಲ್ಲದಿರುವಿಕೆಯೇ ಪೂರ್ವಪಕ್ಷಪ್ರಾಪಕಯುಕ್ತಿಯಾಗಿದೆ.

೧೨. ಉಕ್ತಸ್ಯವಿರೋಧಃ - ಆಕಾಶ ಶಬ್ದಕ್ಕೆ ರೂಢ್ಯರ್ಥವನ್ನು ಬಿಟ್ಟು ವಿಷ್ಣುಪರವಾದ ಯೌಗಿಕಾರ್ಥವನ್ನು ಹೇಳುವುದರಿಂದ 'ವೈ' 'ನಾಮ' ಎಂಬೆರಡು ನಿಪಾತಗಳಿಗೆ ವಿರೋಧ ಬರುತ್ತದೆ. ಇದು ಆಕಾಶಾಧಿಕರಣದಲ್ಲಿನ ಯುಕ್ತಿ

೧೩. ಅರ್ಥಾತ್‌ತಥಾಗತಿಃ - ಜೀವೇಶ್ವರರಿಗೆ ವಕ್ಯವಿರುವ ಕಾರಣ ಅಸಂಗತ್ವಲಿಂಗದಿಂದ ಈಶ್ವರನಲ್ಲಿರುವ ಸ್ವಪ್ನಾದಿದ್ರಷ್ಟೃತ್ವವು ಜೀವನಲ್ಲಿಯೂ ಬರುತ್ತದೆ. ಇದು ಸುಷುಪ್ತ್ಯಧಿಕರಣದ ಪೂರ್ವಪಕ್ಷ ಯುಕ್ತಿ.

ಹೀಗೆ ಹದಿಮೂರು ಅಧಿಕರಣಗಳ ಪೂರ್ವಪಕ್ಷ ಯುಕ್ತಿಗಳನ್ನು ತಿಳಿಯಬೇಕು. ಈ ಪೂರ್ವಪಕ್ಷಯುಕ್ತಿಗಳೇ ನಿರವಕಾಶ ಪ್ರಯುಕ್ತವಾಗಿ ಬಲಿಷ್ಠವಾದಾಗ ಸಿದ್ಧಾಂತ ಯುಕ್ತಿಗಳಾಗುತ್ತವೆಂದು ತಿಳಿಯಬೇಕು.

ಪ್ರಕಾಶಃ – ಇತ್ಯನುವ್ಯಾಖ್ಯಾನ ಇತ್ಯರ್ಥಃ । ಅತಶ್ಚಾದಿತಿ ಸರ್ವಶಬ್ದಾನಾಮನ್ಯತ್ರಾಭಾವಂ ವದತಾ ಗತ್ಯನ್ತರವಿವರ್ಜಿತತ್ವಮುಕ್ತಮಿತಿ ಭಾವಃ ।

ಹೀಗೆ ಮೇಲೆ ಹೇಳಿದಂತೆ ಅನುವ್ಯಾಖ್ಯಾನದಲ್ಲಿ ಹೇಳಲ್ಪಟ್ಟ ಪೂರ್ವಪಕ್ಷದ ನ್ಯಾಯವನ್ನು ತಿಳಿದುಕೊಳ್ಳಬೇಕು.

'ನಾನುಮಾನಮತಚ್ಛಬ್ದಾತ್' ಎಂಬುದಾಗಿ ಸೂತ್ರದಲ್ಲಿ ರುದ್ರನನ್ನು ಪ್ರತಿಪಾದಿಸುವ ಯಾವುದೇ ಶಬ್ದಗಳು ಇಲ್ಲದ ಕಾರಣ ದ್ಯುಭ್ವಾದ್ಯಾಯತನನಾದವನು ವಿಷ್ಣುವೇ ಆಗಿದ್ದಾನೆಂದು ಹೇಳಿದ್ದಾರೆ. ಹೀಗೆ ಸಕಲ ಶಬ್ದಗಳು ವಿಷ್ಣುವಿನಲ್ಲಿ ಮಾತ್ರ ಉಪಪನ್ನವಾಗುತ್ತವೆ ಹೊರತು, ಬೇರೆ ಕಡೆ ಬರುವುದಿಲ್ಲವೆಂದು ತಿಳಿಸುವುದಕ್ಕಾಗಿ 'ಗತ್ಯಂತರವಿವರ್ಜಿತಾಃ' ಎಂಬ ಪದವನ್ನು ಅನುವ್ಯಾಖ್ಯಾನದಲ್ಲಿ ಹೇಳಿದ್ದಾರೆ.

ಪ್ರಕಾಶಃ – ನನ್ವತಚ್ಛಬ್ದಾದಿತ್ಯಸ್ಯ ತಚ್ಛಬ್ದಾಭಾವಾದಿತಿ ವ್ಯಾಖ್ಯಾನಮಯುಕ್ತಮ್ । ಅಸಾಮರ್ಥ್ಯೇನ ಸಮಾಸಾನುಪಪತ್ತೇಃ । ಅತಃ ಪರರೀತ್ಯಾ ಪರ್ಯುದಾಸಮಾಶ್ರಿತ್ಯ ತಚ್ಛಬ್ದವಿರುದ್ಧಶಬ್ದಾದಿತ್ಯೇವ ವ್ಯಾಖ್ಯೇಯಮಿತ್ಯತ ಆಹ – ಅತ್ರ ಚೇತಿ ।।

ಆಕ್ಷೇಪ - ಸೂತ್ರದಲ್ಲಿ 'ಅತಚ್ಛಬ್ದಾತ್' ಎಂಬ ಪದಕ್ಕೆ 'ತಚ್ಛಬ್ದಾಭಾವಾತ್' ಎಂದು ವ್ಯಾಖ್ಯಾನ ಮಾಡಿದಿರಿ. ಇದು ತಪ್ಪು. ಸಾಮರ್ಥ್ಯವಿಲ್ಲದ ಕಾರಣ ಹೀಗೆ ಸಮಾಸವೇ ಆಗುವುದಿಲ್ಲ. ಆದಕ್ಕೋಸ್ಕರ ಪರರು ಹೇಳುವಂತೆ ಪರ್ಯುದಾಸವನ್ನು ಆಶ್ರಯಿಸಿ 'ತಚ್ಛಬ್ದವಿರುದ್ಧಶಬ್ದಾತ್' ಎಂದೇ ವ್ಯಾಖ್ಯಾನಿಸಬೇಕು.

ಆಕ್ಷೇಪದ ಅಭಿಪ್ರಾಯ ಹೀಗಿದೆ - 'ಅತಚ್ಛಬ್ದಾತ್' ಎಂಬಲ್ಲಿರುವ ನಞ್‌ಗೆ ಎರಡು ಅರ್ಥಗಳನ್ನು ಹೇಳಬಹುದು. ೧. ಪ್ರಸಜ್ಯಪ್ರತಿಷೇಧ, ೨. ಪರ್ಯುದಾಸ ಎಂದು. ಒಂದು ವೇಳೆ ಕ್ರಿಯಾಪದದ ಜೊತೆಗೆ ನಞ್ ಎಂಬುದು ಅನ್ವಯವನ್ನು ಹೊಂದಿದರೆ 'ಪ್ರಸಜ್ಯಪ್ರತಿಷೇಧ' ಎನಿಸುತ್ತದೆ. ಒಂದು ವೇಳೆ ಉತ್ತರಪದದ ಜೊತೆಗೆ ನಞ್ ಅನ್ವಯವನ್ನು ಹೊಂದಿದರೆ 'ಪರ್ಯುದಾಸ' ಎನಿಸುತ್ತದೆ. ಪ್ರಕೃತ 'ಅತಚ್ಛಬ್ದಾತ್' ಎಂಬಲ್ಲಿ ಕೇಳಿಸುತ್ತಿರುವ 'ನಞ್'ಗೆ ತಚ್ಛಬ್ದ ಇಲ್ಲ ಎಂದು ಕ್ರಿಯಾಪದದ ಜೊತೆಗೆ ಅನ್ವಯವನ್ನು ಹೇಳುತ್ತಿದ್ದೀರಿ ಹೊರತು, ಉತ್ತರಪದವೆನಿಸಿದ ತಚ್ಛಬ್ದದ ಜೊತೆಗೆ ಅನ್ವಯವನ್ನು ಹೇಳುತ್ತಿಲ್ಲ. ಹೀಗಿರುವಾಗ ನಞ್‌ಗೂ ತಚ್ಛಬ್ದಕ್ಕೂ ಸಮಾಸ ಮಾಡುವುದು ಹೇಗೆ? ಎಂಬುದು ಆಕ್ಷೇಪದ ಸಾರ. ಆದರೆ ಅದ್ವೈತಿಗಳು ಪ್ರಸಜ್ಯ ಪ್ರತಿಷೇಧವನ್ನು ಮಾಡದೇ ಪರ್ಯುದಾಸವನ್ನು ಆಶ್ರಯಿಸಿದ್ದಾರೆ. ಅಂದರೆ ನಞ್‌ಗೆ ಸಮಾಸದಲ್ಲೇ ಇರುವ ಮುಂದಿನ ಪದದ ಜೊತೆಗೆ ಅನ್ವಯ ಮಾಡಿ 'ತಚ್ಛಬ್ದ' ಭಿನ್ನವಾದದ್ದು ಎಂಬರ್ಥವನ್ನು ಒಪ್ಪಿದ್ದಾರೆ. ನೀವೂ ಸಹ ಅವರಂತೆ ವ್ಯಾಖ್ಯಾನ ಮಾಡಬೇಕಲ್ಲವೇ?

ಈ ಪ್ರಶ್ನೆಗೆ ಗ್ರಂಥಕಾರರು 'ಅತ್ರಚ' ಎಂಬ ವಾಕ್ಯದಿಂದ ಉತ್ತರಿಸಿದ್ದಾರೆ.

ಪ್ರಕಾಶಃ – ಪ್ರಸಜ್ಯೇತಿ ।।

'ಪ್ರಸಜ್ಯಪ್ರತಿಷೇಧೋऽಯಂ ಕ್ರಿಯಯಾ ಸಹ ಯತ್ರ ನಞ್ ।
ಪರ್ಯುದಾಸಸ್ತ ವಿಜ್ಞೇಯೋ ಯತ್ರೋತ್ತರಪದೇನ ನಞ್ ।।' ಇತ್ಯುಕ್ತೇಃ ।

ಸಮಾಧಾನ - 'ಅತಚ್ಛಬ್ದಾತ್' ಎಂಬಲ್ಲಿ ಕ್ರಿಯಾಪದದ ಜೊತೆಗೆ 'ನಞ್' ಅನ್ವಯವನ್ನು ಹೊಂದಿದರೂ ಸಹ ಸಮಾಸವು ಸಾಧುವಾಗುತ್ತದೆ. ಅದು ಹೀಗೆ - ಗ್ರಂಥದಲ್ಲಿರುವ 'ಪ್ರಸಜ್ಯಪ್ರತಿಷೇಧ' ಎಂಬ ಮಾತಿನಿಂದ ಈ ಶ್ಲೋಕವನ್ನು ಸ್ಮರಿಸಿಕೊಳ್ಳಬೇಕು.

ಪ್ರಸಜ್ಯಪ್ರತಿಷೇಧೋऽಯಂ ಕ್ರಿಯಯಾ ಸಹ ಯತ್ರ ನಞ್ ।
ಪರ್ಯುದಾಸಸ್ತ ವಿಜ್ಞೇಯೋ ಯತ್ರೋತ್ತರಪದೇನ ನಞ್ ।।

ನಞ್ ಎಂಬ ಉಪಪದವು ಒಂದು ವೇಳೆ ಕ್ರಿಯೆಯಲ್ಲಿ ಅನ್ವಯವನ್ನು ಹೊಂದಿದರೆ 'ಪ್ರಸಜ್ಯಪ್ರತಿಷೇಧ' ಎನಿಸುತ್ತದೆ. ಉದಾಹರಣೆ - 'ಘಟಃ ನಾಸ್ತಿ' ಎಂಬ ವಾಕ್ಯದಲ್ಲಿ ಕ್ರಿಯಾಪದದ ಜೊತೆಗೆ 'ನಞ್' ಎಂಬುದು ಅನ್ವಯವನ್ನು ಹೊಂದಿರುವುದರಿಂದ ಅಭಾವ ಎಂಬರ್ಥವನ್ನು ಹೇಳಬಹುದು. ಇನ್ನು ಎಲ್ಲಿ 'ನಞ್' ಉತ್ತರ ಪದದ ಜೊತೆಗೆ ಅನ್ವಯವನ್ನು ಹೊಂದುತ್ತದೋ, ಅದನ್ನು ಪರ್ಯುದಾಸವೆಂದು ತಿಳಿಯಬೇಕು. 'ಪರ್ಯುದಾಸ' ಎಂದರೆ ಭೇದ. ಅಂದರೆ, 'ಅಘಟಃ' ಎಂದು ಹೇಳಿದಾಗ 'ನಞ್' ಎಂಬುದು ಸಮಾಸದಲ್ಲೇ ಇರುವ ಮುಂದಿನ ಪದದ ಜೊತೆಗೆ ಅನ್ವಯವನ್ನು ಹೊಂದಿದೆ. ಆದ್ದರಿಂದ ಘಟಕ್ಕಿಂತ ಭಿನ್ನವಾದುದು ಎಂದರ್ಥ.

ಪ್ರಕಾಶಃ – ಸೂರ್ಯಂ ನ ಪಶ್ಯನ್ತೀತ್ಯಸೂರ್ಯಂಪಶ್ಯಾಃ । ''ಅಸೂರ್ಯಲಲಾಟಯೋರ್ದೃಶಿತಪೋಃ'' ಇತಿ ಖಶಿ ಕೃತೇ ''ಖಿತ್ಯನವ್ಯಯಸ್ಯ । ಅರುರ್ದ್ವಿಷದಜನ್ತಸ್ಯ ಮುಮ್'' ಇತಿ ಮುಮಾಗಮೇ ''ಪಾಘ್ರಾಧ್ಮಾಸ್ಥಾಮ್ನಾದಾಣ್ದೃಶಿ'' ಇತ್ಯಾದಿನಾ ದೃಶೇಃ ಪಶ್ಯಾದೇಶೇ ರೂಪಮ್ ।

'ಸೂರ್ಯಂ ನ ಪಶ್ಯಂತೀತಿ ಅಸೂರ್ಯಂಪಶ್ಯಾಃ' ಎಂಬುದಾಗಿ ಸಮಾಸವಾಗುತ್ತದೆ. 'ಅಸೂರ್ಯಂ ಪಶ್ಯಾಃ' ಎಂಬ ರೂಪ ನಿಷ್ಪತ್ತಿಯನ್ನು ಹೀಗೆ ತಿಳಿಯಬೇಕು - 'ಅಸೂರ್ಯಲಲಾಟಯೋರ್ದೃಶಿತಪೋಃ' ಎಂಬ ಸೂತ್ರದಲ್ಲಿ 'ಅಸೂರ್ಯ' ಹಾಗೂ 'ಲಲಾಟ' ಎಂಬೆರಡು ಶಬ್ದಗಳಿಗೆ 'ದೃಶಿ' ಹಾಗೂ 'ತಪ' ಎಂಬ ಕ್ರಿಯಾಪದಗಳು ಮುಂದಿರುವಾಗ 'ಖಶ್' ಎಂಬ ಆಗಮ ಬರುತ್ತದೆ. 'ಅಸೂರ್ಯಂಪಶ್ಯಾಃ' 'ಲಲಾಟಂ ತಪಃ' ಎಂಬೆರಡು ಪ್ರಯೋಗಗಳು ಲೋಕದಲ್ಲಿವೆ. ಇದರ ರೂಪನಿಷ್ಪತ್ತಿ ಕ್ರಮ ಹೀಗೆ - ಅಸೂರ್ಯ + ದೃಶ್ ಎಂದಿದ್ದಾಗ ಮೊದಲು 'ಖಷ್' ಪ್ರತ್ಯಯವು ಬಂದು ನಂತರ 'ಖಿತ್ಯನವ್ಯಯಸ್ಯ । ಅರುರ್ದ್ವಿಷದಜಂತಸ್ಯ ಮುಮ್' ಎಂಬ ಸೂತ್ರದಿಂದ 'ಮುಮ್' ಎಂಬ ಆಗಮವು ಬರುತ್ತದೆ. ಅಂದರೆ ಅಸೂರ್ಯ ಶಬ್ದಕ್ಕೆ 'ಖಶ್' ಪ್ರತ್ಯಯ ಬಂದಾಗ, ಅಲ್ಲಿ 'ಖಶ್' ಎಂಬಲ್ಲಿ ಆಕಾರ ಮಾತ್ರ ಉಳಿಯುತ್ತದೆ. ಹಾಗೂ 'ಮುಮ್' ಪ್ರತ್ಯಯದಲ್ಲಿ 'ಮು' ಎಂಬುದು ಮಾತ್ರ ಉಳಿಯುತ್ತದೆ. ಆವಾಗ 'ಅಸೂರ್ಯ + ಅಂ' ಎಂದಾಯಿತು. 'ಯಸ್ಯೇತೀಚ' ಎಂಬ ಸೂತ್ರದಿಂದ ಆಕಾರವು ಲೋಪವಾದರೆ 'ಅಸೂರ್ಯಂ' ಎಂಬ ರೂಪವು ನಿಷ್ಪನ್ನವಾಯಿತು. 'ಪಾಘ್ರಾಧ್ಮಾಸ್ಥಾಮ್ನಾದಾಣ್‌ದೃಶಿ' ಎಂಬ ಸೂತ್ರದಿಂದ ದೃಶಿ ಧಾತುವಿಗೆ 'ಪಶ್ಯ' ಎಂಬ ಆದೇಶವು ಬಂದರೆ 'ಅಸೂರ್ಯಂ ಪಶ್ಯಾಃ' ಎಂಬ ರೂಪವು ನಿಷ್ಪನ್ನವಾಗುತ್ತದೆ.

ಪ್ರಕಾಶಃ – ಶ್ರಾದ್ಧಂ ನ ಭುಙ್ಕ ಇತ್ಯಶ್ರಾದ್ಧಭೋಜೀ । ''ವ್ರಜ'' ಇತಿ ಸೂತ್ರೇಣ ಶಾಸ್ತ್ರೀಯನಿಯಮರೂಪೇ ವ್ರತೇ ಗಮ್ಯಮಾನೇ ಸುಬಂತ ಉಪಪದೇ ಧಾತೋರ್ಣಿನಿ ರೂಪಮ್ ।

ಇದರಂತೆ 'ಅಶ್ರಾದ್ಧಭೋಜೀ' ಎಂಬ ರೂಪವನ್ನೂ ಸಹ ತಿಳಿಯಬೇಕು. 'ಶ್ರಾದ್ಧಂ ನ ಭುಂಕ್ತೇ ಇತಿ ಅಶ್ರಾದ್ಧಭೋಜೀ' ಎಂದು ಸಮಾಸವಾಗಿದೆ. ಯಾರು ಶ್ರಾದ್ಧದ ಊಟವನ್ನೇ ಮಾಡುವುದಿಲ್ಲವೆಂಬ ನಿಯಮವುಳ್ಳವನಾಗಿರುತ್ತಾನೋ, ಅವನನ್ನು 'ಅಶ್ರಾದ್ಧಭೋಜೀ' ಎಂದು ಕರೆಯುತ್ತಾರೆ. 'ವ್ರಜ' ಎಂಬ ಸೂತ್ರದಿಂದ ಶಾಸ್ತ್ರನಿಯಮವಂಬ ವ್ರತವು ಗಮ್ಯಮಾನವಾಗಿರುವಾಗ ಸುಬಂತವು ಉಪಪದವಾದಾಗ ಧಾತುವಿಗೆ 'ಣಿನಿ' ಎಂಬ ಪ್ರತ್ಯಯವು ಬರುತ್ತದೆ. ಪ್ರಕೃತ ಶ್ರಾದ್ಧದ ಊಟವನ್ನು ಮಾಡುವುದಿಲ್ಲವೆಂಬ ಶಾಸ್ತ್ರೀಯನಿಯಮರೂಪವಾದ ವ್ರತವು ಗಮ್ಯಮಾನವಾದ ಪ್ರಯುಕ್ತ 'ಭುಜು' ಧಾತುವಿಗೆ 'ಣಿನಿ' ಪ್ರತ್ಯಯಬಂದರೆ 'ಭೋಜೀ' ಎಂಬ ರೂಪವು ನಿಷ್ಪನ್ನವಾಗುತ್ತದೆ.

ಪ್ರಕಾಶಃ – ಅತ್ರ ನಞಃ ಕ್ರಿಯಾಸಾಪೇಕ್ಷತ್ವೇನ ಸೂರ್ಯಾದಿಪದೇನಾಕಾಙ್ಕ್ಷಾಭಾವೇऽಪಿ ಸಮಾಸಸ್ಸ್ವೀಕೃತೋ ಜ್ಞಾಪಕೇನ । ಜ್ಞಾಪಕಮಾಹ – ಅಕರ್ತರೀತಿ ।।

'ಅಸೂರ್ಯಂ ಪಶ್ಯಾಃ' ಎಂಬಲ್ಲಿ ಮತ್ತು 'ಅಶ್ರಾದ್ಧಭೋಜೀ' ಎಂಬಲ್ಲಿ 'ನಞ್' ಕ್ರಿಯಾಸಾಪೇಕ್ಷವಾಗಿದ್ದರೂ ಸಮಾಸ ಮಾಡಿದ್ದು ಕಾಣಸುತ್ತಿದೆ. ಅಂದರೆ ನಞ್‌ಗೆ ಮುಂದಿರುವ ಸೂರ್ಯಪದದಿಂದಾಗಲೀ ಶ್ರಾದ್ಧಪದದಿಂದಾಗಲೀ ಆಕಾಂಕ್ಷೆಯು ಇರುವುದಿಲ್ಲ. ಆದರೂ ಸಹ ವೈಯ್ಯಾಕರಣರು ಸಮಾಸವನ್ನು ಒಪ್ಪಿದ್ದಾರೆ. ಈ ವಿಷಯದಲ್ಲಿ ಜ್ಞಾಪಕವನ್ನು 'ಅಕರ್ತರಿ' ಎಂಬ ವಾಕ್ಯದಿಂದ ಗ್ರಂಥಕಾರರು ಹೇಳುತ್ತಿದ್ದಾರೆ.

ಪ್ರಕಾಶಃ – ತೃತೀಯಾಧ್ಯಾಯಸ್ಯ ತೃತೀಯಪಾದೇ ಕರ್ತೃವರ್ಜಿತೇऽನ್ಯಸ್ಮಿನ್ಕಾರಕೇ ಸಂಜ್ಞಾಯಾಂ ವಿಷಯೇ ಧಾತೋರ್ಘಞ್ಪ್ರತ್ಯಯೋ ಭವತಿ । ಚಕಾರಾದಸಂಜ್ಞಾಯಾಂ ಚ । ಪ್ರಾಸ್ಯಂತಿ ತಮಿತಿ ಪ್ರಾಸ

इत्यादिसिद्ध्यर्थम् । तत्र सूत्रेऽकर्तरीति किं पर्युदासः किं वा प्रसज्यप्रतिषेध इति विचारे पर्युदासपक्षे नञिवयुक्तन्यायेन कर्तृभिन्नस्य कर्तृसदृशस्य कारकस्यैव ग्रहणसम्भवात् कारकपदं व्यर्थम् । तल्क्रियते । तेन ज्ञायतेऽकर्तरीति न पुर्यदासः । किं तु प्रसज्यप्रतिषेध इति । तथाच प्रसज्यप्रतिषेधेऽपि समासोऽस्तीति ज्ञापनाय कारकपदमिति ।

ಮೂರನೇ ಅಧ್ಯಾಯದ, ಮೂರನೇ ಪಾದದಲ್ಲಿ 'ಅಕರ್ತರಿ ಚ ಕಾರಕೇ ಸಂಜ್ಞಾಯಾಮ್' ಎಂಬ ಸೂತ್ರವಿದೆ. ಈ ಸೂತ್ರದಲ್ಲಿ ಕರ್ತೃಭಿನ್ನವಾದ ಬೇರೆ ಕಾರಕಗಳಲ್ಲಿ ಸಂಜ್ಞೆಯು ವಿಷಯವಾಗಿದ್ದರೆ ಧಾತುವಿಗೆ 'ಘಞ್' ಪ್ರತ್ಯಯವನ್ನು ವಿಧಾನ ಮಾಡಲಾಗಿದೆ. ಸೂತ್ರದಲ್ಲಿರುವ 'ಚ' ಶಬ್ದದಿಂದ ಸಂಜ್ಞೆಯು ವಿಷಯವಾಗದಿದ್ದಾಗಲೂ 'ಘಞ್' ಪ್ರತ್ಯಯ ಬರುತ್ತದೆಂದು ತಿಳಿಸಲಾಗಿದೆ. ಆದ್ದರಿಂದಲೇ 'ಪ್ರಾಸಂತಿ ತಮ್ ಇತಿ ಪ್ರಾಸಃ' 'ಎಸೆಯಲ್ಪಡುವಂತಹ ವಸ್ತು 'ಪ್ರಾಸ' ಎನಿಸುತ್ತದೆ' ಎಂಬುದಾಗಿ 'ಪ್ರಾಸ' ಶಬ್ದವು 'ಘಞ್' ಪ್ರತ್ಯಯಾಂತವಾಗಿ ನಿಷ್ಪನ್ನವಾಗುತ್ತದೆ. ಇದು ಕರ್ಮಾರ್ಥಕವಾಗಿದೆ.

ಈ ಸೂತ್ರದಲ್ಲಿ 'ಅಕರ್ತರಿ' ಎಂಬಲ್ಲಿರುವ 'ನಞ್' ಎಂಬುದು ಪರ್ಯುದಾಸಾರ್ಥದಲ್ಲಿದೆಯೋ? ಅಥವಾ ಪ್ರಸಜ್ಯಪ್ರತಿಷೇಧಾರ್ಥದಲ್ಲಿದೆಯೋ? ಎಂಬ ವಿಚಾರವು ಪ್ರಾಪ್ತವಾದರೆ ಪರ್ಯುದಾಸ ಪಕ್ಷವನ್ನು ಉಪೇಕ್ಷಿಸಬಾರದು. ಹಾಗೇ ಪರ್ಯುದಾಸವೆಂದು ವಿವಕ್ಷಿಸಿದರೆ ಕರ್ತೃಭಿನ್ನವಾದ ಕಾರಕ ಎಂದರ್ಥವಾಗುತ್ತದೆ. ಏಕೆಂದರೆ 'ನಞ್ಯುಕ್ತಂ ತದ್ವಿನ್ನೇ, ತದ್ಸದೃಶೇ ವರ್ತತೇ ತಥಾ ಹ್ಯರ್ಥಗತಿಃ' ನಞ್‌ನಿಂದ ಅಥವಾ 'ಇವ'ದಿಂದ ಕೂಡಿದ ಪದವು ಅದರಿಂದ ಭಿನ್ನವಾದದ್ದನ್ನು ಮತ್ತು ತತ್‌ಸದೃಶವಾದದ್ದನ್ನು ತಿಳಿಸುತ್ತದೆಂದು ಪರಿಭಾಷೆ. ಉದಾಹರಣೆ ಹೀಗಿದೆ - 'ಅಬ್ರಾಹ್ಮಣಃ' ಎಂದರೆ ಬ್ರಾಹ್ಮಣಭಿನ್ನನು ಅಥವಾ ಬ್ರಾಹ್ಮಣಸದೃಶನು ಎಂದರ್ಥ. ಆದರಂತೆ ಪ್ರಕೃತದಲ್ಲಿ 'ಅಕರ್ತರಿ' ಎಂದರೆ ಕರ್ತೃಭಿನ್ನವಾದ ಮತ್ತು ಕರ್ತೃಸದೃಶವಾದ ಕಾರಕ ಎಂದು ತಿಳಿಯುತ್ತದೆ. ಹೀಗೆ ಸೂತ್ರದಲ್ಲಿ 'ಕಾರಕೇ' ಎಂಬ ಪದವನ್ನು ಹೇಳದ್ದಿದರೂ 'ಅಕರ್ತರಿ' ಎಂಬ ಪದದಿಂದಲೇ ಕಾರಕವು ಜ್ಞಾತವಾಗುತ್ತದೆ. ಆದರೂ ಸಹ 'ಕಾರಕೇ' ಎಂದು ಗ್ರಹಣ ಮಾಡಿದ್ದರಿಂದ ಇದು ಪರ್ಯುದಾಸವಲ್ಲ; ಹೊರತು ಪ್ರಸಜ್ಯಪ್ರತಿಷೇಧವೆಂದು ಸ್ಪಷ್ಟವಾಗುತ್ತದೆ. ಪ್ರಸಜ್ಯಪ್ರತಿಷೇಧಾರ್ಥದಲ್ಲಿಯೂ ನಞ್‌ಸಮಾಸವಾಗುತ್ತದೆಂದು ತಿಳಿಸುವುದಕ್ಕಾಗಿಯೇ ಪಾಣಿನಿಯು 'ಕಾರಕೇ' ಎಂಬ ಪದವನ್ನು ಸೂತ್ರದಲ್ಲಿ ಹೇಳಿರುತ್ತಾರೆ.

ಪ್ರಕಾಶಃ – अत एव ''आदेच उपदेशेऽशिति'' इति सौत्रनिर्देशो युक्तः । उपदेश एच आत्वं भवति । शिति तु शकारेत्सञ्ज्ञकप्रत्यये परतो न भवतीति प्रसज्यप्रतिषेधार्थत्वस्य तत्राभिमतत्वात् । पर्युदासत्वे तु शितोऽन्यत्राञ्प्रभृति-प्रत्यये परत एच आत्वं भवतीत्यर्थप्राप्त्या 'सुग्लः' 'सुम्लः' इत्यादौ ''आतश्चोपसर्गे'' इति कप्रत्ययो न स्यात् । व्यक्तमेतत्सर्वं वृत्त्यादौ ।

ಪ್ರಸಜ್ಯ ಪ್ರತಿಷೇಧಾರ್ಥದಲ್ಲಿಯೂ ನ್ಞಿ ಸಮಾಸವಾಗಬಹುದೆಂಬುದಕ್ಕೆ ಮತ್ತೊಂದು ಉದಾಹರಣೆ - 'ಆದೇಚ ಉಪದೇಶೇऽಶಿತಿ' ಎಂಬ ಸೂತ್ರ. ಈ ಸೂತ್ರದ ನಿರ್ದೇಶದಿಂದಲೂ ಮೇಲೆ ಹೇಳಿದ ವಿಷಯವು ಮತ್ತಷ್ಟು ಸ್ಪಷ್ಟವಾಗಿ ಯುಕ್ತವಾಗುತ್ತದೆ. 'ಏ, ಓ, ಐ, ಔ' ಅಕ್ಷರಗಳೇ ಕೊನೆಯಾಗಿ ಉಳ್ಳ ಯಾವ ಧಾತುವು ಉಪದೇಶದಲ್ಲಿ (ಧಾತುಪಾಠದಲ್ಲಿ) ವಿಹಿತವಾಗಿದೆಯೋ ಆ ಧಾತುಗಳ, ಕೊನೆಯಲ್ಲಿರುವ 'ಏಚ್' ಎಂದರೆ (ಏ, ಓ, ಐ, ಔ) ಅಕ್ಷರಗಳಿಗೆ 'ಆತ್' ಎಂಬುದು ಬರುತ್ತದೆ. ಈ ಸೂತ್ರದಲ್ಲಿ 'ಆಶಿತಿ' ಎಂದು ಹೇಳಿದ್ದಾರೆ. ಇದಕ್ಕೆ 'ಶಿತ್'ಭಿನ್ನವಾದ ಪ್ರತ್ಯಯವೆಂದು ಪರ್ಯುದಾಸವನ್ನು ಆಶ್ರಯಿಸಬೇಕೋ? ಅಥವಾ ಶಿತ್ತಾದ ಪ್ರತ್ಯಯವಿದ್ದರೆ ಆತ್ವವು ಬರುವುದಿಲ್ಲವೆಂದು ಪ್ರಸಜ್ಯಪ್ರತಿಷೇಧಾರ್ಥವನ್ನು ಮಾಡಬೇಕೋ? ಎಂಬ ವಿಚಾರವು ಪ್ರಾಪ್ತವಾಗುತ್ತದೆ. ಶಕಾರವೇ 'ಇತ್' ಸಂಜ್ಞೆಯಾಗಿವುಳ್ಳ ಪ್ರತ್ಯಯವು ಪರದಲ್ಲಿದ್ದಾಗ ಆತ್ವವು ಬರುವುದಿಲ್ಲವೆಂಬ ಪ್ರಸಜ್ಯಪ್ರತಿಷೇಧಾರ್ಥವನ್ನು ವೈಯ್ಯಾಕರಣರು ಒಪ್ಪಿದ್ದಾರೆ. ಹೊರತು ಪರ್ಯುದಾಸ ಪಕ್ಷವನ್ನು ಒಪ್ಪಿರುವುದಿಲ್ಲ. ಹಾಗೇನಾದರೂ ಪರ್ಯುದಾಸಾರ್ಥವನ್ನು ನ್ಞಿಗೆ ಹೇಳಿದರೆ 'ಶಿತ್'ಭಿನ್ನವಾದ 'ಏಚ್' ಮೊದಲಾದ ಯಾವುದೇ ಪ್ರತ್ಯಯಗಳು ಪರದಲ್ಲಿದ್ದಾಗ ಆತ್ವವು ಬರುತ್ತದೆಂದು ಸೂತ್ರದ ಅರ್ಥವಾಯಿತು. ಆವಾಗ 'ಸುಗ್ಲಃ, ಸುಮ್ಲಃ' ಇತ್ಯಾದಿ ಸ್ಥಳಗಳಲ್ಲಿ 'ಆತಶ್ಚೋಪಸರ್ಗೇ' ಎಂಬ ಸೂತ್ರದಿಂದ 'ಕ' ಪ್ರತ್ಯಯವನ್ನು ಹೇಳದೇ ಇರಬೇಕಾದೀತು,

'ಗ್ಲೈ' ಅಥವಾ 'ಮ್ಲೈ' ಧಾತುಗಳಿಗೆ 'ಆದೇಶ ಆಶಿತಿ' ಎಂಬ ಸೂತ್ರದಿಂದ ಆತ್ವವು ಬರುತ್ತದೆ. ಆನಂತರ 'ಗ್ಲೈ' ಎಂಬಲ್ಲಿರುವ 'ಏ' ಅಕ್ಷರಕ್ಕೆ ಆತ್ವವು ಪ್ರಾಪ್ತವಾದರೆ 'ಗ್ಲಾ' ಎಂದಾಗುತ್ತದೆ. ಆನಂತರ ಆಕಾರವೇ ಅಂತವಾಗಿವುಳ್ಳ ಧಾತು ಉಪಸರ್ಗ ಸಹಿತವಾದಾಗ 'ಆತಶ್ಚೋಪಸರ್ಗೇ' ಎಂಬ ಸೂತ್ರವು 'ಕ' ಎಂಬ ಪ್ರತ್ಯಯವನ್ನು ವಿಧಿಸುತ್ತದೆ. ಒಂದು ವೇಳೆ 'ಆದೇಚ ಉಪದೇಶೇऽಶಿತಿ' ಎಂಬ ಸೂತ್ರದಲ್ಲಿರುವಾಗ 'ಆಶಿತಿ' ಎಂಬ ಪದಕ್ಕೆ ಶಿತ್‌ಭಿನ್ನವಾದ ಪ್ರತ್ಯಯವು ಪರದಲ್ಲಿದ್ದಾಗ ಎಂದು ಪರ್ಯುದಾಸ ಮಾಡಿದರೆ 'ಆತ್ವ' ಬರುವ ಮೊದಲು ಯಾವುದೇ ಪ್ರತ್ಯಯವು ಪರದಲ್ಲಿ ಇಲ್ಲದ ಕಾರಣ 'ಗ್ಲೈ' ಎಂಬಲ್ಲಿರುವ 'ಏ' ಕಾರಕ್ಕೆ ಆತ್ವವು ಹೇಗೆ ಬರುತ್ತದೆ? ಆತ್ವವೇ ಬಾರದಿದ್ದಾಗ 'ಆತಶ್ಚೋಪಸರ್ಗೇ' ಎಂಬ ಸೂತ್ರದಿಂದ 'ಕ' ಪ್ರತ್ಯಯವಾದರೂ ಸಹ ಹೇಗೆ ಬರಲು ಸಾಧ್ಯ ? ಆದ್ದರಿಂದ ಪರ್ಯುದಾಸಪಕ್ಷವನ್ನು ಆಶ್ರಯಿಸಬಾರದು. ಪ್ರಸಜ್ಯಪ್ರತಿಷೇಧಾರ್ಥವನ್ನು ಸ್ವೀಕರಿಸಿದರೆ ಈ ಸಮಸ್ಯೆ ಇಲ್ಲ. 'ಶಿತಿ ತು ನಭವತಿ' ಎಂದು ವಿವಕ್ಷಿಸಿದಾಗ ಶಿತ್ತಾದ ಪ್ರತ್ಯಯ ಪರದಲ್ಲಿದ್ದರೆ 'ಆತ್ವ' ಬರುವುದಿಲ್ಲವೆಂದಷ್ಟೇ ಸೂತ್ರಕ್ಕೆ ಅರ್ಥ. ಶಿತ್‌ಭಿನ್ನವಾದ ಪ್ರತ್ಯಯವಿದ್ದರೆ 'ಆತ್ವ' ಬರುತ್ತದೆ ಎಂದರ್ಥವಲ್ಲ. ಆದ್ದರಿಂದ 'ಗ್ಲೈ' ಎಂಬ ಧಾತುವಿಗೆ ಮುಂದೆ ಯಾವುದೇ ಪ್ರತ್ಯಯವಿಲ್ಲದಿದ್ದರೂ ಸಹ ಆಕಾರವನ್ನು ಹೇಳಬಹುದು. ಆನಂತರ 'ಆತಶ್ಚೋಪಸರ್ಗೇ' ಎಂಬ ಸೂತ್ರದಿಂದ ಕಪ್ರತ್ಯಯವನ್ನು ಹೇಳಬಹುದು. ಈ ಎಲ್ಲಾ ವಿಷಯಗಳು ಕಾಶಿಕಾ ವೃತ್ತಿ ಮೊದಲಾದವುಗಳಲ್ಲಿ ಸ್ಪಷ್ಟವಾಗಿ ಹೇಳಿರುತ್ತಾರೆ.

ಪ್ರಕಾಶಃ – ಅವ್ಯಯೀಭಾವೇತಿ ।। ತಸ್ಯ ಶಬ್ದಸ್ತಚ್ಛಬ್ದಃ ತಚ್ಛಬ್ದಸ್ಯಾಭಾವोऽತಚ್ಛಬ್ದಮ್ । ''ಅವ್ಯಯಂ ವಿಭಕ್ತಿಸಮೀಪಸಮೃದ್ಧಿವ್ಯೃದ್ಧ್ಯರ್ಥಾಭಾವಾತ್ಯಯಾಸಂಪ್ರತಿಶಬ್ದ-ಪ್ರಾದುರ್ಭಾವಪಶ್ಚಾದ್ಯಥಾನುಪೂರ್ವ್ಯಯೌಗಪದ್ಯಸಾದೃಶ್ಯಸಂಪತ್ತಿಸಾಕಲ್ಯಾನ್ತವಚನೇಷು'' ಇತಿ ಸೂತ್ರೇऽರ್ಥಾ-

भावे वर्तमानं यदव्ययं तदुत्तरपदेन समस्यते स समासोऽव्ययीभाव इति विधानादिहाभावार्थकस्य नञ उत्तरपदेन समासः । यथा मक्षिकाणामभावो निर्मक्षिकम् । विवादस्याभावोऽविवादमित्यादौ तथेत्यर्थः ।

ಅಥ'ವಾ ಮತ್ತೊಂದು ಬಗೆಯಲ್ಲಿ 'ಅತಚ್ಪುರುಷ' ಎಂಬುದರ ಸಾಧುತ್ವವನ್ನು ತಿಳಿಯಬಹುದು. ತಸ್ಯ ಶಬ್ದಃ 'ತಚ್ಛಬ್ದಃ', ತಚ್ಛಬ್ದಸ್ಯಾಭಾವಃ 'ಅತಚ್ಛಬ್ದಮ್' ತಸ್ಮಾತ್ 'ಅತಚ್ಛಬ್ದಾತ್' ಎಂಬುದಾಗಿ ಅವ್ಯಯೀಭಾವ ಸಮಾಸ. 'ಅವ್ಯಯಂ ವಿಭಕ್ತಿ ಸಮೀಪ, ಸಮೃದ್ಧಿ, ವ್ಯದ್ಯರ್ಥಾಭಾವ, ಅತ್ಯಯ, ಅಸಂಪ್ರತಿಶಬ್ದ, ಪ್ರಾದುರ್ಭಾವ, ಪಶ್ಚಾದ್ಯಥಾನುಪೂರ್ವ್ಯಯೌಗಪದ್ಯ, ಸಾದೃಶ್ಯ, ಸಂಪತ್ತಿ, ಸಾಕಲ್ಯಾಂತ ವಚನೇಷು' ಎಂಬ ಸೂತ್ರದಲ್ಲಿ ಅರ್ಥಾಭಾವ ಎಂಬರ್ಥದಲ್ಲಿ ಯಾವ ಅವ್ಯಯ ಇರುತ್ತದೋ ಅದು ಉತ್ತರಪದದ ಜೊತೆಗೆ ಸಮಾಸವನ್ನು ಹೊಂದುತ್ತದೆ. ಇದನ್ನೇ ಅವ್ಯಯೀಭಾವ ಸಮಾಸವೆನ್ನುತ್ತಾರೆ ಎಂಬುದಾಗಿ ಅಭಾವಾರ್ಥದಲ್ಲಿರುವ ನಞ್‌ಗೆ ಉತ್ತರಪದದ ಜೊತೆಗೆ ಸಮಾಸವನ್ನು ವಿಧಿಸಲಾಗಿದೆ. ಆದ್ದರಿಂದ 'ಮಕ್ಷಿಕಾಣಾಮಭಾವಃ ನಿರ್ಮಕ್ಷಿಕಮ್', 'ವಿವಾದಸ್ಯ ಅಭಾವಃ ಅವಿವಾದಮ್' ಎಂದು ಸಮಾಸ ಮಾಡುವಂತೆ ಇಲ್ಲಿಯೂ 'ತಚ್ಛಬ್ದಸ್ಯಃ ಅಭಾವಃ' 'ಅತಚ್ಛಬ್ದಮ್' ಎಂಬುದಾಗಿ ಅವ್ಯಯೀಭಾವ ಸಮಾಸವನ್ನು ಮಾಡಬಹುದು.

प्रकाशः – ''विष्णावेवाऽत्मशब्दस्य रूढत्वान्न शिवादिकान् । श्रुतिर्वक्ति'' इत्येतत्पादीयानुव्याख्याने । तथा -

'आत्मशब्दं यतो हेतुं कृत्वा जीवं न्यवारयत् ।
स्वशब्दात्प्राणभृच्चैव नोक्त इत्येव वेदराट् ।।'

इति चतुर्थाध्यायाद्यपादीयानुव्याख्याने च ''स्वशब्दपर्यायाऽत्मशब्दाच्च न प्रकृतिजीवावभिधीयेते'' इति विष्णुतत्त्वनिर्णये च ''तेभ्यश्शिवादिभ्योऽन्यदतद्ब्रह्म । तस्य शब्दोऽतच्छब्दः'' इत्येतत्पादीयसुधोक्तदिशाऽर्थान्तरस्योक्तत्वात्तत्र च शब्ददोषाभाव इति भावेन 'भाष्ये' इत्युक्तम् ।

ಇಲ್ಲಿ ಮಾತ್ರ ಪ್ರಸಜ್ಯಪ್ರತಿಷೇಧಾರ್ಥದಲ್ಲಿ ಸಮಾಸವನ್ನು ಮಾಡಬೇಕೆಂದು ಹೇಳುತ್ತಿದ್ದಾರೆ. ಆದರೆ ಅನುವ್ಯಾಖ್ಯಾನ, ವಿಷ್ಣುತತ್ತ್ವವಿನಿರ್ಣಯ ಹಾಗೂ ನ್ಯಾಯಸುಧೆಗಳಲ್ಲಿ ಪರ್ಯುದಾಸಪಕ್ಷವನ್ನೇ ಆಶ್ರಯಿಸಿದ್ದಾರೆ. ಈ ಪ್ರಕೃತ ಈ ಅಧಿಕರಣದ ಅನುವ್ಯಾಖ್ಯಾನದಲ್ಲಿ 'ವಿಷ್ಣಾವೇವಾತ್ಮಶಬ್ದಸ್ಯ ರೂಢತ್ವಾನ್ನ ಶಿವಾದಿಕಾನ್ । ಶ್ರುತಿರ್ವಕ್ತಿ' ಆತ್ಮಶಬ್ದವು ವಿದ್ವದ್ರೂಢಿಯಿಂದ ವಿಷ್ಣುವಿನಲ್ಲೇ ಪ್ರಸಿದ್ಧವಾಗಿದೆ. ಆದ್ದರಿಂದ 'ಯಸ್ಮಿನ್ದ್ಯೌಃ' ಎಂಬ ಶ್ರುತಿಯು ರುದ್ರಾದಿಗಳನ್ನು ಹೇಳುವುದಿಲ್ಲ ಎಂಬುದಾಗಿ ಹೇಳಿದ್ದಾರೆ. ಇದರಂತೆ ನಾಲ್ಕನೆಯ ಅಧ್ಯಾಯದ ಪ್ರಥಮಪಾದದಲ್ಲಿರುವ 'ಆತ್ಮೇತಿ ತೂಪಗಚ್ಛಂತಿ' ಎಂಬ ಸೂತ್ರದ ಅನುವ್ಯಾಖ್ಯಾನದಲ್ಲಿ ಹೀಗೆ ಹೇಳಿದ್ದಾರೆ. 'ಆತ್ಮಶಬ್ದಂ ಯತೋ ಹೇತುಂ ಕೃತ್ವಾ ಜೀವಂ ನ್ಯವಾರಯತ್ ।

ಸ್ವಶಬ್ದಾತ್ಪ್ರಾಣಭೃಚ್ಚೈವ ನೋಕ್ತ ಇತ್ಯೇವ ವೇದರಾಟ್ ॥' ಯಾವ ಕಾರಣದಿಂದ ದ್ಯುಭ್ವಾದ್ಯಧಿಕರಣದಲ್ಲಿ 'ಸ್ವಶಬ್ದಾತ್' ಎಂಬ ಸೂತ್ರದಿಂದ 'ಪ್ರಾಣಭೃತ್ಚ' ಎಂಬ ಸೂತ್ರದಿಂದ ಆತ್ಮಶಬ್ದವನ್ನೇ ಹೇತುವನ್ನಾಗಿ ಮಾಡಿ ಜೀವಾದಿಗಳನ್ನು ನಿರಾಕರಿಸಿದ್ದಾರೋ, ಆದ್ದರಿಂದ ಆತ್ಮಶಬ್ದಕ್ಕೆ ಜೀವನೆಂಬರ್ಥವನ್ನು ಸ್ವೀಕರಿಸಲು ಹೇಗೆ ಸಾಧ್ಯ? ಎಂದು. ಮತ್ತು ವಿಷ್ಣುತತ್ವವಿನಿರ್ಣಯದಲ್ಲಿ 'ಸ್ವಶಬ್ದಪರ್ಯಾಯಾತ್ಪಶಬ್ದಾಚ್ಚ ನ ಪ್ರಕೃತಿ-ಜೀವಾವಭಿಧೀಯೇತೇ' ಸ್ವಶಬ್ದದ ಪರ್ಯಾಯಪದವಾದ ಆತ್ಮಶಬ್ದವು ಪ್ರಯುಕ್ತವಾದ್ದರಿಂದ ಪ್ರಕೃತಿ, ಜೀವರು ಪ್ರತಿಪಾದ್ಯರಲ್ಲ ಎಂದು ಹೇಳಿದ್ದಾರೆ. ನ್ಯಾಯಸುಧೆಯಲ್ಲಿಯೂ ಸಹ 'ತೇಭ್ಯಶ್ಚಿವಾದಿಭ್ಯೋಽನ್ಯದತದ್ಬ್ರಹ್ಮ। ತಸ್ಯ ಶಬ್ದೋಽತಚ್ಛಬ್ದಃ' ಎಂಬುದಾಗಿ ಹೇಳಿದ್ದಾರೆ.

ಈ ಮೂರು ಗ್ರಂಥಗಳ ಅಭಿಪ್ರಾಯ ಹೀಗಿದೆ - 'ತತ್' ಎಂದರೆ 'ಶಿವಾದಿಗಳು' ಎಂದರ್ಥ. 'ಅತತ್' ಎಂದರೆ ಶಿವಾದಿಗಳಿಗಿಂತ ಭಿನ್ನನಾದ ಬ್ರಹ್ಮನೆಂದರ್ಥ, 'ಅತಚ್ಛಬ್ದಾತ್' ಎಂದರೆ ಬ್ರಹ್ಮಪ್ರತಿಪಾದಕವಾದ ಶಬ್ದಗಳಷ್ಟೇ ಪ್ರಕರಣದಲ್ಲಿವೆ ಎಂಬರ್ಥವನ್ನು ವಿವಕ್ಷಿಸಬೇಕೆಂದು ಅಭಿಪ್ರಾಯ. ಆದ್ದರಿಂದ ಪ್ರಕೃತ ಗ್ರಂಥಕಾರರು 'ಭಾಷ್ಯೇ' ಎಂದು ಹೇಳಿದ್ದಾರೆ. ಅಂದರೆ ಅನುವ್ಯಾಖ್ಯಾನ ಮೊದಲಾದವುಗಳಿಗೆ ಪರ್ಯುದಾಸಪಕ್ಷವು ಸಮ್ಮತವಾಗಿದ್ದರೂ ಸಹ ಪ್ರಕೃತ ಭಾಷ್ಯದಲ್ಲಿ ಪ್ರಸಜ್ಯಪ್ರತಿಷೇಧಾರ್ಥವನ್ನು ಇಟ್ಟುಕೊಂಡಿದ್ದಾರೆ. ಇದಕ್ಕೆ ಕಾರಣವನ್ನಷ್ಟೇ ಮೇಲೆ ಹೇಳಿದ ಪ್ರಕಾರದಲ್ಲಿ ತಿಳಿದುಕೊಳ್ಳಬೇಕು.

ಪ್ರಕಾಶಃ – ಅರ್ಥಾನ್ತರಪಕ್ಷೇ ''ಅತಚ್ಛಬ್ದಾಭಿಲಾಪಾತ್'' ಇತ್ಯತ್ರ ಪರಮತೇऽಭಿಹಿತರೀತ್ಯಾ ಸ್ವಶಬ್ದಾದಿತ್ಯನೇನ ಪೌನರುಕ್ತ್ಯದೋಷಸ್ತು ಅನ್ಯತ್ರ ಸಿದ್ಧಾನ್ತಸಾಧಕಸ್ಯೈವ ಪೂರ್ವಪಕ್ಷನಿರಾಸೇऽಪಿ ಹೇತ್ವನ್ತರತ್ವಂ ದ್ರಷ್ಟವ್ಯಮ್ ತೇನ ನ ನ್ಯೂನತಾದೋಷ ಇತ್ಯೇತತ್ಪ್ರದರ್ಶಯಿತುಮ್ ''ಸಿದ್ಧಾನ್ತಸಾಧಕಸ್ಯೈವ ಪೂರ್ವಪಕ್ಷನಿರಾಸೇऽಪಿ ವ್ಯಾಪಾರಂ ದರ್ಶಯಿತುಮಿದಂ ಸೂತ್ರಮ್'' ಇತಿ ಸುಧೋಕ್ತದಿಶಾ ಪ್ರಯೋಜನ-ವಿಶೇಷವತ್ತ್ವಾನ್ನಿರಾಕರ್ತವ್ಯ ಇತಿ ಭಾವಃ ।

'ಅತದ್ಧರ್ಮಾಭಿಲಾಪಾತ್' ಎಂಬ ಸೂತ್ರದಲ್ಲಿ ಪರ್ಯುದಾಸಪಕ್ಷವನ್ನು ಆಶ್ರಯಿಸಿ ಸಿದ್ಧಾಂತ ಸಾಧಕವಾದ ಹೇತುವೇ ಪೂರ್ವಪಕ್ಷದ ನಿರಾಕರಣೆಗೂ ಸಾಧಕವಾಗಿದೆಯೆಂದು ಹೇಳಿರುತ್ತಾರೆ. ಆದರಂತೆ ಇಲ್ಲಿ ತಿಳಿಯಬೇಕು. ಹಾಗಾದರೆ 'ಅತಚ್ಛಬ್ದಾತ್' ಎಂಬುದರಿಂದ ಅತ್ಶಬ್ದವಿರುವುದರಿಂದ ಎಂಬರ್ಥವನ್ನೇ ಹೇಳಿದಂತಾಯಿತು. ಪ್ರಥಮಸೂತ್ರದಲ್ಲಿ 'ಸ್ವಶಬ್ದಾತ್' ಎಂಬ ಹೇತುವಿನಿಂದ ಹೇಳಿದ್ದನ್ನೇ ಈ ಸೂತ್ರದಲ್ಲಿಯೂ ಸಹ ಹೇಳಿದಂತಾಗಿ ಪುನರುಕ್ತಿ ದೋಷವು ಬರುತ್ತದಲ್ಲವೇ? ಎಂದರೆ ಹೀಗೆ ಹೇಳುವುದರಿಂದ ಸೂತ್ರಕಾರರು ಒಂದು ಪ್ರಮೇಯವನ್ನು ತಿಳಿಸಿದ್ದಾರೆ. ಪ್ರತಿಯೊಂದು ಅಧಿಕರಣಗಳಲ್ಲಿಯೂ ಯಾವ ಹೇತು ಸಿದ್ಧಾಂತ ಸಾಧಕವಾಗಿರುತ್ತದೋ, ಅದೇ ಹೇತು ಪೂರ್ವಪಕ್ಷದ ನಿರಾಕರಣೆಗೂ ಹೇತುವಾಗಿರುತ್ತದೆಂದು ತಿಳಿಯಬೇಕು. ಆದ್ದರಿಂದ ಒಂದು ವೇಳೆ ಪೂರ್ವಪಕ್ಷನಿರಾಸಯುಕ್ತಿಯನ್ನು ಹೇಳದಿದ್ದರೆ ನ್ಯೂನತಾರೂಪದೋಷವನ್ನು ಚಿಂತನೆ ಮಾಡಬಾರದು ಎಂದು ಸೂತ್ರಕಾರರ ಅಭಿಪ್ರಾಯ. ಈ ವಿಚಾರವನ್ನು ತಿಳಿಸುವುದಕ್ಕಾಗಿಯೇ ಪ್ರಥಮಸೂತ್ರದಲ್ಲಿ ಹೇಳಲ್ಪಟ್ಟ ಆತ್ಮಶಬ್ದವೆಂಬ ಹೇತುವನ್ನು ಪೂರ್ವಪಕ್ಷನಿರಾಸದ ಸಂದರ್ಭದಲ್ಲಿ 'ಅತಚ್ಛಬ್ದಾತ್' ಎಂಬುದರಿಂದ ಹೇಳಲಾಗಿದೆ. ನ್ಯಾಯಸುಧೆಯಲ್ಲಿಯೂ 'ಸಿದ್ಧಾಂತಸಾಧಕಸ್ಯೈವ ಪೂರ್ವಪಕ್ಷನಿರಾಸೇऽಪಿ ವ್ಯಾಪಾರಂ ದರ್ಶಯಿತುಮಿದಂ ಸೂತ್ರಮ್' ಎಂದು ಹೇಳಿದ್ದಾರೆ. ಅದನ್ನು ಇಲ್ಲಿ

ಸ್ಮರಿಸಿಕೊಳ್ಳಬೇಕು.

ಪ್ರಕಾಶಃ – ನನ್ವವ್ಯಯೀಭಾವತ್ವೇ ''ಅವ್ಯಯೀಭಾವಶ್ಚ'' ಇತಿ ಸೂತ್ರೇಣಾವ್ಯಯತ್ವೇ ''ಅವ್ಯಯಾದಾಪ್ಸುಪಃ'' ಇತಿ ಸಮಾಸಾದುತ್ಪನ್ನಸುಪೋ ಲುಕಿ ಪ್ರಾಪ್ತೇ ''ನಾವ್ಯಯೀಭಾವಾದತೋಮ್ತ್ವಪಞ್ಚಮ್ಯಾಃ'' ಇತಿ ಸೂತ್ರೇಣಾಮಾದೇಶವಿಧಾನಾದತಚ್ಛಬ್ದಮಿತಿ ವಾಚ್ಯಂ ನತ್ವತಚ್ಛಬ್ದಾದಿತಿ । ತತ್ರಾಹ – ಅವ್ಯಯೀಭಾವತ್ವೇಽಪೀತಿ ।।

ಪ್ರಶ್ನೆ - 'ಅತಚ್ಛಬ್ದಾತ್' ಎಂಬಲ್ಲಿ 'ಅವ್ಯಯೀಭಾವ' ಸಮಾಸವನ್ನು ಮಾಡಬೇಕೆಂದು ಹೇಳಿದಿರಿ. ಹಾಗಾದರೆ 'ಅವ್ಯಯೀಭಾವಶ್ಚ ' ಎಂಬ ಸೂತ್ರದಿಂದ ಅತಚ್ಛಬ್ದವೆಂಬ ಪದವು ಅವ್ಯಯವಾಯಿತು. ಆವಾಗ 'ಅವ್ಯಯದಾಪ್ಸುಪಃ' ಎಂಬ ಸೂತ್ರದಿಂದ ಸಮಾಸದ ಮೇಲೆ ಬಂದಿರುವ ಸುಪ್‌ಪ್ರತ್ಯಯವು ಲೋಪ ಆದರೆ 'ನಾವ್ಯಯೀಭಾವದತೋಂತ್ಡ ಪಂಚಮ್ಯಾಃ' ಎಂಬ ಸೂತ್ರದಿಂದ 'ಅಮ್' ಆದೇಶ ಬಂದು ಅಭಿವಾದಮ್' ಎಂಬ ರೂಪವು ನಿಷ್ಪನ್ನವಾಗುವಂತೆ 'ಅತಚ್ಛಬ್ದಮ್' ಎಂದಾಗಬೇಕು ಹೊರತು, 'ಅತಚ್ಛಬ್ದಾತ್' ಪಂಚಮೀವಿಭಕ್ತಿಯು ಹೇಗೆ ಬರುತ್ತದೆ.

ಉತ್ತರ - ಈ ಪ್ರಶ್ನೆಗೆ 'ಅವ್ಯಯೀಭಾವತ್ವೇಽಪಿ' ಎಂಬ ಗ್ರಂಥದಿಂದ ಉತ್ತರಿಸಿದ್ದಾರೆ.

ಪ್ರಕಾಶಃ – ಅದನ್ತಾದವ್ಯಯೀಭಾವಾತ್ಪರತಃ ಸುಪೋ ಲುಕ್ ನ ಭವತಿ । ಕಿಂ ತ್ವಮಾದೇಶ ಏವ । ಪಞ್ಚಮ್ಯಾಸ್ತ್ವಮಾದೇಶೋಽಪಿ ನೇತಿ ಪಞ್ಚಮ್ಯಾ ಅಮಾದೇಶಸ್ಯ ನಿಷೇಧಾದಿತ್ಯರ್ಥಃ ।

ಅದಂತವಾದ ಅವ್ಯಯೀಭಾವದ ಮುಂದೆ ಇರುವಂತಹ 'ಸುಪ್' ಪ್ರತ್ಯಯವು 'ಲೋಪ' ಆಗುವುದಿಲ್ಲ ಹೊರತಾಗಿ, ಸುಪ್‌ಗೆ ಅಮಾದೇಶವೇ ಬರುತ್ತದೆ. 'ಅಪಂಚಮ್ಯಾಃ' ಎಂದರೆ ಪಂಚಮೀವಿಭಕ್ತಿಯಲ್ಲಿ 'ಅಮ್' ಆದೇಶವು ಬರುವುದಿಲ್ಲವೆಂದು ಹೇಳಿದ್ದರಿಂದ 'ಅತಚ್ಛಬ್ದಾತ್' ಎಂಬಲ್ಲಿ ಪಂಚಮೀ ವಿಭಕ್ತಿಯು ಇರುವುದರಿಂದ 'ಅಮ್' ಆದೇಶವು ಬರುವುದಿಲ್ಲವೆಂದು ತಿಳಿಯಬೇಕು.

ಪ್ರಕಾಶಃ – ಏತೇನ ''ಅಕರ್ತರಿ ಚ ಕಾರಕ ಇತಿ ಜ್ಞಾಪಕಾದಸಾಮರ್ಥ್ಯೇಽಪಿ ಕ್ವಚಿತ್ಸಮಾಸೋ ಭವತೀತಿ ವಾ ಅರ್ಥಾಭಾವೇ ಯದವ್ಯಯಮಿತ್ಯವ್ಯಯೀಭಾವೋ ವೇತಿ ಸಮಾಧಾನಮವಧಾತವ್ಯಮ್'' ಇತಿ ಸುಧಾವಾಕ್ಯಂ ವಿವೃತಂ ಧ್ಯೇಯಮ್ ।

ಹೀಗೆ ಹೇಳಿದ್ದರಿಂದ 'ಅಕರ್ತರಿ ಚ ಕಾರಕ ಇತಿ ಜ್ಞಾಪಕಾದಸಾಮರ್ಥ್ಯೇಽಪಿ ಕ್ವಚಿತ್ಸಮಾಸೋ ಭವತೀತಿ ವಾ ಅರ್ಥಾಭಾವೇ ಯದವ್ಯಯಮಿತ್ಯವ್ಯಯೀಭಾವೋ ವೇತಿ ಸಮಾಧಾನಮವಧಾತವ್ಯಮ್' 'ಅಕರ್ತರಿ ಚ ಕಾರಕೇ' ಎಂಬ ಪಾಣಿನಿ ಸೂತ್ರದ ಆಧಾರದಿಂದ ಸಾಮರ್ಥ್ಯವಿಲ್ಲದಿದ್ದರೂ ಕೆಲವೊಮ್ಮೆ ಸಮಾಸವಾಗುತ್ತದೆಂದಾಗಲೀ ಅಥವಾ ಅವ್ಯಯೀಭಾವಸಮಾಸವನ್ನಾಗಲೀ ಮಾಡಬೇಕು. ಎಂಬ ಸುಧಾವಾಕ್ಯವನ್ನು ವಿವರಿಸಿದಂತಾಯಿತು.

प्रकाशः – ''छन्दोवत्सूत्राणि भवन्तीति वा'' इति सुधोक्तं समाधानान्तरं स्फुटत्वान्न विवृतम् ।।

ವಾಸ್ತವಿಕವಾಗಿ 'ಛಂದೋವತ್ ಸೂತ್ರಾಣಿ ಭವಂತಿ' 'ಸೂತ್ರಗಳು ವೇದತುಲ್ಯವಾಗಿರುತ್ತವೆ' ಎಂಬ ವ್ಯಾಕ್ಯಾನುಸಾರವಾಗಿ ನಞ್‌ಗೂ ತತ್‌ಶಬ್ದಕ್ಕೂ ಸಾಮರ್ಥ್ಯವಿಲ್ಲದಿದ್ದರೂ ಸಮಾಸವಾಗುತ್ತದೆ ಎಂಬುದಾಗಿ ನ್ಯಾಯಸುಧೆಯಲ್ಲಿ ಮತ್ತೊಂದು ಸಮಾಧಾನವನ್ನು ಹೇಳಿರುತ್ತಾರೆ. ಅದು ಸ್ಪಷ್ಟವಾಗಿರುವುದರಿಂದ ಪುನಃ ಇಲ್ಲಿ ವಿವರಿಸಿಲ್ಲ.

प्रकाशः – एवमिति ।। ''नच स्मार्तमतद्धर्माभिलापात्'' इत्यत्राप्युक्तसमाधिद्वयं ध्येयमित्यर्थः ।

ಇದರಂತೆ 'ನಚ ಸ್ಮಾರ್ತಮತದ್ಧರ್ಮಾಭಿಲಾಪಾತ್' ಎಂಬ ಸೂತ್ರದಲ್ಲಿಯೂ ಹಿಂದೆ ಹೇಳಿದ ಎರಡು ಸಮಾಧಾನಗಳಿಂದ 'ಅತದ್ಧರ್ಮಾಭಿಲಾಪಾತ್' ಎಂಬ ರೂಪನಿಷ್ಪತ್ತಿಯನ್ನು ತಿಳಿಯಬೇಕು. ಇದು 'ಏವಂ' ಎಂಬ ಪ್ರತೀಕದ ಅರ್ಥ.

प्रकाशः – जीववायुनिरासाय सूत्रं ''प्राणभृच्च'' इति । तत्र चशब्द आत्मशब्द-मुक्तोपसृप्यत्वातच्छब्दादिहेतूनां नञ्श्रानुकर्षणार्थ इति टीका न युक्तैव । तथात्वे नानुमानप्राणभृतावतच्छब्दादित्येकयोगेन निर्देष्टव्ये विभागायोगादित्यत आह – चतुर्थ इति ।।

'ಪ್ರಾಣಭೃಚ್ಚ' ಎಂಬುದು ನಾಲ್ಕನೆಯ ಸೂತ್ರ, ಜೀವ ಹಾಗೂ ವಾಯು ಇವರಿಬ್ಬರೂ ದ್ಯುಭ್ವಾದ್ಯಾಯತನರಾಗಿದ್ದಾರೆಂಬ ಪೂರ್ವಪಕ್ಷವನ್ನು ನಿರಾಕರಿಸುವುದಕ್ಕಾಗಿ ಇದು ಹೊರಟಿದೆ.

ಈ ಸೂತ್ರದಲ್ಲಿರುವ 'ಚ' ಶಬ್ದವು ಆತ್ಮಶಬ್ದ, 'ಮುಕ್ತೋಪಸೃಪ್ಯತ್ವ' ಹಾಗೂ 'ಅತಚ್ಛಬ್ದ' ಎಂಬ ಹಿಂದಿನ ಮೂರು ಹೇತುಗಳನ್ನು ಮತ್ತು 'ನಞ್' ಎಂಬುದನ್ನು ಅನುಕರ್ಷಣೆ ಮಾಡಿಕೊಳ್ಳುವುದಕ್ಕಾಗಿ ಪ್ರಯುಕ್ತವಾಗಿದೆಯೆಂದು ಟೀಕೆಯಲ್ಲಿ ಹೇಳಿದ್ದಾರೆ. ಇದು ಹೇಗೆ ಸರಿ ? ಹಾಗೇನಾದರೂ ವಿವಕ್ಷಿತವಾದಲ್ಲಿ 'ನಾನುಮಾನಪ್ರಾಣಭೃತಾವತಚ್ಛಬ್ದಾತ್' ಎಂಬುದಾಗಿ ಒಂದೇ ಸೂತ್ರವನ್ನು ನಿರ್ದೇಶಿಸಬೇಕಿತ್ತು. ಬೇರೆ ಬೇರೆ ಸೂತ್ರಗಳನ್ನಾಗಿ ವಿಭಾಗ ಮಾಡಿದ್ದು ತಪ್ಪಾಗುತ್ತದಲ್ಲವೇ? ಈ ಪ್ರಶ್ನೆಗೆ 'ಚತುರ್ಥೇ' ಎಂಬ ವಾಕ್ಯದಿಂದ ಉತ್ತರಿಸುತ್ತಿದ್ದಾರೆ.

प्रकाशः – योगविभाग उत्तरार्थ इत्यनेनान्वयः । भेदव्यपदेशादित्यत्रानु-वृत्त्यर्थः । सहनिर्देशे त्वानुमानिकस्याप्यनुवृत्तिस्स्यात् ।

ಯೋಗ ವಿಭಾಗ ಶಬ್ದಕ್ಕೆ 'ಉತ್ತರಾರ್ಥಃ' ಎಂಬಲ್ಲಿ ಅನ್ವಯವನ್ನು ತಿಳಿಯಬೇಕು. ಸೂತ್ರಗಳ ವಿಭಾಗವನ್ನೇಕೆ ಮಾಡಿದ್ದಾರೆಂದರೆ 'ಭೇದವ್ಯಪದೇಶಾತ್' ಎಂಬ ಮುಂದಿನ ಸೂತ್ರದಲ್ಲಿ 'ಪ್ರಾಣಭೃಚ್ಚ' ದ್ಯುಭ್ವಾದ್ಯಧಿಕರಣ (೧-೩-೧)

ಎಂಬುದನ್ನೂ ಅನುವೃತ್ತಿ ಮಾಡುವುದಕ್ಕಾಗಿ ಹೇಳಿದ್ದಾರೆ. ಒಂದುವೇಳೆ ಯೋಗವಿಭಾಗ ಮಾಡದೇ ಎಲ್ಲವನ್ನೂ ಒಟ್ಟಿಗೆ ಹೇಳಿದರೆ ಅನುಮಾನಿಕ ಮೊದಲಾದವೂ ಸಹ ಮುಂದಿನ ಸೂತ್ರದಲ್ಲಿ ಅನುವೃತ್ತವಾಗಬೇಕಾದೀತು.

प्रकाशः – अस्तु को दोष इत्यत आह – अद्वैतिनेति ।। आदिपदेन शैवादिग्राह्यः ।

ಮುಂದಿನ ಸೂತ್ರದಲ್ಲಿಯೂ ಎಲ್ಲವೂ ಅನುವೃತ್ತವಾಗಲಿ ಏನು ದೋಷ? ಎಂಬ ಪ್ರಶ್ನೆಗೆ 'ಅದ್ವೈತಿನಾ' ಎಂಬುದರಿಂದ ಉತ್ತರಿಸಿದ್ದಾರೆ. ಆದಿಪದದಿಂದ ಶೈವಾದಿಗಳನ್ನು ವಿವಕ್ಷಿಸಬೇಕು. ಅದ್ವೈತಿಗಳು ಜೀವನಿಂದ ಹೇಗೆ ಅಭೇದವನ್ನು ಒಪ್ಪುತ್ತಾರೋ ಅದರಂತೆ ಸಾಂಖ್ಯಿರಾಗಲೀ, ಶೈವಾದಿಗಳಾಗಲೀ ಪ್ರಧಾನಾದಿಗಳಿಂದ ಬ್ರಹ್ಮನಿಗೆ ಅಭೇದವನ್ನು ಒಪ್ಪಿರುವುದಿಲ್ಲವೆಂದರ್ಥ.

प्रकाशः – यथा व्याकरणेऽङ्गाधिकारे ''दंशसञ्जास्वञ्जां शपि । रञ्जेश्च । घञि च भावकरणयोः'' इत्यत्र रञ्जेश्चेत्यस्य पूर्वसूत्र एव स्वञ्जरञ्जामिति निर्देष्टव्ये घञि चेत्युत्तरसूत्रेऽनुवृत्त्यर्थो योगविभागः । अन्यथा सर्वस्याप्यनुवृत्तिस्स्यात् । तथेहापीति भावः ।

ಪಾಣಿನಿ ವ್ಯಾಕರಣದ ಅಂಗಾಧಿಕಾರ ಸೂತ್ರದಲ್ಲಿ 'ದಂಶಸಂಜಾಸ್ವಂಜಾಂ ಶಪಿ । ರಂಜೇಶ್ಚ । ಘಞ್ ಚ ಭಾವಕರಣಯೋಃ' ಎಂಬ ಆನುಪೂರ್ವಿಯಲ್ಲಿ 'ದಂಶ' ಎಂಬ ಸೂತ್ರದ ಮುಂದಿನ ಸೂತ್ರ 'ರಂಜೇಶ್ಚ' ಎಂಬುದು. ಅದರ ಮುಂದಿನ ಸೂತ್ರ 'ಘಞ್ ಚ ಭಾವಕರಣಯೋಃ' ಎಂಬುದು. 'ಘಞ್ ಚ ಭಾವಕರಣಯೋಃ' ಎಂಬ ಮುಂದಿನ ಸೂತ್ರದಲ್ಲಿ 'ರಂಜೇಶ್ಚ' ಎಂಬ ಹಿಂದಿನ ಸೂತ್ರವನ್ನು ಅನುವೃತ್ತಿ ಮಾಡಿಕೊಳ್ಳುವುದಕ್ಕಾಗಿ ಯೋಗವಿಭಾಗವನ್ನು ಆಶ್ರಯಿಸಲಾಗಿದೆ. ಆಂದರೆ 'ದಂಶಸಂಜಾಸ್ವಂಜಾಂ' ಎಂದು ಒಟ್ಟಿಗೆ ಸೂತ್ರವನ್ನು ಹೇಳಬಹುದಿತ್ತು. ಆದರೂ ಸಹ 'ರಂಜೇಶ್ಚ' ಎಂಬುದಾಗಿ ಪ್ರತ್ಯೇಕವಾಗಿ ಸೂತ್ರವನ್ನು ಮಾಡಿದ್ದೇಕೆ? ಎಂದರೆ ಮುಂದಿನ ಸೂತ್ರದಲ್ಲಿ 'ದಂಶಸ್ವಂಜಜರಂಜಾಮ್' ಮೊದಲಾದ ಶಬ್ದಗಳು ಅನುವೃತ್ತವಾಗಬಾರದು. 'ರಂಜೇಶ್ಚ' ಎಂಬ ಭಾಗ ಮಾತ್ರ ಅನುವೃತ್ತವಾಗಬೇಕೆಂಬ ಉದ್ದೇಶದಿಂದ. ಆದರಂತೆ ಪ್ರಕೃತದಲ್ಲಿಯೂ 'ಭೇದವ್ಯಪದೇಶಾತ್' ಎಂಬ ಸೂತ್ರದಲ್ಲಿ 'ಪ್ರಾಣಭೃಚ್ಚ' ಎಂಬುದನ್ನು ಅನುವೃತ್ತಿಮಾಡಿಕೊಳ್ಳುವುದಕ್ಕಾಗಿ ಪ್ರತ್ಯೇಕ ಪರಿಗಣಿಸಿದ್ದಾರೆ. ಒಂದು ವೇಳೆ 'ಅನುಮಾನ ಪ್ರಾಣಭೃತಾವತಚ್ಚಬ್ದಾದ್' ಎಂದು ಒಟ್ಟಿಗೆ ಸೂತ್ರವನ್ನು ಹೇಳಿದ್ದರೆ ಅನುಮಾನ ಮೊದಲಾದವುಗಳೂ ಸಹ 'ಭೇದವ್ಯಪದೇಶಾತ್' ಎಂಬ ಸೂತ್ರದಲ್ಲಿ ಅನುವೃತ್ತವಾಗುತ್ತಿದ್ದವು. ಆದರೆ ಸಾಂಖ್ಯಾದಿಗಳು ಜೀವಾದಿಗಳಿಂದ ಅಭೇದವನ್ನು ಒಪ್ಪದ ಕಾರಣ ಹಾಗೇ ಅನುವೃತ್ತಿಮಾಡಿಕೊಳ್ಳುವ ಅವಶ್ಯಕತೆ ಇರುವುದಿಲ್ಲ.

प्रकाशः – एतच्च परभाष्यादावपि व्यक्तम् । तेन ''प्राणभृच्चेति सूत्रपृथक्त्व-कल्पनमयुक्तम्'' इति श्रुतप्रकाशोक्तं निरस्तं भवति ।

ಈ ವಿಷಯವು ಆದ್ಯೈತಭಾಷ್ಯಕ್ಕೂ ಸಮ್ಮತವಾಗಿದೆ. ಆವರೂ ಸಹ ಅನುವೃತ್ತಿ ಮಾಡಿಕೊಳ್ಳುವುದಕ್ಕಾಗಿ ಪ್ರತ್ಯೇಕ ಸೂತ್ರವೆಂದು ಸಮಾಧಾನ ನೀಡಿದ್ದಾರೆ. ಹೀಗೆ ಹೇಳಿದ್ದರಿಂದ 'ಪ್ರಾಣಭೃಚ್ಚೇತಿ ಸೂತ್ರಪೃಥಕ್ತ್ವ-ಕಲ್ಪನಮಯುಕ್ತಮ್' 'ಪ್ರಾಣಭೃಚ್ಚ' ಎಂಬ ಸೂತ್ರವನ್ನು ಪ್ರತ್ಯೇಕವಾಗಿ ಪರಿಗಣಿಸಿದ್ದು ಅಯುಕ್ತವಾಗಿದೆಯೆಂಬ ಶ್ರುತಪ್ರಕಾಶದ ಮಾತು ನಿರಾಕೃತವಾಯಿತು.

प्रकाशः – सूत्रे वायुनिरासाप्रतीतेराह – तत्रेति ।।

ಸೂತ್ರದಲ್ಲಿ ವಾಯುದೇವತೆಯು ದ್ಯುಭ್ವಾದ್ಯಾಯತನನಾಗಿದ್ದಾನೆಂಬ ಪಕ್ಷವನ್ನು ನಿರಾಕರಣೆ ಮಾಡಿದ್ದು ಕಾಣಸುತ್ತಿಲ್ಲ ಎಂಬ ಪ್ರಶ್ನೆಗೆ 'ತತ್ರೇತಿ' ಎಂಬುದರಿಂದ ಉತ್ತರಿಸಿದ್ದಾರೆ.

गुरुराजीयम् – अकर्तरि चेति ।। अत्र च सञ्ज्ञायां विषये धातोर्घञ् विहितः प्राप्त आहार इत्यादिसिद्ध्यर्थम् । स च कर्तरि निषिध्यते । अकर्तरीति कर्तरि न भवतीत्यर्थः । किं कारणम् । मिषत्यसौ मेष इत्यादौ घञ् मा भूदित्येवमर्थम् । तथा सति मैष इति प्रसङ्गात् । नच अकर्तरीति प्रसज्यप्रतिषेध इव कर्तृभिन्ने कर्तृसदृशे कारके भवतीति पर्युदासाश्रयणेऽपि मेष इत्यत्र तदभावः सिद्ध्यत्येवेति किं प्रसज्यप्रतिषेधाश्रयणेनेति वाच्यम् । तथा सति कारकग्रहणमनर्थकमेव स्यात् । अकर्तरीति पर्युदासे हि नञिवयुक्तन्यायेन कर्तुरन्यस्मिन्कर्तृसदृशे कारक एवेति प्रतीतिर्भवति । यथाऽब्राह्मण इति क्षत्रियादौ । तस्मात्कारकग्रहणं व्यर्थम् । प्रसज्यप्रतिषेधे तु वाक्यभेदेन सञ्ज्ञायां घञ् भवति । कर्तरि च न भवतीत्येषोऽर्थः सम्पद्यते । ततः सञ्ज्ञायां घञ् भवतीति प्रथमवाक्येऽर्थनिर्देशाभावाद् अनिर्दिष्टार्थाः प्रत्ययाः स्वार्थे भवन्तीति स्वार्थ एव घञ् स्यात् । अतः प्रसज्यप्रतिषेधे कर्तव्यमेव कारकग्रहणम् । पर्युदासे तूक्तरीत्या न कर्तव्यम् । तच्च कियमाणं प्रसज्यनिषेधेना-सामर्थ्येऽपि समासो भवतीति ज्ञापयति । तदनेन प्रकारेणासामर्थ्येऽपि समासस्याकर्तरि च कारके सञ्ज्ञायामित्यत्र कारकग्रहणेन ज्ञापितत्वात् । अतच्छब्दादित्यत्रासामर्थ्येऽपि समासो युज्यत एवेति भावः ।।

ननु चाव्ययादाप्सुप इति सुपो लोपं विधायादन्तादव्ययीभावात्परस्य सुपो 'नाव्ययीभावादतोम्' इत्यम्भावविधानादतच्छब्दमिति स्यात् तत्राह –

अव्ययीभावत्वेऽपीति ।। अपञ्चम्या इत्युक्तेः तत्रैव सूत्रे पञ्चमीं विना मादेशविधानादिति भावः । नानुमानमतच्छब्दादित्यनेन प्रधानरुद्रयोरिव वायुजीवयोरपि निरासस्य कर्तुं शक्यत्वेन प्राणभृच्चेति पृथग्वाक्य-विभागानुपपत्तिरित्यत आह – चतुर्थ इति ।। रुद्रवाय्वोरपि शैवादिभिर्विष्णु-भेदस्यैवाङ्गीकारादित्यादिशब्दार्थः । उत्तरार्थः प्रकरणादित्युत्तरसूत्रार्थ इत्यर्थः ।

ಸಾರ

'ಓಂ ನಾನುಮಾನಮತಚ್ಛಬ್ದಾತ್ ಓಂ' ಎಂಬ ಮೂರನೇ ಸೂತ್ರವು ಪರಪಕ್ಷದಲ್ಲಿ ಯಾವುದೇ ಸಾಧಕಪ್ರಮಾಣಗಳಿಲ್ಲವೆಂದು ಸಮರ್ಥಿಸುತ್ತಿದೆ. ಮೊದಲು ಸ್ವಪಕ್ಷದಲ್ಲಿ ಸಾಧಕಪ್ರಮಾಣಗಳನ್ನು ಹೇಳಿ ಈ ಸೂತ್ರದಲ್ಲಿ ಪರಪಕ್ಷದಲ್ಲಿ ಸಾಧಕಪ್ರಮಾಣಗಳಿಲ್ಲವೆಂದು ಹೇಳುತ್ತಿರುವುದರಿಂದ ಮೂರನೆಯ ಸ್ಥಾನವು ಈ ಸೂತ್ರಕ್ಕೆ ಸಮಂಜಸವಾಗಿದೆ.

ಸೂತ್ರದಲ್ಲಿರುವ ಅನುಮಾನ ಶಬ್ದಕ್ಕೆ ಅನುಮಾನವೇ ಪ್ರಧಾನವಾಗಿವುಳ್ಳ ಪಾಶುಪಾತ್ಯಾದ್ಯಾಗಮಗಳೆಂದರ್ಥ. ಇವುಗಳಲ್ಲಿರುದ್ರಾದಿಗಳೇ ದ್ಯುಭ್ವಾದ್ಯಾಯತನರಾಗಿದ್ದಾರೆಂದು ಹೇಳಲಾಗಿದಯೆಂದು ಪೂರ್ವಪಕ್ಷಕಾರರು ಹೇಳುತ್ತಾರೆ. ಆದರೆ ಈ ವಿಚಾರವನ್ನು ಸಮರ್ಥಿಸಲು ಯಾವುದೇ ಸಾಧಕಪ್ರಮಾಣಗಳಿರುವುದಿಲ್ಲ. ಅಷ್ಟೇ ಅಲ್ಲದೆ ವಿಷ್ಣುವಿಷಯಕವಾದ ಸಮಾಖ್ಯಾಪ್ರಮಾಣದಲ್ಲಿ ವಿಷ್ಣುವೇ ದ್ಯುಭ್ವಾದ್ಯಾಯತನನಾಗಿದ್ದಾನೆನ್ನಲು ಸಾಧಕಪ್ರಮಾಣಗಳಿಲ್ಲವೆಂದೂ ಸಹ ಹೇಳಲು ಸಾಧ್ಯವಿಲ್ಲ. ರುದ್ರಸಮಾಖ್ಯಾ ಪ್ರಮಾಣದಲ್ಲಿರುವ ರುದ್ರ, ಪಿನಾಕೀ ಮೊದಲಾದ ಶಬ್ದಗಳೆಲ್ಲವೂ ವಿಷ್ಣುವನ್ನು ಮುಖ್ಯವಾಗಿ ಪ್ರತಿಪಾದಿಸುತ್ತವೆ. ಆದರಂತೆ ವಿಷುಸಮಾಖ್ಯಾಪ್ರಮಾಣದಲ್ಲಿರುವ ವಿಷ್ಣು ಮೊದಲಾದ ಶಬ್ದಗಳು ರುದ್ರಾದಿಗಳನ್ನು ಮುಖ್ಯವಾಗಿ ಪ್ರತಿಪಾದಿಸುವುದಿಲ್ಲ. ಆದ್ದರಿಂದ ರುದ್ರಸಮಾಖ್ಯಾಪ್ರಮಾಣವು ಸಾವಕಾಶವೆಂದಂತಾಯಿತು. ವಿಷ್ಣುಸಮಾಖ್ಯಾಪ್ರಮಾಣವು ನಿರವಕಾಶವಾಯಿತು. ಆದ್ದರಿಂದಲೇ ಅನುವ್ಯಾಖ್ಯಾನದ ಶ್ಲೋಕದಲ್ಲಿ ಯಾವ ಯುಕ್ತಿಗಳು ಸಾವಕಾಶವಾಗಿರುತ್ತದೋ ಅವನ್ನೇ ಪೂರ್ವಪಕ್ಷಯುಕ್ತಿಯನ್ನಾಗಿ ಪರಿಗಣಿಸಿ ಅವೇ ಯುಕ್ತಿಗಳು ನಿರವಕಾಶವಾಗಿದ್ದರೆ ಸಿದ್ಧಾಂತ ಯುಕ್ತಿಗಳಾಗುತ್ತವೆಯೆಂದು ಶ್ರೀಮದಾಚಾರ್ಯರು ಹೇಳಿದ್ದಾರೆ.

ಸೂತ್ರದಲ್ಲಿ 'ಅತಚ್ಛಬ್ದಾತ್' ಎಂದು 'ನಞ್' ಸಮಾಸವು ಕಾಣಿಸುತ್ತಿದೆ. ಆದರೆ ಪ್ರಸಜ್ಯ ಪ್ರತಿಷೇಧಾರ್ಥದಲ್ಲಿ ನಞ್ ಎಂಬುದು ಕ್ರಿಯಾಸಾಪೇಕ್ಷವಾದ್ದರಿಂದ ಸಾಮರ್ಥ್ಯವನ್ನು ಹೊಂದದ ಕಾರಣ ಸಮಾಸವಾಗುವುದಿಲ್ಲವೆಂದನಿಸುತ್ತದೆ. ಆದರೂ 'ಅಸೂರ್ಯಂ ಪಶ್ಯಾಃ, ಅಶ್ರಾದ್ಧಭೋಜೀ' ಇತ್ಯಾದಿ ಸ್ಥಳಗಳಲ್ಲಿ 'ನಞ್' ಸಮಾಸವನ್ನು ಪ್ರಸಜ್ಯಪ್ರತಿಷೇಧಾರ್ಥದಲ್ಲಿಯೂ ಒಪ್ಪಿರುವುದರಿಂದ ಇಲ್ಲಿಯೂ ತಪ್ಪಾಗುವುದಿಲ್ಲ. ಅಥವಾ ಅವ್ಯಯೀಭಾವ ಸಮಾಸವೆಂದು ಪರಿಗಣಿಸಬಹುದು. ಅವ್ಯಯೀಭಾವ ಸಮಾಸವಾದರೆ 'ಅಮ್' ಪ್ರತ್ಯಯವು

ಕೊನೆಯಲ್ಲಿ ಬರಬೇಕೆಂದೇನೂ ನಿಯಮವಿಲ್ಲ. 'ಅಪಂಚಮ್ಯಾಃ' ಎಂಬುದಾಗಿ ಪಂಚಮೀವಿಭಕ್ತಿಯನ್ನು ಬಿಟ್ಟು ಉಳಿದೆಡೆ ಹಾಗೇ 'ಅಮ್' ಪ್ರತ್ಯಯವು ಬರುತ್ತದೆಂದು ಪಾಣಿನಿ ಸೂತ್ರವು ಹೇಳಿದೆ.

ಮೂರನೆಯ ಸೂತ್ರವು ಹೀಗೆ ಪರಪಕ್ಷದಲ್ಲಿ ಸಾಧಕ ಪ್ರಮಾಣಗಳಿಲ್ಲವೆಂದು ಸಮರ್ಥಿಸಿದ ಮೇಲೆ ನಾಲ್ಕನೆಯ 'ಪ್ರಾಣಭೃಚ್ಚ' ಎಂಬ ಸೂತ್ರವು ಜೀವ ಹಾಗೂ ಪ್ರಧಾನಗಳು ದ್ಯುಭ್ವಾದ್ಯಾಯತನರಾಗುವುದಿಲ್ಲ ವೆಂದು ಸಮರ್ಥಿಸಿದೆ. ಈ ಸೂತ್ರವನ್ನು ಮುಂದಿನ 'ಭೇದವ್ಯಪದೇಶಾತ್' ಎಂಬ ಸೂತ್ರದಲ್ಲಿ ಅನುಕರ್ಷಮಾಡಬೇಕೆಂಬ ಉದ್ದೇಶದಿಂದ ಪ್ರತ್ಯೇಕವಾಗಿ ಹೇಳಿದ್ದಾರೆ. ಮುಂದಿನ ಸೂತ್ರದಲ್ಲಿ ಅನುಕರ್ಷ ಮಾಡುವ ಅವಶ್ಯಕತೆ ಇಲ್ಲದಿದ್ದಲ್ಲಿ ಹಿಂದಿನ ಸೂತ್ರಗಳ ಜೊತೆಗೆ ಸೇರಿಸಿ ಈ ಸೂತ್ರವನ್ನು ಪಠಿಸಬಹುದಿತ್ತು.

• • • • •

ಐದು, ಆರು ಹಾಗೂ ಏಳನೆಯ ಸೂತ್ರಾರ್ಥ ವಿವರಣೆ

ತಾತ್ಪರ್ಯಚಂದ್ರಿಕಾ

ಪಞ್ಚಮೇ ಜೀವಬ್ರಹ್ಮಾಭೇದೇನೋಭಯಾಬಾಧಸಮ್ಭವೇನೈಕಸ್ಯಾಪಿ ಬಾಧೋ ಯುಕ್ತ ಇತಿ ಶಙ್ಕಿತೇ ತನ್ನಿರಾಸಾಚ್ಚಶಬ್ದಾಭಾವಃ ಸ್ವಪಕ್ಷಸಾಧಕಸ್ವಶಬ್ದಾದಿಹೇತುವಿಪ್ರಕರ್ಷಶ್ಚ ।

ಅನುವಾದ – 'ಓಂ ಭೇದವ್ಯಪದೇಶಾತ್ ಓಂ' ಎಂಬುದು ಐದನೆಯ ಸೂತ್ರ. ಜೀವ ಹಾಗೂ ಬ್ರಹ್ಮರಿಗೆ ಅಭೇದವನ್ನೇ ಒಪ್ಪೋಣ. ಹೀಗೆ ಒಪ್ಪುವುದರಿಂದ ಎರಡು ಪಕ್ಷಗಳನ್ನು ಬಾಧವಿಲ್ಲದೇ ಉಪಪಾದಿಸಬಹುದು. ಹೀಗೆಯೇ ವ್ಯಾಖ್ಯಾನಿಸಲು ಬರುವಾಗ ಒಂದು ಪಕ್ಷಕ್ಕೆ ಬಾಧವನ್ನು ಹೇಳುವುದು ತಪ್ಪಾಗುತ್ತದಲ್ಲವೇ? ಈ ಆಶಂಕೆಯನ್ನು ನಿರಾಕರಿಸುವುದಕ್ಕಾಗಿ 'ಭೇದವ್ಯಪದೇಶಾತ್' ಎಂಬ ಸೂತ್ರವು ಹೊರಟಿದೆ. ಹಿಂದಿನ ವಿಷಯದ ಮೇಲೆ ಬರುವ ಅಭೇದಾಶಂಕೆಯನ್ನು ನಿರಾಕರಿಸುವುದಕ್ಕಾಗಿ ಈ ಸೂತ್ರ ಹೊರಟಿರುವುದರಿಂದ 'ಚ' ಶಬ್ದವನ್ನು ಹೇಳಿರುವುದಿಲ್ಲ. ಮತ್ತು ಸ್ವಪಕ್ಷಸಾಧಕವಾದ 'ದ್ಯುಭ್ವಾದ್ಯಾಯತನಂ ಸ್ವಶಬ್ದಾತ್' ಮತ್ತು 'ಮುಕ್ತೋಪಸೃಪ್ಯವ್ಯಪದೇಶಾತ್' ಎಂಬ ಸೂತ್ರಗಳ ಅನಂತರವೂ ಸಹ ಇದು ಪ್ರಸಕ್ತವಾಗುವುದಿಲ್ಲ. ಇಲ್ಲದಿದ್ದರೆ ಸ್ವಪಕ್ಷ ಸಾಧಕವಾದ್ದರಿಂದ ಸೂತ್ರದಲ್ಲಿ 'ಚ' ಶಬ್ದವಿರಬೇಕಿತ್ತು. ಮತ್ತು ಸ್ವಪಕ್ಷಸಾಧಕಗಳ ಮಧ್ಯದಲ್ಲಿಯೇ ಇರಬೇಕಿತ್ತೆಂಬ ಆಕ್ಷೇಪಕ್ಕೆ ಅವಕಾಶವಿರುತ್ತಿತ್ತು.

ಅತ್ರ ಚ 'ಅನ್ಯಮೀಶಮ್' ಇತ್ಯುಕ್ತೇನಾನ್ಯತ್ವೇನ 'ಪಶ್ಯತಿ' ಇತಿ ಪ್ರಕೃತೋ ಜೀವಃ ಪದಿನ್ಯಾಯೇನ ಪ್ರತಿಯೋಗಿತ್ವೇನ ಸಮ್ಬಧ್ಯತ ಇತ್ಯಭಿಪ್ರೇತ್ಯೇಯಂ ಶ್ರುತಿರ್ಜೀವೇಶಭೇದೇ ಪ್ರಮಾಣೀಕೃತಾ ।

'ಜ್ಯುಷ್ಪಂ ಯದಾ ಪಶ್ಯತಿ' ಎಂಬ ಶ್ರುತಿಯು ಈಶನು ಭಿನ್ನನಾಗಿದ್ದಾನೆಂದಷ್ಟೇ ಹೇಳುತ್ತಿದೆ. ಭೇದಕ್ಕೆ ದ್ಯುಭ್ವಾದ್ಯಧಿಕರಣ (೧-೩-೧)

ಪ್ರತಿಯೋಗಿಯಾದವನು ಯಾರೆಂದು ನಿಖರವಾಗಿ ಹೇಳಿರುವುದಿಲ್ಲ. ಈ ಸಂದರ್ಭದಲ್ಲಿ ಪೂರ್ವಮೀಮಾಂಸೆಯ ಪದನ್ಯಾಯದಿಂದ ಜೀವನೇ ಪ್ರತಿಯೋಗಿಯಾದ್ದಾನೆಂದು ತಿಳಿಯಬೇಕು. 'ಸಪ್ತಮಂ ಪದಮ್' ಎಂಬ ಶ್ರುತಿಯಲ್ಲಿ ಪದಶಬ್ದಕ್ಕೆ ಸನ್ನಿಹಿತವಾದ ಒಂದು ವರ್ಷದ ಹಸುವಿನ ಹೆಜ್ಜೆಯನ್ನೇ ಅರ್ಥವನ್ನಾಗಿ ಪರಿಗಣಿಸಬೇಕೆಂದು ಪೂರ್ವಮೀಮಾಂಸೆಯಲ್ಲಿ ಹೇಗೆ ನಿರ್ಣಯಿಸಿದ್ದಾರೋ, ಅದರಂತೆ ಪ್ರಕೃತದಲ್ಲಿಯೂ 'ಪಶ್ಯತಿ' ಎಂಬುದಾಗಿ 'ದರ್ಶನಕರ್ತೃತ್ವೇನ' ಪ್ರಸಕ್ತನಾದ ಜೀವನನ್ನೇ ಭೇದಕ್ಕೆ ಪ್ರತಿಯೋಗಿಯಾಗಿದ್ದಾನೆಂದು ಪರಿಗಣಿಸಬೇಕು. ಈ ಅಭಿಪ್ರಾಯದಿಂದ ಭಾಷ್ಯಕಾರರು ಜೀವೇಶಭೇದವಿಷಯದಲ್ಲಿ ಈ ಶ್ರುತಿಯನ್ನು ಪ್ರಮಾಣವನ್ನಾಗಿ ಹೇಳಿರುತ್ತಾರೆ.

''ವಿಶೇಷಣಭೇದವ್ಯಪದೇಶಾಭ್ಯಾಮ್'' ಇತ್ಯತ್ರ ತ್ವಯಮನ್ಯೋ ಮಾರ್ಗ ಇತ್ಯುಕ್ತೇ ಪ್ರಸಿದ್ಧಮಾರ್ಗಾದನ್ಯತ್ವವತ್ 'ಅನ್ಯಮೀಶಮ್' ಇತ್ಯುಕ್ತೇ ಪ್ರಸಿದ್ಧೇಶಾದ್ರುದ್ರಾದನ್ಯತ್ವಪ್ರತೀತೇರಿಯಂ ಶ್ರುತಿರ್ವ್ಯಾಖ್ಯಾನಾನ್ತರಮಭಿಪ್ರೇತ್ಯ ರುದ್ರಾದನ್ಯತ್ವೇ ಪ್ರಮಾಣೀಕೃತೇತ್ಯವಿರೋಧಃ ।

ಅದೃಶ್ಯತ್ವಾಧಿಕರಣದ 'ವಿಶೇಷಣಭೇದವ್ಯಪದೇಶಾಭ್ಯಾಂಚ ನೇತರೌ' ಎಂಬ ಸೂತ್ರದಲ್ಲಿ ರುದ್ರನಿಗಿಂತ ವಿಷ್ಣು ಭಿನ್ನನಾಗಿದ್ದಾನೆಂದು ಈ ಶ್ರುತಿಗೆ ವ್ಯಾಖ್ಯಾನಿಸಿದ್ದಾರೆ. ಲೋಕದಲ್ಲಿ ''ಇದು ಬೇರೆ ದಾರಿ'' ಎಂದು ಹೇಳಿದರೆ ಪ್ರಸಿದ್ಧವಾದ ದಾರಿಗಿಂತ ಇದು ಭಿನ್ನವಾದ ದಾರಿಯೆಂದು ಹೇಗೆ ತಿಳಿಯುತ್ತದೋ? ಅದರಂತೆ 'ಅನ್ಯಮೀಶಮ್' ಎಂದು ಹೇಳಿದಾಗ ಪ್ರಸಿದ್ಧನಾದ ಈಶನಿಗಿಂತ ಭಿನ್ನನಾದ ಈಶನೆಂದು ತಿಳಿಯುತ್ತದೆ. ಅಂದರೆ ಈಶಶಬ್ದದಿಂದ ಪ್ರಸಿದ್ಧನಾಗಿ ಯಾವ ರುದ್ರನು ವಾಚ್ಯನಾಗಿದ್ದಾನೋ, ಅಂತಹ ಈಶನಿಗಿಂತ ಭಿನ್ನನಾದ ಮತ್ತೊಬ್ಬ ಈಶನೆಂಬ ಪ್ರತೀತಿಯು ಬರುತ್ತದೆ. ಹೀಗೆ ರುದ್ರನಿಗಿಂತ ವಿಷ್ಣು ಭಿನ್ನನಾಗಿದ್ದಾನೆಂದು ಈ ಶ್ರುತಿಯಿಂದ ತಿಳಿದಂತಾಗುತ್ತದೆ. ಹೀಗೆ ಅದೃಶ್ಯತ್ವಾಧಿಕರಣದಲ್ಲಿ ಮಾಡಲ್ಪಟ್ಟ ವ್ಯಾಖ್ಯಾನವು ಇಲ್ಲಿ ಮಾಡುತ್ತಿರುವ ವ್ಯಾಖ್ಯಾನಕ್ಕಿಂತ ಮತ್ತೊಂದು ಬಗೆಯ ವ್ಯಾಖ್ಯಾನವೆಂದು ತಿಳಿಯಬೇಕು. ಆದ್ದರಿಂದ ಒಂದು ವ್ಯಾಖ್ಯಾನಕ್ಕೆ ಮತ್ತೊಂದು ವ್ಯಾಖ್ಯಾನದಿಂದ ವಿರೋಧವನ್ನು ಹೇಳಲು ಸಾಧ್ಯವಿಲ್ಲ.

ಏವಂ ಷಷ್ಠೇऽಪಿ ಭೇದವ್ಯಪದೇಶಸ್ಯಾನ್ಯವಿಷಯತ್ವಶಙ್ಕಾನಿರಾಸಾಚ್ಚಶಬ್ದಾಭಾವಃ ।

'ಓಂ ಪ್ರಕರಣಾತ್ ಓಂ' ಎಂಬುದು ಆರನೆಯ ಸೂತ್ರ. ಭೇದವ್ಯಪದೇಶವನ್ನು ಹೇಳಿದ ಮೇಲೆ ಆ ಭೇದವು ಅನ್ಯವಿಷಯಕವಾಗಬಹುದಲ್ಲವೇ? ಎಂಬ ಆಶಂಕೆಯು ಪ್ರಾಪ್ತವಾಗುತ್ತದೆ. ಅದರ ನಿರಾಸಕ್ಕೋಸ್ಕರ ಈ ಸೂತ್ರವು ಹೊರಟಿದೆ. ಪ್ರಕರಣದ ಬಲದಿಂದ ಜೀವಬ್ರಹ್ಮಭೇದವನ್ನೇ ಸಾಧಿಸಬೇಕೆಂದು ಈ ಸೂತ್ರವು ಸಾಧಿಸುತ್ತಿದೆ. ಆದ್ದರಿಂದ ಈ ಸೂತ್ರದಲ್ಲಿ 'ಚ' ಶಬ್ದವನ್ನು ಹೇಳಿರುವುದಿಲ್ಲ.

ಸಪ್ತಮೇ ತು ನ ಕೇವಲಂ ವ್ಯಪದೇಶಾಚ್ಛ್ರುತೇರ್ಭೇದಃ, ಕಿನ್ತು ಲಿಙ್ಗಾದಪೀತಿ ಕಥನಾಚ್ಚಶಬ್ದಃ ।

'ಓಂ ಸ್ಥಿತ್ಯದನಾಭ್ಯಾಂ ಚ ಓಂ' ಎಂಬುದು ಏಳನೆಯ ಸೂತ್ರ. ಭೇದವ್ಯಪದೇಶದ ವಿಷಯದಲ್ಲಿ ಕೇವಲ ಶ್ರುತಿಯು ಮಾತ್ರ ಪ್ರಮಾಣವಲ್ಲ. ಲಿಂಗವೂ ಸಹ ಪ್ರಮಾಣವಾಗಿದೆಯೆಂದು ಈ ಸೂತ್ರವು ಸಮರ್ಥಿಸುತ್ತಿದೆ. ಆದ್ದರಿಂದಲೇ 'ಚ' ಶಬ್ದವನ್ನು ಸೂತ್ರಕಾರರು ಹೇಳಿದ್ದಾರೆ.

ಶ್ರುತಾವದನಸ್ಯ ಪ್ರಾಥಮ್ಯೇऽಪಿ ಸ್ಥಿತೇರೀಶ್ವರಸಮ್ಬನ್ಧಿತ್ವೇನಾಭ್ಯರ್ಹಿತತ್ವಾದಲ್ಪಾಚ್ತರತ್ವಾಚ್ಚ ಸೂತ್ರೇ ತಸ್ಯಾಃ ಪ್ರಾಥಮ್ಯಮ್ ।

ವಾಸ್ತವಿಕವಾಗಿ ಶ್ರುತಿಯಲ್ಲಿ ಅದನವನ್ನು ಮೊದಲು ಹೇಳಿರುವುದರಿಂದ ಸೂತ್ರದಲ್ಲಿಯೂ ಅದನವನ್ನೇ ಮೊದಲು ಹೇಳಬೇಕಿತ್ತು. ಆದರೆ ಸ್ಥಿತಿಯು ಈಶ್ವರನಿಗೆ ಸಂಬಂಧಿಸಿದ್ದರಿಂದ ಪ್ರಧಾನವಾಗಿದೆ. ಅಪ್ರಧಾನವನ್ನು ಹೇಳುವುದಕ್ಕಿಂತ ಮೊದಲು ಪ್ರಧಾನವನ್ನು ಹೇಳುವುದು ಸಮಂಜಸವೆಂಬ ಅಭಿಪ್ರಾಯದಿಂದ ಸ್ಥಿತಿಯನ್ನೇ ಮೊದಲು ಹೇಳಿರುತ್ತಾರೆ. ಅಥವಾ 'ಅದನ' ಶಬ್ದಕ್ಕಿಂತ 'ಸ್ಥಿತಿ' ಶಬ್ದವು ಕಮ್ಮಿ ಅಜಕ್ಷರಗಳಿಂದ ಕೂಡಿದೆ. ಆದ್ದರಿಂದ 'ಅಲ್ಪಾಚ್ತರಂಪೂರ್ವಮ್' ಎಂಬ ಸೂತ್ರಾನುಸಾರ ಸ್ಥಿತಿಶಬ್ದಕ್ಕೆ ಪ್ರಾಥಮ್ಯವು ಯುಕ್ತವಾಗಿದೆ.

ನಚ ವಾಚ್ಯಂ 'ದ್ವಾ ಸುಪರ್ಣಾ' ಇತಿ ಮನ್ತ್ರೋಕ್ತೇ ಸ್ಥಿತ್ಯದನೇ ಬುದ್ಧಿಜೀವಗತೇ । ನನ್ತು ಜೀವೇಶಗತೇ । ''ತಾವೇತೌ ಸತ್ವಕ್ಷೇತ್ರಜ್ಞಾತ್'' ಇತಿ ಪೈಙ್ಗಿರಹಸ್ಯಬ್ರಾಹ್ಮಣೇನಾಸ್ಯ ಮನ್ತ್ರಸ್ಯ ಸತ್ವಕ್ಷೇತ್ರಜ್ಞಶಬ್ದಾರ್ಥತ್ವೇನ ಬುದ್ಧಿಜೀವವಿಷಯತ್ವೇನ ವ್ಯಾಖ್ಯಾತತ್ವಾದಿತಿ ।

ಆಕ್ಷೇಪ - 'ದ್ವಾ ಸುಪರ್ಣಾ' ಎಂಬ ಶ್ರುತಿಯಲ್ಲಿ ಸ್ಥಿತಿ ಹಾಗೂ ಅದನಗಳೆಂಬ ಲಿಂಗಗಳು ಕೇಳಿಸುತ್ತಿವೆ. ಈ ಲಿಂಗಗಳ ಬಲದಿಂದ ಜೀವ ಹಾಗೂ ಬ್ರಹ್ಮರಿಗೆ ಭೇದವು ಸಿದ್ಧವಾಗುತ್ತದೆಂದು ಹೇಳಿದಿರಿ. ಆದರೆ ಇವು ಬುದ್ಧಿ ಹಾಗೂ ಜೀವರ ಧರ್ಮವಾದ್ದರಿಂದ ಇವೆರಡರ ಭೇದವೇ ಶ್ರುತಿಗೆ ಸಮ್ಮತವಾಗಿದೆ. ಆದ್ದರಿಂದ 'ದ್ವಾ ಸುಪರ್ಣಾ' ಎಂಬ ಶ್ರುತಿಯು ಬುದ್ಧಿ ಹಾಗೂ ಜೀವ ವಿಷಯಕವೆಂದು ಹೇಳಬೇಕು. ಆದ್ದರಿಂದಲೇ ಪೈಂಗಿರಹಸ್ಯದ ಬ್ರಾಹ್ಮಣವಾಕ್ಯದಲ್ಲಿ 'ತಾವೇತೌ ಸತ್ವಕ್ಷೇತ್ರಜ್ಞೌ' ಎಂಬುದಾಗಿ ಈ ಮಂತ್ರಕ್ಕೆ ಸತ್ವ ಹಾಗೂ ಕ್ಷೇತ್ರಜ್ಞರು ವಿಷಯರಾಗಿದ್ದಾರೆಂದು ವ್ಯಾಖ್ಯಾನಿಸಲಾಗಿದೆ. 'ಸತ್ವ' ಎಂದರೆ ಬುದ್ಧಿಯೆಂದರ್ಥ, 'ಕ್ಷೇತ್ರಜ್ಞ' ಎಂದರೆ ಜೀವನೆಂದರ್ಥ. ಒಟ್ಟಾರೆ 'ದ್ವಾ ಸುಪರ್ಣಾ' ಎಂಬ ಶ್ರುತಿಯು ಬುದ್ಧಿಜೀವವಿಷಯಕವೇ ಆಯಿತು.

ಬ್ರಾಹ್ಮಣೇ ಸತ್ವಶಬ್ದಸ್ಯ ''ಊನಂ ನ ಸತ್ವೇಷ್ವಧಿಕೋ ಬಬಾಧೇ'' ಇತಿ ಪ್ರಯೋಗಾತ್ ''ಸತ್ವಮಸ್ಮಿ ತು ಜನ್ತುಷು'' ಇತಿ ನಾಮಾನುಶಾಸನಾತ್ ''ಸತ್ವಂ ಜೀವ ಇತಿ ಪ್ರೋಕ್ತಃ'' ಇತಿ ಸ್ಮೃತೇಶ್ಚ ಜೀವಪರತ್ವಾತ್ ।

ದ್ಯುಭ್ವಾದ್ಯಧಿಕರಣ (೧-೩-೧)

ಸಮಾಧಾನ - ಆದ್ವೈತಿಗಳ ಈ ಆಕ್ಷೇಪವು ತಪ್ಪು. ಪೈಂಗಿ ರಹಸ್ಯ ಬ್ರಾಹ್ಮಣದಲ್ಲಿ 'ದ್ವಾ ಸುಪರ್ಣಾ' ಎಂಬ ಶ್ರುತಿಯು ಸತ್ವ ಹಾಗೂ ಕ್ಷೇತ್ರಜ್ಞಗಳನ್ನು ವಿಷಯೀಕರಿಸುತ್ತಿದೆಯೆಂದು ಹೇಳಲಾಗಿದೆ; ಹೊರತು ಬುದ್ಧಿ ಹಾಗೂ ಜೀವರನ್ನು ವಿಷಯೀಕರಿಸುತ್ತಿದೆಯೆಂದು ಹೇಳಿಲ್ಲ. ಸತ್ವಶಬ್ದಕ್ಕೆ ಬುದ್ಧಿಯೆಂಬ ವ್ಯಾಖ್ಯಾನವು ಅಯುಕ್ತ; ಹೊರತಾಗಿ ಜೀವನೆಂದೇ ಅರ್ಥ. ಏಕೆಂದರೆ ರಘುವಂಶದಲ್ಲಿ 'ಊನಂ ನ ಸತ್ವೇಷ್ವಧಿಕೋ ಬಬಾಧೇ' ಎಂಬುದಾಗಿ ಅನೇಕ ಪ್ರಾಣಿಗಳಿರುವಾಗ ಸಣ್ಣ ಪ್ರಾಣಿಗಳನ್ನು ದೊಡ್ಡ ಪ್ರಾಣಿಗಳು ಹಿಂಸಿಸಲಿಲ್ಲ ಎಂದು ಹೇಳಲಾಗಿದೆ. ಇಲ್ಲಿರುವ ಸತ್ವಶಬ್ದಕ್ಕೆ ಪ್ರಾಣಿಯೆಂದರ್ಥ. ಮತ್ತು ಅಮರಕೋಶದಲ್ಲಿಯೂ 'ಸತ್ವಮಸ್ತ್ರೀ ತು ಜಂತುಷು' ಎಂಬುದಾಗಿ 'ಜಂತು' ಎಂಬರ್ಥದಲ್ಲಿ ಸತ್ವಶಬ್ದವನ್ನು ಪ್ರಯೋಗಿಸಲಾಗಿದೆ. 'ಜಂತು' ಎಂದರೆ ಜೀವನೆಂದೇ ಅರ್ಥ. ಮತ್ತು 'ಸತ್ವಂ ಜೀವ ಇತಿ ಪ್ರೋಕ್ತಃ' ಎಂಬ ಸ್ಮೃತಿಪ್ರಮಾಣವೂ ಇರುವುದರಿಂದ ಸತ್ವಶಬ್ದಕ್ಕೆ ಜೀವನೆಂಬ ವ್ಯಾಖ್ಯಾನವು ಅನಿವಾರ್ಯ.

ಕ್ಷೇತ್ರಜ್ಞಶಬ್ದಸ್ಯ ಚ –

'ಪ್ರಕೃತೇಶ್ಚ ವಿಕಾರಾಣಾಂ ದ್ರಷ್ಟಾರಮಗುಣಾನ್ವಿತಮ್ ।
ಕ್ಷೇತ್ರಜ್ಞಮಾಹುರ್ಜೀವಂ ತು ಕರ್ತಾರಂ ಗುಣಸಂಯುತಮ್ ।।'

ಇತಿ ಮೋಕ್ಷಧರ್ಮಾದಿವಚನೈರ್ಬ್ರಹ್ಮಪರತ್ವಾತ್ ।

ಇನ್ನು 'ಕ್ಷೇತ್ರಜ್ಞ' ಶಬ್ದಕ್ಕೆ ವಿಷ್ಣುವೆಂದರ್ಥ. ಏಕೆಂದರೆ -

'ಪ್ರಕೃತೇಶ್ಚ ವಿಕಾರಾಣಾಂ ದ್ರಷ್ಟಾರಮಗುಣಾನ್ವಿತಮ್ ।
ಕ್ಷೇತ್ರಜ್ಞಮಾಹುರ್ಜೀವಂ ತು ಕರ್ತಾರಂ ಗುಣಸಂಯುತಮ್ ।।'

ಪ್ರಕೃತಿಯ ವಿಕಾರಗಳನ್ನು ನೋಡುವ ವ್ಯಕ್ತಿಯು ತ್ರಿಗುಣಗಳಿಂದ ರಹಿತನಾಗಿದ್ದಾನೆ. ಅಂತಹ ಸರ್ವೋತ್ತಮನಾದ ವಿಷ್ಣುವೇ ಕ್ಷೇತ್ರಜ್ಞನೆನಿಸುತ್ತಾನೆ. ಕರ್ತೃವಾದ ಜೀವನಾದರೂ ತ್ರಿಗುಣಗಳಿಂದ ಬದ್ಧನಾಗಿದ್ದಾನೆ. ಹೀಗೆ ಮೋಕ್ಷಧರ್ಮ ವಚನದಿಂದ ಕ್ಷೇತ್ರಜ್ಞ ಶಬ್ದವು ವಿಷ್ಣುವನ್ನೇ ಪ್ರತಿಪಾದಿಸುತ್ತದೆಂದು ತಿಳಿಯುತ್ತದೆ.

ಅನ್ಯಥಾ 'ದ್ವಾ ಸುಪರ್ಣಾ' ಇತ್ಯಸ್ಮಾದುತ್ತರಂ ''ಸಮಾನೇ ವೃಕ್ಷೇ ಪುರುಷೋ ನಿಮಗ್ನೋऽನೀಶಯಾ ಶೋಚತಿ ಮುಹ್ಯಮಾನಃ'' ಇತ್ಯಾದಿಕಮಯುಕ್ತಮ್ ನಹಿ ಬುದ್ಧೌ ಪುರುಷಶಬ್ದೋ ಮುಹ್ಯಮಾನತ್ವವೀತ-ಶೋಕತ್ವಾದಿಕಂ ಚ ಯುಕ್ತಮ್ ।

ಒಂದು ವೇಳೆ 'ದ್ವಾ ಸುಪರ್ಣಾ' ಎಂಬ ಶ್ರುತಿಯು ಜೀವ ಹಾಗೂ ಬ್ರಹ್ಮರನ್ನೇ ವಿಷಯೀಕರಿಸುತ್ತಿದೆಯೆಂದು ಹೇಳದಿದ್ದರೆ, ಈ ಶ್ರುತಿಯ ಮುಂದಿನ ವಾಕ್ಯದಲ್ಲಿ 'ಸಮಾನೇ ವೃಕ್ಷೇ

ಪುರುಷೋ ನಿಮಗ್ನೋಽನೀಶಯಾ ಶೋಚತಿ ಮುಹ್ಯಮಾನಃ' ಇತ್ಯಾದಿ ಮಾತುಗಳನ್ನು ಹೇಳಿದ್ದು ತಪ್ಪಾಗಬೇಕಾಗುತ್ತದೆ. ಏಕೆಂದರೆ ಬುದ್ಧಿಯಿಲ್ಲಿ ಪುರುಷ ಶಬ್ದದ ಪ್ರಯೋಗವನ್ನಾಗಲೀ, ಮುಹ್ಯಮಾನತ್ವ, ವೀತಶೋಕತ್ವ ಧರ್ಮಗಳನ್ನಾಗಲೀ ಹೇಳಲು ಸಾಧ್ಯವಿಲ್ಲ.

ಪ್ರಕಾಶಃ –

पञ्चम इति ।। भेदव्यपदेशादिति सूत्रे । ''अन्यमीशमिति जीवेशभेदव्यपदेशादित्यर्थः'' इति टीका न युक्तेव । श्रुतौ जीवादन्यमित्यप्रतीतेः । विरुद्धा चादृश्यत्वाधिकरणभाष्येणेत्यत आह – अत्र चेति ।।

ಓಂ ಭೇದವ್ಯಪದೇಶಾತ್ ಓಂ ಎಂಬುದು ಐದನೆಯ ಸೂತ್ರ. ಈ ಸೂತ್ರದಲ್ಲಿ ಜೀವಬ್ರಹ್ಮಭೇದವನ್ನು ಸಮರ್ಥಿಸಲಾಗಿದೆ. ಸೂತ್ರವನ್ನು ವ್ಯಾಖ್ಯಾನಿಸುವಾಗ 'ಅನ್ಯಮೀಶಮಿತಿ ಜೀವೇಶಭೇದವ್ಯಪದೇಶಾದಿತ್ಯರ್ಥಃ' 'ಶ್ರುತಿಯಲ್ಲಿ 'ಅನ್ಯಮೀಶಮ್' ಎಂಬುದಾಗಿ ಜೀವೇಶ ಭೇದವು ಉಕ್ತವಾಗಿರುವುದರಿಂದ' ಎಂಬುದಾಗಿ ಟೀಕೆಯಲ್ಲಿ ಹೇಳಿದ್ದಾರೆ. ಇದು ತಪ್ಪು. ಏಕೆಂದರೆ 'ಅನ್ಯಮೀಶಮ್' ಎಂಬುದಾಗಿ ಶ್ರುತಿಯು 'ಅನ್ಯಮ್' ಎಂಬುದಾಗಿ ಭೇದವನ್ನಷ್ಟೇ ಹೇಳುತ್ತಿದೆ ಹೊರತು, ಜೀವನಿಂದ ಭೇದವನ್ನು ಹೇಳುತ್ತಿಲ್ಲ. ಹಾಗೂ ಜೀವಭೇದವನ್ನು ಈಶನಲ್ಲಿ ಸಮರ್ಥಿಸಿದರೆ ಅದೃಶ್ಯತ್ವಾಧಿಕರಣದ ಭಾಷ್ಯದಿಂದ ವಿರೋಧವೂ ಬರುತ್ತದೆ. ಅದೃಶ್ಯತ್ವಾಧಿಕರಣದಲ್ಲಿರುವ 'ವಿಶೇಷಣಭೇದವ್ಯಪದೇಶಾಭ್ಯಾಂ ಚ ನೇತರೌ' ಎಂಬ ಸೂತ್ರದಲ್ಲಿ ಈಶಶಬ್ದಕ್ಕೆ ರುದ್ರನೆಂಬ ಅರ್ಥವನ್ನು ವಿವಕ್ಷಿಸಿ ರುದ್ರನಿಗಿಂತ ಪರಮಾತ್ಮನು ಭಿನ್ನನಾಗಿದ್ದಾನೆಂದು ವ್ಯಾಖ್ಯಾನಿಸಲಾಗಿದೆ. ಅದಕ್ಕೆ ವಿರುದ್ಧವಾಗಿ ಜೀವನಿಂದ ಪರಮಾತ್ಮನು ಭಿನ್ನನಾಗಿದ್ದಾನೆಂದು ಈಗ ವ್ಯಾಖ್ಯಾನಿಸಿದರೆ ತಪ್ಪಾಗುತ್ತದಲ್ಲವೇ? ಎಂಬ ಪ್ರಶ್ನೆಗೆ 'ಅತ್ರ ಚ' ಎಂಬ ವಾಕ್ಯದಿಂದ ಉತ್ತರಿಸುತ್ತಿದ್ದಾರೆ.

ಪ್ರಕಾಶಃ – पदिन्यायेनेति ।। चतुर्थस्याद्यपादे ''पदकर्माप्रयोजकं नयनस्य परार्थत्वात्'' इति दशमाधिकरणे चिन्तितम् । ज्योतिष्टोमे ''एकहायन्या क्रीणाति'' इत्येकहायन्या गवा सोमक्रयणं प्रकृत्य ''षट्पदान्यनुनिष्क्रामति । सप्तमं पदमध्वर्युरञ्जलिना गृह्णाति'' इति षट्पदनयनानन्तरं साज्यसप्तमपदपांसुग्रहणं विधाय ''यर्हि हविर्धाने प्राची प्रवर्तयेयुस्तर्हि तेनाक्षमुपाञ्ज्यात्'' इति हविर्धाने शकटप्रवर्तनकाले तदक्षाञ्जनं तेन पदपांसुना साऽज्येन कर्तव्यमाम्नायते । तत्र सोमक्रयणवत्पदपांसुसाध्यमक्षाञ्जनमप्येकहायनीनयनस्य प्रयोजकमनुष्ठापकमिति यावत् । उत नेति संशये उभयोरप्येकहायनीनयनसाध्यत्वादुभयं प्रयोजकमिति प्राप्ते एकहायन्या क्रीणातीत्येकहायन्याः क्रयणार्थत्वेन विधानाद् यदर्थं द्रव्यं

तदर्थस्तत्संस्कार इत्येकहायन्या सोमक्रयणदेशं प्रति नयनरूपस्य संस्कारस्यापि क्रयणार्थत्वात्क्रयणमेव प्रयोजकमन्यदनुनिष्पादीति सिद्धान्त इति ।

ಗ್ರಂಥದಲ್ಲಿ ಪದಿನ್ಯಾಯವನ್ನು ಹೇಳಿದ್ದಾರೆ. ಪೂರ್ವಮೀಮಾಂಸೆಯ ಪದಿನ್ಯಾಯದ ವಿವರಣೆ ಹೀಗಿದೆ -

'पदकर्मार्थप्रयोजकं नयनस्य परार्थत्वात्'[1] (೪-೧-೧೦)

ಜ್ಯೋತಿಷ್ಟೋಮ ಪ್ರಕರಣದಲ್ಲಿ 'ಏಕಹಾಯನ್ಯಾ ಕ್ರೀಣಾತಿ' ಎಂಬ ವಾಕ್ಯವು ಪ್ರಸಕ್ತವಾಗಿದೆ. ಜ್ಯೋತಿಷ್ಟೋಮ ಯಾಗಕ್ಕೋಸ್ಕರ ಸೋಮರಸವನ್ನು ಸಂಪಾದಿಸಬೇಕು. ಧನ, ಕನಕಾದಿಗಳನ್ನು ಕೊಟ್ಟು ಸೋಮಲತೆಯನ್ನು ಕ್ರಯಣ ಮಾಡದೇ ಒಂದು ವರ್ಷದ ಕರುವನ್ನು ನೀಡಿ ಸೋಮಲತೆಯನ್ನು ಕ್ರಯಣ

(೧) ಭಾಟ್ಟಸಙ್ಗ್ರಹಃ –

अथ दशमं गवानयनस्य पदकर्माप्रयुक्ताधिकरणम्

पदकर्माप्रयोजकं नयनस्य परार्थत्वात् ॥ २५ ॥

पूर्ववैषम्येणात्र शङ्कनात्सङ्गतिः । ज्योतिष्टोमे ''एकहायन्या सोमं क्रीणाति'' इति सोमक्रयं प्रकृत्य श्रूयते ''षट्पदान्यनुनिष्क्रामति, सप्तमं पदमञ्जलिना गृह्णाति'' इति, ''यर्हि हविर्धाने प्राचीं प्रवर्तयेयुस्तर्हि तेनाक्षमुपाञ्जात्'' इति च । सोमं क्रेतुमेकहायनी गौर्यदा नीयते तदाऽध्वर्युस्तस्याः पृष्ठतोऽनुगच्छति । ततः सप्तमे पदे हिरण्यं निधाय, आज्येन हुत्वा, तत्पदगतरजो गृह्णाति । तद्रजः सङ्गृह्य हविर्धानयोः शकटयोः प्राङ्मुखतया प्रवर्तमानयोरक्षे तेन रजसा युक्तमञ्जनं प्रतिक्षिपेदिति **तदर्थः** । तत्र **सन्देहः**, यदेतदक्षाभ्यञ्जनं सप्तमपदसाध्यं तदर्थमप्येकहायनीनयनं, तेनापि प्रयुज्यते, उत क्रयार्थमेव नयनं, तेनैव प्रयुज्यत इति । **पूर्वपक्षस्तु**, पूर्वत्र दध्यानयनस्य 'तप्ते पयसि' इत्यादिवाक्येनाऽमिक्षामात्रार्थत्वेऽपि, एकहायनीनयनस्य वाक्येन क्रयार्थत्वावगमात्, क्रयस्याक्षाभ्यञ्जनस्य च द्वयोरप्येकहायनीनयनसाध्यत्वात् सन्निधानात् क्रयस्यैव पदकर्मणोऽक्षाभ्यञ्जनस्यापि शेष इत्युभयार्थं सदुभाभ्यां प्रयुज्यते गोर्नयनमिति । **सिद्धान्तस्तु**, 'एकहायन्याक्रीणाति' इति तृतीयाश्रुत्या गोः क्रयार्थत्वावगमेन तत्संस्काररूपनयनस्यापि तदर्थतैवेति क्रय एवैकहायनीयनप्रयोजको न पदकर्माक्षाभ्यञ्जनम् । तत्तु परार्थमेकहायनीनयनमुपजीवतीति । तदाह **सूत्रे**, **पदकर्म** पदसाध्यमक्षाभ्यञ्जनं नयनस्याप्रयोजकम् । नयनस्य क्रयरूपपरार्थत्वादिति । **फलन्तु**, दैवात्सप्तमं पदं शिलादौ निधीयते, पदपांसुग्रहणाय सा पुनर्नेया **पूर्वपक्षे** । **सिद्धान्ते तु** न पुनर्नेया । किन्तु सप्तमपदासंस्कृतेनैव रजसा अक्षाभ्यञ्जनं कार्यमिति । नच परप्रयुक्तद्रव्योपजीविनस्तदलाभे लोप एव युक्त इति वाच्यम् । सप्तमपदसंस्काराभावेऽपि पांसुप्रयोजकस्याक्षाभ्यञ्जनविधेः सत्त्वादिति ।

इति दशमं गवानयनस्य पदकर्माप्रयुक्ताधिकरणम्

ಮಾಡಬೇಕು. ಆ ಒಂದು ವರ್ಷದ ಕರು ಕೆಂಪಾಗಿರಬೇಕು. ಮತ್ತು ಪಿಂಗವರ್ಣದ ಕಣ್ಣುಳ್ಳದ್ದಾಗಿರಬೇಕು. ಇಂತಹ ಕರುವನ್ನು ಸೋಮಕ್ರಯಣಕ್ಕೋಸ್ಕರ ಕರೆದುಕೊಂಡು ಹೋಗುವಾಗ ಏನು ಮಾಡಬೇಕೆಂಬುದನ್ನು ಶ್ರುತಿ ಹೇಳುತ್ತಿದೆ. 'ಷಟ್‌ಪದಾನ್ಯನುನಿಷ್ಕ್ರಾಮತಿ । ಸಪ್ತಮಂ ಪದಮಧ್ವರ್ಯುರಂಜಲಿನಾ ಗೃಹ್ಣಾತಿ' ಪ್ರಾರಂಭದ ಆರು ಹೆಜ್ಜೆಗಳನ್ನು ಕರು ಇಟ್ಟಮೇಲೆ ಏಳನೆಯ ಹೆಜ್ಜೆಯನ್ನು ಇಡುತ್ತದೆ. ಹೆಜ್ಜೆಯಿಟ್ಟ ಆ ಸ್ಥಳವನ್ನು ಅಧ್ವರ್ಯು ಆದವನು ತುಪ್ಪವನ್ನು ಬೆರೆಸಿ ಬೊಗಸೆಯಲ್ಲಿ ಮಣ್ಣನ್ನು ಸ್ವೀಕರಿಸಬೇಕು. ಹೀಗೆ ಪಾಂಸುಗ್ರಹಣವನ್ನು ಶ್ರುತಿ ವಿಧಿಸಿದೆ. ಅನಂತರ 'ಯರ್ಹಿ ಹವಿರ್ಧಾನೇ ಪ್ರಾಚೀ ಪ್ರವರ್ತಯೇಯುಃ ತರ್ಹಿ ತೇನಾಕ್ಷಮುಪಾಜ್ಜಾತ್' ಎಂಬುದಾಗಿ ಯಜ್ಞಮಂಟಪದಲ್ಲಿ ಹವಿರ್ಧಾನದ ಸಂದರ್ಭದಲ್ಲಿ ಶಕಟವು ಚಲಿಸುವಾಗ ಅದರ ಅಕ್ಷಗಳಿಗೆ ಈ ತುಪ್ಪಮಿಶ್ರಿತವಾದ ಮಣ್ಣನ್ನು ಹಚ್ಚಬೇಕೆಂದು ವಿಧಿಸಲಾಗಿದೆ.

ಇಲ್ಲಿ ತಿಳಿಯಬೇಕಾದ ವಿಚಾರವಿಷ್ಟು - ಒಂದು ವರ್ಷದ ಕರುವನ್ನು ಕರೆದುಕೊಂಡು ಹೋಗುವುದೇ ಸೋಮಕ್ರಯಣಕ್ಕೋಸ್ಕರ ಆದ್ದರಿಂದ ಸೋಮಕ್ರಯಣವು ಪ್ರಧಾನವಾಗುತ್ತದೆ. ಏಕಹಾಯನೀನಯನವು ಎಂದರೆ ಕರುವನ್ನು ಕರೆದುಕೊಂಡು ಹೋಗುವುದು ಅಂಗವಾಗುತ್ತದೆ. ಎಲ್ಲಿ ಅಂಗಾಂಗ ಭಾವವಿರುತ್ತದೋ ಅಲ್ಲಿ ಅಂಗದ ಅನುಷ್ಠಾನಕ್ಕಾಗಿ ಅಂಗಿಯು ಪ್ರಯುಕ್ತವಾಗಿರುತ್ತದೆ. ಆದ್ದರಿಂದ ಸೋಮಕ್ರಯಣವು ಏಕಹಾಯನೀನಯನಕ್ಕೆ ಪ್ರಯೋಜಕ ಅನುಷ್ಠಾಪಕವಾಯಿತು.

ಇದರಂತೆ ಅಕ್ಷಾಂಜನವೂ ಸಹ ಏಕಹಾಯನೀನಯನಕ್ಕೆ ಅನುಷ್ಠಾಪಕವೋ? ಅಲ್ಲವೋ? ಅಂದರೆ ಕರುವನ್ನು ಸೋಮಕ್ರಯಣಕ್ಕೆ ಮಾತ್ರ ಕರೆದುಕೊಂಡು ಹೋಗಬೇಕೋ? ಅಥವಾ ಅಕ್ಷಾಂಜನದ ಸಂಪಾದನೆಗೋಸ್ಕರವೂ ಕರೆದುಕೊಂಡು ಹೋಗಬೇಕೋ? ಎಂಬ ಸಂಶಯ ಬರುತ್ತದೆ.

ಪೂರ್ವಪಕ್ಷ - ಸೋಮಕ್ರಯಣವು ಏಕಹಾಯನೀನಯನದಿಂದಲೇ ಹೇಗೆ ಸಾಧ್ಯವೋ, ಅದರಂತೆ ಅಕ್ಷಾಂಜನವೂ ಸಹ ಸೋಮಕ್ರಯಣದಿಂದಲೇ ಸಾಧ್ಯ. ಆದ್ದರಿಂದ ಏಕಹಾಯನೀನಯನವು ಸೋಮಕ್ರಯಣಕ್ಕೂ ಅಂಗವಾಗುತ್ತದೆ. ಅಕ್ಷಾಂಜನಕ್ಕೂ ಸಹ ಅಂಗವಾಗುತ್ತದೆ.

ಸಿದ್ಧಾಂತ - 'ಏಕಹಾಯನ್ಯಾಂಜನಮ್ ಕುರ್ಯಾತ್' ಎಂಬುದಾಗಿ ವಿಧಿವಾಕ್ಯವಿಲ್ಲ. 'ಏಕಹಾಯನ್ಯಾ ಸೋಮಂ ಕ್ರೀಣಾತಿ' ಎಂದು ವಿಧಿವಾಕ್ಯವಿದೆ. ಏಕಹಾಯನೀನಯನ್ನು ವಿಧಾನ ಮಾಡಿರುವುದೇ ಸೋಮಕ್ರಯಣಕ್ಕೋಸ್ಕರ. 'ಏಕಹಾಯನೀ' ಎಂಬ ದ್ರವ್ಯವನ್ನು ಪ್ರಧಾನಕರ್ಮಕ್ಕಾಗಿ ಹೀಗೆ ವಿಧಿಸಲಾಗಿದೆ. ದ್ರವ್ಯದ ಸಂಸ್ಕಾರವೆಂದರೆ ನಯನವೇ ಆಗಿದೆ. ದ್ರವ್ಯ ಯಾವುದಕ್ಕೋಸ್ಕರ ಇದೆಯೋ? ಅದರ ಸಂಸ್ಕಾರವೂ ಸಹ ಅದಕ್ಕೋಸ್ಕರವೇ ಇರುತ್ತದೆ. ಸೋಮಕ್ರಯಣಕ್ಕೋಸ್ಕರ 'ಏಕಹಾಯನೀ' ಎಂಬ ದ್ರವ್ಯವು ಇದೆಯೆಂದಾದರೆ ಅದರ ನಯನವೆಂಬ ಸಂಸ್ಕಾರವೂ ಸಹ ಸೋಮಕ್ರಯಣಕ್ಕೋಸ್ಕರವೆಂದೇ ಸಿದ್ಧವಾಗುತ್ತದೆ. ಆದ್ದರಿಂದ ಕ್ರಯಣವೇ ಪ್ರಯೋಜಕ ಎಂದು ಸಿದ್ಧಾಂತ.

ಪ್ರಕಾಶಃ – अत्र सप्तमं पदमित्यत्र पदशब्दस्य सन्निधानादेकहायनीपदविषयकत्वं सिद्धङ्कृत्वा विचारः प्रवृत्त इति पदिन्यायेनेत्युक्तमित्याहुः । पदयुक्तन्यायः पदिन्यायः ।

द्व्यृभ्वाद्यधिकरण (೧-೩-೧)

ಈ ಪೂರ್ವಮೀಮಾಂಸೆಯ ಅಧಿಕರಣದಲ್ಲಿ 'ಸಪ್ತಮಂ ಪದಮಧ್ವರ್ಯುಃ ಅಂಜಲಿನಾ ಗೃಹ್ಣಾತಿ' ಎಂಬಲ್ಲಿ ಪದಶಬ್ದಕ್ಕೆ ಪ್ರಕೃತವಾದ ಏಕಹಾಯನೀಗೋವಿನ ಹೆಜ್ಜೆಯೆಂದೇ ಅರ್ಥವನ್ನು ಹೇಳಲಾಗಿದೆ. ಅಂದರೆ ಯಾವ ಹೆಜ್ಜೆಯನ್ನು ವಿವಕ್ಷಿಸಬೇಕೆಂದು ಜಿಜ್ಞಾಸೆಯು ಉಂಟಾದಾಗ ಪ್ರಕೃತವಾದ ಏಕಹಾಯನೀಗೋವಿನ ಹೆಜ್ಜೆಯನ್ನೇ ಇಟ್ಟುಕೊಳ್ಳಬೇಕೆಂದು ಸಿದ್ಧಾಂತ ಮಾಡಲಾಗಿದೆ. ಪ್ರಕೃತದಲ್ಲಿ 'ಅನ್ಯಮೀಶಮ್' ಎಂಬ ಶ್ರುತಿಯಲ್ಲಿ ಭೇದಕ್ಕೆ ಪ್ರತಿಯೋಗಿಯಾದ ವ್ಯಕ್ತಿಯನ್ನು ಯಾರೆಂದು ಹೇಗೆ ನಿರ್ಣಯಿಸುವುದು? ಎಂಬ ಪ್ರಶ್ನೆಯು ಪ್ರಸಕ್ತವಾಗುತ್ತದೆ. ಆವಾಗ ಆದೇ ಶ್ರುತಿಯಲ್ಲಿ 'ಪಶ್ಯತಿ' ಎಂಬ ಪದದಿಂದ ಜೀವನು ಪ್ರಸಕ್ತನಾಗಿದ್ದಾನೆ. ಅಂತಹ ಜೀವನನ್ನೇ ಭೇದಕ್ಕೆ ಪ್ರತಿಯೋಗಿಯಾಗಿ ವಿವಕ್ಷಿಸಬೇಕು. ಆವಾಗ 'ಅನ್ಯಮೀಶಮ್' ಎಂಬ ಶ್ರುತಿಯು ಜೀವೇಶಭೇದ ವಿಷಯದಲ್ಲಿ ಪ್ರಮಾಣವಾಗುತ್ತದೆ.

ಇದನ್ನು 'ಪದಿನ್ಯಾಯ' ಎನ್ನುತ್ತಾರೆ. 'ಪದಿ' ಎಂದರೆ 'ಪದ್ಯತೇ ಅಸ್ಯಾ ಅಸ್ತೀತಿ ಪದಿ' 'ಪದಿಚಾಸು ನ್ಯಾಯಶ್ಚ' 'ಪದಿನ್ಯಾಯಃ' ಅಂದರೆ ಪದಶಬ್ದ ಘಟಿತವಾದ ವಾಕ್ಯದಲ್ಲಿರುವ ನ್ಯಾಯವೆಂದರ್ಥ.

ಶ್ರೀವಿಜಯೀಂದ್ರತೀರ್ಥಶ್ರೀಗಳು ನ್ಯಾಯಾಮೃತದ ವ್ಯಾಖ್ಯಾನದಲ್ಲಿ ಯದಿನ್ಯಾಯವೆಂದು ಹೇಳಿದ್ದಾರೆ. ಆ ನ್ಯಾಯವೇ ಬೇರೆಯಾಗುತ್ತದೆ. ಕೆಲವೆಡೆ ಯದಿನ್ಯಾಯವೆಂಬ ಪಾಠವಿರುವುದನ್ನೂ ಸಹ ಕಾಣಬಹುದು.

प्रकाशः – एवमिति ।। पञ्चम इव प्रकरणादित्यत्रापीत्यर्थः । जीवस्य कस्माच्चिदीशादन्यत्वमुच्यते नतु परमात्मनः । अतो न तयोर्भेद इति शङ्कायां

'ಏವಂ ಷಷ್ಠೇऽಪಿ' ಎಂದರೆ ಐದನೆಯ ಸೂತ್ರದಂತೆ 'ಓಂ ಪ್ರಕರಣಾತ್ ಓಂ' ಎಂಬ ಆರನೆಯ ಸೂತ್ರದಲ್ಲಿಯೂ ಸಹ ಎಂದರ್ಥ. ಜೀವನು ಯಾರೋ ಒಬ್ಬ ಈಶನಿಂದ ಭಿನ್ನನಾಗಿದ್ದಾನೆಂದಷ್ಟೇ ಶ್ರುತಿಯಿಂದ ಸಿದ್ಧವಾಗಲಿ, ಪರಮಾತ್ಮನಿಂದಲೇ ಭಿನ್ನನಾಗಿದ್ದಾನೆಂದು ಏಕೆ ಸಿದ್ಧವಾಗಬೇಕು? ಆದ್ದರಿಂದ ಜೀವಪರಮಾತ್ಮರಿಗೆ ಭೇದವು ಸಿದ್ಧವಾಗುತ್ತದೆನ್ನಲು 'ಅನ್ಯಮೀಶಮ್' ಎಂಬ ಶ್ರುತಿಯು ಆಧಾರವಾಗುವುದಿಲ್ಲವಲ್ಲವೇ?

प्रकाशः – ''द्वे विद्ये वेदितव्ये'' इति परविद्याविषयस्य वस्तुनः परमात्मन एव प्रक्रम्याधीतत्वेन तस्य तत्प्रकरणत्वेनेशशब्देन तस्यैव ग्रहणोपपत्तेरित्यर्थोक्तेरिति भावः ।

ಈ ಆಶಂಕೆಯು ತಪ್ಪು. ಏಕೆಂದರೆ 'ದ್ವೇ ವಿದ್ಯೇ ವೇದಿತವ್ಯೇ' ಎಂಬುದಾಗಿ ಪರವಿದ್ಯೆಗೆ ವಿಷಯನಾದ ಪರಮಾತ್ಮನೇ ಪ್ರಾರಂಭದಲ್ಲಿ ಪ್ರಸಕ್ತನಾಗಿದ್ದಾನೆ. ಆದ್ದರಿಂದ ಈ ಪ್ರಕರಣವು ಪರಮಾತ್ಮನನ್ನೇ ಪ್ರತಿಪಾದಿಸಬೇಕಾದ್ದರಿಂದ ಇಲ್ಲಿರುವ 'ಈಶ' ಶಬ್ದವೂ ಸಹ ಅವನನ್ನೇ ಹೇಳುತ್ತದೆ. ಅಂತಹ ಪರಮಾತ್ಮನಿಂದ ಜೀವನು ಭಿನ್ನನಾಗಿದ್ದಾನೆಂಬ ಅರ್ಥವನ್ನು ಶ್ರುತಿಗೆ ಹೇಳುವುದು ಅನಿವಾರ್ಯವಾಗಿದೆಯೆಂದು ತಿಳಿಯಬೇಕು.

प्रकाशः – चशब्दाभाव इति ।। पूर्वानन्तर्यं चेत्यपि ज्ञेयम् ।

'ಪ್ರಕರಣಾತ್' ಎಂಬ ಆರನೆಯ ಸೂತ್ರದಲ್ಲಿ 'ಚ' ಶಬ್ದವನ್ನು ಹೇಳಿರುವುದಿಲ್ಲ. ಏಕೆಂದರೆ ಐದನೆಯ ಸೂತ್ರದ ನಿರ್ಣಯದ ಮೇಲೆ ಬರುವ ಆಶಂಕೆಗೆ ಉತ್ತರವನ್ನು ನೀಡುತ್ತಿದೆ. ಆದ್ದರಿಂದಲೇ ಆರನೆಯ ಸ್ಥಾನವು

ಈ ಸೂತ್ರಕ್ಕೆ ಯುಕ್ತವಾಗಿದೆ. ಇಲ್ಲದಿದ್ದರೆ ಐದನೆಯ ಸೂತ್ರಕ್ಕಿಂತ ಮೊದಲೇ ಈ ಸೂತ್ರವನ್ನು ಹೇಳಬಹುದಿತ್ತಲ್ಲವೇ ? ಎಂಬ ಪ್ರಶ್ನೆಗೆ ಅವಕಾಶವಿರುತ್ತಿತ್ತು ಎಂದು 'ಚಶಬ್ದಾಭಾವ' ಎಂಬ ಪ್ರತೀಕದ ಅಭಿಪ್ರಾಯ.

ಪ್ರಕಾಶಃ – नन्वेवमयं योगश्शक्योऽवक्तुम् । कथमिष्टसिद्धिः । यथाऽतच्छब्दादित्युक्त्या समाख्यास्थरुद्रादिशब्दानां विषयवाक्यस्थजायमानशब्दस्य चान्यार्थत्वनिरासेन विष्ण्वर्थत्वसिद्धिः तथेशशब्दस्यापि विष्ण्वर्थत्वसिद्धेः ।

ಆಕ್ಷೇಪ – 'ಪ್ರಕರಣಾತ್' ಎಂಬ ಸೂತ್ರವನ್ನು ಹೇಳುವ ಅವಶ್ಯಕತೆ ಇಲ್ಲ. ಹಾಗಾದರೆ ಪ್ರಕೃತ ಪ್ರಮೇಯ ಸಿದ್ಧಿ ಹೇಗೆ ಎಂದರೆ ? ಈ ಸೂತ್ರವನ್ನು ಹೇಳದಿದ್ದರೂ ಸಹ ನಿಮ್ಮ ಇಷ್ಟವು ಸಿದ್ಧಿಸುತ್ತದೆ. ಹೇಗೆಂದರೆ? 'ಅತಚ್ಛಬ್ದಾತ್' ಎಂದು ಹೇಳಿರುವುದರಿಂದಲೇ ಸಮಾಖ್ಯಾಪ್ರಮಾಣದಲ್ಲಿರುವ ರುದ್ರಾದಿಶಬ್ದಗಳಿಗೆ ಅನ್ಯಪರತ್ವ ನಿರಾಕರಣ ಪೂರ್ವಕವಾಗಿ ವಿಷ್ಣುಪರತ್ವವನ್ನು ಹೇಳಿದ್ದರಿಂದ ವಿಷಯವಾಕ್ಯದಲ್ಲಿರುವ ಜಾಯಮಾನಶಬ್ದವೂ ಸಹ ಅನ್ಯಪರವಾಗುವುದಿಲ್ಲವೆಂದು ಸಮರ್ಥಿಸಲಾಯಿತು. ಆದರಂತೆ 'ಅನ್ಯಮೀಶಮ್' ಎಂಬಲ್ಲಿರುವ 'ಈಶ' ಶಬ್ದವೂ ಸಹ ಅನ್ಯಪರವಾಗದೇ, ವಿಷ್ಣುಪರವೇ ಆಗುತ್ತದೆಂಬ ವಿಚಾರವು ಸಿದ್ಧವಾಗುತ್ತದೆ. ಹೀಗೆ 'ಅತಚ್ಛಬ್ದಾತ್' ಎಂಬ ಸೂತ್ರದ ಭಾಗದಿಂದಲೇ ಉದ್ದೇಶವು ಸಿದ್ಧಿಸುತ್ತದೆ.

ಪ್ರಕಾಶಃ – नच तत्र ''अजायमानः'' इत्यादिश्रुतिस्मृतिबलात्तथात्वसिद्धिः । इहापि ''स ईशो यो हरिः'' इति ''ईशानादेव चेशानः'' इति ''एवं नानाविधैश्शब्दैरेक एव त्रिविक्रमः'' इति ''अन्यनाम्नां गतिर्विष्णुः'' इति श्रुतिस्मृतिभावात् ।

'ಅಜಾಯಮಾನೋ ಬಹುಧಾ ವಿಧಾಯತೇ' ಇವೇ ಮೊದಲಾದ ಶ್ರುತಿ ಹಾಗೂ ಸ್ಮೃತಿಗಳ ಆಧಾರದಿಂದ ಎಲ್ಲಾ ಶಬ್ದಗಳು ವಿಷ್ಣುಪರವಾಗಿದೆಯೆಂದು ಅಲ್ಲಿ ಸಿದ್ಧವಾಯಿತು. ಆದರೆ ಇಲ್ಲಿ ಪ್ರಮಾಣಗಳಿಲ್ಲವಲ್ಲ ಎಂದರೆ ಇಲ್ಲಿಯೂ ಪ್ರಮಾಣಗಳಿವೆ. ಯಾವುದೆಂದರೆ ಇಲ್ಲಿಯೂ ಸಹ 'ಸ ಈಶೋ ಯೋ ಹರಿಃ' ಎಂಬುದಾಗಿ ಶ್ರೀಹರಿಯನ್ನೇ ಈಶನನ್ನಲಾಗಿದೆ. 'ಈಶಾನಾದೇವ ಚೇಶಾನಃ' ನಿಯಮನ ಮಾಡುವುದರಿಂದ ಭಗವಂತನು ಈಶಾನನೆನಿಸಿದ್ದಾನೆ ಎಂಬುದಾಗಿ; ಮತ್ತು 'ಏವಂ ನಾನಾವಿಧೈಶ್ಶಬ್ದೈರೇಕ ಏವ ತ್ರಿವಿಕ್ರಮಃ' ಆನೇಕ ಶಬ್ದಗಳಿಂದ ಒಬ್ಬನೇ ತ್ರಿವಿಕ್ರಮನು ಪ್ರತಿಪಾದ್ಯನಾಗಿದ್ದಾನೆಂಬುದಾಗಿ, 'ಅನ್ಯನಾಮ್ನಾಂ ಗತಿರ್ವಿಷ್ಣುಃ' ಬೇರೆ ನಾಮಗಳಿಗೂ ವಿಷ್ಣುವೇ ಮುಖ್ಯಾಶಯನಾಗಿದ್ದಾನೆ ಇತ್ಯಾದಿಯಾದ ಶ್ರುತಿಸ್ಮೃತಿಗಳು ಈಶ ಶಬ್ದದಿಂದ ವಿಷ್ಣುವೇ ವಾಚ್ಯನಾಗಿದ್ದಾನೆನ್ನಲು ಆಧಾರವಾಗಿವೆ. ಆದುದರಿಂದ 'ಅತಚ್ಛಬ್ದಾತ್' ಎಂಬ ಸೂತ್ರದ ಭಾಗದಿಂದಲೇ ಈ ಸೂತ್ರದ ಉದ್ದೇಶವು ಸಿದ್ಧಿಸುವಾಗ ಪುನಃ ಈ ಸೂತ್ರದ ರಚನೆ ವ್ಯರ್ಥವಲ್ಲವೇ?

ಪ್ರಕಾಶಃ – मैवम् । अन्तरङ्गज्ञापके सति त्यागायोगाश्चिरवकाशजीवलिङ्गादिना प्रकरणमन्यपरमित्याक्षेपे सति तत्सावकाशत्वस्यातच्छब्दादित्यनेनोक्तौ प्रकरणमपि साधकमेव ।

ಯಾವ ಪ್ರಕರಣದಲ್ಲಿ ಈಶ ಶಬ್ದವಿದೆಯೋ, ಆ ಪ್ರಕರಣದ ಬಲದಿಂದಲೇ ವಿಷ್ಣುವಿಷಯಕವಾಗಿದೆಯೆಂದು ನಿರ್ಣಯಿಸಬಹುದು. ಅಂತರಂಗ ಪ್ರಮಾಣವು ಇರಬೇಕಾದರೆ ಬಹಿರಂಗವೆನಿಸಿದ ಬೇರೆ ಶ್ರುತಿಸ್ಮೃತಿಗಳನ್ನು ಆಧಾರವನ್ನಾಗಿ ನೀಡುವುದು ಸರಿಯಲ್ಲ. ಅಂತರಂಗಜ್ಞಾಪಕವನ್ನು ಬಿಟ್ಟು, ಬಹಿರಂಗಜ್ಞಾಪಕವನ್ನು ಸ್ವೀಕರಿಸುವುದು ತಪ್ಪಾಗುತ್ತದೆ. ಈ ಉದ್ದೇಶಕೋಸ್ಕರ 'ಪ್ರಕರಣಾತ್' ಎಂಬ ಸೂತ್ರವು ಹೊರಟಿದೆ. ಅಥವಾ ನಿರವಕಾಶವಾದ, ಜಾಯಮಾನತ್ವ ಮೊದಲಾದ ಜೀವನ ಲಿಂಗಗಳಿಂದ ಸಮಗ್ರಪ್ರಕರಣವು ಅನ್ಯಪರವಾಗಿದೆಯೆಂದು ಆಕ್ಷೇಪವು ಪ್ರಾಪ್ತವಾದರೆ 'ಅತಶ್ಚಬ್ದಾತ್' ಎಂಬ ಸೂತ್ರದ ಭಾಗದಿಂದ ಪೂರ್ವಪಕ್ಷಲಿಂಗಗಳಿಗೆ ಸಾವಕಾಶತ್ವವನ್ನು ಸಮರ್ಥಿಸಿದ್ದಾಯಿತು. ಆದ್ದರಿಂದಲೇ ಪ್ರಕರಣವೂ ಸಹ ಸಾವಕಾಶವಾಯಿತು. ಹೀಗೆ ಪೂರ್ವಪಕ್ಷಕಾರರು ಹೇಳಿದ ಬಾಧಕಗಳನ್ನು ಪರಿಹರಿಸಿದ ಮೇಲೆ ಈ ಸೂತ್ರವು ಅದೇ ಪ್ರಕರಣವು ಸಿದ್ಧಾಂತಸ್ಥಾಪಕವೂ ಆಗುತ್ತದೆಂಬುದನ್ನು ಸಮರ್ಥಿಸುತ್ತದೆ. ಅಂದರೆ ಬೇರೆಯವರನ್ನು ಪ್ರತಿಪಾದಿಸಲು ಬೇಕಾದ ಲಿಂಗಗಳಿಲ್ಲದ ಕಾರಣ ವಿಷ್ಣುವನ್ನು ಪ್ರತಿಪಾದಿಸುತ್ತದೆಂಬುದನ್ನೂ ಸಹ ತಿಳಿಯಬೇಕು.

ಪ್ರಕಾಶಃ – ಏವಮೇತದನ್ಯತ್ರಾಪ್ಯನುಸನ್ಧೇಯಮಿತ್ಯರ್ಥಸ್ಯ ಜ್ಞಾಪನಾರ್ಥತ್ವಾತ್ಪ್ರಾಗುಕ್ತಶ್ರುತಿಲಿಙ್ಗೋ-ಪೋದ್ಬಲನಾರ್ಥತ್ವಾಚ್ಚಾಸ್ಯ ಯೋಗಸ್ಯೋಕ್ತಿಃ ।

ಹೀಗೆ ಬೇರೆ ಅಧಿಕರಣಗಳಲ್ಲಿಯೂ ತಿಳಿಯಬೇಕು. ಅಂದರೆ ಯಾವ ಶ್ರುತಿವಾಕ್ಯಗಳಲ್ಲಿ ನಿರವಕಾಶವಾದ ಪೂರ್ವಪಕ್ಷಲಿಂಗಗಳಿರುತ್ತವೋ, ಅವುಗಳನ್ನು ಸಾವಕಾಶ ಮಾಡಿದ ಮೇಲೆ ಅದೇ ಶ್ರುತಿವಾಕ್ಯವು ವಿಷ್ಣುಪರತ್ವ ವಿಷಯದಲ್ಲಿ ಸಾಧಕಪ್ರಮಾಣವಾಗುತ್ತದೆಂಬ ವಿಚಾರವನ್ನು ಈ 'ಪ್ರಕರಣಾತ್' ಎಂಬ ಸೂತ್ರವು ಪ್ರತಿಪಾದಿಸುತ್ತಿದೆ. ಆದ್ದರಿಂದ ಎಲ್ಲಾ ಅಧಿಕರಣಗಳಲ್ಲಿಯೂ ಇದರ ಪ್ರಯೋಜನವನ್ನು ಪಡೆದುಕೊಳ್ಳಬೇಕು. ಮತ್ತು ಹಿಂದೆ ಹೇಳಲ್ಪಟ್ಟ ಶ್ರುತಿ ಹಾಗೂ ಲಿಂಗಗಳನ್ನು ಸಮರ್ಥನೆ ಮಾಡುತ್ತಿರುವುದರಿಂದಲೂ ಈ ಸೂತ್ರವು ಸಾರ್ಥಕವಾಗಿದೆಯೆಂದು ತಿಳಿಯಬೇಕು.

ಪ್ರಕಾಶಃ – ಏತೇನ ಕಥಂ ಪ್ರಕರಣೇನ ಶ್ರುತಿಬಾಧ ಇತಿ ಪ್ರತ್ಯುಕ್ತಮ್ । ಶ್ರುತೇಸ್ತಾವಕಾಶತ್ವಾತ್ ಪ್ರಕರಣಸ್ಯಾನವಕಾಶತ್ವಾದಿತಿ ।

ಹೀಗೆ ಹೇಳಿದ್ದರಿಂದ ಪ್ರಕರಣ ಪ್ರಮಾಣದಿಂದ ಬಲಿಷ್ಠವಾದ ಶ್ರುತಿಯು ಹೇಗೆ ಬಾಧಿತವಾಗುತ್ತದೆ? ಎಂಬ ಪೂರ್ವಪಕ್ಷವನ್ನು ನಿರಾಕರಿಸಿದಂತಾಯಿತು. ಶ್ರುತಿಯು ಸಾವಕಾಶವಾದ್ದರಿಂದ ಪ್ರಕರಣವು ನಿರವಕಾಶವಾದ್ದರಿಂದ, ಪ್ರಕರಣದ ಬಲದಿಂದ ಶ್ರುತಿಯನ್ನು ಬಾಧಿಸಬಹುದೆಂದು ಅಭಿಪ್ರಾಯ.

ಪ್ರಕಾಶಃ – ಸಪ್ತಮ ಇತಿ ।। ಸ್ಥಿತ್ಯದನಾಭ್ಯಾಂ ಚೇತ್ಯತ್ರ ।। ಶ್ರುತೇರಿತಿ ।। ಅನ್ಯಶಬ್ದರೂಪಶ್ರುತೇರಿತಿ ವ್ಯಪದೇಶಪದಾರ್ಥೋಕ್ತಿಃ ।

'ಓಂ ಸ್ಥಿತ್ಯದನಾಭ್ಯಾಂಚ ಓಂ' ಎಂಬುದು ಏಳನೆಯ ಸೂತ್ರ. ಈ ಸೂತ್ರವು ಜೀವೇಶಭೇದ ವಿಷಯದಲ್ಲಿ ಲಿಂಗಪ್ರಮಾಣವನ್ನು ಆಧಾರವನ್ನಾಗಿ ನೀಡುತ್ತಿದೆ. ಗ್ರಂಥದಲ್ಲಿರುವ 'ಶ್ರುತೇಃ' ಎಂಬ ಪದಕ್ಕೆ ಅನ್ಯಶಬ್ದವೆಂಬ ಶ್ರುತಿಯೆಂದರ್ಥ. ಸೂತ್ರದಲ್ಲಿರುವ 'ವ್ಯಪದೇಶ' ಪದದ ಅರ್ಥವನ್ನೇ 'ಶ್ರುತೇಃ' ಎಂದಿದ್ದಾರೆ.

ಪ್ರಕಾಶಃ – 'द्वा सुपर्णा' इत्युपक्रम्य 'तयोरन्यः पिप्पलं स्वाद्वत्त्यनश्नन्योऽभिचाकशीति' इति जीवेशयोः कर्मफलोपजीवनतद्रहितावस्थानरूपलिङ्गादपीत्यर्थः ।

'ದ್ವಾ ಸುಪರ್ಣಾ' ಇತ್ಯಾದಿಯಾಗಿ ಪ್ರಾರಂಭವಾದ ಪ್ರಕರಣದಲ್ಲಿ 'ತಯೋರನ್ಯಃ ಪಿಪ್ಪಲಂ ಸ್ವಾದ್ವತ್ತಿ' ಎಂಬುದರಿಂದ ಕರ್ಮಫಲೋಪಜೀವನವೆಂಬ ಲಿಂಗವನ್ನು 'ಅನಶ್ನನ್ನನ್ಯೋಽಭಿಚಾಕಶೀತಿ' ಎಂಬುದರಿಂದ ಕರ್ಮಫಲೋಪಜೀವನರಾಹಿತ್ಯವೆಂಬ ಲಿಂಗವನ್ನು ಶ್ರುತಿಯು ಜೀವಬ್ರಹ್ಮರಲ್ಲಿ ಹೇಳುತ್ತಿದೆ. ವಿರುದ್ಧವಾದ ಈ ಧರ್ಮಗಳಿಗೆ ಅಧಿಕರಣರಾದ ಜೀವ ಹಾಗೂ ಪರಮಾತ್ಮರು ಅಭಿನ್ನರಾಗಲು ಸಾಧ್ಯವಿಲ್ಲವೆಂದರ್ಥ.

ಪ್ರಕಾಶಃ – चशब्द इति ।। पूर्वानन्तर्यं चेत्यपि ग्राह्यम् ।

'ಸ್ಥಿತ್ಯದನಾಭ್ಯಾಂ ಚ' ಎಂಬ ಸೂತ್ರದಲ್ಲಿ 'ಚ' ಶಬ್ದವನ್ನು ಹೇಳಿದ್ದರಿಂದ ಭೇದವ್ಯಪದೇಶ ವಿಷಯದಲ್ಲಿ ಈ ಲಿಂಗವು ಮತ್ತೊಂದು ಪ್ರಮಾಣವಾಗಿದೆಯೆಂದು ತಿಳಿಯುತ್ತದೆ. ಮತ್ತು ಹಿಂದಿನ 'ಪ್ರಕರಣಾತ್' ಎಂಬ ಸೂತ್ರದ ಅನಂತರವೇ ಈ ಸೂತ್ರವು ಸಗಂತವಾಗುತ್ತದೆಂದೂ ಸಹ ತಿಳಿಯುತ್ತದೆ. 'ಭೇದವ್ಯಪದೇಶಾತ್' ಎಂಬ ಸೂತ್ರದಲ್ಲಿ ಜೀವಬ್ರಹ್ಮರಿಗೆ ಭೇದವನ್ನು ಹೇಳಿದ ಮೇಲೆ 'ಪ್ರಕರಣಾತ್' ಎಂಬ ಸೂತ್ರವು ಶ್ರುತಿಪ್ರಮಾಣವನ್ನು ಹೇಳುತ್ತದೆ. ಆದ್ದರಿಂದ ಹಿಂದಿನ ಸೂತ್ರದ ಅನಂತರವೇ ಲಿಂಗಪ್ರಮಾಣವನ್ನು ಹೇಳುವ ಈ ಸೂತ್ರವು ಪ್ರಸಕ್ತವಾಗುತ್ತದೆಂದು ತಿಳಿಯಬೇಕು. ಇದು 'ಚಶಬ್ದಃ' ಎಂಬುದರ ಅರ್ಥ.

ಪ್ರಕಾಶಃ – अत्र ''श्रुतिक्रमोल्लङ्घनमीश्वरस्य प्राधान्यज्ञापनार्थम् । स्थितिपदस्याल्पाक्षरत्वाच्च'' इति टीकायैं व्यक्तमाह – श्रुताविति ।। ''अल्पाच्तरं पूर्वम्'' इति पाणिनिस्मरणादिति भावः ।

ಟೀಕೆಯಲ್ಲಿ 'ಶ್ರುತಿಕ್ರಮೋಲ್ಲಂಘನಮಿಶ್ವರಸ್ಯ ಪ್ರಧಾನ್ಯಜ್ಞಾಪನಾರ್ಥಮ್ । ಸ್ಥಿತಿಪದಸ್ಯಾಲ್ಪಾಕ್ಷರತ್ವಾಚ್ಚ' ಎಂದು ಹೇಳಿದ್ದಾರೆ. ಸೂತ್ರದಲ್ಲಿ ಶ್ರುತಿಯ ಕ್ರಮವನ್ನು ಉಲ್ಲಂಘಿಸಿ, ಅದನವನ್ನು ಮೊದಲು ಹೇಳುವ ಬದಲು ಸ್ಥಿತಿಯನ್ನೇ ಏಕೆ ಹೇಳಿದ್ದಾರೆಂದರೆ ಈಶ್ವರನಿಗೆ ಪ್ರಾಧಾನ್ಯವನ್ನು ತಿಳಿಸುವುದಕ್ಕಾಗಿ. ಅಥವಾ ಸ್ಥಿತಿಪದವು ಅಲ್ಪಾಕ್ಷರವುಳ್ಳದ್ದರಿಂದಲೂ ಮೊದಲು ಹೇಳಿದ್ದಾರೆಂದು ಟೀಕೆಯ ಅಭಿಪ್ರಾಯ. ಇದನ್ನೇ ಗ್ರಂಥಕಾರರು 'ಶ್ರುತೌ' ಎಂಬ ವಾಕ್ಯದಿಂದ ಸ್ಪಷ್ಟಪಡಿಸುತ್ತಿದ್ದಾರೆ. 'ಅಲ್ಪಾಚ್ತರಂ ಪೂರ್ವಮ್' ಎಂಬ ಪಾಣಿನಿಯ ಸೂತ್ರದಲ್ಲಿ ಅಲ್ಪವಾದ ಅಜಕ್ಷರವುಳ್ಳ ಪದವೇ ದ್ವಂದ್ವಸಮಾಸದಲ್ಲಿ ಪ್ರಾರಂಭದಲ್ಲಿ ಬರುತ್ತದೆಂದು ಹೇಳಲಾಗಿದೆ. ಆದ್ದರಿಂದ 'ಸ್ಥಿತ್ಯದನಾಭ್ಯಾಂ' ಎಂಬ ಸೂತ್ರವಿನ್ಯಾಸವು ಸಾಧುವಾಗಿದೆಯೆಂದು ತಿಳಿಯಬೇಕು.

ಪ್ರಕಾಶಃ – गुहानये 'अनश्नन्' इत्यस्याशुभाशननिषेधार्थत्वोक्तावपीह जीवनार्थं कर्मफलाशनं नेत्यर्थकतया व्याख्यानमभिमतम् ।

ಗುಹಾಧಿಕರಣದಲ್ಲಿ 'ಅನಶ್ನನ್' ಎಂಬ ಶ್ರುತಿಯನ್ನು ಅಶುಭವಾದ ಕರ್ಮದ ಫಲವನ್ನು ಭಗವಂತನು ಅನುಭವಿಸುವುದಿಲ್ಲವೆಂಬರ್ಥದಲ್ಲಿ ಹೇಳಿರುತ್ತಾರೆ. ಆದರೂ ಸಹ ಇಲ್ಲಿ ಉಪಜೀವನಕ್ಕೋಸ್ಕರ ಅನುಭವಿಸುವುದಿಲ್ಲವೆಂಬರ್ಥದಲ್ಲಿ ಹೇಳಿರುತ್ತಾರೆ. ಆದರೂ ಸಹ ಇಲ್ಲಿ ಉಪಜೀವನಕ್ಕೋಸ್ಕರ ಕರ್ಮಫಲವನ್ನು ತಿನ್ನುವುದಿಲ್ಲವೆಂದು ಹೇಳಿದ್ದರಿಂದ ಅದಕ್ಕೆ ವಿರುದ್ಧವಾಗುವುದಿಲ್ಲ. ಭಗವಂತನು

ಕರ್ಮಫಲವನ್ನು ತಿನ್ನುವುದಿಲ್ಲ. ಅಷ್ಟೇ ಅಲ್ಲದೇ ಉಪಜೀವನಕ್ಕೋಸ್ಕರ ಯಾವುದೇ ಕರ್ಮವನ್ನೂ ಸಹ ತಿನ್ನುವುದಿಲ್ಲವೆಂದು ಶ್ರುತಿಗೆ ವ್ಯಾಖ್ಯಾನಿಸಬೇಕು.

ಪ್ರಕಾಶಃ –

'ಸುಪರ್ಣಾವೇತೌ ಸಯುಜೌ ಸಖಾಯೌ ಯದೃಚ್ಛಯಾ ಕೃತನೀಡೌ ಚ ವೃಕ್ಷೇ ।
ಏಕಸ್ತಯೋಃ ಖಾದತಿ ಪಿಪ್ಪಲಾನ್ನಮನ್ಯೋ ನಿರನ್ನೋऽಪಿ ಬಲೇನ ಭೂಯಾನ್ ।।'

ಇತ್ಯಾದಿಭಾಗವತೋಕ್ತೇಃ ।

ಈ ವ್ಯಾಖ್ಯಾನವು ಭಾಗವತ ಹಾಗೂ ಸ್ಮೃತಿ ವಾಕ್ಯಗಳಿಗೂ ಸಮ್ಮತವಾಗಿದೆ.

ಸ್ನೇಹಿತರಾದ ಎರಡು ಹಕ್ಕಿಗಳು ಯದೃಚ್ಛೆಯಿಂದ ದೇಹವೆಂಬ ಮನೆಯಲ್ಲಿ ಒಟ್ಟಿಗೆ ಮನೆ ಮಾಡಿದರು. ಅವೆರಡರಲ್ಲಿ ಒಂದು ಹಕ್ಕಿಯು ಪಿಪ್ಪಲ ಹಣ್ಣನ್ನು ತಿಂದರೆ, ಮತ್ತೊಂದು ಹಕ್ಕಿಯು ಹಣ್ಣನ್ನು ತಿನ್ನದೇ ಬಲಿಷ್ಠವಾಗಿತ್ತು. ಇತ್ಯಾದಿಯಾಗಿ ಭಾಗವತದಲ್ಲಿ ಹೇಳಿರುತ್ತಾರೆ.

ಪ್ರಕಾಶಃ –

'ಸಾಶನಾನಶನತ್ವೇನ ನರದೇವೌ ಯಥೋದಿತೌ ।
ಅತ್ತಿಂ ವಿನಾऽಪ್ಯದೌರ್ಬಲ್ಯಾತ್ತಥಾऽನತ್ತಿರ್ಹರಿರ್ಭುಜಃ ।।

ಇತಿ ಸ್ಮೃತೇಶ್ಚೇತಿ ಭಾವಃ ।

ಜೀವನು ತಿನ್ನುವವನಾಗಿ, ಪರಮಾತ್ಮನು ತಿನ್ನದೇ ಇರುವವನಾಗಿ ದೇಹದಲ್ಲಿದ್ದಾರೆ. ಪರಮಾತ್ಮನು ಏನನ್ನೂ ತಿನ್ನದಿದ್ದರೂ ಸಹ ದುರ್ಬಲನಾಗಿಲ್ಲ. ಹೀಗೆ ಶ್ರುತಿಯು ಪ್ರತಿಪಾದಿಸುತ್ತದೆ ಎಂಬುದಾಗಿ ಸ್ಮೃತಿಯಲ್ಲಿ ಹೇಳಲಾಗಿದೆ.

ಪ್ರಕಾಶಃ – ಶ್ರುತೇರ್ಜೀವೇಶವಿಷಯತ್ವಂ ಸಾಧಯತಿ – ನ ಚೇತ್ಯಾದಿನಾ ।।

'ದ್ವಾ ಸುಪರ್ಣಾ' ಎಂಬ ಶ್ರುತಿಯು, ಜೀವ ಹಾಗೂ ಪರಮಾತ್ಮರನ್ನೇ ಪ್ರತಿಪಾದಿಸುತ್ತಿದೆ ಹೊರತು, ಬುದ್ಧಿ ಹಾಗೂ ಜೀವರನ್ನು ಪ್ರತಿಪಾದಿಸುತ್ತಿಲ್ಲವೆಂದು 'ನಚ' ಎಂಬ ವಾಕ್ಯದಿಂದ ಪ್ರತಿಪಾದಿಸುತ್ತಿದ್ದಾರೆ.

ಪ್ರಕಾಶಃ – ತಾವೇತಾವಿತಿ ।। ''ತಯೋರನ್ಯಃ ಪಿಪ್ಪಲಂ ಸ್ವಾದ್ವತ್ತೀತಿ ಸತ್ವಮ್ । ಅನಶ್ನನ್ನನ್ಯೋऽಭಿಚಾಕಶೀತೀತಿ । ಅನಶ್ನನ್ನನ್ಯೋऽಭಿಪಶ್ಯತೀತಿ ಜ್ಞಃ । ಉಭಾವೇತೌ ಸತ್ವಕ್ಷೇತ್ರಜ್ಞೌ । ತದೇತತ್ಸತ್ವಂ ಯೇನ ಸ್ವಪ್ನಂ ಪಶ್ಯತಿ । ಅಥ ಯೋऽಯಂ ಶಾರೀರ ಉಪದ್ರಷ್ಟಾ ಸ ಕ್ಷೇತ್ರಜ್ಞಃ'' ಇತ್ಯನೇನ ವ್ಯಾಖ್ಯಾತತ್ವಾದಿತ್ಯರ್ಥಃ ।

ಗ್ರಂಥದಲ್ಲಿ ಪೈಂಗಿರಹಸ್ಯಬ್ರಾಹ್ಮಣ ವಾಕ್ಯವನ್ನು ಹೇಳಿದ್ದಾರೆ. ಅದರ ಸಂಪೂರ್ಣ ವಾಕ್ಯ ಹೀಗಿದೆ - ಪರಿಪೂರ್ಣಚಂದ್ರಿಕಾ

'ತಯೋರನ್ಯಃ ಪಿಪ್ಪಲಂ ಸ್ವಾದ್ವತ್ತೀತಿ ಸತ್ವಮ್ । ಅನಶ್ನನ್ನನ್ಯೋऽಭಿಚಾಕಾಶೀತಿ ಇತಿ । ಅನಶ್ನನ್ನನ್ಯೋऽಭಿಪಶ್ಯತೀತಿ ಜ್ಞಃ । ಉಭಾವೇತೌ ಸತ್ವಕ್ಷೇತ್ರಜ್ಞೌ । ತದೇತತ್ ಸತ್ವಂ ಯೇನ ಸ್ವಪ್ನಂ ಪಶ್ಯತಿ । ಅಥ ಯೋऽಯಂ ಶಾರೀರ ಉಪದ್ರಷ್ಟಾ ಸ ಕ್ಷೇತ್ರಜ್ಞಃ' ಹೀಗೆ ಪೈಂಗಿರಹಸ್ಯಬ್ರಾಹ್ಮಣ ವಾಕ್ಯವು 'ದ್ವಾ ಸುಪರ್ಣಾ' ಎಂಬ ಶ್ರುತಿಯನ್ನು ಬುದ್ಧಿ ಹಾಗೂ ಜೀವ ಪರವಾಗಿ ವ್ಯಾಖ್ಯಾನಿಸಿದೆ ಎಂದರ್ಥ. ಈ ವಾಕ್ಯಗಳ ಅರ್ಥವನ್ನು ಅನುವಾದದಲ್ಲಿ ಕೊಡಲಾಗಿದೆ.

ಪ್ರಕಾಶಃ – ''ಊನಂ ನ ಸತ್ವೇಷ್ವಧಿಕೋ ಬಬಾಧೇ ತಸ್ಮಿನ್ವನಂ ಗೋಪ್ತರಿ ಗಾಹಮಾನೇ'' ಇತಿ ರಘುವಂಶೇ । ''ದ್ರವ್ಯಾಸುವ್ಯವಸಾಯೇಷು ಸತ್ವಮಸ್ತ್ರೀ ತು ಜನ್ತುಷು'' ಇತಿನಾನಾರ್ಥವರ್ಗೇ । ಜನ್ತುಶ್ಚ ''ಪ್ರಾಣೀತುಚೇತನೋಜನ್ಮೀ ಜನ್ತು' ಇತ್ಯಮರೋಕ್ತೇರ್ಜೀವ ಇತಿ ಭಾವಃ ।

'ಸತ್ವ' ಶಬ್ದಕ್ಕೆ ಜೀವ ಎಂದರ್ಥ. ಕಾಳಿದಾಸನೂ ಸಹ ರಘುವಂಶದಲ್ಲಿ 'ಊನಂ ನ ಸತ್ವೇಷ್ವಧಿಕೋ ಬಬಾಧೇ ತಸ್ಮಿನ್ವನಂ ಗೋಪ್ತರಿ ಗಾಹಮಾನೇ' ಎಲ್ಲ ವಿಧ ಪ್ರಾಣಿಗಳು ವಸಿಷ್ಠರ ಆಶ್ರಮದಲ್ಲಿದ್ದಾಗ ಸಣ್ಣ ಪ್ರಾಣಿಗಳನ್ನು ದೊಡ್ಡ ಪ್ರಾಣಿಗಳು ಹಿಂಸಿಸುತ್ತಿರಲಿಲ್ಲ ಎಂಬುದಾಗಿ ಪ್ರಾಣಿಗಳೆಂಬ ಅರ್ಥದಲ್ಲಿ 'ಸತ್ವ' ಶಬ್ದವನ್ನು ಪ್ರಯೋಗಿಸಿದ್ದಾನೆ. ಅಮರಕೋಶದಲ್ಲಿಯೂ ಸಹ 'ದ್ರವ್ಯಾಸುವ್ಯವಸಾಯೇಷು ಸತ್ವಮಸ್ತ್ರೀ ತು ಜಂತುಷು' ಎಂಬುದಾಗಿ 'ಸತ್ವ' ಶಬ್ದವನ್ನು ಜಂತು ಎಂಬರ್ಥದಲ್ಲಿ ನಾನಾರ್ಥವರ್ಗದಲ್ಲಿ ಪ್ರಯೋಗಿಸಲಾಗಿದೆ. ಜಂತುಶಬ್ದವು 'ಪ್ರಾಣೀ ತು ಚೇತನೋ ಜನ್ಮೀ ಜಂತು' ಎಂಬ ಅಮರಕೋಶದ ಮಾತಿನಂತೆ ಜೀವ ಎಂಬರ್ಥದಲ್ಲಿಯೇ ಪ್ರಸಿದ್ಧವಾಗಿದೆಯೆಂದು ತಿಳಿಯಬೇಕು.

ಪ್ರಕಾಶಃ – **ಇತಿ ಸ್ಮೃತೇರಿತಿ ।। ತ್ರಯೋದಶೇ ಗೀತಾತಾತ್ಪರ್ಯೋಕ್ತಸ್ಮೃತೇರಿತ್ಯರ್ಥಃ । ಮೋಕ್ಷಧರ್ಮಾದೀತಿ ।। ಆದಿಪದೇನ –**

'ಇತಿ ಸ್ಮೃತೇಃ' ಎಂಬುದಕ್ಕೆ ಗೀತಾತಾತ್ಪರ್ಯದ ಹದಿಮೂರನೇ ಅಧ್ಯಾಯದಲ್ಲಿ ಹೇಳಲ್ಪಟ್ಟ ಸ್ಮೃತಿಯ ಮಾತಿನಂತೆ ಎಂದರ್ಥ. 'ಮೋಕ್ಷಧರ್ಮಾದಿ' ಎಂದು ಗ್ರಂಥದಲ್ಲಿ ಹೇಳಿದ್ದಾರೆ. ಇಲ್ಲಿರುವ ಆದಿಪದದಿಂದ ಹರಿವಂಶ ಮುಂತಾದ ಗ್ರಂಥಗಳ ವಾಕ್ಯಗಳನ್ನು ಸ್ಮರಿಸಿಕೊಳ್ಳಬೇಕು. ಅವು ಹೀಗಿವೆ -

'ಕ್ಷೇತ್ರಜ್ಞ ಏತಾ ಮನಸೋ ವಿಭೂತೀರ್ಜೀವಸ್ಯ ಮಾಯಾರಚಿತಾ ಅನಿತ್ಯಾಃ ।
ಆವಿರ್ಹಿತಾಶ್ಚೈವ ತಿರೋಹಿತಾಶ್ಚ ಶುದ್ಧೋ ವಿಚಷ್ಟೇ ಹ್ಯವಿಶುದ್ಧಕರ್ತುಃ ।।
ಕ್ಷೇತ್ರಜ್ಞ ಆತ್ಮಾ ಪುರುಷಃ ಪುರಾಣಸ್ಸಾಕ್ಷಾತ್ಸ್ವಯಂ ಜ್ಯೋತಿರಜಃ ಪರೇಶಃ ।
ನಾರಾಯಣೋ ಭಗವಾನ್ವಾಸುದೇವಃ ಸ್ವಮಾಯಯಾತ್ಮನ್ ವ್ಯವಧೀಯಮಾನಃ ।।

ಇತಿ ಭಾಗವತವಚನಂ, ''ಕ್ಷೇತ್ರಜ್ಞಂ ಚಾಪಿ ಮಾಂ ವಿದ್ಧಿ'' ಇತಿ ಗೀತಾವಚನಂ,

ಸ್ವೇಚ್ಛಯೈವಾವೃತೋ ವಿಷ್ಣುರ್ಜೀವೇ ತಿಷ್ಠತಿ ನಿತ್ಯದಾ ।
ಯೋऽಸೌ ನಿಯಮಯನ್ ಜೀವಂ ಕ್ಷೇತ್ರಜ್ಞ ಇತಿ ಶಬ್ದಿತಃ ।।

ಇತಿ ಹರಿವಂಶಾದಿವಚನಂ ಗೃಹ್ಯತೇ ।।

ಕ್ಷೇತ್ರಜ್ಞನೆನಿಸಿದ ಭಗವಂತನು ಜೀವನಿಗೆ ಸಂಬಂಧಿಸಿದ ಮನಸ್ಸಿನ ವ್ಯಾಪಾರಗಳನ್ನೆಲ್ಲಾ ನೋಡುತ್ತಲೇ ಇರುತ್ತಾನೆ. ಅಂತಹ ಮನಸ್ಸು ಪ್ರಕೃತಿ ನಿರ್ಮಿತವಾಗಿದೆ. ಅನಿತ್ಯವಾಗಿದೆ. ಕೆಲವೊಮ್ಮೆ ತಿರೋಹಿತವೂ, ಇನ್ನೂ ಕೆಲವೊಮ್ಮೆ ಆವಿರೋಹಿತವೂ ಆಗಿದೆ. ಇಂತಹ ಮನಸ್ಸನ್ನು ಶುದ್ಧನಾದ ಪರಮಾತ್ಮನು ವ್ಯಾಪಾರ ಮಾಡಿಸುತ್ತಾನೆ ಎಂಬುದಾಗಿ. ಮತ್ತು 'ಕ್ಷೇತ್ರಜ್ಞ ಆತ್ಮಾ ಪುರುಷಃ ಪುರಾಣಸ್ತಾಕ್ಷ್ಣ್ವಯಂ ಜೋತಿರಜಃ ಪರೇಶಃ । ನಾರಾಯಣೋ ಭಗವಾನ್ವಾಸುದೇವಃ ಸ್ವಮಾಯಯಾತ್ಮನ್ವ್ಯವಧೀಯಮಾನಃ ॥' ಎಂಬುದಾಗಿಯೂ ಭಾಗವತದಲ್ಲಿ ಪರಮಾತ್ಮನನ್ನೇ ಕ್ಷೇತ್ರಜ್ಞನೆಂದು ಸ್ಪಷ್ಟವಾಗಿ ಹೇಳಲಾಗಿದೆ. ಗೀತೆಯಲ್ಲಿಯೂ ಸಹ 'ಕ್ಷೇತ್ರಜ್ಞಂ ಚಾಪಿ ಮಾಂ ವಿದ್ಧಿ' ಎಂದು ಹೇಳಲಾಗಿದೆ. ಮತ್ತು 'ಸ್ವೇಚ್ಛಯೈವಾವೃತೋ ವಿಷ್ಣುಃ ಜೀವೇ ತಿಷ್ಠತಿ ನಿತ್ಯದಾ । ಯೋಽಸೌ ನಿಯಮಯನ್ ಜೀವಂ ಕ್ಷೇತ್ರಜ್ಞ ಇತಿ ಶಬ್ದಿತಃ ॥' ತನ್ನ ಇಚ್ಛೆಯಿಂದಲೇ ಆವೃತನಾದ ಭಗವಂತನು ಯಾವಾಗಲೂ ಜೀವನಲ್ಲಿಯೇ ನೆಲೆಸಿದ್ದಾನೆ. ಮತ್ತು ಅವನನ್ನು ನಿಯಮನ ಮಾಡುವ ಕಾರಣ ಕ್ಷೇತ್ರಜ್ಞನೆನಿಸಿದ್ದಾನೆಂದು ಹರಿವಂಶದಲ್ಲಿ ಹೇಳಿದ್ದಾರೆ.

ಪ್ರಕಾಶಃ – ಪುರುಷಶಬ್ದ ಇತಿ ।। ಯುಕ್ತ ಇತಿ ವಿಪರಿಣಾಮಃ । ಅತ್ರ ವಿಸ್ತರಸ್ತು ಗುರುಪಾದಕೃತಶ್ರುತಿತಾತ್ಪರ್ಯಕೌಮುದ್ಯಾಂ ಜ್ಞೇಯಃ ।।

'ಪುರುಷಶಬ್ದಃ ಯುಕ್ತಂ' ಎಂದು ಲಿಂಗ ವ್ಯತ್ಯಾಸವು ಆಯುಕ್ತವಾಗುತ್ತದೆ. ಆದ್ದರಿಂದ 'ಯುಕ್ತಃ' ಎಂದು ಪುಲ್ಲಿಂಗಾಂತವಾಗಿ ವಿಪರಿಣಾಮ ಮಾಡಿಕೊಳ್ಳಬೇಕು. ಕ್ಷೇತ್ರಜ್ಞ ಶಬ್ದದಿಂದ ಪರಮಾತ್ಮನೇ ಪ್ರತಿಪಾದ್ಯನಾಗಿದ್ದಾನೆ ಸತ್ವಶಬ್ದದಿಂದ ಜೀವನು ಪ್ರತಿಪಾದ್ಯನಾಗಿದ್ದಾನೆಂಬ ವಿಷಯದಲ್ಲಿ ಹೆಚ್ಚಿನ ವಿಚಾರವನ್ನು ಗುರುಗಳು ಮಾಡಿರುವ 'ಶ್ರುತಿತಾತ್ಪರ್ಯ ಕೌಮುದೀ' ಎಂಬ ಗ್ರಂಥವನ್ನು ಓದಿ ತಿಳಿದುಕೊಳ್ಳಬೇಕು.

ಗುರುರಾಜೀಯಮ್ – ತತ್ರ ಚಶಬ್ದ ಇತಿ ।। ಅತ್ರ ಭಾಷ್ಯೇ ಪೂರ್ವಾನುಕ್ತವಾಯುಸಮುಚ್ಚಾಯಕತ್ವಸ್ಯ ಸ್ಪಷ್ಟಪ್ರತೀತೇಃ ಟೀಕಾಯಾಮುಕ್ತಸಾಧ್ಯಹೇತ್ವನುಕರ್ಷಮಾತ್ರಾರ್ಥತ್ವಮಿತ್ಯವ್ಯಾಖ್ಯಾತತ್ವಾದ್ವಾಯುಸಮುಚ್ಚಯಶ್ಚ-ಶಬ್ದಾರ್ಥೋ ನೇತಿ ನ ಮನ್ತವ್ಯಮಿತಿ ಭಾವಃ । 'ಜೀವ ಪ್ರಾಣಧಾರಣೇ' ಇತಿ ಧಾತೋರ್ಜೀವ ಏವ ಪ್ರಾಣಭೃಚ್ಛಬ್ದಾರ್ಥೋऽಭಿಪ್ರೇತೋ ನತು ವಾಯುಃ । ತಥಾತ್ವೇ ರುದ್ರಸ್ಯಾಪಿ ಗ್ರಹಣೋಪಪತ್ತೇಃ । ಟೀಕಾಯಾಂ ಪೂರ್ವಪಕ್ಷೇ ವಾಯೋಃ ಪ್ರಾಣಾಧಾರತ್ವಪ್ರಸಿದ್ಧ್ಯುಕ್ತಿಮಾತ್ರೇಣ ತಸ್ಯ ಗ್ರಹಣೇ 'ಪ್ರಾಣಾನಾಂ ಗ್ರನ್ಥಿರಸಿ' ಇತ್ಯಾದೌ ರುದ್ರಸ್ಯಾಪಿ ತದವಿಶೇಷಾತ್ । ಅತ ಏವ ಭಾಷ್ಯೇ ನ ಜೀವೋ ವಾಯುಶ್ಚೇತಿ ಯೋಗವಿಭಾಗಃ । ಅನ್ಯಥಾ ನ ಪ್ರಕೃತಿಜೀವಾವಭಿಧೀಯೇತೇ ಇತ್ಯನ್ಯತ್ರೇವಾತ್ರಾಪಿ ನ ಜೀವವಾಯೂ ಇತಿ ಸ್ಯಾದಿತಿ ಭಾವೇನೇದಂ ವ್ಯಾಖ್ಯಾನಮ್ । ಭಾವಬೋಧೇ ತು ''ದ್ರವತಾಂ ಹೀನ್ದ್ರಿಯಾಣಾಂ ತು ನಿಯನ್ತಾ ಪ್ರಾಣ ಏಕರಾಟ್'' ಇತ್ಯಾದೌ ಶ್ರುತೌ ಚ ಪ್ರಾಣಸಂವಾದಾದಿನಾ ರುದ್ರಾದ್ಯಪೇಕ್ಷಯಾऽಪ್ಯತಿಶಯೇನ ಪ್ರಾಣಧಾರಕತ್ವಾದ್ವಾಯೋರಪಿ ಸೌತ್ರಪ್ರಾಣಭೃಚ್ಛಬ್ದಾರ್ಥತ್ವಮ್ । ಯೋಗವಿಭಾಗಸ್ತು ತತ್ರೈಕವಚನೋಪಪತ್ತಯೇ ಕೃತಃ । ಭಾಷ್ಯೇ ಚಶಬ್ದಸ್ತು ವಾಯುಪೂರ್ವಪಕ್ಷೇಣ ಹೇತ್ವನಾಂ ಚಾನುಕರ್ಷಾರ್ಥ ಇತ್ಯಾಶಯೇನ ಸೌತ್ರಶಬ್ದಸ್ಯ

मुख्यवायुसमुच्चयज्ञापकत्वमनुक्त्वा वायोः प्राणभृच्छब्दार्थत्वमेवोक्तमिति ज्ञेयम् । ननु 'जुष्टं यदा पश्यत्' इति श्रुतेः पूर्वं परमात्मनो रुद्राद्भेदे प्रमाणत्वेनोदाहृतत्वात् जीवेश्वरभेदे प्रमाणत्वेनोदाहरणे पूर्वोत्तरविरोध इत्यत आह – अत्र चेति ।। **यदिन्यायेनेति** ।। अन्यत्वावधित्वेन प्रतीतो जीवो यद्यवधिर्न स्यात्ततः किं स्यादन्यथाऽवधिन एवाभावात् । यदि चान्यदेवावधिभूतं स्यात्तर्ह्यवधिमदन्यन्नास्तीति वदन्नास्तिको हत इत्यर्थः । पदिन्यायेनेति पाठे पदे जुहोतीति होमाधिकरणम् पदं किमिति प्राप्ते अध्वर्युः सप्तमं पदमञ्जलिना गृह्णातीति प्रकृतैकहायन्या एव वस्तुतः पदप्रतियोगित्ववदत्रापि प्रकृतजीवस्यैवान्यत्वप्रतियोगित्वेन सम्बन्धो ज्ञेय इत्यर्थः । अन्यथा प्रकृतत्वाविशेषात्तत्रापि न स्यादिति भावः । **अभ्यर्हितत्वादिति** ।। 'अभ्यर्हितं पूर्वम्' इति पूर्वनिपात इति भावः ।। **अन्यथेति** ।। 'द्वा सुपर्णा' इति मन्त्रस्य सत्वक्षेत्रज्ञशब्दार्थत्वेन प्रसिद्धबुद्धिजीवविषयत्वाभ्युपगम इत्यर्थः ।

ಸಾರ

'ಓಂ ಭೇದವ್ಯಪದೇಶಾತ್ ಓಂ' ಎಂಬ ಐದನೆಯ ಸೂತ್ರದಲ್ಲಿ ಜೀವಬ್ರಹ್ಮರಿಗೆ ಅಭೇದವನ್ನು ಆಶಂಕಿಸಿದರೆ ಉತ್ತರಿಸಲಾಗಿದೆ. ವಸ್ತುತಃ 'ಜುಷ್ಟಂ ಯದಾ ಪಶ್ಯತ್ಯನ್ಯಮೀಶಮ್' ಎಂಬ ಶ್ರುತಿಯಲ್ಲಿ ಭಿನ್ನನಾದ ಈಶನೆಂದಷ್ಟೇ ಹೇಳಲಾಗಿದೆ. ಯಾರಿಂದ ಭಿನ್ನನಾಗಿದ್ದಾನೆಂದು ಸ್ಪಷ್ಟವಾಗಿ ತಿಳಿಯುವುದಿಲ್ಲ. ಆದರೆ 'ಪಶ್ಯತೀ' ಎಂಬ ಕ್ರಿಯಾಪದದಿಂದ ಜೀವನು ಪ್ರಸಕ್ತನಾದ್ದರಿಂದ ಅರ್ಥಾತ್ ಜೀವನಿಂದ ಭೇದವನ್ನೇ ಹೇಳುತ್ತಿದೆಯೆಂದು ತಿಳಿಯಬೇಕು. 'ಜುಷ್ಟಂ ಯದಾ ಪಶ್ಯತಿ' ಎಂಬ ಶ್ರುತಿಯನ್ನು ಆದೃಶ್ಯತ್ವಾಧಿಕರಣದಲ್ಲಿ ರುದ್ರನಿಗಿಂತ ವಿಷ್ಣು ಭಿನ್ನನಾಗಿದ್ದಾನೆಂಬ ವಿಷಯದಲ್ಲಿ ಪ್ರಮಾಣವನ್ನಾಗಿ ಹೇಳಿದ್ದರು. ಮತ್ತೊಂದು ರೀತಿಯಲ್ಲಿ ಪ್ರಕೃತ ವ್ಯಾಖ್ಯಾನ ಮಾಡುತ್ತಾ ಜೀವ ಬ್ರಹ್ಮರ ಭೇದವಿಷಯದಲ್ಲಿಯೂ ಈ ಶ್ರುತಿಯು ಪ್ರಮಾಣವಾಗಿದೆಯೆಂದು ಸಮರ್ಥಿಸುತ್ತಿದ್ದಾರೆ.

'ಓಂ ಪ್ರಕರಣಾತ್ ಓಂ' ಎಂಬ ಆರನೆಯ ಸೂತ್ರವು ಹಿಂದಿನ ಸೂತ್ರದಲ್ಲಿ ಹೇಳಲ್ಪಟ್ಟ ಭೇದವು ಅನ್ಯವಿಷಯಕವಾಗುವುದಿಲ್ಲವೆಂಬುದನ್ನು ಮಾತ್ರ ಸಮರ್ಥನೆ ಮಾಡುತ್ತಿದೆ.

'ಓಂ ಸ್ಥಿತ್ಯದನಾಭ್ಯಾಂಚ ಓಂ' ಎಂಬ ಏಳನೆಯ ಸೂತ್ರವು ಭೇದವಿಷಯದಲ್ಲಿ ಶ್ರುತಿಯು ಹೇಗೆ ಪ್ರಮಾಣವಾಗಿದೆಯೋ, ಅದರಂತೆ ಶ್ರುತಿ ಹಾಗೂ ಅದನಗಳೆಂಬ ಲಿಂಗಗಳೂ ಸಹ ಪ್ರಮಾಣವಾಗಿದೆಯೆಂದು ಸಮರ್ಥಿಸುತ್ತಿದೆ.

ಅದ್ವೈತಿಗಳು 'ದ್ವಾ ಸುಪರ್ಣಾ' ಎಂಬ ಶ್ರುತಿಯು ಬುದ್ಧಿಜೀವರಿಗೆ ಭೇದವನ್ನು ಹೇಳುವುದಕ್ಕಾಗಿ ಹೊರಟಿದೆ ಎನ್ನುತ್ತಾರೆ. ಆವರು ನೀಡುವ ಕಾರಣ ಪೈಂಗಿರಹಸ್ಯ ಬ್ರಾಹ್ಮಣ ವಾಕ್ಯದಲ್ಲಿ 'ದ್ವಾ ಸುಪರ್ಣಾ' ಎಂಬ ವಾಕ್ಯವನ್ನು ವ್ಯಾಖ್ಯಾನ ಮಾಡುವಾಗ 'ತಾವೇತೌ ಸತ್ವಕ್ಷೇತ್ರಜ್ಞೌ' ಎಂದು ಹೇಳಲಾಗಿದೆ. ಸತ್ವ ಹಾಗೂ

ಕ್ಷೇತ್ರಜ್ಞರೆಂದರೆ ಬುದ್ಧಿ ಮತ್ತು ಜೀವರೇ ಆಗಿರುತ್ತಾರೆಂದು ಅವರ ಸಮರ್ಥನೆ. ಇದು ಸರಿಯಲ್ಲ. 'ಸತ್ವಂ ಜೀವ ಇತಿ ಪ್ರೋಕ್ತಃ' ಇತ್ಯಾದಿ ಮಾತುಗಳ ಆಧಾರದಿಂದ ಜೀವನೇ ಸತ್ವಶಬ್ದದಿಂದ ಪ್ರತಿಪಾದ್ಯನು. ಕ್ಷೇತ್ರಜ್ಞಶಬ್ದದಿಂದ ಪರಮಾತ್ಮನೇ ಪ್ರತಿಪಾದ್ಯನೆನ್ನಲು 'ಅಗುಣಾನ್ವಿತಂ ಕ್ಷೇತ್ರಜ್ಞಮಾಹುಃ' ಇತ್ಯಾದಿ ಅನೇಕ ಪ್ರಮಾಣಗಳಿವೆ. ಈ ಕಾರಣದಿಂದ 'ದ್ವಾ ಸುಪರ್ಣಾ' ಎಂಬ ಶ್ರುತಿಯು ಜೀವಬ್ರಹ್ಮಭೇದಪ್ರತಿಪಾದಕವೇ ಆಗಿದೆ ಹೊರತು, ಬುದ್ಧಿಜೀವರ ಭೇದ ಪ್ರತಿಪಾದಕವಾಗಿಲ್ಲವೆಂದು ತಿಳಿಯಬೇಕು.

ಶಾಂಕರ ಭಾಷ್ಯ ವಿಮರ್ಶೆ

तात्पर्यचन्द्रिका

अन्येतु । ''अमृतस्यैष सेतुः'' इति युष्मावायतनममृतसम्बन्धित्वेन सेतुत्वेन च श्रूयते । नच ब्रह्मणोऽन्यदमृतमस्ति । येन ब्रह्म तत्सम्बन्धि स्यात् ।

ಅನುವಾದ - ಶಾಂಕರ ಭಾಷ್ಯದ ಪ್ರಕಾರ ಸೂತ್ರಾರ್ಥ ಹೀಗಿದೆ - 'ಅಮೃತಸ್ಯೈಷ ಸೇತುಃ' ಎಂಬ ಶ್ರುತಿಯಲ್ಲಿ ಏಷಃ = ಹಿಂದೆ ದ್ಯುಭ್ವಾದ್ಯಾಯತನನೆಂದು ಹೇಳಲ್ಪಟ್ಟರುವವನು, ಅಮೃತಸ್ಯ = ಅಮೃತಕ್ಕೆ ಸಂಬಂಧಿಯಾಗಿದ್ದಾನೆ, ಸೇತುಃ = ಸೇತುವೂ ಸಹ ಆಗಿರುತ್ತಾನೆ. ಹೀಗೆ ಕೇಳಿಸುತ್ತಿದೆ. ಇದರಿಂದ ಯಾವಾತನು ಅಮೃತಸೇತುವಾಗಿದ್ದಾನೋ, ಅವನೇ ದ್ಯುಭ್ವಾದ್ಯಾಯತನನಾಗಿದ್ದಾನೆಂದು ತಿಳಿಯುತ್ತದೆ. ಬ್ರಹ್ಮನಿಗಿಂತ ಬೇರೊಂದು ಪದಾರ್ಥವು ಅಮೃತವಾಗಿದ್ದಲ್ಲಿ, ಅದಕ್ಕೆ ಸಂಬಂಧಿಯಾದವನು ಬ್ರಹ್ಮನೆಂದು ಹೇಳಬಹುದಿತ್ತು. ಆದರೆ ಬ್ರಹ್ಮನೇ ಅಮೃತಸ್ವರೂಪನಾದ್ದರಿಂದ 'ಅಮೃತಸ್ಯ' ಎಂದು ಷಷ್ಠ್ಯಂತ ಪದಪ್ರಯೋಗವನ್ನು ಬ್ರಹ್ಮನಲ್ಲಿ ಹೇಳಲಾಗದು.

सेतुश्च पारवान् । ब्रह्म तु अपारम् । तस्मान्न युष्मावायतनं ब्रह्म । किन्तु रुद्रवायुप्रधानजीवादिरेवेति प्राप्ते ।

ಸೇತುವು ಪರಿಮಿತಿವುಳ್ಳದ್ದಾಗಿರುತ್ತದೆ. ಬ್ರಹ್ಮನು ಅಪರಿಮಿತನಾದ್ದರಿಂದ ಸೇತುವಾಗಲೂ ಸಹ ಸಾಧ್ಯವಿಲ್ಲ. ಆದ್ದರಿಂದ ದ್ಯುಭ್ವಾದ್ಯಾಯತನನಾದವನು ಬ್ರಹ್ಮನಲ್ಲ. ಹೊರತು ರುದ್ರ, ವಾಯು, ಪ್ರಕೃತಿ, ಜೀವ, ಹಿರಣ್ಯಗರ್ಭ ಇವರಲ್ಲಿ ಯಾರಾದರೊಬ್ಬರೂ ಸಹ ದ್ಯುಭ್ವಾದ್ಯಾಯತನರಾಗಬಹುದೆಂದು ಪೂರ್ವಪಕ್ಷ.

प्रधानादेरपि जलविधारकत्वादेरभावेन न रूढं सेतुत्वम् ।

ಯಾವುದು ಸೇತುವಾಗಿರುತ್ತದೋ, ಅದು ಜಲವನ್ನು ಧಾರಣೆ ಮಾಡಿರುತ್ತದೆ. ಪ್ರದಾನಾದಿಗಳನ್ನು ಸೇತುವೆಂದು ಹೇಳಿದರೆ ಜಲವನ್ನು ಧಾರಣೆಮಾಡಿರುವಿಕೆಯೆಂಬುದನ್ನು ಅವುಗಳಲ್ಲಿ ಉಪಪನ್ನವಾಗುವುದಿಲ್ಲ. ಆದ್ದರಿಂದ ರೂಢವಾದ ಸೇತುತ್ವವನ್ನು ಪೂರ್ವಪಕ್ಷಕಾರರಿಗೆ ವಿವಕ್ಷಿಸಲು ಸಾಧ್ಯವಿಲ್ಲ.

यौगिकं तु भावप्रधानामृतशब्दार्थमोक्षधारकत्वाद् ब्रह्मणोऽप्यस्ति ।

ಇನ್ನು ಪೂರ್ವಪಕ್ಷಕಾರರು 'ಸೇತು'ಶಬ್ದಕ್ಕೆ ಯೌಗಿಕಾರ್ಥವನ್ನು ಹೇಳಬೇಕು. ಹಾಗಾದರೆ ಸಿದ್ಧಾಂತದಲ್ಲಿಯೂ ಯೌಗಿಕಾರ್ಥವನ್ನು ಒಪ್ಪಿ ಬ್ರಹ್ಮನಲ್ಲಿಯೇ ಅಮೃತಸೇತುತ್ವವನ್ನು ಉಪಪಾದಿಸಬಹುದು - ಅಮೃತಪದವನ್ನು ಭಾವಪ್ರಧಾನ ನಿರ್ದೇಶ ಮಾಡಿದಾಗ ಮೋಕ್ಷವೆಂಬರ್ಥವು ಲಭಿಸುತ್ತದೆ. ಇಂತಹ ಮೋಕ್ಷಕ್ಕೆ ಧಾರಕನಾದ್ದರಿಂದ ಬ್ರಹ್ಮನು ಅಮೃತಸೇತುವೆನಿಸಿದ್ದಾನೆ.

यद्वा श्रुतावेतच्छब्दो न ब्रह्मपरः । किन्तु ''तमेवैकं जानथ'' इति विधेयत्वेन शब्दतः प्रधानतया प्रस्तुतज्ञानपरः । तस्यामृतत्वसाधनत्वाद्गौणं तत्सेतुत्वमिति सिद्धान्त इत्याहुः ।

ಅಥವಾ 'ಅಮೃತಸ್ಯೈಷಃ' ಎಂಬಲ್ಲಿರುವ 'ಏತತ್' ಶಬ್ದವು ಬ್ರಹ್ಮಪರವಲ್ಲ ಹೊರತಾಗಿ, ಜ್ಞಾನಪರವಾಗಿದೆ. ವಸ್ತುತಃ 'ತಮೇವೈಕಂ ಜಾನಥ' ಎಂಬ ಹಿಂದಿನ ಶ್ರುತಿಯಲ್ಲಿ 'ತಮ್' ಎಂಬ ಪದದಿಂದ ಬ್ರಹ್ಮನೇ ಉದ್ದೇಶ್ಯನಾಗಿ ಪ್ರಕೃತನಾಗಿದ್ದಾನೆ. ಆದರೂ ಸಹ ಅಂತಹ ಬ್ರಹ್ಮನಲ್ಲಿ 'ಜಾನಥ' ಎಂಬುದಾಗಿ ಜ್ಞಾನವನ್ನು ವಿಧಾನ ಮಾಡುತ್ತಿದೆ. ಉದ್ದೇಶ್ಯಕ್ಕಿಂತ ವಿಧೇಯವೇ ಪ್ರಧಾನವಾಗಿರುತ್ತದೆ. ಇಲ್ಲಿ ಪ್ರಧಾನವಾದ 'ಜಾನಥ' ಎಂಬಲ್ಲಿರುವ ಜ್ಞಾನವನ್ನು 'ಏಷಃ' ಎಂಬ ಪದವು ಪರಾಮರ್ಶಿಸುತ್ತಿದೆ, ನಪುಂಸಕಲಿಂಗದಲ್ಲಿರುವ ಜ್ಞಾನವನ್ನು 'ಏಷಃ' ಎಂಬ ಪುಲ್ಲಿಂಗಪದ ಪ್ರಯೋಗದಿಂದ ಹೇಗೆ ಪರಾಮರ್ಶಿಸಲು ಸಾಧ್ಯ? ಎಂದರೆ, 'ಶೈತ್ಯಂ ಹಿ ಯತ್ ಸಾ ಪ್ರಕೃರ್ತಿಜಲಸ್ಯ' ಎಂಬಲ್ಲಿ 'ಶೈತ್ಯಂ' ಎಂಬುದು ನಪುಂಸಕಲಿಂಗದಲ್ಲಿದ್ದರೂ 'ಸಾ' ಎಂಬುದಾಗಿ ಸ್ತ್ರೀಲಿಂಗನಿರ್ದೇಶವನ್ನು 'ಪ್ರಕೃತಿಃ' ಎಂಬ ಪದಕ್ಕೆ ಅನುಸಾರಿಯಾಗಿ ಪ್ರಯೋಗಿಸಿರುವುದು ಕಾಣಿಸುತ್ತದೆ. ಆದರಂತೆ ಪ್ರಕೃತದಲ್ಲಿಯೂ 'ಸೇತುಃ' ಎಂಬ ಪದವು ಪುಲ್ಲಿಂಗದಲ್ಲಿರುವುದರಿಂದ ಅದನ್ನನುಸರಿಸಿ 'ಏಷಃ' ಎಂದು ಪುಲ್ಲಿಂಗವನ್ನೇ ಪ್ರಯೋಗಿಸಲಾಗಿದೆ. ಆದ್ದರಿಂದ 'ತಮೇವೈಕಮ್' ಎಂಬ ಶ್ರುತಿಗೆ 'ಪರಮಾತ್ಮನನ್ನೇ ತಿಳಿಯಿರಿ. ಬೇರೆ ಮಾತುಗಳನ್ನು ಆಡಬೇಡಿ. ಈ ಜ್ಞಾನವೇ ಮೋಕ್ಷಕ್ಕೆ ಸಾಧನವಾಗಿದೆ' ಎಂದು ಅರ್ಥವನ್ನು ಹೇಳಿದಂತಾಯಿತು. ಹೀಗೆ ಸೇತುಶಬ್ದಕ್ಕೆ ಸಾಧನವೆಂದು ಗೌಣಾರ್ಥವನ್ನು ಸ್ವೀಕರಿಸಿದಾಗ ಅಮೃತಸೇತುತ್ವವು ಬ್ರಹ್ಮನೇ ದ್ಯುಭ್ವಾದ್ಯಾಯತನನಾಗಿದ್ದಾನೆನ್ನಲು ಬಾಧಕವಾಗುವುದಿಲ್ಲ. ಇಷ್ಟು ಸಿದ್ಧಾಂತ.

तन्न । ब्रह्मण्यत्यन्तायुक्तेन जायमानत्वलिङ्गेनैव पूर्वपक्षौचित्यात् । ब्रह्मणोऽन्यदमृतं नेति पूर्वपक्षेऽपि जीवादावमृतसेतुत्वस्य दुर्वचत्वाच्च । सिद्धान्ते जायमानत्वलिङ्गस्य गत्यनुक्तेश्च ।

द्युभ्वाद्यधिकरण (१-३-१)

ಅದ್ವೈತಿಗಳ ಈ ಅಧಿಕರಣ ರಚನೆಯು ಅಸಾಧುವಾಗಿದೆ. ಏಕೆಂದರೆ ಬ್ರಹ್ಮನಲ್ಲಿ ಅತ್ಯಂತ ಅಸಂಭಾವಿತವಾದ ಜಾಯಮಾನತ್ವಲಿಂಗದಿಂದಲೇ ಸುಲಭವಾಗಿ ಪೂರ್ವಪಕ್ಷವನ್ನು ಮಾಡುವುದು ಉಚಿತವಾಗಿದೆ. ಅದನ್ನು ಬಿಟ್ಟು ಅಮೃತಸೇತುತ್ವ ಲಿಂಗವು ಉಪಪನ್ನವಾಗುವುದಿಲ್ಲವೆಂಬ ಪೂರ್ವಪಕ್ಷ ಮಾಡುವುದು ಉಚಿತವಲ್ಲ. ಮತ್ತು ಪೂರ್ವಪಕ್ಷ ಮಾಡುವಾಗ ಬ್ರಹ್ಮನನ್ನು ಬಿಟ್ಟು ಬೇರೆ ಯಾವುದೇ ಪದಾರ್ಥವು ಅಮೃತಸ್ವರೂಪವಲ್ಲ ಎಂದು ಹೇಳಿದರು. ಆದ್ದರಿಂದ ಅಮೃತಸೇತುತ್ವವನ್ನು ಜೀವನಲ್ಲಿಯೂ ಸಹ ಉಪಪಾದಿಸುವುದು ಕಷ್ಟವೇ ಆಗಿದೆ. ಅಮೃತಸ್ವರೂಪನೇ ಆಗದಿರುವ ಜೀವನು ಅಮೃತಕ್ಕೆ ಆಶ್ರಯನಾಗಲು ಹೇಗೆ ಸಾಧ್ಯ ? ಮತ್ತು ಅದ್ವೈತಸಿದ್ಧಾಂತದಲ್ಲಿ ಜಾಯಮಾನತ್ವವೆಂಬ ಪೂರ್ವಪಕ್ಷ ಲಿಂಗಕ್ಕೆ ಸಮಾಧಾನವನ್ನು ಹೇಳಿರುವುದಿಲ್ಲ.

सत्यस्य मोक्षस्याद्वैतिमते ब्रह्ममात्रत्वेन ब्रह्मणस्तद्धारकत्वायोगाच्च ।

ಅಮೃತ ಶಬ್ದಕ್ಕೆ ಭಾವಪ್ರಧಾನ ನಿರ್ದೇಶ ಮಾಡಿ ಮೋಕ್ಷವೆಂಬರ್ಥವನ್ನು ಅಂಗೀಕರಿಸಿದರೂ ಸಹ ಅದ್ವೈತಮತದಲ್ಲಿ ಮೋಕ್ಷಕ್ಕೆ ಬ್ರಹ್ಮನು ಆಶ್ರಯನಾಗಿದ್ದಾನೆಂದು ಸಮರ್ಥಿಸಲು ಬರುವುದಿಲ್ಲ. ಏಕೆಂದರೆ ಸತ್ಯಸ್ವರೂಪವಾದ ಮೋಕ್ಷವು ಬ್ರಹ್ಮಸ್ವರೂಪವಾಗಿದೆಯೆಂದು ಅವರ ವಾದ. ಬ್ರಹ್ಮಸ್ವರೂಪವೇ ಆಗಿರುವ ಮೋಕ್ಷಕ್ಕೆ ಬ್ರಹ್ಮನು ಹೇಗೆ ತಾನೆ ಧಾರಕನಾಗುತ್ತಾನೆ ?

मुक्तिः पञ्चमप्रकारेति मतेऽप्यविद्या जीवाश्रितेति पक्षे तद्ध्वंसस्यापि तदाश्रितत्वात् ।

ಇನ್ನು 'न सन्नासन्न सदसत् नानिर्वाच्यश्च तत्क्षयः' ಎಂಬ ಪಂಚಮ ಪ್ರಕಾರವನ್ನೇ ಮೋಕ್ಷವೆಂದು ಹೇಳಬೇಕು. ಆದರೆ ಅವಿದ್ಯೆಯು ಜೀವಾಶ್ರಿತವಾಗಿದೆಯೆಂಬ ಪಕ್ಷವನ್ನು ವಿವಕ್ಷಿಸಿದರೆ ಅವಿದ್ಯಾಧ್ವಂಸರೂಪವಾದ ಮೋಕ್ಷವೂ ಸಹ ಜೀವಾಶ್ರಿತವೇ ಆಗಬೇಕು. ಅಂದರೆ ಧ್ವಂಸ ಮತ್ತು ಪ್ರತಿಯೋಗಿಗಳಿಗೆ ಸಾಮಾನ್ಯಾಧಿಕರಣ್ಯವು ಸರ್ವಾನುಮತವಾಗಿರುವುದರಿಂದ ಮೋಕ್ಷಕ್ಕೆ ಆಶ್ರಯನು ಜೀವನೇ ಆಗುತ್ತಾನೆ ಹೊರತು, ಬ್ರಹ್ಮನಲ್ಲ.

चिन्मात्राश्रितेति पक्षेऽपि मोक्षस्य बन्धाश्रयजीवाश्रितत्वात् ।

ಅವಿದ್ಯೆಯು ಚಿನ್ಮಾತ್ರಾಶ್ರಿತವಾಗಿದೆಯೆಂಬ ವಿವರಣಪಕ್ಷವನ್ನು ಒಪ್ಪಿದರೆ ಮೋಕ್ಷವು ಬಂಧಕ್ಕೆ ಆಶ್ರಯನಾದ ಜೀವನಲ್ಲಿಯೇ ಬರುತ್ತದೆ ಹೊರತು, ಬ್ರಹ್ಮನಲ್ಲಿ ಬರುವುದಿಲ್ಲ. ಯಾರಿಗೆ ಬಂಧವಾಗಿರುತ್ತದೋ, ಅವನಿಗೇ ಮೋಕ್ಷವಾಗಬೇಕಾದ್ದರಿಂದ ಜೀವನು ಬಂಧಕ್ಕೆ ಆಶ್ರಯನಾಗಿದ್ದಾನೆಂದರೆ ಮೋಕ್ಷಕ್ಕೂ ಸಹ ಅವನೇ ಆಶ್ರಯನಾಗಬೇಕು. ಹೀಗೆ ಈ ಪಕ್ಷದಲ್ಲಿಯೂ ಮೋಕ್ಷಾಶ್ರಯತ್ವವು ಬ್ರಹ್ಮನಲ್ಲಿ ಬರುವುದಿಲ್ಲ.

बन्धस्यापि चिन्मात्राश्रितत्वे च श्यामत्वादिवत्संसारस्य प्रतिबिम्बनिष्ठत्वोक्त्ययोगात् ।

ಸಂಸಾರ ಬಂಧವು ಚಿನ್ಮಾತ್ರದಲ್ಲೇ ಆಶ್ರಿತವಾಗಿದೆ ಹೊರತು, ಜೀವನಲ್ಲಲ್ಲ. ಬಂಧಕ್ಕೆ ಆಶ್ರಯನಾದ ಚಿನ್ಮಾತ್ರನು ಮೋಕ್ಷಕ್ಕೂ ಸಹ ಆಶ್ರಯನಾಗುತ್ತಾನೆಂದು ಹೇಳಬಹುದಲ್ಲವೇ? ಎಂದು ಶಂಕಿಸಬಾರದು. ಏಕೆಂದರೆ ದರ್ಪಣ ಮೊದಲಾದ ಉಪಾಧಿಯಲ್ಲಿರುವ ಶ್ಯಾಮವರ್ಣ ಮೊದಲಾದವು ಪ್ರತಿಬಿಂಬದಲ್ಲೇ ಬರುತ್ತವೆ ಹೊರತು, ಬಿಂಬನಲ್ಲಿ ಬರುವುದಿಲ್ಲ. ಆದರಂತೆ ಅವಿದ್ಯಾರೂಪವಾದ ಉಪಾಧಿಯಲ್ಲಿರುವ ಅವಿದ್ಯಾಕಾರ್ಯವೆನಿಸಿದ ಸಂಸಾರವು ಪ್ರತಿಬಿಂಬ ಸ್ಥಾನದಲ್ಲಿರುವ ಜೀವನಿಗೆ ಅಂಟುತ್ತದೆ ಹೊರತು, ಬಿಂಬಸ್ಥಾನದಲ್ಲಿರುವ ಚಿನ್ಮಾತ್ರನಿಗೆ ಅಂಟುವುದಿಲ್ಲವೆಂದು ಅದ್ವೈತಿಗಳ ಸಿದ್ಧಾಂತ. ಇದು ತಪ್ಪಾಗುತ್ತದೆ. ನೀವು ಪ್ರಕೃತವಾದ ಸಂಸಾರಬಂಧವನ್ನು ಚಿನ್ಮಾತ್ರದಲ್ಲಿ ಒಪ್ಪಿದರೆ ಉಪಾಧಿಯಲ್ಲಿರುವ ದೋಷವು ಬಿಂಬದಲ್ಲಿ ಒಪ್ಪಿದಂತಾಗುತ್ತದೆ. ಆದರಿಂದ ಮುಕ್ತಾಶ್ರಯತ್ವವನ್ನು ಕೂಡಿಸಲು ಸಾಧ್ಯವಿಲ್ಲದ ಕಾರಣ ಅಮೃತಸೇತುವೆನಿಸುವುದಿಲ್ಲ. ಆದ್ದರಿಂದಲೇ ದ್ಯುಭ್ವಾದ್ಯಾಯತನನೂ ಸಹ ಆಗಲು ಸಾಧ್ಯವಿಲ್ಲ.

यच्चोक्तं श्रुतावेतच्छब्दो ज्ञानपर इत्यादि । तन्न । ''एषसेतुर्विधृतिः'' इति श्रुत्यन्तरे सेतुत्वेन प्रसिद्धब्रह्मण एवेह प्रत्यभिज्ञानात् ।

ಅದ್ವೈತಿಗಳ ಎರಡನೆಯ ವ್ಯಾಖ್ಯಾನವೂ ಸಹ ಅಸಾಧುವಾಗಿದೆ. 'ಏಷಃ' ಎಂಬಲ್ಲಿರುವ 'ಏತತ್' ಶಬ್ದವು ಜ್ಞಾನವನ್ನು ಪರಾಮರ್ಶಿಸುತ್ತಿದೆಯೆಂಬ ಅವರ ವಿಚಾರವು ಅಸಾಧುವಾಗಿದೆ. ಏಕೆಂದರೆ ಬೃಹದಾರಣ್ಯಕೋಪನಿಷತ್ತಿನಲ್ಲಿ 'ಏಷಸೇತುರ್ವಿಧೃತಿಃ' ಎಂಬುದಾಗಿ ಬ್ರಹ್ಮನು ಸೇತುವಾಗಿದ್ದಾನೆಂದು ಹೇಳಲಾಗಿದೆ. ಅಂತಹ ಬ್ರಹ್ಮನೇ ಇಲ್ಲಿಯೂ ಸಹ ಸೇತುಶಬ್ದದಿಂದ ಪ್ರತಿಪಾದ್ಯನಾಗಿದ್ದಾನೆಂಬ ಪ್ರತ್ಯಭಿಜ್ಞೆಯೇ ಬರುತ್ತದೆ ಹೊರತು, ಜ್ಞಾನವೆಂಬ ಅರ್ಥದ ಚಿಂತನೆ ಯಾರಿಗೂ ಸಹ ಬರುವುದಿಲ್ಲ.

अस्यामेव श्रुतौ ''स एषोऽन्तश्चरते'' इति ''दिव्ये ब्रह्मपुरे ह्येष व्योम्न्यात्मा सम्प्रतिष्ठितः'' इत्युत्तरवाक्यस्थस्यैतच्छब्दस्य ब्रह्मपरत्वदर्शनाच्च ।

ಮತ್ತು ಇದೇ ಪ್ರಕರಣದ ಮುಂದಿನ ವಾಕ್ಯದಲ್ಲಿ 'ಸ ಏಷೋಽಂತಶ್ಚರತೇ' ಎಂಬಲ್ಲಿ 'ದಿವ್ಯೇ ಬ್ರಹ್ಮಪುರೇ ಹ್ಯೇಷ ವ್ಯೋಮ್ನ್ಯಾತ್ಮಾ ಸಂಪ್ರತಿಷ್ಠಿತಃ' ಎಂಬ ಆದರ ಮುಂದಿನ ವಾಕ್ಯದಲ್ಲಿ 'ಏತತ್' ಶಬ್ದದಿಂದ ಬ್ರಹ್ಮನೇ ಪ್ರತಿಪಾದ್ಯನಾಗಿದ್ದಾನೆ ಎಂದು ಹೇಳಿದ್ದಾರೆ. ಆದ್ದರಿಂದ ಇಲ್ಲಿರುವ 'ಏತತ್' ಶಬ್ದದಿಂದಲೂ ಅವನೇ ಪ್ರತಿಪಾದ್ಯನಾಗಬೇಕು.

सिद्धरूपाभिधायिनः पुँल्लिङ्गस्यैतच्छब्दस्य पुँल्लिङ्गेन तच्छब्देनाऽत्मशब्देन चाव्यवधानेन प्रकृतसिद्धरूपाऽत्मपरत्वसम्भवेऽपि तद्विपरीतज्ञानपरत्वायोगाच्च ।

ಅದ್ವೈತಿಗಳ ಈ ಅಧಿಕರಣ ರಚನೆಯು ಅಸಾಧುವಾಗಿದೆ. ಏಕೆಂದರೆ ಬ್ರಹ್ಮನಲ್ಲಿ ಅತ್ಯಂತ ಅಸಂಭಾವಿತವಾದ ಜಾಯಮಾನತ್ವಲಿಂಗದಿಂದಲೇ ಸುಲಭವಾಗಿ ಪೂರ್ವಪಕ್ಷವನ್ನು ಮಾಡುವುದು ಉಚಿತವಾಗಿದೆ. ಆದನ್ನು ಬಿಟ್ಟು ಅಮೃತಸೇತುತ್ವ ಲಿಂಗವು ಉಪಪನ್ನವಾಗುವುದಿಲ್ಲವೆಂಬ ಪೂರ್ವಪಕ್ಷ ಮಾಡುವುದು ಉಚಿತವಲ್ಲ. ಮತ್ತು ಪೂರ್ವಪಕ್ಷ ಮಾಡುವಾಗ ಬ್ರಹ್ಮನನ್ನು ಬಿಟ್ಟು ಬೇರೆ ಯಾವುದೇ ಪದಾರ್ಥವು ಅಮೃತಸ್ವರೂಪವಲ್ಲ ಎಂದು ಹೇಳಿದರು. ಆದ್ದರಿಂದ ಅಮೃತಸೇತುತ್ವವನ್ನು ಜೀವನಲ್ಲಿಯೂ ಸಹ ಉಪಪಾದಿಸುವುದು ಕಷ್ಟವೇ ಆಗಿದೆ. ಅಮೃತಸ್ವರೂಪನೇ ಆಗದಿರುವ ಜೀವನು ಅಮೃತಕ್ಕೆ ಆಶ್ರಯನಾಗಲು ಹೇಗೆ ಸಾಧ್ಯ ? ಮತ್ತು ಅದ್ವೈತಸಿದ್ಧಾಂತದಲ್ಲಿ ಜಾಯಮಾನತ್ವವೆಂಬ ಪೂರ್ವಪಕ್ಷ ಲಿಂಗಕ್ಕೆ ಸಮಾಧಾನವನ್ನು ಹೇಳಿರುವುದಿಲ್ಲ.

सत्यस्य मोक्षस्याद्वैतिमते ब्रह्ममात्रत्वेन ब्रह्मणस्तद्धारकत्वायोगाच्च ।

ಅಮೃತ ಶಬ್ದಕ್ಕೆ ಭಾವಪ್ರಧಾನ ನಿರ್ದೇಶ ಮಾಡಿ ಮೋಕ್ಷವೆಂಬರ್ಥವನ್ನು ಅಂಗೀಕರಿಸಿದರೂ ಸಹ ಅದ್ವೈತಮತದಲ್ಲಿ ಮೋಕ್ಷಕ್ಕೆ ಬ್ರಹ್ಮನು ಆಶ್ರಯನಾಗಿದ್ದಾನೆಂದು ಸಮರ್ಥಿಸಲು ಬರುವುದಿಲ್ಲ. ಏಕೆಂದರೆ ಸತ್ಯಸ್ವರೂಪವಾದ ಮೋಕ್ಷವು ಬ್ರಹ್ಮಸ್ವರೂಪವಾಗಿದೆಯೆಂದು ಅವರ ವಾದ. ಬ್ರಹ್ಮಸ್ವರೂಪವೇ ಆಗಿರುವ ಮೋಕ್ಷಕ್ಕೆ ಬ್ರಹ್ಮನು ಹೇಗೆ ತಾನೆ ಧಾರಕನಾಗುತ್ತಾನೆ ?

मुक्तिः पञ्चमप्रकारेति मतेऽप्यविद्या जीवाश्रितेति पक्षे तद्ध्वंसस्यापि तदाश्रितत्वात् ।

ಇನ್ನು 'न सन्नासन्न सदसत् नानिर्वाच्यश्च तत्क्षयः' ಎಂಬ ಪಂಚಮ ಪ್ರಕಾರವನ್ನೇ ಮೋಕ್ಷವೆಂದು ಹೇಳಬೇಕು. ಆದರೆ ಅವಿದ್ಯೆಯು ಜೀವಾಶ್ರಿತವಾಗಿದೆಯೆಂಬ ಪಕ್ಷವನ್ನು ವಿವಕ್ಷಿಸಿದರೆ ಅವಿದ್ಯಾಧ್ವಂಸರೂಪವಾದ ಮೋಕ್ಷವೂ ಸಹ ಜೀವಾಶ್ರಿತವೇ ಆಗಬೇಕು. ಅಂದರೆ ಧ್ವಂಸ ಮತ್ತು ಪ್ರತಿಯೋಗಿಗಳಿಗೆ ಸಾಮಾನ್ಯಾಧಿಕರಣ್ಯವು ಸರ್ವಾನುಮತವಾಗಿರುವುದರಿಂದ ಮೋಕ್ಷಕ್ಕೆ ಆಶ್ರಯನು ಜೀವನೇ ಆಗುತ್ತಾನೆ ಹೊರತು, ಬ್ರಹ್ಮನಲ್ಲ.

चिन्मात्राश्रितेति पक्षेऽपि मोक्षस्य बन्धाश्रयजीवाश्रितत्वात् ।

ಅವಿದ್ಯೆಯು ಚಿನ್ಮಾತ್ರಾಶ್ರಿತವಾಗಿದೆಯೆಂಬ ವಿವರಣಪಕ್ಷವನ್ನು ಒಪ್ಪಿದರೆ ಮೋಕ್ಷವು ಬಂಧಕ್ಕೆ ಆಶ್ರಯನಾದ ಜೀವನಲ್ಲಿಯೇ ಬರುತ್ತದೆ ಹೊರತು, ಬ್ರಹ್ಮನಲ್ಲಿ ಬರುವುದಿಲ್ಲ. ಯಾರಿಗೆ ಬಂಧವಾಗಿರುತ್ತದೋ, ಅವನಿಗೇ ಮೋಕ್ಷವಾಗಬೇಕಾದ್ದರಿಂದ ಜೀವನು ಬಂಧಕ್ಕೆ ಆಶ್ರಯನಾಗಿದ್ದಾನೆಂದರೆ ಮೋಕ್ಷಕ್ಕೂ ಸಹ ಅವನೇ ಆಶ್ರಯನಾಗಬೇಕು. ಹೀಗೆ ಈ ಪಕ್ಷದಲ್ಲಿಯೂ ಮೋಕ್ಷಾಶ್ರಯತ್ವವು ಬ್ರಹ್ಮನಲ್ಲಿ ಬರುವುದಿಲ್ಲ.

बन्धस्यापि चिन्मात्राश्रितत्वे च श्यामत्वादिवत्संसारस्य प्रतिबिम्बनिष्ठत्वोक्त्य-योगात् ।

ಸಂಸಾರ ಬಂಧವು ಚಿನ್ಮಾತ್ರದಲ್ಲೇ ಆಶ್ರಿತವಾಗಿದೆ ಹೊರತು, ಜೀವನಲ್ಲಲ್ಲ. ಬಂಧಕ್ಕೆ ಆಶ್ರಯನಾದ ಚಿನ್ಮಾತ್ರನು ಮೋಕ್ಷಕ್ಕೂ ಸಹ ಆಶ್ರಯನಾಗುತ್ತಾನೆಂದು ಹೇಳಬಹುದಲ್ಲವೇ? ಎಂದು ಶಂಕಿಸಬಾರದು. ಏಕೆಂದರೆ ದರ್ಪಣ ಮೊದಲಾದ ಉಪಾಧಿಯಲ್ಲಿರುವ ಶ್ಯಾಮವರ್ಣ ಮೊದಲಾದವು ಪ್ರತಿಬಿಂಬದಲ್ಲೇ ಬರುತ್ತವೆ ಹೊರತು, ಬಿಂಬನಲ್ಲಿ ಬರುವುದಿಲ್ಲ. ಆದರಂತೆ ಅವಿದ್ಯಾರೂಪವಾದ ಉಪಾಧಿಯಲ್ಲಿರುವ ಅವಿದ್ಯಾಕಾರ್ಯವೆನಿಸಿದ ಸಂಸಾರವು ಪ್ರತಿಬಿಂಬ ಸ್ಥಾನದಲ್ಲಿರುವ ಜೀವನಿಗೆ ಅಂಟುತ್ತದೆ ಹೊರತು, ಬಿಂಬಸ್ಥಾನದಲ್ಲಿರುವ ಚಿನ್ಮಾತ್ರನಿಗೆ ಅಂಟುವುದಿಲ್ಲವೆಂದು ಅದ್ವೈತಿಗಳ ಸಿದ್ಧಾಂತ. ಇದು ತಪ್ಪಾಗುತ್ತದೆ. ನೀವು ಪ್ರಕೃತವಾದ ಸಂಸಾರಬಂಧವನ್ನು ಚಿನ್ಮಾತ್ರದಲ್ಲಿ ಒಪ್ಪಿದರೆ ಉಪಾಧಿಯಲ್ಲಿರುವ ದೋಷವು ಬಿಂಬದಲ್ಲಿ ಒಪ್ಪಿದಂತಾಗುತ್ತದೆ. ಆದರಿಂದ ಮುಕ್ತಾಶ್ರಯತ್ವವನ್ನು ಕೂಡಿಸಲು ಸಾಧ್ಯವಿಲ್ಲದ ಕಾರಣ ಅಮೃತಸೇತುವೆನಿಸುವುದಿಲ್ಲ. ಆದ್ದರಿಂದಲೇ ದ್ಯುಭ್ವಾದ್ಯಾಯತನನೂ ಸಹ ಆಗಲು ಸಾಧ್ಯವಿಲ್ಲ.

यच्चोक्तं श्रुतावेतच्छब्दो ज्ञानपर इत्यादि । तन्न । ''एषसेतुर्विधृतिः'' इति श्रुत्यन्तरे सेतुत्वेन प्रसिद्धब्रह्मण एवेह प्रत्यभिज्ञानात् ।

ಅದ್ವೈತಿಗಳ ಎರಡನೆಯ ವ್ಯಾಖ್ಯಾನವೂ ಸಹ ಅಸಾಧುವಾಗಿದೆ. 'ಏಷಃ' ಎಂಬಲ್ಲಿರುವ 'ಏತತ್' ಶಬ್ದವು ಜ್ಞಾನವನ್ನು ಪರಾಮರ್ಶಿಸುತ್ತಿದೆಯೆಂಬ ಅವರ ವಿಚಾರವು ಅಸಾಧುವಾಗಿದೆ. ಏಕೆಂದರೆ ಬೃಹದಾರಣ್ಯಕೋಪನಿಷತ್ತಿನಲ್ಲಿ 'ಏಷಸೇತುರ್ವಿಧೃತಿಃ' ಎಂಬುದಾಗಿ ಬ್ರಹ್ಮನು ಸೇತುವಾಗಿದ್ದಾನೆಂದು ಹೇಳಲಾಗಿದೆ. ಅಂತಹ ಬ್ರಹ್ಮನೇ ಇಲ್ಲಿಯೂ ಸಹ ಸೇತುಶಬ್ದದಿಂದ ಪ್ರತಿಪಾದ್ಯನಾಗಿದ್ದಾನೆಂಬ ಪ್ರತ್ಯಭಿಜ್ಞೆಯೇ ಬರುತ್ತದೆ ಹೊರತು, ಜ್ಞಾನವೆಂಬ ಅರ್ಥದ ಚಿಂತನೆ ಯಾರಿಗೂ ಸಹ ಬರುವುದಿಲ್ಲ.

अस्यामेव श्रुतौ ''स एषोऽन्तश्चरते'' इति ''दिव्ये ब्रह्मपुरे ह्येष व्योम्न्यात्मा सम्प्रतिष्ठितः'' इत्युत्तरवाक्यस्थस्यैतच्छब्दस्य ब्रह्मपरत्वदर्शनाच्च ।

ಮತ್ತು ಇದೇ ಪ್ರಕರಣದ ಮುಂದಿನ ವಾಕ್ಯದಲ್ಲಿ 'ಸ ಏಷೋಽಂತಶ್ಚರತೇ' ಎಂಬಲ್ಲಿ 'ದಿವ್ಯೇ ಬ್ರಹ್ಮಪುರೇ ಹ್ಯೇಷ ವ್ಯೋಮ್ನ್ಯಾತ್ಮಾ ಸಂಪ್ರತಿಷ್ಠಿತಃ' ಎಂಬ ಅದರ ಮುಂದಿನ ವಾಕ್ಯದಲ್ಲಿ 'ಏತತ್' ಶಬ್ದದಿಂದ ಬ್ರಹ್ಮನೇ ಪ್ರತಿಪಾದ್ಯನಾಗಿದ್ದಾನೆ ಎಂದು ಹೇಳಿದ್ದಾರೆ. ಆದ್ದರಿಂದ ಇಲ್ಲಿರುವ 'ಏತತ್' ಶಬ್ದದಿಂದಲೂ ಅವನೇ ಪ್ರತಿಪಾದ್ಯನಾಗಬೇಕು.

सिद्धरूपाभिधायिनः पुँल्लिङ्गस्यैतच्छब्दस्य पुँल्लिङ्गेन तच्छब्देनाऽत्मशब्देन चाव्यवधानेन प्रकृतसिद्धरूपाऽत्मपरत्वसम्भवेऽपि तद्विपरीतज्ञानपरत्वायोगाच्च ।

'ಏತತ್' ಶಬ್ದವು ಎಲ್ಲೆಡೆ ಸಿದ್ಧರೂಪವಾದ ವಸ್ತುವನ್ನೇ ಪರಾಮರ್ಶ ಮಾಡುತ್ತದೆ. ಆದ್ದರಿಂದ ಪ್ರಕೃತ 'ಏಷಃ' ಎಂಬಲ್ಲಿರುವ 'ಏತತ್' ಶಬ್ದವೂ ಸಹ ಸಿದ್ಧನಾದ ಬ್ರಹ್ಮನನ್ನೇ ಪರಾಮರ್ಶ ಮಾಡುತ್ತದೆ ಹೊರತು, ಸಾಧ್ಯವಾದ ಜ್ಞಾನವನ್ನು ಪರಾಮರ್ಶ ಮಾಡಲು ಸಾಧ್ಯವಿಲ್ಲ. ಮತ್ತು ಪುಲ್ಲಿಂಗದಲ್ಲಿರುವ 'ಏತತ್' ಶಬ್ದದಿಂದ ಪುಲ್ಲಿಂಗದಿಂದ ಹಿಂದೆ ಪ್ರಸಕ್ತವಾಗಿರುವ 'ತಮ್' ಎಂಬ ತತ್‌ಶಬ್ದದಿಂದ ಹಾಗೂ 'ಆತ್ಮಾನಮ್' ಎಂಬಲ್ಲಿರುವ 'ಆತ್ಮ' ಶಬ್ದದಿಂದ ಪ್ರಕೃತನಾದ ಬ್ರಹ್ಮನನ್ನೇ ಪರಾಮರ್ಶಿಸುವುದು ಉಚಿತ. ಆತ್ಮಶಬ್ದದಿಂದ ಪ್ರಕೃತನಾದವನನ್ನು ಪರಾಮರ್ಶಿಸುವುದು ಇನ್ನೂ ಹೆಚ್ಚು ಉಚಿತ. 'ಜಾನಥ' ಎಂಬುದರಿಂದ ಪ್ರಸಕ್ತವಾದ ಜ್ಞಾನಕ್ಕಿಂತಲೂ ಅತ್ಯಂತ ಹತ್ತಿರವಾದ ಆತ್ಮಶಬ್ದದಿಂದ ಹಿಂದೆ ಆತ್ಮಶಬ್ದದಿಂದ ಪ್ರಸಕ್ತನಾದ ಬ್ರಹ್ಮನನ್ನು ಪರಾಮರ್ಶಿಸುವುದೇ ಸೂಕ್ತವಾಗಿದೆ. ಆದ್ದರಿಂದ ವ್ಯವಹಿತವಾದ ನಪುಂಸಕಲಿಂಗದಿಂದ ಪ್ರಸಕ್ತವಾದ ಮತ್ತು ಸಾಧ್ಯವಾದ ಜ್ಞಾನವನ್ನು ಪರಾಮರ್ಶಿಸುವುದಕ್ಕಿಂತಲೂ ಸಿದ್ಧನಾದ, ಹತ್ತಿರದಲ್ಲೇ ಇರುವ ಆತ್ಮಶಬ್ದದಿಂದ ಹಾಗೂ ಪುಲ್ಲಿಂಗಶಬ್ದದಿಂದಲೇ ಪ್ರಸಕ್ತನಾದ ಬ್ರಹ್ಮನನ್ನು ಪರಾಮರ್ಶಿಸುವುದು ಅತ್ಯಂತ ಅರ್ಥಪೂರ್ಣವಾಗಿದೆ.

किञ्चाऽयसूत्रे द्युभ्वाद्यायतनत्वं नाम परमते निर्विशेषस्य तद्भ्रमाधिष्ठानत्वम् ।

ಮತ್ತು ಪ್ರಥಮಸೂತ್ರದಲ್ಲಿ ದ್ಯುಭ್ವಾದ್ಯಾಯತನತ್ವವೆಂಬ ಧರ್ಮವನ್ನು ಬ್ರಹ್ಮನಲ್ಲಿ ಸಮರ್ಥಿಸಲು ಅದ್ವೈತಿಗಳಿಗೆ ಸಾಧ್ಯವಿಲ್ಲ. ಈ ಪಾದದಲ್ಲಿ ನಿರ್ವಿಶೇಷಬ್ರಹ್ಮನ ಸ್ವರೂಪದ ವಿಚಾರವಷ್ಟೇ ಪ್ರಸಕ್ತವಾಗುವುದರಿಂದ ದ್ಯುಭ್ವಾದ್ಯಾಯತನತ್ವದ ಭ್ರಮೆಗೆ ಬ್ರಹ್ಮನು ಅಧಿಷ್ಠಾನನಾಗಿದ್ದಾನೆಂದಷ್ಟೇ ಹೇಳಬೇಕು. ಅದನ್ನು ಬಿಟ್ಟು ದ್ಯುಭ್ವಾದ್ಯಾಯತನತ್ವವೆಂಬ ಧರ್ಮವನ್ನು ಸಮರ್ಥಿಸಲು ಸಾಧ್ಯವಿಲ್ಲ.

तथाच श्रुतावोतशब्दः सूत्रे चायतनशब्दश्चायुक्तः । नहि शुक्तौ रूप्यमोतमित्युच्यते ।

ಆದ್ದರಿಂದಲೇ ಶ್ರುತಿಯಲ್ಲಿರುವ ಓತಶಬ್ದವು ಸೂತ್ರದಲ್ಲಿರುವ 'ಆಯತನ' ಶಬ್ದವೂ ಸಹ ಅಯುಕ್ತವಾಗುತ್ತದೆ. ಏಕೆಂದರೆ ಶುಕ್ತಿಯಲ್ಲಿ ರೂಪ್ಯವು ಆರೋಪಿತವಾಗಿದೆಯೆಂದು ಹೇಳುತ್ತಾರೆ ಹೊರತು, ಓತವಾಗಿದೆಯೆಂದು ಯಾರೂ ಹೇಳುವುದಿಲ್ಲ.

यच्चोक्तं स्वशब्दादित्यनेनाऽत्मशब्दादित्युच्यते । स हि ब्रह्मणः शब्द इति । तन्न । आत्मशब्दवाच्यत्वस्य निर्विशेषेऽभावात् । तल्लक्ष्यत्वस्य च प्रधानादावपि सम्भवात् । सविशेषस्य चैतत्पादाप्रतिपाद्यत्वात् ।

ಸೂತ್ರದ ಹೇತುಭಾಗಕ್ಕೆ ಮಾಡಿದ ವ್ಯಾಖ್ಯಾನವೂ ಸಹ ಸಾಧುವಲ್ಲ. 'ಸ್ವಶಬ್ದಾತ್' ಎಂಬುದಕ್ಕೆ 'ಆತ್ಮಶಬ್ದಾತ್' ಎಂದೂ ಅಂತಹ ಶಬ್ದವನ್ನು ಬ್ರಹ್ಮಪ್ರತಿಪಾದಿಕವಾಗಿದೆಯೆಂದೂ ವ್ಯಾಖ್ಯಾನಿಸಿದ್ದಾರೆ. ಇದು ತಪ್ಪು. ಆತ್ಮಶಬ್ದದಿಂದ ಶಕ್ತಿವೃತ್ತಿಯಿಂದ ಬ್ರಹ್ಮನು ಪ್ರತಿಪಾದ್ಯನಾಗಿದ್ದಾನೆಂದು ಹೇಳಲು ಸಾಧ್ಯವಿಲ್ಲ. ಈ ಪಾದವು ನಿರ್ವಿಶೇಷಬ್ರಹ್ಮ ಪ್ರತಿಪಾದಕವಾಗಿರುವುದರಿಂದ ಆತ್ಮಶಬ್ದವಾಚ್ಯತ್ವವು ನಿರ್ವಿಶೇಷನಲ್ಲಿ ಅಯುಕ್ತವಾಗಿದೆ. ಲಕ್ಷಣಯಾ ನಿರ್ವಿಶೇಷಪ್ರತಿಪಾದ್ಯನಾಗಿದ್ದಾನೆಂದರೆ ಪ್ರಕೃತಿ ಮೊದಲಾದವುಗಳಲ್ಲಿಯೂ ಲಕ್ಷಣಯಾ ಆತ್ಮಶಬ್ದವಾಚ್ಯತ್ವವನ್ನು ಹೇಳಬಹುದು. ಹಾಗೂ ಸವಿಶೇಷನು ಈ ಪಾದದಿಂದ ಪ್ರತಿಪಾದ್ಯನೇ ಆಗಿರುವುದಿಲ್ಲ.

ಯಚ್ಚೋಕ್ತಂ ರಾಗದ್ವೇಷಾದಿಮುಕ್ತೈರ್ಜ್ಞೇಯತ್ವವ್ಯಪದೇಶಾದಿತಿ ವಾ 'ತಮೇವೈಕಂ ಜಾನಥ ಆತ್ಮಾನಂ ಅನ್ಯಾ ವಾಚೋ ವಿಮುಞ್ಚಥ' ಇತಿ ವಾಗ್ವಿಮೋಕಪೂರ್ವಕಂ ಜ್ಞೇಯತ್ವಾವಚನಾತ್ ಇತಿ ವಾ ''ತಥಾ ವಿದ್ವಾನ್ನಾಮರೂಪಾದ್ವಿಮುಕ್ತಃ ಪರಾತ್ಪರಂ ಪುರುಷಮುಪೈತಿ'' ಇತಿ ಮುಕ್ತೈಃ ಪ್ರಾಪ್ಯತ್ವವ್ಯಪದೇಶಾದಿತಿ ವಾ ದ್ವಿತೀಯಸೂತ್ರಾರ್ಥ ಇತಿ ।'

---

(೧) ಶಾಙ್ಕರಭಾಷ್ಯಮ್ –

ಪ್ರಥಮಾಧ್ಯಾಯೇ ತೃತೀಯಃ ಪಾದಃ

ದ್ಯುಭ್ವಾದ್ಯಾಯತನಂ ಸ್ವಶಬ್ದಾತ್ ॥ ೧ ॥

ಸೂತ್ರಂ ಪ್ರಧಾನಂ ಭೋಕ್ತೃಶೇಷೋ ದ್ಯುಭ್ವಾದ್ಯಾಯತನಂ ಭವೇತ್ ।
ಶ್ರುತಿಸ್ಮೃತಿಪ್ರಸಿದ್ಧಿಭ್ಯಾಂ ಭೋಕ್ತೃತ್ವಾಚ್ಚೇಶ್ವರೇತರಃ ॥
ನಾದ್ಯೌ ಪಕ್ಷಾವಾತ್ಮಶಬ್ದಾನ್ನ ಭೋಕ್ತಾ ಮುಕ್ತಗಮ್ಯತಃ ।
ಬ್ರಹ್ಮಪ್ರಕರಣಾದೀಶಃ ಸರ್ವಜ್ಞತ್ವಾದಿತಸ್ತಥಾ ॥ ೨ ॥

ಇದಂ ಶ್ರೂಯತೇ 'ಯಸ್ಮಿನ್ ದ್ಯೌಃ ಪೃಥಿವೀ ಚಾನ್ತರಿಕ್ಷಮೋತಂ ಮನಃ ಸಹ ಪ್ರಾಣೈಶ್ಚ ಸರ್ವೈಃ । ತಮೇವೈಕಂ ಜಾನಥ ಆತ್ಮಾನಮನ್ಯಾ ವಾಚೋ ವಿಮುಞ್ಚಥಾಮೃತಸ್ಯೈಷ ಸೇತುಃ' ಇತಿ । ಅತ್ರ ಯದೇತದ್ ದ್ಯುಪ್ರಭೃತೀನಾಮೋತತ್ವ-ವಚನಾದಾಯತನಂ ಕಿಞ್ಚಿದವಗಮ್ಯತೇ, ತತ್ಕಿಂ ಪರಂ ಬ್ರಹ್ಮ ಸ್ಯಾದಾಹೋಸ್ವಿದರ್ಥಾನ್ತರಮಿತಿ ಸನ್ದಿಹ್ಯತೇ । ತತ್ರಾರ್ಥಾನ್ತರಂ ಕಿಮಪ್ಯಾಯತನಂ ಸ್ಯಾದಿತಿ ಪ್ರಾಪ್ತಮ್ । ಕಸ್ಮಾತ್, 'ಅಮೃತಸ್ಯೈಷ ಸೇತುಃ' ಇತಿ ಶ್ರವಣಾತ್ । ಪಾರವಾನ್ ಹಿ ಲೋಕೇ ಸೇತುಃ ಪ್ರಖ್ಯಾತಃ । ನಚ ಪರಸ್ಯ ಬ್ರಹ್ಮಣಃ ಪಾರವತ್ತ್ವಂ ಶಕ್ಯಮಭ್ಯುಪಗನ್ತುಮ್, 'ಅನನ್ತಪಾರಮ್' ಇತಿ ಶ್ರವಣಾತ್ । ಅರ್ಥಾನ್ತರೇ ಚಾಯತನೇ ಪರಿಗೃಹ್ಯಮಾಣೇ ಸ್ಮೃತಿಪ್ರಸಿದ್ಧಂ ಪ್ರಧಾನಂ ಪರಿಗೃಹೀತವ್ಯಮ್, ತಸ್ಯ ಕಾರಣತ್ವಾದಾಯತನತ್ವೋಪಪತ್ತೇಃ । ಶ್ರುತಿಪ್ರಸಿದ್ಧೋ ವಾ ವಾಯುಃ ಸ್ಯಾತ್, 'ವಾಯುರ್ವೈ ಗೌತಮಃ, ತತ್ ಸೂತ್ರಮ್ ವಾಯುನಾ ವೈ ಗೌತಮಸೂತ್ರೇಣಾಯಂ ಚ ಲೋಕಃ ಪರಶ್ಚ ಲೋಕಃ ಸರ್ವಾಣಿ ಚ ಭೂತಾನಿ ಸನ್ದೃಬ್ಧಾನಿ ಭವನ್ತಿ' ಇತಿ ವಾಯೋರಪಿ ವಿಧಾರಣತ್ವಶ್ರವಣಾತ್ । ಶಾರೀರೋ ವಾ ಸ್ಯಾತ್ । ತಸ್ಯಾಪಿ ಭೋಕ್ತೃತ್ವಾದ್ ಭೋಗ್ಯಂ ಪ್ರಪಞ್ಚಂ ಪ್ರತ್ಯಾಯತನತ್ವೋಪಪತ್ತೇರಿತ್ಯೇವಂ ಪ್ರಾಪ್ತ ಇದಮಾಹ – **ದ್ಯುಭ್ವಾದ್ಯಾಯತನಮಿತಿ ॥** ದ್ಯೌಶ್ಚ ಭೂಶ್ಚ ದ್ಯುಭುವೌ, ದ್ಯುಭುವಾವಾದೀ ಯಸ್ಯ ತದಿದಂ ದ್ಯುಭ್ವಾದಿ ।

ದ್ಯುಭ್ವಾದ್ಯಧಿಕರಣ (೧-೩-೧)

यदेतदस्मिन् वाक्ये द्यौः पृथिव्यन्तरिक्षं मनः प्राणा इत्येवमात्मकं जगदोतत्वेन निर्दिष्टं, तस्यायतनं परं ब्रह्म भवितुमर्हति । कुतः? स्वशब्दादात्मशब्दादित्यर्थः । आत्मशब्दो हीह भवति 'तमेवैकं जानथ आत्मानम्' इति । आत्मशब्दश्च परमात्मपरिग्रहे सम्यगवकल्पते नार्वान्तरपरिग्रहे । क्वचिच स्वशब्देनैव ब्रह्मण आयतनत्वं श्रूयते 'सन्मूलाः सोम्येमाः सर्वाः प्रजाः सदायतनाः सत्प्रतिष्ठाः' इति । स्वशब्देनैव चेह पुरस्तादुपरिष्टाच्च ब्रह्म सङ्कीर्त्यते 'पुरुष एवेदं विश्वं कर्म तपो ब्रह्म परामृतम्' इति । 'ब्रह्मैवेदममृतं पुरस्ताद् ब्रह्म पश्चाद् ब्रह्म दक्षिणतश्चोत्तरेण' इति च । तत्र त्वायतनायतनवद्भावश्रवणात् । सर्वं ब्रह्मेति च सामानाधिकरण्यात् । यथाऽनेकात्मको वृक्षः शाखा स्कन्धो मूलं चेत्येवं नानारसो विचित्र आत्मेत्याशङ्का सम्भवति, तां निवर्तयितुं सावधारणमाह 'तमेवैकं जानथ आत्मानम्' इति । एतदुक्तं भवति, न कार्यप्रपञ्चविशिष्टो विचित्र आत्मा विज्ञेयः । किं तर्हावद्याकृतं कार्यप्रपञ्चं विद्यया प्रविलापयन्तस्तमेवैकमायतनभूतमात्मानं जानथैकरसमिति । यथा यस्मिन्नास्ते देवदत्तस्तदानयेत्युक्त आसनमेवानयति न देवदत्तम् । तद्वदायतनभूतस्यैवैकरसस्यात्मनो विज्ञेयत्वमुपदिश्यते । विकारानृताभिसन्धस्य चापवादः श्रूयते 'मृत्योः स मृत्युमाप्नोति य इह नानेव पश्यति' इति । सर्वं ब्रह्मेति तु सामानाधिकरण्यं प्रपञ्चप्रविलापनार्थं नानेकरसताप्रतिपादनार्थम् । 'स यथा सैन्धवघनोऽनन्तरोऽबाह्यः कृत्स्नो रसघन एवैवं वा अरेऽयमात्मानन्तरोऽबाह्यः कृत्स्नः प्रज्ञानघन एव'इत्येकरसताश्रवणात् । तस्माद् द्युभ्वाद्यायतनं परं ब्रह्म ॥

यत्तूक्तं सेतुश्रुतेः सेतोश्च पारवत्त्वोपपत्तेर्ब्रह्मणोऽर्थान्तरेण द्युभ्वाद्यायतनेन भवितव्यमिति । अत्रोच्यते विधारणत्वमात्रमत्र सेतुश्रुत्या विवक्ष्यते न पारवत्त्वादि । नहि मृद्दारुमयो लोके सेतुर्दृष्ट इत्यत्रापि मृद्दारुमय एव सेतुरभ्युपगम्यते । सेतुशब्दार्थोऽपि विधारणत्वमात्रमेव न पारवत्त्वादि, षिञो बन्धनकर्मणः सेतुशब्दव्युत्पत्तेः । अपर आह 'तमेवैकं जानथ आत्मानम्' इति यदेतत् सङ्कीर्तितमात्मज्ञानम्, यच्चैतद् 'अन्या वाचो विमुञ्चथ' इति वाग्विमोचनम्, तदत्रामृतत्वसाधनत्वात् 'अमृतस्यैष सेतुः' इति सेतुश्रुत्या सङ्कीर्त्यते, नतु द्युभ्वाद्यायतनम् । तत्र यदुक्तं सेतुश्रुतेर्ब्रह्मणोऽर्थान्तरेण द्युभ्वाद्यायतनेन भाव्यमित्येतदयुक्तम् ॥ १ ॥

मुक्तोपसृप्यव्यपदेशात् ॥ २ ॥

इतश्च परमेव ब्रह्म द्युभ्वाद्यायतनम् । यस्मान्मुक्तोपसृप्यताऽस्य व्यपदिश्यमाना दृश्यते । मुक्तैरुपसृप्यं मुक्तोपसृप्यम् । देहादिष्वनात्मस्वहमस्मीत्यात्मबुद्धिरविद्या, ततस्तत्पूजनादौ रागस्तत्परिभवादौ द्वेषः तदुच्छेददर्शनाद् भयं, मोहश्चेत्येवमयमनन्तश्चदोषो ऽनर्थव्रातः सन्ततः सर्वेषां नः प्रत्यक्षः । तद्विपर्ययेणाविद्यारागद्वेषादिदोषमुक्तैरुपसृप्यङ्गम्यमेतदिति द्युभ्वाद्यायतनं

प्रकृत्य व्यपदेशो भवति । कथम्? 'भिद्यते हृदयग्रन्थिश्छिद्यन्ते सर्वसंशयाः । क्षीयन्ते चास्य कर्माणि तस्मिन् दृष्टे परावरे ।।' इत्युक्त्वा ब्रवीति 'तथा विद्वान्नामरूपाद् विमुक्तः परात्परं पुरुषमुपैति दिव्यम्' इति । ब्रह्मणश्च मुक्तोपसृप्यत्वं प्रसिद्धं शास्त्रे 'यदा सर्वे प्रमुच्यन्ते कामा येऽस्य हृदि श्रिताः । अथ मर्त्योऽमृतो भवत्यत्र ब्रह्म समश्नुते ।।' इत्येवमादौ । प्रधानादीनां तु न क्वचिन्मुक्तोपसृप्यत्वमस्ति प्रसिद्धम् । अपिच 'तमेवैकं जानथ आत्मानमन्या वाचो विमुञ्चथामृतस्यैष सेतुः' इति वाग्विमोकपूर्वकं विज्ञेयत्वमिह द्युभ्वाद्यातनस्योच्यते । तच्च श्रुत्यन्तरे ब्रह्मणो दृष्टम् 'तमेव धीरो विज्ञाय प्रज्ञां कुर्वीत ब्राह्मणः । नानुध्यायाद् बहून् शब्दान् वाचो विग्लापनं हि तत्' इति । तस्मादपि द्युभ्वाद्यायतनं परं ब्रह्म ।। २ ।।

नानुमानमतच्छब्दात् ।। ३ ।।

यथा ब्रह्मणः प्रतिपादको वैशेषिको हेतुरुक्तो नैवमर्थान्तरस्य वैशेषिको हेतुः प्रतिपादकोऽस्तीत्याह । नानुमानिकं साङ्ख्यस्मृतिपरिकल्पितं प्रधानमिह द्युभ्वाद्यायतनत्वेन प्रतिपत्तव्यम् । कस्मात्, अतच्छब्दात् । तस्याचेतनस्य प्रधानस्य प्रतिपादकः शब्दस्तच्छब्दः, न तच्छब्दोऽतच्छब्दः । नह्यत्राचेतनस्य प्रधानस्य प्रतिपादकः कश्चिच्छब्दोऽस्ति, येनाचेतनं प्रधानं कारणत्वेनायतनत्वेन वाऽवगम्येत । तद्विपरीतस्य चेतनस्य प्रतिपादकशब्दोऽत्रास्ति, 'यः सर्वज्ञः सर्ववित्' इत्यादिः । अत एव न वायुरपीह द्युभ्वाद्यातनत्वेनाश्रीयते ।। ३ ।।

प्राणभृच्च ।। ४ ।।

यद्यपि प्राणभृतो विज्ञानात्मन आत्मत्वं चेतनत्वं च सम्भवति, तथाप्युपाधिपरिच्छिन्नज्ञानस्य सर्वज्ञत्वाद्यसम्भवे सत्यस्मादेवातच्छब्दात् प्राणभृदपि न द्युभ्वाद्यायतनत्वेनाऽश्रयितव्यः । नचोपाधिपरिच्छिन्नस्याविभोः प्राणभृतो द्युभ्वाद्यायतनत्वमपि सम्यक् सम्भवति । पृथग्योगकरणमुत्तरार्थम् ।। ४ ।।

कुतश्च न प्राणभृद् द्युभ्वाद्यायतनत्वेनाश्रयितव्यः?

भेदव्यपदेशात् ।। ५ ।।

भेदव्यपदेशश्चेह भवति 'तमेवैकं जानथ आत्मानम्' इति ज्ञेयज्ञातृभावेन । तत्र प्राणभृत् तावन्मुमुक्षुत्वाज्ज्ञाता, परिशेषादात्मशब्दवाच्यं ब्रह्म ज्ञेयं द्युभ्वाद्यायतनमिति गम्यते, न प्राणभृत् ।। ५ ।।

कुतश्च न प्राणभृद् द्युभ्वाद्यायतनत्वेनाश्रयितव्यः?

प्रकरणात् ।। ६ ।।

प्रकरणं चेदं परमात्मनः । 'कस्मिन्नु भगवो विज्ञाते सर्वमिदं विज्ञातं भवति'

ಅದ್ವೈತಿಗಳ ಎರಡನೆಯ ಸೂತ್ರವ್ಯಾಖ್ಯಾನವೂ ಸಹ ಅಸಾಧುವಾಗಿದೆ.

೨. 'ಮುಕ್ತೋಪಸೃಪ್ಯವ್ಯಪದೇಶಾತ್' - ರಾಗದ್ವೇಷಾದಿಗಳಿಂದ ಮುಕ್ತನಾದವನಿಂದ ಬ್ರಹ್ಮನು ಜ್ಞೇಯನಾಗಿದ್ದಾನೆಂದು 'ಭಿದ್ಯತೇ ಹೃದಯಗ್ರಂಥಿಃ' ಎಂಬಲ್ಲಿ ಹೇಳಲಾಗಿದೆ. ಮತ್ತು 'ತಮೇವೈಕಂ ಜಾನಥ ಆತ್ಮಾನಮ್ ಅನ್ಯಾ ವಾಚೋ ವಿಮುಂಚತ' ಎಂಬುದಾಗಿ ಎಲ್ಲಾವಿಧ ಮಾತುಗಳನ್ನು ಬಿಟ್ಟು ಬ್ರಹ್ಮನನ್ನೇ ತಿಳಿಯಬೇಕೆಂದು ಹೇಳಲಾಗಿದೆ. ಹೀಗೆ ವಾಗ್ವಿಮೋಕತ್ವ ಪೂರ್ವಕವಾಗಿ ಜ್ಞೇಯತ್ವವನ್ನು ಹೇಳಿರುವುದರಿಂದಲೂ ಬ್ರಹ್ಮನೇ ದ್ಯುಭ್ವಾದ್ಯಾಯತನನಾಗಿದ್ದಾನೆ. ಅಥವಾ 'ತಥಾ ವಿದ್ವಾನ್ನಾಮರೂಪಾದ್ವಿಮುಕ್ತಃ ಪರಾತ್ಪರಂ ಪುರುಷಮುಪೈತಿ' ಎಂಬಲ್ಲಿ ಮುಕ್ತರಿಂದ

ಇತ್ಯೇಕವಿಜ್ಞಾನೇನ ಸರ್ವವಿಜ್ಞಾನಾಪೇಕ್ಷಣಾತ್ । ಪರಮಾತ್ಮನಿ ಹಿ ಸರ್ವಾತ್ಮಕೇ ವಿಜ್ಞಾತೇ ಸರ್ವಮಿದಂ ವಿಜ್ಞಾತಂ ಸ್ಯಾನ್ನ ಕೇವಲೇ ಪ್ರಾಣಭೃತಿ ।। ೬ ।।

ಕುತಶ್ಚ ಪ್ರಾಣಭೃದ್ ದ್ಯುಭ್ವಾದ್ಯಾಯತನತ್ವೇನಾಶ್ರಯಿತವ್ಯಃ?

ಸ್ಥಿತ್ಯದನಾಭ್ಯಾಂ ಚ ।। ೭ ।।

ದ್ಯುಭ್ವಾದ್ಯಾಯತನಂ ಚ ಪ್ರಕೃತ್ಯ 'ದ್ವಾ ಸುಪರ್ಣಾ ಸಯುಜಾ ಸಖಾಯಾ' ಇತ್ಯತ್ರ ಸ್ಥಿತ್ಯದನೇ ನಿರ್ದಿಶ್ಯೇತೇ । 'ತಯೋರನ್ಯಃ ಪಿಪ್ಪಲಂ ಸ್ವಾದ್ವತ್ತಿ' ಇತಿ ಕರ್ಮಫಲಾಶನಮ್, 'ಅನಶ್ನನ್ನನ್ಯೋऽಭಿಚಾಕಶೀತಿ' ಇತ್ಯೌದಾಸೀನ್ಯೇನಾವಸ್ಥಾನಂ ಚ । ತಾಭ್ಯಾಂ ಚ ಸ್ಥಿತ್ಯದನಾಭ್ಯಾಮೀಶ್ವರಕ್ಷೇತ್ರಜ್ಞೌ ತತ್ರ ಗೃಹ್ಯೇತೇ । ಯದಿ ಚೇಶ್ವರೋ ದ್ಯುಭ್ವಾದ್ಯಾಯತನತ್ವೇನ ವಿವಕ್ಷಿತಸ್ತತಸ್ತಸ್ಯ ಪ್ರಕೃತಸ್ಯೇಶ್ವರಸ್ಯ ಕ್ಷೇತ್ರಜ್ಞಾತ್ ಪೃಥಗ್ವಚನಮವಕಲ್ಪತೇ । ಅನ್ಯಥಾ ಹ್ಯಪ್ರಕೃತವಚನಮಾಕಸ್ಮಿಕಮಸಮ್ಬದ್ಧಂ ಸ್ಯಾತ್ । ನನು ತವಾಪಿ ಕ್ಷೇತ್ರಜ್ಞಸ್ಯೇಶ್ವರಾತ್ ಪೃಥಗ್ವಚನಮಾಕಸ್ಮಿಕಮೇವ ಪ್ರಸಜ್ಯೇತ । ನ, ತಸ್ಯಾವಿವಕ್ಷಿತತ್ವಾತ್ । ಕ್ಷೇತ್ರಜ್ಞೋ ಹಿ ಕರ್ತೃತ್ವೇನ ಭೋಕ್ತೃತ್ವೇನ ಚ ಪ್ರತಿಶರೀರಂ ಬುದ್ಧ್ಯಾದ್ಯುಪಾಧಿಸಮ್ಬದ್ಧೋ ಲೋಕತ ಏವ ಪ್ರಸಿದ್ಧೋ ನಾಸೌ ಶ್ರುತ್ಯಾ ತಾತ್ಪರ್ಯೇಣ ವಿವಕ್ಷ್ಯತೇ । ಈಶ್ವರಸ್ತ್ವಂ ಲೋಕತೋऽಪ್ರಸಿದ್ಧತ್ವಾಚ್ಛ್ರುತ್ಯಾ ತಾತ್ಪರ್ಯೇಣ ವಿವಕ್ಷ್ಯತ ಇತಿ ನ ತಸ್ಯಾಕಸ್ಮಿಕಂ ವಚನಂ ಯುಕ್ತಮ್ । 'ಗುಹಾಂ ಪ್ರವಿಷ್ಟಾವಾತ್ಮಾನೌ ಹಿ' ಇತ್ಯತ್ರಾಪ್ಯೇತದ್ ದರ್ಶಿತಮ್ । 'ದ್ವಾ ಸುಪರ್ಣಾ' ಇತ್ಯಸ್ಯಾಮೃಚೀಶ್ವರಕ್ಷೇತ್ರಜ್ಞಾವುಚ್ಯೇತೇ ಇತಿ । ಯದಾऽಪಿ ಪೈಙ್ಗ್ಯುಪನಿಷತ್ಕೃತೇನ ವ್ಯಾಖ್ಯಾನೇನಾಸ್ಯಾಮೃಚಿ ಸತ್ತ್ವಕ್ಷೇತ್ರಜ್ಞಾವುಚ್ಯೇತೇ, ತದಾऽಪಿ ನ ವಿರೋಧಃ ಕಶ್ಚಿತ್ । ಕಥಮ್? ಪ್ರಾಣಭೃದ್ಗೃಹ ಘಟಾದಿಚ್ಛಿದ್ರವತ್ ಸತ್ತ್ವಾದ್ಯುಪಾಧ್ಯಭಿಮಾನಿತ್ವೇನ ಪ್ರತಿಶರೀರಂ ಗೃಹ್ಯಮಾಣೋ ದ್ಯುಭ್ವಾದ್ಯಾಯತನಂ ನ ಭವತೀತಿ ನಿಷಿದ್ಧ್ಯತೇ । ಯಸ್ತು ಸರ್ವಶರೀರೇಷ್ವುಪಾಧಿಭಿರ್ವಿನೋಪಲಕ್ಷ್ಯತೇ, ಪರಮಾತ್ಮೈವ ಸ ಭವತಿ । ಯಥಾ ಘಟಾದಿಚ್ಛಿದ್ರಾಣಿ ಘಟಾದಿಭಿರುಪಾಧಿಭಿರ್ವಿನೋಪಲಕ್ಷ್ಯಮಾಣಾನಿ ಮಹಾಕಾಶ ಏವ ಭವನ್ತಿ । ತದ್ವತ್ ಪ್ರಾಣಭೃತಃ ಪರಸ್ಮಾದನ್ಯತ್ವಾನುಪಪತ್ತೇಃ ಪ್ರತಿಷೇಧೋ ನೋಪಪದ್ಯತೇ । ತಸ್ಮಾತ್ ಸತ್ತ್ವಾದ್ಯುಪಾಧ್ಯಭಿಮಾನಿನ ಏವ ದ್ಯುಭ್ವಾದ್ಯಾಯತನತ್ವಪ್ರತಿಷೇಧಃ । ತಸ್ಮಾತ್ಪರಮೇವ ಬ್ರಹ್ಮ ದ್ಯುಭ್ವಾದ್ಯಾಯತನಮ್ । ತದೇತತ್ 'ಅದೃಶ್ಯತ್ವಾದಿಗುಣಕೋ ಧರ್ಮೋಕ್ತೇಃ' ಇತ್ಯನೇನೈವ ಸಿದ್ಧಮ್ । ತಸ್ಯೈವ ಹಿ ಭೂತಯೋನಿತ್ವಾಕ್ಯಸ್ಯ ಮಧ್ಯ ಇದಂ ಪಠಿತಮ್ 'ಯಸ್ಮಿನ್ ದ್ಯೌಃ ಪೃಥಿವೀ ಚಾನ್ತರಿಕ್ಷಮ್' ಇತಿ । ಪ್ರಪಞ್ಚಾರ್ಥಂ ತು ಪುನರುಪನ್ಯಸ್ತಮ್ ।। ೭ ।।

ಪ್ರಾಪ್ಯನಾಗಿದ್ದಾನೆಂದು ಹೇಳಿರುವ ಕಾರಣದಿಂದಲೂ ಬ್ರಹ್ಮನೇ ದ್ಯುಭ್ವಾದ್ಯಾಯತನನಾಗಿದ್ದಾನೆಂದು ಸೂತ್ರಾರ್ಥ.

तन्न । निरुपपदस्य मुक्तशब्दस्य संसारान्मुक्ते प्रसिद्धत्वेन तत्त्यागायोगात् । उपपूर्वस्य सृपेः समीपप्राप्त्यर्थत्वेन ज्ञानार्थत्वायोगाच्च ।

ಇದು ತಪ್ಪು. ಯಾವುದೇ ಉಪಪದವಿಲ್ಲದೇ 'ಮುಕ್ತ' ಎಂಬ ಶಬ್ದವನ್ನು ಪ್ರಯೋಗಿಸಿದರೆ ಸಂಸಾರದಿಂದ ಮುಕ್ತನಾಗಿದ್ದಾನೆಂಬರ್ಥವನ್ನೇ ಸ್ವೀಕರಿಸಬೇಕೆಂಬುದು ಪ್ರಸಿದ್ಧವಾಗಿದೆ. ಅದನ್ನು ಬಿಟ್ಟು ರಾಗದ್ವೇಷಾದಿಗಳಿಂದ ಮುಕ್ತನಾಗಿದ್ದಾನೆಂದು ವ್ಯಾಖ್ಯಾನಿಸುವುದು ತಪ್ಪಾಗುತ್ತದೆ. ಮತ್ತು 'ಉಪ' ಎಂಬ ಉಪಸರ್ಗದಿಂದ ಕೂಡಿರುವ 'ಸೃಪ್' ಧಾತುವು ಸಮೀಪವನ್ನು ಹೊಂದಿದ ಎಂಬರ್ಥವನ್ನೇ ಹೇಳುತ್ತದೆ ಹೊರತು, ಜ್ಞಾನವೆಂಬರ್ಥವನ್ನು ಹೇಳುವುದಿಲ್ಲ. ಆದ್ದರಿಂದ ಉಪಪೂರ್ವಕವಾದ 'ಸೃಪ್' ಧಾತುವಿಗೆ ಜ್ಞಾನವೆಂಬರ್ಥವನ್ನು ಮಾಡಿದ್ದು ತಪ್ಪಾಗುತ್ತದೆ.

त्वन्मते ब्रह्मणो मुक्ताभेदेन तत्प्राप्त्यभावाच्च । सगुणमोक्षोक्तौ च पादासङ्गतिः ।

ಮತ್ತು ಅದ್ವೈತ ಮತದಲ್ಲಿ ಬ್ರಹ್ಮನು ಮುಕ್ತರಿಗಿಂತ ಅಭಿನ್ನನಾಗಿದ್ದಾನೆ. ಹೀಗಿರುವಾಗ ಮುಕ್ತನಾದವನು ಬ್ರಹ್ಮನನ್ನು ಹೊಂದುತ್ತಾನೆಂದು ಹೇಳುವುದು ತಪ್ಪಾಗುತ್ತದೆ. ಸಗುಣಬ್ರಹ್ಮನನ್ನು ಹೊಂದುತ್ತಾನೆಂದು ಹೇಳಿದರೆ ಈ ಪಾದದಲ್ಲಿ ಅದು ಅಸಂಗತವಾಗುತ್ತದೆ.

सौत्रमुक्तशब्दस्य श्रौतस्य 'नामरूपाद्विमुक्तः' इत्यस्यास्वारस्यं च ।

ಸಗುಣಬ್ರಹ್ಮನನ್ನು ಹೊಂದುತ್ತಾನೆಂದು ಹೇಳುವುದಾದರೆ ಸೂತ್ರದಲ್ಲಿರುವ ಮುಕ್ತಶಬ್ದವು ಹಾಗೂ ಶ್ರುತಿಯಲ್ಲಿರುವ 'ನಾಮರೂಪಾದ್ವಿಮುಕ್ತಃ' ಎಂಬ ಶಬ್ದವು ಅಸ್ವರಸವಾಗುತ್ತದೆ.

तृतीयसूत्रे अतच्छब्दो नाम तद्वाचकशब्दाभावश्चेन्निर्विशेषेऽपि समः । तल्लक्षकशब्दाभावस्तु प्रधानादावप्यसिद्ध इत्युक्तम् ।

೩. 'ನಾನುಮಾನಂ ಅತಚ್ಛಬ್ದಾತ್' - ಪ್ರಧಾನವನ್ನು ಪ್ರತಿಪಾದಿಸುವ ಶಬ್ದವಿಲ್ಲದ ಕಾರಣ ಲೋಕಾಧಾರವಾಗಿ ಪ್ರಧಾನವು ಪ್ರಸಕ್ತವಾಗಿಲ್ಲ.

ಹೀಗೆ ಮೂರನೆಯ ಸೂತ್ರವನ್ನು ಅದ್ವೈತಿಗಳು ವ್ಯಾಖ್ಯಾನಿಸುತ್ತಾರೆ. ಇದೂ ಸಹ ತಪ್ಪು. 'ಅತಚ್ಛಬ್ದಾತ್' ಎಂಬುದಕ್ಕೆ ಪ್ರಧಾನಪ್ರತಿಪಾದಕವಾದ ಶಬ್ದವಿರುವುದಿಲ್ಲವೆಂದು ವ್ಯಾಖ್ಯಾನಿಸುವುದಾದರೆ ನಿರ್ವಿಶೇಷನಲ್ಲಿಯೂ ಇದು ಸಮಾನವಾಗಿದೆ. ಪ್ರಧಾನವಾಚಕವಾದ ಶಬ್ದವು ಹೇಗಿಲ್ಲವೋ, ಅದರಂತೆ

ನಿರ್ವಿಶೇಷಬ್ರಹ್ಮವಾಚಕವಾದ ಶಬ್ದವೂ ಸಹ ಇಲ್ಲಿ ಇರುವುದಿಲ್ಲ. 'ಆತಚ್ಛಬ್ದಾತ್' ಎಂಬುದಕ್ಕೆ ಪ್ರಧಾನದಲ್ಲಿ ಲಕ್ಷಕವಾದ ಶಬ್ದವಿರುವುದಿಲ್ಲವೆಂದು ವ್ಯಾಖ್ಯಾನಿಸುವುದಾದರೆ ಇದು ಅಸಿದ್ಧವಾಗಿದೆ. ಲಕ್ಷಕಶಬ್ದಾಭಾವವು ನಿರ್ವಿಶೇಷಬ್ರಹ್ಮನಲ್ಲಿ ಅಸಿದ್ಧವಾದಂತೆ ಪ್ರಧಾನದಲ್ಲಿಯೂ ಸಹ ಅಸಿದ್ಧವೇ ಆಗಿದೆ.

ಚತುರ್ಥೆ ''ಯಃ ಸರ್ವಜ್ಞಃ'' ಇತ್ಯತಚ್ಛಬ್ದಾದಪಿ ಜೀವನಿಷೇಧಸ್ತರ್ಹಿ ನಿರ್ವಿಶೇಷಬ್ರಹ್ಮನಿಷೇಧೋಽಪಿ ಸ್ಯಾತ್ । ಸಾರ್ವಜ್ಞಸ್ಯ ಸವಿಶೇಷನಿಷ್ಠತ್ವಾತ್ ।

೪. 'ಜ್ಞಾಜಾಭ್ಯಾಂ' - ಸರ್ವಜ್ಞತ್ವವು ಕೇಳಿಸುತ್ತಿರುವುದರಿಂದಲೇ ಜೀವಾತ್ಮನು ಲೋಕಾಧಾರನಾಗುವುದಿಲ್ಲ.

ಈ ರೀತಿಯ ಅದ್ವೈತಿಗಳ ನಾಲ್ಕನೆಯ ಸೂತ್ರವ್ಯಾಖ್ಯಾನವೂ ಸಹ ಅಸಾಧುವಾಗಿದೆ. ಏಕೆಂದರೆ 'ಯಃ ಸರ್ವಜ್ಞಃ' ಎಂಬಲ್ಲಿ 'ಸರ್ವಜ್ಞ' ಶಬ್ದವು ಕೇಳಿಸುತ್ತಿರುವುದರಿಂದ ಜೀವನನ್ನು ನಿಷೇಧ ಮಾಡುವುದಾದರೆ ನಿರ್ವಿಶೇಷಬ್ರಹ್ಮನನ್ನೂ ಸಹ ನಿಷೇಧ ಮಾಡಬೇಕು. ಏಕೆಂದರೆ ಸರ್ವಜ್ಞತ್ವವು ಸವಿಶೇಷಬ್ರಹ್ಮನಲ್ಲಿ ಮಾತ್ರವಿದೆ ಹೊರತು, ನಿರ್ವಿಶೇಷ ಬ್ರಹ್ಮನಲ್ಲಿ ಇರುವುದಿಲ್ಲ.

ಪಞ್ಚಮೇ ಭೇದವ್ಯಪದೇಶೋ ನಾಮ ''ತಮೇವೈಕಂ ಜಾನಥ'' ಇತಿ ಕರ್ಮಕರ್ತೃವ್ಯಪದೇಶ ಇತ್ಯಪ್ಯಯುಕ್ತಮ್ । 'ಅನ್ಯಮೀಶಮ್' ಇತಿ ಸಾಕ್ಷಾದ್ಭೇದವ್ಯಪದೇಶೇ ಸತಿ ಭೇದಕವ್ಯಪದೇಶ-ಗ್ರಹಣಾಯೋಗಾತ್ ।

೫. 'ಭೇದವ್ಯಪದೇಶಾತ್' - 'ತಮೇವೈಕಂ ಜಾನಥ' ಎಂಬುದಾಗಿ ಯಾರು ಲೋಕಕ್ಕೆ ಆಧಾರನಾಗಿದ್ದಾನೋ ಅವನು ಜ್ಞೇಯನಾಗಿದ್ದಾನೆಂದು ಹೇಳಿರುವುದರಿಂದ ಮತ್ತು ಜೀವನು ಜ್ಞಾತೃವಾಗಿದ್ದಾನೆಂದು ಹೇಳಿರುವುದರಿಂದ ಜೀವನೇ ಲೋಕಾಧಾರನಾಗಲು ಸಾಧ್ಯವಿಲ್ಲ.

ಇದು ಎರಡನೆಯ ಸೂತ್ರಕ್ಕೆ ಅದ್ವೈತಿಗಳ ವ್ಯಾಖ್ಯಾನ. ಇದೂ ಸಹ ತಪ್ಪು. 'ಅನ್ಯಮೀಶಮ್' ಎಂಬುದಾಗಿ ಶ್ರುತಿಯು ಭೇದವನ್ನು ನೇರವಾಗಿಯೇ ಹೇಳುತ್ತಿದೆ. ಇದನ್ನು ಬಿಟ್ಟು ಭೇದಕವ್ಯಪದೇಶನ್ನು ಹೇಳುವುದು ತಪ್ಪಾಗುತ್ತದೆ. ಅಂದರೆ ನೇರವಾದ ಭೇದವನ್ನು ವಿವಕ್ಷಿಸದೇ ಅರ್ಥಾತ್ ತಿಳಿಯುವ ಭೇದವನ್ನು ವಿವಕ್ಷಿಸುವುದು ಅಸಾಧುವಾಗಿದೆ.

ಏವಂ ಸೂತ್ರಾನ್ತರೇಽಪ್ಯನುಪಪತ್ತಿರೂಹ್ಯಾ ।

ಹಿಂದೆ ಹೇಳಿದ ಕ್ರಮದಲ್ಲಿಯೇ ಬೇರೆ ಸೂತ್ರಗಳಲ್ಲಿರುವ ಅನುಪಪತ್ತಿಯನ್ನು ಚಿಂತನೆ ಮಾಡಿ ತಿಳಿದುಕೊಳ್ಳಬೇಕು. ಅದು ಹೀಗಿದೆ -

೬. 'ಪ್ರಕರಣಾತ್' - 'ತಸ್ಮಿನ್ ಭಗವತೋ ವಿಜ್ಞಾತೇ ಸರ್ವವಿದಂ ವಿಜ್ಞಾತಂ ಭವತಿ' ಎಂದು ಉಪನಿಷತ್ತಿನ ಪ್ರಾರಂಭದಲ್ಲಿ ಲೋಕಾಧಾರನಾಗಿರುವನನ್ನು ಬ್ರಹ್ಮನೆಂದು ಹೇಳಲಾಗಿದೆ. ಆದ್ದರಿಂದ ಅವನೇ ಲೋಕಾಧಾರನು.

೭. 'ಸ್ಥಿತ್ಯದನಾಭ್ಯಾಂ ಚ' - 'ಪಿಪ್ಪಲಂಸ್ವಾದುಅತ್ತಿ' ಎಂಬುದಾಗಿ ಕರ್ಮಫಲಭೋಗವನ್ನು ಜೀವನಲ್ಲಿ; 'ಅನಶ್ನನ್‌ಅನ್ಯಃ' ಎಂಬುದಾಗಿ ಕರ್ಮಫಲ ಅಭೋಗವನ್ನು ಬ್ರಹ್ಮನಲ್ಲಿ ಹೇಳುವ ಮೂಲಕ ವಿರುದ್ಧ ಧರ್ಮಗಳನ್ನು ಶ್ರುತಿಯು ತಿಳಿಸುತ್ತಿದೆ. ಬ್ರಹ್ಮನಲ್ಲಿ ಹೀಗೆ ಜೀವನ ಭೇದವನ್ನು ಹೇಳಿರುವುದರಿಂದ ಬ್ರಹ್ಮನು ಪ್ರಸಕ್ತನಾಗಲೇಬೇಕು. ಹೀಗೆ ಪ್ರಸಕ್ತನಾದ ಬ್ರಹ್ಮನನ್ನೇ ದ್ಯುಭ್ವಾದ್ಯಾಯತನನೆಂದು ಶ್ರುತಿ ಹೇಳುತ್ತಿದೆ. ಈ ಕ್ರಮದ ಅದ್ವೈತಿಗಳ ಈ ಎರಡೂ ಸೂತ್ರಗಳ ವ್ಯಾಖ್ಯಾನವೂ ಸಹ ಅಸಾಧುವಾಗಿದೆ. 'ಪ್ರಕರಣಾತ್' ಎಂಬುದು ಅದ್ವೈತ ಮತದಲ್ಲಿ ಪ್ರಧಾನ ಹೇತುವಾಗಿರುವುದರಿಂದ 'ಚ' ಶಬ್ದವನ್ನು ಹೇಳಬೇಕಿತ್ತು. ಮತ್ತು ಏಳನೆಯ ಸೂತ್ರದಲ್ಲಿ ಭೇದಕಧರ್ಮವನ್ನೇ ಪುನಃ ಹೇಳಿದ್ದರಿಂದ 'ಭೇದವ್ಯಪದೇಶಾತ್' ಎಂಬ ಸೂತ್ರದಿಂದ ಪುನರುಕ್ತಿಯು ಬರುತ್ತದೆ.

अत्रापि परमतेऽपि ''भेदव्यपदेशात्'' इत्यनेन जीवब्रह्मभेदोक्तेः ''मुक्तोपसृप्य-व्यपदेशात्'' इत्यनेन मुक्तावपि भेदोक्तेश्चाभेदप्रतिकूलता व्यक्ता ।

ಪ್ರತಿಯೊಂದು ಅಧಿಕರಣಗಳಂತೆ ಈ ಅಧಿಕರಣದಲ್ಲಿಯೂ ಅದ್ವೈತಿಗಳು ಭೇದಸ್ಥಾಪನೆಯನ್ನೇ ಮಾಡಿದ್ದಾರೆ. 'ಭೇದವ್ಯಪದೇಶಾತ್' ಎಂಬ ಸೂತ್ರದಿಂದ ಜೀವಬ್ರಹ್ಮಭೇದವನ್ನು ಹೇಳಿರುವುದರಿಂದ 'ಮುಕ್ತೋಪಸೃಪ್ಯವ್ಯಪದೇಶಾತ್' ಎಂಬ ಸೂತ್ರದಿಂದಲೂ ಮುಕ್ತಿಯಲ್ಲಿಯೂ ಜೀವಬ್ರಹ್ಮರಿಗೆ ಭೇದವಿರುತ್ತದೆಂದು ಹೇಳಿರುವುದರಿಂದ ಅವರ ಅಭೇದವಾದಕ್ಕೆ ಈ ಅಧಿಕರಣವು ಪ್ರತಿಕೂಲವೇ ಆಗಿದೆ.

प्रकाशः —

अन्येत्विति ।।

'पारवत्त्वेन सेतुत्वाद्भेदे षष्ठ्याः प्रयोगतः ।
द्युभ्वाद्यायतनं युक्तं नामृतं ब्रह्म कर्हिचित् ।।'

इति भामत्युक्तमनुवदति ।। — अमृतस्यैष सेतुरिति ।।

ವಿವರಣೆ - ಶಾಂಕರಭಾಷ್ಯದ ಅಧಿಕರಣ ಶರೀರವನ್ನು 'ಅನ್ಯೇತು' ಇತ್ಯಾದಿ ಗ್ರಂಥದಿಂದ ಅನುವಾದ ಮಾಡುತ್ತಿದ್ದಾರೆ. 'ಪಾರವತ್ತ್ವೇನ ಸೇತುತ್ವಾದ್ಭೇದೇ ಷಷ್ಠ್ಯಾಃ ಪ್ರಯೋಗತಃ । ದ್ಯುಭ್ವಾದ್ಯಾಯತನಂ ಯುಕ್ತಂ ನಾಮೃತಂ ಬ್ರಹ್ಮ ಕರ್ಹಿಚಿತ್ ॥' ಮಿತಿಯಿರುವ ಪದಾರ್ಥವೇ ಸೇತುವೆನಿಸುತ್ತದೆ. ಮಿತಿ ಇರುವ ಬ್ರಹ್ಮನು ಅಮೃತಕ್ಕೆ ಸೇತುವಾಗಲು ಸಾಧ್ಯವಿಲ್ಲ. (ಮಿತಿ ಇರದ ಅಮೃತಕ್ಕೆ ಸೇತುವಾಗಲು ಸಾಧ್ಯವಿಲ್ಲ.) ಮತ್ತು 'ಅಮೃತಸ್ಯ' ಎಂಬಲ್ಲಿ ಭೇದಾರ್ಥದಲ್ಲಿ ಷಷ್ಠೀವಿಭಕ್ತಿಯನ್ನು ಪ್ರಯೋಗಿಸಲಾಗಿದೆ. ಅಮೃತಸ್ವರೂಪನಾದ

ब्रह्मನು ಅಮೃತಕ್ಕಿಂತ ಭಿನ್ನನಾದ ಸೇತುವೆನಿಸಲು ಸಾಧ್ಯವಿಲ್ಲ. ಆದ್ದರಿಂದ ದ್ಯುಭ್ವಾದ್ಯಾಯತನನಾದವನು ಬ್ರಹ್ಮನಾಗುವುದಿಲ್ಲ. ಹೀಗೆ ಭಾಮತಿಯಲ್ಲಿ ಹೇಳಿದ್ದನ್ನು 'ಅಮೃತಸ್ಯೈಷ ಸೇತುಃ' ಎಂಬ ವಾಕ್ಯದಿಂದ ಸಂಗ್ರಹಿಸುತ್ತಿದ್ದಾರೆ.

ಪ್ರಕಾಶಃ – ಭಾಷ್ಯೋಕ್ತಕೋಟೀರಾಹ – ರುದ್ರೇತಿ ।। ಆದಿಪದೇನ ಹಿರಣ್ಯಗರ್ಭಃ ।

'धारणादमृतत्वस्य साधनाद्वाऽस्य सेतुता ।
पूर्वपक्षेऽपि मुख्यार्थस्सेतुशब्दो हि नेष्यते ।।'

ಇತಿ ಭಾಮತೀಂ ಹೃದಿ ಕೃತ್ವಾ ಸಿದ್ಧಾನ್ತಮನುವದತಿ – ಪ್ರಧಾನಾದೇರಪೀತಿ ।।

ಶಾಂಕರ ಭಾಷ್ಯದಲ್ಲಿ ಹೇಳಲ್ಪಟ್ಟ ಪೂರ್ವಪಕ್ಷ ಕೋಟಿಗಳನ್ನು 'ರುದ್ರ' ಇತ್ಯಾದಿ ವಾಕ್ಯದಿಂದ ಹೇಳಿದ್ದಾರೆ. ಆದಿಪದದಿಂದ ಹಿರಣ್ಯಗರ್ಭನೆಂಬ ಪಕ್ಷವನ್ನು ಸ್ವೀಕರಿಸಬೇಕು. ಭಾಮತಿಯಲ್ಲಿ ಸಿದ್ಧಾಂತದ ಸಂಗ್ರಹ ಹೀಗಿದೆ- 'ಧಾರಣಾದಮೃತತ್ವಸ್ಯ ಸಾಧನಾದ್ವಾऽಸ್ಯ ಸೇತುತಾ । ಪೂರ್ವಪಕ್ಷೇऽಪಿ ಮುಖ್ಯಾರ್ಥಸ್ಸೇತುಶಬ್ದೋ ಹಿ ನೇಷ್ಯತೇ ॥' ಮೂಲದಲ್ಲಿ ಭಾವಪ್ರಧಾನ ನಿರ್ದೇಶ ಮಾಡಿದಾಗ 'ಅಮೃತತ್ವ' ಎಂದಾಗುತ್ತದೆ. ಮುಕ್ತರಿಗೆ ಧಾರಕನಾದ್ದರಿಂದ ಅಥವಾ ಮೋಕ್ಷಕ್ಕೆ ಹೇತುವಾದ್ದರಿಂದ ಬ್ರಹ್ಮನು 'ಅಮೃತಸ್ಯ ಸೇತುಃ' ಎಂದೆನಿಸುತ್ತಾನೆ. ಪೂರ್ವಪಕ್ಷದಲ್ಲಿಯೂ ಸಹ 'ಸೇತು' ಶಬ್ದಕ್ಕೆ ಮುಖ್ಯಾರ್ಥವನ್ನು ಒಪ್ಪುವುದಿಲ್ಲ. ಆದರಂತೆ ಸಿದ್ಧಾಂತದಲ್ಲಿಯೂ ಸಹ ಮುಖ್ಯಾರ್ಥವನ್ನು ಹೇಳದಿರುವುದೇನೂ ತಪ್ಪಾಗುವುದಿಲ್ಲ.

ಭಾಮತಿಯ ಈ ಮಾತನ್ನು ಮನಸ್ಸಿನಲ್ಲಿಟ್ಟುಕೊಂಡು ಸಿದ್ಧಾಂತವನ್ನು ಅನುವಾದ ಮಾಡುತ್ತಿದ್ದಾರೆ. 'ಪ್ರಧಾನಾದೇರಪಿ' ಇತ್ಯಾದಿ ವಾಕ್ಯದಿಂದ.

ಪ್ರಕಾಶಃ – ಜೀವಾದಾವಿತಿ ।। ಅಮೃತಪದೋಕ್ತಬ್ರಹ್ಮ ಪ್ರತಿ ಸೇತುತ್ವಸ್ಯ ಜೀವಾದಾವಪಿ ದುರ್ವಚತ್ವಾದಿತ್ಯರ್ಥಃ । ನಿರವಕಾಶವಿರೋಧಿಲಿಙ್ಗಸ್ಯ ಜಾಗರೂಕತ್ವಾನ್ನ ಸಿದ್ಧಾನ್ತೋದಯ ಇತಿ ಭಾವೇನಾಹ – ಸಿದ್ಧಾನ್ತ ಇತಿ ।।

ಅಮೃತ ಪದದಿಂದ ಬ್ರಹ್ಮನು ಪ್ರತಿಪಾದ್ಯನಾದರೆ ಅವನನ್ನು ಕುರಿತು ಸೇತುತ್ವವನ್ನು ಜೀವನಲ್ಲಿಯೂ ಸಹ ಹೇಳಲು ಸಾಧ್ಯವಿಲ್ಲ. ಅಮೃತಸ್ವರೂಪನೇ ಆಗದ ಜೀವನು ಅಮೃತಧಾರಕನಾಗಲು ಹೇಗೆ ಸಾಧ್ಯ ? ಮತ್ತು ಜಾಯಮಾನತ್ವವೆಂಬ ನಿರವಕಾಶವಾದ, ವಿರೋಧಿಯಾದ ಜೀವನ ಲಿಂಗವು ಜಾಗರೂಕವಾಗಿರಬೇಕಾದರೆ ಸಿದ್ಧಾಂತದ ಉದಯವಾಗಲು ಹೇಗೆ ಸಾಧ್ಯ ? ಈ ಅಭಿಪ್ರಾಯದಿಂದ 'ಸಿದ್ಧಾಂತಃ' ಎಂಬ ವಾಕ್ಯವು ಹೊರಟಿದೆ.

ಪ್ರಕಾಶಃ – ಯದಪ್ಯಮೃತತ್ವಾಧಾರತ್ವಾದಮೃತಸೇತುತ್ವಂ ಬ್ರಹ್ಮಣಿ ಯುಕ್ತಮಿತಿ ತತ್ರ ಕಿಮಿದಮಮೃತತ್ವಮ್ । ''ಅವಿದ್ಯಾಸ್ತಮಯೋ ಮೋಕ್ಷಸ್ಸಾ ಸಂಸಾರ ಉದಾಹೃತಃ''

ಇತ್ಯುಕ್ತೇರವಿದ್ಯಾನಿವೃತ್ತಿರಿತಿ ಚೇತ್ಸಾ ಕಿಂ ಸತ್ಯಾऽಥ ''ನ ಸನ್ನಾಸನ್ನಸದಸನ್ನಾನಿರ್ವಾಚ್ಯಶ್ಚ ತತ್ಕ್ಷಯಃ'' ಇತ್ಯುಕ್ತೇಃ ಪಞ್ಚಮಪ್ರಕಾರಾ । ಆಽಽದ್ಯೇ ದೋಷಮಾಹ – ಸತ್ಯಸ್ಯೇತಿ ।।

ಅಮೃತಸೇತುತ್ವವನ್ನು ಸಿದ್ಧಾಂತದಲ್ಲಿ ಅಮೃತತ್ವದ ಆಧಾರನಾಗಿದ್ದಾನೆಂಬ ಕಾರಣದಿಂದ ಬ್ರಹ್ಮನಲ್ಲಿ ಯುಕ್ತವಾಗುತ್ತದೆಂದು ಅದ್ವೈತಿಗಳು ಹೇಳಿದರು. ಇಲ್ಲಿರುವ ಅಮೃತತ್ವವೆಂದರೇನು? 'ಅವಿದ್ಯಾಸ್ತಮಯೋ ಮೋಕ್ಷಸ್ತಾ ಸಂಸಾರ ಉದಾಹೃತಃ' ಎಂದು ಹೇಳಿರುವಂತೆ ಅವಿದ್ಯಾನಿವೃತ್ತಿ ರೂಪ ಎನ್ನುವುದಾದರೆ ಅದು ಸತ್ಯವೋ? ಅಥವಾ 'ನ ಸನ್ನಾಸನ್ನ ಸದಸನ್ನಾನಿರ್ವಾಚ್ಯಶ್ಚ ತತ್ಕ್ಷಯಃ' ಎಂಬಂತೆ ಪಂಚಮಪ್ರಕಾರ ರೂಪವೋ? ಎಂದು ವಿಕಲ್ಪ. ಇಲ್ಲಿ ಪ್ರಥಮ ಪಕ್ಷದಲ್ಲಿ 'ಸತ್ಯಸ್ಯ' ಎಂಬ ವಾಕ್ಯದಿಂದ ದೋಷವನ್ನು ಹೇಳುತ್ತಿದ್ದಾರೆ.

ಪ್ರಕಾಶಃ – ದ್ವಿತೀಯೇऽಪ್ಯವಿದ್ಯಾ ಕಿಂ ಭಾಮತೀರೀತ್ಯಾ ಜೀವಾಶ್ರಿತಾऽಥ ವಿವರಣರೀತ್ಯಾ ಚಿನ್ಮಾತ್ರಾಶ್ರಿತೇತಿ । ಆಽಽದ್ಯೇ ದೋಷೋ – ಮುಕ್ತಿರಿತಿ । ದ್ವಿತೀಯೇऽಪಿ ಕಿಂ ಬನ್ಧೋ ಜೀವಾಶ್ರಿತಶ್ಚಿನ್ಮಾತ್ರಾಶ್ರಿತೋ ವಾ ।

ಎರಡನೆಯ ಪಕ್ಷದಲ್ಲಿಯೂ ಸಹ ಅವಿದ್ಯೆಯು ಭಾಮತೀಮತ ಪ್ರಕಾರ ಜೀವಾಶ್ರಿತವೋ? ಅಥವಾ ವಿವರಣಗ್ರಂಥದ ಪ್ರಕಾರ ಚಿನ್ಮಾತ್ರಾಶ್ರಿತವೋ? ಪ್ರಥಮಪಕ್ಷದಲ್ಲಿ 'ಮುಕ್ತಿಃ' ಎಂಬುದರಿಂದ ದೋಷವನ್ನು ಹೇಳಿದ್ದಾರೆ. ಎರಡನೆಯ ಪಕ್ಷದಲ್ಲಿಯೂ ಬಂಧವು ಜೀವಾಶ್ರಿತವೋ? ಅಥವಾ ಚಿನ್ಮಾತ್ರಾಶ್ರಿತವೋ?

ಪ್ರಕಾಶಃ – ಆಽಽದ್ಯೇ ದೋಷಃ **ಚಿನ್ಮಾತ್ರಾಶ್ರಿತೇತಿ** । ಅನ್ಯಥಾ ಬನ್ಧಮೋಕ್ಷಯೋಸ್ಸಾಮಾನಾಧಿಕರಣ್ಯಂ ನ ಸ್ಯಾದಿತಿ ಭಾವಃ । ದ್ವಿತೀಯೇ ದೋಷೋ – **ಬನ್ಧಸ್ಯಾಪೀತಿ** ।।

ಪ್ರಥಮ ಪಕ್ಷದಲ್ಲಿ 'ಚಿನ್ಮಾತ್ರಾಶ್ರಿತ' ಎಂಬ ವಾಕ್ಯದಿಂದ ದೋಷ ಹೇಳಿದ್ದಾರೆ. ಬಂಧವನ್ನು ಜೀವಾಶ್ರಿತವೆಂದು ಹೇಳಿದರೆ ಬಂಧ ಹಾಗೂ ಮೋಕ್ಷಗಳಿಗೆ ಸಾಮಾನಾಧಿಕರಣ್ಯವೇ ಕೂಡದಿರಬೇಕಾದೀತು. ಚಿನ್ಮಾತ್ರಾಶ್ರಿತ ಎಂಬ ಎರಡನೇ ಪಕ್ಷಕ್ಕೆ 'ಬಂಧಸ್ಯಾಪಿ' ಎಂಬುದರಿಂದ ದೋಷ ಹೇಳಿದ್ದಾರೆ.

ಪ್ರಕಾಶಃ – **ಶ್ಯಾಮತ್ವೇತಿ** ।। ಪ್ರತಿಮುಖಾದಾವಿತಿ ಶೇಷಃ । ಯಚ್ಚ ಯದ್ವೇತ್ಯಾದಿನೋಕ್ತಂ ತನ್ನಿರಾಹ – **ಯಚ್ಚೇತಿ** ।।

ಗ್ರಂಥದಲ್ಲಿ 'ಶ್ಯಾಮತ್ವಾದಿವತ್' ಎಂದು ಹೇಳಿದ್ದಾರೆ. ಇಲ್ಲಿ 'ಪ್ರತಿಮುಖಾದೌ' ಎಂಬುದನ್ನು ಶೇಷಪೂರ್ಣ ಮಾಡಿಕೊಳ್ಳಬೇಕು. ಆಂದರೆ ಶ್ಯಾಮತ್ವಾದಿಗಳು ಪ್ರತಿಬಿಂಬದಲ್ಲಷ್ಟೇ ಕಾಣಿಸುತ್ತದೆ ಎಂದರ್ಥ. ಇನ್ನು ಅದ್ವೈತಿಗಳು 'ಯದ್ವಾ' ಇತ್ಯಾದಿ ವಾಕ್ಯಗಳಿಂದ ಎರಡನೆಯ ಬಗೆಯ ಸಿದ್ಧಾಂತವನ್ನು ಸಮರ್ಥಿಸಿದ್ದರು- ಅದನ್ನು 'ಯಚ್ಚ' ಎಂಬ ವಾಕ್ಯದಿಂದ ನಿರಾಕರಿಸುತ್ತಿದ್ದಾರೆ.

ಪ್ರಕಾಶಃ – **ಶ್ರುತ್ಯನ್ತರ ಇತಿ** ।। ವಾಜಸನೇಯೇ ''ಯ ಏಷೋನ್ತರ್ಹೃದಯ ಆಕಾಶಸ್ತಸ್ಮಿನ್ ಶೇತೇ । ಸರ್ವಸ್ಯ ವಶೀ'' ಇತ್ಯುಕ್ತ್ವಾ ''ಏಷ ಸರ್ವೇಶ್ವರ ಏಷ ಭೂತಾಧಿಪತಿರೇಷ ಭೂತಪಾಲ ಏಷ

सेतुर्विधरण एषां लोकानामसम्भेदाय'' इति वाक्ये 'एषः' इत्येतच्छब्दस्य प्रकृतब्रह्मपरत्वं स्पष्टमेवेति भावेन प्रसिद्धेत्युक्तम् ।

'श्रुत्यंतरे' ಎಂದರೆ ಬೃಹದಾರಣ್ಯಕದಲ್ಲಿ ಹೇಳಲ್ಪಟ್ಟ 'य एषोऽन्तर्हृदये आकाशस्तस्मिन् शेते। सर्वस्य वशे' ಎಂಬ ವಾಕ್ಯದ ಅನಂತರ 'एष सर्वेश्वरः एष भूताधिपतिरेष भूतपाल एष सेतुर्विधरण एषाम् लोकानामसंभेदाय' ಎಂಬ ವಾಕ್ಯದಲ್ಲಿ 'एषः' ಎಂಬ 'एतत्' ಶಬ್ದದಿಂದ ಬ್ರಹ್ಮನೇ ಪ್ರಕೃತನಾಗಿದ್ದಾನೆಂದು ಸ್ಪಷ್ಟವಾಗುತ್ತದೆ. ಈ ಅಭಿಪ್ರಾಯದಿಂದ ಗ್ರಂಥದಲ್ಲಿ 'ಪ್ರಸಿದ್ಧ' ಎಂದು ಹೇಳಿದ್ದಾರೆ.

प्रकाशः – तत्र यद्यपि विधरण इत्येव पाठस्तथापि दहरनये ''धृतेश्च महिम्न'' इति सूत्रे भाष्योक्तश्रुत्यन्तरोक्तिरियमिति ध्येयम् ।

ಪ್ರಶ್ನೆ - ಬೃಹದಾರಣ್ಯಕದಲ್ಲಿ 'विधरणः' ಎಂದೇ ಪಾಠವಿದೆ. ಆದರೆ ಗ್ರಂಥಕಾರರು 'विधृतिः' ಎಂದೇಕೆ ಹೇಳಿದ್ದಾರೆ ?

ಉತ್ತರ - ದಹರಾಧಿಕರಣದಲ್ಲಿ 'धृतेश्च महिम्नः' ಎಂಬ ಸೂತ್ರದ ಭಾಷ್ಯದಲ್ಲಿ 'एषस्सेतुर्विधृतिः' ಎಂಬ ಮತ್ತೊಂದು ಶ್ರುತಿಯನ್ನು ಹೇಳಿದ್ದಾರೆ. ಆದ್ದರಿಂದ 'एषस्सेतुर्विधृतिः' ಎಂಬ ವಾಕ್ಯವೇ ಬೇರೆ ಶಾಖೆಯಲ್ಲಿದೆ. ಅದನ್ನುನುಸರಿಸಿ ಬೇರೆ ಶ್ರುತಿಯನ್ನು ಇಲ್ಲಿ ಉದಾಹರಿಸಲಾಗಿದೆ. ಆದ್ದರಿಂದ 'य सर्वेश्वरः' ಎಂಬ ವಾಕ್ಯವೇ ಬೇರೆ ಶಾಖೆಯಲ್ಲಿದೆ ಆದ್ದರಿಂದ ಪಾಠದ ವಿರೋಧವೂ ಬರುವುದಿಲ್ಲ.

प्रकाशः – अस्यामेव आथर्वण एव । तच्छब्देनेति ।। 'तमेवैकम्' इत्यत्र तमित्यनेनेत्यर्थः ।

'अस्यामेव' ಎಂದರೆ ಆಥರ್ವಣದಲ್ಲಿಯೇ ಎಂದರ್ಥ. 'तच्छब्देन' ಎಂದರೆ 'तमेवैकम्' ಎಂಬ ಶ್ರುತಿಯಲ್ಲಿರುವ 'तम्' ಎಂಬ ಪದದಿಂದ ಎಂದರ್ಥ.

प्रकाशः – ननु तमित्यस्य जानयेति ज्ञानवाचिना व्यवहितत्वाज्ज्ञानमेव परामृश्यत इत्यत आह – आत्मशब्देन चेति ।। सूत्रार्थानपि निराह – किञ्चेति ।।

'तमेवैकम्' ಎಂಬಲ್ಲಿ 'तम्' ಎಂಬ ಪದದಿಂದ 'ಜಾನಥ' ಎಂಬ ಜ್ಞಾನವಾಚಿಯಾದ ಪದವು ವ್ಯವಹಿತವಾದ ಕಾರಣ ಜ್ಞಾನವನ್ನೇ ಪರಾಮರ್ಶಿಸಬೇಕಲ್ಲವೇ? ಎಂಬ ಪ್ರಶ್ನೆಗೆ 'आत्मशब्देन' ಎಂಬುದರಿಂದ ಉತ್ತರಿಸಿದ್ದಾರೆ. ಅದ್ವೈತಿಗಳ ಅಧಿಕರಣಶರೀರವನ್ನು ನಿರಾಕರಿಸಿ ಅವರ ಸೂತ್ರವ್ಯಾಖ್ಯಾನವನ್ನೂ ಸಹ ನಿರಾಕರಿಸುತ್ತಿದ್ದಾರೆ 'किंच' ಇತ್ಯಾದಿ ವಾಕ್ಯದಿಂದ.

प्रकाशः – अस्य पादस्य निर्विशेषपरत्वाभ्युपगमेन तत्र द्युभ्वाद्यायतनत्वस्यारोपाधिष्ठानत्वादन्यस्याभावादिति भावः ।

ಅದ್ವೈತಮತ ಪ್ರಕಾರ ಮೂರನೆಯ ಪಾದವು ನಿರ್ವಿಷಯಬ್ರಹ್ಮಪ್ರತಿಪಾದಕವಾಗಿದೆ. ಆದ್ದರಿಂದ ದ್ಯುಭ್ವಾದ್ಯಾಯತನತ್ವವನ್ನು ಬ್ರಹ್ಮನ ಧರ್ಮವೆಂದು ಅವರಿಂದ ಸಮರ್ಥಿಸಲಾಗದು. ಹೊರತಾಗಿ ದ್ಯುಭ್ವಾದ್ಯಾಯತನತ್ವವೆಂಬ ಧರ್ಮದ ಆರೋಪಕ್ಕೆ ಬ್ರಹ್ಮನು ಅಧಿಷ್ಠಾನನಾಗಿದ್ದಾನೆಂದು ಹೇಳಬೇಕು. ಹೀಗೇನಾದರೂ ಅದ್ವೈತಿಗಳು ಹೇಳಿದರೆ ಶ್ರುತಿಯಲ್ಲಿರುವ ಓತತ್ವ ಹಾಗೂ ಸೂತ್ರದಲ್ಲಿರುವ ಆಯತನ ಎಂಬ ಶಬ್ದವು ಅಸಿದ್ಧವಾಗುತ್ತದೆ.

ಪ್ರಕಾಶಃ – प्रतिज्ञाभागं निरस्य हेत्वंशं निराह – यच्चेति । एतेनाऽत्मश्रुति-तात्पर्यविषयत्वमात्रं हेतुरिति प्रत्युक्तम् । शब्दवृत्तिविषयत्वपूर्वकत्वात्तस्य । प्रधानादावपि सम्भवाच्च ।

'ದ್ಯುಭ್ವಾದ್ಯಾಯತನಮ್' ಎಂಬ ಪ್ರತಿಜ್ಞಾಭಾಗಕ್ಕೆ ಅದ್ವೈತಿಗಳ ವ್ಯಾಖ್ಯಾನವನ್ನು ನಿರಾಕರಿಸಿ 'ಸ್ವಶಬ್ದಾತ್' ಎಂಬ ಹೇತುವಿನ ಭಾಗಕ್ಕೆ ಮಾಡುವ ಅವರ ವ್ಯಾಖ್ಯಾನವನ್ನು 'ಯಚ್ಚ' ಇತ್ಯಾದಿ ವಾಕ್ಯದಿಂದ ನಿರಾಕರಿಸುತ್ತಿದ್ದಾರೆ. ಹೀಗೆ ಹೇಳಿದ್ದರಿಂದ ಮತ್ತೊಂದು ಅವರ ಕಲ್ಪನೆಯನ್ನು ನಿರಾಕರಿಸಿದಂತಾಯಿತು. ಆತ್ಮಶ್ರುತಿಯು ಶಕ್ತಿವೃತ್ತಿಯಿಂದಾಗಲೀ, ಲಕ್ಷಣಾವೃತ್ತಿಯಿಂದಾಗಲೀ ಪ್ರತಿಪಾದಿಸುವುದಿಲ್ಲ. ಕೇವಲ ಆತ್ಮಶ್ರುತಿಯ ತಾತ್ಪರ್ಯಕ್ಕೆ ಬ್ರಹ್ಮನು ವಿಷಯನಾಗಿದ್ದಾನೆ. ಆದ್ದರಿಂದ ಆತ್ಮಶ್ರುತಿಯ ತಾತ್ಪರ್ಯವಿಷಯ ದ್ಯುಭ್ವಾದ್ಯಾಯತನನಾಗಿದ್ದಾನೆನ್ನಲು ಹೇತುವಾಗುತ್ತದೆಂದು ಅವರ ಕಲ್ಪನೆ. ಇದು ತಪ್ಪು. ತಾತ್ಪರ್ಯ ವಿಷಯತ್ವವನ್ನು ಹೇಳಬೇಕೆಂದರೆ ಶಬ್ದವೃತ್ತಿವಿಷಯತ್ವ ಮೊದಲು ಇರಲೇಬೇಕು. ಆದ್ದರಿಂದ ನೀವು ಲಕ್ಷಣಾವೃತ್ತಿಯನ್ನೇ ಬ್ರಹ್ಮನಲ್ಲಿ ಹೇಳಬೇಕಾಗುತ್ತದೆ. ಇಂತಹ ಲಕ್ಷಣಾ ವೃತ್ತಿಯಿಂದ ಪ್ರಧಾನಾದಿಗಳೂ ಸಹ ಆತ್ಮಶಬ್ದವಾಚ್ಯವಾಗಬಹುದು.

ಪ್ರಕಾಶಃ – ननु सविशेषस्याऽत्मपदवाच्यत्वं द्युभ्वाद्यायतनत्वं चास्तीत्यत आह – सविशेषस्येति ।। रागद्वेषादिमुक्तैर्ज्ञेयत्वेति ।।

'भिद्यते हृदयग्रन्थिश्छिद्यन्ते सर्वसंशयाः ।
क्षीयन्ते चास्य कर्माणि तस्मिन् दृष्टे परावरे ।।'

इत्यादिनेत्यर्थः ।

ಸವಿಶೇಷಬ್ರಹ್ಮನು ಆತ್ಮಪದದಿಂದ ವಾಚ್ಯನಾಗುತ್ತಾನೆ. ಆದ್ದರಿಂದಲೇ ದ್ಯುಭ್ವಾದ್ಯಾಯತನನೂ ಸಹ ಅವನೇ ಆಗುತ್ತಾನಲ್ಲವೇ ? ಎಂಬ ಪ್ರಶ್ನೆಗೆ 'ಸವಿಶೇಷಸ್ಯ' ಎಂಬ ವಾಕ್ಯದಿಂದ ಉತ್ತರಿಸಿದ್ದಾರೆ. 'ರಾಗದ್ವೇಷಾದಿಮುಕ್ತೈಃ ಜ್ಞೇಯತ್ವವ್ಯಪದೇಶಾತ್' ಎಂಬುದಕ್ಕೆ ಹೀಗರ್ಥ -

'ಭಿದ್ಯತೇ ಹೃದಯಗ್ರಂಥಿಶ್ಚಿದ್ಯಂತೇ ಸರ್ವಸಂಶಯಾಃ।
ಕ್ಷೀಯಂತೇ ಚಾಸ್ಯ ಕರ್ಮಾಣಿ ತಸ್ಮಿನ್ ದೃಷ್ಟೇ ಪರಾವರೇ ॥'
ದ್ಯುಭ್ವಾದ್ಯಧಿಕರಣ (೧-೩-೧)

ಅಪರೋಕ್ಷಜ್ಞಾನವಾದ ಮೇಲೆ ರಾಗದ್ವೇಷಗಳೆಲ್ಲವೂ ದೂರವಾಗುತ್ತದೆ. ಅಂತಹ ರಾಗದ್ವೇಷಾದಿಗಳಿಂದ ಮುಕ್ತರಾದ ಜ್ಞಾನಿಗಳಿಂದ ಬ್ರಹ್ಮನು ತಿಳಿಯುತ್ತಾನೆಂದು ಹೇಳಲಾಗಿದೆ.

ಪ್ರಕಾಶಃ – ''ಹೃದಯಗ್ರನ್ಥಿಶ್ಚಾವಿದ್ಯಾರಾಗದ್ವೇಷಭಯಮೋಹಾಃ । ದರ್ಶನಂ ದೃಷ್ಟಂ ತಸ್ಮಿನ್ । ತದರ್ಥಮಿತಿ ಯಾವತ್ । ಯಥಾ ಚರ್ಮಣಿ ದ್ವೀಪಿನಂ ಹನ್ತಿ ಚರ್ಮಾರ್ಥಮಿತಿ ಗಮ್ಯತೇ'' ಇತಿ ಭಾಮತ್ಯಾಂ ವ್ಯಾಖ್ಯಾನಾತ್ । ಅಸ್ಯಾರ್ಥಸ್ಯ ತತ್ರ ವಾಕ್ಯೇ ಸ್ಪಷ್ಟಮಪ್ರತೀತೇಸ್ತದನುಪಾದಾನೇನ ರಾಗದ್ವೇಷಾದಿಮುಕ್ತೈರಿತ್ಯೇವೋಕ್ತಮ್ ।

'ಭಿದ್ಯತೇ' ಇತ್ಯಾದಿ ಶ್ಲೋಕಕ್ಕೆ ಭಾಮತಿಯ ವ್ಯಾಖ್ಯಾನ ಹೀಗಿದೆ - ''ಹೃದಯಗ್ರಂಥಿಶ್ಚಾವಿದ್ಯಾರಾಗದ್ವೇಷಭಯಮೋಹಾಃ । ದರ್ಶನಂ ದೃಷ್ಟಂ ತಸ್ಮಿನ್ । ತದರ್ಥಮಿತಿ ಯಾವತ್ । ಯಥಾ ಚರ್ಮಣಿ ದ್ವೀಪಿನಂ ಹಂತಿ ಚರ್ಮಾರ್ಥಮಿತಿ ಗಮ್ಯತೇ'' ಎಂದರೆ - ಹೃದಯಗ್ರಂಥಿಃ = ಅವಿದ್ಯಾ, ರಾಗ, ದ್ವೇಷ, ಭಯ, ಮೋಹಗಳೆಲ್ಲವೂ ದೂರವಾಗುತ್ತವೆ. ಯಾವಾಗ ಅವನ ದರ್ಶನಕ್ಕೋಸ್ಕರ ಪ್ರಯತ್ನ ಪಡುತ್ತಾನೋ ಅವಾಗ. 'ದೃಷ್ಟೇ' ಎಂದರೆ ದರ್ಶನಕ್ಕೋಸ್ಕರ ಎಂದರ್ಥ. 'ಚರ್ಮಣಿ ದ್ವೀಪಿನಂ ಹಂತಿ' ಎಂಬಲ್ಲಿ ಚರ್ಮಕ್ಕೋಸ್ಕರ ಎಂಬರ್ಥವು ಹೇಗೆ ಬರುತ್ತದೋ, ಅದರಂತೆ 'ದೃಷ್ಟೇ' ಎಂದರೆ ದರ್ಶನಕ್ಕೋಸ್ಕರ ಎಂದರ್ಥವೂ ತಿಳಿಯುತ್ತದೆ. ಹೀಗೆ ಭಾಮತಿಯಲ್ಲಿ ವ್ಯಾಖ್ಯಾನಿಸಲಾಗಿದೆ. ಈ ಅರ್ಥವು ಸ್ಪಷ್ಟವಾಗಿ ತಿಳಿಯದ ಕಾರಣ ಗ್ರಂಥಕಾರರು 'ಭಿದ್ಯತೇ ಹೃದಯಗ್ರಂಥಿಃ' ಎಂಬ ವಾಕ್ಯವನ್ನು ಸ್ವೀಕರಿಸದೇ, 'ರಾಗದ್ವೇಷಾದಿ ಮುಕ್ತೈಃ' ಎಂದಷ್ಟೇ ಹೇಳಿದ್ದಾರೆ. ಇಲ್ಲದಿದ್ದರೆ ಮುಂದೆ 'ತದ್ವಿದ್ವಾನ್' ಇತ್ಯಾದಿಯಾಗಿ ವಾಕ್ಯವನ್ನು ಉಲ್ಲೇಖಿಸಿ ಮುಕ್ತಪ್ರಾಪ್ಯತ್ವವನ್ನು ಸಮರ್ಥಿಸುವಂತೆ ಇಲ್ಲೂ ಸಹ 'ಭಿದ್ಯತೇ' ಇತ್ಯಾದಿ ಶ್ಲೋಕವನ್ನು ಉಲ್ಲೇಖಿಸಿ, ಮುಕ್ತರಿಂದ ಜ್ಞೇಯತ್ವ ವ್ಯಪದೇಶತ್ವವನ್ನು ಸಮರ್ಥಿಸಬೇಕಿತ್ತು.

ಪ್ರಕಾಶಃ – ವಾಗ್ವಿಮೋಕೇತಿ ।। ಸೂತ್ರೇ ಮುಕ್ತೇತಿಶಬ್ದಸ್ಯ ಭಾವಾರ್ಥನಿಷ್ಠಾನ್ತತ್ವೇನ ಮೋಚನಾರ್ಥತಯಾ ವಾಗ್ವಿಮೋಕಪೂರ್ವಮಿತ್ಯರ್ಥಲಾಭಾದಿತಿ ಭಾವಃ । ಆಭದ್ವಿತೀಯಯೋರ್ದೋಷದ್ವಯಮಾಹ – ನಿರುಪಪದಸ್ಯೇತ್ಯಾದಿ ।। ತೃತೀಯೇ ದೋಷಮಾಹ – ತ್ವನ್ಮತ ಇತಿ ।

ಸೂತ್ರದಲ್ಲಿರುವ 'ಮುಕ್ತ' ಎಂಬ ಶಬ್ದವು ಭಾವಾರ್ಥಕದ ನಿಷ್ಠಾಪ್ರತ್ಯಯಾಂತವಾಗಿದೆ. ಆದ್ದರಿಂದ ಮುಕ್ತ ಶಬ್ದಕ್ಕೆ 'ಮೋಚನ' ಎಂದರ್ಥ. 'ಮೋಚನ' ಎಂದರೆ 'ಬಿಡುವಿಕೆ' ಎಂದರ್ಥ. ಯಾವುದನ್ನು ಬಿಡಬೇಕೆಂದರೆ ಮಾತುಗಳನ್ನು ಬಿಡಬೇಕು. ಹೀಗೆ ವಾಗ್ವಿಮೋಕಪೂರ್ವಕವಾದ ಅರ್ಥವು 'ತಮೇವೈಕಮ್' ಎಂಬ ಶ್ರುತಿಯಿಂದ ತಿಳಿಯುತ್ತಿರುವುದರಿಂದ ಬ್ರಹ್ಮನೇ ದ್ಯುಭ್ವಾದ್ಯಾಯತನನಾಗಿದ್ದಾನೆಂದು ಆದ್ಯೌತಿಗಳ ಎರಡನೆಯ ವ್ಯಾಖ್ಯಾನ. ಈ ಮೂರು ಬಗೆಯ ಅರ್ಥಗಳಲ್ಲಿ ಮೊದಲೆರಡು ಪಕ್ಷಗಳಿಗೆ 'ನಿರುಪಪದಸ್ಯ' ಎಂಬ ವಾಕ್ಯದಿಂದ ದೋಷವನ್ನು ಹೇಳಿದ್ದಾರೆ. ಮೂರನೆಯ ಪಕ್ಷಕ್ಕೆ 'ತ್ವನ್ಮತೇ' ಎಂಬ ವಾಕ್ಯದಿಂದ ದೋಷವನ್ನು ಹೇಳಿದ್ದಾರೆ.

ಪ್ರಕಾಶಃ – ಮುಕ್ತೇತಿ ।। ತಸ್ಯ ಮುಖ್ಯಮುಕ್ತ ಏವ ಸ್ವಾರಸ್ಯಾದಿತಿ ಭಾವಃ ।

ಯದಪಿ ನಾನುಮಾನಮಿತ್ಯಸ್ಯ ಅನುಮೀಯತ ಇತ್ಯನುಮಾನಂ ಪ್ರಧಾನಂ ನ ಶ್ರುತ್ಯಾದ್ಯಾಯತನಮ್ । ತಚ್ಛಬ್ದಾಭಾವಾದಿತ್ಯರ್ಥ ಇತಿ । ತತ್ರ ಹೇತ್ವರ್ಥಂ ನಿರಾಹ – ತೃತೀಯೇತಿ ।। ತಕ್ಕಂ ಆಧಸೂತ್ರಾರ್ಥದೂಷಣಪ್ರಸ್ತಾವೆ ।

'ಮುಕ್ತ' ಎಂಬ ಶಬ್ದವು ಮುಖ್ಯವಾಗಿ ಮುಕ್ತನಾದವನಲ್ಲೇ ಸ್ವರಸವಾಗುತ್ತದೆ. ಸಗುಣಮೋಕ್ಷವು ಅಮುಖ್ಯವಾದ್ದರಿಂದ ಆ ಅರ್ಥದಲ್ಲಿ ಅಸ್ವರಸವಾಗುತ್ತದೆಂದು ತಿಳಿಯಬೇಕು. ಇನ್ನು 'ನಾನುಮಾನಮ್' ಎಂಬ ಸೂತ್ರಭಾಗಕ್ಕೆ 'ಅನುಮೀಯತೇ ಇತಿ ಅನುಮಾನಮ್' = ಪ್ರಕೃತಿಯು ದ್ಯುಭ್ವಾದ್ಯಾಯತನನಾಗುವುದಿಲ್ಲ. ಏಕೆಂದರೆ ಪ್ರಕೃತಿಪ್ರತಿಪಾದಕವಾದ ಶಬ್ದಗಳಿರುವುದಿಲ್ಲವೆಂದು ವ್ಯಾಖ್ಯಾನಿಸುತ್ತಾರೆ. ಈ ವಿಷಯದಲ್ಲಿ ಹೇತುಭಾಗವನ್ನು 'ತೃತೀಯೇ' ಎಂಬ ವಾಕ್ಯದಿಂದ ನಿರಾಕರಿಸಿದ್ದಾರೆ. ಪ್ರಥಮಸೂತ್ರಾರ್ಥದ ನಿರಾಕರಣೆಯ ಸಂದರ್ಭದಲ್ಲಿಯೇ ಇದನ್ನೂ ಸಹ ನಿರಾಕರಿಸಿದ್ದಾಗಿದೆ.

ಪ್ರಕಾಶಃ – ಯದಪಿ ''ಪ್ರಾಣಭೃಚ್ಚ'' ಇತ್ಯತ್ರಾತಚ್ಛಬ್ದಾದಿತಿ ಹೇತುಮನೂದ್ಯ ''ಯಸ್ಸರ್ವಜ್ಞಸ್ಸರ್ವವಿತ್'' ಇತಿ ತದ್ವಿಪರೀತಶಬ್ದಾನ್ನ ಜೀವೋ ದ್ಯುಭ್ವಾದ್ಯಾಯತನಮಿತಿ । ತತ್ರಾಹ – ಚತುರ್ಥ ಇತಿ ।।

'ಪ್ರಾಣಭೃಚ್ಚ' ಎಂಬ ಸೂತ್ರದಲ್ಲಿ 'ಅತಶ್ಚಬ್ದಾತ್' ಎಂಬ ಹೇತುವನ್ನು ಅನುಕರ್ಷ ಮಾಡಿ, 'ಯಸ್ಸರ್ವಜ್ಞಃ ಸರ್ವವಿತ್' ಎಂಬ ಶ್ರುತಿಯಲ್ಲಿ ಕೇಳಿಸುತ್ತಿರುವ ಸರ್ವಜ್ಞ ಶಬ್ದವು ಜೀವನಲ್ಲಿ ಉಪಪನ್ನವಾಗದ ಕಾರಣ ಜೀವನು ದ್ಯುಭ್ವಾದ್ಯಾಯತನನಾಗುವುದಿಲ್ಲವೆಂದು ವ್ಯಾಖ್ಯಾನಿಸುತ್ತಾರೆ. ಇದನ್ನು 'ಚತುರ್ಥೇ' ಎಂಬ ವಾಕ್ಯದಿಂದ ನಿರಾಕರಿಸಿದ್ದಾರೆ.

ಪ್ರಕಾಶಃ – ಸಾಕ್ಷಾದಿತಿ ।। ಭೇದೋಕ್ತಿದ್ವಾರಮನ್ತರೇಣೈವೇತ್ಯರ್ಥಃ । ಏವಮಿತಿ ।। ''ಪ್ರಕರಣಾತ್'' ಇತ್ಯಸ್ಯ ತ್ವನ್ಮತೇ ಪ್ರಧಾನಹೇತ್ವಾತ್ತತ್ರ ಚಶಬ್ದಶ್ರವಣಂ ಸ್ಯಾತ್ । ''ಸ್ಥಿತ್ಯದನಾಭ್ಯಾಮ್'' ಇತ್ಯತ್ರಾಪಿ ಭೇದಕಸ್ಯೈವೋಕ್ತ್ಯಾ ಭೇದಸೂತ್ರೇಣ ಪೌನರುಕ್ತ್ಯಮಿತ್ಯಾದಿ-ರೂಪೇಣೋಹ್ಯೇತ್ಯರ್ಥಃ । ಇತ್ಯನೇನೇತಿ ।। ಪ್ರಾಪ್ತಪ್ರಾಪ್ಯಭಾವಸ್ಯ ಭೇದವ್ಯಾಪ್ತತ್ವಾದಿತಿ ಭಾವಃ ।

'ಸಾಕ್ಷಾತ್' ಎಂಬ ಪದಕ್ಕೆ ಭೇದೋಕ್ತಿದ್ವಾರವನ್ನು ಬಿಟ್ಟು ಎಂದರ್ಥ. 'ಏವಂ' ಎಂದರೆ 'ಪ್ರಕರಣಾತ್' ಎಂಬ ಸೂತ್ರವು ಆದ್ವೈತ ಮತದಲ್ಲಿ ಪ್ರಧಾನವಾದ ಹೇತುವನ್ನು ಹೇಳುತ್ತಿದೆ. ಆದ್ದರಿಂದ 'ಚ'ಶಬ್ದವನ್ನು ಸೂತ್ರಕಾರರು ಹೇಳಬೇಕಿತ್ತು. 'ಸ್ಥಿತ್ಯದನಾಭ್ಯಾಂ' ಎಂಬಲ್ಲಿಯೂ ಭೇದಕಧರ್ಮವನ್ನೇ ಹೇಳಿರುವುದರಿಂದ 'ಭೇದವ್ಯಪದೇಶಾತ್' ಎಂಬ ಸೂತ್ರದಿಂದ ಪುನರುಕ್ತಿ ದೋಷವು ಬರುತ್ತದೆ. ಇತ್ಯಾದಿ ದೋಷಗಳನ್ನು ಸ್ವತಃ ಊಹಿಸಿಕೊಳ್ಳಬೇಕು ಎಂದರ್ಥ. 'ಇತ್ಯನೇನ' ಎಂದರೆ ಪ್ರಾಪ್ಯಪ್ರಾಪ್ಯಭಾವು ಭೇದವ್ಯಾಪ್ತವಾಗಿದೆ. ಆದ್ದರಿಂದ ಭೇದವನ್ನೇ ಆದ್ವೈತಿಗಳು ಹೇಳಿದಂತಾಯಿತು ಎಂದರ್ಥ.

ಗುರುರಾಜೀಯಮ್ – ಶಬ್ದತ ಇತಿ ।। ವೇಧಸ್ಯಾಪ್ರಾಧಾನ್ಯೇನಾರ್ಥತಃ ಪ್ರಾಧಾನ್ಯಾಭಾವೇऽಪಿ ಶಬ್ದತಃ ಪ್ರಾಧಾನ್ಯಮಸ್ತೀತ್ಯರ್ಥಃ । ಸಿದ್ಧಾನ್ತ ಇತಿ ।। ಪ್ರಕೃತ್ಯಧಿಕರಣನ್ಯಾಯೇನ ಸಾವಕಾಶಂ ವೇದವಿಧಾಯಾಃ ಪ್ರತಿಬಿಮ್ಬಪಕ್ಷಪಾತಾದಿತಿ ವಕ್ಷ್ಯಮಾಣರೀತ್ಯಾ ಜ್ಞೇಯಮ್ । ನನು ನಿರ್ವಿಶೇಷಸ್ಯಾತ್ಮಶಬ್ದವಾಚ್ಯತ್ವಾಭಾವೇऽಪಿ ಸವಿಶೇಷಸ್ಯ ತಚ್ಛಬ್ದವಾಚ್ಯತ್ವೇನ ತಸ್ಯೈವಾತ್ರ ಪ್ರತಿಪಾದ್ಯತ್ವಮಸ್ತ್ವಿತ್ಯತ ಆಹ – ಸವಿಶೇಷಸ್ಯೇತಿ ।। ತಥಾಚ ಸವಿಶೇಷಪ್ರತಿಪಾದನೇ ಪಾದಾಸಙ್ಗತಿರಿತಿ ಭಾವಃ ।

ಸಾರ

ಅದ್ವೈತಿಗಳು ನಾವು ಹೇಳುವ ವಾಕ್ಯವನ್ನೇ ಈ ಅಧಿಕರಣಕ್ಕೆ ವಿಷಯವೆನ್ನುತ್ತಾರೆ. ಆದರೆ ಪೂರ್ವಪಕ್ಷ ಹಾಗೂ ಸಿದ್ಧಾಂತ ಲಿಂಗಗಳಲ್ಲಿ ವ್ಯತ್ಯಾಸವಿದೆ. 'ಅಮೃತಸ್ಯೈಷ ಸೇತುಃ' ಎಂಬ ಶ್ರುತಿ ಅಮೃತಕ್ಕೆ ಸೇತುವಾಗಿರುವ ವ್ಯಕ್ತಿಯೇ ದ್ಯುಭ್ವಾದ್ಯಾಯತನನೆಂದು ಹೇಳುತ್ತಿದೆ. ಆದ್ದರಿಂದ ಅಮೃತ ಸ್ವರೂಪನಾದ ಬ್ರಹ್ಮನು ಅಮೃತಕ್ಕೆ ಸೇತುವಾಗಲು ಸಾಧ್ಯವಿಲ್ಲವೆಂದು ಪೂರ್ವಪಕ್ಷ ಮಾಡಿದ್ದಾರೆ. ಅಮೃತಸೇತುತ್ವವನ್ನು ಗೌಣವನ್ನಾಗಿ ವಿವಕ್ಷಿಸಿ ಮುಕ್ತರಿಗೆ ಆಶ್ರಯನಾದ್ದರಿಂದ ಬ್ರಹ್ಮನೇ ಅಪ್ಯುತಸೇತುವಾಗಿದ್ದಾನೆ. ಆದ್ದರಿಂದ ದ್ಯುಭ್ವಾದ್ಯಾಯತನನೂ ಸಹ ಅವನೇ ಆಗುತ್ತಾನೆಂದು ಸಿದ್ಧಾಂತ ಮಾಡಿದ್ದಾರೆ. ಅಥವಾ ಯಾರನ್ನು ತಿಳಿಯುವುದರಿಂದ ಮೋಕ್ಷವು ಉಂಟಾಗುತ್ತದೋ, ಅವನೇ ದ್ಯುಭ್ವಾದ್ಯಾಯತನನೆಂದು ಶ್ರುತಿಗೆ ಅರ್ಥ್ಯಸಬೇಕೆಂದು ಮತ್ತೊಂದು ಬಗೆಯಲ್ಲಿಯೂ ವ್ಯಾಖ್ಯಾನಿಸುತ್ತಾರೆ.

ಇವರ ಈ ಅಧಿಕರಣ ಶರೀರವು ಅಯುಕ್ತವಾಗಿದೆ. ಶ್ರುತಿಯಲ್ಲಿ ಜಾಯಮಾನತ್ವ ಲಿಂಗವು ಕೇಳಿಸುತ್ತಿರುವುದರಿಂದ ಪ್ರಬಲವಾದ ಪೂರ್ವಪಕ್ಷಲಿಂಗವನ್ನು ಬಿಟ್ಟು ಅಪ್ರಧಾನವಾದ ಅಮೃತಸೇತುತ್ವವಿಲ್ಲವೆಂದು ಪೂರ್ವಪಕ್ಷ ಮಾಡುವುದು ಅಸಂಗತ. ಮತ್ತು ಅಮೃತಸೇತುತ್ವವನ್ನು ಬ್ರಹ್ಮನಲ್ಲಿ ಸಮರ್ಥಿಸಲು ಅವರಿಗೆ ಸಾಧ್ಯವೂ ಇಲ್ಲ. ಅದ್ವೈತಮತ ಪ್ರಕಾರ ಮೋಕ್ಷವು ಬ್ರಹ್ಮಸ್ವರೂಪವೇ ಆಗಿದೆ. ಹೀಗಿರುವಾಗ ಬ್ರಹ್ಮ ಮೋಕ್ಷಕ್ಕೆ ಆಶ್ರಯನಾಗಲು ಹೇಗೆ ಸಾಧ್ಯ ? ಆದ್ದರಿಂದ ಗೌಣವಾದ ಅಮೃತಸೇತುತ್ವವನ್ನು ಅವರಿಂದ ಸಮರ್ಥಿಸಲಾಗದು. ಮತ್ತು ದ್ಯುಭ್ವಾದ್ಯಾಯತನತ್ವವನ್ನು ಬ್ರಹ್ಮನಲ್ಲಿ ಸಮರ್ಥಿಸಲು ಸಾಧ್ಯವಿಲ್ಲ. ಏಕೆಂದರೆ ಮೂರನೆಯ ಪಾದವು ಅದ್ವೈತಮತ ಪ್ರಕಾರ ನಿರ್ವಿಶೇಷ ಬ್ರಹ್ಮಪ್ರತಿಪಾದಕವಾಗಿದೆ. ಆದ್ದರಿಂದ ನಿರ್ವಿಶೇಷ ಬ್ರಹ್ಮನಲ್ಲಿ ದ್ಯುಭ್ವಾದ್ಯಾಯತನತ್ವವೆಂಬ ಧರ್ಮವನ್ನು ಸಮರ್ಥಿಸುವುದು ಹೇಗೆ ಸಮಂಜಸವಾಗುತ್ತದೆ?

ಹಾಗೂ 'ಸ್ವಶಬ್ದಾತ್' ಎಂಬುದಕ್ಕೆ ಬ್ರಹ್ಮನಲ್ಲಿ ಆತ್ಮಶಬ್ದವಿರುವುದರಿಂದ ಎಂದು ವ್ಯಾಖ್ಯಾನಿಸುತ್ತಾರೆ. ನಿರ್ವಿಶೇಷ ಬ್ರಹ್ಮನಲ್ಲಿ ಆತ್ಮವಾಚ್ಯತ್ವವೂ ಸಹ ಇರುವುದಿಲ್ಲ. ಈ ಎಲ್ಲಾ ಕಾರಣಗಳಿಂದ ಅದ್ವೈತಿಗಳ ವ್ಯಾಖ್ಯಾನವು ಯಾರಿಗೂ ಸಹ ಮನದಟ್ಟಾಗುವುದಿಲ್ಲ. ಪ್ರತಿಯೊಂದು ಅಧಿಕರಣಗಳಂತೆ ಈ ಅಧಿಕರಣದಲ್ಲಿಯೂ 'ಭೇದವ್ಯಪದೇಶಾತ್' ಎಂಬ ಸೂತ್ರದಿಂದ, 'ಮುಕ್ತೋಪಸೃಪ್ಯವ್ಯಪದೇಶಾತ್' ಎಂಬ ಸೂತ್ರದಿಂದ ಅದ್ವೈತಿಗಳು ದ್ವೈತವನ್ನೇ ಸ್ಥಾಪನೆ ಮಾಡಿದ್ದಾರೆ. ಅದ್ವೈತದ ಸಾಧನೆಗೆ ಇದೂ ಸಹ ಅವರಿಗೆ ಅನುಕೂಲವಾಗುವುದಿಲ್ಲ.

तात्पर्यचन्द्रिका

केचित्तु । ''गौणश्चेन्न आत्मशब्दात्' इत्यत्राऽत्मशब्दस्याचिद् व्यावर्तकतया उक्तत्वादात्मशब्दोक्ते द्युभ्वाद्यायतने प्रधानत्वशङ्कानुदयाज्जीवत्वेनैव पूर्वपक्षः'' इत्याहुः ।

ಅನುವಾದ - ರಾಮಾನುಜರ ಅಧಿಕರಣ ಶರೀರ ಹೀಗಿದೆ - 'ಗೌಣಶ್ಚೇನ್ನ ಆತ್ಮಶಬ್ದಾತ್' ಎಂಬ ಆನಂದಮಯಾಧಿಕರಣದ ಸೂತ್ರದಲ್ಲಿ ಆತ್ಮಶಬ್ದವೆಂಬ ಹೇತು ಅಚಿತ್ಪ್ರಕೃತಿಯನ್ನು ವ್ಯಾವೃತ್ತಿ ಮಾಡುತ್ತಿದೆ. ಆದ್ದರಿಂದ ಪ್ರಕೃತ ದ್ಯುಭ್ವಾದ್ಯಾಯತನವಾದ ಪದಾರ್ಥವು ಆತ್ಮಶಬ್ದ ಪ್ರತಿಪಾದ್ಯವಾಗಿದೆಯೆಂದು ಹೇಳುತ್ತಿರುವುದರಿಂದ ಪ್ರಧಾನವು ಲೋಕಾಧಾರವಾಗಬಹುದಲ್ಲವೇ? ಎಂಬ ಶಂಕೆಯೇ ಹುಟ್ಟಲು ಸಾಧ್ಯವಿಲ್ಲ. ಆದ್ದರಿಂದ ಜೀವನೇ ಲೋಕಾಧಾರನಾಗಿದ್ದಾನೆಂದು ಪೂರ್ವಪಕ್ಷವೆಂದು ಹೇಳುತ್ತಾರೆ.

तन्न । रुद्रादिव्यावर्तकताया अनुक्तत्वेन जीवत्वेनैवेत्यवधारणायोगात् ।

ಹಿಂದೆ ಪ್ರಕೃತಿಯಲ್ಲಿ ಆತ್ಮಶಬ್ದವಿಲ್ಲವೆಂದಷ್ಟೇ ಹೇಳಿದ್ದಾರೆ ಹೊರತು, ರುದ್ರಾದಿಗಳಲ್ಲಿ ಆತ್ಮಶಬ್ದವಿಲ್ಲವೆಂದೇನೂ ಹೇಳಿರುವುದಿಲ್ಲ. ಹೀಗೆ ರುದ್ರಾದಿವ್ಯಾವರ್ತಕವಾಗಿ ಯಾವ ಹೇತುಗಳನ್ನು ಹೇಳದ ಕಾರಣ ಕೇವಲ ಜೀವನೊಬ್ಬನೇ ಪೂರ್ವಪಕ್ಷಕ್ಕೆ ವಿಷಯನಾಗಿದ್ದಾನೆಂಬ ಅವಧಾರಣೆಯು ಅಯುಕ್ತವಾಗುತ್ತದೆ.

''नानुमानम्'' इति सूत्रे प्रधाननिरासायोगाच्च ।

ಮತ್ತು 'ನಾನುಮಾನಮ್' ಎಂಬ ಸೂತ್ರದಲ್ಲಿ ಪ್ರಧಾನವು ಲೋಕಾಧಾರವಲ್ಲವೆಂದು ನಿರಾಕರಿಸಲಾಗಿದೆ. ಅದಕ್ಕನುಗುಣವಾಗಿ ಪ್ರಧಾನವಿಷಯಕವಾದ ಪೂರ್ವಪಕ್ಷವನ್ನು ಮಾಡಲೇಬೇಕು.

''अस्मिन्नस्य च तद्योगं शास्ति'' इत्यादौ मुक्तोपसृप्यत्वस्यापि जीवव्यावर्तकताया उक्तत्वेन मुक्तोपसृप्यत्वेनोक्ते तस्मिञ्जीवत्वशङ्काया अप्यनुदयाच्च ।

'ಅಸ್ಮಿನ್ನಸ್ಯ ಚ ತದ್ಯೋಗಂ ಶಾಸ್ತಿ' ಎಂಬ ಆನಂದಮಯಾಧಿಕರಣದ ಸೂತ್ರದಲ್ಲಿಯೇ ಮುಕ್ತೋಪಸೃಪ್ಯತ್ವವನ್ನು ಜೀವವ್ಯಾವರ್ತಕವಾಗಿ ಹೇಳಲಾಗಿದೆ. ಅದೇ ಮುಕ್ತೋಪಸೃಪ್ಯತ್ವಲಿಂಗವು ಈ ಪ್ರಕರಣದಲ್ಲಿ ಕೇಳಿಸುತ್ತಿರುವುದರಿಂದ ಜೀವನೂ ಸಹ ಪೂರ್ವಪಕ್ಷಕ್ಕೆ ವಿಷಯನಾಗಲು

ಸಾಧ್ಯವಿಲ್ಲ. ಆತ್ಮಶಬ್ದದ ಪ್ರಯೋಗವೂ ಈ ಪ್ರಕರಣದಲ್ಲಿರುವುದರಿಂದ ಪ್ರಕೃತಿಯು ಪೂರ್ವಪಕ್ಷಕ್ಕೆ ವಿಷಯವಾಗದಿದ್ದಲ್ಲಿ ಜೀವನೂ ಸಹ ಪೂರ್ವಪಕ್ಷಕ್ಕೆ ವಿಷಯನಾಗದಿರಬೇಕಾದೀತೆಂಬ ಪ್ರತಿಬಂದಿಗೆ ನಿಮ್ಮಲ್ಲಿ ಉತ್ತರವಿಲ್ಲ.

जायमानत्वादिनिरवकाशलिङ्गैर्मुक्तोपसृप्यत्वस्य गौणत्वे तैरेवात्मशब्दोऽपि ''प्रकाशात्मा प्रदीपः'' इत्यादाविवान्यार्थोऽस्तु ।

ಜಾಯಮಾನತ್ವವೇ ಮೊದಲಾದ ನಿರವಕಾಶಲಿಂಗಗಳ ಬಲದಿಂದ ಮುಕ್ತೋಪಸೃಪ್ಯತ್ವವನ್ನು ಜೀವನಲ್ಲಿ ಗೌಣ ಮಾಡಬೇಕು. ಹೀಗೆ ಹೇಳುವುದಾದರೆ ಅದೇ ಜಾಯಮಾನತ್ವಾದಿ ಲಿಂಗಗಳಿಂದ ಆತ್ಮಶಬ್ದವನ್ನೂ ಸಹ 'ಪ್ರಕಾಶಾತ್ಮಾ ಪ್ರದೀಪಃ' ಎಂಬಲ್ಲಿ ಸ್ವರೂಪವೆಂಬರ್ಥದಲ್ಲಿ ಆತ್ಮಶಬ್ದವನ್ನು ಗೌಣವನ್ನಾಗಿ ವಿವಕ್ಷಿಸುವಂತೆ ಪ್ರಧಾನವಿಷಯದಲ್ಲಿಯೂ 'ಆತ್ಮೀಯ' ಎಂಬರ್ಥದಲ್ಲಿ ಆತ್ಮಶಬ್ದವನ್ನು ಪ್ರಯೋಗಿಸಬಹುದು. ಹೀಗೆ ಗೌಣಾರ್ಥವನ್ನು ಮಾಡುವ ಮೂಲಕ ಆತ್ಮಶಬ್ದದ ವಿರೋಧವನ್ನು ಪರಿಹರಿಸಿ ಪ್ರಧಾನವಿಷಯಕವಾದ ಪೂರ್ವಪಕ್ಷವನ್ನು ಮಾಡಬಹುದು.

प्रत्युतास्मदादिजीवेऽनुभवविरुद्धं द्युभ्वाद्यायतनत्वम् । प्रधाने तु सर्वोपादाने तद्युक्तम् ।

ವಿಚಾರ ಮಾಡಿದರೆ ಪ್ರಧಾನವಿಷಯಕವಾದ ಪೂರ್ವಪಕ್ಷವೇ ಅತ್ಯಂತ ಸಾಧುವಾಗುತ್ತದೆ. ನಮ್ಮಂತಹ ಜೀವರಲ್ಲಿ ಸಕಲಲೋಕಾಧಾರತ್ವವೂ ಅನುಭವ ವಿರುದ್ಧ. ಆದರೆ ಎಲ್ಲಾ ಪದಾರ್ಥಗಳಿಗೂ ಉಪಾದಾನವಾದ ಪ್ರಕೃತಿಯಲ್ಲಿ ಲೋಕಾಧಾರತ್ವವನ್ನು ಸುಲಭವಾಗಿ ಉಪಪಾದಿಸಬಹುದು. ಆದ್ದರಿಂದ ಜೀವನು ಲೋಕಾಧಾರನಾಗಿದ್ದಾನೆಂಬ ಪೂರ್ವಪಕ್ಷವು ಅಸಂಭಾವಿತವಾಗಿದೆ. ಪ್ರಧಾನದಲ್ಲಿ ಅದೇ ಪೂರ್ವಪಕ್ಷವು ಅತ್ಯಂತ ಯುಕ್ತವಾಗುತ್ತದೆ.

किञ्चायसूत्रे 'स्वशब्दात्' इत्यस्य ब्रह्मासाधारणशब्दादित्यर्थ इति त्वयोक्तत्वात् स्वशब्दादित्यनेनैव ''अमृतस्यैष सेतुः'' ''यः सर्वज्ञः'' इत्यादेरिव मुक्तोपसृप्यत्वादिशब्दस्यापि ग्रहणसम्भवान्मुक्तोपसृप्यादिसूत्रवैयर्थ्यम् ।

ಮತ್ತು ಮೊದಲನೆಯ ಸೂತ್ರದಲ್ಲಿ 'ಸ್ವಶಬ್ದಾತ್' ಎಂಬುದಕ್ಕೆ 'ಬ್ರಹ್ಮನ ಅಸಾಧಾರಣ ಶಬ್ದಗಳಿರುವುದರಿಂದ' ಎಂಬರ್ಥವನ್ನು ನೀವು ಹೇಳುತ್ತೀರಿ. ಹಾಗಾದರೆ 'ಸ್ವಶಬ್ದಾತ್' ಎಂಬ ಹೇತುಭಾಗದಿಂದಲೇ 'ಅಮೃತಸ್ಯೈಷ ಸೇತುಃ' 'ಯಃ ಸರ್ವಜ್ಞಃ' ಇತ್ಯಾದಿ ವಾಕ್ಯಗಳಲ್ಲಿ ಹೇಳಲ್ಪಟ್ಟ ಮುಕ್ತೋಪಸೃಪ್ಯತ್ವ, ಸರ್ವಜ್ಞತ್ವ ಮೊದಲಾದವುಗಳನ್ನೂ ಸಹ ಸಂಗ್ರಹಿಸಬಹುದು. ಪುನಃ 'ಮುಕ್ತೋಪಸೃಪ್ಯವ್ಯಪದೇಶಾತ್', 'ಪ್ರಕರಣಾತ್' ಇತ್ಯಾದಿ ಸೂತ್ರಗಳನ್ನು ಹೇಳಿದ್ದು ವ್ಯರ್ಥವಾಗುತ್ತದೆ. ಆದ್ದರಿಂದ ರಾಮಾನುಜರ ಅಧಿಕರಣಶರೀರವು ಅಸಾಧುವಾಗಿದೆ.

ಪರಿಪೂರ್ಣಚಂದ್ರಿಕಾ

नन्वदृश्यत्वादीत्यत्र ''यत्तदद्रेश्यम्'' इत्यादेर्ब्रह्मपरताया उक्तत्वात्तत्प्रकरणस्थस्य ''यस्मिन्द्यौः'' इत्यादेरपि सा सिद्धेतीदमधिकरणमनारभ्यमिति चेत् ।

ಈ ಅಧಿಕರಣಕ್ಕೆ ಅದೃಶ್ಯತ್ವಾಧಿಕರಣದಿಂದ ಪುನರುಕ್ತಿ ಬರುತ್ತದೆ. ಏಕೆಂದರೆ 'ಯತ್ತದದ್ರೇಶ್ಯಮ್' ಇತ್ಯಾದಿ ವಾಕ್ಯಗಳೆಲ್ಲವೂ ಬ್ರಹ್ಮಪರವೆಂದು ಅದೃಶ್ಯತ್ವಾಧಿಕರಣದಲ್ಲಿ ಸಾಧನೆ ಮಾಡಿದ್ದರಿಂದ ಆ ಪ್ರಕರಣದಲ್ಲಿರುವ 'ಯಸ್ಮಿನ್‌ದ್ಯೌಃ' ಇತ್ಯಾದಿ ವಾಕ್ಯಗಳೂ ಸಹ ಬ್ರಹ್ಮಪರವೆಂದೇ ಸಿದ್ಧವಾಗುತ್ತವೆ. ಹೀಗಿರುವಾಗ ಲೋಕಾಧಾರತ್ವವೂ ಬ್ರಹ್ಮನಲ್ಲಿದೆಯೆಂದು ಹಿಂದಿನ ಅಧಿಕರಣದಿಂದ ಸಿದ್ಧವಾದ ಮೇಲೆ ಈ ಅಧಿಕರಣವನ್ನು ಆರಂಭಿಸಿದ್ದು ವ್ಯರ್ಥವಲ್ಲವೇ?

अत्र परैरुक्तम् । 'यस्मिन्' इत्यादिकं 'यत्तदद्रेश्यम्' इत्येतत्प्रकरणे नास्तीति कृत्वाचिन्तयेदमारब्धम् ।

ಈ ಪುನರುಕ್ತಿ ದೋಷವನ್ನು ಅದ್ವೈತಿಗಳು ಹೀಗೆ ಪರಿಹರಿಸುತ್ತಾರೆ - 'ಯಸ್ಮಿನ್‌ದ್ಯೌಃ' ಇತ್ಯಾದಿ ವಾಕ್ಯವು 'ಯತ್ತದದ್ರೇಶ್ಯಮ್' ಎಂಬ ಪ್ರಕರಣದಲ್ಲಿ ಇರುವುದೇ ಇಲ್ಲವೆಂಬ ಕೃತ್ವಾಚಿಂತೆಯನ್ನು ಮಾಡಿಕೊಂಡು ಈ ಅಧಿಕರಣದ ಪೂರ್ವಪಕ್ಷವು ಹುಟ್ಟುತ್ತಿದೆ. ಆದ್ದರಿಂದ ಪುನರುಕ್ತಿ ದೋಷ ಬರುವುದಿಲ್ಲ.

नच तथात्वे ''प्रकरणात्'' इति सूत्रायोगः । तस्य कृत्वाचिन्तात्वोद्घाटनार्थत्वादिति ।

ಹಾಗಾದರೆ 'ಪ್ರಕರಣಾತ್' ಎಂಬ ಸೂತ್ರವು 'ಯಸ್ಮಿನ್‌ದ್ಯೌಃ' ಎಂಬ ವಾಕ್ಯವು ಬ್ರಹ್ಮಪ್ರಕರಣದಲ್ಲಿರುವುದರಿಂದ ಬ್ರಹ್ಮಪರವಾಗಿದೆಯೆಂದು ಸಮರ್ಥಿಸುತ್ತಿದೆ. ಇದು ಅಯುಕ್ತವಾಗುತ್ತದಲ್ಲವೇ? ಎಂದು ಪ್ರಶ್ನಿಸಬಾರದು. ಕೃತ್ವಾಚಿಂತೆಯನ್ನು ಮಾಡಿಕೊಂಡು ಅಧಿಕರಣವು ಆರಂಭಣೀಯವಾಗಿದೆಯೆಂದು ತಿಳಿಸುವುದಕ್ಕಾಗಿಯೇ ಈ ಸೂತ್ರವು ಹೊರಟಿದೆ. ಹೀಗೆ ಅದ್ವೈತಿಗಳು ನೀಡುವ ಸಮಾಧಾನ.

तन्न । कृत्वाचिन्तात्वस्यागतिकगतित्वात् । जायमानत्वादिलिङ्गैः प्रकरणस्याब्रह्मपरत्वेनैव वा प्रकरणादुत्कर्षेण वा पूर्वपक्षसम्भवाच ।

ಇದು ತಪ್ಪು. ಬೇರೆ ಗತಿಯಿಲ್ಲದಿದ್ದಾಗ ಮಾತ್ರ ಕೃತ್ವಾಚಿಂತೆಯನ್ನು ಅವಲಂಬಿಸಬೇಕು. ಆದರೆ ಜಾಯಮಾನತ್ವಾದಿ ಲಿಂಗಗಳಿಂದ ಅಧಿಕಾಶಂಕೆಯನ್ನು ಈ ಅಧಿಕರಣದಲ್ಲಿ ಮಾಡಲು ಬರುತ್ತದೆ. ಅಥವಾ ಸಂಪೂರ್ಣ ಪ್ರಕರಣವೇ ಬ್ರಹ್ಮಪರವಾಗುವುದಿಲ್ಲವೆಂದೂ ಸಹ ಆಶಂಕಿಸಬಹುದು. ಅಥವಾ ಅದೃಶ್ಯತ್ವಪ್ರಕರಣದಲ್ಲಿರುವ 'ಯಸ್ಮಿನ್‌ದ್ಯೌಃ' ಎಂಬ ವಾಕ್ಯಕ್ಕೆ ಸಂಗತಿಯಿಲ್ಲದ ಕಾರಣ, ಉತ್ಕರ್ಷ

ಮಾಡಿ ಬೇರೆ ಪ್ರಕರಣದಲ್ಲಿ ಆದನ್ನು ಅನ್ವಯ ಮಾಡಬೇಕು. ಹೀಗೆ ಅನೇಕ ವಿಧದಲ್ಲಿ ಪೂರ್ವಪಕ್ಷವನ್ನು ಮಾಡಲು ಬರುವಾಗ ಬೇರೆ ಗತಿಯಿಲ್ಲದೇ ಕೃತ್ವಾಚಂತೆಯನ್ನು ಮಾಡಿದ್ದೇವೆಂಬ ಉತ್ತರವು ತಪ್ಪಾಗುತ್ತದೆ.

केचित्तु । लिङ्गैः प्रकरणविच्छेदाशङ्कायां तन्निरासायेदमित्याहुः ।

ರಾಮಾನುಜರ ಪುನರುಕ್ತಿ ಪರಿಹಾರ ಹೀಗಿದೆ - ಇಂದ್ರಿಯಾಧಾರತ್ವವೇ ಮೊದಲಾದ ಲಿಂಗಗಳ ಬಲದಿಂದ ಬ್ರಹ್ಮಪ್ರಕರಣವು ವಿಚ್ಛೇದವಾಗುತ್ತದೆ. ಆದ್ದರಿಂದ 'ಯಸ್ಮಿನ್ದ್ಯೌಃ' ಎಂಬ ವಾಕ್ಯವು ಜೀವವಿಷಯಕವಾಗಬಹುದೆಂದು ಪೂರ್ವಪಕ್ಷ ಹುಟ್ಟಿದಾಗ ಅದರ ನಿರಾಸಕ್ಕೋಸ್ಕರ ಈ ಅಧಿಕರಣವು ಸಾರ್ಥಕವಾಗಿದೆಯೆನ್ನುತ್ತಾರೆ.

तन्न । भाष्यटीकोक्तरीत्या 'यत्तदद्रेश्यम्' इत्यादेरपि जीवविषयत्वमित्येक-वाक्यत्वेनैव पूर्वपक्षसम्भवे प्रकरणविच्छेदायोगात् ।

ಇವರ ವಾದವೂ ಸಹ ತಪ್ಪು. ಭಾಷ್ಯ ಹಾಗೂ ಟೀಕೆಗಳಲ್ಲಿ ಹೇಳಿದ ಪ್ರಕಾರ 'ಯತ್ತದದ್ರೇಶ್ಯಮ್' ಇತ್ಯಾದಿ ವಾಕ್ಯಗಳೂ ಸಹ ಜೀವವಿಷಯಕವೇ ಆಗಿವೆಯೆಂಬುದಾಗಿ ಏಕವಾಕ್ಯತ್ವವನ್ನು ವಿವಕ್ಷಿಸಿಯೇ ಪೂರ್ವಪಕ್ಷವನ್ನು ಮಾಡಲು ಬರುವಾಗ ಪ್ರಕರಣವು ವಿಚ್ಛೇದವಾಗಿದೆಯೆಂಬ ಉತ್ತರವು ತಪ್ಪಾಗುತ್ತದೆ.

नहि जीवस्य द्युभ्वाद्यायतनत्वं शङ्कमानेनादृश्यत्वादिकं शङ्कितुमशक्यम् ।

ಜೀವನು ದ್ಯುಭ್ವಾದ್ಯಾಯತನನಾಗಬಹುದೆಂದು ಶಂಕಿಸುವ ನಿನಗೆ ಆದೃಶ್ಯತ್ವಾದಿಗಳು ಜೀವನಲ್ಲಿ ಬರುತ್ತವೆ ಎಂಬ ಆಶಂಕೆಯು ಕಷ್ಟವಾಗುತ್ತದೇನು? ಅಂದರೆ ಕಷ್ಟಕರವಾದ ದ್ಯುಭ್ವಾದ್ಯಾಯತನತ್ವವನ್ನೇ ಆಶಂಕಿಸಿದ ಮೇಲೆ ಸುಲಭವಾದ ಅದೃಶ್ಯತ್ವಾದಿಗಳನ್ನು ಆಶಂಕಿಸುವುದೇನು ಶ್ರಮಸಾಧ್ಯವಲ್ಲ.

त्वयाऽपि हि ''सर्वत्र प्रसिद्धोपदेशात्'' इत्यत्रैकवाक्यत्वाय ''मनोमयः'' इत्यादिवत् ''सर्वं खल्विदं ब्रह्म'' इत्यापि जीवविषयमित्येव पूर्वपक्षितमिति ।

ಮತ್ತು ರಾಮಾನುಜರೂ ಸಹ 'ಸರ್ವತ್ರ ಪ್ರಸಿದ್ಧೋಪದೇಶಾತ್' ಎಂಬಲ್ಲಿ ಏಕವಾಕ್ಯತಾಕ್ಕೋಸ್ಕರ 'ಮನೋಮಯಃ' ಇತ್ಯಾದಿಗಳಂತೆ 'ಸರ್ವಂ ಖಲ್ವಿದಂ ಬ್ರಹ್ಮ' ಮೊದಲಾದ ವಾಕ್ಯಗಳನ್ನು ಜೀವವಿಷಯಕವೆಂದೇ ಪೂರ್ವಪಕ್ಷ ಮಾಡಿದ್ದಾರೆ. ಆದ್ದರಿಂದ ಏಕವಾಕ್ಯತ್ವವನ್ನು ಒಪ್ಪಿಯೇ ಪೂರ್ವಪಕ್ಷ ಮಾಡಲು ಬರುವಾಗ ಪ್ರಕರಣಕ್ಕೆ ವಿಚ್ಛೇದ ಒಪ್ಪಿದ್ದು ತಪ್ಪಾಗುತ್ತದೆ.

टीकाक्षरार्थस्तु । आरभ्याधीतत्वात् इत्यनेनान्यप्रकरणाधीतत्वं न विवक्षितम् । येनान्यप्रकरणाधीतस्याप्रकरणित्वनियमाद्विरुद्धो हेतुः स्यात् । किन्तु स्वस्यैवोपक्रम्य पठितत्वम् । इतरत् स्पष्टम् ।।

ಟೀಕೆಯ ಕಠಿಣಪದಾರ್ಥ ಹೀಗಿದೆ - 'ಪ್ರಕರಣಾತ್' ಎಂಬ ಸೂತ್ರದ ಟೀಕೆಯಲ್ಲಿ 'ಆರಭ್ಯಾಧೀತತ್ವೇನ' ಎಂಬ ಶಬ್ದವನ್ನು ಪ್ರಯೋಗಿಸಿದ್ದಾರೆ. ಇದನ್ನು ನೋಡಿದಾಗ ಬೇರೆ ಪ್ರಕರಣದಲ್ಲಿ ಹೇಳಿದ್ದನ್ನು ಆರಂಭಿಸಿ ಅಧ್ಯಯನ ಮಾಡಲಾಗಿದೆ ಎಂಬರ್ಥವು ಭಾಸವಾಗುತ್ತದೆ. ಇದು ತಪ್ಪು. 'ಅನ್ಯಪ್ರಕರಣ ಅಧೀತತ್ವ' ಎಂಬರ್ಥವನ್ನು ಟೀಕಾಕಾರರು ವಿವಕ್ಷಿಸಿಲ್ಲ. ಹಾಗೆ ವಿವಕ್ಷಿಸಿದ್ದರೆ ಬೇರೆ ಪ್ರಕರಣದಲ್ಲಿ ಅಧ್ಯಯನ ಮಾಡಿದ್ದು ಈ ಪ್ರಕರಣಕ್ಕೆ ಸಂಬಂಧ ಪಡದ ಕಾರಣ ವಿರುದ್ಧವಾದ ಹೇತುವಾಗುತ್ತದೆ ಎಂದಾಗುತ್ತಿತ್ತು. ಆದ್ದರಿಂದ 'ಆರಭ್ಯಾಧೀತತ್ವೇನ' ಎಂಬುದಕ್ಕೆ ತಾನೇ ಸ್ವತಃ ಉಪಕ್ರಮದಲ್ಲಿ ಪ್ರಸಕ್ತನಾಗಿದ್ದಾನೆ. ಅವನನ್ನೇ ಅಧ್ಯಯನ ಮಾಡುತ್ತಿದ್ದಾರೆ ಎಂದರ್ಥ. ಆದ್ದರಿಂದ ಇದು ವಿಷ್ಣುಪ್ರಕರಣವಾಗಿದೆ ಎಂದು ವಿವಕ್ಷಿಸಿದಾಗ ಹೇತು ವಿರುದ್ಧವಾಗುವುದಿಲ್ಲ. ಉಳಿದ ಟೀಕೆಯ ಕಠಿಣಪದಾರ್ಥಗಳನ್ನು ಉಪನ್ಯಾಸ ಮುಖದಿಂದಲೇ ವ್ಯಾಖ್ಯಾನಿಸುವಾಗಲೇ ಸ್ಪಷ್ಟಪಡಿಸಿದ್ದಾಗಿದೆ.

अतो न मिथ्याभेदपरत्वमिति ।। 'नानुमानम्' इति सूत्रस्यानुमानं भेदमिथ्यात्वे न मानम् । भेदस्य सत्यत्वप्रतिपादकशब्दात् । अनुमानमूलभूतस्य भेदमिथ्यात्वप्रतिपादकशब्दस्याभावाच्चेति वर्णकान्तरं सूचितमिति द्रष्टव्यम् ।। ७ ।। द्युभ्वाद्यधिकरणम् ।। १ ।।

।। इति श्रीब्रह्मण्यतीर्थपूज्यश्रीपादशिष्यव्यासतीर्थविरचितायां तात्पर्यचन्द्रिकायां द्युभ्वाद्यधिकरणं सम्पूर्णम् ।।

ಟೀಕೆಯಲ್ಲಿ 'ಅತೋ ನ ಮಿಥ್ಯಾಭೇದಪರತ್ವಮ್' ಎಂದು ಹೇಳಿದ್ದಾರೆ. ಹೀಗೆ ಹೇಳಿದ್ದರಿಂದ 'ನಾನುಮಾನಮ್' ಎಂಬ ಸೂತ್ರವನ್ನು ಎರಡು ಬಗೆಯಲ್ಲಿ ವ್ಯಾಖ್ಯಾನಿಸಿದಂತಾಯಿತು. 'ನಾನುಮಾನಮ್' ಎಂಬ ಸೂತ್ರಕ್ಕೆ ಅನುಮಾನವು ಮಿಥ್ಯಾಭೂತವಾದ ಭೇದವಿಷಯದಲ್ಲಿ ಪ್ರಮಾಣವಾಗುವುದಿಲ್ಲ. ಏಕೆಂದರೆ ಭೇದವೂ ಸತ್ಯವಾಗಿದೆಯೆಂದು ಪ್ರತಿಪಾದನೆ ಮಾಡುವ ಅನೇಕ ಶಬ್ದಗಳಿರುವ ಕಾರಣ ಎಂಬುದು ಒಂದು ಬಗೆಯ ವ್ಯಾಖ್ಯಾನ. ಅಥವಾ ಅನುಮಾನಕ್ಕೆ ಮೂಲಭೂತವಾದ ಭೇದಮಿಥ್ಯಾತ್ವ ಪ್ರತಿಪಾದಕವಾದ ಶಬ್ದಗಳಿರುವುದಿಲ್ಲವೆಂಬುದು ಎರಡನೆಯ ವ್ಯಾಖ್ಯಾನ. ಇದನ್ನು ಟೀಕೆಯಲ್ಲಿ 'ಅತೋ ನ ಮಿಥ್ಯಾಭೇದಾಪರತ್ವಮ್' ಎಂಬ ವಾಕ್ಯದಿಂದ ಸೂಚಿಸಿದ್ದಾರೆಂದು ತಿಳಿಯಬೇಕು.

ಇಲ್ಲಿಗೆ ಶ್ರೀವ್ಯಾಸತೀರ್ಥರಿಂದ ರಚಿತವಾದ ತಾತ್ಪರ್ಯಚಂದ್ರಿಕೆಯ ಕನ್ನಡಾನುವಾದದಲ್ಲಿ
ದ್ಯುಭ್ವಾದ್ಯಧಿಕರಣವು ಸಂಪೂರ್ಣವಾಯಿತು.

ಪ್ರಕಾಶಃ –

ಕೇಚಿತ್ತ್ವಿತಿ ।। ದ್ಯುಭ್ವಾದ್ಯಾಯತನಂ ಜೀವಃ ಪರಮಾತ್ಮಾ ವೇತಿ ಸಂಶಯೇ ಮನಃಪ್ರಭೃತೀನ್ದ್ರಿಯಾಧಾರ-ತ್ವನಾಡೀಸಮ್ಬನ್ಧಜಾಯಮಾನತ್ವಾದಿಲಿಙ್ಗಾನಾಂ ಶ್ರವಣಾತ್ತದ್ಬಲೇನ ದ್ಯುಪೃಥಿವ್ಯಾದ್ಯಾಯತನತ್ವಾದೇರ್ಜೀವೇ ಸ್ವರೂಪೇಣ ವಾ ಕರ್ಮದ್ವಾರಾ ವಾ ಮುಕ್ತಾವಸ್ಥಾಯಾಂ ವಿಕಸಿತೇನ ಜ್ಞಾನೇನ ವಾ ಕಥಞ್ಚಿನ್ನೇಯತ್ವಾಜ್ಜೀವ ಏವ ದ್ಯುಭ್ವಾದ್ಯಾಯತನಮಿತಿ ಪ್ರಾಪ್ತೇ,

ವಿವರಣೆ - ರಾಮಾನುಜರ ಅಧಿಕರಣವನ್ನು 'ಕೇಚಿತ್' ಇತ್ಯಾದಿ ವಾಕ್ಯದಿಂದ ವಿವರಿಸುತ್ತಿದ್ದಾರೆ. ದ್ಯುಭ್ವಾದ್ಯಾಯತನನಾದವನು ಜೀವನೋ? ಅಥವಾ ಪರಮಾತ್ಮನೋ? ಎಂದು ಸಂಶಯ. ಮನಸ್ಸೇ ಮೊದಲಾದ ಇಂದ್ರಿಯಗಳನ್ನು ಧಾರಣ ಮಾಡಿರುವಿಕೆ. ನಾಡಿಗಳ ಸಂಬಂಧ, ಜಾಯಮಾನತ್ವ ಮೊದಲಾದ ಲಿಂಗಗಳು ಇವೆಲ್ಲವೂ ಕೇಳಿಸುತ್ತಿರುವುದರಿಂದ ಸ್ವರ್ಗ, ಪೃಥಿವೀ ಮೊದಲಾದವುಗಳಿಗೆ ಆಧಾರನಾಗಿರುವವನು ಇಂದ್ರಾದಿ ಜೀವರಾಗಿದ್ದಾರೆಂದು ಹೇಳಬಹುದು. ಅಥವಾ ಕರ್ಮದ ಮೂಲಕ ಸಕಲ ಜೀವರೂ ಲೋಕಾಧಾರರಾಗಿದ್ದಾರೆನ್ನಬಹುದು. ಅಥವಾ ಮುಕ್ತಾವಸ್ಥೆಯಲ್ಲಿ ವಿಕಸಿತವಾದ ಜ್ಞಾನದಿಂದ ಲೋಕಾಧಾರರಾಗಿದ್ದಾರೆಂದು ಹೇಳಬಹುದು. ಹೀಗೆ ಜೀವನೇ ದ್ಯುಭ್ವಾದ್ಯಾಯತನನೆಂದು ಪೂರ್ವಪಕ್ಷ.

ಪ್ರಕಾಶಃ – ''ತಮೇವೈಕಂ ಜಾನಥ ಆತ್ಮಾನಮ್ । ಅಮೃತಸ್ಯೈಷ ಸೇತುಃ । ಯಸ್ಸರ್ವಜ್ಞಃ'' ಇತ್ಯಾದಿಪರಮಾತ್ಮಸಾಧಾರಣಶಬ್ದಾತ್ ''ನಾಮರೂಪಾದ್ವಿಮುಕ್ತಃ ಪರಾತ್ಪರಂ ಪುರುಷಮುಪೈತಿ'' ಇತಿ ನಾಮರೂಪಾತ್ಮಕಬನ್ಧಾನ್ಮುಕ್ತಸ್ಯ ಪ್ರಾಪ್ಯತಯಾ ವ್ಯಪದೇಶಾತ್ ಮನಃಪ್ರಭೃತೀನ್ದ್ರಿಯಾಧಾರತ್ವಸ್ಯ ಸರ್ವಾಧಾರೇ ಪರೇ ಪರಮಾತ್ಮನಿ ''ಸನ್ತತೈ ಶಿಲಾಭಿಸ್ತು ಲಮ್ಬತ್ಯಾಕೋಶಸನ್ನಿಭಮ್'' ಇತ್ಯಾದಿಶ್ರುತ್ಯಾ ನಾಡ್ಯಾಧಾರತ್ವಸ್ಯ ಹೃದಯಾಧಾರದ್ವಾರಾ ''ಅಜಾಯಮಾನೋ ಬಹುಧಾ ವಿಜಾಯತೇ'' ಇತಿ ಶ್ರುತ್ಯಾ ಚಾಕರ್ಮಕೃತಃ ಸ್ವೇಚ್ಛೋಪಾತ್ತದಿವ್ಯವಿಗ್ರಹಯೋಗೇನ ಜಾಯಮಾನತ್ವಸ್ಯಾಪಿ ಪರಮಾತ್ಮನಿ ಸಮ್ಭವಾತ್ಸ ಏವ ದ್ಯುಭ್ವಾದ್ಯಾಯತನಮಿತಿ ಸಿದ್ಧಾನ್ತ ಇತ್ಯಾಹುರಿತ್ಯರ್ಥಃ ।

'ತಮೇವೈಕಂ ಜಾನಥ ಆತ್ಮಾನಮ್ । ಅಮೃತಸ್ಯೈಷ ಸೇತುಃ । ಯಸ್ಸರ್ವಜ್ಞಃ' ಇವೇ ಮೊದಲಾದ ಶ್ರುತಿಗಳಲ್ಲಿ ಪರಮಾತ್ಮನ ಆಸಾಧಾರಣವಾದ ಆತ್ಮಾ ಮೊದಲಾದ ಶಬ್ದಗಳು ಕೇಳಿಸುತ್ತಿವೆ. ಮತ್ತು 'ನಾಮರೂಪಾದ್ವಿಮುಕ್ತಃ ಪರಾತ್ಪರಂ ಪುರುಷಮುಪೈತಿ' ಎಂಬ ಶ್ರುತಿಯಲ್ಲಿ ನಾಮರೂಪಾತ್ಮಕವಾದ ಸಂಸಾರಬಂಧದಿಂದ ಮುಕ್ತನಾಗಿ ಪರಮಾತ್ಮನನ್ನು ಹೊಂದುತ್ತಾನೆಂದು ಮುಕ್ತಪ್ರಾಪ್ಯತ್ವಲಿಂಗವೂ ಸಹ ಕೇಳಿಸುತ್ತಿದೆ. ಸಕಲಕ್ಕೂ ಆಧಾರನಾದ್ದರಿಂದ ಮನಸ್ಸು ಮೊದಲಾದ ಇಂದ್ರಿಯಗಳಿಗೂ ಸಹ ಪರಮಾತ್ಮನು ಆಧಾರನಾಗಿದ್ದಾನೆ. ಮತ್ತು 'ಸಂತತೈಂ ಶಿಲಾಭಿಸ್ತುಲಂಬತ್ಯಾ ಕೋಶಸನ್ನಿಭಮ್' ಇತ್ಯಾದಿ ಶ್ರುತಿಯಿಂದ ಹೃದಯ ಆಧಾರದ ಮೂಲಕ ನಾಡಿಗೆ ಆಧಾರನು ಆಗಿದ್ದಾನೆಂದೂ ತಿಳಿಯುತ್ತದೆ. 'ಅಜಾಯಮಾನೋ ಬಹುಧಾ ವಿಜಾಯತೇ' ಇತ್ಯಾದಿ ಶ್ರುತಿಯಿಂದ ಸ್ವೇಚ್ಛೆಯಿಂದ ಸ್ವೀಕರಿಸುವ ಅನೇಕ ರೂಪಗಳ ಮೂಲಕ ಜಾಯಮಾನತ್ವವೆಂಬ ಲಿಂಗವನ್ನೂ ಸಹ ಪರಮಾತ್ಮನಲ್ಲಿ ಉಪಪಾದಿಸಬಹುದು. ಆದ್ದರಿಂದ ಪರಮಾತ್ಮನೇ

ದ್ಯುಭ್ವಾದ್ಯಾಯತನನಾಗಿದ್ದಾನೆಂದು ಸಿದ್ಧಾಂತ.

ಪ್ರಕಾಶಃ – ನನು 'नानुमानम्' इति सूत्रे प्रधाननिरासप्रतीतेर्जीव एवेति कथं पूर्वपक्ष इत्यतश्श्रुतप्रकाशोक्तमनुवदति – **गौणश्चेदिति ।।**

ಈ ಅಧಿಕರಣದ 'ನಾನುಮಾನಮ್' ಎಂಬ ಸೂತ್ರದಲ್ಲಿ ಪ್ರಕೃತಿಯನ್ನು ಲೋಕಾಧಾರವಲ್ಲವೆಂದು ನಿರಾಕರಿಸಿದ್ದರಿಂದ ಜೀವನೊಬ್ಬನೇ ಪೂರ್ವಪಕ್ಷಕ್ಕೆ ವಿಷಯನಾಗಿದ್ದಾನೆಂದು ಹೇಗೆ ಹೇಳುತ್ತೀರಿ? ಎಂಬ ಪ್ರಶ್ನೆಗೆ ಶ್ರುತಪ್ರಕಾಶದಲ್ಲಿ ಹೇಳಿದ್ದನ್ನು 'गौणश्चेत्' ಎಂಬ ವಾಕ್ಯದಿಂದ ಅನುವಾದ ಮಾಡುತ್ತಿದ್ದಾರೆ.

ಪ್ರಕಾಶಃ – तत्र हि 'तदैक्षत' इतीक्षणं प्रधाने गौणमिति शङ्किते ''अनेन जीवेनात्मना'' इत्यात्मपदप्रयोगात्तस्य जडेऽयोगादित्युक्तेरिति भावः ।

ಶ್ರುತಪ್ರಕಾಶದಲ್ಲಿ ಹೀಗಿದೆ - ಈಕ್ಷತ್ಯಧಿಕರಣದಲ್ಲಿಯೇ ಪ್ರಧಾನವನ್ನು ನಿರಾಕರಿಸಿದ್ದರಿಂದ ಇಲ್ಲಿ ಅದು ಪೂರ್ವಪಕ್ಷಕ್ಕೆ ವಿಷಯವಾಗುವುದಿಲ್ಲ. 'गौणश्चेन्न आत्मशब्दात्' ಎಂಬ ಸೂತ್ರದಲ್ಲಿ 'ತದೈಕ್ಷತ' ಎಂಬ ಶ್ರುತಿಯಿಂದ ಕೇಳಿಸುತ್ತಿರುವ ಜ್ಞಾನವಿಷಯತ್ವವು ಪ್ರಧಾನದಲ್ಲಿ ಗೌಣವಾಗಿ ಹೇಳಬಹುದಲ್ಲವೇ? ಎಂದು ಶಂಕೆಯು ಪ್ರಾಪ್ತವಾದರೆ 'अनेन जीवेनात्मना' ಎಂಬುದಾಗಿ ಶ್ರುತಿಯು 'ಆತ್ಮನಾ' ಎಂಬ ಪದವನ್ನು ಪ್ರಯೋಗಿಸಿದೆ. ಜಡವಾದ ಪ್ರಕೃತಿಯಲ್ಲಿ ಈ ಆತ್ಮಪದವು ಯುಕ್ತವಾಗುವುದಿಲ್ಲವೆಂದು ಹೇಳಿದ್ದಾರೆ. ಅಲ್ಲಿಯೇ ನಿರಾಕೃತವಾಗಿರುವಾಗ ಪುನಃ ಇಲ್ಲಿ ಪ್ರಧಾನವಿಷಯಕವಾದ ಪೂರ್ವಪಕ್ಷವು ಹುಟ್ಟಲು ಸಾಧ್ಯವಿಲ್ಲ.

ಪ್ರಕಾಶಃ – 'नानुमानम्' इति प्रधाननिरासो दृष्टान्तत्वेनोपयुज्यते । यथाप्रधानं न भवति तथा प्राणभृज्जीवोऽपि नेतीति भावः ।

ಆದ್ದರಿಂದ 'ನಾನುಮಾನಮ್' ಎಂಬ ಸೂತ್ರದಲ್ಲಿ ನಿರಾಕರಿಸಲ್ಪಟ್ಟ ಪ್ರಧಾನಕ್ಕೆ ಲೋಕಾಧಾರತ್ವವು ದೃಷ್ಟಾಂತವೆಂದು ತಿಳಿಯಬೇಕು. ಯಾವರೀತಿಯಾಗಿ ಪ್ರಧಾನವು ಲೋಕಾಧಾರವಾಗುವುದಿಲ್ಲವೋ, ಅದರಂತೆ ಪ್ರಾಣಧಾರಕನಾದ ಜೀವನೂ ಸಹ ಲೋಕಾಧಾರನಾಗುವುದಿಲ್ಲವೆಂದು ಅಭಿಪ್ರಾಯ.

ಪ್ರಕಾಶಃ – रुद्रादीति ।। रुद्रवाय्वादेरपीशशब्दसमाख्याभ्यां प्राप्तिभावादिति भावः । 'नानुमानम्' इति सूत्र इति दृष्टान्तत्वकल्पनं त्वयुक्तम् । कल्पकाभावादतिशयाभावाच्चेति भावः ।

ರಾಮಾನುಜರ ಅಧಿಕರಣಶರೀರವನ್ನು 'ರುದ್ರಾದಿ' ಇತ್ಯಾದಿ ವಾಕ್ಯದಿಂದ ನಿರಾಕರಿಸುತ್ತಿದ್ದಾರೆ. ಶ್ರುತಿಯಲ್ಲಿ ರುದ್ರ ಹಾಗೂ ವಾಯುದೇವತೆಗಳಲ್ಲಿಯೂ ಲೋಕಾಧಾರತ್ವವು ಬರಬಹುದೆನ್ನಲು ಸಮಾಖ್ಯಾಪ್ರಮಾಣವು ಆಧಾರವಾಗಿದೆ. ಹೀಗೆ ರುದ್ರಾದಿಗಳೂ ಸಹ ಪೂರ್ವಪಕ್ಷಕ್ಕೆ ವಿಷಯವಾಗಿರುವಾಗ ಅವರನ್ನು ಬಿಟ್ಟು ಜೀವನು ಮಾತ್ರ ಪೂರ್ವಪಕ್ಷಕ್ಕೆ ವಿಷಯನಾಗಿದ್ದಾನೆಂಬ ಕಲ್ಪನೆಯು ತಪ್ಪಾಗುತ್ತದೆ. ಒಂದು ವೇಳೆ ರುದ್ರಾದಿಗಳು ಲೋಕಾಧಾರವೆನ್ನಲು ವ್ಯಾವರ್ತಕ ಧರ್ಮಗಳಿದ್ದಲ್ಲಿ ಜೀವನನ್ನು ಮಾತ್ರ

ವಿವಕ್ಷಿಸಬಹುದಿತ್ತು. ಮತ್ತೇನೆಂದರೆ 'ನಾನುಮಾನಮ್' ಎಂಬ ಸೂತ್ರವು ಕೇವಲ ಪ್ರಕೃತಿಯ ದೃಷ್ಟಾಂತವನ್ನಷ್ಟೇ ನೀಡುತ್ತಿದೆಯೆಂಬ ಕಲ್ಪನೆಯೂ ಸಹ ತಪ್ಪಾಗಿದೆ. ಏಕೆಂದರೆ ಇದು ದೃಷ್ಟಾಂತವನ್ನು ಹೇಳುತ್ತದೆನ್ನಲು 'ಯಥಾ', 'ತಥಾ' ಇತ್ಯಾದಿ ಶಬ್ದಗಳೇನೂ ಇರುವುದಿಲ್ಲ. ಮತ್ತು ದೃಷ್ಟಾಂತವನ್ನು ನೀಡಿದ್ದರಿಂದ ಅತಿಶಯವಾದ ಅರ್ಥವನ್ನೂ ಸಹ ಹೇಳಿದಂತಾಗಲಿಲ್ಲ.

ಪ್ರಕಾಶಃ – ಅಸ್ಮಿನಿತಿ ।। ''ರಸಶಬ್ದನಿರ್ದಿಷ್ಟೇऽಸ್ಮಿನ್ಆನನ್ದಮಯೇऽಸ್ಯ ಜೀವಸ್ಯ ತಲ್ಲಾಭಾದಾನನ್ದಯೋಗಂ ಶಾಸ್ತಿ ''ರಸೋ ವೈ ಸಃ । ರಸಞ್ ಹ್ಯೇವಾಯಂ ಲಬ್ಧ್ವಾऽऽನನ್ದೀಭವತಿ'' ಇತಿ ಶಾಸ್ತ್ರಮ್ । ಅತೋ ನ ಜೀವಃ'' ಇತ್ಯರ್ಥೋಕ್ತೇರಿತಿ ಭಾವಃ ।

ಆನಂದಮಯಾಧಿಕರಣದಲ್ಲಿ ಪ್ರಧಾನವು ನಿರಾಕೃತವಾದ್ದರಿಂದ ಪ್ರಕೃತ ಪೂರ್ವಪಕ್ಷಕ್ಕೆ ಅದು ವಿಷಯವಾಗುವುದಿಲ್ಲವೆನ್ನುವುದಾದರೆ ಜೀವನೂ ಸಹ ಆನಂದಮಯಾಧಿಕರಣದ 'ಅಸ್ಮಿನ್ನಸ್ಯ ಚ' ಎಂಬ ಸೂತ್ರದಿಂದಲೇ ನಿರಾಕೃತನಾಗಿದ್ದಾನೆ. 'ಅಸ್ಮಿನ್ನಸ್ಯ ಚ' ಎಂಬ ಸೂತ್ರಕ್ಕೆ ರಾಮಾನುಜರ ವ್ಯಾಖ್ಯಾನ ಹೀಗಿದೆ - ಅಸ್ಮಿನ್ = ರಸಶಬ್ದ ನಿರ್ದಿಷ್ಟನಾದ ಈ ಆನಂದಮಯನಲ್ಲಿ, ಅಸ್ಯ = ಜೀವನಿಗೆ, ತದ್ಯೋಗಂ = ಆನಂದದ ಪ್ರಾಪ್ತಿಯನ್ನು, ಶಾಸ್ತಿ = 'ರಸೋ ವೈ ಸಃ । ರಸಗ್ಹ್ಯೇವಾಯಂ ಲಬ್ಧ್ವಾऽऽನಂದೀಭವತಿ' ಎಂಬಲ್ಲಿ ಇದನ್ನು ಹೇಳಲಾಗಿದೆ. ಆದ್ದರಿಂದ ಆನಂದಮಯನ ಪ್ರಾಪ್ತಿಯಿಂದ ಜೀವನಿಗೆ ಆನಂದವನ್ನು ಹೇಳಲಾಗಿದೆ. ಇದರಿಂದ ಜೀವನು ಮುಕ್ತೋಪಸೃಪ್ಯತ್ವ ಎಂಬ ಲಿಂಗದಿಂದ ಆನಂದಮಯನಲ್ಲವೆಂದು ಹೇಳಿದ್ದಾಗಿದೆ. ಹೀಗೆ ಜೀವನನ್ನು ನಿರಾಕರಿಸಿದ ಮೇಲೆ ಪುನಃ ಇಲ್ಲಿ ಜೀವವಿಷಯಕವಾದ ಪೂರ್ವಪಕ್ಷವು ಹುಟ್ಟಲು ಸಾಧ್ಯವಿಲ್ಲ.

ಪ್ರಕಾಶಃ – ಪ್ರಕಾಶೇತಿ ।। ತತ್ರ ಯಥಾ ಸ್ವರೂಪಾರ್ಥತ್ವಮಾತ್ಮಶಬ್ದಸ್ಯ ತಥಾ ಜೀವ (ದೀಪ) ವಚ್ಚಾऽऽಪಿ ಪ್ರಧಾನೇ 'ಮಮಾऽऽತ್ಮಾಃ ಭದ್ರಸೇನ' ಇತಿವದಾತ್ಮೀಯೇ ಪ್ರಧಾನ ಆತ್ಮಶಬ್ದಪ್ರಯೋಗ ಇತಿ ತನ್ನಿಷ್ಠಸೂತ್ರವ್ಯಾವರ್ತ್ಯಶಙ್ಕಾಯಾಂ ತ್ವದುಕ್ತರೀತ್ಯಾ ಕಥಞ್ಚಿದರ್ಥೋऽಸ್ತ್ವಿತ್ಯರ್ಥಃ ।

ಜಾಯಮಾನತ್ವವೆಂಬ ನಿರವಕಾಶಲಿಂಗದಿಂದ ಮುಕ್ತೋಪಸೃಪ್ಯತ್ವಾದಿಗಳನ್ನು ಗೌಣವನ್ನಾಗಿ ವಿವಕ್ಷಿಸಿ ಪೂರ್ವಪಕ್ಷ ಮಾಡಬಹುದಲ್ಲವೇ? ಎಂದರೆ, ಅದೇ ನಿರವಕಾಶವಾದ ಜಾಯಮಾನತ್ವಲಿಂಗದಿಂದ ಆತ್ಮಶಬ್ದವನ್ನೂ ಸಹ ಗೌಣವನ್ನಾಗಿ ವಿವಕ್ಷಿಸಬಹುದು. ಯಾವರೀತಿಯಾಗಿ 'ಪ್ರಕಾಶಾತ್ಮಾ ಪ್ರದೀಪಃ' ಎಂಬಲ್ಲಿರುವ ಆತ್ಮಶಬ್ದಕ್ಕೆ ಸ್ವರೂಪ ಎಂಬರ್ಥವನ್ನಷ್ಟೇ ಮಾಡಲಾಗುತ್ತದೋ, ಅದರಂತೆ ಜಡವಾದ ಪ್ರಕೃತಿಯಲ್ಲಿಯೂ 'ಮಮಾತ್ಮಾ ಭದ್ರಸೇನಃ' ಭದ್ರಸೇನನು ನನಗೆ ತುಂಬಾ ಆತ್ಮೀಯನು ಎಂಬ ಪ್ರಯೋಗದಂತೆ ಆತ್ಮೀಯ ಎಂಬರ್ಥದಲ್ಲಿ ಪ್ರಕೃತಿಯಲ್ಲಿಯೂ ಆತ್ಮಶಬ್ದವನ್ನು ಪ್ರಯೋಗಿಸಬಹುದು. ಹಾಗೂ 'ತನ್ನಿಷ್ಠಸ್ಯ ಮೋಕ್ಷೋಪದೇಶಾತ್' ಎಂಬ ಸೂತ್ರದಲ್ಲಿ ಪ್ರಕೃತಿಯಲ್ಲಿಯೂ ಆತ್ಮಶಬ್ದವನ್ನು ಹೀಗೆ ಪ್ರಯೋಗಿಸಬಹುದಲ್ಲವೇ? ಎಂಬ ಆಶಂಕೆಯನ್ನು ನೀವೇ ಮಾಡಿರುತ್ತೀರಿ. ಅದರ ಪ್ರಕಾರ ಈ ಅಧಿಕರಣದಲ್ಲಿಯೂ ಆತ್ಮಶಬ್ದಕ್ಕೆ ಆತ್ಮೀಯವೆಂಬರ್ಥವನ್ನು ಸ್ವೀಕರಿಸಿ ಪ್ರಕೃತಿಯೂ ಸಹ ಲೋಕಾಧಾರವಾಗಿದೆಯೆಂದು ಪೂರ್ವಪಕ್ಷ ಮಾಡಬಹುದೆಂದರ್ಥ.

ಪ್ರಕಾಶಃ – ಏವಂ ಪೂರ್ವಪಕ್ಷಂ ನಿರಸ್ಯ ಸೂತ್ರಾರ್ಥಮಪಿ ನಿರಾಹ – ಕಿಞ್ಚೇತಿ ।। ಆದಿಪದೇನ ಸ್ಥಿತ್ಯದನಪ್ರತಿಪಾದಕಶಬ್ದಗ್ರಹಃ । ಉಭಾಭ್ಯಾಮುಕ್ತಂ ಸಮಾಧಿಂ ನಿರಸ್ಯ ಭಾಷ್ಯಾಭ್ಯುಕ್ತಂ ಸ್ಥಾಪಯಿತುಂ ಗತಾರ್ಥತ್ವಮಾಶಙ್ಕತೇ – ನನ್ವಿತಿ ।।

ಹೀಗೆ ಇಲ್ಲಿಯ ತನಕ ಪೂರ್ವಪಕ್ಷವನ್ನು ನಿರಾಕರಿಸಿ, ರಾಮಾನುಜರ ಸಿದ್ಧಾಂತವನ್ನೂ ಸಹ 'ಕಿಂಚ' ಇತ್ಯಾದಿ ವಾಕ್ಯಗಳಿಂದ ನಿರಾಕರಿಸುತ್ತಿದ್ದಾರೆ. 'ಮುಕ್ತೋಪಸೃಪ್ಯತ್ವಾದಿ' ಎಂಬಲ್ಲಿರುವ ಆದಿಪದದಿಂದ ಸ್ಥಿತ್ಯದನಪ್ರತಿಪಾದಕವಾದ ಶಬ್ದವನ್ನು ವಿವಕ್ಷಿಸಬೇಕು.

ಈ ಅಧಿಕರಣಕ್ಕೆ ಪುನರುಕ್ತಿದೋಷ ಬರುತ್ತದೆಂಬ ಆಶಂಕೆಯು ಎಲ್ಲರಿಗೂ ಸಮಾನ. ಮೊದಲು ಅದ್ವೈತಿಗಳು ಹಾಗೂ ರಾಮಾನುಜರು ಹೇಳುವ ಸಮಾಧಾನವನ್ನು ನಿರಾಕರಿಸಿ ಶ್ರೀಮದಾಚಾರ್ಯರು ಹೇಳಿದ ಸಮಾಧಾನವನ್ನು ಸ್ಥಾಪನೆ ಮಾಡಲು ಗ್ರಂಥಕಾರರು ಹೊರಟಿದ್ದಾರೆ. ಅದಕ್ಕೋಸ್ಕರ ಮೊದಲು ಪುನರುಕ್ತಿ ದೋಷವನ್ನು 'ನನು' ಇತ್ಯಾದಿ ಗ್ರಂಥದಿಂದ ಆಕ್ಷೇಪಿಸುತ್ತಿದ್ದಾರೆ.

ಪ್ರಕಾಶಃ – ಕೃತ್ವಾಚಿನ್ತಯೇತಿ ।। ''ಪ್ರಪಞ್ಚಾರ್ಥಮ್'' ಇತಿ ಭಾಷ್ಯಸ್ಯ ''ತನ್ಮಧ್ಯಾಪಠಿತಮಿತಿ ಕೃತ್ವಾಚಿನ್ತಯೇದಮಧಿಕರಣಂ ಪ್ರವೃತ್ತಮಿತ್ಯರ್ಥಃ'' ಇತಿ ಭಾಮತ್ಯುಕ್ತೇರಿತಿ ಭಾವಃ ।

ಅದ್ವೈತಿಗಳು ಅದೃಶ್ಯತ್ವಾಧಿಕರಣದಲ್ಲಿ ಹೇಳಿರುವ ದ್ಯುಭ್ವಾದ್ಯಾಯತನತ್ವವನ್ನೇ ಈ ಅಧಿಕರಣದಲ್ಲಿ ವಿವರಣೆ ಮಾಡಲಾಗಿದೆಯೆನ್ನುತ್ತಾರೆ. ಆದ್ದರಿಂದಲೇ ಶಾಂಕರಭಾಷ್ಯದಲ್ಲಿ 'ಪ್ರಪಂಚಾರ್ಥಮ್' ಎಂಬ ಪದವಿದೆ. ಇದನ್ನು ವ್ಯಾಖ್ಯಾನಿಸುತ್ತಾ, ಭಾಮತಿಯಲ್ಲಿ 'ತನ್ಮಧ್ಯೇ ಅಪಠಿತಮಿತಿ ಕೃತ್ವಾಚಿಂತಯಾ ಇದಮಧಿಕರಣಂ ಪ್ರವೃತ್ತಮ್ ಇತ್ಯರ್ಥಃ' ಅದೃಶ್ಯತ್ವಾಧಿಕರಣದ ವಿಷಯವಾಕ್ಯದ ಮಧ್ಯದಲ್ಲಿ ದ್ಯುಭ್ವಾದ್ಯಾಯತನತ್ವವನ್ನು ಹೇಳುತ್ತಿರುವ 'ಯಸ್ಮಿನ್ದ್ಯೌಃ' ಎಂಬ ವಾಕ್ಯವು ಪಠಿತವಾಗಿಲ್ಲ ಎಂದು ಇಟ್ಟುಕೊಂಡು ಈ ಅಧಿಕರಣದ ಪೂರ್ವಪಕ್ಷವು ಹೊರಟಿದೆ ಎಂದು ಹೇಳಲಾಗಿದೆ. ಹೀಗೆ 'ಕೃತ್ವಾಚಿಂತೆ' ಎಂಬುದನ್ನು ಅದ್ವೈತ ಭಾಷ್ಯವ್ಯಾಖ್ಯಾನದಲ್ಲಿ ಇರುವುದನ್ನೇ ಇಲ್ಲಿಯೂ 'ಕೃತ್ವಾ ಚಿಂತಯಾ' ಎಂದು ಹೇಳಿದ್ದಾರೆಂದು ತಿಳಿಯಬೇಕು.

ಪ್ರಕಾಶಃ – ಕಲ್ಪತರೂಕ್ತಮಾಹ – ನಚೇತಿ ।। ಗತ್ಯನ್ತರಾಭಾವಾದೇವಮಾಶ್ರೀಯತ ಇತಿ ಅತ ಆಹ – ಜಾಯಮಾನತ್ವೇತಿ ।।

ಕಲ್ಪತರುವಿನಲ್ಲಿ ನೀಡಿದ ಉತ್ತರವನ್ನು 'ನಚ' ಎಂಬ ವಾಕ್ಯದಿಂದ ಅನುವಾದ ಮಾಡಿದ್ದಾರೆ. ಬೇರೆ ಗತಿಯಿಲ್ಲದಿದ್ದಾಗ ಮಾತ್ರ ಕೃತ್ವಾಚಿಂತೆಯನ್ನು ಮಾಡಬೇಕೆಂದು ಗ್ರಂಥಕಾರರು ಹೇಳಿದರು. ಹಾಗಾದರೆ ಪ್ರಕೃತ ಈ ಅಧಿಕರಣದಲ್ಲಿಯೂ ಬೇರೆ ಗತಿಯಿಲ್ಲದ ಕಾರಣದಿಂದಲೇ ಕೃತ್ವಾಚಿಂತೆಯನ್ನು ಮಾಡುತ್ತಿದ್ದೇವೆಂದು ಅದ್ವೈತಿಗಳು ಆಕ್ಷೇಪಿಸಿದರೆ, 'ಜಾಯಮಾನತ್ವ' ಇತ್ಯಾದಿ ವಾಕ್ಯದಿಂದ ಉತ್ತರಿಸುತ್ತಿದ್ದಾರೆ.

प्रकाशः – 'अनुकृतेः' इत्यधिकरणे ''असम्भवानुकारसामर्थ्यलक्षणेन लिङ्गेन प्रकरणबाधया तेजोधातुरेव गम्यते'' इति भामत्युक्तदिशा तत्र लिङ्गात्प्रकरणबाधेन यथा पूर्वपक्षस्तथेति भावः । उत्कर्षेण वेति ।। पूषानुमन्त्रण-मन्त्रस्यैवास्मन्मतेऽत्तेत्यधिकरणपूर्वपक्षोक्तदिशेति भावः ।

ಅನುಕೃತ್ಯಧಿಕರಣದಲ್ಲಿ 'ಅಸಂಭವಾನುಕಾರಸಾಮರ್ಥ್ಯಲಕ್ಷಣೇನ ಲಿಂಗೇನ ಪ್ರಕರಣಬಾಧಯಾ ತೇಜೋಧಾತುರೇವ ಗಮ್ಯತೇ' ಅಸಂಭವಾನುಕಾರಸಾಮರ್ಥ್ಯವೆಂಬ ಲಿಂಗದಿಂದ ಪ್ರಕರಣವು ಬಾಧಿತವಾಗುತ್ತದೆ. ಆದ್ದರಿಂದ ತೇಜಸ್ಸೇ ಪೂರ್ವಪಕ್ಷಕ್ಕೆ ವಿಷಯವಾಗುತ್ತದೆಂದು ಭಾಮತಿಯಲ್ಲಿ ಹೇಳಲಾಗಿದೆ. ಇದರಿಂದ ಪ್ರಕರಣವು ಲಿಂಗದಿಂದ ಬಾಧಿತವಾಗುವ ಮೂಲಕ ಪೂರ್ವಪಕ್ಷ ಮಾಡಬಹುದೆಂದು ತಿಳಿಯುತ್ತದೆ. ಹೀಗೆಯೇ ಇಲ್ಲಿಯೂ ಸಹ ಮಾಡಬಹುದಿತ್ತು ಎಂದಭಿಪ್ರಾಯ. 'ಉತ್ಕರ್ಷೇಣ ವಾ' ಎಂಬುದಕ್ಕೆ ಹೀಗರ್ಥ - ಪೂರ್ವಮೀಮಾಂಸೆಯಲ್ಲಿ ಪೂಷಾನುಮಂತ್ರಣವೆಂಬ ಮಂತ್ರವು ಪ್ರಕೃತ ಆ ಯಾಗದಲ್ಲಿ ಸಂಬಂಧ ಪಡುವುದಿಲ್ಲ. ಆದ್ದರಿಂದ ಮತ್ತೊಂದು ಕಡೆ ಅದನ್ನು ಉತ್ಕರ್ಷ ಮಾಡುತ್ತಾರೆ. ಆದರಂತೆ 'ಯಸ್ಮಿನ್ದ್ಯೌಃ' ಎಂಬುದು ಆದೃಶ್ಯತ್ವಪ್ರಕರಣದಲ್ಲಿ ಸಂಬಂಧ ಪಡದಿದ್ದಾಗ ಬೇರೆ ಕಡೆ ಉತ್ಕರ್ಷ ಮಾಡಬಹುದು. 'ಅತ್ತಾಚರಾಚರಗ್ರಹಣಾತ್' ಎಂಬ ಸೂತ್ರದ ಪೂರ್ವಪಕ್ಷದಲ್ಲಿ ಈ ವಿಷಯವನ್ನು ನಾವು ಸಮರ್ಥಿಸಿದ್ದೇವೆ.

प्रकाशः – केचित्त्विति ।। 'यत्तदद्रेश्यम्' इत्यादिकमस्त्त्करीत्या ब्रह्मप्रकरणम् । 'यस्मिन्द्यौः' इत्यादिकं तु जीवस्यैव प्रकरणम् । इन्द्रियाधारत्वनाडीसम्बद्धत्वजायमान-त्वादिजीवलिङ्गैरिति ब्रह्मप्रकरणविच्छेदाशङ्कायामित्यर्थः ।

ರಾಮಾನುಜರ ಪುನರುಕ್ತಿ ಪರಿಹಾರ ಹೀಗಿದೆ - 'ಯತ್ತದದ್ರೇಶ್ಯಮ್' ಇತ್ಯಾದಿ ವಾಕ್ಯಗಳು ಹಿಂದೆ ಹೇಳಿದ ಪ್ರಕಾರ ಬ್ರಹ್ಮಪ್ರಕರಣವಾಗಲೀ, ಆದರೆ 'ಯಸ್ಮಿನ್ದ್ಯೌಃ' ಎಂಬ ವಾಕ್ಯವು ಬ್ರಹ್ಮಪ್ರಕರಣವಾಗುವುದಿಲ್ಲ. ಜೀವನಪ್ರಕರಣವೇ ಆಗುತ್ತದೆ. ಇಂದ್ರಿಯಾಧಾರತ್ವ, ನಾಡೀಸಂಬದ್ಧತ್ವ, ಜಾಯಮಾನತ್ವ ಮೊದಲಾದ ಲಿಂಗಗಳೆಲ್ಲವೂ ಜೀವವಿಷಯಕವೇ ಆಗಿದೆ. ಹೀಗೆ ಬ್ರಹ್ಮಪ್ರಕರಣಕ್ಕೆ ವಿಚ್ಛೇದಾಶಂಕೆಯು ಪ್ರಾಪ್ತವಾದರೆ ಈ ಅಧಿಕರಣವು ಹೊರಟಿದೆ ಎನ್ನುತ್ತಾರೆ.

प्रकाशः – ननु 'यत्तदद्रेश्यम्' इत्यादिनोक्तमदृश्यत्वादिकमनुभवविषयतया दृश्ये जीवे कथं शङ्कितुं शक्यमित्यत आह – न हीति ।।

'ಯತ್ತದದ್ರೇಶ್ಯಮ್' ಇತ್ಯಾದಿ ವಾಕ್ಯಗಳಿಂದ ಹೇಳಲ್ಪಟ್ಟ ಆದೃಶ್ಯತ್ವಾದಿಗಳನ್ನು ಅನುಭವಕ್ಕೆ ವಿಷಯನಾದ ಪ್ರಯುಕ್ತ ದೃಶ್ಯನಾದ ಜೀವನಲ್ಲಿ ಆಶಂಕಿಸಲು ಹೇಗೆ ಸಾಧ್ಯ ? ಎಂಬ ಪ್ರಶ್ನೆಗೆ 'ನಹಿ' ಎಂಬ ವಾಕ್ಯದಿಂದ ಉತ್ತರಿಸಿದ್ದಾರೆ.

ಪ್ರಕಾಶಃ – द्युभ्वाद्यायतनत्वं नीवेऽनुभवविरुद्धमपि शङ्कमानेन तस्यापि शङ्कितुं शक्यत्वादित्यर्थः । त्वयाऽपीति ।। तत्रैवास्माभिर्विवृतमेतत् ।

ಅನುಭವವಿರುದ್ಧವಾದ ಅದೃಶ್ಯತ್ವವನ್ನು ಜೀವನಲ್ಲಿ ಆಶಂಕಿಸುವುದಾದರೆ ದ್ಯುಭ್ವಾದ್ಯಾಯತನತ್ವವು ಜೀವನಲ್ಲಿ ಅನುಭವವಿರುದ್ಧವಾದರೂ ಸಹ ಆಶಂಕಿಸಲು ತೊಂದರೆಯಿಲ್ಲ ಎಂದು 'ನಹಿ' ಇತ್ಯಾದಿ ವಾಕ್ಯದ ಅಭಿಪ್ರಾಯ. 'ತ್ವಯಾऽಪಿ' ಎಂಬ ವಾಕ್ಯದಿಂದ ಇಲ್ಲಿ ಪ್ರಸ್ತಾಪನೆ ಮಾಡಿದ ವಿಷಯವನ್ನು ಸರ್ವಗತತ್ವಾಧಿಕರಣದಲ್ಲಿಯೇ ನಾವು ವಿವರಿಸಿದ್ದೇವೆ ಎಂದು ತಿಳಿಸಿದ್ದಾರೆ.

ಪ್ರಕಾಶಃ – यत्कश्चिदाह – द्युभ्वाद्यायतनं वायुप्रधानजीवानामन्यतम उत शिव इति संशये वाय्वादिलिङ्गदर्शनेन तेषामन्यतम इति प्राप्ते आत्मशब्दान्मुक्तोपसृप्यत्वलिङ्गात् 'अथ परा यया तदक्षरम्' इति प्रकरणाच्च शिव एवेति सिद्धान्त इति तदपेशलम् ।

ಶ್ಮವರ ಅಧಿಕರಣಶರೀರ ಹೀಗಿದೆ - ದ್ಯುಭ್ವಾದ್ಯಾಯತನನು ವಾಯು, ಪ್ರಕೃತಿ, ಜೀವ ಈ ಮೂವರಲ್ಲಿ ಯಾರಾದರೂ ಒಬ್ಬರಾಗುತ್ತಾರೋ, ಅಥವಾ ಶಿವನೋ ? ಎಂದು ಸಂಶಯ. ವಾಯು ಮೊದಲಾದವರ ಲಿಂಗವು ಕೇಳಿಸುತ್ತಿರುವುದರಿಂದ ಅವರಲ್ಲಿ ಯಾರಾದರೂ ಒಬ್ಬರು ದ್ಯುಭ್ವಾದ್ಯಾಯತನರೆಂದು ಪೂರ್ವಪಕ್ಷ. ಆತ್ಮಶಬ್ದ, ಮುಕ್ತೋಪಸೃಪ್ಯತ್ವವೆಂಬ ಲಿಂಗ, ಪರವಿದ್ಯಾವಿಷಯತ್ವ ಹಾಗೂ ಪ್ರಕರಣ ಇವುಗಳ ಬಲದಿಂದ ಶಿವನೇ ಲೋಕಾಧಾರನಾಗಿದ್ದಾನೆಂದು ಸಿದ್ಧಾಂತ.

ಇವರ ಅಧಿಕರಣಶರೀರವು ಹೇಯವಾಗಿದೆ.

ಪ್ರಕಾಶಃ – ''लोकाश्च लोकिनश्च विष्णावेवोताश्च प्रोताश्च'' इति विष्णुप्रापकस्यापि सत्त्वात् । आत्मश्रुत्यादेर्भाष्योक्तवचनजातेन विष्णवेकनिष्ठत्वात् । रुद्रश्रुतिलिङ्गानां विष्णवेकनिष्ठताया भाष्य एव प्रमाणगणेन समर्थनाच्च ।

'ಲೋಕಾಶ್ಚ, ಲೋಕಿನಶ್ಚ, ವಿಷ್ಣಾವೇವೋತಾಶ್ಚ, ಪ್ರೋತಾಶ್ಚ' ಇತ್ಯಾದಿಯಾಗಿ ವಿಷ್ಣುಪ್ರಾಪಕಲಿಂಗಗಳೂ ಸಹ ಇರುವಾಗ ವಿಷ್ಣುವನ್ನು ಬಿಡಲು ಕಾರಣವಿಲ್ಲ. ಮತ್ತು ಭಾಷ್ಯದಲ್ಲಿ ಉದಾಹರಿಸಿದ ಅನೇಕ ಶ್ರುತಿ, ಸ್ಮೃತಿಗಳ ಆಧಾರದಿಂದ ಕೇವಲ ವಿಷ್ಣುಪರವಾಗಿದೆಯೆಂದು ನಿರ್ಣಯವಾಗಿದೆ. ಮತ್ತು ರುದ್ರ ವಿಷಯಕವಾದ ಶ್ರುತಿಲಿಂಗಗಳೆಲ್ಲವೂ ಸಹ ವಿಷ್ಣುಪರವೇ ಆಗಿವೆಯೆಂಬ ವಿಚಾರವನ್ನು ಅನೇಕ ಪ್ರಮಾಣಗಳ ಆಧಾರದಿಂದ ಭಾಷ್ಯದಲ್ಲಿಯೇ ಸಮರ್ಥನೆ ಮಾಡಿದ್ದಾರೆ.

ಪ್ರಕಾಶಃ – आथर्वणभाष्ये सर्वशब्दप्रतिपाद्यत्वस्य सर्वशब्दवाच्यत्वस्य सर्वोत्तमत्वेन तस्यैव ज्ञेयत्वस्य प्रमाणनिचयोदाहरणेन तत्रैव समर्थितत्वात् ।

विस्तरभयान्नात्र तानि लिख्यन्ते । प्रकरणस्य वैष्णवतायाः प्रागेव समर्थितत्वाच्चेति ।

ಅಥರ್ವಣ ಭಾಷ್ಯದಲ್ಲಿ ಸರ್ವಶಬ್ದಪ್ರತಿಪಾದ್ಯತ್ವರೂಪವಾದ ಸರ್ವಶಬ್ದವಾಚ್ಯತ್ವವು ಸರ್ವೋತ್ತಮನಾದ ವಿಷ್ಣುವಿನಲ್ಲೇ ಉಪಪನ್ನವಾಗುತ್ತದೆ. ಆದ್ದರಿಂದ ಅವನೇ ಜ್ಞೇಯನಾಗಿದ್ದಾನೆಂದು ಅನೇಕ ಪ್ರಮಾಣಗಳ ಉದಾಹರಣೆಯಿಂದ ಸಮರ್ಥಿಸಿದ್ದಾರೆ. ಗ್ರಂಥವು ವಿಸ್ತಾರವಾಗುತ್ತದೆಂಬ ಭಯದಿಂದ ಇಲ್ಲಿ ಆ ಪ್ರಮಾಣಗಳನ್ನು ಬರೆದಿರುವುದಿಲ್ಲ. ಹಾಗೂ ಪ್ರಕರಣವೂ ಸಹ ವಿಷ್ಣುಪರವೇ ಆಗಿದೆಯೆಂದು ಈ ಹಿಂದೆಯೇ ಸಮರ್ಥಿಸಿದ್ದಾಗಿದೆ.

प्रकाशः – ''प्रकरणात्'' इति सूत्रे टीकायां ''द्वे विद्ये वेदितव्ये'' इति परविद्याविषयस्य वस्तुनोऽत्रारभ्याधीतत्वेनास्य विष्णुप्रकरणत्वात्'' इति वाक्ये विरुद्धप्रतीतिं निरस्यन्नर्थमाह – आरभ्येति ।।

'ಪ್ರಕರಣಾತ್' ಎಂಬ ಸೂತ್ರ ಟೀಕೆಯಲ್ಲಿ 'ದ್ವೇ ವಿದ್ಯೇ ವೇದಿತವ್ಯೇ' ಇತಿ ಪರವಿದ್ಯಾವಿಷಯಸ್ಯ ವಸ್ತುನೋಽತ್ರಾರಭ್ಯಾಧೀತತ್ವೇನಾಸ್ಯ ವಿಷ್ಣುಪ್ರಕರಣತ್ವಾತ್' ಎಂದು ಹೇಳಿದ್ದಾರೆ. ಪರವಿದ್ಯಾವಿಷಯತ್ವವನ್ನು ಆರಂಭದಲ್ಲಿ ಹೇಳಿರುವುದರಿಂದ ವಿಷ್ಣು ಪ್ರಕರಣವಾಗಿದೆಯೆಂದು ಈ ವಾಕ್ಯದ ಅಭಿಪ್ರಾಯ. ಆದರೆ 'ಆರಭ್ಯ ಅಧೀತತ್ವೇನ' ಎಂಬ ಪದಕ್ಕೆ ಈ ಅರ್ಥವೆಂದು ಸ್ಪಷ್ಟವಾಗಿ ಅರ್ಥವಾಗುವುದಿಲ್ಲ. ಹಾಗೂ ವಿರುದ್ಧಾರ್ಥದ ಪ್ರತೀತಿಯೇ ಬರುತ್ತದೆ. ಆದ್ದರಿಂದ ಗ್ರಂಥಕಾರರು 'ಆರಭ್ಯ' ಎಂಬ ವಾಕ್ಯದಿಂದ ವ್ಯಾಖ್ಯಾನಿಸುತ್ತಿದ್ದಾರೆ. ಅಂದರೆ ಬೇರೆ ಪ್ರಕರಣದಲ್ಲಿ ಪ್ರಸಕ್ತನಾದವನನ್ನು ಇಲ್ಲಿ ಅಧ್ಯಯನ ಮಾಡಲಾಗುತ್ತಿದೆ ಎಂದರ್ಥವಲ್ಲ ಎಂಬುದು ಇದರಿಂದ ಸ್ಪಷ್ಟವಾಗುತ್ತದೆ.

प्रकाशः – स्पष्टमिति ।। उपन्यासमुखेन विवृतमिति भावः । सूत्रोक्तभेदस्य मिथ्यात्वशङ्कां निरस्यान्ते ''अतो न मिथ्याभेदपरत्वं श्रुतेः'' इत्युक्तम् । तस्य सूत्रारूढतामाह –अतो न मिथ्येति ।।

'ಸ್ಪಷ್ಟಮ್' ಎಂದರೆ - ಉಳಿದ ಟೀಕೆಯ ಕಠಿಣಪದಾರ್ಥಗಳನ್ನು ಉಪನ್ಯಾಸಮುಖದಿಂದ ವ್ಯಾಖ್ಯಾನಿಸಿದ್ದಾಗಿದೆ ಎಂದರ್ಥ. ಟೀಕೆಯಲ್ಲಿ ಸೂತ್ರದಲ್ಲಿ ಹೇಳಲ್ಪಟ್ಟ ಭೇದವು ಮಿಥ್ಯಾರೋಪವಾಗಿದೆಯೆಂಬ ಆಶಂಕೆಯನ್ನು ನಿರಾಕರಿಸಿ, ಕೊನೆಯಲ್ಲಿ 'ಅತೋ ನ ಮಿಥ್ಯಾಭೇದಪರತ್ವಂ ಶ್ರುತೇಃ' ಶ್ರುತಿಗೆ ಮಿಥ್ಯಾಭೇದಪರತ್ವವನ್ನು ಹೇಳಬಾರದು ಎಂದು ಹೇಳಿದ್ದಾರೆ. ಟೀಕೆಯ ಈ ಮಾತನ್ನು ಗ್ರಂಥಕಾರರು ಸೂತ್ರಾರೂಢ ಮಾಡುತ್ತಿದ್ದಾರೆ. 'ಅತೋ ನ ಮಿಥ್ಯಾ' ಇತ್ಯಾದಿ ವಾಕ್ಯದಿಂದ.

प्रकाशः – सूत्रेऽतच्छब्देन मिथ्यात्वविरोधिसत्यत्वं गृह्यत इत्युक्तं भवति । तच्छब्देनानुमानं परामृश्यार्थान्तरमाह – अनुमानेति ।। ७ ।।

।। इति श्रीमत्सर्वतन्त्रस्वतन्त्रसुधीन्द्रतीर्थगुरुपादशिष्यराघवेन्द्रयतिकृते चन्द्रिकाप्रकाशे युष्मदधिकरणं सम्पूर्णम् ।।

ಪರಿಪೂರ್ಣಚಂದ್ರಿಕಾ

ಸೂತ್ರದಲ್ಲಿರುವ 'ಆತಶ್ಚಬ್ದಾತ್' ಎಂಬುದಕ್ಕೆ ಮಿಥ್ಯಾತ್ವಕ್ಕೆ ವಿರುದ್ಧವಾದ ಸತ್ಯತ್ವಪ್ರತಿಪಾದಕ ಶಬ್ದವಿರುವುದರಿಂದ ಎಂಬುದಾಗಿ ಒಂದು ಬಗೆಯ ವ್ಯಾಖ್ಯಾನವನ್ನು ವಿವಕ್ಷಿಸಿದ್ದಾರೆ. ಹಾಗೂ ತಚ್ಛಬ್ದದಿಂದ ಅನುಮಾನವನ್ನು ಪರಾಮರ್ಶಿಸಿ ಅನುಮಾನಕ್ಕೆ ಮೂಲಭೂತವಾದ ಮಿಥ್ಯಾತ್ವಪ್ರತಿಪಾದಕವಾದ ಶಬ್ದವಿರುವುದಿಲ್ಲ ಎಂಬ ಎರಡನೆಯ ವ್ಯಾಖ್ಯಾನವನ್ನು 'ಅನುಮಾನ ಮೂಲಭೂತಸ್ಯ' ಇತ್ಯಾದಿ ವಾಕ್ಯದಿಂದ ಹೇಳುತ್ತಿದ್ದಾರೆ.

ಇಲ್ಲಿಗೆ ಶ್ರೀರಾಘವೇಂದ್ರತೀರ್ಥ ಪೂಜ್ಯಯತಿಗಳಿಂದ ರಚಿತವಾದ ದ್ಯುಭ್ವಾದ್ಯಧಿಕರಣದ ಪ್ರಕಾಶ ಟಿಪ್ಪಣಿಯ ಕನ್ನಡಾನುವಾದವು ಸಮಾಪ್ತವಾಯಿತು.

गुरुराजीयम् – ननु शुद्धस्य मुक्ताभेदेन तत्प्राप्यत्वासम्भवेऽपि सगुणस्य ब्रह्मणो मुक्ताभेदाभावेन तस्य मुक्तप्राप्यत्वमुपपन्नमित्यत आह – सगुणेति ।। एवं सूत्रान्तरेति ।। यत्र साक्षाद्भेदव्यपदेशः सम्भवति तत्र भेदकव्यपदेश-ग्रहणानुपपत्तिरूह्येत्यर्थः । अन्यार्थः स्वरूपार्थः ।। ङ ।। द्युभ्वाद्यधिकरणम् ।।१।।

।। इति श्रीकेशवभट्टारकेण विरचितायां भावदीपिकायां द्युभ्वाद्यधिकरणं सम्पूर्णम् ।। १ ।।

ಸಾರ

ರಾಮಾನುಜರೂ ಸಹ 'ಯಸ್ಮಿನ್ದ್ಯೌಃ' ಎಂಬುದನ್ನೇ ವಿಷಯವಾಕ್ಯವೆನ್ನುತ್ತಾರೆ. ಆದರೆ ಈ ಅಧಿಕರಣದಲ್ಲಿ ಜೀವನು ಮಾತ್ರ ಪೂರ್ವಪಕ್ಷಕ್ಕೆ ವಿಷಯನು. ಪ್ರಕೃತಿ ಮೊದಲಾದವುಗಳು ಪೂರ್ವಪಕ್ಷಕ್ಕೆ ವಿಷಯವಲ್ಲವೆನ್ನುತ್ತಾರೆ. ಏಕೆಂದರೆ 'ಗೌಣಶ್ಚೇನ್ನಾತ್ಮಶಬ್ದಾತ್' ಎಂಬ ಈಕ್ಷತ್ಯಧಿಕರಣ ಸೂತ್ರದಲ್ಲಿ ಆತ್ಮಶಬ್ದವಾಚ್ಯತ್ವವನ್ನು ಪ್ರಕೃತಿಗೆ ನಿರಾಕರಣ ಮಾಡಿದ್ದರಿಂದ ಪುನಃ ಪೂರ್ವಪಕ್ಷ ಮಾಡಲು ಸಾಧ್ಯವಿಲ್ಲ. 'ನಾನುಮಾನಮ್' ಎಂಬ ಸೂತ್ರದಲ್ಲಿ ಪ್ರಕೃತಿಯನ್ನು ನಿರಾಕರಣೆ ಮಾಡಿದ್ದು ಕೇವಲ ದೃಷ್ಟಾಂತಕ್ಕೋಸ್ಕರ. ಹೇಗೆ ಪ್ರಕೃತಿ ಪ್ರಾಪಕವಾದ ಶಬ್ದಗಳು ಇಲ್ಲದ ಕಾರಣ ಪ್ರಕೃತಿಯು ಲೋಕಾಧಾರವಾಗುವುದಿಲ್ಲವೋ ಅದರಂತೆ ಜೀವನೂ ಸಹ ಲೋಕಾಧಾರನಾಗುವುದಿಲ್ಲವೆಂದು ಆದರ ಅಭಿಪ್ರಾಯ. 'ನಾನುಮಾನಮ್ ಆತಚ್ಛಬ್ದಾತ್, ಪ್ರಾಣಭೃಚ್ಚ' ಎಂಬುದನ್ನು ಒಂದೇ ಸೂತ್ರವೆನ್ನುವುದು ಇವರ ಮತ್ತೊಂದು ಅಭಿಪ್ರಾಯ.

ಇವರ ಅಧಿಕರಣಶರೀರವೂ ಸಹ ತಪ್ಪಾಗಿದೆ. ಪ್ರಕೃತಿಯು ಪೂರ್ವಪಕ್ಷಕ್ಕೆ ವಿಷಯವಾಗದಿರಬಹುದು. ಆದರೆ ರುದ್ರ ಹಾಗೂ ವಾಯುಗಳು ಪೂರ್ವಪಕ್ಷಕ್ಕೆ ವಿಷಯವಾಗಬಹುದಲ್ಲವೇ? ಇದಕ್ಕೆ ಅವರಲ್ಲಿ ಉತ್ತರವಿಲ್ಲ. ಮತ್ತು ಆತ್ಮಶಬ್ದದ ಬಲದಿಂದ ಪ್ರಕೃತಿಯು ಪೂರ್ವಪಕ್ಷಕ್ಕೆ ವಿಷಯವಾಗುವುದಿಲ್ಲವೆಂದಮೇಲೆ ಆದೇ ದ್ಯುಭ್ವಾದ್ಯಧಿಕರಣ (೧-೩-೧)

ಆನಂದಮಯಾಧಿಕರಣದಲ್ಲಿ ಮುಕ್ತಪ್ರಾಪ್ಯತ್ವಧರ್ಮವನ್ನು ಜೀವನಲ್ಲಿ ನಿರಾಕರಿಸಲಾಗಿದೆ. ಪ್ರಕೃತಿಯನ್ನು ಪೂರ್ವಪಕ್ಷದಲ್ಲಿ ಸೇರಿಸದೇ ಬಿಟ್ಟರೆ, ಜೀವನನ್ನೂ ಸಹ ಪೂರ್ವಪಕ್ಷದಲ್ಲಿ ಸೇರಿಸಬಾರದು. ಆದ್ದರಿಂದ ಈ ಅಧಿಕರಣದ ಪೂರ್ವಪಕ್ಷಕ್ಕೆ ವಿಷಯವೇ ಇಲ್ಲದಂತಾಗುತ್ತದೆ. ಜಾಯಮಾನತ್ವ ಮೊದಲಾದ ಜೀವವಿಷಯಕವಾದ ಪೂರ್ವಪಕ್ಷಲಿಂಗಗಳಿಂದ ಮುಕ್ತೋಪಸೃಪ್ಯತ್ವವನ್ನು ಗೌಣವನ್ನಾಗಿ ವ್ಯಾಖ್ಯಾನಿಸಬೇಕೆನ್ನುವುದಾದರೆ ಪ್ರಕೃತಿ-ವಿಷಯದಲ್ಲಿರುವ ನಿರವಕಾಶಲಿಂಗಗಳಿಂದಲೇ ಆತ್ಮಶಬ್ದವನ್ನೂ ಸಹ ಗೌಣವನ್ನಾಗಿ ವ್ಯಾಖ್ಯಾನಿಸಬೇಕಾಗುತ್ತದೆ. ಆದ್ದರಿಂದ ಪ್ರಕೃತಿಯು ಪೂರ್ವಪಕ್ಷಕ್ಕೆ ವಿಷಯವಲ್ಲ. ಜೀವನು ಮಾತ್ರವೆಂಬ ವಿಷಯ ಎಂಬ ವಿಚಾರದಲ್ಲಿ ಅರ್ಥವಿಲ್ಲ.

ಅದೃಶ್ಯತ್ವಾಧಿಕರಣದಿಂದ ಈ ಅಧಿಕರಣಕ್ಕೆ ಪುನರುಕ್ತಿ ಬರುತ್ತದೆಂಬ ದೋಷ. ಮೂವರಿಗೂ ಸಮಾನ. ಏಕೆಂದರೆ 'ಯತ್ತದದ್ರೇಶ್ಯಮ್' ಎಂಬ ವಾಕ್ಯವು ಯಾವ ಪ್ರಕರಣದಲ್ಲಿದೆಯೋ, ಆದೇ ಪ್ರಕರಣದಲ್ಲಿ 'ಯಸ್ಮಿನ್‌ದ್ಯೌಃ' ಎಂಬ ವಾಕ್ಯವೂ ಸಹ ಇರುತ್ತದೆ. ಅದೃಶ್ಯತ್ವಾಧಿಕರಣದಿಂದಲೇ ಲೋಕಾಧಾರತ್ವವನ್ನು ವಿಷ್ಣುವಿನಲ್ಲಿ ಸಮರ್ಥಿಸಿದ್ದರಿಂದ ಪುನಃ ಅದನ್ನೇ ಇಲ್ಲಿ ಸಮರ್ಥಿಸಿದರೆ ಪುನರುಕ್ತಿ ಬರುತ್ತದೆ. ಈ ಶಂಕೆಗೆ ಅದ್ವೈತಿಗಳು 'ಯಸ್ಮಿನ್‌ದ್ಯೌಃ' ಎಂಬ ವಾಕ್ಯವು ಪ್ರಕರಣದಲ್ಲಿ ಇಲ್ಲವೆಂದು ತಿಳಿದುಕೊಂಡು ಪೂರ್ವಪಕ್ಷದಲ್ಲಿ ಉತ್ತರಿಸುತ್ತಾರೆ. ಇದು ತಪ್ಪು. ಜಾಯಮಾನತ್ವ ಮೊದಲಾದ ಲಿಂಗಗಳಿಂದ ಸಂಪೂರ್ಣಪ್ರಕರಣವೇ ಜೀವಪರವಾಗುತ್ತದೆಂಬ ಅಧಿಕಾಶಂಕೆಯನ್ನು ಮಾಡಲು ಬರುವಾಗ ಆ ವಾಕ್ಯವನ್ನು ಇಲ್ಲವೆಂದು ತಿಳಿದುಕೊಳ್ಳಬೇಕೆಂಬ ಉತ್ತರವು ತಪ್ಪಾಗುತ್ತದೆ. ರಾಮಾನುಜರು 'ಯತ್ತದದ್ರೇಶ್ಯಮ್' ಎಂಬುದು ಬ್ರಹ್ಮಪರವಾದರೂ ಸಹ ಜೀವವಿಷಯಕವಾದ ಇಂದ್ರಿಯಾಧಾರತ್ವ ಮೊದಲಾದ ಲಿಂಗಗಳು ಕೇಳಿಸುತ್ತಿವೆ. ಆದ್ದರಿಂದ 'ಯಸ್ಮಿನ್‌ದ್ಯೌಃ' ಎಂಬ ಪ್ರಕರಣವೇ ಬೇರೆಯಾಗುತ್ತದೆ. ಪ್ರಕರಣವಿಚ್ಛೇದಪ್ರಾಪಕವು ಇದ್ದಾಗ ಪ್ರಕರಣಭೇದವನ್ನು ಒಪ್ಪುವುದು ಅನಿವಾರ್ಯವೆಂದು ಉತ್ತರಿಸುತ್ತಾರೆ. ಇದೂ ಸಹ ತಪ್ಪು. ಒಂದೇ ಪ್ರಕರಣವೆಂದು ವಿವಕ್ಷಿಸಿದಾಗಲೂ ಪೂರ್ವಪಕ್ಷವನ್ನು ಮಾಡಲು ಬರುವಾಗ ಭಿನ್ನಪ್ರಕರಣವೆಂದು ಹೇಳುವುದು ಸರಿಯಲ್ಲ. ಮತ್ತು ಅನುಭವವಿರುದ್ಧವಾದ ಲೋಕಾಧಾರತ್ವವನ್ನು ಜೀವನಲ್ಲಿ ಆಕ್ಷೇಪಿಸುವ ರಾಮಾನುಜರು ಸುಲಭವಾಗಿ ಆಕ್ಷೇಪಿಸಬಹುದಾದ ಅದೃಶ್ಯತ್ವವನ್ನೇಕೆ ಬಿಡುತ್ತಾರೆಂದು ಅರ್ಥವಾಗದ ಸಂಗತಿ. ಆದ್ದರಿಂದ ಅದೃಶ್ಯತ್ವಾಧಿಕರಣದ ಮೇಲೆ ಬರುವ ಹೆಚ್ಚಿನ ಆಶಂಕೆಯ ಪರಿಹಾರಕ್ಕೋಸ್ಕರ ಈ ಅಧಿಕರಣವು ಹೊರಟಿರುತ್ತದೆಂಬ ಭಾಷ್ಯ ಹಾಗೂ ಟೀಕೆಗಳಲ್ಲಿರುವ ಮಾಡಿರುವ ಸಮರ್ಥನೆಯು ಅತ್ಯಂತ ಸಂಗತವಾಗಿದೆ.

ದ್ಯುಭ್ವಾದ್ಯಧಿಕರಣ

(೧-೩-೧)

ಭಾಗ -೩

ನ್ಯಾಯವಿವರಣ, ನ್ಯಾಯವಿವರಣಪಂಚಿಕಾ,
ಅಣುಭಾಷ್ಯ, ತತ್ವಮಂಜರೀ,
ತಂತ್ರದೀಪಿಕಾ, ನ್ಯಾಯಮುಕ್ತಾವಳಿ ಗ್ರಂಥಗಳ
ಸರಳ ಕನ್ನಡ ಅನುವಾದ

* * *

ಸೂತ್ರಾರ್ಥರತ್ನಾವಳಿ ಗ್ರಂಥದ ಸಂಸ್ಕೃತ ಮೂಲ

॥ श्रीगुरुभ्यो नमः ॥

श्रीमदानन्दतीर्थभगवत्पादाचार्यविरचितम्

न्यायविवरणम्

श्री जयतीर्थविरचिता

न्यायविवरणपञ्जिका

॥ अथ प्रथमाध्यायस्य तृतीयः पादः ॥

द्युभ्वाद्यधिकरणम् (१।३।१)

न्यायविवरणम् – हरिः ॐ ॥ 'प्राणानां ग्रन्थिरसि' । 'रुद्रो वै लोकायतनम् ।' 'वायुना वै गौतमसूत्रेणायं च लोकः परश्च लोकः सर्वाणि भूतानि सन्दृब्धानि भवन्ति' । 'सर्वे वा एते प्राणाश्च प्राणिनश्च देवाश्च दिव्यानि च लोकाश्च लोकिनश्चालोकाश्चालोकिनश्च विष्णावेवोताश्च प्रोताश्च भवन्ति' इत्यादेः द्युभ्वाद्यायतनत्वमज्ञानां साधारणं लिङ्गम् ॥१॥

'यस्मिन् द्यौः' ಎಂಬ ವಾಕ್ಯದಲ್ಲಿ ಹೇಳಲ್ಪಟ್ಟ ದ್ಯುಭ್ವಾದ್ಯಾಯತನತ್ವ ಎಂಬ ಲಿಂಗವು ರುದ್ರ, ವಾಯು, ವಿಷ್ಣು ಮೂವರಲ್ಲಿಯೂ ಸಾಧಾರಣವಾಗಿದೆ. ಅದು ಹೀಗೆ --

'ಎಲೈ ರುದ್ರನೇ! ನೀನು ಇಂದ್ರಿಯಗಳಿಗೆ ಅಭಿಮಾನಿಯಾಗಿರುವಿ. ದೇವತೆಗಳಿಗೆ ಆಶ್ರಯನಾಗಿರುವಿ'. 'ಸಮಸ್ತಲೋಕಗಳಿಗೂ ಸಹ ಆಶ್ರಯನಾಗಿರುವಿ. ಹೀಗೆ ರುದ್ರನಲ್ಲಿ ಸಾಧಾರಣವಾಗಿದೆ'. ಮತ್ತು,

'ಎಲೈ ಗೌತಮರೇ ಸರ್ವಜಗತ್ತಿಗೆ ಆಶ್ರಯದಾಗಿರುವ ವಾಯುದೇವರಿಂದಲೇ ಈ ಲೋಕವು ಪರಲೋಕವು ಸಮಸ್ತ ಭೂತಗಳೂ ಸಹ ಸ್ಥಿತಿಯನ್ನು ಹೊಂದಿವೆ' ಹೀಗೆ ವಾಯುದೇವನಲ್ಲಿ ಪ್ರಸಿದ್ಧವಾಗಿದೆ'.

ಮತ್ತು, 'ಸರ್ವೇ ವಾ' ಇತ್ಯಾದಿಶ್ರುತಿಯಿಂದ ಎಲ್ಲ ಇಂದ್ರಿಯಗಳು, ದೇಹವುಳ್ಳ ಜೀವರು, ದೇವತೆಗಳು ಸ್ವರ್ಗಲೋಕದಲ್ಲಿರುವ ಕಲ್ಪವೃಕ್ಷಮೊದಲಾದ ವಸ್ತುಗಳು, ಭೂಮೊದಲಾದ ಲೋಕಗಳು, ಭೂರ್ಲೋಕಗಳಿಗೆ ಅಭಿಮಾನಿಯಾದ ದೇವತೆಗಳು ಭೂರಾದಿ ಲೋಕಗಳಿಗಿಂತ ಭಿನ್ನವಾದ ವೈಕುಂಠಾದಿಲೋಕಗಳು, ಆ

ಲೋಕಗಳಲ್ಲಿರುವ ಸಕಲ ಮುಕ್ತಜೀವರು ಎಲ್ಲರೂ ಸಹ ವಿಷ್ಣುವನ್ನೇ ಆಶ್ರಯಿಸಿದ್ದಾರೆ. ಅವನನ್ನೇ ಅನನ್ಯವಾಗಿ ಹೊಂದಿದ್ದಾರೆ. ಹೀಗೆ ವಿಷ್ಣುವಿನಲ್ಲಿಯೂ ಸಾಧಾರಣವಾಗಿದೆ.

ಇವೇ ಮೊದಲಾದ ಶ್ರುತಿಗಳಿಂದ ದ್ಯುಭ್ವಾದ್ಯಾಯತನತ್ವವೆಂಬ ಲಿಂಗವು ನ್ಯಾಯಾನುಸಂಧಾನವಿಲ್ಲದ ಅಜ್ಞಾನಿಗಳಿಗೆ ರುದ್ರಾದಿಗಳಲ್ಲಿ ಸಾಧಾರಣವಾಗಿ ಪ್ರತೀತವಾಗುತ್ತದೆ. ಆದರೆ 'ರುಜಂ ದ್ರಾವಯತೇ ಯಸ್ಮಾತ್' ಇತ್ಯಾದಿ ನಿಷ್ಪತ್ತಿಯಿಂದ ರುದ್ರ, ವಾಯು ಮೊದಲಾದ ಶಬ್ದಗಳೆಲ್ಲವೂ ಭಗವತ್ಪರವೇ ಆಗಿದೆ ಎಂದು ತಿಳಿಯಬೇಕು.

ಟೀಕಾ – ತೃತೀಯೇऽಸ್ಮಿನ್ ಪಾದೇ ಅನುವ್ಯಾಖ್ಯಾಯಾಮಧಿಕರಣವಿಷಯಾಃ ಸಙ್ಗ್ರಹೋಕ್ತಾಃ ।

ಲಿಙ್ಗಂ ಸಾಧಾರಣಂ ಶಬ್ದೌ ಸ್ಥಾನಂ ಲಿಙ್ಗಮನುಗ್ರಹಃ ।

ಪುನಃ ಶಬ್ದಾ ಲಿಙ್ಗಶಬ್ದೌ ವಿಚಾರ್ಯಾ ದ್ವಿಃಸ್ಥಿತಾ ಇಹ ।। ಇತಿ ।

ಅನುವ್ಯಾಖ್ಯಾನದಲ್ಲಿ ಮೂರನೆಯ ಪಾದದ ಎಲ್ಲ ಅಧಿಕರಣಗಳ ವಿಷಯಗಳನ್ನು ಸಂಗ್ರಹಿಸಿ ಹೇಳಿರುತ್ತಾರೆ. ಅದು ಹೀಗೆ —

ಲಿಂಗಂ ಸಾಧಾರಣಂ ಶಬ್ದೌ ಸ್ಥಾನಂ ಲಿಂಗಮನುಗ್ರಹಃ ।

ಪುನಃ ಶಬ್ದಾ ಲಿಂಗಶಬ್ದೌ ವಿಚಾರ್ಯಾ ದ್ವಿಃಸ್ಥಿತಾ ಇಹ ।।

ರುದ್ರ, ವಾಯು, ವಿಷ್ಣು ಇವರೆಲ್ಲರಲ್ಲಿಯೂ ಸಾಧಾರಣವಾದ ದ್ಯುಭ್ವಾದ್ಯಾಯತನತ್ವವೆಂಬ ಲಿಂಗ; ಹಾಗೂ ಪ್ರಾಣ ವಿಷ್ಣು, ಇವರಲ್ಲಿ ಸಾಧಾರಣವಾದ ಭೂಮಾ ಎಂಬ ಶಬ್ದ; ವಿಷ್ಣು, ಹಾಗೂ ಚೇತನಪ್ರಕೃತಿಗಳಲ್ಲಿ ಸಾಧಾರಣವಾದ ಆಕ್ಷರಶಬ್ದ; ಹಾಗೂ ವಿಷ್ಣು ಪ್ರಕೃತಿಗಳಲ್ಲಿ ಸಾಧಾರಣವಾದ ಸೃಷ್ಟಿಸ್ಥಾನ; ವಿಷ್ಣು ಆಕಾಶ ಜೀವರಲ್ಲಿ ಸಾಧಾರಣವಾದ ಹೃದ್ದಮಧ್ಯಸ್ಥವೆಂಬ ಲಿಂಗ; ಜ್ಞಾನಿ, ವಿಷ್ಣು ಇವರಲ್ಲಿ ಸಾಧಾರಣವಾದ ಅನುಕೂಲ್ಯದಿಂದ ಸ್ವೀಕರಿಸುವಿಕೆ; ಈಶಾನಶಬ್ದ, ವಜ್ರಶಬ್ದ, ಜ್ಯೋತಿಃಶಬ್ದ, ಆಕಾಶಶಬ್ದ ಹಾಗೂ ಸ್ವಪ್ನಾದಿದರ್ಶನರೂಪವಾದ ಲಿಂಗ, ಬ್ರಾಹ್ಮಣಶಬ್ದ ಇವುಗಳು ಈ ಅಧಿಕರಣದಲ್ಲಿ ವಿಚಾರಮಾಡಲು ಆರ್ಹವಾಗಿವೆ -- ಎಂದು ಈ ಶ್ಲೋಕದ ಅಭಿಪ್ರಾಯ.

ತದಿದಂ ದುರ್ಗಮಾರ್ಥಂ ನ್ಯಾಯಮಾಲಾವಾಕ್ಯವಿವರಣಪ್ರಸಙ್ಗೇನಾದೌ ತಾವತ್ ತದ್ವಿವೃಣೋತಿ । ವಿಷಯಾವಗತಿಪೂರ್ವಕತ್ವಾತ್ ಪೂರ್ವೋತ್ತರಪಕ್ಷನ್ಯಾಯಾವಗತೇಃ ।

ಈ ಶ್ಲೋಕದ ಅರ್ಥವು ಸ್ವಲ್ಪ ಕಠಿಣವಾಗಿರುವುದರಿಂದ ನ್ಯಾಯಮಾಲೆಯ ವಾಕ್ಯವನ್ನು ವಿವರಿಸುವ ಮೂಲಕ ಮೊದಲು ಅದನ್ನೇ ವಿವರಿಸುತ್ತಿದ್ದಾರೆ. ವಿಷಯವನ್ನು ತಿಳಿದ ಮೇಲಷ್ಟೇ ಪೂರ್ವಪಕ್ಷನ್ಯಾಯವನ್ನು ಹಾಗೂ ಸಿದ್ಧಾಂತನ್ಯಾಯವನ್ನು ತಿಳಿಯಲು ಸಾಧ್ಯ.

अत्र 'द्युभ्वाद्यायतनं स्वशब्दात्' इति प्रथमाधिकरणसाधारणं लिङ्गं विचार्यमित्युक्तम् । किं तल्लिङ्गम्? कुत्र च साधारणम्? कथं च साधारणम्? साधारणत्वे च कथं तस्य भगवदेकविषयता? इत्यत आह – प्राणानामिति ।।

ಮೊದಲು 'ದ್ಯುಭ್ವಾದ್ಯಾಯತನಂ ಸ್ವಶಬ್ದಾತ್' ಎಂಬ ಪ್ರಥಮಾಧಿಕರಣದಲ್ಲಿ ಸಾಧಾರಣವಾದ ಲಿಂಗವು ವಿಚಾರ್ಯವಾಗಿದೆಯೆಂದು ಹೇಳಲಾಗಿದೆ. ಆ ಲಿಂಗವು ಯಾವುದು? ಯಾವ ವ್ಯಕ್ತಿಗಳಲ್ಲಿ ಅದು ಸಾಧಾರಣವಾಗಿದೆ? ಸಾಧಾರಣವಾಗಿರುವುದಾದರೂ ಹೇಗೆ? ಸಾಧಾರಣವಾಗಿರುವದಾದರೆ ಅದು ಹೇಗೆ ಕೇವಲ ಭಗವದ್ವಿಷಯಕವಾಗಿರುವುದು? ಈ ಎಲ್ಲ ಪ್ರಶ್ನೆಗಳಿಗೆ ಪ್ರಾಣಾನಾಂ ಎಂಬ ವಾಕ್ಯದಿಂದ ಉತ್ತರಿಸುತ್ತಿದ್ದಾರೆ.

अत्र 'यस्मिन् द्यौः' इत्यादिवाक्योक्तं च द्युभ्वाद्यायतनत्वलिङ्गं विचार्यम् ।

ಈ ಅಧಿಕರಣದಲ್ಲಿ 'ಯಸ್ಮಿನ್ ದ್ಯೌಃ' ಎಂಬ ಶ್ರುತಿಯಲ್ಲಿ ಹೇಳಲ್ಪಟ್ಟ ದ್ಯುಭ್ವಾದ್ಯಾಯತನತ್ವ ಎಂಬ ಲಿಂಗವನ್ನು ವಿಚಾರ ಮಾಡಬೇಕು.

यद्यप्येतानि बहूनि लिङ्गानि । तथा च वक्ष्यति 'अत्रोक्तानां लिङ्गानाम्' इति । तथाऽप्येकवाक्योक्तत्वेनैकवचनम् । तच्च रुद्र- वायु- प्रकृति- जीव- विष्णूनां साधारणम् ।

ವಸ್ತುತಃ ಇಂತಹ ಅನೇಕ ಲಿಂಗಗಳನ್ನು ಇಲ್ಲಿ ವಿಚಾರಮಾಡಬೇಕು. ಆದ್ದರಿಂದಲೇ ಮುಂದೆ 'ಅತ್ರೋಕ್ತಾನಾಂ ಲಿಂಗಾನಾಮ್' ಎಂಬಲ್ಲಿ ಅನೇಕ ಲಿಂಗಗಳು ನಿರ್ಣಯಿಸಲ್ಪಟ್ಟವೆ ಎಂದು ಹೇಳಿರುತ್ತಾರೆ. ಆದರೂ ಸಹ ಈ ವಾಕ್ಯದಲ್ಲಿರುವ ಕೇವಲ ದ್ಯುಭ್ವಾದ್ಯಾಯತನತ್ವವೆಂಬ ಲಿಂಗವನ್ನು ವಿವಕ್ಷಿಸಿ, ಲಿಂಗಮ್ ಎಂಬುದಾಗಿ ಏಕವಚನವನ್ನು ಪ್ರಯೋಗಿಸಿದ್ದಾರೆ. ಇಂತಹ ದ್ಯುಭ್ವಾದ್ಯಾಯತನತ್ವವು ರುದ್ರ, ವಾಯು, ಪ್ರಕೃತಿ, ಜೀವ ಹಾಗೂ ವಿಷ್ಣು ಇವರೆಲ್ಲರಲ್ಲಿಯೂ ಸಾಧಾರಣವಾಗಿದೆ.

'प्राणानां रुद्रो वा' इत्यादिवाक्याद् रुद्रनिष्ठतया प्रतीतेः । ग्रथ्यन्तेऽस्मिन्निति ग्रन्थिः ।

ಅದು ಹೀಗೆ -- 'ಪ್ರಾಣಾನಾಂ' 'ರುದ್ರೋ ವಾ' ಇತ್ಯಾದಿವಾಕ್ಯಗಳ ಬಲದಿಂದ ರುದ್ರನಲ್ಲಿ ದ್ಯುಭ್ವಾದ್ಯಾಯತನತ್ವವು ಕೇಳಿಸುತ್ತಿದೆ. ಗ್ರಂಥಿಃ ಎಂದರೆ 'ಗ್ರಥ್ಯಂತೇ ಅಸ್ಮಿನ್' ಎಂಬ ನಿಷ್ಪತ್ತಿಯಿಂದ ಆಶ್ರಯನಾಗಿದ್ದಾನೆಂದರ್ಥ.

'वायुना' इत्यादिश्रुतेर्वायुनिष्ठत्वावगमात् । सूतमत्र सर्वं जगदिति सूत्रम् । सन्दृब्धानि, सङ्गतान्येव तदाधारतयाऽवस्थितानीत्यर्थः ।

'ವಾಯುನಾ' ಇತ್ಯಾದಿ ಶ್ರುತಿಗಳ ಬಲದಿಂದ ದ್ಯುಭ್ವಾದ್ಯಾಯತನತ್ವವು ವಾಯುನಿಷ್ಠವಾಗಿದೆಯೆಂದು ತಿಳಿಯುತ್ತದೆ. 'ಸೂತ್ರಮ್' ಎಂಬ ಪದಕ್ಕೆ 'ಸೂತಮತ್ರ ಸರ್ವಂ ಜಗತ್' ಎಂಬ ನಿಷ್ಪತ್ತಿಯಿಂದ ಸಕಲ ಜಗತ್ತು ಇವನನ್ನು ಆಶ್ರಯಿಸಿದೆ ಎಂದರ್ಥ. 'ಸಂದೃಬ್ಧಾನಿ' ಎಂಬ ಪದಕ್ಕೆ ಸಂಬಂಧವನ್ನು ಹೊಂದಿರುವ ಪದಾರ್ಥವೇ ಅವನನ್ನು ಆಶ್ರಯಿಸಿಕೊಂಡು ಇರುತ್ತದೆ ಎಂದರ್ಥ.

'सर्वे वा एते' इत्यादिश्रुतेर्विष्णुविषयत्वप्रदर्शनात् । प्राणाः = इन्द्रियाणि । प्राणिनः जीवाः । प्राणिग्रहणेन गृहीतानामपि देवानां प्राधान्यज्ञापनाय पुनर्ग्रहणम् ।

'ಸರ್ವೇ ವಾ ಏತೇ' ಇತ್ಯಾದಿಶ್ರುತಿಗಳ ಬಲದಿಂದ ದ್ಯುಭ್ವಾದ್ಯಾಯತನತ್ವವು ವಿಷ್ಣುವಿನಲ್ಲಿದೆ ಎಂದು ತಿಳಿಯುತ್ತದೆ. ಪ್ರಾಣಾಃ = ಇಂದ್ರಿಯಗಳು. ಪ್ರಾಣಿನಃ = ದೇಹವುಳ್ಳ ಜೀವರುಗಳು. ವಸ್ತುತಃ ಪ್ರಾಣ ಎಂಬ ಪದದಿಂದಲೇ ದೇವತೆಗಳ ಸಂಗ್ರಹವೂ ಸಹ ಆಗುತ್ತದೆ. ಆದರೆ ಉಳಿದ ಪ್ರಾಣಿಗಳ ದೆಸೆಯಿಂದ ದೇವತೆಗಳು ಪ್ರಧಾನರಾಗಿದ್ದಾರೆಂದು ತಿಳಿಸಲು ಪ್ರತ್ಯೇಕವಾಗಿ ಅವರನ್ನು ಸ್ವೀಕರಿಸಲಾಗಿದೆ.

दिवि भवानि दिव्यानि कल्पतरुप्रभृतीनि वस्तूनि । लोकाः = भूरादयः । तदभिमानिनः = लोकिनः । पूर्ववत् पुनर्ग्रहणम् । भूरादिभ्योऽन्ये वैकुण्ठादयोऽलोकाः । तद्गता मुक्ता अलोकिनः । 'ओताश्च प्रोताश्च' इति एतमाश्रिता इत्यर्थः ।

ದಿವಿ ಭವಾನಿ ದಿವ್ಯಾನಿ = ಸ್ವರ್ಗಲೋಕದಲ್ಲಿರುವ ಕಲ್ಪತರು ಮೊದಲಾದ ವಸ್ತುಗಳು. ಲೋಕಾಃ = ಭೂಲೋಕಾದಿಗಳು, ತದಭಿಮಾನಿಯಾದ ಜೀವರುಗಳು; ಹಿಂದಿನಂತೆ ಇಲ್ಲಿಯೂ ಸಹ ಪ್ರತ್ಯೇಕವಾಗಿ ಹೇಳಬೇಕು. ಅಲೋಕಾಃ = ಭೂಲೋಕಾದಿಗಳಿಂತ ಭಿನ್ನವಾದ ವೈಕುಂಠಾದಿ ಲೋಕಗಳು, ಅವುಗಳಲ್ಲಿರುವ ಮುಕ್ತಜೀವರುಗಳು; ಅಲೋಕಿನಃ = ವೈಕುಂಠಾದಿಲೋಕಗಳಲ್ಲಿರುವ ಮುಕ್ತಜೀವರುಗಳು, ಓತಾಶ್ಚ ಪ್ರೋತಾಶ್ಚ = ಓತಪ್ರೋತವಾಗಿ ಹೆಣೆದುಕೊಂಡಂತೆ ವಿಷ್ಣುವನ್ನು ಆಶ್ರಯಿಸಿದ್ದಾರೆ ಎಂದರ್ಥ.

'इत्यादेः' इत्यादिग्रहणेन प्रकृत्यादिनिष्ठत्वेऽपि प्रमाणमुदाहार्यमित्याचष्टे । तच्चान्यत्रोदाहृतम् । अज्ञानां न्यायानुसन्धानरहितानां मतेन । साधारणस्य कथं सिद्धान्ते असाधारणतया साध्यते? इति शङ्काऽनेन परिहता । एवमुत्तरत्रापि ।।

ಇತ್ಯಾದೇಃ ಎಂಬುದಾಗಿ ಆದಿಪದವನ್ನು ಹೇಳಿರುವುದರಿಂದ ಪ್ರಕೃತ್ಯಾದಿನಿಷ್ಠವಾಗಿಯೂ ಸಹ ಹೀಗೆ ಪ್ರಮಾಣವನ್ನು ಉದಾಹರಿಸಬೇಕೆಂದು ತಿಳಿಸಿರುತ್ತಾರೆ. ಪ್ರಕೃತ್ಯಾದಿಗಳೂ ಸಹ ದ್ಯುಭ್ವಾದ್ಯಾಯತನಗಳಾಗಿವೆ ಎಂಬ ವಿಷಯದಲ್ಲಿರುವ ಶ್ರುತಿಯನ್ನು ಬೇರೆ ಕಡೆ ಉದಾಹರಿಸಲಾಗಿದೆ. ಅಜ್ಞಾನಾಂ = ಜ್ಞಾನಾನುಸಂಧಾನವಿಲ್ಲದ ಅಜ್ಞಾನಿಗಳ ಪಕ್ಷದಲ್ಲಿ; ಸಾಧಾರಣವಾದ ಲಿಂಗವನ್ನು

ಸಿದ್ಧಾಂತದಲ್ಲಿ ಕೇವಲ ವಿಷ್ಣುನಿಷ್ಠವಾಗಿ ಅಸಾಧಾರಣವೆಂದು ಹೇಗೆ ಸಾಧಿಸುತ್ತೀರಿ? ಎಂಬ ಶಂಕೆಯನ್ನು ಇದರಿಂದ ಪರಿಹರಿಸದಂತಾಯಿತು. ಮುಂದೆಯೂ ಸಹ ಹೀಗೆಯೇ ತಿಳಿದುಕೊಳ್ಳಬೇಕು.

ಇಲ್ಲಿಗೆ ನ್ಯಾಯವಿವರಣಟೀಕೆಯಲ್ಲಿ ದ್ಯುಭ್ವಾದ್ಯಧಿಕರಣವು ಸಮಾಪ್ತವಾಯಿತು.

॥ ಶ್ರೀಕೃಷ್ಣಾರ್ಪಣಮಸ್ತು ॥

ಶ್ರೀಜಯತೀರ್ಥಭಿಕ್ಷುಗಳಿಂದ ರಚಿತವಾದ ನ್ಯಾಯವಿವರಣೆಯ ಟೀಕೆಯ

ಕನ್ನಡಾನುವಾದದಲ್ಲಿ ಅದೃಶ್ಯತ್ವಾಧಿಕರಣವು ಸಮಾಪ್ತವಾಯಿತು.

श्रीमदानन्दतीर्थभगवत्पादाचार्यविरचितम्

अणुभाष्यम्

द्युभ्वाद्यधिकरणम् (१।३।१)

सर्वाश्रयः

ಅಣುಭಾಷ್ಯ - ದ್ಯುಲೋಕ, ಭೂಲೋಕ ಇವೇ ಮೊದಲಾದ ಸಕಲ ಲೋಕಗಳಿಗೆ ಆಶ್ರಯನಾದವನು ಪರಮಾತ್ಮನೇ ಆಗಿದ್ದಾನೆ.

***

श्री आनन्दतीर्थभगवत्पादाचार्यविरचितम्
ब्रह्मसूत्राणुभाष्यम्
श्रीराघवेन्द्रतीर्थविरचिता
ब्रह्मसूत्राणुभाष्यविवृतिः

तत्वमञ्जरी

द्युभ्वाद्यधिकरणम् (१।३।१)

प्रथमाध्यायस्य तृतीयः पादः

नन्वेवमन्यत्र प्रसिद्धनामलिङ्गात्मकाशेषशब्दानां विष्णुनिष्ठतासिद्धावपि अन्यत्रापि वृत्तिरस्तु । तथाच एको विष्णुरेव इत्यवधारणायोग इत्यतः प्राप्तस्तृतीयः पादः ।

ಮೊದಲನೆಯ ಪಾದದಲ್ಲಿ ಅನ್ಯತ್ರಪ್ರಸಿದ್ಧವಾದ ಸಕಲನಾಮಾತ್ಮಕಶಬ್ದಗಳ ಸಮನ್ವಯವನ್ನು ವಿಷ್ಣುವಿನಲ್ಲಿ ಮಾಡಿದ್ದಾಯಿತು. ಎರಡನೆಯ ಪಾದದಲ್ಲಿ ಅನ್ಯತ್ರಪ್ರಸಿದ್ಧವಾದ ಸಕಲವಿಧವಾದ ಲಿಂಗಾತ್ಮಕಶಬ್ದಗಳನ್ನು ವಿಷ್ಣುವಿನಲ್ಲಿ ಸಮನ್ವಯಮಾಡಿದ್ದಾಯಿತು. ಇದರ ಮೇಲೆ ಬರುವ ಪ್ರಶ್ನೆ ಹೀಗಿದೆ. ಆ ಎಲ್ಲ ಶಬ್ದಗಳು ವಿಷ್ಣುಪರವಾಗಲಿ; ಆದರೆ ಬೇರೆ ಪದಾರ್ಥಗಳನ್ನೂ ಸಹ ಪ್ರತಿಪಾದಿಸಲಿ. ವಿಷ್ಣುವೊಬ್ಬನೇ ಏಕೆ ಪ್ರತಿಪಾದ್ಯನಾಗಬೇಕು? ಆದ್ದರಿಂದ "ವಿಷ್ಣುರೇವ" ಎಂಬ ಅವಧಾರಣವು ಅಯುಕ್ತವಾಗಿದೆ. ಈ ಆಶಂಕೆಯನ್ನು ಪರಿಹರಿಸುವುದಕ್ಕಾಗಿ ಪ್ರಕೃತ ಮೂರನೆಯ ಪಾದವು ಹೊರಡುತ್ತಿದೆ.

ಸಾರಾಂಶ -- ಪ್ರಥಮಪಾದ ಹಾಗೂ ದ್ವಿತೀಯಪಾದದಲ್ಲಿ ಅನ್ಯತ್ರಪ್ರಸಿದ್ಧವಾದ ಶಬ್ದಗಳನ್ನು ವಿಷ್ಣುವಿನಲ್ಲಿ ಸಮನ್ವಯ ಮಾಡಿದರು. ಹಾಗಾಗಿ ಅನ್ಯತ್ರಪ್ರಸಿದ್ಧವಾದ ಶಬ್ದಗಳು ವಿಷ್ಣುವಿನಲ್ಲಿಯೂ ಬರುವುದರಿಂದ ಉಭಯತ್ರಪ್ರಸಿದ್ಧಗಳಾದವು. ಅಷ್ಟೇ ಅಲ್ಲದೆ ಇನ್ನು ಕೆಲವು ಶಬ್ದಗಳು ಸ್ವಾಭಾವಿಕವಾಗಿಯೇ ಉಭಯತ್ರಪ್ರಸಿದ್ಧವಾಗಿವೆ. ಅಂತಹ ನಾಮಾತ್ಮಕವಾದ ಲಿಂಗಾತ್ಮಕವಾದ ಉಭಯತ್ರಪ್ರಸಿದ್ಧಶಬ್ದಗಳನ್ನು ಮಹಾವಿಷ್ಣುವಿನಲ್ಲಿ ಮಾತ್ರ ಸಮನ್ವಯಮಾಡುವುದಕ್ಕಾಗಿ ಈ ಪಾದ ಹೊರಡುತ್ತಿದೆ ಎಂದಭಿಪ್ರಾಯ.

तदर्थमाह – तदन्यत्र च वाचकैः । 'मुख्यतः सर्वशब्दैश्च वाच्य एको जनार्दनः' इत्यग्रेतनत्रिपादी आदावप्याकृष्यते ।

ಈ ಮೂರನೆಯ ಪಾದದ ಸಾರವನ್ನು 'ತದನ್ಯತ್ರ ಚ ವಾಚಕೈಃ' ಎಂಬ ಅಣುಭಾಷ್ಯದಿಂದ ಸಂಗ್ರಹಿಸಿದ್ದಾರೆ. ಇಲ್ಲಿ 'ಮುಖ್ಯತಃ ಸರ್ವಶಬ್ದೈಶ್ಚ ವಾಚ್ಯ ಏಕೋ ಜನಾರ್ದನಃ' ಎಂಬ ಶ್ಲೋಕದ ಭಾಗವನ್ನೂ ಆಕರ್ಷಣೆ ಮಾಡಿ ಇಲ್ಲಿ ಅನ್ವಯಮಾಡಿಕೊಳ್ಳಬೇಕು.

चोऽप्यर्थे । तदिति प्रस्तुतविष्णुपरामर्शः । तदन्यत्रापीत्युक्त्या विष्णावपीति समुच्चीयते । तदिति सप्तम्यन्ताव्ययं वा । तत्र विष्णौ अन्यत्र च वाचकैरुभयवाचकैः ।

'ಅನ್ಯತ್ರ ಚ' ಎಂಬಲ್ಲಿರುವ ಚಶಬ್ದವು ಅಪಿ ಎಂಬರ್ಥದಲ್ಲಿದೆ. 'ತದನ್ಯತ್ರ' ಎಂಬಲ್ಲಿರುವ ತತ್ ಶಬ್ದವು ಪ್ರಸ್ತುತನಾದ ವಿಷ್ಣುವನ್ನು ಪರಾಮರ್ಶಮಾಡುತ್ತಿದೆ. ತದನ್ಯತ್ರಾಪಿ ಎಂದು ಹೇಳಿದ್ದರಿಂದ ವಿಷ್ಣಾವಪಿ ಎಂಬುದು ಸಮುಚ್ಚಿತವಾಗುತ್ತದೆ. ಅಥವಾ 'ತತ್' ಎಂಬುದು ಸಪ್ತಮ್ಯಂತವಾದ ಅವ್ಯಯ. ಆವಾಗ ವಿಷ್ಣುವಿನಲ್ಲಿ ಹಾಗೂ ಬೇರೆ ಪದಾರ್ಥಗಳಲ್ಲಿ ಉಭಯತ್ರಪ್ರಸಿದ್ಧವಾದ ಶಬ್ದಗಳು ಎಂಬರ್ಥವು ದೊರೆಯುತ್ತದೆ.

पूर्वपादद्वयन्यायापादितोभयत्रप्रसिद्धिकैर्वा श्रुत्यन्तरसाधारण्यादिना स्वत एवोभयत्रप्रसिद्धिकैर्वा सर्वशब्दैर्नामलिङ्गोभयात्मकैः शब्दैर्मुख्यतो मुख्यवृत्त्या एको जनार्दनो न तु विष्णुरन्यश्चेत्यर्थः । हरौ तदन्यत्र प्रसिद्धनामलिङ्गसमन्वयमाह विष्णावेवात्र सूत्रकृदिति फलितार्थः । न केवलमन्यत्र प्रसिद्धैः किन्तु तदन्यत्रवाचकैः सर्वशब्दैश्चेति चार्थः ।

ಹಿಂದಿನ ಎರಡು ಪಾದಗಳಲ್ಲಿ ಹೇಳಲ್ಪಟ್ಟ ನ್ಯಾಯದಿಂದ ಆಪಾದಿತವಾದ ಉಭಯತ್ರಪ್ರಸಿದ್ಧವಾದ ಶಬ್ದಗಳಿಂದ ಅಥವಾ ಸಾಧಾರಣವಾದ ಶ್ರುತ್ಯಂತರದಿಂದ ಸ್ವತಃ ಉಭಯತ್ರಪ್ರಸಿದ್ಧವಾದ ಶಬ್ದಗಳಿಂದ ಅಂದರೆ ನಾಮಾತ್ಮಕವಾದ ಮತ್ತು ಲಿಂಗಾತ್ಮಕವಾದ ಉಭಯತ್ರಪ್ರಸಿದ್ಧವಾದ ಶಬ್ದಗಳಿಂದ ಮುಖ್ಯತಃ = ಪರಮಮುಖ್ಯವೃತ್ತಿಯಿಂದ ಒಬ್ಬನೇ ಜನಾರ್ದನನು ಪ್ರತಿಪಾದ್ಯನಾಗಿದ್ದಾನೆ. ಹೊರತು ವಿಷ್ಣು ಹಾಗೂ ಬೇರೆ ಪದಾರ್ಥಗಳಿರಡೂ ಪ್ರತಿಪಾದ್ಯವಾಗಲು ಸಾಧ್ಯವಿಲ್ಲ. ಶ್ರೀಹರಿಯಲ್ಲಿ ಮತ್ತು ಬೇರೆ ಪದಾರ್ಥಗಳಲ್ಲಿ ಪ್ರಸಿದ್ಧವಾದ ನಾಮಾತ್ಮಕ ಹಾಗೂ ಲಿಂಗಾತ್ಮಕಶಬ್ದಗಳ ಸಮನ್ವಯವನ್ನು ಸೂತ್ರಕಾರರು ವಿಷ್ಣುವಿನಲ್ಲೇ ಹೇಳುತ್ತಿದ್ದಾರೆಂದು ಒಟ್ಟು ಅಭಿಪ್ರಾಯ. ಕೇವಲ ಅನ್ಯತ್ರಪ್ರಸಿದ್ಧವಾದ ಶಬ್ದಗಳಿಂದಷ್ಟೇ ಅಲ್ಲ; ಮತ್ತೇನೆಂದರೆ, ಅನ್ಯತ್ರವಾಚಕವಾದ ಸಕಲಶಬ್ದಗಳಿಂದಲೂ ವಿಷ್ಣುವೇ ಪ್ರತಿಪಾದ್ಯನೆಂದು ಚಶಬ್ದದ ಅರ್ಥ.

ननु दृश्यत्वाद्युज्झितो विष्णुरित्ययुक्तम् । तद्धर्मस्य अमृतहेतुज्ञानरूपपरविद्या विषयत्वस्य 'तमेवैकं जानथ आत्मानमन्या वाचो विमुञ्चथ । अमृतस्यैष सेतुः' इत्यथर्वण एवोत्तरत्र 'यस्मिन् द्यौः' इति पूर्ववाक्योक्तद्युभ्वाद्याधारे श्रवणात्तस्य च 'आकाश एव तदोतं च प्रोतं च' इति, 'वायुना वै गौतम सूत्रेणायं च लोकः परश्च लोकः' इति, 'रुद्रो वा व लोकाधारः' इति समाख्याभिः प्रकृतिवायुरुद्राणां 'बहुधा जायमानः' इत्युत्तरवाक्ये श्रुतजाय-मानत्वलिङ्गेन जीवस्य च प्राप्तत्वात् । समाख्यादिस्थरुद्रादिशब्दानां रुद्रादावेव रूढत्वात् प्राचीनोऽपि तेषामन्यतमो न विष्णुरित्यतः प्राप्तं – द्युभ्वाद्यायतनं स्वशब्दात् – इत्यदिसूत्रसप्तकम् ।

ಹಿಂದಿನ ಅದೃಶ್ಯತ್ವಾದಿಕರಣದಲ್ಲಿ ವಿಷ್ಣುವೇ ದೃಶ್ಯತ್ವಾದ್ಯಭಾವಧರ್ಮಗಳಿಂದ ಯುಕ್ತನಾಗಿದ್ದಾನೆಂದು ಸಾಧಿಸಲಾಯಿತು. ಇದು ತಪ್ಪು. ಏಕೆಂದರೆ, ಯಾವ ವ್ಯಕ್ತಿಯು ಅದೃಶ್ಯತ್ವಾದಿಧರ್ಮಗಳಿಂದ ಯುಕ್ತನಾಗಿದ್ದಾನೋ ಆ ವ್ಯಕ್ತಿಯೇ ಮೋಕ್ಷಕ್ಕೆ ಸಾಧನವಾದ ಪರವಿದ್ಯೆಗೂ ವಿಷಯನಾಗಿದ್ದಾನೆಂದು ಹೇಳಲಾಗಿದೆ. ಈ ಪರವಿದ್ಯಾವಿಷಯತ್ವವು 'ತಮೇವೈಕಂ ಜಾನಥ ಆತ್ಮಾನಮನ್ಯಾವಾಚೋ ವಿಮುಂಚಥ । ಅಮೃತಸ್ಯೈಷ ಸೇತುಃ' ಇತ್ಯಾದಿ ಶ್ರುತಿಯಲ್ಲಿ ದ್ಯುಭ್ವಾದ್ಯಾಯತನನಾದ ವ್ಯಕ್ತಿಗೆ ಹೇಳಲ್ಪಟ್ಟಿದೆ. ದ್ಯುಲೋಕ, ಭೂಲೋಕ ಇವುಗಳಿಗೆ ಆಶ್ರಯನಾದವನು ವಿಷ್ಣುವಾಗಲು ಸಾಧ್ಯವಿಲ್ಲ. ಹೊರತಾಗಿ ಪ್ರಕೃತಿ, ವಾಯು, ರುದ್ರ, ಜೀವ ಇವುಗಳಲ್ಲಿ ಯಾರಾದರೂ ಸಹ ದ್ಯುಭ್ವಾದಿಗಳಿಗೆ ಆಶ್ರಯರಾಗಬಹುದು. 'ಆಕಾಶ ಏವ ತದೋತಂ ಪ್ರೋತಂ ಚ' ಎಂಬ ಶ್ರುತಿಯಿಂದ ಪ್ರಕೃತಿಯು ಆಧಾರವಾಗಬಹುದು. 'ವಾಯುನಾ ವೈ ಗೌತಮ ಸೂತ್ರೇಣ ಅಯಂ ಚ ಲೋಕಃ ಪರಶ್ಚ ಲೋಕಃ' ಎಂಬ ಶ್ರುತಿಯ ಸಮಾಖ್ಯೆಯಿಂದ ವಾಯುದೇವನು ಆಶ್ರಯನಾಗಬಹುದು. 'ರುದ್ರೋ ವಾವ ಲೋಕಾಧಾರಃ' ಎಂಬ ಸಮಾಖ್ಯಾಪ್ರಮಾಣದಿಂದ ರುದ್ರನು ಆಶ್ರಯನಾಗಬಹುದು. 'ಬಹುಧಾ ಜಾಯಮಾನಃ' ಎಂಬ ಮುಂದಿನ ವಾಕ್ಯದಲ್ಲಿರುವ ಜಾಯಮಾನತ್ವಲಿಂಗದಿಂದ ಜೀವನೂ ಸಹ ದ್ಯುಭ್ವಾದಿಗಳಿಗೆ ಆಧಾರನಾಗಬಹುದು. ಆದ್ದರಿಂದ ದ್ಯುಲೋಕ, ಭೂಲೋಕ ಇವುಗಳಿಗೆ ವಿಷ್ಣು ಆಧಾರನಾಗುವುದಿಲ್ಲ. ಮತ್ತು ಸಮಾಖ್ಯಾಪ್ರಮಾಣದಲ್ಲಿರುವ ರುದ್ರಾದಿಶಬ್ದಗಳೆಲ್ಲವೂ ರುದ್ರ ವಾಯು ಮೊದಲಾದವರಲ್ಲಿಯೇ ರೂಢವಾಗಿವೆ. ದ್ಯುಭ್ವಾದ್ಯಾಯತನನಾಗದ ವಿಷ್ಣು ಪರವಿದ್ಯೆಗೂ ಸಹ ವಿಷಯನಾಗುವುದಿಲ್ಲ. ಆದ್ದರಿಂದಲೇ ಅದೃಶ್ಯತ್ವಾದಿ ಗುಣಗಳಿಗೂ ಸಹ ಆಧಾರನಾಗುವುದಿಲ್ಲ. ಈ ಆಶಂಕೆಯನ್ನು ಪರಿಹರಿಸುವುದಕ್ಕಾಗಿ ದ್ಯುಭ್ವಾದ್ಯಾಯತನಂ ಸ್ವಶಬ್ದಾತ್ ಇತ್ಯಾದಿ ಏಳು ಸೂತ್ರಗಳು ಹೊರಟಿವೆ.

ತದರ್ಥಂ ಭಾಷತೇ – ಸರ್ವಾಶ್ರಯ ಇತಿ ।

ತದನ್ಯತ್ರ ಚೇತ್ಯಾದಿತ್ರಿಪಾದೀ ಇಹ ಪ್ರತಿನಿಯತಮನ್ವೇತಿ ಲಿಙ್ಗೈರಿತ್ಯಾದಿ ಚ । ಅನ್ತ್ಯಶ್ಚೋऽವಧಾರಣೇ । ತತ್ತಸ್ಮಾದಿತ್ಯಾಪ್ಯರ್ಥಃ ।

ಈ ಅಧಿಕರಣದ ಸಾರವನ್ನು ''ಸರ್ವಾಶ್ರಯಃ'' ಎಂಬ ಅಣುಭಾಷ್ಯದಲ್ಲಿ ಸಂಗ್ರಹಿಸಿದ್ದಾರೆ. 'ತದನ್ಯತ್ರ ಚ ವಾಚಕೈಃ' ಎಂಬ ಶ್ಲೋಕದ ಮೂರನೆಯ ಪಾದವನ್ನು ಈ ಪಾದದ ಎಲ್ಲಾ ಅಧಿಕರಣಗಳ ಜೊತೆಗೂ ಅನ್ವಯ ಮಾಡಬೇಕು. ಮತ್ತು ಎರಡನೆಯ ಪಾದಾರ್ಥವನ್ನು ಸಂಗ್ರಹಿಸುವ ''ಲಿಂಗೈಃ ಸರ್ವೈರ್ಯುತಃ ಸ ಹಿ'' ಎಂಬುದನ್ನೂ ಸಹ ಈ ಪಾದದ ಪ್ರತಿಯೊಂದು ಅಧಿಕರಣಗಳಲ್ಲಿಯೂ ಅನ್ವಯಮಾಡಿಕೊಳ್ಳಬೇಕು. 'ಸರ್ವಶಬ್ದೌಶ್ಚ' ಎಂಬಲ್ಲಿರುವ ಚಶಬ್ದವು ಅವಧಾರಣಾರ್ಥದಲ್ಲಿದೆ. ತತ್ ಎಂಬ ಶಬ್ದವು ತಸ್ಮಾತ್ ಎಂಬರ್ಥದಲ್ಲಿದೆ.

'ಯಸ್ಮಿನ್ ದ್ಯೌಃ ಪೃಥಿವೀ ಚಾನ್ತರಿಕ್ಷಮೋತಂ ಮನಃ ಸಹ ಪ್ರಾಣೈಶ್ಚ ಸರ್ವೈಃ' ಇತಿ ವಾಕ್ಯೋಕ್ತೋ ದ್ಯುಭ್ವಾದಿಸರ್ವಾಶ್ರಯಃ ಸ ಪ್ರಾಗುಕ್ತಃ । 'ವಿಷ್ಣಾವೇವ ಓತಾಶ್ಚ' ಇತಿ ಶ್ರುತೌ ಪ್ರಸಿದ್ಧೋ ವಾ ಏಕೋ ಜನಾರ್ದನಃ । ತಸ್ಮಾತ್ ಯಸ್ಮಿನ್ 'ತಮೇವೈಕಮ್' ಇತ್ಯಾದಿಭಿಃ ತದನ್ಯತ್ರ ಚ ವಾಚಕೈಃ ಇತ್ಯಾದಿನಾऽನ್ಯವಾಚಕತಯाऽಪಿ ಪ್ರತೀತೈಃ ಸರ್ವೈರೇಕೋ ಜನಾರ್ದನ ಏವ ಮುಖ್ಯತೋ ವಾಚ್ಯಃ । ನ ಪ್ರಕೃತ್ಯಾದಿರನೇಕಃ ।

'ಯಸ್ಮಿನ್ ದ್ಯೌಃ ಪೃಥಿವೀ ಚಾಂತರಿಕ್ಷಮೋತಂ ಮನಃ ಸಹ ಪ್ರಾಣೈಶ್ಚ ಸರ್ವೈಃ' ಇತ್ಯಾದಿ ಶ್ರುತಿಯಲ್ಲಿ ದ್ಯುಲೋಕ, ಭೂಲೋಕ ಇವುಗಳಿಗೆ ಆಶ್ರಯನಾಗಿದ್ದಾನೆಂದು ಹೇಳಲ್ಪಟ್ಟ ವ್ಯಕ್ತಿಯು ವಿಷ್ಣುವೇ ಆಗಿದ್ದಾನೆ. ಆದ್ದರಿಂದ 'ವಿಷ್ಣಾವೇವ ಓತಾಶ್ಚ ಪ್ರೋತಾಶ್ಚ' ಇತ್ಯಾದಿ ಶ್ರುತಿಗಳಲ್ಲಿ ಪ್ರಸಿದ್ಧನಾಗಿರುವವನೂ ಸಹ ಒಬ್ಬನೇ ಜನಾರ್ದನನಾಗಿದ್ದಾನೆ. ಪ್ರಕೃತಿ, ರುದ್ರ ಮೊದಲಾದವರು ಪ್ರತಿಪಾದ್ಯರಲ್ಲ. ಆದ್ದರಿಂದ 'ತಮೇವೈಕಂ' ಇತ್ಯಾದಿ ಶ್ರುತಿಯಲ್ಲಿಯೂ ಅನ್ಯತ್ರಪ್ರಸಿದ್ಧವಾದ ಅನ್ಯವಾಚಕವೆಂದು ತೋರುವ ಶಬ್ದಗಳಿಂದೆಲ್ಲ ವಿಷ್ಣುವೊಬ್ಬನೇ ಪರಮ ಮುಖ್ಯವೃತ್ತಿಯಿಂದ ವಾಚ್ಯನಾಗಿದ್ದಾನೆ; ಹೊರತು ಪ್ರಕೃತ್ಯಾದಿ ಅನೇಕ ಪದಾರ್ಥಗಳು ಪ್ರತಿಪಾದ್ಯವಾಗುವುದಿಲ್ಲ.

ಕುತಃ ಸರ್ವಾಶ್ರಯೋ ವಿಷ್ಣುಃ । ಲಿಙ್ಗೈಃ ಸರ್ವೈ : ಯುತಃ ಸ ಹಿ । ಲಿಙ್ಗೈರಿತ್ಯುಪಲಕ್ಷಣಮ್ । 'ಜಾನಥ ಆತ್ಮಾನಮ್' ಇತ್ಯದಿನೋಕ್ತೈಃ ಆತ್ಮಶ್ರುತಿಹೇಯತ್ವಾನುಕ್ತಿ - ಅಹೇಯತ್ವೋಕ್ತಿ - ಮುಕ್ತೋಪಸೃಪ್ಯತ್ವಾದ್ಯೇ ತತ್ಪ್ರಕರಣಸ್ಥಲಿಙ್ಗೈರ್ಯುತತ್ವಾದಿತಿ ವಾ । ಏತೈರಿಙ್ಗೈರ್ಯುತಃ ಸರ್ವಾಶ್ರಯ ಏಕೋ ಜನಾರ್ದನಃ । ತೇಷಾಂ ಚ ಭಾಷ್ಯೋಕ್ತವಚನೈಃ । ವಿಷ್ಣೌ ಪ್ರಸಿದ್ಧತ್ವಾದಿತಿ ವಾऽರ್ಥಃ । ಏವಮಗ್ರೇऽಪಿ ಯೋಜನಾದ್ವಯಂ ಬೋಧ್ಯಮ್ ।

ವಿಷ್ಣುವೇ ಏಕೆ ಸರ್ವಾಶ್ರಯನಾಗಿದ್ದಾನೆ? ಎಂಬ ಪ್ರಶ್ನೆಗೆ "ಲಿಂಗೈಃ ಸರ್ವೈಃ ಯುತಃ ಸ ಹಿ" ಎಂಬುದರಿಂದ ಉತ್ತರಿಸಿದ್ದಾರೆ. 'ಲಿಂಗೈಃ' ಎಂಬುದು ಉಪಲಕ್ಷಣವಾಗಿದೆ. 'ಜಾನಥ ಆತ್ಮಾನಮ್' ಇತ್ಯಾದಿ ಶ್ರುತಿಗಳಲ್ಲಿ ಪ್ರಸಕ್ತವಾದ ಆತ್ಮಶ್ರುತಿ, ಹೇಯತ್ವದ ಅನುಕ್ತಿ, ಅಹೇಯತ್ವದ ಉಕ್ತಿ, ಮುಕ್ತೋಪಸೃಪ್ಯತ್ವ ಇವೇ ಮೊದಲಾದ ಲಿಂಗಗಳು ಈ ಪ್ರಕರಣದಲ್ಲಿ ಇರುತ್ತವೆ. ಇವೆಲ್ಲವೂ ಸಹ ವಿಷ್ಣುವಿನ ಲಿಂಗಗಳಾಗಿರುವುದರಿಂದ ಅವನೇ ಪ್ರತಿಪಾದ್ಯನಾಗಬೇಕು. ಇವುಗಳು ಕೇವಲ ವಿಷ್ಣುವಿನ ಧರ್ಮಗಳೆಂಬುದು ಭಾಷ್ಯದಲ್ಲಿ ಉದಾಹರಿಸಿದ ಪ್ರಮಾಣಗಳಿಂದ ಸ್ಪಷ್ಟವಾಗುತ್ತದೆ. ಅಥವಾ ವಿಷ್ಣುವಿನಲ್ಲಿ ಪ್ರಸಿದ್ಧವಾದ್ದರಿಂದ ಎಂದೂ ಸಹ ಅರ್ಥೈಸಬಹುದು. ಹೀಗೆ ಮುಂದೆಯೂ ನಾಮಸಮನ್ವಯ ಹಾಗೂ ಲಿಂಗಸಮನ್ವಯವೆಂಬ ಎರಡು ಯೋಜನೆಗಳನ್ನು ಮಾಡಿಕೊಳ್ಳಬೇಕು.

नच समाख्याश्रुत्यादिविरोध इत्यतोऽपि – तदन्यत्र चेति । चोऽवधारणे । विष्ण्वन्यवाचकतयैव प्रतीतैः समाख्याश्रुत्यादिगतैः रुद्रपिनाक्यादिसर्वशब्दैः विषयवाक्यस्थजायमानादिशब्दैरेको जनार्दन एव मुख्यतो महायोगपौराणिकरूढिभ्यां वाच्यो हि यतोऽत इत्यर्थः ।

ರುದ್ರಾದಿಗಳಲ್ಲಿ ಪ್ರಸಿದ್ಧವಾದ ಸಮಾಖ್ಯಾಶ್ರುತಿಯ ವಿರೋಧ ಬರುತ್ತದಲ್ಲವೇ? ಎಂಬ ಪ್ರಶ್ನೆಗೂ 'ತದನ್ಯತ್ರ ಚ' ಎಂಬುದರಿಂದಲೇ ಉತ್ತರಿಸಿದ್ದಾರೆ. ಚಶಬ್ದವು ಅವಧಾರಣಾರ್ಥದಲ್ಲಿದೆ. ವಿಷ್ಣುವನ್ನು ಬಿಟ್ಟು ರುದ್ರಾದಿಗಳಲ್ಲಿಯೇ ಪ್ರಸಿದ್ಧವಾದ ಸಮಾಖ್ಯಾಶ್ರುತಿಯಲ್ಲಿರುವ ರುದ್ರ, ಪಿನಾಕೀ ಮೊದಲಾದ ಸಕಲಶಬ್ದಗಳಿಂದ ವಿಷಯವಾಕ್ಯದಲ್ಲಿರುವ ಜಾಯಮಾನ ಮೊದಲಾದ ಶಬ್ದಗಳಿಂದಲೂ ಮುಖ್ಯವಾಗಿ ಜನಾರ್ದನನೇ ಪ್ರತಿಪಾದ್ಯನಾಗಿದ್ದಾನೆ. ಏಕೆಂದರೆ ಮಹಾಯೋಗ ಹಾಗೂ ಪೌರಾಣಿಕರೂಢಿಗಳಿಂದ ವಿಷ್ಣುವೇ ವಾಚ್ಯನಾಗಿದ್ದಾನೆಂದು ನಿರ್ಣಯವಾಗುತ್ತದೆ.

स विष्णुरिति वर्तमानेऽपि जनार्दन इत्युक्तिः 'रुजं द्रावयते यस्माद्रुद्रः तस्माज्जनार्दनः ' इति स्मृतिसूचनेन महायोगपौराणिकरूढिभ्यां रुद्रादिशब्दानां हरौ मुख्यत्वसूचनाय।

'ಸಃ ವಿಷ್ಣುಃ' ಎಂಬುದು ಅನುವೃತ್ತಿಯಿಂದಲೇ ಸಿದ್ಧವಾಗಿದೆ. ಆದರೂ ಸಹ 'ಜನಾರ್ದನಃ' ಎಂಬ ಪದವನ್ನು ಉದ್ದೇಶಪೂರ್ವಕವಾಗಿಯೇ ಪ್ರಯೋಗಿಸಿದ್ದಾರೆ. ಇದಕ್ಕೆ ಕಾರಣ 'ರುಜಂ ದ್ರಾವಯತೇ ಯಸ್ಮಾದ್ ರುದ್ರಃ ತಸ್ಮಾಜ್ಜನಾರ್ದನಃ' ಎಂಬ ಸ್ಮೃತಿಯನ್ನು ಸೂಚಿಸುವ ಮೂಲಕ ಮಹಾಯೋಗ ಹಾಗೂ ಪೌರಾಣಿಕರೂಢಿಗಳಿಂದ ರುದ್ರಾದಿಶಬ್ದಗಳೆಲ್ಲವೂ ಶ್ರೀಹರಿಯಲ್ಲಿಯೇ ಮುಖ್ಯವಾಗಿವೆಯೆಂದು ಸೂಚಿಸಲು ಜನಾರ್ದನಶಬ್ದವನ್ನು ಹೇಳಿರುತ್ತಾರೆ.

ದ್ಯುಭ್ವಾದ್ಯಧಿಕರಣ (೧-೩-೧)

तथा 'न जायते अर्दयति च संसारमिति जनार्दनः' इत्यादिगीताभाष्योक्तदिशा जनपदेनाजत्वोक्त्या 'अजायमानो बहुधा विजायते' इतिश्रुतिसूचनेन प्रादुर्भावजनेः अमृतसेतुपदोक्तमुक्तोपसृप्यत्वस्य च सूचनाय ।

ಇದರಂತೆ 'ನ ಜಾಯತೇ ಅರ್ದಯತಿ ಚ ಸಂಸಾರಮಿತಿ ಜನಾರ್ದನಃ' 'ಸ್ವತಃ ಹುಟ್ಟಲ್ಲದವನು ಸಂಸಾರವನ್ನು ಪರಿಹರಿಸುತ್ತಾನಾದ್ದರಿಂದ ಜನಾರ್ದನನಾಗಿದ್ದಾನೆ ಎಂದು ಗೀತಾಭಾಷ್ಯದಲ್ಲಿ ಹೇಳುವ ಪ್ರಕಾರ ಜನ ಶಬ್ದದಿಂದ ಅಜತ್ವವು ತಿಳಿಯುತ್ತದೆ. 'ಅಜಾಯಮಾನೋ ಬಹುಧಾ ವಿಜಾಯತೇ' ಎಂಬ ಶ್ರುತಿಯು ಸೂಚಿಸುವಂತೆ ಭಗವಂತನಿಗೆ ಪ್ರಾದುರ್ಭಾವರೂಪವಾದ ಜನಿಯನ್ನು ಹೇಳಬೇಕು. ಮತ್ತು 'ಅಮೃತಸೇತು' ಎಂಬ ಪದದಿಂದ ಹೇಳಲ್ಪಟ್ಟ ಮುಕ್ತೋಪಸೃಪ್ಯತ್ವವನ್ನು ಸೂಚಿಸುವುದಕ್ಕಾಗಿಯೂ 'ಜನಾರ್ದನಃ' ಎಂದು ಹೇಳಿರುತ್ತಾರೆ.

तथा 'जुष्टं यदा पश्यत्यन्यमीशमस्य महिमानमिति वीतशोकः' इति, 'जीवादन्यं ज्ञात्वा मुच्यते' इति स्मृत्युक्तदिशा भेदज्ञानिनः संसारार्दकत्वोक्त्या भेदव्यपदेशसूचनेन नात्र जीवेशाभेदः शङ्क्यः ।

ಹಾಗೂ 'ಜುಷ್ಟಂ ಯದಾ ಪಶ್ಯತ್ಯನ್ಯಮೀಶಮಸ್ಯ ಮಹಿಮಾನಮಿತಿ ವೀತಶೋಕಃ' ಇತ್ಯಾದಿ ಶ್ರುತಿಯಲ್ಲಿ ಮತ್ತು 'ಜೀವಾದನ್ಯಂ ಜ್ಞಾತ್ವಾ ವಿಮುಚ್ಯತೇ' ಎಂಬ ಶ್ರುತಿಯಲ್ಲಿ ಹೇಳಿದ ಪ್ರಕಾರ ಜೀವ ಹಾಗೂ ಪರಮಾತ್ಮರ ಜ್ಞಾನದಿಂದ ಯಾರು ಭೇದವನ್ನು ತಿಳಿದುಕೊಳ್ಳುತ್ತಾರೋ ಅಂತಹವರಿಗೆ ಸಂಸಾರವು ಪರಿಹಾರವಾಗುತ್ತದೆಂದು ತಿಳಿಯುತ್ತದೆ. ಹೀಗೆ ಜೀವೇಶಭೇದವು ಸೂಚಿತವಾದ್ದರಿಂದ ಅವರಿಗೆ ಐಕ್ಯವನ್ನು ಆಶಂಕಿಸಬಾರದು.

ईशशब्दश्च जनार्दनपरो मोचकत्वलिङ्गादित्यादिसूचनाय । एक इत्यनेककोटिकपूर्वपक्षनिरासाय ।।१।।

ಈಶಶಬ್ದವು ಮೋಚಕತ್ವಾದಿಲಿಂಗಗಳ ಬಲದಿಂದ ಜನಾರ್ದನನನ್ನೇ ಪ್ರತಿಪಾದಿಸುತ್ತದೆ. ಆದ್ದರಿಂದಲೂ ಜೀವೇಶ್ವರರಿಗೆ ಅಭೇದವಿರುವುದಿಲ್ಲ ಎಂದು ಸೂಚಿಸುವುದಕ್ಕಾಗಿಯೂ ಜನಾರ್ದನಃ ಎಂದು ಹೇಳಿರುತ್ತಾರೆ. ''ಏಕಃ'' ಎಂಬುದರಿಂದ ಪ್ರಕೃತಿ, ರುದ್ರ ಮೊದಲಾದ ಅನೇಕಕೋಟಿಕ ಪೂರ್ವಪಕ್ಷವನ್ನು ನಿರಾಕರಿಸಿದ್ದಾರೆ.

ಶ್ರೀರಾಘವೇಂದ್ರತೀರ್ಥಶ್ರೀಪಾದಂಗಳವರಿಂದ ವಿರಚಿತವಾದ

ತತ್ತ್ವಮಂಜರಿಯ ಕನ್ನಡಾನುವಾದದಲ್ಲಿ ದ್ಯುಭ್ವಾದ್ಯಧಿಕರಣವು ಮುಗಿಯಿತು.

***

ಪರಿಪೂರ್ಣಚಂದ್ರಿಕಾ

।। श्रीजानकीवदनाम्भोजराजहंसाय रामचन्द्राय नमः ।।
।। श्री गुरुभ्यो नमः ।। हरिः ॐ ।।

श्री राघवेन्द्रतीर्थविरचिता

तन्त्रदीपिका

अथ प्रथमाध्यायस्य तृतीयः पादः

द्युभ्वाद्यधिकरणम् (१)

अत्र पादे उभयत्र प्रसिद्धनामलिङ्गात्मकद्विविधशब्दसमन्वय उच्यते-

।। ॐ द्युभ्वाद्यायतनं स्वशब्दात् ॐ ।। १-३-१ ।।

ಈ ಪಾದದಲ್ಲಿ ಉಭಯತ್ರಪ್ರಸಿದ್ಧವಾದ ನಾಮಾತ್ಮಕ ಶಬ್ದಗಳನ್ನು ಹಾಗೂ ಲಿಂಗಾತ್ಮಕಶಬ್ದಗಳನ್ನು ಸಮನ್ವಯ ಮಾಡಲಾಗಿದೆ.

'ಓಂ ದ್ಯುಭ್ವಾದ್ಯಾಯತನಂ ಸ್ವಶಬ್ದಾತ್ ಓಂ'

अत्र नये तादृशं सर्वाधारत्वलिङ्ग समन्वीयते ।

ಈ ಅಧಿಕರಣದಲ್ಲಿ ಉಭಯತ್ರಪ್ರಸಿದ್ಧವಾದ ಸರ್ವಾಧಾರತ್ವ ಎಂಬ ಲಿಂಗದ ಸಮನ್ವಯವನ್ನು ಮಾಡಲಾಗಿದೆ.

तत्त्वित्यस्ति । ''यस्मिन् द्यौः पृथिवी चान्तरिक्षम्'' इत्यादिनोक्तं द्युभ्वाद्यायतनं ततु ब्रह्मैव । न तु प्रधानं वायुरुद्रजीवा वा । स्वशब्दात् स्वेति शब्दः स्वशब्दस्तस्मात् । श्रुतौ स्वशब्दाभावात् तत्पर्यायात्मशब्दो ग्राह्यः । सभाराजेत्यत्रपाणिनीये राजशब्दवत् । तमेवैकं जानथ आत्मानमित्यात्मशब्दादित्यर्थः ।

ಸೂತ್ರಾರ್ಥ ಹೀಗಿದೆ -- ''ತತ್ತು'' ಎಂಬ ಪದಗಳು ಅನುವೃತ್ತವಾಗಿವೆ. 'ಯಸ್ಮಿನ್ ದ್ಯೌಃ ಪೃಥಿವೀ ಚಾಂತರಿಕ್ಷಮ್' ಇತ್ಯಾದಿಶ್ರುತಿಯಿಂದ ಹೇಳಲ್ಪಟ್ಟ ದ್ಯುಭ್ವಾದ್ಯಾಯತನನು ತತ್ತು = ಬ್ರಹ್ಮನೇ ಆಗಿದ್ದಾನೆ.

ಪ್ರಧಾನವಾಗಲೀ, ವಾಯು, ರುದ್ರ, ಜೀವ ಮೊದಲಾದವರಾಗಲೀ ದ್ಯುಭ್ವಾದ್ಯಾಯತನರಾಗಿಲ್ಲ. ಏಕೆಂದರೆ ಸ್ವಶಬ್ದಾತ್ = ಸ್ವ ಎಂಬ ಶಬ್ದವೇ ಸ್ವಶಬ್ದ. ಆದರಿಂದ ಎಂದರ್ಥ. ವಸ್ತುತಃ ಶ್ರುತಿಯಲ್ಲಿ ಸ್ವ ಎಂಬ ಶಬ್ದವು ಇರುವುದಿಲ್ಲ. ಆದ್ದರಿಂದ ಆದಕ್ಕೆ ಪರ್ಯಾಯಪದವಾದ ಆತ್ಮಶಬ್ದವನ್ನು ಸ್ವೀಕರಿಸಬೇಕು.

'ಸಭಾ ರಾಜಾಮನುಷ್ಯಪೂರ್ವಾ' (ಪಾ.ಸೂ.೨/೪/೨೩) ಎಂಬ ಪಾಣಿನಿಸೂತ್ರದಲ್ಲಿ ರಾಜಾ ಎಂಬ ಶಬ್ದದಿಂದ ಆದರ ಪರ್ಯಾಯಪದವನ್ನು ಸ್ವೀಕರಿಸದಂತೆ ಇಲ್ಲಿಯೂ ಸಹ ತಿಳಿಯಬೇಕು. 'ತಮೇವೈಕಂ ಜಾನಥ ಆತ್ಮಾನಮ್' ಎಂಬುದಾಗಿ ಆತ್ಮಶಬ್ದವಿರುವುದರಿಂದ ಎಂದರ್ಥ.

आत्मशब्दादिति वाच्ये स्वेत्युक्तिः स्वस्य ब्रह्मण एव शब्द इत्यपि विग्रहेणासाधारण्यं ज्ञापयितुम् । तच्छब्दादित्युक्तावपि शब्दविशेषो न ज्ञापितः स्यादिति ।

ಹಾಗಾದರೆ ಸೂತ್ರದಲ್ಲಿ 'ಆತ್ಮಶಬ್ದಾತ್' ಎಂದೇ ಹೇಳಬೇಕಿತ್ತು. ಆದರೂ ಸಹ 'ಸ್ವಶಬ್ದಾತ್' ಎಂದು ಹೇಳಲು ಕಾರಣವಿದೆ. ಸ್ವಸ್ಯ = ತನಗೆ ಅಂದರೆ ಬ್ರಹ್ಮನಿಗೇ ಸಂಬಂಧಪಟ್ಟ ಶಬ್ದ ಎಂಬ ವಿಗ್ರಹದಿಂದ ಆತ್ಮಶಬ್ದದ ಅಸಾಧಾರಣ್ಯವನ್ನು ಸೂಚಿಸಲು ಸ್ವಶಬ್ದಾತ್ ಎಂದು ಹೇಳಿದ್ದಾರೆ. ವಸ್ತುತಃ ಆತ್ಮಶಬ್ದವನ್ನು ಸಂಗ್ರಹಿಸಲು ತಚ್ಛಬ್ದಾತ್ ಎಂದೂ ಸಹ ಹೇಳಬಹುದಿತ್ತು. ಆದರೆ ಆದರಿಂದ ಶಬ್ದವಿಶೇಷವಾದ ಆತ್ಮಶಬ್ದವು ಸೂಚಿತವಾಗುವುದಿಲ್ಲ. ಅದಕ್ಕೋಸ್ಕರ 'ಸ್ವಶಬ್ದಾತ್' ಎಂದೇ ಹೇಳಿರುತ್ತಾರೆ.

जायमानत्वरूपजीवलिङ्गादात्मशब्दः अमुख्यः किं न स्यादित्यत आह -

॥ ॐ मुक्तोपसृप्यव्यपदेशात् ॐ ॥ १-३-२ ॥

ಜಾಯಮಾನತ್ವವೆಂಬ ಜೀವನ ಲಿಂಗವಿರುವಪ್ರಯುಕ್ತ ಆತ್ಮಶಬ್ದವು ಏಕೆ ಅಮುಖ್ಯವಾಗಬಾರದು? ಎಂಬ ಆಕ್ಷೇಪಕ್ಕೆ ಉತ್ತರಿಸುತ್ತಿದ್ದಾರೆ. ಓಂ ಮುಕ್ತೋಪಸೃಪ್ಯವ್ಯಪದೇಶಾತ್ ಓಂ.

द्व्येकयोरित्यादाविव भावप्रधानोऽयम् । उपसृप्यत्वं प्राप्यान्तरशून्यत्वे सति प्राप्यत्वम् । तेनान्तरा प्राप्ये न व्यभिचारः ।

'द्व्येकयोः द्विवचनैकवचने' (೧/೪/೨೨) ಎಂಬ ಪಾಣಿನೀಯ ಸೂತ್ರದಲ್ಲಿ ದ್ವಿಶಬ್ದ ಹಾಗೂ ಏಕಶಬ್ದಗಳು ದ್ವಿತ್ವ ಮತ್ತು ಏಕತ್ವವೆಂಬ ಭಾವಪ್ರಧಾನದಿಂದ ಹೇಗೆ ನಿರ್ದಿಷ್ಟವಾಗಿವೆಯೋ ಆದರಂತೆ ಉಪಸೃಪ್ಯ ಎಂಬ ಪದವು ಉಪಸೃಪ್ಯತ್ವವೆಂಬ ಭಾವಪ್ರಧಾನದಲ್ಲಿ ನಿರ್ದೇಶಿಸಲ್ಪಟ್ಟಿದೆ. ಉಪಸೃಪ್ಯತ್ವ ಎಂದರೆ 'ಪ್ರಾಪ್ಯವಾದ ಮತ್ತೊಂದು ಪದಾರ್ಥವಿಲ್ಲದೆ ತಾನು ಮಾತ್ರ ಪ್ರಾಪ್ಯವಾಗಿದೆ' ಎಂದು. ಹೀಗೆ ಹೇಳಿದ್ದರಿಂದ ಆದರ ಮೊದಲು ಮತ್ತೊಂದು ಪ್ರಾಪ್ಯವಾದದ್ದು ಇದ್ದರೂ ಸಹ ವ್ಯಭಿಚಾರವಿಲ್ಲ. ಅಂದರೆ ವಿಷ್ಣುವನ್ನು ಹೊಂದಿದ ಮೇಲೆ ಮತ್ತೊಬ್ಬರನ್ನು ಹೊಂದಬೇಕಾಗಿಲ್ಲ. ಅವನನ್ನು ಹೊಂದುವ ಮೊದಲು ಬೇರೆ ಸ್ಥಾನಗಳನ್ನು ಹೊಂದಿರಬಹುದು ಎಂದರ್ಥ.

''अमृतस्यैष सेतुः'' इत्यमृतशब्दितमुक्तोपसृप्यत्वव्यपदेशात् नात्मशब्दोऽमुख्य इति योज्यम् । अमृतसेत्विति वाच्ये मुक्तेत्याद्युक्तिः तदर्थोक्त्यर्था । एवमन्यत्रापि ।।

ಅಮೃತಸ್ಯೈಷ ಸೇತುಃ ಎಂಬಲ್ಲಿರುವ ಅಮೃತಶಬ್ದದಿಂದ ಮುಕ್ತಪ್ರಾಪ್ಯತ್ವವು ಹೇಳಲ್ಪಟ್ಟದೆ. ಇದರಿಂದ ಆತ್ಮಶಬ್ದವು ಅಮುಖ್ಯವಲ್ಲವೆಂದು ತಿಳಿಯುತ್ತದೆಂದು ಯೋಜನೆ ಮಾಡಿಕೊಳ್ಳಬೇಕು. ಅಮೃತಸೇತು ವ್ಯಪದೇಶಾಚ್ಚ ಎಂದೇ ಸೂತ್ರದಲ್ಲಿ ಹೇಳಬಹುದಿತ್ತು. ಆದರೆ ಮುಕ್ತೋಪಸೃಪ್ಯವ್ಯಪದೇಶಾತ್ ಎಂದು ಹೇಳಿರುವುದು ಅಮೃತಸೇತುಪದದ ಅರ್ಥವನ್ನು ಹೇಳುವುದಕ್ಕಾಗಿ ಎಂದು ತಿಳಿಯಬೇಕು. ಇದರಂತೆ ಬೇರೆ ಕಡೆಯೂ ಸಹ ತಿಳಿದುಕೊಳ್ಳಬೇಕು.

रुद्रप्रकृती किं न स्याताम् । ''रुद्रो वा व लोकाधारः भूतं च भवच्च भविष्यच्च'' इत्यदेः । अत आह -

।। ॐ नानुमानमतच्छब्दात् ॐ ।। १-३-३ ।।

'ರುದ್ರೋ ವಾವ ಲೋಕಾಧಾರಃ' 'ಭೂತಂ ಚ ಭವಚ್ಚ ಭವಿಷ್ಯಚ್ಚ' ಇತ್ಯಾದಿ ಪ್ರಮಾಣಗಳ ಆಧಾರದಿಂದ ರುದ್ರ ಅಥವಾ ಪ್ರಕೃತಿಗಳು ಏಕೆ ದ್ಯುಭ್ವಾದ್ಯಾಯತನರಾಗಬಾರದು? ಎಂಬ ಆಕ್ಷೇಪಕ್ಕೆ ಉತ್ತರಿಸುತ್ತಿದ್ದಾರೆ. 'ಓಂ ನಾನುಮಾನಮತಚ್ಛಬ್ದಾತ್ ಓಂ'

द्युभ्वाद्यायतनमित्यस्ति । अनुमीयत इत्यनुमानशब्देन वा अनुमानशब्दाच्छैषिकेऽणि कृते अनुमानशब्देन वा अनुमानप्रधानपाशुपतसांख्यसिद्धरुद्रप्रधाने ग्रहे ।

'ದ್ಯುಭ್ವಾದ್ಯಾಯತನಂ' ಎಂಬ ಪದವನ್ನು ಇಲ್ಲಿಯೂ ಅನುವೃತ್ತಿಮಾಡಿಕೊಳ್ಳಬೇಕು. 'ಅನುಮಾನದಿಂದ ಸಾಧಿಸಲ್ಪಡುವುದು' ಎಂಬರ್ಥದಲ್ಲಿರುವ ಅನುಮಾನಶಬ್ದದಿಂದ ಅಥವಾ ಅನುಮಾನಶಬ್ದದ ಮುಂದೆ 'ತಸ್ಯೇದಂ' ಎಂಬ ಪಾಣಿನಿಯ ಸೂತ್ರದಿಂದ ಅಣ್ ಪ್ರತ್ಯಯವನ್ನು ಸೇರಿಸಿದಾಗ ಅನುಮಾನಂ ಎಂಬ ರೂಪವು ಸಿದ್ಧವಾಗುತ್ತದೆ. ಹೀಗೆ ಶೈಷಿಕಅಣ್ ಪ್ರತ್ಯಯವನ್ನು ಸೇರಿಸಿದಾಗ ನಿಷ್ಪನ್ನವಾಗುವ ಅನುಮಾನಶಬ್ದದಿಂದಾಗಲೀ ಅಥವಾ ಅನುಮಾನವನ್ನೇ ಪ್ರಧಾನವನ್ನಾಗಿ ಭಾವಿಸುವ ಪಾಶುಪತ ಅಥವಾ ಸಾಂಖ್ಯಮತಗಳಿಂದಾಗಲೀ ಸಿದ್ಧವಾಗುವ ರುದ್ರ ಹಾಗೂ ಪ್ರಕೃತಿಗಳನ್ನು ವಿವಕ್ಷಿಸಬೇಕು.

रुद्रः प्रधानं च न द्युभ्वाद्यायतनम् । अतच्छब्दात् । तयोः रुद्रप्रकृत्योर्भस्मधरोग्रत्वत्रिगुणत्वादिशब्दानामभावादित्यर्थः ।

ಸೂತ್ರಾರ್ಥ ಹೀಗಿದೆ - ರುದ್ರ, ಪ್ರಧಾನ ಮೊದಲಾದವರು ದ್ಯುಭ್ವಾದ್ಯಾಯತನರಲ್ಲ. ಏಕೆಂದರೆ, ಅತಚ್ಛಬ್ದಾತ್ = ರುದ್ರ ಹಾಗೂ ಪ್ರಕೃತಿಗಳಿಗೆ ಸಂಬಂಧಿಸಿದ ಭಸ್ಮಧರ, ಉಗ್ರತ್ವ, ತ್ರಿಗುಣತ್ವ

ಮೊದಲಾದ ಶಬ್ದಗಳಿಲ್ಲದಿರುವುದರಿಂದ ಎಂದರ್ಥ.

ರುದ್ರಪಿನಾಕ್ಯಾದಿಶಬ್ದಾನಾಮ್ ''ಅನ್ಯನಾಮ್ನಾಂ ಗತಿರ್ವಿಷ್ಣುಃ'' ಇತ್ಯಾದೇರ್ನ ತಚ್ಛಬ್ದತ್ವಮಿತಿ ಭಾವಃ । ಅತದ್ಧರ್ಮೇತಿವದಯಂ ನಿರ್ದೇಶೋ ಬೋಧ್ಯಃ ।

ರುದ್ರ, ಪಿನಾಕೀ ಮೊದಲಾದ ಶಬ್ದಗಳು 'ಅನ್ಯನಾಮ್ನಾಂ ಗತಿರ್ವಿಷ್ಣುಃ' ಇತ್ಯಾದಿಯಾದ ಪ್ರಮಾಣಗಳಿಗೆ ಅನುಸಾರಿಯಾಗಿ ರುದ್ರನ ಶಬ್ದಗಳಲ್ಲವೆಂದು ತಿಳಿಯಬೇಕು.ಅತಚ್ಛಬ್ದ ಎಂಬುದು ಅತದ್ಧರ್ಮ ಎಂಬ ಶಬ್ದದಂತೆ ನಿಷ್ಪನ್ನವಾಗಿದೆಯೆಂದು ತಿಳಿಯಬೇಕು.

ರುದ್ರಪ್ರಕೃತ್ಯೋರ್ದ್ವಯೋರುಪಾದಾನಾಯ ವಾ ಟೀಕೋಕ್ತರೀತ್ಯಾ ಪೂರ್ವಪಕ್ಷಯುಕ್ತಿಸೂಚನಾಯ ವಾ ತದಾಗಮಾನಾಮಾನತ್ವಸೂಚನಾಯ ವಾ ವಕ್ಷ್ಯಮಾಣದಿಶಾ ವೃತ್ತ್ಯನ್ತರಸೂಚನಾಯ ವಾ ನಾನುಮಾನಮಿತ್ಯುಕ್ತಿಃ ।

ರುದ್ರ ಹಾಗೂ ಪ್ರಕೃತಿಗಳೆರಡನ್ನೂ ಸ್ವೀಕರಿಸುವುದಕ್ಕಾಗಿ ಅಥವಾ ಟೀಕೆಯಲ್ಲಿ ಹೇಳಿದಂತೆ ಪೂರ್ವಪಕ್ಷಯುಕ್ತಿಯನ್ನು ಸೂಚಿಸುವುದಕ್ಕಾಗಿ ಅಥವಾ ಪಾಶುಪತಾದ್ಯಾಗಮಗಳ ಆಪ್ರಾಮಾಣ್ಯವನ್ನು ಸೂಚಿಸುವುದಕ್ಕಾಗಿ ಅಥವಾ ಮುಂದೆ ಹೇಳುವ ಪ್ರಕಾರ ಮತ್ತೊಂದು ವ್ಯಾಖ್ಯಾನವನ್ನು ಸೂಚಿಸುವುದಕ್ಕಾಗಿ 'ನಾನುಮಾನಮ್' ಎಂದು ಸೂತ್ರಕಾರರು ಹೇಳಿರುತ್ತಾರೆ.

ಜೀವವಾಯೂ ಕಿಮತ್ರ ವಾಚ್ಯೌ ನ ಸ್ಯಾತಾಮ್ । ಜಾಯಮಾನ ಇತಿ ಲಿಙ್ಗಾತ್ ''ವಾಯುನಾ ವೈ ಗೌತಮ'' ಇತ್ಯಾದೇಃ । ಅತ ಆಹ -

।। ॐ प्राणभृच्च ॐ ।। ೧-೩- ೪ ।।

ಜಾಯಮಾನತ್ವ ಎಂಬ ಲಿಂಗವಿರುವುದರಿಂದ ಹಾಗೂ 'ವಾಯುನಾ ವೈ ಗೌತಮಃ' ಇತ್ಯಾದಿ ಶ್ರುತಿಗಳು ಪ್ರಮಾಣವಾಗಿರುವುದರಿಂದ ಜೀವ ಹಾಗೂ ವಾಯು ಇವರುಗಳು ಏಕೆ ದ್ಯುಭ್ವಾದ್ಯಾಯತನರಾಗುವುದಿಲ್ಲ? ಎಂಬ ಆಕ್ಷೇಪಕ್ಕೆ ಉತ್ತರಿಸಲು ಮುಂದಿನ ಸೂತ್ರ ಹೊರಟಿದೆ. 'ಓಂ ಪ್ರಾಣಭೃಚ್ಚ ಓಂ'

चशब्दानेति स्वशब्दादिहेतवश्चानुकृष्यन्ते । वायुश्च समुच्चीयते । आत्मशब्दमुक्तोपसृप्यत्वात् तच्छब्देभ्यो जीववायू न द्युभ्वाद्यायतनमित्यर्थः । जायमानादिशब्दोऽभिव्यक्त्यादिना विष्णौ युक्त इति भावः ।।

'ಚ' ಶಬ್ದದಿಂದ 'ನ' ಎಂಬುದನ್ನು ಸ್ವಶಬ್ದ ಮೊದಲಾದ ಹೇತುಗಳನ್ನು ಅನುವೃತ್ತಿ ಮಾಡಿಕೊಳ್ಳಬೇಕು. ಮತ್ತು ವಾಯುವನ್ನೂ ಸಮುಚ್ಚಯ ಮಾಡಬೇಕು. ಆತ್ಮಶಬ್ದ, ಮುಕ್ತೋಪಸೃಪ್ಯತ್ವ ಮತ್ತು ಜೀವ ಹಾಗೂ ವಾಯುಗಳಲ್ಲಿ ಪ್ರಸಿದ್ಧವಾದ ಶಬ್ದವಿಲ್ಲದಿರುವುದು ಈ ಹೇತುಗಳಿಂದ ಜೀವ ಹಾಗೂ ವಾಯುಗಳು ದ್ಯುಭ್ವಾದ್ಯಾಯತನರಾಗುವುದಿಲ್ಲವೆಂದರ್ಥ.

'जनि प्रादुर्भावे' ಎಂಬ ಧಾತುವಿನಿಂದ ನಿಷ್ಪನ್ನವಾದ ಜಾಯಮಾನಶಬ್ದಕ್ಕೆ ಪ್ರಾದುರ್ಭಾವವೆಂಬ ಅರ್ಥವನ್ನು ವಿಷ್ಣುವಿನಲ್ಲಿ ಹೇಳುವುದು ಯುಕ್ತವೇ ಆಗಿದೆಯೆಂದು ತಿಳಿಯಬೇಕು.

जीव इति वाच्ये 'प्राणभृत्' इत्युक्तिः सह प्राणैः इत्युक्तप्राणभृत्त्वम् तस्य युक्तमिति पूर्वपक्षयुक्ति सूचनाय ।

ವಸ್ತುತಃ ಸೂತ್ರದಲ್ಲಿ 'ಪ್ರಾಣಭೃತ್' ಎಂದು ಹೇಳುವ ಬದಲು ಜೀವಃ ಎಂದು ಹೇಳಬಹುದಿತ್ತು. ಆದರೆ 'सः प्राणैश्च सर्व्वैः' ಎಂಬಲ್ಲಿ ಹೇಳಲ್ಪಟ್ಟ ಪ್ರಾಣಾಧಾರತ್ವವು ಜೀವನಲ್ಲಿ ಯುಕ್ತವಾಗಿದೆ.ಎಂಬ ಪೂರ್ವಪಕ್ಷಯುಕ್ತಿಯನ್ನು ಸೂಚಿಸುವ ಉದ್ದೇಶಕ್ಕಾಗಿ ಪ್ರಾಣಭೃತ್ ಎಂದೇ ಹೇಳಿದ್ದಾರೆ.

योग विभाग उत्तरार्थः । व्याकरणे 'रञ्जेश्च' इत्यादिवत् अत्र श्रुतौ जीवमात्रलिङ्गसत्त्वेन तदैक्येस्यैव अग्रेनिरासात् । अत एव अस्य स्वशब्देनोक्तिः ।

ವ್ಯಾಕರಣದಲ್ಲಿ 'रंजेश्च' ಎಂಬ ಸೂತ್ರವನ್ನು ಮುಂದಿನ ಸೂತ್ರದಲ್ಲಿ ಅನುವೃತ್ತಿ ಮಾಡುವುದಕ್ಕಾಗಿ ಪ್ರತ್ಯೇಕಗೊಳಿಸಲಾಗಿದೆ. ಆದರಂತೆ ಇಲ್ಲಿಯೂ ಸಹ 'प्राणभृच्च' ಎಂಬ ಸೂತ್ರವನ್ನುಮುಂದಿನ ಸೂತ್ರದಲ್ಲಿ ಅನುವೃತ್ತಿ ಮಾಡುವುದಕ್ಕಾಗಿ ಪ್ರತ್ಯೇಕವಾಗಿ ರಚಿಸಿದ್ದಾರೆಂದು ತಿಳಿಯಬೇಕು. ಏಕೆಂದರೆ ಯಸ್ಮಿನ್ ದ್ಯೌಃ ಎಂಬ ಶ್ರುತಿಯಲ್ಲಿ ಜೀವನ ಲಿಂಗವಷ್ಟೇ ಇರುವುದರಿಂದ ಅವನಿಂದ ಐಕ್ಯವನ್ನು ಮುಂದೆ ನಿರಾಕರಿಸುತ್ತಾರೆ. ಆದ್ದರಿಂದಲೇ ಜೀವನಲ್ಲಿ ಪ್ರಸಿದ್ಧವಾಗಿರುವ ಪ್ರಾಣಭೃತ್ ಎಂಬ ಶಬ್ದವನ್ನು ಇಲ್ಲಿ ಹೇಳಿದ್ದಾರೆ.

ननूभयप्रापकाबाधेन जीवब्रह्मभेदोऽस्तित्यत आह -

॥ ॐ भेदव्यपदेशात् ॐ ॥ १-३-५ ॥

ಜೀವಪ್ರಾಪಕವಾದ ಲಿಂಗಗಳು ಮತ್ತು ಬ್ರಹ್ಮಪ್ರಾಪಕವಾದ ಲಿಂಗಗಳೆರಡೂ ಅಬಾಧಿತವಾಗಿರುವುದರಿಂದ ಜೀವಬ್ರಹ್ಮ ಅಭೇದವನ್ನೇ ಒಪ್ಪಬಹುದಲ್ಲವೇ? ಎಂಬ ಪ್ರಶ್ನೆಗೆ ಉತ್ತರಿಸುವುದಕ್ಕಾಗಿ ಮುಂದಿನ ಸೂತ್ರ ಹೊರಟಿದೆ. ಓಂ ಭೇದವ್ಯಪದೇಶಾತ್ ಓಂ'

''जुष्टं यदा पश्यत्यन्यमीशम्'' इतीहैव जीवब्रह्मभेदव्यपदेशात्नैक्यमित्यर्थः ।

ಸೂತ್ರಾರ್ಥ ಹೀಗಿದೆ -- 'जुष्टं यदा पश्यति अन्यमीशम्' ಎಂಬ ಮಾಂಡೂಕ್ಯೋಪನಿಷತ್ತಿನಲ್ಲಿ ಜೀವಬ್ರಹ್ಮಭೇದವನ್ನು ಹೇಳಿರುವುದರಿಂದ ಜೀವಬ್ರಹ್ಮೈಕ್ಯವನ್ನು ಹೇಳಬಾರದೆಂದರ್ಥ.

ईशशब्दं ब्रह्मेति कुतः? येन जीवब्रह्मभेदोक्तिः स्यादित्यत आह -

॥ ॐ प्रकरणात् ॐ ॥ १-३-६ ॥

ಈಶಶಬ್ದವಾಚ್ಯನು ಬ್ರಹ್ಮನೇ ಆಗಿದ್ದಾನೆಂದು ಹೇಗೆ ಹೇಳುತ್ತೀರಿ? ಒಂದುವೇಳೆ ಬ್ರಹ್ಮನು ಈಶಶಬ್ದವಾಚ್ಯನಾದಲ್ಲಿ ಮಾತ್ರ ಜೀವಬ್ರಹ್ಮರಿಗೆ ಭೇದವನ್ನು ಹೇಳಬಹುದು. ಈ ಪ್ರಶ್ನೆಗೆ ಉತ್ತರಿಸಲು ಮುಂದಿನ ಸೂತ್ರ ಹೊರಟಿದೆ. 'ಓಂ ಪ್ರಕರಣಾತ್ ಓಂ'

''ದ್ವೇ ವಿದ್ಯೇ ವೇದಿತವ್ಯೇ'' ಇತಿ ಪರವಿದ್ಯಾವಿಷಯವಸ್ತುನ ಆರಭ್ಯಾಧೀತತ್ವೇನ ಬ್ರಹ್ಮಪ್ರಕರಣಾದೀಶಶಬ್ದಾರ್ಥೋ ಬ್ರಹ್ಮೇತ್ಯರ್ಥಃ ।।

ಸೂತ್ರಾರ್ಥ ಹೀಗಿದೆ - 'ದ್ವೇ ವಿದ್ಯೇ ವೇದಿತವ್ಯೇ' ಎಂಬುದಾಗಿ ಮಾಂಡೂಕ್ಯೋಪನಿಷತ್ತಿನಲ್ಲಿ ಪರವಿದ್ಯೆಗೆ ವಿಷಯವಾದ ಯಾವ ವಸ್ತುವಿದೆಯೋ ಅದನ್ನೇ ಪ್ರಾರಂಭದಲ್ಲಿ ಹೇಳಿ ಮುಂದೆ ವಿಷಯವನ್ನು ನಿರೂಪಣೆ ಮಾಡಿರುವುದರಿಂದ ಸಂಪೂರ್ಣಪ್ರಕರಣವು ಬ್ರಹ್ಮಪರವೆಂದು ಸಿದ್ಧವಾಗುತ್ತದೆ. ಆದ್ದರಿಂದ ಅಲ್ಲಿರುವ ಈಶಶಬ್ದವು ಬ್ರಹ್ಮನನ್ನೇ ಪ್ರತಿಪಾದಿಸುತ್ತದೆಂದರ್ಥ.

ನ ಕೇವಲಂ ಶ್ರುತಿಬಲಾಚ್ಚೈದಃ, ಲಿಙ್ಗಾದಪೀತ್ಯಾಹ -

।। ಓಂ ಸ್ಥಿತ್ಯದನಾಭ್ಯಾಂ ಚ ಓಂ ।। ೧-೩-೭ ।।

ಶ್ರುತಿಬಲದಿಂದಷ್ಟೇ ಅಲ್ಲ ಲಿಂಗದ ಬಲದಿಂದಲೂ ಸಹ ಭೇದವು ಸಿದ್ಧವಾಗುತ್ತದೆಂದು ಹೇಳುತ್ತಿದ್ದಾರೆ. 'ಓಂ ಸ್ಥಿತ್ಯದನಾಭ್ಯಾಂ ಚ ಓಂ'.

ನೈಕ್ಯಮಿತ್ಯಸ್ತಿ । ಸ್ಥಿತಿಃ ಕರ್ಮಫಲೋಪಜೀವನಂ ವಿನಾऽವಸ್ಥಾನಮ್ । ಅದನಂ ತದುಪಜೀವನಮ್ । ತಾಭ್ಯಾಂ ಚ ಜೀವಬ್ರಹ್ಮಣೋರೈಕ್ಯಮಿತ್ಯರ್ಥಃ ।

ಸೂತ್ರಾರ್ಥ ಹೀಗಿದೆ - 'ನ' 'ಐಕ್ಯಂ' ಎಂಬೆರೆಡು ಪದಗಳನ್ನು ಅಧ್ಯಾಹಾರ ಮಾಡಿಕೊಳ್ಳಬೇಕು. ಸ್ಥಿತಿಃ ಎಂದರೆ ಕರ್ಮಫಲವನ್ನು ಉಪಜೀವನ ಮಾಡದೇ ಇರುವವನು. ಅದನ ಎಂದರೆ ಅದನ್ನು ಉಪಜೀವಿಸಿಕೊಂಡಿರುವವನು. ಇವೆರಡರಿಂದ ಜೀವಬ್ರಹ್ಮರಿಗೆ ಅಭೇದವಿಲ್ಲವೆಂದು ತಿಳಿಯುತ್ತದೆ.

''ಅನ್ಯಃ ಪಿಪ್ಪಲಂ ಸ್ವಾದ್ವತ್ತ್ಯನಶ್ನನ್ಯೋ ಅಭಿಚಾಕಶೀತಿ'' ಇತಿ ಜೀವೇಶಯೋರದನತದ್ರಹಿತಸ್ಥಿತ್ಯುಕ್ತೇರಿತಿ ಭಾವಃ ।

'ಅನ್ಯಃ ಪಿಪ್ಪಲಂ ಸ್ವಾದ್ವತ್ತ್ಯನಶ್ನನ್ಯೋ ಅಭಿಚಾಕಶೀತಿ' ಎಂಬುದಾಗಿ ಮಾಂಡೂಕ್ಯೋಪನಿಷತ್ತಿನಲ್ಲಿ ಜೀವೇಶ್ವರರಿಗೆ ತಿನ್ನುವಿಕೆ ಮತ್ತು ತಿನ್ನದಿರುವಿಕೆ ಎಂಬ ಧರ್ಮವನ್ನು ಹೇಳಿರುವುದರಿಂದ ಇಬ್ಬರಿಗೂ ಭೇದವಿದೆಯೆಂದು ತಿಳಿಯಬೇಕು.

ಶ್ರುತಾವದನಸ್ಯಾದಿತ್ವೇನ ಅದನಸ್ಥಿತಿಭ್ಯಾಮಿತಿ ವಾಚ್ಯೇ ಸ್ಥಿತೇರೀಶಸಮ್ಬನ್ಧಿತ್ವೇನಾಭ್ಯರ್ಹಿತ ತ್ವಾದಲ್ಪಾಕ್ಷರತ್ವಾಚ್ಚ ವ್ಯತ್ಯಾಸಃ ।

ಶ್ರುತಿಯಲ್ಲಿ ಆದನವನ್ನು ಮೊದಲು ಹೇಳಲಾಗಿದೆ. ಆದಕ್ಕನುಗುಣವಾಗಿ ಸೂತ್ರದಲ್ಲಿಯೂ ಆದನವನ್ನೇ ಮೊದಲು ಹೇಳಿ 'ಆದನಸ್ಥಿತಿಭ್ಯಾಂ' ಎಂದು ಹೇಳಬೇಕಿತ್ತು. ಆದರೂ ಸಹ ಸ್ಥಿತಿಯು ಈಶನಿಗೆ ಸಂಬಂಧಿಸಿದ್ದರಿಂದ ಶ್ರೇಷ್ಠವಾಗಿದೆ. ಮತ್ತು ಸ್ಥಿತಿಶಬ್ದವು ಆದನ ಶಬ್ದಕ್ಕಿಂತ ಅಲ್ಪಾಕ್ಷರವುಳ್ಳದ್ದಾಗಿದೆ. ಈ ಎರಡು ಕಾರಣಗಳಿಂದ ಆದನಶಬ್ದವನ್ನು ಅನಂತರ ಹೇಳಿ ಸ್ಥಿತಿಶಬ್ದವನ್ನು ಮೊದಲು ಹೇಳಿದ್ದಾರೆ.

अत्र नानुमानमतच्छब्दादित्यनुवृत्त्या अनुमानं भेदमिथ्यात्वे न मानम् । तद्विरुद्धमतत् भेदसत्यत्वम् । अतच्छब्दात् भेदसत्यत्वबोधकशब्दात् । अनुमानमूलभूताशब्दाभावाच्चेति वृत्त्यन्तरमुक्त्वा भेदमिथ्यात्वं निरसनीयामिति वदन्ति ।।१।।

'ನಾನುಮಾನಮತಚ್ಛಬ್ದಾತ್' ಎಂಬ ಸೂತ್ರವನ್ನು ಅನುವೃತ್ತಿಮಾಡಿ ಅನುಮಾನವು ಭೇದಮಿಥ್ಯಾತ್ವವಿಷಯದಲ್ಲಿ ಪ್ರಮಾಣವಲ್ಲವೆಂದು ತಿಳಿಸಿದ್ದಾರೆ. 'ಅತತ್' ಎಂದರೆ ಭೇದಮಿಥ್ಯಾತ್ವಕ್ಕೆ ವಿರುದ್ಧವಾದ ಭೇದಸತ್ಯತ್ವವು ಎಂದರ್ಥ. 'ಅತಚ್ಛಬ್ದಾತ್' ಎಂದರೆ ಭೇದಸತ್ಯತ್ವಕ್ಕೆ ಬೋಧಕವಾದ ಶ್ರುತಿಯಿರುವುದರಿಂದ ಪುತ್ತು ಅನುಮಾನಕ್ಕೆ ಮೂಲಭೂತವಾದ ಶ್ರುತಿಯಿಲ್ಲದಿರುವುದರಿಂದ ಎಂದು ಮತ್ತೊಂದು ವ್ಯಾಖ್ಯಾನವನ್ನು ತಿಳಿದು, ಭೇದಮಿಥ್ಯಾತ್ವವನ್ನು ನಿರಾಕರಿಸಬೇಕೆಂದು ಹೇಳುತ್ತಾರೆ.

॥ ಇಲ್ಲಿಗೆ ದ್ಯುಭ್ವಾದ್ಯಧಿಕರಣವು ತಂತ್ರದೀಪಿಕೆಯ ಕನ್ನಡಾನುವಾದದಲ್ಲಿ ಮುಗಿಯಿತು ॥

श्री राघवेन्द्रतीर्थविरचिता

श्रीन्यायमुक्तावलिः

अथ प्रथमाध्यायस्य तृतीयः पादः

द्युभ्वादधिकरणम् (१) एवम् अन्यत्र प्रसिद्धाशेषनामलिङ्गसमन्वयं महामल्लभङ्गन्यायेन पूर्वमुक्त्वा अत्र उभयत्र प्रसिद्धनामलिङ्गसमन्वयः क्रियते ।।

॥ ॐ द्युभ्वाद्यायतनं स्वशब्दात् ॐ ॥ १ ॥

॥ ॐ मुक्तोपसृप्यव्यपदेशात् ॐ ॥ ॥ ॐ नानुमानमतच्छब्दात् ॐ ॥

॥ ॐ प्राणभृच्च ॐ ॥ ॥ ॐ भेदव्यपदेशात् ॐ ॥

॥ ॐ प्रकरणात् ॐ ॥ ॥ ॐ स्थित्यदनाभ्यां च ॐ ॥

ಪೂರ್ವೆಣ ನಾವಶ್ಯಂ ಸಙ್ಗತ್ಯಪೇಕ್ಷೆತ್ಯವೋಚಾಮ । ಆಥರ್ವಣೆ ''ಯಸ್ಮಿನ್ದ್ಯೌಃ ಪೃಥಿವೀ ಚಾನ್ತರಿಕ್ಷಮೋತಂ ಮನಃ ಸಹ ಪ್ರಾಣೈಶ್ಚ ಸರ್ವೈಃ । ತಮೇವೈಕಂ ಜಾನಥ ಆತ್ಮಾನಮ್''ಮಿತಿ (ಮುಂ.೨-೨-೫) ಶ್ರುತಂ ದ್ಯಾವಾಪೃಥಿವ್ಯಾಯತನಂ ಕಿಂ ವಿಷ್ಣುಃ ಉತ ರುದ್ರಾದಿರಿತಿ ಸನ್ದೇಹಃ ।

ವಸ್ತುತಃ ಬೇರೆ ಪಾದವಾದ್ದರಿಂದ ಸಂಗತಿಯನ್ನು ಅವಶ್ಯ ಹೇಳಲೇಬೇಕೆಂಬ ನಿಯಮವಿಲ್ಲ. ಆದ್ದರಿಂದ ಸಂಗತಿಯನ್ನು ನಾವು ತೋರಿಸಿಲ್ಲ. ಆಥರ್ವಣೋಪನಿಷತ್ತಿನಲ್ಲಿ 'ಯಸ್ಮಿನ್ ದ್ಯೌಃ ಪೃಥಿವೀ ಚಾಂತರಿಕ್ಷಮೋತಂ ಮನಃ ಸಹ ಪ್ರಾಣೈಶ್ಚ ಸರ್ವೈಃ । ತಮೇವೈಕಂ ಜಾನಥ ಆತ್ಮಾನಮ್' ಎಂಬುದಾಗಿ ದ್ಯುಭ್ವಾದ್ಯಾಯತನನು ಶ್ರುತನಾಗಿದ್ದಾನೆ. ಇವನು ವಿಷ್ಣುವೋ ಅಥವಾ ರುದ್ರಾದಿಗಳೋ ಎಂದು ಸಂದೇಹ.

ರುದ್ರಃ ಪ್ರಧಾನಂ ವಾಯುಃ ಜೀವೊ ವೇತಿ ಪೂರ್ವಃ ಪಕ್ಷಃ ।''ರುದ್ರೊ ವಾವ ಲೋಕಾಧಾರಃ'' ''ಪ್ರಾಣಾನಾಂ ಗ್ರನ್ಥಿರಸಿ ರುದ್ರೊ ಮಾऽವಿಶಾನ್ತಕಃ'' (ಮಹಾನಾ.) ಪ್ರಾಣೇಶ್ವರಃ ಕೃತ್ತಿವಾಸಾಃ ಪಿನಾಕೀ (ಧೃತ.ಸ್ಮೃ) ''ಯದ್ಧ್ವೈ ಗಾರ್ಗಿ ದಿವೊ ಯದರ್ವಾಕ್ ಪೃಥಿವ್ಯಾ ಯದನ್ತರಾ ದ್ಯಾವಾಪೃಥಿವೀ ಇಮೇ ಯದ್ಭೂತಞ್ಚ ಭವಚ್ಚ ಭವಿಷ್ಯಚ್ಚೇತ್ಯಾಚಕ್ಷತೇ ಆಕಾಶ ಏವ ತದೋತಂ ಚ ಪ್ರೋತಂ ಚೇತಿ'' (ಬೃ.೫-೮-೭) ''ವಾಯುನಾ ವೈ ಗೌತಮ ಸೂತ್ರೇಣಾಯಂ ಚ ಲೋಕಃ ಪರಶ್ಚ ಲೋಕಃ ಸರ್ವಾಣಿ ಚ ಭೂತಾನಿ ಸನ್ದೃಬ್ಧಾನಿ'' ತಿ (ಬೃ.೫-೭-೨) ಯಥಾಕ್ರಮಂ ತ್ರಿಷು ಸಮಾಖ್ಯಾನಾತ್ ।

ರುದ್ರ ಪ್ರಕೃತಿ ವಾಯು ಹಾಗೂ ಜೀವ ಇವರುಗಳು ದ್ಯುಭ್ವಾದ್ಯಾಯತನರಾಗಿದ್ದಾರೆಂದು ಪೂರ್ವಪಕ್ಷ. 'ರುದ್ರೋ ವಾವ ಲೋಕಾಧಾರಃ' 'ಪ್ರಾಣಾನಾಂ ಗ್ರಂಥಿರಸಿ ರುದ್ರೋ ಮಾವಿಶಾಂತಕಃ' ಎಂಬ 'ಮಹಾನಾರಾಯಣೋಪನಿಷತ್' ಹಾಗೂ 'ಪ್ರಾಣೇಶ್ವರಃ ಕೃತ್ತಿವಾಸಾಃ ಪಿನಾಕೀ' ಎಂಬ ಪ್ಯತಸೂಕ್ತ ಇವುಗಳು ರುದ್ರನು ದ್ಯುಭ್ವಾದ್ಯಾಯತನನಾಗಿದ್ದಾನೆನ್ನಲು ಆಧಾರವಾಗಿವೆ.

'ಯದೂರ್ಧ್ವಂ ಗಾರ್ಗಿ ದಿವೋ ಯದರ್ವಾಕ್ ಪೃಥಿವ್ಯಾ ಯದಂತರಾ ದ್ಯಾವಾಪೃಥಿವೀ ಇಮೇ ಯದ್ಭೂತಂ ಚ ಭವಚ್ಚ ಭವಿಷ್ಯಚ್ಚೇತ್ಯಾಚಕ್ಷತೇ ಆಕಾಶ ಏವ ತದೋತಂ ಚ ಪ್ರೋತಂ ಚ' ಎಂಬ ಬೃಹದಾರಣ್ಯಕವು ಪ್ರಕೃತಿಯು ದ್ಯುಭ್ವಾದ್ಯಾಯತನವಾಗಿದೆ ಎನ್ನಲು ಆಧಾರವಾಗಿವೆ.

'ವಾಯುನಾ ವೈ ಗೌತಮಸೂತ್ರೇಣ ಆಯಂ ಚ ಲೋಕಃ ಪರಶ್ಚ ಲೋಕಃ ಸರ್ವಾಣಿ ಚ ಭೂತಾನಿ ಸಂದೃಬ್ಧಾನಿ' ಎಂಬ ಶ್ರುತಿಯು ವಾಯುದೇವನು ದ್ಯುಭ್ವಾದ್ಯಾಯತನನಾಗಿದ್ದಾನೆನ್ನಲು ಆಧಾರವಾಗಿದೆ.

''स एषोऽन्तश्चरते बहुधा जायमानः'' इति (मै.४-६) जायमानत्वरूप-जीवलिङ्गाच्च ।

'स एषोऽन्तश्चरते बहुधा जायमानः' ಎಂಬ ಮಾಂಡೂಕ್ಯೋಪನಿಷತ್ತು ಜಾಯಮಾನತ್ವವೆಂಬ ಜೀವಲಿಂಗವನ್ನು ಹೇಳುತ್ತಿದೆ. ಇದರಿಂದ ಜೀವನು ದ್ಯುಭ್ವಾದ್ಯಾಯತನನಾಗಿದ್ದಾನೆಂದು ತಿಳಿಯಬಹುದು.

लोकाश्च लोकिनश्च विष्णावेव ओताश्चेति विष्णुसमाख्यातोऽपि बहुरुद्रश्रुतिलिङ्गोपेतत्वेन रुद्रसमाख्यायाः प्राबल्यात् । निरवकाशजायमानत्वलिङ्गेन विष्णुसमाख्याया बाधाच्च ।

'लोकाश्च लोकिनश्च विष्णावेव ओताश्च' ಎಂಬ ಶ್ರುತಿಯು ವಿಷ್ಣುವನ್ನು ಪ್ರತಿಪಾದಿಸಬಹುದು. ಆದರೆ ವಿಷ್ಣುಸಮಾಖ್ಯಾಪ್ರಮಾಣಕ್ಕಿಂತ ಅನೇಕ ಶ್ರುತಿ ಹಾಗೂ ಲಿಂಗಗಳಿಂದ ಕೂಡಿರುವ ಕಾರಣದಿಂದ ರುದ್ರಸಮಾಖ್ಯಾಪ್ರಮಾಣವೇ ಪ್ರಬಲವಾಗಿದೆ. ನಿರವಕಾಶವಾದ ಜಾಯಮಾನತ್ವವೆಂಬ ಲಿಂಗದಿಂದ ವಿಷ್ಣುಸಮಾಖ್ಯಾಪ್ರಮಾಣವು ಬಾಧಿತವಾಗುತ್ತದೆಂದೂ ಸಹ ತಿಳಿಯಬೇಕು.

नच ''अथ परा यया तदक्षरमधिगम्यत'' इति परविद्याविषयत्वरूपविष्णुलिङ्गमप्यनवकाशमितिवाच्यम् । एवं हि द्वयाविरोधेन जीवेशाभेदोऽस्तु पूर्वोक्तदिशा विष्णुलिङ्गस्य जीव इव जीवलिङ्गस्य विष्णावयोगादिति ।।

'अथ परा यया तदक्षरमधिगम्यते' ಎಂಬುದಾಗಿ ಪರವಿದ್ಯಾವಿಷಯತ್ವವೆಂಬ ವಿಷ್ಣುವಿನ ಲಿಂಗವು ನಿರವಕಾಶವಾಗಿದೆಯಲ್ಲವೇ ಎಂದು ಪ್ರಶ್ನಿಸಬಾರದು. ಹಾಗಾದರೆ ಎರಡೂಕಡೆ ನಿರವಕಾಶಪ್ರಮಾಣವಿರುವುದರಿಂದ ಜೀವೇಶರಿಗೆ ಅಭೇದವನ್ನು ಹೇಳಬಹುದು. ಆದ್ದರಿಂದ ಹಿಂದೆ ಹೇಳಿದ ಪ್ರಕಾರ ವಿಷ್ಣುಲಿಂಗವೆಲ್ಲವೂ ಜೀವನಲ್ಲೇ ಬರಬಹುದು. ಆದರೆ ಜೀವನ ಲಿಂಗಗಳು ವಿಷ್ಣುವಿನಲ್ಲಿ ಬರುವುದಿಲ್ಲ. ಏಕೆಂದರೆ ಅಧಿಷ್ಠಾನ ಧರ್ಮವು ಆಧ್ಯಸ್ತದಲ್ಲಿ ಬರುತ್ತದೆ ಹೊರತು; ಆಧ್ಯಸ್ತದಲ್ಲಿರುವ ಧರ್ಮವು ಅಧಿಷ್ಠಾನದಲ್ಲಿ ಬರುವುದಿಲ್ಲ. ಇಷ್ಟು ಪೂರ್ವಪಕ್ಷ.

सिद्धान्तस्तु ।। आत्मानमित्यात्मशब्दादमृतस्यैष सेतुरिति मुक्तप्राप्यत्वरूपानव काशविष्णुलिङ्गाद्रुद्राद्यसाधारणभस्मधरोग्रादिशब्दाभावात् । समाख्यागतरुद्रादिशब्दानां ''रुजं द्रावयते यस्मात्'' इत्यादि (ब्रह्माण्डे) स्मृत्या वैष्णवत्वात् ।

ಸಿದ್ಧಾಂತ ಹೀಗಿದೆ -- 'ಆತ್ಮಾನಂ' ಎಂಬುದಾಗಿ ಆತ್ಮಶಬ್ದದ ಬಲದಿಂದ 'ಅಮೃತಸ್ಯೈಷ ಸೇತುಃ' ಎಂಬುದಾಗಿ ಮುಕ್ತಪ್ರಾಪ್ಯತ್ವವೆಂಬ ನಿರವಕಾಶಲಿಂಗದಿಂದ ವಿಷ್ಣುವೇ ದ್ಯುಭ್ವಾದ್ಯಾಯತನನಾಗಿದ್ದಾನೆಂದು ನಿರ್ಣಯಿಸಬೇಕು. ರುದ್ರಾದಿಗಳಲ್ಲಿ ಅಸಾಧಾರಣವಾಗಿರುವ ಭಸ್ಮಧರ, ಉಗ್ರ ಮೊದಲಾದ ಶಬ್ದಗಳನ್ನು ವಿಷ್ಣುವಿನಲ್ಲೇ ಸಮನ್ವಯಗೊಳಿಸಬೇಕು. ಸಮಾಖ್ಯಾಪ್ರಮಾಣದಲ್ಲಿರುವ ರುದ್ರಾದಿಶಬ್ದಗಳನ್ನು 'ರುಜಂ ದ್ರಾವಯತೇ ಯಸ್ಮಾತ್' ಎಂಬ ಬ್ರಹ್ಮಾಂಡಪುರಾಣದ ಆಧಾರದಿಂದ ವಿಷ್ಣುವಿನಲ್ಲೇ ಸಮನ್ವಯಗೊಳಿಸಬೇಕು.

जायमानत्वस्याप्यजायमानो बहुधा विजायत इति श्रुत्यन्तरबलात्प्रादुर्भावाख्यजनिसम्भवेन च विष्णुनिष्ठत्वात् ।

ಜಾಯಮಾನತ್ವವೆಂಬ ಜೀವನ ಲಿಂಗವೂ ಸಹ 'ಅಜಾಯಮಾನೋ ಬಹುಧಾ ವಿಜಾಯತೇ' ಎಂಬ ಶ್ರುತ್ಯಂತರ ಬಲದಿಂದ ಪ್ರಾದುರ್ಭಾವರೂಪವಾದ ಜಾಯಮಾನತ್ವವನ್ನು ವಿಷ್ಣುವಿನಲ್ಲಿ ಕೂಡಿಸಬಹುದು. 'ಜನಿ ಪ್ರಾದುರ್ಭಾವೇ' ಎಂಬ ಧಾತುವು ಈ ವಿಷಯದಲ್ಲಿ ಆಧಾರವಾಗಿದೆ.

द्वे विद्ये वेदितव्ये इति परविद्याविषयतया प्रकृतेशस्यैव जुष्टं यदा पश्यत्यन्यमीशमिति जीवेन भेदव्यपदेशेन तयोरन्यः पिप्पलं स्वाद्वत्त्यनश्नन्योऽभिचाकशीतीति जीवेशयोः कर्मफलोपजीवनतद्रहितावस्थानरूपभेदकोक्त्या च तयोरैक्यायोगाद्विष्णुरेव द्युभ्वाद्यायतनमिति ।।

'द्वे ವಿದ್ಯೇ ವೇದಿತವ್ಯೇ' ಎಂಬುದಾಗಿ ಪರವಿದ್ಯಾವಿಷಯನಾದವನೇ ಇಲ್ಲಿ ಪ್ರಸಕ್ತನಾಗಿದ್ದಾನೆ. ಅಂತಹವನು 'ಜುಷ್ಟಂ ಯದಾ ಪಶ್ಯತ್ಯನ್ಯಮೀಶಮ್' ಎಂಬುದಾಗಿ ಜೀವನಿಂದ ಭಿನ್ನನಾಗಿದ್ದಾನೆಂದು ಭೇದವ್ಯಪದೇಶವಿದೆ. ಆದ್ದರಿಂದ ಜೀವೇಶರಿಗೆ ಭೇದವನ್ನು ವಿವಕ್ಷಿಸಬಾರದು. ಮತ್ತು 'ತಯೋರನ್ಯಃ ಪಿಪ್ಪಲಂ ಸ್ವಾದ್ವತ್ತ್ಯನಶ್ನನ್ನೋ ಅಭಿಚಾಕಶೀತಿ' ಎಂಬ ಶ್ರುತಿಯು ಕರ್ಮಫಲೋಪಜೀವನ ಎಂಬುದು ಜೀವನ ಧರ್ಮವೆಂದೂ ಕರ್ಮಫಲೋಪಜೀವನರಾಹಿತ್ಯವೆಂಬುದು ಈಶನ ಧರ್ಮವೆಂದು ಹೇಳುತ್ತಿದೆ. ಹೀಗೆ ವಿರುದ್ಧವಾದ ಧರ್ಮಗಳಿರುವುದರಿಂದ ಜೀವೇಶರಿಗೆ ಐಕ್ಯವನ್ನು ಹೇಳುವುದು ತಪ್ಪಾಗುತ್ತದೆ. ಜೀವನಿಗಿಂತ ಅತ್ಯಂತ ಭಿನ್ನನಾದ ವಿಷ್ಣುವೇ ದ್ಯುಭ್ವಾದ್ಯಾಯತನನಾಗಿದ್ದಾನೆ.

फले तु द्युभ्वाद्यायतनस्य ब्रह्मान्यत्वे अदृश्यत्वादिगुणकाक्षरमप्यन्यदिति तदाक्षेपसमाधी ।।१।।

ದ್ಯುಭ್ವಾದ್ಯಾಯತನನಾದವನು ಬ್ರಹ್ಮನಿಗಿಂತ ಭಿನ್ನನಾದರೆ ಅದೃಶ್ಯತ್ವಾದಿ ಗುಣಗಳುಳ್ಳ ಅಕ್ಷರನೂ ಸಹ ಅವನೇ ಆಗುತ್ತಾನೆಂದು ಪೂರ್ವಪಕ್ಷದ ಫಲ. ಆದರ ನಿರಾಕರಣೆಯು ಸಿದ್ಧಾಂತದ ಫಲ.

॥ ಶ್ರೀಕೃಷ್ಣಾರ್ಪಣಮಸ್ತು ॥

सूत्रार्थरत्नावलिः

अथ प्रथमाध्यायस्य तृतीयः पादः

द्युभ्वाद्यधिकरणम् (१)

तत्र चान्यत्र च प्रसिद्धानां शब्दानां विष्णौ समन्वयः प्रायेणास्मिन् पादे क्रियते ।

द्युभ्वाद्यायतनाधिकरणम्

अत्रोभयप्रसिद्धसर्वाधारत्वलिङ्गं ब्रह्मणि समन्वीयते ।

(१) ॐ ॥ द्युभ्वाद्यायतनं स्वशब्दात् ॥ ॐ

ननु ''रुद्रस्यैव द्युभ्वाद्यायतनत्वं भवेत् । अत्रोक्त प्राणाधारत्वस्य 'प्राणानां ग्रन्थिरसि' (महा.ना.१६।२) इत्यादिना तस्मिन्प्रतीतेः । 'मन ओतं च' इत्यादिना मन आयतनत्वस्य तस्मिन्नैवोक्तत्वात् । प्राणाधारत्वलिङ्गेन 'प्राणेश्वर' (घृतसूक्त) इत्यादिना तस्य प्रतीतेः । जीवस्य वा भवेत् । 'स एषोऽन्तश्चरते' (मुं. २।२।६) इत्यादिना जीवलिङ्गप्रतीतेः'' इति प्राप्ते, सूत्रमुपन्यस्यति –

ॐ ।। द्युभ्वाद्यायतनं स्वशब्दादिति ।। अस्यार्थः – द्युभ्वाद्यायतनं 'यस्मिन्' इति वाक्योक्तस्वर्गभूम्यादिसर्वाश्रयो विष्णुरेव । न त्वन्यः । कुतः? स्वशब्दात् स्वेति शब्दः

स्वशब्दगृहीतब्रह्मवाचकात्मशब्दादित्यर्थः ।

एवञ्च 'तमेवैकमात्मानम्' इति आत्मशब्दाद् विष्णोर्द्युभ्वाद्यायतनत्वमिति सिद्धम् ।।

(२) ॐ।। मुक्तोपसृप्यव्यपदेशात् ।।ॐ

ननु ''विष्णौ मुख्योऽप्यात्मशब्दः 'अरा इव रथनाभौ' इत्यत्र बहुधा जायमानत्वरूपजीवलिङ्गात् । तस्य जीववादेव प्राणित्वसिद्धेः । ततश्च जीव एव द्युभ्वाद्यायतनम्'' इति प्राप्ते, सूत्रं पठति –

ॐ।। मुक्तोपसृप्यव्यपदेशादिति ।। अस्यार्थः – द्युभ्वाद्यायतनत्वं न विष्णोरन्यस्य । किन्तु विष्णुरेव । कुतः? मुक्तोपसृप्यव्यपदेशात् । भावप्रधानोऽयम् । द्युभ्वाद्यायतनस्य वस्तुनः 'अमृतस्यैष सेतुः' इति मुक्तप्राप्यवचनात् तस्य चान्यत्रायोगादित्यर्थः ।

एवञ्च 'अमृतस्यैष सेतुः' (मुं. २।२।५) 'ब्रह्मविदाप्नोति परम्' (तै.उ. २।१) इत्यादिषु मुक्तप्राप्यत्ववचनाद् विष्णोर्द्युभ्वाद्यायतनत्वमिति सिद्धम् ।।

(३) ॐ।। नानुमानमतच्छब्दात् ।।ॐ

ननु 'विष्णुप्रापकवत् रुद्रप्रकृत्योरपि प्रापकसद्भावात् तयोर्द्युभ्वाद्यायतनत्वं स्यात्' इति प्राप्ते, सूत्रं पठति –

ॐ।। नानुमानमतच्छब्दादिति ।। अस्यार्थः – अनुमानम् अनुमानमिति वा । अनुमानसिद्धप्रामाण्ययुतपाशुपताद्यागमैः सर्वाश्रयता कल्पितम् । रुद्रप्रधानादिकं द्युभ्वाद्यायतनं न । कुतः? अतच्छब्दात् भस्मधरोग्रत्वादितच्छ्रुतिलिङ्गाद्यभावादित्यर्थः ।

एवञ्च रुद्रादिशब्दानां सावकाशत्वेन 'प्राणानाम्' (महा.ना.१६।२) इत्यादिवाक्यस्य रुद्रपरत्वनिर्णयेनासाधकत्वात् । निरवकाशानां च भस्मधरोग्रत्वादि- शब्दानामभावात् । ततश्च विष्णोर्द्युभ्वाद्यायतनत्वमिति सिद्धम् ।।

(४) ॐ।। प्राणभृच्च ।।ॐ

ननु '' स एष इत्यत्र बहुधाजायमानत्वरूपजीवलिङ्गश्रवणात् प्राणित्वसिद्धेश्च जीवसामान्यस्य 'वायुना वै गौतमसूत्रेणायं लोकः'(बृ. ५।७।२) इति

विषयभूतलोकाधारत्वस्य वायुनिष्ठत्वेन श्रवणाद् वायोर्वा द्युभ्वाद्यायतनत्वं स्यात्'' इति प्राप्ते, सूत्रमुपन्यस्यति –

ॐ।। प्राणभृच्चेति ।। अस्यार्थः – जीवोऽप्यत एव न द्युभ्वाद्यायतन इत्यर्थः ।

एवञ्च प्रागुक्तसावकाशसाधकसद्भावेऽपि निरवकाशात्मशब्दाभावादेव तत्प्रापकत्वेनाभिमतस्य बहुधा जन्मादेः 'अजायमानः' (तै.आ.३।१३।१) श्रुतेर्विष्णावेव सम्भवाच्च न जीवस्य वायोर्वा द्युभ्वाद्यायतनत्वमिति सिद्धम् ।।

(५) ॐ।। भेदव्यपदेशात् ।।ॐ

ननु ''जीवलिङ्गस्य किं विष्णुत्वप्रतिपादनायासेन, जीवस्यैव द्युभ्वाद्यायतनत्वे विष्णोः तल्लाभसम्भवात् । न चोक्तहेतुविरोधः । जीवेशाभेदाभिप्रायेण जीवेऽप्यात्मशब्दाद् युक्तिसम्भवात् जीव एव द्युभ्वाद्यायतनत्वेन प्रतिपाद्यो भवेत्'' इति प्राप्ते, सूत्रमाह –

ॐ।। भेदव्यपदेशादिति ।। अस्यार्थः – 'अन्यमीशम्' इति जीवेशयोर्भेदोक्तेर्न तयोरैक्यमित्यर्थः ।

एवञ्च 'जुष्टं यदा पश्यति' (३।१।१) इत्यत्र दर्शनकर्तृत्वेन प्रकृतजीवस्य ईशपदोक्तेश्वराद् भेदोक्तेर्विष्णुरेव द्युभ्वाद्यायतनत्वेन प्रतिपाद्य इति सिद्धम् ।

(६) ॐ।। प्रकरणात् ।।ॐ

ननु ''जीवस्य कस्माच्चिदीशादन्यत्वमुच्यते न तु परमात्मनः । ततश्च न तयोर्भेदः'' इति प्राप्ते, पराकुर्वत् सूत्रमाह –

ॐ।। प्रकरणादिति ।। अस्यार्थः – 'अन्यम्' इत्यादेर्विष्णुप्रकरणत्वात् । अत्र जीवस्य विष्णुभेद एवोच्यते । न त्वन्यस्माद् भेद इत्यर्थः ।

एवञ्च 'द्वे विद्ये' इत्यस्य परविद्याविषयवस्तुनोऽत्राधीतत्वेन विष्णुप्रकरणत्वात् परमात्मन एव भेदव्यपदेशावगतेर्विष्णुरेव द्युभ्वाद्यायतन इति सिद्धम् ।

(७) ॐ।। स्थित्यदनाभ्यां च ।।ॐ

एवं न केवलं 'जुष्टम्' इति भेदश्रुतेः जीवेशभेदोऽत्र प्रकरणे विवक्षितः इति ज्ञायते किन्तु लिङ्गादपीत्याह सूत्रकृत् –

ॐ।। स्थित्यदनाभ्यां चेति ।। अस्यार्थः – ईशजीवयोः 'द्वा सुपर्णा'

(ಮುಂ. ೩।೧।೧) ಇತ್ಯಾದಿವಾಕ್ಯೋಕ್ತಂ ಕರ್ಮಫಲಾನುಪಜೀವನಸ್ಥಿತಿತದುಪಜೀವನರೂಪಹೇತುಭ್ಯಾಂ ಚ ನ ತಯೋರೈಕ್ಯಂ ವಾಚ್ಯಮಿತ್ಯರ್ಥಃ ।

ಏವಞ್ಚ ನಿರ್ದುಷ್ಟಶ್ರುತ್ಯಾ ಜೀವೇಶಯೋರ್ಭೇದಸ್ಯ ಸಿದ್ಧತ್ವಾನ್ನ ಜೀವಃ ಕಿನ್ತು ವಿಷ್ಣುರೇವ ದ್ಯುಭ್ವಾದ್ಯಾಯತನ ಇತಿ ಸಿದ್ಧಮ್ ।।

।। ಇತಿ ಪ್ರಥಮಾಧ್ಯಾಯಸ್ಯ ತೃತೀಯಃ ಪಾದಃ ।।

।। ಇತಿ ಸೂತ್ರಾರ್ಥರತ್ನಾವಳ್ಯಾಂ ದ್ಯುಭ್ವಾದಧಿಕರಣಮ್ ।।

॥ ಪರಿಪೂರ್ಣಚಂದ್ರಿಕೆಯಲ್ಲಿ ದ್ಯುಭ್ವಾದ್ಯಧಿಕರಣವು ಮುಗಿಯಿತು ॥

॥ ಶ್ರೀಮದ್ಗೋಶಾರ್ಪಣಮಸ್ತು ॥

ಭೂಮಾಧಿಕರಣ

(೧-೩-೨)

ಭಾಗ -೧

ಬ್ರಹ್ಮಸೂತ್ರ, ಸೂತ್ರದೀಪಿಕಾ, ಬ್ರಹ್ಮಸೂತ್ರಭಾಷ್ಯ,
ಸತ್ತರ್ಕದೀಪಾವಳಿ, ತತ್ವಪ್ರಕಾಶಿಕಾ,
ಭಾವದೀಪ ಇವುಗಳ ವಿವರಣೆಯೊಂದಿಗೆ
ಸರಳ ಕನ್ನಡ ಅನುವಾದ

* * *

ಭಾಷ್ಯದೀಪಿಕಾ ಹಾಗೂ ವಾಕ್ಯಾರ್ಥಮಂಜರೀ -
ಸಂಪೂರ್ಣ ಸಂಸ್ಕೃತ ಮೂಲ.

॥ ಶ್ರೀಗುರುಭ್ಯೋ ನಮಃ ॥

ದೇವದೇವೋತ್ತಮ ದೇವತಾಸಾರ್ವಭೌಮ
ಅಖಿಲಾಂಡಕೋಟಿಬ್ರಹ್ಮಾಂಡನಾಯಕ,ಚತುರ್ದಶಲೋಕಗುರುಗಳಾದ
ಶ್ರೀವೇದವ್ಯಾಸದೇವರಿಂದ ಅನುಗ್ರಹಿಸಲ್ಪಟ್ಟ

ಬ್ರಹ್ಮಮೀಮಾಂಸಾಶಾಸ್ತ್ರ

ಭೂಮಾಧಿಕರಣ

ಪೂರ್ಣಸುಖಿಸ್ವರೂಪನಾದ ವಿಷ್ಣುವೇ 'ಭೂಮಾ'

।। अथ भूमाधिकरणम् ।।

सू – ॐ ॥ भूमा सम्प्रसादादध्युपदेशात् ॥ ॐ ॥ ८ ॥

ಯಾವಾತನು ಭೂಮಾ ಎಂಬ ಶಬ್ದದಿಂದ ಪ್ರತಿಪಾದ್ಯನೋ ಅವನು ಪೂರ್ಣಸ್ವರೂಪಸುಖಿನಾಗಿದ್ದಾನೆಂದು, ಮತ್ತು ನಾಮಾಭಿಮಾನಿಯಾದ ಉಷಾದೇವಿಯಿಂದ ಪ್ರಾರಂಭಿಸಿ ವಾಯುದೇವತೆಗಿಂತ ಅಧಿಕನನ್ನಾಗಿ ಹೇಳಿರುವುದರಿಂದಲೂ ಭೂಮಾ ಎಂಬ ಪದದಿಂದ ವಿಷ್ಣುವೇ ಪ್ರತಿಪಾದ್ಯನಾಗುತ್ತಾನೆ.

ಶ್ರೀಜಗನ್ನಾಥಯತಿಗಳಿಂದ ರಚಿಸಲ್ಪಟ್ಟ

ಸೂತ್ರದೀಪಿಕಾ

सूत्रदीपिका – भूमा – 'यो वै भूमा' इति श्रुतौ भूमाशब्दोक्तपूर्णो विष्णुरेव । कुतः? सम्प्रसादात् - 'भूम्नस्तत्सुखम्' इत्यनेन सम्प्रसादशब्दितपूर्णसुखरूपत्वाभिधानात् । किञ्च अध्युपदेशात् - नामादेरपि तदुपरि नामादिदेवतोत्तमत्वेन भूम्नोऽभिधानाच्चेत्यर्थः।।

ಭೂಮಾ = ಯೋ ವೈ ಭೂಮಾ ಎಂಬ ಶ್ರುತಿಯಲ್ಲಿ ಭೂಮಾ ಎಂಬ ಶಬ್ದದಿಂದ ಪ್ರತಿಪಾದ್ಯನಾದವನು ಸುಖಪೂರ್ಣನಾದ ವಿಷ್ಣುವೇ ಆಗಿದ್ದಾನೆ. ಏಕೆಂದರೆ, ಸಂಪ್ರಸಾದಾತ್ = ತತ್ಸುಖಂ ಎಂಬುದರಿಂದ ಪೂರ್ಣಸುಖಸ್ವರೂಪತ್ವವನ್ನು ಹೇಳಿರುವುದರಿಂದ ಮತ್ತು ಅಧ್ಯುಪದೇಶಾತ್ = ನಾಮಾಭಿಮಾನಿಯಾದ ದೇವತೆಗಿಂತ ಅಧಿಕರಾದ ವಾಯುದೇವತೆಗಿಂತಲೂ ಉತ್ತಮನೆಂದು ಭೂಮನನ್ನು ಹೇಳಿರುವುದರಿಂದ.

श्रीमदानन्दतीर्थभगवत्पादाचार्यविरचित-

ब्रह्मसूत्रभाष्यम्

भाष्यम् — 'प्राणो वा आशाया भूयान्' इत्युक्त्वा 'यो वै भूमा तत् सुखम्' (छां. ७–२३.)इत्युक्तेस्तस्यैव

भूमत्वप्राप्तिः ।

ಅನುವಾದ - ಛಾಂದೋಗ್ಯಶ್ರುತಿಯಲ್ಲಿ ಪ್ರಾಣನಾದರೂ ಆಶಾ ಎಂಬ ಭಾರತೀದೇವಿಗಿಂತ ದೊಡ್ಡವನಾಗಿದ್ದಾನೆಂದು ಹೇಳಿ, ಮುಂದೆ ಪ್ರಸಿದ್ಧವಾದ ಯಾವ ವಾಯುದೇವರಿದ್ದಾನೋ ಅವನೇ ಸುಖಪೂರ್ಣನಾಗಿದ್ದಾನೆಂದು ಹೇಳಲಾಗಿದೆ. ಆದ್ದರಿಂದ ಭೂಮಾ ಎಂಬ ಶಬ್ದದಿಂದ ತಿಳಿಯುವ ಆನಂದಪೂರ್ಣತ್ವವು ವಾಯು- ದೇವನಲ್ಲೇ ಬರುತ್ತದೆ.

ಪ್ರತಿಪದಾರ್ಥ -- ಈ ಅಧಿಕರಣದಲ್ಲಿ ಭೂಮಾ ಎಂಬ ಸಾಮಾತ್ಯಕಶಬ್ದವನ್ನು ವಿಷ್ಣುವಿನಲ್ಲಿ ಸಮನ್ವಯ ಮಾಡುತ್ತಿದ್ದಾರೆ. ಭೂಮ್ನಾ ಕ್ರತುವತ್ ಎಂಬ ಸೂತ್ರದಲ್ಲಿ ಭೂಮಾಶಬ್ದವನ್ನು ಧರ್ಮವಾಚಕವಾಗಿ ವಿಕ್ಷಿಪ್ತರೂ ಈ ಅಧಿಕರಣದಲ್ಲಿ ಪೂರ್ಣವಾಗಿರುವಿಕೆ ಎಂದು ಧರ್ಮ್ಯರ್ಥದಲ್ಲಿ ಪ್ರಯೋಗಿಸಲಾಗಿದೆ. ಆಂದರೆ ಗುಣಗಳಿಂದ ಉತ್ತಮನಾಗಿದ್ದಾನೆಂದರ್ಥ. ಶ್ರುತ್ಯಾದಿಸಂಗತಿ ಹಾಗೂ ವಿಷಯಾದಿಗಳನ್ನು ಸೂಚಿಸುತ್ತಾ, ಯುಕ್ತಬದ್ಧವಾದ ಪೂರ್ವಪಕ್ಷವನ್ನು ಪ್ರಾಣೋ ವಾ ಇತ್ಯಾದಿ ಭಾಷ್ಯದಿಂದ ತೋರಿಸುತ್ತಿದ್ದಾರೆ.

ಪ್ರಾಣೋ ವಾ = ಮುಖ್ಯಪ್ರಾಣನಾದರೋ, ಆಶಾಯಾಃ = ಆಶಾ ಎಂಬ ಹೆಸರಿನ ಭಾರತೀದೇವಿಗಿಂತ, ಭೂಯಾನ್ = ಗುಣದಲ್ಲಿ ದೊಡ್ಡವನು, ಇತ್ಯುಕ್ತ್ವಾ = ಹೀಗೆ ಹೇಳಿ, ಮುಂದೆ ಯೋ ವೈ ಭೂಮಾ = ಯಾವ ಪ್ರಸಿದ್ಧನಾದ ವಾಯುದೇವನಿದ್ದಾನೋ, ತತ್ = ಅವನೇ, ಸುಖಪೂರ್ಣನು, ಇತ್ಯುಕ್ತೇಃ = ಹೀಗೆ ಹೇಳಿರುವುದರಿಂದ, ತಸ್ಯೈವ = ಮುಖ್ಯಪ್ರಾಣನಿಗೇನೇ, ಭೂಮತ್ವಪ್ರಾಪ್ತಿಃ = ಭೂಮಾ ಎಂಬ ಶಬ್ದಪ್ರತಿಪಾದ್ಯತ್ವವು, ಯುಕ್ತವಾಗುತ್ತದೆ.(೧)

(೧) **ಭಾಷ್ಯದೀಪಿಕಾ** – ಅತ್ರಾಧಿಕರಣೇ ಭೂಮನಾಮ್ನೋ ವಿಷ್ಣೌ ಸಮನ್ವಯಃ ಪ್ರತಿಪಾದ್ಯತೆ । ಭೂಮಶಬ್ದಶ್ಚ 'ಭೂಮ್ನಃ ಕ್ರತುವತ್' ಇತ್ಯಾದೌ ಕಚಿದ್ಧರ್ಮವಾಚಕೋऽಪ್ಯತ್ರ ಪೂರ್ಣರೂಪಧರ್ಮಿವಚನಃ । ಪೂರ್ಣತ್ವಂ ಚ ಗುಣತ ಉತ್ತಮತ್ವಮಿತಿ ಧ್ಯೇಯಮ್ । ಶ್ರುತ್ಯಾದಿಸಙ್ಗತಿಂ ವಿಷಯಾದಿಕಂ ಚ ಸೂಚಯನ್ ಸಯುಕ್ತಿಕಂ ಪೂರ್ವಪಕ್ಷಂ ದರ್ಶಯತಿ

॥ ಶ್ರೀಗುರುಭ್ಯೋ ನಮಃ ॥

ದೇವದೇವೋತ್ತಮ ದೇವತಾಸಾರ್ವಭೌಮ
ಅಖಿಲಾಂಡಕೋಟಿಬ್ರಹ್ಮಾಂಡನಾಯಕ,ಚತುರ್ದಶಲೋಕಗುರುಗಳಾದ
ಶ್ರೀವೇದವ್ಯಾಸದೇವರಿಂದ ಅನುಗ್ರಹಿಸಲ್ಪಟ್ಟ

ಬ್ರಹ್ಮಮೀಮಾಂಸಾಶಾಸ್ತ್ರ

ಭೂಮಾಧಿಕರಣ

ಪೂರ್ಣಸುಖಿಸ್ವರೂಪನಾದ ವಿಷ್ಣುವೇ 'ಭೂಮಾ'

।। अथ भूमाधिकरणम् ।।

सू – ॐ ॥ भूमा सम्प्रसादादध्युपदेशात् ॥ ॐ ॥ ८ ॥

ಯಾವಾತನು ಭೂಮಾ ಎಂಬ ಶಬ್ದದಿಂದ ಪ್ರತಿಪಾದ್ಯನೋ ಅವನು ಪೂರ್ಣಸ್ವರೂಪಸುಖಿನಾಗಿದ್ದಾನೆಂದು, ಮತ್ತು ನಾಮಾಭಿಮಾನಿಯಾದ ಉಷಾದೇವಿಯಿಂದ ಪ್ರಾರಂಭಿಸಿ ವಾಯುದೇವತೆಗಿಂತ ಅಧಿಕನನ್ನಾಗಿ ಹೇಳಿರುವುದರಿಂದಲೂ ಭೂಮಾ ಎಂಬ ಪದದಿಂದ ವಿಷ್ಣುವೇ ಪ್ರತಿಪಾದ್ಯನಾಗುತ್ತಾನೆ.

ಶ್ರೀಜಗನ್ನಾಥಯತಿಗಳಿಂದ ರಚಿಸಲ್ಪಟ್ಟ

ಸೂತ್ರದೀಪಿಕಾ

सूत्रदीपिका – भूमा – 'यो वै भूमा' इति श्रुतौ भूमाशब्दोक्तपूर्णो विष्णुरेव । कुतः? सम्प्रसादात् - 'भूम्नस्तत्सुखम्' इत्यनेन सम्प्रसादशब्दितपूर्णसुखरूपत्वाभिधानात् । किञ्च अध्युपदेशात् - नामादेरपि तदुपरि नामादिदेवतोत्तमत्वेन भूम्नोऽभिधानाच्चेत्यर्थः।।

ಭೂಮಾ = ಯೋ ವೈ ಭೂಮಾ ಎಂಬ ಶ್ರುತಿಯಲ್ಲಿ ಭೂಮಾ ಎಂಬ ಶಬ್ದದಿಂದ ಪ್ರತಿಪಾದ್ಯನಾದವನು ಸುಖಪೂರ್ಣನಾದ ವಿಷ್ಣುವೇ ಆಗಿದ್ದಾನೆ. ಏಕೆಂದರೆ, ಸಂಪ್ರಸಾದಾತ್ = ತತ್ಸುಖಿಂ ಎಂಬುದರಿಂದ ಪೂರ್ಣಸುಖಿಸ್ವರೂಪತ್ವವನ್ನು ಹೇಳಿರುವುದರಿಂದ ಮತ್ತು ಅಧ್ಯುಪದೇಶಾತ್ = ನಾಮಾಭಿಮಾನಿಯಾದ ದೇವತೆಗಿಂತ ಅಧಿಕರಾದ ವಾಯುದೇವತೆಗಿಂತಲೂ ಉತ್ತಮನೆಂದು ಭೂಮನನ್ನು ಹೇಳಿರುವುದರಿಂದ.

श्रीमदानन्दतीर्थभगवत्पादाचार्यविरचित-
ब्रह्मसूत्रभाष्यम्

भाष्यम् – 'प्राणो वा आशाया भूयान्' इत्युक्त्वा 'यो वै भूमा तत् सुखम्' (छां. ७–२३.)इत्युक्तेस्तस्यैव

भूमत्वप्राप्तिः ।

ಅನುವಾದ – ಛಾಂದೋಗ್ಯಶ್ರುತಿಯಲ್ಲಿ ಪ್ರಾಣನಾದರೂ ಆಶಾ ಎಂಬ ಭಾರತೀದೇವಿಗಿಂತ ದೊಡ್ಡವನಾಗಿದ್ದಾನೆಂದು ಹೇಳಿ, ಮುಂದೆ ಪ್ರಸಿದ್ಧವಾದ ಯಾವ ವಾಯುದೇವರಿದ್ದಾನೋ ಅವನೇ ಸುಖಿಪೂರ್ಣನಾಗಿದ್ದಾನೆಂದು ಹೇಳಲಾಗಿದೆ. ಆದ್ದರಿಂದ ಭೂಮಾ ಎಂಬ ಶಬ್ದದಿಂದ ತಿಳಿಯುವ ಆನಂದಪೂರ್ಣತ್ವವು ವಾಯು- ದೇವನಲ್ಲೇ ಬರುತ್ತದೆ.

ಪ್ರತಿಪದಾರ್ಥ -- ಈ ಅಧಿಕರಣದಲ್ಲಿ ಭೂಮಾ ಎಂಬ ನಾಮಾತ್ಮಕಶಬ್ದವನ್ನು ವಿಷ್ಣುವಿನಲ್ಲಿ ಸಮನ್ವಯ ಮಾಡುತ್ತಿದ್ದಾರೆ. ಭೂಮ್ನಃ ಕ್ರತುವತ್ ಎಂಬ ಸೂತ್ರದಲ್ಲಿ ಭೂಮಾಶಬ್ದವನ್ನು ಧರ್ಮವಾಚಕವಾಗಿ ವಿಕ್ಷಿಸಿದ್ದರೂ ಈ ಅಧಿಕರಣದಲ್ಲಿ ಪೂರ್ಣವಾಗಿರುವಿಕೆ ಎಂದು ಧರ್ಮ್ಯರ್ಥದಲ್ಲಿ ಪ್ರಯೋಗಿಸಲಾಗಿದೆ. ಅಂದರೆ ಗುಣಗಳಿಂದ ಉತ್ತಮನಾಗಿದ್ದಾನೆಂದರ್ಥ. ಶ್ರುತ್ಯಾದಿಸಂಗತಿ ಹಾಗೂ ವಿಷಯಾದಿಗಳನ್ನು ಸೂಚಿಸುತ್ತಾ, ಯುಕ್ತಬದ್ಧವಾದ ಪೂರ್ವಪಕ್ಷವನ್ನು ಪ್ರಾಣೋ ವಾ ಇತ್ಯಾದಿ ಭಾಷ್ಯದಿಂದ ತೋರಿಸುತ್ತಿದ್ದಾರೆ.

ಪ್ರಾಣೋ ವಾ = ಮುಖ್ಯಪ್ರಾಣನಾದರೋ, ಆಶಾಯಾಃ = ಆಶಾ ಎಂಬ ಹೆಸರಿನ ಭಾರತೀದೇವಿಗಿಂತ, ಭೂಯಾನ್ = ಗುಣದಲ್ಲಿ ದೊಡ್ಡವನು, ಇತ್ಯುಕ್ತ್ವಾ = ಹೀಗೆ ಹೇಳಿ, ಮುಂದೆ ಯೋ ವೈ ಭೂಮಾ = ಯಾವ ಪ್ರಸಿದ್ಧನಾದ ವಾಯುದೇವನಿದ್ದಾನೋ, ತತ್ = ಅವನೇ, ಸುಖಿಪೂರ್ಣನು, ಇತ್ಯುಕ್ತೇಃ = ಹೀಗೆ ಹೇಳಿರುವುದರಿಂದ, ತಸ್ಯೈವ = ಮುಖ್ಯಪ್ರಾಣನಿಗೇನೇ, ಭೂಮತ್ವಪ್ರಾಪ್ತಿಃ = ಭೂಮಾ ಎಂಬ ಶಬ್ದಪ್ರತಿಪಾದ್ಯತ್ವವು, ಯುಕ್ತವಾಗುತ್ತದೆ.(೧)

(೧) ಭಾಷ್ಯದೀಪಿಕಾ – अत्राधिकरणे भूमनाम्नो विष्णौ समन्वयः प्रतिपाद्यते । भूमशब्दश्च 'भूम्नः क्रतुवत्' इत्यादौ क्वचिद्धर्मवाचकोऽप्यत्र पूर्णरूपधर्मिवचनः । पूर्णत्वं च गुणत उत्तमत्वमिति ध्येयम् । श्रुत्यादिसङ्गतिं विषयादिकं च सूत्रयन् सयुक्तिकं पूर्वपक्षं दर्शयति

(೨) 'उत्क्रान्तप्राणान्' (छां. ७–१५–३.) इत्यादितल्लिङ्गात् प्राणशब्दश्च वायुवाचीति ।

ಮುಖ್ಯಪ್ರಾಣನುನಿರ್ಗಮಿಸಿದಮೇಲೆತಂದೆಮೊದಲಾದವರನ್ನುಸುಟ್ಟರೂಪಾಪವಿಲ್ಲವೆಂದು ದೇಸದಿಂದ ನಿರ್ಗಮನರೂಪವಾದ ಪ್ರಾಣನ ಲಿಂಗವು ಕೇಳಿಸುತ್ತಿದೆ. ಆದ್ದರಿಂದ ಪ್ರಾಣೋ ವಾ' ಎಂಬ ವಾಕ್ಯದಲ್ಲಿರುವ ಪ್ರಾಣಶಬ್ದದಿಂದ ಮುಖ್ಯಪ್ರಾಣನೇ ಪ್ರತಿಪಾದ್ಯನಾಗುತ್ತಾನೆ. ಆದ್ದರಿಂದಲೇ ಭೂಮಾಶಬ್ದದಿಂದಲೂ ಅವನೇ ಪ್ರತಿಪಾದ್ಯನಾಗುತ್ತಾನೆ.

ಪ್ರತಿಪದಾರ್ಥ -- 'प्राणो वा आशायाभूयान्' ಎಂಬಲ್ಲಿ ಕೇಳಿಸುತ್ತಿರುವ ಪ್ರಾಣಶಬ್ದವು 'अत एव प्राणः' ಎಂಬ ಸೂತ್ರದಲ್ಲಿ ಹೇಳಿರುವ ಪ್ರಕಾರ ವಿಷ್ಣುವನ್ನೇ

– प्राण इति ।।

'छान्दोग्ये' इत्यादौ उपस्कार्यम् । 'इत्युक्त्वा' इत्युपक्रम्येत्युपलक्षणम् । तदुक्तममनुक्त्वेत्यपि द्रष्टव्यम् । अत एव तस्यैव प्राणस्यैवेत्येवकारोऽन्यव्यवच्छेदकः प्रायोजि । श्रुतौ पूर्वपक्षे प्राणशब्दो वायुमात्रपरः । सिद्धान्ते तु भाष्यरीत्या वायुविष्णूभयपरः । न्यायविवरण छान्दोग्यभाष्यरीत्या तु वायुमात्रपरः । न च वायुविष्णूभयवाचित्वं वायुमात्रवाचित्वमित्यर्थद्वयं विरुद्धम् । अन्तर्यामिविवक्षया भाष्यस्य, तदविवक्षया विवरणादेः प्रवृत्तत्वात् । यथा 'आत्मनः आकाशः' (तै.२–१) इत्यत्र सम्भूतशब्दस्यानेकार्थत्वेऽन्तर्यामि-विष्णुरप्याकाशपदेनोच्यते । तस्य जनिमात्रार्थत्वे तु न तेन स उच्यते । तथा तत्त्वप्रदीपे तु 'अभ्युपगमवादत्वात्' इत्यादिना अयं प्राणो विष्णुरित्यभ्युपेत्य वादेन भाष्यं प्रवृत्तम्, इत्युक्तम् । तथा चाऽद्यपक्षे प्राणः 'आशायाः' भारत्याः 'भूयान्' गुणतो ज्येष्ठः । एवं 'प्राणः' तदन्तर्यामी विष्णुरन्तर्यामित्वादेव तत आशायाश्च भूयानित्यर्थः ।

अनेन पूर्वमानन्दमयशब्दोक्तसजातीयोत्कृष्टत्वरूपपूर्णत्वस्येह वायावाक्षेपादानन्दमयाधि-करणेनास्याऽक्षेपिकी सङ्गतिः सूचिता । छन्दोगश्रुत्युक्तो भूमाख्यो विषयः, किं वायुरुत विष्णुरिति सन्देहश्च सूचितः । तथा तस्यैव भूमत्वप्राप्तिरिति पूर्वपक्षः । तत्र प्राणोपक्रमतदुत्तमानुक्तिरूपयुक्तिश्च दर्शिता भवति । 'यो वै भूमा तत्सुखं नाल्पे सुखमस्ति भूमैव सुखम्' इति वाक्ये सुखशब्दः पूर्णसुखार्थः । 'यत्सुखं स भूमा' इति व्यासतीर्थायोक्तेः, सर्वनामानि पर्यायेण तत्तल्लिङ्गभाञ्जीत्युक्तेश्च निरुपपदसुखशब्दमात्रस्यापि पूर्णसुखार्थत्वात् । यदनन्याधीनपूर्णानन्दसुखं स भूमा गुणतः पूर्णो नारायण इत्युद्देश्यविधेययोर्व्यत्ययः । अत एव स्वातन्त्र्येण सुखस्य विशेषणान्न मुक्तजीवेष्वनैकान्त्यमित्याशयेन तदुपपादयति – नाल्प इति ।। 'अल्पे' अपूर्णे मुक्तजीवे तत्प्रसादं विना यतः सुखं नास्तीत्यर्थः । निगमयति – भूमैव सुखमिति ।। अत्रापि व्यत्ययः ।

ಮತ್ತೊಂದು ಯುಕ್ತಿಯಿಂದ ವಿಷ್ಣುವೇ ಭೂಮನಾಗಿದ್ದಾನೆಂಬುದನ್ನು ಪ್ರತಿಪಾದಿಸುವುದಕ್ಕಾಗಿ ಸೂತ್ರವನ್ನು ಪಠಿಸಿ ವ್ಯಾಖ್ಯಾನಿಸುತ್ತಿದ್ದಾರೆ ''ಧರ್ಮ'' ಇತ್ಯಾದಿ ವಾಕ್ಯದಿಂದ.

''ಸ ಏವಾಧಸ್ತಾತ್ ಸ ಉಪರಿಷ್ಟಾತ್ ಸ ಪಶ್ಚಾತ್ ಸ ಪುರಸ್ತಾತ್ ಸ ದಕ್ಷಿಣತಃ ಸ ಉತ್ತರತಃ । ಸ ಏವೇದಂ ಸರ್ವಮ್ । ಯತ್ರ ನಾನ್ಯತ್ ಪಶ್ಯತಿ ನಾನ್ಯತ್ ಶೃಣೋತಿ ನಾನ್ಯದ್ ವಿಜಾನಾತಿ ಸ ಭೂಮಾ ಸ ಭಗವಃ ಕಸ್ಮಿನ್ ಪ್ರತಿಷ್ಠಿತಃ ಸ್ವೇ ಮಹಿಮ್ನಿ''

–ಧರ್ಮೇತಿ ।।ಆದಿಪದೇನ ಸ್ವಾತನ್ತ್ರ್ಯಸ್ವಪ್ರತಿಷ್ಠಿತತ್ವಾದಿಕಂ ಗೃಹ್ಯತೇ । ಅಸ್ಯ ಹೇತೋರ್ವಿಷ್ಣುರೇವ ಭೂಮೇತಿ ಪ್ರಧಾನಸಾಧ್ಯೇನಾನ್ವಯಃ । ಯದ್ಯಪಿ ಛಾನ್ದೋಗ್ಯೇ 'ಯತ್ರ ನಾನ್ಯತ್' (ಛಾಂ.೭.೨೪.೧) ಇತಿ ಸ್ವಾತನ್ತ್ರ್ಯಬೋಧಕವಾಕ್ಯಾನನ್ತರಂ 'ಸ ಏವಾಧಸ್ತಾತ್' (ಛಾಂ.೭.೨೫) ಇತಿ ಸರ್ವಗತತ್ವಾಭಿಧಾಯಕವಾಕ್ಯ ಶ್ರವಣಾತ್ ಪ್ರಥಮಶ್ರುತಸ್ವಾತನ್ತ್ರ್ಯಧರ್ಮ ಸ್ವಶಬ್ದೇನ ಗೃಹೀತ್ವಾ ಸರ್ವಗತತ್ವಮಾದಿಶಬ್ದೇನ ಗ್ರಾಹ್ಯಮ್ । ತಥಾऽಪಿ ತದ್ವಾಕ್ಯೇ ಭೂಮತ್ವನಿಯತಸರ್ವಗತತ್ವಸ್ಯ ಸ್ಪಷ್ಟಂ ಪ್ರತೀತೇಸ್ತದೇವ ವಾಚಕಶಬ್ದೇನ ಗೃಹೀತಮಿತಿ ದ್ರಷ್ಟವ್ಯಮ್ । ಅನೇನ – ಸೂತ್ರೇ ಚೋ ಯುಕ್ತಿಸಮುಚ್ಚಯೇ ಧರ್ಮಶಬ್ದಾತ್ ಪರಮನ್ವೇತಿ । ಲಿಙ್ಗಸ್ಯ ನಿರವಕಾಶತ್ವ-ಜ್ಞಾಪನಾಯೋಪಪತ್ತಿಪರ್ಯನ್ತಂ ಧಾವನಮ್ । ತಥಾ ಚ ನ ಕೇವಲಂ ಸಮ್ಪ್ರಸಾದಾದೇಃ, ಕಿನ್ತು 'ಸ ಏವಾಧಸ್ತಾತ್ ಸ ಉಪರಿಷ್ಟಾತ್ ಸ ಪಶ್ಚಾತ್ ಸ ಪುರಸ್ತಾತ್ ಸ ದಕ್ಷಿಣತಃ ಸ ಉತ್ತರತಃ ಸ ಏವೇದ ಸರ್ವಮ್' (ಛಾಂ. ೭–೨೫–೧.) ಇತಿ ವಾಕ್ಯೇ, ತಥಾ – 'ಯತ್ರ ನಾನ್ಯತ್ ಪಶ್ಯತಿ ನಾನ್ಯಚ್ಛೃಣೋತಿ ನಾನ್ಯದ್ ವಿಜಾನಾತಿ ಸ ಭೂಮಾ' (ಛಾಂ. ೭–೨೪–೧) ಇತಿ ವಾಕ್ಯೇ, ತಥಾ – 'ಸ ಭಗವಃ ಕಸ್ಮಿನ್ ಪ್ರತಿಷ್ಠಿತ ಇತಿ ಸ್ವೇ ಮಹಿಮ್ನಿ' (ಛಾಂ. ೭–೨೪–೧) ಇತ್ಯಾದಿವಾಕ್ಯೇ ಚ ಸರ್ವಗತತ್ವಾದಿಧರ್ಮಶ್ರವಣಾಚ್ಚ ಭೂಮಾ ವಿಷ್ಣುರೇವ, ತೇಷಾಂ ಚ ಧರ್ಮಾಣಾಂ ವಿಷ್ಣಾವೇವೋಪಪತ್ತೇರಿತಿ ಸೂತ್ರಾರ್ಥ ಉಕ್ತೋ ಭವತಿ ।

'ಸಃ' ಭೂಮಶಬ್ದಿತೋ ನಾರಾಯಣಃ ಅಧಃ ಉಪರಿ ಪಶ್ಚಾತ್ ಪುರಸ್ತಾದ್ ದಕ್ಷಿಣತ ಉತ್ತರತಃ ಸರ್ವತ್ರಾಸ್ತಿ । ತತ್ಪ್ರಯೋಜನಮಾಹ – ಸ ಏವೇದ ಸರ್ವಮಿತಿ ।। ತೇನೈವೇದ ಜಗದ್ ವ್ಯಾಪ್ತಂ ಸ ಏವ ಸರ್ವಸತ್ತಾಪ್ರದಸ್ತದರ್ಥಮೇವ ಸರ್ವತ್ರ ತಿಷ್ಠತೀತ್ಯರ್ಥಃ । 'ಯತ್ರ' ಯದ್ವಿನಾ ಯದಧೀನಂ ವಿನಾ ಅನ್ಯತ್ರ ಪಶ್ಯತ್ಯಧಿಕಾರಿ ಸರ್ಬಮೇವ ತದಧೀನಂ ಪಶ್ಯತಿ, ತಥೈವ ಶೃಣೋತಿ, ವಿಜಾನಾತಿ ಚ ಸ ಭೂಮೇತ್ಯರ್ಥಃ । 'ಯತ್ರ' ಯಸ್ಮಿನ್ ದೃಷ್ಟೇऽನ್ಯತ್ ಸ್ವತನ್ತ್ರಂ ನ ಪಶ್ಯತೀತಿ ವಾ । ಹೇ 'ಭಗವೋ' ಭಗವಾನ್ ಸ ಭೂಮಾ ಕಸ್ಮಿನ್ ಪ್ರತಿಷ್ಠಿತ ಇತಿ ನಾರದಪ್ರಶ್ನೇ ಮಹಿಮಗುಣಾತ್ಮಕೇ 'ಸ್ವೇ' ಸ್ವಸ್ಮಿನ್ ಸ್ವಕೀಯೇ ಮಹಿಮ್ನಿ ವಾ ಸ್ವಯಂ 'ಪ್ರತಿಷ್ಠಿತಃ' ಆಶ್ರಿತ ಇತಿ ಸನತ್ಕುಮಾರಃ ಪ್ರತ್ಯಾಹೇತಿ ಶ್ರುತ್ಯರ್ಥಃ ।। ೨ ।।

''ಅವನು ಕೆಳಗೆ ಮೇಲೆ ಹಿಂದೆ ಮುಂದೆ ಎಡ ಬಲ ಹೀಗೆ ಎಲ್ಲೆಡೆಯಲ್ಲಿಯೂ ವ್ಯಾಪ್ತನಾಗಿದ್ದಾನೆ. ಸಕಲ ವಿಶ್ವವೂ ಅವನ ಅಧೀನವಾಗಿದೆ. ಅವನ ಅಧೀನವಿಲ್ಲದ ಯಾವುದೇ ವಸ್ತುವನ್ನು ನೋಡಲು ಸಾಧ್ಯವಿಲ್ಲ. ಕೇಳಲು ತಿಳಿಯಲೂ ಸಹ ಸಾಧ್ಯವಿಲ್ಲ. ಅವನೇ ಭೂಮನು. ಅಂತಹ ಭೂಮನು ಎಲ್ಲಿ ಇರುತ್ತಾನೆ''ಂಬ ನಾರದರ ಪ್ರಶ್ನೆಗೆ ಸನತ್ಕುಮಾರರು ಉತ್ತರಿಸುತ್ತಾರೆ. ''ಅವನು ತನ್ನಲ್ಲಿಯೇ ಇರುತ್ತಾನೆ''. ಹೀಗೆ ಭೂಮನಲ್ಲಿ ಸರ್ವಗತತ್ವ, ಸ್ವೇ ಮಹಿಮ್ನಿಪ್ರತಿಷ್ಠಿತತ್ವ ಮೊದಲಾದ ಧರ್ಮಗಳು ಕೇಳಿಸುತ್ತಿವೆ. ಇವೆಲ್ಲವೂ ಸಹ ವಿಷ್ಣುವಿನ ಅಸಾಧಾರಣವಾದ ಧರ್ಮವಾಗಿರುವುದರಿಂದ ವಿಷ್ಣುವೇ ಭೂಮನಾಗುತ್ತಾನೆ. ಆದ್ದರಿಂದ ಅವನೇ ಆನಂದಮಯನೂ ಆಗುತ್ತಾನೆಂಬುದು ಸಿದ್ಧವಾಯಿತು.

॥ ತತ್ವಪ್ರಕಾಶಿಕೆಯಲ್ಲಿ ಭೂಮಾಧಿಕರಣವು ಮುಗಿಯಿತು ॥

ಭಾವದೀಪಃ –

ॐ ಧರ್ಮೋಪಪತ್ತೇಶ್ಚ ॐ ॥ ಭಾಷ್ಯಸ್ಥಾದಿಪದೋಕ್ತಲಿಙ್ಗದ್ಯೋತನಾಯ ಯತ್ರ ನಾನ್ಯದಿತ್ಯಾದಿಶೇಷೋಕ್ತಿಃ । ಯತ್ರ ಯಸ್ಮಿನ್ ದೃಷ್ಟೇ ಶ್ರುತೇ ವಿಜ್ಞಾತೇ ಸತೀತ್ಯರ್ಥಃ ।

ಭಾಷ್ಯದಲ್ಲಿರುವ ''ಸರ್ವಗತ್ವಾದಿ'' ಎಂಬಲ್ಲಿರುವ ''ಆದಿ'' ಪದದಿಂದ ಹೇಳಲ್ಪಟ್ಟ ಲಿಂಗವನ್ನು ''ಯತ್ರ ನಾನ್ಯತ್ಪಶ್ಯತಿ'' ಇತ್ಯಾದಿಯಾಗಿ ಉಲ್ಲೇಖಿಸುವ ಮೂಲಕ ವ್ಯಾಖ್ಯಾನಿಸಿದ್ದಾರೆ. ''ಯತ್ರ'' ಎಂದರೆ ಯಾರನ್ನು ನೋಡುವುದು, ಕೇಳುವುದು ಮತ್ತು ವಿಶೇಷಜ್ಞಾನ ಪಡೆಯುತ್ತಿರಲೂ ಎಂದರ್ಥ.

ಭಾವದೀಪಃ – ತಪಪತ್ತಿಶಬ್ದಃ ಸೂತ್ರೇ ಲಿಙ್ಗಾನಾಂ ನಿರವಕಾಶತ್ವೋಕ್ತಿಪರ ಇತಿ ಭಾವೇನ ಧರ್ಮಶ್ರವಣಾಚ್ಚ ವಿಷ್ಣಾವೇವೋಪಪತ್ತೇರಿತಿ ವಿಚ್ಛಿದ್ಯ ವ್ಯಾಖ್ಯಾತಮ್ – ಅತ ಇತಿ ॥ ಪೂರ್ಣಸುಖತ್ವಾದಿಹೇತೂನಾಂ ಭಾವಾತ್ ।

ಸೂತ್ರದಲ್ಲಿರುವ ''ಉಪಪತ್ತಿ'' ಶಬ್ದವು ಲಿಂಗಗಳ ನಿರವಕಾಶತ್ವವನ್ನು ನಿರೂಪಣೆ ಮಾಡುತ್ತದೆ. ಈ ಅಭಿಪ್ರಾಯದಿಂದಲೇ ಸರ್ವಗತತ್ವವೇ ಮೊದಲಾದ ಧರ್ಮಗಳು ವಿಷ್ಣುವಿನಲ್ಲಿಯೇ ಉಪಪನ್ನವಾಗುತ್ತದೆ ಎಂಬುದನ್ನು ''ಆತೋ ವಿಷ್ಣೋರೇವ'' ಇತ್ಯಾದಿಯಾಗಿ ವ್ಯಾಖ್ಯಾನ ಮಾಡಿದ್ದಾರೆ. ಪೂರ್ಣಸುಖವೇ ಮೊದಲಾದ ಹೇತುಗಳು ಇರುವುದರಿಂದ ಎಂದರ್ಥ.

ಭಾವದೀಪಃ – ಭಾಷ್ಯದಿಶಾ ಪ್ರಾಣಪದೇನಾನ್ತರ್ಯಾಮ್ಯುಕ್ತ್ಯಾ ಪ್ರಾಣಭೂಮ್ನೋರೇಕತ್ವೇನ ವಾ ನ್ಯಾಯವಿವರಣರೀತ್ಯಾ ಪ್ರಾಣಭೂಮ್ನೋರ್ಭೇದೇನ ಪ್ರಾಣಸ್ಯ ವಾಯುಮಾತ್ರತ್ವೇನ ವಾ ಭೂಮಾ ವಿಷ್ಣುರೇವೇತಿ ಸರ್ವಸೂತ್ರಾರ್ಥಃ ।

'ಉತ್ಕ್ರಮಣ' ಎಂಬ ಲಿಂಗವು ಭಗವಂತನ ರೂಪವಿಶೇಷದಿಂದ ಉಪಪನ್ನವಾಗುತ್ತದೆ. ''ಅನುಕೃತಿ'' ಎಂಬ ಲಿಂಗವೂ ಸಹ ಅಧ್ಯಾಹಾರದಿಂದ ಉಪಪನ್ನವಾಗುತ್ತದೆ. ಮತ್ತು ''ರೂಪವಿಶೇಷ'' ''ವಿವಕ್ಷಾದ್ಯಾಹಾರಗಳೆಂಬ ಉಪಪತ್ತಿಗಳಿಂದ ಮತ್ತು ಬಾಧಕಗಳು ಇಲ್ಲದಿರುವುದರಿಂದ ಭೂಮಾ ಶಬ್ದದಿಂದ

ಪರಮಾತ್ಮನೇ ಪ್ರತಿಪಾದ್ಯನಾಗುತ್ತಾನೆ. ಮತ್ತು ಭಾಷ್ಯದ ಪ್ರಕಾರ ಪ್ರಾಣಪದದಿಂದ ಅಂತರ್ಯಾಮಿಯನ್ನು ವಿವಕ್ಷೆ ಮಾಡಿದರೆ 'ಪ್ರಾಣ' ಮತ್ತು 'ಭೂಮಾ' ಇಬ್ಬರು ಒಬ್ಬನೇ ಆಗುತ್ತಾನೆ. ಅಥವಾ ನ್ಯಾಯವಿವರಣ ಪ್ರಕಾರವಾಗಿ ಪ್ರಾಣ ಮತ್ತು ಭೂಮಾ ಇಬ್ಬರು ಭಿನ್ನರು ಎಂದು ಒಪ್ಪುವುದಾದರೆ ಪ್ರಾಣ ಶಬ್ದದಿಂದ ವಾಯುದೇವರೇ ಪ್ರತಿಪಾದ್ಯರಾಗಿ ಭೂಮಾ ಶಬ್ದದಿಂದ ಮುಖ್ಯವಾಗಿ ವಿಷ್ಣುವೇ ಪ್ರತಿಪಾದ್ಯನಾಗುತ್ತಾನೆ ಎಂದು ನಿರ್ಣಯವಾಗುತ್ತದೆ. ಈ ಪ್ರಮೇಯವೇ ಸಕಲ ಸೂತ್ರಗಳ ಸಾರ.

ಭಾವದೀಪಃ – ತಮೇವ ಹೇತ್ವಕೃತ್ಯ 'ಯೋ ವೈ ಭೂಮಾ ತತ್ಸುಖಮ್' ಇತ್ಯುಕ್ತೇರಿತಿ ಪೂರ್ವಾಕ್ಷೇಪಕಭಾಷ್ಯಾರ್ಥಮುಪಸಂಹರತಿ – ಇತಿ ತಸ್ಯೈವಾನನ್ದಮಯತ್ವಮಿತಿ ।। 'ತತ್ ಸುಖಮ್' ಇತ್ಯುಕ್ತಪೂರ್ಣಸುಖತ್ವಾದ್ವಾರೇತ್ಯರ್ಥಃ ।। ೯ ।।

।। ಇತಿ ರಾಘವೇನ್ದ್ರಯತಿಕೃತೇ ಭಾವದೀಪೇ ಭೂಮಾಧಿಕರಣಮ್ ।।

ಹಿಂದೆ ಹೇಳಿದ ಹೇತುಗಳ ಆಧಾರದಿಂದ "ಯೋ ವೈ ಭೂಮಾ ತತ್ಸುಖಂ" ಎಂಬ ಶ್ರುತಿಯ ಅನುಸಾರವಾಗಿ ಹಿಂದೆ ಭಾಷ್ಯದಲ್ಲಿ ಹೇಳಿದ ಆಕ್ಷೇಪವನ್ನು "ಇತಿ ತಸ್ಯೈವ ಆನಂದಮಯತ್ವಂ" ಎಂಬ ಟೀಕಾ ವಾಕ್ಯಗಳಿಂದ ಉಪಸಂಹಾರ ಮಾಡಿದ್ದಾರೆ. "ತತ್ಸುಖಂ" ಎಂದರೆ ಪೂರ್ಣಸುಖ ಮುಖ್ಯಾಂತರ ಎಂದರ್ಥ.

॥ ಇಲ್ಲಿಗೆ ಭಾವದೀಪದ ಕನ್ನಡಾನುವಾದದಲ್ಲಿ ಭೂಮಾಧಿಕರಣವು ಸಮಾಪ್ತವಾಯಿತು ॥

ॐ ಧರ್ಮೋಪಪತ್ತೇಶ್ಚ ॐ ।। 'ಸ ಏವಾಧಸ್ತಾದ್' ಇತ್ಯಾದ್ಯುಕ್ತಸರ್ವಗತತ್ವಾದಿಧರ್ಮಾಣಾಂ ವಿಷ್ಣಾವೇವೋಪಪತ್ತೇಶ್ಚ ಸ ಏವ ಭೂಮೇತ್ಯರ್ಥಃ ।। **ಸ ಏವೇತಿ ।।** ಸ ಭೂಮೈವಾಧೋಭಾಗಾದಿಸ್ಥಿತಿಃ ಸರ್ವಗತತ್ವಂ ಸರ್ವಸತ್ತಾಪ್ರದಾನಾಯೇತ್ಯುಕ್ತಮ್ ।। **ಸ ಏವೇದಂ ಸರ್ವಮಿತಿ ।।** ಸ ಏವ ಸ್ವತನ್ತ್ರಃ ಇದಂ ಸರ್ವಂ ತದಧೀನಮಿತ್ಯರ್ಥಃ ।। ಯದ್ವಾ ಇದಂ ಸರ್ವಮಿತ್ಯತ್ರ ಲಿಙ್ಗವ್ಯತ್ಯಾಸೇನಾಯಂ ಸರ್ವ ಇತ್ಯಙ್ಗೀಕೃತ್ಯ ಸ ಭೂಮಾ ಸರ್ವತ್ರ ಸನ್ನಿಹಿತತ್ವಾದಯಂ ಪೂರ್ಣತ್ವಾತ್ ಸರ್ವ ಇತ್ಯುಚ್ಯತ ಇತ್ಯರ್ಥಃ । ಯತ್ರೇತ್ಯನೇನ ಭೂಮ್ನೋऽಸದೃಶತ್ವಮುಚ್ಯತೇ ಯತ್ರ ಯಸ್ಯಾಧೀನಂ ವಿನಾನ್ಯಂ ನ ಪಶ್ಯತಿ ಅಧಿಕಾರಿ ಸರ್ವಮೇವ ತದಧೀನಂ ಪಶ್ಯತಿ ಶೃಣೋತಿ ವಿಜಾನಾತಿ ವಾ ಸ ಭೂಮೇತ್ಯರ್ಥಃ । ಜಾನನ್ನಪಿ ನಾರದೋ ವಿಶೇಷಾರ್ಥಜ್ಞಾನಾಯ ಸ್ಥಾಪನಾಯ ಚ ಭೂಮಾಶ್ರಯಂ ಪೃಚ್ಛತಿ – **ಸ ಇತಿ ।।** ಹೇ ಭಗವಃ ಭಗವನ್ ಸ ಭೂಮಾ ಕಸ್ಮಿನ್ ಪ್ರತಿಷ್ಠಿತಃ ಆಶ್ರಿತಃ । ಸನತ್ಕುಮಾರ ಉತ್ತರಮಾಹ – **ಸ್ವೇ ಮಹಿಮ್ನೀತಿ ।।** ಸ್ವೇ ಸ್ವಕೀಯೇ ಮಹಿಮ್ನಿ ಸಾಮರ್ಥ್ಯೇ ಪ್ರತಿಷ್ಠಿತ ಇತ್ಯರ್ಥಃ ।।

।। ಇತಿ ಶ್ರೀಶರ್ಕರಾಶ್ರೀನಿವಾಸವಿರಚಿತಾ ವಾಕ್ಯಾರ್ಥಮಞ್ಜರ್ಯಾಮ್ ಭೂಮಾಧಿಕರಣಮ್ ।।

ಪರಿಪೂರ್ಣಚಂದ್ರಿಕಾ

ಭೂಮಾಧಿಕರಣ
(೧-೩-೨)

ಭಾಗ - ೨

ತಾತ್ಪರ್ಯಚಂದ್ರಿಕಾ, ಪ್ರಕಾಶ,

ಪ್ರತಿಯೊಂದು ವಾಕ್ಯಗಳ ವಿಶೇಷ ವಿವರಣೆಯೊಂದಿಗೆ

ಸರಳ ಅನುವಾದ

***

ಮತ್ತು

ಗುರುರಾಜೀಯಮ್, ಭಾಟ್ಟಸಂಗ್ರಹ,
ಶಾಂಕರಭಾಷ್ಯ, ಭಾಮತೀ,
ರಾಮಾನುಜಭಾಷ್ಯ ಇವುಗಳ ಸಂಪೂರ್ಣ ಅಡಿಟಿಪ್ಪಣಿಯೊಂದಿಗೆ

॥ ಶ್ರೀಲಕ್ಷ್ಮೀಹಯಗ್ರೀವೋ ವಿಜಯತೇತಮಾಮ್ ॥
॥ ಶ್ರೀಮಧ್ವಗಾಜೋ ವಿಜಯತೇತರಾಮ್ ॥
॥ ಶ್ರೀಗುರುಭ್ಯೋ ನಮಃ ॥

ಶ್ರೀಬ್ರಹ್ಮಣ್ಯತೀರ್ಥಶ್ರೀಪಾದಶಿಷ್ಯಶ್ರೀವ್ಯಾಸತೀರ್ಥವಿರಚಿತಾ

ತಾತ್ಪರ್ಯಚಂದ್ರಿಕಾ

ಅಥ ಭೂಮಾಧಿಕರಣಮ್

'ಭೂಮಾ' ಶಬ್ದವು ಧರ್ಮಿಪರ ಮತ್ತು ಉಭಯತ್ರಪ್ರಸಿದ್ಧ

ॐ ಭೂಮಾ ಸಂಪ್ರಸಾದಾದಧ್ಯುಪದೇಶಾತ್ ॐ ॥

अत्र यद्यपि भूमशब्दो बहुशब्दात् ''बहोर्लोपो भू च बहोः'' इति भावे निष्पन्नः । बहुत्वसङ्ख्या च लोकतोऽन्यत्रप्रसिद्धा ।

ಅನುವಾದ - 'ಭೂಮಾ' ಎಂಬ ನಾಮಾತ್ಮಕ ಶಬ್ದವನ್ನು ಈ ಅಧಿಕರಣದಲ್ಲಿ ಸಮನ್ವಯ ಮಾಡುತ್ತಿದ್ದಾರೆ.

ಪ್ರಶ್ನೆ - 'ಭೂಮಾ' ಎಂಬ ಶಬ್ದವು 'ಬಹು' ಎಂಬ ಶಬ್ದದಿಂದ ನಿಷ್ಪನ್ನವಾಗಿದೆ. 'ಬಹೋರ್ಲೋಪೋ ಭೂ ಚ ಬಹೋಃ' ಎಂಬ ಸೂತ್ರದಿಂದ ಭಾವಾರ್ಥದಲ್ಲಿ 'ಬಹು' ಶಬ್ದಕ್ಕೆ 'ಭೂ' ಎಂಬ ಆದೇಶ ಬಂದು 'ಇಮನಿಚ್' ಪ್ರತ್ಯಯದ ಜೊತೆಗೆ ಸೇರಿ 'ಭೂಮಾ' ಎಂಬ ರೂಪವು ಸಿದ್ಧವಾಗಿದೆ. 'ಬಹು' ಶಬ್ದಕ್ಕೆ ಬಹುತ್ವಸಂಖ್ಯೆಯು ಅರ್ಥವಾಗಿರುವುದರಿಂದ 'ಭೂಮಾ' ಎಂಬ ಶಬ್ದಕ್ಕೂ ಸಹ ಬಹುತ್ವಸಂಖ್ಯೆಯೆಂದೇ ಅರ್ಥವಾಗುತ್ತದೆ. ಈ ಅರ್ಥವು 'ತೇನ', 'ವನ' ಮೊದಲಾದ ಸ್ಥಳಗಳಲ್ಲಿ ಲೋಕರೂಢಿಯಿಂದ ಅನ್ಯತ್ರಪ್ರಸಿದ್ಧವಾಗಿದೆ. ಆದ್ದರಿಂದ ಬಹುತ್ವಸಂಖ್ಯಾ ಎಂಬ ಅರ್ಥವುಳ್ಳ 'ಭೂಮಾ' ಎಂಬ ಶಬ್ದವು ಲೋಕತಃ ಅನ್ಯತ್ರಪ್ರಸಿದ್ಧವೆಂದಂತಾಯಿತು. ಹೀಗಿರುವಾಗ ಉಭಯತ್ರಪ್ರಸಿದ್ಧವಾದ ಈ ಪಾದದಲ್ಲಿ ಇದರ ಸಮನ್ವಯವು ಹೇಗೆ ಸಂಗತವಾಗುತ್ತದೆ?

तथाऽपि बहुशब्दस्य ''बहुषु बहुवचनम्'' इत्यादौ सङ्ख्यायामिव बहुत्वमित्यादौ वैपुल्येऽपि प्रयोगात् ।

ಉತ್ತರ - 'ಬಹುಷು ಬಹುವಚನಮ್' ಇತ್ಯಾದಿ ಸೂತ್ರಗಳಲ್ಲಿ 'ಬಹು' ಎಂಬ ಶಬ್ದವನ್ನು ಸಂಖ್ಯಾರ್ಥದಲ್ಲಿ ಪ್ರಯೋಗಿಸಲಾಗಿದೆ. ಇದರಂತೆ 'ಬಹ್ವನ್ನಮ್' ಇತ್ಯಾದಿ ಪ್ರಯೋಗಗಳಲ್ಲಿ ವಿಪುಲವಾದದ್ದು ಎಂಬರ್ಥದಲ್ಲಿಯೂ 'ಬಹು' ಶಬ್ದವನ್ನು ಪ್ರಯೋಗಿಸಲಾಗಿದೆ. ಆದ್ದರಿಂದ 'ಬಹು' ಶಬ್ದಕ್ಕೆ ಸಂಖ್ಯಾವೆಂದಷ್ಟೇ ಅರ್ಥವಲ್ಲ. ವೈಪುಲ್ಯವೆಂಬರ್ಥವನ್ನೂ ಸಹ ವಿವಕ್ಷಿಸಬಹುದು.

अत्रैव च श्रुतौ ''यो वै भूमा तदमृतं यदल्पं तन्मर्त्यम्'' इति बहुत्वसङ्ख्यायुक्तस्याल्पस्य भूमप्रतियोगित्वेनोपादानात्

ಮತ್ತು ಇದೇ ಸೂತ್ರದಲ್ಲಿ 'ಯೋ ವೈ ಭೂಮಾ ತದಮೃತಂ ಯದಲ್ಪಂ ತನ್ಮರ್ತ್ಯಮ್' 'ಭೂಮನೆನಿಸಿದ ಪರಮಾತ್ಮನು ಅಮೃತನಾಗಿದ್ದಾನೆ. ಯಾರು ಅಲ್ಪರೋ ಅವರು ಮರ್ತ್ಯನೆನಿಸಿದ್ದಾರೆ' ಎಂದು ಶ್ರುತವಾಗಿದೆ. ಬಹುತ್ವಸಂಖ್ಯೆಯಿಂದ ಕೂಡಿರುವ ಅಲ್ಪರಾದ ಜೀವರನ್ನು ಭೂಮಕ್ಕೆ ಪ್ರತಿಯೋಗಿಯೆಂದು ಇಲ್ಲಿ ಹೇಳಲಾಗಿದೆ. ಭೂಮನಾಮಕನಾದ ಪರಮಾತ್ಮನಿಗೆ ಬಹುತ್ವಸಂಖ್ಯೆಯುಳ್ಳ ಜೀವರೂ ಪ್ರತಿಯೋಗಿಯಾಗಿರುವುದರಿಂದ ಭೂಮನು ಬಹುತ್ವಸಂಖ್ಯೆಯಿಂದ ಯುಕ್ತನಾಗಲು ಸಾಧ್ಯವಿಲ್ಲ.

नामादिभ्योऽधिकसङ्ख्याहीने च वागादौ ''वाग्वाव नाम्नो भूयसी । आकाशो वाव तेजसो भूयान्'' इत्यादौ बहुशब्दानिष्पन्नभूयःशब्दप्रयोगात्

ಮತ್ತು ನಾಮ ಮೊದಲಾದವುಗಳಿಗಿಂತ ಅಧಿಕವಾದ ಸಂಖ್ಯೆಯನ್ನು ಹೊಂದದ ವಾಕ್, ಆಕಾಶ ಮೊದಲಾದವುಗಳಲ್ಲಿಯೂ ಭೂಯಶ್ಶಬ್ದವನ್ನು ಪ್ರಯೋಗಿಸಲಾಗಿದೆ. 'ವಾಗ್ವಾವ ನಾಮ್ನೋ ಭೂಯಸೀ' ಎಂಬಲ್ಲಿ ನಾಮಕ್ಕಿಂತ 'ವಾಕ್' ಎಂಬುದು ಅಧಿಕಸಂಖ್ಯೆಯಿಂದ ಕೂಡಿದೆಯೆಂದು ಅರ್ಥೈಸಲಾಗದು; ಹೊರತಾಗಿ ವಿಪುಲವಾಗಿದೆಯೆಂದೇ ಅರ್ಥೈಸಬೇಕು. ಇದರಂತೆ 'ಆಕಾಶೋ ವಾವ ತೇಜಸೋ ಭೂಯಾನ್' ಎಂಬಲ್ಲಿ ತೇಜಸ್ಸಿಗಿಂತ ಆಕಾಶವು ಭೂಯಾನ್ ಆಗಿದೆ ಎಂದರೆ ಬಹಳ ಆಕಾಶಗಳಿವೆ ಎಂದರ್ಥವಲ್ಲ. ಒಂದೇ ಆಕಾಶವು ವಿಪುಲವಾಗಿದೆಯೆಂದರ್ಥ. ಹೀಗೆ ಬಹು ಶಬ್ದದಿಂದ ನಿಷ್ಪನ್ನವಾದ 'ಭೂಯಃ' ಎಂಬ ಶಬ್ದವನ್ನು ವೈಪುಲ್ಯ ಎಂಬರ್ಥದಲ್ಲಿ ಪ್ರಯೋಗಿಸಲಾಗಿದೆ.

प्राणो भूमेति पूर्वपक्षेऽपि सङ्ख्यार्थत्वाभावाच्च वैपुल्यार्थत्वात् ।

ವೈಪುಲ್ಯವೆಂಬರ್ಥವೂ ಪೂರ್ವಪಕ್ಷಿಗೂ ಸಮ್ಮತವಾಗಿದೆ. 'ಪ್ರಾಣೋ ಭೂಮಾ' ಪ್ರಾಣನೇ ಭೂಮನಾಗಿದ್ದಾನೆ ಎಂದು ಹೇಳುವ ಪೂರ್ವಪಕ್ಷಕಾರನು ಅನೇಕ ಪ್ರಾಣರಿದ್ದಾರೆಂದು ವಿವಕ್ಷಿಸುವುದಿಲ್ಲ; ಹೊರತಾಗಿ ಪ್ರಾಣದೇವನು ವಿಪುಲನಾಗಿದ್ದಾನೆ ಎಂದೇ ಹೇಳುತ್ತಾನೆ. ಹೀಗೆ ಪ್ರಕರಣದ ಹಿಂದಿನ ಹಾಗೂ ಮುಂದಿನ ಶ್ರುತಿಗಳನ್ನು ಪರ್ಯಾಲೋಚನೆ ಮಾಡಿದಾಗ ಮತ್ತು ಪೂರ್ವಪಕ್ಷಕಾರನ ಅಭಿಪ್ರಾಯವನ್ನು ಗಮನಿಸಿದಾಗ 'ಭೂಮಾ' ಎಂಬ ಶಬ್ದಕ್ಕೆ ವೈಪುಲ್ಯವೆಂಬರ್ಥವನ್ನೇ ಪ್ರಕೃತ ವಿವಕ್ಷಿಸಬೇಕೆಂದು ಸ್ಪಷ್ಟವಾಗುತ್ತದೆ.

ಗುಣಾದಿನಾ ಚ ವೈಪುಲ್ಯಸ್ಯ ಬ್ರಹ್ಮಣ್ಯಪಿ ಸಮ್ಭವಾತ್

ಬ್ರಹ್ಮನು ಗುಣಪರಿಪೂರ್ಣನಾದ್ದರಿಂದ ಗುಣಗಳಿಂದ ವಿಪುಲನಾಗಿದ್ದಾನೆ ಎಂದು ಹೇಳಬಹುದು. ಈ ವಿವಕ್ಷೆಯಿಂದ ಬ್ರಹ್ಮನನ್ನೂ ಭೂಮನೆಂದು ಕರೆಯಬಹುದು.

ಇಹೈವ ಚ ಶ್ರುತೌ ಭೂಮಶಬ್ದಸ್ಯ ''ಯೋ ವೈ ಭೂಮಾ ತದಮೃತಮ್ । ಯೋ ವೈ ಭೂಮಾ ತತ್ಸುಖಮ್ । ಸ ಏವಾಧಸ್ತಾತ್ಸ ಉಪರಿಷ್ಟಾತ್'' ಇತ್ಯಾದೌ ಧರ್ಮಿಣಿ ಪ್ರಯೋಗಾತ್

ಭೂಮಶಬ್ದವು ಧರ್ಮಿವಾಚಕವಾಗಿದೆಯೆಂಬುದು ಮತ್ತೊಂದು ವಿಚಾರ. ಏಕೆಂದರೆ 'ಭೂಮಾ' ಎಂಬ ಶಬ್ದವನ್ನು ಪ್ರಯೋಗಿಸುವಾಗ ಶ್ರುತಿಯು ಹೀಗೆ ಹೇಳಿದೆ - 'ಯೋ ವೈ ಭೂಮಾ ತದಮೃತಮ್ । ಯೋ ವೈ ಭೂಮಾ ತತ್ಸುಖಮ್ । ಸ ಏವಾಧಸ್ತಾತ್ ಸ ಉಪರಿಷ್ಟಾತ್' 'ಯಾರು ಭೂಮನೋ ಅವನ ಅಮೃತನಾಗಿದ್ದಾನೆ. ಯಾರು ಭೂಮನೋ ಅವನು ಸುಖಸ್ವರೂಪನಾಗಿದ್ದಾನೆ. ಯಾರು ಭೂಮನೋ ಅವನೇ ಮೇಲೆ, ಕೆಳಗೆ ಎಲ್ಲೆಡೆಯೂ ವ್ಯಾಪ್ತನಾಗಿದ್ದಾನೆ' ಹೀಗೆ ಹೇಳಿದೆ. ಒಂದು ವೇಳೆ ಧರ್ಮವನ್ನು ವಿವಕ್ಷಿಸಿದರೆ ಅಮೃತನೆಂದು, ಸುಖರೂಪನೆಂದು, ವ್ಯಾಪ್ತನೆಂದು ಹೇಳಲು ಸಾಧ್ಯವಿಲ್ಲ. ಆದ್ದರಿಂದ ಧರ್ಮಿಯಲ್ಲಿಯೇ ಭೂಮಶಬ್ದವನ್ನು ಶ್ರುತಿಯು ಪ್ರಯೋಗಿಸಿದೆಯೆಂದು ತಿಳಿಯಬೇಕು.

ಪೂರ್ವಪಕ್ಷೇऽಪಿ ಚ ಧರ್ಮಿಪರತ್ವಾತ್, ಟೀಕಾऽನುವ್ಯಾಖ್ಯಾನಯೋಶ್ಚ ನಾಮತ್ವೋಕ್ತ್ಯಾ ಧರ್ಮಿಣಿ ರೂಢೇರಭಿಪ್ರೇತತ್ವಾತ್

'ಪ್ರಾಣೋ ಭೂಮಾ' ಎಂಬುದಾಗಿ ಪ್ರಾಣನನ್ನೇ ಭೂಮನೆನ್ನುವ ಪೂರ್ವಪಕ್ಷಕಾರನೂ ಸಹ ಧರ್ಮಿವಾಚಕವೆಂದೇ ಭೂಮಶಬ್ದವನ್ನು ಒಪ್ಪಿರುತ್ತಾನೆ. ಮತ್ತು ಟೀಕೆ ಹಾಗೂ ಅನುವ್ಯಾಖ್ಯಾನಗಳಲ್ಲಿ ವಿಷಯಮಾಲಾನಿರೂಪಣೆಯ ಸಂದರ್ಭದಲ್ಲಿ 'ಭೂಮಾ' ಎಂಬ ಶಬ್ದವನ್ನು ನಾಮಾತ್ಮಕವೆಂದು ಹೇಳಿದ್ದರಿಂದ ಧರ್ಮಿಯಲ್ಲಿ ಇದು ರೂಢವಾಗಿದೆಯೆಂದು ಅಭಿಪ್ರೇತವಾಗಿದೆ. ಆದ್ದರಿಂದ 'ಬಹು' ಶಬ್ದದ ಮೇಲೆ 'ಭೂ' ಆದೇಶಬಂದು 'ಇಮನಿಚ್' ಪ್ರತ್ಯಯ ಬಂದಿರುವ ಕಾರಣ ಯೌಗಿಕವಾಯಿತು. ಆದ್ದರಿಂದ ಧರ್ಮವಾಚಕವಾಯಿತಲ್ಲವೇ ? ಎಂಬ ಶಂಕೆಗೆ ಅವಕಾಶವಿಲ್ಲ.

ವ್ಯಾಕರಣಸ್ಯ ಚ ಸಾಧುತ್ವಾನ್ವಾಖ್ಯಾನಪರತ್ವಾತ್

ಹಾಗಾದರೆ ವ್ಯಾಕರಣದಲ್ಲಿ 'ಬಹು' ಶಬ್ದಕ್ಕೆ 'ಇಮನಿಚ್' ಪ್ರತ್ಯಯವನ್ನು ಹೇಳಿ 'ಭೂ' ಆದೇಶವನ್ನು ಹೇಳಿ 'ಭೂಮಾ' ಎಂಬ ರೂಪವನ್ನು ನಿಷ್ಪನ್ನ ಮಾಡಿದ್ದು ತಪ್ಪಾಯಿತಲ್ಲವೇ? ಮತ್ತು ನೀವು ಧರ್ಮಿಪರವೆಂದು ಹೇಳುವುದು ವ್ಯಾಕರಣಕ್ಕೆ ವಿರುದ್ಧವಲ್ಲವೇ? ಎಂದು ಪ್ರಶ್ನಿಸಬಾರದು. ವ್ಯಾಕರಣವು ಕೇವಲ ಶಬ್ದಸಾಧುತ್ವಕ್ಕೋಸ್ಕರ ಮಾತ್ರ ಹೊರಟಿದೆ. 'ಭೂಮಾ' ಎಂಬ ಶಬ್ದವು ಹೇಗೆ ನಿಷ್ಪನ್ನವಾಗಿದೆಯೆಂದು ತಿಳಿಸುವುದಷ್ಟೇ ವ್ಯಾಕರಣದ ಉದ್ದೇಶ ಹೊರತು, ಧರ್ಮವಾಚಕವಾಗಿದೆಯೆಂದು ತಿಳಿಸಲು ಅದು ಹೊರಟಿಲ್ಲ.

ಪರಿಪೂರ್ಣಚಂದ್ರಿಕಾ

भूमशब्दस्य विपुलरूपधर्मिपरतैव । न त्वनेकपरता । न वा बहुत्वानेकत्व-वैपुल्यरूपधर्मपरतेति न स्वतोऽन्यत्रप्रसिद्धता ।

ಆದ್ದರಿಂದ 'ಭೂಮಾ' ಎಂಬ ಶಬ್ದವು ವಿಪುಲ ಎಂಬ ಧರ್ಮಿವಾಚಕವೇ ಆಗಿದೆಯೆಂದು ಸಿದ್ಧವಾಯಿತು. ಮತ್ತು ಅನೇಕತ್ವಸಂಖ್ಯಾವಾಚಕವೂ ಸಹ ಆಗಿಲ್ಲವೆಂದು ಸಿದ್ಧವಾಯಿತು. ಯಾವ ಕಾರಣದಿಂದ ಬಹುತ್ವ, ಅನೇಕತ್ವ, ವೈಪುಲ್ಯವೆಂಬ ಧರ್ಮವನ್ನು ಭೂಮಾ ಶಬ್ದವು ಹೇಳುವುದಿಲ್ಲವೋ ಆ ಕಾರಣದಿಂದಲೇ ಸ್ವತಃ ಅನ್ಯತ್ರಪ್ರಸಿದ್ಧವೂ ಸಹ ಆಗುವುದಿಲ್ಲ.

नाप्यन्यत्रप्रसिद्धप्राणश्रुतिसाहित्यादन्यत्रप्रसिद्धत्वम् । तस्य "अत एव प्राणः" इत्यत्रोक्तब्रह्मपरतामुपेत्योत्क्रमणादिलिङ्गादेवेह पूर्वपक्षकरणात् ।

ಇನ್ನು ಅನ್ಯತ್ರಪ್ರಸಿದ್ಧವಾದ ಪ್ರಾಣಶ್ರುತಿಯ ಸಾಹಿತ್ಯದಿಂದ 'ಭೂಮಾ' ಎಂಬ ಶಬ್ದವು ಅನ್ಯತ್ರಪ್ರಸಿದ್ಧವಾಗಿದೆಯಲ್ಲವೇ? ಎಂದೂ ಸಹ ಪ್ರಶ್ನಿಸಬಾರದು. ಪ್ರಾಣಶಬ್ದವು 'ಅತ ಏವ ಪ್ರಾಣಃ' ಎಂಬ ಸೂತ್ರದಲ್ಲಿ ಹೇಳಲ್ಪಟ್ಟ ನ್ಯಾಯದಂತೆ ವಿಷ್ಣುಪರವಾಗಿದೆ. ಹೀಗೆ ಒಪ್ಪಿ ಕೇವಲ ಉತ್ಕ್ರಮಣಾದಿ ಲಿಂಗದಿಂದಲೇ 'ಭೂಮಾ' ಎಂಬ ಶಬ್ದವು ವಾಯುದೇವತಾಪರವಾಗಿದೆಯೆಂದು ಇಲ್ಲಿ ಪೂರ್ವಪಕ್ಷ ಮಾಡಲಾಗುತ್ತಿದೆ. ಆದ್ದರಿಂದ ಅನ್ಯತ್ರಪ್ರಸಿದ್ಧವಾದ ಪ್ರಾಣಶ್ರುತಿಯ ಸಾಹಿತ್ಯದಿಂದ ಅನ್ಯತ್ರಪ್ರಸಿದ್ಧವಾಗಿದೆಯೆಂದು ಶಂಕಿಸಬಾರದು.

उत्क्रमणादिलिङ्गसाहित्यादन्यत्रप्रसिद्धता तु पूर्ववन्निरसनीया ।

ಹಾಗಾದರೆ ಉತ್ಕ್ರಮಣಾದಿ ಲಿಂಗವು ಅನ್ಯತ್ರಪ್ರಸಿದ್ಧವಾಗಿದೆ. ಇದರ ಸಾಹಿತ್ಯದಿಂದ 'ಭೂಮಾ' ಎಂಬ ಶಬ್ದವು ಅನ್ಯತ್ರಪ್ರಸಿದ್ಧವಾಗುತ್ತದಲ್ಲವೇ? ಎಂದೂ ಸಹ ಪ್ರಶ್ನಿಸಬಾರದು. ದ್ಯುಭ್ವಾದ್ಯಧಿಕರಣದಲ್ಲಿ ಹೇಳಲ್ಪಟ್ಟ ನ್ಯಾಯದಿಂದ ಅನ್ಯತ್ರಪ್ರಸಿದ್ಧದ ಲಕ್ಷಣವೂ ಇಲ್ಲಿ ಬಾರದ ಕಾರಣ 'ಭೂಮಾ' ಎಂಬ ಶಬ್ದವು ಅನ್ಯತ್ರಪ್ರಸಿದ್ಧವಾಗುವುದಿಲ್ಲವೆಂದು ತಿಳಿಯಬೇಕು.

उभयत्रप्रसिद्धत्वं तु "प्राणो वा आशाया भूयान् विष्णुर्वै देवेभ्यो भूयांस्तस्माद्भूयान्नाम् इत्यादेर्भूमशब्दोऽज्ञानां साधारणः" इति न्यायविवरण एवोक्तम् ।।

'ಭೂಮಾ' ಎಂಬ ಶಬ್ದವು ಉಭಯತ್ರಪ್ರಸಿದ್ಧವೇ ಆಗಿದೆ. ಈ ವಿಷಯವನ್ನು 'ಪ್ರಾಣೋ ವಾ ಆಶಾಯಾ ಭೂಯಾನ್ ವಿಷ್ಣುರ್ವೈ ದೇವೇಭ್ಯೋ ಭೂಯಾಂಸ್ತಸ್ಮಾದ್ಭೂಯಾನ್ನಮ' ಇತ್ಯಾದೇರ್ಭೂಮಶಬ್ದೋಽಜ್ಞಾನಾಂ ಸಾಧಾರಣಃ' ಇತ್ಯಾದಿ ನ್ಯಾಯವಿವರಣ ಗ್ರಂಥದ ವಾಕ್ಯಗಳಿಂದ ಭೂಮಾಧಿಕರಣ (೧-೩-೨)

ಅಜ್ಞಾನಿಗಳ ದೃಷ್ಟಿಯಿಂದಷ್ಟೇ ಪ್ರಾಣ ಹಾಗೂ ವಿಷ್ಣು ಇಬ್ಬರಲ್ಲಿಯೂ 'ಭೂಮಾ' ಎಂಬ ಶಬ್ದವು ಸಾಧಾರಣವಾಗಿದೆ, ಎಂದು ಹೇಳಿರುತ್ತಾರೆ.

ನನು ''ಪ್ರಾಣೋ ವಾ'' ಇತ್ಯುಪಕ್ರಮಾತ್ ''ವಿಷ್ಣುರ್ವಾ'' ಇತಿ ಸಮಾಖ್ಯಾಯಾ ದುರ್ಬಲತ್ವಾತ್ಕಥಂ ತತಃ ಸಾಧಾರಣ್ಯಮಿತಿ ಚೇತ್ನ । ಸಮಾಖ್ಯಾಯಾಃ ಸಾಭ್ಯಾಸತ್ವಾತ್ಸೋಪಪತ್ತಿಕತ್ವಾಚ್ಚಾ-ದೌರ್ಬಲ್ಯಾತ್ ।

'ಪ್ರಾಣೋ ವಾ' ಇತ್ಯಾದಿ ಉಪಕ್ರಮಕ್ಕಿಂತ 'ವಿಷ್ಣುರ್ವಾ' ಇತ್ಯಾದಿ ಸಮಾಖ್ಯೆಯು ದುರ್ಬಲವಾಗಿದೆ. ಹೀಗಿರುವಾಗ ಉಪಕ್ರಮ ಹಾಗೂ ಸಮಾಖ್ಯಾ ಪ್ರಮಾಣಗಳಿಂದ ಸಮಾನವಾಗಿ ಉಭಯಸಾಧಾರಣವಾಗಿದೆಯೆಂದು ಹೇಳಲು ಹೇಗೆ ಸಾಧ್ಯ ? ಎಂದು ಶಂಕಿಸಬಾರದು. ಉಪಕ್ರಮಕ್ಕಿಂತ ಕೇವಲ ಸಮಾಖ್ಯೆಯು ದುರ್ಬಲವಾಗಿರಬಹುದು. ಆದರೆ ಪ್ರಕೃತ ಅಭ್ಯಾಸ ಹಾಗೂ ಉಪಪತ್ತಿಗಳಿಂದ ಸಮಾಖ್ಯೆಯು ಯುಕ್ತವಾಗಿದೆ. ಆದ್ದರಿಂದ ಇದು ಉಪಕ್ರಮಕ್ಕಿಂತ ದುರ್ಬಲವಾಗುವುದಿಲ್ಲ.

ಅತ ಏವ ನ್ಯಾಯವಿವರಣೇ ಸಮಾಖ್ಯಾಯಾಮಭ್ಯಾಸೋಪಪತ್ತೀ ಉಕ್ತೇ ।

ಆದ್ದರಿಂದಲೇ ನ್ಯಾಯವಿವರಣದಲ್ಲಿ ಸಮಾಖ್ಯಾಪ್ರಮಾಣವನ್ನು ಹೇಳುವಾಗ ಅಭ್ಯಾಸ ಹಾಗೂ ಉಪಪತ್ತಿಗಳನ್ನೂ ಸಹ ಹೇಳಿರುತ್ತಾರೆ.

ಯದ್ವಾ ಉಪಕ್ರಮಸಮಾಖ್ಯಯೋರ್ಬಲಾಬಲಜ್ಞಾನದಶಾಯಾಂ ಸಾಧಾರಣ್ಯಮ್ । ಅತ ಏವ ನ್ಯಾಯವಿವರಣೇ ''ಅಜ್ಞಾನಾಮ್'' ಇತ್ಯುಕ್ತಮ್ ।

ಅಥವಾ ಉಪಕ್ರಮ ಹಾಗೂ ಸಮಾಖ್ಯಾಪ್ರಮಾಣಗಳಿಗೆ ಪ್ರಾಬಲ್ಯ ಹಾಗೂ ದೌರ್ಬಲ್ಯಗಳ ವಿಚಾರವನ್ನು ಮಾಡದ ದೆಶೆಯಲ್ಲಿ ಉಭಯಸಾಧಾರಣವಾಗಿದೆಯೆಂದು ತಿಳಿಯಬೇಕು. ಆದ್ದರಿಂದಲೇ ನ್ಯಾಯವಿವರಣದಲ್ಲಿ 'ಅಜ್ಞಾನಾಮ್' ಎಂದು ಹೇಳಿದ್ದಾರೆ. ಅಂದರೆ ಅಜ್ಞಾನಿಗಳ ಪ್ರಕಾರವಷ್ಟೇ ಇದು ಉಭಯಸಾಧಾರಣವಾಗಿದೆಯೆಂದರ್ಥ.

ಶ್ರೀರಾಘವೇಂದ್ರತೀರ್ಥವಿರಚಿತ
ಪ್ರಕಾಶ

ಪ್ರಕಾಶಃ –

ॐ भूमा सम्प्रसादादध्युपदेशात् ॐ ।। अत्र टीकायां ''प्राणो वा आशाया भूयान्' इत्युपक्रमेण 'विष्णुर्वै देवेभ्यो भूयांस्तस्माद्भूयान्नाम्' इति श्रुत्या च वायुविष्णुसाधारणस्य भूमनाम्नः'' इत्याद्युक्तम् ।

ಭೂಮಾಧಿಕರಣವು ಪ್ರಾರಂಭವಾಗುತ್ತಿದೆ. ಈ ಅಧಿಕರಣದ ಟೀಕೆಯಲ್ಲಿ 'ಪ್ರಾಣೋ ವಾ ಆಶಾಯಾ ಭೂಯಾನಿತ್ಯುಪಕ್ರಮೇಣ ವಿಷ್ಣುರ್ವೈ ದೇವೇಭ್ಯೋ ಭೂಯಾಂಸ್ತಸ್ಮಾದ್ಭೂಯಾನ್ನಾಮೇತಿ ಶ್ರುತ್ಯಾ ಚ ವಾಯುವಿಷ್ಣುಸಾಧಾರಣಸ್ಯ ಭೂಮನಾಮ್ನಃ' ಎಂದು ಹೇಳಿದ್ದಾರೆ. ಅಂದರೆ 'ಪ್ರಾಣೋ ವಾ ಆಶಾಯಾ ಭೂಯಾನ್' ಎಂಬುದಾಗಿ ಉಪಕ್ರಮ ರೂಪಪ್ರಮಾಣದ ಆಧಾರದಿಂದ 'ಭೂಮ'ಶಬ್ದವು ವಾಯುವಿನಲ್ಲಿ ಕೇಳಿಸುತ್ತಿದೆ. 'ವಿಷ್ಣುರ್ವೈ ದೇವೇಭ್ಯೋ ಭೂಯಾನ್ ತಸ್ಮಾತ್ ಭೂಯಾನ್ ನಾಮ' ಎಂಬ ಸಮಾಖ್ಯಾಶ್ರುತಿಯಲ್ಲಿ ವಿಷ್ಣುವಿನಲ್ಲಿ ಕೇಳಿಸುತ್ತಿದೆ. ಹೀಗೆ ವಾಯು ಹಾಗೂ ವಿಷ್ಣು ಇಬ್ಬರಲ್ಲಿಯೂ 'ಭೂಮಾ' ಎಂಬ ಶಬ್ದವು ಸಾಧಾರಣವಾಗಿದೆ ಎಂದು ಇದರ ಅಭಿಪ್ರಾಯ.

ಪ್ರಕಾಶಃ – तच्च न्यायविवरणटीकायां ''ननु भूमशब्दो भाववाची । तत्कथं धर्मिणो शङ्क्यते । कथं च भूयानित्यनेन समानार्थः । कथं च नामात्मकः । मैवम् । 'यो वै भूमा तत्सुखम्' इत्युत्तरवाक्यपर्यालोचनया भावभवित्रोरभेदाभिप्रायेण भवितृविषयतावगमात्'' इति ग्रन्थेनाक्षिप्य समाहितम् ।

ಇದೇ ಮಾತನ್ನು ನ್ಯಾಯವಿವರಣೆಯ ಟೀಕೆಯಲ್ಲಿ ಆಕ್ಷೇಪ ಮಾಡಿ ಸಮಾಧಾನ ನೀಡಿದ್ದಾರೆ - 'ನನು ಭೂಮಶಬ್ದೋ ಭಾವವಾಚೀ । ತತ್ಕಥಂ ಧರ್ಮಿಣೋಶಂಕ್ಯತೇ । ಕಥಂ ಚ ಭೂಯಾನಿತ್ಯನೇನ ಸಮಾನಾರ್ಥಃ । ಕಥಂ ಚ ನಾಮಾತ್ಮಕಃ । ಮೈವಮ್ । ಯೋ ವೈ ಭೂಮಾ ತತ್ಸುಖಮಿತ್ಯುತ್ತರವಾಕ್ಯ-ಪರ್ಯಾಲೋಚನಯಾ ಭಾವಭವಿತ್ರೋರಭೇದಾಭಿಪ್ರಾಯೇಣ ಭವಿತೃವಿಷಯತಾವಗಮಾತ್'' ಎಂದು. ಆಕ್ಷೇಪ ಹೀಗಿದೆ - 'ಭೂಮಾ' ಎಂಬ ಶಬ್ದವು ಧರ್ಮವಾಚಕವಾಗಿದೆ. ಆದರೆ ವಾಯು ಹಾಗೂ ವಿಷ್ಣುವನ್ನು ಪ್ರತಿಪಾದಿಸುತ್ತದೆನ್ನುವ ಮೂಲಕ ಧರ್ಮವಾಚಕವೆಂದು ನೀವು ಹೇಳುತ್ತಿದ್ದೀರಿ. ಇದು ಹೇಗೆ ಸರಿ? ಮತ್ತು ವಾಯುವಿಷಯದಲ್ಲಿರುವ ಉಪಕ್ರಮಪ್ರಮಾಣದಲ್ಲಾಗಲೀ ವಿಷ್ಣುವಿಷಯಕವಾದ ಸಮಾಖ್ಯಾ-ಪ್ರಮಾಣದಲ್ಲಾಗಲೀ 'ಭೂಯಾನ್' ಎಂಬ ಶಬ್ದವಿದೆ ಹೊರತು, 'ಭೂಮ' ಎಂಬ ಶಬ್ದವಿಲ್ಲ. ಹೀಗಿರುವಾಗ 'ಭೂಯಾನ್' ಎಂಬ ಶಬ್ದ ಹಾಗೂ 'ಭೂಮಾ' ಎಂಬ ಶಬ್ದಗಳು ಸಮಾನಾರ್ಥಕವೆಂದು ಹೇಗೆ ಹೇಳುತ್ತೀರಿ? ಮತ್ತು ಲಿಂಗಾತ್ಮಕವಾದ ಭೂಮಶಬ್ದವನ್ನು ನಾಮಾತ್ಮಕವೆಂದು ಹೇಗೆ ಹೇಳುತ್ತೀರಿ? ಹೀಗೆ ಮೂರು ಆಕ್ಷೇಪಗಳು ಬರುತ್ತವೆ.

ಇದಕ್ಕೆ ಹೀಗೆ ಉತ್ತರ - 'ಯೋ ವೈ ಭೂಮಾ ತತ್ಸುಖಮ್' ಎಂದು ಮುಂದಿನ ವಾಕ್ಯವನ್ನು ಆಲೋಚನೆ ಮಾಡಿದಾಗ ಧರ್ಮ ಹಾಗೂ ಧರ್ಮಿಗಳಿಗೆ ಅಭೇದವಿದೆಯೆಂದು ತಿಳಿಯುತ್ತದೆ. ಧರ್ಮಿಯನ್ನು ಅರ್ಥವೆಂದು ಹೇಳುವುದರಿಂದ ಧರ್ಮವೆಂಬರ್ಥವನ್ನೂ ಸಹ ಹೇಳಿದಂತೆ ಆಗುತ್ತದೆ. ಇತ್ಯಾದಿ ಗ್ರಂಥದಿಂದ ಆಕ್ಷೇಪ ಮಾಡಿ ಉತ್ತರಿಸಿದ್ದಾರೆ.

ಪ್ರಕಾಶಃ – तद्विवरीतुकामस्तदाक्षेपसमाधानयोरन्यत्रप्रसिद्धत्वशङ्काव्युदासोऽपि फलमिति भावेनाऽक्षेपमनूद्य समाधिं च प्रपञ्चयति – अत्र यद्यपीत्यादिना स्वतोऽन्यत्रप्रसिद्धतेत्यन्तेन ।।

ತತ್ವಪ್ರಕಾಶಿಕಾಟೀಕೆಯನ್ನು ಹಾಗೂ ನ್ಯಾಯವಿವರಣಟೀಕೆಯನ್ನು ವಿವರಿಸಲು ಹೊರಟಿದ್ದಾರೆ. ವಿವರಣೆಯ ಅಭಿಪ್ರಾಯದಿಂದ ಆಕ್ಷೇಪ ಹಾಗೂ ಸಮಾಧಾನಗಳಿಗೆ 'ಭೂಮಾ' ಎಂಬ ಶಬ್ದವು ಅನ್ಯತ್ರಪ್ರಸಿದ್ಧವಾಗುತ್ತದಲ್ಲವೇ? ಎಂಬ ಶಂಕೆಯ ಪರಿಹಾರವೂ ಸಹ ಮತ್ತೊಂದು ಬಗೆಯ ಪ್ರಯೋಜನವಾಗಿದೆಯೆಂಬ ಅಭಿಪ್ರಾಯದಿಂದ ಆಕ್ಷೇಪವನ್ನು ಅನುವಾದ ಮಾಡಿ ಸಮಾಧಾನವನ್ನು ವಿವರಿಸುತ್ತಿದ್ದಾರೆ 'अत्र यद्यपि' ಇತ್ಯಾದಿ ಗ್ರಂಥದಿಂದ ಪ್ರಾರಂಭಿಸಿ 'स्वतोऽन्यत्रप्रसिद्धता' ಎಂಬ ಗ್ರಂಥದ ತನಕ.

ಪ್ರಕಾಶಃ – बहुशब्दात् ''पृथ्वादिभ्य इमनिज्वा'' इति सूत्रेण भावे इमनिच्प्रत्यये सति 'बहोः' इति सूत्रेण बहोः परस्येमनिच्प्रत्ययस्यादेरिकारस्य लोपो बहुशब्दस्य 'भ्' इत्यादेशश्चेति विधानाद्भूमेति रूपमिति भावः ।

'ಭೂಮಾ' ಎಂಬ ಶಬ್ದದ ನಿಷ್ಪತ್ತಿಯನ್ನು ಹೀಗೆ ತಿಳಿಯಬೇಕು. 'ಪೃಥ್ವಾದಿಭ್ಯ ಇಮನಿಜ್ವಾ' ಎಂಬ ಸೂತ್ರವು ಪೃಥಿವೀ ಮೊದಲಾದ ಶಬ್ದಗಳಿಗೆ ವಿಕಲ್ಪವಾಗಿ 'ಇಮನಿಚ್' ಪ್ರತ್ಯಯವನ್ನು ವಿಧಿಸುತ್ತಿದೆ. ಪೃಥಿವೀ ಮೊದಲಾದವುಗಳ ಮಧ್ಯದಲ್ಲಿ 'ಭೂ' ಶಬ್ದವೂ ಸಹ ಸೇರಿದೆ. ಆದ್ದರಿಂದ ಭಾವಾರ್ಥದಲ್ಲಿ ಬಹುಶಬ್ದಕ್ಕೆ 'ಇಮನಿಚ್' ಪ್ರತ್ಯಯವು ಬರುತ್ತದೆ. ಅನಂತರ 'ಇಮನಿಚ್' ಎಂಬಲ್ಲಿರುವ ಚಕಾರ, ಇಕಾರ ಇವುಗಳಿಗೆ 'ಇತ್' ಸಂಜ್ಞೆಯು ಬಂದು ಅವು ಲೋಪವಾದರೆ 'ಬಹು ಇಮನ್' ಎಂದಾಗುತ್ತದೆ. 'ಬಹೋಃ' ಎಂಬ ಸೂತ್ರದಿಂದ ಬಹು ಶಬ್ದದ ಮುಂದಿರುವ 'ಇಮನಿಚ್' ಪ್ರತ್ಯಯದ ಮೊದಲಿನ ಇಕಾರಕ್ಕೆ ಲೋಪ ಬರುತ್ತದೆ. ಮತ್ತು ಬಹು ಶಬ್ದಕ್ಕೆ 'ಭೂ' ಎಂಬ ಆದೇಶವೂ ಸಹ ಬರುತ್ತದೆ. ಆವಾಗ 'ಭೂಮನ್' ಎಂಬ ಪ್ರಾತಿಪದಿಕವು ನಿಷ್ಪನ್ನವಾಗುತ್ತದೆ. ಪ್ರಥಮಾ ವಿಭಕ್ತಿ ಏಕವಚನದಲ್ಲಿ 'ಭೂಮಾ' ಎಂಬ ರೂಪವು ಸಿದ್ಧವಾಗುತ್ತದೆಂದು ತಿಳಿಯಬೇಕು.

ಪ್ರಕಾಶಃ – अन्यत्र सेनावनादौ । गुहानयन्यायेन भगवत्यप्यस्ति प्रसिद्धिरित्यतो 'लोकतः' इत्युक्तम् । यथा प्राचीनवैश्वानरनाम्नो लोकतोऽन्यत्रप्रसिद्धिस्तथेति भावः ।

ಹೀಗೆ ವ್ಯಾಕರಣದಿಂದ ನಿಷ್ಪನ್ನವಾದ 'ಭೂಮಾ' ಎಂಬ ಶಬ್ದವು ಬಹುತ್ವಸಂಖ್ಯಾರ್ಥದಲ್ಲಿ ಲೋಕತಃ ಅನ್ಯತ್ರಪ್ರಸಿದ್ಧವಾಗಿದೆ. ಅಂದರೆ ಸೇನಾ, ರೇಣ, ವನ ಮೊದಲಾದವೆಡೆ 'ಭೂಮಾ' ಎಂಬ ಶಬ್ದವನ್ನು ಅನೇಕತ್ವ ಸಂಖ್ಯೆಯುಳ್ಳದ್ದೆಂಬರ್ಥದಲ್ಲಿ ಪ್ರಯೋಗಿಸುತ್ತೇವೆ.

ಗುಹಾಧಿಕರಣದ ನ್ಯಾಯದಂತೆ 'ಭೂಮಾ' ಎಂಬ ಶಬ್ದದ ಪ್ರಸಿದ್ಧಿಯನ್ನು ಭಗವಂತನಲ್ಲಿಯೂ ಹೇಳಬಹುದು. ಅದಕ್ಕೋಸ್ಕರ 'ಲೋಕತಃ' ಎಂಬ ಪದವನ್ನು ಹೇಳಿದ್ದಾರೆ. ಯಾವರೀತಿಯಾಗಿ ವೈಶ್ವಾನರಾಧಿಕರಣದಲ್ಲಿ ಸಮನ್ವಯ ಮಾಡಲ್ಪಟ್ಟ 'ವೈಶ್ವಾನರ' ಎಂಬ ನಾಮಾತ್ಮಕ ಶಬ್ದವು ಭಗವಂತನಲ್ಲಿ ಪ್ರಸಿದ್ಧವಾಗಿದ್ದರೂ ಲೋಕತಃಅನ್ಯತ್ರಪ್ರಸಿದ್ಧವಾಗಿದೆಯೆಂದು ವಿವಕ್ಷಿಸಲಾಗಿತ್ತೋ ಅದರಂತೆ 'ಭೂಮಾ' ಎಂಬ ಶಬ್ದವೂ ಸಹ ಲೋಕತಃ ಅನ್ಯತ್ರಪ್ರಸಿದ್ಧವಾಗಿದೆಯೆಂದು ತಿಳಿಯಬೇಕು.

ಪ್ರಕಾಶಃ – ಭೂಮಶಬ್ದಸ್ಯ ಪೂರ್ಣಪರ್ಯಾಯಸ್ಯ ಧರ್ಮಿಪರಸ್ಯೈವಾತ್ರ ಗ್ರಹಣಂ ನ ಪುನರ್ಭಾವಾರ್ಥಕಸ್ಯ ಸಙ್ಖ್ಯಾವಾಚಿನ ಇತಿ ಭಾವೇನ ತತ್ರ ಪ್ರಯೋಗೋಪಪತ್ತೀ ದರ್ಶಯತಿ – ತಥಾऽಪೀತ್ಯಾದಿನಾ ।।

'ಭೂಮಾ' ಎಂಬ ಶಬ್ದವು ಪೂರ್ಣ ಎಂಬರ್ಥದಲ್ಲಿ ಧರ್ಮಿಪರವಾಗಿಯೇ ಇದೆ. ಧರ್ಮಿಪರವಾದ 'ಭೂಮಾ' ಎಂಬ ಶಬ್ದವನ್ನೇ ಸೂತ್ರಕಾರರು ಇಲ್ಲಿ ಸ್ವೀಕರಿಸಿದ್ದಾರೆ ಹೊರತು, ಭಾವಾರ್ಥದಲ್ಲಿರುವ ಸಂಖ್ಯಾವಾಚಿಯಾದ 'ಭೂಮಾ' ಎಂಬ ಶಬ್ದವನ್ನು ಸ್ವೀಕರಿಸಿಲ್ಲ. ಧರ್ಮಿಪರವಾದ 'ಭೂಮಾ' ಎಂಬ ಶಬ್ದವನ್ನು ಸ್ವೀಕರಿಸಿದ್ದಾರೆಂದು ತಿಳಿಯಬೇಕಾದರೆ ಮೊದಲು ಧರ್ಮ್ಯರ್ಥದಲ್ಲಿ ಅದರ ಪ್ರಯೋಗವನ್ನು ಹಾಗೂ ಅದು ಹೇಗೆ ಉಪಪನ್ನವಾಗುತ್ತದೆಂಬುದನ್ನು ತಿಳಿಯಬೇಕು. ಅದನ್ನು 'ತಥಾऽಪಿ' ಇತ್ಯಾದಿ ಗ್ರಂಥದಿಂದ ಸ್ಪಷ್ಟಪಡಿಸುತ್ತಿದ್ದಾರೆ.

ಪ್ರಕಾಶಃ – 'ಭೂಮಶಬ್ದಸ್ಯ ವಿಪುಲರೂಪಧರ್ಮಿಪರತೈವ' ಇತ್ಯನ್ವಯಃ । ತತ್ರ ಹೇತುಃ 'ಬಹ್ವರ್ಥಶಬ್ದಸ್ಯ ವೈಪುಲ್ಯಾರ್ಥತ್ವಾತ್' ಇತಿ । 'ಧರ್ಮಿಣಿ ಪ್ರಯೋಗಾತ್' ಇತ್ಯಾದಿಶ್ಚ । ವೈಪುಲ್ಯಾರ್ಥತ್ವೇ ಹೇತುಃ ವೈಪುಲ್ಯೇऽಪಿ ಪ್ರಯೋಗಾತ್ ಇತ್ಯಾದಿ । 'ಇತ್ಯಾದೌ' ಇತ್ಯಾದಿಪದೇನ ''ಬಹವಃ ಪುರುಷಾ ಬ್ರಹ್ಮನ್ನುತಾಹೋ ಏಕ ಏವ ತು'' ಇತ್ಯಾದಿಗ್ರಹಃ ।

'ತಥಾऽಪಿ' ಎಂಬ ಶಬ್ದಕ್ಕೆ 'ಭೂಮಶಬ್ದಸ್ಯ ವಿಪುಲರೂಪಧರ್ಮಿಪರತೈವ' ಎಂಬಲ್ಲಿ ಅನ್ವಯ ಮಾಡಬೇಕು. ಈ ವಿಷಯದಲ್ಲಿ 'ಬಹುಶಬ್ದಸ್ಯ ವೈಪುಲ್ಯಾರ್ಥತ್ವಾತ್' ಎಂಬುದರಿಂದ ಕಾರಣವನ್ನು ನೀಡಿದ್ದಾರೆ. ಅಂದರೆ 'ಬಹು' ಎಂಬ ಶಬ್ದವು ಸಂಖ್ಯಾರ್ಥದಲ್ಲಿ ಹೇಗೆ ಪ್ರಸಿದ್ಧವಾಗಿದೆಯೋ ಅದರಂತೆ 'ವಿಪುಲ' ಎಂಬರ್ಥದಲ್ಲಿಯೂ ಸಹ ಪ್ರಸಿದ್ಧವಾಗಿದೆ. ಇದರಂತೆ 'ಧರ್ಮಿಣಿ ಪ್ರಯೋಗಾತ್' ಎಂದೂ ಕಾರಣವನ್ನು ಕೊಟ್ಟಿದ್ದಾರೆ. ಧರ್ಮಿಯಲ್ಲಿ 'ಬಹು' ಎಂಬ ಶಬ್ದವನ್ನು ಪ್ರಯೋಗ ಮಾಡುವುದರಿಂದ. ಹೀಗೆ 'ವೈಪುಲ್ಯ' ಎಂಬರ್ಥವನ್ನು ಹೇಳಬಹುದೆನ್ನಲು 'ವೈಪುಲ್ಯೇऽಪಿ ಪ್ರಯೋಗಾತ್' ಎಂದು ಕಾರಣವನ್ನು ಹೇಳಿರುತ್ತಾರೆ. 'ಇತ್ಯಾದಿ' ಎಂಬ ಆದಿಪದದಿಂದ 'ಬಹವಃ ಪುರುಷಾ ಬ್ರಹ್ಮನ್ನುತಾಹೋ ಏಕ ಏವ ತು'' ಇತ್ಯಾದಿ ದೃಷ್ಟಾಂತಗಳನ್ನು ತಿಳಿಯಬೇಕು. ಜನಮೇಜಯರು ವೈಶಂಪಾಯನರನ್ನು ಕುರಿತು, ಪುರುಷರು ಅನೇಕರೋ? ಅಥವಾ ಒಬ್ಬನೋ? ಎಂದು ಪ್ರಶ್ನಿಸುತ್ತಾರೆ. ಇಲ್ಲಿರುವ 'ಬಹು' ಶಬ್ದವು ಸಂಖ್ಯಾರ್ಥದಲ್ಲಿ

ಪ್ರಸಿದ್ಧವಾಗಿದೆ. ಯಾವರೀತಿಯಾಗಿ ಸಂಖ್ಯಾರ್ಥದಲ್ಲಿ 'ಬಹು' ಎಂಬ ಅರ್ಥವು ಪ್ರಸಿದ್ಧವಾಗಿದೆಯೋ, ಅದರಂತೆ 'ವಿಪುಲ' ಎಂಬರ್ಥದಲ್ಲಿಯೂ ಸಹ ಪ್ರಸಿದ್ಧವಾಗಿದೆಯೆಂದು ಗ್ರಂಥದ ಅಭಿಪ್ರಾಯ.

ಪ್ರಕಾಶಃ – ವೈಪುಲ್ಯೇऽಪೀತಿ ।। ಉಕ್ತಞ್ಚ ''ಬಹುಗುಣವತ್ತುಽತಿ ಸಙ್ಖ್ಯಾ'' ಇತ್ಯತ್ರ ವೃತ್ತ್ಯಾದೌ ''ಬಹು ಓದನಮ್ ಇತಿ ವೈಪುಲ್ಯಾರ್ಥಕोऽप्यस्ति'' ಇತಿ । ಉಪಪತ್ತಿಮಾಹ – **ಅತ್ರೈವ ಚೇತಿ ।।**

'ಬಹುಗಣವತ್ತುಡತಿ ಸಂಖ್ಯಾ' ಎಂಬ ವಾಕ್ಯದ ಕಾಶಿಕಾವೃತ್ತಿಯಲ್ಲಿ 'ಬಹು ಓದನಮ್ ಇತಿ ವೈಪುಲ್ಯಾರ್ಥಕೋऽಪ್ಯಸ್ತಿ' 'ಬಹು' ಎಂಬ ಶಬ್ದವು ವಿಪುಲ ಎಂಬರ್ಥವನ್ನೂ ಸಹ ಹೊಂದಿರುತ್ತದೆ' ಎಂದು ಹೇಳಲಾಗಿದೆ. ಹೀಗೆ ಅನೇಕ ಕಡೆ ಪ್ರಯೋಗಗಳಿರುವುದರಿಂದ ಧರ್ಮಿಪರವಾಗಿದೆಯೆಂದು ತಿಳಿಯುತ್ತದೆ. ಮತ್ತು ಉಪಪತ್ತಿಯೂ ಸಹ ಈ ವಿಷಯದಲ್ಲಿದೆಯೆಂಬುದಾಗಿ 'ಅತ್ರೈವ ಚ' ಇತ್ಯಾದಿ ಗ್ರಂಥದಿಂದ ಪ್ರತಿಪಾದಿಸುತ್ತಿದ್ದಾರೆ.

ಪ್ರಕಾಶಃ – ಉಪಪತ್ತ್ಯನ್ತರಮಾಹ – ನಾಮಾದಿಭ್ಯ ಇತಿ ।। ಪೂರ್ವಪಕ್ಷेऽಪೀತ್ಯುಭಯಸಾಧಾರಣ್ಯ-ಕಥನಾಯ । ಏವಮಗ್ರेऽಪಿ । **ವೈಪುಲ್ಯಾರ್ಥತ್ವಂ ಭೂಮಶಬ್ದಸ್ಯ ಸಮರ್ಥ್ಯ ವೈಪುಲ್ಯಯುಕ್ತಧರ್ಮಿಪರತ್ವಂ ಸಾಧಯತಿ – ಇಹೈವ ಚೇತಿ ।।**

'ಭೂಮಾ' ಎಂಬ ಶಬ್ದವು ವೈಪುಲ್ಯಾರ್ಥಕವೇ ಆಗಿದೆಯೆನ್ನಲು ಮತ್ತೊಂದು ಉಪಪತ್ತಿಯನ್ನು 'ನಾಮಾದಿಭ್ಯಃ' ಇತ್ಯಾದಿ ವಾಕ್ಯದಿಂದ ಸಮರ್ಥಿಸುತ್ತಿದ್ದಾರೆ. 'ಪೂರ್ವಪಕ್ಷेऽಪಿ' ಎಂದು ಹೇಳಿದ್ದರಿಂದ 'ಭೂಮಾ' ಎಂಬ ಶಬ್ದವು ಪ್ರಾಣ ಹಾಗೂ ವಿಷ್ಣು ಇಬ್ಬರಲ್ಲಿಯೂ ಸಾಧಾರಣವಾಗಿದೆಯೆಂದು ತಿಳಿಸಿದಂತಾಯಿತು. ಹೀಗೆ ಮುಂದೆಯೂ ತಿಳಿಯಬೇಕು. ಇಲ್ಲಿಯ ತನಕ 'ಭೂಮಾ' ಎಂಬ ಶಬ್ದಕ್ಕೆ ವೈಪುಲ್ಯ ಎಂಬರ್ಥವನ್ನು ಸಮರ್ಥಿಸಿ, 'ವೈಪುಲ್ಯ' ಎಂಬ ಧರ್ಮದಿಂದ ಕೂಡಿರುವ ಧರ್ಮಿಪರವಾಗಿಯೂ ಆಗಿದೆಯೆಂದು 'ಇಹೈವ ಚ' ಇತ್ಯಾದಿ ವಾಕ್ಯದಿಂದ ಸಾಧಿಸುತ್ತಿದ್ದಾರೆ.

ಪ್ರಕಾಶಃ – ಟೀಕाऽನುವ್ಯಾಖ್ಯಾನಯೋಶ್ಚೇತಿ ।। ಟೀಕಾಯಾಂ ಸ್ಪಷ್ಟಮ್ । ಅನುವ್ಯಾಖ್ಯಾನे ತು ''ಲಿಙ್ಗಂ ಸಾಧಾರಣಂ ಶಬ್ದೌ'' ಇತಿ ಶಬ್ದಪದೇನ ನಾಮತ್ವೋಕ್ತಿರಿತಿ ಭಾವಃ ।

'ಟೀಕಾऽನುವ್ಯಾಖ್ಯಾನಯೋಶ್ಚ' ಎಂಬುದರ ಅಭಿಪ್ರಾಯ ಹೀಗಿದೆ - ಟೀಕೆಯಲ್ಲಿ 'ಭೂಮನಾಮ್ನಃ' ಎಂದು ಹೇಳಿದ್ದರಿಂದ ಧರ್ಮಿವಾಚಕವೆಂದು ಸ್ಪಷ್ಟವಾಗಿ ತಿಳಿಯುತ್ತದೆ. ಅನುವ್ಯಾಖ್ಯಾನದಲ್ಲಾದರೂ 'ಲಿಂಗಂ ಸಾಧಾರಣಂ ಶಬ್ದೌ' ಎಂಬಲ್ಲಿ 'ಶಬ್ದ' ಎಂಬ ಪದದಿಂದ ನಾಮಾತ್ಮಕವೆಂದು ತಿಳಿಸಿದ್ದಾರೆಂದು ತಿಳಿಯಬೇಕು. ಮೊದಲು ಲಿಂಗವೆಂದು ಹೇಳಿ, ಅನಂತರ 'ಶಬ್ದೌ' ಎಂಬುದಾಗಿ ಹೇಳಿದ್ದರಿಂದ ಭೂಮಾಧಿಕರಣದಲ್ಲಿ ಹಾಗೂ ಅಕ್ಷರಾಧಿಕರಣದಲ್ಲಿ ನಾಮಾತ್ಮಕ ಶಬ್ದದ ಸಮನ್ವಯವನ್ನು ಮಾಡುತ್ತಿದ್ದಾರೆಂದು ಇದರ ಅರ್ಥ.

ಪ್ರಕಾಶಃ – ರೂಢೇರಿತಿ ।। ತಥಾ ಚಾವ್ಯುತ್ಪನ್ನ ಏವಾಯಮಖण्ಡಶಬ್ದ ಇತ್ಯುಕ್ತಂ ಭವತಿ । ಪಾಣಿನೀಯವ್ಯುತ್ಪಾದನಸ್ಯ ತರ್ಹಿ ಕಾ ಗತಿರಿತ್ಯತ ಆಹ – **ವ್ಯಾಕರಣಸ್ಯ ಚೇತಿ ।।**

'ರೂಢೇಃ' ಎಂದು ಹೇಳಿದ್ದರಿಂದ 'ಭೂಮಾ' ಎಂಬ ಶಬ್ದವು ಅಖಂಡ ಶಬ್ದವಾಗಿದೆಯೆಂದು ತಿಳಿಯಬೇಕು. ಅಂದರೆ ಇದರ ವ್ಯುತ್ಪತ್ತಿಯನ್ನು ತೋರಿಸಬೇಕಾಗಿಲ್ಲ. ಹಾಗಾದರೆ ಪಾಣಿನೀಯ ವ್ಯಾಕರಣದಲ್ಲಿ 'ಭೂಮಾ' ಎಂಬ ಶಬ್ದದ ವ್ಯುತ್ಪತ್ತಿಯನ್ನು ತೋರಿಸಿದ್ದಾರಲ್ಲ, ಇದಕ್ಕೇನು ಗತಿ? ಎಂಬ ಪ್ರಶ್ನೆಗೆ 'ವ್ಯಾಕರಣಸ್ಯ ಚ' ಎಂಬುದರಿಂದ ಉತ್ತರಿಸುತ್ತಿದ್ದಾರೆ.

'यत्रार्थस्य विसंवादः प्रत्यक्षेणोपलभ्यते ।
स्वरसंस्कारमात्रार्था तत्र व्याकरणस्मृतिः ।।'

इत्युक्तेः स्वरसंस्कारमात्रार्थत्वाच्चेत्यपि ध्येयम् ।

ಪ್ರತ್ಯಕ್ಷದಿಂದ ಅರ್ಥಕ್ಕೆ ಎಲ್ಲಿ ವಿಸಂವಾದ ಬಂದಿರುತ್ತದೋ, ಅಲ್ಲಿ ಉದಾತ್ತಾದಿಸ್ವರಸಂಸ್ಕಾರ-ಕ್ಕೋಸ್ಕರವಷ್ಟೇ ವ್ಯಾಕರಣವು ಉಪಯುಕ್ತವಾಗುತ್ತದೆ.

ಈ ಮಾತಿನಂತೆ ಸ್ವರಸಂಸ್ಕಾರ ಸಿದ್ಧಿಗಾಗಿ ಮಾತ್ರ ವ್ಯಾಕರಣದಲ್ಲಿ 'ಭೂಮಾ' ಎಂಬ ಶಬ್ದವನ್ನು ನಿಷ್ಪನ್ನ ಮಾಡಿದ್ದಾರೆ. ಅಥವಾ ಶಬ್ದಸಾಧುತ್ವಕ್ಕೋಸ್ಕರವೂ ಹಾಗೇ ವ್ಯುತ್ಪತ್ತಿ ತೋರಿಸಿದ್ದಾರೆಂದು ಉತ್ತರಿಸಬಹುದು.

ಪ್ರಕಾಶಃ – अत एव ''स एषोऽणिमा'' ''धातुः प्रसादान्महिमानमीशम्'' इत्यादिश्रुतिषु ''स चाह भूमा परमेष्ठिनं प्रभुर्बद्धाञ्जलिं सस्मितपूर्वया गिरा'' इत्यादिस्मृतिषु च प्रयोगो धर्मिणि बहुलमुपलभ्यते ।

ಆದ್ದರಿಂದಲೇ 'स एषोऽणिमा' 'धातुः प्रसादान्महिमानमीशम्' ಇತ್ಯಾದಿ ಶ್ರುತಿಗಳಲ್ಲಿ 'ಇಮನಿಚ್' ಪ್ರತ್ಯಯಾಂತವಾದ ಅಣಿಮಾ, ಮಹಿಮಾನ ಮೊದಲಾದ ಶಬ್ದಗಳನ್ನು ಧರ್ಮ್ಯರ್ಥದಲ್ಲಿಯೇ ಪ್ರಯೋಗಿಸಲಾಗಿದೆ. ಮತ್ತು ''स चाह भूमा परमेष्ठिनं प्रभुर्बद्धाञ्जलिं सस्मितपूर्वया गिरा' ಎಂಬಲ್ಲಿಯೂ 'ಭೂಮಾ' ಎಂಬ ಶಬ್ದವನ್ನು ಧರ್ಮ್ಯರ್ಥದಲ್ಲಿ ಸ್ಮೃತಿಯೂ ಸಹ ಪ್ರಯೋಗಿಸಿದೆ.

ಪ್ರಕಾಶಃ – कचित्तु ''तत्सिद्धिजातिसारूप्यप्रशंसाभूम्'' इति जैमिनीये ''अध्यात्मसम्बन्धभूमा'' इत्यत्र च धर्मेऽपि प्रयोगात्तदर्थत्वाच्च व्याकरणस्येत्यपि ध्येयम् ।

ಅಥವಾ ಕೆಲವೆಡೆ 'तत्सिद्धिजातिसारूप्यप्रशंसाभूमा' ಇತ್ಯಾದಿಯಾದ ಜೈಮಿನಿ ಸೂತ್ರದಲ್ಲಿ ಮತ್ತು 'ಅಧ್ಯಾತ್ಮಸಂಬಂಧಭೂಮಾ' ಎಂಬ ಬ್ರಹ್ಮಸೂತ್ರದಲ್ಲಿ 'ಭೂಮಾ' ಎಂಬ ಶಬ್ದವನ್ನು ಧರ್ಮಾರ್ಥದಲ್ಲಿಯೂ ಸಹ ಪ್ರಯೋಗಿಸಲಾಗಿದೆ. ಧರ್ಮಾರ್ಥಕವಾದ ಇಂತಹ 'ಭೂಮಾ' ಎಂಬ ಶಬ್ದವನ್ನಷ್ಟೇ ನಿಷ್ಪನ್ನ ಮಾಡುವುದಕ್ಕಾಗಿ ವ್ಯಾಕರಣವು ಹೊರಟಿರುತ್ತದೆ ಎಂದು ತಿಳಿಯಬೇಕು.

प्रकाशः – स्वत इति ।। श्रुतिलिङ्गसाहित्यं विनेत्यर्थः । प्रकारान्तरेण जातामन्यत्रप्रसिद्धत्वशङ्कां ''प्राणो वा आशाया भूयान्'' इत्युक्तप्राणशब्दस्य ''अत एव प्राणः'' इत्युक्तरीत्या विष्णुपरत्वात्'' इत्यादिटीकासूचितपरिहारेण निराह – नापीति ।।

ಇಲ್ಲಿಯ ತನಕ ಒಂದು ಪ್ರಕಾರದಲ್ಲಿ ಸಿದ್ಧವಾದ ಅನ್ಯತ್ರಪ್ರಸಿದ್ಧತ್ವ ಶಂಕೆಯನ್ನು ನಿರಾಕರಿಸಿದರು. ಈಗ ಮತ್ತೊಂದು ಪ್ರಕಾರದಿಂದ ಅನ್ಯತ್ರಪ್ರಸಿದ್ಧತ್ವಶಂಕೆಯನ್ನು 'प्राणो वा आशाया भूयान्' ಇತ್ಯುಕ್ತಪ್ರಾಣಶಬ್ದಸ್ಯ ''अत एव प्राणः'' ಇತ್ಯುಕ್ತರೀತ್ಯಾ ವಿಷ್ಣುಪರತ್ವಾತ್' ಎಂದರೆ 'प्राणो वा आशाया भूयान्' ಎಂಬಲ್ಲಿ ಹೇಳಲ್ಪಟ್ಟ ಪ್ರಾಣಶಬ್ದಕ್ಕೆ 'अत एव प्राणः' ಎಂಬ ಸೂತ್ರದಲ್ಲಿ ಹೇಳಿದಂತೆ ವಿಷ್ಣುಪರತ್ವವಿರುವುದರಿಂದ' ಇತ್ಯಾದಿ ಟೀಕೆಯಿಂದ ಸೂಚಿತವಾದ ಪರಿಹಾರದಿಂದ ನಿರಾಕರಿಸುತ್ತಿದ್ದಾರೆ. 'नापि' ಇತ್ಯಾದಿ ವಾಕ್ಯದಿಂದ.

प्रकाशः – यथाऽऽदित्यश्रुतिसाहित्यात्सर्वगतत्वस्यान्यत्रप्रसिद्धत्वं तथेह न शङ्क्यम् । तत्रादित्यश्रुतेरन्तर्नये साक्षादश्रवणेन लोकतोऽन्यत्रप्रसिद्धचाश्रयेण वा संवत्सरसारत्वादिलिङ्गवशेनादित्यश्रुतेरन्यत्रप्रसिद्धत्वेन वा तत्साहित्येनान्यत्रप्रसिद्धेस्सर्वगतत्वस्योक्तावपि नेह तथेति भावेनोक्तं – ब्रह्मपरतामुपेत्येति ।

ಸರ್ವಗತತ್ವಾದಿಗಳಂತೆ 'ಭೂಮಾ' ಎಂಬ ಶಬ್ದವೂ ಸಹ ಅನ್ಯತ್ರಪ್ರಸಿದ್ಧವಾಗುತ್ತದೆಂದು ಶಂಕಿಸಬಾರದು. ಏಕೆಂದರೆ ಆಲ್ಲಿ ಆದಿತ್ಯಶ್ರುತಿಯ ಸಾಹಿತ್ಯದಿಂದ ಸರ್ವಗತತ್ವವು ಅನ್ಯತ್ರಪ್ರಸಿದ್ಧವಾಗಿತ್ತು. ಆದರೆ ಇಲ್ಲಿ ಅಂತಹ ಶ್ರುತಿಗಳು ಇರುವುದಿಲ್ಲ. ಆದಿತ್ಯಶ್ರುತಿಯು ಅಂತರಧಿಕರಣದ ನ್ಯಾಯದಲ್ಲಿ ನೇರವಾಗಿ ಕೇಳಿಸದ ಕಾರಣ ಲೋಕತಃ ಅನ್ಯತ್ರಪ್ರಸಿದ್ಧಿಯನ್ನು ಆಶ್ರಯಿಸಿ ಆ ಕಾರಣದಿಂದ ಆದಿತ್ಯಶ್ರುತಿಯು ಅನ್ಯತ್ರಪ್ರಸಿದ್ಧವಾಗುತ್ತದೆ ಎಂದು ಹೇಳಬಹುದು. ಅಥವಾ ಸಂವತ್ಸರಸಾರತ್ವವೇ ಮೊದಲಾದ ಲಿಂಗಗಳ ಬಲದಿಂದ ಆದಿತ್ಯಶ್ರುತಿಯು ಅನ್ಯತ್ರಪ್ರಸಿದ್ಧವಾಗಿತ್ತು. ಆದರ ಸಾಹಿತ್ಯದಿಂದ ಸರ್ವಗತತ್ವಕ್ಕೆ ಅನ್ಯತ್ರಪ್ರಸಿದ್ಧತ್ವವನ್ನು ವಿವಕ್ಷಿಸಿದ್ದು ತಪ್ಪಾಗುವುದಿಲ್ಲ. ಆದರೆ ಪ್ರಕೃತ ಅಂತಹ ಅನ್ಯತ್ರಪ್ರಸಿದ್ಧವಾದ ಯಾವುದೇ ಶ್ರುತಿಗಳಿಲ್ಲದ ಕಾರಣ 'ಭೂಮಾ' ಎಂಬ ಶಬ್ದವನ್ನು ಅನ್ಯತ್ರಪ್ರಸಿದ್ಧವೆಂದು ವಿವಕ್ಷಿಸಲು ಸಾಧ್ಯವಿಲ್ಲ.

प्रकाशः – पूर्ववदिति ।। समाख्याश्रुतितौल्याभावस्यान्यत्रप्रसिद्धलक्षणानुप्रवेशादत्र च तत्तौल्यस्यैव वक्ष्यमाणदिशा सत्त्वेन वा स्वत एवान्यत्रप्रसिद्धत्वस्यान्यत्रप्रसिद्धलक्षणत्वादिह च तदभावस्योक्तत्वान्न लिङ्गसाहित्येन अन्तर्यामित्वमिवान्यत्रप्रसिद्धत्वं शङ्कनीयमिति निरसनीयमित्यर्थः ।

ಶರೀರತ್ವಾದಿ ಲಿಂಗಗಳ ಸಾಹಚರ್ಯದಿಂದ ಆಂತರ್ಯಾಮಿತ್ವವು ಹೇಗೆ ಅನ್ಯತ್ರಪ್ರಸಿದ್ಧವಾಗಿತ್ತೋ ಆದರಂತೆ ಉತ್ತಮತ್ವಾದಿ ಲಿಂಗಗಳ ಸಾಹಚರ್ಯದಿಂದ 'ಭೂಮಾ' ಎಂಬ ಶಬ್ದವು ಅನ್ಯತ್ರಪ್ರಸಿದ್ಧವಾಗಿದೆಯಲ್ಲವೇ? ಎಂದು ಪ್ರಶ್ನಿಸಬಾರದು. ಏಕೆಂದರೆ ಸಮಾಖ್ಯಾಶ್ರುತಿತೌಲ್ಯಾಭಾವವು

ಅನ್ಯತ್ರಪ್ರಸಿದ್ಧಶ್ರುತಿಲಕ್ಷಣದಲ್ಲಿ ಸೇರಿದೆ. ಸ್ವಕೃತ ಸಮಾಖ್ಯಾಶ್ರುತಿಯ ತೌಲ್ಯವೇ ಇಲ್ಲಿರುವುದರಿಂದ ಸಮಾಖ್ಯಾಶ್ರುತಿಯ ತೌಲ್ಯಾಭಾವವೆಂಬ ಅನ್ಯತ್ರಪ್ರಸಿದ್ಧದ ಲಕ್ಷಣವು ಬರುವುದಿಲ್ಲ. ಅಥವಾ ಸ್ವತಃ ಅನ್ಯತ್ರಪ್ರಸಿದ್ಧವಾದದ್ದನ್ನೇ ಅನ್ಯತ್ರಪ್ರಸಿದ್ಧದ ಲಕ್ಷಣ ಎಂದು ವಿವಕ್ಷಿಸಬೇಕೆಂದು ಹೇಳಲಾಗಿತ್ತು. ಪ್ರಕೃತ 'ಭೂಮಾ' ಎಂಬ ಶಬ್ದವು ಸ್ವಾಭಾವಿಕವಾಗಿ ಅನ್ಯತ್ರಪ್ರಸಿದ್ಧವಾಗಿರುವುದಿಲ್ಲ. ಆದ್ದರಿಂದ ಸ್ವತಃ ಏವ ಅನ್ಯತ್ರಪ್ರಸಿದ್ಧತ್ವವೆಂಬ ಮತ್ತೊಂದು ಬಗೆಯ ಅನ್ಯತ್ರಪ್ರಸಿದ್ಧಿಯ ಲಕ್ಷಣವೂ ಸಹ 'ಭೂಮಾ' ಎಂಬ ಶಬ್ದದಲ್ಲಿ ಬರುವುದಿಲ್ಲ. ಇದು 'ಪೂರ್ವವತ್' ಎಂಬ ವಾಕ್ಯದ ಅಭಿಪ್ರಾಯ.

ಪ್ರಕಾಶಃ – ''ಪ್ರಾಣೋ ವಾ ಆಶಾಯಾ ಭೂಯಾನ್'' ಇತ್ಯಾದಿಟೀಕೋಕ್ತೇರ್ವಿಶೇಷವಿವಕ್ಷಯಾ ಮೂಲಮಾಹ – ಉಭಯತ್ರೇತಿ ।

'ಪ್ರಾಣೋ ವಾ ಆಶಾಯಾ ಭೂಯಾನ್' ಇತ್ಯಾದಿಯಾಗಿ 'ಭೂಮಾ' ಎಂಬ ಶಬ್ದವು ಪ್ರಾಣ ಹಾಗೂ ವಿಷ್ಣು ಇಬ್ಬರಲ್ಲಿಯೂ ಸಾಧಾರಣವಾಗಿದೆಯೆಂದು ಹೇಳಿದ್ದಾರೆ. ಟೀಕೆಯ ಈ ಮಾತಿಗೆ ನ್ಯಾಯವಿವರಣವೇ ಮೂಲವಾಗಿದೆಯೆಂದು ಗ್ರಂಥಕಾರರು ತೋರಿಸುತ್ತಾ ನ್ಯಾಯವಿವರಣದಲ್ಲಿರುವ ವಿಶೇಷಾರ್ಥವನ್ನೂ ಸಹ ಪ್ರಕಟಪಡಿಸುತ್ತಿದ್ದಾರೆ. 'ಉಭಯತ್ರ' ಇತ್ಯಾದಿ ಗ್ರಂಥದಿಂದ.

ಪ್ರಕಾಶಃ – ನ್ಯಾಯವಿವರಣೇऽತ್ರ ಟೀಕಾಯಾಂ ಚ ''ತಸ್ಮಾದ್ಭೂಯಾನ್ನಾಮ'' ಇತ್ಯಂಶೋಕ್ತೇರುಪಯೋಗಮ್ ''ಆಸನ್ನಸ್ಯೋಪಕ್ರಮಸ್ಯಾನಾಸನ್ನಾಯಾಃ ಸಮಾಖ್ಯಾಯಾಶ್ಚ ಕಥಂ ಸಾಧಾರಣ್ಯಪ್ರತೀತಿರಿತ್ಯುತ್ಪತ್ತಿಮಿತಿ ಚ'' ಇತಿ ನ್ಯಾಯವಿವರಣಟೀಕಾಸ್ಥಶಙ್ಕಾತಾತ್ಪರ್ಯಾಭಿವ್ಯಕ್ತಿಪೂರ್ವಕಮಾಹ – ನನ್ವಿತ್ಯಾದಿನಾ ।।

ನ್ಯಾಯವಿವರಣದಲ್ಲಿ ಮತ್ತು ಪ್ರಕೃತ ಟೀಕೆಯಲ್ಲಿ 'ವಿಷ್ಣುರ್ವೈ ದೇವೇಭ್ಯೋ ಭೂಯಾನ್' ಎಂದಷ್ಟೇ ಹೇಳಿದ್ದರೆ ಸಾಕಾಗುತ್ತಿತ್ತು. 'ತಸ್ಮಾದ್ಭೂಯಾನ್ನಾಮ' ಎಂದೇಕೆ ಹೇಳಿದರು? ಎಂಬ ಪ್ರಶ್ನೆಗೆ ಪ್ರಯೋಜನವನ್ನು ಹೇಳುತ್ತಿದ್ದಾರೆ. ಅಭ್ಯಾಸ ಹಾಗೂ ಉಪಪತ್ತಿಗಳು ಸಮಾಖ್ಯಾಪ್ರಮಾಣದಲ್ಲಿ ಇರುತ್ತದೆಂದು ತಿಳಿಸುವುದಕ್ಕಾಗಿ 'ತಸ್ಮಾತ್' ಇತ್ಯಾದಿಯಾಗಿ ಹೇಳಿದ್ದಾರೆ. ಹೇಗೆಂಬುದನ್ನು 'ಆಸನ್ನಸ್ಯೋಪಕ್ರಮಸ್ಯಾನಾಸನ್ನಾಯಾಃ ಸಮಾಖ್ಯಾಯಾಶ್ಚ ಕಥಂ ಸಾಧಾರಣ್ಯಪ್ರತೀತಿರಿತ್ಯುತ್ಪತ್ತಿಮಿತಿ ಚ' ಇತ್ಯಾದಿ ನ್ಯಾಯವಿವರಣ ಟೀಕೆಯಲ್ಲಿ ಉಪಕ್ರಮವೇ ಒಂದು ಕಡೆ ಇದೆ. ಸಮಾಖ್ಯಾಪ್ರಮಾಣವೇ ಮತ್ತೊಂದು ಕಡೆಯಿದೆ. ಹೀಗೆ ಬೇರೆ ಬೇರೆ ಕಡೆ ಇರುವ ಉಪಕ್ರಮ ಹಾಗೂ ಸಮಾಖ್ಯಾಪ್ರಮಾಣಗಳಿಂದ ಸಾಧಾರಣ್ಯಪ್ರತೀತಿಯು ಹೇಗೆ ಬರುತ್ತದೆ? ಎಂಬ ನ್ಯಾಯವಿವರಣ ಟೀಕಾದಲ್ಲಿರುವ ಆಶಂಕೆಯ ತಾತ್ಪರ್ಯವನ್ನು ಸ್ಪಷ್ಟಪಡಿಸುವುದಕ್ಕಾಗಿ 'ನನು' ಇತ್ಯಾದಿ ಗ್ರಂಥವು ಹೊರಟಿದೆ.

ಪ್ರಕಾಶಃ – ಸಾಭ್ಯಾಸತ್ವಾದಿತಿ ।। 'ಭೂಯಾನ್' ಇತ್ಯಸ್ಯ ದ್ವಿಃಶ್ರವಣಾತ್ತಸ್ಮಾದ್ದೇವೇಭ್ಯೋ ಭೂಯಸ್ತ್ವಾದಿತ್ಯುಪಪತ್ತ್ಯುಕ್ತೇರಿತಿ ಭಾವಃ । ಅಸ್ಮಿನ್ಪಕ್ಷेऽज्ञानामित्येತನ್ನಾಪೇಕ್ಷ್ಯಮೇವೇತಿ ವಾ ಪೂರ್ವೋತ್ತರಪಕ್ಷನಿರ್ಣಾಯಕಾನಭಿಜ್ಞಾನಾಮಿತ್ಯರ್ಥಕಂ ವಾ ನೇಯಮ್ ।

प्रकाशः – स्वत इति ।। श्रुतिलिङ्गसाहित्यं विनेत्यर्थः । प्रकारान्तरेण जातामन्यत्रप्रसिद्धत्वशङ्कां ''प्राणो वा आशाया भूयान्'' इत्युक्तप्राणशब्दस्य ''अत एव प्राणः'' इत्युक्तरीत्या विष्णुपरत्वात्'' इत्यादिटीकासूचितपरिहारेण निराह – नापीति ।।

ಇಲ್ಲಿಯ ತನಕ ಒಂದು ಪ್ರಕಾರದಲ್ಲಿ ಸಿದ್ಧವಾದ ಅನ್ಯತ್ರಪ್ರಸಿದ್ಧತ್ವ ಶಂಕೆಯನ್ನು ನಿರಾಕರಿಸಿದರು. ಈಗ ಮತ್ತೊಂದು ಪ್ರಕಾರದಿಂದ ಅನ್ಯತ್ರಪ್ರಸಿದ್ಧತ್ವಶಂಕೆಯನ್ನು 'ಪ್ರಾಣೋ ವಾ ಆಶಾಯಾ ಭೂಯಾನ್' ಇತ್ಯುಕ್ತಪ್ರಾಣಶಬ್ದಸ್ಯ ''ಅತ ಏವ ಪ್ರಾಣಃ'' ಇತ್ಯುಕ್ತರೀತ್ಯಾ ವಿಷ್ಣುಪರತ್ವಾತ್' ಎಂದರೆ 'ಪ್ರಾಣೋ ವಾ ಆಶಾಯಾ ಭೂಯಾನ್' ಎಂಬಲ್ಲಿ ಹೇಳಲ್ಪಟ್ಟ ಪ್ರಾಣಶಬ್ದಕ್ಕೆ 'ಅತ ಏವ ಪ್ರಾಣಃ' ಎಂಬ ಸೂತ್ರದಲ್ಲಿ ಹೇಳಿದಂತೆ ವಿಷ್ಣುಪರತ್ವವಿರುವುದರಿಂದ' ಇತ್ಯಾದಿ ಟೀಕೆಯಿಂದ ಸೂಚಿತವಾದ ಪರಿಹಾರದಿಂದ ನಿರಾಕರಿಸುತ್ತಿದ್ದಾರೆ. 'ನಾಪಿ' ಇತ್ಯಾದಿ ವಾಕ್ಯದಿಂದ.

प्रकाशः – यथाऽऽदित्यश्रुतिसाहित्यात्सर्वगतत्वस्यान्यत्रप्रसिद्धत्वं तथेह न शङ्क्यम् । तत्रादित्यश्रुतेरन्तर्नये साक्षादश्रवणेन लोकतोऽन्यत्रप्रसिद्धयाश्रयेण वा संवत्सरसारत्वादिलिङ्गवशेनादित्यश्रुतेरन्यत्रप्रसिद्धत्वेन वा तत्साहित्येनान्यत्रप्रसिद्धेस्सर्वगतत्वस्योक्तावपि नेह तथेति भावेनोक्तं – ब्रह्मपरतामुपेत्येति ।

ಸರ್ವಗತತ್ವಾದಿಗಳಂತೆ 'ಭೂಮಾ' ಎಂಬ ಶಬ್ದವೂ ಸಹ ಅನ್ಯತ್ರಪ್ರಸಿದ್ಧವಾಗುತ್ತದೆಂದು ಶಂಕಿಸಬಾರದು. ಏಕೆಂದರೆ ಆಲ್ಲಿ ಆದಿತ್ಯಶ್ರುತಿಯ ಸಾಹಿತ್ಯದಿಂದ ಸರ್ವಗತತ್ವವು ಅನ್ಯತ್ರಪ್ರಸಿದ್ಧವಾಗಿತ್ತು. ಆದರೆ ಇಲ್ಲಿ ಆಂತಹ ಶ್ರುತಿಗಳು ಇರುವುದಿಲ್ಲ. ಆದಿತ್ಯಶ್ರುತಿಯು ಆಂತರಧಿಕರಣದ ನ್ಯಾಯದಲ್ಲಿ ನೇರವಾಗಿ ಕೇಳಿಸದ ಕಾರಣ ಲೋಕತಃ ಅನ್ಯತ್ರಪ್ರಸಿದ್ಧಿಯನ್ನು ಆಶ್ರಯಿಸಿ ಆ ಕಾರಣದಿಂದ ಆದಿತ್ಯಶ್ರುತಿಯು ಅನ್ಯತ್ರಪ್ರಸಿದ್ಧವಾಗುತ್ತದೆ ಎಂದು ಹೇಳಬಹುದು. ಅಥವಾ ಸಂವತ್ಸರಸಾರತ್ವವೇ ಮೊದಲಾದ ಲಿಂಗಗಳ ಬಲದಿಂದ ಆದಿತ್ಯಶ್ರುತಿಯು ಅನ್ಯತ್ರಪ್ರಸಿದ್ಧವಾಗಿತ್ತು. ಆದರ ಸಾಹಿತ್ಯದಿಂದ ಸರ್ವಗತತ್ವಕ್ಕೆ ಅನ್ಯತ್ರಪ್ರಸಿದ್ಧತ್ವವನ್ನು ವಿವಕ್ಷಿಸಿದ್ದು ತಪ್ಪಾಗುವುದಿಲ್ಲ. ಆದರೆ ಪ್ರಕೃತ ಅಂತಹ ಅನ್ಯತ್ರಪ್ರಸಿದ್ಧವಾದ ಯಾವುದೇ ಶ್ರುತಿಗಳಿಲ್ಲದ ಕಾರಣ 'ಭೂಮಾ' ಎಂಬ ಶಬ್ದವನ್ನು ಅನ್ಯತ್ರಪ್ರಸಿದ್ಧವೆಂದು ವಿವಕ್ಷಿಸಲು ಸಾಧ್ಯವಿಲ್ಲ.

प्रकाशः – पूर्ववदिति ।। समाख्याश्रुतितौल्याभावस्यान्यत्रप्रसिद्धलक्षणानुप्रवेशादत्र च तत्तौल्यस्यैव वक्ष्यमाणदिशा सत्त्वेन वा स्वत एवान्यत्रप्रसिद्धत्वस्यान्यत्रप्रसिद्धलक्षणत्वादिह च तदभावस्योक्तत्वान्न लिङ्गसाहित्येन अन्तर्यामित्वमिवान्यत्रप्रसिद्धत्वं शङ्कनीयमिति निरसनीयमित्यर्थः ।

ಶರೀರತ್ವಾದಿ ಲಿಂಗಗಳ ಸಾಹಚರ್ಯದಿಂದ ಆಂತರ್ಯಾಮಿತ್ವವು ಹೇಗೆ ಅನ್ಯತ್ರಪ್ರಸಿದ್ಧವಾಗಿತ್ತೋ ಅದರಂತೆ ಉತ್ಕ್ರಮಣಾದಿ ಲಿಂಗಗಳ ಸಾಹಚರ್ಯದಿಂದ 'ಭೂಮಾ' ಎಂಬ ಶಬ್ದವು ಅನ್ಯತ್ರಪ್ರಸಿದ್ಧವಾಗಿದೆಯಲ್ಲವೇ? ಎಂದು ಪ್ರಶ್ನಿಸಬಾರದು. ಏಕೆಂದರೆ ಸಮಾಖ್ಯಾಶ್ರುತಿತೌಲ್ಯಾಭಾವವು

ಅನ್ಯತ್ರಪ್ರಸಿದ್ಧಶ್ರುತಿಲಕ್ಷಣದಲ್ಲಿ ಸೇರಿದೆ. ಪ್ರಕೃತ ಸಮಾಖ್ಯಾಶ್ರುತಿಯ ತೌಲ್ಯವೇ ಇಲ್ಲಿರುವುದರಿಂದ ಸಮಾಖ್ಯಾಶ್ರುತಿಯ ತೌಲ್ಯಾಭಾವವೆಂಬ ಅನ್ಯತ್ರಪ್ರಸಿದ್ಧದ ಲಕ್ಷಣವು ಬರುವುದಿಲ್ಲ. ಅಥವಾ ಸ್ವತಃ ಅನ್ಯತ್ರಪ್ರಸಿದ್ಧವಾದದ್ದನ್ನೇ ಅನ್ಯತ್ರಪ್ರಸಿದ್ಧದ ಲಕ್ಷಣ ಎಂದು ವಿವಕ್ಷಿಸಬೇಕೆಂದು ಹೇಳಲಾಗಿತ್ತು. ಪ್ರಕೃತ 'ಭೂಮಾ' ಎಂಬ ಶಬ್ದವು ಸ್ವಾಭಾವಿಕವಾಗಿ ಅನ್ಯತ್ರಪ್ರಸಿದ್ಧವಾಗಿರುವುದಿಲ್ಲ. ಆದ್ದರಿಂದ ಸ್ವತಃ ಏವ ಅನ್ಯತ್ರಪ್ರಸಿದ್ಧತ್ವವೆಂಬ ಮತ್ತೊಂದು ಬಗೆಯ ಅನ್ಯತ್ರಪ್ರಸಿದ್ಧಿಯ ಲಕ್ಷಣವೂ ಸಹ 'ಭೂಮಾ' ಎಂಬ ಶಬ್ದದಲ್ಲಿ ಬರುವುದಿಲ್ಲ. ಇದು 'ಪೂರ್ವವತ್' ಎಂಬ ವಾಕ್ಯದ ಅಭಪ್ರಾಯ.

ಪ್ರಕಾಶಃ – ''ಪ್ರಾಣೋ ವಾ ಆಶಾಯಾ ಭೂಯಾನ್'' ಇತ್ಯಾದಿಟೀಕೋಕ್ತೆರ್ವಿಶೇಷವಿವಕ್ಷಯಾ ಮೂಲಮಾಹ – ಉಭಯತ್ರೇತಿ ।

'ಪ್ರಾಣೋ ವಾ ಆಶಾಯಾ ಭೂಯಾನ್' ಇತ್ಯಾದಿಯಾಗಿ 'ಭೂಮಾ' ಎಂಬ ಶಬ್ದವು ಪ್ರಾಣ ಹಾಗೂ ವಿಷ್ಣು ಇಬ್ಬರಲ್ಲಿಯೂ ಸಾಧಾರಣವಾಗಿದೆಯೆಂದು ಹೇಳಿದ್ದಾರೆ. ಟೀಕೆಯ ಈ ಮಾತಿಗೆ ನ್ಯಾಯವಿವರಣವೇ ಮೂಲವಾಗಿದೆಯೆಂದು ಗ್ರಂಥಕಾರರು ತೋರಿಸುತ್ತಾ ನ್ಯಾಯವಿವರಣದಲ್ಲಿರುವ ವಿಶೇಷಾರ್ಥವನ್ನೂ ಸಹ ಪ್ರಕಟಪಡಿಸುತ್ತಿದ್ದಾರೆ. 'ಉಭಯತ್ರ' ಇತ್ಯಾದಿ ಗ್ರಂಥದಿಂದ.

ಪ್ರಕಾಶಃ – ನ್ಯಾಯವಿವರಣೇऽತ್ರ ಟೀಕಾಯಾಂ ಚ ''ತಸ್ಮಾದ್ಭೂಯಾನ್ನಾಮ'' ಇತ್ಯಂಶೋಕ್ತೇರುಪಯೋಗಮ್ ''ಆಸನ್ನಸ್ಯೋಪಕ್ರಮಸ್ಯಾನಾಸನ್ನಾಯಾಃ ಸಮಾಖ್ಯಾಯಾಶ್ಚ ಕಥಂ ಸಾಧಾರಣ್ಯಪ್ರತೀತಿರಿತಿಹೇತುತ್ವಮಿತಿ ಚ'' ಇತಿ ನ್ಯಾಯವಿವರಣಟೀಕಾಸ್ಥಶಙ್ಕಾತಾತ್ಪರ್ಯಾಭಿವ್ಯಕ್ತಿಪೂರ್ವಕಮಾಹ – ನನ್ವಿತ್ಯಾದಿನಾ ।।

ನ್ಯಾಯವಿವರಣದಲ್ಲಿ ಮತ್ತು ಪ್ರಕೃತ ಟೀಕೆಯಲ್ಲಿ 'ವಿಷ್ಣುರ್ವೈ ದೇವೇಭ್ಯೋ ಭೂಯಾನ್' ಎಂದಷ್ಟೇ ಹೇಳಿದ್ದರೆ ಸಾಕಾಗುತ್ತಿತ್ತು. 'ತಸ್ಮಾದ್ಭೂಯಾನ್ನಾಮ' ಎಂದೇಕೆ ಹೇಳಿದರು? ಎಂಬ ಪ್ರಶ್ನೆಗೆ ಪ್ರಯೋಜನವನ್ನು ಹೇಳುತ್ತಿದ್ದಾರೆ. ಅಭ್ಯಾಸ ಹಾಗೂ ಉಪಪತ್ತಿಗಳು ಸಮಾಖ್ಯಾಪ್ರಮಾಣದಲ್ಲಿ ಇರುತ್ತದೆಂದು ತಿಳಿಸುವುದಕ್ಕಾಗಿ 'ತಸ್ಮಾತ್' ಇತ್ಯಾದಿಯಾಗಿ ಹೇಳಿದ್ದಾರೆ. ಹೇಗೆಂಬುದನ್ನು 'ಆಸನ್ನಸ್ಯೋಪಕ್ರಮಸ್ಯಾನಾಸನ್ನಾಯಾಃ ಸಮಾಖ್ಯಾಯಾಶ್ಚ ಕಥಂ ಸಾಧಾರಣ್ಯಪ್ರತೀತಿಹೇತುತ್ವಮಿತಿ ಚ' ಇತ್ಯಾದಿ ನ್ಯಾಯವಿವರಣ ಟೀಕೆಯಲ್ಲಿ ಉಪಕ್ರಮವೇ ಒಂದು ಕಡೆ ಇದೆ. ಸಮಾಖ್ಯಾಪ್ರಮಾಣವೇ ಮತ್ತೊಂದು ಕಡೆಯಿದೆ. ಹೀಗೆ ಬೇರೆ ಬೇರೆ ಕಡೆ ಇರುವ ಉಪಕ್ರಮ ಹಾಗೂ ಸಮಾಖ್ಯಾಪ್ರಮಾಣಗಳಿಂದ ಸಾಧಾರಣ್ಯಪ್ರತೀತಿಯು ಹೇಗೆ ಬರುತ್ತದೆ? ಎಂಬ ನ್ಯಾಯವಿವರಣ ಟೀಕಾದಲ್ಲಿರುವ ಆಶಂಕೆಯ ತಾತ್ಪರ್ಯವನ್ನು ಸ್ಪಷ್ಟಪಡಿಸುವುದಕ್ಕಾಗಿ 'ನನು' ಇತ್ಯಾದಿ ಗ್ರಂಥವು ಹೊರಟಿದೆ.

ಪ್ರಕಾಶಃ – ಸಾಭ್ಯಾಸತ್ವಾದಿತಿ ।। 'ಭೂಯಾನ್' ಇತ್ಯಸ್ಯ ದ್ವಿಃಶ್ರವಣಾತ್ತಸ್ಮಾದ್ದೇವೇಭ್ಯೋ ಭೂಯಸ್ತ್ವಾದಿತ್ಯುಪಪತ್ತ್ಯುಕ್ತೇರಿತಿ ಭಾವಃ । ಅಸ್ಮಿನ್ಪಕ್ಷेऽज्ञानामित್ಯೇತನ್ನಾಪೇಕ್ಷ್ಯಮೇವೇತಿ ವಾ ಪೂರ್ವೋತ್ತರಪಕ್ಷನಿರ್ಣಾಯಕಾನಭಿಜ್ಞಾನಾಮಿತ್ಯರ್ಥಕಂ ವಾ ನೇಯಮ್ ।

'ಸಾಭ್ಯಾಸತ್ವಾತ್' ಎಂದರೆ - 'ಭೂಯಾನ್' ಎಂಬುದಾಗಿ ಎರಡು ಬಾರಿ ಹೇಳಿದ್ದರಿಂದ ಆಭ್ಯಾಸ ರೂಪ ಪ್ರಮಾಣವನ್ನೂ, 'ದೇವೇಭ್ಯೋ ಭೂಯಸ್ತ್ವಾತ್' ಎಂಬುದಾಗಿ ಉಪಪತ್ತಿಯನ್ನೂ ಸಹ ಹೇಳಿದೆಯೆಂದು ತಿಳಿಯಬೇಕು. ಉಪ್ರಕಮವು ಆಸನ್ನವಾದ್ದರಿಂದ ಪ್ರಬಲವಾಗಿದೆ. ಸಮಾಖ್ಯಾಪ್ರಮಾಣವು ಉಪಪತ್ತಿ ಹಾಗೂ ಅಭ್ಯಾಸಗಳಿಂದ ಕೂಡಿದ್ದರಿಂದ ಪ್ರಬಲವಾಗಿದೆಯೆಂದು ಹೇಳಿದಂತಾಯಿತು. ಈ ಪಕ್ಷದಲ್ಲಿ 'ಅಜ್ಞಾನಾಮ್' ಎಂಬುದನ್ನು ವಿವಕ್ಷಿಸಬಾರದು. ಆಜ್ಞಾನಿಗಳ ದೃಷ್ಟಿಯಿಂದ ಎಂಬುದನ್ನು ಪರಿಗಣಿಸದೇ ಉಭಯಸಾಧಾರಣ್ಯವನ್ನು ತಿಳಿಯಬೇಕು. ಅಥವಾ ಪೂರ್ವಪಕ್ಷಸಾಧಕವಾದ ಹಾಗೂ ಸಿದ್ಧಾಂತ ಸಾಧಕವಾದ ಆಧಾರಗಳಿದ್ದರೂ ಸಹ ಯಾರು ಇವುಗಳ ಒಂದೂ ಪ್ರಾಬಲ್ಯ, ದೌರ್ಬಲ್ಯಗಳನ್ನು ತಿಳಿದಿರುವುದಿಲ್ಲವೋ, ಅಂತಹ ದೃಷ್ಟಿಯಿಂದ ಉಭಯಸಾಧಾರಣವಾಗಿದೆಯೆಂದು ಹೇಳುವುದಕ್ಕಾಗಿ 'ಅಜ್ಞಾನಾಮ್' ಎಂದಿದ್ದಾರೆಂದು ಭಾವಿಸಬೇಕು.

ಪ್ರಕಾಶಃ – अत एव टीकायामज्ञानामित्यस्यानुक्तिरिति भावः । इदानीं ''अज्ञानामित्युक्तत्वात्'' इति न्यायविवरणटीकां विवृण्वन्नज्ञानामित्यनुरोधेन समाध्यन्तरमाह – **यद्वोपक्रमेति ।।**

ಆದ್ದರಿಂದಲೇ ಟೀಕೆಯಲ್ಲಿ 'ಅಜ್ಞಾನಾಮ್' ಎಂಬುದಾಗಿ ಹೇಳಿಯೇ ಇಲ್ಲ.

ಪ್ರಕೃತ 'ಅಜ್ಞಾನಾಮಿತ್ಯುಕ್ತತ್ವಾತ್' ಎಂಬ ನ್ಯಾಯವಿರಣಟೀಕೆಯನ್ನು ವಿವರಿಸುವವರಾಗಿ 'ಅಜ್ಞಾನಾಂ' ಎಂಬುದನ್ನು ಕೂಡಿಸುವ ದೃಷ್ಟಿಯಿಂದ ಮತ್ತೊಂದು ಸಮಾಧಾನವನ್ನು 'ಯದ್ವಾ' ಇತ್ಯಾದಿ ಗ್ರಂಥದಿಂದ ಸಮರ್ಥಿಸುತ್ತಿದ್ದಾರೆ.

ಗುರುರಾಜೀಯಮ್ – ।। ॐ भूमा सम्प्रसादादध्युपदेशात् ॐ ।। **बहोर्लोप** इति ।। 'बहोर्भाव' इति विग्रहे 'पृथ्व्यादिभ्य इमनज्वा' इतीमनिच्प्रत्यये बहुशब्दोपरिकृते 'बहोर्लोपो भू च बहोः' इति सूत्रेण बहोरुत्तरेषामिमनिजादीनामि कारलोपे बहोः स्थाने 'भू' आदेशे च भूमेति रूपसिद्धिरिति भावः । नन्वन्यत्रप्रसिद्धशरीरित्वसाहित्यादन्तर्यामित्वमिव भूमशब्दस्याप्यन्यत्रप्रसिद्धप्राण-श्रुतिसाहित्यादन्यत्रप्रसिद्धत्वात्तस्योभयत्रप्रसिद्धसमन्वयप्रतिपादके पादेऽसङ्गतिरित्यत आह – **नापीति ।। पूर्ववदिति ।।** अन्यत्रप्रसिद्धजायमानत्वलिङ्गेन घुभ्वाद्यायतनत्व स्यान्यत्रप्रसिद्धत्वे शङ्किते तस्य येन प्रकारेणान्यत्रप्रसिद्धत्वं निराकृतं तेनैव प्रकारेणेत्यर्थः । स चेत्थम् । अन्यत्रप्रसिद्धसाहचर्येण परतोऽन्यत्रप्रसिद्धत्वव-न्यायविवरणोदाहृताभ्यः 'प्राणो वा आज्ञाया भूयान्' 'विष्णुर्वै देवेभ्यो भूयान्' इत्यादिश्रुतिभ्य उभयत्रप्रसिद्धसाहचर्यं विना स्वतः उभयत्रप्रसिद्धत्वस्य सत्वादिति वा अन्यत्रप्रसिद्धेत्यत्रप्रसिद्धान्यसाहित्यसापेक्षत्वादुभयत्रप्रसिद्धेश्च तन्निरपेक्षत्वा-

ನಿರಪೇಕ್ಷಾದರಾದ್ಧಾ ಸಮಾಖ್ಯಾಶ್ರುತ್ಯಾದಿತೌಲ್ಯಾಭಾವಸ್ಯಾಪ್ಯನ್ಯತ್ರಪ್ರಸಿದ್ಧಲಕ್ಷಣಾನ್ತರ್ಗತತ್ವಾತ್ ತಸ್ಯ ಚ ಪ್ರಕೃತೇऽಸತ್ವೇನಾನ್ತರ್ಯಾಮಿತ್ವೇ ಸತ್ತ್ವಾತ್ತ- ಸ್ಯಾನ್ಯತ್ರಪ್ರಸಿದ್ಧತೇತಿ ವಾ ಸರ್ವಗತತ್ವಾದೀನಾಂ ಬ್ರಹ್ಮಣ್ಯಯುಕ್ತತ್ವಾದೇವಾನ್ಯತ್ರಪ್ರಸಿದ್ಧತೇತಿ ವಾ ಪೂರ್ವವದಿತ್ಯರ್ಥಃ । ನನು ತಥಾऽಪಿ ನೋಭಯತ್ರಪ್ರಸಿದ್ಧತಾ । ಅಭ್ಯಾಸೋಪಪತ್ತಿಸಹಿತಸಮಾಖ್ಯಾಯಾ-ಸ್ಸಕಾಶಾದುಪಕ್ರಮಮಾತ್ರಸ್ಯ ದುರ್ಬಲತ್ವಾದಿತ್ಯರುಚ್ಯಾ ಪಕ್ಷಾನ್ತರಮಾಹ – ಯದ್ವೇತಿ ।।

ಸಾರ

'ಭೂಮಾ' ಎಂಬ ನಾಮಾತ್ಮಕ ಶಬ್ದವನ್ನು ಈ ಅಧಿಕರಣದಲ್ಲಿ ಸಮನ್ವಯ ಮಾಡುತ್ತಿದ್ದಾರೆ. 'ಪ್ರಾಣೋ ವಾ ಆಶಾಯಾ ಭೂಯಾನ್' ಎಂಬುದಾಗಿ ಛಾಂದೋಗ್ಯದಲ್ಲಿ ಪ್ರಾಣನನ್ನು 'ಭೂಮಾ' ಎನ್ನಲಾಗಿದೆ. 'ವಿಷ್ಣುರ್ವೈ ದೇವೇಭ್ಯೋ ಭೂಯಾನ್' ಎಂಬುದಾಗಿ ವಿಷ್ಣುವನ್ನೂ ಸಹ 'ಭೂಮಾ' ಎನ್ನಲಾಗಿದೆ. ಆದ್ದರಿಂದ ಪ್ರಾಣ ಹಾಗೂ ವಿಷ್ಣು ಇಬ್ಬರಲ್ಲಿಯೂ ಪ್ರಸಿದ್ಧವಾದ 'ಭೂಮಾ' ಎಂಬ ಶಬ್ದವು ಉಭಯತ್ರಪ್ರಸಿದ್ಧವಾಯಿತು.

ವಸ್ತುತಃ 'ಬಹು' ಎಂಬ ಶಬ್ದದ ಮೇಲೆ 'ಇಮನಿಚ್' ಪ್ರತ್ಯಯ ಹಾಗೂ ಭೂ ಆದೇಶಗಳು ಬಂದು 'ಭೂಮಾ' ಎಂಬ ಶಬ್ದವು ನಿಷ್ಪನ್ನವಾಗಿದೆ. ಆದ್ದರಿಂದ ಸಂಖ್ಯಾವಾಚಕವಾದ 'ಭೂಮಾ' ಎಂಬ ಶಬ್ದವು ಧರ್ಮವಾಚಕವಾಗುವುದರಿಂದ ಲಿಂಗಾತ್ಮಕವಾಗಿದೆಯೆಂದೆನಿಸುತ್ತದೆ. ಆದರೆ 'ಯೋ ವೈ ಭೂಮಾ ತದಮೃತಮ್' ಇತ್ಯಾದಿಯಾಗಿ ಶ್ರೇಷ್ಠನೆಂಬರ್ಥದಲ್ಲಿ ಉಪನಿಷತ್ತು 'ಭೂಮಾ' ಶಬ್ದವನ್ನು ಪ್ರಯೋಗ ಮಾಡುತ್ತಿದೆ. ಮತ್ತು 'ವಾಗ್ವಾವ ನಾಮ್ನೋ ಭೂಯಸೀ' ಇತ್ಯಾದಿ ಸ್ಥಳಗಳಲ್ಲಿ ಕೇಳಿಸುತ್ತಿರುವ 'ಭೂಮಾ' ಎಂಬ ಶಬ್ದಕ್ಕೆ ಸಮಾನಾರ್ಥಕವಾದ 'ಭೂಯಸ್' ಶಬ್ದವನ್ನು ಸಂಖ್ಯಾದ್ಯರ್ಥದಲ್ಲಿ ವಿವಕ್ಷಿಸಲು ಸಾಧ್ಯವಿಲ್ಲ. ಆದ್ದರಿಂದ ಶ್ರೇಷ್ಠನೆಂಬ ಧರ್ಮವಾಚಕತ್ವವನ್ನೇ 'ಭೂಮಾ' ಎಂಬ ಶಬ್ದಕ್ಕೆ ಒಪ್ಪಬೇಕು.

ಇಂತಹ 'ಭೂಮಾ' ಎಂಬ ಶಬ್ದವು ಉಭಯತ್ರಪ್ರಸಿದ್ಧವಾಗಿದೆ. 'ಪ್ರಾಣೋ ವಾ ಆಶಾಯಾ ಭೂಯಾನ್' ಎಂಬ ಛಾಂದೋಗ್ಯೋಪನಿಷತ್ತಿನ ಉಪಕ್ರಮದಲ್ಲಿ ಪ್ರಾಣನಲ್ಲಿ ಪ್ರಸಿದ್ಧವಾದ 'ಭೂಮಾ' ಎಂಬ ಶಬ್ದವು 'ವಿಷ್ಣುರ್ವೈ ದೇವೇಭ್ಯೋ ಭೂಯಾನ್' ಎಂಬ ಸಮಾಖ್ಯಾಪ್ರಮಾಣದಲ್ಲಿ ವಿಷ್ಣುವಿನಲ್ಲಿಯೂ ಪ್ರಸಿದ್ಧವಾಗಿದೆ. ಉಪಕ್ರಮ ಪ್ರಮಾಣಕ್ಕಿಂತ ಸಮಾಖ್ಯಾಪ್ರಮಾಣವು ದುರ್ಬಲವಾಗಿದ್ದರೂ ಕೂಡ ಇಲ್ಲಿರುವ ಸಮಾಖ್ಯಾಪ್ರಮಾಣವು ಅಭ್ಯಾಸ ಹಾಗೂ ಉಪಪತ್ತಿಗಳಿಂದ ಸಹಿತವಾಗಿದೆ. ಆದ್ದರಿಂದ ಉಪಕ್ರಮದಿಂದ ಸಮಾನಬಲವುಳ್ಳದ್ದೇ ಆಗಿದೆ. ಹೀಗೆ ಸಮಬಲವಾದ ಉಪಕ್ರಮ ಹಾಗೂ ಸಮಾಖ್ಯಾಪ್ರಮಾಣಗಳು ಪ್ರಾಣ ಹಾಗೂ ವಿಷ್ಣುವಿನಲ್ಲಿ 'ಭೂಮಾ' ಶಬ್ದವನ್ನು ಪ್ರಯೋಗಿಸುತ್ತಿರುವ ಕಾರಣ ಉಭಯತ್ರಪ್ರಸಿದ್ಧವಾಗಿದೆಯೆಂದು ತಿಳಿಯಬೇಕು. ಅಥವಾ ಉಪಕ್ರಮ ಹಾಗೂ ಸಮಾಖ್ಯಾಪ್ರಮಾಣಗಳಲ್ಲಿ ಯಾರಿಗೆ ಪ್ರಾಬಲ್ಯ ಹಾಗೂ ದೌರ್ಬಲ್ಯ ವಿಚಾರವು ಬಂದಿರುವುದಿಲ್ಲವೋ, ಅಂತಹ ವ್ಯಕ್ತಿಯ ವಿಷಯದಲ್ಲಿ 'ಭೂಮಾ' ಎಂಬ ಶಬ್ದವು ಉಭಯಸಾಧಾರಣವಾಗಿದೆಯೆಂದು ತಿಳಿಯಬಹುದು.

तात्पर्यचन्द्रिका

यद्वा विष्णौ प्राणशब्दसमन्वयस्योक्तत्वेनोपक्रमस्य सम्भावितावकाशत्वात् समाख्यास्थविष्णुशब्दस्य च प्राणे तदनुक्तेस्तयोस्तुल्यबलत्वम् ।

ಅನುವಾದ - ಪ್ರಾಣವಿಷಯಕವಾದ ಉಪಕ್ರಮಪ್ರಮಾಣ, ವಿಷ್ಣುವಿಷಯಕವಾದ ಸಮಾಖ್ಯಾಪ್ರಮಾಣಗಳೆರಡೂ ಸಮಾನಬಲವಾಗಿವೆಯೆಂದು ಮತ್ತೊಂದು ರೀತಿಯಲ್ಲಿ ಹೀಗೆ ತಿಳಿಯಬೇಕು. ಪ್ರಾಣಾಧಿಕರಣದಲ್ಲಿ ಪ್ರಾಣಶಬ್ದವನ್ನು ವಿಷ್ಣುವಿನಲ್ಲಿ ಸಮನ್ವಯ ಮಾಡಿರುವುದರಿಂದ 'ಪ್ರಾಣೋ ವಾ ಆಶಾಯಾ ಭೂಯಾನ್' ಎಂಬ ಉಪಕ್ರಮದಲ್ಲಿ ಕೇಳಿಸುತ್ತಿರುವ ಪ್ರಾಣಶಬ್ದವೂ ಸಹ ವಿಷ್ಣುವಿನಲ್ಲಿ ಅವಕಾಶವನ್ನು ಹೊಂದಿರಬಹುದೆಂಬ ಸಂಭಾವನೆಯು ಬರುತ್ತದೆ. ಆದರೆ ಸಮಾಖ್ಯಾಪ್ರಮಾಣದಲ್ಲಿರುವ ವಿಷ್ಣುಶಬ್ದವನ್ನು ಪ್ರಾಣನಲ್ಲಿ ಸಮನ್ವಯ ಹೇಳದ ಕಾರಣ ವಿಷ್ಣುವನ್ನು ಬಿಟ್ಟು ಬೇರೆ ಕಡೆ ಅವಕಾಶ ಹೊಂದಲು ಸಾಧ್ಯವೇ ಇಲ್ಲ. ಹೀಗೆ ಎರಡೂ ಸಹ ಸಮಾನ ಬಲವುಳ್ಳವುಗಳಾಗುತ್ತವೆ. ಆಂದರೆ ಸಮಾಖ್ಯಾಪ್ರಮಾಣಕ್ಕಿಂತ ಉಪಕ್ರಮಪ್ರಮಾಣವು ಪ್ರಬಲವಾಗಿದ್ದರೂ ಪ್ರಾಣಶಬ್ದವು ವಿಷ್ಣುವಿನಲ್ಲಿ ಅವಕಾಶ ಹೊಂದಿರಬಹುದೆಂಬ ಸಂಭಾವನೆಯಿರುವುದರಿಂದ ಸ್ವಲ್ಪ ದುರ್ಬಲವಾಗಿದೆ. ವಿಷ್ಣುಶಬ್ದವು ನಿರವಕಾಶವಾದ ಪ್ರಯುಕ್ತ ಪ್ರಬಲವೇ ಆಗಿದೆ. ಹೀಗೆ ಸಮಾನ ಬಲವನ್ನು ತಿಳಿದು 'ಭೂಮಾ' ಎಂಬ ಶಬ್ದವು ಉಭಯಸಾಧಾರಣವಾಗಿದೆಯೆಂದು ಪೂರ್ವಪಕ್ಷ ಮಾಡಬಹುದು.

'अज्ञानाम्' इत्युक्तिस्तु सिद्धान्तन्यायाननुसन्धानाभिप्राया ।

ಹಾಗಾದರೆ ನ್ಯಾಯವಿವರಣದಲ್ಲಿ 'ಅಜ್ಞಾನಾಮ್' ಎಂದೇಕೆ ಹೇಳಿದ್ದಾರೆ? ಎಂದರೆ ಯಾರಿಗೆ ಪ್ರಾಣ ಶಬ್ದವು ವಿಷ್ಣುವಿನಲ್ಲಿ ಸಮನ್ವಯವಾಗುತ್ತದೆಂಬ ಸಿದ್ಧಾಂತ ನ್ಯಾಯದ ಅನುಸಂಧಾನವಿರುವುದಿಲ್ಲವೋ ಅಂತಹವನನ್ನು ಕುರಿತು 'ಅಜ್ಞಾನಾಮ್' ಎಂದು ಹೇಳಿರುತ್ತಾರೆ.

यद्यपि विष्णुपक्ष इव प्राणपक्षेऽपि ''प्राणो वाव सर्वेभ्यो भूयान्'' इति समाख्याऽस्ति ।

ಪ್ರಶ್ನೆ - ವಿಷ್ಣು ವಿಷಯದಲ್ಲಿ ಹೇಗೆ ಸಮಾಖ್ಯಾಪ್ರಮಾಣವಿದೆಯೋ, ಆದರಂತೆ ಪ್ರಾಣವಿಷಯದಲ್ಲಿಯೂ ಸಹ 'ಪ್ರಾಣೋ ವಾವ ಸರ್ವೇಭ್ಯೋ ಭೂಯಾನ್' ಎಂಬುದಾಗಿ ಸಮಾಖ್ಯಾಪ್ರಮಾಣವಿದೆ. ಇದನ್ನು ಬಿಟ್ಟು ಉಪಕ್ರಮ ಪ್ರಮಾಣವನ್ನೇಕೆ ಹೇಳಿದಿರಿ? ಹೀಗೆ

ಸಮಾಖ್ಯಾಪ್ರಮಾಣವನ್ನು ಇಬ್ಬರಲ್ಲಿಯೂ ಹೇಳಿದಾಗ ಸಮಾನ ಬಲವನ್ನು ಮತ್ತು ಉಭಯಸಾಧಾರಣ್ಯವನ್ನು ಸುಲಭವಾಗಿ ಉಪಪಾದಿಸಬಹುದಲ್ಲವೇ?

तथाऽपि तस्या उपासकेषु प्राणस्य भूयस्त्वपरत्वेन सर्वेभ्यो भूयस्त्वपरत्वाभावात् प्राणप्रापकोपक्रमे सति समाख्याया अनादरणीयत्वाच्च न तया साधारण्यमुक्तम् ।

ಉತ್ತರ - ಪ್ರಾಣವಿಷಯದಲ್ಲಿ ಸಮಾಖ್ಯಾಪ್ರಮಾಣವನ್ನು ತಿಳಿಯುವುದು ಕಷ್ಟ. ಏಕೆಂದರೆ 'ಪ್ರಾಣೋ ವಾವ ಸರ್ವೆಭ್ಯೋ ಭೂಯಾನ್' ಎಂಬ ವಾಕ್ಯವು ಉಪಾಸಕರಿಗಿಂತ ಪ್ರಾಣನು ಉತ್ತಮನಾಗಿದ್ದಾನೆಂದಷ್ಟೇ ಹೇಳುತ್ತಿದೆ ಹೊರತು, ಸಕಲ ದೇವತೆಗಳಿಂದ ಉತ್ತಮನಾಗಿದ್ದಾನೆಂದು ಹೇಳುತ್ತಿಲ್ಲ. ಮತ್ತು ಪ್ರಾಣವಿಷಯದಲ್ಲಿ ಬಲಿಷ್ಠವಾದ ಉಪಕ್ರಮ ಪ್ರಮಾಣವೇ ಇರುವಾಗ ಸಮಾಖ್ಯಾಪ್ರಮಾಣವನ್ನು ಹೇಳಬಾರದು. ಈ ದೃಷ್ಟಿಯಿಂದ ಸಮಾಖ್ಯಾಪ್ರಮಾಣದಿಂದ ಉಭಯಸಾಧಾರಣ್ಯವನ್ನು ಹೇಳಿರುವುದಿಲ್ಲ.

द्युभ्वाद्यधिकरणे तु रुद्रादिप्रापकोपक्रमाभावात्समाख्यया तदुक्तिः ।

ಹಾಗಾದರೆ ದ್ಯುಭ್ವಾದ್ಯಧಿಕರಣದಲ್ಲಿಯೂ ಸಮಾಖ್ಯಾಪ್ರಮಾಣವನ್ನು ಹೇಳದೇ ಉಪಕ್ರಮ ಪ್ರಮಾಣವನ್ನೇ ಹೇಳಬಹುದಿತ್ತಲ್ಲವೇ? ಎಂದರೆ ಅಲ್ಲಿ ರುದ್ರಾದಿಗಳ ವಿಷಯದಲ್ಲಿ ಯಾವುದೇ ಉಪಕ್ರಮ ಪ್ರಮಾಣವು ಇರಲಿಲ್ಲ. ಅನಿವಾರ್ಯವಾಗಿ ಸಮಾಖ್ಯಾಪ್ರಮಾಣವನ್ನು ಹೇಳಬೇಕಾಗಿತ್ತು. ಇದಕ್ಕೋಸ್ಕರ ಉಪಕ್ರಮ ಪ್ರಮಾಣವನ್ನು ಹೇಳದೇ ಸಮಾಖ್ಯಾಪ್ರಮಾಣವನ್ನೇ ಹೇಳಿರುತ್ತಾರೆ. ಆದರೆ ಪ್ರಕೃತ ಬಲಿಷ್ಠವಾದ ಉಪಕ್ರಮ ಪ್ರಮಾಣವಿರಬೇಕಾದರೆ ಸಮಾಖ್ಯಾಪ್ರಮಾಣವನ್ನು ಹೇಳುವ ಅವಶ್ಯಕತೆಯಿಲ್ಲ.

यद्यपि ''सर्वत्रप्रसिद्ध'' इत्यादावपि ''तस्यैतस्यासावादित्यो रसः'' इत्युपक्रम आदित्यश्रुतिरस्ति ।

ಪ್ರಶ್ನೆ - 'ಸರ್ವತ್ರಪ್ರಸಿದ್ಧೋಪದೇಶಾತ್' ಎಂಬಲ್ಲಿಯೂ 'ತಸ್ಯೈತಸ್ಯಾಸಾವಾದಿತ್ಯೋ ರಸಃ' ಎಂಬುದಾಗಿ ಆದಿತ್ಯನಲ್ಲಿ ಶ್ರುತಿರೂಪ ಉಪಕ್ರಮ ಪ್ರಮಾಣವಿದೆ. ವಿಷ್ಣುವಿನಲ್ಲಿ 'ಅಂತಬರ್ಹಿಶ್ಚ ತತ್ಸರ್ವಮ್' ಇತ್ಯಾದಿಯಾಗಿ ಸಮಾಖ್ಯಾಪ್ರಮಾಣವಿದೆ. ಈ ಉಪಕ್ರಮ ಹಾಗೂ ಸಮಾಖ್ಯಾಪ್ರಮಾಣಗಳ ಆಧಾರದಿಂದ ಸರ್ವಗತತ್ವದರ್ಮವನ್ನೂ ಸಹ ಉಭಯತ್ರಪ್ರಸಿದ್ಧವೆಂದೇ ಹೇಳಿರಿ. ಒಂದು ವೇಳೆ ಅದನ್ನು ಅನ್ಯತ್ರಪ್ರಸಿದ್ಧವೆನ್ನುವುದಾದರೆ ಪ್ರಕೃತ 'ಭೂಮಾ' ಎಂಬ ಶಬ್ದವನ್ನು ಉಭಯತ್ರಪ್ರಸಿದ್ಧವೆಂದು ಹೇಗೆ ಪರಿಗಣಿಸುತ್ತೀರಿ?

तथाऽपि ब्रह्मणस्सर्वभूतगतत्वरूपाल्पौकस्त्वस्य पूर्वपक्षिणा काप्यनङ्गीकारेण ब्रह्मणि समाख्याया अभावात्तस्यान्यत्रप्रसिद्धता ।

ಉತ್ತರ - ಸರ್ವಗತತ್ವಾಧಿಕರಣಕ್ಕೂ ಈ ಅಧಿಕರಣಕ್ಕೂ ಬಹಳಷ್ಟು ವ್ಯತ್ಯಾಸವಿದೆ. ಸರ್ವಭೂತಗತತ್ವರೂಪವಾದ ಅಲ್ಪಸ್ಥಾನಸ್ಥಿತತ್ವವನ್ನು ಪೂರ್ವಪಕ್ಷಿಯು ಬ್ರಹ್ಮನಿಗೆ ಎಲ್ಲಿಯೂ ಒಪ್ಪಿರುವುದಿಲ್ಲ. ಯಾವುದೇ ಸಮಾಖ್ಯಾಪ್ರಮಾಣವನ್ನು ಹೇಳಿದರೂ ಅದು ವಿಷ್ಣುವಿಷಯಕವೆಂದು ಪೂರ್ವಪಕ್ಷಿಯು ಹೇಳುವುದೇ ಇಲ್ಲ. ಹೀಗಿರುವಾಗ ವಿಷ್ಣುವಿನಲ್ಲಿ ಸಮಾಖ್ಯಾಪ್ರಮಾಣವಿದೆಯೆಂದು ಹೇಳಲು ಹೇಗೆ ಸಾಧ್ಯ ? ಆದ್ದರಿಂದ ಸರ್ವಗತತ್ವವನ್ನು ಅನ್ಯತ್ರಪ್ರಸಿದ್ಧವೆಂದು ಪರಿಗಣಿಸಿದ್ದಾರೆ.

इह तु समाख्याश्रुतौ विष्णोर्भूयस्त्वेऽपि न विषयवाक्ये स भूमेति पूर्वपक्षः ।

ಆದರೆ ಈ ಪಾದದಲ್ಲಿರುವ ಎಲ್ಲಾ ಅಧಿಕರಣಗಳಲ್ಲಿಯೂ ಅನೇಕ ಸಮಾಖ್ಯಾಶ್ರುತಿಗಳನ್ನು ವಿಷ್ಣುವಿಷಯಕವೆಂದು ಪೂರ್ವಪಕ್ಷಿಯು ಒಪ್ಪುತ್ತಾನೆ. ಹಾಗೆ ಒಪ್ಪಿದರೂ ವಿಷಯವಾಕ್ಯದಲ್ಲಿರುವ 'ಭೂಮಾ' ಎಂಬ ಶಬ್ದಗಳನ್ನು ವಿಷ್ಣುವಿಷಯಕವೆಂದು ಒಪ್ಪುವುದಿಲ್ಲ. ಆದ್ದರಿಂದ ಸಮಾಖ್ಯಾಶ್ರುತಿ ಹಾಗೂ ಉಪಕ್ರಮ ಪ್ರಮಾಣಗಳ ಆಧಾರದಿಂದ 'ಭೂಮಾ' ಮೊದಲಾದ ಶಬ್ದಗಳನ್ನು ಉಭಯತ್ರಪ್ರಸಿದ್ಧವೆನ್ನಬಹುದು.

अत एवात्र टीकायां ''नच विष्णोरपि भूमत्वस्य श्रुत्यन्तरे प्रसिद्धत्वादत्र वाच्यत्वमिति वाच्यम् । उपक्रमात् समाख्याया दुर्बलत्वात्'' इति ग्रन्थे समाख्या विष्णुपरेत्यङ्गीकृत्य पूर्वपक्षितम् ।

ಆದ್ದರಿಂದಲೇ ಈ ಅಧಿಕರಣದ ಟೀಕೆಯಲ್ಲಿ 'नच विष्णोरपि भूमत्वस्य श्रुत्यन्तरे प्रसिद्धत्वादत्र वाच्यत्वमिति वाच्यम् । उपक्रमात् समाख्याया दुर्बलत्वात्' 'ವಿಷ್ಣುವಿನಲ್ಲಿಯೂ ಶ್ರುತ್ಯಂತರದಿಂದ ಭೂಮತ್ವವು ಪ್ರಸಿದ್ಧವಾಗಿದೆ. ಆದ್ದರಿಂದ ಅವನೇ ಈ ಪ್ರಕರಣದಲ್ಲಿ ಪ್ರತಿಪಾದ್ಯನೆನ್ನಬಹುದಲ್ಲವೇ? ಎಂದು ಪ್ರಶ್ನಿಸಬಾರದು. ಉಪಕ್ರಮಕ್ಕಿಂತ ಸಮಾಖ್ಯಾಪ್ರಮಾಣವು ದುರ್ಬಲವಾಗಿದೆ' ಇತ್ಯಾದಿ ಗ್ರಂಥದಲ್ಲಿ ಸಮಾಖ್ಯಾಪ್ರಮಾಣವನ್ನು ವಿಷ್ಣುಪರವೆಂದು ಒಪ್ಪಿಯೇ ಪೂರ್ವಪಕ್ಷ ಮಾಡಿದ್ದಾರೆ.

टीकायां ''वायोरेव भूमत्वाद्'' इत्यवधारणं तु विषयवाक्ये वायोरेव भूमत्वाभिप्रायम् ।

ಹಾಗಾದರೆ ಟೀಕೆಯಲ್ಲಿ 'ವಾಯೋರೇವ ಭೂಮತ್ವಾತ್' ವಾಯುದೇವನೇ ಭೂಮನಾಗಿದ್ದಾನೆಂಬ ಅವಧಾರಣವನ್ನೇಕೆ ಮಾಡಿದ್ದಾರೆಂದರೆ, ವಿಷಯವಾಕ್ಯದಲ್ಲಿ ವಾಯುವೇ ಭೂಮನಾಗಿದ್ದಾನೆಂಬ ಅಭಿಪ್ರಾಯದಿಂದ. ಈ ಊರಿನಲ್ಲಿ ಇವನೇ ಪಂಡಿತನೆಂದು ಹೇಳುವಂತೆ ವಿಷಯವಾಕ್ಯದಲ್ಲಷ್ಟೇ ವಾಯು ಭೂಮನೆಂದು ಪ್ರತಿಪಾದ್ಯನಾಗಿದ್ದಾನೆ.

अत्र प्राणश्रुतिर्विष्णुपरा चेत्तत्रापि विष्णुश्रुतिः प्राणपरा स्यादित्यभिप्रायं वा ।

ಅಥವಾ ಪ್ರಾಣಶ್ರುತಿಯನ್ನು ವಿಷ್ಣುಪರವೆಂದು ಸಿದ್ಧಾಂತಿಗಳು ಹೇಳುವುದಾದರೆ ವಿಷ್ಣುಶ್ರುತಿಯೂ ಸಹ ಏಕೆ ಪ್ರಾಣ ಪರವಾಗಬಾರದು? ಎಂಬ ಅಭಿಪ್ರಾಯದಿಂದಲೂ 'ವಾಯೋರೇವ ಭೂಮತ್ವಾತ್' ಎಂಬ ಅವಧಾರಣವು ಯುಕ್ತವಾಗುತ್ತದೆ.

टीकोक्त आनन्दमयाक्षेपस्तु समाख्याश्रुतौ विष्णोर्भूयस्त्वेऽपि पूर्णानन्दत्वस्य ''यो वै भूमा तत्सुखं भूमैव सुखं नाल्पे सुखमस्ति'' इति भूमरूपवायोरन्यत्र निषेधादानन्दमयश्रुतेश्च वायुपरत्वे तदयोगाद्युक्तः ।

ಸಮಾಖ್ಯಾಪ್ರಮಾಣವು ವಿಷ್ಣುವಿಷಯದಲ್ಲಿದೆ ಎಂದು ಪೂರ್ವಪಕ್ಷಿಯು ಹೇಳುವುದಾದರೆ ಆನಂದಮಯತ್ವವನ್ನು ಹೇಗೆ ಆಕ್ಷೇಪಿಸುವುದು ? ಎಂಬ ಪ್ರಶ್ನೆಗೆ ಹೀಗೆ ಉತ್ತರಿಸಬೇಕು. ಸಮಾಖ್ಯಾಶ್ರುತಿಯು ವಿಷ್ಣುವನ್ನು 'ಭೂಮಾ' ಎನ್ನುತ್ತಿದೆಯೆಂದು ಪೂರ್ವಪಕ್ಷಿಯು ಹೇಳುವುದಾದರೂ ಸಹ ಆ ಸಮಾಖ್ಯಾಶ್ರುತಿಯಲ್ಲಿ ಆನಂದಮಯತ್ವವು ಕೇಳಿಸುತ್ತಿಲ್ಲ. ಹೊರತಾಗಿ ಯಾವ ಉಪಕ್ರಮ ಪ್ರಮಾಣವು ಪ್ರಾಣನನ್ನು ಭೂಮನೆನ್ನುತ್ತಿದೆಯೋ ಅಂತಹ ಭೂಮನನ್ನೇ ಆನಂದಮಯನೆಂದು ''ಯೋ ವೈ ಭೂಮಾ ತತ್ಸುಖಂ ಭೂಮೈವ ಸುಖಂ ನಾಲ್ಪೇ ಸುಖಮಸ್ತಿ'' ಇತ್ಯಾದಿಯಾಗಿ ಛಾಂದೋಗ್ಯವು ಹೇಳುತ್ತಿದೆ. ಭೂಮನಾದ ವಾಯುವೇ ಆನಂದಮಯನೆಂದ ಮೇಲೆ ವಿಷ್ಣುವನ್ನು ಪುನಃ ಆನಂದಮಯನೆಂದು ಹೇಳಲಾಗದು. ಒಂದು ವೇಳೆ ಆನಂದಮಯ ಶ್ರುತಿಯು ವಾಯುಪರವಾಗದಿದ್ದರೆ 'ಯೋ ವೈ ಭೂಮಾ' ಎಂಬ ಶ್ರುತಿಯ ವಿರೋಧ ಬರುತ್ತದೆ. ಆದ್ದರಿಂದ ವಿಷ್ಣುವಿನಲ್ಲಿ ಆನಂದಮಯತ್ವವು ಉಪಪನ್ನವಾಗುವುದಿಲ್ಲವೆಂದು ಆಕ್ಷೇಪ ಮಾಡಬಹುದು.

तस्माद्भूमशब्दस्य साधारण्याद् युक्ता पादसङ्गतिः ।

ಆದ್ದರಿಂದ 'ಭೂಮಾ' ಎಂಬ ಶಬ್ದವು ವಿಷ್ಣು ಹಾಗೂ ವಾಯು ಇಬ್ಬರಲ್ಲಿಯೂ ಸಾಧಾರಣವಾಗಿದೆ. ಆದ್ದರಿಂದಲೇ ಉಭಯತ್ರಪ್ರಸಿದ್ಧವಾಗುತ್ತದೆ. ಆದ್ದರಿಂದಲೇ ತೃತೀಯ ಪಾದದಲ್ಲಿ 'ಭೂಮಾ' ಶಬ್ದದ ಸಮನ್ವಯವು ಸಂಗತವಾಗುತ್ತದೆ.

ಪ್ರಕಾಶಃ –

''ಪ್ರಾಣಶಬ್ದಸ್ಯಾತ ಏವ ಪ್ರಾಣ ಇತ್ಯುಕ್ತರೀತ್ಯಾ ವಿಷ್ಣುಪರತ್ವಾತ್'' ಇತಿ ಟೀಕಾಸೂಚಿತಂ ಸಮಾಧ್ಯನ್ತರಮಾಹ – ಯದ್ವಾ ವಿಷ್ಣಾವಿತಿ ।।

ವಿವರಣೆ - 'ಪ್ರಾಣಶಬ್ದಸ್ಯಾತ ಏವ ಪ್ರಾಣ ಇತ್ಯುಕ್ತರೀತ್ಯಾ ವಿಷ್ಣುಪರತ್ವಾತ್' 'ಪ್ರಾಣಶಬ್ದವು 'ಅಥ ಏವ ಪ್ರಾಣಃ' ಎಂಬ ಸೂತ್ರದ ನ್ಯಾಯದಿಂದ ವಿಷ್ಣುಪರವಾಗಿದೆ' ಇತ್ಯಾದಿ ಟೀಕೆಯಿಂದ ಸೂಚಿತವಾದ ಮೂರನೇ ಪ್ರಕಾರದ ಸಮಾಧಾನವನ್ನು 'ಯದ್ವಾ,' ಇತ್ಯಾದಿ ವಾಕ್ಯದಿಂದ ಹೇಳುತ್ತಿದ್ದಾರೆ. ಎಂದರೆ ಉಪಕ್ರಮ ಹಾಗೂ ಸಮಾಖ್ಯಾಪ್ರಮಾಣಗಳೆರಡೂ ಸಮಾನ ಬಲವಾಗಿವೆಯೆಂದು ಟೀಕೆಯ ಅಭಿಪ್ರಾಯ.

ಪ್ರಕಾಶಃ – ನನು ಪೂರ್ವತ್ರೈವಾತ್ರಾಪಿ ಸಮಾಖ್ಯಾಶ್ರುತಿದ್ವಯೇನೈವೋಭಯತ್ರಪ್ರಸಿದ್ಧಿಸಮ್ಭವೇ ಶ್ರುತ್ಯುಪಕ್ರಮಯೋಃ ಕ್ಲೇಶೇನ ತೌಲ್ಯಮುಪಾದ್ಯ ಕುತಸ್ಸಾಧಾರಣತ್ವಮುಪಪಾದ್ಯತೇ ।

ಆಕ್ಷೇಪ - ಹಿಂದಿನ ಅಧಿಕರಣದಂತೆ ಈ ಅಧಿಕರಣದಲ್ಲಿಯೂ ವಿಷ್ಣು ಹಾಗೂ ಪ್ರಾಣ ಇಬ್ಬರ ವಿಷಯದಲ್ಲಿ ಸಮಾಖ್ಯಾಪ್ರಮಾಣವನ್ನೇ ಹೇಳಬಹುದಿತ್ತು. ಆಗ ಉಭಯತ್ರಪ್ರಸಿದ್ಧವಾಗಿದೆಯೆಂಬುದನ್ನು ತಿಳಿಯುವುದು ಸುಲಭವಾಗುತ್ತಿತ್ತು. ಈಗ ಸಮಾಖ್ಯಾಶ್ರುತಿ ಹಾಗೂ ಉಪಕ್ರಮಪ್ರಮಾಣಗಳನ್ನು ಹೇಳುತ್ತಿದ್ದೀರಿ. ಇದರಿಂದ ಉಭಯಸಾಧಾರಣ್ಯವನ್ನು ತಿಳಿಯುವುದು ಕಷ್ಟಕರವಾಗಿದೆ. ಸುಲಭವಾದದ್ದನ್ನು ಬಿಟ್ಟು ಕಷ್ಟದಿಂದ ಉಭಯಸಾಧಾರಣ್ಯವನ್ನೇಕೆ ತಿಳಿಯಬೇಕು.

ಪ್ರಕಾಶಃ – ನಚ ವಾಯುಸಮಾಖ್ಯಾತೋ ವಿಷ್ಣುಸಮಾಖ್ಯಾಯಾಃ ಪ್ರಾಗುಕ್ತರೀತ್ಯಾ ಬಲವತ್ತ್ವಾತ್ತತ್ರಾಪಿ 'ಅಜ್ಞಾನಾಮ್' ಇತ್ಯುಪಪಾದನೀಯಮಿತಿ ವಾಚ್ಯಮ್ ।

ವಾಯುಸಮಾಖ್ಯೆಗಿಂತ ವಿಷ್ಣುಸಮಾಖ್ಯೆಯು ಹಿಂದೆ ಹೇಳಿದಂತೆ ಬಲಿಷ್ಠವಾಗಿದೆ. ಆದ್ದರಿಂದ ಇಲ್ಲಿಯೂ ಸಹ 'ಅಜ್ಞಾನಾಮ್' ಇತ್ಯಾದಿ ರೀತಿಯಿಂದ ಸಿದ್ಧಾಂತನ್ಯಾಯದ ಅನುಸಂಧಾನವಿಲ್ಲದಿದ್ದಾಗ ಸಮಾನ ಬಲವೆಂದು ಹೇಳಬೇಕಾಗುತ್ತದೆ. ಈ ಅಭಿಪ್ರಾಯದಿಂದ ಉಪಕ್ರಮ ಹಾಗೂ ಸಮಾಖ್ಯಾಪ್ರಮಾಣವನ್ನು ಇಲ್ಲಿ ಅನುಸರಿಸಿದ್ದೇವೆಂದು ಉತ್ತರಿಸಬಾರದು.

ಪ್ರಕಾಶಃ – ''ಪ್ರಾಣೋ ವಾವ ಸರ್ವೇಭ್ಯೋ ಭೂಯಾನ್ ಪ್ರಾಣಾದ್ಭೂಯಾನ್ ಪ್ರಾಣೋ ಹೈವ ಭೂಯಾನ್ ತಸ್ಮಾದ್ ಭೂಯಾನ್ ನಾಮ'' ಇತಿ ಶ್ರುತೇರಪಿ ಸಾಮ್ಯಾಸೋಪಪತ್ತಿಕತ್ವಾದಿತಿ ಭಾವೇನಾऽಕ್ಷಿಪ್ಯ ಸಮಾಧತ್ತೇ – ಯದ್ಯಪೀತಿ ।।

'ಪ್ರಾಣೋ ವಾವ ಸರ್ವೇಭ್ಯೋ ಭೂಯಾನ್ ಪ್ರಾಣಾದ್ಭೂಯಾನ್ ಪ್ರಾಣೋ ಹ್ಯೇವ ಭೂಯಾನ್ ತಸ್ಮಾದ್ ಭೂಯಾನ್ ನಾಮ' ಎಂಬ ಪ್ರಾಣವಿಷಯಕವಾದ ಸಮಾಖ್ಯಾಪ್ರಮಾಣವೂ ಸಹ ಅಭ್ಯಾಸ ಹಾಗೂ ಉಪಪತ್ತಿಗಳಿಂದ ಸಹಿತವಾಗಿದೆ. ಯಾವರೀತಿಯಾಗಿ ವಿಷ್ಣುಸಮಾಖ್ಯಾಪ್ರಮಾಣವು ಅಭ್ಯಾಸ ಹಾಗೂ

ಉಪಪತ್ತಿಗಳಿಂದ ಸಹಿತವಾದ ಕಾರಣ ಬಲಿಷ್ಠವಾಗಿದೆಯೋ, ಆದರಂತೆ ಪ್ರಾಣಸಮಾಖ್ಯಾ ಪ್ರಮಾಣವೂ ಸಹ ಬಲಿಷ್ಠವೇ ಆಗಿದೆ. ಹೀಗಿರುವಾಗ ಪ್ರಾಣವಿಷಯಕವಾದ ಸಮಾಖ್ಯಾಪ್ರಮಾಣವನ್ನು ಹೇಳದೆ ಉಪಕ್ರಮಪ್ರಮಾಣವನ್ನು ಏಕೆ ಅನುಸರಿಸಿದಿರಿ? ಎಂಬ ಆಕ್ಷೇಪಕ್ಕೆ 'ಯದ್ಯಪಿ' ಇತ್ಯಾದಿ ಗ್ರಂಥದಿಂದ ಸಮಾಧಾನ ನೀಡುತ್ತಿದ್ದಾರೆ.

ಪ್ರಕಾಶಃ – ಉಪಾಸಕೇಷ್ವಿತಿ ।। ''ಇಯದಾಮನನಾತ್'' ಇತ್ಯತ್ರ ಭಾಷ್ಯೇ ತದರ್ಥ ಏವೋದಾಹೃತತ್ವಾದಿತಿ ಭಾವಃ ।

'ಉಪಾಸಕೇಷು' ಎಂದರೆ 'ಇಯದಾಮನನಾತ್' ಎಂಬ ಸೂತ್ರದ ಭಾಷ್ಯದಲ್ಲಿ 'ಪ್ರಾಣೋ ವಾವ ಸರ್ವೇಭ್ಯೋ ಭೂಯಾನ್' ಎಂಬುದಕ್ಕೆ ಉಪಾಸಕರಲ್ಲಿ ಪ್ರಾಣನು ಅತಿ ಉತ್ತಮನಾಗಿದ್ದಾನೆಂಬರ್ಥವನ್ನೇ ಹೇಳಲಾಗಿದೆ. ಆ ಅರ್ಥದಲ್ಲಿಯೇ ಅದನ್ನು ಅಲ್ಲಿ ಉದಾಹರಿಸಿದ್ದಾರೆ ಎಂದು ತಿಳಿಯಬೇಕು ಎಂದರ್ಥ.

ಪ್ರಕಾಶಃ – ನನು ಶ್ರುತಾವುಪಾಸಕಾನ್ನೂನಸ್ತ್ವಸ್ಯಾಪ್ರತೀತೇಶ್ಚೈತ್ಯನ್ತರಾತ್ತಥಾ ಕಲ್ಪನಸ್ಯ ವಿಲಮ್ಬಿತತ್ವಾದಾಪಾತತಃ ಸಾಧಾರಣ್ಯಮಸ್ತೀತ್ಯನುಶಯಾದಾಹ – ಪ್ರಾಣಪ್ರಾಪಕ ಇತಿ ।।

'ಪ್ರಾಣೋ ವಾವ ಸರ್ವೇಭ್ಯೋ ಭೂಯಾನ್' ಎಂಬ ಶ್ರುತಿಯಲ್ಲಿ ಉಪಾಸಕರಿಗಿಂತ ಪ್ರಾಣನು ಉತ್ತಮನಾಗಿದ್ದಾನೆಂದು ತಿಳಿಯುತ್ತಿಲ್ಲ. ಮತ್ತೊಂದು ಶ್ರುತಿಯ ಆಧಾರದಿಂದ ಈ ಅರ್ಥವನ್ನು ಕಲ್ಪಿಸಬೇಕು. ಇದು ವಿಲಂಬವಾಗುತ್ತದೆ. ಆಪಾತತಃ ನೋಡಿದಾಗ ಎಲ್ಲರಿಗಿಂತಲೂ ಪ್ರಾಣನು ಉತ್ತಮನಾಗಿದ್ದಾನೆಂಬರ್ಥವೇ ತಿಳಿಯುತ್ತದೆ. ಹೀಗಿರುವಾಗ ಇದರಲ್ಲಿ ಸಕಲರಿಗಿಂತ ಉತ್ತಮತ್ವವು ಹೇಳಲ್ಪಟ್ಟಲ್ಲವೆಂದು ಹೇಗೆ ಹೇಳುತ್ತೀರಿ? ಎಂಬ ಆಶಂಕೆಯು ಪ್ರಾಪ್ತವಾಗುವುದರಿಂದ; ಮತ್ತೊಂದು ಸಮಾಧಾನವನ್ನು 'ಪ್ರಾಣಪ್ರಾಪಕ' ಇತ್ಯಾದಿ ವಾಕ್ಯದಿಂದ ಹೇಳುತ್ತಿದ್ದಾರೆ.

ಪ್ರಕಾಶಃ – ಪ್ರಾಗಪ್ಯೇವಂ ಸ್ಯಾತ್ । ವೈರೂಪ್ಯಂ ಕುತ ಇತ್ಯತ ಆಹ – ದ್ಯುಭ್ವಾದೀತಿ ।।

ಹಾಗಾದರೆ ಹಿಂದಿನ ಅಧಿಕರಣದಲ್ಲಿಯೂ ಉಪಕ್ರಮ ಪ್ರಮಾಣವನ್ನೇ ಹೇಳಬೇಕಿತ್ತು. ಅಥವಾ ಅಲ್ಲಿ ಸಮಾಖ್ಯಾಪ್ರಮಾಣವನ್ನು ಹೇಳಿರುವುದರಿಂದ ಇಲ್ಲಿಯೂ ಅದನ್ನೇ ಹೇಳಬೇಕಿತ್ತು. ವಿಭಿನ್ನ ಶೈಲಿಯಲ್ಲೇಕೆ ಪೂರ್ವಪಕ್ಷ ಮಾಡುತ್ತಿದ್ದೀರಿ ? ಎಂಬ ಪ್ರಶ್ನೆಗೆ 'ದ್ಯುಭ್ವಾದ್ಯಧಿಕರಣೇ ತು' ಎಂಬುದರಿಂದ ಉತ್ತರಿಸಿದ್ದಾರೆ. ದ್ಯುಭ್ವಾದ್ಯಧಿಕರಣದಲ್ಲಿ ಉಪಕ್ರಮ ಪ್ರಮಾಣವೇ ಇಲ್ಲದ ಕಾರಣ ಸಮಾಖ್ಯಾಪ್ರಮಾಣವನ್ನು ಅನುಸರಿಸುವುದು ಅನಿವಾರ್ಯವಾಗಿತ್ತು ಎಂದು ಉತ್ತರ.

ಪ್ರಕಾಶಃ – ಉಕ್ತಸಾಧಾರಣ್ಯಸ್ಯಾತಿಪ್ರಸಙ್ಗಮಾಶಙ್ಕ್ಯಾಽಽಹ – ಯದ್ಯಪೀತಿ ।।

ಉಪಕ್ರಮಪ್ರಮಾಣದಿಂದ ಹಾಗೂ ಸಮಾಖ್ಯಾಪ್ರಮಾಣದಿಂದ 'ಭೂಮಾ' ಎಂಬ ಶಬ್ದವು ಉಭಯಸಾಧಾರಣವಾಗುವುದಾದರೆ ಸರ್ವಗತತ್ವಾಧಿಕರಣದಲ್ಲಿಯೂ ಆದಿತ್ಯವಿಷಯದಲ್ಲಿ ಉಪಕ್ರಮ ಪ್ರಮಾಣವಿದೆ; ವಿಷ್ಣುವಿಷಯದಲ್ಲಿ ಸಮಾಖ್ಯಾಪ್ರಮಾಣವಿದೆ. ಆದ್ದರಿಂದ ಸರ್ವಗತತ್ವವೂ ಸಹ ಉಭಯತ್ರಪ್ರಸಿದ್ಧವಾಗಬೇಕಲ್ಲವೇ? ಎಂಬ ಅತಿಪ್ರಸಂಗಕ್ಕೆ 'ಯದ್ಯಪಿ' ಇತ್ಯಾದಿ ವಾಕ್ಯದಿಂದ ಉತ್ತರಿಸಿದ್ದಾರೆ.

ಪ್ರಕಾಶಃ – ''ಅನ್ತರ್ಬಹಿಶ್ಚ ತತ್ಸರ್ವಂ ವ್ಯಾಪ್ಯ ನಾರಾಯಣಸ್ಥಿತಃ'' ಇತ್ಯಾದೌ ಸರ್ವಗತತ್ವಂ ಪ್ರಸಿದ್ಧಮ್ । ತಥಾಪ್ಯತ್ರಾಭಿಪ್ರೇತಸ್ಯಾರ್ಭಕೌಕಸ್ತ್ವಸ್ಯ ಕಾಪ್ಯಸಮ್ಮತೇರಿತ್ಯರ್ಥಃ । ಪ್ರಕೃತೇ ತು ನೈವಮಿತಿ ಸೋಪಷ್ಟಮ್ಭಮಾಹ – ಇಹ ತ್ವಿತಿ ।।

'ಅಂತರ್ಬಹಿಶ್ಚ ತತ್ಸರ್ವಂ ವ್ಯಾಪ್ಯ ನಾರಾಯಣಃ ಸ್ಥಿತಃ' ಇತ್ಯಾದಿಯಾಗಿ ವಿಷ್ಣುವಿನಲ್ಲಿ ಸರ್ವಗತತ್ವವೇನೋ ಪ್ರಸಿದ್ಧವಾಗಿದೆ. ಆದರೆ ಅರ್ಭಕೌಕಸ್ತ್ವ ರೂಪವಾದ ಸರ್ವಗತತ್ವವನ್ನು ಪೂರ್ವಪಕ್ಷಿಯು ಯಾವುದೇ ವಾಕ್ಯದಲ್ಲಿಯೂ ಸಹ ಒಪ್ಪಲ್ಲ. ಆದ್ದರಿಂದ ಅದು ಅನ್ಯತ್ರಪ್ರಸಿದ್ಧವೇ ಆಗುತ್ತದೆ. ಆದರೆ ಪ್ರಕೃತ 'ಭೂಮಾ' ಎಂಬ ಶಬ್ದವು ಉಪಕ್ರಮಪ್ರಮಾಣದಲ್ಲಿ ಮಾತ್ರ ವಿಷ್ಣುವಿಷಯಕವಲ್ಲ. ಉಳಿದ ಸಮಾಖ್ಯಾದಿ ಪ್ರಮಾಣಗಳಲ್ಲಿ ವಿಷ್ಣುವಿಷಯಕವಾಗಬಹುದೆಂದು ಪೂರ್ವಪಕ್ಷಿಯು ಅಭಿಪ್ರಾಯ ಪಟ್ಟಿದ್ದಾನೆ. ಈ ಕಾರಣದಿಂದ 'ಭೂಮಾ' ಶಬ್ದವು ಉಭಯತ್ರಪ್ರಸಿದ್ಧವಾಗಿದೆಯೆಂಬುದಾಗಿ 'ಇಹ ತು' ಇತ್ಯಾದಿ ಗ್ರಂಥದಿಂದ ಪ್ರತಿಪಾದಿಸುತ್ತಿದ್ದಾರೆ.

ಪ್ರಕಾಶಃ – ಭೂಶಬ್ದಸ್ಯ ರೂಢತ್ವೋಕ್ತೇರ್ಭಾವಪ್ರತ್ಯಯಾನ್ತತ್ವಾಸಮ್ಮತೇರ್ಭೂಮತ್ವಸ್ಯೇತಿ ಸಾಧು । ತರ್ಹ್ಯವಧಾರಣಾಯೋಗ ಇತ್ಯತ ಆಹ – ವಾಯೋರೇವೇತಿ ।। ನನು ಸರ್ವತ್ರೇತ್ಯರ್ಥಃ ।

'ಭೂಮಾ' ಎಂಬ ಶಬ್ದವು ಧರ್ಮವಾಚಕವಾಗಿದೆ. ಅಂದರೆ ಭಾವಾರ್ಥದಲ್ಲಿ 'ಇಮನಿಚ್' ಪ್ರತ್ಯಯವು ಬಂದು 'ಭೂಮಾ' ಎಂಬ ಶಬ್ದವು ನಿಷ್ಪನ್ನವಾಗಿದೆ. ಪುನಃ ಇದರ ಮೇಲೆ ಭಾವಾರ್ಥದಲ್ಲಿ 'ತ್ವ' ಪ್ರತ್ಯಯವನ್ನು ಹೇಳಲು ಸಾಧ್ಯವಿಲ್ಲ. ಹೀಗಿರುವಾಗ ಗ್ರಂಥಕಾರರು 'ಭೂಮತ್ವಸ್ಯ' ಎಂದು ಹೇಗೆ ಹೇಳಿದರು? ಎಂದರೆ ಪ್ರಕೃತ ವಿವಕ್ಷಿಸಿರುವ 'ಭೂಮಾ' ಎಂಬ ಶಬ್ದವು ರೂಢವಾಗಿದೆಯೆಂದು ಗ್ರಂಥಕಾರರು ಅಭಿಪ್ರಾಯ ಪಟ್ಟಿದ್ದಾರೆ. ಅಂದರೆ ಪ್ರಕೃತ ವಿವಕ್ಷಿಸಿದ 'ಭೂಮಾ' ಎಂಬ ಶಬ್ದವು ಧರ್ಮವಾಚಕವಾಗಿದೆ ಹೊರತು, ಧರ್ಮಿವಾಚಕವಾಗಿಲ್ಲ. ಆದ್ದರಿಂದ ಭಾವಾರ್ಥದಲ್ಲಿ ಪುನಃ 'ತ್ವ' ಪ್ರತ್ಯಯವನ್ನು ಹೇಳಬಹುದು.

'ಭೂಮಾ' ಎಂಬ ಶಬ್ದವು ಉಭಯಸಾಧಾರಣವಾಗುವುದಾದರೆ ವಾಯುವೇ ಭೂಮನೆಂದು ಹೇಗೆ ಅವಧಾರಣ ಮಾಡುತ್ತೀರಿ? ಎಂಬ ಪ್ರಶ್ನೆಗೆ 'ವಾಯೋರೇವ' ಎಂಬ ವಾಕ್ಯದಿಂದ ಉತ್ತರಿಸಿದ್ದಾರೆ. ವಿಷಯವಾಕ್ಯದಲ್ಲಷ್ಟೇ ವಾಯುವು ಮಾತ್ರ ಪ್ರತಿಪಾದ್ಯ; ಬೇರೆ ಕಡೆ ಅಲ್ಲವೆಂದು ಇದರ ಅರ್ಥ.

ಪ್ರಕಾಶಃ – ಪೂರ್ವಪಕ್ಷೇ ಪ್ರಾಣಶ್ರುತೇರ್ನಿರವಕಾಶತ್ವಯುಕ್ತಿಸೂಚನಾರ್ಥೆ ವಾ ತದಿತ್ಯಾಹ – ಅತ್ರೇತಿ ।।

ಅಥವಾ ಪೂರ್ವಪಕ್ಷದಲ್ಲಿ ಪ್ರಾಣಶ್ರುತಿಯು ನಿರವಕಾಶವಾಗಿದೆಯೆಂದು ಆಕ್ಷೇಪಿಸಲಾಗಿದೆ. ಆ ನಿರವಕಾಶತ್ವಕ್ಕೆ ಯುಕ್ತಿಯನ್ನು ಸೂಚಿಸುವುದಕ್ಕಾಗಿಯೂ ಅವಧಾರಣವನ್ನು ಹೇಳಿದ್ದಾರೆಂದು ತಿಳಿಯಬೇಕು. ಇದನ್ನೇ 'ಅತ್ರ' ಇತ್ಯಾದಿ ವಾಕ್ಯದಿಂದ ಪ್ರತಿಪಾದಿಸಿದ್ದಾರೆ.

ಪ್ರಕಾಶಃ – ನನ್ವೇವಂ ವಿಷಯವಾಕ್ಯೇ ವಾಯೋರೇವ ಭೂಮತ್ವಮಿತ್ಯಾಶಯವರ್ಣನೇऽನ್ಯತ್ರಾऽನನ್ದಮಯಸ್ಯ ವಿಷ್ಣುತ್ವೇऽಪ್ಯದೋಷಾತ್ತದಾಕ್ಷೇಪಾಯೋಗ ಇತ್ಯತ ಆಹ – ಟೀಕೇತಿ ।। ಏತಾವತಾ ಗ್ರನ್ಥೇನೋಕ್ತಸ್ಯ ಫಲಮಾಹ – ತಸ್ಮಾದಿತಿ ।।

ವಿಷಯವಾಕ್ಯದಲ್ಲಿ ವಾಯುವೇ ಭೂಮನಾಗಿದ್ದಾನೆಂಬ ಅಭಿಪ್ರಾಯವನ್ನು ಹೇಳುವುದಾದರೆ ಉಳಿದ ವಾಕ್ಯಗಳಲ್ಲಿ ವಾಯುದೇವನು ಪ್ರತಿಪಾದ್ಯನಾಗಬೇಕಾಗಿಲ್ಲ. ಆವಾಗ ಆನಂದಮಯವಾಕ್ಯವು ವಿಷ್ಣುವನ್ನೇ ಪ್ರತಿಪಾದಿಸಬಹುದು. ಹೀಗಿರುವಾಗ ಆನಂದಮಯತ್ವವನ್ನು ಈ ಅಧಿಕರಣದ ಪೂರ್ವಪಕ್ಷದಿಂದ ಆಕ್ಷೇಪಿಸಲು ಹೇಗೆ ಸಾಧ್ಯ ? ಎಂಬ ಪ್ರಶ್ನೆಗೆ 'ಟೀಕೋಕ್ತೇಃ' ಎಂಬುದಾಗಿ ಉತ್ತರಿಸಿದ್ದಾರೆ. ಇಲ್ಲಿಯ ತನಕ ಹೇಳಿದ ಗ್ರಂಥದ ಫಲವನ್ನು 'ತಸ್ಮಾತ್' ಇತ್ಯಾದಿ ವಾಕ್ಯದಿಂದ ಉಪಸಂಹಾರ ಮಾಡುತ್ತಿದ್ದಾರೆ.

ಸಾರ

ಅಥವಾ 'ಆತ ಏವ ಪ್ರಾಣಃ' ಎಂಬ ಸೂತ್ರದಲ್ಲಿಯೇ ಪ್ರಾಣಶಬ್ದವನ್ನು ವಿಷ್ಣುಪರವೆಂದು ನಿರ್ಣಯಿಸಿದ್ದಾಗಿದೆ. ಆದ್ದರಿಂದ ಉಪಕ್ರಮದಲ್ಲಿರುವ ಪ್ರಾಣಶಬ್ದವು ಸಾವಕಾಶವಾಯಿತು. ಸಮಾಖ್ಯಾಪ್ರಮಾಣದಲ್ಲಿರುವ ವಿಷ್ಣುಶಬ್ದವು ಪ್ರಾಣನಲ್ಲಿ ಸಮನ್ವಯವಾಗದ ಕಾರಣ ನಿರವಕಾಶವಾಗಿದೆ. ವಾಸ್ತವಿಕವಾಗಿ ಉಪಕ್ರಮವು ಸಮಾಖ್ಯಾಪ್ರಮಾಣಕ್ಕಿಂತ ಬಲಿಷ್ಠವಾಗಿದ್ದರೂ ಸಾವಕಾಶವಾಗಿರುವುದರಿಂದ ಸಮಾಖ್ಯಾಪ್ರಮಾಣಕ್ಕೆ ಹಾಗೂ ಉಪಕ್ರಮ ಪ್ರಮಾಣಕ್ಕೆ ಸಮಾನ ಬಲವನ್ನು ಹೇಳಬಹುದು.

ಈ ಅಧಿಕರಣದಲ್ಲಿ 'ಭೂಮಾ' ಎಂಬ ಶಬ್ದವು ಉಭಯಸಾಧಾರಣವಾಗಿದೆಯೆನ್ನಲು ಉಪಕ್ರಮ ವಾಕ್ಯ ಹಾಗೂ ಸಮಾಖ್ಯಾಪ್ರಮಾಣಗಳನ್ನು ಆಧರಿಸುತ್ತಿದ್ದಾರೆ. ಆದರೆ 'ಪ್ರಾಣೋ ವಾವ ಸರ್ವೇಭ್ಯೋ ಭೂಯಾನ್' ಎಂಬುದಾಗಿ ಪ್ರಾಣನ ವಿಷಯದಲ್ಲಿಯೂ ಸಮಾಖ್ಯಾಪ್ರಮಾಣವನ್ನೇ ಹೇಳಬಹುದು. ಹೀಗೆ ಹೇಳಿದಾಗ ಪೂರ್ವಪಕ್ಷ ಹಾಗೂ ಸಿದ್ಧಾಂತ ಪಕ್ಷಗಳಲ್ಲಿ ಸಮಬಲವಾದ ಪ್ರಮಾಣಗಳನ್ನು ಹೇಳಿದಂತಾಗುತ್ತದೆ. ಆದರೆ 'ವ್ಯಾಣೋ ವಾವ ಸರ್ವೇಭ್ಯೋ ಭೂಯಾನ್' ಎಂಬ ಸಮಾಖ್ಯಾಪ್ರಮಾಣದಲ್ಲಿ ಸಕಲ ದೇವತೆಗಳಿಗಿಂತಲೂ ಪ್ರಾಣನು ಉತ್ತಮನೆಂದು ಸ್ಪಷ್ಟವಾಗಿ ತಿಳಿಯುವುದಿಲ್ಲ. ಕೇವಲ ಉಪಾಸಕರಿಗಿಂತ ಉತ್ತಮನಾಗಿದ್ದಾನೆಂದಷ್ಟೇ ತಿಳಿಯುತ್ತದೆ. ಈ ಕಾರಣಕ್ಕಾಗಿ ಉಪಕ್ರಮಪ್ರಮಾಣವನ್ನೇ ಆಧರಿಸಿದ್ದಾರೆ.

ಹಿಂದಿನ ದ್ಯುಭ್ವಾದ್ಯಧಿಕರಣದಲ್ಲಿಯೂ ಉಪಕ್ರಮಪ್ರಮಾನವನ್ನೇ ಹೇಳಬಹುದಿತ್ತಲ್ಲವೇ? ಎಂದು ಪ್ರಶ್ನಿಸಬಾರದು. ಅಲ್ಲಿ ರುದ್ರಾದಿ ಪ್ರಾಪಕವಾದ ಉಪಕ್ರಮಪ್ರಮಾಣವು ಇಲ್ಲದ ಕಾರಣದಿಂದಲೇ ಪೂರ್ವಪಕ್ಷ ಹಾಗೂ ಸಿದ್ಧಾಂತ ಪಕ್ಷಗಳಲ್ಲಿ ಸಮಬಲವಾದ ಸಮಾಖ್ಯಾಪ್ರಮಾಣಗಳನ್ನೇ ಆಶ್ರಯಿಸಲಾಗಿದೆ.

ಉಪಕ್ರಮ ಹಾಗೂ ಸಮಾಖ್ಯಾಪ್ರಮಾಣಗಳಿಂದ 'ಭೂಮಾ' ಎಂಬ ಶಬ್ದವು ಉಭಯ ಸಾಧಾರಣವಾಗಿದೆಯೆಂದು ಹೇಳುವುದಾದರೆ ಸರ್ವಗತತ್ವಾಧಿಕರಣದಲ್ಲಿಯೂ 'ತಸ್ಯೈತಸ್ಯಾವಿತ್ಯೋ ರಸಃ' ಎಂದು ಆದಿತ್ಯನಲ್ಲಿ ಶ್ರುತಿರೂಪ ಉಪಕ್ರಮಪ್ರಮಾಣವಿದೆ. ಬ್ರಹ್ಮನ ವಿಷಯದಲ್ಲಿ ಸಮಾಖ್ಯಾಪ್ರಮಾಣವಿದೆ. ಹಾಗಾಗಿ 'ಭೂಮಾ' ಎಂಬ ಶಬ್ದದಂತೆ ಸರ್ವಗತತ್ವವೂ ಸಹ ಉಭಯತ್ರಪ್ರಸಿದ್ಧವಾಗಬೇಕಲ್ಲವೇ? ಎಂಬುದು ಮುಂದಿನ ಪ್ರಶ್ನೆ. ಈ ಪ್ರಶ್ನೆಗೆ ಹೀಗೆ ಉತ್ತರಿಸಬೇಕು. ಸರ್ವಗತತ್ವಾಧಿಕರಣದಲ್ಲಿ ಯಾವುದೇ ಶ್ರುತಿಯಲ್ಲಿಯೂ ಸಹ ಆಲ್ಪೌಕ್ಸ್ವವೆಂಬ ಸರ್ವಭೂತಗತತ್ವವನ್ನು ಪೂರ್ವಪಕ್ಷಿಯು ಬ್ರಹ್ಮನಲ್ಲಿ ಒಪ್ಪಿರುವುದಿಲ್ಲ. ಆದ್ದರಿಂದ ಸಮಾಖ್ಯಾಪ್ರಮಾಣವನ್ನೇ ಅಲ್ಲಿ ಹೇಳಲುಸಾಧ್ಯವಿಲ್ಲ. ಆದರೆಪ್ರಕೃತಈಅಧಿಕರಣದಪೂರ್ವಪಕ್ಷಿಯುಸಮಾಖ್ಯಾಶ್ರುತಿಯುವಿಷ್ಣುಪರವಾಗಬಹುದೆಂದು ಒಪ್ಪಿಕೊಂಡು ಉಪಕ್ರಮದಲ್ಲಿರುವ 'ಭೂಮಾ' ಎಂಬ ಶಬ್ದವನ್ನಷ್ಟೇ ವಿಷ್ಣುಪರವಲ್ಲವೆಂದು ಆಕ್ಷೇಪಿಸುತ್ತಿದ್ದಾನೆ. ಹೀಗೆ ಎರಡೂ ಅಧಿಕರಣಗಳ ವ್ಯತ್ಯಾಸವನ್ನು ಗಮನಿಸಬೇಕು.

'ಯೋ ವೈ ಭೂಮಾ ತತ್ಸುಖಮ್' ಇತ್ಯಾದಿಯಾಗಿ ಭೂಮರೂಪನಾದ ವಾಯು, ಆನಂದಮಯನಾಗದಿದ್ದರೆ ಇಲ್ಲಿ ಭೂಮನಿಗೆ ಹೇಳಲ್ಪಟ್ಟ ಸುಖವೂ ಸಹ ಕೂಡುವುದಿಲ್ಲ. ಆದ್ದರಿಂದ ಭೂಮನೆನಿಸಿದ ಮುಖ್ಯಪ್ರಾಣನೇ ಆನಂದಮಯನಾಗುತ್ತಾನೆ. ಹೀಗೆ 'ಭೂಮಾ' ಎಂಬ ಶಬ್ದವು ವಿಷ್ಣು ಹಾಗೂ ವಾಯು ಇಬ್ಬರಲ್ಲಿಯೂ ಸಾಧಾರಣವಾಗಿರುವುದರಿಂದ ಪಾದಸಂಗತಿಯು ಯುಕ್ತವಾಗಿದೆ.

• • • • •

ಹಿಂದಿನ ಅಧಿಕರಣದಿಂದ ಅವಾಂತರಸಂಗತಿ ವಿಚಾರ

ತಾತ್ಪರ್ಯಚನ್ದ್ರಿಕಾ

ಅವಾನ್ತರಸઙ્ગತಿಸ್ತು ''ಸ ಏವಾಧಸ್ತಾತ್ಸ ಉಪರಿಷ್ಟಾತ್'' ''ಏವಂ ವಿಜಾನನ್ನಾತ್ಮರತಿರಾತ್ಮಕ್ರೀಡಃ'' । ''ಯೋ ವೈ ಭೂಮಾ ತದಮೃತಮ್'' ಇತ್ಯಾದಿನಾ ಭೂಮ್ನಾಯುಕ್ತಸ್ಯ ಸರ್ವಗತತ್ವಾದೇಃ

ಅನುವಾದ - ಈ ಅಧಿಕರಣಕ್ಕೆ ಅವ್ಯವಹಿತವಾದ ಹಿಂದಿನ ದ್ಯುಭ್ವಾದ್ಯಧಿಕರಣದಿಂದ ಅವಾಂತರ ಸಂಗತಿಯನ್ನು ಹೀಗೆ ತಿಳಿಯಬೇಕು - 'ಸ ಏವಾಧಸ್ತಾತ್ ಸ ಉಪರಿಷ್ಟಾತ್'' ಎಂಬ ವಾಕ್ಯದಲ್ಲಿ ಸರ್ವಗತತ್ವಧರ್ಮವನ್ನು ಭೂಮನಲ್ಲಿ ಹೇಳಲಾಗಿದೆ. 'ಏವಂ ವಿಜಾನನ್ ಆತ್ಮರತಿಃ ಆತ್ಮಕ್ರೀಡಃ' ಎಂಬ ಶ್ರುತಿಯಲ್ಲಿ ಭೂಮನ ಜ್ಞಾನದಿಂದ ಸ್ವರೂಪಾನಂದದ ಆವಿರ್ಭಾವವಾಗುತ್ತದೆಂದು ಹೇಳಲಾಗಿದೆ. 'ಯೋ ವೈ ಭೂಮಾತದಮೃತಮ್' ಎಂಬಲ್ಲಿ ಅಮೃತತ್ವಧರ್ಮವನ್ನು ಭೂಮನಲ್ಲಿ ಹೇಳಲಾಗಿದೆ.

''ಬ್ರಹ್ಮೈವೇದಮಮೃತಮ್'' ''ಪುರಸ್ತಾದ್ಬ್ರಹ್ಮ ಪಶ್ಚಾದ್ಬ್ರಹ್ಮ ದಕ್ಷಿಣತಶ್ಚೋತ್ತರೇಣ ಅಧಶ್ಚೋರ್ಧ್ವೆ ಚ ಪ್ರಸೃತಮ್ '' ''ಆತ್ಮಕ್ರೀಡ ಆತ್ಮರತಿಃ'' ಇತ್ಯಾದಿನಾ ದ್ಯುಭ್ವಾದ್ಯಾಯತನೇ ಶ್ರವಣಾತ್;

ಹೀಗೆ ಭೂಮನಲ್ಲಿ ಹೇಳಲ್ಪಟ್ಟ ಧರ್ಮಗಳೆಲ್ಲವೂ ಸಹ ದ್ಯುಭ್ವಾದ್ಯಾಯತನನಲ್ಲಿಯೂ ಕೇಳಿಸುತ್ತಿದೆ. ''ಬ್ರಹ್ಮೈವೇದಮಮೃತಮ್'' ಎಂಬ ಶ್ರುತಿಯಲ್ಲಿ ಅಮೃತತ್ವ ಧರ್ಮವು, 'ಪುರಸ್ತಾತ್ ಬ್ರಹ್ಮ ಪಶ್ಚಾದ್ಬ್ರಹ್ಮ ದಕ್ಷಿಣತಶ್ಚೋತ್ತರೇಣ ಅಧಶ್ಚೋರ್ಧ್ವಂ ಚ ಪ್ರಸೃತಮ್'', ಎಂಬಲ್ಲಿ ಸರ್ವಗತತ್ವಧರ್ಮವು ''ಆತ್ಮಕ್ರೀಡ ಆತ್ಮರತಿಃ'' ಎಂಬಲ್ಲಿ ದ್ಯುಭ್ವಾದ್ಯಾಯತನನ ಜ್ಞಾನದಿಂದ ಸ್ವರೂಪಾನಂದದ ಆವಿರ್ಭಾವವು ಕೇಳಿಸುತ್ತಿದೆ.

ಭೂಮ್ನೋऽನ್ಯತ್ವೇ ದ್ಯುಭ್ವಾದ್ಯಾಯತನಮಪ್ಯನ್ಯತ್ಸ್ಯಾದಿತಿ ಪೂರ್ವಾಕ್ಷೇಪೇಣ ಪೂರ್ವಪಕ್ಷೋತ್ಥಾನಾದಾಕ್ಷೇಪಿಕೀ ।

ಈ ಹಿಂದೆ ಹೇಳಿದ ಕಾರಣದಿಂದ ಒಂದು ವೇಳೆ ಭೂಮನೆನಿಸಿದವನು ಮುಖ್ಯಪ್ರಾಣಾದಿಗಳಾದರೆ ದ್ಯುಭ್ವಾದ್ಯಾಯತನರೂ ಸಹ ಮುಖ್ಯಪ್ರಾಣಾದಿಗಳೇ ಆಗುತ್ತಾರೆ. ಹೀಗೆ ಹಿಂದಿನ ಅಧಿಕರಣದ ದ್ಯುಭ್ವಾದ್ಯಾಯತನತ್ವವನ್ನು ಆಕ್ಷೇಪಿಸುತ್ತಿರುವುದರಿಂದ ಆಕ್ಷೇಪಿಕೀ ಎಂಬ ಅವಾಂತರಸಂಗತಿಯನ್ನು ತಿಳಿಯಬೇಕು.

टीकायां तु समन्वेतव्यभूमशब्दसन्निहितत्वात्पूर्णानन्दत्वस्य तदाक्षिप्तम् ।

ಹಾಗಾದರೆ ಟೀಕೆಯಲ್ಲಿ ಆನಂದಮಯಾಧಿಕರಣದಿಂದ ಸಂಗತಿಯನ್ನು ಏಕೆ ತೋರಿಸಿದ್ದಾರೆ ಎಂದರೆ ಸಮನ್ವಯ ಮಾಡಬೇಕಾದ 'ಭೂಮಾ' ಎಂಬ ಶಬ್ದದ ಜೊತೆಗೆ ಪೂರ್ಣಾನಂದತ್ವವು ಕೇಳಿಸುತ್ತಿದೆ. ಈ ದೃಷ್ಟಿಯಿಂದ ಆನಂದಮಯತ್ವವನ್ನೇ ಆಕ್ಷೇಪ ಮಾಡಿದ್ದಾರೆ ಹೊರತು, ಅವ್ಯವಹಿತವಾದ ಹಿಂದಿನ ಅಧಿಕರಣದಿಂದ ಸಂಗತಿಯಿರುವುದಿಲ್ಲವೆಂಬ ಅಭಿಪ್ರಾಯದಿಂದ ಅಲ್ಲ.

प्रकाशः –

एवं ''अस्ति शास्त्रादिसङ्गतिः'' इति टीकामुपपाद्यांशोपपादनेन विवृत्य ''श्रुत्यादिसङ्गतिः'' इत्यादिटीकया तुल्यन्यायतया सूचितामव्यवहितपूर्वाधिकरणसङ्गतिं स्वयमाह – अवान्तरेति ।।

ವಿವರಣೆ - 'ಅಸ್ತಿ ಶಾಸ್ತ್ರಾದಿಸಂಗತಿಃ' ಎಂಬ ಟೀಕೆಯಲ್ಲಿ ಶಾಸ್ತ್ರಸಂಗತಿ, ಅಧ್ಯಾಯ ಸಂಗತಿ ಹಾಗೂ ಪಾದಸಂಗತಿಗಳನ್ನು ಭೂಮಾಧಿಕರಣಕ್ಕೆ ಹೇಳಿದ್ದಾರೆ. ಇಲ್ಲಿ ಹೇಳಲ್ಪಟ್ಟ ಶಾಸ್ತ್ರಸಂಗತಿ ಹಾಗೂ ಅಧ್ಯಾಯಸಂಗತಿಗಳು ಸುಲಭವಾಗಿರುವುದರಿಂದ ಅದನ್ನು ಗ್ರಂಥಕಾರರು ವಿವರಿಸಲಿಲ್ಲ. ಕೇವಲ ವಿವರಿಸಲೇಬೇಕಾದ ಅಂಶವನ್ನು ಮಾತ್ರ ಎಂದರೆ ಪಾದಸಂಗತಿಯನ್ನಷ್ಟೇ ವಿವರಿಸಿದರು. ಪ್ರಕೃತ 'ಶ್ರುತ್ಯಾದಿಸಂಗತಿಃ' ಇತ್ಯಾದಿ ಟೀಕೆಯಲ್ಲಿ ಸಮಾನನ್ಯಾಯದಿಂದ ಸೂಚಿತವಾದ ಅವ್ಯವಹಿತವಾದ ಪೂರ್ವಾಧಿಕರಣಸಂಗತಿಯನ್ನು ಸ್ವತಃ 'ಅವಾಂತರಸಂಗತಿಸ್ತು' ಇತ್ಯಾದಿ ಗ್ರಂಥದಿಂದ ವಿವರಿಸುತ್ತಿದ್ದಾರೆ. ಅಂದರೆ ಟೀಕೆಯಲ್ಲಿ ಆನಂದಮಯಾಧಿಕರಣದಿಂದ ಆಕ್ಷೇಪಸಂಗತಿಯನ್ನು ತೋರಿಸಿದ್ದಾರೆ. ಸಮಾನನ್ಯಾಯದಿಂದ ಹಿಂದಿನ ಅಧಿಕರಣದಿಂದಲೇ ಸಂಗತಿಯನ್ನು ಸೂಚಿಸಿದ್ದಾರೆ. ಅದನ್ನು ಗ್ರಂಥಕಾರರು ಇಲ್ಲಿ ವಿವರಿಸಿದ್ದಾರೆಂದು ತಿಳಿಯಬೇಕು.

प्रकाशः – सर्वगतत्वात्मक्रीडत्वामृतत्वादिधर्माणामुभयत्र श्रवणाद्भूम्नोऽन्यत्वे प्राक्तनस्यापि तथात्वं स्यादित्याक्षेपेण पूर्वपक्षोत्थानादाक्षेपिकीत्यर्थः ।

'ಸರ್ವಗತತ್ವ', 'ಆತ್ಮಕ್ರೀಡತ್ವ', 'ಅಮೃತತ್ವ' ಇವೇ ಮೊದಲಾದ ಧರ್ಮಗಳು ಭೂಮನಲ್ಲಿ ಕೇಳಿಸುತ್ತಿರುವಂತೆ ದ್ಯುಭ್ವಾದ್ಯಾಯತನನಲ್ಲಿಯೂ ಕೇಳಿಸುತ್ತಿದೆ. ಒಂದುವೇಳೆ ಭೂಮನು ವಿಷ್ಣುವಿಗಿಂತ ಭಿನ್ನನಾದರೆ ಹಿಂದಿನ ಅಧಿಕರಣದಲ್ಲಿ ಹೇಳಲ್ಪಟ್ಟ ದ್ಯುಭ್ವಾದ್ಯಾಯತನನೂ ಸಹ ಅವನೇ ಆಗುತ್ತಾನೆ. ಹೀಗೆ

ಪೂರ್ವಾಧಿಕರಣದ ಸಿದ್ಧಾಂತವನ್ನು ಆಕ್ಷೇಪ ಮಾಡುವ ಮೂಲಕ ಪೂರ್ವಪಕ್ಷ ಹುಟ್ಟುತ್ತಿರುವುದರಿಂದ ಆಕ್ಷೇಪಿಕೀ ಸಂಗತಿಯಿರುತ್ತದೆಂದು ತಿಳಿಯಬೇಕು.

ಪ್ರಕಾಶಃ – ನಚ ನಿರ್ಣೀತಬ್ರಹ್ಮಪ್ರಕರಣಗತಸರ್ವಗತತ್ವಾದಿಬಲೇನ ಭೂಮ್ನ ಏವ ವಿಷ್ಣುತ್ವಂ ಸ್ಯಾದಿತಿ ವಾಚ್ಯಮ್ ।

ಪ್ರಶ್ನೆ - ನಿರ್ಣಯಿಸಲ್ಪಟ್ಟ ಬ್ರಹ್ಮಪ್ರಕರಣದಲ್ಲಿರುವ ಸರ್ವಗತತ್ವಾದಿ ಧರ್ಮಗಳಿಂದ ಭೂಮನೇ ವಿಷ್ಣುವಾಗಿದ್ದಾನೆಂದು ನಿರ್ಣಯಿಸಬಹುದಲ್ಲವೇ?

ಪ್ರಕಾಶಃ – ಉತ್ಕ್ರಮಣಲಿಙ್ಗಸ್ಯ ಹರಾವಯೋಗೇನ ನಿರವಕಾಶತಯಾ ತದನುರೋಧೇನ ಭೂಮ್ನೋऽನ್ಯತ್ವೇ ಸರ್ವಗತತ್ವಾದೇರಪ್ಯನ್ಯಧರ್ಮತಾವಶ್ಯಮ್ಭಾವಾದ್ ಬ್ರುಮ್ವಾದ್ಯಾಯತನತ್ವಾದೇರ್ವಾಯಾವಪ್ಯುಪಪತ್ತೇ ಜಾಯಮಾನತ್ವ-ಲಿಙ್ಗಸ್ಯಾಪ್ಯಕ್ಲೇಶೇನೋಪಪತ್ತೇಃ ।

ಉತ್ತರ - ಉತ್ಕ್ರಮಣಾದಿ ಲಿಂಗಗಳು ಭಗವಂತನಲ್ಲಿ ಕೂಡುವುದಿಲ್ಲ. ಮತ್ತು ಮುಖ್ಯಪ್ರಾಣಾದಿಗಳಲ್ಲಿ ಮಾತ್ರ ಕೂಡುವುದರಿಂದ ನಿರವಕಾಶವಾಗಿದೆ. ಇದಕ್ಕನುಸಾರಿಯಾಗಿ ಭೂಮನು ವಿಷ್ಣುವಿಗಿಂತ ಬೇರೆಯವನಾದ ಮುಖ್ಯಪ್ರಾಣನೇ ಆಗುತ್ತಾನೆ. ಆದ್ದರಿಂದ ಸರ್ವಗತತ್ವಾದಿಗಳನ್ನೂ ಸಹ ಮುಖ್ಯಪ್ರಾಣಾದಿಗಳ ಧರ್ಮವೆಂದೇ ಅವಶ್ಯವಾಗಿ ಹೇಳಬೇಕು. ಹಿಂದಿನ ಅಧಿಕರಣದಲ್ಲಿ ಹೇಳಲ್ಪಟ್ಟ ದ್ಯುಭ್ವಾದ್ಯಾಯನತ್ವಾದಿಗಳು ವಾಯುವಿನಲ್ಲಿಯೂ ಉಪಪನ್ನವಾಗುತ್ತವೆ. ಆಷ್ಟೇ ಅಲ್ಲದೆ ಜಾಯಮಾನತ್ವವೆಂಬ ಹಿಂದಿನ ಅಧಿಕರಣದ ಪೂರ್ವಪಕ್ಷ ಲಿಂಗವನ್ನು ಕ್ಲೇಶವಿಲ್ಲದೇ ಉಪಪಾದಿಸಬಹುದು.

ಪ್ರಕಾಶಃ – ಭೂಮ್ನೋ ವಿಷ್ಣುತ್ವನಿರ್ಣಯಂ ವಿನಾ ತಸ್ಯ ಬ್ರಹ್ಮಪ್ರಕರಣತ್ವಾನಿರ್ಣಯಾಚ್ಚೇತಿ ಭಾವಃ ।

ಮತ್ತು ಪ್ರಕರಣದಲ್ಲಿ ಕೇಳಿಸುತ್ತಿರುವ ಭೂಮನು ವಿಷ್ಣುವೇ ಆಗಿದ್ದಾನೆಂದು ಎಲ್ಲಿಯ ತನಕ ನಿಮಗೆ ನಿರ್ಣಯಿಸಲು ಬರುವುದಿಲ್ಲವೋ ಅಲ್ಲಿಯ ತನಕ ಇದನ್ನು ವಿಷ್ಣುಪ್ರಕರಣವೆಂದು ನಿರ್ಣಯಿಸಲೂ ಸಹ ಸಾಧ್ಯವಿಲ್ಲ. ಪ್ರಕೃತ ನಾವು ಉತ್ಕ್ರಮಣವೆಂಬ ಲಿಂಗದಿಂದ ಭೂಮನನ್ನು ಮುಖ್ಯಪ್ರಾಣನೆಂದು ಹೇಳುವಾಗ ನಿಮಗೆ ಭೂಮನನ್ನು ವಿಷ್ಣುವೆಂದು ಹೇಳಲು ಸಾಧ್ಯವಿಲ್ಲ.

ಪ್ರಕಾಶಃ – ಯದ್ಯಪಿ ಸರ್ವಗತತ್ವಾಮೃತತ್ವೇ ಏವ ಭೂಮವಾಕ್ಯೇ ಶ್ರುತೇ । 'ಆತ್ಮಕ್ರೀಡಃ' ಇತ್ಯಾದಿಕಂ ತು ''ಅಥಾತ ಆತ್ಮಾದೇಶಃ'' ಇತ್ಯತ್ರೋಪರಿತನವಾಕ್ಯೇ ಶ್ರುತಮ್ ।

ಪ್ರಶ್ನೆ - ಸರ್ವಗತತ್ವ, ಅಮೃತತ್ವಗಳು ಮಾತ್ರ ಭೂಮನಲ್ಲಿ ಕೇಳಿಸುತ್ತಿವೆ. ಆತ್ಮಕ್ರೀಡತ್ವಾದಿಧರ್ಮಗಳು 'ಅಥಾತ ಆತ್ಮಾದೇಶಃ' ಎಂಬ ಮುಂದಿನ ವಾಕ್ಯದಲ್ಲಿ ಪ್ರತಿಪಾದ್ಯನಾದ ಆತ್ಮನಲ್ಲಿ ಕೇಳಿಸುತ್ತಿವೆ. ಹೀಗಿರುವಾಗ ಆತ್ಮಕ್ರೀಡತ್ವಾದಿಗಳನ್ನು ಭೂಮನ ಧರ್ಮವೆಂದು ಹೇಗೆ ಹೇಳಿದಿರಿ?

ಪ್ರಕಾಶಃ – ತಥಾऽಪಿ ಭೂಮಾತ್ಮನೋರಭೇದಾಭಿಪ್ರಾಯೇಣೈವಮುಕ್ತಮ್ ।

ಉತ್ತರ - ಭೂಮಾ ಹಾಗೂ ಆತ್ಮಾ ಇಬ್ಬರಿಗೂ ಅಭೇದವನ್ನು ಒಪ್ಪಿ ಎಲ್ಲವನ್ನು ಭೂಮನ ಧರ್ಮವೆಂದು ಹೇಳಿದ್ದೇವೆ. ಆದ್ದರಿಂದ ಆತ್ಮಕ್ರೀಡತ್ವಾದಿಗಳೂ ಸಹ ಭೂಮನ ಧರ್ಮವಾಗಬಹುದು.

प्रकाशः – यद्यप्यात्मक्रीडत्वादिकमुपासकधर्मः । यदाहुः ''आत्मरतिर्भगवद्रतिः'' इति । ''तेनैव क्रीडते नित्यं स्त्रीरूपो मिथुनो भवेत्'' इति च ।

ಪ್ರಶ್ನೆ - ಆತ್ಮಕ್ರೀಡತ್ವಾದಿಗಳನ್ನು ಭೂಮನ ಧರ್ಮವೆಂದು ಹೇಗೆ ಹೇಳಿದಿರಿ? ಅವು ಉಪಾಸಕನ ಧರ್ಮವಾಗಿವೆ. ಏಕೆಂದರೆ 'ಆತ್ಮರತಿಃ ಭಗವದ್‌ರತಿಃ' ಎಂದು ಛಾಂದೋಗ್ಯಭಾಷ್ಯದಲ್ಲಿ ವ್ಯಾಖ್ಯಾನಿಸಿದ್ದಾರೆ. ಮತ್ತು 'ತೇನೈವ ಕ್ರೀಡತೇ ನಿತ್ಯಂ ಸ್ತ್ರೀರೂಪೋ ಮಿಥುನೋ ಭವೇತ್' ಎಂಬಲ್ಲಿ ಬ್ರಹ್ಮದೇವರನ್ನೇ ಸ್ತ್ರೀಯನ್ನಾಗಿ ಮಾಡಿಕೊಂಡು ಪರಮಾತ್ಮನು ವಿಹಾರ ಮಾಡಿದನೆಂದು ಹೇಳಿದ್ದಾರೆ. ಇದರಿಂದಲೂ ಆತ್ಮರತಿಯು ಚತುರ್ಮುಖನೆಂಬ ಉಪಾಸಕನಾದ ಜೀವನ ಧರ್ಮವೆಂದು ತಿಳಿಯುತ್ತದಲ್ಲವೇ?

प्रकाशः – तथाऽप्युपासकक्रीडादिहेतुत्वं तद्धर्म इत्याशयेनैतदुक्तिः ।

ಉತ್ತರ - ಉಪಾಸಕರ ಕ್ರೀಡೆಗೆ ಪರಮಾತ್ಮನು ಕಾರಣನಾಗಿದ್ದಾನೆ. ಆದ್ದರಿಂದ 'ಆತ್ಮಕ್ರೀಡ' ಎಂಬ ಶಬ್ದಕ್ಕೆ 'ಉಪಾಸಕಕ್ರೀಡಾದಿಹೇತು' ಉಪಾಸಕನ ಕ್ರೀಡೆಗೆ ಕಾರಣವಾಗಿರುವಿಕೆ ಎಂಬರ್ಥವನ್ನು ವಿವಕ್ಷಿಸಬೇಕು. ಇಂತಹ ಪರಮಾತ್ಮನ ಧರ್ಮವೇ ಆಗಿದೆ.

प्रकाशः – एतेन ''आत्मशब्दाद् द्युभ्वाद्यायतनं ब्रह्मेत्युक्तम् । तत्रात्मशब्दः प्राणेऽनैकान्तिकः । 'तरति शोकम् आत्मवित्' इत्यत्राब्रह्मणि प्राणे प्रयोगादित्याक्षेपिकी'' इति कल्पतरूक्तं निरस्तम् ।

ಕಲ್ಪತರುವಿನಲ್ಲಿ ಹಿಂದಿನ ಅಧಿಕರಣದಿಂದ ಸಂಗತಿಯನ್ನು ಹೀಗೆ ಹೇಳಲಾಗಿದೆ - ''ಆತ್ಮಶಬ್ದಾದ್ ದ್ಯುಭ್ವಾದ್ಯಾಯತನಂ ಬ್ರಹ್ಮೇತ್ಯುಕ್ತಮ್ । ತತ್ರಾತ್ಮಶಬ್ದಃ ಪ್ರಾಣೇऽನೈಕಾಂತಿಕಃ । 'ತರತಿ ಶೋಕಮ್ ಆತ್ಮವಿತ್', ಇತ್ಯತ್ರ ಬ್ರಹ್ಮಣಿ ಪ್ರಾಣೇ ಪ್ರಯೋಗಾದಿತ್ಯಾಕ್ಷೇಪಿಕೀ'' ಆತ್ಮಶಬ್ದವಿರುವುದರಿಂದ ದ್ಯುಭ್ವಾದ್ಯಾಯತನನಾದವನು ಬ್ರಹ್ಮನೇ ಆಗುತ್ತಾನೆಂದು ಹಿಂದೆ ಹೇಳಲಾಯಿತು. ಆದರೆ ಆತ್ಮಶಬ್ದವೆಂಬ ಹೇತುವಿಗೆ ಪ್ರಾಣನಲ್ಲಿ ಅನೈಕಾಂತಿಕ ದೋಷ ಬರುತ್ತದೆ. 'ತರತಿ ಶೋಕಮ್ ಆತ್ಮವಿತ್' ಎಂಬಲ್ಲಿ ಅಬ್ರಹ್ಮನಾದ ಪ್ರಾಣನಲ್ಲಿ ಆತ್ಮಶಬ್ದವನ್ನು ಪ್ರಯೋಗಿಸಲಾಗಿದೆ. ವ್ಯಭಿಚರಿತವಾದ ಇಂತಹ ಆತ್ಮಶಬ್ದ ಬಲದಿಂದ ದ್ಯುಭ್ವಾದ್ಯಾಯತನನಾದವನು ಬ್ರಹ್ಮನೇ ಆಗಿದ್ದಾನೆಂದು ನಿರ್ಣಯಿಸಲಾಗದು. ಹೀಗೆ ಆಕ್ಷೇಪಿಕೀ ಸಂಗತಿಯನ್ನು ತಿಳಿಯಬೇಕು. ಈಗಾಗಲೇ ಹೇಳಿದ ವಿಚಾರಗಳಿಂದ ಕಲ್ಪತರುವಿನ ಈ ವಿಚಾರಗಳನ್ನು ನಿರಾಕರಿಸಿದಂತಾಯಿತು.

प्रकाशः – 'आत्मवित्' इत्यस्याध्यायादौ श्रुतत्वेन भूम्नि साक्षादश्रुततया तदाक्षेपायोगात् ।

ಅದು ಹೀಗೆ - 'ತರತಿ ಶೋಕಂ ಆತ್ಮವಿತ್' ಎಂಬ ವಾಕ್ಯವು ಅಧ್ಯಾಯದ ಪ್ರಾರಂಭದಲ್ಲಿ ಪ್ರಸಕ್ತವಾಗಿದೆ. ನೇರವಾಗಿ ಭೂಮನಲ್ಲಿ ಈ ಆತ್ಮಶಬ್ದವು ಕೇಳಿಸುತ್ತಿಲ್ಲ. ಆದ್ದರಿಂದ ಆತ್ಮಶಬ್ದವನ್ನು ಆಕ್ಷೇಪ ಮಾಡುವ ಮೂಲಕ ಸಂಗತಿಯನ್ನು ತೋರಿಸುವುದು ಅಯುಕ್ತವಾಗುತ್ತದೆ.

ಪ್ರಕಾಶಃ – ಪ್ರಾಣಾದೇರಬ್ರಹ್ಮತ್ವೇऽಪಿ ''अथात आत्मादेशः'' इत्यथशब्देन प्राक्तन-प्राणप्रकरणविच्छेदेनोक्तात्माभिप्रायेण 'आत्मवित्' इत्यस्योपपत्तेः ।

ಮತ್ತು ಪ್ರಾಣಾದಿಗಳು ಬ್ರಹ್ಮರಾಗದಿದ್ದರೂ ಸಹ 'ಅಥಾತ ಆತ್ಮಾದೇಶಃ' ಎಂಬಲ್ಲಿ ಪ್ರಕರಣ ವಿಚ್ಛೇದಕವಾದ 'ಅಥ' ಶಬ್ದದಿಂದ ಆತ್ಮಾ ಎಂದು ಹೇಳಿದ್ದರಿಂದ ಬ್ರಹ್ಮನು ಆತ್ಮಾಗಬಹುದು. ಒಂದು ವೇಳೆ ಪ್ರಾಣನಲ್ಲಿ ಆತ್ಮಶಬ್ದವನ್ನು ಪ್ರಯೋಗಿಸಲಾಗಿದೆಯೆಂದು ನಿಶ್ಚಯವಾಗಿದ್ದರೆ ದ್ಯುಭ್ವಾದ್ಯಾಯತನನನ್ನು ಆಕ್ಷೇಪಿಸಬಹುದಿತ್ತು. ಆದರೆ ಹಾಗಿಲ್ಲ. ಆದ್ದರಿಂದ ಆತ್ಮಶಬ್ದವನ್ನು ಪ್ರಾಣವಿಷಯಕವೆಂದು ಹೇಳಲಾಗದು.

ಪ್ರಕಾಶಃ – ಭೂಮಗತತ್ವೇನ ಭೂಮವಾಕ್ಯ ಏವ ಶ್ರುತಾಮೃತತ್ವಾದಿಮುಖೇನಾಕ್ಷೇಪಸ್ಯೈವೋಚಿತತ್ವಾಚ್ಚ।

ಮತ್ತು ಭೂಮವಾಕ್ಯದಲ್ಲಿಯೇ ಭೂಮನಲ್ಲಿ ಶ್ರುತವಾದ ಅಮೃತತ್ವಾದಿಗಳ ಮೂಲಕ ಆಕ್ಷೇಪ ಮಾಡುವುದೇ ಅತ್ಯಂತ ಉಚಿತವಾಗಿದೆ.

ಪ್ರಕಾಶಃ – ಯತ್ತು ಶ್ರುತಪ್ರಕಾಶೇ ''यथा प्रकरणाविच्छेदेन परमात्मपरत्वं साधितं तथा जीवप्रकरणाविच्छेदेन जीवपरत्वमिति शङ्कोत्थानात्सङ्गतिः'' इत्यादि तदपि तेनैव निरस्तम् ।

ಶ್ರುತಪ್ರಕಾಶದಲ್ಲಿ ಸಂಗತಿಯನ್ನು ಹೀಗೆ ತೋರಿಸಿದ್ದಾರೆ - 'ಯಥಾ ಪ್ರಕರಣಾವಿಚ್ಛೇದೇನ ಪರಮಾತ್ಮಪರತ್ವಂ ಸಾಧಿತಂ ತಥಾ ಜೀವಪ್ರಕರಣಾವಿಚ್ಛೇದೇನ ಜೀವಪರತ್ವಮಿತಿ ಶಂಕೋತ್ಥಾನಾತಸಂಗತಿಃ' 'ಹಿಂದಿನ ದ್ಯುಭ್ವಾದ್ಯಧಿಕರಣದಲ್ಲಿ ಪರವಿದ್ಯಾವಿಷಯನಾದ ಬ್ರಹ್ಮನಲ್ಲಿ ದ್ಯುಭ್ವಾದ್ಯಾಯತನತ್ವವು ಕೇಳಿಸುತ್ತಿರುವುದರಿಂದ ಪೂರ್ವಪಕ್ಷವು ಹುಟ್ಟಲು ಸಾಧ್ಯವೇ ಇಲ್ಲವೆಂಬ ಶಂಕೆಗೆ ಪ್ರಕರಣ ವಿಚ್ಛೇದವಿರುವುದರಿಂದ ಪರವಿದ್ಯಾವಿಷಯನಾದವನು ವಿಷ್ಣುವಾದರೂ ಸಹ ದ್ಯುಭ್ವಾದ್ಯಾಯತನನು ಪರಮಾತ್ಮನಾಗುವುದಿಲ್ಲವೆಂದು ಆಕ್ಷೇಪವನ್ನು ಮಾಡಿಕೊಂಡಿದ್ದಾರೆ. ಸಿದ್ಧಾಂತ ಮಾಡುವಾಗ ಪರವಿದ್ಯಾವಿಷಯ ಪ್ರಕರಣ ಹಾಗೂ ದ್ಯುಭ್ವಾದ್ಯಧಿಕರಣ ಪ್ರಕರಣವು ಒಂದೇ ಆಗಿದೆ ಹೊರತು, ಬೇರೆ ಪ್ರಕರಣಗಳು ಅಲ್ಲವೆಂದು ನಿರ್ಣಯಿಸಿದ್ದಾರೆ. ಅದರಂತೆ ಇಲ್ಲಿಯೂ ಸಹ ಪ್ರಕರಣವನ್ನು ವಿಚ್ಛೇದ ಮಾಡದೇ ಜೀವನನ್ನು ಯಾವನಾದರೂ ಒಬ್ಬನನ್ನು ಜೀವನೆಂದು ಹೇಳಬಹುದಲ್ಲವೇ? ಎಂಬ ಆಕ್ಷೇಪವು ಬರುತ್ತದೆ. ಅದರ ಪರಿಹಾರಕ್ಕೋಸ್ಕರ ಈ ಅಧಿಕರಣವು ಹೊರಟಿದೆಯೆಂಬುದಾಗಿ ಸಂಗತಿಯನ್ನು ತಿಳಿಯಬೇಕು. ಹೀಗೆ ಆಕ್ಷೇಪ ಮಾಡಿಕೊಂಡು ಸಂಗತಿಯನ್ನು ಹೇಳಿದ್ದಾರೆ. ಇದನ್ನೂ ಸಹ ಈಗ ನಿರಾಕರಿಸಿದಂತಾಯಿತು.

ಪ್ರಕಾಶಃ – ಅಮೃತತ್ವಾದೇರನಾಕ್ಷೇಪೆ ಪೂರ್ವನಿರ್ಣೀತಬ್ರಹ್ಮಧರ್ಮೈರ್ಭೂಮಾ ಬ್ರಹ್ಮೇತ್ಯಪಿ ವಕ್ತುಂ ಶಕ್ಯತ್ವೇನ ಪೂರ್ವಪಕ್ಷಾನುದಯಪ್ರಸಙ್ಗಾತ್ ।

ಅಮೃತತ್ವಾದಿಗಳನ್ನು ಆಕ್ಷೇಪ ಮಾಡದಿದ್ದರೆ ಹಿಂದೆ ನಿರ್ಣಯಿಸಲ್ಪಟ್ಟ ಬ್ರಹ್ಮನ ಧರ್ಮಗಳಿಂದ ಭೂಮನು ಬ್ರಹ್ಮನೇ ಆಗಿದ್ದಾನೆಂದೂ ಹೇಳಬಹುದು. ಆವಾಗ ಪೂರ್ವಪಕ್ಷವೇ ಹುಟ್ಟಲು ಸಾಧ್ಯವಿಲ್ಲ. ಅದಕ್ಕೋಸ್ಕರ ಮೊದಲು ಅಮೃತತ್ವಾದಿಗಳನ್ನು ಆಕ್ಷೇಪ ಮಾಡಲೇ ಬೇಕು.

प्रकाशः – पूर्वं प्रकरणविच्छेदशङ्काया एवायुक्तत्वादित्युक्तत्वाच्चेति ।

ಮತ್ತು ಹಿಂದಿನ ಅಧಿಕರಣದಲ್ಲಿ ಪ್ರಕರಣವಿಚ್ಛೇದವನ್ನು ಶಂಕಿಸಬಾರದೆಂದು ನಿರ್ಣಯಿಸಿ ಹೇಳಿರುವುದರಿಂದ ಪುನಃ ಅದನ್ನೇ ವಿವಕ್ಷಿಸಿ ಇಲ್ಲಿ ಪೂರ್ವಪಕ್ಷವನ್ನು ಮಾಡಲು ಬರುವುದಿಲ್ಲ.

आनन्दमयाक्षेपटीका तु प्रयोजनपरेति भावः ।

ಅವ್ಯವಹಿತವಾದ ಹಿಂದಿನ ಅಧಿಕರಣದಿಂದಲೇ ಹೀಗೆ ಸಂಗತಿಯನ್ನು ತೋರಿಸಲು ಬರುವಾಗ ಆನಂದಮಯಾಧಿಕರಣದಿಂದ ಆಕ್ಷೇಪ ಮಾಡಿಕೊಂಡು ಟೀಕೆಯಲ್ಲಿ ತೋರಿಸಲ್ಪಟ್ಟ ಸಂಗತಿಯು ಕೇವಲ ಪ್ರಯೋಜನ ಪರವಾಗಿದೆಯೆಂದು ತಿಳಿಯಬೇಕು.

प्रकाशः – ननूक्तरीत्या सन्निहितपूर्वाक्षेपे सङ्गतिफलयोर्द्वयोरपि सम्भवात्किं व्यवहिताक्षेपेणेत्यत आह – टीकायां त्विति ।।

ಹಿಂದೆ ಹೇಳಿದಂತೆ ಹಿಂದಿನ ಅಧಿಕರಣದಿಂದಲೇ ಸಂಗತಿ ಹಾಗೂ ಫಲಗಳನ್ನು ತೋರಿಸಲು ಬರುವಾಗ ವ್ಯವಹಿತವಾದ ಆನಂದಮಯಾಧಿಕರಣದಿಂದ ಫಲವನ್ನು ಏಕೆ ತೋರಿಸುತ್ತಿದ್ದೀರಿ? ಎಂಬ ಪ್ರಶ್ನೆಗೆ 'ಟೀಕಾಯಾಂ ತು' ಇತ್ಯಾದಿ ಗ್ರಂಥದಿಂದ ಉತ್ತರಿಸುತ್ತಿದ್ದಾರೆ.

ಸಾರ

ಭೂಮನಲ್ಲಿ ಸರ್ವಗತತ್ವ, ಆತ್ಮಕ್ರೀಡಾತ್ವ, ಅಮೃತತ್ವ ಇವೇ ಮೊದಲಾದ ಧರ್ಮಗಳು ಕೇಳಿಸುತ್ತಿವೆ. ದ್ಯುಭ್ವಾದ್ಯಾಯತನನಲ್ಲಿಯೂ ಕೂಡ ಇವೇ ಧರ್ಮಗಳು ಕೇಳಿಸುತ್ತಿವೆ. ಆದ್ದರಿಂದ ಭೂಮಾ ಹಾಗೂ ದ್ಯುಭ್ವಾದ್ಯಾಯತನರು ಒಬ್ಬನೇ ಎಂದು ತಿಳಿಯುತ್ತದೆ. ಒಂದು ವೇಳೆ ಈಗಾಗಲೇ ಹೇಳಿದಂತೆ ಭೂಮನು ಮುಖ್ಯಪ್ರಾಣನಾದರೆ ದ್ಯುಭ್ವಾದ್ಯಾಯತನನೂ ಸಹ ಅವನೇ ಆಗುತ್ತಾನೆ. ಹೀಗಿರುವಾಗ ದ್ಯುಭ್ವಾದ್ಯಾಯತನನು ವಿಷ್ಣುವೆಂದು ಹಿಂದಿನ ಅಧಿಕರಣದಲ್ಲಿ ಹೇಗೆ ನಿರ್ಣಯಿಸಿದಿರಿ ? ಎಂದು ಆಕ್ಷೇಪಿಕೀ ಸಂಗತಿಯನ್ನು ತಿಳಿಯಬೇಕು. ಟೀಕೆಯಲ್ಲಿ ಆನಂದಮಯಾಧಿಕರಣದಿಂದ ಸಂಗತಿಯನ್ನು ತೋರಿಸಿರುತ್ತಾರೆ. ಯಾವ ನ್ಯಾಯವನ್ನು ವಿವಕ್ಷಿಸಿ ಆನಂದಮಯಾಧಿಕರಣದಿಂದ ಸಂಗತಿಯನ್ನು ತೋರಿಸಿದ್ದಾರೋ ಅದೇ ನ್ಯಾಯವು ಹಿಂದಿನ ಅಧಿಕರಣದಿಂದ ತೋರಿಸುವ ಸಂಗತಿಯಲ್ಲಿಯೂ ಇರುವುದರಿಂದ ಟೀಕೆಯಿಂದಲೇ ಪೂರ್ವಾಧಿಕರಣದ ಸಂಗತಿಯನ್ನು ಸೂಚಿಸಿದ್ದಾರೆ.

तात्पर्यचन्द्रिका .

अत्र ''यो वै भूमा तत्सुखम्'' इत्युक्तो भूमा किं मुख्यवायुरुत विष्णुरिति चिन्ता ।

'ಯೋ ವೈ ಭೂಮಾ ತತ್ಸುಖಮ್' ಎಂಬ ಶ್ರುತಿಯಲ್ಲಿ ಯಾರು ಪೂರ್ಣನೋ, ಅವನೇ ಪೂರ್ಣಾನಂದವುಳ್ಳವನು. ಅಲ್ಪನಲ್ಲಿ ಪೂರ್ಣಾನಂದವಿಲ್ಲವೆಂದು ಹೇಳಲಾಗಿದೆ. ಇಲ್ಲಿ ಪೂರ್ಣನೆಂದು ಹೇಳಲ್ಪಟ್ಟ 'ಭೂಮಾ' ಎಂಬ ಶಬ್ದವು ಮುಖ್ಯಪ್ರಾಣನನ್ನು ಪ್ರತಿಪಾದಿಸುತ್ತಿದೆಯೋ? ಅಥವಾ ವಿಷ್ಣುವನ್ನೋ ? ಎಂದು ಸಂಶಯ.

तदर्थं तत्सुखमित्युक्तं पूर्णसुखत्वं किं वायोरुत विष्णोरिति ।

ಹಿಂದಿನ ಸಂಶಯವು ಪರಿಹಾರವಾಗಬೇಕೆಂದರೆ, 'ತತ್ಸುಖಮ್' ಎಂಬಲ್ಲಿ ಹೇಳಲ್ಪಟ್ಟ ಪೂರ್ಣಸುಖಿತ್ವವು ವಾಯುವಿನಲ್ಲಿ ಬರುತ್ತದೋ? ವಿಷ್ಣುವಿನಲ್ಲೋ ? ಎಂಬ ಸಂಶಯವು ಪರಿಹಾರವಾಗಬೇಕು.

तदर्थं भूम्नो ब्रह्मत्वे प्राणाद्भूयस्त्वानुक्तिरयुक्ता, उत युक्तेति ।

ಹಿಂದಿನ ಸಂಶಯ ಪರಿಹಾರವಾಗಬೇಕೆಂದರೆ, ಭೂಮನು ಬ್ರಹ್ಮನಾದರೆ ಮುಖ್ಯಪ್ರಾಣನಿಗಿಂತ ಶ್ರೇಷ್ಠನಾದ ಮತ್ತೊಬ್ಬನನ್ನು ಹೇಳದಿರುವಿಕೆಯೆಂಬ ಅನುಕ್ತಿಯು ಅಯುಕ್ತವಾಗುತ್ತದೋ? ಅಥವಾ ಯುಕ್ತವಾಗುತ್ತದೋ? ಎಂಬ ಸಂಶಯ ಪರಿಹಾರವಾಗಬೇಕು.

तदर्थं ''प्राणो वा आशाया भूयान्'' इत्युक्तः प्राणः किं मुख्यवायुरुत ब्रह्मेति ।

ಹಿಂದಿನ ಸಂಶಯ ಪರಿಹಾರವಾಗಬೇಕೆಂದರೆ, 'ಪ್ರಾಣೋ ವಾ ಆಶಾಯಾ ಭೂಯಾನ್' ಎಂಬಲ್ಲಿ ಹೇಳಲ್ಪಟ್ಟ ಪ್ರಾಣನು ಮುಖ್ಯಪ್ರಾಣನೋ? ಅಥವಾ ಬ್ರಹ್ಮನೋ ? ಎಂಬ ಸಂಶಯವು ಪರಿಹಾರವಾಗಬೇಕು.

प्राणस्य मुख्यवायुत्वे हि वायुतो ब्रह्मणो भूयस्त्वं वक्तव्यमिति तदनुक्तिरयुक्ता । ब्रह्मत्वे तु स्वस्मात्स्वस्य भूयस्त्वस्यावक्तव्यत्वेन तदनुक्तिर्युक्ता ।

ಒಂದು ವೇಳೆ ಪ್ರಾಣನು ಮುಖ್ಯಪ್ರಾಣನಾದರೆ ವಾಯುವಿಗಿಂತ ಬ್ರಹ್ಮನಿಗೆ ಉತ್ತಮತ್ವವನ್ನು ಹೇಳಬೇಕು. ಆದರೆ ಶ್ರುತಿಯಲ್ಲಿ ಹಾಗೆ ಹೇಳಿರುವುದಿಲ್ಲ. ಹೀಗೆ ಅನುಕ್ತಿಯು ಅಯುಕ್ತವಾಗುತ್ತದೆ.

ಒಂದು ವೇಳೆ ಪ್ರಾಣನು ಬ್ರಹ್ಮನಾದರೆ ತನಗಿಂತ ತನ್ನಲ್ಲೇ ಉತ್ತಮತ್ವವನ್ನು ಹೇಳಿದಂತಾಗುತ್ತದೆ. ಹೀಗೆ ಹೇಳುವ ಅವಶ್ಯಕತೆ ಇಲ್ಲದ ಕಾರಣ ಪ್ರಾಣನಿಗಿಂತ ಉತ್ತಮತ್ವವನ್ನು ಶ್ರುತಿಯು ಹೇಳದಿರುವುದೇ ಯುಕ್ತವಾಗಿದೆ.

तदर्थम् ''उत्क्रान्तप्राणान्'' इति प्राणे श्रुतमुत्क्रमणं किं ब्रह्मणि न युक्तमुत युक्तमिति ।

ಹಿಂದಿನ ಸಂಶಯ ಪರಿಹಾರವಾಗಬೇಕೆಂದರೆ 'ಉತ್ಕ್ರಾಂತಪ್ರಾಣಾನ್' ಎಂಬಲ್ಲಿ ಪ್ರಾಣನಲ್ಲಿ ಹೇಳಲ್ಪಟ್ಟ ಉತ್ಕ್ರಮಣವು ಬ್ರಹ್ಮನಲ್ಲಿ ಅಯುಕ್ತವಾಗುತ್ತದೋ? ಅಥವಾ ಯುಕ್ತವಾಗುತ್ತದೋ? ಎಂಬ ಸಂಶಯವು ಪರಿಹಾರವಾಗಬೇಕು.

ಪ್ರಕಾಶಃ –

विषयसंशयटीकां व्यनक्ति – अत्रेति ।। छान्दोग्ये सप्तमेऽध्याये नारदकृतप्रश्नं प्रति सनत्कुमारोक्तोत्तरत्वेन नामवाङ्मनस्सङ्कल्पचित्तध्यानविज्ञानबलान्नाशेज-आकाशस्मराशाप्राणशब्दवाच्यान् उषास्वाहापर्जन्यमित्राग्निवरुणचन्द्रभूतवाय्वनिरुद्ध-प्राणपुरन्दरोमाशिवसरस्वतीमुख्यप्राणानुत्तरोत्तरातिशयितत्वेनोक्त्वा

ವಿವರಣೆ – ವಿಷಯ ಹಾಗೂ ಸಂಶಯಗಳನ್ನು ನಿರೂಪಿಸುವ ಟೀಕೆಯನ್ನು 'अत्र' ಇತ್ಯಾದಿ ಗ್ರಂಥದಿಂದ ವ್ಯಾಖ್ಯಾನಿಸುತ್ತಿದ್ದಾರೆ. छान्दोग्योपनिषत्तಿನ ಏಳನೇ ಅಧ್ಯಾಯವು ಸನತ್ಕುಮಾರರನ್ನು ಕುರಿತು ಮಾಡುವ ನಾರದರ ಪ್ರಶ್ನೆಯೊಂದಿಗೆ ಪ್ರಾರಂಭವಾಗುತ್ತದೆ. ನಾರದರ ಪ್ರಶ್ನೆಗೆ ಸನತ್ಕುಮಾರರು ಉತ್ತರಿಸುತ್ತಾ ನಾಮ, ವಾಕ್, ಮನಸ್, ಸಂಕಲ್ಪ, ಚಿತ್ತ, ಧ್ಯಾನ, ವಿಜ್ಞಾನ, ಬಲ, ಅನ್ನ, ಆಪ್, ತೇಜಸ್, ಆಕಾಶ, ಸ್ಮರ, ಆಶಾ, ಪ್ರಾಣ ಮೊದಲಾದ ಶಬ್ದಗಳಿಂದ ಪ್ರತಿಪಾದ್ಯರಾದ ಉಷಾ, ಸ್ವಾಹಾ, ಪರ್ಜನ್ಯ, ಮಿತ್ರ, ಅಗ್ನಿ, ವರುಣ, ಚಂದ್ರ, ಭೂತವಾಯು, ಅನಿರುದ್ಧ, ಪ್ರಾಣ, ಪುರಂದರ, ಉಮಾ, ಶಿವ, ಸರಸ್ವತೀ, ಮುಖ್ಯಪ್ರಾಣ ಇವರನ್ನು ಕ್ರಮವಾಗಿ ಉತ್ತಮರೆಂದು ಹೇಳಿರುತ್ತಾರೆ. ಅನಂತರ;

ಪ್ರಕಾಶಃ – अनन्तरं नारदप्रश्नमन्तरेणैव ''एष तु वा अतिवदति यस्सत्येनातिवदति'' इत्युपक्रम्य सत्यविज्ञानमतिश्रद्धानिष्ठातिसुखपर्यन्तानुक्त्वा वक्ति सनत्कुमारः –

ಮುಂದೆ ನಾರದರು ಪ್ರಶ್ನೆ ಮಾಡದಿದ್ದರೂ 'एष तु वा अतिवदति यस्सत्येनातिवदति' 'ಯಾರು ಪರಮಾತ್ಮನನ್ನು ಪ್ರಾಣನಿಗಿಂತ ಉತ್ಕೃಷ್ಟನೆಂದು ಹೇಳುತ್ತಾನೋ, ಅವನೇ ಮುಖ್ಯನಾದ ಅಧಿಕಾರಿ' ಎಂದು

ಪ್ರಾರಂಭಿಸಿ ಸತ್ಯ, ವಿಜ್ಞಾನ, ಮತಿ, ಶ್ರದ್ಧಾ, ನಿಷ್ಠಾ, ಕೃತಿ, ಸುಖ ಎಂಬಲ್ಲಿಯ ತನಕ ಭಗವಂತನ ಅನೇಕ ವಿಧವಾದ ಗುಣಗಳನ್ನು ವರ್ಣಿಸಿದ್ದಾರೆ. ಆನಂತರ ಪುನಃ ಸನತ್ಕುಮಾರರು ಹೇಳುತ್ತಾರೆ -

ಪ್ರಕಾಶಃ –''यो वै भूमा तत्सुखं नाल्पे सुखमस्ति, भूमैव सुखं भूमा त्वेव विजिज्ञासितव्य इति । भूमानं भगवो विजिज्ञास इति ।

ಯಾರು ಪೂರ್ಣವಾದ ಗುಣಗಳನ್ನು ಹೊಂದಿದ್ದಾನೋ, ಅವನೇ ಪೂರ್ಣಸುಖನಾಗುತ್ತಾನೆ. ಮುಕ್ತರಾದ ಜೀವರಲ್ಲಿಯೂ ಸಹ ಪೂರ್ಣಸುಖವಿರುವುದಿಲ್ಲ. ಆದ್ದರಿಂದ ಪೂರ್ಣಗುಣನಾದ ಪರಮಾತ್ಮನೇ ಪೂರ್ಣಸುಖನು. ಹೀಗೆ ಯಾರು ಪರಮಾತ್ಮನ ಸುಖವೆಂಬ ಗುಣವನ್ನು ತಿಳಿಯಲು ಅಪೇಕ್ಷಿಸುತ್ತಾನೋ, ಅವನು ಮೊದಲು ಗುಣಪರಿಪೂರ್ಣತ್ವವನ್ನು ತಿಳಿದುಕೊಳ್ಳಬೇಕು ಎಂಬುದಾಗಿ ಸನತ್ಕುಮಾರರು ಉಪದೇಶಿಸುತ್ತಾರೆ. ಪುನಃ ನಾರದರು, 'ಪೂಜ್ಯರೇ ! ಪರಮಾತ್ಮನ ಗುಣಪರಿಪೂರ್ಣತ್ವವನ್ನು ತಿಳಿಯಲು ನಾನು ಅಪೇಕ್ಷಿಸುತ್ತಿದ್ದೇನೆ. ಆದನ್ನೇ ನನಗೆ ಉಪದೇಶಿಸಿರಿ' ಎಂದು ಪ್ರಾರ್ಥಿಸುತ್ತಾರೆ.

ಪ್ರಕಾಶಃ – यत्र नान्यत्पश्यति नान्यच्छृणोति नान्यद्विजानाति स भूमा । अथ यत्रान्यत्पश्यत्यन्यच्छृणोत्यन्यद्विजानाति तदल्पम् । यो वै भूमा तदमृतम् । अथ यदल्पं तन्मर्त्यम् । स भगवः कस्मिन्प्रतिष्ठित इति । स्वे महिम्नि यदि वा न महिम्नीति ।

'ಯಾರ ಅಧೀನವಾಗದೇ ಸ್ವತಂತ್ರವಾಗಿ ಬೇರೆ ಯಾವುದೂ ಸಹ ದರ್ಶನ, ಶ್ರವಣ, ವಿಶೇಷಜ್ಞಾನಗಳಿಗೆ ಗೋಚರವಾಗುವುದಿಲ್ಲವೋ, ಅಂತಹ ವ್ಯಕ್ತಿಯೇ ಗುಣಪರಿಪೂರ್ಣ ಸ್ವರೂಪನು. ಯಾರ ಅಧೀನವಾಗಿ ಅಸ್ವತಂತ್ರವಾಗಿ ಬೇರೆ ಪದಾರ್ಥವು ದರ್ಶನ, ಶ್ರವಣ, ವಿಶೇಷಜ್ಞಾನಗಳಿಗೆ ಗೋಚರವಾಗುತ್ತದೋ, ಅಂತಹ ವ್ಯಕ್ತಿಯು ಅಲ್ಪಗುಣಗಳುಳ್ಳವನು. ಗುಣಪರಿಪೂರ್ಣನಾದ ಪರಮಾತ್ಮನು ನಿತ್ಯಮುಕ್ತನು. ಮುಕ್ತರಾಗಿದ್ದರೂ ಅಲ್ಪಗುಣಿಗಳೇ ಆದ ಬ್ರಹ್ಮಾದಿಗಳು ಮೊದಲು ಮರಣವುಳ್ಳವರಾಗಿರುತ್ತಾರೆ'. ಹೀಗೆ ಸನತ್ಕುಮಾರರು ಗುಣಪೂರ್ಣನಾದ ಪರಮಾತ್ಮನ ಮಹಿಮೆಯನ್ನು ಉಪದೇಶಿಸಿದಾಗ ಪುನಃ ನಾರದರು ಪ್ರಶ್ನಿಸುತ್ತಾರೆ. 'ಆ ಪರಮಾತ್ಮನು ಯಾರನ್ನು ಆಶ್ರಯಿಸಿಕೊಂಡಿದ್ದಾನೆ' ಎಂದು. ಆಗ ಸನತ್ಕುಮಾರರು ಉತ್ತರಿಸುತ್ತಾರೆ - 'ಅವನು ತನ್ನ ಸ್ವರೂಪಭೂತವಾದ ಸಾಮರ್ಥ್ಯವನ್ನು ಆಶ್ರಯಿಸಿಕೊಂಡಿದ್ದಾನೆ. ಅಥವಾ ಬೇರೆ ಯಾವುದನ್ನೂ ಆಶ್ರಯಿಸಿಲ್ಲವೆಂದು ಹೇಳಬಹುದು' ಎಂದು ಉತ್ತರಿಸುತ್ತಾರೆ.

ಪ್ರಕಾಶಃ – गो अश्वमिह महिमेत्याचक्षते हस्तिहिरण्यं दासभार्यं क्षेत्राण्यायतनानीति नाहमेवं ब्रवीमीति होवाचान्योन्यस्मिन्प्रतिष्ठित इति ।

ಹಸು, ಕುದುರೆ, ಆನೆ, ಸುವರ್ಣ, ಭೃತ್ಯರು, ಹೆಂಡತಿ, ಭೂಮಿ, ಮನೆ ಇವೆಲ್ಲವನ್ನೂ ಸಹ ಲೌಕಿಕರು ಸಂಪತ್ತೆಂದು ಪರಿಗಣಿಸುತ್ತಾರೆ. ಆದರೆ ಇಂತಹ ಅಲ್ಪವಾದ ಸಂಪತ್ತನ್ನು ಗುಣಪರಿಪೂರ್ಣನಾದ ಪರಮಾತ್ಮನು ಆಶ್ರಯಿಸಿದ್ದಾನೆಂದು ನಾನು ಹೇಳುವುದಿಲ್ಲ. 'ಪರಮಾತ್ಮನನ್ನು ಬಿಟ್ಟು ಬೇರೆ ಎಲ್ಲಾ ಪದಾರ್ಥಗಳು ತಮ್ಮ

ಸ್ವರೂಪಭೂತವಲ್ಲದ ಅಲ್ಪವಾದ ಸಂಪತ್ತನ್ನು ಆಶ್ರಯಿಸಿರುತ್ತಾರೆ. ಆದರೆ ಪರಮಾತ್ಮನು ಮಾತ್ರ ಹಾಗಿರುವುದಿಲ್ಲ' ಎಂದು ಮುಂದೆ ಸನತ್ಕುಮಾರರು ಸಮರ್ಥಿಸುತ್ತಾರೆ.

ಪ್ರಕಾಶಃ – ಸ ಏವಾಧಸ್ತಾತ್ಸ ಏವೋಪರಿಷ್ಟಾತ್ಸ ಪಶ್ಚಾತ್ಸ ಪುರಸ್ತಾತ್ಸ ದಕ್ಷಿಣತಸ್ಸ ಉತ್ತರತಸ್ಸ ಏವೇದಂ ಸರ್ವಮ್'' ಇತ್ಯಾದಿ । ಸ ಭೂಮಾ ವಿಷಯ ಇತ್ಯರ್ಥಃ ।

ಗುಣಪೂರ್ಣನಾದ ನಾರಾಯಣನೆಂಬ ಪರಮಾತ್ಮನ ಲಕ್ಷಣವನ್ನು ಹೀಗೆ ತಿಳಿಯಬೇಕು - ಕೆಳಗೆ, ಮೇಲೆ, ಹಿಂದೆ, ಮುಂದೆ, ಎಡ, ಬಲ ಎಲ್ಲೆಡೆಯೂ ಅವನು ವ್ಯಾಪಿಸಿಕೊಂಡಿರುತ್ತಾನೆ. ಎಲ್ಲವೂ ಅವನ ಅಧೀನವಾಗಿದೆ. ಅವನೇ ಸ್ವತಂತ್ರನಾಗಿದ್ದಾನೆ ಎಂಬುದಾಗಿ.

ಈ ಪ್ರಕರಣದಲ್ಲಿ ಪ್ರಸಕ್ತನಾದ ಭೂಮನೇ ಈ ಅಧಿಕರಣಕ್ಕೆ ವಿಷಯನಾಗಿದ್ದಾನೆ.

ಪ್ರಕಾಶಃ – ಮುಖ್ಯವಾಯುರಿತಿ ।। ಜಡತ್ವಕೋಟೇರಗ್ರೇ ನಿರಸಿಷ್ಯಮಾಣತ್ವಾದಿತಿ ಭಾವಃ ।। ಪೂರ್ಣಸುಖತ್ವಮಿತಿ ।। ಅತ್ರ ಸುಖಶಬ್ದಸ್ಯ ತಾದೃಶಸುಖವಾಚಿತ್ವಂ ಸಿದ್ಧಾನ್ತೇ ಸ್ಪಷ್ಟಯಿಷ್ಯತೇ ।।

'ಮುಖಿಮಾಯುಃ' ಎಂಬ ಪ್ರತೀಕಕ್ಕೆ ಜಡವಾದ ವಾಯುವನ್ನೇಕೆ ಇಲ್ಲಿ ಪೂರ್ವಪಕ್ಷವನ್ನಾಗಿ ಸ್ವೀಕರಿಸಿಲ್ಲ ಎಂದರೆ, ಜಡವಾದ ವಾಯುವನ್ನು ಇಲ್ಲಿ ವಿವಕ್ಷಿಸಲು ಬರುವುದಿಲ್ಲವೆಂದು ಮುಂದೆ ನಿರಾಕರಿಸುತ್ತಾರೆ ಎಂದಭಿಪ್ರಾಯ. ಗ್ರಂಥದಲ್ಲಿ 'ಪೂರ್ಣಸುಖತ್ವಮ್' ಎಂದು ಹೇಳಿದ್ದಾರೆ. ಸುಖಶಬ್ದಕ್ಕೆ ಪೂರ್ಣವಾದ ಸುಖವೆಂದೇ ಅರ್ಥವೆಂದು ಮುಂದೆ ಸಿದ್ಧಾಂತದಲ್ಲಿ ಸ್ಪಷ್ಟಪಡಿಸುತ್ತಾರೆ.

ಪ್ರಕಾಶಃ – ಭೂಯಸ್ತ್ವೇತಿ ।। ''ಅಸ್ತಿ ವಾವ ಪ್ರಾಣಾದ್ಭೂಯಃ'' ಇತ್ಯಾದಿಪ್ರಶ್ನಪ್ರತಿವಚನರೂಪೇಣ ಭೂಯಸ್ತ್ವಾನುಕ್ತಿರಿತ್ಯರ್ಥಃ । ಅಸ್ಪಷ್ಟಾಂಶೇ ಫಲಫಲಿಭಾವಮಾಹ – ಪ್ರಾಣಸ್ಯೇತಿ ।।

'ಭೂಯಸ್ತ್ವ' ಎಂದು ಗ್ರಂಥದಲ್ಲಿದೆ. ಅಭಿಪ್ರಾಯವೇನೆಂದರೆ -'ಅಸ್ತಿ ವಾವ ಪ್ರಾಣಾದ್ಭೂಯಃ' 'ಪ್ರಾಣನಿಗಿಂತ ಉತ್ತಮನಿದ್ದಾನೇನು ?' ಎಂಬ ಪ್ರಶ್ನೆಗೆ ಉತ್ತರ ನೀಡುವ ಮೂಲಕವಾಗಿ ಭೂಮನನ್ನು ಉತ್ತಮನೆಂದು ಸನತ್ಕುಮಾರರು ಹೇಳಿರುವುದಿಲ್ಲ ಹೊರತು, ಪ್ರಶ್ನೆ ಮಾಡದೇ ಸ್ವತಃ ತಾವಾಗಿಯೇ ಹೇಳಿರುತ್ತಾರೆ. ಆದ್ದರಿಂದ ಪ್ರಶ್ನಪ್ರತಿವಚನರೂಪದಿಂದ ಭೂಯಸ್ತ್ವಾನುಕ್ತಿಯೆಂದು ತಿಳಿಯಬೇಕು. ಯಾವ ಅಂಶದಲ್ಲಿ ಫಲಫಲಿಭಾವವು ಸ್ಪಷ್ಟವಾಗಿ ತಿಳಿಯುವುದಿಲ್ಲವೋ, ಆ ಅಂಶದಲ್ಲಷ್ಟೇ ಫಲಫಲಿಭಾವವನ್ನು ತೋರಿಸುತ್ತಿದ್ದಾರೆ 'ಪ್ರಾಣಸ್ಯ' ಇತ್ಯಾದಿಯಾಗಿ

**ಪ್ರಕಾಶಃ – ದ್ವಾವಿಹ ಪೂರ್ವಪಕ್ಷೌ । ಪ್ರಾಣಭೂಮ್ನೋರ್ಭೇದ ಇತ್ಯೇಕೋऽಭೇದ ಇತ್ಯನ್ಯಃ । ತತ್ರಾಽಽಽ

प्रकाशः – तत्राद्ये भूयस्त्वानुक्तिः पूर्वपक्षयुक्तिः । अन्त्ये चोत्क्रमणलिङ्गमिति व्यवस्थेति ज्ञापनाय प्राणस्य ब्रह्मत्वपक्षे भूयस्त्वानुक्तिघटनाय मध्ये फलफलिभावं प्रदर्श्य लिङ्गविषयां चिन्तां पश्चादाह – तदर्थमुत्क्रान्तेति ।।

ಮೊದಲನೆಯ ಪಕ್ಷದಲ್ಲಿ ಭೂಯಸ್ತ್ವದ ಅನುಕ್ತಿಯು ಪೂರ್ವಪಕ್ಷ ಯುಕ್ತಿ. ಎರಡನೇ ಪಕ್ಷದಲ್ಲಿ ಉತ್ಕ್ರಮಣಲಿಂಗವು ಪೂರ್ವಪಕ್ಷ ಯುಕ್ತಿ. ಈ ವ್ಯವಸ್ಥೆಯನ್ನು ತಿಳಿಸುವುದಕ್ಕಾಗಿಯೇ ಅಂದರೆ ಪ್ರಾಣನೇ ಬ್ರಹ್ಮನಾದರೆ ಮತ್ತು ಪ್ರಾಣನೇ ಬ್ರಹ್ಮನಾಗಿದ್ದಾನೆಂಬ ಪಕ್ಷದಲ್ಲಿ ಭೂಯಸ್ತ್ವಾನುಕ್ತಿಯು ಯುಕ್ತವಾಗುತ್ತದೆಂದು ತಿಳಿಸುವುದಕ್ಕಾಗಿ ಮಧ್ಯದಲ್ಲಿಯೇ ಫಲಫಲಿಭಾವವನ್ನು ತೋರಿಸಿ, ಕೊನೆಯಲ್ಲಿ ಉತ್ಕ್ರಮಣ-ಲಿಂಗವಿಷಯಕವಾದ ಸಂಶಯವನ್ನು ತೋರಿಸಿದ್ದಾರೆ. ವಸ್ತುತಃ ಪ್ರತಿಯೊಂದು ಅಧಿಕರಣದಲ್ಲಿಯೂ ಸಂಶಯಪರಂಪರೆಗಳೆಲ್ಲ ತೋರಿಸಿ, ಕೊನೆಯಲ್ಲಿ ಫಲಫಲಿಭಾವವನ್ನು ಹೇಳುತ್ತಾರೆ. ಆದರೆ ಇಲ್ಲಿ ಮಾತ್ರ ನಾಲ್ಕು ಸಂಶಯಗಳನ್ನು ತೋರಿಸಿ, ಕೊನೆಯ ಸಂಶಯವನ್ನು ತೋರಿಸುವ ಮೊದಲೇ ಫಲಫಲಿಭಾವವನ್ನು ಗ್ರಂಥಕಾರರು 'तदर्थमुत्क्रान्त' ಎಂದು ತೋರಿಸಿದ್ದಾರೆ. ಇದರ ಆಂತರ್ಯವೇನೆಂದರೆ ಭೂಯಸ್ತ್ವಾನುಕ್ತಿಯೆಂಬ ಪೂರ್ವಪಕ್ಷಯಯುಕ್ತಿಯು ಪೂರ್ವಪಕ್ಷದಲ್ಲಿ ಯುಕ್ತವಾಗುತ್ತದೆಂದು ತೋರಿಸಬೇಕಾಗಿರುವುದು.

प्रकाशः – ''उत्क्रान्तः प्राणो येषां तानुत्क्रान्तप्राणान् । शूलेन समासं व्यतिषन्दहेत् । नैवैनं ब्रूयुः पितृहाऽसीति मातृहाऽसि'' इति प्राणप्रकरणे प्राणस्यान्वयव्यतिरेकाभ्यां जीवनदत्वमुपपादयितुं श्रुतमुत्क्रमणमित्यर्थः ।

'उत्क्रान्तः प्राणो येषां तानुत्क्रान्तप्राणान् । शूलेन समासं व्यतिषन्दहेत् । नैवैनं ब्रूयुः पितृहाऽसीति मातृहाऽसि' ಯಾರ ದೇಹದಿಂದ ಪ್ರಾಣನು ಉತ್ಕ್ರಾಂತನಾಗಿರುತ್ತಾನೋ ಅಂತಹ ತಂದೆ ಅಥವಾ ತಾಯಿಯ ಶರೀರವನ್ನು ಶೂಲದಿಂದ ಘಾಸಿಗೊಳಿಸಿದರೂ, ಅಥವಾ ಸುಟ್ಟರೂ, ತಂದೆಯನ್ನು ಕೊಂದವನು, ತಾಯಿಯನ್ನು ಕೊಂದವನು ಎಂದು ಯಾರೂ ಹೇಳುವುದಿಲ್ಲ. ಹೀಗೆ ಪ್ರಾಣಪ್ರಕರಣದಲ್ಲಿ ಪ್ರಾಣನ ಅನ್ವಯವ್ಯತಿರೇಕಗಳಿಂದ ಜೀವನ ಇರುವಿಕೆ ಹಾಗೂ ಇಲ್ಲದಿರುವಿಕೆಯನ್ನು ಸಮರ್ಥಿಸಿದ್ದಾರೆ. ಇದನ್ನು ಉಪಪಾದಿಸುವುದಕ್ಕಾಗಿ 'उत्क्रमणम्' ಎಂದು ಹೇಳಿದ್ದಾರೆ.

प्रकाशः – नन्वेवमुत युक्तेत्यन्तचिन्तात्रयं प्रदर्श्य पश्चाद्भूमा मुख्यवायुरुत विष्णुरिति चिन्ता । तदर्थं प्रक्रमे श्रुतः प्राणः किं मुख्यवायुरुत ब्रह्मेति । तदर्थमुत्क्रान्तेत्यादिचिन्तेत्यपि चिन्तात्रयं प्रदर्शनीयमिति चेत् ।

ಹೀಗೆ ಚಿಂತಾಕ್ರಮವನ್ನು ತೋರಿಸುವ ಪಕ್ಷದಲ್ಲಿ 'उत युक्ता' ಎಂಬ ಮೂರು ಸಂಶಯಗಳನ್ನು ತೋರಿಸಿದ ಮೇಲೆ ಭೂಮನು ಮುಖ್ಯಪ್ರಾಣನೋ? ಅಥವಾ ವಿಷ್ಣುವೋ? ಎಂಬ ಶಂಕಾ, ಇದರ ಪರಿಹಾರಕ್ಕಾಗಿ ಉಪಕ್ರಮದಲ್ಲಿ ಶ್ರುತನಾದ ಪ್ರಾಣನು ಮುಖ್ಯಪ್ರಾಣನೋ? ಅಥವಾ ಬ್ರಹ್ಮನೋ? ಎಂಬ

ಚಿಂತಾ ಇದಕ್ಕಾಗಿ 'ಉತ್ಕ್ರಾಂತ' ಇತ್ಯಾದಿ ವಾಕ್ಯದಿಂದ ಪ್ರತಿಪಾದ್ಯನು ಯಾರು ಎಂಬ ಚಿಂತಾ. ಹೀಗೆ ಮತ್ತೂ ಸಹ ಮೂರು ಚಿಂತೆಗಳನ್ನು ತೋರಿಸಬೇಕಿತ್ತು. ಆದರೆ ಗ್ರಂಥಕಾರರು ಇದನ್ನು ಏಕೆ ತೋರಿಸಿಲ್ಲ?

ಪ್ರಕಾಶಃ – ಮೈವಮ್ । ಯದಿ ಪ್ರಾಣಭೂಮ್ನೋರ್ಭೇದಾಭೇದಪಕ್ಷೌ ವ್ಯವತಿಷ್ಠೇಯಾತಾಂ ತದೈವಂ ಭವೇತ್ । ನ ಚೈವಮ್ । ತಯೋರಗ್ರೇ ಟೀಕಾರೀತ್ಯಾ ಸಮುಚ್ಚಯೋಕ್ತೇಃ । ಅತ ಏಕಪ್ರಕಾರೇಣೈವ ಚಿನ್ತಾಪರಮ್ಪರೋಪದರ್ಶಿತಾ ।

ಹೀಗೆ ಪ್ರಶ್ನಿಸಬಾರದು. ಒಂದು ವೇಳೆ ಪ್ರಾಣ ಹಾಗೂ ಭೂಮಾ ಇಬ್ಬರಿಗೂ ಭೇದವಿದೆ ಅಥವಾ ಅಭೇದವಿದೆ ಎಂಬೆರಡು ಪಕ್ಷಗಳನ್ನು ಅಂಗೀಕರಿಸಿದ್ದರೆ, ಆಗ ನೀವು ಹೇಳಿದಂತೆ ಪುನಃ ಮೂರು ಬಗೆಯ ಚಿಂತೆಗಳನ್ನು ತೋರಿಸಬಹುದಿತ್ತು. ಆದರೆ ಹಾಗಿಲ್ಲ, ಟೀಕೆಯ ಪ್ರಕಾರ ಮುಂದೆ ಹೇಳುವಂತೆ ಸಮುಚ್ಚಯಪಕ್ಷವನ್ನೇ ಸ್ವೀಕರಿಸಲಾಗಿದೆ. ಆದ್ದರಿಂದ ಗ್ರಂಥಕಾರರು ಒಂದೇ ಪ್ರಕಾರದಲ್ಲಿ ಸಂಶಯ ಪರಂಪರೆಯನ್ನು ತೋರಿಸಿದ್ದಾರೆ.

ಪ್ರಕಾಶಃ – ತಥಾ ಚಾಯಮರ್ಥಃ । ಯದಿ ಪ್ರಾಣೇ ಶ್ರುತಮುತ್ಕ್ರಮಣಲಿಙ್ಗಂ ವಕ್ಷ್ಯಮಾಣದಿಶಾ ಸರ್ವಗತೇ ಬ್ರಹ್ಮಣಿ ನ ಯುಕ್ತಂ ತದೋಪಕ್ರಮೇ ಶ್ರುತಸ್ಯ ಪ್ರಾಣಸ್ಯ ವಾಯುತ್ವಾತ್ತತೋऽಪಿ ಬ್ರಹ್ಮಣಃ ಶ್ರೇಷ್ಠತ್ವೇನ ಸಿದ್ಧಾನ್ತಿನೋಪಗತತ್ವಾತ್ಪ್ರಶ್ನಪ್ರತಿವಚನಾಭ್ಯಾಂ ಪ್ರಾಣಾದ್ಭೂಯಸ್ತ್ವಸ್ಯ ವಾಚ್ಯತ್ವೇನ ತದನುಕ್ತೇರಯುಕ್ತತ್ವಾತ್ತಸ್ಯೈವ ಪೂರ್ಣಸುಖತ್ವಂ ಭೂಮತ್ವಂ ಚೇತಿ ಪೂರ್ವಪಕ್ಷೇ ಫಲಮ್ ।

ಸಿದ್ಧಾಂತ ಹಾಗೂ ಪೂರ್ವಪಕ್ಷಗಳ ಫಲಫಲಿಭಾವವನ್ನು ಹೀಗೆ ತಿಳಿಯಬೇಕು - ಒಂದು ವೇಳೆ ಪ್ರಾಣನಲ್ಲಿ ಶ್ರುತವಾದ ಉತ್ಕ್ರಮಣಲಿಂಗವು ಮುಂದೆ ಹೇಳುವ ಪ್ರಕಾರ ಸರ್ವಗತನಾದ ಬ್ರಹ್ಮನಲ್ಲಿ ಅಯುಕ್ತವಾದರೆ ಆಗ, ಉಪಕ್ರಮದಲ್ಲಿ ಶ್ರುತನಾದ ಪ್ರಾಣನು ವಾಯುವೇ ಆಗುತ್ತಾನೆ. ಅಂತಹ ವಾಯುವಿಗಿಂತ ಬ್ರಹ್ಮನು ಶ್ರೇಷ್ಠನೆಂದು ಸಿದ್ಧಾಂತಿಯು ಒಪ್ಪಿರುವುದರಿಂದ ಪ್ರಶ್ನೆ ಹಾಗೂ ಉತ್ತರಗಳಿಂದ ಪ್ರಾಣನಿಗಿಂತ ಉತ್ತಮತ್ವವನ್ನು ಬ್ರಹ್ಮನಿಗೆ ಹೇಳಬೇಕು. ಆದರೆ ಹಾಗೆ ಉಪನಿಷತ್ತಿನಲ್ಲಿ ಹೇಳಿರುವುದಿಲ್ಲ. ಹೀಗೆ ಹೇಳದಿರುವಿಕೆಯಿಂದಲೇ ಮುಖ್ಯಪ್ರಾಣನಿಗೆ ಪೂರ್ಣಸುಖತ್ವವನ್ನು ಹಾಗೂ ಭೂಮತ್ವವನ್ನು ಹೇಳಬೇಕೆಂಬುದು ಪೂರ್ವಪಕ್ಷದ ಫಲ.

ಪ್ರಕಾಶಃ – ಯದಾ ತು ರೂಪವಿಶೇಷಾದಿನಾ ಯುಕ್ತಂ ತದಾ ಪ್ರಾಣಸ್ಯ ಬ್ರಹ್ಮತ್ವಾತ್ತ್ವಸ್ಮಾತ್ತ್ವಸ್ಯ ಭೂಯಸ್ತ್ವಾಯೋಗೇನ ತದನುಕ್ತೇರ್ಯುಕ್ತತ್ವಾತ್ಪೂರ್ಣಸುಖತ್ವಂ ಭೂಮತ್ವಂ ಚ ವಿಷ್ಣೋರೇವೇತಿ ಸಿದ್ಧಾನ್ತೇ ಫಲಮಿತಿ ।

ಒಂದು ವೇಳೆ ಭಗವಂತನ ಅನೇಕ ರೂಪಗಳ ಭೇದದಿಂದ ತನ್ನಿಂದಲೇ ತನಗೆ ಭೂಯಸ್ತ್ವವನ್ನು ಹೇಳಿದ್ದು ಯುಕ್ತವಾಗುವುದಾದರೆ ಪ್ರಾಣನೂ ಸಹ ಬ್ರಹ್ಮನೇ ಆಗುತ್ತಾನೆ. ಆವಾಗ ತನ್ನಿಂದಲೇ ತನಗೆ ಉತ್ತಮತ್ವವು ಬರುವುದಿಲ್ಲವಾದ್ದರಿಂದ ಭೂಯಸ್ತ್ವದ ಅನುಕ್ತಿಯು ಯುಕ್ತವಾಗುತ್ತದೆ. ಆದ್ದರಿಂದ ಪೂರ್ಣಸುಖತ್ವ ಹಾಗೂ ಭೂಮತ್ವಗಳೆರಡು ವಿಷ್ಣುವಿನಲ್ಲೇ ಬರುತ್ತದೆಂಬುದು ಸಿದ್ಧಾಂತದ ಫಲ.

ಪ್ರಕಾಶಃ – ನನ್ವೇವಂ ''ವ್ಯತಿಹಾರೋ ವಿಶಿಂಷನ್ತಿ ಹೀತರವತ್'' ಇತ್ಯೇತದವಕ್ತವ್ಯಂ ಪ್ರಾಪ್ನೋತಿ । ಮೈವಮ್ ।। ಭೇದಪಕ್ಷ ಏವ ತಸ್ಯ ಪ್ರವೃತ್ತೇಃ ।

ಭೂಮಾ ಹಾಗೂ ವಿಷ್ಣು ಇಬ್ಬರಿಗೂ ಐಕ್ಯವನ್ನು ಒಪ್ಪಿದರೆ 'ವ್ಯತಿಹಾರೋ ವಿಶಿಂಷಂತಿ ಹೀತರವತ್' ಎಂಬುದನ್ನು ಹೇಳುವ ಅವಶ್ಯಕತೆಯೇ ಇಲ್ಲ. ಇಬ್ಬರಿಗೂ ಐಕ್ಯವನ್ನು ಹೇಳಿದಾಗ ಭಾರತೀದೇವಿಗಿಂತ ವಿಷ್ಣುವೇ ಶ್ರೇಷ್ಠನೆಂದು ಹಾಗೂ ಪ್ರಾಣ ಹಾಗೂ ಬ್ರಹ್ಮ ಶಬ್ದಗಳಿಂದ ಅವನೇ ಪ್ರತಿಪಾದ್ಯನೆಂದು ನಿರ್ಣಯವಾಗುತ್ತದೆ. ಹೀಗಿರುವಾಗ ಪ್ರಶ್ನೋತ್ತರಗಳ ಆಧ್ಯಾಹಾರವು ಅನಾವಶ್ಯಕವಲ್ಲವೇ? ಎಂದು ಪ್ರಶ್ನಿಸಬಾರದು. ಏಕೆಂದರೆ ಭೇದಪಕ್ಷದಲ್ಲಷ್ಟೇ 'ವ್ಯತಿಹಾರೋ ವಿಶಿಂಷಂತಿ ಹೀತರವತ್' ಎಂಬುದು ಪ್ರವೃತ್ತವಾಗಿದೆ. ಭೂಮಾ ಹಾಗೂ ಪ್ರಾಣ ಇಬ್ಬರೂ ಸಹ ಬೇರೆಯೆಂದು ವಿವಕ್ಷಿಸಿದಾಗ ಪ್ರಶ್ನೋತ್ತರಗಳ ಅನಿವಾರ್ಯತೆ ಇರುತ್ತದೆ.

ಪ್ರಕಾಶಃ – ಅಭೇದಪಕ್ಷೇऽಪಿ ಪ್ರಾಣಾನ್ತರ್ಯಾಮಿತಯೈವಾತ್ರ ಪ್ರಾಣಪದೇನ ಬ್ರಹ್ಮಣಃ ಸ್ವೀಕಾರೇಣ ಪ್ರಾಣಶಬ್ದಸ್ಯ ಮುಖ್ಯಪ್ರಾಣಾರ್ಥಕತ್ವಸ್ಯಾಪಿ ಭಾವೇನ ಭೂಮ್ನಃ ಕೇವಲಬ್ರಹ್ಮಮಾತ್ರತ್ವಸಿದ್ಧಯೇ ಪ್ರಾಣಾಸಾಙ್ಕರ್ಯಾಯ ವ್ಯತಿಹಾರಸ್ಯಾವಶ್ಯಂ ವಾಚ್ಯತ್ವಾಚ್ಚೇತಿ ।

ಇನ್ನು ಪ್ರಾಣ ಹಾಗೂ ಬ್ರಹ್ಮ ಇಬ್ಬರಿಗೂ ಅಭೇದವನ್ನು ಒಪ್ಪಿದಾಗ ಪ್ರಾಣಪದವು ನೇರವಾಗಿ ಬ್ರಹ್ಮನನ್ನೇ ಪ್ರತಿಪಾದಿಸುವುದಿಲ್ಲ ಹೊರತಾಗಿ, ಮುಖ್ಯಪ್ರಾಣನ ಅಂತರ್ಯಾಮಿಯಾದ ಬ್ರಹ್ಮನನ್ನು ಪ್ರತಿಪಾದಿಸುತ್ತದೆಂದು ಸಿದ್ಧಾಂತದಲ್ಲಿ ಒಪ್ಪಲಾಗಿದೆ. ಆದ್ದರಿಂದ ಪ್ರಾಣಶಬ್ದಕ್ಕೆ ಮುಖ್ಯಪ್ರಾಣನೆಂಬರ್ಥವೂ ಸಹ ಇರುವುದರಿಂದ; ಕೇವಲ ಬ್ರಹ್ಮನನ್ನು ಪ್ರತಿಪಾದಿಸುವುದಕ್ಕಾಗಿ 'ಭೂಮಾ' ಎಂಬ ಶಬ್ದವನ್ನು ಪ್ರಯೋಗಿಸಲಾಗಿದೆ. ಆದ್ದರಿಂದ 'ಪ್ರಾಣ' ಎಂಬ ಶಬ್ದವು ಮುಖ್ಯಪ್ರಾಣ ಹಾಗೂ ಬ್ರಹ್ಮ ಇಬ್ಬರನ್ನೂ ಪ್ರತಿಪಾದಿಸಿದರೆ 'ಭೂಮಾ' ಎಂಬ ಶಬ್ದವು ಬ್ರಹ್ಮನನ್ನು ಮಾತ್ರ ಪ್ರತಿಪಾದಿಸುತ್ತದೆ. ಹೀಗೆ ಪ್ರಾಣನಿಂದ ಸಾಂಕರ್ಯಬರಬಾರದೆಂದು ವ್ಯತಿಹಾರವನ್ನು ಅವಶ್ಯವಾಗಿ ಹೇಳಬೇಕು.

ಪ್ರಕಾಶಃ – ನನ್ವೇವಂ ಪ್ರಾಣ ಏವ ಸಂಶಯಧರ್ಮೀ ಕ್ರಿಯತಾಮ್ । ಸೂತ್ರೇ ಚ ಪ್ರಾಣಪದಮೇವ ನಿವೇಶ್ಯತಾಮ್ । ತಭಯತ್ರಪ್ರಸಿದ್ಧಿಶ್ಚ ಪ್ರಾಣಪದಸ್ಯ ''ಆಕಾಶೋऽರ್ಥಾನ್ತರತ್ವಾದಿ'' ಇತ್ಯಾದಾವಾಕಾಶಾದಿಶಬ್ದಸ್ಯೇವ ಪೂರ್ವೋಕ್ತ್ಯನ್ಯತ್ರಪ್ರಸಿದ್ಧಿಭ್ಯಾಂ ಭವಿಷ್ಯತಿ ।

ಆಕ್ಷೇಪ - ಪ್ರಾಣಶಬ್ದವನ್ನು ವಿಷ್ಣುವಿನಲ್ಲಿ ಸಮನ್ವಯ ಮಾಡುವುದಾದರೆ ಸೂತ್ರದಲ್ಲಿ ಪ್ರಾಣನನ್ನೇ ಸಂಶಯಧರ್ಮಿಯನ್ನಾಗಿ ಮಾಡಬಹುದಿತ್ತಲ್ಲವೇ ಎಂದರೆ 'ಭೂಮಾಸಂಪ್ರಸಾದಾತ್ ಅಧ್ಯುಪದೇಶಾತ್' ಎಂದು ಹೇಳುವ ಬದಲು 'ಪ್ರಾಣಸಂಪ್ರಸಾದಾತ್ ಅಧ್ಯುಪದೇಶಾತ್' ಎಂದೇ ಹೇಳಬಹುದಿತ್ತು. ಹೀಗೆ ಪ್ರಾಣಪದವನ್ನು ಸೂತ್ರದಲ್ಲಿ ಹೇಳುವುದರಿಂದ ಉಭಯತ್ರಪ್ರಸಿದ್ಧವಾಗಿದೆಯೆಂಬ ವಿಚಾರವು ಸುಲಭವಾಗಿ ತಿಳಿಯುತ್ತದೆ. ಏಕೆಂದರೆ 'ಆಕಾಶೋऽರ್ಥಾಂತರತ್ವಾದಿವ್ಯಪದೇಶಾತ್' ಇತ್ಯಾದಿ ಸೂತ್ರದಲ್ಲಿ ಆಕಾಶಶಬ್ದವು ಹೇಗೆ ಉಭಯತ್ರಪ್ರಸಿದ್ಧವಾಗಿದೆಯೋ ಅದರಂತೆ ಪ್ರಾಣಪದವೂ ಸಹ ಉಭಯತ್ರಪ್ರಸಿದ್ಧವಾಗಿದೆ. ಎಂದರೆ

ಪ್ರಥಮ ಪಾದದಲ್ಲಿ ಸಮನ್ವಯ ಮಾಡಲ್ಪಟ್ಟ ಆಕಾಶಶಬ್ದವು ವಿಷ್ಣುಪರವಾಗಿದೆಯೆಂಬುದನ್ನು ವಿವಕ್ಷಿಸಿ ಲೋಕತಃ ಅನ್ಯತ್ರಪ್ರಸಿದ್ಧವೂ ಆಗಿದೆಯೆಂಬ ವಿವಕ್ಷೆಯಿಂದ ಆಕಾಶಶಬ್ದವನ್ನು ಉಭಯತ್ರಪ್ರಸಿದ್ಧವೆಂದು ಪರಿಗಣಿಸಲಾಗಿದೆ. ಆದರಂತೆ 'ಆತ ಏವ ಪ್ರಾಣಃ' ಎಂಬ ಸೂತ್ರದಲ್ಲಿ ವಿಷ್ಣುವಿನಲ್ಲಿ 'ಪ್ರಾಣ' ಎಂಬ ಪದವನ್ನು ಸಮನ್ವಯ ಮಾಡಲಾಗಿದೆ. ಲೋಕರೂಢಿಯಿಂದ ಮುಖ್ಯಪ್ರಾಣನಲ್ಲಿಯೂ ಪ್ರಸಿದ್ಧವಾಗಿದೆ. ಹೀಗೆ ಉಭಯತ್ರಪಸಿದ್ಧವಾಗುವ ಪ್ರಯುಕ್ತ ಇದರ ಸಮನ್ವಯವೇ ಹೆಚ್ಚು ಸೂಕ್ತವಾಗುತ್ತದೆ.

ಪ್ರಕಾಶಃ – नायं प्राणो ब्रह्म उत्क्रमणलिङ्गादिति पूर्वपक्षश्च ऋजुः । भूमा न विष्णुः तदभिन्नप्राणे श्रुतोत्क्रमणविरोधादित्युक्तिर्वक्रा ।

ಮತ್ತು ಈ ಪ್ರಾಣನು ಬ್ರಹ್ಮನಲ್ಲ. ಏಕೆಂದರೆ ಉತ್ಕ್ರಮಣಾದಿಲಿಂಗಗಳು ಕೇಳಿಸುತ್ತಿರುವುದರಿಂದ ಎಂದು ಪೂರ್ವಪಕ್ಷವನ್ನು ಸುಲಭವಾಗಿಯೇ ಮಾಡಬಹುದು. ಒಂದು ವೇಳೆ ಭೂಮಶಬ್ದವನ್ನು ಸಮನ್ವಯ ಮಾಡುವುದಾದರೆ ಭೂಮನು ವಿಷ್ಣುವಲ್ಲ. ಏಕೆಂದರೆ ಭೂಮನಿಗಿಂತ ಅಭಿನ್ನನಾದ ಪ್ರಾಣನಲ್ಲಿ ಉತ್ಕ್ರಮಣಾದಿಲಿಂಗಗಳು ಶ್ರುತವಾಗಿದೆ. ಆ ಲಿಂಗಗಳಿಂದ ವಿರೋಧ ಬರುತ್ತದೆಂದು ಪೂರ್ವಪಕ್ಷ ಮಾಡುವುದು ವಕ್ರವಾಗಿದೆ.

ಪ್ರಕಾಶಃ – प्राणस्याविष्णुत्वात् तत्प्रकरणस्थभूम्नः पूर्णसुखस्य च अविष्णुत्वादानन्दमयोऽपि न विष्णुरिति पूर्वाक्षेपश्च भविष्यति ।

ಮತ್ತು ಪ್ರಾಣನು ವಿಷ್ಣುವಲ್ಲದ ಕಾರಣ ಪ್ರಾಣ ಪ್ರಕರಣದಲ್ಲಿರುವ ಭೂಮಾ ಹಾಗೂ ಪೂರ್ಣಸುಖಗಳೂ ಸಹ ವಿಷ್ಣುವಾಗಲು ಸಾಧ್ಯವಿಲ್ಲ. ಆದ್ದರಿಂದಲೇ ಆನಂದಮಯನೂ ಸಹ ವಿಷ್ಣುವಾಗುವುದಿಲ್ಲವೆಂದು ಹಿಂದಿನ ಅಧಿಕರಣದ ಮೇಲೆ ಆಕ್ಷೇಪಿಸಿ ಪೂರ್ವಪಕ್ಷವನ್ನು ಮಾಡಬಹುದು.

ಪ್ರಕಾಶಃ – यथा छन्दोनये गायत्र्या अविष्णुत्वात्तदभिन्नस्य ''परो दिवो ज्योतिर्दीप्यते'' इति ज्योतिषस्तथात्वेन ''ज्योतिर्हृदय आहितं यत्'' इत्युक्त-ज्योतिषोऽप्यविष्णुत्वमिति तद्वदिति चेत्

ಉದಾಹರಣೆ : ಗಾಯತ್ರ್ಯಧಿಕರಣದಲ್ಲಿ 'ಛಾಂದೋಽಭಿಧಾನಾತ್' ಎಂಬ ಸೂತ್ರದಲ್ಲಿ ಗಾಯತ್ರಿಯು ವಿಷ್ಣುವಲ್ಲದ ಕಾರಣ ಗಾಯತ್ರಿಯಿಂದ ಅಭಿನ್ನನಾದ 'ಪರೋ ದಿವೋ ಜ್ಯೋತಿರ್ದಿಪ್ಯತೇ' ಇತ್ಯಾದಿ ಶ್ರುತಿಗಳಿಂದ ಪ್ರತಿಪಾದ್ಯನಾದ ಜ್ಯೋತಿಯೂ ಸಹ ವಿಷ್ಣುವಾಗುವುದಿಲ್ಲ. ಆದ್ದರಿಂದ 'ಜ್ಯೋತಿರ್ಹೃದಯ ಆಹಿತಂ ಯತ್' ಎಂಬಲ್ಲಿ ಹೇಳಲ್ಪಟ್ಟ ಜ್ಯೋತಿಯು ವಿಷ್ಣುವಲ್ಲವೆಂದು ಹೇಗೆ ಪೂರ್ವಪಕ್ಷ ಮಾಡಲಾಗಿದೆಯೋ ಆದರಂತೆ ಇಲ್ಲಿಯೂ ಸಹ ತಿಳಿಯಬೇಕು. ಈ ಎಲ್ಲ ಕಾರಣಗಳಿಂದ ಸೂತ್ರದಲ್ಲಿ 'ಭೂಮಾ' ಎಂಬ ಪದವನ್ನು ಹೇಳುವುದಕ್ಕಿಂತ 'ಪ್ರಾಣ' ಎಂಬ ಪದವನ್ನು ಹೇಳುವುದೇ ಸ್ವರಸವಾಗುತ್ತದಲ್ಲವೇ?

प्रकाशः – मैवम् । भूम्न उक्तौ प्रागसमन्वितशब्दसमन्वयलाभात् पूर्वाक्षेपस्य साक्षादेव सम्भवात्,

ಸಮಾಧಾನ - ಇದು ತಪ್ಪು. ಪ್ರಾಣ ಪದವನ್ನು ಸೂತ್ರದಲ್ಲಿ ಹೇಳದೇ 'ಭೂಮಾ' ಎಂಬ ಪದವನ್ನು ಸೂತ್ರದಲ್ಲಿ ಹೇಳಿದ್ದರಿಂದ ಹಿಂದೆ ಸಮನ್ವಯ ಮಾಡದ 'ಭೂಮಾ' ಎಂಬ ಹೊಸದೊಂದು ಶಬ್ದವನ್ನು ವಿಷ್ಣುವಿನಲ್ಲಿ ಸಮನ್ವಯ ಮಾಡಿದಂತಾಗುತ್ತದೆ. ಮತ್ತು ಹಿಂದಿನ ಅಧಿಕರಣದಲ್ಲಿ ಹೇಳಲ್ಪಟ್ಟ ದ್ಯುಭ್ವಾದ್ಯಾಯತನತ್ವಾದಿಗಳು ಭೂಮನಲ್ಲಿ ಕೇಳಿಸುತ್ತಿರುವುದರಿಂದ ಪೂರ್ವಾಧಿಕರಣಗಳಿಂದ ಆಕ್ಷೇಪವನ್ನು ನೇರವಾಗಿಯೇ ಮಾಡಬಹುದು.

प्रकाशः – चन्द्रिकोक्तदिशा पूर्वाधिकरणसङ्गतिसौकर्यात् सम्प्रसादाध्युपदेश-धर्मोपपत्तीनां सिद्धान्तहेतूनां भूमवाक्य एव श्रवणात्

ಮತ್ತು ಗ್ರಂಥದಲ್ಲಿ ಹೇಳಿದ ಪ್ರಕಾರ ಹಿಂದಿನ ಅಧಿಕರಣದಿಂದ ಸಂಗತಿಯು ಸ್ಪಷ್ಟವಾಗಿ ತಿಳಿಯುತ್ತದೆ. ಅಷ್ಟೇ ಅಲ್ಲದೆ, ಸೂತ್ರದಲ್ಲಿ ಹೇಳಲ್ಪಟ್ಟ 'ಸಂಪ್ರಸಾದ' ಹಾಗೂ 'ಅಧ್ಯುಪದೇಶ' ಮೊದಲಾದ ಸಿದ್ಧಾಂತ ಹೇತುಗಳೆಲ್ಲವೂ ಭೂಮವಾಕ್ಯದಲ್ಲಿಯೇ ಶ್ರುತವಾಗುತ್ತಿವೆ.

प्रकाशः – सिद्धान्तेऽपि प्राणशब्दस्य मुख्यवायुपरत्वात्याजनाच्चान्तरनयेऽक्षिस्थ इव भूमैव प्राधान्येन चिन्तितो न प्राण इति ।

ಮತ್ತೊಂದು ಗಮನಿಸಬೇಕಾದ ವಿಚಾರವೆಂದರೆ - ಈ ಅಧಿಕರಣದ ಸಿದ್ಧಾಂತದಲ್ಲಿ ಪ್ರಾಣಶಬ್ದವು ಮುಖ್ಯಪ್ರಾಣನನ್ನು ಪ್ರತಿಪಾದಿಸುವುದಿಲ್ಲವೆಂದೇನೂ ಅಂಗೀಕರಿಸಿಲ್ಲ. ನಾಲ್ಕನೆಯ ಪಾದದಲ್ಲಿ ಮಾತ್ರ ಸಕಲ ಶಬ್ದಗಳೂ ಪರಮಾತ್ಮನನ್ನು ಮಾತ್ರ ಪ್ರತಿಪಾದಿಸುತ್ತವೆಂದು ಸಾಧಿಸಲಾಗಿದೆ. ಮೊದಲ ಮೂರು ಪಾದಗಳಲ್ಲಿ ವಿಷ್ಣುಪರವಾಗುವಂತೆ ಬೇರೆ ಪದಾರ್ಥಗಳನ್ನೂ ಸಹ ಪ್ರತಿಪಾದಿಸುತ್ತವೆಂದು ಒಪ್ಪಲಾಗಿದೆ. ಆದ್ದರಿಂದ ಮುಖ್ಯವಾಗಿ ಪ್ರಾಣಾದಿಶಬ್ದಗಳಿಂದ ಭಗವಂತನು ಪ್ರತಿಪಾದ್ಯನಾದರೂ ಸಹ ಮುಖ್ಯಪ್ರಾಣಾದಿಗಳೂ ಸಹ ಅಮುಖ್ಯವಾಗಿ ಪ್ರತಿಪಾದ್ಯರಾಗುವುದರಿಂದ ಪ್ರಾಣಶಬ್ದದ ಉಲ್ಲೇಖವನ್ನು ಸೂತ್ರದಲ್ಲಿ ಮಾಡಿರುವುದಿಲ್ಲ. ಆದ್ದರಿಂದ ಅಂತರಾಧಿಕರಣದಲ್ಲಿ ಆದಿತ್ಯಸ್ಥಸ್ತ್ವವೆಂಬ ಲಿಂಗವನ್ನು ಸಮನ್ವಯ ಮಾಡದೇ ಪ್ರಧಾನವಾಗಿ ಅಕ್ಷಿಸ್ಥಸ್ತ್ವವೆಂಬ ಲಿಂಗವನ್ನೇ ಸಮನ್ವಯ ಮಾಡಲು ಹೇಗೆ ಕಾರಣವಿದೆಯೋ ಅದರಂತೆ ಇಲ್ಲಿಯೂ ಸಹ ಪ್ರಾಣಶಬ್ದದ ಸಮನ್ವಯವನ್ನು ಮಾಡದೇ ಪ್ರಧಾನವಾಗಿ 'ಭೂಮಾ' ಎಂಬ ಶಬ್ದದ ಸಮನ್ವಯ ಮಾಡಲು ಕಾರಣವಿರುತ್ತದೆ. ಆದ್ದರಿಂದ ಸೂತ್ರಕಾರರು 'ಭೂಮಾ ಸಂಪ್ರದಾಸಾತ್' ಎಂದು ಹೇಳಿದ್ದು ಲಕ್ಷಣ ಯುಕ್ತವಾಗಿದೆ.

गुरुराजीयम् – ननु समाख्यावाक्ये विष्णोर्भूमत्वमुपेत्य विषयवाक्येऽन्यस्य भूमत्वमिति टीकाभिप्रेतमित्युक्तम् । तदयुक्तम् । तथा सति, 'अतो वायोरेव भूमत्वात्' इति पूर्वपक्षोपसंहारटीकाविरोधापातादित्यत आह – **टीकायामिति** ।।

विषयवाक्ये वायोरेव भूमत्वमित्यभिप्रायकल्पने सङ्कुचितत्वं सम्भवतीत्यस्वरसादाह – अत्रेति ।। नन्वेवं समाख्यावाक्ये विष्णोरेव भूमत्वमित्यभ्युपगम्य विषयवाक्येऽन्यस्यैव तदिति पूर्वपक्षकरणे पूर्णानन्दत्वस्य वाक्यान्तरे ब्रह्मनिष्ठत्वेन विष्णोरेवानन्दमयत्वेऽपि विषयवाक्येऽन्यस्य भूमत्वमिति पूर्वपक्षसम्भवाद्दीकायामानन्दमयोऽपीत्याक्षेपोऽनुपपन्न इत्यत आह – टीकोक्त इति ।। अवान्तरसङ्गतिस्त्विति।। उपलक्षणमेतत् । तस्याक्षेपेण समाधानाद्वा सर्वगतस्योत्क्रमणरूपमरणासम्भवात्पूर्वोक्तः 'स एषोऽन्तश्चरते बहुधा जायमानः' इति बहुधाजननं तत्सहपठितमन्तस्सञ्चरणं चाक्षिप्य समाधानाद्वाऽऽक्षेपिकी सङ्गतिः । पूर्वत्र जनिस्समर्थिता अत्र तूत्क्रान्तिरूपमृतिरिति देहयोगवियोगरूपोपजीव्योपजीवकभावरूपाऽवान्तरसङ्गतिरित्याद्यूह्यम् ।

ಸಾರ

ಸಿದ್ಧಾಂತ ಹಾಗೂ ಪೂರ್ವಪಕ್ಷಗಳ ಫಲಫಲಿಭಾವವನ್ನು ಹೀಗೆ ತಿಳಿಯಬೇಕು - ಒಂದು ವೇಳೆ ಪ್ರಾಣನಲ್ಲಿ ಶ್ರುತವಾದ ಉತ್ತಮಣಲಿಂಗವು ಮುಂದೆ ಹೇಳುವ ಪ್ರಕಾರ ಸರ್ವಗತನಾದ ಬ್ರಹ್ಮನಲ್ಲಿ ಆಯುಕ್ತವಾದರೆ ಉಪಕ್ರಮದಲ್ಲಿ ಶ್ರುತನಾದ ಪ್ರಾಣನು ವಾಯುವೇ ಆಗುತ್ತಾನೆ. ಅಂತಹ ವಾಯುವಿಗಿಂತ ಬ್ರಹ್ಮನು ಶ್ರೇಷ್ಠನೆಂದು ಸಿದ್ಧಾಂತಿಯು ಒಪ್ಪಿರುವುದರಿಂದ ಪ್ರಶ್ನ ಹಾಗೂ ಉತ್ತರಗಳಿಂದ ಪ್ರಾಣನಿಗಿಂತ ಉತ್ತಮತ್ವವನ್ನು ಬ್ರಹ್ಮನಿಗೆ ಹೇಳಬೇಕು. ಆದರೆ ಹಾಗೆ ಉಪನಿಷತ್ತಿನಲ್ಲಿ ಹೇಳಿರುವುದಿಲ್ಲ. ಹೀಗೆ ಹೇಳದಿರುವಿಕೆಯೇ ಮುಖ್ಯಪ್ರಾಣನಿಗೆ ಪೂರ್ಣಸುಖತ್ವವನ್ನು ಹಾಗೂ ಭೂಮತ್ವವನ್ನು ಹೇಳಬೇಕೆಂಬುದಕ್ಕೆ ಗಮಕ ಎಂದು ಪೂರ್ವಪಕ್ಷಕಾರರ ಆಶಯ.

ಒಂದು ವೇಳೆ ಭಗವಂತನ ಅನೇಕ ರೂಪಗಳ ಭೇದದಿಂದ ತನ್ನಿಂದಲೇ ತನಗೆ ಭೂಯಸ್ತ್ವವನ್ನು ಹೇಳಿದ್ದು ಯುಕ್ತವಾಗುವುದಾದರೆ ಪ್ರಾಣನೂ ಸಹ ಬ್ರಹ್ಮನೇ ಆಗುತ್ತಾನೆ. ಆಗ ತನ್ನಿಂದಲೇ ತನಗೆ ಉತ್ತಮತ್ವವು ಬರುವುದಿಲ್ಲವಾದ್ದರಿಂದ ಭೂಯಸ್ತ್ವದ ಆನುಕ್ತಿಯು ಯುಕ್ತವಾಗುತ್ತದೆ. ಆದ್ದರಿಂದ ಪೂರ್ಣಸುಖತ್ವ ಹಾಗೂ ಭೂಮತ್ವಗಳೆರಡೂ ವಿಷ್ಣುವಿನಲ್ಲೇ ಬರುತ್ತದೆಂಬುದು ಸಿದ್ಧಾಂತದ ಉದ್ದೇಶ.

ಮುಖ್ಯಪ್ರಾಣನೇ ಭೂಮನು
(ಪ್ರಥಮ ಪೂರ್ವಪಕ್ಷ)

तात्पर्यचन्द्रिका

पूर्वपक्षस्तु । भूमा मुख्यवायुरेव । ''प्राणो वा आशाया भूयान्'' इति प्राणशब्देनोपक्रमात् ।

ಅನುವಾದ - ಮುಖ್ಯಪ್ರಾಣನೇ ಭೂಮನಾಗಿದ್ದಾನೆ. ಏಕೆಂದರೆ 'ಪ್ರಾಣೋ ವಾ ಆಶಾಯಾ ಭೂಯಾನ್' ಎಂಬುದಾಗಿ ಪ್ರಾಣಶಬ್ದದಿಂದಲೇ ಪ್ರಕರಣವು ಪ್ರಾರಂಭವಾಗುತ್ತಿದೆ.

भूम्नो ब्रह्मत्वं हि द्वेधा भवेत् । प्राणो वायुरेव भूमा तु ब्रह्मेति प्राणभूम्नोर्भेदेन वा प्राणो भूमा च ब्रह्मैवेति तयोरभेदेन वा ।

ಎರಡು ಪ್ರಕಾರದಲ್ಲಿ ಭೂಮನನ್ನು ಬ್ರಹ್ಮನೆಂದು ಹೇಳಬಹುದು. ೧. ಪ್ರಾಣನು ವಾಯುವೇ ಆಗಿದ್ದಾನೆ. ಹಾಗೂ ಭೂಮನು ಮಾತ್ರ ಬ್ರಹ್ಮನೇ ಆಗಿದ್ದಾನೆ. ಹೀಗೆ ಪ್ರಾಣ ಹಾಗೂ ಭೂಮಾ ಇಬ್ಬರಿಗೂ ಭೇದವೇ ಇರುತ್ತದೆ.

೨. ಪ್ರಾಣ ಹಾಗೂ ಭೂಮಾ ಇಬ್ಬರೂ ಸಹ ಬ್ರಹ್ಮರೇ ಆಗಿದ್ದಾರೆ. ಪ್ರಾಣ ಹಾಗೂ ಭೂಮರಿಗೆ ಅಭೇದವೇ ಇರುತ್ತದೆ. ಈ ಎರಡು ಪಕ್ಷಗಳಲ್ಲಿ ಯಾವುದನ್ನು ಒಪ್ಪುತ್ತೀರಿ?

नायः । प्राणादुत्तममनुक्त्वा भूम्न आम्नानात् यदि हि नामादिभ्यो वागादिवत्प्राणाद्भूमाऽन्यः स्यात्तदा ''अस्ति भगवो नाम्नो भूयः'' इत्यादिप्रश्नवत् ''वाग्वाव नाम्नो भूयसी'' इत्यादिप्रतिवचनवच्च 'अस्ति भगवः प्राणाद्भूयः' इति प्रश्नः 'भूमा वाव प्राणाद्भूयान्' इति प्रतिवचनं च स्यात् ।

ಪ್ರಥಮಪಕ್ಷವು ಅಯುಕ್ತವಾಗಿದೆ. ಪ್ರಾಣ ಹಾಗೂ ಭೂಮಾ ಇಬ್ಬರಿಗೂ ಭೇದವಿರುವುದಾದರೆ ಪ್ರಾಣನಿಗಿಂತ ಉತ್ತಮನಿದ್ದಾನೆಂದು ಹೇಳದೇ ಭೂಮನನ್ನು ಶ್ರುತಿಯು ಹೇಳುತ್ತಿದೆ. ಒಂದು ವೇಳೆ ನಾಮಾದಿಗಳಿಗಿಂತ ವಾಗಾದಿಗಳು ಭಿನ್ನವಾದ್ದರಿಂದ ಹೇಗೆ ಉತ್ತಮವಾಗಿವೆಯೋ ಆದರಂತೆ ಪ್ರಾಣನಿಗಿಂತ ಭೂಮನು ಅನ್ಯನಾಗಿದ್ದರೆ ಆವಾಗ 'ಅಸ್ತಿ ಭಗವೋ ನಾಮ್ನೋ ಭೂಯಃ' ನಾಮಕ್ಕಿಂತ ಶ್ರೇಷ್ಠವಾದದ್ದು ಇದೆಯೇನು? ಎಂದು ಪ್ರಶ್ನಿಸುವಂತೆ ಮತ್ತು 'ವಾಗ್ವಾವ ನಾಮ್ನೋ ಭೂಯಸೀ' ನಾಮಕ್ಕಿಂತ ವಾಕ್ ಎಂಬುದು ಶ್ರೇಷ್ಠವಾಗಿದೆಯೆಂದು ಉತ್ತರಿಸುವಂತೆ ಪ್ರಕೃತದಲ್ಲಿಯೂ 'ಅಸ್ತಿ ಭಗವಃ ಪ್ರಾಣಾತ್ ಭೂಯಃ' ಪ್ರಾಣನಿಗಿಂತ ಉತ್ತಮವಾದ ವಸ್ತುವಿದೆಯೇನು ? ಎಂಬ ಪ್ರಶ್ನೆಯನ್ನು ಮತ್ತು

'ಭೂಮಾ ವಾವ ಪ್ರಾಣಾದ್ ಭೂಯಾನ್' ಪ್ರಾಣನಿಗಿಂತ ಭೂಮನೇ ಉತ್ತಮನಾಗಿದ್ದಾನೆಂಬ ಉತ್ತರವನ್ನೂ ಸಹ ಹೇಳಬೇಕಾಗಿತ್ತು.

भूम्नः सर्वोत्तमत्वार्थमेव नामवागादितारतम्यस्य प्रक्रान्तत्वात् । नच यदर्थमन्यत्प्रक्रान्तं तदनुक्तिर्युक्ता ।

ಭೂಮನು ಸರ್ವೋತ್ತಮನಾಗಿದ್ದಾನೆಂದು ಸಾಧಿಸುವುದಕ್ಕಾಗಿಯೇ ನಾಮ, ವಾಕ್ ಇವುಗಳಿಗೆಲ್ಲಾ ತಾರತಮ್ಯವನ್ನು ಹೇಳಲಾಗಿದೆ. ಯಾವ ಸರ್ವೋತ್ತಮತ್ವದ ಪ್ರತಿಪಾದನೆಗಾಗಿ ತಾರತಮ್ಯವು ಹೇಳಲ್ಪಟ್ಟಿದೆಯೋ ಆದ್ದರಿಂದ ತಾರತಮ್ಯವನ್ನು ಹೇಳಲೇಬೇಕು. ಅಂತಹ ಸರ್ವೋತ್ತಮತ್ವವನ್ನೇ ಕೊನೆಗೆ ಪ್ರತಿಪಾದಿಸದಿದ್ದರೆ ತಾರತಮ್ಯ ಹೇಳಿದ್ದೇ ಅಯುಕ್ತವಾಗುತ್ತದೆ.

अत एव टीकायां ''तारतम्यमाशावसानमुक्त्वा'' इत्युक्तम् । तदुक्तं न्यायविवरणे ''प्राणो वा आशाया भूयानित्युक्त्वा प्राणाद्भूयसोऽनुक्तिः'' इति । विष्णुसमाख्या तु प्राणोपक्रमाद्दुर्बला ।

ಆದ್ದರಿಂದಲೇ ಟೀಕೆಯಲ್ಲಿ 'ತಾರತಮ್ಯಮಾಶಾವಸಾನಮುಕ್ತ್ವಾ' 'ಆಶಾ' ಎನಿಸಿದ ಭಾರತೀದೇವಿಯ ತನಕ ತಾರತಮ್ಯವನ್ನು ಹೇಳಿ' ಎಂದು ವ್ಯಾಖ್ಯಾನಿಸಿದ್ದಾರೆ. ಇದನ್ನು ನ್ಯಾಯವಿವರಣದಲ್ಲಿ 'ಪ್ರಾಣೋ ವಾ ಆಶಾಯಾ ಭೂಯಾನಿತ್ಯುಕ್ತ್ವಾ ಪ್ರಾಣಾದ್ಭೂಯಸೋऽನುಕ್ತಿಃ' ಎಂದರೆ ಪ್ರಾಣನು 'ಆಶಾ' ಎನಿಸಿದ ಭಾರತೀದೇವಿಗಿಂತ ಉತ್ತಮನೆಂದು ಹೇಳಿ ಪ್ರಾಣನಿಗಿಂತ ಮತ್ತೊಬ್ಬನು ಉತ್ತಮನೆಂದು ಹೇಳದಿರುವಿಕೆಯು' ಎಂದು ಹೇಳಿರುತ್ತಾರೆ.

ಮುಖ್ಯಪ್ರಾಣನ ವಿಷಯದಲ್ಲಿ ಉಪಕ್ರಮಪ್ರಮಾಣವಿರುವಂತೆ ವಿಷ್ಣುವಿನ ವಿಷಯದಲ್ಲೂ ಸಮಾಖ್ಯಾಪ್ರಮಾಣವಿದೆಯೆಂದು ಹೇಳಬಾರದು. ಉಪಕ್ರಮಕ್ಕಿಂತ ಸಮಾಖ್ಯೆಯು ದುರ್ಬಲವಾಗಿರುತ್ತದೆ.

प्रकाशः –

प्राणभूम्नोर्भेदपक्षेऽभेदपक्षे चानुक्तिरुत्क्रमणलिङ्गं च क्रमेण पूर्वपक्षप्रापके इति भावेन ''मुख्यप्राणोऽयं भूमेति पूर्वपक्षः'' इत्यादिटीकां विवृण्वन्पूर्वपक्षयति – पूर्वपक्षस्त्विति ।।

ವಿವರಣೆ - ಪ್ರಾಣ ಹಾಗೂ ಭೂಮಾ ಇಬ್ಬರಿಗೂ ಭೇದವಿರುವಪಕ್ಷದಲ್ಲಿ ಅನುಕ್ತಿಯು ಪೂರ್ವಪಕ್ಷಲಿಂಗವಾಗಿದೆ. ಅಭೇದ ಪಕ್ಷದಲ್ಲಿ ಉತ್ಕ್ರಮಣಲಿಂಗವೂ ಪೂರ್ವಪಕ್ಷಲಿಂಗವಾಗಿದೆ. ಈ

ಅಭಪ್ರಾಯದಿಂದ 'ಮುಖ್ಯಪ್ರಾಣೋಽಯಂ ಭೂಮೇತಿ ಪೂರ್ವಪಕ್ಷಃ' ಇತ್ಯಾದಿ ಟೀಕಾ ಮಾತುಗಳು ಹೊರಟಿರುತ್ತವೆಂದು 'ಪೂರ್ವಪಕ್ಷಸ್ತು' ಇತ್ಯಾದಿ ಗ್ರಂಥದಿಂದ ಪೂರ್ವಪಕ್ಷ ಮಾಡುತ್ತಿದ್ದಾರೆ.

ಪ್ರಕಾಶಃ – ನಾಮೇತ್ಯಾರಭ್ಯಾಭಿಧಾಯೇತ್ಯನ್ತಟೀಕಾಯಾಸ್ತಾತ್ಪರ್ಯೋಕ್ತಿಃ ಆಶಾಯಾ ಭೂಯಾನಿತಿ । ''ಪ್ರಾಣಶಬ್ದೇನೋಪಕ್ರಮಾತ್'' ಇತಿ ಟೀಕಾಯಾಮೇವಮನುಕ್ತ್ವಾऽನ್ಯಥೋಕ್ತೇರುಪಯೋಗೋऽಗ್ರೇ ಸ್ಪಷ್ಟಃ ।

'ನಾಮಾ' ಎಂಬಲ್ಲಿಂದ ಪ್ರಾರಂಭಿಸಿ 'ಅಭಿಧಾಯ' ಎಂಬಲ್ಲಿಯ ತನಕದ ಟೀಕಾವಾಕ್ಯಗಳ ತಾತ್ಪರ್ಯವನ್ನು 'ಆಶಾಯಾ ಭೂಯಾನ್' ಇತ್ಯಾದಿಯಾಗಿ ಹೇಳುತ್ತಿದ್ದಾರೆ. 'ಪ್ರಾಣಶಬ್ದೇನೋಪಕ್ರಮಾತ್' ಎಂದಷ್ಟೇ ಟೀಕೆಯಲ್ಲಿ ಹೇಳಿದ್ದರೆ ಸಾಕಾಗುತ್ತಿತ್ತು. ಸಂಪೂರ್ಣ ತಾರತಮ್ಯವನ್ನೆಲ್ಲಾ ಏಕೆ ಹೇಳಬೇಕು? ಎಂಬ ಪ್ರಶ್ನೆಗೆ 'ಅನುಕ್ತಿ' ಎಂಬ ಲಿಂಗವನ್ನು ಸ್ಪಷ್ಟವಾಗಿ ಸಾಧಿಸುವುದಕ್ಕಾಗಿ ಸಂಪೂರ್ಣ ತಾರತಮ್ಯವನ್ನು ಹೇಳಿದ್ದಾರೆಂಬ ವಿಚಾರವನ್ನು ಮುಂದೆ ಸ್ಪಷ್ಟಪಡಿಸಲಾಗುತ್ತದೆ.

ಪ್ರಕಾಶಃ – ''ತದುತ್ತಮಮನುಕ್ತ್ವಾ ಭೂಮ್ನ ಆಮ್ನಾತತ್ವಾತ್'' ಇತಿ ಟೀಕಾ ಪ್ರಾಣಭೂಮ್ನೋರ್ಭೇದಪಕ್ಷ ಏವ ಯೋಜ್ಯೇತಿ ಭಾವೇನ ವಿಕಲ್ಪಯತಿ – ಭೂಮ್ನ ಇತಿ ।। ''ತದುತ್ತಮಮ್'' ಇತ್ಯಾದಿಟೀಕಾಂ ಯೋಜಯತಿ – ನಾಥ ಇತ್ಯಾದಿನಾ ।।

'ತದುಕ್ತಮಮನುಕ್ತ್ವಾ ಭೂಮ್ನ ಆಮ್ನಾತತ್ವಾತ್'' ಪ್ರಾಣನಿಗಿಂತ ಉತ್ತಮನಿದ್ದಾನೆಂದು ಹೇಳದೆ ಭೂಮನನ್ನು ಹೇಳಿರುವುದರಿಂದ ಇತ್ಯಾದಿ ಟೀಕೆಯು, ಪ್ರಾಣ ಹಾಗೂ ಭೂಮಾ ಇಬ್ಬರ ಭೇದಪಕ್ಷದಲ್ಲಿ ಮಾತ್ರ ಉಪಪನ್ನವಾಗುತ್ತದೆಂಬ ವಿವಕ್ಷೆಯಿಂದ 'ಭೂಮ್ನಃ' ಇತ್ಯಾದಿಯಾಗಿ ವಿಕಲ್ಪ ಮಾಡುತ್ತಿದ್ದಾರೆ. 'ತದುತ್ತಮಮ್' ಇತ್ಯಾದಿ ಟೀಕೆಯನ್ನು 'ನಾದ್ಯಃ' ಇತ್ಯಾದಿ ಗ್ರಂಥದಿಂದ ಯೋಜನೆ ಮಾಡುತ್ತಿದ್ದಾರೆ.

ಪ್ರಕಾಶಃ – ನನು ಪ್ರಾಣಾದ್ಭೂಯಸೋऽನುಕ್ತಿರ್ನ ಪ್ರಾಣಸ್ಯ ಭೂಮತ್ವಸಾಧಿಕಾ । ವಿದ್ಯಮಾನಸ್ಯಾಪಿ ಪ್ರಾಣಾದುತ್ತಮಸ್ಯಾನುಕ್ತಿಸಮ್ಭವಾತ್ । ಅತೋऽಪ್ರಯೋಜಕೋ ಹೇತುರಿತ್ಯತ ಆಹ – ಭೂಮ್ನ ಇತಿ ।।

ಪ್ರಾಣನಿಗಿಂತ ಉತ್ತಮನಿದ್ದಾನೆಂದು ಹೇಳದಿರುವಿಕೆಯು ಪ್ರಾಣನಿಗೆ ಭೂಮತ್ವವನ್ನು ಸಾಧಿಸುವುದಿಲ್ಲ. ಏಕೆಂದರೆ ಪ್ರಾಣನಿಗಿಂತ ಮತ್ತೊಬ್ಬನು ಶ್ರೇಷ್ಠನಿದ್ದಾನೆ; ಆದರೆ ಅವನನ್ನು ಹೇಳದಿರಬಹುದು. ಆದ್ದರಿಂದ 'ಅನುಕ್ತಿ' ಎಂಬ ಲಿಂಗವು ಅಪ್ರಯೋಜಕವಾಗಿದೆಯಲ್ಲವೇ? ಎಂಬ ಪ್ರಶ್ನೆಗೆ 'ಭೂಮ್ನಃ' ಇತ್ಯಾದಿ ಗ್ರಂಥದಿಂದ ಉತ್ತರಿಸಿದ್ದಾರೆ.

ಪ್ರಕಾಶಃ – ಏವಂ ಭೂಯಸೋऽನುಕ್ತೇರ್ನಿರವಕಾಶತ್ವಮುಪಪಾದ್ಯ ಟೀಕಾರೂಢಂ ಕರೋತಿ – ಅತ ಏವೇತಿ ।। ಭೂಮ್ನಸ್ಸರ್ವೋತ್ತಮತ್ವಾರ್ಥಂ ತಾರತಮ್ಯಸ್ಯ ಪ್ರಕ್ರಾನ್ತತ್ವಾದೇವಾವಶ್ಯವಕ್ತವ್ಯತ್ವಸ್ಫೋರಣಾಯ ತಥೋಕ್ತಮಿತ್ಯರ್ಥಃ ।

ಹೀಗೆ ಉತ್ತಮತ್ವದ ಹೇಳದಿರುವಿಕೆಯು ನಿರವಕಾಶವಾದ ಲಿಂಗವಾಗಿದೆ ಎಂಬುದನ್ನು ಉಪಪಾದಿಸಿದಂತಾಯಿತು. ಇದನ್ನೇ 'ಅತ ಏವ' ಇತ್ಯಾದಿ ಗ್ರಂಥದಿಂದ ಟೀಕಾರೂಢ ಮಾಡುತ್ತಿದ್ದಾರೆ.

ಅಂದರೆ ಭೂಮನು ಸರ್ವೋತ್ತಮನಾಗಿದ್ದಾನೆಂದು ಸಾಧಿಸುವುದಕ್ಕಾಗಿ ತಾರತಮ್ಯವನ್ನು ಶ್ರುತಿಯು ಹೇಳಿದೆ. ಆದ್ದರಿಂದ ಅವಶ್ಯ ಹೇಳಲೇಬೇಕಾದ ಸರ್ವೋತ್ತಮತ್ವದ ಸಿದ್ಧಿಗಾಗಿ ಟೀಕೆಯಲ್ಲಿ ಹಾಗೇ ಹೇಳಿರುತ್ತಾರೆ.

ಪ್ರಕಾಶಃ – ಭಾಷ್ಯೇऽಪ್ರತೀತಾವಪಿ ಟೀಕಾಯಾಮೇವಮುಕ್ತೇರ್ಮೂಲಮಾಹ – **तदुक्तमिति ।। ''नच विष्णोरपि भूमत्वस्य'' इत्यादिटीकार्थमाह – विष्णुसमाख्या त्विति ।।**

ಭಾಷ್ಯದಲ್ಲಿ 'ಅನುಕ್ತಿ' ಎಂಬ ಲಿಂಗವನ್ನು ಹೇಳಿದ್ದು ಕಾಣಸುವುದಿಲ್ಲ. ಆದರೆ ನ್ಯಾಯವಿವರಣದಲ್ಲಿ ಹೇಳಿರುವುದರಿಂದ ಟೀಕೆಯಲ್ಲಿ ಅನುಕ್ತಿಯನ್ನು ಲಿಂಗವನ್ನಾಗಿ ವಿವಕ್ಷಿಸಿದ್ದಾರೆಂದು 'ತದುಕ್ತಮ್' ಇತ್ಯಾದಿ ಗ್ರಂಥದಿಂದ ಪ್ರತಿಪಾದಿಸುತ್ತಿದ್ದಾರೆ. 'ನಚ ವಿಷ್ಣೋರಪಿ ಭೂಮತ್ವಸ್ಯ' ಇತ್ಯಾದಿ ಟೀಕೆಯ ಅಭಿಪ್ರಾಯವನ್ನು 'ವಿಷ್ಣುಸಮಾಖ್ಯಾ ತು' ಇತ್ಯಾದಿ ವಾಕ್ಯದಿಂದ ವಿವರಿಸುತ್ತಿದ್ದಾರೆ.

ಪ್ರಕಾಶಃ – ननु समाख्याऽपि साभ्यासत्वादिना प्रबलेति चेन्न । निरवकाशानुक्तिसाहित्येन प्राणोपक्रमस्य ततोऽपि प्राबल्यमित्याशयात् ।

ವಿಷ್ಣುವಿಷಯಕವಾದ ಸಮಾಖ್ಯಾಪ್ರಮಾಣವೂ ಸಹ ಅಭ್ಯಾಸ, ಉಪಪತ್ತಿ ಮೊದಲಾದವುಗಳಿಂದ ಸಹಿತವಾಗಿ ಬಲಿಷ್ಠವೇ ಆಗಿದೆ. ಹೀಗಿರುವಾಗ ಸಮಾಖ್ಯಾಪ್ರಮಾಣವನ್ನು ದುರ್ಬಲವೆಂದು ಹೇಗೆ ಹೇಳುತ್ತೀರಿ? ಎಂದು ಪ್ರಶ್ನಿಸಬಾರದು. ನಿರವಕಾಶವಾದ ಅನುಕ್ತಿಯೆಂಬ ಲಿಂಗದ ಸಾಹಿತ್ಯದಿಂದ ಮುಖ್ಯಪ್ರಾಣನ ವಿಷಯದಲ್ಲಿರುವ ಉಪಕ್ರಮಪ್ರಮಾಣವೂ ಸಹ ಸೋಪಪತ್ತಿಕವಾದ ಸಮಾಖ್ಯಾಪ್ರಮಾಣಕ್ಕಿಂತಲೂ ಪ್ರಬಲವೇ ಆಗಿದೆಯೆಂದು ಅಭಿಪ್ರಾಯ.

ಸಾರ

ಮುಖ್ಯಪ್ರಾಣನೇ ಭೂಮನಾಗಿದ್ದಾನೆ. 'ಪ್ರಾಣೋ ವಾ ಆಶಾಯಾ ಭೂಯಾನ್' ಎಂಬ ಉಪಕ್ರಮ ಪ್ರಮಾಣವೇ ಈ ವಿಷಯದಲ್ಲಿ ಆಧಾರವಾಗಿದೆ. ಪ್ರಾಣ ಹಾಗೂ ಭೂಮಾ ಇಬ್ಬರಿಗೂ ಭೇದವನ್ನು ಹೇಳಬಾರದು. ಏಕೆಂದರೆ ಹಾಗೇನಾದರೂ ಭೇದವಿದ್ದಿದ್ದರೆ ಪ್ರಾಣನಿಗಿಂತ ಭೂಮನನ್ನು ಉತ್ತಮನೆಂದು ಹೇಳಬೇಕಿತ್ತು. ಆದರೆ ಹಾಗೆ ಹೇಳಿರುವುದಿಲ್ಲ. ಅಥವಾ ಪ್ರಾಣನಿಗಿಂತ ಉತ್ತಮನೊಬ್ಬ ಇದ್ದಾನೆಂಬ ಪ್ರಶ್ನೆಯನ್ನೂ ಸಹ ಮಾಡಿರುವುದಿಲ್ಲ. ಆದ್ದರಿಂದ ಮುಖ್ಯಪ್ರಾಣನೇ ಭೂಮನಾಗಿದ್ದಾನೆಂದು ಸ್ಪಷ್ಟವಾಗುತ್ತದೆ. ಇನ್ನು ವಿಷ್ಣುವಿನ ವಿಷಯದಲ್ಲಿಯೂ ಸಮಾಖ್ಯಾಪ್ರಮಾಣವಿದೆಯೆಂದು ಹೇಳಬಹುದು. ಆದರೆ ಉಪಕ್ರಮ ಹಾಗೂ ಸಮಾಖ್ಯಾಪ್ರಮಾಣಗಳೆರಡರ ಮಧ್ಯದಲ್ಲಿ ಉಪಕ್ರಮ ಪ್ರಮಾಣವೇ ಶ್ರೇಷ್ಠವಾಗಿರುತ್ತದೆ. ಆದ್ದರಿಂದ ವಿಷ್ಣುವಿನ ಸಮಾಖ್ಯಾಪ್ರಮಾಣವು ಇದನ್ನು ವಿರೋಧಿಸುವುದಿಲ್ಲ.

• • • • •

ಮುಖ್ಯಪ್ರಾಣದೇವರೇ ಭೂಮರೆಂದು ಭಾಷ್ಯದ ಪ್ರಕಾರ ಪೂರ್ವಪಕ್ಷ

तात्पर्यचन्द्रिका

न द्वितीयः । ''अत एव प्राणः'' इत्युक्तरीत्या प्राणशब्दस्य ब्रह्मपरत्वसम्भवेऽपीह ''उत्क्रान्तप्राणान्'' इति प्राण उत्क्रमणश्रवणात्तस्य च पूर्णे ब्रह्मण्ययोगात् । तदुक्तं भाष्ये ''उत्क्रान्तप्राणानित्यादितल्लिङ्गात्'' इति ।

ಅನುವಾದ - ಪ್ರಾಣ ಹಾಗೂ ಭೂಮಾ ಎರಡೂ ಸಹ ಬ್ರಹ್ಮನೇ ಆಗಿದ್ದಾನೆಂಬ ಎರಡನೇ ಪಕ್ಷವೂ ಸಹ ತಪ್ಪು. ಏಕೆಂದರೆ 'अत एव प्राणः' ಎಂಬ ಸೂತ್ರದಲ್ಲಿ ಹೇಳಿದಂತೆ ಪ್ರಾಣಶಬ್ದವು ಬ್ರಹ್ಮಪರವಾಗಬಹುದು; ಆದರೆ 'उत्क्रान्तप्राणान्' ಎಂಬುದಾಗಿ ಪ್ರಾಣನಲ್ಲಿ ಉತ್ಕ್ರಮಣಲಿಂಗವು ಕೇಳಿಸುತ್ತಿದೆ. ಪೂರ್ಣನಾದ ಬ್ರಹ್ಮನಲ್ಲಿ ಉತ್ಕ್ರಮಣವನ್ನು ಹೇಳಲು ಸಾಧ್ಯವಿಲ್ಲ. ಇದನ್ನೇ ಭಾಷ್ಯದಲ್ಲಿ 'उत्क्रान्तप्राणानित्यादितल्लिङ्गात्' 'उत्क्रान्तप्राणान्' ಇವೇ ಮೊದಲಾದ ಪ್ರಾಣಲಿಂಗಗಳಿರುವುದರಿಂದ ಎಂದು ಹೇಳಿರುತ್ತಾರೆ.

वायोर्भूमत्वे तु तद्युक्तम् ।

ವಾಯುದೇವರು ಭೂಮನಾದಾಗ ಉತ್ಕ್ರಮಣಲಿಂಗವು ಯುಕ್ತವಾಗುತ್ತದೆ. ಬ್ರಹ್ಮನು ಎಲ್ಲೆಡೆ ವ್ಯಾಪ್ತನಾದ್ದರಿಂದಲೂ ಉತ್ಕ್ರಮಣವನ್ನು ಅವನಲ್ಲಿ ಹೇಳಲು ಸಾಧ್ಯವಿಲ್ಲ. ಆದರೆ ವಾಯುದೇವರು ಅಣುಸ್ವರೂಪನಾದ್ದರಿಂದ ಉತ್ಕ್ರಮಣವನ್ನು ಹೇಳಬಹುದು.

नहि देशतः पूर्णत्वं भूमत्वम् । ''वाग्वाव नाम्नो भूयसी । वाग्वाव ऋग्वेदं विज्ञापयति यजुर्वेदं स यदा मनसा मनस्यति मन्त्रानधीयीयेत्यथाधीते'' इत्यादिषु वाङ्मनःसङ्कल्पादिवाक्येषु पूर्वत्र सर्वत्र भूयस्त्वस्य गुणज्यैष्ठ्यरूपतया भूमेत्यत्रापि तस्यैव वक्तव्यत्वात् ।

ದೇಶತಃ ಪೂರ್ಣನಾಗಿರುವಿಕೆಯು ಭೂಮಶಬ್ದದ ಅರ್ಥವೆಂದು ಹೇಳಬಾರದು. ಏಕೆಂದರೆ ಗುಣಜ್ಯೇಷ್ಠತ್ವವನ್ನು ಭೂಮತ್ವವೆಂದು 'वाग्वाव नाम्नो भूयसी । वाग्वाव ऋग्वेदं विज्ञापयति यजुर्वेदं स यदा मनसा मनस्यति मंत्रानधीयीयेत्यथाधीते' ಇತ್ಯಾದಿ ವಾಕ್ಯಗಳಲ್ಲಿ, ವಾಕ್, ಮನಸ್ಸು, ಸಂಕಲ್ಪ ಇವುಗಳ ಮಧ್ಯದಲ್ಲಿ ಹಿಂದಿನ ಅಭಿಮಾನಿದೇವತೆಗಳಿಗಿಂತ ಮುಂದಿನ ಅಭಿಮಾನಿದೇವತೆಗಳು ಉತ್ತಮರಾಗಿದ್ದಾರೆಂದು ಹೇಳಲಾಗಿದೆ. ಇಲ್ಲಿ ಉತ್ತಮ ಎಂದರೆ ದೇಶತಃ ವ್ಯಾಪ್ತರಾಗಿದ್ದಾರೆಂದರ್ಥವಲ್ಲ. ಹೊರತು ಹಿಂದಿನ

ಅಭಿಮಾನಿದೇವತೆಗಳಿಗಿಂತ ಮುಂದಿನ ಅಭಿಮಾನಿದೇವತೆಗಳು ಗುಣದಿಂದ ಉತ್ತಮರಾಗಿದ್ದಾರೆಂದಷ್ಟೇ ಅರ್ಥ. ಅದೇ ರೀತಿಯಾಗಿ 'ಆಶಾ' ಎನಿಸಿದ ಭಾರತೀದೇವಿಗಿಂತ 'ಭೂಮಾ' ಎಂಬ ಶಬ್ದವಾಚ್ಯನು ಉತ್ತಮನೆಂದು ಹೇಳಿದರೆ, ಗುಣದಿಂದ ಉತ್ತಮನೆಂದೇ ಅರ್ಥ ಹೊರತು, ಎಲ್ಲೆಡೆ ವ್ಯಾಪಿಸಿದ್ದಾನೆಂದು ಅರ್ಥವಲ್ಲ.

अत एव टीकायां ''प्राणस्योत्तमत्वम्'' इत्युत्तमशब्दः । आनन्दमय उक्तमानन्दस्य पूर्णत्वं च न देशतः, किन्तु नीलतमत्व-विद्वत्तमत्वादिवत्सर्वस्मात्सजातीयादुत्कृष्टत्वम् ।

ಆದ್ದರಿಂದಲೇ ಟೀಕೆಯಲ್ಲಿ 'ಪ್ರಾಣಸ್ಯೋತ್ತಮತ್ವಮ್' 'ಪ್ರಾಣನಿಗೆ ಉತ್ತಮತ್ವವಿದೆ' ಎಂಬುದಾಗಿ 'ಉತ್ತಮ' ಎಂಬ ಶಬ್ದವನ್ನು ಪ್ರಯೋಗಿಸಲಾಗಿದೆ. ಆನಂದಮಯನಲ್ಲಿ ಹೇಳಲ್ಪಟ್ಟ ಆನಂದದ ಪೂರ್ಣತ್ವವೂ ಸಹ ದೇಶತಃ ವ್ಯಾಪ್ತವಾಗಿದೆಯೆಂದಲ್ಲ. ಹೊರತಾಗಿ ನೀಲತಮತ್ವ, ವಿದ್ವತ್ತಮತ್ವ ಮೊದಲಾದ ಶಬ್ದಗಳನ್ನು ಕೇವಲ ಸಜಾತೀಯ ಪದಾರ್ಥಗಳಿಗಿಂತ ಶ್ರೇಷ್ಠವಾಗಿದೆ ಎಂಬರ್ಥದಲ್ಲಿ ಪ್ರಯೋಗಿಸುವಂತೆ ಆನಂದಮಯನಾದವನು ಎಂದರೆ ಉಳಿದ ಎಲ್ಲಾ ದೇವತೆಗಳ ಆನಂದಕ್ಕಿಂತ ಇವನ ಆನಂದವು ಉತ್ಕೃಷ್ಟವಾಗಿದೆಯೆಂದು ಆ ಆನಂದಮಯಶಬ್ದವು ಸಜಾತೀಯವಾದ ಉತ್ಕೃಷ್ಟತ್ವವನ್ನೇ ಹೇಳುತ್ತಿದೆ.

अन्यथा ''ते ये शतं मानुषा आनन्दाः, स एको मनुष्यगन्धर्वाणामानन्दः'' इत्याद्ययोगात् । नहि मानुषाद्यानन्देभ्यो मनुष्यगन्धर्वाद्यानन्दा देशतः शतगुणिताः । एवंविधपूर्णानन्दत्वं चाणोरपि वायोर्युक्तमिति युक्तश्चीकोक्त आनन्दमयाक्षेपः ।

ಹಿಂಗ ಹೇಳದಿದ್ದರೆ 'ತೇ ಯೇ ಶತಂ ಮಾನುಷಾ ಆನಂದಾಃ, ಸ ಏಕೋ ಮನುಷ್ಯಗಂಧರ್ವಾಣಾಮಾನಂದಃ' ಇತ್ಯಾದಿ ಶ್ರುತಿಗಳಲ್ಲಿ ಮನುಷ್ಯರ ಆನಂದಕ್ಕಿಂತ ಮನುಷ್ಯ-ಗಂಧರ್ವರ ಆನಂದವು ಉತ್ತಮವೆಂದು ಹೇಳಿದ್ದೂ ಸಹ ತಪ್ಪಾಗಬೇಕಾದೀತು. ಏಕೆಂದರೆ ಮನುಷ್ಯಾದಿಗಳ ಆನಂದಕ್ಕಿಂತ ಮನುಷ್ಯಗಂಧರ್ವಾದಿಗಳ ಆನಂದವು ನೂರುಪಟ್ಟು ದೇಶದಷ್ಟು ವಿಸ್ತಾರವಾಗಿದೆಯೆಂಬರ್ಥವನ್ನು ಹೇಳಲು ಸಾಧ್ಯವಿಲ್ಲ. ಆದ್ದರಿಂದ ಮನುಷ್ಯರ ಆನಂದಕ್ಕಿಂತ ನೂರುಪಟ್ಟು ಗುಣತಃ ಉತ್ಕೃಷ್ಟವಾಗಿದೆಯೆಂದಷ್ಟೇ ವಿವಕ್ಷಿಸಬೇಕು. ಇಂತಹ ಪೂರ್ಣಾನಂದತ್ವವನ್ನು ಅಣುಸ್ವರೂಪರೇ ಆದ ವಾಯುದೇವರಲ್ಲಿಯೂ ಸಹ ಹೇಳಬಹುದು. ಆದ್ದರಿಂದ ಟೀಕೆಯಲ್ಲಿ ಆನಂದಮಯನ ಮೇಲಿನ ಆಕ್ಷೇಪವು ಯುಕ್ತವೇ ಆಗಿದೆ. ಅಂದರೆ 'ಭೂಮಾ' ಎಂಬ ಶಬ್ದದಿಂದ

ಪ್ರತಿಪಾದ್ಯರಾದ ಕಾರಣ ವಾಯುದೇವರೇ ಆನಂದಮಯರಾಗಬೇಕೆಂಬ ಆಕ್ಷೇಪವು ಸಮಂಜಸವಾಗಿದೆಯೆಂದರ್ಥ.

ಪ್ರಕಾಶಃ –

''ನನು 'ಪ್ರಾಣೋ ವಾ ಆಶಾಯಾ ಭೂಯಾನ್' ಇತ್ಯುಕ್ತಪ್ರಾಣಸ್ಯ 'ಅತ ಏವ ಪ್ರಾಣಃ' ಇತ್ಯುಕ್ತರೀತ್ಯಾ ವಿಷ್ಣುಪರತ್ವಾತ್'' ಇತ್ಯಾದಿಟೀಕಾಂ ವ್ಯಾಚಷ್ಟೇ – ನ ದ್ವಿತೀಯ ಇತ್ಯಾದಿನಾ ।।

ವಿವರಣೆ - ''ನನು ಪ್ರಾಣೋ ವಾ ಆಶಾಯಾ ಭೂಯಾನಿತ್ಯುಕ್ತಪ್ರಾಣಸ್ಯ ಅತ ಏವ ಪ್ರಾಣ ಇತ್ಯುಕ್ತರೀತ್ಯಾ ವಿಷ್ಣುಪರತ್ವಾತ್'' 'ಆಶಾ' ಎನಿಸಿದ ಭಾರತೀದೇವಿಗಿಂತ ಪ್ರಾಣನು ಶ್ರೇಷ್ಠನಾದ್ದರಿಂದ 'ಅತ ಏವ ಪ್ರಾಣಃ' ಎಂಬಲ್ಲಿ ಹೇಳಿದಂತೆ 'ಪ್ರಾಣ' ಶಬ್ದವು ವಿಷ್ಣುಪರವಾಗುತ್ತದೆ' ಇತ್ಯಾದಿ ಟೀಕೆಯನ್ನು ವ್ಯಾಖ್ಯಾನಿಸುತ್ತಿದ್ದಾರೆ 'ನ ದ್ವಿತೀಯ ಇತ್ಯಾದಿನಾ' ಎಂಬುದಾಗಿ.

ಪ್ರಕಾಶಃ – ಇಹೇತಿ ।। ವಿಷಯವಾಕ್ಯೇ ।। ಉತ್ಕ್ರಮಣಶ್ರವಣಾದಿತಿ ।। ತಥಾ ಚ ತತ್ರೈವಾತ್ರ ನಿರವಕಾಶವಿಷ್ಣುಲಿಙ್ಗಾಭಾವಾತ್ಪ್ರತ್ಯುತ ವಿಪರೀತಲಿಙ್ಗಾಭಾವಾನ್ನ ತನ್ಯಾಯವಿಷಯತ್ವಮಸ್ಯೇತಿ ಭಾವಃ ।

'ಇಹ' ಎಂದರೆ ವಿಷಯವಾಕ್ಯದಲ್ಲಿ ಎಂದರ್ಥ. 'ಉತ್ಕ್ರಮಣಶ್ರವಣಾತ್' ಎಂದು ಗ್ರಂಥದಲ್ಲಿದೆ. ಹೀಗೆ ಹೇಳಿದ್ದರಿಂದ ವಿಷ್ಣುವಿನ ವಿಷಯದಲ್ಲಿ ನಿರವಕಾಶವಾದ ವಿಷ್ಣುಲಿಂಗಗಳು ಕೇಳಿಸುತ್ತಿಲ್ಲ. ಅಷ್ಟೇ ಅಲ್ಲದೆ ವಿಪರೀತವಾಗಿ ಮುಖ್ಯಪ್ರಾಣದೇವರ ಲಿಂಗವೇ ಕೇಳಿಸುತ್ತಿದೆ. ಆದ್ದರಿಂದ ಪ್ರಥಮಪಾದದ ಪ್ರಾಣಾಧಿಕರಣದ ನ್ಯಾಯಕ್ಕೆ ಈ ಅಧಿಕರಣದಲ್ಲಿ ಪ್ರಸಕ್ತವಾದ ಪ್ರಾಣಶಬ್ದವು ವಿಷಯವಾಗುವುದಿಲ್ಲವೆಂದು ತಿಳಿಯಬೇಕು. ಒಂದು ವೇಳೆ ನಿರವಕಾಶವಾದ ವಿಷ್ಣುವಿನ ಲಿಂಗವಿದ್ದಲ್ಲಿ ಮಾತ್ರ ಹಿಂದಿನ ಪ್ರಾಣಾಧಿಕರಣದ ನ್ಯಾಯದಿಂದ ಈ ಪ್ರಾಣಶಬ್ದವೂ ಸಹ ವಿಷ್ಣುಪರವಾಗುತ್ತದೆಂದು ಸಾಧಿಸಬಹುದಿತ್ತು.

ಪ್ರಕಾಶಃ – ಪೂರ್ಣೇ ದೇಶಾದಿತೋ ವ್ಯಾಪ್ತೇ ದೇಹಾದುತ್ಕ್ರಮಣಾಯೋಗಾದಿತ್ಯರ್ಥಃ । ಭಾಷ್ಯಂ ತಚ್ಚಾಖ್ಯಾನಂ ಚೋಕ್ತದಿಶಾ ದ್ವಿತೀಯಪಕ್ಷನಿರಾಸಪರಮಿತಿ ಭಾವೇನಾऽಽಹ – ತದುಕ್ತಮಿತಿ ।।

'ಪೂರ್ಣೇ' ಎಂಬ ಶಬ್ದಕ್ಕೆ ದೇಶತಃ ವ್ಯಾಪ್ತನಾದ ವಿಷ್ಣುವಿನಲ್ಲಿ ದೇಹಾದಿಗಳಿಂದ ಉತ್ಕ್ರಮಣವು ಕೂಡುವುದಿಲ್ಲವೆಂದರ್ಥ. ಭಾಷ್ಯ ಹಾಗೂ ಅದರ ಟೀಕೆಯು ಎರಡನೆಯ ಪಕ್ಷವನ್ನು ನಿರಾಸ ಮಾಡುತ್ತಿದೆಯೆಂಬ ಅಭಿಪ್ರಾಯದಿಂದ 'ತದುಕ್ತಮ್' ಎಂದು ಹೇಳಿರುತ್ತಾರೆ.

ಪ್ರಕಾಶಃ – ನನು ''ಉತ್ಕ್ರಾನ್ತಿಗತ್ಯಾಗತೀನಾಮ್'' ಇತ್ಯಾದೌ ವಕ್ಷ್ಯಮಾಣದಿಶಾ ವಾಯೋರಪ್ಯಣುತ್ವಾತ್ಕಥಂ ತಸ್ಯ ಭೂಮತ್ವಂ ಪೂರ್ಣಸುಖತ್ವಂ ವಾ ಸ್ಯಾದಿತ್ಯತಃ ''ತಸ್ಯ ಚ ವಾಯಾವೇವ ಸಮ್ಭವಾತ್'' ಇತಿ ಟೀಕಾಂ ವಿವೃಣ್ವನ್ನಾಹ – ವಾಯೋರಿತಿ ।।

ಪ್ರಶ್ನೆ - 'ಉತ್ಕ್ರಾಂತಿಗತ್ಯಾಗತೀನಾಮ್' ಇತ್ಯಾದಿಯಾಗಿ ಮುಂದೆ ಹೇಳುವ ಪ್ರಕಾರ ವಾಯುದೇವರೂ ಸಹ ಅಣುರೂಪರೇ ಆಗಿದ್ದಾರೆ. ಹೀಗಿರುವಾಗ ಭೂಮತ್ವವನ್ನಾಗಲೀ, ಪೂರ್ಣಸುಖತ್ವವನ್ನಾಗಲೀ, ಅವರಲ್ಲಿ ಹೇಳಲು ಹೇಗೆ ಸಾಧ್ಯ ?

ಉತ್ತರ - 'ತಸ್ಯ ಚ ವಾಯಾವೇವ ಸಂಭವಾತ್' ಇತ್ಯಾದಿ ಟೀಕೆಯಲ್ಲಿ ಹೇಳಿದಂತೆ ಸಜಾತೀಯರಿಗಿಂತ ಉತ್ಕೃಷ್ಟರೆಂಬ ಅಭಿಪ್ರಾಯದಲ್ಲಷ್ಟೇ 'ಭೂಮಾ' ಎಂಬ ಶಬ್ದವನ್ನು ವಾಯುದೇವರಲ್ಲಿ ಪ್ರಯೋಗಿಸಲಾಗಿದೆಯೆಂದು 'ವಾಯೋಃ' ಇತ್ಯಾದಿ ವಾಕ್ಯದಿಂದ ವಿವರಿಸುತ್ತಿದ್ದಾರೆ.

ಪ್ರಕಾಶಃ – ''ವಾಗ್ವಾವ ಋಗ್ವೇದಮ್'' ಇತ್ಯಾದಿ ಗುಣಕಥನಮ್ । ''ಸ ಯದಾ ಮನಸಃ'' ಇತಿ ಮನಃಪ್ರಕರಣಗತವಾಕ್ಯಮ್ ।

'ವಾಗ್ವಾವ ಋಗ್ವೇದಮ್' ಇತ್ಯಾದಿಯಾಗಿ ಅಭಿಮಾನಿ ದೇವತೆಗಳ ಗುಣಗಳನ್ನು ಹೇಳಿರುತ್ತಾರೆ. 'ಸ ಯದಾ ಮನಸಃ' ಎಂಬ ವಾಕ್ಯವು ಮನಃಪ್ರಕರಣದಲ್ಲಿದೆಯೆಂದು ತಿಳಿಯಬೇಕು.

ಸಾರ

ಭೂಮರೆನಿಸಿದವರು ಮುಖ್ಯಪ್ರಾಣದೇವರೇ ಹೊರತು, ಬ್ರಹ್ಮನಲ್ಲ. ಪ್ರಾಣಶಬ್ದದಿಂದ ಬ್ರಹ್ಮನೂ ಪ್ರತಿಪಾದ್ಯನಾದ್ದರಿಂದ ಬ್ರಹ್ಮನನ್ನೂ ಸಹ ಭೂಮನೆನ್ನಬಹುದಲ್ಲವೇ? ಎಂದು ಪ್ರಶ್ನಿಸಬಾರದು. ಪ್ರಥಮ ಪಾದದಲ್ಲಿ ಪ್ರಾಣಶಬ್ದವನ್ನು ಬ್ರಹ್ಮನೆಂದು ಸಮರ್ಥಿಸಲು ನಿರವಕಾಶವಾದ ವಿಷ್ಣುವಿನ ಲಿಂಗವಿತ್ತು. ಆದರೆ ಇಲ್ಲಿ ಅಂತಹ ವಿಷ್ಣುಲಿಂಗಗಳೇನೂ ಇರುವುದಿಲ್ಲ. ವಿಪರೀತವಾಗಿ 'ದೇಹಾದುತ್ಕ್ರಮಣ' ಎಂಬ ಲಿಂಗವೇ ಇರುತ್ತದೆ. ಮುಖ್ಯಪ್ರಾಣದೇವರು ಭೂಮರೆಂದು ಹೇಳಿದರೆ ಯಾವುದೇ ಬಾಧಕಗಳೂ ಸಹ ಇರುವುದಿಲ್ಲ. ಎಲ್ಲೆಡೆ ವ್ಯಾಪ್ತನಾಗಿದ್ದರೆ ಮಾತ್ರ ಭೂಮನೆನಿಸಬೇಕಾಗಿಲ್ಲ. ಭೂಮಪ್ರಕರಣವನ್ನು ಹಿಂದಿನ, ಮುಂದಿನ ವಾಕ್ಯಗಳಿಂದ ವಿಚಾರ ಮಾಡಿದಾಗ ಅಲ್ಲಿ ಗುಣತಃ ಉತ್ತಮತ್ವವೇ ಪ್ರಸಕ್ತವಾಗಿದೆ ಎಂದು ತಿಳಿಯುತ್ತದೆ. ಆದ್ದರಿಂದ ಅಶಾಯನಿಸಿದ ಭಾರತಿಗಿಂತ ಉತ್ತಮನಾಗಿದ್ದಾನೆಂದರೆ ಹೆಚ್ಚಿನ ದೇಹದಲ್ಲಿದ್ದಾನೆಂದು ಅರ್ಥವಲ್ಲ. ಹೆಚ್ಚಿನ ಗುಣಗಳುಳ್ಳವ- ನಾಗಿದ್ದಾನೆಂದಷ್ಟೇ ಅರ್ಥ. ಆದ್ದರಿಂದ ಅಣುಸ್ವರೂಪರಾಗಿದ್ದರೂ ಸಹ ಮುಖ್ಯಪ್ರಾಣದೇವರಲ್ಲಿ ಭೂಮತ್ವವು ಯುಕ್ತವಾಗುತ್ತದೆ. ಅವರೇ ಆನಂದಮಯರೂ ಸಹ ಆಗುತ್ತಾರೆಂದು ಆಕ್ಷೇಪ ಮಾಡಬಹುದು.

• • • • •

तात्पर्यचन्द्रिका

नच भूम्नः ''स एवाधस्तात्स उपरिष्टात्स पश्चात्'' इति वाक्यशेषस्यसर्वगतत्वविरोधेनोत्क्रमणं गौणमिति युक्तम् ।

ಅನುವಾದ - ಉಪನಿಷತ್ತಿನಲ್ಲಿ ಭೂಮನೆಂದು ವರ್ಣಿಸಲ್ಪಟ್ಟ ಯಾವ ವ್ಯಕ್ತಿಯಿದ್ದಾನೋ ಅವನಲ್ಲಿ 'ಸ ಏವಾಧಸ್ತಾತ್ಸ ಉಪರಿಷ್ಟಾತ್ಸ ಪಶ್ಚಾತ್' ಭೂಮನೇ ಕೆಳಗೆ, ಮೇಲೆ, ಹಿಂದೆ, ಮುಂದೆ ಎಲ್ಲೆಡೆಯೂ ಇದ್ದಾನೆ. ಇತ್ಯಾದಿಯಾಗಿ ವಾಕ್ಯಶೇಷದಲ್ಲಿ ಸರ್ವಗತತ್ವಧರ್ಮವನ್ನು ಹೇಳಲಾಗಿದೆ. ಈ ಸರ್ವಗತತ್ವಧರ್ಮಕ್ಕೆ ವಿರೋಧ ಬರುವ ಕಾರಣ ಪ್ರಾಣನಲ್ಲಿ ಕೇಳಿಸುತ್ತಿರುವ ಉತ್ಕ್ರಮಣಲಿಂಗವನ್ನು ಗೌಣವನ್ನಾಗಿ ಮಾಡಬೇಕಲ್ಲವೇ? ಎಂದು ಪ್ರಶ್ನಿಸಬಾರದು.

श्रौतोत्क्रमणविरोधेन 'अधस्तात्' 'उदुपरिष्टात्' इत्याद्यनेकपदसमभिव्याहाररूप-वाक्यगम्यसर्वगतत्वस्यैव गौणत्वात् ।

ಏಕೆಂದರೆ ನೇರವಾಗಿ ಶ್ರುತಿಯಿಂದಲೇ ಉತ್ಕ್ರಮಣಲಿಂಗವು ಕೇಳಿಸುತ್ತಿದೆ. ಆದರೆ ಸರ್ವಗತತ್ವ ಲಿಂಗವು 'ಅಧಸ್ತಾತ್' 'ಉಪರಿಷ್ಟಾತ್' ಇವೇ ಮೊದಲಾದ ಅನೇಕ ಪದಗಳ ಸಮಭಿವ್ಯಾಹಾರ ರೂಪವಾದ ವಾಕ್ಯದಿಂದ ಸಿದ್ಧವಾಗುತ್ತದೆ. ನೇರವಾಗಿ ಶ್ರುತಿಯಿಂದ ತಿಳಿಯುವ ಉತ್ಕ್ರಮಣಲಿಂಗಕ್ಕಿಂತ ಕಷ್ಟದಿಂದ ತಿಳಿಯುವ ಸರ್ವಗತತ್ವ ಲಿಂಗವು ಬಾಧಿತವಾಗುತ್ತದೆ. ಆದ್ದರಿಂದ ಉತ್ಕ್ರಮಣಲಿಂಗಕ್ಕೆ ಅನುಸಾರಿಯಾಗಿ ಸರ್ವಗತತ್ವಲಿಂಗವನ್ನೇ ಗೌಣವನ್ನಾಗಿ ವ್ಯಾಖ್ಯಾನಿಸಬೇಕಾಗುತ್ತದೆ.

ब्रह्मणस्तु सर्वगतत्वं श्रुत्यन्तरादिसिद्धम् । एवञ्च पूर्णानन्दत्वादिरूपं सिद्धान्ते हेतूकृतं सम्प्रसादादिकं पूर्वपक्षिणा वायौ शङ्कयत इति न भूम्नो ब्रह्मता ।

ಬ್ರಹ್ಮನಿಗಾದರೂ ಸರ್ವಗತತ್ವವು 'ಸ ಏವಾಧಸ್ತಾತ್' ಸಿದ್ಧವಾಗಿರುವುದಿಲ್ಲ. ಹೊರತಾಗಿ 'ಅಂತರ್ಬಹಿಶ್ಚ ತತ್ಸರ್ವಮ್' ಮೊದಲಾದ ಬೇರೆ ಶ್ರುತಿಗಳಿಂದ ಸಿದ್ಧವಾಗಿದೆ. ಆದ್ದರಿಂದ ಸೂತ್ರದಲ್ಲಿ ಹೇತುವನ್ನಾಗಿ ಮಾಡಲ್ಪಟ್ಟ 'ಸಂಪ್ರಸಾದಾತ್' ಎಂಬ ಪದದಿಂದ ತಿಳಿಯುವ ಪೂರ್ಣಾನಂದತ್ವವೆಂಬ ಸಿದ್ಧಾಂತಹೇತುವನ್ನು ಪೂರ್ವಪಕ್ಷಿಯು ವಾಯುದೇವರಲ್ಲಿ ಶಂಕಿಸುತ್ತಾನೆ. ಹೀಗೆ ಪೂರ್ಣಾನಂದರೇ ಆಗಿರುವ ವಾಯುದೇವರು ಭೂಮಶಬ್ದದಿಂದ ಪ್ರತಿಪಾದ್ಯರಾಗುತ್ತಾರೆ; ಹೊರತು ಪರಮಾತ್ಮನಲ್ಲ.

ಪರಿಪೂರ್ಣಚಂದ್ರಿಕಾ

ಪ್ರಕಾಶಃ –

ನನ್ವತ್ರ ಭೂಮ್ನಃ 'स एवाधस्तात्' ಇತ್ಯಾದಿನಾ ಸರ್ವಗತತ್ವೇನ ಶ್ರುತಸ್ಯ ವಾಯುತ್ವೇ ವಾಯೋರಪಿ ಸರ್ವಗತತ್ವಾಪತ್ತ್ಯಾ ಬ್ರಹ್ಮಣೀವ ವಾಯಾವಪ್ಯುತ್ಕ್ರಮಣಮಯುಕ್ತಮ್ । ತತ್ರೋಪಚರಿತಂ ಚೇದ್ಬ್ರಹ್ಮಣ್ಯಪಿ ತಥೋಪೇತ್ಯ ಭೂಮತ್ವಮುಚ್ಯತಾಮಿತಿ ಭಾವೇನಾಶಙ್ಕ್ಯ ನಿರಾಹ – **ನಚ ಭೂಮ್ನ ಇತಿ ।।**

ವಿವರಣೆ - ಶ್ರುತಿಯಲ್ಲಿ ಯಾವಾತನು ಭೂಮನೆಂದು ಕರೆಸಿಕೊಳ್ಳುತ್ತಿದ್ದಾನೋ, ಆವನು 'स एवाधस्तात्' ಇತ್ಯಾದಿ ಶ್ರುತಿಯು ಹೇಳುವಂತೆ ಸರ್ವಗತನೆಂದು ಶ್ರುತನಾಗಿದ್ದಾನೆ. ಒಂದು ವೇಳೆ ಭೂಮನೇ ವಾಯುದೇವರಾದರೆ, ಅವರೇ ಸರ್ವಗತರೂ ಆಗುತ್ತಾರೆ. ಆದ್ದರಿಂದ ಸರ್ವಗತನಾದ ಪರಮಾತ್ಮನಲ್ಲಿ ಉತ್ಕ್ರಮಣವು ಹೇಗೆ ಅಯುಕ್ತವಾಗುತ್ತದೋ, ಅದರಂತೆ ವಾಯುದೇವರಿಗೂ ಸಹ ಉತ್ಕ್ರಮಣವು ಅಯುಕ್ತವಾಗುತ್ತದೆ. ಒಂದು ವೇಳೆ ವಾಯುದೇವರ ವಿಷಯದಲ್ಲಿ ಉತ್ಕ್ರಮಣವನ್ನು ಔಪಚಾರಿಕವಾಗಿ ಹೇಳುವುದಾದರೆ ಬ್ರಹ್ಮನಲ್ಲಿಯೂ ಸಹ ಔಪಚಾರಿಕವಾಗಿಯೇ ಉತ್ಕ್ರಮಣವನ್ನು ಹೇಳಬೇಕಾದೀತು. ಈ ಅಭಿಪ್ರಾಯದಿಂದ ಆಕ್ಷೇಪ ಮಾಡಿ ಉತ್ತರಿಸುತ್ತಿದ್ದಾರೆ 'नच भूम्नः' ಇತ್ಯಾದಿ ಗ್ರಂಥದಿಂದ.

ಪ್ರಕಾಶಃ – ಗೌಣಮಿತಿ ।। ಮನೋಗತಮೇವಾತ್ರ ಭಾತೀತ್ಯರ್ಥಃ । ಶ್ರೌತೇತಿ ।। ಉತ್ಕ್ರಾನ್ತೇತಿ ಪದಶ್ರುತ್ಯಾ ಪ್ರತೀತೇತ್ಯರ್ಥಃ ।

'ಗೌಣಮ್' ಎಂದರೆ ಮನಸ್ಸಿನಲ್ಲಿರುವ ಉತ್ಕ್ರಮಣವನ್ನು ಪ್ರಾಣನಲ್ಲಿ ಗೌಣವಾಗಿ ಪ್ರಯೋಗಿಸಲಾಗಿದೆ ಎಂದರ್ಥ. 'ಶ್ರೌತೋತ್ಕ್ರಮಣವಿರೋಧೇನ' ಎಂದರೆ 'ಉತ್ಕ್ರಾಂತ' ಎಂಬ ಪದಶ್ರವಣದಿಂದ ಪ್ರತೀತವಾದ ಉತ್ಕ್ರಮಣಲಿಂಗದ ವಿರೋಧದಿಂದ ಎಂದರ್ಥ.

ಪ್ರಕಾಶಃ – ಬ್ರಹ್ಮಣೋऽಪ್ಯತ್ರೋಕ್ತಂ ಸರ್ವಗತತ್ವಂ ಸಙ್ಕುಚಿತಮುಪೇತ್ಯೋತ್ಕ್ರಮಣಂ ಚ ಮುಖ್ಯಮಙ್ಗೀಕೃತ್ಯ ಭೂಮತ್ವಮುಚ್ಯತಾಮಿತ್ಯತ ಆಹ – ಬ್ರಹ್ಮಣಸ್ತ್ವಿತಿ ।।

ಬ್ರಹ್ಮನಲ್ಲಿ ಒಪ್ಪಿದ ಸರ್ವಗತತ್ವವು ಗೌಣವೆಂದು ಒಪ್ಪಿ ಉತ್ಕ್ರಮಣವನ್ನೇ ಮುಖ್ಯವಾಗಿ ಅಂಗೀಕರಿಸಿ, ಭೂಮತ್ವವನ್ನು ಹೇಳಬಹುದಲ್ಲವೇ? ಎಂಬ ಪ್ರಶ್ನೆಗೆ 'ಬ್ರಹ್ಮಣಸ್ತು' ಎಂಬ ವಾಕ್ಯದಿಂದ ಉತ್ತರಿಸುತ್ತಿದ್ದಾರೆ.

ಪ್ರಕಾಶಃ – ''सर्वगतं सुसूक्ष्मम्' 'अन्तर्बहिश्च तत्सर्वं व्याप्य नारायणःस्थितः'' ಇತ್ಯಾದಿಶ್ರುತ್ಯನ್ತರ ಇತ್ಯರ್ಥಃ ।

'ಸರ್ವಗತಂ ಸುಸೂಕ್ಷ್ಮಮ್' ಎಂಬ ಶ್ರುತಿಯಲ್ಲಿ 'ಅಂತರ್ಬಹಿಶ್ಚ ತತ್ಸರ್ವಂ ವ್ಯಾಪ್ಯ ನಾರಾಯಣಃ ಸ್ಥಿತಃ' ಇತ್ಯಾದಿ ಶ್ರುತಿಗಳಲ್ಲಿ ಬ್ರಹ್ಮನಿಗೆ ಸರ್ವಗತತ್ವವು ಹೇಳಲ್ಪಟ್ಟಿದೆಯೆಂದು ತಿಳಿಯಬೇಕು.

ಪ್ರಕಾಶಃ – ಏತೇನ ''सर्वगते हरावसम्भवात्'' ಇತಿ ಟೀಕಾ ವಿವೃತಾ । ನನ್ವಥಾಪಿ ತತ್ಸುಖಮಿತ್ಯುಕ್ತಪೂರ್ಣಸುಖತ್ವಾಭ್ಯುಪದೇಶಾದಿನಾ ಭೂಮಾ ವಿಷ್ಣುಃ ಕಿಂ ನ ಸ್ಯಾದಿತ್ಯತ ಆಹ – **ಏವಞ್ಚೇತಿ ।।**

ಹೀಗೆ ಹೇಳಿದ್ದರಿಂದ 'ಸರ್ವಗತೇ ಹರಾವಸಂಭವಾತ್' ಎಂಬ ಟೀಕೆಯನ್ನು ವಿವರಿಸಿದಂತಾಯಿತು.

ಪ್ರಶ್ನೆ - ಇಷ್ಟು ಹೇಳಿದರೂ 'ತತ್ಸುಖಮ್' ಎಂಬ ಶ್ರುತಿಯಲ್ಲಿ ಹೇಳಲ್ಪಟ್ಟ ಪೂರ್ಣಸುಖತ್ವ, ಅಧ್ಯುಪದೇಶ ಮುಂತಾದ ಹೇತುಗಳಿಂದ ಭೂಮನೆನಿಸಿದವನು ವಿಷ್ಣುವೇ ಏಕಾಗಬಾರದು? ಎಂಬ ಪ್ರಶ್ನೆಗೆ 'ಏವಂಚ' ಇತ್ಯಾದಿ ವಾಕ್ಯದಿಂದ ಉತ್ತರಿಸಿದ್ದಾರೆ.

ಸಾರ

ಭೂಮಪ್ರಕರಣದಲ್ಲಿ ಸರ್ವಗತತ್ವವು ಕೇಳಿಸುತ್ತಿದೆ. ಆದಕ್ಕನುಸಾರಿಯಾಗಿ ಪ್ರಾಣನಲ್ಲಿ ಕೇಳಿಸುತ್ತಿರುವ ದೇಹಾದ್ಯುತ್ಕ್ರಮಣವೆಂಬ ಲಿಂಗವನ್ನು ಗೌಣವಾಗಿ ವ್ಯಾಖ್ಯಾನಿಸಬೇಕೆಂದು ಹೇಳಬಾರದು. ಏಕೆಂದರೆ 'ಉತ್ಕ್ರಾಂತ' ಎಂಬ ಶಬ್ದದಿಂದಲೇ ನೇರವಾಗಿ ಪ್ರಾಣಕೋತ್ಕ್ರಮಣವೆಂಬ ಲಿಂಗವು ತಿಳಿಯುತ್ತಿದೆ. ಹಾಗೇ ಸರ್ವಗತತ್ವವವನ್ನು ನೇರವಾಗಿ ಹೇಳುವ ಯಾವುದೇ ಶಬ್ದಗಳು ಶ್ರುತಿಯಲ್ಲಿರುವುದಿಲ್ಲ. ಆದ್ದರಿಂದ ಸರ್ವಗತತ್ವವನ್ನೇ ಗೌಣವನ್ನಾಗಿ ಅರ್ಥೈಸಬೇಕು. ಒಟ್ಟಾರೆ ಸಂಪ್ರಸಾದವೆಂಬ ಪೂರ್ಣಾನಂದತ್ವವು ವಿಷ್ಣುವಿನಲ್ಲಿ ಮಾತ್ರ ಬರುತ್ತದೆಂಬ ನಿಯಮವನ್ನು ಸಿದ್ಧಾಂತಿಗಳು ಮಾಡಲು ಸಾಧ್ಯವಿಲ್ಲ. ಮುಖ್ಯಪ್ರಾಣದೇವರಲ್ಲಿಯೂ ಈ ಲಿಂಗವು ಬರುತ್ತಿದೆ.

● ● ● ● ●

ವ್ಯಾಪ್ತನಾದ ಬ್ರಹ್ಮನಲ್ಲಿ ಉತ್ಕ್ರಮಣವನ್ನು ಹೇಳಲಾಗದೆಂದು ಪೂರ್ವಪಕ್ಷದ ಉಪಸಂಹಾರ

ತಾತ್ಪರ್ಯಚನ್ದ್ರಿಕಾ

ನಚ ವಾಚ್ಯಂ ''ಅನ್ಯಭಾವವ್ಯಾವೃತ್ತೇಃ'' ಇತ್ಯತ್ರ ಬ್ರಹ್ಮಣೋ ಮಹತ್ತ್ವೇऽಪ್ಯಣುತ್ವಂ ವಕ್ಷ್ಯತೇ । ಅಣುತ್ವಮೇವ ಚ ಕ್ರಿಯಾವತ್ತ್ವೇ ತನ್ತ್ರಮ್ । ನತು ಮಹತ್ತ್ವಾಭಾವವಿಶಿಷ್ಟಮ್ । ನ ವಾ ಮಹತ್ತ್ವಾಭಾವಃ । ಗೌರವಾದಿತಿ ।

ಅನುವಾದ - ಮುಂದಿನ ಅಕ್ಷರಾಧಿಕರಣದ 'ಅನ್ಯಭಾವವ್ಯಾವೃತ್ತೇಃ' ಎಂಬ ಗುಣಸೂತ್ರದಲ್ಲಿ ಬ್ರಹ್ಮನಿಗೆ ಮಹತ್ವವಿದ್ದರೂ ಸಹ ಅಣುತ್ವವು ಇರುತ್ತದೆಂದು ಸಮರ್ಥಿಸುತ್ತಾರೆ. ಅಣುರೂಪನಾದ ಬ್ರಹ್ಮನಿಗೆ ಉತ್ಕ್ರಮಣವೆಂಬ ಲಿಂಗವನ್ನು ಹೇಳಲು ಏನು ತೊಂದರೆ? ಏಕೆಂದರೆ ಕ್ರಿಯಾ ಇರಬೇಕೆಂದರೆ ಅಣುವಾಗಿದ್ದರೆ ಸಾಕು, ಪರಮಾತ್ಮನಲ್ಲಿ ಅಣುತ್ವವಿರುವ ಪ್ರಯುಕ್ತ ಕ್ರಿಯಾವನ್ನು ಹೇಳಬಹುದು. ಕ್ರಿಯಾವತ್ವಕ್ಕೆ ಅಣುತ್ವವೇ ಪ್ರಯೋಜಕ ಹೊರತು, ಮಹತ್ತ್ವಾಭಾವವಿಶಿಷ್ಟವಾದ ಅಣುತ್ವವಾಗಲೀ, ಅಥವಾ ಮಹತ್ತ್ವಾಭಾವವಾಗಲೀ ಪ್ರಯೋಜಕವಲ್ಲ. ಏಕೆಂದರೆ ಅಣುತ್ವಕ್ಕಿಂತ ಮಹತ್ತ್ವಾಭಾವವು ಗುರುಭೂತವಾಗಿದೆ. ಮಹತ್ತ್ವಾಭಾವಕ್ಕಿಂತಲೂ, ಮಹತ್ತ್ವಾಭಾವವಿಶಿಷ್ಟವಾದ ಅಣುತ್ವವು ಇನ್ನೂ ಗುರುಭೂತವಾಗಿದೆ. ಆದ್ದರಿಂದ ಲಘುಭೂತವಾದ ಅಣುತ್ವವನ್ನೇ ಪ್ರಯೋಜಕವೆಂದು ಹೇಳುವುದು

ಸಾಧುವಾಗಿದೆ. ಇಂತಹ ಅಣುತ್ವವು ಬ್ರಹ್ಮನಲ್ಲಿರುವುದರಿಂದ ಉತ್ಕ್ರಮಣವೆಂಬ ಕ್ರಿಯೆಯನ್ನು ಹೇಳಲು ಏನು ತೊಂದರೆ?

महत्त्वमेवाक्रियत्वे तन्त्रम् । न त्वणुत्वाभावविशिष्टम् । न वाऽणुत्वाभाव इत्यपि सम्भवात् ।

ಹೀಗೆ ಪ್ರಶ್ನಿಸಬಾರದು. ಏಕೆಂದರೆ ನೀವು ಹೇಳಿದ್ದಕ್ಕೆ ವಿಪರೀತವಾಗಿಯೂ ಹೇಳಲು ಬರುತ್ತದೆ. ಏಕೆಂದರೆ ಕ್ರಿಯಾಶೂನ್ಯತ್ವಕ್ಕೆ ಮಹತ್ತ್ವವೇ ಪ್ರಯೋಜಕವಾಗಿದೆ; ಹೊರತು ಅಣುತ್ವಾಭಾವವಿಶಿಷ್ಟವಾದ ಮಹತ್ತ್ವವಾಗಲೀ ಅಥವಾ ಅಣುತ್ವಾಭಾವವಾಗಲೀ ಪ್ರಯೋಜಕವಲ್ಲ. ಏಕೆಂದರೆ ಮಹತ್ತ್ವಕ್ಕಿಂತ ಅಣುತ್ವಾಭಾವವು ಗುರುಭೂತವಾಗಿದೆ. ಅಣುತ್ವಾಭಾವಕ್ಕಿಂತಲೂ ಅಣುತ್ವಾಭಾವವಿಶಿಷ್ಟವಾದ ಮಹತ್ತ್ವವು ಇನ್ನೂ ಗುರುಭೂತವಾಗಿದೆ. ಇವೆರಡಕ್ಕಿಂತ ಮಹತ್ತ್ವವು ಲಘುಭೂತವಾಗಿರುವ ಕಾರಣ ಕ್ರಿಯೆ ಇಲ್ಲದಿರಲು ಮಹತ್ತ್ವವನ್ನು ಪ್ರಯೋಜಕವೆಂದೂ ಹೇಳಬಹುದು ಎಂದರ್ಥ. ಬ್ರಹ್ಮನಲ್ಲಿ ಮಹತ್ತ್ವವಿರುವ ಪ್ರಯುಕ್ತ ಕ್ರಿಯಾಶೂನ್ಯತ್ವವನ್ನು ಒಪ್ಪಲೇಬೇಕು. ಆಂದರೆ ವ್ಯಾಪ್ತನಾದ ಬ್ರಹ್ಮನು ದೇಹದಿಂದ ಉತ್ಕ್ರಮಣನಾಗಲು ಸಾಧ್ಯವಿಲ್ಲ ಎಂದು ಹೇಳಿದಂತಾಗುತ್ತದೆ.

'सर्वत्रप्रसिद्ध' इत्यत्र तु सर्वगतस्यापि व्योमदृष्टान्तेनैकदेशगतत्वमुक्तम् । नतु सक्रियत्वम् ।

ಸರ್ವಗತತ್ವಾಧಿಕರಣದಲ್ಲಿ ಸರ್ವಗತನಾದ ಬ್ರಹ್ಮನು ಎಲ್ಲೆಡೆ ವ್ಯಾಪ್ತವಾದ ಆಕಾಶದ ದೃಷ್ಟಾಂತದಿಂದ ಹೃದಯವೆಂಬ ಅಲ್ಪಸ್ಥಾನದಲ್ಲಿಯೂ ಇರುತ್ತಾನೆಂದು ಸಮರ್ಥಿಸಲಾಗಿದೆ. ಹೊರತು ಅಣುಸ್ವರೂಪನಾದ್ದರಿಂದ ಕ್ರಿಯೆವುಳ್ಳವನೆಂದು ಸಮರ್ಥಿಸಿರುವುದಿಲ್ಲ. ಆದ್ದರಿಂದ ಸರ್ವಗತತ್ವಾಧಿಕರಣದಲ್ಲಿ ಕ್ರಿಯೆಯನ್ನು ಹೇಳಿರುವ ಪ್ರಯುಕ್ತ ಬ್ರಹ್ಮನಲ್ಲಿ ಉತ್ಕ್ರಮಣವನ್ನು ಹೇಳಬಹುದಲ್ಲವೇ? ಎಂಬ ಶಂಕೆಗೆ ಆಸ್ಪದವಿಲ್ಲ.

''ज्योतिर्दर्शनात्'' इत्यत्र तु ''स समानः सन्नुभौ लोकावनुसञ्चरति'' इत्युक्तं यत्कर्मवशेनोभयलोकसञ्चरणं तत्कर्मातीतस्य ब्रह्मणो न युक्तमिति शङ्का,

ಈ ಅಧಿಕರಣಕ್ಕೆ ಸರ್ವಗತತ್ವಾಧಿಕರಣದಿಂದ ಹೇಗೆ ಗತಾರ್ಥತ್ವವಿಲ್ಲವೋ, ಅದರಂತೆ 'ಜ್ಯೋತಿರ್ದರ್ಶನಾತ್' ಎಂಬ ಅಧಿಕರಣದಿಂದಲೂ ಗತಾರ್ಥತ್ವವು ಬರುವುದಿಲ್ಲ. ಏಕೆಂದರೆ 'ಜ್ಯೋತಿರ್ದರ್ಶನಾತ್' ಎಂಬ ಸೂತ್ರದಲ್ಲಿ 'ಸ ಸಮಾನಃ ಸನ್ನುಭೌ ಲೋಕಾವನುಸಂಚರತಿ' ಎಂಬ ಶ್ರುತಿಯಲ್ಲಿ ಕರ್ಮದ ಅಧೀನವಾಗಿ ಎರಡು ಲೋಕಗಳನ್ನು ಸಂಚಾರ ಮಾಡುತ್ತಾನೆ ಎಂದು ಹೇಳಲಾಗಿದೆ. ಈ ಎರಡು ಲೋಕದ ಸಂಚಾರವು ಯಾರಿಗೆ ಎಂಬ ಪ್ರಶ್ನೆ ಬಂದಾಗ ಕರ್ಮಾತೀತನಾದ ಬ್ರಹ್ಮನಿಗೆ ಈ ಸಂಚಾರವು ಯುಕ್ತವಾಗುವುದಿಲ್ಲವೆಂದು ಶಂಕೆ;

नेदं सञ्चरणं कर्मवशात् । किन्तु स्वेच्छयेति परिहारश्च । ननु पूर्णस्य क्रियानुपपत्त्या शङ्कातत्परिहारौ । अत एव तत्र पूर्वपक्षे टीका ''जीवस्य हि कर्मवशादुभयलोकसञ्चरणं युक्तम्'' इति ।

ಹಾಗೂ ಉಭಯಲೋಕದ ಸಂಚಾರವು ಕರ್ಮಾಧೀನವಾಗಿದೆಯೆಂದು ಶ್ರುತಿಯು ಹೇಳುತ್ತಿಲ್ಲ. ಹೊರತಾಗಿ ಸ್ವೇಚ್ಛೆಯಿಂದಲೇ ಸಂಚಾರವು ನಡೆಯುತ್ತದೆಂದು ಪರಿಹಾರವನ್ನೂ ಹೇಳಲಾಗಿದೆ. ಆದರೆ ಪೂರ್ಣನಾದ ಅಂದರೆ ಎಲ್ಲೆಡೆ ವ್ಯಾಪ್ತನಾದ ಪರಮಾತ್ಮನಿಗೆ ಸಂಚಾರವೆಂಬ ಕ್ರಿಯೆಯನ್ನೇ ಹೇಳಲು ಸಾಧ್ಯವಿಲ್ಲದ ಕಾರಣ ಶಂಕೆಯನ್ನಾಗಲೀ ಪರಿಹಾರವನ್ನಾಗಲೀ ಹೇಳಲು ಸಾಧ್ಯವಿಲ್ಲ. ಮತ್ತು ಇದು ಜೀವನಿಗೆ ಸಂಬಂಧಿಸಿದ ಸಂಚಾರವೆಂದೇ ಹೇಳಬೇಕು. ಆದ್ದರಿಂದಲೇ ಆ ಅಧಿಕರಣದ ಪೂರ್ವಪಕ್ಷಟೀಕೆಯಲ್ಲಿ 'ಜೀವಸ್ಯ ಹಿ ಕರ್ಮವಶಾದುಭಯಲೋಕಸಂಚರಣಂ ಯುಕ್ತಮ್' 'ಕರ್ಮಾಧೀನನಾದ ಜೀವನಿಗೆ ಉಭಯಲೋಕದ ಸಂಚಾರವು ಯುಕ್ತವಾಗುತ್ತದೆ' ಎಂದು ಹೇಳಿರುತ್ತಾರೆ.

सिद्धान्तन्यायविवरणं च ''लोकसञ्चरणं तु जीवमादाय तस्यैवादुःखेन स्वातन्त्र्यात्'' इति ।

ಇದರಂತೆ ಸಿದ್ಧಾಂತವನ್ನು ಹೇಳುವ ನ್ಯಾಯವಿವರಣದಲ್ಲಿಯೂ ಸಹ 'ಲೋಕಸಂಚರಣಂ ತು ಜೀವಮಾದಾಯ ತಸ್ಯೈವಾದುಃಖೇನ ಸ್ವಾತಂತ್ರ್ಯಾತ್' 'ಜೀವನ ವಿಷಯಲ್ಲದಷ್ಟೇ ಲೋಕಸಂಚಾರವನ್ನು ಹೇಳಿದ್ದಾರೆ. ಪರಮಾತ್ಮನು ಸ್ವತಂತ್ರನಾದ್ದರಿಂದ ಅವನಿಗೆ ಲೋಕಸಂಚಾರವನ್ನು ಹೇಳಿರುವುದಿಲ್ಲ' ಎಂಬುದಾಗಿ ಹೇಳಿದ್ದಾರೆ. ಆದ್ದರಿಂದ ಕ್ರಿಯೆಯು ಕೂಡುವುದಿಲ್ಲವೆಂಬ ಶಂಕೆಯನ್ನು ಮತ್ತು ಅದರ ಪರಿಹಾರವನ್ನು 'ಜ್ಯೋತಿರ್ದರ್ಶನಾತ್' ಎಂಬ ಸೂತ್ರದಲ್ಲಿ ಮಾಡಿರುವುದಿಲ್ಲ ಹೊರತಾಗಿ, ಕರ್ಮಾಧೀನವಾದ ಕ್ರಿಯೆಯೂ ಕೂಡುವುದಿಲ್ಲವೆಂದು ಶಂಕಿಸಿ ಉತ್ತರಿಸಿದ್ದಾರೆ. ಆದ್ದರಿಂದ ಜ್ಯೋತಿರಧಿಕರಣದಿಂದ ಗತಾರ್ಥತ್ವವು ಬರುವುದಿಲ್ಲವೆಂದು ತಿಳಿಯಬೇಕು.

नच ''शास्त्रदृष्ट्यः'' इति न्यायेनान्तर्यामिगता क्रिया । ''एष म आत्माऽन्तर्हृदये ज्यायान्पृथिव्याः'' इत्यादिश्रुत्या तस्यापि सर्वगतत्वात् ।

'ಶಾಸ್ತ್ರದೃಷ್ಟ್ಯಾತು' ಇತ್ಯಾದಿ ಸೂತ್ರದ ನ್ಯಾಯದಿಂದ ಮುಖ್ಯಪ್ರಾಣದೇವರ ಅಂತರ್ಯಾಮಿಯಾದ ಪರಮಾತ್ಮನಿಗೂ ಸಹ ಉತ್ಕ್ರಮಣರೂಪಕ್ರಿಯೆಯನ್ನು ಹೇಳಬಹುದಲ್ಲವೇ? ಎಂದು ಪ್ರಶ್ನಿಸಬಾರದು. 'ಏಷ ಮ ಆತ್ಮಾಂತರ್ಹೃದಯೇ ಜ್ಯಾಯಾನ್ ಪೃಥಿವ್ಯಾಃ' ಇತ್ಯಾದಿ ಶ್ರುತಿಗಳಿಂದ ಅಂತರ್ಯಾಮಿಯಾದವನೂ ಸಹ ವ್ಯಾಪ್ತನೇ ಆಗಿದ್ದಾನೆಂದು ಸಿದ್ಧವಾಗಿದೆ.

यदि च सर्वगतस्यापि क्रिया तदा ''उत्क्रान्तिगत्यागतीनाम्'' इत्यत्र जीवस्य सक्रियत्वेनाणुत्वोक्तिरयुक्ता स्यादिति ।

ಒಂದು ವೇಳೆ ಸರ್ವಗತನಾದ ಬ್ರಹ್ಮನಿಗೂ ಸಹ ಉತ್ಕ್ರಮಣಾದಿಕ್ರಿಯೆಯನ್ನು ಹೇಳಿದರೆ ಆಗ 'ಉತ್ಕ್ರಾಂತಿಗತ್ಯಾಗತೀನಾಮ್' ಎಂಬ ಸೂತ್ರದಲ್ಲಿ ಕ್ರಿಯೆಯುಳ್ಳವನಾದ ಪ್ರಯುಕ್ತ ಜೀವನು ಅಣುವಾಗಿದ್ದಾನೆಂದು ಸಾಧಿಸಿದ್ದು ತಪ್ಪಾಗಬೇಕಾದೀತು. ಆದ್ದರಿಂದ ವ್ಯಾಪ್ತನಾದ ವ್ಯಕ್ತಿಗೆ ಕ್ರಿಯೆಯನ್ನು ಹೇಳಲು ಸಾಧ್ಯವಿಲ್ಲವೆಂದು ಈ ಅಧಿಕರಣದ ಪೂರ್ವಪಕ್ಷ.

ಪ್ರಕಾಶಃ –

अधिकरणान्तरन्यायैरेवोत्क्रमणस्यापि भगवति सिद्धेर्न तेनेह पूर्वपक्षोदय इति भावेनाशङ्क्य निराह – न चेत्यादिना ।।

ವಿವರಣೆ - ಬೇರೆ ಅಧಿಕರಣಗಳ ನ್ಯಾಯದಿಂದಲೇ ಉತ್ಕ್ರಮಣವೆಂಬ ಕ್ರಿಯೆಯು ಭಗವಂತನಲ್ಲಿ ಸಿದ್ಧವಾಗುವ ಕಾರಣದಿಂದ ಈ ಅಧಿಕರಣವು ಗತಾರ್ಥವಾಗುತ್ತದೆ. ಆದ್ದರಿಂದ ಪೂರ್ವಪಕ್ಷವೇ ಹುಟ್ಟಲು ಸಾಧ್ಯವಿಲ್ಲವಲ್ಲವೇ? ಎಂಬ ಆಶಂಕೆಯನ್ನು 'ನಚ' ಇತ್ಯಾದಿ ಗ್ರಂಥದಿಂದ ನಿರಾಕರಿಸುತ್ತಿದ್ದಾರೆ.

प्रकाशः – इत्यत्रेति ।। उत्तराधिकरणगुणसूत्र इत्यर्थः । न त्विति ।। ''येन ब्रह्मणि महत्त्वस्यापि भावात्क्रियावत्त्वं न स्यात्'' इति वाक्यशेषः ।

'ಇತ್ಯತ್ರ' ಎಂದರೆ ಮುಂದಿನ ಅಕ್ಷರಾಧಿಕರಣದ ಗುಣಸೂತ್ರದಲ್ಲಿ ಎಂದರ್ಥ. 'ನತು ಮಹತ್ತ್ವಾಭಾವವಿಶಿಷ್ಟಮ್' ಎಂಬ ವಾಕ್ಯದ ಅನಂತರ - 'ಯೇನ ಬ್ರಹ್ಮಣಿ ಮಹತ್ತ್ವಸ್ಯಾಪಿ ಭಾವಾತ್ ಕ್ರಿಯಾವತ್ತ್ವಂ ನ ಸ್ಯಾತ್' 'ಒಂದು ವೇಳೆ ಮಹತ್ತ್ವಾಭಾವವಿಶಿಷ್ಟವಾದ ಅಣುತ್ವವು ಕ್ರಿಯಾವತ್ತ್ವಕ್ಕೆ ಪ್ರಯೋಜಕವಾಗಿದ್ದಲ್ಲಿ ಬ್ರಹ್ಮನಲ್ಲಿ ಮಹತ್ತ್ವವೂ ಸಹ ಇರುವುದರಿಂದ ಕ್ರಿಯಾವತ್ತ್ವವು ಬರುವುದಿಲ್ಲವೆಂದು ಹೇಳಬಹುದಿತ್ತು' ಎಂಬ ವಾಕ್ಯವನ್ನು ಶೇಷಪೂರ್ಣ ಮಾಡಿಕೊಳ್ಳಬೇಕು.

प्रकाशः – गौरवादितीति ।। नच वाच्यमिति पूर्वेणान्वयः । अभावघटितत्वादिति भावः ।

'ಗೌರವಾದಿತಿ' ಎಂಬಲ್ಲಿ 'ಇತಿ' ಶಬ್ದಕ್ಕೆ 'ನಚ ವಾಚ್ಯಮ್' ಎಂಬಲ್ಲಿ ಅನ್ವಯ ಮಾಡಬೇಕು. ಎಂದರೆ - ಅಭಾವಘಟಿತವಾದ್ದರಿಂದ ಗೌರವದೋಷ ಬರುತ್ತದೆಂದು ತಿಳಿಯಬೇಕು.

प्रकाशः – इत्यपि सम्भवादिति ।। तथा च ब्रह्मणि सत्यप्यणुत्वे न तेनोत्क्रमणादिक्रियावत्त्वसिद्धिः । महत्त्वस्याक्रियत्वप्रयोजकस्याकाशादाविव भावादिति भावः ।

'ಇತ್ಯಪಿ ಸಂಭವಾತ್' ಎಂದು ಗ್ರಂಥದಲ್ಲಿದೆ. ಈ ವಾಕ್ಯಕ್ಕೆ ; ಆದ್ದರಿಂದ ಬ್ರಹ್ಮನಲ್ಲಿ ಅಣುತ್ವವಿದ್ದರೂ ಸಹ ಅಣುತ್ವ ಪ್ರಯುಕ್ತವಾಗಿ ಉತ್ಕ್ರಮಣಾದಿ ಕ್ರಿಯೆಯನ್ನು ಹೇಳಲು ಸಾಧ್ಯವಿಲ್ಲ. ಏಕೆಂದರೆ ಕ್ರಿಯಾಶೂನ್ಯತ್ವಕ್ಕೆ ಪ್ರಯೋಜಕವಾದ ಮಹತ್ತ್ವಾದಿಗಳೂ ಸಹ ಆಕಾಶಾದಿಗಳಂತೆ ಬ್ರಹ್ಮನಲ್ಲಿ ಇರುವುದರಿಂದ ಎಂದಭಿಪ್ರಾಯ.

ಪ್ರಕಾಶಃ – ಉಕ್ತಮಿತಿ ।। ''ಅರ್ಭಕೌಕಸ್ತ್ವಾತ್'' ಇತ್ಯಾದಿಗುಣಸ್ತ್ರೇಣೇತ್ಯರ್ಥಃ ।

'ಉಕ್ತಮ್' ಎಂದರೆ 'ಅರ್ಭಕೌಕಸ್ತ್ವಾತ್' ಇತ್ಯಾದಿ ಗುಣಸೂತ್ರದಲ್ಲಿ ಹೇಳಿದ್ದಾರೆಂದರ್ಥ.

ಪ್ರಕಾಶಃ – ಜ್ಯೋತಿರಿತಿ ।। ಅತ್ರ ಸಿದ್ಧಕ್ರಿಯಾವತ್ತ್ವಮುಪೇತ್ಯೈವ ವಿಶೇಷಶಙ್ಕಯಾ ತತ್ಪ್ರವೃತ್ತಮಿತ್ಯರ್ಥಃ । ಪೂರ್ಣಸ್ಯ ದೇಶತೋ ವ್ಯಾಪ್ತಸ್ಯ । ಅನ್ತರ್ಯಾಮಿಗತಾ ಕ್ರಿಯೇತಿ ।। ಪ್ರಾಣಸಂವಾದಾದಿಲಿಙ್ಗವದಿತಿ ಭಾವಃ ।।

'ಜ್ಯೋತಿರ್ದರ್ಶನಾತ್' ಎಂಬ ಸೂತ್ರದಲ್ಲಿ ಮೊದಲೇ ಸಿದ್ಧವಾದ ಕ್ರಿಯಾವತ್ತ್ವವನ್ನು ಪರಮಾತ್ಮನಲ್ಲಿ ಅಂಗೀಕರಿಸಿಯೇ ಅದರ ಮೇಲೆ ಬರುವ ವಿಶೇಷ ಶಂಕೆಯನ್ನು ಪರಿಹರಿಸಿದ್ದಾರೆ. 'ಪೂರ್ಣಸ್ಯ' ಎಂದರೆ ದೇಶತಃ ವ್ಯಾಪ್ತನಾದ ಎಂದರ್ಥ. 'ಅಂತರ್ಯಾಮಿಗತಾ ಕ್ರಿಯಾ' ಎಂದರೆ ಪ್ರಾಣಸಂವಾದಾದಿಲಿಂಗಗಳಂತೆ ಅಂತರ್ಯಾಮಿಯಲ್ಲಿರುವ ಕ್ರಿಯೆಯನ್ನು ತಿಳಿಯಬೇಕೆಂದಭಿಪ್ರಾಯ.

ಪ್ರಕಾಶಃ – ತಸ್ಯಾಪಿ ಸರ್ವಗತತ್ವಾದಿತಿ ।। ''ತತ್ಪ್ರಾಣ ಉತ್ಕ್ರಾನ್ತೇऽಪಧತೇ'' ಇತ್ಯಾದಿಪ್ರಾಣೋತ್ಕ್ರಮಣಾದಿ ತ್ವತ್ರತ್ಯನ್ಯಾಯೇನಾನ್ತರ್ಯಾಮಿಗತತ್ವೇನ ತತ್ರಾಭಿಮತಮ್ । ನತು ತತ್ರೈವ ತತ್ಸಿದ್ಧಮಿತಿ ಭಾವಃ ।

'ಶಾಸ್ತ್ರದೃಷ್ಟ್ಯಾ' ಇತ್ಯಾದಿ ಸೂತ್ರದಲ್ಲಿ 'ತತ್ಕ್ರತೂ ಉತ್ಕ್ರಾಮಂತೇऽಪದ್ಯತೇ' ಇತ್ಯಾದಿಯಾಗಿ ಪ್ರಾಣೋತ್ಕ್ರಮಣಾದಿಗಳನ್ನು ಹೇಳಿದ್ದು ಈ ಅಧಿಕರಣದ ಸಿದ್ಧಾಂತನ್ಯಾಯವನ್ನು ಅನುಸರಿಸಿ ಅಂತರ್ಯಾಮಿಗತತ್ವೇನ ಅಲ್ಲಿ ಹೇಳಿರುತ್ತಾರೆ. ಹೊರತು ಅಲ್ಲಿಯೇ ಸಿದ್ಧವಾದ ನ್ಯಾಯವನ್ನು ಅನುಸರಿಸಿ ಹೇಳಿರುವುದಲ್ಲವೆಂದು ತಿಳಿಯಬೇಕು.

ಪ್ರಕಾಶಃ – ಏತೇನ ''ಸರ್ವಗತೇ ಹರಾವಸಮ್ಭವಾತ್'' ಇತಿ ಟೀಕಾವಾಕ್ಯಮ್ ಅಣುತ್ವವತ್ಯಪಿ ಹರೌ ಸರ್ವಗತೇऽಸಮ್ಭವಾದಿತಿ ವ್ಯೋಮವದೇಕದೇಶಗತೇऽಪಿ ಹರೌ ಸರ್ವಗತೇऽಸಮ್ಭವಾದಿತಿ ಅನ್ತರ್ಯಾಮಿಣ್ಯಪಿ ಸರ್ವಗತೇ ಹರಾವಸಮ್ಭವಾದಿತ್ಯಾದಿ ರೂಪೇಣ ವ್ಯಾಖ್ಯಾತಂ ಭವತಿ ।

ಹೀಗೆ ಹೇಳಿದ್ದರಿಂದ 'ಸರ್ವಗತೇ ಹರೌವಸಂಭವಾತ್' ಇತ್ಯಾದಿ ಟೀಕಾವಾಕ್ಯವನ್ನು ಅನೇಕ ಬಗೆಯಲ್ಲಿ ವ್ಯಾಖ್ಯಾನಿಸಿದಂತಾಯಿತು. ಶ್ರೀಹರಿಯು ಅಣುತ್ವವುಳ್ಳವನಾದರೂ ಸಹ ಅವನು ಸರ್ವಗತನಾದ ಪ್ರಯುಕ್ತ ಅಂತಹ ಶ್ರೀಹರಿಯಲ್ಲಿ ಕ್ರಿಯೆಯು ಕೂಡುವುದಿಲ್ಲ. ಮತ್ತು ಆಕಾಶದಂತೆ ಪರಮಾತ್ಮನು

ಏಕದೇಶಗತನಾಗಿದ್ದರೂ ಸರ್ವಗತನಾದ ಪ್ರಯುಕ್ತ ಕ್ರಿಯೆಯು ಕೂಡುವುದಿಲ್ಲ. ಮತ್ತು ಅಂತರ್ಯಾಮಿಯಾಗಿದ್ದರೂ ಸಹ ಸರ್ವಗತನಾದ ಪ್ರಯುಕ್ತ ಶ್ರೀಹರಿಯಲ್ಲಿ ಕ್ರಿಯೆಯು ಕೂಡುವುದಿಲ್ಲ. ಇತ್ಯಾದಿಯಾಗಿ ವ್ಯಾಖ್ಯಾನಿಸಿದಂತಾಯಿತು.

ಪ್ರಕಾಶಃ – ಉತ್ಕ್ರಾನ್ತೀತಿ ।। ದ್ವಿತೀಯಸ್ಯ ತೃತೀಯಪಾದೇ ''ಉತ್ಕ್ರಾನ್ತಿಗತ್ಯಾಗತೀನಾಮ್'' ಇತ್ಯತ್ರ ಜೀವಃ ಕಿಂ ವ್ಯಾಪ್ತೋऽಣುರ್ವೇತಿ ಸನ್ದೇಹೇ ''ವ್ಯಾಪ್ತಾ ಹ್ಯಾತ್ಮಾನಃ'' ಇತಿ ಶ್ರುತೇರ್ವ್ಯಾಪ್ತ ಇತಿ ಪ್ರಾಪ್ತೇ ''ಸೋऽಸ್ಮಾಚ್ಛರೀರಾದುತ್ಕ್ರಮ್ಯಾಮುಂ ಲೋಕಮಭಿಗಚ್ಛತ್ಯಮುಷ್ಮಾದಿಮಂ ಲೋಕಮಾಗಚ್ಛತಿ'' ಇತ್ಯುತ್ಕ್ರಮಣಗಮನಾಗಮನರೂಪಕ್ರಿಯಾದರ್ಶನಾದ್ವ್ಯಾಪ್ತಸ್ಯ ತದಯೋಗಾದಣುರೇವ । ವ್ಯಾಪ್ತತ್ವಶ್ರುತೇಃ ಪರಮಾತ್ಮವಿಷಯತ್ವಮಿತಿ ವಕ್ಷ್ಯಮಾಣತ್ವಾತ್ತದ್ವಿರೋಧಸ್ಯಾದಿತ್ಯರ್ಥಃ ।

'ಉತ್ಕ್ರಾಂತಿಗತ್ಯಾಗತೀನಾಮ್' ಎಂಬ ಪ್ರತೀಕದ ಅಭಿಪ್ರಾಯ ಹೀಗೆ -

ಎರಡನೆಯ ಅಧ್ಯಾಯದ ಮೂರನೆಯ ಪಾದದಲ್ಲಿ ಬರುವ ಈ ಸೂತ್ರದಲ್ಲಿ ಹೀಗೆ ವಿಚಾರ ಮಾಡಿದ್ದಾರೆ - ಜೀವನು ವ್ಯಾಪ್ತನೋ? ಅಥವಾ ಅಣುವೋ ಎಂದು ಸಂಶಯ. 'ವ್ಯಾಪ್ತಾ ಹ್ಯಾತ್ಮಾನಃ' ಎಂಬ ಶ್ರುತಿಯಿರುವುದರಿಂದ ಜೀವನು ವ್ಯಾಪ್ತನಾಗಿದಾನೆಂದು ಪೂರ್ವಪಕ್ಷ. 'ಸೋऽಸ್ಮಾಚ್ಛರೀರಾದುತ್ಕ್ರಮ್ಯಾಮುಂ ಲೋಕಮಭಿಗಚ್ಛತ್ಯಮುಷ್ಮಾದಿಮಂ ಲೋಕಮಾಗಚ್ಛತಿ' ಎಂಬುದಾಗಿ ಉತ್ಕ್ರಮಣ, ಗಮನ, ಆಗಮನ ಮೊದಲಾದ ಕ್ರಿಯೆಗಳನ್ನು ಹೇಳಿರುವ ಪ್ರಯುಕ್ತ ವ್ಯಾಪ್ತನಾದ ಜೀವನಿಗೆ ಇಂತಹ ಕ್ರಿಯೆಯು ಕೂಡುವುದಿಲ್ಲ. ಆದ್ದರಿಂದ ಜೀವನು ಅಣುಸ್ವರೂಪನೆಂದೇ ಹೇಳಬೇಕು. ವ್ಯಾಪ್ತತ್ವವನ್ನು ಹೇಳುವ ಶ್ರುತಿಯಿದ್ದರೂ ಸಹ ಅದು ಕೇವಲ ಪರಮಾತ್ಮಕ ವಿಷಯಕವೆಂದು ಮುಂದೆ ಸಮರ್ಥಿಸುತ್ತಾರೆ. ಆದ್ದರಿಂದ ಈ ಅಧಿಕರಣದಲ್ಲಿ ಕ್ರಿಯೆಯುಳ್ಳವನಾದ್ದರಿಂದ ಜೀವನನ್ನು ಅಣುಸ್ವರೂಪನೆಂದು ಸಮರ್ಥಿಸಲಾಗಿದೆ. ಇದರ ವಿರೋಧ ಬರುತ್ತದೆಂದು ತಿಳಿಯಬೇಕು.

ಆದ್ದರಿಂದ ಉತ್ಕ್ರಮಣಲಿಂಗವನ್ನು ವಿಷ್ಣುವಿನಲ್ಲಿ ಹೇಳಲು ಬಾರದ ಕಾರಣ ಪ್ರಾಣಶಬ್ದದಿಂದ ವಾಚ್ಯರಾದವರು ಮುಖ್ಯಪ್ರಾಣದೇವರೇ ಆಗುತ್ತಾರೆ. ಅವರೇ 'ಭೂಮಾ' ಎಂಬ ಶಬ್ದದಿಂದಲೂ ಪ್ರತಿಪಾದ್ಯರಾಗುತ್ತಾರೆಂಬ ಪೂರ್ವಪಕ್ಷವು ಸಿದ್ಧವಾಯಿತು.

ಗುರುರಾಜೀಯಮ್ – ಉಪಕ್ರಮಾನುಕ್ತಯೋರೇಕತ್ರಾಸಮ್ಭವಾತ್ಪಕ್ಷಭೇದೇನ ವ್ಯವಸ್ಥಾಪನಾಯಾऽಹ – **ಭೂಮ್ನೋ ಬ್ರಹ್ಮತ್ವಂ ಹಿ ದ್ವೈಧಾ ಭವೇದಿತ್ಯಾದಿನಾ ।।** 'ಪ್ರಾಣಭೂಮ್ನೋರಭೇದಪಕ್ಷ' ಇತ್ಯಾದಿನೈತದ್ವಿವೇಕಂ ಸ್ವಯಮೇವ ಕರಿಷ್ಯತಿ । ನನು ಸರ್ವಗತತ್ವೇನ ಬ್ರಹ್ಮಣ ಉತ್ಕ್ರಮಣಮ್ । ತಸ್ಯ ಭೂಮತ್ವಾನಙ್ಗೀಕಾರೇ ವಾಯೋರೇವ ಸರ್ವಗತತ್ವಾಪತ್ತ್ಯೋತ್ಕ್ರಮಣಾನುಪಪತ್ತಿರಿತ್ಯತ ಆಹ – **ವಾಯೋರಿತಿ ।।** ನನು ವಾಯೋರಣುತ್ವೇನ ತಸ್ಯೈವಾನನ್ದಮಯತ್ವಮಿತಿ ಟೀಕೋಕ್ತಾಕ್ಷೇಪಾನುಪಪತ್ತಿಃ । ಆನನ್ದಮಯ ಉಕ್ತಸ್ಯ ದೇಶತಃ ಪೂರ್ಣತ್ವಸ್ಯಾಣೌ ವಾಯಾವಸಮ್ಭವಾದಿತ್ಯತ ಆಹ – **ಆನನ್ದಮಯ ಇತಿ ।।**

ಸಾರ

ಪರಮಾತ್ಮನು ವ್ಯಾಪ್ತನಾದ ಕಾರಣ 'ದೇಹದಿಂದ ಹೊರಗೆ ಹೊರಟಿದ್ದಾನೆ'. ಅಥವಾ 'ದೇಹದಲ್ಲಿ ಪ್ರವೇಶ ಮಾಡಿದ್ದಾನೆ' ಇತ್ಯಾದಿಯಾಗಿ ಯಾವುದೇ ಕ್ರಿಯೆಯನ್ನು ಹೇಳಲು ಸಾಧ್ಯವಿಲ್ಲ. ಇಂತಹ ಕ್ರಿಯೆಯನ್ನು ಅಣುಸ್ವರೂಪನಾದ ಮುಖ್ಯಪ್ರಾಣನಲ್ಲಿ ಮಾತ್ರ ಹೇಳಬೇಕೆಂದು ಪೂರ್ವಪಕ್ಷದ ಅಭಿಪ್ರಾಯ. ಬ್ರಹ್ಮನು ವ್ಯಾಪ್ತನಾಗಿದ್ದರೂ ಸಹ ಅಣುಸ್ವರೂಪನೂ ಆಗಿರುವ ಪ್ರಯುಕ್ತ ಕ್ರಿಯೆಯನ್ನು ಹೇಳಬಹುದಲ್ಲವೇ ? ಎಂಬ ಪ್ರಶ್ನೆ ಸಹಜವಾಗಿ ಬರುತ್ತದೆ. ಆದರೆ ಅಣುತ್ವವಿರುವ ಪ್ರಯುಕ್ತ ಕ್ರಿಯೆಯು ಬರುತ್ತದೆಂದು ಹೇಳುವುದಾದರೆ ಮಹತ್ತ್ವವಿರುವ ಪ್ರಯುಕ್ತ ಕ್ರಿಯೆಯು ಬರುವುದಿಲ್ಲವೆಂದು ಹೇಳಿದರೆ ಈ ರೀತಿಯ ಪೂರ್ವಪಕ್ಷಗಳ ಪ್ರತಿಬಂದಿಗೆ ಉತ್ತರವನ್ನು ನೀಡಲು ಸಾಧ್ಯವಿಲ್ಲ. ಆದ್ದರಿಂದ ವ್ಯಾಪ್ತನಾದ ಪರಮಾತ್ಮನಿಗೆ ಕ್ರಿಯೆಯು ಕೂಡುವುದಿಲ್ಲವೆಂಬುದೇ ಈ ಅಧಿಕರಣದ ಪೂರ್ವಪಕ್ಷ. ಇದರ ನಿರಾಕರಣೆಯೇ ಸಿದ್ಧಾಂತ.

ಈ ಪೂರ್ವಪಕ್ಷ ಹಾಗೂ ಸಿದ್ಧಾಂತಗಳನ್ನು ಬೇರೆ ಯಾವುದೇ ಅಧಿಕರಣಗಳಲ್ಲಿಯೂ ಸಹ ಮಾಡಿರುವುದಿಲ್ಲ. 'ಸರ್ವತ್ರ ಪ್ರಸಿದ್ಧೋಪದೇಶಾತ್' ಎಂಬ ಸೂತ್ರದಲ್ಲಿ ಸರ್ವಗತನಾದ ಪರಮಾತ್ಮನು ಹೃದಯದಲ್ಲಿದ್ದಾನೆಂದು ಹೇಳಿದ್ದಾರೆ ಹೊರತು, ವ್ಯಾಪ್ತನಾದ ಪರಮಾತ್ಮನಿಗೆ ಕ್ರಿಯೆಯು ಬರುತ್ತದೆಂದು ಹೇಳಿರುವುದಿಲ್ಲ. ಇದರಂತೆ 'ಜ್ಯೋತಿರ್ದರ್ಶನಾತ್' ಎಂಬ ಸೂತ್ರದಲ್ಲಿ ಕರ್ಮಾಧೀನವಾಗಿ ಸಂಚಾರವು ಬರುತ್ತದೆಂದು ಹೇಳಿದ್ದಾರೆ ಹೊರತು, ವ್ಯಾಪ್ತನಾದ ಪರಮಾತ್ಮನಿಗೆ ಕ್ರಿಯೆಯು ಬರುವುದಿಲ್ಲವೆಂದು ಪೂರ್ವಪಕ್ಷವನ್ನು ಮಾಡಿರುವುದಿಲ್ಲ. ಮತ್ತು ಅದರ ಖಂಡನೆಯನ್ನೂ ಸಹ ಮಾಡಿರುವುದಿಲ್ಲ. ಆದ್ದರಿಂದ ಈ ಅಧಿಕರಣವು ಬೇರೆ ಅಧಿಕರಣದಿಂದ ಗತಾರ್ಥವಾಗಲು ಸಾಧ್ಯವಿಲ್ಲ. ಆದ್ದರಿಂದ ಉತ್ಕ್ರಮಣವೆಂಬ ಲಿಂಗವು ಮುಖ್ಯಪ್ರಾಣನಲ್ಲಿ ಮಾತ್ರ ಬರುತ್ತದೆ. ಪ್ರಾಣಶಬ್ದದಿಂದ ಮುಖ್ಯಪ್ರಾಣದೇವರೇ ಪ್ರತಿಪಾದ್ಯರಾಗುತ್ತಾರೆ, ಅವರೇ ಭೂಮರೂ ಸಹ ಆಗುತ್ತಾರೆಂಬ ಎಂಬ ಪೂರ್ವಪಕ್ಷವು ಉದಯವಾಯಿತು.

● ● ● ● ●

ವಿಷ್ಣುವೇ ಭೂಮನೆಂದು ಸಿದ್ಧಾಂತ

तात्पर्यचन्द्रिका

सिद्धान्तस्तु । ''यो वै भूमा तत्सुखम्'' इति भूम्नः पूर्णसुखतोक्ता । सा च ''विश्वशम्भुवम्'' इत्यादिभाष्योक्तश्रुत्यादिभिर्विष्वेकनिष्ठा ।

ಅನುವಾದ - 'ಭೂಮಾ' ಎಂಬ ಶಬ್ದ ಪ್ರತಿಪಾದ್ಯನಾದವನು ಮಹಾವಿಷ್ಣುವೇ ಆಗಿದ್ದಾನೆ. ಏಕೆಂದರೆ 'ಯೋ ವೈ ಭೂಮಾ ತತ್ಸುಖಮ್' 'ಯಾರು ಭೂಮನಾಗಿದ್ದಾನೋ, ಅವನು ಪೂರ್ಣಸುಖವುಳ್ಳವನು' ಎಂಬುದಾಗಿ ಶ್ರುತಿಯು ಭೂಮನನ್ನು ಪೂರ್ಣಸುಖಸ್ವರೂಪನೆಂದು ಕರೆಯುತ್ತಿದೆ. ಇಂತಹ ಪೂರ್ಣಸುಖವು 'ವಿಶ್ವಶಂಭುವಮ್' 'ಪೂರ್ಣವಾದ ಸುಖಕ್ಕೆ

ಆಶಯನಾದವನು' ಇತ್ಯಾದಿಯಾದ ಭಾಷ್ಯದಲ್ಲಿ ಉದಾಹರಿಸಲ್ಪಟ್ಟ ಅನೇಕ ಶ್ರುತಿಗಳಿಂದ ಕೇವಲ ವಿಷ್ಣುವಿನಲ್ಲಿ ಮಾತ್ರ ಇರುತ್ತದೆಂದು ಸಿದ್ಧವಾಗಿದೆ.

नहि द्वयोः सर्वोत्कृष्टानन्दत्वम् । विरोधात् ।

ಇಂತಹ ಪೂರ್ಣಸುಖವನ್ನು ವಾಯುದೇವರಲ್ಲಿ ಹಾಗೂ ಪರಮಾತ್ಮನಲ್ಲಿ ಇಬ್ಬರಲ್ಲಿಯೂ ಒಪ್ಪೋಣವೆಂದು ಹೇಳಬಾರದು. ಏಕೆಂದರೆ ಇಬ್ಬರಿಗೆ ಸರ್ವೋತ್ಕೃಷ್ಟವಾದ ಆನಂದವನ್ನು ಹೇಳಿದರೆ ವಿರೋಧ ಬರುತ್ತದೆ. 'ಸರ್ವೋತ್ಕೃಷ್ಟ ಆನಂದ' ಎಂದರೆ ಬೇರೆ ಎಲ್ಲರ ಆನಂದಕ್ಕಿಂತ ಉತ್ತಮವಾದ ಆನಂದವೆಂದರ್ಥ. ಬೇರೆ ಎಲ್ಲರ ಆನಂದದಲ್ಲೇ ವಾಯುದೇವರ ಆನಂದವೂ ಸಹ ಸೇರುವುದರಿಂದ ಅವರ ಆನಂದವನ್ನು ಸರ್ವೋತ್ಕೃಷ್ಟವೆಂದು ಹೇಳಬಾರದು.

'तत्सुखम्' इत्यत्रामुख्यभूतापूर्णसुखोक्तौ तु मुख्यामुख्यन्यायबाधः ।

ಹಾಗೂ ಶ್ರುತಿಯಲ್ಲಿರುವ 'ತತ್ಸುಖಿಮ್' ಎಂಬ ಶಬ್ದವು ಪೂರ್ಣವಾದ ಸುಖವನ್ನೇ ಹೇಳುತ್ತದೆ. ಒಂದು ವೇಳೆ ಅಮುಖ್ಯವಾದ ಅಪೂರ್ಣಸುಖವನ್ನು ವಿವಕ್ಷಿಸಿದರೆ 'ಮುಖ್ಯಾಮುಖ್ಯಯೋಃ ಮುಖ್ಯೇ ಸಂಪ್ರತ್ಯಯಃ' ಎಂಬ ನ್ಯಾಯದಿಂದ ವಿರೋಧ ಬರುತ್ತದೆ. ಆದ್ದರಿಂದ ಅಮುಖ್ಯವಾದ ಸುಖವನ್ನು ವಿವಕ್ಷಿಸದೇ ಮುಖ್ಯವಾದ ಪೂರ್ಣಸುಖವನ್ನೇ ಸುಖಶಬ್ದದಿಂದ ವಿವಕ್ಷಿಸಬೇಕು.

'नाल्पे सुखम्' इति निषेधायोगश्च । जडे सुखस्याप्रसक्तेः ।

ಒಂದು ವೇಳೆ ಸುಖಶಬ್ದದಿಂದ ಅಮುಖ್ಯವಾದ ಸುಖವನ್ನೇ ವಿವಕ್ಷಿಸಿದರೆ 'ನಾಲ್ಪೇ ಸುಖಿಮ್' 'ಅಲ್ಪನಲ್ಲಿ ಸುಖವಿರುವುದಿಲ್ಲ' ಎಂಬುದಾಗಿ ಮಾಡಲ್ಪಟ್ಟ ನಿಷೇಧವು ಅಯುಕ್ತವಾಗುತ್ತದೆ. ಏಕೆಂದರೆ ಜಡದಲ್ಲಂತೂ ಸುಖಕ್ಕೆ ಪ್ರಸಕ್ತಿಯೇ ಇರುವುದಿಲ್ಲ.

चेतने च सुखमात्रनिषेधे बाधात् । पूर्णसुखनिषेधस्तु चेतने न बाधितः ।

ಚೇತನದಲ್ಲಿಯೂ ಸಹ ಸುಖಸಾಮಾನ್ಯವನ್ನೇ ನಿಷೇಧ ಮಾಡಿದರೆ ಬಾಧ ಬರುತ್ತದೆ. ಹಾಗಾಗಿ ಪೂರ್ಣಸುಖದ ನಿಷೇಧವನ್ನೇ ಚೇತನನಲ್ಲಿ ಮಾಡಬೇಕು. ಇದು ಬಾಧಿತವಲ್ಲ.

किं चायं चरमकक्ष्यापन्नो भूमा सर्वोत्तमः ।

ಮತ್ತೊಂದು ಕಾರಣದಿಂದಲೂ 'ಭೂಮಾ' ಎನಿಸಿದವನು ಸರ್ವೋತ್ತಮನಾದ ವಿಷ್ಣುವೇ ಆಗಿದ್ದಾನೆಂದು ನಿರ್ಣಯಿಸಬಹುದು. ತಾರತಮ್ಯವನ್ನು ಹೇಳುತ್ತಾ ಕೊನೆಯ ಸ್ಥಾನದಲ್ಲಿ ಭೂಮನನ್ನು ಶ್ರುತಿ ಹೇಳುತ್ತಿದೆ. ಇವನ ಅನಂತರ ಮತ್ತೊಬ್ಬನ ಪ್ರಸ್ತಾಪವಿರುವುದಿಲ್ಲ. ಆದ್ದರಿಂದ ಸರ್ವೋತ್ತಮನಾದ ಭಗವಂತನೇ ಭೂಮನಾಗುತ್ತಾನೆ.

ಪ್ರಾಣಭೂಮ್ನೋರಭೇದಪಕ್ಷೇ ''ವಾಗ್ವಾವ ನಾಮ್ನೋ ಭೂಯಸೀ'' ಇತ್ಯಾದಾವಿವ ಪ್ರತಿಯೋಗಿ-ವಿಶೇಷಾನುಪಾದಾನಾತ್ ।

ಪೂರ್ವಪಕ್ಷ ಮಾಡುವಾಗ ಅಭೇದ ಪಕ್ಷ ಹಾಗೂ ಭೇದಪಕ್ಷಗಳನ್ನು ಅಂಗೀಕರಿಸಿ ಆಕ್ಷೇಪಿಸಲಾಗಿತ್ತು. ಎರಡು ಪಕ್ಷಗಳಲ್ಲಿಯೂ ಸಹ ವಿಷ್ಣುವೇ ಭೂಮನಾಗುತ್ತಾನೆ. ಒಂದು ವೇಳೆ ಪ್ರಾಣ ಹಾಗೂ ಇಬ್ಬರಿಗೂ ಅಭೇದವನ್ನು ಒಪ್ಪುವುದಾದರೆ, 'ವಾಗ್ವಾವ ನಾಮ್ನೋ ಭೂಯಸೀ' 'ನಾಮಾಭಿಮಾನಿಯಾದ ದೇವತೆಗಿಂತ ವಾಗಾಭಿಮಾನಿಯಾದ ದೇವತೆಯು ಉತ್ತಮಳು' ಎಂದು ಹೇಗೆ ಪ್ರತಿಯೋಗಿವಿಶೇಷವನ್ನು ಶ್ರುತಿಯು ಹೇಳುತ್ತಿದೆಯೋ ಆದರಂತೆ ಭೂಮನನ್ನು ಉತ್ತಮನೆಂದು ಹೇಳಿದಾಗ ಹೀಗೆ ಪ್ರತಿಯೋಗಿವಿಶೇಷವನ್ನು ಹೇಳಿರುವುದಿಲ್ಲ. ಆದ್ದರಿಂದ ಭೂಮನು ಸರ್ವೋತ್ತಮನೇ ಆಗಬೇಕು.

ಭೇದಪಕ್ಷೇ ಪ್ರಾಣಾದಪ್ಯುತ್ತಮತ್ವಾತ್ ।

ಪ್ರಾಣ ಹಾಗೂ ಭೂಮಾ ಇಬ್ಬರಿಗೂ ಭೇದವನ್ನು ಒಪ್ಪುವುದಾದರೆ ಮುಖ್ಯಪ್ರಾಣದೇವರಿಗಿಂತ ಭೂಮನು ಸರ್ವೋತ್ತಮನೆಂದು ನಿರಾತಂಕವಾಗಿ ಹೇಳಬಹುದು.

''ನಾಲ್ಪೇ ಸುಖಮ್'' ಇತಿ ನಿರುಪಪದಾಲ್ಪಸ್ಯ ಪ್ರತಿಯೋಗಿತ್ವೇನೋಪಾದಾನಾಚ್ಚ । ಅಸರ್ವೋತ್ತಮಸ್ಯ ಕಸ್ಮಾಚ್ಚಿದಲ್ಪತ್ವೇನ ನಿರುಪಪದಾಲ್ಪಸ್ಯ ತತ್ಪ್ರತಿಯೋಗಿತ್ವಾಯೋಗಾತ್ ।

'ನಾಲ್ಪೇ ಸುಖಮ್' ಎಂಬಲ್ಲಿ ಉಪಪದವಿಲ್ಲದ ಅಲ್ಪಶಬ್ದದಿಂದ ಪ್ರತಿಯೋಗಿಯನ್ನು ಶ್ರುತಿಯು ಹೇಳುತ್ತಿದೆ. ಭೂಮನು ಪೂರ್ಣಸುಖಸ್ವರೂಪನಾಗಿದ್ದಾನೆ. ಅಲ್ಪನಾದವನು ಇಂತಹ ಪೂರ್ಣಸುಖವನ್ನು ಹೊಂದಿರುವುದಿಲ್ಲವೆಂದು ಹೇಳಿದ್ದರಿಂದ ಸರ್ವೋತ್ತಮನಲ್ಲದ ವ್ಯಕ್ತಿಯು ಯಾರೋ ಒಬ್ಬನಿಗಿಂತ ಅಲ್ಪನೇ ಆಗಿರುತ್ತಾನೆ. ಅಂತಹ ನಿರುಪಪದನಾದ ಅಲ್ಪನಿಗೆ ಪೂರ್ಣಸುಖವುಳ್ಳವನು ಪ್ರತಿಯೋಗಿಯಾಗಲು ಸಾಧ್ಯವಿಲ್ಲ.

ತಚ್ಚ ''ವಿಶ್ವತಃ ಪರಮ್'' ಇತ್ಯಾದಿಭಾಷ್ಯೋಕ್ತಶ್ರುತ್ಯಾದಿಭಿರ್ವಿಷ್ಣ್ವೇಕನಿಷ್ಠಮ್ । ನಚ ದ್ವಯೋಃ ಸರ್ವೋತ್ತಮತ್ವಮ್ । ವಿರೋಧಾತ್ । ತಸ್ಮಾದ್ಭೂಮಾ ವಿಷ್ಣುಃ ।

ಸರ್ವೋತ್ಕೃಷ್ಟವಾದ ಸುಖವು 'ವಿಶ್ವತಃ ಪರಮಮ್' ಇತ್ಯಾದಿ ಭಾಷ್ಯದಲ್ಲಿ ಉದಾಹರಿಸಿದ ಶ್ರುತ್ಯಾದಿಗಳಿಂದ ಕೇವಲ ವಿಷ್ಣುವಿನಲ್ಲಿ ಮಾತ್ರವೇ ಇರುತ್ತದೆಂದು ನಿಶ್ಚಯವಾಗುತ್ತದೆ. ಇಬ್ಬರಿಗೆ ಸರ್ವೋತ್ತಮತ್ವವನ್ನು ಹೇಳಲು ಬರುವುದಿಲ್ಲ. ಹಾಗೆ ಹೇಳಿದರೆ ವಿರೋಧ ಬರುತ್ತದೆ. ಆದ್ದರಿಂದ ಭೂಮನೆನಿಸಿದವನು ವಿಷ್ಣುವೇ ಆಗಿದ್ದಾನೆ.

ಪ್ರಕಾಶಃ –

पराभिमतहेत्वोरनुत्तमुत्क्रमणयोस्सावकाशतामग्रे विवक्षुस्सूत्रोपात्तसम्प्रसादादि-हेतुना भूमा विष्णुरित्युक्तिपरां ''विष्णुरेवायं भूमा'' इत्यादिटीकां विवृण्वन् सिद्धान्तयति – सिद्धान्तस्त्विति ।।

ವಿವರಣೆ - ಸಿದ್ಧಾಂತವನ್ನು ಪ್ರಾರಂಭಿಸುತ್ತಿದ್ದಾರೆ. ಪೂರ್ವಪಕ್ಷ ಮಾಡುವಾಗ ಅನುಕ್ತ ಹಾಗೂ ಉತ್ತಮಣವೆಂಬ ಎರಡು ಯುಕ್ತಿಗಳನ್ನು ಹೇಳಿದ್ದರು. ಇವೆರಡೂ ಸಹ ಸಾವಕಾಶವಾಗಿವೆಯೆಂಬ ವಿಚಾರವನ್ನು ಮುಂದೆ ಸಮರ್ಥಿಸುತ್ತಾರೆ. ಪ್ರಕೃತ, ಸೂತ್ರದಲ್ಲಿ ಹೇಳಲ್ಪಟ್ಟ 'ಸಂಪ್ರಸಾದಾತ್' ಎಂಬ ಹೇತುವಿನಿಂದ ಭೂಮನು ವಿಷ್ಣುವೇ ಆಗಿದ್ದಾನೆಂಬುದನ್ನು ಸಮರ್ಥಿಸುತ್ತಿದ್ದಾರೆ. ಇದನ್ನು 'ವಿಷ್ಣುರೇವಾಯಂ ಭೂಮಾ' ಇತ್ಯಾದಿ ಟೀಕೆಯಲ್ಲಿ ವ್ಯಾಖ್ಯಾನಿಸಿದ್ದನ್ನೇ ಪ್ರಕೃತ ಗ್ರಂಥಕಾರರು ವಿವರಿಸುತ್ತಿದ್ದಾರೆ 'ಸಿದ್ಧಾಂತಸ್ತು' ಇತ್ಯಾದಿ ಗ್ರಂಥದಿಂದ.

ಪ್ರಕಾಶಃ – ''पूर्णसुखरूपत्वाभिधानात्, नामादीनां सर्वेषामुपरि तदुत्तमत्वेन व्यपदेशाच्च'' इति टीकोक्तहेत्वोः ''पूर्णसुखत्वादिकं च कुतो विष्णुत्वनिश्चायकम्'' इत्यादिटीकोक्तनिरवकाशतां क्रमेण विवरिष्यन्नाद्यस्य तां तावदाह – यो वै भूमेत्यादिना ।।

'ಪೂರ್ಣಸುಖರೂಪತ್ವಾಭಿಧಾನಾತ್, ನಾಮಾದೀನಾಂ ಸರ್ವೇಷಾಮುಪರಿ ತದುತ್ತಮತ್ವೇನ ವ್ಯಪದೇಶಾಚ್ಚ' 'ಪೂರ್ಣಸುಖಸ್ವರೂಪವನ್ನು ಹೇಳಿರುವುದರಿಂದ ಮತ್ತು ನಾಮಾಭಿಮಾನಿದೇವತೆಗಳಿಂದೆಲ್ಲಾ ಉತ್ತಮನೆಂದು ಹೇಳಿರುವುದರಿಂದಲೂ' ಎಂದು ಟೀಕೆಯಲ್ಲಿ ಹೇಳಿರುವ ಎರಡು ಹೇತುಗಳನ್ನು, 'ಪೂರ್ಣಸುಖತ್ವಾದಿಕಂ ಚ ಕುತೋ ವಿಷ್ಣುತ್ವನಿಶ್ಚಾಯಕಮ್' 'ಪೂರ್ಣಸುಖವನ್ನು ಹೇಳಿದ ಮಾತ್ರದಿಂದ ವಿಷ್ಣುವೇ ಭೂಮನಾಗಿದ್ದಾನೆಂದು ಹೇಗೆ ನಿಶ್ಚಯಿಸುತ್ತೀರಿ?' ಇತ್ಯಾದಿ ಟೀಕಾಮಾತಿನಲ್ಲಿ ನಿರವಕಾಶವಾಗಿವೆಯೆಂದು ಸಮರ್ಥಿಸಲಾಗಿವೆ. ಅದನ್ನೇ ಕ್ರಮವಾಗಿ ವಿವರಿಸುತ್ತಾ ಮೊದಲನೇ ಹೇತುವಿಗೆ ನಿರವಕಾಶತ್ವವನ್ನು 'ಯೋ ವೈ ಭೂಮಾ' ಇತ್ಯಾದಿ ವಾಕ್ಯದಿಂದ ಸಮರ್ಥಿಸುತ್ತಿದ್ದಾರೆ.

ಪ್ರಕಾಶಃ – विश्वशम्भुवं पूर्णसुखाश्रयमित्यर्थः ।

'लक्षणं परमानन्दो विष्णोरेव न संशयः ।
अव्यक्तादितृणान्तास्तु विप्लुतानन्दभागिनः ।।' इति

'सुखं लब्ध्वा हि कुरुते लोकचेष्टां जनार्दनः ।
अल्पात्सुखादल्पकर्मा पूर्णानन्दाद्धि सर्वकृत् ।।'
ಭೂಮಾಧಿಕರಣ (೧-೩-೨)

इत्यादिस्मृतयस्सर्वकर्तृत्वादियुक्तयश्चादिपदार्थाः ।

'ವಿಶ್ವಶಂಭುವಮ್' ಎಂಬ ಪದಕ್ಕೆ ಪೂರ್ಣವಾದ ಸುಖಕ್ಕೆ ಆಶ್ರಯನಾದವನು ಎಂದರ್ಥ.

'ಲಕ್ಷಣಂ ಪರಮಾನಂದೋ ವಿಷ್ಣೋರೇವ ನ ಸಂಶಯಃ।
ಅವ್ಯಕ್ತಾದಿತೃಣಾಂತಾಸ್ತು ವಿಪ್ಲುಡಾನಂದಭಾಗಿನಃ'

'ಪರಮಾನಂದವೆಂಬುದೇ ವಿಷ್ಣುವಿನ ಲಕ್ಷಣವೆಂಬುದರಲ್ಲಿ ಸಂಶಯವಿಲ್ಲ. ಲಕ್ಷ್ಮೀದೇವಿಯಿಂದ ಆರಂಭಿಸಿ ತೃಣಪರ್ಯಂತ ಸಕಲಜೀವಿಗಳು ಅನುಭವಿಸುವ ಆನಂದವು ವಿಷ್ಣುವಿನ ಆನಂದದ ಮುಂದೆ ಒಂದು ಬಿಂದು ಮಾತ್ರ' ಎಂಬುದಾಗಿ ಪೂರ್ಣಸುಖಕ್ಕೆ ಪರಮಾತ್ಮನೇ ಆಶ್ರಯನಾಗಿದ್ದಾನೆಂದು ಹೇಳಲಾಗಿದೆ.

ಸುಖಂ ಲಬ್ಧ್ವಾ ಹಿ ಕುರುತೇ ಲೋಕಚೇಷ್ಟಾಂ ಜನಾರ್ದನಃ।
ಅಲ್ಪಾತ್ಸುಖಾದಲ್ಪಕರ್ಮಾ ಪೂರ್ಣಾನಂದಾದ್ಧಿ ಸರ್ವಕೃತ್ ॥

'ಸುಖದಿಂದಲೇ ಲೋಕದ ಚೇಷ್ಟೆಯನ್ನು ಜನಾರ್ದನನು ಮಾಡುತ್ತಾನೆ. ಅಲ್ಪಸುಖದಿಂದ ಸಣ್ಣ ಕೆಲಸವನ್ನಷ್ಟೇ ಮಾಡಬಹುದು. ಸಮಸ್ತ ಜಗತ್ತಿನ ಚೇಷ್ಟೆಯೆಂಬ ದೊಡ್ಡ ಕಾರ್ಯವನ್ನು ಮಾಡಬೇಕೆಂದರೆ ಪೂರ್ಣಾನಂದನೇ ಆಗಿರಬೇಕು'.

ಇವೇ ಮೊದಲಾದ ಶ್ರುತಿ, ಸ್ಮೃತಿಗಳಿಂದ ಪೂರ್ಣಾನಂದತ್ವ ಹಾಗೂ ಸರ್ವಕರ್ತೃತ್ವಾದಿಗಳು ವಿಷ್ಣುವಿನಲ್ಲಿ ಮಾತ್ರ ಬರುತ್ತವೆಂದು ತಿಳಿಯುತ್ತದೆ. ಗ್ರಂಥದಲ್ಲಿರುವ ಆದಿಪದದಿಂದ ಈ ಶ್ರುತಿ, ಸ್ಮೃತಿ ಪ್ರಮಾಣಗಳನ್ನು ಮತ್ತು ಸರ್ವಕರ್ತೃತ್ವಾದಿ ಯುಕ್ತಿಗಳನ್ನು ಸಂಗ್ರಹಿಸಬೇಕು.

प्रकाशः – वायोरप्यस्तित्वत्यत आह – नहीति ।। एतेन ''नापि पूर्णानन्दत्वम्'' इति टीकायां 'विरोधात्' इति पदमत्राप्यनुवर्त्य योज्यमिति सूचितम् । सर्वशब्दस्यासङ्कुचितत्वेनान्योन्यनिरूपितोत्कर्षस्य द्वयोरयोगादित्यर्थः ।

ವಾಯುದೇವರಿಗೂ ಸರ್ವೋತ್ಕೃಷ್ಟವಾದ ಆನಂದವು ಬರಲಿ ಎಂಬ ಪ್ರಶ್ನೆಗೆ 'ನಹಿ' ಇತ್ಯಾದಿಯಾಗಿ ಉತ್ತರಿಸಿದ್ದಾರೆ. ಹೀಗೆ ಹೇಳಿದ್ದರಿಂದ 'ನಾಪಿ ಪೂರ್ಣಾನಂದತ್ವಂ' ಎಂಬ ಟೀಕೆಯಲ್ಲಿ 'ವಿರೋಧಾತ್' ಎಂಬ ಪದವಿದೆ ಅದನ್ನು ಇಲ್ಲಿಯೂ ಸಹ ಅನುವೃತ್ತಿ ಮಾಡಿಕೊಂಡು ಯೋಜನೆ ಮಾಡಬೇಕೆಂದು ತಿಳಿಯುತ್ತದೆ. ಪರಮಾತ್ಮನಿಗೆ ಹಾಗೂ ವಾಯುದೇವರಿಬ್ಬರಿಗೂ ಸರ್ವೋತ್ಕೃಷ್ಟವಾದ ಆನಂದವನ್ನು ಹೇಳಿದರೆ ಸರ್ವಶಬ್ದವು ಅಸಂಕುಚಿತವಾದ ಆನಂದವನ್ನೇ ಹೇಳುತ್ತದೆ. ಇಬ್ಬರನ್ನು ಸರ್ವೋತ್ಕೃಷ್ಟ ಆನಂದವುಳ್ಳವರೆಂದು ಹೇಳಿದರೆ ವಿಷ್ಣುವಿನ ಸರ್ವಶಬ್ದದಲ್ಲಿ ವಾಯುದೇವರು ಬರುತ್ತಾರೆ. ವಾಯುದೇವರಿಗೆ ಸಂಬಂಧಿಸಿದ ಸರ್ವಶಬ್ದದಲ್ಲಿ ವಿಷ್ಣುವು ಬರುತ್ತಾನೆ. ಹೀಗೆ ಪರಸ್ಪರ ವಿರೋಧ ಬರುವುದರಿಂದ ಇಬ್ಬರಿಗೆ ಸರ್ವೋತ್ತಮವಾದ ಆನಂದವನ್ನು ಹೇಳಲು ಸಾಧ್ಯವಿಲ್ಲ.

ಪ್ರಕಾಶಃ – ನನು ''ಪೂರ್ಣಸುಖತೋಕ್ತಾ'' ಇತ್ಯಯುಕ್ತಮ್ । ಅಶ್ರವಣಾತ್ । ಸುಖಶಬ್ದಸ್ಯಾಪೂರ್ಣಸುಖಾರ್ಥತ್ವೇऽप್ಯುಪಪತ್ತೇರಿತ್ಯತಃ ''ಪೂರ್ಣಸುಖತ್ವಾಭಿಧಾನಾತ್'' ಇತಿ ಹೇತೋರಸಿದ್ಧಿಂ ಪರಿಹರ್ತುಂ ಪ್ರವೃತ್ತಾಂ ''ನಿರೂಪಪದಸುಖಶಬ್ದಮಾತ್ರಸ್ಯಾಪಿ ಪೂರ್ಣಸುಖಾರ್ಥತ್ವಾತ್'' ಇತಿ ಟೀಕಾಂ ವಿಪಕ್ಷೇ ಬಾಧಕೋಕ್ತ್ಯಾ ವ್ಯನಕ್ತಿ – ತತ್ಸುಖಮಿತಿ ।।

ಟೀಕೆಯಲ್ಲಿ 'ಪೂರ್ಣಸುಖತೋಕ್ತಾ' 'ಪೂರ್ಣವಾದ ಸುಖವನ್ನು ಶ್ರುತಿಯು ಹೇಳಿದೆ' ಎಂಬ ಮಾತು ಅಯುಕ್ತವಾಗಿದೆ. ಏಕೆಂದರೆ ಶ್ರುತಿಯಲ್ಲಿ ಭಗವಂತನಿಗೆ ಪೂರ್ಣಸುಖವಿದೆಯೆಂದು ಕೇಳಿಸುತ್ತಿಲ್ಲ. ಸುಖಶಬ್ದಕ್ಕೆ ಅಪೂರ್ಣವಾದ ಸುಖವುಳ್ಳವನೆಂದೂ ಸಹ ಅರ್ಥವನ್ನು ಮಾಡಬಹುದಲ್ಲವೇ? ಎಂಬ ಪ್ರಶ್ನೆಗೆ ಉತ್ತರವಾಗಿ ಹಾಗೂ 'ಪೂರ್ಣಸುಖತ್ವಾಭಿಧಾನಾತ್' 'ಪೂರ್ಣಸುಖತ್ವವನ್ನು ಹೇಳಿರುವುದರಿಂದ' ಎಂಬ ಹೇತು ನಿರ್ದುಷ್ಟವಾಗಿದೆ ಎಂದು ಸಮರ್ಥಿಸುವುದಕ್ಕಾಗಿ ಅಂದರೆ ಈ ಹೇತುವಿಗೆ ಬರುವ ಅಸಿದ್ಧಿದೋಷವನ್ನು ಪರಿಹರಿಸುವುದಕ್ಕಾಗಿ 'ನಿರುಪಪದಸುಖಶಬ್ದಮಾತ್ರಸ್ಯಾಪಿ ಪೂರ್ಣಸುಖಾರ್ಥತ್ವಾತ್' 'ಉಪಪದವಿಲ್ಲದ ಸುಖಶಬ್ದವು ಪೂರ್ಣಸುಖವನ್ನೇ ಹೇಳುತ್ತದೆ' ಎಂಬ ಟೀಕೆಯು ಹೊರಟಿದೆ. ಈ ಟೀಕಾ ಮಾತಿಗೆ ವಿಪಕ್ಷದಲ್ಲಿ ಬಾಧಕವನ್ನು ಹೇಳುವ ಮೂಲಕ ವ್ಯಾಖ್ಯಾನಿಸುತ್ತಿದ್ದಾರೆ 'ತತ್ಸುಖಮ್' ಇತ್ಯಾದಿ ಗ್ರಂಥದಿಂದ.

ಪ್ರಕಾಶಃ – ''ಮುಖ್ಯಾಮುಖ್ಯಯೋರ್ಮುಖ್ಯೇ ಸಂಪ್ರತ್ಯಯಃ'' ಇತಿ ನ್ಯಾಯಬಾಧ ಇತ್ಯರ್ಥಃ ।

'ಮುಖ್ಯಾಮುಖ್ಯಯೋರ್ಮುಖ್ಯೇ ಸಂಪ್ರತ್ಯಯಃ' ಎಂಬ ನ್ಯಾಯವು ಮುಖ್ಯ ಹಾಗೂ ಅಮುಖ್ಯಗಳಲ್ಲಿ ಮುಖ್ಯವನ್ನೇ ಸ್ವೀಕರಿಸಬೇಕೆಂದು ಹೇಳುತ್ತಿದೆ. ಸುಖಶಬ್ದದಿಂದ ಅಪೂರ್ಣಸುಖ ಹಾಗೂ ಪೂರ್ಣಸುಖಗಳೆಂಬ ಅಮುಖ್ಯಾರ್ಥವನ್ನು ಹಾಗೂ ಮುಖ್ಯಾರ್ಥವನ್ನು ಸ್ವೀಕರಿಸಲು ಬರುತ್ತದೆ. ಆದರೆ ಈ ನ್ಯಾಯಕ್ಕೆ ಅನುಸಾರಿಯಾಗಿ ಪೂರ್ಣಸುಖವೆನಿಸಿದ ಮುಖ್ಯಾರ್ಥವನ್ನೇ ಇಲ್ಲಿ ಸ್ವೀಕರಿಸಬೇಕು. ಇಲ್ಲದಿದ್ದರೆ ನ್ಯಾಯದ ವಿರೋಧ ಬರುತ್ತದೆಂದು 'ತತ್ಸುಖಮ್' ಎಂಬ ವಾಕ್ಯವು ಹೇಳುತ್ತಿದೆ.

ಪ್ರಕಾಶಃ – ಇಹ ಸುಖಶಬ್ದಃ ಪೂರ್ಣಸುಖವಾಚೀತ್ಯತ್ರ ''ಕರೋತಿ ನಾಸುಖೀ ಭೂಮಾ ಸುಖಂ ನಾಲ್ಪೇ ಸುಖಂ ಭವೇತ್'' ಇತ್ಯಾನನ್ದಮಯನಯಾನುವ್ಯಾಖ್ಯಾನೇ ''ಪೂರ್ಣಮೇವಾತ್ರ ಸುಖಂ ವಿವಕ್ಷಿತಮ್ । ನಾಲ್ಪೇ ಸುಖಮಸ್ತೀತ್ಯುಕ್ತತ್ವಾತ್'' ಇತೀಹ ತತ್ತ್ವಪ್ರದೀಪೇ ಚೋಕ್ತದಿಶಾऽರ್ಥಾಪತ್ತಿಂ ಚಾಹ – ನಾಲ್ಪ ಇತಿ ।।

ಶ್ರುತಿಯಲ್ಲಿರುವ ಸುಖಶಬ್ದವು ಪೂರ್ಣಸುಖವನ್ನೇ ಹೇಳುತ್ತಿದೆ ಎಂಬ ವಿಷಯದಲ್ಲಿ 'ಕರೋತಿ ನಾಸುಖೀ ಭೂಮಾ ಸುಖಂ ನಾಲ್ಪೇ ಸುಖಂ ಭವೇತ್' ಎಂಬ ಆನಂದಮಯಾಧಿಕರಣದ ಅನುವ್ಯಾಖ್ಯಾನದಲ್ಲಿ ಮತ್ತು 'ಪೂರ್ಣಮೇವಾತ್ರ ಸುಖಂ ವಿವಕ್ಷಿತಮ್, ನಾಲ್ಪೇ ಸುಖಮಸ್ತಿ ಇತ್ಯುಕ್ತತ್ವಾತ್' ಎಂಬ ಈ ಅಧಿಕರಣದ ತತ್ತ್ವಪ್ರದೀಪದಲ್ಲಿ ಹೇಳಿದಂತೆ ಅರ್ಥಾಪತ್ತಿ ಪ್ರಮಾಣವನ್ನು ಹೇಳುತ್ತಿದ್ದಾರೆ 'ನಾಲ್ಪೇ' ಇತ್ಯಾದಿ ವಾಕ್ಯದಿಂದ.

प्रकाशः – ''यो वै भूमा तत्सुखम्'' इत्युक्त्वा ''नाल्पे सुखम्'' इति निषिध्यते । तत्राल्पशब्देन जडं चेतनं वा वाच्यम् । आद्ये जडे सुखस्याप्रसक्तेरप्रसक्तनिषेधापातात् ।

'ಯೋ ವೈ ಭೂಮಾ ತತ್ಸುಖಮ್' ಎಂದು ಹೇಳಿ 'ನಾಲ್ಪೇ ಸುಖಮ್' ಎಂಬುದಾಗಿ ನಿಷೇಧ ಮಾಡಲಾಗಿದೆ. ಇಲ್ಲಿರುವ ಅಲ್ಪಶಬ್ದದಿಂದ ಜಡವನ್ನಾಗಲೀ ಅಥವಾ ಚೇತನನನ್ನಾಗಲೀ ವಿವಕ್ಷಿಸಬೇಕು. ಆದರೆ ಆದರೆ ಜಡವಾದದ್ದನ್ನೇ ಅಲ್ಪವೆಂದು ವಿವಕ್ಷಿಸಿದರೆ ಅಪ್ರಸಕ್ತ ನಿಷೇಧ ಮಾಡಿದಂತಾಗುತ್ತದೆ. ಏಕೆಂದರೆ ಜಡದಲ್ಲಿ ಸುಖಕ್ಕೆ ಪ್ರಸಕ್ತಿಯೇ ಇಲ್ಲದ ಕಾರಣ ಜಡಪದಾರ್ಥದಲ್ಲಿ ಸುಖದ ನಿಷೇಧವು ತಪ್ಪಾಗುತ್ತದೆ.

प्रकाशः – नच ''नान्तरिक्षे न दिवि'' इतिवन्नित्यानुवादः । व्यर्थत्वात् । 'नान्तरिक्षे' इत्यादेस्तूपयोगोऽन्तर्यामिनये व्यक्तः ।

ಇನ್ನು 'ನಾಂತರಿಕ್ಷೇ ನ ದಿವಿ' ಇತ್ಯಾದಿಯಂತೆ ಅನುವಾದಕ್ಕೋಸ್ಕರ ಜಡವನ್ನು ಹೇಳಿದ್ದಾರೆನ್ನಬೇಕು. ಆದರೆ ಅದು ವ್ಯರ್ಥ. 'ನಾಂತರಿಕ್ಷೇ' ಇತ್ಯಾದಿಯಾಗಿ ಅನುವಾದ ಮಾಡಲು ಕಾರಣವೇನೆಂಬುದನ್ನು ಮುಂದೆ ಅಂತರ್ಯಾಮ್ಯಧಿಕರಣದಲ್ಲಿ ನಾವು ಸ್ಪಷ್ಟಪಡಿಸುತ್ತೇವೆ.

प्रकाशः – अतश्चेतन एव निषेध इति वाच्यम् । तत्र चाहं सुखीत्यादिप्रत्यक्षादिना सुखस्य प्रमितत्वेन सुखमात्रनिषेधे बाधापत्तेः ।

ಆದ್ದರಿಂದ ಚೇತನನೇ ಅಲ್ಪಶಬ್ದದಿಂದ ಪ್ರಸಕ್ತನಾಗಿದ್ದಾನೆಂದು ಹೇಳಬೇಕು. ಆಂತಹ ಚೇತನನಲ್ಲಿ ಸುಖವನ್ನು ನಿಷೇಧ ಮಾಡಲಾಗಿದೆ ಎಂದು ಹೇಳಬೇಕು. ಆದರೆ 'ಅಹಂ ಸುಖೀ' ಇತ್ಯಾದಿ ಪ್ರತ್ಯಕ್ಷದಿಂದ ಸುಖವು ಚೇತನನಲ್ಲಿ ಪ್ರಮಿತವಾಗಿದೆ. ಹೀಗಿರುವಾಗ 'ನಾಲ್ಪೇ ಸುಖಮ್' ಎಂಬ ವಾಕ್ಯದಿಂದ ಸುಖಸಾಮಾನ್ಯವನ್ನೇ ನಿಷೇಧಿಸಲು ಬರುವುದಿಲ್ಲ.

प्रकाशः – अतः ''अपशवो वा अन्ये गोअश्वेभ्यः'' इत्यत्र प्रशस्तपशुत्वनिषेधवत्पूर्णसुखमेव निषिध्यत इत्युपेयम् ।

ಆದ್ದರಿಂದ 'ಅಪಶವೋ ವಾ ಅನ್ಯೇ ಗೋ ಅಶ್ವೇಭ್ಯಃ' 'ಗೋ ಹಾಗೂ ಕುದುರೆಗಳಿಗಿಂತ ಉಳಿದ ಪ್ರಾಣಿಗಳು ಪಶುಗಳೇ ಅಲ್ಲ' ಎಂಬಲ್ಲಿ ಪ್ರಶಸ್ತವಾದ ಪಶುಗಳಲ್ಲ ಎಂದಷ್ಟೇ ಅರ್ಥೈಸುವಂತೆ ಪ್ರಕೃತ ಶ್ರುತಿಯಲ್ಲಿಯೂ ಉಳಿದ ಚೇತನರಲ್ಲಿ ಸುಖವೇ ಇಲ್ಲವೆಂದರೆ ಪೂರ್ಣವಾದ ಸುಖವಿಲ್ಲವೆಂದೇ ಅರ್ಥೈಸಬೇಕು.

प्रकाशः – तादृशस्य जीवेऽभावेन बाधाप्रसक्तेः । अतस्तत्र सुखनिषेधान्यथानुपपत्त्या च पूर्णसुखमेव सुखशब्दार्थ इत्यर्थः ।

ಪೂರ್ಣಸುಖವಿಲ್ಲವೆಂದು ಜೀವನಲ್ಲಿ ಹೇಳಿದಾಗ ಬಾಧವು ಬರುವುದಿಲ್ಲ. ಆದ್ದರಿಂದ ಜೀವನಲ್ಲಿ ಸುಖನಿಷೇಧದ ಅನ್ಯಥಾನುಪಪತ್ತಿಯ ಪ್ರಮಾಣದಿಂದ ಪೂರ್ಣಸುಖವೇ ಸುಖಶಬ್ದದ ಅರ್ಥವೆಂದು ಸಿದ್ಧವಾಯಿತು.

ಪ್ರಕಾಶಃ – एवं सौत्रसम्प्रसादशब्दितं पूर्णसुखत्वरूपं टीकाद्युक्तमाद्यहेतुं समर्थ्य अध्युपदेशशब्दितस्य ''सर्वेषामुपरि तदुत्तमत्वेन व्यपदेशाच्च'' इति द्वितीयहेतोरपि भूम्न्यसिद्धिं परिहरन्विष्वेकनिष्ठतामाह – **किञ्चेति** ।।

ಸೂತ್ರದಲ್ಲಿ 'ಸಂಪ್ರಸಾದಾತ್' ಎಂಬ ಶಬ್ದದಿಂದ ಪೂರ್ಣಸುಖತ್ವವೆಂಬ ಹೇತುವನ್ನು ಹೇಳಿದ್ದಾರೆ. ಇದನ್ನು ಟೀಕಾದಿಗಳಲ್ಲಿ ಹೇಗೆ ವ್ಯಾಖ್ಯಾನಿಸಿದ್ದಾರೋ ಅದನ್ನು ಗ್ರಂಥಕಾರರು ಇಲ್ಲಿಯ ತನಕ ಸಮರ್ಥಿಸಿದರು. ಪ್ರಕೃತ 'ಅಧ್ಯುಪದೇಶಾತ್' ಎಂಬ ಶಬ್ದದಿಂದ 'ಸರ್ವೇಷಾಮುಪರಿ ತದುತ್ತಮತ್ವೇನ ವ್ಯಪದೇಶಾಚ್ಚ' 'ಎಲ್ಲರಿಗಿಂತಲೂ ಭೂಮನನ್ನು ಉತ್ತಮನೆಂದು ಹೇಳಿರುವುದರಿಂದ' ಎಂಬ ಎರಡನೆಯ ಹೇತುವನ್ನು ಸೂತ್ರಕಾರರು ಹೇಳಿದ್ದಾರೆ. ಈ ಹೇತು ಭೂಮನಲ್ಲಿ ಅಸಿದ್ಧವಾಗಿದೆಯೆಂಬ ದೋಷವನ್ನು ಪರಿಹರಿಸುತ್ತಾ ಇದು ವಿಷ್ಣುವಿನಲ್ಲಿ ಮಾತ್ರ ಇರುತ್ತದೆಂದು 'ಕಿಂಚ' ಇತ್ಯಾದಿ ವಾಕ್ಯದಿಂದ ಸಮರ್ಥಿಸುತ್ತಿದ್ದಾರೆ.

ಪ್ರಕಾಶಃ – **प्रतियोगीति** ।। एतस्माद्भूयानित्यवधिविशेषानिर्देशादित्यर्थः ।

'ಪ್ರತಿಯೋಗಿ ವಿಶೇಷ' ಎಂದರೆ ಉಳಿದೆಲ್ಲಾ ಕಡೆ 'ಇಂತಹವರಿಂದ ಉತ್ತಮ' ಎಂಬುದಾಗಿ ಹೇಳಿ ಪ್ರತಿಯೋಗಿ ವಿಶೇಷವನ್ನು ಹೇಳಿ ಭೂಮನನ್ನು ಹೇಳುವಾಗ ಪ್ರತಿಯೋಗಿ ವಿಶೇಷವನ್ನು ಹೇಳದ ಕಾರಣ ಭೂಮನೇ ಸರ್ವೋತ್ತಮನೆಂದು ಸಿದ್ಧನಾಗುತ್ತಾನೆ.

ಪ್ರಕಾಶಃ – ननु प्राणभूम्नोरभेदे ''प्राणो वा आशाया भूयान् '' इत्याशारूप-प्रतियोगिविशेषोपादानमस्ति । नच तत्प्राणस्यैव ननु भूम्न इति युक्तम् । द्वयोरेकत्वादिति चेत्र ।

ಪ್ರಶ್ನೆ - ಪ್ರಾಣ ಹಾಗೂ ಭೂಮಾ ಇಬ್ಬರಿಗೂ ಅಭೇದವನ್ನು ಒಪ್ಪಿದಾಗ 'ಪ್ರಾಣೋ ವಾ ಆಶಾಯಾ ಭೂಯಾನ್' ಎಂಬುದಾಗಿ ಭೂಮನಿಗೆ ಆಶಾಯೆಂಬ ಭಾರತೀದೇವಿಯನ್ನು ಪ್ರತಿಯೋಗಿವಿಶೇಷವೆಂದು ಹೇಳಲಾಗಿದೆ. ಪ್ರಾಣನನ್ನು ಕುರಿತು ಪ್ರತಿಯೋಗಿವಿಶೇಷವನ್ನು ಹೇಳಿದ್ದಾರೆ ಹೊರತು, ಭೂಮನನ್ನು ಕುರಿತು ಹೇಳಿಲ್ಲವೆಂದು ಉತ್ತರಿಸಬಾರದು. ಪ್ರಾಣ ಹಾಗೂ ಭೂಮಾ ಇಬ್ಬರೂ ಒಂದೇ ಆಗಿರುವುದರಿಂದ ಪ್ರಾಣನಿಗೆ ಪ್ರತಿಯೋಗಿವಿಶೇಷವನ್ನು ಹೇಳಿದಮೇಲೆ ಭೂಮನಿಗೂ ಸಹ ಪ್ರತಿಯೋಗಿವಿಶೇಷವನ್ನು ಹೇಳಿದಂತಾಯಿತು. ಆದ್ದರಿಂದ ಪ್ರತಿಯೋಗಿವಿಶೇಷವನ್ನು ಹೇಳದ ಕಾರಣ ಭೂಮನು ಸರ್ವೋತ್ತಮನಾಗಿದ್ದಾನೆಂದು ಹೇಗೆ ನಿಶ್ಚಯಿಸುತ್ತೀರಿ?

ಪ್ರಕಾಶಃ – ಪ್ರಾಣಶಬ್ದಸ್ಯ ವಾಯುಪರತ್ವಮುಪೇತ್ಯೈವ ತದನ್ತರ್ಯಾಮಿತಯಾ ವಿಷ್ಣೋಃ ಪ್ರಾಣಶಬ್ದಿತತ್ವೋಪಗಮೇನಾಶೋತ್ತಮತ್ವಸ್ಯ ಪ್ರಾಣಗತತ್ವಾತ್ ।

ಉತ್ತರ - ಪ್ರಾಣಶಬ್ದವು ವಾಯುಪರವಾಗಿದೆ ಎಂದು ಅಂಗೀಕರಿಸಿ ವಾಯುದೇವರ ಅಂತರ್ಯಾಮಿಯಾಗಿರುವುದರಿಂದ ವಿಷ್ಣುವೂ ಸಹ ಪ್ರಾಣಶಬ್ದದಿಂದ ಪ್ರತಿಪಾದ್ಯನಾಗುತ್ತಾನೆಂದು ನಾವು ಒಪ್ಪುತ್ತೇವೆ. ಹೀಗೊಪ್ಪಿದಾಗ ಆಶಾನಾಮಕಳಾದ ಭಾರತೀದೇವಿಗಿಂತ ಉತ್ತಮತ್ವವು ಮುಖ್ಯಪ್ರಾಣದೇವರಲ್ಲಿ ಹೇಳಿದಂತಾಗುತ್ತದೆ ಹೊರತು, ವಿಷ್ಣುವಿನಲ್ಲಿ ಹೇಳಿದಂತಾಗುವುದಿಲ್ಲ.

ಪ್ರಕಾಶಃ – ''ಮಹತಃ ಪರಮವ್ಯಕ್ತಮ್'' ಇತ್ಯಾದಾವನ್ಯಗತೋಚ್ಚತ್ವನೀಚತ್ವನಿಯಾಮಕತ್ವೇನ ತಚ್ಛಬ್ದಾರ್ಥತಯಾ ತತ್ರ ಸ್ಥಿತತ್ವಸ್ಯಾऽನುಮಾನಿಕನಯೇ ವಕ್ಷ್ಯಮಾಣದಿಶಾ ಪ್ರಾಣಗತಾऽಶೋತ್ತಮತ್ವಾದಿನಿಯನ್ತೃತಯಾ ತತ್ರ ಹರೇಃ ಪ್ರಾಣಪದೇನ ಗ್ರಹಣಾಙ್ಗಮಗತೋತ್ತಮತ್ವಂ ಪ್ರತ್ಯಾಶಾಯಾಃ ಪ್ರತಿಯೋಗಿತ್ವಾಭಾವಾತ್ ।

'ಮಹತಃ ಪರಮವ್ಯಕ್ತಮ್' 'ಮಹತ್ತತ್ವಕ್ಕಿಂತ ಅವ್ಯಕ್ತತತ್ವವು ಶ್ರೇಷ್ಠ' ಇತ್ಯಾದಿ ಸ್ಥಳಗಳಲ್ಲಿ ಬೇರೆ ಕಡೆಯಿರುವ ಉಚ್ಚತ್ವ, ನೀಚತ್ವಗಳಿಗೆ ಪರಮಾತ್ಮನು ನಿಯಾಮಕನಾಗಿ ಆಯಾ ಪದಾರ್ಥಗಳಲ್ಲಿ ಇದ್ದಾನೆಂದು ಅನುಮಾನಿಕಾಧಿಕರಣದಲ್ಲಿ ನಾವು ಸಮರ್ಥಿಸುತ್ತೇವೆ. ಆದರಂತೆ ಇಲ್ಲಿಯೂ ಸಹ ಮುಖ್ಯಪ್ರಾಣಾದಿಗಳಲ್ಲಿರುವ ಆಶೋತ್ತಮತ್ವಾದಿ ಧರ್ಮಗಳನ್ನು ಭಗವಂತನು ನಿಯಂತ್ರಿಸುತ್ತಿದ್ದಾನೆ ಎಂದಷ್ಟೇ ಈ ಶ್ರುತಿಗೆ ವ್ಯಾಖ್ಯಾನಿಸಬೇಕು ಹೊರತು, ಪರಮಾತ್ಮನಿಗೆ ಆಶೋತ್ತಮತ್ವವನ್ನು ಹೇಳಲಟ್ಟಿದೆಯೆಂದು ವ್ಯಾಖ್ಯಾನಿಸಬಾರದು. ಆದ್ದರಿಂದ ಪ್ರಾಣಪದಕ್ಕೆ ಮುಖ್ಯಪ್ರಾಣನೆಂದು ಒಂದು ಬಗೆಯ ಅರ್ಥ. ಮತ್ತೊಂದು ಮುಖ್ಯಪ್ರಾಣನಲ್ಲಿರುವ ಉತ್ತಮತ್ವಕ್ಕೆ ಭಗವಂತನು ನಿಯಾಮಕನಾಗಿದ್ದಾನೆಂದು ಅರ್ಥ. ಇಂತಹ ಅಂತರ್ಯಾಮಿಯಾದ ಭಗವಂತನನ್ನು ಪ್ರಾಣಪದದಿಂದ ಸ್ವೀಕರಿಸುವ ಕಾರಣ ಭೂಮನಲ್ಲಿರುವ ಉತ್ತಮತ್ವಕ್ಕೆ ಆಶಾನಾಮಕಳಾದ ಭಾರತಿಯು ಪ್ರತಿಯೋಗಿಯಾಗಲು ಸಾಧ್ಯವಿಲ್ಲ.

ಪ್ರಕಾಶಃ – ಅನ್ಯಥಾ ವಾಯೋರುತ್ತಮತಾನುಕ್ತಿಪ್ರಸಙ್ಗಾತ್ । ಏವಞ್ಚ ತಸ್ಯಾವಧಿವಿಶೇಷಮನುಪಾದಾಯೈವ ಸರ್ವಾನ್ತೇ ಪಾಠಾತ್ಸರ್ವೋತ್ತಮತ್ವಸಿದ್ಧಿರಿತಿ ಭಾವಃ ।

ಒಂದು ವೇಳೆ ಮುಖ್ಯಪ್ರಾಣದೇವರಲ್ಲಿರುವ ಉತ್ತಮತ್ವಕ್ಕೆ ಆಶಾನಾಮಕಳಾದ ಭಾರತಿಯು ಪ್ರತಿಯೋಗಿಯಾಗಿದ್ದಾಳೆಂದು ಒಪ್ಪದಿದ್ದರೆ ವಾಯುದೇವರಿಗೆ ಉತ್ತಮತ್ವವನ್ನೇ ಹೇಳಿದಂತಾಗುವುದಿಲ್ಲ. ಆದ್ದರಿಂದ ಭೂಮನಿಗೆ ಪ್ರತಿಯೋಗಿವಿಶೇಷವನ್ನು ಹೇಳದೇ ಕೊನೆಯ ಸ್ಥಾನದಲ್ಲಿ ಅವನನ್ನು ಪ್ರಸ್ತಾಪ ಮಾಡಿದ್ದರಿಂದ ಅವನು ಸರ್ವೋತ್ತಮನೇ ಆಗಿದ್ದಾನೆಂದು ಸಿದ್ಧವಾಗುತ್ತದೆ.

ಪ್ರಕಾಶಃ – ಏತೇನ ''ವಿಶೇಷಾನುಕ್ತೇರಖಿಲೇಶತ್ವಮೇವೋಕ್ತಂ ಭವತಿ । ನ ಚೇದಮಸಿದ್ಧಮ್ । ನಾಮವಾಗಾದೀನಾಂ ಪೂರ್ವಪೂರ್ವಾಧಿಪತ್ಯಸ್ಯೋಕ್ತತ್ವಾತ್'' ಇತಿ ಸುಧಾವಾಕ್ಯಂ ವಿವೃತಂ ಧ್ಯೇಯಮ್ ।।

ಹೀಗೆ ಹೇಳಿದ್ದರಿಂದ 'ವಿಶೇಷಾನುತ್ಕೃರಖಿಲೇಶತ್ವಮೇವೋಕ್ತಂ ಭವತಿ । ನ ಚೇದಮಸಿದ್ಧಮ್ । ನಾಮವಾಗಾದೀನಾಂ ಪೂರ್ವಪೂರ್ವಾಧಿಪತ್ಯಸ್ಯೋಕ್ತತ್ವಾತ್' 'ಪ್ರತಿಯೋಗಿವಿಶೇಷವನ್ನು ಹೇಳದ ಕಾರಣ ಸರ್ವೋತ್ತಮತ್ವವನ್ನೇ ಹೇಳಿದಂತಾಗುತ್ತದೆ, ಇದು ಅಸಿದ್ಧವಲ್ಲ. ನಾಮ, ವಾಗಾದಿಅಭಿಮಾನಿದೇವತೆಗಳಲ್ಲಿ ಹಿಂದಿನವರಿಗೆ ಮುಂದಿನವರು ಅಧಿಪತಿಯೆಂದು ಹೇಳಿದ್ದರಿಂದ' ಇತ್ಯಾದಿ ಸುಧಾವಾಕ್ಯವನ್ನು ವಿವರಿಸಿದಂತಾಯಿತು.

ಪ್ರಕಾಶಃ – ಪ್ರಾಣಾದಪೀತಿ ।। ಸರ್ವೋತ್ತಮಾದಪಿ ಪ್ರಾಣಾದಿತ್ಯರ್ಥಃ । ಅಲ್ಪಸ್ಯ ಭೂಮಪ್ರತಿಯೋಗಿತ್ವೇನೋಪಾದಾನೇऽಪಿ ಕಥಂ ಸರ್ವೋತ್ತಮತ್ವಲಾಭ ಇತ್ಯತ ಆಹ – ಅಸರ್ವೇತಿ ।।

'ಪ್ರಾಣಾದಪಿ' ಎಂಬ ಪದಕ್ಕೆ ಸರ್ವೋತ್ತಮನಾದ ಪ್ರಾಣನಿಗಿಂತಲೂ ವಿಷ್ಣು ಉತ್ತಮನಾಗಿದ್ದಾನೆಂದರ್ಥ. ಭೂಮಕ್ಕೆ ಪ್ರತಿಯೋಗಿಯಾದದ್ದು ಅಲ್ಪವೆಂದು ಸ್ವೀಕರಿಸುವುದರಿಂದ ಸರ್ವೋತ್ತಮತ್ವವು ಹೇಗೆ ಸಿದ್ಧವಾಗುತ್ತದೆ ? ಎಂಬ ಪ್ರಶ್ನೆಗೆ 'ಅಸರ್ವೋತ್ತಮಸ್ಯ' ಎಂಬುದರಿಂದ ಉತ್ತರಿಸಿದ್ದಾರೆ.

ಪ್ರಕಾಶಃ – ಏವಂ ಟೀಕಾಉಕ್ತಮಧ್ಯುಪದೇಶಹೇತುಂ ಸುಧಾರೀತ್ಯಾ ಸರ್ವೋತ್ತಮತ್ವರೂಪಂ ಭೂಮ್ನ್ಯುಪಪಾದ್ಯ ವೈಷ್ಣವತ್ವಂ ತಸ್ಯಾಹ – ತಚ್ಚೇತಿ ।। ಸರ್ವೋತ್ತಮತ್ವಂ

ಇಲ್ಲಿಯ ತನಕ ಟೀಕೆಯಲ್ಲಿ ಹೇಳಲ್ಪಟ್ಟ ಅಧ್ಯುಪದೇಶವೆಂಬ ಹೇತುವನ್ನು ಸುಧೆಯ ಪ್ರಕಾರ ಸರ್ವೋತ್ತಮತ್ವವೆಂದು ಭೂಮನಲ್ಲಿ ಅಂಗೀಕರಿಸಿ 'ತಚ್ಚ' ಎಂದರೆ - ಸರ್ವೋತ್ತಮತ್ವ ಎಂದರ್ಥ. ಅದು ವಿಷ್ಣುವಿನಲ್ಲಿ ಮಾತ್ರವಿದೆಯೆಂದು 'ತಚ್ಚ' ಇತ್ಯಾದಿ ಗ್ರಂಥದಿಂದ ಪ್ರತಿಪಾದಿಸುತ್ತಿದ್ದಾರೆ.

ಪ್ರಕಾಶಃ – ''ವಿಶ್ವತಃ ಪರಮಾಂ ಸರ್ವಪರಮಮಕಾರವಾಚ್ಯಮಿತ್ಯರ್ಥಃ'' ಇತಿ ಟೀಕಾಯಾಂ ವ್ಯಕ್ತಮ್ । ''ಉತ್ತಮಃ ಪುರುಷಸ್ತ್ವನ್ಯಃ ಪರಮಾತ್ಮೇತ್ಯುದಾಹೃತಃ'' । ''ನ ತ್ವತ್ಸಮोऽಸ್ತ್ಯಭ್ಯಧಿಕಃ ಕುತोऽನ್ಯಃ'' ಇತ್ಯಾದಿರಾದಿಪದಾರ್ಥಃ ।

'ವಿಶ್ವತಃ ಪರಮಾಂ ಸರ್ವಪರಮಮಕಾರವಾಚ್ಯಮಿತ್ಯರ್ಥಃ' ಎಂಬ ಟೀಕೆಯಲ್ಲಿ 'ವಿಶ್ವತಃ ಪರಮಂ ನಿತ್ಯಂ' ಎಂಬಲ್ಲಿ 'ಪರಮಾಮ್' ಎಂಬ ಪದಕ್ಕೆ 'ಉತ್ತಮ ಹಾಗೂ ಆಕಾರ ಶಬ್ದಗಳಿಂದ ವಾಚ್ಯನಾಗಿದ್ದಾನೆಂದರ್ಥ' ಎಂಬುದಾಗಿ ಟೀಕೆಯಲ್ಲಿ ವ್ಯಾಖ್ಯಾನಿಸಿದ್ದಾರೆ. ಇದರಿಂದ ಸರ್ವೋತ್ತಮತ್ವವು ಸಿದ್ಧವಾಗುತ್ತದೆ. ಮತ್ತು ''ಉತ್ತಮಃ ಪುರುಷಸ್ತ್ವನ್ಯಃ ಪರಮಾತ್ಮೇತ್ಯುದಾಹೃತಃ' 'ಪರಮಾತ್ಮನೇ ಉತ್ತಮಪುರುಷನಾಗಿದ್ದಾನೆ'. 'ನ ತ್ವತ್ಸಮोऽಸ್ತ್ಯಭ್ಯಧಿಕಃ ಕುತोऽನ್ಯಃ' 'ನಿನಗೆ ಸರಿಸಾಟಿಯಾದ ವ್ಯಕ್ತಿ ಮತ್ತೊಬ್ಬನಿಲ್ಲ. ನಿನಗಿಂತ ಶ್ರೇಷ್ಠನಾದ ವ್ಯಕ್ತಿಯಂತೂ ದೂರತೋऽಪಾಸ್ತನಾಗಿದ್ದಾನೆ' ಇತ್ಯಾದಿ ಸ್ಮೃತಿವಾಕ್ಯಗಳನ್ನು ಆದಿಪದದಿಂದ ವಿವಕ್ಷಿಸಬೇಕು.

ಪ್ರಕಾಶಃ – 'ನಚ ಸರ್ವೋತ್ತಮತ್ವಂ ವಾಯೋರಪಿ ವಿರೋಧಾದೇವ' ಇತಿ ಟೀಕಾರ್ಥಮಾಹ – ನಚೇತಿ ।। ಸರ್ವಶಬ್ದಸ್ಯಾಸಙ್ಕುಚಿತತ್ವೇನಾನ್ಯೋನ್ಯನಿರೂಪಿತೋತ್ತಮತ್ವಸ್ಯ ದ್ವಯೋರ್ವಿರುದ್ಧತ್ವಾತ್ ಇತ್ಯರ್ಥಃ ।

ಸರ್ವೋತ್ತಮತ್ವವನ್ನು ವಾಯುದೇವರಿಗೂ ಸಹ ಒಪ್ಪೋಣವೆಂದು ಹೇಳಬಾರದು. ಹಾಗಾದಲ್ಲಿ ವಿರೋಧ ಬರುತ್ತದೆಂದು 'ನಚ ಸರ್ವೋತ್ತಮತ್ವಂ ವಾಯೋರೇವ ವಿರೋಧಾತ್' ಎಂಬ ಟೀಕೆಯಲ್ಲಿ ಹೇಳಿರುತ್ತಾರೆ. ಆದನ್ನೇ 'ನಚ' ಇತ್ಯಾದಿ ಗ್ರಂಥದಿಂದ ವ್ಯಾಖ್ಯಾನಿಸುತ್ತಿದ್ದಾರೆ. ಸರ್ವಶಬ್ದವು ಅಸಂಕುಚಿತವಾದ್ದರಿಂದ ಪರಸ್ಪರ ನಿರೂಪಿತವಾದ ಉತ್ತಮತ್ವವನ್ನು ಹೇಳಿದರೆ ವಿರೋಧ ಬರುತ್ತದೆಂದರ್ಥ.

प्रकाशः – सूत्राद्युक्तहेतुद्वयसमर्थनमुपसंहरन् साध्यमाह – तस्मादिति ।। सम्प्रसादादिनिरवकाशहेतुद्वयादित्यर्थः ।

ಹೀಗೆ ಎರಡು ಸೂತ್ರಗಳಲ್ಲಿ ಹೇಳಲ್ಪಟ್ಟ ಎರಡು ಹೇತುಗಳ ವ್ಯಾಖ್ಯಾನವನ್ನು ಉಪಸಂಹಾರ ಮಾಡುತ್ತಾ, ಸಾಧ್ಯವನ್ನು 'ತಸ್ಮಾತ್' ಇತ್ಯಾದಿ ವಾಕ್ಯದಲ್ಲಿ ಹೇಳಿದ್ದಾರೆ. 'ತಸ್ಮಾತ್' ಎಂದರೆ ಸಂಪ್ರಸಾದವೇ ಮೊದಲಾದ ನಿರವಕಾಶವಾದ ಎರಡು ಹೇತುಗಳಿರುವುದರಿಂದ ಎಂದರ್ಥ. 'ವಿಷ್ಣುಃ ಭೂಮಾ, ಸಂಪ್ರಸಾದಾತ್' ಅಥವಾ 'ವಿಷ್ಣುಃ ಭೂಮಾ ಅಧ್ಯುಪದೇಶಾತ್' ಎಂಬುದಾಗಿ ಅನುಮಾನ ಸ್ವರೂಪವನ್ನು ಇಲ್ಲಿ ತಿಳಿಯಬೇಕು.

गुरुराजीयम् – विरोधादिति ।। सर्वशब्दस्य स्वेतरसर्वपरत्वेन एकस्य सर्वोत्तमत्वे अन्यस्य तद्धीनत्वापत्तौ पुनस्तस्य सर्वोत्तमत्वे विरोधात् । अन्यस्य वाऽधमत्वप्राप्त्या विरोधादित्यर्थः । एकप्रतियोगिकोत्कर्षापकर्षयोरेकत्र व्याहतत्वादित्याशयः । प्रतियोगिविशेषेति ।। निर्विशेषणभूमशब्दस्य निरूपचरित-सर्वोत्तमत्वाप्रतियोगिविशेषोक्तिरूपापवादकाभावाच्चरमकक्ष्यापन्नत्वेन सर्वोत्तमत्व-मित्यर्थः । असर्वोत्तमस्येति ।। तथासति 'नाल्पे' इत्यनेन भूमन्यपि सुखनिषेधापत्त्या भूमैव सुखमित्यनेन विरोधापत्तेरिति भावः ।।

ಸಾರ

ಯಾರು ಭೂಮನಾಗಿದ್ದಾನೋ, ಅವನು ಪರಿಪೂರ್ಣವಾದ ಸುಖವುಳ್ಳವನೆಂದು 'ಯೋ ವೈ ಭೂಮಾ ತತ್ಸುಖಮ್' ಎಂಬ ಶ್ರುತಿಯು ಪ್ರತಿಪಾದನೆ ಮಾಡುತ್ತಿದೆ. ನಿರುಪಪದವಾದ ಸುಖಶಬ್ದಕ್ಕೆ ಪರಿಪೂರ್ಣವೆಂದೇ ಅರ್ಥ. ಪರಿಪೂರ್ಣಸುಖ ಇರುವುದು ಪರಮಾತ್ಮನಲ್ಲಿ ಮಾತ್ರವೇ. ಬೇರೆಯವರೆಲ್ಲರೂ ಅಲ್ಪವಾದ ಸುಖವುಳ್ಳವರು. ಆದ್ದರಿಂದ ಬೇರೆಯವರು ಯಾರೂ ಸಹ 'ಭೂಮಾ' ಎಂಬ ಶಬ್ದದಿಂದ ಪ್ರತಿಪಾದ್ಯರಾಗುವುದಿಲ್ಲ. ಈ ಎಲ್ಲ ವಿಷಯವನ್ನು 'ಸಂಪ್ರಸಾದಾತ್' ಎಂಬ ಲಿಂಗದಿಂದ ಸೂತ್ರಕಾರರು ಹೇಳಿರುತ್ತಾರೆ.

'ವಿಶ್ವಶಂಭುವಮ್' ಎಂಬ ಶ್ರುತಿಯು ಪೂರ್ಣವಾದ ಸುಖಕ್ಕೆ ಆಶಯನಾದವನು ವಿಷ್ಣುವೇ ಆಗಿದ್ದಾನೆಂದು ಹೇಳುತ್ತಿರುವುದರಿಂದ ಮುಖ್ಯಪ್ರಾಣದೇವರನ್ನು ಪೂರ್ಣಸುಖಸ್ವರೂಪರೆಂದು ಹೇಳಬಾರದು.

ತಾತ್ಪರ್ಯಚನ್ದ್ರಿಕಾ

ನಚ ಭೇದಪಕ್ಷೇ ಪ್ರಾಣಾದ್ಭೂಯಸೋऽನುಕ್ತಿರ್ಬಾಧಿಕಾ ।

ಅನುವಾದ - ಭೇದವಿಷಯಕ ಪೂರ್ವಪಕ್ಷದಲ್ಲಿ ಮುಖ್ಯಪ್ರಾಣದೇವರಿಗಿಂತ ಭೂಯಸ್ತ್ವವನ್ನು ಹೇಳದಿರುವಿಕೆಯೇ ಬಾಧಕವಾಗಿದೆಯೆಂದು ಆಕ್ಷೇಪಿಸಲಾಗಿತ್ತು. ಇದು ತಪ್ಪು.

ಪೂರ್ವಪಕ್ಷೇऽಪಿ ಪ್ರಾಣಸ್ಯ ವಿಷ್ಣುತೋ ಭೂಯಸ್ತ್ವಾನುಕ್ತೇರ್ಬಾಧಕತ್ವಾತ್ ।

ಪೂರ್ವಪಕ್ಷದಲ್ಲಿಯೂ ಸಹ ಪ್ರಾಣನಿಗೆ ವಿಷ್ಣುವಿಗಿಂತ ಭೂಯಸ್ತ್ವವನ್ನು ಹೇಳಿರುವುದಿಲ್ಲ. ಆದ್ದರಿಂದ ಪ್ರಾಣನಿಗಿಂತ ಉತ್ತಮತ್ವವನ್ನು ಹೇಳುವುದು ವಿಷ್ಣುಪಕ್ಷದಲ್ಲಿ ಹೇಗೆ ಬಾಧಕವಾಗುತ್ತದೆಂದು ಪೂರ್ವಪಕ್ಷಕಾರರು ಹೇಳುತ್ತಾರೋ, ಆದರಂತೆ ವಿಷ್ಣುವಿಗಿಂತ ಭೂಯಸ್ತ್ವವನ್ನು ಪ್ರಾಣನಲ್ಲಿ ಹೇಳದಿರುವಿಕೆಯೂ ಸಹ ಪೂರ್ವಪಕ್ಷಗಳಿಗೆ ಬಾಧಕವಾಗುತ್ತವೆ.

ವಿಷ್ಣೋರಧಮತ್ವೇ ಹಿ ನಾಮಾದಿದೇವೇಭ್ಯ ಇವ ಪ್ರಾಣಸ್ಯ ವಿಷ್ಣುತೋऽಪಿ ಭೂಯಸ್ತ್ವಂ ಪ್ರಶ್ನೋತ್ತರಾಭ್ಯಾಮುಚ್ಯೇತ ।

ವಿಷ್ಣುವು ಪ್ರಾಣನಿಗಿಂತ ಅಧಮನಾದರೆ ನಾಮ, ವಾಕ್, ಮೊದಲಾದ ಅಭಿಮಾನಿ ದೇವತೆಗಳಿಗಿಂತ ಮುಖ್ಯಪ್ರಾಣದೇವರು ಉತ್ತಮರಾಗಿದ್ದಾರೆಂದು ಹೇಗೆ ಹೇಳಲ್ಪಟ್ಟಿದೆಯೋ, ಆದರಂತೆ ವಿಷ್ಣುವಿಗಿಂತಲೂ ಮುಖ್ಯಪ್ರಾಣದೇವರು ಉತ್ತಮರಾಗಿದ್ದಾರೆಂದು ಪ್ರಶ್ನೆ ಹಾಗೂ ಉತ್ತರಗಳಿಂದ ಹೇಳಬೇಕಿತ್ತು.

ತದುಕ್ತಂ ನ್ಯಾಯವಿವರಣೇ ''ಪ್ರಾಣಸ್ಯ ವಿಷ್ಣೋಃ ಸಕಾಶಾದ್ಭೂಯಸ್ತ್ವಾನುಕ್ತಿಃ'' ಇತಿ ।

ಇದನ್ನೇ ನ್ಯಾಯವಿವರಣದಲ್ಲಿ 'ಪ್ರಾಣಸ್ಯ ವಿಷ್ಣೋಃ ಸಕಾಶಾದ್ಭೂಯಸ್ತ್ವಾನುಕ್ತಿಃ'' ಮುಖ್ಯಪ್ರಾಣದೇವರಿಗೆ ವಿಷ್ಣುವಿನ ದೆಸೆಯಿಂದ ಭೂಯಸ್ತ್ವವನ್ನು ಹೇಳದಿರುವಿಕೆಯು ಪೂರ್ವಪಕ್ಷಕಾರರಿಗೆ ಬಾಧಕವಾಗಿದೆ ಎಂದು ಹೇಳಿರುತ್ತಾರೆ.

ನ ಚೈವಮನುಕ್ತ್ಯೋಃ ಸಾಮ್ಯಮ್ । ''ಏವಂ ವಿಜಾನನ್ನತಿವಾದಿ'' ಇತಿ ಪ್ರಾಣಜ್ಞಾನಿನೋऽತಿವಾದಿತ್ವಮುಕ್ತ್ವಾ ''ಏಷ ತು ವಾ ಅತಿವದತಿ ಯಃ ಸತ್ಯೇನಾತಿವದತಿ'' ಇತಿ ಸತ್ಯಾಖ್ಯಭೂಮಜ್ಞಾನಿನಸ್ತುಶಬ್ದೇನ ವಿಶೇಷೋಕ್ತ್ಯಾ ಭೂಮ್ನಃ ಪ್ರಾಣಾದಪ್ಯತಿಶಯಸ್ಯೋಕ್ತತಯಾ 'ಅಸ್ತಿ ಭಗವಃ ಪ್ರಾಣಾದ್ಭೂಯಃ' ಇತಿ ಪ್ರಶ್ನಾದೇರಧ್ಯಾಹಾರ್ಯತ್ವೇನಾನುಕ್ತೇರನ್ಯಥಾऽಪ್ಯುಪಪತ್ತೇಃ ।

ಹಾಗಾದರೆ ಪೂರ್ವಪಕ್ಷ ಹಾಗೂ ಸಿದ್ಧಾಂತ ಪಕ್ಷಗಳಲ್ಲಿ 'ಅನುಕ್ತಿ' ಎಂಬ ಬಾಧವು ಸಮಾನವಾಯಿತಲ್ಲವೇ? ಎಂದು ಪ್ರಶ್ನಿಸಬಾರದು. ಏಕೆಂದರೆ 'ಏವಂ ವಿಜಾನನ್ನತಿವಾದೀ' ಎಂಬುದಾಗಿ ಯಾರು ಪ್ರಾಣನನ್ನು ತಿಳಿದಿದ್ದಾರೋ, ಅವರು ಉತ್ತಮಜ್ಞಾನಿಗಳಾಗಿದ್ದಾರೆಂದು ಅತಿವಾದಿತ್ವವನ್ನು ಹೇಳಲಾಗಿದೆ. ಆದರೆ ಮುಂದೆ 'ಏಷ ತು ವಾ ಅತಿವದತಿ ಯಃ ಸತ್ಯೇನಾತಿವದತಿ' 'ಸತ್ಯನೆಂಬ ಭೂಮನ:ನ್ನು ಯಾರು ತಿಳಿದಿದ್ದಾರೋ, ಅವರು ಮತ್ತಷ್ಟು ಉತ್ತಮ ಜ್ಞಾನಿಗಳಾಗಿದ್ದಾರೆ' ಎಂಬುದಾಗಿ 'ತು' ಎಂಬ ಶಬ್ದದಿಂದ ವಿಶೇಷವಾದ ಅತಿಶಯವನ್ನು ಶ್ರುತಿಯು ಹೇಳುತ್ತಿದೆ. ಈ 'ತು' ಶಬ್ದವು ಭೂಮನಿಗೆ ಪ್ರಾಣನಿಗಿಂತ ಅತಿಶಯವನ್ನು ಹೇಳುತ್ತಿದೆ ಎಂದರ್ಥ. ಆದ್ದರಿಂದ ಪ್ರಾಣನಿಗಿಂತ ಶ್ರೇಷ್ಠನಾದವನು ಮತ್ತೊಬ್ಬನಿದ್ದಾನೇನು? ಎಂಬ ಪ್ರಶ್ನೆಯನ್ನು ಮೂಲದಲ್ಲಿ ಹೇಳಿಲ್ಲದಿದ್ದರೂ ಅಧ್ಯಾಹಾರ ಮಾಡಿಕೊಳ್ಳಬೇಕು. ಆದ್ದರಿಂದ ಸಿದ್ಧಾಂತದಲ್ಲಿ ಇರುವ ಅನುಕ್ತಿಯೆಂಬುದು ಅನ್ಯಥಾ ಉಪಪನ್ನವಾಗುತ್ತದೆ.

अत एव ''गत्यन्तरविवर्जिताः'' इत्यनुव्याख्याने सिद्धान्तीयानुक्ते-र्निरवकाशत्वमुक्तम् ।

ಪೂರ್ವಪಕ್ಷಕಾರರು ಸಿದ್ಧಾಂತಿಗಳನ್ನು ಕುರಿತು ಯಾವ ಅನುಕ್ತಿಯೆಂಬ ಬಾಧಕವನ್ನು ಹೇಳಿದರೋ, ಅದು ಪ್ರಶ್ನೆ ಹಾಗೂ ಉತ್ತರಗಳನ್ನು ಅಧ್ಯಾಹಾರ ಮಾಡಿಬಿಟ್ಟರೆ ಸಾವಕಾಶವಾಗುತ್ತದೆ. ಆದರೆ ಸಿದ್ಧಾಂತಿಗಳು ಪೂರ್ವಪಕ್ಷಕಾರರನ್ನು ಕುರಿತು ಯಾವ ಅನುಕ್ತಿಯೆಂಬ ಬಾಧಕವನ್ನು ಹೇಳುತ್ತಿದ್ದಾರೋ, ಅದು ನಿರವಕಾಶವಾಗಿದೆ. ಆದ್ದರಿಂದಲೇ ಅನುವ್ಯಾಖ್ಯಾನದಲ್ಲಿ 'ಗತ್ಯಂತರವಿವರ್ಜಿತಾಃ' ಎಂಬುದಾಗಿ ನಿರವಕಾಶತ್ವವನ್ನು ಹೇಳಿರುತ್ತಾರೆ.

एतच्च ''व्यतिहारो विशिंषन्ति'' इत्यत्र सूत्रकृदेव वक्ष्यति ।।

ಈ ಬಗೆಯಲ್ಲಿ ಅಧ್ಯಾಹಾರ ಮಾಡಿಕೊಳ್ಳಬೇಕೆಂದು ಸೂತ್ರಕಾರರೇ 'ವ್ಯತಿಹಾರೋ ವಿಶಿಂಷಂತಿ' ಎಂಬ ಸೂತ್ರದಲ್ಲಿ ಹೇಳುತ್ತಾರೆ.

प्रकाशः –

एवं साधकोक्त्या भूमा विष्णुरित्युक्त्वा पूर्ववाद्युक्ते भूयस्त्वानुक्त्युत्क्रमणरूपे बाधके निराचिकीर्षुरनुक्तिं तावदनूद्य न्यायविवरणोक्तदिशा साम्येन तावदापादयति – न चेत्यादिना ।।

ವಿವರಣೆ - ಇಲ್ಲಿಯ ತನಕ ಭೂಮಶಬ್ದದಿಂದ ವಿಷ್ಣುವೇ ಪ್ರತಿಪಾದ್ಯನಾಗಿದ್ದಾನೆನ್ನಲು ಸಾಧಕಪ್ರಮಾಣಗಳನ್ನು ಹೇಳಿದ್ದಾಯಿತು. ಪ್ರಕೃತ ಪೂರ್ವಪಕ್ಷಿ ಸ್ವಪಕ್ಷಸಾಧಕವನ್ನಾಗಿ ಭೂಯಸ್ತ್ವಾನುಕ್ತಿ

ಹಾಗೂ ಉತ್ತಮಣಲಿಂಗಗಳನ್ನು ಸಮರ್ಥಿಸಿದ್ದನು. ಆ ಎರಡು ಬಾಧಕಗಳನ್ನು ನಿರಾಕರಣೆ ಮಾಡುವ ಉದ್ದೇಶದಿಂದ ಮೊದಲು ಅನುಕ್ತಿಯೆಂಬ ಬಾಧಕಪ್ರಮಾಣವನ್ನು ಅನುವಾದ ಮಾಡಿ ನ್ಯಾಯವಿವರಣದ ಪ್ರಕಾರ ನಾವೂ ಸಹ ಪೂರ್ವಪಕ್ಷಿಗಳಿಗೆ ಅನುಕ್ತಿಯನ್ನು ಆಕ್ಷೇಪಿಸಬಹುದೆಂದು ಆಪಾದಿಸುತ್ತಿದ್ದಾರೆ 'ನಚ' ಇತ್ಯಾದಿ ಗ್ರಂಥದಿಂದ.

ಪ್ರಕಾಶಃ – ವಿಷ್ಣುತೋ ಭೂಯಸ್ತ್ವಾನುಕ್ತೇರ್ನಿರವಕಾಶತಾಮಾಹ – ವಿಷ್ಣೋರಿತಿ ।। ಉಚ್ಯೇತೇತಿ ।। ತ್ವನ್ಮತೇ ತಸ್ಯ ಸರ್ವೋತ್ತಮತ್ವಾರ್ಥಮೇವ ನಾಮತ್ವಾಗಾದಿತಾರತಮ್ಯಸ್ಯ ಪ್ರಕ್ರಾನ್ತತ್ವಾತ್ ।

ವಿಷ್ಣುವಿಗಿಂತ ಮುಖ್ಯಪ್ರಾಣದೇವರಿಗೆ ಸರ್ವೋತ್ತಮತ್ವವನ್ನು ಹೇಳದಿರುವಿಕೆಯು ನಿರವಕಾಶ ಪ್ರಮಾಣವಾಗಿದೆ ಎಂಬುದಾಗಿ 'ವಿಷ್ಣೋಃ' ಇತ್ಯಾದಿ ವಾಕ್ಯದಿಂದ ಪ್ರತಿಪಾದಿಸುತ್ತಿದ್ದಾರೆ. 'ಉಚ್ಯೇತ' ಎಂಬುದರ ಅಭಿಪ್ರಾಯ ಹೀಗಿದೆ - ಪೂರ್ವಪಕ್ಷದ ಪ್ರಕಾರ ಪ್ರಾಣದೇವರಿಗೆ ಸರ್ವೋತ್ತಮತ್ವವನ್ನು ಹೇಳುವುದಕ್ಕಾಗಿಯೇ ನಾಮವಾಗಾದಿ ತಾರತಮ್ಯವು ಹೊರಟಿರುತ್ತದೆ.

ಪ್ರಕಾಶಃ – ತಥಾ ಚ ಪ್ರಾಣಸ್ಯೈವ ಸರ್ವೋತ್ತಮತ್ವೇ ವಿಷ್ಣುತೋ ಭೂಯಸ್ತ್ವಮಾಶಾನನ್ತರಂ ವಿಷ್ಣುರ್ವಾವ ಆಶಾಯಾ ಭೂಯಾನಿತ್ಯುಕ್ತ್ವಾ ಪಶ್ಚಾದಸ್ತಿ ಭಗವೋ ವಿಷ್ಣೋರ್ಭೂಯಾನಿತಿ ಪ್ರಶ್ನಃ ಪ್ರಾಣೋ ವಾವ ವಿಷ್ಣೋರ್ಭೂಯಾನಿತಿ ಪ್ರತಿವಚನಂ ಚ ಸ್ಯಾತ್ ।

ಆದ್ದರಿಂದ ಮುಖ್ಯಪ್ರಾಣದೇವರಿಗೆ ಸರ್ವೋತ್ತಮತ್ವವನ್ನು ಪ್ರತಿಪಾದಿಸಲೇಬೇಕು. ಆದಕ್ಕಾಗಿ ವಿಷ್ಣುವಿನ ದೆಸೆಯಿಂದ ಉತ್ತಮತ್ವವನ್ನು ಮುಖ್ಯಪ್ರಾಣದೇವರಿಗೆ ಹೇಳಲೇಬೇಕು. ಆದಕ್ಕಾಗಿ ಆಶಾನಾಮಕಳಾದ ಭಾರತೀದೇವಿಯನ್ನು ಹೇಳಿದ ಮೇಲೆ 'ವಿಷ್ಣೋರ್ವಾವ ಆಶಾಯಾ ಭೂಯಾನ್' ಎಂದು ಹೇಳಿ; ಮುಂದೆ 'ಅಸ್ತಿ ಭಗವೋ ವಿಷ್ಣೋರ್ಭೂಯಾನ್' ವಿಷ್ಣುವಿಗಿಂತ ಉತ್ತಮನಾದವನು ಇದ್ದಾನೇನು ಎಂಬ ಪ್ರಶ್ನೆಯನ್ನು ಹಾಗೂ 'ಪ್ರಾಣೋ ವಾವ ವಿಷ್ಣೋರ್ಭೂಯಾನ್' ಎಂಬ ಉತ್ತರವನ್ನೂ ಅಧ್ಯಾಹಾರ ಮಾಡಿಕೊಳ್ಳಲೇಬೇಕು.

ಪ್ರಕಾಶಃ – ಪ್ರಶ್ನಾದಿನಾऽವಶ್ಯವಕ್ತವ್ಯಸ್ಯ ಭೂಯಸ್ತ್ವಸ್ಯಾನುಕ್ತೌ ಹೇತ್ವನ್ತರಾಭಾವಾತ್ತದನ್ಯಥಾನುಪಪತ್ತ್ಯಾ ನ ಪ್ರಾಣಸ್ಯ ಸರ್ವೋತ್ತಮತ್ವಂ ಶಙ್ಕ್ಯಮ್ । ಕಿನ್ತು ಭೂಮ್ನ ಏವ ತಥಾತ್ವಂ ವಾಚ್ಯಮಿತಿ ಭಾವಃ ।

ಹೀಗೆ - ಪ್ರಶ್ನೆ ಹಾಗೂ ಉತ್ತರಗಳಿಂದ ಅವಶ್ಯ ವಕ್ತವ್ಯವಾದ ಭೂಯಸ್ತ್ವವನ್ನು ಹೇಳದಿರಲು ಬೇರೆ ಕಾರಣವಿಲ್ಲ. ಇದರ ಅನ್ಯಥಾನುಪಪತ್ತಿಯಿಂದ ಪ್ರಾಣನಿಗೆ ಸರ್ವೋತ್ತಮತ್ವವನ್ನು ಸಾಧಿಸಲಾಗದೆಂದು ಸಿದ್ಧವಾಗುತ್ತದೆ; ಹೊರತು ಭೂಮನಿಗೆ ಸರ್ವೋತ್ತಮತ್ವವನ್ನು ಹೇಳಬೇಕು ಎಂದು ಸಿದ್ಧವಾಗುವುದಿಲ್ಲ.

ಪ್ರಕಾಶಃ – ಪ್ರಾಣಸ್ಯ ವಿಷ್ಣುತೋ ಭೂಯಸ್ತ್ವಾನುಕ್ತಿರೂಪಯುಕ್ತೇಷ್ಟಿಕಾಕಾರೈತ್ರ ನ್ಯಾಯವಿವರಣೇ ಸುಧಾಯಾಂ ಚಾವ್ಯಾಖ್ಯಾತತ್ವಾದತ್ರ ತಾಂ ಸ್ವಯಂ ವ್ಯಾಖ್ಯಾಯ ಮೂಲಾರೂಢಾಂ ಕರೋತಿ – ತದುಕ್ತಮಿತಿ ।।

ಮುಖ್ಯಪ್ರಾಣದೇವರಿಗೆ ವಿಷ್ಣುವಿಗಿಂತ ಭೂಯಸ್ತ್ವವನ್ನು ಹೇಳದಿರುವಿಕೆ ಎಂಬ ಅನ್ಯಥಾನುಪಪತ್ತಿಯಿಂದ ಸರ್ವೋತ್ತಮತ್ವವು ಮುಖ್ಯಪ್ರಾಣದೇವರಿಗೆ ಸಿದ್ಧವಾಗುವುದಿಲ್ಲ ಎಂಬ ವಿಚಾರವನ್ನು ಭಾಷ್ಯಟೀಕೆಯಲ್ಲಾಗಲೀ ಎಂಬ ನ್ಯಾಯವಿವರಣದಲ್ಲಿ ಅಥವಾ ಸುಧೆಯಲ್ಲಾಗಲೀ ವ್ಯಾಖ್ಯಾನಿಸಿರುವುದಿಲ್ಲ. ಆದ್ದರಿಂದ ಸ್ವತಃ ಗ್ರಂಥಕಾರರೇ ಇಲ್ಲಿ ವ್ಯಾಖ್ಯಾನ ಮಾಡಿ ಎಲ್ಲ ವಿಚಾರವನ್ನು ಮೂಲಾರೂಢ ಮಾಡುತ್ತಿದ್ದಾರೆ 'ತದುಕ್ತಮ್' ಇತ್ಯಾದಿಗಳಿಂದ.

ಪ್ರಕಾಶಃ – ನ್ಯಾಯವಿವರಣಪಾಠೇ ಮುಖ್ಯಪ್ರಾಣಸ್ಯೇತಿ । ನನ್ವೇವಂ ಭೂಮ್ನೋऽಪಿ ಪ್ರಾಣಾದ್ಭೂಯಸ್ತ್ವಾನುಕ್ತ್ಯನ್ಯಥಾನುಪಪತ್ತ್ಯಾ ನ ಸರ್ವೋತ್ತಮತ್ವಮಿತಿ ಸುವಚಮ್ । ತಥಾ ಚ ಕಥಂ ನಿರ್ಣಯ ಇತಿ ಭಾವೇನಾಶಙ್ಕ್ಯ ನಿರಾಹ – ನಚೇತಿ ।।

'ಪ್ರಾಣಸ್ಯ' ಎಂದು ಇಲ್ಲಿ ಹೇಳಿದ್ದಾರೆ ಆದರೆ ನ್ಯಾಯವಿವರಣದ ಪಾಠ 'ಮುಖ್ಯಪ್ರಾಣಸ್ಯ' ಎಂದಿದೆ.

ಹಾಗಾದರೆ ಭೂಮನಿಗೂ ಸಹ ಮುಖ್ಯಪ್ರಾಣದೇವರಿಗಿಂತ ಭೂಯಸ್ತ್ವವನ್ನು ಹೇಳದಿರುವಿಕೆ ಎಂಬ ಅನ್ಯಥಾನುಪಪತ್ತಿಯಿಂದ ಸರ್ವೋತ್ತಮತ್ವವು ಸಿದ್ಧವಾಗುವುದಿಲ್ಲವೆಂದು ಹೇಳಬಹುದಲ್ಲವೇ? ಹೀಗಿರುವಾಗ ಯಾವ ಪಕ್ಷವನ್ನು ಹೇಗೆ ನಿರ್ಧರಿಸಲು ಸಾಧ್ಯ? ಎಂಬ ಅಭಿಪ್ರಾಯದಿಂದ ಆಶಂಕಿಸಿ ಉತ್ತರಿಸುತ್ತಿದ್ದಾರೆ 'ನಚ' ಇತ್ಯಾದಿ ಗ್ರಂಥದಿಂದ.

ಪ್ರಕಾಶಃ – ''ಏಷ ತು ವಾ ಅತಿವದತಿ'' ಇತ್ಯಾದಿಟೀಕೋಕ್ತಂ ಸಮಾಧಿಂ ವ್ಯನಕ್ತಿ – ಏವಮಿತಿ ।। ಪ್ರಾಣಪಕರಣೇ ''ಸ ವಾ ಏಷ ಏವಂ ಪಶ್ಯನ್ನೇವಂ ಮನ್ವಾನ ಏವಂ ವಿಜಾನನ್ನತಿವಾದೀ ಭವತಿ । ತಂ ಚೇದ್ ಬ್ರೂಯುರತಿವಾದ್ಯಸೀತಿ । ಅತಿವಾದ್ಯಸ್ಮೀತಿ ಬ್ರೂಯಾನ್ನಪಹ್ನುವೀತ'' ಇತ್ಯುಕ್ತ್ವಾ 'ಏಷ ತು ವಾ' ಇತ್ಯಾಘಾಮ್ನಾಯತೇ ।

'ಏಷ ತು ವಾ ಅತಿವದತಿ' ಇತ್ಯಾದಿ ಟೀಕೆಯಲ್ಲಿ ಹೇಳಲ್ಪಟ್ಟ ಸಮಾಧಾನವನ್ನು 'ಏವಮ್' ಇತ್ಯಾದಿ ಗ್ರಂಥದಿಂದ ವ್ಯಾಖ್ಯಾನಿಸುತ್ತಿದ್ದಾರೆ. ಪ್ರಾಣಪ್ರಕರಣದಲ್ಲಿ 'ಸ ವಾ ಏಷ ಏವಂ ಪಶ್ಯನ್ನೇವಂ ಮನ್ವಾನ ಏವಂ ವಿಜಾನನ್ನತಿವಾದೀ ಭವತಿ । ತಂ ಚೇದ್ ಬ್ರೂಯುರತಿವಾದ್ಯಸೀತಿ । ಅತಿವಾದ್ಯಸ್ಮೀತಿ ಬ್ರೂಯಾನ್ನಪಹ್ನುವೀತ' 'ಯಾರು ಪ್ರಾಣನನ್ನು ಉತ್ತಮನೆಂದು ತಿಳಿಯುತ್ತಾನೋ, ಇನ್ನೊಬ್ಬರಿಗೂ ಸಹ ಉಪದೇಶಿಸುತ್ತಾನೋ, ಅವನು ಅತಿಶಯಿತವಾಗಿ ಪ್ರಾಣನನ್ನು ತಿಳಿದ ಕಾರಣ ಅತಿವಾದಿಯೆನಿಸುತ್ತಾನೆ. ಯಾರಾದರೂ ಅವನನ್ನು ಕುರಿತು ನೀನು ಅತಿವಾದಿಯಾಗಿದ್ದೀಯೆಂದು ಹೇಳಿದರೆ, ಹೌದು ನಾನು ಅತಿವಾದಿಯಾಗಿದ್ದೇನೆಂದೇ ಉತ್ತರಿಸಬೇಕು ಹೊರತು, ನಾನು ಅತಿವಾದಿಯಾಗಿಲ್ಲವೆಂದು ತಿರಸ್ಕರಿಸಬಾರದು' ಎಂಬುದಾಗಿ ಉಪನಿಷತ್ತಿನಲ್ಲಿ ಹೇಳಿ; 'ಏಷ ತು ವಾ' ಇತ್ಯಾದಿ ವಾಕ್ಯಗಳು ಪ್ರಸಕ್ತವಾಗಿದೆ. ಅಂದರೆ ಮುಖ್ಯಪ್ರಾಣನನ್ನು ತಿಳಿದವನು ಅತಿವಾದಿಯಾಗಿದ್ದಾನೆಂದು ಹೇಳುವುದಷ್ಟೇ ಅಲ್ಲದೇ ಮುಖ್ಯಪ್ರಾಣನಿಗಿಂತ ಅತ್ಯಂತ ಅತಿಶಯಿತನಾದ ಪರಮಾತ್ಮನನ್ನು ಇನ್ನೂ ಉತ್ತಮನೆಂದು ಯಾರು ತಿಳಿಯುತ್ತಾನೋ, ಅವನು ಅತಿಶಯಿತವಾದ ಅತಿವಾದಿಯೆನಿಸುತ್ತಾನೆಂದು ಹೇಳಲಾಗಿದೆ. ಆದ್ದರಿಂದ ಮುಖ್ಯಪ್ರಾಣದೇವರಿಗಿಂತಲೂ ಭೂಮನೇ ಸರ್ವೋತ್ಕೃಷ್ಟನು ಅವನೇ ವಿಷ್ಣುವೆಂದು ನಿರ್ಣಯವಾಗುತ್ತದೆ.

ಪ್ರಕಾಶಃ – ननु सत्यस्यातिशयितत्वे भूम्नः किमायातमित्यत उक्तम् **'सत्याख्य'** इति । तयोरभेदश्च ''सैव हि सत्यादयः'' इत्यत्र वक्ष्यत इति भावः ।।

ಸತ್ಯನಿಗೆ ಅತಿಶಯತ್ವವನ್ನು ಉಪನಿಷತ್ತು ಹೇಳುತ್ತಿದೆ. ಇದರಿಂದ ಭೂಮನಿಗೆ ಅತಿಶಯಿತತ್ವವನ್ನು ಹೇಗೆ ಹೇಳಿದಂತಾಗುತ್ತದೆ ? ಎಂಬ ಪ್ರಶ್ನೆಗೆ 'ಸತ್ಯಾಖ್ಯ' ಎಂದು ಉತ್ತರಿಸಿದ್ದಾರೆ. ಸತ್ಯನೆಂದು ಭೂಮನೆಂದು 'ಸೈವ ಹಿ ಸತ್ಯಾದಯಃ' ಎಂಬ ಸೂತ್ರದಲ್ಲಿ ಮುಂದೆ ಸಮರ್ಥಿಸುವವರಿದ್ದಾರೆಂದು ಅಭಿಪ್ರಾಯ.

ಪ್ರಕಾಶಃ – **प्रश्नादेरिति** ।। **'भूमा वाव प्राणाद्भूयान्'** इति परिहारस्य चेत्यादिपदार्थः । ननु यथा पूर्ववादिना सिद्धान्तिनं प्रत्युक्ता प्राणाद्भूयस्त्वानुक्तिर्गत्यन्तरयुक्ता तथा सिद्धान्तिना पूर्ववादिनं प्रत्युक्ता प्राणस्य विष्णुतो भूयस्त्वानुक्तिरपि तथा स्यात् । एवञ्च पुनर्निर्णयो न स्यादित्यतो नैवमिति भावेनाह – अत एवेति ।।

'ಪ್ರಶ್ನಾದೇಃ' ಎಂಬಲ್ಲಿರುವ ಆದಿಪದದಿಂದ 'ಭೂಮಾ ವಾವ ಪ್ರಾಣಾದ್ಭೂಯಾನ್' ಎಂಬ ಪರಿಹಾರವನ್ನು ವಿವಕ್ಷಿಸಬೇಕು.

ಯಾವರೀತಿಯಾಗಿ ಪೂರ್ವಪಕ್ಷಿಯಿಂದ ಸಿದ್ಧಾಂತಿಯನ್ನು ಕುರಿತು ಹೇಳಲ್ಪಟ್ಟ 'ಪ್ರಾಣಾದ್ಭೂಯಸ್ತ್ವಾನುಕ್ತಿ' ಎಂಬ ಲಿಂಗವು ಸಾವಕಾಶವಾಗಿದೆಯೆಂದು ಸಿದ್ಧಾಂತಿಗಳು ಹೇಳಿದರೋ, ಅದರಂತೆ ಪೂರ್ವಪಕ್ಷಿಯನ್ನು ಕುರಿತು ಸಿದ್ಧಾಂತಿಯಿಂದ ಹೇಳಲ್ಪಟ್ಟ 'ಪ್ರಾಣನಿಗೆ ವಿಷ್ಣುವಿಗಿಂತ ಭೂಯಸ್ತ್ವಾನುಕ್ತಿ' ಎಂಬುದೂ ಸಹ ಸಾವಕಾಶವಾಗಿದೆಯೆಂದು ಹೇಳಬಹುದಲ್ಲವೇ? ಆದ್ದರಿಂದ ಪುನಃ ಎರಡೂ ಪಕ್ಷಗಳು ಸಮಬಲವಾಗುತ್ತವಲ್ಲವೇ? ನಿರ್ಣಯ ಮಾಡಲು ಸಾಧ್ಯವಿಲ್ಲವಲ್ಲವೇ? ಎಂಬ ಪ್ರಶ್ನೆಗೆ 'ಅತ ಏವ' ಇತ್ಯಾದಿ ಗ್ರಂಥದಿಂದ ಉತ್ತರಿಸುತ್ತಿದ್ದಾರೆ.

ಪ್ರಕಾಶಃ – पूर्ववाद्युक्तानुक्तेस्सावकाशत्वादेव साम्यनिरासाय सिद्धान्तिनोक्तानुक्तेर्निरवकाशत्वं –

ಪೂರ್ವಪಕ್ಷಿಯಿಂದ ಹೇಳಲ್ಪಟ್ಟ ಅನುಕ್ತಿಯು ಸಾವಕಾಶವಾಗಿದೆ. ಆದ್ದರಿಂದಲೇ ಸಿದ್ಧಾಂತಿಯಿಂದ ಹೇಳಲ್ಪಟ್ಟ ಅನುಕ್ತಿಯು ನಿರವಕಾಶವಾಗಿದೆ. ಆದ್ದರಿಂದ ಇಬ್ಬರಲ್ಲಿ ಅನುಕ್ತಿಯೆಂಬುದು ಸಮಾನವಾಗಿರುವುದಿಲ್ಲ. ಈ ವಿಷಯವು ಅನುವ್ಯಾಖ್ಯಾನದಲ್ಲಿ ಸ್ಪಷ್ಟವಾಗಿ ಉಕ್ತವಾಗಿದೆ.

ಪ್ರಕಾಶಃ –

'बाहुल्यं लिङ्गशब्दानामनुक्तिश्च विरुद्धता ।
अनुक्तिरन्वयाभावो विपरीतश्रुतिभ्रमः ।
भूमाधिकरण (೧-೩-೨)

लिङ्गावकाशराहित्यभ्रमस्तादृग्द्वयं तथा ।
बहुतादृक्त्वमुक्तस्य विरोधोऽर्थात्तथा गतिः ।।
समस्तमेतदित्यत्र पूर्वपक्षेषु युक्तयः ।
ता एव बलवत्यस्तु गत्यन्तरविवर्जिताः ।।

सिद्धान्तयुक्तयो ज्ञेयाः' इत्यनुव्याख्यान उक्तमित्यर्थः । विवरिष्यते चैतदग्रे ।

'बाहुल्यं लिंगशब्दानामनुक्तिश्च विरुद्धता ।
अनुक्तिरन्वयाभावो विपरीतश्रुतिर्भ्रमः ।।
लिंगावकाशराहित्यभ्रमस्तादृग्द्वयं तथा ।
बहुतादृक्त्वमुक्तस्य विरोधोऽर्थात्तथा गतिः ।।
समस्तमेतदित्यत्र पूर्वपक्षेषु युक्तयः ।
ता एव बलवत्यस्तु गत्यन्तरविवर्जिताः ।।
सिद्धान्तयुक्तयो ज्ञेयाः'

ಎಂಬ ಅನುವ್ಯಾಖ್ಯಾನದಲ್ಲಿ ಮೇಲೆ ಹೇಳಿದ ವಿಷಯವು ಸ್ಪಷ್ಟಪಡಿಸಲಾಗಿದೆ. ಇದನ್ನು ಮುಂದೆ ನಾವು ವಿವರಿಸುವವರಿದ್ದೇವೆ.

प्रकाशः – नन्वेवं निरवकाशानुक्तेरेव सिद्धान्तन्यायत्वोक्तेः पूर्वपक्षानुक्तेरन्यथोपपत्तिरूपन्यायस्य टीकायां कुतो व्युत्पादनं कृतम् । तथा सति न्यायभेदेनाधिकरणभेदस्स्यात् । 'सैव हि' इत्यस्य व्यर्थतापत्तेश्चेत्यतस्तत्रोक्तस्यैवात्र शिष्यहितायोक्तिरिति भावेनाह – एतच्चेति ।। पूर्वपक्षीयानुक्तेरुक्तरीत्या सावकाशत्वमित्यर्थः ।

ಹಾಗಾದರೆ ನಿರವಕಾಶವಾದ ಅನುಕ್ತಿಯೇ ಸಿದ್ಧಾಂತ ನ್ಯಾಯವಾಗಿದೆ. ಪೂರ್ವಪಕ್ಷದಲ್ಲಿ ಹೇಳಲ್ಪಟ್ಟ ಅನುಕ್ತಿಯು ಅನ್ಯಥಾ ಉಪಪನ್ನವಾದ್ದರಿಂದ ಸಾವಕಾಶವಾಗಿದೆ ಎಂದು ಹೇಳಿದಿರಿ. ಈ ನ್ಯಾಯವನ್ನು ಟೀಕೆಯಲ್ಲಿ ಹೇಳಿದ್ದೂ ತಪ್ಪಲ್ಲವೇ? ಹಾಗೇ ಹೇಳಿದರೆ ನ್ಯಾಯಭೇದದಿಂದ ಅಧಿಕರಣವೂ ಸಹ ಭಿನ್ನವಾಗಬೇಕಾಗುತ್ತದೆ. ಮತ್ತು 'ಸೈವ ಹಿ' ಎಂಬ ವ್ಯರ್ಥವಾಗಬೇಕಾಗುತ್ತದಲ್ಲವೇ? ಎಂಬೆರಡು ಪ್ರಶ್ನೆಗಳಿಗೆ 'ಸೈವ ಹಿ' ಎಂಬ ಸೂತ್ರದಲ್ಲಿ ಹೇಳಲ್ಪಟ್ಟ ವಿಚಾರವನ್ನೇ ಇಲ್ಲಿ ಶಿಷ್ಯರ ಹಿತಕ್ಕಾಗಿ ಮೊದಲೇ ಹೇಳಿರುತ್ತಾರೆಂಬ ಅಭಿಪ್ರಾಯದಿಂದ 'ಎತಚ್ಚ' ಇತ್ಯಾದಿ ಗ್ರಂಥವು ಹೊರಟಿದೆ. 'ಎತಚ್ಚ' ಎಂಬ ಪದಕ್ಕೆ ಪೂರ್ವಪಕ್ಷಕಾರರು ಹೇಳಲ್ಪಟ್ಟ ಅನುಕ್ತಿಯು ಹಿಂದೆ ಹೇಳಿದಂತೆ ಸಾವಕಾಶವಾಗಿದೆಯೆಂದು ತಿಳಿಯಬೇಕು.

प्रकाशः – तृतीयस्य तृतीयपादे द्वाविंशाधिकरणे विष्णुः प्राणादुत्तमो न वेति संशये छान्दोग्ये प्राणस्यैव सर्वोत्तमत्वेनोक्तत्वात्प्राणाद्भूयसोऽन्यस्य प्रश्नप्रतिवचनाभ्यामनुक्तेः प्राण एव सर्वोत्तम इति प्राप्ते प्रकरणान्तर इव

प्रश्नप्रतिवचनयोर्व्यतिहारोऽध्याहारः कार्यः । 'एष तु वा अतिवदति' इति 'तु' - शब्देन विशेषणाद्विष्णुरेव सत्यशब्देनोत्तमतयोच्यत इति वक्ष्यतीत्यर्थः ।

'ವ್ಯತಿಹಾರೋ ವಿಶಿಂಷಂತಿ' ಎಂಬ ಸೂತ್ರವು ಮೂರನೇ ಅಧ್ಯಾಯದ ಮೂರನೇ ಪಾದದ ಇಪ್ಪತ್ತರಡನೇ ಅಧಿಕರಣದಲ್ಲಿ ಬರುತ್ತದೆ.

ಈ ಅಧಿಕರಣದ ವಿಚಾರ ಹೀಗಿದೆ - ವಿಷ್ಣು ಪ್ರಾಣನಿಗಿಂತ ಉತ್ತಮನೋ, ಅಲ್ಲವೋ? ಎಂದು ಸಂಶಯ. ಛಾಂದೋಗ್ಯದಲ್ಲಿ ಪ್ರಾಣನನ್ನೇ ಸರ್ವೋತ್ತಮನೆಂದು ಹೇಳಿರುವ ಕಾರಣ ಮತ್ತು ಪ್ರಾಣನಿಗಿಂತ ಮತ್ತೊಬ್ಬನಿರಬಹುದೆಂಬ ಪ್ರಶ್ನೆಯನ್ನಾಗಲೀ, ಉತ್ತರವನ್ನಾಗಲೀ ಹೇಳದ ಕಾರಣ ಪ್ರಾಣನೇ ಸರ್ವೋತ್ತಮನಾಗಿದ್ದಾನೆಂದು ಪೂರ್ವಪಕ್ಷ. ಬೇರೆ ಪ್ರಕರಣದಲ್ಲಿ ಪ್ರಶ್ನ ಮತ್ತು ಪ್ರತಿವಚನಗಳಿರುವುದರಿಂದ ಆದರಂತೆ ಇಲ್ಲಿಯೂ ಸಹ ಪ್ರಶ್ನಪ್ರತಿವಚನಗಳನ್ನು ಅಧ್ಯಾಹಾರ ಮಾಡಿಕೊಳ್ಳಬೇಕು. 'ಏಷ ತು ವಾ ಅತಿವದತಿ' ಎಂಬಲ್ಲಿರುವ 'ತು' ಶಬ್ದವನ್ನು ವಿಶೇಷಣವನ್ನಾಗಿ ಹೇಳಿರುವ ಕಾರಣ ವಿಷ್ಣುವೇ ಸತ್ಯಶಬ್ದದಿಂದ ಉತ್ತಮನಾಗಿದ್ದಾನೆಂದು ಕರೆಸಿಕೊಳ್ಳುತ್ತಾನೆ. ಹೀಗೆ - ಅಧ್ಯಾಹಾರ ಮಾಡಿಕೊಳ್ಳಬೇಕೆಂಬ ವಿಷಯವನ್ನು 'ವ್ಯತಿಹಾರೋ ವಿಶಿಂಷಂತಿ' ಎಂಬ ಸೂತ್ರವು ಪ್ರತಿಪಾದಿಸುತ್ತದೆ. ಇದನ್ನು ಮುಂದೆ ಸಮರ್ಥಿಸುತ್ತಾರೆ.

ಸಾರ

ಭೂಮನೇ ವಿಷ್ಣುವಾಗಿದ್ದಾನೆಂಬ ವಿಷಯದಲ್ಲಿ ಅನೇಕ ಸಾಧಕ ಪ್ರಮಾಣಗಳಿವೆ. ಆಷ್ಟೇ ಅಲ್ಲದೇ ಪೂರ್ವಪಕ್ಷಕಾರರು ಹೇಳಲ್ಪಟ್ಟ ಅನುಕ್ತಿ ಹಾಗೂ ಉತ್ಪಮಣ ಎಂಬ ಬಾಧಕಗಳೂ ಸಹ ಇರುವುದಿಲ್ಲ. ಏಕೆಂದರೆ ಪ್ರಾಣನಿಗಿಂತ ವಿಷ್ಣು ಅಧಿಕನಾಗಿದ್ದಾನೆಂದು ಹೇಳದಿರುವಿಕೆಯು ಬಾಧಕವಾಗುತ್ತದೆಂದು ಪೂರ್ವಪಕ್ಷಕಾರರು ಹೇಗೆ ಹೇಳುತ್ತಾರೋ ಅದರಂತೆ ವಿಷ್ಣುವಿಗಿಂತ ಪ್ರಾಣನು ಉತ್ತಮನಾಗಿದ್ದಾನೆಂಬ ಹೇಳದಿರುವಿಕೆಯು ಪೂರ್ವಪಕ್ಷಕಾರರಿಗೂ ಬಾಧಕವಾಗಿದೆ. ಪ್ರಾಣನು ಸರ್ವೋತ್ತಮನೆಂದೇ ಪೂರ್ವಪಕ್ಷಕಾರರು ಸಮರ್ಥಿಸಬೇಕು. ಆದ್ದರಿಂದ ವಿಷ್ಣುವಿಗಿಂತಲೂ ಪ್ರಾಣನಿಗೆ ಉತ್ತಮತ್ವವನ್ನು ಅವರು ಪ್ರತಿಪಾದಿಸಿದರೆ ಮಾತ್ರ ಭೂಮನು ಪ್ರಾಣನಾಗಿದ್ದಾನೆಂಬ ಸಮರ್ಥನೆಯು ಸಾಧ್ಯವಾಗುತ್ತದೆ. ಆದ್ದರಿಂದ ನಮ್ಮನ್ನು ಕುರಿತು ಯಾವ ಅನುಕ್ತಿಯನ್ನು ಬಾಧಕವನ್ನಾಗಿ ಹೇಳುತ್ತಿದ್ದಾರೋ, ಅದೇ ಅನುಕ್ತಿಯಂಬ ಲಿಂಗವು ಪೂರ್ವಪಕ್ಷಕಾರರಿಗೇನೇ ಮಾರಕವಾಗಿದೆ.

'ಅಧ್ಯುಪದೇಶಾತ್' ಎಂಬಲ್ಲಿ 'ಅಧಿ' ಎಂದರೆ 'ಸರ್ವಾಧಿಕ' ಎಂದರ್ಥ. ಪ್ರಾಣನನ್ನು ಸರ್ವೋತ್ತಮನೆಂದು ಶ್ರುತಿಯು ಹೇಳಿದೆ. ಶ್ರುತಿಯಲ್ಲಿ ಪ್ರಸಕ್ತವಾದ ಪ್ರಕರಣ ಹೀಗಿದೆ - ನಾರದರು ಸನತ್ಕುಮಾರರನ್ನು ಬ್ರಹ್ಮೋಪದೇಶಕ್ಕಾಗಿ ಉಪಸತ್ತಿ ಮಾಡುತ್ತಾರೆ. ಅಂತಹ ನಾರದರನ್ನು ಕುರಿತು ಸನತ್ಕುಮಾರರು 'ನಾಮ ಬ್ರಹ್ಮೇತ್ಯುಪಾಸೀತ' ನಾಮಾಭಿಮಾನಿಯಾದ ಉಷಾದೇವಿಯನ್ನು ಪೂರ್ಣಳೆಂದು ಉಪಾಸನೆ ಮಾಡಬೇಕು ಎಂದು ಪ್ರಾರಂಭ ಮಾಡಿ ಆಶಾನಾಮಕಳಾದ ಭಾರತೀದೇವಿಯ ತನಕ ಉಪಾಸನೆಯನ್ನು ತಾರತಮ್ಯ ಪ್ರಕಾರವಾಗಿ ಉಪದೇಶಿಸಿದರು. ಕೊನೆಯಲ್ಲಿ ಆಶಾನಾಮಕಳಾದ ಭಾರತೀದೇವಿಗಿಂತ ಪ್ರಾಣನನ್ನು ಉತ್ತಮನೆಂದು ಹೇಳಿದರು. ಅಂತಹ ಪ್ರಾಣನಿಗಿಂತ ಉತ್ತಮನಾದ

ಮತ್ತೊಬ್ಬನನ್ನು ಹೇಳಲಿಲ್ಲ. ಇದರಿಂದ ಸರ್ವೋತ್ತಮನಾದ ವ್ಯಕ್ತ ಪ್ರಾಣನೆಂದೇ ತಿಳಿಯುತ್ತದೆ. ಈ ಪ್ರಾಣಶಬ್ದದಿಂದ ಪ್ರತಿಪಾದ್ಯನಾದವನು ವಿಷ್ಣುವೇ ಆಗಿದ್ದಾನೆ ಹೊರತು, ಮುಖ್ಯಪ್ರಾಣದೇವರಲ್ಲ. ಆದ್ದರಿಂದ ವಿಷ್ಣುವೇ ಭೂಮನೆನಿಸುತ್ತಾನೆಂಬುದು ಒಟ್ಟು ಅಭಿಪ್ರಾಯ.

● ● ● ● ●

ವ್ಯತಿಹಾರಾದ್ಯಧಿಕರಣಗಳಿಂದ ಇದು ಗತಾರ್ಥವಲ್ಲ

तात्पर्यचन्द्रिका

नचैवमिह पूर्वपक्षानुदयः । व्यतिहार इत्यत्रोक्तोऽध्याहारो न युक्तः ।

ಅನುವಾದ - 'ವ್ಯತಿಹಾರೋ ವಿಶಿಂಷಂತಿ' ಎಂಬ ಸೂತ್ರದಲ್ಲಿ ಹೇಳುವಂತೆ 'ಅಸ್ತಿ ಭಗವಃ ಪ್ರಾಣಾದ್ ಭೂಯಃ' ಎಂಬ ಪ್ರಶ್ನೆ ಹಾಗೂ ಉತ್ತರಗಳನ್ನು ಅಧ್ಯಾಹಾರ ಮಾಡಿಕೊಳ್ಳುವುದಾದರೆ ಪೂರ್ವಪಕ್ಷವೇ ಇಲ್ಲಿ ಹುಟ್ಟಲು ಸಾಧ್ಯವಿಲ್ಲವಲ್ಲವೇ? ಎಂದು ಪ್ರಶ್ನಿಸಬಾರದು. ಏಕೆಂದರೆ 'ವ್ಯತಿಹಾರೋ ವಿಶಿಂಷಂತಿ' ಎಂಬ ಸೂತ್ರದಲ್ಲಿ ಹೇಳಲ್ಪಟ್ಟ ಅಧ್ಯಾಹಾರವು ಈ ಅಧಿಕರಣದಲ್ಲಿ ಒಪ್ಪಲು ಸಾಧ್ಯವೇ ಇಲ್ಲ.

तृशब्दस्य ''विज्ञानं त्वेव विजिज्ञासितव्यम्'' इति सत्यानन्तरमुक्तेषु विज्ञानादिष्विवाभेदेऽप्युपपत्तेः ।

ಏಕೆಂದರೆ 'ಏಷ ತು ವಾ ಅತಿವದಿತಿ' ಎಂಬಲ್ಲಿರುವ 'ತು' ಎಂಬ ಶಬ್ದದ ಬಲದಿಂದ ಪ್ರಶ್ನೋತ್ತರಗಳನ್ನು ಅಧ್ಯಾಹಾರ ಮಾಡಿಕೊಳ್ಳುವಿರಾದರೆ 'ವಿಜ್ಞಾನಂ ತ್ವೇವ ವಿಜಿಜ್ಞಾಸಿತವ್ಯಮ್' ಇತ್ಯಾದಿ 'ಸತ್ಯ'ನ ವಿಚಾರ ಹೇಳಿ, ಮುಂದೆ ಹೇಳಿರುವ ಹದಿನಾಲ್ಕು ಸ್ಥಳಗಳಲ್ಲಿಯೂ 'ತು' ಶಬ್ದವು ಕೇಳಿಸುತ್ತಿದೆ. ಹಾಗಾದರೆ ಇಲ್ಲಿಯೂ ಸಹ ವಿಜ್ಞಾನ ಮೊದಲಾದವುಗಳು ವಿಷ್ಣುವಿಗಿಂತ ಉತ್ತಮವೆಂದು ಹೇಳಬೇಕಾದೀತು. ಆದರೆ ಹಾಗೇ ಒಪ್ಪದೆ ವಿಷ್ಣುವಿಗಿಂತ ವಿಜ್ಞಾನಾದಿಗಳಿಗೆ ಅಭೇದವನ್ನೇ ಒಪ್ಪುತ್ತೀರಿ. ಆದ್ದರಿಂದ 'ತು' ಶಬ್ದಕ್ಕೆ ಅಧ್ಯಾಹಾರಾರ್ಥವನ್ನು ಹೇಳದೇ ಅಭೇದಾರ್ಥವನ್ನು ಹೇಳಿ ಕೂಡಿಸಬೇಕು.

विज्ञानादीनां च सत्याभेदः ''सैव हि सत्यादयः'' इत्यधिकरणसिद्ध इति प्राप्ते,

ವಿಜ್ಞಾನ ಮೊದಲಾದವುಗಳಿಗೆ ಸತ್ಯನಾಮಕನಾದ ಪರಮಾತ್ಮನಿಂದ ಅಭೇದವೇ ಇರುತ್ತದೆಂದು 'ಸೈವ ಹಿ ಸತ್ಯಾದಯಃ' ಇತ್ಯಾದಿ ಅಧಿಕರಣಗಳಲ್ಲಿ ಸಿದ್ಧವಾಗಿದೆ. ಆದ್ದರಿಂದ 'ತು' ಶಬ್ದವಿದ್ದರೂ ಇಲ್ಲಿ ಹೇಗೆ ಪ್ರಶ್ನೋತ್ತರಗಳನ್ನು ಅಧ್ಯಾಹಾರ ಮಾಡಿಕೊಂಡು ವಿಷ್ಣುವಿಗಿಂತ ವಿಜ್ಞಾನಾದಿಗಳು ಉತ್ತಮವೆಂದು

ಸಿದ್ಧಾಂತಿಗಳು ಒಪ್ಪುವುದಿಲ್ಲವೋ, ಅದರಂತೆ 'ಏಷ ತು ವಾ' ಎಂಬಲ್ಲಿರುವ 'ತು' ಶಬ್ದದಿಂದಲೂ ಅಧ್ಯಾಹಾರ ಮಾಡಿಕೊಳ್ಳಬೇಕಾಗಿಲ್ಲ. ಆಂದರೆ 'ವ್ಯತಿಹಾರೋ ವಿಶಿಂಷಂತಿ' ಎಂಬ ಸೂತ್ರದಲ್ಲಿ ಸೂತ್ರಕಾರರು ಹೇಳುವುದನ್ನು ಇಲ್ಲಿ ಅಂಗೀಕರಿಸಿಲ್ಲವೆಂದು ಪೂರ್ವಪಕ್ಷ.

श्रुत्यन्तरे प्राणादेकस्यैवाधिकस्योक्तेः 'एष तु' इत्यत्र तुशब्दोऽध्याहार-कल्पकः । 'विज्ञानं तु' इत्यादौ तु सत्याख्यब्रह्मण्येव धर्मान्तराभिप्रायत्वान्न तत्कल्पक इति सिद्धान्तस्येहाभिप्रेतत्वात् ।

ಬೇರೆ ಶ್ರುತಿಯಲ್ಲಿ ಮುಖ್ಯಪ್ರಾಣದೇವರಿಗಿಂತ ಒಬ್ಬನಿಗೆ ಮಾತ್ರ ಉತ್ತಮತ್ವವು ಹೇಳಲ್ಪಟ್ಟಿದೆ. ಆದ್ದರಿಂದ 'ಏಷ ತು ವಾ' ಎಂಬಲ್ಲಿರುವ 'ತು' ಶಬ್ದವು ಪ್ರಶ್ನೋತ್ತರಗಳ ಅಧ್ಯಾಹಾರಕ್ಕೆ ಕಲ್ಪಕವಾಗುತ್ತದೆ. ಆದರೆ 'ವಿಜ್ಞಾನಂ ತು' ಇತ್ಯಾದಿ ವಾಕ್ಯಗಳಲ್ಲಿರುವ 'ತು' ಶಬ್ದವು ಸತ್ಯನೆಂಬ ಬ್ರಹ್ಮನಲ್ಲಿಯೇ ಮತ್ತೊಂದು ಧರ್ಮವನ್ನು ಹೇಳಲು ಸಾರ್ಥಕ್ಯವನ್ನು ಹೊಂದಿದೆ ಹೊರತು, ಪ್ರಶ್ನೋತ್ತರಗಳಿಗೆ ಕಲ್ಪಕವಾಗುವುದಕ್ಕಲ್ಲ. ಆದ್ದರಿಂದ 'ವಿಜ್ಞಾನಂ ತು' ಎಂಬಲ್ಲಿರುವ 'ತು' ಶಬ್ದದಿಂದ 'ಏಷ ತು ವಾ' ಎಂಬಲ್ಲಿರುವ 'ತು' ಶಬ್ದದಂತೆ ಪ್ರಶ್ನೋತ್ತರವನ್ನು ಅಧ್ಯಾಹಾರ ಮಾಡಿಕೊಳ್ಳಬೇಕಾಗಿಲ್ಲವೆಂದು ಈ ಅಧಿಕರಣದ ಸಿದ್ಧಾಂತ.

अत एव प्राणाद्भूमो भूयस्त्वोक्तिरूपा सिद्धान्तयुक्तिरधिकरणान्तर-व्युत्पाद्यत्वादिहानुव्याख्याने ''अनुक्तिश्च'' इति चशब्देनोक्ता । प्राणस्य विष्णुतो भूयस्त्वानुक्तिस्तु ''अनुक्ति'' इति स्वशब्देनोक्ता ।

ಆದ್ದರಿಂದಲೇ ಪ್ರಾಣನಿಗಿಂತ ವಿಷ್ಣು ಉತ್ತಮನಾಗಿದ್ದಾನೆಂಬ 'ಉಕ್ತಿ'ರೂಪವಾದ ಸಿದ್ಧಾಂತ ಯುಕ್ತಿಯು ಬೇರೆ ಅಧಿಕರಣದಿಂದ ವ್ಯುತ್ಪಾದ್ಯವಾಗಿದೆ. ಈ ಕಾರಣದಿಂದ ಅನುವ್ಯಾಖ್ಯಾನದಲ್ಲಿ 'ಅನುಕ್ತಿಶ್ಚ' ಎಂಬಲ್ಲಿರುವ 'ಚ' ಶಬ್ದದಿಂದ 'ಉಕ್ತಿ' ಎಂಬುದನ್ನು ಹೇಳಿರುತ್ತಾರೆ. ಆದರೆ ವಿಷ್ಣುವಿಗಿಂತ ಪ್ರಾಣನು ಉತ್ತಮನಲ್ಲ ಎಂಬ ಅನುಕ್ತಿಯನ್ನು 'ಅನುಕ್ತಿಃ' ಎಂಬ ಶಬ್ದದಿಂದಲೇ ಹೇಳಿರುತ್ತಾರೆ.

तदुक्तं न्यायविवरणे ''प्राणस्य विष्णोस्सकाशाद्भूयस्त्वानुक्तिः । चशब्देन 'एष तु वा अतिवदति यः सत्येनातिवदति' इति प्राणाद्विष्णोर्भूयस्त्वोक्तिश्च'' इति ।

'ಅನುಕ್ತಿಶ್ಚ' ಎಂಬ ಅನುವ್ಯಾಖ್ಯಾನದ ನ್ಯಾಯವನ್ನೇ ವಿವರಿಸಲು ಹೊರಟ ನ್ಯಾಯವಿವರಣದಲ್ಲಿ 'प्राणस्य विष्णोस्सकाशाद्भूयस्त्वानुक्तिः । चशब्देन 'एष तु वा अतिवदति यः सत्येनातिवदति' इति प्राणाद्विष्णोर्भूयस्त्वोक्तिश्च' 'ಮುಖ್ಯಪ್ರಾಣದೇವರು ವಿಷ್ಣುವಿನ

ದೆಸೆಯಿಂದ ಉತ್ತಮರಾಗಿದ್ದಾರೆಂದು ಹೇಳದಿರುವಿಕೆಯು ಮತ್ತು 'ಚ' ಶಬ್ದದಿಂದ 'ಏಷ ತು ವಾ ಅತಿವದತಿ, 'ಯಃ ಸತ್ಯೇನಾತಿವದತೀ' ಎಂಬುದಾಗಿ ಮುಖ್ಯಪ್ರಾಣದೇವರಿಗಿಂತ ವಿಷ್ಣು ಉತ್ತಮನಾಗಿದ್ದಾನೆಂಬ ಹೇಳುವಿಕೆಯನ್ನು ಸ್ವೀಕರಿಸಬೇಕು' ಎಂಬುದಾಗಿ ಸ್ಪಷ್ಟಪಡಿಸಿದ್ದಾರೆ.

ಗಾಣಸ್ಯ ವಿಷ್ಣೋಃ ಸಕಾಶಾದ್ಭೂಯಸ್ತ್ವಾನುಕ್ತಿಸ್ತ್ವನನ್ಯಥಾಸಿದ್ಧಾ । ಪ್ರಶ್ನಾಧ್ಯಾಹಾರ-ಕಲ್ಪಕಾಭಾವಾತ್ ।

ಆದ್ದರಿಂದ ವಿಷ್ಣುವಿನ ದೆಸೆಯಿಂದ ಮುಖ್ಯಪ್ರಾಣದೇವರಿಗೆ ಭೂಯಸ್ತ್ವವನ್ನು ಹೇಳದ ಕಾರಣ 'ಭೂಯಸ್ತ್ವಾನುಕ್ತಿ' ಎಂಬ ಲಿಂಗವು ಅನ್ಯಥಾಸಿದ್ಧವಾದ್ದರಿಂದ ನಿರವಕಾಶವಾಗಿ ಬಲಿಷ್ಠವಾಗಿದೆ. ನಾವೂ ಸಹ ಪ್ರಶ್ನೋತ್ತರಗಳನ್ನು ಆಧ್ಯಾಹಾರ ಮಾಡಿಕೊಳ್ಳುತ್ತೇವೆಂದು ಪೂರ್ವಪಕ್ಷಿಗಳಿಗೆ ಉತ್ತರಿಸಲಾಗದು. ಏಕೆಂದರೆ ಪ್ರಶ್ನೋತ್ತರಗಳನ್ನು ಆಧ್ಯಾಹಾರ ಮಾಡಿಕೊಳ್ಳಲು ಬೇಕಾಗಿರುವ ಯಾವುದೇ ಕಲ್ಪಕಗಳು ಶ್ರುತಿಯಲ್ಲಿ ಕಾಣಿಸುತ್ತಿಲ್ಲ.

ಪ್ರಕಾಶಃ –

ತೇನ ಗತಾರ್ಥತ್ವಮಾಶಙ್ಕ್ಯ ತದಾಕ್ಷೇಪೇಣಾಸ್ಯ ಪ್ರವೃತ್ತಿರಿತ್ಯಾಹ – ನ ಚೈವಮಿತ್ಯಾದಿನಾ ।।

'ವ್ಯತಿಹಾರೋ ವಿಶಿಂಷಂತಿ' ಎಂಬ ಸೂತ್ರದಲ್ಲಿ ಪ್ರಶ್ನೋತ್ತರಗಳನ್ನು ಆಧ್ಯಾಹಾರ ಮಾಡಿಕೊಳ್ಳಬೇಕೆಂದು ಸಮರ್ಥಿಸುತ್ತಾರೆಂದು ಹೇಳಿದಿರಿ. ಹಾಗಾದರೆ ಆ ಸೂತ್ರದಲ್ಲಿ ಪ್ರತಿಪಾದಿಸಿದ ವಿಷಯವನ್ನೇ ಇಲ್ಲಿಯೂ ಪ್ರತಿಪಾದಿಸುತ್ತಿರುವುದರಿಂದ ಪುನರುಕ್ತಿ ಬರುತ್ತದಲ್ಲವೇ? ಎಂದು ಪ್ರಶ್ನಿಸಬಾರದು. 'ವ್ಯತಿಹಾರೋ ವಿಶಿಂಷಂತಿ' ಎಂಬ ಸೂತ್ರದ ಪ್ರಮೇಯವನ್ನೇ ಇಲ್ಲಿ ಆಕ್ಷೇಪಿಸುತ್ತಿರುವುದರಿಂದ ಪುನರುಕ್ತಿಗೆ ಅವಕಾಶವಿಲ್ಲವೆಂದು 'ನಚ ಏವಮ್' ಇತ್ಯಾದಿ ಗ್ರಂಥದಿಂದ ಪ್ರತಿಪಾದಿಸುತ್ತಿದ್ದಾರೆ.

ಪ್ರಕಾಶಃ – 'ಸೈವ ಹಿ' ಇತಿ ತದುತ್ತರಾಧಿಕರಣೇ ಪ್ರಾಣಾತ್ಸತ್ಯಶಬ್ದಿತೋ ವಿಷ್ಣುರೇಕ ಏವೋತ್ತಮ ಉತ ಬಹವ ಇತಿ ಸಂಶಯೇ ಸತ್ಯಾದುಪರಿ ವಿಜ್ಞಾನಮತಿಶ್ರದ್ಧಾನಿಷ್ಠಾಕೃತಿಸುಖಭೂಮಾಹಙ್ಕಾರಾತ್ಮನಾ-ಮುಕ್ತತ್ವಾದ್ಬಹವ ಇತಿ ಪ್ರಾಪ್ತೇ 'ಸತ್ಯಂ ಭಗವೋ ವಿಜಿಜ್ಞಾಸೇ' ಇತಿ ಸತ್ಯನಾಮಕಭಗವದ್ಗುಣ-ಜಿಜ್ಞಾಸಾಯಾಂ ವಿಜ್ಞಾನಾದ್ಯುಕ್ತೇರ್ದಾಕ್ಷಾಯಣಯಜ್ಞಾದ್ಯುಕ್ತೇರಿವ ಪ್ರಕೃತಸ್ಯೈವ ಗುಣಕಥನಪರತ್ವೇನೈವೋಪಪತ್ತೇಃ ಸೈವ ಪರದೇವತಾ ಸತ್ಯಾದಯ ಇತಿ ವಕ್ಷ್ಯಮಾಣತ್ವಾದಿತಿ ಭಾವಃ ।

'ವ್ಯತಿಹಾರೋ ವಿಶಿಂಷಂತಿ' ಎಂಬ ಅಧಿಕರಣದ ಮುಂದಿನ ಅಧಿಕರಣದಲ್ಲಿ 'ಸೈವ ಹಿ ಸತ್ಯಾದಯಃ' ಎಂಬ ಸೂತ್ರವು ಪ್ರಸಕ್ತವಾಗಿದೆ. ಈ ಅಧಿಕರಣದಲ್ಲಿ ಮುಖ್ಯಪ್ರಾಣದೇವರಿಗಿಂತ ಸತ್ಯಶಬ್ದಪ್ರತಿಪಾದ್ಯನಾದ ವಿಷ್ಣುವೊಬ್ಬನೇ ಉತ್ತಮನೋ, ಅಥವಾ ಬಹಳಮಂದಿ ಉತ್ತಮರಿದ್ದಾರೋ ? ಎಂದು ಸಂಶಯ. ಸತ್ಯಶಬ್ದವಾಚ್ಯನಾದ ವ್ಯಕ್ತಿಗಿಂತಲೂ ವಿಜ್ಞಾನ, ಮತಿ, ಶ್ರದ್ಧಾ, ನಿಷ್ಠಾ, ಕೃತಿ, ಸುಖ, ಭೂಮಾ, ಅಹಂಕಾರ ಮೊದಲಾದ ಅನೇಕರನ್ನು ಹೇಳಿದ್ದರಿಂದ ಅನೇಕರು ಉತ್ತಮರಾಗಿದ್ದಾರೆಂದು ಪೂರ್ವಪಕ್ಷ. 'ಸತ್ಯಂ ಭಗವೋ

ವಿಜಿಜ್ಞಾಸೇ' ಎಂಬುದಾಗಿ ಸತ್ಯನಾಮಕನಾದ ಭಗವಂತನ ಗುಣಗಳ ಜಿಜ್ಞಾಸೆಯನ್ನು ಮಾಡುವಾಗ ವಿಜ್ಞಾನ, ಮತಿ ಮೊದಲಾದವುಗಳನ್ನು ಸನತ್ಕುಮಾರರು ಹೇಳಿರುತ್ತಾರೆ. ದಾಕ್ಷಾಯಣಯಜ್ಞಾದಿಗಳಲ್ಲಿ ಕೇವಲ ಗುಣಕಥನವನ್ನು ಹೇಗೆ ಮಾಡುತ್ತಾರೋ ಆದರಂತೆ ಪ್ರಕೃತನಾದ ಸತ್ಯನಾಮಕನಾದ ಪರಮಾತ್ಮನಲ್ಲಿ ವಿಜ್ಞಾನ ಮೊದಲಾದ ಗುಣಗಳನ್ನು ಚಿಂತನೆ ಮಾಡಿರುತ್ತಾರೆ. ಹೀಗೆ 'ಸೈವ ಹಿ ಸತ್ಯಾದಯಃ' ಎಂಬ ಸೂತ್ರದಲ್ಲಿ ಮುಂದೆ ಸಮರ್ಥಿಸುತ್ತಾರೆಂದು ತಿಳಿಯಬೇಕು.

ಪ್ರಕಾಶಃ – ಶ್ರುತ್ಯನ್ತರೇ ತೈತ್ತಿರೀಯಾದೌ । ಅತ ಏವೇತ್ಯುಕ್ತಂ ವ್ಯನಕ್ತಿ – ಅಧಿಕರಣಾನ್ತರ-ವ್ಯುತ್ಪಾದನತ್ವಾದಿತಿ ।। ಅನುವ್ಯಾಖ್ಯಾನೇ ನ್ಯಾಯಸಙ್ಗ್ರಹಾನುವ್ಯಾಖ್ಯಾನೇ । ಇದಾನೀಂ ''ಗತ್ಯನ್ತರವಿವರ್ಜಿತಾಃ'' ಇತ್ಯುಕ್ತಸಿದ್ಧಾನ್ತೀಯಾನುಕ್ತೇರ್ನಿರವಕಾಶತ್ವಂ ವ್ಯನಕ್ತಿ – ಪ್ರಾಣಸ್ಯೇತಿ ।।

'ಶ್ರುತ್ಯಂತರೇ' ಎಂದರೆ ತೈತ್ತಿರೀಯಾದಿ ಶ್ರುತಿಗಳಲ್ಲಿ ಎಂದರ್ಥ. 'ಅತ ಏವ' ಎಂಬುದನ್ನು 'ಅಧಿಕರಣಾಂತರವ್ಯುತ್ಪಾದ್ಯತ್ವಾತ್' ಎಂಬುದರಿಂದ ವ್ಯಾಖ್ಯಾನಿಸಿದ್ದಾರೆ. 'ಅನುವ್ಯಾಖ್ಯಾನೇ' ಎಂದರೆ 'ನ್ಯಾಯಗಳನ್ನು ಸಂಗ್ರಹಿಸುವ ಅನುವ್ಯಾಖ್ಯಾನದಲ್ಲಿ' ಎಂದರ್ಥ. ಪ್ರಕೃತ 'ಗತ್ಯಂತರವಿವರ್ಜಿತಾಃ' ಎಂದು ಹೇಳಲ್ಪಟ್ಟ ಸಿದ್ಧಾಂತದ ಅನುಕ್ತಿಯೆಂಬ ಲಿಂಗವನ್ನು ನಿರವಕಾಶವೆಂದು ಸಮರ್ಥಿಸುತ್ತಿದ್ದಾರೆ - 'ಪ್ರಾಣಸ್ಯ' ಇತ್ಯಾದಿ ವಾಕ್ಯದಿಂದ.

ಗುರುರಾಜೀಯಮ್ – ಅನುಕ್ತೇರನ್ಯಥಾಪ್ಯುಪಪತ್ತೇರಿತಿ ।। ಗಮ್ಯಮಾನತ್ವಾದಪ್ರಯೋಗ ಇತಿ ತು ಶಬ್ದಕಾರ್ಯಪ್ರಶ್ನಪ್ರತಿವಚನಾನುಕ್ತೇಃ । ಅನ್ಯಥಾ ವಿಷ್ಣೋಃ ಪ್ರಾಣೋತ್ತಮತ್ವಾಭಾವ ವಿನಾऽಪಿ ಉಪಪತ್ತೇರಿತಿ ಭಾವಃ । ವ್ಯತಿಹಾರ ಇತ್ಯತ್ರೋಕ್ತ ಇತಿ ।। ಏಷ್ಯದಧಿಕರಣಪೂರ್ವಪಕ್ಷಪ್ರವೃತ್ತೇರೇತದಧಿ-ಕರಣಪೂರ್ವಪಕ್ಷದಶಾಯಾಮೇತದಧಿಕರಣಸಿದ್ಧಾನ್ತಾನುನ್ಮೇಷೇಣ ತೇನಾಸ್ಯ ಗತಾರ್ಥತಾಯಾಃ ವಕ್ತುಮಶಕ್ಯತ್ವಾದಿತಿ ನ್ಯಾಯಸ್ಯ ವಿಪಕ್ಷೇ ಬಾಧಕೋಕ್ತ್ಯಾ ಪೂರ್ವಮೇವಾನೇಕಶ ಉಪಪಾದಿತತ್ವಾದಭ್ಯುಪಗ ಮವಾದೇನ ವಾऽತ್ರೈವಮುಕ್ತಿರಿತಿ ಜ್ಞಾತವ್ಯಮ್ ।

ಸಾರ

'ವ್ಯತಿಹಾರೋ ವಿಶಿಂಷಂತಿ' ಎಂಬ ಸೂತ್ರದಲ್ಲಿಯೂ ಮುಂದೆ ಇದೇ ವಿಷಯವನ್ನು ಪ್ರತಿಪಾದಿಸುವರಿದ್ದಾರೆ. ಆದ್ದರಿಂದ ಪ್ರಶ್ನಪ್ರತಿವಚನಗಳನ್ನು ಉಪನಿಷತ್ತಿನಲ್ಲಿ ಅನುಸಂಧಾನ ಮಾಡಿಕೊಂಡು ವಿಷ್ಣುವೇ ಭೂಮನಾಗಿದ್ದಾನೆಂದು ಸಮರ್ಥಿಸುವುದು ಯುಕ್ತವಲ್ಲವೆಂದು ಹೇಳಬಾರದು. ಹಾಗೂ 'ವ್ಯತಿಹಾರೋ ವಿಶಿಂಷಂತಿ' ಎಂಬ ಸೂತ್ರದಲ್ಲಿ ಆಧ್ಯಾಹಾರ ಮಾಡಿಕೊಳ್ಳಬೇಕೆಂಬುದನ್ನು ಹೇಳಿದ್ದು ಸತ್ಯ. ಆದರೆ ಅದನ್ನೇ ಇಲ್ಲಿ ಆಕ್ಷೇಪ ಮಾಡುತ್ತಿರುವುದರಿಂದ ಪುನರುಕ್ತಿಗೆ ಅವಕಾಶವಿಲ್ಲವೆಂದು ತಿಳಿಯಬೇಕು.

ನ್ಯಾಯವಿವರಣ ಹಾಗೂ ಛಾಂದೋಗ್ಯ ಭಾಷ್ಯಗಳಲ್ಲಿ ಪ್ರಾಣಶಬ್ದಕ್ಕೆ ಮುಖ್ಯಪ್ರಾಣನೆಂದೇ ವ್ಯಾಖ್ಯಾನಿಸಿದ್ದಾರೆ. ಹಾಗಾದರೆ ಶ್ರುತಿಯಲ್ಲಿ ವಿಷ್ಣುವನ್ನು ಉಲ್ಲೇಖಿಸಿದಂತೆಯೇ ಆಗಲಿಲ್ಲವಲ್ಲಾ? ಎಂದು ಪ್ರಶ್ನಿಸಬಾರದು. ಮುಖ್ಯಪ್ರಾಣದೇವರ ಅನಂತರ ಸತ್ಯವು ಪ್ರಸ್ತುತವಾಗಿದೆ. ಅಂತಹ ಸತ್ಯಶಬ್ದದಿಂದ ವಿಷ್ಣುವೇ ಪ್ರತಿಪಾದ್ಯನೆಂದು ತಿಳಿಯಬೇಕು. ಆದ್ದರಿಂದಲೇ 'ಏವಂ ವಿಜಾನನ್ ಅತಿವಾದೀ' ಎಂದು ಮುಖ್ಯಪ್ರಾಣದೇವರನ್ನು ಯಾರು ತಿಳಿಯುತ್ತಾರೋ, ಅವನನ್ನು 'ಅತಿವಾದಿ' ಅಂದರೆ ಅಧಿಕಜ್ಞಾನಿಯೆಂದು ಶ್ರುತಿಯು ಪ್ರಶಂಸಿಸಿದೆ. ಅನಂತರ 'ಏಷ ತು ವಾ ಅತಿವದತಿ ಯಃ ಸತ್ಯೇನಾತಿವದತಿ' ಎಂಬುದಾಗಿ ಯಾರು ಸತ್ಯಸ್ವರೂಪನಾದ ಬ್ರಹ್ಮನನ್ನು ತಿಳಿಯುತ್ತಾರೋ ಅವನು ಅತ್ಯಧಿಕವಾದ ಜ್ಞಾನ ಎಂಬುದಾಗಿ 'ತು' ಶಬ್ದವು ಅತಿಶಯವನ್ನು ತಿಳಿಸುತ್ತಿದೆ. ಆದ್ದರಿಂದ ಸತ್ಯಶಬ್ದದಿಂದ ಪರಬ್ರಹ್ಮನೇ ಪ್ರತಿಪಾದ್ಯನೆಂದು ಸಿದ್ಧವಾಗುತ್ತದೆ. ಆದ್ದರಿಂದ ಶ್ರುತಿಯಲ್ಲಿ ವಿಷ್ಣುವಿನ ಉಲ್ಲೇಖವಿದೆ ಎಂದು ಸಿದ್ಧವಾಗುತ್ತದೆ.

• • • • •

ಪ್ರಾಣಶಬ್ದಾರ್ಥ ವಿಷಯದಲ್ಲಿ ಭಾಷ್ಯ ಹಾಗೂ ನ್ಯಾಯವಿವರಣೆಗಳಿಗೆ ವಿರೋಧವಿಲ್ಲ

तात्पर्यचन्द्रिका

नन्वत्र ''प्राणो वा आशायाः'' इत्यत्र प्राणो विष्णुरित्युपेत्य भाष्ये सिद्धान्तितम् । न्यायविवरणे तु मुख्यवायुरित्युपेत्य ।

ಅನುವಾದ - ಆಕ್ಷೇಪ - 'ಪ್ರಾಣೋ ವಾ ಆಶಾಯಾ ಭೂಯಾನ್' ಎಂಬಲ್ಲಿರುವ ಪ್ರಾಣಶಬ್ದವು ವಿಷ್ಣುಪರವಾಗಿದೆ ಎಂಬರ್ಥವನ್ನು ಅಂಗೀಕರಿಸಿ ಭಾಷ್ಯದಲ್ಲಿ ಸಿದ್ಧಾಂತ ಮಾಡಿದ್ದಾರೆ. ಆದರೆ ನ್ಯಾಯವಿವರಣದಲ್ಲಿ ಪ್ರಾಣಶಬ್ದವು ಮುಖ್ಯಪ್ರಾಣಪರವಾಗಿದೆಯೆಂದು ಅಂಗೀಕರಿಸಿ ಸಿದ್ಧಾಂತ ಮಾಡಿದ್ದಾರೆ.

तद्विरुद्धम् । न चार्थद्वयस्य वैकल्पिकत्वादेवाविरोधः । प्राणस्य विष्णुत्वपक्षे ''एष तु वा अतिवदति'' इति तुशब्दायोगात् ।

ಒಂದೇ ಪ್ರಾಣಶಬ್ದಕ್ಕೆ ವಿಷ್ಣು ಹಾಗೂ ಮುಖ್ಯಪ್ರಾಣ ಎಂಬೆರಡು ಅರ್ಥವನ್ನು ಒಪ್ಪುವುದು ವಿರುದ್ಧವಾಗಿದೆ. ವಿಕಲ್ಪವನ್ನು ಆಶ್ರಯಿಸಿದಾಗ ವಿರೋಧಕ್ಕೆ ಅವಕಾಶವಿಲ್ಲವಲ್ಲವೇ? ಎಂದು ಕೇಳಬಾರದು. ಪ್ರಾಣಶಬ್ದದಿಂದ ವಿಷ್ಣುವೇ ಪ್ರತಿಪಾದ್ಯನಾದ ಮೇಲೆ 'ಏಷ ತು ವಾ ಅತಿವದತಿ' ಎಂಬಲ್ಲಿರುವ ಅತಿಶಯಿತತ್ವವೆಂಬ ಅರ್ಥವನ್ನು ಹೇಳುವ 'ತು' ಶಬ್ದವು ಅಯುಕ್ತವಾಗುತ್ತದೆ.

आशाशब्दोक्तसरस्वतीतो मुख्यवायोरुत्तमत्वमनुक्त्वा विष्णोरेव तदुक्त्ययोगाच्च ।

ಮತ್ತು 'ಆಶಾ' ಎಂಬ ಶಬ್ದದಿಂದ ಪ್ರತಿಪಾದ್ಯಳಾದ ಸರಸ್ವತೀದೇವಿಗಿಂತ ಮುಖ್ಯಪ್ರಾಣದೇವರಿಗೆ ಉತ್ತಮತ್ವವನ್ನು ಹೇಳದೇ ನೇರವಾಗಿ ವಿಷ್ಣುವಿಗೆ ಉತ್ತಮತ್ವವನ್ನು ಹೇಳುವುದು ಅಯುಕ್ತ. ಆದ್ದರಿಂದ ಇದೂ ಸಹ ತಪ್ಪಾಗುತ್ತದೆ.

नच प्राणस्य मुख्यवायुत्वेऽपि श्रीतत्त्वस्य तत उत्तमत्वमनुक्त्वा विष्णोस्तदुक्तिरयुक्तेति वाच्यम् ।

ಇನ್ನು ಪ್ರಾಣಶಬ್ದವು ಮುಖ್ಯಪ್ರಾಣಪರವಾದರೂ ಸಹ ಮುಖ್ಯಪ್ರಾಣದೇವರಿಗಿಂತ ಲಕ್ಷ್ಮೀದೇವಿಗೆ ಉತ್ತಮತ್ವವನ್ನು ಹೇಳದೇ ವಿಷ್ಣುವಿಗೆ ಉತ್ತಮತ್ವವನ್ನು ಹೇಳುವುದು ಅಯುಕ್ತವಲ್ಲವೇ? ಎಂದು ಪ್ರಶ್ನಿಸಬಾರದು. ಲಕ್ಷ್ಮೀದೇವಿಗೆ ಉತ್ತಮತ್ವವನ್ನು ಹೇಳದಿರಲು ಕಾರಣವಿದೆ -

'नामादयस्तु बद्धत्वान्मोचकत्वात्परोऽपि च ।
उभयोरप्यभावेन यथाऽव्यक्तं न तूदितम् ।।'
इति वचनेनैव तदनुक्तेर्गत्युक्तेः ।

'ನಾಮಾದಯಸ್ತು ಬದ್ಧತ್ವಾನ್ಮೋಚಕತ್ವಾತ್ಪರೋಽಪಿ ಚ । ಉಭಯೋರಪ್ಯಭಾವೇನ ಯಥಾಽವ್ಯಕ್ತಂ ನ ತೂದಿತಮ್ ।' 'ನಾಮ, ವಾಗಾದಿಗಳು ಬದ್ಧವಾದ್ದರಿಂದ ಉತ್ತಮವೆಂದು ಹೇಳಲ್ಪಟ್ಟವೆ. ವಿಷ್ಣು ಮೋಚಕನಾದ್ದರಿಂದ ಉತ್ತಮನೆಂದು ಉಕ್ತನಾಗಿದ್ದಾನೆ. ಬದ್ಧತ್ವ ಹಾಗೂ ಮೋಚಕತ್ವ ಎರಡೂ ಇಲ್ಲದ ಕಾರಣ ಲಕ್ಷ್ಮೀದೇವಿಗೆ ಉತ್ತಮತ್ವವನ್ನು ಹೇಳುವ ಪ್ರಸಕ್ತಿ ಶ್ರುತಿಯಲ್ಲಿರುವುದಿಲ್ಲ' ಎಂಬ ಮಾತಿನಿಂದ ಲಕ್ಷ್ಮೀದೇವಿಯನ್ನು ಉಲ್ಲೇಖಿಸದಿರಲು ಕಾರಣವನ್ನು ಹೇಳಲಾಗಿದೆ.

''इयदामननात्'' इत्याद्यधिकरणैश्छान्दोग्यभाष्येण च विरोधाच्च । तत्र नित्यवद्वायुपरताया उक्तत्वादिति चेन्न ।

ಮತ್ತು ಪ್ರಾಣಶಬ್ದವು ವಿಷ್ಣುಪರವಾದರೆ 'ಇಯದಾಮನನಾತ್' 'ವ್ಯತಿಹಾರೋ ವಿಶಿಂಷಂತಿ' 'ಸೈವ ಹಿ ಸತ್ಯಾದಯಃ' ಇವೇ ಮೊದಲಾದ ಅಧಿಕರಣಗಳಿಂದ ಮತ್ತು ಛಾಂದೋಗ್ಯಭಾಷ್ಯದಿಂದಲೂ ವಿರೋಧ ಬರುತ್ತದೆ. ಇವುಗಳಲ್ಲಿ ಪ್ರಾಣಶಬ್ದವು ಮುಖ್ಯಪ್ರಾಣಪರವೆಂದೇ ನಿರ್ಣಯಿಸಲಾಗಿದೆ. 'ಯತೋ ವಾ ಇಮಾನಿ ಭೂತಾನಿ ಜಾಯಂತೇ' ಇತ್ಯಾದಿ ವಾಕ್ಯಗಳಿಗೆ ವ್ಯವಸ್ಥಿತವಾಗಿ ಒಂದೇ ಅರ್ಥವನ್ನು ಹೇಳುವಂತೆ ಪ್ರಾಣಶಬ್ದಕ್ಕೂ ಸಹ ನಿತ್ಯವಾಗಿ ಒಂದೇ ಅರ್ಥವನ್ನು ಹೇಳಬೇಕೆಂದು ಅವುಗಳಲ್ಲಿ ನಿರ್ಣಯಿಸಿದ್ದಾರೆ. ಆದ್ದರಿಂದ ನ್ಯಾಯವಿವರಣದಲ್ಲಿ ಹೇಳಿದ ಪ್ರಕಾರ ಪ್ರಾಣಶಬ್ದವು

ಮುಖ್ಯಪ್ರಾಣಪರವೆಂದೇ ಹೇಳಬೇಕು. ಹೀಗೆ ಹೇಳಿದಾಗ ಭಾಷ್ಯದಲ್ಲಿ ವಿಷ್ಣುಪರವೆಂದು ಹೇಳಿದ್ದು ತಪ್ಪಲ್ಲವೇ?

वायुपरत्वेऽपि ''आत्मन आकाशः सम्भूतः'' इत्यादावाकाशादिशब्दानामिवान्तर्यामिपरत्वस्यापि सम्भवेन भाष्ये तदुक्तेः ।

ಸಮಾಧಾನ - ಪ್ರಾಣಶಬ್ದವು ಮುಖ್ಯಪ್ರಾಣನನ್ನು ಪ್ರತಿಪಾದನೆ ಮಾಡಿದರೂ ಸಹ 'ಆತ್ಮನ ಆಕಾಶಃ ಸಂಭೂತಃ' ಇತ್ಯಾದಿ ಸ್ಥಳಗಳಲ್ಲಿ 'ಆಕಾಶ' ಶಬ್ದವು ಭೂತಾಕಾಶವನ್ನು ಪ್ರತಿಪಾದನೆ ಮಾಡುವುದಲ್ಲದೇ ವಿಷ್ಣುವನ್ನೂ ಸಹ ಹೇಗೆ ಪ್ರತಿಪಾದಿಸುತ್ತದೋ, ಅದರಂತೆ ವಾಯುಶಬ್ದವು ವಿಷ್ಣುವನ್ನೂ ಸಹ ಪ್ರತಿಪಾದನೆ ಮಾಡಬಹುದು. ಮುಖ್ಯಪ್ರಾಣನಲ್ಲಿ ವಿಷ್ಣು ಅಂತರ್ಯಾಮಿಯಾಗಿರುವುದರಿಂದ ಅಂತರ್ಯಾಮಿ ವಿವಕ್ಷೆಯಿಂದ ಆಕಾಶಶಬ್ದದಂತೆ ಪ್ರಾಣನೆಂದೂ ಸಹ ಅವನನ್ನು ಕರೆಯಬಹುದು. ಈ ಅಭಿಪ್ರಾಯದಿಂದ ಭಾಷ್ಯಕಾರರು ಹಾಗೆ ಪ್ರಯೋಗ ಮಾಡಿದ್ದಾರೆ.

तदुक्तिश्च पूर्वपक्षवन्न केवलं वायुपरत्वमिति स्वरूपकीर्तनार्थं वा प्राणान्तर्यामित्वेनैव प्राणाद्भूयस्त्वं लब्धमिति परिहारान्तरोक्त्यर्थं वा 'सम्भूतः' इत्यत्र च भवनवदिहोत्क्रमणस्यापि वक्तव्यत्वेन प्रसङ्गादुत्क्रमणलिङ्गसमन्वयार्थं वेति द्रष्टव्यम् ।

ಭಾಷ್ಯದಲ್ಲಿ ಪ್ರಾಣಶಬ್ದದಿಂದ ವಿಷ್ಣುವನ್ನು ಪ್ರತಿಪಾದ್ಯನೆಂದು ಹೇಳಲು ಅನೇಕ ಕಾರಣಗಳಿವೆ. ಪೂರ್ವಪಕ್ಷದಲ್ಲಿ ಪ್ರಾಣಶಬ್ದವು ಕೇವಲ ವಾಯುಪರವೆಂದು ಒಪ್ಪುತ್ತಾರೆ. ಆದರೆ ಸಿದ್ಧಾಂತದಲ್ಲಿ ಪ್ರಾಣಶಬ್ದವು ಕೇವಲ ವಾಯುಪರವಲ್ಲ. ಅಂತರ್ಯಾಮಿಯಾದ ಪರಮಾತ್ಮನನ್ನೂ ಸಹ ಪ್ರತಿಪಾದಿಸುತ್ತದೆಂಬ ವಾಸ್ತವ ವಿಚಾರವನ್ನು ತಿಳಿಸಬೇಕಾಗಿದೆ. ಅಥವಾ ಮುಖ್ಯಪ್ರಾಣದೇವರಲ್ಲಿ ಅಂತರ್ಯಾಮಿಯಾಗಿರುವ ಪ್ರಯುಕ್ತ ಮುಖ್ಯಪ್ರಾಣದೇವರಿಗಿಂತ ವಿಷ್ಣು ಉತ್ತಮನಾಗಿದ್ದಾನೆಂದು ತಿಳಿಸಬೇಕಾಗಿದೆ. ಅಥವಾ 'ಆತ್ಮನ ಆಕಾಶಃ ಸಂಭೂತಃ' ಎಂಬಲ್ಲಿರುವ ಸಂಭೂತತ್ವಲಿಂಗವನ್ನು ವಿಷ್ಣುವಿನಲ್ಲಿ ಸಮರ್ಥಿಸಿದಂತೆ ಉತ್ಕ್ರಮಣವೆಂಬ ಲಿಂಗವನ್ನು ವಿಷ್ಣುವಿನಲ್ಲಿ ಸಮರ್ಥಿಸಬೇಕಾಗಿದೆ. ಈ ಎಲ್ಲಾ ಕಾರಣದಿಂದ ಭಾಷ್ಯದಲ್ಲಿ ಪ್ರಾಣಶಬ್ದವನ್ನು ವಿಷ್ಣುಪರವೆಂದು ಹೇಳಿದ್ದು ಸಾರ್ಥಕವಾಗಿದೆ.

अत एव टीकायां ''प्राणशब्देनापि विष्णोरुक्तत्वात् । अस्तु वाऽयं प्राणो वायु'' इति ग्रन्थाभ्यां भाष्यन्यायविवरणोक्तपक्षौ विरोधमुद्भाव्य निरसितुमापाततो वैकल्पिकत्वेनोक्त्वा ''न चैतदर्थद्वयं विरुद्धम्'' इत्यनेन ग्रन्थेन तयोः समुच्चयेनाविरोध एव स्थापितः ।

ಆದ್ದರಿಂದಲೇ ಟೀಕೆಯಲ್ಲಿ 'ಪ್ರಾಣಶಬ್ದೇನಾಪಿ ವಿಷ್ಣೋರುಕ್ತತ್ವಾತ್ । ಅಸ್ತು ವಾऽಯಂ ಪ್ರಾಣೋ ವಾಯುಃ' ಎಂಬೆರಡು ಗ್ರಂಥಗಳಿಂದ ಭಾಷ್ಯ ಹಾಗೂ ನ್ಯಾಯವಿವರಣ ಪಕ್ಷಗಳಿಗೆ ವಿರೋಧವನ್ನು ಪ್ರಕಟಪಡಿಸಿ ಅವುಗಳ ವಿರೋಧವನ್ನು ಪರಿಹರಿಸುವುದಕ್ಕಾಗಿ ವಿಕಲ್ಪಪಕ್ಷವನ್ನು ಒಪ್ಪಬಹುದಲ್ಲವೇ? ಎಂದು ಉತ್ತರಿಸಿ 'ನ ಚೈತದರ್ಥದ್ವಯಂ ವಿರುದ್ಧಮ್' ಇತ್ಯಾದಿ ಗ್ರಂಥದಿಂದ ಸಮುಚ್ಚಯಪಕ್ಷವನ್ನು ಆಶ್ರಯಿಸುವ ಕಾರಣ ವಿರೋಧವಿಲ್ಲವೆಂದು ಸ್ಥಾಪನೆ ಮಾಡಿದ್ದಾರೆ.

तत्वप्रदीपे तु ''अभ्युपगम्यवादत्वात्'' इत्यादिनाऽयं प्राणो विष्णुरित्यभ्युपेत्यवादेन भाष्यं प्रवृत्तमित्युक्तम् । तत्र भाष्यन्यायविवरणयोः पक्षभेदेन व्यवस्थितत्वाद्भाष्ये पूर्वपक्ष उत्क्रमणलिङ्गोक्तिः सिद्धान्ते ब्रह्मण्युत्क्रमणसमर्थनं च स्वरसम् ।

ನ್ಯಾಯವಿವರಣಕ್ಕೆ ಭಾಷ್ಯದಿಂದ ಬಂದಂತಹ ವಿರೋಧವನ್ನು ತತ್ವಪ್ರದೀಪದಲ್ಲಿ ಮತ್ತೊಂದು ಬಗೆಯಲ್ಲಿ ಪರಿಹರಿಸಿದ್ದಾರೆ. 'ಅಭ್ಯುಗಪಮ್ಯವಾದತ್ವಾತ್' ಇತ್ಯಾದಿಯಾದ ವಾಕ್ಯದಿಂದ ಪ್ರಾಣನು ವಿಷ್ಣುವಾಗಿದ್ದಾನೆಂದು ಅಂಗೀಕಾರವಾದ ಮಾಡುವ ಮೂಲಕ ಭಾಷ್ಯವು ಹೊರಟಿರುತ್ತದೆಂದು ವ್ಯಾಖ್ಯಾನಿಸಿದ್ದಾರೆ. ಭಾಷ್ಯ ಹಾಗೂ ನ್ಯಾಯವಿವರಣಗಳು ಪಕ್ಷಭೇದದಿಂದ ವ್ಯವಸ್ಥಿತವಾಗಿರುತ್ತವೆ. ಭಾಷ್ಯದಲ್ಲಿ ಪೂರ್ವಪಕ್ಷ ಮಾಡುವಾಗ ಉತ್ಕ್ರಮಣವೆಂಬ ಲಿಂಗವು ಹಾಗೂ ಸಿದ್ಧಾಂತ ಮಾಡುವಾಗ ಬ್ರಹ್ಮನಲ್ಲಿ ಉತ್ಕ್ರಮಣವೆಂಬ ಕ್ರಿಯೆಯ ಸಮರ್ಥನೆಯೂ ಸ್ವರಸವಾಗುತ್ತದೆ.

प्रकाशः –

अत्र टीकायां भाष्योक्तं प्राणभूम्नोरुभयोरपि विष्णुत्वमुत्क्रमणलिङ्गं च समर्थ्याभेदपक्षमेव प्रतिष्ठाय ''अस्तु वाऽयं प्राणो वायुरेव'' इति भेदपक्षमपि भाष्यानुक्तमुक्त्वोपपाद्याभेदभेदपक्षायोरविरोधश्चोक्तः ।

ವಿವರಣೆ – ಟೀಕೆಯಲ್ಲಿ ಭಾಷ್ಯದ ಪ್ರಕಾರ ಪ್ರಾಣ ಹಾಗೂ ಭೂಮಾ ಇಬ್ಬರೂ ಸಹ ವಿಷ್ಣುವೇ ಆಗಿದ್ದಾರೆಂದು ಸಮರ್ಥಿಸಿ ಹಾಗೂ ಉತ್ಕ್ರಮಣವೆಂಬ ಲಿಂಗವನ್ನು ವಿಷ್ಣುವಿನಲ್ಲಿ ಸಮರ್ಥಿಸಿ ಅಭೇದಪಕ್ಷವನ್ನು ಸಮರ್ಥಿಸಿದ್ದಾರೆ. ಮತ್ತು 'ಅಸ್ತು ವಾऽಯಂ ಪ್ರಾಣೋ ವಾಯುರೇವ' ಎಂಬುದಾಗಿ ಭೇದಪಕ್ಷವನ್ನೂ ಸಹ ಭಾಷ್ಯದಲ್ಲಿ ಹೇಳಿ, ಅದನ್ನು ಸಮರ್ಥಿಸಿ, ಭೇದಪಕ್ಷ ಹಾಗೂ ಅಭೇದಪಕ್ಷಗಳಿಗೆ ಹೇಗೆ ವಿರೋಧ ಬರುವುದಿಲ್ಲವೋ, ಆ ಕ್ರಮದಲ್ಲಿ ಎರಡನ್ನೂ ಹೊಂದಿಸಿರುತ್ತಾರೆ.

प्रकाशः – अत्र भेदपक्षोक्तिस्समुच्चयेनाविरोधोक्तिश्च किं मूला किंनिमित्ता चेत्यतस्तदाशयं विवरितुमभेदपक्षमाक्षिपति – नन्विति ।।

ಹೀಗೆ ಟೀಕೆಯಲ್ಲಿ ಭೇದಪಕ್ಷವನ್ನು ಭಾಷ್ಯದಲ್ಲಿ ಹೇಳದಿದ್ದರೂ ಏಕೆ ಸ್ವೀಕರಿಸಿದರು? ಮತ್ತು ಸಮುಚ್ಚಯ ಪಕ್ಷವನ್ನು ಒಪ್ಪಿ ವಿರೋಧವಿಲ್ಲವೆಂದು ಪರಿಹಾರ ನೀಡುವುದಕ್ಕೆ ಏನು ಆಧಾರ ? ಮತ್ತು ಏನು ಕಾರಣ? ಎಂಬ ಪ್ರಶ್ನೆಗೆ ಟೀಕೆಯ ಅಭಿಪ್ರಾಯವನ್ನು ವಿವರಿಸುವವರಾಗಿ ಅಭೇದ ಪಕ್ಷವನ್ನು ಆಕ್ಷೇಪ ಮಾಡುತ್ತಿದ್ದಾರೆ 'ನನು' ಇತ್ಯಾದಿ ಗ್ರಂಥದಿಂದ.

ಪ್ರಕಾಶಃ – ಪ್ರಾಣೋ ವಿಷ್ಣುರಿತ್ಯುಪೇತ್ಯೇತಿ ।। ಉತ್ಕ್ರಮಣಲಿಙ್ಗಸ್ಯ ಹರೌ ಸಮರ್ಥನಾದೇತದವಗಮ್ಯತ ಇತಿ ಭಾವಃ ।

'ಪ್ರಾಣೋ ವಿಷ್ಣುರಿತ್ಯುವೇತ್ಯ' ಎಂದು ಗ್ರಂಥದಲ್ಲಿದೆ. ಅಂದರೆ 'ವ್ಯತಿಹಾರೋ ವಿತಿಷಂತಿ' ಇತ್ಯಾದಿ ಸೂತ್ರಗಳಲ್ಲಿ ಸಮರ್ಥಿಸುವಂತೆ ಉತ್ಕ್ರಮಣಲಿಂಗವು ವಿಷ್ಣುವಿನಲ್ಲಿಯೂ ಉಪಪನ್ನವಾಗುತ್ತದೆ. ಆದ್ದರಿಂದ ವಿಷ್ಣುವನ್ನು ಪ್ರಾಣನೆನ್ನಬಹುದೆಂದು ಅಭಿಪ್ರಾಯ.

ಪ್ರಕಾಶಃ – ನನು ಋಗಾದೀನಾಂ ಪರಾಪರಾರ್ಥದ್ವಯವದಿಹಾಪಿ ವಿವಕ್ಷಾಭೇದೇನ ಕದಾಚಿದಯಂ ಕದಾಚಿತ್ಸೋऽಪ್ಯರ್ಥೋऽಸ್ತು ಕೋ ದೋಷಃ । ಅತ ಏವ 'ಅನ್ಯಮೀಶಮ್' ಇತ್ಯಸ್ಯಾದೃಶ್ಯತ್ವನಯೇऽನ್ಯೋऽರ್ಥೋ ಶುಭ್ವಾದಿನಯೇऽನ್ಯೋऽರ್ಥ ಉಕ್ತ ಇತ್ಯತ ಆಹ – ನಚೇತಿ ।।

ಪ್ರಶ್ನೆ - ಋಗ್ವೇದಾದಿಗಳಲ್ಲಿ ಪರ ಅರ್ಥ ಅಪರಾರ್ಥ ಎಂಬುದಾಗಿ ಒಂದೇ ಸೂಕ್ತಕ್ಕೆ ಅನೇಕ ಬಗೆಯಲ್ಲಿ ಅರ್ಥೈಸುವುದು ಕಂಡಿದೆ. ಅದೇ ರೀತಿಯಾಗಿ ವಿವಕ್ಷಾಭೇದದಿಂದ ಒಂದೇ ಪ್ರಾಣಶಬ್ದವು ಮುಖ್ಯಪ್ರಾಣದೇವರನ್ನು ಹಾಗೂ ವಿಷ್ಣುವನ್ನು ಇಬ್ಬರನ್ನೂ ಸಹ ಪ್ರತಿಪಾದಿಸಬಹುದು. ಆದ್ದರಿಂದಲೇ 'ಜುಷ್ಟಂ ಯದಾ ಪಶ್ಯತ್ಯನ್ಯಮೀಶಮ್' ಎಂಬ ಶ್ರುತಿಗೆ ಅದೃಶ್ಯತ್ವಾದಿಗಳಲ್ಲಿ ದರ್ಶನಕರ್ತೃತ್ವೇನ ಪ್ರಸಕ್ತನಾದ ಜೀವ ಪ್ರತಿಯೋಗಿಕವಾದ ಭೇದವನ್ನು ವಿಷ್ಣುವಿನಲ್ಲಿ ಸಮರ್ಥಿಸಿದ್ದಾರೆ. ಆದರೆ ದ್ಯುಭ್ವಾದ್ಯಧಿಕರಣದ ಭೇದವ್ಯಪದೇಶ ಸೂತ್ರದಲ್ಲಿ ಲೋಕದಲ್ಲಿ ಈಶನೆಂದು ಪ್ರಸಿದ್ಧನಾದ ಯಾವ ರುದ್ರನಿದ್ದಾನೋ, ಅವನ ಭೇದವನ್ನು ವಿಷ್ಣುವಿನಲ್ಲಿ ಹೇಳಿದ್ದಾರೆ. ಹೀಗೆ 'ಜುಷ್ಟಂಯದಾ' ಎಂಬ ಒಂದೇ ಶ್ರುತಿಗೆ ಎರಡು ಅರ್ಥಗಳನ್ನು ವಿವಕ್ಷಾಭೇದದಿಂದ ಮಾಡಿದ್ದು ಕಂಡಿರುತ್ತದೆ. ಅದರಂತೆ ಒಂದೇ ಪ್ರಾಣಶಬ್ದಕ್ಕೆ ಎರಡು ಅರ್ಥಗಳನ್ನು ಏಕೆ ಹೇಳಬಾರದು?

ಉತ್ತರ - ಈ ಪ್ರಶ್ನೆಗೆ 'ನಚ' ಎಂಬ ವಾಕ್ಯದಿಂದ ಉತ್ತರಿಸಿದ್ದಾರೆ. ವಿಕಲ್ಪ ಮಾಡುವುದರಿಂದ ಎರಡೂ ಪಕ್ಷಗಳಿಗೆ ವಿರೋಧವಿಲ್ಲವೆಂದು ಹೇಳಬಾರದು. ಹಾಗಾದಲ್ಲಿ 'ತು' ಶಬ್ದವು ಅನುಪಪನ್ನವಾಗುತ್ತದೆ ಮತ್ತು ಭಾರತೀದೇವಿಗಿಂತ ಮುಖ್ಯಪ್ರಾಣದೇವರಿಗೆ ಉತ್ತಮತ್ವವನ್ನು ಹೇಳಿದಂತಾಗುವುದಿಲ್ಲ.

ಪ್ರಕಾಶಃ – ಪ್ರಾಣಭೂಮ್ನೋರ್ಭೇದಪಕ್ಷेऽಪಿ ದೋಷಮಾಶಙ್ಕ್ಯ ನಿರಾಹ – ನಚೇತಿ ।। ವಚನೇನೇತಿ ।। ತೃತೀಯೇ ''ಕಾಮಾದಿತರತ್ರ ತತ್ರ ಚಾಯತನಾದಿಭ್ಯಃ'' ಇತ್ಯತ್ರ ಭಾಷ್ಯೋಕ್ತಬ್ರಹ್ಮತರ್ಕವಚನೇನೇತ್ಯರ್ಥಃ ।

ಮುಖ್ಯಪ್ರಾಣ ಹಾಗೂ ಭೂಮಾ ಇಬ್ಬರೂ ಬೇರೆ ಎಂಬ ಪಕ್ಷದಲ್ಲಿಯೂ ದೋಷವನ್ನು ಆಕ್ಷೇಪಿಸಿ ನಿರಾಕರಿಸುತ್ತಿದ್ದಾರೆ 'ನಚ' ಇತ್ಯಾದಿ ಗ್ರಂಥದಿಂದ. 'ವಚನೇನ' ಎಂದರೆ ಮೂರನೇ ಅಧ್ಯಾಯದ 'ಕಾಮಾದಿತರತ್ರ ತತ್ರ ಚಾಯತನಾದಿಭ್ಯಃ' ಎಂಬ ಸೂತ್ರದ ಭಾಷ್ಯದಲ್ಲಿ ಉದಾಹರಿಸಲ್ಪಟ್ಟ ಬೃಹತ್ತರ್ಕದ ಮಾತಿನಿಂದ ಎಂದರ್ಥ.

ಪ್ರಕಾಶಃ – ತತ್ರ ಯಥೇತ್ಯಸ್ಯ ''ಶ್ರುತೌ ತಥಾ ಜೀವಪರಾವುಚ್ಯೇತೇ ಕಿಞ್ಚ ನೇತರತ್'' ಇತ್ಯುತ್ತರಾರ್ಧೇನಾನ್ವಯಃ । ವೈಕಲ್ಪಿಕಾರ್ಥದ್ವಯಪಕ್ಷೇ ಬಾಧಕಾನ್ತರಮಾಹ – **ಇಯದಿತಿ** ।। ಆದಿಪದೇನ 'ವ್ಯತಿಹಾರಃ' 'ಸೈವ ಹಿ' ಇತ್ಯನಯೋರ್ಗ್ರಹಃ ।

ಶ್ಲೋಕದಲ್ಲಿ 'ಯಥಾ' ಎಂಬ ಪದಕ್ಕೆ ಮುಂದಿನ ಶ್ಲೋಕದಲ್ಲಿರುವ 'ಶ್ರುತೌ ತಥಾ ಜೀವಪರಾವುಚ್ಯೇತೇ ಕಿಂಚ ನೇತರತ್' ಎಂಬ ಉತ್ತರಾರ್ಧದ ಜೊತೆಗೆ ಅನ್ವಯ ಮಾಡಬೇಕು. ಯಾವರೀತಿಯಾಗಿ ಅವ್ಯಕ್ತತತ್ವವು ಪ್ರತಿಪಾದ್ಯವಾಗಿಲ್ಲವೋ, ಆದರಂತೆ ಜೀವ ಹಾಗೂ ಪರಮಾತ್ಮರು ಮಾತ್ರ ಪ್ರತಿಪಾದ್ಯರಾಗಿದ್ದಾರೆ; ಬೇರೆ ಯಾವುದೂ ಪ್ರತಿಪಾದ್ಯವಾಗಿಲ್ಲ. ಎಂದು ಅಭಿಪ್ರಾಯ. ವಿಕಲ್ಪವನ್ನು ಆಶ್ರಯಿಸಿದ ಎರಡು ಪಕ್ಷಗಳಲ್ಲಿ ಮತ್ತೊಂದು ಬಾಧಕವನ್ನು ಹೇಳುತ್ತಿದ್ದಾರೆ 'ಇಯತ್' ಇತ್ಯಾದಿ ವಾಕ್ಯದಿಂದ. ಆದಿಪದದಿಂದ 'ವ್ಯತಿಹಾರಃ ವಿಶಿಂಷಂತಿ' 'ಸೈವ ಹಿ ಸತ್ಯಾದಯಃ' ಎಂಬೆರಡು ಸೂತ್ರಗಳನ್ನು ಸ್ವೀಕರಿಸಬೇಕು.

ಪ್ರಕಾಶಃ – ಇಯದಾಮನನಾದಿತ್ಯುಪಾಸನಾಪಾದೀಯೈಕವಿಂಶಾಧಿಕರಣೇ ಹ್ರುಪಾಸನಾಧಿಕಾರಿಣೋ ನಾಮವಾಗಾದಯಃ ಪ್ರಾಣಾವಸಾನಾ ನ ವೇತಿ ಸಂಶಯೇ ನಾಮಾದೀನಾಂ ಸೋತ್ತರತ್ವದರ್ಶನಾತ್ಪ್ರಾಣಾದಪ್ಯುತ್ತ-ಮಾಧಿಕಾರಿಸಾಧನಸೌಲಭ್ಯಾನ್ನಾಮಾದಯೋऽಧಿಕಾರಿಣೋ ನ ಪ್ರಾಣಾವಸಾನಾ ಇತಿ ಪ್ರಾಪ್ತೇ ''ಪ್ರಾಣೋ ವಾವ ಸರ್ವೇಭ್ಯೋ ಭೂಯಾನ್'' ಇತಿ ಶ್ರುತೇರಧಿಕಾರಿಣಾಂ ಇಯತ್ ಛಾನ್ದೋಗ್ಯೋಕ್ತ ಪ್ರಾಣಾವಸಾಯಿತ್ವಮೇವೇತಿ ವಕ್ಷ್ಯಮಾಣತ್ವಾದಿತಿ ಭಾವಃ ।

ಉಪಾಸನಾ ಪಾದದ ಇಪ್ಪತ್ತೊಂದನೆಯ ಅಧಿಕರಣದಲ್ಲಿ 'ಇಯದಾಮನನಾತ್' ಎಂಬ ಸೂತ್ರವಿದೆ. ಇದರಲ್ಲಿ ಮಾಡುವ ವಿಚಾರ ಹೀಗಿದೆ - 'ಉಪಸಾನಾಧಿಕಾರಿಗಳೆಲ್ಲರೂ ಪ್ರಾಣದೇವರೇ ಕೊನೆಯಾಗಿ ಉಳ್ಳವರೋ ಅಥವಾ ಬೇರೆಯವರೇ ಕೊನೆಯಾಗಿ ಉಳ್ಳವರಾಗಿದ್ದಾರೋ ಎಂದು ಸಂಶಯ. ನಾಮಾದಿಗಳಿಗೆ ಸೋತ್ತರತ್ವವು ಎಂದು ಕಾಣಿಸುತ್ತಿರುವುದರಿಂದ ಮುಖ್ಯಪ್ರಾಣದೇವರಿಗಿಂತಲೂ ಸಹ ಉತ್ತಮರು ಇರಬಹುದು. ಆದ್ದರಿಂದ ''ಪ್ರಾಣಃ, ಸೋತ್ತರಃ, ಉಪಾಸಕತ್ವಾತ್, ನಾಮವಾಗಾದಿವತ್'' ಎಂದು ಸಾಧಿಸಬಹುದು. ಆದ್ದರಿಂದ ಅಧಿಕಾರಿಗಳು ಮುಖ್ಯಪ್ರಾಣ ಕೊನೆಯಾಗಿ ಉಳ್ಳವರಲ್ಲ ಎಂದು ಪೂರ್ವಪಕ್ಷ. 'ಪ್ರಾಣೋ ವಾವ ಸರ್ವೇಭ್ಯೋ ಭೂಯಾನ್' ಎಂಬ ಶ್ರುತಿಯ ಆಧಾರದಿಂದ ಅಧಿಕಾರಿಗಳು ಇಯತ್ = ಇಷ್ಟೇ ಇದ್ದಾರೆಂದು ಛಾಂದೋಗ್ಯದಲ್ಲಿ ಮುಖ್ಯಪ್ರಾಣದೇವರ ತನಕ ಹೇಳಿದ್ದರಿಂದ ಅವರಿಗಿಂತ ಉತ್ತಮರಾದ ಅಧಿಕಾರಿಗಳಿಲ್ಲವೆಂದು ಮುಂದೆ ಸಮರ್ಥಿಸುತ್ತಾರೆ.

ಪ್ರಕಾಶಃ –

ತಸ್ಯಾಃ ಶ್ರೇಷ್ಠೋ ಮುಖ್ಯವಾಯುಃ ಪ್ರಕೃಷ್ಟಾನಾಂ ಚ ನಾಯಕಃ ।
ಪ್ರಾಣನಾಮಾ ನ ಇತ್ಯೇವ ಹ್ಯಾನನ್ದಸ್ಸಮುದೀರಿತಃ ।
ಆಣಾ ಸರಸ್ವತೀ ಪ್ರೋಕ್ತಾ ತತ್ಪ್ರಕೃಷ್ಟಸುಖತ್ವತಃ ।
ಪ್ರಾಣ ಇತ್ಯುಚ್ಯತೇ ವಾಯುಸ್ಸರ್ವೇ ತ್ವೇತೇ ದಶೋತ್ತರಾ ।।

ಇತ್ಯಾದಿಛಾನ್ದೋಗ್ಯಭಾಷ್ಯೇಣೇತ್ಯರ್ಥಃ ।

ಆಶಾನಾಮಕಳಾದ ಭಾರತೀದೇವಿಗಿಂತಲೂ ಮುಖ್ಯಪ್ರಾಣದೇವರೇ ಶ್ರೇಷ್ಠರಾಗಿದ್ದಾರೆ. ಪ್ರಕೃಷ್ಟವಾದ ನಾಯಕರಾದ್ದರಿಂದ ಅವರಿಗೆ 'ಪ್ರಾಣ' ಎಂದು ಹೆಸರು. ಅಥವಾ 'ನ' ಎಂದರೆ 'ಆನಂದ' ಎಂದರ್ಥ. 'ಆಣಾ' ಎಂದರೆ 'ಸರಸ್ವತೀ' ಎಂದರ್ಥ. ಆವಳಿಗಿಂತ ಉತ್ಕೃಷ್ಟವಾದ ಸುಖವನ್ನು ಹೊಂದಿರುವ ಪ್ರಯುಕ್ತ ವಾಯುದೇವರು ಪ್ರಾಣಶಬ್ದದಿಂದ ವಾಚ್ಯರಾಗಿದ್ದಾರೆ. ಹೀಗೆ ಎಲ್ಲ ದೇವತೆಗಳು ಅವರವರ ಯೋಗ್ಯತೆಗೆ ತಕ್ಕಂತೆ ಉತ್ತಮವಾದ ಆನಂದವನ್ನು ಪಡೆದಿರುತ್ತಾರೆ. ಹೀಗೆ ಛಾಂದೋಗ್ಯಭಾಷ್ಯದಲ್ಲಿ ಹೇಳಿರುತ್ತಾರೆ.

ಪ್ರಕಾಶಃ – ನಿತ್ಯವದಿತಿ ಸ್ವಾರ್ಥೇ ವತಿಃ । ಯದ್ವಾ ವ್ಯವಸ್ಥಿತೈಕಾರ್ಥಕೇವಾಕ್ಯೇ ''ಯತೋ ವಾ ಇಮಾನಿ ಭೂತಾನಿ ಜಾಯನ್ತೇ'' ಇತ್ಯಾದೌ ಯಥೋಕ್ತಿಸ್ತಥೇತ್ಯರ್ಥಃ । ಇತರಥಾ ವಾಯುರ್ವೇತಿ ವಾಶಬ್ದಶ್ಶ್ರುತೇತಿ ಭಾವಃ ।

'ನಿತ್ಯವತ್' ಎಂಬಲ್ಲಿರುವ 'ವತ್' ಪ್ರತ್ಯಯವು ಸ್ವಾರ್ಥದಲ್ಲಿದೆ. ಆದ್ದರಿಂದ ನಿತ್ಯದಿಂದ ಎಂದರ್ಥ. ಅಥವಾ 'ಇವ' ಎಂಬರ್ಥದಲ್ಲಿ 'ವತ್' ಪ್ರತ್ಯಯವು ಬಂದಿರುತ್ತದೆ. ಅಂದರೆ ವ್ಯವಸ್ಥಿತವಾಗಿ ಒಂದೇ ಅರ್ಥವನ್ನು ಪ್ರತಿಪಾದಿಸುವ 'ಯತೋ ವಾ ಇಮಾನಿ ಭೂತಾನಿ ಜಾಯಂತೇ' ಇತ್ಯಾದಿ ವಾಕ್ಯಗಳಲ್ಲಿ ಹೇಗೆ ವ್ಯಾಖ್ಯಾನಿಸಲಾಗುತ್ತದೋ, ಅದರಂತೆ ಎಂಬರ್ಥವನ್ನು ತಿಳಿಯಬೇಕು. ಹೀಗೊಪ್ಪದಿದ್ದರೆ ಭಾಷ್ಯದಲ್ಲಿ 'ವಾಯುರೇವ' ಎಂದು ಹೇಳುವ ಬದಲು 'ವಾಯುರ್ವಾ' ಎಂಬುದಾಗಿ 'ವಾ' ಎಂಬ ಶಬ್ದವನ್ನು ಹೇಳಬೇಕಾಗಿತ್ತು.

ಪ್ರಕಾಶಃ – ಅಭೇದಪಕ್ಷೋಕ್ತೇಃ ಫಲಮಾಹ – ತದುಕ್ತಿಶ್ಚೇತಿ ।। ಉಕ್ತಂ ಸರ್ವಂ ಟೀಕಾಯಾಸ್ತಾತ್ಪರ್ಯ-ವರ್ಣನಮಿತಿ ಭಾವೇನ ತದಾರೂಢಂ ಕರೋತಿ – ಅತ ಏವೇತಿ ।।

ಅಭೇದಪಕ್ಷವನ್ನು ಹೇಳಿದ್ದರ ಪ್ರಯೋಜನವನ್ನು 'ತದುಕ್ತಿಶ್ಚ' ಎಂಬ ವಾಕ್ಯದಿಂದ ಪ್ರತಿಪಾದಿಸುತ್ತಿದ್ದಾರೆ. ಟೀಕೆಯ ತಾತ್ಪರ್ಯವನ್ನು ಸ್ಪಷ್ಟವಾಗಿ ವರ್ಣಿಸಿದಂತಾಯಿತೆಂಬ ಅಭಿಪ್ರಾಯದಿಂದ ತಾವು ಹೇಳಿದ ವಿಷಯವನ್ನು ಟೀಕಾರೂಢ ಮಾಡುತ್ತಿದ್ದಾರೆ 'ಅತ ಏವ' ಇತ್ಯಾದಿ ಗ್ರಂಥದಿಂದ.

ಪ್ರಕಾಶಃ – ಪರಿಹಾರಾನ್ತರಮಾಹ – ತತ್ವಪ್ರದೀಪೇ ತ್ವಿತಿ ।। ಭಾಷ್ಯಾದೌ ಹರಾವುತ್ಕ್ರಮಣಸ್ಯ ಶ್ರುತಿಸಿದ್ಧತ್ವಮೇವೋಕ್ತಮ್ । ನ ತೂಪಪತ್ತಿಸಿದ್ಧತ್ವಮ್ ।

ಮತ್ತೊಂದು ಬಗೆಯಲ್ಲಿ ನ್ಯಾಯವಿವರಣಕ್ಕೆ ಭಾಷ್ಯದ ವಿರೋಧವನ್ನು ಪರಿಹರಿಸುತ್ತಿದ್ದಾರೆ 'ತತ್ಪ್ರದೀಪೇ ತು' ಇತ್ಯಾದಿ ವಾಕ್ಯದಿಂದ. ಭಾಷ್ಯಾದಿಗಳಲ್ಲಿ ಉತ್ಕ್ರಮಣಾದಿಲಿಂಗಗಳು. ಶ್ರೀಹರಿಯಲ್ಲಿ ಶ್ರುತಿಸಿದ್ಧವಾಗುತ್ತದೆಂದು ಹೇಳಿದ್ದಾರೆ ಹೊರತು, ಉಪಪತ್ತಿಯಿಂದ ಸಿದ್ಧವಾಗುತ್ತದೆಂದು ಹೇಳಿರುವುದಿಲ್ಲ.

ಗುರ್ವರ್ಥದೀಪಿಕಾ – ನಿತ್ಯವದಿತಿ ಸ್ವಾರ್ಥಿಕೋ ವತಿಃ । ನಿತ್ಯಮೇವೇತ್ಯರ್ಥಃ । ನನು ಭಾಷ್ಯೇ ಪ್ರಾಣಶಬ್ದಸ್ಯ ವಿಷ್ಣುವಾಚಕತ್ವಂ ಕುತ ಉಕ್ತಮಿತ್ಯತ ಆಹ – ತದುಕ್ತಿಶ್ಚೇತಿ ।। ನನು ಸ್ವರೂಪಕೀರ್ತನಾರ್ಥತ್ವಂ ವೈಯರ್ಥ್ಯಾಪರಪರ್ಯಾಯ ಏವೇತ್ಯತ ಆಹ – ಪ್ರಾಣಾನ್ತರ್ಯಾಮಿತ್ವೇನ ವೇತಿ ।। ನನು ಪ್ರಾಣಶಬ್ದಸ್ಯ ವಿಷ್ಣುಪರತ್ವಾಭಾವೇऽಪಿ ಪ್ರಕರಣವಿಚ್ಛೇದಕತ್ವಶಬ್ದಮಹಿಮ್ನಾ ಪ್ರಾಣಾದ್ವಿಷ್ಣೋರ್ಮುಖ್ಯಸ್ತ್ವೋತ್ಕ್ರಿಲಿಂಗ್ಯತ ಏವೇತಿ ಕಿಮರ್ಥಂ ಪ್ರಾಣಸ್ಯ ವಿಷ್ಣುತ್ವವಚನಮಿತ್ಯತ ಆಹ – ಸಮ್ಮೂತ ಇತ್ಯತ್ರೇತಿ ।। ಪ್ರಾಣಸ್ಯ ವಿಷ್ಣುತ್ವಾನುಕ್ತೌ ನೋತ್ಕ್ರಮಣಾದಿಲಿಙ್ಗಸಮನ್ವಯಃ । ಉತ್ಕ್ರಮಣಾದೇಃ ಪ್ರಾಣನಿಷ್ಠತ್ವಶ್ರವಣೇऽಪಿ ಭೂಮನಿಷ್ಠತ್ವೇನಾಶ್ರವಣಾದಿತಿ ಭಾವಃ ।

ಸಾರ

'ಪ್ರಾಣೋ ವಾ ಆಶಾಯಾ ಭೂಯಾನ್' ಎಂಬ ಛಾಂದೋಗ್ಯದಲ್ಲಿರುವ ಪ್ರಾಣಶಬ್ದಕ್ಕೆ 'ವಿಷ್ಣು' ಎಂಬರ್ಥವನ್ನು ಒಪ್ಪಿ ಸಿದ್ಧಾಂತ ಮಾಡಿರುತ್ತಾರೆ. ಆದರೆ ನ್ಯಾಯವಿವರಣದಲ್ಲಿ ಮುಖ್ಯಪ್ರಾಣನೆಂಬರ್ಥವನ್ನೂ ಒಪ್ಪಿಯೇ ಸಿದ್ಧಾಂತ ಮಾಡಿರುತ್ತಾರೆ. ವಿಚಾರ ಮಾಡಿದರೆ ನ್ಯಾಯವಿವರಣದ ಅಭಿಪ್ರಾಯವು ಅತ್ಯಂತ ಸಮಂಜಸವೆಂದನಿಸುತ್ತದೆ. ಏಕೆಂದರೆ ಪ್ರಾಣಶಬ್ದವು ವಿಷ್ಣುಪರವಾಗುವುದರಿಂದ 'ಏಷ ತು ವಾ ಅತಿವದಿತಿ' ಎಂಬಲ್ಲಿರುವ 'ತು' ಶಬ್ದವು ಸ್ವಾರಸ್ಯವಾಗುತ್ತದೆ. ಮತ್ತು ಆಶಾನಾಮಕಳಾದ ಭಾರತೀದೇವಿಗಿಂತ ಮುಖ್ಯಪ್ರಾಣದೇವರಿಗೆ ಉತ್ತಮತ್ವವನ್ನು ಹೇಳಿದಂತಾಗುತ್ತದೆ. ಅಷ್ಟೇ ಅಲ್ಲದೆ 'ಇಯದಾಮನನಾತ್' ಇತ್ಯಾದಿ ಸೂತ್ರಗಳಲ್ಲಿ ಹಾಗೂ ಛಾಂದೋಗ್ಯಭಾಷ್ಯದಲ್ಲೆಲ್ಲಾ ಪ್ರಾಣಶಬ್ದಕ್ಕೆ ಮುಖ್ಯಪ್ರಾಣನೆಂಬರ್ಥವನ್ನೇ ಅಂಗೀಕರಿಸಿದ್ದಾರೆ. ಹೀಗಿರುವಾಗ ಭಾಷ್ಯದಲ್ಲಿ ವಿಷ್ಣುವೆಂಬರ್ಥವನ್ನು ಅಂಗೀಕರಿಸಿದ್ದು ವಿರುದ್ಧವಾಗುತ್ತದಲ್ಲವೆ ಎಂಬ ವಿರೋಧಾಶಂಕೆಯು ಬರುತ್ತದೆ.

ಇದಕ್ಕೆ ಸಮಾಧಾನ ಹೀಗೆ - ಶ್ರೀಮದಾಚಾರ್ಯರು ಭಾಷ್ಯದಲ್ಲಿ ಪ್ರಾಣಶಬ್ದಕ್ಕೆ ವಿಷ್ಣುವೆಂಬರ್ಥವನ್ನು ಒಪ್ಪಲು ಅನೇಕ ಕಾರಣಗಳಿವೆ. ಪೂರ್ವಪಕ್ಷಕಾರರಂತೆ ನಾವು ಕೇವಲ ಪ್ರಾಣಪರತ್ವವನ್ನು ಮಾತ್ರ ಒಪ್ಪರುವುದಿಲ್ಲ. ವಿಷ್ಣುಪರತ್ವವನ್ನೂ ಸಹ ಒಪ್ಪುತ್ತೇವೆ. ಅಥವಾ ಮುಖ್ಯಪ್ರಾಣದೇವರಿಗಿಂತ ವಿಷ್ಣು ಉತ್ತಮನಾಗಿದ್ದಾನೆಂದು ಹೇಳಬೇಕಾಗಿದೆ. ಅಥವಾ ಅಂತರ್ಯಾಮಿತ್ವೇನೈವ ಉತ್ಕ್ರಮಣಾದಿಲಿಂಗವನ್ನು ವಿಷ್ಣುವಿನಲ್ಲಿ ಕೂಡಿಸಬೇಕಾಗಿದೆ. ಈ ಎಲ್ಲಾ ಕಾರಣಕ್ಕೋಸ್ಕರ ವಿಷ್ಣುಪರತ್ವವನ್ನು ಪ್ರಾಣಶಬ್ದಕ್ಕೆ ಒಪ್ಪರುತ್ತಾರೆ. ಆದ್ದರಿಂದ ಬೇರೆ ಬೇರೆ ವಿವಕ್ಷೆಗಳಿಂದ ಪ್ರಾಣಶಬ್ದದಿಂದ ಮುಖ್ಯಪ್ರಾಣ ಹಾಗೂ ವಿಷ್ಣು ಪ್ರತಿಪಾದ್ಯರಾಗಿದ್ದಾರೆಂದು ಉತ್ತರಿಸಬೇಕಾಗಿಲ್ಲ ಹೊರತಾಗಿ ಮುಖ್ಯಪ್ರಾಣ ಹಾಗೂ ವಿಷ್ಣು ಇಬ್ಬರೂ ಸಹ ಪ್ರತಿಪಾದ್ಯರೇ ಆಗಿದ್ದಾರೆಂದು ಒಪ್ಪಬೇಕು. ವಿಕಲ್ಪಪಕ್ಷವನ್ನು ಆಶ್ರಯಿಸಬಾರದು. ಸಮುಚ್ಚಯಪಕ್ಷವನ್ನೇ ಆಶ್ರಯಿಸಬೇಕು.

ಭಗವಂತನಲ್ಲಿ ಉತ್ಕ್ರಮಣ ಕ್ರಿಯೆಯ ಸಮರ್ಥನೆ

तात्पर्यचन्द्रिका

युक्तञ्च ब्रह्मण्युत्क्रमणम् ।

जात्यादेः सर्वगस्यापि प्रतिव्यक्तिसमाप्तिवत् ।
सर्वगस्यापीश्वरस्य क्रियाया अपि सम्भवात् ।। १ ।।

यथा सर्वगतान्तरेऽदृष्टाऽपि जातिरूपसर्वगते एकैकत्र समाप्तिः । एकैकव्यक्तिदर्शनेऽपि जातिप्रतीतेः ।

ಅನುವಾದ - ಬ್ರಹ್ಮನಲ್ಲಿ ಉತ್ಕ್ರಮಣವೆಂಬ ಲಿಂಗವು ಯುಕ್ತವೇ ಆಗಿದೆ. 'ಜಾತ್ಯಾದೇಃ ಸರ್ವಗಸ್ಯಾಪಿ ಪ್ರತಿವ್ಯಕ್ತಿಸಮಾಪ್ತಿವತ್ । ಸರ್ವಗಸ್ಯಾಪೀಶ್ವರಸ್ಯ ಕ್ರಿಯಾಯಾ ಅಪಿ ಸಂಭವಾತ್' ಜಾತಿ ಮೊದಲಾದವುಗಳು ಎಲ್ಲೆಡೆ ವ್ಯಾಪ್ತವಾಗಿದ್ದರೂ ಆಯಾ ವ್ಯಕ್ತಿಗಳಲ್ಲಿ ಸಮಾಪ್ತಿಯನ್ನು ಹೊಂದಿವೆ. ಆದರಂತೆ ಈಶ್ವರನು ಸರ್ವಗತನಾಗಿದ್ದರೂ ಅವನಲ್ಲಿ ಕ್ರಿಯೆಯು ಯುಕ್ತವಾಗುತ್ತದೆ.

ಶ್ಲೋಕದ ವ್ಯಾಖ್ಯಾನ ಹೀಗಿದೆ - ಆಕಾಶ ಮೊದಲಾದ ಸರ್ವಗತವಾದ ಪದಾರ್ಥಗಳು ಒಂದೇ ಕಡೆ ಸಂಪೂರ್ಣವಾಗಿ ಇರುತ್ತವೆಂದು ಎಲ್ಲಿಯೂ ಕಂಡಿಲ್ಲ. ಆದರೂ ಸಹ ಎಲ್ಲೆಡೆ ವ್ಯಾಪ್ತವಾದ ಜಾತಿಯು ಆಯಾ ವ್ಯಕ್ತಿಗಳಲ್ಲಿ ಸಮಾಪ್ತವಾಗಿರುವುದು ಕಾಣಿಸುತ್ತಿದೆ. ಏಕೆಂದರೆ ಗೋ, ಘಟ ಮೊದಲಾದ ಒಂದೊಂದೇ ವ್ಯಕ್ತಿಗಳನ್ನು ನೋಡಿದಾಗಲೂ ಅವುಗಳಲ್ಲಿರುವ ಜಾತಿಯು ಪ್ರತೀತವಾಗುತ್ತದೆ.

यथा चासम्भावितमपि सर्वगतेषु गगनादिषु सर्वगतदिगाद्यसम्बद्धत्वमजसंयोगाभावपक्षे । तथा सर्वगतान्तरेऽदृष्टमपि क्रियावत्त्वं ब्रह्मण्यस्तु ।

ದಿಕ್, ಆಕಾಶ ಮೊದಲಾದವುಗಳು ಎಲ್ಲೆಡೆ ವ್ಯಾಪ್ತವಾದ್ದರಿಂದ ಅವುಗಳ ಸಂಯೋಗವೂ ಸಹ ಎಲ್ಲೆಡೆ ಇದ್ದೇ ಇರುತ್ತದೆ. ಪರಸ್ಪರ ವ್ಯಾಪ್ತವಾದ ಎರಡು ಪದಾರ್ಥಗಳು ಸಂಯೋಗವನ್ನು ಹೊಂದದೇ ಇರಲು ಸಾಧ್ಯವಿಲ್ಲ. ಹೀಗೆ ಅಸಂಭಾವಿತವಾಗಿದ್ದರೂ ಸರ್ವಗತವಾದ ಗಗನಾದಿಗಳಲ್ಲಿ ಸರ್ವಗತವಾದ ದಿಕ್ ಮೊದಲಾದವುಗಳ ಸಂಯೋಗವನ್ನು ತಾರ್ಕಿಕರು ಒಪ್ಪಿರುವುದಿಲ್ಲ. ಏಕೆಂದರೆ ನಿತ್ಯವಾದ ಪದಾರ್ಥಗಳಿಗೆ ಸಂಯೋಗವು ಕೂಡುವುದಿಲ್ಲವೆಂಬುದು ಅವರ ಮತ. ಈ ದೃಷ್ಟಾಂತದಂತೆ ಉಳಿದ ಸರ್ವಗತವಾದ ಪದಾರ್ಥಗಳಲ್ಲಿ ಕ್ರಿಯೆಯು ಕಾಣಿಸದಿದ್ದರೂ ಸರ್ವಗತನಾದ ಬ್ರಹ್ಮನಲ್ಲಿ ಉತ್ಕ್ರಮಣವೆಂಬ ಕ್ರಿಯೆಯು ಉಪಪನ್ನವಾಗಬಹುದು.

''तमुत्क्रामन्तं प्राणोऽनूत्क्रामति'' ''स्वाभाविकी ज्ञानबलक्रिया च'' ''ज्ञानं नित्यं क्रिया नित्या बलं शक्तिः परात्मनः'' इत्यादिश्रुतेः ।

ಬ್ರಹ್ಮನಲ್ಲಿ ಉತ್ಕ್ರಮಣ ಕ್ರಿಯೆಯು ಅಸಂಭಾವಿತವೆಂದು ಹೇಳಬಾರದು. ಏಕೆಂದರೆ 'ತಮುತ್ಕ್ರಾಂತಂ ಪ್ರಾಣೋಽನೂತ್ಕ್ರಾಮತಿ' 'ಸ್ವಾಭಾವಿಕೀ ಜ್ಞಾನಬಲಕ್ರಿಯಾ ಚ' 'ಜ್ಞಾನಂ ನಿತ್ಯಂ ಕ್ರಿಯಾ ನಿತ್ಯಾ ಬಲಂ ಶಕ್ತಿಃ ಪರಾತ್ಮನಃ'' ಇವೇ ಮೊದಲಾದ ಶ್ರುತಿಗಳಿಂದ ಭಗವಂತನ ಕ್ರಿಯೆಯು ನಿತ್ಯವಾಗಿರುತ್ತದೆಂದು ತಿಳಿಯುತ್ತವೆ.

क्रियाया औपाधिकत्वं तु ''सर्वत्र प्रसिद्ध'' इत्यत्रोक्तेनाणुत्वस्योपाधिकत्व-निरासकन्यायेन निरसनीयम् ।

ಭಗವಂತನ ಕ್ರಿಯೆಯನ್ನು ಔಪಾಧಿಕವೆಂದು ಹೇಳಬಹುದಲ್ಲವೇ? ಎಂದು ಪ್ರಶ್ನಿಸಬಾರದು. ಇದನ್ನು 'ಸರ್ವತ್ರಪ್ರಸಿದ್ಧೋಪದೇಶಾತ್' ಎಂಬ ಸೂತ್ರದಲ್ಲಿಯೇ ನಿರಾಕರಿಸಲಾಗಿದೆ. ಆ ಅಧಿಕರಣದಲ್ಲಿ ಭಗವಂತನಿಗೆ ಅಣುತ್ವದ ಔಪಾಧಿಕತ್ವವನ್ನು ನಿರಾಸ ಮಾಡಿದೆ. ಆದ್ದರಿಂದಲೇ ಇದೂ ಸಹ ನಿರಾಕೃತವಾಯಿತು.

किञ्च क्रियावत्त्वेऽणुत्वमेव तन्त्रम् । नतु महत्त्वाभावादि । गौरवात् । गुणजात्यादौ क्रियापातात्च ।

ಮತ್ತು ಭಗವಂತನಲ್ಲಿ ಕ್ರಿಯೆಯಿರಲು ಅಣುತ್ವವೆಂಬ ಕಾರಣವಿದೆ. ಕಾರಣವಿದ್ದಾಗ ಕ್ರಿಯೆಯನ್ನು ಒಪ್ಪದಿರಲು ಸಾಧ್ಯವಿಲ್ಲ. ಕ್ರಿಯೆಗೆ ಅಣುತ್ವವೇ ಕಾರಣ ಹೊರತು, ಮಹತ್ತ್ವಾಭಾವವಾಗಲೀ, ಮಹತ್ತ್ವಭಾವದಿಂದ ವಿಶಿಷ್ಟವಾದ ಅಣುತ್ವವಾಗಲೀ ಕಾರಣವಲ್ಲ. ಅವುಗಳನ್ನೇನಾದರೂ ಕಾರಣವೆಂದರೆ ಗೌರವ ದೋಷ ಬರುತ್ತದೆ. ಮತ್ತು ಮಹತ್ತ್ವಾಭಾವವು ಯಾವುದೇ ಪರಿಮಾಣವಿಲ್ಲದ ಗುಣ ಹಾಗೂ ಜಾತಿಗಳಲ್ಲಿಯೂ ಇರುತ್ತದೆ. ಹಾಗಾಗಿ ಗುಣಾದಿಗಳಲ್ಲಿಯೂ ಕ್ರಿಯೆಯು ಬರಬೇಕಾದೀತು.

अत एव न महत्त्वमक्रियत्वे तन्त्रम् । गुणादौ महत्त्वाभावेऽप्यक्रियत्व-दर्शनात् ।

ಆದ್ದರಿಂದರಿಂದಲೇ ಕ್ರಿಯೆಯಿಲ್ಲದಿರಲು ಮಹತ್ತ್ವವು ಪ್ರಯೋಜಕವಲ್ಲ. ಏಕೆಂದರೆ ಗುಣಾದಿಗಳಲ್ಲಿ ಮಹತ್ತ್ವವಿಲ್ಲದಿದ್ದರೂ ಕ್ರಿಯಾಶೂನ್ಯತ್ವವು ಕಾಣಿಸುತ್ತಿದೆ.

भावरूपायां क्रियायां पूर्वं धीस्यायां पूर्वं धीस्यं यदणुत्वरूपं प्रयोजकं तदभावादेवाक्रियत्वोपपत्तौ तत्प्रयोजकान्तरस्यानन्वेषणीयत्वाच्च ।

ಮತ್ತು ಭಾವರೂಪವಾದ ಕ್ರಿಯೆಯು ಮೊದಲು ಬುದ್ಧಿಯಲ್ಲಿರುತ್ತದೆ. ಮೊದಲೇ ಬುದ್ಧಿಯಲ್ಲಿ ಅಣುತ್ವವೆಂಬ ಪ್ರಯೋಜಕವೂ ಸಹ ಇರುತ್ತದೆ. ಇಂತಹ ಅಣುತ್ವವೆಂಬ ಪ್ರಯೋಜಕವಿಲ್ಲದ ಕಾರಣದಿಂದಲೇ ಭಾವರೂಪವಾದ ಕ್ರಿಯೆಯೂ ಇರುವುದಿಲ್ಲವೆಂದು ಹೇಳಲು ಬರುವಾಗ ಕ್ರಿಯಾಶೂನ್ಯತ್ವಕ್ಕೆ ಮತ್ತೊಂದು ಕಾರಣವನ್ನು ಹುಡುಕುವುದು ಅಸಾಧುವಾಗಿದೆ.

यदि च विभुद्रव्ये पूर्वदेशादिरूपफलाभावेन क्रिया न स्यात्तर्हि सुखदुःखेच्छा-संस्कारादिरूपफलाभावेनेश्वरे ज्ञानमपि न स्यात् । ज्ञानं नित्यत्वाल्लोकविलक्षणं चेत्क्रियाऽपि तथाऽस्तु ।

ಇನ್ನು ಭಗವಂತನಲ್ಲಿ ಕ್ರಿಯೆಯನ್ನು ಒಪ್ಪುವುದಕ್ಕೆ ಏನೂ ಪ್ರಯೋಜನವಿಲ್ಲ. ಸರ್ವತ್ರವ್ಯಾಪ್ತನಾದ್ದರಿಂದ ಪೂರ್ವದೇಶಪಭಾಗವಾಗಲೀ, ಉತ್ತರದೇಶಸಂಯೋಗವಾಗಲೀ, ಉಂಟಾಗುವುದಿಲ್ಲ. ಫಲವಿಲ್ಲದ ಕಾರಣ ಕ್ರಿಯೆಯನ್ನೂ ಸಹ ಒಪ್ಪಲು ಬರುವುದಿಲ್ಲವಲ್ಲವೇ? ಎಂದು ಪ್ರಶ್ನಿಸಬೇಕು. ಇದೂ ಸಹ ತಪ್ಪು. ಹಾಗಾದರೆ ಸುಖ, ದುಃಖ, ಇಚ್ಛಾ, ಸಂಸ್ಕಾರ ಮೊದಲಾದ ಯಾವುದೇ ಫಲಗಳಿಲ್ಲದ ಕಾರಣ ಭಗವಂತನಲ್ಲಿ ಜ್ಞಾನವನ್ನೂ ಸಹ ಒಪ್ಪದಿರುವ ಪ್ರಸಂಗ ಬರುತ್ತದೆ. ಭಗವಂತನ ಜ್ಞಾನವು ನಿತ್ಯವಾಗಿರುವುದರಿಂದ ಲೋಕವಿಲಕ್ಷಣವಾಗಿದೆಯೆಂದು ಉತ್ತರಿಸುವುದಾದರೆ ಕ್ರಿಯೆಯೂ ಸಹ ಭಗವಂತನಂತೆಯೇ ನಿತ್ಯವಾಗಿರುವುದರಿಂದ ಫಲವಿಲ್ಲದಿದ್ದರೂ ಅವನಲ್ಲಿ ಉಪಪನ್ನವಾಗುತ್ತದೆಂದು ಒಪ್ಪಬಹುದು.

प्रकाशः –

स्वयं तदाह – युक्तश्चेति ।। आदिपदार्थं वदन् श्लोकं व्याचष्टे – ययेति ।।

ವಿವರಣೆ - ಉತ್ತಮಣಲಿಂಗವು ಶ್ರೀಹರಿಯಲ್ಲಿ ಉಪಪನ್ನವಾಗುತ್ತದೆಂಬ ವಿಚಾರವನ್ನು ಗ್ರಂಥಕಾರರೇ ಸ್ವತಃ ಸಮರ್ಥಿಸುತ್ತಿದ್ದಾರೆ 'ಯುಕ್ತಂ ಚ' ಇತ್ಯಾದಿ ವಾಕ್ಯದಿಂದ. ಶ್ಲೋಕದಲ್ಲಿರುವ ಆದಿಪದದ ಅರ್ಥವನ್ನು ಸ್ವತಃ ಗ್ರಂಥಕಾರರೇ ಸ್ಪಷ್ಟ ಪಡಿಸುತ್ತಾ, ಶ್ಲೋಕವನ್ನು ವ್ಯಾಖ್ಯಾನಿಸುತ್ತಿದ್ದಾರೆ 'ಯಥಾ' ಇತ್ಯಾದಿ ವಾಕ್ಯದಿಂದ.

प्रकाशः – ननु तत्र प्रतीतिबलादन्यतरकर्मादिकारणाभावादिवशात्तथात्वेऽपीह किं मानमित्यत आह – तमिति ।। विष्णुमित्यर्थः ।।

ಒಂದೊಂದೇ ವ್ಯಕ್ತಿಯಲ್ಲಿ ಜಾತಿಯು ಪ್ರತೀತವಾಗುವುದರಿಂದ ಎಲ್ಲೆಡೆ ವ್ಯಾಪ್ತವಾದ ಜಾತಿಯು ಒಂದೊಂದು ಕಡೆಯೂ ಸಮಾಪ್ತವಾಗುತ್ತದೆಂದು ಒಪ್ಪಬೇಕು. ಮತ್ತು ಕಾಲ ಮತ್ತು ಆಕಾಶಗಳಿಗೆ

ಸಂಯೋಗವನ್ನೇಕೆ ಒಪ್ಪುವುದಿಲ್ಲವೆಂದರೆ ಸಂಯೋಗಕ್ಕೆ ಅನ್ಯತರಕರ್ಮವೂ ಕಾರಣ. ಕಾಲ ಅಥವಾ ಆಕಾಶಗಳೆರಡರಲ್ಲಿ ಒಂದಕ್ಕೆ ಕರ್ಮವನ್ನು ಹೇಳಬೇಕಾಗುತ್ತದೆ. ಆದರೆ ವಿಭುವಾದ ಎರಡು ಪದಾರ್ಥಗಳಲ್ಲಿಯೂ ಕರ್ಮವನ್ನು ಒಪ್ಪಲಾಗದ ಕಾರಣ ಕಾಲಾಕಾಶಸಂಯೋಗವನ್ನು ಒಪ್ಪಿರುವುದಿಲ್ಲ. ಆದರೆ ಪ್ರಕೃತ ಸರ್ವತ್ರವ್ಯಾಪ್ತನಾದ ಪರಮಾತ್ಮನಿಗೆ ಉತ್ಕ್ರಮಣವನ್ನು ಒಪ್ಪಲು ಏನು ಪ್ರಮಾಣ? ಎಂಬ ಪ್ರಶ್ನೆಗೆ 'ತಮ್' ಇತ್ಯಾದಿ ವಾಕ್ಯದಿಂದ ಉತ್ತರಿಸುತ್ತಿದ್ದಾರೆ. 'ತಮ್' ಎಂದರೆ ವಿಷ್ಣುವನ್ನು ಎಂದರ್ಥ. ಅಂದರೆ ವಿಷ್ಣುವಿನಲ್ಲಿ ಉತ್ಕ್ರಮಣಲಿಂಗವಿದೆಯೆನ್ನಲು ಅನೇಕ ಪ್ರಮಾಣಗಳಿವೆಯೆಂದರ್ಥ.

ಪ್ರಕಾಶಃ – ಶ್ರುತೇರೌಪಾಧಿಕಕ್ರಿಯಾವಿಷಯತ್ವಮಸ್ತ್ವित्यत आह – क्रियाया इति ।।

ಶ್ರುತಿಯು ಔಪಾಧಿಕವಾದ ಕ್ರಿಯೆಯನ್ನಷ್ಟೇ ಭಗವಂತನಲ್ಲಿ ಹೇಳುತ್ತಿದೆಯೆಂದು ವ್ಯಾಖ್ಯಾನಿಸಬಹುದಲ್ಲವೇ? ಎಂಬ ಪ್ರಶ್ನೆಗೆ 'ಕ್ರಿಯಾಯಾಃ' ಎಂಬ ವಾಕ್ಯದಿಂದ ಉತ್ತರಿಸಿದ್ದಾರೆ. ಸರ್ವಗತತ್ವಾಧಿಕರಣದ ನ್ಯಾಯದಿಂದ ಔಪಾಧಿಕ ಕ್ರಿಯಾವಿಷಯತ್ವವನ್ನು ಅಲ್ಲಗಳೆಯಬೇಕೆಂದು ಇದರಿಂದ ತಿಳಿಯುತ್ತದೆ.

ಪ್ರಕಾಶಃ – यथा सर्षपादेरणीयस्त्वे ततोऽप्यधिकपरिमाणहृदयादेरनुपाधित्वं तथाऽत्यन्ताणुतररूपगतक्रियायामपि न ततोऽपि स्थूलस्योपाधित्वम्, 'उत्क्रान्त-प्राणान्' इत्यादौ क्रियोपाधेरनुक्तेश्च श्रौतोत्क्रमणानुरोधेनेश्वरस्य क्रियावत्त्वं तत्प्रयोजकमणुत्वं च स्वाभाविकम् ।

ಸರ್ಷಪಾದಿಗಳಿಗಿಂತಲೂ ಸಣ್ಣ ಪರಿಮಾಣವನ್ನು ಭಗವಂತನಿಗೆ ಹೇಳುವುದಾದರೆ ಅಂತಹ ಭಗವಂತನಿಗಿಂತ ಅಧಿಕ ಪರಿಮಾಣವುಳ್ಳ ಹೃದಯವು ಹೇಗೆ ಉಪಾಧಿಯಾಗುವುದಿಲ್ಲವೋ, ಆದರಂತೆ ಅತ್ಯಂತ ಅಣುತರವಾದ ರೂಪದಲ್ಲಿರುವ ಭಗವಂತನ ಕ್ರಿಯೆಗೂ ಸಹ ಅದಕ್ಕಿಂತ ಅಧಿಕ ಪರಿಮಾಣವುಳ್ಳ ಹೃದಯಾದಿಗಳು ಉಪಾಧಿಯಾಗುವುದಿಲ್ಲ. ಆದ್ದರಿಂದ ಭಗವಂತನ ಕ್ರಿಯೆಗೆ ಔಪಾಧಿಕತ್ವವನ್ನು ಹೇಳಲು ಬರುವುದಿಲ್ಲ. ಮತ್ತು 'ಉತ್ಕ್ರಾಂತಪ್ರಾಣಾನ್' ಇತ್ಯಾದಿಗಳಲ್ಲಿ ಭಗವಂತನ ಕ್ರಿಯೆಗೆ ಯಾವುದೇ ಉಪಾಧಿಯನ್ನು ಹೇಳಿಲ್ಲ. ಹಾಗಾಗಿ ಶ್ರುತಿಯಲ್ಲಿ ಹೇಳಲ್ಪಟ್ಟ ಉತ್ಕ್ರಮಣಲಿಂಗಕ್ಕೆ ಅನುಸಾರಿಯಾಗಿ ಈಶ್ವರನ ಕ್ರಿಯೆಯು ಮತ್ತು ಕ್ರಿಯೆಗೆ ಪ್ರಯೋಜಕವಾದ ಅಣುತ್ವವು ಎರಡೂ ಸಹ ಸ್ವಾಭಾವಿಕವೆಂದೇ ಹೇಳಬೇಕು.

ಪ್ರಕಾಶಃ – अक्रियत्वं तत्प्रयोजकमहत्त्वं त्वौपाधिकमित्यपि सुवचम् । अतिमहापरिमाणादेः कथं ततो न्यूनपरिमाणोपाधिकृतत्वमिति चेत्सर्षपादितोऽप्यणु-परिमाणादेः कथं ततोऽधिकपरिमाणहृदयाद्युपाधिहेतुकत्वमिति सममित्यादिरूपेण निरसनीयमित्यर्थः । अत एव ''स्वाभाविकी'' इति श्रुत्युक्तिः ।

ಅಷ್ಟೇ ಅಲ್ಲದೇ ಅಕ್ರಿಯತ್ವ ಹಾಗೂ ಅದಕ್ಕೆ ಪ್ರಯೋಜಕವಾದ ಮಹತ್ವ ಇವೆರಡು ಔಪಾಧಿಕವಾಗುತ್ತವೆಂದು ಹೇಳುವುದು ಬಹಳ ಸುಲಭ. ಭಗವಂತನು ಅತಿಮಹಾ ಪರಿಮಾಣವುಳ್ಳವನಾದ್ದರಿಂದ ಅವನಿಗೆ ಅವನಿಗಿಂತ ನ್ಯೂನಪರಿಮಾಣವುಳ್ಳದ್ದು ಹೇಗೆ ಉಪಾಧಿಯಾಗುತ್ತದೆ, ಎಂದರೆ ಸರ್ಷಪಾದಿಗಳಿಗಿಂತಲೂ ಅತ್ಯಂತ ಅಣುವಾದ ಭಗವಂತನಿಗೆ ಸರ್ಷಪಕ್ಕಿಂತ ಅಧಿಕಪರಿಮಾಣವುಳ್ಳ

ಹೃದಯಾದಿಗಳು ಉಪಾಧಿಯಾಗುತ್ತವೆಂದು ಪೂರ್ವಪಕ್ಷಕಾರರು ಹೇಗೆ ಹೇಳಿದರೋ ಅದರಂತೆ ನಾವೂ ಸಹ ಪ್ರತಿಬಂಧಿಯಾಗಿ ಉತ್ತರಿಸುತ್ತೇವೆ. ಈ ಕ್ರಮದಲ್ಲಿ ಪೂರ್ವಪಕ್ಷವನ್ನು ನಿರಾಕರಿಸಬೇಕು. ಆದ್ದರಿಂದಲೇ ಶ್ರುತಿಯಲ್ಲಿ 'ಸ್ವಾಭಾವಿಕೀ' ಭಗವಂತನ ಕ್ರಿಯೆಯು ಸ್ವಾಭಾವಿಕವಾಗಿದೆಯೆಂದು ಹೇಳಿರುತ್ತಾರೆ.

ಪ್ರಕಾಶಃ – ನನು ನ ಹರೌ ಕ್ರಿಯಾವತ್ತ್ವಂ ಯುಕ್ತಮ್ । ಪ್ರಯೋಜಕಧರ್ಮಾಭಾವಾತ್ । ಅನ್ಯಥೋತ್ಕ್ರಮಣಾದಿನಾ ಜೀವಾಣುತ್ವಾದಿಸಿದ್ಧಿರ್ನ ಸ್ಯಾತ್ । ವ್ಯಾಪ್ತೇ ಹರೌ ಪೂರ್ವದೇಶವಿಭಾಗಾದಿ-ಫಲಾಭಾವಾಚ್ಚ । ಅತಸ್ತನ್ನಿವೃತ್ತೌ ಕ್ರಿಯಾಯಾ ಅಪಿ ನಿವೃತ್ತಿಃ । ಶ್ರುತ್ಯಾದಿ ತು ಗೌಣಂ ವ್ಯಾಖ್ಯೇಯಮಿತ್ಯತಃ ಪ್ರಯೋಜಕಂ ತಾವದಾಹ – ಕಿಞ್ಚೇತಿ ।।

ಆಕ್ಷೇಪ - ಶ್ರೀಹರಿಯಲ್ಲಿ ಕ್ರಿಯೆಯನ್ನು ಒಪ್ಪುವ ಅವಶ್ಯಕತೆ ಇಲ್ಲ. ಏಕೆಂದರೆ ಕ್ರಿಯೆಯನ್ನು ಒಪ್ಪಲು ಬೇಕಾಗಿರುವ ಯಾವುದೇ ಧರ್ಮಗಳು ಆವನಲ್ಲಿರುವುದಿಲ್ಲ. ಹಾಗೇ ಪ್ರಯೋಜಕ ಧರ್ಮಗಳಿಲ್ಲದಿದ್ದರೂ ಕ್ರಿಯೆಯನ್ನು ಒಪ್ಪುವುದಾದರೆ ಉತ್ಕ್ರಮಣಾದಿಕ್ರಿಯೆಯಿಂದ ಜೀವನಲ್ಲಿ ಅಣುತ್ವವನ್ನು ಸಾಧಿಸುವುದೂ ಸಹ ತಪ್ಪಾಗಬೇಕಾದೀತು. ಮತ್ತು ಶ್ರೀಹರಿಯು ಎಲ್ಲೆಡೆ ವ್ಯಾಪ್ತನಾಗಿದ್ದಾನೆ. ಕ್ರಿಯೆಯನ್ನು ಒಪ್ಪುವುದರಿಂದ ಪೂರ್ವದೇಶ ವಿಭಾಗ, ಉತ್ತರದೇಶಸಂಯೋಗ, ಇದೇ ಮೊದಲಾದ ಫಲಗಳನ್ನು ಹೇಳಬೇಕಾಗುತ್ತದೆ. ಎಲ್ಲೆಡೆ ವ್ಯಾಪಿಸಿರುವ ಪರಮಾತ್ಮನಲ್ಲಿ ಇಂತಹ ಫಲವನ್ನು ಹೇಳುವುದು ಅಸಂಭಾವಿತ. ಫಲವಿಲ್ಲದ ಮೇಲೆ ಕ್ರಿಯೆಯೂ ಸಹ ಇಲ್ಲವೆಂದೇ ತಿಳಿಯುತ್ತದೆ. ಶ್ರುತಿಯಲ್ಲಿ ಭಗವಂತನಿಗೆ ಕ್ರಿಯೆಯನ್ನು ಹೇಳಿದ್ದರೂ ಸಹ ಅದನ್ನು ಗೌಣವನ್ನಾಗಿ ವ್ಯಾಖ್ಯಾನಿಸಬೇಕಾಗುತ್ತದೆ. ಆದ್ದರಿಂದ ಭಗವಂತನಿಗೆ ಕ್ರಿಯೆಯನ್ನು ಒಪ್ಪುವುದು ತಪ್ಪಲ್ಲವೇ?

ಸಮಾಧಾನ - ಇದು ತಪ್ಪು. ಭಗವಂತನಲ್ಲಿ ಕ್ರಿಯೆಯನ್ನು ಒಪ್ಪಲು ಪ್ರಯೋಜಕ ಧರ್ಮವಿದೆ ಎಂದರೆ ಕ್ರಿಯಾವತ್ತ್ವಕ್ಕೆ ಪ್ರಯೋಜಕವಾದ ಅಣುತ್ವರೂಪವಾದಧರ್ಮವು ಭಗವಂತನಲ್ಲಿದೆಯೆಂದು ತಿಳಿಯಬೇಕು. ಇದನ್ನು 'ಕಿಂಚ' ಇತ್ಯಾದಿ ಗ್ರಂಥದಿಂದ ಸಮರ್ಥಿಸುತ್ತಿದ್ದಾರೆ.

ಪ್ರಕಾಶಃ – ಆದಿಪದೇನ ಮಹತ್ತ್ವಾಭಾವವಿಶಿಷ್ಟಮಣುತ್ವಂ ಗೃಹ್ಯತೇ । ಮಹತ್ತ್ವಾಭಾವಸ್ಯ ತನ್ತ್ರತ್ವೇ ದೋಷಾನ್ತರಮಾಹ – ಗುಣೇತಿ ।। ಪರೀತ್ಯೈತತ್ । ''ಗುಣಾದ್ವಾ ಲೋಕವತ್'' ಇತ್ಯತ್ರ ಗುಣೇऽಪಿ ಕ್ರಿಯಾವತ್ತ್ವೋಕ್ತೇಃ ।

ಆದಿಪದದಿಂದ ಮಹತ್ತ್ವಾಭಾವವಿಶಿಷ್ಟವಾದ ಅಣುತ್ವವನ್ನು ವಿವಕ್ಷಿಸಬೇಕು. ಮಹತ್ತ್ವಾಭಾವವನ್ನೇ ಕ್ರಿಯೆಗೆ ಪ್ರಯೋಜಕವೆಂದು ಹೇಳಿದರೆ ಮತ್ತೊಂದು ದೋಷವನ್ನು 'ಗುಣ' ಇತ್ಯಾದಿ ವಾಕ್ಯದಿಂದ ಹೇಳುತ್ತಿದ್ದಾರೆ. ತಾರ್ಕಿಕಮತದ ಪ್ರಕಾರ ಈ ದೋಷವನ್ನು ಹೇಳಿದ್ದಾರೆ. ಏಕೆಂದರೆ ಸಿದ್ಧಾಂತದ ಪ್ರಕಾರ 'ಗುಣಾದ್ವಾ ಲೋಕವತ್' ಎಂಬ ಸೂತ್ರದಲ್ಲಿ ಗುಣಕ್ಕೂ ಸಹ ಕ್ರಿಯೆ ಇರುತ್ತದೆಂದು ಸಮರ್ಥಿಸಲಾಗಿದೆ.

ಪ್ರಕಾಶಃ – ಪ್ರಾಗುಕ್ತಪ್ರತಿಬನ್ದೀಂ ನಿರಾಹ – ಅತ ಏವೇತಿ ।। ಏತಮೇವ ಹೇತುಂ ವ್ಯನಕ್ತಿ – ಗುಣಾದಾವಿತಿ ।। ಕಿಂ ತರ್ಹಿಕ್ರಿಯತ್ವೇ ತನ್ತ್ರಂ ಯದಭಾವಾದ್ಧರಾವಕ್ರಿಯತ್ವಂ ವಾರ್ಯತ ಇತ್ಯತಸ್ಸಯುಕ್ತಿಕಂ ತದಾಹ – ಭಾವೇತಿ ।।

ಹಿಂದೆ ಹೇಳಿದ ಪ್ರತಿಬಂಧಿಯನ್ನು ನಿರಾಕರಿಸುತ್ತಿದ್ದಾರೆ 'ಅತ ಏವ' ಇತ್ಯಾದಿ ವಾಕ್ಯದಿಂದ. 'ಅತ ಏವ' ಇತ್ಯಾದಿ ವಾಕ್ಯದಿಂದ ಹೇಳಲ್ಪಟ್ಟ ಹೇತುವನ್ನೇ ನಿರಾಕರಿಸುತ್ತಿದ್ದಾರೆ - 'ಗುಣಾದೌ' ಇತ್ಯಾದಿ ವಾಕ್ಯದಿಂದ. ಹಾಗಾದರೆ ಕ್ರಿಯೆಯಿಲ್ಲದಿರಲು ಯಾವುದು ಪ್ರಯೋಜಕ? ಯಾವುದರ ಅಭಾವದಿಂದ ಕ್ರಿಯೆಯಿಲ್ಲವೆಂಬುದನ್ನು ಆಲ್ಲಗಳೆಯಲು ಸಾಧ್ಯ ? ಎಂಬ ಪ್ರಶ್ನೆಗೆ ಯುಕ್ತಿಬದ್ಧವಾಗಿ 'ಭಾವ' ಇತ್ಯಾದಿ ವಾಕ್ಯದಿಂದ ವಿವರಿಸುತ್ತಿದ್ದಾರೆ.

प्रकाशः – यदपि फलाभावादक्रियत्वमिति तदप्रयोजकमित्याह – यदि चेति ।। तथाऽस्त्विति ।। अनित्यक्रियाया विभागादिफलजनकत्वेऽपीश्वरक्रियाया नित्यत्वेन लोकक्रियाविलक्षणत्वात्तादृशफलाभावेऽपि क्रियावत्त्वं सम्भवतीत्यर्थः ।

ಇನ್ನು ಫಲವಿಲ್ಲದ ಕಾರಣ ಭಗವಂತನಿಗೆ ಕ್ರಿಯೆಯನ್ನು ಒಪ್ಪಬೇಕಾಗಿಲ್ಲ ಎಂದು ಆಕ್ಷೇಪಿಸಿದ್ದರು. ಈ ಕಾರಣವು ಅಪ್ರಯೋಜಕವಾಗಿದೆಯೆಂದು 'ಯದಿ ಚ' ಇತ್ಯಾದಿ ವಾಕ್ಯದಿಂದ ಹೇಳುತ್ತಿದ್ದಾರೆ. 'ತಥಾऽಸ್ತು' ಎಂಬುದರ ಅಭಿಪ್ರಾಯ ಹೀಗಿದೆ - ಲೋಕದಲ್ಲಿ ಅನಿತ್ಯಕ್ರಿಯೆಗೆ ವಿಭಾಗ, ಸಂಯೋಗ ಮೊದಲಾದ ಫಲಗಳಿರುವುದು ಕಂಡಿದೆ. ಆದರೆ ಈಶ್ವರನ ಕ್ರಿಯೆಯು ನಿತ್ಯವಾದ್ದರಿಂದ ಲೋಕಕ್ರಿಯೆಗಿಂತ ವಿಲಕ್ಷಣವಾಗಿದೆ. ಹಾಗಾಗಿ ಅಂತಹ ಸಂಯೋಗಾದಿ ಫಲಗಳಿಲ್ಲದಿದ್ದರೂ ಕ್ರಿಯೆಯನ್ನು ಒಪ್ಪಬಹುದೆಂದು ತಿಳಿಯಬೇಕು.

गुरुराजीयम् – यदुक्तमुत्क्रान्तप्राणानिति प्राणोत्क्रमणश्रवणात्तस्य च पूर्णे ब्रह्मण्ययोगाच्च न प्राणस्य विष्णुत्वमिति तन्निराकरोति – युक्तश्चेति ।। प्रसङ्गात्क्रियाया अनित्यत्वं पराचष्टे – क्रियाया इति ।। न्यायेनेति ।। उपाध्यनुक्तिन्यायेनेत्यर्थः । यदि च विभुद्रव्य इति ।। यावत्कर्मसत्त्वं संयोग-विभागोत्पादिनियमात्कार्याभावेन कारणाभावानुमानादित्यर्थः । पूर्वदेशाद्विभागादीत्यत्रादिशब्देनोत्तरदेशसंयोगोत्पत्तिसङ्ग्रहः ।

ಸಾರ

ಉತ್ಕ್ರಮಣವೆಂಬ ಕ್ರಿಯೆಯು ವ್ಯಾಪ್ತನಾದ ಭಗವಂತನಲ್ಲಿ ಹೇಗೆ ಕೂಡುತ್ತದೆ? ಎಂಬ ಗೊಂದಲವು ಬೇಡ. ಎಲ್ಲೆಡೆ ವ್ಯಾಪ್ತವಾದ ಜಾತಿಯು ಮಡಿಕೆ ಮೊದಲಾದವುಗಳಲ್ಲಿ ಇರುತ್ತದೆಂದು ಒಪ್ಪಿದ್ದಾರೆ. ಮತ್ತು ಆಕಾಶ, ದಿಕ್ ಇವರಡೂ ವ್ಯಾಪ್ತವಾಗಿರುವುದರಿಂದ ಪರಸ್ಪರ ಸಂಯೋಗವಿದ್ದರೂ ತಾರ್ಕಿಕರು ನಿತ್ಯದ್ರವ್ಯಗಳಿಗೆ ಸಂಯೋಗವನ್ನು ಒಪ್ಪರುವುದಿಲ್ಲ. ಅದರಂತೆ ಎಲ್ಲೆಡೆ ಭಗವಂತನು ವ್ಯಾಪ್ತನಾಗಿದ್ದರೂ ಕ್ರಿಯೆಯನ್ನು ಒಪ್ಪಲು ಅಡ್ಡಿಯಿಲ್ಲ.

'ಸ್ವಾಭಾವಿಕೀ ಜ್ಞಾನಬಲಕ್ರಿಯಾ ಚ' ಇವೇ ಮೊದಲಾದ ಪ್ರಮಾಣಗಳ ಆಧಾರದಿಂದ ಭಗವಂತನಲ್ಲಿರುವ ಕ್ರಿಯೆ ಮೊದಲಾದವು ಸ್ವಾಭಾವಿಕವಾಗಿರುತ್ತವೆ ಎಂದು ತಿಳಿದು ಬರುತ್ತಿದೆ. ಮತ್ತು ಭಗವಂತನಲ್ಲಿ ಇಂತಹ ಕ್ರಿಯೆಯಿರಲು ಅಣುತ್ವವೆಂಬ ಧರ್ಮವಿದೆ. ಅಣುವಾದ ಪದಾರ್ಥಗಳಲ್ಲಿ ಕ್ರಿಯೆಯಿರುವುದು ಲೋಕದಲ್ಲಿ

ಕಾಣುತ್ತೇವೆ. ಭಗವಂತನಿಗೆ ಅಣುರೂಪವೂ ಇರುವುದರಿಂದ ಕ್ರಿಯೆಯನ್ನು ಹೇಳಲು ಏನೂ ತೊಂದರೆಯಿಲ್ಲ. ಮತ್ತು ಇವನಲ್ಲಿರುವ ಕ್ರಿಯೆಯು ಲೋಕವಿಲಕ್ಷಣವಾಗಿರುವುದರಿಂದ ಉತ್ತರದೇಶಸಂಯೋಗ, ಪೂರ್ವದೇಶವಿಭಾಗ ಮೊದಲಾದ ಪ್ರಯೋಜನಗಳಿಲ್ಲದಿದ್ದರೂ ಸ್ವಾಭಾವಿಕವಾಗಿ ಇರುತ್ತದೆಂದು ಒಪ್ಪಬೇಕು.

ಆದ್ದರಿಂದ ಉತ್ಕ್ರಮಣವೆಂಬ ಪೂರ್ವಪಕ್ಷಲಿಂಗವು ವಿಷ್ಣುವಿನಲ್ಲಿ ಸಾವಕಾಶವಾಯಿತು. ಈ ಲಿಂಗದಿಂದ ಮುಖ್ಯಪ್ರಾಣನೇ ಭೂಮನಾಗಿದ್ದಾನೆಂದು ಸಾಧಿಸಲು ಬರುವುದಿಲ್ಲ.

• • • • •

ಭಗವತ್ ಕ್ರಿಯೆಯು ಶಕ್ತಿ, ವ್ಯಕ್ತಿ ಎಂದು ಎರಡು ವಿಧ

ತಾತ್ಪರ್ಯಚಂದ್ರಿಕಾ

ಯದ್ವಾ ಪೂರ್ವದೇಶಸಂಯೋಗಾನಭಿವ್ಯಕ್ತಿರುತ್ತರದೇಶಸಂಯೋಗಾಭಿವ್ಯಕ್ತಿಶ್ಚ ಕ್ರಿಯಾಭಿವ್ಯಕ್ತಿ-ಫಲಮಸ್ತು ।

ಅನುವಾದ - ಅಥವಾ ಭಗವತ್ಕ್ರಿಯೆಗೂ ಸಹ ಫಲವಿದೆ. ಯಾವಾಗ ಭಗವಂತನಲ್ಲಿ ಕ್ರಿಯೆಯು ಉಂಟಾಗುತ್ತದೋ ಆವಾಗ ಪೂರ್ವದೇಶ ಸಂಯೋಗವು ಅಭಿವ್ಯಕ್ತವಾಗುವುದಿಲ್ಲ. ಉತ್ತರದೇಶ ಸಂಯೋಗವಷ್ಟೇ ಅಭಿವ್ಯಕ್ತವಾಗುತ್ತದೆ. ಎಲ್ಲೆಡೆ ಭಗವಂತನ ಸಂಯೋಗವೇ ಇದ್ದರೂ ಸಹ ಕೆಲವೆಡೆ ಅಭಿವ್ಯಕ್ತವಾಗಿ ಇನ್ನೂ ಕೆಲವೆಡೆ ಅಭಿವ್ಯಕ್ತವಾಗದೇ ಇರಬಹುದಾದ್ದರಿಂದ ಕ್ರಿಯಾಭಿವ್ಯಕ್ತಿಯೇ ಫಲವೆಂದು ಹೇಳಬಹುದು. ಆದ್ದರಿಂದ ಫಲವಿಲ್ಲದ ಕಾರಣ ಕ್ರಿಯೆಯೇ ಇಲ್ಲವೆಂದು ಹೇಳಲಾಗದು.

ಅಥವಾ ಅಣುತ್ವಮಹತ್ತ್ವಯೋಃ ಸದಾ ಸತ್ತ್ವೇऽಪಿ ಯದಾ ಮಹತ್ತ್ವಸ್ಯ ವ್ಯಕ್ತ್ಯಾತ್ಮಕತಾऽಣುತ್ವಸ್ಯ ತು ಶಕ್ತ್ಯಾತ್ಮಕತಾ ತದಾ ಕ್ರಿಯಾಯಾ ಅಪಿ ಶಕ್ತ್ಯಾತ್ಮನೈವಾವಸ್ಥಾನಾದ್ಬ್ರಹ್ಮಣಃ ಸ್ವತಸ್ಸಿದ್ಧಃ ಸರ್ವೈಃ ಸಹ ಸಂಯೋಗ ಏವ । ನ ಕಸ್ಮಾದಪಿ ವಿಭಾಗಃ ।

ಅಥವಾ ಭಗವಂತನಲ್ಲಿ ಅಣುತ್ವ ಹಾಗೂ ಮಹತ್ತ್ವಗಳೂ ಯಾವಾಗಲೂ ಇರುತ್ತದೆ. ಆದರೂ ಸಹ ಯಾವಾಗ ಮಹತ್ತ್ವವು ವ್ಯಕ್ತ್ಯಾತ್ಮಕವಾಗಿ ಇರುತ್ತದೋ ಆವಾಗ ಅಣುತ್ವವು ಶಕ್ತ್ಯಾತ್ಮಕವಾಗಿ ಇರುತ್ತದೆ. ಆದೇ ಸಂದರ್ಭದಲ್ಲಿ ಕ್ರಿಯೆಯೂ ಸಹ ಶಕ್ತಿಸ್ವರೂಪದಿಂದಲೇ ಇರುತ್ತದೆ. ಆದ್ದರಿಂದ ಬ್ರಹ್ಮನಿಗೆ ಸ್ವಾಭಾವಿಕವಾಗಿ ಸಕಲಪದಾರ್ಥಗಳಿಂದ ಸಂಯೋಗವೇ ಇರುತ್ತದೆ; ಹೊರತು ಯಾವ ಪದಾರ್ಥದಿಂದಲೂ ವಿಭಾಗವು ಇರುವುದಿಲ್ಲ.

ಯದಾ ತು ಮಹತ್ತ್ವಸ್ಯ ಶಕ್ತ್ಯಾತ್ಮಕತಾऽಣುತ್ವಸ್ಯ ವ್ಯಕ್ತ್ಯಾತ್ಮಕತಾ ತದಾ ಕ್ರಿಯಾಯಾ ಅಪಿ ವ್ಯಕ್ತ್ಯಾತ್ಮಕತ್ವಾತ್ಪೂರ್ವದೇಶವಿಭಾಗಾದಿಕಮಸ್ತು ।

ಪರಿಪೂರ್ಣಚಂದ್ರಿಕಾ

ಯಾವಾಗ ಮಹತ್ತ್ವವು ಶಕ್ಯಾತ್ಮನಾ ಇದ್ದು ಅಣುತ್ವವು ವ್ಯಕ್ಯಾತ್ಮನಾ ಇರುತ್ತದೋ, ಆವಾಗ ಕ್ರಿಯೆಯೂ ಸಹ ಅಭಿವ್ಯಕ್ತಿಸ್ವರೂಪದಿಂದಲೇ ಇರುತ್ತದೆ. ಆದ್ದರಿಂದಲೇ ಪೂರ್ವದೇಶ ವಿಭಾಗ, ಉತ್ತರದೇಶ ಸಂಯೋಗಾದಿಗಳೂ ಸಹ ಉಂಟಾಗುತ್ತದೆ.

एकस्मिन् रूपेऽणुत्वव्यक्तावपि रूपान्तरे महत्त्वव्यक्तिरविरुद्धा । रूपाणामभेदेऽपि सविशेषत्वात् । अचिन्त्यशक्तित्वाच्चेशस्येति दिक् ।

ಭಗವಂತನಿಗೆ ಅನೇಕ ರೂಪಗಳಿರುವುದರಿಂದ ಒಂದು ರೂಪದಲ್ಲಿ ಅಣುತ್ವವು ವ್ಯಕ್ತವಾಗಿದ್ದರೂ ಮತ್ತೊಂದು ರೂಪದಲ್ಲಿ ಮಹತ್ತ್ವವು ವ್ಯಕ್ತವಾಗಿರುತ್ತದೆ. ಹೀಗೊಪ್ಪುವುದು ವಿರುದ್ಧವಲ್ಲ. ಭಗವಂತನ ಪ್ರತಿಯೊಂದು ರೂಪಗಳಿಗೆ ಅಭೇದವಿದ್ದರೂ ಸಹ ವಿಶೇಷದ ಬಲದಿಂದ ಈ ಒಂದು ವ್ಯತ್ಯಾಸವನ್ನು ಹೇಳಬಹುದು. ಅಥವಾ ಅಚಿಂತ್ಯಾದ್ಭುತಶಕ್ತಿಯನ್ನು ಹೊಂದಿರುವ ಭಗವಂತನಲ್ಲಿ ಇಂತಹ ಕಲ್ಪನಾತೀತವಾದ ಗುಣಗಳು ಇರಬಹುದು. ಈ ಎಲ್ಲ ವಿಚಾರವು ಕೇವಲ ದಿಕ್‌ಪ್ರದರ್ಶನ. ಇನ್ನೂ ಹೆಚ್ಚಿನ ವಿಚಾರವನ್ನು ಶಿಷ್ಯಂದಿರೇ ಊಹಿಸಿಕೊಳ್ಳಬೇಕು.

जीवस्याणुत्वे तु सर्वथा पूर्वदेशविभागादिहेतुभूता क्रिया हेतुः न क्रियामात्रमिति वक्ष्यते ।

ಇನ್ನು 'ಉತ್ಕ್ರಾಂತಿಗತ್ಯಾಗತೀನಾಮ್' ಎಂಬ ಸೂತ್ರದಲ್ಲಿ ಜೀವನನ್ನು ಅಣುಸ್ವರೂಪವೆಂದು ಸಾಧಿಸುತ್ತೇವೆ. ಆದಕ್ಕೆ ಕಾರಣವೇನೆಂದರೆ ಸರ್ವಥಾ ಪೂರ್ವದೇಶವಿಭಾಗಾದಿಗಳಿಗೆ ಕಾರಣವಾಗಿರುವಂತಹ ಕ್ರಿಯೆಯೇ; ಹೊರತು ಕೇವಲ ಕ್ರಿಯೆಯನ್ನು ಕಾರಣವೆಂದು ಹೇಳುವುದಿಲ್ಲ. ಕ್ರಿಯೆಯನ್ನು ಮಾತ್ರ ಕಾರಣವೆಂದು ಹೇಳಿದ್ದಲ್ಲಿ, ನಿಮ್ಮ ಆಕ್ಷೇಪವು ಸಮಂಜಸವಾಗುತ್ತಿತ್ತು.

अत्र सूत्रे 'सम्यक्प्रसीदति अनेन' इति व्युत्पत्त्या सम्प्रसादः पूर्णसुखम् । सुखे प्रसादशब्दस्तु ईश्वरस्य सुखं चेद्दुःखमपि स्यादिति न शङ्क्यम् । पूर्णानन्दकार्येण सम्यक्प्रसादेन दुःखाभावनिश्चयात् ।

'ಭೂಮಾ ಸಂಪ್ರಸಾದಾದಧ್ಯುಪದೇಶಾತ್' ಎಂಬ ಸೂತ್ರದಲ್ಲಿ 'ಸಂಪ್ರಸಾದಾತ್' ಎಂಬ ಹೇತುವನ್ನು ಹೇಳಿದ್ದಾರೆ .'ಸಮ್ಯಕ್‌ಪ್ರಸೀದತಿ ಅನೇನ' ಎಂಬ ವ್ಯುತ್ಪತ್ತಿಯಿಂದ 'ಸಂಪ್ರಸಾದ' ಶಬ್ದಕ್ಕೆ 'ಪೂರ್ಣಸುಖ' ಎಂದರ್ಥ. 'ಸುಖ' ಎಂಬರ್ಥದಲ್ಲಿ 'ಪ್ರಸಾದ' ಶಬ್ದವನ್ನು ಪ್ರಯೋಗಿಸುವುದಕ್ಕೆ ಕಾರಣ ಹೀಗಿದೆ. ಈಶ್ವರನಿಗೆ ಸುಖವು ಉಂಟಾಗುವುದಾದರೆ ದುಃಖವೂ ಉಂಟಾಗಲಿ ಎಂದು ಶಂಕಿಸಬಾರದು. ಏಕೆಂದರೆ ಅವನು ಪೂರ್ಣಾನಂದಸ್ವರೂಪನಾದ್ದರಿಂದ ಪೂರ್ಣಾನಂದದ ಕಾರ್ಯವಾದ ಸಮ್ಯಕ್‌ಪ್ರಸಾದದಿಂದ ದುಃಖವು ಸ್ವಲ್ಪವೂ ಸಹ ಅವನಲ್ಲಿ ಬರುವುದಿಲ್ಲವೆಂದು ನಿಶ್ಚಯಿಸುತ್ತೇವೆ.

ज्ञानवत्सुखस्यापि दुःखाविनाभावाभावाच्चेति दर्शयितुं प्रयुक्तः ।

ಮತ್ತು ಜ್ಞಾನವು ದುಃಖದ ಜೊತೆಗೆ ಅವಿನಾಭೂತವಾಗಿ ಹೇಗೆ ಇರುವುದಿಲ್ಲವೋ, ಆದರಂತೆ ಸುಖವೂ ಸಹ ದುಃಖದ ಜೊತೆಗೆ ಅವಿನಾಭೂತವಾಗಿವಿರುವುದಿಲ್ಲವೆಂಬುದನ್ನು ತೋರಿಸಲು ಸಂಪ್ರಸಾದ ಶಬ್ದವನ್ನೇ ಪ್ರಯೋಗಿಸಿದ್ದಾರೆ. ಇಲ್ಲದಿದ್ದರೆ ಪೂರ್ಣಸುಖಸ್ವರೂಪನಾದ್ದರಿಂದ ಎಂದೇ ಪ್ರಯೋಗಿಸುತ್ತಿದ್ದರು. ಹೀಗೆ ದುಃಖವು ಇರುವುದಿಲ್ಲವೆಂದು ತಿಳಿಸುವುದಕ್ಕಾಗಿ ಮತ್ತು ಸುಖವು ದುಃಖದ ಜೊತೆಗೆ ಅವಿನಾಭೂತವಾಗಿಲ್ಲವೆಂದು ತಿಳಿಸುವ ಎರಡು ಉದ್ದೇಶಗಳಿಂದ ಸೂತ್ರದಲ್ಲಿ ಸಂಪ್ರಸಾದ ಶಬ್ದವನ್ನೇ ಬಳಸಿದ್ದಾರೆ.

अत्र विषयवाक्यक्रमात्सूत्रक्रमः ।

'ಯೋ ವೈ ಭೂಮಾ ತತ್ಸುಖಮ್' ಎಂಬ ವಾಕ್ಯವು 'प्रथमसूत्रद ವಿಷಯವಾಕ್ಯ. 'स एव अधस्तात्' ಎಂಬ ಮುಂದಿನ ವಾಕ್ಯವು ಎರಡನೆಯ ಸೂತ್ರದ ವಿಷಯವಾಕ್ಯ. ವಿಷಯವಾಕ್ಯಕ್ಕೆ ಅನುಸಾರಿಯಾಗಿ ಸೂತ್ರಕ್ರಮವಿದೆ.

ಪ್ರಕಾಶಃ —

ननु 'उत्क्रान्तप्राणान्' इति भूतकालनिर्देशान्न क्रियाया नित्यत्वमिति चेत्तर्हि तदैक्षतेति निर्देशाज्ज्ञाननित्यत्वाभावोऽपि स्यात् । यदि वेदस्यानादिनित्यत्वादद्य इव श्वःप्रभृतिष्वप्यनन्तकालेष्वेवमेवोक्त्या ज्ञानस्यानाद्यनन्तकालतासिद्ध्या वा

ವಿವರಣೆ - ಆಕ್ಷೇಪ - ಭಗವಂತನ ಕ್ರಿಯೆಯು ನಿತ್ಯವಾಗಿದೆಯೆಂದು ಹೇಳಿದಿರಿ. ಆದರೆ 'ಉತ್ಕ್ರಾಂತಪ್ರಾಣಾನ್' ಎಂಬ ಶ್ರುತಿಯಲ್ಲಿ ಭೂತಕಾಲವನ್ನು ಹೇಳುವ 'ಕ್ತ' ಪ್ರತ್ಯಯವು 'ಉತ್ಕ್ರಾಂತ' ಎಂಬ ಶಬ್ದದಲ್ಲಿರುತ್ತದೆ. ಆದ್ದರಿಂದ ಉತ್ಕ್ರಮಣವೆಂಬ ಕ್ರಿಯೆಯು ಭೂತಕಾಲದಲ್ಲಿ ಮಾತ್ರ ಇತ್ತು ಎಂದು ಇದರಿಂದ ತಿಳಿಯುತ್ತದೆ. ಹೀಗಿರುವಾಗ ನಿತ್ಯವಾಗಿರುತ್ತದೆಂದು ಹೇಗೆ ಹೇಳುತ್ತೀರಿ?

ಸಮಾಧಾನ - ಇದು ತಪ್ಪು. ಹಾಗಾದರೆ 'तदैक्षत' ಎಂಬಲ್ಲಿಯೂ ಭೂತಕಾಲವನ್ನು ಹೇಳುವ 'ಲಙ್' ಪ್ರಯೋಗವಿದೆ. ಆದ್ದರಿಂದ ಭಗವದ್ವಿಷಯಕವಾದ ಜ್ಞಾನವನ್ನು ಅನಿತ್ಯವೆಂದು ಹೇಳಬೇಕಾದೀತು.

ಆಕ್ಷೇಪ - 'ಐಕ್ಷತ' ಎಂಬ 'ಲಙ್' ಪ್ರಯೋಗದಿಂದ ಪರಮಾತ್ಮನ ಜ್ಞಾನವು ಅನಿತ್ಯವೆಂದಾಗುವುದಿಲ್ಲ. ಏಕೆಂದರೆ ವೇದವು ಅನಾದಿನಿತ್ಯವಾಗಿದೆ. ಇವತ್ತು ಯಾವ ಮಾತನ್ನು ಹೇಳುತ್ತದೋ, ಅದೇ ಮಾತುಗಳನ್ನು ನಾಳೆ, ನಾಡಿದ್ದು ಮೊದಲಾದ ದಿವಸಗಳಲ್ಲಿಯೂ ಹೇಳುತ್ತದೆ. ಹೀಗೆ ಅನಂತಕಾಲದಲ್ಲಿಯೂ ಒಂದೇ ಮಾತನ್ನು ಪ್ರತಿನಿತ್ಯ ಹೇಳುವುದರಿಂದ 'ಐಕ್ಷತ' ಎಂಬ 'ಲಙ್' ಪ್ರಯೋಗವನ್ನು ನಿನ್ನೆ, ಇವತ್ತು, ನಾಳೆ, ನಾಡಿದ್ದೂ ಪ್ರತಿಯೊಂದು ದಿವಸವೂ ಸಹ ಮಾಡುತ್ತದೆ. ಆದ್ದರಿಂದ ಇವತ್ತು 'ಐಕ್ಷತ' ಎಂದು ಹೇಳಿದಾಗ,

ನಿನ್ನೆಯ ದಿವಸ ಪರಮಾತ್ಮನ ಜ್ಞಾನವಿತ್ತೆಂದು ತಿಳಿಯುತ್ತದೆ. ನಾಳೆಯ ದಿವಸ 'ಏಕ್ಷತ' ಎಂದು ಹೇಳಿದಾಗ ಇವತ್ತಿನ ದಿವಸ ಜ್ಞಾನವಿತ್ತೆಂದು ತಿಳಿಯುತ್ತದೆ. ಈ ಕ್ರಮದಲ್ಲಿ ಪ್ರತಿಯೊಂದು ದಿವಸವೂ ಭಗವಂತನಲ್ಲಿ ಜ್ಞಾನವೇ ಸಿದ್ಧವಾಗುವುದರಿಂದ 'ಲಙ್' ಪ್ರಯೋಗ ಮಾಡಿದರೂ ಭಗವಂತನ ಜ್ಞಾನವು ಅನಿತ್ಯವಾಗುವುದೆಂದಾಗುವುದಿಲ್ಲ.

ಪ್ರಕಾಶಃ – ಲಕಾರಸ್ಯ ಕಾಲತ್ರಯಾನ್ಯತಮವಾಚಿತ್ವೇನ ಕಾಲತ್ರಯವಾಚಿನಃ ಕಸ್ಯಚಿಲ್ಲಕಾರಸ್ಯಾಭಾವಾದ್ಯೇನಕೇನಚಿಲ್ಲಙಾದಿನಾ ನಿರ್ದೇಶೋऽಪಿ ತನ್ನಿತ್ಯತ್ವ ಏವ ಶ್ರುತ್ಯನ್ತರಸಿದ್ಧೇ ತಾತ್ಪರ್ಯಾದ್ಧಾ ಜ್ಞಾನನಿತ್ಯತ್ವಸಿದ್ಧಿಃ ।

ಅಥವಾ ಯಾವುದೇ ಲಕಾರವು ಮೂರುಕಾಲಗಳಲ್ಲಿ ಒಂದು ಕಾಲವನ್ನಷ್ಟೇ ಹೇಳಲು ಸಾಧ್ಯ. ಮೂರೂಕಾಲಗಳನ್ನು ಒಟ್ಟಿಗೆ ಹೇಳುವ ಯಾವ ಲಕಾರವೂ ವ್ಯಾಕರಣ ಶಾಸ್ತ್ರದಲ್ಲಿಲ್ಲ. ಆದ್ದರಿಂದ ಯಾವುದಾದರೂ ಒಂದು ಲಕಾರವನ್ನು ಪ್ರಯೋಗಿಸಲೇ ಬೇಕು. ಈ ದೃಷ್ಟಿಯಿಂದ ಲಙ್ ಲಕಾರವನ್ನು ಶ್ರುತಿಯು ಬಳಸಿದೆ. ಭಗವಂತನ ಜ್ಞಾನವು ನಿತ್ಯವಾಗಿದೆಯೆಂದು ಬೇರೆ ಶ್ರುತಿಗಳಿಂದ ಸಿದ್ಧವಾದ ಪ್ರಯುಕ್ತ ಲಙ್ ಲಕಾರದಿಂದ ನಿರ್ದೇಶಿಸಲ್ಪಟ್ಟ ಜ್ಞಾನವೂ ಸಹ ನಿತ್ಯವೆಂದೇ ಶ್ರುತಿಯ ತಾತ್ಪರ್ಯವಿರುತ್ತದೆ. ಹೀಗೆ ಎರಡು ಕ್ರಮದಲ್ಲಿ ಭಗವಂತನ ಜ್ಞಾನವು ನಿತ್ಯವೆಂದು ಸಿದ್ಧವಾಗುತ್ತದೆ.

ಪ್ರಕಾಶಃ – ತರ್ಹಿ ಕ್ರಿಯಾಯಾ ಅಪಿ ತಥಾತ್ವಮಸ್ತು । ಅತ ಏವ ಪೂರ್ವೆ ''ಜ್ಞಾನಂ ನಿತ್ಯಂ ಕ್ರಿಯಾ ನಿತ್ಯಾ'' ಇತ್ಯುದಾಹೃತಮ್ ।

ಸಮಾಧಾನ - ಹಾಗಾದರೆ ನಾವೂ ಸಹ ಭಗವಂತನ ಕ್ರಿಯೆಯನ್ನು ಈ ಕ್ರಮದಲ್ಲಿಯೇ ನಿತ್ಯವೆನ್ನುತ್ತೇವೆ. ಆಂದರೆ ಉತ್ಪ್ಯಾಂತ ಎಂಬಲ್ಲಿ ಭೂತಾರ್ಥದಲ್ಲಿ 'ಕ್ತ' ಪ್ರತ್ಯಯವಿದ್ದರೂ ಪ್ರತಿನಿತ್ಯ ವೇದದ ಪ್ರಯೋಗವು ಹೀಗೇ ಇರುವುದರಿಂದ ಭಗವಂತನ ಕ್ರಿಯೆಯು ನಿತ್ಯವೆಂದಾಗುತ್ತದೆ. ಅಥವಾ ಮೂರೂ ಕಾಲದಲ್ಲಿ ಭಗವಂತನ ಕ್ರಿಯೆಗೆ ನಿತ್ಯತ್ವವನ್ನು ಹೇಳುವ ಯಾವುದೇ ಲಕಾರಗಳಿಲ್ಲದ ಕಾರಣ ಭೂತಾರ್ಥದಲ್ಲಿರುವ 'ಕ್ತ' ಪ್ರತ್ಯಯವನ್ನು ಪ್ರಯೋಗಿಸಿದೆ. ಬೇರೆ ಶ್ರುತಿಯ ಆಧಾರದಿಂದ ಕ್ರಿಯೆಯ ನಿತ್ಯತ್ವವು ಸಿದ್ಧವಾಗುತ್ತದೆ. ಆದ್ದರಿಂದಲೇ ಹಿಂದೆ 'ಜ್ಞಾನಂ ನಿತ್ಯಂ ಕ್ರಿಯಾ ನಿತ್ಯಾ' ಎಂಬ ಕ್ರಿಯಾನಿತ್ಯತ್ವವನ್ನು ಸಮರ್ಥಿಸುವ ಶ್ರುತಿಯನ್ನು ಉದಾಹರಿಸಲಾಗಿದೆ.

ಪ್ರಕಾಶಃ – ನನು ಯದೀಶ್ವರಕ್ರಿಯಾ ನಿತ್ಯಾ ಸರ್ವದೋಪಲಮ್ಭೇತೇತಿ ಚೇನ್ನ । ಅಯೋಗ್ಯತ್ವೇನ ಪ್ರತ್ಯಕ್ಷೇಣೋಪಲಮ್ಭಸ್ಯ (ಆಪದಯಿತುಮಶಕ್ಯತ್ವಾತ್ ಅಗಮಾದಿಜನ್ಯೋಪಲಮ್ಭಸ್ಯ ತು) ತು ಕ್ರಿಯಾ ನಿತ್ಯೇತಿ ಸತ್ತ್ವಾತ್ ।

ಆಕ್ಷೇಪ - ಒಂದು ವೇಳೆ ಈಶ್ವರನ ಕ್ರಿಯೆಯು ನಿತ್ಯವೆನ್ನುವುದಾದರೆ ಯಾವಾಗಲೂ ಉಪಲಬ್ಧವಾಗಬೇಕಲ್ಲವೇ?

ಸಮಾಧಾನ - ಇದು ಸರಿಯಲ್ಲ. ಯಾವಾಗಲೂ ಉಪಲಬ್ಧವಾಗಬೇಕೆಂದು ಹೇಗೆ ಹೇಳುತ್ತೀರಿ? ಪ್ರತ್ಯಕ್ಷದಿಂದ ಉಪಲಬ್ಧವಾಗಲು ಸಾಧ್ಯವಿಲ್ಲ. ಈಶ್ವರನ ಕ್ರಿಯೆಯು ಪ್ರತ್ಯಕ್ಷಕ್ಕೆ ಆಯೋಗ್ಯವಾದ್ದರಿಂದ 'ಪ್ರತ್ಯಕ್ಷದಿಂದ ಉಪಲಬ್ಧವಾಗಲಿ' ಎಂದು ಆಪಾದನೆ ಮಾಡುವುದೇ ತಪ್ಪಾಗುತ್ತದೆ. ಇನ್ನು ಆಗಮಾದಿಗಳಿಂದ ಉಪಲಬ್ಧವಾಗಲಿ ಎಂದರೆ ಆಗಮಾದಿಗಳಲ್ಲಿ ಕ್ರಿಯೆಯನ್ನು ನಿತ್ಯವೆಂದೇ ಹೇಳಲಾಗಿದೆ.

ಪ್ರಕಾಶಃ – ಅಭಿವ್ಯಕ್ತೇಃ ಕಾದಾಚಿತ್ಕತ್ವೇನ ಕದಾಚಿದುಪಲಮ್ಭಸ್ಯಾಪಿ ಸಮ್ಭವಾಚ್ಚ । ಉಕ್ತಞ್ಚ ಸುಧಾಯಾಮತ್ತೇತಿನಯೇ ''ಕದಾಚಿದಭಿವ್ಯಕ್ತೇಃ ಕದಾಚಿದೇವೋಪಲಭ್ಯತ ಇತ್ಯಙ್ಗೀಕಾರೇ ನ ಬಾಧಕಂ ಪಶ್ಯಾಮಃ'' ಇತಿ ।

ಅಥವಾ ಭಗವಂತನಲ್ಲಿ ಕ್ರಿಯೆಯು ನಿತ್ಯವಾಗಿದ್ದರೂ ಆದರೆ ಅಭಿವ್ಯಕ್ತಿಯು ಕೆಲವು ಕಾಲದಲ್ಲಷ್ಟೇ ಇರುತ್ತದೆಂದು ಒಪ್ಪಿದ್ದರಿಂದ ಕ್ರಿಯೆಯ ಉಪಲಬ್ಧಿಯೂ ಸಹ ಕೆಲವೊಮ್ಮೆ ಮಾತ್ರ ಇರುತ್ತದೆಂಬುದು ಯುಕ್ತವಾಗುತ್ತದೆ. ಇದೇ ವಿಚಾರವು ನ್ಯಾಯಸುಧೆಯ ಆತ್ಮತತ್ತ್ವಾಧಿಕರಣದಲ್ಲಿ 'ಕದಾಚಿದಭಿವ್ಯಕ್ತೇಃ ಕದಾಚಿದೇವೋಪಲಭ್ಯತ ಇತ್ಯಂಗೀಕಾರೇ ನ ಬಾಧಕಂ ಪಶ್ಯಾಮಃ' 'ಕೆಲವೊಮ್ಮೆ ಮಾತ್ರ ಅಭಿವ್ಯಕ್ತವಾಗುವ ಪ್ರಯುಕ್ತ, ಕೆಲವೊಮ್ಮೆ ಮಾತ್ರ ಉಪಲಬ್ಧವಾಗುತ್ತದೆಂದು ಅಂಗೀಕರಿಸಿದರೆ ಬಾಧಕವನ್ನೇನೂ ನಾವು ಕಾಣುವುದಿಲ್ಲ' ಎಂದು ಹೇಳಿರುತ್ತಾರೆ.

ಪ್ರಕಾಶಃ – ಏತೇನ ಭಗವತಿ ನಿತ್ಯಮುತ್ಕ್ರಮಣವತ್ತ್ವೇ ಜೀವಸ್ಯ ಸರ್ವದಾ ಮರಣಮೇವ ಸ್ಯಾದಿತಿ ನಿರಸ್ತಮ್ । ಶಕ್ತ್ಯಾತ್ಮನೋತ್ಕ್ರಮಣಸ್ಯ ನಿತ್ಯತ್ವೇऽಪಿ ಕದಾಚಿದೇವ ವ್ಯಜ್ಯಮಾನತ್ವೇನ ದೋಷಾಭಾವಾತ್ ।

ಆಕ್ಷೇಪ - ಒಂದು ವೇಳೆ ಭಗವಂತನಲ್ಲಿ ನಿತ್ಯವಾದ ಉತ್ಕ್ರಮಣವೆಂಬ ಕ್ರಿಯೆಯನ್ನು ಒಪ್ಪುವುದಾದರೆ ಜೀವನಿಗೆ ನಿರಂತರ ಮರಣವೇ ಬರಬೇಕಾಗುತ್ತದಲ್ಲವೇ?

ಸಮಾಧಾನ - ಈ ಆಕ್ಷೇಪವೂ ಸಹ ಹಿಂದಿನ ಪರಿಹಾರದಿಂದಲೇ ನಿರಾಕೃತವಾಯಿತು. ಏಕೆಂದರೆ ಭಗವಂತನ ದೇಹೋತ್ಕ್ರಮಣವು ಶಕ್ತ್ಯಾತ್ಮನಾ ನಿತ್ಯವೆಂದು ಒಪ್ಪಿದರೂ ಒಂದು ಕಾಲದಲ್ಲಷ್ಟೇ ವ್ಯಕ್ತವಾಗುತ್ತದೆ. ಯಾವ ಕಾಲದಲ್ಲಿ ವ್ಯಕ್ತವಾಗುತ್ತದೋ, ಅದನ್ನೇ ಮರಣವೆಂದು ತಿಳಿಯಬೇಕು. ಯಾವಾಗಲೂ ವ್ಯಕ್ತವಾಗದ ಕಾರಣ ದೋಷವಿಲ್ಲ.

ಪ್ರಕಾಶಃ – ನನು ಯದಿ ಕ್ರಿಯಾ ವಿಭಾಗಾದಿಕಾರ್ಯಂ ನ ಕುರ್ಯಾತ್ತರ್ಹಿ ಕ್ರಿಯಾತ್ವಂ ವ್ಯಾಹನ್ಯೇತ । ಸಂಯೋಗವಿಭಾಗಾಸಮವಾಯಿಕಾರಣತ್ವಾತ್ಕ್ರಿಯಾಯಾಃ । ಯದಿ ಸಾ ತೌ ಕುರ್ಯಾತ್ತರ್ಹಿ ತಸ್ಯಾಸ್ಸಂಯೋಗವಿಭಾಗೌ ಪ್ರತ್ಯನಪೇಕ್ಷಕಾರಣತ್ವಾತ್ತದುತ್ಪತ್ತಿಸಾತತ್ಯಪ್ರಸಙ್ಗ ಇತಿ ಚೇತ್

ಆಕ್ಷೇಪ - ಭಗವಂತನಲ್ಲಿ ಕ್ರಿಯೆಯು ನಿತ್ಯವಾಗಿದೆ. ಆದರೆ ನಿತ್ಯವಾಗಿ ವಿಭಾಗ, ಸಂಯೋಗ ಮೊದಲಾದ ಕಾರ್ಯವನ್ನು ಹುಟ್ಟಿಸುವುದಿಲ್ಲವೆಂದು ಸಿದ್ಧಾಂತಿಗಳು ಹೇಳುತ್ತಿದ್ದೀರಿ. ಹಾಗಾದರೆ ಇದು ಕ್ರಿಯೆಯೇ

ಆಗುವುದಿಲ್ಲ. ಏಕೆಂದರೆ ಸಂಯೋಗ, ವಿಭಾಗಗಳಿಗೆ ಯಾವುದು ಅಸಮವಾಯಿ ಕಾರಣವಾಗಿರುತ್ತದೋ, ಅದೇ ಕ್ರಿಯೆಯೆನಿಸುತ್ತದೆ. ಭಗವಂತನ ಕ್ರಿಯೆಯನ್ನು ಕ್ರಿಯೆಯೆನ್ನಬೇಕಾದರೆ ಸಂಯೋಗ, ವಿಭಾಗಗಳು ಉಂಟಾಗುತ್ತದೆಂದು ಒಪ್ಪಲೇಬೇಕು. ಏಕೆಂದರೆ ಸಂಯೋಗ, ವಿಭಾಗಗಳನ್ನು ಕುರಿತು ಕ್ರಿಯೆಯು ಅನಪೇಕ್ಷ ಕಾರಣವಾಗಿದೆ. ಅಂದರೆ ಕ್ರಿಯೆ ಇರುತ್ತದೆಂದರೆ ಸಂಯೋಗ ಅಥವಾ ವಿಭಾಗಗಳು ಆಗಲೇಬೇಕು. ಮತ್ತೊಂದು ಕಾರಣವನ್ನು ಅಪೇಕ್ಷಿಸುವುದಿಲ್ಲ. ಆದ್ದರಿಂದ ನಿರಂತರಕ್ರಿಯೆ ಇರುವುದಾದಲ್ಲಿ ನಿರಂತರ ಸಂಯೋಗ, ವಿಭಾಗಗಳು ನಡೆಯುತ್ತಲೇ ಇರಬೇಕಾಗುತ್ತದಲ್ಲವೇ?

ಪ್ರಕಾಶಃ – ज्ञानेऽप्यस्य तुल्यत्वात् । अस्तु वा संयोगादिजनकत्वम् । तच्च द्वेधा । तदभिव्यक्तिजनकत्वेनोपचाराद्वा मुख्यत एव वेति भावेनाह तावदाह – यद्वेति ।।

ಈ ದೋಷ ಭಗವಂತನ ಜ್ಞಾನವನ್ನು ನಿತ್ಯವೆಂದು ಹೇಳಿದಾಗಲೂ ಸಮಾನವಾಗಿದೆ. ಆದ್ದರಿಂದ ನಮ್ಮ ಪ್ರತಿಬಂಧಿಗೆ ನೀವು ಏನು ಉತ್ತರಿಸುತ್ತೀರೋ ಅದನ್ನೇ ನಾವೂ ಸಹ ಉತ್ತರಿಸುತ್ತೇವೆ.

ಅಥವಾ ಭಗವಂತನ ಕ್ರಿಯೆಯು ಸಂಯೋಗಾದಿಗಳಿಗೆ ಜನಕವಾಗಿದೆಯೆಂದೇ ಒಪ್ಪೋಣ. ಎರಡು ಬಗೆಯಲ್ಲಿ ಸಂಯೋಗಾದಿ ಜನಕವಾಗಬಹುದು ಎಂದರೆ ಸಂಯೋಗ ವಿಭಾಗಾದಿಗಳ ಅಭಿವ್ಯಕ್ತಿಗೆ ಜನಕವಾಗಿರುವುದರಿಂದ ಔಪಚಾರಿಕವಾಗಿ ಅಥವಾ ಮುಖ್ಯವಾಗಿ ಕ್ರಿಯೆಯು ಜನಕ ಎಂದು ಹೇಳಬಹುದು. ಇವೆರಡರಲ್ಲಿ ಮೊದಲನೆಯ ಪಕ್ಷವನ್ನು 'ಯದ್ವಾ' ಇತ್ಯಾದಿ ಗ್ರಂಥದಿಂದ ಸಮರ್ಥಿಸುತ್ತಿದ್ದಾರೆ.

ಪ್ರಕಾಶಃ – क्रियायाश्शक्त्यात्मकत्वं व्यक्त्यात्मकत्वं चेति द्वैरूप्यम् । तत्र शक्त्यात्मना नित्याऽपि सा यदा व्यज्यते तदा पूर्वदेशसंयोगानभिव्यक्तिरुत्तरदेश-संयोगाभिव्यक्तिश्च जायते । देशान्तरसयोगानभिव्यक्तिमात्रेण विभागव्यवहार इति भावः ।

ಕ್ರಿಯೆಯು ಶಕ್ತ್ಯಾತ್ಮಕ ಹಾಗೂ ವ್ಯಕ್ತ್ಯಾತ್ಮಕ ಎಂದು ಎರಡು ವಿಧದಲ್ಲಿದೆ, ಶಕ್ತ್ಯಾತ್ಮವಾ ನಿತ್ಯವಾಗಿದ್ದರೂ ಯಾವಾಗ ವ್ಯಕ್ತವಾಗುತ್ತದೋ, ಆವಾಗ ಪೂರ್ವದೇಶಸಂಯೋಗವು ಅನಭಿವ್ಯಕ್ತವಾಗಿರುತ್ತದೆ. ಹಾಗೂ ಉತ್ತರದೇಶ ಸಂಯೋಗವು ಅಭಿವ್ಯಕ್ತವಾಗುತ್ತದೆ. ಇದರಂತೆ ದೇಶಾಂತರಸಂಯೋಗದ ಅನಭಿವ್ಯಕ್ತಿಯ ಕಾರಣದಿಂದ 'ವಿಭಾಗ' ಎಂಬ ವ್ಯವಹಾರವು ಯುಕ್ತವಾಗುತ್ತದೆಂದು ತಿಳಿಯಬೇಕು

ಪ್ರಕಾಶಃ – ननु केयं क्रियाभिव्यक्तिर्नाम । न तावत्प्रतीतिः । ईश्वरापेक्षया नित्यसिद्धत्वेन सर्वदा संयोगव्यक्त्यापत्तेः ।

ಆಕ್ಷೇಪ - ಕ್ರಿಯೆಯು ಅಭಿವ್ಯಕ್ತವಾಗುತ್ತದೆಂಬುದಕ್ಕೆ ಏನರ್ಥ? ಪ್ರತೀತವಾಗುತ್ತದೆಂಬುದು ಸರಿಯಲ್ಲ. ಏಕೆಂದರೆ ಈಶ್ವರನ ದೃಷ್ಟಿಯಿಂದ ಕ್ರಿಯೆಯು ಪ್ರತೀತವಾಗುತ್ತದೋ? ಅಥವಾ ಬೇರೆಯವರ ದೃಷ್ಟಿಯಿಂದ

ಕ್ರಿಯೆಯು ಪ್ರತೀತವಾಗುತ್ತದೋ? ಎಂಬ ಪ್ರಶ್ನೆಗೆ ಉತ್ತರಿಸಬೇಕು. ಈಶ್ವರನ ದೃಷ್ಟಿಯಿಂದ ಪ್ರತೀತವಾಗುತ್ತದೆನ್ನುವುದಾದರೆ ಈಶ್ವರನಿಗೆ ನಿರಂತರವಾಗಿ ಪ್ರತೀತಿಯಿರುವುದರಿಂದ ಯಾವಾಗಲೂ ಸಂಯೋಗವು ಅಭಿವ್ಯಕ್ತವಾಗಬೇಕಾದೀತು.

ಪ್ರಕಾಶಃ – परापेक्षया कदाऽप्यभावेन नित्यमनभिव्यक्त्यापत्तेः । परप्रतीतिरूपक्रियाभिव्यक्तिभावे वा संयोगव्यक्त्यादिकार्योत्पादस्य तदनपेक्षत्वात् । अत एव नावरणनिवृत्तिर्व्यक्तिरिति ।

ಇನ್ನು ಬೇರೆಯವರ ದೃಷ್ಟಿಯಿಂದ ಅಭಿವ್ಯಕ್ತವಾಗುತ್ತಿದೆಯೆನ್ನುವುದಾದರೆ ಈಶ್ವರನ ಕ್ರಿಯೆಯು ಅತೀಂದ್ರಿಯವಾದ್ದರಿಂದ ಅವನ ಕ್ರಿಯೆಯ ಪ್ರತೀತಿಯು ಬೇರೆಯವರಿಗೆ ಯಾವಾಗಲೂ ಬರಲು ಸಾಧ್ಯವೇ ಇಲ್ಲ. ಆದ್ದರಿಂದ ಈಶ್ವರನ ಕ್ರಿಯೆಯು ಅಭಿವ್ಯಕ್ತವಾಗುತ್ತದೆಂಬುದು ಕೂಡುವುದೇ ಇಲ್ಲ. ಒಂದು ವೇಳೆ ಆಗಮಾದಿಗಳಿಂದ ಜೀವರಿಗೆ ಅಂತಹ ಪ್ರತೀತಿಯನ್ನು ಒಪ್ಪಿದರೂ ಆ ಪ್ರತೀತಿಯು ಸಂಯೋಗ, ವಿಭಾಗ ಮೊದಲಾದ ಕಾರ್ಯಗಳ ವ್ಯುತ್ಪತ್ತಿಗೆ ಪ್ರಯೋಜಕವಾಗುವುದಿಲ್ಲ. ಆದ್ದರಿಂದಲೇ ಆವರಣ ನಿವೃತ್ತಿಯನ್ನು ಅಭಿವ್ಯಕ್ತಿಯೆಂದು ಹೇಳಲಾಗದು. ಏಕೆಂದರೆ ಕ್ರಿಯೆಗೆ ಇರುವ ಆವರಣನಿವೃತ್ತಿಯು ಈಶ್ವರನ ದೃಷ್ಟಿಯಿಂದ ಹೇಳಲಾಗದು. ಈಶ್ವರನಿಗೆ ಆವರಣವೇಇಲ್ಲದ ಕಾರಣ, ಆವರಣನಿವೃತ್ತಿಯನ್ನು ಅಭಿವ್ಯಕ್ತಿಯೆಂದು ಹೇಳುವುದು ತಪ್ಪಾಗುತ್ತದೆ. ಬೇರೆಯವರ ದೃಷ್ಟಿಯಿಂದ ಯಾವ ಆವರಣವಿದೆಯೋ, ಅದರ ನಿವೃತ್ತಿಯೇ ಅಭಿವ್ಯಕ್ತಿಯೆಂದು ಹೇಳುವುದಾದರೆ ನಿರಂತರವಾಗಿ ಆವರಣವು ನಿವೃತ್ತವಾಗದ ಕಾರಣ ಅಭಿವ್ಯಕ್ತಿಯು ಯಾವಾಗಲೂ ಇಲ್ಲವೆಂದೇ ಆಯಿತು. ಒಂದು ವೇಳೆ ಆವರಣವು ನಿವೃತ್ತವಾದರೂ ಕಾರ್ಯದ ವ್ಯುತ್ಪತ್ತಿಗೆ ಅದರ ಉಪಯೋಗವಿಲ್ಲ. ಆದ್ದರಿಂದ ಕ್ರಿಯೆಯು ಅಭಿವ್ಯಕ್ತವಾಗುತ್ತದೆಂಬುದನ್ನು ಸಮರ್ಥಿಸಲಾಗದು.

ಪ್ರಕಾಶಃ – मैवम् । ''व्यक्तिशब्देनावस्थानविशेषस्य विवक्षितत्वात्'' इत्यत्तेति नये सुधायामेवोक्तेरिति तात्पर्यात् । संयोगविशेषस्वरूपोत्पादकत्वमप्यस्तीत्याह – अथवेति ।।

ಸಮಾಧಾನ - ವ್ಯಕ್ತಿ ಶಬ್ದಕ್ಕೆ ಪ್ರತೀತವಾಗುತ್ತದೆಂದರ್ಥವಲ್ಲ. ಹೊರತಾಗಿ, 'ವ್ಯಕ್ತಿಶಬ್ದೇನ ಅವಸ್ಥಾವಿಶೇಷಸ್ಯ ವಿವಕ್ಷಿತತ್ವಾತ್' ಎಂಬ ಅತ್ಯುದ್ಧಿಕರಣದ ನ್ಯಾಯಸುಧೆಯ ಮಾತಿನಂತೆ ವ್ಯಕ್ತಿಶಬ್ದದಿಂದ ಶಕ್ತಿಯ ಅವಸ್ಥಾವಿಶೇಷವನ್ನೇ ವಿವಕ್ಷಿಸಬೇಕು ಎಂದು ಹೇಳುತ್ತೇವೆ. ಹೀಗೆ ಹೇಳಿದಾಗ ಹಿಂದಿನ ದೋಷಗಳಿಗೆ ಅವಕಾಶವಿಲ್ಲ. ಆಂದರೆ ಕ್ರಿಯೆಯು ಅಭಿವ್ಯಕ್ತಿರೂಪದಿಂದ ಮಾತ್ರ ವ್ಯವಹಾರಕ್ಕೆ ಕಾರಣವಾಗುತ್ತದೆ. ಕ್ರಿಯಾಭಿವ್ಯಕ್ತಿಗೆ ಸಂಯೋಗವಿಶೇಷವೆಂಬ ಸ್ವರೂಪೋತ್ಪಾದಕತ್ವವೂ ಸಹ ಇರುತ್ತದೆಂಬ ವಿಚಾರವನ್ನು 'ಅಥವಾ' ಇತ್ಯಾದಿ ಗ್ರಂಥದಿಂದ ಸಮರ್ಥಿಸುತ್ತಿದ್ದಾರೆ.

ಪ್ರಕಾಶಃ – ननूक्तं तथात्वे तदुत्पत्तिसातत्यप्रसङ्ग इति ।

ಆಕ್ಷೇಪ - ಕ್ರಿಯೆಯು ನಿತ್ಯವೆಂದು ಹೇಳಿದರೆ ಸಂಯೋಗ, ವಿಭಾಗಗಳ ಉತ್ಪತ್ತಿಯು ನಿರಂತರ ಆಗಬೇಕಾದೀತಲ್ಲವೇ?

ಪ್ರಕಾಶಃ – ತನ್ನ । ಕ್ರಿಯಾವ್ಯಕ್ತಿದಶಾಯಾಮೇವ ದೇಶಾನ್ತರಸಂಯೋಗವಿಭಾಗವಿಶೇಷೋತ್ಪಾದಾಭ್ಯುಪಗಮಾತ್ । ಕ್ರಿಯಾವ್ಯಕ್ತಿಶ್ಚ ತತ್ಪ್ರಯೋಜಕಾಣುತ್ವವ್ಯಕ್ತಿದಶಾಯಾಮೇವೇತಿ ನ ಕೋऽಪಿ ದೋಷ ಇತಿ ।

ಸಮಾಧಾನ - ಇದು ತಪ್ಪು. ಕ್ರಿಯೆಯು ಯಾವಾಗ ಅಭಿವ್ಯಕ್ತವಾಗಿರುತ್ತದೋ, ಆವಾಗ ಮಾತ್ರ ಅದು ದೇಶಾಂತರಸಂಯೋಗ ಹಾಗೂ ವಿಭಾಗಗಳಿಗೆ ಉತ್ಪಾದಕವಾಗುತ್ತದೆಂದು ಒಪ್ಪಿದ್ದೇವೆ. ಕ್ರಿಯೆಯು ಯಾವಾಗ ಅಭಿವ್ಯಕ್ತವಾಗುತ್ತದೆಂದರೆ ಕ್ರಿಯೋತ್ಪತ್ತಿಗೆ ಪ್ರಯೋಜಕವಾದ ಅಣುತ್ವವೆಂಬ ಧರ್ಮವು ಭಗವಂತನಲ್ಲಿ ಯಾವಾಗ ಅಭಿವ್ಯಕ್ತವಾಗುತ್ತದೋ, ಆವಾಗ ಮಾತ್ರ. ಅಂದರೆ ಆ ಸಮಯದಲ್ಲಿ ಮಾತ್ರ ಕ್ರಿಯೆಯು ಉಂಟಾಗುತ್ತದೆಂದು ಒಪ್ಪುತ್ತೇವೆ. ಹೀಗೆ ಹೇಳಿದಾಗ ಯಾವುದೇ ದೋಷಕ್ಕೂ ಅವಕಾಶವಿಲ್ಲ.

ಪ್ರಕಾಶಃ – ನನು ಕ್ರಿಯಾ ಸ್ವಸತ್ತೋತ್ತರಕ್ಷಣೇ ಸಂಯೋಗಾದಿಕಂ ಕರೋತ್ಯುತ ವಿರಮ್ಯ ವಾ । ನಾದ್ಯಃ । ಸ್ವಸತ್ತಾಯಾ ಇದಮ್ಪ್ರಥಮತಾಭಾವೇನ ಸಂಯೋಗಾದಿವಿಶೇಷಸ್ಯ ವಿವಕ್ಷಿತಕ್ಷಣಾದಪಿ ಪೂರ್ವಮುತ್ಪತ್ತಿಪ್ರಸಙ್ಗಾತ್ । ನ ದ್ವಿತೀಯಃ । ಪೂರ್ವೋತ್ತರಾವಸ್ಥಯೋರವಿಶಿಷ್ಟಸ್ಯ ವಿರಮ್ಯ ವ್ಯಾಪಾರಾಯೋಗಾತ್ । ಉತ್ತರಸಂಯೋಗಸ್ಯ ಕರ್ಮವಿನಾಶಕತ್ವೇನ ಕೃತಸಂಯೋಗಸ್ಯ ಕರ್ಮಣೋऽವಸ್ಥಾನಾನುಪಪತ್ತೇಶ್ಚ । ತಥಾ ವ್ಯಕ್ತಿಶ್ಚ ಕಿಂ ಕ್ರಿಯಾತೋ ಭಿನ್ನಾ ನ ವೇತ್ಯಾದಿಚೋದ್ಯನಿರಾಕರಣಮತ್ತಾಧಿಕರಣಾನುವ್ಯಾಖ್ಯಾನಸುಧಾದೌ ದ್ರಷ್ಟವ್ಯಮಿತಿ ಭಾವೇನಾಹ – ದಿಗಿತಿ ।।

ಆಕ್ಷೇಪ - ಈಶ್ವರನ ಕ್ರಿಯೆಯು ಸಂಯೋಗ ಹಾಗೂ ವಿಭಾಗಗಳನ್ನು ಉತ್ಪತ್ತಿ ಮಾಡುತ್ತದೋ, ಇಲ್ಲವೋ ಎಂದು ವಿಕಲ್ಪಿಸಿದಾಗ ಉತ್ಪತ್ತಿಯಾಗುವುದಿಲ್ಲ. ಆದರೆ ಕ್ರಿಯೆಯಾಗಿದೆ ಎಂದು ಹೇಳಿದರೆ ವ್ಯಾಹತಿ ದೋಷ ಬರುತ್ತದೆ. ಇನ್ನು ಈಶ್ವರನ ಕ್ರಿಯೆಯು ಸಂಯೋಗ, ವಿಭಾಗಗಳಿಗೆ ಜನಕವಾಗಿದೆ ಎಂಬ ಪಕ್ಷದಲ್ಲಿ ಕ್ರಿಯೆಯು ತಾನಿರುವ ಉತ್ತರಕ್ಷಣದಲ್ಲಿ ಸಂಯೋಗಾದಿಗಳನ್ನು ಉತ್ಪತ್ತಿ ಮಾಡುತ್ತದೋ, ಅಥವಾ ಕೆಲವು ಕ್ಷಣಗಳ ಅನಂತರ ಉತ್ಪತ್ತಿ ಮಾಡುತ್ತದೋ, ಕ್ರಿಯೆಯು ನಿತ್ಯವಾದ್ದರಿಂದ ಇದೇ ಮೊದಲು ಇರುತ್ತದೆಂದು ಹೇಳಲಾಗದು ಎಂದು ಪ್ರಶ್ನಿಸುತ್ತೇವೆ. ಆದ್ದರಿಂದ ವಿವಕ್ಷಿತವಾದ ಕ್ಷಣಗಳಿಗಿಂತಲೂ ಮೊದಲ ಕ್ಷಣಗಳೂ ಸಹ ಸ್ವಸತ್ತೋತ್ತರ ಕ್ಷಣಗಳಾಗಿರುವುದರಿಂದ ಸಂಯೋಗಾದಿ ವಿಶೇಷಗಳ ಉತ್ಪತ್ತಿ ಮೊದಲೇ ಆಗಬೇಕಾದೀತು.

ಎರಡನೆಯ ಪಕ್ಷದಲ್ಲಿ 'ಕೆಲವು ಕ್ಷಣಗಳ ಅನಂತರ ಉತ್ಪತ್ತಿ ಮಾಡುತ್ತದೆ' ಎಂದು ಅಂಗೀಕರಿಸಿದರೆ ಅದೂ ಸಹ ಉಪಪನ್ನವಾಗುವುದಿಲ್ಲ. ಏಕೆಂದರೆ ಕ್ರಿಯೆಯಲ್ಲಿ ಪೂರ್ವೋತ್ತರಕ್ಷಣಗಳಲ್ಲಿ ವೈಲಕ್ಷಣ್ಯವು ಕಾಣಿಸುವುದಿಲ್ಲ. ಆದ್ದರಿಂದ ವಿರಮ್ಯ ವ್ಯಾಪಾರವನ್ನು ಹೇಳುವುದೂ ಸಹ ಅದಕ್ಕೆ ಕೂಡುವುದಿಲ್ಲ. ಹಾಗೂ ಉತ್ತರದೇಶಸಂಯೋಗವು ಕ್ರಿಯಾನಾಶಕವೆಂಬ ನಿಯಮವಿರುವುದರಿಂದ ಸಂಯೋಗದ ಉತ್ಪತ್ತಿಯ ಅನಂತರ ಸಂಯುಕ್ತವಾದ ಕ್ರಿಯೆಯ ಇರುವಿಕೆಯೂ ಸಹ ಕೂಡುವುದಿಲ್ಲ. ಇದರಂತೆ ಅಭಿವ್ಯಕ್ತಿಯೂ ಸಹ ಕ್ರಿಯೆಗಿಂತ ಭಿನ್ನವೋ, ಅಲ್ಲವೋ? ಇತ್ಯಾದಿ ವಿಕಲ್ಪಗಳನ್ನು ಮಾಡಿ ನಿರಾಕರಿಸಬೇಕು. ಆದ್ದರಿಂದ ಭಗವಂತನ ಕ್ರಿಯೆಯನ್ನು ನಿತ್ಯವೆಂದು ಹೇಗೆ ಹೇಳುತ್ತೀರಿ?

ಸಮಾಧಾನ - ಇವೇ ಮೊದಲಾದ ಆಕ್ಷೇಪಗಳನ್ನು ಅತ್ಯತ್ವಾಧಿಕರಣದ ಅನುವ್ಯಾಖ್ಯಾನ ಹಾಗೂ ಸುಧೆಯಲ್ಲಿ ನಿರಾಕರಿಸಿದಂತೆ ಖಂಡನೆ ಮಾಡಬೇಕು. ಸುಧೆಯಲ್ಲಿ ಹೇಳಿದ ಪರಿಹಾರ ಹೀಗಿದೆ - ಭಗವಂತನ ಕ್ರಿಯೆಯು ಸಂಯೋಗ ಹಾಗೂ ವಿಭಾಗಗಳಿಗೆ ಜನಕವೇ ಆಗಿವೆ. ಮತ್ತು ಆ ಈಶ್ವರನ ಕ್ರಿಯೆಯು ಕೆಲವು ಕ್ಷಣಗಳ ನಂತರವೇ ಸಂಯೋಗಾದಿಗಳನ್ನು ಉತ್ಪತ್ತಿ ಮಾಡುತ್ತದೆ ಎಂದೂ ಸಹ ಉತ್ತರಿಸಬೇಕು. ಅಂದರೆ ಕ್ರಿಯೆಯು ಅಭವ್ಯಕ್ತಿಯಿಂದ ವಿಶಿಷ್ಟವಾದ ಸಂಯೋಗ ಹಾಗೂ ವಿಭಾಗಗಳನ್ನು ಉಂಟುಮಾಡುತ್ತದೆ. ಆದ್ದರಿಂದ ಈ ರೀತಿ ಹೇಳಿದಾಗ ವಿರಮ್ಯ ವ್ಯಾಪಾರದ ಅನುಪಪತ್ತಿಯು ಬರುವುದಿಲ್ಲ. ಒಂದು ವೇಳೆ ಕ್ರಿಯೆಗೆ ವಿರಮ್ಯ ವ್ಯಾಪಾರವು ಅನುಪಪನ್ನವಾಗಿದ್ದಲ್ಲಿ, ಅವಯವಕ್ರಿಯೆಯೂ ಕೂಡ ಉತ್ತರದೇಶಸಂಯೋಗವನ್ನು ತನ್ನ ಉತ್ಪತ್ತಿಯ ಅವ್ಯವಹಿತವಾದ ಮುಂದಿನ ಕ್ಷಣದಲ್ಲಿ ಉತ್ಪತ್ತಿ ಮಾಡಬೇಕಾದೀತು. ಕ್ರಿಯೆಯು ಸಂಯೋಗದ ಉತ್ಪತ್ತಿಯ ಅನಂತರದಲ್ಲಿ ಇರುವುದಿಲ್ಲವೆಂಬ ನಿಯಮವು ಅನಿತ್ಯಕ್ರಿಯೆಯಲ್ಲಿ ಮಾತ್ರ. ಅಂದರೆ ಈಶ್ವರನ ಕ್ರಿಯೆಯ ಅಭವ್ಯಕ್ತಿಯು ಕಾದಾಚಿತ್ಕವಾಗಿದೆ. ಆದ್ದರಿಂದ ಅಭವ್ಯಕ್ತಿಯನ್ನು ಅನುಸರಿಸಿ ಪೂರ್ವೋತ್ತರ ಅವಸ್ಥೆಗಳಲ್ಲಿ ವ್ಯತ್ಯಾಸವನ್ನು ಇಟ್ಟುಕೊಳ್ಳಬೇಕು. ಹೀಗೆ ಕ್ರಿಯೆಯು ಅಭವ್ಯಕ್ತಿಯಾದ ಅನಂತರವೇ ವಿರಾಮವಿಲ್ಲದೇ ಸಂಯೋಗದ ಉತ್ಪತ್ತಿಯಾಗುವುದರಿಂದ ಬಾಧಕವಿಲ್ಲ. ಇವೇ ಮೊದಲಾದ ಸಮಾಧಾನಗಳನ್ನು ಸುಧೆಯಲ್ಲಿ ಹೇಳಿದ್ದಾರೆ. ಅದನ್ನು ಇಲ್ಲಿ ಅನುಸಂಧಾನ ಮಾಡಿಕೊಳ್ಳಬೇಕು. ಈ ಅಭಿಪ್ರಾಯದಿಂದ ಗ್ರಂಥಕಾರರು 'ದಿಕ್‌ಪ್ರದರ್ಶನಮ್' ಎಂದು ಹೇಳಿದ್ದಾರೆ.

ಪ್ರಕಾಶಃ – तथा हि ।। व्यक्त्या विशिष्टस्य कर्मणः कार्योत्पादकत्वेन शक्त्यात्मकस्य विरम्यैव तत्करणोपपत्तेः । कृतसंयोगस्य कर्मणोऽवस्थानं नेत्यस्यानित्य-क्रियाविषयत्वेनोपपत्तेश्च ।

'ತಥಾಹಿ' ಎಂಬ ಗ್ರಂಥದ ಅಭಿಪ್ರಾಯ ಹೀಗೆ -

ಅಭವ್ಯಕ್ತಿ ವಿಶಿಷ್ಟವಾದ ಕರ್ಮವೇ ಸಂಯೋಗಾದಿಜನಕವಾದ್ದರಿಂದ ಶಕ್ತ್ಯಾತ್ಮಕವಾ ಇರುವ ಕ್ರಿಯೆಗೆ ಅಥವಾ ಕರ್ಮಕ್ಕೆ ವಿರಮ್ಯವ್ಯಾಪಾರವನ್ನು ಕೂಡಿಸಲು ಬರುತ್ತದೆ. ಹಾಗೂ ಯಾವುದರಲ್ಲಿ ಸಂಯೋಗವು ಉತ್ಪನ್ನವಾಗುತ್ತದೋ, ಅಂತಹ ಸಂಯೋಗವೆಂಬ ಕ್ರಿಯೆಯು ನಿರಂತರವಾಗಿರುವುದಿಲ್ಲವೆಂಬ ವ್ಯಾಪ್ತಿಯು ಕೇವಲ ಅನಿತ್ಯಕ್ರಿಯೆಯಲ್ಲಿ ಮಾತ್ರ ಹೊರತು, ನಿತ್ಯಕ್ರಿಯೆಯಲ್ಲಿ ಸಂಬಂಧ ಪಡುವುದಿಲ್ಲ ಎಂದೂ ಸಮಾಧಾನವನ್ನು ಹೇಳಬಹುದು.

ಪ್ರಕಾಶಃ – उक्तं च बृहदारण्यकभाष्ये -

व्यक्तिभावं गता या तु करोतीति स्वरूपिणी ।
शक्तिरूपस्थिता सैव क्रियाशक्तिरितीर्यते ।
सा च व्यक्तिस्तु जनिवत्क्रियाया रूपमेव तु ।

ಪರಿಪೂರ್ಣಚಂದ್ರಿಕಾ

तथापि तु विशेषेण स्वरूपेण विशेषणम् ।
जनेर्जनिवदेवासौ ज्ञातव्या व्यतिरेकतः ।। इति ।

ಈ ವಿಷಯವು ಬೃಹದಾರಣ್ಯಕ ಭಾಷ್ಯದಲ್ಲಿ ಇನ್ನು ಸ್ಪಷ್ಟವಾಗಿ ಹೇಳಲ್ಪಟ್ಟಿದೆ.

ವ್ಯಕ್ತಿಭಾವಂ ಗತಾ ಯಾ ತು ಕರೋತೀತಿ ಸ್ವರೂಪಿಣೀ।
ಶಕ್ತಿರೂಪಸ್ಥಿತಾ ಸೈವ ಕ್ರಿಯಾಶಕ್ತಿರಿತೀರ್ಯತೇ।
ಸಾ ಚ ವ್ಯಕ್ತಿಸ್ತು ಜನಿವತ್ ಕ್ರಿಯಾಯಾ ರೂಪಮೇವ ತು।
ತಥಾಪಿ ತು ವಿಶೇಷೇಣ ಸ್ವರೂಪೇಣ ವಿಶೇಷಣಮ್ ।
ಜನೇರ್ಜನಿವದೇವಾಸೌ ಜ್ಞಾತವ್ಯಾ ವ್ಯತಿರೇಕತಃ।'

ಶಕ್ತಿರೂಪವಾದ ಕ್ರಿಯೆಗೂ, ವ್ಯಕ್ತಿರೂಪವಾದ ಕ್ರಿಯೆಗೂ ಭೇದವಿದೆಯೋ, ಅಭೇದವಿದೆಯೋ? ಭೇದವಿದೆಯೆಂದು ಹೇಳುವುದಾದರೆ ಶಕ್ತಿರೂಪ ಕ್ರಿಯೆಯು ಮಾತ್ರ ನಿತ್ಯವೆಂದಾಯಿತು. ವ್ಯಕ್ತಿರೂಪವಾದ ಕ್ರಿಯೆಯು ಅನಿತ್ಯವಾಯಿತು. ಅಭೇದವಿದೆಯೆಂದರೆ ನಿರಂತರ ಸಂಹಾರಾದಿ ಕ್ರಿಯೆಗಳು ಉಂಟಾಗಬೇಕಾದೀತಲ್ಲವೇ? ಈ ಆಕ್ಷೇಪವೂ ಸರಿಯಲ್ಲ. ಏಕೆಂದರೆ ಯಾವ ಕ್ರಿಯೆಯು ವ್ಯಕ್ತ್ಯಾತ್ಮನಾ ಇರುತ್ತದೋ, ಆಗ ಮಾತ್ರ ಸಂಹಾರಾದಿ ಕ್ರಿಯೆಗಳು ಇರುತ್ತವೆ ಎಂಬ ವ್ಯವಹಾರಕ್ಕೆ ವ್ಯಕ್ತವಾದ ಎಂದರೆ ಪ್ರಕಟವಾದ ಕ್ರಿಯೆಯಷ್ಟೇ ಕಾರಣವಾಗುತ್ತದೆ. ಆದೇ ಕ್ರಿಯೆಯು ಶಕ್ತಿರೂಪವಾಗಿರುವಾಗ ಕ್ರಿಯಾಶಕ್ತಿ ಎನಿಸಿಕೊಳ್ಳುತ್ತದೆ. ಹೀಗೆ ಶಕ್ತಿ ಹಾಗೂ ವ್ಯಕ್ತಿಗಳಿಗೆ ಭೇದವಿಲ್ಲದ ಕಾರಣ ಯಾವ ದೋಷವು ಬರುವುದಿಲ್ಲ. ಉತ್ಪತ್ತಿಯ ಉತ್ಪತ್ತಿಯು ವಸ್ತುವಿನ ಉತ್ಪತ್ತಿಗಿಂತ ಹೇಗೆ ಭಿನ್ನವಲ್ಲವೋ ಆದರಂತೆ ಶಕ್ತಿಯ ವ್ಯಕ್ತಿಯು ಶಕ್ತಿಗಿಂತ ಬೇರೆಯಲ್ಲ. ಶಕ್ತಿ ಮತ್ತು ವ್ಯಕ್ತಿಗಳು ಅಭಿನ್ನವಾಗಿದ್ದರೂ ಅವುಗಳಿಗೆ ವಿಶೇಷವಿರುವುದರಿಂದ ಸಂಹಾರಕಾಲದಲ್ಲಿ ಸಂಹಾರಕ್ರಿಯೆಯಷ್ಟೇ ಇರುತ್ತದೆ ಹೊರತು, ಸೃಷ್ಟಿಕ್ರಿಯೆ ಇರುವುದಿಲ್ಲ. ಆದ್ದರಿಂದ ಸೃಷ್ಟಿಕಾಲ, ಸಂಹಾರಕಾಲ ಮೊದಲಾದ ವಿಶೇಷ ವ್ಯವಹಾರವು ಯುಕ್ತವಾಗುತ್ತದೆ. ಒಂದು ವೇಳೆ ಅಭೇದವಿರುವುದಾದರೆ ಭೇದಕಾರ್ಯವನ್ನು ವಿಶೇಷವು ನಿರ್ವಾಹ ಮಾಡುತ್ತದೆ. ಶಕ್ತಿ-ವ್ಯಕ್ತಿಗಳಲ್ಲಿರುವ ವಿಶೇಷವೂ ಸಹ ವಿಶೇಷಿಗಳಾದ ಶಕ್ತಿ-ವ್ಯಕ್ತಿಗಳಿಗಿಂತ ಭಿನ್ನವಲ್ಲ. ಹಾಗೇನಾದರೂ ಭಿನ್ನವಾದರೆ ಶಕ್ತಿ ಹಾಗೂ ವ್ಯಕ್ತಿಗಳಿಗೆ ಭೇದವನ್ನು ಒಪ್ಪಬಹುದಿತ್ತು. ಹೊರತಾಗಿ ಆ ವಿಶೇಷವು ಶಕ್ತಿ ಹಾಗೂ ವ್ಯಕ್ತಿಗಳ ಸ್ವರೂಪವೇ ಆಗಿದೆ. ಆ ವಿಶೇಷವೇ 'ತಾನು, ವಿಶೇಷ, ಶಕ್ತಿ-ವ್ಯಕ್ತಿಗಳು, ವಿಶೇಷಿಗಳು' ಎಂಬ ವ್ಯವಹಾರವನ್ನು ನಿರ್ವಾಹ ಮಾಡುತ್ತದೆ. ವಿಶೇಷದಿಂದ ಕೂಡಿರುವ ಭೇದವ್ಯವಹಾರವನ್ನು ನಿರ್ವಾಹ ಮಾಡಲು ಮತ್ತೊಂದು ವಿಶೇಷವನ್ನು ಅಂಗೀಕರಿಸಬೇಕಾಗಿಲ್ಲ. ಹಾಗೇನಾದರೂ ಮತ್ತೊಂದು ವಿಶೇಷವನ್ನು ಒಪ್ಪಿದರೆ ಅನವಸ್ಥಾದೋಷವು ಬರುತ್ತದೆ. ಘಟದ ಉತ್ಪತ್ತಿಗಿಂತ, ಉತ್ಪತ್ತಿಯ ಉತ್ಪತ್ತಿಯು ಹೇಗೆ ಭಿನ್ನವಲ್ಲದಿದ್ದರೂ 'ಘಟವು ಹುಟ್ಟಲು, ಘಟದ ಉತ್ಪತಿಯು ಉತ್ಪತ್ತಿಯೂ ಹುಟ್ಟಲು' ಎಂಬ ವ್ಯವಹಾರವನ್ನು ನಿರ್ವಾಹ ಮಾಡುತ್ತದೋ? ಆದರಂತೆ ವಿಶೇಷವು ವಿಶೇಷಿಗಳಿಗಿಂತ ಅಭಿನ್ನವಾಗಿದ್ದರೂ 'ತಾನು ವಿಶೇಷ, ಶಕ್ತಿ-ವ್ಯಕ್ತಿಗಳು ವಿಶೇಷವುಳ್ಳವು' ಎಂಬ ವ್ಯವಹಾರವನ್ನು ನಿರ್ವಹಿಸುತ್ತದೆ.

ಭೂಮಾಧಿಕರಣ (೧-೩-೨)

ಪ್ರಕಾಶಃ – ಏತೇನ ''ರೂಪಾನ್ತರವಿವಕ್ಷಯೋತ್ಕ್ರಮಣಸ್ಯ ಶ್ರುತಿಸಿದ್ಧತ್ವಾತ್'' ಇತಿ ಟೀಕೋಪಪಾದಿತಾ ಭವತಿ ।

ಹೀಗೆ ವ್ಯಾಖ್ಯಾನಿಸಿದ್ದರಿಂದ 'ರೂಪಾಂತರವಿವಕ್ಷಯಾ ಉತ್ಕ್ರಮಣಸ್ಯ ಶ್ರುತಿಸಿದ್ಧತ್ವಾತ್' ಭಗವಂತನ ರೂಪವಿಶೇಷ ಪ್ರಯುಕ್ತವಾಗಿ ಉತ್ಕ್ರಮಣವನ್ನು ಉಪಪಾದಿಸಬಹುದೆಂಬುದು ಶ್ರುತಿಯಿಂದ ಸಿದ್ಧವಾಗಿದೆ ಎಂಬ ಟೀಕೆಯನ್ನು ವಿವರಿಸಿದಂತಾಯಿತು.

ಪ್ರಕಾಶಃ – ಯದಪ್ಯವಾದಿ ಪೂರ್ವವಾದಿನಾ ಯದಿ ಚ ಸರ್ವಗತಸ್ಯಾಪಿ ಕ್ರಿಯಾ ತದೋತ್ಕ್ರಾನ್ತಿಗತ್ಯಾಗತೀನಾಮಿತ್ಯಾದಿ ತತ್ರಾಹ – ಜೀವಸ್ಯೇತಿ ।।

ಮತ್ತು ಪೂರ್ವಪಕ್ಷಕಾರನು ಒಂದು ವೇಳೆ ಸರ್ವಗತನಾದ ಬ್ರಹ್ಮನಿಗೆ ಕ್ರಿಯೆಯನ್ನು ಒಪ್ಪುವುದಾದರೆ ಜೀವನಿಗೆ ಅಣುತ್ವವನ್ನು ಸಮರ್ಥಿಸುವ ಅವಶ್ಯಕತೆಯಿಲ್ಲವೆಂದು ಆಕ್ಷೇಪಿಸಿದ್ದನು. ಆ ಆಕ್ಷೇಪಕ್ಕೆ 'ಜೀವಸ್ಯ' ಇತ್ಯಾದಿ ವಾಕ್ಯದಿಂದ ಉತ್ತರಿಸುತ್ತಿದ್ದಾರೆ. ಜೀವನ ಕ್ರಿಯೆಯು ಸರ್ವಥಾ ಸಂಯೋಗ, ವಿಭಾಗಗಳಿಗೆ ಜನಕವಾಗಿರುವುದರಿಂದ ಅಣುತ್ವವನ್ನು ಸಾಧನೆ ಮಾಡುವುದು ಯುಕ್ತವಾಗಿದೆಯೆಂದು ಇದರ ಅಭಿಪ್ರಾಯ.

ಪ್ರಕಾಶಃ – ಸೂತ್ರೇ ಸಂಪ್ರಸಾದಾದಿತ್ಯಸ್ಯ ಭಾಷ್ಯೇ ಪೂರ್ಣಸುಖರೂಪತ್ವಾದಿತಿ ವ್ಯಾಖ್ಯಾನಾತ್ ಕೃತಮ್ । ತದಯುಕ್ತಮಿವ । ತಥಾತ್ವೇ ಪೂರ್ಣಸುಖಾದಿತ್ಯೇವ ಸೂತ್ರಣಾಪತ್ತಿಃ । ಕಥಂ ಚ ಸಂಪ್ರಸಾದಪದೇನ ತಲ್ಲಾಭ ಇತ್ಯತಸ್ತತ್ವಪ್ರದೀಪಸುಧಯೋರುಕ್ತಯೋಗಪ್ರದರ್ಶನೇನ ಪೂರ್ಣಸುಖಲಾಭಪ್ರಕಾರಂ ವದನ್ ಸಂಪ್ರಸಾದ-ಪದಪ್ರಯೋಗಪ್ರಯೋಜನಂ ಚಾಹ – ಅತ್ರ ಸೂತ್ರ ಇತಿ ।।

ಸೂತ್ರದಲ್ಲಿ 'ಸಂಪ್ರಸಾದಾತ್' ಎಂಬ ಹೇತುವನ್ನು ಪ್ರಯೋಗಿಸಿದ್ದಾರೆ. ಅದನ್ನು ಭಾಷ್ಯದಲ್ಲಿ 'ಪೂರ್ಣಸುಖಿರೂಪತ್ವಾತ್' ಎಂದು ವ್ಯಾಖ್ಯಾನಿಸಿದ್ದಾರೆ. ಭಾಷ್ಯದ ಈ ವ್ಯಾಖ್ಯಾನವು ಅಯುಕ್ತವಾದಂತೆ ಕಾಣಿಸುತ್ತದೆ. 'ಸಂಪ್ರಸಾದಾತ್' ಎಂಬ ಪದದಿಂದ ಪೂರ್ಣಸುಖವನ್ನು ವಿವಕ್ಷಿಸುವುದಾದಲ್ಲಿ 'ಪೂರ್ಣಸುಖಾತ್' ಎಂದೇ ಸೂತ್ರವನ್ನು ಹೇಳಬೇಕಿತ್ತು. 'ಸಂಪ್ರಸಾದ' ಪದದಿಂದ ಪೂರ್ಣಸುಖವೆಂಬರ್ಥವು ಹೇಗೆ ದೊರೆಯುತ್ತದೆ ? ಎಂಬ ಪ್ರಶ್ನೆಗೆ ತತ್ವಪ್ರದೀಪ ಹಾಗೂ ನ್ಯಾಯಸುಧೆಯಲ್ಲಿ ಹೇಳಲ್ಪಟ್ಟ 'ಸಮ್ಯಕ್ ಪ್ರಸಾದಃ' ಎಂಬ ಯೋಗಾರ್ಥವನ್ನು ತೋರಿಸುವ ಮೂಲಕ ಪೂರ್ಣಸುಖವು ಹೇಗೆ ತಿಳಿಯುತ್ತದೆ ಎಂಬುದನ್ನು ಸ್ಪಷ್ಟಪಡಿಸುತ್ತಾ 'ಸಂಪ್ರಸಾದ' ಪದ ಪ್ರಯೋಗದ ಪ್ರಯೋಜನವನ್ನು 'ಅತ್ರ ಸೂತ್ರೇ' ಇತ್ಯಾದಿ ಗ್ರಂಥದ ಮೂಲಕ ಪ್ರತಿಪಾದಿಸುತ್ತಿದ್ದಾರೆ.

ಪ್ರಕಾಶಃ – ಸಮ್ಯಕ್ಪ್ರಸೀದತ್ಯನೇನೇತಿತಿ ।। ಸಂಪ್ರೇತ್ಯುಪಸರ್ಗದ್ವಯಪೂರ್ವಕಾತ್ ''ಷದ್ಲೃ ವಿಶರಣಗತ್ಯವಸಾದನೇಷು'' ಇತಿ ಧಾತೋಃ ''ಅಕರ್ತರಿ ಚ ಕಾರಕೇ ಸಂಜ್ಞಾಯಾಮ್'' ಇತಿ ಕರಣೇ ಘಞ್ಪ್ರತ್ಯಯೇ ರೂಪಮಿತಿ ಭಾವಃ ।।

'ಸಮ್ಯಕ್ಪ್ರಸೀದತಿ ಅನೇನ' ಎಂಬ ವ್ಯುತ್ಪತ್ತಿಯಿಂದ 'ಸಂಪ್ರಸಾದ' ಶಬ್ದವು 'ಸುಖ' ಎಂಬರ್ಥವನ್ನು

ತಿಳಿಸುತ್ತದೆ. 'ಸಂ' 'ಪ್ರ' ಎಂಬ ಎರಡು ಉಪಸರ್ಗಗಳ ಮುಂದೆ 'ಷದ್‌ಲೃ ವಿಶರಣಗತ್ಯವಸಾದನೇಷು' ಎಂಬ ಧಾತುವಿಗೆ 'ಆಕರ್ತರಿ ಚ ಕಾರಕೇ ಸಂಜ್ಞಾಯಾಮ್' ಎಂಬ ಸೂತ್ರದಿಂದ ಕರಣಾರ್ಥದಲ್ಲಿ 'ಘಞ್' ಪ್ರತ್ಯಯವನ್ನು ಮಾಡಿದಾಗ 'ಸಂಪ್ರಸಾದ' ಶಬ್ದವು ನಿಷ್ಪನ್ನವಾಗುತ್ತದೆ.

ಪ್ರಕಾಶಃ – ಸಮ್ಯಕ್ಪ್ರಸಾದೇನೇತಿ ।। ಸ ಚೇಶ್ವರೇ ಶ್ರುತಿಸ್ಮೃತ್ಯಾದಿಗಮ್ಯ ಇತಿ ಭಾವಃ – ದುಃಖಾವಿನಾಭಾವೇತಿ ।। ಮುಕ್ತೇಷು ಸತ್ಯಪಿ ಸುಖೇ ದುಃಖಾಭಾವಾದಿತಿ ಭಾವಃ ।

'ಸಮ್ಯಕ್‌ಪ್ರಸಾದೇನ' ಎಂದು ಗ್ರಂಥದಲ್ಲಿದೆ. ಇದರಿಂದ ಈಶ್ವರನಲ್ಲಿ ಪೂರ್ಣಸುಖವಿದೆಯೆಂದು ಹೇಳಿರುತ್ತಾರೆ. ಇದು ಶ್ರುತಿ, ಸ್ಮೃತಿಗಳಿಂದ ಸಿದ್ಧವಾಗಿದೆಯೆಂದು ತಿಳಿಯಬೇಕು. 'ದುಃಖ ಅವಿನಾಭಾವ' ಎಂದರೆ ಮುಕ್ತರಲ್ಲಿ ಸುಖವಿದ್ದರೂ ದುಃಖವಿಲ್ಲವಾದ್ದರಿಂದ ಎಂದು ಅಭಿಪ್ರಾಯ.

ಪ್ರಕಾಶಃ – ವಿಷಯವಾಕ್ಯೇತಿ ।। 'ಯೋ ವೈ ಭೂಮಾ ತತ್ಸುಖಮ್' ಇತಿ ವಾಕ್ಯಮಾದ್ಯಸ್ಯ ವಿಷಯಃ । 'ಸ ಏವಾಧಸ್ತಾತ್' ಇತ್ಯಾದ್ಯುತ್ತರವಾಕ್ಯಂ ತು ''ಧರ್ಮೋಪಪತ್ತೇಶ್ಚ'' ಇತ್ಯಸ್ಯ ವಿಷಯ ಇತಿ ತತ್ಕ್ರಮಾತ್ಕ್ರಮ ಇತ್ಯರ್ಥಃ । ತತ್ರ ಸರ್ವಗತತ್ವಾದಿಧರ್ಮಾಣಾಂ ಪ್ರಾಗಾಕ್ಷಿಪ್ತಾನಾಮಪಿ ಸೂತ್ರೇ ಹೇತೂಕರಣಂ ಚ ತದಾಕ್ಷೇಪಕಸ್ಯ ಉತ್ಕ್ರಮಣರೂಪಬಾಧಕಸ್ಯ ಪರಿಹೃತತ್ವಾದ್ಯುಕ್ತಮಿತಿ ಭಾವಃ ।

'ಯೋ ವೈ ಭೂಮಾ ತತ್ಸುಖಮ್' ಎಂಬ ವಾಕ್ಯವು ಪ್ರಥಮಸೂತ್ರಕ್ಕೆ ವಿಷಯವಾಗಿದೆ. 'ಸ ಏವಾಧಸ್ತಾತ್' ಎಂಬ ಮುಂದಿನ ವಾಕ್ಯವು 'ಧರ್ಮೋಪಪತ್ತೇಶ್ಚ' ಎಂಬ ಸೂತ್ರಕ್ಕೆ ವಿಷಯವಾಗಿದೆ. ಈ ವಿಷಯವಾಕ್ಯದ ಆನುಪೂರ್ವಿಯಿಂದ ಸೂತ್ರದ ಆನುಪೂರ್ವಿಯು ಅತ್ಯಂತ ಸಮಂಜಸವಾಗಿದೆಯೆಂದು ತಿಳಿಯಬೇಕು.

ಸರ್ವಗತತ್ವಾದಿ ಧರ್ಮಗಳನ್ನು ಹಿಂದೆ ಪೂರ್ವಪಕಾರನು ಆಕ್ಷೇಪ ಮಾಡಿದ್ದರಿಂದ ಅದನ್ನೇ ಸೂತ್ರದಲ್ಲಿ ಹೇಗೆ ಹೇತುವನ್ನಾಗಿ ಮಾಡಿದರು ? ಎಂದರೆ, ಪೂರ್ವಪಕ್ಷದಲ್ಲಿ ಮಾಡಲ್ಪಟ್ಟ ಆಕ್ಷೇಪವು ಉತ್ಕ್ರಮಣವೆಂಬ ಬಾಧಕದಿಂದ ಈಗಾಗಲೇ ಪರಿಹರಿಸಿದ್ದಾಗಿದೆ. ಆದ್ದರಿಂದ ಸರ್ವಗತತ್ವಾದಿಧರ್ಮವನ್ನು ಹೇತುವನ್ನಾಗಿ ಉಪಯೋಗಿಸಬಹುದು.

ಗುರುರಾಜೀಯಮ್ – ನನು ಸರ್ವಗತಸ್ಯಾಪಿ ಬ್ರಹ್ಮಣೋ ಯದಿ ಕ್ರಿಯಾವತ್ತ್ವಮಭ್ಯುಪಗಮ್ಯತೇ ತರ್ಹ್ಯುತ್ಕ್ರಾನ್ತಿಗತ್ಯಾಗತೀನಾಮಿತ್ಯತ್ರ ಸಕ್ರಿಯತ್ವೇನ ಜೀವಸ್ಯಾಣುತ್ವೋಕ್ತಿರಯುಕ್ತೇತ್ಯತ ಆಹ – ಜೀವಸ್ಯಾಣುತ್ವೇ ತ್ವಿತಿ ।।

ಯಾವುದೇ ಪದಾರ್ಥದಲ್ಲಿ ಕ್ರಿಯೆ ಉಂಟಾಗಬೇಕೆಂದರೆ ಅದು ಅಣುರೂಪವಾಗಿರಬೇಕು. ಅಥವಾ ಮಧ್ಯಮ ಪರಿಮಾಣವುಳ್ಳದ್ದಾಗಿರಬೇಕು. ಏಕೆಂದರೆ ಕ್ರಿಯೆ ಎಂದರೆ ತಾನು ಯಾವ ಸ್ಥಳದಲ್ಲಿ ಇರುತ್ತದೋ, ಆ ಸ್ಥಳವನ್ನು ಬಿಟ್ಟು ಮತ್ತೊಂದು ಸ್ಥಳಕ್ಕೆ ಹೋಗುವುದು ಎಂದರ್ಥ. ಎಲ್ಲೆಡೆ ತುಂಬಿರುವ ವಸ್ತು ಇರುವ ಸ್ಥಳದಿಂದ ಹೊರಟು ಮತ್ತೊಂದು ಸ್ಥಳಕ್ಕೆ ಹೋಗಲು ಸಾಧ್ಯವೇ ಇಲ್ಲ. ಭಗವಂತನು ಎಲ್ಲೆಡೆ ವ್ಯಾಪ್ತನಾಗಿದ್ದಲ್ಲಿ ಇಂತಹ ಕ್ರಿಯೆಯನ್ನು ಒಪ್ಪುವುದು ಹೇಗೆ ? ಎಂಬುದೇ ಇಲ್ಲಿ ಬಂದಿರುವ ದೊಡ್ಡ ಗೊಂದಲ.

ಈ ಗೊಂದಲಕ್ಕೆ ಅನೇಕ ಬಗೆಯಲ್ಲಿ ಪರಿಹಾರಗಳನ್ನು ತಿಳಿದುಕೊಳ್ಳಬಹುದು. ಭಗವಂತನು ಅಣುವಿಗಿಂತ ಅಣುಸ್ವರೂಪನು, ಹಾಗೂ ಮಹತ್‌ಪದಾರ್ಥಕ್ಕಿಂತಲೂ ಮಹತ್‌ಸ್ವರೂಪನೂ ಆಗಿರುತ್ತಾನೆ. ಈ ವಿರುದ್ಧ ಧರ್ಮವು ಒಬ್ಬನೇ ಭಗವಂತನಲ್ಲಿ ಒಪ್ಪಲು ಹೇಗೆ ಸಾಧ್ಯ ? ಎಂಬುದು ಮತ್ತೊಂದು ಗೊಂದಲ. ಈ ಗೊಂದಲವನ್ನು ಪರಿಹರಿಸಿಕೊಂಡರೆ ಎಲ್ಲೆಡೆ ವ್ಯಾಪ್ತನಾದ ಭಗವಂತನಲ್ಲಿ ಕ್ರಿಯೆಯೂ ಸಹ ಉಪಪನ್ನವಾಗುತ್ತದೆಂದು ಸುಲಭವಾಗಿ ತಿಳಿಯಬಹುದು. ನ್ಯಾಯಸುಧಾ, ಅನುವ್ಯಾಖ್ಯಾನ ಹಾಗೂ ತತ್ತ್ವಪ್ರಕಾಶಿಕೆ ಮೊದಲಾದ ಗ್ರಂಥಗಳಲ್ಲಿ ಹೇಳಿರುವ ಪ್ರಮೇಯಗಳನ್ನು ಗ್ರಂಥಕಾರರು ಇಲ್ಲಿ ಸಂಗ್ರಹಿಸಿ, ಈ ಎಲ್ಲಾ ಪ್ರಶ್ನೆಗಳನ್ನು ಪರಿಹರಿಸುತ್ತಿದ್ದಾರೆ. ಭಗವಂತನಲ್ಲಿ ಯಾವಾಗ ಅಣುತ್ವವೆಂಬ ಧರ್ಮವಿರುತ್ತದೋ, ಆವಾಗಲೇ ಮಹತ್ತ್ವವೆಂಬ ಧರ್ಮವು ಅದೇ ಪ್ರಕಾರದಲ್ಲಿರುತ್ತದೆಂದು ನಾವು ಹೇಳುವುದಿಲ್ಲ, ಸ್ವಲ್ಪ ವ್ಯತ್ಯಾಸವಿದೆ. ಪ್ರತಿಯೊಂದು ಗುಣಗಳೂ ಸಹ ಶಕ್ತಿ ಹಾಗೂ ವ್ಯಕ್ತಿ ಸ್ವರೂಪದಲ್ಲಿರುತ್ತದೆ. ಅಣುತ್ವವು ಯಾವಾಗ ಶಕ್ತಿಸ್ವರೂಪದಲ್ಲಿರುತ್ತದೋ, ಆವಾಗ ಮಹತ್ತ್ವವು ವ್ಯಕ್ತಿರೂಪದಲ್ಲಿರುತ್ತದೆ. ಶಕ್ತಿರೂಪವೆಂದರೆ ಆ ಸಂದರ್ಭದಲ್ಲಿ ಆ ರೂಪದಿಂದ ಕೆಲಸವಾಗುತ್ತಿರುವುದಿಲ್ಲ ಎಂದರ್ಥ. ವ್ಯಕ್ತಿಸ್ವರೂಪವೆಂದರೆ ಅದೇ ಸಂದರ್ಭದಲ್ಲಿ ಆ ರೂಪದಿಂದ ಆ ಕಾರ್ಯವು ನಡೆಯುತ್ತಿರುತ್ತದೆ ಎಂದರ್ಥ. ಆದ್ದರಿಂದ ಅಣುತ್ವ ಹಾಗೂ ಮಹತ್ತ್ವಗಳು ನಿರಂತರವಾಗಿ ಭಗವಂತನಲ್ಲಿ ಇದ್ದರೂ ಸಹ ಎರಡೂ ಧರ್ಮಗಳು ಕೇವಲ ಶಕ್ತಿರೂಪದಿಂದಾಗಲೀ ಅಥವಾ ವ್ಯಕ್ತಿರೂಪದಿಂದಾಗಲೀ, ಇರುವುದಿಲ್ಲವೆಂಬ ಸೂಕ್ಷ್ಮಪ್ರಮೇಯವನ್ನು ಗಮನಿಸಬೇಕು. ಅಂತೂ ಭಗವಂತನಲ್ಲಿ ಅಣುತ್ವವು ಯಾವಾಗ ವ್ಯಕ್ತಿಸ್ವರೂಪದಿಂದ ಇರುತ್ತದೋ, ಆವಾಗ ಮಹತ್ತ್ವವು ವ್ಯಕ್ತಿಸ್ವರೂಪದಿಂದ ಇರುವುದಿಲ್ಲವೆಂದಂತಾಯಿತು. ಈ ಬಗೆಯಲ್ಲಿ ಚಿಂತಿಸಿದಾಗ ಅಣುಸ್ವರೂಪನಾದ ಭಗವಂತನಿಗೆ ಪೂರ್ವದೇಶ ವಿಭಾಗ, ಉತ್ತರದೇಶ ಸಂಯೋಗ ಮೊದಲಾದವುಗಳೆಲ್ಲವೂ ಸಿದ್ಧವಾಗುತ್ತವೆ. ಯಾವಾಗ ಮಹತ್ತ್ವವು ವ್ಯಕ್ತವಾಗಿರುತ್ತದೋ, ಆವಾಗ ಅಣುತ್ವವು ಶಕ್ತಿರೂಪದಲ್ಲಿರುವುದರಿಂದ ಪೂರ್ವದೇಶವಿಭಾಗ ಅಥವಾ ಉತ್ತರದೇಶಸಂಯೋಗಗಳನ್ನು ಒಪ್ಪಲು ಸಾಧ್ಯವಿಲ್ಲ. ಅಂದರೆ ವ್ಯಕ್ತನಾದ ಅಣುಸ್ವರೂಪವುಳ್ಳ ಭಗವಂತನಲ್ಲಿ ಕ್ರಿಯೆಯು ನಡೆಯುತ್ತದೆಂದು ಇದರ ಅಭಿಪ್ರಾಯ. ಭಗವಂತನಲ್ಲಿ ಅನೇಕ ಕ್ರಿಯೆಗಳಿವೆ. ಸೃಷ್ಟಿ ಮಾಡುವ ಕ್ರಿಯೆ, ಸಂಹಾರ ಮಾಡುವ ಕ್ರಿಯೆ ಇತ್ಯಾದಿಯಾಗಿ ಎಣಿಸಲು ಸಾಧ್ಯವಾಗದಷ್ಟು ಕ್ರಿಯೆಗಳಿವೆ. ಇವೆಲ್ಲವೂ ಸಹ ಭಗವತ್‌ಸ್ವರೂಪವೇ ಎಂಬುದರಲ್ಲಿ ಸಂದೇಹವಿಲ್ಲ. ಆದರೆ ಸೃಷ್ಟಿ ಮಾಡುವ ಕ್ರಿಯೆಯು ಭಗವತ್‌ಸ್ವರೂಪವಾದ್ದರಿಂದ ನಿರಂತರವಾಗಿರುವುದಾದರೆ, ನಿರಂತರ ಸೃಷ್ಟಿಯೇ ಆಗುತ್ತಿರಬೇಕಾಗುತ್ತದೆ. ಸಂಹಾರ, ನಿಯಮನ ಮೊದಲಾದ ಕ್ರಿಯೆಗಳು ನಡೆಯಲು ಸಾಧ್ಯವಿಲ್ಲದಂತಾಗುತ್ತದೆ. ಈಗಾಗಲೇ ಹೇಳಿದಂತೆ ಪ್ರತಿಯೊಂದೂ ಕ್ರಿಯೆಯನ್ನು ಶಕ್ಯಾತ್ಮನಾ, ವ್ಯಕ್ತಾತ್ಮನಾ ವಿಭಾಗ ಮಾಡಿಕೊಂಡಾಗ ಯಾವಾಗ ಸೃಷ್ಟಿ ಸಮಯವು ಪ್ರಾಪ್ತವಾಗುತ್ತದೋ, ಆವಾಗ ಮಾತ್ರ ಸೃಷ್ಟಿ ಮಾಡುವ ಕ್ರಿಯೆಯು ಅಭಿವ್ಯಕ್ತವಾಗುತ್ತದೆ. ಸಂಹಾರ ಮಾಡುವ ಕಾಲವು ಪ್ರಾಪ್ತವಾದಾಗ ಸಂಹಾರ ಮಾಡುವಂತಹ ಕ್ರಿಯೆಯು ಪ್ರಾಪ್ತವಾಗುತ್ತದೆ. ಹೀಗೆ ಹೇಳಿದಾಗ ಎಲ್ಲಾ

ವಿಧದ ಸಮಾಧಾನಗಳನ್ನು ಹೇಳಿದಂತಾಗುತ್ತದೆ. ಶ್ರೀರಾಮಚಂದ್ರನು ರಾವಣನನ್ನು ಕೊಂದನು ಎಂದು ಹೇಳಿದಾಗ ರಾವಣನ ಹನನವೆಂಬ ಕ್ರಿಯೆಯು ಶ್ರೀರಾಮಚಂದ್ರನಲ್ಲಿ ನಿರಂತರವಾಗಿ ಇರುತ್ತದೆ. ಅಂದ ಮಾತ್ರಕ್ಕೆ ಯಾವಾಗಲೂ ರಾವಣನನ್ನು ಸಂಹಾರ ಮಾಡುತ್ತಲೇ ಇರುತ್ತಾನೆ ಎಂದರ್ಥವಲ್ಲ. ಹೊರತಾಗಿ ಯಾವಾಗ ಆ ಸಮಯವು ಪ್ರಾಪ್ತವಾಗುತ್ತದೋ, ಆ ಸಂದರ್ಭದಲ್ಲಿ ಮಾತ್ರ ರಾವಣನನ್ನು ಕೊಲ್ಲುವಂತಹ ಕ್ರಿಯೆಯು ಅಭಿವ್ಯಕ್ತವಾಗುತ್ತದೆ. ಉಳಿದ ಕಾಲಗಳೆಲ್ಲಾ ಶಕ್ತಿಸ್ವರೂಪದಲ್ಲಿರುತ್ತದೆ ಎಂದು ತಿಳಿಯ ಬೇಕಾದ ಮುಖ್ಯಪ್ರಮೇಯ.

ಹೀಗೆ ಭಗವಂತನ ಕ್ರಿಯೆಗಳು ಅಣುತ್ವ, ಮಹತ್ತ್ವ ಮೊದಲಾದ ಗುಣಗಳು ಶಕ್ತಿ ಹಾಗೂ ವ್ಯಕ್ತಿಸ್ವರೂಪ ಎಂಬ ಎರಡು ಬಗೆಯನ್ನು ಹೊಂದಿರುತ್ತವೆ ಎಂದಷ್ಟೇ ಅಲ್ಲ. ಭಗವಂತನಿಗೆ ಅನೇಕ ರೂಪಗಳು ಪ್ರಮಾಣಸಿದ್ಧವಾಗಿದೆ. ಒಂದು ರೂಪದಲ್ಲಿ ಅಣುತ್ವವು ವ್ಯಕ್ತವಾಗಬಹುದು. ಮತ್ತೊಂದು ರೂಪದಲ್ಲಿ ಮಹತ್ತ್ವವು ವ್ಯಕ್ತವಾಗಬಹುದು. ಹೀಗೆ ರೂಪಗಳ ಭೇದದಿಂದಲೂ ಅಣುತ್ವ ಮಹತ್ತ್ವಗಳನ್ನು ಉಪಪಾದಿಸುವುದು ಸುಲಭ. ಸವಿಶೇಷ ಭೇದವಿರುವುದರಿಂದ ಹೀಗೆ ಭೇದದ ಕಾರ್ಯವು ಆಯಾ ರೂಪಗಳಲ್ಲಿ ನಡೆಯುತ್ತವೆ. ಅಥವಾ ಅಚಿಂತ್ಯಾತ್ಮಕ ಶಕ್ತಿಯನ್ನು ಹೊಂದಿರುವ ಭಗವಂತನಲ್ಲಿ ನಮ್ಮ ಕಲ್ಪನೆಗೆ ಮೀರಿದ ವಿಚಾರಗಳೇ ಇರುತ್ತವೆ.

ಸೂತ್ರದಲ್ಲಿ 'ಸಂಪ್ರಸಾದಾತ್' ಎಂದು ಹೇಳಿದ್ದಾರೆ. 'ಸಂಪ್ರಸಾದಾತ್' ಎಂಬ ಶಬ್ದಕ್ಕೆ ಪೂರ್ಣಸುಖವುಳ್ಳವನಾದ್ದರಿಂದ ಎಂದರ್ಥ. ಒಂದು ವೇಳೆ 'ಸಂಪ್ರಸಾದಾತ್' ಶಬ್ದವನ್ನು ಬಳಸದೇ 'ಪೂರ್ಣಸುಖಾತ್' ಎಂದೇ ಹೇಳಿದ್ದರೆ, ಸುಖವಿರುವುದಾದರೆ ದುಃಖವು ಬರಲಿ, ಅಥವಾ ಸುಖದ ಜೊತೆಗೆ ದುಃಖವು ಅವಿನಾಭೂತವಾಗಿದೆ, ಇತ್ಯಾದಿಯಾಗಿ ಪ್ರಶ್ನೆಗಳು ಹುಟ್ಟುತ್ತಿದ್ದವು. 'ಸಂಪ್ರಸಾದಾತ್' ಶಬ್ದವನ್ನು ಬಳಸಿದ್ದರಿಂದ ಸುಖದ ಕಾರ್ಯವೆನಿಸಿದ ಪ್ರಸಾದವು ಈಶ್ವರನಲ್ಲಿ ಪೂರ್ಣವಾಗಿರುವುದರಿಂದ ದುಃಖಕ್ಕೆ ಅವಕಾಶವಿಲ್ಲ. ಮತ್ತು ಜ್ಞಾನದಂತೆ ಸುಖವೂ ಸಹ ದುಃಖದಿಂದ ಅವಿನಾಭೂತವಾಗಿಲ್ಲ ಎಂಬರಡು ಪ್ರಮೇಯಗಳನ್ನು ಸೂತ್ರಕಾರರು ಸೂಚಿಸಿದ್ದಾರೆ. ಉಪನಿಷತ್ತಿನಲ್ಲಿರುವ ವಿಷಯವಾಕ್ಯಕ್ಕೆ ಅನುಗುಣವಾಗಿಯೇ ಸೂತ್ರಗಳ ಕ್ರಮವಿರುವುದರಿಂದ ಸೂತ್ರಗಳ ವಿನ್ಯಾಸ ಶೈಲಿಯು ಅತ್ಯಂತ ಅರ್ಥಪೂರ್ಣವಾಗಿದೆ.

• • • • •

ಶಾಂಕರಭಾಷ್ಯ ವಿಮರ್ಶೆ

तात्पर्यचन्द्रिका

अन्ये तु । जडरूपः पञ्चवृत्तिर्वायुरेव भूमेति प्राप्ते निर्विशेषब्रह्मैव भूमेति सिद्धान्त इत्याहुः ।

ಅನುವಾದ - ಶಾಂಕರ ಭಾಷ್ಯದಲ್ಲಿ ಸೂತ್ರವನ್ನು ಹೀಗೆ ವ್ಯಾಖ್ಯಾನಿಸಿದ್ದಾರೆ - ಜಡರೂಪವಾದ ಪ್ರಾಣಾಪಾನಾದಿ ಪಂಚವೃತ್ತಿಯನ್ನೂ ತಾಳಿದ ವಾಯುವೇ ಭೂಮವೆನಿಸಿದೆ ಎಂದು ಪೂರ್ವಪಕ್ಷ. ನಿರ್ವಿಶೇಷಬ್ರಹ್ಮನೇ ಭೂಮನಾಗಿದ್ದಾನೆಂದು ಸಿದ್ಧಾಂತ.

ಭೂಮಾಧಿಕರಣ (೧-೩-೨)

तन्न । पञ्चवृत्तौ ''तरति शोकमात्मवित्'' इत्युपक्रमस्यात्मशब्दादेः ''भूमैव सुखम्'' इत्युक्तसुखत्वस्य चायोगेन पूर्वपक्षस्यातितुच्छत्वात् ।

ಇದು ತಪ್ಪು. ಜಡವಾದ ವಾಯು ಭೂಮವೆನಿಸಿದರೆ 'ತರತಿ ಶೋಕಮಾತ್ಮವಿತ್', ಹಾಗೂ ಆತ್ಮಶಬ್ದ ಎಂದು ಉಪಕ್ರಮದಲ್ಲಿ ಶ್ರುತವಾದ 'ಭೂಮೈವ ಸುಖಮ್' ಎಂಬಲ್ಲಿ ಶ್ರುತವಾದ ಸುಖತ್ವವು ಜಡವಾದ್ದರಲ್ಲಿ ಕೂಡುವುದಿಲ್ಲವಾದ್ದರಿಂದ ತಪ್ಪಾಗುತ್ತದೆ. ಆದ್ದರಿಂದ ಪೂರ್ವಪಕ್ಷ ಹುಟ್ಟಲು ಸಾಧ್ಯವೇ ಇಲ್ಲ.

प्राणशब्दश्च ''ते ह प्राणा अहं श्रेयसि व्यूदिरे । अहं श्रेयानस्म्यहं श्रेयानस्मीति । तान्वरिष्ठः प्राण उवाच'' इत्यादौ तदभिमानिदेवतायामेव प्रसिद्धः ।

ಮತ್ತು ಪ್ರಾಣಶಬ್ದವು 'ತೇ ಹ ಪ್ರಾಣಾ ಅಹಂ ಶ್ರೇಯಸಿ ವ್ಯೂದಿರೇ । ಅಹಂ ಶ್ರೇಯಾನಸ್ಮ್ಯಂ ಶ್ರೇಯಾನಾಸ್ಮೀತಿ । ತಾನ್ವರಿಷ್ಠಃ ಪ್ರಾಣ ಉವಾಚ' ಇತ್ಯಾದಿ ಪ್ರಕರಣದಲ್ಲಿ ಪ್ರಸಕ್ತವಾದ ಪ್ರಾಣಶಬ್ದವು ಅಭಿಮಾನಿದೇವತೆಯಲ್ಲಿಯೇ ಪ್ರಸಿದ್ಧವಾಗಿದೆ.

सिद्धान्तोऽप्ययुक्तः । उक्तरीत्योपक्रमानुगुणस्य गुणज्यैष्ठ्यरूपस्योत्तमत्वस्य निर्गुणेऽयोगात् ।

ಸಿದ್ಧಾಂತವೂ ಸಹ ತಪ್ಪು. ಹಿಂದೆ ಹೇಳಿದ ಪ್ರಕಾರ ಉಪಕ್ರಮಕ್ಕೆ ಅನುಗುಣವಾಗಿರುವ ಗುಣಜ್ಯೇಷ್ಠತ್ವರೂಪವಾದ ಉತ್ತಮತ್ವವನ್ನು ಭೂಮಶಬ್ದವು ಪ್ರತಿಪಾದಿಸುತ್ತಿದೆ. ಇದು ನಿರ್ಗುಣನಲ್ಲಿ ಯುಕ್ತವಾಗುವುದಿಲ್ಲ.

कल्पितज्यैष्ठ्यस्य च ''भूमा त्वेव विजिज्ञासितव्यः । भूमानं भगवो विजिज्ञासे'' इत्युक्तं चरमकक्ष्यात्वेन मुमुक्षुजिज्ञास्यत्वमयुक्तम् ।१

(१) शाङ्करभाष्यम्

भूमा प्राणः परेशो वा प्रश्नप्रत्युक्तिवर्जनात् ।
विजानन्नतिवादी भवति' इति प्राणविदोऽतिवादित्वमुक्त्वा 'एष तु वा अतिवदति यः सत्येनातिवदति' इति सत्यवेदित्वेनातिवादिनं तुशब्देन पूर्वस्मादतिवादिनो व्यावर्तयति । अत एव 'एष तु वा अतिवदति' इत्यत्र प्राणातिवादिनो न प्रत्यभिज्ञा । अतोऽस्यातिवादित्वनिमित्तं सत्यं पूर्वातिवादित्वनिमित्तात् प्राणादधिकमिति विज्ञायते । ननु च प्राणवेदिन एव सत्यवदनमङ्गत्वेनोपदिष्टम्, अतः प्राणप्रकरणाविच्छेद इत्युक्तम् । नैतद् युक्तम्, तुशब्देन ह्यतिबाधेवान्यः प्रतीयते, नतु तस्यैवातिवादिनस्सत्यवदनाङ्गविशिष्टतामात्रम् । 'एष तु वा अग्निहोत्री यस्सत्यं वदति' इत्यादिष्वग्निहोत्र्यन्तराप्रतीतेः, प्रतीतस्यैवाग्निहोत्रिणस्सत्यवदनाङ्गविधानमिति क्लिष्टा गतिराश्रीयते । अत्र त्वतिवाद्यन्तरत्वनिमित्तं सत्यशब्दाभिधेयं परं ब्रह्म प्रतीयते । सत्यशब्दश्च 'सत्यं ज्ञानमनन्तं ब्रह्म' इत्यादिषु परस्मिन् ब्रह्मणि प्रयुक्तः । अतस्तन्निष्ठस्यातिवादिनः पूर्वस्मादधिकत्वं हि वस्त्वन्तरात्पुरुषार्थतयाऽतिक्रान्तस्वोपास्यवस्तुवादित्वम् । नामाद्याशापर्यन्तोपास्यवस्त्वतिक्रान्तस्वोपास्यप्राणशब्दनिर्दिष्टप्रत्यगात्मवादित्वात् प्राणविदोऽतिवादित्वम् । तस्यापि सातिशयपुरुषार्थत्वान्निरतिशयपुरुषार्थतयोपास्यपरब्रह्मवादिन एव साक्षादतिवादित्वमिति 'एष तु वा अतिवदति यः सत्येनातिवदति' इत्युक्तम् । सत्येनेतीत्थम्भूतलक्षणे तृतीया । सत्येन परेण ब्रह्मणोपास्येनोपलक्षितो योऽतिवदतीत्यर्थः । अत एवैनं शिष्यः प्रार्थयते 'सोऽहं भगवत्सत्येनातिवदति' इति । आचार्यश्च 'सत्यं त्वेव विजिज्ञासितव्यम्' इत्याह । 'आत्मनः प्राणः' इति च प्राणशब्दनिर्दिष्टस्याऽत्मन उत्पत्तिरुच्यते । अतः 'तरति शोकमात्मवित्' इति प्रक्रान्त आत्मा प्राणशब्दनिर्दिष्टादन्य इति गम्यते ।

यदुक्तम् 'अस्ति भगवः प्राणाद्भूयः' इति प्रश्नस्य 'अदो वाव प्राणाद् भूयः' इति प्रतिवचनस्य चादर्शनात् प्रक्रान्त आत्मोपदेशः प्राणोपदेशपर्यवसानो गम्यत इति, तदयुक्तम् । नहि प्रश्नप्रतिवचनाभ्यामेवार्थान्तरत्वं गम्यते, प्रमाणान्तरेणापि तत्सम्भवात् । उक्तं च प्रमाणान्तरम्, 'अस्ति भगवः प्राणाद्भूयः' इत्यपृच्छतोऽयमभिप्रायः। नामादिष्वाशापर्यन्तेष्वचेतनेषु पुरुषार्थभूयस्तया पूर्वपूर्वमतिक्रान्तेष्वप्युत्तरोत्तरेषूपदिष्टेषु तत्तद्वेदिन आचार्येणातिवादित्वं नोक्तम् । प्राणशब्दनिर्दिष्टप्रत्यगात्मयाथात्म्यवेदिनस्तु पुरुषार्थभूयस्त्वातिशयं मन्वानेन 'स वा एष एवं पश्यन्नेवं मन्वान एवं विजानन्नतिवादी भवति' इति अतिक्रान्तवस्तुवादित्वमुक्तम् । अतोऽत्रैवात्मोपदेशस्समाप्त इति मत्वा शिष्यो भूयो न पप्रच्छ । आचार्यस्त्विदमपि सातिशयं मत्वा निरतिशयपुरुषार्थभूतं सत्यशब्दाभिधेयं परं ब्रह्म 'एष तु वा अतिवदति यः सत्येनातिवदति' इति स्वयमेवोपचिक्षेप । शिष्योऽपि परमपुरुषार्थरूपे परस्मिन् ब्रह्मण्युपक्षिप्ते तत्स्वरूपतदुपासनयाथात्म्यबुभुत्सया 'सोऽहं भगवः सत्येनातिवदानि' इति प्रार्थयामास । ततो ब्रह्मसाक्षात्कारनिमित्तातिवादित्वसिद्धये

ಬ್ರಹ್ಮಸಾಕ್ಷಾತ್ಕಾರೋಪಾಯಭೂತಂ ಬ್ರಹ್ಮೋಪಾಸನಂ 'ಸತ್ಯಂ ತ್ವೇವ ವಿಜಿಜ್ಞಾಸಿತವ್ಯಮ್' ಇತ್ಯುಪದಿಶ್ಯ ತದುಪಾಯಭೂತಂ ಬ್ರಹ್ಮಮನನಂ 'ಮತಿಸ್ತ್ವೇವ ವಿಜಿಜ್ಞಾಸಿತವ್ಯಾ' ಇತ್ಯುಪದಿಶ್ಯ ಶ್ರವಣಪ್ರತಿಷ್ಠಾರ್ಥತ್ವಾನ್ಮನನಸ್ಯ ಮನನೋಪದೇಶೇನ ಶ್ರವಣಮರ್ಥಸಿದ್ಧಂ ಮತ್ವಾ ಶ್ರವಣೋಪಾಯಭೂತಾಂ ಬ್ರಹ್ಮಣಿ ಶ್ರದ್ಧಾಮ್ 'ಶ್ರದ್ಧಾ ತ್ವೇವ ವಿಜಿಜ್ಞಾಸಿತವ್ಯಾ' ಇತ್ಯುಪದಿಶ್ಯ ತದುಪಾಯಭೂತಾಂ ಚ ತನ್ನಿಷ್ಠಾಂ 'ನಿಷ್ಠಾ ತ್ವೇವ ವಿಜಿಜ್ಞಾಸಿತವ್ಯಾ' ಇತ್ಯುಪದಿಶ್ಯ ತದುಪಾಯಭೂತಾಂ ಚ ತದುಯೋಗಪ್ರಯತ್ನರೂಪಾಂ ಕೃತಿಮಪಿ 'ಕೃತಿಸ್ತ್ವೇವ ವಿಜಿಜ್ಞಾಸಿತವ್ಯಾ' ಇತ್ಯುಪದಿಶ್ಯ ಶ್ರವಣಾದ್ಯುಪಕ್ರಮರೂಪಕೃತಿಸಿದ್ಧಯೇ ಪ್ರಾಪ್ಯಭೂತಸ್ಯ ಸತ್ಯಶಬ್ದಾಭಿಹಿತಸ್ಯ ಬ್ರಹ್ಮಣಸ್ಸುಖರೂಪತಾ ಜ್ಞಾತವ್ಯೇತಿ 'ಸುಖಂ ತ್ವೇವ ವಿಜಿಜ್ಞಾಸಿತವ್ಯಮ್' ಇತ್ಯುಪದಿಶ್ಯ ನಿರತಿಶಯವಿಪುಲಮೇವ ಸುಖಂ ಪರಮಪುರುಷಾರ್ಥರೂಪಂ ಭವತೀತಿ ತಸ್ಯೈವ ಬ್ರಹ್ಮಣಸ್ಸುಖರೂಪಸ್ಯ ನಿರತಿಶಯವಿಪುಲತಾ ಜ್ಞಾತವ್ಯೇತಿ 'ಭೂಮಾ ತ್ವೇವ ವಿಜಿಜ್ಞಾಸಿತವ್ಯಃ' ಇತ್ಯುಪದಿಶ್ಯ ನಿರತಿಶಯವಿಪುಲಸುಖರೂಪಸ್ಯ ಬ್ರಹ್ಮಣೋ ಲಕ್ಷಣಮಿದಮುಚ್ಯತೇ 'ಯತ್ರ ನಾನ್ಯತ್ ಪಶ್ಯತಿ ನಾನ್ಯಚ್ಛೃಣೋತಿ ನಾನ್ಯದ್ ವಿಜಾನಾತಿ ಸ ಭೂಮಾ' ಇತಿ । ಅಯಮರ್ಥಃ– ಅನವಧಿಕಾತಿಶಯಸುಖರೂಪೇ ಬ್ರಹ್ಮಣ್ಯನುಭೂಯಮಾನೇ ತತೋऽನ್ಯತ್ ಕಿಮಪಿ ನ ಪಶ್ಯತ್ಯನುಭವಿತಾ । ಬ್ರಹ್ಮಸ್ವರೂಪತದ್ಭಿಭೂತ್ಯನ್ತರ್ಗತತ್ವಾಚ್ಚ ಕೃತ್ಸ್ನಸ್ಯ ವಸ್ತುಜಾತಸ್ಯ । ಅತ ಏವೈಶ್ವರ್ಯಾಪರಪರ್ಯಾಯವಿಭೂತಿಗುಣ-ವಿಶಿಷ್ಟಂ ನಿರತಿಶಯಸುಖರೂಪಂ ಬ್ರಹ್ಮಾನುಭವನ್ ತದ್ಭವತಿರಿಕ್ತಸ್ಯ ವಸ್ತುನೋऽಭಾವಾದೇವ ಕಿಮಪ್ಯನ್ಯನ್ನ ಪಶ್ಯತಿ । ಅನುಭಾವ್ಯಸ್ಯ ಸರ್ವಸ್ಯ ಸುಖರೂಪತ್ವಾದೇವ ದುಃಖಂ ಚ ನ ಪಶ್ಯತಿ, ತದೇವ ಹಿ ಸುಖಮ್, ಯದನುಭೂಯಮಾನಂ ಪುರುಷಾನುಕೂಲಂ ಭವತಿ ।

ನನು ಚೇದಮೇವ ಜಗದ್ ಬ್ರಹ್ಮಣೋऽನ್ಯತಯाऽನುಭೂಯಮಾನಂ ದುಃಖರೂಪಂ ಪರಿಮಿತಸುಖರೂಪಂ ಚ ಭವತ್ಕಥಮಿವ ಬ್ರಹ್ಮವಿಭೂತಿತ್ವೇನ ತದಾತ್ಮಕತಯाऽನುಭೂಯಮಾನಂ ಸುಖರೂಪಮೇವ ಭವೇತ್ । ಉಚ್ಯತೇ । ಕರ್ಮವಶ್ಯಾನಾಂ ಕ್ಷೇತ್ರಜ್ಞಾನಾಂ ಬ್ರಹ್ಮಣೋऽನ್ಯತ್ವೇನಾನುಭೂಯಮಾನಂ ಕೃತ್ಸ್ನಂ ಜಗತ್ ತತ್ತತ್ಕರ್ಮಾನುರೂಪಂ ದುಃಖಂ ಚ ಪರಿಮಿತಸುಖಂ ಚ ಭವತಿ । ಅತೋ ಬ್ರಹ್ಮಣೋऽನ್ಯತಯಾ ಪರಿಮಿತಸುಖತ್ವೇನ ದುಃಖತ್ವೇನ ಚ ಜಗದನುಭವಸ್ಯ ಕರ್ಮನಿಮಿತ್ತತ್ವಾತ್ ಕರ್ಮರೂಪಾವಿದ್ಯಾವಿಮುಕ್ತಸ್ಯ ತದೇವ ಜಗದ್ವಿಭೂತಿಗುಣವಿಶಿಷ್ಟಬ್ರಹ್ಮಾನುಭವಾನ್ತರ್ಗತಂ ಸುಖಮೇವ ಭವತಿ । ಯಥಾ ಪಿತ್ತೋಪಹತೇನ ಪೀಯಮಾನಂ ಪಯಃ ಪಿತ್ತತಾರತಮ್ಯೇನಾಲ್ಪಸುಖಂ ವಿಪರೀತಂ ಚ ಭವತಿ, ಯಥಾ ಪಿತ್ತಾನುಪಹತಸ್ಯ ಸುಖಾಯೈವ ಭವತಿ । ಯಥೈವ ರಾಜಪುತ್ರಸ್ಯ ಪಿತುರ್ಲೀಲೋಪಕರಣಮತಥಾ-ತ್ವೇನಾನುಸನ್ಧೀಯಮಾನಂ ಪ್ರಿಯತ್ವಮನುಪಗತಮ್, ತಥಾತ್ವಾನುಸನ್ಧಾನೇ ಪ್ರಿಯತಮಂ ಭವತಿ, ತಥಾ ನಿರತಿಶಯಾನನ್ದಸ್ವರೂಪಸ್ಯ ಬ್ರಹ್ಮಣोऽನವಧಿಕಾತಿಶಯಾಸङ್ಖ್ಯೇಯಕಲ್ಯಾಣಗುಣಾಕರಸ್ಯ ಲೀಲೋಪಕರಣಂ ತದಾತ್ಮಕಂ ಚಾನುಸನ್ಧೀಯಮಾನಂ ಜಗನ್ನಿರತಿಶಯಪ್ರೀತಯೇ ಭವತ್ಯೇವ । ಅತೋ ಜಗದೈಶ್ವರ್ಯ-ವಿಶಿಷ್ಟಮನವಧಿಕಾತಿಶಯಸುಖರೂಪಂ ಬ್ರಹ್ಮಾನುಭವಸ್ತತೋऽನ್ಯತ್ ಕಿಮಪಿ ನ ಪಶ್ಯತಿ । ದುಃಖಂ ಚ ನ ಪಶ್ಯತಿ । ಏತದೇವೋಪಪಾದಯತಿ ವಾಕ್ಯಶೇಷಃ 'ಸ ವಾ ಏಷ ಏವಂ ಪಶ್ಯನ್ನೇವಂ ಮನ್ವಾನ ಏವಂ ವಿಜಾನನ್ನಾತ್ಮರತಿರಾತ್ಮಕ್ರೀಡ ಆತ್ಮಮಿಥುನ ಆತ್ಮಾನನ್ದಸ್ಸ ಸ್ವರಾಡ್ ಭವತಿ । ತಸ್ಯ ಸರ್ವೇಷು ಲೋಕೇಷು ಕಾಮಚಾರೋ ಭವತಿ । ಅಥ ಯेऽನ್ಯಥाऽತೋ ವಿದುರನ್ಯರಾಜಾನಸ್ತೇऽಕ್ಷಯ್ಯಲೋಕಾ ಭವನ್ತಿ । ತೇಷಾಂ ಸರ್ವೇಷು ಲೋಕೇಷ್ವಕಾಮಚಾರೋ ಭವತಿ' ಇತಿ । ಸ್ವರಾಡ್ ಅಕರ್ಮವಶ್ಯಃ । ಅನ್ಯರಾಜಾನಃ ಕರ್ಮವಶ್ಯಾಃ । ತಥಾ 'ನ

'ಪಿತೃಹಾ ವೈ ತ್ವಮಸಿ' ಇತ್ಯಾದಿ ವಾಕ್ಯದಲ್ಲಿ ಪ್ರಾಣಸಹಿತವಾದ ಶರೀರವನ್ನು ಹಿಂಸೆಗೆ ಯೋಗ್ಯವಾಗಿದೆಯೆನ್ನಲಾಗಿದೆ. ಕೇವಲ ಜಡವಾದ ಪ್ರಾಣಕ್ಕೆ ಪಿತೃತ್ವವಾಗಲೀ ಅಥವಾ ಹಿಂಸ್ಯತ್ವವಾಗಲೀ ಯುಕ್ತವಾಗುವುದಿಲ್ಲ. ಆದ್ದರಿಂದ ಜೀವನೇ ಪ್ರಾಣಶಬ್ದವಾಚ್ಯನಾಗಿದ್ದಾನೆಂದು ಪೂರ್ವಪಕ್ಷ.

तन्न । प्राणशब्दस्य प्रसिद्ध्यनुसारेण प्राणाभिमानिदेवतावाचित्वेऽपि ''अथ यद्यप्येनानुत्क्रान्तप्राणान्'' इत्यादिनोपपादितस्य पितृत्वादेः सम्भवेन लक्षणायोगात् ।

ರಾಮಾನುಜರ ಈ ಅಧಿಕರಣದ ಪೂರ್ವಪಕ್ಷವೇ ಸರಿಯಿಲ್ಲ. ಏಕೆಂದರೆ ಶ್ರುತಿಪ್ರಸಿದ್ಧಿಗೆ ಅನುಸಾರಿಯಾಗಿ ಪ್ರಾಣಶಬ್ದವು ಅಭಿಮಾನಿದೇವತೆಯನ್ನೇ ಪ್ರತಿಪಾದಿಸುತ್ತದೆ. ಹೀಗೆ ಹೇಳಿದಾಗಲೂ 'ಅಥ ಯದ್ಯಪ್ಯೇನಾನುತ್ಕ್ರಾಮತ್ಯಾನ್' ಇತ್ಯಾದಿ ವಾಕ್ಯದಲ್ಲಿ ಹೇಳಲ್ಪಟ್ಟ ಪಿತೃತ್ವಾದಿಗಳೂ ಸಹ ಯುಕ್ತವಾಗುತ್ತದೆ. ಆದ್ದರಿಂದ ಜೀವನಲ್ಲಿ ಲಕ್ಷಣವನ್ನೇಕೆ ಮಾಡಬೇಕು.

पश्यो मृत्युं पश्यति, न रोगं नोत दुःखताम् । सर्वं ह पश्यः पश्यति सर्वमाप्नोति सर्वशः ।।' इति च । निरतिशयसुखरूपत्वं च ब्रह्मणः 'आनन्दमयोऽभ्यासात्' इत्यत्र प्रपञ्चितम् । अतः प्राणशब्दनिर्दिष्टात् प्रत्यगात्मनोऽर्थान्तरभूतस्य सत्यशब्दाभिधेयस्य ब्रह्मणो भूमेत्युपदेशाद् भूमा परं ब्रह्म ।। ८ ।।

धर्मोपपत्तेश्च ॥ अस्य भूम्नो ये धर्मा आम्नायन्ते, तेऽपि परस्मिन्नेवोपपद्यन्ते । 'एतदमृतम्' इति स्वाभाविकममृतत्वम् । 'स्वे महिम्नि' इत्यनन्याधारत्वम् । 'स एवाधस्तात्' इत्यादि । 'स एवेदं सर्वम्' इति सर्वात्मकत्वम् । 'आत्मतः प्राणः' इत्यादि प्राणप्रभृतिसर्वस्योत्पादकत्वमित्यादयो हि धर्माः परमात्मन एव । यत्तु 'अहमेवाधस्तात्' इत्यादिना सर्वात्मकत्वमुपदिष्टम्, तद्भूमविशिष्टस्य ब्रह्मणोऽहङ्ग्रहेणोपासनमुपदिश्यते 'अथातोऽहङ्कारादेशः' इत्यहङ्ग्रहोपदेशोपक्रमात् । अहमर्थस्य प्रत्यगात्मनोऽपि ह्यात्मा परमात्मेत्यन्तर्यामिब्राह्मणादिषूक्तम् । अतः प्रत्यगर्थस्य परमात्मपर्यवसानादहंशब्दोऽपि परमात्मपर्यवसायीति प्रत्यगात्मशरीरकत्वेन परमात्मानुसन्धानार्थोऽयमहङ्ग्रहोपदेशः । परमात्मनस्सर्वशरीरतया सर्वात्मत्वात् प्रत्यगात्मनोऽप्यात्मा परमात्मा । तदेव 'अथात आत्मादेशः' इत्यादिना 'आत्मैवेदं सर्वम्' इत्यन्तेनोच्यते । एतदेवोपपादयितुं प्रत्यगात्मनोऽप्यात्मभूतात् परमात्मनः सर्वस्योत्पत्तिरुच्यते । 'तस्य ह वा एतस्यैवं पश्यत एवं मन्वानस्यैवं विजानत आत्मतः प्राण आत्मत आकाशः' इत्यादिना । उपासकस्यान्तर्यामितयाऽवस्थितात् परमात्मनस्सर्वस्योत्पत्तिरित्यर्थः । अतः परमात्मनः प्रत्यगात्मशरीरकत्वज्ञानप्रतिष्ठार्थमहङ्ग्रहोपासनं कर्तव्यम् । तस्माद् भूमविशिष्टः परमात्मेति सिद्धम् ।। ९ ।।

''अथ यद्यप्येनानुत्क्रान्तप्राणान्'' इति प्रकृतानामाचार्यादिजीवानाम् उत्क्रान्तप्राणत्वस्योक्तत्वेन प्राणस्य जीवमात्रत्वायोगाच्च । नहि स्वयं स्वस्मादुत्क्रान्तो भवति ।

'ಅಥ ಯದ್ಯಪ್ಯೇನಾನುತ್ಕ್ರಾಂತಪ್ರಾಣಾನ್' ಇತ್ಯಾದಿ ವಾಕ್ಯದಲ್ಲಿ ಆಚಾರ್ಯರೇ ಮೊದಲಾದ ಜೀವರುಗಳು ಪ್ರಕೃತರಾಗಿದ್ದಾರೆ. ಅಂತಹ ಜೀವರ ಪ್ರಾಣವು ಉತ್ಕ್ರಾಂತವಾಗುತ್ತದೆಂದು ಶ್ರುತಿಯು ಹೇಳುತ್ತಿದೆ. ಆದ್ದರಿಂದ ಪ್ರಾಣನು ಜೀವನಾಗಲು ಸಾಧ್ಯವಿಲ್ಲ. ಏಕೆಂದರೆ ಜೀವನನ್ನೇ ಪ್ರಾಣನೆಂದರೆ 'ಪ್ರಾಣನು ಪ್ರಾಣನಿಂದ ಉತ್ಕ್ರಾಂತನಾದನು' ಎಂದು ಹೇಳಿದಂತಾಗುತ್ತದೆ. ಆದರೆ ತಾನು ತನ್ನಿಂದ ಉತ್ಕ್ರಾಂತನಾಗಲು ಎಂದೂ ಸಹ ಸಾಧ್ಯವಿಲ್ಲ.

अत एव ''एष सम्प्रसादोऽस्माच्छरीरात्समुत्थाय'' इति श्रुतेः सम्प्रसादो जीवः । तस्मादध्युपदेशादिति केषाञ्चित्सूत्राक्षरार्थोऽपि निरस्तः ।

ಆದ್ದರಿಂದಲೇ 'ಏಷ ಸಂಪ್ರಸಾದೋಽಸ್ಮಾಚ್ಛರೀರಾತ್ಸಮುತ್ಥಾಯ'' ಎಂಬ ಶ್ರುತಿಯಲ್ಲಿರುವ 'ಸಂಪ್ರಸಾದ' ಶಬ್ದವು ಜೀವನನ್ನು ಪ್ರತಿಪಾದಿಸುತ್ತದೆ. ಅಂತಹ ಜೀವನ ದೆಸೆಯಿಂದ 'ಅಧ್ಯುಪದೇಶಾತ್' ಅಧಿಕನೆಂಬ ಉಪದೇಶವಿರುವ ಪ್ರಯುಕ್ತ ಬ್ರಹ್ಮನೇ ಭೂಮನಾಗುತ್ತಾನೆಂಬ ರಾಮಾನುಜರ ಸೂತ್ರವ್ಯಾಖ್ಯಾನವೂ ಸಹ ನಿರಾಸಿತವಾಯಿತು.

तथात्वे श्रुतौ प्राणशब्दस्य जीवे लक्षणापत्तेः । जीवसामान्यादध्युपदेशमात्रेण ब्रह्मत्वासिद्धेश्च । त्वद्रीत्या श्रद्धादिषु व्यभिचाराच्च ।

ಒಂದು ವೇಳೆ 'ಸಂಪ್ರಸಾದ' ಶಬ್ದಕ್ಕೆ ಜೀವನೆಂದು ಅರ್ಥೈಸುವುದಾದರೆ ಶ್ರುತಿಯಲ್ಲಿರುವ ಪ್ರಾಣಶಬ್ದಕ್ಕೆ ಜೀವನಲ್ಲಿ ಲಕ್ಷಣಾ ಮಾಡಬೇಕಾಗುತ್ತದೆ. ಮತ್ತು ಸಾಮಾನ್ಯನಾದ ಜೀವನಿಗಿಂತ ಉತ್ತಮತ್ವವನ್ನು ಹೇಳಿದ ಮಾತ್ರಕ್ಕೆ ಭೂಮನು ಬ್ರಹ್ಮನೇ ಆಗುತ್ತಾನೆಂದು ಸಿದ್ಧವಾಗುವುದಿಲ್ಲ. ಅಷ್ಟೇ ಅಲ್ಲದೇ, ನಿಮ್ಮ ಪ್ರಕಾರವೇ ಜೀವನಿಗಿಂತ ಉತ್ತಮತ್ವವೂ ಶ್ರದ್ಧಾ ಮೊದಲಾದವುಗಳಲ್ಲಿಯೂ ಹೇಳಲ್ಪಟ್ಟಿದೆ. ಆದರೆ ಅವುಗಳಲ್ಲಿ ಬ್ರಹ್ಮತ್ವವಿಲ್ಲದ ಕಾರಣ ವ್ಯಭಿಚಾರವು ಬರುತ್ತದೆ.

'सम्प्रसादोऽस्मात्' इति श्रुतौ शरीरात्समुत्थानलिङ्गेन सम्प्रसादशब्दस्याल्प-सुखयुक्तजीवे कथञ्चिद्यौगिकत्वेऽपि सूत्रेऽल्पसुखयुक्तजीवपरत्वे हेत्वभावाच्च ।

'ಸಂಪ್ರಸಾದೋಽಸ್ಮಾತ್' ಎಂಬ ಶ್ರುತಿಯಲ್ಲಿ ಶರೀರದಿಂದ ಹೊರಡುವಿಕೆಯೆಂಬ ಲಿಂಗದಿಂದ 'ಸಂಪ್ರಸಾದ' ಶಬ್ದಕ್ಕೆ ಅಲ್ಪಸುಖವುಳ್ಳ ಜೀವನಲ್ಲಿ ಯಾವುದೋ ಒಂದು ರೀತಿ ಯೌಗಿಕಾರ್ಥವನ್ನು ಮಾಡಿದರೂ ಸೂತ್ರದಲ್ಲಿರುವ 'ಸಂಪ್ರಸಾದ' ಶಬ್ದಕ್ಕೆ ಸ್ವಲ್ಪಸುಖವುಳ್ಳ ಜೀವನೆಂಬರ್ಥವನ್ನು ಹೇಳಲು ಯಾವುದೇ ಕಾರಣವಿಲ್ಲ.

''नामाभिमानिनी चोषा'' इत्यादिस्मृत्या नामादीनामपि जीवविशेषत्वाच्चेति ।

ಮತ್ತು 'ನಾಮಾಭಮಾನಿನೀ ಚೋಷಾ ತಸ್ಯಾ ಬ್ರಹ್ಮ ಪರಂ ಸ್ಮರ' ಇತ್ಯಾದಿ ಸ್ಮೃತಿಯಿಂದ ನಾಮಾದಿಗಳೂ ಸಹ ಜೀವನಿಗಿಂತ ಉತ್ತಮವೆಂದು ಹೇಳಲ್ಪಟ್ಟವೆ. ಆದ್ದರಿಂದ ಜೀವಾಧಿಕ್ಯೇನ ಉಪದೇಶವು ನಾಮಾದಿಗಳಲ್ಲಿದ್ದರೂ ಬ್ರಹ್ಮತ್ವವು ಇಲ್ಲದ ಕಾರಣ ವ್ಯಭಚಾರ ಬರುತ್ತದೆ.

टीकाक्षरार्थस्तु स्पष्टः । यद्यपि श्रुतौ विश्वतः परममिति द्राविडपाठः । तथापि विश्वतः परमामित्यान्ध्रपाठो भाष्य उदाहृतः ।।

।। इति श्रीब्रह्मण्यतीर्थपूज्यश्रीपादशिष्यव्यासतीर्थविरचिता तात्पर्यचन्द्रिकायां भूमाधिकरणं सम्पूर्णम् ।।

ಟೀಕೆಯ ಕಠಿಣ ಪದಗಳ ಅರ್ಥವು ಉಪನ್ಯಾಸಮುಖದಿಂದಲೇ ವಿವರಿಸುವಾಗಲೇ ಸ್ಪಷ್ಟವಾಗಿದೆ. ಭಾಷ್ಯದಲ್ಲಿ ಉದಾಹರಿಸಿದ ಶ್ರುತಿಯಲ್ಲಿ 'ವಿಶ್ವತಃ ಪರಮ್' ಎಂದು ತಮಿಳು ದೇಶದ ಪಾಠ, 'ವಿಶ್ವತಃ ಪರಮಾಮ್' ಎಂಬುದು ಆಂಧ್ರ ಪಾಠ. ಹೀಗೆ ವೇದದಲ್ಲಿಯೂ ಪಾಠಭೇದವನ್ನು ಗಮನಿಸಬೇಕು.

ಇಲ್ಲಿಗೆ ಶ್ರೀವ್ಯಾಸತೀರ್ಥರಿಂದ ರಚಿತವಾದ ತಾತ್ಪರ್ಯಚಂದ್ರಿಕೆಯ ಕನ್ನಡಾನುವಾದದಲ್ಲಿ ಭೂಮಾಧಿಕರಣವು ಸಂಪೂರ್ಣವಾಯಿತು.

प्रकाशः –

केचित्त्विति ।। ''यत्र नान्यत्पश्यति नान्यच्छृणोति नान्यद्विजानाति स भूमा'' इत्यादावुक्तो भूमा किं प्रत्यागात्मरूपो जीवोऽथ परमात्मेति संशये

ವಿವರಣೆ - ರಾಮಾನುಜರ ಅಧಿಕರಣ ಶರೀರ ಹೀಗಿದೆ - 'ಯತ್ರ ನ್ಯಾನ್ಯತ್ಪಶ್ಯತಿ ನಾನ್ಯಚ್ಛೃಣೋತಿ ನಾನ್ಯದ್ವಿಜಾನಾತಿ ಸ ಭೂಮಾ' ಇತ್ಯಾದಿ ಶ್ರುತಿಯಲ್ಲಿ ಪ್ರತಿಪಾದ್ಯನಾದ ಭೂಮನು ಪ್ರತ್ಯಗಾತ್ಮನಾದ ಜೀವನೋ ಅಥವಾ ಪರಮಾತ್ಮನೋ ? ಎಂದು ಸಂಶಯ.

प्रकाशः – नामादिषु प्रश्नोत्तरत्वेन प्रवृत्तस्य भूयस्त्ववचनस्य प्राणे पर्यवसानात् प्राणाद्धि तदनुक्तेः प्राणभूम्नोरभेदात् प्राणशब्दस्य ''ततति शोकमात्मवित्'' इत्यात्मजिज्ञासया प्रक्रान्ते प्रकरणे प्राणपर्यन्तोपास्योपदेशहेतुना प्राणसाहचर्यनिमित्तेन लक्षणया जीवपरत्वात्

ನಾಮ, ವಾಕ್ ಇವುಗಳ ವಿಷಯದಲ್ಲಿ ಪ್ರಶ್ನೆ ಹಾಗೂ ಉತ್ತರಗಳು ನಾರದರು ಹಾಗೂ ಸನತ್ಕುಮಾರರ ನಡುವೆ ನಡೆಯುತ್ತಿದೆ. ಕೊನೆಯಲ್ಲಿ ಪ್ರಾಣನನ್ನು ಉತ್ತಮರೆಂದು ಸನತ್ಕುಮಾರರು ಉತ್ತರಿಸಿದ್ದಾರೆ. ಪ್ರಾಣನಿಗಿಂತ ಮತ್ತೊಬ್ಬ ಉತ್ತಮನನ್ನು ಅವರು ಹೇಳಿಲ್ಲ. ಆದ್ದರಿಂದ ಪ್ರಾಣನೇ ಭೂಮನೆಂದು ಹೇಳಬೇಕು. ಆದ್ದರಿಂದ ಇಂತಹ ಪ್ರಾಣಶಬ್ದವು; 'ತರತಿ ಶೋಕಮಾತ್ಮವಿತ್' ಇತ್ಯಾದಿಯಾಗಿ ಆತ್ಮಜಿಜ್ಞಾಸೆಯಿಂದ ಪ್ರಾರಂಭವಾದ ಪ್ರಕರಣವು ಪ್ರಾಣನಲ್ಲಿ ಪರ್ಯವಸಾನವನ್ನು ಹೊಂದಿರುವ ಕಾರಣದಿಂದ ಪ್ರಾಣನ ಸಾಹಚರ್ಯವೆಂಬ ನಿಮಿತ್ತದಿಂದ ಲಕ್ಷಣಯಾ ಜೀವನನ್ನೇ ಪ್ರತಿಪಾದಿಸುತ್ತದೆ.

ಪ್ರಕಾಶಃ – ಪ್ರಸಿದ್ಧಜಡವಾಯುಪರತ್ವೇ ಪ್ರಕ್ರಾನ್ತಾತ್ಮಶಬ್ದಾಯೋಗಾತ್ ''ಪ್ರಾಣೋ ವೈ ಪಿತಾ ಪ್ರಾಣೋ ವೈ ಮಾತಾ ಪ್ರಾಣೋ ಭ್ರಾತಾ ಪ್ರಾಣಸ್ತ್ವಸಾ ಪ್ರಾಣ ಆಚಾರ್ಯಃ ಪ್ರಾಣೋ ಬ್ರಾಹ್ಮಣಃ'' ಇತ್ಯುಕ್ತಪಿತೃತ್ವಾದೇರಯೋಗಾತ್

ಒಂದು ವೇಳೆ ಪ್ರಾಣಶಬ್ದವು ಜಡವಾಯುವನ್ನು ಪ್ರತಿಪಾದಿಸುವುದಾದರೆ ಉಪಕ್ರಮದಲ್ಲಿರುವ ಆತ್ಮಶಬ್ದವು ತಪ್ಪಾಗುತ್ತದೆ. ಮತ್ತು 'ಪ್ರಾಣೋ ವೈ ಪಿತಾ ಪ್ರಾಣೋ ವೈ ಮಾತಾ ಪ್ರಾಣೋ ಭ್ರಾತಾ ಪ್ರಾಣಃ ಸ್ವಸಾ ಪ್ರಾಣ ಆಚಾರ್ಯಃ ಪ್ರಾಣೋ ಬ್ರಾಹ್ಮಣಃ' ಎಂಬಲ್ಲಿ ಪ್ರಾಣನಿಗೆ ಹೇಳಲ್ಪಟ್ಟ ಪಿತೃತ್ವ, ಮಾತೃತ್ವ, ಭ್ರಾತೃತ್ವ ಇವುಗಳೆಲ್ಲವೂ ಅಯುಕ್ತವಾಗುತ್ತವೆ.

ಪ್ರಕಾಶಃ – ತಥಾ ''ಪಿತೃಹಾ ವೈ ತ್ವಮಸಿ'' ಇತಿ ''ಮಾತೃಹಾ ತ್ವಮಸಿ'' ಇತ್ಯಾದಿನಾ ತಥಾ ''ಉತ್ಕ್ರಾನ್ತಪ್ರಾಣಾನ್'' ಇತ್ಯಾರಭ್ಯ ಪ್ರವೃತ್ತೇನ ''ನ ಪಿತೃಹಾऽಸಿ' ಕ್'ತಿ ''ನ ಮಾತೃಹಾऽಸಿ'' ಇತ್ಯಾದಿನಾ ಚಾತ್ರ ಪ್ರಕರಣೇ ಸ ಪ್ರಾಣೇಷು ಹಿಂಸಕೇ ಪುರುಷೇ ಹಿಂಸಾನಿಮಿತ್ತೋಪಕ್ರೋಶ ವಚನಸ್ಯಾಪ್ರಾಣೇಷು ಹಿಂಸಕೇ ಹಿಂಸಾನಿಮಿತ್ತೋಪಕ್ರೋಶ ಭಾವಸ್ಯ ಚ ದರ್ಶನೇನ ಕೇವಲಜಡೇ ಹಿಂಸ್ಯತ್ವಾನಿಮಿತ್ತೋಪಕ್ರೋಶಾದೇಶ್ಚಾಯೋಗಾತ್

ಮತ್ತು 'ಪಿತೃಹಾ ವೈ ತ್ವಮಸಿ' ಎಂಬುದಾಗಿ ಮತ್ತು 'ಮಾತೃಹಾ ತ್ವಮಸಿ' ಇತ್ಯಾದಿಯಾಗಿ ಹಾಗೂ ಆದರಂತೆ 'ಉತ್ಕ್ರಾಂತಪ್ರಾಣಾನ್' ಎಂಬುದರಿಂದ ಪ್ರಾರಂಭಿಸಿ ಪ್ರವೃತ್ತವಾದ 'ನ ಪಿತೃಹಾಸಿ' 'ನ ಮಾತೃಹಾಽಸಿ' ಇತ್ಯಾದಿಯಾಗಿ ಇದೇ ಪ್ರಕರಣದಲ್ಲಿ ಪ್ರಾಣಸಹಿತನಾದ ಪುರುಷನನ್ನು ಹಿಂಸೆ ಮಾಡಿದರೆ ಆಕ್ರೋಶದ ಮಾತನ್ನು ಶ್ರುತಿಯು ಹೇಳುತ್ತಿದೆ. ಪ್ರಾಣವಿಲ್ಲದ ಪುರುಷನನ್ನು ಹಿಂಸೆ ಮಾಡಿದರೆ ಹಿಂಸಾ ನಿಮಿತ್ತವಾದ ಆಕ್ರೋಶವನ್ನು ಶ್ರುತಿಯು ಹೇಳುತ್ತಿಲ್ಲ. ಏಕೆಂದರೆ ಪ್ರಾಣವಿಲ್ಲದ ಶರೀರವು ಕೇವಲ ಜಡವಾಗುವುದರಿಂದ ಹಿಂಸೆಯು ಉಂಟಾಗುವುದಿಲ್ಲ. ಆದಕ್ಕೆ ನಿಮಿತ್ತವಾದ ಆಕ್ರೋಶವನ್ನೂ ಸಹ ಶ್ರುತಿಯು ಹೇಳಲು ಸಾಧ್ಯವಿಲ್ಲ.

ಪ್ರಕಾಶಃ – ಲೋಕೇ ಚ ಸಜೀವನಿರ್ಜೀವಯೋರುಪಮರ್ದಕಾರಿಷ್ವಪಕ್ರೋಶತದಭಾವೋಪಲಮ್ಭಾತ್ ಪ್ರಾಣಶಬ್ದಿತೋ ಜೀವ ಏವ ಭೂಮೇತಿ ಪ್ರಾಪ್ತೇ

ಲೋಕದಲ್ಲಿಯೂ ಸಹ ಜೀವ ಇರುವ ಶರೀರವನ್ನು ಹಿಂಸೆ ಮಾಡಿದರೆ ಆಕ್ರೋಶವು ವ್ಯಕ್ತವಾಗುತ್ತದೆ. ನಿರ್ಜೀವ ಶರೀರವನ್ನು ಹಿಂಸಿಸಿದರೆ ಆಕ್ರೋಶವು ವ್ಯಕ್ತವಾಗುವುದಿಲ್ಲ. ಈ ಕಾರಣದಿಂದ ಪ್ರಾಣಶಬ್ದವು ಜೀವನನ್ನೇ ಪ್ರತಿಪಾದಿಸುತ್ತದೆ. ಅಂತಹ ಜೀವನೇ ಭೂಮನಾಗಿದ್ದಾನೆಂದು ಪೂರ್ವಪಕ್ಷ.

ಪ್ರಕಾಶಃ – ಭೂಯೋ ವಿಷಯಪ್ರಶ್ನಪ್ರತ್ಯುಕ್ತಯೋಃ ಪ್ರಾಣಪರ್ಯಂತತ್ವೇऽಪಿ ಪ್ರಾಣವಾದಿನोऽತಿವಾದಿತ್ವೋಕ್ತ್ಯನನ್ತರम् ''ಏಷ ತು ವಾ ಅತಿವದತಿ ಯः ಸತ್ಯೇನಾತಿವದತಿ'' ಇತಿ ತುಶಬ್ದೇನೋಪಾಸಕಭೇದं ಪ್ರತಿಪಾದ್ಯ ಸತ್ಯೋಪಾಸಕಸ್ಯ ಪೂರ್ವಸ್ಮಾತ್ಪ್ರಾಣೋಪಾಸಕಾದಾಧಿಕ್ಯಕಥನಾದತಿವಾದಿತ್ವಸ್ಯ ಸ್ವೋಪಾಸ್ಯಾಧಿಕ್ಯವಾದಿತ್ವರೂಪತ್ವಾತ್ಸತ್ಯಶಬ್ದಾವಸೇಯं ಬ್ರಹ್ಮೈವ ಭೂಮಾ ಸಮ್ಪ್ರಸಾದಾತ್ಪ್ರಾಣಶಬ್ದಿತಾಜ್ಜೀವಾದೂರ್ಧ್ವಮುಪದೇಶಾತ್ । ಅಮೃತತ್ವಸ್ವಮಹಿಮಪ್ರತಿಷ್ಠಿತತ್ವ-ಸರ್ವಾತ್ಮತ್ವಾದಿಧರ್ಮಾಣಾಮುಪಪತ್ತೇಶ್ಚ ಬ್ರಹ್ಮೈವ ಭೂಮೇತಿ ಸಿದ್ಧಾನ್ತ ಇತ್ಯಾಹುರಿತ್ಯರ್ಥಃ ।

ಜೀವನು ಪ್ರಾಣನಾಗಲು ಸಾಧ್ಯವಿಲ್ಲ. ಏಕೆಂದರೆ ನಾಮ, ವಾಕ್ ಮೊದಲಾದ ಅನೇಕ ದೇವತೆಗಳ ವಿಷಯದಲ್ಲಿ ಪ್ರಶ್ನೆ ಹಾಗೂ ಉತ್ತರಗಳು ನಡೆದು ಪ್ರಾಣನ ತನಕ ಸನತ್ಕುಮಾರರು ಉತ್ತರಿಸಿದ್ದಾರೆ. ಯಾರು ಈ ಪ್ರಾಣನನ್ನು ತಿಳಿಯುತ್ತಾರೋ, ಅವನನ್ನು ಅತಿವಾದಿಯೆಂದು ಹೇಳಿ, ಅನಂತರ 'ಏಷ ತು ವಾ ಅತಿವದತಿ ಯः ಸತ್ಯೇನಾತಿವದತಿ' 'ಯಾವಾತನು ಸತ್ಯನನ್ನು ತಿಳಿಯುತ್ತಾನೋ, ಅವನು ವಿಶೇಷವಾದ ಅತಿವಾದಿಯೆನಿಸುತ್ತಾನೆ' ಎಂಬುದಾಗಿ ಶ್ರುತಿಯಲ್ಲಿರುವ 'ತು' ಶಬ್ದವು ಉಪಾಸಕರಲ್ಲಿ ಭೇದವನ್ನು ಪ್ರತಿಪಾದಿಸಿದೆ. ಅಂದರೆ ಪ್ರಾಣೋಪಾಸಕನು ಕೇವಲ ಅತಿವಾದಿಯಾಗುತ್ತಾನೆ. ಸತ್ಯೋಪಾಸಕನು ವಿಶೇಷವಾದ ಅತಿವಾದಿಯಾಗುತ್ತಾನೆ ಎಂಬುದಾಗಿ. ಹೀಗೆ ಪ್ರಾಣೋಪಾಸಕನೇ ಬೇರೆ, ಸತ್ಯೋಪಾಸಕನೇ ಬೇರೆ ಎಂದು ಉಪನಿಷತ್ತು ಹೇಳಿದೆ. ಮತ್ತು ಸತ್ಯೋಪಾಸಕನು, ಪ್ರಾಣೋಪಾಸಕನಿಗಿಂತ ಶ್ರೇಷ್ಠನೆಂದು ಹೇಳಿರುವುದರಿಂದ ಸತ್ಯಶಬ್ದದಿಂದ ಬ್ರಹ್ಮನೇ ಪ್ರತಿಪಾದ್ಯನೆಂದು ಅವನೇ ಭೂಮನೆಂದು ತಿಳಿಯುತ್ತದೆ. ಏಕೆಂದರೆ 'ಸಂಪ್ರಸಾದಾತ್' ಪ್ರಾಣಶಬ್ದ ಪ್ರತಿಪಾದ್ಯನಾದ ಜೀವನಿಗಿಂತ, 'ಅಧ್ಯುಪದೇಶಾತ್' ಉತ್ತಮನೆಂದು ಉಪದೇಶಿಸಿದ್ದರಿಂದ ಮತ್ತು ಅಮೃತತ್ವ, ಸ್ವಮಹಿಮಪ್ರತಿಷ್ಠಿತತ್ವ, ಸರ್ವಾತ್ಮಕತ್ವ ಮೊದಲಾದ ಧರ್ಮಗಳನ್ನೂ ಸಹ ಹೇಳಿರುವುದರಿಂದ ಬ್ರಹ್ಮನೇ ಭೂಮನಾಗುತ್ತಾನೆ ಹೊರತು, ಜೀವನಲ್ಲವೆಂದು ಸಿದ್ಧಾಂತ.

ಪ್ರಕಾಶಃ – ತರ್ಹಿ ಕो ವಿಶೇಷ ಇತ್ಯತ ಆಹ – ಪ್ರಾಣಶಬ್ದಸ್ತ್ವಿತಿ ।। ಜೀವಗ್ರಹೇ ಹೇತ್ವದ್ವಯಮಾಹ – ಪ್ರಾಣो ಹೇತಿ ।। ಸಿದ್ಧಾನ್ತಸ್ಯ ಸ್ಫುಟತ್ವಾತ್ಪೂರ್ವಪಕ್ಷಸ್ಯೈವोಪನ್ಯಾಸಃ ।

ನಮ್ಮ ಸಿದ್ಧಾಂತದಂತೆ ರಾಮಾನುಜರ ಅಧಿಕರಣದ ಸಿದ್ಧಾಂತವೂ ಸಹ ಇರುವುದರಿಂದ ಏನು ವ್ಯತ್ಯಾಸ? ಎಂಬ ಪ್ರಶ್ನೆಗೆ, 'ಪ್ರಾಣಶಬ್ದಸ್ತು' ಇತ್ಯಾದಿ ವಾಕ್ಯದಿಂದ ಉತ್ತರಿಸಿದ್ದಾರೆ. ಇಬ್ಬರ ಸಿದ್ಧಾಂತವು ಒಂದೇ ಆಗಿದ್ದರೂ ಪ್ರಾಣಸಾಹಚರ್ಯದಿಂದ ಜೀವನೇ ಭೂಮನಾಗುತ್ತಾನೆಂದು ವಿಭಿನ್ನವಾದ ಪೂರ್ವಪಕ್ಷವನ್ನು ರಾಮಾನುಜರು ಹೇಳಿದ್ದಾರೆಂದು ಅಭಿಪ್ರಾಯ. ಜೀವನೇ ಪೂರ್ವಪಕ್ಷಕ್ಕೆ ವಿಷಯನಾಗಲು ಎರಡು ಹೇತುಗಳನ್ನು 'ಪ್ರಾಣೋ ಹ' ಇತ್ಯಾದಿ ವಾಕ್ಯದಿಂದ ಹೇಳಿದ್ದಾರೆ. ಹೀಗೆ ರಾಮಾನುಜರ ಸಿದ್ಧಾಂತವು ನಮಗೆ ಸಮ್ಮತೇ ಆಗಿರುವುದರಿಂದ ಪೂರ್ವಪಕ್ಷದಲ್ಲಿ ಮಾತ್ರ ವಿವಾದವಿರುವುದರಿಂದ ಗ್ರಂಥಕಾರರು ಕೇವಲ ಪೂರ್ವಪಕ್ಷವನ್ನಷ್ಟೇ ಉಪನ್ಯಾಸ ಮಾಡಿದ್ದಾರೆ.

ಪ್ರಕಾಶಃ – ಯದುಕ್ತಂ ಪ್ರಾಣಶಬ್ದಶ್ಚೇತನಪರ ಇತಿ ತದ್ಯುಕ್ತಮ್ । ಲಾಕ್ಷಣಿಕತ್ವಂ ತ್ವಯುಕ್ತಮಿತ್ಯಾಹ – ಪ್ರಾಣಶಬ್ದಸ್ಯೇತಿ ।। ಪ್ರಸಿದ್ಧೀತಿ ।। ಪ್ರಾಗುಕ್ತಶ್ರುತಿಪ್ರಸಿದ್ಧ್ಯನುಸಾರೇಣೇತ್ಯರ್ಥಃ ।

ಪ್ರಾಣಶಬ್ದವು ಚೇತನಪರವೆಂದು ಹೇಳಿದ್ದು ಯುಕ್ತವಾಗಿದೆ. ಆದರೆ ಜೀವನಲ್ಲಿ ಲಕ್ಷಣಾ ಮಾಡಬೇಕೆಂದು ಹೇಳಿದ್ದು ಅಯುಕ್ತವಾಗಿದೆಯೆಂಬುದಾಗಿ 'ಪ್ರಾಣಶಬ್ದಸ್ಯ' ಇತ್ಯಾದಿ ವ್ಯಾಕವು ಪ್ರತಿಪಾದಿಸುತ್ತಿದೆ. 'ಪ್ರಸಿದ್ಧಿ' ಎಂದರೆ ಹಿಂದೆ ಹೇಳಲ್ಪಟ್ಟ ಶ್ರುತಿಪ್ರಸಿದ್ಧಿಗೆ ಅನುಸಾರಿಯಾಗುವುದರಿಂದ ಎಂದರ್ಥ.

ಪ್ರಕಾಶಃ – ತದೀಯಸೂತ್ರಾರ್ಥೋऽप್ಯಯುಕ್ತ ಇತ್ಯಾಹ – ಅತ ಏವೇತಿ ।। ಅತಶ್ಶಬ್ದಾರ್ಥಂ ವ್ಯನಕ್ತಿ – ತಥಾತ್ವ ಇತಿ ।। ತ್ವಯಾ ತಥೋಕ್ತತ್ವಾದಿತಿ ಭಾವಃ ।।

ರಾಮಾನುಜರ ಸೂತ್ರಾರ್ಥವೂ ಸಹ ಅಯುಕ್ತವಾಗಿದೆಂಬುದಾಗಿ 'ಅತ ಏವ' ಇತ್ಯಾದಿ ವಾಕ್ಯವು ಪ್ರತಿಪಾದಿಸುತ್ತಿದೆ. 'ಅತಃ' ಶಬ್ದದ ಅರ್ಥವನ್ನೇ 'ತಥಾತ್ವೇ' ಎಂಬುದಾಗಿ ಸ್ಪಷ್ಟಪಡಿಸುತ್ತಿದ್ದಾರೆ. ಸೂತ್ರದಲ್ಲಿರುವ ಪ್ರಾಣಶಬ್ದಕ್ಕೆ ಲಕ್ಷಣಾ ಮಾಡಿದರೆ ಶ್ರುತಿಯಲ್ಲಿರುವ ಪ್ರಾಣಶಬ್ದಕ್ಕೂ ಸಹ ಲಕ್ಷಣಾ ಮಾಡಬೇಕಾಗುತ್ತದೆಂದು ಈವಾಕ್ಯದಲ್ಲಿ ಹೇಳುತ್ತಿದ್ದಾರೆ. 'ತಥಾತ್ವೇ' ಎಂದರೆ 'ಸೂತ್ರದಲ್ಲಿರುವ ಪ್ರಾಣಶಬ್ದಕ್ಕೆ ನೀನು ಲಕ್ಷಣಾ ಮಾಡುವುದಾದರೆ' ಎಂದರ್ಥ.

ಪ್ರಕಾಶಃ – 'ಮಹತಃ ಪರಮವ್ಯಕ್ತಮ್' ಇತ್ಯಾದೌ ತ್ವನ್ಮತೇ ಜೀವಾದಧಿಕತ್ವೇನ ನಿರ್ದಿಷ್ಟೇ ಶರೀರೇ ಬ್ರಹ್ಮತ್ವಾಭಾವಾದಪ್ರಯೋಜಕोऽयं ಹೇತುರಿತ್ಯಾಹ – ಜೀವೇತಿ ।। ತ್ವದ್ರೀತ್ಯೇತಿ ।। ತ್ವನ್ಮತೇ ತೇಷಾಮಬ್ರಹ್ಮತ್ವಾತ್ಸತ್ಯವಾಕ್ಯ ಇವ ಶ್ರದ್ಧಾ ತ್ವೇವೇತ್ಯಾಧಿಕ್ಯದ್ಯೋತಕತುಶಬ್ದಸ್ಯ ಶ್ರದ್ಧಾದೌ ಭಾವಾದಿತಿ ಭಾವಃ ।

'ಮಹತಃ ಪರಮವ್ಯಕ್ತಮ್' ಇತ್ಯಾದಿ ವಾಕ್ಯಗಳಲ್ಲಿ ನೀವು ಜೀವನಿಗಿಂತ ಉತ್ತಮವೆಂದು ನಿರ್ದೇಶಿಸಲ್ಪಟ್ಟ ಶರೀರದಲ್ಲಿ ಬ್ರಹ್ಮತ್ವವು ಇರುವುದಿಲವೆಂದು ಹೇಳಿದ್ದೀರಿ. ಆದ್ದರಿಂದ ನಿಮ್ಮ ಹೇತು ಅಪ್ರಯೋಜಕವಾಗಿದೆಯೆಂದು 'ಜೀವ' ಇತ್ಯಾದಿ ವಾಕ್ಯದಿಂದ ಪ್ರತಿಪಾದಿಸಿದ್ದಾರೆ. 'ತ್ವದ್ರೀತ್ಯಾ' ಎಂದರೆ ನಿಮ್ಮ ಮತದಲ್ಲಿ ಸತ್ಯವು ಮಾತ್ರ ಬ್ರಹ್ಮ, ಶ್ರದ್ಧಾದಿಗಳು ಬ್ರಹ್ಮವಲ್ಲ. 'ತು' ಶಬ್ದವು ಅಧಿಕ್ಯವನ್ನು ಸೂಚಿಸುವುದಾದರೆ 'ಶ್ರದ್ಧಾತ್ವೇವ ವಿಜಿಜ್ಞಾಸಿತವ್ಯಾ' ಇತ್ಯಾದಿ ವಾಕ್ಯಗಳಲ್ಲಿಯೂ 'ತು' ಶಬ್ದವು ಶ್ರುತವಾದ್ದರಿಂದ ಶ್ರದ್ಧಾದಿಗಳಲ್ಲಿಯೂ ಅತಿಶಯಿತವಾದ ಅತಿವಾದಿತ್ವವು ಇರುತ್ತದೆ. ಆದರೆ ಬ್ರಹ್ಮತ್ವವು ಇಲ್ಲದ ಕಾರಣ ಹೇತು ವ್ಯಭಿಚರಿತವಾಗಿದೆಯೆಂದು ತಿಳಿಯಬೇಕು.

ಪ್ರಕಾಶಃ – ತಥಾ ಹಿ ತಜ್ಞಾಷ್ಯಂ ''ಬ್ರಹ್ಮೋಪಾಸನಂ ಸತ್ಯಂ ತ್ವೇವ ವಿಜಿಜ್ಞಾಸಿತವ್ಯಮುಪದಿಶ್ಯ ತದುಪಾಯಭೂತಂ ಬ್ರಹ್ಮಮನನಂ ಮತಿಸ್ತ್ವೇವ ವಿಜಿಜ್ಞಾಸಿತವ್ಯೇತ್ಯುಪದಿಶ್ಯ ಶ್ರವಣಪ್ರತಿಷ್ಠಾರ್ಥತ್ವಾನ್ಮನನಸ್ಯ ಮನನೋಪದೇಶೇನ ಶ್ರವಣಮಪ್ಯರ್ಥಾತ್ಸಿದ್ಧಂ ಮತ್ವಾ ಶ್ರವಣೋಪಾಯಭೂತಾಂ ಬ್ರಹ್ಮಣಿ ಶ್ರದ್ಧಾಂ ಶ್ರದ್ಧಾ ತ್ವೇವ ವಿಜಿಜ್ಞಾಸಿತವ್ಯೇತ್ಯುಪದಿಶ್ಯ'' ಇತ್ಯಾದಿ ।

ಏಕೆಂದರೆ ರಾಮಾನುಜರ ಭಾಷ್ಯವೇ ಹೀಗಿದೆ - ''ಬ್ರಹ್ಮೋಪಾಸನಂ ಸತ್ಯಂ ತ್ವೇವ ವಿಜಿಜ್ಞಾಸಿತವ್ಯಮುಪದಿಶ್ಯ ತದುಪಾಯಭೂತಂ ಬ್ರಹ್ಮಮನನಂ ಮತಿಸ್ತ್ವೇವ ವಿಜಿಜ್ಞಾಸಿತವ್ಯೇತ್ಯುಪದಿಶ್ಯ ಶ್ರವಣಪ್ರತಿಪಾದ್ಯಾರ್ಥತ್ವಾನ್ಮನನಸ್ಯ ಮನನೋಪದೇಶೇನ ಶ್ರವಣಮಪ್ಯರ್ಥಾತ್ಸಿದ್ಧಂ ಮತ್ವಾ ಶ್ರವಣೋಪಾಯಭೂತಾಂ ಬ್ರಹ್ಮಣಿ ಶ್ರದ್ಧಾಂ ಶ್ರದ್ಧಾತ್ವೇವ ವಿಜಿಜ್ಞಾಸಿತವ್ಯೇತ್ಯುಪದಿಶ್ಯ'' ಬ್ರಹ್ಮೋಪಾಸನೆಯನ್ನು 'ಸತ್ಯಂ ತ್ವೇವ ವಿಜಿಜ್ಞಾಸಿತವ್ಯಮ್' 'ಸತ್ಯವೆಂದು ಜಿಜ್ಞಾಸೆ ಮಾಡಬೇಕು' ಎಂದು ಉಪದೇಶಿಸಿದ್ದಾರೆ. ಆದಕ್ಕೆ ಉಪಾಯಭೂತವಾಗಿ ಬ್ರಹ್ಮನ ಮನನವನ್ನು 'ಮತಿಸ್ತ್ವೇವ ವಿಜಿಜ್ಞಾಸಿತವ್ಯಾ' ಎಂದು ಉಪದೇಶಿಸಲಾಗಿದೆ. ಮನನವು ಶ್ರವಣದ ನಿರ್ಧಾರಕ್ಕಾಗಿ ಉಪದೇಶಿಸಿದ್ದರಿಂದ ಮನನದಿಂದಲೇ ಶ್ರವಣವೂ ಸಹ ಅರ್ಥಾತ್ ಸಿದ್ಧವಾಯಿತೆಂದು ತಿಳಿದು ಶ್ರವಣಕ್ಕೆ ಸಾಧನವಾದ ಶ್ರದ್ಧೆಯನ್ನು ಮುಂದೆ ಉಪದೇಶಿಸಲಾಗಿದೆ. 'ಶ್ರದ್ಧಾ ತ್ವೇವ ವಿಜಿಜ್ಞಾಸಿತವ್ಯಾ' ಇತ್ಯಾದಿಯಾಗಿ. ಹೀಗೆ ನೀವೇ ವ್ಯಾಖ್ಯಾನಿಸಿದ್ದೀರಿ. ಆದ್ದರಿಂದ ಶ್ರದ್ಧಾ, ಮತಿ ಇವುಗಳೆಲ್ಲಾ ಬ್ರಹ್ಮವಲ್ಲವೆಂದು ನೀವು ಒಪ್ಪಿದಂತಾಯಿತು.

ಪ್ರಕಾಶಃ – ನನು 'ಸಂಪ್ರಸಾದೋಽಸ್ಮಾತ್' ಇತಿ ಶ್ರುತೌ ಜೀವೇ ಪ್ರಸಕ್ತೇನ ಜೀವವಾಚಿನಾ ಸೌತ್ರಸಂಪ್ರಸಾದಶಬ್ದೇನ ಜೀವಸ್ಯೋಕ್ತೇಸ್ತದನುರೋಧಾಚ್ಛ್ರುತೌ ಲಕ್ಷಣಾऽಽಶ್ರೀಯತ ಇತ್ಯತ ಆಹ – ಸಂಪ್ರಸಾದ ಇತಿ ।।

ಬೃಹದಾರಣ್ಯಕಶ್ರುತಿಯಲ್ಲಿ 'ಸಂಪ್ರಸಾದಃ ಅಸ್ಮಾತ್' ಇತ್ಯಾದಿಯಾಗಿ ಜೀವನಲ್ಲಿ 'ಸಂಪ್ರಸಾದ' ಶಬ್ದವನ್ನು ಪ್ರಯೋಗಿಸಲಾಗಿದೆ. ಆದನ್ನೇ ಸೂತ್ರದಲ್ಲಿ 'ಸಂಪ್ರಸಾದ' ಶಬ್ದದಿಂದ ಹೇಳಿರುವುದರಿಂದ ಜೀವನು ಪ್ರತಿಪಾದ್ಯನಾಗುತ್ತಾನೆ. ಹೀಗೆ ಶ್ರುತಿಗೆ ಅನುಸಾರಿಯಾಗಿ ಸೂತ್ರವು 'ಸಂಪ್ರಸಾದ' ಶಬ್ದದಿಂದ ಜೀವನನ್ನು ಹೇಳುವ ಕಾರಣ ಈ ಸೂತ್ರಕ್ಕೆ ಅನುಸಾರಿಯಾಗಿ ಶ್ರುತಿಯಲ್ಲಿರುವ ಪ್ರಾಣಶಬ್ದಕ್ಕೆ ಲಕ್ಷಣಾ ಮಾಡಬಹುದಲ್ಲವೇ? ಎಂಬ ಪ್ರಶ್ನೆಗೆ 'ಸಂಪ್ರಸಾದ' ಇತ್ಯಾದಿ ವಾಕ್ಯದಿಂದ ಉತ್ತರಿಸುತ್ತಿದ್ದಾರೆ.

ಪ್ರಕಾಶಃ – ಸಂಪ್ರಸಾದಶಬ್ದಸ್ಯ ಜೀವೇऽಭಿಧಾನಾಭಾವೇನ ರೂಢ್ಯಭಾವಾತ್ಸ್ವಯೋಗ್ಯ-ಕಿಞ್ಚಿತ್ಪೂರ್ಣಸುಖವತಿ ತಸ್ಮಿನ್ ಸಂಬದ್ಧಂ ಪ್ರಸಾದಶಬ್ದಿತಂ ಸುಖಂ ಯಸ್ಯೇತಿ ವ್ಯುತ್ಪತ್ತ್ಯಾ ಸುಖಸಂಬದ್ಧೋ ಜೀವಃ ಸಂಪ್ರಸಾದಶಬ್ದೇನ ಗ್ರಾಹ್ಯಃ । ನಚಾತ್ರ ಮುಖ್ಯಾರ್ಥಸ್ಯ ತತ್ಸುಖಮಿತ್ಯುಕ್ತಸ್ಯ ಸನ್ನಿಹಿತಪೂರ್ಣಸುಖಸ್ಯ ತ್ಯಾಗೇನ ಜೀವಗ್ರಹಣೇ ಹೇತುರಸ್ತಿ । ಯೇನ ಶ್ರುತೌ ತದ್ಗಲಾಲ್ಲಕ್ಷಣಾऽಽಶ್ರೀಯೇತೇತ್ಯರ್ಥಃ ।

'ಸಂಪ್ರಸಾದ' ಶಬ್ದಕ್ಕೆ ಜೀವನೆಂಬ ಅರ್ಥವು ಕೋಶಾದಿಗಳಿಂದ ಸಿದ್ಧವಾಗಿಲ್ಲ. ಆದ್ದರಿಂದಲೇ ರೂಢಿಯೂ ಸಹ ಇರುವುದಿಲ್ಲ. ಹಾಗಾಗಿ ತನ್ನ ಯೋಗ್ಯತೆಗೆ ಅನುಸಾರಿಯಾದ ಸ್ವಲ್ಪವೇ ಪೂರ್ಣವಾದ ಸುಖ ಇರುವುದರಿಂದ ಅಂತಹ ಜೀವನಲ್ಲಿ 'ಪ್ರಸಾದ' ಶಬ್ದಪ್ರತಿಪಾದ್ಯವಾದ ಸುಖವು ಸ್ವಲ್ಪವೇ ಸಂಬಂಧವನ್ನು ಹೊಂದಿರುತ್ತವೆ. ಆದ್ದರಿಂದ 'ಪ್ರಸಾದಃ ಸಂಬದ್ಧಂ ಯಸ್ಯ' ಎಂಬ ವ್ಯುತ್ಪತ್ತಿಯಿಂದ 'ಸಂಪ್ರಸಾದ' ಶಬ್ದದಿಂದ ಯೌಗಿಕಾರ್ಥವನ್ನು ಸ್ವೀಕರಿಸುವ ಮೂಲಕ ಜೀವನೆಂಬರ್ಥವನ್ನು ಸ್ವೀಕರಿಸಬೇಕು. ಆದರೆ 'ತತ್ಸುಖಮ್' ಎಂಬ ಶ್ರುತಿಯಲ್ಲಿ ಪರಿಪೂರ್ಣವಾದ ಸುಖವುಳ್ಳ ಬ್ರಹ್ಮನೆಂಬ ಮುಖ್ಯಾರ್ಥನನ್ನು ಬಿಟ್ಟು ಸ್ವಲ್ಪವೇ

ಪೂರ್ಣಸುಖವುಳ್ಳ ಜೀವನೆಂಬರ್ಥವನ್ನು ಸ್ಫೀಕರಿಸಲು ಕಾರಣವಿಲ್ಲ. ಹಾಗೇನಾದರೂ ಕಾರಣವಿದ್ದರೆ ಅದರ ಬಲದಿಂದ ಶ್ರುತಿಯಲ್ಲಿರುವ ಪ್ರಾಣಶಬ್ದಕ್ಕೆ ಲಕ್ಷಣಾವನ್ನು ಮಾಡಬಹುದಿತ್ತು.

ಪ್ರಕಾಶಃ – ಕಿಞ್ಚ ಜೀವಾದಾಧಿಕ್ಯೇನೋಪದೇಶಸ್ಯ ವಾಗಾದಾವಪಿ ಸತ್ತ್ವಾತ್ತತ್ರಾಪಿ ವ್ಯಭಿಚಾರ ಇತಿ ಭಾವೇನಾಹ – ನಾಮೇತಿ ।। ''ನಾಮಾಭಿಮಾನಿನೀ ಚೋಷಾ ತಸ್ಯಾ ಬ್ರಹ್ಮ ಪರಂ ಸ್ಮರ'' ಇತ್ಯಾದಿಚ್ಛಾಂದೋಗ್ಯಭಾಷ್ಯೋದಾಹೃತಸ್ಮೃತ್ಯೇತ್ಯರ್ಥಃ ।

ಮತ್ತು ಜೀವನಿಗಿಂತ ಉತ್ತಮತ್ವದ ಉಪದೇಶವು ವಾಗಾದಿಗಳಲ್ಲಿಯೂ ಸಹ ಇರುವುದರಿಂದ ಅಲ್ಲಿ ಬ್ರಹ್ಮತ್ವವಿಲ್ಲದ ಕಾರಣ ವ್ಯಭಿಚಾರಬರುತ್ತದೆಂಬ ಅಭಿಪ್ರಾಯದಿಂದ 'ನಾಮ' ಇತ್ಯಾದಿ ವಾಕ್ಯವು ಹೊರಟಿದೆ. 'ನಾಮಾಭಿಮಾನಿನೀ ಚೋಷಾ ತಸ್ಯಾ ಬ್ರಹ್ಮ ಪರಂ ಸ್ಮರ' ಇತ್ಯಾದಿಯಾಗಿ ಛಾಂದೋಗ್ಯ ಭಾಷ್ಯದಲ್ಲಿ ಉದಾಹರಿಸಿದ ಸ್ಮೃತಿಯಿಂದ ಎಂದು ಇದರ ಅರ್ಥ.

ಪ್ರಕಾಶಃ – ''ಧರ್ಮೋಪಪತ್ತೇಶ್ಚ'' ಇತಿ ಸೂತ್ರಾರ್ಥೋ ನ ವಿರುದ್ಧ ಇತಿ ನ ದೂಷಿತಃ । ''ಪ್ರತಿಸೂತ್ರಂ ಪ್ರಕಾಶ್ಯೇತೇ ಘಟನಾಘಟನೇ ಮಯಾ'' ಇತ್ಯುಕ್ತೇಃ ಪ್ರಾಯಿಕತ್ವಾಭಿಪ್ರಾಯತ್ವಾದದ್ವೈತಮತ ಏತತ್ಸೂತ್ರಾರ್ಥಸ್ಯಾಪಿ ದೂಷಣಾಚ್ಚ ನ ಪ್ರತಿಜ್ಞಾವಿರೋಧಃ ।

'ಧರ್ಮೋಪಪತ್ತೇಶ್ಚ' ಎಂಬ ಸೂತ್ರದ ಅರ್ಥವು ನಮ್ಮ ಸಿದ್ಧಾಂತಕ್ಕೆ ವಿರುದ್ಧವಲ್ಲದ ಕಾರಣ ಪ್ರತ್ಯೇಕವಾಗಿ ದೂಷಣೆ ಮಾಡಿಲ್ಲ. ಹಾಗಾದರೆ 'ಪ್ರತಿಸೂತ್ರಂ ಪ್ರಕಾಶ್ಯೇತೇ ಘಟನಾಘಟನೇ ಮಯಾ' ಎಂಬ ಪ್ರತಿಜ್ಞಾವಾಕ್ಯದಲ್ಲಿ ಪ್ರತಿಯೊಂದು ಸೂತ್ರಗಳನ್ನೂ ಸಹ ವಿಮರ್ಶಿಸುತ್ತೇವೆ ಎಂದು ಹೇಳಿದ್ದಾರಲ್ಲ, ಎಂದರೆ ಆ ಮಾತು ಪ್ರಾಯಿಕ. ಅಂದರೆ ಅಥವಾ ಅದ್ವೈತಮತದ ನಿರಾಕರಣೆಯಿಂದಲೇ ಇವರ ಈ ಸೂತ್ರಾರ್ಥವೂ ಸಹ ನಿರಾಕರಿಸಿದಂತಾಯಿತೆಂಬ ಅಭಿಪ್ರಾಯವಿರುವುದರಿಂದಲೂ ಪ್ರತಿಜ್ಞೆಗೆ ವಿರೋಧವಿರುವುದಿಲ್ಲ.

ಪ್ರಕಾಶಃ – ಏತೇನ ರಾಮಾನುಜರೀತಿಮನುಸೃತ್ಯ ಪೂರ್ವೋತ್ತರಪಕ್ಷೌ ಕುರ್ವತಃ ಕಸ್ಯಚಿಚ್ಛೈವಸ್ಯ ಮತಂ ಪ್ರತ್ಯುಕ್ತಂ ಧ್ಯೇಯಮ್ । ಯದತ್ರ ಸೌತ್ರಹೇತೋಶ್ಚಾನ್ದ್ರಿಕೋಕ್ತವ್ಯಭಿಚಾರನಿರಾಸಾಯ ಸಮ್ಪ್ರಸಾದಾಜ್ಜೀವಾದಧಿಕಾತ್ಮತ್ವೇನೋಪದೇಶಾದಿತ್ಯರ್ಥ ಇತ್ಯುಕ್ತಂ ತನ್ನ । ಸೂತ್ರೇ ಅಧ್ಯಾತ್ಮೋಪದೇಶಾದಿತಿ ನಿರ್ದೇಶಾಭಾವಾತ್ ।

ರಾಮಾನುಜ ಮತವನ್ನು ಅನುಸರಿಸಿ ಪೂರ್ವಪಕ್ಷ ಹಾಗೂ ಸಿದ್ಧಾಂತ ಪಕ್ಷಗಳನ್ನು ಸಮರ್ಥಿಸುವ ಯಾರೋ ಒಬ್ಬ ಶೈವನ ಮತವೂ ಸಹ ರಾಮಾನುಜಮತ ನಿರಾಕರಣೆಯಿಂದಲೇ ನಿರಾಕೃತವಾಯಿತೆಂದು ತಿಳಿಯಬೇಕು. ಸೂತ್ರದಲ್ಲಿ ಹೇಳಲ್ಪಟ್ಟ 'ಅಧ್ಯುಪದೇಶಾತ್' ಎಂಬ ಹೇತುವಿಗೆ ಗ್ರಂಥದಲ್ಲಿ ವ್ಯಭಿಚಾರ ದೋಷವನ್ನು ಹೇಳಿದ್ದಾರೆ. ಅದನ್ನು ಪರಿಹರಿಸುವುದಕ್ಕಾಗಿ ಈ ಶೈವನು ಜೀವನಿಗಿಂತ ಅಧಿಕನಾದ ಆತ್ಮನೆಂಬ ಉಪದೇಶವಿರುವುದರಿಂದ ವ್ಯಭಿಚಾರ ಬರುವುದಿಲ್ಲವೆಂದು ಹೇಳುತ್ತಾನೆ. ಇದೂ ಸಹ ತಪ್ಪು. ಏಕೆಂದರೆ - ವ್ಯಭಿಚಾರ ಪರಿಹಾರಕ್ಕಾಗಿ ಆತ್ಮೋಪದೇಶವನ್ನು ಶ್ರುತಿಯು ಮಾಡುತ್ತಿದೆ ಎಂದರೆ ಸೂತ್ರದಲ್ಲಿ 'ಅಧ್ಯಾತ್ಮೋಪದೇಶಾತ್' ಎಂದೇ ನಿರ್ದೇಶಿಸಬೇಕಿತ್ತು. ಆದರೆ ಹಾಗೆ ನಿರ್ದೇಶವಿಲ್ಲ.

प्रकाशः – यदत्रोक्तं शिवार्कमणिदीपिकायां ''निरतिशयसुखवर्णनपरस्य भूमोपदेशस्यात्मविषयत्वं स्पष्टमिति हेतावपेक्षितमप्यात्मत्वविशेषणं सूत्रे न कृतम्'' इति

ಈ ವಿಷಯದಲ್ಲಿ 'ಶಿವಾರ್ಕಮಣಿ ದೀಪಿಕಾ' ಎಂಬ ಶೈವರ ಗ್ರಂಥವು ಉತ್ತರಿಸಲು ಪ್ರಯತ್ನ ಪಟ್ಟಿದೆ. 'ನಿರತಿಯಶಸುಖವರ್ಣನಪರಸ್ಯ ಭೂಮೋಪದೇಶಸ್ಯಾತ್ಮವಿಷಯತ್ವಂ ಸ್ಪಷ್ಟಮಿತಿ ಹೇತಾವಪೇಕ್ಷಿತಮಪ್ಯಾತ್ಮತ್ವ-ವಿಶೇಷಣಂ ಸೂತ್ರೇನ ಕೃತಮ್' ನಿರತಿಶಯವಾದ ಸುಖವನ್ನು ವರ್ಣಿಸಲು ಹೊರಟಿರುವ 'ಭೂಮಾ' ಎಂಬ ಪದವು ಆತ್ಮವಿಷಯಕವಾಗಿದೆ. ಈ ವಿಷಯವೂ ಅತ್ಯಂತ ಸ್ಪಷ್ಟವಾದ್ದರಿಂದ ಆತ್ಮತ್ವವಿಶೇಷಣವು ಹೇತುವಿನಲ್ಲಿ ಅಪೇಕ್ಷಿತವಾಗಿದ್ದರೂ ಸೂತ್ರಕಾರರು ಪ್ರತ್ಯೇಕವಾಗಿ ನಿರ್ದೇಶಿಸಿಲ್ಲ ಎಂದು.

प्रकाशः – तन्न । अधिकत्वस्यापि स्पष्टत्वेनावाच्यत्वापातात् । भूमोपदेशस्यात्मविषयत्वाय निरतिशयसुखत्वस्य हेतुत्वेनावश्यकत्वेऽस्मन्मतरीत्या 'सम्प्रसादात्' इत्यस्यैव तदर्थत्वस्य न्याय्यत्वेन तेनात्मत्वं प्रसाध्याधिकात्मत्वेनोपदेशादित्याद्युक्तेः क्लिष्टत्वात् ।

ಇದು ತಪ್ಪು. ಅಧಿಕತ್ವವೂ ಸಹ ಸ್ಪಷ್ಟವಾಗಿಯೇ ತಿಳಿಯುವುದರಿಂದ 'ಅಧ್ಯುಪದೇಶಾತ್' ಎಂಬುದೂ ಸಹ ಹೇಳಿದ್ದು ನಿಮ್ಮ ಪ್ರಕಾರ ವ್ಯರ್ಥವಾಗುತ್ತದೆ. ಭೂಮೋಪದೇಶವು ಆತ್ಮವಿಷಯವಾಗಿದೆಯೆಂದು ಸಾಧಿಸುವುದಕ್ಕಾಗಿ ನಿರತಿಶಯಸುಖತ್ವವನ್ನು ಹೇತುವೆಂದು ನೀವು ಅವಶ್ಯವಾಗಿ ಹೇಳುತ್ತೀರಿ. ಈ ವಿವಕ್ಷೆಯಿದ್ದಲ್ಲಿ ನಮ್ಮ ಮತದ ಪ್ರಕಾರ 'ಸಂಪ್ರಸಾದಾತ್' ಎಂಬುದನ್ನೇ ಪ್ರತ್ಯೇಕ ಹೇತುವೆಂದು ಹೇಳುವುದು ಸುಲಭ. ಹೊರತಾಗಿ 'ಸಂಪ್ರಸಾದದಿಂದ ಆತ್ಮತ್ವವನ್ನು ಸಾಧಿಸಿ ಆದರಿಂದ ಅಧಿಕ ಆತ್ಮತ್ವದ ಉಪದೇಶವು ಇರುತ್ತದೆಂದು ಹೇಳುವುದು ಅತ್ಯಂತ ಕ್ಲಿಷ್ಟಕರ. ಅಂದರೆ 'ಸಂಪ್ರಸಾದಾತ್' ಮತ್ತು 'ಅಧ್ಯುಪದೇಶಾತ್' ಎಂಬುದು ಬೇರೆ ಬೇರೆ ಹೇತುಗಳೆಂದೇ ಹೇಳಬೇಕು. 'ಸಂಪ್ರಸಾದಾತ್ ಅಧ್ಯುಪದೇಶಾತ್' ಎಂಬುದು ಒಂದೇ ಹೇತುವೆಂದು ಹೇಳುವುದು ತಪ್ಪಾಗುತ್ತದೆಂದು ಅಭಿಪ್ರಾಯ.

प्रकाशः – ''भूमा नारायणाख्यस्स्यात्स एवाहं कृतिस्मृतः'' इत्यादिस्मृतिविरोधात् भूमा शिव इति सिद्धान्तस्यानुत्थानाच्चेति । स्पष्ट इति ।। उपन्यासमुखेन विवृत इत्यर्थः ।। छ ।।

।। इति श्रीमत्सर्वतन्त्रस्वतन्त्रसुधीन्द्रतीर्थगुरुपादशिष्यराघवेन्द्रयतिकृते चन्द्रिकाप्रकाशे भूमाधिकरणं सम्पूर्णम् ।।

'ಭೂಮಾ ನಾರಾಯಣಾಖ್ಯಃ ಸ್ಯಾತ್ ಸ ಶಿವಾಹಂ ಕೃತಿ ಸ್ಮೃತಃ' ಇವೇ ಮೊದಲಾದ ಸ್ಮೃತಿಗಳ ವಿರೋಧವಿರುವುದರಿಂದ ಭೂಮನೇ ಶಿವನಾಗಿದ್ದಾನೆಂಬ ನಿಷ್ಕರ್ಷೆ ಸಿದ್ಧಾಂತವೇ ಹುಟ್ಟಲು ಸಾಧ್ಯವಿಲ್ಲ. 'ಸ್ಪಷ್ಟ' ಎಂದು ಗ್ರಂಥದಲ್ಲಿ ಹೇಳಿದ್ದಾರೆ. ಅಂದರೆ ಟೀಕೆಯ ಅನೇಕ ಕಠಿಣಪದಗಳ ಅರ್ಥವನ್ನು ಉಪನ್ಯಾಸ ಮುಖದಲ್ಲಿಯೇ ವಿವರಿಸಿದ್ದಾಗಿದೆ ಎಂದರ್ಥ.

ಇಲ್ಲಿಗೆ ಶ್ರೀರಾಘವೇಂದ್ರತೀರ್ಥ ಪೂಜ್ಯಯತಿಗಳಿಂದ ರಚಿತವಾದ ಭೂಮಾಧಿಕರಣದ
ಪ್ರಕಾಶ ಟಿಪ್ಪಣಿಯ ಕನ್ನಡಾನುವಾದವು ಸಮಾಪ್ತವಾಯಿತು.

ಗುರುರಾಜೀಯಮ್ – ನನ್ವೇವಂ ಪ್ರಸಾದಶಬ್ದಸ್ಯ ಸುಖಪರತ್ವೇ ಸಂಪ್ರಸಾದೋಽಸ್ಮಾಚ್ಛರೀರಾದಿತಿ ಶ್ರುತಾವಪಿ ಸುಖಪರತ್ವಂ ಸ್ಯಾತ್ । ಯದಿ ಚ ತತ್ರ ಜೀವಪರತ್ವಂ ತರ್ಹಿ ಸಂಪ್ರಸಾದಾದಿತಿ ಸೂತ್ರಸ್ಥಪ್ರಸಾದಶಬ್ದಸ್ಯಾಪಿ ಜೀವಪರತ್ವಮಿತಿ ಸಮಾನಮಿತ್ಯತ ಆಹ – **ಸಂಪ್ರಸಾದ ಇತಿ** ।। ಅಲ್ಪತ್ವಂ ಸುಖವಿಷಯಂ ತಚ್ಚ ತತ್ಸುಖಂ ಚ ತಚ್ಚುಕ್ರೋ ಜೀವ ಇತಿ ವದತಾ ದುಃಖಬಾಹುಲ್ಯವಜ್ಜೀವಪರತ್ವಂ ಸಂಪ್ರಸಾದಶಬ್ದಸ್ಯ ನ ಸಂಭವತಿ । ನಹಿ ಗಙ್ಗಾಯಾಂ ಘೋಷ ಇತ್ಯತ್ರ ಗಙ್ಗಾಶಬ್ದಸ್ತೀರಪರ ಇತ್ಯೇತಾವತಾ ಗಙ್ಗಾಯಾಂ ಮತ್ಸ್ಯ ಇತ್ಯತ್ರಾಪಿ ತತ್ಪರೋ ಭವತಿ । ತದಿಹ 'ಸಂಪ್ರಸಾದೋಽಸ್ಮಾಚ್ಛರೀರಾತ್' ಇತ್ಯತ್ರ ಬಾಧಕಸದ್ಭಾವೇನ ಸಂಪ್ರಸಾದಶಬ್ದಸ್ಯ ಜೀವಪರತ್ವೇಽಪ್ಯನ್ಯತ್ರ ನ ತತ್ಪರತ್ವಮ್ । ಅನ್ಯಥಾಽತಿಪ್ರಸಙ್ಗಃ ಸ್ಯಾದಿತಿ ಭಾವಃ ।।

।। ಇತಿ ಶ್ರೀಕೇಶವಭಟ್ಟಾರಕೇಣ ವಿರಚಿತಾಯಾಂ ಭಾವದೀಪಿಕಾಯಾಂ
ಭೂಮಾಧಿಕರಣಂ ಸಂಪೂರ್ಣಮ್ ।। ೨ ।।

ಸಾರ

ರಾಮಾನುಜರ ಭೂಮಾಧಿಕರಣ ಹೀಗಿದೆ - ಪ್ರಕರಣದಲ್ಲಿರುವ 'ಭೂಮಾ' ಎಂಬ ಶಬ್ದವು ಲಕ್ಷಣಾ ವೃತ್ತಿಯಿಂದ ಜೀವನನ್ನೇ ಪ್ರತಿಪಾದಿಸುತ್ತದೆ. ಕಾರಣವೇನೆಂದರೆ ಪ್ರಾಣಶಬ್ದವು ಜಡವಾಯುವನ್ನು ಪ್ರತಿಪಾದಿಸಲು ಪ್ರಕರಣದಲ್ಲಿ ಹೇಳಲ್ಪಟ್ಟ ಪಿತೃತ್ವ, ಹಿಂಸ್ಯತ್ವ ಮೊದಲಾದ ಬಾಧಕಗಳಿವೆ. ಆದ್ದರಿಂದ ಚೇತನನ್ನೇ ಪ್ರತಿಪಾದಿಸಬೇಕು. ಪ್ರಾಣಶಬ್ದದ ಸಾಹಚರ್ಯವಿರುವ ವ್ರಯುಕ್ತ ಜೀವಾತ್ಮನೇ ಪ್ರಾಣನಾಗುತ್ತಾನೆ. ಮೋಕ್ಷವನ್ನು ಹೊಂದಿದ ನಂತರ ಪೂರ್ಣಸುಖಸ್ವರೂಪನಾಗುವುದರಿಂದ 'ಭೂಮಾ ತತ್ಸುಖಮ್' ಪೂರ್ಣಸುಖಸ್ವರೂಪನಾದ ಭೂಮನೆಂದರೆ ಜೀವಾತ್ಮನೇ ಆಗುತ್ತಾನೆಂಬುದು ಯುಕ್ತವಾಗಿದೆ. ಇಷ್ಟು ಪೂರ್ವಪಕ್ಷ.

ಜೀವನಿಗಿಂತ ಬ್ರಹ್ಮತತ್ವವು ಉತ್ತಮವೆಂದು 'ಸತ್ಯ' ಶಬ್ದದಿಂದ ತಿಳಿಯುತ್ತಿದೆ. ಮತ್ತು ಪ್ರಾಣಜ್ಞಾನಿಯನ್ನು ಅತಿವಾದಿಯೆಂದು ಸತ್ಯನನ್ನು ತಿಳಿದವನು ಅತಿಶಯವಾದ ಅತಿವಾದಿಯೆಂದು ಶ್ರುತಿಯು ಉಪಾಸಕನ ಭೇದವನ್ನು ಹೇಳುತ್ತಿದೆ. ಆದ್ದರಿಂದಲೇ ಪ್ರಾಣನೇ ಬೇರೆ, ಭೂಮನೇ ಬೇರೆ ಎಂಬ ವಿಷಯವು ಸ್ಪಷ್ಟವಾಗುತ್ತದೆ. 'ಸತ್ಯಂ ಜ್ಞಾನ ಅನಂತಂ ಬ್ರಹ್ಮ' ಎಂಬ ಶ್ರುತಿಯ ಆಧಾರದಿಂದ ಸತ್ಯ ಶಬ್ದದ ಪ್ರತಿಪಾದ್ಯನು ಬ್ರಹ್ಮನೇ ಆಗುತ್ತಾನೆ. ಇಷ್ಟು ಸಿದ್ಧಾಂತ.

ರಾಮಾನುಜರ ಈ ಅಧಿಕರಣ ಶರೀರವು ಆಯುಕ್ತವಾಗಿದೆ. ಏಕೆಂದರೆ ಅವರಪೂರ್ವಪಕ್ಷವು ಸಮಂಜಸವಾಗಿದ್ದಲ್ಲಿ ಸಿದ್ಧಾಂತವು ಸರಿಯನ್ನಬಹುದಿತ್ತು. ಆದರೆ ಪೂರ್ವಪಕ್ಷವೇ ಸರಿಯಿಲ್ಲ. ಪ್ರಾಣಶಬ್ದಕ್ಕೆ ಅಭಿಮಾನಿ ಚೇತನವೆಂದು ಅರ್ಥೈಸಿದರೂ ಸಹ ಪಿತೃತ್ವ ಹಿಂಸತ್ವ ಮೊದಲಾದ ಧರ್ಮಗಳನ್ನು ಕೂಡಿಸಬಹುದು. ಪಿತೃತ್ವಾದಿ ಬಾಧಕಗಳಿರುವುದರಿಂದ ಜೀವನಲ್ಲಿ ಲಕ್ಷಣಾ ಮಾಡುವುದು ಅನಿವಾರ್ಯವೆಂಬ ಅವರ ವಿಚಾರದಲ್ಲಿ ಅರ್ಥವೇ ಇಲ್ಲ. ಮತ್ತು ತಂದೆ, ತಾಯಿ, ಆಚಾರ್ಯ ಮೊದಲಾದ ಜೀವರ ಪ್ರಾಣವು ಉತ್ಕ್ರಾಂತವಾಗುತ್ತದೆಂದು ಶ್ರುತಿಯು ಹೇಳುತ್ತಿದೆ. ಪ್ರಾಣನೇ ಜೀವನಾದರೆ, ಜೀವನ ದೆಸೆಯಿಂದ ಜೀವನು ಉತ್ಕ್ರಾಂತನಾಗುತ್ತಾನೆ ಎಂದು ಹೇಳಿದಂತಾಗುತ್ತದೆ. ಇದು ತಪ್ಪಲ್ಲವೇ? ಪ್ರಾಣೋತ್ಕ್ರಮಣವು ಪ್ರಸಿದ್ಧವಾಗಿದೆ ಹೊರತು, ಜೀವೋತ್ಕ್ರಮಣವು ಪ್ರಸಿದ್ಧವಾಗಿಲ್ಲ. ಆದ್ದರಿಂದ ಸೂತ್ರದಲ್ಲಿರುವ 'ಸಂಪ್ರಸಾದ' ಶಬ್ದವು ಜೀವನನ್ನು ಪ್ರತಿಪಾದಿಸುವುದಿಲ್ಲ. ಪ್ರಾಣನನ್ನೇ ಪ್ರತಿಪಾದಿಸುತ್ತದೆ. ಜೀವನನ್ನು ಪ್ರತಿಪಾದಿಸುತ್ತದೆಂಬ ಪೂರ್ವಪಕ್ಷವು ಅಯುಕ್ತವಾಗಿದೆಯೆಂದು ತಿಳಿಯಬೇಕು.

• • • • •

ಭೂಮಾಧಿಕರಣ
(೧-೩-೨)

ಭಾಗ -೩

ನ್ಯಾಯವಿವರಣ, ನ್ಯಾಯವಿವರಣಪಂಚಿಕಾ,
ಅಣುಭಾಷ್ಯ, ತತ್ವಮಂಜರೀ,
ತಂತ್ರದೀಪಿಕಾ, ನ್ಯಾಯಮುಕ್ತಾವಳಿ ಗ್ರಂಥಗಳ
ಸರಳ ಕನ್ನಡ ಅನುವಾದ

* * *

ಸೂತ್ರಾರ್ಥರತ್ನಾವಳಿ ಗ್ರಂಥದ ಸಂಸ್ಕೃತ ಮೂಲ

॥ श्रीगुरुभ्यो नमः ॥

श्रीमदानन्दतीर्थभगवत्पादाचार्यविरचितम्

न्यायविवरणम्

श्री जयतीर्थविरचिता

न्यायविवरणपञ्जिका

भूमाधिकरणम् (१।३।२)

न्यायविवरणम् –

'प्राणो वा आशाया भूयान् विष्णोर्वै देवेभ्यो भूयांस्तस्माद् भूयान्नाम' इत्यादेर्भूमशब्दोऽज्ञानां साधारणः ॥२॥

ಮುಖ್ಯಪ್ರಾಣನು ಆಶಾ ಎಂಬ ಭಾರತೀದೇವಿಗಿಂತ ಉತ್ತಮನಾಗಿದ್ದಾನೆ ಎಂದು ಪ್ರಾರಂಭದಲ್ಲಿ ಹೇಳಿರುವ ಕಾರಣ ಮುಖ್ಯಪ್ರಾಣನೇ ಭೂಮಾ ಎನಿಸಿದ್ದಾನೆಂದು ಪ್ರಶ್ನೆ ಬರುತ್ತದೆ. ಆದರೆ ಸಕಲದೇವತೆಗಳಿಗಿಂತ ಶ್ರೇಷ್ಠನಾದ ವಿಷ್ಣುವೇ ಭೂಯಾನ್ ಎನಿಸುತ್ತಾನೆ. 'ಪೂರ್ಣಮದಃ ಪೂರ್ಣಮಿದಂ' ಮೊದಲಾದ ಬೇರೆ ಶ್ರುತಿಗಳ ಸಮಾಖ್ಯೆಯಿಂದ ಇವು ವಿಷ್ಣುವಿಷಯಕವೆಂದು ತಿಳಿಯುತ್ತದೆ. ಭೂಮಾ ಎಂಬ ಶಬ್ದವು ಅಜ್ಞಾನಿಗಳ ಪ್ರಕಾರ ಪ್ರಾಣ ಹಾಗೂ ವಿಷ್ಣು ಇಬ್ಬರಲ್ಲಿಯೂ ಸಾಧಾರಣವಾಗಿದೆ.

ಟೀಕಾ – **'शब्दौ'** (अनु.व्या.) इत्यनेन द्वितीयतृतीययोरधिकरणयोर्नामात्मकौ साधारणौ शब्दौ विचार्यावित्युक्तम् । लिङ्गमिति पृथगुक्तम् । तेन शब्दस्यनामविषयत्वात् । **'साधारणम्'** इत्यस्य चयथान्वयं विपरिणामेन सर्वत्रानुवृत्तेः । अनुवृत्तिज्ञापनार्थमेवान्तेऽपि **'द्विःस्थिता'** इत्याह । **'द्वि'** इत्यनेकोपलक्षणम् । **'विचार्या'** इत्येतदपि यथान्वयं विपरिणम्यते । एवं स्थिते **'भूमा सम्प्रसादादध्युपदेशाद्'** इत्यत्र तावत् पूर्ववच्छङ्काचतुष्टयनिरासार्थमाह – प्राणो वा इति ।। **'प्राणो वा आशाया भूयान्'** इत्यादिश्रुत्यन्तरसमाख्यानाद् विष्णुविषयताप्रतीतेश्च भूमशब्दोऽज्ञानां तयोः साधारणो विचार्यः । ननु भूमशब्दो भाववाची । तत्कथं धर्मिणो शङ्क्यते । कथं च

भूयान् इत्यनेन समानार्थः । कः च नामात्मकः । मैवम् । 'यो वै भूमा तत्सुखम्' इत्याद्युत्तरवाक्यपर्यालोचनया भावभवित्रोरभेदाभिप्रायेण भवितृविषयतावगमात् । आसन्नस्योपक्रमस्यानासन्नायाः समाख्यायाश्च कथं साधारण्यप्रतीतिहेतुत्वमिति चेन्न, 'अज्ञानाम्' इत्युक्तत्वात् ।

'ಪ್ರಾಣೋ ವಾ ಆಶಾಯಾ ಭೂಯಾನ್' ಹೇಳಲ್ಪಟ್ಟ ಭೂಮನು ಉಪಕ್ರಮ ಹಾಗೂ ಮುಖ್ಯವಾಯುವೋ ಅಥವಾ ವಿಷ್ಣುವೋ ಎಂದು ಸಂದೇಹ ಬರುತ್ತದೆ. ಮುಖ್ಯಪ್ರಾಣನೇ ಭೂಮನೆಂದು ಪೂರ್ವಪಕ್ಷ. ವಿಷ್ಣುವೆಂದು ಸಿದ್ಧಾಂತ. ಅನುಕ್ತಿ ಎಂಬುದು ಪೂರ್ವಪಕ್ಷ ನ್ಯಾಯ. ಅದನ್ನು ಪ್ರಾಣೋ ವಾ ಇತ್ಯಾದಿವಾಕ್ಯವು ವಿವರಿಸುತ್ತಿದೆ. ಪ್ರಾಣನಿಗಿಂತ ಶ್ರೇಷ್ಠನಾಗಿದ್ದಾನೆಂದು ಹೇಳದಿರುವಿಕೆಯು ಪ್ರಾಣನಿಗೆ ಭೂಮತ್ವವನ್ನು ಸಾಧಿಸುತ್ತಿದೆ. ಪ್ರಾಣನಿಗಿಂತ ಉತ್ತಮನಾದವನು ಯಾವನಾದರೂ ಒಬ್ಬನು ಇರುತ್ತಾನೆ. ಆದರೂ ಸಹ ಅವನನ್ನು ಉಲ್ಲೇಖಿಸಲೇಬೇಕೆಂಬ ನಿಯಮವಿರುವುದಿಲ್ಲವಲ್ಲವೇ? ಎಂಬ ಪ್ರಶ್ನೆಗೆ 'ಪ್ರಾಣೋ ವಾ ಆಶಾಯಾ ಭೂಯಾನ್ ಇತ್ಯುಕ್ತ್ವಾ'' ಇತ್ಯಾದಿ ವಾಕ್ಯಗಳಿಂದ ಉತ್ತರಿಸುತ್ತಿದ್ದಾರೆ. ಆದ್ದರಿಂದ ನಾಮಾಭಿಮಾನಿವಾಗಭಿಮಾನಿ ಮೊದಲಾದ ದೇವತೆಗಳ ತಾರತಮ್ಯವನ್ನು 'ಆಶಾ' ಎಂಬ ಭಾರತೀದೇವಿಯ ತನಕ ಹೇಳಿ 'ಪ್ರಾಣೋ ವಾ ಆಶಾಯಾ ಭೂಯಾನ್' ಆಶಾದೇವಿಗಿಂತಲೂ ಪ್ರಾಣನೇ ಶ್ರೇಷ್ಠನು ಎಂದು ಹೇಳಲಾಗಿದೆ. ಅನಂತರ ಪ್ರಾಣನಿಗಿಂತ ಉತ್ತಮನಾದವನು ಮತ್ತೊಬ್ಬನಿದ್ದಾನೆಂದು ಹೇಳಿರುವುದಿಲ್ಲ. ಆದ್ದರಿಂದ ಶ್ರುತಿಯಲ್ಲಿ ಪ್ರತಿಪಾದ್ಯನಾದ ಭೂಮನು ಮುಖ್ಯಪ್ರಾಣನೇ ಆಗುತ್ತಾನೆ. ಹೀಗೆ 'ಅನುಕ್ತಿ' ಎಂಬುದು ಪೂರ್ವಪಕ್ಷನ್ಯಾಯವೆಂದು ತಿಳಿಯಬೇಕು.

.ಶ್ರೀಜಯತೀರ್ಥಭಿಕ್ಷುಗಳಿಂದ ರಚಿತವಾದ ನ್ಯಾಯವಿವರಣೆಯ ಟೀಕೆಯಲ್ಲಿ

ಕನ್ನಡಾನುವಾದದಲ್ಲಿ ಭೂಮಾಧಿಕರಣವು ಸಮಾಪ್ತವಾಯಿತು.

॥ ಶ್ರೀಕೃಷ್ಣಾರ್ಪಣಮಸ್ತು ॥

श्रीमदानन्दतीर्थभगवत्पादाचार्यविरचितम्

अणुभाष्यम्

भूमाधिकरणम् (१।३।२)

पूर्णगुणः

ಅಣುಭಾಷ್ಯ - ಪೂರ್ಣವಾದ ಸುಖಸ್ವರೂಪವುಳ್ಳ ಪರಮಾತ್ಮನೇ ಭೂಮನು.

***

श्री आनन्दतीर्थभगवत्पादाचार्यविरचितम्
ब्रह्मसूत्राणुभाष्यम्
श्रीराघवेन्द्रतीर्थविरचिता
ब्रह्मसूत्राणुभाष्यविवृतिः

तत्वमञ्जरी

भूमाधिकरणम् (१।३।२)

१०३. नन्वथापि पूर्णानन्दो विष्णुरित्ययुक्तम् । छान्दोग्ये सप्तमे यो वै भूमा तत्सुखम्' इति भूमशब्दितस्य निरुपपदसुखपदेन पूर्णसुखत्वोक्तेः । भूम्नश्च 'प्राणो वा आशाया भूयान्' इत्युपक्रमेण 'उत्क्रान्तप्राणान्' इतीश्वरे व्याप्तेरनुपपत्तोत्क्रमण-लिङ्गयुक्तप्राणशब्दि-तमुख्यवातुतदवादितदयतः प्राप्तं 'भूमासंप्रसादात्' इत्यादि-सूत्रद्वयम् ।

ಆನಂದಮಯಾಧಿಕರಣದಲ್ಲಿ ಪೂರ್ಣವಾದ ಆನಂದವುಳ್ಳವನು ವಿಷ್ಣುವೇ ಆಗಿದ್ದಾನೆಂದು ಸಮರ್ಥಿಸಲಾಯಿತು. ಇದು ಸರಿಯಲ್ಲ. ಏಕೆಂದರೆ, ಛಾಂದೋಗ್ಯದ ಏಳನೆಯ ಅಧ್ಯಾಯದಲ್ಲಿ 'ಯೋ ವೈ ಭೂಮಾ ತತ್ಸುಖಮ್' ಎಂಬ ಶ್ರುತಿಯಲ್ಲಿ 'ಭೂಮಾ' ಎಂಬ ಶಬ್ದಕ್ಕೆ ಪೂರ್ಣಸುಖವುಳ್ಳವನೆಂಬರ್ಥವನ್ನು ಹೇಳಲಾಗಿದೆ. ನಿರುಪಪದವಾದ ಸುಖಶಬ್ದವು ಪೂರ್ಣಸುಖವನ್ನೇ ಹೇಳುತ್ತದಾದ್ದರಿಂದ ಇಂತಹ ಭೂಮನು ಮುಖ್ಯಪ್ರಾಣನೇ ಆಗಿದ್ದಾನೆ. ಏಕೆಂದರೆ 'ಪ್ರಾಣೋ ವಾ ಆಶಾಯಾ ಭೂಯಾನ್' ಆಶಾ ನಾಮಕಳಾದ ಭಾರತೀದೇವಿಗಿಂತಲೂ ಪ್ರಾಣನು ಅಧಿಕನಾಗಿದ್ದಾನೆಂದು ಪ್ರಾರಂಭದಲ್ಲಿ ಹೇಳಲಾಗಿದೆ. ಮತ್ತು 'ಉತ್ಕ್ರಾಂತಪ್ರಾಣಾನ್' ಎಂಬಲ್ಲಿ ಉತ್ಕ್ರಮಣವೆಂಬ ಲಿಂಗವನ್ನು ಹೇಳಲಾಗಿದೆ. ವ್ಯಾಪ್ತನಾದ ಈಶ್ವರನಲ್ಲಿ ಉತ್ಕ್ರಮಣವು ಉಪಪನ್ನವಾಗುವುದಿಲ್ಲ. ಆದ್ದರಿಂದ ಪ್ರಾಣಶಬ್ದದಿಂದ ಮುಖ್ಯಪ್ರಾಣನೇ ಪ್ರತಿಪಾದ್ಯನಾದ್ದರಿಂದ ಭೂಮನೂ ಸಹ ಅವನೇ ಆಗುತ್ತಾನೆ. ಇಷ್ಟು ಪೂರ್ವಪಕ್ಷ. ಇದನ್ನು ನಿರಾಕರಿಸುವುದಕ್ಕಾಗಿ 'ಭೂಮಾ ಸಂಪ್ರಸಾದಾತ್' 'ಧರ್ಮೋಪಪತ್ತೇಶ್ಚ' ಎಂಬೆರಡು ಸೂತ್ರಗಳು ಹೊರಟಿವೆ.

೧೦೪. ತದರ್ಥಃ – ಪೂರ್ಣಗುಣ ಇತಿ । ಪೂರ್ವವದನುಷಕ್ತಃ । 'ಯೋ ವೈ ಭೂಮಾ' ಇತಿ ಭೂಮಶಬ್ದೋಕ್ತಃ ಪೂರ್ಣಗುಣಃ ಸ ಪ್ರಾಕ್ ಪೂರ್ಣಾನಂದತ್ವೇನೋಕ್ತಃ ಸ ಏಕೋ ಜನಾರ್ದನಃ ।

ಭೂಮಾಧಿಕರಣದ ಸಾರವನ್ನು 'ಪೂರ್ಣಗುಣಃ' ಎಂಬ ಮಾತಿನಲ್ಲಿ ಸಂಗ್ರಹಿಸಿದ್ದಾರೆ. ಇಲ್ಲಿಯೂ ಸಹ ಹಿಂದಿನ ಅಧಿಕರಣದಂತೆ ಆನುಷಂಗ ಮಾಡಬೇಕು. 'ಯೋ ವೈ ಭೂಮಾ' ಎಂಬ ಶ್ರುತಿಯಲ್ಲಿ ಕೇಳಿಸುತ್ತಿರುವ 'ಭೂಮಾ' ಎಂಬ ಶಬ್ದವು ಪೂರ್ಣಗುಣವುಳ್ಳವನೆಂಬರ್ಥವನ್ನು ಹೇಳುತ್ತದೆ. ಹಿಂದೆ ಜನಾರ್ದನನೇ ಪೂರ್ಣಗುಣವುಳ್ಳವನೆಂದು ಹೇಳಿದ್ದರಿಂದ ಅವನೇ 'ಭೂಮಾ' ಎಂಬ ಶಬ್ದದಿಂದಲೂ ಪ್ರತಿಪಾದ್ಯನಾಗುತ್ತಾನೆ.

ತಸ್ಮಾತ್ ಪ್ರಾಣೋಪಕ್ರಮೇಣ 'ವಿಷ್ಣುರ್ವಾ ವ ದೇವೇಭ್ಯೋ ಭೂಯಾನ್' ಇತಿ ಸಮಾಖ್ಯಯಾ ಚ ತತ್ರಾನ್ಯತ್ರ ಚ ವಾಚಕತ್ವೇನ ಪ್ರತೀತೈಃ ಭೂಮಸುಖಪ್ರಾಣಾತ್ಮಾದಿಸರ್ವಶಬ್ದೈಃ ಮುಖ್ಯತೋ ಜನಾರ್ದನ ಏವ ವಾಚ್ಯೋ ನ ತು ಮುಖ್ಯಪ್ರಾಣಃ ।

ಆದ್ದರಿಂದ ಉಪಕ್ರಮದಲ್ಲಿ ಪ್ರಾಣನನ್ನು ಹೇಳಿದ್ದರೂ 'ವಿಷ್ಣುರ್ವಾವ ದೇವೇಭ್ಯೋ ಭೂಯಾನ್' ಎಂಬ ಸಮಾಖ್ಯಾಪ್ರಮಾಣದಿಂದ ಎರಡು ಕಡೆ ಸಾಧಾರಣವಾದ 'ಭೂಮಾ' ಎಂಬ ಶಬ್ದವು ಮತ್ತು 'ಸುಖ' 'ಪ್ರಾಣ' 'ಆತ್ಮಾ' ಮೊದಲಾದ ಶಬ್ದಗಳು ಪರಮಮುಖ್ಯವೃತ್ತಿಯಿಂದ ಜನಾರ್ದನನನ್ನೇ ಪ್ರತಿಪಾದಿಸುತ್ತವೆ ಹೊರತು ಮುಖ್ಯಪ್ರಾಣನಲ್ಲ.

೧೦೫. ಕುತಃ । ಪೂರ್ಣಗುಣೋ ವಿಷ್ಣು ರಿಙ್ಗೈಃ ಸರ್ವೈರ್ಯುತೋ ಹಿ । 'ತತ್ಸುಖಂ' ಇತ್ಯುಕ್ತಪೂರ್ಣಸುಖತ್ವ - ಸರ್ವೌತ್ತಮತ್ವ -ಸ ಏವಾಧಸ್ತಾದಿತ್ಯಾದಿನೋಕ್ತಸರ್ವಗತತ್ವಾದಿಲಿಙ್ಗೈರ್ಯುತತ್ವಾತ್ । ತೇಷಾಂ ಭಾಷ್ಯೋಕ್ತವಾಕ್ಯೈರೇರೌ ಪ್ರಸಿದ್ಧತ್ವಾದಿತ್ಯರ್ಥಃ ।

ಏಕೆಂದರೆ, ಪೂರ್ಣಗುಣಸ್ವರೂಪನಾದ ವಿಷ್ಣುವು 'ಸರ್ವೋತ್ತಮತ್ವ', 'ಸ್ವೇ ಮಹಿಮ್ನಿ ಪ್ರತಿಷ್ಠಿತತ್ವ' ಮೊದಲಾದ ಲಿಂಗಗಳಿಂದ ಯುಕ್ತನಾಗಿದ್ದಾನೆ. 'ತತ್ಸುಖಮ್' ಎಂಬಲ್ಲಿ ಕೇಳಿಸುತ್ತಿರುವ 'ಪೂರ್ಣಸುಖತ್ವ' ಹಾಗೂ ಸರ್ವೋತ್ತಮತ್ವ 'ಸ ಏವಾಧಸ್ತಾತ್' ಇತ್ಯಾದಿ ವಾಕ್ಯಗಳಿಂದ ಕೇಳಿಸುತ್ತಿರುವ ಸರ್ವಗತತ್ವ ಮೊದಲಾದ ಲಿಂಗಗಳೆಲ್ಲವೂ ವಿಷ್ಣುವಿನಲ್ಲೇ ಉಪಪನ್ನವಾಗುತ್ತವೆ. ಭಾಷ್ಯದಲ್ಲಿ ಉದಾಹರಿಸಿದ ಅನೇಕ ವಾಕ್ಯಗಳಿಂದ ಈ ಎಲ್ಲ ಲಿಂಗಗಳೂ ವಿಷ್ಣುವಿನಲ್ಲೇ ಪ್ರಸಿದ್ಧವಾಗಿವೆ.

೧೦೬. ನ ಚ ಪ್ರಾಣಲಿಙ್ಗವಿರೋಧ ಇತ್ಯತೋऽಪಿ – ಲಿಙ್ಗೈ ಸರ್ವೈರ್ಯುತೋ ಹೀತಿ । 'ತಮುತ್ಕ್ರಾಮನ್ತಂ ಪ್ರಾಣೋऽನ್ವುತ್ಕ್ರಾಮತಿ' ಇತ್ಯಾದೌ ಉತ್ಕ್ರಮಣಲಿಙ್ಗಯುತೋ ಜನಾರ್ದನಃ ಪ್ರಸಿದ್ಧ ಇತ್ಯರ್ಥಃ । ಪ್ರಾಣಪದೇನ ತದನ್ತರ್ಯಾಮಿರೂಪಸ್ಯೈವ ಗೃಹೀತೇಃ । ಪ್ರಾಣಲಿಙ್ಗಾನಾಂ ಉತ್ಕ್ರಮಣಾದೀನಾಂ ವ್ಯಕ್ಯಾತ್ಮನಾ ಸ್ಥಿತಾಣ್ವೂವಿಶೇಷೇ ಯುಕ್ತತ್ವಾದಿತಿ ಭಾವಃ ।

'ತಮುತ್ಕ್ರಾಮಂತಂ ಪ್ರಾಣೋ ಅನುಕ್ರಾಮತಿ' ಎಂಬುದಾಗಿ ಪ್ರಾರಂಭದಲ್ಲಿ ಮುಖ್ಯಪ್ರಾಣನ ಲಿಂಗವು ಕೇಳಿಸುತ್ತಿರುವುದರಿಂದ ಅದರ ವಿರೋಧವು ಬರುತ್ತದಲ್ಲವೇ ? ಎಂಬ ಪ್ರಶ್ನೆಗೆ 'ಲಿಂಗೈಸ್ಸರ್ವೈರ್ಯುತೋ ಹಿ' ಎಂಬುದರಿಂದಲೇ ಉತ್ತರವನ್ನು ತಿಳಿಯಬೇಕು. 'ತಮುತ್ಕ್ರಾಮಂತಂ ಪ್ರಾಣೋऽನುಕ್ರಾಮತಿ' ಎಂಬ ಪ್ರಾರಂಭದ ವಾಕ್ಯದಲ್ಲಿ ಕೇಳಿಸುತ್ತಿರುವ ಉತ್ಕ್ರಮಣಲಿಂಗವೂ ಸಹ ಜನಾರ್ದನನಲ್ಲೇ ಪ್ರಸಿದ್ಧವಾಗಿದೆ. ಪ್ರಾಣಪದದಿಂದ ಮುಖ್ಯಪ್ರಾಣ ಹಾಗೂ ವಿಷ್ಣು ಇಬ್ಬರೂ ಪ್ರತಿಪಾದ್ಯರಾದರೂ ಸಹ ಅಂತರ್ಯಾಮಿ ವಿವಕ್ಷೆಯಿಂದ ವಿರೋಧವಿರುವುದಿಲ್ಲ. ಅಂದರೆ ಎಲ್ಲೆಡೆ ವ್ಯಾಪ್ತನಾಗಿದ್ದರೂ ಅನೇಕ ರೂಪಗಳಿರುವುದರಿಂದ ಪ್ರಾಣ ಎಂಬ ಅಂತರ್ಯಾಮಿ ರೂಪದಿಂದ ದೇಹದಿಂದ ನಿರ್ಗಮಿಸುತ್ತಾನೆಂದು ತಿಳಿಯಬೇಕು. ಮುಖ್ಯಪ್ರಾಣನ ಲಿಂಗವೆನಿಸಿದ ಉತ್ಕ್ರಮಣಾದಿಗಳನ್ನು ದೇಹದಲ್ಲಿರುವ ಭಗವಂತನ ಅಣುರೂಪದ ವಿವಕ್ಷೆಯಿಂದ ವ್ಯಕ್ಯಾತ್ಮನಾ ಯುಕ್ತವಾಗುತ್ತದೆಂದು ತಿಳಿಯಬೇಕು.

೧೦೯. ಭೂ ಬಹಾವಿತಿ ಧಾತೋಃ ಬಹ್ವಃ ಪೂರ್ಣತಾಯಾಮಿತಿ ಚೇತಿ ಛಾನ್ದೋಗ್ಯ ಭಾಷ್ಯದಿಶಾ ಭೂಮಶಬ್ದಃ ಪೂರ್ಣಗುಣವಾಚೀ ಧ್ಯೇಯಃ । ಅತ್ರ ಜನಾರ್ದನ ಇತ್ಯುಕ್ತಿಃ ಮೋಚಕತ್ವೇನೋಕ್ತಭೂಮ್ನ ಉಪಾಸಕತಯೋಕ್ತಪ್ರಾಣತ್ವಂ ನ ಶಂಕ್ಯಮಿತಿ ಸೂಚನಾಯ । ಏಕ ಇತ್ಯುಕ್ತಿರಪಿ ಭೂಮಸುಖಸತ್ಯವಿಜ್ಞಾನಾದ್ಯನೇಕಶಬ್ದೈರೇಕೋ ಗುಣಭೇದೇನೋಚ್ಯತೇ ನತ್ವನೇಕ ಇತಿ ವಕ್ತುಮ್ । ಸೈವ ಹೀತ್ಯತೋऽಯಾಗತಾರ್ಥತ್ವಂ ಅನ್ಯತೋ ಧ್ಯೇಯಮ್ ।। ೨ ।।

'ಭೂ ಬಹೌ' ಎಂಬ ಧಾತುವಿನಿಂದ 'ಭೂಮಾ' ಎಂಬ ಶಬ್ದವು ನಿಷ್ಪನ್ನವಾಗಿದೆ. 'ಬಹ್ವಃ ಪೂರ್ಣತಾಯಾಮ್' ಎಂಬುದಾಗಿ ಛಾಂದೋಗ್ಯಭಾಷ್ಯದಲ್ಲಿ ಹೇಳಿದ ಪ್ರಕಾರ 'ಭೂಮಾ' ಎಂಬ ಶಬ್ದವು ಪೂರ್ಣಗುಣಸ್ವರೂಪನಾದ ಜನಾರ್ದನನನ್ನೇ ಪ್ರತಿಪಾದಿಸುತ್ತದೆಂದು ತಿಳಿಯಬೇಕು.

ಇಲ್ಲಿ 'ಜನಾರ್ದನ' ಎಂಬ ಶಬ್ದಪ್ರಯೋಗಕ್ಕೆ ಕಾರಣವಿದೆ.ಏಕೆಂದರೆ ಅರ್ದನ ಎಂಬ ಪದಕ್ಕೆ ಮೋಚಕನೆಂದರ್ಥ. ಮೋಚಕನೆಂದು ಹೇಳಲ್ಪಟ್ಟ ಭೂಮನನ್ನು, ಉಪಾಸಕನೆಂದು ಹೇಳಲ್ಪಟ್ಟ ಮುಖ್ಯಪ್ರಾಣನೆಂದು ಶಂಕಿಸಬಾರದು. ಅಂದರೆ ಉಪಾಸಕನಾದ ಮುಖ್ಯಪ್ರಾಣನು ಭೂಮಾ ಎಂಬ ಶಬ್ದದಿಂದ ವಾಚ್ಯನಾಗಲಾರನು. ಇದನ್ನು ಸೂಚಿಸುವುದಕ್ಕಾಗಿ 'ಜನಾರ್ದನಃ' ಎಂದು ಹೇಳಿದ್ದಾರೆ. ಏಕಃ ಎಂದು ಹೇಳಿರುವುದರಿಂದ ಭೂಮಾ, ಸುಖ, ಸತ್ಯ, ವಿಜ್ಞಾನ ಮೊದಲಾದ ಅನೇಕಶಬ್ದಗಳಿಂದ ಗುಣಭೇದದಿಂದ ಒಬ್ಬನೇ ಪ್ರತಿಪಾದ್ಯನಾಗಿದ್ದಾನೆ. ಹೊರತು ಅನೇಕರಲ್ಲ ಎಂದು ತಿಳಿಸಿದ್ದಾರೆ. 'ಹಿ' ಎಂದು ಹೇಳಿದ್ದರಿಂದ ಈ ಅಧಿಕರಣವು ಬೇರೆ ಅಧಿಕರಣದಿಂದ ಗತಾರ್ಥವಾಗಿಲ್ಲವೆಂದು ತಿಳಿಯುತ್ತದೆ.

ಶ್ರೀರಾಘವೇಂದ್ರತೀರ್ಥಶ್ರೀಪಾದಂಗಳವರಿಂದ ವಿರಚಿತವಾದ

ತತ್ತ್ವಮಂಜರಿಯ ಕನ್ನಡಾನುವಾದದಲ್ಲಿ ಭೂಮಾಧಿಕರಣವು ಮುಗಿಯಿತು.

***

॥ श्रीजानकीवदनाम्भोजराजहंसाय रामचन्द्राय नमः ॥

॥ श्री गुरुभ्यो नमः ॥ हरिः ॐ ॥

श्री राघवेन्द्रतीर्थविरचिता

तन्त्रदीपिका

भूमाधिकरणम् (१।३।२)

॥ ॐ भूमा सम्प्रसादादध्युपदेशात् ॐ ॥ १-३-८ ॥

अत्र तादृश भूमनाम समन्वीयते । ''यो वै भूमा तत्सुखम्'' इत्युक्तो भूमा ततु ब्रह्मैव । नतु प्राणः ।

ಈ ಅಧಿಕರಣದಲ್ಲಿ ಉಭಯತ್ರಪ್ರಸಿದ್ಧವಾದ 'ಭೂಮಾ' ಎಂಬ ನಾಮಾತ್ಮಕಶಬ್ದದ ಸಮನ್ವಯವನ್ನು ವಿಷ್ಣುವಿನಲ್ಲಿ ಮಾಡುತ್ತಿದ್ದಾರೆ. 'ಯೋ ವೈ ಭೂಮಾ ತತ್ಸುಖಮ್' ಎಂಬುದಾಗಿ ಛಾಂದೋಗ್ಯದಲ್ಲಿ ಹೇಳಲ್ಪಟ್ಟ ಭೂಮನು ವಿಷ್ಣುವೇ ಆಗಿದ್ದಾನೆ ಹೊರತು ಮುಖ್ಯಪ್ರಾಣನಲ್ಲ.

कुतः? सम्प्रसादात् सम्यक् प्रसीदत्यनेनेति सम्प्रसादः पूर्णसुखम् । ''तत्सुखम्'' इति पूर्णसुखत्वाभिधानात् । अध्युपदेशात्, अधि आधिक्यत्वेन नामादीनां सर्वेषामुपरि तदुत्तमत्वेन व्यपदेशाच्चेत्यग्रेतनश्चकारोऽत्रानुकृष्यते ।

ಸೂತ್ರಾರ್ಥ - ಏಕೆಂದರೆ 'ಸಂಪ್ರಸಾದಾತ್' 'ಚೆನ್ನಾಗಿ ಯಾವುದರಿಂದ ಪ್ರಸನ್ನನಾಗುತ್ತಾನೋ ಅದು 'ಸಂಪ್ರಸಾದ' ಎನಿಸುತ್ತದೆ. ಅಂದರೆ ಪೂರ್ಣಸುಖವೆಂದರ್ಥ. 'ತತ್ಸುಖಮ್' ಎಂಬಲ್ಲಿ ಪೂರ್ಣಸುಖವನ್ನು ಹೇಳಿರುವುದರಿಂದ. ಅಧ್ಯುಪದೇಶಾತ್ = ಅಧಿ ಅಧಿಕವೆಂದು, ನಾಮಾಭಿಮಾನಿ ಮೊದಲಾದವರಿಗಿಂತ ಉತ್ತಮನೆಂದು ಉಪದೇಶಿಸಿರುವುದರಿಂದಲೂ ಭೂಮಾ = ವಿಷ್ಣುವೇ ಭೂಮನಾಗಿದ್ದಾನೆ. ಮುಂದಿನ ಸೂತ್ರದಲ್ಲಿರುವ ಚಶಬ್ದವನ್ನು ಇಲ್ಲಿ ಅನ್ವಯ ಮಾಡಬೇಕು.

अत्र भूमेति पुंनिर्देशः प्राग्वत् । सम्बन्धभूमेत्यस्य भावार्थत्वेऽपीह भावभवित्रोरभेदात्पूर्णरूपभवित्रर्थत्वं बोध्यम् ।

ಇಲ್ಲಿ 'ಭೂಮಾ' ಎಂಬುದು ಪುಲ್ಲಿಂಗಶಬ್ದವಾಗಿದೆ. ವಾಸ್ತವಿಕವಾಗಿ 'ಭೂಮಾ' ಎಂಬ ಶಬ್ದವು 'ಸಂಬಂಧಭೂಮಾ' ಎಂಬ ಸೂತ್ರದಲ್ಲಿ ಹೇಳಿದಂತೆ ಧರ್ಮಾರ್ಥಕವೇ ಆಗಿದೆ. ಆದರೂ ಸಹ ಧರ್ಮ, ಹಾಗೂ ಧರ್ಮಿಗಳಿಗೆ ಅಭೇದವಿರುವ ಪ್ರಯುಕ್ತ ಪ್ರಕೃತ ಪೂರ್ಣ ಎಂಬ ಧರ್ಮ್ಯರ್ಥವನ್ನೇ ವಿವಕ್ಷಿಸಬೇಕೆಂದು ತಿಳಿಯಬೇಕು.

पूर्णसुखत्वादिति वाच्ये सम्प्रसादादिति यौगिकोक्तिरीशस्य सुखित्वे दुःखित्वं स्यादिति न शङ्क्यम् । पूर्णसुखकार्येण प्रसादेन दुःखाभावनिश्चयादिति सूचयितुम् ।

ಸೂತ್ರದಲ್ಲಿ 'ಸಂಪ್ರಸಾದಾತ್' ಎಂದು ಹೇಳುವ ಬದಲು 'ಪೂರ್ಣಸುಖತ್ವಾತ್' ಎಂದೇ ಹೇಳಬಹುದಿತ್ತು. ಆದರೆ 'ಸಂಪ್ರಸಾದಾತ್' ಎಂಬ ಯೌಗಿಕಶಬ್ದಪ್ರಯೋಗದಿಂದ ಪೂರ್ಣಸುಖದ ಕಾರ್ಯವೆನಿಸಿದ ಪ್ರಸನ್ನತೆಯನ್ನು ಇದರಿಂದ ತಿಳಿಸಿದ್ದಾರೆ. ಸುಖಿವುಳ್ಳವನಾದರೆ ದುಃಖವೂ ಸಹ ಬರಬೇಕಲ್ಲವೇ? ಎಂಬ ಶಂಕೆಯನ್ನು ಇದರಿಂದ ಪರಿಹರಿಸಿದಂತಾಯಿತು. ಪೂರ್ಣಸುಖದ ಕಾರ್ಯವೆನಿಸಿದ ಪ್ರಸಾದದಿಂದ ವಿಷ್ಣುವಿಗೆ ದುಃಖವೇ ಇರುವುದಿಲ್ಲವೆಂದು ನಿಶ್ಚಯವಾಗಿದೆ.

इतश्चैवमित्याह -

।। ॐ धर्मोपपत्तेश्च ॐ ।। १-३-९ ।।

ಮತ್ತೊಂದು ಕಾರಣದಿಂದಲೂ ಭೂಮನು ವಿಷ್ಣುವೇ ಆಗಿದ್ದಾನೆಂದು ಸಮರ್ಥಿಸುತ್ತಿದ್ದಾರೆ. ಓಂ ಧರ್ಮೋಪಪತ್ತೇಶ್ಚ ಓಂ.

''स एवाधस्तत् स उपरिष्टात्'' इत्युक्तसर्वगतत्वादिधर्माणामुपपत्तेश्च भूमा ब्रह्मैवेत्यर्थः ।

ಸೂತ್ರಾರ್ಥ ಹೀಗಿದೆ - 'ಸ ಏವಾಧಸ್ತಾತ್ ಸ ಏವ ಉಪರಿಷ್ಟಾತ್' ಎಂಬ ಛಾಂದೋಗ್ಯದಲ್ಲಿ ಹೇಳಲ್ಪಟ್ಟ ಸರ್ವಗತತ್ವವೇ ಮೊದಲಾದ ಧರ್ಮಗಳು, ಉಪಪತ್ತೇಶ್ಚ = ಉಪಪನ್ನವಾಗುವುದರಿಂದಲೂ ಭೂಮಾ = ಬ್ರಹ್ಮನೇ ಭೂಮನಾಗಿದ್ದಾನೆ.

श्रुतौ सत्यस्यादित्वेऽपि सत्यादेः प्रणाड्या भूमा यत्तत्वोक्तेः सर्वस्य ब्रह्मताप्तये भूम्न उक्तिरित्येके । सम्प्रसादादिहेतुयुतत्वाच्च । सैव हीत्यतो गतत्वं चान्यतोऽवसेयम् ।। २ ।।

ಶ್ರುತಿಯಲ್ಲಿ ಸತ್ಯನನ್ನೇ ಮೊದಲು ಹೇಳಿರುವುದರಿಂದ ಆವನಿಗೆ ಬ್ರಹ್ಮತ್ವವನ್ನು ಸಾಧಿಸಬೇಕಿತ್ತು. ಆದರೂ ಸಹ ಸತ್ಯ ಮೊದಲಾದವುಗಳಿಗೆ ಕ್ರಮವಾಗಿ ಭೂಮಾಧೀನತ್ವವು ಹೇಳಲ್ಪಟ್ಟಿದೆ. ಆದ್ದರಿಂದ ಸತ್ಯ ಮೊದಲಾದ ಎಲ್ಲ ಪದಾರ್ಥಗಳೂ ಬ್ರಹ್ಮವೇ ಆಗಿದೆ ಎಂದು ಸಾಧಿಸುವುದಕ್ಕಾಗಿ ಭೂಮಶಬ್ದವನ್ನೇ ಸೂತ್ರದಲ್ಲಿ ಗ್ರಹಣ ಮಾಡಿದ್ದಾರೆ. ಇದು ಕೆಲವರ ಉತ್ತರ. 'ಸಂಪ್ರಸಾದ' ಮೊದಲಾದ ಬ್ರಹ್ಮನ ಲಿಂಗಗಳು ಕೇಳಿಸುತ್ತಿರುವುದರಿಂದಲೂ ಬ್ರಹ್ಮನೇ ಭೂಮನಾಗಿದ್ದಾನೆ. 'ಸೈವ ಹಿ ಸತ್ಯಾದಯಃ' ಎಂಬ ಸೂತ್ರದಿಂದ ಈ ಅಧಿಕರಣಕ್ಕೆ ಗತಾರ್ಥತ್ವದೋಷವು ಬರುವುದಿಲ್ಲವೆಂದು ಬೇರೆ ಗ್ರಂಥದಿಂದ ತಿಳಿಯಬೇಕು.

ಶ್ರೀರಾಘವೇಂದ್ರತೀರ್ಥಶ್ರೀಪಾದಂಗಳವರಿಂದ ರಚಿತವಾದ

ತಂತ್ರದೀಪಿಕಾದ ಕನ್ನಡಾನುವಾದದಲ್ಲಿ ಭೂಮಾಧಿಕರಣವು ಸಮಾಪ್ತವಾಯಿತು.

ಶ್ರೀ ರಾಘವೇಂದ್ರತೀರ್ಥವಿರಚಿತಾ

ಶ್ರೀನ್ಯಾಯಮುಕ್ತಾವಲಿಃ

ಭೂಮಾಧಿಕರಣಮ್ (೧।೩।೨)

।। ॐ भूमा सम्प्रसादादध्युपदेशात् ॐ ।। २ ।।

।। ॐ धर्मोपपत्तेश्च ॐ ।।

''स एवाधस्तात्स एवोपरिष्टात्स पश्चात्स पुरस्तात्स दक्षिणतः स उत्तरतः स एवेदं सर्व'' (छां.७-२५-१) ''यत्रनान्यत्पश्यति नान्यच्छृणोति नान्यद्विजानाति स भूमा स भगवः कस्मिन्प्रतिष्ठित इति स्वे महिम्निइति'' (छां.७-२४-१) इत्यादिना श्रुतस्य सर्वगतत्वादेर्भूमधर्मस्य ''ब्रह्मैवेदममृतं पुरस्तात् ब्रह्मपश्चाद्ब्रह्म दक्षिणत'' (मुं.४-१४) इत्यादिना द्युभ्वाद्यायतने श्रुतत्वात्तदाक्षेपेण पूर्वपक्षोत्थानात्सङ्गतिः ।

'स एवाधस्तात् स एवोपरिष्टात् स पश्चात् स पुरस्तात् स दक्षिणतः स उत्तरतः स एवेदं सर्वम्' ಭೂಮನೇ ಮೇಲೆ ಕೆಳಗೆ, ಆನಂತರ, ಹಿಂದೆ, ಬಲ, ಎಡ ಎಲ್ಲ ಕಡೆಯೂ ಇರುತ್ತಾನೆ ಎಂಬುದಾಗಿ ಛಾಂದೋಗ್ಯೋಪನಿಷತ್ತು ಭೂಮನನ್ನು ವರ್ಣಿಸುತ್ತಿದೆ. ಮತ್ತು 'ಯತ್ರ ನಾನ್ಯತ್ ಪಶ್ಯತಿ ನಾನ್ಯತ್ ಶೃಣೋತಿ ನಾನ್ಯದ್ ವಿಜಾನಾತಿ ಸ ಭೂಮಾ ಸ ಭಗವಃ ಕಸ್ಮಿನ್ ಪ್ರತಿಷ್ಠಿತಃ ಇತಿ ಸ್ವೇ ಮಹಿಮ್ನಿ ಇತಿ' ಯಾವಾತನನ್ನು ಸಂಪೂರ್ಣ ನೋಡಲು, ಕೇಳಲು, ತಿಳಿಯಲು ಸಾಧ್ಯವಿಲ್ಲವೋ ಅವನೇ ಭೂಮನಾಗಿದ್ದಾನೆ. ಅವನೇ ಭಗವಂತನು ಅವನು ಎಲ್ಲಿದ್ದಾನೆ ಎಂದರೆ ತನ್ನ ಸಾಮರ್ಥ್ಯದಲ್ಲಿಯೇ ಇದ್ದಾನೆ' ಹೀಗೆ ಸರ್ವಗತತ್ವ, 'ಸ್ವೇ ಮಹಿಮ್ನಿ ಪ್ರತಿಷ್ಠಿತತ್ವ' ಮೊದಲಾದ ಧರ್ಮಗಳನ್ನು ಭೂಮನಲ್ಲಿ ಛಾಂದೋಗ್ಯವು ಹೇಳುತ್ತಿದೆ. 'ಬ್ರಹ್ಮೈವೇದಮಮೃತಂ ಪುರಸ್ತಾತ್ ಬ್ರಹ್ಮ ಪಶ್ಚಾತ್ ಬ್ರಹ್ಮ ದಕ್ಷಿಣತಃ' ಅಮೃತಸ್ವರೂಪನಾದ ಬ್ರಹ್ಮನೇ ಹಿಂದೆ ಮುಂದೆ ಎಲ್ಲೆಡೆ ಇರುತ್ತಾನೆಂದು ಮಾಂಡೂಕ್ಯೋಪನಿಷತ್ತಿನಲ್ಲಿಯೂ ಹೇಳಲಾಗಿದೆ. ಹೀಗೆ ಯಾವಾತನು ದ್ಯುಭ್ವಾದ್ಯಾಯತನನಾಗಿದ್ದನೋ ಅವನನ್ನು ಭೂಮನೆಂದು ಹೇಳಿರುವುದರಿಂದ ದ್ಯುಭ್ವಾದ್ಯಾಯತನನು ವಿಷ್ಣುವೇ ಆಗಿದ್ದಾನೆಂದು ಹೇಗೆ ನಿರ್ಣಯಿಸುತ್ತೀರಿ? ಎಂಬುದನ್ನು ಆಕ್ಷೇಪಿಸಿ ಪೂರ್ವಪಕ್ಷವನ್ನು ಮಾಡುತ್ತಿರುವುದರಿಂದ ಹಿಂದಿನ ಅಧಿಕರಣದಿಂದ ಸಂಗತಿಯನ್ನು ತಿಳಿಯಬೇಕು.

''यो वै भूमा तत्सुखमिति'' (छां. ७-२३-१) छान्दोग्ये सप्तमेऽध्याये श्रुतो भूमा किं मुख्यप्राण उत विष्णुरिति सन्देहः ।।

'ಯೋ ವೈ ಭೂಮಾ ತತ್ಸುಖಮ್' ಎಂಬುದಾಗಿ ಛಾಂದೋಗ್ಯೋಪನಿಷತ್ತಿನ ಏಳನೆಯ ಅಧ್ಯಾಯದಲ್ಲಿ ಶ್ರುತನಾದ ಭೂಮನು ಮುಖ್ಯಪ್ರಾಣನೋ ವಿಷ್ಣುವೋ ಎಂದು ಸಂದೇಹ.

ಪ್ರಾಣೋ ಭೂಮೇತಿ ಪೂರ್ವಃ ಪಕ್ಷಃ ।। ನಾಮ ವಾಕ್ ಮನಃ ಸಙ್ಕಲ್ಪ ವಿತ್ತ ಧ್ಯಾನ ವಿಜ್ಞಾನ ಬಲಾನ್ನಾಪ ತೇಜಆಕಾಶಸ್ಮರಾಶಾಪ್ರಾಣೇಷು ಪ್ರತ್ಯೇಕಂ ಪ್ರಶ್ನಪ್ರತ್ಯುಕ್ತಿಪೂರ್ವಮುತ್ತರೋತ್ತರಾಧಿಕ್ಯಮುಕ್ತ್ವಾ ಪ್ರಾಣಾದೂರ್ಧ್ವಮಸ್ತಿ ಪ್ರಾಣಾದ್ಭೂಯ ಇತಿ ಪ್ರಶ್ನಸ್ಯ ಭೂಮಾ ವಾವ ಪ್ರಾಣಾದ್ಭೂಯಾನಿತಿ ಪ್ರತ್ಯುಕ್ತೇಶ್ಚಾಭಾವೇನ ಭೂಮ್ನಃಪ್ರಾಣಾದನನ್ಯತ್ವಾತ್, ವಿಷ್ಣುರ್ವಾವ ದೇವೇಭ್ಯೋ ಭೂಯಾನಿತಿ ಸಮಾಖ್ಯಾಯಾಃ ಪ್ರಾಣೋ ವಾ ಆಶಾಯಾ ಭೂಯಾನಿತಿ ಉಪಕ್ರಮಾತ್ ದುರ್ಬಲತಯಾ ತೇನ ತದ್ಬಾಧಾತ್ ।

ಮುಖ್ಯಪ್ರಾಣನೇ ಭೂಮನಾಗಿದ್ದಾನೆಂದು ಪೂರ್ವಪಕ್ಷ, ನಾಮ, ವಾಕ್, ಮನಸ್ಸು, ಸಂಕಲ್ಪ, ಚಿತ್ತಜ್ಞಾನ ವಿಜ್ಞಾನ, ಅಪ್ಪು, ತೇಜಸ್ಸು, ಆಕಾಶ, ಸ್ಮರ, ಆಶಾ ಪ್ರಾಣ ಇವರುಗಳಲ್ಲಿ ಪ್ರತ್ಯೇಕವಾಗಿ ಪ್ರಶ್ನ ಹಾಗೂ ಉತ್ತರಗಳನ್ನು ಹೇಳುತ್ತಾ ಉತ್ತರೋತ್ತರಾಧಿಕ್ಯವನ್ನು ಸಮರ್ಥಿಸಲಾಗಿದೆ. ನಾಮಾಭಿಮಾನಿದೇವತೆಯಿಂದ ಪ್ರಾರಂಭಿಸಿ ಮುಖ್ಯಪ್ರಾಣನ ತನಕ ತಾರತಮ್ಯವನ್ನು ಹೇಳಲಾಗಿದೆ. ಮುಖ್ಯಪ್ರಾಣನಿಗಿಂತ ಶ್ರೇಷ್ಠನಾದವನು ಮತ್ತೊಬ್ಬನಿದ್ದಾನೆಯೇ ಎಂಬ ಪ್ರಶ್ನೆಗೆ 'ಭೂಮೋ ವಾವ ಪ್ರಾಣೋ ಭೂಯಾನ್' ಭೂಮನೇ ಪ್ರಾಣನಿಗಿಂತ ಉತ್ತಮನಾಗಿದ್ದಾನೆಂದು ಉತ್ತರವು ಕೇಳಿಸುತ್ತಿಲ್ಲ. ಇದರಿಂದ ಪ್ರಾಣನೇ ಭೂಮನಾಗಿದ್ದಾನೆಂದು ಸ್ಪಷ್ಟವಾಗುತ್ತದೆ. 'ವಿಷ್ಣುರ್ವಾವ ದೇವೇಭ್ಯೋ ಭೂಯಾನ್' ಎಂಬುದಾಗಿ ವಿಷ್ಣುವೇ ಭೂಮನೆನ್ನಲು ಸಮಾಖ್ಯಾಪ್ರಮಾಣವನ್ನು ಹೇಳಬಹುದು. ಆದರೆ 'ಪ್ರಾಕೋ ವಾ ಆಶಾಯಾ ಭೂಯಾನ್' ಎಂಬುದಾಗಿ ಪ್ರಾರಂಭದಲ್ಲಿರುವ ಉಪಕ್ರಮ ಪ್ರಮಾಣಕ್ಕಿಂತ ದುರ್ಬಲವಾದ ಸಮಾಖ್ಯಾಪ್ರಮಾಣವು ಬಾಧಿತವಾಗುತ್ತದೆ.

ಉತ್ಕ್ರಾನ್ತಪ್ರಾಣಾನಿತಿ ಪ್ರಾಣೇ ಶ್ರುತಸ್ಯೋತ್ಕ್ರಮಣಲಿಙ್ಗಸ್ಯ ಸರ್ವಗತೇ ವಿಷ್ಣಾವಯೋಗೇನ ''ಅತ ಏವ ಪ್ರಾಣ'' (ಬ್ರ.ಸೂ. ೧-೧-೨೩) ಇತಿ ನ್ಯಾಯೇನ ಪ್ರಾಣಶ್ರುತೇಃ ವಿಷ್ಣಾವವಕಾಶ ಇತ್ಯಸ್ಯಾಪ್ಯಯೋಗಾದಿತಿ ।।

'ಉತ್ಕ್ರಾಂತಪ್ರಾಣಾನ್' ಎಂಬ ಶ್ರುತಿಯಲ್ಲಿ ಮುಖ್ಯಪ್ರಾಣನಿಗೆ ಹೇಳಲ್ಪಟ್ಟ ಉತ್ಕ್ರಮಣವೆಂಬ ಲಿಂಗವು ಎಲ್ಲೆಡೆ ವ್ಯಾಪ್ತನಾದ ವಿಷ್ಣುವೆಂದು ಹೇಳಲು ಸಾಧ್ಯವಿಲ್ಲ. ಆದ್ದರಿಂದ 'ಅತ ಏವ ಪ್ರಾಣಃ' ಎಂಬ ಸೂತ್ರದ ನ್ಯಾಯದಿಂದ ಪ್ರಾಣಶಬ್ದವು ವಿಷ್ಣುವನ್ನು ಪ್ರತಿಪಾದಿಸುತ್ತದೆಂಬ ಶಂಕೆಗೂ ಅವಕಾಶವಿಲ್ಲ.

ಸಿದ್ಧಾನ್ತಸ್ತು ।। ನಿರುಪಪದಸುಖಪದೋಕ್ತಪೂರ್ಣಸುಖತ್ವಸ್ಯ ಸರ್ವೇಷಾಂ ನಾಮಾದೀನಾಂ ಉಪರಿ ಸರ್ವಾಧಿಕತ್ವೇನಾಪ್ತಾತತ್ವಸ್ಯ ಸ ಏವಾಧಸ್ತಾದಿತ್ಯಾದಿನೋಕ್ತಸರ್ವಗತತ್ವಾದಿಧರ್ಮಾಣಾಂ ಚ

''विश्वशम्भुवं, विश्वतः परम्'' इत्यादिश्रुतिभिः (महाना.उ ।) ब्रह्मैकनिष्ठत्वात् विष्णावणुत्वस्यापि वक्ष्यमाणत्वेनोत्क्रमणक्रियाया अपि युक्तत्वात् ।

ಸಿದ್ಧಾಂತ ಹೀಗಿದೆ - ಉಪಪದವಿಲ್ಲದ ಸುಖಪದಕ್ಕೆ ಪೂರ್ಣಸುಖವೆಂದೇ ಅರ್ಥ. ಮತ್ತು ನಾಮಾಭಿಮಾನಿ ದೇವತೆಯಿಂದ ಪ್ರಾರಂಭಿಸಿ ಸರ್ವಾಧಿಕ್ಯವನ್ನು ಶ್ರುತಿಯು ಏನು ಹೇಳಿದೆಯೋ ಅದು ವಿಷ್ಣುವಿನಲ್ಲೇ ಉಪಪನ್ನವಾಗುತ್ತದೆ. ಮತ್ತು 'स एवाधस्तात्' ಇತ್ಯಾದಿಶ್ರುತಿಯಲ್ಲಿ ಹೇಳಲ್ಪಟ್ಟ ಸರ್ವಗತತ್ವಾದಿ ಧರ್ಮಗಳು 'विश्वशंभुवम्' 'विश्वतः परम्' ಇತ್ಯಾದಿ ಶ್ರುತಿಗಳಿಂದ ವಿಷ್ಣುವಿನಲ್ಲೇ ಬರುತ್ತವೆಂದು ನಿರ್ಣಯವಾಗುತ್ತದೆ. ಉಪಕ್ರಮದಲ್ಲಿ ಹೇಳಲ್ಪಟ್ಟ ಉತ್ಕ್ರಮಣ ಲಿಂಗದ ವಿರೋಧವು ಇರುವುದಿಲ್ಲ. ಏಕೆಂದರೆ ವಿಷ್ಣುವಿಗೆ ಅನೇಕ ರೂಪಗಳಿರುವುದರಿಂದ ದೇಹದಲ್ಲಿರುವ ಅಣುರೂಪದಿಂದ ನಿರ್ಗಮನ ಮಾಡುತ್ತಾನೆಂದು ಉತ್ಕ್ರಮಣವನ್ನು ಹೇಳಬಹುದು. ಮುಂದೆ ವಿಷ್ಣುವಿಗೆ ಅಣುರೂಪತ್ವವನ್ನು ಸಮರ್ಥಿಸಲಾಗುತ್ತದೆ. ಆದ್ದರಿಂದ ಉತ್ಕ್ರಮಣಕ್ರಿಯೆಯು ಯುಕ್ತವಾಗುತ್ತದೆ.

प्राणो भूमा च विष्णुरेवेति प्राणभूम्नोरभेदेन वा भूमा विष्णुरेवेति ।

ಪ್ರಾಣ ಹಾಗೂ ಭೂಮಾ ಎಂಬ ಶಬ್ದಗಳಿಂದ ವಿಷ್ಣುವೇ ಪ್ರತಿಪಾದ್ಯನು. ಪ್ರಾಣ ಹಾಗೂ ಭೂಮಾ ಶಬ್ದಗಳೆರಡೂ ಒಬ್ಬನನ್ನೇ ಪ್ರತಿಪಾದಿಸುತ್ತಿವೆ. ಅಥವಾ ಪ್ರಾಣಶಬ್ದವು ಮುಖ್ಯಪ್ರಾಣನನ್ನು ಪ್ರತಿಪಾದಿಸಿದರೂ ಪ್ರಶ್ನೆ ಹಾಗೂ ಉತ್ತರಗಳ ಆಧ್ಯಾಹಾರದಿಂದ ಪ್ರಾಣ ಹಾಗೂ ಭೂಮಾ ಇಬ್ಬರಿಗೂ ಅಭೇದವಿದೆಯೆಂದು ತಿಳಿಯುತ್ತದೆ. ಆದ್ದರಿಂದ ಭೂಮನು ವಿಷ್ಣುವೇ ಆಗಿದ್ದಾನೆ.

फले तु सुखमित्युक्तपूर्णसुखत्वमुखेनानन्दमयाक्षेपसमाधी ।। २ ।।

'तत्सुखिम्' ಎಂಬಲ್ಲಿ ಹೇಳಲ್ಪಟ್ಟ ಪೂರ್ಣಸುಖತ್ವದ ಮೂಲಕವಾಗಿ ಪೂರ್ವಪಕ್ಷ ಮಾಡುತ್ತಿರುವುದರಿಂದ ಹೇಗೆ ಆನಂದಮಯನಾಗುತ್ತಾನೆಂಬ ಆನಂದಮಯಾಧಿಕರಣದ ಆಕ್ಷೇಪವೇ ಪೂರ್ವಪಕ್ಷದ ಫಲ. ಆದರ ಸಮಾಧಾನವೇ ಸಿದ್ಧಾಂತದ ಫಲ.

ಶ್ರೀರಾಘವೇಂದ್ರತೀರ್ಥಶ್ರೀಪಾದಂಗಳವರಿಂದ ರಚಿತವಾದ

ನ್ಯಾಯಮುಕ್ತಾವಳಿಯ ಕನ್ನಡಾನುವಾದದಲ್ಲಿ ಭೂಮಾಧಿಕರಣವು ಸಮಾಪ್ತವಾಯಿತು.

सूत्रार्थरत्नावलिः

भूमाधिकरणम् (१।३।२)

अत्र भूमनाम्नो विष्णौ समन्वयः क्रियते ।

(८) ॐ॥ भूमा सम्प्रसादादध्युपदेशात् ॥ॐ

ननु ''भूमाख्यः प्राणो भवेत् । 'प्राणो वा'(छां. ७।१५।१) इति प्राणस्योत्तमत्वमुक्त्वा, तदुत्तमत्वमनुक्त्वा भूम्न आम्नातत्वात् । 'उत्क्रान्तप्राणान् शूलेन' (छां. ७।१५।३) इत्यनेनोत्क्रमणलिङ्गश्रवणात् । न चेदं लिङ्गं विष्णावववकाशमर्हति । सर्वगतत्वात् । प्राणशब्दस्य वायुवाच्यत्वात् । ततश्चानन्दमयोऽपि स एव'' इति प्राप्ते, सूत्रमुपन्यस्यति –

ॐ॥ भूमा सम्प्रसादादध्युपदेशादिति ॥ अस्यार्थः – भूमा 'यो वै भूमा' इति श्रुतौ भूमशब्दोक्तपूर्णो विष्णुरेव । कुतः? सम्प्रसादात् 'भूम्नस्तत्सुखम्' इत्यनेन सम्प्रसादशब्दितपूर्णसुखरूपत्वाभिधानात् । किञ्च अध्युपदेशात् । नामादेरपि तदुपरि नामादिदेवतोत्तमत्वेन भूम्नोऽभिधानाच्चेत्यर्थः ।

एवञ्च विष्णुरेवायं भूमा । पूर्णसुखत्वात् । तस्य चान्यत्र निरवकाशत्वात् । किञ्चास्य भूम्नः सर्वेषामुपर्युपदेशः श्रूयते । न चास्यान्यत्रावकाशः । न चोपक्रमे प्राणशब्देन कथमसौ विष्णुरिति वाच्यम् । प्राणशब्देनापि विष्णोरुक्तत्वात् । न चोत्क्रमणादिलिङ्गविरोधः । 'तमुत्क्रान्तम्'(बृ. ६।४।७) इति श्रुतिसिद्धत्वेन तस्य विष्णावेव मुख्यत्वात् । अथवाऽयं प्राणो वायुरेव । तथाऽपि न तस्य भूमत्वप्राप्तिः । एष तु वा इत्यादिना सूचितप्रज्ञाद्यध्याहारेण प्राणाद् विष्णोर्भूयस्त्वमुक्त्वा भूम्न आम्नानात् ।

सर्वेषां नामादीनामुपरि विष्णोः सर्वोत्तमत्वेनाभिधानात् । भूमा विष्णुरेवेति सिद्धम् ।

(९) ॐ॥ धर्मोपपत्तेश्च ॥ॐ

युक्त्यन्तरेण विष्णोर्भूमत्वप्रतिपादयत् सूत्रं पठति –

ॐ धर्मोपपत्तेश्चेति ।। अस्यार्थः – 'स एवाधस्तात्' (छां.७।२५) इत्यादिना भूम्नि सर्वगतत्वादिधर्मश्रवणात् । तस्य च विष्णोरेवोपपत्तेः । विष्णुरेव भूमा इत्यर्थः ।

एवञ्च प्राणपदेन वाय्वन्तर्गतस्य विष्णोरभिधानात् । 'आत्मन आकाशः' (तै.आ.२।१) इत्यत्र सम्भूतपदेन भूतस्य तदभिमानिदेहस्य स्वरूपोत्पत्त्यभिधानेऽपि तदभिमानिनो हरेश्च देहसम्बन्धप्रादुर्भावयोश्चाभिधानवत् 'भूमा वाव प्राणः' इत्यनेन स्वरूपोत्तमत्वस्य भूम्नोऽभिधानेऽपि वाय्वन्तर्गताद् रूपात् प्रसादोन्मुखत्वरूपोत्तमत्वविशिष्टभूमाभिधानसम्भवेन प्रश्नप्रतिवचनसहिष्णुत्वसम्भवात् । किञ्च 'स एवाधस्तात्' इत्यादिना भूम्नि सर्वगतत्वादयो धर्माः श्रूयन्ते । नैते अन्यत्रावकाशा लभन्ते । ततश्च निरवकाशेभ्यः सर्वगतत्वादिभ्यो भूमा विष्णुरेवेति तस्यैवानन्दमयत्वमिति सिद्धम् ।।

।। इति सूत्रार्थरत्नावळ्यां भूमाधिकरणम् ।।

॥ ಪರಿಪೂರ್ಣಚಂದ್ರಿಕೆಯಲ್ಲಿ ಭೂಮಾಧಿಕರಣವು ಮುಗಿಯಿತು ॥

॥ ಶ್ರೀಮದ್ಭೇಶಾರ್ಪಣಮಸ್ತು ॥

ಜೀವದ ಎಲ್ಲಾ ಚಟುವಟಿಕೆಗಳಿಗೆ ನೆಲೆಯಾದುದೇ ದೇಹ.

ಸೂಕ್ಷ್ಮಾತಿಸೂಕ್ಷ್ಮ ರಚನೆಗಳ ವಿಸ್ಮಯ. ಪ್ರತೀಕ್ಷಣವೂ ಎಂತೆಂಥದ್ದೋ
ಭೌತಿಕ ಆಭೌತಿಕ ಕ್ರಿಯೆಗಳ ಆಗರ, ಇಷ್ಟೊಂದು ಆಗುಹೋಗುಗಳು ಆಕಸ್ಮಿಕವಲ್ಲ,
ನಿಯಾಮಕರ್ಯಾರು? ಎನ್ನುವ ಪ್ರಶ್ನೆ ಸಹಜ.
ದೇವತೆಗಳು - ಉಪದೇವತೆಗಳು - ಕ್ಷುದ್ರದೇವತೆಗಳು - ಅಧೀನಕರ್ಮಿಗಳು ಇದೆಲ್ಲವನ್ನು ಸ್ವಾತಂತ್ರ್ಯದಿಂದ
ನಿಯಂತ್ರಿಸಲು ಇವರಿಗೆ ಸಾಧ್ಯವಿಲ್ಲ.
ಇವರೂ ಸಹ ಜೀವರೇ ತಾನೆ ? ಆ ಜೀವನಿಗೆ ಮತ್ತೊಬ್ಬ ಜೀವನನ್ನು ಪರಾವಲಂಬಿಯಾಗಿಯೇ
ನಿಯಂತ್ರಿಸುವುದೆಂದರೆ ಅನವಸ್ಥಾದೋಷಕ್ಕೆ ನಾಂದಿ ಹಾಡಿದಂತೆ.
ಸಮಸ್ತ ಜೀವಗಳ ಆತ್ಯಂತಿಕ, ಏಕನಿಯಾಮಕನಿದ್ದರೆ ಮಾತ್ರ
ಈ ಎಲ್ಲಾ ಪ್ರಶ್ನೆಗಳಿಗೆ ಸಮಂಜಸವಾದ ಉತ್ತರ ಸಾಧ್ಯ ?
ಆವನೇ ಅಮೃತ - ಆಳಯ ಮೊದಲಾದ ಲಿಂಗಗಳಿಂದ ಕೂಡಿದ
ಅಂತರ್ಯಾಮಿಯಾದ ಮಹಾವಿಷ್ಣು....

ಇಂತಹ ಅಂತರ್ಯಾಮಿ ಅದೃಶ್ಯತ್ವವೇ ಮೊದಲಾದ ಅನೇಕ ಗುಣಗಳ ಗಣಿ.
ನಿಮಗೊತ್ತಾ ?!! ಭಗವಂತನಲ್ಲಿರುವ ಧರ್ಮಗಳೆಲ್ಲವು ಆವನ ಸ್ವರೂಪವೇ ಆಗಿವೆ !! ಆವನಲ್ಲಿರುವ
ದುರ್ಗುಣಗಳ ಅಭಾವವೂ ಸಹ ಆವನ ಸ್ವರೂಪವೇ ಆಗಿವೆ,
ಇದೆಲ್ಲವೇ ನಿಜವಾದ ಅದ್ಭುತ. ಹೊಳೆಯುವ ಶುದ್ಧ ಹಳದಿ ಬಣ್ಣದವನೆಂಬ
ಹೇತುವುಳ್ಳವನು ಮಹಾವಿಷ್ಣುವೆ !!
ವೈಶ್ವಾನರ ಎಂಬ ನಾಮಸಮನ್ವಯದಿಂದಾಗಿ ಹಲವು ಲಿಂಗಗಳ ಸಮನ್ವಯವು ಸಿದ್ಧಿಸುತ್ತವೆ.
ಉಭಯತ್ರಪ್ರಸಿದ್ಧ ನಾಮಲಿಂಗಾತ್ಮಕಶಬ್ದಗಳ ಸಮನ್ವಯವೇ ಮೂರನೆಯ ಪಾದದ ಗುರಿ.

ಸ್ವರ್ಗಾದಿಲೋಕಗಳಿಗೆ ಆಧಾರನಾದವನು ಮಹಾವಿಷ್ಣುವೆಂದು
ಮಾಂಡೂಕ್ಯೋಪನಿಷತ್ತು ಸಾರುತ್ತಿದೆ.
ಭೂಮಾ ಎಂಬ ಹೆಸರು ಪ್ರಾಣದೇವರದ್ದೆಂದು ಅನ್ನುವುದು ಮಿಥ್ಯಾ.
ಪರಿಪೂರ್ಣಸುಖ ಸರ್ವೋತ್ತಮತ್ವ ಮೊದಲಾದ ಹೇತುಗಳು ''ಭೂಮಾ ಮಹಾವಿಷ್ಣುವೇ''
ಎಂದು ನಗಾರಿ ಹೊಡೆಯುತ್ತಿವೆಯೆಲ್ಲಾ !!!! ....

ಪ್ರಕಾಶಕರು : ಶ್ರೀವಾದರಾಜಮಠ, ಮುಳಬಾಗಿಲು